ಪ್ರಬುದ್ಧ ಕರ್ಣಾಟಕ

ಸಂಪುಟ ೩೭—ಸಂಚಿಕೆ ೧

೧೪೩

ಮನ್ಮಥ ಸಂವತ್ಸರ

ಚೈತ್ರ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೫೫

ವಿಷಯ ಸೂಚಿಕೆ



‘ ಕನ್ನಡವೇ ಶಿಕ್ಷಣಮಾಧ್ಯಮವಾಗಬೇಕು ’

—ಶ್ರೀ ಕುವೆಂಪು

ಪ್ರಬುದ್ಧ ಕರ್ಣಾಟಕ

ಮನ್ಮಥ ಸಂವತ್ಸರ | ೧೪೩ | ಚೈತ್ರ ಸಂಚಿಕೆ

ಯಂ ಶೈವಾಃ*

ಶಿವನೆಂದಾ ಶೈವರಾರನ್ ಸಮುಪಾಸಿಪರ್, ಬ್ರಹ್ಮಮೆಂದಾ ವೇದಾಂತಿಗಳ್,
ಜಿನನೆಂದಾ ಜೈನಶಾಸನರತರ್, ಕರ್ತೃನೆಂದಾ ನೈಯಾಯಿಕರ್,
ಗುರುವೆಂದಾ ಬುದ್ಧನಂ ಬೌದ್ಧರ್, ಕರ್ಮಮೆಂದಾ ಮೀಮಾಂಸಕರ್,
ಹರಿಯೆಂಬಾ ದೇವಂ ವಾಂಛಿತ ಫಲಂಗಳಂ ನೀಡುಗಾ ತ್ರೈಲೋಕ್ಯನಾಥಂ !

ಕುವೆಂಪು

---

* ಯಂ ಶೈವಾಸ್ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನಃ
ಬೌದ್ಧಾ ಬುದ್ಧ ಇತಿ ಪ್ರಮಾಣಪಟವಃ ಕರ್ತೇತಿ ನೈಯಾಯಿಕಾಃ
ಅರ್ಹನ್ನಿತ್ಯಥ ಜೈನಶಾಸನರತಾಃ ಕರ್ಮೇತಿ ಮೀಮಾಂಸಕಾಃ
ಸೋಽಯಂ ನೋ ವಿದಧಾತು ವಾಂಛಿತಫಲಂ ತ್ರೈಲೋಕ್ಯನಾಥೋ ಹರಿಃ

ಹೂವಿನ ತೋಟದಲ್ಲಿ

ಬಣ್ಣದ ರೂಪದಿ ಭಗವತ್ ಪ್ರೇಮಂ
ಕಣ್ಣನು ಚುಂಬಿಸಿದೆ!
ಬಿಂಬಾಧರದಾ ಸೃಷ್ಟಿಯ ಹೃದ್‌ರತಿ
ಜ್ವಾಲಾವರ್ಣದ ಲೀಲಾ ಪರ್ಣದಿ
ಓಷ್ಠಾಗ್ನಿಯ ಪ್ರತಿಬಿಂಬಿಸಿದೆ!
ಕಬ್ಬಿಗನೆದೆಯಲಿ ಶ್ರದ್ಧಾನಂದಂ
ಅಗ್ನಿಯ ಬುಗ್ಗೆಯೊಲುಕ್ಕುತೆ ಧಗ್ಗನೆ
ಪ್ರಾಣ ಸಮುದ್ರಂ ಜೃಂಭಿಸಿದೆ!
ದೇವಾಲಯವೀ ಹೂವಿನ ತೋಟಂ:
ರಸಸಾಧನೆ ಈ ಯೋಗದ ನೋಟಂ:
ಜೀವನ ದೇವನ ಈ ಹೂಬೇಟಂ
ಮೂಲೋಕವನಾಲಿಂಗಿಸಿದೆ!
ಭಗವದ್‌ಭೋಗದ ಈ ಜೇನೂಟಂ
ತೃಷ್ಣೆಯ ಬೇರನೆ ಭಂಗಿಸಿದೆ!
ಇಂದ್ರಿಯಗಳನುಲ್ಲಂಘಿಸಿದೆ!
ನಾನೆಂಬಬುಧಿಯನಿಂಗಿಸಿದೆ!

ಕುವೆಂಪು

ಸತ್ಯಸಾಧಕ ಹರಿಶ್ಚಂದ್ರ

ಉತ್ತಮವಾದ ದಾರ್ಶನಿಕ ಕವಿಕೃತಿಗಳು ಆತ್ಮದ ಅನಂತ ಯಾತ್ರೆಯ ಹಾದಿಯಲ್ಲಿ ನಿಂತ ಬೆಳಕಿನ ಕೈಗಂಬಗಳು. ಯಾವ ಒಂದು ದೇಶದ, ಒಂದು ಕಾಲದ ಪರಿಮಿತಿಗೆ ಒಳಪಡದೆ, ಸರ್ವದೇಶ ಸರ್ವಕಾಲಗಳಿಗೂ ಸ್ಫೂರ್ತಿಯಾಗಿ ನಿಲ್ಲುವ ಮಾನವಾತ್ಮದ ಮಹತ್ಸಾಧಕರ ದಿವ್ಯ ಯಾತ್ರೆಯೇ ಅವುಗಳ ವಸ್ತು. ಅವು ನಿತ್ಯ ಸತ್ಯಗಳ ಜೀವಂತ ಪ್ರತಿಮೆ, ಯುಗಯುಗದ ಸಾಧಕರಿಗೆ ಪ್ರಣವಮಂತ್ರ.

ಭಾರತೀಯ ಪುರಾಣೇತಿಹಾಸಗಳು ಇಂತಹ ದಾರ್ಶನಿಕ ದೃಷ್ಟಿಯ ಕಾವ್ಯ ಕಥಾವಸ್ತುಗಳ ಗಣಿ. ಧರ್ಮವೇ ಉಸಿರಾದ ಭಾರತದ ಹಿರಿಯರು ಮಾಡಿದ ಆಲೋಚನೆಗಳಲ್ಲಿ, ನುಡಿದ ಮಾತುಗಳಲ್ಲಿ ಕೇಳಿಬರುತ್ತಿರುವುದು ಇದೊಂದೇ ದನಿ: "ಯೋ ವೈ ಭೂಮಾ ತತ್ಸುಖಂ, ನಾಲ್ಪೇ ಸುಖಮಸ್ತಿ."

ಆ ಭೂಮಾನುಭೂತಿ ಎಂಥದು? ಅದರ ಸ್ವರೂಪವೇನು? ಅದನ್ನು ಸಾಧಿಸುವ ವಿಧಾನವೇನು?—ಇತ್ಯಾದಿ ಪ್ರಶ್ನೆಗಳಿಗೆ ಭಾರತ ಬಹು ಹಿಂದೆಯೇ ಕೂಲಂಕಷವಾಗಿ ಚರ್ಚಿಸಿ, ಖಚಿತವಾದ ವಾಣಿಯಲ್ಲಿ ಉತ್ತರ ಕೊಟ್ಟಿದೆ. ಮಹಾಕವಿಗಳ ಕಾವ್ಯಗಳಲ್ಲಿ ಮಹದ್‌ವ್ಯಕ್ತಿಗಳ ಜೀವನದಲ್ಲಿ, ಭಗವದ್‌ಭಕ್ತರ ಸ್ತೋತ್ರಗಳಲ್ಲಿ ಮತ್ತು ಅನುಭಾವ ಗೀತೆಗಳಲ್ಲಿ ಈ ಅನುಭೂತಿಯ ಬೆಳಕಿದೆ. ಆ ಪರಮಸತ್ಯ 'ಏಕಂ ಸತ್ ವಿಪ್ರಾ ಬಹುಧಾ ವದಂತಿ' ಎಂಬ ಸೂತ್ರಕ್ಕೆ ವ್ಯಾಖ್ಯಾನದಂತೆ ಕಾಲದಿಂದ ಕಾಲಕ್ಕೆ ಸಾಧಕರ ಜೀವನದಲ್ಲಿ ಪುನರ್‌ಪ್ರಕಾಶನಗೊಂಡಿದೆ.

ಸತ್ಯ ಒಂದೇ; ತಿಳಿದವರು ಅದನ್ನು ಬಗೆಬಗೆಯಾಗಿ ಬಣ್ಣಿಸುತ್ತಾರೆ. ಯಾವುದು ಈ ಸತ್ಯ?

'ಸತ್' ಎಂದರೆ ಯಾವುದು ಇದೆಯೋ ಅದು; ಯಾವುದು ಎಲ್ಲದೂ ಆಗಿದೆಯೋ ಅದು. ಸ್ಥೂಲವಾಗಿ ಹೇಳುವುದಾದರೆ ಯಾವುದು ನಮ್ಮ ದೃಷ್ಟಿಗೆ ಮತ್ತು ಮುಷ್ಟಿಗೆ ಸಿಗುತ್ತದೆಯೋ ಅದೇ ಸತ್. ಏಕೆಂದರೆ ಅನ್ಯಪ್ರಮಾಣವನ್ನ ಪೇಕ್ಷಿಸದ ಸಾಮಾನ್ಯ ಬುದ್ಧಿಗೆ ಇಂದ್ರಿಯಾನುಭವವೇ ಪ್ರಥಮ ಪ್ರಮಾಣ. ಆದುದರಿಂದ ಸತ್ ಎಂದರೆ ಯಾವುದು ಇಂದ್ರಿಯ ಗೋಚರವಾಗುತ್ತಿದೆಯೋ ಆ ಜಗತ್ತು ಮತ್ತು ಅದರ ವ್ಯಾಪಾರಗಳು. ಇದು ಮೊದಲ ಹೆಜ್ಜೆ. ಆದರೆ ನಾವು ಯಾವುದನ್ನು ಕಾಣುತ್ತಿದ್ದೇವೋ, ಸ್ಪರ್ಶಿಸುತ್ತಿದ್ದೇವೋ ಆ ವಸ್ತುಗಳು ಸತ್ಯವಲ್ಲ

ಎಂಬುದು ದಿನದಿನವೂ ಅನುಭವಕ್ಕೆ ಬರುತ್ತದೆ. ಆದುದರಿಂದ ಇಂದು ಕಂಡು ಚಣಮಾತ್ರದಲ್ಲಿ ಕಣ್ಮರೆಯಾಗುವ, ಇಂದು ಇದ್ದು ನಾಳೆ ನಶಿಸಿಹೋಗುವ ವಸ್ತುಗಳನ್ನು ಸತ್ಯ ಎಂದು ಕರೆಯಲು ಬಾರದು. ಇದೇ ಮಿಥ್ಯೆ : ಕ್ಷಣಿಕ ಅಥವಾ ನಶ್ವರ. ಆದುದರಿಂದ ಈ ಎಲ್ಲ ಪರಿವರ್ತನೆಗಳ ಮೂಲದಲ್ಲಿ ಹುದುಗಿ, ಮೇಲಿನ ಈ ಎಲ್ಲ ವ್ಯಾಪಾರಗಳ ನಶ್ವರ ಮನೋಹರ ಲೀಲೆಯನ್ನು ಸೃಜಿಸಿ ಒಳಗೆ ಇರುವ ಮಹಾಶಕ್ತಿಯನ್ನೇ ನಮ್ಮವರು ಸತ್ಯ ಎಂದು ಕರೆದರು. "ಈ ಸತ್ಯದ ಮುಖ ಬಂಗಾರದ ಹೊದಿಕೆಯಿಂದ ಆವೃತವಾಗಿದೆ. ಸತ್ಯ ಧರ್ಮ ದರ್ಶನ ಕಾಂಕ್ಷಿಯಾದ ನನಗಾಗಿ ಆ ಹೊದಿಕೆಯನ್ನು ತೆರೆ"—ಎಂದು ಋಷಿಗಳು ಪ್ರಾರ್ಥಿಸಿದರು. ಈ ಸತ್ಯವೇ ಶಿವ, ಸುಂದರ ಎಂದು ಕರೆದರು. ಈ ಸತ್ಯವನ್ನು ನಾನಾ ಬಗೆಯ ಸಾಧಕರು ನಾನಾ ಬಗೆಯಲ್ಲಿ ಅನುಭವಕ್ಕೆ ತಂದುಕೊಂಡರು. ದಾನಮಾಡುವುದೇ ಕರ್ಣನಿಗೆ ಸತ್ಯವಾಯಿತು; ಪಿತೃವಾಕ್ಯಪರಿಪಾಲನೆಯೇ ರಾಮನಿಗೆ ಸತ್ಯವಾಯಿತು; ಪಾತಿವ್ರತ್ಯವೇ ಸತಿಯರಿಗೆ ಸತ್ಯವಾಯಿತು; ನುಡಿದ ಮಾತನ್ನು ಕಡೆ ತನಕ ನಡೆಸುವುದೇ ಹರಿಶ್ಚಂದ್ರನಿಗೆ ಸತ್ಯವಾಯಿತು. ಅಹಿಂಸಾಪಾಲನೆಯೇ ಗಾಂಧೀಜಿಗೆ ಸತ್ಯವಾಯಿತು. ಹೀಗೆ ಮಹಾವ್ಯಕ್ತಿಗಳ ಒಬ್ಬೊಬ್ಬರ ಜೀವನವೂ ಪರಮಸತ್ಯದ ವ್ಯಾಖ್ಯಾನದಂತಿವೆ:

* * * *

ಸತ್ಯ ಎಂಬ ಮಾತು ಬಂದೊಡನೆಯೇ ಅದಕ್ಕೆ ಹರಿಶ್ಚಂದ್ರನ ಹೆಸರು ಅಂಟಿಕೊಂಡು ಬರುತ್ತದೆ—ಕರ್ಣನಿಗೆ ದಾನಗುಣದಂತೆ! ಕರ್ಣನನ್ನು ದಾನಶೂರನೆಂದಂತೆ, ಹರಿಶ್ಚಂದ್ರನಿಗೆ ಸತ್ಯಹರಿಶ್ಚಂದ್ರನೆಂಬ ಹೆಸರು ಸಾರ್ಥಕವಾಗಿದೆ, ಹರಿಶ್ಚಂದ್ರನ ವ್ಯಕ್ತಿತ್ವ ಆ ಸತ್ಯದಲ್ಲಿ ಕರಗಿ ಒಂದಾಗಿದೆ, ಸತ್ಯದಿಂದ ಹರಿಶ್ಚಂದ್ರ ಹೇಗೆ ಅಮರನಾದನೊ, ಅಂತೆಯೇ ಹರಿಶ್ಚಂದ್ರನಿಂದ ಸತ್ಯವೂ ಹೊಸ ಹೊಗರನ್ನು ಹೊಂದಿದೆ. ಹರಿಶ್ಚಂದ್ರ ಬರುವ ಮುನ್ನ ಸತ್ಯಕ್ಕೆ ಯಾವ ಸ್ಥಾನವಿತ್ತೋ, ಅದು ಹರಿಶ್ಚಂದ್ರ ಬಂದಮೇಲೆ ಒಂದು ವಿಶಿಷ್ಟ ಸ್ಥಾನವನ್ನು ಪಡೆಯಿತೆನ್ನಬೇಕು. ಅನಂತ ಸತ್ಯದ ಟಂಕಸಾಲೆಯಿಂದ ಒಂದಿಷ್ಟು ಚಿನ್ನವನ್ನು ತೆಗೆದುಕೊಂಡು ತಮ್ಮ ಬದುಕಿನ ಮೂಸೆಯಲ್ಲಿ ಕರಗಿಸಿ, ತಮ್ಮ ಚಾರಿತ್ರ್ಯದ ಮುದ್ರೆ ಒತ್ತಿ ಅವುಗಳನ್ನು ಮಹಾವ್ಯಕ್ತಿಗಳು ಲೋಕದಲ್ಲಿ ಚಲಾವಣೆಗೆ ತರುತ್ತಾರೆ. ಹೀಗೆ ಮಹಾವ್ಯಕ್ತಿಗಳ ಸಾಧನೆಯಿಂದ ಜಗತ್ತು ಶ್ರೀಮಂತವಾಗುತ್ತಲೇ ಇದೆ:

"ಮನುಜರ ಮೇಲೆ, ಸಾವವರ ಮೇಲೆ, ಕನಿಷ್ಠರ ಮೇಲೆ" ಕಾವ್ಯವನ್ನು ಬರೆಯಕೂಡದೆನ್ನುವ ಮನೋಧರ್ಮವುಳ್ಳ ಯುಗದಲ್ಲಿ ಕವಿ ರಾಘವಾಂಕ ಧೈರ್ಯವಾಗಿ ತನ್ನ ಕಾವ್ಯಕ್ಕೆ ಹರಿಶ್ಚಂದ್ರನ ಕಥೆಯನ್ನು ಆರಿಸಿಕೊಂಡು ಕೃತಾರ್ಥನಾಗಿದ್ದಾನೆ.

ಕವಿಗೆ ಗೊತ್ತು, ತನ್ನ ಕಥಾನಾಯಕ ಸಾಮಾನ್ಯ ಮನುಜನೂ ಅಲ್ಲ, ಕನಿಷ್ಠನೂ ಅಲ್ಲ, ಸಾವವನೂ ಅಲ್ಲ ಎಂಬುದು! ಆತ ಸತ್ಯಸಾಧಕ ಹರಿಶ್ಚಂದ್ರನ ಜೀವನವನ್ನು ಕುರಿತು ಹಾಡುವ ಮುನ್ನ ಮಾಡಿರುವ ಪಂಪಾಪತಿಯ ಸ್ತೋತ್ರವೇ ಆ ಪರಮ ಸತ್ಯದ ಸೊಗಸಾದ ಪ್ರತಿಮೆ:

ಶ್ರೀಪತಿಗೆ ಸೊಬಗನುಡುಪತಿಗೆ ಶಾಂತಿಯನು ವಾ
ಣೀಪತಿಗೆ ಚಾತುರ್ಯಮಂ ದಿವಸ್ಪತಿಗೆ ಪ್ರ
ತಾಪಮಂ ಸುರಪತಿಗೆ ಭೋಗಮಂ ರತಿಪತಿಗೆ ಮೂಲೋಕವಾವರಿಸುವ
ರೂಪಂ ಸರಿತ್ಪತಿಗೆ ಗಂಭೀರತೆಯನು ಸ್ವಾ
ಹಾಪತಿಗೆ ತೇಜಮಂ ಕೊಟ್ಟ ಗುರುಮೂರ್ತಿ ಪಂ
ಪಾಪತಿ ವಿರೂಪಾಕ್ಷನೆಮಗಿಷ್ಟಸಿದ್ಧಿಯಂ ಮಾಳ್ಕೆ ಸಂತೋಷದಿಂದ

ಇಲ್ಲಿ ವರ್ಣಿತವಾಗಿರುವುದು; 'ಗುರುಮೂರ್ತಿ'ಯಾದ ಎಲ್ಲ ಶಕ್ತಿಸೌಂದರ್ಯ ಗಳಿಗೂ ಮೂಲನಾದ ಪರಮ ಸತ್ಯದ ಸ್ವರೂಪ. ಹರಿಶ್ಚಂದ್ರ ಸಾಕ್ಷಾತ್ಕರಿಸಿ ಕೊಂಡುದು ಈ ಸತ್ಯವನ್ನು. ಅವನ ಅನುಭವದಲ್ಲಿ—

"ಹರನೆಂಬುದೇ ಸತ್ಯ. ಸತ್ಯವೆಂಬುದೇ ಹರನು"

* * * *

ಯಾವ ದಿವ್ಯ ಸಾಧಕರ ಜೀವನವನ್ನವಲೋಕಿಸಿದರೂ ಕಾಣುವುದಿಷ್ಟು: ಅವರು ಹುಟ್ಟುತ್ತಲೇ ಪರಿಪೂರ್ಣರಲ್ಲ; ಬೆಳೆಯುತ್ತ ಪರಿಪೂರ್ಣರು. ಅವರ ಜೀವನ ಹೂವಿನ ಹಾಸಿಗೆಯಲ್ಲ; ಶರಶಯನ. ಅವರು ಭೋಗವೈಭವಗಳ ನಡುವೆ ಬಾಳಿದರೂ ಅವರ ದೃಷ್ಟಿ ಅದನ್ನು ತೃಣೀಕರಿಸದ ಭೂಮದೆಡೆಗೆ, ಅವರ ಹಾದಿಯ ತುಂಬ ಧರ್ಮಸಂಕಟಗಳ ಕೂರಲಗಿನ ಕೊಳ್ಳಗಳು; ಅಗ್ನಿಪರೀಕ್ಷೆಯ ಕುಂಡಗಳು, ಕಂಬನಿಯ ಕಡಲುಗಳು. ಆದರೂ ಈ ಎಲ್ಲ ಸಂಕಟಗಳ ಮಾಲೆಯ ಮೇಲೆ ನಗು ಮುಖದಿಂದ, ದಿವ್ಯ ಶ್ರದ್ಧೆಯಿಂದ, ಉಳಿದವರೆಡೆಗೆ ಪರಮ ಅನುಕಂಪದಿಂದ ಅವರ ಯಾತ್ರೆ ಸಾಗುತ್ತದೆ. ಈ ಎಲ್ಲ ನಿಶಿತಧಾರೆಯ ಮೇಲೆ ನಡೆದು ಮಾನವಕಲ್ಯಾಣಕ್ಕೆ ತಮ್ಮ ಸರ್ವಸ್ವವನ್ನು ಧಾರೆ ಎರೆದು ಶಿವದ ಬೆಳಕಿನಲ್ಲಿ ನಿಂತ ಧೀರರಿವರು!

ಹರಿಶ್ಚಂದ್ರನ ಜೀವನ ಮೇಲಿನ ಹೇಳಿಕೆಗೆ ಒಂದು ವಿವರಣೆ ಇದ್ದಂತಿದೆ. ಅವನ ಕಥೆ ಎಲ್ಲರಿಗೂ ಗೊತ್ತಿದೆ. ಅಲ್ಲಿ ಕಥೆ ಮುಖ್ಯವಲ್ಲ: ವ್ಯಥೆ ಮುಖ್ಯ; ಆ ವ್ಯಥೆ ಯನ್ನು ವ್ಯಕ್ತಿ ತಾಳಿಕೊಂಡು ನಿಂತ ರೀತಿ ಮುಖ್ಯ. ಅಲ್ಲಿಯೇ ಅವನ ಹಿರಿಮೆ.

ಕವಿ ರಾಘವಾಂಕ ಸಹೃದಯರಿಗೆ ಕಾವ್ಯಾರಂಭದಲ್ಲಿ ಹರಿಶ್ಚಂದ್ರನನ್ನು ಹೀಗೆ ಪರಿಚಯ ಮಾಡಿಕೊಡುತ್ತಾನೆ:

ಸುರಪತಿಯ ಭೋಗ, ಅಗ್ನಿಯ ತೇಜ, ಅಂತಕನ
ಭರದದಟು, ನೈರುತಿಯ ಕಾಯ್ಪು, ರತ್ನಾಕರೇ
ಶ್ವರನ ಗಂಭೀರ, ಅನಿಲನ ಬಲಂ, ವಿತ್ತಪನ ಸಿರಿ, ರುದ್ರನುಗ್ರತ್ವವು:
ತರಣಿಯ ಪ್ರಭೆ, ಧರೆಯ ಧೈರ್ಯ, ಚಂದ್ರನ ಶಾಂತಿ
ವೆರಸಿ ರೂಪಾದುದುದು. . . [೧-೧೨]

ಸೃಷಿಯ ಸಮಸ್ತ 'ಸತ್' ಶಕ್ತಿಗಳ ಎರಕಹೊಯ್ದು ಮಾಡಿದಂತಿದೆ ಈ ಪಾತ್ರ; ಈ ಹರಿಶ್ಚಂದ್ರನ ಖ್ಯಾತಿ ಮೂರು ಲೋಕಕ್ಕೂ ಗೊತ್ತು; ಅಂತೇ ಆತನ ಸತ್ಯದ ಮಹತ್ತೂ. ಆದುದರಿಂದಲೇ ದೇವಲೋಕದಲ್ಲಿ ಸತ್ಯವಂತರ ಮಾತು ಬಂದಾಗ ವಸಿಷ್ಠರು ಹರಿಶ್ಚಂದ್ರನ ಸತ್ಯವನ್ನು ಪ್ರಶಂಸೆ ಮಾಡಿ

ಹಲವು ಮಾತೇಕೆ? ಆ ಹರಿಶ್ಚಂದ್ರ ಭೂನಾಥ
ನೊಳಗಸತ್ಯವನು ಕಾಣಿಸಲು ಬಲ್ಲರು ಧಾತ್ರಿ
ಯೊಳು ಮುನ್ನ ಹುಟ್ಟಿದವರಿಲ್ಲ, ಇನ್ನು ಹುಟ್ಟುವರ
ಕಾಣೆ; ನಾನಿದ ಬಲ್ಲೆನು. . . . . [೨-೯]

ಎನ್ನುತ್ತಾರೆ. ಆದರೆ ವಸಿಷ್ಠರ ಪ್ರಶಂಸೆಯ ಮಾತು ಸ್ವರ್ಗದ ಇಂದ್ರಸಭೆಯಲ್ಲಿ ಋಷಿಗಳೀರ್ವರ ವೈಯ್ಯಕ್ತಿಕ ರಾಗದ್ವೇಷಗಳ ವಾಗ್ವಾದ ವಿಷಯವಾಗಿ, ಕಡೆಗೆ ವಿಷಮವಾದ ಸಿಡಿಲಾಗಿ ಹರಿಶ್ಚಂದ್ರನ ತಲೆಯ ಮೇಲೆ ಇಳಿದುಬಿಡುತ್ತದೆ.

ಹರಿಶ್ಚಂದ್ರನ ಸತ್ಯಪರೀಕ್ಷೆಗೆ ಬ್ರಹ್ಮರ್ಷಿ ವಸಿಷ್ಠರೂ ರಾಜರ್ಷಿ ವಿಶ್ವಾಮಿತ್ರರೂ, ಸ್ಥಾವರ-ಜಂಗಮ ಕ್ರಿಯಾಶಕ್ತಿಗಳಾಗಿ ನಿಲ್ಲುತ್ತಾರೆ. ದೇವತೆಗಳೇ ಪ್ರೇಕ್ಷಕರಾಗುತ್ತಾರೆ. ಪಂಪಾಪತಿ ವಿರೂಪಾಕ್ಷನ ಅಧ್ಯಕ್ಷತೆಯಲ್ಲಿ ಹರಿಶ್ಚಂದ್ರನ ನೋವಿನ ನಾಟಕ ಆರಂಭವಾಗುತ್ತದೆ.

* * * *

ರಾಘವಾಂಕ ಹರಿಶ್ಚಂದ್ರನ ಪಾತ್ರಪರಿಚಯಾರಂಭದಲ್ಲಿ ಅವನನ್ನು ಸೃಷ್ಟಿಯ ಸತ್‌ಶಕ್ತಿಗಳ ಸಾಕಾರಮೂರ್ತಿಯಂತೆ ಬಣ್ಣಿಸಿದ್ದರೂ, ಅವನಿನ್ನೂ ಸಾಧಕನೆಂಬುದನ್ನು ಕವಿ ಮರೆತಿಲ್ಲ. ಅವನಲ್ಲಿಯೂ ದೋಷಗಳಿವೆ. ತನಗೆ ಮಗನಾದರೆ ಅವನನ್ನು ವರುಣನಿಗೆ ಬಲಿಕೊಡುವೆನೆಂದು ಹರಸಿಕೊಂಡು, ಮಗನಾದಮೇಲೆ ಪುತ್ರವ್ಯಾಮೋಹದಿಂದ ಬಲಿಗೊಡಲೊಪ್ಪದೆ ಅಡವಿಗಟ್ಟಿ ಬಚ್ಚಿಟ್ಟುದುಂಟು; ಮಾಯದಬಲೆಯರನ್ನು ತಾನೇ ಸ್ವತಃ ಚಮ್ಮಟಿಗೆವಿಡಿದು ಚರ್ಮ ಸುಲಿಯುವ ತನಕ ಬಡಿದುದುಂಟು; ಸಮಸ್ತ ರಾಜ್ಯವನ್ನು ಕಳೆದುಕೊಂಡು, ತನ್ನನ್ನೇ ಮಾರಿಕೊಳ್ಳಲು ಹೊರಟಾಗ ತೆತ್ತ ಸಾಲದ ಭರದಲ್ಲಿ ಅರಿಯದೆ ಅನಾಮಿಕನನ್ನು ಹೊಲೆಯನೆಂದು ರೇಗಿದ್ದುಂಟು. ವ್ಯಕ್ತಿ ಎಂದ ಮೇಲೆ ದೋಷಗಳಿದ್ದೇ ಇರುತ್ತವೆ. ಕವಿ ಮೊದಲೇ ಹೇಳಿದಂತೆ

"ನಡೆವರೆಡಹದೆ ಕುಳಿತರೆಡಹುವರೆ?" ಎಂಬ ಮಾತು ಕವಿಕೃತಿಯನ್ನು ಮಾತ್ರ ಕುರಿತು ಹೇಳಿದ ಮಾತಲ್ಲ, ಹರಿಶ್ಚಂದ್ರನ ಪಾತ್ರವನ್ನು ಕುರಿತು ಹೇಳಿದ ಮಾತು ಎಂದು ತೋರುತ್ತದೆ. ನಾವು ನೋಡಬೇಕಾದುದು ಒಬ್ಬ ವ್ಯಕ್ತಿಯಲ್ಲಿ ಪರಿಪೂರ್ಣತೆ ಎಷ್ಟು ಎಂದಲ್ಲ; ಅವನಲ್ಲಿ ಉಳಿದವರಿಗಿಂತ ಅಪರಿಪೂರ್ಣತೆ ಎಷ್ಟು ಕಡಿಮೆ ಎಂಬುದನ್ನು!

ಮೊದಮೊದಲು ಸಾಮಾನ್ಯರಂತೆ ತೋರುತಿದ್ದವನು, ಮಾನವಸಹಜವಾದ ದೌರ್ಬಲ್ಯಗಳಿಂದ ಕೂಡಿದವನು, ತನ್ನ ಸಂಸ್ಕಾರವಿಶೇಷದಿಂದ ಯಾವುದೋ ಒಂದು ಅಮೃತ ಮುಹೂರ್ತದಲ್ಲಿ ಹೊಸ ಬೆಳಕಿಗೆ ಎಚ್ಚರಗೊಳ್ಳುತ್ತಾನೆ. ಒಮ್ಮೆ ಸತ್ಯದ ಮಿಂಚು ಅಂತರಂಗದಲ್ಲಿ ಹೊಳೆಯಿತೆಂದಾಗ, ಅದನ್ನು ಸಾಧಿಸುವ ಹಂಬಲ ಪ್ರಬಲವಾದಾಗ, ವ್ಯಕ್ತಿ ತನ್ನ ಧ್ಯೇಯವನ್ನು ರೂಪಿಸಿಕೊಂಡಾಗ, ಶ್ರದ್ಧೆ ಗರಿಗೆದರಿದಾಗ, ಅದಕ್ಕಾಗಿ ತನ್ನ ಸರ್ವಸ್ವವನ್ನು ತೃಣೀಕರಿಸಿ ಹೊರಟಾಗ, ಅದಕ್ಕಾಗಿ ಕಡೆತನಕ ಹೋರಾಡಿ ಅದನ್ನು ಸಾಕ್ಷಾತ್ಕರಿಸಿಕೊಂಡಾಗ ನಮಗೆ ಆ ಪಾತ್ರದ ಹಿರಿಮೆ ಗೋಚರವಾಗುತ್ತದೆ. ಹರಿಶ್ಚಂದ್ರನ ವಿಚಾರದಲ್ಲೂ ಹೀಗೇ ಆಗಿದೆ.

ಹರಿಶ್ಚಂದ್ರನ ದೃಷ್ಟಿಯಲ್ಲಿ ಸತ್ಯ ಎಂದರೆ, ಆಡಿದ ಮಾತನ್ನು ತಪ್ಪದೆ ನಡೆಯಿಸುವುದು ಮತ್ತು ನಿರ್ಲಿಪ್ತನಾಗಿ ತನ್ನ ಸ್ವಾಮಿಕಾರ್ಯವನ್ನು ಪರಿಪಾಲಿಸುವುದು.

ಹರಿಶ್ಚಂದ್ರನ ಜೀವನವೇ ಸತ್ಯದ ಪ್ರಯೋಗಶಾಲೆ. ಅವನದು ಯೋಗಿಗಳಂತಹ ಏಕಾಂತವಾಸದ ಸಾಧನೆಯಲ್ಲ; ಬಾಳಿನ ಬಿರುಗಾಳಿಗೆ ಎದೆಯೊಡ್ಡಿ ನಿಂತು ಮುನ್ನಡೆಯುವ ಉದಾತ್ತ ಚಾರಿತ್ರ್ಯ. ಅವನು ಕಾಷಾಯವಸ್ತ್ರಧಾರಿಯಾದ ಸಂನ್ಯಾಸಿಯಲ್ಲ; ಸಮಸ್ತ ರಾಜ್ಯಭಾರವನ್ನು ಹೊತ್ತ ಕ್ಷತ್ರಿಯ. ಧುರದಲ್ಲಿ ಅರಿನೃಪರನ್ನು ನಡುಗಿಸಿದ ವೀರ. ಈ ಕ್ಷಾತ್ರವೀರತೆ ಅವನ ಸಾಧನೆಯಲ್ಲಿ ಧರ್ಮವೀರತೆಯಾಗುತ್ತದೆ. ಅವನು ಹೋರಾಡುವುದು ಬಹಿರಂಗ ಶತ್ರುಗಳೊಡನೆ ಅಲ್ಲ; ಅಂತರಂಗ ಶತ್ರುಗಳೊಡನೆ!

ಹರಿಶ್ಚಂದ್ರನ ಸತ್ಯಸಾಧನೆ ಬುದ್ಧಿಪೂರ್ವಕವಾಗಿ ಮೊದಲಾದುದಲ್ಲ. ಶ್ರದ್ಧಾಪೂರ್ವಕವಾಗಿ ಮೊದಲಾದುದು. ಕಟ್ಟಕಡೆಯಲ್ಲಿ ಹರಿಶ್ಚಂದ್ರನನ್ನು ಕುರಿತು 'ನೀನು ಏಕೆ ಹೀಗೆಮಾಡಿದೆ?' ಎಂದು ಕೇಳಿದ್ದರೆ ಅವನಿಗೇ ಆ ಪ್ರಶ್ನೆ ಮತ್ತು ತನ್ನ ಚಾರಿತ್ರ್ಯ ಆಶ್ಚರ್ಯವನ್ನೂ ಸಂತೋಷವನ್ನೂ ಉಂಟುಮಾಡುತಿದ್ದುವೆಂದು ತೋರುತ್ತದೆ! ಶಿವೇಚ್ಛಾರೂಪಿಯಾದ ಯಾವುದೋ ಶಕ್ತಿಯೊಂದು ಆತನನ್ನು ಮುನ್ನಡೆಸಿತ್ತು. ಜಗತ್ತಿನ ಸತ್ಯಸಾಧಕರ ಹಾರೈಕೆಗಳೆಲ್ಲಾ ಅವನ ಅಂತರಂಗದಲ್ಲಿ ಒಂದಾಗಿ ಅವನಿಗೆ ಶಕ್ತಿಯಾಗಿರಬೇಕು. ಏಕೆಂದರೆ ಸತ್ಕಾರ್ಯದಲ್ಲಿ ತೊಡಗಿದವನಿಗೆ ಜಗತ್ತಿನ ಸತ್ ಶಕ್ತಿಗಳೆಲ್ಲವೂ ನೆರವಾಗುತ್ತವೆ. ಹೊರನೋಟಕ್ಕೆ ವ್ಯಕ್ತಿಯೊಬ್ಬನೇ ಗೋಚರಿಸಿದರೂ ಆ ವ್ಯಕ್ತಿಯಲ್ಲಿ ಅಡಗಿ ಅವನನ್ನು ಲೋಕಕಲ್ಯಾಣಕ್ಕೆ ಮುನ್ನಡೆಸುವ ಶಕ್ತಿಗಳೆಷ್ಟೋ! ಮಹಾವ್ಯಕ್ತಿಗಳ ತಪಸ್ಸು, ಕೇವಲ ಒಂದು ವ್ಯಕ್ತಿಯದಲ್ಲ, ಅನೇಕ ಶಕ್ತಿಯದು.

ಹರಿಶ್ಚಂದ್ರನ ಸತ್ಯಸಾಧನೆಗೆ ಪ್ರಧಾನಶಕ್ತಿಯಾಗಿ ನಿಂತಿರುವುದು ಗುರುವಸಿಷ್ಠರ ಆಶೀರ್ವಾದ. ಅವರು ಹರಿಶ್ಚಂದ್ರನ ಸತ್ಯನಿಷ್ಠೆಯನ್ನು ಬಲ್ಲವರಾಗಿದ್ದುದರಿಂದಲೇ ಅಷ್ಟು ಖಚಿತವಾದ ವಾಣಿಯಲ್ಲಿ ಹರಿಶ್ಚಂದ್ರನ ಮಹಿಮೆಯನ್ನು ಘೋಷಿಸಿದರು, ವಿಶ್ವಾಮಿತ್ರರೆದುರಿಗೆ ಬಲುಘೋರವಾದ ಪಣವನ್ನು ತೊಟ್ಟರು. ಯಾವ ವಿಧವಾದ ಲೌಕಿಕ ರಾಗದ್ವೇಷಕ್ಕೂ ಆಸ್ಪದವಿಲ್ಲದಂತಹ ದಿವ್ಯಲೋಕದ ಸಭೆಯಲ್ಲಿ ಯಾವ ವಿಧಿ, ಋಷಿಶ್ರೇಷ್ಠರಿಬ್ಬರ ಮನಸ್ಸಿನಲ್ಲಿ ರಾಗದ್ವೇಷದ ಕಿಡಿಗಳನ್ನುದ್ದೀಪಿಸಿ ಹರಿಶ್ಚಂದ್ರನ ಸತ್ಯಪರೀಕ್ಷೆಯ ನಾಟಕಕ್ಕೆ ನಾಂದಿಯನ್ನು ಹಾಡಿತೋ ಅದು ಶಿವಮುಖವಾದುದೆಂಬುದು ವಸಿಷ್ಠರ ಯೋಗದೃಷ್ಟಿಗೆ ಸಂಪೂರ್ಣವಾಗಿ ವೇದ್ಯವಾದುದು. ಮುಂದೆ ಹರಿಶ್ಚಂದ್ರನ ಬಾಳಿನಲ್ಲಿ ಬಂದೊದಗುವ ಸಂಕಟಗಳ ಪರಂಪರೆಯನ್ನು ಅವರು ಬಲ್ಲರು. ಆದರೆ ಹಾಗಾಗುವುದೇ ವಿಧಿನಿಯಮವಾದುದರಿಂದ ಅವರು ಅದನ್ನು ತಡೆಯುವ ಋತವಿರುದ್ಧವಾದ ಕಾರ್ಯಕ್ಕೆ ಹೋಗದೆ, ಹರಿಶ್ಚಂದ್ರನಿಗೆ ಆ ಬವಣೆಗಳಿಂದ ಕೇಡಾಗದಂತೆ ಆಶೀರ್ವಾದಮಾಡುವ, ದೈವೀಕೃಪೆಯನ್ನು ಆರ್ಜಿಸುವ ಪ್ರಯತ್ನ ಮಾಡುತ್ತಾರೆ. ಆದುದರಿಂದಲೇ ಅವರು ಕೌಶಿಕನ ಕಾಟ ಹರಿಶ್ಚಂದ್ರನ ಮೇಲೆ ಅಡಿಯಿಟ್ಟಾಗ ಅವನಿಗೆ ವಾಚ್ಯವಾಗಿ ಆ ವಿಚಾರವನ್ನು ಸೂಚಿಸದೆ, ಅವನನ್ನು ನೇರವಾಗಿ ಪಂಪಾವಿರೂಪಾಕ್ಷನ ಸನ್ನಿಧಿಗೆ ಕರೆದೊಯ್ಯುತ್ತಾರೆ. ಅಲ್ಲಿ ವಸಿಷ್ಠರು ಹರಿಶ್ಚಂದ್ರನನ್ನು ಕರೆದೊಯ್ದುದು ಹರಿಶ್ಚಂದ್ರನ ಸತ್ಯಯಾತ್ರೆಗೆ ದೈವೀಕೃಪೆಯ ರಕ್ಷೆಯನ್ನು ಕಟ್ಟುವುದಕ್ಕೆ ಎಂಬುದು ತಿಳಿಯುತ್ತದೆ. ಈ ದೈವೀಕೃಪೆ ಹರಿಶ್ಚಂದ್ರನನ್ನು ಉದ್ದಕ್ಕೂ ಕಾಪಾಡುತ್ತದೆ.

ಎರಡನೆಯ ಶಕ್ತಿ—ವಿಶ್ವಾಮಿತ್ರನ ಕಠೋರ ಕರುಣೆ! ವಿಶ್ವಾಮಿತ್ರನ ಪಾತ್ರ ಈ ಕಾವ್ಯದಲ್ಲಿ ಮೊದಲರ್ಧದಲ್ಲಿ ಪ್ರತ್ಯಕ್ಷವಾಗಿ, ಉಳಿದರ್ಧದಲ್ಲಿ ಪರೋಕ್ಷವಾಗಿ ಪ್ರವಹಿಸುತ್ತದೆ. ಮೊದಲರ್ಧದಲ್ಲಿ ಆತ ವ್ಯಕ್ತಿಯಾಗಿ, ಉಳಿದರ್ಧದಲ್ಲಿ ಶಕ್ತಿಯಾಗಿ ಗೋಚರಿಸುತ್ತಾನೆ. ಉತ್ತರಾರ್ಧದಲ್ಲಿಯಂತೂ ವಿಶ್ವಾಮಿತ್ರನ ಪ್ರಕೃತಿಯು ಪ್ರಚಂಡಶಕ್ತಿಯ ಪ್ರತಿನಿಧಿ. ಸಾಮಾನ್ಯದೃಷ್ಟಿಗೆ ಕಾವ್ಯದ ತುಂಬಾ ಕೇಳಿಸುವುದು ವಿಶ್ವಾಮಿತ್ರನ ಕಾಟದ ಬಿರುಗಾಳಿಯ ಭೋರ್ಗರೆವ ರವ! ಆದರೆ ಆ ಬಿರುಗಾಳಿಯ ಹೃದಯದ ಶಿವದ ಬೆಳಕು ಸುಲಭವಾಗಿ ಕಾಣದು. ಆದರೆ ಗಮನಿಸಬೇಕಾದ ಒಂದು ಅಂಶವಿದೆ: ಯಾವ ಕವಿ ಮೊದಮೊದಲು ವಿಶ್ವಾಮಿತ್ರನನ್ನು "ಮುನಿರಕ್ಕಸ" "ಆಸುರದ ಕೋರಡಿಗ" ಎನ್ನುತ್ತಾನೆಯೋ ಅದೇ ಕವಿ ಕಡೆಯಲ್ಲಿ ವಿಶ್ವಾಮಿತ್ರನನ್ನು ಕುರಿತು "ಲೋಕದ ಕಣ್ಗೆ ಕಡುಮುಳಿದರಂತೆ ತೋರಿಸಿ ಸತ್ಯಶುದ್ಧವಪ್ಪನ್ನೆಗಂ ಕಾಡಿನೋಡಿ, ಕಡೆಯೊಳು ಹರಿಶ್ಚಂದ್ರರಾಯಂಗೆ ಗಣವೆರಸಿ ಮೃಡನನೆಳೆತಂದಿತ್ತು ಕೀರ್ತಿಯಂ ಮೂಜಗದ ಕಡೆಗೆ

ಹರಹಿದ ಮುನಿವರೇಣ್ಯ ವಿಶ್ವಾಮಿತ್ರ" [೯-೧೧] ಎಂದು ಸ್ತುತಿಸುತ್ತಾನೆ. ಆತ ಈಗ "ಮುನಿರಕ್ಕಸ"ನಲ್ಲ, "ಮುನಿವರೇಣ್ಯ." ಅವನು 'ಕಡುಮುಳಿದರಂತೆ' ತೋರಿದ್ದು ಕವಿಯ ಕಣ್ಣಿಗಲ್ಲ; "ಲೋಕದ ಕಣ್ಗೆ." ಯಾವ ಹರಿಶ್ಚಂದ್ರ ತನ್ನ ರಾಜ್ಯ ಸಮಸ್ತವನ್ನೂ ತೆತ್ತು, ಮೂರು ತಿಂಗಳ ಗಡುವನ್ನು ಬೇಡಿ, ಕಡೆಗೆ ಅವಧಿ ಮುಗಿಯುವ ಹೊತ್ತಿನಲ್ಲಿ ಮುಂದುಗಾಣದೆ ತಳಮಳಿಸುತ್ತಿರುವಾಗ ಅವನ ಪತ್ನೀಪುತ್ರರನ್ನು ಕೊಂಡುಕೊಳ್ಳಲು ಏರ್ಪಾಡುಮಾಡಿದವನೂ ವಿಶ್ವಾಮಿತ್ರನೇ ಎಂಬುದನ್ನು ಮರೆಯ ಬಾರದು. ವಿಶ್ವಾಮಿತ್ರನ ಅಪ್ಪಣೆಯಂತೆ ಅಗ್ನಿ ವಿಪ್ರವೇಷವನ್ನು ತಾಳಿ ಹರಿಶ್ಚಂದ್ರನ ಸತಿಸುತರನ್ನು ಕೊಳ್ಳುತ್ತಾನೆ; ವಿಶ್ವಾಮಿತ್ರನ ಅಪ್ಪಣೆಯಂತೆ ಯಮ, ವೀರಬಾಹುಕ ನಾಗಿ ಹರಿಶ್ಚಂದ್ರನನ್ನು ಕೊಳ್ಳುತ್ತಾನೆ. ಹೀಗೆ ನಿರ್ದಿಷ್ಟವಾದ ಗಡುವಿನೊಳಗಾಗಿ ಹರಿಶ್ಚಂದ್ರನು ಋಣವಿಮುಕ್ತನಾಗಿ ಆಡಿದ ಮಾತನ್ನು ಉಳಿಸಿಕೊಳ್ಳಲು ನೆರವಾಗು ವವನೂ ವಿಶ್ವಾಮಿತ್ರನೇ! ಹೀಗೆ ಕೊಲಲೆತ್ತಿದ ಕೈಯೇ, ಕಾಯಲೂ ಕೈಚಾಚಿದೆ. ನಮಗೆ ಕಾಣುವುದು ಕಾಡುವ ಕೈಮಾತ್ರ; ಕಾಪಾಡುವ ಕೈ ಗುಪ್ತಗಾಮಿನಿಯಾಗಿ ಸರ್ವದಾ ಹರಿಶ್ಚಂದ್ರನ ಹಿತಚಿಂತನೆಯಲ್ಲಿ ತೊಡಗಿದೆ. ಯಾವ ಕೈ ನಿಷ್ಕರುಣವಾಗಿ ರಾಜ್ಯವನ್ನು ಸುಲಿಯಿತೋ ಅದೇ ಕೈ ಕಡೆಗೆ—

> ಆನೇಕೆ ರಾಜ್ಯವೇಕೆಲೆ ಜನಪ! ಸತ್ಯಸಂ
> ಧಾನಮಂ ನೋಡಲೆಂದುಳ್ಳುದೆಲ್ಲವ ಕೊಂಡ
> ಡೇನೆಂಬನೋ ಎಂದು ಕಾಡಿನೋಡಿದೆನೈಸೆ;
> ಸರ್ವರಾಜ್ಯಂ ನಿನ್ನದು [೯-೧೮]

ಎಂದು ಘೋಷಿಸಿ, ತನ್ನ ಐವತ್ತು ಕೋಟಿ ವರುಷದ ತಪಸ್ಸಿನಲ್ಲಿ ಅರ್ಧವನ್ನು ಧಾರೆ ಎರೆಯುತ್ತದೆ. ಮೊದಲು ವಸಿಷ್ಠರ ಮೇಲೆ ಗುಡುಗಾಡುತಿದ್ದ ವಿಶ್ವಾಮಿತ್ರನೇ ಕಡೆಗೆ ಹರಿಶ್ಚಂದ್ರನಿಗೆ ಸತ್ಯಸಾಕ್ಷಾತ್ಕಾರವಾದಾಗ "ಮುನಿವರೇಣ್ಯ ವಿಶ್ವಾಮಿತ್ರ ಬಂದನು ವಸಿಷ್ಠಸಹಿತ!" ಅವರಿಬ್ಬರಲ್ಲಿಯೂ ಈಗ ಯಾವ ಹಗೆತನದ ಹೊಗೆಯೂ ಇಲ್ಲ. ಅವರಿಬ್ಬರೂ ಹರಿಶ್ಚಂದ್ರನ ಸತ್ಯಯಜ್ಞದ ಪುರೋಹಿತರು!

ಮೂರನೆಯದಾಗಿ, ಹರಿಶ್ಚಂದ್ರನ ಸತ್ಯಸಾಧನೆಯಲ್ಲಿ ಶಕ್ತಿಯಾದುದು ಸತಿ ಚಂದ್ರಮತಿಯ ಅಚಲವಾದ ವಿಶ್ವಾಸ ಮತ್ತು ಅನುಸರಣೆ. ಮಹಾವ್ಯಕ್ತಿಗಳ ಸಾಧನೆ ಯಲ್ಲಿ ಅವರ ಸಹಧರ್ಮಿಣಿಯರ ಸಾಧನೆಯೂ ಪೂರಕವಾಗಿರುತ್ತದೆ. ಸಾಧಕ, ಸಂಸಾರಿಯಾಗಿದ್ದರಂತೂ ಆತನ ಸಾಧನೆಗೆ ಸಹಧರ್ಮಿಣಿಯ ಅನುಮತಿ, ಅನುಸರಣೆ, ಅತ್ಯಂತ ಆವಶ್ಯಕ. ಹರಿಶ್ಚಂದ್ರನ ಸತ್ಯಸಾಧನೆಯಲ್ಲಿ ಚಂದ್ರಮತಿಯ ಪಾತ್ರ ಬಲು ಹಿರಿಯದು.

ಆಕೆಯನ್ನು ಕುರಿತು "ಪತಿಭಕ್ತಿಯೊಳರುಂಧತಿಗೆ ಸರಿ, ಜಸದೊಳು ಪರಮ ರೋಹಿಣಿಗೆ ಹೆಗಲೆಣೆ, ಪುಣ್ಯದೊಳು ಸ್ವಧಾತರುಣಿಗೋರಗೆ, ವಂದ್ಯತೆಯೊಳು ಗಾಯಿತ್ರಿಗೊರೆದೊರೆ" ಎಂದು ಕವಿಯ ವರ್ಣನೆ. ಹರಿಶ್ಚಂದ್ರನ ಮೇಲೆ ಕೌಶಿಕನ ಕಾಟ ಮೊದಲಾಗುವ ಆರಂಭದಲ್ಲಿ, ಬೇಟೆಯಾಯಾಸದಿಂದ ಬಳಲಿ ಮಲಗಿದ ಹರಿಶ್ಚಂದ್ರನಿಗೆ ಮುಂದೊದಗಲಿರುವ ಗತಿಯನ್ನು ಸೂಚಿಸುವಂತಹ ಕನಸೊಂದು ಬೀಳುತ್ತದೆ. ಆಗ ಆತ ಎಚ್ಚತ್ತು ಆ ಕನಸಿನ ಪರಿಯನ್ನು ವಿವರಿಸಿದಾಗ ಚಂದ್ರಮತಿ ಹರಿಶ್ಚಂದ್ರನನ್ನು ಕುರಿತು—

"ಬಗೆವಡೀ ಕನಸು ಗುರುವಾಜ್ಞೆಯಂ ಮೀರಿತ
ಕ್ಕೊಗೆವ ಸೂಚನೆ; ಮುನಿಯಬೇಡ, ಮಂ
ತ್ರಿಗೆ, ಮಗಂಗೆ, ಎನಗೆ, ರಾಜ್ಯಕ್ಕೆ, ಚತುರಂಗಸೇನೆಗೆ, ಸಕಲಭಾಂಡಾರಕೆ,
ನಗರಕ್ಕೆ, ಸರ್ವಪರಿವಾರಕ್ಕೆ, ತೇಜದೇ
ಳ್ಗೆಗೆ, ನಿನ್ನ ಹರಣಕ್ಕೆ, ಕೇಡುಬಂದಡೆ ಬರಲಿ;
ಮಿಗೆಸತ್ಯವಂ ಬಿಟ್ಟು ಕೆಡದಿರವನೀಶ ಕೈಮುಗಿದು ಬೇಡಿದೆನು . . ." [೪-೨೨]

ಎನ್ನುತ್ತಾಳೆ. ಚಂದ್ರಮತಿ ಹರಿಶ್ಚಂದ್ರನ ಸತ್ಯಯಾತ್ರೆಗೆ ಸಹಯಾತ್ರಿ ಮತ್ತು ಸ್ಫೂರ್ತಿ. ಆಕೆಯ ದೃಷ್ಟಿಗೆ ಎಲ್ಲಕ್ಕಿಂತ,—ತನಗಿಂತಲೂ, ಕಡೆಗೆ ತನ್ನ ಪತಿಗಿಂತಲೂ !—ಸತ್ಯವೇ ಮಿಗಿಲಾದುದು. ಆದುದರಿಂದ ಸಕಲ ರಾಜ್ಯಭ್ರಷ್ಟನಾದ ಹರಿಶ್ಚಂದ್ರನೊಡನೆ ತನ್ನ ಪತಿಯ ವರ್ತನೆಗಳೊಂದಕ್ಕೂ ತುಟಿಪಿಟಿಕ್ಕೆನ್ನದೆ ಮೌನವಾಗಿ ಹಿಂಬಾಲಿಸುತ್ತಾಳೆ. ಒಂದು ಚಕ್ರಾಧಿಪತ್ಯದ ಮಹಾರಾಣಿಯಾಗಿದ್ದವಳು ಕಲ್ಲು ಮುಳ್ಳಿನ ಹಾದಿಯನ್ನು ತುಳಿಯುತ್ತಾಳೆ. ಕೌಶಿಕನ ದಾವಾಗ್ನಿಯನ್ನು ಧೈರ್ಯವಾಗಿ ಎದುರಿಸುತ್ತಾಳೆ. ಆಕೆ ದಾವಾಗ್ನಿಯನ್ನು ಹೊಕ್ಕು ಬಂದ ಸಂದರ್ಭ ಆಕೆಯ ಪತಿಭಕ್ತಿಗೆ ಮತ್ತು ದೈವೀಶ್ರದ್ಧೆಗೆ ಒಡ್ಡಿದ ಅಗ್ನಿಪರೀಕ್ಷೆಯಂತಿದೆ. ಮುಂದೆ ನಿರ್ದಿಷ್ಟ ಅವಧಿಯಲ್ಲಿ ಸಾಲವನ್ನು ತೀರಿಸುವ ಬಗೆ ಹೇಗೆಂದು ಮುಂದುಗಾಣದೆ ಕೂತಿದ್ದಾಗ ಗಂಡನನ್ನು ಕುರಿತು "ಸಾಲದಲಿ ಪೋದನಿತು ಪೋಗಲಿ, ನಮ್ಮಿಬ್ಬರಂ ಮಾರು ಬಳಿಕುಳಿದುದಂ ಕಾಣು ನಡೆ" ಎಂದು ದಾರಿ ತೋರಿಸುತ್ತಾಳೆ. ಪತಿಯ ಸತ್ಯಸಾಧನೆಗಾಗಿ, ಪಶುಗಳಗಡಿಸಂತಿದ್ದ ಆ ವಿಪ್ರನ ಮನೆಯಲ್ಲಿ ದಾಸಿಯಾಗಿ ಅವಳು ಪಡಬಾರದ ಕಷ್ಟಗಳನ್ನು ಅನುಭವಿಸುತ್ತಾಳೆ. ಬಾಳಿನ ಕಣ್ಣಾದ ಲೋಹಿತಾಶ್ವನು ಹಾವುಕಡಿದು ಸತ್ತಾಗ, ಅವನನ್ನು ದಹಿಸಲು ಹಣವಿಲ್ಲದಿದ್ದಾಗ "ವಿಗತಸಪ್ತದ್ವೀಪಪತಿಯ ಬಸುರಲಿ ಬಂದು, ಮಗನೆ ನಿನಗೊಮ್ಮೆಟ್ಟು ಸುಡುಗಾಡು ಹಗೆಯಾಯ್ತೆ" ಎಂದು ಹಲುಬುತ್ತಾಳೆ. ಒಮ್ಮೆಯಾದರೂ ತಮ್ಮ ದುರ್ಗತಿಗಾಗಿ ಆ ವಿಶ್ವಾಮಿತ್ರನನ್ನು

ಶಪಿಸಲಿಲ್ಲ. ಗಂಡನ ವರ್ತನೆಯನ್ನು ಕುರಿತು ಗೊಣಗಲಿಲ್ಲ. ಶ್ಮಶಾನದಲ್ಲಿ ಚಾಂಡಾಲ ವೇಷದ ಹರಿಶ್ಚಂದ್ರ ಅವಳನ್ನು ಕುರಿತು "ಜನಕೆ ನಗೆಗೆಡೆಯಾದ ಪಾತಕ ಹರಿಶ್ಚಂದ್ರ ನವನನೇನೆಂದು ನೆನೆದಪೆ" ಎಂದಾಗ ಅವಳು—

ಜಡೆವೊತ್ತಡಂ, ಹಸಿಯ ತೊವಲುಟ್ಟೊಡಂ, ಸಾಡ
ಸುಡುಗಾಡಿನೊಳಗಿರ್ದಡಂ, ನರಕಪಾಲಮಂ
ಪಿಡಿದಿರ್ದಡಂ, ತಿರಿದು ವಿಷವುಂಡಡಂ, ಶವಶಿರೋಮಾಲೆಗಟ್ಟಿರ್ದಡಂ
ಕಡುಮರುಳ್ ಪಡೆಯ ಸಂಗಡ ಬತ್ತಲಿರ್ದಡಂ
ಮೃಡನಲ್ಲದಖಿಳಲೋಕಕ್ಕೊಡೆಯನಿಲ್ಲೆಂಬ
ನುಡಿಯಂತಿರೆ, ಎನಗೆ ಆ ಹರಿಶ್ಚಂದ್ರನಲ್ಲದೆ ಇನ್ನಾರುಗತಿಮತಿ? . . . [೮-೩೫]

ಎನ್ನುತ್ತಾಳೆ. ಹರಿಶ್ಚಂದ್ರನಿಗೆ "ಹರನೆಂಬುದೇ ಸತ್ಯ, ಸತ್ಯವೆಂಬುದೆ ಹರನು" ಎನ್ನುವುದರಲ್ಲಿ ಎಷ್ಟು ಶ್ರದ್ಧೆಯೋ, ಹಾಗೇ ಚಂದ್ರಮತಿಗೆ ಪತಿ ಎಂಬುದೇ ಹರನು ಹರನೆಂಬುದೇ ಪತಿಯು ಎನ್ನುವಷ್ಟರಮಟ್ಟಿನ ಶ್ರದ್ಧೆ! ಕಡೆಗೆ ಶ್ಮಶಾನದಲ್ಲಿ ಹರಿಶ್ಚಂದ್ರನು ಅವಳ ತಲೆಗಡಿಯಲು ಸಿದ್ಧನಾದಾಗ ಅವಳು ದೇವರಲ್ಲಿ ಮಾಡಿಕೊಂಡ ಪ್ರಾರ್ಥನೆ ಇದು.

"ಭೂಚಂದ್ರ ತಾರಾರ್ಕಂಬರಂ
ಕಲಿಹರಿಶ್ಚಂದ್ರರಾಯಂ ಸತ್ಯವೆರಸಿಬಾಳಲಿ,
ಮಗಂ ಮುಕ್ತನಾಗಲಿ, ಮಂತ್ರಿ ನೆನೆದುದಾಗಲಿ,
ರಾಜ್ಯದೊಡೆಯ ವಿಶ್ವಾಮಿತ್ರ ನಿತ್ಯನಾಗಲಿ . . ." [೯-೧೪]

ಇಂತಹ ಸಾಧ್ವೀಶಿರೋಮಣಿಯ ತಪಸ್‌ಶಕ್ತಿ ನೆರವಾದಾಗ ಹರಿಶ್ಚಂದ್ರ ಸತ್ಯ ಸಾಕ್ಷಾತ್ಕಾರಮಾಡಿಕೊಂಡುದು ಅಚ್ಚರಿಯೇನಲ್ಲ ಎನ್ನಿಸಿಬಿಡುತ್ತದೆ.

ಇದೆಲ್ಲಕ್ಕಿಂತ ಮಿಗಿಲಾದುದು ಹರಿಶ್ಚಂದ್ರನ ಅಚಲವಾದ ಶ್ರದ್ಧೆ. ಅದು ಆತನ ನಡೆಯಲ್ಲಿ—ನುಡಿಯಲ್ಲಿ ಕಾಣಿಸುತ್ತದೆ. ಆ ಶ್ರದ್ಧೆಗೆ ಅಳಿವಿನ ಭೀತಿ ಒಂದಿನಿತೂ ಇಲ್ಲ; ಅಂತಹ ವೀರಶ್ರದ್ಧೆ ಅದು. ಉದ್ದಕ್ಕೂ ಅವನು ನಡೆದುಕೊಳ್ಳುವ ರೀತಿಯಲ್ಲಿ, ಒದಗಿದ ಸನ್ನಿವೇಶಗಳನ್ನು ಎದುರಿಸುವ ಮನೋಭಾವದಲ್ಲಿ ಆ ಧಾರ್ಮಿಕಶ್ರದ್ಧೆ ಗೋಚರಿಸುತ್ತದೆ.

ಸತ್ಯಸಾಧಕರ ಯಾತ್ರೆ ಮೊದಲಾಗುವುದು ತ್ಯಾಗದಿಂದ. ತ್ಯಾಗ ಎಂದರೆ ಬಲವಂತದಿಂದ ಕೊಡುವುದಲ್ಲ, ಮಾತಿಗೆ ಸಿಕ್ಕಿದೆನಲ್ಲಾ ಎಂಬ ತಳಮಳದಿಂದ ಕೊಡುವುದಲ್ಲ. ಪ್ರತಿಫಲ ನಿರೀಕ್ಷೆಯಿಂದ ಮಾಡುವುದಲ್ಲ. ಅಥವಾ ಬೆಪ್ಪುತನದಿಂದ ಕೊಡುವುದಲ್ಲ. ಹರಿಶ್ಚಂದ್ರನ ತ್ಯಾಗ ಈ ಬಗೆಯದಲ್ಲ. ಆತನ ಪಾಲಿಗೆ ಸತ್ಯವೊಂದೇ ಹಿರಿದಾಗಿ ತೋರಿ ಉಳಿದುದೆಲ್ಲಾ ಕಿರಿದಾಗಿ ತೋರಿತು. ಲೌಕಿಕ ಭೋಗಗಳ ಮೇಲೆ ವಿರಕ್ತಿ ಬಂದಾಗ ಸಾಧಕನಿಗೆ ಈಶ್ವರೀಶಕ್ತಿಯ ಮೇಲಿನ ಅನುರಕ್ತಿ ಬಲಿಯುತ್ತದೆ.

ಹರಿಶ್ಚಂದ್ರನು ವಿಶ್ವಾಮಿತ್ರನಿಗೆ ಸಮಸ್ತ ರಾಜ್ಯ ಭಂಡಾರವನ್ನು ಒಪ್ಪಿಸುವಾಗ, ಅದು ತನ್ನದು ಎನ್ನುವುದಕ್ಕಿಂತ ಅದು ಯಾರದೋ ಎಂಬಂತೆ ಒಪ್ಪಿಸುತ್ತಾನೆ. ಆ ಸಂದರ್ಭದಲ್ಲಿ ಅವನ ಮನಸ್ಸು ಒಂದಿನಿತೂ ಅಳುಕುವುದಿಲ್ಲ; ರಾಜ್ಯ ಹೋಯಿತೇ ಎಂಬ ಕೊರಗಿನ ಛಾಯೆ ಕೂಡಾ ಸುಳಿಯುವುದಿಲ್ಲ. ಅವನು ನಗರವನ್ನು ಬಿಟ್ಟು ಹೊರಡುವ ಮೊದಲು ತನ್ನ ಪುರಜನರನ್ನು ಕುರಿತು

> ' ಈಗಳೆರಡನೆಯ ಶಿವನೆನಿಪ ಕೌಶಿಕನೊಡೆಯನಾದಪನು,
> ಆತನ ಪಾದಪಂಕಜಕ್ಕೆ, ಎನಗೆ ಬೆಸಕೈವಂತೆ ಕೈವುದು
> ಅಂಜುವುದು, ವಿನಯಮಂ ನುಡಿವುದು, ಓಲೈಸುತಿಹುದು [೬-೨೦]

ಎಂದು ಕೈಮುಗಿದು ಬೇಡಿಕೊಳ್ಳುತ್ತಾನೆ. ಇಲ್ಲಿ ಆತನ ಮಾನಸಿಕ ವಿಕಾಸದ ಪರಿಯನ್ನು ಕಾಣಬಹುದು.

ಮುಂದೆ ದಾರಿಯುದ್ದಕ್ಕೂ ನಕ್ಷತ್ರಕನ ಕಾಟದಲ್ಲಿ ಬೆಂದು, ಕಾಶೀನಗರಕ್ಕೆ ಬಂದು ತನಗೆ ಪ್ರಿಯರಾದ ಸತಿಸುತರನ್ನು ಮಾರಿ, ಕಡೆಗೆ ತನ್ನನ್ನೇ ವೀರಬಾಹುಕನಿಗೆ ಮಾರಿಕೊಂಡು "ಏಳಬುಧಿ ಕಡೆಯಾದ ಸರ್ವರಾಜ್ಯಶ್ರೀಯಮೇಳದೊಳು ವೀರ ಸಿರಿಯಂ ವಿಜಯಸಿರಿಗಳಂ ತಾಳಲಾಪದಟುಳ್ಳ ಭುಜ"ದ ಮೇಲೆ ಅನಾಮಿಕನ ಪದ ಭಾರವನ್ನು ಹೊತ್ತು, ನೀನು ಏನು ಹೇಳಿದರೂ ನಡೆಸುತ್ತೇನೆಂದು ನಂಬುಗೆಗೊಡುವ ಹರಿಶ್ಚಂದ್ರನ ವ್ಯಕ್ತಿತ್ವ ಧೀರವಾದುದು.

ಶ್ಮಶಾನ ಹರಿಶ್ಚಂದ್ರನ ಪಾಲಿಗೆ ಅಶುಭವಾದ ಸ್ಥಳವಲ್ಲ. ಅವನ ದೃಷ್ಟಿಗೆ ಈಗ ಹಿಂದಿನ ರಾಜ್ಯಪದವಿಗಳ ನಷ್ಟದ ಕೊರಗೂ ಇಲ್ಲ. ಅವನು ಮಹಾರಾಜ. ರಾಜ್ಯವಿರಲಿ ಇಲ್ಲದಿರಲಿ, ರಾಜ. ಮನೋಭಾವದಲ್ಲಿ ಮಹಾರಾಜನಾದುದರಿಂದಲೇ ಅವನು—

> ವರವಾರಣಾಸಿಮಧ್ಯವೆ ಲಾಳದೇಶ, ಅ
> ಚ್ಚರಿಯ ಕಾಶೀಪುರ ಅಯೋಧ್ಯೆ, ಶ್ಮಶಾನಧರೆ
> ಅರಮನೆ, ಪ್ರೇತಗಾಹಿನ ತವಗ ಮಣಿಪೀಠ, ಪರಿಣಾಮವಾರೋಗಣೆ.
> ಪರಮಧೃತಿ ಚತುರಂಗಸೇನೆ, ಸಂಬಳಿಗೋಲು
> ಕರವಾಳು, ಸತ್ಯ ಭಂಡಾರ, ಪತಿಯಾಜ್ಞೆ ಭಾ
> ಸುರತರಕ್ಷತ್ರಧರ್ಮಗಳೆಂದೇ ಕಾಣುತಿರ್ದನು . . . [೭-೫೩].

ಅವನೀಗ ಸಮದರ್ಶಿ. ಅರಮನೆಯೋ, ಶ್ಮಶಾನವೋ, ರಾಜ್ಯವೋ, ಸುಡುಗಾಡೋ ಎಲ್ಲವೂ ಒಂದೆ. ಕರ್ಮ ಬೇರೆಬೇರೆಯಾದರೂ ಮನೋಧರ್ಮ ಮಾತ್ರ ಒಂದೇ. ಇದು ಆತನ ಸಾಧನೆಯ ಶಿಖರ; ಸಿದ್ಧಿಯ ಮುಂಬೆಳಗು.

ಹರಿಶ್ಚಂದ್ರನ ಸಾಧನೆಯಲ್ಲಿ ಅತ್ಯಂತ ಮುಖ್ಯವಾದುದು ಈ ಶ್ಮಶಾನಪರ್ವ ! ಈ ಪ್ರಸಂಗ ಅತ್ಯಂತ ಸ್ವಾರಸ್ಯವೂ ಅರ್ಥಪೂರ್ಣವೂ ಆದುದು.

ಸತ್ಯಸಾಧಕರಿಗೆ ಈ ಜಗತ್ತು ಮಿಥ್ಯೆ ಎಂಬ ಅರಿವಿದ್ದರೆ ಸಾಲದು, ಅನುಭವವೂ ಅಗತ್ಯ. ಶ್ಮಶಾನ ಎಲ್ಲ ಲೌಕಿಕ ವಿಭವಗಳ ನಿಲುಗಡೆ. ಜೀವನ ನಶ್ವರ, ಮಿಥ್ಯೆ ಎಂಬ ಅರಿವು ಅನುಭವಕ್ಕೆ ಬರುವದಕ್ಕೆ ಶ್ಮಶಾನಕ್ಕಿಂತ ಮಿಗಿಲಾದ ಸ್ಥಳವುಂಟೆ? ಎಲ್ಲ ಲೌಕಿಕ ಸುಖದ ತೊರೆಗಳು ಹರಿದುಬರುವಂತಹ ಶ್ಮಶಾನದ ಕೇಂದ್ರದಲ್ಲಿ ಹರಿಶ್ಚಂದ್ರ ಕುಳಿತಿದ್ದಾನೆ. ದಿನಬೆಳಗಾದರೆ ನೂರಾರು ದೇಹಗಳು ಬಂದು ಅಲ್ಲಿ ಬೇಯುತ್ತವೆ. ಈ ಮಿಥ್ಯೆಯ ಲೀಲೆಯನ್ನು ಕಾಣುತ್ತಾ ಕಾಣುತ್ತಾ ಅವನ ಮನಸ್ಸು ಸತ್ಯನಿಷ್ಠೆಯನ್ನು ಇನ್ನೂ ಬೆಳಸಿಕೊಳ್ಳುತ್ತದೆ. ದಿನವೂ ಬೇಯುವ ನೂರಾರು ದೇಹಗಳು ಯಾರೋ ತನಗೆ ಸಂಬಂಧಿಸದೆ ಇದ್ದವರವು ಎಂದು ಅವುಗಳನ್ನು ಗಮನಿಸದೆ ತನ್ನ ಕರ್ತವ್ಯವನ್ನು ನಿರ್ವಹಿಸಬಹುದು. ಆದರೆ ಒಂದು ದಿನ ಅನಿರೀಕ್ಷಿತವಾಗಿ ಬರುತ್ತದೆ ತನ್ನ ಮಗ ರೋಹಿತಾಶ್ವನ ಶವ! ಪಿತೃ ಸಹಜವಾದ ವೇದನೆ, ಅವನನ್ನು ಕೊರೆಯುತ್ತದೆ. ತನ್ನನ್ನು ತಾನು ಶಪಿಸಿಕೊಳ್ಳುತ್ತಾನೆ. ಮಗನಿಗಾಗಿ ಕಂಬನಿ ಸುರಿಸುತ್ತಾನೆ. ಆದರೆ ಆ ಶೋಕದ ದಾರುಣತೆಯಲ್ಲಿಯೂ ತನ್ನ ಕರ್ತವ್ಯವನ್ನು ಮರೆಯುವುದಿಲ್ಲ. ತನ್ನ ಮಗನ ಶವವಾದರೇನು, ಯಾರದಾದರೇನು? ಆಗ ಚಂದ್ರಮತಿಗೆ ಹೇಳುತ್ತಾನೆ—

> "ತೆರೆಯನಿಕ್ಕದೆ ಸುಡಲ್‌ಬಾರದು; ಉಳ್ಳೊಡೆ ಕೊಡು,
> ಇಲ್ಲದಡೆ ಬೇಗದಿ ಹೋಗಿ ನಿನ್ನೊಡೆಯನಂ ಬೇಡಿ ತಾ.
> ತಾರದಿರೆ ಸುಡಲ್ಬೇಡ . . . . . ." [೮-೪೪]

ಅವನಿಗೆ ತನ್ನ ಮಗ ಮಡಿದನೆಂದು ಶೋಕಿಸಲು ಮಾತ್ರ ಅಧಿಕಾರ ಉಂಟು; ಆದರೆ ತನ್ನ ಮಗನ ಶವವೆಂದು ಉಚಿತವಾಗಿ ಸಂಸ್ಕಾರಮಾಡಲು ಅಧಿಕಾರವಿಲ್ಲ. ಏಕೆಂದರೆ ಅವನೀಗ ವೀರಬಾಹುಕನ ಸೇವಕ. ಎಂತಹ ಸ್ವಾಮಿನಿಷ್ಠೆ! ಇದು ಆತನಲ್ಲಿ ಅನುರಾಗಕ್ಕೂ ಕರ್ತವ್ಯಕ್ಕೂ ನಡೆದ ಘರ್ಷಣೆಯ ಫಲ.

ಈ ಘಟನೆ ನಡೆದ ಕೊಂಚಹೊತ್ತಿನಲ್ಲಿ ಆತ ಮತ್ತೊಂದು ಘಟನೆಯನ್ನೆದುರಿಸಬೇಕಾಗುತ್ತದೆ. ತೆರವನ್ನು ಬೇಡಿ ತರಲೆಂದು ನಡುವಿರುಳು ಮನೆಗೆ ಹೊರಟ ಚಂದ್ರಮತಿಯ ಮೇಲೆ ರಾಜಪುತ್ರ ವಧೆಯ ದೋಷವನ್ನು ಹೊರಿಸಿ ವೀರಬಾಹುಕನ ಸೇವಕರು ಅವಳ ತಲೆಗಡಿಯಬೇಕೆಂಬ ರಾಜಾಜ್ಞೆಯೊಡನೆ ಹರಿಶ್ಚಂದ್ರನ ಎದುರಿಗೆ ತಂದು ನಿಲ್ಲಿಸುತ್ತಾರೆ. ಹರಿಶ್ಚಂದ್ರ ಆಕೆಯನ್ನು ಚಂದ್ರಮತಿ ಎಂದು ತಿಳಿದಿರಲಿಲ್ಲ. ಯಾವಾಗ ಆಕೆ "ಕಲಿ ಹರಿಶ್ಚಂದ್ರರಾಯಂ ಸತ್ಯವೆರಸಿ ಬಾಳಲಿ" ಎಂದು ಹರಕೆಯನ್ನು ನುಡಿದಳೋ ಆಗ ಹರಿಶ್ಚಂದ್ರ ಬೆರಗಾಗುತ್ತಾನೆ. ಯಾವ ವಿಧಿ ಕೊಂಚ ಹೊತ್ತಿನ ಮುಂದೆ ಮಗನ ಮರಣವನ್ನು ತೋರಿತೋ ಅದೇ ಈಗ ತನ್ನ ಮಡದಿಯ ತಲೆಯನ್ನು ಕಡಿಸಲೂ ಹೊಂಚುಹಾಕಿರುವುದನ್ನು ತಿಳಿದು ವಿಧಿಲೀಲೆಗೆ ಚಕಿತನಾಗು

ತ್ತಾನೆ. ತನ್ನದೆಂದು ಕರೆದುಕೊಳ್ಳಬಹುದಾಗಿದ್ದವರು ಇಬ್ಬರು. ಒಬ್ಬ ಲೋಹಿತಾಶ್ವ, ಮತ್ತೊಬ್ಬಳು ಚಂದ್ರಮತಿ. ಆ ಇಬ್ಬರಲ್ಲಿ ಒಂದರ ಕತೆ ಮುಗಿಯಿತು; ಇನ್ನೊಂದನ್ನು ತಾನೇ ಮುಗಿಸಬೇಕಾಗಿದೆ. ತನ್ನದಾಗಿ ಉಳಿದುಕೊಂಡ ಒಂದೇ ಒಂದು ಮಧುರ ಬಂಧನವನ್ನು ಕಡಿಯಲು ಸಿದ್ಧನಾಗಿ ನಿಂತಿದ್ದಾನೆ. ಆಗಲೂ ಮೇಲಿನಿಂದ ವಿಶ್ವಾಮಿತ್ರನ ಪ್ರಲೋಭನೆಯ ಮಿಂಚು ಮಿಂಚಿತು; ಆದರೆ ಸತ್ಯನಿಷ್ಠನಾದ ಹರಿಶ್ಚಂದ್ರನ ದೃಢನಿರ್ಧಾರದ ಗುಡುಗು ಮೊಳಗಿತು—

"ವರಪುತ್ರನಸುವಳಿದು ಪೋದೊಡೇಂ, ನಾನೆನ್ನ
ತರುಣಿಯಂ ಕೊಂದೊಡೇಂ ಕುಂದೆ? ಸತ್ಯವನು ಬಿ
ಟ್ಟಿರನ್ ಎನಿಸಿದಡೆ ಸಾಕು . . . . . ." [೯-೭].

ಹರಿಶ್ಚಂದ್ರನು ಕಡಿಯಲು ನಿಂತಿದ್ದುದು ತನ್ನ ಚಂದ್ರಮತಿಯ ಕೊರಳನ್ನಲ್ಲ; ತನ್ನ ಮಮಕಾರದ ಮೂಲವನ್ನು, ನಾನು, ನನ್ನದು ಎಂಬ ಬಂಧನವನ್ನು! ಯಾವಾಗ ವ್ಯಕ್ತಿ ತನ್ನ ಅಳಿದುಳಿದ ಅಹಂಕಾರವನ್ನೂ ಕತ್ತರಿಸಲೂ ಸಿದ್ಧನಾಗುವನೋ ಆಗ ಅಲ್ಲಿಂದಲೇ ಮೂಡುತ್ತದೆ ಸಾಕ್ಷಾತ್ಕಾರದ ಜ್ಯೋತಿ. ಹರಿಶ್ಚಂದ್ರನು ಬೀಸಿದ ಖಡ್ಗಧಾರೆಯಿಂದ, ಚಂದ್ರಮತಿಯ ಕೊರಳಿಗೂ ತನ್ನ ಖಡ್ಗಕ್ಕೂ ಆದ ಘರ್ಷಣೆಯ ನಡುವಿನಿಂದಲೇ ಪಂಪಾಪತಿ ವಿರೂಪಾಕ್ಷ ಮೂಡಿಬರುತ್ತಾನೆ. ಆಗ "ಸರ್ವದೇವರು ಬಂದರಪ್ರತಿಮ ದೇವಾಧಿದೇವ ಪಂಪಾ ವಿರೂಪಾಕ್ಷನೆಡೆಗೆ". ಅದು ಅಂತಹ ಲೋಕೋತ್ತರವಾದ ಘಟನೆ. ಆ ಘಟನೆಯ ರೋಮಾಂಚಕಾರಿಯಾದ ಸುದ್ದಿ ಮೂಲೋಕಕ್ಕೂ ಹರಹುತ್ತದೆ. ಎಲ್ಲ ದಿವ್ಯಸಭೆಗಳಲ್ಲಿಯೂ "ಧರಣಿಪನ ಕಥನವೇ ಕಥನ, ಮಾತೇ ಮಾತು."

* * * *

ಹರಿಶ್ಚಂದ್ರನ ಕಥೆ ದಿವ್ಯಸಾಧಕನ ಕಥೆ. "ಹರನೆಂಬುದೇ ಸತ್ಯ, ಸತ್ಯವೆಂಬುದೆ ಹರನು ಎರಡಿಲ್ಲ" ಎಂದು ಶ್ರುತಿ ಸಾರುತ್ತಿರಲಾಗಿ ಅದನ್ನು "ನಿರುತವಮಾಡಿ ಮೂಜಗಕೆ ತೋರಿದ" ಮಹಾ ಪ್ರಯೋಗಪುರುಷ ಹರಿಶ್ಚಂದ್ರ. ಕಡೆಗೆ ಪಂಪಾಪತಿಯ ಸನ್ನಿಧಿಯಲ್ಲಿ ಗುರು ವಸಿಷ್ಠರು—

"ಕರುಣದಿಂ ಧರ್ಮಾರ್ಥ ಕಾಮ ಮೋಕ್ಷಂಗಳಂ
ಸುರಿದು ನಿನ್ನಯ ಪುಣ್ಯಕಥೆ ಸರ್ವಲೋಕದೊಳಗಿರಲಿ" [೯-೨೦].

ಎಂದು ಹರಸುತ್ತಾರೆ. ಋಷಿ ವಸಿಷ್ಠರ ಹರಕೆ ಚಿರಂತನವಾಗಿದೆ.*

ಜಿ. ಎಸ್. ಶಿವರುದ್ರಪ್ಪ

---

* ಇಲ್ಲಿ ಉದ್ಧರಿಸಿರುವ ಪದ್ಯಭಾಗಗಳು 'ಹರಿಶ್ಚಂದ್ರ ಕಾವ್ಯಸಂಗ್ರಹ'ದಿಂದ.

ವಿದ್ಯುನ್ಮೂರ್ತಿ

ಗೋಪೀವಲ್ಲಭದಾಸಶಾಸ್ತ್ರಿಗಳು ಮೈಸೂರಿಗೆ ಮೊದಲು ಸಲ ಬಂದದ್ದು ಈಗಲೇ. ಅವರ ಹಳ್ಳಿ ಆಧುನಿಕ ಜೀವನದ ತೋರಿಕೆ ಆಡಂಬರಗಳಿಂದ ದೂರವಾಗಿದೆ. ಬಸ್ಸು, ರೈಲು, ವಿದ್ಯುಚ್ಛಕ್ತಿ ಇವು ಯಾವುವೂ ಅದನ್ನು ಮುಟ್ಟಿಲ್ಲ. ಶಾಸ್ತ್ರಿಗಳು ಸಂಪ್ರದಾಯಶೀಲರೂ, ವೇದವಿತ್ತರೂ, ಶಾಸ್ತ್ರವೇತ್ತರೂ, ವಿದ್ಯಾನಿಧಿಗಳೂ ಆದ್ದರಿಂದ ಸರಳವಾದ ಹಳ್ಳಿಯ ಜೀವನ ಅವರಿಗೆ ಸಾಕಾಗಿದ್ದಿತು. ಅವರ ತಂದೆಯ ಹೆಸರು ಭಕ್ತಶಿರೋಮಣಿ ಗೋಕುಲದಾಸ ಶಾಸ್ತ್ರಿಗಳು. ಜಗದ್ಗುರು ಶ್ರೀ ಅಭಿನವ ನರಸಿಂಹಭಾರತೀ ಸ್ವಾಮಿಗಳು ಶಾಸ್ತ್ರಿಗಳ ಹರಿಕಥೆಯನ್ನು ಕೇಳಿ ಆನಂದಪಟ್ಟು ಕೊಟ್ಟ ಬಿರುದು ಅದು. ಅವರ ಪೂರ್ವಿಕರಲ್ಲಿ ಒಬ್ಬರು ಭಕ್ತಿಮಾರ್ಗವನ್ನು ಅತಿಯಾಗಿ ಮಾಡಿಕೊಂಡು ಹುಚ್ಚರಾಗಿದ್ದರಂತೆ: ಸದಾಕಾಲದಲ್ಲಿಯೂ "ವಾಸುದೇವ, ಬಾ! ಬಂದೆಯಾಪ್ಪ, ನಿನಗಾಗಿ ನಾನು ಕಾದಿದ್ದೆ. . . . ವಾಸುದೇವ, ಬಂದೆಯಾ, ಹೋದೆಯಾ? . . . . ಇನ್ನು ಯಾವಾಗ ಬರುವೆ?" ಎಂದು ಹೇಳುತ್ತಿದ್ದರಂತೆ. ಅವರಿಗೆ ಯಾವಾಗಲೂ ವಾಸುದೇವನ ಧ್ಯಾನ. ಇನ್ನೂ ಹಿಂದಕ್ಕೆ ಹೋದರೆ—ಸುಮಾರು ಏಳೆಂಟು ತಲೆಮಾರು ಹಿಂದಕ್ಕೆ—ಶಾಸ್ತ್ರಿಗಳ ಹಿರಿಯರೊಬ್ಬರು ಶುದ್ಧ ವೇದಾಂತಿಗಳ ಜೀವನ ನಡೆಸುತ್ತಿದ್ದರಂತೆ. ಬೆಳಗ್ಗೆದ್ದು ಹೊಳೆಯಲ್ಲಿ ಸ್ನಾನ ಮಾಡಿ ಬೆಳಗಿನ ಆಹ್ನಿಕ ಮುಗಿಸಿ, ಕೈಯಲ್ಲಿ ಒಂದು ಚೆಂಬು ಹಿಡಿದು ಭಿಕ್ಷಾಟನಕ್ಕೆ ಹೋಗುತ್ತಿದ್ದರು. ಅವರ ಹಿಂದೆ ನಾಲ್ಕಾರು ಶಿಷ್ಯರು ಗುರುಗಳಿಂದ ವೇದಪಾಠ ಹೇಳಿಸಿಕೊಂಡು ಹೋಗುತ್ತಿದ್ದರು. ಶಾಸ್ತ್ರಿಗಳು ಯಾವ ಬಗೆಯ ದಾನವನ್ನೂ ಪ್ರತಿಗ್ರಹ ಮಾಡಿದವರಲ್ಲ. ಆದರೆ ಶಿಷ್ಯರಿಗೆ ಮನೆಯಲ್ಲಿಯೇ ಊಟಹಾಕುವರು. ಚೆಂಬು ತುಂಬಿದಮೇಲೆ ಮನೆಗೆ ಬಂದು ಅದನ್ನು ಧರ್ಮಪತ್ನಿಯ ಮುಂದೆ ಬಗ್ಗಿಸಿ ಅದರಲ್ಲಿ ನೀರು ತುಂಬಿಕೊಂಡು ಹೋಗಿ ವೇದಪಾಠ ಹೇಳುವರು. ಅಲ್ಲಿಗೆ ಅವರು ಸಂಸಾರ ಭರಣಕ್ಕಾಗಿ ಮಾಡುವ ಕೆಲಸ ಮುಗಿಯಿತು. ಈ ದಿವ್ಯ ಜೀವನದ ಮಹತ್ವವನ್ನು ತಿಳಿದ ಆಸ್ತಿಕ ಶಿರೋಮಣಿಗಳು, ಅವರ ಮನೆಯವರು, ಜೊಗಸೆ ಅಕ್ಕಿಯಲ್ಲಿ ಚಿನ್ನ ಬೆಳ್ಳಿ ನಾಣ್ಯಗಳನ್ನು ಸೇರಿಸಿ ಇವರಿಗೆ ಭಿಕ್ಷೆ ಹಾಕುತ್ತಿದ್ದರು. ಇಂಥ ಕಾಲ, ಇಂಥ ಜೀವನ, ಇಂಥ ಸಮಾಜ ಹಿಂದೂ ಸಂಸ್ಕೃತಿಯ ಸುವರ್ಣಯುಗದ ಹೆಗ್ಗುರುತುಗಳಲ್ಲವೆ!

ಗೋಪೀವಲ್ಲಭದಾಸಶಾಸ್ತ್ರಿಗಳು ವಸ್ತುತಃ ಇದೇ ರೀತಿ ಜೀವನ ಮಾಡ ದಿದ್ದರೂ, ಆಧುನಿಕ ಜೀವನದ ಬಹು ದೋಷ ದುರ್ಗುಣಗಳಲ್ಲಿ ಯಾವುದೂ ಅವರ ಮನೆಯನ್ನು ಪ್ರವೇಶಿಸಿರಲಿಲ್ಲ. ವಂಶಾನುಗುಣವಾಗಿ ಬಂದ ವೇದವಿದ್ಯೆಯಲ್ಲಿ ಘನ ಪಾಠಿಗಳಾಗಿದ್ದರು. ಶಾಸ್ತ್ರಗಳನ್ನೋದಿದ್ದರು. ಪುರಾಣಗಳನ್ನು ಹೇಳುತ್ತಿದ್ದರು, ಹರಿಕಥೆಗಳನ್ನು ನಡೆಸುತ್ತಿದ್ದರು. ಜ್ಞಾನಮಾರ್ಗ ಭಕ್ತಿಮಾರ್ಗಗಳೆರಡೂ ಅವರಲ್ಲಿ ಒಂದುಗೂಡಿದ್ದುವು. ಸದಸದ್ವಿವೇಕ ಅವರಲ್ಲಿ ಚೆನ್ನಾಗಿ ಬೇರೂರಿದ್ದಿತು. ಎಲ್ಲ ಬಗೆಯ ಮೋಹಗಳೂ ಭ್ರಾಂತಿಗಳೂ ಅವರಿಂದ ದೂರವಾಗಿದ್ದುವು. ವಯಸ್ಸು ಐವತ್ತರ ಮೇಲಾಗಿದ್ದಿತು ; ಅವರ ಮನಸ್ಸು ಸುಸಂಸ್ಕೃತವಾಗಿದ್ದಿತು.

ವಿದ್ಯುದ್ವರ್ಣನೂ ಇಚ್ಛಾಶಕ್ತಿಸಹಿತನೂ ಆದ ಪರಮಾತ್ಮನ ಲೀಲೆ ವಿಶ್ವದಷ್ಟೂ ವೈವಿಧ್ಯದಿಂದ ಒಡಗೂಡಿದ್ದು. ಅವನ ಲೀಲೆಯ ಶಕ್ತಿ ಅಪಾರವಾದುದು; ಅದಕ್ಕೆ ಬಾಗದ ವೇದಾಂತಿ ಎಲ್ಲೂ ಸಿಗಲಾರ. ಶಾಸ್ತ್ರಿಗಳು ಮೈಸೂರಿಗೆ ಬಂದಾಗ ನವರಾತ್ರಿಯ ಮಹೋತ್ಸವದ ಕಾಲ. ದಸರಾ ವಸ್ತುಪ್ರದರ್ಶನ ನಡೆಯುತ್ತಿತ್ತು. ವಿದ್ಯುಚ್ಛಕ್ತಿಯ ದೀಪಗಳಿಂದ ಅಲಂಕೃತವಾಗಿ ರಂಜಿಸುತ್ತ, ಇಶ್ವೈವಾಣಿಯ ಸಂಗೀತ ಗಳನ್ನು ಹಾಡುತ್ತ ಬೀದಿಬೀದಿಯಲ್ಲಿ ಅಲೆಯುತ್ತಿದ್ದ ಬಸ್ಸುಗಳನ್ನು ನೋಡಿ ಬೆರಗಾ ದರು. ಅರಮನೆಯ ಮುಂಭಾಗದಲ್ಲಿ ನಿಂತು, ಸಹಸ್ರಾರು ಸಂಖ್ಯೆಯ ವಿದ್ಯುಚ್ಛಕ್ತಿಯ ದೀಪಗಳು ಏಕಕಾಲದಲ್ಲಿ ಬೆಳಕನ್ನು ಬೀರಲು ಮೊದಲಿಟ್ಟಾಗ. ಒಂದರೆಕ್ಷಣ ಅವರು ಸ್ತಂಭೀಭೂತರಾಗಿ ನಿಂತರು. ಅವರ ಮನಸ್ಸು ಆ ದಿವ್ಯಜ್ಯೋತಿಯಲ್ಲಿ ಒಂದಾಗಿ ಹೋಗಿತ್ತು. ಪಿ. ಸಿ. ಎಮ್. ತೆಗೆದುಕೊಂಡು ಮೊದಲ ತರಗತಿಯಲ್ಲಿ ಬಿ.ಎಸ್‌ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾಗಿ, ಕಾಲೇಜಿನಲ್ಲಿ ಅಧ್ಯಾಪಕನಾಗಿರುವ ಯುವಕನೇ ಈ ದಿವ್ಯ ದೃಶ್ಯವನ್ನು ನೋಡಿ ಬೆರಗಾದನೆಂದರೆ ಇನ್ನು ಶಾಸ್ತ್ರಿಗಳ ಆಶ್ಚರ್ಯಕ್ಕೆ ಪಾರವೆಲ್ಲಿಬಂದಿತು ! ಸಯಾಜಿರಾವ್ ರಸ್ತೆಯಲ್ಲಿ ಬೆಳಗುತ್ತಿದ್ದ ನಾಲ್ಕು ಸಾಲು ದೀಪ ಗಳು ಅವರ ಮನಸ್ಸಿಗೆ ಆಶ್ಚರ್ಯವನ್ನುಂಟುಮಾಡಿದವು. ಆಸ್ಪತ್ರೆಯ ಚೌಕದಿಂದ ನಿಂತು ನೋಡುವವರಿಗೆ ಅವು ದೀಪಗಳ ಸಾಲು ಮಾತ್ರವಾಗಿ ಕಾಣುತ್ತಿರಲಿಲ್ಲ. ವಿದ್ಯುಲ್ಲೇಖೆಯಂತೆ ಪ್ರಕಾಶಮಾನನಾದವನು ಪರಮಾತ್ಮನು ಎಂದು ಸೂಕ್ತಗಳು ಹೇಳುತ್ತವೆ. ಕ್ಷಣಿಕವೂ, ಆದರೆ ಅಪಾರಶಕ್ತಿಯ ಮಗುವೂ ಆದ ವಿದ್ಯುಲ್ಲೇಖೆಗಳ ತಂಡವನ್ನು ಹಿಡಿದು ಒಂದಕ್ಕೊಂದನ್ನು ಸೇರಿಸಿ ರಸ್ತೆಯುದ್ದಕ್ಕೂ ತೋರಣದಂತೆ ಕಟ್ಟಿರುವರೋ ಎನ್ನುವ ಭ್ರಾಂತಿ ಬರುತ್ತಿದ್ದಿತು.

ಈ ದೃಶ್ಯಗಳಿಂದ ತಲೆಯೆತ್ತಿದರೆ ಚಾಮುಂಡಿಬೆಟ್ಟದ ಮೇಲಿನ ಜ್ಯೋತಿರ್ಮಯ ದೃಶ್ಯಗಳು ಕಣ್ಣನ್ನು ಕೋರೈಸುತ್ತಿದ್ದುವು. ಕೆಲವು ವೇಳೆಗಳಲ್ಲಿ, ಮೋಡಗಳು

ಬೆಟ್ಟದ ಕೆಳಭಾಗವನ್ನು ಮುಚ್ಚಿರುವಾಗ, ಮೋಡಗಳು ಚಲಿಸುತ್ತಿದ್ದರೂ, ಮೋಡಗಳ ಮೇಲಿರುವ ಬೆಟ್ಟದ ಭಾಗ, ಅರಮನೆ, ಅಮರಾವತಿಯ ಚಿತ್ರವನ್ನು ಶಾಸ್ತ್ರಿಗಳ ನೆನಪಿಗೆ ತರುತ್ತಿದ್ದುವು. ಕಾಳರಾತ್ರಿಯ ದಿನ ಶಾಸ್ತ್ರಿಗಳು ರಾಯರ ಕಾರಿನಲ್ಲಿ ಚಾಮುಂಡೇಶ್ವರಿಯ ಸೇವೆಗೆ ಹೋಗಿದ್ದರು. ಮಧ್ಯೆ ನಿಂತು ಮೈಸೂರು ಪಟ್ಟಣದ ದೃಶ್ಯವನ್ನು ನೋಡಿ ಬೆರಗಾಗಿ ನಿಂತಿದ್ದಾಗ ರಾಯರ ಮಗ, ಆಧುನಿಕ ಕನ್ನಡಕವಿವರ್ಯರು ಇದೇ ದೃಶ್ಯವನ್ನು ವರ್ಣಿಸಿರುವ ಕವನದಿಂದ ಕೆಲವು ಪಂಕ್ತಿಗಳನ್ನು ಹೇಳಿದನು:

"ತಾರೆಗಳ ದಿಬ್ಬಣವು
ಗಗನದಿಂದೈತಂದು
ಬೆಟ್ಟದುದಿಯಲಿ ತಳುವಿ
ಸೋಪಾನಗಳನಿಳಿದು
ತಪ್ಪಲಲಿ ಮೇಳವಿಸಿ
. . . . . .
ಕವಿದು ಕಿಕ್ಕಿರಿದಂತೆ,
ಸಗ್ಗ ನೆಲಕಿಳಿದಂತೆ,
ಬಾನಿಳೆಗೆ ಬಿದ್ದಂತೆ,"

ಸಹಸ್ರಾರು ದೀಪಗಳು ರಾಜಧಾನಿಯನ್ನು ಬೆಳಗುತ್ತಿದ್ದುವು, ಪುರಾಣ ಇತಿಹಾಸಗಳಲ್ಲಿ ಶಾಸ್ತ್ರಿಗಳು ಓದಿದ್ದ ಅಲಕಾಪುರಿ ಇತ್ಯಾದಿ ದೇವನಗರಗಳ ನೆನಪು ಬಂದಿತು. ಆನಂದ ಆಶ್ಚರ್ಯಗಳು ಶಾಸ್ತ್ರಿಗಳ ಮನಸ್ಸು ಹೃದಯಗಳನ್ನು ತುಂಬಿದುವು.

ಮಾರನೆ ದಿನ ಶಾಸ್ತ್ರಿಗಳು ಪೇಟೆ ಬೀದಿಗಳಲ್ಲಿ ಹೋಗಿ ಬಟ್ಟೆ ಅಂಗಡಿಗಳಲ್ಲಿ ಬಣ್ಣಬಣ್ಣದ ಬಟ್ಟೆಗಳನ್ನು ನೋಡಿದರು. ಹಾಡುಗಳನ್ನು ಹಾಡುತ್ತಾ ಊರಿನ ಬೀದಿಗಳಲ್ಲಿ ಅಲೆಯುತ್ತಿದ್ದ ಬಸ್ಸು ಕಾರುಗಳು ಒಂದು ವಿಚಿತ್ರ ವಾತಾವರಣವನ್ನೆ ಕಲ್ಪಿಸಿದುವು. ದಾರಿಯುದ್ದಕ್ಕೂ ನಡೆದುಹೋಗುವಾಗ ಪ್ರತಿಯೊಂದು ಅಂಗಡಿಯಿಂದಲೂ ಬರುವ ರೇಡಿಯೋ ಹಾಡು, ಸಮಾಚಾರ ಒಂದೇ ಆಗಿರುತ್ತಿದ್ದಿತು. ಆಗ ಶಾಸ್ತ್ರಿಗಳಿಗೆ ಅನ್ನಿಸಿತು: ಒಬ್ಬನೇ ದೇವರು ಎಲ್ಲ ಕಡೆಯಲ್ಲಿಯೂ ಇರುತ್ತಾನೆ ಎಂದು ಜನಕ್ಕೆ ಹೇಳಲು ಇದೊಂದು ಉಪಾಯ. ಯಾವುದೋ ಒಂದು ಕ್ಷೇತ್ರದಿಂದ ಪ್ರಸಾರವಾಗುವ ಒಂದೇ ಹಾಡು, ಒಂದೇ ಕಾಲದಲ್ಲಿ ಬಹುಕಡೆಯಲ್ಲಿ ಕೇಳಿಬರುವುದು ಸಾಧ್ಯವಾಗಿದೆ; ಟೆಲಿವಿಷನ್ ಮೂಲಕ ಒಂದೇ ಚಿತ್ರ, ಏಕಕಾಲದಲ್ಲಿ ಬಹುಕಡೆಗಳಲ್ಲಿ ಕಾಣಿಸುವುದು ಸಾಧ್ಯವಾಗಿದೆ. ಶ್ರೀ ಕೃಷ್ಣನು ಏಕಕಾಲದಲ್ಲಿ ಬಹುಕಡೆಯಲ್ಲಿ ಕಾಣಿಸಿಕೊಂಡ ಎಂದು ಭಾರತದಲ್ಲಿ ಬರುವ ವಾಕ್ಯವನ್ನು ಆಧುನಿಕ ವಿದ್ಯಾವಂತರೂ ನಂಬಬಹುದು ಎಂದು ಶಾಸ್ತ್ರಿಗಳಿಗೆ ಭಾಸವಾಯಿತು. ಅವರಿಗೆ ಬಹು ಹೆಚ್ಚಿನ

ಆಶ್ಚರ್ಯವನ್ನುಂಟುಮಾಡಿದುದು ರೇಡಿಯೋ. ದೇಶವಿದೇಶಗಳ ಮಾತು, ಹಾಡು ಎಲ್ಲವನ್ನೂ ಕೇಳಿದರು; ಪರಮಾತ್ಮನ ಶಕ್ತಿ ಎಷ್ಟು ಅದ್ಭುತವೆಂದು ಪುನಃ ಪುನಃ ಚಕಿತರಾದರು. ಮಾನವನ ಬುದ್ಧಿಶಕ್ತಿಯೇ ಇಷ್ಟನ್ನು ಮಾಡಿದರೆ ಪರಮಾತ್ಮನ ಶಕ್ತಿ ಇನ್ನೇನನ್ನು ಮಾಡಲಾರದು ಎಂದುಕೊಂಡರು. ಆಧುನಿಕ ಪ್ರಪಂಚದ ನಾಗರಿಕತೆಯ ವೈಖರಿಯನ್ನು ನೋಡಿದ ಶಾಸ್ತ್ರಿಗಳಿಗೆ ಅನಾಸ್ತಿಕತೆ ಬರಲಿಲ್ಲ; ಅವರ ಆಸ್ತಿಕತೆ ಇನ್ನೂ ದೃಢವಾಯಿತು. ವಿಜ್ಞಾನ ಸಾಧಿಸಿರುವ ಕೃತ್ಯಗಳನ್ನು, ಕೊಟ್ಟಿರುವ ಭಾವನೆಗಳನ್ನು ಶಾಸ್ತ್ರಿಗಳು ನೋಡಿ, ಕೇಳಿದ್ದರ ಫಲ ಅವರ ವೈದಿಕ ಅಭಿಪ್ರಾಯಗಳು ಹೆಚ್ಚು ದೃಢವಾದುವು; ಸಡಿಲವಾಗಲಿಲ್ಲ. ಪರಮಾತ್ಮನ ಲೀಲೆ ಎಷ್ಟು ಅನಂತ, ಎಷ್ಟು ಅದ್ಭುತ ಎನ್ನುವುದನ್ನು ಕಣ್ಣಾರ ಕಂಡರು.

ಆದರೂ ಈ ಅದ್ಭುತಗಳೆಲ್ಲವೂ ಅವರ ಮನಸ್ಸಿನ ಮೇಲುಮಡಿಕೆಯನ್ನು ಕೆದಕಿದುವು; ಮನಸ್ಸು ಹೃದಯಗಳ ಆಳವನ್ನು ಮುಟ್ಟಲಿಲ್ಲ. ಮೈಸೂರಿನಲ್ಲಿಯೇ ಇರಬೇಕೆಂದಾಗಲಿ ಈ ವಸ್ತುಗಳನ್ನು ಅವರ ಹಳ್ಳಿಗೆ ತೆಗೆದುಕೊಂಡು ಹೋಗಬೇಕೆಂದಾಗಲಿ ಅವರ ಮನಸ್ಸಿಗೆ ಬರಲಿಲ್ಲ. ಚಪಲಗಳು, ಆಸೆಗಳು ಅವರನ್ನು ಆವರಿಸಲಿಲ್ಲ. ಒಂದು ಸಾಯಂಕಾಲ ದಸರಾ ವಸ್ತುಪ್ರದರ್ಶನಕ್ಕೆ ಹೋದರು. ಸುಮಾರು ಏಳು ಗಂಟೆ ವೇಳೆಗೆ ವಿದ್ಯುಚ್ಛಕ್ತಿಯ ಸಾಮಾನುಗಳನ್ನು ಮಾರಾಟಮಾಡುತ್ತಿದ್ದ ಅಂಗಡಿಯ ಮುಂಭಾಗಕ್ಕೆ ಬಂದರು. ಅವರು ಬರುವ ವೇಳೆಗೆ ಸರಿಯಾಗಿ, ಆ ಕ್ಷಣ ಸ್ವಿಚ್ ಹಾಕಿದ ಫಲವಾಗಿ, ಒಂದು ಶ್ರೀ ಕೃಷ್ಣ ವಿಗ್ರಹ ಅವರ ಮುಂದೆ ಬಂದು ನಿಂತಂತೆ ಆಯಿತು. ದಯಾಮಯನೂ, ಕರುಣಾಸಾಗರನೂ, ಭಕ್ತಪರಾಧೀನನೂ ಆದ ಶ್ರೀ ಕೃಷ್ಣಪರಮಾತ್ಮನು ಆಕಾಶಮಾರ್ಗದಿಂದ ಅದೃಶ್ಯನಾಗಿ ಬಂದು ಶಾಸ್ತ್ರಿಗಳ ಮುಂದೆ ನಿಂತಂತೆ ಆಯಿತು. ಆ ಕ್ಷಣದ ವರೆಗೂ ಇಲ್ಲದ ದಿವ್ಯಮೂರ್ತಿ ಇದ್ದಕ್ಕಿದ್ದಂತೆ ಕಣ್ಣುಮುಂದೆ ಬಂದು ನಿಂತರೆ ಶಾಸ್ತ್ರಿಗಳೊಬ್ಬರೇ ಅಲ್ಲ ಚಕಿತರಾಗಿ ನಿಂತವರು, ಬಹುಜನ ಅಲ್ಲಿಗೆ ನುಗ್ಗಿದರು. ವಿದ್ಯುಚ್ಛಕ್ತಿಯ ಬಹುಬಗೆಯ ಯಂತ್ರಗಳನ್ನೂ ಶಕ್ತಿಗಳನ್ನೂ ರೂಪುಗಳನ್ನೂ ಬಹು ಉಪಾಯಾಂತರದಿಂದ ಒಟ್ಟುಗೂಡಿಸಿ ತಯಾರಾಗಿದ್ದ ದಿವ್ಯ ಸುಂದರ ತೇಜೋಮಯ ವಿಗ್ರಹ ಅದು. ಅದರ ಎತ್ತರ ಸುಮಾರು ಐದು ಅಡಿ. ಕಳಕಳಿಸುವ ನಿರಾಜಿಯ ಉಡಿಗೆ. ಒಂದು ಕೈಯಲ್ಲಿ ಸುದರ್ಶನ ಚಕ್ರ; ಪ್ರಭೆಯನ್ನು ಚೆಲ್ಲುತ್ತ ವೇಗವಾಗಿ ತಿರುಗುತ್ತಿದೆ. ಇನ್ನೊಂದು ಕೈಯಲ್ಲಿ ಶಂಖ; ಆ ಕೈ ಚಲಿಸುತ್ತಿದೆ; ಶಂಖವನ್ನು ಬಾಯಿ ಹತ್ತಿರ ಆಗಾಗ್ಗೆ ತೆಗೆದುಕೊಂಡು ಹೋಗಿ ನಾದವನ್ನು ಕೊಡುತ್ತಿದೆ. ಮೂರನೆಯ ಕೈ ಅಭಯವನ್ನು ತೋರಿಸುತ್ತಿದೆ; ನಾಲ್ಕನೆಯದು ವರವನ್ನು ಕೊಡುತ್ತಿದೆ; ಈ ಎರಡು ಕೈಗಳೂ ಆಗಾಗ ಚಲಿಸುತ್ತಿವೆ. ಕೊರಳಲ್ಲಿ

ಪ್ರಜ್ವಲಿಸುವ ಹಾರ; ಬಹು ಬಣ್ಣಗಳನ್ನೊಳಗೊಂಡ ನವಮಣಿಗಳ ಹಾರಕ್ಕಿಂತಲೂ ಹೆಚ್ಚಿನ ತೇಜಸ್ಸು ಸೌಂದರ್ಯಗಳಿಂದ ಕೂಡಿದೆ. ಪ್ರಸನ್ನ ಮುಖಮುದ್ರೆ. ಈ ಎಲ್ಲವನ್ನೂ ಮೀರಿಸಿರುವ ಪ್ರಭೆ ತಲೆಯ ಸುತ್ತಲೂ ಹರಡಿದೆ. ಈ ದಿವ್ಯ ಸುಂದರ ಮೂರ್ತಿಯನ್ನು ನಾಗರಿಕರು ಒಂದೆರಡು ನಿಮಿಷ ನೋಡಿ ಕೆಲಸದ ಕೆಲಸಗಾರನ ಕೌಶಲ್ಯವನ್ನು ಕೊಂಡಾಡಿ ಮುಂದೆ ಹೋದರು. ಶಾಸ್ತ್ರಿಗಳು ನಿಂತಲ್ಲಿಯೇ ಅಚಲ ರಾಗಿ ನಿಂತು ದಿವ್ಯಮೂರ್ತಿಯನ್ನು ನೋಡುತ್ತ ಸುಮಾರು ಅರ್ಧ ಗಂಟೆ ಕಾಲ ನಿಂತುಬಿಟ್ಟರು. ಅವರಿಗೆ ಸುತ್ತಮುತ್ತಲ ಜನರ ಅಥವಾ ಆವರಣದ ನೆನಪೇ ಹೋಯಿತು. ಯಾರೂ ಶಾಸ್ತ್ರಿಗಳ ತಲ್ಲೀನತೆಗೆ ಭಂಗವನ್ನು ತರಲಿಲ್ಲ.

ಈ ಸಾಯುಜ್ಯಾವಸ್ಥೆಯಿಂದ ಎಚ್ಚೆತ್ತ ಶಾಸ್ತ್ರಿಗಳು ತೇಜೋಮಯವಾದ ಮೂರ್ತಿಯ ಸಮೀಪಕ್ಕೆ ಹೋಗಿ ಮೂರ್ತಿಯ ಭವ್ಯರೂಪವನ್ನು ಆಪಾದಮಸ್ತಕ ವಾಗಿ ಪರಿಶೀಲಿಸಿದರು. ಆಮೇಲೆ ಸ್ವಲ್ಪದೂರಕ್ಕೆ ಹೋಗಿ ಅಲ್ಲಿಂದ ನೋಡಿದರು. ನಿಂತ ಸ್ಥಳದಿಂದ ಎಡಬಲಗಳಿಗೆ ನಾಲ್ಕಾರು ಹೆಜ್ಜೆ ಹೋಗಿ ಅಲ್ಲಿಂದ ನೋಡಿದರು. ಎಷ್ಟು ನೋಡಿದರೂ ತೃಪ್ತಿಯೇ ಇಲ್ಲ. ಪರಿಣಾಮ, ಆ ದಿವ್ಯರೂಪ ಅವರ ಮನಸ್ಸಿ ನಲ್ಲಿ ಅಚಂಚಲವಾಗಿ, ದೃಢವಾಗಿ ನಿಂತಿತು. ಮನೆಗೆ ಹೋಗಿ ಆಹ್ನಿಕ ಮಾಡುವಾಗ "ಸರ್ವದೇವ ನಮಸ್ಕಾರಃ ಕೇಶವಂ ಪ್ರತಿಗಚ್ಛತಿ" ಎನ್ನುವ ಮಾತುಗಳು ಬಂದಾಗ ಇದೇ ವಿದ್ಯುನ್ಮೂರ್ತಿ ಮುಂದೆ ಬಂದು ನಿಂತಿತು. ಲಕ್ಷ್ಮೀನಾರಾಯಣ ಧ್ಯಾನವನ್ನು ಮಾಡುತ್ತ "ಉದ್ಯದಾದಿತ್ಯಸಂಕಾಶಂ ಪೀತವಾಸಂ ಚತುರ್ಭುಜಂ। ಶಂಖಚಕ್ರ ಗದಾಪಾಣಿಂ . . ." ಎಂದು ಧ್ಯಾನಿಸುವಾಗಲೂ ಇದೇ ತೇಜಃಪುಂಜಮೂರ್ತಿ ಭಾಸವಾಯಿತು. ಸಹಸ್ರಾದಿತ್ಯಸಂಕಾಶನೂ, ಧರ್ಮಾತ್ಮನೂ, ಸತ್ಯಸಂಧನೂ, ರಾವಣ ಅಂತಕನೂ ಆದ ಶ್ರೀ ರಾಮಚಂದ್ರನನ್ನು ಧ್ಯಾನಿಸುವಾಗಲೂ ಇದೇ ಮೂರ್ತಿ ಮನಸ್ಸನ್ನು ತುಂಬಿತು. ಶಾಸ್ತ್ರಿಗಳು ಊಟಮಾಡಿ "ಕೃಷ್ಣ ನೀ ಬೇಗನೆ ಬಾರೋ" ಎನ್ನುವ ಕೃತಿಯನ್ನು ಭಕ್ತಿಪರವಶರಾಗಿ ಒಂದು ಗಂಟೆಯ ಕಾಲ ಹಾಡಿ ಮಲಗಿದರು.

ದೇಹ ನಿದ್ರಾವಸ್ಥೆಯಲ್ಲಿದ್ದಿತು; ಆದರೆ ಮನಸ್ಸು ಎಚ್ಚರವಾಗಿಯೇ ಇದ್ದಿತು; ರಾತ್ರಿಯೆಲ್ಲಾ ಶಾಸ್ತ್ರಿಗಳಿಗೆ ಸ್ವಪ್ನದ ಮೇಲೆ ಸ್ವಪ್ನ. ಜಾಗ್ರದವಸ್ಥೆಯಲ್ಲಿ ಅವರು ಯಾವ ಯಾತ್ರೆಯನ್ನು ಮಾಡಿರಲಿಲ್ಲ. ಆದರೆ ಪ್ರಸಿದ್ಧ ಪವಿತ್ರಸ್ಥಳಗಳ ಮಹಿಮೆ ಯನ್ನು ಪುರಾಣ ಹೇಳುವಾಗ ತಿಳಿದಿದ್ದರು. ಅನೇಕ ವೇಳೆ ಸ್ವಪ್ನಾವಸ್ಥೆಯಲ್ಲಿ ಆ ಕ್ಷೇತ್ರ ಗಳಿಗೆ ಹೋಗಿ ಅಲ್ಲಿಯ ದೇವತಾದರ್ಶನಲಾಭವನ್ನು ಪಡೆದಿದ್ದರು. ಒಂದು ಬಾರಿ ತಿರುಪತಿಗೆ ಹೋದರಂತೆ; ದೇವಸ್ಥಾನದ ಬಳಿ ಜನರೇ ಇರಲಿಲ್ಲ; ಒಳಗೆ ಹೋದರು; ತೆರೆ ಹಾಕಿತ್ತು, ಆದರೂ ಅದರ ಮೂಲಕ ಆ ಕಲ್ಯಾಣಮೂರ್ತಿ ಕಂಡಿತು; "ಏನಪ್ಪಾ,

ನಿನ್ನ ದರ್ಶನಕ್ಕೆ ಬಂದರೆ, ಇಲ್ಲಿಯೂ ತಡೆಯೇ" ಎಂದು ಮನಸ್ಸಿನಲ್ಲಿ ದುಃಖಿಸಿದರು ಶಾಸ್ತ್ರಿಗಳು; "ಬೇಡ, ದುಃಖಿಸಬೇಡ, ನಾನೇ ನಿನ್ನ ಬಳಿ ಬರುತ್ತೇನೆ" ಎಂದು ಹೇಳಿ, ಕಾಮಿತಾರ್ಥಪ್ರದಾಯಕನಾದ ಶ್ರೀನಿವಾಸನು ಶಾಸ್ತ್ರಿಗಳ ಬಳಿಗೆ ಬರುತ್ತಿದ್ದನಂತೆ; ಶಾಸ್ತ್ರಿಗಳು ಆನಂದಸಾಗರದಲ್ಲಿ ತೇಲುತ್ತಿದ್ದರೂ, ಆ ಆನಂದ ಅನುಗ್ರಹಗಳಲ್ಲಿ ಭಾಗಿಯಾಗಲು ಅವರ ಅಮ್ಮನನ್ನು ಕೂಗಿದರು—ಸ್ವಪ್ನ ಅಲ್ಲಿಗೆ ಮುಗಿಯಿತು. ಶಾಸ್ತ್ರಿಗಳಿಗೆ ಸ್ವಪ್ನಪ್ರಪಂಚದ ಅನುಭವ ಹೆಚ್ಚು. ಇನ್ನೊಂದು ಬಾರಿ ಪುಣ್ಯಕ್ಷೇತ್ರವೊಂದಕ್ಕೆ ಹೋಗಿ, ಶಾಸ್ತ್ರಿಗಳು ಶ್ರೀ ಜಗದ್ಗುರು ಆದಿ ಶಂಕರಾಚಾರ್ಯರ ಕಂಚಿನ ಪ್ರತಿಮೆಯ ಮುಂದೆ ನಿಂತು ಧ್ಯಾನಿಸುತ್ತಿದಾರೆ. ಆ ವಿಗ್ರಹ ಜೀವಂತವಾಗಿ ಇವರನ್ನು ಆಲಿಂಗಿಸಿತಂತೆ . . . ಶಾಸ್ತ್ರಿಗಳಿಗೆ ಎಚ್ಚರವಾಯಿತು; ಆನಂದ, ದುಃಖ ಎರಡೂ ಅವರನ್ನು ಏಕಕಾಲದಲ್ಲಿ ತುಂಬಿದುವು. ಆದಿನ ರಾತ್ರಿಯಲ್ಲಿ ಕಂಚಿಯ ವರದರಾಜಸ್ವಾಮಿಯ ಮುಂದೆ ನಿಂತಾಗ, ವೆಂಕಟಾಚಲಪತಿಯ ವಿಗ್ರಹವೇ ಎದುರಿನಲ್ಲಿದ್ದಾಗ, ಬದರಿಯಲ್ಲಿ ಸಾಕ್ಷಾತ್ ನಾರಾಯಣನ ದರ್ಶನ ಮಾಡುವಾಗ, ಬೇಲೂರಿನ ಕೇಶವಸ್ವಾಮಿಯಲ್ಲಿ ದೃಷ್ಟಿ ನಿಂತಾಗ, ಕಾಶಿಯ ಬಿಂದುಮಾಧವನನ್ನು, ಗಯಾಕ್ಷೇತ್ರದ ಗದಾಧರನನ್ನು ಜನಾರ್ದನಸ್ವಾಮಿಯನ್ನು ನೋಡಿದಾಗಲೂ ಇದೇ ವಿದ್ಯುನ್ಮೂರ್ತಿ ಹಿನ್ನೆಲೆಯಿಂದ ಬಂದು ಶಾಸ್ತ್ರಿಗಳ ಮುಂದೆ ನಿಂತಿತು. ಬ್ರಾಹ್ಮೀಮುಹೂರ್ತದಲ್ಲೆದ್ದು ವಾಸುದೇವ ಮೂರ್ತಿಯ ಧ್ಯಾನಮಾಡುವಾಗಲೂ ಇದೇ ತೇಜೋರಾಶಿಯೆ ಅವರ ದೃಷ್ಟಿಗೆ ಗೋಚರವಾಯಿತು. ಈ ವಿದ್ಯುನ್ಮೂರ್ತಿ ಶಾಸ್ತ್ರಿಗಳ ಮನಸ್ಸಿನ ಒಳಮಡಿಕೆಯನ್ನು ಹೊಕ್ಕು ಅಲ್ಲಿ ಬೇರೂರಿತ್ತು. ಶಾಸ್ತ್ರಿಗಳು ಈ ವಿದ್ಯುನ್ಮೂರ್ತಿಯ ವಶರಾಗಿದ್ದರು. ಒಂದು ಬಗೆಯ ಮೋಹ ಶಾಸ್ತ್ರಿಗಳನ್ನು ಆವರಿಸಿತು.

ಮಾರನೆಯದಿನ ಸಾಯಂಕಾಲ ಶಾಸ್ತ್ರಿಗಳು ಪುನಃ ವಸ್ತುಪ್ರದರ್ಶನಕ್ಕೆ ಹೋದರು. ವಿದ್ಯುಚ್ಛಕ್ತಿಯ ವೈಭವ ಅವರ ಮೇಲೆ ಹಿಂದಿನ ಸಾಯಂಕಾಲದ ಪರಿಣಾಮವನ್ನೆ ಉಂಟುಮಾಡಿತು. ಶಾಸ್ತ್ರಿಗಳು ಅದರ ಬೆಲೆಯನ್ನು ವಿಚಾರಿಸಿದರು. ಎಡಗೈಯಲ್ಲಿರುವ ಸುದರ್ಶನ ಚಕ್ರ ಹೇಗೆ ಸತತವಾಗಿ ತಿರುಗುತ್ತೆ; ಬಲಗೈಯಿನ ಶಂಖ ಹೇಗೆ ಆಗಿಂದಾಗ ಬಾಯಿಬಳಿಗೆ ಬಂದು ನಾದಮಾಡುತ್ತೆ; ಕೊರಳಲ್ಲಿರುವ ರತ್ನಮಾಲೆಗೆ ಆ ಪ್ರಕಾಶ ಹೇಗೆ ಉಂಟಾಗುತ್ತೆ; ತಲೆಯ ಸುತ್ತಲ ಪ್ರಭೆ ಹೇಗೆ ಉತ್ಪನ್ನವಾಗುತ್ತೆ ಇತ್ಯಾದಿ ವಿಚಾರಗಳನ್ನು ಪ್ರಶ್ನೆಮಾಡಿ ತಿಳಿದರು. ಆ ಸ್ವಿಚ್ಚುಗಳು, ಆ ಮೋಟಾರುಗಳು, ಆ ಕ್ಲಾಕ್‌ವರ್ಕ್ ಎಲ್ಲವೂ ಶಾಸ್ತ್ರಿಗಳಿಗೆ ಸಂಪೂರ್ಣವಾಗಿ ಅರ್ಥವಾಗಲಿಲ್ಲ. ವಿಗ್ರಹವನ್ನು ಕೊಂಡುಕೊಳ್ಳುವ ಆಸೆ ಮನಸ್ಸಿನಲ್ಲಿ ಹುಟ್ಟಿತು. ಶಾಸ್ತ್ರಿಗಳು ಮನೆಗೆ ಹೋಗಿ ಊಟಮಾಡಿದರು. ಆ ಮೇಲೆ ಅವರ ಇಚ್ಛೆಯನ್ನು

ರಾಯರಿಗೆ ತಿಳಿಸಿದರು. ರಾಯರೂ, ಅವರ ಮಕ್ಕಳೂ, ವಿದ್ಯುಚ್ಛಕ್ತಿಯ ಯಂತ್ರಗಳಲ್ಲಿರುವ ತೊಡಕುಗಳನ್ನು ವಿವರಿಸಿದರು; ಮನೆಯಲ್ಲಿದ್ದ ರೇಡಿಯೋ ಯಂತ್ರವನ್ನು ಬಿಚ್ಚಿ ಅದರೊಳಗಿರುವ ತಂತಿಗಳ ಗೋಜನ್ನು ಯಂತ್ರದ ಜಟಿಲತೆಯನ್ನು ತೋರಿಸಿದರು. ಸಾಲದ್ದಕ್ಕೆ ಶಾಸ್ತ್ರಿಗಳ ಹಳ್ಳಿಯಲ್ಲಿ ವಿದ್ಯುಚ್ಛಕ್ತಿಯೇ ಇಲ್ಲ; ಇದನ್ನು ಕೊಂಡು ಅವರು ಮಾಡುವುದಾದರೂ ಏನು! ಈ ಮಾತುಗಳು ಶಾಸ್ತ್ರಿಗಳ ಮೋಹವನ್ನು ಸ್ವಲ್ಪವೂ ಕಡಿಮೆಮಾಡಲಿಲ್ಲ. ಮಾರನೆಯ ಬೆಳಿಗ್ಗೆ ವಸ್ತುಪ್ರದರ್ಶನಕ್ಕೆ ಹೋಗಿ ಅಂಗಡಿಯ ಮಾಲೀಕನಲ್ಲಿ ಚರ್ಚೆಮಾಡಿದರು. ವಿದ್ಯುಚ್ಛಕ್ತಿಯನ್ನು ಗಾಜಿನ ಪೆಟ್ಟಿಗೆಗಳಲ್ಲಿ ಕೂಡಿಟ್ಟು ತೆಗೆದುಕೊಂಡುಹೋಗಿ, ಹಳ್ಳಿಯಲ್ಲಿಯೂ ಈ ತೇಜೋಮೂರ್ತಿ ರಾರಾಜಿಸುವಂತೆ ಮಾಡಬಹುದು ಎಂದು ಹೇಳಿದ ಮಾತು ಶಾಸ್ತ್ರಿಗಳ ಆಸೆಯನ್ನು ಹೆಚ್ಚಿಸಿತು. ಗಲಾಟೆಯಿಲ್ಲದ ಆ ವೇಳೆಯಲ್ಲಿ ವಿದ್ಯುನ್ಮೂರ್ತಿಗೆ ಸಂಬಂಧಿಸಿದ ಯಂತ್ರಗಳು, ಸ್ವಿಚ್ಚುಗಳು ಮತ್ತು ಇತರ ವಿಷಯಗಳನ್ನು ಆದಷ್ಟು ಚೆನ್ನಾಗಿ ಪರಿಚಯಮಾಡಿಕೊಂಡರು. ಅದರ ಬೆಲೆಯನ್ನು ನಿಶ್ಚಯಮಾಡಿದರು; ಅವರ ವಿಳಾಸವನ್ನು ಅಂಗಡಿಯ ಮಾಲೀಕನಿಗೆ ಕೊಟ್ಟರು. ಸಾಯಂಕಾಲ ಪದ್ಧತಿಯಂತೆ ಬಂದು ಭವ್ಯಮೂರ್ತಿಯ ದರ್ಶನ ಮಾಡಿ ಮನೆಗೆ ಹೋದರು. ಆದರೆ ಆ ರಾತ್ರಿ ಸ್ವಪ್ನಗಳಿಲ್ಲ. ಸ್ವಪ್ನಾತೀತವಾದ ನಿದ್ರೆಯ ಸುಖವನ್ನನುಭವಿಸಿದರು.

ಬೆಳಗಿನ ಆಹ್ನಿಕವಾದಮೇಲೆ ರಾಯರನ್ನು ಜತೆಮಾಡಿಕೊಂಡು ವಸ್ತುಪ್ರದರ್ಶನಕ್ಕೆ ಹೋಗಿ ವಿದ್ಯುನ್ಮೂರ್ತಿಯ ಬೆಲೆಯನ್ನು ಸಂಪೂರ್ಣವಾಗಿ ಕೊಟ್ಟು, ವಿಳಾಸವನ್ನು ತಿಳಿಸಿದರು. ವಸ್ತುಪ್ರದರ್ಶನ ಮುಗಿದ ಮೂರು ದಿನಗಳೊಳಗೆ ಅವರ ಎಂಜಿನಿಯರು ಸಕಲ ಸಾಮಗ್ರಿಗಳನ್ನೂ ಕಂಪನಿಯ ಕಾರಿನಲ್ಲಿ ತಂದು ಅವರ ಹಳ್ಳಿಯ ಮನೆಯಲ್ಲಿ ಎಲ್ಲವನ್ನೂ ಸೇರಿಸಿಕೊಡುವನೆಂದು ಯಜಮಾನನು ಭರವಸೆ ಕೊಟ್ಟನು. ತೃಪ್ತರಾದ ಶಾಸ್ತ್ರಿಗಳು ಆ ಮಧ್ಯಾಹ್ನ ಊಟಮಾಡಿ ಹಳ್ಳಿಗೆ ತೆರಳಿದರು.

ಹಳ್ಳಿಯಲ್ಲಿ ಯಾರಿಗೂ ಈ ವಿಚಾರವನ್ನು ಶಾಸ್ತ್ರಿಗಳು ತಿಳಿಸಲಿಲ್ಲ. ಆದರೂ ವಿದ್ಯುನ್ಮೂರ್ತಿಯ ನಿರೀಕ್ಷಣೆಯಲ್ಲಿ, ಹಳ್ಳಿಯವರಿಗೆಲ್ಲಾ ಅದ್ಭುತವಾದ ದೃಶ್ಯವನ್ನು ತೋರಿಸುತ್ತೇನೆ ಎನ್ನುವ ಉತ್ಸಾಹದಲ್ಲಿ ನಾಲ್ಕಾರು ದಿನಗಳು ನಾಲ್ಕಾರು ಕ್ಷಣಗಳಂತೆ ಕಳೆದುಹೋದುವು. ಮಧ್ಯಾಹ್ನದ ವೇಳೆಯಲ್ಲಿ ಭಾಗವತಾದಿ ಪುರಾಣಗಳನ್ನು ಹೇಳುವಾಗ ಅವರ ವಾಣಿಯಲ್ಲಿ ಒಂದು ಹೊಸ ಶಕ್ತಿಯನ್ನೂ, ಅರ್ಥದಲ್ಲಿ ಹೊಸ ಸ್ಫೂರ್ತಿಯನ್ನೂ, ಅವರ ಭಾವನಾಶಕ್ತಿಯಲ್ಲಿ ಹೊಸ ಬೆಳಕನ್ನೂ ಜನರು ಕಂಡು ಅದರ ಪರಿಣಾಮವಾಗಿ ಉಂಟಾದ ಹೆಚ್ಚಿನ ಆನಂದವನ್ನು ಅನುಭವಿಸಿದರು. ಶಾಸ್ತ್ರಿಗಳ ಬಿಂಬ ಕಲ್ಪನಾಶಕ್ತಿ ಪುರಾಣ ಕೇಳುವವರ ಕಲ್ಪನಾಶಕ್ತಿಯನ್ನು ಬೆದಕಿ, ಎಚ್ಚರ

ಗೊಳಿಸಿದುದರ ಪರಿಣಾಮವಾಗಿ ಅವರ ಮನಸ್ಸುಗಳಲ್ಲಿಯೂ ಸಚ್ಚಿದಾನಂದಸ್ವರೂಪನಾದ ಪರಮಾತ್ಮನ ದಿವ್ಯರೂಪ ಅಚಲವಾಗಿ ನಿಂತಿತು. ಪುರಾಣ ಕೇಳುವವರಲ್ಲಿ ಹೊಸ ಶಕ್ತಿ ತೋರಿತು ; ಹೊಸ ಅನುಭವವುಂಟಾಯಿತು. ಅವರಿಗೆ ಶಾಸ್ತ್ರಿಗಳಲ್ಲಿದ್ದ ಪೂಜ್ಯಭಾವನೆ ಹೆಚ್ಚಿತು. ರಾತ್ರಿಯಲ್ಲಿ ಊಟ ಮುಗಿದು ಶಾಸ್ತ್ರಿಗಳು ಮಲಗಿದರೆ ಅವರಿಗೆ ಎರಡು ಬಗೆಯ ಮನೋವ್ಯಾಪಾರ ಗೋಚರವಾಗುತ್ತಿದ್ದಿತು. ಎಚ್ಚರಾವಸ್ಥೆಯಲ್ಲಿ ಉತ್ಸಾಹವೇ ಅವರನ್ನು ತುಂಬಿರುತ್ತಿದ್ದಿತು. ರಾತ್ರಿಯ ಮೌನ ಸ್ವಲ್ಪ ಉತ್ಸಾಹವನ್ನು ಕೊಟ್ಟು, ಅವರು ಒಂದು ನಿದ್ರೆಮಾಡಿ ಎದ್ದರೆಂದರೆ, ಅವರ ಮನಸ್ಸನ್ನು ಕಲಕಿ, ಸಂಶಯ ನಿರಾಶೆಗಳನ್ನು ಬಿತ್ತಿ, ಶಾಸ್ತ್ರಿಗಳ ಮೈ ಬೆಮರುವಂತೆ ಮಾಡುತ್ತಿದ್ದಿತು. ಅವರ ಮನಸ್ಸನ್ನು ಚುಚ್ಚುತ್ತಿದ್ದ ಪ್ರಶ್ನೆಗಳು ಇವು: ವಿದ್ಯುಸ್ಫೂರ್ತಿಯನ್ನು ಅಂಗಡಿಯವನು ಈ ಹಳ್ಳಿಗೆ ತರುವನೇ? ದಾರಿ ಚೆನ್ನಾಗಿಲ್ಲ, ಕಾರು ಅಥವಾ ಬಸ್ಸು ಬರುವುದಕ್ಕೆ ದಾರಿಯಲ್ಲಿ ಕಲ್ಲುಬಂಡೆಗಳಿವೆ. ಕಾರು ದಢಕ್ಕನೆ ದುಮುಕಿದಾಗ ವಿಗ್ರಹ ಭಿನ್ನವಾದರೊ? ಅಥವಾ ಯಂತ್ರದೊಳಗಿನ ತಂತಿಗಳ ಗೋಜಿನಲ್ಲಿ ಯಾವುದಾದರೊಂದು ಸಡಿಲವಾದರೋ? ಇಲ್ಲಿಗೆ ಬಂದ ಮೇಲೆ ಯಂತ್ರಗಳು ಸರಿಯಾಗಿ ಕೆಲಸಮಾಡದೆ, ವಿದ್ಯುಸ್ಫೂರ್ತಿ ತೇಜೋಹೀನವಾದರೋ? ಈ ಮನೋವೃತ್ತಿಯಿಂದ ಉಂಟಾದ ಸಂಕಟವನ್ನನುಭವಿಸಿದ ಮೇಲೆ, ಅವರ ಕಲ್ಪನಾಶಕ್ತಿ ಅಮಿತ ತೇಜಸ್ಸಿನ, ಸಹಸ್ರಾದಿತ್ಯ ಸಂಕಾಶನಾದ, ಸಚ್ಚಿದಾನಂದ ಮೂರ್ತಿಯಾದ ಕೃಷ್ಣಪರಮಾತ್ಮನ ವಿಗ್ರಹವನ್ನು ಸೃಷ್ಟಿಸುತ್ತಿದ್ದಿತು. ಅದರಲ್ಲಿ ಶಾಸ್ತ್ರಿಗಳ ಮನಸ್ಸು ತಲ್ಲೀನವಾಗಿ ಅವರು ನಿದ್ರಾಪರವಶರಾಗಿ ಬೆಳಗ್ಗೆ ಏಳುವ ವೇಳೆಗೆ ಆನಂದಮಯರಾಗಿರುತ್ತಿದ್ದರು. ಹಾಗೂ, ಅವರ ಕಲ್ಪನಾಶಕ್ತಿ ಸೃಷ್ಟಿಸುತ್ತಿದ್ದ ದಿವ್ಯಮೂರ್ತಿಯ ಪ್ರಕಾಶ ದಿನೇ ದಿನೇ ಹೆಚ್ಚುತ್ತಿದ್ದಿತು. ಅವರ ಪುರಾಣದಲ್ಲಿ ಹೆಚ್ಚಿನ ಸ್ಫೂರ್ತಿ ಕಾಣುತ್ತಿದ್ದಿತು.

ಒಂದು ದಿನ ಸಾಯಂಕಾಲ ಪುರಾಣ ಮುಗಿದು ಮಂಗಳಶ್ಲೋಕ ಹೇಳುವ ವೇಳೆಗೆ ಸರಿಯಾಗಿ ಬಸ್ಸೊಂದು ಶಾಸ್ತ್ರಿಗಳ ಮನೆಯ ಮುಂದೆ ಬಂದು ನಿಂತಿತು. ದಾರಿ ಚೆನ್ನಾಗಿರಲಿಲ್ಲ, ಬಸ್ಸು ಬಹು ಕುಲುಕಾಡಿತು. ಆದರೂ ಯಂತ್ರಗಳಿಗೆ ಏನೂ ಘಾಸಿಯಾಗಿರಲಾರದು ಎಂದು ಡ್ರೈವರ್ ಹೇಳಿದ. ಯಂತ್ರಗಳನ್ನು ಜೋಡಿಸಲು ಬಂದಿದ್ದ ಎಂಜಿನಿಯರ್ ಯುವಕ. ಏನು ಕೆಟ್ಟುಹೋಗಿದ್ದರೂ ಐದು ನಿಮಿಷಗಳಲ್ಲಿ ಎಲ್ಲವನ್ನು ಸರಿಮಾಡುವುದಾಗಿ ಅವನು ಭರವಸೆ ಕೊಟ್ಟ. ಆಗಲೇ ಕತ್ತಲು ಕವಿಯಲು ಆರಂಭವಾಗಿದ್ದುದರಿಂದಲೂ, ಮಾರ್ಗಾಯಾಸವಾಗಿದ್ದುದರಿಂದಲೂ ಅವರು ವಿಶ್ರಮಿಸಿಕೊಳ್ಳಲೇಬೇಕೆಂದು ಶಾಸ್ತ್ರಿಗಳು ಒತ್ತಾಯಮಾಡಿದರು. ಅವರಿಗೆ ಊಟ

ಉಪಚಾರಗಳಲ್ಲಿ ಯಾವ ಕೊರತೆಯೂ ಇಲ್ಲದಂತೆ ಶಾಸ್ತ್ರಿಗಳು ಏರ್ಪಾಡುಮಾಡಿದರು. ಮಾರನೆಯ ದಿನ ಊಟವಾದಮೇಲೆ ಯಂತ್ರಗಳ ಜೋಡಣೆಗೆ ಆರಂಭಮಾಡುವುದು ಸರಿಯೆಂದು ತಿಳಿಸಿ ಅತಿಥಿಗಳನ್ನು ಮಲಗುವಂತೆ ಹೇಳಿ, ಶಾಸ್ತ್ರಿಗಳೂ ಊಟಮಾಡಿ ಮಲಗಿದರು.

ಡ್ರೈವರ್ ಹೇಳಿದ ಮಾತುಗಳು ಅವರ ಮನಸ್ಸಿನಲ್ಲಿದ್ದ ಸಂಶಯವನ್ನು ಭದ್ರಪಡಿಸಿದುವು. ಯಂತ್ರಗಳು ಬಸ್ಸಿನ ಕುಲುಕಾಟದಿಂದ ಕೆಟ್ಟುಹೋಗಿರುವುವೆಂದೂ ವಿದ್ಯುನ್ಮೂರ್ತಿಯು ಪ್ರಕಾಶಿಸುವುದಿಲ್ಲವೆಂದೂ ಮನಸ್ಸಿಗೆ ದೃಢವಾಯಿತು. ಅವರ ಅವಿವೇಕ, ನಶ್ವರವಾದ ಈ ಮೂರ್ತಿಗೆ ಅವರು ಮೋಹಪಟ್ಟದ್ದು ತಪ್ಪು ಎಂದು ಅವರಿಗೆ ಗೋಚರವಾಯಿತು. ಮನಸ್ಸಿನಲ್ಲಿ ಸಂಕೋಚ, ಪರಿತಾಪಗಳು ಮೊಳಕೆ ಇಟ್ಟುವು. ದೇಹದಲ್ಲಿ ಒಂದು ಬಗೆಯ ನಿತ್ರಾಣ ತೋರಿಬಂದಿತು. ನಿದ್ರೆ ಬರಲಿಲ್ಲ. ಪುರುಷಸೂಕ್ತ, ನಾರಾಯಣಸೂಕ್ತ, ಪುರಾಣಪುಣ್ಯಕಥೆಗಳಲ್ಲಿ ವರ್ಣಿತವಾಗಿರುವ ಸಚ್ಚಿದಾನಂದನಾದ ಶ್ರೀ ಕೃಷ್ಣನ ದಿವ್ಯ ಮೂರ್ತಿಗಳನ್ನು ಶಾಸ್ತ್ರಿಗಳು ಧ್ಯಾನಿಸಿದರು. ಶರೀರವು ನಿದ್ರಾವಶವಾದ ಮೇಲೆ ಅವರ ಕಲ್ಪನೆಯಲ್ಲಿ ಅವರು ಸಹಸ್ರಾದಿತ್ಯ ಸಂಕಾಶನಾದ ದಿವ್ಯ ನಾರಾಯಣಮೂರ್ತಿಯ ರೂಪನ್ನು ನೋಡಿ ಅಮಿತ ಆನಂದವನ್ನನುಭವಿಸಿ ಶಾಂತಚಿತ್ತರಾಗಿ ಎದ್ದು ಪ್ರಾತಃಕರ್ಮಗಳನ್ನು ನೆರವೇರಿಸಿದರು. ಅತಿಥಿಗಳಿಗೆ ಸ್ನಾನ ಉಪಾಹಾರಾದಿ ಸೌಕರ್ಯಗಳನ್ನು ಕಲ್ಪಿಸಿಕೊಟ್ಟರು. ಊಟ, ವಿಶ್ರಾಂತಿಯಾದ ಮೇಲೆ ಶಾಸ್ತ್ರಿಗಳು ಪುರಾಣ ಹೇಳಲು ಆರಂಭಮಾಡಿದರು. ಎಂಜಿನಿಯರು ವಿದ್ಯುನ್ಮೂರ್ತಿಯ ಜೋಡಣೆಗೆ ಆರಂಭಮಾಡಿದನು. ಶಾಸ್ತ್ರಿಗಳ ಮಾತಿನಲ್ಲಿ ಹೆಚ್ಚಿನ ವಿವೇಕ, ಶಾಂತಿ, ಆನಂದಾನುಭವ ಕಂಡುಬಂದುವು. ಪುರಾಣ ಮುಗಿಯಿತು, ಕತ್ತಲಾಯಿತು, ಎಂಜಿನಿಯರಿಗೆ ಕೆಲಸದಲ್ಲಿ ಬೇಸರವಾಯಿತು. ವಿದ್ಯುನ್ಮೂರ್ತಿ ಬೆಳಗಲಿಲ್ಲ. ಹೊರನೋಟಕ್ಕೆ ಶಾಸ್ತ್ರಿಗಳಲ್ಲಿ ಯಾವ ಬದಲಾವಣೆಯೂ ಕಾಣಿಸಲಿಲ್ಲ. ಅತಿಥಿಗಳಿಗೆ ಹೆಚ್ಚಿನ ಉಪಚಾರ ಹೇಳಿದರು. ಊಟವಾಗಿ ಎಲ್ಲರೂ ಮಲಗಿದರು. ಆಯಾಸಪಟ್ಟ ಅತಿಥಿಗಳಿಗೆ ಬೇಗನೆ ಸುಖನಿದ್ರೆ ಬಂದಿತು. ಶಾಸ್ತ್ರಿಗಳಿಗೆ ದೇಹಾಯಾಸ ಬಹು ಹೆಚ್ಚಿದಂತೆ ತೋರಿತು, ಜ್ವರವೂ ಬಂದಿತು, ಬೆಳಗಿನ ವೇಳೆಗೆ ಜ್ವರ ಬಹು ಹೆಚ್ಚಿತು. ಶಾಸ್ತ್ರಿಗಳಿಗೆ ಜ್ಞಾನ ಹೋಯಿತು, ಅವರು ಬಹುಬಗೆಯ ಧ್ಯಾನಶ್ಲೋಕಗಳನ್ನು ಹೇಳಿ ದೇವರ ಸ್ತುತಿ ಮಾಡುತ್ತಿದ್ದರು. ಎಂಜಿನಿಯರು ವಿದ್ಯುನ್ಮೂರ್ತಿಯ ಯಂತ್ರಗಳನ್ನು ಸರಿಮಾಡಿಕೊಂಡುಬರುವುದಾಗಿ ಹೇಳಿ ಎಲ್ಲವನ್ನೂ ತೆಗೆದುಕೊಂಡು ಮೈಸೂರಿಗೆ ಬಂದನು. ಮಧ್ಯಾಹ್ನದ ವೇಳೆಗೆ ಶಾಸ್ತ್ರಿಗಳು ಸ್ತೋತ್ರಗಳನ್ನು ನಿಲ್ಲಿಸಿದರು. ಮುಖದಲ್ಲಿ ಶಾಂತಮುದ್ರೆ ತೋರಿತು; ದಿವ್ಯ ತೇಜಸ್ಸು ಮೂಡಿತು.

ಶಾಸ್ತ್ರಿಗಳ ಮುಖದಲ್ಲಿ ದೇವತಾಂಶವೇ ಹೆಚ್ಚುತ್ತಿರುವಂತೆ ಜನರಿಗೆ ಭಾಸವಾಯಿತು. ಶಾಸ್ತ್ರಿಗಳು ಯಾವ ಮಾತನ್ನೂ ಆಡಲಿಲ್ಲ; ಯಾರ ಮಾತೂ ಅವರಿಗೆ ಕೇಳಿಸಲಿಲ್ಲ. ಎರಡು ದಿನಗಳು ಈ ರೀತಿಯಲ್ಲಿ ಕಳೆದುವು. ಮೂರನೆ ದಿನ ಬೆಳಿಗ್ಗೆ ಶಾಸ್ತ್ರಿಗಳು ಎಂದಿನಂತೆ ಎದ್ದು ಆಹ್ನಿಕಗಳನ್ನು ಮಾಡಿದರು. ಊಟವಾಗಿ ವಿಶ್ರಾಂತಿಯಾದ ಮೇಲೆ ಪುರಾಣ ಹೇಳಲು ಆರಂಭಮಾಡಿದರು. ಶ್ರೋತೃಗಳಿಗೆ ಹೊಸ ಅನುಭವ. ಮಾತನಾಡುವವರು ಶಾಸ್ತ್ರಿಗಳಲ್ಲ, ದೇವರೇ ಎನ್ನಿಸಿತು. ಅವರ ಒಂದೊಂದು ಮಾತೂ ಪುರಾಣ ಕೇಳುವವರ ಹೃದಯದ ಆಳವನ್ನು ಮುಟ್ಟಿತು. ಕೋಟಿ ಭಾಸ್ಕರ ತೇಜಸ್ಸುಳ್ಳ ಅಮರಪ್ರಭನಾದ ಶ್ರೀಮನ್ನಾರಾಯಣನ ಕಲ್ಯಾಣಮೂರ್ತಿ ಅವರ ಅಂತಃಕರಣದಲ್ಲಿ ಅಚಲವಾಗಿ ನಿಂತಿತು. ಅವರ ಜನ್ಮ ಆ ದಿನ ಸಾರ್ಥಕವಾಯಿತು ಎಂದು ಪ್ರತಿಯೊಬ್ಬ ಶ್ರೋತೃವೂ ಭಾವಿಸಿದನು. ಗಂಡುಹೆಣ್ಣೆನ್ನುವ ಭೇದವಿಲ್ಲದೆ ಎಲ್ಲರಲ್ಲಿಯೂ ಒಂದೇ ಭಾವನೆ ಮೂಡಿದ್ದಿತು.

ಶಾಸ್ತ್ರಿಗಳು ಆನಂದಶಾಂತಿಗಳ ತವರಾಗಿ, ಎಂದಿನಂತೆ ಮಂಗಳಶ್ಲೋಕವನ್ನು ಹಾಡಿದರು. ಎಲ್ಲರೂ ಒಕ್ಕೊರಳಿನಿಂದ ಹಲವಾರು ದೇವರ ಹೆಸರನ್ನು ಹೇಳಿ ಜಯಘೋಷ ಮಾಡುತ್ತಿದ್ದರು. ಆ ವೇಳೆಗೆ ಅಂಚೆಯವನು ಶಾಸ್ತ್ರಿಗಳಿಗೆ ಒಂದು ಕಾಗದವನ್ನು ತಂದನು. ಶಾಸ್ತ್ರಿಗಳು ಅದನ್ನು ಓದಿಸಿ ಕೇಳಿದರು. ಅದು ಮೈಸೂರಿನಿಂದ ಎಂಜಿನೀಯರು ಬರೆದ ಕಾಗದ. ವಿದ್ಯುನ್ಮೂರ್ತಿ ಈಗ ಸರಿಯಾಗಿ ರಾರಾಜಿಸುತ್ತಿದೆ. ಶಾಸ್ತ್ರಿಗಳು ಶುಭದಿವಸವೊಂದನ್ನು ಗೊತ್ತುಮಾಡಿ ಪತ್ರ ಬರೆಯಬೇಕೆಂದೂ, ಆ ದಿನ ಮೈಸೂರಿಂದ ವಿದ್ಯುನ್ಮೂರ್ತಿಯನ್ನು ತಂದು ಶಾಸ್ತ್ರಿಗಳ ಹಳ್ಳಿಯ ಮನೆಯಲ್ಲಿ ಅದನ್ನು ಜೋಡಿಸುವರೆಂದೂ ಬರೆದಿದ್ದಿತು. ಶಾಸ್ತ್ರಿಗಳು ಕಿರುನಗೆಯಿಂದ ಪತ್ರವನ್ನು ಒಂದು ಕಡೆ ಇಡುವಂತೆ ಹೇಳಿದರು. ಪದ್ಧತಿ ಪ್ರಕಾರ ಪುರಾಣ ಕೇಳಲು ಬಂದವರಿಗೆಲ್ಲಾ ಪ್ರಸಾದ ವಿನಿಯೋಗಮಾಡಿದರು.

“ ಮಂ ”

ಮಹಾಸಂಗಮ*

ದೃಶ್ಯ ೧

ಬಸವಣ್ಣನವರ ಪೂಜಾಗೃಹದಿಂದ ಮೊದಲು ಟಿಂಟಿಣಿಸುವ ಘಂಟಾನಾದ ಓಂಕಾರರವದೊಡನೆ ತೇಲಿಬಂದು ಹಾಗೆಯೇ ಮಂದಮಂದವಾಗಿ ಕರಗುತ್ತದೆ. ಪೂಜಾಗೃಹದ ಮುಂದಿನ ನಡುಮನೆಯಲ್ಲಿ ಬಸವಣ್ಣನವರ ಸಾಕುಮಗಳು ಹಾಡುವ ವಚನವೊಂದು ಕೇಳಿಬರುತ್ತದೆ:

ಚಕೋರಂಗೆ ಚಂದ್ರಮನಾ ಬೆಳಗಿನ ಚಿಂತೆ
ಅಂಬುಜಕೆ ಭಾನುವಿನ ಉದಯದ ಚಿಂತೆ
ಭ್ರಮರಂಗೆ ಪರಿಮಳದ ಬಂಡುಂಬುವ ಚಿಂತೆ
ಎನಗೆ ನಮ್ಮ ಕೂಡಲ ಸಂಗಮನ ನೆನೆವ ಚಿಂತೆ

ಬಸವಣ್ಣ : (ಧೀರವಾಗಿ ಗಂಭೀರವಾಗಿ ಪ್ರವೇಶಿಸಿ ವ್ಯಾಕುಲ ಮುದ್ರೆಯಿಂದ ನಿಡುಸುಯ್ದು ತಮ್ಮಲ್ಲಿ ತಾವೆ).

ಕೂಡಲ ಸಂಗಮನ ನೆನೆವ ಚಿಂತೆ! . . . ಹೌದು.
ಅದಕಿಂದು ತುಂಬಿದರ್ಥ ಬಂದಿಹುದು . . .!
ಬರಿಯ ನೆನೆವ ಚಿಂತೆಯಲ್ಲ; . . . ಅವನೆಡೆಗೇ ಧಾವಿಸಿ ಹೋಗುವಾಸೆ.
ಲೋಕದಾವಾವ ಚಿಂತೆಗಳೊ ತಮ್ಮ ನೆರಳನು ಚೆಲ್ಲಿ
ಧೃತಿಯ ಕದಡಿವೆ ಇಂದು . . .!

ಸುಗ್ಗಲೆ : ಅದೇನು ಅಪ್ಪಾಜೀ ನಿಮಗೆ ಅಂತಹ ಚಿಂತೆ?
ಮೊದಲಿನಂತೆ ರಾಜಕಾರಣವಿಲ್ಲ
ಮಂತ್ರಿಪದವಿಯ ಹೊರೆಯಿಲ್ಲ
ದಾಸೋಹದಲ್ಲಿ ಕೊರೆಯಿಲ್ಲ
ಮತ್ತಾವ ಲೋಕ ಕಷ್ಟಕಾರ್ಪಣ್ಯಗಳ ಚಿಂತೆಯಿದೆ ನಿಮಗೆ?

ಬಸವಣ್ಣ : ಎಂಥದೋ ಅತೃಪ್ತಿ; ಎಂಥದೋ ತಳಮಳ
ಯಾವ ಶುಭಕೊ ಇಲ್ಲವೆ ಅಶುಭಕೊ ಕಾಣೆ
ಈ ತಳಮಳದ ಮುನ್ನುಡಿ.

---

* ೧೯೫೪ ನೇ ಏಪ್ರಿಲ್ ೫ ರಂದು A. I. R. ಮೈಸೂರಿನಿಂದ ಪ್ರಸಾರವಾದ ನಾಟಕ.

ಸುಗ್ಗಲೆ : ಶರಣನೆಂದೆಂದೂ ಧೃತಿಗೆಡಬಾರದು
ಶರಣನಿಗೆ ಕೆಚ್ಚಿರಬೇಕು ಎನ್ನಲಿಲ್ಲವೇ, ನೀವು ಅಪ್ಪಾಜಿ?

ಬಸವಣ್ಣ : ಹೌದವ್ವಾ ಕೆಚ್ಚಿರಬೇಕು
ಆದರಾ ಕೆಚ್ಚಿನಲಿ ನೆಚ್ಚಿರಬೇಕು
ಇಲ್ಲ . . . ಇಂದೇಕೊ ನನ್ನ ಸ್ಥಿತಿ
ಇಂತಾದುದಚ್ಚರಿಯೆ!

ಸುಗ್ಗಲೆ : ನನಗೂ ಅಚ್ಚರಿಯೆ ಅಪ್ಪಾಜಿ!
ದಿಟ. ಎಂದಿನಂತಿಲ್ಲ ನೀವಿಂದು.
ಯಾವುದೋ ಚಿಂತೆ; ಕಣ್ಣೊಳಗೆ . . . ಅದೋ
ಯಾವುದೋ ದೂರ ತೀರದ ಬೆಳಕು!

ಬಸವಣ್ಣ : ಕಪ್ಪಡಿಯ ಸಂಗಮನ ನೆನಪಾಗುತಿದೆ ಇಂದು
ಅಲ್ಲಿಂದ ಶ್ರೀ ಸೂತ್ರ ಬಾ ಎಂದು ಎಳೆಯುತಿದೆ!
ಯಾವುದಾದರೂ ಒಂದು ವಚನವನು ಹಾಡವ್ವ ಸುಗ್ಗಲಾ.
ಎನಿತೊಸಲ ನಿನ್ನ ಈ ಸಂಗೀತ ನೆಮ್ಮದಿಯನಿತ್ತಿಹುದು.

ಸುಗ್ಗಲೆ : (ವೀಣೆಯನ್ನು ನುಡಿಸಿಕೊಂಡು ಅದಕ್ಕೆ ಎಣೆಯಾದ ಮಧುರಕಂಠದಿಂದ ಹಾಡುವಳು : ಬಾಳ ವ್ಯಾಕುಲತೆಯನ್ನೇ ತೋಡಿಕೊಂಡಂತೆ)
ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೊ?
ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ
ಮನೆಯೊಳಗೆ ಮನೆಯಯೊಡೆಯನಿದ್ದಾನೊ ಇಲ್ಲವೊ?
ತನುವಿನಲಿ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ
ಮನೆಯೊಳಗೆ ಮನೆಯೊಡೆಯನಿಲ್ಲ.
ಕೂಡಲಸಂಗಮ ದೇವ!

ಬಸವಣ್ಣ : (ಅಂತರ್ಮುಖಿಯಾಗಿ)
"ಮನೆಯೊಳಗೆ ಮನೆಯೊಡೆಯನಿಲ್ಲ!"
ಹೌದು. ಮನೆಯೊಳಗೆ ಮನೆಯೊಡೆಯನಿಲ್ಲ!
ಮನೆಯೊಳಗೆ ಮನೆಯೊಡೆಯನಿದ್ದಿರಲು
ಈ ಎಲ್ಲ ತಳಮಳವೇಕೆ? . . . .
ಇಲ್ಲ. ಸಂಗನಾಥಂಗಿನ್ನೂ ದಯೆ ಬರಲಿಲ್ಲ.
ಬಾಳಿನುದ್ದಕು ನನ್ನ ಅರೆದು ನೋಡಿದುದಾಯ್ತು,

ಒರೆದು ನೋಡಿದುದಾಯ್ತು!
ಪರೀಕ್ಷೆ! ಪರೀಕ್ಷೆ!
ಬಾಳೆಲ್ಲ ಪರೀಕ್ಷೆ!

[ಅಷ್ಟು ಹೊತ್ತಿಗೆ ಪಡಿಹಾರಿ ಬರುತ್ತಾನೆ]

ಪಡಿಹಾರಿ: ಶರಣು ಅಣ್ಣನವರಿಗೆ: ರಾಯಸದ ಸಂಕಣ್ಣ ಬಂದಿದಾನೆ ತಮ್ಮನ್ನು ಕಾಣಬೇಕು ಎನ್ನುತ್ತಾನೆ.

ಬಸವಣ್ಣ: ಒಳಗೆ ಬರಹೇಳು ಉತ್ತಣ್ಣ.

[ಕೊಂಚ ಹೊತ್ತಿನಲ್ಲಿ ಸಂಕಣ್ಣ ಬರುತ್ತಾನೆ]

ಸಂಕಣ್ಣ: ಶರಣು ಅಣ್ಣನವರೇ

ಬಸವಣ್ಣ: ಶರಣು ಶರಣು ಸಂಕಣ್ಣ. ಬಾ, ಇಲ್ಲಿ ಕುಳಿತುಕೊ

ಸಂಕಣ್ಣ: ಅಣ್ಣನವರು ಮಗಳ ಹಾಡು ಕೇಳುತಿದ್ದಿರೇನೊ?

ಬಸವಣ್ಣ: ಹೌದು. ಶಿವಕೀರ್ತನೆಯಲ್ಲಿದ್ದೆವು.

ಸಂಕಣ್ಣ: ಅಣ್ಣನವರಂತೂ ಬಲು ಅಪರೂಪವಾಗಿ ಬಿಟ್ಟಿರಿ
ಬಿಜ್ಜಳನ ಮಂತ್ರಿಯಾಗಿದ್ದಾಗ ಆಗಾಗ
ಕಾಣುತಿದ್ದಿರಿ ನಮಗೆ. ಈಗ ನೀವಾಯಿತು.
ನಿಮ್ಮ ಮನೆಯಾಯಿತು!

ಬಸವಣ್ಣ: ಅದೂ ಒಳಿತೆ ಸಂಕಣ್ಣ. ದಿನ ದಿನವು
ಬಿಗಿವ ಬಂಧನ ಸಡಿಲವಾಗದಿದ್ದರೆ ನಮಗೆ
ಶಿವಚಿಂತೆಗನುವೆಲ್ಲಿ? ಕೂಡಲ ಸಂಗಯ್ಯನೇ ಇಂತು
ಬಿಜ್ಜಳನ ಮನಹೊಕ್ಕು ನನಗೆ ಈ
ಏರ್ಪಾಡು ಮಾಡಿರಬೇಕು

ಸಂಕಣ್ಣ: ಹಾಗೇನು? ನಮ್ಮಲ್ಲಿ ಬಹಳ ಜನ
ಬಿಜ್ಜಳನಿಗೂ ತಮಗು ಏನೇನೊ ಮನಸ್ತಾಪವಾಯಿತು
ಆದರಿಂದ ನೀವು ಪ್ರಧಾನಿಪಟ್ಟವ ಬಿಟ್ಟಿರಿ ಎಂದು
ಭಾವಿಸಿದ್ದೆವು ನೋಡಿ!

ಬಸವಣ್ಣ: (ನಸನಕ್ಕು) ಹಾಗೇನು? ಹೌದು. ಯಾರಿಗೂ ತಿಳಿಯದಿದು
ಗೆಳೆಯ ಬಿಜ್ಜಳದೇವ ತಾನೆ ಜಿಡುಗಡೆ ಮಾಡಿ
ಚೆನ್ನಬಸವಣ್ಣನಿಗೆ ಮಂತ್ರಿಪದವಿಯ ಹೇರಿ

ನನ್ನ ಭಕ್ತಿಯ ಬೆಳೆಗೆ ಅನುವು ಮಾಡಿಹನಿಂತು!
ಏನವನ ಅಕ್ಕರೆ! ಎಷ್ಟೊಂದು ಭಕ್ತಿ.

ಸಂಕಣ್ಣ : ಅಂತಿರ್ದನೇ ದೊರೆ? ತಿಳಿಯದಿದ್ದೆವೆ ನಾವು?
ನಮಗೆ ತಿಳಿದಿಹುದಿಷ್ಟು : ದೊರೆಯ ಮನ ಒಡೆದಿಹುದು.
ಕೇಳಲಿಲ್ಲವೆ ನೀವು?
ಹರಳಯ್ಯ ಮಧುವಯ್ಯಗಳ ಸಂಬಂಧ
ಎಂಥ ಕೋಲಾಹಲವನೆಬ್ಬಿಸಿಹುದೆಂದು?

ಬಸವಣ್ಣ : ಅದಕೇನು ಕೋಲಾಹಲ?
ಅನುಭಾವ ಮಂಟಪದ ಹಿರಿಯರೊಪ್ಪಿಹರದಕೆ.

ಸಂಕಣ್ಣ : ಹಿರಿಯರೊಪ್ಪಿಗೆಯಿಂದ ಆದುದಾಸಂಬಂಧ ದಿಟ.
ಆದರದು ಕುಲದ ಹಿರಿತನದ ಹೆಮ್ಮೆಯ ಜನಕೆ
ಹಿಡಿಸಲಿಲ್ಲಣ್ಣಯ್ಯ.
ಹೊಲೆಯರಿಗೂ ದ್ವಿಜರಿಗೂ ಸಂಬಂಧವನು ಮಾಡಿ
ಜಾತಿಸಂಕರವಾಯ್ತು, ಧರ್ಮಕ್ಕೆ ಚ್ಯುತಿಯಾಯ್ತು
ಎಂಬ ಹುಯ್ಯಲು ಇಂದು ಊರೆಲ್ಲ ತುಂಬಿಹುದು.
ದ್ವಿಜರೆಲ್ಲ ದೊರೆಯೆಡೆಗೆ ದೂರಸೊಯ್ದಿಹರಂತೆ.

ಬಸವಣ್ಣ : ದೊರೆಯೇನು ತಿಳಿಯದವನೇ?
ಶರಣವತ್ಸಲನವನು. ಧರ್ಮಾಧರ್ಮಗಳ
ತಿಳಿದವನು ಅವನು.

ಸಂಕಣ್ಣ : ಆದರೂ ಅಣ್ಣನವರೇ ಈಗೆದ್ದಿರುವ ಈ ಗಲಭೆ
ಎಂಥವರ ಮನವನೂ ಎತ್ತ ಬೇಕೊ ಅತ್ತ
ತಿರುಗಿಸುವ ತೆರನಿಹುದು. ಆಗಿಹುದು ಸಾಮಾನ್ಯ
ಸಂಗತಿಯೆ? ಗುಣದಿಂದಲೇ ಕುಲದ ಶ್ರೇಷ್ಠತೆ
ಯೆಂಬ ಹಿರಿ ಸಂದೇಶದಾಚರಣೆಗಿದು ರೂಪ.
ಕ್ರಾಂತಿಯಲ್ಲವೆ ಮತ್ತೆ ಬಹುದಿನದ ವರ್ಣಸಂಪ್ರದಾಯಕ್ಕೆ.
ಬಿಜ್ಜಳನೂ ಹೊರತಲ್ಲ. ಅದಕೆ ಅವನೂ ಬಂದಿ.

ಬಸವಣ್ಣ : ವಿಪ್ರ ಮೊದಲು ಅಂತ್ಯಜ ಕಡೆಯಾಗಿ
ಶಿವಭಕ್ತರೆಲ್ಲರೂ ಒಂದೆ ಎಂಬೆನು ನಾನು.
ಅಷ್ಟಕ್ಕು ಮಧುವಯ್ಯ ಹರಳಯ್ಯ ಶಿವಶರಣ

ರಾಗಿರಲು ವರ್ಣಸಂಕರವೆಲ್ಲಿ ?
ನಮ್ಮ ಜನದಲಿ ನಡೆದ ಮದುವೆಯಲಿ
ಬೇರೆ ಜನರಾಕ್ಷೇಪಕವಕಾಶವೆಲ್ಲಿಹುದು ?
ಅದ . . . (ಮಾತು ಪೂರೈಸುತ್ತಿದ್ದಂತೆ ಪ್ರತಿಹಾರಿ ಓಡಿಬರುತ್ತಾನೆ)

ಪಡಿಹಾರಿ : (ಏದುತ್ತ ಗಾಬರಿಯಾಗಿ)
ಪ್ರಮಾದ ! ಅಣ್ಣನವರೆ ಪ್ರಮಾದ.

ಸಂಕಣ್ಣ
ಬಸವಣ್ಣ (ಏಕಕಾಲದಲ್ಲಿ)—ಆ ! ಏನದು ಪ್ರಮಾದ ?
ಸುಗ್ಗಲೆ

ಪಡಿಹಾರಿ : ಹರಳಯ್ಯ ಮಧುವಯ್ಯ ಭಕ್ತರನು ಆನೆ ಕಾಲಿಗೆ ಕಟ್ಟಿ
ಎಳಸುತಿಹರಂತೆ. ದೊರೆಯಾಜ್ಞೆ ಎನುತಿಹರು.
ಊರೆಲ್ಲ ಕೋಲಾಹಲ ! ಜನ ರೋಷಗೊಂಡಿಹರು.
ಭೀತರಾಗಿಹರಿನ್ನು ಕೆಲರು.

ಬಸವಣ್ಣ : ಶಿವ ಶಿವಾ ! ಶಿವ ಶಿವಾ ! ಬಿಜ್ಜಳನ ಕಜ್ಜವೇ ಇದು !
ಹಿಂಸೆ ನಡೆದುದೆ ಪುಣ್ಯಕಲ್ಯಾಣದಲಿ !
ಇಲ್ಲ ಎನಬಾರದೆ, ಇದು ಹುಸಿ ಎನಬಾರದೆ.
. . . ಬಿಜ್ಜಳನ ಕೈಯಿರಲಾರದಿಲ್ಲಿ.

ಸಂಕಣ್ಣ : ಯಾಕಿಲ್ಲ ಬಸವರಸ. ಅವನದೇ ಕೈವಾಡ.
ಸಂದೇಹವಿನಿತಿಲ್ಲ. ನಿಮ್ಮ ಒಳ್ಳೆಯತನವು
ಬೇರೆಯವರಲ್ಲಿಯೂ ಒಳ್ಳಿತನೆ ಕಾಣುವುದು
ಏನು ಸೋಜಿಗವಲ್ಲ. ಹೊರಜಗದ ದಂದುಗವ
ದೂರ ಮಾಡಿಹ ನಿಮಗೆ ಅಲ್ಲಿ ಆಗುವುದೇನೂ ತಿಳಿಯದಿದೆ.
ಈಗಲಾದರು ನೀವೆ ದೊರೆಯ ಮನ ಸರಿಪಡಿಸಿ
ನಿಮ್ಮ ಮೌನವನೊಡೆದು ಮುನ್ನಿನಂದದಿ ಜಗವ
ತಿದ್ದಬಾರದೆ ಅಣ್ಣ ?

ಬಸವಣ್ಣ : ಜಗವ ತಿದ್ದುವುದೆ ? ಏನು ಭ್ರಾಂತಿ !
ಎಲ್ಲರೂ ತಂತಮ್ಮ ದೌರ್ಬಲ್ಯಗಳ ಮಾಜಿ
ಪರರ ತಪ್ಪನು ಕೆದಕಿ ಆಡುವವರೇ. ತಿದ್ದಲೆಳಸುವವರೇ !

ಸಂಕಣ್ಣ : ನಿಮ್ಮ ರೀತಿಯೆ ಇಂದು ಬೇರೆಯಾದಂತಿಹುದು.
ಯಾವುದೂ ಬೇಡದಿಹ ವಿರಕ್ತರಂತಿಹಿರಿ.
ನಿಮ್ಮ ನುಡಿಯೊಳಗೇನೊ ಕಳವಳ ಚಿಂತೆಗಳ ಸುಯ್ಯುತಿವೆ!
ಕಲ್ಯಾಣಕೇನುಗತಿ! ಸಾವೋ ನೋವೊ ಅಣ್ಣ ನೀವೇ ಗತಿ
ಎಂದಿಗೂ ಕೈಬಿಡದಿರಿ.

(ಹೊರಗಡೆ ಮತ್ತೆ ಜನದ ಗದ್ದಲವಾಗುತ್ತದೆ. ಏನೊ ಕಲಕಲ)

ಸಂಕಣ್ಣ (ಆಲಿಸಿ) : ಮತ್ತಾವ ಕಲಕಲವೊ?
ನಾನದನು ತಿಳಿಯಲೆ ಅಣ್ಣನವರೆ.
ನನಗೆ ಬರಲಪ್ಪಣೆಯೆ.

ಬಸವಣ್ಣ : ಹೋಗಿ ಬಾ ಸಂಕಣ್ಣ. ನೀನೆಂಬುದು ದಿಟ.
ಇಂದೇಕೊ ನನ್ನ ಮನ ಎಂದಿನಂದದೊಳಿಲ್ಲ.
ಮತ್ತಾವ ದುರ್ವಾರ್ತೆ ಬಾಗಿಲಲಿ ಕಾದಿಹುದೊ!

[ಸಂಕಣ್ಣ ಹೋಗುವನು. ಸುಗ್ಗವ್ವೆ ಚಿಂತಾಕ್ರಾಂತವಾದ ಬಸವಣ್ಣನವರ ಮುಖವನ್ನು ನೋಡಿ ನಿಡುಸುಯ್ಯುತ್ತಾಳೆ]

ಸುಗ್ಗವ್ವೆ : ಅಪ್ಪಾಜಿ, ನಿಮ್ಮ ತಳಮಳದ ಕಾರಣವು
ಈಗೀಗ ತಿಳಿಯುತಿದೆ.
ನಿಮ್ಮೆದೆಯೋ ಶೃತಿಗೈದ ವೀಣೆಯ ತಂತಿಯಂತೆ!
ಗಾಳಿದೂರದಲ್ಲಿದ್ದರೂ, ಅದು ಬರುವ ಸದ್ದಿಗೇ
ಝುಮ್ಮೆನ್ನುವುದೀ ವೀಣೆ!

ಪಡಿಹಾರಿ : (ಆತುರದಲ್ಲಿ ಓಡಿಬಂದು) ಅಣ್ಣನವರೇ ಮತ್ತೊಂದು ದುರ್ವಾರ್ತೆ!

ಸುಗ್ಗಲೆ, ಬಸವಣ್ಣ : ಹಾ! ಏನದು?

ಪಡಿಹಾರಿ : ಬಿಜ್ಜಳ ದೊರೆಯು ಕೊಲೆಯಾಯಿತಂತೆ!

ಬಸವಣ್ಣ : ಹಾ! ಯಾವಾಗ? ಎಲ್ಲಿ? ಏಕೆ?

ಪಡಿಹಾರಿ : ಹರಳಯ್ಯ ಮಧುವಯ್ಯರಿಗೆ ಬಿಜ್ಜಳನಿತ್ತ
ತೀರ್ಪಿನ ಶಿಕ್ಷೆಗೆ ಕೆರಳಿ, ಯಾರೋ ಅವರ
ಈ ಮಧ್ಯಾಹ್ನ ಕೊಲೆಗೆಯ್ದರಂತೆ!

ಬಸವಣ್ಣ : ಶಿವ ಶಿವಾ! ಶಿವ ಶಿವಾ!

ಕೊಲೆ! ಕಲ್ಯಾಣನಗರಿಯಲಿ ಕೊಲೆ!
ಅನುಭಾವ ಮಂಟಪದ ಸಾತ್ವಿಕರ ಬೀಡಿನಲಿ ಕೊಲೆ!
ಅಲ್ಲಮಪ್ರಭುವರನ ಪಾದ ಸ್ಪರ್ಶದ ನೆಲದಿ ಕೊಲೆ!
ಚೆನ್ನಬಸವನು ಇಂದು ಮಂತ್ರಿಯಾಗಿದ್ದರೂ
ಶರಣಜನ ಸಂಗಮದ ಕಲ್ಯಾಣನಗರಿಯಲಿ ಕಗ್ಗೊಲೆ!
ಜಾತ್ಯಾಂಧರಾದ ಜನ ತಪ್ಪುಮಾಡಿದರೆಂದು
ಶಿವಭಕ್ತರಾದವರೂ ಅದೆ ಪಾಪವೆಸಗುವುದೆ?
ಓ ನನ್ನ ಕಲ್ಯಾಣವೇ,
ಪ್ರತೀಕಾರ ಭೀಷಣದ ಮಸಣವಾದೆಯ ನೀನು?
ಅಯ್ಯೊ ನನ್ನ ಜನ, ನನ್ನ ಮತ ಏನಾದುದು!
ಕೊಲೆಯ ರಕುತದ ನೆಲದಿ ಇರಬಹುದೆ ನಾನಿನ್ನು?
ಇಲ್ಲ; ನಾನಿನ್ನು ಇರಲಾರೆ; ಸಂಗಯ್ಯನಿಲ್ಲದೀ
ಕೊಲೆಯ ನಾಡೊಳಗಿನ್ನು ಇರಲಪ್ಪುದೇ ನಾನು?
. . . (ನಿಟ್ಟುಸಿರುಬಿಟ್ಟು) ನನ್ನ ಬಾಳಿನ ಕಾರ್ಯ
ಮುಗಿದುದಾಯ್ತೆನಲು ಇದುವೇ ಸಂಕೇತ!

ಸುಗ್ಗಲೆ: ಅಪ್ಪಾಜಿ, ಈ ಸ್ಥಿತಿಯಲೀ ಜನವ ಬಿಟ್ಟೆಲ್ಲಿ ಹೋಗುವಿರಿ?

ಬಸವಣ್ಣ: ಇನ್ನೆಲ್ಲಿಗವ್ವಾ. . . ನನ್ನ ಸಂಗಯ್ಯನಿರುವೆಡೆಗೆ. ಆ ಕಪ್ಪಡಿಯ ಕ್ಷೇತ್ರಕ್ಕೆ.

ಸುಗ್ಗಲೆ: ನಿಮ್ಮ ಕಿರಿಯಂದಿನಲಿ ನೀವಲ್ಲೆ ಇದ್ದಿರಿ ಎಂದು ಕೇಳಿಬಲ್ಲೆನು ನಾನು.

ಬಸವಣ್ಣ: ಹೌದು ಸುಗ್ಗಲಾ. ನಾನಲ್ಲೆ ಇದ್ದವನು.
ಅಲ್ಲಿಂದ ಬಂದವನು ಅಲ್ಲಿಗೇ ಹೋಗುವೆನು.
(ಹಳೆಯ ನೆನಪನ್ನು ಧೇನಿಸುತ್ತ) ಆಹಾ!
ಏನು ಸೊಗಸಿನ ಬೀಡು ಅದು ಸುಗ್ಗಲಾ.
ಈಗದರ ಮಧುರನೆನಪು ಕಣ್ಣಿಗೆ ಕಟ್ಟುತಿದೆ! (ಕಣ್ಣು ಮುಚ್ಚಿ
ಮತ್ತೆ ಆ ಸುಂದರ ನೋಟ ನೋಡುವ ಪ್ರಸನ್ನತೆಯಿಂದ)
ಮಲಾಪಹಾರಿ ಕೃಷ್ಣವೇಣಿಗಳ ಸಂಗಮದ ಚೆಲ್ವುನೆಲೆ!
ಆ ಶಾಂತ ಗುರುಕುಲ: . . . ಏಕಾದುದೋ ಆ ಕನಸು

ಸುಗ್ಗಲೆ: ಯಾವ ಕನಸದು ಅಪ್ಪಾಜೀ?

ಬಸವಣ್ಣ: ಇತ್ತಕಡೆ ಬರುವ ಮುನ್ನಾದುದವ್ವಾ . . .

ಸುಗ್ಗಲೆ: ಕನಸೊಳೇನಾದುದು ಅಪ್ಪಾಜಿ?

ಬಸವಣ್ಣ : ಕನಸಿನಲಿ ಸಂಗಯ್ಯ ಮೈದೋರಿ " ಎಲೆ ಮಗನೆ ಬಸವಣ್ಣ
ನಿನ್ನ ಮಹೀತಳದೊಳು ಮೆರೆದಪೆವು. ನೀಂ ಬಿಜ್ಜಳರಾಯನಿರ್ಪ್ಪ
ಮಂಗಳವಾಡಕ್ಕೆ ಪೋಗು " ಎಂದು ಬೆಸಸಿದನೆನಗೆ.

ಸುಗ್ಗಲೆ : ಆಮೇಲೆ!

ಬಸವಣ್ಣ : ಅಂದೆಲ್ಲ ತಳಮಳದಿ ಬೇಡಿ ಕರೆದೆನು ಅವನ
ಮತ್ತೆ ಆ ಇರುಳವನು ಕನಸಿನಲಿ ಮೈದೋರಿ
" ಎಲೆ ಮಗನೆ ಎಲೆ ಕಂದ ಎಲೆ ಬಸವ
ನಿನ್ನ ನಗಲಿರಲಾರೆ . . . ನಿನ್ನೊಡನೊಡನೆ ಬಿಡದೆ ಬಪ್ಪೆಂ "
ಎಂದಭಯ ನೀಡಿದನು.

ಸುಗ್ಗಲೆ : ಅವನೆ ನಿನ್ನೊಡನಿರಲು . . . ಮತ್ತೇಕೆ?

ಬಸವಣ್ಣ : ಇಲ್ಲ ಸುಗ್ಗಲಾ; ಅವನಿಲ್ಲ ಈಗ.
ಅವನು ಇದ್ದರೆ ಇಲ್ಲಿ ಕೊಲೆ ನಡೆಯುತಿತ್ತೇನು
ಕಲ್ಯಾಣನಗರಿಯಲಿ?
ನಾನೋ, ಅವನೊಮ್ಮೆ ನುಡಿಸಿ ಮೂಲೆಗೆ ಎಸೆದ
ದಂಡಿಗೆಯ ತೆರನಿಹೆನು . . .!
ನನ್ನ ನಿಲ್ಲಿಗೆ ಕಳುಹಿದವನಿಚ್ಛೆ ಮುಗಿದುದೊ ಏನೊ!
ಇಲ್ಲ ಸುಗ್ಗಲಾ; ಅವನಿಲ್ಲ ಇಲ್ಲಿ.
ಎನ್ನ ಮನವಿಂತೇಕೆ ಕಪ್ಪಡಿಯ ಕಡೆಗೇ
ಸೆಳೆಯುತಿದೆ! ಆ ಕರೆಗೆ ಓಗೊಟ್ಟು ನಡೆವುದೊಂದೇ ಮುಕ್ತಿ.

ಸುಗ್ಗಲೆ : ನಾ ಬರಲೆ ನಿನ್ನೊಡನೆ, ಅಪ್ಪಾಜಿ ನಿನ್ನ ಬಿಟ್ಟಿರಲಾರೆ.

ಜಸವಣ್ಣ : ಬೇಡ ಮಗಳೇ ಬೇಡ. ನೀನಿನ್ನು ಎಳ ಹಸುಳೆ
ನಿನಗಿನ್ನು ಕಾರ್ಯವಿದೆ. ನಿನ್ನ ಬಿಟ್ಟುಹೋಗುವುದೂ ನನಗೆ
ಸುಲಭವೆಂದೆಯ ತಾಯಿ! ಆದರೂ
ಕಲ್ಲಾಗಿಸಿಹೆ ಮನವ. ನನ್ನ ಮಮತೆಯ ಮಗಳೆ
ಹೇಗೊ ಬಂದೆ, ನನ್ನ ಬಾಳಿಗೆ ಸಂದೆ . . .

ಸುಗ್ಗಲೆ : ಹೌದು ಅಪ್ಪಾಜಿ. ಹೇಗೊ ಬಂದೆ ನಿನ್ನ ಬಾಳಿಗೆ ಸಂದೆ
ಅನಾಥಳಾದೆನ್ನ ನೀನಂದು ಕರುಣದಿ ಕೊಂಡು
ಮಗಳೆಂದೆ ಸಲಹಿದೆ. ನಿನ್ನಡಿಯ ಬೆಳಕಿನಲಿ
ನನಗಿನಿತು ಇರಲಿತ್ತೆ. ನೀನು ಹೋದರೆ ನನಗೆ
ಗತಿಯಾರು ಅಪ್ಪಾಜಿ?

ಬಸವಣ್ಣ : ಎಲ್ಲರನು ಸಲಹುವಾ ಸಂಗಯ್ಯನಿಹನವ್ವ
ಎಲ್ಲ ಸಂಗನ ಲೀಲೆ ಸುಗ್ಗಲಾ ಎಲ್ಲ ಸಂಗನ ಲೀಲೆ!

ಸುಗ್ಗಲೆ : ನನಗಾಗಿ ಅಲ್ಲವಾದರೂ ಕಲ್ಯಾಣನಗರಿಯನು
ಅನಾಥವಾಗಿಸಿ ನೀವು ನಡೆಯಬಹುದೇ ತಂದೆ.
ಈಗ ಬಿಜ್ಜಳನಿಲ್ಲ; ಮತ್ತೆ ನೀವೂ ಇಲ್ಲ;
ಕಲ್ಯಾಣಕಾದರೂ ನಿಲಬಾರದೇ ನೀವು.

ಬಸವಣ್ಣ : ನಾ ಬಂದ ಕಾರ್ಯ ಮುಗಿಯಿತ್ತು ಸುಗ್ಗಲಾ.
ನನ್ನ ಕಲ್ಯಾಣವೊಂದೇ ಉಳಿದಿಹುದು ನನಗಿನ್ನು.
ಜ್ಞಾನಿ ಚನ್ನಬಸವನು ಇನ್ನು ಎಲ್ಲವನು ನೋಡುವನು
ಈಗ ಬೀಳ್ಕೊಡು ಮಗುವೆ; ಹೋಗಿಬರುವೆನು ನಾನು.
ಏಕಳುವೆ ಸುಗ್ಗಲಾ, ಅಳಬೇಡ; ಅಳುವುದಕೆ ಹೊತ್ತಲ್ಲ.
ಹೋಗು, ತಾಯಿ ನೀಲಾಂಬಿಕೆಗೆ ತಿಳಿಸು
ಕಪ್ಪಡಿಯ ಸಂಗಮದಿ ಐಕ್ಯವಾಗಲು ಅಣ್ಣ ತೆರಳಿದರು.
ನೀನು ಅಲ್ಲಿಗೆ ಬಂದು ಸಂಗಮನ ಕೂಡೆಂದು
ಅಣ್ಣ ಹೇಳಿದರೆಂದು ತಿಳಿಸು. ಹೋಗು ಸುಗ್ಗಲಾ ಹೋಗು.

(ದಾರುಣವಾದ ಶೋಕಧ್ವನಿ ಸುಗ್ಗಲೆಯ ಅಳುವಿನಲ್ಲಿ ಬೆರೆದು ಕರಗುತ್ತದೆ)

ದೃಶ್ಯ ೨

[ಬಸವಣ್ಣನವರ ಭವ್ಯ ಪ್ರಾಸಾದದ ಅಂತಃಪುರದ ತೋಟ. ಸಂಜೆಯ ಪೂಜಾ ಘಂಟೆಯದನಿ ಮೊಳಗಿ ಕರಗುತ್ತಿದೆ. ಶಿವಪೂಜೆಯನ್ನು ಪೂರೈಸಿ ಪುಣ್ಯವತಿ ಸತಿ ನೀಲಾಂಬಿಕೆ ಅವ್ವನವರು ಶಿವಧ್ಯಾನ ತೇಜೋದೀಪ್ತಿ ಮುಖದಲ್ಲಿ ಬೆಳಗುತ್ತಿರುವಂತೆ ಶಾಂತಚಿತ್ತರಾಗಿ ಗಂಭೀರವಾಗಿ ಬರುತ್ತಾರೆ]

ನೀಲಾಂಬಿಕೆ : (ಮೃದುವಾಗಿ ಆದರೂ ರಾಜ್ಞೀ ದರ್ಪವಾಣಿಯಿಂದ)
ರೇಚವ್ವೆ, ಪಾದೋದಕಾದಿಗಳ ಎಲ್ಲರಿಗೂ ತೆಗೆದಿರಿಸಿ
ಇನ್ನು ಅಡುಗೆಗೆ ತೊಡಗು. ಈ ಬೆಳಗಿನಿಂದಲೂ
ನಿಮ್ಮಣ್ಣನವರೇಕೊ ಊಟವನೆ ಮಾಡಿಲ್ಲ.
ಅವರಿಗೇನೊ ಚಿಂತೆ; ನಡೆಬೇಗ. ಈಗಲಾದರೂ ಇನಿತು
ಪ್ರಸಾದವನು ಕೊಳ್ಳುವರೊ ಏನೊ.

ರೇಚವ್ವೆ : ಅಂತೆ ಆಗಲಿ ಅಕ್ಕ. ಇದೊ ಹೊರಟೆ.

[ಸ್ವಲ್ಪ ದೂರ ಹೋದವಳು ಚೆನ್ನಬಸವಣ್ಣನವರು ಬರುವುದನ್ನು ಕಂಡು ಗಕ್ಕನೆ ಹೊರಳಿ ಬಂದು, ಮೆಲ್ಲಗೆ]

ಅಕ್ಕ ಚೆನ್ನಬಸವಣ್ಣನವರಿತ್ತಲೇ ಬರುತಿಹರು.

(ಬೇರೊಂದು ಬಾಗಿಲಿಂದ ಒಳಗೆ ಹೋಗುವಳು)

ನೀಲಾಂಬಿಕೆ: ಓ . . . ಬಾ ತಮ್ಮಾ ಚೆನ್ನಬಸವಣ್ಣ
ನೀ ಬಂದುದೊಳಿತಾಯ್ತು.

ಚೆನ್ನಬಸವಣ್ಣ: ಅವ್ವನವರೇನೊ ನನ್ನ ಬರಲು ಹೇಳಿದಿರಂತೆ.
ಕೊಂಚಬಿಡುವಾದೊಡನೆ ಈ ಕಡೆಗೆ ಐತಂದೆ
ಹಾಳು ರಾಜಕಾರಣ ತಾಯಿ; ಬಲು ತೊಡಕು.
ಏಕಾದರೂ ಇದಕೆ ಸಿಕ್ಕಿಕೊಂಡೆನೊ ನಾನು.

ನೀಲಾಂಬಿಕೆ: ಹೌದಪ್ಪ. ನಿನ್ನ ನೋಡುವುದೀಗ ಬಲು ಕಷ್ಟ!
ರಾಜಕಾರಣ ಚಕ್ರವ್ಯೂಹದ ಬಂಟನಲ್ಲವೆ ನೀನು.
ನಿನಗೆ ಬಿಡುವಿಹುದೊ ಇಲ್ಲವೊ ತಿಳಿದು ಬಾ ಎಂದು
ಸೇವಕಿಯ ಕಳಿಸಿದ್ದೆ. ಸರಿ ನೀನೆಯೇ
ಬರುವಂತೆ ಮಾಡಿದಳು ಅವಳು! ಒಳಿತಾಯ್ತು.

ಚೆನ್ನಬಸವಣ್ಣ: ಸರಿ ಬಿಡಿ ಅವ್ವ; ನಾನೆ ಬರಲೆಂದಿದ್ದೆ.
ಅಣ್ಣನವರನು ಕಂಡು ಮಾತನಾಡಲು ಕೂಡ
ಪುರಸತ್ತು ನನಗಿಲ್ಲ. ಅಣ್ಣನವರಾಲಯದಿ
ಶಿವಸೇವೆ ಎಂತಿಹುದು. ಎಲ್ಲ ಸುಗಮವು ತಾನೆ?
ಇಂದು ಅಣ್ಣನ ಮನವು ತಳಮಳಿಸುತಿಹುದೆಂದು
ಕೇಳಿ ಬಂದೆನು ಇತ್ತ.

ನೀಲಾಂಬಿಕೆ: ಹೌದಪ್ಪ. ಯಾಕೊ ಏನೊ ಈ ಎರಡು ದಿನದಿಂದ
ವ್ಯಾಕುಲಿತರಂತಿಹರು. ಊಟವಂತೂ ಬೇಕೊ—
ಬೇಡೋ ಎನುವಂತೆ. ನಿನ್ನ ನುಡಿಬೆಳಕಿನಿತು
ಅವರ ಚಿಂತೆಯ ನೆರಳ ಚೆದುರಿಸೀತೆಂದೀಗ
ಕರೆಕಳಿಸಲೆಳಸಿದೆ. ಏನು? ನಿನ್ನ ಮೊಗದಲು
ಕೂಡ ಅಂಥದೇ ಚಿಂತೆಯೇ?
ಎಲ್ಲಿಂದ ಬೀಸಿತೊ ಈ ಬೇಸರದ ಗಾಳಿ!

ಚೆನ್ನಬಸವಣ್ಣ : (ಸ್ವಗತ) ಸೂಕ್ಷ್ಮಜ್ಞ ಬಸವಣ್ಣ !
ಅವರ ಮನ ಶೃತಿಗೈದ ವೀಣೆಯೊಲು
ಬಲು ಚುರುಕು, ಬಲು ಸೂಕ್ಷ್ಮ !
ಹೊರಗಾದ ಶಿವದ್ರೋಹ, ಬೀಳದಿದ್ದರು ಕಣ್ಗೆ
ಕೇಳದಿದ್ದರು ಕಿವಿಗೆ ಅದು ಅವರ ಮನವ
ತಟ್ಟಿಹುದೆಂದೇ ತೋರುತಿದೆ ನನಗೆ.

(ಪ್ರಕಾಶವಾಗಿ ನೀಲವ್ವನವರಿಗೆ)

ನೀವನ್ನುವುದು ನಿಜ ಅವ್ವನವರೇ.
ಹೊರಗೆ ಬೀಸುತಿದೆ ಬಿರುಗಾಳಿ.
ಮೇಲುಕೀಳೆಂದೆಂಬ ಅಭಿಮಾನಗಳ ಕಿಚ್ಚು
ಧಗಧಗಿಸುತಿದೆ ಜಗವ.
ಶೀಲ-ನೀಲರ ಪ್ರೇಮಕಲ್ಯಾಣದಿಂದಾಗಿ
ಸಂಪ್ರದಾಯದ ಸರ್ಪ ಭುಸುಗುಟ್ಟಿ ಹೆಡೆ ಎತ್ತಿ
ಕಲ್ಯಾಣನಗರಿಯಲಿ ಹರಿದಾಡುತಿದೆ ಇಂದು.
'ಜಾತಿಸಂಕರವಾಯ್ತು, ಧರ್ಮಕ್ಕೆ ಚ್ಯುತಿಯಾಯ್ತು'
ಎಂಬ ಹುಯ್ಯಲು ಅದನು ಕೆರಳಿಸಿತಿಂದು.
ವೀರಶೈವರಿಗೊಂದು ಹಿರಿಯ ಸತ್ವಪರೀಕ್ಷೆ !
ಏನು ಘೋರದ ಸುದ್ದಿ ! ಅಣ್ಣನವರಿಗೆ ಸುದ್ದಿ
ತಿಳಿಯಲಾಗದು ತಾಯಿ.

ನೀಲಾಂಬಿಕೆ : **(ಗಾಬರಿಗೊಂಡು)** ಏನದು ತಮ್ಮಾ ಆ ಘೋರ ವಾರ್ತೆ !
ಮರೆಮಾಜದೆಲ್ಲವನು ಹೇಳು.
ಅವರ ಬಳಿಯಂತಲ್ಲ; ಸಹಿಸಬಲ್ಲೆನು ನಾನು

ಚೆನ್ನಬಸವಣ್ಣ : (ಗದ್ಗದವಾಣಿಯಿಂದ) ಏನು ಹೇಳಲಿ ಅಕ್ಕ. ಏನಾಗಿಹೋಯ್ತವ್ವ
ನನ್ನ ಮಂತ್ರಿ ಪದದಪಮಾನವಾದಂತೆ ನಡೆದುದಾ ದುರ್ಘಟನೆ.
ಚಾಡಿಮಾತಿನ ವಿಷವನೊಳಕೊಂಡ ದೊರೆಯ ಮನ
ವರ್ಣಧರ್ಮ ರಕ್ಷಣೆಯೆಂಬ ತಮಸಾಭಿಮಾನಕ್ಕೆ
ಹರಳಯ್ಯ ಮಧುವಯ್ಯರನು ದೈತ್ಯರೀತಿಯಲೆಳೆಸಿ
ಕೊಲ್ಲಿಸಿದನೀ ದಿವಸ. ಕಲ್ಯಾಣ ಕಟುಕರ ಕೇರಿಯಾಗಲದುವೆ

ಪೀಠಿಕೆಯಾಯ್ತು . . .
ರೋಷ ಆವೇಶಗಳಿಂದ ಒಳಿತೇನು ಆದೀತು ?

ನೀಲಾಂಬಿಕೆ : (ಚಣಕಾಲ ದಿಙ್ಮೂಢಳಾಗಿ ಕಿವಿಮುಚ್ಚಿ)
ಶಿವ ಶಿವಾ! ಶಿವ ಶಿವಾ! ಸಾಕು ನಿಲ್ಲಿಸು ತಮ್ಮ
ಶಿವದ್ರೋಹ ವಾರ್ತೆಯಿದು, ಅತಿ ಘೋರ ಅತಿ ಘೋರ!

ಚೆನ್ನಬಸವಣ್ಣ : ಅದು ಮಾತ್ರವಲ್ಲಕ್ಕ, ಅದು ಮಾತ್ರವಲ್ಲ.
ಅದಕಿಂತಲೂ ಮಿಗಿಲು ಶಿವದ್ರೋಹವೊಂದಾಯ್ತು.
ರೋಷಭೀಷಣ ಮತಿಗಳಾರೊ ಬಿಜ್ಜಳನನ್ನು
ಕೊಲೆಗೆಯ್ದರಂತೆ.
ಬಸವಣ್ಣನವರಿಂತು ಭಕ್ತಿಜಲವೆರೆದು ಬೆಳೆಸಿದೀ
ಶಿವಭಕ್ತಿ ಪಂಥಕ್ಕೆ ನೆತ್ತರಭಿಷೇಕವೇ ?
ಅಣ್ಣನವರಿಗೆ ತಿಳಿಯಲವರೆಂತು ಸಹಿಸುವರೋ
ನೀವೆ ಗತಿ ಅಕ್ಕ. ಅಣ್ಣನೆಡೆ ನಡೆಯಿರಿ.
ಅವರ ಸಂತೈಸಿರಿ.

ನೀಲಾಂಬಿಕೆ : ದಿಟ ತಮ್ಮಾ ಚೆನ್ನಣ್ಣ.
ಘೋರವೆನ್ನುವ ಅಚ್ಚರಿಯ ಬಾಯ್ ಆಕಾಶವಾಗುತಿದೆ!
ಕಲ್ಯಾಣಕೀಗತಿಯಾಗುವದೆಂದು ಯಾರು ಬಗೆದಿದ್ದರು ಹೇಳು.

[ಕಣ್ಮುಚ್ಚಿ ಧ್ಯಾನದಿಂದ ಧೃತಿ ಶಕ್ತಿಯನ್ನು ಆವಾಹನೆಮಾಡುತ್ತ ಮತ್ತೆ ಶಾಂತಗಾಂಭೀರ್ಯದಿಂದ ವಿಸ್ತಾರಿತಲೋಚನೆಯಾಗಿ]

[ಹಿನ್ನೆಲೆ—ನಾದತರಂಗ, ಶಾಂತಗಂಭೀರವಾಗಿ ಕರಗುವುದು]

ಶಿವನಿಚ್ಛೆಯೇನೆಣಿಸಿ ತಂದುದೊ ಈ ಗತಿಯ.
ಶಿವಲೀಲೆ ನೂರುಬಗೆ, ತಮ್ಮ, ನೂರುಬಗೆ!
ನಾವರಿಯ ಬಲ್ಲೆವೇ.
ಶಿವಶರಣ ಮಹಿಮೆಯನು ಮರಣದಲಿ ನೋಡಣ್ಣ.
ಮೃತರಲ್ಲ ಚೆನ್ನಣ್ಣ ಕೊಲೆಯಾದ ಶರಣರು
ಶಿವಧರ್ಮ ನೆಲೆಗೊಳಲು, ವಿಶ್ವತೋಮುಖವಾಗಿ
ಚಿರವಾಗಿ ಬಾಳಿಸಲು
ಶರಣರಿತ್ತಿಹ ಧೀರ ವಿಶ್ವಾಸದಮೃತವಿದು.

ಶಿವಭಕ್ತಿಗಿದು ಚಿರಂತನ ರಕ್ಷೆ.
ಎಲ್ಲ ಶಿವದ ಜಯ!

ಚೆನ್ನಬಸವಣ್ಣ : ಅಂತೆ ನುಡಿಯಿರಿ ತಾಯಿ, ಇನ್ನೂ ನುಡಿಯಿರಿ, ಮತ್ತೂ ನುಡಿಯಿರಿ,
ಈ ಧೀರನುಡಿಗಳನು.
ಒಂದೊಂದೂ ಭರವಸೆಯ ಅಮೃತಬಿಂದು.
ನಿರಾಸೆಯಲಿ ಮುಳುಗಿ ಚಡಪಡಿಪ ಮನಗಳನು
ಎತ್ತಿ ನಿಲಿಸುವ ಮತ್ತೆ ಸಂತೈಸುವೀಮಾತು
ಒಂದೊಂದೂ ಶಿವಶಕ್ತಿ.
ದೂರ ದೂರದೊಳಲ್ಲಿ ಬೆಳಕಿನಾವರಣದಲಿ
ಕಂಗೊಳಿಪ ಲೋಕವನು ಬರುವ ಸುಖ ಸಗ್ಗವನು
ತೆರೆಯುತಿಹುದೀಮಾತು.

[ಆ ಸುಂದರ ಸ್ವಪ್ನದಲ್ಲಿದ್ದವರನ್ನು ಎಚ್ಚರಿಸುವಂತೆ ಸುಗ್ಗಲೆ, ಅವ್ವಾ! ಅವ್ವಾ! ಎಂದು ಕೂಗುತ್ತ ದುಃಖ ವಿಹ್ವಲೆಯಾಗಿ ಬರುತ್ತಾಳೆ. ಚಿತ್ರಾರ್ಪಿತ ಪ್ರತಿಮೆಯಂತೆ ನಿಂತ ನೀಲಾಂಬಿಕೆಯ ಕಣ್ಣುಗಳು ಮೆಲ್ಲನೆ ತೆರೆದು, ಕಾಲಬಳಿ ಬಾಗಿದ ಸುಗ್ಗಲೆಯನ್ನು ನೋಡಿ ಮೈದಡವಿ ಮೇಲೆತ್ತಿ ಅಪ್ಪಿಕೊಂಡು]

ನೀಲಾಂಬಿಕೆ: ಏನಾಯ್ತು ತಾಯಿ. ಇಷ್ಟೇಕೆ ಅಳುತಿರುವೆ?
ನಿಮ್ಮ ಅಪ್ಪಾಜಿ ಕುಶಲವಾಗಿಹರಷ್ಟೆ?

ಸುಗ್ಗಲೆ: ಅವ್ವಾ . . . ಅಪ್ . . . ಅಪ್ಪಾಜಿ . . . ಇನ್ನೆಲ್ಲಿ
ನನ್ನೊಬ್ಬಳನೆ ಬಿಟ್ಟು . . . ದೂರವಾಗಿಸುವಿರಾ . . .
ಅಪ್ಪಾಜೀ. (ಬಿಕ್ಕುತ್ತ ಅಳುವಳು)

ನೀಲಾಂಬಿಕೆ: (ಮುಖ ಮತ್ತೆ ಚಿಂತೆ—ಅಶುಭವೇನೊ ಎಂಬ ಶಂಕೆಯಿಂದ ಮಸುಗುತ್ತದೆ)
ಏನವ್ವ. ಏನಾಯ್ತು ತಾಯೀ.
ಅಳಬೇಡ. ಹುಚ್ಚಿ, ಅಪ್ಪಾಜಿ ನಿನ್ನನು ಬಿಟ್ಟು
ಇನ್ನೆಲ್ಲಿ ಹೋದಾರು. ಹೊರಗೇನೊ ಗಲಭೆ
ವಿಚಾರಿಸಲು ಹೋಗಿರಬಹುದು.
ಅದಕೇಕೆ ಇಷ್ಟು ಅಳು.

ಸುಗ್ಗಲೆ: ಇಲ್ಲವ್ವ. ಅಪ್ಪಾಜಿ ಇನ್ನಿಲ್ಲ
'ಶಿವದ್ರೋಹ . . . ಶಿವದ್ರೋಹ
ಕೊಲೆಯ ರಕುತದ ನೆಲದಿ ಇರಲಾರೆ ನಾನಿನ್ನು'

ಎನ್ನುತ್ತ ಕಪ್ಪಡಿಯ ಸಂಗಮನ ಕ್ಷೇತ್ರಕ್ಕೆ
ಹೊರಟುಹೋದರು ಅವ್ವ.
ಕಲ್ಯಾಣವನು ತೊರೆದು ದೂರಹೋದರು ಅವ್ವ.

ನೀಲಾಂಬಿಕೆ : ಹಾ ! ಕಲ್ಯಾಣವನು ತೊರೆದು ದೂರಹೋದರೆ ಅವರು ?
ಇದು ನಿಜವೆ ? ಯಾರಿಗೂ ಹೇಳದೆಯೆ ಇದ್ದಕಿದ್ದಂತೆಯೇ
ನಮ್ಮೆಲ್ಲರನು ಬಿಟ್ಟು ಹೊರಟು ಹೋದರೆ ಅವರು ?

ಚೆನ್ನಬಸವಣ್ಣ : ಒಂದಾದಮೇಲೊಂದು ಬರಸಿಡಿಲ ಬಡಿತಗಳು !
ಸೈರಿಸುವಶಕ್ತಿ ಕೊಡು ಚೆನ್ನಸಂಗನ ಬಸವ !
ಬಸವಣ್ಣನವರುಳಿದ ಕಲ್ಯಾಣವಿನ್ನೇಕೆ ?
ಅವ್ವಾ ನನಗೂ ಅಪ್ಪಣೆ ಕೊಡಿರಿ. ಅಣ್ಣನನು ಅನುಸರಿಸಿ
ಕಪ್ಪಡಿಗೆ ನಡೆಯುವೆನು.

ನೀಲಾಂಬಿಕೆ : ತಾಳ್ಮೆ ತಮ್ಮಾ ತಾಳ್ಮೆ.
ಜ್ಞಾನಿಯಾದವ ನೀನೂ ಇಂತು ದೆಸೆಗೆಟ್ಟಿರಲು
ಉಳಿದವರ ಪಾಡೇನು ?
ಭರವಸೆಯ ಸೂತ್ರದಲಿ, ಚೆದುರಿರುವ ಮುತ್ತುಗಳ
ಆಯ್ದು ಕಟ್ಟುವರಾರು ?
ತಾಳು, ಮತ್ತೇನು ಹೇಳಿದರೊ
ಹೇಳವ್ವ ಸುಗ್ಗಲಾ. ಕಪ್ಪಡಿಗೆ ನಡೆದಾಗ
ಅವರೇನ ಹೇಳಿದರು ?

ಸುಗ್ಗಲೆ : 'ತಂದೆ ಕೂಡಲಸಂಗ ನಿನ್ನೆಡೆಗೆ ತೆಗೆದುಕೋ'
ಎಂಬ ಹಂಬಲದಲ್ಲಿ ಮುಳುಗಿದ್ದರವ್ವ
'ಜ್ಞಾನಿ ಚೆನ್ನಬಸವನು ಇನ್ನು ಎಲ್ಲವನು ನೋಡುವನು'
ಎಂದು ಹೇಳಿದರೆನಗೆ.
'ನೀಲಾಂಬಿಕೆಗೂ ತಿಳಿಸು ಮಗು. ಅವಳೂ ಬಂದು
ಸಂಗಮನಲ್ಲಿ ಐಕ್ಯವಾಗಲಿ' ಎಂದು ಹೇಳಿದರವ್ವ.
ಅವ್ವಾ, ನೀನೂ ಹೋದರಿನ್ನಾರು ಗತಿ ನನಗೆ ?
ನೀ ನಡೆದರೆನ್ನನೂ ಕರೆದೊಯ್ಯಬೇಕವ್ವ.

ನೀಲಾಂಬಿಕೆ : (ಕ್ಷಣಕಾಲ ಮೈಮರೆತು ಏನನೊ ಧ್ಯಾನಿಸುತ್ತ ಚಿಂತಾಮಗ್ನಳಾಗಿದ್ದು)
ಯಾವ ಮಾಯೆಯ ಮರುಳೊ ಕವಿದಿರುವುದಂತು ದಿಟ.

ಅವರನೂ ಆವರಿಸಿತೇ ಮಾಯೆ! . .
ಆರಾರ್ಗೆ ಆವಾವ ಮಂಕಾಗಿ ಕವಿಯುವುದೊ
ಜಗವನೆಲ್ಲವ ಸುತ್ತಿ ಮುತ್ತಿರುವ ಮಾಯೆ!
ನೋಡಿದೆಯ ತಮ್ಮ ಚೆನ್ನಬಸವಣ್ಣ
ಮಾಯೆಯೀ ಪರಿಯನ್ನು . . . .
ಅವರ ವಚನವನವರೆ ಮರೆವಂತೆ ಮಾಡಿತೇ!!
ಸಂಗಯ್ಯನೇ ಇಂತು ಅಂಗೈಯ ಇಷ್ಟಲಿಂಗವಾಗಿರಲಾಗಿ
ಕಪ್ಪಡಿಯ ಕ್ಷೇತ್ರದಲೆ ಅವನನರಸಲು ಬೇಕೆ?
ಆದರೆ ಮುನ್ನವೆ ನಾನು ನನ್ನಿಷ್ಟಲಿಂಗದಲಿ
ಸಂಗಯ್ಯನೊಡವೆರೆದು ಇಲ್ಲಿಯೇ ನಾನವರ
ಎದುರುಗೊಳ್ಳುವೆನೆಂದು
ಗುರುವಿನಾಣತಿಯನ್ನು ಇಂತು ಪಾಲಿಪೆ ನಾನು.
ಇನ್ನು ಬರುವೆ. ನನ್ನಳಿಯ ಚೆನ್ನಬಸವಣ್ಣ.
ನಿನಗೂ ಇರಲಿ ಗುರುವಾಜ್ಞೆ. ಅನುಭವಮಂಟಪದ
ಸಂಘಟನೆ, ಚಾಲನೆ ಮತ್ತೆ ಹೊಣೆ.
ಧೀರಚಿತ್ತದಲಿನ್ನು ಬೀಳ್ಕೊಡಿರಿ ನನ್ನನ್ನು
ಎಲ್ಲವೂ ಒಳಿತಕ್ಕೆ;
ಒಬ್ಬೊಬ್ಬರದು ಒಂದೊಂದು ದಾರಿ!

ಚೆನ್ನಬಸವಣ್ಣ : ಆಜ್ಞೆ ಅವ್ವನವರೇ
ಅಣ್ಣ ಬಸವಣ್ಣನವರ ಮತ್ತೆ ನಿಮ್ಮಾ ಆಜ್ಞೆ
ವಜ್ರಬಂಧನವಾಗಿ ನನ್ನಿಚ್ಛೆಯನು ಕಟ್ಟಿ
ನನ್ನನಿಟ್ಟಿಹುದಿಲ್ಲಿ.
ಪತಿಗೆ ತಕ್ಕ ಸತಿ; ಶಿವಶರಣೆ, ಪುಣ್ಯವತಿ.
ನಿನ್ನ ನಿಲವಿಗೆ ಏರಿ ನಡೆವುದೇ ಶಿವಯಾತ್ರೆ
ನೀವಿಲ್ಲದಿಹ ಪಾಳು ರುದ್ರಭೂಮಿಯನೆಂತು
ಶಿವಭೂಮಿಯಾಗಿಪೆನೊ? ನೀವೆ ನನ್ನೊಳು ನಿಂತು
ಶಿವಶಕ್ತಿ ಕೃಪೆಯಾಗಿ ನನ್ನ ನಡೆಸುವಿರೆಂಬ
ನಂಬುಗೆಯೆ ನನಗೆ ಗತಿ.

ನೀಲಾಂಬಿಕೆ : ತಿಳಿದವನು ನೀನು ಚೆನ್ನಬಸವಣ್ಣ.

ಲೋಕ ಲೋಕಂಗಳನು ಶಿವತತ್ತ್ವಮಯವಾಗಿ
ನಡೆಸ ಶಕ್ತಿಯೆ ನಿನ್ನ ಕಾಪಿನಲಿ ನಿರುತ.
'ಇದೊ ನಮ್ಮ ಮಮತೆಯ ಹೂವು ಈ ಸುಗ್ಗಲಾ!
ಇವಳ ರಕ್ಷಣೆ ನಿನದು. ಅಳಬೇಡ ಸುಗ್ಗಲಾ
ಪುಣ್ಯಯಾತ್ರೆಯ ಹಾದಿ ನಡೆವ ಸಖೀರು ನಾವು.
ಅಗಲವುದು ಮತ್ತೆ ಕೂಡುವುದಕೇ!
ಬರಲೇ ಮಕ್ಕಳೇ ಇನ್ನು ....

ನೀಲಾಂಬಿಕೆ ಮೌನವಾಗಿ ತನ್ನ ಶಿವಪೂಜಾಗೃಹವನ್ನು ಸೇರುತ್ತಾಳೆ. ಸುಗ್ಗಲೆ ದುಃಖವುಕ್ಕಿ ತಡೆಯದಾಗಿ ಬಿಕ್ಕುತ್ತ ಅಳುವ ದನಿ ಕೇಳುತ್ತದೆ. ಶಿವಪೂಜಾಗೃಹ ಮಹತ್ಪ್ರಕಾಶದಿಂದ ಬೆಳಗುತ್ತದೆ. ಅದನ್ನು ನೋಡುತ್ತ ಇಬ್ಬರೂ ಕ್ಷಣಕಾಲ ಬೆರಗುವಟ್ಟು ನಿಲ್ಲುತ್ತಾರೆ.

ಚೆನ್ನಬಸವಣ್ಣ : ಧನ್ಯೆ ಸತಿ ನೀಲಾಂಬೆ! ಧನ್ಯ ನಾನೂ ಈ ದಿವ್ಯದರ್ಶನದಿ.
ಅಬ್ಬಾ ಏನು ಮಹತ್ಪ್ರಕಾಶವಿದು ಮುಂದಿರದ ತುಂಬೆಲ್ಲ
ಪುಳಕಗೊಳಿಸಿದೆ ತನುವನಾದ್ಯಂತ!
ಜ್ಯೋತಿ ಜ್ಯೋತಿಯೊಳೊಂದಾಗುವೀ
ಮಹಾಸಂಗಮದ ದರ್ಶನಕೆ!

[ಘಂಟಾನಾದ. ಓಂಕಾರಗಳ ಮಧುರ ದನಿ ವ್ಯಾಪಿಸಿ ಕಿವಿಯ ತುಂಬುವುದು. ದನಿಯೊಡನೆ ಪ್ರಕಾಶವೂ ಕ್ರಮೇಣ ಮರೆಯಾಗುವುದು. ಅಸ್ಪಷ್ಟವಾದ ಕತ್ತಲಾವರಿಸುವುದು. ಆ ವೇಳೆಗೆ ಶೋಕ ಸಂತಪ್ತಳಾಗಿ ನೆಮ್ಮದಿಯಿಲ್ಲದ ಸುಗ್ಗಲಾದೇವಿ ತನ್ನ ಪ್ರಿಯವೀಣೆಯಿಂದ ಶೋಕವನ್ನೆ ಮೀಟುವ ದನಿಯೊಂದಿಗೆ ದನಿಬೆರಸಿ ಹಾಡುವುದು ಹಿನ್ನೆಲೆಯಾಗಿ ಕೇಳಿಸುವುದು.]—

ಚೆನ್ನಬಸವಣ್ಣ : (ಮನವ ಹಿಂಡುವ ಶೋಕದ ದನಿಯಲ್ಲಿ)
ಹೊತ್ತು ಮುಳುಗಿತು ಇನ್ನು ;
ಕತ್ತಲಾವರಿಸುತಿದೆ ಕಲ್ಯಾಣನಗರಿಯನು.
ಎಂತಹ ಬೆಳಕಿನ ಹಬ್ಬ ಮುಗಿದುಹೋಯಿತು ಬೇಗ!
ಸತದೃಷ್ಟ ಕಲ್ಯಾಣ!
ಬಸವಣ್ಣ ನೀಲಾಂಬಿಕೆಯರಿಲ್ಲದೀ ಕಲ್ಯಾಣ!
ಬರಿದಾದ ಮನೆ, ಬರಿದಾದ ಮನ!

(ಹಿನ್ನೆಲೆಯ ವೀಣೆಯ ದನಿ ತುಸು ಹೆಚ್ಚಾಗುತ್ತದೆ)

ಯಾವುದೀ ಗೋಳುದನಿ ಬಾನ ಬಯಲಲೆಯುತಿದೆ!
ಕತ್ತಲಾವರಿಸಿದೀ ಕಲ್ಯಾಣನಗರಿಯಲಿ.

ಈ ರುದ್ರ ನೀರವತೆಯಲಿ,
ತರು ತರುಗಳಿಂ, ಮನೆಮನೆಗಳಿಂ
ಬೀದಿಬೀದಿಗಳಿಂದ ಶೋಕ ಗೀತೆಯು ದೀನ
ಗಾಳಿಗುಂಟಾ ಹರಿದು ಏನನೋ ಹುಡುಕುತಿರುವಂತೆ
ಕೇಳುತಿದೆ.
ಕಲ್ಯಾಣ ದೇವಿಯೇನ್ ಬಸವಣ್ಣನನು ತಿರುಗಿ
ಬಾರೆಂದು ಕರೆದಪಳೊ. . . (ಸಗದ್ಗದವಾಗಿ)
ಬರಬಾರದೇ ಅಣ್ಣ, ಬಸವಾ. . . ಬಾರಾ. . .

ಗಾಳಿ ಹುಯ್ಯಲಿಡುತ್ತದೆ. ಅದೇ ಪರಿಚಿತ ಸುಗ್ಗಿಯ ಕಂಠ. ಶೋಕಭರಿತವಾಗಿ ವೀಣೆಯ ದನಿಯ ಜೊತೆಗೆ ಬರುವ ಹಾಡು : "ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ" ಪುನರಾವರ್ತಿಯಾಗುತ್ತ ಕ್ರಮೇಣ ತಗ್ಗಿ ಕರಗಿ ಹೋಗುತ್ತದೆ.

ಜಿ. ಎಸ್. ಶಿವರುದ್ರಪ್ಪ
ಕೆ. ಬಿ. ಪ್ರಭುಪ್ರಸಾದ

ಚಿಂತನ

ಸುಮ್ಮನಿಲ್ಲ ಬಿಮ್ಮನಿಲ್ಲ
ನನ್ನ ಮನಸಿದು
ತನ್ನತನವ ಕಾಣೆನಲ್ಲ
ಎನುತಲಿರುವುದು.

ನಿತ್ಯ ನಿತ್ಯ ನಿಜವನರಸಿ
ಜಪಿಸುತಿರುವುದು.
ದೃಢವ ಕಂಡು ನುಡಿಯ ಬಯಸಿ
ಮಿಡಿಯುತಿರುವುದು.

ಬರಿಯ ನೊರೆಯ ಬೆಡಗ ಕಂಡು
ಬೇಸರಾಗಿದೆ.
ಅರಿವಿಗಾಗಿ ದಾಹಗೊಂಡು
ನುಗ್ಗಿ ನಡೆದಿದೆ.

ಆತ್ಮತೃಪ್ತಿ ಫಲಿಸದಿರಲು
ಏನ ನುಡಿಯಲಿ ?
ನನ್ನ ನಾನೆ ಕಾಣದಿರಲು
ಏನನೊರೆಯಲಿ ?

ಕಣ್ಣ ನೋಟ ಸುಳಿಸಿದತ್ತ
ಮಂಜು ಮುಸುಕಿದೆ.
ಒಳಗು ಹೊರಗು ಸುತ್ತಮುತ್ತ
ಪ್ರಶ್ನೆಯಾಗಿದೆ.

ಅನ್ಯರೊಲವು ಮಾನ್ಯವಲ್ಲ
ನಾನೆ ತಣಿಯದೆ.
ಸೊಲ್ಲಿಗಿನಿತು ಬೆಲೆಯೆ ಇಲ್ಲ
ಸ್ಫೂರ್ತಿ ಇಲ್ಲದೆ.

ಕನಸ ಕಂಡ ಕಣ್ಣಿಗಿಂದು
ನನಸು ಕಾಣದೆ ?
ಮನದ ಬೆಳಕು ಬೆಳಗಿದಂದು
ಶಂಕೆ ಹರಿಯದೆ ?

ಮೂರು ಹೊತ್ತು ಇದೇ ಚಿಂತೆ,
ಇದುವೆ ಚಿಂತನ !
ಕುದಿವ ಮೌನ ರತ್ನದಂತೆ
ಧ್ಯಾನಸಾಧನ !

ಜಿ. ವರದರಾಜರಾವ್

ಆನಂದಲಹರೀ

ಮಹೀಂ ಮೂಲಾಧಾರೇ ಕಮಪಿ ಮಣಿಪೂರೇ ಹುತವಹಂ
ಸ್ಥಿತಂ ಸ್ವಾಧಿಷ್ಠಾನೇ ಹೃದಿ ಮರುತಮಾಕಾಶಮುಪರಿ |
ಮನೋಽಪಿ ಭ್ರೂಮಧ್ಯೇ ಸಕಲಮಪಿಭಿತ್ವಾ ಕುಲಪಥಂ
ಸಹಸ್ರಾರೇ ಪದ್ಮೇ ಸಹರಹಸಿ ಪತ್ಯಾವಿಹರಸೇ || ೯ ||

ಎಲೌ ದೇವಿ, ಮೂಲಾಧಾರದಲ್ಲಿ 'ಪೃಥ್ವಿ'ಯನ್ನೂ, ಸ್ವಾಧಿಷ್ಠಾನದಲ್ಲಿ 'ಜಲ' ವನ್ನೂ, ಮಣಿಪೂರದಲ್ಲಿ 'ಅಗ್ನಿ'ಯನ್ನೂ, ಅನಾಹತದಲ್ಲಿ (ಹೃದಯ) ವಾಯುವನ್ನೂ, ಅದರ ಊರ್ಧ್ವದಲ್ಲಿ 'ಆಕಾಶ' (ವಿಶುದ್ಧ)ವನ್ನೂ, ಭ್ರೂಮಧ್ಯ (ಆಜ್ಞಾ)ದಲ್ಲಿ 'ಮನಸ್ಸ'ನ್ನೂ, ಭೇದಿಸಿಕೊಂಡು, ಈ ರೀತಿಯಲ್ಲಿ ಇಡೀ ಕುಲಪಥವನ್ನು ಅತಿಕ್ರಮಿಸಿ, ಸಹಸ್ರಾರದಲ್ಲಿ ನಿನ್ನ ಪತಿಯೊಡನೆ ವಿಹರಿಸುವೆ.

ಟೀಕೆ: ಈ ಶ್ಲೋಕದಲ್ಲಿ ಯೋಗರೀತ್ಯಾ ಕುಂಡಲಿನಿಯ 'ಆರೋಹಣ'ವು ವರ್ಣಿತವಾಗಿದೆ. ಇದೇ 'ಅಂತರ್ಯಾಗ'. ಕುಂಡಲಿನಿಯ ದೇಹವು 'ಅಷ್ಟಾಂಗ' ಪರಿಪೂರ್ಣವಾದದ್ದು. ಷಟ್ಚಕ್ರಗಳು ಕುಂಡಲಿನಿಯ 'ತಾತ್ಕಾಲಿಕ ವಿಶ್ರಾಂತಿಸ್ಥಾನಗಳು.' ದೇವಿಯು ಈ ಚಕ್ರಗಳಲ್ಲಿ 'ತನ್ಮಾತ್ರ'ರೂಪದಲ್ಲಿರುವ 'ತತ್ವ'ಗಳನ್ನು ವಶಪಡಿಸಿಕೊಳ್ಳುವಳು. ಯೋಗಿಯು ಈ ಕೆಳಗಿನ ಚಕ್ರಗಳಲ್ಲಿ ಅನೇಕ ಪ್ರಲೋಭನಗಳಿಂದ ವಂಚಿತನಾಗುವನು. ಆದರೆ ಕುಂಡಲಿನಿಯ ಶಾಶ್ವತಸ್ಥಾನ 'ಸಹಸ್ರಾರ'. ಅದೇ ಯೋಗಿಯ 'ಗಂತವ್ಯಲಕ್ಷ್ಯ'ವಾಗಿರಬೇಕು. ಸಹಸ್ರಾರದಲ್ಲಿ ಸವಿಕಲ್ಪಾವಸ್ಥೆಯು ಕೊನೆಗಂಡು ನಿರ್ವಿಕಲ್ಪಾವಸ್ಥೆಯಲ್ಲಿ ಆತ್ಮವು ಲಯವಾಗುವುದು. ಕುಂಡಲಿನಿಯು 'ಕಾರ್ಯಪ್ರಪಂಚ'ವನ್ನು ಉತ್ತರಿಸಿ 'ಕಾರಣ ಪ್ರಪಂಚ'ವನ್ನು ಸೇರುವಳು.

'ಲಲಿತಾಸಹಸ್ರನಾಮಭಾಷ್ಯ'ದಲ್ಲಿ 'ಕುಲಪಥ'ವನ್ನು ಕುರಿತು ಹೀಗೆ ಉಕ್ತವಾಗಿದೆ: 'ಕುಲ' ಎಂದರೆ 'ಸಜಾತೀಯ ಸಮೂಹ.' 'ಕು=ಪೃಥ್ವೀ, ಲ=ಲೀನ.' 'ಮೂಲಾಧಾರ'ವು 'ಕುಲ'ವೆಂದು ಹೇಳಲ್ಪಡುತ್ತದೆ. ಏಕೆಂದರೆ 'ಪೃಥ್ವೀತತ್ವ'ವು ಅದರಲ್ಲಿ ಅಂತರ್ಗತವಾಗಿದೆ.

ಸಹಸ್ರಾರದಿಂದ ಪ್ರವಹಿಸುವ ಅಮೃತವು 'ಕುಲಾಮೃತ'ವೆಂದು ಹೇಳಲ್ಪಡುತ್ತದೆ. 'ಸ್ವಚ್ಛಂದತಂತ್ರ'ದ ಪ್ರಕಾರ 'ಶರೀರ'ವು ಅಮೃತವೆಂದು ಹೇಳಲ್ಪಡುತ್ತದೆ. ಕುಲಾಮೃತವು ದೇಹಸಂಬಂಧವನ್ನು ಪಡೆದಿರುವ ಕಾರಣ ಅದಕ್ಕೆ ಆ ಹೆಸರು ಪ್ರಾಪ್ತವಾಯಿತು.

ಅಥವಾ 'ಕುಲ' ಎಂದರೆ 'ಶಾಸ್ತ್ರ.' ಈ ಶಾಸ್ತ್ರವು ಉಪಾಸಕ ಉಪಾಸ್ಯ ಚಿತ್ತಸಾಜಾತ್ಯ ಸಮುದಾಯವನ್ನು ಪ್ರತಿಪಾದಿಸುತ್ತದೆ. 'ಕಲ್ಪಸೂತ್ರ'ಗಳಲ್ಲಿ ಹೀಗೆ

ಹೇಳಲ್ಪಟ್ಟಿದೆ. 'ಕುಲಶಾಸ್ತ್ರಗಳನ್ನು ಗೋಪ್ಯವಾಗಿಡಬೇಕು.' ಆಗಮಗಳೂ ಸಹ 'ಸರ್ವಶಾಸ್ತ್ರಗಳೂ ಕುಲದಲ್ಲಿ ಲಯವಾಗುತ್ತವೆ ಎಂದು ತಿಳಿಸುತ್ತವೆ.' ಕುಲ ಎಂದರೆ ವಂಶವಲ್ಲ ಸದಾಚಾರ.

ಅಥವಾ 'ಕುಲ' ಎಂದರೆ 'ಪಾತಿವ್ರತ್ಯಾದಿ ಶೀಲಗುಣಸಂಪನ್ನ'ಯುಕ್ತವಾದ ವಂಶ. ದೇವಿಯು ಅಂತಹ ವಂಶಾಭಿಜಾತಳು. ಕುಲಾಂಗನೆಯು ಸುರಕ್ಷಿತವಾಗುವಂತೆ, ದೇವಿಯು 'ಅವಿದ್ಯಾ'ಯವನಿಕೆಯಿಂದ ರಕ್ಷಿತಳಾಗಿದ್ದಾಳೆ, ಎಂದರೆ ಅದರಿಂದ ಆಚ್ಛಾದಿಸಲ್ಪಟ್ಟಿದ್ದಾಳೆ. ಕುಲಾರ್ಣವವು ತಿಳಿಸುತ್ತದೆ. ಇತರ ಎಲ್ಲ ವಿದ್ಯೆಗಳೂ ಗಣಿಕೆಯಂತೆ ಪ್ರಕಟವಾಗಿವೆ. ಶಾಂಭವೀ ವಿದ್ಯೆಯು ಮಾತ್ರ ಕುಲಾಂಗನೆಯಂತೆ ರಕ್ಷಿಸಲ್ಪಟ್ಟಿದೆ. ಭಗವಾನ್ ಪರಶುರಾಮನೂ ಸಹ 'ಇತರ ವಿದ್ಯೆಗಳು ವೇಶ್ಯೆಯಂತೆ ಅತಿ ಪ್ರಕಟವಾಗಿವೆ' ಎಂದು ಹೇಳಿರುವನು.

ಅಥವಾ 'ಕುಲ' ಎಂದರೆ 'ಸಹಸ್ರಾರಕಮಲ.' 'ಸ್ವಚ್ಛಂದತಂತ್ರ'ವು ತಿಳಿಸುತ್ತದೆ: 'ಅದರ ಕರ್ಣಿಕಾಪ್ರದೇಶದಲ್ಲಿ ದೇವಿಯು ನೆಲಸಿದ್ದಾಳೆ. ದಳಗಳಲ್ಲಿ "ಕುಲಶಕ್ತಿಯರು" ವಾಸಿಸುತ್ತಿದ್ದಾರೆ.'

> ಸುಧಾಧಾರಾಸಾರೈಶ್ಚರಣಯುಗಲಾಂತರ್ವಿಗಲಿತೈಃ
> ಪ್ರಪಂಚಂ ಸಿಂಚಂತೀ ಪುನರಪಿ ರಸಾಮ್ನಾಯ ಮಹಸಃ |
> ಅವಾಪ್ಯ ಸ್ವಾಂ ಭೂಮಿಂ ಭುಜಗನಿಭಮಧ್ಯುಷ್ಟವಲಯಂ
> ಸ್ವಮಾತ್ಮಾನಾಂ ಕೃತ್ವಾ ಸ್ವಪಿಷಿ ಕುಲಕುಂಡೇ ಕುಹರಿಣಿ ||೧೦||

ತರುವಾಯ ನಿನ್ನ ಚರಣಯುಗ್ಮಗಳಿಂದ ಪ್ರವಹಿಸುವ ಸುಧಾಧಾರೆಯಿಂದ ಚಕ್ರಗಳನ್ನು ಸಿಂಚಿಸಿ, ನಿನ್ನ ನಿವಾಸವಾದ ಮೂಲಾಧಾರಕ್ಕೆ ಹಿಂದಿರುಗಿ, ತ್ರಿವಲಯರೂಪೀ ಸರ್ಪದ ನಿನ್ನ ಪೂರ್ವಾಕಾರವನ್ನು ತಳೆದು, ಕುಲಕುಂಡದ ಕುಹರದಲ್ಲಿ ನಿದ್ರಿಸುತ್ತೀಯೆ.

ಟೀಕೆ—ಈ ಶ್ಲೋಕವು ಯೋಗರೀತ್ಯಾ ಕುಂಡಲಿನಿಯ 'ಅವರೋಹಣ' ಕ್ರಮವನ್ನು ತಿಳಿಸುತ್ತದೆ. ದೇವಿಯು ಮೂಲಾಧಾರದಿಂದ ಸಹಸ್ರಾರಕ್ಕೆ ಏರುವಾಗ, ಚಕ್ರಗಳು ಆಕೆಯಲ್ಲಿ ಐಕ್ಯವಾಗುವುವು. ಕುಂಡಲಿನಿಯು ಮೂಲಾಧಾರಕ್ಕೆ ಹಿಂದಿರುಗುವಾಗ ತನ್ನಿಂದ ಈ ಚಕ್ರಗಳನ್ನು ವ್ಯಕ್ತಗೊಳಿಸುವಳು (ರಸಾಮ್ನಾಯ ಮಹಸಾ). ಕಾಳೀಚರಣನು ಹೀಗೆ ಹೇಳಿದ್ದಾನೆ: ಆಮ್ನಾಯ=ವಿಧಾನ, ಮಹಸ್ = ಪ್ರಕಾಶ. ರಸ=ಚಕ್ರಗಳು. ಏಕೆಂದರೆ ಕಾಳೀಚರಣನಿಂದ ಅನ್ಯತ್ರ ಹೀಗೆ ಉಕ್ತವಾಗಿದೆ: ರಸ=ವಿಷಯ ಅಥವಾ ಐಹಿಕಸುಖಾಭಿಲಾಷೆ. ಚಕ್ರಗಳಲ್ಲಿ ಐಕ್ಯವಾಗಿರುವ 'ವೃತ್ತಿ'ಗಳು ಮಾನವನಲ್ಲಿಲ್ಲದಿದ್ದರೆ, ಅವನು ವಿರಕ್ತನಾಗುತ್ತಾನೆ. ಕುಂಡಲಿನಿಯು ಹಿಂದಿರುಗುವಾಗ ಚಕ್ರಗಳಲ್ಲಿ ವಿಲೀನವಾಗಿರುವ 'ವೃತ್ತಿ'ಗಳನ್ನು ಜಾಗೃತಗೊಳಿಸುವಳು. ಸಹಸ್ರಾರದಲ್ಲಿ ಪತಿಯೊಡನೆ ರಮಿಸುವಾಗ ತನ್ನ ಶ್ರೀ ಚರಣಗಳಿಂದ ಪ್ರವಹಿಸುವ ಅಮೃತಧಾರೆಯ ಮೂಲಕ ಷಟ್ಚಕ್ರಗಳಿಂದ

ರೂಪಿತನಾದ ' ಪ್ರಪಂಚ 'ವನ್ನು ತೋರಿಸುವಳು. ತರುವಾಯ ' ಕುಲಕುಂಡಾ ' ಎಂದರೆ ಮೂಲಾಧಾರಕ್ಕೆ ಹಿಂದಿರುಗಿ, ಅಲ್ಲಿ ಪ್ರತಿಷ್ಠಿತವಾಗಿರುವ ' ಸ್ವಯಂಭುಲಿಂಗ 'ವೇಷ್ಟನಮಾಡಿಕೊಂಡು ನಿದ್ರಿಸುವಳು. ಇಲ್ಲಿ ಸ್ವಾಮಿ ಅಚ್ಯುತಾನಂದರ ವ್ಯಾಖ್ಯಾನವನ್ನೇ ಆಧಾರವಾಗಿಟ್ಟುಕೊಂಡು ಅನುವಾದ ಮಾಡಲಾಗಿದೆ. ಅವರು ' ಕುಹರಿಣೀ ' ಎಂಬ ಪದವು ಸಪ್ತಮೀ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿದೆಯೆಂದೂ, ' ಕುಲಕುಂಡಾ ' ಎಂಬುದನ್ನು ವಿಶೇಷಿಸುವ ' ಗುಣವಾಚಕ 'ವೆಂದೂ ಹೇಳಿದ್ದಾರೆ. ' ಕುಹರಿಣೀ ' ಎಂಬುದು ಪ್ರಥಮಾ ವಿಭಕ್ತಿಯ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿದೆಯೆಂದೂ, ಅಧ್ಯಾಹಾರವಾಗಿರುವ ' ಕುಂಡಲೀ ' ಎಂಬುದರ ' ವಿಶೇಷಣ 'ವೆಂದೂ ಕಾಳೀಚರಣನು ಹೇಳಿದ್ದಾನೆ. ಇದರ ಪ್ರಕಾರ ' ಕುಹರದಲ್ಲಿ ನೆಲಸಿರುವವಳು ' ಎಂದು ಅರ್ಥಮಾಡಬೇಕಾಗುತ್ತದೆ.

' ಕುಲಕುಂಡ 'ವು ಯೋಗನಾಡಿಗಳ ಮೂಲಸ್ಥಾನವೆಂದು ಉಕ್ತವಾಗಿದೆ. ಕುಂಡಲನಿಯು ಸಹಸ್ರಾರದಲ್ಲಿ ದೀರ್ಘಕಾಲ ನೆಲಸುವುದಿಲ್ಲ. ಇದು ಯೋಗಿಯ ಸಾಧನ ಬಲವನ್ನು ಅವಲಂಬಿಸಿದೆ. ಯೋಗಿಯು ಪ್ರತಿಯೊಂದು ಸಲವೂ ಈ ಅಧಿಷ್ಠಾನ ಕಾಲವನ್ನು ಲಂಬಿಸಿಸಲು ಪ್ರಯತ್ನಿಸುತ್ತಾನೆ. ಕುಂಡಲಿನಿಯ ' ಆರೋಹಣ 'ವು ವರ್ಣ ಮತ್ತು ನಾದಯುಕ್ತವಾದದ್ದು. ಆಗ ಹೃದಯದಲ್ಲಿ ' ಅನಾಹತ 'ವು ಧ್ವನಿತವಾಗುತ್ತದೆ. ' ಸಹಸ್ರಾರ 'ವು ' ನಿರ್ವಾಣ 'ಮಯವಾದದ್ದು, ಎಂದರೆ ವರ್ಣ ಮತ್ತು ನಾದವಿವರ್ಜಿತವಾದದ್ದು.

ಚತುರ್ಭಿಃ ಶ್ರೀಕಂಠೈಃ ಶಿವಯುವತಿಭಿಃ ಪಂಚಭಿರಪಿ
ಪ್ರಭಿನ್ನಾಭಿಃ ಶಂಭೋರ್ನವಭಿರಪಿ ಮೂಲಪ್ರಕೃತಿಭಿಃ |
ಚತುಶ್ಚತ್ವಾರಿಂಶದ್ವಸುದಲಕಲಾಬ್ಜತ್ರಿವಲಯ—
ತ್ರಿರೇಖಾಭಿಃ ಸಾರ್ಧಂ ತವ ಭವನಕೋಣಾಃ ಪರಿಣತಾಃ || ೧೧ ||

ನಿನ್ನ ಭವನವು ಶಂಭುವಿನ ಒಂಬತ್ತು ಮೂಲಪ್ರಕೃತಿಗಳಿಂದ, ಎಂದರೆ ನಾಲ್ಕು ' ಶ್ರೀಕಂಠ 'ರಿಂದಲೂ, ಐದು ' ಶಿವಯುವತಿ 'ಯರಿಂದಲೂ ರೂಪಿತವಾಗಿದೆ. ಕೋನಗಳು ನಲವತ್ತಮೂರು. ಶ್ರೀ ಚಕ್ರವು ಮೂರು ವಲಯಗಳು, ಮೂರು ರೇಖೆಗಳು ಎಂಟು ಮತ್ತು ಹದಿನಾರು ದಳಗಳುಳ್ಳ ಪದ್ಮಗಳಿಂದಲೂ ಯುಕ್ತವಾಗಿದೆ.

ಟೀಕೆ: ಇದು ' ಬಹಿರ್ಯಾಗ.' ' ಶ್ರೀಕಂಠ 'ರೆಂದರೆ ಊರ್ಧ್ವಮುಖವಾಗಿರುವ ನಾಲ್ಕು ತ್ರಿಕೋಣಗಳು. ಇವು ' ಶಿವಾತ್ಮಕ 'ವಾದುವು. ' ಶಿವಯುವತಿ 'ಯರೆಂದರೆ ಅಧೋಮುಖವಾಗಿರುವ ಪಂಚ ತ್ರಿಕೋಣಗಳು. ಇವು ' ಶಕ್ತ್ಯಾತ್ಮಕವಾದುವು.' ' ಬಿಂದುರೂಪೀ ' ಶಿವನ ' ಮೂಲ ಪ್ರಕೃತಿ 'ಯಿಂದ ಈ ನವತ್ರಿಕೋಣಗಳು ರೂಪಿತವಾದುವು. ತ್ರಿಕೋಣಗಳು ಅಂತರ್ಯದಲ್ಲಿವೆ. ಸಮಾನರೇಖೆಗಳು ಬಾಹ್ಯಸ್ಥಿತವಾಗಿವೆ. ಈ ತ್ರಿಕೋಣಗಳ ಮತ್ತು ಸಮಾನರೇಖೆಗಳ ಮಧ್ಯೆ ಮೂರು ವೃತ್ತಗಳಿವೆ. ಈ ವೃತ್ತಗಳ ಅಂತರ್ಯದಲ್ಲಿ ಪದ್ಮಗಳು ಅಧಿಷ್ಠಿತವಾಗಿವೆ. ಅಷ್ಟದಳ ಪದ್ಮವು ಅಂತರ್ಯದಲ್ಲಿದೆ. ಷೋಡಶದಳ ಪದ್ಮವು ಅದರ ಬಾಹ್ಯಸ್ಥಿತವಾಗಿದೆ. ಇದೇ ವಿಖ್ಯಾತವಾದ

'ಶ್ರೀಯಂತ್ರ' ಅಥವಾ 'ಶ್ರೀ ಚಕ್ರ' ಒಂಬತ್ತು ಪ್ರಕೃತಿಗಳು 'ಮೂಲಪ್ರಕೃತಿ'ಯ ಪ್ರತಿ ಪ್ರಕೃತಿಗಳು. ಅವುಗಳಿಂದ ಎಂಟು ವಿಕೃತಿಗಳು ಉದ್ಭವಿಸುತ್ತವೆ.

ಈ ಒಂಬತ್ತು ತ್ರಿಕೋಣಗಳ ಪರಸ್ಪರ ಕ್ರಿಯೆ ಪ್ರತಿಕ್ರಿಯೆಗಳಿಂದ ಬ್ರಹ್ಮಾಂಡ ವ್ಯಕ್ತವಾಗುತ್ತದೆ. 'ಕಾಮಿಕ'ವೆಂಬ ಮಂತ್ರಶಾಸ್ತ್ರದಲ್ಲಿ ಶ್ರೀ ಚಕ್ರಕ್ಕೂ ಮಾನವ ದೇಹಕ್ಕೂ ಸಾದೃಶ್ಯವನ್ನು ಕಲ್ಪಿಸಿದೆ. ಅದನ್ನು ಇಲ್ಲಿ ಕೋಷ್ಟಕರೂಪದಲ್ಲಿ ಕೊಟ್ಟಿದೆ:

ಸೂಕ್ಷ್ಮ ಪ್ರಪಂಚ		ಸ್ಥೂಲ ಪ್ರಪಂಚ	
ಪಂಚ ಶಕ್ತಿ ಕೋನಗಳು	ಚತುಶ್ಶಿವ ಕೋನಗಳು	ಪಂಚ ಶಕ್ತಿ ಕೋನಗಳು	ಚತುಶ್ಶಿವ ಕೋನಗಳು
ತ್ವಕ್ಕು	ಮಜ್ಜ	ಪಂಚಭೂತಗಳು	ಮಾಯಾ
ಅಸೃಕ್	ಶುಕ್ರ	ಪಂಚತನ್ಮಾತ್ರಗಳು	ಶುದ್ಧವಿದ್ಯಾ
ಮಾಂಸ	ಪ್ರಾಣ	ಪಂಚಜ್ಞಾನೇಂದ್ರಿಯಗಳು	ಮಹೇಶ್ವರ
ಮೇಧ	ಜೀವ	ಪಂಚಕರ್ಮೇಂದ್ರಿಯಗಳು	ಸದಾಶಿವ
ಅಸ್ಥಿ		ಪಂಚಪ್ರಾಣಗಳು	

ಪೂರ್ವೋಕ್ತ ಸಾದೃಶ್ಯವನ್ನು ವರ್ಣಿಸುವುದರಲ್ಲಿ ಕೆಲವರು ತಾಂತ್ರಿಕರು ೫೧ ತತ್ವಗಳನ್ನೂ, ಕೆಲವರು ೯೪ ತತ್ವಗಳನ್ನೂ, ಇತರರು ೨೫ ತತ್ವಗಳನ್ನೂ ಅಂಗೀಕರಿಸುವರು.

ಶ್ರೀ ಚಕ್ರದ ರಚನೆಯಲ್ಲಿ ಮೂರು ವಿಧಗಳಿವೆ: ಮೇರು, ಕೈಲಾಸ ಮತ್ತು ಭೂ ಪ್ರಸ್ತಾರಗಳು. ಮೇರು ಪ್ರಸ್ತಾರದಲ್ಲಿ ಷೋಡಶ ನಿತ್ಯಾದೇವಿಯರು ಪ್ರತಿಷ್ಠಿತರಾಗಿರುತ್ತಾರೆ. ಕೈಲಾಸದಲ್ಲಿ 'ಅಷ್ಟಮಾತೃಕೆ'ಯರೂ, 'ಭೂ' ಪ್ರಸ್ತಾರದಲ್ಲಿ ಅಷ್ಟವರೆನೀ ದೇವಿಯರೂ ಪ್ರತಿಷ್ಠಿತರಾಗಿರುತ್ತಾರೆ. ಶ್ರೀ ಚಕ್ರದ ಆರಾಧನೆಯಿಂದ ಪೃಶ್ನಿಗಳೆಂಬ ಋಷಿಗಳು ಕುಂಡಲಿನಿಯೋಗ ಸಿದ್ಧಿಯನ್ನು ಪಡೆದರೆಂದು 'ತೈತ್ತರೀಯಾರಣ್ಯಕ'ದಲ್ಲಿ ಉಕ್ತವಾಗಿದೆ. ಶ್ರೀ ಚಕ್ರದ ಕೋನಗಳನ್ನು ಕುರಿತು ಭಿನ್ನಾಭಿಪ್ರಾಯಗಳಿವೆ. ಕೆಲವರು ೪೪ ಕೋನಗಳೆಂದೂ, ಇತರರು ೪೩ ಕೋನಗಳೆಂದೂ ಹೇಳಿದ್ದಾರೆ. ಶ್ರೀಮದಾಚಾರ್ಯರಿಂದ ೪೩ ಕೋನಗಳಿರಬೇಕೆಂದು ಉಕ್ತವಾಗಿದೆ. ಪೂರ್ವೋಕ್ತ ನಾಲ್ಕು ಶಿವತತ್ವಗಳ ಪೈಕಿ, ಶುದ್ಧ ವಿದ್ಯೆಯು 'ಸದ್ವಿದ್ಯೆ'ಯೆಂದು ಕರೆಯಲ್ಪಟ್ಟು, ಸದಾಶಿವನು 'ಸಾದಾಖ್ಯ'ನೆಂದು ಸಂಬೋಧಿಸಲ್ಪಟ್ಟಿದ್ದಾನೆ. 'ಸಾದಾಖ್ಯ' ಎಂದರೆ 'ಸತ್ ಆಖ್ಯಾತ'. ಏಕೆಂದರೆ ಇಲ್ಲಿ ಪ್ರಥಮತಃ ಸಾತ್ವಿಕ ಅಹಂಕಾರವು ತಲೆದೋರುವುದು.

ತ್ವದೀಯಂ ಸೌಂದರ್ಯಂ ತುಹಿನಗಿರಿಕನ್ಯೇ ತುಲಯಿತುಂ
ಕವೀಂದ್ರಾಃ ಕಲ್ಪಂತೇ ಕಥಮಪಿ ವಿರಿಂಚಿ ಪ್ರಭೃತಯಃ|
ಯದಾಲೋಕೌತ್ಸುಕ್ಯಾದಮರಲಲನಾ ಯಾಂತಿ ಮನಸಾ
ತಪೋಭಿರ್ದುಷ್ಪ್ರಾಪ್ಯಾಮಪಿ ಗಿರಿಶಸಾಯುಜ್ಯಪದವೀಮ್ ||೧೨||

ಎಲೌ, ಹಿಮಶೈಲಪುತ್ರೀ, ಹರಿಹರ ಬ್ರಹ್ಮಾದಿಗಳೇ ಮುಂತಾದ ಮಹಾಕವಿಗಳು ನಿನ್ನ ಸೌಂದರ್ಯವನ್ನು ಊಹಿಸಲು ಸರ್ವಥಾ ಅಸಮರ್ಥರಾಗಿರುವರು. ಅತಿಶಯುವಾದ ನಿನ್ನ ಸೌಂದರ್ಯವನ್ನು ಕುರಿತು ಧ್ಯಾನಿಸುವ ದೇವಿಯರು, ಮಹಾಯೋಗಿಗಳಿಗೂ ದುಷ್ಪ್ರಾಪ್ಯವಾದ ಶಿವಸಾಯುಜ್ಯವನ್ನು ಪಡೆಯುವರು.

ಟೀಕೆ: ತ್ರಿಮೂರ್ತಿಗಳು ಶಾಸ್ತ್ರಕರ್ತೃತ್ವದಿಂದಲೂ, ಸೃಷ್ಟಿ, ಸ್ಥಿತಿ, ಸಂಹಾರ ಕಾರ್ಯ ನಿರ್ವಹಣದಿಂದಲೂ ಅವರು ಕವಿಗಳು. ದೇವಿಯ ಅನುಪಮಸೌಂದರ್ಯದ ದರ್ಶನವನ್ನು ಪಡೆಯುವ ಅಮರ ಲಲನೆಯರು ಇಚ್ಛಾಮಾತ್ರದಿಂದ, ಕಠಿನ ತಪೋನಿರತರಾದ ಯೋಗಿಗಳಿಗೂ ದುಸ್ಸಾಧ್ಯವಾದ, ಸಾಯುಜ್ಯವನ್ನು ಹೊಂದುವರು. 'ತಪೋಭಿಃ' ಎಂಬುದಕ್ಕೆ 'ಪಶೂನಾಂ' ಎಂಬ ಪಾಠಾಂತರವಿದೆ. ಇದರ ಪ್ರಕಾರ 'ತಾಂತ್ರಿಕ ಮಾರ್ಗ' ವನ್ನನುಸರಿಸದ ಪಶುಗಳಿಂದ ಪಡೆಯಲು ಅಸಾಧ್ಯವಾದದ್ದು ಎಂಬ ಅರ್ಥವನ್ನು ಕಲ್ಪಿಸಬಹುದು.

ನರಂ ವರ್ಷೀಯಾಂಸಂ ನಯನವಿರಸಂ ನರ್ಮಸು ಜಡಂ
ತವಾಪಾಂಗಾಲೋಕೇ ಪತಿತಮನುಧಾವಂತಿ ಶತಶಃ|
ಗಲದ್ವೇಣೀಬಂಧಾಃ ಕುಚಕಲಶ ವಿಸ್ರಸ್ತಸಿಚಯಾ
ಹಠಾತ್ತ್ರುಟ್ಯತ್ಕಾಂಚ್ಯೋ ವಿಗಲಿತ ದುಕೂಲಾ ಯುವತಯಃ ||೧೩||

ವೃದ್ಧನೂ, ಅಂಧನೂ, ಪ್ರೇಮವಿರತನೂ ಆದವನನ್ನು, ನಿನ್ನ ಅಪಾಂಗದೃಷ್ಟಿಯ ವೀಕ್ಷಣಮಾತ್ರದಿಂದ, ನೂರಾರು ಯುವತಿಯರು, ತಮ್ಮ ಕುಚ ಕುಂಭದಿಂದ ಕಂಚುಕವು ಜಾರುತ್ತಿರಲು, ಕಾಂಚೀದಾಮವು ಭೇದಿಸಿಹೋದುದರಿಂದ ಗಲಿತ ವಸ್ತ್ರರಾಗಿ ಗಲಿತ ಕೇಶಿಯರಾಗಿ ಅವನ ಹಿಂದೆ ಧಾವಿಸುವರು.

ಟೀಕೆ: ತೃತೀಯ ಪುರುಷಾರ್ಥವಾದ 'ಕಾಮ'ದ ಸಿದ್ಧಿಗಾಗಿ ಇದು 'ಮದನ ಪ್ರಯೋಗ'ವೆಂದು ಅನೇಕ ವ್ಯಾಖ್ಯಾನಕಾರರು ನಿರ್ದೇಶಿಸಿದ್ದಾರೆ. ಕಮನೀಯಳಾದ ದೇವಿಯ ಮಹತ್ವವು ಎಷ್ಟು ಅತಿಶಯವಾದುದೆಂದರೆ, ಆಕೆಯ ಅಪಾಂಗದೃಷ್ಟಿಯು ಯಾವ ವಸ್ತುವಿನ ಮೇಲೆ ಬೀಳುತ್ತದೋ, ಅದು ಸರ್ವಾದರಣೀಯವಾಗುತ್ತದೆ.

ಕ್ಷಿತೌ ಷಟ್‌ಪಂಚಾಶತ್ ದ್ವಿಸಮಧಿಕ ಪಂಚಾಶದುದಕೇ
ಹುತಾಶೇ ದ್ವಾಷಷ್ಟಿಶ್ಚತುರಧಿಕ ಪಂಚಾಶದನಿಲೇ|
ದಿವಿ ದ್ವಿಃಷಟ್‌ತ್ರಿಂಶನ್ಮನಸಿ ಚ ಚತುಃಷಷ್ಠಿರಿತಿಯೇ
ಮಯೂಖಾಸ್ತೇಷಾಮಪ್ಯುಪರಿ ತವ ಪದಾಂಬುಜಯುಗಮ್ ||೧೪||

ಎಲೌ ಜನನಿಯೇ, ಪೃಥ್ವಿಗೆ ಐವತ್ತಾರು ಮಯೂಖಗಳೂ, ಜಲಕ್ಕೆ ಐವತ್ತೆರಡೂ, ಅಗ್ನಿಗೆ ಅರವತ್ತೆರಡೂ, ವಾಯುವಿಗೆ ಐವತ್ತನಾಲ್ಕೂ, ಆಕಾಶಕ್ಕೆ ಎಪ್ಪತ್ತೆರಡೂ, ಮನಸ್ಸಿಗೆ ಅರವತ್ತನಾಲ್ಕೂ ಇವೆ. ಆದರೆ ಕಮಲಸದೃಶವಾದ ನಿನ್ನ ಪಾದಯುಗ್ಮಗಳು, ಅವುಗಳಿಗೆ ಅತೀತವಾಗಿ, ಅವುಗಳ ಉಪರಿಭಾಗದಲ್ಲಿ (ಹಂ ಮತ್ತು ಸಃ) ಪ್ರಕಾಶಿಸುತ್ತಿವೆ.

ಟೀಕೆ—'ಮಯೂಖ'ಗಳೆಂದರೆ ದಿವಾರಾತ್ರಿಗಳು. ಷಟ್ಚಕ್ರಗಳ ಮಯೂಖಗಳು ಒಟ್ಟುಗೂಡಿ, ಚಾಂದ್ರಾಯಣದ ಆರು ಋತುಗಳುಳ್ಳ ಮುನ್ನೂರರವತ್ತು ದಿವಸಗಳಿಂದ ಸಹಿತವಾದ ಒಂದು ವರ್ಷವಾಗುತ್ತದೆ. ನಾದ ಮತ್ತು ಬಿಂದುಗಳು ದೇವಿಯ ಪಾದದ್ವಯಗಳು; ಅವುಗಳ ಮೇಲೆ 'ಕಾಲಗೋಚರ' ವಸಂತಋತುವು ಐವತ್ತಾರು ದಿನಗಳುಳ್ಳದ್ದು. ಗ್ರೀಷ್ಮವು ಐವತ್ತೆರಡು, ವರ್ಷಋತುವು ಅರವತ್ತೆರಡು, ಹೇಮಂತವು ಐವತ್ತುನಾಲ್ಕು, ಶರತ್ ಎಪ್ಪತ್ತೆರಡು, ಶಿಶಿರ ಅರವತ್ತನಾಲ್ಕು ದಿನಗಳೂ ಉಳ್ಳವು. ಪ್ರತಿಯೊಂದು 'ಚಕ್ರ'ವೂ ಒಂದೊಂದು 'ಋತು'ವನ್ನು ನಿರ್ದೇಶಿಸುತ್ತದೆ. ಇವೆಲ್ಲಕ್ಕಿಂತಲೂ ಮೇಲೆ ದೇವಿಯ ಪಾದಯುಗ್ಮಗಳಿವೆ. ಇವೇ 'ಬ್ರಹ್ಮ' ಮತ್ತು 'ಪರಬ್ರಹ್ಮ', ಅಥವಾ 'ನಾದ' ಮತ್ತು 'ಬಿಂದು.' ಇವು ಕಾಲಾತೀತವಾದುವು. ಪೃಥ್ವಿಯ 'ಐವತ್ತಾರು ಮಯೂಖ'ಗಳು, ಅದರ 'ಇಪ್ಪತ್ತೆಂಟು ತತ್ವ'ಗಳ ದ್ವಿಗುಣಿತ (duplicate) ಎಂದರೆ, 'ಇಪ್ಪತ್ತೆಂಟು ಶಿವತತ್ವಗಳು' ಮತ್ತು 'ಇಪ್ಪತ್ತೆಂಟು ಶಕ್ತಿ ತತ್ವಗಳು'. ಇದೇ ರೀತಿಯಲ್ಲಿ ಇತರ ಚಕ್ರಗಳ ಮಯೂಖಗಳಿಗೂ ಅನ್ವಯಿಸಿಕೊಳ್ಳಬೇಕು. ಇವುಗಳ ಊರ್ಧ್ವಭಾಗದಲ್ಲಿ ವಿರಾಜಿಸುವ ದೇವಿಯ ಪಾದದ್ವಯಗಳು 'ತತ್ವಾತೀತ'ವಾದುವು.

ಸ್ವಾಮಿ ಅಚ್ಯುತಾನಂದರ ಅಭಿಪ್ರಾಯದಲ್ಲಿ ಮಯೂಖಗಳೆಂದರೆ ವಿವಿಧ ರೀತಿಯಲ್ಲಿ ವಿಂಗಡಿಸಲ್ಪಟ್ಟಿರುವ 'ವರ್ಣ'ಗಳು.

(೧) ೫೬ ಮಯೂಖಗಳು = ೫೦ ಅಕ್ಷರಗಳು + ಐಂ, ಹ್ರೀಂ, ಶ್ರೀಂ, ಐಂ, ಕ್ಲೀಂ, ಸೌಃ (ಪೃಥ್ವೀ)
(೨) ೫೨ „ = „ + ಸೌಂ, ಶ್ರೀಂ (ಅಪ್ಪು)
(೩) ೬೨ „ = „ + ಔ, ಔ, ಔ, ಔ, ಹಂ, ಸಃ, ಹಂ, ಸಃ, ಹಂ. ಸಃ, ಹಂ, ಸಃ (ಅಗ್ನಿ)
(೪) ೫೪ „ = „ + ಯಂ, ರಂ, ಲಂ, ವಂ (ವಾಯು)
(೫) ೭೨ „ = „ + ೧೪ ಸ್ವರಗಳು (೫ಸಲ) = ೭೦ + ಐಂ, ಹ್ರೀಂ (ಆಕಾಶ)
(೬) ೬೪ „ = „ + ೧೬ „ (೪ „) = ೬೪ (ಮನಸ್)

ಷಟ್ಚಕ್ರಗಳಲ್ಲಿ 'ಹಂ' ಮತ್ತು 'ಸಃ' ಎಂಬ ವರ್ಣಗಳನ್ನು ಪ್ರತಿಷ್ಠಿಸಿ, ಪೂರ್ವೋಕ್ತ ೩೬೦ ವರ್ಣಗಳೊಡನೆ 'ನ್ಯಾಸ' ಮಾಡಬೇಕೆಂದು ಕೆಲವರು ಹೇಳುತ್ತಾರೆ.

'ಹಂಸ' ಮಂತ್ರವು 'ಅಜಪಗಾಯತ್ರಿ'. ಮಂತ್ರವಿಲ್ಲದೆ, ಎಂದರೆ ಜಪವಿಲ್ಲದೆ, ಮಂತ್ರಾನುಷ್ಠಾನಮಾಡುವವರಿಗೆ ಸಿದ್ಧಿಯನ್ನು ಕೊಡುವ ಮಂತ್ರ. ಇದು ಸಂಸಾರ ಪಾಶವನ್ನು ಭೇದಿಸುತ್ತದೆ.

ಶರಜ್ಜ್ಯೋತ್ಸ್ನಾಶುಭ್ರಾಂ ಶಶಿಯುತಜಟಾಜೂಟಮಕುಟಾಂ
ವರತ್ರಾಸತ್ರಾಣಸ್ಫಟಿಕಘಟಿಕಾ ಪುಸ್ತಕ ಕರಾಮ್ |
ಸಕೃನ್ನತ್ವಾ ನತ್ವಾ ಕಥಮಿವ ಸತಾಂ ಸನ್ನಿದಧತೇ
ಮಧುಕ್ಷೀರದ್ರಾಕ್ಷಾ ಮಧುರಿಮಧುರೀಣಾ ಭಣಿತಯಃ || ೧೫ ||

ಶರತ್ಕಾಲದ ಪೂರ್ಣಚಂದ್ರನಂತೆ ವಿರಾಜಿಸುವ ಮತ್ತು ಯಾರ ಜಟಾಮಕುಟವು ಶಶಿಕಲೆಯಿಂದ ಪ್ರಕಾಶಿಸುತ್ತಿರುವುದೋ, ಯಾರ ಹಸ್ತಗಳಲ್ಲಿ 'ಸ್ಫಟಿಕಾಕ್ಷಮಾಲೆ' ಮತ್ತು 'ಪುಸ್ತಕ'ಗಳು ಶೋಭಿಸುತ್ತಿರುವವೋ, ಯಾರ ಕರಗಳು 'ಅಭಯ' ಮತ್ತು 'ವರದ' ಮುದ್ರೆಗಳನ್ನು ಪ್ರದರ್ಶಿಸುತ್ತಿರುವುವೋ, ಅಂತಹ ನಿನಗೆ ನಮಿಸಿ, ನಿನ್ನನ್ನು ಕುರಿತು ಧ್ಯಾನಿಸದಿದ್ದರೆ, ಮುನಿಗಳ ವಾಕ್ಯಗಳು ಮಧುಕ್ಷೀರ ಮತ್ತು ದ್ರಾಕ್ಷಾರಸದಂತೆ ಮಾಧುರ್ಯಪೂರಿತವಾಗಿರಲು ಹೇಗೆ ಸಾಧ್ಯವಾಗುತ್ತಿತ್ತು?

ಟೀಕೆ: ಅಚ್ಯುತಾನಂದರ ಅಭಿಪ್ರಾಯದ ಪ್ರಕಾರ ಇಲ್ಲಿ 'ಕ್ರಿಯಾಶಕ್ತಿ'ಯ ಧ್ಯಾನವು ಸೂಚಿತವಾಗಿದೆ. ಇದು ಮತ್ತು ಮುಂದಿನ ಎರಡು ಶ್ಲೋಕಗಳು 'ಕವಿತ್ವಸಿದ್ಧಿ'ಯನ್ನು ಪಡೆಯಲು ಸಹಾಯಮಾಡುವ 'ಸಾರಸ್ವತ ಪ್ರಯೋಗ.'

ಕವೀಂದ್ರಾಣಾಂ ಚೇತಃ ಕಮಲವನ ಬಾಲಾತಪರುಚಿಂ
ಭಜಂತೇ ಯೇ ಸಂತಃ ಕತಿಚಿದರುಣಾಮೇವ ಭವತೀಮ್ |
ವಿರಿಂಚಿ ಪ್ರೇಯಸ್ಯಾಸ್ತರುಣಕರ ಶೃಂಗಾರಲಹರೀ—
ಗಭೀರಾಭಿರ್ವಾಗ್ಭಿರ್ವಿದಧತಿ ಸತಾಂ ರಂಜನಮಮೀ || ೧೬ ||

ಮಹಾಕವಿಗಳ ಹೃದಯವೆಂಬ ಕಮಲವನದಲ್ಲಿ, ಅರುಣವರ್ಣದಿಂದ ಕೂಡಿ, ಉದಯ ಭಾಸ್ಕರನಂತೆ ಪ್ರಕಾಶಿಸುವ ನಿನ್ನನ್ನು ಪೂಜಿಸುವ ಸನ್ಮತಿಗಳು ಸರಸ್ವತಿಯ ಮುಖದಿಂದ ಹೊರಹೊಮ್ಮುವ ಶೃಂಗಾರ ರಸಪೂರಿತವಾದ ವಾಗ್ಝರಿಯಿಂದ ಸಭಾ ರಂಜನೆಗೊಳಿಸುವರು.

ಟೀಕೆ: ರವಿಯು ಕಮಲವನ್ನು ವಿಕಸಿಸುವಂತೆ, ದೇವಿಯು ಮಹಾಕವಿಗಳ ಹೃದಯವನ್ನು ವಿಕಾಸಗೊಳಿಸುವಳು. ಇಲ್ಲಿ ದೇವಿಯ 'ಇಚ್ಛಾಶಕ್ತಿ' ಸ್ವರೂಪವು ವರ್ಣಿತವಾಗಿದೆ. ಕ್ರಿಯಾಶಕ್ತಿಯು 'ವಾಗ್ಭವ'ದ ಅಧಿಷ್ಠಾತೃದೇವಿ ; ಇಚ್ಛಾಶಕ್ತಿಯು 'ಕಾಮಕೂಟ'ದ ಅಧಿದೇವತೆ.

ಸವಿತ್ರೀಭಿರ್ವಾಚಾಂ ಶಶಿಮಣಿಶಿಲಾಭಂಗರುಚಿಭಿ—
ರ್ವಶಿನ್ಯಾದ್ಯಾಭಿಸ್ತ್ವಾಂ ಸಹ ಜನನಿ ಸಂಚಿಂತಯತಿ ಯಃ |
ಸ ಕರ್ತಾ ಕಾವ್ಯಾನಾಂ ಭವತಿ ಮಹತಾಂ ಭಂಗಿರುಚಿಭಿ—
ರ್ವಚೋಭಿರ್ವಾಗ್ದೇವೀ ವದನಕಮಲಾಮೋದ ಮಧುರೈಃ || ೧೭ ||

ಎಲೌ ಜನನೀ, ಚಂದ್ರಕಾಂತ ಶಿಲೆಯಂತೆ ಸುಂದರವಾದ, ಮಧುರವಾಕ್ಪ್ರದಾಯಿನಿಯರಾದ, ವಶಿನೀ ಮುಂತಾದ ಪರಿವಾರದೇವಿಯರ ಸಮೇತ ನಿನ್ನನ್ನು ಕುರಿತು ಧ್ಯಾನಿಸುವವನು ಮಹಾಕವಿಯಾಗಿ, ಅವನ ವಾಕ್ಕುಗಳು ವಾಗ್ದೇವಿಯ ಮುಖಕಮಲದ ದಿವ್ಯಾಮೋದದಿಂದ ಮಾಧುರ್ಯಯುಕ್ತವಾಗಿರುವುವು.

ಟೀಕೆ—ಶಕ್ತಿಕೂಟದ ಅಧಿಷ್ಠಾತೃದೇವಿಯಾದ 'ಜ್ಞಾನಶಕ್ತಿ'ಯನ್ನು ಕುರಿತು ಧ್ಯಾನಿಸುವುದರ ಫಲವನ್ನು ಈ ಶ್ಲೋಕವು ತಿಳಿಸುತ್ತದೆ. ವಶಿನೀ, ಕಾಮೇಶ್ವರೀ, ವಿಮಲಾ, ಅರುಣಾ, ಜಯಿನೀ, ಸರ್ವೇಶ್ವರೀ, ಕೌಲಿನೀ, ಮೋಹಿನೀ ಎಂಬುವರೇ 'ಅಷ್ಟಶಕ್ತಿ'ಯರು.

ತನುಚ್ಛಾಯಾಭಿಸ್ತೇ ತರುಣತರಣಿ ಶ್ರೀಧರಣಿಭಿ
ರ್ದಿವಂ ಸರ್ವಾಮುರ್ವೀಮರುಣಿಮನಿಮಗ್ನಾಂ ಸ್ಮರತಿ ಯಃ।
ಭವಂತ್ಯಸ್ಯ ತ್ರಸ್ಯದ್ವನಹರಿಣ ಶಾಲೀನನಯನಾಃ
ಸಹೋರ್ವಶ್ಯಾ ವಶ್ಯಾಃ ಕತಿ ಕತಿ ನ ಗೀರ್ವಾಣ ಗಣಿಕಾಃ ॥ ೧೮ ॥

ಬಾಲಸೂರ್ಯನಂತೆ ಅರುಣವರ್ಣದಿಂದ ಪ್ರಕಾಶಿಸುತ್ತಿರುವ ಮನೋಹರವಾದ ನಿನ್ನ ಶರೀರಕಾಂತಿಯಿಂದ ಭೂಮ್ಯಾಕಾಶಗಳು ತಪ್ತವಾಗಿರುವುವೆಂದು ಭಾವಿಸುವವನು, ವನಹರಿಣಿಗಳಂತೆ ಸುಂದರವಾದ ಬೆದರುಗಣ್ಣುಗಳುಳ್ಳ ಅಪ್ಸರೆಯರನ್ನು ವಶಪಡಿಸಿಕೊಳ್ಳುವನು.

ಟೀಕೆ—ಶಕ್ತಿಕೂಟದ ಅಧಿದೇವತೆಯಾದ 'ಜ್ಞಾನಶಕ್ತಿ'ಯನ್ನು ಕುರಿತು ಧ್ಯಾನಿಸುವುದರ ಫಲವು ಇಲ್ಲಿ ಸೂಚಿತವಾಗಿದೆ. ದೇವಲೋಕದ ಅಪ್ಸರೆಯರು ಅನಿಮಿಷನಯನೆಯರು. ಆದರೆ ಅವರ ನೇತ್ರಗಳೂ ಚಂಚಲವಾಗುವುವು. ಜ್ಞಾನಶಕ್ತಿಯ ಆರಾಧನೆಯಿಂದ ಲಭಿಸುವ ಶಕ್ತಿವಿಶೇಷವನ್ನು ಈ ಶ್ಲೋಕವು ವರ್ಣಿಸುತ್ತದೆ.

(ಸಶೇಷ)

ಸಿ. ಬಿ. ಸೀತಾರಾಂ.

ಅಸಗ ಕವಿಯ ಖ್ಯಾತಿ

ಕನ್ನಡ ಸಾಹಿತ್ಯದಲ್ಲಿ ಅಸಗನ (ಸು. ಕ್ರಿ.ಶ. ೮೩೦-೮೮೦) ಪರಿಚಯವಾಗುವುದು ಮೊತ್ತಮೊದಲು ಕವಿಚಕ್ರವರ್ತಿ ಪೊನ್ನನಿಂದ. ಆತನು ಪುರಾಣ ಚೂಡಾಮಣಿ ಎನಿಸಿದ ತನ್ನ ಶಾಂತಿಪುರಾಣದಲ್ಲಿ (ಕ್ರಿ.ಶ. ೯೫೦)

ಕನ್ನಡಗವಿತೆಯೊಳಸಗಂ
ಗನ್ನೂರ್ಮಡಿ ರೇಖೆಗಗ್ಗಳಂ ಸಕ್ಕದದೊಳ್ |
ಮುನ್ನುಳ್ಳ ಕಾಳಿದಾಸಂ
ಗನ್ನೂರ್ಮಡಿ ರಚನೆಯೊಳ್ ಕುರುಳ್ಗಳ ಸವಣಂ ||

(ಶಾಂತಿಪುರಾಣ. ಆ. ೧., ಪ. ೧೧.)

ಎಂದು ಹೇಳಿದ್ದಾನೆ. ಕಾವ್ಯಗಳನ್ನು ರಚಿಸುವದರಲ್ಲಿ ತಾನು ಕನ್ನಡ ಕವಿಯಾದ ಅಸಗನನ್ನೂ ಸಂಸ್ಕೃತ ಕವಿಯಾದ ಕಾಳಿದಾಸನನ್ನೂ ಮೀರಿದ್ದೇನೆ ಎಂಬ ಪೊನ್ನನ ಹೇಳಿಕೆ ಆತ್ಮಸ್ತುತಿಯ ಪರಾಕಾಷ್ಠತೆ ಎಂದೇ ಹೇಳಬೇಕಾಗುತ್ತದೆ. ಸಂಸ್ಕೃತ ಕವಿಕುಲಲಲಾಮನಾದ ಕಾಳಿದಾಸನನ್ನು ತಾನು ಎಷ್ಟೇ ಮೀರಿದ್ದೇನೆಂದು ಹೇಳಿದರೂ ಆತನ ಪ್ರಭಾವ ಪೊನ್ನನ ಶಾಂತಿಪುರಾಣದಲ್ಲಿ ಒಡೆದು ಕಾಣುತ್ತಿದೆ. '೫ ನೆಯ ಆಶ್ವಾಸದ ಜ್ಯೋತಿಃಪ್ರಭೆಯ ಸ್ವಯಂವರ ವರ್ಣನೆಯಲ್ಲಿ ಕಾಳಿದಾಸನ ರಘುವಂಶದಲ್ಲಿಯ ಇಂದುಮತೀ ಸ್ವಯಂವರವರ್ಣನೆಯ ಹಲವು ಪದ್ಯಗಳನ್ನು ಪೊನ್ನನು ಅನುವಾದಿಸಿದ್ದಾನೆ' ಎಂದು ಶ್ರೀ ಡಿ. ಎಲ್. ನರಸಿಂಹಾಚಾರ್ಯರವರು ಹೇಳಿದ್ದಾರೆ (ಪೊನ್ನನೂ ಕಾಳಿದಾಸನೂ. ಪ್ರ. ಕ. ೧೨. ೨). ಕಾಳಿದಾಸನ ಬಗೆಗೆ ಪೊನ್ನನ ಪಾಡು ಆದಂತೆ ಅಸಗನ ಬಗೆಗಾದರೂ ಆಗಿರಬೇಕು. ಅಸಗನ ಕನ್ನಡ ಕೃತಿಗಳು ನಮಗೆ ದೊರಕಿಲ್ಲ. ದೊರಕಿದ್ದರೆ ಅವುಗಳ ಪ್ರಭಾವ ಪೊನ್ನನ ಕೃತಿಗಳ ಮೇಲೆ ಯಾವ ರೀತಿಯದಾಗಿತ್ತೆಂಬುದು ಕಂಡುಹಿಡಿಯಲು ಬರುವಂತಿತ್ತು. ಅಸಗನ ಸಂಸ್ಕೃತ ಶಾಂತಿಪುರಾಣವನ್ನು ಓದಿ ಪೊನ್ನನು ತನ್ನ ಶಾಂತಿ ಪುರಾಣವನ್ನು ಬರೆದಿರಬಹುದೆಂದು ಡಾ. ಎ. ಎನ್. ಉಪಾಧ್ಯೆಯವರು ಊಹಿಸಿದ್ದಾರೆ. ('Asaga and his works', *Karnatak Historical Review*, Vol. II., No. 1., Pp. 42-47). ಪೊನ್ನನು ಕಾಳಿದಾಸನ ಕೂಡ ಅಸಗನ ಹೆಸರನ್ನು ಹೇಳಿದ್ದನ್ನು ನೋಡಿದರೆ ಪೊನ್ನನ ಕಾಲದಲ್ಲಿಯೇ ಅಸಗನು 'ಕನ್ನಡ ಕವಿ' ಎಂದು ಸಾಕಷ್ಟು ಪ್ರಖ್ಯಾತನಾಗಿರಬೇಕು.

ಪೊನ್ನನು ತಾನು ಎಲ್ಲ ಕವಿಗಳನ್ನೂ ಮೀರಿದ್ದೇನೆಂಬ ಆತ್ಮಸ್ತುತಿಯುಳ್ಳ ಆತನ ಒಂದು ಪದ್ಯ ಕೆಳಗಿನಂತಿದೆ.

> ಅಯ್ದು ಕಷಾಯೋದಕದೊಳ್
> ತೊಯ್ದು ಸಗಂಬೋಲ್ ನೃಪೇಂದ್ರ ಸಭೆಯೆಂಬ ಕೊಳ|
> ಕುಯ್ದು [ಲಸದಲೆದು ಸಿಲೆಯೊಳ್]
> ಪೊಯ್ದಂ ಕವಿಚಕ್ರವರ್ತಿ ಕವಿಜೀವರಮಂ||
>
> (ಶಾಂತಿ. ಆ. ೧೨., ಪ. ೨೩.)

ಮೇಲಿನ ಪದ್ಯದಲ್ಲಿ ಪೊನ್ನನು ತನ್ನನ್ನು ಕನ್ನಡ ಕವಿಯಾದ ಅಸಗನಿಗೆ ಹೋಲಿಸಿಕೊಂಡು ಆತನ ಐದು ಕನ್ನಡ ಕೃತಿಗಳ ಉಲ್ಲೇಖವನ್ನು ಪರ್ಯಾಯವಾಗಿ ಮಾಡಿದಂತೆ ತೋರುತ್ತದೆ.

ಪೊನ್ನನ ಅನಂತರ ಅಸಗನನ್ನು ಸ್ಮರಿಸಿದವನು ದುರ್ಗಸಿಂಹನು (ಸು. ಕ್ರಿ.ಶ. ೧೦೪೫). ಈತನು ಚಾಳುಕ್ಯ ಜಯಸಿಂಹನ ಸಂಧಿವಿಗ್ರಹಿಯಾಗಿದ್ದನು. ಸಯ್ಯಡಿಯವನು. ವಸುಭಾಗಭಟ್ಟನ ಪಂಚತಂತ್ರವನ್ನು ಚಂಪೂವಿನಲ್ಲಿ ಕನ್ನಡಿಸಿದ್ದಾನೆ. ತನ್ನ ಪಂಚತಂತ್ರದಲ್ಲಿ

> ಪೊಸತೆನಿಸಿ ದೇಸೆಯಿಂ ನವ
> ರಸಮೆಸೆಯಲ್ಕೊಳ್ಪುವೆತ್ತ ಮಾರ್ಗದಿನಿಳೆಗೇ||
> ನೆಸೆದುವೊ ಸುಕವಿಗಳೆನೆ ನೆಗ
> ೞ್ದಸಗನ ಮನಸಿಜನ ಚಂದ್ರಭಟ್ಟನ ಕೃತಿಗಳ್||

ಎಂದು ಹೇಳಿ ಅಸಗನನ್ನು ಮನಸಿಜ, ಚಂದ್ರಭಟ್ಟರ ಕೂಡ ಸುಕವಿಗಳ ಮಾಲಿಕೆಯಲ್ಲಿ ಸೇರಿಸಿ ಹೊಗಳಿದ್ದಾನೆ. ಇದರ ಮೇಲಿಂದ ನೋಡಲಾಗಿ ಅಸಗನು ದುರ್ಗಸಿಂಹನ ಕಾಲದಲ್ಲಿ ಹೊಸತು ಎನಿಸುವಂಥ ದೇಸೆಯಿಂದ ಹಾಗೂ ಒಂಬತ್ತು ರಸಗಳಿಂದ ತುಂಬಿಕೊಂಡು ಶೋಭಿಸುವಂಥ ಮಾರ್ಗದಿಂದ ಕಾವ್ಯ ರಚಿಸಲು ಬಲ್ಲವನಾಗಿದ್ದನೆಂದೂ ಒಳ್ಳೆಯ ಕವಿಯೆಂದೂ ಸಾಕಷ್ಟು ಖ್ಯಾತಿಯನ್ನು ಪಡೆದಂತೆ ತೋರುತ್ತದೆ. ದುರ್ಗಸಿಂಹನ ಒಲವು ದೇಸೆ ಹಾಗೂ ಮಾರ್ಗಗಳ ಕಡೆಗೆ ಇದ್ದದ್ದರಿಂದ ಆತನು ಅಸಗನ 'ಪೊಸತೆನಿಸಿದ ದೇಸೆ'ಯನ್ನೂ 'ನವರಸಮೆಸೆಯಲ್ಕೊಳ್ಪುವೆತ್ತ ಮಾರ್ಗ'ವನ್ನೂ ಮೆಚ್ಚಿರಲಿಕ್ಕೆ ಸಾಕು.

ಸುಮಾರು ಹನ್ನೊಂದನೆಯ ಶತಮಾನದಲ್ಲಿದ್ದ ಜಯಕೀರ್ತಿಯು ತನ್ನ ಛಂದೋನುಶಾಸನವೆಂಬ ಸಂಸ್ಕೃತಗ್ರಂಥದಲ್ಲಿ ಅಸಗನ ಬಗ್ಗೆ ಹೆಚ್ಚಾದ ಪರಿಚಯಮಾಡಿಕೊಡುತ್ತಾನೆ. ತನ್ನ ಛಂದೋನುಶಾಸನದಲ್ಲಿ ಏಳನೆಯ ಅಧಿಕಾರವನ್ನು ಕನ್ನಡ

ವೃತ್ತಗಳ ಪರಿಚಯಕ್ಕಾಗಿಯೇ ಮೀಸಲಾಗಿಟ್ಟಿದ್ದಾನೆ. ಸಮಾನಾಕ್ಷರ (ದೊರೆಯಕ್ಕರ) ಹಾಗೂ ಛಂದೋವತಂಸಗಳ ಲಕ್ಷಣಗಳನ್ನು ಹೇಳುವ ಪದ್ಯಗಳಲ್ಲಿ ಅಸಗನು 'ಕರ್ಣಾಟಕುಮಾರಸಂಭವ'ವೆಂಬ ಒಂದು ಕಾವ್ಯವನ್ನು ಬರೆದಿದ್ದು ಅದರಲ್ಲಿ ಕನ್ನಡ ವೃತ್ತಗಳಾದ ದೊರೆಯಕ್ಕರ ಹಾಗೂ ಛಂದೋವತಂಸಗಳನ್ನು ಉಪಯೋಗಿಸಿದ್ದಾನೆಂದು ಹೇಳಿದ್ದಾನೆ. ಆ ಪದ್ಯಗಳು ಕೆಳಗಿನಂತಿವೆ.

ಸಮಾನಾಕ್ಷರದ ಲಕ್ಷಣ—

ರತಿಪತಿ ಗಣಯುಗ್ಮಾದ್ರತಿತಃ ಸ್ಮರಯುಗ್ಮಂ ರತಿರಪಿ ಚ ಪುನಃ |
ಪ್ರತಿಪಾದೇವರ್ತತೇ ಯಸ್ಮಿಂಸ್ತತ್ಸಮಾನಾಕ್ಷರಂ ನಾಮ ||
ಶೃತಿಕಾಂತಮಕ್ಷರದಕ್ಷೈರಾದೃತಮಸಗಾಖ್ಯ ಕವಿನಾ|
ಪ್ರತಿಪಾದಿತಂ ನನು ಕರ್ಣಾಟಕುಮಾರ ಸಂಭವ ಕಾವ್ಯೇ || ೭ ||

ಛಂದೋವತಸಂದ ಲಕ್ಷಣ—

ಕಂದರ್ಪ ಗಣತೋ ರತಿಗಣಚತುಷ್ಕಂ ಚೇತ್ |
ಛಂದಸಿ ಜಯಕೀರ್ತೇರಾದಿ ವರಾಹಾಖ್ಯಾ ||
ಛಂದೋವತಂಸ ನಾಮೇತಿ ಚತುಷ್ಪದಿಕಾ |
ಸಂದೃಷ್ಟ್ಯಾ ಸೌ ಕುಮಾರಸಂಭವಾದೌ || ೧೬ ||

ಅಸಗನು ವರ್ಧಮಾನಚರಿತೆ (ಕ್ರಿ.ಶ. ೮೫೩) ಹಾಗೂ ಶಾಂತಿಪುರಾಣಗಳೆಂಬ ಎರಡು ಸಂಸ್ಕೃತ ಕಾವ್ಯಗಳನ್ನು ಬರೆದಿದ್ದಾನೆ. ಅವು ಅಚ್ಚಾಗಿವೆ. ವರ್ಧಮಾನಚರಿತೆಯ ಕೊನೆಗೆ ತಾನು ಎಂಟು ಜೈನ—ಧರ್ಮೋಪದೇಶಕವಾದ ಕಾವ್ಯಗಳನ್ನು ಬರೆದಿದ್ದೇನೆಂದು ಹೇಳಿದ್ದಾನೆ. ಆದರೆ ಅವುಗಳ ಬಗ್ಗೆ ನಮಗೆ ಯಾವ ಸಂಗತಿಗಳೂ ಗೊತ್ತಾಗಿಲ್ಲ. ಜಯಕೀರ್ತಿಯ ಛಂದೋನುಶಾಸದಲ್ಲಿಯ ಹೇಳಿಕೆಯಿಂದ ಅಸಗನು ಕುಮಾರಸಂಭವವೆಂಬ ಒಂದು ಕನ್ನಡ ಕಾವ್ಯವನ್ನು ಬರೆದ ಸಂಗತಿ ಮಾತ್ರ ಗೊತ್ತಾಗುತ್ತದೆ. ಈ ಕುಮಾರಸಂಭವವು ಕಾಳಿದಾಸನ ಕುಮಾರ ಸಂಭವದ ಅನುವಾದವಾಗಿರದೆ ಆ ಕಥೆಯ ಆಧಾರದ ಮೇಲೆ ಅಸಗನು ಒಂದು ಸ್ವತಂತ್ರವಾದ ಚಂಪೂ ಕಾವ್ಯವನ್ನು ರಚಿಸಿರಬಹುದೆಂದು ಬೇರೆಡೆಗೆ ಹೇಳಿದ್ದೇನೆ (ಅಸಗನ ಕನ್ನಡ ಕುಮಾರ ಸಂಭವ, ಕನ್ನಡನುಡಿ., xv ಡಿ., xvi ಮೇ).

ಸುಮಾರು ಇದೇ ಶತಮಾನದಲ್ಲಿಯೇ ಇದ್ದ ಧವಲ ಎಂಬ ಕವಿಯು ತನ್ನ ಅಪಭ್ರಂಶಕಾವ್ಯವಾದ ಹರಿವಂಶಪುರಾಣದಲ್ಲಿ ಅಸಗನ ಬಗೆಗೆ ಹಾಗೂ ಆತನ ಕೃತಿಯ ಬಗೆಗೆ ಕೆಳಗಿನಂತೆ ಹೇಳಿದ್ದಾನೆ.

ಅಸಗು ಮಹಾಕಇ ಜೇಂ ಸುಮಣೋಹರು|
ವೀರಜಿನೇಂದ ಚರಿ ಉ ಕಿಉ ಸುಂದರು||
ಕೇತ್ತಿಯ ಕಹಮಿ ಸುಕ ಇ ಗುಣ ಆಯರ|
ಗೇಯ ಕವ್ವ ಜಹಿಂ ವಿರ ಇಯ ಸುಂದರ||

ಮೇಲಿನ ಪದ್ಯದಲ್ಲಿ ಧವಲನು ಅಸಗನನ್ನೂ ಆತನ ಕೃತಿಯನ್ನೂ ಮನಸೋಕ್ತ ವಾಗಿ ವರ್ಣಿಸಿದ್ದಾನೆ 'ಅಸಗನು ಬಹಳ ದೊಡ್ಡ ಕವಿಯು. ಅವನು ಸುಂದರವಾದ ಹಾಗೂ ಮನೋಹರವಾದ ವೀರಜಿನೇಂದ್ರ ಚರಿತವನ್ನು ಬರೆದಿರುತ್ತಾನೆ. ಈ ಕಾವ್ಯ ದಲ್ಲಿ ಸುಂದರವಾದ ಪದ್ಯಗಳು ಹೆಣೆಯಲ್ಪಟ್ಟಿವೆ. ಅವುಗಳ ಗುಣಗಳು ವರ್ಣನಾ ತೀತವಾಗಿವೆ' ಎಂದು ಧವಲನ ಹೇಳಿಕೆ ಇದೆ. ಈತನು ವರ್ಣಿಸಿದ ವೀರಜಿನೇಂದ್ರ ಚರಿತವು ಅಸಗನ ವರ್ಧಮಾನ ಪುರಾಣವೇ ಸರಿ. (ಧವಲ ಕವಿಯು ಅಸಗನ ಬಗೆಗೆ ಬರೆದ ಪದ್ಯವನ್ನು ನನಗೆ ಸಕಾಲಕ್ಕೆ ಒದಗಿಸಿಕೊಟ್ಟದ್ದಕ್ಕಾಗಿ ನಾನು ಡಾ. ಎ. ನ್. ಉಪಾಧ್ಯೆ ಇವರಿಗೆ ಚಿರಋಣಿಯಾಗಿದ್ದೇನೆ).

ನಯಸೇನನು ತನ್ನ ಧರ್ಮಾಮೃತ ಪುರಾಣವನ್ನು ಬರೆದದ್ದು ಕ್ರಿ.ಶ. ೧೧೧೨ ರಲ್ಲಿ. ಈತನು ತನ್ನ ಧರ್ಮಾಮೃತ ಪುರಾಣದಲ್ಲಿ

ಅಸಗನ ದೇಸೆ ಪೊನ್ನನ ಮಹೋನ್ನತಿವೆತ್ತ ಬೆಡಂಗು ಪಂಪನೊ•
ವೆಸದೃಶಮಪ್ಪಪೂರ್ವರಸಮೆಯ್ದೆ ಗಜಾಂಕುಶನೊಳ್ಪುವೆತ್ತು ರಂ|
ಜಿಸುವ ಸದರ್ಥದೃಷ್ಟಿ ಗುಣವರ್ಮನ ಜಾಣ್ ಕವಿರತ್ನನೋಜೆ ಶೋ
ಭಿಸೆ ನೆಲಸಿರ್ಕೆ ಧಾರಿಣಿಮನಂಗೊಳೆ ಮತ್ಕೃತಿಯೊಳ್ ನಿರಂತರಂ||

ಎಂದು ಹೇಳಿದ್ದನ್ನು ನೋಡಿದರೆ ನಯಸೇನನು ಅಸಗನ ದೇಸೆಯನ್ನು ಬಹಳ ಮೆಚ್ಚಿ ಕೊಂಡಿದ್ದನೆಂದು ಹೇಳಬಹುದು. ಇಷ್ಟೇ ಅಲ್ಲ. ತನ್ನ ಧರ್ಮಾಮೃತ ಪುರಾಣದಲ್ಲಿ ಕೂಡ ಸಾಕಷ್ಟು ದೇಸಿ ಶಬ್ದಗಳನ್ನು ಉಪಯೋಗಿಸಿದ್ದಾನೆ. ನಯಸೇನನ ಕಾಲದಲ್ಲಿ ಸಹ ಅಸಗನು ದೇಸೆ ಕಾವ್ಯ ಬರೆಯುವದರಲ್ಲಿ ಪಳಗಿದವನೆಂದು ಹೆಸರಾದಂತೆ ತೋರುತ್ತದೆ. ಆದ್ದರಿಂದ ನಯಸೇನನು ಆತನ ದೇಸೆ ತನ್ನ ಧರ್ಮಾಮೃತ ಪುರಾಣ ದಲ್ಲಿ ನಿರಂತರವಾಗಿ ನೆಲಸಲೆಂದು ಹಾರೈಸಿದ್ದಾನೆ.

ಬ್ರಹ್ಮಶಿವನು ತನ್ನ ಸಮಯ ಪರೀಕ್ಷೆಯಲ್ಲಿ (ಕ್ರಿ.ಶ. ೧೧೫೦-೧೨೦೦)

ಪೊನ್ನನೆ ಪಂಪನೆ ರಜಕನೆ|
ರನ್ನನೆ ಕವಿತಾಗುಣೋದಯನೆ ದರ್ಶನಸಂ||
ಪನ್ನತೆಯೊಳ್ ಕವಿತೆಯೊಳವ|
ರನ್ನನೆ ವಿದಿತಾತ್ಮಭಾವನಗ್ಗಳದೇವಂ||

(ಅ. ೧., ಪ. ೩೫.)

ಎಂದು ಹೇಳಿದ್ದಾನೆ. ಈ ಪದ್ಯದಲ್ಲಿ 'ರಜಕ'ನೆಂದರೆ ಅಸಗನೇ ಹೊರತು ಬೇರೆ ಯಾರೂ ಅಲ್ಲ. ಆದ್ದರಿಂದ ಬ್ರಹ್ಮಶಿವನು ಅಸಗನನ್ನು ಪಂಪಪೊನ್ನರ ಕೂಡ ಸ್ತುತಿಸಿದ್ದಾನೆಂದು ಹೇಳಬಹುದು.

ಎರಡನೆಯ ನಾಗವರ್ಮನು (ಕ್ರಿ.ಶ. ೧೧೪೫) ತನ್ನ ಕಾವ್ಯಾವಲೋಕನದಲ್ಲಿ ಅಸಗನ ಕನ್ನಡ ಕುಮಾರಸಂಭವದಲ್ಲಿರಬಹುದಾದ ಕೆಲವು ಪದ್ಯಗಳನ್ನು ಸೂತ್ರಗಳಿಗೆ ಲಕ್ಷ್ಯಗಳಾಗಿ ಉಪಯೋಗಿಸಿಕೊಂಡಿದ್ದಾನೆ. ಆ ಪದ್ಯಗಳನ್ನೂ ಅವುಗಳ ಸಂದರ್ಭಗಳನ್ನೂ ನಾನು ಬೇರೆಡೆಗೆ ಕಾಣಿಸಿದ್ದೇನೆ (ಕನ್ನಡ ನುಡಿ, XV. ಡಿ, XVI ಮೇ).

ಹೊಯ್ಸಳ ೨ನೆಯ ವೀರಬಲ್ಲಾಳನಿಂದ ಕವಿಚಕ್ರವರ್ತಿ ಎಂಬ ಬಿರುದನ್ನು ಪಡೆದ ಜನ್ನನು ತನ್ನ ಅನಂತನಾಥಪುರಾಣದಲ್ಲಿ (ಕ್ರಿ.ಶ. ೧೨೩೦)

ಎನಗನುಕೂಲಮಕ್ಕೆ ಗುಣವರ್ಮನ ಜಾಣ್ನುಡಿ ಪಂಪನಿಂಪು ಪೊ
ನ್ನನ ಬಗೆ ನಾಗವರ್ಮನ ಬಹುಜ್ಞತೆ ರನ್ನನ ಕಾನ್ತಿ ನಾಗಚಂ||
ದ್ರನ ರಸಭಾವಮುಗ್ಗಳನ ವಕ್ರತೆ ನೇಮಿಯ ದೇಸೆ ಪುಷ್ಪಬಾ|
ಣನ ಮೃದುಬಂಧವಿಾಕವಿಗಳಲ್ತೆ ಜಿನೇಂದ್ರಪುರಾಣಕರ್ತೃಗಳ್||

ಎಂದು ಹೇಳಿದ್ದಾನೆ. ಈ ಪದ್ಯದಲ್ಲಿ ಜನ್ನನು ತನ್ನ ಗುರುವಾದ ಎರಡನೆಯ ನಾಗವರ್ಮನ 'ಬಹುಜ್ಞತೆ'ಯನ್ನು ಹೊಗಳಿ ಆತನು 'ಜಿನೇಂದ್ರಪುರಾಣಕರ್ತೃ'ಗಳಲ್ಲಿ ಒಬ್ಬನೆಂದು ಹೇಳಿದ್ದಾನೆ. ಮದ್ರಾಸ ವಿಶ್ವವಿದ್ಯಾಲಯದವರು ಪ್ರಕಟಿಸಿದ ಆಚಣ್ಣನ ವರ್ಧಮಾನಪುರಾಣದ ಸಂಪಾದಕರು ಅದೇ ಪುರಾಣದ ಮುನ್ನುಡಿಯಲ್ಲಿ ಎರಡನೆಯ ನಾಗವರ್ಮನು ಒಂದು ವರ್ಧಮಾನಪುರಾಣವನ್ನು ಬರೆದ ಸಂಗತಿಯನ್ನು ಹೇಳಿದ್ದಾರೆ. ನಾಗವರ್ಮನು ತನ್ನ ವರ್ಧಮಾನಪುರಾಣವನ್ನು ಬರೆಯುವಂದು ಅಸಗನ ಸಂಸ್ಕೃತ ವರ್ಧಮಾನಪುರಾಣವನ್ನು ಬಹುಶಃ ಓದಿರಬೇಕು. ಹಾಗೇ ಆತನ ಇತರ ಕನ್ನಡ ಕೃತಿಗಳನ್ನೂ ಓದಿರಬೇಕು. ಆದ್ದರಿಂದಲೇ, ಅಸಗನ 'ಕುಮಾರ ಸಂಭವ'ದಲ್ಲಿಯ ಕೆಲವು ಪದ್ಯಗಳನ್ನು ತನ್ನ ಕಾವ್ಯಾವಲೋಕನದಲ್ಲಿ ಸೂತ್ರಗಳಿಗೆ ಲಕ್ಷ್ಯಗಳಾಗಿ ಉಪಯೋಗಿಸಿಕೊಂಡಿರಬೇಕೆಂದು ತೋರುತ್ತದೆ.

ಆಚಣ್ಣನು (ಸು. ಕ್ರಿ.ಶ. ೧೧೯೫) ತನ್ನ ವರ್ಧಮಾನಪುರಾಣದಲ್ಲಿ ತನ್ನ ಹಿಂದಣ ಕವಿಗಳನ್ನು ಹೇಳುವ ಸಂದರ್ಭದಲ್ಲಿ ಅಸಗನನ್ನು ಹೇಳಲು ಮರೆತಿಲ್ಲ. ಆ ಪದ್ಯ ಕೆಳಗಿನಂತಿದೆ.

ಶ್ರೀವಿಜಯಂ ಗಜಾಂಕುಶನುದಾತ್ತಯಶಂ ಗುಣವರ್ಮನಾ ಜಗ|
ತ್ಪಾವನನಾಗವರ್ಮನಸಗಂ ರಸಿಕಾಗ್ರಣಿ ಹಂಪದೇವನಾ ||

ಭಾವಕಚಕ್ರಿ ಹೊನ್ನಿಗನಿಳಾನುತ ರನ್ನಿಗನಗ್ಗದಗ್ಗಳಂ|
ಧೀವಿಭು ಬೊಪ್ಪನೆಂಬ ಕವಿಕಂದರ್ಪರಿಂದೆಸೆದತ್ತು ಭೂತಳಂ||

(ಆ. ೧., ಪ. ೧೮.)

ಆಚಣ್ಣನು ಜಗತ್ಪಾವನನಾಗವರ್ಮ ಹಾಗೂ ಅಸಗ ಇವರಿಬ್ಬರನ್ನೂ ಸ್ತುತಿಸಿದ್ದನ್ನು ನೋಡಿದರೆ ಆತನು ನಾಗವರ್ಮನ ಕನ್ನಡ ವರ್ಧಮಾನಪುರಾಣವನ್ನೂ ಅಸಗನ ಸಂಸ್ಕೃತವರ್ಧಮಾನಪುರಾಣವನ್ನೂ ತಾನು ತನ್ನ ವರ್ಧಮಾನ ಪುರಾಣ ಬರೆಯುವಂದು ಓದಿರಬೇಕೆಂದು ತೋರುವದು ಸ್ವಾಭಾವಿಕ.

ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವವು (ಕ್ರಿ.ಶ. ೧೨೪೦) ಕನ್ನಡ ಸಾಹಿತ್ಯದಲ್ಲಿಯೇ ಮೊದಲನೆಯ ಕಾವ್ಯಸಂಗ್ರಹವು. ಇದರಲ್ಲಿ ಕವಿಯು ಹಿಂದಿನ ಖ್ಯಾತರಾದ ಕವಿಗಳ ಪದ್ಯಗಳನ್ನು ಅಷ್ಟಾದಶವರ್ಣನೆಗೆ ಅನುಕೂಲವಾಗುವಂತೆ ಉಪಯೋಗಿಸಿಕೊಂಡಿದ್ದಾನೆ. ಈ ಉದ್ಗ್ರಂಥದ ಸಂಪಾದಕರಾದ ಶ್ರೀ ಎನ್. ಅನಂತ ರಂಗಾಚಾರ್ಯರವರು 'ಸೂಕ್ತಿ ಸುಧಾರ್ಣವದಲ್ಲಿ . . . . ಹರಿಹರನ ಗಿರಿಜಾ ಕಲ್ಯಾಣಕ್ಕೆ ಸಂಬಂಧಪಡದ ಶಿವಪಾರ್ವತಿಯರ ವಿಷಯಕವಾದ ಕೆಲವು ಪದ್ಯಗಳು ಇವೆ' ಎಂದು ಹೇಳಿದ್ದಾರೆ (ಸೂಕ್ತಿ ಸುಧಾರ್ಣವ, ಮುನ್ನುಡಿ XXVI). ಈ ಪದ್ಯಗಳು ಅಸಗನ ಕುಮಾರಸಂಭವದಲ್ಲಿಯವು ಇರಬಹುದೆಂದು ನನಗೆ ತೋರುತ್ತದೆ. ಯಾಕೆಂದರೆ ಅಸಗನ ಕುಮಾರಸಂಭವವು ಹರಿಹರನ ಗಿರಿಜಾಕಲ್ಯಾಣಕ್ಕಿಂತ ಮೊದಲು ಬರೆಯಲ್ಪಟ್ಟದ್ದು. ಮತ್ತು ಅಸಗನು ಈಗಾಗಲೇ ಸಾಕಷ್ಟು ಖ್ಯಾತಿಯನ್ನು ಪಡೆದದ್ದರಿಂದ ಮಲ್ಲಿಕಾರ್ಜುನನು ಅವನ ಗ್ರಂಥಗಳೊಳಗಿನ ಪದ್ಯಗಳನ್ನು ತನ್ನ ಸೂಕ್ತಿಸುಧಾರ್ಣವದಲ್ಲಿ ಸೇರಿಸಿರಬಹುದು.

೨ನೆಯ ನಾಗವರ್ಮನ ಕಾವ್ಯಾವಲೋಕನದಲ್ಲಿಯ ಶಬ್ದಸ್ಮೃತಿಯನ್ನೇ ವಿಸ್ತರಿಸಿ ಬರೆದ ಕೇಶಿರಾಜನು (ಸು. ಕ್ರಿ.ಶ. ೧೨೬೦) ತನ್ನ ಶಬ್ದಮಣಿದರ್ಪಣದಲ್ಲಿ

ಗಜಗನ ಗುಣನಂದಿಯ ಮನ|
ಸಿಜನಸಗನ ಚಂದ್ರಭಟ್ಟ ಗುಣವರ್ಮ ಶ್ರೀ ||
ವಿಜಯರ ಹೊನ್ನನ ಹಂಪನ|
ಸುಜನೋತ್ತಂಸನ ಸುಮಾರ್ಗಮಿದಱೊಳ್ ಲಕ್ಷ್ಯಂ ||

ಎಂದು ಹೇಳಿದ್ದನ್ನು ನೋಡಿದರೆ ಅಸಗನು ಕೇಶಿರಾಜನ ಕಾಲಕ್ಕೆ 'ಸುಮಾರ್ಗ'ದಲ್ಲಿ ಕಾವ್ಯರಚನೆ ಮಾಡಿದವನೆಂದು ಸಾಕಷ್ಟು ಪ್ರಸಿದ್ಧಿಯನ್ನು ಪಡೆದಿರಬೇಕು. ಅದ್ದರಿಂದಲೇ ಕೇಶಿರಾಜನು ತನ್ನ ವ್ಯಾಕರಣದ ಸೂತ್ರಗಳಿಗೆ ಅಸಗನ ಕೃತಿಗಳೊಳಗಿನ ಪದ್ಯಗಳನ್ನು ಲಕ್ಷ್ಯಗಳಾಗಿ ಉಪಯೋಗಿಸಿಕೊಂಡಿದ್ದಾನೆ.

ನಂಜುಂಡ ಕವಿಯು (ಕ್ರಿ.ಶ. ೧೫೨೫) ಕುಮಾರ ರಾಮನ ಕಥೆಯನ್ನು ಸಾಂಗತ್ಯದಲ್ಲಿ ಬರೆದಿದ್ದಾನೆ. ಆತನು ಪೂರ್ವಕವಿಗಳನ್ನು ಸ್ತುತಿಸುವ ಪ್ರಸಂಗದಲ್ಲಿ ಅಸಗನನ್ನು ಸ್ತುತಿಸುತ್ತಾನೆ. ಆ ಪದ್ಯ ಕೆಳಗಿನಂತಿದೆ.

ಗುಣಗಣ ಗುಣವರ್ಮನ ನಾಗಚಂದ್ರನ |
ಗುಣಸೋತ್ತುಂಗನಸಗನ ||
ಗುಣದ ರನ್ನನ ಶಾಂತಿವರ್ಮನ ಪದಸರ |
ಣಿಗಳಿಗೊಲಿದೆರಗುವೆನು ||

ಅಸಗನ ವರ್ಧಮಾನಪುರಾಣಕ್ಕೆ ಕನ್ನಡ ಟೀಕೆಯೊಂದು ಬರೆಯಲ್ಪಟ್ಟಿದೆ. ಆದರೆ ಟೀಕಾಕಾರನ ಹೆಸರಾಗಲಿ ಕಾಲವಾಗಲಿ ನಿಶ್ಚಿತವಾಗಿ ತಿಳಿದಿಲ್ಲ. ಆತನು ಸುಮಾರು ೧೭ ನೆಯ ಶತಮಾನದವನಿರಬಹುದೆಂದು ತಾಡವಾಲೆಯ ಅಕ್ಷರಗಳಿಂದ ಊಹಿಸಲಾಗಿದೆ.

ಅಸಗನ ಕೃತಿಗಳಲ್ಲಿ ಆತನ ವರ್ಧಮಾನ ಪುರಾಣವು ಶಾಂತಿಪುರಾಣಕ್ಕಿಂತ ಹೆಚ್ಚು ಲೋಕಪ್ರಿಯವಾದಂತೆ ತೋರುತ್ತದೆ. ಅಪಭ್ರಂಶ ಕವಿಯಾದ ಧವಲನು ಅದನ್ನು ಮನಸಾರೆ ಹೊಗಳುತ್ತಾನೆ. ಕನ್ನಡ ಕವಿಗಳಾದ ನಾಗವರ್ಮ ಆಚಣ್ಣ ಮೊದಲಾದವರು ಅದನ್ನು ಓದಿರಬಹುದು. ಯಾವನೋ ಒಬ್ಬನು ಅದೇ ಪುರಾಣಕ್ಕೆ ಕನ್ನಡದಲ್ಲಿ ಟೀಕೆ ಬರೆದಿದ್ದಾನೆ. ಪೊನ್ನನೊಬ್ಬನು ಮಾತ್ರ ಶಾಂತಿಪುರಾಣವನ್ನು ಓದಿರಬಹುದೆಂದು ತೋರುತ್ತದೆ.

ಈ ರೀತಿಯಾಗಿ ಅಸಗನು ೧೦ ನೇ ಶತಮಾನದಿಂದ ೧೭ ನೇ ಶತಮಾನದ ವರೆಗೆ ಒಬ್ಬರಿಲ್ಲೊಬ್ಬರಿಂದ ಹೊಗಳಿಸಿಕೊಂಡಿದ್ದಾನೆ. ಪೊನ್ನ, ನಯಸೇನ, ದುರ್ಗಸಿಂಹ ಮೊದಲಾದ ಕನ್ನಡ ಕವಿಗಳಷ್ಟೇ ಅಲ್ಲದೆ ಜಯಕೀರ್ತಿಯೆಂಬ ಸಂಸ್ಕೃತಕವಿಯೂ ಧವಲನೆಂಬ ಅಪಭ್ರಂಶಕವಿಯೂ ಅಸಗನನ್ನು ಹೊಗಳುತ್ತಾರೆ. ಇಂಥ ಮಹಾಕವಿಯ ಕನ್ನಡ ಗ್ರಂಥಗಳು ಬೆಳಕಿಗೆ ಬರದಿರುವದು ಕನ್ನಡಿಗರ ದೌರ್ಭಾಗ್ಯ. ಜಯಕೀರ್ತಿಯ ಛಂದೋನುಶಾಸನದಿಂದ ಅಸಗನ ಕನ್ನಡ ಕುಮಾರಸಂಭವದ ಹೆಸರು ಮಾತ್ರ ದೊರೆಯುವದು. ಇದುವರೆಗೂ ಈತನ ಉಳಿದ ಕನ್ನಡಕೃತಿಗಳ ಬಗ್ಗೆ ಏನೂ ಗೊತ್ತಾಗಿಲ್ಲ. ಈತನ ಬಗೆಗೆ ಹೆಚ್ಚು ಸಂಶೋಧನೆ ಮಾಡಿ ಈತನ ಗ್ರಂಥಗಳನ್ನು ಬೆಳಕಿಗೆ ತಂದಲ್ಲಿ ಪಂಪಪೂರ್ವ ಕನ್ನಡಸಾಹಿತ್ಯದ ಮೇಲೆ ಹೊಸ ಬೆಳಕು ಬೀಳದೆ ಇರಲಾರದು.

ವೆಂ. ಬಿ. ಲೋಕಾಪೂರ

ಹಡಗು ಮುಳುಗುವಂತೆ

೧

ಹಡಗು ಮುಳುಗುವಂತೆ ನನ್ನ
ನಡಗಿಸಯ್ಯ ನಿನ್ನೊಳು;
ಕಡಲು ನಿನ್ನ ಹೃದಯದೊಲವು
ಎಡವಿ ಬಿದ್ದೆ ನಿನ್ನೊಳು.

೨

ಕಾಣೆನಲ್ಪತನವನೆಲ್ಲು
ಬಾನು ನಿನ್ನ ಮನವು ಬಲ್ಲೆ
ಸೂರ್ಯ ಚಂದ್ರತಾರೆ ನಿವಹ
ಸೂರೆಯಾದುವಲ್ಲವೆ?

೩

ಮರ್ತ್ಯದಲ್ಪ ಸುಖಕೆ ಸೋತ
ನಿತ್ಯ ಮರಣ ಜೀವಿಯಲ್ಲ;
ಹತ್ತು ಜನುಮದಿಂದ ಬಂದ
ಭಕ್ತಿ ಬಂಧಿಸಿರುವುದು.

೪

ಗಗನ ನಿನ್ನ ಧ್ಯಾನಲೋಕ,
ಮಿಗಿಲೆ ನನ್ನ ಮರ್ತ್ಯತಾಪ,
ಮುಗಿಲು ಕರಗುವಂತೆ ನಿನ್ನ
ಹೊಗಿಸಿ ಕರಗಿಸೆನ್ನನು.

೫

ತಾಯಿತಂದೆ ಮಡದಿ ಮಗಳ
ಪ್ರೇಮವೆಲ್ಲ ತುಂಬಿ ಹರಿವ
ದೇವಗಂಗೆ ನಿನ್ನ ಕರುಣೆ;
ದೇವ ಮುಳುಗಿಸದರೊಳು.

ಕುಮುದ.

ಕನ್ನಡ ಕಾವ್ಯಪ್ರಕಾಶ

ಎರಡನೆಯ ಉಲ್ಲಾಸ

ಈಗ ಕ್ರಮವಾಗಿ[1] ಶಬ್ದ[2] ಮತ್ತು ಅರ್ಥಗಳ ಸ್ವರೂಪವನ್ನು ಹೇಳುತ್ತಾನೆ—

ಸ್ಯಾದ್ ವಾಚಕೋ ಲಾಕ್ಷಣಿಕಃ ಶಬ್ದೋಽತ್ರ ವ್ಯಂಜಕಸ್ತ್ರಿಧಾ ॥ ೧*a* ॥

ಇಲ್ಲಿ ಶಬ್ದ ಮೂರು ಬಗೆ—(೧) ವಾಚಕ (೨) ಲಾಕ್ಷಣಿಕ ಮತ್ತು (೩) ವ್ಯಂಜಕ.

ಇಲ್ಲಿ ಎಂದರೆ ಕಾವ್ಯದಲ್ಲಿ[3]; ಈ ಮೂರು ಬಗೆಯ ಶಬ್ದಗಳ ಸ್ವರೂಪವನ್ನು ಮುಂದೆ ಹೇಳುವೆವು.

ವಾಚ್ಯಾದಯಸ್ತದರ್ಥಾಃ ಸ್ಯುಃ ತಾತ್ಪರ್ಯಾರ್ಥೋಽಪಿ ಕೇಷುಚಿತ್ ॥ ೧*b* ॥

ಅವುಗಳ ಅರ್ಥಗಳು 'ವಾಚ್ಯ' ಮುಂತಾದವು. ಕೆಲವರ[4] ಮತದಲ್ಲಿ ತಾತ್ಪರ್ಯಾರ್ಥವೆಂಬುದೂ ಒಂದುಂಟು.

'ವಾಚ್ಯ ಮುಂತಾದವು' ಎಂದರೆ ವಾಚ್ಯ, ಲಕ್ಷ್ಯ, ವ್ಯಂಗ್ಯಗಳು.

---

[1] ಮೊದಲನೆಯ ಉಲ್ಲಾಸದಲ್ಲಿ ಹೇಳಿದ ಕಾವ್ಯಲಕ್ಷಣದಲ್ಲಿ ಅಂತರ್ಗತವಾದ ಒಂದೊಂದು ಅಂಶದ ವಿವರಣೆಗೂ ಒಂದೊಂದು ಉಲ್ಲಾಸವೇ ಮೀಸಲಾಗಿದೆ. ಈ ಉಲ್ಲಾಸ ಲಕ್ಷಣ ವಾಕ್ಯದ ಮುಖ್ಯಾಂಶವಾದ ಶಬ್ದಾರ್ಥಗಳ ಸ್ವರೂಪವನ್ನು ನಿರ್ಣಯಿಸುತ್ತದೆ.

[2] ಶಬ್ದ ಎಂದರೆ ಇಲ್ಲಿ ಅರ್ಥಬೋಧಕವಾದ ವರ್ಣಸಮೂಹ; ಅರ್ಥಶೂನ್ಯ ಸದ್ದುಗಳಲ್ಲ.

[3] ಸಂಸ್ಕೃತ ದಾರ್ಶನಿಕರು ಶಾಸ್ತ್ರದಲ್ಲಿ ಶಬ್ದಕ್ಕೆ ಮೂರನೆಯ ವ್ಯಾಪಾರವನ್ನೊಪ್ಪುತ್ತಿರಲಿಲ್ಲ; ಆನಂದವರ್ಧನನಿಗಿಂತ ಹಿಂದಿನ ಆಲಂಕಾರಿಕರೇ ಒಪ್ಪುತ್ತಿರಲಿಲ್ಲ. ಈಚಿನವರಲ್ಲಿಯೂ ಭೋಜನೇ ಮುಂತಾದವರು ಕಾವ್ಯದಲ್ಲಿ ಮಾತ್ರ ಅದನ್ನು ಒಪ್ಪಿದರು. ಶಾಸ್ತ್ರದಲ್ಲಿ ಒಪ್ಪುವುದನಗತ್ಯವೆಂದರು— "ತಾತ್ಪರ್ಯಮೇವ ವಚಸಿ ಧ್ವನಿರೇವ ಕಾವ್ಯೇ". ಮಮ್ಮಟನು ಚರ್ಚೆಗೆ ಹೋಗದೆ ಅದರ ವ್ಯಾಪ್ತಿಯನ್ನು ಪರಿಮಿತಗೊಳಿಸಿದ್ದಾನೆ.

[4] ಎಂದರೆ ಮೀಮಾಂಸಕರ. ಮೀಮಾಂಸಕರಲ್ಲಿ ಕುಮಾರಿಲಭಟ್ಟರ ಅನುಯಾಯಿಗಳಿಗೆ ಭಾಟ್ಟರೆಂದೂ ಪ್ರಭಾಕರನ ಅನುಯಾಯಿಗಳಿಗೆ ಪ್ರಾಭಾಕರರೆಂದೂ ವ್ಯವಹರಿಸುವುದು ರೂಢಿ. ಇವರಲ್ಲಿ ಪರಸ್ಪರ ಪ್ರಕ್ರಿಯಾಭೇದಗಳುಂಟು. ಭಾಟ್ಟರು ಶಬ್ದಗಳಿಗೆ ತಾತ್ಪರ್ಯಾರ್ಥವೂ ಒಂದುಂಟೆಂದು ಒಪ್ಪುತ್ತಾರೆ; ಪ್ರಾಭಾಕರರು ಮಾತ್ರ ಒಪ್ಪುವುದಿಲ್ಲ.

ಆಕಾಂಕ್ಷೆ[5], ಯೋಗ್ಯತೆ[6] ಮತ್ತು ಸನ್ನಿಧಿ[7]ಗಳ ಪ್ರಭಾವದಿಂದ ಪದಗಳ ಅರ್ಥಗಳನ್ನು—ಇವುಗಳ ಸ್ವರೂಪವನ್ನು ಮುಂದೆ ವಿವರಿಸಿದೆ—ಅನ್ವಯಮಾಡಿಕೊಂಡಾಗ ವಿಲಕ್ಷಣವೂ ಪದಗಳ ಪ್ರತ್ಯೇಕಾರ್ಥಗಳಿಗಿಂತ ಭಿನ್ನವೂ ಆದ ಹೊಸದೊಂದು ವಾಕ್ಯಾರ್ಥ ಮೇಲೆದ್ದು ಕಾಣುತ್ತದೆ. ಇದೇ ತಾತ್ಪರ್ಯಾರ್ಥವೆಂದು ಅಭಿಹಿತಾನ್ವಯವಾದಿಗಳ ಮತ[8]. ಆದರೆ ವಾಕ್ಯಾರ್ಥವೂ ವಾಚ್ಯವೆಂಬುದು ಅನ್ವಿತಾಭಿಧಾನವಾದಿಗಳ ಅಭಿಪ್ರಾಯ.[9]

ಸರ್ವೇಷಾಂ ಪ್ರಾಯಶೋಽರ್ಥಾನಾಂ ವ್ಯಂಜಕತ್ವಮಪೀಷ್ಯತೇ ॥ ೨a ॥

ಪ್ರಾಯಿಕವಾಗಿ ಎಲ್ಲ ಅರ್ಥಗಳಿಗೂ ವ್ಯಂಜಕತ್ವವನ್ನೊಪ್ಪಲಾಗಿದೆ.[10] ವಾಚ್ಯಾರ್ಥದ ವ್ಯಂಜಕತ್ವಕ್ಕೆ ಉದಾಹರಣೆ:—

ಮಾಏ ಘರೋವಅರಣಂ ಅಜ್ಜ ಹು ಣತ್ಥಿತ್ತಿ ಸಾಹಿಅಂ ತುಮಏ ।
ತಾ ಭಣ ಕಿಂ ಕರಣಿಜ್ಜಂ ಏಮೇಅ ಣ ವಾಸರೋ ಠಾಇ ॥

---

[5] ತಿಳಿಯುವವನ ಜಿಜ್ಞಾಸೆಯೇ 'ಆಕಾಂಕ್ಷೆ'. ಅದನ್ನು ಪೂರೈಸುವ ಶಬ್ದಾರ್ಥಗಳಿಗೂ ಅದನ್ನು ಆರೋಪಿಸಬಹುದು. ಹೋಲಿಸಿ—

'ಆಕಾಂಕ್ಷಾ ಪ್ರತಿಪತ್ತುರ್ಹಿ ಜಿಜ್ಞಾಸಾನವಸಾನತಃ ।
ಸಾ ಹಿ ಶಬ್ದಾರ್ಥಯೋರ್ಜಾತಾ ತದ್ಧರ್ಮ ಉಪಚರ್ಯತೇ ॥'

[6] ಶಬ್ದಗಳಿಗೆ ಪರಸ್ಪರ ಸಂಬಂಧದ ಅರ್ಹತೆಯೇ 'ಯೋಗ್ಯತೆ'.

[7] ಆಕಾಂಕ್ಷಿತವೂ ಯೋಗ್ಯವೂ ಆದ ಪದಗಳ ಅತ್ಯಂತ ಸಾಮೀಪ್ಯವು 'ಸನ್ನಿಧಿ'.

[8] ಭಾಟ್ಟಮೀಮಾಂಸಕರಿಗೆ ಅಭಿಹಿತಾನ್ವಯವಾದಿಗಳೆಂದೂ ಹೆಸರು. 'ಶಬ್ದಗಳಿಗೆ ವಸ್ತುಬೋಧಕತ್ವವುಂಟೇ ಹೊರತು ಅನ್ವಯ ಅಥವಾ ಅವುಗಳ ಪರಸ್ಪರ ಸಂಬಂಧವನ್ನೂ ಬೋಧಿಸುವ ಶಕ್ತಿಯಿಲ್ಲ. ಅವೇ ವಾಕ್ಯದ ಅಂಶಗಳೆನಿಸಿದಾಗ ಪ್ರಕರಣ ಬಲದಿಂದ ಸಂಬಂಧವನ್ನೂ ತೋರಿಸಬಲ್ಲವು. ಹೀಗೆ ಶಬ್ದಗಳಿಗೆ ವಾಕ್ಯಾಂಗಗಳಾದಾಗ ಬರುವ ವ್ಯಾಪಾರವೇ ತಾತ್ಪರ್ಯ. ಹೀಗೆ ಅರ್ಥಗಳು ಮೊದಲು ಅಭಿಹಿತವಾದ ಮೇಲೆ ಅವುಗಳ ಅನ್ವಯಕಾಲದಲ್ಲಿ ಮಾತ್ರ ತಾತ್ಪರ್ಯ ವಾಕ್ಯದಿಂದ ಪ್ರತೀತವಾಗುತ್ತದೆ' ಎಂಬುದು ಅವರ ಸಿದ್ಧಾಂತ.

[9] ಅನ್ವಿತಾಭಿಧಾನವಾದಿಗಳೆಂದರೆ ಪ್ರಾಭಾಕರರು. ಇವರು ಶಬ್ದಗಳ ಅರ್ಥಸಮುದಾಯಕ್ಕಿಂತ ಬೇರೆಯಾದ ವಾಕ್ಯಾರ್ಥ ಅಥವಾ ತಾತ್ಪರ್ಯಾರ್ಥವನ್ನೊಪ್ಪುವುದಿಲ್ಲ. ಇವರ ಪ್ರಕಾರ ಶಬ್ದಗಳು ಮೊದಲು ಅನ್ವಿತವಾದ ಮೇಲೆಯೇ ತಮ್ಮ ಅರ್ಥವನ್ನು ಬೋಧಿಸುತ್ತವೆ; ಅನನ್ವಿತವಾದ ಶಬ್ದಗಳು ಅರ್ಥಪ್ರತೀತಿಕರಗಳೇ ಅಲ್ಲ.

[10] ಇದೇ ಕಾವ್ಯದ ವೈಶಿಷ್ಟ್ಯ. ಶಾಸ್ತ್ರದಲ್ಲಿ ಅರ್ಥಗಳು ಗಮ್ಯವೇ ಹೊರತು ಗಮಕಗಳಲ್ಲ. ಆದರೆ ಕಾವ್ಯದಲ್ಲಿ ಎಲ್ಲ ಬಗೆಯ ಅರ್ಥಗಳಿಗೂ ವ್ಯಂಜಕತ್ವವುಂಟು. ಇದರ ವಿವರಣೆಗೆ ಮುಂದೆ ಮೂರನೆಯ ಉಲ್ಲಾಸವನ್ನೋದಿ.

ಅಮ್ಮ ! ನುಡಿದೆ ನೀನೆಯಿಂದು ಮನೆಯೊಳಿಲ್ಲ ವಸ್ತುವು |
ಪೇಳು ಮಾಳ್ಪುದೇನನಿನ್ನು ನಿಲ್ಲದಿಂತೆ ದಿವಸವು ‖

ಇಲ್ಲಿ ಮಗಳು ಸ್ವೈರವಿಹಾರಕ್ಕೆ ಹೊರಟಿದ್ದಾಳೆಂದು ಸೂಚಿತವಾಗುತ್ತದೆ.[11] ಲಕ್ಷ್ಯಾರ್ಥದ ವ್ಯಂಜಕತ್ವಕ್ಕೆ ಉದಾಹರಣೆ :—

ಸಾಹೇನ್ತೀ ಸಹಿ ಸುಹಅಂ ಖಣೇ ಖಣೇ ದೂಮಿಆಸಿ ಮಜ್ಝ ಕಏ |
ಸಬ್ಭಾವಣೇಹಕರಣಿಜ್ಜಸರಿಸಅಂ ದಾವ ವಿರಇಅಂ ತುಮಏ ‖

ಒಲಿಸುತ್ತೆ ಸುಭಗನನು ಸಖಿಯೆ ! ನೀನೆನಗಾಗಿ
ಚಣಚಣವು ನೊಂದು ಬೆಂದಿರುವೆಯಲ್ತೆ |
ಸದ್ಭಾವ ಸುಸ್ನೇಹ ಸದೃಶವೆನಿಸುವ ಕಾರ್ಯ—
ವಾವುದೋ ನೀನದನೆ ಗೈದೆಯಲ್ತೆ ‖

ಇಲ್ಲಿ, 'ನನ್ನ ಪ್ರಿಯನನ್ನು ರಮಿಸಿದ ನೀನು ಶತ್ರುವಿನಂತೆ ವರ್ತಿಸಿದ್ದೀಯೆ' ಎಂಬುದು ಲಕ್ಷ್ಯಾರ್ಥ. ಅದರ ಮೇಲಿಂದ ಸೂಚಿತವಾಗುವ 'ಕಾಮುಕನೂ ಅಪರಾಧಿ'ಯೆಂಬ ವಿಷಯ ವ್ಯಂಗ್ಯಾರ್ಥ.[12] ವ್ಯಂಗ್ಯಾರ್ಥದ ವ್ಯಂಜಕತ್ವಕ್ಕೆ ಉದಾಹರಣೆ:—

ಉಅ ಣಿಚ್ಚಲಣಿಪ್ಪನ್ದಾ ಭಿಸಿಣೀಪತ್ತಮ್ಮಿ ರೇಹಇ ಬಲಾಆ |
ಣಿಮ್ಮಲಮರಗಅ ಭಾಅಣಪರಿಟ್ಠಿಆ ಸಂಖಸುತ್ತಿವ್ವ ‖

ನೋಡು ಬೆಳ್ಳಕ್ಕಿಯನು ನಿಶ್ಚಲವು[13] ನಿಷ್ಪಂದ[14]
ಪದ್ಮಪತ್ರದ ಮೇಲೆ ಕಂಗೊಳಿಪುದು |
ನಿರ್ಮಲದ ಮರಕತದ ಹರಿವಾಣದೊಳಗಿಟ್ಟ
ಶಂಖಶುಕ್ತಿಯೊ ತಾನು ಎಂದೆನಿಪುದು ‖

ಇಲ್ಲಿ, ಹಕ್ಕಿ ನಿಷ್ಪಂದವಾಗಿರುವುದರಿಂದ ಅದರ ನಿರ್ಭಯವೂ, ನಿರ್ಭಯದ ಮೇಲಿಂದ ಅಲ್ಲಿ ಜನಗಳಾರೂ ಇಲ್ಲವೆಂಬುದೂ, ಅದರ ಮೇಲಿಂದ ಸ್ಥಲ ಸಂಕೇತಸ್ಥಾನ

---

11 ಹೇಳುವ ವ್ಯಕ್ತಿಯ ವೈಶಿಷ್ಟ್ಯದಿಂದ. ಅವಳು ಜಾರಿಣಿಯಲ್ಲದಿದ್ದರೆ ಯಾವ ವ್ಯಂಗ್ಯಾರ್ಥವೂ ಇರುತ್ತಿರಲಿಲ್ಲ.

12 ವ್ಯಂಗ್ಯಾರ್ಥಪರಾಮರ್ಶಕ್ಕೆ ರಸಿಕರು ಮಾತ್ರ ಅಧಿಕಾರಿಗಳು. ಹೋಲಿಸಿ—**ಕನ್ನಡ ಧ್ವನ್ಯಾಲೋಕ**, ಪು. ೯-೧೦.

13 ನಿಶ್ಚಲ=ಎಡೆಯಿಂದೆಡೆಗೆ ಹಾರಾಡದ (ಮಾಣಿಕ್ಯಚಂದ್ರ).

14 ನಿಷ್ಪಂದ=ಅಂಗಾಂಗಗಳನ್ನು ಚಲಿಸದ (ಮಾಣಿಕ್ಯಚಂದ್ರ).

ವಾಗಲು ಯೋಗ್ಯವಾಗಿದೆಯೆಂಬುದೂ ನಾಯಿಕೆಯಿಂದ ನಾಯಕನಿಗೆ ಸೂಚಿತವಾಗಿದೆ.[15] ಅಥವಾ 'ನೀನು ಸುಳ್ಳಾಡುತ್ತಿರುವೆ; ಇಲ್ಲಿ ನೀನು ಮುಂಚೆ ಬಂದೇ ಇಲ್ಲ' ಎಂಬಂಶ ಸೂಚಿತವಾಗಿದೆ.[16]

ಇನ್ನು ಕ್ರಮವಾಗಿ ವಾಚಕವೇ ಮೊದಲಾದ ಶಬ್ದಗಳ ಸ್ವರೂಪವನ್ನು ಹೇಳುತ್ತಾನೆ—

ಸಾಕ್ಷಾತ್ ಸಂಕೇತಿತಂ ಯೋಽರ್ಥಮಭಿಧತ್ತೇ ಸ ವಾಚಕಃ ॥ ೨b ॥

ಯಾವುದು ನೇರವಾಗಿ ಸಂಕೇತಸಿದ್ಧವಾದ ಅರ್ಥವನ್ನು ಪ್ರತಿಪಾದಿಸುವುದೋ ಅದು ವಾಚಕ(ಶಬ್ದ).

ಲೋಕವ್ಯವಹಾರದಲ್ಲಿ ಸಂಕೇತ [17]ತಿಳಿಯದ ಮನುಷ್ಯನಿಗೆ ಶಬ್ದದಿಂದ ಅರ್ಥವಿಶೇಷದ ಪರಿಜ್ಞಾನವೇ ಉಂಟಾಗುವುದಿಲ್ಲ. ಆದ್ದರಿಂದ ಸಂಕೇತದ ಸಹಾಯವನ್ನು ಪಡೆದೇ ಶಬ್ದ ಅರ್ಥವಿಶೇಷವನ್ನು ಪ್ರತಿಪಾದಿಸುವುದೆನ್ನಬೇಕು. ಎಂದಮೇಲೆ ಯಾವುದಕ್ಕೆ ಯಾವುದರಲ್ಲಿ ಸಂಕೇತ ನೇರವಾಗಿ[18] ಸಿದ್ಧವೋ ಅದಕ್ಕದು ವಾಚಕವೆಂದಂತಾಯಿತು.

ಸಂಕೇತಿತಶ್ಚತುರ್ಭೇದೋ ಜಾತ್ಯಾದಿರ್ಜಾತಿರೇವ ವಾ । ೩a ।

ಸಂಕೇತಸಿದ್ಧವಾದ ಅರ್ಥ 'ಜಾತಿ' ಮುಂತಾದ ನಾಲ್ಕು ಬಗೆಯೆನ್ನಬಹುದು; ಅಥವಾ 'ಜಾತಿ'ಯೊಂದೇ ಎನ್ನಬಹುದು.

ಕಾರ್ಯಸಾಧನೆಗಾಗಲಿ ಕೆಲಸದಲ್ಲಿ (ಕರ್ತೃವಿನ) ಪ್ರವೃತ್ತಿಗಾಗಲಿ ನಿವೃತ್ತಿಗಾಗಲಿ ಯೋಗ್ಯವಾದುದು ವ್ಯಕ್ತಿಯೇ[19] ಆದರೂ ವ್ಯಕ್ತಿಯಲ್ಲೇ ಸಂಕೇತವುಂಟೆನ್ನಲು ಎರಡು ಅಡ್ಡಿಗಳಿವೆ—(೧) ಆನಂತ್ಯ[20] ಮತ್ತು (೨) ವ್ಯಭಿಚಾರ.[21] ಅಲ್ಲದೆ 'ಓಡಾಡು

---

[15] ಪ್ರಕರಣ ಸಂಭೋಗಶೃಂಗಾರಕ್ಕೆ ಪೋಷಕವೆಂದು ಭಾವಿಸುವುದಾದರೆ ಈ ಧ್ವನಿ.

[16] ಪ್ರಕರಣ ವಿಪ್ರಲಂಭಶೃಂಗಾರಕ್ಕೆ ಪೋಷಕವೆಂದು ತಿಳಿದರೆ ಇದು ವ್ಯಂಗ್ಯ.

[17] ಈ ಪದ್ಯಕ್ಕೆ ಇದೇ ಅರ್ಥವೆಂಬ ನಿಯಮವೇ ಸಂಕೇತ. ಇದು ಈಶ್ವರೇಚ್ಛೆಯಿಂದಾದುದೆಂದು ತಾರ್ಕಿಕರೂ ವ್ಯವಹಾರಾಧೀನವೆಂದು ವೈಯಾಕರಣಿಗಳೂ ಹೇಳುತ್ತಾರೆ.

[18] ಲಕ್ಷಣೆಯಲ್ಲಿ ಅರ್ಥ ಹೀಗೆ ನೇರವಾಗಿ ಬರುವುದಿಲ್ಲ; ಅಲ್ಲಿ ಲಕ್ಷ್ಯಾರ್ಥಗ್ರಹಣೆ ದೂರ ಅಥವಾ ವ್ಯವಹಿತವಾಗಿರುತ್ತದೆ.

[19] ಒಂದು ಜಾತಿಯಲ್ಲಿ ಬರುವ ಅನೇಕ ವಸ್ತುಗಳಲ್ಲಿ ಒಂದೊಂದೂ 'ವ್ಯಕ್ತಿ'ಯೆನಿಸುತ್ತದೆ.

[20] ವ್ಯಕ್ತಿಗಳ ಸಂಖ್ಯೆ ಅನಂತವಾದುದರಿಂದ ಸಂಕೇತವನ್ನೂ ಅನಂತ ಸಂಖ್ಯೆಯಲ್ಲಿ ಕಲ್ಪಿಸಬೇಕಾಗುತ್ತದೆ. ಹಾಗೆ ಕಲ್ಪಿಸಿದರೆ ಆನಂತ್ಯವೆಂಬ ತರ್ಕದೋಷ ಬರುತ್ತದೆ, ಏಕೆಂದರ ಅನಂತ ವ್ಯಕ್ತಿಗಳೆಲ್ಲವನ್ನೂ ತಿಳಿದವನಿಲ್ಲ.

ತ್ತಿರುವ ಡಿತ್ಥನೆಂಬ ಬಿಳಿಯ ಆಕಳು' ಎಂಬ ಪ್ರಯೋಗದಲ್ಲಿ ಬೇರೆ ಬೇರೆ ಶಬ್ದಗಳು ಬೇರೆ ಬೇರೆ ಪ್ರಕಾರ ವಾಚಿಗಳಾಗಿರುವುದನ್ನು[22] ಇಲ್ಲವೆನ್ನುವ ಪರಿಸ್ಥಿತಿಯುಂಟಾಗುತ್ತದೆ. ಆದುದರಿಂದ ವ್ಯಕ್ತಿಯಲ್ಲಿ ಸಂಕೇತವನ್ನೊಪ್ಪುವುದಿಲ್ಲ; ವ್ಯಕ್ತಿಯ 'ಉಪಾಧಿ'[23] ಯಲ್ಲಿ ಮಾತ್ರ ಸಂಕೇತವುಂಟು.

ಉಪಾಧಿಯೂ ಎರಡು ಬಗೆ—(೧) ವಸ್ತುವಿನಲ್ಲಿಯೇ ಇರುವ ಧರ್ಮ (೨) ಹೇಳುವ ಮನುಷ್ಯನು ತನ್ನ ಇಷ್ಟಾನುಸಾರವಾಗಿ ಆರೋಪಿಸುವ ಧರ್ಮ. ವಸ್ತುಧರ್ಮ ಮತ್ತೆ ಎರಡು ಬಗೆ—(೧) ಸಿದ್ಧವಾದುದು ಮತ್ತು (೨) ಮುಂದೆ ಸಿದ್ಧವಾಗತಕ್ಕದು. ಇವುಗಳಲ್ಲಿ ಮೊದಲನೆಯದಾದ ಸಿದ್ಧವಸ್ತುಧರ್ಮ ಪುನಃ ಎರಡು ಬಗೆಯದು—(೧) ವಸ್ತುವಿಗೆ ಪ್ರಾಣಪ್ರದವಾದುದು[24] ಮತ್ತು (೨) ವಸ್ತುವಿಗೆ ವಿಶೇಷವನ್ನು ತರುವಂತಹುದು. ಇವುಗಳಲ್ಲಿ ಮೊದಲನೆಯದೇ 'ಜಾತಿ' (=*genus*). **ವಾಕ್ಯಪದೀಯ** ''[25]ದಲ್ಲಿ ಹೇಳಿರುವಂತೆ—"ಆಕಳು ಸ್ವರೂಪ ಮಾತ್ರದಿಂದ[26] ಆಕಳೂ

[21] ಇದನ್ನು ತಪ್ಪಿಸಲು ತಿಳಿದಷ್ಟು ವ್ಯಕ್ತಿಗಳಲ್ಲಿ ಮಾತ್ರ ಸಂಕೇತವುಂಟೆಂದರೆ ಆಗ 'ವ್ಯಭಿಚಾರ' ವೆಂಬ ಮತ್ತೊಂದು ದೋಷ ಸಂಘಟಿಸುತ್ತದೆ; ವಸ್ತುತಃ ಸ್ವತಃ ತಿಳಿಯದಿರುವ ವ್ಯಕ್ತಿಯ ಪ್ರತೀತಿಯೂ ಶಬ್ದದಿಂದಾಗುವುದು ಲೋಕಸಿದ್ಧವಾದುದರಿಂದ ಲಕ್ಷಣ ಇಲ್ಲಿ ಅನ್ವಯಿಸದೆ ತಪ್ಪುತ್ತದೆ.

[22] ಇದರ ವಿವರಣೆ ಈಗಲೇ ಮುಂದೆ ಬರುತ್ತದೆ.

[23] ಉಪಾಧಿಯೆಂದರೆ ವ್ಯಕ್ತಿಯ ವಿಶೇಷಣ. ಜಾತಿ, ಗುಣ, ಕ್ರಿಯೆ, ಯದೃಚ್ಛಾದತ್ತ ಸಂಜ್ಞೆ—ಈ ನಾಲ್ಕನ್ನೂ ವೈಯಾಕರಣಿಗಳು ವ್ಯಕ್ತಿಯ ವಿಶೇಷಣ ಅಥವಾ ಉಪಾಧಿಗಳೆನ್ನುತ್ತಾರೆ. ವೈಯಾಕರಣರೂ ಮೀಮಾಂಸಕರೂ ಸಂಕೇತದ ಉಪಾಧಿಯಲ್ಲಿ ಮಾತ್ರ ಉಂಟೆಂದರೆ ನೈಯಾಯಿಕರು ವ್ಯಕ್ತಿ, ಉಪಾಧಿಗಳೆರಡರಲ್ಲೂ ಉಂಟೆನ್ನುತ್ತಾರೆ. ಬೌದ್ಧರು ಎರಡರಲ್ಲೂ ಇಲ್ಲವೆನ್ನುತ್ತಾರೆ. ಅವರ ಪ್ರಕಾರ ಬೇರೊಂದಲ್ಲವೆನ್ನುವುದೇ ಅಥವಾ ಅನ್ಯಾಪೋಹವೇ ಸಂಕೇತದ ವಿಷಯ. ಅಲಂಕಾರಶಾಸ್ತ್ರಕ್ಕೆ ವೈಯಾಕರಣರ ಸಿದ್ಧಾಂತಗಳೇ ಹೆಚ್ಚು ಪ್ರಮಾಣವೆಂಬುದು ಈ ಉಲ್ಲಾಸದಲ್ಲೆಲ್ಲ ಸ್ಪಷ್ಟ.

[24] ಪ್ರಾಣವನ್ನು ಎಂದರೆ ವ್ಯವಹಾರಯೋಗ್ಯತೆಯನ್ನು ಕೊಡಲು ಅಥವಾ ಕಲ್ಪಿಸಲು ಸಮರ್ಥವಾದುದು (ಜಗನ್ನಾಥನ ರಸಗಂಗಾಧರ, ಪು. ೧೪೩).

[25] ವಾಕ್ಯ ಮತ್ತು ಪದಗಳ ತತ್ವವನ್ನು ನಿರೂಪಿಸುವ ಪ್ರೌಢ ವ್ಯಾಕರಣಗ್ರಂಥ. ಇದನ್ನು ಬರೆದವನು ಪ್ರಖ್ಯಾತನಾದ ಭರ್ತೃಹರಿ. ಚೀಣಾದೇಶದ ಯಾತ್ರಿಕನಾದ ಇತ್ಸಿಂಗನು ವಾಕ್ಯಪದೀಯಕಾರನಾದ ಭರ್ತೃಹರಿ ಕ್ರಿ.ಶ. ೬೫೦ ರಲ್ಲಿ ದಿವಂಗತನಾದನೆಂದು ಉಲ್ಲೇಖಿಸಿದ್ದಾನೆ. ಶ್ಲೋಕರೂಪವಾದ ಈ ಗ್ರಂಥದಲ್ಲಿ ಬ್ರಹ್ಮ ಅಥವಾ ಆಗಮಕಾಂಡ, ವಾಕ್ಯಕಾಂಡ ಮತ್ತು ಪದ ಅಥವಾ ಪ್ರಕೀರ್ಣಕಾಂಡಗಳೆಂಬ ಮೂರು ಭಾಗಗಳಿವೆ.

[26] ಸ್ವರೂಪ ಎಂದರೆ ಆಕೃತಿ, ಬಣ್ಣ ಮುಂತಾದ ಬಾಹ್ಯಾಂಶಗಳಾಗಬಹುದು ಅಥವಾ ಜಾತಿ ವಿರಹಿತವಾದ ಗೋವ್ಯಕ್ತಿಯಾಗಬಹುದು.

ಅಲ್ಲ, ಆಕಳಲ್ಲದ್ದೂ ಅಲ್ಲ; ಆಕಳುಗಳಿಗೆಲ್ಲ ಅನ್ವಯಿಸುವ ಜಾತಿಯ (ಗೋತ್ವದ ಸಂಬಂಧದಿಂದ ಮಾತ್ರ ಆಕಳೆನಿಸುತ್ತದೆ." ಎರಡನೆಯದು ಗುಣ. (ಜಾತಿಯಿಂದ) ವಸ್ತು ಅಸ್ತಿತ್ವಕ್ಕೆ ಬಂದಮೇಲೆ 'ಬಿಳಿಯ' ಮುಂತಾದ ಗುಣಗಳು ಅದನ್ನು ವಿಶೇಷಿಸುತ್ತವೆ. 'ಮುಂದೆ ಸಿದ್ಧವಾಗತಕ್ಕ' ವಸ್ತುಧರ್ಮವೆಂದರೆ ಕ್ರಿಯೆ. 'ಮೊದಲು,' 'ಕಡೆ' ಎಂಬ ಎರಡು ಅವಯವಗಳ ಅಂತರದಲ್ಲಿ ನಡೆಯುವ ಕೆಲಸವನ್ನೆಲ್ಲ ಇದು ಗರ್ಭೀಕರಿಸುತ್ತದೆ.[27] 'ಡಿತ್ಥ' ಮುಂತಾದ ಶಬ್ದ(=*proper name*)ಗಳ ಸ್ವರೂಪವು ಅಂತ್ಯಾಕ್ಷರದ ಉಚ್ಚಾರಣೆಯ ಸಂಸ್ಕಾರ ಬಂದಮೇಲೆ ಮಾತ್ರ ವೇದ್ಯ; ಒಂದೊಂದು ಅಕ್ಷರವನ್ನೂ ಉಚ್ಚರಿಸುವಾಗ ಕ್ರಮ ಕ್ರಮವಾಗಿ ತಿಳಿಯುವುದಿಲ್ಲ.[28] ಅದನ್ನು ಹೇಳುವವನು ತನ್ನ ಮನಬಂದಂತೆ ಬೇಕಾದ ವಸ್ತುವಿಗೆ ಆರೋಪಿಸಬಹುದಾದ್ದರಿಂದ ಯಾವ ವಸ್ತುವಿಗೆ ಅದನ್ನಾರೋಪಿಸುತ್ತಾನೋ ಅದಕ್ಕದು ಹೆಸರಾಗುತ್ತದೆ. (ಆಕಳಿಗೆ 'ಡಿತ್ಥ' ಎಂದಾಗ ಆಕಳೇ ಡಿತ್ಥವಾಗುತ್ತದೆ).[29] ಆದ್ದರಿಂದಲೇ 'ಓಡಾಡುತ್ತಿರುವ ಡಿತ್ಥನೆಂಬ ಬಿಳಿಯ ಆಕಳು' ಎಂಬಲ್ಲಿ ಶಬ್ದಗಳ ಪ್ರವೃತ್ತಿ ನಾಲ್ಕು ವಿಧ" ಎಂದು **ಮಹಾಭಾಷ್ಯಕಾರನು**[30] ಹೇಳಿರುವನು.

'ಪರಮಾಣು' ಮೊದಲಾದುವಕ್ಕೆ ಗುಣವೆಂಬ ವ್ಯವಹಾರವು ಶಾಸ್ತ್ರಾಂತರದ ಪರಿಭಾಷೆಯಲ್ಲಿ ಮಾತ್ರವೇ ಸಿದ್ಧ.[31] ಅವರು ಗುಣಗಳೆಂದರೆ ಇಷ್ಟು ಎಂದು ಪಟ್ಟಿ

---

[27] ಅನ್ನ ಮಾಡುವ ಕ್ರಿಯೆಯೆಂದರೆ ತಪ್ಪಲೆಯಲ್ಲಿ ನೀರಿಡುವುದರಿಂದ ಆರಂಭಿಸಿ ಒಲೆಯ ಮೇಲೆ ಇಡುವುದು, ಸೌದೆಯನ್ನುರಿ ಮಾಡುವುದು, ಬೆಂದದ್ದನ್ನು ನೋಡುವುದೇ ಮುಂತಾಗಿ ಕೆಳಗಿಳಿಸುವವರೆಗಿನ ಅನೇಕ ಕೆಲಸಗಳನ್ನೂ ಒಳಗೊಳ್ಳುತ್ತದೆ. ಹೋಲಿಸಿ—ಪೂರ್ವಾಪರೀಭೂತಂ ಭಾವಮಾಖ್ಯಾತೇನ ಆಚಷ್ಟೇ ಉಪಕ್ರಮಪ್ರಭೃತಿ ಅಪವರ್ಗಪರ್ಯಂತಮ್ —ಯಾಸ್ಕನ **ನಿರುಕ್ತ**.

[28] I. (i. ii). ಇದಕ್ಕೇ 'ಸ್ಫೋಟ'ವೆಂದು ಹೆಸರು. ಶಬ್ದವು ಅಖಂಡಸ್ಫೋಟಕ್ಕೆ ವ್ಯಂಜಕ ಮಾತ್ರ.

[29] ಇದನ್ನೇ ಇಂಗ್ಲಿಷ್ ತರ್ಕಶಾಸ್ತ್ರದಲ್ಲಿ *Proper names have no connotation* ಎಂದು ಸೂತ್ರಪ್ರಾಯವಾಗಿ ಹೇಳುತ್ತಾರೆ.

[30] ಭಗವಾನ್ ಪಂತಜಲಿಗಳೇ ಮಹಾಭಾಷ್ಯಕಾರರು. ಸಂಸ್ಕೃತ ವ್ಯಾಕರಣಕ್ಕೆ ಮೂಲವಾದ ಪಾಣಿನಿಯ ಅಷ್ಟಾಧ್ಯಾಯೀ ಸೂತ್ರಗಳ ವಿಸ್ತೃತ ವಿವರಣೆಯೇ ಮಹಾಭಾಷ್ಯ. ಪತಂಜಲಿಗಳ ಕಾಲ ಕ್ರಿ.ಪೂ. ಎರಡನೆಯ ಶತಮಾನ.

[31] ವೈಶೇಷಿಕರು ಜಗತ್ತಿನಲ್ಲಿ ಒಪ್ಪುವ ಪದಾರ್ಥಗಳು (=*Categories*) ಆರು: ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ ಮತ್ತು ಸಮವಾಯ. ಇವುಗಳಲ್ಲಿ ದ್ರವ್ಯಗಳು ಒಂಭತ್ತು—ಪೃಥಿವೀ, ಅಪ್, ತೇಜಸ್ಸು, ವಾಯು, ಆಕಾಶ, ಕಾಲ, ದಿಕ್, ಆತ್ಮ ಮತ್ತು ಮನಸ್ಸು. ದ್ರವ್ಯಾಶ್ರಿತವಾದ ಗುಣಗಳು 24—ರೂಪ, ರಸ, ಗಂಧ, ಸ್ಪರ್ಶ, ಸಂಖ್ಯೆ, ಪರಿಮಾಣ, ಇತ್ಯಾದಿ. ದ್ರವ್ಯ

ಯನ್ನು ಕೊಡುವಾಗ ಅದನ್ನೂ ಸೇರಿಸಿರುವುದರಿಂದ ಮಾತ್ರ 'ಅಣು' ಎಂಬುದು 'ಗುಣ'ವೆನಿಸುತ್ತದೆ.

ಮುಖವು ಒಂದೇ ಆದರೂ ಕತ್ತಿ, ಕನ್ನಡಿ, ಎಣ್ಣೆ, ಮುಂತಾಗಿ ಬೇರೆಬೇರೆ ಆಲಂಬನಗಳಲ್ಲಿ ಅದು ಪ್ರತಿಫಲಿಸಿದಾಗ ಬೇರೆಬೇರೆಯಾಗಿ ಕಾಣುವಂತೆ ಗುಣ, ಕ್ರಿಯೆ,

ಗಳಲ್ಲಿ ಕಾರಣದ್ರವ್ಯ ಮತ್ತು ಕಾರ್ಯದ್ರವ್ಯಗಳೆಂದು ಎರಡು ಬಗೆ. ಪ್ರತಿಯೊಂದು ಕಾರ್ಯದ್ರವ್ಯಕ್ಕೂ ಒಂದು ಕಾರಣದ್ರವ್ಯ ಅವಯವ ಸಂಯೋಗ ಮತ್ತು ಅಗತ್ಯವಾದ ಸಾಮಗ್ರಿಗಳು ಕಾರಣವೆನಿಸುತ್ತವೆ. ಕಾರ್ಯದ್ರವ್ಯದ ರೂಪಾದಿ ಗುಣಗಳಿಗೆ ಕಾರಣದ್ರವ್ಯದ ರೂಪಾದಿಗಳೇ ಕಾರಣ. ಬಟ್ಟೆಯೆಂಬ ಕಾರ್ಯಕ್ಕೆ ದಾರಗಳು ಸಮವಾಯಿಕಾರಣ, ಅವುಗಳ ಸಂಯೋಗ ಅಸಮವಾಯಿಕಾರಣ. ಮಗ್ಗವು ನಿಮಿತ್ತಕಾರಣ. ಬಟ್ಟೆಗಳ ಬಣ್ಣಕ್ಕೆ ದಾರದ ಬಣ್ಣ ಕಾರಣ. ಈ ತತ್ವದಂತೆ ಸ್ಥೂಲ ಜಗತ್ತಿನ ಸೃಷ್ಟಿಯನ್ನು ವಿವರಿಸುವಾಗ ಕೆಲವೊಂದು ತೊಂದರೆಗಳು ಬರುತ್ತವೆ. ಕಣ್ಣಿಗೆ ಕಾಣುವಂತಹ ಪರಿಮಾಣವನ್ನು ಮಹತ್ ಎನ್ನುತ್ತಾರೆ. ಪರ್ವತದಷ್ಟು ದೊಡ್ಡ ವಸ್ತುವೇ ಇರಲಿ ಅದರ ಸಣ್ಣ ಅವಯವಗಳ ಸಂಯೋಗದಿಂದ ಆಯಿತೆನ್ನುವುದರಿಂದ, ಈ ಅವಯವಗಳನ್ನು ಎಲ್ಲಿಯ ವರೆಗೆ ಸಾಧ್ಯವೋ ಅಲ್ಲಿಯ ವರೆಗೆ ವಿಭಾಗಿಸಿದರೆ, ಬಿಸಿಲುಕೋಲಿನಲ್ಲಿ ಕಾಣುವ ಒಂದು ಸಣ್ಣ ರವೆಯ ವರೆಗೆ ಬರಬಹುದು. ಅದನ್ನು 'ತ್ರುಟಿ' ಅಥವಾ ತ್ರಸರೇಣು ಎನ್ನುತ್ತಾರೆ. ಆದರೆ ಅದೂ ಕಣ್ಣಿಗೆ ಕಾಣುವುದರಿಂದ 'ಮಹತ್' ಎಂಬ ಪರಿಮಾಣವನ್ನೇ ಉಳ್ಳದು. ಇನ್ನು ಈ ತ್ರುಟಿಯ ಕಾರಣಗಳನ್ನು ಹೇಳುವಾಗ ಕಣ್ಣಿಗೆ ಕಾಣದ ಪರಿಮಾಣಗಳನ್ನು ಒಪ್ಪಬೇಕಾಗುತ್ತದೆ. ಅನವಸ್ಥೆಯನ್ನು ತಪ್ಪಿಸಲು ಆರಂಭದ ಕಾರಣ ದ್ರವ್ಯಗಳು ನಿತ್ಯ ಅಥವಾ ಕಾರಣಾಂತರ ರಹಿತವೆಂದೂ ಒಪ್ಪಬೇಕಾಗುತ್ತದೆ. ಹೀಗೆ ಸೃಷ್ಟಿಯ ಸಲಕ ವಸ್ತುಗಳಿಗೂ ಮೂಲವಾದ ನಿತ್ಯದ್ರವ್ಯಗಳೇ ಪರಮಾಣುಗಳು. ಪೃಥಿವೀ, ಅಪ್, ತೇಜಸ್ಸು, ವಾಯು—ಈ ನಾಲ್ಕು ಭೂತಗಳೂ ನಿತ್ಯಪರಮಾಣು ರೂಪಗಳೆನ್ನುತ್ತಾರೆ. ಇವುಗಳಲ್ಲಿರುವ ಸೂಕ್ಷ್ಮಪರಿಮಾಣಕಾರ್ಯಗಳ ಮಹತ್ವ ಪರಿಮಾಣಕ್ಕೆ ಕಾರಣವಲ್ಲ; ಇವುಗಳ ಸಂಖ್ಯೆಯೇ ಕಾರಣ ಎಂಬ ಹೊಸದೊಂದು ತತ್ವವನ್ನು ನಿರೂಪಿಸುತ್ತಾರೆ, ಪರಮಾಣುಗಳ ಪರಿಣಾಮಕ್ಕೆ ಪರಮಾಣುತ್ವ ಅಥವಾ ಪಾರಿಮಾಂಡಲ್ಯವೆನ್ನುತ್ತಾರೆ. ಎರಡು ಪರಮಾಣುಗಳ ಸಂಯೋಗದಿಂದಾಗುವ ದ್ವಣುಕದ ಪರಿಮಾಣಕ್ಕೆ ಅಣುತ್ವವೆನ್ನುತ್ತಾರೆ. ಅಂತಹ ಮೂರು ದ್ವಣುಕಗಳ ಸಂಯೋಗದಿಂದ ಹುಟ್ಟುವ ತ್ರ್ಯಣುಕವೇ ತ್ರುಟಿ ಅಥವಾ ತ್ರಸರೇಣು. ಅದರ ಪರಿಮಾಣ ಮಹತ್ವ ಪರಮಮಹತ್ವ ಅಥವಾ ವಿಭುತ್ವ ನಿರವಯವವಾದ ಆಕಾಶ ಮತ್ತು ಆತ್ಮಗಳಲ್ಲಿ ಉಂಟು; ಪರಮಾಣುತ್ವ ಅಥವಾ ಪಾರಿಮಾಂಡಲ್ಯವು ಪರಮಾಣುಗಳಲ್ಲಿರುತ್ತದೆ. ಇವೆರಡೂ ಶಾಸ್ತ್ರಕಲ್ಪಿತವೇ ಹೊರತು ಪ್ರತ್ಯಕ್ಷಗೋಚರವಲ್ಲ. ಹೀಗೆ ಸೃಷ್ಟಿಯ ಪ್ರತಿಯೊಂದು ವಸ್ತುವಿಗೂ ಪರಮಾಣು, ದ್ವ್ಯಣುಕ, ತ್ರ್ಯಣುಕ, ಚತುರಣುಕ ಇತ್ಯಾದಿ ವಿವಿಧಾವಸ್ಥೆಗಳನ್ನೊಪ್ಪಿ ತ್ರಸರೇಣುವಿನಿಂದ ಪರ್ವತದ ವರೆಗಿನ ಎಲ್ಲ ಕಾರ್ಯಗಳನ್ನೂ ಸಕಾರಣವಾಗಿ ವೈಶೇಷಿಕರು ವಿವರಿಸುತ್ತಾರೆ.

ಮೇಲೆ ಹೇಳಿದ ತತ್ವದಂತೆ ಪರಮಾಣುತ್ವ ಅಥವಾ ಪಾರಿಮಾಂಡಲ್ಯವು ೨೪ ಗುಣಗಳಲ್ಲೊಂದಾದ ಗುಣವಾಗುವುದೇ ಹೊರತು ಜಾತಿಯಾಗುವುದಿಲ್ಲ. ಆದರೆ ಮಮ್ಮಟನು ವಿವರಿಸಿರುವ ವೈಯಾಕರಣರ ಪ್ರತಿಕ್ರಿಯೆಯಲ್ಲಿ ವಸ್ತುವಿನ ಪ್ರಾಣಪ್ರದ ಧರ್ಮವೇ ಜಾತಿಯೆನಿಸುವುದರಿಂದ ಪರಮಾಣುತ್ವ ಜಾತಿಯೆನಿಸುವುದೇ ಹೊರತು ಗುಣವೆನಿಸುವುದಿಲ್ಲ.

ಯದೃಚ್ಛೆಗಳೆಲ್ಲ ವಸ್ತುತಃ ಒಂದೇ ಆಗಿದ್ದರೂ ಆಶ್ರಯಗಳು ಬೇರೆಬೇರೆಯಾದಾಗ ಒಂದೊಂದೂ ಬೇರೆಬೇರೆಯಾಗಿ ತೋರುತ್ತದೆ.[32]

'ಹಿಮ, ಹಾಲು, ಶಂಖ ಮುಂತಾದ ಬೇರೆಬೇರೆ ಆಶ್ರಯಗಳಲ್ಲಿರುವ ಬಿಳುಪು ವಸ್ತುತಃ ಬೇರೆಬೇರೆಯಾದರೂ ನಾವು ಎಲ್ಲವನ್ನೂ ಸಮಾನವಾಗಿ 'ಬಿಳುಪಾದುದು,

---

ವೈಶೇಷಿಕರು ಪರಮಾಣುತ್ವವನ್ನು ಜಾತಿಯೆಂದೊಪ್ಪದಿರಲು ಅವರ ಮತ್ತೊಂದು ಪ್ರಕ್ರಿಯೆಯೇ ಕಾರಣ. ಒಂದೇ ವಸ್ತುವಿನಲ್ಲಿ ಎರಡು ಜಾತಿಗಳನ್ನೊಪ್ಪಬೇಕಾದರೆ ಅವೆರಡಕ್ಕೂ ಪರಜಾತಿ ಮತ್ತು ಅಪರಜಾತಿಯೆನ್ನಲು ಬರುವಂತೆ ವಿಭಾಗವಿರಬೇಕೆಂಬ ನಿಯಮವಿದೆ. ಘಟದಲ್ಲಿ ಘಟತ್ವವೆಂಬ ಜಾತಿಯಿರುವಂತೆ ಪೃಥಿವೀತ್ವವೆಂಬ ಜಾತಿಯೂ ಉಂಟೆನ್ನಬಹುದು, ಏಕೆಂದರೆ ಘಟತ್ವಜಾತಿ ಅಪರ (*less extensive*) ಮತ್ತು ಪೃಥಿವೀತ್ವ ಜಾತಿಯು ಪರ (more extensive) ಎರಡು ಜಾತಿಗಳೂ ಹೀಗೆ ಪರಸ್ಪರ ಭಿನ್ನವಾಗಿಲ್ಲದೆ ಅಭೇದ, ತುಲ್ಯತ್ವ, ಸಾಂಕರ್ಯ, ಅನಿಯಮ, ರೂಪಹಾನಿ, ಅಸಂಬಂಧಗಳಿಗೆ ಎಡೆಯೀಯುತ್ತಿದ್ದರೆ ಆಗ ಜಾತಿಕಲ್ಪನೆಯ ತಪ್ಪಾಗುತ್ತದೆ. ಹೋಲಿಸಿ—

ವ್ಯಕ್ತೇರಭೇದಸ್ತುಲ್ಯತ್ವಂ ಸಂಕರೋऽಥಾನವಸ್ಥಿತಿಃ |
ರೂಪಹಾನಿರಸಂಬಂಧೋ ಜಾತಿಬಾಧಕಸಂಗ್ರಹಃ ||
(ಸಾಹಿತ್ಯಚೂಡಾಮಣಿಯಲ್ಲಿ ಉದಾಹೃತ)

ಪ್ರಕೃತದಲ್ಲಿ ಪರಮಾಣುವಿನ ಪೃಥಿವೀತ್ವವೆಂಬ ಜಾತಿಗೂ ಪರಮಾಣುತ್ವವೆಂಬ ಜಾತಿಗೂ ಸಾಂಕರ್ಯ ಸ್ಪಷ್ಟ; ಪರಾಪರಭೇದವಿಲ್ಲ. ಆದ್ದರಿಂದ ವೈಶೇಷಿಕರು ಪರಮಾಣುತ್ವವನ್ನು ಜಾತಿಯೆನ್ನಲು ಬರುವುದಿಲ್ಲ. ವೈಯಾಕರಣರು ಮೇಲೆ ಹೇಳಿದ ತಾರ್ಕಿಕರ ಜಾತಿಬಾಧಕಗಳನ್ನೊಪ್ಪದಿರುವುದರಿಂದ ಅವರಿಗೆ ಜಾತಿಯೆನ್ನಲು ಬರುತ್ತದೆ (ಮಾಣಿಕ್ಯಚಂದ್ರನ ಸಂಕೇತ).

ಕಾವ್ಯರಹಸ್ಯ ವಿವರಣೆಗೆ ಈ ಸೂಕ್ಷ್ಮ ತರ್ಕದೃಷ್ಟಿ ಅನಗತ್ಯವಾದರೂ ಮಮ್ಮಟನು ಈ ಉಲ್ಲಾಸದ ಉದ್ದಕ್ಕೂ ತನ್ನ ಸರ್ವತಂತ್ರ ಸ್ವಾತಂತ್ರ್ಯ ಹಾಗು ನಿಷ್ಕೃಷ್ಟ ಶಾಸ್ತ್ರಪಾಂಡಿತ್ಯಗಳನ್ನು ಪ್ರದರ್ಶಿಸುತ್ತಾನೆ.

[32] ವ್ಯಕ್ತಿಗಳಲ್ಲಿ ಸಂಕೇತವನ್ನೊಪ್ಪಿದರೆ ಆನಂತ್ಯ, ವ್ಯಭಿಚಾರ ಮುಂತಾದ ದೋಷಗಳು ಬರುವುವೆಂದು ಹೇಳಲಾಯಿತು. ಅವೇ ದೋಷಗಳೇ ಗುಣ, ಕ್ರಿಯೆ, ಯದೃಚ್ಛಾಸಂಜ್ಞೆಗಳಲ್ಲಿ ಸಂಕೇತವನ್ನೊಪ್ಪಿದರೂ ಬರುವುವೆಂಬ ಆಶಂಕೆಗೆ ಇಲ್ಲಿ ಉತ್ತರವಿದೆ. ಒಂದೊಂದು ವಸ್ತುವಿನಲ್ಲಿರುವ ಗುಣವೂ ಬೇರೆಬೇರೆಯೇ ಎಂಬುದು ಆಶಂಕೆಗೆ ಮೂಲ. ಹಾಲಿನ ಬಿಳಿಪೂ ಹಿಮದ ಬಿಳುಪೂ ಸಮಾನವೇ ಹೊರತು ಒಂದೇ ಅಲ್ಲ ಎಂಬ ಈ ವಾದವನ್ನೇ ಮಮ್ಮಟನು ನಿರಾಕರಿಸಿದ್ದಾನೆ. ದೃಷ್ಟಾಂತದ ಮೂಲಕ ವಸ್ತುಗಳು ಭಿನ್ನವಾದರೂ ಅವುಗಳ ಗುಣ, ಕ್ರಿಯೆ, ಜಾತಿಗಳು ಅಭಿನ್ನವೆಂಬುದೇ ವೈಯಾಕರಣರ ಮತ. ಹೋಲಿಸಿ—'ಕರ್ಮೈಕಂ ಜಾತಿರವ್ಯೇಕಾ ಜಗತ್ಯೇಕಃ ಸ್ಥಿತೋ ಗುಣಃ' (ಸಂಕೇತ). ಈ ವೈಯಾಕರಣರ ಸಿದ್ಧಾಂತಕ್ಕೆ ಪತಂಜಲಿ, ಭರ್ತೃಹರಿಗಳ ವಾಕ್ಯಗಳೇ ಆಧಾರ. ಮಮ್ಮಟನು ಇಲ್ಲಿ ಅದನ್ನೇ ಅನುಸರಿಸುತ್ತಿರುವುದು ಸ್ಪಷ್ಟ.

ಎಂದೇ ವ್ಯವಹರಿಸುತ್ತೇವೆ; ಅರ್ಥಪ್ರತೀತಿಯನ್ನೂ ಪಡೆಯುತ್ತೇವೆ. ಇದಕ್ಕೆ ಕಾರಣವೇನೆಂದರೆ ಆ ವಸ್ತುಗಳಲ್ಲೆಲ್ಲ ಬಿಳುಪು (=ಶುಕ್ಲತ್ವ) ಎಂಬ ಒಂದೇ ಜಾತಿ ಯಿದೆ. ಹಾಗೆಯೇ ಬೆಲ್ಲವನ್ನು ಪಾಕಮಾಡುತ್ತಿರಲಿ, ಅನ್ನವನ್ನು ಬೇಯಿಸುತ್ತಿರಲಿ ಎಲ್ಲ ಅಡಿಗೆಯ ಕೆಲಸವನ್ನೂ 'ಪಾಕ'ವೆಂದು ನಾವು ಕರೆಯುವುದಕ್ಕೆ 'ಪಾಕತ್ವ' ವೆಂಬ ಜಾತಿ ಎಲ್ಲಕ್ಕೂ ಅನ್ವಯಿಸುವುದೇ ಕಾರಣ. 'ಡಿತ್ಥ' ಎಂಬ ಒಂದೇ ಹೆಸರನ್ನು ಮಗು, ಮುದುಕ, ಗಿಳಿ ಮುಂತಾದವರು ಉಚ್ಚರಿಸಿದಾಗ ಶಬ್ದದಲ್ಲಿಯೇ ಭೇದ ಕಾಣುವುದು; ಆ ಹೆಸರುಳ್ಳ ವಸ್ತು ಕೂಡ ಪ್ರತಿ ಕ್ಷಣವೂ ಬೇರೆಬೇರೆಯಾಗಿರಬಹುದು. ಹೀಗಿದ್ದರೂ ಸಮಾನವಾಗಿ 'ಡಿತ್ಥ' ಎಂಬ ಹೆಸರನ್ನು ನಾವು ಬಳಸುತ್ತಿರುವುದಕ್ಕೆ ಸಹ 'ಡಿತ್ಥತ್ವ'ವೆಂಬ ಜಾತಿ ಎಲ್ಲೆಡೆಯಲ್ಲಿಯೂ ಸಿದ್ಧವಾಗಿರುವುದೇ ಕಾರಣ. ಆದುದರಿಂದ ಶಬ್ದಗಳಿಗೆಲ್ಲ ಜಾತಿಯೊಂದೇ ನಿಯಾಮಕವೆಂದು ಬೇರೆಯವರು ಅಭಿಪ್ರಾಯಪಡುತ್ತಾರೆ.[33]

ಮತ್ತೆ ಕೆಲವರು ಜಾತಿವಿಶಿಷ್ಟವಾದ ವ್ಯಕ್ತಿಯನ್ನೇ ಶಬ್ದದ ಅರ್ಥವೆಂದೂ[34] ಬೇರೆಯವರು 'ಅಪೋಹ' ಅಥವಾ ಅನ್ಯವ್ಯಾವೃತ್ತಿಯೇ ಶಬ್ದದ ಅರ್ಥವೆಂದೂ ಹೇಳಿದ್ದಾರೆ.[35] ಆದರೆ ಗ್ರಂಥವು ಅತಿ ದೊಡ್ಡದಾಗುವುದೆಂಬ ಭೀತಿಯಿಂದಲೂ ಪ್ರಕೃತಕ್ಕೆ ಉಪಯೋಗವಲ್ಲದುದರಿಂದಲೂ ಅದನ್ನು ಇಲ್ಲಿ ವಿವರಿಸಿಲ್ಲ.

---

33 ಇದು ಮೀಮಾಂಸಕರ ಸಿದ್ಧಾಂತ. ಇವರು ಮೇಲೆ ಹೇಳಿದ ವೈಯಾಕರಣರ ಮತವನ್ನೊಪ್ಪುವುದಿಲ್ಲ. ಗುಣಕ್ರಿಯಾಯದೃಚ್ಛೆಗಳಿಗೆ ವಸ್ತುತಃ ಭೇದವೇ ಇಲ್ಲ; ಆಲಂಬನದ ಭೇದದಿಂದ ಮಾತ್ರ ಭೇದವಿದ್ದಂತೆ ತೋರುತ್ತದೆ ಎಂದು ವೈಯಾಕರಣಿಗಳು ಹೇಳಿದರೆ, ಮೀಮಾಂಸಕರು ಇವಕ್ಕೆಲ್ಲ ವಸ್ತುತಃ ಭೇದವೇ ಉಂಟು; ಹಾಗೆ ಭೇದವಿರುವುದರಿಂದ ಅವು ಸಂಕೇತಕ್ಕೆ ತಕ್ಕವೇ ಅಲ್ಲ; ಆದ್ದರಿಂದ ಗುಣ ಮುಂತಾದುವುಗಳಲ್ಲೂ ಜಾತಿಯನ್ನು ಕಲ್ಪಿಸಿ, ಆ ಜಾತಿಯಲ್ಲಿ ಮಾತ್ರ ಸಂಕೇತವನ್ನು ಸಾಧಿಸಬಹುದು ಎನ್ನುತ್ತಾರೆ.

34 ಇದು ಪ್ರಾಚೀನ ನೈಯಾಯಿಕರ ಸಿದ್ಧಾಂತ. ಹೋಲಿಸಿ—'ವ್ಯಕ್ತ್ಯಾಕೃತಿಜಾತಯಸ್ತು ಪದಾರ್ಥಃ'—ನ್ಯಾಯಸೂತ್ರ.

35 ಇದು ಬೌದ್ಧರ ಪ್ರಕ್ರಿಯೆ. ಸರ್ವವನ್ನೂ ಕ್ಷಣಿಕವೆನ್ನುವ ಅವರು ಜಾತಿಯನ್ನೇ ಉಂಟೆನ್ನುವಂತಿಲ್ಲ; ಏಕೆಂದರೆ ಜಾತಿಯ ಪರಾಮರ್ಶಕ್ಕೆ ಎರಡು ಕ್ಷಣಗಳಾದರೂ ಅನೇಕ ವಸ್ತುಗಳು ಇರಬೇಕಾಗುತ್ತದೆ; ಮತ್ತು ಜಾತಿಗೆ ಸ್ವತಂತ್ರವಾದ ನಿತ್ಯತೆ ಬೇಕಾಗುತ್ತದೆ; ಅಂತೆಯೇ ಅವರು ಗುಣಾದಿಗಳೂ ಕ್ಷಣಿಕವಾದುದರಿಂದ ಎಲ್ಲಿಯೂ ಸಂಕೇತವುಂಟೆನ್ನಲು ಬರುವುದಿಲ್ಲ. ಆದಕಾರಣ ಅವರು 'ಅನ್ಯಾಪೋಹ'ವನ್ನು ಪದದ ಅರ್ಥವೆನ್ನುತ್ತಾರೆ. ಆಕಳಲ್ಲದ್ದು ಅಲ್ಲ ಎಂಬುದೇ 'ಆಕಳು' ಎಂಬ ಶಬ್ದದ ಅರ್ಥ, ಈ ವಾದದಲ್ಲಿ. ಈ ವಾದದ ಪೂರ್ಣ ವಿವರಣೆಗೆ ನನ್ನ ಕನ್ನಡ ಕಾವ್ಯಾಲಂಕಾರ, V. ೧೬-೨೦ ಟಿಪ್ಪಣಿಗಳನ್ನೋದಿ.

ಸ ಮುಖ್ಯೋಽರ್ಥಸ್ತತ್ರ ಮುಖ್ಯೋ ವ್ಯಾಪಾರೋಽಸ್ಯಾಭಿಧೋಚ್ಯತೇ ॥ ೩॥

ಅದು ಮುಖ್ಯಾರ್ಥ. ಅಲ್ಲಿ ಕೂಡ ಇದರ ಮುಖ್ಯ[36] ವ್ಯಾಪಾರಕ್ಕೆ 'ಅಭಿಧಾ' ಎಂದು ಹೆಸರು.

'ಅದು' ಎಂದರೆ ನೇರವಾಗಿ ಸಂಕೇತವನ್ನುಳ್ಳ ಅರ್ಥ. 'ಇದರ' ಎಂದರೆ ಶಬ್ದದ ಎಂದು ತಾತ್ಪರ್ಯ.

ಮುಖ್ಯಾರ್ಥಬಾಧೇ ತದ್ಯೋಗೇ ರೂಢಿತೋಽಥ ಪ್ರಯೋಜನಾತ್ ।
ಅನ್ಯೋಽರ್ಥೋ ಲಕ್ಷ್ಯತೇ ಯತ್ ಸಾ ಲಕ್ಷಣಾರೋಪಿತಾ ಕ್ರಿಯಾ ॥ ೪ ॥

ಮುಖ್ಯಾರ್ಥ ಬಾಧಿತವಾಗಿರುವಾಗ ಅದರೊಡನೆ ಯೋಗವೂ ಕಾಣುತ್ತಿದ್ದರೆ, ರೂಢಿಯ ಬಲದಿಂದಾಗಲಿ ಇಲ್ಲವೆ ಪ್ರಯೋಜನದ ಕಾರಣದಿಂದಾಗಲಿ ಬೇರೊಂದರ್ಥವು ಸ್ಫುರಿಸುವುದಕ್ಕೆ ನಿಯಾಮಕವಾದ ಮತ್ತು ಮನುಷ್ಯನಿಂದ ಶಬ್ದಕ್ಕೆ ಆರೋಪಿತವಾದ ಎರಡನೆಯ ಕ್ರಿಯೆ ಅಥವಾ ವ್ಯಾಪಾರವೇ ಲಕ್ಷಣೆ.

'ಕಾರ್ಯದಲ್ಲಿ ಕುಶಲ' ಇತ್ಯಾದಿ ಪ್ರಯೋಗಗಳಲ್ಲಿ 'ಕುಶ(ದರ್ಭೆ)ಗಳನ್ನು ಕೊಯ್ಯುವವನು' ಇತ್ಯಾದಿ ವಾಚ್ಯಾರ್ಥ ಹೊಂದಿಕೊಳ್ಳದೆ ಹೋಗುವುದರಿಂದ ಮತ್ತು 'ಗಂಗೆಯಲ್ಲಿ ಗೊಲ್ಲರ ಹಳ್ಳಿ' ಇತ್ಯಾದಿ ವಾಕ್ಯಗಳಲ್ಲಿ ಗಂಗಾಪ್ರವಾಹ ಹಳ್ಳಿಗೆ ಆಲಂಬನವಾಗುವುದು ಅಸಾಧ್ಯವಾದುದರಿಂದ ಮುಖ್ಯಾರ್ಥಕ್ಕೆ ಮೊದಲು ಬಾಧೆ ಬರುತ್ತದೆ. (ಆ ಬಾಧೆಯನ್ನು ಪರಿಹರಿಸುವುದಕ್ಕಾಗಿ) ಮುಖ್ಯಾರ್ಥದೊಡನೆ ಯೋಗ ಅಥವಾ ಸಂಬಂಧವಿರುವಂತೆ ಜನರ ಮಾತಿನ ರೂಢಿಯನ್ನನುಸರಿಸಿ 'ಕುಶಲ' ಎಂದರೆ 'ವಿವೇಚನಾಶಕ್ತಿಯುಳ್ಳವನು' ಎಂದು ಅರ್ಥಮಾಡುತ್ತೇವೆ. ಹಾಗೆಯೇ 'ಗಂಗಾತೀರದ ಹಳ್ಳಿ' ಎಂದಾಗ ಬಾರದ ಶೀತತ್ವ ಪಾವನತ್ವ ಮುಂತಾದ ಧರ್ಮಾತಿಶಯಗಳು ಚೆನ್ನಾಗಿ ಪ್ರಕಟವಾಗಲೆಂಬ ಪ್ರಯೋಜನವನ್ನು ದೃಷ್ಟಿಯಲ್ಲಿಟ್ಟು 'ಗಂಗೆಯಲ್ಲಿ' ಎಂಬ ಮುಖ್ಯಾರ್ಥದ ಬದಲು 'ಗಂಗಾತೀರದಲ್ಲಿ' ಎಂಬ ಅಮುಖ್ಯಾರ್ಥವನ್ನು ಸ್ವೀಕರಿಸುತ್ತೇವೆ. ಹೀಗೆ ಮುಖ್ಯಾರ್ಥದಿಂದ ಸೂಚ್ಯವಾದ ಅಮುಖ್ಯಾರ್ಥವೇ ಲಕ್ಷ್ಯಾರ್ಥ. ಇಂತಹ ಸೂಚನೆಯಲ್ಲಿ ನಿಯಾಮಕವಾದ ಶಬ್ದವ್ಯಾಪಾರವು (ನೇರವಾದುದಲ್ಲ) ಆರೋಪಿತವಾದುದು; ವಸ್ತುತಃ ಅದು ನಡುವಣ ವಾಚ್ಯಾರ್ಥದಲ್ಲಿಯೇ ಇರತಕ್ಕುದು (ಸಾಕ್ಷಾತ್ ಶಬ್ದದಲ್ಲಲ್ಲ). ಅದೇ ಲಕ್ಷಣೆ.

---

[36] 'ಮುಖ್ಯ' ವೆಂದರೆ ಇಲ್ಲಿ ಪ್ರಥಮ ಎಂದರ್ಥವೇ ಹೊರತು ಪ್ರಧಾನವೆಂದಲ್ಲ (ಸಾಹಿತ್ಯ ಚೂಡಾಮಣಿ).

ಸ್ವಸಿದ್ಧಯೇ ಪರಾಕ್ಷೇಪಃ ಪರಾರ್ಥಂ ಸ್ವಸಮರ್ಪಣಮ್ ।
ಉಪಾದಾನಂ ಲಕ್ಷಣಂ ಚೇತ್ಯುಕ್ತಾ ಶುದ್ಧೈವ ಸಾ ದ್ವಿಧಾ ॥ ೫ ॥

ತನ್ನ ಸಿದ್ಧಿಗಾಗಿ (ತನಗೆ ಸಂಬಂಧಿಸಿದ) ಮತ್ತೊಂದರ್ಥವನ್ನು ಸಾಮರ್ಥ್ಯ ಬಲದಿಂದ ಸೂಚಿಸುವುದು 'ಉಪಾದಾನ ಲಕ್ಷಣೆ'; ಮತ್ತೊಂದು ಅರ್ಥದ ಸಲುವಾಗಿ ತನ್ನನ್ನೇ ತ್ಯಾಗಮಾಡಿಕೊಳ್ಳುವುದು 'ಲಕ್ಷಣ ಲಕ್ಷಣೆ.' ಹೀಗೆ ಶುದ್ಧ ಲಕ್ಷಣೆ ಎರಡು ಬಗೆಯೆನ್ನುತ್ತಾರೆ.

"ಈಟಿಗಳು ಪ್ರವೇಶಿಸುತ್ತವೆ", "ಕೋಲುಗಳು ಪ್ರವೇಶಿಸುತ್ತವೆ" ಮುಂತಾದ ವಾಕ್ಯಗಳಲ್ಲಿ ಈಟಿ ಕೋಲು ಇತ್ಯಾದಿಗಳು (ತಾವೇ ಪ್ರವೇಶಿಸುವುದಶಕ್ಯವಾದ ಕಾರಣ) ತಮ್ಮ ಪ್ರವೇಶದ ಸಿದ್ಧಿಗಾಗಿ ತಮ್ಮನ್ನು ಹಿಡಿದ ಮನುಷ್ಯರನ್ನು ಸೂಚಿಸುತ್ತವೆ. ಇಲ್ಲಿ ಉಪಾದಾನವಿರುವುದರಿಂದ[37] ಲಕ್ಷಣೆ **'ಉಪಾದಾನ ಲಕ್ಷಣೆ'** ಯೆನಿಸುತ್ತದೆ. "ಹಸುವನ್ನು ಕಟ್ಟಬೇಕು" ಎಂಬ ವೇದವಾಕ್ಯದಲ್ಲಿ 'ಹಸು'ವೆಂದರೆ ಮುಖ್ಯಾರ್ಥ ಹಸುವಿನ ಜಾತಿಯಾದರೂ ಜಾತಿಯನ್ನು ಕಟ್ಟಲು ಬರುವುದಿಲ್ಲವಾದ ಪ್ರಯುಕ್ತ ಮುಖ್ಯಾರ್ಥವಾದ ಜಾತಿ ವ್ಯಕ್ತಿಯೆಂಬ ಅಮುಖ್ಯಾರ್ಥವನ್ನು ಸೂಚಿಸುತ್ತದೆಂದೂ[38] "ವಿಶೇಷಣ (=ಜಾತಿ) ನಿರೂಪಣೆಯಲ್ಲಿ ಮಾತ್ರ ಶಬ್ದ ನಿರತವಾಗಿರುವುದೆಂದ ಮೇಲೆ, ಅದರ ವಿಶೇಷ ಮುಖ್ಯ ಶಕ್ತಿ (=ಅಭಿಧೆ)ಯೆಲ್ಲವೂ ಅಷ್ಟರಲ್ಲೇ

---

[37] ಉಪಾದಾನವೆಂದರೆ ಕೂಡಿಸಿಕೊಳ್ಳುವಿಕೆ ಅಥವಾ ಸೇರಿಸಿಕೊಳ್ಳುವಿಕೆ. ಲಕ್ಷ್ಯಾರ್ಥದಲ್ಲಿ ಸೇರಿಸಲ್ಪಟ್ಟಿರುವ ಅಂಶ ಯಾವುದೆಂದರೆ ಮುಖ್ಯಾರ್ಥದಲ್ಲಿಲ್ಲದ ಅರ್ಥಾಂತರವಾಗಬಹುದು. ಉದಾಹರಣೆಯಲ್ಲಿ 'ಮನುಷ್ಯರು' ಎಂಬ ಹೊಸ ಅರ್ಥ ಲಕ್ಷ್ಯಾರ್ಥದಲ್ಲಿ ಸೇರಿಕೊಳ್ಳುತ್ತದೆ. ಇದನ್ನೇ ಮುಕುಲಭಟ್ಟನು "ಕ್ವಚಿತ್ ಖಲು ಅರ್ಥಾಂತರೋಪಾದಾನೇನ ಲಕ್ಷಣಾ ಪ್ರವರ್ತತೇ" (ಅಭಿಧಾವೃತ್ತಿ ಮಾತೃಕಾ, ಪು. ೬) ಎಂದು ಸ್ಪಷ್ಟವಾಗಿ ಹೇಳಿದ್ದಾನೆ. ಮುಕುಲನ ಗ್ರಂಥವನ್ನೋದಿದ್ದ ಮಮ್ಮಟನೂ ಈ ಅಭಿಪ್ರಾಯದಿಂದಲೇ ಬರೆದಿರುವನೆನ್ನುವುದು ಯುಕ್ತ. ಆದರೆ ವಿಶ್ವನಾಥನೇ ಮುಂತಾದವರು ಬೇರೆ ವಿವರಣೆಯನ್ನು ಕೊಡುತ್ತಾರೆ. ಅವರ ಪ್ರಕಾರ ಮುಖ್ಯಾರ್ಥವೇ 'ಈಟಿ' ಇತ್ಯಾದಿ ಲಕ್ಷ್ಯಾರ್ಥದಲ್ಲಿಯೂ ಮಾಯವಾಗದೆ ಉಳಿದುಕೊಳ್ಳುತ್ತದೆ; ಆದ್ದರಿಂದ ಉಪಾದಾನ ಲಕ್ಷಣೆಯೆಂಬ ಹೆಸರು ಸಾರ್ಥಕವೆನ್ನುತ್ತಾರೆ.

[38] ಮುಕುಲಭಟ್ಟನು (ಕ್ರಿ. ಶ. ಹತ್ತನೆಯ ಶತಮಾನ) ತನ್ನ 'ಅಭಿಧಾವೃತ್ತಿ' 'ಮಾತೃಕೆ'ಯಲ್ಲಿ ಹೀಗೆ ಹೇಳಿ ಈ ಉದಾಹರಣೆಯನ್ನು ಕೊಟ್ಟಿದ್ದಾನೆ. ಆ ವಾದವನ್ನು ಇಲ್ಲಿ ಮಮ್ಮಟನು ಖಂಡಿಸುತ್ತಿದ್ದಾನೆ. (ಹೋಲಿಸಿ—. . . ಉಪಾದಾನಮ್. ಯಥಾ ಗೌರನುಬಂಧ್ಯ ಇತಿ. ಅತ್ರ ಹಿ ಗೋತ್ವಸ್ಯ ಯಾಗಂ ಪ್ರತಿ ಸಾಧನತ್ವಂ ವ್ಯಕ್ತ್ಯಾಕ್ಷೇಪಮಂತರೇಣ ನೋಪಪದ್ಯತೇ ಇತಿ ತತ್ಸಿದ್ಧ್ಯರ್ಥತಯಾ ವ್ಯಕ್ತೇಃ ಆಕ್ಷೇಪಃ, ಪು ೬-೭). ಆದರೆ ನಾಗೇಶಭಟ್ಟನು ವಾದ ಮಂಡನಮಿಶ್ರರದೆಂದು ತನ್ನ ಉದ್ಯೋತದಲ್ಲಿ ಬರೆದಿದ್ದಾನೆ.

ಮುಗಿದುಬಿಡುವುದರಿಂದ ಮುಂದೆ ವಿಶೇಷ್ಯ (=ವ್ಯಕ್ತಿ)ವನ್ನೂ ಅದೇ ಬೋಧಿಸಲು ಬಾರದು" ಎಂಬ ಸಿದ್ಧಾಂತದಂತೆ[39] ಪ್ರಕೃತದಲ್ಲಿಯೂ ಹಸುವೆಂಬ ವ್ಯಕ್ತಿಯನ್ನು ನೇರವಾಗಿ 'ಹಸು' ಎಂಬ ಶಬ್ದವು ಬೋಧಿಸಲು ಅಸಮರ್ಥವಾಗಿದೆಯೆಂದೂ, ಆದುದರಿಂದ ಇಂತಹ ಪ್ರಯೋಗಗಳೆಲ್ಲವೂ 'ಉಪಾದಾನಲಕ್ಷಣೆ'ಗೆ ಉದಾಹರಣೆಗಳೆಂದೂ ಭಾವಿಸಲಾಗದು. ಏಕೆಂದರೆ ಇಲ್ಲಿ (ಲಕ್ಷಣೆಯನ್ನು ಸಮರ್ಥಿಸುವುದಕ್ಕೆ ಅತ್ಯಗತ್ಯವಾದ) ಪ್ರಯೋಜನವಾವುದೂ ಇಲ್ಲ; ಇದನ್ನು ರೂಢಿಯೆನ್ನುವಂತೆಯೂ ಇಲ್ಲ. ಜಾತಿಯೂ ವ್ಯಕ್ತಿಯೂ ಅವಿನಾಭಾವಿಗಳು (ಒಂದನ್ನು ಬಿಟ್ಟು ಒಂದು ಇರಲಾರದವು). ಆದುದರಿಂದ ಜಾತಿಯು ವ್ಯಕ್ತಿಯನ್ನು ಸೂಚಿಸುವುದು ಸಹಜವಾಗಿಯೇ ಇದೆ.[40] (ಅದಕ್ಕೆ ಲಕ್ಷಣೆಯೆನ್ನುವ ಪ್ರಸಂಗವೇನೂ ಇಲ್ಲ). ಉದಾಹರಣೆಗೆ "ಮಾಡಲ್ಪಡಲಿ" ಎಂಬ ಕರ್ಮಣಿಪ್ರಯೋಗದಲ್ಲಿ ಕ್ರಿಯಾರ್ಥ (ನೇರವಾಗಿ ಕರ್ಮಕ್ಕೆ ಅನ್ವಯಿಸುತ್ತಿದ್ದರೂ) ಕರ್ತವ್ಯವನ್ನು ಸೂಚಿಸುತ್ತದೆ. "ಮಾಡು" ಎಂಬ ಕರ್ತರಿಪ್ರಯೋಗದಲ್ಲಿ ಕ್ರಿಯೆ (ನೇರವಾಗಿ ಕರ್ತೃವನ್ನು ಕುರಿತರೂ) ಕರ್ಮವನ್ನು ಸೂಚಿಸುತ್ತದೆ.[41] ಅಥವಾ "ಪ್ರವೇಶಿಸು" ಎಂದಿಷ್ಟೇ ಹೇಳಿದಾಗ "ಮನೆಯನ್ನು" ಎಂಬುದೂ "ಉಂಡೆಯನ್ನು" ಎಂದಿಷ್ಟೇ ಹೇಳಿದಾಗ "ತಿನ್ನು" ಎಂಬುದೂ ಪ್ರಸಂಗಬಲದಿಂದಲೇ ಸೂಚಿತವಾಗುತ್ತವೆ.[42] (ಇಲ್ಲೆಲ್ಲೂ ಲಕ್ಷಣೆಯನ್ನು ಹೇಳುವ ಕಾರಣವಿಲ್ಲ).

"ಕೊಬ್ಬಿದ ದೇವದತ್ತನು ಹಗಲು ಊಟಮಾಡುವುದಿಲ್ಲ" ಎಂಬಲ್ಲಿ "ರಾತ್ರಿ

---

[39] ಇದು ಪ್ರಸಿದ್ಧವಾದ ಮೀಮಾಂಸಕರ ನ್ಯಾಯ. ಇದನ್ನೇ 'ವಿಶೇಷಣ ತಿಳಿದಲ್ಲದೆ ವಿಶೇಷ್ಯ ತಿಳಿಯದು' ('ನಾಗೃಹೀತ ವಿಶೇಷಣಾ ವಿಶೇಷ್ಯ ಬುದ್ಧಿಃ') ಎಂದು ಹೇಳುವುದೂ ಉಂಟು. ಇಲ್ಲಿ ವಿಶೇಷ್ಯವೆಂದರೆ ವ್ಯಕ್ತಿ; ಜಾತಿ ವಿಶೇಷಣ. (ಸಂಪ್ರದಾಯ ಪ್ರಕಾಶಿನಿ). ಈ ನ್ಯಾಯವನ್ನೇ **ಸಾಹಿತ್ಯದರ್ಪಣ**ದಲ್ಲಿ "ಶಬ್ದ ಬುದ್ಧಿ ಕರ್ಮಣಾಂ ವಿರಮ್ಯ ವ್ಯಾಪಾರಾಭಾವಃ" ಎಂಬ ಮಾತುಗಳಲ್ಲಿ ಹೇಳಿದೆ. ಶಬ್ದದ ವ್ಯಾಪಾರ ನಿಂತು ನಿಂತು ಮುಂದುವರಿಯಲಾರದೆಂದು ತಾತ್ಪರ್ಯ.

[40] ಇಂತಹ ಸೂಚನೆಗೆ ತರ್ಕದಲ್ಲಿ "ಅನುಮಾನ" ವೆನ್ನುತ್ತಾರೆ; ಮೀಮಾಂಸೆಯಲ್ಲಿ 'ಅರ್ಥಾಪತ್ತಿ'ಯೆಂದರೂ ಎನ್ನಬಹುದು. ಮುಂದೆ ಟಿಪ್ಪಣಿಗಳನ್ನೋದಿ.

[41] ಸಾಕಾಂಕ್ಷವಾದ ಒಂದರ್ಥದಿಂದ ಮತ್ತೊಂದು ಅರ್ಥ ಅಧ್ಯಾಹಾರವಾಗುತ್ತದೆಂಬುದು ಪ್ರಾಭಾಕರ ಮೀಮಾಂಸಕರ ಮತ. ಅದನ್ನನುಸರಿಸಿ ಮಮ್ಮಟನು ಈ ಅರ್ಥಾಧ್ಯಾಹಾರದ ಉದಾಹರಣೆಗಳನ್ನು ಕೊಟ್ಟಿದ್ದಾನೆ.

[42] ಆದರೆ ಭಾಟ್ಟ ಮೀಮಾಂಸಕರು ನೇರವಾದ ಅರ್ಥದಲ್ಲಿ ಅಧ್ಯಾಹಾರವನ್ನು ಒಪ್ಪದೆ ಶಬ್ದಮಾತ್ರ ಅಧ್ಯಾಹಾರಕ್ಕೆ ಯೋಗ್ಯವೆನ್ನುತ್ತಾರೆ. ಆ ಮತವನ್ನನುಸರಿಸಿ ಮಮ್ಮಟನು ಇಲ್ಲಿ ಈ ಶಬ್ದಾಧ್ಯಾಹಾರದ ಉದಾಹರಣೆಗಳನ್ನೂ ಕೊಟ್ಟಿದ್ದಾನೆ.

ಊಟಮಾಡುತ್ತಾನೆ" ಎಂಬಂಶವು ಕೂಡ ಲಕ್ಷಣೆಯಿಂದ ಬಂದುದಲ್ಲ. ಅದು 'ಶ್ರುತಾರ್ಥಾಪತ್ತಿ'ಗೆ ಇಲ್ಲವೆ 'ಅರ್ಥಾಪತ್ತಿ'ಗೆ ಉದಾಹರಣೆ.[43]

"ಗಂಗೆಯಲ್ಲಿ ಗೊಲ್ಲರ ಹಳ್ಳಿ" ಎಂಬಲ್ಲಿ ಹಳ್ಳಿಗೆ ಆಲಂಬನ ಸಿದ್ಧಿಸುವ ಸಲುವಾಗಿ 'ಗಂಗೆ'ಯೆಂಬ ಶಬ್ದ ತನ್ನ ಮುಖ್ಯಾರ್ಥವನ್ನೂ ಕಳೆದುಕೊಳ್ಳುವುದರಿಂದ ಇಂತಹ ಪ್ರಯೋಗಗಳಲ್ಲಿ 'ಲಕ್ಷಣ' ಅಥವಾ ಸೂಚಕವಾದ ಚಿಹ್ನೆಯಿದೆ.[44] ಆದಕಾರಣ ಇದು **ಲಕ್ಷಣ ಲಕ್ಷಣೆ**ಯೆನಿಸುತ್ತದೆ.

---

[43] ಇದನ್ನು ಕೂಡ ಮುಕುಲಭಟ್ಟನು ಉಪಾದಾನ ಲಕ್ಷಣೆಗೇ ಉದಾಹರಣೆಯೆಂದು ಬರೆದಿದ್ದಾನೆ. ಇಲ್ಲಿ ಅರ್ಥಪೂರ್ಣಕ್ಕಾಗಿ 'ರಾತ್ರಿ ಊಟಮಾಡುತ್ತಾನೆ' ಎಂಬ ಶಬ್ದಾಂತರಗಳ ಅಧ್ಯಾಹಾರವನ್ನು ಅವನೂ ಶ್ರುತಾರ್ಥಾಪತ್ತಿಯೆಂದೇ ಒಪ್ಪಿದರೂ ಉಪಾದಾನ ಲಕ್ಷಣೆಯ ಲಕ್ಷಣಗಳೆಲ್ಲ (ಸ್ವಸಿದ್ಧಿಗೆ ಅನ್ಯಾರ್ಥದ ಆಕ್ಷೇಪ; ಲಕ್ಷ್ಯಾರ್ಥದಲ್ಲಿ ಅದರ ಅಂತರ್ಭಾವ ಇತ್ಯಾದಿ) ಇಲ್ಲಿ ಅನ್ವಯಿಸುವುದರಿಂದ ಲಕ್ಷಣಾವಿಷಯವೆಂದು ಅವನ ಅಭಿಮತ. ಆದರೆ ಅರ್ಥಾಪತ್ತಿಯ ವಿಷಯವೇ ಬೇರೆ; ಲಕ್ಷಣಾ ವಿಷಯವೇ ಬೇರೆ ಎನ್ನುವ ಮಮ್ಮಟನು ಅಲ್ಲಿ ಅರ್ಥಾಪತ್ತಿಯುಂಟೇ ಹೊರತು ಲಕ್ಷಣೆಯಿಲ್ಲವೆನ್ನುತ್ತಾನೆ.

ಅರ್ಥಗಳು ವಿಸಂಗತವೆಂಬಂತೆ ಭಾಸವಾಗುತ್ತಿರುವಾಗ, ಸಮನ್ವಯದ ಸಲುವಾಗಿ ಅಧ್ಯಾಹಾರ ಮಾಡುವುದೇ ಅರ್ಥಾಪತ್ತಿ. ಪ್ರತ್ಯಕ್ಷವಾಗಿ ಕೊಬ್ಬಿದ ದೇವದತ್ತನನ್ನು ನಾವು ನೋಡುತ್ತಿರುವಾಗ, ಅವನು ಹಗಲು ಊಟವಿಲ್ಲದ ಮೇಲೆ ರಾತ್ರೆ ಮಾಡಿಯೇ ಮಾಡುತ್ತಾನೆಂದುಕೊಳ್ಳುವುದು ದೃಷ್ಟಾರ್ಥಾಪತ್ತಿ. ನಾವು ನೋಡದಿದ್ದರೂ ಇತರರಿಂದ ಆ ವಾಕ್ಯವನ್ನು ಕೇಳಿದಾಗ ಶಬ್ದರೂಪವಾದ ಅಧ್ಯಾಹಾರ ಮಾಡಿಕೊಳ್ಳುತ್ತೇವೆ. ಅದು ಶ್ರುತಾರ್ಥಾಪತ್ತಿ. ಪ್ರಾಭಾಕರರು ದೃಷ್ಟಾರ್ಥಾಪತ್ತಿಯನ್ನೊಪ್ಪುತ್ತಾರೆ; ಭಾಟ್ಟರು ಶ್ರುತಾರ್ಥಾಪತ್ತಿಯನ್ನು, ನೈಯಾಯಿಕರು ಅರ್ಥಾಪತ್ತಿಯನ್ನು ಬೇರೆ ಪ್ರಮಾಣವೆನ್ನದೆ ಅದನ್ನು ಅನುಮಾನದಲ್ಲಿಯೇ ತರುತ್ತಾರೆ.

ಮಮ್ಮಟನ ಟೀಕೆಯನ್ನು ವಿಮರ್ಶಿಸುತ್ತಾ ಪ್ರೊ ಎ. ಬಿ. ಗಜೇಂದ್ರಗಡಕರ ಅವರು 'ಮುಕುಲನು ಹೇಳಿದ್ದು ನಿರ್ದುಷ್ಟ; ಉದಾಹರಣೆಯಲ್ಲಿ ಲಕ್ಷಣೆಯ ಲಕ್ಷಣಗಳೆಲ್ಲ ಅನ್ವಯಿಸುತ್ತವೆ. ಮಮ್ಮಟನ ಖಂಡನೆ ಸಕಾರಣವಾಗಿಲ್ಲ. ಮೀಮಾಂಸಕರು ಯಾವುದನ್ನು ಅರ್ಥಾಪತ್ತಿಯೆನ್ನುವರೋ ಅದನ್ನು ಆಲಂಕಾರಿಕರು ಲಕ್ಷಣೆಯೆನ್ನುವುದರಲ್ಲಿ ತಪ್ಪೇನು? ಮೀಮಾಂಸಕರಂತೆ ಆಲಂಕಾರಿಕರೇನೂ ಅರ್ಥಾಪತ್ತಿಯನ್ನೇ ಒಂದು ಪ್ರಮಾಣವೆನ್ನುವವರಲ್ಲ' ಎಂದು ಮುಂತಾಗಿ ಬರೆದಿರುವುದು (ಪು. ೨೭೧) ಅವಿಚಾರಿತರಮಣೀಯ. ಏಕೆಂದರೆ ಪದಾರ್ಥ, ವಾಕ್ಯಾರ್ಥ ತತ್ವಗಳನ್ನು ಪ್ರಥಮತಃ ಪ್ರತಿಪಾದಿಸಿದ ದಾರ್ಶನಿಕರೇ ಮೀಮಾಂಸಕರು. ಅಭಿಧೆ, ಲಕ್ಷಣೆ ಮುಂತಾದ ವಿಭಾಗಗಳನ್ನು ಮಾಡಿದವರೂ ಅವರೇ. ಅವರ ಹಾದಿಯನ್ನು ಅನುಸರಿಸಿ ಆಲಂಕಾರಿಕಾರು ಹೊರಟಿದ್ದಾರೆಯೇ ಹೊರತು ಇವರದೇ ಆದ ಬೇರೆ ದಾರಿಯೊಂದಿಲ್ಲ. ಕಾವ್ಯಶಾಸ್ತ್ರಗಳೆರಡಕ್ಕೂ ಸಮಾನವಾದ ಶಬ್ದಾರ್ಥ ವಿವೇಚನೆಯಲ್ಲಿ ಆಲಂಕಾರಿಕರಿಗೆ ಮೀಮಾಂಸಕರ ಮತವೂ ಪ್ರಮಾಣವೇ; ಕೇವಲ ಕಾವ್ಯನಿಷ್ಠವಾದ ಅಂಶಗಳಲ್ಲಿ ಮಾತ್ರ ಅವರು ವೈಯಾಕರಣರ ಸ್ಫೋಟವಾದವನ್ನು ಮಾನ್ಯಮಾಡಿ ವ್ಯಂಜನಾವೃತ್ತಿಯನ್ನು ಸ್ಥಾಪಿಸುತ್ತಾರೆ.

[44] ಇಲ್ಲಿ 'ಲಕ್ಷಣ'ವೆಂದರೆ 'ಉಪಲಕ್ಷಣ'ವೆಂದರ್ಥ. ಯಾವುದಾದರೊಂದನ್ನು ಸೂಚಿಸುವ

ಲಕ್ಷಣೆಗೆ ಮೇಲೆ ಹೇಳಿದ ಎರಡು ಬಗೆಗಳೂ **ಶುದ್ಧ;** 'ಉಪಚಾರ' (ಸಾದೃಶ್ಯಮೂಲವಾದ ಸಮಾರೋಪ)[45] ಅಲ್ಲಿ ಸೇರಿಕೊಂಡಿಲ್ಲವಾದುದರಿಂದ. ಈ ಎರಡು ಬಗೆಗಳಲ್ಲಿಯೂ ಲಕ್ಷ್ಯಾರ್ಥ ಮತ್ತು ಲಕ್ಷಕವಾದ ವಾಚ್ಯಾರ್ಥ ಗಳಿಗೆ ಪರಸ್ಪರ ಭೇದವನ್ನು ಬಲಪಡಿಸುವಂತಹ ಪ್ರತ್ಯೇಕತೆಯೇನೂ ಇಲ್ಲ.[46] ಗಂಗಾ ತೀರವನ್ನು (ಗಂಗಾತೀರವೆಂಬ ಶಬ್ದದಿಂದ ನೇರವಾಗಿ ಹೇಳದೆ) ಗಂಗೆಯೆಂಬ ಶಬ್ದ ದಿಂದ ಹೇಳುವಾಗ, ಆ ಅಭಿನ್ನ ಅರ್ಥಪ್ರತೀತಿ ಬರುವಾಗ ಮಾತ್ರ, ವಿವಕ್ಷಿತವಾದ ಪ್ರಯೋಜನವು ಪ್ರತೀತವಾಗುತ್ತದೆ. ಗಂಗೆಗೂ ಗಂಗಾತೀರಕ್ಕೂ ಸುಮ್ಮನೆ ಸಾಮೀಪ್ಯ ಸಂಬಂಧವಿದೆಯೆಂಬುದಿಷ್ಟೇ ಪ್ರತೀತವಾದರೆ "ಗಂಗಾತೀರದಲ್ಲಿ ಹಳ್ಳಿ" ಯೆಂಬ ಮುಖ್ಯ ಶಬ್ದಪ್ರಯೋಗಕ್ಕೂ "ಗಂಗೆಯಲ್ಲಿ ಹಳ್ಳಿ"ಯೆಂಬ ಲಕ್ಷಣಾಶಬ್ದ ಪ್ರಯೋಗಕ್ಕೂ ವ್ಯತ್ಯಾಸವೇನು ?[47]

ಹೆಗ್ಗುರುತೇ ಉಪಲಕ್ಷಣ. 'ಕಾಗೆಯಿರುವುದೇ ದೇವದತ್ತನ ಮನೆ' ಎನ್ನುವಾಗ ಕಾಗೆ ಉಪ ಲಕ್ಷಣ ಅಥವಾ ಹೆಗ್ಗುರುತು.

45 ಮುಕುಲನ ಪ್ರಕಾರ 'ಉಪಚಾರ'ವೆಂದರೆ ಒಂದನ್ನು ಮತ್ತೊಂದೆಂದು ಆರೋಪಿಸು ವುದು :—ಉದಾ.—ಆಯುಸ್ಸೇ ಘೃತ. ಈ ಅಭೇದದ ಆರೋಪಕ್ಕೆ ಕಾರ್ಯಕಾರಣಭಾವ ನಿಮಿತ್ತವಾದ್ದರಿಂದ ಇದು ಶುದ್ಧೋಪಚಾರ. ಆದರೆ 'ಮುಖವೇ ಚಂದ್ರ', 'ವಟುವೇ ಬೆಂಕಿ' 'ವಾಹೀಕನೇ ಹಸು' ಇತ್ಯಾದಿಗಳಲ್ಲಿ ಅಭೇದದ ಕಲ್ಪನೆಗೆ ಅವುಗಳಲ್ಲಿರುವ ಸದೃಶಗುಣಗಳೇ ನಿಮಿತ್ತವಾದ್ದರಿಂದ ಇದು **ಗೌಣ** ಉಪಚಾರ. ಮಮ್ಮಟನು ಇಲ್ಲಿ ಗುಣಮೂಲವಾದ ಉಪಚಾರ ವನ್ನೇ ಪ್ರಸ್ತಾಪಿಸುತ್ತಿರುವುದು ಸ್ಪಷ್ಟ.

46 ಉಪಾದಾನ ಲಕ್ಷಣೆ ಮತ್ತು ಲಕ್ಷಣ ಲಕ್ಷಣೆಗಳೇ ಪ್ರಸ್ತುತವಾದ ಎರಡು ಬಗೆಗಳು. ಮುಕುಲಭಟ್ಟನು ಈ ಎರಡು ಬಗೆಗಳ ಉದಾಹರಣೆಗಳಲ್ಲೂ ('ಈಟಿಗಳು ಪ್ರವೇಶಿಸುತ್ತವೆ' ಮತ್ತು 'ಗಂಗೆಯಲ್ಲಿ ಹಳ್ಳಿ') ಲಕ್ಷ್ಯ—ಲಕ್ಷಕಗಳಿಗೆ ಭೇದ ಅಥವಾ ಪ್ರತ್ಯೇಕತೆ ("ತಾಟಸ್ಥ್ಯ") ಯೇ ಎದ್ದು ಕಾಣುವುದೆಂದು ಹೇಳಿ ಆದ್ದರಿಂದ ಅವು "ಶುದ್ಧ" ಲಕ್ಷಣೆಯೆಂದು ವಿವರಿಸಿದ್ದನು. ಲಕ್ಷಕವೆಂದರೆ ಶಬ್ದದ ವಾಚ್ಯಾರ್ಥ ; ಲಕ್ಷ್ಯವೆಂದರೆ ಲಕ್ಷ್ಯಾರ್ಥ. ಈಟಿಗಳೇ (ಲಕ್ಷಕ) ಬೇರೆ, ಅದನ್ನು ಹಿಡಿದ ಪುರುಷರೇ (ಲಕ್ಷ್ಯ) ಬೇರೆ; ಗಂಗೆಯೇ (ಲಕ್ಷಕ) ಬೇರೆ, ಗಂಗಾತೀರವೇ (ಲಕ್ಷ್ಯ) ಬೇರೆ. ಆದರೆ ಮಮ್ಮಟನು ಹೀಗೆ ಪ್ರತ್ಯೇಕತೆಯುಂಟೆಂಬುದನ್ನು ಖಂಡಿಸಿ ಮುಕುಲನ ಮತವನ್ನು ದೂಷಿಸುತ್ತಾನೆ.

47 ಮುಕುಲನಂತೆ ಲಕ್ಷ್ಯ—ಲಕ್ಷಕಗಳಲ್ಲಿ ಪ್ರತ್ಯೇಕತೆಯುಂಟೆನ್ನುವುದಾದರೆ ಲಕ್ಷಣೆಯನ್ನು ಆಶ್ರಯಿಸಲು ವಿಶಿಷ್ಟ ಪ್ರಯೋಜನವೇ ಇಲ್ಲವಾಗುತ್ತವೆಂಬುದು ಮಮ್ಮಟನ ಮುಖ್ಯವಾದ ಶೀತತ್ವ, ಪಾವನತ್ವ ಮುಂತಾದ ಪ್ರಯೋಜನಾತಿಶಯಗಳು ಸಿದ್ಧಿಸಬೇಕಾದರೆ ಗಂಗಾತೀರವೂ ಗಂಗೆಯೂ, ಅಭಿನ್ನವೆನ್ನಬೇಕೇ ಹೊರತು ಪ್ರತ್ಯೇಕವೆಂದಲ್ಲ. ಪ್ರಯೋಜನ ತಪ್ಪಿದ ಮೇಲೆ ಲಕ್ಷಣೆಯ ಪ್ರಯೋಗದ ಅಗತ್ಯವಾದರೂ ಏನೆಂಬ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿಯುತ್ತದೆ. ಆದ್ದ

ಸಾರೋಪಾನ್ಯಾ ತು ಯತ್ರೋಕ್ತೌ ವಿಷಯೀ ವಿಷಯಸ್ತಥಾ ॥೬*a*॥

ಎಲ್ಲಿ ವಿಷಯಿ ಮತ್ತು ವಿಷಯ ಎರಡನ್ನೂ ಒಟ್ಟಿಗೆ ಹೇಳಿರುವುದೋ ಅದು 'ಸಾರೋಪಾ' ಎಂಬ ಬೇರೆ ಲಕ್ಷಣೆ.

ಸಮಾರೋಪಿತ ವಸ್ತು ಮತ್ತು ಸಮಾರೋಪಕ್ಕೆ ವಿಷಯ[48] ಇವೆರಡರ ಪರಸ್ಪರ ಭೇದಗಳು ಮರೆಯಾಗದಿದ್ದರೂ[49] ಒಂದಕ್ಕೊಂದು ವಿಶೇಷವಾಗುವಂತೆ ನಿರ್ದೇಶಿಸಿದರೆ ಅದು 'ಸಾರೋಪಾ' ಎಂಬ ಲಕ್ಷಣೆ.

ವಿಷಯ್ಯಂತಃಕೃತೇಽನ್ಯಸ್ಮಿನ್ ಸಾ ಸ್ಯಾತ್ ಸಾಧ್ಯವಸಾನಿಕಾ ॥೬*b*॥

ವಿಷಯಿಯಿಂದ ಇನ್ನೊಂದು ಮರೆಯಾಗಿದ್ದರೆ ಅದು 'ಸಾಧ್ಯವಸಾನಾ' ಎಂಬ ಲಕ್ಷಣೆ.

ಸಮಾರೋಪದ ವಿಷಯವು ಸಮಾರೋಪಿತ ವಸ್ತುವಿನಿಂದ ಮುಚ್ಚಿಹೋಗಿದ್ದರೆ ಆ ಲಕ್ಷಣೆಯನ್ನು 'ಸಾಧ್ಯವಸಾನಾ' ಎನ್ನಬೇಕು. (ಸಾಧ್ಯವಸಾನಾ=ಅಧ್ಯಾಹಾರಯುಕ್ತ)[50]

ಭೇದಾವಿಮೌ ಚ ಸಾದೃಶ್ಯಾತ್ ಸಂಬಂಧಾಂತರತಸ್ತಥಾ ।
ಗೌಣೌ ಶುದ್ಧೌ ಚ ವಿಜ್ಞೇಯೌ ॥೭*abc*॥

ಈ ಎರಡು ಭೇದಗಳೂ ಕೂಡ ಸಾದೃಶ್ಯಸಂಬಂಧವಿದ್ದಾಗ 'ಗೌಣ'ಗಳೆಂದೂ[51] ಸಾದೃಶ್ಯವಲ್ಲದ ಬೇರೆ ಸಂಬಂಧವಿದ್ದಾಗ 'ಶುದ್ಧ'ಗಳೆಂದೂ ತಿಳಿಯಬೇಕು.

ರಿಂದ "ಶುದ್ಧ" ವೆಂಬ ಲಕ್ಷಣಾವಿಭಾಗಕ್ಕೆ ಉಪಚಾರದ ಅಮಿಶ್ರಣವು ಮೂಲವೇ ಹೊರತು ಲಕ್ಷ್ಯ—ಲಕ್ಷಕಗಳ ಪ್ರತ್ಯೇಕತೆಯಲ್ಲವೆಂದು ಮಮ್ಮಟನ ಅಭಿಪ್ರಾಯ.

48 ಸ್ಥೂಲವಾಗಿ ಇವನ್ನು ಉಪಮಾನ ಮತ್ತು ಉಪಮೇಯಗಳೆನ್ನಬಹುದು.

49 ಅರ್ಥದಲ್ಲಿ ಐಕ್ಯವಿದ್ದರೂ ಎರಡು ಪ್ರತ್ಯೇಕ ಶಬ್ದಗಳ ಪ್ರಯೋಗವಿರುವುದರಿಂದ ಪರಸ್ಪರ ಭೇದವು ಮರೆಯಾಗುವುದಿಲ್ಲ.

50 ಇಲ್ಲಿ ಉಪಮಾನವೊಂದೇ ಶಬ್ದತಃ ಉಕ್ತವಾಗುವುದರಿಂದ ಭೇದ ಮರೆಯಾಗಿರುತ್ತದೆ.

51 ಮುಕುಲನು ಈ ಭೇದಗಳನ್ನು (ಸಾರೋಪಾ ಮತ್ತು ಸಾಧ್ಯವಸಾನಾ) "ಗೌಣ" ವೆನ್ನುವ ಕಾರಣವೇ ಬೇರೆ. ಅವನ ಪ್ರಕಾರ ಇವುಗಳಲ್ಲಿ ಲಕ್ಷ್ಯ—ಲಕ್ಷಕಗಳು ಅಭಿನ್ನವಾಗಿರುತ್ತವೆ; ಶುದ್ಧಭೇದಗಳಲ್ಲಿದ್ದಂತೆ ಭಿನ್ನವಾಗಿರುವುದಿಲ್ಲ. "ಮುಖಚಂದ್ರ" ಎಂಬ ಸಮಾಸದಲ್ಲಿ ಮುಖ, ಚಂದ್ರ ಎರಡೂ ಅಭಿನ್ನವೇ ಹೊರತು ಭಿನ್ನವಲ್ಲ. ಆದರೆ ಮಮ್ಮಟನ ಪ್ರಕಾರ ಅವೆರಡರಲ್ಲಿರುವ ಸಾದೃಶ್ಯವೇ "ಗೌಣ"ವೆನ್ನಲು ನಿಯಾಮಕ.

ಈ ಎರಡು ಭೇದಗಳೆಂದರೆ 'ಸಾರೋಪಾ' ಮತ್ತು 'ಸಾಧ್ಯವಸಾನಾ' ಎಂಬವು. ಸಾದೃಶ್ಯ ಸಂಬಂಧಬಂದಾಗ ಇವಕ್ಕೆ ಕ್ರಮವಾಗಿ ಉದಾಹರಣೆ:— 'ವಾಹೀಕನು[52] ಹಸು' ಮತ್ತು "ಇಗೋ ಹಸು!". (ಈ ವಾಕ್ಯಗಳ ವಿವರಣೆಯಲ್ಲಿ ಮತಭೇದವುಂಟು:—)

೧. 'ಹಸು' ಎಂಬ ಶಬ್ದ, ಲಕ್ಷಣೆಯಿಂದ ತನ್ನ ಮುಖ್ಯಾರ್ಥದಲ್ಲಿರುವ ಜಾಡ್ಯ, ಮಾಂದ್ಯ ಮೊದಲಾದ ಗುಣಗಳನ್ನು ಮೊದಲು ಸೂಚಿಸಿ, ತನ್ಮೂಲಕ (ಅದೇ ಗುಣಗಳುಳ್ಳ) ವಾಹೀಕ (=ಒಂದು ದೇಶದ ಮನುಷ್ಯ)ನೆಂಬ ಅರ್ಥಾಂತರವನ್ನು ನೇರವಾಗಿ ಬೋಧಿಸಲು ಸಮರ್ಥವಾಗುವುದೆಂದು ಕೆಲವರ ಅಭಿಪ್ರಾಯ.

೨. ತನ್ನ ಮುಖ್ಯಾರ್ಥದಲ್ಲಿರುವ ಗುಣಗಳಿಂದ ಅಭಿನ್ನವಾದ ಪುರುಷಗತಗುಣಗಳು ಮಾತ್ರ ಲಕ್ಷಿತವಾಗುತ್ತವೆ; ಪುರುಷನೆಂಬ ಅರ್ಥವನ್ನು ಅವು ನೇರವಾಗಿ ಬೋಧಿಸಲಾರವು ಎಂಬುದು ಮತ್ತೆ ಕೆಲವರ ಮತ.

೩. ಎರಡಕ್ಕೂ ಸಮಾನವಾದ ಗುಣಗಳನ್ನು ಆಶ್ರಯಿಸಿ (ಪುರುಷನೆಂಬ) ಎರಡನೆಯ ಅರ್ಥವೇ ಲಕ್ಷಿತವಾಗುತ್ತದೆ ಎಂಬುದು ಮೂರನೆ ಅಭಿಪ್ರಾಯ.[53] ಇದನ್ನು ಪುಷ್ಟೀಕರಿಸಲು ಬೇರೆ ಪ್ರಮಾಣವೂ ಉಂಟು—

---

[52] ವಾಹೀಕ=ಬಾಹ್ಲೀಕ, ಪಂಜಾಬಿನ ಒಂದು ಪ್ರಾಂತದ ಹೆಸರು. ಇಲ್ಲಿಯ ಜನರು ಕ್ರೂರಿಗಳು ಮತ್ತು ಬುದ್ಧಿಹೀನರೆಂದು ಪ್ರಸಿದ್ಧರಾಗಿದ್ದರು. 'ವಾಹೀಕ'ನೆಂದರೆ ನೇಗಿಲನ್ನು ಹೊರುವವನು, ಕೂಲಿ, ಮುಂತಾದ ಅರ್ಥಗಳನ್ನೂ ಮಾಡಿದ್ದಾರೆ.

[53] ಈ ಮೂರು ಅಭಿಪ್ರಾಯಗಳ ಮರ್ಮ ತಿಳಿಯದೆ ಗಜೇಂದ್ರಗಡಕರ, ಸುಕರಣಕರ ಮುಂತಾದ ಆಧುನಿಕ ವಿದ್ವಾಂಸರು ತಮ್ಮ ಟಿಪ್ಪಣಿಗಳಲ್ಲಿ ಬಹಳ ಒದ್ದಾಡಿದ್ದಾರೆ. ಈ ಮತಭೇದಗಳಿಗೆ ಮೂಲವೇನೆಂದು ತಿಳಿಯಬೇಕಾದರೆ ಭಟ್ಟಗೋಪಾಲನ ಸಾಹಿತ್ಯಚೂಡಾಮಣಿಯನ್ನೋದಬೇಕು. ಅಲ್ಲಿ ಉದ್ಭಟ, ಅಭಿನವಗುಪ್ತ, ಮಹಿಮಭಟ್ಟ, ಇವರ ವಾಕ್ಯಗಳನ್ನು ಪೂರ್ಣವಾಗಿ ಅನುವಾದ ಮಾಡಿ ಇವುಗಳ ಔಚಿತ್ಯವನ್ನು ನಿರೂಪಿಸಲಾಗಿದೆ. ಇಲ್ಲಿ ಮಮ್ಮಟನು ಉದ್ಭಟನ ಅಭಿಪ್ರಾಯವನ್ನೇ ಬರೆಯುತ್ತಿರುವುದು ನಿರ್ವಿವಾದ. ಉದ್ಭಟನು ಹೇಳುವ ಮಾತುಗಳಿವು:— "ಕೇಚಿತ್ ಶಬ್ದಾರೋಪಪೂರ್ವಂ ಅರ್ಥಾರೋಪಂ ಬ್ರುವತೇ. ಅಪರೇ ವಿಪರ್ಯಯಮ್. ಅನ್ಯೇ ಯೌಗಪದ್ಯಮ್. ಏಷ ಏವ ಯುಕ್ತಃ ಪಕ್ಷಃ"—(ಕೆಲವರು ಶಬ್ದಾರೋಪದ ಅನಂತರವೇ ಅರ್ಥಾರೋಪವೆನ್ನುತ್ತಾರೆ; ಕೆಲವರು ಅರ್ಥಾರೋಪದ ಅನಂತರ ಶಬ್ದಾರೋಪವೆನ್ನುತ್ತಾರೆ; ಇತರರು ಎರಡು ಆರೋಪಗಳೂ ಏಕಕಾಲದಲ್ಲಿಯೇ ಉಂಟೆನ್ನುತ್ತಾರೆ. ಇವೇ ಯೋಗ್ಯವಾದ ಪಕ್ಷ) ಇದನ್ನು ಮೊದಲು ಉದಾಹರಿಸಿ ವಿವರಿಸಿದವರು ಅಭಿನವಗುಪ್ತರು. (ಲೋಚನದಲ್ಲಿ) ಅವರ ವಿವರಣೆ ಹೀಗಿದೆ:—"ಲಕ್ಷಣೆ ಗೌಣಿಯನ್ನೂ ಒಳಗೊಳ್ಳುತ್ತದೆ. ಕೇವಲ ಶಬ್ದವು ಅರ್ಥಾಂತರವನ್ನು ಲಕ್ಷಿಸಿ ಅದರೊಡನೆಯೇ ಸಾಮಾನಾಧಿಕರಣ್ಯ (=ವಿಶೇಷಣ-ವಿಶೇಷ್ಯಭಾವ) ವನ್ನು ಪಡೆಯುತ್ತದೆ. ಅಥವಾ ವಾಚ್ಯಾರ್ಥವು ಅರ್ಥಾಂತರವನ್ನು (=ಲಕ್ಷ್ಯಾರ್ಥವನ್ನು) ಲಕ್ಷಿಸಿ

'ಮುಖ್ಯಾರ್ಥವನ್ನು ಬಿಡದೆ ಬರುವ ಪ್ರತೀತಿಯೇ ಲಕ್ಷಣೆ; ಲಕ್ಷಿತವಾದ ಗುಣಗಳ ಯೋಗವಿದ್ದರೆ ಆಗ ವ್ಯಾಪಾರವು ಗೌಣವೆನ್ನುವೆವು.'[54] ಇಲ್ಲಿ ಬಿಡದೆ (ಮೂಲ—'ಅವಿನಾಭೂತ') ಎನ್ನುವುದಕ್ಕೆ ಸಾಮಾನ್ಯ ಸಂಬಂಧವುಳ್ಳ ಎಂದರ್ಥವೇ

ತನ್ನ ವಾಚಕಶಬ್ದವನ್ನು ಅದರ ವಾಚಕಶಬ್ದದೊಡನೆ ಸಮಾನಾಧಿಕರಣವಾಗುವಂತೆ ಮಾಡುತ್ತದೆ. ಅಥವಾ ಶಬ್ದಾರ್ಥಗಳೆರಡೂ ಏಕಕಾಲದಲ್ಲಿ ಲಕ್ಷಿಸುತ್ತಾ ಬೇರೆ ಶಬ್ದಾರ್ಥಗಳೆರಡರೊಡನೆಯೂ ಸಂಮಿಶ್ರವಾಗಿಬಿಡುತ್ತವೆ.''

'ವಾಹೀಕನೇ ಹಸು' ಎಂಬ ಉದಾಹರಣೆಯನ್ನು ತೆಗೆದುಕೊಂಡು ಮಮ್ಮಟನು ಈ ಮೂರು ಮತಗಳನ್ನೂ ವಿವರಿಸುತ್ತಿದ್ದಾನೆ. ಹಸುವೆಂಬ ಶಬ್ದವನ್ನು ವಾಹೀಕನಿಗೆ ವಿಶೇಷಣವೆಂದು ಮೊದಲು ಆರೋಪಿಸುವುದರಿಂದ, ಎಂದರೆ ಶಬ್ದಾರೋಪ ವಾಕ್ಯದಲ್ಲಿರುವುದರಿಂದ, ಹಸುವಿನಲ್ಲಿರುವ ಗುಣಗಳಿಗೆ ಸದೃಶವಾದ ಗುಣಗಳನ್ನುಳ್ಳ ಮನುಷ್ಯನೆಂಬ ಲಕ್ಷ್ಯಾರ್ಥವು 'ಹಸು', ಎಂಬ ವಾಚ್ಯಾರ್ಥದಿಂದ ಅಭಿಹಿತವಾಗುತ್ತದೆ ಎಂಬುದು ಮೊದಲನೆಯ ಪಕ್ಷ. ಈ ಶಬ್ದಾರೋಪವು ಮೊದಲಲ್ಲ; ಇದು ಸಿದ್ಧಿಸುವುದಕ್ಕಾಗಿ ಹಸು, ವಾಹೀಕ, ಇಬ್ಬರಲ್ಲಿಯೂ ಇರುವ ಗುಣಗಳೆಂಬ ಅರ್ಥಗಳಿಗೆ ಮೊದಲು ಅಭೇದದ ಅಧ್ಯಾರೋಪ ಮಾಡುತ್ತೇವೆ. ಆದ್ದರಿಂದ ಲಕ್ಷ್ಯಾರ್ಥ ಗುಣಗಳೇ ಹೊರತು ಪುರುಷನಲ್ಲ, ಎಂಬುದು ಎರಡನೆಯ ಪಕ್ಷ. ಆದರೆ ವಿಶಿಷ್ಟಗುಣಯುಕ್ತ ಪುರುಷನೆಂಬ ಅರ್ಥಾಂತರವು ಸದೃಶ ಗುಣಗಳ ಮೂಲಕ ಲಕ್ಷಿತವಾಗುತ್ತದೆನ್ನುವುದು ಮೂರನೆಯ ಪಕ್ಷ. ಇಲ್ಲಿ ವಾಚಕಶಬ್ದ ವಾಚ್ಯಾರ್ಥಗಳಿಗೂ ಲಕ್ಷಕ ಲಕ್ಷ್ಯಾರ್ಥಗಳಿಗೂ ಏಕಕಾಲದಲ್ಲಿ ಸಂಮಿಶ್ರಣವನ್ನು ಹೇಳಿದಂತಾಗುತ್ತದೆ. ಅರ್ಥಪ್ರತೀತಿ ಬೇಗ ಬರುತ್ತಿರುವಾಗ ಶಬ್ದ, ಅರ್ಥಗಳ ಆರೋಪದಲ್ಲಿ ಪೂರ್ವಾಪರ ಕಲ್ಪನೆಗಳಿಗವಕಾಶವಿಲ್ಲವೆಂದು ಈ ಪಕ್ಷ ಸೂಚಿಸುತ್ತದೆ. ಆದ್ದರಿಂದಲೇ ಉದ್ಭಟನು ಅದನ್ನು 'ಯುಕ್ತ'ವೆಂದಿರುವುದು. ಮಹಿಮಭಟ್ಟನು ಮಾತ್ರ ಈ ಸಮಶೀರ್ಷಿಕೆಯ 'ಶಬ್ದಾರ್ಥರೋಪ' ತರ್ಕವಿರುದ್ಧವೆಂದು ದೂಷಿಸುತ್ತಾನೆ. ಹೋಲಿಸಿ—

ಪ್ರಧಾನೇತರಭಾವೇನಾವಸ್ಥಾನಾದಾರ್ಥಶಬ್ದಯೋಃ |
ಸಮಶೀರ್ಷಿಕಯಾರೋಪಃ ನ ತಯೋರುಪಪದ್ಯತೇ ||

—ವ್ಯಕ್ತಿವಿವೇಕ

[54] ಇದು ಕುಮಾರಿಲಭಟ್ಟರ ತಂತ್ರವಾರ್ತಿಕದಿಂದ (ಅ-೧೦, ಪಾ. ೪, ಸೂ ೨೨) ಉದಾಹೃತವಾದ ಕಾರಿಕೆ. ಅವರು ಶಬ್ದಗಳಿಗೆ ಅಭಿಧಾ, ಲಕ್ಷಣಾ ಎಂಬ ವ್ಯಾಪಾರಗಳನ್ನು ಹೇಳುವಂತೆ 'ಗುಣವೃತ್ತಿ'ಯೆಂಬ ಮೂರನೆಯ ವ್ಯಾಪಾರವನ್ನೊಪ್ಪುತ್ತಾರೆ; ಎಂದರೆ ಕುಮಾರಿಲಭಟ್ಟರ ಪ್ರಕಾರ ಲಕ್ಷಣಾ, ಮತ್ತು ಗುಣವೃತ್ತಿಗಳು ಬೇರೆ ಬೇರೆ ವೃತ್ತಿಗಳೇ ಹೊರತು ಗುಣವೃತ್ತಿಯು ಲಕ್ಷಣೆಯಲ್ಲಿ ಅಂತರ್ಗತವಾಗುವುದಿಲ್ಲ. ಅವೆರಡರ ವ್ಯತ್ಯಾಸವನ್ನೂ ಅವರು ಈ ಕಾರಿಕೆಯಲ್ಲಿ ಹೇಳಿದ್ದಾರೆ. ''ಮಾನಾಂತರವಿರುದ್ಧೇ ತು ಮುಖ್ಯಾರ್ಥಸ್ಯ ಪರಿಗ್ರಹೇ'' (=ಮುಖ್ಯಾರ್ಥವನ್ನೇ ಆಶ್ರಯಿಸುವುದು ಕಾರಣಾಂತರದಿಂದ ಬಾಧಿತವಾದಾಗ (ಎಂಬುದು ಹಿಂದಿನ ವಾಕ್ಯಭಾಗ, ಮುಖ್ಯಾರ್ಥದೊಡನೆ ಸಾಕ್ಷಾತ್ತಾಗಿ ಯೋಗ ಅಥವಾ ಸಂಬಂಧವು ಲಕ್ಷಣಗೆ ನಿಯಾಮಕವೆಂದೂ ಗುಣವೃತ್ತಿಗೆ ಲಕ್ಷ್ಯಮಾಣವಾದ ಗುಣಗಳ ಯೋಗ ಮಾತ್ರ ನಿಯಾಮಕವೆಂದೂ ಇಲ್ಲಿ ಸ್ಪಷ್ಟವಾಗಿ

ಹೊರತು ಪಾರಿಭಾಷಿಕವಾದ ಅವಿನಾಭಾವ ಅಥವಾ ತಾದಾತ್ಮ್ಯವನ್ನುಳ್ಳ ಎಂದಲ್ಲ. ಹಾಗಾಗುವ ಪಕ್ಷಕ್ಕೆ "ಮಂಚಗಳು ದನಿಗೈಯುತ್ತವೆ" ಮುಂತಾದ ಪ್ರಯೋಗಗಳಲ್ಲಿ ಲಕ್ಷಣೆಯೇ ಇಲ್ಲದೆ ಹೋದೀತು. ತಾದಾತ್ಮ್ಯ ಸಹಜವಾಗಿಯೇ ಅರ್ಥಾತ್ ಸಿದ್ಧವಾಗುವ ಪ್ರಯುಕ್ತ ಅಲ್ಲೆಲ್ಲ ಲಕ್ಷಣೆಯನ್ನು ಆಶ್ರಯಿಸುವ ಕಾರಣವಿಲ್ಲವೆಂದು ಈಗಾಗಲೇ ಹೇಳಲಾಗಿದೆ.[55]

'ತುಪ್ಪವೇ ಆಯುಸ್ಸು,' 'ಇಗೋ ಆಯುಸ್ಸು'[56] ಎಂಬ ಪ್ರಯೋಗಗಳಲ್ಲಿ ಸಾದೃಶ್ಯದ ಬದಲು ಕಾರ್ಯಕಾರಣಭಾವವೆಂಬ ಬೇರೊಂದು ಸಂಬಂಧವಿದೆ. ಇಂತಹ ಕಡೆಗಳಲ್ಲಿ ಕಾರ್ಯಕಾರಣ ಭಾವವೇ ಮುಂತಾದುವುಗಳ ಜ್ಞಾನ ಮೊದಲು ಬಂದ ಮೇಲೆ ಆರೋಪ ಹಾಗು ಅಧ್ಯವಸಾನಗಳು ಹೊರಡುತ್ತವೆ.[57]

ಮೇಲಿನ ಎರಡು ವಿಧವಾದ ಗೌಣವೃತ್ತಿಗಳಲ್ಲಿ[58] ಪ್ರಯೋಜನವೇನೆಂದರೆ ಕ್ರಮವಾಗಿ (೧) ಭೇದವಿದ್ದರೂ ತಾದ್ರೂಪ್ಯದ ಪ್ರತೀತಿ ಮತ್ತು (೨) ಸರ್ವಥಾ ಅಭೇದದ ಪ್ರತೀತಿ. ಹಾಗೆಯೇ ಎರಡು ಬಗೆಯ ಶುದ್ಧ ಲಕ್ಷಣಾಭೇದಗಳಲ್ಲಿ[59] ಪ್ರಯೋಜನ

ಹೇಳಿರುವುದರಿಂದ ಇದೂ ಮಮ್ಮಟನ ಅಭಿಪ್ರಾಯಕ್ಕೆ ಪೋಷಕವಾಗಿದೆ. ಒಂದರಲ್ಲಿ ನೇರವಾದ ಯೋಗವೂ ಇನ್ನೊಂದರಲ್ಲಿ ಎರಡರ ಗುಣಗಳಿಗೆ ಮಾತ್ರ ಯೋಗವೂ ಇರುತ್ತದೆ. ಆದರೆ ವ್ಯಾಖ್ಯಾಕಾರರು ಇಲ್ಲಿ ಅಭಿಪ್ರಾಯವನ್ನು ಅನೇಕ ವಿಧವಾಗಿ ಎಳೆದೆಳೆದು ಮನಸ್ಸಿಗೆ ಭ್ರಾಂತಿ ಬರುವಂತೆ ಮಾಡುತ್ತಾರೆ. ಶಬ್ದಾರ್ಥಾರೋಪಗಳೆರಡೂ ಸಂಮಿಶ್ರವಾದಲ್ಲದೆ ಲಕ್ಷಕ ಶಬ್ದಕ್ಕೂ ಲಕ್ಷ್ಯಾರ್ಥಕ್ಕೂ ಗುಣಯೋಗ ಉಪಪನ್ನವಾಗುವುದಿಲ್ಲ. ಕುಮಾರಿಲಭಟ್ಟರ ಪ್ರಮಾಣವನ್ನು ಕೊಟ್ಟರೂ ಮಮ್ಮಟನು ಅವರಂತೆ ಲಕ್ಷಣೆ, ಗೌಣಿಗಳನ್ನು ಬೇರೆಬೇರೆಯೆನ್ನದೆ ಗೌಣಿ ಲಕ್ಷಣೆಯ ಪ್ರಭೇದವೆಂದಿರುವುದು ಗಮನಾರ್ಹ.

55 ಮೇಲೆ ೪೧-೪೩ ಟಿಪ್ಪಣಿಗಳನ್ನೋದಿ.

56 ಪೂರ್ಣ ಶ್ಲೋಕ ಹೀಗಿದೆ :—

ಆಯುಃ ಘೃತಂ ಯಶಸ್ತ್ಯಾಗೋ ಭಯಂ ಚೌರಃ ಸುಖಂ ಪ್ರಿಯಾ |
ವೈರಂ ದ್ಯೂತಂ ಗುರುರ್ಜ್ಞಾನಂ ಶ್ರೇಯಃ ಸತ್ತೀರ್ಥಸೇವನಂ ||

ಆಯುಸ್ಸಿಗೆ ತುಪ್ಪ, ಯಶಸ್ಸಿಗೆ ತ್ಯಾಗ, ಭಯಕ್ಕೆ ಕಳ್ಳ, ಸುಖಕ್ಕೆ ಪ್ರಿಯ ಇವು ಪ್ರಬಲ ಕಾರಣಗಳೆಂದು ಭಾವ. ಕಾರ್ಯ ಕಾರಣಗಳೆರಡನ್ನೂ ಪ್ರತ್ಯೇಕ ಶಬ್ದಗಳಿಂದ ಹೇಳಿರುವುದರಿಂದ ಇದು 'ಸಾರೋಪಾ'. ಕಾರಣವನ್ನು ಹೇಳದೆ ಕಾರ್ಯವೊಂದನ್ನೇ ಹೇಳಿದ್ದರೆ 'ಸಾಧ್ಯವಸಾನಾ'. ಸಾರೋಪಾ ಲಕ್ಷಣೆಯನ್ನು ಎಲ್ಲ ರೂಪಕಾಲಂಕಾರಗಳಲ್ಲಿಯೂ ಸಾಧ್ಯವಸಾನಾ ಲಕ್ಷಣೆಯನ್ನು ಎಲ್ಲ ಅತಿಶಯೋಕ್ತಿ ಅಲಂಕಾರಗಳಲ್ಲೂ ಗಮನಿಸಬಹುದು.

57 ಗುಣವೃತ್ತಿಯ ಉದಾಹರಣೆಗಳಂತೆ ಸಾದೃಶ್ಯಸಂಬಂಧದ ಪರಾಮರ್ಶದಿಂದಲ್ಲ.

58 'ವಾಹೀಕನು ಹಸು', 'ಇಗೋ ಹಸು' ಎಂಬುವೇ ಉದಾಹರಣೆಗಳು.

59 'ತುಪ್ಪವೇ ಆಯುಸ್ಸು', 'ಇಗೋ ಆಯುಸ್ಸು' ಎಂಬುವು ಉದಾಹರಣೆಗಳು. ಇವನ್ನಾಗಲೇ ಹೇಳಿದೆ.

ಕ್ರಮವಾಗಿ (೧) ಅನ್ಯವಿಲಕ್ಷಣವಾದ ಕಾರ್ಯಕಾರಿತ್ವ ಮತ್ತು (೨) ಒಮ್ಮೆಯೂ ತಪ್ಪದೆ ಕಾರ್ಯವನ್ನು ಉಂಟುಮಾಡುವ ಸಾಮರ್ಥ್ಯ.

ಕೆಲವೊಮ್ಮೆ 'ಅದರ ಸಲುವಾಗಿ' ಎಂಬರ್ಥದಲ್ಲಿಯೂ ಅಧ್ಯಾರೋಪವು ಬರಬಹುದು. ಉದಾ.:—ಇಂದ್ರನ ಸಲುವಾಗಿ ನೆಟ್ಟ ಕಂಭವು 'ಇಂದ್ರ'ನೆನಿಸುತ್ತದೆ. ಕೆಲವೊಮ್ಮೆ ಸ್ವಸ್ವಾಮಿಭಾವದಲ್ಲಿ—ಉದಾ: ರಾಜನ ಕಡೆಯ ಅಧಿಕಾರಿಯೇ 'ರಾಜ'ನೆನಿಸುತ್ತಾನೆ. ಕೆಲವೊಮ್ಮೆ ಅವಯವ—ಅವಯವಿಭಾವದಲ್ಲಿ—ಉದಾ: 'ಅಗ್ರಹಸ್ತ' ಎಂಬ ಸಮಾಸದಲ್ಲಿ ಹಸ್ತ ಎಂದರೆ ಅವಯವದ ತುದಿ ಮಾತ್ರ.[60] ಕೆಲವೊಮ್ಮೆ ಆ ಕೆಲಸವನ್ನು ಮಾಡುವವನು ಎಂಬ ಅರ್ಥದಲ್ಲಿ—ಉದಾ.:—(ಜನ್ಮದಿಂದ) 'ಬಡಗಿಯಲ್ಲದಿದ್ದರೂ (ವೃತ್ತಿಯಲ್ಲಿ) ಬಡಗಿ.'[61]

ಲಕ್ಷಣಾ ತೇನ ಷಡ್ವಿಧಾ ॥ ೭*d* ॥


ಹೀಗೆ ಲಕ್ಷಣೆ ಆರು ಬಗೆ.[62]

---

[60] ಹಸ್ತವೆಂದರೆ ಪೂರ್ಣ ಕೈ ಮುಖ್ಯಾರ್ಥ. 'ಅಗ್ರಹಸ್ತ'ವೆಂದರೆ ಕೈಯೆಂದರ್ಥವಲ್ಲ; ಕೈತುದಿಯೆಂದರೆ ಕೈಬೆರಳೆಂದರ್ಥ. ಹೋಲಿಸಿ ವಾಮನ—'ಹಸ್ತಾಗ್ರಾಗ್ರಹಸ್ತಾದಯೋ ಗುಣಗುಣಿನೋರ್ಭೇದಾಭೇದಾತ್.''

[61] ಈ ಎಲ್ಲ ಉದಾಹರಣೆಗಳಲ್ಲೂ ಸಾದೃಶ್ಯೇತರ ಸಂಬಂಧ ಅಧ್ಯಾರೋಪಕ್ಕೆ ನಿಮಿತ್ತವಾದುದರಿಂದ ಅವು ''ಶುದ್ಧ'' ಲಕ್ಷಣೆಗಳೆನಿಸುತ್ತವೆ. ಹೋಲಿಸಿ—''ಸಹಚರಣ—ಸ್ಥಾನ—ತಾದರ್ಥ್ಯ—ವೃತ್ತ—ಮಾನ—ಧಾರಣ—ಸಾಮೀಪ್ಯ—ಯೋಗ—ಸಾಧನ—ಆಧಿಪತ್ಯೇಭ್ಯೋ ಬ್ರಾಹ್ಮಣ—ಮಂಚ—ಕಟ—ರಾಜ—ಸಕ್ತು—ಚಂದನ—ಗಂಗಾ—ಶಕಟ—ಅನ್ನ—ಪುರುಷೇಷು ಅತದ್ಭಾವೇಽಪಿ ತದುಪಚಾರಃ''—ನ್ಯಾಯಸೂತ್ರ II. ii. ೬೩. ಇಲ್ಲಿ 'ಉಪಚಾರ'ವೆಂದರೆ ಆರೋಪವೆಂಬ ಸಾಮಾನ್ಯಾರ್ಥವೇ ಹೊರತು ಸಾದೃಶ್ಯ ಮಾತ್ರ ಮೂಲವಾದ ಆರೋಪವೆಂಬ ಸಂಕುಚಿತಾರ್ಥವಿಲ್ಲ.

[62] ಇದನ್ನು ಪಟ್ಟಿಮಾಡಿ ಹೀಗೆ ತೋರಿಸಬಹುದು:—



ಮೊದಲಿನ ಎರಡು ಬಗೆಗಳನ್ನೂ[63] ಸೇರಿಸಿದರೆ ಎಂದು ತಾತ್ಪರ್ಯ. ಅದಾದರೋ-

ವ್ಯಂಗ್ಯೇನ ರಹಿತಾ ರೂಢೌ ಸಹಿತಾ ತು ಪ್ರಯೋಜನೇ । ೮*ab* ।

ರೂಢಿಯನ್ನಾಶ್ರಯಿಸುವಾಗ ವ್ಯಂಗ್ಯಾರ್ಥವಿಲ್ಲದಿರುತ್ತದೆ ; ಆದರೆ ಪ್ರಯೋಜನವನ್ನಾಶ್ರಯಿಸುವಾಗ ವ್ಯಂಗ್ಯಾರ್ಥವನ್ನೊಳಗೊಂಡಿರುತ್ತದೆ.[64]

ಏಕೆಂದರೆ ಪ್ರಯೋಜನ ವ್ಯಂಜನಾವ್ಯಾಪಾರದಿಂದ ಮಾತ್ರ ಗಮ್ಯ.

ತಚ್ಚ ಗೂಢಮಗೂಢಂ ವಾ । ೮*c* ।

ಅದು ಗೂಢವಾಗಿರಬಹುದು[65]; ಇಲ್ಲವೆ ಅಗೂಢವಾಗಿರಬಹುದು.

'ಅದು' ಎಂದರೆ ವ್ಯಂಗ್ಯವಾದ ಅರ್ಥ. ಗೂಢವ್ಯಂಗ್ಯಕ್ಕೆ ಉದಾಹರಣೆ—

ಮುಖಂ ವಿಕಸಿತಸ್ಮಿತಂ ವಶಿತವಕ್ರಿಮ ಪ್ರೇಕ್ಷಿತಂ
ಸಮುಚ್ಛಲಿತವಿಭ್ರಮಾ ಗತಿರಪಾಸ್ತಸಂಸ್ಥಾ ಮತಿಃ
ಉರೋ ಮುಕುಲಿತಸ್ತನಂ ಜಘನಮಂಸಬಂಧೋದ್ಧುರಂ
ಬತೇಂದುವದನಾತನೌ ತರುಣಿಮೋದ್ಗಮೋ ಮೋದತೇ ॥

ಮೊಗದೊಳರಳಿದೆ ನಗೆಯು ನೇತ್ರವು ಕೊಂಕನೇ ಬಸಗೈದಿದೆ
ಮೇಲೆ ಚಿಮ್ಮಿದೆ ಗತಿಯ ಲೀಲೆಯು ಮತಿಯು ತೊರೆದಿದೆ ಸೀಮೆಯ ।
ಎದೆಯು ಮೊಲೆಗಳ ಮುಗಳ ತೋರ್ಪುದು ಪೀನ ಜಘನವು ಮೈಮೆಯ
ಚಂದ್ರವದನೆಯ ದೇಹದೊಳಹಾ! ಏರುಜವ್ವನ ನಲಿದಿದೆ ॥[66]

ಸ್ಪಷ್ಟವಾಗಿರುವ ಈ ಭೇದಗಳ ಬದಲು ಚಂಡೀದಾಸ, ಗೋವಿಂದ, ಮಾಣಿಕ್ಯಚಂದ್ರ, ಮುಂತಾದ ಟೀಕಾಕಾರರು ಬೇರೆ ವಿಭಾಗಕ್ರಮಗಳನ್ನು ಸೂಚಿಸಿದ್ದಾರೆ. ಅವು ವ್ಯರ್ಥವೆಂದು ಇಲ್ಲಿ ಕೈಬಿಟ್ಟಿದೆ.

63 'ಉಪಾದಾನ' ಮತ್ತು 'ಲಕ್ಷಣ' ಲಕ್ಷಣೆಗಳೇ ಮೊದಲಿನ ಎರಡು ಭೇದಗಳು.

64 'ಲಕ್ಷಣೆ' ಎಂದು ಅಧ್ಯಾಹಾರ ಮಾಡಿಕೊಳ್ಳಬೇಕು.

65 ಕಾವ್ಯಾರ್ಥಪರಾಮರ್ಶದಲ್ಲಿ ಪರಿಪಕ್ವವಾದ ಬುದ್ಧಿಯುಳ್ಳ ಸಹೃದಯರಿಗೆ ಮಾತ್ರ ವೇದ್ಯವಾದುದು 'ಗೂಢ'ವೆಂದು ಪ್ರದೀಪಕಾರನು ಬರೆಯುತ್ತಾನೆ.

66 ನಗೆಗೆ ಪುಷ್ಪಧರ್ಮವನ್ನು ಆರೋಪಿಸುವುದರಿಂದ ಸೌರಭವೂ, ನೇತ್ರಕ್ಕೆ ಚೇತನಕ್ರಿಯೆಯನ್ನಾರೋಪಿಸುವುದರಿಂದ ಅನುರಾಗವೂ, ಮೂರ್ತವಸ್ತುಧರ್ಮವನ್ನು ಅಮೂರ್ತವಾದ ವಿಲಾಸಕ್ಕೆ ಆರೋಪಿಸುವುದರಿಂದ ರತಿಯೋಗ್ಯತ್ವವೂ, ಹಾಗೆಯೇ ಮತಿಗೆ ಚೇತನಕ್ರಿಯೆಯನ್ನಾರೋಪಿಸುವುದರಿಂದ ಜಾಣ್ಮೆಯೂ, ಎದೆಗೆ ಮೊಗ್ಗೆನ್ನುವಾಗ ರೂಪಾತಿಶಯವೂ, ಜಘನದ ಪೀನತ್ವಾರೋಪದಲ್ಲಿ ಭೋಗಯೋಗ್ಯತ್ವವೂ, 'ನಲಿದಿದೆ' ಎಂಬ ಚೇತನಕ್ರಿಯೆಯಿಂದ ಯೌವನಾರಂಭದ ಅನಿತರಸಾಧಾರಣತ್ವವೂ ಸಹೃದಯರಿಗೆ ವ್ಯಂಗ್ಯವಾಗಿ ಸ್ಫುರಿಸಿ ಚಮತ್ಕಾರವನ್ನುಂಟುಮಾಡುವುವೆಂದು 'ಸಾಹಿತ್ಯಚೂಡಾಮಣಿ'ಯಲ್ಲಿ ವಿವರಿಸಿದೆ.

ಅಗೂಢವ್ಯಂಗ್ಯಕ್ಕೆ ಉದಾಹರಣೆ—

ಶ್ರೀ ಪರಿಚಯಾಜ್ಜಡಾ ಅಪಿ ಭವಂತ್ಯಭಿಜ್ಞಾ ವಿದಗ್ಧಚರಿತಾನಾಮ್ ।
ಉಪದಿಶತಿ ಕಾಮಿನೀನಾಂ ಯೌವನಮದ ಏವ ಲಲಿತಾನಿ ॥

ಸಿರಿ ಬರೆ ಜಡರುಂ ಪರಿಣತ-
ಚರಿತಂಗಳೊಳಪ್ಪರಲ್ತೆ ಕೋವಿದಮತಿಗಳ್ ।
ನೆರೆವುದು ಕಲಿಸಲ್ ಜವ್ವನ-
ದುರವಣೆ ಮೇಣ್ ಲಲನೆಯರ್ಗೆ ಸಲ್ಲೀಲೆಗಳಂ ॥

ಇಲ್ಲಿ 'ಉಪದಿಶತಿ' ಅಥವಾ 'ಕಲಿಸಲ್ ನೆರೆವುದು' ಎಂಬ ಶಬ್ದದಿಂದ 'ಅನಾಯಾಸವಾಗಿ ಪಾಠವನ್ನು ಕಲಿಸುವುದು' ಎಂಬರ್ಥ ಗಮ್ಯವಾದರೂ ವಾಚ್ಯಾರ್ಥದಷ್ಟೇ ಸ್ಫುಟವಾಗಿ ಪ್ರತೀತವಾಗುತ್ತದೆ.[67]

ತದೇಷಾ ಕಥಿತಾ ತ್ರಿಧಾ ॥೮॥

ಹೀಗೆ ಲಕ್ಷಣೆ (ವ್ಯಂಗ್ಯದ ದೃಷ್ಟಿಯಿಂದ) ಮೂರು ವಿಧ.

ಅವ್ಯಂಗ್ಯ, ಗೂಢವ್ಯಂಗ್ಯ ಮತ್ತು ಅಗೂಢವ್ಯಂಗ್ಯ ಎಂಬವೇ ಮೂರು ಬಗೆಗಳು.[68]

ತದ್ಭೂಃ ಲಾಕ್ಷಣಿಕಃ ॥೯a॥

---

[67] ಇಲ್ಲಿ ವ್ಯಂಗ್ಯಾರ್ಥ ಸರ್ವರಿಗೂ ಸುಲಭವೇದ್ಯವಾದುದರಿಂದ ಅಗೂಢ. ಅಲಂಕಾರ ದೃಷ್ಟಾಂತ.

[68] ವ್ಯಂಗ್ಯಾರ್ಥವನ್ನು ವಿಭಾಜಕತ್ವವೆಂದು ಭಾವಿಸಿದರೆ, ಈ ಹೊಸ ದೃಷ್ಟಿಯಿಂದ ಲಕ್ಷಣೆ ಮೂರುಬಗೆಯದಾಗುತ್ತದೆ:—

ಲಕ್ಷಣೆ

೧. ವ್ಯಂಗ್ಯರಹಿತ (ರೂಢಿ) [ಕುಶಲ, ಇತ್ಯಾದಿ.]

ವ್ಯಂಗ್ಯಸಹಿತ (ಪ್ರಯೋಜನ)

೨. ಗೂಢ ವ್ಯಂಗ್ಯಸಹಿತ ['ಮೊಗದೊಳರಳಿದೆ,' ಇತ್ಯಾದಿ]

೩. ಅಗೂಢ ವ್ಯಂಗ್ಯಸಹಿತ ['ಸಿರಿ ಬರೆ' ಇತ್ಯಾದಿ]

ಆ ಲಕ್ಷಣಾವ್ಯಾಪಾರವನ್ನುಳ್ಳದ್ದು 'ಲಾಕ್ಷಣಿಕ'[69]

ಇಲ್ಲಿ ಶಬ್ದವೆಂದು ಅಧ್ಯಾಹಾರಮಾಡಿಕೊಳ್ಳಬೇಕು. 'ತದ್ಭೂಃ' ಎಂದರೆ ಅದರ ಆಶ್ರಯವಾದುದು.

ತತ್ರ ವ್ಯಾಪಾರೋ ವ್ಯಂಜನಾತ್ಮಕಃ ‖೯*b*‖

ಅಲ್ಲಿ (=ವ್ಯಂಗ್ಯವಾದ ಪ್ರಯೋಜನವುಳ್ಳ ಲಾಕ್ಷಣಿಕ ಶಬ್ದದಲ್ಲಿ) ವ್ಯಂಜನಾ ಎಂಬ ವ್ಯಾಪಾರವೂ ಇರುತ್ತದೆ.

ಏಕೆಂಬುದನ್ನು ಹೇಳುತ್ತಾನೆ—

ಯಸ್ಯ ಪ್ರತೀತಿಮಾಧಾತುಂ ಲಕ್ಷಣಾ ಸಮುಪಾಸ್ಯತೇ ‖೯*cd*‖

ಫಲೇ ಶಬ್ದೈಕಗಮ್ಯೇಽತ್ರ ವ್ಯಂಜನಾನ್ನಾಪರಾ ಕ್ರಿಯಾ ‖೧೦*ab*‖

ಯಾವುದರ ಪ್ರತೀತಿಯನ್ನು ಮಾಡಿಕೊಡಲು ಲಕ್ಷಣಾ ವ್ಯಾಪಾರವನ್ನು ಆಶ್ರಯಿಸುತ್ತೇವೆಯೋ ಆ ಶಬ್ದಮಾತ್ರಗಮ್ಯವಾದ ಪ್ರಯೋಜನವನ್ನು ಬೋಧಿಸುವಾಗ ಶಬ್ದಕ್ಕೆ ವ್ಯಂಜನೆಯಲ್ಲದೆ ಬೇರೆ ವ್ಯಾಪಾರವಿಲ್ಲ.

ಪ್ರಯೋಜನವನ್ನು ಪ್ರತಿಪಾದಿಸಬೇಕೆಂದೇ ಎಲ್ಲಿ ಲಕ್ಷಣಾಯುಕ್ತವಾದ ಶಬ್ದವನ್ನು ಪ್ರಯೋಗಿಸಿದೆಯೋ ಅಲ್ಲಿ ಅದರ (ಪ್ರಯೋಜನದ) ಪ್ರತೀತಿ ಬೇರಾವುದರಿಂದಲೂ ಬರುವುದೆಂಬಂತಿಲ್ಲ; ಆ ಶಬ್ದವೊಂದರಿಂದಲೇ ಬರುತ್ತದೆನ್ನಬೇಕು. ಆಗ ಶಬ್ದದ ವ್ಯಾಪಾರ ಕೂಡ ವ್ಯಂಜನೆಯಲ್ಲದೆ ಬೇರೊಂದಾಗಲಾರದು.[70] ಏಕೆಂದರೆ—

---

[69] ಮೂಲಕಾರಿಕೆಗಳನ್ನು ಪ್ರಸಂಗೋಚಿತವಾಗಿ ಒಡೆದೊಡೆದು ವಿವರಿಸುವುದು ಶಾಸ್ತ್ರಕಾರರ ಸರಣಿ. ಈ "ಖಂಡೀಕೃತ್ಯ ಪಠನ"ವನ್ನು ಧ್ವನ್ಯಾಲೋಕದಲ್ಲೂ ನೋಡಬಹುದು.

[70] ಲಕ್ಷಣಾವ್ಯಾಪಾರದ ನಿರೂಪಣೆ ಮುಗಿದ ಮೇಲೆ ಲಕ್ಷಣಾಮೂಲವಾದ ವ್ಯಂಜನಾ ವ್ಯಾಪಾರದಿಂದ ಆರಂಭಿಸಿ ಆ ವ್ಯಾಪಾರದ ಪೂರ್ಣ ನಿರೂಪಣೆಗೆ ಮಮ್ಮಟನು ತಿರುಗುತ್ತಾನೆ. ಆನಂದವರ್ಧನನಿಗಿಂತ ಹಿಂದಿನ ಲಾಕ್ಷಣಿಕರು ವ್ಯಂಜನಾವ್ಯಾಪಾರವನ್ನೇ ಒಪ್ಪುತ್ತಿರಲಿಲ್ಲ. ವ್ಯಾಕರಣದ ಸ್ಫೋಟವಾದದಲ್ಲಿ ಒಪ್ಪಿದಂತೆ ಅಲಂಕಾರಶಾಸ್ತ್ರದಲ್ಲೂ ಇವನ್ನು ಒಪ್ಪಬೇಕೆಂದು ಮೊದಲು ವಾದಿಸಿದವನು ಆನಂದವರ್ಧನ. ಅವನ ವಾದವನ್ನು ಪುರಸ್ಕರಿಸದೆ ತಾರ್ಕಿಕರು ಅದು "ಅನುಮಾನ"ದಲ್ಲೇ ಅಂತರ್ಗತವಾಗುವುದೆನ್ನುತ್ತಿದ್ದರು: ಮೀಮಾಂಸಕರು "ಅರ್ಥಾಪತ್ತಿ"ಯಲ್ಲೇ ಅದನ್ನು ತರುತ್ತಿದ್ದರು. 'ಧ್ವನ್ಯಾಲೋಕ'ವನ್ನು ಖಂಡಿಸಲು 'ಹೃದಯದರ್ಪಣ', 'ವ್ಯಕ್ತಿವಿವೇಕ' ಮುಂತಾದ ಸ್ವತಂತ್ರಗ್ರಂಥಗಳೇ ರಚಿತವಾಗಿದ್ದುವು. ಅಂತೆಯೇ ಅಭಿನವಗುಪ್ತರು ಆನಂದವರ್ಧನನ್ನು ಸಮರ್ಥಿಸಲು ತಮ್ಮ ಪ್ರೌಢವಾದ 'ಲೋಚನ'ವನ್ನೂ ಬರೆದಿದ್ದರು. ಮಮ್ಮಟನು ತನ್ನ ಅಧಿಕಾರವಾಣಿಯಿಂದ ವ್ಯಂಜನಾವ್ಯಾಪಾರದ ಅಸ್ತಿತ್ವವನ್ನು ಮತ್ತೆ ಸಮರ್ಥಿಸುವು

ನಾಭಿಧಾ ಸಮಯಾಭಾವಾತ್ ॥೧೦c॥

ಅದಕ್ಕೆ ಆ ಸಂಕೇತವಿಲ್ಲದ ಕಾರಣ ಅದು ಅಭಿಧೆಯಲ್ಲ.

"ಗಂಗೆಯಲ್ಲಿ ಹಳ್ಳಿ" ಎನ್ನುವಾಗ ಗಂಗಾತೀರದಲ್ಲಿ ಪ್ರತೀತವಾಗುವ ಪಾವನತ್ವ ಮುಂತಾದ ಧರ್ಮಗಳಾವುವೂ 'ಗಂಗೆ'ಯೆಂಬ ಶಬ್ದಕ್ಕೆ ಸಂಕೇತಿತವಾದ ಅರ್ಥಗಳಲ್ಲ.

ಹೇತ್ವಭಾವಾನ್ನ ಲಕ್ಷಣಾ ॥ ೧೦d ॥

ಅಗತ್ಯವಾದ ನಿಮಿತ್ತಗಳಿಲ್ಲದಿರುವುದರಿಂದ ಲಕ್ಷಣೆಯೂ ಅಲ್ಲ.

ಮುಖ್ಯಾರ್ಥದ ಬಾಧೆ ಮುಂತಾದ ಮೂರು ಲಕ್ಷಣೆಯನ್ನಾಶ್ರಯಿಸಲು ಅಗತ್ಯವಾದ ನಿಮಿತ್ತಗಳು ಹೇಗೆಂದರೆ—

ಲಕ್ಷ್ಯಂ ನ ಮುಖ್ಯಂ ನಾಪ್ಯತ್ರ ಬಾಧೋ ಯೋಗಃ ಫಲೇನ ನೋ।
ನ ಪ್ರಯೋಜನಮೇತಸ್ಮಿನ್ ನ ಚ ಶಬ್ದಃ ಸ್ಖಲದ್ಗತಿಃ ॥ ೧೧ ॥

ಲಕ್ಷ್ಯಾರ್ಥವೇ ಮುಖ್ಯಾರ್ಥವಲ್ಲ; ಇಲ್ಲಿ ಅದಕ್ಕೆ ಬಾಧೆಯೂ ಇಲ್ಲ; ಪ್ರಯೋಜನದೊಡನೆ ಸಂಬಂಧ ಮೊದಲೇ ಇಲ್ಲ; ಅದಕ್ಕೆ ಬೇರೊಂದು ಪ್ರಯೋಜನವನ್ನೂ ಹೇಳುವಂತಿಲ್ಲ; ಶಬ್ದ ತನ್ನ ಗತಿಯಲ್ಲಿ ಸ್ವಲ್ಪವೂ ಕುಂಠಿತವೇ ಅಲ್ಲ.[71]

ದಕ್ಕಾಗಿ ವಿಷಯವನ್ನೆಲ್ಲ ಕೂಲಂಕಷವಾಗಿ ಚರ್ಚಿಸಿದ್ದಾನೆ. ವ್ಯಂಜನಾವ್ಯಾಪಾರದ ಸಮರ್ಥನೆಗಾಗಿಯೇ ಲಕ್ಷಣೆಯ ವ್ಯಾಪ್ತಿಯನ್ನು ಅವನಷ್ಟು ಖಚಿತವಾಗಿ ಮೊದಲು ಮಾಡಿಕೊಟ್ಟಿರುವುದು. ಲಕ್ಷಣೆಯ ವ್ಯಾಪ್ತಿ ಇಷ್ಟೇ ಪರಿಮಿತವೆಂದು ಸಿದ್ಧವಾದ ಮೇಲೆ ಅದಕ್ಕಿಂತ ಹೊರಗಾದ ವ್ಯಂಜನಾವ್ಯಾಪಾರವನ್ನು ಸಾಧಿಸುವುದು ಸುಲಭ. ಆನಂದವರ್ಧನನ ಲಕ್ಷಣಾನಿರೂಪಣೆಗಿಂತಲೂ ಮಮ್ಮಟನ ನಿರೂಪಣೆ ಮಾರ್ಮಿಕವೂ ತಲಸ್ಪರ್ಶಿಯೂ ಪರಿಪೂರ್ಣವೂ ಆಗಿರುವುದೇ ಅವನ ಶಾಸ್ತ್ರದೃಷ್ಟಿಯ ಪ್ರಗಲ್ಭತೆಗೆ ಮಾನದಂಡ. ನಿಜವಾಗಿಯೂ ಮಮ್ಮಟನನ್ನು ಧ್ವನಿಪ್ರಸ್ಥಾಪನ ಪರಮಾಚಾರ್ಯನೆಂದು ಮುಂದಿನವರು ಮನಸಾರೆ ಗೌರವಿಸುವುದಕ್ಕೆ ಅವನ ದ್ವಿತೀಯೋಲ್ಲಾಸದ ನಿಷ್ಕೃಷ್ಟನಿರೂಪಣೆಯೇ ಕಾರಣ.

[71] ಹೋಲಿಸಿ—ಕನ್ನಡ ಧ್ವನ್ಯಾಲೋಕ I, ೨೦. ಗಂಗಾ ಶಬ್ದಕ್ಕೆ ತೀರವೆಂಬ ಲಕ್ಷ್ಯಾರ್ಥವನ್ನು ಹೇಳುವಾಗ ಗತಿ ಅಥವಾ ವ್ಯಾಪಾರವು ನೇರವಲ್ಲ ; ವಕ್ರ. ಏಕೆಂದರೆ ಮುಖ್ಯಾರ್ಥದ ನಂತರ ಅದು ಮುಖ್ಯಾರ್ಥಯೋಗ, ರೂಢಿ, ಇತ್ಯಾದಿಗಳನ್ನು ಹಿಂಬಾಲಿಸಿ ಮತ್ತೆ ಹೊರಡಬೇಕಾಗುತ್ತದೆ. ಆದರೆ ಶೀತತ್ವಾದಿ ಪ್ರಯೋಜನವನ್ನು ಸೂಚಿಸಲು ಅದು ನೇರವಾಗಿಯೇ ವ್ಯಂಜನಾವ್ಯಾಪಾರದಿಂದ ಶಕ್ತವಾಗಿದೆ. ಲಕ್ಷಣಾಸ್ಥಲದಂತೆ ಶಬ್ದದ ಗತಿಗೆ ಅಲ್ಲಿ ಸ್ಖಲನವೇನೂ ಇಲ್ಲ. ಆದ್ದರಿಂದ ಪ್ರಯೋಜನ ಹೇಗೆಯೂ ಲಕ್ಷಣಾ ವೇದ್ಯವಲ್ಲ ; ಲಕ್ಷಣಾ ವಿಲಕ್ಷಣವಾದ ವ್ಯಾಪಾರದಿಂದ ಮಾತ್ರ ಬೋಧ್ಯವೆಂದಂತಾಯಿತು. ಇದರ ವ್ಯಾಖ್ಯಾನದಲ್ಲಿಯೂ ಕೆಲವು ಟೀಕಾಕಾರರು ಎಡವಿದ್ದಾರೆ.

'ಗಂಗೆ'ಯೆಂಬ ಶಬ್ದ 'ಪ್ರವಾಹ'ವೆಂಬ ಮುಖ್ಯಾರ್ಥದಲ್ಲಿ ಬಾಧಿತಾವಾಗುವ ಕಾರಣ ಹೇಗೆ 'ತೀರ'ವೆಂಬರ್ಥವನ್ನು ಲಕ್ಷಣೆಯಿಂದ ಬೋಧಿಸುವುದೋ ಹಾಗೆಯೇ 'ತೀರ'ವೂ ಸಹ ತನ್ನ ಮುಖ್ಯಾರ್ಥದಲ್ಲಿ ಬಾಧಿತವಾಗುತ್ತಿದ್ದರೆ ಮಾತ್ರ ಆ ಪ್ರಯೋಜನವನ್ನು (ಪಾವನತ್ವ, ಇತ್ಯಾದಿ) ಲಕ್ಷಿಸುವುದೆನ್ನಲು ಬರುತ್ತಿತ್ತು. ಆದರೆ ಮೊದಲನೆಯದಾಗಿ ತೀರ ಗಂಗಾಶಬ್ದದ ಮುಖ್ಯಾರ್ಥವೇ ಅಲ್ಲ. ಎರಡನೆಯದಾಗಿ ಅದರಲ್ಲಿ ಬಾಧೆಗೂ ಅವಕಾಶವಿಲ್ಲ. ಮೂರನೆಯದಾಗಿ ಗಂಗಾಶಬ್ದದಿಂದ ಪ್ರತೀತ ವಾಗುವ ತೀರಕ್ಕೂ ಅದರ ಲಕ್ಷ್ಯಾರ್ಥವೆನ್ನಬೇಕೆನ್ನುತ್ತಿರುವ ಪಾವನತ್ವ ಇತ್ಯಾದಿ ಗಳಿಗೂ ಸಂಬಂಧವೇ ಇಲ್ಲ. ನಾಲ್ಕನೆಯದಾಗಿ, ವಸ್ತುತಃ ಪ್ರಯೋಜನವಾಗಿರುವು ದನ್ನೇ ಲಕ್ಷ್ಯವೆನ್ನಲು ಮತ್ತೊಂದು ಪ್ರಯೋಜನವಾವುದೂ ಇಲ್ಲ. ಕಡೆಯದಾಗಿ 'ಗಂಗಾ'ಶಬ್ದ ತಟವನ್ನು ಹೇಗೆ ನೇರವಾಗಿ ಬೋಧಿಸಲಾರದೋ ಹಾಗೆ ಪ್ರಯೋಜನ ವನ್ನು ಬೋಧಿಸಲು ಅಸಮರ್ಥವಾಗಿಲ್ಲ.

ಏವಮಪ್ಯನವಸ್ಥಾ ಸ್ಯಾದ್ ಯಾ ಮೂಲಕ್ಷಯಕಾರಿಣೀ ॥ ೧೨*ab* ॥

ಹೀಗಾಗುವುದಾದರೆ ಮೂಲವನ್ನೇ ನಾಶಮಾಡುವ ಅನವಸ್ಥೆಯೊದಗೀತು ಪ್ರಯೋಜನವೂ ಲಕ್ಷಣಾಗಮ್ಯವೆನ್ನುವುದಾದರೆ ಅದಕ್ಕೆ ಇನ್ನೊಂದು ಪ್ರಯೋಜನ ಆ ಪ್ರಯೋಜನಕ್ಕೆ ಮತ್ತೊಂದು ಪ್ರಯೋಜನ ಹೀಗೆ ಕೊನೆಯಿಲ್ಲದೆ ಕಲ್ಪಿಸುತ್ತಾ ಹೋಗುವ ಪ್ರಸಂಗವೊದಗಿ ಪ್ರಕೃತದ ಪ್ರತೀತಿಯೇ ತಪ್ಪಿಹೋದೀತು.

ಹಾಗಲ್ಲ; ಪಾವನತ್ವ ಮುಂತಾದ ಧರ್ಮಗಳಿಂದೊಡಗೂಡಿದ ತೀರವೇ ಲಕ್ಷ್ಯಾರ್ಥ; 'ಗಂಗಾತೀರದಲ್ಲಿ ಹಳ್ಳಿ' ಎಂದು ಹೇಳಿದಾಗ ಬರುವ ಅರ್ಥಕ್ಕಿಂತಲೂ ಹೆಚ್ಚಾಗಿರುವ ಅತಿಶಯದ ಪ್ರತೀತಿಯೇ ಪ್ರಯೋಜನ. ಆದುದರಿಂದ ಪ್ರಯೋಜನ ಸಹಿತವಾದುದರಲ್ಲಿಯೇ ಲಕ್ಷಣೆಯನ್ನಲು ಬರುತ್ತದೆ. ಇನ್ನು 'ವ್ಯಂಜನೆಯಿಂದಾಗ ಬೇಕಾದುದೇನು?'[72] ಎಂದು ಪೂರ್ವಪಕ್ಷದವರು ಹೇಳಬಹುದು. ಅದಕ್ಕೋಸ್ಕರ ಇದನ್ನು ಹೇಳುತ್ತಾನೆ—

ಪ್ರಯೋಜನೇನ ಸಹಿತಂ ಲಕ್ಷಣೀಯಂ ನ ಯುಜ್ಯತೇ ॥ ೧೨*cd* ॥

---

[72] ಇದುವರೆಗೆ ನಿರಾಕರಿಸಿದುದನ್ನು 'ದ್ವಿತೀಯಲಕ್ಷಣಾವಾದ'ವೆಂದೂ ಇದನ್ನು 'ವಿಶಿಷ್ಟ ಲಕ್ಷಣಾವಾದ'ವೆಂದೂ ಹೇಳಬಹುದು. ದ್ವಿತೀಯಲಕ್ಷಣಾವಾದದಲ್ಲಿ ತೀರ, ಪ್ರಥಮಲಕ್ಷಣೆಯ ವಿಷಯವೆಂದೂ ಪ್ರಯೋಜನ ದ್ವಿತೀಯಲಕ್ಷಣೆಯ ವಿಷಯವೆಂದೂ ಹೇಳಿದರೆ, ಈ ಹೊಸವಾದದಲ್ಲಿ ತೀರ ಮತ್ತು ಪ್ರಯೋಜನ ಎರಡೂ ಒಟ್ಟಿಗೆ ಪ್ರಥಮಲಕ್ಷಣೆಯಿಂದಲೇ ಪ್ರತೀತವಾಗುವುದೆಂದು ಹೇಳಲ್ಪಡುತ್ತದೆ.

ಪ್ರಯೋಜನದಿಂದ ಕೂಡಿದುದೇ ಲಕ್ಷಣೆಗೆ ವಿಷಯವೆನ್ನುವುದು ಸರಿಯಲ್ಲ. ಏಕೆಂದರೆ—

ಜ್ಞಾನಸ್ಯ ವಿಷಯೋಽಹ್ಯನ್ಯಃ ಫಲಮನ್ಯದುದಾಹೃತಮ್ ॥ ೧೩*ab* ॥

ಜ್ಞಾನದ ವಿಷಯವೇ ಬೇರೆ; ಫಲವೇ ಬೇರೆ ಎಂದು ನಿರ್ಣಯಿಸಿದ್ದಾರೆ.[73]

ಪ್ರತ್ಯಕ್ಷವೇ ಮುಂತಾದ ಜ್ಞಾನಕ್ಕೆ 'ಕರಿಯದು' ಮುಂತಾದುದು ವಿಷಯ; ಅದರ ಫಲ ಮಾತ್ರ (ಜ್ಞೇಯಧರ್ಮವಾದ) ಪ್ರಕಟತೆ ಅಥವಾ (ಜ್ಞಾತೃಧರ್ಮವಾದ) ಸಂವೇದನ.[74]

ವಿಶಿಷ್ಟೇ ಲಕ್ಷಣಾ ನೈವಂ ॥ ೧೩*c* ॥

(ಪ್ರಯೋಜನ) ವಿಶಿಷ್ಟವಾದುದನ್ನು ಲಕ್ಷಣೆ ಬೋಧಿಸಲಾರದು.
ಮೇಲೆ ಹೇಳಿದ್ದರಿಂದಲೇ ಇದರ ವಿವರಣೆಯಾದಂತಾಗಿದೆ.

ವಿಶೇಷಾಃ ಸ್ಯುಸ್ತು ಲಕ್ಷಿತೇ ॥ ೧೩*d* ॥

ಲಕ್ಷ್ಯಾರ್ಥದಲ್ಲಿ (ವ್ಯಾಪಾರಾಂತರಗಮ್ಯವಾದ) ವಿಶೇಷಗಳುಂಟಾಗಬಹುದು; ಅಷ್ಟೆ.

'ತೀರ'ವೇ ಮುಂತಾದ ಲಕ್ಷ್ಯಾರ್ಥದಲ್ಲಿ 'ಪಾವನತ್ವ' ಮುಂತಾದ ವಿಶೇಷಗಳು ಇರಬಹುದು. ಆದರೆ ಅವು ಅಭಿಧೆ, ತಾತ್ಪರ್ಯ, ಲಕ್ಷಣೆ ಈ ಮೂರು ವ್ಯಾಪಾರ

---

[73] 'ಜ್ಞಾನ'ವೆಂದರೆ ಪ್ರತ್ಯಕ್ಷ, ಅನುಮಾನ, ಉಪಮಾನ, ಶಬ್ದ ಮುಂತಾದ ಪ್ರಮಾಣಗಳಿಂದ ಬರುವ ಪ್ರತೀತಿ. ಪ್ರತ್ಯಕ್ಷಜ್ಞಾನಕ್ಕೆ ವಸ್ತುಗಳು ವಿಷಯ, ಅದರ ಪ್ರಯೋಜನವೂ ವಸ್ತುವೇ ಅಲ್ಲ. ವಸ್ತುವಿನಲ್ಲಿ ಅಥವಾ ಜ್ಞಾತೃವಿನಲ್ಲಿ ಉಂಟಾಗುವ ಧರ್ಮ. ಹಾಗೆಯೇ ಗಂಗಾತೀರವೆಂಬುದು ವಸ್ತು; ಶೀತತ್ವವೆಂಬುದು ಧರ್ಮ. ಇವೆರಡೂ ಒಂದೇ ವ್ಯಾಪಾರದಿಂದ ಬೋಧ್ಯವಾಗಲಾರವು, ಬೇರೆಬೇರೆಯಾದ ಕಾರಣ. ಜ್ಞಾನದ ವಿಷಯ ಮತ್ತು ಫಲಗಳು ಬೇರೆಬೇರೆಯೆಂಬುದನ್ನು ಎಲ್ಲ ದಾರ್ಶನಿಕರೂ ಒಪ್ಪುತ್ತಾರೆ.

[74] ಭಾಟ್ಟಮೀಮಾಂಸಕರ ಪ್ರಕಾರ ಪ್ರತ್ಯಕ್ಷಜ್ಞಾನದ ಫಲ ಜ್ಞೇಯವಸ್ತುವಿನ ಧರ್ಮವಾದ 'ಪ್ರಕಟತೆ'; ಒಂದು ವಸ್ತುವನ್ನು ನಾವು ನೋಡಿದರೆ ಆ ವಸ್ತುವಿನಲ್ಲಿ 'ಪ್ರಕಟತೆ'ಯೆಂಬ ಧರ್ಮವು ಉತ್ಪನ್ನವಾಗುವುದೆಂದು ಅವರ ಮತ. ಇದೇ ಆ ಪ್ರತ್ಯಕ್ಷಜ್ಞಾನದ ಫಲ ಅಥವಾ ಪ್ರಯೋಜನ. ಆದರೆ ಪ್ರಾಭಾಕರ ಮೀಮಾಂಸಕರ ಮತ್ತು ತಾರ್ಕಿಕರ ಪ್ರಕಾರ ಜ್ಞಾನದಿಂದ ಜ್ಞೇಯವಸ್ತುವಿನಲ್ಲಿ ಧರ್ಮವಾವುದೂ ಬರುವುದಿಲ್ಲ; ಜ್ಞಾತೃವಿನಲ್ಲಿ ಮಾತ್ರ 'ಸಂವೇದನ, ಅಥವಾ 'ಅನುವ್ಯವಸಾಯ'ವೆಂಬ ಧರ್ಮವು ಹುಟ್ಟುವುದು. ಈ ಎರಡು ಸಿದ್ಧಾಂತಗಳಲ್ಲೂ ಜ್ಞಾನದ ವಿಷಯವೇ ಬೇರೆ ಪ್ರಯೋಜನವೇ ಬೇರೆ ಎಂಬ ತತ್ತ್ವ ಮಾತ್ರ ಸಮಾನ. ಮಮ್ಮಟನು ಇಲ್ಲಿ ಎರಡು ಸಿದ್ಧಾಂತಗಳಿಗೂ ಅನ್ವಯಿಸಿ ವಿವರಿಸುತ್ತಿದ್ದಾನೆ.

ಗಳಿಗಿಂತಲೂ ಬೇರೆಯಾದ ಮತ್ತೊಂದು ವ್ಯಾಪಾರದಿಂದ ಮಾತ್ರ ಗಮ್ಯ. ಆ ವ್ಯಾಪಾರವನ್ನು ವ್ಯಂಜನ, ಧ್ವನನ, ದ್ಯೋತನ ಮುಂತಾದ ಪದಗಳಿಂದ ಹೆಸರಿಸ ಬಹುದು. ಅದುಂಟೆಂದು ಅವಶ್ಯವಾಗಿ ಅಂಗೀಕರಿಸಲೇಬೇಕು.

ಇಲ್ಲಿಯ ವರೆಗೆ ಲಕ್ಷಣಾಮೂಲವಾದ ವ್ಯಂಜಕತ್ವವನ್ನು ಹೇಳಲಾಯಿತು. ಇನ್ನು ಅಭಿಧಾಮೂಲವಾದುದನ್ನು ವಿವರಿಸುತ್ತಾನೆ—

ಅನೇಕಾರ್ಥಸ್ಯ ಶಬ್ದಸ್ಯ ವಾಚಕತ್ವೇ ನಿಯಾತ್ರಿತೇ ।
ಸಂಯೋಗಾದ್ಯೈರವಾಚ್ಯಾರ್ಥಧೀಕೃದ್ ವ್ಯಾಪೃತಿರಂಜನಮ್ ॥೧೪॥

ನಾನಾರ್ಥಗಳನ್ನುಳ್ಳ ಶಬ್ದದ ವಾಚಕತ್ವಶಕ್ತಿ ಒಂದರ್ಥದಲ್ಲಿ ಮಾತ್ರ ನಿಯಮಿತವಾದ ಮೇಲೆ 'ಸಂಯೋಗ' ಮುಂತಾದುವುಗಳ ಪ್ರಭಾವದಿಂದ ಮತ್ತೊಂದರ್ಥ ಸ್ಫುರಿಸುತ್ತಿದ್ದರೆ ಅಲ್ಲಿ ವ್ಯಾಪಾರ ವಾಚಕತ್ವವಲ್ಲ; ವ್ಯಂಜನೆಯೇ.

"'ಸಂಯೋಗ', 'ವಿಯೋಗ', 'ಸಾಹಚರ್ಯ', 'ವಿರೋಧ', 'ಅರ್ಥ', 'ಪ್ರಕರಣ', 'ಲಿಂಗ', ಶಬ್ದಾಂತರದ 'ಸನ್ನಿಧಿ', 'ಸಾಮರ್ಥ್ಯ,' 'ಔಚಿತ್ಯ', 'ದೇಶ', 'ಕಾಲ', 'ವ್ಯಕ್ತಿ', 'ಸ್ವರ'—ಇವೇ ಮುಂತಾದುವು ಶಬ್ದದ ಅರ್ಥ ಸಂದಿಗ್ಧ ವಾದಾಗ ಸ್ಪಷ್ಟತೆಯನ್ನುಂಟುಮಾಡಲು ಸಹಾಯಕವಾಗುವುವು"[75] ಎಂದು ಹೇಳಿರುವ ಪ್ರಕಾರ—

'ಶಂಖಚಕ್ರಗಳನ್ನುಳ್ಳ ಹರಿ', 'ಶಂಖಚಕ್ರಗಳಿಲ್ಲದ ಹರಿ' ಎಂಬಲ್ಲಿ ಹರಿಯೆಂದರೆ[76] ಶ್ರೀಮನ್ನಾರಾಯಣನೇ; 'ರಾಮಲಕ್ಷ್ಮಣರು' ಎಂಬಲ್ಲಿ ದಶರಥನ ಮಕ್ಕಳೇ; 'ಅವರದು ರಾಮಾರ್ಜುನರ ಗತಿಯಾಯಿತು' ಎಂಬಲ್ಲಿ ಪರಶುರಾಮ ಕಾರ್ತ ವೀರ್ಯಾರ್ಜುನರೇ; 'ಭವನಾಶನನಾದ ಸ್ಥಾಣುವನ್ನು ಭಜಿಸು' ಎಂಬಲ್ಲಿ ಶಿವನೇ; 'ದೇವನಿಗೆ ಎಲ್ಲವೂ ವಿದಿತ' ಎಂಬಲ್ಲಿ ದೇವನೆಂದರೆ ನೀನು; 'ಮಕರಧ್ವಜನು ಕುಪಿತ ನಾಗಿರುವನು' ಎಂಬಲ್ಲಿ ಕಾಮ; 'ಪುರವೈರಿಯಾದ ದೇವ'ನೆಂದರೆ ಶಂಭು; 'ಕೋಗಿಲೆ ಮಧುವಿನಿಂದ ಮತ್ತವಾಗಿದೆ' ಎಂದರೆ ವಸಂತದಲ್ಲಿ; 'ಕಾಂತಾಮುಖ ರಕ್ಷಿಸಲಿ' ಎಂದರೆ ಸಾಮ್ಮುಖ್ಯ; 'ರಾಜಧಾನಿಯಲ್ಲಿ ಪರಮೇಶ್ವರನು ರಾಜಿಸುತ್ತಾನೆ' ಎಂದರೆ ರಾಜ; ಹಗಲು 'ಚಿತ್ರಭಾನು ಬೆಳಗುತ್ತಾನೆ' ಎಂದರೆ ಸೂರ್ಯ; ಅದನ್ನೇ ರಾತ್ರೆ ಹೇಳಿದರೆ ಅಗ್ನಿ; ಮಿತ್ರ ಬೆಳಗುತ್ತಾನೆ ('ಮಿತ್ರ' ಎಂಬುದು ನಪುಂಸಕ

---

[75] ಭರ್ತೃಹರಿಯ **ವಾಕ್ಯಪದೀಯ**, II, ೭೩೧. (ಕಾಶೀ ಸಂಸ್ಕೃತ ಗ್ರಂಥಮಾಲೆ).

[76] 'ಹರಿ'ಯ ನಾನಾರ್ಥಗಳಲ್ಲಿ ಇಂದ್ರ, ಯಮ, ಸೂರ್ಯ, ಚಂದ್ರ, ಸಿಂಹ, ಕುದುರೆ ಕೋತಿ, ಹಾವು, ಕಪ್ಪೆ, ಎಲ್ಲವೂ ಬರುತ್ತವೆ.

ಲಿಂಗದಲ್ಲಿ ಪ್ರಯುಕ್ತ) ಎಂದರೆ ಸ್ನೇಹಿತ; ಅದೇ ಪುಲ್ಲಿಂಗವಿದ್ದಾಗ 'ಸೂರ್ಯ'. ಸ್ವರವು 'ಇಂದ್ರಶತ್ರು' ಮುಂತಾದ ವೇದಪ್ರಯೋಗಗಳಲ್ಲಿ ಮಾತ್ರ ವಿಶೇಷಾರ್ಥವನ್ನು ತರುತ್ತದೆ; ಕಾವ್ಯದಲ್ಲಿಲ್ಲ. 'ಇವೇ ಮುಂತಾದುವು' ಎನ್ನುವುದರಿಂದ—

ಏದ್ದಹಮೇತ್ತತ್ಥಣಿಆ ಏದ್ದಹಮೇತ್ತೇಹಿಂ ಅಚ್ಛಿವತ್ತೇಹಿಂ।
ಏದ್ದಹಮೇತ್ತಾವತ್ಥಾ ಏದ್ಧಹಮೇತ್ತೇಹಿಂ ದಿಅಏಹಿಂ॥

ಇನಿತಿನಿತು ಪಿರಿಯ ಮೊಲೆಯವ-
ಳಿನಿತಿನಿತೆಸಲಕ್ಷಿ ಪತ್ರಮವಳಾನನದೊಳ್।
ಇನಿತೀ ದೊರೆಯಾದಳ್ ಮೇಣ್
ಇನಿತೀ ದಿವಸಂಗಳಲ್ಲಿ ನುಡಿಯಲ್ಕಾರೆಂ॥

ಮುಂತಾದೆಡೆಗಳಲ್ಲಿ ಅಭಿನಯಾದಿಗಳೂ ಅರ್ಥದ್ಯೋತಕವಾಗುತ್ತವೆ.

ಹೀಗೆ ಸಂಯೋಗಾದಿಗಳು ಶಬ್ದದ ಇತರಾರ್ಥ ವಾಚಕತ್ವವನ್ನು ನಿವಾರಿಸಿದ್ದರೂ ನಾನಾರ್ಥಕ ಶಬ್ದ ಒಮ್ಮೊಮ್ಮೆ ಅರ್ಥಾಂತರವನ್ನು ಬೋಧಿಸುತ್ತಿದ್ದರೆ ಅಲ್ಲಿ ಅಭಿಧೆಯೆನ್ನಲಾಗದು, ಅದರ ಶಕ್ತಿ ನಿಯಮಿತವಾಗಿಬಿಟ್ಟಿರುವ ಪ್ರಯುಕ್ತ. ಅಲ್ಲಿ ಲಕ್ಷಣೆಗೂ ಅವಕಾಶವಿಲ್ಲ, ಮುಖ್ಯಾರ್ಥಬಾಧೆಯೇ ಮುಂತಾದ ನಿಮಿತ್ತಗಳಿಲ್ಲದಿರುವುದರಿಂದ. ಆದರೆ ವ್ಯಂಜನೆಯೇ ಶಬ್ದದ ವ್ಯಾಪಾರ. ಉದಾಹರಣೆ—

ಭದ್ರಾತ್ಮನೋ ದುರಧಿರೋಹತನೋರ್ವಿಶಾಲ-॥
ವಂಶೋನ್ನತೇಃ ಕೃತಶಿಲೀಮುಖಸಂಗ್ರಹಸ್ಯ।
ಯಸ್ಯಾನುಪಪ್ಲುತಗತೇಃ ಪರವಾರಣಸ್ಯ
ದಾನಾಂಬುಸೇಕ ಸುಭಗಃ ಸತತಂ ಕರೋಽಭೂತ್॥

ಭದ್ರಾತ್ಮನೂ ದುರಧಿರೂಢನುಮಾ ವಿಶಾಲ-
ವಂಶೋನ್ನತಂ ಕೃತಶಿಲೀಮುಖ ಸಂಗ್ರಹಂ ಮೇಣ್।
ನಿತ್ಯಾನುಪಪ್ಲುತಗತಂ ಪರವಾರಣಂ ತಾಂ
ದಾನಾಂಬುವಿಂದೆ ಸುಭಗಂ ಕರಮಾಯ್ತುವಂಗಂ[77]

[77] ಇದು ರಾಜನ ಪ್ರಶಂಸಾಪರವಾದ ಶ್ಲೋಕ. ಅವನು ದಾನವೀರನೆಂದು ವರ್ಣಿಸುವಾಗಲೇ ಶ್ಲೇಷೆಯಿಂದ ಶಬ್ದಗಳು ಆನೆಗೂ ಅನ್ವಯಿಸುತ್ತವೆ. ಆನೆ ಪ್ರಸ್ತುತವಲ್ಲದಿದ್ದರೂ ರಾಜನು ಆನೆಗೆ ಸಮಾನವೆಂಬುದು ವ್ಯಂಜನಾವ್ಯಾಪಾರ ಗಮ್ಯ. ರಾಜನ ದಾನೋದಕ, ಆನೆಯ ಮದೋದಕ ಕರ—ಸೊಂಡಿಲುಗಳಂತೆ ಭದ್ರಸ್ವರೂಪ, ದುರಧಿರೋಹ—ಶರೀರ, ವಂಶೋನ್ನತಿ, ಶಿಲೀಮುಖ (ಬಿಲ್ಲು ಮತ್ತು ದುಂಬಿ) ಸಂಗ್ರಹ, ಅಪ್ರತಿಹತಗಮನ, ಸರವಾರಣತ್ವ ಮುಂತಾದ ವಿಶೇಷಣಗಳೂ ಎರಡು ಕಡೆಗೂ ಅನ್ವಯಿಸುವಂತಿವೆ. ಹೋಲಿಸಿ—ಕನ್ನಡ ಧ್ವನ್ಯಾಲೋಕ, ಪುಟ ೨೬-೪೯

ತದ್ಯುಕ್ತೋ ವ್ಯಂಜಕಶ್ಶಬ್ದಃ ‖ ೧೫*a* ‖

ಆದರಿಂದ ಕೂಡಿದ ಶಬ್ದ ವ್ಯಂಜಕ.
ಆದರಿಂದ ಎಂದರೆ ವ್ಯಂಜನಾವ್ಯಾಪಾರದಿಂದ.

ಯತ್ಸೋಽರ್ಥಾಂತರಯುಕ್ ತಥಾ । ೧೫*b* ।
ಅರ್ಥೋಽಪಿ ವ್ಯಂಜಕಸ್ತತ್ರ ಸಹಕಾರಿತಯಾ ಮತಃ ‖ ೧೫*cd* ‖

ಏಕೆಂದರೆ ಅದು (=ಶಬ್ದವು) ಅರ್ಥಾಂತರದೊಡನೆ ಕೂಡಿರುತ್ತದಾಗಿ ಹಾಗೆನಿಸುತ್ತದೆ. ಅರ್ಥವೂ ಕೂಡ (ಧ್ವನಿಸುವುದರಲ್ಲಿ) ಶಬ್ದಕ್ಕೆ ಸಹಕಾರಿಯಾಗುವುದರಿಂದ ಕಾವ್ಯದಲ್ಲಿ ವ್ಯಂಜಕವೆಂದೊಪ್ಪಲಾಗಿದೆ.

ಇಲ್ಲಿಗೆ ಕಾವ್ಯಪ್ರಕಾಶದಲ್ಲಿ 'ಶಬ್ದಾರ್ಥ ಸ್ವರೂಪ ನಿರ್ಣಯ' ಎಂಬ ಎರಡನೆಯ ಉಲ್ಲಾಸ ಮುಗಿದುದು.

ನುತ ಶಬ್ದಾರ್ಥಂಗಳ ಸಂ-
ಗತಿಯಂ ನಿಷ್ಕೃಷ್ಟವಾಗಿ ಮಮ್ಮಟನೊರೆದಂ ।
ಮತಿವಂತರ್ ಕನ್ನಡಿಗರ್
ಶತಿಕರಿಸುಗೆ ಕಾವ್ಯತತ್ವನಿರ್ಣಯರಸಿಕರ್ ‖

—ಡಾ॥ ಕೆ. ಕೃಷ್ಣಮೂರ್ತಿ

ಸತ್ಯಕ್ರಿಯಾ

ಸತ್ಯಕ್ರಿಯೆಯೆಂದರೆ ಸತ್ಯದ (ಸತ್ಯವಾಕ್ಯದ) ಉಚ್ಚಾರಣೆಯಿಂದ ಸಾಧಿಸುವ ಕಾರ್ಯ. ಸತ್ಯವಾದ ಈ ವಾಕ್ಯದ ಉಚ್ಚಾರಣೆಯಿಂದ ಮನಸ್ಸಿನಲ್ಲಿರುವ ಕಾರ್ಯವು ಸಿದ್ಧಿಸಲೆಂದು ಸಂಕಲ್ಪಿಸಿ ಸತ್ಯವಾಕ್ಯವನ್ನು ಉಚ್ಚಾರಣೆಮಾಡಿ ಆ ಮೂಲಕ ಕಾರ್ಯ ಸಿದ್ಧಿಯನ್ನು ಪಡೆಯುವುದಕ್ಕೆ ಸತ್ಯಕ್ರಿಯೆಯೆಂದು ಹೆಸರು.

ಸತ್ಯಕ್ರಿಯೆಗೆ ನಾಲ್ಕು ಅಂಗಗಳಿರುವುವು

(೧) ಸತ್ಯವಾದ ವಾಕ್ಯ. (೨) ಅದರ ಉಚ್ಚಾರಣೆ. (೩) ಉಚ್ಚಾರಣೆಯಿಂದ ಅಭೀಪ್ಸಿತವಾದ ಕಾರ್ಯವು ಕೈಗೂಡಲೆಂಬ ಸಂಕಲ್ಪ (ಈ ಸಂಕಲ್ಪವನ್ನು ಬಾಯಿಯಲ್ಲಿ ಹೇಳಿದರೂ ಹೇಳಬಹುದು ಅಥವಾ ಹೇಳದೆಯೇ ಇರಬಹುದು.) (೪) ಅಭೀಪ್ಸಿತವಾದ ಕಾರ್ಯದ ಸಿದ್ಧಿ. ಇದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇವೆ.

ಸುಭದ್ರೆಯಿಂದಲೂ ಉತ್ತರೆಯಿಂದಲೂ ಪ್ರಾರ್ಥಿತನಾದ ಶ್ರೀ ಕೃಷ್ಣನು ಸತ್ತು ಹುಟ್ಟಿದ ಉತ್ತರೆಯ ಮಗುವನ್ನು ಬದುಕಿಸಿದ ವಿಷಯವು ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ (೬೯, ೧೭-೨೪) ಈ ರೀತಿಯಾಗಿ ವರ್ಣಿಸಲ್ಪಟ್ಟಿರುವುದು :

ಪ್ರತಿಜಜ್ಞೇ ಚ ದಾಶಾರ್ಹಃ ತಸ್ಯ ಜೀವಿತಮಚ್ಯುತಃ |
ಅಬ್ರವೀಚ್ಚ ವಿಶುದ್ಧಾತ್ಮಾ ಸರ್ವಂ ವಿಶ್ರಾವಯನ್ ಜಗತ್ ||೧೭||

ನ ಬ್ರವೀಮ್ಯುತ್ತರೇ ಮಿಥ್ಯಾ ಸತ್ಯಮೇತದ್ಭವಿಷ್ಯತಿ |
ಏಷ ಸಂಜೀವಯಾಮ್ಯೇನಂ ಪಶ್ಯತಾಂ ಸರ್ವದೇಹಿನಾಂ || ೧೮ ||

ನೋಕ್ತಪೂರ್ವಂ ಮಯಾ ಮಿಥ್ಯಾ ಸ್ವೈರೇಷ್ವಪಿ ಕದಾಚನ |
ನ ಚ ಯುದ್ಧಾತ್ಪರಾ ವೃತ್ತಃ ತಥಾ ಸಂಜೀವತಾಮಯಂ || ೧೯ ||

ಯಥಾ ಮೇ ದಯಿತೋ ಧರ್ಮೋ ಬ್ರಾಹ್ಮಣಾಶ್ಚ ವಿಶೇಷತಃ |
ಅಭಿಮನ್ಯೋಃ ಸುತೋ ಜಾತೋ ಮೃತೋ ಜೀವತ್ವಯಂ ತಥಾ ||೨೦||

ಯಥಾಹಂ ನಾಭಿಜಾನಾಮಿ ವಿಜಯೇ ತು ಕದಾಚನ |
ವಿರೋಧಂ ತೇನ ಸತ್ಯೇನ ಮೃತೋ ಜೀವತ್ವಯಂ ಶಿಶುಃ ||೨೧||

ಯಥಾ ಸತ್ಯಂ ಚ ಧರ್ಮಶ್ಚ ಮಯಿ ನಿತ್ಯಂ ಪ್ರತಿಷ್ಠಿತೌ |
ತಥಾ ಮೃತಃ ಶಿಶುರಯಂ ಜೀವತಾದಭಿಮನ್ಯುಜಃ ||೨೨||

ಯಥಾ ಕಂಸಶ್ಚ ಕೇಶೀ ಚ ಧರ್ಮೇಣ ನಿಹತೌ ಮಯಾ|
ತೇನ ಸತ್ಯೇನ ಬಾಲೋऽಯಂ ಪುನಃ ಸಂಜೀವತಾಮಿಹ ||೨೩||

ಇತ್ಯುಕ್ತ್ವಾ ವಾಸುದೇವೋऽಥ ತಂ ಬಾಲಂ ಭರತರ್ಷಭ|
ಪಾದೇನ ಕಮಲಾಭೇನ ಬ್ರಹ್ಮರುದ್ರಾರ್ಚಿತೇನ ಚ|
ಪಸ್ಪರ್ಶ ಪುಂಡರೀಕಾಕ್ಷ ಆಪಾದತಲಮಸ್ತಕಂ ||೨೪||

ಸ್ಪೃಷ್ಟಮಾತ್ರಸ್ತು ಕೃಷ್ಣೇನ ಸ ಬಾಲೋ ಭರತರ್ಷಭ|
ಶನೈಶ್ಶನೈರ್ಮಹಾರಾಜ ಪ್ರಾಪದ್ಯತ ಸಚೇತನಾಂ ||೨೫||

ಇಲ್ಲಿ ಶ್ರೀ ಕೃಷ್ಣನು ಹದಿನೆಂಟನೆಯ ಶ್ಲೋಕದಲ್ಲಿ "ಏಷ ಸಂಜೀವಯಾಮ್ಯೇನಂ ಪಶ್ಯತಾಂ ಸರ್ವದೇಹಿನಾಂ" ಎಂದು ಮನಸ್ಸಿನಲ್ಲಿದ್ದ ಸಂಕಲ್ಪವನ್ನು ಹೇಳಿದ್ದಾನೆ. ೨೫ ನೇ ಶ್ಲೋಕದಲ್ಲಿರುವ "ಶನೈಃಶನೈಃ ಮಹಾರಾಜ ಪ್ರಾಪದ್ಯತ ಸಚೇತನಾಂ" ಎಂಬ ವಾಕ್ಯದಿಂದ ಅಭೀಪ್ಸಿತವಾದ ಕಾರ್ಯವು ಸಿದ್ಧಿಸಿತೆಂದು ಹೇಳಿದೆ. ಹತ್ತೊಂಭತ್ತರಿಂದ ಇಪ್ಪತ್ತಮೂರನೇ ಶ್ಲೋಕಗಳಲ್ಲಿರುವ "ನೋಕ್ತಪೂರ್ವಂ ಮಯಾ ಮಿಥ್ಯಾ ಸ್ವೈರೇಷ್ವಪಿ ಕದಾಚನ| ನಚಯುದ್ಧಾತ್ಪರಾವೃತ್ತಃ . . . ತೇನಸತ್ಯೇನ ಬಾಲೋऽಯಂ ಪುನಃ ಸಂಜೀವತಾಮಿಹ" ಎಂಬ ವಾಕ್ಯಗಳಲ್ಲಿ ಶ್ರೀ ಕೃಷ್ಣನು ಹೇಳಿದ ಐದು ಸತ್ಯವಾಕ್ಯಗಳೂ ಈ ಸತ್ಯವಾಕ್ಯಗಳ ಉಚ್ಚಾರಣೆ ಮೂಲಕವಾಗಿ (ತಥಾ, ತಥಾ, ತೇನಸತ್ಯೇನ, ತಥಾ, ತೇನಸತ್ಯೇನ) ಇಷ್ಟಕಾರ್ಯವು ಸಿದ್ಧಿಸಬೇಕಾಗಿರುವುದೆಂದೂ ಹೇಳಲ್ಪಟ್ಟಿರುವುದು.

ಹೀಗೆಯೇ ಅರ್ಜುನನು ಕರ್ಣನನ್ನು ಕೊಲ್ಲುವಾಗ ಸತ್ಯಕ್ರಿಯೆಯನ್ನು ಮಾಡಿದನೆಂದು ಕರ್ಣಪರ್ವದಲ್ಲಿರುವ (೯೮—೪೫, ೪೬, ೪೭, ೫೦) ಶ್ಲೋಕಗಳಿಂದ ತಿಳಿದು ಬರುತ್ತದೆ. ಈ ಶ್ಲೋಕಗಳು ಯಾವುವೆಂದರೆ :

ತತಸ್ತು ತಂ ವೈ ಶರಮಪ್ರಮೇಯಂ
ಗಾಂಡೀವಧನ್ವಾ ಧನುಷಿ ನ್ಯಯೋಜಯತ್|
ಯುಕ್ತ್ವಾ ಮಹಾಸ್ತ್ರೇಣ ಪರೇಣ ಚಾಪಂ
ವಿಕೃಷ್ಯ ಗಾಂಡೀವಮುವಾಚ ಸತ್ವರಂ ||೪೫||

ಅಯಂ ಮಹಾಸ್ತ್ರಪ್ರಹಿತೋ ಮಹಾಶರಃ
ಶರೀರಹೃಚ್ಚಾಸುಹರಶ್ಚ ದುರ್ಹೃದಃ|
ತಪೋऽಸ್ತಿ ತಪ್ತಂ ಗುರವಶ್ಚ ತೋಷಿತಾ
ಮಯಾ ಯದೀಷ್ಟಂ ಸುಹುತಂ ಯದಿಶ್ರುತಂ ||೪೬||

ಅನೇನ ಸತ್ಯೇನ ನಿಹಂತ್ವಯಂ ಶರಃ
ಸುಸಂಹಿತಃ ಕರ್ಣಮರಿಂ ಮಮೋರ್ಜಿತಂ |
ಇತ್ಯೂಚಿವಾಂಸ್ತಂ ಪ್ರಮುಮೋಚ ಬಾಣಂ
ಧನಂಜಯಃ ಕರ್ಣವಧಾಯ ಘೋರಂ ||೪೭||

ತೇನಾರ್ಜುನಸ್ತನ್ ಮಹನೀಯಮಸ್ಯ
ಶಿರೋಽಹರತ್ ಸೂತಪುತ್ರಸ್ಯ ರಾಜನ್ ||೫೦||

ಇಲ್ಲಿ ನಲವತ್ತಾರನೇ ಶ್ಲೋಕದ ಪೂರ್ವಾರ್ಧದಲ್ಲಿ 'ಅಯಂ ... ದುರ್ಹೃದಃ' ಎಂಬ ವಾಕ್ಯದಲ್ಲಿ ಅರ್ಜುನನಿಗೆ ಈಪ್ಸಿತವಾದ ಕಾರ್ಯವೂ ಉತ್ತರಾರ್ಧದಲ್ಲಿ ಸತ್ಯವಾಕ್ಯವೂ ೪೭ ನೇ ಶ್ಲೋಕದ ಪೂರ್ವಾರ್ಧದಲ್ಲಿ (ಅನೇನ ಸತ್ಯೇನ ನಿಹಂತು ... ಕರ್ಣಮರಿಂ) ಈ ಸತ್ಯವಾಕ್ಯದ ಉಚ್ಚಾರಣೆಯಿಂದ ಈಪ್ಸಿತವಾದ ಕಾರ್ಯವು ಕೈಗೂಡಲಿ ಎಂಬ ಸಂಕಲ್ಪವೂ ೫೦ ನೇ ಶ್ಲೋಕದ ಉತ್ತರಾರ್ಧದಲ್ಲಿ ಆ ಕಾರ್ಯದ ಸಿದ್ಧಿಯೂ ಹೇಳಲ್ಪಟ್ಟಿರುವುವು.

ಗ್ರಂಥಗಳಲ್ಲಿ ವರ್ಣಿಸಲ್ಪಟ್ಟಿರುವ ಎಲ್ಲ ಸತ್ಯಕ್ರಿಯೆಗಳ ನಿರೂಪಣೆಯಲ್ಲಿಯೂ ಈ ನಾಲ್ಕು ಅಂಗಗಳೂ ನಿರೂಪಿಸಲ್ಪಟ್ಟಿರುವುದಿಲ್ಲ. ದಿವ್ಯಾವದಾನದ ೬೧೩ ನೇ ಪುಟದಲ್ಲಿ ಹೇಳಲ್ಪಟ್ಟಿರುವ—

ಸರಃ ಪ್ರಸನ್ನಂ ನಿರ್ದೋಷಂ ಪ್ರಶಾಂತಂ ಸರ್ವತೋಭಯಂ|
ಈತಯೋ ಯತ್ರ ಶಾಮ್ಯಂತಿ ಭಯಾನಿ ಚಲಿತಾನಿ ಚ ||

ತಂ ವೈ ದೇವಾ ನಮಸ್ಯಂತಿ ಸರ್ವಸಿದ್ಧಾಶ್ಚ ಯೋಗಿನಃ|
ಏತೇನ ಸತ್ಯವಾಕ್ಯೇನ ಸ್ವಸ್ತ್ಯಾನಂದಾಯ ಭಿಕ್ಷವೇ ||

ಅಥಾಯುಷ್ಮಾನಾನಂದಃ ಪ್ರತಿಹತ ಚಂಡಾಲಮಂತ್ರಃ
ಚಂಡಾಲಗೃಹಾನ್ನಿಷ್ಕ್ರಮ್ಯ ಯೇನ ಸ್ವಕೋ ವಿಹಾರಃ
ತೇನೋಪಸಂಕ್ರಮಿತು ಮಾರಬ್ಧಃ||

ಎಂಬ ವಾಕ್ಯಗಳಲ್ಲಿ ನಿರೂಪಿಸಲ್ಪಟ್ಟಿರುವ ಸತ್ಯಕ್ರಿಯೆಯಲ್ಲಿ ಮೂರು ಅಂಗಗಳು ಮಾತ್ರ ಕಾಣಬರುವುವು ; ಸತ್ಯವಾಕ್ಯವನ್ನು ಬುದ್ಧನು ಉಚ್ಚರಿಸಿದನೆಂದು ಹೇಳಲ್ಪಟ್ಟಿಲ್ಲ. ಮಹಾಭಾರತದ ಅನುಶಾಸನಪರ್ವದಲ್ಲಿರುವ—

ಅಗ್ನಿರುವಾಚ

ಯಥ್ಯಾಹಂ ತತ್ರ ನಾಶ್ನಾಮಿ ಯತ್ರ ನಾಶ್ನಂತಿ ವೈ ದ್ವಿಜಾಃ |
ಏತೇನ ಸತ್ಯವಾಕ್ಯೇನ ಪಾದಃ ಕುಂಭಸ್ಯ ಪೂರ್ಯತಾಂ||

ಸೂರ್ಯ ಉವಾಚ

ಯಥಾ ಗೋಬ್ರಾಹ್ಮಣಸ್ಯಾರ್ಥೇ ನ ತಪಾಮಿ ಯಥಾಬಲಂ |
ಏತೇನ ಸತ್ಯವಾಕ್ಯೇನ ಪಾದಃ ಕುಂಭಸ್ಯ ಪೂರ್ಯತಾಂ ||

ಶಚ್ಯುವಾಚ

ಕರ್ಮಣಾ ಮನಸಾ ವಾಚಾ ನಾವಮನ್ಯೇ ಪುರಂದರಂ |
ಏತೇನ ಸತ್ಯವಾಕ್ಯೇನ ಪಾದಃ ಕುಂಭಸ್ಯ ಪೂರ್ಯತಾಂ ||

ಎಂಬ ಶ್ಲೋಕಗಳಲ್ಲಿ (ಅಧ್ಯಾಯ ೧೩, ಶ್ಲೋ. ೪-೬) ಕಂಡುಬರುವ ಸತ್ಯಕ್ರಿಯೆಯಲ್ಲಿ ಸತ್ಯವಾಕ್ಯವೂ ಅದರ ಉಚ್ಚಾರಣೆಯೂ ಮನಸ್ಸಿನಲ್ಲಿ ಅಪೇಕ್ಷಿತವಾದ ಕಾರ್ಯವೂ ಹೇಳಲ್ಪಟ್ಟಿರುವವು; ಅಪೇಕ್ಷಿತವಾದ ಕಾರ್ಯವು ಸಿದ್ಧಿಸಿತೆಂದು ಹೇಳಲ್ಪಟ್ಟಿಲ್ಲ.

'ಜರ್ನಲ್ ಆಫ್ ದಿ ರಾಯಲ್ ಏಷ್ಯಾಟಿಕ್ ಸೊಸೈಟಿ' (೧೯೧೭, ೪೨೯ff) ಪತ್ರಿಕೆಯಲ್ಲಿ ಪ್ರ|| ಬರ್ಲಿಂಗೇಮ್ (B. W. Burlimgame)ರವರು ಸತ್ಯಕ್ರಿಯೆಯನ್ನು ಕುರಿತು ವಿಸ್ತೃತವಾದ ಲೇಖನವನ್ನು ಬರೆದಿರುತ್ತಾರೆ. ಅಲ್ಲಿ ೪೩೬ನೇ ಪುಟದಲ್ಲಿ ಅವರು ಹೇಳಿರುವ ರೀತ್ಯಾ ಸತ್ಯಕ್ರಿಯೆಯನ್ನು ನಿರೂಪಿಸುವ ವಾಕ್ಯಗಳು ಸಂಸ್ಕೃತದಲ್ಲಿ 'ಯೇನ ಸತ್ಯೇನ ಸತ್ಯವಚನೇನ . . . . ತೇನಸತ್ಯೇನ ಸತ್ಯವಚನೇನ; ಅನೇನ ಸತ್ಯೇನ ಸತ್ಯವಚನೇನ; ಏತೇನ ಸತ್ಯವಾಕ್ಯೇನ; ಅನೇನ ಸತ್ಯವಾಕ್ಯೇನ; ಯಥಾ . . . ಸತ್ಯವಚನೇನ; ಯಥಾ . . . ಸತ್ಯೇನ; ಯಥಾ . . . ಏತೇನ ಸತ್ಯೇನ; ಯದಿ . . . ತೇನ ಸತ್ಯೇನ; ಯಥಾ . . . ತಥಾ; ಅತಃ; ಯಥಾ . . . ಅತಃ' ಎಂದೂ ಬಹುವಿಧವಾಗಿರುವುವು. ನಾವು ಮೇಲೆ ಉದಾಹರಿಸಿರುವ ಆಶ್ವಮೇಧಿಕಪರ್ವದ ಶ್ಲೋಕಗಳಲ್ಲಿ ತಥಾ ಎಂದೂ, ಯಥಾ . . . ತಥಾ ಎಂದೂ ಯಥಾ ತೇನ ಸತ್ಯೇನ ಎಂದೂ ಮೂರು ವಿಧವಾಗಿ ಸತ್ಯಕ್ರಿಯೆಯು ನಿರ್ದೇಶಿಸಲ್ಪಟ್ಟಿರುವುದು. ಮೇಲೆ ಹೇಳಿದ ಕರ್ಣಪರ್ವದ ಶ್ಲೋಕಗಳಲ್ಲಿ ಯದಿ . . . ಅನೇನ ಸತ್ಯೇನ ಎಂದೂ ಇರುವುದು. ಮೇಲೆ ಹೇಳಿದ ದಿವ್ಯಾವದಾನದ ವಾಕ್ಯದಲ್ಲಿ ಏತೇನ ಸತ್ಯೇನ ಎಂದೂ ಇರುವುದು. ಯಥಾ . . . ತಥಾ ಎಂಬ ಪದಗಳ ಪ್ರಯೋಗಕ್ಕೆ ಇನ್ನೆರಡು ಉದಾಹರಣೆಗಳನ್ನು ಕೊಡುತ್ತೇವೆ.

ರಘುವಂಶ ೧೫, ೮೦-೮೧ :

ಅಥ ವಾಲ್ಮೀಕಿ ಶಿಷ್ಯೇಣ ಪುಣ್ಯಮಾವರ್ಜಿತಂ ಪಯಃ |
ಆಚಮ್ಯೋದೀರಯಾಮಾಸ ಸೀತಾ ಸತ್ಯಾಂ ಸರಸ್ವತೀಂ ||
ವಾಙ್ಮನಃಕರ್ಮಭಿಃ ಪತ್ಯೌ ವ್ಯಭಿಚಾರೋ ಯಥಾ ನಮೇ |
ತಥಾ ವಿಶ್ವಂಭರೇ ದೇವಿ ಮಾಮಂತರ್ಧಾತುಮರ್ಹಸಿ ||

ಶ್ರೀಮದ್ರಾಮಾಯಣ ೬, ೧೧೬, ೨೫-೨೬ :

ಯಥಾ ಮೇ ಹೃದಯಂ ನಿತ್ಯಂ ನಾಪಸರ್ಪತಿ ರಾಘವಾತ್ |
ತಥಾ ಲೋಕಸ್ಯ ಸಾಕ್ಷೀ ಮಾಂ ಸರ್ವತಃ ಪಾತು ಪಾವಕಃ ||
ಯಥಾ ಮಾಂ ಶುದ್ಧಚಾರಿತ್ರಾಂ ದುಷ್ಟಾಂ ಜಾನಾತಿ ರಾಘವಃ |
ತಥಾ ಲೋಕಸ್ಯ ಸಾಕ್ಷೀ ಮಾಂ ಸರ್ವತಃ ಪಾತು ಪಾವಕಃ ||

'ಯಥಾ . . . ತಥಾ' ಎಂಬ ಪದಗಳು ಸಾಮಾನ್ಯವಾದ ಉಪಮಾನವನ್ನು ಹೇಳುವುದಕ್ಕೂ ಉಪಯೋಗಿಸಲ್ಪಡುತ್ತವೆ;

ಉದಾ : ಸುಂದರಕಾಂಡ ೫-೪, ೭ :

ಹಂಸೋ ಯಥಾ ರಾಜತಪಂಜರಸ್ಥಃ ಸಿಂಹೋ ಯಥಾ ಮಂದರಕಂದರಸ್ಥಃ |
ವೀರೋ ಯಥಾ ಗರ್ವಿತಕುಂಜರಸ್ಥಶ್ಚಂದ್ರೋಽಪಿ ಬಭ್ರಾಜ ತಥಾಂಬರಸ್ಥಃ ||೪||

ಶಿಲಾತಲಂ ಪ್ರಾಪ್ಯ ಯಥಾ ಮೃಗೇಂದ್ರೋ ಮಹಾರಣಂ ಪ್ರಾಪ್ಯ ಯಥಾಗಜೇಂದ್ರಃ |
ರಾಜ್ಯಂ ಸಮಾಸಾದ್ಯ ಯಥಾ ನರೇಂದ್ರಸ್ತಥಾ ಪ್ರಕಾಶೋ ವಿರರಾಜ ಚಂದ್ರಃ ||೭||

ಆದ್ದರಿಂದ ಈ ಪದಗಳು ಉಪಮಾನವನ್ನು ಬೋಧಿಸುವುವೋ ಅಥವಾ ಸತ್ಯಕ್ರಿಯೆಯನ್ನು ನಿರೂಪಿಸುವುವೋ ಎಂಬ ವಿಷಯದಲ್ಲಿ ಓದುವವರಿಗೆ ಸಂದೇಹವಾಗಬಹುದು. ಅಂತಹ ಸಂದರ್ಭದಲ್ಲಿ ಯಥಾ ಎಂಬುದರಿಂದ ಪ್ರಾರಂಭವಾಗುವ ವಾಕ್ಯದಲ್ಲಿಯೂ ತಥಾ ಎಂಬುದರಿಂದ ಪ್ರಾರಂಭವಾಗುವ ವಾಕ್ಯದಲ್ಲಿಯೂ ಯಾವ ಕ್ರಿಯಾಪದಗಳು ಇರುವುವೆಂಬುದನ್ನು ನಾವು ಪರೀಕ್ಷಿಸಿ ಎರಡು ವಾಕ್ಯಗಳಲ್ಲಿಯೂ ಸಮಾನಾರ್ಥಕ ಕ್ರಿಯಾಪದಗಳಿದ್ದಲ್ಲಿ ಆ ವಾಕ್ಯದಲ್ಲಿ ಉಪಮಾಲಂಕಾರವಿರುವುದೆಂದೂ ಭಿನ್ನಾರ್ಥಕ ಕ್ರಿಯಾಪದಗಳಿದ್ದಲ್ಲಿ ಸತ್ಯಕ್ರಿಯೆಯು ನಿರೂಪಿತವಾಗಿರುವುದೆಂದೂ ತಿಳಿದುಕೊಳ್ಳಬೇಕು.

ಋಕ್‌ಸಂಹಿತೆಯ ೫ ನೇ ಮಂಡಲದ ೭೮ ನೇ ಸೂಕ್ತದ ೮ ನೇ ಮಂತ್ರವು ಈ ರೀತಿಯಾಗಿರುವುದು—

ಯಥಾ ವಾತೋ ಯಥಾ ವನಂ ಯಥಾ ಸಮುದ್ರ ಏಜತಿ |
ಏವಾತ್ವಂ ದಶಮಾಸ್ಯ ಸಹಾವೇಹಿ ಜರಾಯುಣಾ ||

ಯಾಸ್ಕಮುನಿಯು (ನಿ. ೩, ೧೫, ೨) ಈ ಮಂತ್ರದಲ್ಲಿ ಕರ್ಮೋಪಮೆಯು ಇರುವುದೆಂದು ಹೇಳಿರುತ್ತಾನೆ.

ಇದಕ್ಕನುಸಾರವಾಗಿ ನಿರುಕ್ತವ್ಯಾಖ್ಯಾನಕಾರನಾದ ದುರ್ಗಾಚಾರ್ಯನು "ಯಥಾ ವಾತವನಸಮುದ್ರಾಃ ಏಜಂತೇ ಕಂಪಂತೇ ಏವ ಏವಂ ತ್ವಂ ಹೇ ದಶಮಾಸ್ಯ

ದಶಮಾಸ ಸಂಭೂತಗರ್ಭ ಏತಸ್ಮಾತ್ ಮಾತುರುದರಾತ್ ಅದುಃಖಯನ್ನೇತಾಂ ಏಜನ್ ಚಲನ್ ಏಹಿ ಅರ್ವಾಙೇಹಿ ಸಹಜರಾಯುಣಾ ಉಲ್ಬೆನ ಪ್ರಜಾಯಸ್ವ| ಮಾಸ್ಥಾಃ ತ್ವಂ ಏತಸ್ಮಿನ್ನುದರೇ ಇತ್ಯಭಿಪ್ರಾಯಃ" ಎಂದು ಮಂತ್ರಾರ್ಥವನ್ನು ವಿವರಿಸಿರುತ್ತಾನೆ. ಸ್ಕಂದಸ್ವಾಮಿ ಮಹೇಶ್ವರರ ನಿರುಕ್ತ ಟೀಕೆಯಲ್ಲಿಯೂ ಕೂಡ ಈ ಮಂತ್ರವು ಈರೀತಿಯಲ್ಲಿಯೇ ವಿವರಿಸಲ್ಪಟ್ಟಿರುವುದು. ಋಕ್‌ಸಂಹಿತಾಭಾಷ್ಯದಲ್ಲಿ ಸಾಯಣಾಚಾರ್ಯರು—ವಾತೋಯಥಾ ಕಂಪಮಾನೋ ವನಂ ಕಂಪಯತಿ ಸ್ವಯಂ| ಯಥಾಸಮುದ್ರಶ್ಚಲತಿ ಚಾಲ್ಯತೇ ವಾಥ ವಾಯುನಾ‖ ಸ್ಥಿತ್ವಾ ದಶೈವ ಮಾಸಾಂಸ್ತ್ವಂ ಗರ್ಭೋಽಲ್ಬೇನ ಸುವೇಷ್ಟಿತಃ| ನಿರ್ಗಚ್ಛ ಜಠರಾನ್ಮಾತುಃ ಜರಯಾ ಸಹಿತಃಪತ‖ ಎಂದು ಶ್ಲೋಕರೂಪದಲ್ಲಿ ಮಂತ್ರಾರ್ಥವನ್ನು ವಿವರಿಸಿದ್ದಾರೆ.

ಹೀಗೆಯೇ ಋಗ್ವೇದ ವ್ಯಾಖ್ಯಾನಕಾರರಾದ ಗ್ರಾಸ್‌ಮನ್, ಲೂಡ್‌ವಿಗ್, ಗೆಲ್ಡ್‌ನರ್, (Grassmann, Ludwig, Geldner) ಮೊದಲಾದವರು ಈ ಮಂತ್ರದಲ್ಲಿ ಉಪಮಾನವಿದೆಯೆಂದು ಭಾವಿಸಿ ಮಂತ್ರವನ್ನು ಅದಕ್ಕನುಸಾರವಾಗಿ ವ್ಯಾಖ್ಯಾನ ಮಾಡಿರುತ್ತಾರೆ. ಆದರೆ ಯಥಾ ಎಂಬುದರಿಂದ ಪ್ರಾರಂಭವಾಗುವ ವಾಕ್ಯದಲ್ಲಿ 'ಏಜತಿ' (ಕಂಪಿಸುತ್ತದೆ, ಚಲಿಸುತ್ತದೆ) ಎಂಬ ಕ್ರಿಯಾಪದವೂ 'ಏವ' ಎಂದು ಪ್ರಾರಂಭವಾಗುವ ಎರಡನೇ ವಾಕ್ಯದಲ್ಲಿ 'ಅವೇಹಿ' (ಹೊರಗೆ ಬಾ) ಎಂಬ ಕ್ರಿಯಾಪದವೂ ಇರುವುದರಿಂದ 'ಯಥಾ . . . ಏವ' ಎಂಬ ಈ ಪದಗಳು ಉಪಮಾನವನ್ನು ಬೋಧಿಸುವುದಿಲ್ಲವೆಂದೂ ಸತ್ಯಕ್ರಿಯೆಯನ್ನು ಬೋಧಿಸುವುವೆಂದೂ ಸ್ಪಷ್ಟ. ವಸ್ತುತಃ ಈ ಮಂತ್ರವೂ ಮತ್ತು ಇದರ ಹಿಂದಿನ ಮತ್ತು ಮುಂದಿನ ಮಂತ್ರಗಳೂ ಸುಖಪ್ರಸವಕ್ಕಾಗಿ ಉಪಯೋಗಿಸುವ 'ಉಪನಿಷತ್' ಆಗಿರುವುವೆಂದು (ಗರ್ಭಸ್ರಾವಿಣೀ ಉಪನಿಷತ್) ಸರ್ವಾನುಕ್ರಮಣಿಯಲ್ಲಿ ಹೇಳಲ್ಪಟ್ಟಿರುವುದು.

"ವಾಯುವೂ ವನವೂ ಸಮುದ್ರವೂ ಸರ್ವದಾ ಚಲಿಸುತ್ತಿರುವುವೆಂಬುದು ಎಷ್ಟು ಸತ್ಯವೋ ಆ ಸತ್ಯದ ಬಲದಿಂದ, ಎಲೈ ಹತ್ತು ಮಾಸ ತುಂಬಿದ ಗರ್ಭವೇ ನೀನು ಉಲ್ಬದಿಂದ ಸಹಿತವಾಗಿ ತಾಯಿಯ ಹೊಟ್ಟೆಯಿಂದ ಹೊರಗೆ ಬಂದುಬಿಡು" ಎಂದು ಮಂತ್ರದ ಅರ್ಥ.

ಮಾಧ್ಯಂದಿನ ಸಂಹಿತೆಯ ೮ ನೇ ಅಧ್ಯಾಯದಲ್ಲಿ—

ಏಜತು ದಶಮಾಸ್ಯೋ ಗರ್ಭೋ ಜರಾಯುಣಾ ಸಹ |
ಯಥಾಯಂ ವಾಯುರೇಜತಿ ಯಥಾ ಸಮುದ್ರ ಏಜತಿ |
ಏವಾಯಂ ದಶಮಾಸ್ಯೋ ಅಸ್ರಜ್ಜರಾಯುಣಾ ಸಹ ||

ಎಂಬ ೮ನೇ ಮಂತ್ರವು ಮೇಲೆ ಹೇಳಿದ ಋಗ್ವೇದಮಂತ್ರಕ್ಕೆ ಅತ್ಯಂತ ಸದೃಶವಾಗಿರುವುದು. ಈ ಮಂತ್ರದಲ್ಲಿ ಎರಡನೆಯ ಅರ್ಧಕ್ಕೆ ಒಂದನೆಯ ಅರ್ಧದೊಡನೆ ಅನ್ವಯಮಾಡಬೇಕೆಂದು ಉವಟ ಮಹೀಧರರು ತಮ್ಮ ಭಾಷ್ಯದಲ್ಲಿ ಹೇಳಿದ್ದಾರೆ. ಈ ಎರಡು ಅರ್ಧಗಳಿಗೆ "ಈ ವಾಯುವು ಹೇಗೆ ಚಲಿಸುತ್ತಿದೆಯೋ, ಸಮುದ್ರವು ಹೇಗೆ ಚಲಿಸುತ್ತಿದೆಯೋ, ಹಾಗೆಯೇ ಹತ್ತು ಮಾಸ ತುಂಬಿದ ಈ ಗರ್ಭವು ಉಲ್ಬದೊಡನೆ ಚಲಿಸಲಿ" ಎಂದು ಅರ್ಥ. ಈ ಮಂತ್ರದಲ್ಲಿ ಸತ್ಯಕ್ರಿಯೆಯು ನಿರ್ದಿಷ್ಟವಾಗಿಲ್ಲ; ಉಪಮಾಲಂಕಾರವಿರುವುದು.

ಮೇಲೆ ಹೇಳಿದ ಲೇಖನದಲ್ಲಿ ಪ್ರ. ಬರ್ಲಿಂಗೇಮ್‌ರವರು ಸತ್ಯವಾಕ್ಯದ ಉಚ್ಚಾರಣೆಯು ಗ್ರಂಥಗಳಲ್ಲಿ ಸಚ್ಚವಜ್ಜ, ಸಚ್ಚವಚನ, ಸಚ್ಚ ಎಂಬ ಪಾಲಿಪದಗಳಿಂದಲೂ, ಸತ್ಯವಾಕ್ಯ, ಸತ್ಯವಚನ, ಸತ್ಯ ಎಂಬ ಸಂಸ್ಕೃತಪದಗಳಿಂದಲೂ ನಿರ್ದೇಶಿಸಲ್ಪಡುವುದೆಂದು ಹೇಳಿರುತ್ತಾರೆ. ಋಕ್‌ಸಂಹಿತೆಯಲ್ಲಿ ಸತ್ಯ ಎಂಬ ಪದವಲ್ಲದೆ ಅದರ ಪರ್ಯಾಯವಾದ 'ಋತ' ಎಂಬ ಪದವೂ 'ಸತ್ಯತಾತಿ' 'ಸತ್ಯೋಮನ್ಯುಃ 'ಸತ್ಯೋ ಮಂತ್ರಃ' 'ಸತೀನಮನ್ಯು' 'ಸತ್ಯಮಂತ್ರ' 'ಸತ್ಯೋಕ್ತಿ' 'ಋತಸ್ಯ ಪ್ರವಾಚನಂ' ಎಂಬ ಪದಗಳಿಂದಲೂ ಇದು ನಿರ್ದೇಶಿಸಲ್ಪಟ್ಟಿರುವುದು.

ಋತ ಎಂಬ ಪದಕ್ಕೆ ಸತ್ಯ ಎಂಬ ಅರ್ಥವಲ್ಲದೆ 'ಯಜ್ಞ' 'order', 'law', 'right' 'divine law', 'moral order', 'divine order' ಎಂದು ಮೊದಲಾದ ಅರ್ಥಗಳೂ ಕೂಡ ಬೋಟ್ಲಿಂಕ್-ರೋಟ್, ಮ್ಯಾಕ್‌ಡಾನಲ್ ಮೊದಲಾದವರ ಸಂಸ್ಕೃತಕೋಶಗಳಲ್ಲಿ ಹೇಳಲ್ಪಟ್ಟಿರುವುವು. ಸಾಯಣಾಚಾರ್ಯರು 'ಋತ' ಎಂಬ ಪದಕ್ಕೆ ಪ್ರಾಯಿಕವಾಗಿ 'ಸತ್ಯಮುದಕಂ ಯಜ್ಞೋ ವಾ' ಎಂಬುದಾಗಿ ಅರ್ಥಮಾಡಿರುತ್ತಾರಾದ್ದರಿಂದ ಸತ್ಯಕ್ರಿಯೆಯನ್ನು ನಿರೂಪಿಸುವ ಮಂತ್ರಗಳಲ್ಲಿ ಈ ಪದವು ಈ ಅರ್ಥವನ್ನು ಬೋಧಿಸುವುದೆಂಬುದನ್ನು ಸಾಯಣರು ತಿಳಿದಿದ್ದರೋ ಇಲ್ಲವೋ ಎಂದು ಹೇಳುವುದು ಕಷ್ಟ. ಗ್ರಾಸ್‌ಮನ್, ಲೂಡ್‌ವಿಗ್ ಮೊದಲಾದ ವ್ಯಾಖ್ಯಾತೃಗಳಿಗಾದರೆ ಈ ವಿಷಯವು ತಿಳಿದಿರಲಿಲ್ಲವೆಂದು ಅವರ ವಿವರಣೆಗಳಿಂದ ಸ್ಪಷ್ಟವಾಗಿ ಹೊರಪಡುತ್ತದೆ.

ಈ ವಿಷಯದಲ್ಲಿ ನಾವು ಎರಡು ಉದಾಹರಣೆಗಳನ್ನು ಕೊಡಬಹುದು.

(೧) ಸೌಧನ್ವನಾಃ ಎಂದರೆ ಸುಧನ್ವನ ಪುತ್ರರೆಂದು ವರ್ಣಿತರಾಗಿರುವ ಮೂರು ಋಭುಗಳು ಮೊದಲು ಮರ್ತ್ಯರಾಗಿದ್ದರೆಂದೂ ಐದು ಕಾರ್ಯಗಳನ್ನು ಮಾಡಿದ್ದರಿಂದ ದೇವತ್ವವನ್ನು ಪಡೆದು ಯಜ್ಞಹವಿಸ್ಸಿಗೆ ಭಾಗಿಗಳಾದರೆಂದೂ ಅನೇಕ ಮಂತ್ರಗಳಲ್ಲಿ ಹೇಳಲ್ಪಟ್ಟಿರುವುದು. ಈ ಕಾರ್ಯಗಳಾವುವೆಂದರೆ—

೧. ಮುದಿಯರಾಗಿದ್ದ ಮಾತಾಪಿತೃಗಳಿಗೆ ಯೌವನವನ್ನುಂಟುಮಾಡುವುದು.

೨. ತ್ವಷ್ಟೃವಿನಿಂದ ನಿರ್ಮಿತವಾದ ಒಂದು ಚಮಸವನ್ನು (ಕುಡಿಯುವ ಪಾತ್ರೆಯನ್ನು) ನಾಲ್ಕಾಗಿ ಮಾಡುವುದು.

೩. ಒಣಗಿದ ಚರ್ಮದಿಂದ ಜೀವಂತವಾಗಿರುವ ಕಾಮದುಘವಾದ ಹಸುವನ್ನು ನಿರ್ಮಿಸುವುದು.

೪. ಸರ್ವತ್ರ ಗಮನವುಳ್ಳ ಎರಡು ಕುದುರೆಗಳನ್ನು ನಿರ್ಮಿಸುವುದು.

೫. ಎಲ್ಲ ಕಡೆಯೂ ಹೋಗುವ ರಥವನ್ನು ನಿರ್ಮಿಸುವುದು. ಈ ವಿಷಯವು ಕೆಳಗೆ ಹೇಳಿರುವ ಮಂತ್ರಗಳಲ್ಲಿ (ಋಕ್‌ಸಂಹಿತೆ, ೧, ೨೦, ೨-೬) ನಿರೂಪಿಸಲ್ಪಟ್ಟಿರುವುದು :

ಯ ಇಂದ್ರಾಯ ವಚೋಯುಜಾ ತತಕ್ಷುರ್ಮನಸಾ ಹರೀ |
ಶಮೀಭಿರ್ಯಜ್ಞಮಾಶತ ||
ತಕ್ಷನ್ನಾಸತ್ಯಾಭ್ಯಾಂ ಪರಿಜ್ಮಾನಂ ಸುಖಂ ರಥಂ |
ತಕ್ಷನ್ ಧೇನುಂ ಸಬರ್ದುಘಾಂ ||
ಯುವಾನಾ ಪಿತರಾ ಪುನಃ ಸತ್ಯಮಂತ್ರಾ ಋಜೂಯವಃ |
ಋಭವೋ ವಿಷ್ಟ್ಯಕ್ರತ ||
ಸಂವೋ ಮದಾಸೋ ಅಗ್ಮತೇಂದ್ರೇಣ ಚ ಮರುತ್ವತಾ |
ಆದಿತ್ಯೇಭಿಶ್ಚ ರಾಜಭಿಃ ||
ಉತತ್ಯಂ ಚಮಸಂ ನವಂ ತ್ವಷ್ಟುರ್ದೇವಸ್ಯ ನಿಷ್ಕೃತಂ |
ಅಕರ್ತ ಚತುರಃ ಪುನಃ ||

ಚಮಸವನ್ನು ನಾಲ್ಕು ಮಾಡಿದರೆಂದು ನಿರೂಪಿಸುವ—

ಇದಂ ತೃತೀಯಂ ಸವನಂ ಕವೀನಾಂ
ಋತೇನ ಯೇ ಚಮಸಮೈರಯಂತ |
ತೇ ಸೌಧನ್ವನಾಃ ಸ್ವರಾನಶಾನಾಃ
ಸ್ವಿಷ್ಟಿಂ ನೋ ಅಭಿವಸ್ಯೋ ನಯಂತು ||

ಎಂಬ ಮಂತ್ರದಲ್ಲಿ (ಅಥರ್ವಸಂಹಿತೆ ೬, ೪೭, ೩ ; ತೈತ್ತಿರೀಯ ಸಂಹಿತೆ ೩, ೧, ೯, ೨) ಋತೇನ ಎಂಬ ಪದವು ಉಪಯುಕ್ತವಾಗಿರುವುದು.

"ಜ್ಯೇಷ್ಠ ಆಹ ಚಮಸಾ ದ್ವಾ ಕರೇತಿ ಕನೀಯಾನ್ ತ್ರೀನ್ ಕೃಣವಾಮೇತ್ಯಾಹ| ಕನಿಷ್ಠ ಆಹ ಚತುರಃ ಕರೇತಿ ತ್ವಷ್ಟ ಋಭವಸ್ತತ್ ಪನಯದ್ವಚೋ ವಃ ‖ ಸತ್ಯಮೂಚುರ್ನರ ಏವಾಹಿಚಕ್ರುಃ" ಎಂಬ ಮಂತ್ರದಲ್ಲಾದರೆ (ಋ. ೪, ೩೫, ೫-೬) 'ಸತ್ಯಮೂಚುಃ' ಎಂದು ಹೇಳಲ್ಪಟ್ಟಿರುವುದು; ಮತ್ತು "ಆಪೋಭೂಯಿಷ್ಠಾ

ಇತ್ಯೇಕೋ ಅಬ್ರವೀತ್ ಅಗ್ನಿರ್ಭೂಯಿಷ್ಠ ಇತ್ಯನ್ಯೋ ಅಬ್ರವೀತ್| ವಧರ್ಯಂತೀಂ ಬಹುಭ್ಯಃ ಪ್ರೈಕೋ ಅಬ್ರವೀತ್ ಋತಾವದಂತಃ ಚಮಸಾನ್ ಅಪಿಂಶತ" ಎಂಬ ಮಂತ್ರದಲ್ಲಿ (ಋ. ೧, ೧೬೧, ೯) ಋತಾವದಂತಃ ಎಂದರೆ ಸತ್ಯವಾಕ್ಯಗಳನ್ನು ಹೇಳುತ್ತಾ ಎಂದು ಹೇಳಲ್ಪಟ್ಟಿರುವುದಲ್ಲದೆ 'ಆಪೋ ಭೂಯಿಷ್ಠಾಃ,' 'ಅಗ್ನಿರ್ಭೂಯಿಷ್ಠಃ' ಎಂಬ ಎರಡು ಸತ್ಯವಾಕ್ಯಗಳೂ ಕೂಡ ಕೊಡಲ್ಪಟ್ಟಿರುವುವು. ಆದ್ದರಿಂದ ಮೇಲೆ ಹೇಳಿದ ಅಥರ್ವ ಮಂತ್ರದಲ್ಲಿರುವ 'ಋತೇನ' ಎಂಬ ಪದಕ್ಕೆ 'ಸತ್ಯವಾಕ್ಯದಿಂದ' ಎಂದು ಅರ್ಥಮಾಡಬೇಕೆಂದೂ 'rightfully' (Whitney-Lanman), 'in due order' (Ludwig) 'righteously' (Keith) ಎಂದು ಮೊದಲಾದ ಅರ್ಥಗಳು ತಪ್ಪೆಂದೂ ಸ್ಪಷ್ಟ.

ಹೀಗೆಯೇ 'ಋತಾವದಂತಃ' ಎಂಬ (೧, ೧೬೧, ೯ ನೇ) ಮಂತ್ರದಲ್ಲಿರುವ ಪದಗಳಿಗೆ 'keeping your words' (Hillebrandt), 'speaking good words' (Grassmann) 'speaking truly' (Ludwig) 'saying true words to one another' (Geldner) ಎಂಬ ಅರ್ಥಗಳು ತಪ್ಪೆಂಬುದೂ ಸ್ಪಷ್ಟ.

ಮೇಲೆ ಹೇಳಿದ ಋ. ೪, ೩೫, ೫ ನೇ ಮಂತ್ರದಲ್ಲಿರುವ ಆಹ ಚಮಸಾದ್ವಾಕರೇತಿ, ತ್ರೀನ್ ಕೃಣವಾ ಮೇತಿ, ಚತುರಃಕರೇತಿ ಎಂಬ ವಾಕ್ಯಗಳಿಂದ ಆ ಮೂರು ಋಭುಗಳು ಮನಸ್ಸಿನಲ್ಲಿ ಮಾಡಿಕೊಂಡಿದ್ದ ಸಂಕಲ್ಪವು ಬೋಧಿತವಾಗುವುದು. ೧, ೧೬೧, ೯ ನೇ ಮಂತ್ರದಲ್ಲಿರುವ 'ಆಪೋಭೂಯಿಷ್ಠಾಃ' ಎಂಬುದು ಒಂದನೆಯ ಋಭುವು ಹೇಳಿದ ಸತ್ಯವಾಕ್ಯವು; 'ಅಗ್ನಿರ್ಭೂಯಿಷ್ಠಃ' ಎಂಬುದು ಎರಡನೇ ಋಭುವು ಹೇಳಿದ ಸತ್ಯವಾಕ್ಯವು 'ನರ ಏವಾಹಿಚಕ್ರುಃ' ಎಂಬ ವಾಕ್ಯದಲ್ಲಿ ಆ ಋಭುಗಳಿಗೆ ಈಪ್ಸಿತವಾದ ಕಾರ್ಯವು ಸಿದ್ಧಿಸಿತೆಂದು ಹೇಳಿರುವುದು.

(೨) ಅಂಗಿರಸ್ಸುಗಳೆಂಬ ಋಷಿಗಳೂ ಇಂದ್ರ, ಅಗ್ನಿ, ಬೃಹಸ್ಪತಿಗಳೂ ವಲನಾಮಕನಾದ ಅಸುರನನ್ನು ಸೋಲಿಸಿ ಅವನಿಂದ ಗಿರಿಗುಹೆಯಲ್ಲಿ ಬಂಧಿಸಲ್ಪಟ್ಟಿದ್ದ ಗೋವುಗಳನ್ನೂ, ನೀರುಗಳನ್ನೂ, ಸೂರ್ಯನನ್ನೂ, ಉಷಸ್ಸುಗಳನ್ನೂ ಬಿಡುಗಡೆಮಾಡಿ ದ್ಯಾವಾ ಭೂಮಿಗಳನ್ನು ವಿಸ್ತರಿಸಿ ಬೀಳದಂತೆ ಭದ್ರವಾಗಿ ಸ್ಥಾಪಿಸಿದರೆಂದು ಅನೇಕ ಮಂತ್ರಗಳಲ್ಲಿ ಹೇಳಲ್ಪಟ್ಟಿರುವುದು. ಈ ವಿಷಯವಾಗಿ ಋ. ೧೦, ೬೨, ೨: "ಯ ಉದಾಜನ್ ಪಿತರೋ ಗೊಮಯಂ ವಸು ಋತೇನಾಭಿಂದನ್ ಪರಿವತ್ಸರೇ ವಲಂ" ಎಂಬ ಮಂತ್ರದಲ್ಲಿ ಋತೇನ ಎಂಬ ಪದವು ಉಪಯೋಗಿಸಲ್ಪಟ್ಟಿರುವುದು. ಋ. ೧೦, ೧೩೮, ೧: "ತವತ್ಯ ಇಂದ್ರ ಸಖ್ಯೇಷು ವಹ್ನಯ ಋತಂ ಮನ್ವಾನಾ ವ್ಯದರ್ದಿರುರ್ವಲಂ" ಎಂಬ ಮಂತ್ರದಲ್ಲಿ 'ಋತಂಮನ್ವಾನಾಃ' ಎಂಬ ಪದಗಳೂ ಉಪಯೋಗಿಸಲ್ಪಟ್ಟಿರುವುವು. ಋ. ೧೦, ೧೧೧, ೪ :

"ಇಂದ್ರೋ ಮಹ್ನಾ ಮಹತೋ ಅರ್ಣವಸ್ಯ ವ್ರತಾಮಿನಾ ದಂಗಿರೋಭಿರ್ಗೃಣಾನಃ| ಪುರೂಣಿಚಿನ್ನಿ ತತಾನಾರಜಾಂಸಿದಾ ಧಾರಯೋ ಧರುಣಂಸತ್ಯತಾತಾ" ಎಂಬ ಮಂತ್ರದಲ್ಲಿ 'ಸತ್ಯತಾತಾ' ಎಂಬ ಪದವೂ ಋ. ೨, ೨೪, ೧೪: 'ಬ್ರಹ್ಮಣಸ್ಪತೇ ರಭವದ್ಯಥಾವಶಂ ಸತ್ಯೋಮನ್ಯುರ್ಮಹಿ ಕರ್ಮಾಕರಿಷ್ಯತಃ| ಯೋಗಾ ಉದಾಜತ್ ಸದಿವೇ ವಿಚಾಭಜನ್ ಮಹೀವರೀತಿಃ ಶವಸಾ ಸರತ್ಪೃಥಕ್' ಎಂಬ ಮಂತ್ರದಲ್ಲಿ 'ಸತ್ಯೋಮನ್ಯುಃ' ಎಂಬ ಪದಗಳೂ, ಋ. ೧೦, ೬೭, ೮ : 'ತೇ ಸತ್ಯೇನ ಮನಸಾ ಗೋಪತಿಂಗಾ ಇಯಾನಾಸ ಇಷಣಯಂತ ಧೀಭಿಃ! ಬೃಹಸ್ಪತಿರ್ಮಿಥೋ ಅವದ್ಯಪೇಭಿರುದುಸ್ರಿಯಾ ಅಸೃಜತ ಸ್ವಯುಗ್ಭಿಃ' ಎಂಬ ಮಂತ್ರದಲ್ಲಿ 'ಸತ್ಯೇನ ಮನಸಾ' ಎಂಬ ಪದಗಳೂ ಋ. ೧೦, ೧೧೨, ೮ :

'ಪ್ರತ ಇಂದ್ರ ಪೂರ್ವ್ಯಾಣಿ ಪ್ರನೂನಂ ವೀರ್ಯಾವೋಚಂ ಪ್ರಥಮಾಕೃತಾನಿ| ಸತೀನಮನ್ಯು ರಶ್ರಥಾಯೋ ಅದ್ರಿಂಸುವೇದನಾ ಮಕೃಣೋರ್ಬ್ರಹ್ಮಣೇಗಾಂ' ಎಂಬ ಮಂತ್ರದಲ್ಲಿ 'ಸತೀನಮನ್ಯುಃ' ಎಂಬ ಪದವೂ ಹೇಳಲ್ಪಟ್ಟಿರುವವು. ಋ. ೧೦, ೬೨, ೩ : ೪, ೩, ೧೧ ; ೪, ೧, ೧೩ ; ೪, ೨, ೧೪ ; ೬, ೩೯, ೪ ; ೫, ೪೫, ೮ ; ೧೦, ೬೭, ೨ ; ಮೊದಲಾದ ಋಕ್ ಸಂಹಿತೆಯ ಮಂತ್ರಗಳಲ್ಲಾದರೆ 'ಋತ' ಎಂಬ ಪದವು ಈ ಸಂದರ್ಭದಲ್ಲಿ ಪ್ರಯುಕ್ತವಾಗಿರುವುದು. ಮೇಲೆ ಹೇಳಿದಂತೆ ಗ್ರಾಸ್‌ಮನ್ ಮೊದಲಾದ ವ್ಯಾಖ್ಯಾನಕಾರರು ಈ ಮಂತ್ರಗಳಲ್ಲೆಲ್ಲಾ ಈ ಪದಕ್ಕೆ 'rightfully', 'according to law', 'according to divine law' ಎಂದು ಮೊದಲಾಗಿ ಅರ್ಥಮಾಡಿರುವರು. ಮೇಲೆ ಹೇಳಿದಂತೆ ಇದೇ ಸಂದರ್ಭದಲ್ಲಿ 'ಸತೀನಮನ್ಯುಃ' (ಸತ್ಯವಾಕ್ಯ ರೂಪವಾದ ಮಂತ್ರವು) 'ಸತ್ಯೋಮನ್ಯುಃ' 'ಸತ್ಯಮಂತ್ರಃ', 'ಸತ್ಯೇನ ಮನಸಾ' ಎಂಬ ಪದಗಳು ಬೇರೆ ಮಂತ್ರಗಳಲ್ಲಿ ಪ್ರಯುಕ್ತವಾಗಿರುವುದರಿಂದ ಮೇಲೆ ಹೇಳಿದ ಮಂತ್ರಗಳಲ್ಲಿ 'ಋತೇನ' ಎಂಬ ಪದಕ್ಕೆ 'ಸತ್ಯವಾಕ್ಯದಿಂದ' ಎಂದು ಅರ್ಥಮಾಡಬೇಕು. ಋ. ೧೦, ೩೫, ೮ : "ಸಾಮಾ ಸತ್ಯೋಕ್ತಿಃ ಪರಿಪಾತು ವಿಶ್ವತೋ ದ್ಯಾವಾಚ ಯತ್ರ ತತನನ್ನಹಾನಿ ಚ| ವಿಶ್ವಮನ್ಯನ್ನಿವಶತೇ ಯದೇಜತಿ ವಿಶ್ವಾಹಾಪೋ ವಿಶ್ವಾಹೋದೇತಿ ಸೂರ್ಯಃ": ೧೦, ೩೫, ೮ : ಪಿಪರ್ತುಮಾ ತದೃತಸ್ಯಪ್ರವಾಚನಂ ದೇವಾನಾಂ ಯನ್ಮನುಷ್ಯಾ ಅಮನ್ಮಹಿ| ವಿಶ್ವಾ ಇದುಸ್ರಾಃ ಸ್ಪಳುದೇತಿ ಸೂರ್ಯಃ ಸ್ವಸ್ತ್ಯಗ್ನಿಂ ಸಮಿಧಾನಮೀಮಹೇ ; ಅಥರ್ವಸಂಹಿತೆ, ೪, ೧೮, ೧ : ಸಮಂ ಜ್ಯೋತಿಃ ಸೂರ್ಯೇಣಾಹ್ನಾ ರಾತ್ರೀ ಸಮಾವತೀ| ಕೃಣೋಮಿ ಸತ್ಯಮೂತಯೇ ಅರಸಾಃ ಸಂತು ಕೃತ್ವರೀಃ—ಎಂಬ ಮೂರು ಮಂತ್ರಗಳಲ್ಲಿ ಸತ್ಯವಾಕ್ಯವೂ ಅದರ ಉಚ್ಚಾರಣೆಯಿಂದ ಸಿದ್ಧಿಸಬೇಕಾದ ಕಾರ್ಯವೂ

ನಿರ್ದೇಶಿಸಲ್ಪಟ್ಟಿರುವುವು. ವ್ಯಾಖ್ಯಾನಕಾರರು ಈ ಮಂತ್ರಗಳಿಗೂ ಸರಿಯಾದ ವ್ಯಾಖ್ಯಾನವನ್ನು ಮಾಡಿಲ್ಲ; ಈ ಮಂತ್ರಗಳಲ್ಲಿ ಸತ್ಯಕ್ರಿಯೆಯು ನಿರ್ದೇಶಿಸಲ್ಪಟ್ಟಿರುವ ದೆಂಬ ವಿಷಯವು ಅವರಲ್ಲಿ ಯಾರಿಗೂ ಗೋಚರವಾಗಲಿಲ್ಲ.

ಸತ್ಯಕ್ರಿಯಾ ಎಂಬ ಪದವು ಬೋಟ್ಲಿಂಕ್-ರೋಟ್ (Böhtlingk-Roth) ಅಷ್ಟು ಹಿರಿದಾದವರ ಸಂಸ್ಕೃತಕೋಶಗಳಲ್ಲಿ ಕೊಡಲ್ಪಟ್ಟಿಲ್ಲ. ಈ ಕೋಶಗಳು ರಚಿಸಲ್ಪಟ್ಟಾಗ, ಎಂದರೆ ಸುಮಾರು ಎಂಭತ್ತು ವರ್ಷಗಳ ಹಿಂದೆ, ಮುದ್ರಿತವಾಗಿದ್ದ ಸಂಸ್ಕೃತ ಗ್ರಂಥಗಳ ಸಂಖ್ಯೆಯು ಅತ್ಯಲ್ಪವಾಗಿತ್ತು. ಅಲ್ಲಿಂದ ಈಚೆಗೆ ಅನೇಕ ಸಂಸ್ಕೃತ ಗ್ರಂಥಗಳು ಅಚ್ಚಾಗಿರುವುವು. ಅವುಗಳಲ್ಲಿ ಸತ್ಯಕ್ರಿಯಾ ಎಂಬ ಪದವು ಒಂದು ವೇಳೆ ಉಪಯೋಗಿಸಲ್ಪಟ್ಟಿರಬಹುದು. ನಾವು ಮೇಲೆ ಉದಹರಿಸಿರುವ ಅಥರ್ವಸಂಹಿತೆಯ ೪, ೧೮, ೧ ನೆಯ ಮಂತ್ರದಲ್ಲಂತೂ ("ಕೃಣೋಮಿ ಸತ್ಯ ಮೂತಯೇ" ರಕ್ಷಣೆಗಾಗಿ ಸತ್ಯಕ್ರಿಯೆಯನ್ನು ಮಾಡುತ್ತೇನೆ) ಸತ್ಯ ಎಂಬ ಪದದೊಡನೆ ಕೃಧಾತುವಿನ ಪ್ರಯೋಗವು ಸ್ಪಷ್ಟವಾಗಿ ಕಣ್ಣಿಗೆ ಬೀಳುವದು.

—ಎ. ವೆಂಕಟಸುಬ್ಬಯ್ಯ.

ಗಾಥಾಸಪ್ತಶತಿಯಿಂದ

೧

ಮಧುಮಾಸಮಾರುತ ಬೀಸುವ ಬನದೊಳು
ಮಧುಕರ ಝೇಂಕಾರದಡವಿಯೊಳು
ಪಥಿಕರ ಮನವನು ಸೆಳೆಯುವ ತೆರದೊಳು
ಗೋಪಿಯು ವಿರಹವ ಹಾಡುವಳು.

೨

ಅಮೃತದ ಹೊಂಗೊಡವೆ, ಬಾನಿನ ಚೆಂದೊಡವೆ,
ರಜನಿಯ ತಿಲಕವೆ, ಹೇ ಇಂದುವೆ!
ನೀನಾವ ಕರಗಳಿಂದಿನಿಯನ ಸೋಂಕಿದೆ
ಸೋಂಕಯ್ಯ ನನ್ನ ನುಮವುಗಳಿಂದೆ!

೩

ಪುರುಷರು ಹರುಷದಿಂದೂರೂರು ಸುತ್ತುವ
ತಪ್ಪೆಲ್ಲ, ಪೆಣ್ಗಳದವರದಲ್ಲ.
ಒಬ್ಬರೊ ಇಬ್ಬರೊ ಜೀವವ ತೆರದಲ್ಲ-
ದೀ ತೆರನಗಲಿಕೆ ನಿಲ್ಲದಲ್ಲ!

೪

ಮುದಿತನ ಬಡತನವೆಂತೆಂತು ಬರುವುದು
ಎಂತೆಂತು ರೂಪು ಕೆಟ್ಟಳಿಯುವುದು
ಗಂಡನ ವಿಷಯದೊಳಂತಂತು ಬೆಳೆವುದು
ಕುಲಸತಿಯೊಲುಮೆಯು ದೃಢವಹುದು.

—ಎಸ್. ವಿ. ಪರಮೇಶ್ವರ ಭಟ್ಟ

ಅಳು

ಅಳು, ಅಳು, ಅಳು !

ಮರಳಿ ಮರಳಿ ಅಳು ; ಇನ್ನೂ ಅಳು ; ನಿಲುಗಡೆಯಿಲ್ಲದ ಅಳು !

ರೋಹಿಣಿಯ ಕೆನ್ನೆ ಅದೆಷ್ಟು ಕಂಬನಿಯನ್ನು ಕುಡಿದಿದೆಯೋ ? ಕಂಬನಿಯಲ್ಲಿ ತೊಯ್ದು ತೊಯ್ದು, 'ಅದಾವ ಬೆಂದ ದುಃಖದ ಕಡಲಿನಾಳದಿಂದ ಹನಿಹನಿಯಾಗಿ ಹೊರಬಂದು ನನ್ನ ಸಂಗ ಬೆಳಸುತ್ತಿರುವೆ ?' ಎಂದು ಅದೆಷ್ಟು ಸಲ ಆ ಕಂಬನಿಯ ಕೋಡಿಯನ್ನು ಪ್ರಶ್ನಿಸಿದೆಯೋ ! ಕೆನ್ನೆ—ಕಂಬನಿಗಳ ಕೆಳಗೆ ಅವಳ ಸೆರಗಿನ ಕೊನೆ ಅದಿನ್ನೆಷ್ಟು ಸಲ ಭಂಗತಂದಿದೆಯೋ !

ರೋಹಿಣಿಯ ರೂಪಿಗೆ ಮನಸೋತು ಅವಳ ಕೈಹಿಡಿದ ರಮೇಶ್ ಹಸೆಮಣೆ ಮೆಟ್ಟಿದಂದಿನಿಂದ ಹೊಸ ಸಂಸಾರ ಹೂಡಿದ ಈ ವರೆಗೆ ಅವಳ ಕಂಬನಿಯ ಕಾರಣ ವರಿಯಲು ಅದೆಷ್ಟೋ ಸಲ ತುಂಬೊಲವಿನ ಒತ್ತಾಯದಿಂದ ಪ್ರಯತ್ನಿಸಿದ್ದ ; ಪ್ರಯತ್ನಿಸಿ ಪ್ರಯತ್ನಿಸಿ ವಿಫಲನಾಗಿದ್ದ.

ಪ್ರಸ್ತವಾದಂದಿನಿಂದ ಇಂದಿನ ವರೆಗೆ ರಮೇಶ್ ರೋಹಿಣಿಯೊಂದಿಗೆ ಹಾಸಿಗೆಯನ್ನು ಹಂಚಿಕೊಂಡಿದ್ದ. ಆದರೇನು ? ಅವಳು ಅರಳಿಯ ಮರಕ್ಕೆ ಮದುವೆಯಾದ ಬೇವಿನ ಮರವಾಗಿದ್ದಳೆ ಹೊರತು, ಮಾಕಂದವನ್ನು ತಾನಾಗಿ ಅರಸಿ ಒಪ್ಪಿ ಅಪ್ಪಿದ ಮಲ್ಲಿಗೆಯಾಗಿರಲಿಲ್ಲ.

ಹಾಗೆಂದು, ರೋಹಿಣಿಗೆ ರಮೇಶನಲ್ಲಿ ಒಲವಿಲ್ಲದೆ ಇರಲಿಲ್ಲ. ಆದರೆ ಅವಳ ನಿರಂತರ ಅಶ್ರುಧಾರೆಯಲ್ಲಿ ಒಲವಿನ ಒರತೆಯೂ ಸಂಗಮವಾಗಿದೆಯೆಂದು ಅವನು ಹೇಗೆ ತಾನೆ ಗುರುತಿಸಬೇಕು. ಪಾಪ ! ಸಂಗಮದೆಡೆಯನ್ನೆ ಅವನು ಕಾಣ. ಇನ್ನೊಂದು ಹೊಳೆಯ ಹರಿವಿನ ಅರಿವು ಅವನಿಗೆ ಹೇಗೆ ತಾನೆ ಆಗಬೇಕು ?

ಆದರೂ, ಅದೆಂತಹ ಮರುಕ ಅವನದು ! ರೂಪಮೋಹದಿಂದ ಹುಟ್ಟಿದ್ದೋ, ನಿಜವಾದದ್ದೋ ? ಅದನ್ನವನು ಕಾಣ.

ಮರುಕ ಮಾತ್ರವಲ್ಲ ; ಅವಳಲ್ಲಿ ಅವನಿಗೆ ಒಲವೂ ಇದ್ದಿತು. ತನ್ನನ್ನೂ ಅಂತೆಯೇ ಅವಳು ಒಲಿದಿರುವಳೋ ಇಲ್ಲವೋ ? ಇದೇ ಅವನನ್ನು ಕಾಡುತ್ತಿದ್ದ ಸಂದೇಹ. ಮೆಯ್ಯನ್ನು ಕೊಡದಿದ್ದವಳು ಮನವನ್ನು ಹೇಗೆ ಕೊಟ್ಟಿದ್ದಾಳು ?

ಎಷ್ಟೋ ಸಲ ಅವಳನ್ನವನು ಪ್ರಶ್ನಿಸಿದ್ದ :

"ರೋಹಿಣೀ . . ."

"..."

"ನನ್ನ ಮೇಲೆ ನಿನಗೆ ಪ್ರೀತಿ ಇಲ್ಲವೆ?"

"..."

"ನಿನ್ನ ಮನಸ್ಸಿನಲ್ಲಿ ಏನಿದೆ, ಹೇಳು."

"ನಿನಗೇನು ಕೊರತೆ."

"ಇಷ್ಟವಿಲ್ಲದೆ ನನ್ನನ್ನು ಮದುವೆಯಾದೆಯಾ?"

"ನಾನು ಬಡವನೆಂದು ದುಃಖವೆ? . . ."

"ಇನ್ನು ಯಾರನ್ನಾದರೂ ಪ್ರೀತಿಸಿದ್ದೆಯಾ? . . ." ಇತ್ಯಾದಿ, ಇತ್ಯಾದಿ.

ರಮೇಶನ ಪ್ರಶ್ನೆಗಳ ಗಾಳ ಅವಳ ಕಂಬನಿಯ ಹೊಳೆಯಿಂದ 'ನಿಜ'ದ ಮೀನನ್ನು ಹಿಡಿದು ತರಲು ತೀರ ಅಸಮರ್ಥವಾಗಿತ್ತು. ಅವನು ಪ್ರಯತ್ನಿಸುತ್ತಲೇ ಇದ್ದ; ಪ್ರಯತ್ನಿಸಿ ಪ್ರಯತ್ನಿಸಿ ವಿಫಲನಾಗಿದ್ದ.

ರೋಹಿಣಿ ಕಂಬನಿಯ ಕಡಲಿನಲ್ಲಿ ಮುಳುಗಿದ್ದರೆ ರಮೇಶ್ ನಿರಂತರ ನಿರರ್ಥಕ ಪ್ರಯತ್ನಶ್ರಾಂತನಾಗಿ ನಿರಾಶೆಯ ತಪ್ಪಲಿನಲ್ಲಿ ನಿಂತು, 'ನಿಜ'ದ ಪರ್ವತವನ್ನೇರಲಾಗದ ಹೆಳವನಾಗಿದ್ದ.

* * * * *

ರಮೇಶ್ ಬೆಂಗಳೂರಿನ ಕಚೇರಿಯೊಂದರ ಒಬ್ಬ ಬಡಗುಮಾಸ್ತೆ. ಅದಕ್ಕೆ ಮುಂಚೆ ಬಿ.ಎ. ಪರೀಕ್ಷೆಯಲ್ಲಿ ಪೂರ್ತಿ ತೇರ್ಗಡೆಯಾಗದೆ, ಮತ್ತೆ ಮತ್ತೆ ಓದಲು ಇಷ್ಟವಾಗಲಿ ಅನುಕೂಲವಾಗಲಿ ಇಲ್ಲದೆ, ತಾಯಿಯ ಬಲವಂತಕ್ಕೆ ಕಟ್ಟುಬಿದ್ದು ರೋಹಿಣಿಯನ್ನು ಮದುವೆಯಾಗಿ ಎರಡು ವರ್ಷವಾಗಿತ್ತು, ಅಷ್ಟೆ. ತಾಯಿಯ ಬಲವಂತದ ಜೊತೆಗೆ, ರಮೇಶನೂ ಹೆಣ್ಣನ್ನು ನೋಡಲು ಮೈಸೂರಿನಿಂದ ಬೆಂಗಳೂರಿಗೆ ಹೋಗಿದ್ದಾಗ ರೋಹಿಣಿಯನ್ನು ಮನಸಾರೆ ಮೆಚ್ಚಿ ಮದುವೆಯಾಗಿದ್ದ.

ರಮೇಶನ ತಾಯಿ ಕಮಲಮ್ಮ ಬೆಂಗಳೂರಿನಲ್ಲಿ ಗುಮಾಸ್ತೆಯಾಗಿದ್ದ ತಮ್ಮ ಹಿರಿಯ ಮಗನ ಮನೆಯಲ್ಲಿ ಇದ್ದರು. ಕಿರಿಯ ಮಗನ ಓದು, ಮಗಳ ಮದುವೆ—ಇವೆರಡರ ಹೊಣೆ ಅವರ ಕೊರಳಿಗೆ ಕಟ್ಟಿತ್ತು. ತಾನಂತೂ ಬಿ.ಎ. ಮಾಡಲಿಲ್ಲ. ತಮ್ಮನಾದರೂ ಮಾಡಲಿ ಎಂದು ವೆಂಕಟೇಶ್ ತಮ್ಮನನ್ನು ಮೈಸೂರಿನಲ್ಲಿ ಬಿ.ಎ. ಪರೀಕ್ಷೆಗೆ ಓದಿಸುತ್ತಿದ್ದ. ರಾಮಕೃಷ್ಣಯ್ಯನವರು ತಮ್ಮ ಮಗಳು ರೋಹಿಣಿಯನ್ನು ರಮೇಶನಿಗೆ ಕೊಡಬಂದಾಗ, ರಮೇಶ್ ಜೂನಿಯರ್ ಬಿ.ಎ. ತರಗತಿಯಲ್ಲಿ ಓದುತ್ತಿದ್ದ. ಇದ್ದಕ್ಕಿದ್ದಹಾಗೆ ಕಾಗದ ಬಂದಿತು ಅಣ್ಣನಿಂದ—ತಾಯಿ ಗೊತ್ತುಮಾಡಿರುವ ಹೆಣ್ಣನ್ನು ನೋಡಲು ಬರಬೇಕೆಂದು. ಹೌದು; ಕಮಲಮ್ಮ ಸಂಬಂಧವನ್ನು ಒಪ್ಪಿ

ಬಿಟ್ಟಿದ್ದರು. ಹುಡುಗಿ ಚೆನ್ನಾಗಿದ್ದಾಳೆ; ಎಸ್.ಎಸ್.ಎಲ್.ಸಿ. ಮಾಡಿದ್ದಾಳೆ; ತಮ್ಮಂತೆ ಬಡವರೇ ಆದ ರಾಮಕೃಷ್ಣಯ್ಯನವರು ಹೊಟ್ಟೆಬಟ್ಟೆಕಟ್ಟಿಯೋ ಸಾಲಮಾಡಿಯೋ ವರೋಪಚಾರದ ಜೊತೆಗೆ ಐನೂರು ರೂಪಾಯಿ ಕೊಡಲು ಒಪ್ಪಿದ್ದಾರೆ. ಈ ಹಣ ಮಗಳ ಮದುವೆಗಾದೀತು. ಮಾತುಕತೆಯಿಂದ ಬೀಗರು ತುಂಬ ಗೌರವಸ್ಥರಾಗಿ ಕಾಣುತ್ತಾರೆ. ಇದಕ್ಕಿಂತ ಇನ್ನೇನಾಗಬೇಕು ? ಕಷ್ಟದಲ್ಲಿರುವ ಅವರ 'ಕನ್ಯಾಸೆರೆ' ಬಿಡಿಸಿದರೆ ತಮಗೂ ಪುಣ್ಯಬರುತ್ತದೆ. ಇಷ್ಟೆಲ್ಲ ಆಲೋಚನೆ ಮಾಡಿ, ಕಮಲಮ್ಮ ಸಂಬಂಧವನ್ನು ತಾವು ಒಪ್ಪಿಬಿಟ್ಟಿದ್ದರು. ಆದರೂ, ಹೆಣ್ಣನ್ನು ನೋಡಿ ಒಪ್ಪುವ ಸ್ವಾತಂತ್ರ್ಯವನ್ನು ಮಾತ್ರ ಕಾಲಕ್ಕೆ ತಕ್ಕಂತೆ ಮಗನಿಗೇ ಬಿಟ್ಟಿದ್ದರು.

ರಮೇಶ್ ಹೆಣ್ಣು ನೋಡಲು ಬೆಂಗಳೂರಿಗೆ ತನ್ನ ಅಣ್ಣನ ಮನೆಗೆ ಹೋದ. ರಾಮಕೃಷ್ಣಯ್ಯನವರು ತಮ್ಮ ಕುಟುಂಬದೊಂದಿಗೆ ಮಗಳು ರೋಹಿಣಿಯನ್ನು ತೋರಲು ಕರೆದುತಂದಿದ್ದರು. ಅವರು ಶ್ರಮವಹಿಸಿ ಅವಳಿಗೆ ಮಾಡಿದ್ದ ಅಲಂಕಾರ, ಮಲ್ಲಿಗೆ ಸಂಪಗೆ ಗುಲಾಬಿ ಪಚ್ಚೆಯತೆನೆಗಳ ಹೂಮಾಲೆಗೆ ಪನ್ನೀರು ಚಿಮುಕಿಸಿ ದಂತಿತ್ತು. ಇತರ ವಿವರಗಳನ್ನು ತನ್ನ ತಾಯ ತೀರ್ಮಾನಕ್ಕೆ ಬಿಟ್ಟು, ರಮೇಶ್ ರೋಹಿಣಿಯನ್ನು ಒಪ್ಪಿಕೊಂಡ.

ರೂಪೊಂದೇ ಅಲ್ಲ; ರೋಹಿಣಿ ಬಹು ಇಂಪಾಗಿ ಕೆಲವು ಹಾಡುಗಳನ್ನು ಹಾಡಿದಳು; ಒಂದೆರಡು ಚಲನಚಿತ್ರಗಳ ಹಾಡು, ಒಂದೆರಡು ದೇವರ ನಾಮ, ನಡುವೆ ಒಂದು ತ್ಯಾಗರಾಜರ ಕೃತಿ. "ಮಗಳಿಗೆ ಸಂಗೀತ ಬೇರೆ ಹೇಳಿಸಿದ್ದೀರಿ, ಪರವಾಯಿಲ್ಲ!" ಎಂದು ಕಮಲಮ್ಮ ಒಂದು ಹಾಡು ಮುಗಿದಕೂಡಲೆ ಮೆಚ್ಚುಗೆಯ ನುಡಿಯಾಡಿದರು. "ಮೇಷ್ಟರನ್ನಿಟ್ಟು ಸಂಗೀತ ಹೇಳಿಸುವಷ್ಟು ಚೈತನ್ಯ ಇದೆಯೆ ಅಮ್ಮ ನಮಗೆ ? ಅಲ್ಲಿ ಇಲ್ಲಿ ಕೇಳಿ ಕೇಳಿ ಕಲಿತದ್ದು" ಎಂದು ರಾಮಕೃಷ್ಣಯ್ಯನವರ ಹೆಂಡತಿ ಸಂಕೋಚ ಪಟ್ಟು ನುಡಿದರು. ಶಾಸ್ತ್ರೀಯವಾಗಿ ಸಂಗೀತಾಭ್ಯಾಸಮಾಡಿದ್ದವರ ಹಾಡಿಕೆಗೆ ಸಮನಾಗಿತ್ತು ರೋಹಿಣಿಯ ಹಾಡಿಕೆ. ಇದೂ ಸಹ ರಮೇಶನನ್ನು ಒಲಿಸಿಕೊಳ್ಳಲು ನೆರವಾಗಿತ್ತು.

ರೋಹಿಣಿ ಹಾಡಿದ ಕಡೆಯ ಹಾಡು, 'ಬಿನ್ನಹಕೆ ಬಾಯಿಲ್ಲವಯ್ಯ, ಅನಂತ ಅಪರಾಧ ಎನ್ನೊಳಿರಲಾಗಿ' ಎಂಬ ಪುರಂದರದಾಸರ ದೇವರನಾಮ. ರೋಹಿಣಿ ಭಾವ ಪೂರ್ಣವಾಗಿ ಈ ಕೃತಿಯನ್ನು ಹಾಡತೊಡಗಿದ್ದಳು. ಇದ್ದಕ್ಕಿದ್ದ ಹಾಗೆ ಅವಳ ಕಂಠರೋಧವಾಯಿತು ; ಕಂಬನಿಗರೆಯುವುದಕ್ಕೆ ಮೊದಲಿಟ್ಟಳು. ಆಗ ಅಳು ಬರದಿದ್ದರೆ ಇನ್ನೊಂದೆರಡು ಹಾಡುಗಳನ್ನು ಹಾಡುತ್ತಿದ್ದಳೇನೋ. ಅಷ್ಟಕ್ಕೆ ಹಾಡಿಕೆ ನಿಂತಿತು. ಯಾಕೆ ಹಾಗೆ ಅತ್ತಳೋ ಯಾರೂ ಅರಿಯದಾದರು. "ಸಂಕೋಚ. ಎಂದೂ ಬೇರೆ

ಕಡೆ ಹಾಡಿದವಳಲ್ಲ. ಹಾಡಿದ್ದು ಸರಿಹೋಯಿತೋ ಇಲ್ಲವೋ ಅಂತ ದಿಗಿಲುಪಟ್ಟಿದ್ದಾಳೆ ಅಂತ ಕಾಣುತ್ತೆ" ಎಂದು ರಾಮಕೃಷ್ಣಯ್ಯನವರು ಸಮಾಧಾನದ ವಾಕ್ಯವೊಂದನ್ನು ಆಡಿದರು. ಅತ್ತು ಕೆಂಪಾದ ರೋಹಿಣಿಯ ಕಣ್ಣು ಕೆನ್ನೆಗಳು ರಮೇಶನಿಗೆ ಮೋಹಕವಾಗಿಯೆ ಕಂಡುವು. ಅವಳ ಅಳುವಿನಲ್ಲಿಯೂ ಅದು ಏನೋ ಒಂದು ಬಗೆಯ ಗಾನಮಾಧುರ್ಯವೇ ರಮೇಶನ ಕಿವಿಗಳಲ್ಲಿ ಹೊಳಲಿಟ್ಟಿತು. ಅಬಲೆಯ ಆರ್ತನಾದದಂತೆ ಧ್ವನಿಸಿತು ಅವಳ ಅಳು, ಅವನ ಗಂಡುಹೃದಯಕ್ಕೆ. ರಮೇಶ ಅವಳನ್ನು ಮನಸ್ಸಿನಲ್ಲಿ ಸಂಪೂರ್ಣವಾಗಿ ಒಪ್ಪಿಬಿಟ್ಟ.

ಮಾರನೆಯ ದಿನ ಉತ್ತರ ಹೇಳುವುದಾಗಿ ಕಮಲಮ್ಮ ಹೇಳಿದರು.

ಅಂದಿನ ರಾತ್ರಿಯೇ ತಾಯಿಮಕ್ಕಳ ನಡುವೆ ಮಾತುಕತೆ ನಡೆಯಿತು. ಎಲ್ಲರೂ ಒಪ್ಪುವ ರೀತಿಯೆ ಕಂಡುಬಂದಿತು. ಆದರೆ ರಮೇಶನ ಅತ್ತಿಗೆಯ ಟೀಕೆ ವಿರುದ್ಧವಾಗಿತ್ತು: 'ಹೆಣ್ಣು ಅತ್ತಳು. ಅವಳಿಗೆ ಇಷ್ಟವಿಲ್ಲವೋ ಏನೋ. ಅಲ್ಲದೆ, ಅತ್ತದ್ದು ಅಪಶಕುನ. ಹೆಣ್ಣು ನಾಚಬಹುದು; ಬಿಗುಮಾನ ತೋರಬಹುದು; ಬಿಂಕ ಮೆರೆಯಬಹುದು; ಹುಬ್ಬುಗಂಟಿಕ್ಕಲೂ ಬಹುದು. ಅಳುವುದೆಂದರೇನು? ಅದು ಅಪಶಕುನ.'

"ನಾಚಿಕೆಗೇಡೇ ಸರಿ. ಧಾರೆಯೆರೆಯುವಾಗ ತಂದೆತಾಯಿ ಕಣ್ಣೀರಿನಲ್ಲೇ ಧಾರೆಯೆರೆಯುತ್ತಾರೆ. ಮನೆ ತುಂಬಿಸಿಕೊಡುವಾಗ ಎಲ್ಲರೂ ಅಳುವುದೇ! ಮದುವೆಮನೆಯಲ್ಲೆ ಅಳಬಹುದಂತೆ, ಯಾಕೋ ಏನೋ ಹೆಣ್ಣು ಈಗ ಅತ್ತರೆ ಏನು? ರಮೇಶ ಒಪ್ಪಿದರೆ ಸರಿ"—ಎಂದು ಕಮಲಮ್ಮ ಹೆಣ್ಣುತಂದುಕೊಳ್ಳಲು ಒಪ್ಪಿದಂತೆಯೆ ನುಡಿದರು.

ರೋಹಿಣಿಯನ್ನು ಮದುವೆಯಾಗಲು ರಮೇಶ ಒಪ್ಪಿಯೇಬಿಟ್ಟ.

ಮದುವೆಯೂ ಆಯಿತು.

ಅಳು, ಅಳು, ಅಳು.

ಅಳುವಿನ ಹೊನಲಿನಲ್ಲಿಯೇ ತೇಲಿಬಂದಳು ರೋಹಿಣಿ ಗಂಡನ ಮನೆಗೆ.

ಮದುವೆಯಲ್ಲಿ ಹಸೆಮಣೆಯ ಮೇಲೆ ಅಳು; ಮನೆ ತುಂಬಿಸಿಕೊಳ್ಳುವಾಗ ಅಳು. ಕೆಲವು ತಿಂಗಳು ಕಳೆದ ಮೇಲೆ ಪ್ರಸ್ತದ ಉದ್ದಕ್ಕೂ ಅಳು. ಅವಳ ಅಳುವಿನ ಕಾರಣ ಅವಳೊಂದಿಗೆ ರಮೇಶ ತಲೆಯೂರಿದ್ದ ಅವಳ ಕಂಬನಿ ಕುಡಿದ ದಿಂಬಿಗೆ ಗೊತ್ತಿದ್ದಿತೋ ಏನೋ! ಹೇಳಲಾಗದ ರಹಸ್ಯವನ್ನು ರಮೇಶ ತನ್ನಲ್ಲಿಯೆ ಬಚ್ಚಿಟ್ಟುಕೊಂಡ. ಮನಸ್ಸಿಗೆ ನಿರಾಶೆಯಾಯಿತು, ನೋವಾಯಿತು; ಆದರೂ ರೋಹಿಣಿಯ ಮೇಲೆ ಅವನಿಗೆ ಕೋಪವಿಲ್ಲ.

ಉದ್ಯೋಗ ದೊರೆಯುವ ಮುನ್ನ ಒಂದೆರಡು ತಿಂಗಳು ರಮೇಶ ಅಣ್ಣನ ಮನೆ

ಯಲ್ಲಿ ಇದ್ದ. ಅಣ್ಣನಿಗೆ ಬೇರೆಯ ಕಡೆ ವರ್ಗವಾಗಲು, ಅವನು ಒಂದು ಕೆಲಸ ಹುಡುಕಿ ಕೊಳ್ಳಬೇಕಾಯಿತು.

ಈಗ ರೋಹಿಣಿ ಗಂಡನೊಂದಿಗೆ ಸಂಸಾರಮಾಡುತ್ತಿದ್ದಾಳೆ. ತನ್ನ ಅಳಲ ಕಾರಣವನ್ನು ಕೈಹಿಡಿದ ಗಂಡನಿಗೆ ಹೇಳಿಕೊಳ್ಳಲು ಏಕಾಂತದ ಅವಕಾಶವಿದೆ. ಆದರೂ ಹೇಳಿಕೊಳ್ಳಲೊಲ್ಲಳು.

ಗಂಡ ತನ್ನ ಮೈ ಮುಟ್ಟಿದರೆ ಅಳುತ್ತಾಳೆ; ಕೆಂಡವಾಗುತ್ತದೆ ಅವನ ಕೈ ಸೋಂಕು.

ರೋಹಿಣಿಯ ನಿಲುಗಡೆಯಿಲ್ಲದ ಈ ಅಳುವಿನ ಸಂಗತಿ ಹೊರಪಡದೆ ಇರಲು ಸಾಧ್ಯವಿರಲಿಲ್ಲ. ಅವಳ ತಂದೆತಾಯಿಗಂತೂ ಅದು ಬಹುಮಟ್ಟಿಗೆ ಮೊದಲೇ ತಿಳಿದಿದ್ದ ಸಂಗತಿ. ರಮೇಶ ತನ್ನ ತಾಯಿ ಮತ್ತು ಅಣ್ಣನೊಂದಿಗೂ ತನ್ನ ಹೆಂಡತಿಯ ವಿಚಿತ್ರ ಸ್ವಭಾವವನ್ನು ಕುರಿತು ಸಂಕಟಪಟ್ಟು ಹೇಳಿಕೊಂಡಿದ್ದ ; "... ಎಲ್ಲದರಲ್ಲೂ ಸರಿ. ಅಡಿಗೆ, ಮನೆಯ ಒಪ್ಪ ಓರಣ, ನಡೆನುಡಿ ಎಲ್ಲ ನನಗೆ ಒಪ್ಪಾಗಿದೆ. ಒಂದೊಂದು ದಿನ ... ರಾತ್ರಿಹೊತ್ತು ... ಇದ್ದಕ್ಕಿದ್ದ ಹಾಗೆ ಮಗುವಿನ ಹಾಗೆ ಅಳುತ್ತ ಕುಳಿತು ಬಿಡುತ್ತಾಳೆ ..." "ಏನೋ ಅಪ್ಪ, ನನಗೆ ಅರ್ಥವಾಗುವುದಿಲ್ಲ. ಒಂದು ಯಂತ್ರ ವಾದರೂ ಕಟ್ಟಿಸಿನೋಡು" ಎಂದು ತಾಯಿ ಒಮ್ಮೆ ಬೆಂಗಳೂರಿಗೆ ಬಂದಿದ್ದಾಗ ಸಲಹೆ ಕೊಟ್ಟರು.

ರೋಹಿಣಿಗೆ ಭೀತಿಶಂಕೆಯ ಯಂತ್ರ ಕಟ್ಟಿಸಿದ್ದೂ ಆಯಿತು. ಅವಳ ಅಳು ಮಾತ್ರ ನಿಲ್ಲಲಿಲ್ಲ.

ರೋಹಿಣಿಯ ತಂದೆಯೂ ಈಗ ತುಮಕೂರಿಗೆ ವರ್ಗವಾಗಿ ಹೋಗಿದ್ದರು. ಅವರು ಒಮ್ಮೆ ಬಂದಿದ್ದಾಗ ಅವರಿಗೆ ರಮೇಶ್ ತನ್ನ ಹೆಂಡತಿಯ ಸ್ಥಿತಿಯನ್ನು ವಿವರಿಸಿ, "ಮದುವೆಗೆ ಮುಂಚೆಯೂ ಹೀಗೇ ಇದ್ದಳೆ?" ಎಂದು ಆತಂಕಗೊಂಡು ಕೇಳಿದ. "ಹೀಗೆ ಇರಲಿಲ್ಲವಲ್ಲ! ಏನೋ ಖಾಯಿಲೆ ಇರಬಹುದಪ್ಪ. ಹೆಂಗಸರ ಆಸ್ಪತ್ರೆಗೆ ತೋರಿಸಿನೋಡು. ಏನಾದರೂ ಟಾನಿಕ್ ಕೊಡಿಸಿದರೆ ಸರಿಹೋಗಬಹುದು" ಎಂದರು ರಾಮಕೃಷ್ಣಯ್ಯನವರು.

ಆಸ್ಪತ್ರೆಗೆ ಹೋಗಿ ತೋರಿಸಿಕೊಳ್ಳುವುದು ರೋಹಿಣಿಗೆ ಇಷ್ಟವಿಲ್ಲ. ಗಂಡನ ಬಲವಂತಕ್ಕೆ ಅವನೊಂದಿಗೆ ಆಸ್ಪತ್ರೆಗೆ ಹೋದಳು. ಹಾಗೆ ಹೋಗುವ ಮುನ್ನ ಅತ್ತಳು ಎಂದು ಬೇರೆ ಹೇಳಲೇಬೇಕಾಗಿಲ್ಲ.

ಲೇಡಿ ಡಾಕ್ಟರು ಈ 'ರೋದನ ರೋಗಿ'ಯನ್ನು ವಿವರವಾಗಿ ಪರೀಕ್ಷಿಸಿದರು ; ಅವಳಿಗೆ ಅನೇಕ ಪ್ರಶ್ನೆಗಳನ್ನು ಹಾಕಿ ಬೇಸರಪಡಿಸಿದರು; ಒಂದೆರಡು ಪ್ರಶ್ನೆಗಳು

ಅವಳನ್ನು ಅಳುವಂತೆಯೂ ಮಾಡಿದುವು. ರಮೇಶ ಹೇಳಿದ್ದು ಕಟ್ಟುಕತೆಯಲ್ಲ ಎಂದು ಅವರಿಗೆ ಖಚಿತವಾಯಿತು. ಆದರೂ ರೋಗ ನಿಧಾನಮಾಡಲಾಗಲಿಲ್ಲ.

"Nervous Debility (ನರದೌರ್ಬಲ್ಯ) ಇರಬಹುದು ಕಣ್ರಿ. ಈ ಟಾನಿಕ್ ಕೊಡಿ, ಸರಿಹೋಗಬಹುದು" ಎಂದು ಲೇಡಿ ಡಾಕ್ಟರ್ 'ವೈಟಮಿನ್ ಬಿ ಕಾಂಪ್ಲೆಕ್ಸ್' ಬರೆದುಕೊಟ್ಟರು. ಅದರಿಂದ ಏನೂ ಪ್ರಯೋಜನವಾಗಲಿಲ್ಲ.

"ಹಿಸ್ಟೀರಿಯಾ ಇರಬಹುದು. ಮೆಂಟಲ್ ಆಸ್ಪತ್ರೆಗೆ ತೋರಿಸಿ ನೋಡಯ್ಯಾ' ಎಂದು ಸಂಗತಿಯನ್ನು ಬಲ್ಲ ರಮೇಶನ ಆಪ್ತಮಿತ್ರರು ಸಲಹೆ ಮಾಡಿದರು.

'ಹೌದು, ಇರಬಹುದು' ಎನ್ನಿಸಿತು ರಮೇಶನಿಗೆ.

"ರೋಹಿಣಿ . . . ನಾಳೆ ಭಾನುವಾರ . . ."

"ಏನು ಸಿನಿಮಾಕ್ಕೆ ತಾನೆ?"

"ಅಲ್ಲ . . ."

"ಮತ್ತೆ . . ."

"ಹುಚ್ಚರಾಸ್ಪತ್ರೆಗೆ ನಿನ್ನನ್ನು ಕರೆದುಕೊಂಡು ಹೋಗಬೇಕು" ಎಂದು ಹೇಳಲು ಅವನಿಗೆ ಬಾಯಿಬರಲಿಲ್ಲ. ಹೇಳದೆ ಇದ್ದರೆ ವಿಧಿಯಿಲ್ಲ.

"ಒಂದು ಕಡೆಗೆ ಹೋಗಬೇಕಾಗಿದೆ . . . ಬರುತ್ತೀ ತಾನೆ . . ."

"ನಾನು ನಿಮ್ಮ ನೆರಳುತಾನೆ. ನೀವು ಹೋದಕಡೆಗೆ ಬಾ ಅಂದರೆ ಬರಬೇಕು. ಆದರೂ, ಸುಮ್ಮನೆ ಒಂದು ಕಡೆಗೆ ಅಂದರೆ ಏನಂತ ತಿಳಿದುಕೋಬೇಕು? ಇಂಥ ಕಡೆಗೆ ಅಂತ ಹೇಳಬಾರದೆ?" ಎಂದು ಸಮಾಧಾನಚಿತ್ತದಿಂದ, ನಗುನಗುತ್ತಲೇ ನುಡಿದಳು.

"ಹೋದ ಮೇಲೆ ತಾನೇ ಗೊತ್ತಾಗುತ್ತೆ. ಒಂಬತ್ತು ಗಂಟೆಯ ಹೊತ್ತಿಗೇ ಅಡಿಗೆ ಮಾಡಿಬಿಡು. ಹೋಟಲಿಂದ ಇಡ್ಲಿ ತಂದುಬಿಡುತ್ತೇನೆ; ತಿಂದುಕೊಂಡು ಹೋಗೋಣ. ಹಾಗೇ ಲಾಲ್‌ಬಾಗಿನಲ್ಲಿ ಸುತ್ತಾಡಿಕೊಂಡು . . ."

ರಮೇಶನ ಮಾತಿನಿಂದ ಏನೋ ವಿಹಾರ ಎಂದೇ ಬಗೆದಳು ರೋಹಿಣಿ. ಒಂದು ಭಾಗದಲ್ಲಿ ಅವನನ್ನು ತೃಪ್ತಿಗೊಳಿಸಲು ಅವಳು ಹಿಂದೆಗೆದಿದ್ದಳೇ ಹೊರತು, ಸರ್ವ ವಿಧದಿಂದಲೂ ಪತಿಯ ಇಷ್ಟಾನುವರ್ತಿಯಾಗಿ ನಡೆದುಕೊಳ್ಳಬೇಕೆಂದೇ ಎಂದಿನಿಂದಲೂ ಅವಳ ಮನಃಪೂರ್ವಕ ಪ್ರಯತ್ನ. ರಮೇಶನಿಗಿಂತ ಒಳ್ಳೆಯ ಗಂಡನನ್ನು ಪಡೆಯುವುದು ಸಾಧ್ಯವಿರಲಿಲ್ಲ ಎಂದು ಮನದಟ್ಟಾಗಿದ್ದಿತು ಅವಳಿಗೆ. ಹೆಂಡತಿಯಾಗಿಯೂ ಹೆಂಡತಿಯಂತೆ ನಡೆದುಕೊಳ್ಳದೆ ಇದ್ದ ತನ್ನೊಂದಿಗೆ ಬಾಳ್ವೆ ಮಾಡುತ್ತಿರಬೇಕಾದರೆ ಅವನ ಸಹನೆ ಎಷ್ಟು!

ರಮೇಶನೊಂದಿಗೆ ಹೋಗಲು ರೋಹಿಣಿ ಒಪ್ಪಿಕೊಂಡಳು.

ಭಾನುವಾರ ಬೆಳಗ್ಗೆ ವಿಹಾರ ವಿನೋದಗಳಿಂದಲೆ ಪ್ರಾರಂಭವಾಯಿತು. ಲಾಲ್ ಬಾಗಿನ ಉತ್ತರದ ಗೇಟಿನ ಬಳಿ ಗಾಡಿ ಮಾಡಿಕೊಂಡು ಹುಚ್ಚರಾಸ್ಪತ್ರೆಯನ್ನು ತಲಪಿ, ಅಲ್ಲಿ ಮುಖ್ಯವೈದ್ಯರನ್ನು ಹುಡುಕಿಕೊಂಡು ಅಲೆದಾಡಿದಾಗ ಸ್ಥಳ ಯಾವುದೆಂದು ರೋಹಿಣಿಗೆ ಖಚಿತವಾಯಿತು.

"ಇದೇ ತಾನೆ, ಒಂದು ಕಡೆ, ನನ್ನನ್ನ ಕರೆದುಕೊಂಡುಬರಬೇಕು ಅಂತ ಇದ್ದದ್ದು ?" ಎಂದು ರೋಹಿಣಿ ಪ್ರಶ್ನಿಸಿದಳು.

ರಮೇಶ ಮೌನವಾಗಿದ್ದ.

"ನಿಮಗೇನಾದರೂ ಹುಚ್ಚುಗಿಚ್ಚು ಹಿಡಿದಿದೆಯೋ ಹೇಗೆ? ಇಲ್ಲಿಗೆ, ಎಲ್ಲಾ ಬಿಟ್ಟು . . ."

"ಅಯ್ಯೋ ಹುಚ್ಚಿ, ಸ್ವಲ್ಪ ಸುಮ್ಮನಿರಬಾರದೆ? ಇಲ್ಲಿ ಕುಳಿತಿರು, ಬೇಗ ಬಂದು ಬಿಟ್ಟೆ" ಎಂದು ರಮೇಶ ರೋಹಿಣಿಯನ್ನು ಒಂದು ಬೆಂಚಿನ ಮೇಲೆ ಕೂರಿಸಿ, ಆಸ್ಪತ್ರೆಯ ಸೂಪರಿಂಟೆಂಡೆಂಟರನ್ನು ಕಾಣಲು ಹೋದ.

ಅಲ್ಲಿ ಅವರಿಗೆ ರಮೇಶ ತನ್ನ ಹೆಂಡತಿಯ ಅಳುವಿನ ಪ್ರಸಂಗವನ್ನು ವಿವರಿಸಿ ಹೇಳಿದ. ಅವರು ಹಾಕಿದ ಪ್ರಶ್ನೆಗಳಿಗೆಲ್ಲ ರಮೇಶ ಸರಿಯಾದ ಉತ್ತರಗಳನ್ನೇ ಒದಗಿಸಿದ. ಆದರೆ, ಈ ಪ್ರಶ್ನೋತ್ತರಗಳಿಂದ ನಿಜಾಂಶ ನುಣುಚಿಕೊಂಡೇ ಇತ್ತು.

"ರೋದನ ರೋಗಿ" ಇದ್ದ ಕಡೆಗೇ ಡಾಕ್ಟರು ರಮೇಶನೊಂದಿಗೆ ಬಂದರು; ಲೋಕಾಭಿರಾಮವಾಗಿ, ಮನೋರೋಗಕ್ಕೆ ಸಂಬಂಧಪಟ್ಟ ಪ್ರಶ್ನೆಗಳು ಎಂದು ಸುಳಿವು ಕೊಡದ ಹಲವಾರು ಪ್ರಶ್ನೆಗಳನ್ನು ರೋಗಿಗೆ ಹಾಕಿದರು. ರೋಹಿಣಿ ಕೊಟ್ಟ ಉತ್ತರಗಳೆಲ್ಲ ಸಮಂಜಸವಾಗಿಯೆ ಇದ್ದುವು. ಯಾವ ಬಗೆಯಲ್ಲಿಯೇ ಆಗಲಿ ಅವಳ ಚಿತ್ತಸ್ವಾಸ್ಥ್ಯ ಕೆಟ್ಟಿದೆಯೆಂದು ಶಂಕಿಸಲು ವೈದ್ಯರಿಗೆ ಕಾರಣ ತೋರಲಿಲ್ಲ. ಹಾಗಾದರೆ, ತನ್ನ ಹೆಂಡತಿಯ ಬಗ್ಗೆ ರಮೇಶ್ ಹೇಳುವುದೇ ಸುಳ್ಳೋ? ರೋಹಿಣಿಯ ಅರ್ಥವಿಲ್ಲದ ರೋದನಕ್ಕೆ ಕಾರಣವೇನು? ಅವಳನ್ನು ಕೆಲವು ಕಾಲ ಆಸ್ಪತ್ರೆಯಲ್ಲೇ ಇಟ್ಟುಕೊಂಡು ಪರೀಕ್ಷಿಸುವುದು ಒಳ್ಳೆಯದೆಂದು ವೈದ್ಯರು ನಿರ್ಧರಿಸಿದರು.

"ನಿಮ್ಮ ಯಜಮಾನರು ಒಪ್ಪಿಗೆ ಕೊಟ್ಟಿದ್ದಾರೆ. ನೀವು ಒಂದೆರಡು ದಿನ ಇಲ್ಲಿಯೇ . . ."

ಕೆನ್ನೆಗೆ ಬಲವಾಗಿ ಹೊಡೆದಂತೆ ಭಾಸವಾಯಿತು ರೋಹಿಣಿಗೆ. ಕೋಪಗೊಂಡು ಸಿಟಿತು ನುಡಿದಳು;

"ನನ್ನ ಯಜಮಾನರೂ ನೀವೂ ಸೇರಿಕೊಂಡು ನನ್ನನ್ನ ಹುಚ್ಚಿಯಾಗಿ ಮಾಡಬೇಕು ಅಂತ ಮಾತಿಕೊಂಡಿದ್ದೀರೋ?"

ಎಷ್ಟೋ ಮಂದಿ ನಿಜವಾದ ಹುಚ್ಚರೇ ಹೀಗೆ ಮಾತಾಡಿದ್ದನ್ನು ವೈದ್ಯರು ಚೆನ್ನಾಗಿ ಬಲ್ಲರು. ರೋಹಿಣಿಗೆ ಹುಚ್ಚಿಲ್ಲವೆಂದೂ ಅವರಿಗೆ ಮನವರಿಕೆಯಾಗಿತ್ತು. ರಮೇಶ ಹೇಳಿದ್ದು ನಿಜವಾಗಿದ್ದರೆ ಈಗಲ್ಲದಿದ್ದರೆ ಮುಂದಾದರೂ ಹುಚ್ಚು ಹಿಡಿಯಬಹುದೆಂದು ವೈದ್ಯರು ಶಂಕಿಸಿದರು. ಅವಳ ಅಳುವಿನ ಮೂಲಕಾರಣವನ್ನು ಕಂಡು ಹಿಡಿದು, ಅದು ನಿಲ್ಲುವ ಹಾಗೆ ಮಾಡಿ, ಅವಳ ಭವಿಷ್ಯವನ್ನು ಸಂರಕ್ಷಿಸಬೇಕೆಂದು ಅವರು ಕುತೂಹಲಗೊಂಡಿದ್ದರು. ಅವಳ ಅಳುವಿನ ಮೂಲ ಅವಳ ಮನಸ್ಸಿನಲ್ಲಿಯೆ ಹುದುಗಿದೆಯೆಂಬುದರಲ್ಲಿ ಅವರಿಗೆ ಸಂದೇಹವಿರಲಿಲ್ಲ.

“ಹಾಗಾದರೆ, ನಾನು ಕೇಳುವ ಈ ಪ್ರಶ್ನೆಗೆ ಉತ್ತರ ಹೇಳಿ. ನೀವು ಆಗಾಗ್ಗೆ ಕಾರಣವಿಲ್ಲದೆ ಅಳುತ್ತ ಕುಳಿತುಬಿಡುತ್ತೀರಂತಲ್ಲ? ಹೌದೋ.”

ರೋಹಿಣಿಯ ಮುಖ ತಗ್ಗಿತು; ವಿವರ್ಣವಾಯಿತು.

“ಕಾರಣವಿಲ್ಲದೆ ಅತ್ತರೆ, ನಕ್ಕರೆ . . . ನಿಮಗೆ ಗೊತ್ತೇ ಇದೆ ಅಂತ ಕಾಣುತ್ತೆ. ಆದ್ದರಿಂದ, ನೀವು ಅಳುವುದು ನಿಜವೇ ಆದರೆ, ಅದಕ್ಕೆ ಕಾರಣ ಇರಬೇಕಲ್ಲ. ದುಃಖದ ಕಾರಣ ಏನಾದರೂ ಇದ್ದರೆ ಅದನ್ನು ಬಚ್ಚಿಟ್ಟುಕೊಳ್ಳುವುದು ಒಳ್ಳೆಯದಲ್ಲ. ಅದರ ಮೂಲಕಾರಣ, ನಿಮ್ಮ ಯಾವುದಾದರೂ ತೀರದ ಆಶೆಯೋ ಹಳೆಯ ಕಹಿ ನೆನಪೋ ಏನಾದರೂ ಇದ್ದರೆ, ನನಗೆ ಹೇಳಬೇಡಿ; ನಿಮ್ಮ ಯಜಮಾನರಲ್ಲಿಯಾದರೂ ಹೇಳಿಕೊಳ್ಳಿ. ಅವರಿಗೂ ತಿಳಿಸಬಾರದ್ದು ಇದ್ದೀತೆ? ಖಂಡಿತ ಇರಲಾರದು. ಅಲ್ಲವೇ ? . . .”

“ಡಾಕ್ಟರೇ, ಡಾಕ್ಟರೇ, ನಿಮ್ಮ ದಮ್ಮಯ್ಯ, ನೀವಿಬ್ಬರೂ ಸೇರಿಕೊಂಡು ನನಗೆ ಹುಚ್ಚು ಹಿಡಿಸುತ್ತ ಇದ್ದೀರಿ. ಇನ್ನು ಒಂದು ಕ್ಷಣ ಇಲ್ಲಿ ಇದ್ದರೂ ನನಗೆ . . . ಅಯ್ಯೊ ಅಯ್ಯೊ . . .” ಎಂದು ರೋದಿಸತೊಡಗಿದಳು.

ವೈದ್ಯರು ಮೇಲಕ್ಕೆದ್ದು, ರಮೇಶನನ್ನು ಒಂದು ಮಾರಾಚೆ ಕರೆದುಕೊಂಡು ಹೋಗಿ ಪಿಸುಮಾತಿನಲ್ಲಿ ಹೇಳಿದರು:

“. . . ಏನೂ ಗಾಬರಿ ಪಡಬೇಡಿ. ಅವರ ಅಳುವಿಗೆ ಕಾರಣವಿಲ್ಲದೆ ಇಲ್ಲ. ನೀವೇ ಹೇಗಾದರೂ ಉಪಾಯದಿಂದ ಅದನ್ನು ಹೊರಪಡಿಸಿದರೆ, ಅಳುವೂ ನಿಂತೀತು. ಅವರನ್ನು ಸದಾ ಸಂತೋಷವಾಗಿಟ್ಟಿರಿ. ನೀವೇ ಅವರ ವೈದ್ಯರಾಗಬೇಕು . . .”

* * * *

ರಮೇಶ್ ರೋಹಿಣಿಯನ್ನು ಸಂತೋಷವಾಗಿರಿಸಲು ಎಂದಿನಿಂದಲೂ ಪ್ರಯತ್ನಿಸಿದ್ದ. ಅಂದು ಮನೆಗೆ ಹಿಂದಿರುಗಿ ಊಟ, ಮಧ್ಯಾಹ್ನದ ಕಾಫಿ ಎಲ್ಲ ಮುಗಿದಮೇಲೆ ಸಿನಿಮಾಕ್ಕೆ ಹೋಗೋಣ ಎಂದು ರಮೇಶ್ ರೋಹಿಣಿಗೆ ಹೇಳಿದ. ಎಷ್ಟು ಬಲವಂತ

ಮಾಡಿದರೂ ಅವಳು ಒಪ್ಪಲಿಲ್ಲ. 'ನೀವು ಹೋಗಿಬನ್ನಿ. ನನಗೇನೂ ಹುಚ್ಚು ಹಿಡಿದೂ ಇಲ್ಲ, ಹಿಡಿಯುವುದೂ ಇಲ್ಲ. ಗಾಬರಿಯಾಗಬೇಡಿ. ಆದರೂ . . ."

"ಏನು ಆದರೂ . . .?"

"ಏನೂ ಇಲ್ಲ. ನನ್ನಿಂದ ನಿಮಗೆ ಸುಖ ಇಲ್ಲ. ನೀವು ಇನ್ನೊಂದು ಮದುವೆಯಾದರೂ ಮಾಡಿಕೊಂಡುಬಿಡಿ. . . ."

"ನಿನಗೇನು ಬುದ್ಧಿಗಿದ್ಧಿ ಇದೆಯೋ ಇಲ್ಲವೋ?"

"ಇಲ್ಲ ಅಂತ ಹೇಗೂ ನಿಮಗೆ ಅನುಮಾನವಾಗಿದೆಯಲ್ಲ. ಅದಕ್ಕೆ ಹೇಳಿದೆ. ."

"ಹೋಗಲಿ, ಆ ಮಾತು ಈಗ ಯಾಕೆ? ಸಿನಿಮಾಕ್ಕೆ ಬರುತ್ತೀಯೋ ಇಲ್ಲವೋ?"

"ಇನ್ನೊಂದು ದಿನ ಬಂದರಾಯಿತು. ನೀವು ಹೋಗಿಬನ್ನಿ, ಇವೊತ್ತು" ಎಂದು ಸಮಾಧಾನಳಾಗಿ ನುಡಿದಳು ರೋಹಿಣಿ.

* * * *

ರೋಹಿಣಿಯನ್ನು ಬಿಟ್ಟು ಸಿನಿಮಾಕ್ಕೆ ಹೋಗಲು ಅವನಿಗೆ ಮನಸ್ಸಾಗಲಿಲ್ಲ. ಅಲ್ಲದೆ, 'ಮ್ಯಾಟಿನಿ' ಪ್ರದರ್ಶನದ ಹೊತ್ತು ಮೀರುತ್ತಲೂ ಬಂದಿತ್ತು.

"ಹೋಗಲಿ, ಸಿನಿಮಾ ಬೇಡ. ಲಾಲ್‌ಬಾಗಿಗಾದರೂ ಹೋಗೋಣ ಬಾ."

"ಇದೇನೂ ಅಂದ್ರೆ! ಬೆಳಗ್ಗೆ ತಾನೆ ಹೋಗಿದ್ದೆವಲ್ಲ! ನಾನು ಎಲ್ಲಿಗೂ ಬರೋದಿಲ್ಲ; ಸುಮ್ಮನೆ ಬಲವಂತಮಾಡಬೇಡಿ."

ರಮೇಶ್ ಸಂಜೆ ತಿರುಗಾಡಿಕೊಂಡು ಬರಲು ಮನೆಬಿಟ್ಟು ಒಬ್ಬನೇ ಹೊರಟ. ಅವನ ತಲೆಯಲ್ಲಿ ಅಂದು ರೋಹಿಣಿಯ ಆಲೋಚನೆಯೆ ತುಂಬಿತ್ತು. ಅಲ್ಲಿ ಇಲ್ಲಿ ಸುತ್ತಾಡಿ ಮನೆಗೆ ಹಿಂದಿರುಗುವ ಹೊತ್ತಿಗೆ ರಾತ್ರಿ ಎಂಟಾಗಿತ್ತು. ಹಿಂದುಗಡೆಯ ಸಣ್ಣ ಮನೆ. ರಾತ್ರಿಯ ವೇಳೆ ಜೊತೆಗೆ ಯಾರೂ ಇಲ್ಲದೆ, ಬಾಗಿಲನ್ನು ಭದ್ರಪಡಿಸಿಕೊಂಡು ದೀಪ ಹಾಕಿಕೊಂಡು ಕುಳಿತಿರುತ್ತಿದ್ದುದು ರೋಹಿಣಿಯ ಪದ್ಧತಿ. ರಮೇಶ "ಲೇ, ಬಾಗಿಲು, ಬಾಗಿಲು ತೆಗೆಯೇ" ಎಂದು ಕೂಗಿದರೂ, ರೋಹಿಣಿ "ಯಾರು, ಯಾರು?" ಎಂದು ಮರಮರಳಿ ಪ್ರಶ್ನಿಸಿ, ರಮೇಶನ ಧ್ವನಿ ಎಂದು ಖಚಿತಪಡಿಸಿಕೊಂಡು ಬಾಗಿಲು ತೆಗೆಯುತ್ತಿದ್ದಳು. ಎಂದಿನ ರೂಢಿಯಂತೆ ಇಂದೂ ಮನೆಯ ದೀಪ ಉರಿಯುತ್ತಿದ್ದಿತು. ರಮೇಶ ಹಿಂದಿರುಗಿದವನೇ, ಎಂದಿನಂತೆ 'ಬಾಗಿಲು ತೆಗಿ' ಎಂದು ಕೂಗಿದ. ಮೂರು ನಾಲ್ಕು ಸಲ ಕೂಗಿದರೂ ರೋಹಿಣಿ ಉತ್ತರ ಕೊಡದಿರಲು, ಬಲವಾಗಿ ಬಾಗಿಲನ್ನು ತಟ್ಟಿ ಕೂಗಿದ. ತಟ್ಟಿದ ಮಾತ್ರಕ್ಕೇ ಬಾಗಿಲು

ತಾನಾಗಿ ತೆರೆಯಿತು. ಬಾಗಿಲ ಚಿಲಕ ಹಾಕಿಕೊಳ್ಳುವುದನ್ನು ಮರೆತು, ಚಾಪೆಯ ದಿಂಬಿನ ಮೇಲೆ ತಲೆಯೂರಿ ರೋಹಿಣಿ ಗಾಢನಿದ್ರೆಯಲ್ಲಿ ಮುಳುಗಿದ್ದಳು. ವಿದ್ಯುದ್ದೀಪದ ಬೆಳಕಿನಲ್ಲಿ ಅವಳ ಮುದ್ದುಮುಖ ಮೋಹಕವಾಗಿ ಕಂಡಿತು ರಮೇಶನಿಗೆ. ಮೆಲ್ಲನೆ ಅವಳ ಬಳಿ ಸಾರಿ, ಸದ್ದಾಗದಂತೆ ಅವಳ ಬಳಿ ಕುಳಿತ; ಅವಳ ಮುಖವನ್ನು ಕ್ಷಣಕಾಲ ನಿಟ್ಟಿಸುತ್ತ ಕುಳಿತ. ದಿಂಬಿನ ಅಡಿಯಲ್ಲಿ ಬೆಳ್ಳನೆಯ ಕಾಗದದ ಮಡಿಕೆ ಇಣಿಕಿ ನೋಡುತ್ತಿತ್ತು. ಕೂತೂಹಲದಿಂದ ರಮೇಶ ಅದನ್ನು ಕೈಗೆತ್ತಿಕೊಂಡು, ಮಡಿಕೆ ಬಿಚ್ಚಿದ. ರೋಹಿಣಿಯ ಅಕ್ಷರ; ಅವಳೇ ಬರೆದದ್ದು, ಸಂಶಯವಿಲ್ಲ. ಓ, ಆಚೆಯ ಪಕ್ಕದಲ್ಲಿ ತನ್ನ ಅಗ್ಗದ ಫೌಂಟನ್‌ಪೆನ್ನೂ ಮುಚ್ಚದೆ ಹಾಗೆಯೇ ಮಲಗಿದೆ! ಅವಳು ಬರೆದು ಮಲಗಿರಬೇಕು. ಬರಹ ಮುಗಿದೂ ಇರಲಿಲ್ಲ; ಮುಂದೇನು ಬರೆಯುವುದು ಎಂದು ಯೋಚನೆಯಲ್ಲಿ ನಿದ್ದೆ ಹತ್ತಿರಬೇಕು. ಅಲ್ಲಲ್ಲೆ ಕೆಲವು ಅಕ್ಷರಗಳು ಕಲಸಿಹೋಗಿವೆ. ಆದರೂ ಓದಬಹುದು. ಅದು ಯಾಕೆ ಕಲಸಿಹೋಗಿವೆ? ಅವನ ಗಮನ ದಿಂಬಿನ ಒದ್ದೆಯಾದ ಭಾಗದ ಕಡೆಗೆ ಹೊರಳಿತು. ಒದ್ದೆಯಾಗಿದೆಯೋ, ಅಥವಾ ಜಿಡ್ಡಿನ ಕಲೆಯೋ? ಮುಟ್ಟಿನೋಡಿದ. ಹೌದು, ಇನ್ನೂ ಒದ್ದೆಯಾಗಿಯೇ ಇದೆ. ಕಾಗದ ಬರೆಯುತ್ತ ಕಂಬನಿ ಸುರಿದಿರಬೇಕು. ಅದಕ್ಕೇ ಅಕ್ಷರ ಅಲ್ಲಲ್ಲಿ ಕಲಿಸಿ ಹೋಗಿದೆ. ಕಾಗದವನ್ನು ಮುಗಿಸದೆ ದಿಂಬಿನ ಕೆಳಗಿಟ್ಟು, ಅಳುತ್ತಲೇ ಮಲಗಿರಬೇಕು. ಅತ್ತು ಅತ್ತು ನಿದ್ದೆ ಬಂದಿರಬೇಕು. ದಿಂಬಿನ ಕಂಬನಿಯ ಕತೆಗೆ ಅರೆಬರೆದ ಕಾಗದವೆ ಸಾಕಷ್ಟು ಸಾಕ್ಷ್ಯವಾಗಿತ್ತು. ಅದನ್ನವನು ಓದಿಕೊಂಡ:

"... ಪಾದಪದ್ಮಂಗಳಲ್ಲಿ. ಸೇವಕಿಯ ಅನಂತ ಪ್ರಣಾಮಗಳು."

"ನನ್ನ ನಿತ್ಯದ ಅಳುವಿಗೆ ಕಾರಣ ತಿಳಿಯಲು ನೀವು ಸಾಹಸಪಡುತ್ತಿದ್ದೀರಿ. ಅದನ್ನು ತಿಳಿಸುವ ಮುನ್ನ ನಿಮಗೆ ಇನ್ನೊಂದು ಮದುವೆ ಮಾಡಿಸಬೇಕು; ಆಮೇಲೆ ತಿಳಿಸಿದರೂ ಬಾಧಕವಿಲ್ಲ—ಎಂದುಕೊಂಡಿದ್ದೆ. ಆದರೆ ನಿಮ್ಮ ಮನಸ್ಸು ಇನ್ನೊಂದು ಮದುವೆಯ ಕಡೆಗಿಲ್ಲ. ಕಾರಣ ತಿಳಿಸಿ, ಕಣ್ಣುಮುಚ್ಚುವ ದಾರಿ ಹುಡುಕಿಕೊಳ್ಳುತ್ತೇನೆ. ಆಮೇಲಾದರೂ ನೀವು ಇನ್ನೊಂದು ಮದುವೆಯಾಗಿ, ನನ್ನಿಂದ ಪಡೆಯಲಾಗದ ಸುಖವನ್ನು ಪಡೆಯಿರಿ.

ನನ್ನದು ಎಂಜಲುಮೈಯಿ. ನಿಮಗದು ಸಲ್ಲದು. ಅದರ ಕಥೆ ನಮ್ಮ ತಂದೆ ತಾಯಿಗೂ ಪೂರ್ತಿ ಗೊತ್ತಿಲ್ಲ. ನಾನು ಕೆಲವು ದಿನ ಕಣ್ಮರೆಯಾಗಿದ್ದುದು ಮಾತ್ರ ಅವರಿಗೆ ಗೊತ್ತು. ಪೋಲೀಸಿನವರು ನನ್ನನ್ನು ನನ್ನ ತಂದೆತಾಯಿಗಳ ವಶಕ್ಕೆ ಒಪ್ಪಿಸಿ, ನಡೆದದ್ದನ್ನೆಲ್ಲ ನನ್ನ ಎದುರಿಗೆಯೇ ಅವರಿಗೆ ತಿಳಿಸಿದರು. ಸೂಳೆಗಾರಿಕೆಯ ವೃತ್ತಿಗೆ ಎಳೆಯುವುದಕ್ಕೊ, ಇಲ್ಲ ದುಷ್ಟಧನಿಕರಿಗೆ ಕನ್ನೆಯರನ್ನು ಒದಗಿಸುವ

ದುರ್ವ್ಯಾಪಾರಕ್ಕೋ ಹೂಡಿದ್ದ ಸಂಚಿಗೆ ನಾನು ಬಲಿಯಾದೆ. ನನ್ನ ಸ್ನೇಹಿತೆ ಒಬ್ಬಳು ಒಂದು ದಿನ ನನ್ನನ್ನು ತಾನು ನೃತ್ಯ ಸಂಗೀತ ಕಲಿಸುವ ಶಾಲೆ ಎಂದು ಹೇಳಿ ಒಂದು ಮನೆಗೆ ಕರೆದುಕೊಂಡು ಹೋದಳು. ರಾತ್ರಿ ಇದ್ದಕ್ಕಿದ್ದ ಹಾಗೆ ಅವಳು ಕಣ್ಮರೆಯಾಗಿದ್ದಳು. ನನ್ನ ಜೊತೆಗೆ ಇನ್ನೂ ಇಬ್ಬರು ಮೂವರು ಹುಡುಗಿಯರಿದ್ದರು. ಅವರ ಮುಖವೂ ಸಪ್ಪೆ. ಅವರೂ ನನ್ನ ಹಾಗೆಯೆ ಬಲೆಗೆ ಬಿದ್ದ ಹಕ್ಕಿಗಳು ಎಂದು ಆಮೇಲೆ ನನಗೆ ಗೊತ್ತಾಯಿತು. ಅದೇ ರಾತ್ರಿ, ನಮ್ಮನ್ನು ಮನೆಗೆ ಬಿಡುವುದಾಗಿ ಹೇಳಿ ಯಾರೋ ನಮ್ಮನ್ನು ದೊಡ್ಡ ಕಾರಿನಲ್ಲಿ ಕರೆದೊಯ್ದರು. ನಗರ ಮಧ್ಯದಲ್ಲಿ ಒಂದು ದೊಡ್ಡ ಉಪ್ಪರಿಗೆಯ ಮನೆ ನಮ್ಮ ಬಿಡಾರ ವಾಯಿತು. ನಮಗೆ ದಿಕ್ಕೇ ತೋರಲಿಲ್ಲ; ಏನು ಸಂಗತಿ ಎಂದು ತಿಳಿಯಲಿಲ್ಲ. ಆಮೇಲೆ ಗೊತ್ತಾಯಿತು ಅದು ಒಂದು ಹೋಟಲು ಎಂದು. ಅಂದಿನ ರಾತ್ರಿ ನಮಗೆಲ್ಲ ಉಪವಾಸ. ಮಾರನೆಯ ದಿನದಿಂದ ರಾಜೋಪಚಾರ. ಮೂರು ನಾಲ್ಕು ದಿನ ನಾವು ಒಟ್ಟಿಗೆ ಇದ್ದೆವು—ಒಂದು ಕೋಣೆಯಲ್ಲಿ, ಬಂದಿಗಳಂತೆ. ಒಬ್ಬಳು ಕಿರಿಚಿಕೊಳ್ಳತೊಡ ಗಿದಳು; ಅವಳನ್ನು ಬೇರೆ ಮಾಡಿದರು. ನಾನು ಸುಮ್ಮನೆ ಅಳತೊಡಗಿದೆ. ಅಂದಿನಿಂದ ಪ್ರಾರಂಭವಾಯಿತು. ನನ್ನ ಅಳು ಒಂದು ರಾತ್ರಿ, ನಾನು ಅತ್ತು ಅತ್ತು ಮೈಮರೆತು ಮಲಗಿದ್ದಾಗ ನಡೆಯಿತು ಅತ್ಯಾಚಾರ—ಅವನೊಬ್ಬ ಧನಿಕಪಶು. ಅಂದು ನಾನು ಕೆಟ್ಟೆ. ಆಮೇಲೆ ಬಂದರು—ಒಬ್ಬ ಸೇಟ್, ಒಬ್ಬ ತರುಣ ವಿದ್ಯಾರ್ಥಿ. ಆದರೆ, ಯಾರೂ ನನ್ನನ್ನು ಇನ್ನು ಕೆಡಿಸಲು ಅವಕಾಶಕೊಡಲಿಲ್ಲ. ನನ್ನ ಅಳುವೇ ನನಗೊಂದು ರಕ್ಷೆ ಯಾಗಿ ಪರಿಣಮಿಸಿತ್ತು. ಅಳು, ಅಳು, ಅಳು—ಎಷ್ಟು ಅತ್ತೆನೋ ದೇವರೇ ಬಲ್ಲ . . . ಆ ಮೇಲೆ ನನಗೆ ಜ್ಞಾಪಕ ಇರುವುದು, ಪೋಲೀಸರು ಬಂದು ನನ್ನನ್ನು ಬಿಡಿಸಿಕೊಂಡು ಹೋದದ್ದು. ನಮ್ಮ ತಂದೆ ಪೊಲೀಸರಿಗೆ ದೂರು ಕೊಟ್ಟಿದ್ದರು. ಯಾರೋ ದುಷ್ಟರು ಕನ್ಯಾಪಹಾರಮಾಡಿದರೆಂದು ಮಾತ್ರ ವ್ಯಥೆಗೊಂಡರು; ನಾನು ದೊರೆತಾಗ ಮತ್ತೆ ಹಡೆದಂತೆ ಸಂತಸಗೊಂಡರು. ನಾನು ಕೆಟ್ಟದ್ದು ಮಾತ್ರ ಅವರಿಗೂ ತಿಳಿಯದು. ಅವರು ಪ್ರಶ್ನಿಸಲೂ ಇಲ್ಲ, ನಾನು ಹೇಳಲೂ ಇಲ್ಲ. ಯಾವ ಬಾಯಿಂದ ತಿಳಿಸಲಿ? ನಾವು ಮದುವೆಯಾಗುವ ಮುನ್ನ ನಿಮ್ಮನ್ನು ನೋಡಿದಾಗ, ನೀವು ನನ್ನನ್ನು ಒಪ್ಪಿದಿರಿ ಎಂದು ನಿಮ್ಮ ನೋಟದಿಂದಲೇ ನನಗೆ ಗೊತ್ತಾದಾಗ, ನಿಮಗೆ, ಮೋಸಮಾಡುತ್ತಿದ್ದೇನಲ್ಲಾ ಎಂದು ದುಃಖವಾಯಿತು; ಅತ್ತೆ. ಆದರೂ, ಅದು ಏಕೋ ಹೇಗೋ ನಿಮ್ಮ ಕೈಹಿಡಿ ಯಲು ಒಪ್ಪಿದೆ; ಕೈಹಿಡಿದಾಯಿತು. ಆದರೆ . . ."

ಕಾಗದ ಇಲ್ಲಿಗೆ ನಿಂತುಹೋಗಿತ್ತು. ಇಷ್ಟೇ ತಕ್ಕಮಟ್ಟಿಗೆ ದೀರ್ಘವಾಗಿತ್ತು. ಏನಿಲ್ಲದಿದ್ದರೂ ಅಕ್ಷರಕ್ಕೊಂದಾದರೂ ಕಂಬನಿ ಉದುರಿದೆ ಎಂದು ರಮೇಶ್ ಬಗೆದ.

ರಮೇಶನಿಗೆ ಏನೋ ಸ್ಫೂರ್ತಿ ಬಂದಂತಾಯಿತು. ತಾನೊಂದು ಕಾಗದವನ್ನು ತೆಗೆದುಕೊಂಡು, ಮೂರೇ ವಾಕ್ಯ ಬರೆದು ಅವಳ ಕಾಗದದೊಂದಿಗೆ ಇಟ್ಟ:

"ನಿನ್ನ ವಿಚಾರವೆಲ್ಲ ತಿಳಿದಹಾಗಾಯಿತು. ನಿನ್ನ ತಪ್ಪು, ಹೊಣೆ ಏನೂ ಇಲ್ಲ. ನಾನು ಈಗಲೂ ನಿನ್ನನ್ನು ನೀನು ಇರುವಹಾಗೆಯೇ ಸ್ವೀಕರಿಸಲು ಸಿದ್ಧನಾಗಿದ್ದೇನೆ. ಇನ್ನು ನೀನು ಅಳಲು ಕಾರಣವಿಲ್ಲ.

ನಿನ್ನ ರಮೇಶ."

ರಮೇಶ ರೋಹಿಣಿಯನ್ನು ಎಬ್ಬಿಸದೆ, ಮುಂಬಾಗಿಲ ಚಿಲಕ ಹಾಕಿಕೊಂಡು, ತನ್ನ ಕೋಣೆಗೆ ಹೋಗಿ ಮಲಗಿದ. ಅಂದಿನ ರಾತ್ರಿ ಇಬ್ಬರಿಗೂ ಉಪವಾಸ.

* * * *

ಒಂದು ವರ್ಷವಾದ ಮೇಲೆ ರಮೇಶನಿಗೆ ಮತ್ತೆ ಅಳು ಕೇಳಿಬಂದಿತು. ರೋಹಿಣಿಯದಲ್ಲ; ಅವಳು ಹೆತ್ತ ತನ್ನ ಮಗುವಿನದು.

—ಎಂ. ವಿ. ಸೀತಾರಾಮಯ್ಯ.

ನೀನಿಲ್ಲದ ಮನೆ

ಮನೆಯೊಳಗೆ ನೀನಿಲ್ಲವೆಂದೆ, ಇಲ್ಲವೆಂದೆ,
ನಾ ಬಂದೆ.

ಅಲ್ಲೆ ಬಾಗಿಲ ಬಳಿಯೆ ಸುತ್ತುಬಳ್ಳಿ,—ಬಳ್ಳಿ ;
ಹೂವಿಲ್ಲ, ಮೊಗ್ಗೆ ಇಲ್ಲಲ್ಲಿ!
ಹೂವ ಬಿಡಿಸಿದರಾರು ಸಂಜೆಯಲ್ಲಿ ?—ಅಲ್ಲಿ
ತಂಗಾಳಿ ಎಲೆಗಳಲ್ಲಿ.

ಮನೆಯೊಳಗೆ ಸದ್ದಡಗಿ ಸಂಜೆ—ತಂಪು,—ತಂಪು ;
ನನಗೋ ಎದೆಭಾರ!
ಪ್ರಾಣವನೆ ಹೀರುತಿದೆ ಮಲ್ಲಿಗೆಯ ಕಂಪು,—ಕಂಪು ;
ಕರೆಯುತಿದೆ ಚಂದ್ರತೀರ!

ಮನೆಯೊಳಗೆ ನೀನಿಲ್ಲವೆಂದೆ ಬಂದೆ,—ಬಂದೆ ;
ನಿನ್ನ ಹೆಸರನು ಕರೆದು ನಿಂತೆ.
ಒಳಬಂದ ಕೆಂಗರುವನತ್ತ ದಾಟಿಸಿ ಬಂದೆ ;—
ಅಲ್ಲಿಗೂ ದೂರ ನಿಶ್ಚಿಂತೆ.

ನೀನಿರದ ಬೀದಿಯಲಿ ನೂರಾರು ದೀಪ,—ದೀಪ ;
ಆದರೂ ನೀನಿರದ ಚಿಂತೆ ;
ಎಲ್ಲಿಂದಲೋ ಏನೊ ನನಗೆ ತಗುಲಿತೆ ಶಾಪ ?
ಒಬ್ಬನೇ ಬಾಗಿಲಲಿ ನಿಂತೆ.

"೧-A" ಬಸ್ಸಿನಲಿ ನನ್ನೆದುರಿಗೇ ನಕ್ಕು
ತೆರಳಿತ್ತು ಒಂದು ಜೋಡಿ ;
ನೆರೆಮನೆಯ ತರುಣಿ ಕಂದನನೆತ್ತಿ ಮುತ್ತಿಟ್ಟು
ಬರುತಿಹಳು ಇತ್ತ ನೋಡಿ.

ಸ್ನೇಹಿತನ ಮಡದಿ ಸಣ್ಣಗೆ ನಕ್ಕು ' ಒಳಗಿಹರು ;
ಬನ್ನಿರೆ 'ಂದೇಕೆ ಕರೆವಳೊ !
ಹೂವಮಾರುವ ಹೆಣ್ಣು ತಳ್ಳಿಕೊಂಡೇ ನಡೆದು
' ಕ್ಷಮಿಸಿರೆ 'ಂದೇಕೊ ನುಡಿವಳೊ !

ಇವು ಎಲ್ಲ ಚೆಲುವು, ನೆರೆಮನೆಯ ಸಂತಸವೆನಗೆ ;
ದಿಟವೊಂದೆ ನಿನ್ನ ಮನಸು.
ಈ ಮನೆಯ ಒಳಗು ಹೊರಗೆಲ್ಲ ಕಾದಿವೆ ನಿನಗೆ
ನನಗಂತು ನಿನ್ನ ಕನಸು

—ಕೆ. ಎಸ್. ನ.

ವಿಜಯನಗರದ ಸಾಹಿತ್ಯ ಸಾಮ್ರಾಜ್ಯ

ಪ್ರಪಂಚದ ಮತ್ತಾವ ದೇಶದಲ್ಲಿಯೂ ಧರ್ಮವು ಮನುಷ್ಯನ ಜೀವನದಲ್ಲಿ ಭಾರತದಷ್ಟು ನಿಕಟವಾಗಿ ಮಿಳಿತವಾಗಿರುವುದಿಲ್ಲ. ಅವರ ಆಚಾರವ್ಯವಹಾರ, ಸಂಪ್ರದಾಯ, ನಿತ್ಯಜೀವನ, ಆಹಾರ, ಉಡುಪು, ಸಾಮಾಜಿಕ ಮತ್ತು ರಾಜಕೀಯ ವ್ಯವಹಾರ—ಒಂದೊಂದೂ ಧರ್ಮದಿಂದ ವಿಶೇಷ ಪರಿಣಾಮವನ್ನು ಹೊಂದಿರುತ್ತದೆ. ಇದರ ಪ್ರಾಮುಖ್ಯತೆಯನ್ನು ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಲ್ಲಿ ಸ್ಪಷ್ಟವಾಗಿ ಕಾಣಬಹುದು. ಸ್ವಧರ್ಮೋದ್ಧಾರಕ್ಕಾಗಿ ಸ್ಥಾಪಿತವಾದ ಸ್ವರಾಜ್ಯ ವಿಜಯನಗರ.

ಡಿಲ್ಲಿಯ ಸುಲ್ತಾನನಾದ ಅಲ್ಲಾಉದ್ದೀನ್ ಖಿಲ್ಜಿಯು ೧೨೯೪ರಲ್ಲಿ ದಕ್ಷಿಣದ ಕಡೆ ಹೊರಟು ದೇವಗಿರಿಗೆ ಮುತ್ತಿಗೆ ಹಾಕಿ ಅಲ್ಲಿಯ ದೊರೆಯಾದ ರಾಮದೇವನನ್ನು ಸೋಲಿಸಿ ಕಪ್ಪವನ್ನು ವಸೂಲ್ಮಾಡಿದಾಗಲೇ ಹಿಂದುಗಳಿಗೆ ಮಹಾ ಅನಾಹುತವು ಪ್ರಾರಂಭವಾಯಿತು. ಖಿಲ್ಜಿಯ ಕಾರ್ಯವನ್ನು ಅವನ ದಂಡನಾಯಕನಾದ ಮಲ್ಲಿಕಾಫರನು ಮುಂದುವರಿಸಿ ದಕ್ಷಿಣದ ಯಾದವರನ್ನೂ ಹೊಯ್ಸಳರನ್ನೂ ಸೋಲಿಸಿ ದಕ್ಷಿಣ ಭಾರತವನ್ನೆಲ್ಲಾ ಸ್ವಾಧೀನಪಡಿಸಿಕೊಂಡು ಪಾಂಡ್ಯರ ರಾಜಧಾನಿಯಾದ ಮಧುರೆಯಲ್ಲಿ ತನ್ನ ಸೈನ್ಯವನ್ನು ಸ್ಥಾಪಿಸಿದನು. ಓರಗಲ್ಲಿನ ಕಾಕತೀಯ ಪ್ರತಾಪರುದ್ರನನ್ನು ಅಧೀನನನ್ನಾಗಿ ಮಾಡಿಕೊಂಡನು. ಹುಚ್ಚುದೊರೆಯಾದ ಮಹಮ್ಮದ್ ಬಿನ್ ತೊಗಲಕ್ಕನ ಕಾಲದಲ್ಲಿ ಈ ಕಾರ್ಯವು ಮತ್ತಷ್ಟು ಮುಂದುವರಿದು ಓರಗಲ್ಲು ಮತ್ತು ದೇವಗಿರಿಗಳು ಡೆಲ್ಲಿಯ ಒಂದು ಭಾಗವೇ ಆದುವು. ದೋರಸಮುದ್ರವು ಹಾಳಾಗಿ ರಾಜನು ಕೊಲ್ಲಲ್ಪಟ್ಟನು. ಕಂಪಿಲಿಯ ರಾಜನು ಹತನಾದುದಲ್ಲದೆ ಅವನ ಇಬ್ಬರು ಮಕ್ಕಳು ಸೆರೆಯಾಗಿ ಒಯ್ಯಲ್ಪಟ್ಟು ಮುಸಲ್ಮಾನಮತಕ್ಕೆ ಪರಿವರ್ತಿತರಾದರು. ಕ್ರಿ.ಶ. ೧೩೩೬ರ ವೇಳೆಗೆ ದಕ್ಷಿಣ ಹಿಂದೂಸ್ಥಾನವೆಲ್ಲಾ ಮಹಮ್ಮದೀಯರ ಅಧೀನವಾಗಿ ಅಲ್ಲಿಯ ಮುಖ್ಯಸ್ಥಳಗಳಲ್ಲೆಲ್ಲಾ ಅವರ ಸೈನ್ಯವು ಇಡಲ್ಪಟ್ಟಿತು. ಇದರಿಂದ ಹಿಂದುಗಳಿಗೆ ಒದಗಿದ ದುಸ್ಥಿತಿಯಾದರೂ ಏನು? ಅವರಿಗೆ ಉಳಿಗಾಲವಿಲ್ಲದಾಯಿತು. ಹಿಂದೂ ದೇವಾಲಯಗಳು ನೆಲಸಮನಾದುವು. ಅವರ ಪವಿತ್ರವಾದ ವೇದಶಾಸ್ತ್ರ ಗ್ರಂಥಗಳು ಅಗ್ನಿಯ ಪಾಲಾದವು. ಆರ್ಷೇಯವಾಗಿ ನಡೆದುಬಂದ ಹಿಂದೂ ಸಂಪ್ರದಾಯಗಳೂ ಧರ್ಮವೂ ನಾಮಾವಶೇಷವಾದುವು. ಸ್ತ್ರೀಪುರುಷರು ಮಾನವಾಗಿ ಬಾಳುವುದೇ ಅಸಾಧ್ಯವಾಯಿತು! ಇದನ್ನು ಪ್ರತ್ಯಕ್ಷವಾಗಿ ಕಂಡು ಪಡಬಾರದ

ಕಷ್ಟಕ್ಕೊಳಗಾಗಿದ್ದ ಶ್ರೀವೈಷ್ಣವ ಆಚಾರ್ಯರಾದ ವೇಂಕಟನಾಥರು ತಮ್ಮ 'ಅಭೀತಿಸ್ತವ'ವೆಂಬ ಸ್ತೋತ್ರದಲ್ಲಿ ರಂಗನಾಥನನ್ನು ಕುರಿತು ಹೀಗೆಂದು ಪ್ರಾರ್ಥಿಸಿದ್ದಾರೆ:

ಕಲಿಪ್ರಣಿಧಿ ಲಕ್ಷಣೈಃ ಕಲಿತ ಶಾಕ್ಯ ಲೋಕಾಯತೈಃ
ತುರುಷ್ಕಯವನಾದಿಭಿಃ ಜಗತಿ ಜೃಂಭಮಾಣಂ ಭಯಮ್ |
ಪ್ರಕೃಷ್ಟನಿಜಶಕ್ತಿಭಿಃ ಪ್ರಸಭಮಾಯುಧೈಃ ಪಂಚಭಿಃ
ಕ್ಷಿತಿತ್ರಿದಶರಕ್ಷಕೈಃ ಕ್ಷಪಯ ರಂಗನಾಥ ಕ್ಷಣಾತ್ ||[1]

ಆಗಿನ ದುಸ್ಥಿತಿಯನ್ನು ಕುರಿತು ಕಂಪರಾಯನ ಪತ್ನಿಯಾದ ಗಂಗಾದೇವಿಯು ತನ್ನ ಕಂಪರಾಯ ಚರಿತ್ರದಲ್ಲಿ ಹೀಗೆಂದು ವರ್ಣಿಸಿದ್ದಾಳೆ:

ಶ್ರುತಿರಸ್ತಮಿತಾ ನಯಃ ಪ್ರಲೀನಃ ವಿರತಾ ಧರ್ಮಕಥಾ ಚ್ಯುತಂ ಚರಿತ್ರಂ |
ಸುಕೃತಂ ಗತಂ ಅಭಿಜಾತ್ಯಮಸ್ತಂ ಕಿಮಿವ್ಯಾನತ್ ಕಲಿರೇಕ ಏವಧನ್ಯಃ ||[2]

ಇಂತಹ ವಿಷಮಸ್ಥಿತಿಯನ್ನು ಎದುರಿಸಿ ಕ್ಷುಭಿತ ಮನಸ್ಕರಾದ ಹಿಂದುಗಳಿಗೆ ಶಾಂತಿಯನ್ನುಂಟುಮಾಡಿ ಅವರಿಗೆ ಆಶ್ರಯವನ್ನು ಕೊಡಲು ದಕ್ಷಿಣದೇಶದಲ್ಲಿ ಪ್ರಬಲವಾದ ರಾಜ್ಯವಾವುದೂ ಇರಲಿಲ್ಲ. ಅತಿ ಪ್ರಬಲರಲ್ಲದಿದ್ದರೂ ಸ್ವತಂತ್ರರಾಗಿ ದಕ್ಷಿಣದಲ್ಲಿ ರಾಜ್ಯಭಾರಮಾಡುತ್ತಿದ್ದ ಹೊಯ್ಸಳರೂ ಪಾಂಡ್ಯರೂ ಒಂದಾಗಿ ಶತ್ರುಗಳನ್ನು ಹಿಂದಕ್ಕಟ್ಟಬಹುದಾಗಿತ್ತು. ಆದರೆ ಬಹುಕಾಲದಿಂದ ಅವರಿಗೆ ದ್ವೇಷವಿದ್ದುದರಿಂದ ಸಹಕರಿಸಿ ಕೆಲಸಮಾಡಲು ಸಾಧ್ಯವಿಲ್ಲದೆ ಮೇಲೆ ಹೇಳಿದಂತೆ ಆಕ್ರಮಣಕಾರರಿಂದ ಪದಚ್ಯುತರಾದರು. ಆದುದರಿಂದ ಈ ವಿಷಮಸನ್ನಿವೇಶವನ್ನು ಸರಿಪಡಿಸಿ ಉತ್ತರದ ಕಡೆಯಿಂದ ತರಂಗತರಂಗವಾಗಿ ಪ್ರವಹಿಸುತ್ತಿದ್ದ ಮಹಮದೀಯವಾಹಿನಿಯನ್ನು ತಡೆದು ಹಿಂದುಗಳಿಗೆ ಆಶ್ರಯವನ್ನು ಕಲ್ಪಿಸಿಕೊಟ್ಟು ಅವರ ಸನಾತನಧರ್ಮವನ್ನು ಏಕರೀತಿಯಾಗಿ ನಡಸಿಕೊಂಡುಬರುವುದಕ್ಕಾಗಿ ದೇಶದ ಜನರೆಲ್ಲರೂ ಬಡವಬಲ್ಲಿದರೆನ್ನದೆ, ಪಂಡಿತಪಾಮರರೆನ್ನದೆ, ಉಚ್ಚನೀಚರೆನ್ನದೆ ಒಟ್ಟುಗೂಡಿ ಧರ್ಮಸಂಸ್ಥಾಪನೆಯೊಂದನ್ನೇ ಮುಖ್ಯಗುರಿಯಾಗಿಟ್ಟುಕೊಂಡು ವಿಜಯನಗರದ ಸಾಮ್ರಾಜ್ಯವನ್ನು ಸ್ಥಾಪಿಸಿದರು. ವೈಯಕ್ತಿಕ ಭಿನ್ನತೆಗಳನ್ನು ದೂರಮಾಡಿ ಸಮನ್ವಯ ಮನೋಭಾವದಿಂದ ಏಕೀಭವಿಸಿದರು. ಅತ್ಯಲ್ಪಕಾಲದಲ್ಲಿ ರಾಜ್ಯವು ವಿಸ್ತರಿಸಿ ಪೂರ್ವಪಶ್ಚಿಮಘಟ್ಟಗಳ ನಡುವೆ ದಕ್ಷಿಣಭಾರತವನ್ನೆಲ್ಲಾ ಏಕಚ್ಛತ್ರಾಧಿಪತ್ಯದಲ್ಲಿ ಸಮಾವೇಶಗೊಳಿಸಲು ಸಾಧ್ಯವಾಯಿತು. ಈ ರಾಜ್ಯದರಸರೆಲ್ಲರೂ ವೀರರೂ ಮೇಧಾವಿಗಳೂ ಆಗಿದ್ದುದರಿಂದ ಯೋಗ್ಯರೂ ದಕ್ಷರೂ ಆದ ಮಂತ್ರಿಗಳ ಸಹಾಯದಿಂದ ರಾಜ್ಯಪರಿಪಾಲನೆಯನ್ನು

---

[1] ಅಭೀತಿಸ್ತವ, ೨೨. [2] ಆಧಾರಗ್ರಂಥಗಳು, ಪು. ೨೮.

ಮಾಡಿದರು. ಹಿಂದುಗಳಿಗೆ ಬಂದೊದಗಿದ್ದ ವಿಪತ್ತು ಪರಿಹಾರವಾಯಿತು. ಆರ್ಯ ಧರ್ಮಕ್ಕೂ ಅದಕ್ಕೆ ಆಧಾರಭೂತರಾಗಿದ್ದ ವಿದ್ವಾಂಸರಿಗೂ ಆಶ್ರಯವು ದೊರಕಿತು. ರಾಜರು ವಿದ್ವಾಂಸರ ಮತ್ತು ಧರ್ಮಸಂಸ್ಥೆಗಳ ಅಭಿವೃದ್ಧಿಗೆ ಅನೇಕ ದತ್ತಿಗಳನ್ನು ಬಿಟ್ಟು ಪ್ರೋತ್ಸಾಹಿಸಿದರು. ವಿದ್ವಾಂಸರನ್ನು ಉಚ್ಚ ಬಿರುದುಗಳಿಂದ ಸನ್ಮಾನಿಸಿದರು. ರಾಜ್ಯದ ಮೂಲೆಮೂಲೆಗಳಲ್ಲಿ ನಿರಾಶ್ರಯರಾಗಿದ್ದ ಅನೇಕ ವಿದ್ವಾಂಸರೂ ಕವಿಗಳೂ ಶಾಸ್ತ್ರವೇತ್ತರೂ ರಾಜಾಸ್ಥಾನದಲ್ಲಿ ಬಂದು ಸೇರಿ ರಾಜಾಶ್ರಯವನ್ನು ಪಡೆದು ವಿಶೇಷ ವಾಗಿ ಗ್ರಂಥರಚನೆಯನ್ನು ಮಾಡಿದರು. ತಮಗೆ ಆಶ್ರಯವಿತ್ತು ಪೋಷಿಸಿದ ಕೃತಿಭರ್ತರ ಹೆಸರನ್ನು ಶಾಶ್ವತಗೊಳಿಸಲು ಕೃತಿಕರ್ತರು ತಮ್ಮ ಗ್ರಂಥಗಳನ್ನು ಅವರ ಅಂಕಿತದಿಂದ ರಚಿಸಲು ಮೊದಲುಮಾಡಿದರು. ಕವಿಗಳ ಮತ್ತು ವಿದ್ವಾಂಸರ ಸಹವಾಸ ದಿಂದ ಅನೇಕ ರಾಜರುಗಳು ಸ್ವತಃ ಉದ್ದಾಮ ಕವಿಗಳಾದರು. ಬಹುಮಂದಿ ಅರಸರು ಪರಾಕ್ರಮಶಾಲಿಗಳಾಗಿದ್ದುದರಿಂದ ಅನೇಕ ಕಾವ್ಯಗಳಿಗೆ ನಾಯಕರಾದರು. ರಾಜರ ಕೈಕೆಳಗಿದ್ದ ಅಧಿಕಾರಿಗಳಲ್ಲನೇಕರು ತಮ್ಮ ಯಜಮಾನರನ್ನನುಸರಿಸಿ ತಾವೂ ಕವಿ ಗಳಿಗೆ ಪೋಷಕರೂ, ಪ್ರೇರಕರೂ, ಸಹಾಯಕರೂ ಆದರು. ಇದರಿಂದ ವಿಜಯನಗರ ಸಾಮ್ರಾಜ್ಯವು ಬೆಳೆದ ಹಾಗೆಲ್ಲ ಅಲ್ಲಿಯ ಸಾರಸ್ವತಪ್ರಪಂಚವೂ ವಿಶೇಷವಾಗಿ ಅಭಿವೃದ್ಧಿಹೊಂದಿ ಅದರ ಅತ್ಯುನ್ನತ ಸ್ಥಿತಿಯಲ್ಲಿ ಅಭೂತಪೂರ್ವವಾದ ಸಾಹಿತ್ಯ ಸಾಮ್ರಾಜ್ಯವು ನೆಲೆಗೊಂಡಿತು. ವಿದ್ಯಾರಣ್ಯಸ್ವಾಮಿಗಳು ದಕ್ಷಿಣದೇಶದಲ್ಲಿ ಒಂದು ಧರ್ಮಸಾಮ್ರಾಜ್ಯವನ್ನು ಸ್ಥಾಪಿಸಬೇಕೆಂದು ಯೋಚಿಸಿ ತಮ್ಮ ತಪಃಪ್ರಭಾವದಿಂದ ಭುವನೇಶ್ವರಿಯ ಅನುಗ್ರಹ ಪಡೆದು ಸುವರ್ಣವೃಷ್ಟಿಯನ್ನುಂಟುಮಾಡಿ ಹರಿಹರ ಬುಕ್ಕರಿಂದ ವಿಜಯನಗರವನ್ನು ಸ್ಥಾಪಿಸಿದರೆಂದೂ ಈ ಸಾಮ್ರಾಜ್ಯವು ಆರ್ಯ ಸಂಸ್ಕೃತಿಗೆ ಆವಾಸಸ್ಥಾನವಾಗಿರಬೇಕೆಂಬ ಉದ್ದೇಶದಿಂದ ಅದರ ರಾಜಧಾನಿಗೆ ವಿದ್ಯಾನಗರಿಯೆಂಬ ಅಭಿಧಾನವನ್ನಿತ್ತರೆಂದೂ ಪ್ರತೀತಿಯುಂಟು. ಇದರ ಐತಿಹಾಸಿಕ ಸತ್ಯವೆಷ್ಟರಮಟ್ಟಿನದಾದರೂ ವಿಜಯನಗರ ಸಾಮ್ರಾಜ್ಯದಲ್ಲಿ ಹಿಂದೆಂದೂ ಇಲ್ಲದ ಸಾಹಿತ್ಯಪ್ರಪಂಚದ ಸುವರ್ಣಯುಗವು ನೆಲೆಗೊಂಡಿತೆಂದು ಹೇಳುವುದರಲ್ಲಿ ಯಾವ ಸಂದೇಹವೂ ಇಲ್ಲ.

ವಿಜಯನಗರ ಸಾಮ್ರಾಜ್ಯವು ೧೩೩೬ ನೆಯ ವರ್ಷದಿಂದ ಸುಮಾರು ಇನ್ನೂರು ವರ್ಷಗಳ ಕಾಲ ಬಹು ಯಶಸ್ವಿಯಾಗಿ ಬಾಳಿ ತನ್ನ ಕೀರ್ತಿಧ್ವಜವನ್ನು ಪ್ರಪಂಚ ದಲ್ಲೆಲ್ಲಾ ಮೆರೆಯಿಸಿತು. ಸಂಗಮರೂ ಸಾಳುವರೂ ತುಳುವರೂ ಆರುವೀಡು ವಂಶಸ್ಥರೂ ಸಾಮ್ರಾಜ್ಯ ಸಿಂಹಾಸನವನ್ನಲಂಕರಿಸಿದರು. ಪ್ರತಿಯೊಂದು ವಂಶದ ಒಬ್ಬೊಬ್ಬ ಅರಸರೂ ಒಂದೊಂದು ರೀತಿಯಲ್ಲಿ ಸಾಹಿತ್ಯಪ್ರಪಂಚಕ್ಕೆ ಸಹಾಯ

ನೀಡಿದ್ದಾರೆ. ಅವರೆಲ್ಲರೂ ಮಾಡಿರುವ ಕಾರ್ಯವನ್ನು ಕುರಿತು ವಿಚಾರಮಾಡುವುದೇ ಈ ಲೇಖನದ ಉದ್ದೇಶ. ಆದರೂ ಪ್ರತಿಯೊಬ್ಬರ ಕೆಲಸವನ್ನೂ ಸೂಕ್ಷ್ಮವಾಗಿ ವಿಮರ್ಶಿಸುವುದು ಈ ಲೇಖನದ ಅಳತೆಗೆ ಮೀರಿದುದರಿಂದ ಒಂದೊಂದು ವಂಶದ ಆಶ್ರಯದಲ್ಲಿ ನಡೆದ ಸಾಹಿತ್ಯಕಾರ್ಯವನ್ನು ಸ್ಥೂಲವಾಗಿ ಪರಿಶೀಲಿಸಲು ಇಲ್ಲಿ ಪ್ರಯತ್ನ ಪಟ್ಟಿದೆ.

ವಿಜಯನಗರ ಸಾಮ್ರಾಜ್ಯವು ತೆಲುಗು ಕನ್ನಡ ತಮಿಳು ಪ್ರಾಂತಗಳಲ್ಲೆಲ್ಲಾ ವ್ಯಾಪಿಸಿತ್ತು. ಆದುದರಿಂದ ವಿಜಯನಗರದ ಅರಸುಗಳು ದೇಶಭಾಷೆಗಳಾದ ಈ ಮೂರಕ್ಕೂ ಪ್ರೋತ್ಸಾಹವನ್ನಿತ್ತರು. ಅಲ್ಲದೆ ಇವುಗಳೆಲ್ಲಕ್ಕೂ ಪ್ರಾಚೀನವೂ ಬಹುಕಾಲದಿಂದ ಪೂಜ್ಯವೂ ಆದ ಸಂಸ್ಕೃತಭಾಷೆಗೆ ವಿಶೇಷ ಸಹಾಯ ಸಿಕ್ಕಿತು. ಭಾಷಾಭಿವೃದ್ಧಿಗೆ ಭಾರತದಲ್ಲಿ ಮತಾವೇಶವೇ ಪ್ರಧಾನಕಾರಣವಾದುದರಿಂದ ಮತಾಭಿಮಾನವು ಹೆಚ್ಚಿದ ಹಾಗೆಲ್ಲ ಭಾಷೆಯೂ ತನ್ಮೂಲಕ ಆ ಭಾಷಾಸಾಹಿತ್ಯವೂ ವಿಶೇಷ ಪುಷ್ಟಿಯನ್ನು ಪಡೆಯಿತು.

ಸಂಗಮವಂಶದಲ್ಲಿ ಬುಕ್ಕಹರಿಹರರೇ ವಿಜಯನಗರದ ಮೊದಲನೆಯ ಅರಸರು. ಇವರ ತರುವಾಯ ಇಮ್ಮಡಿ ಬುಕ್ಕ ಮತ್ತು ಇಮ್ಮಡಿ ಹರಿಹರ ಮೊದಲಾದವರು ರಾಜ್ಯಭಾರಮಾಡಿದರು. ಈ ಕಾಲದಲ್ಲಿಯೇ ಇವರ ಸಹೋದರರೂ ಮಕ್ಕಳನೇಕರೂ ರಾಜಪ್ರತಿನಿಧಿಗಳಾಗಿ ಅನೇಕ ಮಂಡಲಗಳಲ್ಲಿ ಆಳುತ್ತಿದ್ದರು. ಇವರೆಲ್ಲರಿಗೂ ರಾಜ್ಯಭಾರ ನಿರ್ವಹಣಕಾರ್ಯದಲ್ಲಿ ಸಹಾಯಮಾಡಿದವರು ವಿದ್ವಾಂಸರೂ ರಾಜಕಾರ್ಯಧುರಂಧರರೂ ಆದ ಮಾಧವ ಸಾಯಣ ಭೋಗನಾಥ ಸಹೋದರರು. ಇವರು ರಾಜಕಾರ್ಯದಲ್ಲಿಯೇ ಅಲ್ಲದೆ ಯುದ್ಧವಿಷಯದಲ್ಲಿಯೂ ಭವಿಷ್ಯದ್ರಾಜರ ಪೋಷಣೆಯಲ್ಲಿಯೂ ವಿಶೇಷವಾದ ಬುದ್ಧಿಕೌಶಲ್ಯವನ್ನು ತೋರಿಸಿದರು. ಇವರ ಸಹಾಯದ ಜೊತೆಗೆ ಸಂಗಮವಂಶೀಯರಿಗೆ ರಾಜಕಾರ್ಯದಲ್ಲಿ ಶೃಂಗೇರಿಮಠದ ಸ್ವಾಮಿಗಳಿಂದ ಸಲಹೆಗಳೂ ಪ್ರೋತ್ಸಾಹವೂ ದೊರಕಿದವು. ಶೃಂಗೇರಿಮಠದ ವಿದ್ಯಾತೀರ್ಥಸ್ವಾಮಿಗಳೂ ವಿದ್ಯಾರಣ್ಯರೂ ವಿಜಯನಗರದ ರಾಜರಿಗೆ ವಿವಿಧರೀತಿಗಳಲ್ಲಿ ಸಹಾಯಮಾಡಿರುವುದು ಶಾಸನಾಧಾರದಿಂದ ಶ್ರುತಪಡುತ್ತದೆ.* ಅವರ ಸಹಾಯಕ್ಕೆ ಪ್ರತಿಯಾಗಿ ಅರಸರೂ ಆ ಮಠಕ್ಕೆ ತಮ್ಮ ಕೃತಜ್ಞತೆಗಳನ್ನು ಸಲ್ಲಿಸಿದ್ದಾರೆ. ಈ ಪರಸ್ಪರ ಸಹಾಯ

* ೧೩೭೭ರ ಶಾಸನವೊಂದರಲ್ಲಿ ಬುಕ್ಕನು 'ವಿದ್ಯಾತೀರ್ಥ ಕೃಪಾಂಭೋಧಿರಾಕಾಸುಧಾಕರ'ನೆಂದೂ ಶೃಂಗೇರಿ ಶಾಸನವೊಂದರಲ್ಲಿ (ಮೈ.ಶಾ.ವ. ೧೯೧೬ ಪು. ೫೮) ಅವನು 'ವಿದ್ಯಾರಣ್ಯ ಕೃಪಾಲಬ್ಧ ಜ್ಞಾನಸಾಮ್ರಾಜ್ಯ'ನೆಂದೂ, ಇಮ್ಮಡಿ ಹರಿಹರನ ಹೊಸ ಹಳ್ಳಿಯ ತಾಮ್ರಫಲಕದಲ್ಲಿ ಹರಿಹರನು (ಬೊಂ. ಇತಿ, ಸಂ. ಪ ೧೯೩೪ ಸಂ. ೧, ಪು. ೬) 'ಮಹಾನುಭಾವಾನಾಂ ಕ್ರಿಯಾಶಕ್ತಿ ವಿದ್ಯಾರಣ್ಯ ಶ್ರೀ ಚರಣಾನಾಮುಪದೇಶ ಜನಿತ ತತ್ತ್ವಪ್ರಕಾಶಕಃ' ಎಂದೂ ಉಲ್ಲೇಖಿತವಾಗಿದೆ.

ದಿಂದ ಒಂದುಕಡೆ ರಾಜ್ಯವಿಸ್ತರಣವೂ ಮತ್ತೊಂದುಕಡೆ ಧರ್ಮಾಭಿವೃದ್ಧಿಯೂ ಏಕ ಕಾಲದಲ್ಲಿ ಉಂಟಾದುವು.

ರಾಜ್ಯಸ್ಥಾಪನೆಯಲ್ಲಿ ಸಂಗಮರಾಜರು ಶೈವಗುರುಗಳಾದ ಕ್ರಿಯಾಶಕ್ತಿ ಪಂಥದವರಿಂದ ವಿಶೇಷ ಸಹಾಯವನ್ನು ಪಡೆದಿರಬೇಕು. ಒಂದನೆಯ ಬುಕ್ಕನ ಮೊದಲ್ಗೊಂಡು ಇಮ್ಮಡಿ ಹರಿಹರರಾಯನ ಕಾಲದ ವರೆಗೆ ಇವರ ಪ್ರಭಾವ ವಿಶೇಷವಾಗಿದ್ದಂತೆ ಶಾಸನಗಳಿಂದ ಕಂಡುಬರುತ್ತದೆ. ಇವರೇ ಸಂಗಮರಾಜರ ಕುಲಗುರುಗಳು. ಕಾಶೀವಿಲಾಸ ಕ್ರಿಯಾಶಕ್ತಿ ಬುಕ್ಕನ ಕುಲಗುರು. ಬನವಾಸಿಯಲ್ಲಿ ಮಂತ್ರಿಯಾಗಿದ್ದ ಮಾಧವ ಮಂತ್ರಿಯ ಗುರುವಾಗಿದ್ದವನೂ ಈತನೇ.[3] ಮಾಧವಮಂತ್ರಿ ಮತ್ತು ಮಾದಪ್ಪನಿಂದ ರಚಿತವಾದ 'ಸರ್ವಾಗಮಸಾರಸಂಗ್ರಹ'ದ ರಚನೆಗೆ ಈತನೇ ಪ್ರೇರಕನಾಗಿರಬೇಕು.[4] ಸೊರಬದ ೩೭೫ನೆಯ ಶಾಸನದಲ್ಲಿ ಈತನು ಗಿರೀಶನ ಅಪರಾವತಾರವೆಂದೂ ತ್ರಿಯಂಬಕನಷ್ಟು ಕೀರ್ತಿವಂತನೆಂದೂ ಹೇಳಿದೆ. ಚನ್ನರಾಯಪಟ್ಟಣದ ೨೫೬ ನೆಯ ಶಾಸನದಲ್ಲಿ[5] ಇಮ್ಮಡಿ ಹರಿಹರನು ತನ್ನ ಕುಲಗುರುವನ್ನು 'ಶ್ರೀಮದ್ರಾಜಗುರು ಮಹಾಮಂಡಲಾಚಾರ್ಯ ವಾಣೀವಿಲಾಸಕ್ರಿಯಾಶಕ್ತಿ' ಎಂದು ಸಂಬೋಧಿಸಿದ್ದಾನೆ. ಗಂಗಾದೇವಿಯ 'ವೀರಕಂಪರಾಯಚರಿತ'ದಲ್ಲಿ ಕ್ರಿಯಾಶಕ್ತಿಯೇ ಇಮ್ಮಡಿ ಕಂಪಣ್ಣನ ಕುಲಗುರುವೆಂದು ಹೇಳಿದೆ. ೧೩೮೯ ನೆಯ ವರ್ಷದ ಶಾಸನವೊಂದರಲ್ಲಿ ಇಮ್ಮಡಿ ಬುಕ್ಕನು ಕ್ರಿಯಾಶಕ್ತಿ ದೇಶಿಕನ ಆಜ್ಞೆಯ ಪ್ರಕಾರ ಶೃಂಗೇರಿಯ ವಿದ್ಯಾಶಂಕರಸ್ವಾಮಿಗೆ ದತ್ತಿಬಿಟ್ಟಿರುವಂತೆ ಉಕ್ತವಾಗಿದೆ. ಇವೆಲ್ಲವನ್ನೂ ನೋಡಿದರೆ ಕ್ರಿಯಾಶಕ್ತಿಗಳ ಪ್ರಭಾವವು* ಸಂಗಮರಾಜರ ಮೇಲೆ ವಿಶೇಷವಾಗಿದ್ದಂತೆ ಕಾಣುತ್ತದೆ. ಈ ಕ್ರಿಯಾಶಕ್ತಿಗಳು ಲಕುಲಾಗಮಕ್ಕೆ ಸೇರಿದ ಪಾಶುಪತಮತಾವಲಂಬಿಗಳಾದ ಶೈವಗುರುಗಳು. ಹಾಗೆಯೇ ಸಂಗಮರಾಜರಿಗೆ ಸಹಾಯಮಾಡಿದ ಶೃಂಗೇರಿ ಮಠದ ಸ್ವಾಮಿಗಳೂ ಮಾಧವಸಾಯಣರೂ ಅದ್ವೈತಿಗಳು. ಆದುದರಿಂದ ವಿಜಯನಗರದ ಮೊದಲನೆಯ ರಾಜವಂಶದವರ ಆಶ್ರಯದಲ್ಲಿ ಸ್ವಾಭಾವಿಕವಾಗಿ ಶೈವಮತವೂ ಶೈವಗ್ರಂಥಗಳೂ ಅಭಿವೃದ್ಧಿಯಾದುವು.

ಈ ಸಂದರ್ಭದಲ್ಲಿಯೇ ಮತ್ತೊಂದು ವಿಷಯವನ್ನು ಜ್ಞಾಪಕದಲ್ಲಿಡುವುದು ಮೇಲು. ವಿಜಯನರಗದ ರತ್ನಸಿಂಹಾಸನಾಧಿಪತಿಗಳಾದ ಬೇರೆಬೇರೆ ಮನೆತನದ ರಾಜರು ಕಾಲಾನುಗುಣವಾಗಿ ಭಿನ್ನಪ್ರಭಾವಗಳಿಂದ ಭಿನ್ನಭಿನ್ನ ವೈದಿಕಮತದ ಕಡೆ

---

[3] ಎ. ಕ. ೮. ಸೊರಬ ೩೭೫. [4] ಅದೇ. [5] ಎ. ಕ. ೫. ಚನ್ನರಾಯಪಟ್ಟಣ ೨೫೬.

* ಇಮ್ಮಡಿ ಹರಿಹರ, ದೇವರಾಯ, ವಿಜಯಭೂಪತಿ, ಮಾಧವಮಂತ್ರಿ, ಮುದ್ದಣದಂಡೇಶ, ಪಿಟ್ಟಣ ಒಡೆಯ ಇವರೆಲ್ಲ ಕ್ರಿಯಾಶಕ್ತಿ ಪಂಥದವರು.

ಒಲವನ್ನು ತೋರಿಸಿದ್ದಾರೆ. ಆದಿಕಾಲದ ಅರಸರಿಗೆ ಶೈವ ವೀರಶೈವಪಂಥದಲ್ಲಿ ಪಕ್ಷಪಾತ; ಸಾಳುವ ತುಳುವರು ವೈಷ್ಣವ ಪಂಥಕ್ಕೆ ಶಿರಬಾಗಿದರು. ಆರುವೀಡು ಮನೆತನದವರು ಶ್ರೀ ವೈಷ್ಣವರ ಸಾಕ್ಷಾತ್ ಶಿಷ್ಯರಾದರು. ಅದೇ ಆಚಾರವ್ಯವಹಾರವನ್ನು ತಮ್ಮ ವ್ಯಕ್ತಿಜೀವನದಲ್ಲಿ ಅಳವಡಿಸಿಕೊಂಡರು. ಆದರೂ ಯಾರೇ ಆಗಲಿ ಯಾವ ವಿಧವಾದ ಅಂಧಶ್ರದ್ಧೆಗೆ, ಧರ್ಮಾಂಧತೆಗೆ ಗುರಿಯಾಗದೆ ಸನಾತನ ಧರ್ಮಾಭಿವೃದ್ಧಿಗೆ ಕಾರಣವಾದ ಎಲ್ಲ ಪಂಥಗಳಿಗೂ ಸಮಾನವಾದ ಪ್ರೋತ್ಸಾಹವನ್ನಿತ್ತು ತಮ್ಮ ಹೃದಯ ವೈಶಾಲ್ಯವನ್ನು ಕಾಪಾಡಿಕೊಂಡು ಬಂದಿದ್ದಾರೆ. ಆದುದರಿಂದಲೇ ವಿಜಯನಗರದ ಕಾಲದಲ್ಲಿ ಶೈವ, ವೀರಶೈವ, ವೈಷ್ಣವ, ಶ್ರೀವೈಷ್ಣವ ಜೈನಪಂಥಗಳು ಏಕಕಾಲದಲ್ಲಿ ಪಕ್ಕಪಕ್ಕದಲ್ಲಿಯೇ ಬೆಳೆದುಬರಲು ಸಾಧ್ಯವಾಯಿತು. ಅವರಿಗಿರುವ 'ಚತುಸ್ಸಮಯ ಸಮುದ್ಧರಣ' ಎಂಬ ಬಿರುದು ಅಕ್ಷರಶಃ ಸತ್ಯವಾದುದು, ಕರ್ಣಾಟಕದಲ್ಲಲ್ಲದೆ ಇನ್ನೆಲ್ಲಿಯೂ ಇಂತಹ ಧರ್ಮಸಮನ್ವಯವನ್ನು ಕಾಣಲು ಸಾಧ್ಯವಿಲ್ಲ.

ಮೇಲೆ ಹೇಳಿದ ಮಂತ್ರಿಗಳಿಂದಲೂ ಗುರುಗಳಿಂದಲೂ ಪ್ರೇರಿತರಾದ ಸಂಗಮ ವಂಶೀಯರೂ ಅವರ ಅನುಯಾಯಿಗಳೂ ತಮಗೆ ಅವರಲ್ಲಿದ್ದ ಗಾಢವಾದ ಭಕ್ತಿ ವಿಶ್ವಾಸಗಳನ್ನು ಸೂಚಿಸುವುದಕ್ಕಾಗಿಯೂ ಅವರಿಂದ ಪಡೆದ ಸಹಾಯಕ್ಕೆ ಪ್ರತಿಫಲವಾಗಿಯೂ ತಮಗಿದ್ದ ಧರ್ಮಾಭಿಮಾನವನ್ನು ಸಾರ್ಥಕಪಡಿಸಿಕೊಳ್ಳುವುದಕ್ಕಾಗಿಯೂ ತಮ್ಮ ಗುರುಗಳಿಗೂ ಅವರ ಶಿಷ್ಯರಾದ ವಿದ್ವಾಂಸರಿಗೂ ಗ್ರಾಮ, ಭೂಮಿ, ದ್ರವ್ಯ ಮೊದಲಾದುವನ್ನು ಕೊಟ್ಟು ಪ್ರೋತ್ಸಾಹಿಸಿದರು. ಹುಲಿಕೆರೆಯ ತಾಮ್ರಶಾಸನ[6] ಅಗ್ರಹಾರ ಬಾಚಳ್ಳಿಯ ತಾಮ್ರಶಾಸನ[7] ಹರಿಹರದ ಶಿಲಾಶಾಸನ[8] ಇವುಗಳಲ್ಲಿ ಸಾಯಣಾಚಾರ್ಯರಿಗೂ ಇತರ ವಿದ್ವಾಂಸರಿಗೂ ಗ್ರಾಮಗಳನ್ನು ಕೊಟ್ಟಂತೆ ಹೇಳಿದೆ. ತೀರ್ಥಹಳ್ಳಿಯ ೧೫೪ ನೆಯ ಶಾಸನದಲ್ಲಿ ಹರಿಹರ ಮಹಾರಾಯನು ವೇದಮಾರ್ಗ ಪ್ರತಿಷ್ಠಾಪನಾಚಾರ್ಯನಾದ ಹರಿಹರದೇವನಿಗೆ ಶಾಂತಲಿಗೆಯೆಂಬ ಗ್ರಾಮವನ್ನು ದಾನಮಾಡಿರುವುದು ಲಿಖಿತವಾಗಿದೆ. ಬುಕ್ಕ ಮಹಾರಾಯನೂ ಅವನ ತರುವಾಯ ಬಂದ ಅರಸರೂ ಶೃಂಗೇರಿಯ ಮಠದಲ್ಲಿ ಸಂತತವಾಗಿ ಪಾಠಪ್ರವಚನ ಕಾಲಕ್ಷೇಪಾದಿಗಳು ನಡೆಯುವುದಕ್ಕಾಗಿ ಅನೇಕ ದತ್ತಿಗಳನ್ನು ಬಿಟ್ಟಿದ್ದಾರೆ. ೧೩೮೦ ನೆಯ ವರ್ಷದ ಒಂದು ಕಡತದಿಂದ ಇಮ್ಮಡಿ ಹರಿಹರನು ಆ ವರ್ಷದಲ್ಲಿ ಶೃಂಗೇರಿಮಠಕ್ಕೆ ಒಂದು ಹೊಸ ಶಾಸನವನ್ನು ಕೊಟ್ಟು ಹಿಂದೆ ಕೊಟ್ಟಿದ್ದ ಶಾಸನಗಳನ್ನೆಲ್ಲಾ ಅದರಲ್ಲಿ ಹೊಗಳಿ ಊರ್ಜಿತಪಡಿಸಿದಂತೆ ತಿಳಿಯಬಹುದಾಗಿದೆ.[10] ಇಮ್ಮಡಿ ಹರಿಹರರಾಯನ ಹೆಬ್ಬಸೂರು

---

[6] ಅದೇ. [7] ಮೈ. ಶಾ. ವ. ೧೯೩೫-೫೭. [8] ಎ. ಕ. ೧೧ ದಾವ ೩೪. [9] ಎ. ಕ. ೮ ತೀರ್ಥಹಳ್ಳಿ ೧೫೮. [10] ಮೈ. ಶಾ. ವ ೧೯೧೮-೯೪.

ತಾಮ್ರಶಾಸನ[11]ದಿಂದ ಬುಕ್ಕ ಮಹಾರಾಜನು ವಿದ್ಯಾತೀರ್ಥಸ್ವಾಮಿಗಳಿಗೆ ವಿಶೇಷ ಸನ್ಮಾನಮಾಡಿದಂತೆಯೂ ಅವರ ಸಹಾಯದಿಂದ ಅವನು ಬಹು ಖ್ಯಾತಿಗೆ ಬಂದಂತೆಯೂ ತಿಳಿದುಬರುತ್ತದೆ. ಇಮ್ಮಡಿ ಹರಿಹರನು ತನ್ನ ಕುಲಗುರುವಾದ ಕ್ರಿಯಾಶಕ್ತಿಯ ಆಜ್ಞೆಯ ಪ್ರಕಾರ ಗದಗು ಪ್ರಾಂತವನ್ನು ೬೬ ಹಳ್ಳಿಗಳಾಗಿ ಭಾಗಿಸಿ ವಿದ್ವಾಂಸರಿಗೆ ದಾನಮಾಡಿದನೆಂಬುದು ಡಾಂಬಲ್ ತಾಮ್ರಶಾಸನ[12]ದಿಂದ ಶ್ರುತ ವಾಗುತ್ತದೆ. ಇವುಗಳನ್ನು ಪಡೆದವರಲ್ಲಿ ಸೋಮಭಟ್ಟ ಶ್ರೀರಂಗಭಟ್ಟ ಹನುಮಾನ್ ಎಂಬುವರು ಉದ್ದಾಮ ಕವಿಗಳಾಗಿದ್ದರೆಂದೂ ವಿರೂಪಾಕ್ಷನೆಂಬುವನು ಉತ್ತಮ ನಾದ ಜ್ಯೋತಿಷ್ಕನೆಂದೂ ಹರಿ ಎಂಬುವನು 'ಜ್ಯೋತಿರ್ವಿದಾಭೋಗ' ಎಂಬುದರ ಕರ್ತೃವೆಂದೂ ನರಸಿಂಹನೆಂಬುವನು ಸಾಮವೇದದ ಪ್ರತ್ಯಕ್ಷಮೂರ್ತಿಯೆಂದೂ ವೆಂಕಟನು ಶಾಸ್ತ್ರಜ್ಞನೆಂದೂ ಕಾಶೀನಾಥನು ಶಾಸ್ತ್ರವಾರಧಿ ಪಾರಂಗತನೆಂದೂ ಅದೇ ಶಾಸನದಲ್ಲಿ ಹೇಳಿದೆ. ಇದೇ ಶಾಸನದಲ್ಲಿ ಶೃಂಗೇರಿಮಠಕ್ಕೆ ಸೇರಿದ ಶೃಂಗೇರಿಭಟ್ಟ ಮತ್ತು ವಿದ್ಯಾಶಂಕರಭಟ್ಟ ಎಂಬಿಬ್ಬರಿಗೂ ವೃತ್ತಿಗಳು ಕೊಡಲ್ಪಟ್ಟಿವೆ. ಮಾಧವ ಮಂತ್ರಿಯೂ ಕೂಡ ಕ್ರಿಯಾಶಕ್ತಿ ದೇಶಿಕನ ಆಜ್ಞೆಯ ಮೇರೆ ಒಂದು ವರ್ಷ ತಪಸ್ಸು ಮಾಡಿ ವರ್ಷಾಂತ್ಯದಲ್ಲಿ ಬುಕ್ಕಮಹಾರಾಜನಿಂದ ಮುಚ್ಚುಂದಿ ಎಂಬ ಗ್ರಾಮವನ್ನು ಪಡೆದು ಅದನ್ನು ವೃತ್ತಿಗಳನ್ನಾಗಿ ಭಾಗಿಸಿ ಎಂಬತ್ತು ಜನ ಕಾಶ್ಮೀರ ದೇಶದ ಶೈವ ವಿದ್ವಾಂಸರಿಗೆ ದಾನಮಾಡಿದನೆಂಬುದು ಶಿಕಾರಿಪುರದ ಒಂದು ಶಾಸನದಿಂದ[13] ವ್ಯಕ್ತ ವಾಗುತ್ತದೆ. ಮುಳುಬಾಗಿಲು ತಾಲ್ಲೋಕಿನ ೧೫೮ ನೆಯ ಮತ್ತು ಗೋರಿಬಿದನೂರಿನ ೪೬ ನೆಯ ಶಾಸನಗಳಲ್ಲಿ ಬುಕ್ಕಮಹಾರಾಯನು ನಾಚಿನ ಸೋಮನೆಂಬುವನಿಗೆ ಒಂದು ಅಗ್ರಹಾರವನ್ನು ದಾನಮಾಡಿರುವುದಾಗಿ ಹೇಳುವ ಈ ಕೆಳಗಿನ ಶ್ಲೋಕಗಳು ಸಿಕ್ಕುವುವು.

ಆಪಸ್ತಂಭಾಖ್ಯ ಸೂತ್ರಾಯ ಭಾರದ್ವಾಜಾಖ್ಯ ವಾಯಿನೆ |
ಯಾಜುಷಾಣಾಂ ವರೇಣ್ಯಾಯ ಸಕಲಾಗಮವೇದಿನೆ ||
ಅಷ್ಟಾದಶಪುರಾಣಾನಾಂ ಅಭಿಜ್ಞಾತಾರ್ಥವೇದಿನೇ |
ಅಷ್ಟಭಾಷಾಕವಿತ್ವಶ್ರೀ ಶ್ರೀವಾಣೀಜಿತಸಂಪದೇ ||
ಸೋಮಾಯ ನಾಚಿನಾಂಬೋಧೇಃ ಸೋಮಾಯಾಮಿತತೇಜಸೇ
ಬುಕ್ಕರಾಯಪುರಖ್ಯಾತಂ ಪ್ರತಿನಾಮ್ನಾಚ ಶೋಭಿತಂ
ಸಹಿರಣ್ಯಪಯೋಧಾರಾಪೂರ್ವಕಂ ದತ್ತವಾನ್ ಮುದಾ ||

---

[11] ಎ.ಕ. ೪. ಎಡತೊರೆ ೪೬. [12] ಬಿ.ಬಿ.ಆರ್.ಎ. ೧೨, ಪು. ೩೩೮. [13] ಎ.ಕ. ೬, ಶಿಕಾರಿ ೨೮೧.

ಇವುಗಳಿಂದ ನಾಚಿನ ಸೋಮನು ಅಷ್ಟಭಾಷೆಗಳಲ್ಲಿ ಕವಿತ್ವಮಾಡುವ ಶಕ್ತಿಯುಳ್ಳವನಾಗಿದ್ದನೆಂಬುದೂ ವೇದಾಗಮಪುರಾಣಜ್ಞನೆಂಬುದೂ ಬುಕ್ಕರಾಯನಿಂದ ಬುಕ್ಕರಾಯಪುರವನ್ನು ದಾನವಾಗಿ ಪಡೆದನೆಂಬುದೂ ಶ್ರುತಪಡುವುದು. ಈ ನಾಚಿನ ಸೋಮನೇ ಇದೇ ಹೆಸರಿನ ಸುಪ್ರಸಿದ್ಧನಾದ ಆಂಧ್ರಕವಿಯೆಂಬುದಾಗಿ ಪಂಡಿತರು ಒಪ್ಪಿರುತ್ತಾರೆ. ಇವನು ಆಂಧ್ರಭಾಷೆಯಲ್ಲಿ 'ಹರಿವಂಶಮು', 'ವಸಂತವಿಲಾಸಮು' ಎಂಬ ಎರಡು ಗ್ರಂಥಗಳನ್ನು ರಚಿಸಿರುತ್ತಾನೆ. ಇವನ ಕವಿತಾದೃಷ್ಟಿಯಿಂದ ಇವನು ಭಾರತವನ್ನು ರಚಿಸಿದ ಆಂಧ್ರಕವಿತ್ರಯಕ್ಕಿಂತ ಮಿಗಿಲೆಂಬುದಾಗಿ ವೀರೇಶಲಿಂಗಂ ಪಂತಲು ಅವರು ಒಪ್ಪಿರುತ್ತಾರೆ.[14]

ರಾಜರು ಪ್ರಜೆಗಳ ಸರ್ವತೋಮುಖವಾದ ಬೆಳವಣಿಗೆಗೆ ಸಾಧಕವಾಗಿ ಅನೇಕ ದತ್ತಿಗಳನ್ನು ಬಿಟ್ಟರೆ ಪ್ರಜೆಗಳು ರಾಜರ ಶ್ರೇಯಸ್ಸಿಗಾಗಿ, ಮೇಲ್ಮೆಗಾಗಿ ಅಭಿವೃದ್ಧಿಗಾಗಿ ಅನೇಕ ಧರ್ಮಶಾಸನಗಳನ್ನು ಬಿಟ್ಟಿರುವುದು ವಿಜಯನಗರದ ವೈಶಿಷ್ಟ್ಯ. ಈ ಧರ್ಮಶಾಸನಗಳು ಪ್ರಜಾಪ್ರಭುಗಳ ಪರಸ್ಪರ ಪ್ರೀತ್ಯಾದರಗಳನ್ನು ವಿಶದಪಡಿಸುತ್ತವೆ. ೧೩೮೦ ರಲ್ಲಿ ತಾಮಸಂದಿ ಆದಿನಾಥನ ಮಗನು ಬುಕ್ಕರಾಯನ ಕ್ಷೇಮಚಿಂತನಕ್ಕಾಗಿ ಮುರಾಸೂರಿನಲ್ಲಿ ಆದಿನಾರಾಯಣನ ಮೂರ್ತಿಯನ್ನು ಸ್ಥಾಪಿಸಿದನು. ೧೩೮೨ ರಲ್ಲಿ ಇರುಗಪ್ಪನೆಂಬುವನು ಮಹೇಂದ್ರಮಂಗಲವನ್ನು ರಾಜನ ಶ್ರೇಯಸ್ಸಿಗಾಗಿ ದತ್ತಿಯಾಗಿ ಕೊಟ್ಟನು. ಇಮ್ಮಡಿ ಹರಿಹರನ 'ಖಡ್ಗದೇವತೆಗೆ ಜಯಸಿಗುವುದಕ್ಕಾಗಿ' ಪಳ್ಳಿಯಾರು ನಾಡಿನ ಪಾರುಪತ್ತೆಗಾರನೂ ಆ ಊರಿನ ನಿವಾಸಿಗಳೂ ಧರ್ಮಮಾಡಿದರು ಮುಂಬಳ್ಳಿಯ ವರ್ತಕರು 'ದೇವರಾಯನು ಭೂಮಂಡಲದ ಒಡೆಯನಾಗಲೆಂದು ಆಶಿಸಿ' ಮಗ್ಗವೊಂದಕ್ಕೆ ಒಂದು ಗದ್ಯಾಣದಂತೆ ಹಣ ಶೇಖರಿಸಿ ಕೊಟ್ಟರು. ೧೪೫೨ ರಲ್ಲಿ ದೇವಪ್ಪಗಳು ಮಲ್ಲಿಕಾರ್ಜುನನ 'ಆರೋಗ್ಯಲಾಭ'ಕ್ಕಾಗಿ ಸೇದಿಯಾರು ನೆಲ್ಲೂರು ಗ್ರಾಮವನ್ನು ದತ್ತಿ ಕೊಟ್ಟರು. ನರಸಿಂಗದೇವ ಮಹಾರಾಯನಿಗೆ ಬೀರಪ್ಪ ನಾಯಕನೂ ಇಮ್ಮಡಿ ನರಸಿಂಗರಾಯನಿಗೆ ಕಸವೇನಾಯಕನೂ ಧರ್ಮಶಾಸನವನ್ನು ಬಿಟ್ಟಿದ್ದಾರೆ. ೧೫೧೨ ರಲ್ಲಿ ರಾಯಪ್ಪಕೊಂಡನರಸು ಅಯೋಧ್ಯಾಪುರವನ್ನು ಕೃಷ್ಣ ದೇವನ ಧರ್ಮಕ್ಕೆ ಕೊಟ್ಟನು. ೧೫೨೨ ರಲ್ಲಿ ಗೋವಿಂದರಾಜನು ೧೪೭ ಗದ್ಯಾಣ ಗಳನ್ನು ಕೃಷ್ಣದೇವರಾಯನು ಕುದುರೆ, ಆನೆ, ಧನ, ದಳಗಳನ್ನು ಪಡೆಯಲೆಂದು ಕಾಣಿಕೆಯಿತ್ತನು. ಬಸವಯ್ಯನಾಯಕ ಹನುಮಪ್ಪನಾಯಕ ಎಂಬುವರು ಅನುಕ್ರಮ ವಾಗಿ ೧೫೨೨ ಮತ್ತು ೧೫೨೯ ರಲ್ಲಿ ಕೃಷ್ಣರಾಯನ ಧರ್ಮಕ್ಕಾಗಿ ದಾನಮಾಡಿದರು.

---

[14] ಎ.ಲಿಂ. ೧೦ ಪು. ೧೧೬.

ಹೀಗೆಯೇ ಅಚ್ಯುತರಾಯ, ಸದಾಶಿವರಾಯ, ರಾಮರಾಯರ ವಿಷಯವಾಗಿಯೂ ಬಟ್ಟಿರುವ ಧರ್ಮಶಾಸನಗಳು ಹೇರಳವಾಗಿ ಸಿಕ್ಕುವುವು.

ದೇಶದಲ್ಲಿ ಶಾಂತಿ ನೆಲಸಿ ಪರಕೀಯರ ಉಪದ್ರವ ಕಡಿಮೆಯಾಗಲು ಸಾಹಿತ್ಯ ರಚನೆಗೆ ವಿಶೇಷ ಸೌಲಭ್ಯವುಂಟಾಯಿತು. ಧರ್ಮಪೋಷಣೆಯು ವಿದ್ಯಾಪೋಷಣೆ, ಸಾಹಿತ್ಯಪೋಷಣೆಗಳಲ್ಲಿ ಪರಿಣಮಿಸಿತು. ಆರ್ಷೇಯವಾದ ಸಂಪ್ರದಾಯ ವಿದ್ಯೆಯನ್ನು ಪಾಲಿಸಿ ಪ್ರಚುರಪಡಿಸುವುದೂ ಹೊಸಹೊಸ ಭಕ್ತಿಪಂಥಗಳಿಗೆ ಆಶ್ರಯವನ್ನಿತ್ತು ಹಿಂದಿನವುಗಳೊಂದಿಗೆ ಸಮನ್ವಯಪಡಿಸುವುದೂ ವಿದ್ಯಾನಗರಿಯ ರಾಜರಿಗೆ ಮುಖ್ಯ ಧ್ಯೇಯವಾಗಿತ್ತು. ಆದುದರಿಂದ ಸಾಹಿತ್ಯವಾಹಿನಿಯು ರಾಜಾಸ್ಥಾನದಿಂದ ಬಹುಮುಖವಾಗಿ ಪ್ರವಹಿಸಲು ಆರಂಭವಾಯಿತು.

ಸಾಮ್ರಾಜ್ಯಸ್ಥಾಪನೆಯ ವೇಳೆಗೆ ಕರ್ಣಾಟಕದಲ್ಲಿ ಶ್ರೀ ಶಂಕರಾಚಾರ್ಯ, ಶ್ರೀ ರಾಮಾನುಜಾಚಾರ್ಯ, ಶ್ರೀ ಮಧ್ವಾಚಾರ್ಯರಿಂದ ಪುಷ್ಟೀಕೃತವಾದ ಮತತ್ರಯಗಳೂ ಬಹುಮಟ್ಟಿಗೆ ಪ್ರಚಾರವಾಗಿ ಆಯಾ ಸಿದ್ಧಾಂತಗಳ ಸ್ಥಾಪನೆಗೆ ಅನೇಕ ಗ್ರಂಥಗಳು ರಚಿತವಾಗಿದ್ದುವು. ೧೪ನೆಯ ಶತಮಾನದ ಆದಿಭಾಗದಲ್ಲಿ ಅದ್ವೈತ ಮಹಾಪಂಡಿತರುಗಳಾದ ವಿದ್ಯಾತೀರ್ಥರು 'ರುದ್ರಪ್ರಶ್ನಭಾಷ್ಯ'ವನ್ನೂ ಶಂಕರಾನಂದರು 'ಬೃಹದಾರಣ್ಯಕ' 'ಮಾಂಡೂಕ್ಯ'ಗಳಿಗೆ ವ್ಯಾಖ್ಯಾನಗಳನ್ನೂ ಶ್ರೀಕಂಠನಾಥರು ತಮ್ಮ ಶ್ರೀಕಂಠಭಾಷ್ಯವನ್ನೂ ರಚಿಸಿ ಅದ್ವೈತ ಸಿದ್ಧಾಂತವನ್ನು ಸ್ಥಿರವಾದ ಅಡಿಗಲ್ಲಿನ ಮೇಲೆ ಮಂಡಿಸಿದ್ದರು.

ವೀರಶೈವಮತವೂ ಈ ಕಾಲಕ್ಕೆ ವಿಶೇಷವಾಗಿ ಬೆಳೆದುಬಂದಿತ್ತು. ಈ ಪಂಥದಲ್ಲಿ ಈ ಕಾಲದಲ್ಲಿ ಪ್ರಸಿದ್ಧನಾಗಿದ್ದವನು ಪಾಲ್ಕುರಿಕೆ ಸೋಮನಾಥ. ಈತನು ವೀರ ಪ್ರತಾಪ ಇಮ್ಮಡಿ ಪ್ರತಾಪರುದ್ರನ ಆಸ್ಥಾನದಲ್ಲಿ 'ಸೋಮನಾಥಭಾಷ್ಯ' (ಬಸವ ರಾಜೀಯ) 'ರುದ್ರಭಾಷ್ಯ', 'ಅಷ್ಟಕ', 'ಪಂಚಕ' 'ನಮಸ್ಕಾರ ಗದ್ಯ', 'ಬಸವೋದಾಹರಣ,' 'ಚತುರ್ವೇದ ತಾತ್ಪರ್ಯ ಸಂಗ್ರಹ' ಮೊದಲಾದುವುಗಳನ್ನು ರಚಿಸಿದನು. ಚೆನ್ನರಾರು ಕರಸ್ಥಳಿಸೋಮ, ರೆಂತಾಲಮಲ್ಲಿನಾಥ, ಗೊಬ್ಬೂರುಸಂಗ, ಪಾಲ್ಕುರಿಕೆ ಸೂರನ್ನ, ಕರಸ್ಥಲವಿಶ್ವನಾಥ, ಗುರುಲಿಂಗಾರ್ಯ, ಕಟ್ಟಿಕ್ಕುರ್ಕಿ ಪೊಟ್ಟಿದೇವ ಇವರು ಸಮಕಾಲೀನರಾದ ಗುರುಗಳು. ಗೋಳಾಕಿಮಠದ ಪಾಶುಪತಶೈವರು ಈ ಕಾಲದಲ್ಲಿ ಪ್ರಬಲರಾಗಿದ್ದರು. ಈಗಲೇ ಹುಲಿಮಠವು ಜ್ಞಾನಶಕ್ತಿ ಮತ್ತು ಸಾಂಬಶಕ್ತಿ ಎಂಬುವರ ಅಧ್ಯಕ್ಷತೆಯಲ್ಲಿ ಕಾಳಾಮುಖಶೈವರ ಕೇಂದ್ರವಾಗಿತ್ತು.

ದ್ವೈತಪಂಥದಲ್ಲಿ ನಾರಾಯಣಪಂಡಿತ, ಪದ್ಮನಾಭತೀರ್ಥ, ನರಹರಿತೀರ್ಥ ಮೊದಲಾದವರಿಂದ ಅನೇಕ ಗ್ರಂಥಗಳು ರಚಿತವಾಗಿ ಆನಂದತೀರ್ಥರ (ಮಧ್ವಾಚಾರ್ಯರ) ಕಾರ್ಯ ಮುಂದುವರಿದಿತ್ತು.

ಭಗವದ್ರಾಮಾನುಜಾಚಾರ್ಯರಿಂದ ಸುಪುಷ್ಟವಾಗಿ ಪ್ರಚಾರವಾದ ವಿಶಿಷ್ಟಾದ್ವೈತಮತವು ನಾನಾಮುಖವಾಗಿ ಬೆಳೆದುಬಂದಿತ್ತು. ರಾಮಾನುಜರ ಪಂಚಪರಂಪರೆಗಳಾದ ಮಂತ್ರಪರಂಪರೆ, ಮಂತ್ರಾರ್ಥಪರಂಪರೆ, ಶ್ರೀ ಭಾಷ್ಯಗುರುಪರಂಪರೆ, ಆಶ್ರಯಣಗುರುಪರಂಪರೆ, ಗ್ರಂಥಪರಂಪರೆಗಳಲ್ಲಿ ನಾನಾ ಆಚಾರ್ಯರು ಅವತರಿಸಿ ಗ್ರಂಥ ರಚನೆಮಾಡಿ ಕಾಲಕ್ಷೇಪನಡಸಿ ಪಂಥವನ್ನು ಸರ್ವಸಮೃದ್ಧವನ್ನಾಗಿಮಾಡಿದ್ದರು. ಪ್ರಸಕ್ತಕಾಲದಲ್ಲಿ ಶ್ರೀ ವೇದಾಂತ ದೇಶಿಕ*ರೂ ಶ್ರೀ ಪಿಳ್ಳೈಲೋಕಾಚಾರ್ಯರೂ ಈ ಶಾಖೆಯ ಎರಡು ಮಾರ್ಗಗಳಿಗೆ ನಾಯಕರಾಗಿದ್ದರು. ಸರ್ವತಂತ್ರಸ್ವತಂತ್ರರೆಂದು ಬಿರುದಾಂಕಿತರಾದ ವೇದಾಂತ ದೇಶಿಕರು ವಿಶಿಷ್ಟಾದ್ವೈತತತ್ತ್ವಕ್ಕೆ ಸೇರಿದ ೧೨೦ ಗ್ರಂಥಗಳನ್ನೂ ಪಿಳ್ಳೈಲೋಕಾಚಾರ್ಯರು ತತ್ತ್ವಾರ್ಥ ವಿವರಣೆಗಳಿಗೆ ಸಂಬಂಧಪಟ್ಟ ಅನೇಕ ಗ್ರಂಥಗಳನ್ನೂ ರಚಿಸಿದ್ದರು.

---

* ವೇದಾಂತದೇಶಿಕರು (ವೇಂಕಟನಾಥರು) ವಿಜಯನಗರದ ಆದಿಕಾಲದಲ್ಲಿದ್ದ ಉದ್ದಾಮ ಪಂಡಿತರು. ಆ ಕಾಲದ ಸಾಹಿತ್ಯಪ್ರಪಂಚಕ್ಕೆ ಅವರಿಂದ ಆಗಿರುವ ಸೇವೆ ಅಪಾರ. ಆ ಕಾಲದ ಸಾಹಿತಗಳನೇಕರೊಡನೆ ಅವರ ಸಂಬಂಧವು ಉಲ್ಲೇಖವಾಗಿದೆ. ಅವರು ವಿದ್ಯಾರಣ್ಯರ ಸಹಪಾಠಿಗಳಾಗಿದ್ದ ಹಾಗೆಯೂ ರಾಜ್ಯಸ್ಥಾಪನೆಯಾದ ಮೇಲೆ ವಿದ್ಯಾರಣ್ಯರಿಂದ ರಾಜಾಸ್ಥಾನಕ್ಕೆ ಆಹ್ವಾನಿತರಾಗಿ ಅಲ್ಲಿಗೆ ಹೋಗುವುದಕ್ಕೆ ಇಷ್ಟವಿಲ್ಲದೆ 'ವೈರಾಗ್ಯಪಂಚಕ'ವೆಂಬ ಅಯ್ದು ಶ್ಲೋಕಗಳನ್ನು ಬರೆದು ಕಳುಹಿಸಿದುದಾಗಿಯೂ ಪ್ರತೀತಿ ಇದೆ. ಇವರು ಕ್ರಿ.ಶ. ೧೨೬೮ ನೆಯ ಶುಕ್ಲವರ್ಷದಿಂದ ೧೩೬೯ ನೆಯ ಸೌಮ್ಯವರ್ಷದ ವರೆಗೆ ಅಂದರೆ ಒಂದು ನೂರು ವರ್ಷ ಜೀವಿಸಿದ್ದರು. ಇವರು ಸಾಹಿತ್ಯದ ಹಲವು ಶಾಖೆಗಳಲ್ಲಿ ಅದ್ವಿತೀಯ ಪಂಡಿತರಾಗಿದ್ದು ಒಟ್ಟು ೧೨೦ ಗ್ರಂಥಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಹಯಗ್ರೀವಸ್ತೋತ್ರ, ದೇವನಾಯಕ ಪಂಚಾಶತ್, ಅಚ್ಯುತಶತಕಮ್, ಗೋಪಾಲವಿಂಶತಿಃ ದೇಹಳೀಶಸ್ತುತಿಃ ಯಥೋಕ್ತಕಾರಿಸ್ತೋತ್ರಮ್, ಕಾಮಾಸಿಕಾಷ್ಟಕಮ್, ಅಷ್ಟಭುಜಾಷ್ಟಕಂ, ಶರಣಾಗತಿದೀಪಿಕೆ, ಪರಮಾರ್ಥಸ್ತುತಿಃ, ದಯಾಶತಕಂ, ವರದರಾಜಪಂಚಾಶತ್, ಭಗವಧ್ಯಾನ, ಸೋಪಾನಂ, ದಶಾವತಾರಸ್ತೋತ್ರಮ್, ಅಭೀತಿಸ್ತವಂ, ನ್ಯಾಸದಶಕಂ, ನ್ಯಾಸವಿಂಶತಿಃ, ನ್ಯಾಸತಿಲಕಂ, ರಘುವೀರಗದ್ಯಂ, ಶ್ರೀಸ್ತುತಿಃ, ಭೂಸ್ತುತಿಃ, ನೀಳಾಸ್ತುತಿಃ, ಗೋದಾಸ್ತುತಿಃ, ಸುದರ್ಶನಾಷ್ಟಕಂ, ಷೋಡಶಾಯುಧಸ್ತೋತ್ರಂ, ಗರುಡದಂಡಕಂ, ಗರುಡಪಂಚಾಶತ್, ದ್ರಮಿಡೋಪನಿಷತ್ಸಾರಂ, ದ್ರಮಿಡೋಪನಿಷತ್ತಾತ್ಪರ್ಯರತ್ನಾವಳೀ, ಯತಿರಾಜಸಪ್ತತಿಃ, ವೈರಾಗ್ಯಪಂಚಕಂ, ದಿವ್ಯದೇಶಮಂಗಳಾಶಾಸನಪಂಚಕಂ ಇವು ೩೨ ಸ್ತೋತ್ರಗಳು. ಯಾದವಾಭ್ಯುದಯಂ, ಹಂಸಸಂದೇಶಂ, ಸುಭಾಷಿತನೀವಿ, ಪಾದುಕಾಸಹಸ್ರಂ, ಭೂಗೋಳನಿರ್ಣಯಃ, ತದ್ವ್ಯಾಖ್ಯಾ, ಸಂಕಲ್ಪಸೂರ್ಯೋದಯಂ ಇವು ಏಳು ಕಾವ್ಯನಾಟಕಗಳು, ಯಜ್ಞೋಪವೀತ ಪ್ರತಿಷ್ಠೆ, ಆರಾಧನಕ್ರಮಂ, ಹರಿದಿನತಿಲಕಂ, ತದ್ವ್ಯಾಖ್ಯಾ, ಪಾಂಚರಾತ್ರರಕ್ಷೆ. ಸಚ್ಚರಿತ್ರರಕ್ಷೆ, ರಹಸ್ಯರಕ್ಷೆ, ಗೀತಾರ್ಥಸಂಗ್ರಹರಕ್ಷೆ, ನಿಕ್ಷೇಪರಕ್ಷೆ, ನ್ಯಾಸವಿಂಶತಿವ್ಯಾಖ್ಯಾನಂ, ನ್ಯಾಯಸಿದ್ಧಾಂಜನಂ, ನ್ಯಾಯಪರಿಶುದ್ಧಿಃ, ತತ್ತ್ವಮುಕ್ತಾಕಲಾಪಂ, ಸರ್ವಾರ್ಥಸಿದ್ಧಿಃ, ಅಧಿಕರಣದರ್ಪಣಂ, ಅಧಿಕರಣಸಾರಾವಳೀ, ತಾತ್ಪರ್ಯಚಂದ್ರಿಕಾ, ತತ್ತ್ವಟೀಕಾ, ಸೇಶ್ವರ

ಜೈನರಲ್ಲಿ ದೇಶೀಗಣಮಾಘನಂದಿ, ಅಭಯಚಂದ್ರ, 'ಸಾರಚತುಷ್ಟ'ಯದ ವ್ಯಾಖ್ಯಾಕಾರನಾದ ಬಾಲಚಂದ್ರ, ರಾಮಚಂದ್ರಮಲಧಾರಿ ಮೊದಲಾದವರು ಜೈನ ಸಿದ್ಧಾಂತಪ್ರಚಾರಕ್ಕೆ ಸಾಧಕವಾದ ಅನೇಕ ಗ್ರಂಥಗಳನ್ನು ರಚಿಸಿದ್ದರು.

ಸಾಹಿತ್ಯಕ್ಷೇತ್ರದಲ್ಲಿ ಪ್ರತಾಪರುದ್ರನ ಪ್ರತ್ಯಕ್ಷಪ್ರೋತ್ಸಾಹದಿಂದ ಕಾವ್ಯ, ನಾಟಕ, ಅಲಂಕಾರಗ್ರಂಥಗಳನೇಕವು ರಚಿತವಾಗಿದ್ದುವು. ವಿದ್ಯಾನಾಥನ 'ಪ್ರತಾಪ ರುದ್ರಯಶೋಭೂಷಣ'ವೇ ಇದಕ್ಕೆ ಪ್ರತ್ಯಕ್ಷಸಾಕ್ಷಿ.

ಈ ತುಂಬುಸಾಹಿತ್ಯದ ಹಿನ್ನೆಲೆಯಲ್ಲಿ ವಿಜಯನಗರ ಸಾಹಿತ್ಯ ಸಾಮ್ರಾಜ್ಯದ ಉಗಮವಾಯಿತು. ಬುಕ್ಕ ಹರಿಹರರ ಮಂತ್ರಿಗಳಾದ ಮಾಧವ ಸಹೋದರರು ಉದ್ದಾಮವಿದ್ವಾಂಸರು; ವೇದಮಾರ್ಗ ಪ್ರವರ್ತಕರು; ಧರ್ಮಸ್ಥಾಪನೆಯಲ್ಲಿ ಬದ್ಧ ಕಂಕಣರು. ರಾಜ್ಯಸ್ಥಾಪನೆಯ ಕಾರ್ಯವು ಒಂದು ಘಟ್ಟಕ್ಕೆ ಬರಲು ಧರ್ಮಾಭಿ ವೃದ್ಧಿಗೆ ಸಾಧಕವಾದ ಅನೇಕ ಗ್ರಂಥಗಳ ರಚನೆಗೆ ಕೈಹಾಕಿದರು. ಆರ್ಷೇಯಧರ್ಮಕ್ಕೆ ಮೂಲಾಧಾರವಾದ ಶ್ರುತಿಸ್ಮೃತಿಗಳು ಎಲ್ಲರಿಗೂ ಸುಲಭಗ್ರಾಹ್ಯವಾಗಿರಲಿಲ್ಲವಾದು ದರಿಂದ ಅವುಗಳಿಗೆ ಭಾಷ್ಯವನ್ನೂ ವ್ಯಾಖ್ಯಾನಗಳನ್ನೂ ರಚಿಸುವುದು ಪ್ರಥಮ ಕರ್ತವ್ಯ ವೆಂದು ತೋರಿತು. ಅದೇಪ್ರಕಾರ ಮಾಧವಾಚಾರ್ಯನು ಪರಾಶರಸ್ಮೃತಿಯ ವ್ಯಾಖ್ಯಾನ ವಾದ 'ಪರಾಶರಮಾಧವೀಯ'ವೆಂಬ ಗ್ರಂಥವನ್ನು ಮೊದಲು ರಚಿಸಿದನು. 'ವ್ಯವಹಾರಮಾಧವ' 'ಕಾಲಮಾಧವೀಯ' ಅಥವಾ 'ಕಾಲನಿರ್ಣಯ' 'ಜೀವನ್ಮುಕ್ತಿ ವಿವೇಕ' 'ಜೈಮಿನೀಯ ನ್ಯಾಯಮಾಲಾವಿಸ್ತರ' ಇವು ಆತನ ಇತರ ಗ್ರಂಥಗಳು. ಇವುಗಳಲ್ಲಿ ಪರಾಶರಸ್ಮೃತಿವ್ಯಾಖ್ಯಾನವು ಹಿಂದುಗಳ ನಿತ್ಯನೈಮಿತ್ತಿಕ ಧರ್ಮಗಳನ್ನು ವಿವರಿಸುತ್ತದೆ. 'ವ್ಯವಹಾರಮಾಧವ'ವು ರಾಜನೀತಿಗಳನ್ನು ತಿಳಿಸು

ಮೀಮಾಂಸಾ, ಮೀಮಾಂಸಾಪಾದುಕಾ, ಶತದೂಷಿಣೀ, ಈಶಾವಾಸ್ಯೋಪನಿಷದ್ಭಾಷ್ಯಂ, ಇವು ಅನುಷ್ಠಾನಾದಿ ಶಾಸ್ತ್ರ ವಿಷಯಗ್ರಂಥಗಳು. ಸಂಪ್ರದಾಯ ಪರಿಶುದ್ಧಿ, ತತ್ತ್ವಪದವಿ, ರಹಸ್ಯಪದವಿ, ತತ್ತ್ವನವನೀತಂ, ರಹಸ್ಯನವನೀತಂ, ತತ್ತ್ವಮಾತೃಕಾ, ರಹಸ್ಯಮಾತೃಕಾ, ತತ್ತ್ವಸಂದೇಶಂ, ರಹಸ್ಯ ಸಂದೇಶಂ, ರಹಸ್ಯ ಸಂದೇಶವಿವರಣಂ, ತತ್ವರತ್ನಾವಳೀ, ತತ್ವಸಂಗ್ರಹಂ, ರಹಸ್ಯರತ್ನಾವಲೀ, ರಹಸ್ಯ ರತ್ನಾವಲೀ ಹೃದಯಂ, ತತ್ತ್ವತ್ರಯಚುಳಕಂ, ಸಾರದೀಪಂ, ಶ್ರೀ ರಹಸ್ಯತ್ರಯಸಾರಂ, ಸಾರಾಸಾರಂ, ಅಭಯಪ್ರದಾನಸಾರಂ, ತತ್ತ್ವಶಿಖಾಮಣಿ, ರಹಸ್ಯಶಿಖಾಮಣಿ, ಅಂಜಲಿವೈಭವಂ, ಪ್ರಧಾನಶತಕಂ, ಉಪಕಾರಸಂಗ್ರಹಂ, ಸಾರಸಂಗ್ರಹಂ, ವಿರೋಧಪರಿಹಾರಂ, ಮುನಿವಾಹನಭೋಗಂ, ಪರಮಪದ ಸೋಪಾನಂ, ಪರಮತಭಂಗಂ, ಹಸ್ತಿಗಿರಿಮಾಹಾತ್ಮ್ಯಂ, ಇವು ರಹಸ್ಯಗಳು. ದೇಶಿಕಪ್ರಬಂಧಂ ತಮಿಳುಪ್ರಬಂಧಗ್ರಂಥ, ಇವಲ್ಲದೆ ಈಗ ಉಪಲಬ್ಧವಲ್ಲದ ಶಿಲ್ಪಾರ್ಥಸಾರ, ಚಕಾರಸಮರ್ಥನಂ, ಸಾರಸಂಕ್ಷೇಪಂ, ಮಧುರಕವಿಹೃದಯಂ ರಸಭೂಮಾಮೃತಂ, ವೃಕ್ಷಭೂಮಾಮೃತಂ, ಪ್ರಾಕೃತ ವಿಶದಸಂಗ್ರಹಃ, ನಿಗಮಪರಿಮಲ ಎಂಬ ಗ್ರಂಥಗಳು ಏತತ್ಕೃತವೆಂದು ಉಕ್ತವಾಗಿದೆ.

ವ್ರದು. ‘ಕಾಲನಿರ್ಣಯ’ವು ಧರ್ಮಗಳನ್ನು ಮಾಡುವ ಕಾಲವನ್ನು ನಿಷ್ಕರ್ಷಿಸುತ್ತದೆ. ‘ಜೀವನ್ಮುಕ್ತಿವಿವೇಕ’ವು ‘ಪರಾಶರಸ್ಮೃತಿವ್ಯಾಖ್ಯಾನ’ದ ಅನುಬಂಧದಂತಿದೆ. ಇದರಲ್ಲಿ ಪರಮಹಂಸರೆಂಬ ಸಂನ್ಯಾಸಿಗಳ ಧರ್ಮವು ಉಕ್ತವಾಗಿದೆ. ಯಜ್ಞಯಾಗಾದಿಗಳ ಕ್ರಮವನ್ನೂ ಅದಕ್ಕೆ ಸಂಬಂಧಪಟ್ಟಿರುವ ವೈದಿಕಪ್ರಕ್ರಿಯೆಗಳನ್ನೂ ವಿವರಿಸುವ ಜೈಮಿನಿಯ ಸೂತ್ರಗಳ ವಿಸ್ತಾರವೇ ‘ಜೈಮಿನೀಯ ನ್ಯಾಯಮಾಲಾವಿಸ್ತರ.’ ಇವುಗಳೆಲ್ಲವೂ ಬುಕ್ಕಮಹಾರಾಜನ ಆಶ್ರಯದಲ್ಲಿ ರಚಿತವಾದುವು. ಮಾಧವಾಚಾರ್ಯನ ಸಹೋದರನಾದ ಸಾಯಣನೂ ವಿದ್ವಾಂಸನೂ ಪ್ರತಿಭಾಶಾಲಿಯೂ ಆಗಿದ್ದುದರಿಂದ ‘ಸುಭಾಷಿತ ಸುಧಾನಿಧಿ’ ‘ಪುರುಷಾರ್ಥ ಸುಧಾನಿಧಿ’ ‘ಪ್ರಾಯಶ್ಚಿತ್ತ ಸುಧಾನಿಧಿ’ ‘ಯಜ್ಞತಂತ್ರ ಸುಧಾನಿಧಿ’ ‘ಅಲಂಕಾರ ಸುಧಾನಿಧಿ’ ‘ವೇದಾರ್ಥಪ್ರಕಾಶ’ ಮೊದಲಾದುವುಗಳನ್ನು ರಚಿಸಿದನು. ಇವುಗಳಲ್ಲಿ ಮೊದಲೆರಡೂ ಪ್ರಾಚೀನ ಮಹನೀಯರ ಉಪದೇಶವಾಕ್ಯಗಳ ಸಂಕಲನ. ‘ಯಜ್ಞತಂತ್ರ ಸುಧಾನಿಧಿ’ಯು ಯಜ್ಞಯಾಗಾದಿಗಳ ಕ್ರಮವನ್ನು ವಿವರಿಸುವ ಗ್ರಂಥ. ‘ಪ್ರಾಯಶ್ಚಿತ್ತ ಸುಧಾನಿಧಿ’ಯು ನಾನಾ ಪಾತಕಗಳ ಪರಿಹಾರಕ್ಕೋಸ್ಕರ ಆಚರಿಸತಕ್ಕ ಸತ್ಕರ್ಮಗಳನ್ನು ಕುರಿತುದು. ಇದಕ್ಕೆ ಕರ್ಮವಿಪಾಕವೆಂಬ ಹೆಸರೂ ಉಂಟು. ‘ಆಯುರ್ವೇದ ಸುಧಾನಿಧಿ’ಯು[15] ವೈದ್ಯಗ್ರಂಥ. ‘ಅಲಂಕಾರ ಸುಧಾನಿಧಿ’ಯು ಕಾವ್ಯಗಳ ಅಂಗಾಂಗಗಳಾದ ಅಲಂಕಾರಗಳ ಸ್ವರೂಪವನ್ನು ವಿವರಿಸುತ್ತದೆ. ಧಾತುವೃತ್ತಿಯು ಸಂಸ್ಕೃತಧಾತುಗಳ ವಿಷಯಕವಾದುದು. ವೇದಗಳ ಅಂತರಾರ್ಥವನ್ನು ಸಾಮಾನ್ಯಲೋಕಕ್ಕೆ ಸಾಂಗವಾಗಿ ವಿಶದಪಡಿಸುವ ವೇದಭಾಷ್ಯವೇ ‘ವೇದಾರ್ಥಪ್ರಕಾಶ.’[16] ಇವುಗಳಲ್ಲಿ ‘ವೇದಾರ್ಥ

[15] ಆಯುರ್ವೇದ ಸುಧಾನಿಧಿಯು ಏಕಾಮ್ರನಾಥನದೆಂದೂ ಈತನ ಮೊಮ್ಮಗನಾದ ಶ್ರೀಶೈಲನಾಥನು ‘ಪ್ರಶ್ನೋತ್ತರ ರತ್ನಮಾಲೆ’ಯೆಂಬ ವೈದ್ಯಗ್ರಂಥವನ್ನು ರಚಿಸಿರುವನೆಂದೂ ಈಚೆಗೆ ತಿಳಿದುಬಂದಿದೆ.

[16] ವೇದಭಾಷ್ಯವು ಮಾಧವಸಾಯಣ ಕೃತವೆಂದು ಪ್ರತೀತಿಯಿದ್ದರೂ ಅದು ಅನೇಕ ವಿದ್ವಾಂಸರು ಅವಿಚ್ಛಿನ್ನವಾಗಿ ದುಡಿದುದರ ಫಲವೆಂದು ಘಂಟಾಘೋಷವಾಗಿ ಹೇಳಬಹುದು. ಸಾಯಣನೇ ತನ್ನ ವ್ಯಾಖ್ಯಾನಮಧ್ಯದಲ್ಲಿ ತನಗೆ ಪೂರ್ವದಲ್ಲಿದ್ದ ಹಸ್ತಾಮಲಕ, ಗೋಮತಿ, ಧನುಷ್ಕಯಜ್ವ, ಆತ್ಮಾನಂದ, ರಾವಣಭಟ್ಟ, ಭಾಸ್ಕರ, ಹರಿಸ್ವಾಮಿ, ಸ್ಕಾಂದಸ್ವಾಮಿ, ಭಾವಸ್ವಾಮಿ, ಹರದತ್ತ, ವೆಂಕಟಮಾಧವ, ಗೋವಿಂದಸ್ವಾಮಿ, ಉದ್ಗೀತಾಚಾರ್ಯ, ಭಾರತಸ್ವಾಮಿ, ಮಹಿಷನಾರಾಯಣ, ಕಪರ್ದಸ್ವಾಮಿ ಮತ್ತು ಉವಟ ಎಂಬುವರಿಗೆ ತನ್ನ ಋಣವನ್ನು ಒಪ್ಪಿಕೊಂಡಿದ್ದಾನೆ. ಅಲ್ಲದೆ ಸಾಯಣನಿಗೆ ಭಾಷ್ಯರಚನಾಕಾರ್ಯದಲ್ಲಿ ಪಂಚಾಂಗೀಮಾಧವ ನರಹರಿಸೋಮಯಾಜಿ, ನಾರಾಯಣವಾಜಪೇಯಿ, ಪಂಡರೀದೀಕ್ಷಿತ, ನಾಗಾಭರಣ ವಾಮನಭಟ್ಟ ಮೊದಲಾದವರು ಸಮಷ್ಟಿದೃಷ್ಟಿಯಿಂದ ತಮ್ಮ ವ್ಯಕ್ತಿತ್ವವನ್ನು ದೂರಮಾಡಿ ಸಹಾಯಮಾಡಿರುವುದಾಗಿ ಖಚಿತವಾಗಿ ತಿಳಿದುಬರುತ್ತದೆ.

ಪ್ರಕಾಶ'ದ ರಚನೆಗೆ ಬುಕ್ಕಮಹಾರಾಯನೇ ಕಾರಣಭೂತನೆಂಬುದು ವೇದಭಾಷ್ಯದ ಮುಂದಿನ ಪ್ರಸ್ತಾವನೆಯ ಶ್ಲೋಕಗಳಿಂದಲೂ ಆಶ್ವಾಸಾಂತ್ಯವಾಕ್ಯದಿಂದಲೂ ವಿಶದ ಪಡುವುದು.

ಯತ್ಕಟಾಕ್ಷೇಣ ತದ್ರೂಪಂ ದಧದ್ಬುಕ್ಕಮಹೀಪತಿಃ
ಆದಿಶನ್ಮಾಧವಾಚಾರ್ಯಂ ವೇದಾರ್ಥಸ್ಯಪ್ರಕಾಶನೆ|
ಯೇ ಪೂರ್ವೋತ್ತರಮೀಮಾಂಸೆ ತೇವ್ಯಾಖ್ಯಾಯಾತಿ ಸಂಗ್ರಹಾತ್
ಕೃಪಾಲುರ್ಮಾಧವಾಚಾರ್ಯಃ ವೇದಾರ್ಥಂವಕ್ತುಮುದ್ಯತಃ||

ಇತಿ ಸಾಯಣಾಚಾರ್ಯ ವಿರಚಿತೇ ಮಾಧವೀಯೇ ವೇದಾರ್ಥಪ್ರಕಾಶೇ, ಇತ್ಯಾದಿ.

'ಪ್ರಾಯಶ್ಚಿತ್ತ ಸುಧಾನಿಧಿ' 'ಅಲಂಕಾರ ಸುಧಾನಿಧಿ' 'ಧಾತುವೃತ್ತಿ' ಇವು ಸಂಗಮರಾಜನ ಆಶ್ರಯದಲ್ಲಿ ರಚಿತವಾದುವು.[17] 'ಯಜ್ಞತಂತ್ರ ಸುಧಾನಿಧಿ'ಯೂ ಅಥರ್ವವೇದ ಮತ್ತು ಶತಪಥಬ್ರಾಹ್ಮಣಭಾಷ್ಯವೂ ಇಮ್ಮಡಿ ಹರಿಹರನ ಕಾಲದಲ್ಲಿ ಮುಗಿದವು. ಮಾಧವನ ಮತ್ತೊಬ್ಬ ಸಹೋದರನಾದ ಭೋಗನಾಥ ಕವಿಯು ಸಂಗಮರಾಜನ ನರ್ಮ ಸಚಿವನಾಗಿದ್ದುಕೊಂಡು ವೇದಶಾಸ್ತ್ರಗಳ ಗೋಜಿಗೆ ಹೋಗದೆ ಭಾವನಾಪ್ರಪಂಚದಲ್ಲಿ ಮಗ್ನನಾಗಿ ಮನೋಹರವಾದ ಕಾವ್ಯಗಳನ್ನು ರಚಿಸಿದನು. 'ರಾಮೋಲ್ಲಾಸಂ', 'ತ್ರಿಪುರವಿಜಯಂ', 'ಉದಾಹರಣಮಾಲಾ', 'ಮಹಾಗಣಪತಿ ಸ್ತವಂ', 'ಶೃಂಗಾರಮಂಜರಿ', 'ಗೌರೀನಾಥಾಷ್ಟಕಂ' ಇವು ಆರೂ ಭೋಗನಾಥ ಕೃತವಾದುವು. ಭೋಗನಾಥನು ಸ್ವತಃ ಕವಿಯಾಗಿದ್ದುದಲ್ಲದೆ ಇತರ ಪಂಡಿತರನ್ನು ಪರೀಕ್ಷೆಮಾಡುವಷ್ಟು ದಕ್ಷನೂ ಅವರಿಗೆ ಆಶ್ರಯಕೊಡುವಷ್ಟು ಉದಾರಿಯೂ ಆಗಿದ್ದನು. ಸಾಯಣಪುತ್ರನಾದ ಮಾಧವನು ಅಥವಾ ಸಾಯಣಮಾಧವನು ಈ ಕಾಲದ ಮತ್ತೊಬ್ಬ ವಿದ್ವಾಂಸ. ಈತನು 'ಸರ್ವದರ್ಶನ ಸಂಗ್ರಹ'ವೆಂಬ ಗ್ರಂಥವನ್ನು ಕಂಪಣ್ಣ ಒಡೆಯರ ಆಶ್ರಯದಲ್ಲಿ ರಚಿಸಿದನು.

ಸಶೇಷ

ಎನ್. ಅನಂತರಂಗಾಚಾರ್.

---

17. ಇಂಡಿಯನ್ ಆಂಟಿಕ್ವೆರಿ ೧೯೧೬ ಪು. ೨.

ಮೃತ್ತಿಕೆಯ ಮೂರ್ತಿಯನು ಮಾಡಿ

ಮೃತ್ತಿಕೆಯ ಮೂರ್ತಿಯನು ಮಾಡಿ, ಕಲ್ಪಿತಜೀವ
ಕೊಟ್ಟು, ಮಂಗಳದೈವವೆಂದೆನುತ ಭಕ್ತಿಯಲಿ
ಪೂಜೆಯನು ಸಲ್ಲಿಸುತ ಕೃತಕೃತ್ಯತೆಯ ಪಡೆವ
ಭಕ್ತನಿಗೆ 'ಇದು ಮಣ್ಣು, ಜನವೃಂದ ಕಾಲಿನಲಿ
ಹಲವು ಯುಗಗಳು ತುಳಿದ ತಾಣದಲಿ ಬಿದ್ದಿದ್ದ
ಧೂಳು' ಎನ್ನುವ ಕೀಳುಭಾವ ಬಾರದು. ಭಕ್ತಿ
ತನ್ನ ಜೀವಾತ್ಮವನು ಅದರಲ್ಲಿ ಅರಿತಿದ್ದ
ಕ್ಷಣದಲ್ಲೆ, ಅದು ಪೂರ್ಣಶುದ್ಧತೆಯ ಪರಶಕ್ತಿ
ಪಡೆದು ಮಂಗಳದೇವಿಯಾಯ್ತು. ಗುಡಿಯಲ್ಲಿಂದು
ಪೂಜೆ ಸಲ್ಲುವುದು ದಿನ. ಕೇಳರಾರೂ ಅಲ್ಲಿ
'ಇದು ಮಣ್ಣು, ಪರಿಕಾರ ಪೂಜೆ ಇದಕೇಕೆಂದು'!
ಅಂತು ವಸಂತದ ಮೂರ್ತಿ, ನಿನ್ನ ಕುಲ, ಜನನೆಲ್ಲಿ
ಎನುವ ಚಿಂತೆಯ ಸೋಂಕು ನನಗಿಲ್ಲ. ನೀನೆನ್ನ
ಹೃದಯದೊಲವಲಿ ಮಿಂದು ಪುಟವೆದ್ದ ರಸಚಿನ್ನ !

ಎಸ್. ಅನಂತನಾರಾಯಣ

ಆಂಗ್ಲೇಯರ ಸಾಹಿತ್ಯ ವಿಮರ್ಶೆ

೧

[illegible]

ಗುರುಸ್ಥಾನ. ಮಧ್ಯಮ ಯುಗದಲ್ಲಿನ ಕ್ರೈಸ್ತಧರ್ಮ ಮತ್ತು ಪ್ರಕೃತಿ ವಿಜ್ಞಾನಗಳಿಗೆ ಅವನ ತರ್ಕಶಾಸ್ತ್ರ, ಭೌತಶಾಸ್ತ್ರಗಳೇ ಆಧಾರ. ಧರ್ಮಶಾಸ್ತ್ರದಲ್ಲಿ ಸಂತ ಪಾಲನ ಸ್ಥಾನ ವಾವುದೋ, ಅದನ್ನೇ ಪ್ರಕೃತಿ ಶಾಸ್ತ್ರದಲ್ಲಿ ಅರಿಸ್ಟಾಟಲನು ಹೊಂದಿರುತ್ತಾನೆಂದು ರೋಜರ್ ಬೇಕನ್ ನಂಬಿದ್ದನು. ಪುನರ್ಜೀವನದ ಕಾಲದಿಂದೀಚೆಗೆ ಸಾಹಿತ್ಯಲೋಕ ದಲ್ಲಿ ಅವನು ಕವಿ, ವಿಮರ್ಶಕರಿಗೆ ಶಾಸಕ ಪ್ರಭುವಾದನು. ಭಕ್ತಿಯು ಅದೃಶ್ಯವಾಗು ತ್ತಿರುವ ನಮ್ಮ ಕಾಲದಲ್ಲಿ ಮಾತ್ರವೇ ಅವನ ಗೌರವ ತಗ್ಗುತ್ತಿರುವಂತೆ ಕಾಣುತ್ತದೆ. ಆದರೂ ಪಾಶ್ಚಾತ್ಯರ ಧರ್ಮ, ವಿಜ್ಞಾನ, ಸಾಹಿತ್ಯ, ಸಂಸ್ಕೃತಿಗಳ ಅಧ್ಯಯನಕ್ಕೆ ಅವನ ಸಿದ್ಧಾಂತದ ಅರಿವಂತೂ ಅತ್ಯವಶ್ಯಕ. ಅವನ ದರ್ಶನದ ಪರಿಚಯವಿಲ್ಲದಿದ್ದರೆ ಕ್ರೈಸ್ತ ಧರ್ಮದ ಅನೇಕ ಸೂತ್ರಗಳ, ಕ್ರೈಸ್ತ ಧರ್ಮಾಚಾರ್ಯರಾದ ಆಕ್ವಿನಸ್, ಡಿನ್ಸ್ ಸ್ಕೋಟಸ್ ಮುಂತಾದವರ ವಾದಗಳ ಅರ್ಥವೇ ಸಿಗುವುದಿಲ್ಲ. ಆಧುನಿಕ ವಿಜ್ಞಾನದ ಬೆಳವಣಿಗೆಯಲ್ಲಿ ಬೇಕನ್ ಮತ್ತು ಗೆಲಿಲಿಯೋರ ಗ್ರಂಥಗಳನ್ನು ಓದ ಬೇಕಾದಲ್ಲಿ, ಅರಿಸ್ಟಾಟಲ್ ಪಂಥವನ್ನು ತಿಳಿದಿರಬೇಕು. ಡಾಂಟೆ, ಛಾಸರ್, ಷೇಕ್ಸ್ ಪಿಯರ್ ಮತ್ತು ಮಿಲ್ಟನ್‌ರ ಕಾವ್ಯಗಳ ವ್ಯಾಖ್ಯಾನಕ್ಕೆ ಅರಿಸ್ಟಾಟಲಿನ ದರ್ಶನದ ಜ್ಞಾನ ಅವಶ್ಯಕ. ಇಂದು ಶಬ್ದಾರ್ಥ ಸಂಬಂಧದ ವಿಷಯದಲ್ಲಿ ಪಾಶ್ಚಾತ್ಯರಲ್ಲಿ ನಡೆಯುತ್ತಿರುವ ವಿಪುಲವಾದ ಚರ್ಚೆಯಲ್ಲಿ ಪೂರ್ವಪಕ್ಷ ಅರಿಸ್ಟಾಟಲಿನ ವ್ಯಾಕರಣ ರೀತಿ. ಮತ್ತು ಪಾಶ್ಚಾತ್ಯರಲ್ಲಿನ ದಿನಬಳಕೆಯ "ಸ್ವರ್ಣ ಮಧ್ಯಮ ಮಾರ್ಗ"; "ಲಿಬರಲ್ ಶಿಕ್ಷಣ"; ಸಾಹಿತ್ಯದಲ್ಲಿ "ವಸ್ತು" "ಆಕೃತಿ" ಎಂಬ ವಿಭಾಗ; "ಮುಖ್ಯ" "ಗೌಣ" ಗುಣಗಳೆಂಬ ವಿಭಜನೆ; "ಜ್ಞಾನ ಪ್ರಧಾನ" "ಪ್ರಯೋಗ ಪ್ರಧಾನ"—ಎಂಬ ಪದಗಳ ಅರ್ಥಗೌರವ ಅರಿಸ್ಟಾಟಲಿನ ಗ್ರಂಥಗಳಲ್ಲಿ ಅವುಗಳ ಉಪಯೋಗರೀತಿಯ ಮೇಲೆ ನಿಂತಿದೆ. ಈತನೇ ಪಾಶ್ಚಾತ್ಯ ಸಾಹಿತ್ಯದಲ್ಲಿ ಆದ್ಯ ವಿಮರ್ಶಕ.

೨

ಅರಿಸ್ಟಾಟಲ್ ಹುಟ್ಟಿದ್ದು ಕ್ರಿ.ಪೂ. ೩೮೪ರಲ್ಲಿ, ಸ್ಟಾಗಿರ ಎಂಬ ನಗರದಲ್ಲಿ. ಇವನ ತಂದೆ ಮ್ಯಾಸಿಡಾನಿನ ಅಮಿಂಟಾಸ್ ದೊರೆಯ ಆಸ್ಥಾನ ವೈದ್ಯ; ಇವನ ತಾಯಿಯ ಮನೆತನವೂ ವೈದ್ಯರದೇ. ಆದ್ದರಿಂದ ಪ್ರತಿಯೊಂದು ವಸ್ತುವನ್ನೂ ಜೀವ ಶಾಸ್ತ್ರದ ಕೋಣದಿಂದ ನೋಡುವ ದೃಷ್ಟಿ ಮತ್ತು ವಿಭಜನಾ ಮನೋಭಾವ ಇವನಿಗೆ ರಕ್ತಗತವಾಗಿ ಬಂದಿದ್ದಿತು. ಹದಿನೇಳನೆಯ ವಯಸ್ಸಿನಲ್ಲಿ ಅಥೆನ್ಸಿಗೆ ಹೋಗಿ ಇಪ್ಪತ್ತು ವರ್ಷಗಳ ಕಾಲ ಪ್ಲೇಟೋವಿನ ಗುರುಕುಲದಲ್ಲಿ ಶಿಷ್ಯನಾಗಿಯೂ ಬೋಧಕನಾಗಿಯೂ ಇದ್ದನು. ಅನಂತರ ಐದು ವರ್ಷಗಳ ಕಾಲ ಏಷಿಯಾ ಮೈನರಸಲ್ಲಿದ್ದು, ಆ ಮೇಲೆ

ಏಳು ವರ್ಷಗಳು ಅಲೆಕ್ಸಾಂಡರಿನ ಗುರುವಾಗಿ ಮ್ಯಾಸಿಡಾನಿನಲ್ಲಿ ವಾಸಿಸಿದನು. ಅಥೆನ್ಸಿಗೆ ಕ್ರಿ.ಪೂ. ೩೩೫ ರಲ್ಲಿ ಹಿಂದಿರುಗಿ ಪ್ಲೇಟೋವಿನ ವಿದ್ಯಾಲಯಕ್ಕೆ ಪೂರಕವಾಗಿ ತನ್ನ "ಲೈಸಿಯಮ್"ನ್ನು ಸ್ಥಾಪಿಸಿದನು. ಹತ್ತು ವರ್ಷಗಳ ಮೇಲೆ ಅಲೆಕ್ಸಾಂಡರಿನ ಮರಣಾನಂತರ, ಅಥೆನ್ಸಿನ ಮ್ಯಾಸಿಡನ್ ವಿರೋಧಪಕ್ಷದವರು ಈತನನ್ನು ದೈವದ್ರೋಹಿಯೆಂದು ಶಿಕ್ಷೆಗೆ ಗುರಿಮಾಡಲು ಯತ್ನಿಸಿದರು. ಸೋಕ್ರೆಟಿಸಿನ ಗತಿಯನ್ನು ನೆನೆದು, "ಅಥೆನ್ಸ್ ತತ್ವಶಾಸ್ತ್ರಕ್ಕೆ ಎರಡನೆಯ ಬಾರಿ ಅಪಘಾತ ಮಾಡೀತೆಂದು" ಯೋಚಿಸಿ, ಅರಿಸ್ಟಾಟಲನು ಯೂಬಿಯದ ಕಾಲ್ಕಿಸಿಗೆ ಓಡಿಹೋಗಿ, ಕ್ರಿ.ಪೂ. ೩೨೨ ರಲ್ಲಿ ತನ್ನ ಅರವತ್ತು ನಾಲ್ಕನೆಯ ವಯಸ್ಸಿನಲ್ಲಿ ಕಾಲವಾದನು.

ಅರಿಸ್ಟಾಟಲ್ ಹುಟ್ಟಿದಾಗ ಸೋಕ್ರೆಟಿಸ್ ಸತ್ತು ಇನ್ನೂ ಇಪ್ಪತ್ತು ವರ್ಷಗಳಾಗಿರಲಿಲ್ಲ; ಇವನು ಸತ್ತದ್ದು ಕೆರೋನಿಯ ಯುದ್ಧಕ್ಕೆ ಇಪ್ಪತ್ತು ವರ್ಷಗಳಿರುವಾಗಲೇ. ಇವನ ಕಾಲಕ್ಕಾಗಲೇ ಗ್ರೀಸ್ ತನ್ನ ಉಚ್ಛ್ರಾಯ ದೆಸೆಯನ್ನು ದಾಟಿತ್ತು; ಆದರೆ ಕ್ಷೀಣದೆಸೆಗಿನ್ನೂ ಬಂದಿರಲಿಲ್ಲ. ಈ ಮಧ್ಯಕಾಲದಲ್ಲಿ ಗ್ರೀಸಿನ ಶ್ರೇಷ್ಠ ನಿರ್ಮಾತೃಗಳ ಹಿಂಬದಿಯಲ್ಲಿ ಬಂದವನು ಗ್ರೀಸಿನ ಶ್ರೇಷ್ಠ ವಿಮರ್ಶಕ ಅರಿಸ್ಟಾಟಲ್. ಆ ಕಾರ್ಯಕ್ಕೆ ಬೇಕಾದ ಸಾಧನಸಂಪತ್ತು ಅವನಲ್ಲಿ ಒಂದು ಅಭೂತಪೂರ್ವವಾದ ರೀತಿಯಲ್ಲಿದ್ದಿತು. ಇವನ ಅಧಿಭೌತಶಾಸ್ತ್ರದ ಆರಂಭ ವಾಕ್ಯ: "ಎಲ್ಲಾ ಮನುಷ್ಯರೂ ತಿಳಿಯಬೇಕೆಂದು ಸ್ವಾಭಾವಿಕವಾಗಿಯೇ ಆಶಿಸುತ್ತಾರೆ." ಈ ಜಿಜ್ಞಾಸೆಯನ್ನು ಆದಷ್ಟು ಕಾರ್ಯಗತಮಾಡಲು ಪ್ರಯತ್ನಿಸಿದನು. ಓದುವುದರಲ್ಲಿ ಇವನ ಆಸಕ್ತಿ ಎಷ್ಟಿತ್ತೆಂದರೆ, ಇವನ ಮನೆಗೆ "ಓದುಗನ ಮನೆ" ಎಂಬ ಹೆಸರು ಪ್ರಚಾರದಲ್ಲಿತ್ತಂತೆ. ಪಠನಕ್ಕೆ ಕೊಟ್ಟ ಬೆಲೆಗಿಂತ ಹೆಚ್ಚು ಬೆಲೆಯನ್ನು ಪ್ರಯೋಗಕ್ಕೆ ಕೊಟ್ಟಿದ್ದನು. ಸ್ವತಃ ಪದ್ಯಗಳನ್ನು ಬರೆದಿದ್ದನಂತೆ; ವಾದ್ಯ ನುಡಿಸುವುದರಲ್ಲೂ ಕುಶಲ. ಅವನ ಭಾಷೆಯೂ ಕೂಡ ಗಂಭೀರವೂ ಶಾಸ್ತ್ರೀಯವೂ ರಮ್ಯವೂ ಆಗಿತ್ತೆಂದು ಸಿಸಿರೋ ಹೊಗಳುತ್ತಾನೆ; ಈಗಲೂ ಅದು ಅನುಕರಣೀಯವೆಂದು ಸೋಮರ್‌ಸೆಟ್ ಮಾಮ್ ಅನ್ನುತ್ತಾನೆ.

ಅರಿಸ್ಟಾಟಲಿನ ಜ್ಞಾನ ಸಾಮ್ರಾಜ್ಯವಾದರೋ ಅತಿ ವಿಶಾಲವಾದುದು. ತತ್ತ್ವಶಾಸ್ತ್ರ (ಅಧಿ ಭೌತ ಮತ್ತು ನೈತಿಕ) ತರ್ಕ, ಧರ್ಮ, ಭಾಷಣ ಕಲೆ, ಕಾವ್ಯ, ನಾಟಕ, ರಾಜನೀತಿ, ಇತಿಹಾಸ, ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ, ಆಕಾಶ ವಿಜ್ಞಾನ (Meteorology)—ಇವೆಲ್ಲದರ ಮೇಲೆ ಅವನು ಶಾಸ್ತ್ರೀಯವಾದ ಗ್ರಂಥಗಳನ್ನು ಬರೆದಿದ್ದಾನೆ. ಆಗಿನ ಕಾಲದಲ್ಲಿ ಪ್ರಚಾರದಲ್ಲಿದ್ದ ಶಾಸ್ತ್ರ, ವಿದ್ಯೆ, ಕಲೆಗಳಷ್ಟನ್ನೂ ಅರಿತು, ಅವುಗಳನ್ನು ಕ್ರೋಢೀಕರಿಸಿ ತನ್ನ ವಿಚಾರನಿಕಷದಲ್ಲಿ ಅವುಗಳನ್ನು ನಿಷ್ಪಕ್ಷ

ಪಾತದಿಂದ ಪರೀಕ್ಷಿಸಿ ನಮ್ಮ ಮುಂದಿಡುತ್ತಾನೆ. ಆದ್ದರಿಂದಲೇ ಈತನಿಗೆ "ಸರ್ವ ಶಾಸ್ತ್ರ ವಿಶಾರದ", "ಬಲ್ಲಿದರ ಗುರು"ವೆಂಬ ಗೌರವಗಳಿದ್ದುವು; ಮತ್ತು ಈತನ ಗ್ರಂಥಗಳಿಗೆ ಧರ್ಮಗ್ರಂಥಗಳ ಸ್ಥಾನವಿದ್ದಿತು; ಅನೇಕ ವೇಳೆ ಆ ಗ್ರಂಥ ಗಳು ಆ ಶಾಸ್ತ್ರಗಳ ಆದಿ ಗ್ರಂಥಗಳೂ ಆದುವು. ಇವುಗಳಲ್ಲಿ ಅವನ "ಕಾವ್ಯ ಮೀಮಾಂಸೆ"ಯೂ ಒಂದು. "ಅದು ಪಾಶ್ಚಾತ್ಯಸಾಹಿತ್ಯವಿಮರ್ಶೆಯ ಆದಿಗ್ರಂಥ; ಅದನ್ನು ಬರೆದವನಾದರೋ ಪ್ರಪಂಚದ ಮೊದಲನೆಯ ವಿಜ್ಞಾನಿ."

೩

ಅರಿಸ್ಟಾಟಲಿನ ಗ್ರಂಥಗಳಲ್ಲಿ ಸಾಹಿತ್ಯವಿಮರ್ಶೆಗೆ ಸಂಬಂಧಪಟ್ಟವು ಅವನ 'ಭಾಷಣ ಶಾಸ್ತ್ರ' (Rhetoric) ಮತ್ತು 'ಕಾವ್ಯಮೀಮಾಂಸೆ' (Poetics). ಅವನು ಕವಿಗಳನ್ನು ಕುರಿತು ಮತ್ತೊಂದು ಗ್ರಂಥವನ್ನು ಬರೆದಿದ್ದನಂತೆ. ಆದರೆ ಅದು ಲಬ್ಧವಾಗಿಲ್ಲ. ಇವೆರಡರಲ್ಲಿ ಪ್ರಮುಖವಾದುದು 'ಕಾವ್ಯಮೀಮಾಂಸೆ.'

'ಕಾವ್ಯಮೀಮಾಂಸೆ'ಯ ಗ್ರಂಥದ ವಿಷಯವಾಗಿಯೇ ಅನೇಕ ವಾದವಿವಾದ ಗಳಿವೆ. ಅದು ಅರಿಸ್ಟಾಟಲಿನ ಬರಹವೇ ಅಥವಾ ಅವನು ಪಾಠಹೇಳುತ್ತಿದ್ದಾಗ ಅವನ ಶಿಷ್ಯನೊಬ್ಬನು ಬರೆದುಕೊಂಡ ವಿಷಯಗಳ ಸಂಕಲನವೇ? ಈಗಿರುವ ಗ್ರಂಥ ದಲ್ಲಿ ಎಲ್ಲಾ ಅರಿಸ್ಟಾಟಲಿನದೇ ಅಥವಾ ಕೆಲವು ಭಾಗಗಳೇನಾದರೂ ಪ್ರಕ್ಷಿಪ್ತಗಳೇ? ಸಿಕ್ಕಿರುವ ಗ್ರಂಥ ಪೂರ್ಣವಾಗಿದೆಯೇ ಅಥವಾ ಇನ್ನೂ ದೊಡ್ಡದಾಗಿದ್ದ ಗ್ರಂಥದ ಒಂದು ಭಾಗವೇ? ಇದರ ರಚನೆಯ ಕಾಲ ಯಾವುದು? ಎಂಬ ಪ್ರಶ್ನೆಗಳು ದೀರ್ಘಕಾಲ ಚರ್ಚಿಸಲ್ಪಟ್ಟಿವೆ. ಅದರ ಫಲವಾಗಿ ಅನೇಕ ವಿಷಯಗಳಲ್ಲಿ ಬಹು ಸಮ್ಮತವಾದ ಅಭಿಪ್ರಾಯವಿದೆ. 'ಕಾವ್ಯಮೀಮಾಂಸೆ'ಯ ಕಾಲ ಸುಮಾರು ಕ್ರಿ.ಪೂ. ೩೩೦ ಎಂದು ನಿಶ್ಚಿತವಾಗಿದೆ. ಅದು ಅರಿಸ್ಟಾಟಲಿನ ಸ್ವಂತ ಬರಹವೇ ಅಥವಾ ಅವನ ಶಿಷ್ಯನದೇ ಎಂಬ ವಿಷಯದಲ್ಲಿ ಸ್ವಲ್ಪ ಸಂದೇಹವಿದ್ದರೂ ಅದರ ಅಭಿಪ್ರಾಯ ಗಳು ಅವನವೇ; ಭಾಷೆಯ ಬಹುಭಾಗವೂ ಅವನದೇ ಎಂದು ವಿದ್ವಾಂಸರ ನಂಬುಗೆ. ನಮಗೆ ಸಿಕ್ಕಿರುವ ಗ್ರಂಥ ಅಪೂರ್ಣವೆಂದೂ, ಅದರ ಎರಡನೆಯ ಭಾಗ ನಾಶವಾಗಿದೆ ಯೆಂದೂ ತೀರ್ಮಾನವಾಗಿದೆ. ಮತ್ತು ಸಿಕ್ಕಿರುವ ಗ್ರಂಥದಲ್ಲೇ ೧೨ ಮತ್ತು ೨೦ ನೆಯ ಅಧ್ಯಾಯಗಳು ಪ್ರಕ್ಷಿಪ್ತಗಳೆಂದು ಎಣಿಸಲ್ಪಟ್ಟಿವೆ.

'ಕಾವ್ಯಮೀಮಾಂಸೆ' ಸುಮಾರು ಐವತ್ತು ಪುಟಗಳಷ್ಟಿರುವ ಚಿಕ್ಕ ಗ್ರಂಥ. ಅಲ್ಲಿ ಸಾಹಿತ್ಯದ ತಾತ್ವಿಕ ಪ್ರಶ್ನೆಗಳಾಗಲೀ ಅದರ ಎಲ್ಲಾ ಪ್ರಕಾರಗಳಾಗಲೀ ಚರ್ಚಿತವಾಗಿಲ್ಲ. ವಿಮರ್ಶಿತವಾಗಿರುವ ಸಾಹಿತ್ಯವೂ ಕೂಡ ಪ್ರಪಂಚದ ಒಂದು ದೇಶದ ಕೆಲವೇ ಶತಮಾನಗಳದು ಮತ್ತು ಅದೂ ಕೂಡ ಆ ಸಾಹಿತ್ಯದ ಸಂಪೂರ್ಣ

ಚರ್ಚೆಯಿಲ್ಲ. ಅರಿಸ್ಟಾಟಲಿನ ಕಾಲಕ್ಕೆ ಗ್ರೀಕ್ ಸಾಹಿತ್ಯ ತನ್ನ ಶಿಖರವನ್ನೇನೋ ಮುಟ್ಟಿತ್ತು. ಆದರೆ ಅರಿಸ್ಟಾಟಲ್ ತನ್ನ ಗ್ರಂಥದಲ್ಲಿ ವಿಶದವಾಗಿ ವಿಮರ್ಶಿಸಿರುವುದು ರುದ್ರನಾಟಕವನ್ನು ಮಾತ್ರ, ಮತ್ತು ಪ್ರಾಸಂಗಿಕವಾಗಿ ಮಹಾಕಾವ್ಯವನ್ನು. ಐದನೆ ಶತಮಾನದ ಗ್ರೀಕ್ ಸಾಹಿತ್ಯದಲ್ಲಿ ರುದ್ರನಾಟಕದಷ್ಟೇ ಔನ್ನತ್ಯವನ್ನು ಪಡೆದಿದ್ದ ಮತ್ತೊಂದು ಸಾಹಿತ್ಯ ಪ್ರಕಾರ ಭಾವಗೀತವಾಗಿದ್ದರೂ ಅರಿಸ್ಟಾಟಲಿನ ಗ್ರಂಥದಲ್ಲಿ ಈಸ್ಕಿಲಸ್, ಸೋಫೋಕ್ಲಿಸರ ಹೆಸರುಗಳಿವೆಯೇ ಹೊರತು ಅಲ್ಕ್‌ಮಾನ್, ಸ್ಯಾಫೋರ ಸುದ್ದಿಯಿಲ್ಲ. ಜಾನಪದ ಸಾಹಿತ್ಯದ, ಗ್ರಾಮಜೀವನದ ಸಾಹಿತ್ಯದ, ವಿಡಂಬನಗಳ ಉಲ್ಲೇಖವಿಲ್ಲ. ವೈನೋದಿಕದ ವಿಷಯವಾಗಿ ಒಂದೆರಡು ಮಾತುಗಳು ಮಾತ್ರ ಇವೆ. ಭಾಷಣ ಶೈಲಿಯನ್ನು ಬಿಟ್ಟು ಉಳಿದ ಗದ್ಯಸಾಹಿತ್ಯದ ವಿಷಯವಿಲ್ಲ. ಆಗಾಮಿ ಸಾಹಿತ್ಯದಲ್ಲಿನ ಡಾಂಟೆ, ವರ್ಡ್ಸ್‌ವರ್ತ್; ಷೇಕ್ಸ್‌ಪಿಯರ್, ಮೋಲಿಯರ್; ಷಾ, ಓನೀಲ್; ಸ್ಕಾಟ್, ಡಿಕನ್ಸ್; ಹಾರ್ಡಿ, ಜಾಯ್ಸ್; ಮಾನ್ತೇಯಿನ್, ಲ್ಯಾಂಬ್; ಮೊಫಾಸಾ, ಮಾಮ್—ಇವರ ಕಾವ್ಯ, ನಾಟಕ, ಕಾದಂಬರಿ, ಪ್ರಬಂಧ, ಸಣ್ಣ ಕಥೆ ಮುಂತಾದುವುಗಳ ವೈವಿಧ್ಯ ಅರಿಸ್ಟಾಟಲನಿಗೆ ಹೊಳೆದಿರಲು ಸಾಧ್ಯವೇ ಇಲ್ಲ. ಇಷ್ಟಲ್ಲದೆ ಅವನ ವಿಮರ್ಶಾರೀತಿಯೂ ಕೂಡ ಸುಲಭಗ್ರಾಹ್ಯವಾಗಿಲ್ಲ. ಅನೇಕ ಅಭಿಪ್ರಾಯಗಳು ತರ್ಕ ಸ್ಥಾಪಿತವಾಗಿರುವ ಬದಲು ಅಧಿಕಾರ ದರ್ಪದಿಂದ ಕೊಡಲ್ಪಟ್ಟಿವೆ. ಕೆಲವು ಅತಿ ಮುಖ್ಯವಾದ ಪದಗಳ ವಿವರಣೆ ಸಾಕಷ್ಟಿಲ್ಲದೆ, ಅವುಗಳ ಸುತ್ತಲೂ ವ್ಯಾಖ್ಯಾನದ ಸುಳಿಗಳು ಹರಡಲು ಅನುಕೂಲವಾಯಿತು. ಗ್ರಂಥ ಮೊದಲಲ್ಲಿ ಆದರಣೀಯವಾಗಿದ್ದರೂ, ಕೊನೆಗೆ ನೀರಸವಾದಂತಿದೆ. ಸ್ವಾಭಿಪ್ರಾಯ ಗಳಲ್ಲೇ ವಿರೋಧಗಳೂ ಕೆಲವು ಕಡೆ ಕಂಡುಬರುತ್ತವೆ. ಆದರೆ ಅಲ್ಪ ಆಕಾರದ ಅಸಂಪೂರ್ಣ ವಿಷಯದ, ಅಸಮರ್ಪಕ ವಿಚಾರದ, ಸಂದಿಗ್ಧ ಶೈಲಿಯ ದೋಷಗಳಿಂದ ಕೂಡಿದ್ದರೂ ಅರಿಸ್ಟಾಟಲಿನ 'ಕಾವ್ಯಮೀಮಾಂಸೆ'ಯು ಪಾಶ್ಚಾತ್ಯ ಸಾಹಿತ್ಯ ವಿಮರ್ಶೆಯ ಮೇಲೆ ಬೀರಿರುವ ಪ್ರಭಾವವನ್ನು ಇನ್ನಾವ ಗ್ರಂಥವೂ ಸರಿಗಟ್ಟಿಲ್ಲ. ಅರಿಸ್ಟಾಟಲಿನ ಸಾಹಿತ್ಯ ತತ್ತ್ವಗಳು ಯೂಕ್ಲಿಡಿನ ಜ್ಯಾಮಿತಿಯ ತತ್ತ್ವಗಳಷ್ಟೇ ಅಚಲವಾದುವುಗಳೆಂದು ಲೆಸ್ಸಿಂಗ್ ಅಭಿಪ್ರಾಯಪಡುತ್ತಾನೆ. ವಿಮರ್ಶಕ ವ್ಯಕ್ತಿ ಯನ್ನವಲಂಬಿಸುವವನು ಅರಿಸ್ಟಾಟಲನನ್ನು ಓದದಿದ್ದರೆ ಮಹತ್ತರ ಹಾನಿಗೆ ಗುರಿ ಯಾಗದಿರುವುದು ಅಸಂಭವ; ಸಾಹಿತ್ಯವಿಮರ್ಶೆಯಲ್ಲಿ ಕೆಲವು ಭಾಗಗಳಲ್ಲಿ ನಾವು ಮುಂದುವರೆದಿದ್ದರೂ, ಉಳಿದ ಬಹುಭಾಗದಲ್ಲಿ ಅರಿಸ್ಟಾಟಲಿನಿಂದ ಆಕ್ರಮಿತವಾದ ಪ್ರದೇಶವನ್ನು ವ್ಯವಸ್ಥೆಯಲ್ಲಿಡುವುದರಲ್ಲೇ ನಾವು ತೊಡಗಿದ್ದೇವೆ; ಮಾನವಕೃತ ಸಿದ್ಧಾಂತಗಳಲ್ಲಿ ಪ್ರತಿಯೊಂದರಲ್ಲೂ ಅರಿಸ್ಟಾಟಲಿಗೆ ಪೂಜ್ಯಸ್ಥಾನವಿದ್ದರೂ, ಸಾಹಿತ್ಯ

ವಿಮರ್ಶೆಯಲ್ಲಿ ಅವನಿಗಿರುವ ಉನ್ನತಸ್ಥಾನ ಇನ್ನಾವುದರಲ್ಲಿಯಾದರೂ ಇದೆಯೇ ಎಂದು ಸಂದೇಹವಾಗುತ್ತದೆ; ಅವನು ವಿಮರ್ಶೆಯ ಅಲೆಕ್ಸಾಂಡರನೇ. ಮತ್ತು ಈ ರಂಗದಲ್ಲಿ ಅವನ ವಿಜಯ, ಇನ್ನೊಂದು ರಂಗದಲ್ಲಿ ಅವನ ಶಿಷ್ಯನ ವಿಜಯದಂತಲ್ಲದೆ, ಇಂದಿನ ವರೆಗೂ ನಶಿಸಿಲ್ಲ ಎನ್ನುತ್ತಾನೆ ಸೆಯಿಂಟ್ಸ್‌ಬರಿ. ವಿಮರ್ಶೆಯಲ್ಲಿ ಅನಾಯಕತ್ವ ತಲೆದೋರಿದಾಗ, ಅರಿಸ್ಟಾಟಲಿನ 'ಕಾವ್ಯಾಮೀಮಾಂಸೆ'ಯ ಯುಕ್ತ ಅಧ್ಯಯನ ಪರಿಹಾರವನ್ನೊದಗಿಸುತ್ತದೆಯೆಂದು ಲೇನ್ ಕೂಪರ್ ಹೇಳುತ್ತಾನೆ. ಅಬರ್ ಕ್ರಾಂಬಿಯ ಅಭಿಪ್ರಾಯದಲ್ಲಿ 'ಕಾವ್ಯಾಮೀಮಾಂಸೆ' ಸಾಹಿತ್ಯದ ತಾತ್ವಿಕವಾದ ಆದ್ಯ ಕೂಲಂಕಷ ಚರ್ಚೆಮಾತ್ರವಲ್ಲ, ಆಗಾಮಿ ಚರ್ಚೆಗಳೆಲ್ಲದರ ಅಡಿಗಲ್ಲು.

ಅರಿಸ್ಟಾಟಲನ 'ಕಾವ್ಯಾಮೀಮಾಂಸೆ'ಗೆ ಈ ಗೌರವ ಸಿಗಲು ಕಾರಣ ಅರಿಸ್ಟಾಟಲಿನ ಅಧ್ಯಯನ ರೀತಿ, ಅವನು ಓದಿದ ಮತ್ತು ವಿಮರ್ಶಿಸಿದ ಸಾಹಿತ್ಯದ ವೈಶಿಷ್ಟ್ಯ ಮತ್ತು ಈ ಗ್ರಂಥರಚನೆಯ ಕಾಲಕ್ಕೆ ಅವನು ಪಡೆದಿದ್ದ ಅನುಭವ, ಗಾಂಭೀರ್ಯ, ಹೃದಯವೈಶಾಲ್ಯ ಮತ್ತು ಬುದ್ಧಿಯ ಪ್ರಗಲ್ಭತೆ. ಈ ಗ್ರಂಥವನ್ನು ಬರೆಯುವ ವೇಳೆಗೆ ಅವನು ತನ್ನ 'ರಾಜನೀತಿ'ಯಲ್ಲಿ ಅಂದು ಗೊತ್ತಿದ್ದ ರಾಜ್ಯಾಂಗ ಗಳನ್ನೆಲ್ಲಾ ಪರೀಕ್ಷಿಸಿದ್ದನು; 'ನೀತಿಶಾಸ್ತ್ರ'ದಲ್ಲಿ ಧರ್ಮನಿಯಮಗಳನ್ನು; 'ಭೌತ ಶಾಸ್ತ್ರ'ದಲ್ಲಿ ಬಾಹ್ಯಪ್ರಕೃತಿಯ ಸ್ವರೂಪವನ್ನು; "ಅಧಿಭೌತಶಾಸ್ತ್ರ"ದಲ್ಲಿ ಜೀವನದ ಆದ್ಯತತ್ವಗಳನ್ನು; "ಜೀವಶಾಸ್ತ್ರ"ದಲ್ಲಿ ಪ್ರಾಣಿಗಳಲ್ಲಿರುವ ಚಿತ್ತತ್ವವನ್ನು ಕುರಿತು ಅಂದಿನ ವರೆಗೆ ನಡೆದಿದ್ದ ವಾದಗಳನ್ನೆಲ್ಲಾ ಪರೀಕ್ಷಿಸಿ ತನ್ನ ಸಿದ್ಧಾಂತವನ್ನು ಸ್ಥಾಪಿ ಸಿದ್ದನು. ಈ ಶಾಸ್ತ್ರಗಳ ಅಭ್ಯಾಸದಿಂದ ನಿಶಿತವಾಗಿದ್ದ ಅವನ ಬುದ್ಧಿ ಸಾಹಿತ್ಯ ವಿಮರ್ಶೆಯಲ್ಲಿಯೂ ತನ್ನ ಪ್ರತಿಭೆಯನ್ನು ವ್ಯಕ್ತಪಡಿಸಿದುದು ಆಶ್ಚರ್ಯವೇನೂ ಅಲ್ಲ. ಅವನ ಅಧ್ಯಯನರೀತಿಯಲ್ಲಿಯೂ ಒಂದು ವಿಶೇಷವಿದೆ. ಪ್ಲೇಟೋವಿನ ಒಲವು ಗಣಿತಶಾಸ್ತ್ರದಲ್ಲಿದ್ದರೆ, ಅರಿಸ್ಟಾಟಲಿನ ಹೃದಯ ಜೀವಶಾಸ್ತ್ರಕ್ಕೆ ಒಲಿದಿತ್ತು. ಆದ್ದ ರಿಂದ ಅವನು ಪ್ರತಿಯೊಂದು ವಸ್ತುವನ್ನೂ ಜೀವಶಾಸ್ತ್ರದ ದೃಷ್ಟಿಯಿಂದ ವೀಕ್ಷಿಸು ತ್ತಿದ್ದನು. ಪ್ಲೇಟೋ ಕೆಲವು ಸಾಮಾನ್ಯ ತತ್ವಗಳನ್ನು ಸ್ವತಸ್ಸಿದ್ಧಗಳೆಂದು ಒಪ್ಪಿ ಅನಂತರ ವಸ್ತುಗಳ ಪರೀಕ್ಷೆಗೆ ಹೊರಟರೆ, ಅದರ ವಿರುದ್ಧಮಾರ್ಗ ಅರಿಸ್ಟಾಟಲಿನದು. ಪ್ರತ್ಯೇಕ ವಸ್ತುಗಳನ್ನು ಮೊದಲು ವಿಮರ್ಶಿಸಿ ಅನಂತರ ಅವುಗಳಲ್ಲಿ ಕಂಡುಬಂದ ಸಾಮಾನ್ಯ ತತ್ತ್ವಗಳನ್ನು ಒಪ್ಪಿಕೊಳ್ಳುತ್ತಾನೆ. ಆದ್ದರಿಂದ ಅವನ ಸಿದ್ಧಾಂತ ನಮ್ಮ ಅನುಭವಕ್ಕೆ ಹತ್ತಿರವಿರುವಂತೆ ಕಾಣುವುದು ಸಹಜ. ಸಾಹಿತ್ಯ ವಿಮರ್ಶೆಯಲ್ಲಿಯೂ ಅವನು ಇದೇ ಮಾರ್ಗವನ್ನು ಅನುಸರಿಸುತ್ತಾನೆ. ತನ್ನ 'ರಾಜನೀತಿ'ಯನ್ನು ಬರೆಯಬೇಕಾದಾಗ, ಪ್ರಭುತ್ವದ ವೈವಿಧ್ಯಗಳ ಮೇಲೆ ಅಂದು ಗೊತ್ತಿದ್ದ ವಿಷಯಗಳನ್ನೆಲ್ಲಾ ಸಂಗ್ರಹಿ

ಸಿದ್ದನು; ಹಾಗೆಯೇ 'ಕಾವ್ಯಮೀಮಾಂಸೆ'ಯಲ್ಲಿ ಕಾವ್ಯ, ನಾಟಕಗಳ ತತ್ತ್ವವನ್ನು ವಿಮರ್ಶಿಸುವ ಮುನ್ನ, ಅಥೆನ್ಸಿನಲ್ಲಿ ಪ್ರದರ್ಶಿತವಾದ ನಾಟಕಗಳ ಪಟ್ಟಿಯೊಂದನ್ನು ತಯಾರಿಸಿದ್ದನಂತೆ; ಅದರಲ್ಲಿ ನಾಟಕಗಳ, ನಾಟಕ ಕರ್ತರ, ನಿರ್ದೇಶಕರ, ನಟರ ಮತ್ತು ಬಹುಮಾನ ಪಡೆದವರ ಹೆಸರುಗಳಿದ್ದುವಂತೆ. ಒಂದು ಪ್ರಾಣಿಯ ಸ್ವಭಾವ ಗೊತ್ತಾಗಬೇಕಾದಲ್ಲಿ ಅದರ ಇಂದಿನ ಸ್ಥಿತಿಯನ್ನು ಮಾತ್ರ ಗಮನಿಸಿದರೆ ಸಾಲದು; ಅದರ ಹುಟ್ಟು, ಬೆಳವಣಿಗೆ, ಅದರ ಪೂರ್ಣರೂಪವೆಲ್ಲವನ್ನೂ ಅವಲೋಕಿಸಬೇಕು. ಈ ಶಾಸ್ತ್ರವಿಧಾನವನ್ನು ನಾವು ಅರಿಸ್ಟಾಟಲಿನ ರುದ್ರನಾಟಕಗಳ ವಿಮರ್ಶೆಯಲ್ಲಿ ಕಾಣಬಹುದು.

ಅರಿಸ್ಟಾಟಲನು ವಿಮರ್ಶಿಸಿದ ಸಾಹಿತ್ಯವಾದರೋ ಕ್ಷಣಭಂಗುರವಾದ ತಾತ್ಕಾಲಿಕ ಸಾಹಿತ್ಯವಲ್ಲ. ಕ್ರಿ.ಪೂ. ಐದನೆಯ ಶತಮಾನದ ಗ್ರೀಕ್ ಸಾಹಿತ್ಯದ ಮಟ್ಟವನ್ನು ಪಾಶ್ಚಾತ್ಯಸಾಹಿತ್ಯ ಅಲ್ಲಿಂದೀಚೆಗೆ ಮುಟ್ಟಿರುವುದು ಎರಡುಸಲಕ್ಕಿಂತ ಹೆಚ್ಚಿಲ್ಲ. ಅಂತಹ ಸಾಹಿತ್ಯಕ್ಕೆ ಅರಿಸ್ಟಾಟಲಿನಂತಹ ಸರ್ವತೋಮುಖ ಪಾಂಡಿತ್ಯ ಪ್ರತಿಭೆಗಳುಳ್ಳ ವಿಮರ್ಶಕನಿದ್ದುದು ಒಂದೇ ಬಾರಿಯೆಂದು ಹೇಳಬಹುದು. ಆದ್ದರಿಂದ ಅರಿಸ್ಟಾಟಲಿನ ಗ್ರೀಸ್ ಸಾಹಿತ್ಯವಿಮರ್ಶೆಯಲ್ಲಿ ಹೊರಬಿದ್ದ ಸಾಹಿತ್ಯಶಾಸ್ತ್ರದ ಸಾಮಾನ್ಯ ತತ್ತ್ವಗಳು ಒಂದಿಲ್ಲೊಂದು ಬಗೆಯಾಗಿ ಸಾಹಿತ್ಯ ಸಾಮಾನ್ಯಕ್ಕೆಲ್ಲಾ ಅನ್ವಿತವಾಗಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಅವನ ತತ್ತ್ವಗಳಷ್ಟೇ ಅಲ್ಲದೆ, ಅವನ ವಿಮರ್ಶಾಮಾರ್ಗವೂ ಕೂಡ ಇಂದಿಗೂ ಸಾಹಿತ್ಯವಿಮರ್ಶೆಯಲ್ಲಿ ಅಷ್ಟೇ ಪ್ರಯೋಜನಕಾರಿಯಾಗಿದೆ.

ಸಶೇಷ

—ಎನ್. ಬಾಲಸುಬ್ರಹ್ಮಣ್ಯ.

ನಮಗಿಲ್ಲ ಸಾವು

೧

ಮೂಡು ಬಾನಂಚಿನಲಿ ರವಿಯುದಯವಾಗುತಿದೆ
ಸುತ್ತಲೆಲ್ಲೆಲ್ಲಿಯೂ ಹೊಂಗದಿರನೆಸೆದು.
ಸುಳಿವ ಗಾಳಿಗೆ ಬಳುಕಿ ಅರೆಬಿರಿದ ಮೊಗ್ಗುಗಳು
ನಗುತಿಹವು ತುಂಬಿಗಳ ಚುಂಬನದೊಳೆಸೆದು.

೨

ಜಗದೆಲ್ಲ ಜೀವಿಗಳನೆಚ್ಚರಿಸಿ ತಂಗಾಳಿ
ತೀಡುತಿಹುದುದಯದೊಳು ನರುಗಂಪನಾಂತು.
ಎಳದಳಿರ ಹಸುರಿನೊಳು ಇಬ್ಬನಿಯ ಮಣಿಗಣವು
ಮುತ್ತುರತ್ನಂಗಳೊಲು ಮಿನುಗುತಿಹವೆಂತು !

೩

ಬಿತ್ತರದ ಬಾನಿನೊಳು ಮೆಲುಮೆಲನೆ ಮೋಡಗಳು
ಹಕ್ಕಿಗಳ ಹಾಡಿನಲಿ ಸಾಗುತಿವೆ ನಲಿದು ;
ಬಂಡುಣುವ ತುಂಬಿಗಳ ಝೇಂಕಾರದೋಂಕಾರ-
ದಾನಂದವೀತಿರೆಯ ತುಂಬುತಿಹುದು.

೪

ಈ ಬಾಳ ತೋಟದಲಿ ಸಿಂಗಾರ ಮಾಟದಲಿ
ಬಂಡುಣಲು ಬಂದಿರುವ ತುಂಬಿಗಳು ನಾವು
ದಿನದಿನವು ಹಾರಾಡಿ ಬಂಡುಂಡು ನಲಿದಾಡಿ
ಹಾಡುವುದೆ ನಮ್ಮಗುರಿ ನಮಗಿಲ್ಲ ಸಾವು !

—ಜಯದೇವ

ಶಿಶು ಶಿವ ಲೀಲೆ

ಬಿಸಿಲಿನ ಮಳೆಯನು ಸುರಿಸಿದ್ದಿತು ಬಾನ್,
ಬೆಂದೆದೆಯಿಂ ಸುಯ್ದಿದ್ದಿತು ನೆಲ ತಾನ್!

ಪ್ರೇಮದ ಪೂರವು ಬತ್ತಿದ ಎದೆಯೊಲು
ಬರಿದಾಗಿದ್ದುದು ಬೀದಿ,
ಕತ್ತೆ ನಾಯಿಗಳು ಎಮ್ಮೆ ಕೋಣಗಳು
ನಿಲಲಾರದಿದ್ದ ಹಾದಿ!

ಕಿಟಕಿಯಾಚೆ ನಾನಿಣಿಕಿ ನೋಡಿದರೆ
ಬರಿಯ ಬಿಸಿಲ ಶರಧಿ!
ತೆರೆದ ಕಣ್ಣು ತೆರೆದಲ್ಲೆ ಸೀದು
ಬರಿ ಕುರುಡನಪ್ಪ ತೆರದಿ!

ಇದ್ದಕಿದ್ದಂತೆ ಕಣ್ಣ ಸೆಳೆದಿತ್ತು
ಅಚ್ಚರಿಯ ನೋಟವೊಂದು,
ಬಿಸಿಲ ಬೇಗೆಯನು ಬೆಳುದಿಂಗಳಾಗಿಸುವ
ದೇವಮಾಟವೊಂದು!

ರಸ್ತೆಯ ಮಧ್ಯದಿ ಶಿಶುವೊಂದಿದ್ದುದು
ಕ್ರೀಡೋನ್ಮಾದದಲಿ;
ತನ್ನ ಆತ್ಮವನು ತಾನೆ ಅರಳಿಸುವ
ಆತ್ಮನಿನಾದದಲಿ!

ಎಲ್ಲ ಗುಣಗಳಸು ಉಳಿದ ಬ್ರಹ್ಮನೊಲು
ಅದರ ಮೈಯೊ ನಗ್ನ!
ಬಿಸಿಲ ಬೇಗೆಯನು ಅರಿಯದಂದದಲಿ
ಅದುವೊ ಕೇಳಿ ಮಗ್ನ!

ಆವ ಸಂತಸಕೊ ಒಮ್ಮೆ ನಗುವುದದು
ಕೈಯ ಚಪ್ಪಾಳೆಯಿಕ್ಕಿ.
ತೋಳನೆತ್ತುತ್ತ ಒಲೆವುದತ್ತಿತ್ತ
ಆ ಚೆಲುವ ಪುಟ್ಟ ಹಕ್ಕಿ!

ನೋಡ ನೋಡುತಿರೆ ದೂಳನೆತ್ತಿತ್ತು
  ಹೂವಿನಂಥ ಕೈಯಿ.
ದೂಳ ಸ್ನಾನವನು ಪಡೆದು ನಲಿಯಿತದೊ
  ಬಂಗಾರದಂಥ ಮೈಯಿ!

ಗಗನ ಗಂಗೆ ಝುರ ಝುರನೆ ಸುರಿದು ಹರ-
  ಮುಡಿಯ ತೊಯ್ಸುವಂತೆ,
ಧೂಳಿ ವರ್ಷ ಶಿಶು ಮೃದುಲ ಕೇಶವನು
  ಕೆಂಬಣ್ಣಗೆಯ್ಸಿತಂತೆ!

ಕುಳಿತು ಸಾಕಾಗಿ ಕುಣಿತ ಬೇಕಾಗಿ
  ತನ್ನ ತಾನೆ ನೆಮ್ಮಿ
ಮೇಲಕೆದ್ದು ಕರವೆರಡ ಚಾಚಿತ್ತು
  ಮುಗಿಲ ಕಡೆಗೆ ಚಿಮ್ಮಿ;

ಒಮ್ಮೆ ತೆಂಕಲಿಗೆ, ಒಮ್ಮೆ ಬಡಗಲಿಗೆ
  ಒಮ್ಮೆ ಪಡುವಣತ್ತಣ್ಗೆ,
ಒಮ್ಮೆ ಬಾನಕಡೆಗೊಮ್ಮೆ ಬುವಿಯ ಕಡೆ-
  ಗೊಮ್ಮೆ ಮೂಡಣತ್ತಣ್ಗೆ,

ಎಸೆಯುತ್ತ ಕೈಯ, ಬಳುಕುತ್ತ ಮೈಯ
  ಕುಣಿಯುತ್ತಲಿತ್ತು ಶಿಶುವು,
  ಮಣಿಯುತ್ತಲಿತ್ತು ಶಿಶುವು.

ಪದವನಿಟ್ಟಲ್ಲಿ ಹಾಲು ಹರಿಯಿತೆನೆ
  ಭ್ರಮಿಸುವಂಥ ಚೆಲುವು;
ಕಣ್ಣಿದಿಟ್ಟಿಯಲೆ ಎದೆಯ ಮೋಹಿಸುವ
  ಗಂಧರ್ವ ಲೋಕದೊಲವು!

ಕೋಟಿ ಕೋಟಿ ಯುಗಕೊಮ್ಮೆ ಕುಣಿವ ಆ
  ಹರನ ನೃತ್ಯಮೂರ್ತಿ,
ಕಂಡಂತೆ ಬಗೆಯು ಮಣಿ ಮಣಿದು ಚಿಂತಿಸಿತು
  ಅದಕೆ ಇದುವೆ ಸ್ಫೂರ್ತಿ?

—ಪ್ರಭುಶಂಕರ.

ವೇದ–ವೇದಾಂತ

(ಗ್ರಂಥಾವಲೋಕನ ಮತ್ತು ತತ್ತ್ವಚಿಂತನ)*

ವೇದ-ವೇದಾಂತಗ್ರಂಥಗಳ ಅನುವಾದ ಮತ್ತು ವಿವರಣಗಳು ಹೊಸಗನ್ನಡದಲ್ಲಿ ಕೆಲಮಟ್ಟಿಗೆ ಆಗಿರುತ್ತವೆ. ಆದರೆ ಹೊಸಮನಸ್ಸಿಗೆ ಅಚ್ಚುಮೆಚ್ಚಾಗುವ ರೀತಿಯಲ್ಲಿ ಕಿರಿಯ ಹೊತ್ತಗೆಗಳ ರೂಪದಲ್ಲಿ ಅವು ಬಂದಿರುವುದು ಕಡಿಮೆ. 'ಪುರುಷ ಸೂಕ್ತ' ಎಂಬ ವೇದಗ್ರಂಥ, 'ಈಶೋಪನಿಷತ್ತು' ಎಂಬ ವೇದಾಂತಗ್ರಂಥ, ಇವೆರಡನ್ನು ಒಂದು ನಿಶ್ಚಿತಕ್ರಮದಲ್ಲಿ ಅನುವಾದಪೂರ್ವಕವಾಗಿ ಯುಕ್ತಿಬದ್ಧವಾಗಿ ವಿವರಿಸಿ ಶ್ರೀ ಡಿ.ವಿ.ಜಿ. ಯವರು ಕನ್ನಡಿಗರ ಆಧ್ಯಾತ್ಮಿಕ ಜ್ಞಾನದ ಬೆಳವಣಿಗೆಗೆ ತಮ್ಮದೊಂದು ಬೆಲೆಯುಳ್ಳ ಕಾಣಿಕೆಯನ್ನು ಸಲ್ಲಿಸಿದ್ದಾರೆ. ಎರಡೂ ಗ್ರಂಥಗಳು ಚಿಕ್ಕವು. ಪ್ರತಿಯೊಂದರಲ್ಲಿ ಹದಿನೆಂಟು ಋಕ್ಕುಗಳು ಇಲ್ಲವೆ ಪದ್ಯಗಳು. ಮಂತ್ರಗಳೆಂದು ಅವುಗಳ ಖ್ಯಾತಿ. ಒಂದು ದೇವದರ್ಶನವನ್ನೂ ಇನ್ನೊಂದು ಜೀವನದರ್ಶನವನ್ನೂ ಕಿರಿದರಲ್ಲಿ ಹಿರಿದಾಗಿ ಮಾಡಿಕೊಡುವ ಅಗಾಧ ಶಕ್ತಿಯುಳ್ಳವು, ಅವು ಶತ-ಶತಕಗಳಿಂದಲೂ ಬ್ರಹ್ಮಜಿಜ್ಞಾಸುಗಳಿಗೆ ಜೀವನಸಾಧಕರಿಗೆ ಸ್ಫೂರ್ತಿ ಕೊಡುತ್ತ ಬಂದಿವೆ. ಸಂಸ್ಕೃತವನ್ನು ಏನೂ ಅರಿಯದ ಅಥವಾ ಸಾಕಷ್ಟು ಅರಿಯದ ಕನ್ನಡಿಗರಿಗೆ ಅವುಗಳ ಸ್ಫೂರ್ತಿಯ ಕಾರಂಜಿಯನ್ನು ಒದವಿಸಿ ಕೊಟ್ಟಿರುವ ಶ್ರೀ ಡಿ.ವಿ.ಜಿ. ಯವರು ವಂದ್ಯರಾಗಿರುತ್ತಾರೆ.

'ವೇದ-ವೇದಾಂತಗ್ರಂಥಗಳು ಅಪೌರುಷೇಯ, ದೇವವಾಣಿ. ಅವನ್ನು ಹೇಳಲು ಕೇಳಲು ಎಲ್ಲರಿಗೆ ಅಧಿಕಾರವಿಲ್ಲ. ಕನ್ನಡಿಸುವುದಂತೂ ದೂರವೇ ಉಳಿಯಿತು' ಎಂಬ ದೃಷ್ಟಿ ಕೆಲವು ಸಂಪ್ರದಾಯನಿಷ್ಠರಲ್ಲಿ ಇನ್ನೂ ಇದೆ. ಅವರಿಗೆ ಇಂಥ ಗ್ರಂಥರಚನೆಯಿಂದ ಸಂತೋಷವಾಗುವುದರ ಬದಲು ಸಂಕಟವೇ ಆಗಬಹುದು, ಆದರೆ ಕಾಲಪಕ್ಷಿ ಬಹುದೂರ ಉಡ್ಡಾಣಮಾಡಿದೆ. ಹಿಂದಿನ ಮತ್ತು ಇಂದಿನ ಜ್ಞಾನಭಾಂಡಾರವು ತಿಳಿಯಬೇಕೆನ್ನುವವರಿಗೆಲ್ಲ ಅವರವರ ನುಡಿಯಲ್ಲಿ ದೊರೆಯಬೇಕು

---

* **ಪುರುಷ ಸೂಕ್ತ** (ಸಂಸ್ಕೃತ ಮೂಲ, ಕನ್ನಡ ಛಾಯಾಪದ್ಯ ಪೀಠಿಕೆ ತಾತ್ಪರ್ಯ ಟಿಪ್ಪಣಿಗಳೊಡನೆ) ಲೇ : ಡಿ.ವಿ.ಜಿ. ; ಪ್ರಕಾಶಕರು : ಕಾವ್ಯಾಲಯ, ಮೈಸೂರು ; ಪು. ೮೦ ; ಬೆಲೆ, ರೂ. ೧-೪-೦.

ಈಶೋಪನಿಷತ್ತು (ಕನ್ನಡ ತಾತ್ಪರ್ಯ ಸಂಗ್ರಹ ಛಾಯಾಪದ್ಯ ಟಿಪ್ಪಣಿಗಳೊಡನೆ) ಲೇ : ಡಿ.ವಿ.ಜಿ. ; ಪ್ರಕಾಶಕರು : ಕಾವ್ಯಾಲಯ, ಮೈಸೂರು ; ಪುಟ. ೮೭ ; ಬೆಲೆ, ೧೨ ಆಣೆ.

ಎಂಬ ಹೊಸ ದೃಷ್ಟಿ ಸಾಕಷ್ಟು ಪ್ರಚುರವಾಗಿದೆ. ಆದರೆ ತಿಳಿಯಬೇಕೆನ್ನುವ ತವಕ ತೀವ್ರವಾದದ್ದಿರಬೇಕು, ಆಯಾ ಜ್ಞಾನಕ್ಕೆ ಅನುಗುಣವಾದ ಮನೋಭಾವ ಬೆಳೆದಿರಬೇಕು. ತಿಳಿಯಲು ಎಲ್ಲರಿಗೆ ಅಧಿಕಾರವಿದ್ದರೂ ತಿಳಿದುಕೊಳ್ಳುವ 'ಅಧಿಕಾರ'ವನ್ನು ಎಲ್ಲರೂ ಪಡೆದಿರಲಾರರು. ಅಥವಾ 'ಅಧಿಕಾರ'ವನ್ನು ಪಡೆಯದಿರುವ ವರೆಗೆ ಎಲ್ಲ ಜ್ಞಾನವು ಎಲ್ಲರಿಗೆ ತಿಳಿಯದು. ಈ 'ಅಧಿಕಾರ'ವೇನು ಎಂಬುದನ್ನು ಶ್ರೀ ಡಿ.ವಿ.ಜಿ. ಯವರು ಎರಡೂ ಪುಸ್ತಕಗಳ ಪ್ರಾರಂಭದಲ್ಲಿ ವಿವರಿಸಿದ್ದಾರೆ. 'ಪುರುಷ ಸೂಕ್ತ'ದಲ್ಲಿ 'ಗ್ರಂಥಾಧಿಕಾರ—ಗ್ರಂಥವಿಚಾರ' ಎಂಬ ಪೀಠಿಕಾಭಾಗದಲ್ಲಿ 'ಈ ಗ್ರಂಥದ ವಿಷಯಕ್ಕೆ ಅನುಗುಣವಾದ ಮನಸ್ಸಿದ್ಧತೆಯೂ ಶೀಲಸಂಸ್ಕಾರವೂ ಯಾರಲ್ಲಿ ಉಂಟೋ ಅವರೇ ಇದಕ್ಕೆ ಅಧಿಕಾರಿಗಳು' ಎಂದು ಹೇಳಿದೆ. ಅವರು ಜಿಜ್ಞಾಸುಗಳಾಗಿರಬೇಕೆಂದೂ ಜಿಜ್ಞಾಸೆಗೆ ಮೊದಲು ದೇಹ, ಇಂದ್ರಿಯ, ಮನಸ್ಸು, ಬುದ್ಧಿ ಈ ನಾಲ್ಕನ್ನು ಸಂಸ್ಕಾರಪಡಿಸಿಕೊಳ್ಳುವುದರ ಮೂಲಕ ಪೂರ್ವಸಿದ್ಧತೆ ಮಾಡಿಕೊಳ್ಳಬೇಕೆಂದೂ ಹೇಳಲಾಗಿದೆ. ಪೂರ್ವಪರಂಪರೆಯಲ್ಲಿ ತತ್ತ್ವವ್ಯಾಸಂಗಕ್ಕೆ ಬೇಕಾದ ನಾಲ್ಕು ಗುಣ ಯೋಗ್ಯತೆಗಳನ್ನು ಹೇಳಿದ್ದಾರೆ: (೧) ನಿತ್ಯಾನಿತ್ಯವಿವೇಕ, (೨) ಭೋಗವಿರಾಗ, (೩) ಶಮದಮಾದಿ ಸಂಯಮ, (೪) ವೇದಶಾಸ್ತ್ರಶ್ರವಣವನ್ನು ವಿಶ್ವಾಸದಿಂದಾರಂಭಿಸುವ ಬುದ್ಧಿ ವೃತ್ತಿ. ಇವುಗಳಿಗೆ 'ಸಾಧನ ಚತುಷ್ಟಯ'ವೆನ್ನುತ್ತಾರೆ. ಇವನ್ನು ವಿವರಿಸಿ 'ಯಾರ ಸಹಜದಲ್ಲಿ ಅಧ್ಯಾತ್ಮಕುತೂಹಲವಿಲ್ಲವೋ, ಯಾರು ತಮ್ಮ ವ್ಯವಹಾರದಲ್ಲಿ ನಿಯಮನಿಷ್ಠೆಗಳನ್ನಿಟ್ಟುಕೊಂಡಿಲ್ಲವೋ, ಯಾರು ತಾತ್ವಿಕದೃಷ್ಟಿಯನ್ನು ಸಂತತಾಭ್ಯಾಸದಿಂದ ಸೂಕ್ಷ್ಮಪಡಿಸಿಕೊಂಡಿಲ್ಲವೋ ಅಂಥವರಿಗೆ ಇಂಥ ಗ್ರಂಥ ನಿಷ್ಪ್ರಯೋಜಕ' ಎಂದು ಲೇಖಕರು ಎಚ್ಚರಿಕೆ ಕೊಟ್ಟಿದ್ದಾರೆ. ಮುಂದೆ 'ಶುಚಿಯೂ ನಿಷ್ಠೆಯೂ ಇಲ್ಲದವರಿಗೆ ವೇದವನ್ನುಪದೇಶಿಸತಕ್ಕದ್ದಲ್ಲವೆಂದು ವೇದದಲ್ಲಿಯೇ ವಿಧಿವಾಕ್ಯಗಳು ಅಲ್ಲಲ್ಲಿವೆ. ಅದಕ್ಕೆ ಕಾರಣ ವೇದವಿದ್ಯೆಯನ್ನು ಬಚ್ಚಿಟ್ಟುಕೊಳ್ಳಬೇಕೆಂದಲ್ಲ, ತಕ್ಕವರಿಗಾಗಿ ಕಾಪಾಡಬೇಕೆಂಬುದು' ಎಂಬ ಸಮರ್ಥನೆಯನ್ನೂ ಮಾಡಿದ್ದಾರೆ. ಇದೇ ಅಭಿಪ್ರಾಯವು ಈಶೋಪನಿಷತ್ತಿನ ಪೀಠಿಕೆಯಲ್ಲಿ ಬಂದಿದೆ.

ಗ್ರಂಥಾಧಿಕಾರವನ್ನು ಕುರಿತು ಲೇಖಕರು ಹೇಳಿದ ಮಾತುಗಳಲ್ಲಿ ಪೂರ್ವಸಂಪ್ರದಾಯದ ವಿಷಯದಲ್ಲಿ ಕೆಲಮಟ್ಟಿಗೆ ಅಸಾಂಪ್ರದಾಯಿಕವಾದ, ಬುದ್ಧಿಗಮ್ಯವಾದ ವಿವರಣೆಯಿರುತ್ತದೆ. ಆಧ್ಯಾತ್ಮಿಕಗ್ರಂಥಗಳನ್ನು ಓದಿ ತಿಳಿದುಕೊಳ್ಳುವವನಲ್ಲಿ ಮನಸ್ಸಿದ್ಧತೆ, ಅಧ್ಯಾತ್ಮಕುತೂಹಲಗಳು ಬೇಕೆಂಬುದು ನಿಜ. ಒಂದು ಬಗೆಯ ಶೀಲಸಂಸ್ಕಾರವೂ ಬೇಕು. ಯಾಕಂದರೆ ಅದಿಲ್ಲದೆ ಮನಸ್ಸಿದ್ಧತೆಯಾಗಲಿ ಅಧ್ಯಾತ್ಮಕುತೂಹಲವಾಗಲಿ ಸ್ಥಿರವಾಗಿ ನಿಲ್ಲದು. ಇಷ್ಟುಮಟ್ಟಿಗೆ ಸಂಪ್ರದಾಯದ ವಿವರಣೆ

ಸಮಂಜಸವಾಗಿದೆ. ಆದರೆ ಸಂಪ್ರದಾಯದಲ್ಲಿ ಸಾಮಾನ್ಯವಾಗಿ ಜನ್ಮ ಮತ್ತು ಧಾರ್ಮಿಕ ಸಂಸ್ಕಾರಗಳನ್ನು ಅವಲಂಬಿಸಿರುವ ಅಧಿಕಾರವು ಈ ವಿಶಾಲಭೂಮಿಕೆಗೆ ಹೊಂದಿಕೊಳ್ಳುವುದಿಲ್ಲ. ಈ ಅಂಶದಲ್ಲಿ ಲೇಖಕರ ವಿವರಣೆ ಅಸಾಂಪ್ರದಾಯಿಕವೆನ್ನಬಹುದು. ಸಾಧನ ಚತುಷ್ಟಯವನ್ನು ಸಹ ಸಾಂಪ್ರದಾಯಿಕ ಅರ್ಥದಲ್ಲಿ ತೆಗೆದುಕೊಂಡರೆ ತೀರ ಸ್ವಲ್ಪ ಜನರಿಗೆ ಗ್ರಂಥಾಧಿಕಾರವು ದೊರೆಯುತ್ತದೆ. ಲೇಖಕರು ಜಾಣ್ಮೆಯಿಂದ ಅದನ್ನು ವಿವರಿಸಿ ಅದರಲ್ಲಿಯೂ ಸಾರಭೂತವಾದ ಅಂಶಗಳನ್ನು ತಮ್ಮ ಗ್ರಂಥಾಧಿಕಾರ ನಿಯಮಗಳಲ್ಲಿ ಸೇರಿಸಿದ್ದಾರೆ. ಇಷ್ಟಾದರೂ 'ವ್ಯವಹಾರದಲ್ಲಿ ನಿಯಮನಿಷ್ಠೆ' ಎಂಬ ಪದವು ಸಂಪ್ರದಾಯದ ಆಚಾರಧರ್ಮದತ್ತ ಒಲಿಯುತ್ತದೆ. ಈ ಆಶಯವು ಮಾತ್ರ ಲೇಖಕರಲ್ಲಿದ್ದರೆ ಗ್ರಂಥಾಧಿಕಾರವು ಇಪ್ಪತ್ತನೆಯ ಶತಮಾನದಲ್ಲಿ ಬಹು ಮರ್ಯಾದಿತವಾಗುವುದು. ಮೊದಲು ಅವರು ಉಪಯೋಗಿಸಿದ 'ಶೀಲಸಂಸ್ಕಾರ' ಎಂಬ ಸರ್ವಸಾಮಾನ್ಯ ಪದವೇ ಹೆಚ್ಚು ಒಳ್ಳೆಯದೆಂದು ನಮಗೆ ತೋರುತ್ತದೆ. ಒಟ್ಟಿನಲ್ಲಿ ಪ್ರಜಾಪ್ರಭುತ್ವದ ಕಾಲದಲ್ಲಿ ಪ್ರಚಲಿತವಾಗಿರುವ ಅಧಿಕಾರವು ಪ್ರತಿವ್ಯಕ್ತಿಗೆ ಸಲ್ಲತಕ್ಕದ್ದಾದರೂ ಆ ಅಧಿಕಾರವನ್ನು ಉಪಯೋಗಿಸಲು ನಮ್ಮ ಆಧ್ಯಾತ್ಮಿಕ ಪರಂಪರೆಯಲ್ಲಿ ನಡೆದುಬಂದಿರುವ 'ಅಧಿಕಾರ'ವನ್ನು ಪ್ರತಿ ವ್ಯಕ್ತಿ ಪಡೆಯಬೇಕಾಗುತ್ತದೆ. ವಿಶಾಲವಾದ ಅರ್ಥದಲ್ಲಿ ಇದನ್ನು ಗ್ರಂಥಾವಲೋಕನಕ್ಕೂ ಇತರ ವಿಷಯಗಳಿಗೂ ಅನ್ವಯಗೊಳಿಸಬಹುದು.

ಈ ಎರಡೂ ಕಿರಿಹೊತ್ತಗೆಗಳಲ್ಲಿ ಒಂದು ಸಮಾನಕ್ರಮವಿದೆ. ಪೀಠಿಕಾಭಾಗ ಮತ್ತು ಗ್ರಂಥಭಾಗ ಎಂದು ಎರಡರಲ್ಲಿಯೂ ಎರಡು ಭಾಗಗಳಿದ್ದು ಪೀಠಿಕಾಭಾಗದಲ್ಲಿ ತಾತ್ಪರ್ಯಸಂಗ್ರಹವೂ ಗ್ರಂಥಭಾಗದಲ್ಲಿ ಸಂಸ್ಕೃತಮೂಲ, ಕನ್ನಡ ಛಾಯಾಪದ್ಯ, ಟಿಪ್ಪಣಿಗಳೂ ಇರುತ್ತವೆ. 'ಪುರುಷ ಸೂಕ್ತ'ದ ಕೊನೆಯಲ್ಲಿ ಚಾತುರ್ವರ್ಣ್ಯವ್ಯವಸ್ಥೆಯನ್ನು ಕುರಿತು ಒಂದು ಅನುಬಂಧವಿರುತ್ತದೆ. ಈಶೋಪನಿಷತ್ತಿನ ಪೀಠಿಕಾಭಾಗದಲ್ಲಿ ಉಪನಿಷದ್ವಿಚಾರವಾಗಿ ಸಾಮಾನ್ಯ ಪರಿಚಯವಿರುತ್ತದೆ. ಎರಡರಲ್ಲಿಯೂ ಬಂದಿರುವ ಪದ್ಯರೂಪವಾದ ಕನ್ನಡ–ಅನುವಾದಗಳು ಕನ್ನಡಕ್ಕೆ ವಿಶೇಷವಾದ ಕಾಣಿಕೆಗಳಾಗಿರುತ್ತವೆ. ಈ ವರೆಗೆ ಮಂತ್ರಗಳನ್ನು ಗದ್ಯರೂಪದಲ್ಲಿ ಅನುವಾದಿಸಿರುವುದುಂಟು. ಪದ್ಯರೂಪದಲ್ಲಿ ಅವನ್ನು ಅನುವಾದಿಸಬೇಕೇ, ಅದಕ್ಕೆ ಅಧಿಕಾರಿಗಳು ಯಾರು ಎಂಬ ಪ್ರಶ್ನೆ ಸಾಂಪ್ರದಾಯಿಕರಲ್ಲದವರ ಮನಸ್ಸಿನಲ್ಲಿಯೂ ಏಳಬಹುದು. ಕನ್ನಡದಲ್ಲಿ ಅವುಗಳ ಅರ್ಥ ತಿಳಿಸುವುದು ಮಾತ್ರ ಉದ್ದೇಶವಾಗಿದ್ದರೆ ಗದ್ಯವು ಈ ಕೆಲಸ ಮಾಡುತ್ತದೆ, ಹೆಚ್ಚು ಸ್ಫುಟವಾಗಿ ಮಾಡುತ್ತದೆ. ಮೂಲದ ಗಾಂಭೀರ್ಯ, ಸಾಮರ್ಥ್ಯ, ಗೂಢಶಕ್ತಿಗಳನ್ನು ಒಳಗೊಳ್ಳಲು ಪದ್ಯಾನುವಾದ ಬೇಕೆಂದು ತೋರ

ಬಹುದು. ಆದರೆ ಅದು ಎಷ್ಟು ಮಟ್ಟಿಗೆ ಸಾಧ್ಯ ಎಂಬುದನ್ನು ಯೋಚಿಸಬೇಕು. ಮಂತ್ರಗಳನ್ನು ಮಂತ್ರದ್ರಷ್ಟಾರರು ಕಂಡು ನುಡಿಯಲ್ಲಿ ಕಂಡರಿಸಿದಂತೆ ಎಂಥ ಅನುವಾದಕಾರನೂ ಕನ್ನಡಿಸಲಾರನು. ಒಂದು ಭಾಷೆಯಲ್ಲಿಯ ಮಂತ್ರ ಇನ್ನೊಂದ ರಲ್ಲಿ ಭಾಷಾಂತರಗೊಳ್ಳಬಹುದು, ಹೊಸ ಮಂತ್ರ ಅಥವಾ 'ಮಂತ್ರಾಂತರ'ವಾಗ ಲಾರದು. ಅದೇಕೆ, ಕೆಲವು ಸಲ ಭಾಷಾಂತರದಲ್ಲಿ ಭಾವಾಭಾಸವು ಉಂಟಾಗಬಹುದು, ಮೂಲದಲ್ಲಿ ಗೂಢವಾದದ್ದು ಅನುವಾದದಲ್ಲಿ ಅನಾವಶ್ಯಕವಾಗಿ ಅತಿಸ್ಪಷ್ಟವಾಗ ಬಹುದು, ಮೂಲದಲ್ಲಿ ಸ್ಪಷ್ಟವಾದದ್ದು ಅನುವಾದದಲ್ಲಿ ಕ್ಲಿಷ್ಟವಾಗಬಹುದು. ಇದನ್ನೆಲ್ಲ ಗಮನಿಸಿದರೆ, ಈ ಗ್ರಂಥಕರ್ತರು ಎಷ್ಟೇ ಸಮರ್ಥರಾದರೂ ಗದ್ಯದಲ್ಲಿ ಮಾತ್ರ ಅನುವಾದವನ್ನು ಕೊಡುವುದು ಉಚಿತವಾಗಿತ್ತೆಂದು ನಮಗೆ ತೋರುತ್ತದೆ. ಮಂತ್ರಗಳ ಅನುವಾದ ಎಂಬ ದೃಷ್ಟಿಯನ್ನು ಬದಿಗಿಟ್ಟು ಸಂಸ್ಕೃತ ಪದ್ಯದ 'ಛಾಯಾ ಪದ್ಯ' ಎಂಬುದಾಗಿ ಇಲ್ಲಿಯ ಕನ್ನಡ ಪದ್ಯಗಳನ್ನು ನೋಡಿದರೆ ಅವು ಅರ್ಥವಾಹಿ ಯಾಗಿವೆಯೆಂದು ಒಟ್ಟಿನಲ್ಲಿ ಹೇಳಬಹುದು. ಆದರೆ ಹಳೆಯ ಹೊಸ ವ್ಯಾಕರಣರೂಪ ಗಳ ವಿಷಮಮಿಶ್ರಣವು ಶೈಲಿಯಲ್ಲಿ ಆಗಿದೆ. ಸಂಸ್ಕೃತಪರಿಯದವರಿಗೆ ಅಲ್ಲಲ್ಲಿ ಬರೆವಣಿಗೆ ಪ್ರೌಢವೂ ಸಂಸ್ಕೃತನಿಬದ್ಧವೂ ಆಗಿದೆ. ಪುರುಷ ಸೂಕ್ತ ೩ ನೆಯ ಪದ್ಯದ ಅನುವಾದದಲ್ಲಿ 'ಮುಪ್ಪಾಗ' ಎಂಬ ಪ್ರಯೋಗವು ಮುಕ್ಕಾಲು ಭಾಗ ಎಂಬರ್ಥದಲ್ಲಿ ಇರುವುದೆಂದು ತಿಳಿಯುವುದು ಕಷ್ಟವಾಗುತ್ತದೆ. 'ಈಶಾವಾಸ್ಯ ಮಿದಂ' ಇತ್ಯಾದಿ ಪದ್ಯದ ಅನುವಾದ ಅತಿಯಾಗಿ ಹರಡಿಕೊಂಡಿದೆ. ಅದಕ್ಕೆ ಮೂಲದ ಸೂತ್ರಬದ್ಧತೆಯಾಗಲಿ ಗಾಂಭೀರ್ಯವಾಗಲಿ ಇಲ್ಲ. 'ಈಶನಾವರಿಸಿರ್ಪನೀ ಜಗವನೆಲ್ಲವನು' ಇದಕ್ಕಿಂತ ವಿಕಲ್ಪವಾಗಿ ಕೊಟ್ಟಿರುವ 'ಈಶ್ವರನ ಮನೆಯೊ ಇದು' ಎಂಬುದು ಹೆಚ್ಚು ತಿಳಿಯಾಗಿದೆ. ಎರಡನೆಯ ಪದ್ಯದಲ್ಲಿ 'ನ ಕರ್ಮ ಲಿಪ್ಯತೇ ನರೇ' ಇದರ ಅನುವಾದವಾದ 'ಅಂಟದಘ' ಎಂಬುದು ಕಿವಿಗೆ ಹಿತವಾಗಿ ಕೇಳುವುದಿಲ್ಲ, ಅಚ್ಚ ಕನ್ನಡಿಗನಿಗೆ ಅರ್ಥವಾಗುವುದಿಲ್ಲ. ಮೂಲದ ಛಂದಸ್ಸಿಗಿಂತ ಅಗಲಾದ ಛಂದಸ್ಸನ್ನು ಛಾಯಾಪದ್ಯಕ್ಕೆ ಆರಿಸಿಕೊಂಡಿರುವುದರಿಂದಲೂ ವಿವರಣೆಯ ದೃಷ್ಟಿ ಪ್ರಭಾವಶಾಲಿಯಾಗಿರುವುದರಿಂದಲೂ ಈಶೋಪನಿಷತ್ತಿನ ಛಾಯಾಪದ್ಯಗಳಲ್ಲಿ ಹಲವು ಕಡೆಗೆ ಅತಿ ಹರಡುವಿಕೆ ಎದ್ದು ಕಾಣುತ್ತದೆ; ಛಂದಸ್ಸಿನ, ಯತಿಯ ನ್ಯೂನತೆ ಗಳು ನುಸುಳಿರುತ್ತವೆ.

ಎರಡೂ ಪುಸ್ತಕಗಳಲ್ಲಿ ಬಹು ಮಹತ್ವದ ಭಾಗವೆಂದರೆ ತಾತ್ವಿಕ ವಿವರಣೆಯುಳ್ಳದು. ತಾತ್ಪರ್ಯಸಂಗ್ರಹ, ಟಿಪ್ಪಣಿ, ಚರ್ಚೆ ಇದೆಲ್ಲದರಲ್ಲಿಯೂ ಗ್ರಂಥಕಾರರ ನಿಷ್ಕೃಷ್ಟ ಪಾಂಡಿತ್ಯ, ಪರಿಪಕ್ವ ಅನುಭವವಿವೇಕ, ವಿಚಾರಶೀಲತೆ, ನಿರ್ದುಷ್ಟ ಶಾಸ್ತ್ರಶುದ್ಧ ಶೈಲಿ

ಇವು ಎದ್ದು ಕಾಣುತ್ತವೆ. 'ಪುರುಷ ಸೂಕ್ತ'ದ ಅನುಬಂಧವಾಗಿ ಬಂದಿರುವ ಚಾತುರ್ವರ್ಣ್ಯವ್ಯವಸ್ಥೆಯನ್ನು ಕುರಿತ ಚರ್ಚೆ ಮೇಲಿನ ಎಲ್ಲ ಗುಣಗಳಿಗೆ ಸಾಕ್ಷಿಯಾಗಿದೆ. ಪೌರ್ವಾತ್ಯ ಮತ್ತು ಪಾಶ್ಚಾತ್ಯ ಲೇಖಕರ ಆಧಾರಗಳಿಂದ ಲೇಖಕರು ಈ ವಿಷಯವನ್ನು ಸಮರ್ಥವಾಗಿ ಪ್ರತಿಪಾದಿಸಿದ್ದಾರೆ. ಸನಾತನವಾದ ಹಿಂದೂಧರ್ಮದ ಬುಡಕಟ್ಟೆಂದು ಭಾವಿಸಲಾದ ಚಾತುರ್ವರ್ಣ್ಯವ್ಯವಸ್ಥೆಯಲ್ಲಿಯ ಬುದ್ಧಿಗ್ರಾಹ್ಯವಾದ ಅಂಶಗಳನ್ನು ಬಿಡಿಸಿ ತೋರಿಸಿದ್ದಾರೆ. ಈ ವಿಷಯವಾಗಿ ತಿಳಿವಳಿಕೆ ಪಡೆಯಬಯಸುವವರು ಈ ಅನುಬಂಧವನ್ನು ಅವಶ್ಯವಾಗಿ ಓದಬೇಕು.

ಈಶೋಪನಿಷತ್ತು 'ವೇದದ ಅತ್ಯಂತ ಸಾರಭಾಗಗಳಲ್ಲೊಂದು' ಎಂದೂ 'ಈ ಉಪನಿಷತ್ತಿನ ಉಪದೇಶವು ವೇದಮತಸ್ಥರಿಗೆ ಮಾತ್ರವೇ ಅಲ್ಲದೆ ಎಲ್ಲ ದೇಶಗಳ ಎಲ್ಲ ಮತಗಳ ಜನರಿಗೂ ಗ್ರಾಹ್ಯವಾಗತಕ್ಕದ್ದೆಂದು ಪ್ರಸ್ತುತದ ಅನುವಾದಕಾರನ ನಂಬಿಕೆ' ಎಂದೂ 'ವಿಶ್ವಸಾಮಾನ್ಯ ಮಾನವನಿಗೆ ಮಾರ್ಗದೀಪಕವಾಗಬಲ್ಲದ್ದೆಂಬುದೇ ಈ ಉಪನಿಷತ್ತಿಗಿರುವ ದೊಡ್ಡ ಬೆಲೆ' ಎಂದೂ 'ಪ್ರವೃತ್ತಿ ನಿವೃತ್ತಿಗಳೆರಡರ ಸಮನ್ವಯವನ್ನು ಬೋಧಿಸಿರುವುದೇ ಈಶೋಪನಿಷತ್ತಿನ ವಿಶೇಷಗುಣ' ಎಂದೂ ಲೇಖಕರು ಹೇಳಿದ್ದಾರೆ. ಅವರ ವಿಶಾಲ ಸ್ವತಂತ್ರದೃಷ್ಟಿ ಇಲ್ಲಿ ಕಾಣುತ್ತದೆ. 'ಈ ಪುಸ್ತಕದ ಕನ್ನಡ ಅನುವಾದದಲ್ಲಿ ಆ ಎಲ್ಲ ಟೀಕೆಟಿಪ್ಪಣಿಗಳನ್ನೂ ಉಚಿತಕಂಡಂತೆ ಉಪಯೋಗಿಸಿಕೊಂಡಿದೆ' ಎಂಬುದರಲ್ಲಿಯೂ ಅದು ವ್ಯಕ್ತವಾಗಿದೆ. ಇಂಥ ಗ್ರಂಥದಲ್ಲಿ ಸಾಂಪ್ರದಾಯಿಕದೃಷ್ಟಿಗೆ ಸರಿಹೋಗದಂಥ ಆದರೂ ವಿವರಣಕಾರನ ಸ್ವತಂತ್ರಬುದ್ಧಿಗೆ ಸರಿದೋರುವಂಥ ವಿವರಣೆಗಳು ಒಟ್ಟಿನಲ್ಲಾಗಲಿ ವಿವರದಲ್ಲಾಗಲಿ ಬರುವುದು ಕ್ರಮಪ್ರಾಪ್ತವಾಗುತ್ತದೆ. ಉಪನಿಷತ್ತಿನಂಥ ಗ್ರಂಥವಿವರಣೆಯಲ್ಲಿ ಯಾವೊಂದು ತತ್ತ್ವಸಂಪ್ರದಾಯವನ್ನು ಆಧಾರವಾಗಿಟ್ಟುಕೊಳ್ಳದೆ ಅಥವಾ ಸಾಮಾನ್ಯವಾಗಿ ಸಂಪ್ರದಾಯವೆಂಬುದನ್ನು ಮನ್ನಿಸದೆ ಸ್ವತಂತ್ರಬುದ್ಧಿಯನ್ನು ಎಷ್ಟರ ಮಟ್ಟಿಗೆ ಓಡಿಸಬೇಕು, ಇಂಥ ಗ್ರಂಥವಾಚನಕ್ಕೆ ಅಧಿಕಾರ ಪರಿಮಿತಿಯಿರುವಂತೆ ಗ್ರಂಥಲೇಖನಕ್ಕೂ ಪರಿಮಿತಿಯಿರಬೇಕೇ ಎಂಬ ಪ್ರಶ್ನೆಗಳು ಏಳುತ್ತವೆ. ಈ ವಿಷಯವಾಗಿ ತಮ್ಮ 'ಮರುಮಾತು' ಎಂಬಲ್ಲಿ ಲೇಖಕರು ಹೀಗೆ ಹೇಳಿದ್ದಾರೆ: 'ಸಾಂಪ್ರದಾಯಿಕವಾಗಿ ಬಂದಿರುವ ಅರ್ಥವನ್ನು ಬಿಡಲು ಅದಕ್ಕೆ ಪ್ರಬಲಕಾರಣಗಳಿದ್ದ ಹೊರತು ಹಾಗೆ ಮಾಡತಕ್ಕದ್ದಲ್ಲವೆಂದು ನಾನು ತಿಳಿದುಕೊಂಡಿದ್ದೇನೆ . . . ಬಹುಮುಖವಾಗಿಯೂ ತಳಮುಟ್ಟುವಂತೆಯೂ ಹುಡುಕಿನೋಡದೆ ಸಂಪ್ರದಾಯವನ್ನು ಬಿಡಲಾಗದು' ಆಚಾರ್ಯ ವಿನೋಬಾ ಭಾವೆಯವರ 'ಈಶಾವಾಸ್ಯವೃತ್ತಿ' ಎಂಬ ಗ್ರಂಥವು ಲೇಖಕರ ಕಣ್ಣಿಗೆ ಬಿದ್ದಿತು. 'ಅವರ ಅರ್ಥನಿರ್ಣಯ ಮಾರ್ಗವು ಅನೇಕ ಅಂಶಗಳಿಂದ ನಾನು

ಅನುಸರಿಸಿರುವ ಮಾರ್ಗದಿಂದ ಬೇರೆಯಾಗಿದೆ' ಎಂದು ಅವರಿಗೆ ತೋರಿತು. ಈ ಸಂದರ್ಭದಲ್ಲಿ ಮೇಲೆ ಅವತರಿಸಿದ ವಾಕ್ಯಗಳು ಬಂದಿವೆ. ಸಾಂಪ್ರದಾಯಿಕವಾಗಿ ಬಂದಿರುವ ಅರ್ಥ ಎಂದರೇನು? ಅದು ಒಂದೇ ಇರುವುದೇ? ಅನೇಕ ಕಡೆಗಳಲ್ಲಿ ಅದು ಭಿನ್ನವಾಗಿದೆ, ಅನ್ಯೋನ್ಯ ವಿರೋಧಿಯಾಗಿದೆ. ಮತಾಚಾರ್ಯರೂ ಇತರ ಜ್ಞಾನಿಗಳೂ ಮಾಡಿದ ವಿವರಣೆ ಬೇರೆ ಬೇರೆಯಾಗಿದೆಯೆಂಬುದನ್ನು ಎಲ್ಲರೂ ಬಲ್ಲರು. ಹೀಗಿರುವಾಗ ಭಿನ್ನಭಿನ್ನ ತಾತ್ವಿಕಸಂಪ್ರದಾಯಗಳಲ್ಲಿ ಬಂದಿರುವ ಅರ್ಥ ಎಂದು ತಿಳಿಯಬೇಕೆಂದರೆ ಅದರಲ್ಲಿ ಸರಿದೋರಿದ್ದರೆ ಆಯ್ಕೆ ಎಂಬುದು ಅನಿವಾರ್ಯವಾಗಿ Eclecticism (ಸಾರಸಂಗ್ರಹಪದ್ಧತಿ)ಗೆ ಸಮಾನವಾದ ಧೋರಣೆ ವ್ಯಕ್ತವಾಗುತ್ತದೆ ಮತ್ತು ಸಂಪ್ರದಾಯನಿಷ್ಠೆಯ ಮೂಲ ಉದ್ದೇಶವು ಸಫಲವಾಗುವುದಿಲ್ಲ. ಇನ್ನು 'ಯಾವುದಾದರೊಂದು ಸಂಪ್ರದಾಯದಲ್ಲಿ ಬಂದಿರುವ ಅರ್ಥ' ಎಂದೂ ಪ್ರಬಲ ಕಾರಣಗಳಿದ್ದ ಹೊರತು ಆ ಅರ್ಥವನ್ನು ಬಿಡಕೂಡದು ಎಂದೂ ಲೇಖಕರ ಅಭಿಪ್ರಾಯ ವಿರಬಹುದು. ಈ ಬಗೆಯ ಸಂಪ್ರದಾಯನಿಷ್ಠೆ ಗ್ರಂಥದ ಒಳಭಾಗದಲ್ಲಿ ತೋರಿಬರುವ ಮತ್ತು ಲೇಖಕರ ಮಾತುಗಳಿಂದಲೇ ತಿಳಿಯುವ ಸ್ವತಂತ್ರ ವಿವರಣದೃಷ್ಟಿಗೆ ವಿಸಂಗತವಾಗಿದೆ. ಪ್ರಬಲಕಾರಣಗಳಿರುವ ಮೂಲಕ ಸಾಂಪ್ರದಾಯಿಕ ಅರ್ಥವನ್ನು ಬಿಟ್ಟಿರುವುದರಿಂದ ವಿಸಂಗತಿ ದೋಷವಿಲ್ಲ ಎಂದರೆ ಆಚಾರ್ಯ ಭಾವೆಯವರಂಥ ವಿವರಣಕಾರರು ಬೇರೆ ಅರ್ಥನಿರ್ಣಯಮಾರ್ಗವನ್ನು ಅನುಸರಿಸಿರುವರೆಂದು ಅನ್ನುವ ಕಾರಣವಿಲ್ಲ. ಅವರಾದರೂ ಗ್ರಂಥೋಪದೇಶದ ಸಯುಕ್ತಿಕವಾದ ವಿವರಣೆಗೆ ನೆರವಾಗಲೆಂದು ತಮ್ಮ ದೃಷ್ಟಿಯಿಂದ ಪ್ರಬಲ ಕಾರಣಗಳಿರುವುದರಿಂದಲೇ ಸಾಂಪ್ರದಾಯಿಕ ಅರ್ಥವನ್ನು ಬಿಟ್ಟು ತಮ್ಮ ಅರ್ಥವನ್ನು ಹೇಳಿರಬೇಕು. ಒಟ್ಟಿನಲ್ಲಿ ಪೂರ್ವದಿಂದ ನಡೆದು ಬಂದಿರುವ ಇಲ್ಲವೆ ಅರ್ವಾಚೀನವಾದ ಮತಪಂಥ ಇಲ್ಲವೆ ತತ್ತ್ವಪ್ರಣಾಲಿಗಳಲ್ಲಿ ಯಾವೊಂದರಲ್ಲಿ ಶ್ರದ್ಧೆಯಿಟ್ಟು ಅದನ್ನು ವಿವರಿಸುವ ಕ್ರಮ ಅಥವಾ ಅವುಗಳಲ್ಲಿ ಗ್ರಾಹ್ಯವಾದ್ದನ್ನು ಸ್ವೀಕರಿಸಿ ಅವಶ್ಯಕಂಡಲ್ಲಿ ಸ್ವಂತದೃಷ್ಟಿಗೆ ಯೋಗ್ಯವೆಂದು ತೋರುವ ಸ್ವತಂತ್ರಕ್ರಮ ಇವೆರಡು ಮಾತ್ರ ಸಾಧ್ಯಕ್ರಮಗಳು. ಇವುಗಳಲ್ಲಿ ಎರಡನೆಯ ಸ್ವತಂತ್ರಕ್ರಮವನ್ನೇ ಒಟ್ಟಿನಲ್ಲಿ ಅನುಸರಿಸಿದ ಈ ಗ್ರಂಥಕರ್ತರು ಮೊದಲನೆಯ ಕ್ರಮದ ಹೊಸ ಆವೃತ್ತಿ ಎಂಬಂತೆ ತಮ್ಮ ಪದ್ಧತಿಯನ್ನು ವರ್ಣಿಸಿದ್ದು ಅಷ್ಟು ಸುಸಂಗತವಾದುದಲ್ಲ. ಅದರಿಂದ ಹಳೆಯ ಮಡಿವಂತರಿಗೂ ಸಮಾಧಾನವಿಲ್ಲ, ಹೊಸ ವಿಚಾರವಂತರಿಗೂ ಸಮಾಧಾನವಿಲ್ಲ.

ಈ ಬಗೆಯ ಗ್ರಂಥಲೇಖನಕ್ಕೆ ಅಧಿಕಾರ ಪರಿಮಿತಿ ಇರಬೇಕೆ? ಎಂಬ ಪ್ರಶ್ನೆಯನ್ನು ಆಗಲೆ ಸೂಚಿಸಿದ್ದೆವು. 'ನಾಯಮಾತ್ಮಾ ಬಲಹೀನೇನಲಭ್ಯಃ ನ ಮೇಧಯಾ

ನ ಬಹುನಾ ಶ್ರುತೇನ' ಎಂಬಲ್ಲಿರುವಂತೆ ಆತ್ಮಜ್ಞಾನವಾಗಲಿ ಆತ್ಮವಿಷಯಕ ಗ್ರಂಥಗಳ ವಿವರಣೆಯಾಗಲಿ ಕೇವಲ ಮೇಧಾವಿಗಳಿಗೆ, ಬಹುಶ್ರುತರಿಗೆ ಸಾಧ್ಯವಿಲ್ಲ. ತಪಸ್ಸಿದ್ಧರಾದ ಋಷಿಗಳು, ಈಶ್ವರ ಸಾಕ್ಷಾತ್ಕಾರಹೊಂದಿದ ಯೋಗಿಗಳು ಇಂಥ ವಿವರಣೆಯ ಕಾರ್ಯಕ್ಕೆ ಉತ್ತಮ ಅಧಿಕಾರಿಗಳೆಂಬುದನ್ನು ಅಲ್ಲಗಳೆಯುವಂತಿಲ್ಲ. ಅವರವರು ಕಂಡ ಸತ್ಯವು ವಿವಿಧವಾದರೂ ಅದಕ್ಕಿರುವ ಮಹತ್ವ ಹೆಚ್ಚಿನದು. ಅಂತೇ ಅಂಥವರ ಸತ್ಯದರ್ಶನದ ಅನುಸರಣ—ವಿವರಣ ಇವು ಮಾತ್ರ ಅವರ ಅನುಯಾಯಿಗಳ ಕರ್ತವ್ಯ ಎಂಬ ಶ್ರದ್ಧೆ ಬೆಳೆದುಬಂದಿತು.

ಇಂದು ಆತರದ ಶ್ರದ್ಧೆ ಹೊಸ ವಿದ್ಯಾವಂತರಲ್ಲಿ ಕಡಿಮೆಯಾಗಿದೆ. ಬುದ್ಧಿಯುಕ್ತವಾದ ಶ್ರದ್ಧೆಯ ಮೂಲಕ ಅವರಲ್ಲಿ ಹೊಸ ಶ್ರದ್ಧೆಯನ್ನು ಹುಟ್ಟಿಸಬೇಕಾಗಿದೆ. ವೇದೋಪನಿಷತ್ತುಗಳಲ್ಲಿ ನೆಲೆನಿಂತ ಜೀವನಪೋಷಕವಾದ ಸನಾತನ ತತ್ವಗಳನ್ನು ಯುಕ್ತಿಬದ್ಧವಾಗಿ ವಿವರಿಸಬೇಕಾಗಿದೆ, ಮನಗಾಣಿಸಿಕೊಡಬೇಕಾಗಿದೆ. ಈ ಕಾರ್ಯವನ್ನು ಈ ಕಾಲದ ಜ್ಞಾನಿಗಳೂ ಋಷಿಗಳೂ ಮಾಡುತ್ತಿರುವರು; ವಿದ್ವಾಂಸರೂ ಸಂಸ್ಕೃತಿಸಂಪನ್ನರೂ ಮಾಡುತ್ತಿರುವರು. ಅಂಥ ಶ್ರದ್ಧೆಗೆ ಬುದ್ಧಿಯನ್ನು ದಾಸನನ್ನಾಗಿ ಮಾಡದೆ ಜಾಗೃತ ಮತ್ತು ವಿವೇಕಪೂರ್ಣವಾದ ಬುದ್ಧಿಯ ಬೆಳಕಿನಿಂದ ಹೊಸ ಶ್ರದ್ಧೆಯನ್ನು ಅವರು ಬೆಳಗುತ್ತಿದ್ದಾರೆ. ಸದ್ಯದ ಗ್ರಂಥಕರ್ತರು ವಿದ್ವಾಂಸರು, ವಿಚಾರಸಂಪನ್ನರು ಎಂಬುದು ನಿರ್ವಿವಾದವಾಗಿದೆ. ಜ್ಞಾನಿಗಳ ತರುವಾಯ ಇಂಥ ಗ್ರಂಥಲೇಖನದ ಅಧಿಕಾರವು ಇಂಥವರಿಗೆ ಸಲ್ಲುತ್ತದೆ. ಕೇವಲ ಪಾಂಡಿತ್ಯವುಳ್ಳವರು ಜೀವನಸಾಧನೆಯಿಲ್ಲದೆ ವಿಚಾರವಿವೇಕವಿಲ್ಲದೆ ಈ ಬಗೆಯ ಗ್ರಂಥರಚನೆಗೆ ಅನಧಿಕಾರಿಗಳಾಗುತ್ತಾರೆ ಎಂಬುದನ್ನು ಮಾತ್ರ ಅರಿತಿರಬೇಕು.

ಈಶೋಪನಿಷತ್ತು ನಿಚ್ಚಳವಾದ ಪರಿಪೂರ್ಣ ದರ್ಶನದಿಂದ ಹೊರಹೊಮ್ಮಿದ ಮಂತ್ರಪುಂಜವಾಗಿದೆ. ಆ ದರ್ಶನಕ್ಕೆ ಅನುಭವದಿಂದ ಏರದ ಅಥವಾ ಊಹೆಯಿಂದ ನಿಲುಕದ ಚಿತ್ರವನ್ನು ಅದರ ಸರಳೋಕ್ತಿಗಳು ಕೂಡ ದಿಗಿಲುಗೊಳಿಸುತ್ತವೆ. ಪ್ರವೃತ್ತಿ-ನಿವೃತ್ತಿ, ಕರ್ಮ-ಜ್ಞಾನ, ತ್ಯಾಗ-ಭೋಗ ಇವುಗಳ ಸಮನ್ವಯದ ಸಮ್ಯಕ್ತ್ವವು ಈ ಉಪನಿಷತ್ತಿನಲ್ಲಿರುವುದೆಂದು ಸಾಮಾನ್ಯವಾಗಿ ಎಲ್ಲರಿಗೆ ತೋರುತ್ತದೆ. ಆದರೆ ಅದು ಪ್ರತಿಪದ್ಯದ ವಿವರದಲ್ಲಿ ಹೇಗೆ ಮೂಡಿದೆ ಎಂಬುದರ ಬಗ್ಗೆ ಐಕಮತ್ಯವಿಲ್ಲ. ತಮಗೆ ಸಂಮತವಾದ ತತ್ವಪ್ರಣಾಲಿಯನ್ನನುಸರಿಸುವ ಅರ್ಥವನ್ನು ಅದರಿಂದ ಹಿಂಡಿ ತೆಗೆಯುವ ಮತಾಚಾರ್ಯರಾಗಲಿ ಸ್ವತಂತ್ರವಾಗಿ ವಿವರಣಕ್ಕೆ ತೊಡಗಿರುವ ವಿದ್ವಾಂಸರಾಗಲಿ ಎಲ್ಲರಲ್ಲಿ ಮತಭೇದ ಎದ್ದುಕಾಣುತ್ತದೆ. ವಿಶೇಷವಾಗಿ ವಿದ್ಯೆ-ಅವಿದ್ಯೆ, ಸಂಭೂತಿ-ಅಸಂಭೂತಿ ಈ ಪದಗಳ ಅರ್ಥವೇನು? ಆಯಾ

ಪದ್ಯಸಂದರ್ಭಗಳಲ್ಲಿ ಅವು ಯಾವ ಅರ್ಥಸುಸಂಗತಿಯನ್ನು ಉಂಟುಮಾಡುತ್ತವೆ? ಎಂಬುದು ವಿವರಣೆಯ ವೈವಿಧ್ಯವನ್ನು ಹೆಚ್ಚುಗೊಳಿಸಿದೆ. ಈ ಬಗ್ಗೆ ಈ ಗ್ರಂಥ ಕರ್ತರ ವಿವರಣೆಯನ್ನು ತಿಳಿದುಕೊಳ್ಳುವುದು ಅಗತ್ಯ. 'ವಿದ್ಯೆ, ಅವಿದ್ಯೆ ಎಂಬ ಪದಗಳು ಸಂಕೇತಾರ್ಥದಲ್ಲಿ ಉಪಯುಕ್ತವಾಗಿವೆ. ಹೀಗೆ :—

ವಿದ್ಯೆ	ಅವಿದ್ಯೆ
(ಆತ್ಮ) ಜ್ಞಾನ	(ಲೋಕ) ಕರ್ಮ
ಸಂನ್ಯಾಸ	ಸಂಸಾರ
ಅಂತರ್ಮುಖಿತ್ವ	ಬಹಿರ್ಮುಖಿತ್ವ
ನಿವೃತ್ತಿಧರ್ಮ	ಪ್ರವೃತ್ತಿ ಧರ್ಮ'

ಈ ಸಂಕೇತಾರ್ಥವನ್ನು ಇಟ್ಟುಕೊಂಡು ಆ ಮೂರು ಮಂತ್ರಗಳನ್ನು ಸುಸಂಗತವಾಗಿ ವಿವರಿಸಲಾಗಿದೆ. ಮೂರನೆಯ ಮಂತ್ರದ ವಿವರಣೆ ಹೀಗಿದೆ: 'ಯಾರಾದರೆ ವಿದ್ಯೆ ಅವಿದ್ಯೆಗಳೆರಡನ್ನೂ ಒಟ್ಟುಗೂಡಿಸಿ (ಅವುಗಳ ಅನ್ಯೋನ್ಯಸಂಬಂಧವನ್ನು) ತಿಳಿದುಕೊಂಡಿರುತ್ತಾನೋ ಅವನು ಅವಿದ್ಯೆಯ ದ್ವಾರಾ, ಎಂದರೆ ಪ್ರವೃತ್ತಿಧರ್ಮವಾದ ಗೃಹಸ್ಥಾಶ್ರಮಸಂಸ್ಕಾರರೂಪದ ಕರ್ಮಮಾರ್ಗದಿಂದ, ಮೃತ್ಯುವನ್ನು—ಎಂದರೆ ಮರ್ತ್ಯವಾದ ಈ ಪ್ರಪಂಚದ ಮಾಯಾದ್ವಂದ್ವಗಳನ್ನು ದಾಟಿ, ವಿದ್ಯೆಯ ದ್ವಾರಾ—ಎಂದರೆ ನಿವೃತ್ತಿಧರ್ಮವಾದ ವಿರಕ್ತಸಂಸ್ಕಾರರೂಪದ ಜ್ಞಾನಮಾರ್ಗದಿಂದ ಅಮೃತವನ್ನು ಎಂದರೆ ನಾಶರಹಿತವಾದ ಪರಮಾತ್ಮವಸ್ತುವನ್ನು ಸೇರುತ್ತಾನೆ (ಮೋಕ್ಷ ಪಡೆಯುತ್ತಾನೆ.)' ಈ ಪದ್ಯಾರ್ಥದ ವಿಸ್ತರಣೆಯಲ್ಲಿ 'ಮೋಕ್ಷಕ್ಕೆ ಆತ್ಮಜ್ಞಾನ ಬೇಕು, ಆತ್ಮಜ್ಞಾನಕ್ಕೆ ಮೊದಲು ಚಿತ್ತಶುದ್ಧಿ ಅವಶ್ಯ, ಚಿತ್ತಶುದ್ಧಿ ಸತ್ಕರ್ಮದಿಂದಲೇ ಸಾಧ್ಯ' ಎಂಬುದಾಗಿ ಹೇಳಿದೆ. ಮುಂದೆ (೧) ಪ್ರವೃತ್ತಿ ಧರ್ಮಗಳು ಸಮಾಜ ಹಿತಾಪೇಕ್ಷೆ, ಆದ್ದರಿಂದ ಕರ್ತವ್ಯ, (೨) ಅವು ಜೀವಪರಿಶುದ್ಧಿಗೆ ಸಹಾಯಕ, (೩) ಪ್ರವೃತ್ತಿ ಸ್ವಾಭಾವಿಕ, ಸುಲಭ; ನಿವೃತ್ತಿಯಾದರೋ ಸಂಸ್ಕಾರ ಜನ್ಯ ಎಂಬ ಮೂರು ಅಂಶಗಳು ನೆನಪಿನಲ್ಲಿರಬೇಕಾದುವೆಂದು ಗುರುತಿಸಲಾಗಿದೆ.

ಅವಿದ್ಯೆ ಎಂದರೆ ಅಗ್ನಿಹೋತ್ರಾದಿ ಕರ್ಮ, ವಿದ್ಯೆ ಎಂದರೆ ದೇವತಾಜ್ಞಾನ ಎಂಬ ಶಂಕರಾಚಾರ್ಯ ಭಾಷ್ಯದಲ್ಲಿಯ ಮರ್ಯಾದಿತ ಅರ್ಥವು ಇಲ್ಲಿ ವಿಸ್ತಾರಗೊಂಡಿದೆ, ಅಲ್ಲದೆ ಸತ್‌ಕರ್ಮವು ಜ್ಞಾನಸಾಧಕವಾದ್ದರಿಂದ ಸರ್ವರಿಗೆ ಇಷ್ಟವೆಂಬ ವಿವರಣೆಯಲ್ಲಿ ಸಮನ್ವಯದೃಷ್ಟಿ ಫಲಿಸಿದೆ. ಈ ಬಗೆಯ ಸಮನ್ವಯವು ಶಾಂತರ ತತ್ತ್ವಕ್ಕೆ ಸಂಮತವಾದುದಲ್ಲ. ತನ್ನಷ್ಟಕ್ಕೆ ಲೇಖಕರ ವಿವರಣೆಯನ್ನು ಪರೀಕ್ಷಿಸಲಾಗಿ, ಪ್ರವೃತ್ತಿ-ನಿವೃತ್ತಿಗಳ ಅನ್ಯೋನ್ಯ ಸಂಬಂಧವನ್ನು ಜ್ಞಾನಸಿದ್ಧಿಯ ವರೆಗೆ ಸರಿಯಾಗಿ

ವಿವರಿಸಲಾಗಿದೆ. ಆದರೆ ವಿದ್ಯೆ-ಅವಿದ್ಯೆಗಳ ಸಂಕೇತಾರ್ಥಗಳನ್ನು ಹೇಳುವಲ್ಲಿ ಅವುಗಳ ಮುಖ್ಯಾರ್ಥಗಳ ಕಡೆಗೆ ಗಮನ ಕಡಿಮೆಯಾಗಿದೆ. ವಿದ್ಯೆ ಇದು ಆತ್ಮಜ್ಞಾನವಾದರೆ, ಅವಿದ್ಯೆ ಇದು ಮುಖ್ಯಾರ್ಥದಲ್ಲಿ ಏನು ಎಂಬುದನ್ನು ಹೇಳಬೇಕಾಗಿತ್ತು. ಲೋಕ (ಕರ್ಮ) ಎಂಬ ಪರ್ಯಾಯ ಅರ್ಥದಿಂದ ಸಮಾಧಾನವಾಗಲಾರದು. ಈ ಮಾತು ವಿದ್ಯೆ, ಅವಿದ್ಯೆಗಳಿಗೆ ಸಮಾಸಪದಗಳಾಗಿ ಕೊಟ್ಟಿರುವ ಉಳಿದೆಲ್ಲವಕ್ಕೂ ಅನ್ವಯಿಸುತ್ತದೆ. ಜ್ಞಾನಸಂಬಂಧಿಯಾದ ಅರ್ಥ ಮುಖ್ಯ; ಕರ್ಮ, ಧರ್ಮ ಇವಕ್ಕೆ ಸಂಬಂಧಿಸಿದ ಅರ್ಥ ಪರ್ಯಾಯದ್ದು. 'ತತೋಭೂಯೋ ಇವತೇತಮಃ' (ಇನ್ನೂ ಹೆಚ್ಚಿನದೆನಿಸುವ ಕತ್ತಲು) ಎಂಬ ಪದ್ಯಭಾಗದ ವಿವರಣೆ ಬೇಕಾಗಿತ್ತು. 'ಭೂಯ ಇವಃ ಹೆಚ್ಚಿನದೆನಿಸುವ' ಎಂದೇಕೆ? ಇದನ್ನು ಸ್ಪಷ್ಟೀಕರಿಸಿಲ್ಲ.

ತರುವಾಯದ ಮೂರು ಮಂತ್ರಗಳಲ್ಲಿ ಬಂದಿರುವ ಸಂಭೂತಿ-ಅಸಂಭೂತಿಗಳ ವಿಚಾರವಾಗಿ ಈ ಗ್ರಂಥಕರ್ತರ ವಿವರಣೆ ಹೀಗಿದೆ: 'ಮೇಲೆ ಜ್ಞಾನಕರ್ಮಗಳ—ಸಂನ್ಯಾಸಗಾರ್ಹಸ್ಥ್ಯಗಳ—ನಿವೃತ್ತಿ ಪ್ರವೃತ್ತಿಗಳ ಆಪಾತವಿರೋಧವನ್ನು ಪರಿಹರಿಸಿ ಸಮನ್ವಯ ಮಾಡಿದ್ದಾಗಿದೆ. ಈಗ ಬ್ರಹ್ಮೋಪಾಸನೆ—ಜಗದುಪಾಸನೆಗಳ,—ವಿರಕ್ತ ಜೀವನ ಸಾಮಾಜಿಕ ಜೀವನಗಳ, ಅವಿರೋಧವನ್ನು ತೋರಿಸುವುದಾಗುತ್ತದೆ. ಇದನ್ನು ಮೇಲಣ ವಿಷಯದ ರೂಪಾಂತರ ಅಥವಾ ಪುರೋಧಾರೆಯೆಂದು ಹೇಳಬಹುದು. . . 'ಸಂಭೂತಿ', 'ಸಂಭವ' ಎಂದರೆ ತಾನಾಗಿ ಇರುವಿಕೆ, ಆಗುವಿಕೆ; 'ಸ್ವಯಂಭು'; ಜಗತ್ತಿನ ಹುಟ್ಟಿಗೆ ಮೂಲಕಾರಣವಾದ ಬ್ರಹ್ಮವಸ್ತು. 'ಅಸಂಭೂತಿ', 'ಅಸಂಭವ' ಎಂದರೆ ಆ ಬ್ರಹ್ಮದಿಂದ ಆಗಿದ್ದರೂ ಬೇರೆಯೆಂಬಂತೆ ತೋರುವ ಜಗತ್ತು 'ವಿನಾಶ' ಎಂದರೆ ನಾಶಹೊಂದುವುದಾದ ಜಗತ್ತು. ಆ ಪದಗಳ ಪರ್ಯಾಯೋಪಯೋಗ ಹೀಗೆ—

ಜಗತ್ಕಾರಣವಾದ ಬ್ರಹ್ಮ	ಬ್ರಹ್ಮೇತರವೆನಿಸುವ ಜಗತ್ತು
ಸಂಭೂತಿ, ಸಂಭವ, ಸಂಭೂತಿ, ಈಶತ್ವ, (ಚೈತನ್ಯ), (ವಸ್ತು), (ಸ್ವತಂತ್ರ), (ಸತ್ಯ)	(ಅನುಕ್ರಮವಾಗಿ) ಅಸಂಭೂತಿ, ಅಸಂಭವ, ವಿನಾಶ, ಜೀವತ್ವ, (ಜಡ), (ಛಾಯೆ), (ಪರತಂತ್ರ), (ಮಾಯೆ)

ಸಂಭೂತಿ-ಅಸಂಭೂತಿಗಳಿಗೆ ಈ ಅರ್ಥವನ್ನಿಟ್ಟುಕೊಂಡು ಗ್ರಂಥಕರ್ತರು ಸಂಬಂಧಪಟ್ಟ ಮೂರು ಮಂತ್ರಗಳನ್ನು ವಿವರಿಸಿದ್ದಾರೆ. ೧೨ನೆಯ ಮಂತ್ರದ ವಿವರಣೆಯಲ್ಲಿ 'ಯಾರು (ಬ್ರಹ್ಮಕಾರ್ಯವಾದ ಜಗತ್ತನ್ನು ತೊರೆದು) ಕೇವಲ ಬ್ರಹ್ಮವಸ್ತು ಮಾತ್ರ ಹುಡುಕುತ್ತಾರೋ ಅವರು ಇನ್ನೂ ಹೆಚ್ಚಿನದೆನಿಸುವ ಕತ್ತಲನ್ನು

ಸೇರುತ್ತಾರೆ (ಏಕೆಂದರೆ ಬ್ರಹ್ಮವಸ್ತುವು ಜಗತ್ತನ್ನು ಬಿಟ್ಟಿರುವುದಲ್ಲ)' ಎಂಬ ವಾಕ್ಯವಿದೆ, 'ಇನ್ನೂ ಹೆಚ್ಚಿನದೆನಿಸುವ' ಎಂಬ ಮಾತಿನ ತೀರ ಸಂಕ್ಷಿಪ್ತ ಕಾರಣ ನಿರ್ದೇಶವಿದೆ. ಮೂರನೆಯ ಮಂತ್ರದ ಅನುವಾದವು ಹೀಗಿದೆ: 'ಯಾರಾದರೆ ಸಂಭೂತಿ (ಬ್ರಹ್ಮ) ವಿನಾಶ (ಜಗತ್ತು) ಗಳೆರಡನ್ನೂ ಒಟ್ಟುಗೂಡಿಸಿ (ಅವುಗಳ ಅನ್ಯೋನ್ಯ ಸಂಬಂಧವನ್ನು) ನೋಡಿರುತ್ತಾನೋ ಅವನು ವಿನಾಶದ ಎಂದರೆ ಜಗಜ್ಜೀವನದ ಮೂಲಕ, ಅರ್ಥಾತ್ ಲೋಕ ಸಂಪರ್ಕ ಸಂಸ್ಕಾರದಿಂದ—ಮೃತ್ಯುವನ್ನು, ಎಂದರೆ ಜಗನ್ಮಾಯೆಯನ್ನು ದಾಟಿ, ಸಂಭೂತಿಯಿಂದ—ಎಂದರೆ ಬ್ರಹ್ಮಸ್ವರೂಪದರ್ಶನದಿಂದ ಅಮೃತವನ್ನು, ಎಂದರೆ ನಾಶರಹಿತವಾದ ಆ ಪರಮಾತ್ಮ ವಸ್ತುವನ್ನು ಸೇರುತ್ತಾನೆ.' ಈ ವಿವರಣೆಯಲ್ಲಿ ಅಂತರ್ಗತವಾಗಿ ಶಂಕರಭಗವತ್ಪಾದರು ಕೊಟ್ಟಿರುವ ಅರ್ಥದ ವಿವೇಚನೆ ಬಂದಿದೆ. ಅವರ ಮೇರೆಗೆ ಸಂಭೂತಿಯೆಂದರೆ ಸೃಷ್ಟಿಯಲ್ಲಿ ಪ್ರಥಮನಾದ ಹಿರಣ್ಯಗರ್ಭನೆಂಬ ಕಾರ್ಯಬ್ರಹ್ಮ, ಅಸಂಭೂತಿಯೆಂದರೆ ಅವ್ಯಾಕೃತಪ್ರಕೃತಿ. ಆದರೆ ಲೇಖಕರ ಅಭಿಪ್ರಾಯದಲ್ಲಿ 'ಸಂಭೂತಿ ಅಸಂಭೂತಿಗಳೂ, ಮೇಲಣ ವಿದ್ಯೆ ಅವಿದ್ಯೆಗಳಂತೆ, ಪರಸ್ಪರ ವಿರುದ್ಧಾರ್ಥಕಗಳೆಂದು ಭಾವಿಸುವುದು ಪ್ರಕರಣದೃಷ್ಟಿಯಿಂದ ಯುಕ್ತವಾಗಿದೆ. ಹಿರಣ್ಯಗರ್ಭನಿಗೂ ಅವ್ಯಾಕೃತವೆಂಬುದಕ್ಕೂ ಇರುವ ಭೇದವು ಸ್ಥಾನಗಣನೆಯದೇ ಹೊರತು ಜಾತಿಯದಲ್ಲ. ಜಾತಿಯಲ್ಲಿ ಎರಡೂ ಶುದ್ಧಬ್ರಹ್ಮದಿಂದ ಭಿನ್ನವಾದುವೇ; ಅವೆರಡೂ ಅಣ್ಣ ತಂಗಿಯರಂತೆ ಇರುತ್ತವೆ, ವಿರೋಧಿಗಳಲ್ಲ . . . ಇಲ್ಲಿ ನಾವು ಮಾಡಿರುವ ಅರ್ಥವು ಬೇರೆ ಬಗೆಯದಾದರೂ ಅದು ತಾತ್ಪರ್ಯದಲ್ಲಿ ಶಂಕರರ ಅರ್ಥಕ್ಕೆ ವಿರುದ್ಧವಾಗಿಲ್ಲ. ಪ್ರಾಚೀನವಾದ ಉವಟಾಚಾರ್ಯಭಾಷ್ಯದಲ್ಲಿ ನಮ್ಮ ಅರ್ಥಕ್ಕೆ ಸಮರ್ಥನೆ ಕಾಣುತ್ತದೆ' ಹೀಗೆಂದು ಉವಟಾಚಾರ್ಯಭಾಷ್ಯದಿಂದ ಪ್ರಸ್ತುತವಾದ ಉದ್ಧೃತಿಯನ್ನು ಕೊಡಲಾಗಿದೆ. ಕೊನೆಗೆ 'ಉವಟಭಟ್ಟರು ಶರೀರ ಎಂದು ಕರೆದಿರುವುದನ್ನು ನಾವು ಜಗತ್ತು ಎಂದು ಕರೆದಿದ್ದೇವೆ. ಶರೀರಕೋಟಿಯೇ ಜಗತ್ತು. ಶರೀರವೆಂಬುದು ವ್ಯಷ್ಟಿವಾಚಕ, ಜಗತ್ತು ಸಮಷ್ಟಿವಾಚಕ' ಎಂಬ ವಾಕ್ಯವಿದೆ. ಗ್ರಂಥಕರ್ತರ ಮನೋಗತವು ಸ್ಪಷ್ಟವಾಗಲೆಂದೂ ಚರ್ಚೆಗೆ ನೆರವಾಗಲೆಂದೂ ಅವತರಣಿಕೆಗಳನ್ನು ಸ್ವಲ್ಪ ವಿಸ್ತಾರವಾಗಿ ಕೊಟ್ಟಿದೆ. ಸಂಭೂತಿ-ಅಸಂಭೂತಿ ಪದಗಳಿಗೆ ತಾವು ಇಟ್ಟುಕೊಂಡಿರುವ ಅರ್ಥಕ್ಕೆ ಅನುಗುಣವಾಗಿ ಗ್ರಂಥಕರ್ತರು ಮೂರು ಮಂತ್ರಗಳನ್ನು ಸರಿಯಾಗಿಯೇ ವಿವರಿಸಿದ್ದಾರೆ. ಆಯಾ ಪದಗಳ ಅರ್ಥವು ಸಾಮಾನ್ಯವಾಗಿ ಶಾಂಕರತತ್ವಸರಣಿಯಲ್ಲಿದ್ದರೂ ಪ್ರತ್ಯಕ್ಷವಾಗಿ ಶಂಕರರು ಕೊಟ್ಟಿರುವ ಅರ್ಥಕ್ಕಿಂತ ಬೇರೆಯಾಗಿದೆಯೆಂಬುದನ್ನು ಅಲ್ಲಗಳೆಯುವಂತಿಲ್ಲ. ಪರಬ್ರಹ್ಮ ಮತ್ತು ಕಾರ್ಯಬ್ರಹ್ಮ ಎಂಬ ಪದಗಳು ಒಂದೇ

ಬ್ರಹ್ಮವಸ್ತುವನ್ನು ಕುರಿತಾಗಿದ್ದರೂ ತಾತ್ವಿಕವಾಗಿ ಅವುಗಳಲ್ಲಿ ಭೇದವಿದೆ. ಆ ಭೇದವು ಪಾರಮಾರ್ಥಿಕವಾಗಿರಲಿ ಅಧ್ಯಾರೋಪಿತವಾಗಿರಲಿ ಅದು ಭೇದವೆಂಬುದೇನು ಸುಳ್ಳಲ್ಲ. ಹಾಗೇ ವಿನಾಶಿಯಾದ ಜಗತ್ತು ಮತ್ತು ಅವ್ಯಾಕೃತವಾದ ಪ್ರಕೃತಿ ಇವುಗಳಲ್ಲಿಯೂ ಭೇದವಿದೆ. ಅಲ್ಲದೆ ಲೇಖಕರೇ ತೋರಿಸಿಕೊಟ್ಟಿರುವಂತೆ ಪರಬ್ರಹ್ಮ ಮತ್ತು ಜಗತ್ತು ಇವು ಪರಸ್ಪರ ವಿರುದ್ಧಾರ್ಥಕಗಳಿರುವಂತೆ ಕಾರ್ಯಬ್ರಹ್ಮ ಮತ್ತು ಅವ್ಯಾಕೃತಗಳಲ್ಲ. ಹೀಗಿರುವಾಗ 'ಇಲ್ಲಿ ನಾವು ಮಾಡಿರುವ ಅರ್ಥವು ಬೇರೆ ಬಗೆಯದಾದರೂ ಅದು ತಾತ್ಪರ್ಯದಲ್ಲಿ ಶಂಕರರ ಅರ್ಥಕ್ಕೆ ವಿರುದ್ಧವಾಗಿಲ್ಲ' ಎಂಬ ವಾಕ್ಯವು ಯಥೋಚಿತವೆಂದು ನಮಗೆ ತೋರಲಿಲ್ಲ. ತಮ್ಮ ಅರ್ಥಯೋಜನೆಗೆ ಉವಟಾರ್ಯಭಾಷ್ಯದಲ್ಲಿ ಸಮರ್ಥನೆಯಿರುವುದೆಂದು ಲೇಖಕರು ತೋರಿಸಿದ್ದು ಯೋಗ್ಯವಾಗಿದೆ. ಆದರೆ ಅದರಿಂದ ಉವಟಾರ್ಯರ ಮತ್ತು ಲೇಖಕರ ಅರ್ಥಯೋಜನೆ ಶಂಕರರ ಅರ್ಥಕ್ಕೆ ಅವಿರುದ್ಧವಾಗಿದೆ, ಸಂಪ್ರದಾಯಕ್ಕೆ ಅನುಕೂಲವಾಗಿದೆ ಎಂದು ಮಾತ್ರ ನಿಷ್ಪನ್ನವಾಗುವುದಿಲ್ಲ. ಪದಗಳ ಅರ್ಥದ ತರುವಾಯ ವಾಕ್ಯಾರ್ಥವಿವರಣೆ ಮತ್ತು ಅದರಲ್ಲಿ ಅಡಕವಾದ ಸಮನ್ವಯವನ್ನು ನೋಡಿದರೆ ವಿದ್ಯೆ-ಅವಿದ್ಯೆಗಳುಳ್ಳ ಮಂತ್ರಗಳ ವಿವರಣೆಯಲ್ಲಿ ಹೇಗೋ ಹಾಗೆ ಇಲ್ಲಿಯೂ ಲೇಖಕರು ಶಾಂಕರ ದೃಷ್ಟಿಗಿಂತ ಬೇರೆಯಾದ ದೃಷ್ಟಿಯನ್ನು ತೋರಿದ್ದಾರೆ. 'ಸಾಂಪ್ರದಾಯಿಕವಾಗಿ ಬಂದಿರುವ ಅರ್ಥವನ್ನು ಬಿಡಲು ಅದಕ್ಕೆ ಪ್ರಬಲಕಾರಣಗಳಿದ್ದ ಹೊರತು ಹಾಗೆ ಮಾಡತಕ್ಕದಲ್ಲವೆಂದು ನಾನು ತಿಳಿದುಕೊಂಡಿದ್ದೇನೆ' ಎಂಬ ಅವರ ಅಭಿಪ್ರಾಯವನ್ನು ಇಲ್ಲಿ ಮನದಂದರೆ, ಪ್ರಬಲಕಾರಣಗಳಿದ್ದ ಮೂಲಕವೇ ಅವರು ಪದ-ವಾಕ್ಯಗಳ ಅರ್ಥವಿವರಣೆಯಲ್ಲಿ ಸ್ವತಂತ್ರವಾದ ಪ್ರಾಮಾಣಿಕವಾದ ಮತಭೇದವನ್ನು ವ್ಯಕ್ತಮಾಡಿದ್ದಾರೆ. ಅದು ಅಭಿನಂದ್ಯವೇ ಆಗಿದೆ. ಸತ್ಯವಾವುದು ಎಂಬ ಪ್ರಶ್ನೆಗೆ ಕೊನೆಯ ಉತ್ತರ ದೊರೆಯುವುದು ಕಷ್ಟ. ಆದರೆ ತಾವು ತಂತಮ್ಮ ನಿಲವಿನಲ್ಲಿ ಕಂಡ ಸತ್ಯಕ್ಕೆ ಎಲ್ಲರೂ ಪ್ರಾಮಾಣಿಕವಾಗಿರಬೇಕೆಂಬುದು ಒಪ್ಪತಕ್ಕ ತತ್ವವಾಗಿದೆ.

ಸಂಭೂತಿ-ಅಸಂಭೂತಿ ಈ ಪದಗಳ ನಿಜವಾದ ಅರ್ಥವೇನು? ಈಶೋಪನಿಷತ್ಕಾರನು ಆಯಾ ಸಂದರ್ಭದಲ್ಲಿ ಆ ಮಂತ್ರಗಳಲ್ಲಿ ಯಾವ ಅರ್ಥವನ್ನು ಕಂಡಿದ್ದನು? ಈ ಪ್ರಶ್ನೆಗಳು ಎಂದಿನಿಂದಲೂ ಸಮರ್ಪಕವಾದ ಉತ್ತರದ ದಾರಿ ಕಾಯುತ್ತ ನಿಂತಿರುತ್ತವೆ. ಉಪನಿಷತ್ತಿನಲ್ಲಿಯ ಪದಗಳಲ್ಲಿ ವಾಚ್ಯಾರ್ಥಕ್ಕಿಂತ ವ್ಯಂಗ್ಯಾರ್ಥ ಅಥವಾ ಸಂಕೇತಾರ್ಥವು ಕೆಲವು ಸಲ ಅಭಿಪ್ರೇತವಾಗಿರುತ್ತದೆ ಎಂಬುದನ್ನು ಒಪ್ಪಿದರೂ ಈ ಲೇಖಕರು ಆ ಪದಗಳಿಗೆ ಕೊಟ್ಟಿರುವ ಅರ್ಥವು ನಮಗೆ ಸಮಂಜಸವೆನಿಸುವುದಿಲ್ಲ. ಸಂಭೂತಿ, ಅಸಂಭೂತಿ (ವಿನಾಶ) ಇವು ಭಾವನಾಮ

ಗಳಾಗಿದ್ದು ಆತ್ಮದ ಅಥವಾ ಚಿತ್ತದ ಒಂದು ಭಾವ ಅಥವಾ ಕ್ರಿಯೆಯನ್ನು ಸೂಚಿಸ ಬೇಕೇ ಹೊರತು ಸೂಕ್ಷ್ಮವಾದ ಇಲ್ಲವೆ ಸ್ಥೂಲವಾದ ವಸ್ತುವನ್ನಲ್ಲ. ಸಂಸ್ಕೃತ ಕೋಶದಲ್ಲಿ, ವಿಶೇಷವಾಗಿ ಉಪನಿಷತ್ಕೋಶದಲ್ಲಿ ಈ ಪದಗಳಿಗೆ ಲೇಖಕರು ಕೊಟ್ಟಿರುವ ಅರ್ಥವು ಕಾಣದೊರೆಯುವುದಿಲ್ಲ. ಉಪನಿಷತ್‌ಕೋಶದಲ್ಲಿ ಎಂಬ ಮಾತನ್ನು ನಾವು ತಾತ್ಪೂರ್ತಿಕವಾಗಿ ಬಳಸಿದ್ದೇವೆ. ಈ ವಿಷಯದಲ್ಲಿ ಸಂಶೋಧನೆ ನಡೆಯಬೇಕು. ಸಂಭೂತಿ, ಸಂಭವ ಎಂದರೆ 'ತಾನಾಗಿ ಇರುವಿಕೆ, ಆಗುವಿಕೆ; ಸ್ವಯಂಭು, ಜಗತ್ತಿನ ಹುಟ್ಟಿಗೆ ಮೂಲಕಾರಣವಾದ ಬ್ರಹ್ಮವಸ್ತು' ಎಂಬುದಾಗಲಿ 'ಅಸಂಭೂತಿ, ಅಸಂಭವ ಎಂದರೆ ಆ ಬ್ರಹ್ಮದಿಂದ ಆಗಿದ್ದರೂ ಬೇರೆಯೆಂಬಂತೆ ತೋರುವ ಜಗತ್ತು' ಎಂಬು ದಾಗಲಿ ಎಳೆದುತಂದ ಅರ್ಥದಂತೆ ತೋರುತ್ತವೆ. 'ವಿನಾಶ' ಎಂದರೆ 'ನಾಶ ಹೊಂದುವುದಾದ ಜಗತ್ತು' ಎಂಬುದು ಇನ್ನೂ ಹೆಚ್ಚಿನ ಎಳೆದಾಟವನ್ನು ತೋರಿಸು ತ್ತದೆ. 'ವಿನಾಶಿ' ಎನ್ನಬಹುದಾಗಿರುವಾಗ 'ವಿನಾಶ' ಎಂಬ ಪದವನ್ನು ಏಕೆ ಬಳಸಲಾಗಿದೆ ಎಂಬುದನ್ನು ಯೋಚಿಸಬೇಕಾಗಿತ್ತು. 'ಸಂಭೂತಿ' ಪದಕ್ಕೆ ಕೋಶದಲ್ಲಿ 'ಜನ್ಮ, ಮೂಲ, ಹುಟ್ಟುವಿಕೆ' ಮುಂತಾದ ಅರ್ಥಗಳಿದ್ದರೆ 'ಅಸಂಭೂತಿ'ಗೆ 'ಜನ್ಮ ರಾಹಿತ್ಯ, ಪುನರ್ಜನ್ಮರಾಹಿತ್ಯ' ಎಂಬ ಅರ್ಥಗಳಿರುತ್ತವೆ. ಇವುಗಳ ಜಾಡನ್ನು ಹಿಡಿದು ಆ ಪದಗಳನ್ನು ಅರ್ಥವಿಸುವ ಯತ್ನಮಾಡಿದ್ದರೆ ಒಳ್ಳೆಯದಾಗುತ್ತಿತ್ತು.

ಈ ಸಂದರ್ಭದಲ್ಲಿ ಬೇರೆಬೇರೆ ಜ್ಞಾನಿಗಳ, ವಿದ್ವಾಂಸರ ಅಭಿಪ್ರಾಯವನ್ನು ನಾವು ತಿಳಿದುಕೊಳ್ಳಬೇಕು, ವಿಸ್ತಾರಭಯದಿಂದ ಅವುಗಳ ನಿರೂಪಣೆ ಇಲ್ಲಿ ಸಾಧ್ಯವಿಲ್ಲ, ಆದರೆ ಹಿಂದಿನಿಂದ ಬಂದಿರುವ ಅಥವಾ ಇಂದಿಗಿರುವ ವಿವರಣೆಗಳಿಗಿಂತ ಬೇರೆಯಾದ ಒಂದು ವಿವರಣೆಯತ್ತ ಜಿಜ್ಞಾಸುಗಳ ಗಮನವನ್ನು ಎಳೆಯಬಯಸುತ್ತೇವೆ. ಆಧುನಿಕ ಯುಗದ ಶ್ರೇಷ್ಠಜ್ಞಾನಿಗಳಲ್ಲಿ ಒಬ್ಬರಾದ ಮಹರ್ಷಿ ಅರವಿಂದರು ಈಶೋಪನಿಷತ್ತನ್ನು ಕುರಿತು ಸಮಗ್ರವಾದ ವಿವರಣೆ ಬರೆದಿರುವರೆಂಬುದು ಸರ್ವಶ್ರುತವಾಗಿದೆ. ಅದರಲ್ಲಿ ವಿದ್ಯೆ-ಅವಿದ್ಯೆ, ಸಂಭೂತಿ-ಅಸಂಭೂತಿ ಎಂಬ ಪದಗಳ ಅರ್ಥವನ್ನೂ ಆಯಾ ಮಂತ್ರಗಳ ಅರ್ಥವನ್ನೂ ಅವರು ವಿಸ್ತಾರವಾಗಿ ಕೊಟ್ಟಿದ್ದಾರೆ. ಈಶೋಪನಿಷತ್ತಿನ ಅಭ್ಯಾಸಿಗಳು ಅವನ್ನು ತಿಳಿದುಕೊಂಡಿರುವುದು ಲೇಸು.

ಅರವಿಂದರ ವಿವರಣೆಯ ಸಾರಾಂಶ ಹೀಗಿದೆ: ವಿದ್ಯೆ ಎಂದರೆ ಏಕತ್ವದ ಪ್ರಜ್ಞೆ, ಅವಿದ್ಯೆಯೆಂದರೆ ಅನೇಕತ್ವದ ಪ್ರಜ್ಞೆ. ಏಕತ್ವವು ಶಾಶ್ವತವಾದ ಸತ್ಯ. ಅದಿಲ್ಲದೆ ಅನೇಕತ್ವವು ಅಸತ್ಯ, ಭ್ರಾಂತಿ. ಅದು ಏಕತ್ವದ ಲೀಲೆ, ಅದರ ವಿವಿಧವಾದ ಆತ್ಮ ವಿಸ್ತರಣೆ. ವಿದ್ಯೆ-ಅವಿದ್ಯೆಗಳ ಅತ್ಯಂತ ಸಾಮರಸ್ಯದ ಮೂಲಕ ದಿವ್ಯತ್ವವು ವ್ಯಕ್ತಿ ಯಲ್ಲಿ ಪೂರ್ಣವಾಗಿ ಪ್ರಕಟವಾಗುವುದರಲ್ಲಿಯೇ ಮನುಷ್ಯನ ಪರಿಪೂರ್ಣತೆಯಿರುತ್ತದೆ.

ಕೇವಲ ವಿದ್ಯೆ ಅಥವಾ ಕೇವಲ ಅವಿದ್ಯೆಯ ಅನುಸರಣದಿಂದ ಈ ಸಂಕಲ್ಪವು ಸಿದ್ಧಿಸುವುದಿಲ್ಲ. ಯಾರು ಕೇವಲ ಅವಿದ್ಯೆ ಅಂದರೆ ಅನೇಕತ್ವದ ಬೆನ್ನು ಹತ್ತುವರೋ ಅವರು ಏಕತ್ವದಿಂದ ದೂರ ಸರಿಯುತ್ತ ಪ್ರಕೃತಿಯ ಯಾಂತ್ರಿಕ ಮತ್ತು ಭೇದಕಾರಕ ಶಕ್ತಿಗಳಿಗೆ ಒಳಗಾಗಿ ಅಂಧಃತಮವನ್ನು ಸೇರುತ್ತಾರೆ. ಯಾರು ಕೇವಲ ವಿದ್ಯೆ ಅಂದರೆ ಏಕತ್ವದ ಬೆನ್ನುಹತ್ತುವರೋ ಅವರು ಸಮಗ್ರಜ್ಞಾನಕ್ಕೆ ಹೊರತಾಗಿ ಹೆಚ್ಚಿನದೇನೋ ಎನ್ನುವ ಕತ್ತಲೆಯಲ್ಲಿ ಪ್ರವೇಶಿಸುತ್ತಾರೆ. ವಿದ್ಯೆಯ ಅವಸ್ಥೆ ಅವಿದ್ಯೆಗಿಂತ ಮೇಲಿನದಾದರೂ ಕತ್ತಲೆ ಹೆಚ್ಚಿನದು ಆಗುತ್ತದೆ. ಯಾಕಂದರೆ ಕೆಳಗಣ ಅವಸ್ಥೆಯಾದ ಅವಿದ್ಯೆಯಿಂದ ಬಿಡುಗಡೆ ಯಾವಾಗಲೂ ಸಾಧ್ಯ. ಆದರೆ ಕೇವಲ ವಿದ್ಯೆಯ ಶೂನ್ಯ ಇಲ್ಲವೆ ಅಸತ್ತಿನ ಕಲ್ಪನೆಯಿಂದ ಆತ್ಮದ ಪೂರ್ಣಾವಿಷ್ಕಾರಕ್ಕೆ ತಿರುಗಿ ಬರುವುದು ಹೆಚ್ಚು ಕಠಿಣವಾಗುತ್ತದೆ.

ಸಂಭೂತಿ ಎಂದರೆ ಜನ್ಮ, ಜನನ ಆಗುವಿಕೆ; ಅಸಂಭೂತಿ ಎಂದರೆ ಅಜನ್ಮ, ಜನ್ಮರಾಹಿತ್ಯ, ಜನ್ಮಮುಕ್ತಿ. ಪ್ರಕೃತಿಯ ಹೊರಗಣ ಆತ್ಮವು ಏನೂ ಆಗುವುದಿಲ್ಲ. ಅದು ನಿತ್ಯವೂ ಅವಿಕಾರ್ಯವೂ ಆಗಿರುತ್ತದೆ. ಪ್ರಕೃತಿಯೊಳಗಣ ಆತ್ಮವು ಆಗುತ್ತದೆ, ತನ್ನ ರೂಪಗಳನ್ನು ಬದಲಿಸುತ್ತದೆ. ಕಾಲಕ್ರಮದಲ್ಲಿ ವಿವಿಧ ರೂಪ ಮತ್ತು ಅವಸ್ಥೆಗಳಲ್ಲಿ ಪ್ರವೇಶವೆಂದರೆ ಪ್ರಕೃತಿಯಲ್ಲಿ ಜನ್ಮ. ಮನುಷ್ಯನು ಜನ್ಮದ ತ್ರಸ್ತಾವಸ್ಥೆಯಿಂದ ಪ್ರಾರಂಭಮಾಡಿ ಅಜನ್ಮವೆಂಬ ಸಮುಸ್ಥಿತಿಗೆ ಬಂದು ಮುಟ್ಟುತ್ತಾನೆ. ಅಹಂಭಾವವೇ ಜನ್ಮಕಾರಣವಾದ ಗ್ರಂಥಿ, ಅಹಂಭಾವದ ವಿನಾಶವು ಅಜನ್ಮಸ್ಥಿತಿಗೆ ಒಯ್ಯುತ್ತದೆ. ಆದ್ದರಿಂದಲೇ ಅಸಂಭೂತಿ ಅಥವಾ ಅಜನ್ಮಕ್ಕೆ 'ವಿನಾಶ' ಎಂಬುದಾಗಿಯೂ ಕರೆದಿದೆ.


ಜನ್ಮ ಮತ್ತು ಅಜನ್ಮ ಇವು ಮೂಲತಃ ದೈಹಿಕ ಅವಸ್ಥೆಗಳಲ್ಲ. ಆದರೆ ಆತ್ಮಿಕ ಅವಸ್ಥೆಗಳು. ಮನುಷ್ಯನು ಅಹಂಭಾವದ ಗ್ರಂಥಿಯನ್ನು ಭೇದಿಸಿ ದೇಹದಲ್ಲಿ ಉಳಿಯಬಹುದು, ಆದರೆ ಅಹಂಭಾವವಿನಾಶದಲ್ಲಿಯೇ ಕೇವಲವಾಗಿ ತೊಡಗಿದರೆ, ಅವನು ದೇಹದಲ್ಲಿ ಮತ್ತೆ ಹುಟ್ಟಿಬರುವುದಿಲ್ಲ. ಅಜನ್ಮದಲ್ಲಿಯ ಇಲ್ಲವೆ ಜನ್ಮದಲ್ಲಿಯ ಆಸಕ್ತಿ ಪೂರ್ಣಮಾರ್ಗವಲ್ಲ. ಕೇವಲ ಅಜನ್ಮದಲ್ಲಿಯ ಆಸಕ್ತಿ ವಿವೇಚನಾಶೂನ್ಯವಾದ ಪ್ರಕೃತಿಯಲ್ಲಿ ಅಥವಾ ಶೂನ್ಯದಲ್ಲಿ ವಿನಾಶವನ್ನು ತರುತ್ತದೆ. ಇವೆರಡೂ ತಾಮಸೀ ಅವಸ್ಥೆಗಳು. ಇತ್ತ ಶರೀರಧಾರಣರೂಪವಾದ ಜನ್ಮದಲ್ಲಿ ಆಸಕ್ತಿಯೆಂದರೆ ತನ್ನನ್ನು ತಾನು ಪರಿಮಿತಿಗೊಳಿಸಿಕೊಂಡು ಅಹಂಕಾರನಿಷ್ಠಜನ್ಮಚಕ್ರದಲ್ಲಿ ತಿರುಗುತ್ತಿರುವುದು. ಇನ್ನೊಂದರಿಗಿಂತ ಒಂದು ದೃಷ್ಟಿಯಲ್ಲಿ ಇದು ಹೆಚ್ಚಿನ ಅಂಧಕಾರ. ಯಾಕಂದರೆ ಇದರಲ್ಲಿ ಮುಕ್ತತೆಯ ಪ್ರೇರಣೆಯದೇ ಅಜ್ಞಾನವಿರುತ್ತದೆ.

ಬ್ರಹ್ಮನು ವಿದ್ಯೆ ಮತ್ತು ಅವಿದ್ಯೆ, ಸಂಭೂತಿ ಮತ್ತು ಅಸಂಭೂತಿ ಎರಡೂ ಆಗಿರುತ್ತಾನೆ. ಆತ್ಮದ ಅಸಂಭೂತಿ ಅಥವಾ ಜನ್ಮರಾಹಿತ್ಯದ ಅರಿವಿನಿಂದಲೇ ಸಂಭೂತಿಯಲ್ಲಿ ಮುಕ್ತ ಹಾಗೂ ದಿವ್ಯ ಜೀವನವು ಸಾಧ್ಯವಾಗುತ್ತದೆ. ಅಹಂಕಾರವಿನಾಶದಿಂದ ಮತ್ತು ಜನ್ಮಾಸಕ್ತಿಯ ವಿಲಯನದಿಂದ ಆತ್ಮವು ಮೃತ್ಯುವಿನಾಚೆ ದಾಟಿ ಹೋಗುತ್ತದೆ, ದ್ವಂದ್ವಗಳ ಪರಿಮಿತಿಯಿಂದ ಮುಕ್ತವಾಗುತ್ತದೆ. ಈ ಮುಕ್ತಿಯನ್ನು ಪಡೆದಮೇಲೆ ಸಂಭೂತಿಯನ್ನು ಪ್ರಕೃತಿಯ ಪ್ರಕ್ರಿಯೆಯೆಂದು ಅದು ಸ್ವೀಕರಿಸುತ್ತದೆ, ಆದರೆ ತನಗೆ ಅಧೀನವಾಗಿ ಮಾತ್ರ; ಬಂಧನಕಾರಕವಾಗಿ ಅಲ್ಲ. ಈ ಸ್ವತಂತ್ರ ಮತ್ತು ದಿವ್ಯವಾದ ಸಂಭೂತಿಯಿಂದ ಅದು ಅಮೃತಪದವಿಯ ಸೌಖ್ಯ ಹೊಂದುತ್ತದೆ.

ಮೇಲಿನ ಸಾರಾಂಶದಿಂದ ಅರವಿಂದರ ವಿವರಣೆ ಎಲ್ಲ ಅಂಶಗಳಲ್ಲಿ ಸ್ಪಷ್ಟವಾಗುವುದೆಂದು ನಾವು ತಿಳಿದಿಲ್ಲ. ಆದರೆ ಅದರ ತಾತ್ಪರ್ಯವು ತಿಳಿಯಲೆಂದು ಕೊಟ್ಟಿರುತ್ತದೆ. ಈಶೋಪನಿಷತ್ತಿನ ಸಮನ್ವಯಪೂರ್ಣವಾದ ಮತ್ತು ಸೂಕ್ಷ್ಮತಮವಾದ ಜೀವನದರ್ಶನದ ಪರಿಜ್ಞಾನಕ್ಕೆ ವಿದ್ಯೆ-ಅವಿದ್ಯೆ, ಸಂಭೂತಿ-ಅಸಂಭೂತಿ ಈ ಪದಗಳಿಗೆ ಅವರು ಕೊಟ್ಟಿರುವ ಅರ್ಥ ಮತ್ತು ಮಾಡಿದ ವಿವರಣೆ ತುಂಬ ಸಹಾಯಕವಾಗುತ್ತವೆ ಎಂಬುದನ್ನು ಗಮನಿಸಬೇಕು. ವಿಶೇಷತಃ ಸಂಭೂತಿ ಮತ್ತು ಅಸಂಭೂತಿಗಳು ಋಷಿವಾಣಿಯ ಗುಹೆಯಿಂದ ತಮ್ಮೆಲ್ಲ ಅರ್ಥಕಾಂತಿಯಿಂದ ಹೊರಬಂದು ಉಪನಿಷದಭ್ಯಾಸಿಗೆ ಮತ್ತು ಆಧ್ಯಾತ್ಮಿಕ ಸಾಧಕನಿಗೆ ಹೊಸ ಬೆಳಕನ್ನೀಯುತ್ತವೆ.

ಶ್ರೀ ಡಿ.ವಿ.ಜಿ. ಯವರ ಎರಡು ಗ್ರಂಥಗಳ ಅವಲೋಕನವನ್ನೂ ಆನುಷಂಗಿಕವಾದ ತತ್ವಚಿಂತನೆಯನ್ನೂ ಈ ಲೇಖನದಲ್ಲಿ ಮಾಡಲು ಪ್ರಯತ್ನಿಸಿದ್ದೇನೆ. ನಾನು ತತ್ವಜ್ಞಾನದ ವಿದ್ಯಾರ್ಥಿಯಲ್ಲ, ಆದರೆ ತತ್ವಜಿಜ್ಞಾಸು. ಈ ದೃಷ್ಟಿಯಿಂದ ಈ ಲೇಖನವನ್ನು ನೋಡಬೇಕೆಂದು ವಾಚಕರಲ್ಲಿ ಅರಿಕೆಮಾಡಬಯಸುತ್ತೇನೆ. ತತ್ವಚಿಂತನೆ ಜೀವನಸಾಧನೆಗೆ ಅತ್ಯಾವಶ್ಯಕವಾದ ಒಂದು ಸಾಧನ. ಅಂತೆಯೆ ತಮ್ಮ ಜೀವನವು ಒಳ್ಳೆಯದಾಗಬೇಕು, ಪೂರ್ಣತೆಯ ಗುರಿಯತ್ತ ಮುಂಬರಿಯಬೇಕು ಎಂದು ಹಂಬಲಿಸುವವರೆಲ್ಲ ಜೀವನಸಾಧಕರಾಗಿರುವಂತೆ ತತ್ವಚಿಂತಕರೂ ಆಗುತ್ತಾರೆ. ಶ್ರೀ ಡಿ.ವಿ.ಜಿ. ಯವರ ಮನೋಭೂಮಿಕೆ ಇದೇ ಆಗಿರುವುದೆಂದು ನಾನು ನಂಬಿದ್ದೇನೆ. ಅವರ ಪರಿಣತಪ್ರಜ್ಞೆಯಿಂದ ಹಲವಾರು ಜೀವನಮಾರ್ಗದರ್ಶಿಯಾದ ತತ್ವನಿರೂಪಕವಾದ ಗ್ರಂಥಗಳು ರಚಿತವಾಗಲಿ, ಕನ್ನಡ ಜ್ಞಾನಭಾಂಡಾರವು ತುಂಬಲಿ ಎಂದು ಹಾರೈಸುತ್ತೇನೆ.

ರಂ. ಶ್ರೀ. ಮುಗಳಿ



ಫ್ಲೈಯಿಂಗ್ ಸಾಸರ್*

ನಮ್ಮ ಹಿಂದಿನ ಕಥೆಗಳಲ್ಲಿ ಬಹು ಸೊಗಸಾದ ಕಲ್ಪನಾಸಾಮ್ರಾಜ್ಯ ನಿರ್ಮಾಣವಾಗಿರುವುದನ್ನು ಕಾಣುತ್ತೇವೆ. ಅವುಗಳಲ್ಲಿ ವರ್ಣನೆಗಳು ರಮ್ಯವಾಗಿ ಮನೋಹರವಾಗಿ ಆಶ್ಚರ್ಯಕರವಾಗಿವೆ. ಇಂತಹ ವರ್ಣನೆಗಳು ಒಂದಲ್ಲ, ಎರಡಲ್ಲ, ಹತ್ತಾರು! ಯಾವ ಸ್ಥಳಕ್ಕೆ ಅಂದರೆ ಆ ಸ್ಥಳಕ್ಕೆ ಕೊಂಡುಹೋಗುವ ಕೀಲುಕುದುರೆ, ಹಾರುವ ಪಾದರಕ್ಷೆ, ಮಾಯಾ ಜಮಖಾನ, ಕೇಳಿದ್ದನ್ನು ತಕ್ಷಣವೇ ಉಂಟುಮಾಡಿಕೊಡುವ ಅಲ್ಲಾವುದ್ದೀನನ ಮಾಯಾದೀಪ ಮೊದಲಾದಂತಹ ವಸ್ತುಗಳು ಅದೃಷ್ಟವಂತರಿಗೆ ಒದಗಿಬಂದ ಪ್ರಸಂಗಗಳು ಬೇಕಾದಷ್ಟು.

---

* 'ಫ್ಲೈಯಿಂಗ್ ಸಾಸರು' ವಿಷಯದಲ್ಲಿ ಈಗಾಗಲೆ ಸಾಹಿತ್ಯ ಬೆಳೆದಿದೆ, ಹಲವಾರು ಪುಸ್ತಕಗಳೂ ಲೇಖನಗಳೂ ಪ್ರಕಟವಾಗಿವೆ. ಈ ಲೇಖನಕ್ಕೆ ಆಧಾರ 'Flying Saucers have Landed by Desmond Leslie and George Adamski; Flying Saucers from the Moon by N. T. Wilkins; Flying Saucers from other Sapce by D. E. Keyhoe; Man from Mars by Cedric Allinghan ಮುಂತಾದ ಪುಸ್ತಕಗಳು ಮತ್ತು ನಾನಾ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಅನೇಕ ಲೇಖನಗಳು. ಈ ಪುಸ್ತಕಗಳು ಫ್ರಾನ್ಸಿನಲ್ಲಿರುವ ವೇದಾಂತ ರಾಮಕೃಷ್ಣ ಆಶ್ರಮದ ಸ್ವಾಮಿ ಸಿದ್ಧೇಶ್ವರಾನಂದಜಿ ಅವರು ಶ್ರೀ ಕುವೆಂಪು ಅವರಿಗೆ ಕಳುಹಿಸಿ ಕೊಟ್ಟವು. ಸ್ವಾಮಿ ಸಿದ್ಧೇಶ್ವರಾನಂದಜಿ, ಪುಸ್ತಕಗಳನ್ನು ಕಳುಹಿಸಿಕೊಡುತ್ತ ಹೀಗೆ ಬರೆದಿದ್ದಾರೆ: With all love and greetings I am offering you this document of facts staggering the wildest imagination, a subject that add another dimention to our thinking, of course under thought realm, a phenomena of the waking state.

ನಮ್ಮ ಕಾವ್ಯಗಳಲ್ಲಿ ಕಾಣುವ ಅದ್ಭುತ ಮತ್ತು ಮಹತ್ತರವಾದ ವಿಷಯಗಳಿಗೇನು ಕಡಿಮೆಯಿಲ್ಲ. ಕಾಮಧೇನು, ಕಲ್ಪತರು ಅಂತಹವುಗಳ ವರ್ಣನೆ ಯಾರನ್ನು ಆಶಾವಂತರನ್ನಾಗಿಮಾಡುವುದಿಲ್ಲ! ಎಷ್ಟು ಜನರಿಗಂದರೆ ಅಷ್ಟು ಜನರಿಗೆ ಬಯಸಿದ ಭಕ್ಷ್ಯಗಳನ್ನು ಒದಗಿಸುವ ಅಕ್ಷಯಪಾತ್ರೆ ಯಾರಿಗೆ ಬೇಡ? ಒಂದು ತೊಟ್ಟು ಸೇವಿಸಿದರೆ ಸಾಕು ಹಸಿವೆಯ ಬಾಧೆ, ನಿದ್ರೆಯ ಕಾಟ, ಮುಪ್ಪಿನ ಗೋಳು—ಈ ಎಲ್ಲವೂ ತಪ್ಪಿ ಅಮರರನ್ನಾಗಿಮಾಡುವ ಅಮೃತಬಿಂದು ಬೇಡ ಅನ್ನುವವರಾರು? ಈರೇಳು ಲೋಕಗಳಲ್ಲಿ ಎಲ್ಲಿಗೆಂದರೆ ಅಲ್ಲಿಗೆ ಎಷ್ಟು ಜನರನ್ನೆಂದರೆ ಅಷ್ಟು ಜನರನ್ನು ಮನೋವೇಗಕ್ಕೂ ಮಿಗಿಲಾದ ವೇಗದಲ್ಲಿ ಸುರಕ್ಷಿತವಾಗಿ ಕೊಂಡುಹೋಗುವ ರಾವಣನ ಪುಷ್ಪಕ ವಿಮಾನದಂತಹದೊಂದು ಸಿಗುವುದಾದರೆ ಅಮೆರಿಕ ರಷ್ಯದೇಶಗಳು ಏನನ್ನು ಬೇಕಾದರೂ ಬಲಿಕೊಡಲು ಸಿದ್ಧವಾಗವು ಎನ್ನಲಾಗುವುದೆ? ಮಂತ್ರಿಸಿಬಿಟ್ಟರೆ ವೈರಿಸಮೂಹವನ್ನೇ ಭಸ್ಮಮಾಡುವ ಆಗ್ನೇಯಾಸ್ತ್ರ, ಸಾಗರಗಳ ನಿರ್ಮಾಣಮಾಡಿ ವೈರಿಗಳನ್ನೆಲ್ಲ ಕೊಚ್ಚಿಕೊಂಡುಹೋಗುವ ವಾರುಣಾಸ್ತ್ರ ಮೊದಲಾದ ಅಸ್ತ್ರತಂತ್ರ ಕೈಗೂಡುವುದಾದರೆ ರಷ್ಯ ಅಮೇರಿಕಗಳು ಒಂದನ್ನು ಮತ್ತೊಂದು ಎರಿಹೋಗಿ ನಾಶವಾಗಲಿಕ್ಕೂ ಸಿದ್ಧವಿಲ್ಲ ಎನ್ನುವುದೆಂತು?

ಇಷ್ಟಕ್ಕೆ ಆ ಕವಿಬ್ರಹ್ಮರ ಸೃಷ್ಟಿ ತೀರಲಿಲ್ಲ. ಈರೇಳು ಲೋಕಗಳನ್ನು ನಿರ್ಮಿಸಿ ಕಿನ್ನರ, ಕಿಂಪುರುಷ, ಯಕ್ಷ, ಸುರ ಮೊದಲಾದ ಉತ್ಕೃಷ್ಟ ಜೀವವರ್ಗಗಳನ್ನು ಸೃಷ್ಟಿಸಿ ಒಂದೊಂದು ಲೋಕದಲ್ಲಿ ಒಂದೊಂದು ವರ್ಗದವರನ್ನು ತುಂಬಿರುವರು. ಮಾನವನು ಹಸಿವೆಯಿಂದ, ಮುಪ್ಪಿನಿಂದ, ಸಾವಿನಿಂದ ಬಳಲುತ್ತಿದ್ದರೆ; ಹಸಿವೆಯ ಆತಂಕವಿಲ್ಲದೆ, ನಿದ್ದೆಯ ಬಾಧೆಯಿಲ್ಲದೆ, ಮುಪ್ಪಿನ ಗೋಳಿಲ್ಲದೆ ಅಮರರಾಗಿ ಯಾವಾಗಲೂ ಯೌವನತುಂಬಿ ಮಾನವನ ಪಡೆಪಾಟಲನ್ನು ನೋಡಿ ವಿನೋದಪಡುತ್ತ ಆ ದೇವಲೋಕದ ಸಲ್ಲನಲ್ಲೆಯರು ವಿಹರಿಸುತ್ತಿರುವರು. ಈ ಸುಖವನ್ನು ನೋಡಿ ಅದಾರಿಗೆ ತಾನೆ ಅಸೂಯೆ ಮೂಡದು!

ಹೀಗೆ ಆ ಮಹಾ ಮೇಧಾವಿಗಳ ಕಲ್ಪನಾ ಸಾಮ್ರಾಜ್ಯಗಳು ವರ್ಣಿತವಾಗಿವೆ. ಅದನ್ನೆಲ್ಲ ನಾವು ಮತ್ತೆ ಮತ್ತೆ ಓದಿ ಓದಿ ಮನೋರಂಜನೆ ಪಡೆಯುತ್ತಿದ್ದೇವೆ. ಒಳ್ಳೆಯ ಸೊಗಸಾದ ಕಲ್ಪನೆ, ಅದೆಷ್ಟು ರಮ್ಯವಾಗಿದೆ, 'ರವಿ ಕಾಣದ್ದನ್ನು ಕವಿ ಕಂಡ' ಅನ್ನುವುದರಲ್ಲಿ ಉತ್ಪ್ರೇಕ್ಷೆ ತಾನೆ ಏನು ಎಂದು ಮೆಚ್ಚುತ್ತೇವೆ. ಈಗಿನ ಕಾಲದಲ್ಲಿ ಈ ಕಲ್ಪನಾ ಶಕ್ತಿಯೂ ಕಡಿಮೆಯಾಗಿ ಕಾವ್ಯಗಳಲ್ಲಿ ವರ್ಣಿತವಾಗಿರುವ ಮಹಾ ಸನ್ನಿವೇಶಗಳನ್ನು ಪೂರ್ಣ ಅರ್ಥಮಾಡಿಕೊಳ್ಳುವ ಶಕ್ತಿ ಕುಗ್ಗುತ್ತಿದೆಯೇನೊ ಎನಿಸುತ್ತದೆ. ಆದರೂ ಈಚೀಚೆಗೆ ಒದಗುತ್ತಿರುವ ಪ್ರಸಂಗಗಳಿಂದ ಕಾವ್ಯಗಳ ವರ್ಣನೆ ಕಲ್ಪನೆಯಾಗಿರದೆ

ನಿಜವೇ ಏಕಿರಬಾರದು ಎಂಬ ಸಂದೇಹ ಹುಟ್ಟಿದರೆ ಅದೇನು ಆಶ್ಚರ್ಯವಲ್ಲ. ಕವಿಗಳು ತಮ್ಮ ಅಂತರ್‌ದೃಷ್ಟಿಯಿಂದ ಅವ್ಯಕ್ತವಾಗಿರುವುದನ್ನು ಕಂಡು ಅನುಭವಿಸಿ ವರ್ಣಿಸಿರಬಾರದೇಕೆ ಅನಿಸುತ್ತದೆ.

ಕಾವ್ಯದ ಕಾಲ ಬೇಡ, ಈಚೆಗೆ ತೆಗೆದುಕೊಂಡರೂ ಅದು ಸರಿ ಎನಿಸದಿರದು. ಮಂಗಳಗ್ರಹಕ್ಕೆ ಎರಡು ಉಪಗ್ರಹಗಳಿವೆ. ಅವುಗಳು ಗ್ರಹದ ಸುತ್ತ ಸುತ್ತುವ ರೀತಿ ನಮ್ಮ ಚಂದ್ರನಂತಲ್ಲದೆ ವಿಚಿತ್ರ. ಒಂದು ಪಶ್ಚಿಮದಿಂದ ಪೂರ್ವಕ್ಕೆ ಸುತ್ತಿದರೆ ಇನ್ನೊಂದು ಉತ್ತರದಿಂದ ದಕ್ಷಿಣಕ್ಕೆ ಸುತ್ತುತ್ತದೆ. ಈ ಗ್ರಹಗಳಿರುವುದು ಗೊತ್ತಾದದ್ದು ೧೮೭೭ ರಲ್ಲಿ. ಅದಕ್ಕೂ ಹಿಂದೆ ದೂರದರ್ಶಿ ಸೌಲಭ್ಯವಿಲ್ಲದ ಕಾಲದಲ್ಲಿದ್ದ ಡಾನ್‌ಸ್ವಿಫ್ಟ್ ತನ್ನ ಗಲಿವರನ ಪ್ರವಾಸ ಪುಸ್ತಕದಲ್ಲಿ ಈ ವಿಷಯ ವಿವರಿಸಿದ್ದಾನೆ; ವಾಲ್ಟೇಯರ್ ತನ್ನ ಮೈಕ್ರೊಮೆಗಾಸ್‌ನಲ್ಲಿ ವಿವರಿಸಿದ್ದಾನೆ. ಇವರಿಗೆ ಅದು ಹೇಗೆ ಗೊತ್ತಿತ್ತು? ಅವರ ಅಂತರ್‌ದೃಷ್ಟಿಯಿಂದಲೇ ಎಂದು ಹೇಳಿದರೆ ತಪ್ಪಾಗಲಾರದು. ಬೇರೆ ಲೋಕದ ಜನರನ್ನು ಕಿನ್ನರರೆಂದೋ ಯಕ್ಷರೆಂದೋ ದೇವತೆಗಳೆಂದೋ ಕರೆದಿರಬಹುದು. ಅವರ ಲೋಕಸಂಚಾರ ಸೌಲಭ್ಯವನ್ನು ಪುಷ್ಪಕವಿಮಾನವೋ ಮಾಯಾ ಜಮಖಾನವೋ ಕೀಲುಕುದುರೆಯೋ ಎಂದೂ ವರ್ಣಿಸಿರಬಹುದು. ಈಗ ಎಲ್ಲೆಲ್ಲೂ ಪ್ರಚಲಿತವಾಗಿ ಹರಡುತ್ತಿರುವ 'ಫ್ಲೈಯಿಂಗ್ ಸಾಸರ್' ವಿಷಯ ನಿಜವಾದುದಾದರೆ ನಮ್ಮ ಕಾವ್ಯಗಳ ಕಲ್ಪನೆಯೂ ಉತ್ಪ್ರೇಕ್ಷೆಯಿದ್ದರೂ ನಿಜವಾಗಬಹುದು.

ಸುಮಾರು ನಾಲ್ಕು ಶತಮಾನಕ್ಕೂ ಹಿಂದಿನಿಂದ ಈ 'ಫ್ಲೈಯಿಂಗ್ ಸಾಸರ್' ಕತೆಗಳು ಕೇಳಿಬರುತ್ತಿವೆ. ಗ್ರೀಕ್ ರೋಮನರ ಕಾಲದಿಂದ ಅಂದರೂ ತಪ್ಪಾಗಲಾರದು. ಇತ್ತೀಚೆಗೆ ಅದರಲ್ಲೂ ಎರಡನೆಯ ಮಹಾಯುದ್ಧವಾದ ಮೇಲೆ ಅವುಗಳು ಕಾಣಿಸಿಕೊಳ್ಳುವುದು ಹೆಚ್ಚಾಗಿದೆ. ಅಮೆರಿಕದಲ್ಲಿ, ಇಂಗ್ಲೆಂಡಿನಲ್ಲಿ, ಜಪಾನಿನಲ್ಲಿ, ಫ್ರಾನ್ಸಿನಲ್ಲಿ ಹಾಗೂ ಎಲ್ಲೆಲ್ಲೊ ಇವುಗಳ ಹಾರಾಟ ಜಾಸ್ತಿಯಾಯಿತು. ರಷ್ಯದಲ್ಲೂ ಇರಬೇಕು. ಜಪಾನಿನವರು ಜರ್ಮನರದೇನೋ ಸಂಶೋಧನೆಯ ಫಲ ಇದು ಎಂದುಕೊಂಡರು. ಅಮೆರಿಕನ್ನರು ರಷ್ಯನ್ನರ ಮಸಲತ್ತಿನ ಸಂಶೋಧನೆ ಇದು ಎಂದರು. ರಷ್ಯನ್ನರು ಇದು ಅಮೆರಿಕನರದೇ ಇರಬೇಕು, ಏನೋ ಚಳಕ ನಡಸುತ್ತಿದ್ದಾರೆ ಎಂದುಕೊಂಡಿರಬೇಕು. ಹೀಗೆ ಒಬ್ಬರು ಇನ್ನೊಬ್ಬರಲ್ಲಿ ಸಂಶಯಪಟ್ಟುಕೊಂಡರು. ಸಾಸರುಗಳ ಹಾರಾಟವನ್ನು ಕಂಡ ಸಾಮಾನ್ಯಜನ ತಮ್ಮ ತಮ್ಮ ಸರಕಾರಗಳು ನಡಸುತ್ತಿರುವ ಏನೋ ಸಂಶೋಧನೆ ಇರಬೇಕು ಎಂದು ತಿಳಿದರು. ಕೆಲವು ವಿಜ್ಞಾನಿಗಳು ವಾಯುಮಂಡಲದಲ್ಲಿ ಪ್ರಕೃತಿಯ ಬದಲಾವಣೆಯಿಂದ ಒದಗುವ ಬೆಳಕು ಅಥವಾ ಆಗಾಗ್ಗೆ ಸಂಭವಿಸುವ ಉಲ್ಕಾಪಾತಗಳಿರಬೇಕೆಂದು ಊಹಿಸಿದರು. ಆದರೆ ಹೀಗೆ ಬಹುಕಾಲ

ಊಹೆ ಪ್ರತಿ ಊಹೆಯಲ್ಲಿ ನಿಲ್ಲಲಾಗಲಿಲ್ಲ. 'ಫ್ಲೈಯಿಂಗ್ ಸಾಸರಿನ' ಕತೆಗಳು ಚಿತ್ರ ವಿಚಿತ್ರವಾಗಿ ಹರಡತೊಡಗಿದವು. ಪ್ರತ್ಯಕ್ಷವಾಗಿ ಕಂಡ ಅನೇಕರು ಅವುಗಳು ಲೋಹದಿಂದ ತಯಾರಾದ ಯಂತ್ರಗಳೆಂದು ಹೇಳಿದರು. ಈ ಗಲಾಟೆ ಹೆಚ್ಚಲು ಅಮೇರಿಕ ಸರಕಾರ ಈ ಫ್ಲೈಯಿಂಗ್ ಸಾಸರಿನ ಹಾರಾಟ ತಾನು ನಡಸುತ್ತಿರುವ ಕಾರ್ಯವಲ್ಲ ಎಂದು ಹೇಳಿತು. ಮಿಕ್ಕ ಸರಕಾರಗಳೂ ಇದಕ್ಕೆ ಸಂಬಂಧಪಟ್ಟಿಲ್ಲ ವೆಂಬುದೂ ಸ್ಪಷ್ಟವಾಯಿತು. ರಷ್ಯ ತನಗೆ ದತ್ತವಾಗಿ ಬಂದ 'ಸ್ಫಿಂಕ್ಸ್ ಮೌನ'ವನ್ನು ಆಚರಿಸಿದರೂ ಇದು ಅವರ ಕೆಲಸವೂ ಅಲ್ಲವೆಂಬುದು ತಿಳಿಯಿತು.

ಹಾಗಾದರೆ 'ಫ್ಲೈಯಿಂಗ್ ಸಾಸರ್' ಏನಿರಬೇಕು ಎಂಬ ಜಿಜ್ಞಾಸೆಗೆ ಪ್ರಾರಂಭವಾಯಿತು. ಹೀಗೆ ಆಶ್ಚರ್ಯಕರವಾದ ಸಂಗತಿ ನಡೆಯುತ್ತಿರಲು ಸರಕಾರ ಗಳಾದರೂ ಅದೆಂತು ನೆಮ್ಮದಿಯಿಂದಿರಲಾಗುವುದು? ಅಮೆರಿಕ, ಇಂಗ್ಲೆಂಡ್, ಕೆನಡ ಮೊದಲಾದ ದೇಶಗಳ ವಿಮಾನದಳದ ಇಲಾಖೆಗಳೂ ಖಗೋಳಶಾಸ್ತ್ರ ಕಾರಾಗಾರ ಗಳೂ ಇದರ ಪರಿಶೋಧನೆಗೆ ತೊಡಗಿದವು. ಅಮೆರಿಕ ಸರಕಾರ ಇಂದು ಇದಕ್ಕಾಗಿ 'ಸಾಸರು ಪರಿಶೋಧನೆ' ಇಲಾಖೆಯೊಂದನ್ನು ಬೇರೆಯಾಗಿ ಪ್ರಾರಂಭಿಸಿ ಸತ್ಯಾ ಸತ್ಯಗಳನ್ನು ಶೋಧಿಸತೊಡಗಿದೆ. ಇದರಲ್ಲಿ ಆಸಕ್ತರಾದ ಕೆಲವು ಸಾರ್ವಜನಿಕರೂ ಸಂಶೋಧನೆ ನಡೆಸತೊಡಗಿದಾರೆ. ಈ ಬಗೆಯಲ್ಲಿ ಕಾರ್ಯ ಪ್ರಾರಂಭವಾದ ಮೇಲೂ ನಿರ್ದಿಷ್ಟವಾಗಿ ಏನೆಂಬುದು ಗೊತ್ತಾಗಲಿಲ್ಲ. ಕಣ್ಣಿಂದ ಕಂಡವರು ವಿಷಯ ತಿಳಿಸಿದರೆ, ಅದೇ ಸರಿ ಎಂದು ನಂಬಲು ಅದನ್ನು ಕಾಣದ ವಿಜ್ಞಾನಿಗಳು ಹಿಂಜರಿದರು. ಅಂತು ಒಂದು ಬೋಗುಣಿಯನ್ನು ಮತ್ತೊಂದು ಬೋಗುಣಿಯ ಮೇಲೆ ಮುಚ್ಚಿದರೆ ಕಾಣುವ ಆಕಾರದಂತಹ ವಸ್ತುಗಳು ಒಮ್ಮೊಮ್ಮೆ ಒಂಟೊಂಟಿಯಾಗಿ ಒಮ್ಮೊಮ್ಮೆ ಗುಂಪಾಗಿ ಪ್ರಕಾಶಮಾನವಾಗಿ ಆಕಾಶದಲ್ಲಿ ಅತಿ ವೇಗದಿಂದ ಹರಿದಾಡಿ ಗಗನವೇರಿ ಮರೆಯಾಗುತ್ತಿದ್ದುದರಿಂದ ಅವುಗಳು ಏನು ಎಂಬುದನ್ನು ನಿಖರವಾಗಿ ಹೇಳುವುದು ಕಷ್ಟವಾಯಿತು. ಹಲವು ವೇಳೆ ವಿಮಾನ ಚಾಲಕರು ತಮ್ಮ ವಿಮಾನಗಳನ್ನು ಹಾರಿಸಿ ಸಾಸರುಗಳ ಬೆನ್ನಟ್ಟಿಹೋಗಿದ್ದಾರೆ. ಆದರೆ ಅವುಗಳ ವೇಗವನ್ನು ಅನುಸರಿಸಲಾರದೆ ನಿಷ್ಫಲವಾಗಿ ಹಿಂದಿರುಗಿದ್ದಾರೆ. ಆಮೇಲಾಮೇಲೆ ಎರಡನೆಯ ಮಹಾಯುದ್ಧ ನಡೆದು ಅಣುಬಾಂಬು, ಜಲಜನಕಬಾಂಬುಗಳ ಸಿಡಿತ ನಡೆಯತೊಡಗಿದ ಮೇಲೆ ಅಲ್ಲಲ್ಲಿ ಹೆಚ್ಚು ಹೆಚ್ಚಾಗಿ ಸಾಸರುಗಳು ಕಾಣಿಸಿಕೊಂಡುದರಿಂದ ಇವುಗಳ ಸ್ವರೂಪ ಕೊಂಚಮಟ್ಟಿಗೆ ತಿಳಿಯುವಂತಾಯಿತು. ಈ ಫ್ಲೈಯಿಂಗ್ ಸಾಸರುಗಳು ಎಂಟಡಿ ವ್ಯಾಸವುಳ್ಳ ಗಾತ್ರ ದಿಂದ ನೂರಡಿ ವ್ಯಾಸವುಳ್ಳ ಗಾತ್ರದ ವರೆಗೂ ಕಾಣಿಸಿಕೊಳ್ಳತೊಡಗಿದವು. ಅಷ್ಟೇ ಅಲ್ಲ. ಗೂಡಿನಲ್ಲಿ ಪಾರಿವಾಳಗಳನ್ನು ತುಂಬಿತಂದು ಬೇಕಾದ ಸ್ಥಳದಿಂದ ಹಾರಬಿಡು

ವಂತೆ ಈ ಫ್ಲೈಯಿಂಗ್ ಸಾಸರುಗಳಿಗೆ ನೆಲೆಯಾಗಿ ಅವುಗಳನ್ನು ತುಂಬಿತಂದು ಭೂಮಿಯ ಆಕಾಶದಲ್ಲಿ ಎಲ್ಲೋ ತೇಲಿನಿಂತು ಅಲ್ಲಿಂದ ಅವುಗಳನ್ನು ಹಾರಬಿಡುವ ಬಹು ದೊಡ್ಡದಾದ ತಾಯಿ ವಿಮಾನಗಳೂ ಹಲವರಿಗೆ ಕಾಣಿಸಿಕೊಂಡಿವೆ. ಈ ವಿಮಾನ ಸಿಗಾರ್ (ಹೊಗೆಬತ್ತಿ) ಆಕಾರದಲ್ಲಿವೆಯಂತೆ. ಇವು ಒಂದೊಂದು ಸಾವಿರ ಅಡಿಯಿಂದ ಮೈಲಿಗಟ್ಟಲೆ ಉದ್ದದಷ್ಟು ದೊಡ್ಡವಾಗಿವೆ ಎಂದು ಕಂಡವರು ಹೇಳುತ್ತಾರೆ. ಇವುಗಳ ವೇಗ ಇಲ್ಲಿಯ ವರೆಗೆ ಗೊತ್ತಾಗಿರುವಂತೆ ಗಂಟೆಗೆ ೧೮,೦೦೦ ಮೈಲಿಗಳು. ಇನ್ನೂ ಹೆಚ್ಚಿರಬಹುದು!

ಇಷ್ಟೆಲ್ಲ ನಡೆಯುತ್ತಿರುವ ಸುದ್ದಿ ಹರಡಿ ಜನರ ಕುತೂಹಲ ಕೆರಳಿರುವಾಗ ಸರಕಾರಗಳು ತಾನೆ ಹೇಗೆ ಸುಮ್ಮನಿರಲಾದೀತು? ಸರಕಾರಗಳ ವಿಮಾನಗಳ ಶಾಖೆಗಳು ತಮ್ಮ ರೇಡಾರ್ ಮೊದಲಾದ ಯಂತ್ರಸಲಕರಣೆಯಿಂದ ಪರಿಶೋಧನೆಗೆ ತೊಡಗಿದವು. ಪರಿಶೋಧನೆಯಲ್ಲಿ ಕಂಡುಬಂದ ವಿಷಯಗಳನ್ನೆಲ್ಲ ಹೊರಗೆಡಹಲಿಲ್ಲ. ಅದು ಸ್ವಭಾವಿಕ. ದೇಶದ ಸುರಕ್ಷತೆಯ ಹೊಣೆಹೊತ್ತ ಸರಕಾರಕ್ಕೆ ಸಾರ್ವಜನಿಕ ಹಿತದೃಷ್ಟಿಯಲ್ಲಿ ಯಾವದನ್ನು ಬಯಲುಮಾಡಬಹುದೊ ಯಾವುದನ್ನು ಗುಟ್ಟಾಗಿಟ್ಟಿರಬೇಕೊ ಆ ಜವಾಬ್ದಾರಿಯಿರುತ್ತದೆ. ಜನರ ಮನಸ್ಸಿನಲ್ಲಿ ಅಲ್ಲಸಲ್ಲದ ಕಲಕಾಟ ಉಂಟುಮಾಡ ಬಾರದು. ಅದರಲ್ಲೂ ಅಮೆರಿಕದ ಜನ ಸ್ವಲ್ಪಕ್ಕೆಲ್ಲ ಮತಿಗೆಡುವರು. ೧೯೩೮ ರಲ್ಲಿ ವೆಲ್ಸ್‌ರವರ 'ಪ್ರಪಂಚಗಳ ಯುದ್ಧ' ಎಂಬ ಕಾದಂಬರಿಯ ವಿಷಯ ಅಮೆರಿಕ ಆಕಾಶವಾಣಿಯ ಮೂಲಕ ಪ್ರಸಾರವಾದಾಗ ಆ ಕಾದಂಬರಿಯಲ್ಲಿ ಬೇರೆ ಲೋಕದ ಜನರು ಭೂಲೋಕದ ಧಾಳಿಮಾಡಿದರು ಎಂದಿರುವುದನ್ನು ನಿಜವೆಂದೇ ತಿಳಿದು ಅಮೆರಿಕದ ಜನ ನಡೆದುಕೊಂಡ ರೀತಿ ಅಸಾಧ್ಯವಾಗಿತ್ತು. ಆ ಧಾಳಿಯಿಂದ ತಪ್ಪಿಸಿ ಕೊಳ್ಳಲು ಏನೇನು ಕಾರ್ಯ ಕೈಗೊಳ್ಳಬೇಕೊ ಅದೆಲ್ಲ ಆಯಿತು. ಧಾಳಿ ನಿಜವಲ್ಲ ಅದೊಂದು ಕಾದಂಬರಿಯ ಕಥೆಯೆಂದು ಜನರನ್ನು ಸಮಾಧಾನಗೊಳಿಸುವುದು ಕಷ್ಟತರವಾಯಿತು. ಹೀಗೆ ಜನರು ಕಂಗಾಲು ಆಗದಂತೆ ನೋಡಿಕೊಳ್ಳಲು ಯಾವ ವಿಷಯ ಯಾವಾಗ ಹೇಳಬೇಕೆಂಬ ಪರಿಜ್ಞಾನ ಸರಕಾರ ಉಳಿಸಿಕೊಳ್ಳಬೇಕು. ಅಮೆರಿಕದ ವಿಮಾನ ಇಲಾಖೆಯಲ್ಲಿ ಈ ಫ್ಲೈಯಿಂಗ್ ಸಾಸರಿಗೆ ಸಂಬಂಧಪಟ್ಟ ಪ್ರಸಂಗಗಳು ೩,೦೦೦ ಕ್ಕೂ ಮೀರಿ ಇವೆಯಂತೆ. ಈಗ ಜನಕ್ಕೆ ಗೊತ್ತಾಗಿರುವು ದಕ್ಕಿಂತ ಇನ್ನೂ ಹೆಚ್ಚಿನ ಸತ್ಯವಾದ ಸಂಗತಿಗಳನ್ನೊಳಗೊಂಡ ಪ್ರಸಂಗಗಳೂ ಇವೆಯಂತೆ. ಆದರೆ ಹೊರಗೆ ಗೊತ್ತಾಗಿರುವುವು ಕೆಲವು; ಅವುಗಳಲ್ಲಿ ಒಂದೆರಡನ್ನು ಇಲ್ಲಿ ಉದಾಹರಿಸಬಹುದು.

'ನ್ಯೂಯಾರ್ಕ್ ಹೆರಾಲ್ಡ್' ಪತ್ರಿಕೆಯ ೧೧-೪-೧೮೯೭ ರ ಸಂಚಿಕೆಯಲ್ಲಿ ಬಂದ

ಸುದ್ದಿ ಇದು—೧೮೯೭ ಏಪ್ರಿಲ್ ೯, ೧೦ ರ ರಾತ್ರಿ ೨ ಗಂಟೆಯ ವರೆಗೆ ಚಿಕಾಗೊ ನಗರದ ಮೇಲೆ ಸಿಗಾರ್ (ಹೊಗೆಬತ್ತಿ) ಆಕಾರದ ಎರಡು ದೊಡ್ಡ ಯಕ್ಷ ಆಕಾಶ ನೌಕೆಗಳನ್ನು ಆಶ್ಚರ್ಯ ಮುಗ್ಧರಾದ ಸಾವಿರಾರು ಜನರು ವೀಕ್ಷಿಸಿದರು. ಆ ನೌಕೆಗಳ ಫೋಟೊ ಚಿತ್ರಗಳನ್ನು ಕೂಡ ತೆಗೆಯಲಾಯಿತು. ಅದೇ ಪತ್ರಿಕೆಯಲ್ಲಿ ಆ ಮೇಲೆ ಬಂದ ಸುದ್ದಿಯಂತೆ ಆ ಯಕ್ಷನೌಕೆಗಳು ಮುಂದಿನ ದಿನಗಳಲ್ಲಿ ಇನ್ನೂ ಕೆಲವು ಪಟ್ಟಣಗಳಲ್ಲಿ ಕಾಣಿಸಿಕೊಂಡವಂತೆ!

ಇನ್ನೊಂದು, ಇಂಥದು ನಡದದ್ದು ೧೯೫೦ ನೇ ಏಪ್ರಿಲ್ ೨೭ ನೆಯ ದಿನ. ವಿಮಾನ ಚಾಲಕ ಕ್ಯಾಪ್ಟನ್ ರಾಬರ್ಟ್ ಅಡಿಕ್ಸ್, ಜನಸಂಚಾರ ವಿಮಾನದಲ್ಲಿ ಚಿಕಾಕೋವಿಗೆ ಹೋಗುತ್ತಿದ್ದಾಗ ಕಂಡ ವಿಷಯ. ಇದಕ್ಕೆ ಮೊದಲು ಅಡಿಕ್ಸ್‌ಗೆ ಫ್ಲೈಯಿಂಗ್ ಸಾಸರಲ್ಲಿ ನಂಬಿಗೆ ಇರಲಿಲ್ಲ. ಆತನ ಮುಂದೆ ಆ ವಿಷಯ ಹಾಸ್ಯಕ್ರೀಡಾಗುತ್ತಿತ್ತು. ಆತ ಹೇಳುವುದು ಕೇಳಿ—

"ನಾವು ೩,೦೦೦ ಅಡಿ ಮೇಲಿದ್ದೆವು. ಅದು ನಮ್ಮ ಪಕ್ಕದಲ್ಲೇ ಚಲಿಸುತ್ತಿತ್ತು. ಅದು ಗುಂಡಾಗಿ ದಪ್ಪವಾಗಿ ಸಯವಾಗಿದ್ದು ಕಾಂತಿಪಂಕ್ತಿಯಿಂದ ಕೂಡಿತ್ತು. ಪ್ರಕಾಶಮಾನವಾದ ಕೆಂಪಸೆಯ ಬಣ್ಣದಿಂದ ಹೊಳೆಯುತ್ತಿತ್ತು. ವಿಮಾನದಲ್ಲಿದ್ದ ಪ್ರಯಾಣಿಕರೂ ಕಂಡರು. ನಾನು ಗೌರ್‌ಬೆಂಡ್ ವಿಮಾನ ನಿಲ್ದಾಣಕ್ಕೆ ರೇಡಿಯೋ ಮೂಲಕ ಆ ಸಮಾಚಾರ ತಿಳಿಸಿದೆ. ಅವರಿಗೆ ಗೊತ್ತಿಲ್ಲದೆ ಅವರಿಗೆ ಸಂಬಂಧಪಟ್ಟ ಯಾವ ವಿಮಾನವೂ ಆ ಆಕಾಶದಲ್ಲಿಲ್ಲವೆಂದು ಆ ನಿಲ್ದಾಣದ ಅಧಿಕಾರಿ ತಿಳಿಸಿದ. ಆ ಪ್ರಕಾಶಮಾನವಾದ ವಸ್ತುವಿನ ಹತ್ತಿರ ಹೋಗಲು ಪ್ರಯತ್ನಪಟ್ಟೆ. ಆದರೆ ಅದರ ಕಡೆಗೆ ನನ್ನ ವಿಮಾನ ತಿರುಗಿದೊಡನೆ ಅದು ಏನೋ ರೇಡಾರ್ ವಿಕರ್ಷಣ ಯಂತ್ರ ರಚನೆಯನ್ನೊಳಗೊಂಡಿದ್ದಂತೆ ತಕ್ಷಣವೇ ತನ್ನ ದಿಕ್ಕನ್ನು ಬದಲಾಯಿಸಿ, ಭೂಮಿಯಿಂದ ೧,೫೦೦ ಅಡಿ ಎತ್ತರಕ್ಕೆ ಇಳಿದು ಆಮೇಲೆ ಮೇಲಕ್ಕೆ ಹಾರಿ ಗಗನವನ್ನು ಸೇರಿತು."

ಇನ್ನೊಬ್ಬ ವಿಮಾನ ಚಾಲಕ ಕ್ಯಾಪ್ಟನ್ ವಿಲ್ಸ್ ಸ್ಪೆರ್ರೀ ಹೇಳುವುದು ಕೇಳಿ: ಈತನೂ ಫ್ಲೈಯಿಂಗ್ ಸಾಸರಲ್ಲಿ ನಂಬಿಗೆ ಇಲ್ಲದಿದ್ದವನು. ತಾನೇ ಕಂಡ ಮೇಲೆ ಅಮೆರಿಕದ 'ಫ್ಲೈಯಿಂಗ್' ಪತ್ರಿಕೆಯಲ್ಲಿ ಆತ ಬರೆದುದು ಇದು—

"ನಮ್ಮ ವಿಮಾನ ವಾಷಿಂಗ್‌ಟನ್ ಬಿಟ್ಟಾಗ ರಾತ್ರಿ ೯-೧೫ ಗಂಟೆಯಾಗಿತ್ತು. ಮೂವತ್ತು ಮೈಲಿ ದೂರಪ್ರಯಾಣ ನಡೆದಿತ್ತು. ಭೂಮಿಯಿಂದ ೧೮,೦೦೦ ಅಡಿ ಎತ್ತರದಲ್ಲಿದ್ದೆವು. ನನ್ನ ಜೊತೆಯ ಅಧಿಕಾರಿ ಗೇಟ್ಸ್ 'ಅದೇನು ನೋಡು' ಎಂದು ಕೂಗಿ ತೋರಿಸಿದನು. ನಾನು ತಿರುಗಿನೋಡಿದೆ. ನಕ್ಷತ್ರಕ್ಕಿಂತ ಅದೆಷ್ಟೋಪಾಲು ಪ್ರಕಾಶಮಾನವಾದ ನೀಲಿಬಣ್ಣದ ಅದು ನಮ್ಮ ಕಡೆ ಬರುತ್ತಿತ್ತು. ಅದು ಐದು ಕ್ಷಣ

ಚಲಿಸದೆ ನಿಂತು ತನ್ನ ದಿಕ್ಕನ್ನು ಬದಲಾಯಿಸಿ ನಮ್ಮ ಮತ್ತು ಚಂದ್ರನ ಮಧ್ಯೆ ಸರಿದು ಹೋಯಿತು. ಚಂದ್ರನಿಗೂ ನಮಗೂ ಮಧ್ಯೆ ಬಂದಾಗ ಚಂದ್ರನಿಗೆ ಅಡ್ಡಾಗಿ ಅದರ ಛಾಯರೂಪ ಆಕಾಶದಲ್ಲಿ ಕಂಡಿತು. ಅದು ಪ್ರಕಾಶ ಪಂಕ್ತಿಗಳನ್ನು ಬೀರಿತ್ತು. ಲೋಹದಿಂದ ತಯಾರಾಗಿದ್ದಂತೆ ಕಂಡಿತು. ಚಲನೆಯೋ ಅತಿ ವೇಗವಾಗಿತ್ತು. ನನ್ನ ವಿಮಾನವನ್ನು ತಿರುಗಿಸಿ ಅದನ್ನನುಸರಿಸಲು ಪ್ರಯತ್ನಿಸಿದೆ. ಅದು ಹಿಂದಕ್ಕೆ ತಿರುಗಿ ಹಾರಿ ಮರೆಯಾಯಿತು.

ವಿಮಾನ ಚಾಲಕರು ಕಂಡ ಇನ್ನೊಂದು ಪ್ರಸಂಗ ಹೇಳಿದರೆ ಹೆಚ್ಚಾಗಲಾರದು. ಕೇಳಿ :

ಇದು ನಡೆದದ್ದು ೧೯೫೦ ರ ಮಾರ್ಚಿ ೩೧ ರ ರಾತ್ರಿ. ಆದಮ್ ಮತ್ತು ಅಂಡರ್ಸನ್ ಇಬ್ಬರು ವಿಮಾನ ಚಾಲಕರು ತಮ್ಮ ವಿಮಾನಗಳನ್ನು ಹಾರಿಸುತ್ತಿದ್ದಾಗ ಇದ್ದಕ್ಕಿದ್ದಂತೆಯೇ ಒಂದು ದೊಡ್ಡ ಸಾಸರು ಇವರನ್ನು ಪರೀಕ್ಷಿಸಲೋ ಎಂಬಂತೆ ಇವರ ವಿಮಾನದ ಕಡೆ ನುಗ್ಗಿ ಬಂತು. "ನಾವು ಈ ವಿಷಯದಲ್ಲಿ ಕಿಂಚಿತ್ತೂ ನಂಬಿಗೆಯುಳ್ಳವರಾಗಿರಲಿಲ್ಲ. ಆದರೆ ಇದು ನೋಡಿ ಪೆಚ್ಚಾಗಿಬಿಟ್ಟೆವು. ಅದರ ಪ್ರಕಾಶ ಆ ನುರಿತ ಸಂಚಾಲಕರ ಕಣ್ಣುಗಳನ್ನು ಕೋರೈಸಿತು. ಅದರ ಗುಮ್ಮಟದ ಮಧ್ಯದಲ್ಲಿ ಸುತ್ತ ಬಿಳಿನೀಲಿಯ ಹೊಳೆವ ಬೆಳಕಿನ ಪಂಕ್ತಿಯಿತ್ತು. ಅದು ಬಹುಶಃ ನಿಶಾನಿಯೋ ಇಲ್ಲ ಯಂತ್ರವನ್ನು ತಿರುಗಿಸುವ ಶಕ್ತಿಯೋ ಆಗಿರಬೇಕು. ಆ ಪ್ರಭಾಪಂಕ್ತಿಗೆ ಕೆಳಗೆ ಆ ಗುಮ್ಮಟದಲ್ಲಿ ಎಂಟು ಹತ್ತು ಗುಂಡು ಕಿಂಡಿಗಳಿದ್ದುದು ಕಾಣುತ್ತಿತ್ತು. ಅವುಗಳು ಬಹುಶಃ ಆಕಾಶದಿಂದ ಶಕ್ತಿ ಹೀರುತ್ತಿದ್ದ ಕಿಂಡಿಗಳಿದ್ದರೂ ಇರಬಹುದು. ಕೊಂಚ ಹೊತ್ತು ಪರೀಕ್ಷೆ ನಡೆಸುವಂತೆ ನಡೆದು ಆಮೇಲೆ ಮೂತಿ ಮೇಲೆತ್ತಿ ಗಂಟೆಗೆ ಸಾವಿರ ಮೈಲಿ ವೇಗದಲ್ಲಿ ಗಗನಕ್ಕೇರಿಹೋಯಿತು."

ಕೆಲವು ಫ್ಲೈಯಿಂಗ್ ಸಾಸರುಗಳು ೯ ಅಂಗುಲದಷ್ಟು ಚಿಕ್ಕವು. ಈ ಬಗೆಯ ಚಿಕ್ಕಪುಟ್ಟ ಸಾಸರುಗಳನ್ನು ಬರೀ ವೀಕ್ಷಣೆಗಾಗಿ ಬಳಸುತ್ತಿದ್ದಾರೆಂದು ಹೇಳಬಹುದು. ಹಾರಾಟದಲ್ಲಿರುವ ನಮ್ಮ ವಿಮಾನಗಳನ್ನು ಬಳಸಿ ಅಲ್ಲಿ ಪರಿಸ್ಥಿತಿಯೇನು ಎಂಬುದನ್ನು ತಿಳಿಯುವಂತೆ ವರ್ತಿಸುತ್ತವೆಯಂತೆ! ಇವುಗಳ ಚಲನೆ ಅದೇನು ತಾಯಿ ಹಡಗಿನಲ್ಲಿರುವ ಚಾಲಕನ ಮಾನಸಿಕ ಭಾವನೆಯ ಶಕ್ತಿಯಿಂದಲೋ ಇಲ್ಲ ಇನ್ನಾವುದೋ ಸೂತ್ರ ಪ್ರಭಾವದಿಂದಲೋ ನಡೆಯುತ್ತಿರಬೇಕೆಂದು ಊಹಿಸಲಾಗಿದೆ.

ಇದೊಂದು ದುರಂತ ಕತೆ. ನಡೆದುದು ೭ ಜನವರಿ ೧೯೪೮ ರಲ್ಲಿ. ಕ್ಯಾಪ್ಟನ್ ಥಾಮಸ್ ಮೆಂಟಲ್ ಎರಡನೆಯ ಮಹಾಯುದ್ಧದಲ್ಲಿ ಖ್ಯಾತಿಗಳಿಸಿದ ವಿಮಾನ ಸಂಚಾಲಕ. ಆತನೂ ಮತ್ತಿಬ್ಬರು ಸಂಚಾಲಕರೂ ಆಕಾಶದಲ್ಲಿ ತಮ್ಮ ತಮ್ಮ

ವಿಮಾನದಲ್ಲಿ ಗಾಡ್ಮನ್ ನಿಲ್ದಾಣದ ಮೇಲೆ ಹಾರಾಡುತ್ತಿದ್ದರು. ಆಗ ಗುರುತಿಸಲಾಗದ ಅಪರಿಚಿತ ವಸ್ತು ವಿಶೇಷವೊಂದನ್ನು ಅನುಸರಿಸಿ, ಪರಿಶೋಧಿಸಬೇಕೆಂದು ಅವರಿಗೆ ಆಣತಿ ಬಂತು. ಈ ಆಣತಿ 'ಗಾಡ್ಮನ್' ವಿಮಾನ ನಿಲ್ದಾಣದ ಅಧಿಕಾರಿ ಕರ್ನಲ್ ಗೇ ಹಿಕ್ಸನಿಂದ ಬಂದುದು. ಗೇ ಹಿಕ್ಸ್ ಈ ಆಶ್ಚರ್ಯಕರ ವಸ್ತುವನ್ನು ಬಹುಕಾಲ ತನ್ನ 'ದೂರದರ್ಶಿ'ಯಿಂದ ವೀಕ್ಷಿಸಿ ಅನಂತರ ಆ ಸಂಚಾಲಕರಿಗೆ ಆಣತಿ ಕಳುಹಿಸಿದನು. ಕರ್ನಲ್ ಹಿಕ್ಸ್ ಹೇಳಿದ್ದು—

"ಅದು ಕೊಡೆಯಾಕಾರದಲ್ಲಿತ್ತು. ಬೆಳ್ಳಗೆ ಹೊಳೆಯುತ್ತಿತ್ತು. ಅದರ ಸುತ್ತ ಕೆಚ್ಚನೆಯ ಪ್ರಭಾಪಂಕ್ತಿಯೊಂದು ಪರಿಭ್ರಮಿಸುತ್ತಿತ್ತು" ಅದನ್ನನುಸರಿಸಿದ ವಿಮಾನ ಚಾಲಕರಲ್ಲಿ ಇಬ್ಬರು ಅದನ್ನನುಸರಿಸಲಾರದೆ ಹಿಂತಿರುಗಿದರು. ಆದರೆ ಮೆಂಟಲ್ ನಿಂದ ಬಂದ ಕೊನೆಯ ರೇಡಿಯೋ ಸುದ್ದಿ ಇದು.

"ಅದು ಬಲು ದೊಡ್ಡದು; ಲೋಹದಿಂದ ತಯಾರಾದಂತಿದೆ; ಅದರ ವ್ಯಾಸ ಸುಮಾರು ೧,೦೦೦ ಅಡಿ ಇರಬೇಕು. ಅದು ತನ್ನ ವೇಗವನ್ನು ಗಂಟೆಗೆ ೨೫೦ ಮೈಲಿಯಿಂದ ೪೦೦ ಮೈಲಿಗೇರಿಸಿದೆ; ನಾನದನ್ನು ಬೆನ್ನಟ್ಟಿ ಹೋಗುತ್ತಿದ್ದೇನೆ. ಇಪ್ಪತ್ತು ಸಾವಿರ ಅಡಿ ಎತ್ತರದ ವರೆಗೆ ಹೋಗಿ ಹಿಂತಿರುಗುತ್ತೇನೆ." ಆಮೇಲೆ ಗೊತ್ತಾದುದು ಮೆಂಟಲ್ ವಿಮಾನ ಗಂಡಾಂತರಕ್ಕೀಡಾಗಿ ತುಣುಕುತುಣುಕಾಗಿ ಒಡೆದುಬಿದ್ದುದು ಮತ್ತು ಮೆಂಟಲನ ಅಂತ್ಯ.

ವಿಮಾನ ಈ ಬಗೆಯಲ್ಲಿ ಅಪಘಾತಕ್ಕೀಡಾಗಬೇಕಾಗಿದ್ದರೆ ಅಸಾಧಾರಣವಾದ ಪರಿಸ್ಥಿತಿಯೊದಗಿರಬೇಕೆಂದು ಊಹಿಸಲಾಯಿತು.

ದೆಹಲಿಯಲ್ಲಿ ನಡೆದ ಪ್ರಸಂಗ ಇದು: ೧೯೫೧ ರ ಮಾರ್ಚಿ ೧೫ ರಂದು ಬೆಳಿಗ್ಗೆ ೧೦.೨೦ ರ ಸಮಯ; ದೆಹಲಿ ನಗರದ ಮೇಲೆ ಫ್ಲೈಯಿಂಗ್ ಸಾಸರೊಂದು ಕಾಣಿಸಿಕೊಂಡಿತು. ಅದನ್ನು ಸಾವಿರಾರುಮಂದಿ ಕುತೂಹಲದಿಂದ ವೀಕ್ಷಿಸಿದರು. ಆಕಾಶದಲ್ಲಿ ಇಪ್ಪತ್ತು ನಿಮಿಷಗಳ ಕಾಲ ಸುತ್ತುತ್ತಿತ್ತು. ಅದನ್ನು ವೀಕ್ಷಿಸಿದ ದೆಹಲಿ 'ಫ್ಲೈಯಿಂಗ್' ಮುಖ್ಯ ಇಂಜನಿಯರ್ ಪ್ರ್ಯಾನ್ಸ್ಲೀ ಪ್ಲೋಟ್ ಹೀಗೆ ಹೇಳಿದ್ದಾರೆ: ಅದು ಸಿಗಾರ್ (ಹೊಗೆಬತ್ತಿ) ಆಕಾರದಲ್ಲಿತ್ತು. ಸುಮಾರು ನೂರಡಿ ಉದ್ದ, ಕೊನೆಯಲ್ಲಿ ಜ್ವಾಲೆಯ ಬಳೆ. ನಿಶ್ಶಬ್ದವಾಗಿ ೫,೦೦೦ ಅಡಿ ಎತ್ತರದಲ್ಲಿ ಗಂಟೆಗೆ ೨,೦೦೦ ಮೈಲಿ ವೇಗದಲ್ಲಿ ಹಾರಾಡುತ್ತಿತ್ತು. ಲೋಹದಿಂದ ಮಾಡಿದಂತಿತ್ತು. ಅದು ಅತ್ತಿತ್ತ ತಿರುಗಿದಾಗ ಸೂರ್ಯ ಕಿರಣಗಳು ಅದರ ಮೇಲೆ ಬಿದ್ದು ಪ್ರತಿಫಲಿಸುತ್ತಿದ್ದುವು. ಇದೇನೆಂದು ಪರೀಕ್ಷಿಸಲು ಮೂರು ಜೆಟ್ ವಿಮಾನಗಳು ಮೇಲೆ ಹಾರಿದವು. ಕೂಡಲೆ ಅದು ವೇಗಗೊಂಡು ಅಂತರಿಕ್ಷಕ್ಕೆ ಹಾರಿ ಮರೆಯಾಯಿತು.

ಹೀಗೆ ಬೇಕಾದಷ್ಟು ಪ್ರಸಂಗಗಳು ನಡೆದಿರುವ ವರದಿಗಳಿವೆ. ಆದರೆ ಈ 'ಫ್ಲೈಯಿಂಗ್ ಸಾಸರ್' ವಿಷಯ ಇನ್ನೂ ಚರ್ಚಾಸ್ಪದವಾಗಿಯೇ ಇದೆ. ಕ್ಯಾಪ್ಟನ್ ಮೆಂಟಲ್ ಕಥೆಯನ್ನೇ ಕುರಿತು ಹಲವರು ಹಲವು ವಿಧದಲ್ಲಿ ಟೀಕೆ ಮಾಡಿದರು. ಮೆಂಟಲ್ ಶುಕ್ರ ಗ್ರಹವನ್ನೇ ಭ್ರಮೆಗೊಂಡು ಅನುಸರಿಸಿಹೋದನೆಂದು ಕೆಲವರೂ, ಯಾವುದೋ ಉಲ್ಕಾಪಾತದ ಬೆನ್ನಟ್ಟಿರಬೇಕೆಂದು ಕೆಲವರೂ, ಆಕಾಶಬುಟ್ಟಿಗೆ ಮರುಳಾಗಿರಬೇಕೆಂದು ಕೆಲವರೂ, ಹೇಳಿದರು. ಆದರೆ ಸನ್ನಿವೇಶವನ್ನು ಬಲ್ಲವರು ಮೆಂಟಲ್ ಅಟ್ಟಿಸಿಕೊಂಡು ಹೋದುದು "ಫ್ಲೈಯಿಂಗ್ ಸಾಸರೇ" ಎಂದು ನಿರ್ದಿಷ್ಟವಾಗಿ ಹೇಳಿದ್ದಾರೆ. ಮೆಂಟಲ್‌ನಂತಹ ೩,೦೦೦ ಗಂಟೆಗಳ ಕಾಲಕ್ಕೂ ಮೀರಿ ಆಕಾಶದಲ್ಲಿ ಬಗೆಬಗೆಯ ವಾತಾವರಣದಲ್ಲಿ ವಿಮಾನನಡೆಸಿ ಅನುಭವಗಳಿಸಿದ್ದ ನುರಿತ ವೈಮಾನಿಕ ಯಾವುದು ಯಾವುದಕ್ಕೋ ಭ್ರಮೆಗೊಳ್ಳಲಾರ. ಅವನಲ್ಲದೆ ಅವನೊಡನೆ ಇನ್ನೂ ಇಬ್ಬರು ವೈಮಾನಿಕರಿದ್ದರು. ಅಷ್ಟರ ಜೊತೆಗೆ ನಿಲ್ದಾಣದ ಅಧಿಕಾರಿ ಕರ್ನಲ್ ಹಿಕ್ಸ್ ಬಹಳ ಹೊತ್ತು ವೀಕ್ಷಿಸಿ ಅದನ್ನು ಅನುಸರಿಸಿ ನೋಡುವಂತೆ ಮೆಂಟಲ್‌ಗೆ ಹೇಳಿದ್ದು.

ಹಲವು ಸಾರಿ ಈ ಉಲ್ಕಾಪಾತಗಳೂ ಮತ್ತು ವಾತಾವರಣದಲ್ಲಿ ಅನಿಲಗಳ ಸಂಯೋಗದಿಂದ ಉಂಟಾಗಬಹುದಾದ ಪ್ರಭೆ ಮೊದಲಾದ ಬೆಳಕನ್ನು ಕಂಡು ಹಲವರು ಅನೇಕ ವೇಳೆ ಅವನ್ನು "ಫ್ಲೈಯಿಂಗ್ ಸಾಸರ್" ಎಂದು ಭ್ರಮಿಸಿರಬಹುದು. ಆದರೆ ಅಷ್ಟರಿಂದಲೇ ಈ ಫ್ಲೈಯಿಂಗ್ ಸಾಸರುಗಳ ಕಥೆ ಸುಳ್ಳೆನ್ನಲಾಗುವುದಿಲ್ಲ. ಫ್ಲೈಯಿಂಗ್ ಸಾಸರುಗಳನ್ನೂ ಅವುಗಳಲ್ಲಿ ಬರುವ ಜನರನ್ನೂ ಪ್ರತ್ಯಕ್ಷ ಕಂಡ ಕಥೆಗಳೂ ಅನೇಕವಿವೆ.

೧೯೪೭ರ ಜೂನ್ ೨೧ನೆಯ ದಿನ ಡಾಲ್ ಎಂಬುವನು ಮೂರಿ ದ್ವೀಪದ ಬಳಿ ದೋಣಿಯಲ್ಲಿ ಹೋಗುತ್ತಿದ್ದಾಗ ಸುಮಾರು ೨,೦೦೦ ಅಡಿ ಎತ್ತರದಲ್ಲಿ ಆರು ಸಾಸರುಗಳನ್ನು ಕಂಡನು. ಅವುಗಳಲ್ಲಿ ಒಂದು ಏನೋ ಕೆಟ್ಟು ತೊಂದರೆಗೀಡಾಗಿರುವಂತೆ ಕಂಡಿತು. ಇನ್ನೈದು ಅದನ್ನು ಸರಿಮಾಡಲೋಸುಗವೋ ಎನ್ನುವಂತೆ ಅದರ ಸುತ್ತ ಸುತ್ತುತ್ತ ಎಲ್ಲವೂ ೫೦೦ ಅಡಿ ಎತ್ತರಕ್ಕಿಳಿದವು. ಅಷ್ಟರಲ್ಲಿ ಇದ್ದಕ್ಕಿದ್ದಂತೆ ತೊಂದರೆಗೀಡಾಗಿದ್ದ ಸಾಸರಿನಿಂದ ಭೂಮ್ ಶಬ್ದವಾಗಿ ಬೆಳಕು ಚಿಮ್ಮಿತು. ಏನೊ ಕಪ್ಪನೆಯ ಸಣ್ಣನೆಯ ತೆಳುವಾದ ವಸ್ತುಗಳು ನೀರೊಳಗೆ ಬಿದ್ದು ಕಾಯ್ದ ಲೋಹ ನೀರೊಳಗೆ ಬಿದ್ದರಾಗುವ ಸುಯ್ ಶಬ್ದ ಕೇಳಿಬಂತು. ಕೊಂಚಹೊತ್ತಿನಲ್ಲೆ ಆ ಆರು ಸಾಸರುಗಳೂ ಮೇಲೇರಿ ಮಾಯವಾದವು.

ಫ್ಲೈಯಿಂಗ್ ಸಾಸರುಗಳು ಕೆಟ್ಟು ಭೂಮಿಗೆ ಬಿದ್ದಿರುವ ಘಟನೆಗಳೂ ಅನೇಕವಿವೆ. ಇಂಗ್ಲೆಂಡಿನಲ್ಲೊಮ್ಮೆ ಒಂದು ಸಣ್ಣ ಫ್ಲೈಯಿಂಗ್ ಸಾಸರು ಭೂಮಿಗೆ ಬಿದ್ದು

ಒಂದು ಹುಡುಗಿಗೆ ತಾಕಿ ಆ ಹುಡುಗಿ ಮೃತಿಹೊಂದಿದಳು. ಕೆಟ್ಟು ಭೂಮಿಗೆ ಬಿದ್ದ ಫ್ಲೈಯಿಂಗ್ ಸಾಸರುಗಳ ಗುರುತು ವಿಮಾನದಳದವರಿಗೆ ಬೇಕಾದಷ್ಟು ಗೊತ್ತಿರ ಬೇಕೆಂದು ಹೇಳುತ್ತಾರೆ. ೧೯೪೮ ರ ಫೆಬ್ರವರಿ ೧೮ ರಲ್ಲಿ ಒಂದು ಸ್ಫೋಟನೆ ನಡೆಯಿತು. ಅದು ಅದ್ಭುವಾಗಿತ್ತು. ಈ ಸಿಡಿತ ನಡೆಯುವುದಕ್ಕೆ ಕೊಂಚ ಮೊದಲು ಆಕಾಶದಲ್ಲಿ ಕೊಳವೆಯಾಕಾರದ ಲೋಹದ ಪ್ರಕಾಶಮಾನವಾದ ವಸ್ತು ಒಂದನ್ನು ವಿಮಾನ ಸಂಚಾಲಕರು ಈಕ್ಷಿಸಿದ್ದರು. ಅದರ ಮೂತಿ ಹೊಳೆಯುತ್ತಿತ್ತು. ಅದರ ಹಿಂಬದಿಯಿಂದ ಜ್ವಾಲೆ ಏಳುತ್ತಿತ್ತು. ೧೨,೫೦೦ ಅಡಿ ಎತ್ತರದಲ್ಲಿ ಹಾರುತ್ತಿದ್ದ ವಿಮಾನದಲ್ಲಿದ್ದ ಸಂಚಾಲಕನಿಗೆ ಸ್ಫೋಟನ ಭೂಮಿಗೆ ಹತ್ತಿರದಲ್ಲಿ ಆದಂತೆ ಕಂಡಿತಂತೆ. ಆದರೆ ಸಿಡಿದ ವಸ್ತುವಿನ ಚೂರೇನೂ ಭೂಮಿಯ ಮೇಲೆ ಸಿಗಲಿಲ್ಲ. ಅದೇನು ಅನಿಲ ರೂಪಕ್ಕೆ ಪರಿವರ್ತಿತವಾಗಿಹೋಯಿತೋ ಏನೊ. ಕೆನಡ ದೇಶದ 'ಸ್ವೀಪ್ ರಾಕ್ ಎಕೊ' ಪತ್ರಿಕೆಯಲ್ಲಿ ಪ್ರಕಟವಾದ ವರದಿ ನೋಡಿ—

"ನಾನು ನನ್ನ ಮಡದಿ ಇಬ್ಬರೂ ಮೀನು ಬೇಟೆಗೆಂದು ಒಂದು ಸಣ್ಣ ದೋಣಿ ಯಲ್ಲಿ ಹೊರಟೆವು. ಅದು ೧೯೫೦ ರ ಜುಲೈನ ಒಂದು ಭಾನುವಾರ. ಸಂಜೆ ಯಾಗುತ್ತ ಬಂತು. ದೋಣಿಯನ್ನು ಮರಳ ದಡಕ್ಕೆ ತಂದು ನಿಲ್ಲಿಸಿ ಮನೆಗೆ ಹಿಂದಿರುಗಲು ಸಿದ್ಧಮಾಡಿಕೊಳ್ಳುತ್ತಿದ್ದೆವು. ಇದ್ದಕ್ಕಿದಂತೆ ಏನೋ ವಾಯುಮಂಡಲ ವನ್ನು ಬಗೆದುಕೊಂಡು ಬರುವ ಸದ್ದಾಯಿತು. ನಾನು ಪಕ್ಕದ ಬಂಡೆಯನ್ನೇರಿ ಅದೇನಿರ ಬಹುದೆಂದು ನೋಡಿದೆ. ಆಶ್ಚರ್ಯ! ಸುಮಾರು ಫರ್ಲಾಂಗ್ ದೂರದಲ್ಲಿ ಆ ಕೊಲ್ಲಿಯ ನೀರಿಗೆ ಕೊಂಚ ಎತ್ತರದಲ್ಲಿ ಚಲಿಸದೆ ನಿಂತಿದ್ದ ಒಂದು ಪ್ರಕಾಶಮಾನವಾದ ವಸ್ತು ವನ್ನು ಕಂಡೆ. ನನ್ನ ಹೆಂಡತಿಯನ್ನು ಕರೆದು ನಾವಿಬ್ಬರೂ ಬಂಡೆಗಳ ಸಂದಿನಿಂದ ಅದರ ಕಾರ್ಯವನ್ನು ನೋಡತೊಡಗಿದೆವು. ನಮಗೆ ಕೊಂಚ ದೂರದಲ್ಲಿ ನೀರು ಕುಡಿಯಲು ಬಂದ ಜಿಂಕೆಯೊಂದು ಕೂಡ ಆ ಕಡೆ ದೃಷ್ಟಿಯಿಟ್ಟು ನಿಂತಿತು. ಆ ವಸ್ತುವಿನಲ್ಲಿದ್ದವರಿಗೆ ಆ ಜಿಂಕೆಯ ಇರುವಿಕೆ ಗೊತ್ತಾಗಿರಬೇಕು. ಆದರೆ ಅವರು ಅದಕ್ಕೆ ಅಷ್ಟು ಲಕ್ಷ್ಯ ಕೊಡಲಿಲ್ಲವೆಂದು ಕಾಣುತ್ತದೆ. ಆ ವಸ್ತು ಒಂದು ಬೋಗಣಿಯನ್ನು ಮತ್ತೊಂದರ ಮೇಲೆ ಮುಚ್ಚಿದ ಆಕಾರದಲ್ಲಿತ್ತು. ಅದರ ಎತ್ತರ ಮಧ್ಯದಲ್ಲಿ ಸುಮಾರು ೧೫ ಅಡಿ ಏಣಿನಲ್ಲಿ ೧೦ ಅಡಿ ಇದ್ದೀತು. ಮೇಲ್ಭಾಗದಲ್ಲಿ, ಹೊಳೆಯುತ್ತ ಸುತ್ತುತ್ತಿದ್ದ ಪ್ರಭೆಯ ಒಂದು ಬಳೆ ಕಾಣುತ್ತಿತ್ತು. ಏಣಿನ ಸುತ್ತಲೂ ಗುಂಡು ಕಿಂಡಿ ಗಳಿದ್ದುವು. ಅದರಿಂದ ನಾಲ್ಕು ಅಡಿ ಎತ್ತರದ ವ್ಯಕ್ತಿಗಳು ಹೊರಬಂದು ಏನೋ ಕೆಲಸದಲ್ಲಿ ತೊಡಗಿದರು. ಕೊಳವೆಯೊಂದನ್ನು ನೀರೊಳಗೆ ಇಳಿಬಿಟ್ಟು ಏನೋ ಸೇದುತ್ತಿದ್ದಂತೆ ಕಂಡಿತು. ಆ ಜನರ ಚಲನೆ ಯಂತ್ರಚಲನೆಯಂತೆ ಕಾಣು

ತ್ತಿತ್ತು. ಅವರ ಕೆಲಸ ಮುಗಿದಮೇಲೆ ಅವರೆಲ್ಲ ಒಳಗೆ ಸೇರಿದರು. ಅದು ಹಾರಿ ಹೋಯಿತು. ಮಾರನೆಯ ದಿನವೂ ನೋಡಿದೆವು. ಇನ್ನೊಂದು ದಿನ ನನ್ನ ಗೆಳೆಯ ನೊಬ್ಬನನ್ನು ಕರೆದುಕೊಂಡು ಹೋಗಿ ತೋರಿಸಿದೆ. ಆ ದಿನ ಮಾತ್ರ ಫೋಟೋ ತೆಗೆದು ಕೊಳ್ಳುವ ಆತುರದಲ್ಲಿ ಕೊಂಚ ಬಳಿಗೆ ಹೋದಾಗ ಅದನ್ನರಿತ ಅವರು ವಿದ್ಯುದ್ವೇಗದಲ್ಲಿ ಒಳಗೆ ಸೇರಿ ಹಾರಿಹೋದರು."

ಭೂಲೋಕದ ಜನರನ್ನು ಫ್ಲೈಯಿಂಗ್ ಸಾಸರುಗಳ ಮೂಲಕ ಬೇರೆ ಲೋಕಕ್ಕೆ ಕೊಂಡುಹೋಗಿರುವರೆಂದು ಅನೇಕ ನಿದರ್ಶನಗಳಿಂದ ಗೊತ್ತಾಗುತ್ತದೆ. ಶುಕ್ರಗ್ರಹ ದವನಿಗೂ ಆಡಮ್‌ಸ್ಕಿಗೂ ಆದ ಭೇಟಿಯಲ್ಲೂ ಈ ವಿಷಯ ಬಂದಿದೆ. ಅಲ್ಲದೆ ಅನೇಕ ವಿಮಾನಗಳು ಒಂದೇ ಪ್ರದೇಶದಲ್ಲಿ ಕಾಣೆಯಾಗಿವೆ. ಅವುಗಳು ದುರಂತಕ್ಕೀಡಾಗಿ ಕೆಳಗೆ ಬಿದ್ದ ಗುರುತೇ ಸಿಕ್ಕಿಲ್ಲ. ಇದೆಲ್ಲ ಆ ಭಾವನೆಗೆ ಎಡೆ ಕೊಟ್ಟಿದೆ.

ಕೆಲವರು ಹೇಳುವುದು ಇದು: ಫ್ಲೈಯಿಂಗ್ ಸಾಸರ ಜನರು ಯಾವಾಗಲೂ ಸ್ನೇಹಭಾವದಿಂದಲೇ ನಡೆದುಕೊಂಡಿದ್ದಾರೆಂದು ಹೇಳುವಂತಿಲ್ಲ. ಅನೇಕ ವೇಳೆ ನಮ್ಮ ವಿಮಾನಗಳ ಅಪಘಾತಕ್ಕೆ ಫ್ಲೈಯಿಂಗ್ ಸಾಸರುಗಳು ಕಾರಣವಾಗಿವೆ. ಅಷ್ಟೇ ಅಲ್ಲ, ಅನೇಕ ವೇಳೆ ನಮ್ಮ ಕೆಲವು ವಿಮಾನಗಳು ತಮ್ಮಲ್ಲಿದ್ದ ಜನರೊಡನೆ ಈ ಲೋಕ ದಿಂದಲೇ ಕಾಣೆಯಾಗಿವೆ. ಅವುಗಳು ಹಾಗೆ ಮರೆಯಾಗಿರುವ ರೀತಿ ನೋಡಿದರೆ ಅವುಗಳನ್ನು ಫ್ಲೈಯಿಂಗ್ ಸಾಸರುಗಳು ಸೆರೆ ಹಿಡಿದುಕೊಂಡು ಹೋಗಿರಬೇಕು.

ಆಗಸ್ಟ್ ೨, ೧೯೪೭ ರ ದಿನ ಅಮೆರಿಕದ ಲ್ಯಾಂಕ್ಯಾಷ್ಟ್ರಿಯನ್ ಸ್ಟಾರ್ ಡಸ್ಟ್ ವಿಮಾನ ಷ್ಯಾಂಕಿಯಾಗೆ ನಿಲ್ದಾಣದಲ್ಲಿ ೫-೪೫ ಕ್ಕೆ ಇಳಿಯಬೇಕಾಗಿತ್ತು. ೫-೪೧ ರಲ್ಲಿ ತಾನು ಬರುತ್ತಿರುವ ವಿಷಯ ತಿಳಿಸಿ ಆ ವಿಮಾನದಿಂದ ರೇಡಿಯೋ ಸುದ್ದಿ ಬಂತು. ಆ ಸುದ್ದಿಯ ಕೊನೆಯಲ್ಲಿ 'ಸ್ಟ್ಯೆಂಡಿಕ್' ಎಂಬ ಪದ ಶುದ್ಧವಾಗಿ ಕೇಳಬಂತು. ನಿಲ್ದಾಣದ ರೇಡಿಯೋ ಚಾಲಕನಿಗೆ ಈ ಶಬ್ದದ ಅರ್ಥ ಗೊತ್ತಾಗದೆ ಅದೇನೆಂದು ಎರಡು ಸಾರಿ ಕೇಳಿದ. ಉತ್ತರವಾಗಿ ಮತ್ತೆ ಮತ್ತೆ ವಿಮಾನದಿಂದ ಅದೇ ಮಾತು ಕೇಳಿಬಂತು. ಆ ಮೇಲೆ ಆ ವಿಮಾನ ಏನಾಯಿತೊ ಗೊತ್ತಾಗಲಿಲ್ಲ. ಎಷ್ಟು ಹುಡುಕಿ ದರೂ ಅದರ ಸುಳಿವೇ ಸಿಗಲಿಲ್ಲ. ಇದೇ ರೀತಿಯಲ್ಲಿ ಅನೇಕ ವಿಮಾನಗಳು ಸುಮಾರು ಅದೇ ಸ್ಥಳದಲ್ಲಿ ಕಾಣದಾಗಿವೆ. ಈ ನಿದರ್ಶನಗಳು ನಮ್ಮ ವಿಮಾನಗಳನ್ನು ಸೆರೆ ಹಿಡಿದು ಕೊಂಡು ಹೋಗುತ್ತಿದ್ದಾರೆಂಬ ಸಂದೇಹಕ್ಕೆ ಎಡೆಗೊಟ್ಟಿವೆ.

ವಿಮಾನ ಅಪಘಾತಗಳು ಕೆಲವು ಫ್ಲೈಯಿಂಗ್ ಸಾಸರಿನಿಂದಲೇ ಆಗಿವೆ ಎಂದರೂ ಅದು ಬೇಕಂತ ಆಗಿರಲಾರದು; ಅಕಸ್ಮಾತ್ ಸಂಭವಿಸಿದ ಪ್ರಸಂಗಗಳಿರಬೇಕು. ಇನ್ನು ಸೆರೆ ಹಿಡಿದುಕೊಂಡು ಹೋಗಿರುವ ವಿಷಯ. ಇದು ಇದ್ದರೂ ಇರಬಹುದು. ಇಲ್ಲಿಯ

ಜನರಿಂದ ವಿಷಯಸಂಗ್ರಹಣ ಮಾಡಲು ಇಲ್ಲವೆ ಇಲ್ಲಿಯ ಭಾಷಾಪರಿಚಯ ಪಡೆಯಲು ಹೀಗೆ ಮಾಡಿರಬಹುದು. ಅಷ್ಟರಿಂದಲೇ ಅವರು ವೈರಿಗಳೆಂದು ಹೇಳುವಂತಿಲ್ಲ. ಈಗ ಗೊತ್ತಾಗಿರುವಂತೆ ಶುಕ್ರ ಮತ್ತು ಮಂಗಳ ಲೋಕದವರು ಸ್ನೇಹಿತರಾಗಿಯೇ ಇದ್ದಾರೆ. ಅವರು ಈ ಲೋಕಕ್ಕೆ ಬಂದು ನಮ್ಮೊಡನೆ ಸೇರಬೇಕಾಗಿದ್ದರೆ ನಮಗೆ ಒಳ್ಳೆಯದನ್ನೇ ಬಗೆಯಬೇಕು. ಈ ಲೋಕದ ನಿಜಸ್ಥಿತಿ ಅವರಿಗೆ ಪೂರ್ಣ ಅರಿವಾದಾಗ ಆ ಜನರು ನಮ್ಮ ಮಧ್ಯೆ ಬಂದು ನಿಂತಾರು. ನಮ್ಮ ರಾಷ್ಟ್ರರಾಷ್ಟ್ರಗಳಲ್ಲಿ ಆಗಾಗ್ಗೆ ಆಗುತ್ತಿರುವ ಯುದ್ಧಗಳ ಅನಿಷ್ಟದಿಂದ ನಮ್ಮನ್ನು ಪಾರುಮಾಡಿ ಕಲ್ಯಾಣವೆಸಗಲು ಆ ಜನರು ಪ್ರಯತ್ನಪಟ್ಟಾರು. ಅವರ ಗುರಿ ಶಾಂತಿ ಮತ್ತು ಸಹಕಾರ ಜೀವನ ಮತ್ತು ಪ್ರಗತಿಯೇ ಹೊರತು ನಾಶ ಮತ್ತು ದ್ವೇಷವಲ್ಲ ಎಂದು ಊಹಿಸಬಹುದು. ಆದರಿಂದ ಅವರು ಈ ಲೋಕದ ಗೆಳೆಯರಾಗಿಯೇ ಬರುವುದರಲ್ಲಿ ಸಂಶಯವಿಲ್ಲ. ಅದಕ್ಕೆ ಕಾಲ ಬರಬೇಕಷ್ಟೆ ಎಂಬುದು ಹಲವಾರ ವಾದ.

ಆ ಲೋಕದ ಜನರು ಇಲ್ಲಿ ಯಾವು ಯಾವುದೋ ರೂಪದಲ್ಲಿದ್ದಾರೆಂದೂ ಇಲ್ಲಿ ವಿಷಯಸಂಗ್ರಹಣ ಮಾಡುತ್ತಿದ್ದಾರೆಂದೂ ಹೇಳಲು ಈ ಮುಂದೆ ಹೇಳುವ ಒಂದು ಕಥೆ ಕೇಳಿ. ಇದೊಂದು ದಂತಕಥೆ ಇದ್ದಂತಿದೆ. ಆದರೂ ನಂಬಬೇಕಾದುದು. ಲಾಸ್ ಏಂಜಲ್ಸ್‌ನಲ್ಲಿರುವ ಪತ್ತೆದಾರಿ ಇಲಾಖೆಗೆ ಆರುವರೆ ಅಡಿ ಎತ್ತರದ ಇಬ್ಬರು ಸೇರಿ ಕೊಂಡರು. ಅವರ ಆಕಾರ ಕೊಂಚ ವಿಚಿತ್ರವಾಗಿತ್ತು. ಅವರು ದೃಢಕಾಯರಾಗಿ ಬಲಿಷ್ಠರಾಗಿರುವುದು ಎದ್ದು ಕಾಣುತ್ತಿತ್ತು. ಅವರಿಗೆ ವಹಿಸಿದ ಕೆಲಸದಲ್ಲೂ ಆಶ್ಚರ್ಯ ಕರವಾದ ನೈಪುಣ್ಯ ತೋರಿಸುತ್ತಿದ್ದರು. ಒಮ್ಮೆ ಇವರಲ್ಲೊಬ್ಬ ಒಂದು ಉಕ್ಕಿನ ಪೆಟ್ಟಿಗೆಗೆ ಒರಗಿ ನಿಂತು ಅದನ್ನು ತನ್ನ ಬೆರಳಿಂದದುಮಿದಾಗ ಆ ಪೆಟ್ಟಿಗೆಯ ಹಲಗೆ ಯಲ್ಲಿ ಅರ್ಧ ಅಂಗುಲದ ಹಳ್ಳ ಉಂಟಾಯಿತು. ಆ ಮೇಲೆ ಅವರಿಬ್ಬರೂ ಕಾಣ ದಾದರು. ಎಷ್ಟು ಹುಡುಕಿದರೂ ಸಿಗಲಿಲ್ಲ. ಆ ಮೇಲೆ ಉಕ್ಕಿನ ಹಲಗೆಯನ್ನು ಪರೀಕ್ಷೆಗೆ ಕಳುಹಿಸಿದಾಗ ಆ ತರಹ ತಗ್ಗು ಉಂಟುಮಾಡಲು ಒಂದು ಚದುರಂಗುಲದಲ್ಲಿ ೨,೦೦೦ ಪೌಂಡ್ ಶಕ್ತಿಯ ಒತ್ತಡ ಬೇಕಾಗುತ್ತದೆಂದೂ ಆ ತಗ್ಗಿನಲ್ಲಿ ಏನೂ ಗೊತ್ತಾಗದ ಎಂಟು ಬಗೆಯ ಬೇರೆ ವಸ್ತು ಸಂಯೋಜನವಾಗಿದೆ ಎಂದೂ ಗೊತ್ತಾ ಯಿತು. ಆ ಇಬ್ಬರೂ ಬೇರೆ ಗ್ರಹದವರಿರಬೇಕೆಂದು ಊಹಿಸಲಾಯಿತು.

ಹೀಗೆ ಬೇಕಾದಷ್ಟು ಕಥೆಗಳಿವೆ. ಜನರು ಹೇಳುವುದೆಲ್ಲ ನಿಜವೆಂದು ನಂಬ ಬೇಕಾಗಿಲ್ಲ. ಎಷ್ಟೋ ಕಥೆಗಳು ಕುಚೇಷ್ಟೆಗಾಗಿ ಕಲ್ಪಿಸಿದವುಗಳಿವೆ. ಕುಚೋದ್ಯ ಗಾರರು ಕೆಲವರು ಏನೋ ವೇಷ ಹಾಕಿಕೊಂಡು ಬಂದು ತಾವು ಬೇರೆ ಲೋಕದಿಂದ ಬಂದವರೆಂದು ಹೇಳಿಕೊಂಡಿರುವ ಕಥೆಗಳೂ ಇವೆ. ಆದರೆ ಈ ದೆಸೆಯಿಂದ ನಿಜ


ವಾದವುಗಳನ್ನು ನಂಬದಿರುವ ದುರದೃಷ್ಟ ಬೇಡ. ನಮಗಿಂತಲೂ ಮುಂದುವರಿದಿರುವ ಬೇರೆ ಲೋಕದ ಜನರ ನಿಕಟ ಪರಿಚಯ ಮತ್ತು ಸಂಬಂಧ ಬೆಳೆಸುವ ಕಾಲ ಬಂದೀತು. ಬೇರೆ ಲೋಕಗಳನ್ನು ಮುಟ್ಟುವ ಆಸೆ ನಮ್ಮಲ್ಲೂ ಮೂಡದೆ ಇಲ್ಲ. ಹೀಗಿರುವಾಗ ಈ ವಿಷಯದಲ್ಲಿ ನಿರ್ಲಕ್ಷ್ಯ ತೋರುವುದು ತರವಾಗಲಾರದು.

ಈ ಕಥೆ ಕೇಳಿ, ತುಂಬಾ ಸ್ವಾರಸ್ಯವಾಗಿದೆ. ಬೇರೆ ಲೋಕದ ವಿಮಾನವಾದ ಫ್ಲೈಯಿಂಗ್ ಸಾಸರನ್ನು ಹತ್ತಿರದಿಂದ ನೋಡಿದ್ದಷ್ಟೇ ಅಲ್ಲ, ಅದರಲ್ಲಿ ಬಂದಿದ್ದ ಮನುಷ್ಯನನ್ನು ಕಂಡು ಆತನೊಡನೆ ಮಾತಾಡಿದ ಕಥೆ. ಮಾತಾಡಿದಾತ ಸಾಮಾನ್ಯ ನಾದವನೇನಲ್ಲ. ಅಮೆರಿಕ ದೇಶದ ಪ್ರಜೆಯಾದ ಮಿ. ಜಾರ್ಜ್ ಆಡಮ್‌ಸ್ಕಿ; ತತ್ತ್ವಶಾಸ್ತ್ರದ ಅಧ್ಯಾಪಕರು; ವಿಜ್ಞಾನವನ್ನೂ ಅಧ್ಯಯನ ಮಾಡಿದವರು; ಖಗೋಳ ಶಾಸ್ತ್ರಜ್ಞರು. ಜೊತೆಗೆ ಫ್ಲೈಯಿಂಗ್ ಸಾಸರ್ ವಿಷಯದಲ್ಲಿ ಸಂಶೋಧನೆ ನಡೆಸಿದವರು. ಈ ಸಂಶೋಧನೆಗೆ ನೆರವಾಗುವಂತೆ ಒಂದು ೧೫ ಅಂಗುಲದ ಮತ್ತೊಂದು ಆರು ಅಂಗುಲದ ದೂರದರ್ಶಿಗಳನ್ನಿಟ್ಟುಕೊಂಡಿದ್ದಾರೆ. ಆತ ಭಾವಾನುಭೂತಿ ಅಭ್ಯಾಸ ಮಾಡಿದವರು. ಈ ಪ್ರಪಂಚದ ಅತಿ ದೊಡ್ಡ ೨೦೦ ಅಂಗುಲದ ದೂರದರ್ಶಿ ಇರುವ ಹೇಲ್ ಖಗೋಳ ವೀಕ್ಷಣ ಕೇಂದ್ರಕ್ಕೆ ೧೧ ಮೈಲಿ ದೂರದಲ್ಲಿ ಅವರ ನಿವಾಸ. ಕ್ಯಾಲಿಫೋರ್ನಿಯದ ಪಲಮೋರ ಬೆಟ್ಟದ ತಪ್ಪಲಲ್ಲಿ ಅವರ ನಿವಾಸ ವಿರುವುದರಿಂದ ಅದು ಖಗೋಳಶಾಸ್ತ್ರದ ಅಭ್ಯಾಸಕ್ಕೆ ಅನುಕೂಲವಾದ ಸ್ಥಳ.

ಅಂದು ೧೯೫೨ನೆಯ ನವಂಬರು ತಿಂಗಳಿನ ೨೦ ನೆಯ ದಿನ ಗುರುವಾರ. ಫ್ಲೈಯಿಂಗ್ ಸಾಸರ್ ವಿಷಯವೇ ಮನದಲ್ಲೆಲ್ಲ ತುಂಬಿಕೊಂಡಿದ್ದ ಆಡಮ್‌ಸ್ಕಿಗೆ ಅಂದು ಏನೋ ವಿಶೇಷ ಘಟನೆ ನಡೆಯುತ್ತದೆನಿಸಿತು. ಬೆಳಿಗ್ಗೆ ಎದ್ದು ತಮ್ಮ ಸಲಕರಣೆ ಗಳನ್ನು ಸಿದ್ಧಮಾಡಿಕೊಂಡು, ತಮ್ಮ ಗೆಳೆಯರನ್ನು ಕರೆದುಕೊಂಡು ದೂರದ ಮರಳು ಗಾಡಿಗೆ ಹೋದರು. ಫ್ಲೈಯಿಂಗ್ ಸಾಸರುಗಳನ್ನು ನೋಡುವ ಉದ್ದೇಶದಿಂದ ಕೈಗೊಂಡ ಅನೇಕ ಪ್ರವಾಸಗಳಲ್ಲಿ ಇದೊಂದು. ಫ್ಲೈಯಿಂಗ್‌ಸಾಸರುಗಳು ಸಾಧಾರಣ ವಾಗಿ ಆ ಭಾಗದಲ್ಲಿ ಇಳಿಯುತ್ತವೆ ಎಂಬ ಪ್ರತೀತಿ ಇತ್ತು. ಕಾರಣ ಆ ಭಾಗದಲ್ಲಿ ಭೂಮಿಯ ಕಾಂತಿಮಂಡಳ ಇದ್ದು ಆ ಶಕ್ತಿಯಿಂದ ನಡೆಯಬಹುದಾದ ಫ್ಲೈಯಿಂಗ್ ಸಾಸರುಗಳು ಭೂಮಿ ಕಡೆ ಬರಲು ಹೆಚ್ಚು ಅನುಕೂಲವಿರಬೇಕು ಎಂದು ಊಹಿಸ ಲಾಗಿದೆ.

ಅಲ್ಲಿ ಬಹಳ ಹೊತ್ತು ಕಾದ ಮೇಲೆ ದೂರದ ಬೆಟ್ಟದ ಮೇಲೆ ಆಕಾಶದಲ್ಲಿ ಸಿಗಾರ್ (ಹೊಗೆಬತ್ತಿ) ಆಕಾರದ ಆಕಾಶ ಹಡಗು ಅವರಿಗೆ ಕಾಣಿಸಿಕೊಂಡಿತು. ಅದನ್ನು ನೋಡಿದಕೂಡಲೆ ಅದು ಬೇರೆ ಲೋಕದ್ದು ಎಂಬುದರಲ್ಲಿ ಆಡಮ್‌ಸ್ಕಿಗೆ ಸಂದೇಹವಿರಲಿಲ್ಲ.

ಅದು ಗಗನದಲ್ಲಿ ನಿಶ್ಶಬ್ದವಾಗಿ ನಿಂತಿತ್ತು. ಅದನ್ನು ನೋಡಿದ ಅವರೆಲ್ಲ ರೋಮಾಂಚನಗೊಂಡರು. ತಮ್ಮಲ್ಲಿದ್ದ ದೂರದರ್ಶಿಯಿಂದ ಸ್ಪಷ್ಟವಾಗಿ ಅದನ್ನು ನೋಡಿದರು. ಆಡಮ್‌ಸ್ಕಿ ಅದರ ಫೋಟೊ ಇಳಿಸಿಕೊಂಡರು. ಇಷ್ಟರಲ್ಲಿ ಅದು ಚಲಿಸತೊಡಗಿ



ಸಿಗಾರು (ಹೊಗೆಬತ್ತಿ) ಆಕಾರದ ದೊಡ್ಡ ತಾಯಿ ಹಡಗು ಆಕಾಶದಲ್ಲಿ ತೇಲಿನಿಂತು ಫ್ಲೈಯಿಂಗ್ ಸಾಸರುಗಳನ್ನು ಹಾರಬಿಡುತ್ತಿರುವುದು

(ಆಡಮ್‌ಸ್ಕಿ ತೆಗೆದ ಫೋಟೊ ಚಿತ್ರಗಳನ್ನು ಅನುಸರಿಸಿ ಬರೆದುದು)

ಮಾಯವಾಯಿತು. ಭಾವಾನುಭೂತಿ ಅಭ್ಯಾಸಮಾಡಿದ್ದ ಆಡಮ್‌ಸ್ಕಿಗೆ ಆ ಆಕಾಶ ಹಡಗು ತನಗಾಗಿಯೆ ಬಂದಂತೆನಿಸಿತು. ಅಲ್ಲದೆ ಅದರಿಂದ ಹೊರಟ ಫ್ಲೈಯಿಂಗ್ ಸಾಸರೊಂದು ಎಲ್ಲೋ ತನಗಾಗಿ ಕಾಯ್ದಿರಬೇಕೆನಿಸಿತು. ಆಗ ಆಡಮ್‌ಸ್ಕಿ ಜೊತೆಯವರ ಸಹಾಯದಿಂದ ಆ ಸ್ಥಳದಿಂದ ದೂರಹೋಗಿ ತನ್ನ ದೂರದರ್ಶಿಯನ್ನು ಸಿದ್ಧಮಾಡಿಕೊಂಡು ಅವರನ್ನೆಲ್ಲ ಹಿಂದಕ್ಕೆ ಕಳುಹಿಸಿ ತಾನೊಬ್ಬನೇ ಕಾಯುತ್ತ ನಿಂತರು. ಸ್ವಲ್ಪಹೊತ್ತಿನಲ್ಲೇ ಒಂದು ಫ್ಲೈಯಿಂಗ್ ಸಾಸರು ಆಕಾಶದಲ್ಲಿ ಕಾಣಿಸಿಕೊಂಡಿತು. ಅಷ್ಟರಲ್ಲಿ ವಿಮಾನದಳದ ವಿಮಾನಗಳು ಆರ್ಭಟಮಾಡಿಕೊಂಡು ಬಂದವು. ಫ್ಲೈಯಿಂಗ್ ಸಾಸರನ್ನು ನೋಡಿಯೇ ಅದನ್ನು ಅಟ್ಟಿಸಿಕೊಂಡು ಬಂದಿರಬೇಕು. ಆದರೆ ಫ್ಲೈಯಿಂಗ್ ಸಾಸರು ಕ್ಷಣದಲ್ಲಿ ಮರೆಯಾಯಿತು. ವಿಮಾನಗಳು ಕೊಂಚ ಹೊತ್ತು ಸುತ್ತಾಡಿ

ಹಿಂತಿರುಗಿದವು. ಆ ಮೇಲೆ ಕೊಂಚ ಹೊತ್ತಿನಲ್ಲಿ ಆಡಮ್‌ಸ್ಕಿ ಕೊಂಚ ದೂರದಲ್ಲಿ ನಿಂತು ಕೈಬೀಸಿ ಕರೆಯುತ್ತಿದ್ದ ಮನುಷ್ಯನೊಬ್ಬನನ್ನು ಕಂಡರು. ಆ ಮನುಷ್ಯ ಅಲ್ಲಿಗೆ ಹೇಗೆ ಬಂದ ಎಂದು ಆಶ್ಚರ್ಯಹೊಂದಿ ಅವನ ಬಳಿಗೆ ಹೋದರು. ಆ ಮನುಷ್ಯ ತಾನು ನೋಡಿದ್ದ ಭೂಮಿಯವರಿಗೆಲ್ಲರಿಗಿಂತ ಸ್ಫುರದ್ರೂಪಿಯಾಗಿದ್ದುದರಿಂದಲೂ ಪ್ರಸನ್ನನಾಗಿದ್ದುದರಿಂದಲೂ ಬೇರೆ ಲೋಕದವನೆಂಬುದು ಸ್ಪಷ್ಟವಾಗಿತ್ತು. ಆತ ತನ್ನ ಕೈನೀಡಿ ಆಡಮ್‌ಸ್ಕಿಯ ಕೈಮೇಲಿಟ್ಟು ಸ್ನೇಹತೋರಿಸಿದ.

ಪರಲೋಕದ ವ್ಯಕ್ತಿಯೊಬ್ಬನನ್ನು ಸಂಧಿಸಿದಾಗ ಎಷ್ಟೋ ವಿಷಯಗಳನ್ನು ತಿಳಿದುಕೊಳ್ಳಬೇಕೆಂಬ ಆಸೆಮೂಡಿದ್ದು ಸ್ವಾಭಾವಿಕ. ಆದರೆ ಒಬ್ಬರ ಮಾತು ಒಬ್ಬರಿಗೆ ಅರ್ಥವಾಗುತ್ತಿರಲಿಲ್ಲ. ಇಂಥ ಸಮಯದಲ್ಲಿ ಕೈಸಂಜ್ಞೆಯೊಂದೇ ಮಾಧ್ಯಮ. ಜೊತೆಗೆ ಅನುಕೂಲವಾಗಿ ಆಡಮ್‌ಸ್ಕಿ ಭಾವಾನುಭೂತಿ ಬೇರೆ ಅಭ್ಯಾಸಮಾಡಿದ್ದರು. ಅದರಿಂದ ಒಬ್ಬರ ಮನಸ್ಸಿನಲ್ಲಿದ್ದುದನ್ನು ಮತ್ತೊಬ್ಬ ಅರ್ಥಮಾಡಿಕೊಳ್ಳಬಹುದಾಗಿತ್ತು.

ಆಡಮ್‌ಸ್ಕಿ ಮತ್ತು ಆ ಪರಲೋಕನಿವಾಸಿ ಇವರಲ್ಲಿ ನಡೆದ ಸಂಭಾಷಣೆ, ಅದು ನಡೆದ ರೀತಿ, ಇದನ್ನೆಲ್ಲ ಇಲ್ಲಿ ಕೊಡುತ್ತಿಲ್ಲ. ಅದು ದೀರ್ಘವಾಗಿದೆ. ಸಾರಾಂಶ ಮಾತ್ರ ಹೇಳಬಹುದು. ಬಂದಿದ್ದವನು ಶುಕ್ರಗ್ರಹದ ಮನುಷ್ಯ. ಆತ ಕಾಲಿನಿಂದ ಹಿಡಿದು ಕತ್ತಿನ ವರೆಗೂ ಒಂದೇ ಆಗಿದ್ದ. ಒಂದು ತರಹೆ ಉಡುಪು ಧರಿಸಿದ್ದ. ಶುಕ್ರಗ್ರಹದಿಂದ ದೊಡ್ಡದಾದ ತಾಯಿ ಹಡಗು ಫ್ಲೈಯಿಂಗ್ ಸಾಸರುಗಳನ್ನು ಹೊತ್ತುತಂದು ಭೂಮಿಗೆ ಹತ್ತಿರದಲ್ಲಿ ಆಕಾಶದಲ್ಲಿ ನಿಲ್ಲುತ್ತದೆ. ಅಲ್ಲಿಂದ ಫ್ಲೈಯಿಂಗ್ ಸಾಸರುಗಳು ಹಾರಿ ಭೂಮಿಯ ಕಡೆ ಬರುತ್ತವೆ. ಶುಕ್ರಗ್ರಹದಲ್ಲಷ್ಟೇ ಅಲ್ಲ, ಈ ಸೌರವ್ಯೂಹದ ಕೆಲವು ಗ್ರಹಗಳಲ್ಲೂ ಜೊತೆಗೆ ಬೇರೆ ಸೌರವ್ಯೂಹದ ಲೋಕಗಳಲ್ಲೂ ಮಾನವರಿದ್ದಾರೆ. ಫ್ಲೈಯಿಂಗ್ ಸಾಸರುಗಳು ಆಕರ್ಷಣ ಮತ್ತು ವಿಕರ್ಷಣ ಶಕ್ತಿಯಿಂದ ಅಂದರೆ ಕಾಂತಿ ಶಕ್ತಿಯಿಂದ ಚಲಿಸುತ್ತಿರಬಹುದು. ಫ್ಲೈಯಿಂಗ್ ಸಾಸರು ಕೆಟ್ಟು ಸ್ಫೋಟನವಾಗಿರುವುದುಂಟು; ಆ ಜನರು ಮೃತ್ಯುವಿಗೊಳಗಾಗಿರುವುದುಂಟು. ಭೂಲೋಕದ ಜನರನ್ನು ಶುಕ್ರಗ್ರಹಕ್ಕೆ ಕೊಂಡುಹೋಗಿರಬಹುದು. ಭೂಮಿಯಲ್ಲಿ ಅಣುಬಾಂಬು ಮತ್ತು ಜಲಜನಕಬಾಂಬು ಇವುಗಳ ಆಸ್ಫೋಟನದಿಂದ ಭೂಮಿಯ ರೇಡಿಯೇಷನ್ ಅನಂತವಾದ ಆಕಾಶದಲ್ಲಿ ಸೇರಿಹೋಗಿ ಭೂಮಿಗೂ ಅಪಾಯ ಮತ್ತಿತರ ಗ್ರಹಗಳಿಗೂ ಅಪಾಯ ಸಂಭವಿಸಬಹುದು. ಅದರಿಂದ ಈಗೀಗ ಹೆಚ್ಚುಹೆಚ್ಚಾಗಿ ಅವರು ಬಂದು ವೀಕ್ಷಣೆ ಮಾಡುತ್ತಿದ್ದಾರೆ.

ಇವರಿದ್ದ ಸ್ಥಳಕ್ಕೆ ಕೊಂಚ ದೂರದಲ್ಲೇ ಶುಕ್ರವಾಸಿ ಬಂದಿದ್ದ ಫ್ಲೈಯಿಂಗ್ ಸಾಸರು ಭೂಮಿಗೆ ಮೂರಡಿ ಅಂತರದಲ್ಲಿ ಆಕಾಶದಲ್ಲಿ ನಿಶ್ಚಲವಾಗಿ ಭೂಮಿಗೆ ತಾಗದೆ

ನಿಂತಿತ್ತು. ಅದು ಪ್ರಕಾಶದಿಂದ ಹೊಳೆಯುತ್ತಿತ್ತು. ಮಾತು ಮುಗಿದು ಶುಕ್ರವಾಸಿ ಹೊರಟಾಗ ಆಡಮ್‌ಸ್ಕಿ ಅವನೊಡನೆ ಫ್ಲೈಯಿಂಗ್ ಸಾಸರು ಬಳಿಗೆ ಹೋದರು. ಆಡಮ್‌ಸ್ಕಿ ಕೇಳಿದಾಗ ಫೋಟೊ ತೆಗೆಸಿಕೊಳ್ಳಲು ಶುಕ್ರವಾಸಿ ಒಪ್ಪಲಿಲ್ಲ. ಫ್ಲೈಯಿಂಗ್ ಸಾಸರೊಳಗೆ ಹೋಗಿ ನೋಡಲೂ ಅವನ ಒಪ್ಪಿಗೆ ಸಿಗಲಿಲ್ಲ. ಆ ಫ್ಲೈಯಿಂಗ್ ಸಾಸರು ಗಾಜಿನ ಗಟ್ಟಿಯಿಂದ ಮಾಡಿದಂತಿತ್ತು. ಅದರ ಫೋಟೊ ಆಡಮ್‌ಸ್ಕಿ ತೆಗೆದುಕೊಂಡಿದ್ದಾರೆ. ಈ ಇಬ್ಬರ ಭೇಟಿ ನಡೆದದ್ದನ್ನೆಲ್ಲ ದೂರದಲ್ಲಿದ್ದ ಆಡಮ್‌ಸ್ಕಿಯ ಗೆಳೆಯರೆಲ್ಲ ದೂರದರ್ಶಿಯಿಂದ ವಿವರವಾಗಿ ಕಂಡಿದ್ದಾರೆ.




ಶುಕ್ರಗ್ರಹದಿಂದ ಬಂದಿದ್ದ ಸಾಸರು
(ಜಾರ್ಜ್ ಆಡಮ್‌ಸ್ಕಿ ತೆಗೆದ ಫೋಟೊ ಚಿತ್ರಗಳನ್ನು ಅನುಸರಿಸಿ ಬರೆದುದು)

ಆಡಮ್‌ಸ್ಕಿ ಹಿಂದೆ ತೆಗೆದಿದ್ದ ಫೋಟೊ ಫಿಲಂಗಳಲ್ಲಿ ಒಂದನ್ನು ಆ ಶುಕ್ರವಾಸಿ ಹಿಂತಿರುಗಿಸುವುದಾಗಿ ಹೇಳಿ ತೆಗೆದುಕೊಂಡು ಹೋದ. ಡಿಸೆಂಬರು ೩ ನೆಯ ತಾರೀಖು ಆಡಮ್‌ಸ್ಕಿ ತನ್ನ ನಿವಾಸದ ಬಳಿಯಿದ್ದಾಗ ಮತ್ತೆ ಈ ಫ್ಲೈಯಿಂಗ್ ಸಾಸರು ಕಾಣಿಸಿಕೊಂಡು ಅಂದು ಶುಕ್ರವಾಸಿ ತೆಗೆದುಕೊಂಡು ಹೋಗಿದ್ದ ಫಿಲಮ್ ಅನ್ನು ಕೆಳಗೆ ಬಿಸಾಡಿ ಹೋಯಿತು. ಆ ಫಿಲಂನಲ್ಲಿ ಆಡಮ್‌ಸ್ಕಿ ತೆಗೆದಿದ್ದ ಚಿತ್ರಕ್ಕೆ ಬದಲು ಅದೇನೊ ಅರ್ಥವಾಗದ ಅಕ್ಷರಗಳಿದ್ದವು.

ಮೇಲೆ ಹೇಳಿದ್ದು ಶುಕ್ರಗ್ರಹದಿಂದ ಬಂದವನ ಕಥೆ. ಆದರೆ ಮತ್ತೊಂದು, ಮಂಗಳಗ್ರಹದಿಂದ ಬಂದವನ ಕಥೆ. ಅದೂ ಸ್ವಾರಸ್ಯವಾಗಿದೆ. ಅದು ನಡೆದದ್ದೂ ಬ್ರಿಟನ್ನಿನ ಸ್ಕಾಟ್ಲೆಂಡ್ ತೀರಪ್ರದೇಶದಲ್ಲಿ. ಈ ಮಂಗಳವಾಸಿಯನ್ನು ಭೇಟಿ

ಯಾದವರು ಸೆಡ್ರಿಕ್ ಅಲಿಂಗ್ಯಾಮ್. ಅಲಿಂಗ್ಯಾಮ್ ೬ ಅಂಗುಲದ ದೂರದರ್ಶಕವನ್ನಿಟ್ಟುಕೊಂಡು ಖಗೋಳಶಾಸ್ತ್ರದ ಅಭ್ಯಾಸ ನಡೆಸುತ್ತಿದ್ದಾರೆ.

ಅಲಿಂಗ್ಯಾಮ್ ಡರ್ಬನ್‌ನಿಂದ ಸ್ಕಾಟ್ಲೆಂಡಿಗೆ ಹೋಗಿ ವಿಶ್ರಾಂತಿ ಪಡೆಯುತ್ತ ಪಕ್ಷಿಜೀವನವನ್ನು ವೀಕ್ಷಿಸುತ್ತಿದ್ದಾಗ ನಡೆದ ಕಥೆ. "ಒಂದು ದಿನ (೧೮-೨-೫೪) ಸಮುದ್ರತೀರದಲ್ಲಿ ತಿರುಗಾಡುತ್ತಿದ್ದಾಗ ಮಧ್ಯಾಹ್ನ ೧೨-೩೫ ರ ಸಮಯದಲ್ಲಿ



ಮಂಗಳಗ್ರಹದಿಂದ ಬಂದಿದ್ದ ಸಾಸರು ನೌಕೆ ಮತ್ತು ಮಾನವ
(ಸೆಡ್ರಿಕ್ ಆಲಿಂಗ್‌ಹ್ಯಾಮ್ ತೆಗೆದ ಫೋಟೊ ಚಿತ್ರಗಳನ್ನು ಅನುಸರಿಸಿ ಬರೆದುದು)


ಒಂದು ಸಾಸರು ಆಕಾಶದಲ್ಲಿ ಬಂದುದನ್ನು ಕಂಡೆ. ಅದು ನಿಶ್ಯಬ್ದವಾಗಿದ್ದರೂ ಅದು ನುಗ್ಗಿಕೊಂಡು ಬರುತ್ತಿದ್ದುದರಿಂದ ಗಾಳಿಯಲ್ಲಿ ಸದ್ದಾಗುತ್ತಿತ್ತು. ಅದೇ ಮೊದಲನೆಯ ಸಾರಿ ನಾನು ಸಾಸರನ್ನು ಕಂಡದ್ದು. ಕೊಂಚ ಹೊತ್ತಿನಲ್ಲೇ ಅದು ಮರೆಯಾಯಿತು. ಇನ್ನೊಮ್ಮೆ ಅದನ್ನು ಕಾಣುವ ಆಸೆಯಿಂದ ಅಲ್ಲೇ ಕಾಯ್ದು ಕುಳಿತೆ. ಮೂರು ಗಂಟೆಯ ವರೆಗೂ ಕಾಣಿಸಲೇ ಇಲ್ಲ. ಆಗ ನಾನು ನೋಡಿದ್ದು ಸಾಸರೋ ಅಲ್ಲವೋ ಎಂಬ ಸಂದೇಹ ಬಂತು. ೩-೫ ರಲ್ಲಿ ಸಾಸರು ಆಕಾಶದಲ್ಲಿ ಮತ್ತೆ ಕಾಣಿಸಿಕೊಂಡಿತು. ದೂರದರ್ಶಿಯಿಂದ ಚೆನ್ನಾಗಿ ನೋಡಿದೆ; ಅದು ಸಾಸರೇ ಆಗಿತ್ತು. ಆಡಮ್‌ಸ್ಕಿಯ ಹಾಗೆ ಅದರಲ್ಲಿರುವವನ ಪರಿಚಯಮಾಡಿಕೊಳ್ಳುವ ಆಸೆಯಿಂದ ಆ ಕಡೆ ಕೈಬೀಸಿದೆ,

ಆದರೆ ಮತ್ತೆ ಅದು ಮರೆಯಾಯಿತು. ಮತ್ತೆ ಬರುವುದೆಂಬ ಭರವಸೆ ಇರಲಿಲ್ಲ. ಆದರೆ ೩-೪೫ರ ಹೊತ್ತಿಗೆ ತಿರುಗಿ ಕಾಣಿಸಿಕೊಂಡಿತು. ಸಮುದ್ರದ ಕಡೆಯಿಂದ ಬರುತ್ತಿತ್ತು. ಅದು ಭೂಮಿಗಿಳಿದೇ ಇಳಿಯುವುದೆಂದುಕೊಂಡೆ. ಹಾಗೆಯೇ ಆಯಿತು. ಅದರಿಂದ ಒಬ್ಬ ಹೊರಗೆ ಬಂದ. ಆಡಮ್‌ಸ್ಕಿಯ ಅನುಭವ ಓದಿದ್ದುದರಿಂದ ಇವನನ್ನು ಪ್ರಶ್ನೆಮಾಡಿ ಉತ್ತರ ಪಡೆಯಲು ಯತ್ನಿಸಿದೆ. ಆದರೆ ಆಡಮ್‌ಸ್ಕಿಯಂತೆ ನನಗೆ ಭಾವಾನುಭೂತಿ ಬರುತ್ತಿರಲಿಲ್ಲ.'' ಮುಂದೆ ಈ ಇಬ್ಬರಿಗೂ ನಡೆದ ಸಂಜ್ಞಾಸಂಭಾಷಣೆ ದೀರ್ಘವಾಗಿದೆ. ಮುಖ್ಯ ಸಾರಾಂಶ ಇಷ್ಟು : ಈ ಸಾಸರು ಬಂದದ್ದು ಮಂಗಳದಿಂದ. ಮಂಗಳಗ್ರಹಕ್ಕೂ ಶುಕ್ರಗ್ರಹಕ್ಕೂ ಸಂಚಾರ ಸಂಬಂಧ ಉಂಟು, ಮಂಗಳಗ್ರಹದಲ್ಲಿ ಸಮುದ್ರವಿಲ್ಲ. ಮಂಗಳಲೋಕದವರೂ ಶುಕ್ರಲೋಕದವರೂ ಭೂಮಿಗೆ ಬರುವಾಗ ಚಂದ್ರಲೋಕವನ್ನು ತಮ್ಮ ಸಾಸರು ನಿಲ್ದಾಣವಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ. ಬುಧಗ್ರಹದಲ್ಲಿ ಜೀವಿಗಳಿಲ್ಲ. ಮಂಗಳಗ್ರಹದಲ್ಲಿ ಕಾಣುವ ಕಪ್ಪು ಗೆರೆಗಳು ನೀರಾವರಿಗಾಗಿ ತೋಡಿರುವ ನಾಲೆಗಳು. ಈ ಮಂಗಳವಾಸಿ ಭೂಮಿಯಲ್ಲಿ ಮತ್ತೊಂದು ಮಹಾಯುದ್ಧ ಆಗುವುದೇ ಎಂದು ತಿಳಿದುಕೊಳ್ಳಲು ಕಾತರತೆ ಕಂಡುಬಂತು. ಆತ ಆರಡಿ ಎತ್ತರವಾಗಿ ಸುಂದರವಾಗಿದ್ದ. ಆತನ ಧ್ವನಿ ಮಧುರವಾಗಿತ್ತು.

ಫ್ಲೈಯಿಂಗ್ ಸಾಸರ್ ಅಂದರೇನು ಎಂಬುದನ್ನು ಈ ಕಥೆಗಳು ಹೇಳಿವೆ. ಫ್ಲೈಯಿಂಗ್ ಸಾಸರುಗಳಿಗೆ ಸಂಬಂಧಪಟ್ಟ ಪ್ರಸಂಗಗಳು ನೂರಾರಿವೆ. ಇಲ್ಲಿ ಉದಾಹರಣೆಗೆ ಕೆಲವನ್ನು ಮಾತ್ರ ಹೇಳಲಾಯಿತು. ಅಮೆರಿಕ, ಬ್ರಿಟನ್ ಮೊದಲಾದ ದೇಶಗಳ ವಿಮಾನ ಇಲಾಖೆಗಳಲ್ಲಿ ಇನ್ನೂ ಬೇಕಾದಷ್ಟು ನಿದರ್ಶನಗಳಿರಬೇಕು. ಫೋಟೋಚಿತ್ರಗಳೂ ಚಲನಚಿತ್ರಗಳೂ ಇವೆಯೆಂದು ನಂಬಬಹುದು. ಆದರೆ ಅವರು ಎಲ್ಲವನ್ನೂ ಹೊರಗೆಡಹಬಾರದು. ಹಿಂದೆ ಹೇಳಿದಂತೆ ಸರಕಾರದವರು ಇಂತಹ ಒಂದು ವಿಷಯದಲ್ಲಿ ಏನಾದರು ಹೇಳಿಕೆ ಕೊಡಬೇಕಾಗಿದ್ದರೆ ಸಮಯ, ಸಂದರ್ಭ, ಕಾರಣ ಬೇಕಾಗುತ್ತದೆ. ಸಾರ್ವಜನಿಕ ಹಿತದೃಷ್ಟಿಯಲ್ಲಿ ಅವರ ಜವಾಬ್ದಾರಿ ದೊಡ್ಡದು. ಸರಕಾರಗಳು ಮೌನತಾಳಿವೆಯಾದುದರಿಂದ ಜವಾಬ್ದಾರಿಯುತರಾದ ಸಾರ್ವಜನಿಕರು ತಮ್ಮ ಅನುಭವಗಳನ್ನೂ ತಮ್ಮ ಪರಿಶೋಧನೆಯ ಫಲವನ್ನೂ ತಿಳಿಸಿದರೆ ಅವುಗಳನ್ನು ಅಲ್ಲಗಳೆಯಬಾರದು, ಅಸಡ್ಡೆಯಿಂದ ಕಾಣಬಾರದು.

ಹೀಗೆ 'ಫ್ಲೈಯಿಂಗ್ ಸಾಸರು' ಯಕ್ಷ ವಿಮಾನಗಳು ಯಾವ ಯಾವ ಲೋಕದಿಂದಲೋ ನಮ್ಮ ಭೂಲೋಕಕ್ಕೆ ಭೇಟಿ ಕೊಡುತ್ತವೆ ಎನ್ನೋಣ. ಈ ಬ್ರಹ್ಮಾಂಡದಲ್ಲಿ, ದೂರದ ಅನಂತ ಬಗೆಬಗೆಯ ವಾತಾವರಣದ, ಲೋಕಲೋಕಗಳ ಆಕರ್ಷಣ ಶಕ್ತಿಯ ಆಕಾಶದ ನಾನಾ ರೀತಿಯ ಅಡ್ಡಿ ಆತಂಕಗಳನ್ನೆಲ್ಲ, ಕಷ್ಟ ನಿಷ್ಠುರ

ಗಳನ್ನೆಲ್ಲ ಮೀರಿ ಭೂಮಿಯನ್ನು ತಲುಪುವಂತಹ ವಿಮಾನಗಳನ್ನು ಸೃಷ್ಟಿಸಿಕೊಂಡು ಬರುತ್ತಿರುವ ಜನರಿರಬಹುದಾದ ಲೋಕಗಳಾದರೂ ಯಾವುವು ಎಂಬುದು ಬೇಕಲ್ಲ! ಕೊನೆಯಪಕ್ಷ ನಮ್ಮ ಸೌರವ್ಯೂಹದ ಸ್ಥಿತಿಗತಿಗಳನ್ನು ನಮ್ಮ ತಿಳುವಳಿಕೆಗೆ ಎಟಕುವ ಮಟ್ಟಿಗಾದರೂ ವಿಮರ್ಶಿಸೋಣ.



ನಮ್ಮ ಸೌರವ್ಯೂಹ

ಸೂರ್ಯನಿಗೂ ಗ್ರಹಗಳಿಗೂ ಇರುವ ದೂರವನ್ನೂ ಕ್ರಮವನ್ನೂ ಸಾಧಾರಣವಾಗಿ ತೋರಿಸಿದೆ. ಈಗ ಗೊತ್ತಿರುವಂತೆ ಈ ವ್ಯೂಹದಲ್ಲಿ ೯ ಗ್ರಹಗಳೂ ಅವುಗಳಿಗೆ ೩೧ ಉಪಗ್ರಹಗಳೂ ಇವೆ.

ಈಗ ಗೊತ್ತಾಗಿರುವಂತೆ ಸೌರವ್ಯೂಹದಲ್ಲಿ ಒಂಬತ್ತು ಗ್ರಹಗಳಿವೆ. ಜೊತೆಗೆ ಭೂಮಿಗೆ ಚಂದ್ರನಿರುವಂತೆ ಅನೇಕ ಗ್ರಹಗಳಿಗೆ ಉಪಗ್ರಹಗಳಿವೆ. ಈ ಗ್ರಹಗಳ ಹೂರಣ ಒಂದೇ ಆದರೂ ಕಾಲಮಾನ ವ್ಯತ್ಯಾಸದಿಂದ ಗ್ರಹ ಗ್ರಹಕ್ಕೆ ಗುಣ ವ್ಯತ್ಯಾಸ ಬಂದಿದೆ; ವಾತಾವರಣ ವ್ಯತ್ಯಾಸ ಅನಿವಾರ್ಯ. ಸೂರ್ಯನಿಗೆ ಅತಿ ಹತ್ತಿರದಲ್ಲಿರುವ ಬುಧಗ್ರಹದಲ್ಲಿ ಶಾಖ ಅತಿ, ಸೀಸ ಕರಗುವಷ್ಟು ಶಾಖ ಅಲ್ಲಿ. ಅದರಿಂದ ಅಲ್ಲಿ ಯಾವ ಜೀವಿಯೂ ಇರಲಾರದು. ಗುರು, ಶನಿ, ಯೂರೆನಸ್, ನೆಪ್ಚೂನ್, ಪ್ಲೇಟೋ— ಈ ಗ್ರಹಗಳು ಸೂರ್ಯನಿಗೆ ಅಪಾರ ದೂರದಲ್ಲಿರುವುದರಿಂದ ಚಳಿ ಅತಿ. ಆ ಗ್ರಹ

ಗಳಲ್ಲೂ ಜೀವಿಗಳಿರುವುದು ಸಂದೇಹ. ಈ ನಂಬಿಕೆಯಿದ್ದರೂ ಅಮೆರಿಕದ ಗಣಿತ ಶಾಸ್ತ್ರಜ್ಞ ಟ್ಯಾಯ್ಕೆ ಹೇಳ್ತಾರೆ—ಮೆತೆನ್, ಅಮೋನಿಯ, ಜಲಜನಕ ತುಂಬಿರುವ ವಾತಾವರಣವಿರುವ ಮತ್ತು ಅತಿ ಬಲವಾದ ಆಕರ್ಷಣ ಶಕ್ತಿಯನ್ನೊಳ ಗೊಂಡಿರುವ ಶನಿ, ಯೂರೆನೆಸ್, ನೆಪ್ಚೂನ್ ಈ ಗ್ರಹಗಳಲ್ಲೂ ಕೂಡ ಹರಳಿನ ಆಕೃತಿಯ ಜೀವಿಗಳಿರಬಹುದು, ಎಂದು. ಈ ಗ್ರಹಗಳ ನಿಜವಾದ ಲಕ್ಷಣಗಳನ್ನು ಭೂಮಿಯಿಂದ ತಿಳಿಯಲು ಇನ್ನೂ ಸಾಧ್ಯವಾಗಿಲ್ಲ. ಇನ್ನು ಉಳಿದವು ಶುಕ್ರ ಮತ್ತು ಮಂಗಳ.

ಶುಕ್ರಗ್ರಹ ಸ್ವಲ್ಪ ಹೆಚ್ಚು ಕಡಿಮೆ ಭೂಮಿಯಷ್ಟೇ ಗಾತ್ರದ್ದು. ಅದರ ವ್ಯಾಸ ೭,೭೦೦ ಮೈಲಿ. ಸೂರ್ಯನಿಗೆ ೬,೭೨,೦೦,೦೦೦ ಮೈಲಿ ದೂರದಲ್ಲಿದ್ದು ಭೂಮಿಗೆ ೨,೫೬,೭೦,೦೦೦ ಮೈಲಿ ಅಂತರದಲ್ಲಿದೆ. ಶುಕ್ರ ಸೂರ್ಯನ ಸುತ್ತ ಒಂದು ಸುತ್ತು ಸುತ್ತಲು ೨೨೫ ದಿನ ತೆಗೆದುಕೊಳ್ಳುತ್ತದೆ. ಅಷ್ಟು ದಿನದಲ್ಲಿ ಅದು ತನ್ನ ಸುತ್ತ ಒಂದೇ ಸುತ್ತು ಸುತ್ತುತ್ತಿರಬೇಕೆಂದು ನಂಬಲಾಗಿದೆ. ಅದರಿಂದ ಅದರಲ್ಲಿ ಒಂದು ಹಗಲಾಗಲಿ ಒಂದು ರಾತ್ರಿಯಾಗಲಿ ನಮ್ಮ ೧೧೨ ದಿನದಷ್ಟು ದೀರ್ಘವಾಗಿರಬೇಕು. ಅದರ ವಾತಾವರಣದಲ್ಲಿ ಯಾವಾಗಲೂ ಧೂಳೋ ಮೋಡವೋ ಇಲ್ಲ ಏನೋ ಮುಚ್ಚಿ ಅದರ ಮೇಲ್ಮಯ್ಯ ಲಕ್ಷಣ ಏನೆಂಬುದು ನಿಖರವಾಗಿ ಗೊತ್ತಾಗಿಲ್ಲ. ಅಲ್ಲೂ ಬಹು ಎತ್ತರವಾದ ಬೆಟ್ಟಗಳೂ ಆಳವಾದ ಕಣಿವೆಗಳೂ ಇರಬಹುದೆಂದು ಊಹಿಸ ಬಹುದಷ್ಟೆ. ವಾತಾವರಣದ ಮೇಲ್ಮಯ್ಯಲ್ಲಿ ಆಮ್ಲಜನಕವಿರುವುದರ ಕುರುಹಿಲ್ಲ. ಕೆಳ ಭಾಗದಲ್ಲೂ ಇರಲಾರದೆಂದು ಊಹಿಸಬಹುದು. ನೀರೂ ಇರಲಾರದು. ವಾತಾ ವರಣದಲ್ಲಿ ಆಮ್ಲಜನಕದ ಅಭಾವ ಕಾಣುವುದರಿಂದ ಇಲ್ಲಿನಂತೆ ಸಸ್ಯಗಳಿರುವುದೂ ಸಂದೇಹ. ಹೀಗಿರುವಲ್ಲಿ ಪ್ರಾಣಿಗಳು ಹೇಗೆ ಬದುಕಬಲ್ಲವು ಎಂಬುದೂ ಸಂದೇಹ.

ಮಂಗಳಗ್ರಹ ಗಾತ್ರದಲ್ಲಿ ಭೂಮಿಗಿಂತ ಚಿಕ್ಕದು. ವ್ಯಾಸ ೪,೨೩೦ ಮೈಲಿ. ಸೂರ್ಯನಿಗೆ ೧೪,೧೫,೦೦,೦೦೦ ಮೈಲಿ ಅಂತರದಲ್ಲೂ ಭೂಮಿಗೆ ೪,೮೬,೩೦,೦೦೦ ಮೈಲಿ ಅಂತರದಲ್ಲೂ ಇದೆ. ಈ ಗ್ರಹ ಭೂಮಿಯಿಂದ ಕೆಂಪಾಗಿ ಕಾಣುತ್ತದೆ. ಮರಳುಸೀಮೆ ಹೆಚ್ಚಾಗಿದ್ದು ಅದರ ಹೊಳವು ಹಾಗೆ ಕಾಣಲು ಕಾರಣವೆನ್ನುತ್ತಾರೆ. ಈ ಮರುಭೂಮಿಗಳ ಮಧ್ಯೆ ವಿಶಾಲವಾಗಿ ಹರಡಿರುವ ಕಪ್ಪು ಪ್ರದೇಶಗಳು ಕಾಣುತ್ತವೆ. ಸಸ್ಯವೃದ್ಧಿಯಾಗಿರುವ ಪ್ರದೇಶಗಳೇ ಇವು ಇರಬೇಕೆನ್ನುತ್ತಾರೆ. ಈ ಪ್ರದೇಶಗಳಲ್ಲಿ ಕಾಲಕಾಲಕ್ಕೆ ಬಣ್ಣ ಬದಲಾವಣೆ ಕಾಣುವುದರಿಂದ ಅದು ಋತು ಧರ್ಮವಿರಬೇಕೆಂದೂ ಅದರಿಂದ ಸಸ್ಯವೃದ್ಧಿ ಇರಲೇಬೇಕೆಂದೂ ಹೇಳುತ್ತಾರೆ. ವಾತಾ ವರಣದಲ್ಲಿ ಕೊಂಚ ಆಮ್ಲಜನಕವೂ ಕಂಡುಬಂದಿದೆ. ಈ ಗ್ರಹದ ಮೇಲೆ ಒಂದು ಕಡೆ

ಯಿಂದ ಒಂದು ಕಡೆಗೆ ನೇರವಾದ ಗೆರೆಗಳು ಕಾಣುತ್ತವೆ. ಇವು ಅಲ್ಲಿನವರು ನೀರಾವರಿ ಸೌಕರ್ಯಕ್ಕಾಗಿ ತೋಡಿಕೊಂಡಿರುವ ನಾಲೆಗಳೆಂದು ಊಹಿಸಲಾಯಿತು. ಅಷ್ಟೇ ಅಲ್ಲ, ನೀರು ತುಂಬ ಕಡಮೆಯಿರುವುದರಿಂದ ಇದ್ದ ನೀರು ಆವಿಯಾಗಿ ಹೋಗದಂತೆ ಕೊಳವೆಗಳ ಮೂಲಕ ಹಾಯಿಸುತ್ತಾರೆಂದೂ ಊಹಿಸಲಾಯಿತು. ನೀರಿನ ಅಭಾವ ದಿಂದ ಅಲ್ಲಿನವರು ಕೃತಕ ನೀರನ್ನು ತಯಾರುಮಾಡಿ ಇಷ್ಟು ಜೋಪಾನವಾಗಿ ಅದನ್ನು ಉಪಯೋಗಿಸುತ್ತಾರೆಂದೂ ವಿಜ್ಞಾನದೃಷ್ಟಿಯಲ್ಲಿ ಅಷ್ಟು ಮುಂದುವರಿ ದಿದ್ದಾರೆಂದೂ ಹೇಳುತ್ತಾರೆ. ಆದರೆ ಈ ವಿಷಯಗಳೆಲ್ಲ ತುಂಬ ಚರ್ಚಾಸ್ಪದವಾಗಿವೆ. ಇದೇ ಸರಿ ಎಂದು ಇನ್ನೂ ನಿಖರವಾಗಿ ನಮಗೆ ಗೊತ್ತಾಗಿಲ್ಲ.

ಇನ್ನು ಪರಲೋಕದವರು ಭೂಮಿಗಿಳಿಯಲು ನಿಲ್ದಾಣ ಮಾಡಿಕೊಂಡಿರ ಬಹುದಾದ ಭೂಮಿಗೆ ಉಪಗ್ರಹವಾಗಿರುವ ಚಂದ್ರಗ್ರಹದ ವಿಷಯ. ಭೂಮಿಗೆ ೨,೩೮,೮೦೦ ಮೈಲಿಗಳ ದೂರದಲ್ಲಿರುವ ಈ ಗ್ರಹದ ವ್ಯಾಸ ೨,೧೬೦ ಮೈಲಿ. ನಮಗಿದು ಇಷ್ಟು ಹತ್ತಿರವಿರುವುದರಿಂದ ಇದರ ಮೇಲ್ಮೈಯ್ಯ ಲಕ್ಷಣ ಇತರ ಗ್ರಹಗಳಿಗಿಂತ ಸ್ಪಷ್ಟವಾಗಿ ಕಾಣಲು ಸಾಧ್ಯವಿದೆ. ಚಂದ್ರನ ಒಂದೇ ಭಾಗ ಯಾವಾಗಲೂ ಭೂಮುಖವಾಗಿರುವುದರಿಂದ ಅದರ ಹಿಂದಿರುವ ಭಾಗ ನಮಗೆ ಕಾಣಿಸುವುದೂ ಇಲ್ಲ. ಆ ಭಾಗ ಹೇಗಿದೆ ಅಲ್ಲೇನಿದೆ ಎಂಬುದು ಗೊತ್ತಾಗುವಂತೆಯೂ ಇಲ್ಲ. ನಮಗೆ ಕಾಣುವ ಭಾಗದಲ್ಲಿ ದೊಡ್ಡ ದೊಡ್ಡ ಪರ್ವತಗಳಿವೆ. ಜ್ವಾಲಾಮುಖಿಯ ಬಾಯಿ ಯಂತಿರುವ ಬಳೆಯಾಕಾರದ ಅಗಲವಾದ ಕುಳಿಗಳಿವೆ. ಈ ಕುಳಿಗಳು ಮೈಲಿಗಟ್ಟಲೆ ವ್ಯಾಸವುಳ್ಳವು. ಅದರಲ್ಲಿ ಅತಿ ದೊಡ್ಡದು ೫೬ ಮೈಲಿ ವ್ಯಾಸವಿದೆ. ಇವುಗಳ ತಳಗಳು ಸಮತಟ್ಟಾಗಿದ್ದು ಮಧ್ಯಮಧ್ಯದಲ್ಲಿ ಎತ್ತರವಾದ ಒಂದೊಂದು ಶಿಖರವಿದೆ. ಜ್ವಾಲಾ ಮುಖಿಗಳಿಂದಲೋ ಇಲ್ಲ ಇನ್ನೂ ಚಂದ್ರ ಬೆಣ್ಣೆಯಂತೆ ಮೆದುವಾಗಿದ್ದಾಗ ಉಲ್ಕಾ ಪಾತದ ಆಘಾತದಿಂದಲೋ ಕುಳಿಗಳಾಗಿರಬೇಕು. ಈ ಚಂದ್ರಗ್ರಹದ ಸುತ್ತ ವಾತಾ ವರಣವಿಲ್ಲ. ಒಳಗೆ ಶಾಖವೂ ಇಲ್ಲ. ಆದರಿಂದ ಇದು ಸತ್ತ ಗ್ರಹ; ಜೀವಕ್ಕೆ ಆಧಾರ ವಿಲ್ಲದ್ದು.

ಅಂತು ನಮ್ಮ ಜ್ಞಾನಶಕ್ತಿಗೆ ಹೊಳೆಯುವಂತೆ ಮಂಗಳಗ್ರಹದಲ್ಲಿ ಜೀವಿಗಳಿರ ಬಹುದು. ಶುಕ್ರಗ್ರಹದಲ್ಲೂ ಅಲ್ಲಿನ ವಾತಾವರಣಕ್ಕೆ ಹೊಂದಿಕೊಂಡ ಜೀವಿಗಳಿರ ಬಹುದು. ಆದರೆ ಫ್ಲೈಯಿಂಗ್ ಸಾಸರು ಕಥೆಯಂತೆ ಈ ಎರಡು ಗ್ರಹದಲ್ಲೂ ಮಾನವ ರಿದ್ದಾರೆ. ಅವರು ನಮಗಿಂತ ಎಲ್ಲ ವಿಷಯಗಳಲ್ಲೂ ಮುದುವರಿದವರು. ನಾವಿನ್ನೂ ನಮ್ಮ ಹತ್ತಿರದ ಗ್ರಹವಾದ ಚಂದ್ರಗ್ರಹಕ್ಕೇ ಮುಟ್ಟಲ್ಲದಿರುವಾಗ ಅವರು ಚಂದ್ರ ಗ್ರಹವನ್ನು ತಮ್ಮ ನಿಲ್ದಾಣ ಬಂದನ್ನಾಗಿ ಮಾಡಿಕೊಂಡು ಭೂಮಿಗೂ ಬರುತ್ತಿದ್ದಾರೆ

ಎಂದಂತಾಯಿತು. ಈ ದೃಷ್ಟಿಯಲ್ಲಿ ಅವರೊಡನೆ ನಾವು ನಮ್ಮೊಡನೆ ಶಿಲಾಯುಗದವರನ್ನು ಹೋಲಿಸಿದಂತೆ.

ಚಂದ್ರಗ್ರಹವನ್ನು ಈ ಮಂಗಳವಾಸಿಗಳೂ ಶುಕ್ರವಾಸಿಗಳೂ ಭೂಮಿಗೆ ಬರುವ ಹಾದಿಯ ನಿಲ್ದಾಣವಾಗಿ ಮಾಡಿಕೊಂಡಿದ್ದಾರೆಂದರೆ ನಂಬಬಹುದೆಂದು ಕೆಲವು ವಿಜ್ಞಾನಿಗಳು ಹೇಳುತ್ತಾರೆ. ಈಗೆ ಕೆಲವು ವರ್ಷಗಳ ಹಿಂದೆ ಚಂದ್ರಗ್ರಹದಲ್ಲಿ ಉತ್ತರ ಭಾಗದಲ್ಲಿರುವ ಸಮಭೂಮಿಯಲ್ಲಿ ಒಂದು ದೊಡ್ಡ ಕೋಟೆ ಕಟ್ಟಿದ್ದಂತಿದ್ದು ಚಂದ್ರನಗರ ಬಂದಿದ್ದಂತೆ ಕಾಣುತ್ತಿತ್ತಂತೆ. ಅಲ್ಲದೆ ಇನ್ನೊಬ್ಬ ಖಗೋಳಶಾಸ್ತ್ರಜ್ಞನು ಚಂದ್ರಗ್ರಹಣದ ದಿನ ತನ್ನ ದೂರದರ್ಶಕ ಸಲಕರಣೆಗಳಿಂದ ಪರೀಕ್ಷಿಸುತ್ತಿದ್ದಾಗ ಅಲ್ಲಿ ಪ್ರಕಾಶಮಾನವಾದ ಬೆಳಕುಗಳು ಕಾಣಿಸಿದ್ದುವಂತೆ. ಇದರಿಂದ ಚಂದ್ರಗ್ರಹದಲ್ಲಿ ಯಾರೋ ಒಂದು ನಿಲ್ದಾಣ ಕಟ್ಟಿ ಬಂದುಹೋಗುತ್ತಿದ್ದಾರೆಂದು ಊಹಿಸಲಾಯಿತು. ಈಗ ಆ ನಗರದ ಹಾಳು ಮಾತ್ರ ಕಾಣುತ್ತಿದೆಯಂತೆ. ಬಹುಶಃ ಭೂಮಿಯಿಂದ ಚಂದ್ರಗ್ರಹದ ವೀಕ್ಷಣೆ ಜಾಸ್ತಿಯಾಗಲು ಆ ನಿಲ್ದಾಣವನ್ನು ನಮಗೆ ಮರೆಯಾದ ಚಂದ್ರನ ಭಾಗಕ್ಕೆ ಸಾಗಿಸಿರಬೇಕೆಂದು ಊಹಿಸುತ್ತಾರೆ. ಫ್ಲೈಯಿಂಗ್ ಸಾಸರಿನಲ್ಲಿ ಇಲ್ಲಿಗೆ ಬಂದ ಶುಕ್ರವಾಸಿ ಮತ್ತು ಮಂಗಳವಾಸಿ ಹೇಳಿರುವಂತೆ ಚಂದ್ರಲೋಕ ಅವರ ಒಂದು ನಿಲ್ದಾಣ.

ಭೂಮಿಯೊಂದರಲ್ಲಲ್ಲದೆ ಇನ್ನೆಲ್ಲಿಯೂ ಜೀವಿಗಳಿಲ್ಲ ಎನ್ನುವುದು ಸರಿಯಲ್ಲ. ಭೂಮಿಗೆ ಆದಿಯಲ್ಲಿ ಜೀವಿಗಳು ಬಂದದು ಯಾವುದೋ ಗ್ರಹದಿಂದ ಬಂದ ಉಲ್ಕಾಪಾತದ ಮೂಲಕ ಎಂಬ ವಾದವೊಂದಿದೆ. ಕೆಲವು ವರ್ಷಗಳ ಹಿಂದೆ ಅಮೇರಿಕದ ವಿಜ್ಞಾನಿ ಹ್ಯಾನ್ ಒಂದು ಉಲ್ಕಾಪಾತವನ್ನು ಪರೀಕ್ಷಿಸಿ ಅದರಲ್ಲಿ ಪ್ರಾಣಿಗಳ ಪಳೆಯುಳಿಕೆ ಇರುವುದನ್ನು ಕಂಡುಹಿಡಿದ. ಆ ಉಲ್ಕಾಪಾತ ಯಾವ ಗ್ರಹದ ಚೂರೋ ಅದೆಷ್ಟು ಕಾಲ ಆಕಾಶದಲ್ಲಿ ತೂಗಾಡುತ್ತಿತ್ತೋ ಆದರೂ ಅದರಲ್ಲಿ ಪಳೆಯುಳಿಕೆ ಅಳಿದಿರಲಿಲ್ಲ. ಇದು ನೋಡಿದರೆ ನಮಗೆ ಜ್ಞಾನಕ್ಕೆ ಸಿಲುಕದ ವಿಷಯ ಬಹಳವಿದೆ ಎಂದಾಯಿತು.

ನಾವೀಗ ಅಣುಯುಗಕ್ಕೆ ಕಾಲಿಟ್ಟಿದ್ದೇವೆ. ಎಲ್ಲಕ್ಕೂ ಯಾವುದು ಮೂಲವೆಂದು ತಿಳಿದಿದ್ದೇವೆಯೋ ಯಾವುದರ ಶಕ್ತಿ ವಿಶ್ವಕ್ಕೆ ಆಧಾರವಾಗಿದೆ ಎಂದು ಅರಿಯುತ್ತಿದ್ದೇವೆಯೋ ಆ ಅಣುವಿನ ಶಕ್ತಿಯನ್ನು ನಮ್ಮ ಪ್ರಗತಿಗೆ ಉಪಯೋಗಿಸಿಕೊಳ್ಳಲು ಪ್ರಯತ್ನ ನಡೆಸುತ್ತಿದ್ದೇವೆ. ಆದರೂ ಚಂದ್ರನನ್ನು ಮುಟ್ಟುವ ಆಸೆಯೇ ಇನ್ನೂ ನೆರವೇರಿಲ್ಲ. ನಮ್ಮ ಪ್ರಯತ್ನವೆಲ್ಲ ಇನ್ನೂ ಭೂಮಿಯನ್ನೇ ಸುತ್ತಿಕೊಂಡು ಅದರ ವಾತಾವರಣದಲ್ಲೇ ಇದೆ. ಹೀಗಿರುವಲ್ಲಿ ಅವರು ಮಂಗಳಲೋಕದಿಂದಲೋ

ಶುಕ್ರಲೋಕದಿಂದಲೋ ನಿರಾಯಸವಾಗಿ ತಮ್ಮ ವಿಮಾನದಲ್ಲಿ ಗ್ರಹದಿಂದ ಗ್ರಹಕ್ಕೆ ಓಡಾಡುತ್ತಿದ್ದಾರಲ್ಲ! ಅದೇನು ಶಕ್ತಿ ಅವರ ಕೈವಶವಾಗಿದೆ! ಇದರಲ್ಲೇನೂ ಆಶ್ಚರ್ಯ ಪಡಬೇಕಾದುದಿಲ್ಲವೆನಿಸುತ್ತದೆ. ಇನ್ನೆಲ್ಲೂ ಜನರಿಲ್ಲವೆಂದೂ ನಾವೇ ಬುದ್ಧಿವಂತರೆಂದೂ ತಿಳಿಯುವುದರಿಂದ ಈ ಸಂದೇಹ ಮೂಡಲು ಕಾರಣ. ಶುಕ್ರಗ್ರಹದಲ್ಲಾಗಲಿ ಮಂಗಳಗ್ರಹದಲ್ಲಾಗಲಿ, ಆ ವಿಷಯಕ್ಕೆ ಮಿಕ್ಕಾವ ಗ್ರಹಗಳಲ್ಲಾಗಲಿ ಜೀವಿಗಳಿರ ಬಾರದೇಕೆ? ಅಲ್ಲಲ್ಲಿನ ವಾತಾವರಣಕ್ಕೆ ಹೊಂದಿಕೊಂಡು ಮಿಕ್ಕ ಲೋಕಗಳಲ್ಲಿ ನಮಗಿಂತಲೂ ಮೊದಲೇ ವಿಜ್ಞಾನದ ಗುಟ್ಟನ್ನೆಲ್ಲ ಅರಿತುಕೊಂಡು ಅಣುಶಕ್ತಿಯನ್ನು ಕರಗತ ಮಾಡಿಕೊಂಡು ಪ್ರಗತಿ ಸಾಧಿಸಿರಬಾರದೇಕೆ?

ಅಣುವಿನಲ್ಲಿರುವ ಶಕ್ತಿ ಅನಂತವಾದುದು. ಸರ್ ಜೇಮ್ಸ್ ಹೇಳುವಂತೆ 'ಕ್ವೀನ್ ಮೇರಿ' ಎಂಬ ಬೃಹತ್ ಹಡಗನ್ನು ಅಟ್ಲಾಂಟಿಕ್ ಸಾಗರದಲ್ಲಿ ಇಂಗ್ಲೆಂಡ್ ಅಮೆರಿಕಗಳ ಮಧ್ಯೆ ನಾಲ್ಕಾರು ಸಾರಿ ಓಡಾಡಿಸಲು ಒಂದು ತುಣುಕು ಕಲ್ಲಿದ್ದಿಲನಲ್ಲಿರುವ ಶಕ್ತಿ ಸಾಕು, ಸರಿಯಾಗಿ ಉಪಯೋಗಿಸಿಕೊಳ್ಳುವುದಾದರೆ. ಹಾಗಿರುವಲ್ಲಿ ಆ ಪರಲೋಕದ ಜಾಣರು ಅಣುಶಕ್ತಿಯನ್ನು ನ್ಯಾಯರೀತಿಯಲ್ಲಿ ಉಪಯೋಗಿಸಿಕೊಳ್ಳುತ್ತಿದ್ದರೆ ಮಿಂಚಿನ ವೇಗವನ್ನು ಸಾಧಿಸಿ ಆಕರ್ಷಣ ಮತ್ತು ವಿಕರ್ಷಣ ಶಕ್ತಿಯನ್ನು ಗೆದ್ದಿರುವು ದರಲ್ಲಿ, ದೂರ ಮತ್ತು ವಾತಾವರಣದ ಆತಂಕವನ್ನು ಬಗೆಹರಿಸಿಕೊಂಡಿರುವುದರಲ್ಲಿ, ಆಶ್ಚರ್ಯವೇನಿಲ್ಲ.

ಹೀಗೆ ಶಕ್ತರಾದವರು ತಾವು ಬದುಕುವ ವಾತಾವರಣಕ್ಕೆ ವ್ಯತಿರಿಕ್ತವಾದ ವಾತಾವರಣವನ್ನು ಬಗ್ಗಿಸಿಕೊಳ್ಳುವ ವಿದ್ಯೆಯನ್ನೂ ಕಲಿತಿರಬಹುದು. ಕಾಮರೂಪಿ ಇಚ್ಛಾ ಜೀವಿ ಎಂಬುದು ನಮ್ಮ ಕಾವ್ಯದ ಮಾತಾದರೂ ಈ ಬ್ರಹ್ಮಾಂಡದಲ್ಲಿ ಅದನ್ನು ಸಾಧಿಸಿರುವವರು ಬೇರಾರೂ ಇಲ್ಲವೆಂದೇಕೆ ನಂಬಬೇಕು? ನಾವಿನ್ನೂ ಕಲ್ಪನೆಯಲ್ಲಿ ಕಾಣುವುದನ್ನು ಅವರಾಗಲೇ ಸಾಧಿಸಿರಬಹುದು. ಕಣ್ಣಿಗೆ ಕಾಣದಂತಹ ಸೂಕ್ಷ್ಮ ಕ್ರಿಮಿಯೊಂದು ಮಂಜಿನ ಗಡ್ಡೆಯಲ್ಲೂ ಕುದಿಯುವ ನೀರಿನಲ್ಲೂ ಬದುಕುವ ಇಚ್ಛಾ ಜೀವಿಯಾಗಲು ಶಕ್ತಿ ಇರುವಾಗ ಉತ್ಕೃಷ್ಟಜೀವಿ ಒಂದು ವಾತಾವರಣದಿಂದ ಇನ್ನೊಂದು ವಾತಾವರಣದಲ್ಲಿ ಬದುಕುವುದನ್ನು ಸಾಧಿಸಲಾಗುವುದಿಲ್ಲ ಎನ್ನುವುದು ಹೇಗೆ? ಈ ಭೂಮಿಯಲ್ಲಿ ಯಾವ ವಾತಾವರಣವನ್ನಾಗಲಿ ಅನುಸರಿಸಿಕೊಂಡು ಬಗ್ಗಿಸಿ ಕೊಳ್ಳುವ ಶಕ್ತಿ ಪಡೆದಿಲ್ಲವೆ ಮಾನವ? ಅದರಿಂದ ಈ ಎಲ್ಲ ಪ್ರಶ್ನೆಗಳಿಗೆ 'ಇರಬಹುದು' ಎನ್ನುವುದೇ ಸರಿಯಾದ ಉತ್ತರ. ಏಕೆಂದರೆ ನಾವು ಕಂಡುದೇ ಸತ್ಯ ಇಲ್ಲದುದು ಅಸತ್ಯ ಎನ್ನುವುದು ಈ ಕಾಲಕ್ಕೆ ತಕ್ಕುದಲ್ಲ. ವೈಜ್ಞಾನಿಕದೃಷ್ಟಿಯಲ್ಲಿ ನಮಗೆ ವ್ಯಕ್ತವಾಗಿರು ವುದು ಕಿಂಚಿತ್ತು. ವ್ಯಕ್ತವಾಗದುದು ಬಹಳ, ಅವ್ಯಕ್ತವಾಗಿರುವುದು ಅಪಾರ. ಅದೇಕೆ

ಗಾಜಿನ ಕಡ್ಡಿಯನ್ನು ರೇಷ್ಮೆಯಿಂದ ಉಜ್ಜಿದರೆ ಪಾಸಿಟೀವ್ ವಿದ್ಯುತ್ತು ಗಾಜಿನಲ್ಲೂ ನೆಗಟೀವ್ ವಿದ್ಯುತ್ತು ರೇಷ್ಮೆಯಲ್ಲೂ ಉಂಟಾಗುತ್ತದೆಂದು ಒಬ್ಬ ಶಾಲೆಯ ವಿದ್ಯಾರ್ಥಿ ಕೇಳಿದರೆ ಸಮಂಜಸವಾದ ಉತ್ತರ ಹೇಳಲು ನಮಗಿನ್ನೂ ಗೊತ್ತಾಗಿಲ್ಲ. ಹೀಗಿರುವಲ್ಲಿ ಈ ಬ್ರಹ್ಮಾಂಡದ ಮಹಾ ಗರ್ಭದಲ್ಲಿ ಅದೇನೇನು ಅವ್ಯಕ್ತವಾಗಿ ಅಡಗಿದೆಯೋ !

ಫ್ಲೈಯಿಂಗ್ ಸಾಸರಿನ ಕಥೆ ಬಹುಕಾಲದಿಂದ ಕೇಳಿಬರುತ್ತಿದೆ. ಮೊದಮೊದಲು ಅಪೂರ್ವವಾಗಿ ಈ ಲೋಕದಲ್ಲಿ ಕಾಣಿಸಿಕೊಂಡರೂ ಈಗೀಗ ಹೆಚ್ಚಾಗಿ ಕಾಣಿಸಿ ಕೊಳ್ಳುತ್ತಿವೆ. ಭೂಮಿಯ ವಿಷಯದಲ್ಲಿ ಹೆಚ್ಚು ಆಸಕ್ತಿ ತೋರಿಸುತ್ತಿವೆ ನಿಜ. ಆದರೆ ಅದೇಕೆ ಇಷ್ಟು ದಿನದ ವರೆಗೆ ಈ ಭೂಮಿಯೊಡನೆ ಸಂಬಂಧ ಬೆಳಸಿಲ್ಲ ಎಂಬ ಪ್ರಶ್ನೆ ಏಳುವುದು ಸ್ವಾಭಾವಿಕ.

ನಮಗಿಂತ ಮುಂದುವರಿದ ಮಂಗಳವಾಸಿಗಳಿಗೂ ಶುಕ್ರವಾಸಿಗಳಿಗೂ ಭೂಲೋಕ ಹೆಚ್ಚು ಇನ್ನೂ ನಾಗರಿಕತೆಯ ಆದಿಯಲ್ಲಿರಬೇಕೆಂದೆನಿಸಿರಬೇಕು. ನಾವು ನಾಗರಿಕರೆನಿಸಿಕೊಂಡವರು ಎಲ್ಲಾದರೂ ಅನಾಗರಿಕ ಕಾಡುಜನರನ್ನು ನೋಡಿದರೆ ಕೂಡಲೆ ಅವರಲ್ಲಿಗೆ ಒಬ್ಬೊಬ್ಬರೆ ಹೋಗಲು ಅಂಜುತ್ತೇವೆ. ಏನೋ ರಕ್ಷಣೆ ಪಡೆದು ಹೋದರೂ ಹೋದಕೂಡಲೆ ಸಲಿಗೆಯಿಂದ ಓಡಾಡಲಾರೆವು. ನಮಗೆ ಗೊತ್ತಿರುವ ವಿದ್ಯೆಯನ್ನೆಲ್ಲ ಅವರಿಗೆ ತಿಳಿಸುವುದೇ ಇಲ್ಲ. ತಿಳಿಸಿದರೂ ಅವರಿಗೆ ಏನೇನೂ ಅರ್ಥ ವಾಗದೆ ಅನರ್ಥವಾಗಬಹುದು. ಅಲ್ಲದೆ ಅವರು ಗುರುವಿಗೇ ತಿರುಮಂತ್ರ ಹೇಳಲೂ ಬಹುದು. ಆದ್ದರಿಂದ ಬುದ್ಧಿವಂತರು ಆತುರಪಡದೆ ಅಪಾಯ ತಂದುಕೊಳ್ಳದೆ ನಿಧಾನ ವಾಗಿ ವರ್ತಿಸಿ ಅವರ ಸ್ಥಿತಿಗತಿ ತಿಳಿದುಕೊಂಡು ಕ್ರಮೇಣ ಆ ಭಾಗಕ್ಕೆ ಸಂಚಾರ ಸೌಲಭ್ಯ ಸರಿಯಾಗಿ ಏರ್ಪಡಿಸಿಕೊಂಡು, ರೋಗರುಜಿನ ಮತ್ತಿತರ ಅಪಾಯಗಳಿಗೆ ರಕ್ಷಣೆ ಪಡೆದುಕೊಂಡು ಕ್ರಮವಾಗಿ ಕಾರ್ಯಾರಂಭ ಮಾಡುತ್ತಾರೆ. ಹಾಗೆಯೇ ಈ ಪರಲೋಕದವರೂ ನಮ್ಮ ವಿಷಯದಲ್ಲಿ ವರ್ತಿಸುತ್ತಿರಬಾರದೇಕೆ ?

ಫ್ಲೈಯಿಂಗ್ ಸಾಸರುಗಳು ಕೆಲವು ಪ್ರದೇಶಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳು ತ್ತಿವೆ. ಕೆಲವು ಕಡೆ ಕಾಣಿಸಿಕೊಳ್ಳುತ್ತಲೇ ಇಲ್ಲ. ಇದಕ್ಕೆ ಕಾರಣ ಹಲವಿವೆ. ಫ್ಲೈಯಿಂಗ್ ಸಾಸರುಗಳು ಕೇವಲ ವಿಹಾರಕ್ಕಾಗಿಯೇ ಈ ಲೋಕಕ್ಕೆ ಭೇಟಿ ಕೊಡು ತ್ತಿಲ್ಲ. ಅವಿಲ್ಲಿಗೆ ಬರುತ್ತಿರುವುದು ಒಂದು ನಿರ್ದಿಷ್ಟ ಉದ್ದೇಶದಿಂದ. ಆ ಉದ್ದೇಶಕ್ಕೆ ಬೇಕಾಗುವ ಪ್ರದೇಶಗಳು ಕೆಲವು. ಅಮೆರಿಕ ವಿಜ್ಞಾನದೃಷ್ಟಿಯಲ್ಲಿ ಪ್ರಗತಿ ಸಾಧಿ ಸಿರುವ ರಾಷ್ಟ್ರ. ಆದರಿಂದ ಅಲ್ಲಿ ಅವುಗಳಿಗೆ ಕಾರ್ಯ ಹೆಚ್ಚಿರಬಹುದು. ಹಾಗೆಯೇ ಒಂದೊಂದು ಕಾರಣದಿಂದ ಕೆಲವು ಕಡೆ ಅವುಗಳ ಆಗಮನ ಹೆಚ್ಚು. ಒಂದೊಂದು

ವೇಳೆ ಅವುಗಳು ಬಂದರೂ ಗೊತ್ತಾಗದೆ ಹೋಗಬಹುದು; ಏಕೆಂದರೆ ನಾವು ಆಕಾಶದ ಕಡೆ ನೋಡುವುದೇ ಕಡಿಮೆ.

'ಫ್ಲೈಯಿಂಗ್ ಸಾಸರು' ಯಕ್ಷನೌಕೆಗಳಲ್ಲಿ ಬರುವ ಜನರ ಜೀವನದಲ್ಲಿ ಯುದ್ಧ ಆಕ್ರಮಣ ನಾಶ ಈ ಘಟ್ಟಗಳೆಲ್ಲ ಕಳೆದುಹೋಗಿರಬೇಕು. ನಮ್ಮಲ್ಲಿರುವ ಇವುಗಳೆಲ್ಲ ಅವರಿಗೆ ಅನಾಗರಿಕತೆಯ ಕುರುಹು ಎನಿಸಿರಬೇಕು. ಅವುಗಳಲ್ಲಿ ತೊಡಗಿರುವ ನಮ್ಮೊಡನೆ ಹೇಗೆ ವರ್ತಿಸಬೇಕೋ ಅದು ಅವರಿಗೆ ಇನ್ನೂ ಗೊತ್ತಾಗದಿರಬಹುದು. ಅಲ್ಲದೆ ನಮ್ಮ ರಾಜಕೀಯದ ಈ ಚಾಕಚಕ್ಯತೆ ಅವರಿಗೆ ಅರ್ಥವಾಗದೆ ಅದೊಂದು ಸಮಸ್ಯೆಯಾಗಿರಬೇಕು. ನಮ್ಮ ಸಂಪರ್ಕದಿಂದ ಆ ಲೋಕಗಳಿಗೂ ಈ ರಾಜಕೀಯದ ಹೊಲಸು ಸೋಂಕು ಹರಡಿತು ಎಂದು ಹೆದರಿರಲೂ ಬಹುದು. ಇನ್ನೂ ಹಲವು ಸಮಸ್ಯೆಗಳು ಅವರ ಮುಂದೆ ನಿಂತು ಅವುಗಳ ಪರಿಹಾರವಾಗುವ ವರೆಗೂ ಹೆಚ್ಚು ಸಂಬಂಧ ಬೆಳಸದೆ ವೀಕ್ಷಣೆ ಮತ್ತು ಪರಿಶೋಧನೆಯಲ್ಲಿರಬೇಕು. ಭೂಮಿಯ ಸಂಪರ್ಕದಿಂದ ಅವರಿಗೂ ಅನುಕೂಲವಿದ್ದೀತು. ಶ್ರೀಮಂತವಾದ ಈ ಭೂಮಿಯಲ್ಲಿ ಅವರಿಗೆ ಬೇಕಾದ ಕಚ್ಚಾ ಮಾಲು ಸಿಕ್ಕೀತು. ಅಥವಾ ಇನ್ನೂ ಬೇರೆ ಅನುಕೂಲಗಳೂ ದೊರಕಿಯಾವು. ಇದರಿಂದ ಭೂಮಿಯೊಡನೆ ಹೆಚ್ಚು ಸಂಬಂಧ ಬೆಳಸಲು ಅವರಿಗೂ ಆಸೆ ಇರಬೇಕು. ಒಂದಲ್ಲ ಒಂದು ದಿನ ಭೂಲೋಕದೊಡನೆ ಆ ಜನರ ನಿಕಟಸಂಬಂಧ ಬೆಳೆಯಲೇ ಬೇಕು. ಆ ದೃಷ್ಟಿಯಲ್ಲಿ ನಾವು ಈ ವಿಷಯದಲ್ಲಿ ಸರಿಯಾದ ಜಿಜ್ಞಾಸೆ ನಡೆಸಿ ಸರಿಯಾಗಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದಷ್ಟೂ ಒಳ್ಳೆಯದು.

ನಭ.

ಕಾವ್ಯಾವಲೋಕನ

ಭಾರತದ ಸಂಕ್ಷಿಪ್ತ ಚರಿತ್ರೆ (*A Short History of India* ಎಂಬ ಪುಸ್ತಕದ ಅನುವಾದ)—ಅನುವಾದಕರು: ಎಂ. ವಾಸುದೇವರಾವ್, ಎಂ.ಎ., ಎಲ್.ಟಿ. ಅವರು ; ಮದ್ರಾಸು ವಿಶ್ವವಿದ್ಯಾನಿಲಯದ ಪ್ರಕಟನೆ ; ಪುಟ ೪೧೯+V ; ಬೆಲೆ, ೧೫ ರೂಪಾಯಿ.

ನಮಗೆ ದೊರಕುವ ಭಾರತದ ಇತಿಹಾಸ ಗ್ರಂಥಗಳು ಸಮರ್ಪಕವಾದ ರೀತಿಯಲ್ಲಿ ರಚಿತವಾಗಿಲ್ಲವೆಂಬ ಅಭಿಪ್ರಾಯಕ್ಕೆ ಸಾಕಷ್ಟು ಆಧಾರವಿದೆ. ಹಿಂದಿನ ಕಾಲದಲ್ಲಿ ಈ ಮಹಾರಾಷ್ಟ್ರದ ಸಂಘಟಿತ ಮತ್ತು ಸಮರ್ಪಕವಾದ ಇತಿಹಾಸ ರಚನೆಗೆ ಯಾರೂ ಕೈಹಾಕಿದಂತಿಲ್ಲ. ಸ್ವಲ್ಪಮಟ್ಟಿಗೆ ಅದರ ಜಾಡು ಸಿಗುವಂತಿರುವುದು ಹೂಯೆನ್‌ಸಾಂಗ್, ಫಾಹಿಯಾನ್ ಅಂತಹ ವಿದೇಶೀ ಪ್ರವಾಸಿಗಳ ಬರಹದಿಂದ. ಆಧುನಿಕ ಕಾಲವೆನಿಸಿಕೊಂಡಾಗಲಂತು ಚರಿತ್ರಕಾರರು ಬಹುಮಟ್ಟಿಗೆ ಪರಕೀಯರ ಆಡಳಿತದ ಪ್ರಭಾವಕ್ಕೆ ಒಳಗಾದವರು. ಹೀಗಾಗಿ ನಮ್ಮ ರಾಷ್ಟ್ರದ ಸರಿಯಾದ ಇತಿಹಾಸಜ್ಞಾನ ಸಮುಗೊದಗದಿರುವುದು ದುರದೃಷ್ಟ. ಇಂತಹ ಸಂದರ್ಭದಲ್ಲಿ ಭಾರತದ ಒಂದು ಒಳ್ಳೆಯ ಚರಿತ್ರೆ ಬರುವುದು ಸ್ವಾಗತಾರ್ಹ.

ಒಳ್ಳೆಯ ಗ್ರಂಥಗಳನ್ನು ಕನ್ನಡದಲ್ಲಿ ಪ್ರಕಟಿಸಿ ಉಪಕಾರವೆಸಗುತ್ತಿರುವ ಮದ್ರಾಸು ವಿಶ್ವವಿದ್ಯಾನಿಲಯ ಪ್ರಕಟಿಸಿರುವ 'ಭಾರತದ ಸಂಕ್ಷಿಪ್ತ ಚರಿತ್ರೆ' ಆ ನಮ್ಮ ಆಶೆಯನ್ನು ನೆರವೇರಿಸುವಂತಿಲ್ಲ. ಇದು W. H. Morland, C.S.I.E., K.C.S.I. ಮತ್ತು Alul Chandra Chatterje, G.C.I.E., K.C.S.I. ಇವರು ಈಗ್ಗೆ ೧೮ ವರ್ಷಗಳ ಹಿಂದೆ ಬರೆದು ೧೯೩೬ ರಲ್ಲಿ ಪ್ರಕಟಿಸಿದ (ಚಟರ್ಜಿ ಅವರು ೧೯೪೪ ರಲ್ಲಿ ಎರಡನೆಯ ಮುದ್ರಣ ಕಂಡಾಗ ಕೆಲವು ವಿವರಣೆ ಸೇರಿಸಿದ್ದಾರೆ) *A Short History of India* ಎಂಬ ಪುಸ್ತಕದ ಅನುವಾದ.

ಈ ಅನುವಾದರೂಪದ ಪುಸ್ತಕವನ್ನು ೧೯೫೧ ರಲ್ಲಿ ಪ್ರಕಟಿಸುವುದಕ್ಕಿಂತ ಒಂದು ಸಂಘಟಿತವಾದ ಸಮಂಜಸವಾದ ರೀತಿಯಲ್ಲಿ ಭಾರತದ ಚರಿತ್ರೆಯನ್ನು ಹೊಸದಾಗಿ ಬರೆಯಿಸಿ ಪ್ರಕಟಿಸಿದ್ದರೆ ಚೆನ್ನಾಗಿತ್ತೆಂದು ಹೇಳದೆ ವಿಧಿಯಿಲ್ಲ.

* * *

ಸರಳ ಭೂವಿಜ್ಞಾನ (*Earth Lore Geology Without Jargon*) ಎಂಬ ಪುಸ್ತಕದ ಅನುವಾದ ; ಅನುವಾದಕರು : ಎಂ. ವಾಸುದೇವರಾವ್, ಎಂ.ಎ., ಎಲ್.ಟಿ. ಅವರು ; ಮದ್ರಾಸು ವಿಶ್ವವಿದ್ಯಾನಿಲಯದ ಪ್ರಕಟನೆ ; ಪುಟ ೧೨೦ ; ಬೆಲೆ, ೫ ರೂಪಾಯಿ.

ನಮ್ಮ ಭೂಮಿಯ ವಿಷಯ ತಿಳಿಯಲು ಭೂಮಿಯೇ ನಮಗಿರುವ ಆಧಾರ. ಭೂಮಿಯೇ ಒಂದು ಗ್ರಂಥವಾದರೆ ಅದರ ಮೇಲ್ಮಯ್ಯ ಲಕ್ಷಣ, ಅದರಲ್ಲಿರುವ ಕಲ್ಲಿನ ಪದರಗಳು, ಆ ಪದರಗಳಲ್ಲಿ ದೊರಕುವ ಪಳೆಯುಳಿಕೆ, ಅದರ ಗರ್ಭದಲ್ಲಿರುವ ಶಾಖ, ಖನಿಜಗಳು, ಅದರ ಪರ್ವತಶ್ರೇಣಿಗಳು, ಜ್ವಾಲಾಮುಖಿಗಳು ಮೊದಲಾದುವೆಲ್ಲವೂ ಆ ಗ್ರಂಥದ ಸ್ವಾರಸ್ಯಪೂರ್ಣವಾದ ಅಧ್ಯಾಯಗಳು. ತಾನು ವಾಸಮಾಡುವ ಭೂಗ್ರಹದ ಇತಿಹಾಸವನ್ನು ತಿಳಿದುಕೊಳ್ಳಬೇಕೆಂಬ ಶ್ರದ್ಧಾವಂತನಿಗೆ ಈ ವಿಷಯ ಸೊಗಸಾದ ಕಾದಂಬರಿಗಿಂತ ಸ್ವಾರಸ್ಯವಾಗಿದೆ.

ಭೂಮಿ ಆದಿಯಲ್ಲಿ ಕಾಯ್ದ ಅನಿಲರೂಪದಲ್ಲಿತ್ತು, ಈಗಲೂ ಭೂಕೇಂದ್ರ ಗರ್ಭದಲ್ಲಿ ಅದೇ ಸ್ಥಿತಿ ಇದೆ ಎಂಬುದರ ವಿವರಣೆಯನ್ನು ಅರಿತುಕೊಳ್ಳುವುದರಲ್ಲಾಗಲಿ; ಪ್ರಪಂಚದಲ್ಲೇ ಅತ್ಯಂತ ಎತ್ತರವಾದ ಹಿಮಾಲಯ ಪರ್ವತ ಹಿಂದೊಮ್ಮೆ ಸಮುದ್ರದ ಆಳದ ತಳವಾಗಿತ್ತು ಎಂಬುದನ್ನು ತಿಳಿದುಕೊಳ್ಳುವುದರಲ್ಲಾಗಲಿ; ಒಂದು ಕಾಲದಲ್ಲಿ ಆಫ್ರಿಕ, ಯೂರೋಪ್ ಮತ್ತು ಅಮೆರಿಕ ಖಂಡಗಳೆಲ್ಲ ಒಂದೇ ಭೂಖಂಡವಾಗಿದ್ದು ಆ ಮೇಲೆ ಆ ಖಂಡದಲ್ಲಿ ಬಿರುಕುಂಟಾಗಿ ಅಮೆರಿಕ ಖಂಡ ಕ್ರಮೇಣ ದೂರ ಸರಿದು ನಿಂತು ಆ ಬಿರುಕೇ ಈಗ ಅಟ್ಲಾಂಟಿಕ್ ಮಹಾಸಾಗರವಾಗಿದೆ ಎಂಬ ವಿಷಯವನ್ನು ತಿಳಿಯುವುದರಲ್ಲಾಗಲಿ; ಯಾರಿಗೆ ಅಭಿರುಚಿ ಹುಟ್ಟದು! ವಿಶ್ವಸೃಷ್ಟಿಯ ಮಹಾಕಥೆ, ಭೂಮಿಯ ಮೇಲ್ಮಯ್ಯ ಲಕ್ಷಣ, ಭೂಗರ್ಭದಲ್ಲಿ ಅಡಗಿರುವ ಸಾಮಗ್ರಿಗಳು ಇವೆಲ್ಲವನ್ನೂ ಅರಿತುಕೊಳ್ಳಬೇಕಾದುದು ಅಗತ್ಯ.

ಈ ಎಲ್ಲ ವಿಷಯಗಳ ಸಾಧಾರಣ ಜ್ಞಾನ ಪಡೆದುಕೊಳ್ಳಲು 'ಸರಳ ಭೂವಿಜ್ಞಾನ' ಪುಸ್ತಕ ಬಹಳ ಮಟ್ಟಿಗೆ ನೆರವಾಗುತ್ತದೆ. ಈ 'ಸರಳ ಭೂವಿಜ್ಞಾನ', Prof. S. J. Shand ಅವರು ಬರೆದ *Earth Lore Geology Without Jargon* ಎಂಬ ಪುಸ್ತಕದ ಅನುವಾದ. ಅನುವಾದ ಸಾಕಷ್ಟು ಮಟ್ಟಿಗೆ ಚೆನ್ನಾಗಿಯೆ ಬಂದಿದೆಯೆಂದು ಹೇಳಬೇಕು.

ಮದ್ರಾಸು ವಿಶ್ವವಿದ್ಯಾನಿಲಯ ಈ ಬಗೆಯ ಪುಸ್ತಕಗಳನ್ನು ಕನ್ನಡದಲ್ಲಿ ತರುತ್ತಿರುವುದು ಅಭಿನಂದನೀಯ ಮತ್ತು ಆದರ್ಶನೀಯ.

ನಭ.

*
* *

ಹಚ್ಚೆಯ ತೆನೆ—ಬರೆದವರು: ಕರ್ಣಾಟಕ ಸಂಘದ ಸದಸ್ಯರು; ಪ್ರಕಾಶಕರು: ಕರ್ಣಾಟಕ ಸಂಘ, ಸೆಂಟ್ರಲ್ ಕಾಲೇಜ್, ಬೆಂಗಳೂರು; ಬೆಲೆ, ರೂ. ೧-೦-೦.

ಇದರಲ್ಲಿ ವಿವಿಧ ಲೇಖಕರು ಬರೆದಿರುವ ಹತ್ತು ಲೇಖನಗಳಿವೆ. ಶ್ರೀಮಾನ್

ಜಿ. ಪಿ. ರಾಜರತ್ನಂರವರು ವಿದ್ಯಾರ್ಥಿಗಳ ಪ್ರತಿಭೆಯನ್ನು ಪ್ರಚೋದಿಸಿ ಬೆಳಕಿಗೆ ತಂದು 'ಕಾಲೇಜ್ ಬರವಣಿಗೆ'ಯ ರೂಪದಲ್ಲಿ ಕಿರಿಯ ಲೇಖಕರಿಗೆ ಪ್ರೋತ್ಸಾಹವನ್ನೀಯುತ್ತಿದ್ದಾರೆ.

"ಕನ್ನಡಿ ಮುಂದೆ" ನಿಂತ ಶ್ರೀಮಾನ್ ಎನ್. ಲಿಂಗಪ್ಪನವರು ತಿಳಿಯಾದ ಹಾಸ್ಯದೊಡನೆ, ಕನ್ನಡಿಯ ಮಹತ್ವ ಮತ್ತು ಅದರ ಆವಶ್ಯಕತೆ, ಕನ್ನಡಿಯ ಮುಂದೆ ನಿಲ್ಲುವವರ ಮನೋವಿಶ್ಲೇಷಣೆ—ಇವುಗಳನ್ನು ಸುಂದರವಾಗಿ ಮಾಡಿದ್ದಾರೆ. ಇವರ 'ಮೂಗಿನ ಮಹತ್ವ'ವೂ ಮಹತ್ವದ್ದೇ. ಈ ಎರಡು ಲೇಖನಗಳೂ ಲೇಖಕರ ಪ್ರತಿಭೆಯ ಕುರುಹುಗಳಾಗಿವೆ. ಇವರು ಇದನ್ನು ಬೆಳಸಿಕೊಂಡು ಹೋದರೆ ಶ್ರೇಷ್ಠ ನಿಬಂಧಕಾರರಾಗುವುದರಲ್ಲಿ ಸಂದೇಹವಿಲ್ಲ.

ಶ್ರೀ ಜಿ. ಎಸ್. ಶ್ರೀನಿವಾಸಮೂರ್ತಿಯವರ 'ಒಂದು ಕೆಟ್ಟ ಕನಸು' ಸುಮಾರಾಗಿದೆ. ಇದರಲ್ಲಿ ಕಥೆಗಾರನ ಕೌಶಲವಿದೆ. ಇವರ 'ನಾನು ಕಂಡಿರುವ ಕಣ್ಣುಗಳು' ಸಾಕಷ್ಟು ಚೆನ್ನಾಗಿದೆ. ಇವರು ಮುಂದೆ ಒಳ್ಳೆಯ ಕಥೆಗಾರರಾಗಬಹುದು.

ಶ್ರೀ ಎಂ. ಚಂದ್ರಶೇಖರರವರ 'ಹಳೆಯ ಚಪ್ಪಲಿ ಹೊಲಿಯುವವನು' ಒಂದು ಸುಂದರ ಕಥೆ. ಕೀಳುಜಾತಿಯಲ್ಲಿ ಹುಟ್ಟಿ, ಅನಕ್ಷರಸ್ಥನಾದ ಹಳೆಯ ಚಪ್ಪಲಿ ಹೊಲೆಯುವವನ ವಿಚಾರಸರಣಿ, ತಿಳಿವು ಮತ್ತು ಅವನ ಕರ್ಮಠ ಜೀವನ ಅನುಕರಣೀಯವಾಗಿದೆ. ಇವರ 'ಸಸ್ಯಶಾಸ್ತ್ರಪ್ರದರ್ಶನ'ವೂ ತುಂಬಾ ಚೆನ್ನಾಗಿದೆ. ಅನುಭವಿಗಳು ಇಂಥ ಪ್ರದರ್ಶನಗಳ ಲಾಭವನ್ನು ಪಡೆಯದೆ ಇದೇನು ಪ್ರದರ್ಶನವೋ ಎಂದು ಮೂಗು ಮುರಿಯುತ್ತಾರೆ. ಆದರೆ ತಿಳಿದವರು ಅದರ ಲಾಭ ಪಡೆಯುತ್ತಾರೆ. ಇಲ್ಲಿ ಲೇಖಕರು ಸರಸವಾಗಿ ತನ್ನ ಮಿತ್ರನಿಗೆ ಪ್ರದರ್ಶನವನ್ನು ವಿವರಿಸಿ ತಿಳಿಸಿದ್ದಾರೆ.

ಶ್ರೀಮತಿ ಎಂ. ಆರ್. ವಿಮಲಾ ಅವರು 'ನಾನು ತಿಂದಿರುವ ಹಣ್ಣುಗಳು' ಎಂದು ತಮಗೆ ದೊರಕಿದ ಹಣ್ಣುಗಳ ವರ್ಣನೆಯನ್ನು ಮಾಡಿ ಎಲ್ಲರ ಬಾಯಲ್ಲು ನೀರೂರುವಂತೆ ಮಾಡಿದ್ದಾರೆ. ನಾಗರಿಕರು ಕಂಡು ಕೇಳರಿಯದ ಕಾಡುಹಣ್ಣುಗಳ ಸವಿಯನ್ನು ಸವಿದ ಅವರೇ ಪುಣ್ಯವಂತರು.

ಶ್ರೀ ಬಿ. ಟಿ. ಅಶ್ವತ್ಥನಾರಾಯಣರಾವ್‌ರವರ 'ಪೆನ್ಸಿಲಿನ ಆಶೆ' (ಅಮೋಘವಾದುದು,) ತಿಳಿಯಾದ ವ್ಯಂಗ್ಯಮಿಶ್ರಿತ ಮನೋವೈಜ್ಞಾನಿಕ ಚಿತ್ರವಿದು. ಇವರು ಅಭ್ಯಾಸಮಾಡಿದರೆ ಉತ್ತಮ ಬರಹಗಾರರಾಗುವ ಉಜ್ವಲ ಭವಿಷ್ಯವಿದೆ.

ಶ್ರೀ ಆರ್. ಪಿ. ನಂಜಪ್ಪನವರಂಥವರಿಗೆ ವೈಜ್ಞಾನಿಕ ಪ್ರದರ್ಶನಗಳಲ್ಲಿ ನಿಸರ್ಗ ಸೌಂದರ್ಯ ಕಾಣದು. ಇದು ಸಹಜವೆ. ಕವಿಹೃದಯಗಳಿಗೆ ನಿಸರ್ಗ ಸೌಂದರ್ಯವನ್ನು ಕತ್ತರಿಸಿ, ಪ್ರಯೋಗಶಾಲೆಯಲ್ಲಿ ಭೂತಕನ್ನಡಿಯಲ್ಲಿ ತೋರಿಸಿದರೆ ಚಂದವೆನಿಸು

ವುದೆ? ಹೀಗೆಯೇ ಶ್ರೀ ಎ. ವೆಂಕಟನಾರಾಯಣರಾವ್ ಅವರಿಗೂ ಅನಿಸಿದೆ. 'ಸಸ್ಯ ವೈಭವವನ್ನು ನೋಡಿ ಹೃದಯ ಕುಣಿಯುತ್ತಿದ್ದ'ವರಿಗೆ ಅಂದಿನ ಪ್ರದರ್ಶನದ ಸಸ್ಯ ವೈಭವ ಹಿಡಿಸದಿದ್ದುದು ಅಚ್ಚರಿಯೇನಲ್ಲ!

ಇಲ್ಲಿ ಬರೆದಿರುವ ಲೇಖನಗಳೆಲ್ಲ ವಿಷಯ ಪ್ರತಿಪಾದನೆ, ಭಾಷಾಸೌಂದರ್ಯ ಮತ್ತು ಭಾವಮಾಧುರ್ಯದಿಂದ ಕೂಡಿ ಒಳ್ಳೆ ಕೃತಿಗಳಾಗಿವೆ. ಕೆಲವಂತೂ ತುಂಬಾ ಚೆನ್ನಾಗಿ ಬಂದಿವೆ. ನಮ್ಮ ಕಿರಿಯ ಲೇಖಕರಿಗೆ ಇದೇ ತೆರನಾದ ಪ್ರೋತ್ಸಾಹ ಸಿಕ್ಕಿ ಪ್ರತಿಭಾವಂತರಾಗಿ ಕನ್ನಡ ಸಾಹಿತ್ಯದ ಅಭಿವೃದ್ಧಿಗೆ ಸಹಾಯಕರಾಗಲೆಂದು ಆಶಿಸುತ್ತೇನೆ.

ಯ. ಹನುಮಯ್ಯ.

*
* *

ರಾಜ್ಯಾಂಗ ತತ್ವಗಳು—ಶ್ರೀ ಡಿ.ವಿ.ಜಿ. ; ಕಾವ್ಯಾಲಯ, ಮೈಸೂರು.

ಕನ್ನಡದಲ್ಲಿ ರಾಜಕೀಯ ಶಾಸ್ತ್ರದ ಬಗ್ಗೆ ಹೊರಬಿದ್ದಿರುವ ಗ್ರಂಥಗಳು ಬಹು ಕಡಿಮೆ. ಈ ನ್ಯೂನತೆಯನ್ನು ಗಮನಿಸಿ ಹೊರಬೀಳುವ ಗ್ರಂಥ ಸ್ವಾಗತಾರ್ಹ.

ಶ್ರೀ ಡಿ.ವಿ.ಜಿ. ಅವರ 'ರಾಜ್ಯಾಂಗ ತತ್ವಗಳು' ಸಣ್ಣ ಗ್ರಂಥವಾದರೂ ಬಾಧಕವಿಲ್ಲ. ಗ್ರಂಥದ ಪ್ರಾಮುಖ್ಯತೆ ಅದರಲ್ಲಿರುವ ಪುಟಗಳ ಸಂಖ್ಯೆಗಳಿಂದಲ್ಲ; ಸಮಾಜಪ್ರಪಂಚವನ್ನು ಅರಿಯಲು ಗ್ರಂಥ ನೀಡುವ ಬೆಳಕಿನಿಂದ 'ರಾಜ್ಯ'ದ ಸ್ವರೂಪವನ್ನು ಪರಿಚಯಮಾಡಿಕೊಡಲು ಗ್ರಂಥಕರ್ತರು ಯತ್ನಿಸಿದ್ದಾರೆ. ಒಂದು ದೃಷ್ಟಿಯಲ್ಲಿ ಗ್ರಂಥಕರ್ತರು ಯಶಸ್ವಿಯಾಗಿದ್ದಾರೆ; ಇನ್ನೊಂದು ದೃಷ್ಟಿಯಲ್ಲಿ ಗ್ರಂಥದಲ್ಲಿ ನಿರಾಶೆಯನ್ನು ಕಾಣಬೇಕಾಗಿದೆ. ಭಾವವಾದದ (Philosophical Idealism) ಅಡಿಪಾಯದ ಮೇಲೆ ಗ್ರಂಥವನ್ನು ರಚಿಸಲಾಗಿದೆ. 'ವ್ಯಕ್ತಿ', 'ಸಮಾಜ', 'ರಾಜ್ಯ', 'ಆಡಳಿತ,' 'ಅಧಿಕಾರ', 'ಸ್ವಾತಂತ್ರ್ಯ', 'ಹಕ್ಕುಗಳು', 'ಸರ್ಕಾರ', ಮತ್ತು 'ನೆಮ್ಮದಿ' ಎಂಬ ಭಾವರೂಪದ ಶಬ್ದಗಳನ್ನು (Concepts) ಅಪೇಕ್ಷಿಸಿದ ಸ್ಥಳಗಳಲ್ಲಿ ಸಮನ್ವಯ ಬರುವ ಹಾಗೆ ಚಿತ್ರಿಸಿ ರಾಜ್ಯಶಾಸ್ತ್ರವನ್ನು ರಚಿಸಲಾಗಿದೆ. ದೋಷರಹಿತ ಮತ್ತು ಶಾಶ್ವತವಾದ ರಾಜಕೀಯ ವ್ಯವಸ್ಥೆ ಮತ್ತು ರಾಜಕೀಯ ಜೀವನವನ್ನು ಕಂಡುಹಿಡಿಯಲು ಹೊರಟಿರುವ ಭಾವವಾದಿಗಳು ಇತಿಹಾಸದ ವಿವಿಧ ಕಾಲಗಳಲ್ಲಿದ್ದ, ಇರುವ ರಾಜಕೀಯ ಜೀವನ ಮತ್ತು ವ್ಯವಸ್ಥೆಗಳ ವೈಶಿಷ್ಟ್ಯ, ವಸ್ತುಪ್ರಪಂಚದಲ್ಲೂ, ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲೂ ಉಂಟಾಗಿರುವ ಬದಲಾವಣೆಗಳನ್ನು ಕಾಣದಿರುವುದು ಅವರ ತಪ್ಪಲ್ಲ; ವಾಸ್ತವಿಕ ರಾಜಕೀಯ ಪ್ರಪಂಚದ ತಪ್ಪು. ಭಾವವಾದಿಗಳಿಗೆ ರಾಜ್ಯಶಾಸ್ತ್ರ

ಒಂದು ಕಲೆ, ವಿಜ್ಞಾನವಲ್ಲ. ವಾಸ್ತವಿಕ ಪ್ರಪಂಚವನ್ನು ಪ್ರತಿಬಿಂಬಿಸುವುದು ಭಾವವಾದೀ ರಾಜ್ಯಶಾಸ್ತ್ರದ ಕರ್ತವ್ಯವಲ್ಲ. ಶ್ರೀ ಡಿ.ವಿ.ಜಿ. ಅವರು ಇಂತಹ ಭಾವವಾದೀ ರಾಜ್ಯಶಾಸ್ತ್ರದ ಪ್ರತಿಪಾದನೆಯಲ್ಲಿ ಯಶಸ್ವಿಯಾಗಿದ್ದಾರೆ. ಈ ಬಗೆಯ ಶಾಸ್ತ್ರರಚನೆ ಹೊಸದೇನೂ ಅಲ್ಲ. ಪ್ಲೇಟೋ ಅರಿಸ್ಟಾಟಲ್‌ರ ರಾಜಕೀಯ ಗ್ರಂಥಗಳೇ ನಾಂದಿಯಾಗಿ ಅಂದಿನಿಂದ ಈ ವರೆಗೆ ಭಾವವಾದೀ ಮಾರ್ಗ ಜಾಡುಬಿದ್ದಿದೆ. ವಿಶ್ವವಿದ್ಯಾನಿಲಯಗಳು ಭಾವವಾದೀ ರಾಜಕೀಯ ಪಠ್ಯಕ್ರಮಕ್ಕೆ ಮತ್ತು ಭಾವವಾದದ ಪ್ರಸಾರಕ್ಕೆ ತೌರುಮನೆಯಾಗಿವೆ. ಈ ಮಾರ್ಗ ಎಷ್ಟು ಶುಷ್ಕವಾದದ್ದು, ಎಷ್ಟು ಫಲಹೀನವಾಗಿದೆ ಎಂಬುದಕ್ಕೆ ವಾಸ್ತವಿಕ ಪ್ರಪಂಚಕ್ಕೂ ವಿಶ್ವವಿದ್ಯಾನಿಲಯದ ಪಾಂಡಿತ್ಯಪ್ರದರ್ಶನಕ್ಕೂ ಇರುವ ಅಂತರವೇ ಸಾಕ್ಷಿಯಾಗಿದೆ.

ವಾಸ್ತವಿಕ ಸಮಾಜದ ಆಗುಹೋಗುಗಳು, ಸಮಾಜದಲ್ಲಿ ಆಗಿರುವ ಮತ್ತು ಆಗುತ್ತಿರುವ ಬದಲಾವಣೆಗಳು, ಈ ಬದಲಾವಣೆಗಳಿಗೆ ಕಾರಣಶಕ್ತಿಗಳು, ಜನಜೀವನದ ಸ್ವರೂಪ, ಜನಜೀವನ ಸಂಬಂಧಗಳಲ್ಲಿರುವ ವಿರಸಗಳು, ವಿರಸಗಳು ರಾಜಕೀಯ ಜೀವನದ ಮೇಲೆ ಮಾಡಿರುವ ಪರಿಣಾಮಗಳು, ಸಮಾಜವಿಕಾಸದಲ್ಲಿ ಉಂಟಾಗಿರುವ ವರ್ಗಹೋರಾಟ, ದಂಗೆ, ಕ್ರಾಂತಿ ಮತ್ತು ವಿಪ್ಲವ ಇವೊಂದೂ ಭಾವವಾದಿಗಳಿಗೆ ಮುಖ್ಯವಲ್ಲ. ಈ ವಾಸ್ತವಿಕ ಅಂಶಗಳ ವಿಮರ್ಶೆ ತನ್ಮೂಲಕ ನಮ್ಮ ಪ್ರಸ್ತುತ ರಾಜಕೀಯರಂಗದ ಸ್ವರೂಪವನ್ನು ಅರಿಯಲು ಗ್ರಂಥ ಸ್ವಲ್ಪವೂ ಸಹಾಯಕವಾಗಿಲ್ಲವೆಂದು ಹೇಳಬೇಕು. ಐತಿಹಾಸಿಕ ಹಿನ್ನೆಲೆ, ಆಧಾರ ಮತ್ತು ಐತಿಹಾಸಿಕ ಬದಲಾವಣೆಗಳನ್ನು ದೂರಮಾಡಿ ರಚಿತವಾಗಿರುವ, ಆಗುತ್ತಿರುವ, ರಾಜಕೀಯ ಗ್ರಂಥಗಳ ಸ್ವರೂಪ ಇದೇ ಆಗಿದೆ. ಇದು ನಮಗೆ ರಾಜಕೀಯ ವಿಜ್ಞಾನವಾಗುವುದಿಲ್ಲ; ಹಿತೋಪದೇಶವಾಗುತ್ತದೆ. ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ಭಾವವಾದೀ ರಾಜಕೀಯ ಗ್ರಂಥಗಳ ಸ್ವರೂಪ ಇದೇ ಆಗಿದೆ.

ಗ್ರಂಥ 'ರಾಜ್ಯಾಂಗತತ್ವಗಳು' ಎಂದು ಇದೆ. ಆದರೆ ನಿರೂಪಣೆಯಲ್ಲಿ 'ರಾಜ್ಯ'ದ ಹುಟ್ಟು ಮತ್ತು ಆಗಮನಕ್ಕೆ ಸಂಬಂಧಿಸಿರುವ ಹಾಗೆ ಹಲವು ವಾದಗಳ ಜಿಜ್ಞಾಸೆಯೇ ಇಲ್ಲ. 'ರಾಜ್ಯ' ಸ್ವಾಭಾವಿಕವಾದದ್ದೆಂದು ಭಾವಿಸಿ ನಿರೂಪಣೆ ಮುಂದುವರಿದಿದೆ. ಆದರೆ 'ರಾಜ್ಯ'ವೇ ಇಲ್ಲದ ಸಮಾಜಗಳು ಇದ್ದವೆಂಬುದನ್ನು ನಾವು ಮರೆಯುವ ಹಾಗಿಲ್ಲ. ಗ್ರಂಥವನ್ನು 'ರಾಜ್ಯಾಂಗತತ್ವ'ವೆಂದು ಮಾತ್ರ ಕರೆದಿದ್ದರೆ ಚೆನ್ನಾಗಿತ್ತು. 'ರಾಜ್ಯ' ವಿಕಾಸವನ್ನು ಚರ್ಚಿಸುವಾಗ (ಪುಟ ೧೧೮) ಪ್ರಜಾತತ್ವ ಎಲ್ಲಕ್ಕಿಂತ ಈಚಿನದು ಎಂದು ಹೇಳಲಾಗಿದೆ. ಆದರೆ ರಾಜಕ ಪ್ರಭುತ್ವಕ್ಕಿಂತ ಮುಂಚೆಯೇ ಪ್ರಜಾಪ್ರಭುತ್ವ ಇದ್ದುದಕ್ಕೆ ಇತಿಹಾಸದಲ್ಲಿ ಸಾಕ್ಷ್ಯವಿದೆ. ಭಾರತದಲ್ಲೂ ರಾಜಕೀಯದ

ಬಗ್ಗೆ ಜಿಜ್ಞಾಸೆ ಇತ್ತೆಂಬುದರ ಬಗ್ಗೆ ಸಮರ್ಥನೆ ಅನವಶ್ಯಕವಾಗಿದೆ. (ಅಧ್ಯಾಯ ೩). ಸಮಾಜವಿದ್ದೆಡೆ ರಾಜಕೀಯ ಇದ್ದೇ ಇರುತ್ತದೆ. ಭಾರತೀಯ ರಾಜಕೀಯ ಮೀಮಾಂಸೆ ರಾಜನ ಗುಣಲಕ್ಷಣಗಳ ನಿರ್ಣಯದಲ್ಲೇ ಮುಕ್ತಾಯವಾಗಿ ನಿಂತು ದಕ್ಕೂ, ಪಾಶ್ಚಾತ್ಯ ರಾಜಕೀಯ ಮೀಮಾಂಸೆ ಮುಂದೋಟ ಗಳಿಸಿ ರಾಜನಿಗೇ ಸ್ಥಾನವಿಲ್ಲದ ರಾಜ್ಯವ್ಯವಸ್ಥೆಯನ್ನು ಸ್ಥಾಪಿಸುವುದಕ್ಕೆ ಪ್ರೇರೇಪಣೆ ಹೊಂದುವು ದಕ್ಕೂ ಕಾರಣಗಳನ್ನು ಕೊಟ್ಟಿಲ್ಲ.

ಗ್ರಂಥಕರ್ತರ ಒಲವು ಸರಾಜಕ ಪ್ರಭುತ್ವದ ಮೇಲೆ (Limited Monarchy) ಇದ್ದಹಾಗೆ ವ್ಯಕ್ತವಾಗಿದೆ. (ಪುಟ ೧೦೭). ಇದಕ್ಕಾಗಿ ೧೨ ನೇ ಅಧ್ಯಾಯವನ್ನು ಪೂರ್ಣವಾಗಿ ರಾಜ್ಯದಲ್ಲಿ ರಾಜನ ಸ್ಥಾನಮಾನಗಳ ಬಗ್ಗೆ ಮೀಸಲುಮಾಡಿದ್ದಾರೆ. ಸರಾಜಕ ವ್ಯವಸ್ಥೆಯಲ್ಲಿ ಗ್ರಂಥಕರ್ತರು ತೃಪ್ತಿಯನ್ನೂ ಸಮಾಗಮನವನ್ನೂ ಕಾಣು ತ್ತಿರುವಾಗ ಭಾರತದಲ್ಲಿ ಅವತರಣಿಕೆ ಹೊಂದಿರುವ ಪ್ರಜಾಸತ್ತೆ ಗ್ರಂಥಕರ್ತರಿಗೆ ಬೇಡವಾದ ತುತ್ತನ್ನು ನುಂಗಿದ ಹಾಗೆ ಪರಿಣಮಿಸಿದೆ. ಅನಿವಾರ್ಯವಾದ ಪ್ರಜಾ ಸತ್ತೆಯನ್ನು ಅನಿರೀಕ್ಷಿತ ದೃಷ್ಟಿಯಿಂದ ಕಂಡು ಮೊದಲಿನ ಹತ್ತು ಅಧ್ಯಾಯ ಗಳೊಡನೆ ಕಡೆಯ ಮೂರು ಅಧ್ಯಾಯಗಳನ್ನು ವಿಧಿಯಿಲ್ಲದೆ ಮಿಲನಮಾಡಲಾಗಿದೆ.

ಪುಟ ೧೩೯ ರಲ್ಲಿ ವಿವಿಧ ರಾಜಕೀಯ ಪಕ್ಷಗಳಿಂದ 'ವಿಪತ್ತು ತಪ್ಪಬೇಕಾದರೆ ಪಕ್ಷಾತೀತವಾದ ರಾಷ್ಟ್ರಕವರ್ಗವು ರಾಜಕೀಯದಲ್ಲಿ ಹೆಚ್ಚಾಗಿರಬೇಕು' ಎಂದು ಹೇಳಲಾಗಿದೆ. ಈ ಪಕ್ಷಾತೀತವಾದ ರಾಷ್ಟ್ರಕ ವರ್ಗವು ಯಾವುದು, ಈ ವರ್ಗದ ಸ್ಥಾನಮಾನಗಳೇನು, ಪಕ್ಷಾತೀತವಾದ ವರ್ಗವೂ ಸಹ ಒಂದು ಪಕ್ಷವಾಗುವು ದಿಲ್ಲವೇ ಎಂಬುದರ ಬಗ್ಗೆ ಯಾವ ವಿವರಣೆಯೂ ಇಲ್ಲ. ಸಾರ್ವಜನಿಕ ಪುರುಷರ ವಿಂಗಡನೆ ಸಮಂಜಸವಾಗಿಲ್ಲ. ಬಹುಶಃ ಗ್ರಂಥಕರ್ತರು ಪ್ಲೇಟೋವಿನ ಜನವಿಂಗಡನೆಗೆ ಮನಸೋತು ಜ್ಞಾನಿಗಳ ಪ್ರಭುತ್ವಕ್ಕೆ ಆಸೆ ತೀರಿಸಿದ ಹಾಗೆ ಕಾಣುತ್ತದೆ. ಪುಟ ೧೩೭ ರಲ್ಲಿ ವರ್ಣಿಸಲಾಗಿರುವ ಸಾಧ್ಯ ಚಿಂತಕರ ಸ್ಥಾನಮಾನಗಳನ್ನು ಬಹು ಗೋಪ್ಯ ವಾಗಿ ಇಡಲಾಗಿದೆ.

ಪ್ರಸ್ತುತ ರಾಜಕೀಯ ಪ್ರಪಂಚದಲ್ಲಿ ಸಮಾಜವಾದದ ಬಗ್ಗೆ ಅಷ್ಟೊಂದು ಜಿಜ್ಞಾಸೆ ಇರುವಾಗ ಇಡೀ ೧೮೨ ಪುಟಗಳಲ್ಲಿ ಒಂದೆಡೆಯಲ್ಲಾದರೂ ಸಮಾಜ ವಾದಕ್ಕೂ ರಾಜ್ಯಾಂಗ ತತ್ವಕ್ಕೂ ಇರುವ ಸಂಬಂಧವೇನೆಂಬುದನ್ನು ಚರ್ಚಿಸುವು ದಿರಲಿ, ಆ ಶಬ್ದವೂ ಸಹ ಇಲ್ಲ. ರಾಜ್ಯವ್ಯವಸ್ಥೆಯ ಸ್ವರೂಪ ಸರಾಜಕ ಪ್ರಭುತ್ವದಲ್ಲಿ ಪರಿ ಪಕ್ವತೆಯನ್ನು ಕಂಡಿತು ಎನ್ನುವುದೊರಳಗಾಗಿ ನಾನೂ ಇದ್ದೇನೆಂದು ಬಂದ ಪ್ರಜಾ ಪ್ರಭುತ್ವವನ್ನು ಗ್ರಂಥಕರ್ತರು ಅನುಮಾನದೃಷ್ಟಿಯಲ್ಲಿ ಇದಿರುಗೊಳ್ಳುತ್ತಿರುವಾಗ ಇನ್ನು ಸಮಾಜವಾದದ ಶಬ್ದದ ಉಚ್ಚಾರಣೆಯೂ ಸಹ ಬರಲು ಸಾಧ್ಯವೇ ಇಲ್ಲ!

ರಾಜಕೀಯ ವಿಚಾರ ಎಲ್ಲರಿಗೂ ಬೇಕಾದದ್ದು. ಅತೀಕ್ಷ್ಣ ಪ್ರಜೆಯಿಂದ ಸಂಭವಿಸುವ ಕೇಡುಗಳ ಬಗ್ಗೆ ಗ್ರಂಥಕರ್ತರು ಒತ್ತಿ ನುಡಿದಿರುವುದು ಬಹು ಮುಖ್ಯವಾದದ್ದು.

ಎಲ್. ಶ್ರೀಕಂಠಯ್ಯ.

*
* *

ಧ್ವನಿಸಾರವಮು (ತೆಲುಗು)—ಗ್ರಂಥಕರ್ತರು ಮತ್ತು ಪ್ರಕಾಶಕರು : ಮಹೋಪಾಧ್ಯಾಯ, ಸಾಹಿತ್ಯ ವಿದ್ಯಾಪ್ರವೀಣ, ಜಮ್ಮುಲಮಡಕ, ಮಾಧವರಾಮಶರ್ಮರು ; ಅಧ್ಯಾಪಕರು, ಎ.ಸಿ. ಕಾಲೇಜು, ಗುಂಟೂರು (ಆಂಧ್ರ) ; ಪುಟಗಳು ೮೮ ; ಬೆಲೆ, ರೂ. ೧-೪-೦.

ಇದು ಸಂಸ್ಕೃತದಲ್ಲಿ ಆನಂದವರ್ಧನನು ರಚಿಸಿರುವ "ಧ್ವನ್ಯಾಲೋಕ"ದ ತೆಲುಗು ಸಂಗ್ರಹಸ್ವರೂಪ. ಧ್ವನಿಯನ್ನು ಪ್ರತಿಪಾದಿಸಿ ಆ ಪ್ರಸ್ಥಾನವನ್ನು ಸ್ಥಾಪಿಸುವ ಗ್ರಂಥ. ಅಲಂಕಾರಗ್ರಂಥಗಳ ಮೂಲಕೃತಿಗಳು ಪರಿವರ್ತನೆಯಾಗಿ ಅಚ್ಚಾಗಿರುವ ಗ್ರಂಥಗಳು ಕನ್ನಡಕ್ಕಿಂತಲೂ ತೆಲುಗಿನಲ್ಲಿ ಹೆಚ್ಚಾಗಿವೆ. ಪ್ರೊಫೆಸರ್ ಎ. ಆರ್. ಕೃಷ್ಣಶಾಸ್ತ್ರಿಗಳು "ಕನ್ನಡ ಧ್ವನ್ಯಾಲೋಕ"ಕ್ಕೆ ೧೯೫೧ ರಲ್ಲಿ ಮುನ್ನುಡಿ ಬರೆಯುತ್ತಾ ಹೀಗೆ ಹೇಳಿದ್ದಾರೆ: "ನನಗೆ ತಿಳಿದಮಟ್ಟಿಗೆ ಭಾಷಾಂತರ ಕೆಲಸವನ್ನು ಮೊದಲು ಕೈಕೊಂಡವರು ದಿ|| ಅಕ್ಕಲೆ ಲಕ್ಷ್ಮೀನರಸಿಂಹಶಾಸ್ತ್ರಿಗಳು. ಅವರು ೧೯೦೫ ರಲ್ಲಿ 'ಕನ್ನಡಿಗರಾದ ಅಲಂಕಾರವಿದ್ಯಾರ್ಥಿಗಳು ಅಲಂಕಾರವಿದ್ಯಾರ್ಥಿಗಳೇ ಆದರಲ್ಲಾ' ಎಂದು ಚಿಂತಿಸಿ "ಚಂದ್ರಾಲೋಕ"ವನ್ನು ಕನ್ನಡಿಸಿದರು. ಎರಡನೆಯದೇ ಡಾ|| ಕೆ. ಕೃಷ್ಣಮೂರ್ತಿಯವರ "ಕನ್ನಡ ಧ್ವನ್ಯಾಲೋಕ." ಈ ಲೇಖಕರೇ ಭಾಮಹನ ಕಾವ್ಯಾಲಂಕಾರವನ್ನು ಕನ್ನಡಿಸಿದ್ದಾರೆ. ಮಮ್ಮಟನ ಕಾವ್ಯಪ್ರಕಾಶವನ್ನು ಅನುವಾದಿಸಿದ್ದಾರೆ, ಸಧ್ಯದಲ್ಲೇ ಇದು ಪ್ರಕಟವಾಗಲಿದೆ. ಕನ್ನಡ ಸಾಹಿತ್ಯದಲ್ಲಿ ನೃಪತುಂಗನ 'ಕವಿರಾಜಮಾರ್ಗ', ನಾಗವರ್ಮನ 'ಕಾವ್ಯಾವಲೋಕನ' ಮತ್ತು ಈ ಕೆಳಗೆ ಸೂಚಿಸಿದವರೂ ಕನ್ನಡದಲ್ಲಿ ಅಲಂಕಾರಗ್ರಂಥಗಳನ್ನು ಬರೆದಿದ್ದಾರೆ.

(೧) ಉದಯಾದಿತ್ಯ—ಉದಯಾದಿತ್ಯಾಲಂಕಾರ.

(೨) ಜಾಯೇಂದ್ರ—(ಜಾಯುಗೊಂಡ ದೇಶಾಯಿ) ಕುವಲಯಾನಂದಾಲಂಕಾರ ಶಾಸ್ತ್ರ (ಕರ್ಣಾಟಕ ಕುವಲಯಾನಂದ) (*Mys. O. R. I.;* K. A. ೩೦೦ ಸಂಖ್ಯೆಯ ಕೈಬರಹದ ಪ್ರತಿ).

(೩) ತಿಮ್ಮ (=ತಿಮ್ಮಯ್ಯ) ಅಲಂಕಾರಸಂಗ್ರಹ (=ನವರಸಾಲಂಕಾರ) ಮೈಸೂರು ಶಾಸನದ ಇಲಾಖೆಯವರ ಬಳಿ ಇರುವ ಓಲೆಯಗರಿ ಪ್ರತಿ).

(೪) ಮಾಧವ—ಮಾಧವಾಲಂಕಾರ (*Mys. O. R. I.;* K. A. ೪೮ ಕೈಬರಹದ ಪ್ರತಿ).

(೫) ಚಾವಲಿ ರಾಮಸ್ವಾಮಿಶಾಸ್ತ್ರಿ—"ಕರ್ಣಾಟಕ ಛಂದೋಲಂಕಾರ ಸಾಹಿತ್ಯಲಕ್ಷಣ" (ಮದ್ರಾಸಿನ ಗ್ರಂಥರತ್ನಾಕರ ಮುದ್ರಾಕ್ಷರ ಶಾಲೆ ೧೮೮೫).

(೬) ಶಿವಶಂಕರಶಾಸ್ತ್ರಿ ಸಿದ್ಧಾಂತಿ—"ಕರ್ಣಾಟಕ ಚಂದ್ರಾಲೋಕ" (ಬೆಂಗಳೂರು ಸಿಟಿ ಬುಕ್ ಡಿಪೋ ಮುದ್ರಾಕ್ಷರ ಶಾಲೆ ೧೮೯೭).

(೭) ಸಾಳ್ವ—ರಸರತ್ನಾಕರ (ಎ. ವೆಂಕಟರಾವ್ ಮತ್ತು ಹೆಚ್. ಶೇಷ ಅಯ್ಯಂಗಾರ್ ಅವರು ಸಂಪಾದಿಸಿದ್ದು ೧೯೩೨).

(೮) ತಿರುಮಲಾರ್ಯ—ಅಪ್ರತಿಮ ವೀರಚರಿತೆ (ಕರ್ಣಾಟಕ ಕಾವ್ಯಮಂಜರಿ ೧೮೯೩ ಮತ್ತು ೧೯೩೧).

(೯) ಅಳಿಯ ಲಿಂಗರಾಜ-ನರಪತಿ ಚರಿತೆ (ಕರ್ಣಾಟಕ ಗ್ರಂಥಮಾಲೆ).

(೧೦) ಪ್ರೊ॥ ತೀ. ನಂ. ಶ್ರೀಕಂಠಯ್ಯ "ಭಾರತೀಯ ಕಾವ್ಯಮೀಮಾಂಸೆ" (ವಚನಗ್ರಂಥ ೧೯೫೨ ಮೈಸೂರು ವಿ.ವಿ. ಪ್ರಕಟನೆ).

ಶ್ರೀಯುತ ಮಾಧವರಾಮಶರ್ಮರು ಜಗನ್ನಾಥನ ರಸಗಂಗಾಧರವನ್ನೂ, ವಿದ್ಯಾನಾಥನ ಪ್ರತಾಪರುದ್ರೀಯವನ್ನೂ, ಮಮ್ಮಟನ ಕಾವ್ಯಪ್ರಕಾಶವನ್ನೂ ತೆಲುಗಿಗೆ ಪರಿವರ್ತನೆ ಮಾಡಿದ್ದಾರೆ. ಇವಲ್ಲದೆ, "ವಕ್ರೋಕ್ತಿ ಜೀವಿತಸಾರಮು", "ವ್ಯಕ್ತಿ ವಿವೇಕಾಸಾರಮು," "ಭಾವಪ್ರಕಾಶನ ಸಂಗ್ರಹಮು," "ನಾಟ್ಯಸಾರಮು" ಎಂಬ ಗ್ರಂಥಗಳನ್ನು ರಚಿಸಿದ್ದಾರೆ. ಇವರ "ನವರಸಗಂಗಾಧರ"ವು ತೆಲುಗಿನಲ್ಲಿ ಉತ್ತಮ ಸಾಹಿತ್ಯವಿಮರ್ಶೆ ಗ್ರಂಥವೆಂದು ನಿರ್ಧರಿಸಿ ಮದ್ರಾಸು ಸರ್ಕಾರದ ತೆಲುಗು ಭಾಷಾ ಸಮಿತಿಯವರು ಬಹುಮಾನವನ್ನು ಕೊಟ್ಟಿದ್ದಾರೆ.

ತೆಲುಗಿನಲ್ಲಿ ಅಲಂಕಾರ ಗ್ರಂಥರಚನೆಯು ಪ್ರಾಚೀನವಾದದ್ದು. ೧೬ ನೆಯ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯದ ಅಳಿಯ ರಾಮರಾಯನ ಆಸ್ಥಾನ ಕವಿಯಾದ ರಾಮರಾಜಭೂಷಣ ಎಂಬ ಬಿರುದನ್ನು ಪಡೆದ ಭಟ್ಟಮೂರ್ತಿಕವಿ "ಕಾವ್ಯಾಲಂಕಾರ ಸಂಗ್ರಹ"ವನ್ನು ರಚಿಸಿದ್ದಾನೆ. ಅದರಲ್ಲಿ ಸಾಹಿತ್ಯಕ್ಕೆ ಬೇಕಾಗಿರುವ ಕಾವ್ಯಲಕ್ಷಣಗಳು, ಗುಣ, ವೃತ್ತಿ, ರೀತ್ಯಲಂಕಾರಗಳನ್ನು ವಿವರಿಸಿದ್ದಾನೆ. ಆಮೇಲೆ ೧೮ ನೆಯ ಶತಮಾನದಲ್ಲಿ ಎನ್ನಕೋಟ ಪೆದ್ದನ ಎಂಬ ಕವಿ "ಕಾವ್ಯಾಲಂಕಾರ ಚೂಡಾಮಣಿ"ಯನ್ನೂ, ಆಡಿದ ಮುಸೂರಕವಿ "ಆಂಧ್ರ ಚಂದ್ರಲೋಕ"ವನ್ನೂ ರಚಿಸಿದ್ದಾರೆ. ೧೮೬೩ ರಲ್ಲಿ ದಂಪೂರು ವೆಂಕಟಸುಬ್ಬಶಾಸ್ತ್ರಿಗಳು "ಚಂದ್ರಾಲೋಕ"ವನ್ನು ತೆಲುಗಿಗೆ ಭಾಷಾಂತರಮಾಡಿದ್ದಾರೆ. (ಇದು ಈಗ ಮೈಸೂರು

ಪಬ್ಲಿಕ್ ಲೈಬ್ರರಿಯಲ್ಲಿದೆ) ಇವೆಲ್ಲವೂ ಅಚ್ಚಾಗಿವೆ. ೨೦ ನೆಯ ಶತಮಾನದಲ್ಲಿ ಕೀ|| ಶೇ|| ವೇದಂ ವೆಂಕಟರಾಯಶಾಸ್ತ್ರಿಗಳು ವಿಶ್ವನಾಥನ ಸಾಹಿತ್ಯದರ್ಪಣವನ್ನೂ ಭಾನುಮಿಶ್ರಕವಿಯ "ರಸಮಞ್ಜರಿ"ಯನ್ನೂ ಭಾಷಾಂತರಮಾಡಿದ್ದಾರೆ. "ಆಂಧ್ರ ಧ್ವನ್ಯಾಲೋಕ"ವನ್ನು ಪಂತುಲ ಲಕ್ಷ್ಮೀನಾರಾಯಣ ಶಾಸ್ತ್ರಿಯವರೂ, ಉದ್ಭಟನ "ಕಾವ್ಯಾಲಂಕಾರ ಸಂಗ್ರಹ"ವನ್ನು ಉಸ್ಮಾನಿಯಾ ವಿಶ್ವವಿದ್ಯಾನಿಲಯದ ಸನ್ನಿಧಾನಂ ಸೂರ್ಯನಾರಾಯಣ ಶಾಸ್ತ್ರಿಯವರೂ ತೆಲುಗಿಗೆ ಪರಿವರ್ತನೆ ಮಾಡಿದ್ದಾರೆ. ಸಂಸ್ಕೃತದಲ್ಲಿರುವ ನಾಟ್ಯಶಾಸ್ತ್ರ, ಕಾವ್ಯಾಲಂಕಾರ, ಕಾವ್ಯಾದರ್ಶ, ಧ್ವನ್ಯಾಲೋಕ, ಕಾವ್ಯಪ್ರಕಾಶ ಮುಂತಾದ ಗ್ರಂಥಗಳನ್ನು ಅನುಸರಿಸಿ "ಕಾವ್ಯಾತ್ಮ" ಎಂಬ ವಚನಗ್ರಂಥವನ್ನು ಶ್ರೀಯುತ ರಾಘವಯ್ಯಂಗಾರ್ ಬರೆದಿದ್ದಾರೆ.

"ಧ್ವನಿಸಾರಮು" ಧ್ವನಿಯನ್ನು ಪ್ರತಿಪಾದಿಸಿ ಆ ಪ್ರಸ್ಥಾನವನ್ನು ಸ್ಥಾಪಿಸುವ ಗ್ರಂಥ. ಧ್ವನ್ಯಾಲೋಕವನ್ನು ಎಲ್ಲರೂ ಓದಿ ಅರ್ಥಮಾಡಿಕೊಳ್ಳುವುದು ಕಷ್ಟ. ಆದುದರಿಂದ ಅದರ ಸಾರವನ್ನು ಶ್ರೀ ಮಾಧವರಾಮಶರ್ಮರು ಕೊಟ್ಟಿದ್ದಾರೆ. ಮೂಲಗ್ರಂಥದಿಂದ ಕೆಲವು ಕಾರಿಕೆಗಳನ್ನು ಗ್ರಂಥದಲ್ಲಿ ಸೇರಿಸಿದ್ದಾರೆ. ಪ್ರಸಿದ್ಧವಾದ ರಮಣೀಯವಾದ ಉದಾಹರಣೆಗಳನ್ನು ಕೊಟ್ಟಿದ್ದಾರೆ. ಧ್ವನ್ಯಾಲೋಕದಲ್ಲಿರುವಂತಹ ವಾದಜಟಿಲತೆ ಇದರಲ್ಲಿಲ್ಲ. ಈ ಸಾರವನ್ನು ಒಳ್ಳೆಯ ರೀತಿಯಿಂದ ಶ್ರೀ ಶರ್ಮರು ತಂದಿದ್ದಾರೆ.

ಅಲಂಕಾರಶಾಸ್ತ್ರವು ಬಹಳ ಪ್ರಾಚೀನವಾದ ಶಾಸ್ತ್ರ. ವೇದ ಪುರಾಣ ಇತಿಹಾಸಗಳಲ್ಲಿ ಇದರ ಸ್ವರೂಪವು ಗೋಚರವಾಗುತ್ತದೆ. ಅಗ್ನಿಪುರಾಣದಲ್ಲಿ ಕೆಲವು ಅಧ್ಯಾಯಗಳು ಸಾಹಿತ್ಯಪದ್ಧತಿಗಳನ್ನು ವಿಶದೀಕರಿಸುತ್ತವೆ. ಕೇವಲ ಅಲಂಕಾರ ಗ್ರಂಥಾದಿಗಳೇ ಎಂದರೆ ಭಾಮಹನ "ಕಾವ್ಯಾಲಂಕಾರ"ವೇ ಮೊದಲನೆಯದು. ಇದಕ್ಕೂ ಪ್ರಾಚೀನ ಗ್ರಂಥಗಳಿದ್ದರೂ ಇರಬಹುದು. ಆದರೆ ಅವು ಸಿಗುವುದಿಲ್ಲ. ಅನಂತರ ಬಂದಿರುವ ಆಲಂಕಾರಿಕರಿಗೆ ಭಾಮಹನೇ ಮಾರ್ಗದರ್ಶಿ ಎಂದು ಹೇಳಬಹುದು. ಸಾಹಿತ್ಯಶಾಸ್ತ್ರದಲ್ಲಿ ಭಿನ್ನವಿಭಿನ್ನ ಪ್ರಸ್ಥಾನಗಳಿವೆ. ಅವುಗಳಲ್ಲಿ ಅಲಂಕಾರಪ್ರಸ್ಥಾನವು ಮೊದಲನೆಯದು. ಅದರಲ್ಲಿ ಆದಿಪುರುಷನು ಭಾಮಹನು, ದಂಡಿ ಗುಣಪ್ರಸ್ಥಾನವ್ಯವಸ್ಥಾಪಕನು; ವಾಮನನು ರೀತಿಪ್ರಸ್ಥಾನವಾದಿ; ಆನಂದವರ್ಧನ ಮತ್ತು ಅಭಿನವಗುಪ್ತರು ಧ್ವನಿಪ್ರಸ್ಥಾನಾಚಾರ್ಯರು; ಕುಂತಕನು ವಕ್ರೋಕ್ತಿವಾದಿ; ಕ್ಷೇಮೇಂದ್ರನು ಔಚಿತ್ಯಾಭಿಮಾನಿ; ಮಹಿಮನು ಅನುಮಾನನಿರ್ಣೀತ.

ಮಾನವನಿಗೆ ಶರೀರವೂ ಆತ್ಮವೂ ಇದ್ದಹಾಗೆಯೇ ಕಾವ್ಯಕ್ಕೂ ಶರೀರಾತ್ಮಗಳಿವೆ ಎಂದು ಭಾವಿಸಿದ್ದಾರೆ. ಒಳ್ಳೆಯ ಅಂಗಸೌಷ್ಠವವು ಇರುವ ರೂಪವು ಹೇಗೆ ಆಕರ್ಷ

ಣೀಯವಾಗಿರುತ್ತದೆಯೋ ಹಾಗೆಯೇ ಅಂದವಾದ ಶಬ್ದಾರ್ಥಗಳುಳ್ಳ ವಾಕ್ಯಾವತಾರವನ್ನು ಸೊಗಸಾದ ಕಾವ್ಯವೆಂದು ಪರಿಗಣಿಸಿದ್ದಾರೆ. ಇಂತಹ ಅಂಗಾಂಗ ಸೌಷ್ಠವಕ್ಕೆ ಕಂಠಹಾರಗಳು, ಕರಕಂಕಣಗಳು, ಪಾದಾಭರಣಗಳು ಉಲ್ಲಾಸಕರವಾದ ವಸ್ತುಗಳು. ಹಾಗೆಯೆ ಶಬ್ದಾರ್ಥಗಳಿಗೆ ಸೌಂದರ್ಯದಾಯಕವಾದದ್ದು ಅಲಂಕಾರಗಳೆಂದು ಪರಿಗಣನೆ ಮಾಡಿದ್ದಾರೆ. ಎಷ್ಟು ರೂಪವಿದ್ದರೂ ಕೂಡಾ ವಿಕಾಸವು ಇಲ್ಲದೇ ಇರಬಹುದು. ಇಂತಹ ಜೀವಕಳೆಯನ್ನು ಸಮುದ್ದೀಪಿಸುವ ಒಂದು ಜೀವಕಳೆ ಲೋಪವಾಗಿದೆಯೆಂದು ತೋರುತ್ತದೆ. ವಾಸನೆ ಇಲ್ಲದ ಪುಷ್ಪದ ಹಾಗೆ, ಹಾಲಿಲ್ಲದ ದೊಡ್ಡ ಕೆಚ್ಚಲಿನ ಹಾಗೆ, ನೀರಿಲ್ಲದ ಮುತ್ತಿನ ಹಾಗೆ ಇರುತ್ತದೆ. ಇದನ್ನು ಕಂಡುಹಿಡಿದು ಭರತನು ಇದಕ್ಕೆ ರಸವಿರಬೇಕೆಂದನು.

ಆನಂದವರ್ಧನನು ಉತ್ಕರ್ಷಹೇತುಗಳಾದ ಅಲಂಕಾರಾದಿಗಳನ್ನು ಬೇಡವೆನ್ನಲಿಲ್ಲ. ಆದರೆ ಏತತ್ಪ್ರಾಪ್ತಿ ಸೂತ್ರವು ಧ್ವನ್ಯಭಿನೀತವಾಗಿದ್ದರೆ ಕಾವ್ಯಕ್ಕೆ ಆಹ್ಲಾದಕರವಾದ ರಮಣೀಯತೆ ಇರುತ್ತದೆಯೆಂದು ಮನೋಹರವಾದ ಧ್ವನಿವಾದವನ್ನು ಪ್ರತಿಪಾದಿಸಿದ್ದಾನೆ. ಆದರೆ ಆ ಕಾಲದಲ್ಲಿ ಇಂತಹ ವಾದವು ಹುಟ್ಟುವುದಕ್ಕೆ ಅವಕಾಶವಿತ್ತೆಂದು ತೋರುತ್ತದೆ. ಆಗಿನ ಸಾಮಾಜಿಕ ಚರಿತ್ರೆಗೆ ಶಿಷ್ಟರೆ ನಾಯಕರು. ಸಾಮಾನ್ಯಪ್ರಜೆಗಳಲ್ಲ. ರಚನಾರಂಗದಲ್ಲಿ ಸೂತ್ರಶೈಲಿ, ಭಾಷ್ಯಪದ್ಧತಿ, ಪೂರ್ವಪಕ್ಷ ಸಿದ್ಧಾಂತ, ಮರ್ಯಾದೆ—ಇಂತಹ ವಿಧಾನಗಳು ಹೇರಳವಾಗಿ ವ್ಯಾಪ್ತಿಗೆ ಬಂದವು . . . ದರ್ಶನಗಳ ಪ್ರಭಾವವು ಚೆನ್ನಾಗಿ ಪ್ರತಿಷ್ಠಿತವಾಯಿತು. ಆನುಷಂಗಿಕವಾಗಿ ಕಾವ್ಯಪರಾಮರ್ಶೆಯು ಆಗಿದೆ. ಅವುಗಳಲ್ಲಿ ರಸವಾದವೂ, ಅಲಂಕಾರವಾದವೂ ಮುಖ್ಯವೆಂದು ಹೇಳಬಹುದು, ರಸವಾದವೇ ಆಗಿಂದಾಗ್ಯೆ ಬೆಳೆಯುತ್ತಾ ಬಂದಿದೆ. ಆನಂದವರ್ಧನನು ಈ ವಾದವನ್ನು ಚಿತ್ತಸಂಸ್ಕಾರರೂಪವಾದ ಧ್ವನಿಸೂತ್ರದಿಂದ ಬಂಧಿಸಲು ತನ್ನ ಚಾತುರ್ಯವನ್ನು ತೋರಿಸಿದ್ದಾನೆ. ಅಲಂಕಾರಶಾಸ್ತ್ರದಲ್ಲಿ ವೇದಾಂತವಿಭಾಗದಲ್ಲಿ ಆಚಾರ್ಯ ಶಂಕರನು ಹೇಗೆಯೋ ಹಾಗೆಯೇ ಆನಂದವರ್ಧನನು ಖಂಡಿತವಾದಿಯಾಗಿದ್ದಾನೆ. ಕಾವ್ಯಕ್ಕೆ ಆತ್ಮವು ರಸವೇ ಆದರೂ ಅದರ ಉತ್ಪತ್ತಿ ಅನುಭೂತಿ ಧ್ವನಿಮೂಲಕ ಉಪಲಬ್ಧವಾಗಬೇಕೆಂದು ಅವನ ಮತ. ಆಗ ಶಬ್ದಾರ್ಥಗಳು ಅವ್ಯಕ್ತಾಭಿರಮ್ಯವಾದ ಕಳಾಸ್ಫೂರ್ತಿಯನ್ನು ಉನ್ಮುಕ್ತವಾಗಿ ಮಾಡಿ ಪ್ರಸನ್ನತೆಯನ್ನುಂಟುಮಾಡುತ್ತವೆ.

ಆನಂದವರ್ಧನನು ಆವಿಷ್ಕರಿಸಿದ ಧ್ವನಿವಾದಕ್ಕೆ ಅಭಿನವಗುಪ್ತನು ವ್ಯಾಖ್ಯಾನವನ್ನು ರಚಿಸಿ ಅದಕ್ಕೆ "ಲೋಚನ" ಎಂದು ಹೆಸರಿಟ್ಟಿದ್ದಾನೆ. ಅಭಿನವಗುಪ್ತನು ದೊಡ್ಡ ವಿದ್ವಾಂಸನು, ನಾನಾ ಶಾಸ್ತ್ರಗಳನ್ನು ತಿಳಿದಿರುವವನು. ಪರಮ ಶೈವಭಕ್ತನು,

ಸಾಧನೆಯನ್ನು ತಿಳಿದಿರುವ ಯೋಗಿ, ಶೈವಧರ್ಮಾಗಮಗ್ರಂಥಗಳನ್ನು ರಚಿಸಿ ಸಶರೀರನಾಗಿ ಗುಹಾಪ್ರವೇಶವನ್ನು ಮಾಡಿದ ಮಹಾಸಿದ್ಧನು. ಇಂತಹ ಉದಾತ್ತ ವಿಜ್ಞಾನಿ ಲೌಕಿಕವಾದ ನಾಟ್ಯವೇದವನ್ನೂ ಧ್ವನ್ಯಾಲೋಕವನ್ನೂ ಆಸಕ್ತಿಯಿಂದ ವಿಚಕ್ಷಿಸಿ ಅದರಲ್ಲಿರುವ ಮಹತ್ತರವಾದ ಮಾಧುರ್ಯವನ್ನು ತೋರಿಸಿ, ಅಲೌಕಿಕ ವಿಭೂತಿಯನ್ನು ನಿರೂಪಣೆಮಾಡಿ ಸಹೃದಯ ಸಾಧನ ಪ್ರವೃತ್ತಿಗೆ ನಿರೂಢಿಯನ್ನು ಕೊಟ್ಟು ಕವಿ ಹಾಡಿದ ಗಾನಕ್ಕೆ ಉಪಶ್ರುತಿಯನ್ನು ನಿವೇದಿಸಿದ್ದಾನೆ.

ಸಾಹಿತ್ಯರಚನಕ್ಕಾದರೂ ಆಸ್ವಾದನಕ್ಕಾದರೂ ಕವಿಗಳಿಗೂ ಸಹೃದಯರಿಗೂ ಸಾಹಿತ್ಯಲಕ್ಷಣ ಪರಿಜ್ಞಾನವು ಅವಶ್ಯಕವಾಗಿದೆ. ಈ ಅಂಶವು ಸಕಲ ಸಾಹಿತ್ಯಾಭಿಮಾನಿಗಳ ಹೃದಯದಲ್ಲಿ ಪ್ರತಿಷ್ಠಿತವಾಗಿದೆ. ಸಂಸ್ಕೃತ ಗ್ರಂಥಗಳನ್ನು ಭಾಷಾಂತರ ಮಾಡಿರುವ ಸಂಗ್ರಹಸ್ವರೂಪದಲ್ಲಿರುವ ಗ್ರಂಥಗಳನ್ನೋದಿದರೆ ಮೂಲಗ್ರಂಥಗಳ ಮೇಲೆ ಅಭಿರುಚಿಯು ಹುಟ್ಟುತ್ತದೆ. ಸಂಸ್ಕೃತ ಮತ್ತು ತೆಲುಗು ಇವೆರಡರಲ್ಲಿಯೂ ಪಾಂಡಿತ್ಯವುಳ್ಳ ಶ್ರೀಯುತ ಮಾಧವರಾಮಶರ್ಮರು ಪ್ರಯತ್ನಪಟ್ಟು ಅನೇಕ ಗ್ರಂಥಗಳನ್ನು, ಮುಖ್ಯವಾಗಿ ಅಲಂಕಾರಶಾಸ್ತ್ರಗಳ ಸಂಗ್ರಹಸ್ವರೂಪಗಳನ್ನು ರಚಿಸಿದ್ದಾರೆ. ಧ್ವನಿಸಾರವು, ಎಲ್ಲಾ ಸಾಹಿತ್ಯಪ್ರಿಯರು ಓದಿ ಸಂತೋಷಪಡಬೇಕಾದಂತಹ ಗ್ರಂಥ. ಕನ್ನಡಿಗರು ಕೂಡಾ ಓದಿ ಅರ್ಥಮಾಡಿಕೊಳ್ಳಬಲ್ಲ ರೀತಿಯಲ್ಲಿ ಗ್ರಾಂಥಿಕಭಾಷೆಯಲ್ಲಿ ಬರೆದಿದ್ದಾರೆ.

ವಿದ್ವಾನ್ ಕೆ. ಸುಬ್ಬರಾಮಪ್ಪ

*
* *

ನವ್ಯ ಸಾಹಿತ್ಯನಿರ್ಮಾಣ (ಆಕಾಶವಾಣಿ ಭಾಷಣಗಳು)—ಪ್ರಕಾಶಕರು : ಕಾವ್ಯಾಲಯ, ಮೈಸೂರು ; ಪುಟಗಳು ೪೮ ; ಬೆಲೆ, ರೂ. ೦-೪-೦.

ಕಳೆದ ವರುಷ ಆಗಸ್ಟ್ ೧೫ರ ಸಂಜೆ ಮೈಸೂರು ಆಕಾಶವಾಣಿಯವರು ಏರ್ಪಡಿಸಿದ್ದ ಭಾಷಣಮಾಲೆಯಲ್ಲಿ ಭಾಗವಹಿಸಿದ್ದ ನಮ್ಮ ನಾಡಿನ ಆರು ಜನ ಪ್ರಮುಖ ಸಾಹಿತಿಗಳ ಭಾಷಣಗಳು ಈ ಪುಟ್ಟ ಪುಸ್ತಕದಲ್ಲಿವೆ. ಶ್ರೀಗಳಾದ ಡಿ. ವಿ. ಗುಂಡಪ್ಪ, ಶಿವರಾಮಕಾರಂತ, ಅ. ನ. ಕೃಷ್ಣರಾಯ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ವಿ. ಸೀತಾರಾಮಯ್ಯ, ಕೆ. ವಿ. ಪುಟ್ಟಪ್ಪ ಇವರು ಕ್ರಮವಾಗಿ ರಾಷ್ಟ್ರಸ್ವಾತಂತ್ರ್ಯ ಮತ್ತು ಕಾವ್ಯಸ್ಫೂರ್ತಿ, ಹೊಸ ಸಾಹಿತ್ಯರೂಪಗಳು, ಸಾಹಿತ್ಯದಲ್ಲಿ ವಾಸ್ತವಿಕತೆ. ನವ್ಯಸಾಹಿತ್ಯದಲ್ಲಿ ನಿರೋಗ ವಿಮರ್ಶೆ, ಸಾಹಿತ್ಯ ಮತ್ತು ಲೋಕಶಾಂತಿ, ಮುಂದಿನ ಸಾಹಿತ್ಯದಲ್ಲಿ ಸಮನ್ವಯ ಸರ್ವೋದಯ ಮತ್ತು ಪೂರ್ಣದೃಷ್ಟಿ ಎಂಬ ವಿಷಯಗಳ

ಮೇಲೆ ಮಾತನಾಡಿದ್ದಾರೆ. ಶ್ರೀ ಕಾರಂತ ಮತ್ತು ಅ. ನ. ಕೃ. ಅವರು ಮುಖ್ಯವಾಗಿ ಕನ್ನಡ ಸಾಹಿತ್ಯವನ್ನೇ ನಿರ್ದೇಶಿಸಿ ಮಾತನಾಡಿದ್ದಾರೆ.

ವಿಮರ್ಶೆಯ ಮೂಲತತ್ವಗಳನ್ನು ಮಾಸ್ತಿಯವರು ಹೇಳಿರುವಷ್ಟು ಸುಲಭವಾಗಿ, ಸರಳವಾಗಿ ಹೇಳುವುದು ಇನ್ನೊಬ್ಬರಿಂದ ಆಗದ ಮಾತು. ಅ. ನ. ಕೃ. ಕನ್ನಡ ಸಾಹಿತ್ಯದ ಈ ಕಾಲವನ್ನು 'ಕಾದಂಬರಿ ಯುಗ' ಎಂದು ಕರೆದಿರುವುದು ನಿಜವಾದರೂ, ನಮ್ಮ ಕಾದಂಬರಿಗಳು "ರಷ್ಯಾ, ಅಮೇರಿಕಾ, ಫ್ರಾನ್ಸ್, ಇಂಗ್ಲೆಂಡ್ ದೇಶಗಳ ಕಾದಂಬರಿಗಳೊಂದಿಗೆ ಧೈರ್ಯವಾಗಿ ಸ್ಪರ್ಧಿಸಲು ಸಿದ್ಧವಾಗಿವೆ" ಎಂಬ ಮಾತನ್ನು ನಾವು ಒಪ್ಪುವುದಿಲ್ಲ. ಆ ಕಾಲ ಇನ್ನೂ ಕನ್ನಡಕ್ಕೆ ಬರಬೇಕಾಗಿದೆ. ಆ ಬಗೆಯ ಸತ್ವವಿರುವ ನಮ್ಮ ಎರಡು ಮೂರು ಕಾದಂಬರಿಗಳಾದರೂ, ಇದು ಕಾದಂಬರಿ ಯುಗ ಎಂದು ನಾವು ಕರೆದುಕೊಳ್ಳುವ ಕಾಲಕ್ಕಿಂತಲೂ ಮೊದಲೇ ಬಂದವು ಎಂಬುದನ್ನು ನಾವು ಗಮನಿಸಬೇಕು. ದೊಡ್ಡ ಆಸೆ, ಆದರ್ಶಗಳನ್ನು ಇಟ್ಟುಕೊಳ್ಳುವುದು ಒಳ್ಳೆಯದು; ಆದರೆ ಅದೇ ತೃಪ್ತಿಯಾದರೆ ಹಾನಿಯಾಗುತ್ತದೆ.

ಈ ಭಾಷಣಮಾಲೆಯನ್ನು ನಿರ್ದೇಶಿಸಿದ ಇನ್ನೊಬ್ಬ ಪ್ರಮುಖ ಸಾಹಿತಿ ಶ್ರೀ ಜಿ. ಪಿ. ರಾಜರತ್ನಂ ಅವರ ಉಪಕ್ರಮ ಮತ್ತು ಉಪಸಂಹಾರ ಭಾಷಣಗಳೂ ಇಲ್ಲಿವೆ. ಅವರು ಪ್ರತಿ ಭಾಷಣಕಾರರನ್ನೂ ಕುರಿತು ಹೇಳಿದ ಪರಿಚಯದ ಮಾತುಗಳನ್ನೂ ಇಲ್ಲಿ ಸೇರಿಸಬೇಕಾಗಿತ್ತು. ಆ ಸಂದರ್ಭದಲ್ಲಿ ಆಕಾಶವಾಣಿಯವರು ತೆಗೆಸಿ ಬೇರೆಡೆಗಳಲ್ಲಿ ಪ್ರಕಟವಾದ ಈ ಏಳು ಜನ ಸಾಹಿತಿಗಳ ಗುಂಪುಚಿತ್ರವನ್ನು (Group Photo) ಈ ಪುಸ್ತಕದಲ್ಲಿ ಅಗತ್ಯವಾಗಿ ಸೇರಿಸಬೇಕಾಗಿತ್ತು. ನಮ್ಮ ಹಿರಿಯರನ್ನು ಒಂದು ಕಡೆ ಕಾಣುವುದೇ ಸಂತೋಷದ ಸಂಗತಿ.

ಗಾಳಿಯಲ್ಲಿ ತೇಲಿ, ಯಾವುದೊ ಪತ್ರಿಕೆಗಳಲ್ಲಿ ಪ್ರಕಟವಾಗಿ ಮರೆಯಾಗಿ ಹೋಗುತ್ತಿದ್ದ ಈ ಉಪಯುಕ್ತ ಭಾಷಣಗಳನ್ನು ಇಲ್ಲಿ ಒಂದು ಕಡೆ ಸೇರಿಸಿ ಕಾವ್ಯಾಲಯದವರು ತುಂಬ ಒಳ್ಳೆಯ ಕೆಲಸ ಮಾಡಿದ್ದಾರೆ. ಇದು ಆಕಾಶವಾಣಿಯ ಒಂದು ದಿನದ ಒಂದು ಕಾರ್ಯಕ್ರಮ! ಹೀಗೇ, ಸ್ವಾರಸ್ಯವಾದ, ಉಪಯುಕ್ತವಾದ ಎಷ್ಟೋ ಕಾರ್ಯಕ್ರಮಗಳು, ಭಾಷಣಗಳು ದಿನವೂ ಪ್ರಸಾರವಾಗುತ್ತವೆ. ಅದರಲ್ಲಿ ಬಹುಪಾಲು ಗಾಳಿಯಲ್ಲಿ ತೂರಿಹೋಗುತ್ತವೆ; ವಿರಳವಾಗಿ ಒಂದೆರಡು ಅಲ್ಲಿ ಇಲ್ಲಿ ಪತ್ರಿಕೆಗಳಲ್ಲಿ ಪ್ರಕಟವಾಗಿ ಮಾಸಿಹೋಗುತ್ತವೆ. ಅವು ಎಲ್ಲರ ಕೈಗಳಿಗೆ ಬಂದು, ಪ್ರಯೋಜನವಾಗುವಂತೆ ಕಾವ್ಯಾಲಯದವರು ಒಂದು ಹೊಸಮಾರ್ಗ ತೋರಿದ್ದಾರೆ. ಅವರಿಗೆ ನಮ್ಮ ಅಭಿನಂದನೆಗಳು. ಈ ಬಗೆಯ ಕೆಲಸವನ್ನು ಇತರ ಕನ್ನಡ ಪ್ರಕಾಶಕರೂ ಮಾಡಬೇಕು, ಅಥವಾ ಆಕಾಶವಾಣಿಯವರೇ ಒಂದು ವ್ಯವಸ್ಥಿತ ಕಾರ್ಯ

ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ 'ಗಾಳಿಮಾತು'ಗಳು 'ಗಾಳಿಮಾತು'ಗಳೇ ಆಗುತ್ತವೆ.

ಹಾ. ಮಾ. ನಾಯಕ.

***

ಆನಂದಲಹರಿ—ಲೇಖಕರು : ಶ್ರೀ 'ಆನಂದ'; ಪ್ರಕಾಶಕರು : ಶಾರದಾ ಪ್ರಕಟನಾಲಯ, ಅರಳೀಪೇಟೆ, ಬೆಂಗಳೂರು ನಗರ; ಪುಟಗಳು ೧೩೨+೮; ಬೆಲೆ, ರೂ. ೦-೧೨-೦.

ಕನ್ನಡದ ಮೊದಲದರ್ಜೆಯ ಲೇಖಕರಲ್ಲೊಬ್ಬರಾದ ಶ್ರೀ 'ಆನಂದ'ರ ಹೊಸ ಪುಸ್ತಕ ಆನಂದಲಹರಿ ಎಂಬ ನಗೆಬರಹಗಳ ಸಂಕಲನ. ನಗೆಬರಹಗಳು ಎಂದೊಡನೆಯೇ ಲಘುಬರಹಗಳು ಎಂದು ತಿಳಿಯಬೇಕಾದುದಿಲ್ಲ. ಈ ಬರಹಗಳಲ್ಲಿ ಬಿಗಿಯಿದೆ, ಆ ಬಿಗಿಯಲ್ಲಿ ನಗುವಿದೆ. ಈ ಮಾತಿಗೆ ಒಂದು ಬರಹ—ನನ್ನ ನೆನಪಿನ ವೀರ—ಮಾತ್ರ ಹೊರಗಾಗುತ್ತದೆ. ಅದರಲ್ಲಿ ಮೊದಮೊದಲಿಗೆ ನಗೆಯ ತೆರೆಗಳಿದ್ದರೂ ಕೊನೆಗೆ ಆಳದಲ್ಲಿ ಜೀವನದ ಗಾಢವಾದ ಚಿತ್ರಣವಿದೆ. ದುರಂತದ ಛಾಯೆಯಿದೆ. ಓದುಗರನ್ನು ಆಳವಾದ ಆಲೋಚನೆಗೆ ತೆಗೆದುಕೊಂಡು ಹೋಗುತ್ತದೆ. ಉಳಿದ ಬರಹಗಳಲ್ಲಿ ಕಥೆಗೆ ಬೇಕಾದ ವಸ್ತುವಿದೆ; ಹರಟೆಯ ವಿಸ್ತಾರವಿದೆ; ಶಿಥಿಲತೆಯಿದೆ; ನಿಬಂಧದ ಚೌಕಟ್ಟಿದೆ. ಇದೆಲ್ಲಕ್ಕೂ ತಿಳಿನಗೆಯ ಮೇಲಂಗಿಯಿದೆ. ಈ ಎಲ್ಲ ಕಾರಣಗಳಿಂದ ಆನಂದರ ಈ ಕೃತಿಗೆ ಕನ್ನಡದ ಈಚಿನ ಕೃತಿಗಳಲ್ಲಿ ಒಂದು ವಿಶಿಷ್ಟವಾದ ಸ್ಥಾನವಿದೆ.

ಇಲ್ಲಿನ ಎಂಟು ಚಿತ್ರಗಳಲ್ಲಿ ಮಿನ್ನಿಚಿತ್ರ, ನನ್ನ ನೆನಪಿನ ವೀರ, ಪಾಃಪಸಂದ್ ನಾಮಾ ಇವು ಮೂರು ಆನಂದರ ಸ್ವಂತ ಕೃತಿಗಳು. ಉಳಿದ ಐದು—ನನ್ನ ಪ್ರಯಾಣ ಸಖಿ, ನಾಯಿಪಾಡು, ನನ್ನ ತ್ಯಾಗರಾಜತ್ವ, ಉತ್ತಿಷ್ಠ ಭಲ್ಲೂಕ, ನನ್ನ ಗಡಿಯಾರ— ಇವು ಕ್ರಮವಾಗಿ, ಸುಪ್ರಸಿದ್ಧ ಇಂಗ್ಲಿಷ್ ನಿಬಂಧಕಾರರಾದ ಎ. ಜಿ. ಗಾರ್ಡಿನರ್ ಅವರ ಎ ಫೆಲೋ ಟ್ರ್ಯಾವಲರ್, ಆಲ್ ಎಬೌಟ್ ಎ ಡಾಗ್, ಆನ್ ಗಿವಿಂಗ್ ಅಪ್ ಟುಬ್ಯಾಕೋ, ಟೇಮಿಂಗ್ ದಿ ಬೇರ್ ಮತ್ತು ಮೋರ್ಕ್‌ಟ್ವೈನ್ ಅವರ 'ಮಾರ್ಕ್ ಟ್ವೈನ್ಸ್ ವಾಚ್' ಎಂಬ ಬರಹಗಳ 'ಪ್ರಚೋದನೆಯ ಕನ್ನಡ ಫಲ.' ಲೇಖಕರು ತಮ್ಮ ಮುನ್ನುಡಿಯಲ್ಲಿ ಈ ಬರಹಗಳ ಮೂಲವನ್ನು ಸೂಚಿಸಿದ್ದರಿಂದ ಗೊತ್ತಾಗಬೇಕೇ ವಿನಾ ಹಾಗೆಯೇ ತಿಳಿಯದು. ಇವು ಸ್ವಂತ ಕೃತಿಗಳಷ್ಟೇ ಸ್ವಾರಸ್ಯವಾಗಿವೆ. ಮೂಲದಲ್ಲಿ ಎರಡು, ಮೂರು, ನಾಲ್ಕು, ಹೆಚ್ಚೆಂದರೆ ನಾಲ್ಕುವರೆ ಪುಟಗಳಷ್ಟಿರುವ ಈ ಬರಹಗಳು ಇಲ್ಲಿ ಹದಿನಾಲ್ಕರಿಂದ ಇಪ್ಪತ್ತು ಪುಟಗಳ ವರೆಗೆ ಮೈತುಂಬಿ ವಿಸ್ತಾರವಾಗಿ ಬೆಳೆದಿವೆ. ಹಾಗಾಗಿ ಮೂಲದಲ್ಲಿ ಇಲ್ಲದ ಎಷ್ಟೋ ಸಂಗತಿಗಳು, ಸನ್ನಿವೇಶಗಳು,

ಇಲ್ಲಿ ಹೊಸದಾಗಿ ಬಂದಿವೆ. ಹಾಗೆಯೇ ಮೂಲದಲ್ಲಿ ಕಾಣಬರದ ಸೊಗಸು ಈ ಬರಹಗಳಲ್ಲಿ ಮೈವೆತ್ತು ಬಂದಿದೆ.

ಬಸ್ಸಿನಲ್ಲಿ ನಾಯಿಮರಿಯೊಂದನ್ನು ತೆಗೆದುಕೊಂಡು ಹೋಗುವಾಗ ಉದ್ಭವಿಸಿದ ಸಮಸ್ಯೆಯೊಂದರ ಮೂಲಕ ಗಾರ್ಡಿನರ್ ಅಲ್ಲಿ 'ಪೌರನೀತಿ'ಯೊಂದನ್ನು ಹೇಳಿದ್ದರೆ ಅದು ಇಲ್ಲಿ ನಗೆಯ ಕಾರಂಜಿಯಾಗಿದೆ, 'ನಾಯಿಪಾಡಿ'ನಲ್ಲಿ. 'ನನ್ನ ಪ್ರಯಾಣ ಸಖಿ' ನಿಬಂಧದಲ್ಲಿ ತಮ್ಮ ಜೊತೆಯಲ್ಲಿ ನಿಜವಾಗಿದ್ದ ಪ್ರಯಾಣಿಕರು ಯಾರು ಎಂದು ಹೇಳಿ ಆನಂದರು ಓದುಗರ ಕುತೂಹಲವನ್ನು ಒಡೆಯುವುದಕ್ಕೆ ಬಲು ಮೊದಲೇ ಗಾರ್ಡಿನರ್ ಆ ರಹಸ್ಯವನ್ನು ಬಯಲುಮಾಡುತ್ತಾನೆ. ಮಾರ್ಕ್‌ಟ್ವೈನ್ ತನ್ನ ಗಡಿಯಾರದ 'ದುರಸ್ತಿ'ಗೆ ಹೋಗುವ ಪ್ರತಿಯೊಬ್ಬ ಗಡಿಯಾರದ ಅಂಗಡಿಯವರೂ ಹೆಚ್ಚೂ ಕಡಿಮೆ ಒಂದೇ ರೀತಿಯವರು. ಆದರೆ ಆನಂದರು ಚಿತ್ರಿಸಿರುವ ರಿಪೇರಿಗಾರರು ಒಬ್ಬೊಬ್ಬರಿಗೆ ಒಂದೊಂದು ವಿಶಿಷ್ಟವಾದ ವ್ಯಕ್ತಿತ್ವವಿದೆ. ಅವರಲ್ಲಿ ಒಬ್ಬನು, ಷೇಕಲ್ಲಿ. ಅವನು ಮೋಟಾರ್ ವರ್ಕ್‌ಷಾಪಿನಲ್ಲಿ ಮೆಕ್ಯಾನಿಕ್ ಆಗಿದ್ದು ಅಲ್ಲಿಯೇ ಕೆಲಸದಲ್ಲಿ ಒರಟ ಎನ್ನಿಸಿಕೊಂಡು ಬಂದವನು—ಗಡಿಯಾರ ರಿಪೇರಿಗೆ ತೊಡಗಿದ್ದಾನೆ!

ಹೀಗೆ ಉದಾಹರಣೆಗಳನ್ನು ಬೇಕಾದಷ್ಟು ಕೊಡಬಹುದು. ಆದರೆ ಆನಂದರ ಕಲೆಗಾರಿಕೆಯನ್ನು, ಈ ಬರಹಗಳ ಹೆಚ್ಚುಗಾರಿಕೆಯನ್ನು ನಿಜವಾಗಿ ಅರಿಯಬೇಕೆನ್ನುವವರು ಈ ಬರಹಗಳನ್ನೂ ಓದಿ ಒಮ್ಮೆ ಮೂಲವನ್ನೂ ಖಂಡಿತವಾಗಿ ಓದಬೇಕು. ಈ ಬರಹಗಳಲ್ಲಿ ಮೂಲದ ಅಸ್ತಿಪಂಜರಕ್ಕೆ ರಕ್ತಮಾಂಸ ತುಂಬಿ ನಿಂತಿದೆ. ಓದುಗರಲ್ಲಿ ಆನಂದವನ್ನೂ, ಉಲ್ಲಾಸವನ್ನೂ ನೀಡುವುದರಲ್ಲಿ ಆನಂದರ ಈ ಬರಹಗಳು ಮೂಲಕ್ಕಿಂತ ಹೆಚ್ಚು ಯಶಸ್ವಿಯಾಗಿವೆಯೆಂದರೆ ಅತಿಶಯೋಕ್ತಿಯಾಗಲಾರದು.

ಕೆಲವು ಕಡೆ ಅತಿ ದೀರ್ಘವಾಗಿ ಬೆಳಸುವುದರಿಂದ, ಒಂದು ವಿಷಯದಿಂದ ಇನ್ನೊಂದು ವಿಷಯಕ್ಕೆ ಸಂಬಂಧವಿರಲಿ ಇರದಿರಲಿ ನೆಗೆಯುವುದರಿಂದ ಈ ಬರಹಗಳಲ್ಲಿ ಶಿಥಿಲತೆ ಹೆಚ್ಚೇನೋ ಎನಿಸುತ್ತದೆ. ಅವರ ಸ್ವಂತ ಕೃತಿಯಾದ ಷಾಃಪಸಂದ್ ನಾಮಾ ಇಡೀ ಬರಹ ಇದಕ್ಕೊಂದು ಉದಾಹರಣೆ. ಜಟಕಾಗಾಡಿಯನ್ನು ಕುರಿತ ಬರಹದಲ್ಲಿ ನವ್ಯಕವಿತೆಯ ಪ್ರಸ್ತಾಪ ಬರುವುದು ನಮಗೆ ಅಷ್ಟು ಸರಿಯೆನಿಸುವುದಿಲ್ಲ. ಹೀಗೆ ಹೆಚ್ಚಾಗಿ ಹಿಗ್ಗಿಸದಿದ್ದರೆ ಇಲ್ಲಿಯ ಎಲ್ಲ ಬರಹಗಳೂ ಇನ್ನೂ ಉತ್ತಮವಾಗುತ್ತಿದ್ದುವೇನೋ ಎಂದು ಅನ್ನಿಸುತ್ತದೆ. ಇದನ್ನು ಲೇಖಕರು ಗಮನಿಸಬೇಕು. ಈ ಪುಸ್ತಕವನ್ನು ಇಂಗ್ಲಿಷಿನಲ್ಲಿ ಅರ್ಪಣೆ ಮಾಡಿರುವುದರ ಔಚಿತ್ಯ ನಮಗೆ ತಿಳಿಯದು.

ಈಚಿನ ಅರ್ಥಹೀನ ಮುಖಚಿತ್ರಗಳನ್ನು ಕಂಡು ಬೇಸತ್ತವರಿಗೆ ಈ ಪುಸ್ತಕದ ಮುಖಚಿತ್ರ ಒಂದು ಹೊಸ ಅನುಭವವನ್ನುಂಟುಮಾಡುತ್ತದೆ. ಈ ಪುಸ್ತಕವನ್ನು ಓದಿ

ಮುಗಿಸಿದ ಮೇಲೆ, ಆರಂಭದಲ್ಲಿ ಉದ್ಧೃತವಾದ 'Mirth is the Medicine of Life . . .' ಎಂಬ ಸಾಲುಗಳ ನಿಜವಾದ ಅರ್ಥ ತಿಳಿಯುತ್ತದೆ. ಈ ಹೊಸ ಬಗೆಯ ಕೃತಿಗಾಗಿ 'ಆನಂದ'ರು ನಮ್ಮ ಅಭಿನಂದನೆಗೆ ಪಾತ್ರರಾಗಿದ್ದಾರೆ.

ಹಾ. ಮಾ. ನಾಯಕ.

***

ಹೇಮಂತ ಗಾನ (ಕಾದಂಬರಿ)—ಶ್ರೀ ವ್ಯಾಸರಾಯ ಬಲ್ಲಾಳ; ಪ್ರಕಾಶಕರು: ಉಷಾ ಸಾಹಿತ್ಯಮಾಲೆ, ಮೈಸೂರು; ಪುಟಗಳು ೪೩೫; ಬೆಲೆ, ರೂ. ೩-೪೦.

ಕಲಾತ್ಮಕವಾದ ಸಣ್ಣ ಕಥೆಗಳನ್ನು ಬರೆದು ಕನ್ನಡಜನಕ್ಕೆ ಪರಿಚಿತರಾದ ಶ್ರೀ ವ್ಯಾಸರಾಯ ಬಲ್ಲಾಳರು ತಮ್ಮ ಮೊದಲನೆಯ ಕಾದಂಬರಿ 'ಅನುರಕ್ತೆ'ಯಿಂದ ಆ ಪರಿಚಯವನ್ನು ಭದ್ರಪಡಿಸಿಕೊಂಡುದಲ್ಲದೆ, ತಮ್ಮ ಮುಂದಿನ ಕೃತಿಗಳ ಬಗೆಗೆ ಓದುಗರು ಕುತೂಹಲದಿಂದ ಎದುರುನೋಡುವಷ್ಟು ಮಟ್ಟಿಗೆ ಯಶಸ್ವಿಯಾದರು. ಹಾಗೆ ಬಲ್ಲಾಳರ ಮೊದಲ ಕೃತಿಯ ಬಗೆಗೆ ಆಸಕ್ತಿ ಕುತೂಹಲ ತಳೆದವರಿಗೆ ಈ ಎರಡನೆಯ ಕೃತಿ 'ಹೇಮಂತ ಗಾನ' ಸಾಕಷ್ಟು ತೃಪ್ತಿ ತರುತ್ತದೆಂಬುದು ಅತ್ಯಂತ ಸಂತೋಷದ ಸಂಗತಿ. ಅಚ್ಚಿನ ಮನೆಯಲ್ಲಿ ಕುಳಿತು ಅಚ್ಚಿನ ವೇಗದಲ್ಲೇ ಬರೆದ ಕಾದಂಬರಿಗಳನ್ನು ಓದಿ ಓದಿ ಬೇಸತ್ತಿರುವ ನಮ್ಮ ಜನ 'ಹೇಮಂತ ಗಾನ'ವನ್ನು ಆದರದಿಂದ ಬರಮಾಡಿಕೊಳ್ಳುವರೆಂಬುದರಲ್ಲಿ ಸಂದೇಹವಿಲ್ಲ. ಮೊದಲ ಕೃತಿಯಲ್ಲೇ ಯಶಸ್ವಿಯಾದ ಬಲ್ಲಾಳರು ತಮ್ಮ ಬರವಣಿಗೆಯಲ್ಲಿ ತೋರಿರುವ ಸಂಯಮವನ್ನು ನೋಡಿದರೇ ಅವರೊಬ್ಬ ಕಲಾವಿದರೆಂಬುದು ತಿಳಿಯುತ್ತದೆ.

ಶ್ರೀಪತಿರಾಯರ ಹೆಣ್ಣು ಮಕ್ಕಳು: ಹಿರಿಯವಳು ಭಾರತಿ, ಎರಡನೆಯವಳು ಸುನಂದ. ಅನಂತ ಬಡತನದಲ್ಲೇ ಹುಟ್ಟಿ ಬೆಳೆದಿದ್ದರೂ ಅವನ ಪ್ರತಿಭೆ ಆದರ್ಶಗಳನ್ನು ಕಂಡು ಮಾರುಹೋದ ಶ್ರೀಪತಿರಾಯರು ಅವನ ಓದಿಗೆ ಸಹಾಯಮಾಡಿ ಅವನನ್ನೇ ತಮ್ಮ ಮೊದಲ ಅಳಿಯನನ್ನಾಗಿ ಮಾಡಿಕೊಳ್ಳುತ್ತಾರೆ. ಮುಂಬಯಿಯಲ್ಲಿ ಕೆಲಸಕ್ಕೆ ಸೇರಿದ ಅನಂತ ಸ್ವತಃ ಮನೆಮಾಡಿ ಭಾರತಿಯನ್ನು ಕರೆಸಿಕೊಳ್ಳಲು ಅಸಮರ್ಥನಾಗುತ್ತಾನೆ. ಭಾರತಿ ಇದರಿಂದ ತುಂಬ ನೋವಿಗೆ ಒಳಗಾದುದನ್ನು ಸಹಿಸಲಾರದೆ ಅವಳ ತಂದೆ ತಾವೇ ಅವಳನ್ನು ಮುಂಬಯಿಗೆ ಕರೆದುಕೊಂಡು ಹೋಗಿ ಮನೆ ಗೊತ್ತುಮಾಡಿ ಮಗಳ ಸಂಸಾರ ಆರಂಭಿಸಿ ಬರುತ್ತಾರೆ. ತನ್ನ ಎಳೆತನದಿಂದಲೂ ಆದರ್ಶದ ಚಿಟ್ಟೆಯನ್ನು ಹಿಡಿಯಲು ಹೊರಟ ಅನಂತನಿಗೆ ಲೋಕವ್ಯವಹಾರದಲ್ಲಿ ಸಂಸಾರ ಹೆಚ್ಚಿನದಾಗಿ ತೋರುವುದಿಲ್ಲ. ಜೀವನಕ್ಕಾಗಿ ಹಿಡಿದ ವೃತ್ತಿಯ ಜೊತೆಗೆ

ಒಂದು ಪತ್ರಿಕೆ, ಕೆಲಸಗಾರರ ಸಂಘ, ರಾತ್ರಿಶಾಲೆ ಹೀಗೆ ನೂರೆಂಟು ಕೆಲಸ ಕಾರ್ಯಗಳಲ್ಲಿ ಮಗ್ನನಾಗಿ ಕೊನೆಗೊಮ್ಮೆ ತನ್ನ ಕೆಲಸವನ್ನು ಕಳೆದುಕೊಳ್ಳುತ್ತಾನೆ. ಆದರೆ ಅವನ ಕೆಲಸ, ಅವನ ಆದರ್ಶ, ಅವನ ವಿಚಾರಧಾರೆಗಳಿಗೆ ಮನಸೋತ ಇಂದಿರಾ ಅವನ ಬಗೆಗೆ ಆಸಕ್ತಳಾಗುತ್ತಾಳೆ. ಇದನ್ನು ದುರುಪಯೋಗಪಡಿಸಿಕೊಂಡು ಅನಂತ ತನ್ನ ಹೃದಯವನ್ನು ಅವಳಿಗಾಗಿ ಮೀಸಲಿಡಲು ಮುಂದಾಗುತ್ತಾನೆ. ಭಾರತಿ ಬಸುರಿಯೆಂದು ತಿಳಿದು ಸ್ವತಃ ಶ್ರೀಪತಿರಾಯರೇ ಬಂದು ಅವಳನ್ನು ಊರಿಗೆ ಕರೆದುಕೊಂಡು ಹೋಗುತ್ತಾರೆ. ಇಂದಿರ ತನ್ನಲ್ಲಿ ತೋರಿಸಿದ ಸಲುಗೆಯನ್ನು, ಆತ್ಮೀಯತೆಯನ್ನು ತಪ್ಪು ತಿಳಿದು ತನ್ನ ಪ್ರೀತಿಯನ್ನು ವ್ಯಕ್ತಪಡಿಸಿ ಅವಳಿಂದ ತಿರಸ್ಕೃತನಾಗುತ್ತಾನೆ, ಅವನನ್ನೇ ನಚ್ಚಿ ನಂಬಿದ್ದ ಭಾರತಿಯೊಡನೆ ಅವನ ಜೀವನ ಇನ್ನೊಮ್ಮೆ ವ್ಯವಸ್ಥಿತವಾಗಬಹುದೆಂದು ಓದುಗರು ನಂಬುವಷ್ಟರಲ್ಲಿ ಅವನು ಅನಿರೀಕ್ಷಿತ ರೈಲ್ವೆ ಅಪಘಾತಕ್ಕೆ ಸಿಕ್ಕಿ ಮರಣಹೊಂದುತ್ತಾನೆ.

ಇದಿಷ್ಟು ಈ ಸುಂದರಕಾದಂಬರಿಯ ನೀರಸ ಸಾರಾಂಶ.

ಮುಖ್ಯವಾದ ಮೂರು ಪಾತ್ರಗಳಾದ ಭಾರತಿ, ಅನಂತ, ಇಂದಿರಾ ಇವರ ಹೆಸರನ್ನು ಹೊತ್ತು ಈ ಕಾದಂಬರಿಯಲ್ಲಿ ಮೂರು ಭಾಗಗಳಿವೆ. ಅನಂತನ ಮನೆಯ ಬಡತನ, ಭಾರತಿ ಕೆಚ್ಚಿನ ಕನಸು, ಮುಂಬಯಿನ ಜೀವನ, ಇಲ್ಲಿನ ಮುಖ್ಯ ವ್ಯಕ್ತಿಗಳ ಆದರ್ಶದ ಸಂಕೇತವಾದ 'ಕಹಳೆ' ಪತ್ರಿಕೆ ಜೀವನ ಮತ್ತು ಸಾವು, ಇಂದಿರೆಯ ನಿರಾಡಂಬರ ಜೀವನದ ಹಿಂದಿರುವ ಉಜ್ವಲ ಕಥೆ—ಇಲ್ಲಿ ಹಿನ್ನೆಲೆಯಾಗಿ ಬಂದಿವೆ. ಜೀವನಕ್ಕಿಂತ ಹೋರಾಟ ಮೇಲೆಂದು ತಿಳಿದು, ಅದರಿಂದ ತಾವು ಮುಟ್ಟಬಹುದೆಂದು ತಿಳಿದ ಮುಗಿಲ ರಾಜ್ಯವನ್ನು ಮುಟ್ಟಲಾರದೆ ಹೋದ ರಾಜೀವ, ಸೋಮಯಾಜಿಗಳಂತಹ ವ್ಯಕ್ತಿಗಳು; ಸುಖದ ಪರಮಾವಧಿಯೇ ಜೀವನದ ಕೊನೆಯ ಮೆಟ್ಟಿಲೆಂಬಂತೆ ನಡೆಯುವ ಸುನಂದ-ರಾಧಾಕೃಷ್ಣರು; ಪ್ರೀತಿ, ನಿರ್ಮಲಾಂತಃಕರಣಗಳಿಂದ ಜೀವನದ ಕಹಿಯನ್ನು ಮರೆಸಲು ಸಮರ್ಥರಾಗುವಂತಹ ಪಾರ್ವತಿ—ಸುಶೀಲೆಯರಂತಹ ಮಹಿಳೆಯರು ಇಲ್ಲಿನ ಕಥಾಭಿತ್ತಿಯ ಹಿನ್ನೆಲೆಯನ್ನು ವರ್ಣರಂಜಿತವಾಗಿ ಮಾಡಿದಾರೆ. ಹಾಸಿಗೆಯಲ್ಲಿಯೇ ಪರಿಚಿತನಾಗಿ ಅಲ್ಲಿಯೆ ಕೊನೆಯಾಗುವ ಪದ್ಮನಾಭ, ಆಗೊಮ್ಮೆ ಈಗೊಮ್ಮೆ ಸುಳಿದುಹೋಗುವ ಅನಂತನ ತಾಯಿ-ತಂದೆ; ಭಾರತಿಯ ತಂದೆ; ಪುಟ್ಟ ಮಕ್ಕಳಾದ ನರಹರಿ-ಸುಭದ್ರಾ ಇವರೂ ಓದುಗರ ಚಿತ್ತದಲ್ಲಿ ಪರಿಣಾಮವನ್ನುಂಟುಮಾಡುತ್ತಾರೆ. ಪದ್ಮನಾಭನ ಸಾವು; ಭಾರತಿ ಸಿಟ್ಟುಮಾಡಿಕೊಂಡು ತಂದೆಯ ಮನೆಗೆ ಹೋದಾಗ ಅವಳತ್ತೆ ಅನಂತನ ಚಿತ್ರವನ್ನು ಕಳಿಸಿಕೊಡುವುದು; ಗಾಂಧೀಜಿ ಸತ್ತ ದಿನ ಭಾರತಿ ತಾನು ಬಸುರಿಯೆಂದು ಗಂಡನಿಗೆ

ಹೇಳುವುದು—ಮುಂತಾದ ಸಂದರ್ಭಗಳನ್ನು ಕಾದಂಬರಿಕಾರರು ಹೃದಯಸ್ಪರ್ಶಿಯಾಗಿ ಚಿತ್ರಿಸಿದಾರೆ.

ಬಡತನ—ಆದರ್ಶ—ಹೋರಾಟಗಳು ಮುಪ್ಪುರಿಗೊಂಡ ಈ ಕಾದಂಬರಿ ಓದುಗರನ್ನು ಆಕರ್ಷಿಸುತ್ತದೆ. 'ಅನುರಕ್ತೆ'ಯಲ್ಲಿ ತಾವು ಮೆರೆದ ಮನಸ್ಸಿನೊಳಗಿನ ಹೋರಾಟದ ಎಳೆಯನ್ನು ಇಲ್ಲಿ ಉದ್ದಕ್ಕೂ ಎಳೆದಿದಾರೆ. ಇದರ ಜೊತೆ ಜೊತೆಯಾಗಿ ನಮ್ಮ ನಾಡಿನ ಸ್ವಾತಂತ್ರ್ಯ ಸಂಗ್ರಾಮದ ಕತೆಯೂ ಬೆರೆತಿದೆ. ಒಂದು ದೃಷ್ಟಿಯಿಂದ ಆ ವಸ್ತ್ರದ ಮೇಲೆಯೇ ಇಲ್ಲಿ ಕಥೆಯ ಹೂವನ್ನು ಹೆಣೆಯಲಾಗಿದೆ. ಹೀಗೆ ಇಲ್ಲಿ ರಾಷ್ಟ್ರದ ಹೋರಾಟದ ಕಥೆ, ವ್ಯಕ್ತಿ ವ್ಯಕ್ತಿಗಳ ಮನಸ್ಸಿನ ಹೋರಾಟದ ಕಥೆ ಸುಗಮವಾಗಿದೆ.

'ಅರ್ಧ ಕಿವಿಯನ್ನು ಮುಚ್ಚಿ ಕೆನ್ನೆಯ ತನಕ ಜೋಲುವ ಕೂದಲಿಗೆ ಕೇದಗೆ ಮುಡಿಸಿದರೆ ಕಾಡಿನಲ್ಲಿ ತಿಂಗಳ ಬೆಳಕು ಬಿದ್ದ ಹಾಗೆ'; 'ಎತ್ತರವಾದ ಬಂಡೆಯಲ್ಲಿ ಪ್ರಕೃತಿಯ ಮೇಲೆ ಪುರುಷನ ಸ್ವಾಮ್ಯವನ್ನು ಸ್ಥಾಪಿಸಿರುವ ಪ್ರತೀಕವಾಗಿ ದೊಡ್ಡ ರೇಡಿಯೋ ಗೋಪುರ ನಿಂತಿದೆ', 'ಅನಂತನ ಉಸಿರು ತಡೆದು ತಡೆದು ಬರುತ್ತಿತ್ತು; ನಿದ್ದೆಯಲ್ಲೂ ಯಾರಿಗಾಗಿಯೋ ಅಳುತ್ತಿದ್ದಾನೆ ಎನ್ನುವಂತೆ' ಎಂಬಂತಹ ಸುಂದರವಾದ ಮಾತುಗಳೂ, ವರ್ಣನೆಗಳೂ, ಜೀವಂತವಾದ ಸಹಜವಾದ ಸಂಭಾಷಣೆಯೊಂದಿಗೆ ಈ ಕಾದಂಬರಿಯಲ್ಲಿ ಬೆರೆತು ಅದರ ಬೆಲೆಯನ್ನು ಹೆಚ್ಚಿಸಿದೆ.

ಹಾ. ಮಾ. ನಾಯಕ.

* * *

ಸಾಹಿತ್ಯಸಮೀಕ್ಷೆ—ವಿವಿಧ ಲೇಖಕರಿಂದ; ಪ್ರಕಾಶಕರು: ಕಲಾಕ್ಷೇತ್ರ ೧೭೧, ರಮಾವಿಲಾಸ ಅಗ್ರಹಾರ, ಮೈಸೂರು; ಪುಟಗಳು ೧೩೪; ಬೆಲೆ, ರೂ. ೧-೦-೦.

ಕನ್ನಡದ ವಿಮರ್ಶಾಸಾಹಿತ್ಯಕ್ಕೆ ನೀಡುವ ಯಾವ ಕಾಣಿಕೆಯೂ ಅಲ್ಪವಾದುದಲ್ಲ. ಅಂಥದರಲ್ಲಿ ತರುಣ ಸಂಪಾದಕರುಗಳಾದ ಶ್ರೀ ಟಿ. ಆರ್. ತಿಪ್ಪೇಸ್ವಾಮಿ, ಶ್ರೀ ಹೇಮದಳ ರಾಮದಾಸ್ ಮತ್ತು ಶ್ರೀ ಜಿ. ಶಂ. ಪರಮಶಿವಯ್ಯನವರು ಅತ್ಯಂತ ಉತ್ಸಾಹದಿಂದ ಶ್ರಮಿಸಿ (ಸಂಪದನಾಕಾರ್ಯ ಶ್ರಮವೇ!) ಈ ಅಮೂಲ್ಯವಾದ ಹೊತ್ತಗೆಯನ್ನು ಹೊರತಂದು ನಮ್ಮೆಲ್ಲರ ಮೆಚ್ಚುಗೆಗೂ ಪಾತ್ರರಾಗಿದ್ದಾರೆ.

ಕನ್ನಡನಾಡಿನ ಅತ್ಯಂತ ಶ್ರೇಷ್ಠ ವಿಮರ್ಶಕರ "ವಿರಳಪಂಕ್ತಿ"ಯಲ್ಲಿ ನಿಲ್ಲುವ ಪ್ರೊ|| ತೀ. ನಂ. ಶ್ರೀಕಂಠಯ್ಯನವರಿಗೆ ಈ ವಿಮರ್ಶಾಗ್ರಂಥವನ್ನು ಕಾಣಿಕೆಯಾಗಿ ನೀಡಿರುವುದು ಸಂಪಾದಕರ ಭಕ್ತಿಯನ್ನು ಮಾತ್ರವಲ್ಲದೆ ಔಚಿತ್ಯಜ್ಞಾನವನ್ನೂ

ತೋರಿಸುತ್ತದೆ. ತಮ್ಮ 'ಹಿತವಾಣಿ'ಯಲ್ಲಿ ನಾಡಿನ ಹಿರಿಯ ಸಾಹಿತಿಗಳಾದ ಶ್ರೀ ವಿ. ಸೀತಾರಾಮಯ್ಯನವರು ಈ ಮಾತನ್ನೇ ತಮ್ಮ ವಿದ್ವತ್ತಿನ ಅಧಿಕಾರವಾಣಿಯಿಂದ ಆಡಿದ್ದಾರೆ. "ನಾನು ಅರಿತಂತೆ ಶ್ರೀ ತೀ. ನಂ. ಶ್ರೀ ಅವರಿಗಿಂತ ಹೆಚ್ಚು ಮೇಧಾವಿಗಳೂ, ಸಾಹಿತ್ಯಜ್ಞರೂ, ವಿಮರ್ಶಕರೂ ಆದ ಮಂದಿ ಕನ್ನಡನಾಡಿನಲ್ಲಿ ಏಕೆ ಬೇರೆ ಪ್ರಾಂತಗಳಲ್ಲಿಯೂ ಇಲ್ಲ."

ಇಂತಹ ಶ್ರೀ ತೀ. ನಂ. ಶ್ರೀಯವರ ಪರಿಚಯದ ಲೇಖನದಿಂದ ಪುಸ್ತಕ ಆರಂಭವಾಗುತ್ತದೆ, ಲೇಖನ ಪುಟ್ಟದು. ಏಕಾದರೂ ಮುಗಿಯಿತೋ ಎನಿಸುವಷ್ಟು ಸುಂದರವಾಗಿ ಶ್ರೀ ತೀ. ನಂ. ಶ್ರೀ ಯವರ ಮಧುರ ವ್ಯಕ್ತಿತ್ವವನ್ನು ಶ್ರೀ ದೇ. ಜವರೇಗೌಡರು ಇದರಲ್ಲಿ ಮಾಡಿಕೊಟ್ಟಿದ್ದಾರೆ. ಚಿರಪರಿಚಿತರಾದ ಶ್ರೀ ತೀ. ನಂ. ಶ್ರೀಯವರು ಲೇಖನವನ್ನು ಓದಿ ಮುಗಿಸುವ ವೇಳೆಗೆ ಮತ್ತಷ್ಟು ಆತ್ಮೀಯರಾಗುತ್ತಾರೆ. ನಮ್ಮ ದೃಷ್ಟಿಯಲ್ಲಿ ಇನ್ನೂ ಎತ್ತರಕ್ಕೆ ಏರುತ್ತಾರೆ.

ಉಳಿದ ಹನ್ನೊಂದು ಲೇಖನಗಳನ್ನೂ ವಿವರ ವಿವರವಾಗಿ ವಿಮರ್ಶಿಸುವುದಕ್ಕೆ ಸ್ಥಳಾವಕಾಶವಾದರೂ ಎಲ್ಲಿದೆ?

'ನವ್ಯ ಕವಿತೆಯನ್ನು ಕುರಿತು' ಶ್ರೀ ಎಂ. ಗೋಪಾಲಕೃಷ್ಣ ಅಡಿಗ, ಎಂ.ಎ. ಅವರು ವಿಚಾರಪೂರಿತವಾದ ಲೇಖನ ಬರೆದಿದ್ದಾರೆ. ತಮ್ಮ ಲೇಖನದಲ್ಲಿ ಶ್ರೀ ಅಡಿಗರು ಕಾವ್ಯದ ಹೊರಮೈಯಲ್ಲಿ ಹೇಗೆ ಕಾಲಕಾಲಕ್ಕೆ ಅನಿವಾರ್ಯವಾಗಿ ಬದಲಾವಣೆಗಳಾಗುತ್ತಾ ಹೋಗುತ್ತವೆ ಎಂಬುದನ್ನು ತರ್ಕಬದ್ಧವಾಗಿ ತೋರಿಸಿದ್ದಾರೆ. ಆದರೆ 'ರೊಮಾಂಟಿಕ್' ಸಂಪ್ರದಾಯದ ಬಗ್ಗೆ ತಾವು ಹಿಂದೆ ಹೊರಪಡಿಸಿದ ಅಭಿಪ್ರಾಯವನ್ನು ಸ್ಪಷ್ಟಗೊಳಿಸಲು ಹೊರಟ ಅವರು ಅದನ್ನು ಅಷ್ಟೇನೂ ಯಶಸ್ವಿಗಳಾಗಿ ನೆರವೇರಿಸಿರುವಂತೆ ತೋರುವುದಿಲ್ಲ. ಕಾರಣ ಇದು. "ರೋಮಾಂಟಿಕ್ ಸಂಪ್ರದಾಯದ ಸತ್ವ ಈಗ ತೀರುತ್ತ ಬಂದಿದೆ" ಎಂಬ ಹೇಳಿಕೆ ನೂರು ವಾದಗಳಿಂದಾಗಲೀ ನೂರಾರು ಉದ್ಧರಣೆಗಳಿಂದಾಗಲೀ ಸಾಧಿಸಲ್ಪಡಬಹುದಾದ ಸತ್ಯವಲ್ಲ. ಒಬ್ಬನೇ ಮಾನವನ ಮನಸ್ಸು ನೂರಾರು ಬೇರೆಬೇರೆಯ ಘಟ್ಟಗಳಲ್ಲಿ ನೂರಾರು ವಿವಿಧ ರೂಪಗಳನ್ನೂ, ಸತ್ವಗಳನ್ನೂ ಬಯಸುತ್ತದೆ. ಅವನ ಮನಸ್ಸಿನ ನೆಲೆಯಂತೆ ಇವು ಅವನಿಗೆ ರಸಾನುಭವವನ್ನೋ, ಆತ್ಮತೃಪ್ತಿಯನ್ನೋ ನೀಡುತ್ತವೆ. ಇದನ್ನೇ ಶ್ರೀ ಅಡಿಗರೂ ಹೇಳಿದ್ದಾರೆ (ಪು. ೧೩). ವರ್ಡ್ಸ್‌ವರ್ತನ 'ಮಗುವಿನ ಅಮರತ್ವ'ವನ್ನು ಕುರಿತ ಕವನ ನನಗೆ ಎಲಿಯಟ್ಟನ 'ಹಾಳುಭೂಮಿ'ಗಿಂತಲೂ ನೂರುಪಾಲು ಭವ್ಯವಾಗಿ ಕಾಣಬಹುದು. ಇಂದಿಗೂ ಎಲಿಯಟ್ಟನ ಕವನವನ್ನು ಬಹುವಾಗಿ ಮೆಚ್ಚಿಕೊಂಡ ಮತ್ತೊಬ್ಬನಿಗೆ ವರ್ಡ್ಸ್‌ವರ್ತನ ಕವನದಲ್ಲಿ ಕಾವ್ಯತ್ವವೇ ಕಾಣದಿರ

ಬಹುದು. ಆದರೆ ಇದು ನಮ್ಮ ನಮ್ಮ ರುಚಿಭೇದವನ್ನು ತೋರಿಸುತ್ತದೆಯೇ ಹೊರತು ಯಾವ ಕಾವ್ಯರೂಪ ಶ್ರೇಷ್ಠವೆಂಬುದನ್ನಾಗಲೀ, ಯಾವುದು ಯುಗದ ರುಚಿಯನ್ನೇ ನಿರ್ಧರಿಸುತ್ತದೆಯೆಂಬುದನ್ನಾಗಲೀ ಅಲ್ಲ.

ಶ್ರೀಮಾನ್ ಎಸ್. ವಿ. ಪರಮೇಶ್ವರಭಟ್ಟ, ಎಂ.ಎ. ಅವರ 'ಕನ್ನಡದಲ್ಲಿ ಜೀವನ ಚರಿತ್ರೆಗಳು', ಶ್ರೀಮಾನ್ ಎಂ. ವಿ. ಸೀತಾರಾಮಯ್ಯ, ಎಂ.ಎ. ಅವರ 'ಕನ್ನಡ ನಾಟಕ', ಶ್ರೀ ತ. ರಾ. ಸುಬ್ಬರಾಯರ 'ಕನ್ನಡ ಕಾದಂಬರಿಗಳು.' ಶ್ರೀ ಎಚ್. ಎನ್. ಕೃಷ್ಣಸ್ವಾಮಿ ಅಯ್ಯಂಗಾರ್, ಎಂ.ಎ., ಬಿ.ಕಾಂ. ಅವರ 'ಕನ್ನಡದಲ್ಲಿ ಹರಟೆಯ ಸ್ಥಾನ' ಮತ್ತು ಶ್ರೀ ಜಿ. ವರದರಾಜಾರಾವ್, ಎಂ.ಎ. ಅವರ 'ಕನ್ನಡ ಸಣ್ಣ ಕತೆಗಳ ಪ್ರಗತಿ' ಇವೆಲ್ಲ ಮತ್ತೊಂದು ಬಗೆಯ ಲೇಖನಗಳು. ಪ್ರತಿಯೊಂದರಲ್ಲಿಯೂ ತಮ್ಮ ತಮ್ಮ ವಿಷಯವನ್ನು ಕುರಿತು ಚಾರಿತ್ರಿಕವಾದ ಪ್ರಗತಿಯನ್ನು ಲೇಖಕರು ಚಿತ್ರಿಸಿದ್ದಾರೆ. ಜೀವನ ಚರಿತ್ರೆಗಳ ಸ್ವರೂಪವನ್ನು ಕುರಿತು ಶ್ರೀ ಪರಮೇಶ್ವರಭಟ್ಟರೂ, ನಾಟಕದ ಸ್ವರೂಪವನ್ನು ಕುರಿತು ಶ್ರೀ ಎಂ. ವಿ. ಸೀ. ಯವರೂ, ಕಾದಂಬರಿಯ ಸ್ವರೂಪವನ್ನು ಕುರಿತು ಶ್ರೀ ತ. ರಾ. ಸು. ಅವರೂ, ಹರಟೆಯ ಸ್ವರೂಪವನ್ನು ಕುರಿತು ಶ್ರೀ ಎಚ್. ಎನ್. ಕೃ. ಅಯ್ಯಂಗಾರ್ಯರೂ ತುಂಬ ತಿಳಿಯಾದ ವಿವರಣೆಗಳನ್ನು ಕೊಟ್ಟಿದ್ದಾರೆ. ಇಷ್ಟೊಂದು ಸಂಕ್ಷಿಪ್ತವಾದ ಸ್ಥಳಾವಕಾಶದಲ್ಲಿಯೇ ಸ್ವರೂಪನಿರ್ಣಯ, ಚಾರಿತ್ರಿಕ ಬೆಳವಣಿಗೆ ಈ ಎರಡೂ ಕಾರ್ಯವನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿರುವ ಲೇಖಕರ ಶಕ್ತಿ ಪ್ರಶಂಸಾರ್ಹವಾದುದೇ.

ಅಲಂಕಾರಶಾಸ್ತ್ರದ ವಿದ್ಯಾರ್ಥಿಗೆ ತುಂಬ ಅನುಕೂಲವಾಗುವಂತೆ ಶ್ರೀ ಎಚ್. ದೇವೀರಪ್ಪ, ಎಂ.ಎ. ಅವರು "ಔಚಿತ್ಯ" ಎಂಬ ಲೇಖನವನ್ನು ಬರೆದಿದ್ದಾರೆ. ಪ್ರಸಿದ್ಧರಾದ ಆಲಂಕಾರಿಕರ ಅಭಿಮತಗಳಲ್ಲಿ ಯಾವುದನ್ನೂ ಬಿಡದೆ ಕಾವ್ಯದಲ್ಲಿ ಉಚಿತವಾವುದು, ಅನುಚಿತವಾವುದು ಎಂಬುದನ್ನು ವಿಮರ್ಶೆಮಾಡಿದ್ದಾರೆ.

ಮುಂದಿನದು ಶ್ರೀ ಜಿ. ಎಸ್. ಶಿವರುದ್ರಪ್ಪ, ಎಂ.ಎ. ಅವರ 'ಭಾವಗೀತ' ಎಂಬ ಲೇಖನ. ಪಾಶ್ಚಾತ್ಯ ಮತ್ತು ಪೌರ್ವಾತ್ಯ ಸಾಹಿತ್ಯಜ್ಞರ ಅಭಿಪ್ರಾಯಗಳನ್ನು ಸುಂದರವಾಗಿ ಕ್ರೋಢೀಕರಿಸಿ ಶ್ರೀಮಾನ್ ಜಿ. ಎಸ್. ಶಿ. ಅವರು ಭಾವಗೀತದ ಸ್ವರೂಪ ನಿರ್ಣಯಮಾಡಿದ್ದಾರೆ. ಲೇಖನದ ಮಧ್ಯೆ ಮಧ್ಯೆ ಬರುವ ಉದ್ಧೃದ್ಧ ನೆಯ ಇಂಗ್ಲಿಷ್ ವಾಕ್ಯಗಳಿಗೆ ಅಲ್ಲಿಯ ಕನ್ನಡದ ಅನುವಾದವನ್ನು ಕೊಟ್ಟಿದ್ದರೆ ಲೇಖನದ ಸಂಪತ್ತು ಮತ್ತಷ್ಟು ಅಧಿಕವಾಗುತ್ತಿತ್ತೆಂದು ಸೂಚಿಸಬಹುದು. ನವ್ಯಕಾವ್ಯದ ಬಗೆಗೆ ಬರೆಯುತ್ತಾ "ಈ ಕಾವ್ಯವನ್ನು ರಚಿಸುವವರಿಗಾಗಲಿ ಈ

ಕಾವ್ಯದ ಬಗ್ಗೆ ಬರೆಯುವವರಿಗಾಗಲೀ ಖಚಿತವಾದ ಒಂದು 'ದರ್ಶನ'ವಿರುವಂತೆ ತೋರುವುದಿಲ್ಲ" ಎಂದು ಅವರು ಹೇಳುವ ಮಾತನ್ನು ನಾವು ಒಪ್ಪುವುದಕ್ಕಾಗು ವುದಿಲ್ಲ. ಶ್ರೀಮಾನ್ ಗೋಪಾಲಕೃಷ್ಣ ಅಡಿಗರ 'ಹಿಮಗಿರಿಯ ಕಂದರ' ಎಂಬ ಕವನದಲ್ಲಿ ಎಂತಹ ದರ್ಶನ ಅಡಗಿದೆ! ಮಾನವನ ಮಹದಾಕಾಂಕ್ಷಾ ಸಾಧನೆ, ಅದ ಕ್ಕಿರುವ ಇಂದಿನ ಯುಗದ ಅಡ್ಡಿ, ಇದಕ್ಕೆ ಎಂತಹ ಚಿತ್ರವನ್ನು ಸೃಷ್ಟಿಸಿದ್ದಾರೆ ಅವರು!

"ಸಾಹಿತ್ಯದಲ್ಲಿ ಕಲೆ" ಎಂಬ ಪುಟ್ಟ ಲೇಖನದಲ್ಲಿ ನಿಜವಾದ ಕಲೆಯ ಉಗಮವನ್ನು ಡಾ|| ಶ್ರೀಕಂಠಶಾಸ್ತ್ರಿ, ಎಂ.ಎ., ಡಿ.ಲಿಟ್., ಅವರು ತಮ್ಮ ವಿದ್ವತ್ಪೂರ್ಣವಾದರೂ ಸರಳವಾದ ಶೈಲಿಯಲ್ಲಿ ವಿವರಿಸಿದ್ದಾರೆ.

ಶ್ರೀಮಾನ್ ದೇ. ಜವರೇಗೌಡರ ಇನ್ನೊಂದು ಲೇಖನ 'ಸಾಹಿತ್ಯದಲ್ಲಿ ಪ್ರತಿಮಾವಿಧಾನ'. ವಿಮರ್ಶೆಯ ಪ್ರಪಂಚದಲ್ಲಿ ಇದು ಹೊಸದಾಗಿ ಪ್ರಯೋಗ ವಾಗುತ್ತಿರುವ ಪದ. ಮಹಾಕವಿ ಕುವೆಂಪುರವರನ್ನು ಅನುಕರಿಸಿಯೋ, ಅನು ಸರಿಸಿಯೋ ಅನೇಕರು ಅನೇಕ ಸಲ 'ಪ್ರತಿಮಾ' ಎಂಬುದನ್ನು ಪ್ರಯೋಗಿಸು ತ್ತಿದ್ದಾರೆ. ಶ್ರೀ ದೇ. ಜ. ಗೌ. ಅವರ ಪ್ರಯತ್ನ ಈ ಪ್ರತಿಮಾವಿಧಾನವೆಂಥದು ಎಂಬುದನ್ನು ವಿವರಿಸ ಹೊರಡುವುದು. ಅದರಲ್ಲಿ ಅವರು ಬಹುಮಟ್ಟಿಗೆ ಯಶಸ್ವಿ ಗಳಾಗಿದ್ದಾರೆ, ಎಂದು ಹೇಳಬಹುದು. ಪ್ರತಿಮೆಗೆ ನಿದರ್ಶನವಾಗಿ ಅವರು ಕುಮಾರ ವ್ಯಾಸನ ಸುಪ್ರತೀಕ ಗಜದ ವರ್ಣನೆಯ 'ಜಗದ ನಿಡುನಿದ್ರೆಯಲಿ' ಎಂಬ ಪದ್ಯ ವನ್ನು ಉದ್ಧರಿಸುತ್ತಾರೆ. ಈ ಅದ್ಭುತವಾದ ಷಟ್ಪದಿಯಲ್ಲಿ ಕುಮಾರವ್ಯಾಸ ರೂಪಕ ಗಳು ಉತ್ಪ್ರೇಕ್ಷೆಗಳ ಸಾಲುಸಾಲನ್ನೇ ನೇಯುತ್ತಾ ಹೋಗುತ್ತಾನೆ. ಇದೇ ಪ್ರತಿಮೆಯೆ? ಇದೇ ಪ್ರತಿಮೆಯಾದರೆ ಯಾವುದಕ್ಕೆ ಪ್ರತಿಮೆ? ಶಕ್ತಿಮಾತ್ರಕ್ಕೇ? ಹಾಗಾದರೆ ಭೀಮ ಯಾವುದಕ್ಕೆ ಪ್ರತಿಮೆ? ಆನೆ, ಭೀಮ ಇಬ್ಬರೂ ಶಕ್ತಿಗೆ ಮಾತ್ರ ಪ್ರತಿಮೆಯಾದರೆ ಅವರಿಬ್ಬರ ನಡುವೆ ಏನೂ ವ್ಯತ್ಯಾಸವಿಲ್ಲವೆ? ಅಲ್ಲದೆ 'ಕೈಕಾಲ್ ಮೂಡಿತೋ ನಭಕೆ' ಎನ್ನುವಾಗ ಕುಮಾರವ್ಯಾಸ ಎಲ್ಲ ಪ್ರತಿಮೆಗಳನ್ನೂ ಸುಪ್ರತೀಕ ಗಜ ಚತುರಂಗವನ್ನು ಪುಡಿಪುಡಿ ಮಾಡಿದಂತೆ ನುಚ್ಚುನೂರು ಮಾಡುವುದಿಲ್ಲವೆ! ಇವುಗಳನ್ನು ದೃಷ್ಟಿಯಲ್ಲಿಟ್ಟುಕೊಂಡಿದ್ದರೆ ಚೆನ್ನಾಗಿರುತ್ತಿತ್ತು.

ಕೊನೆಯದಾಗಿ ಶ್ರೀ ಎಚ್. ಎಚ್. ಅಣ್ಣಯ್ಯಗೌಡ ಎಂ.ಎ. ಅವರ ಲೇಖನ. 'ವಿಡಂಬನ'ವೆಂದರೇನೆಂಬುದನ್ನು ಲೇಖಕರು ವಿವರಿಸಿ ಆಂಗ್ಲಸಾಹಿತ್ಯದಲ್ಲಿ ಅದನ್ನು ಅಲ್ಲಿನ ಪ್ರಸಿದ್ಧ ಸಾಹಿತಿಗಳು ಉಪಯೋಗಿಸಿಕೊಂಡಿರುವ ರೀತಿಯನ್ನು ವಿಸ್ತಾರವಾಗಿ ತಿಳಿಸಿದ್ದಾರೆ. ಅಲ್ಲಲ್ಲಿ ಮುಖ್ಯವಾದ ನಿದರ್ಶನಗಳನ್ನು ಉದ್ಧರಿಸಿದ್ದರೆ ಲೇಖನದ ಸ್ವಾರಸ್ಯ ಪೂರ್ಣವಾಗಿರುತ್ತಿತ್ತು.

ವಿದ್ವಾಂಸರನ್ನು ಮತ್ತೆ ಮತ್ತೆ ಪೀಡಿಸಿಯಾದರೂ ಇಂತಹ ಅಮೂಲ್ಯ ಕೃತಿಗಳನ್ನು ಸಂಪಾದಿಸಿ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಕನ್ನಡಿಗರಿಗೆ ಒದಗಿಸುವ ಭಾಗ್ಯ 'ಕಲಾಕ್ಷೇತ್ರ'ದ್ದಾಗಲಿ!

—ಪ್ರಭುಶಂಕರ.

*
* *

ಒಲುಮೆ—ಕವಿ: ತೀ. ನಂ. ಶ್ರೀಕಂಠಯ್ಯ; ಪ್ರಕಾಶನ: ಶ್ರೀ ಶಾರದಾಮಂದಿರ, ಮೈಸೂರು; ೫೦ ಪುಟಗಳು; ಬೆಲೆ, ಸಾಧಾರಣಪ್ರತಿ ರೂ. ೧-೮-೦.; ಉತ್ತಮಪ್ರತಿ ರೂ. ೨-೮-೦.

'ಒಲುಮೆ' ಪ್ರಣಯ ಗೀತಗಳಿಗೇ ಮೀಸಲಾದ ಕನ್ನಡ ಪುಸ್ತಕಗಳಲ್ಲಿ ಮೊದಮೊದಲನೆಯದು. ೧೯೩೨ ರಲ್ಲಿ ಅಚ್ಚಾದ ಈ ಪ್ರೇಮ ಗೀತಗಳ ಸಂಕಲನ ಈಗ ೨೨ ವರ್ಷದ ಅನಂತರ ಮತ್ತೆ ಹೊಸದಾಗಿ ಬಂದಿದೆ. ಇಲ್ಲಿ ಈ ತಿದ್ದಿ ಬೆಳೆಸಿದ ಎರಡನೆಯ ಮುದ್ರಣದಲ್ಲಿ ಆರು ಹೊಸ ಕವಿತೆಗಳನ್ನು ಕೂಡಿಸಿಕೊಂಡು, 'ಸಂಸ್ಕೃತದಿಂದ' ಎಂಬ ಭಾಗದಲ್ಲಿದ್ದ ಆರು ಕವಿತೆಗಳನ್ನು ಬಿಟ್ಟಿದೆ. ಗಾಥಾಸಪ್ತಶತಿಯಿಂದ ಅನುವಾದಿಸಿದ ಕವಿತೆಗಳ ಗುಂಪು ಮೊದಲನೆಯ ಮುದ್ರಣದಲ್ಲಿ ಎಂಟಿದ್ದುದು ಈ ಮುದ್ರಣದಲ್ಲಿ ಹದಿನೆಂಟಾಗಿದೆ. ಈ ಎಲ್ಲ ಪರಿಪಾಕದಿಂದ ಪುಸ್ತಕ ಗಾತ್ರದಲ್ಲಿ, ಗುಣದಲ್ಲಿ ವಿಸ್ತಾರಗೊಂಡಿದೆ. ಮೊದಲಚ್ಚಿನ ಪ್ರತಿಗಳು ದೊರೆಯದಂತಾಗಿ ಬಹುಕಾಲವಾಗಿತ್ತು. ಈಗಲಾದರೂ ಪುಸ್ತಕ ದೊರೆಯುವಂತೆ ಎರಡನೆಯ ಮುದ್ರಣವನ್ನು ಮಾಡಿ ಪ್ರಕಾಶನಕ್ಕೆ ತಂದ ಶ್ರೀ ಎಚ್. ಎಂ. ಶಂಕರನಾರಾಯಣರಾಯರಿಗೆ ಕನ್ನಡ ಕಾವ್ಯಪ್ರಿಯರು ಋಣಿಗಳು. ಪ್ರೊ|| ತೀ. ನಂ. ಶ್ರೀಕಂಠಯ್ಯನವರು ಸ್ವಭಾವ ಸಹಜವಾದ ವಿನಯದಿಂದ ಕನ್ನಡ ಕಾವ್ಯವಾಹಿನಿಯಲ್ಲಿ ಬಂದ ಮೊದಲ ಪ್ರೇಮ ಗೀತಗಳಲ್ಲಿ ಒಂದೆಂಬುದು ಒಂದೇ ಈ ಕೃತಿಯ ವಿಶೇಷವೆಂದು ಹೇಳಿಕೊಂಡಿದ್ದಾರೆ. "ಅಂದಿನ ಪದ್ಯಗಳನ್ನು ಮತ್ತೊಮ್ಮೆ ಓದಿದಾಗ ಎಷ್ಟೋ ಕಡೆ ಮಾತು ಸಪ್ಪೆಯೆಂದೂ ಭಾವವು ಸಾಮಾನ್ಯವೆಂದೂ ನನಗೇ ಅನ್ನಿಸಿತು" ಎಂದು ಹೇಳಿಕೊಂಡಿದ್ದಾರೆ. ಕೊನೆಯಲ್ಲಿ ರಸದ ದೃಷ್ಟಿಯಿಂದಲ್ಲದಿದ್ದರೂ ಕಾಲದ ದೃಷ್ಟಿಯಿಂದಾದರೂ ಈ ಪದ್ಯಗಳನ್ನು ಜನ ನೋಡಿದರೆ ಈ ಪುನರ್ಮುದ್ರಣ ಸಾರ್ಥಕವಾಯಿತೆಂದು ಹೇಳಿಕೊಂಡಿದ್ದಾರೆ. ಇದು ವಿನಯಕ್ಕೆ ಒಪ್ಪವಾದ ಮಾತು. ಆದರೆ ನಾವು ಒಪ್ಪಬೇಕಾದ ಮಾತಲ್ಲ. ಪರಿಶುದ್ಧವಾದ ಒಂದು ಸಣ್ಣ ಚೌಕದಲ್ಲಿ ಪಾಕಗೊಂಡ ಪ್ರಣಯ ಕೃತಿಯನ್ನು ಶ್ರೀಕಂಠಯ್ಯನವರು ಇಲ್ಲಿ ರಚಿಸಿದ್ದಾರೆ. ಹೃದಯದಲ್ಲಿ ಕದ್ದು ಸುಳಿಯುವ ಪ್ರಣಯ, ಅಲ್ಲಿ ಬೆಳಗುವ ಪ್ರಣತಿಯ ಬಗೆ ಈ ಪ್ರಣತಿಯ ದೀಪ್ತಿಗೆ ಸ್ನೇಹ

ನೆರವಾಗಿ ಬೆಳಕು ಬೆಳೆಯುವ ರೀತಿ, ಸ್ನೇಹದ ನೆರವಿಳಿದಾಗ ಪ್ರೇಮದ ನೆರೆಯಿಳಿಯುವುದು, ಪ್ರಣಯಿಗಳು ಓದಿಗಾಗಿಯೇ, ಮನೆಯವರ ಬಲವಂತಕ್ಕಾಗಿಯೇ ದೇಹದಿಂದ ದೇಶದವರ ಹೊತ್ತಿನಲ್ಲಿಯೋ, ಒಂದು ನೀತಿ ನಿಯಮವನ್ನು ಪಾಲಿಸುವುದಕ್ಕಾಗಿ ಸಂಯಮದಿಂದ ದೇಹದ ಆಸೆಯನ್ನು ಬಿಗಿಹಿಡಿದಿರುವಾಗಲೋ ಅವರ ಹೃದಯದ ಬೆಳಕು ಏರಿಳಿಯುವಾಗಿನ ನೆರಳು ಬೆಳಕಿನ ವಿನ್ಯಾಸ, ನಂದದಿದ್ದರೂ ಕುಂದಿ ಪ್ರಣಯ ನಂದಾದೀಪ—ಕೊನೆಯಲ್ಲಿ ಬೆಳಗುತ್ತಿರುವ ಹೊತ್ತಿನಲ್ಲಿ ಬೆಂಗಾಳಿ ಬೀಸಿ ಬೆಳಕಿಗೆ ಬಡಿದು, ಅದರ ಕೊರಳಮುಕಿ ಸಾಯಿಸಿದಾಗ ಕತ್ತಲು ಮುತ್ತಿ ಆವರಿಸುವ ರೀತಿ—ಇವುಗಳೆಲ್ಲಾ ಒಲುಮೆಯಲ್ಲಿ ಸುಂದರವಾದ ಮಾತಿನಲ್ಲಿ ಚಿತ್ರಿತವಾಗಿದೆ.

ಒಲುಮೆ ಬಾಳಿನ ಒಂದು ಅವಶ್ಯಕ ತಂತು. ಈ ಒಲುಮೆ, ಪ್ರೇಮ ಹೇಗೆ ಬರುತ್ತದೆ, ಬೆಳೆಯುತ್ತದೆಂದು ಹೇಳಲಾಗುವುದಿಲ್ಲ. 'ಪ್ರಥಮದರ್ಶನ'ದಲ್ಲಿ ಹೆಣ್ಣು ನೋಡಲು ಹೋಗುವ ತರುಣನ ಮನಸ್ಸು

"ತಳೆದ ಮುಗಿಲ ಮುಸುಕಿನಲ್ಲಿ
ದಿನವು ಕೊರಗುತಿದ್ದಿತು,
ಮಳೆಯು ಮನಸಿನುಲ್ಲಸವನು
ಜಿನುಗಿ ತೊಳೆಯುತಿದ್ದಿತು.'

ಆಗ ಏನನ್ನೋ ನೆನೆಯುತ್ತಿದ್ದಾಗ ಇದ್ದಕ್ಕಿದ್ದಂತೆ

"ಸುಳಿಯಿತಾಗವಿಂಚದೊಂದು
ಸೆಳೆದು ನನ್ನ ಕಣ್ಣನು"

ಮತ್ತೆ ಹೆಣ್ಣು ಮಿಂಚು ನಡೆದು ಬಂದಂತೆ ಬಂದು ನಮಸ್ಕರಿಸಿದಾಗ ಹಗಲ ಮಂಕು ಚೆದರಿ, ಈತನಕ ಬಂಧಿಸಿದ್ದ ಹೃದಯದ ಬಾಗಿಲು ತೆರೆಯಿತು. ಈಗ ಮನಸ್ಸು ಹಿತವಡೆಯಿತು.

ಚೆಲುವೆಯೆಂದು ನುಡಿಯಲಾರೆ;
ಚದುರೆಯೇನೊ ತಿಳಿಯದು.
ಒಲಿದು ನನ್ನ ಹೃದಯವೆಂತು
"ಇವಳೆ ಸಾಕು" ಎಂದಿತು!

ಹೇಗೆ ಈ ಒಲುಮೆ ಬಂದಿತೋ ಎಂತು ಈ ಸಂಬಂಧ ಬೆಳೆಯಿತೋ ಎನ್ನುವ ಸವಿಮಿಡುಕು 'ಸಂಬಂಧ'ದಲ್ಲಿ ಮೂಡಿದೆ. ಎಷ್ಟೋ ಕನ್ಯೆಯರನ್ನು ನೋಡಿದ್ದರೂ ಅವರಿಗೆ ಮನಸ್ಸು ಮಾರುಹೋಗಲಿಲ್ಲ. ಮಾಯೆಗೆ ಸಿಲುಕಲಿಲ್ಲ. ಆದರೆ ಈಗಲೆಂತೋ

ಏನೋ, ಕಂಡರಿಯದ ಈ ಕನ್ಯೆಗೆ ಹೃದಯದ ಬಾಗಿಲು ತೆರೆದಿದೆ. ಆಗ ಯುವಕನಿಗೆ ಅನಿಸುತ್ತದೆ—

"ನಾನು ನಂಬದ ಕಾರ್ಯವೆಂದು ನಡೆಯಿತು, ನನ್ನ
ಜೀವನದ ಬಗೆಯಿಂದೆ ಹೊಸದಾಯಿತು."

ಇದು ಒಲವಿನ ಜವ್ವನಿಗರ ಸಂದರ್ಶನದ ಚಿತ್ರ—ಕಣ್ಣಿಗೆ ಕಟ್ಟುವಂತಿದೆ. ಒಲುಮೆಯೊಂದಿಗೇ ವಿರಹ ಕೂಡ ಕೂಡಿಕೊಂಡೇ ಬರುತ್ತದೆ. ಗಂಡ ಹೊರಡಬೇಕು. ಹೊರಡುವ ಮನಸ್ಸಿಲ್ಲ. ಕಳಿಸುವ ಇಚ್ಛೆಯೂ ಇಲ್ಲ. ಆದರೆ ವಿಧಿಯಿಲ್ಲ. "ಹೊರಡುವಾಗ" ಕವಿತೆಯ ನಾಲ್ಕು ಸಾಲಿನಲ್ಲಿ ಸ್ಪಷ್ಟ ಸುಂದರ ಚಿತ್ರಣ ಮೂಡಿಬಂದಿದೆ.

"ಹಿರಿಯರಿರುವರೆಂದು ನಾಚಿ ನುಡಿಯಲಾರದವಳ ಕೊರಗು,
ತೆರೆದ ತುಟಿಯ ನಡುಕ, ಇನಿಸು ಬೆವತು ಕೆಂಪಗಾದ ಕೆನ್ನೆ,
ನೀರ ತೆರೆಯ ಹಿಂದೆ ಕಣ್ಣು ಬೀರುತಿರುವ ಬಯಕೆ ನೋಟ;
ಊರಿಗಿದನು ನೋಡಿ ನೋಡಿ ಹೊರಡಲಾರೆ, ನಿಲ್ಲಲಾರೆ!"

ಹೀಗೆಯೇ 'ಹಿಡಿದ ವ್ರತ'ದಲ್ಲಿ ಒಡೆದ ಪ್ರೇಮದ ಚಿತ್ರಣ ಕಾಣುತ್ತದೆ, 'ನಡೆದ ಸಂಗತಿ'ಯಲ್ಲಿ ಅನುಕಂಪ ಹಿರಿದಾಗಿ ಭಾವನೆಯ ಉದ್ವೇಗ ನೇರವಾಗಿ ಮನಸ್ಸನ್ನು ಮುಟ್ಟಿ ಕಡೆಯುತ್ತದೆ. 'ಹೊಲಕಾಯುವ ಚದುರೆ,' 'ಒಲಿದೆನೇಕೆ' 'ಹೂವಿನ ಸರ' 'ನಿರಾಶೆ', 'ಅಗಲಿಕೆ' ಮುಂತಾದ ಎಲ್ಲ ಕವಿತೆಗಳಲ್ಲಿಯೂ ಒಲವಿನ ನೂರುಮುಖ, ಉಲ್ಲಾಸ, ನಿರಾಸೆ ತುಂಬಿದ ಆಸೆ, ನೀರು ತುಂಬಿದ ಕಂಗಳ ನಗೆ, ವಿರಹದ ಸುಖಾಗ್ನಿ ಅಗಲಿಕೆಯಲ್ಲಿ ಹಾಲುಯೆನಿಸುವ ಹಂಬಲಿಕೆ ಇಂತಹ ಭಾವಗಳ ಪ್ರತಿಮೆಗಳು ಕಡೆದಂತೆ ಚಿತ್ರಿತವಾಗಿವೆ.

"ಸನ್ನೆಯಲಿ ಕೆಣಕಿ ಬಳಿಕೋಡಿ ಅಣಕಿಸಿದಂತೆ" ಭಾವನೆ ಪದಪುಂಜದಲ್ಲಿ, ರಸಚಿತ್ರಗಳಲ್ಲಿ ಮಿಣುಕುತ್ತದೆ, ಮಿಂಚುತ್ತದೆ. ಸಹಜ ಸುಂದರವಾದ ಸರಳ ನುಡಿಗಳು ಎದೆತಾಗಿ ಮನಮುಟ್ಟುವಂತೆ ಸಾಲು ಸಾಲಿನಲ್ಲೂ ಕಾಣಿಸಿಕೊಳ್ಳುತ್ತವೆ.

"ಸಾಕು ಸಾಕೀ ಚದುರು; ಮೊದಲೊನಪಿಗೇ ಸೋತು,
ಕಾಣಿಕೆಗೆ ಹೃದಯವನು ತೆತ್ತಿರುವೆನು!"
—ನೇತ್ರ ನಟಿಯರು (ಪುಟ ೨೪)

"ಎಷ್ಟು ಕಷ್ಟದಿಂದ ಸರವ
ಗಟ್ಟಿ ಮನಸುಮಾಡಿ ನನ್ನ
ಬಳಿಗೆ ತಂದಳೊ!

ಪುಟ್ಟ ಮೈಯೊಳೆಷ್ಟು ಒಲವೊ
ಅಳೆಯ ಬಲ್ಲೆನೆ! ,'

—ಹೂವಿನ ಸರ (ಪುಟ ೮)

"ಒಬ್ಬರೊಬ್ಬರನರಿಯಲೆಂದೇ
ಬಂದಿತೇನೀ ಪ್ರೇಮವು?"

—(ಏಕೆ ನಲುಗಿತು ಪುಟ ೩೧)

ಇಂತಹ ಸುಂದರ ಚಿತ್ರಗಳು ಪುಟ ಪುಟದಲ್ಲೂ ಮಿನುಗುತ್ತವೆ. "ನೀವೆಲ್ಲೋ ಹುಟ್ಟಿದಿರಿ, ನಾವೆಲ್ಲೋ ಹುಟ್ಟಿದೆವು, ಯಾವ ಸುಲಗ್ನದಲ್ಲೋ ಇಲ್ಲಿ ಸೇರಿದೆವು" ಎಂಬ ರವೀಂದ್ರನಾಥ ಠಾಕೂರರ ಮಾತನ್ನು ಈ 'ಒಲುಮೆ' ನೆನಪಿಗೆ ತರುತ್ತದೆ. ಇಲ್ಲಿಯ ಪ್ರೇಮಗೀತೆಗಳಲ್ಲಿ ಅತಿ ಉದ್ವೇಗವಾಗಲಿ, ಉದ್ರೇಕವಾಗಲಿ ಇಲ್ಲವೆಂಬುದು ನಿಜ, ಉದ್ರೇಕವಿದ್ದಿದ್ದರೆ ಗೀತಗಳು ಔಚಿತ್ಯ ಮೀರುತ್ತಿದ್ದುವೋ ಏನೋ. ಇಲ್ಲಿ ಭಾವನೆಯನ್ನು ಕಡಿವಾಣ ಹಾಕಿ ನಿಲ್ಲಿಸಿ ಪದಗಳಲ್ಲಿ ಪದುವಿಟ್ಟಿರುವುದರಿಂದಲೇ, ಧ್ವನಿಯಲ್ಲಿಯೇ ಎಲ್ಲ ಸೂಚಿತವಾಗಿದೆ. ಸರಳವಾಗಿ ಸರಸವಾಗಿ ಹೇಳುವ ಪದ್ಧತಿ ಶ್ರೀಕಂಠಯ್ಯನವರದು. ಈ ಸರಳ ಪದ್ಧತಿಯ ಸಾಧನೆಯಲ್ಲಿ ಒಮ್ಮೊಮ್ಮೆ ಗದ್ಯತನ ಮಾತಿನ ಗದ್ಯತನ ಎರಡೂ ಅಲ್ಲಲ್ಲಿ ಕಾಣಿಸಿಕೊಳ್ಳುತ್ತವೆ. ಆದರೆ ಕೃತಿಯ ಒಟ್ಟಿನ ಗುಣಕ್ಕೆ ಇದರಿಂದ ಯಾವ ಕೊರತೆಯೂ ಇಲ್ಲ. ಈ ಕೃತಿಯಲ್ಲಿ ಭಾವನೆಗಳು ಕಚಕುಳಿಯಿಟ್ಟು ನಸುನಗಿಸುವಂತಹ ಮೃದುತೆಯನ್ನು ಪಡೆದಿವೆ. ನವುರಾಗಿವೆ. ಒಮ್ಮೆಗೇ ನೆಲದಿಂದ ಕಾಲುಕಿತ್ತು ಗಾಳಿಯಲ್ಲಿ ತೂರಿಸುವಂತಹ ಉದ್ರೇಕದ ಬಿರುಸಿಲ್ಲ. ಕೆಲವರಿಗೆ ಇದು ಸಪ್ಪೆಯಾಗಿ ಕಾಣಬಹುದು. ಆದರೆ ಇಲ್ಲಿಯ ಮಿಲನ, ವಿರಹ, ದರ್ಶನ, ಅಗಲಿಕೆಗಳ ಗೀತಗಳು ತಮ್ಮಲ್ಲಿ ತುಂಬಿಕೊಂಡಿರುವ ಸಮಾಧಾನ, ಸಾಂತ್ವನ, ಸಂಯಮಗಳಿಂದ, ರಸಚಿತ್ರಣಗಳಿಂದ ಕಾವ್ಯಪ್ರಿಯರಿಗೆ ಹೃದಯಸ್ಪರ್ಶಿಗಳಾಗಿವೆ. 'ಗಾಥಾಸಪ್ತಶತಿ'ಯಿಂದ ಗ್ರೀಕಿನಿಂದ ಮತ್ತು ಇಂಗ್ಲಿಷಿನಿಂದಲೂ ಹಲವು ಅನುವಾದಗಳು ರಸಪೂರ್ಣವಾಗಿ ಬಂದಿವೆ. 'ಒಲುಮೆ' ಗರತಿಯ ಗಾಂಭೀರ್ಯ ಪಡೆದು ಮೌನದಲ್ಲಿ, ಚಿಮುಕುನೋಟದಲ್ಲಿ, ಬರಿಯ ಒಂದು ಕೊಂಕಿನಲ್ಲಿಯೇ ಚೆಲ್ಲಾಟವನ್ನು ಜವ್ವನದ ಬಗೆಯನ್ನು ಸೂಚಿಸುವ ಹೊಸ ವಧುವಿನಂತೆ ತನ್ನದೇ ಆದ ಅದೊಂದು ಚೆಂದ, ಅದೊಂದು ನಯವಿನ್ಯಾಸ, ಒಲುಮೆಯದು.

—ಎಸ್. ಅನಂತನಾರಾಯಣ.

*
* *

ನಿಟ್ಟುಸಿರು (ಕಥಾಸಂಕಲನ)—ಕಥೆಗಾರರು : ಸೂ. ವೆಂ. ಆರಗ; ಪ್ರಕಾಶಕರು : ಕನ್ನಡ ಕುಲ, ವಾಣಿವಿಲಾಸ ರಸ್ತೆ, ಮೈಸೂರು; ಪುಟಗಳು ೧೦೩; ಬೆಲೆ, ಎಂಟಾಣೆ.

'ನಿಟ್ಟುಸಿರು' ಲೇಖಕರ ಮೊದಲನೆಯ ಕಥಾಸಂಕಲನ. "ನಮ್ಮ ಸಮಾಜದಲ್ಲಿ ನನ್ನ ಸುತ್ತಮುತ್ತ ಬದುಕಿ ಬಾಳುತ್ತಿರುವ, ನನ್ನ ಬಾಳಿಗೆ ಸಮೀಪವಾಗಿರುವ ಅಕ್ಕ ತಂಗಿಯರು ಸಮಾಜದ ಕ್ರೂರ ಬಂಧನದಿಂದಾಗಿ ಹಲವು ವಿಧದಿಂದ ನೊಂದು ಬೆಂದು ಬಾಳು ಕಹಿಯೆನಿಸಿ ಬಂಧನದಿಂದ ಹೊರಬರಲಾರದೆ ತೊಳಲುತ್ತಿರುವುದನ್ನು ಕಂಡು ನಾನಿಟ್ಟ ನಿಟ್ಟುಸಿರು ಈ ಕಥಾರೂಪಗಳಲ್ಲಿ ಮೈತಾಳಿದೆ"—ಎಂದು ಲೇಖಕರು ಪೀಠಿಕೆಯಲ್ಲಿ ಹೇಳಿದ್ದಾರೆ. ಈ ಸಂಕಲನವನ್ನು ಓದಿದ ಮೇಲೆ ಈ ಮಾತು ಸಹಜ ವಾದುದು ಎಂದು ಭಾಸವಾಗುತ್ತದೆ. ಹೆಂಗಸಿನ ದುಃಖಕ್ಕೆ ಹಲವಾರು ಕಾರಣಗಳಿವೆ. ಅವುಗಳಲ್ಲಿ ಆರು ಕಾರಣಗಳು ಆರು ಕಥೆಗಳ ರೂಪವನ್ನು ತಾಳಿವೆ. ದಯಾರ್ದ್ರ ಹೃದಯರಾದ ಕಥೆಗಾರರು ಹೆಂಗಸಿನ ಶೋಚನೀಯ ಸ್ಥಿತಿಯನ್ನು ಇವುಗಳಲ್ಲಿ ಮನಗಾಣಿಸಲು ಪ್ರಯತ್ನಪಟ್ಟಿದ್ದಾರೆ.

ಈ ಸಂಕಲನದಲ್ಲಿ ಆರು ಕಥೆಗಳಿವೆ. ಮೊದಲನೆಯ ಕಥೆ 'ಹೆಣ್ಣುಮಗು'ವಿನಲ್ಲಿ ಗರ್ಭಿಣಿ ಸರೋಜ ಹೆಣ್ಣು ಮಕ್ಕಳನ್ನೇ ಹಡೆದು ಮತ್ತೆ ಹೆಣ್ಣು ಮಗುವನ್ನು ಹಡೆದರೆ ಬಡತನ ಬೆನ್ನು ಹತ್ತಿದ ಗಂಡ ಎಲ್ಲಿ ಮುಖ ತಿರುಗುವನೊ ಎಂದು ಶಂಕಿಸಿ ಹುಟ್ಟಿದ ಮಗು ಹೆಣ್ಣೆಂದು ತಿಳಿದು ಗೆಳತಿ ಶೀಲಳೊಡನೆ ತನ್ನ ದುಃಖವನ್ನು ತೋಡಿಕೊಳ್ಳುವಾಗ ಆಕೆಯ ಗಂಡ ನಾಗರಾಜ ಇವರ ಮಾತನ್ನು ಕೇಳಿ ಲಜ್ಜಿತನಾಗಿ ಪಶ್ಚಾತ್ತಾಪಪಟ್ಟು ಪ್ರಸೂತಿ ಗೃಹಕ್ಕೆ ಬಂದು ತಪ್ಪನ್ನು ಒಪ್ಪಿಕೊಂಡು ಸಂತೋಷಪಡುತ್ತಾನೆ. ಸದ್ಯ ಅವರ ಪುಣ್ಯಕ್ಕೆ ಮಗು ಗಂಡಾಗಿತ್ತು. 'ಮನಶ್ಶಾಂತಿ'ಯಲ್ಲಿ ಗಂಡ ಮತ್ತು ತೌರಿನಿಂದ ದೂರವಾದ ಸ್ತ್ರೀಯೊಬ್ಬಳ ಮನಸ್ಸು ಮುರಿದು ಮತ್ತೆ ಶಾಂತಿ ನೆಲೆಸಿದ ರೀತಿ ಚಿತ್ರಿತವಾಗಿದೆ. ಸಕಾಲದಲ್ಲಿ ಮೈನೆರೆಯದ ರತ್ನ ಪತಿಯ ತಿರಸ್ಕಾರಕ್ಕೆ ತುತ್ತಾಗಿ ತಾಯಿಯಿಂದಲೂ ನಿಂದಿತಳಾಗಿ ಅಕ್ಕನ ಆಶ್ರಯದಲ್ಲಿ ಬೀಳುತ್ತಾಳೆ. ಆದರೆ ಅಲ್ಲಿಯೂ ತಾಯಿಯ ಮತ್ತು ಭಾವನ ಕಟೂಕ್ತಿ ಎದೆಯಿರಿಯಲು ಆತ್ಮಹತ್ಯೆ ಮಾಡಿ ಕೊಳ್ಳಲು ಮನಸ್ಸು ಮಾಡಿ ಅಕ್ಕನ ಮಗಳು 'ಆಶಾ'ಳಿಗಾಗಿ ಜೀವಿಸಲು ನಿರ್ಧರಿಸು ವಳು. 'ಶಾಂತಿ' ಎಂಬ ಕಥೆಯಲ್ಲಿ ದೀಪಾವಳಿಯಲ್ಲಿ ಮಾವನ ಮನೆಗೆ ಹೋದ ಕಥೆಗಾರ ತನ್ನ ಮೊದಲನೆಯ ಹೆಂಡತಿ ಶಾಂತಳನ್ನು ಸ್ಮರಿಸಿಕೊಳ್ಳುತ್ತಾ ವಿರಹ ವ್ಯಾಕುಲಿತನಾಗಿ ಎರಡನೆಯ ಹೆಂಡತಿ ಜಯಂತಿಯನ್ನೂ ಶಾಂತಿಯನ್ನೂ ಪರಸ್ಪರ ಹೋಲಿಸಿ ಜಯಂತಿಯನ್ನು ಪ್ರೀತಿಸಲಾರದೆ ತನ್ನ ಮನಸ್ಥಿತಿಯನ್ನು ಆಕೆಯೊಡನೆ ಹೇಳಿ ಆಕೆಯ ಆಲಿಂಗನದಲ್ಲಿ ಸಿಕ್ಕಿ ಶಾಂತಿಯನ್ನು ಮರೆತರೆ 'ಹಿಂದಿನ ಪುಟ'ದಲ್ಲಿ ತಾನೊಲಿದ ಕುಸುಮಳನ್ನು ವಂಚಿಸಿ ಲಲಿತಳನ್ನು ವಿವಾಹವಾದ ಮೂರ್ತಿ ಎಂಟು ವರ್ಷಗಳಾದ ಮೇಲೆ ಕುಸುಮಳನ್ನು ತನ್ನ ಮನೆಯಲ್ಲಿ ಕಂಡು ಪೂರ್ವಸ್ಮೃತಿ

ಕೆರಳಿ ತನ್ನ ತಪ್ಪನ್ನರಿತು ಕುಸುಮಳ ಭಾವಚಿತ್ರದೆದುರು ನಿಂತು ಕ್ಷಮೆ ಕೇಳುವುದು ಮನಮುಟ್ಟುವಂತೆ ಚಿತ್ರಿತವಾಗಿದೆ. ಬೆಳೆದು ನಿಂತ ರತ್ನ ತನ್ನ ಮದುವೆ ನಿಶ್ಚಿತವಾದ ಸಂಭ್ರಮದಲ್ಲಿ ಹಗಲುಗನಸು ಕಾಣುತ್ತಿರುವಾಗ ಕಥೆ ಬೇರೆ ದಾರಿ ಹಿಡಿದು ಮದುವೆ ನಿಂತ ಶೋಕಘಟನೆ 'ಹೊಳೆದ ಮಿಂಚಿ'ನಲ್ಲಿ ನಿರೂಪಿತವಾಗಿದೆ. ರತ್ನ ಮದುವೆ ಮಾಡಿಕೊಳ್ಳಬಹುದಾಗಿದ್ದರೂ ತನ್ನ ಚಾರಿತ್ರವನ್ನು ಶಂಕಿಸಿದವನನ್ನು ಮದುವೆಯಾದರೆ ಮುಂದೆ ಕಷ್ಟ ಅನುಭವಿಸಬೇಕಾಗುತ್ತದೆಯೆಂದುಕೊಂಡು ಮದುವೆಯಾಗಲು ನಿರಾಕರಿಸಿದ ದಿಟ್ಟತನ ಮೆಚ್ಚುವಂತಹುದು. ಕೊನೆಯ ಕಥೆಯಾದ 'ಒಡೆದ ಕನಸಿ'ನಲ್ಲಿ ಚಲನಚಿತ್ರವನ್ನು ನೋಡಲಾಗದ ಅರುಂಧತಿ ಅತ್ತೆಯ ಕಿರುಕುಳವನ್ನು ತಾಳಲಾರದೆ ಬೇರೆ ಸಂಸಾರ ಹೂಡಿ ಪುಟ್ಟ ಶಿಶುವಿನೊಡನೆ ಸುಖಸಾಗರದಲ್ಲಿ ಈಜತೊಡಗಿದ್ದಾಗ 'ಅಲಾರಂ'ನಿಂದ ಎಚ್ಚರಗೊಂಡು ನಿರಾಶಳಾಗಿ ದಿನದ ದುಡಿಮೆಗೆ ಹೊರಟ ಶೋಕಪೂರ್ಣ ಚಿತ್ರವಿದೆ.

'ಶಾಂತಿ'ಯನ್ನು ಬಿಟ್ಟು ಉಳಿದ ಕಥೆಗಳಲ್ಲಿ ಸ್ತ್ರೀಯರ ನೋವು ಮತ್ತು ಕಹಿಬಾಳು ಪ್ರಧಾನವಾಗಿ ಬಂದಿದೆ. 'ಶಾಂತಿ'ಯಲ್ಲಿ ಒಲಿಯದ ಗಂಡನಿಂದ ಬೆಂದ ಜಯಂತಿಯ ದುಃಖ ಇಂಗಿತವಾಗಿದೆ. ಗಂಡನ ಎದೆದುಗುಡವನ್ನರಿಯದ ಮುಗ್ಧೆ ಜಯಂತಿ ಮುಂದೆ ಅವನಿಗೆ ಅನುಕೂಲಳಾಗಿ ವರ್ತಿಸುವಳು. ಕಥಾವಸ್ತು ವಾಸ್ತವ ಜೀವನಕ್ಕೆ ಸಮೀಪವಾಗಿವೆ. ವಸ್ತುವಿನಲ್ಲಿ ವೈವಿಧ್ಯತೆ ಇಲ್ಲದಿರುವುದು ಒಂದು ಕೊರತೆ, ಹೆಣ್ಣಿನ ಎದೆಹೊಕ್ಕು ಪರಿಶೀಲಿಸುವ ಸೂಕ್ಷ್ಮ ದೃಷ್ಟಿ ಲೇಖಕರಿಗಿದೆ. ಯಾವ ಚಿತ್ತಾಕರ್ಷಕವಾದ, ಪಾತ್ರವಾಗಲಿ ಸನ್ನಿವೇಶವಾಗಲಿ ರಚಿತವಾಗದಿದ್ದರೂ ಕಥೆಗಳು ಚೆನ್ನಾಗಿವೆ. ಪ್ರತಿ ಕಥೆಯಲ್ಲಿ ಮೂರು ನಾಲ್ಕು ಪಾತ್ರಗಳು ಬರುತ್ತವೆ, ಎಲ್ಲ ಚಿಕ್ಕ ಕಥೆಗಳು. ಪಾತ್ರ ನಿರೂಪಣೆ ಮತ್ತು ಸಂಭಾಷಣೆ ಚೆನ್ನಾಗಿವೆ. ಶೈಲಿ ಸರಳವಾಗಿ ಸಹಜವಾಗಿದೆ. ಪುಸ್ತಕವನ್ನು ಒಮ್ಮೆ ಬೇಸರವಿಲ್ಲದೆ ಓದಿ ಮುಗಿಸಬಹುದು. ಕಥಾಭ್ಯಾಸವನ್ನು ಮುಂದುವರಿಸಿ ಮುಂದೆ ಹೃದಯಂಗಮವಾದ ಕಥೆಗಳನ್ನು ನೀಡಲೆಂದು ಹಾರೈಸುತ್ತೇನೆ.

—ಸೋ. ಕೆಂ. ರಾಮಣ್ಣ

* * *

ಅಭಿಸಾರಿಕೆ—ಲೇಖಕರು : ಪುಟ್ಟಸ್ವಾಮಯ್ಯ ಅವರು ; ಪ್ರಕಾಶಕರು : ಪ್ರತಿಭಾ ಪ್ರಕಾಶನ, ೬೧೪ ಅರಳೇಪೇಟೆ, ಬೆಂಗಳೂರು ೨ ; ನ್ಯೂಸ್‌ಪ್ರಿಂಟ್ ಕಾಗದ, ೨೪೮ ಪುಟಗಳು ; ಬೆಲೆ, ರೂ. ೧-೪-೦.

ವೇಶ್ಯಾಜೀವನದ ಚಿತ್ರಗಳು ಇತ್ತೀಚಿನ ಅನೇಕ ಕಾದಂಬರಿಗಳ ಆಧಾರಗಳಾಗಿವೆ. ಆದರೆ ಇಂಥ ಒಂದು ದೃಷ್ಟಿ—ಅಂದರೆ ವೇಶ್ಯೆಯಾದವಳೂ ಮದುವೆಯಾಗಿ ನೆಮ್ಮದಿಯ ಜೀವನಮಾಡಲಿಕ್ಕೆ ಸಾಧ್ಯವೇ ?—ಬೇರೆಡೆ ಕಂಡುಬರುವುದಿಲ್ಲ. ಹಾಗೂ ಈ ಪ್ರಯತ್ನ ವಾತಾವರಣದ ಕಲುಷತೆಯಿಂದಲೋ ಅಥವಾ ಹಿಂದಿನ ವಾಸನಾ ಬಲದಿಂದಲೋ ಲತಾಂಗಿಯು ಓದಿದ ಆಧುನಿಕ ಯುವತಿಯಾದರೂ ಮತ್ತೆ ಕಾಮದ ಕಡೆಗೇ ಬಲಿಯಾಗುತ್ತಾಳೆ. ಆಕೆಯ ಗಂಡ ಮಂಗೇಶನೂ ವೇಶ್ಯಾಕುಲೋತ್ಪನ್ನನೇ. ಆತನೇ ತಲೆಹಿಡುಕನಾಗುವುದನ್ನು ಕಂಡು, ಪದ್ಮಳ ಸಹಕಾರದಿಂದ ಪ್ರತಿಭಟಿಸುತ್ತಾಳೆ. ಮತ್ತೆ ಆಕೆಯ ತಾಯಿ ರತ್ನಮ್ಮ ತನ್ನ ವೃತ್ತಿಯನ್ನೇ ಮಗಳಲ್ಲೂ ಮುಂದುವರಿಸಬೇಕೆಂದು ಸನ್ಮಾರ್ಗಿಯಾದ ಮಗಳನ್ನು ಮನಸ್ಸು ತುಂಡರಿಸುವಂತೆ ದೋಷಾರೋಪಣೆಮಾಡಿ ಜೋಶಿಯೊಡನೆ ಇಲ್ಲದ ಸಂಬಂಧದ ಬಗ್ಗೆ ಚುಚ್ಚುಮಾತಾಡುತ್ತಿರುತ್ತಾಳೆ. ಈ ಕಿರುಕುಳವೇ ಆಕೆಯ ಜೀವನವನ್ನು ತಮ್ಮ ತಮ್ಮ ವಂಶವೃತ್ತಿಯೆಡೆಗೆ ಒಯ್ಯುತ್ತದೆ. ಆದರೆ 'ಜೋಶಿ' ಆಕೆಯನ್ನು ಪಡೆಯಲು ಇಚ್ಛೆ ಇದ್ದೂ ಧರ್ಮ ಮತ್ತು ಕಾನೂನಿನ ದೃಷ್ಟಿಯಿಂದ ಅಹಿತವಾದ್ದೆಂದು ಆಕೆಗೆ ತಿಳಿಸಿ ಮತ್ತೆ ಸನ್ಮಾರ್ಗಕ್ಕೆ ಒಯ್ಯುತ್ತಾನೆ. ಆತನೇನೋ ಹಿಂದೆ ಮೈಸೂರಿನಲ್ಲಿ ಅಂಬುಜಮ್ಮನ ಮನೆಯಲ್ಲೇ ಆಕೆಯನ್ನು ನೋಡಿ ಮೋಹಿಸಿದ್ದ. ಅಂತೆಯೇ ತನ್ನ 'ವಿಶ್ವಾಮಿತ್ರ' ಪತ್ರಿಕೆಯಲ್ಲಿ 'ಮಹಿಳಾ ಮತ್ತು ಮಕ್ಕಳ ಪುಟ'ಗಳ ಸಂಪಾದಕಿಯನ್ನಾಗಿಮಾಡಿ ಆಕೆಗೆ ಜೀವನವನ್ನು ಸರಳವಾಗಿಸಿದ್ದ. ಅಂತೆಯೇ ಲತಾಂಗಿಗೂ ಆತನಲ್ಲಿ ಆತ್ಮಸಮರ್ಪಣೆ ಮಾಡಿಕೊಳ್ಳುವಷ್ಟು ಶ್ರದ್ಧಾಭಕ್ತಿಗಳಿದ್ದುವು. ಮನೆಯಲ್ಲಿ ಕಿರುಕುಳ, ಮನಸ್ಸಿನಲ್ಲಿ ಚಿಂತೆ. ಹೊರಗೂ ಶಾಂತಿ ಅಷ್ಟಕ್ಕಷ್ಟೇ. ಹೀಗಿರುವಾಗ ಮದ್ರಾಸಿನಲ್ಲಿ ನಡೆಯಲಿದ್ದ 'ಭಾರತ ರಾಜಕೀಯ ಸರ್ವಪಕ್ಷಪರಿಷತ್ತಿನ ವಾರ್ಷಿಕಾಧಿವೇಶನ'ಕ್ಕೆ ಪತ್ರಿಕೆಯ ಪ್ರತಿನಿಧಿಯಾಗಿ ಜೋಶಿಯಿಂದಲೇ ಕಳಿಸಲ್ಪಟ್ಟಳು. ಅಲ್ಲಿಯಾದರೂ ನಾಲ್ಕು ದಿನ ಶಾಂತಜೀವನದ ಸವಿ ಸಿಗಬಹುದೆಂದು ಹೋಗುವಾಗ ಪದ್ಮ ಅವಳಿಗೆ ಅನುರೂಪ ಪ್ರಿಯ ಸಿಕ್ಕಲೆಂದು ಹಾರೈಸಿದ್ದಳು. ಅವಳ ಹಾರೈಕೆಯಂತೆ ಮುಂದಿನ ಘಟನೆಗಳೂ ನಡೆದವು. ಅಂತೆಯೇ ಅವಳೂ ತನ್ನ ಸ್ನೇಹಿತೆಯ ಪತಿ ಮತ್ತು ತನ್ನ ಹಿಂದಿನ ಸಹಪಾಠಿ ರಮೇಶ್, ಸಹ ಪ್ರೀತಿಗೆ ಒಳಗಾಗಿ ಅಂದು ರಾತ್ರಿ ಮದ್ರಾಸ್ ಜೀವನದ ಸುಖಮಯ ವಾತಾವರಣಕ್ಕೆ ತನ್ನ ಶೀಲದ ಬಲಿಯ ನಾಂದಿ ಹಾಡುತ್ತಾ ಅಭಿಸಾರಿಕೆಯಾಗಿ ಅವನ ಹತ್ತಿರ ಹೋದಳು. ಅಲ್ಲಿನ ಜೀವನ ಅವಳ ದೃಷ್ಟಿಯಲ್ಲಿ ಮಧುರವೇ. ಸನ್ನಿವೇಶವೂ ಸಹಾಯಕವಾಗಿಯೇ ಇತ್ತು. ಆದರೆ ಸಮಾಜ ಇದನ್ನು ಏನನ್ನಬೇಕು? ಈ ಬಗ್ಗೆ

ಉತ್ತರವಿಲ್ಲ. ಹೇಗಾದರೂ ಲತಾಂಗಿ ಒಂದು ಬಗೆಯ ವಿಶಿಷ್ಟ ವ್ಯಕ್ತಿತ್ವಹೊಂದಿದ ಸುಂದರಕೃತಿ. ಜೋಶಿ ಸುಹೃಜನ. ಪದ್ಮಾ, ಭಾರತನಾರಿಯ ಆದರ್ಶವಾಗದೆ ಮಿಶ್ರ ಸಂಸ್ಕೃತಿಯ ವಿಚಿತ್ರ ಹುಡುಗಿ. ಮಾರ್ದವಕ್ಕಿಂತ ಕಾಠಿನ್ಯವೇ ಹೆಚ್ಚು. ಒಟ್ಟಿನಲ್ಲಿ ಕಾದಂಬರಿ ಓದಲು ಅರ್ಹವಾಗಿದೆ.

*
* *

ಪ್ರಚಂಡ ಚಾಣಿಕ್ಯ—ಲೇಖಕರು : ಪುಟ್ಟಸ್ವಾಮಯ್ಯ ಅವರು ; ಪ್ರಕಾಶಕರು : ಪ್ರತಿಭಾ ಪ್ರಕಾಶನ, ಕಾಟನ್ ಪೇಟೆ, ಬೆಂಗಳೂರು ೨ ; ನ್ಯೂಸ್‌ಪ್ರಿಂಟ್ ಕಾಗದ ; ಪುಟಗಳು ೧೫೬ ; ಬೆಲೆ, ರೂ. ೦-೧೨-೦.

ಪ್ರಸಿದ್ಧ ವಂಗ ನಾಟಕಕಾರ ದ್ವಿಜೇಂದ್ರಲಾಲ್‌ರಾಯರ 'ಚಂದ್ರಗುಪ್ತ' ಎಂಬ ನಾಟಕದ ಆಧಾರವೇ ಈ ಕೃತಿಯ ಸೃಷ್ಟಿಗೆ ಮೂಲ. ಮೂಲ ಲೇಖಕರ ವಿಷಯ ಏನೂ ಹೇಳುವ ಅವಶ್ಯಕತೆ ಕಂಡುಬರುವುದಿಲ್ಲ. ಅವರ ಅನೇಕ ನಾಟಕಗಳು ಹಲವಾರು ಭಾಷೆಗಳಲ್ಲಿ ಅನುವಾದಿತವಾಗಿ ಸರ್ವಪ್ರಿಯವಾಗಿರುವುದೇ ಅವರ ಪ್ರತಿಭಾ ಸಂಪನ್ನ ವ್ಯಕ್ತಿತ್ವಕ್ಕೆ ದ್ಯೋತನರೂಪ. ದ್ವಿಜೇಂದ್ರರ ನಾಟಕಗಳು ರಂಗಭೂಮಿಗೆ ಅಳವಡುವಂಥವೂ, ಪಾತ್ರಗಳು ತಮ್ಮವೇ ವಿಶಿಷ್ಟ ಚಾರಿತ್ರ ಬಲವುಳ್ಳವೂ, ಸನ್ನಿವೇಶ ಗಳು ಯುಕ್ತವಾದವೂ, ಕಥಾನಕ ಪದಜೋಡಣೆಗಳು ಆಕರ್ಷಣೀಯವಾದವೂ ಆಗಿರುತ್ತವೆ. ಇದಲ್ಲದೆ ಹೆಜ್ಜೆ ಹೆಜ್ಜೆಗೆ ಅವರಲ್ಲಿದ್ದ ಬಿಂಬಗ್ರಾಹಿತ್ವವೂ ಪಾತ್ರರಚನೆಯಲ್ಲಿ ಅದರ ಉಪಯೋಗವು ಸಾರ್ಥಕ್ಯ ಪಡೆದಿರುವುದೂ ಕಂಡುಬರುತ್ತದೆ. ಹೀಗೆ ನವವೋನ್ಮೇಷಶಾಲಿನೀ ಪ್ರತಿಭಾನ್ವಿತರೂ, ಕ್ರಾಂತದರ್ಶಿಗಳೂ ಆದ ಅಂತಹ ಸಾಹಿತಿಗಳ ಕೃತಿಗಳನ್ನು ಅನುವಾದ ಅಥವಾ ರೂಪಾಂತರ ರೂಪಗಳಲ್ಲಿ ಕನ್ನಡಿಗರಿಗೂ ಒದಗಿಸಿಕೊಟ್ಟು ಮಾನವಸ್ವಭಾವದ ಪರಿಚಯದ ಅನುಭವವು ಪೂರ್ಣವಾಗುವಂತೆ ಮಾಡಬೇಕಾಗಿರುವುದು ಪ್ರಸ್ತುತ ಲೇಖಕರಂತಹವರ ಸ್ತುತ್ಯಕಾರ್ಯ. ಇಂಥದೇ ಆದಾನಪ್ರದಾನ, ಪರಸ್ಪರ ವಿನಿಮಯವೇ ಹೃದಯವೈಶಾಲ್ಯಕ್ಕೂ, ವಿಶ್ವಬಂಧುತ್ವಕ್ಕೂ, ಮಾನವತೆಯ ಪ್ರಭಾವಪೂರ್ಣ ಪ್ರಸಾರಕ್ಕೂ ಮುನ್ನುಡಿ.

ನಾಟಕವು ವಸ್ತುನಿರ್ದೇಶನ, ಪಾತ್ರರಚನೆ, ಸಂಭಾಷಣಾಕೌಶಲ, ಭಾವ ಪ್ರದರ್ಶನಗಳಿಂದಲೂ ಚಂದ್ರಗುಪ್ತ, ಮುರಾ, ಛಾಯಾ—ಮುಂತಾದವರ ಚರಿತ್ರೆ ಗಳಿಂದಲೂ ಶೋಭಿತವಾಗಿದೆ. ಇಂತಹ ಪ್ರಯತ್ನಗಳು ವಿಪುಲವಾಗಿ ನಡೆದು ಸಾಹಿತ್ಯಕೃಷಿ ಹೇರಳವಾಗಲೆಂದೇ ಹಾರೈಕೆ.

'ಜಯದೇವ' ಮೊದಲಾದ ನಾಟಕಗಳನ್ನು ಕನ್ನಡಿಗರಿಗೆ ಈ ಮೊದಲೇ ನೀಡಿ ಪುಟ್ಟಸ್ವಾಮಯ್ಯನವರು ಅಭಿನಂದನಾರ್ಹರಾಗಿದ್ದಾರೆ.

—ಮಾ. ದೇವೇಗೌಡ

ನೌಕಾಘಾತ—ಲೇಖಕ: ರವೀಂದ್ರನಾಥ ಠಾಕೂರ್; ಅನುವಾದಕಿ: ಎಚ್. ವಿ. ಸಾವಿತ್ರಮ್ಮ; ಪ್ರಕಾಶಕರು: ಕಾವ್ಯಾಲಯ, ಮೈಸೂರು; ಪುಟಗಳು ೨೩೧; ಬೆಲೆ, ರೂ. ೧-೪-೦.

ಇದು ವಿಶ್ವಕವಿ ರವೀಂದ್ರನಾಥ ಠಾಕೂರರ 'ದಿ ರೆಕ್' (The Wreck) ಎಂಬ ಕಾದಂಬರಿಯ ಅನುವಾದ. 'ಮುಳುಗಿದ ದೋಣಿ' ಎಂಬ ಹೆಸರಿನಲ್ಲಿ ರವೀಂದ್ರರ ಈ ಕಾದಂಬರಿಯ ಇನ್ನೊಂದು ಅನುವಾದ ಈಗಾಗಲೇ ಬಂದಿತ್ತು. ಮಹಾಕವಿಯ ಒಂದು ಕೃತಿ ಹಲವು ಅನುವಾದಗಳ ಮೂಲಕ ಹೆಚ್ಚು ಹೆಚ್ಚು ಪ್ರಚಾರಕ್ಕೆ ಬರುವುದರಿಂದ ಲಾಭವೇ ಹೊರತು ನಷ್ಟವೇನಿಲ್ಲ. ಆದುದರಿಂದ ಶ್ರೀಮತಿ ಸಾವಿತ್ರಮ್ಮನವರ ಈ ಪ್ರಯತ್ನವೂ ಸಾರ್ಥಕವಾದುದೇ ಆಗಿದೆ. ರವೀಂದ್ರನಾಥ ಠಾಕೂರರು (೧೮೬೧-೧೯೪೨) ಬಂಗಾಳದ ಪ್ರಸಿದ್ಧ ಕವಿಗಳಷ್ಟೇ ಅಲ್ಲ ಅವರು ವಿಶ್ವಕವಿಗಳು. ಅಷ್ಟೇ ಅಲ್ಲ ಅವರು ವಿಖ್ಯಾತ ನಾಟಕಕಾರರು, ಕಥೆಗಾರರು, ಕಾದಂಬರಿಕಾರರೂ ಆಗಿದ್ದಾರೆ. ಆದರೆ ಅವರ ಕಾವ್ಯಗುಣ ಅವರ ಕೃತಿಗಳಲ್ಲೆಲ್ಲಾ ಮೆರೆಯುತ್ತಿರುವುದರಲ್ಲಿ ಸಂಶಯವಿಲ್ಲ. 'ನೌಕಾಘಾತ'ದಲ್ಲೂ ಕೂಡ ಅದನ್ನು ಕಾಣುತ್ತೇವೆ. 'ನೌಕಾಘಾತ' ಅವರ ಶ್ರೇಷ್ಠ ಕೃತಿಯಲ್ಲದೇ ಇದ್ದರೂ ಅದೊಂದು ಕುತೂಹಲಾತ್ಮಕವಾದ ಓದುಗರ ಮನಸ್ಸನ್ನು ರಮಿಸುವ ಒಂದು ಕಾದಂಬರಿ.

ಮದುವೆಯನ್ನು ಮುಗಿಸಿಕೊಂಡು ಎಲ್ಲರೂ ದೋಣಿಗಳಲ್ಲಿ ಊರಿಗೆ ಹೊರಟರು. ಅಕಸ್ಮಾತ್ತಾಗಿ ಎದ್ದ ಬಿರುಗಾಳಿಯ ಹೊಡೆತಕ್ಕೆ ದೋಣಿಗಳು ಸಿಕ್ಕಿ ಎಲ್ಲರೂ ನೀರಿನ ಪಾಲಾದರು. ರಮೇಶನಿಗೆ ಜ್ಞಾನ ಬಂದಾಗ ಒಂದು ಮರಳು ದಿಣ್ಣೆಯ ಮೇಲೆ ಬಿದ್ದಿದ್ದನು. ಮಬ್ಬು ಹರಿದು ಬೆಳುದಿಂಗಳು ನದಿಯ ದಡದ ಮರಳನ್ನು ಆವರಿಸಿತ್ತು. ಹಿಂದಿನದೆಲ್ಲವೂ ನೆನಪಾಗುತ್ತಲೇ ಉಳಿದ ಜನರನ್ನು ಹುಡುಕುತ್ತ ಬರುವಾಗ ತನ್ನದೇ ರೀತಿಯಲ್ಲಿ ಅಪಘಾತಕ್ಕೆ ಒಳಗಾಗಿ ದಡದ ಮೇಲೆ ಎಚ್ಚರ ತಪ್ಪಿ ಬಿದ್ದಿದ್ದ ಕಮಲೆಯನ್ನು ಕಂಡನು. ಅವಳು ತೊಟ್ಟಿದ್ದ ವಧುವಿನ ಕೆಂಪು ವಸ್ತ್ರಗಳನ್ನು ಕಂಡು ಅವಳೇ ತನ್ನ ಹೆಂಡತಿಯೆಂದು ಭಾವಿಸಿದನು. ಪ್ರಕೃತಿಯ ಆ ಮೌನ ವಾತಾವರಣದಲ್ಲಿ ಕಮಲೆಯ ಸೌಂದರ್ಯ ರಮೇಶನ ಮನಸ್ಸನ್ನು ಸೂರೆಗೊಂಡಿತು. ಕಮಲೆಯೂ ಕೂಡ ರಮೇಶನೇ ತನ್ನ ಪತಿಯೆಂದು ಭಾವಿಸಿದಳು. ರಮೇಶ ಕಮಲೆಯನ್ನು ಕರೆದುಕೊಂಡು ತನ್ನ ಹಳ್ಳಿಗೆ ಬಂದನು. ಸತ್ತವರ ಸಂಸ್ಕಾರಗಳನ್ನು ಮುಗಿಸಿ ಕಮಲೆಯನ್ನು ಪ್ರೀತಿಸಲು ತೊಡಗುವಾಗ ಕಮಲೆ ತನ್ನ ಹೆಂಡತಿಯಲ್ಲವೆಂದೂ ಬೇರೊಂದು ಮದುವೆಯ ಗುಂಪಿಗೆ ಸೇರಿದವಳಾಗಿದ್ದು ಬಿರುಗಾಳಿಯ ಏಟಿಗೆ ಸಿಕ್ಕಿ ತನ್ನಂತೆ ಅಪಘಾತದಿಂದ ಪಾರಾಗಿ ಬಂದಿದ್ದಿರಬೇಕೆಂದೂ ತಿಳಿಯುವುದು. ಇದು ಕಮಲೆಗೆ

ತಿಳಿಯದು. ಈಗ ರಮೇಶ ಸಂಕಟದಲ್ಲಿ ಸಿಕ್ಕಿಕೊಂಡನು. ತನ್ನ ಹೆಂಡತಿಯಲ್ಲದವಳನ್ನು ಹೆಂಡತಿಯೆಂದು ಸ್ವೀಕರಿಸುವುದು ಹೇಗೆ? ಇದು ಅವನ ಮನಸ್ಸಿಗೆ ಒಪ್ಪಿಗೆಯಲ್ಲ ಮತ್ತು ಸಮಾಜಕ್ಕೆ ವಿರೋಧ. ಆದರೆ ಕಮಲೆಯನ್ನು ಯಾರಿಗೆ ಒಪ್ಪಿಸುವುದು? ಅವಳ ಪತಿ ಬದುಕಿದ್ದಾನೆಯೋ ಇಲ್ಲವೋ? ಬದುಕಿದ್ದರೆ ಜನರ ಕಣ್ಣಿಗೆ ತಾವು ಗಂಡ ಹೆಂಡಿರಂತೆ ಇರುವಾಗ ಆತನು ಕಮಲೆಯನ್ನು ಸ್ವೀಕರಿಸುವನೇ? ಇಂಥ ವಿಚಿತ್ರ ಆಲೋಚನೆಗಳು ಅವನ ಮನಸ್ಸನ್ನು ಕಾಡುತ್ತಿರುವಾಗ ಆ ಹಳ್ಳಿಯನ್ನು ಬಿಟ್ಟು ಕಲ್ಕತ್ತೆಗೆ ರಮೇಶ ಬಂದನು. ಕಮಲೆಯನ್ನು ಸ್ಕೂಲಿಗೆ ಸೇರಿಸಿದುದರಿಂದ ಕೆಲವು ಕಾಲ ಅವಳನ್ನು ದೂರವಿಟ್ಟಿರುವುದು ಸಾಧ್ಯವಾಯಿತು. ಮೊದಲು ಆನಂದಬಾಬುವಿನ ಮಗಳು ಹೇಮನಳಿನಿಯ ಕಡೆಗೆ ಆಕರ್ಷಿತನಾಗಿದ್ದ ರಮೇಶನಿಗೆ ಹೇಮನಳಿನಿಯನ್ನು ಪ್ರೀತಿಸುವ ಅವಕಾಶ ಸಿಕ್ಕಿತು. ಕಮಲೆ ಹೇಗಿದ್ದರೂ ತನ್ನ ಹೆಂಡತಿಯಲ್ಲವಾದ್ದರಿಂದ ಅವನಿಗೆ ಯಾವ ಭಯವೂ ಇರಲಿಲ್ಲ. ಹೇಮನಳಿನಿ ರಮೇಶರ ಮದುವೆಯು ನಿಶ್ಚಯ ವಾಯಿತು. ಮದುವೆಯಾದ ಮೇಲೆ ಹೇಮನಳಿನಿಗೆ ಎಲ್ಲ ವಿಷಯಗಳನ್ನೂ ತಿಳಿಸಿ ಕಮಲೆಗೂ ತಿಳಿಸಿದರೆ ಎಲ್ಲವೂ ಸರಿಹೋಗುತ್ತದೆ, ಗತಿಯಿಲ್ಲದ ಕಮಲೆ ಹೇಗೋ ಹೇಮನಳಿನಿಯ ಆಶ್ರಯದಲ್ಲಿ ಬದುಕಿರುತ್ತಾಳೆ ಎಂಬುದು ರಮೇಶನ ಭಾವನೆಯಾಗಿದ್ದಿತು. ಇನ್ನೇನು ಮದುವೆ ಎರಡು ದಿವಸಗಳಿವೆ ಎನ್ನುವಾಗ ಪರಿಸ್ಥಿತಿ ಇದ್ದಕ್ಕಿದ್ದಂತೆ ಬಿಗಡಾಯಿಸುತ್ತದೆ. ಪೂಜಾರಜಾ ಕಾಲದಲ್ಲಿ ಕಮಲೆಯನ್ನು ಸ್ಕೂಲಿನಲ್ಲೇ ಇಟ್ಟಿರಬೇಕೆಂಬ ರಮೇಶನ ಏರ್ಪಾಡು ತಲೆಕೆಳಕಾಗಿ ಕಮಲೆಯು ಸ್ಕೂಲಿನಿಂದ ಶನಿವಾರ ಮನೆಗೆ ಬರತಕ್ಕವಳಾದಳು. ಭಾನುವಾರವೇ ಮದುವೆ. ಏನುಮಾಡಬೇಕು ಎಂದು ತಿಳಿಯದೆ ಮದುವೆಯನ್ನು ಮುಂದುಹಾಕಲು ರಮೇಶ ಕೇಳಿಕೊಂಡನು. ಸಂತೋಷ ಉತ್ಸಾಹಗಳಿಂದ ತುಂಬಿದ್ದ ಮನೆಯನ್ನು ಚಿಂತೆಯಾವರಿಸಿತು. ರಮೇಶನ ಪ್ರತಿಸ್ಪರ್ಧಿಯಾಗಿದ್ದ ಅಕ್ಷಯನಿಗೆ ಮೂಲಕಾರಣವನ್ನು ಬೆದಕುವ ಕುತೂಹಲ. ಈ ಸಮಯಕ್ಕೆ ಸರಿಯಾಗಿ ಆನಂದಬಾಬುವಿನ ಮಗ ಜೋಗೇಂದ್ರನೂ ಬಂದು ಸೇರಿದನು. ಜೋಗೇಂದ್ರ ಅಕ್ಷಯನಿಗೆ ಅನುಕೂಲವಾದನು. ರಮೇಶ ಕಮಲೆಯರು ಒಟ್ಟಿಗೆ ಇರುವುದನ್ನು ಶನಿವಾರ ಜೋಗೇಂದ್ರ ಅಕ್ಷಯರು ಕಂಡುಹಿಡಿದು ಮನೆಗೆ ಬಂದು ರಮೇಶನ ಹೆಂಡತಿ ಕಮಲೆಯ ವಿಚಾರವನ್ನು ಹೇಳಿ ಮದುವೆಯನ್ನು ಮುಂದು ಹಾಕಿದರು.

ಕಮಲೆಯನ್ನು ತನ್ನ ಹಳ್ಳಿಗೆ ಕರೆದುಕೊಂಡುಹೋಗಿ ಬಿಟ್ಟು ಬಂದು ಹೇಮನಳಿನಿಯನ್ನು ಮದುವೆಯಾಗಿ ಎಲ್ಲ ವಿಷಯವನ್ನೂ ಹೇಳಿಬಿಟ್ಟರೆ ತನ್ನ ಮೇಲೆ ಯಾವ ಸಂಶಯವೂ ಇರುವುದಿಲ್ಲ ಎಂದು ಭಾವಿಸಿದ್ದ ರಮೇಶನ ದಾರಿ ತೊಡಕಿನದಾಯಿತು.

ಕಮಲೆಯನ್ನು ಕರೆದುಕೊಂಡು ರೈಲಿಗೆ ಹೊರಟರೆ ಅಕ್ಷಯ ಅಲ್ಲಿಯೂ ಇವರನ್ನು ಹಿಂಬಾಲಿಸಬೇಕೆ? ಗೋಲ್ಕಂಡದಲ್ಲಿ ರೈಲನ್ನು ಇಳಿದು ಬೇರೆ ಏನನ್ನೂ ಯೋಚಿಸದೆ ಪ್ರಯಾಣಕ್ಕೆ ಸಿದ್ಧವಾಗಿ ನಿಂತಿದ್ದ ಪಶ್ಚಿಮದ ಕಡೆಗೆ ಹೋಗುವ ಹಡಗನ್ನು ರಮೇಶ ಹತ್ತಿದನು. ಅಕ್ಷಯ ರಮೇಶನ ನೆಲೆಯನ್ನು ತಿಳಿಯಲಾರದೆ ಕಲ್ಕತ್ತೆಗೆ ಹಿಂದಿರುಗಿದನು. ಎಲ್ಲಿ ಇಳಿಯಬೇಕೆಂಬ ನಿಶ್ಚಯವಿಲ್ಲದೆ ನಿಧಾನವಾಗಿ ಸಾಗುತ್ತಿದ್ದ ಹಡಗಿನ ಮೇಲೆ ರಮೇಶನ ಮನಸ್ಸಿನಲ್ಲಿ ಚಿಂತೆ ಆರಂಭವಾಗುವುದು. ಕಮಲೆಯ ಪತಿಯ ವಿಷಯವು ಎಷ್ಟು ಪತ್ತೆಮಾಡಿದರೂ ತಿಳಿಯದೆ ಹೋಗಿರುವಾಗ ಕಮಲೆಯನ್ನು ಏನುಮಾಡು ವುದು? ಅವಳಿಗೆ ಎಲ್ಲ ವಿಷಯವನ್ನೂ ತಿಳಿಸಿ ಬಿಟ್ಟುಬಿಡುವುದೆ? ಛೆ! ಅವಳು ರಮೇಶ ನನ್ನು ಪತಿಯೆಂದೇ ನಂಬಿರುವಾಗ ಹಾಗೆ ಮಾಡುವುದುಚಿತವಲ್ಲ. ಬರಬರುತ್ತ ಹೇಮನಳಿನಿಯನ್ನು ಮರೆತು ಕಮಲೆಯನ್ನೇ ಸ್ವೀಕರಿಸಬೇಕೆಂಬ ನಿರ್ಧಾರ ಅವನಲ್ಲಿ ಮೂಡಿತು. ಹಡಗಿನಲ್ಲಿ ಪರಿಚಯವಾದ ಮಾವ ತ್ರೈಲೋಕ್ಯ ಚಕ್ರವರ್ತಿ ಅವರನ್ನು ಘಾಸೀಪುರದ ತನ್ನ ಮನೆಗೆ ಕರೆದುಕೊಂಡು ಹೋದನು. ಬೇರೊಂದು ಮನೆ ಮಾಡಿ ಅಲ್ಲಿ ಇಬ್ಬರೂ ಸಂಸಾರ ಮಾಡಲು ಸಿದ್ಧತೆಗಳಾದಾಗ ತನ್ನ ಪತಿ ರಮೇಶನಲ್ಲವೆಂಬ ಅಂಶ ಕಮಲೆಗೆ ತಿಳಿಯಿತು. ಅಲಹಾಬಾದಿನಿಂದ ರಮೇಶನು ಕಮಲೆಯ ಪ್ರೇಮವನ್ನು ಯಾಚಿಸಿ ಬರೆದಿದ್ದ ಪತ್ರವು ಕಮಲೆಯ ಕೈಸೇರಿ ಪತಿಯಲ್ಲದವನೊಡನೆ ಬಾಳಬೇಕೆಂಬ ಅಸಹ್ಯ ಭಾವನೆಯಿಂದ ದುಃಖಿತಳಾಗಿ ಮನೆಬಿಟ್ಟು ಹೊರಟುಹೋದಳು. ರಮೇಶನ ಹಾದಿಯಿಂದ ಕಮಲೆ ಹೊರಟುಹೋದಮೇಲೆ ಅವನು ಪುನಃ ಹೇಮನಳಿನಿಯನ್ನು ಮದುವೆಯಾಗಬಹುದಲ್ಲವೆ! ಆದರೆ ಇಷ್ಟರಲ್ಲಿ ನಳಿನಾಕ್ಷನ ಪರಿಚಯವಾಗಿ ಹೇಮ ನಳಿನಿ ಅವನನ್ನು ಮದುವೆಯಾಗಬೇಕೆಂದಾಗಿದ್ದಿತು.

ನಳಿನಾಕ್ಷನು ತನ್ನ ತಾಯಿಯ ಕಾಯಿಲೆಯ ದೆಸೆಯಿಂದ ಅವಳ ಸೇವೆ ಮಾಡುತ್ತ ಕಾಶಿಯಲ್ಲಿದ್ದನು. ಹವಾ ಬದಲಾವಣೆಗಾಗಿ ಆನಂದಬಾಬು ಹೇಮ ನಳನಿಯರು ಕಾಶಿಗೆ ಬಂದರು. ಕೊನೆಯದೃಶ್ಯ ಕಾಶಿಯಲ್ಲಿ ನಡೆಯುತ್ತದೆ. ಕಮಲೆ ನವೀನಕಾಶಿಯ ಕೈಗೆ ಸಿಕ್ಕಿ ಅಲ್ಲಿಂದ ಹೇಗೋ ತಪ್ಪಿಸಿಕೊಂಡುಬಂದು ಮಾವನ ಉಪಾಯದ ಕಾರಣ ನಳಿನಾಕ್ಷನ ತಾಯಿ ಕ್ಷೇಮಂಕಾರಿಯ ಸೇವೆಗಾಗಿ ಅವಳ ಮನೆ ಸೇರಿಕೊಂಡಳು. ಅಕ್ಷಯ ಪುನಃ ರಮೇಶನ ಅಕೃತ್ಯವನ್ನು ಆನಂದಬಾಬು ಹೇಮ ನಳಿನಿಗೆ ತಿಳಿಸಿದನು. ಇದು ಅವನ ಕೊನೆಯ ಪ್ರಯತ್ನ. ರಮೇಶ ಜೋಗೇಂದ್ರರು ಕಾಶಿಗೆ ಬಂದರು. ರಮೇಶ ಎಲ್ಲವನ್ನು ಹೇಮನಳಿನಿಗೆ ಪತ್ರಮುಖೇನ ತಿಳಿಸಿದ. ಅದು ನಳಿನಾಕ್ಷನಿಗೂ ತಿಳಿಯಿತು. ನಳಿನಾಕ್ಷ ಹೇಮನಳನಿಯರ ಮದುವೆಯ ಮಾತು ನಿಂತು ನಳಿನಾಕ್ಷ-ಕಮಲೆಯರ ಆತ್ಮಗಳು ಒಂದುಗೂಡಿದುವು.

'ನೌಕಾಘಾತ' ಬಹುಮಟ್ಟಿಗೆ ಘಟನಾಪ್ರಧಾನವಾದ ಕಾದಂಬರಿ ಎಂದು ಹೇಳಬಹುದು. ಒಂದಾದರ ಮೇಲೊಂದು ಅನಿರೀಕ್ಷಿತ ಘಟನೆಗಳು ಜರಗುತ್ತ ಓದುಗರ ಮನಸ್ಸನ್ನು ಸೆರೆಹಿಡಿಯುವ ಶಕ್ತಿಯನ್ನುಳ್ಳದ್ದು ಈ ಕಾದಂಬರಿಯ ವಸ್ತು. ನದಿಯ ದಡದ ಮರಳಿನ ಮೇಲೆ ಘನ ವಾತಾವರಣದ ನಿದ್ದೆಯಲ್ಲಿ ಕಥೆ ಆರಂಭವಾಗಿ ಕಲ್ಕತ್ತ, ಘಾಸಿಪುರ, ಕಾಶಿ ಮತ್ತು ಗಂಗೆಯ ತೆರೆಗಳ ಮೇಲೆ ಹಾದುಹೋಗುತ್ತದೆ. ಮುಂದೆ ಏನು ಮುಂದೆ ಏನು ಎಂದು ಓದುಗನ ಕುತೂಹಲ ಕೆರಳುವುದಕ್ಕೆ ಕಥಾ ನಿರೂಪಣೆಯೂ ಸಹಾಯಮಾಡುತ್ತದೆ. ಮೊದಮೊದಲಿನಲ್ಲಿ ಚಮತ್ಕಾರವಾಗಿ ಘಟನೆಗಳನ್ನು ಜೋಡಿಸಿರುವುದು ಕಂಡುಬರುತ್ತಾ ಕಾದಂಬರಿಯ ಕೊನೆಯನ್ನು ಸಮೀಪಿಸುತ್ತಿರುವಂತೆ ಅನಿರೀಕ್ಷಿತ ಘಟನೆಗಳು ನಿಬಿಡವಾಗಿ ಸೂತ್ರಧಾರನು ಸೂತ್ರದ ಬೊಂಬೆಗಳನ್ನು ಆಡಿಸುವಂತೆ ಎಲ್ಲ ಪಾತ್ರಗಳೂ ಕಾದಂಬರಿಕಾರನ ಇಚ್ಛೆಗೆ ತಕ್ಕಂತೆ ಆಡುತ್ತ ತಮ್ಮ ತಮ್ಮ ವಿಧಾಯಕವಾದ ಕೆಲಸವನ್ನು ನಿರ್ವಹಿಸುವುದರಿಂದ ಕೃತಕತೆಯ ಭಾವ ನಮ್ಮ ಮನಸ್ಸಿನಲ್ಲಿ ಮೂಡುವ ಸಂಭವವಿದೆ.

ಘಟನಾಪರಂಪರೆಗಳ ನಡುವೆ ಜೀವನದ ಸುಳಿಗೆ ಸಿಕ್ಕ ಪಾತ್ರಗಳು ನಮ್ಮ ಮನಸ್ಸನ್ನು ಸೂರೆಗೊಳ್ಳುತ್ತವೆ. ಘಟನಾಪ್ರಧಾನವಾದ ಕಾದಂಬರಿಯಾದರೂ ಪಾತ್ರಗಳ ಆಂತರಿಕ ಹೋರಾಟದ ಚಿತ್ರವಿಲ್ಲದೆ ಇಲ್ಲ. ಇದಕ್ಕೆ ರಮೇಶ ಮತ್ತು ಕಮಲೆಯರ ಪಾತ್ರಗಳೇ ಸಾಕ್ಷಿ. ಉತ್ತಮವಾದ ಪ್ರಕೃತಿ ವರ್ಣನೆಯ ಹಿಂಬದಿಯಲ್ಲಿ ರಮೇಶನ ಮನಸ್ಸಿನ ಹೊಯ್ದಾಟದ ಚಿತ್ರವನ್ನು ಲಘುವಾಗಿಯಾದರೂ ಕಲ್ಪನೆ ಮಾಡಿಕೊಳ್ಳಲು ಸಾಧ್ಯವಾಗುವಷ್ಟರ ಮಟ್ಟಿಗೆ ಕೊಟ್ಟಿದ್ದಾರೆ. ಈ ಮನಸ್ಸಿನ ಹೋರಾಟವೇ ರಮೇಶನ ಪಾತ್ರದಲ್ಲಿ ಆಸಕ್ತಿಯನ್ನುಂಟುಮಾಡುವ ಅಂಶ. ರಮೇಶನಿಗೆ ನಾಯಕಪಟ್ಟವನ್ನು ಕಟ್ಟುವುದಕ್ಕೂ ಕೂಡ ಇದೇ ಆಧಾರ. ಒಂದು ಕಡೆ ಹೇಮ ನಳಿನಿಯ ಆಕರ್ಷಣೆ; ಇನ್ನೊಂದು ಕಡೆ ಕಮಲೆಯ ಮುಗ್ಧತೆ, ಸರಳತೆ ಪತಿಭಕ್ತಿಗಳನ್ನು ಕಂಡು ಮರುಕ. ಇವೆರಡರ ನಡುವೆ ಸಿಕ್ಕಿ ಪರದಾಡುವ ರಮೇಶನ ಮನಸ್ಸಿನ ಚಿತ್ರ, ಕಲ್ಪನೆಗೆ ಕುತೂಹಲದ ರೆಕ್ಕೆಯನ್ನು ಮೂಡಿಸುತ್ತದೆ. ಹುಟ್ಟಿದಂದಿನಿಂದಲೂ ಕಷ್ಟಗಳನ್ನೇ ಅನುಭವಿಸುತ್ತ ವಿಧಿಯ ಬಿಗಿಮುಷ್ಟಿಗೆ ಸಿಲುಕಿದವಳು ಕಮಲೆ. ತಂದೆಯಲ್ಲಿ ಪ್ರೀತಿ, ರಮೇಶನಲ್ಲಿ ಪ್ರೇಮ. ಆದರೆ ಸನ್ನಿವೇಶದ ದಾಂಡಿಗೆ ಸಿಕ್ಕಿ ಚೆಂಡಿನಂತೆ ಈಕಡೆಯಿಂದ ಆಕಡೆಗೆ ಮದುವೆಯ ಹೆಣ್ಣಾಗಿ ಎಸೆದಾಡಲ್ಪಟ್ಟ ಚೆಂಡು ಹೇಮನಳಿನಿ. ಈ ಕಾದಂಬರಿಯಲ್ಲೆಲ್ಲ ಸುಂದರವಾದ ಪಾತ್ರಗಳೆಂದರೆ ಆದರ್ಶ ತಂದೆ ಆನಂದ ಬಾಬು, ಸ್ನೇಹಪರನಾದ ಮಾವ ಚಕ್ರವರ್ತಿ, ಸ್ವಾಮಿಭಕ್ತ ಉಮೇಶ.

ಈ ಕಾದಂಬರಿಗೆ ಭೂಷಣದಂತೆ ಬಂದಿರುವುದು ಅಲ್ಲಲ್ಲಿನ ಪ್ರಕೃತಿ ವರ್ಣನೆ.

ಪ್ರಕೃತಿ ಕಾದಂಬರಿಯಲ್ಲಿನ ವಿಷಯ ಸನ್ನಿವೇಶಗಳಿಗೆ ತಕ್ಕ ಹಿನ್ನೆಲೆಯನ್ನು ಒದಗಿಸಿ ಕೊಡುತ್ತದೆ. ಕವಿ ರವೀಂದ್ರರ ಕವಿಹೃದಯವನ್ನು ಇಂಥ ಸಂದರ್ಭಗಳಲ್ಲಿ ಸ್ಪಷ್ಟವಾಗಿ ಕಾಣುತ್ತೇವೆ.

ಶ್ರೀಮತಿ ಸಾವಿತ್ರಮ್ಮನವರು ತಮ್ಮ ಇತರ ಕೃತಿಗಳಲ್ಲಿ ಮೆರೆದಿರುವ ಸಹಜ ಸರಳತೆಯನ್ನು ಅನುವಾದದಲ್ಲಿಯೂ ಉಳಿಸಿಕೊಂಡಿದ್ದಾರೆ. ಅನುವಾದ ಮಾಡಿದ ಕೃತಿಯನ್ನು ಓದುತ್ತಿದ್ದೇವೆಂಬ ಭಾವನೆ ಬರದೆ ಸಹಜ ಸ್ವತಂತ್ರ ಕೃತಿಯ ಓಟ ವಿರುವುದು ಈ ಅನುವಾದದ ಸೊಗಸು. ಮೂಲ ಕಾದಂಬರಿಯನ್ನು ಪೂರ್ಣವಾಗಿ ಅನುವಾದ ಮಾಡದೆ ಕೊಂಚಮಟ್ಟಿಗೆ ಸಂಗ್ರಹಿಸಿದ್ದಾರೆ. ಸಾಮಾನ್ಯವಾಗಿ ಸಂವಾದದ ಸೌಂದರ್ಯವನ್ನು ಹಾಗೆಯೇ ಉಳಿಸಿಕೊಂಡು ವರ್ಣನಾ ಭಾಗಗಳನ್ನೂ, ಪಾತ್ರಗಳ ಮನಸ್ಸಿನ ಚಿತ್ರದ ವರ್ಣನೆಯ ಭಾಗಗಳನ್ನೂ ಸಂಗ್ರಹಿಸಿದ್ದಾರೆ. ಹತ್ತಾರು ವಾಕ್ಯಗಳ ಸಾರಾಂಶವನ್ನು ಒಂದೊಂದು ವಾಕ್ಯದಲ್ಲಿ ಅಡಕಮಾಡಿದ್ದಾರೆ. ಹೀಗೆ ಸಂಗ್ರಹಿಸಿರು ವುದರಿಂದ ಓದಿನಲ್ಲಿ ತೊಡಕಾಗಲಿ, ಮುಗ್ಗುರಿಸುವುದಾಗಲಿ ಕಂಡುಬರುವುದಿಲ್ಲ. ಪ್ರಕೃತಿ ವರ್ಣನೆಯ ಹಿಂಬದಿಯಲ್ಲಿ ಪಾತ್ರಗಳ ಆಂತರಿಕ ತುಮುಲವನ್ನು ವಿಸ್ತರಿ ಸಿರುವ ಭಾಗಗಳನ್ನು ಕೆಲವು ಕಡೆಗಳಲ್ಲಿ ಪೂರ್ಣವಾಗಿ ಉಳಿಸಿಕೊಂಡಿದ್ದರೆ ಚೆನ್ನಾಗಿ ತ್ತೆಂದು ತೋರುತ್ತದೆ. ಹಾಗಿಲ್ಲದಿರುವುದರಿಂದ ಪಾತ್ರಗಳ ಮಾನಸಿಕ ವ್ಯಾಪಾರದ ಸೊಗಸು, ಈ ಅನುವಾದದ ಓದುಗರಿಗೆ ಕೊಂಚಮಟ್ಟಿಗೆ ನಷ್ಟವಾಗಿದೆಯೆಂದು ಹೇಳದೆ ವಿಧಿಯಿಲ್ಲ. ಒಂದೆರಡು ಕಡೆ ಸಂಗ್ರಹಿಸಿರುವ ಭಾಗದಲ್ಲಿ ವಿಷಯಗಳು ಅಸ್ಪಷ್ಟ ವಾಗುವುದು ಕಂಡುಬಂದರೂ ಅದು ಅಷ್ಟಾಗಿ ಗಮನಕ್ಕೆ ಬರುವುದಿಲ್ಲ. ವಿಸ್ತಾರ ಭಯದಿಂದ ಉದಾಹರಣೆಗಳನ್ನು ಕೊಡಲಾಗಿಲ್ಲ. ಕೆಲವೆಡೆಗಳಲ್ಲಿ ಪಾತ್ರಗಳ ಸಂವಾದದ ಭಾಗಗಳೂ ಕಾದಂಬರಿಕಾರರ ಮಾತುಗಳೂ ಸೇರಿಕೊಂಡುಹೋಗಿ ವಿರಾಮ ಚಿಹ್ನೆಗಳು ತಪ್ಪಾಗಿ ಬಿದ್ದಿರುವ ಅಚ್ಚಿನ ದೋಷಗಳು ಉಳಿದುಬಿಟ್ಟಿವೆಯೆಂದು ಹೇಳದೆ ವಿಧಿಯಿಲ್ಲ.

ಒಂದು ಸಾಹಿತ್ಯದಲ್ಲಿ ಸ್ವತಂತ್ರ ಕೃತಿಗಳಿಗೆ ಸ್ಥಾನ ಇರುವಂತೆಯೇ ಅನುವಾದ ಗಳಿಗೂ ಸ್ಥಾನವಿದೆ. ವಿಶ್ವಸಾಹಿತ್ಯದ ಶ್ರೇಷ್ಠಕೃತಿಗಳು ಕನ್ನಡಕ್ಕೆ ಬರಬೇಕು. ಈ ಕೆಲಸ ನಡೆದಿರುವುದು ಕಡಿಮೆ. ಹೀಗೆಯೇ ಶ್ರೇಷ್ಠ ಕೃತಿಗಳ ಉತ್ತಮ ಅನುವಾದವನ್ನು ಕನ್ನಡಕ್ಕೆ ತರುವುದರ ಮೂಲಕ ಶ್ರೀಮತಿ ಎಚ್. ವಿ. ಸಾವಿತ್ರಮ್ಮ ನವರು ಆ ಕೊರತೆಯನ್ನು ಕಡಿಮೆಮಾಡುವುದರ ಕಡೆಗೆ ಗಮನಕೊಡುವರೆಂದು ಭಾವಿಸಬಹುದು.

ಕೆ. ಎಸ್. ಕೆ.

ಮುಳ್ಳಿನ ಹಾಸಿಗೆ—ಲೇಖಕರು : ಶ್ರೀ ಪಂ. ಮೂ. ರುದ್ರಮುನಿಸ್ವಾಮಿ ; ಪ್ರಕಾಶಕರು : ಭಾರತೀಪ್ರಕಾಶನ, ಕೃಷ್ಣಮೂರ್ತಿಪುರಂ, ಮೈಸೂರು ; ಪುಟಗಳು ೩೨೦ ; ಬೆಲೆ, ರೂ. ೧-೮-೦.

ಕಾದಂಬರಿ ಕಾದಂಬರಿಗೆ ಇರುವ ಬಹುಮುಖ್ಯ ವ್ಯತ್ಯಾಸ ಲೇಖಕರ ವ್ಯಕ್ತಿತ್ವದ ವೈಶಿಷ್ಟ್ಯ. ಎಲ್ಲ ಲೇಖಕರ ಕಣ್ಣು ನಿತ್ಯಜೀವನದ ಕಡೆಗೇ ಇದೆ. ಆದರೆ ಅವರ ಕಲ್ಪನೆ ಸೃಜಿಸುವ ಲೋಕ ಅವರವರ ವ್ಯಕ್ತಿತ್ವಕ್ಕೆ ಅನುಗುಣವಾಗಿ ಬೇರೆಬೇರೆಯೇ ಆಗಿ ಪರಿಣಮಿಸುತ್ತದೆ. ಅನೇಕ ವೇಳೆ ಕಾದಂಬರಿಗಳ ಕಥೆ, ಸನ್ನಿವೇಶ, ವ್ಯಕ್ತಿಗಳು—ಇವುಗಳಲ್ಲಿ ಬಹುಮಟ್ಟಿನ ಹೋಲಿಕೆ ಕಂಡುಬರಬಹುದು. ಆದರೆ ಲೇಖಕನ ವ್ಯಕ್ತಿತ್ವದ ಛಾಯೆ ಅವುಗಳ ಮೇಲೆ ಬಿದ್ದು ಅವುಗಳು ತೀರ ಹೊಸವೇ ಆಗಿಬಿಡುತ್ತವೆ.

'ಮುಳ್ಳಿನ ಹಾಸಿಗೆ' ಈ ದೃಷ್ಟಿಯಿಂದ ಹೊಸದು. ಅತ್ತೆ ನಾದಿನಿಯರ ಕಿರುಕುಳ ಮನೆಗೆ ಬಂದ ಸೊಸೆಗೆ ಹೊಸದೇನೂ ಅಲ್ಲ; ದಾಯಾದಿಗಳ ಮತ್ಸರ ಅನುಭವಿಸದವರು ಅತಿ ವಿರಳ; ಆದರೂ ಶ್ರೀ ರುದ್ರಮುನಿಸ್ವಾಮಿಗಳ ದಿಗ್ದರ್ಶನದಲ್ಲಿ ಈ ಎರಡೂ ಅಂಶಗಳು ಕೂಡಿ ಆದ ಒಂದು ಹೊಸ ಜೀವನದ ವಿಷಯ ವೈಪರೀತ್ಯಗಳ ಸಾಧಾರಣ ಕಥೆ ಇದರಲ್ಲಿ ಬಿಡಿಸಲ್ಪಟ್ಟಿದೆ. ಹೊಸದಾಗಿ ಬಾಳನ್ನು ಕಂಡು, ಆದರ ಕುಂದುಕೊರತೆಗಳು, ಅಸಹ್ಯಮೋಸಗಳು, ದ್ವೇಷಾಸೂಯೆಗಳು—ಇವುಗಳನ್ನು ನೋಡಿ ಕುಪಿತನಾಗುವ ಮಮ್ಮಲ ಮರುಗುವ ತರುಣನೊಬ್ಬನ ಕಲ್ಪನಾಮೂಸೆಯಿಂದ ಹೊರಬಿದ್ದ ಕೃತಿ ಈ ಕಾದಂಬರಿ.

ಅಂದರೆ ಈ ಕಾದಂಬರಿಯಲ್ಲಿರುವ ದೋಷಗಳು ಮೊದಲ ಪ್ರಯತ್ನದ ಮತ್ತು ತಾರುಣ್ಯದ ದೋಷಗಳು ಮಾತ್ರ. ಅದರಿಂದ ಕಾದಂಬರಿ ಭಲೆ ಎನ್ನಿಸುವಂತೆ ಬರಲಾರದು ; ಬೇಸರ ಎಲ್ಲೂ ಬಾರದ ಹಾಗೆ ಸೊಗಸಾಗಿ ಕಟ್ಟಿ ನಿಲ್ಲಿಸುವುದು ಸ್ವಲ್ಪಮಟ್ಟಿಗೆ ಕಷ್ಟವಾಗದೆ ಇರದು. ಲೇಖನಿ ಪಳಗದ ಕಾರಣವಾಗಿ ಬರುವ ದೋಷಗಳ ಜೊತೆಗೆ, ಈ ಕಾದಂಬರಿಯ ಅಗಾಧ ವಸ್ತುವನ್ನು ಇರುವ ಅವಕಾಶದೊಳಗೇ ಅಂದವಾಗಿ ಅಡಕಮಾಡಲು ಬೇಕಾದ ದಕ್ಷತೆ ಸ್ವಲ್ಪ ಸಾಲದುದರಿಂದ ಬರುವ ದೋಷವೂ ಸೇರಿ ಸುಶಿಕ್ಷಿತರಾದ ಓದುಗರು ಅತೃಪ್ತಿ ಪಡಬಹುದು. ಆದರೆ ಈ ತರುಣ ಲೇಖಕರು ಒಂದು ತುಂಬು ಪ್ರಪಂಚವನ್ನು ಈ ಕಾದಂಬರಿಯ ಎಲ್ಲೆಯೊಳಗೆ ತಂದು ನಿಲ್ಲಿಸುವ ಸಾಹಸ ಮಾಡಿರುವುದು ಸ್ತುತ್ಯಾರ್ಹವೇ ಆಗಿದೆ.

ಶಿವಣ್ಣಯ್ಯನವರದು ಒಂದು ಪ್ರಸಿದ್ಧ ಮನೆತನ. ಅವರ ಮಗಳು ಮಾಲಿನಿ ಚೆಲುವೆ ಮತ್ತು ಸುಗುಣೆ. ಅಸಭ್ಯತನವೇ ಮೂರ್ತಿಮತ್ತಾದಂತಿದ್ದ ಉಮಾಪತಿಯೊಡನೆ ಅವಳ ವಿವಾಹ ನಡೆದುಹೋಗುತ್ತದೆ. ಅದು ವಿಧಿಯ ಅಣಕವೇ ಸರಿ. ಉಮಾಪತಿಗೆ ತಂಗಿಯನ್ನು ಕೊಡುವುದು ವಿವೇಕಿಯೂ ವಿಚಾರಪರನೂ ಆದ

ರೇಣುಕನಿಗೆ ಸ್ವಲ್ಪವೂ ಇಷ್ಟವಿರಲಿಲ್ಲ. ಮದುವೆಯಾದುದೇ ತಡ ಅಳಿಯನ ದುಷ್ಟ ವರ್ತನೆಯ ಸೆಕೆ ಶಿವಣ್ಣಯ್ಯನವರ ಸಂಸಾರಕ್ಕೆ ತಟ್ಟಲು ಮೊದಲಾಗುತ್ತದೆ. ಅವನ 'ದುಂಡಾವರ್ತಿ'ಯ ಬೆಂಕಿಗೆ ದಾಯಾದಿ ಬಸವರಾಜನ ಮಾತ್ಸರ್ಯದ ಗಾಳಿ ಸೋಕಿ ಅದು ಹುಚ್ಚುಹುಚ್ಚಾಗಿ ಹರಡುತ್ತದೆ. ಸಂಯಮಶಾಲಿಗಳೂ ಪ್ರೀತಿಸಂಪನ್ನರೂ ಆದ ಶಿವಣ್ಣಯ್ಯನವರು ತುಂಬ ಕೊರಗಿಗೆ ಪಕ್ಕಾಗಿ ಸೊರಗಿಹೋಗುತ್ತಾರೆ.

ಮಾಲಿನಿಯು ಅತ್ತೆಯ ಮನೆಗೆ ಹೋದವಳು ಪುನಃ ತೌರಿಗೆ ಬರಲಿಲ್ಲ. ಮಾವ ಅಳಿಯಂದಿರ ದ್ವೇಷಕ್ಕೆ ಅವಳು ಬಲಿಯಾದಳು. ಮದುವೆಯಾದಮೇಲೆ ಮೂರು ವರ್ಷಗಳು ಕಳೆದುವು; ಅವು ಮೂರು ಯುಗಗಳಾಗಿ ಪರಿಣಮಿಸಿದುವು. ಮಾವ ಅಳಿಯಂದಿರ ಮಧ್ಯೆ ಬೆಳೆದ ಕಿಚ್ಚನ್ನು ಆರಿಸಲು ಮಾಡಿದ ಎಲ್ಲರ ಪ್ರಯತ್ನವೂ ವ್ಯರ್ಥವಾಯಿತು. ಮಾಲಿನಿ ಅದರಲ್ಲೇ ಬೆಂದುಹೋದಳು. ಅವಳ ಬಾಳಿಗೆ ತಂಪು ದೊರಕಿದ್ದು ತುಂಗಭದ್ರೆಯ ತೆರೆತೋಳ ಅಪ್ಪುಗೆಯಲ್ಲೇ. ಮಾಲಿನಿ ಸತ್ತಳು; ಸತ್ತು ಗೆದ್ದಳು. ಗಂಡನ, ಅತ್ತೆಯ, ನಾದಿನಿ ಭಾವಮೈದುನರ ಕಿರುಕುಳಗಳ ಕೊನೆ ಅವಳ ಸಾವು. ತಂದೆ ತಾಯಿ ಅಣ್ಣಂದಿರಿಗೆ ದುಃಖದೊಂದಿಗೆ ನೆಮ್ಮದಿಯೇ ಬಂದಿರಬೇಕು. ಈ ದುರಂತ ನಾಟಕವನ್ನು ನೋಡುತ್ತಾ ಗೆದ್ದ ವಿಧಿ ನಕ್ಕಿರಬೇಕು.

ಶ್ರೀ ರುದ್ರಮುನಿಸ್ವಾಮಿಗಳು ಈ ಕಾದಂಬರಿಯಲ್ಲಿ ತುಂಬ ವ್ಯಕ್ತಿಗಳನ್ನು ತಂದಿದ್ದಾರೆ. ಬಾಳಿನ ಸಮಸ್ಯೆಯನ್ನು ಒಬ್ಬೊಬ್ಬರು ಒಂದೊಂದು ರೀತಿ ಎದುರಿಸುತ್ತಾರೆ. ರೇಣುಕ, ಮಾಧು, ವಿಶ್ವನಾಥ ಈ ಮೂವರು ಸ್ನೇಹಿತರ ಬಾಳು ಬೇರೆ ಬೇರೆ ತೆರ. ವಿಶ್ವನಾಥನಿಗೆ ಎಲ್ಲ ಅನುಕೂಲಗಳಿದ್ದರೂ ಬಾಳು ಬೇಡವಾಗುತ್ತದೆ; ಕ್ರಮೇಣ ಅವನು ಮತ್ತೆ ಮನುಷ್ಯನಾಗುತ್ತಾನೆ. ರೇಣುಕ ಅನುಭವಿಸಬೇಕಾದ ಕಷ್ಟಗಳನ್ನೆಲ್ಲಾ ಅನುಭವಿಸಿ ವಿವೇಕಿಯಾಗಿ ನಿಲ್ಲುವನು. ಮಾಧು ತನ್ನ ಕಡು ಬಡತನದ ಬಾಳನ್ನು ಹೇಗೋ ಸುಧಾರಿಸಿಕೊಂಡು ಬರುವನು. ಇವರುಗಳ ಬಾಳು ಹೇಗೋ ನೇರವಾಯಿತು. ಆದರೆ ಮಾಲಿನಿಗೆ ಬಾಳಿನಲ್ಲಿ ಸುಖ ದೊರಕದಾಯಿತು; ಅಂತೆಯೇ ಅವಳು ಬಾಳನ್ನು ದಾಟಿ ಬಾಳಿನಾಚೆ ಸುಖಪಡೆಯುವ ಮನಸ್ಸು ಮಾಡಿಯೇ ಬಿಟ್ಟಳು.

ಬಸವರಾಜನಿಗೆ ಕೆಟ್ಟ ಮೇಲೆ ಬುದ್ಧಿ ಬಂತು; ಆದರೆ ಆ ವೇಳೆಗೆ ಎಲ್ಲ ಮಿಂಚಿ ಹೋಗಿತ್ತು. ಅವನ ಹೆಂಡತಿ ಹಾಲಮ್ಮ ಅಸುಖಿಯಾಗಿಯೇ ನಿಲ್ಲಬೇಕಾಗಿ ಬರುವುದು ಅವಳ ದುರ್ವಿಧಿ.

ಶಿವಕುಮಾರ ತೆರೆದ ಕಣ್ಣಿಂದ ಬಾಳನ್ನು ಕಂಡು ನಾಟಕದಲ್ಲಿ ಅದನ್ನು ಪ್ರತಿಬಿಂಬಿಸುವ ಕೆಲಸದಲ್ಲಿ ತೊಡಗುವನು. ಪ್ರೇಮಚಂದ್ರರು ಮಾನವ ಪ್ರೇಮಿಗಳು.

ಅವರ ಕರುಣಾಮಯ ನಯನಗಳ ಜ್ಯೋತಿ ಅವರ ಸುತ್ತುಮುತ್ತೆಲ್ಲ ಹರಡಿ ಕಷ್ಟದ ಬಾಳನ್ನು ಸ್ವಲ್ಪ ಹಗುರಗೊಳಿಸುತ್ತದೆ.

ಈ ಕಾದಂಬರಿಯ ಲೋಕದಲ್ಲಿ ಶಿವಶಂಕರಪಾಟೀಲ ಮತ್ತು ಗುರುಶಾಂತ ಶಾಸ್ತ್ರಿಗಳಂತಹ ಸಜ್ಜನರೂ, ಭೂತಪ್ಪ ಮತ್ತು ಸಣ್ಣದುರಗಪ್ಪನವರಂತಹ ಮಾಂತ್ರಿಕರೂ, ಶಶಿಕಲೆಯಂತಹ ಸೂಳೆಯರೂ ಇದ್ದಾರೆ. ಇಲ್ಲಿನ ಪ್ರಪಂಚ ತುಂಬ ವಿಸ್ತಾರವಾಗಿದೆ ಮತ್ತು ವೈವಿಧ್ಯಪೂರ್ಣವಾಗಿದೆ.

ಲೇಖಕರು ಕಟ್ಟಿರುವ ಇಷ್ಟು ದೊಡ್ಡ ಪ್ರಪಂಚವನ್ನು ನಾವು ಸುಮ್ಮನೆ ತಳ್ಳಿ ಹಾಕುವುದು ನಮಗೆ ಸಲ್ಲದು. ಕೆಡಿಸಿರುವ ಸಂದರ್ಭಗಳು ಅದರಲ್ಲಿ ಹೇಗೆ ಸೇರಿ ಹೋಗಿವೆಯೋ, ಹಾಗೆಯೇ ಸೊಗಸಾದ ಸನ್ನಿವೇಶಗಳೂ ಇದರಲ್ಲಿವೆ: ಉದಾಹರಣೆಗೆ ಮಾಲಿನಿ ತುಂಗಭದ್ರೆಯನ್ನು ಅರಸಿ ಅದರಲ್ಲಿ ಸೇರಿಹೋಗುವ ದೃಶ್ಯ ತುಂಬ ಮನೋಹರವಾಗಿದೆ.

ಶ್ರೀ ರುದ್ರಮುನಿಸ್ವಾಮಿಗಳು ಉತ್ತಮ ಕಾದಂಬರಿಕಾರರಾಗುವ ಶಕ್ತಿ ಪಡೆದಿದ್ದಾರೆ. ಈ ಮೊದಲ ಕಾದಂಬರಿಯನ್ನು ತಮ್ಮ ಶಕ್ತಿಮೀರಿ ಸಾಹಸಮಾಡಿ ಸಾಧಿಸಿಕೊಂಡಿದ್ದಾರೆ. ಅದು ನಮಗೆ ಬಹಳ ತೃಪ್ತಿಕೊಡುವ ವಿಷಯ.

—ವಿ. ವಿ.

*
* *

ಸ್ವಾತಂತ್ರ್ಯದೇವ (ಕವನಸಂಗ್ರಹ)—ಬರೆದವರು : ಶ್ರೀ ಸಿ. ಬಾ. ಕಾಡಣ್ಣವರು, ಬೆಳಗಾಂವಿ ; ಕ್ರಾ. ಅ. ಪು. ೬೭ ; ಬೆಲೆ, ರೂ. ೧-೦-೦.

‘ಸ್ವಾತಂತ್ರ್ಯದೇವ’ ಶ್ರೀ ಸಿ. ಬಾ. ಕಾಡಣ್ಣನವರ ಮೊಟ್ಟಮೊದಲನೆಯ ಕವನಸಂಗ್ರಹ. ಶ್ರೀಯುತರು ವರಕವಿಗಳಾದ ಸಾಲಿ ರಾಮಚಂದ್ರರಾಯರ ಅಚ್ಚು ಮೆಚ್ಚಿನ ಶಿಷ್ಯರು. ಈ ಸಂಗ್ರಹಕ್ಕೆ ಶ್ರೀ ಈಶ್ವರ ಸಣಕಲ್ಲ ಅವರು ಸಾರವತ್ತಾದ, ರಸವತ್ತಾದ ಮತ್ತು ಸುದೀರ್ಘವಾದ ಮುನ್ನುಡಿಯನ್ನು ಬರೆದಿದ್ದಾರೆ. ಸಂಗ್ರಹದಲ್ಲಿ ಮೂವತ್ತುನಾಲ್ಕು ಕವನಗಳಿವೆ. ಇವುಗಳನ್ನು ಗಾಂಧಿಜಿ ಅವರ ವ್ಯಕ್ತಿತ್ವದಿಂದ ಕವಿಗಳ ಮನಸ್ಸಿನಮೇಲುಂಟಾದ ಪರಿಣಾಮದಿಂದ ಉದ್ಭವಿಸಿದ ಕವನಗಳು, ನಿಸರ್ಗ ಅಥವಾ ಪ್ರಕೃತಿಯ ಬಗ್ಗೆ ಕವಿಗಳ ಅಭಿಪ್ರಾಯ, ನಲವತ್ತೆರಡರ ಸ್ವಾತಂತ್ರ್ಯ ಸಂಗ್ರಾಮದ ಚಳುವಳಿಯ ಕಾವಿನಿಂದ ಸ್ಫೂರ್ತಿಗೊಂಡ ಕವನಗಳು, ಎಂದು ಮೂರು ವಿಧವಾಗಿ ವಿಂಗಡಿಸಬಹುದು.

ಭಾರತದ ಸ್ವಾತಂತ್ರ್ಯಕ್ಕಾಗಿ ತನುಮನಧನಗಳನ್ನರ್ಪಿಸಿ ಅಹಿಂಸಾವ್ರತವನ್ನೇ ಎತ್ತಿಹಿಡಿದು ಆಂಗ್ಲರಿಗೆ ಅನೇಕ ರೀತಿಯಲ್ಲಿ ನೀತಿಬೋಧೆ ಮಾಡಿ ಅವರೊಡನೆ ಸೆಣಸಿ

ಭಾರತಾಂಬೆಯ ದಾಸ್ಯ ಶೃಂಖಲೆಯನ್ನೂ ಕಡಿದ ಮಹಾತ್ಮಾ ಗಾಂಧಿ ಅವರ ವಿವಿಧ ಮುಖಗಳ ಚಿತ್ರಣವೆಂದೇ ಈ 'ಸ್ವಾತಂತ್ರ್ಯ ದೇವ'ನನ್ನು ಕರೆಯಬಹುದು.

ಸುಪ್ರಸಿದ್ಧ ಸಾಹಿತಿಗಳಾದ ಶ್ರೀಮಾನ್ ಡಿ. ವಿ. ಗುಂಡಪ್ಪನವರ 'ಗಾಂಧಿ' ಎಂಬ ಪದ್ಯದಿಂದ ಪ್ರೇರಿತರಾಗಿ ಅವರ 'ಗಾಂಧಿ'ಯಲ್ಲಡಗಿರುವ,

"ಇಂದ್ರಿಯಂಗಳ ಜಯಿಸಿ ಚಿತ್ತಶುದ್ಧಿಯ ಬಯಸಿ
ಲೋಭಮಂ ತ್ಯಜಿಸಿ ರೋಷವ ವರ್ಜಿಸಿ
. . . .
'ದೇಶಸೇವೆಯನೀಶಸೇವೆಯೆನಿಸಿ
. . . .
ಪಾಶ್ಚಾತ್ಯಜನಕಮಧ್ಯಾತ್ಮ ನೀತಿಯನು ಪೇಳ್ದಾ
ದೈವಸಂಪನ್ಮಾರ್ಗದರ್ಶಕಂ ಗಾಂಧಿಯಲ್ತೆ!"

ಎಂಬ ಸಾರಾಂಶಭೂತವಾದ ಪದ್ಯವನ್ನು ಲಂಬಿಸಿ ಮಹಾತ್ಮರ ಉದಾತ್ತ ಗುಣಗಳನ್ನು ಅವರ ಬಾಲ್ಯದಿಂದ ಅಂತ್ಯದ ವರೆಗೆ ಒಂದೊಂದು ಪದ್ಯದಲ್ಲಿಯೂ ಹಾಡಿ ಹೊಗಳಿರುವಂತೆ ಕಂಡುಬರುತ್ತದೆ.

ಆ ದೇಶಭಕ್ತನ, ಮೇಧಾವಿಯ ಗುಣಗಾನಮಾಡಿದ ಶ್ರೀಯುತರ ಈ ಪದ್ಯ ಚೆನ್ನಾಗಿದೆ.

'ಆವ ದನಿಯೊಳಗಾವ ಬಗೆಯಿಂದ ಬಣ್ಣಿಸಲಿ,
ಪಾರತಂತ್ರ್ಯದ ನಾಶ, ಭಾರತಾಂಬೆಯ ದಾಸ್ಯರಾಕ್ಷಸಿಯ
ಸಂಹಾರ, ಜಗದ ಪಾಪವ ಕಳೆವ ಜಗ ಬೆಳಕು ನೀನಾಗಿ
ಹಗಲಿರುಳು ಕಾದಾಡಿ ಸ್ವಾತಂತ್ರ್ಯದೊರಕಿಸಿದ ಪುಣ್ಯಾತ್ಮ'

ಎಂದೂ,

'ಆರು ಮೊಳದ ಖಾದಿ: ಭೂರಿ ಹರುಷದಿಯುಟ್ಟು|
ಭಾರತದ ಸಿರಿಯೆನಿಪ ರಾಟಿಯ ತಿರುವುವಂಥಾ
ಅಜ್ಜನ ಕಂಡಿರೇನೋ:

ಎಂದೂ ಮಹಾತ್ಮರು 'ಮಿಥ್ಯೆಯೆಂಬ ಶತ್ರುವನ್ನು ತುಳಿದ ಪುತ್ಥಳಿ'ಯೆಂದೂ, 'ಹಿಂಸೆಯೆಂಬ ಹುಲಿಯನ್ನು ಧ್ವಂಸಮಾಡಿದ ಯೋಗಿ' ಎಂದೂ

"ನಗು ನಗು ಮೋಹನ! ಭಾರತ ಜೀವನ!
ಮೋಜಿನ ಮುದುಕಾ, ಮೋಹದ ಮುದುಕಾ"

ಎಂದೂ "ಪರಕೀಯರಾಳಿಕೆಯ ದುರ್ಗತಿಯ ಚಿತ್ರವನು ನಿರುಕಿಸುತ ಸರುವ ಸುಖವ ಬಿಸುಟ ಬಾಪೂಜೀ ನೀನೇ ಧನ್ಯ, ಮಾನ್ಯ" ಎಂದೂ ಆ ಜಗನ್ಮಾನ್ಯನು "ಸತ್ತ

ರೇನು? ಸತ್ವಶಾಲಿ ಮಡಿದರೆ ತೇಜವಳಿವುದೇ"? ಎಂದೂ ಹೃದಯ ತಣಿಯೆ ಹಾಡಿ ಹರಸಿದ್ದಾರೆ.

ಪ್ರಕೃತಿಯನ್ನೂ ಅದರ ವಿಚಿತ್ರವನ್ನೂ ಪ್ರಶಾಂತತೆಯನ್ನೂ ವರ್ಣಿಸುವಾಗಲೂ ಅಷ್ಟೇ. ಅವರ ಭಾವಕ್ಕೆ ಬರಡಿಲ್ಲ. ಚಿತ್ತಶುದ್ಧಿಯಿಂದ ಪ್ರತಿಯೊಂದನ್ನೂ ನಿರ್ಮಲವಾಗಿ ರಸವತ್ತಾಗಿ ಚಿತ್ರಿಸಿದ್ದಾರೆ. 'ಕೋಗಿಲೆ' ಎಂಬ ಕವನದ

"ತಿಳಿಗೊಳದ ತಿಳಿನೀರು
ಜುಳುಜುಳನೆ ಹರಿಯುವುದು
ತಳಿತೆಸೆವ ಮಾಮರವು ನೆರೆ ಮೆರೆವುದಿಲ್ಲ"

"ಲಲಿತ ಮಲ್ಲಿಗೆ ಬಳ್ಳಿ
ಯೊಳು ಸುಳಿವ ತಂಗಾಳಿ
ಅಲರವಾಸನೆಯನ್ನು ಸೂರೆಗೊಳ್ಳುವುದು"

ಎಂಬ ಭಾಗವನ್ನು ಓದಿದಾಗ ಮುಂದೆ ಇವರು ಒಳ್ಳೆಯ ಕವನಗಳನ್ನು ಬರೆಯಬಲ್ಲರು ಎನಿಸುತ್ತದೆ.

'ಚಹದೇವ' ಎಂಬ ಲಾವಣಿಯಲ್ಲಿ

"ಹಸಿವೆಯನ್ನು ಕೆಡಿಸಿ ತಿರುಗೆ ಹಚ್ಚುವೆನು
ನಿದ್ದಿಯನ್ನು ಬುದ್ಧಿಗಲಿಸಿ ಅಟ್ಟುವೆನು
ವಜ್ರದಂತಹ ಇಂದ್ರಿಯನು ನೀರಮಾಡಿ
ರೋಗವನ್ನು ತರುವೆನು"

ಎಂದು ಹೇಳಿ ಕಾಫಿ, ಟೀ ಮುಂತಾದುವನ್ನು ಸೇವಿಸುವುದರಿಂದ ಆಗುವ ದುಷ್ಪರಿಣಾಮಗಳನ್ನು ತಿಳಿಸಿದ್ದಾರೆ.

ಸಂಗ್ರಹದ ಕೊನೆಯ ಪದ್ಯ 'ಕಾವ್ಯರ್ಷಿ ಕುವೆಂಪು' ಎಂಬುದು. ಮುಂದೆ ಉತ್ತಮ ಕವಿಗಳಾಗಲಿರುವ ಕಾಡಣ್ಣನವರು ಇಂದಿನ 'ಮಹಾಕವಿ' ಕುವೆಂಪು ಅವರನ್ನು 'ಕಾವ್ಯರ್ಷಿ' 'ತವಕಾವ್ಯಶಕ್ತಿಯಲಿ ಜೀವತ್ವ, ಬ್ರಹ್ಮತ್ವ, ಕಾವ್ಯತ್ವ' ತೇಲುತಿವೆಯೆಂದು ಹೇಳಿ ಶ್ರೀ ಕುವೆಂಪುರವರಲ್ಲಿರುವ ಅವರ ಶ್ರದ್ಧೆ ಭಕ್ತಿ, ಗೌರವಗಳನ್ನು ಸೂಚಿಸಿದ್ದಾರೆ.

—ಎಸ್. ಶ್ರೀನಿವಾಸನ್.

* * *

ವೀರರಾಣಿ ಕಿತ್ತೂರ ಚೆನ್ನಮ್ಮ (ಕಾದಂಬರಿ)—ಲೇಖಕರು : ಅ. ನ. ಕೃಷ್ಣರಾಯರು ; ಪ್ರಕಾಶಕರು : ಶ್ರೀ ಗೌರೀಶಂಕರ ಬುಕ್ ಡಿಪೋ, ದೇವರಾಜ ಮಾರ್ಕೆಟ್, ಮೈಸೂರು ; ಪುಟ ೧೪೮ ; ಬೆಲೆ, ರೂ. ೧-೮-೦.

ಈಚೆಗೆ ನಮ್ಮಲ್ಲಿ ಚಾರಿತ್ರಿಕ ಕಾದಂಬರಿಗಳೂ ಬರುತ್ತಿವೆ. ಸಾಮಾಜಿಕ ಕಾದಂಬರಿ ಬರೆಯುವುದಕ್ಕಿಂತ, ಚಾರಿತ್ರಿಕ ಕಾದಂಬರಿ ಬರೆಯುವಲ್ಲಿ ಲೇಖಕನಿಗೆ, ಚಾರಿತ್ರಿಕ ಸಂಗತಿಗಳ ಆಳವಾದ ಅಭ್ಯಾಸ, ಅಂದಿನ ಜನಜೀವನದ ವಿಸ್ತೃತ ಪರಿಚಯ ದೊರೆಯುವ ಎಲ್ಲ ಐತಿಹ್ಯಗಳನ್ನು ಜೋಡಿಸಿ, ಸತ್ಯಾಸತ್ಯತೆಯನ್ನು ಶುಚಿದೃಷ್ಟಿಯಿಂದ ಗುರುತಿಸಿ, ಹೀಗೇ ಆಗಿರಬಹುದೆಂದು ನಿರ್ಧರಿಸುವ ಚಾಕಚಕ್ಯತೆ ಹೆಚ್ಚು ಇರಬೇಕು. ಜೊತೆಗೆ ಅಲ್ಲಿನ ಸಂಗತಿಗಳಿಗೆ ಸರಿಹೋಲುವ, ಕೆಲವು ಕಾಲ್ಪನಿಕ ವಸ್ತು, ಪಾತ್ರಗಳನ್ನು ತಂದು, ರಸವತ್ತಾಗಿ ಮಾಡುವ ಕಲ್ಪಕದೃಷ್ಟಿಯೂ ಇರಬೇಕಾಗಿದೆ. ಶ್ರೀ ಗಳಗನಾಥ ಹಾಗೂ ವೆಂಕಟಾಚಾರ್ಯರು ಈ ದಾರಿ ನಡೆದು ತೋರಿಸಿದ್ದಾರೆ. ಈಚೆಗೆ ಆನಂದಕಂದ, ಮಾಸ್ತಿ, ತ. ರಾ. ಸು—ಮುಂತಾದವರು ಅದೇ ದಾರಿಹಿಡಿದು, ನಡೆದು, ದಾರಿಯನ್ನು ನಯಗೊಳಿಸಿದ್ದಾರೆ. ಈ ವರ್ಗದ ಕಾದಂಬರಿಗಳ 'ರೂಪಶೇಷಗಳನ್ನು ನಿಷ್ಕೃಷ್ಟ'ವಾಗಿರುವ ಪ್ರಯೋಗವನ್ನು ಶ್ರೀ ಅ. ನ. ಕೃಷ್ಣರಾಯರು ಈ ಕಾಂಬರಿಯಲ್ಲಿ ಕೈಕೊಂಡಿದ್ದಾರೆ. ಯಶಸ್ವಿಗಳೂ ಆಗಿದ್ದಾರೆ. ಹೀಗೆಯೇ 'ನಾಟ್ಯರಾಣಿ ಶಾಂತಳಾದೇವಿ' ಹಾಗೂ, ವಿಜಯನಗರದ ಸಮಗ್ರ ಇತಿಹಾಸವನ್ನು ಎಂಟು ಕಾದಂಬರಿಗಳಲ್ಲಿ ಚಿತ್ರಿಸಲು ಲೇಖಕರು ಪ್ರಯತ್ನಿಸುತ್ತಿದ್ದಾರೆ ಎಂದು ಹೇಳಿಕೊಂಡಿರುವುದು, ಓದುಗರ ಹಸಿವನ್ನು ಕೆರಳಿಸುತ್ತಿದೆ.

ಚಾರಿತ್ರಿಕ ಕಾದಂಬರಿಗಳಲ್ಲಿ ವಸ್ತುವಿನ ಆಯ್ಕೆಯೇ ಪ್ರಪ್ರಥಮ ಆವಶ್ಯಕತೆ. ಸಂದಿಗ್ಧ, ಹಾಗೂ ಅಸಮರ್ಪಕ ಚಾರಿತ್ರಿಕ ಸಂಗತಿಗಳನ್ನು ಹೇಗೆ ಆಯ್ದು, ಸಸಿನೆಗೊಳಿಸಿದ್ದಾರೆಂಬುದನ್ನು ಈ ಕೆಳಗಿನ ಕಥೆಯ ಚೌಕಟ್ಟಿನಿಂದ ನೋಡಬಹುದು. ಕನ್ನಡನಾಡಿನಲ್ಲಿ ಟಿಪ್ಪು—ಹೈದರ್ ರಾಜ್ಯದ ನಂತರ ಬಾಳಿ ಬೆಳಕಾದ ಕೆಲವೇ ಸಣ್ಣ ಪುಟ್ಟ ರಾಜ್ಯಗಳಲ್ಲಿ ಕಿತ್ತೂರು ಸಂಸ್ಥಾನದ ರೋಮಾಂಚಕಾರಿ ಚರಿತ್ರೆ ಎಂದಿಗೂ ಕನ್ನಡಿಗರ ಧೀಶಕ್ತಿಯನ್ನು ಪ್ರಚೋದಿಸುವುದಾಗಿದೆ. ಈ ಎರಡು ಕನ್ನಡ ರಾಜ್ಯಗಳಲ್ಲಿ ಸಂಬಂಧ ಸೂಚಿಸಲು, ಪಟ್ಟಣರಾಜ್ಯದ ವೈಭವಕಾಲದಲ್ಲಿದ್ದು, ಅದರ ಪತನವನ್ನೂ ಕಂಡ, ಸದಾಶಿವಶಾಸ್ತ್ರಿಗಳೆಂಬ ವೈಣಿಕರೊಬ್ಬರು, ದೇಶಾಟನ ಮಾಡುತ್ತಾ ಚಿತ್ತೂರು ಸಂಸ್ಥಾನಕ್ಕೆ ಬಂದು, ಅಲ್ಲಿನ ರಾಜಕೀಯ ವಿದ್ಯಮಾನಗಳಲ್ಲಿ ಭಾಗ ವಹಿಸುವಂತೆ ಕಲ್ಪಿಸಿದ್ದಾರೆ. ಈ ವೈಣಿಕ ಶಾಸ್ತ್ರಿಗಳು, ಕಿತ್ತೂರು ರಾಜ್ಯದ ಹಿತೈಷಿಗಳಾಗಿದ್ದ ಚಿದಂಬರ ದೀಕ್ಷಿತರೆಂಬ ನಿವೃತ್ತ ಮಂತ್ರಿಗಳೊಡನೆ ಬೆರೆತು,

ಅಂತಃಕಲಹಗಳ ಸಂಚನ್ನರಿಯುತ್ತಾರೆ. ಇಂಗ್ಲಿಷಿನವರು ದಕ್ಷಿಣ ಭಾರತದಲ್ಲಿ ಕತ್ತಿ ಹಿರಿದು, ರಾಜ್ಯಗಳನ್ನು ಮುರಿದು, ಪಾಳೆಪಟ್ಟುಗಳನ್ನೂ ದೇಸಗತ್ತಿಗಳನ್ನು ಕಬಳಿಸುತ್ತಿದ್ದ ಉತ್ಕಟ ಸನ್ನಿವೇಶದಲ್ಲಿ ಕಥೆ ಪ್ರಾರಂಭವಾಗುತ್ತದೆ. ಆಗ ಕಿತ್ತೂರಿನಲ್ಲಿ, ಮಲ್ಲಸರ್ಜದೇಸಾಯರು ಆಳುತ್ತಿದ್ದರು. ಅವರಿಗೆ ಪ್ರತಿ ನಿಮಿಷವೂ ಇಂಗ್ಲಿಷಿನವರ ಭಯವಿದ್ದಿತು. ಕಾರಣ, ಒಳಗೊಳಗೇ ಸೈನ್ಯಸನ್ನಾಹ ಸಿದ್ಧತೆ ನಡೆಯುತ್ತಿದ್ದಿತು. ಅಲ್ಲದೆ ದೇಸಗತ್ತಿಯ ಆಸೆಯಿಂದ ಇಂಗ್ಲಿಷರೊಡನೆ ಒಳಸಂಚು ನಡೆಯಿಸುತ್ತಿದ್ದ ಮಲ್ಲಪ್ಪಸೆಟ್ಟಿ, ವೆಂಕಟರಾಯರಂತಹ ಕುಹಕಿಗಳನ್ನು ಅದುಮಿಹಾಕಲು ಒಂದು ಕಡೆ ಯತ್ನಿಸುತ್ತಲೂ, ಇನ್ನೊಂದು ಕಡೆ ನಿಷ್ಠಾವಂತರಾದ ಗುರುಸಿದ್ದಪ್ಪ, ರಾಯಣ್ಣ, ಬಾಲಣ್ಣ ಮುಂತಾದವರನ್ನು ತರಬೇತಿಮಾಡುತ್ತಲೂ ಇದ್ದರು. ಇಂಗ್ಲಿಷರು ಬೆಣ್ಣೆ ಹಂಚಿಕೊಡುವ ಬೆಕ್ಕಿನಂತೆ ಹೊಂಚುಹಾಕುತ್ತಿದ್ದರು. ಮಲ್ಲಸರ್ಜದೇಸಾಯಿಯರಿಗೆ ರಾಜ್ಯದ ಬಗ್ಗೆ ಹೆಚ್ಚು ಆಸಕ್ತಿಯಿರಲಿಲ್ಲ, ಅವರ ಉತ್ತರಾಧಿಕಾರಿಗಳಾದ ಶಿವಲಿಂಗ ರುದ್ರಸರ್ಜರೂ ಅಷ್ಟಕ್ಕಷ್ಟೆ. ಹೀಗಾಗಿ ಕಿರಿಯ ರಾಣಿ ಚೆನ್ನವ್ವನ ಮೇಲೆ ರಾಜ್ಯಭಾರದ ಉಸ್ತುವಾರಿ ಬೀಳುತ್ತದೆ. ಬರಗಾಲದಲ್ಲಿ ಬದನೆಕಾಯಿ ದೆವ್ವವಾದಂತೆ, ಪ್ರಭುಗಳು ಅಕಾಲಮರಣಕ್ಕೆ ತುತ್ತಾದರು. ಕೊನೆಯ ಗಳಿಗೆಯಲ್ಲಿ ದತ್ತುಮಗನನ್ನು ಸ್ವೀಕಾರಮಾಡಿ, ಆತನೇ ಉತ್ತರಾಧಿಕಾರಿಯೆಂದು ನೇಮಿಸಿದರು. ಈ ಸಂಗತಿ ಇಂಗ್ಲಿಷರಿಗೆ ತಿಳಿದು, ಕದನಕ್ಕೆ ಕಾಲು ತುಳಿಯಲು ಮುಂದೆ ಬಂದರು. ಮಲ್ಲಪ್ಪ ಸೆಟ್ಟಿಯು ಒಳಸಂಚುಮಾಡಿದ, ರಾಜ್ಯದ ಗುಟ್ಟುಗಳನ್ನು ವೈರಿಗಳಿಗೆ ತಿಳಿಸಿದ. ಸಂಧಾನದ ನೆಪ ಒಡ್ಡಿದರೂ, ಕ್ಷಾತ್ರಶಕ್ತಿಯ ಅವತಾರಿಣಿಯಾಗಿದ್ದ ಚನ್ನಮ್ಮರಾಣಿ ಒಪ್ಪಲಿಲ್ಲ. ಯುದ್ಧವೇ ಪ್ರಾಪ್ತವಾಯಿತು. ಮೊದಲನೆ ಯುದ್ಧದಲ್ಲಿ ಇಂಗ್ಲಿಷರಿಗೇ ಸೋಲಾಯಿತು. ಆದರೆ, ಎರಡನೆ ಯುದ್ಧದಲ್ಲಿ, ಒಳಸಂಚಿನಿಂದಾಗಿ, ಕನ್ನಡಿಗರ ವೀರರಾಜ್ಯ ಇಂಗ್ಲಿಷರ ಕೈವಶವಾಯಿತು. ರಾಣಿಯರು ಹಾಗೂ ದತ್ತಪುತ್ರರು ಸೆರೆಯಾದರು. ಅನಂತರ, ಸಂಗೊಳ್ಳಿರಾಯಣ್ಣ ಗುಡ್ಡಗಾಡು ಸೇರಿ, ಹಲವಾರು ದೇಸಾಯರ ಸಹಾಯಪಡೆದು, ಕನ್ನಡಿಗರ ಕ್ಷಾತ್ರಶಕ್ತಿಯನ್ನು ಬೆಳಗಿ, ಬಿದ್ದ ರಾಜ್ಯದ ಬಾವುಟವನ್ನೆತ್ತುವ ಯತ್ನದಲ್ಲಿದ್ದಾಗ, ಅನುಯಾಯಿಗಳೊಡನೆ ಬ್ರಿಟಿಷರ ಕೈಸೆರೆಯಾಗಿ, ಫಾಶಿಕಂಬಕ್ಕೆ ತುತ್ತಾದ. ರಾಜ್ಯದ ವೀರರೂ, ಅಮಾತ್ಯರೂ, ಬ್ರಿಟಿಷರ ಬಲಿಕಂಬಕ್ಕೆ ಬಲಿಯಾದರು. ಸೆರೆಮನೆಯ ಅಪಮಾನವನ್ನೂ, ನೂರಾರು ವೀರರ ಕೊಲೆಯ ಪರಿತಾಪವನ್ನೂ ಸಹಿಸಲಾರದೆ, ದತ್ತುಕುಮಾರನನ್ನು, ರಾಣಿ ವೀರವ್ವ ಕತ್ತಿಯಿಂದಿರಿದು, ತಾನೂ ಅದೇ ಕತ್ತಿಗೇ ಶರಣಾದಳು. ನಿರಶನ ವ್ರತಧಾರಿಯಾಗಿ, ಬೈಲುಹೊಂಗಲದ ಅರಮನೆಯೇ ಸೆರೆಮನೆಯಾಗಿದ್ದ, ರಾಣಿ ಚೆನ್ನವ್ವ, ತನ್ನ

ಪಕ್ಷದ ವೀರರ ಚಿತ್ರಹಿಂಸೆ, ಕೊಲೆಯನ್ನು ಕಂಡು, ಕೇಳಿ, ಎದೆಬಿರಿದು, ಚಂಡಿ ಚಾಮುಂಡಿಯಾಗಿ 'ಭಾರತ ಸ್ವತಂತ್ರವಾಗುವ ವರೆಗೆ ಜಗತ್ತಿಗೆ ಶಾಂತಿಯಿಲ್ಲ, ಇಂದು ಅಳಿದ ಚನ್ನಮ್ಮ ಮತ್ತೆ ಹುಟ್ಟಿ ಹೋರಾಡುವಳು' ಎಂದು ವೀರಪ್ರತಿಜ್ಞೆಯನ್ನು ಭಾರತೀಯರಿಗಿತ್ತು, ಅಮರಳಾದಳು. ಅವಳ ಮಾತು ಸತ್ಯವೋ ಎನ್ನುವಂತೆ, ಮತ್ತೆ ಝಾನ್ಸಿರಾಣಿ ಲಕ್ಷ್ಮೀಬಾಯಿ ಹುಟ್ಟಿ ಬ್ರಿಟಿಷರನ್ನೆದುರಿಸಿದಳು. ಅನಂತರ ಭಾರತದ ಸ್ವಾತಂತ್ರ್ಯ ಸಂಗ್ರಾಮ ಆರಂಭವಾಗಿ, ಕನ್ನಡಿಗ ವೀರಮಹಿಳೆಯ ಮಹದಾಸೆ ಈಡೇರಿತೆಂಬಂತೆ, ಸ್ವತಂತ್ರ ಭಾರತ ಬೆಳಕಾಯಿತು—ಹೀಗೆ, ಹಬ್ಬಿದೆ ಕತೆಯ ಹರವು. ತರುಣ ರಕ್ತಕುದಿಯುವ ಶೈಲಿಯಲ್ಲಿ, ಕಾದಂಬರಿಯ ಅಂತ್ಯಭಾಗ ರಚಿತವಾಗಿದೆ.

ಎರಡನೆಯದು, ಜೋಡಣೆ, ಕಟ್ಟು. ಇಲ್ಲಿಯೂ ಕಲೆಗಾರನ ಪ್ರತಿಭೆ ಕಾಣುತ್ತದೆ. ಕಿತ್ತೂರ ಸಂಸ್ಥಾನದ ಚರಿತ್ರೆಯ ಮಧ್ಯಭಾಗದಿಂದ ಕಥೆ ಪ್ರಾರಂಭವಾಗಿದ್ದರೂ ಹೊಸದಾಗಿ ಬಂದ ಸದಾಶಿವ ಶಾಸ್ತ್ರಿಗಳಿಗೆ, ತಿಳಿಸುವ ನೆಪದಲ್ಲಿ, ಸಂಸ್ಥಾನದ ಪೂರ್ವ ಚರಿತ್ರೆಯನ್ನೆಲ್ಲಾ ಸೂಕ್ಷ್ಮವಾಗಿ ವಿವರಸಿದ್ದಾರೆ. ಚಿದಂಬರ ದೀಕ್ಷಿತರು, ರಾಯಣ್ಣ, ಬಿಚ್ಚುಗತ್ತಿ ಮುಂತಾದವರಿಗೆ ಗುಪ್ತವಾಗಿ ಶಸ್ತ್ರವಿದ್ಯೆ ಕಲಿಸುವ ಸನ್ನಿವೇಶ, ಶಾಸ್ತ್ರಿಗಳ ಸಂಗೀತ ಕಛೇರಿ, ಚನ್ನಪ್ಪನಿಗೆ ಸಂಗೀತ ಪಾಠ ಹೇಳಿಕೊಡುವುದು, ಚನ್ನಮ್ಮನಿಗೆ ವಿಷಹಾಕುವ ಪ್ರಸಂಗ ಹೊರಬಿದ್ದುದು, ಭರಮನಾಯಕನ ಪ್ರಸಂಗ, ವೀರರನ್ನು ಬಹಿರಂಗವಾಗಿ ಫಾಸಿಗೇರಿಸುವ ಸನ್ನಿವೇಶ, ದೇಶದ್ರೋಹಿಗಳಿಗೊದಗಿದ ಅಪಮಾನ, ಶಿಕ್ಷೆ, ಕ್ಯಾಪ್ಟನ್ ಹ್ಯಾರಿಸನ್‌ನ ಪರಿವರ್ತನೆ—ಮುಂತಾದ ವೈವಿಧ್ಯ ಪೂರ್ಣ ರಸೋತ್ಕಟ ಸನ್ನಿವೇಶಗಳಿಂದ ಚರಿತ್ರೆಯ ಪುಸ್ತಕವಾಗಬಹುದಾದದ್ದು ರೋಮಾಂಚಕಾರಿ ಕಾದಂಬರಿಯಾಗಿದೆ. ಭಾಷೆ, ಶೈಲಿ (ಕೆಲವು ಪ್ರಮಾದಕರ ಅಚ್ಚಿನ ದೋಷಗಳನ್ನು ಬಿಟ್ಟರೆ) ಚಾರಿತ್ರಿಕ ಕಾದಂಬರಿಗೆ ಒಪ್ಪುವಂತಿದೆ. ಶ್ರೀ ಅ.ನ.ಕೃ. ಜೀವನದಲ್ಲಿಯೂ ಸಂವಾದ ಚತುರರಾದಂತೆ, ಕೃತಿಗಳಲ್ಲಿಯೂ, ಸಹಜವಾದ, ಸಂದರ್ಭಕ್ಕೊಪ್ಪುವ, ಕಾಕು, ಕ್ರೋಧ, ಕಟಕಿ, ದರ್ಪ, ವೈಯಾರ, ಕುಹಕ—ಭಾವಗಳನ್ನು ಪ್ರದರ್ಶಿಸುವ ಮಾತಿನ ಸರಣಿಯನ್ನು ಸ್ವಾರಸ್ಯವಾಗಿ ತಂದಿದ್ದಾರೆ. ಬರಲಿರುವ ಚಾರಿತ್ರಿಕ ಕಾದಂಬರಿಗಳಲ್ಲಿ ಇದು ಇನ್ನೂ ಸಿದ್ಧಿಸುವುದೆಂದು ಆಶಿಸೋಣವೆ?

ಓದಿ ಮುಗಿಸಿದಾಗ, ವಿಶಾಲವಾದ ವಸ್ತುವನ್ನು, ಏನೋ ಒಂದು ಉದ್ದೇಶಕ್ಕಾಗಿ, ಮೊಟಕು ಮಾಡಿದಂತೆನಿಸುತ್ತದೆ. ಈ ಪುಟ್ಟ ಪುಟ್ಟ ಇಪ್ಪತ್ತು ಅಧ್ಯಾಯಗಳಲ್ಲಿ ಹರವಿರುವ, ಕಥೆಯಿಂದ ಸುಮಾರು ಮುನ್ನೂರು ಪುಟದ ಕಾದಂಬರಿಯಾದರೂ ಆಗಿದ್ದರೆ, ಬುತ್ತಿಯ ಗಂಟಿರುವಷ್ಟು ಗಂಟಲು ಅಳವಡಿಸಿದಂತಾಗುತ್ತಿತ್ತು. ಹಾಗಿದ್ದರೆ

ಕಿತ್ತೂರು ಬಂಡಾಯದ ವಿಶಾಲ ಹಿನ್ನೆಲೆ ಹಾಗೂ, ಸಮಗ್ರ ಭರತಖಂಡದ ಇತಿಹಾಸದಲ್ಲಿ ಅದರ ಪ್ರಾಮುಖ್ಯತೆ, ಮುಂದಿನ ಮಹಾ ಸಂಗರಕ್ಕೆ ಈ ಬಂಡಾಯ ಕೊಟ್ಟ ಪ್ರಚೋದನೆ—ಇವುಗಳನ್ನು ಬರಿಯ ಸೂಚನಾಮಾತ್ರವಾಗಿ ಕೊಡದೆ, ಮೈಛಳಿಬಿಟ್ಟು, ಪೂರ್ವೋದ್ದೇಶಗಳಿಲ್ಲದೆ, ಲೀಲಾಜಾಲವಾಗಿ ಕಾರ್ಯಕ್ಕೆ ತೊಡಗುವ ವರ್ಣಶಿಲ್ಪಿಯಂತೆ, ಸಮಗ್ರವಾಗಿ ಚಿತ್ರಿಸಬಹುದಿತ್ತು. ಕಥೆ ನಾಗಾಲೋಟದಿಂದ ಓಡುವುದು ಗುಣವಾದರೂ, ಉದ್ದಿಷ್ಟ ಪರಿಣಾಮವನ್ನು ಮೂಡಿಸಿ, ಓದುಗರಲ್ಲಿ ನೆಲೆಗೊಳಿಸುವಲ್ಲಿ, ಇದು ನ್ಯೂನತೆಯಾಗಿದೆ. ಹಾಗೆಯೇ, ಬಯಲಾಟದ ಪುಟ್ಟ ಅಟ್ಟದಮೇಲೆ, ಹಿಡಿಸಲಾರದಷ್ಟು ಜನ ನಿಂತುಕೊಂಡಂತೆ, ಇಲ್ಲಿನ ಹೇರಳ ಪಾತ್ರ ಸಂಖ್ಯೆ, ತರುಬಿ ನಿಂತಂತಾಗಿದೆ. ಶಿವಾಜಿಗೆ ಧರ್ಮರಕ್ಷೆಯನ್ನಿತ್ತ ರಾಮದಾಸರಂತೆ, ಶಾಂತವೀರಸ್ವಾಮಿಗಳೆನ್ನುವವರು ಚನ್ನಮ್ಮನಿಗೆ ವೀರದೀಕ್ಷೆಯಿತ್ತು, ಧರ್ಮರಕ್ಷೆಯಿತ್ತು ಬಂಡಾಯದಲ್ಲಿ ನೆರವಾದರೆಂಬುದು ಜನಜನಿತವಾಗಿದ್ದರೂ, ಆ ಸ್ಥಾನದಲ್ಲಿ ಸದಾಶಿವಶಾಸ್ತ್ರಿಗಳೆಂಬ ಕಲ್ಪಿತ ಪಾತ್ರವನ್ನು ತಂದಿರುವುದರ ಔಚಿತ್ಯ ವಿಚಾರಣೀಯ. ಅಂದಿನ ಛಿದ್ರನಾಯಕತ್ವ, ಯುದ್ಧ, ಅಂತಃಕಲಹ, ಜೊತೆಗೆ ಅಂದಿನ ದಿನನಿತ್ಯದ ಜನಜೀವನ—ಇನ್ನೂ ಸಮರ್ಪಕವಾಗಿ ಚಿತ್ರಿತವಾಗಬೇಕಿತ್ತು ಎನಿಸುತ್ತದೆ. ಇಂಗ್ಲಿಷ್ ಕ್ಯಾಪ್ಟನ್‌ಗಳು ನಿರರ್ಗಳವಾದ ಶುದ್ಧ ಕನ್ನಡ ಮಾತನಾಡುವುದೂ, ಉತ್ತರ ಕರ್ನಾಟಕದ ಜನ, 'ಸರಳ ಮೈಸೂರು ಕನ್ನಡ' ಮಾತನಾಡುವುದು ಸಹಜವೆ? ಮುಖಚಿತ್ರ ಕನ್ನಡರಾಣಿ ಚನ್ನಮ್ಮನನ್ನು ನೆನಪಿಗೆ ತರದೆ, 'ಬೀಬಿ'ಯೊಬ್ಬಳ ಚಿತ್ರದಂತಿದೆ!!

ಅಂತೂ, ಅ.ನ.ಕೃ. ಅವರು ಚಾರಿತ್ರಿಕ ಕಾದಂಬರಿಯ 'ಟ್ರೈಲರ್' ಬಿಟ್ಟಿದ್ದಾರೆ, ಸಂಪೂರ್ಣ 'ಚಿತ್ರಪಟ'ಕ್ಕಾಗಿ ಓದುಗರು ಕಾದಿದ್ದಾರೆ. ಲೇಖಕರೂ ಹಾಗೂ ಪ್ರಕಾಶಕರೂ ಪ್ರಶಂಸನೀಯರು.

—ಎಸ್. ಎಂ. ವೃಷಭೇಂದ್ರಸ್ವಾಮಿ.

ವಸ್ತುಕೋಶ

ಇಂಡಿಯನ್ ಹಿಸ್ಟಾರಿಕಲ್ ರಿಕಾರ್ಡ್ಸ್ ಕಮೀಷನ್ನಿನ ಮೂವತ್ತೊಂದನೆಯ ಅಧಿವೇಶನ, ಮೈಸೂರು

ಆಧುನಿಕ ಭಾರತದ ಚರಿತ್ರೆಯ ಪತ್ರಲೇಖನಗಳ ಸಂಗ್ರಹ ಮತ್ತು ಅವುಗಳ ಸಂಶೋಧನೆ ಮತ್ತು ಪ್ರಕಟನ ಕಾರ್ಯದಲ್ಲಿ ನಿರತವಾಗಿರುವ ಕೇಂದ್ರ ಸರ್ಕಾರದ ವಿದ್ಯಾ ಇಲಾಖೆಯ ಅಂಗಸಂಸ್ಥೆಯಾದ ಇಂಡಿಯನ್ ಹಿಸ್ಟಾರಿಕಲ್ ರಿಕಾರ್ಡ್ಸ್ ಕಮೀಷನ್ನಿನ ಮೂವತ್ತೊಂದನೆಯ ಅಧಿವೇಶನವು ಮೈಸೂರು ವಿಶ್ವವಿದ್ಯಾನಿಲಯದ ಆಹ್ವಾನದ ಮೇಲೆ ಜನವರಿ ೨೫ ಮತ್ತು ೨೬ ದಿನಾಂಕಗಳಲ್ಲಿ ಮೈಸೂರಿನಲ್ಲಿ ಕ್ರಾಫರ್ಡ್ ಹಾಲಿನಲ್ಲಿ ಸಮಾವೇಶಗೊಂಡಿದ್ದಿತು. ಅಧಿವೇಶನದಲ್ಲಿ ಭಾಗವಹಿಸಲು ಭಾರತದ ನಾನಾ ಭಾಗಗಳಿಂದ ಸುಮಾರು ಎಪ್ಪತ್ತು ಮಂದಿ ಪ್ರಖ್ಯಾತ ಇತಿಹಾಸಜ್ಞರೂ ಲೇಖಾಸಂಗ್ರಹಾಲಯಗಳ ಅಧಿಕಾರಿಗಳೂ ಬಂದಿದ್ದರು. ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸುತ್ತಾ ಮೈಸೂರಿನ ಶ್ರೀಮನ್ಮಹಾರಾಜರವರು ಈ ರೀತಿ ಅಪ್ಪಣೆ ಕೊಡಿಸಿದರು: "ಕಳೆದ ಮೂವತ್ತು ವರ್ಷಗಳಿಂದ ನೀವು ಯಶಸ್ವಿಯಾದ ಕೆಲಸವನ್ನು ಶ್ರಮವಹಿಸಿ, ಶ್ರದ್ಧೆಯಿಂದ ಮಾಡುತ್ತಿದ್ದೀರಿ. ನೀವು ಮಾಡುತ್ತಿರುವ ಕೆಲಸವು ಇತರ ಯಾವ ವೈಜ್ಞಾನಿಕ ಸಂಸ್ಥೆಯು ನಡೆಸುತ್ತಿರುವ ಮಹತ್ವಸಾಧನೆಗೂ ಕಡಿಮೆಯಿಲ್ಲ. ಇದು ಅಷ್ಟೇ ಪ್ರಾಮುಖ್ಯವಾಗಿದೆ." ಇಂದು ಚರಿತ್ರಕಾರರು ಸಾಧಿಸಬೇಕಾದ ಕಾರ್ಯವೇನೆಂಬುದನ್ನು ತಿಳಿಸುತ್ತಾ "ಭಾರತದ ಚರಿತ್ರೆಯಲ್ಲಿ ಬ್ರಿಟಿಷರ ಆಳ್ವಿಕೆಯ ಅಧ್ಯಾಯವು ಮುಗಿದುಹೋಗಿದೆ. ಐತಿಹಾಸಿಕ ದೃಷ್ಟಿಯಿಂದ ಈ ಅಧ್ಯಾಯಕ್ಕೆ ಸಂಬಂಧಪಟ್ಟ ವಿಚಾರಗಳನ್ನು ನಿರ್ಧರಿಸಿ ಸರಿಯಾದ ತೀರ್ಮಾನಕ್ಕೆ ಬರಬೇಕು. ಬಹುಮಟ್ಟಿಗೆ ಆಂಗ್ಲೇಯ ಚರಿತ್ರಕಾರರೇ ಬ್ರಿಟಿಷ್ ಇಂಡಿಯಾ ಚರಿತ್ರೆಯನ್ನು ಬರೆದಿರುತ್ತಾರೆ. ಅವರ ಐತಿಹಾಸಿಕ ದೃಷ್ಟಿಯೂ, ಭಾವನೆಗಳೂ, ಅಭಿಪ್ರಾಯಗಳೂ, ತೀರ್ಮಾನಗಳೂ ಸ್ವಪಕ್ಷಪಾತದಿಂದ ಕೂಡಿರುವುದು ಸಹಜವಾಗಿಯೇ ಇದೆ. ಇಂತಹ ಪರಿಸ್ಥಿತಿಯಲ್ಲಿ ಭಾವಾತಿರೇಕಕ್ಕಾಗಲಿ, ಮನೋದ್ವೇಗಕ್ಕಾಗಲಿ, ದ್ವೇಷಾಸೂಯೆಗಳಿಗಾಗಲಿ ಎಡೆಗೊಡದೆ ಈ ಪರ್ವಕಾಲದ ಚರಿತ್ರಾಂಶಗಳನ್ನೂ ವೈಜ್ಞಾನಿಕ ರೀತಿಯಲ್ಲಿ ನಿಷ್ಪಕ್ಷಪಾತವಾಗಿ ವಿಮರ್ಶೆಮಾಡಿ ನಾಡಿನ ಚರಿತ್ರೆಯನ್ನು ಮರಳಿ ರಚಿಸಿದರೆ ಅದು ನಮ್ಮ ತಪ್ಪು ಅಭಿಪ್ರಾಯಗಳನ್ನು

ನಿರ್ಮೂಲಮಾಡಿ ನಮಗೆ ಹೊಸ ಬೆಳಕನ್ನು ಕೊಡಬಲ್ಲುದು. ಈ ದೃಷ್ಟಿಯಿಂದ ಐತಿಹಾಸಿಕ ದಾಖಲೆಗಳನ್ನು ಸಂಗ್ರಹಿಸಿ ಸುವ್ಯವಸ್ಥಿತವಾಗಿ ಅವುಗಳನ್ನು ಇಡುವುದು ಅಗತ್ಯ. ಈ ರೀತಿ ಇಡುವುದರಿಂದ ಸರ್ಕಾರಗಳು ಇಂದಿನ ಅನೇಕ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ಹಿಂದಿನ ಅನುಭವಗಳು ಮಾರ್ಗದರ್ಶನವಾಗುತ್ತವೆ" ಎಂದು ನುಡಿದರು. ದೇಶದ ಎಲ್ಲಾ ಭಾಗಗಳಲ್ಲಿಯೂ ಆಲೇಖಾಸಂಗ್ರಹಾಲಯಗಳನ್ನು ಏರ್ಪಡಿಸುವುದು ಮತ್ತು ಅವುಗಳಿಗೆ ತರಪೇತು ಹೊಂದಿದ ದಕ್ಷರಾದ ಅಧಿಕಾರಿಗಳನ್ನೂ ಸಿಬ್ಬಂದಿಯನ್ನೂ ನಿಯಮಿಸಬೇಕಾದ ಅಗತ್ಯವನ್ನು ಒತ್ತಿ ಹೇಳಿ ಇದಕ್ಕಾಗಿ ಪಂಚವಾರ್ಷಿಕ ಯೋಜನೆಯಲ್ಲಿ ತಕ್ಕ ವ್ಯವಸ್ಥೆಯಾಗಬೇಕೆಂದು ತಿಳಿಸಿದರು."

ಮೈಸೂರಿನ ವಿದ್ಯಾಮಂತ್ರಿಗಳೂ ಸ್ವಾಗತ ಸಮಿತಿಯ ಅಧ್ಯಕ್ಷರೂ ಆದ ಶ್ರೀ ಎ. ಜಿ. ರಾಮಚಂದ್ರರಾಯರು ಬಂದಿದ್ದ ಪ್ರತಿನಿಧಿಗಳನ್ನು ಆದರದಿಂದ ಸ್ವಾಗತಿಸಿದರು. ಅನಂತರ ಕೇಂದ್ರ ವಿದ್ಯಾಮಂತ್ರಿಗಳೂ ಕಮೀಷನನ್ನಿನ ಅಧ್ಯಕ್ಷರೂ ಆದ ಮೌಲಾನಾ ಅಬುಲ್ ಕಲಾಂ ಆಜಾದರು ತಮ್ಮ ಅಧ್ಯಕ್ಷಭಾಷಣ ಮಾಡಿದರು.[1] ಅಧ್ಯಕ್ಷಭಾಷಣದಲ್ಲಿ ಮೈಸೂರಿನ ವೈಶಿಷ್ಟ್ಯವನ್ನು ಈ ರೀತಿ ಹೊಗಳಿದರು. "ಬ್ರಿಟಿಷರ ದಿನಗಳಲ್ಲಿ ಮೈಸೂರು ಭಾರತೀಯ ಸಂಸ್ಥಾನಗಳ ಮುಂದಿನ ಸಾಲಿನಲ್ಲಿದ್ದು, ಶಿಕ್ಷಣ, ಕೈಗಾರಿಕೆ, ಮತ್ತು ಕಾರ್ಯನಿರ್ವಹಣಗಳ ವಿಷಯದಲ್ಲಿ ವಿಶಾಲಮನೋಭಾವದ ಮತ್ತು ಪ್ರಗತಿದಾಯಕ ನೀತಿಯಿಂದ ವಿಶೇಷಸ್ಥಾನ ಪಡೆದು ಸ್ವಾತಂತ್ರ್ಯವನ್ನು ಗಳಿಸಿದ ನಂತರ, ಮೈಸೂರು ಉಳಿದ ಭಾರತದೊಂದಿಗೆ ಲೀನಹೊಂದಿ ರಾಷ್ಟ್ರದ ಹೆಚ್ಚು ಪ್ರಗತಿದಾಯಕ ಮತ್ತು ಅಭಿವೃದ್ಧಿಹೊಂದಿದ ರಾಜ್ಯಗಳೊಂದಿಗೆ ತನ್ನ ಸ್ಥಾನವನ್ನು ಅಲಂಕರಿಸಿತು." ಸಿಪಾಯಿ ದಂಗೆಯನ್ನು ಪ್ರಸ್ತಾಪಿಸುತ್ತಾ "ಸಿಪಾಯಿ ದಂಗೆಯೆಂದು ಸಾಮಾನ್ಯವಾಗಿ ವರ್ಣಿಸಲಾಗಿರುವ ೧೯೫೭ ರ ಭಾರತೀಯ ಸ್ವಾತಂತ್ರ್ಯ ಸಮರದ ಬಗ್ಗೆ ನೂತನವೂ, ಪ್ರಾಮಾಣಿಕವೂ ಆದ ಇತಿಹಾಸವನ್ನು ರಚಿಸಬೇಕಾದ ಕಾಲವೀಗ ಬಂದಿದೆ. ಇನ್ನೆರಡು ವರ್ಷಗಳಲ್ಲಿ ಈ ಚಳುವಳಿಯ ಶತಮಾನೋತ್ಸವವು ಬರಲಿದೆ. ದಂಗೆಯಲ್ಲಿ ಮೊದಲು ಗುಂಡುಹಾರಿಸಿದ್ದು ೧೮೫೭ ರ ಮೇ ೧೦ ನೆಯ ದಿನಾಂಕದಂದು. ಆದುದರಿಂದ ೧೯೫೭ ರ ಮೇ ೧೦ ನೆಯ ದಿನಾಂಕದ ಹೊತ್ತಿಗೆ ಈ ಹೋರಾಟದ ಗ್ರಾಹ್ಯ ಇತಿಹಾಸವನ್ನು ಪ್ರಕಟಿಸುವುದು ಯೋಗ್ಯವಾಗಿದೆ" ಎಂದರು. ಇದಕ್ಕಾಗಿ ವಿಖ್ಯಾತ ಭಾರತೀಯ ಚರಿತ್ರಕಾರರೂ ರಾಷ್ಟ್ರೀಯ ಆಲೇಖಾಸಂಗ್ರಹಾಲಯದ ಮಾಜಿ ನಿರ್ದೇಶಕರೂ, ದೇಹಲಿ

---

[1] ಕಾರ್ಯಗೌರವದಿಂದ ಶ್ರೀ ಆಜಾದರು ಬರದಿರಲು ಅವರ ಭಾಷಣವನ್ನು ಕೇಂದ್ರ ವಿದ್ಯಾ ಇಲಾಖೆಯ ಸಹಕಾರ್ಯದರ್ಶಿಗಳಾದ ಶ್ರೀ ಆರ್. ಎಲ್. ಸೇಠಿಯವರು ಓದಿದರು.

ವಿಶ್ವವಿದ್ಯಾನಿಲಯದಲ್ಲಿ ಸ್ವಲ್ಪಕಾಲ ಉಪಕುಲಪತಿಗಳಾಗಿದ್ದವರೂ ಆದ ಡಾ|| ಎಸ್. ಎನ್. ಸೇನ್ ರವರನ್ನು ನಿಯೋಜಿಸಲಾಗಿದೆಯೆಂದು ಶ್ರೀ ಅಜಾದರು ನುಡಿದರು. ಈ ಕಾರ್ಯಕ್ಕೆ ಭಾರತ ಸರ್ಕಾರ ಎಲ್ಲಾ ನೆರವು ಮತ್ತು ಸೌಲಭ್ಯ ನೀಡಿರುವುದಲ್ಲದೆ, ಲಂಡನ್ನಿನ ಇಂಡಿಯ ಆಫೀಸಿನಿಂದಲೂ ಆಧಾರಸಾಹಿತ್ಯವನ್ನು ಒದಗಿಸಿಕೊಡಲಾಗುವುದೆಂದು ಹೇಳಿದರು. ಇದುವರೆಗಿನ ಸಾಕ್ಷಿ ಸಾಹಿತ್ಯವನ್ನು ಶ್ರೀ ಅಜಾದರು ಸ್ಥೂಲವಾಗಿ ವಿಮರ್ಶೆಮಾಡಿ, ಭಾರತೀಯ ದಂಗೆಯು ಜಾಗರೂಕತೆಯ ಯೋಜನೆಯಿಂದ ನಡೆದುದಲ್ಲವೆಂದೂ, ಅದರ ಹಿಂದೆ ಪರಿಣತಮತಿಗಳು ಇದ್ದರೆಂಬುದು ನಿಜವಲ್ಲವೆಂದೂ, ನೂರು ವರ್ಷಗಳ ಬ್ರಿಟಿಷರ ಆಡಳಿತದಿಂದ ಭಾರತೀಯರು ಬೇಸರಗೊಂಡಿದ್ದುದೇ ಈ ದಂಗೆಗೆ ಕಾರಣವೆಂದೂ, ಜನಸಮುದಾಯದ ಪ್ರತಿಭಟನೆಯ ಸಂಕೇತ ಈ ದಂಗೆಯೆಂದೂ ನುಡಿದರು.

ಮುಂದುವರೆಯುತ್ತಾ ಸಚಿವ ಅಜಾದರು "ರಾಷ್ಟ್ರೀಯ ಆಲೇಖಸಂಗ್ರಹಾಲಯವು (National Archives of India) ಇದುವರೆಗೆ ಸಾಧಿಸಿರುವ ಕಾರ್ಯವನ್ನು ಈ ರೀತಿ ವಿವರಿಸಿದರು "ವಿದೇಶಗಳಲ್ಲಿ ಭಾರತಕ್ಕೆ ಸಂಬಂಧಿಸಿದಂತೆ ಇರುವ ಐತಿಹಾಸಿಕ ರಿಕಾರ್ಡುಗಳ ಮೈಕ್ರೋಫಿಲ್ಮಿಂಗ್ ಕೆಲಸ ಪ್ರಗತಿಪರವಾಗಿ ನಡೆಯುತ್ತಿದೆ. ಭಾರತದಲ್ಲಿರುವ ಅಧಿಕೃತ ರಿಕಾರ್ಡ್‌ಗಳ ಮೈಕ್ರೋಫಿಲ್‌ಮಿಂಗ್ ಮುನ್ನಡೆದಿದೆ. ಈ ವರ್ಷ ವಿದೇಶಾಂಗ ಇಲಾಖೆಯ ಮೂರು ಲಕ್ಷ ಪುಟಗಳೂ, ಹೋಂ ಇಲಾಖೆಯ ಒಂದೂವರೆ ಲಕ್ಷ ಪುಟಗಳೂ ಫಿಲ್ಮಾಗಿವೆ. ಮೆಕಾರ್ಟ್ನೆ ಕಾಗದಪತ್ರಗಳೂ ಹಿಂಡ್‌ಮನ್‌ರ ಹೋಲೋಗ್ರಾಫ್ ಪತ್ರಗಳು, ಪ್ರಮುಖ ಪರ್ಷಿಯನ್, ಅರಾಬಿಕ್ ಮತ್ತು ಉರ್ದು ಹಸ್ತಪ್ರತಿಗಳು ಇಲಾಖೆಯಿಂದ ಸಂಗ್ರಹಿಸಲ್ಪಟ್ಟಿವೆ. ಚಾರಿತ್ರಿಕ ಸಂಶೋಧನೆಗೆ ಆರು ಮಂದಿ ವಿದ್ಯಾರ್ಥಿಗಳಿಗೆ ವೇತನ ಕೊಡಲಾಗಿದೆ. ಪ್ರಾಂತ್ಯಗಳಲ್ಲಿಯೂ ಇದೇ ರೀತಿ ವೇತನಗಳನ್ನು ಕೊಟ್ಟು ಸಂಶೋಧನೆಗೆ ಪ್ರೋತ್ಸಾಹ ಕೊಡುವುದು ಅಗತ್ಯವಾಗಿದೆ ಮತ್ತು ಸರ್ಕಾರಗಳು ತಮ್ಮ ರಿಕಾರ್ಡ್ ಆಫೀಸುಗಳನ್ನು ಆಧುನಿಕ ರೀತಿಯಲ್ಲಿ ಇಡಬೇಕಾದುದು ಅವಶ್ಯಕ" ಎಂದು ಹೇಳಿದರು.

ಅಧಿವೇಶನದ ಅಂಗವಾಗಿ ಐತಿಹಾಸಿಕ ದಾಖಲೆ ಪತ್ರಗಳ ಪ್ರದರ್ಶನವೊಂದು ಏರ್ಪಾಡಾಗಿದ್ದಿತು. ಕೇಂದ್ರ ಸರ್ಕಾರದ ರಾಷ್ಟ್ರೀಯ ಆಲೇಖಾಸಂಸ್ಥೆ, ವಿವಿಧ ಸಂಸ್ಥಾನಗಳ ಆಲೇಖಾಕಚೇರಿಗಳು, ಡಿಫೆನ್ಸ್ ಇಲಾಖೆ, ಮೈಸೂರು ಸರ್ಕಾರ, ಮೈಸೂರು ಪ್ರಾಚ್ಯ ಸಂಶೋಧನ ಸಂಸ್ಥೆ, ಪ್ರಾಚ್ಯ ವಸ್ತು ವಿಮರ್ಶನ ಇಲಾಖೆ ಮತ್ತು ಕೆಲವು ಖಾಸಗಿ ಮನೆತನದವರು ಈ ವಸ್ತು ಪ್ರದರ್ಶನದಲ್ಲಿ ಭಾಗವಹಿಸಿದ್ದರು. ಅದರ ಆರಂಭೋತ್ಸವನ್ನು ಮೈಸೂರಿನ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು

ನೆರವೇರಿಸಿದರು. ತಮ್ಮ ಭಾಷಣದಲ್ಲಿ ನಿಜವಾದ ಇತಿಹಾಸದ ಸ್ವರೂಪವೇನು ಎಂಬ ವಿಷಯವನ್ನು ಪ್ರಸ್ತಾಪಿಸುತ್ತಾ, "ಇತಿಹಾಸವು ಕೇವಲ ಯುದ್ಧಗಳ, ರಾಜ ಪರಂಪರೆಯ ಅಥವಾ ಪರಾಕ್ರಮಶಾಲಿ ವ್ಯಕ್ತಿಗಳ ಕಥೆಯಲ್ಲ. ಇಡೀ ಜನತೆಯ ಸಾಮಾಜಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಬೆಳವಣಿಗೆಯನ್ನೂ ಒಳಗೊಂಡಿದೆ" ಎಂದರು. ಈ ವಿಷಯಗಳನ್ನೊಳಗೊಂಡಿರುವ ದಾಖಲೆಗಳು ರಾಷ್ಟ್ರಜೀವನದ ಇತಿಹಾಸವನ್ನು ತಿಳಿಸುವುದರಿಂದ ಅವುಗಳನ್ನು ಸುವ್ಯವಸ್ಥಿತ ರೀತಿಯಲ್ಲಿ ಕಾಪಾಡುವುದು ಅಗತ್ಯವೆಂದರು. ಈ ಕ್ಷೇತ್ರದಲ್ಲಿ ಮೈಸೂರು ಸಾಧಿಸಿರುವ ಕೆಲಸವನ್ನು ಕುರಿತು ಮಾತನಾಡುತ್ತಾ "ಇನ್ನೂ ಪರಿಶೋಧಿಸಲ್ಪಡಬೇಕಾದ ಐತಿಹಾಸಿಕ ವಸ್ತುಗಳು ಮೈಸೂರು ಸಂಸ್ಥಾನದ ಎಲ್ಲಾ ಕಡೆಗಳಲ್ಲಿಯೂ ಹೆಚ್ಚಾಗಿ ದೊರೆಯುತ್ತವೆ. ಪ್ರಾಂತೀಯ ಇತಿಹಾಸ ದಾಖಲೆಗಳ ಪರಿಶೀಲನಾಸಮಿತಿಯವರೂ ಪ್ರಾಚ್ಯ ವಸ್ತು ಸಂಶೋಧನಾ ಸಂಸ್ಥೆಯವರೂ ಕನ್ನಡ ಸಾಹಿತ್ಯ ಪರಿಷತ್ತಿನವರೂ ಸಂಸ್ಕೃತ, ಕನ್ನಡ, ಮರಾಠಿ, ಉರ್ದು, ಮತ್ತು ಪರ್ಷಿಯನ್ ಭಾಷೆಗಳಲ್ಲಿರುವ ಪ್ರಮುಖ ಕರಡು ಪ್ರತಿಗಳನ್ನು ಪತ್ತೆಮಾಡುವುದು, ಶೇಖರಿಸುವುದು, ಈ ಕಾರ್ಯದಲ್ಲಿ ಅಮೂಲ್ಯವಾದ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಕರಡು ಪತ್ರಗಳನ್ನು ಪಡೆಯುವುದರಲ್ಲಿಯೂ ಮತ್ತು ಅವುಗಳನ್ನು ವೈಜ್ಞಾನಿಕ ರೀತಿಯಲ್ಲಿ ಕಾಪಾಡುವುದರಲ್ಲಿಯೂ ಮೈಸೂರು ಸತತವಾದ ಅಲ್ಲದೆ ಪ್ರಗತಿಪರವಾದ ನೀತಿಯನ್ನು ಅನುಸರಿಸುತ್ತಿದೆ" ಎಂದರು. ಇಂದು ನಮ್ಮ ಚರಿತ್ರೆಯ ಸತ್ಯದರ್ಶನಕ್ಕೆ ಇದ್ದ ಆತಂಕಗಳು ಮಾಯವಾಗಿವೆಯೆಂದು ಹೇಳಿ ಸ್ವಾತಂತ್ರ್ಯ ಬಂದಮೇಲೆ ಇಂಡಿಯಾ ದೇಶದ ಚರಿತ್ರೆಯನ್ನು ಪುನಃ ಬರೆಯುವ ಅವಶ್ಯಕತೆಯನ್ನು ಸಮರ್ಥಿಸಿದರು.

ಅಧಿವೇಶನದ ಎರಡನೆಯ ದಿನ ಚರಿತ್ರಕಾರರು ತಾವು ಬರೆದಿದ್ದ ಲೇಖನಗಳನ್ನು ಓದಿ ಚರ್ಚಿಸಿದರು. ಕಮೀಷನ್ನಿಗೆ ಕಳುಹಿಸಿದ್ದ ಲೇಖನಗಳಲ್ಲಿ ಕೆಲವು ಮುಖ್ಯ ಲೇಖನಗಳ ವಿಷಯವನ್ನು ಇಲ್ಲಿ ಸೂಚಿಸಬಹುದು.

(1) Some contemporary records relating the movement of 1857-9, K. K. Datta.

(2) The Mughals and the Gherwal Rulers,— G. N. Saletore.

(3) Franco-Mysore Relations from 1785-93—S. P. Sen.

(4) Lord Curzon's impressions of Indian Administration,— Sukumar Bhattacharya.

(5) Nawabs of Carnatic and Hindu Temples,—T. V. Mahalingam.

(6) A Squad of Aurangzeb,—Sushil Chandra De.

(7) A few unpublished letters of Sir Thomas Munro,—Sajanlal.

(8) Note on Belagutti Palegars,—Dr. M. V. Krishna Rao.
(9) Mysore Rising of 1830,—Dr. B. A. Saletore.

ಅದೇ ದಿನ ಕಮೀಷನ್ನಿನ ಅಂಗವಾದ ಸಂಶೋಧನ ಮತ್ತು ಪ್ರಕಟನ (Research and Publication Committee) ಸಮಿತಿ, ಡಾ|| ಆರ್. ಸಿ. ಮುಜುಮ್‌ದಾರ್ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಹಲವಾರು ನಿರ್ಣಯಗಳನ್ನು ಅಂಗೀಕರಿಸಿತು.

೨೫ ನೇ ತಾರೀಖಿನ ಸಂಜೆ ಮೈಸೂರಿನ ಶ್ರೀಮನ್ಮಹಾರಾಜರವರು ಸಮ್ಮೇಳನಕ್ಕೆ ಬಂದಿದ್ದ ಅತಿಥಿಗಳ ಗೌರವಾರ್ಥವಾಗಿ ಲಲಿತಮಹಲ್ ಅರಮನೆಯಲ್ಲಿ ಒಂದು ಸತ್ಕಾರಕೂಟ ಏರ್ಪಡಿಸಿದ್ದರು. ಅಧಿವೇಶನದ ಎರಡು ದಿನವೂ ನೃತ್ಯ, ಸಂಗೀತ ಮತ್ತು ನಾಟಕಗಳ ಮನೋರಂಜನೆಯ ಕಾರ್ಯಕ್ರಮಗಳು ಏರ್ಪಾಡಾಗಿದ್ದುವು. ಮೂರನೆಯ ದಿನ ಬಂದಿದ್ದ ಅತಿಥಿಗಳು ಮೈಸೂರಿನ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿಯಿತ್ತರು. ಮೈಸೂರಿನ ಅಧಿವೇಶನವು ಸಂಪೂರ್ಣ ಯಶಸ್ವಿಯಾಗಿ ಕೊನೆಗೊಳ್ಳಲು ಸರ್ಕಾರ ಇತ್ತ ನೆರವು ಮತ್ತು ವಿಶ್ವವಿದ್ಯಾನಿಲಯದ ಉಪಸ್ಥಾನಪತಿಗಳೂ, ರಿಜಿಸ್ಟ್ರಾರ್ ರವರೂ, ಮಹಾರಾಜ ಕಾಲೇಜಿನ ಪ್ರಿನ್ಸಿಪಾಲರೂ, ಹಲವಾರು ಉಪಸಮಿತಿಗಳ ಸದಸ್ಯರೂ ಇತ್ತ ಸಹಕಾರ ಸಹಾನುಭೂತಿಗಳೇ ಕಾರಣ. ಎಲ್ಲಕ್ಕಿಂತ ಮಿಗಿಲಾಗಿ ಕಾರ್ಯದರ್ಶಿಗಳಾದ ಡಾ|| ಬಿ. ಎ. ಸಾಲತೊರೆ ಮತ್ತು ಸ್ಥಳೀಯ ಕಾರ್ಯದರ್ಶಿಗಳಾದ ಇತಿಹಾಸ ಪ್ರಾಧ್ಯಾಪಕರಾದ ಡಾ|| ಎಂ. ವಿ. ಕೃಷ್ಣರಾವ್ ಕಾರ್ಯದಕ್ಷತೆ ಪ್ರಶಂಸನೀಯವಾದುದು.

—ಡಿ. ಯನ್. ಅಚ್ಯುತರಾವ್.

*
* *

ಶ್ರೀ ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ., ಅವರ ಭಾವಚಿತ್ರದ ಅನಾವರಣ

ಮೈಸೂರು ಮಹಾರಾಜ ಕಾಲೇಜಿನ ಕನ್ನಡ ಸಂಘದ ಆಶ್ರಯದಲ್ಲಿ ದಿನಾಂಕ—೭-೧-೫೫ ರಂದು ಶ್ರೀ ಕೃಷ್ಣಶಾಸ್ತ್ರಿಗಳವರ ಭಾವಚಿತ್ರದ ಅನಾವರಣ ಮಹೋತ್ಸವ ಜರುಗಿತು. ಅಂದಿನ ಸಭಾಧ್ಯಕ್ಷತೆಯನ್ನು ಮಹಾರಾಜ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಶ್ರೀ ಕೆ. ವಿ. ಪುಟ್ಟಪ್ಪ, ಎಂ.ಎ., ಅವರು ವಹಿಸಿದ್ದರು. ಮೈಸೂರಿನ ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಹೊಂಬೇಗೌಡ, ಬಿ.ಎ., ಎಲ್‌ಎಲ್.ಬಿ., ಅವರು ಭಾವಚಿತ್ರವನ್ನು ಅನಾವರಣಮಾಡಲು ಒಪ್ಪಿ ದಯಮಾಡಿಸಿದ್ದರು. ಶ್ರೀ ಶಾಸ್ತ್ರಿಗಳವರ ಭಾವಚಿತ್ರವನ್ನು ಶ್ರೀ ಡಿ. ಎಲ್. ನರಸಿಂಹಾಚಾರ್ ಎಂ.ಎ., ಅವರು ಕನ್ನಡ ಸಂಘಕ್ಕೆ ದಯಪಾಲಿಸಿದ್ದರು. ಸಭೆಯ ಕಾರ್ಯಕಲಾಪಗಳು ಜೂನಿಯರ್ ಬಿ.ಎ. ಮಂದಿರದಲ್ಲಿ ಸಂಜೆ ಆರು ಗಂಟೆಗೆ ಆರಂಭವಾದವು. ಶ್ರೀ

ಶಾಸ್ತ್ರಿಗಳವರ ಶಿಷ್ಯರೂ ಅಭಿಮಾನಿಗಳೂ ಕನ್ನಡ ಸಂಘದ ಸದಸ್ಯರೂ ಕಾಲೇಜಿನ ಅಧ್ಯಾಪಕರೂ ವಿದ್ಯಾರ್ಥಿಗಳೂ ಸಭೆಗೆ ದಯಮಾಡಿಸಿದ್ದರು.

ಅಧ್ಯಕ್ಷರು ಶ್ರೀ ಹೊಂಬೇಗೌಡರನ್ನು ಹೀಗೆ ಪರಿಚಯಮಾಡಿಕೊಟ್ಟರು : "ಈ ಸಮಾರಂಭವನ್ನು ನೆರವೇರಿಸಲು ವಿಶ್ವಾಸದಿಂದ ಒಪ್ಪಿ ಬಂದಿರುವ ಶ್ರೀ ಹೊಂಬೇಗೌಡರಿಗೆ ನಿಮ್ಮೆಲ್ಲರ ಪರವಾಗಿ ನಾನು ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಅವರ ಕೆಲಸ, ಪ್ರಪಂಚದಲ್ಲಿ ತುಂಬ ಸಂಕಟಕರವಾದುದು, ಕಂಟಕಮಯವಾದುದು. ಆಸ್ಪತ್ರೆ, ಕೋರ್ಟು, ಇವೆರಡೂ ಮನುಷ್ಯಜೀವಿತದ ಎರಡು ಪ್ರಬಲವಾದ ಆಸುರೀ ಶಕ್ತಿಗಳ ಪ್ರತಿನಿಧಿಗಳು. ಆದರೆ ವೈದ್ಯರೂ ನ್ಯಾಯಾಧೀಶರೂ ದೈವೀಶಕ್ತಿಯ ಪ್ರತಿನಿಧಿಗಳಾದರೆ ಲೋಕಕ್ಕೆ ಕ್ಷೇಮ. ಒಮ್ಮೊಮ್ಮೆ ಆಸುರೀ ಶಕ್ತಿಗಳು ಸತ್‌ಶಕ್ತಿಯ ಮುಸುಕು ಹಾಕಿಕೊಂಡು ಬರುತ್ತವೆ. ಅಂತಹ ಕಾಲದಲ್ಲಿ ನ್ಯಾಯಾಧೀಶರು ಎಚ್ಚರಿಕೆಯಿಂದ ತೀರ್ಪುಕೊಡಬೇಕಾಗುತ್ತದೆ. ನಿಷ್ಪಕ್ಷಪಾತವಾದ ತೀರ್ಪುಕೊಡಲು ಪ್ರತಿಭೆ, ವಿದ್ವತ್ತು, ದೈವಕೃಪೆಗಳು ಬೇಕಾಗುತ್ತವೆ. ನ್ಯಾಯಾಧೀಶ ಎಷ್ಟು ವಿನಯವಂತನಾದರೂ ಸಾಲದು. ನನ್ನ ಮಿತ್ರರಾದ ಶ್ರೀ ಹೊಂಬೇಗೌಡರು ವಿನಯದ ಮೂರ್ತಿಯಾಗಿದ್ದಾರೆ. ಶ್ರೀ ಎ. ಆರ್. ಕೃಷ್ಣಶಾಸ್ತ್ರಿಗಳ ವಿದ್ಯಾರ್ಥಿಗಳಾಗಿದ್ದ ಇವರು ಇಂದು ತಮ್ಮ ಗುರುಗಳ ವಿಷಯವಾಗಿ ನಮಗೆ ಪರಿಚಯಮಾಡಿಕೊಡುವವರಾಗಿದ್ದಾರೆ."

ಆ ಬಳಿಕ ಶ್ರೀ ಹೊಂಬೇಗೌಡರು ತಮ್ಮ ಗುರುಗಳಾದ ಶ್ರೀ ಕೃಷ್ಣಶಾಸ್ತ್ರಿಗಳ ಗುಣಗಾನಮಾಡುತ್ತ, ತಮ್ಮ ಮತ್ತು ಅವರ ನಡುವಣ ಗುರುಶಿಷ್ಯ ಸಂಬಂಧವನ್ನು ಕುರಿತು ಹೀಗೆ ಹೇಳಿದರು :

"ಹಿರಿಯರೆ, ಸೋದರರೆ, ಇಂದಿನ ಸಮಾರಂಭಕ್ಕೆ ಬಂದು ಮಾತನಾಡುವುದಕ್ಕೆ ನನಗಿರುವ ಯೋಗ್ಯತೆ ಎಂದರೆ ಇಪ್ಪತ್ತೈದು ವರ್ಷಗಳ ಹಿಂದೆ ಶ್ರೀ ಶಾಸ್ತ್ರಿಗಳವರ ಶಿಷ್ಯನಾಗಿದ್ದದ್ದೇ. ಅವರ ಶಿಷ್ಯರಲ್ಲಿ ಅನೇಕರು ಕವಿಗಳೂ ಸಾಹಿತಿಗಳೂ ಆಗಿದ್ದಾರೆ. ೧೯೩೧ ರಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ನಾನು ಅವರ ಶಿಷ್ಯನಾಗಿದ್ದದ್ದು ನನಗೆ ಒದಗಿದ್ದ ಒಂದು ದೊಡ್ಡ ಸದವಕಾಶ. ಆ ಕಾಲದಲ್ಲಿ ಕನ್ನಡವೆಂದರೆ ವಿದ್ಯಾರ್ಥಿಗಳಿಗೆ ಹೆಚ್ಚು ಅಭಿಮಾನವಿರಲಿಲ್ಲ. ಕನ್ನಡವೆಂದರೆ ಗಲಾಟೆಮಾಡುವ ತರಗತಿ ಎನ್ನುವ ಮನೋಭಾವ ಬೆಳೆದಿತ್ತು. ಶೇಕಡ ೩೫ ಬಂದರೆ ಸಾಕು ಎನ್ನುವ ಕಾಲ ಅದು, ನಾನೂ ಅಂತಹ ವಿದ್ಯಾರ್ಥಿಯೇ ಆಗಿದ್ದೆ. ೧೯೨೯ ರಲ್ಲಿ ನಾನು ಕಾಲೇಜನ್ನು ಸೇರಿದಾಗ ಕನ್ನಡ ತರಗತಿಯಲ್ಲಿ ೯೦ ಜನ ವಿದ್ಯಾರ್ಥಿಗಳಿದ್ದರು. ಮೊದಲನೆಯ ದಿನ ಶಾಸ್ತ್ರಿಗಳು ತರಗತಿಗೆ ಬಂದಾಗ ಉಳಿದ ಪಂಡಿತರಂತೆಯೇ ಇವರೂ ಎಂದು ನಮ್ಮ ಪಾಡಿಗೆ ನಾವು ಗಲಾಟೆ ಮಾಡಿದೆವು. ಆಗ ಶಾಸ್ತ್ರಿಗಳು ಇಂಗ್ಲಿಷಿನಲ್ಲಿ ಶಿಸ್ತಿನ ವಿಷಯ

ವಾಗಿ ಒಂದು ಚಿಕ್ಕ ಭಾಷಣಮಾಡಿದರು. 'ಇವೇನು! ಕನ್ನಡ ಪಂಡಿತರಿಗೆ ಇಂಗ್ಲೀಷೂ ಬರುತ್ತವೆಯೆ?' ಎಂಬ ಆಶ್ಚರ್ಯ ವಿದ್ಯಾರ್ಥಿಗಳಿಗುಂಟಾಗಿ ಒಂದು ರೀತಿಯ ಗೌರವ ಭೀತಿಗಳು ಹುಟ್ಟಿದವು. ಅಂದಿನಿಂದ ಇನ್ನಾವ ತರಗತಿಯಲ್ಲಿಯೂ ಕಾಣದ 'Pindrop Silence' ಇರುತ್ತಿತ್ತು. ಶಾಸ್ತ್ರಿಗಳ ತರಗತಿಯಲ್ಲಿ ಇದಕ್ಕೆ ಕಾರಣ ಅವರು ರಸವತ್ತಾಗಿ ಹೇಳುತ್ತಿದ್ದ ಬೋಧನಕ್ರಮವೇ ಎಂದು ಹೇಳಬೇಕು.

ನಮಗೆ ಪಾಠಹೇಳುತ್ತಿದ್ದದ್ದು ಶಾಕುಂತಲ ನಾಟಕ ಮತ್ತು ದೇವಿ ಚೌಧುರಾಣಿ ಕಾದಂಬರಿ. ಶಾಕುಂತಲ ನಾಟಕವನ್ನೂ ಅದರ ವಿಮರ್ಶೆಯನ್ನೂ ನಾನೆಂದಿಗೂ ಮರೆಯಲಾರೆ. ನಾನಂತೂ ಒಂದು ತರಗತಿಗೂ ಚಕ್ಕರ್ ಕೊಡುತ್ತಿರಲಿಲ್ಲ. ಅಂತಹ ಐಂದ್ರಜಾಲಿಕ ಶಕ್ತಿ ಶಾಸ್ತ್ರಿಗಳ ಪಾಠದಲ್ಲಿತ್ತು.

First Terminal Examination ಬಂತು. ಪರೀಕ್ಷೆ ಮುಗಿದನಂತರ ಶಾಸ್ತ್ರಿಗಳ ತರಗತಿ ಬಂದಾಗ ನನ್ನ ಉತ್ತರ ಪತ್ರಿಕೆಯನ್ನು ಓದಿ, ಒಂದು ಪ್ರಶ್ನೆಯ ಉತ್ತರಕ್ಕೆ ೨೫ ಅಂಕಗಳಿಗೆ ೨೫ ಅಂಕಗಳನ್ನೂ ಕೊಟ್ಟು ನನ್ನನ್ನು ಪ್ರಶಂಸಿಸಿದರು. ತರಗತಿ ಮುಗಿದೊಡನೆ ನನ್ನ ಬೆನ್ನುತಟ್ಟಿ 'ನಿನಗೆ ಕನ್ನಡದಲ್ಲಿ ಅಭಿಮಾನವಿದೆ. ನೀನು ಇನ್ನೂ ಕೆಲವು ಉತ್ತಮ ವಿಮರ್ಶೆಯ ಪುಸ್ತಕಗಳನ್ನು ಓದು' ಎಂದು ಒಂದು ಪುಸ್ತಕಗಳ ಪಟ್ಟಿಯನ್ನೇ ಕೊಟ್ಟರು. ಅಂದಿನಿಂದ ನಾನು ಅವರ ಹತ್ತಿರದವನಾದೆ. ಅವರ ನಿರಾಡಂಬರ ಜೀವನ, ನನ್ನ ಕಣ್ಣಿಗೆ ಕಟ್ಟಿದಂತಿದೆ. ಅಂತಹ ಮೃದುಸ್ವಭಾವದ ಗುರುಗಳನ್ನು ನನ್ನ ಜೀವನದಲ್ಲಿ ನೋಡಿದುದು ವಿರಳ. ಎಲ್ಲ ಕೆಲಸದಲ್ಲಿಯೂ ವಿಶೇಷ ಶ್ರದ್ಧೆಯನ್ನು ವಹಿಸುತ್ತಿದ್ದ ಅವರ ಕರ್ತವ್ಯನಿಷ್ಠೆ ನನ್ನ ಜೀವನದಲ್ಲಿ ಮೇಲುಪಂಕ್ತಿಯಾಗಿದೆ. ಅವರು ನನ್ನಂತೆಯೇ ಅನೇಕಾನೇಕ ಶಿಷ್ಯರಿಗೆ ಸ್ಫೂರ್ತಿ ನೀಡಿದ್ದಾರೆ. ಕನ್ನಡ ಸಂಘದವರು ಅವರ ಭಾವಚಿತ್ರವನ್ನು ಅನಾವರಣಮಾಡಿಸಿ ಅವರ ಸ್ಫೂರ್ತಿ ನಿರಂತರವಾಗಿ ಮುಂದೆಯೂ ಹರಿದುಬರುವಂತೆ ಮಾಡಿರುವುದು ತುಂಬ ಒಳ್ಳೆಯ ಕೆಲಸ. ನಾನು ಈ ಕಾರ್ಯದಲ್ಲಿ ಭಾಗವಹಿಸಿ ನನ್ನ ಗುರುಭಕ್ತಿಯ ಕಾಣಿಕೆಯನ್ನು ಸಲ್ಲಿಸುತ್ತಿದ್ದೇನೆ.

ಹೀಗೆ ಹೇಳಿ ಶ್ರೀ ಹೊಂಬೇಗೌಡರು ವೇದಿಕೆಯ ಮೇಲೆ ದಿವ್ಯವಾಗಿ ಅಳವಡಿಸಿದ್ದ ಶ್ರೀ ಶಾಸ್ತ್ರಿಗಳವರ ಭಾವಚಿತ್ರವನ್ನು ಸಭೆಯ ಹರ್ಷೋದ್ಗಾರ ಕರತಾಡನಗಳೊಡನೆ ಅನಾವರಣಮಾಡಿದರು.

ಬಳಿಕ ಅಂದಿನ ಅಧ್ಯಕ್ಷತೆ ವಹಿಸಿದ ಶ್ರೀ ಕುವೆಂಪು ಅವರು ಕವಿಸಹಜವಾಣಿಯಿಂದ ಶ್ರೀ ಶಾಸ್ತ್ರಿಗಳವರನ್ನು ಕುರಿತು ಆತ್ಮೀಯವಾದ ಕೆಲವು ಮಾತುಗಳನ್ನು ಆಡುತ್ತ ಹೀಗೆ ಹೇಳಿದರು :

ಶ್ರೀ ಕೃಷ್ಣಶಾಸ್ತ್ರಿಗಳವರ ಅಂತರಂಗದ ಶಿಷ್ಯರಾದ ಶ್ರೀ ಹೊಂಬೇಗೌಡರು ಗುರುಗಳ ಆತ್ಮೀಯವಾದ ಪರಿಚಯವನ್ನು ಹೃತ್ಪೂರ್ವಕವಾಗಿ ಮಾಡಿದ್ದಾರೆ. ಕೃಷ್ಣಶಾಸ್ತ್ರಿಗಳು ತಮಗೆ ತಾವೇ ಏನಾಗಿದ್ದಾರೆ ಎನ್ನುವುದನ್ನು ತಿಳಿಯಲು ಇಂತಹ ಆತ್ಮೀಯ ವಾಕ್ಯಗಳು ಸಹಾಯಮಾಡುತ್ತವೆ. ಸಮುದ್ರವನ್ನಾಗಲಿ ಪರ್ವತವನ್ನಾಗಲಿ ಪೂರ್ಣವಾಗಿ ಪರಿಚಯ ಮಾಡಿಕೊಂಡೆ ಎನ್ನುವುದು ಕಷ್ಟ. ಕಲ್ಪನಾಗೋಚರವಾದ ವೈಭವದೊಡನೆ ಅನುಭವವೇದ್ಯವಾದ ವಿಷಯವೂ ಸೇರಿ ಬಹುಮಟ್ಟಿಗೆ ಸತ್ಯದರ್ಶನವಾಗಬಹುದು. ಈ ಕಾರಣದಿಂದ ಇವರು ಅವರು ಮತ್ತೊಬ್ಬರು ಎಲ್ಲರೂ ಹೇಳುವುದನ್ನು ಗೌರವಿಸಿದರೆ ಬಹುಮಟ್ಟಿಗೆ ಒಬ್ಬ ವ್ಯಕ್ತಿಯ ಸಮ್ಯಕ್‌ದರ್ಶನಕ್ಕೆ ಸಹಾಯವಾಗಬಹುದು.

ನಾನು ತುಂಬ ಕಾಡಿನಲ್ಲಿದ್ದವ. ಪ್ರಕೃತಿಸೌಂದರ್ಯದಲ್ಲಿ ಉತ್ಕರ್ಷ, ಆನಂದ; ಗಿರಿವನದಿಂದ ಸ್ಫೂರ್ತಿ, ಇವೆಲ್ಲವೂ ನನಗೆ ಸಹಜವಾಗಿಯೇ ಬಂದವು. ಸಾಹಿತ್ಯಕ್ಕೆ ನಾಗರಿಕ ಪ್ರಯೋಜನವೂ ಇದೆ ಎಂದು ನನಗೆ ಆಗ ತಿಳಿದಿರಲಿಲ್ಲ. ನನ್ನ ಪೂಜ್ಯ ಗುರುಗಳಾದ ಶ್ರೀ ವೆಂಕಣ್ಣಯ್ಯನವರೂ ಶ್ರೀ ಕೃಷ್ಣಶಾಸ್ತ್ರಿಗಳೂ ಪ್ರಬುದ್ಧ ಕರ್ಣಾಟಕಕ್ಕೂ ಸಾಹಿತ್ಯ ಪರಿಷತ್ ಪತ್ರಿಕೆಗೂ ಲೇಖನಗಳನ್ನೂ ಬರೆ ಎಂದು ನನ್ನನ್ನು ಪ್ರೇರೇಪಿಸಿದರು. ನಾನು ನಿರ್ಲಿಪ್ತನಾಗಿಯೇ ಇದ್ದೆ. ಶ್ರೀ ಶಾಸ್ತ್ರಿಗಳವರ ಪ್ರೋತ್ಸಾಹದಿಂದ ಸಣ್ಣ ಕಥೆಯೊಂದನ್ನು ಒಂದು ಸ್ಪರ್ಧೆಗೆ ಕಳುಹಿಸಿದೆ. ಅದಕ್ಕೆ ಮೊದಲನೆಯ ಬಹುಮಾನವಾದ ಸ್ವರ್ಣಪದಕ ಬಂದಿತು.

ಶ್ರೀ ರಾಮಕೃಷ್ಣಾಶ್ರಮಕ್ಕೆ ಶ್ರೀ ವೆಂಕಣ್ಣಯ್ಯನವರೂ ಶ್ರೀ ಕೃಷ್ಣಶಾಸ್ತ್ರಿಗಳವರೂ ಆಗಾಗ ಬರುತ್ತಿದ್ದರು. ಆಗ ಸುಮಾರು ೭೦-೮೦ ಪುಟಗಳ ಶ್ರೀ ರಾಮಕೃಷ್ಣರ ಜೀವನವನ್ನು ಕುರಿತ ಅವರಿಬ್ಬರೂ ಬರೆದು ಪ್ರಕಟಿಸಿದ ಪುಸ್ತಕವೊಂದು ಅವರ ವಿಷಯವಾಗಿ ನನ್ನಲ್ಲಿದ್ದ ಪೂಜ್ಯ ಮನೋಭಾವವನ್ನು ದ್ವಿಗುಣಗೊಳಿಸಿತು. ಶ್ರೀ ಶಾಸ್ತ್ರಿಗಳವರ ಸ್ವರೂಪ ಸ್ವಭಾವ ಮೇಲುಗಡೆಗೆ ಕಾಣುವುದಕ್ಕಿಂತ ಬೇರೆಯಾದದ್ದು. ಹೊರಗಡೆ ನೋಡಿದರೆ ಒರಟಾಗಿ ನಿಷ್ಠುರವಾಗಿ ನಿರ್ದಾಕ್ಷಿಣ್ಯವಾಗಿ ಕಾಣಬರುವ ಅವರ ಪ್ರಕೃತಿ ಒಳಗಡೆ ಅಷ್ಟೇ ಮೃದು ಅಷ್ಟೇ ರಸಭರಿತದಿಂದ ಅಷ್ಟೇ ದಾಕ್ಷಿಣ್ಯಯುಕ್ತ. ಕರಿಯ ಕಬ್ಬು ಹೇಗೋ ಹಾಗೆ! ಹೊರಗೆ ಎಷ್ಟು ಕಠಿಣವೋ ಒಳಗೆ ಅಷ್ಟೂ ಸಿಹಿ. ರುಚಿ ತಿಳಿದವರು ಕರಿಯ ಕಬ್ಬನ್ನೇ ಆಶಿಸುತ್ತಾರೆ. ನರಿಗಳು ಕೂಡ ದಾಸಕಬ್ಬಿನ ತೋಟಕ್ಕೆ ನುಗ್ಗಿದಂತೆ ಕರಿ ಕಬ್ಬಿನ ತೋಟಕ್ಕೆ ನುಗ್ಗುವುದಿಲ್ಲ. ಶಾಸ್ತ್ರಿಗಳು ನರಿಗಳಂತಹ ಜನರನ್ನು ದೂರವಿಡುತ್ತಿದ್ದರು.

ನಾನು ತರಗತಿಯ ಯಾವ ಪಾಠದಲ್ಲಿಯೂ ವಿಶೇಷವಾದ ಆಸಕ್ತಿ ವಹಿಸು

ತ್ತಿರಲಿಲ್ಲ. ಅದಕ್ಕೆ ಕಾರಣ ಬೇರೆ. ಫೇಲಾದ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ನಾಗಿ ಅಲೆಯುವುದಕ್ಕಾಗಿ ಅಲ್ಲ. ಯಾವುದೋ ಅತೀತ ರಹಸ್ಯವನ್ನು ಅರಿಯುವ ವಿಧದಲ್ಲಿ ನನ್ನ ಮನಸ್ಸು ಸಂಚರಿಸುತ್ತಿತ್ತು. ನಾನು ಹೀಗೆ ಔದಾಸೀನ್ಯ ಮನೋ ಭಾವದಿಂದಿದ್ದರೂ ಶಾಸ್ತ್ರಿಗಳು ಮಾತ್ರ ನನ್ನನ್ನು ಪ್ರೀತಿ ವಿಶ್ವಾಸದಿಂದಲೇ ಕಾಣು ತ್ತಿದ್ದರು. ಫಿಲಾಸಫಿ ಎಂ.ಎ. ಗೆ ಹೋಗಬೇಕಾಗಿದ್ದ ನಾನು ಕನ್ನಡ ಎಂ.ಎ. ತೆಗೆದುಕೊಳ್ಳುವುದಕ್ಕೆ ಶಾಸ್ತ್ರಿಗಳು ಬಹುಮಟ್ಟಿಗೆ ಕಾರಣ. ೧೯೨೮ ರಲ್ಲಿ ವಿದ್ಯಾರ್ಥಿ ಕವಿಸಮ್ಮೇಳನದ ಅಧ್ಯಕ್ಷತೆಯನ್ನು ನಾನು ವಹಿಸುವುದಕ್ಕೆ ಅವರ ಆಜ್ಞೆಯೇ ಕಾರಣ. ನಾನು ಬರೆದ 'ನನ್ನ ಗೋಪಾಲ' ಎಂಬ ಚಿಕ್ಕ ಭಕ್ತನಾಟಕವನ್ನು ಅವರು ಓದಿ ತುಂಬ ಮೆಚ್ಚಿ ಕಾಗದ ಬರೆದರು. ಸಾಮಾನ್ಯವಾಗಿ ಎಲ್ಲಿಯೂ ಭಾವೋದ್ರೇಕಕ್ಕೆ ಎಡೆಗೊಡದ ಶಾಸ್ತ್ರಿಗಳು ಆ ನಾಟಕವನ್ನು ಓದಿ 'ಕಣ್ಣೀರಿನ ಕಾಲುವೆ ಹರಿಸಿದ್ದೇನೆ' ಎಂದು ಬರೆದುದನ್ನು ಕಂಡು ಹೊರಗಡೆ ಕಾಣದ ಎನಿತೆನಿತೊ ಭಕ್ತಿಯ ಮಜಲುಗಳು ಅವರ ಹೃದಯದಲ್ಲಿ ಇವೆ ಎಂಬುದನ್ನು ಅರ್ಥಮಾಡಿಕೊಂಡೆ. ನಾನು ಅವರ ಬಳಿ ವಿಶೇಷವಾದ ಭಕ್ತಿಯಿಂದಾಗಲಿ ಔದಾರ್ಯದಿಂದಾಗಲಿ ನಡೆದುಕೊಂಡಿದ್ದೇನೆ ಎಂದು ಹೇಳಲಾರೆ. ಅವರು ಮಾತ್ರ ಗೋವು ತನ್ನ ಕರುವನ್ನು ಕಂಡಂತೆ ನನ್ನನ್ನು ಕಂಡಿದ್ದಾರೆ. ಕನ್ನಡ ಸಾಹಿತ್ಯದ ಬೆಳವಣಿಗೆಗೆ ದುಡಿದವರಲ್ಲಿ ಶ್ರೀಗಳಾದ ಬಿ. ಎಂ. ಶ್ರೀ., ವೆಂಕಣಯ್ಯ, ಕೃಷ್ಣಶಾಸ್ತ್ರೀ ಇವರ ಹೆಸರು ಚಿರಸ್ಥಾಯಿಯಾಗಿರುತ್ತದೆ. ಅವರ ಶಕ್ತಿಸಾಮರ್ಥ್ಯ ಅವರ ಪ್ರಭಾವ ನಾಡಿನ ಚೇತನದ ಕುಡಿಗಳಾಗುತ್ತವೆ.

ಷೆಲ್ಲಿ ಬರೆದ Oozimandias ಎಂಬ ಕವನ ನನಗೀಗ ಜ್ಞಾಪಕಕ್ಕೆ ಬರುತ್ತದೆ: ಒಂದು ಬೃಹತ್ ಶಿಲಾರೂಪ ಮರಳುಗಾಡಿನ ಮಧ್ಯೆ ನಿಂತಿದೆ. ಅದರ ಕೆಳಗಡೆ Look on the mighty and despair ಎಂಬ ಲಿಪಿ ಲಿಖಿತವಾಗಿದೆ. ಈಗ ನೋಡಿದರೆ ಆ ಶಿಲಾರೂಪ ಅರ್ಧ ತುಂಡಾಗಿದೆ. ಅದನ್ನು ಕಂಡಾಗ Nothing besides remains ಎಂಬ ಷೆಲ್ಲಿಯ ವಾಕ್ಯ ಜ್ಞಾಪಕಕ್ಕೆ ಬರುತ್ತದೆ. ರಾಜನೊಬ್ಬನ ಕೀರ್ತಿಗಾಗಿ ಅಂದು ಕೆತ್ತಿ ನಿಲ್ಲಿಸಿದ ವಿಗ್ರಹ ಇಂದು ಚೂರಾಗಿ ಬಿದ್ದಿರುವುದನ್ನು ನೋಡಿದರೆ ನಶ್ವರದಲ್ಲಿ ಶಾಶ್ವತತೆಯನ್ನು ಕಾಣಬಯಸುವ ಆಕಾಂಕ್ಷೆ ಎಂತಹ ಅವಿವೇಕ ಎನ್ನುವುದು ವೇದ್ಯವಾಗುತ್ತದೆ. ಶಾಸ್ತ್ರಿಗಳ ಯಶಶ್ಶರೀರ ಅವರ ಕೃತಿಗಿಂತ ಹೆಚ್ಚು. ಅವರ ಪ್ರಭಾವ ಸ್ಫೂರ್ತಿದಾಯಕ ಮಾರ್ಗದರ್ಶಕ, ಎನ್ನುವುದನ್ನು ಈಗಲೂ ಅವರು ಕನ್ನಡ ಕೋಶವನ್ನು ಬೆಳೆಸುತ್ತ ತಪಸ್ವಿಯಂತೆ ನಿವೃತ್ತರಾದಮೇಲೂ ನಡೆಸುತ್ತಿರುವ ಕಾರ್ಯತತ್ಪರತೆ ಸಾರುತ್ತವೆ. ಸಾಮಾನ್ಯವಾಗಿ ನಿವೃತ್ತರಾದಮೇಲೆ ಏನು ಗತಿ ಎಂದು ಯೋಚಿಸುವುದುಂಟು. ಆಗ ಅಧಿಕಾರಿಯೂ ಜವಾನನ ಅನುಗ್ರಹಕ್ಕೆ

ಹಾರೈಸುವ ಸ್ಥಿತಿ ಬರುವುದುಂಟು. ಆದರೆ ಶ್ರೀ ಶಾಸ್ತ್ರಿಗಳು ನಿವೃತ್ತರಾದಮೇಲೆ ಕ್ಲಬ್ಬುಗಳಲ್ಲಿ ಇಸ್ಪೀಟಾಡುತ್ತ ಕಾಲಕಳೆಯದೆ, ಲಾಭಕ್ಕಾಗಿಯಾಗಲಿ ದಾಕ್ಷಿಣ್ಯಕ್ಕಾಗಲಿ ಒಳಗಾಗದೆ ತಮ್ಮ ತಪೋಜೀವನವನ್ನು ಗವಿಯನ್ನು ಸೇರಿಕೊಂಡೇ ನಡೆಸುತ್ತಿದ್ದಾರೆ. 'ವಿವಿಕ್ತ ದೇಶಸೇವಿತ್ವಂ ಅರತಿರ್ಜನ ಸಂಸದಿ' ಎಂಬ ಗೀತೆಯ ಸಾಧಕಜೀವನ, ಶ್ರೀ ಶಾಸ್ತ್ರಿಗಳದು. ಮಹರ್ಷಿ ಅರವಿಂದರ ಸಾವಿತ್ರಿ ಎಂಬ ಮಹಾಕಾವ್ಯದಲ್ಲಿ ಬರುವ ಕೆಲವು ಪಂಕ್ತಿಗಳನ್ನು ಇಲ್ಲಿ ಹೇಳಬಯಸುತ್ತೇನೆ. . .

> Whoever is too great must lonely live,
> Adored he walks in mighty solitude;
> Vain in his labour to create his kins,
> His only comrade is the strength with in.[1]

ಬ್ರಹ್ಮಸಾಕ್ಷಾತ್ಕಾರದತ್ತ ಮುನ್ನಡೆಯುವ ಸಾಧಕರನ್ನು ಕುರಿತ ಈ ಹೇಳಿಕೆಯ ಒಂದು ಭಾಗವಾದರೂ ಶ್ರೀ ಕೃಷ್ಣಶಾಸ್ತ್ರಿಗಳಂತವರ ಜೀವನಕ್ಕೂ ಅನ್ವಯಿಸುತ್ತದೆ.

ಅವರ ಬದುಕು ಸಾಗುತ್ತಿರುವುದು ಯಶೋಲಕ್ಷ್ಮಿಯ ಕಡೆಗೆ; ಕೀರ್ತಿಶನಿಯ ಕಡೆಗಲ್ಲ. ಅಹಂಕಾರದ ಡೊಳ್ಳನ್ನು ಬೆಳಸುತ್ತದೆ ಕೀರ್ತಿಶನಿ. ಆದರೆ ಯಶೋಲಕ್ಷ್ಮಿ ನಾನೆಂಬ ಅಹಂಕಾರವನ್ನು ದೂರಮಾಡುತ್ತದೆ. ಶ್ರೀ ಕೃಷ್ಣಶಾಸ್ತ್ರಿಗಳವರ ಭಾವಚಿತ್ರವನ್ನು ಅನಾವರಣಮಾಡಿದ ಈ ಸುಸಮಯದಲ್ಲಿ ಅವರ ಆಯುರಾರೋಗ್ಯ ಐಶ್ವರ್ಯಗಳು ವೃದ್ಧಿಯಾಗಿ ಅವರ ತಪಸ್ಸು ಕನ್ನಡನಾಡಿನಲ್ಲಿ ಹೆಚ್ಚು ಫಲಕಾರಿಯಾಗಲಿ ಎಂದು ಪ್ರಾರ್ಥಿಸುತ್ತೇನೆ.

ಕಾರ್ಯದರ್ಶಿಯ ವಂದನೆಯೊಡನೆ ರಾಷ್ಟ್ರಗೀತೆಯ ಅನಂತರ ಸಭೆ ಮುಕ್ತಾಯವಾಯಿತು.

ಶ್ರೀಮಾನ್ ಎ. ಆರ್. ಕೃಷ್ಣಶಾಸ್ತ್ರಿಗಳವರು ಈ ಸಂದರ್ಭದಲ್ಲಿ ಶ್ರೀಮಾನ್ ಪುಟ್ಟಪ್ಪನವರಿಗೆ ಬರೆದ ಪತ್ರವೊಂದನ್ನು ಇಲ್ಲಿ ಪ್ರಕಟಿಸುವುದು ಉಚಿತವೆಂದು ಭಾವಿಸಿ ಇಲ್ಲಿ ಅಚ್ಚುಮಾಡಿಸಿದ್ದೇವೆ.

ಶ್ರೀಮಾನ್ ಪುಟ್ಟಪ್ಪನವರಲ್ಲಿ ಕೃಷ್ಣಶಾಸ್ತ್ರಿಯ ಬಿನ್ನಹ

ಮಹಾರಾಜಾ ಕಾಲೇಜಿನ ಕನ್ನಡ ಸಂಘದ ಆಶ್ರಯದಲ್ಲಿ ಈ ತಿಂಗಳು ೭ನೆಯ ತಾರೀಖಿನ ದಿನ ನಡೆದ ಉತ್ಸವಕ್ಕೆ ಆಹ್ವಾನವು ಅದೇ ದಿನ ನನ್ನ ಕೈಸೇರಿ ಸಂತೋಷವನ್ನೂ ಹೆಮ್ಮೆಯನ್ನೂ ಉಂಟುಮಾಡಿತು. ನನ್ನ ಇಷ್ಟಮಿತ್ರರೂ ಪ್ರಿಯಶಿಷ್ಯರೂ

[1] Savitri: Book iv Canto 2.

ಕನ್ನಡ ಸಾಹಿತ್ಯಾಭಿಮಾನಿಗಳೂ ಈರೀತಿಯಾಗಿ ಒಟ್ಟುಗೂಡಿ ನನ್ನ ಭಾವಚಿತ್ರವನ್ನು ಮಹಾರಾಜಾ ಕಾಲೇಜಿನಲ್ಲಿರಿಸಲು ಏರ್ಪಾಡು ಮಾಡಿದ್ದು ನನ್ನ ಮನಸ್ಸಿಗೆ ಒಂದು ಸಮಾಧಾನವನ್ನು ತಂದಿದೆ. ನಾನು ಮಹಾರಾಜಾ ಕಾಲೇಜಿಗೆ ವಿದ್ಯಾರ್ಥಿಯಾಗಿ ಸೇರಿದಾಗ ಅಲ್ಲಿ ಹೈಸ್ಕೂಲೂ ಇತ್ತು. ಅದರ ಹೈಸ್ಕೂಲು ಕಾಲೇಜು ತರಗತಿಗಳಲ್ಲಿ ನಾನು ಐದಾರು ವರ್ಷ ಓದಿ ಎರಡಕ್ಷರವನ್ನು ಸಂಪಾದಿಸಿದೆ. ಅದು ನನಗೆ ವೇತನವನ್ನೂ ಬಹುಮಾನಗಳನ್ನೂ ಕೊಟ್ಟು ಉಚಿತವಾಗಿ ವಿದ್ಯಾದಾನಮಾಡಿತು; ಪ್ರೋತ್ಸಾಹಿಸಿ ಮುಂದಕ್ಕೆ ಬಿಟ್ಟಿತು. ಆ ಸಹಾಯವಿಲ್ಲದಿದ್ದರೆ ನನ್ನಂಥ ಬಡವಿದ್ಯಾರ್ಥಿ ಪ್ರೌಢವಿದ್ಯೆಯನ್ನು ಗಳಿಸುವುದು ಸಾಧ್ಯವಾಗುತ್ತಿರಲಿಲ್ಲ. ಇಂಥ ಕಡೆಯಲ್ಲಿ ನನ್ನ ಭಾವಚಿತ್ರವನ್ನು ಅನಾವರಣಮಾಡಿಸಿಕೊಟ್ಟದ್ದು, ತಾವೆಲ್ಲರೂ ನನ್ನನ್ನು ನನ್ನ ತಾಯಿಯ ಗರ್ಭವಾಸಕ್ಕೆ ಒಪ್ಪಿಸಿಕೊಟ್ಟಂತಾಗಿದೆ. ಇಂದು ನಾನು ಉಂಡು ಉಡುತ್ತಿರುವ ಅನ್ನಬಟ್ಟೆಗಳು ಆ ತಾಯಿಯ ಅವ್ಯಾಜಕೃಪೆಯಿಂದ ದೊರೆತವು. ನಾನು ಆ ಸಂಸ್ಥೆಗೆ ಹೆಚ್ಚೇನೂ ಮಾಡಲಾಗಿಲ್ಲವಲ್ಲಾ ಎಂದು ಸಂಕೋಚವಾಗುತ್ತಿದೆ. ಆದರೆ, 'ಯದ್ಯತ್ಕರ್ಮ ಕರೋಮಿ ತತ್ತದಖಿಲಂ . . . ತವಾರಾಧನಂ' ಎಂದು ನಿರ್ವಂಚನೆಯಾಗಿ ಆಕೆಯ ಮಾನಸಪೂಜೆ ಮಾಡುತ್ತಿದ್ದೇನೆ. ಯುವರಾಜಾ ಕಾಲೇಜಿನಲ್ಲಿ ಸ್ವಲ್ಪದಿನಗಳ ಕೆಳಗೆ ಇಂಥ ಉತ್ಸವ ನಡೆಯಿತು. ಆ ಕಾಲೇಜಿಗೂ ನನಗೂ ಯಾವ ವಿಧವಾದ ಸಂಬಂಧವೂ ಇರಲಿಲ್ಲ. ನನ್ನ ಮಿತ್ರರಾದ ಕೆಲವರ ಅಭಿಮಾನವೇ ಅದಕ್ಕೆ ಕಾರಣ. ಹಾಗೇ ಸಾಹಿತ್ಯ ಪರಿಷತ್ತಿನಲ್ಲಿಯೂ ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದಲ್ಲಿಯೂ ನನ್ನ ಭಾವ ಚಿತ್ರಗಳನ್ನಿಟ್ಟರು. ನಾನು ಅಲ್ಲಿ ಮಾಡಿದ್ದು ಅಲ್ಪಸೇವೆ. ಅದು ಕಾಕತಾಳೀಯ; ಕರ್ಮ ಧರ್ಮ ಸಂಯೋಗ. ಮಹಾರಾಜಾ ಕಾಲೇಜಿನಲ್ಲಿ, ಆರೇಳು ವರ್ಷ ಉಪಾಧ್ಯಾಯ ನಾಗಿದ್ದಾಗ ಅಷ್ಟು ಸೇವೆಯನ್ನೂ ನಾನು ಮಾಡಿಲ್ಲ. ಆಸೆ ಉತ್ಸಾಹಗಳೇನೋ ಇದ್ದುವು. ಆದರೂ ಅವೆಲ್ಲ ಕಡೆಗಳಿಗಿಂತ ಇಲ್ಲಿ ನಡೆದ ಈ ಉತ್ಸವದಿಂದ ನನ್ನ ಮನಸ್ಸಿಗೆ ಕ್ಷಮ್ಯವಾದ ಸಂತೋಷ ಸಂತೃಪ್ತಿಗಳು ಉಂಟಾಗಿವೆ. ಅದಕ್ಕೆ ಸಂಬಂಧಪಟ್ಟ ನನ್ನ ಮಿತ್ರರೆಲ್ಲರಿಗೂ ನನ್ನ ಈ ಸಂತೋಷವನ್ನು ದಯವಿಟ್ಟು ತಿಳಿಸಬೇಕು. ನಮ್ಮ ವಿದ್ಯಾ ಮಾತೆಯು ನಮ್ಮೆಲ್ಲರನ್ನೂ ಆಶೀರ್ವದಿಸಲಿ. ಕನ್ನಡ ವಿದ್ಯಾರ್ಥಿಗಳಲ್ಲಿಯೂ ಉಪಾ ಧ್ಯಾಯರಲ್ಲಿಯೂ ಸಾರ್ವಜನಿಕರಲ್ಲಿಯೂ ಇದೇ ವಿಧವಾದ ತಾಯ್ನುಡಿಯ ಅಭಿಮಾನವು ಬೆಳಗುತ್ತಿರಲಿ.

ಇಂತೀ ತಮ್ಮ

ಎ. ಆರ್. ಕೃಷ್ಣಶಾಸ್ತ್ರೀ

ಸಂಪಾದಕೀಯ

ಭಾರತ ಸಾಹಿತ್ಯ ಅಕಾಡೆಮಿಯ ಗೌರವ ಪಾರಿತೋಷಿಕ

ಭಾರತವು ಸ್ವತಂತ್ರವಾದಂದಿನಿಂದ ಭಾರತೀಯ ಸಾಹಿತ್ಯ, ಸಂಗೀತ, ಚಿತ್ರ ಮೊದಲಾದ ಕುಶಲ ಕಲೆಗಳ ಬೆಳವಣಿಗೆಗೂ ಭಾರತೀಯ ಸಂಸ್ಕೃತಿಯ ಪ್ರಸಾರಕ್ಕೂ ಕೇಂದ್ರ ಸರ್ಕಾರದವರೂ ಪ್ರಾಂತ ಸರಕಾರದವರೂ ವಿಶೇಷ ಗಮನವಿಟ್ಟಿರುವುದು ಶ್ಲಾಘನೀಯವಾಗಿದೆ. ಇದಕ್ಕಾಗಿ ಪ್ರತ್ಯೇಕವಾದ ಅಕಾಡೆಮಿಗಳನ್ನು ತೆರೆದು ಕವಿಶ್ರೇಷ್ಠರಿಗೂ ಉತ್ತಮ ಕಲಾವಿದರಿಗೂ ಪಾರಿತೋಷಕಗಳನ್ನು ನೀಡಿ ಆ ಮೂಲಕ ಕಲಾರಾಧನೆಯನ್ನು ನಡೆಸುತ್ತಿದ್ದಾರೆ.

ಈ ವರ್ಷ ಸಾಹಿತ್ಯ ಅಕಾಡೆಮಿಯವರು ಭಾರತದ ಹನ್ನೆರಡು ಮುಖ್ಯ ಭಾಷೆಗಳಲ್ಲಿ ರಚಿತವಾದ ಉದ್ಗ್ರಂಥಗಳಿಗೆ ಐದು ಸಹಸ್ರ ರೂಪಾಯಿಗಳ ಕೊಡುಗೆಯ ಗೌರವ ಪಾರಿತೋಷಕವನ್ನು ನೀಡಿ ಕವಿವರೇಣ್ಯರನ್ನೂ ವಿದ್ವಾಂಸರನ್ನೂ ಗೌರವಿಸಿದ್ದಾರೆ. ಈ ಗೌರವವನ್ನು ಪಡೆದವರ ಹೆಸರುಗಳನ್ನೂ ಅವರು ರಚಿಸಿದ ಕೃತಿಗಳ ಹೆಸರನ್ನೂ ಇಲ್ಲಿ ಕೊಡಲಾಗಿದೆ—

ಕನ್ನಡ: ಶ್ರೀ ಕುವೆಂಪು (ಪ್ರೊ|| ಕೆ. ವಿ. ಪುಟ್ಟಪ್ಪ, ಎಂ.ಎ.) ವಿರಚಿತ "ಶ್ರೀ ರಾಮಾಯಣದರ್ಶನಂ" (ಮಹಾಕಾವ್ಯ ೨ ಮಹಾಸಂಪುಟಗಳು).

ತೆಲುಗು: ದಿವಂಗತ ಶ್ರೀ ಸುರಪುರಂ ಪ್ರತಾಪರೆಡ್ಡಿ ವಿರಚಿತ "ಆಂಧ್ರುಲು ಸಾಂಘಿಕ ಚಾರಿತ್ರ" (ಆಂಧ್ರರ ಸಾಮಾಜಿಕ ಚರಿತ್ರೆ).

ತಮಿಳು: ಶ್ರೀ ಆರ್. ಪಿ. ಸೇತುಪಿಳ್ಳೆ ವಿರಚಿತ "ತಮಿಳು ಇನ್‌ಬಂ" (ಪ್ರಬಂಧಗಳು).

ಮಳೆಯಾಳ: ಶ್ರೀ ಆರ್. ನಾರಾಯಣ ಪಣಿಕ್ಕಾರ್ ವಿರಚಿತ "ಭಾಷಾಸಾಹಿತ್ಯ ಚರಿತ್ರಂ" (ಮಳೆಯಾಳ ಸಾಹಿತ್ಯದ ಇತಿಹಾಸ: ೭ ಸಂಪುಟಗಳು).

ಮರಾಠಿ: ಶ್ರೀ ಲಕ್ಷ್ಮಣಶಾಸ್ತ್ರಿ ಜೋಷಿ ವಿರಚಿತ "ವೈದಿಕ್ ಸಂಸ್ಕೃತಿ ಚ ವಿಕಾಸ್" (ವೇದಗಳ ಕಾಲದ ಭಾರತದ ಸಾಂಸ್ಕೃತಿಕ ಇತಿಹಾಸ).

ಬಂಗಾಳಿ: ದಿವಂಗತ ಶ್ರೀ ಜೀವನಾನಂದ ದಾಸ್ ವಿರಚಿತ "ಶ್ರೇಷ್ಠ ಕವಿತಾ" (ಗೀತಗಳು).

ಅಸ್ಸಾಮಿ: ಶ್ರೀ ಜರೇಂದ್ರನಾಥ್ ದೋವೆರಾ ವಿರಚಿತ "ಬನ ಫೂಲ್" (ಗೀತಗಳು).

ಗುಜರಾತಿ: ದಿವಂಗತ ಪ್ರೊ|| ಮಹಾದೇವ ದೇಸಾಯಿ ವಿರಚಿತ "ಮಹದೇವ್ ಭೈನಿ" (ದೇಸಾಯಿಯವರ ದಿನಚರಿ).

ಒರಿಯಾ : ಶ್ರೀ ಗೋಪಿನಾಥ್ ಮಹಂತಿ ವಿರಚಿತ "ಅಮೃತಕಾರ ಸಂತಾನ್" (ಗಿರಿಜನರ ಜೀವನವನ್ನು ಕುರಿತು ರಚಿಸಿದ ಕಾದಂಬರಿ).

ಪಂಜಾಬಿ : ಶ್ರೀ ಭಾಯ್ ವೀರ್‌ಸಿಂಗ್ ವಿರಚಿತ "ಮೇರೆ ಸೈಯಾನ್ ಜೊ" (ಗೀತೆಗಳು).

ಉರ್ದು : ಶ್ರೀ ಜಫಾರ್ ಹುಸೇನ್ ಖಾನ್ ವಿರಚಿತ "ಫೂಲ್ ಔರ್ ಮಹೀಯರ್" (ತತ್ತ್ವಶಾಸ್ತ್ರವನ್ನು ಕುರಿತು ರಚಿಸಿದ ಪ್ರಬಂಧ).

ಹಿಂದಿ : ಶ್ರೀ ಮಖನ್‌ಲಾಲ್ ಚತುರ್ವೇದಿ ವಿರಚಿತ "ಹಿಂ ತರಂಗಿಣಿ" (ಗೀತಗಳು).

ಈ ಹನ್ನೆರಡು ಭಾಷೆಗಳಲ್ಲಿ ಉದ್ಗ್ರಂಥಗಳನ್ನು ರಚಿಸಿದ ಎಲ್ಲ ಕವಿರೇಣ್ಯರನ್ನೂ ಘನ ವಿದ್ವಾಂಸರನ್ನೂ ನಾವು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ. ಇಂತಹ ಗೌರವ ಪಾರಿತೋಷಕಗಳ ಕೊಡುಗೆಯನ್ನು ವರ್ಷ ವರ್ಷವೂ ನೀಡುವ ಯೋಜನೆಯನ್ನು ಕೇಂದ್ರಸರ್ಕಾರವು ಕೈಗೊಳ್ಳುವುದರಿಂದ ಭಾರತದ ಕಲೆ ಸಂಸ್ಕೃತಿಗಳ ಸರ್ವತೋಮುಖವಾದ ಪ್ರಗತಿ ಸಾಧಿತವಾಗುವುದೆಂದು ಹೇಳಬಯಸುತ್ತೇವೆ.

ಶ್ರೀ ಕುವೆಂಪು ಅವರ ಗೌರವಾರ್ಥವಾಗಿ ಮೈಸೂರು ವಿಶ್ವವಿದ್ಯಾನಿಲಯದವರು ಏರ್ಪಡಿಸಿದ್ದ ಅಭಿನಂದನ ಸಭೆ

ಈ ಸಂದರ್ಭದಲ್ಲಿ ಮಹಾಕವಿ ಶ್ರೀ ಕುವೆಂಪು ಅವರನ್ನು ಪ್ರತ್ಯೇಕವಾಗಿ ಅಭಿನಂದಿಸುವುದಕ್ಕೆ ನಮಗೆ ಸಂತೋಷವಾಗಿದೆ. ಈ ಗೌರವದಿಂದ ಕನ್ನಡನಾಡಿಗೇ ಒಂದು ಯಶಸ್ಸಿನ ಕಿರೀಟವಿಟ್ಟಂತಾಗಿದೆ. ಅಷ್ಟೇ ಅಲ್ಲ, ಇಂತಹವರಿಗೆ ಪಾರಿತೋಷಿಕ ಸಂದದ್ದರಿಂದ ಜನವೂ ಸರಕಾರವೂ ತನ್ನನ್ನು ತಾನು ಗೌರವಿಸಿಕೊಂಡಂತಾಗಿದೆ. ಇಂತಹ ಮಹಾಕೃತಿಗಳ ಜ್ಯೋತಿಸ್ಸಲಿಲವಾಹಿನಿಯಿಂದ ಮತ್ತೆ ಮತ್ತೆ ಕನ್ನಡನಾಡು ರಸಸ್ಯಂದಿಯಾಗಲಿ, ಜನರ ಹೃನ್ಮನಂಗಳು ತಣಿಯಲಿ, ನುಡಿಯ ಯಶಸ್ಸು ಬೆಳಗಲಿ!

ತಾ ೨-೮-೬೮ ರಂದು ಮೈಸೂರು ಮಹಾರಾಜಾಕಾಲೇಜಿನ ಒಳ ಅಂಗಣದಲ್ಲಿ ಕವಿವರ್ಯ ಶ್ರೀ ಕುವೆಂಪು ಅವರನ್ನು ಅಭಿನಂದಿಸಿದ ಸಮಾರಂಭದ ವಿವರಗಳನ್ನು ಶ್ರೀ ಕುವೆಂಪು ಅಭಿನಂದನ ಸಮಾರಂಭದ ಪುರವಣಿಯಲ್ಲಿ ಕೊಟ್ಟಿರುತ್ತೇವೆ.

ಶ್ರೀ ದಿವಾಕರರಿಗೆ ಸಂಭವನಾಗ್ರಂಥದ ಸಮರ್ಪಣೆ

ಈ ಸಮಯದಲ್ಲಿ ಬಿಹಾರಿನ ಲೋಕಪಾಲರಾದ ಶ್ರೀ ರಂಗನಾಥ ರಾಮಚಂದ್ರ ದಿವಾಕರ ಅವರಿಗೆ ಅವರ ಮಿತ್ರರೂ ಅಭಿಮಾನಿಗಳೂ ಬೊಂಬಾಯಿ ನಗರದಲ್ಲಿ ೨-೩-೬೮ ರಲ್ಲಿ ಬೊಂಬಾಯಿ ಲೋಕಪಾಲರಾದ ಶ್ರೀ ಹರಿಕೃಷ್ಣ ಮೆಹತಾಬ್ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ "ಕರ್ನಾಟಕ ದರ್ಶನ" ಎಂಬ ಹೆಸರಿನ ೬೦೦ ಪುಟಗಳ

ಸಂಭಾವನೆಯ ಗ್ರಂಥವನ್ನು ಅರ್ಪಿಸಿದರು. ಈ ಗ್ರಂಥದಲ್ಲಿ ಶ್ರೀ ದಿವಾಕರರ ಮಿತ್ರರೂ ನಮ್ಮ ದೇಶದ ವಿದ್ವಾಂಸರೂ ಸಾಹಿತಿಗಳೂ ಪ್ರೌಢ ಲೇಖನಗಳನ್ನು ಬರೆದಿದ್ದಾರೆ. ಈ ಎಲ್ಲ ಲೇಖನಗಳು ಇಂಗ್ಲಿಷಿನಲ್ಲಿರುವುದರಿಂದ ಕರ್ಣಾಟಕದ ಹೊರಗಡೆಯ ಜನರಿಗೂ ಕನ್ನಡ ಭಾಷೆ ಸಾಹಿತ್ಯ ಸಂಸ್ಕೃತಿಯು ವೇದ್ಯವಾಗುವಂತಿದೆ. ಬೊಂಬಾಯಿ ಲೆಜಿಸ್ಲೆಟಿವ್ ಕೌನ್ಸಿಲಿನ ಚೇರ್‌ಮನ್ನರಾದ ಶ್ರೀ ಹುಕ್ಕೇರಿಕರ್ ರಾಮ ರಾಯರು ಈ ಬೃಹತ್ ಗ್ರಂಥದ ಉದಯಕ್ಕೂ ಅಭಿನಂದನ ಸಮಾರಂಭಕ್ಕೂ ಮುಖ್ಯ ಕಾರ್ಯಕರ್ತರಾಗಿ ದುಡಿದಿರುವುದು ಪ್ರಶಂಸನೀಯ. ನಾಲ್ಕಾರು ದಶಕ ಗಳಿಂದ ಕನ್ನಡ ನಾಡುನುಡಿಗಳ ಸೇವೆಗಾಗಿ ದುಡಿದವರು ಶ್ರೀ ದಿವಾಕರರವರು. ಇವರು ಶ್ರೀ ರಾಮಕೃಷ್ಣ ಪರಮಹಂಸ, ಶ್ರೀ ಅರವಿಂದ ಮೊದಲಾದ ವಿಭೂತಿ ಪುರುಷರ ಆಧ್ಯಾತ್ಮಿಕ ಜೀವನದ ಅಮೃತ ಸರೋವರದಲ್ಲಿ ಮಿಂದು ಪುನೀತರಾದವರು. ಅಖಂಡ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕನ್ನಡದ ನಾಯಕಮಣಿಯಾಗಿ ದೇಶಸೇವೆ ಸಲ್ಲಿಸಿದ ವೀರವರರು. ಇಂತಹ ಹಿರಿಯರಿಗೆ ಸಂದ ಗೌರವಕ್ಕಾಗಿ ಈ ಮಹನೀಯರನ್ನು ನಾವು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ.

ಬೊಂಬಾಯಿ ಮದರಾಸು ಪ್ರಾಂತದವರು ಕನ್ನಡ ಸಾಹಿತಿಗಳಿಗೆ ನೀಡಿದ ಪ್ರೋತ್ಸಾಹ

ಈಚೆಗೆ ಬೊಂಬಾಯಿ ಪ್ರಾಂತ ಸರಕಾರದವರು ಶ್ರೀ ದತ್ತಾತ್ರೇಯ ರಾಮ ಚಂದ್ರ ಬೇಂದ್ರೆ ಅವರ "ಹೊಸ ಸಂಸಾರ" ಎಂಬ ನಾಟಕಕ್ಕೆ ೨,೫೦೦ ರೂಪಾಯಿ ಗಳ ಬಹುಮಾನ ಒಂದನ್ನು ಕೊಟ್ಟು ಪ್ರೋತ್ಸಾಹಿಸಿದ್ದಾರೆ. "ಅಂಬಿಕಾತನಯದತ್ತ" ಎಂಬ ಕಾವ್ಯನಾಮದಿಂದ ಸುವಿಖ್ಯಾತರಾದ ವರಕವಿ ಬೇಂದ್ರೆಯವರನ್ನು ಹೀಗೆ ಗೌರವಿಸಿ ಬೊಂಬಾಯಿ ಸರಕಾರ ತನ್ನನ್ನು ತಾನೇ ಗೌರವಿಸಿಕೊಂಡಿದೆ. ಈ ಸರಕಾರ ಇತರ ಸಾಹಿತಿಗಳಿಗೂ ಬಹುಮಾನಗಳನ್ನು ಕೊಟ್ಟಿದೆ. ಮದ್ರಾಸ್ ಪ್ರಾಂತ ಸರಕಾರವೂ ಕೂಡ ತನ್ನ ಪ್ರಾಂತದ ಲೇಖಕರನ್ನು ಗೌರವಿಸಿರುವುದನ್ನು ಇಲ್ಲಿ ನೆನೆಯುತ್ತೇವೆ. ಹೀಗೆ ಗೌರವಾನ್ವಿತರಾದ ಸಾಹಿತಿಗಳೆಲ್ಲರನ್ನೂ ಅಭಿನಂದಿಸುತ್ತೇವೆ.

ಶ್ರೀ ವಿ. ಸೀತಾರಾಮಯ್ಯ, ಡಾ|| ಟಿ. ಎ. ಪುರುಷೋತ್ತಮ್ ಶ್ರೀ ಎಂ. ಯಾಮುನಾಚಾರ್ಯ ಇವರ ನಿವೃತ್ತಿ

ಬೆಂಗಳೂರು ಸೆಂಟ್ರಲ್ ಕಾಲೇಜಿನ ಉಪಪ್ರಾಧ್ಯಾಪಕರಾಗಿದ್ದ ಶ್ರೀ ವಿ. ಸೀತಾರಾಮಯ್ಯನವರು ಈಗತಾನೆ ನಿವೃತ್ತರಾಗಿದ್ದಾರೆ. ಇವರು ಉತ್ತಮ ಕವಿಗಳು, ವಿಮರ್ಶಕರು, ಕಲಾಪ್ರೇಮಿಗಳು. ಇವರು ತಮ್ಮ ಅಧ್ಯಾಪಕ ವೃತ್ತಿಯಲ್ಲಿ ಬಹುಜನ

ವಿದ್ಯಾರ್ಥಿಗಳಿಗೆ ಸ್ಫೂರ್ತಿ ನೀಡಿದ್ದಾರೆ. "ಪ್ರಬುದ್ಧ ಕರ್ನಾಟಕ"ದ ಸಂಪಾದಕರಾಗಿ ಶ್ರದ್ಧೆಯಿಂದ ಇವರು ಸಲ್ಲಿಸಿದ ಸೇವೆಯನ್ನು ಇಲ್ಲಿ ನಾವು ನೆನೆಯುತ್ತೇವೆ. ಶ್ರೀಯುತರ ಈ ವೃತ್ತಿನಿವೃತ್ತಿ ಮುಂದಿನ ಕನ್ನಡ ನಾಡು ನುಡಿಗಳ ಸೇವೆಗೆ ಪ್ರವೃತ್ತಿಯ ಮುನ್ನುಡಿಯಾಗಲಿ. ಜಗಜ್ಜನನಿ ಶ್ರೀಯುತರಿಗೆ ದೀರ್ಘಾಯುರಾರೋಗ್ಯ ಶ್ರೇಯಸ್ಸುಗಳನ್ನು ದಯಪಾಲಿಸಲಿ, ಅವರ ಪರಿಣತ ಅನುಭವ ನಾಡಿಗೆ ಇನ್ನೂ ಹೆಚ್ಚಾಗಿ ದೊರಕಲಿ!

ಮೈಸೂರು ಮಹಾರಾಜಾ ಕಾಲೇಜಿನಲ್ಲಿ ತತ್ತ್ವಶಾಸ್ತ್ರದ ಪ್ರಾಧ್ಯಾಪಕರಾಗಿಯೂ ಪ್ರಿನ್ಸಿಪಾಲರಾಗಿಯೂ ಸೇವೆ ಸಲ್ಲಿಸಿದ ಡಾ|| ಟಿ. ಎ. ಪುರುಷೋತ್ತಮ್ ಅವರು ಇದೇ ಏಪ್ರಿಲ್ ೧ ನೇ ತಾರೀಖಿನಿಂದ ನಿವೃತ್ತರಾಗಿದ್ದಾರೆ. ಶ್ರೀಯುತರ ತತ್ತ್ವಜ್ಞಾನ, ಶಾಸ್ತ್ರಪಾಂಡಿತ್ಯ, ಲೋಕಾನುಭವ, ಅನನ್ಯ ಸಾಧಾರಣವಾದ ವಾಗ್ಮಿತೆ—ಇವುಗಳಿಂದ ವಿದ್ಯಾರ್ಥಿಗಳಿಗೂ ಅಧ್ಯಾಪಕರಿಗೂ ಲಾಭವಾಗಿದೆ. ಅವರ ಮುಂದಿನ ಜೀವನ ತಪೋಮಯವಾಗಿ ಅವರಿಂದ ಬಹುಕಾಲ ಜನತೆಗೆ ತತ್ತ್ವಜ್ಞಾನದ ಬೆಳಕು ದೊರಕುವಂತಾಗಲಿ ಎಂದು ಆಶಿಸುತ್ತೇವೆ.

ಇದೇ ಸಂದರ್ಭದಲ್ಲಿ ಇದೇ ಕಾಲೇಜಿನ ತತ್ತ್ವಶಾಸ್ತ್ರದ ಉಪಪ್ರಾಧ್ಯಾಪಕರಾದ ಶ್ರೀ ಎಂ. ಯಾಮುನಾಚಾರ್ಯರು ಏಪ್ರಿಲ್ ೧ ರಲ್ಲಿ ನಿವೃತ್ತರಾಗಿದ್ದಾರೆ. ಇವರ ವಿಷಯವಾಗಿ ಇವರನ್ನು ಬೀಳ್ಕೊಡುವಾಗ ಶ್ರೀ ಕುವೆಂಪು ಅವರು ಹೇಳಿದ ಮಾತುಗಳನ್ನು ಜ್ಞಾಪಿಸುತ್ತೇವೆ: "ಶ್ರೀ ಯಾಮುನಾಚಾರ್ಯರು ವಿದ್ವಾಂಸರು, ವಾಗ್ಮಿಗಳು. ಇವರ ನಿವೃತ್ತಿ ಮುಂದಿನ ಭವ್ಯತರ ಜೀವನಕ್ಕೆ ಪ್ರವೃತ್ತಿಯಾಗಲಿ. ಅವರು ನಿಜವಾಗಿಯೂ ನಿವೃತ್ತರಾದಂತೆ ಕಾಣುವುದಿಲ್ಲ. ನಾನೇನೋ ಇವರ ನಿವೃತ್ತಿಯ ಕಾಗದಕ್ಕೆ ಪ್ರಿನ್ಸಿಪಾಲ್ ಆಗಿ ರುಜುಹಾಕಿದ್ದೇನೆ. ಆದರೆ ಆ ರುಜು ಋಜುವಲ್ಲ. ಈ ಕಾಲೇಜಿನ ಅಧಿಕಾರವಾದ ಉಪಪ್ರಾಧ್ಯಾಪಕ ವೃತ್ತಿಯಿಂದ ನಿವೃತ್ತಿ ಹೊಂದಿದರೂ ಆತ್ಮವೈಭವದಲ್ಲಿ ಎಲ್ಲ ಅಧಿಕಾರ ಬರಲಿ ಎಂದು ಹಾರೈಸುತ್ತೇನೆ."

ಕನ್ನಡ ಮಾಧ್ಯಮ

ಬಹುಕಾಲದಿಂದಲೂ ಕನ್ನಡ ಮಾಧ್ಯಮದ ಆವಶ್ಯಕತೆಯನ್ನು ಸಕಾರಣವಾಗಿ ಸಮಗ್ರವಾಗಿ ಪ್ರಬುದ್ಧ ಕರ್ಣಾಟಕದ ಸಂಪಾದಕೀಯದಲ್ಲಿ ಬರೆಯುತ್ತಲೇ ಬಂದಿದ್ದೇವೆ. ಶಿಕ್ಷಣವೇತ್ತರೂ ಸುಜ್ಞಾನಿಗಳೂ ಅಂಕಿಅಂಶಗಳ ಆಧಾರದಿಂದ ಶಿಕ್ಷಣ ಮಾಧ್ಯಮದ ಆವಶ್ಯಕತೆಯನ್ನು ಹೇಳುತ್ತ ಬಂದಿದ್ದಾರೆ. ಆದರೂ ಕನ್ನಡಿಗರೇ ಆದ ಕೆಲವು ರಾಜಕೀಯ ವ್ಯಕ್ತಿಗಳೂ ಪ್ರಮುಖ ಅಧಿಕಾರಸ್ಥಾನದಲ್ಲಿರುವವರೂ ಕನ್ನಡ

ಮಾಧ್ಯಮದ ವಿಷಯವಾಗಿ ನುಡಿದ ಅಪಚಾರದ ನುಡಿಗಳು ಕನ್ನಡ ತಾಯಿಯನ್ನೇ ತಿವಿದಂತಿವೆ. ಆದರೆ ಕನ್ನಡದ ಮುನ್ನಡೆಯನ್ನು ಯಾವ ಶಕ್ತಿಯೂ ತಡೆಯಲಾರ ದೆಂಬುದು ಸ್ವಯಂಸಿದ್ಧವಾದ ಸತ್ಯ. ಸಿರಿಗನ್ನಡ ತಾಳಿದೆ, ಬಾಳಿದೆ, ಗೆದ್ದಿದೆ, ನಾಳೆ ಆಳುತ್ತದೆ.

ಸ್ವವಿಷಯ

ಕಳೆದ ಎರಡು ವರ್ಷಗಳಿಂದ ಪ್ರಬುದ್ಧ ಕರ್ಣಾಟಕದ ಸಹಾಯಕ ಸಂಪಾದಕ ರಾಗಿ ಶ್ರದ್ಧೆ ಉತ್ಸಾಹಗಳಿಂದ ಕಾರ್ಯನಿರ್ವಹಣೆ ಮಾಡಿದ ಶ್ರೀ ದೇ. ಜವರೇಗೌಡ, ಎಂ.ಎ., ಅವರು ಈಗ ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟಣ ಮತ್ತು ಪ್ರಚಾರೋಪನ್ಯಾಸ ಶಾಖೆಯ ಕಾರ್ಯದರ್ಶಿಗಳಾಗಿ ನೇಮಕಗೊಂಡಿದ್ದಾರೆ. ಶ್ರೀಯುತರು ಸಹಾಯಕ ಸಂಪಾದಕರಾಗಿದ್ದ ಅವಧಿಯಲ್ಲಿ ಪತ್ರಿಕೆ ಸಾಧಿಸಿದ ಪ್ರಗತಿಯನ್ನು ಮೆಚ್ಚಿ ಪತ್ರಿಕೆಯ ಹುಟ್ಟು ಬೆಳವಣಿಗೆಗೆ ಆದ್ಯಕರ್ತರಾದ ಶ್ರೀಮಾನ್ ಎ. ಆರ್. ಕೃಷ್ಣಶಾಸ್ತ್ರಿಗಳು ಅವರ ಶಿಷ್ಯರೊಬ್ಬರಿಗೆ ಬರೆದ ಕಾಗದದ ಕೆಲವು ಪಂಕ್ತಿ ಗಳನ್ನು ಇಲ್ಲಿ ಕೊಟ್ಟಿದ್ದೇವೆ: "Under Sri S. V. Parameswara Bhatta and Sri D. Javare Gowda's Editorship Prabudha Karnataka is steadily improving.

It is a long time since I saw an issue running to 200 pages. The articles are vieing with one another in point of scholarship and information.

ಶ್ರೀ ದೇ. ಜವರೇಗೌಡರ ಕರ್ತವ್ಯದಕ್ಷತೆಗೆ ಈ ಹಿರಿಯ ನುಡಿಗಳು ಕನ್ನಡಿ ಹಿಡಿದಿವೆ. ಶ್ರೀಯುತರು ನಾಡು ನುಡಿಗಳ ಏಳಿಗೆಯನ್ನು ಇನ್ನೂ ಅತಿಶಯವಾಗಿ ಸಾಧಿಸಲೆಂದು ಆಶಿಸುತ್ತೇವೆ. ಇದುವರೆಗೆ ವಿಶ್ವವಿದ್ಯಾನಿಲಯದ ಪ್ರಕಟಣ ಮತ್ತು ಪ್ರಚಾರೋಪನ್ಯಾಸ ಶಾಖೆಯ ಕಾರ್ಯದರ್ಶಿಗಳಾಗಿ ಕೆಲಸಮಾಡಿದ ಶ್ರೀ ಉ. ಕಾ. ಸುಬ್ಬರಾಯಾಚಾರ್, ಎಂ.ಎ., ಅವರು ಈಗ ಈ ಪತ್ರಿಕೆಯ ಸಂಪಾದಕ ರಾಗಿ ನೇಮಕಗೊಂಡಿರುವುದು ಸಂತೋಷದ ವಿಷಯ.

ಈ ಸಂಚಿಕೆ ಸ್ವಲ್ಪ ತಡವಾಗಿ ಪ್ರಕಟವಾಗಿದೆ. ಇದಕ್ಕಾಗಿ ಚಂದಾದಾರರ ಕ್ಷಮೆ ಕೋರುತ್ತೇವೆ.



ಮಾನ್ಯ ಮುಖ್ಯಮಂತ್ರಿಗಳು ಶ್ರೀ ಕುವೆಂಪು ಅವರಿಗೆ ಪುಷ್ಪಹಾರವನ್ನು ಸಮರ್ಪಿಸಿ ಅಭಿನಂದಿಸುತ್ತಿರುವುದು

ಶ್ರೀ ಕುವೆಂಪು

ಅಭಿನಂದನ ಸಮಾರಂಭ

(ತಾ. ೨-೪-೫೫)

ಮಹಾಕವಿ ಶ್ರೀ ಕುವೆಂಪು ಅಭಿನಂದನ ಸಮಾರಂಭ

ಭಾರತ ಸರಕಾರದ ಸಾಹಿತ್ಯ ಅಕಾಡೆಮಿಯವರು ಶ್ರೀ ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯಕ್ಕೆ ಗೌರವ ಪಾರಿತೋಷಕವನ್ನು ನೀಡಿದ ಸಂದರ್ಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವೈಸ್-ಚಾನ್ಸೆಲರೂ ಅಧ್ಯಾಪಕರೂ ಮತ್ತು ವಿದ್ಯಾರ್ಥಿಗಳೂ ಶ್ರೀ ಕುವೆಂಪು ಅವರನ್ನು ಗೌರವಿಸುವ ಸಲುವಾಗಿ ಮನ್ಮಥ ಸಂವತ್ಸರದ ಚೈತ್ರ ಶುದ್ಧ ದಶಮಿ ಶನಿವಾರ (೨-೪-೫೫) ಸಂಜೆ ೫.೩೦ ಕ್ಕೆ ಮೈಸೂರು ಮಹಾರಾಜ ಕಾಲೇಜಿನ ಒಳ ಅಂಗಣದಲ್ಲಿ ಅಭಿನಂದನ ಸಮಾರಂಭವನ್ನು ಏರ್ಪಡಿಸಿದ್ದರು. ಮೈಸೂರು ಸಂಸ್ಥಾನದ ಮುಖ್ಯಮಂತ್ರಿಗಳಾದ ಶ್ರೀ ಕೆ. ಹನುಮಂತಯ್ಯ, ಬಿ.ಎ., ಎಲ್‌ಎಲ್. ಬಿ., ಅವರು ಅಂದಿನ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಮೈಸೂರು ವಿಶ್ವವಿದ್ಯಾನಿಲಯದ ಕೌನ್ಸಿಲಿನ ಸದಸ್ಯರೂ ನಾನಾ ಶಾಲೆ ಕಾಲೇಜುಗಳ ಅಧ್ಯಾಪಕರೂ ವಿದ್ಯಾರ್ಥಿಗಳೂ ಪುರಪ್ರಮುಖರೂ ಸಾಹಿತ್ಯಾಭಿಮಾನಿಗಳೂ ಸಭೆಯ ಸಮಾರಂಭದಲ್ಲಿ ಭಾಗಿಗಳಾಗಿದ್ದರು. ಭಾರತದ ಬೇರೆಬೇರೆ ಕಡೆಗಳಿಂದ ಅನೇಕ ಮಹನೀಯರು ಕವಿವರ್ಯರನ್ನು ಅಭಿನಂದಿಸುವ ಸಂದೇಶಗಳನ್ನು ಕಳುಹಿಸಿದ್ದರು.


ಮಹಾರಾಜ ಕಾಲೇಜಿನ ಒಳ ಅಂಗಣವು ಬಣ್ಣಬಣ್ಣದ ವಿದ್ಯುದ್ದೀಪಗಳಿಂದ ವಿಲಸಿತವಾಗಿದ್ದಿತು. ಹಸಿರು ತೋರಣಗಳಿಂದಲೂ ರಂಗವಲ್ಲಿಯ ಚಿತ್ರಗಳಿಂದಲೂ ಕಾಲೇಜಿನ ಆವರಣವು ಶೋಭಿಸುತ್ತಿತ್ತು. ಒಳ ಅಂಗಣದಲ್ಲಿ ಎತ್ತರವಾದ ವೇದಿಕೆಯನ್ನು ಹಸಿರು ಎಲೆಬಳ್ಳಿಗಳಿಂದ ಸುಂದರವೂ ಸರಳವೂ ಆದ ರೀತಿಯಲ್ಲಿ ಅಲಂಕರಿಸಲಾಗಿತ್ತು. ವೇದಿಕೆಯ ಹಿನ್ನೆಲೆಯ ತೆರೆಯ ಮೇಲೆ ಶ್ವೇತವಸ್ತ್ರದಲ್ಲಿ ಬೃಹತ್‌ಗಾತ್ರದ ನೀಲಾಕ್ಷರಗಳಿಂದ ವಿನಿರ್ಮಿತವಾದ 'ಸಿರಿಗನ್ನಡಂ ಗೆಲ್ಗೆ' ಎಂಬ ಬರಹ ಕನ್ನಡದ ಸರ್ವಾಂಗೀಣ ಪ್ರಗತಿಯ ದ್ಯೋತಕವಾಗಿ ಎಲ್ಲರ ಕಣ್ಮನಗಳ ಕೌತುಕವಾಗಿ ವಿರಾಜಿಸುತ್ತಿತ್ತು. ಸಭಾಂಗಣವನ್ನು ಪ್ರವೇಶಿಸುವ ಮುನ್ನ ಶ್ರವಣ ಸುಭಗವಾದ ನಾಗಸ್ವರದ ಸುಮಧುರ ಧ್ವನಿ ಸಹೃದಯರಿಗೆ ಸ್ವಾಗತವೀಯುತ್ತಿತ್ತು. ಸಭಾಂಗಣವನ್ನು ಪ್ರವೇಶಿಸಿದಾಗ ಕನ್ನಡಗೀತಗಳ ಧ್ವನಿಮುದ್ರಿಕೆಗಳ ಕಾವ್ಯಗಾಯನದ ನಾದತರಂಗಲೀಲೆ ಮೆಲ್ಲಮೆಲ್ಲನೆ ಸಂಜೆಗಾಳಿಯಲ್ಲಿ ಕರಗಿ ಸಹೃದಯರನ್ನು ಅಲೌಕಿಕವಾದ ರಸಲೋಕವಿಹಾರ ಸುಖಕ್ಕೆ ಏರಿಸುತ್ತಿತ್ತು. ಸಭಾಂಗಣದಲ್ಲಿ ಮುಖ್ಯ ಅತಿಥಿಗಳಾದ ಶ್ರೀ ಕುವೆಂಪು

ಅವರೂ ಉಪಸ್ಥಾನಪತಿಗಳಾದ ಶ್ರೀ ಡಿ'ಸೋಜಾ ಅವರೂ ಸಭೆಗೆ ಆಗಮಿಸಿದ ಪ್ರಮುಖರೊಡನೆ ಕುಶಲಸಲ್ಲಾಪಗಳಲ್ಲಿ ನಿರತರಾಗಿದ್ದರು. ಇಂತಹ ರಸನಿಮಿಷ ಗಳನ್ನು ಶಾಶ್ವತಗೊಳಿಸುವ ಉದ್ದೇಶದಿಂದ ಛಾಯಾಗ್ರಾಹಕರು ಕಾರ್ಯನಿರತ ರಾಗಿದ್ದರು.

ಕಾಲೇಜಿನ ಮಹಾದ್ವಾರದಲ್ಲಿ ಉಪಸ್ಥಾನಪತಿಗಳೂ ಪ್ರಿನ್ಸಿಪಾಲರಾದ ಶ್ರೀ ಕುವೆಂಪು ಅವರೂ ವಿಶ್ವವಿದ್ಯಾನಿಲಯದ ಕೌನ್ಸಿಲ್ ಸದಸ್ಯರೂ ಸಮಾರಂಭದ ಅಧ್ಯಕ್ಷತೆ ಯನ್ನು ವಹಿಸುವುದಕ್ಕಾಗಿ ಬೆಂಗಳೂರಿನಿಂದ ದಯಮಾಡಿಸಿದ ಮುಖ್ಯಮಂತ್ರಿ ಗಳನ್ನು ಸ್ವಾಗತಿಸಿ ವೇದಿಕೆಗೆ ಕರೆದೊಯ್ದರು. ಸಭಿಕರ ಕರತಾಡನಗಳ ಮಧ್ಯೆ ಮುಖ್ಯಮಂತ್ರಿಗಳೂ ಉಪಸ್ಥಾನಪತಿಗಳೂ ಕವಿವರ್ಯರೂ ಸುಖಾಸೀನರಾದರು. ಸಭೆಯ ಕಾರ್ಯಕಲಾಪಗಳು ಪ್ರಾರಂಭವಾಗುವ ಮುನ್ನ ಸಂಧ್ಯಾರಾಗರಂಜಿತವಾದ ನೀಲೋಜ್ವಲ ನಭೋಮಂಡಲವು ಇದ್ದಕ್ಕಿದ್ದಂತೆ ಮೇಘಾಚ್ಛಾದಿತವಾಯಿತು. ಅದನ್ನು ಕಂಡ ಸಭಿಕರು ಮಳೆ ಬಿದ್ದು ಸಭೆಯ ಕಾರ್ಯಕಲಾಪಗಳಿಗೆ ಎಲ್ಲಿ ಅಡಚಣೆ ಯುಂಟಾಗುವುದೋ ಎಂದು ಆಕುಲಚಿತ್ತರಾದರು. ಆದರೆ ಪ್ರಕೃತಿ ಅಂದಿನ ಸಮಾ ರಂಭದಲ್ಲಿ ಭಾಗವಹಿಸಲೆಂದು ನೀಲಮೇಘರೂಪಿಯಾಗಿ ತೇಲಿಬಂದು ಪುಷ್ಪವೃಷ್ಟಿ ಯನ್ನು ಸುರಿಸುವಂತೆ ಮುಗಿಲು ಹನಿಹನಿ ಹೂಮಳೆಗರೆದು ಅದೃಶ್ಯವಾದಾಗ ಸಭಿಕರು ಆಶ್ಚರ್ಯಚಕಿತರಾದರು. ಪವಾಡದ ಮೇಲೆ ಪವಾಡವೆಂಬಂತೆ ಮತ್ತೊಂದು ಆಶ್ಚರ್ಯ ಗೋಚರಿಸಿತು. ಲೋಕಲೋಕಗಳ ದಿವ್ಯ ಚೇತನಗಳು ಬೆಳ್ಳಕ್ಕಿಯ ರೂಪದಲ್ಲಿ ಹಂತಿಹಂತಿಯಾಗಿ ಒಳಾಂಗಣದ ಮೇಲಿನ ಮುಗಿಲಂಗಣದಲ್ಲಿ ಅವತರಿಸಿ ವಲಯ ವಲಯವಾಗಿ ಪ್ರದಕ್ಷಿಣೆಮಾಡಿ ಪೂರ್ವಾಭಿಮುಖವಾಗಿ ಬೆಳ್ಗರಿಗೆದರಿ ನೀಲಾಕಾಶ ದಲ್ಲಿ ತೇಲಿಹೋದುವು.

ಮಹಾರಾಣಿ ಕಾಲೇಜಿನ ವಿದ್ಯಾರ್ಥಿನಿಯರಾದ ಶ್ರೀ ತಾರಾಮಣಿ ಮತ್ತು ಶ್ರೀ ಕಾವೇರಮ್ಮ ಅವರಿಂದ 'ನಮೋ ಭರತಮಾತೆ' ಎಂಬ ಕವಿವರ್ಯರ 'ಸ್ವಾತಂತ್ರ್ಯೋತ್ಸವ ಮಹಾಪ್ರಗಾಥ'ದ ಪ್ರಾರ್ಥನಾಪಂಕ್ತಿಗಳ ಪಠಣದಿಂದ ಸಭೆ ಪ್ರಾರಂಭವಾಯಿತು. ಉಪಸ್ಥಾನಪತಿಗಳಾದ ಶ್ರೀ ವಿ. ಎಲ್. ಡಿ'ಸೋಜಾ ಅವರು ಸ್ವಾಗತಭಾಷಣವನ್ನು ಪ್ರಪ್ರಥಮವಾಗಿ ಕನ್ನಡದಲ್ಲಿ ಮಾಡಿದಾಗ ಸಭೆ ಕರತಾಡನಗಳ ಮಳೆಗರೆಯಿತು. ಅಸ್ಖಲಿತವೂ ಮಧುರವೂ ಆದ ರೀತಿಯಲ್ಲಿ ಹೀಗೆ ಭಾಷಣಮಾಡಿದರು :





ವೈಸ್ ಚಾನ್ಸೆಲರ್ ಶ್ರೀ ಪಿ. ಎಲ್. ಡಿ'ಸೋಜಾ ಅವರು ಸ್ವಾಗತಭಾಷಣ ಮಾಡುತ್ತಿರುವುದು

ಮಾನ್ಯ ಮುಖ್ಯಮಂತ್ರಿಗಳೆ, ಮಹಿಳೆಯರೆ, ಮಹನೀಯರೆ

ಮೈಸೂರು ಚರಿತ್ರೆಯಲ್ಲಿ ಹಿಂದೆಂದೂ ನಾವು ಕಾಣದಂಥ ಅಪೂರ್ವ ಸಂದರ್ಭದಲ್ಲಿ ನಾವು ಇಂದು ಇಲ್ಲಿ ಸೇರಿರುತ್ತೇವೆ. ನಮ್ಮ ನಾಡಿಗೆ ಕೀರ್ತಿಯನ್ನೂ ಘನತೆಯನ್ನೂ ತಂದಿರುವ ಕನ್ನಡ ಕವಿಯನ್ನು ಗೌರವಿಸಲು ನಾವು ಇಂದು ನೆರೆದಿರುತ್ತೇವೆ. ತುಂಬು ಸಂತೋಷಪ್ರದವಾದ ಈ ಸಮಾರಂಭಕ್ಕೆ ನಿಮ್ಮನ್ನು ನಾನು ಸ್ವಾಗತಿಸುತ್ತೇನೆ. ನೀವು ಮತ್ತು ನಾನು ಕನ್ನಡ ಜನಕ್ಕೆ ಉಂಟಾಗಿರುವ ಸಂತೋಷದಲ್ಲಿ ಭಾಗಿಗಳು. ಭಾರತ ಸಾಹಿತ್ಯ ಅಕಾಡೆಮಿಯವರು ನಮ್ಮ ಕವಿಯನ್ನು ಗೌರವಿಸಿದ್ದಾರೆ; ನಾವು ಕವಿಯೊಡನೆ ಆ ಗೌರವದಲ್ಲಿ ಪಾಲುದಾರರಾಗಲು ಇಲ್ಲಿ ಸೇರಿರುತ್ತೇವೆ.

ಮಾದರಿ ಸಂಸ್ಥಾನವೆಂಬ ಕೀರ್ತಿಯನ್ನು ಮೊದಲಿಂದ ಗಳಿಸಿ, ಪ್ರಗತಿಯ ಹಾದಿಯಲ್ಲಿ ಮುನ್ ಸಾಗುತ್ತಿರುವ ನಮ್ಮ ಸಂಸ್ಥಾನ ಇಂದು ನಮ್ಮ ಮಾನ್ಯ ಮುಖ್ಯಮಂತ್ರಿಗಳ ಅಧಿಕಾರದಲ್ಲಿ ತನ್ನ ಪ್ರಗತಿಯ ಮತ್ತೊಂದು ಮುಖವನ್ನು ಮುಟ್ಟಿದೆ. ಶ್ರೀ ಹನುಮಂತಯ್ಯನವರು ನಮ್ಮ ಭಾರತದ ಅಗ್ರನಾಯಕರಲ್ಲೊಬ್ಬರು. ನಮ್ಮ ಪ್ರಧಾನಿಗಳಾದ ಜವಹರಲಾಲ್ ಅವರು ಹೇಗೆ ವಿದ್ಯಾಸಂಸ್ಕೃತಿಗಳ ಪಕ್ಷಪಾತಿಗಳಾಗಿ ಸದಾ ಅವುಗಳ ಏಳಿಗೆಗಾಗಿ ದುಡಿಯುತ್ತಿದ್ದಾರೆಯೋ ಹಾಗೆಯೇ ನಮ್ಮ ಮುಖ್ಯಮಂತ್ರಿಗಳೂ ವಿದ್ಯೆ ಮತ್ತು ಸಂಸ್ಕೃತಿಗಳ ಪ್ರಸಾರಕ್ಕೆ ಕಂಕಣಬದ್ಧರಾಗಿದ್ದಾರೆ. ಅವರ ನೇತೃತ್ವದಲ್ಲಿ ನಮ್ಮ ಎಲ್ಲ ವಿದ್ಯಾಸಂಸ್ಥೆಗಳೂ ವಿದ್ಯಾರ್ಥಿನಿಲಯಗಳೂ ಅಭಿವೃದ್ಧಿಯನ್ನು ಹೊಂದುವುದರಲ್ಲಿ ಸಂದೇಹವೇ ಇಲ್ಲ. ನಮ್ಮ ವಿಶ್ವವಿದ್ಯಾನಿಲಯ—ಅದರಲ್ಲೂ ಮುಖ್ಯವಾಗಿ ಅವರು ಓದಿ ಕಲಿತ ಅವರ ಅಚ್ಚುಮೆಚ್ಚಿನ ಈ ಮಹಾರಾಜಾ ಕಾಲೇಜು—ಎಡೆಬಿಡದೆ ಅವರ ಗಮನವನ್ನು ಸೆಳೆದಿದೆ. ವಿಶ್ವವಿದ್ಯಾನಿಲಯದ ಅಧ್ಯಾಪಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಅತ್ಯಗತ್ಯವಾಗಿ ಬೇಕೆನಿಸಿದ ಅವಶ್ಯಕತೆಗಳನ್ನು ಸಲ್ಲಿಸಿಕೊಡುವುದರಲ್ಲಿ ನಮ್ಮ ಮುಖ್ಯಮಂತ್ರಿಗಳು ತೀವ್ರವಾದ ಆಸಕ್ತಿಪೂರ್ವಕರಾಗಿದ್ದಾರೆ. ಇಂತಹ ವಿದ್ಯಾಭಿಮಾನಿಗಳೂ ಸಂಸ್ಕೃತಿಪ್ರಿಯರೂ ಆದ ನಾಯಕರನ್ನುಳ್ಳ ಮೈಸೂರು, ಸಮಸ್ತ ಭಾರತದ ಯೋಗಕ್ಷೇಮವನ್ನು ಕೂಡ ನೋಡಿಕೊಳ್ಳಬಲ್ಲ ದಕ್ಷತೆಯನ್ನು ಸಾಧಿಸಿದೆ ಎನ್ನುವುದು ನಮಗೆ ಹೆಮ್ಮೆಯ ವಿಷಯ. ಇಂತಹ ದಕ್ಷನಾಯಕರ ಮಂತ್ರಿತ್ವದಲ್ಲಿ ನಮ್ಮ ಸಂಸ್ಥಾನವು ವಿದ್ಯೆ, ವ್ಯಾಪಾರ, ಕೃಷಿ, ಕೈಗಾರಿಕೆ ಮುಂತಾದ ಕ್ಷೇತ್ರಗಳಲ್ಲಿ ಸಾಧಿಸಿರುವ ಪ್ರಗತಿಯನ್ನು ಭಾರತ ಸರ್ಕಾರವು ಆಸಕ್ತಿಯಿಂದ ನೋಡುತ್ತಿದೆ. ಸದಾ ಭಾರತದ ಮೆಚ್ಚಿಕೆಯ ಕಣ್ಣು ನಮ್ಮ ಸಂಸ್ಥಾನದ ಮೇಲಿದ್ದು ಅದನ್ನು ಕಾಯುತ್ತಿದೆ. ಇದೂ ನಮಗೆ

ಹೆಮ್ಮೆಯ ವಿಷಯವೇ. ಈಗ ಇಲ್ಲಿ ನಮ್ಮ ಹೆಮ್ಮೆಯನ್ನು ಉಕ್ಕೇರಿಸುವ ಇನ್ನೊಂದು ಸಂಗತಿಯನ್ನು ಹೇಳಬಯಸುತ್ತೇನೆ.

ಎಲ್ಲ ದೇಶದಲ್ಲಿಯೂ ಒಂದು ಕ್ರಾಂತಿಯೋ ಒಂದು ಪುನರುಜ್ಜೀವನವೋ ಒಂದು ಅನುಭಾವದ ಒಳ ಎಚ್ಚರವೋ ನಡೆದ ಕಾಲದಲ್ಲಿ ಕವಿಯೊಬ್ಬನು ಮೂಡಿ ಬರುತ್ತಾನೆ. ಆ ನಾಡಿನ ಕ್ರಾಂತಿ, ಪುನರುಜ್ಜೀವನ, ಕಲ್ಯಾಣಗಳನ್ನು ಹಾಡುವ, ಆ ಜನತೆಯ ಆಶೋತ್ತರಗಳನ್ನು ಸಾರುವ, ಕವಿಯೊಬ್ಬನು ಉದಯಿಸುತ್ತಾನೆ, ನಮ್ಮ ಕಣ್ಣು ಮುಂದೆ ಮೆರೆಯುತ್ತಿರುವ ಮೈಸೂರಿನ ಈ ನವೋದಯದ ಕಾಲದಲ್ಲಿ. ಕರ್ಣಾಟಕದ ಈ ಪುನರುಜ್ಜೀವನದ ಸಮಯದಲ್ಲಿ, ನಮ್ಮ ಕವಿವರೇಣ್ಯರಾದ ಶ್ರೀ ಕೆ. ವಿ. ಪುಟ್ಟಪ್ಪನವರು ನಮ್ಮ ಕಾಲವನ್ನು ಪ್ರತಿಬಿಂಬಿಸುತ್ತಿರುವುದು ಉಚಿತ ವಾಗಿಯೇ ಇದೆ. ಸಾವಿರಾರು ವರ್ಷಗಳಿಂದ ನಮ್ಮ ಜನತೆಯ ತತ್ತ್ವ, ದರ್ಶನ, ಸಂಸ್ಕೃತಿಗಳನ್ನು ತಿದ್ದಿ ಬೆಳಗಿದ ನಮ್ಮ ಮಹಾಕಾವ್ಯವೊಂದನ್ನು ತಮ್ಮ ದರ್ಶನ ಪ್ರತಿಭೆಯಿಂದ ಮರಳಿ ಸೃಷ್ಟಿಸಿರುವ ಶ್ರೀ ರಾಮಾಯಣದರ್ಶನಮ್ ಮಹಾಕಾವ್ಯದ ಕರ್ತೃಗಳಾದ ಶ್ರೀ ಕುವೆಂಪು ಅವರನ್ನು ಭಾರತ ಸರ್ಕಾರದವರು ಗೌರವಿಸಿರುವುದು ಅರ್ಥಪೂರ್ಣವಾಗಿದೆ, ಔಚಿತ್ಯಪೂರ್ಣವಾಗಿದೆ.

ನಾನು ಈ ಹೊತ್ತು ಕನ್ನಡದಲ್ಲಿ ಮಾತನಾಡುತ್ತಿದ್ದೇನೆ. ಈ ಭಾಷೆಯಲ್ಲಿ ಸಾಮರ್ಥ್ಯವಿದೆ ಎಂದಾಗಲಿ ಲಲಿತವಾಗಿ ಮಾತನಾಡುವ ಜಾಣ್ಮೆಯನ್ನು ಪಡೆದಿದ್ದೇನೆ ಎಂದಾಗಲಿ ಭಾವಿಸಿ ನಾನು ಕನ್ನಡದಲ್ಲಿ ಮಾತನಾಡುತ್ತಿಲ್ಲ. ಕನ್ನಡ ಭಾಷೆ ಸಾಹಿತ್ಯ ಗಳ ಏಳಿಗೆಗಾಗಿ ಸತತವೂ ತಮ್ಮ ಬದುಕನ್ನು ಮುಡಿಪಾಗಿಟ್ಟು ದುಡಿಯುತ್ತಿರುವ ವೀರಕವಿಗಳಾದ ಶ್ರೀ ಕೆ. ವಿ. ಪುಟ್ಟಪ್ಪನವರನ್ನು ಕುರಿತು ಹೇಳುವಾಗ ಕನ್ನಡದಲ್ಲಿ ಮಾತನಾಡುವುದಕ್ಕಿಂತಲೂ ಹೆಚ್ಚಿನ ಗೌರವಕಾಣಿಕೆ ಯಾವುದಿದೆ? ಶ್ರೀ ಪುಟ್ಟಪ್ಪ ನವರು "ಕನ್ನಡ, ಕನ್ನಡ, ಹಾ! ಸವಿಗನ್ನಡ" ಎಂದು ರಾಗಾವೇಶದಿಂದ ಹಾಡಿದ್ದಾರೆ. ಕನ್ನಡ ಎಂದೊಡನೆಯೇ ಭಾವಪರವಶರಾಗುವ ಕವಿವರ್ಯರ ಮಿತ್ರನೂ ಮೆಚ್ಚುಗನೂ ಆದ ನಾನು ಕನ್ನಡದಲ್ಲಿಯೇ ಮಾತನಾಡಿ, ಈಗ ಕನ್ನಡನಾಡಿನಲ್ಲಿ ಭರದಿಂದ ಬೀಸುತ್ತಿರುವ ಆ ಭಾವಾವೇಶವನ್ನೂ ಸ್ಫೂರ್ತಿಯನ್ನೂ ಸ್ವಲ್ಪವಾದರೂ ಸೋಂಕಿಸಿಕೊಳ್ಳಬೇಕೆಂದಿದ್ದೇನೆ. ಶ್ರೀ ಪುಟ್ಟಪ್ಪನವರು ಇಂಗ್ಲಿಷಿನಲ್ಲಿ ಮಾತನಾಡು ವಾಗ ನಿಷ್ಠುರತೆಯ ಗಡಿ ಮುಟ್ಟಿದರೋ ಎನ್ನುವಷ್ಟರ ಮಟ್ಟಿಗೆ ಖಚಿತವಾಗಿ ಪ್ರಖರ ವಾಗಿ ಮಾತನಾಡುವುದನ್ನೂ, ತಮ್ಮ ಪ್ರೀತಿಯ ಕನ್ನಡದಲ್ಲಿ ಮಾತನಾಡುವಾಗ ನಿಮ್ಮನ್ನು ನಿರಸ್ತ್ರರನ್ನಾಗಿ ಮಾಡಿ ಮರುಳುಗೊಳಿಸುವಂತಹ ಮೋಹಕವಾದ ನಯ ನುಡಿಗಳನ್ನು ಉಪಯೋಗಿಸಿ ಮಾತನಾಡುವುದನ್ನೂ ನಾನು ಬಲ್ಲೆ.

ನಮ್ಮ ಮುಖ್ಯಮಂತ್ರಿಗಳು ಕೈಗೊಂಡಿರುವ ಗಮನಾರ್ಹವಾದ ಅನೇಕ ಕಾರ್ಯಗಳಲ್ಲಿ ಸಂಸ್ಕೃತಿ ಪ್ರಸಾರವನ್ನು ಇಲ್ಲಿ ನೆನೆಯಬೇಕು. ನಾವು ಚರಿತ್ರೆಯನ್ನು ಓದಿದ್ದೇವೆ. ರಾಜ ಮಹಾರಾಜರ ಕಥೆಗಳನ್ನು ಕೇಳಿದ್ದೇವೆ. ಸಾಮಾನ್ಯ ಜನತೆಯಲ್ಲಿ ಸಂಸ್ಕೃತಿಯನ್ನು ಪ್ರಚಾರಮಾಡುವಂತಹ ದೊಡ್ಡ ಒಂದು ಯೋಜನೆಯನ್ನು ದೇಶದ ಅಧಿಕಾರವರ್ಗ, ಪ್ರತಿದಿನದ ಆಡಳಿತದಲ್ಲಿ ಕಾರ್ಯಗತ ಮಾಡಿದಂತಹ ಸಂಗತಿ ಚರಿತ್ರೆಯಲ್ಲಿ ತೀರ ವಿರಳ. ನಾವು ಎಷ್ಟೋ ವೇಳೆ ಲಲಿತ ಶಾಖೆಗಳ ಅಭಿವೃದ್ಧಿಗಾಗಿ ಏರ್ಪಟ್ಟ ಸಚಿವಶಾಖೆಗಳ ವಿಚಾರವಾಗಿಯೂ ಕೇಳಿದ್ದೇವೆ. ಆದರೆ ದೇಶದಲ್ಲಿ ಶತಮಾನಗಳಿಂದ ಪರಂಪರೆಯಾಗಿ ಬೆಳೆದುಬಂದಿರುವ ಬೌದ್ಧಿಕ, ಆಧ್ಯಾತ್ಮಿಕ ಸಂಸ್ಕೃತಿಯ ಬೆಳೆಯನ್ನು ಅನುಭವಿಸಲು ಹಕ್ಕುದಾರರಾಗಿರುವ ಜನಸಾಮಾನ್ಯರ ಮನೆಯ ಬಾಗಿಲಿಗೆ ಕಲೆ, ಧರ್ಮ, ಸಂಸ್ಕೃತಿಗಳ ಅಮೃತವನ್ನು ಕೊಂಡೊಯ್ಯುತ್ತಲಿರುವ ಈ ಸಂಸ್ಕೃತಿ ಪ್ರಸಾರದ ವ್ಯಾಪ್ತಿಯೇ ಬೇರೆ, ಆ ಸಚಿವ ಶಾಖೆಯ ಮಿತಿಯೇ ಬೇರೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಯೋಚಿಸಿ ಯೋಜಿಸಿ ರೂಢಿಸುತ್ತಿರುವ ಮೈಸೂರಿನ, ಏಕೆ ಕನ್ನಡನಾಡಿನ, ಮನೆಮಾತಾಗಿರುವ ಈ ಸಂಸ್ಕೃತಿ ಪ್ರಚಾರದ ಅಮೃತಧಾರಾವಾಹಿನಿಗೆ ಶ್ರೀ ಕುವೆಂಪು ಅವರ ಬರವಣಿಗೆಗಳೇ ತಲಕಾವೇರಿ ಎಂದು ನಾನು ಭಾವಿಸಿದ್ದೇನೆ. ಇಡೀ ಜನತೆಯ ಅನುಭವ ವಿಶೇಷಗಳಿಗೆ ಬಾಯಾಗಿ, ಅದರ ಭಾವಗಳಿಗೆ ಕೊರಲಾಗಿ ಶ್ರೀ ಕುವೆಂಪು ಅವರು ಇಂಪಾದ ಸೊಂಪಾದ ಕಾವ್ಯಗಾನವನ್ನು ಹಾಡಿದ್ದಾರೆ. ಈ ಹಾಡುಗಳು ಸದಾ ಕಾಲ ಮರಳಿ ಮರಳಿ ಮೊಳಗಿ ತಲೆಮೊರೆಯಿಂದ ತಲೆಮೊರೆಗೆ ಆನಂದವನ್ನು ನೀಡುತ್ತವೆ. ಶ್ರೀ ಕುವೆಂಪು ಅವರ ಇಂತಹ ಚಿರನೂತನ ಕಾವ್ಯಸೃಷ್ಟಿಯೇ ಈ ಸಂಸ್ಕೃತಿ ಪ್ರಸಾರಕ್ಕೆ ಸ್ಫೂರ್ತಿ ಶಕ್ತಿ ಕಾಂತಿಗಳನ್ನು ನೀಡಿದೆ. ಸರಸ್ವತಿಯ ಅಮೃತಪುತ್ರರಾದ ಶ್ರೀ ಕುವೆಂಪು ಅವರು ಧನ್ಯರು, ಅವರನ್ನು ಪಡೆದ ಕನ್ನಡ ನುಡಿಯೂ ಧನ್ಯ, ನಾಡೂ ಧನ್ಯ, ಇಂತಹ ಕವಿವರ್ಯರನ್ನು ಪ್ರಾಧ್ಯಾಪಕರನ್ನಾಗಿ ಪಡೆದ ನಮ್ಮ ಮಹಾರಾಜಾ ಕಾಲೇಜೂ ಧನ್ಯ, ಇಂತಹ ಕವಿ ಪ್ರಾಧ್ಯಾಪಕರನ್ನು ಗೌರವಿಸುತ್ತಿರುವ ನಾವಲ್ಲವೆ ಧನ್ಯರು?

* * * * *

ಅನಂತರ ಗಮಕ ವಿದುಷಿ ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್ ಅವರು ಶ್ರೀ ರಾಮಾಯಣದರ್ಶನಂ ಮಹಾಕಾವ್ಯದ ಎರಡನೆಯ ಸಂಪುಟದ 'ತಪಸ್ಸಿದ್ಧಿ' ಎಂಬ ಹನ್ನೆರಡನೆಯ ಸಂಚಿಕೆಯಿಂದ ಕೆಲವು ಭಾಗಗಳನ್ನು ಹೃದಯಂಗಮವಾಗಿಯೂ ಅರ್ಥಪೂರ್ಣವಾಗಿಯೂ ವಾಚನಮಾಡಿದರು. ಇವರು ಶ್ರೀ ರಾಮಾಯಣದರ್ಶನಂ ಕಾವ್ಯವಾಚನವನ್ನು ಒಂದು ತಪಸ್ಸೆಂದು ಕೆಲವು ವರ್ಷಗಳಿಂದ ಸಾಧಿಸಿರುವುದರಿಂದ ಇವರ ವಾಚನ ಸಭಿಕರಿಗೆ ಹರ್ಷದಾಯಕವಾಗಿತ್ತು.

ಆಮೇಲೆ ಮಾನ್ಯ ಅತಿಥಿಗಳನ್ನು ಅಭಿನಂದಿಸುವ ಭಾಷಣಗಳು ನಡೆದವು. ಮೊದಲು ಟೀಚರ್ಸ್ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಎ. ಸಿ. ದೇವೇಗೌಡರವರು ತಮ್ಮ ಮತ್ತು ಶ್ರೀ ಕುವೆಂಪು ಅವರ ನಿಕಟಪರಿಚಯವನ್ನೂ ಶ್ರೀ ಕುವೆಂಪು ಅವರ ಕಾವ್ಯಮಹಿಮೆಯನ್ನೂ ಅವರ ಕೃತಿಗಳ ಜನಪ್ರಿಯತೆಯನ್ನೂ ಕುರಿತು ಈ ರೀತಿಯಾಗಿ ಭಾಷಣಮಾಡಿದರು.

ನಮ್ಮ ವಿಶ್ವವಿದ್ಯಾನಿಲಯದಲ್ಲಿ ಕನ್ನಡಭಾಷೆಯ ಪ್ರಾಧ್ಯಾಪಕರಾಗಿರುವ ಶ್ರೀಮಾನ್ ಪುಟ್ಟಪನವರ 'ಶ್ರೀ ರಾಮಾಯಣದರ್ಶನಂ' ಕೃತಿಗೆ ಭಾರತ ಸರ್ಕಾರದ ಸಾಹಿತ್ಯ ಅಕಾಡೆಮಿಯವರು ನೀಡಿರುವ ಸನ್ಮಾನಕ್ಕಾಗಿ ಅವರನ್ನು ಅಭಿನಂದಿಸುವುದು ನನಗೆ ಸಂತೋಷದ ವಿಷಯ. ಅವರು ಮಲೆನಾಡಿನಲ್ಲಿ ಜನಿಸಿ ಅಲ್ಲಿನ ಸೃಷ್ಟಿಸೌಂದರ್ಯಗಳ ನಡುವೆ ಬೆಳೆದವರು ; ಅನಂತರ ನಮ್ಮ ವಿಶ್ವವಿದ್ಯಾನಿಲಯ ದಲ್ಲಿ ವ್ಯಾಸಂಗವನ್ನು ಮಾಡಿ, ಇಲ್ಲಿಯೇ ಸೇವೆ ಸಲ್ಲಿಸುತ್ತ, ರಾಷ್ಟ್ರದ ಗೌರವಾಭಿ ಮಾನಗಳಿಗೆ ಪಾತ್ರರಾದವರು. ಮಲೆನಾಡಿನವನೇ ಆದ ನನಗೆ ಇಂಥ ಸಹೋದ್ಯೋಗಿ ಯೊಬ್ಬರನ್ನು ಅಭಿನಂದಿಸುವ ಕಾರ್ಯ ಇನ್ನೂ ಹೆಚ್ಚಿನ ಸಂತೋಷವನ್ನು ನೀಡುತ್ತದೆ.

ಸುಮಾರು ೨೮ ವರ್ಷಗಳ ಹಿಂದೆ ನಾನು ಸೆಂಟ್ರಲ್ ಕಾಲೇಜಿನಲ್ಲಿ ವಿದ್ಯಾರ್ಥಿ ಯಾಗಿದ್ದಾಗ ಶ್ರೀ ಪುಟ್ಟಪ್ಪನವರ 'ಕಿಂದರಿಜೋಗಿ' ಕಥನಕವನವನ್ನು ಓದಿದ್ದನ್ನು ಕೇಳುವ ಸುಯೋಗ ದೊರಕಿತು. ಪುಟ್ಟಪ್ಪನವರಲ್ಲಿ ನನ್ನ ಆಸಕ್ತಿ ಅಂದು ಮೊದಲಾ ಯಿತು. ಆಗ ಕನ್ನಡದಲ್ಲಿ 'ಧರಣಿಮಂಡಲ ಮಧ್ಯದೊಳಗೆ' 'ಯಾಕಳುವೆ ಎಲೆ ರಂಗ' 'ಎಲೆ ಬೆಕ್ಕೆ ರೂಪಿನಿಂದಲೆ' 'ಅಕ್ಕ ನಿನ್ನ ಮಾತಕೇಳಿ'—ಇಂಥ ಕೆಲವು ಹಾಡುಗಳನ್ನು ಬಿಟ್ಟರೆ ಶಿಶುಗೀತೆಗಳು ಅಷ್ಟಾಗಿ ಇರಲಿಲ್ಲ. ಆಧುನಿಕವಾಗಿ ಪ್ರಕಟ ವಾಗುತ್ತಿರುವ ಕೆಲವು ಕವನಗಳು ಸ್ವಲ್ಪಕಾಲ ಎಲ್ಲರ ಬಾಯಲ್ಲೂ ನಲಿದಾಡುತ್ತಿದ್ದು ಬಹುಬೇಗ ಹಳದಾಗಿ ಮರೆಯಾಗುವುದನ್ನು ನಾವು ನೋಡಿದ್ದೇವೆ. ೨೮ ವರ್ಷಗಳ ಹಿಂದೆ ಕೇಳಿದ 'ಕಿಂದರಿ ಜೋಗಿ'ಯನ್ನು ಈಗ ಕರ್ಣಾಟಕದ ಮನೆಮನೆಯಲ್ಲೂ ಮಕ್ಕಳು ಹಾಡುತ್ತಿರುವುದನ್ನು ಕೇಳಬಹುದು. ಉತ್ತಮ ಸಾಹಿತ್ಯಕ್ಕೆ ಅದರ ಜನಪ್ರಿಯತೆಯೇ ಒಳ್ಳೆಯ ವಿಮರ್ಶೆಯೆನ್ನಲು ಇದು ತಕ್ಕ ನಿದರ್ಶನವೆಂದು ನಾನು ಭಾವಿಸುತ್ತೇನೆ.

ಸುಮಾರು ೩೦ ವರ್ಷಗಳ ಹಿಂದೆ ಆರಂಭವಾದ ಶ್ರೀಮಾನ್ ಪುಟ್ಟಪ್ಪನವರ ಸಾಹಿತ್ಯಸೇವೆ ಇಂದಿಗೂ ನಡೆದುಕೊಂಡು ಬರುತ್ತಿದೆ. ಅವರು ಮೊದಲೊದಲು ಪ್ರಕಟಿಸಿದ 'ಕೊಳಲು' 'ಪಾಂಚಜನ್ಯ' 'ನವಿಲು' ಮುಂತಾದ ಕವನಸಂಗ್ರಹಗಳು ಕನ್ನಡನಾಡಿನ ಮೂಲೆಮೂಲೆಗಳಲ್ಲೂ ಜನಪ್ರಿಯತೆಯನ್ನು ಗಳಿಸಿವೆ. ಅವರ ಜಲಗಾರ,

ಮಹಾರಾತ್ರಿ, ಕುರುಕ್ಷೇತ್ರ, ನನ್ನ ಗೋಪಾಲ, ರಕ್ತಾಕ್ಷಿ, ಬೆರಳ್‌ಗೆ ಕೊರಳ್ ಮುಂತಾದ ನಾಟಕಗಳು ನಮ್ಮ ರಂಗಭೂಮಿಗೆ ಹೊಸಕಳೆಯನ್ನು ತಂದಿವೆ. ಅವರ ಗದ್ಯಗ್ರಂಥಗಳೂ ವಿಮರ್ಶನ ಲೇಖನಗಳೂ ತರುಣರಿಗೂ ಕಿರಿಯ ಸಾಹಿತಿಗಳಿಗೂ ಉತ್ಸಾಹವನ್ನೂ ಮಾರ್ಗದರ್ಶನವನ್ನೂ ನೀಡುವಂತಿವೆ; ಅವರ ಕಥನಕವನಗಳು ನಮ್ಮ ಸಾಹಿತ್ಯದಲ್ಲಿ ಹೊಸ ಪಂಥವನ್ನು ಆರಂಭಿಸಿವೆ; ಅವರ ಏಕೈಕ ಕಾದಂಬರಿ 'ಕಾನೂರು ಸುಬ್ಬಮ್ಮ ಹೆಗ್ಗಡಿತಿ' ಮಲೆನಾಡಿನ ಜೀವನವನ್ನು ರಮ್ಯವಾಗಿ ಚಿತ್ರಿಸುತ್ತದೆ. ಇವೆಲ್ಲ ಕೃತಿಗಳಲ್ಲೂ ಶ್ರೀ ಪುಟ್ಟಪ್ಪನವರ ನಿಸರ್ಗ ಪ್ರೇಮವನ್ನೂ ಶೈಲಿಯ ಸೊಬಗನ್ನೂ ಭಾವನೆಯ ಮಾಧುರ್ಯವನ್ನೂ, ನಮ್ಮ ಸಂಸ್ಕೃತಿಯ ಮೆರುಗನ್ನೂ ಕಾಣಬಹುದು.

ಶ್ರೀ ಪುಟ್ಟಪ್ಪನವರ ಹೆಸರನ್ನು ಸಾಮಾನ್ಯ ಅಕ್ಷರಸ್ಥರಲ್ಲೂ ಪ್ರಚಾರಮಾಡಿ ಅವರ ಕೀರ್ತಿಯನ್ನು ಹರಡಿದ ಗ್ರಂಥವೆಂದರೆ ಅವರು ರಚಿಸಿರುವ 'ಜನಪ್ರಿಯ ವಾಲ್ಮೀಕಿ ರಾಮಾಯಣ'. ಜನತೆಯಲ್ಲಿ ಸಂಸ್ಕೃತಿ ಪ್ರಚಾರ ಬಹು ಸುಲಭವಾಗಿ ಆಗುವುದಕ್ಕೋಸ್ಕರ ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯವರು ಈ ಗ್ರಂಥವನ್ನು ಬರೆದುಕೊಡುವಂತೆ ಶ್ರೀಮಾನ್ ಪುಟ್ಟಪ್ಪನವರನ್ನು ಕೇಳಿಕೊಂಡರು. ಆಗ ಸಮಿತಿಯ ಮುಖ್ಯಾಧಿಕಾರಿಯಾಗಿ ಕೆಲಸಮಾಡುವ ಸುಯೋಗ ನನಗೆ ದೊರಕಿತ್ತು. ಈ ಗ್ರಂಥ ಹೆಸರಿಗೆ ತಕ್ಕಂತೆ ಕರ್ಣಾಟಕದ ಹಳ್ಳಿಹಳ್ಳಿಗಳಲ್ಲೂ ಜನಪ್ರಿಯವೆನಿಸಿ ಪ್ರಚಾರಕ್ಕೆ ಬಂದುಬಿಟ್ಟಿದೆ.

ಸುಮಾರು ೨೦ ವರ್ಷಗಳ ಹಿಂದೆ ಹೈಸ್ಕೂಲಿನಲ್ಲಿ ಕನ್ನಡ ಮಾಧ್ಯಮವನ್ನು ಆಚರಣೆಗೆ ತರಲು ಯತ್ನಿಸಿದಾಗ ಅನೇಕ ಪೋಷಕರು ಇಂಗ್ಲಿಷ್ ಮಾಧ್ಯಮವನ್ನೇ ಬಯಸುತ್ತಿದ್ದರು. ಇಂದಿಗೂ ಅದು ಪೂರ್ಣವಾಗಿ ನಿಂತಿಲ್ಲ. ಅಂಥ ಸಮಯದಲ್ಲಿ ಶ್ರೀ ಪುಟ್ಟಪ್ಪನವರು ಕನ್ನಡ ಮಾಧ್ಯಮವನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ, ಅದು ಯಶಸ್ವಿಯಾಗುವದೆಂಬ ಭರವಸೆಯನ್ನು ವ್ಯಕ್ತಪಡಿಸುತ್ತಿದ್ದರು. ಯಾವ ಜನಾಂಗವೇ ಆಗಲಿ ದೇಶಭಾಷೆಯಲ್ಲಿ ಪಡೆಯುವ ಶಿಕ್ಷಣದಿಂದ ಮಾತ್ರ ನಿಜವಾದ ಪ್ರಗತಿಯನ್ನು ಸಾಧಿಸಬಲ್ಲುದೆಂಬುದು ಅವರ ದೃಢವಾದ ನಂಬಿಕೆ.

ಹೈಸ್ಕೂಲಿನಲ್ಲಿ ಕನ್ನಡ ಮಾಧ್ಯಮ ಯಶಸ್ವಿಯಾದದ್ದನ್ನು ಕಂಡು ಕಾಲೇಜಿನಲ್ಲೂ ಎಲ್ಲ ಪಾಠಗಳನ್ನು ಕನ್ನಡದಲ್ಲೇ ಏಕೆ ಮಾಡಬಾರದೆಂದು ಶ್ರೀ ಪುಟ್ಟಪ್ಪನವರು ಅಧ್ಯಾಪಕರಲ್ಲೂ ವಿದ್ಯಾರ್ಥಿಗಳಲ್ಲೂ ಆ ಹಂಬಲವನ್ನು ಬೆಳೆಸಲು ತಮ್ಮ ಪ್ರಭಾವವನ್ನು ಬೀರಿರುವರು. ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕಮಾಲೆಯಲ್ಲಿ ರಸಾಯನಶಾಸ್ತ್ರ, ಭೌತಶಾಸ್ತ್ರ, ಸಸ್ಯಶಾಸ್ತ್ರ, ಭೂಮಿಶಾಸ್ತ್ರ, ಅರ್ಥಶಾಸ್ತ್ರ, ತರ್ಕ

ಶಾಸ್ತ್ರ ಮುಂತಾದ ವಿಷಯಗಳನ್ನು ಕುರಿತ ಪ್ರೌಢಗ್ರಂಥಗಳನ್ನು ಬರೆಸಿ ಪ್ರಕಟಿಸುವ ಕಾರ್ಯವನ್ನು ಕೈಕೊಂಡಿರುವರೆಂದು ಕೇಳಿರುತ್ತೇನೆ. ಇದು ನೆರವೇರಿದರೆ ಕನ್ನಡ ಮಾಧ್ಯಮವನ್ನು ಆಚರಣೆಗೆ ತರಲು ಇರುವ ತೊಂದರೆಗಳಲ್ಲಿ ಒಂದು ನಿವಾರಣೆ ಯಾದಂತಾಗುತ್ತದೆ.

ಸದ್ಯದಲ್ಲಿ ಹೈಸ್ಕೂಲುಗಳಲ್ಲಿ ಕನ್ನಡ ಭಾಷೆಯನ್ನು ಪಂಡಿತರು ಬೋಧಿಸುತ್ತಿರುವರು. ಅವರಿಗೆ ಕನ್ನಡ ಭಾಷೆಯಲ್ಲಿ ಆಳವಾದ ಅಭ್ಯಾಸ ಇರುವುದೆಂದು ಒಪ್ಪಬಹುದಾದರೂ ಬೋಧನಕ್ರಮವಾಗಲಿ ವಿಶ್ವಸಾಹಿತ್ಯಸಂಸ್ಕೃತಿಗಳ ಪರಿಚಯವಾಗಲಿ ಅಷ್ಟಾಗಿ ಅಭ್ಯಾಸವಾಗಿರುವುದಿಲ್ಲ. ಕನ್ನಡ ಪದವೀಧರರು ಹೈಸ್ಕೂಲಿನಲ್ಲಿ ಕನ್ನಡ ಪಾಠ ಮಾಡುವುದಾದರೆ ವಿದ್ಯಾರ್ಥಿಗಳ ಭಾಷಾಶಕ್ತಿ, ಸಾಹಿತ್ಯಾಭಿರುಚಿ—ಇವೆಲ್ಲ ಉತ್ತಮಗೊಳ್ಳಬಲ್ಲುವೆಂದು ಭಾವಿಸುವುದರಲ್ಲಿ ಪುಟ್ಟಪ್ಪನವರೂ ಒಬ್ಬರು. ಈಚೆಗೆ ಟೀಚರ್ಸ್ ಕಾಲೇಜಿನಲ್ಲಿ ಕನ್ನಡ ಭಾಷಾಬೋಧನೆಯ ಕ್ರಮವನ್ನು ಒಂದು ಅಧ್ಯಯನ ವಿಷಯವನ್ನಾಗಿ ಮಾಡಲು ಆಲೋಚಿಸಿ ಎರಡು ವರ್ಷಗಳಿಂದ ಆರಂಭಿಸಿ ನಡೆಸಲಾಗುತ್ತಿದೆ. ಆಗ ಶ್ರೀಮಾನ್ ಪುಟ್ಟಪ್ಪನವರು ಅದಕ್ಕೆ ತಮ್ಮ ಸಹಕಾರವನ್ನೂ ಬೆಂಬಲವನ್ನೂ ನೀಡಿ ಪ್ರೋತ್ಸಾಹಿಸಿದರು.

ಈಚೆಗೆ ನಮ್ಮ ಜನತೆಯ ಗಮನವನ್ನು ಸೆಳೆದಿರುವ ವಿಷಯವೆಂದರೆ ಕರ್ಣಾಟಕ ಏಕೀಕರಣಕ್ಕೆ ಸಂಬಂಧಿಸಿದ ಅಂಶ. ಇದು ಇನ್ನು ಮೇಲೆ ಇತ್ಯರ್ಥವಾಗಬೇಕಾದ ವಿಷಯ. ಕೆಲವರು ಏಕೀಕರಣ ಬೇಕೆಂದರೆ ಮತ್ತೆ ಕೆಲವರು ಬೇಡವೆನ್ನುತ್ತಿದ್ದಾರೆ. ಆ ಚರ್ಚಾತ್ಮಕ ವಿಷಯವನ್ನು ಇಲ್ಲಿ ಅಷ್ಟಾಗಿ ಪ್ರತಿಪಾದಿಸುವುದು ಅಗತ್ಯವಲ್ಲವಾದರೂ ಶ್ರೀ ಪುಟ್ಟಪ್ಪನವರು ವ್ಯಕ್ತಪಡಿಸಿರುವ ನಿಲವನ್ನು ಸ್ಮರಿಸಿಕೊಳ್ಳಬೇಕಾಗಿದೆ. ಶ್ರೀ ಪುಟ್ಟಪ್ಪನವರಿಗೆ ಕರ್ಣಾಟಕ ರಾಜಕೀಯವಾಗಿ ವಿಭಜಿಸಿ ಹೋಗಿದ್ದರೂ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ದೃಷ್ಟಿಯಲ್ಲಿ ಅವಿಭಾಜ್ಯವಾಗಿಯೇ ಉಳಿದಿದೆ. ಕೆಲವು ಕಾಲದಿಂದ ಕಾರಣಾಂತರಗಳಿಂದ ಬೇರೆಬೇರೆ ಪ್ರಾಂತಗಳಲ್ಲಿ ಸೇರಿರುವ ಕನ್ನಡ ಮಾತಾಡುವ ಜನರೆಲ್ಲ ರಾಜಕೀಯವಾಗಿ ಒಂದುಗೂಡುವ ಅಗತ್ಯವನ್ನು ಅವರು ಸ್ಪಷ್ಟಪಡಿಸಿದ್ದಾರೆ. ಹಾಗೆ ಕನ್ನಡಿಗರೆಲ್ಲ ಒಟ್ಟುಗೂಡುವುದರಿಂದ ಮಾತ್ರ ಅವರ ಅಭಿವೃದ್ಧಿಯಾಗುವುದೆಂದು ಅವರು ದೃಢವಾಗಿ ನಂಬಿರುವರು. ತಮ್ಮ ಭಾಷಣಗಳ ಮೂಲಕವೂ ಲೇಖನಗಳ ಮೂಲಕವೂ ಇದನ್ನು ಸ್ಪಷ್ಟಪಡಿಸಿರುವರು. ರಾಜಕೀಯವಾಗಲಿ ಆರ್ಥಿಕವಾಗಲಿ ಯಾವ ಶಕ್ತಿಯೂ ಅಂಥ ಏಕೀಕರಣವನ್ನು ವಿರೋಧಿಸಕೂಡದು. ಕನ್ನಡ ಮಾತಾಡುವವರೆಲ್ಲ ಕನ್ನಡತಾಯ ಮಕ್ಕಳೆಂಬ ಭಾವನೆಯಿಂದ ಒಟ್ಟುಗೂಡಿ ಬಾಳಬೇಕು ಎಂಬುದೇ ಅವರ ಉದ್ದೇಶ.

ಶ್ರೀ ರಾಮಾಯಣದರ್ಶನದಂಥ ಮಹಾಕಾವ್ಯ ರಚಿಸುವುದು ಸಾಮಾನ್ಯ ಸಾಹಿತಿಗೆ ಸಾಧ್ಯವಿಲ್ಲದ ಕಾರ್ಯ. ಶ್ರೀ ಪುಟ್ಟಪ್ಪನವರು ದೀರ್ಘಕಾಲ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ದುಡಿದು, ಅಗತ್ಯವಾದ ಸಿದ್ಧಿಯನ್ನೆಲ್ಲ ಪಡೆದಿದ್ದಾರೆ. ತಮ್ಮ ಜೀವಿತದ ಮಹಾಸಿದ್ಧಿಯಂತೆ ಶ್ರೀ ರಾಮಾಯಣದರ್ಶನದಂಥ ಗ್ರಂಥವನ್ನು ಕನ್ನಡ ಜನತೆಗೆ ಅರ್ಪಿಸಿದ್ದಾರೆ. ನಮ್ಮ ಸಾಹಿತ್ಯದಲ್ಲಿ ಇಂಥ ಪುಣ್ಯಕೃತಿ ಆವಿರ್ಭವಿಸಿತೆಂದು ನಾವೆಲ್ಲರೂ ಹೆಮ್ಮೆಪಡಬಹುದಾಗಿದೆ. ತನ್ನ ವಿದ್ಯಾರ್ಥಿಯೊಬ್ಬನು—ಅಧ್ಯಾಪಕನೊಬ್ಬನು—ರಾಷ್ಟ್ರಕವಿಪಟ್ಟವನ್ನು ಪಡೆಯುವಂತಾಗಿ ನಮ್ಮ ವಿಶ್ವವಿದ್ಯಾನಿಲಯ ಸಾರ್ಥಕ್ಯವನ್ನು ಸಾಧಿಸಿಕೊಂಡಿತು.

ಭಾರತ ಸರ್ಕಾರದ ಸಾಹಿತ್ಯ ಅಕಾಡೆಮಿಯವರ ಗೌರವಾಭಿಮಾನಗಳಿಗೆ ಪಾತ್ರರೆನಿಸಿರುವ ಶ್ರೀಮಾನ್ ಪುಟ್ಟಪ್ಪನವರಿಗೆ ನನ್ನ ಪರವಾಗಿಯೂ, ನಿಮ್ಮ ಪರವಾಗಿಯೂ, ಕನ್ನಡನಾಡಿನ ಪರವಾಗಿಯೂ ಹೃತ್ಪೂರ್ವಕ ಅಭಿನಂದನೆಗಳನ್ನು ಅರ್ಪಿಸುತ್ತೇನೆ. ಅವರಿಂದ ಮುಂದೆಯೂ ಕನ್ನಡ ನಾಡುನುಡಿಗಳಿಗೆ ಇನ್ನೂ ಹೆಚ್ಚಿನ ಸೇವೆ ಸಲ್ಲುವಂತೆ ಭಗವಂತ ಅವರಿಗೆ ಆಯುರಾರೋಗ್ಯವನ್ನೂ ಶಕ್ತಿ ಸಾಮರ್ಥ್ಯಗಳನ್ನೂ ನೀಡಲೆಂದು ಪ್ರಾರ್ಥಿಸುತ್ತೇನೆ.

*   *   *   *

ಬಳಿಕ ಮಹಾರಾಜ ಕಾಲೇಜಿನ ಇಂಗ್ಲಿಷ್ ಪ್ರಾಧ್ಯಾಪಕರಾದ ಶ್ರೀ ಭರತರಾಜ ಸಿಂಗ್ ಅವರು ಕವಿವರ್ಯರ ವಿದ್ಯಾರ್ಥಿಗಳಾಗಿ ತಾವು ಕಲಿತ ಕಾವ್ಯಪಾಠವನ್ನು ನೆನೆದು ಕವಿವರ್ಯರ ಬೋಧನವೈಶಿಷ್ಟ್ಯವನ್ನೂ ಅವರ ವ್ಯಕ್ತಿಪ್ರಭಾವವನ್ನೂ ಕುರಿತು ಹೀಗೆ ಭಾಷಣಮಾಡಿದರು.

ಮಾನ್ಯ ಅಧ್ಯಕ್ಷರೆ, ಶ್ರೀ ಕುವೆಂಪು ಅವರೆ,

ಈ ಶುಭಸಂದರ್ಭದಲ್ಲಿ ನನಗೂ ಎರಡು ಮಾತನಾಡುವ ಅವಕಾಶ ಸಿಕ್ಕಿದುದು ನನ್ನ ಸುಕೃತ, ಸಹೋದ್ಯೋಗಿಯಾಗಿ ಮಾತನಾಡುವುದು ಮಾತ್ರವಲ್ಲದೆ ಶ್ರೀ ಕುವೆಂಪು ಅವರ ವಿದ್ಯಾರ್ಥಿಯಾಗಿಯೂ ನನ್ನ ಗೌರವವನ್ನು ಸಲ್ಲಿಸುತ್ತಿರುವುದು ಹೆಮ್ಮೆಯ ವಿಷಯ.

ಸಾಮಾನ್ಯವಾಗಿ ದಿನ ಕಳೆದಂತೆ ವಿದ್ಯಾರ್ಥಿದೆಶೆಯನ್ನು ಮರೆಯುವುದು ಮನುಷ್ಯನಿಗೆ ಸಹಜವಾದುದು. ಅಷ್ಟೇ ಅಲ್ಲ. ಎಷ್ಟೋ ವಿಷಯಗಳನ್ನು ಮರೆಯುವುದೂ ಆವಶ್ಯಕ. ಆದರೆ ಮಹಾಕವಿಗಳಾದ ಶ್ರೀ ಕುವೆಂಪು ಅವರ ವಿದ್ಯಾರ್ಥಿಯಾಗಿ ಅವರು ಬೋಧಿಸಿದ ಶ್ರೇಷ್ಠ ಕಾವ್ಯವೊಂದರ ಪಾಠಪ್ರವಚನಗಳನ್ನು ನಾನೆಂದಿಗೂ

ಮರೆಯಲಾರೆ! ಸ್ವತಃ ಮಹಾಕವಿಯಾದವರೊಬ್ಬರು ತಮ್ಮ ಪ್ರತಿಭಾಮಹಿಮೆಯಿಂದ ಆ ಕಾವ್ಯದ ಸನ್ನಿವೇಶವನ್ನು ರಸಮಯವನ್ನಾಗಿ ಮರಳಿ ಸೃಷ್ಟಿಸಿ ಪಾಠ ಹೇಳಿದ ಆ ದಿನಗಳ ರಸನಿಮಿಷಗಳ ಸವಿನೆನಪು ನನ್ನ ಸ್ಮೃತಿಪಟಲದಲ್ಲಿ ಅಚ್ಚಳಿಯದೆ ಇದೆ. ಮಹಾಕವಿಗಳು ಪಾಠ ಹೇಳಿದ ಆ ಶ್ರೇಷ್ಠಕಾವ್ಯ "ಕರ್ನಾಟಕ ಕಾದಂಬರಿ ಸಂಗ್ರಹ!"

ಶ್ರೀ ಕುವೆಂಪು ಅವರು ಮೊದಲು ಕೃತಿರಚನೆ ಮಾಡಿದ್ದು ಇಂಗ್ಲಿಷಿನಲ್ಲಿ ಎಂದರೆ ನಿಮಗೆ ಆಶ್ಚರ್ಯವಾಗಬಹುದು. ಭಾವಗಳು ಬೇರೊಂದು ಭಾಷೆಯಲ್ಲಿ ರೂಪುಗೊಂಡಾಗ, ಅವುಗಳು ಮೃಗಾಲಯದ ಪಂಜರಬದ್ಧವಾದ ಪ್ರಾಣಿಗಳಂತೆ, ದೇಹ ಜೀವಗಳಿಂದ ಕೂಡಿದ್ದರೂ ಸಹಜಸ್ವಾತಂತ್ರ್ಯದ ಸೌಂದರ್ಯದಿಂದ ಕಂಗೊಳಿಸುವುದಿಲ್ಲ. ಈ ಸತ್ಯವನ್ನರಿತು ಪರಭಾಷೆಯಲ್ಲಿ ಬರೆಯುವುದನ್ನು ಬಿಟ್ಟು ಮಾತೃಭಾಷೆಯಲ್ಲಿಯೇ ತಮ್ಮ ಭಾವಗಳನ್ನು ಅಭಿವ್ಯಕ್ತಗೊಳಿಸಿ ನಮ್ಮೆಲ್ಲರಿಗೂ ಮಾರ್ಗದರ್ಶಕರಾಗಿದ್ದಾರೆ.

ದರ್ಶನ ಸಂಪತ್ತಿಲ್ಲದ ಕಾವ್ಯ ಮಹಾಕಾವ್ಯವಾಗುವುದಿಲ್ಲ; ಕವಿ, ಮಹಾಕವಿಯಾಗುವುದಿಲ್ಲ. ಶ್ರೀ ಕುವೆಂಪು ಅವರು ಮಹಾಕವಿ ಮಾತ್ರವಲ್ಲ, ದಾರ್ಶನಿಕರೂ ಹೌದು. 'ಋಷಿಯಾಗಬಲ್ಲವನೇ ಕವಿಯಾಗಬಲ್ಲ' ಎಂಬ ಸೂತ್ರಕ್ಕೆ ಶ್ರೀ ಕುವೆಂಪು ಅವರು ನಿದರ್ಶನರಾದ ಸಂತ ಕವಿಗಳು. ಅವರ ಸಾಧನೆಯ ಫಲವೇ ಅವರ ಕೃತಿ, ಅವರ ಕಲೆ, ಅವರ ಜೀವನ. ಕಲೆಗಾಗಿ ಕಲೆಯ ಸಾಧನೆಯಲ್ಲಿ ನಿರತರಾಗದೆ ಆತ್ಮೋದ್ಧಾರಕ್ಕಾಗಿ ಕಲೆಯ ಉಪಾಸಕರಾಗಿದ್ದಾರೆ. ಈ ಉಪಾಸನೆಯ ಸಂಕೇತವೇ "ಶ್ರೀ ರಾಮಾಯಣದರ್ಶನಂ"! ಈ ಮೇರುಕೃತಿ ಅವರ ಅಧ್ಯಾತ್ಮ ಸಾಧನೆಯ ಒಂದು ಶಿಖರ. ಕವಿಯ ಮನೋಭೂಮಿಕೆಯಲ್ಲಿ ವ್ಯಕ್ತಾವ್ಯಕ್ತವಾಗಿ ಗೋಚರಿಸುವ ದಿವ್ಯ ಭಾವಗಳು ಜ್ಯೋತಿಶ್ಶಿಖರಗಳನ್ನೇರಿ ಇಂತಹ ಬೃಹತ್‌ಕೃತಿರೂಪಗಳನ್ನು ಧರಿಸಿ ತಮಸ್ಸನ್ನು ಮತ್ತೆ ಮತ್ತೆ ಪರಿಹರಿಸಲಿ! Oh! Pilgrim of the soul, journey on for ever, and may you never arrive! For, to arrive is to stop!!

* * * *

ಆಮೇಲೆ ವಿದ್ಯಾರ್ಥಿಗಳ ಪರವಾಗಿ ಕನ್ನಡ ಮೂರನೇ ಆನರ್ಸ್ ತರಗತಿಯ ಶ್ರೀ ಹಾ. ಮಾ. ನಾಯಕ್ ಅವರು ಕನ್ನಡನಾಡಿನ ಹಿರಿಮೆಗರಿಮೆಗಳನ್ನು ವಿವರಿಸುತ್ತಾ ನಮ್ಮ ಕಾಲದಲ್ಲಿ ಶ್ರೀ ಕುವೆಂಪು ಅವರು ಕನ್ನಡ ಸಾಹಿತ್ಯ ಸಂಸ್ಕೃತಿಗಳನ್ನು ಹೇಗೆ ಪ್ರತಿನಿಧಿಸುತ್ತಾರೆ ಎಂಬುದನ್ನು ವಿಶಿಷ್ಟ ಶೈಲಿಯಲ್ಲಿ ಹೀಗೆ ಭಾಷಣ ಮಾಡಿದರು.

ಕವಿವರ್ಯ ಕುವೆಂಪು ಅವರೆ, ಅಧ್ಯಕ್ಷ ಹನುಮಂತಯ್ಯನವರೆ, ಉಪಸ್ಥಾನಪತಿ ಡಿ'ಸೋಜಾ ಅವರೆ, ಹಿರಿಯರೆ ಮತ್ತು ಗೆಳೆಯರೆ,

ಕನ್ನಡದ ಭಾಗ್ಯದೇವತೆ ತನ್ನ ನಾಡಿನ ಬಗೆಗೆ ಜನದ ಬಗೆಗೆ ಯಾವತ್ತೂ ಕೃಪಣಳಾದುದಿಲ್ಲ. ಅವಳ ಕೃಪೆ, ಕರುಣೆ ನಮ್ಮ ಮೇಲೆ ಸತತವಾಗಿದೆ. ಅದು ಶ್ರೀಗಂಧದ ಬನಗಳಾಗಿ, ಜೋಗದ ಜಲಪಾತವಾಗಿ ಹೊಮ್ಮಿರಬಹುದು ; ನೃಪತುಂಗ ವಿಷ್ಣುವರ್ಧನರಂತಹ ದೊರೆಗಳಾಗಿ, ಪಂಪ ನಾರಣಪ್ಪರಂತಹ ಕವಿಗಳಾಗಿ ಬಂದಿರ ಬಹುದು ; ಶ್ರವಣಬೆಳಗೊಳದ ಗೊಮ್ಮಟೇಶ್ವರನಾಗಿ, ಬೇಲೂರಿನ ಶಿಲಾಬಾಲಿಕೆಯ ರಾಗಿ ಆ ಭಾಗ್ಯ ಮೈದೋರಿರಬಹುದು ; ವೀಣೆ ಶೇಷಣ್ಣನವರ ನಾದಮಾಧುರ್ಯ ದಲ್ಲಿಯೋ, ವರದಾಚಾರ್ಯರ ನಟನಕೌಶಲದಲ್ಲಿಯೋ ಅದು ವ್ಯಕ್ತವಾಗಿರಬಹುದು. ನಮ್ಮ ಕಾಲದಲ್ಲಿಯಂತೂ ಆ ದೇವಿ ಕುವೆಂಪು—ಬೇಂದ್ರೆಯಂತಹ ಕವಿಗಳನ್ನು ಕರುಣಿಸಿದ್ದಾಳೆ; ಯಾವ ಬಹುಮಾನಕ್ಕೂ ಸಿಕ್ಕದ, ಎಲ್ಲ ಬೆಲೆಗಳನ್ನೂ ಮೀರಿದ ಭುವನದ ಭಾಗ್ಯದಿಂದಾದ ಶ್ರೀ ರಾಮಾಯಣದರ್ಶನದಂತಹ ಮಹಾಕಾವ್ಯವನ್ನು ನೀಡಿದ್ದಾಳೆ. ಜೀವನದ ನಿಜಮೌಲ್ಯಗಳು ಸವೆಯುತ್ತಿರುವ, ದೊಡ್ಡ ಆಶೆ ಆದರ್ಶ ಗಳಲ್ಲಿ ನಂಬಿಕೆ, ಶ್ರದ್ಧೆಗಳು ಕುಂದುತ್ತಿರುವ ಈ ಕಾಲದಲ್ಲಿ ಭಾರತೀಯ ಸಾಹಿತ್ಯ ದಲ್ಲಿಯೇ ಬೃಹತ್ತು ಮಹತ್ತುಗಳಲ್ಲಿ ಅದ್ವಿತೀಯವಾದ ಮಹಾಕಾವ್ಯವನ್ನು ರಚಿಸಿ ಕುವೆಂಪು ಅವರು ಒಂದು ಅದ್ಭುತ ಪವಾಡವನ್ನು ಮೆರೆದಿದ್ದಾರೆ. ಲೋಕಕ್ಕೆ ಕನ್ನಡದ ಪರವಾದ ದರ್ಶನಾತ್ಮಕ ಕಾಣಿಕೆಯೊಂದನ್ನು ನೀಡಿದ್ದಾರೆ.

ಕವಿ ಕುವೆಂಪು ಅವರನ್ನು, ಅವರ ಸಾಹಿತ್ಯದ ದಶಮುಖಗಳನ್ನು ನಾನು ತಮಗೆ ಹೊಸದಾಗಿ ಪರಿಚಯ ಮಾಡಿಕೊಡಬೇಕಾದುದಿಲ್ಲ. ನೀಲಮೇಘಶ್ಯಾಮ ಬೃಂದಾವನದಲ್ಲಿ ಕೊಳಲು ಬಾರಿಸುತ್ತಿದ್ದನೆಂದು ಕೇಳಿದ್ದೇವೆ; ನಾವಾರೂ ಅದನ್ನು ಪ್ರತ್ಯಕ್ಷ ಕಂಡಿಲ್ಲ ಕೇಳಿಲ್ಲ—ಆದರೆ ಆ ಕೊಳಲು ಕೆಲವು ಕಾಲ ಕುವೆಂಪು ಅವರ ಕೈವಶವಾಗಿತ್ತೆಂಬುದು ಮಾತ್ರ ನಿಜ ಎಂದು ನಮ್ಮವರೇ ಒಬ್ಬರು ಪ್ರಶಂಸಿಸಿದ್ದಾರೆ. ಮಹಾರಾಷ್ಟ್ರದ ಪ್ರಮುಖ ಸಾಹಿತಿ ಮಾಮಾವರೇರ್‌ಕರ್ ಅವರು ಕುವೆಂಪು ಅವರನ್ನು ಗರುಡಪಕ್ಷಿಯೆಂದು ನಿರ್ದೇಶಿಸಿದ್ದಾರೆ. ಎಲ್ಲ ಪಕ್ಷಿಗಳಿಗಿಂತ ಎತ್ತರದಲ್ಲಿ ಹಾರಿದರೂ ನೆಲವನ್ನು ನೋಡುವ ಹಂಬಲವನ್ನು ಕಳೆದುಕೊಳ್ಳದ ಆ ರಾಜಪಕ್ಷಿಯನ್ನು ಗಮನಿಸಿದವರಿಗೆ ಈ ಹೋಲಿಕೆ ಎಷ್ಟು ಉಚಿತವೆಂದು ಗೊತ್ತಾಗುತ್ತದೆ. ಕವಿವರ್ಯ ಟಾಗೂರರು ತೀರಿಹೋದ ತರುಣದಲ್ಲಿ 'ವಿಶ್ವಭಾರತಿ'ಯಲ್ಲಿ ಪ್ರಕಟವಾದ ಲೇಖನ ವೊಂದರಲ್ಲಿ ಕುವೆಂಪು ಅವರನ್ನು ಟಾಗೂರರ ಉತ್ತರಾಧಿಕಾರಿಗಳೆಂದು ಕರೆಯ ಲಾಗಿತ್ತು. ಹೀಗೆ, ಆಧುನಿಕ ಕನ್ನಡ ಸಾಹಿತ್ಯದ ಸರಸ್ಸಿಗೆ ಸಾಗರದ ಆಳವನ್ನೂ

ವೈಶಾಲ್ಯವನ್ನೂ ದೊರಕಿಸಿಕೊಟ್ಟ ಕುವೆಂಪು ಅವರು ಭಾರತೀಯ ಸಾಹಿತ್ಯಲೋಕದಲ್ಲಿಯೇ ತಮ್ಮ ಹಿರಿಮೆಯನ್ನೂ, ವ್ಯಕ್ತಿತ್ವವನ್ನೂ ಪ್ರಕಟಪಡಿಸಿದ್ದಾರೆ.

ಸಾಹಿತ್ಯ ಅಕಾಡೆಮಿಯಿಂದ ಬಹುಮಾನಿತರಾದ ಕುವೆಂಪು ಅವರನ್ನು ಅಭಿನಂದಿಸಲು ನಾನು ಹಿರಿಯರೊಬ್ಬರೊಂದಿಗೆ ಹೋದಾಗ ನಮ್ಮನ್ನು ಕಂಡೊಡನೆಯೇ ಅವರೇ ಅಭಿನಂದಿಸಿದರು. 'ತಮ್ಮನ್ನು ಅಭಿನಂದಿಸಲೋಸುಗ ನಾವು ಬಂದಿದೇವೆ' ಎಂದು ನಾವು ಹೇಳಿದಾಗ, ಅವರು 'ಇಲ್ಲ, ಇಲ್ಲ, ನಿಮಗೆ, ಕನ್ನಡ ಜನತೆಗೆ ಅಭಿನಂದನೆಗಳು ಸಲ್ಲಬೇಕು. ರಾಮಾಯಣದರ್ಶನ ಕನ್ನಡದ್ದು; ಅದಕ್ಕೆ ಬಂದ ಬಹುಮಾನ, ಸಂದ ಗೌರವ, ಕನ್ನಡ ಜನತೆಗೆ ಬಂದದ್ದು' ಎಂದು ಹೇಳಿದರು. ಕನ್ನಡದ ಕಾರಣವನ್ನು ಇಷ್ಟು ಆತ್ಮೀಯತೆಯಿಂದ, ಕಳಕಳಿಯಿಂದ ಕಾಣಬಲ್ಲವರು ಇಂದು ನಮ್ಮಲ್ಲಿ ಬಹಳ ಜನರಿಲ್ಲ. ಕನ್ನಡದ ತವರಿನಲ್ಲೇ, ಮಹಾಕವಿಗಳ ಜನ್ಮಸ್ಥಾನದಲ್ಲಿಯೇ, ಕನ್ನಡದ ಸ್ಥಾನ ಇನ್ನೂ ನಿಶ್ಚಯವಾಗಿಲ್ಲ. 'ಕನ್ನಡದ ಕಣ್ಣದು ಮೈಸೂರು' ಎಂದು ಕವಿ ಹಾಡಿದ ಈ ದೇಶದ ಶಿಕ್ಷಣ ಸಂಸ್ಥೆಗಳಲ್ಲಿ ಹದಿನಾರಾಣೆಯ ಕನ್ನಡಿಗರೇ ಕನ್ನಡ ಅಕ್ಷರ ಕಾಣದೆ, ಕನ್ನಡದ ಮಾತು ಕೇಳದೆ ದಾಟಿಹೋಗಬಹುದಾದ ಪರಿಸ್ಥಿತಿ ಕಳೆದಿಲ್ಲ. ಕನ್ನಡದ ಬಗ್ಗೆ ಒಂದು ಒಳ್ಳೆಯ ಮಾತಾಡುವುದೂ ತಪ್ಪಾಗುತ್ತದೆ; ರಾಷ್ಟ್ರೀಯತೆ—ಅಂತರಾಷ್ಟ್ರೀಯತೆಗೆ ಧಕ್ಕೆ ಬರುತ್ತದೆಂದು ಒಂದು ವರ್ಗದ ಜನ ಭಾವಿಸುತ್ತಾರೆ. ರಾಜಕೀಯ, ಸಾಮಾಜಿಕ ಮತ್ತು ಅಧಿಕಾರೀ ಕ್ಷೇತ್ರಗಳಲ್ಲಿ ತಮ್ಮ ಸ್ಥಾನವನ್ನುಳಿಸಿಕೊಳ್ಳುವುದಕ್ಕಷ್ಟೆ ಇಂದು ಹಲವರಿಗೆ ಕನ್ನಡ ಬೇಕಾಗಿದೆ; ಆದರೆ ಕುವೆಂಪು ಅವರಿಗೆ, ಅವರಂತಹ ವಿರಳರಿಗೆ ಕನ್ನಡವೇ ಜೀವನದ ಧ್ಯೇಯ, ಧೋರಣೆ, ಆದರ್ಶ, ಸರ್ವಸ್ವ. ಕನ್ನಡದ ಬಾಳು ಹಸನಾಗಲು ಇವರಿಗೆ ಕನ್ನಡ ಬೇಕಾಗಿದೆ. ಕವಿಯಾಗಿ 'ಕನ್ನಡವೆನೆ ಕುಣಿದಾಡುವುದೆನ್ನೆದೆ' ಎಂದು, ಪ್ರವಾದಿಯಾಗಿ 'ಸಾಯುತಿದೆ ನಿಮ್ಮ ನುಡಿ ಓ! ಕನ್ನಡದ ಕಂದರಿರ' ಎಂದು ಎಚ್ಚರಿಸಿದ ಕುವೆಂಪು ಅವರು ಈ ಕಾಲು ಶತಮಾನದಲ್ಲಿ ಕನ್ನಡಕ್ಕಾಗಿ, ಅದಕ್ಕೆ ಸಲ್ಲಬೇಕಾದ ಸ್ಥಾನಕ್ಕಾಗಿ ಹೋರಾಟ ನಡೆಸಿದಾರೆ. ಕೋಗಿಲೆಯ ಉಲಿಯಲ್ಲಿ, ಕೊಳಲ ಇನಿದನಿಯಲ್ಲಿ, ಪಾಂಚಜನ್ಯದ ಭೀಮ ಗರ್ಜನೆಯಲ್ಲಿ ಅವರು ಕನ್ನಡದ ಕೆಚ್ಚನ್ನು ಎತ್ತಿ ಹೇಳಿದ್ದಾರೆ; ಹಿರಿಮೆಯನ್ನು ಹಾಡಿದ್ದಾರೆ.

ಹಲವು ಕುಡಿಗಳಿಂದ ಒಂದು ಭವ್ಯ ಬೆಳಕು ಬರುವಂತೆ; ಹಲವು ಬಣ್ಣಗಳಿಂದ ಒಂದೇ ಬಿಳಿಯ ಬಣ್ಣ ಫಲಿಸುವಂತೆ ಹದಿನಾಲ್ಕು ಭಾಷೆ, ಸಾಹಿತ್ಯ, ಸಂಸ್ಕೃತಿಗಳಿಂದ ಒಂದು ಭರತವರ್ಷ, ಒಂದು ಭಾರತೀಯ ಸಂಸ್ಕೃತಿ ಆಗಿದೆ. ಕನ್ನಡ ಬಲಗೊಂಡರೆ, ಬೆಳೆದರೆ, ಬಾಳಿದರೆ ಭರತವರ್ಷ ಬಲಗೊಳ್ಳುತ್ತದೆ, ಬೆಳೆಯುತ್ತದೆ, ಬಾಳುತ್ತದೆ;

ಕನ್ನಡ ಸೋತರೆ, ಸೊರಗಿದರೆ ಭರತವರ್ಷ ಸೋಲುತ್ತದೆ ಸೊರಗುತ್ತದೆ. ಹದಿನಾಲ್ಕು ಹಣತೆಗಳ ಭಾರತೀಯ ಸಾಂಸ್ಕೃತಿಕ ದೀಪಾವಳಿಯಲ್ಲಿ ತಮ್ಮ ಪಾಲಿನ ಕುಡಿಯನ್ನು ಹೊತ್ತಿಸಲು ಬಂಗಾಳದ ಜನ ಶಾಂತಿನಿಕೇತನ, ಕಲ್ಕತ್ತಾ ವಿಶ್ವವಿದ್ಯಾನಿಲಯಗಳನ್ನು ಉಪಯೋಗಿಸಿಕೊಂಡಂತೆ, ತಮಿಳುನಾಡಿನ ಜನ ಅಣ್ಣಾಮಲೈ ವಿಶ್ವವಿದ್ಯಾನಿಲಯವನ್ನು ಉಪಯೋಗಿಸಿಕೊಂಡಂತೆ, ಮಹಾರಾಷ್ಟ್ರದ ಜನ ಪೂನಾ ವಿಶ್ವವಿದ್ಯಾನಿಲಯನ್ನು ಬಳಸಿಕೊಂಡಂತೆ ಕನ್ನಡದ ಜನವೂ ಮೈಸೂರು ವಿಶ್ವವಿದ್ಯಾನಿಲಯವನ್ನು ಪಯೋಗಿಸಬೇಕೆಂಬುದು ನಮ್ಮ ಹಿರಿಯರ ಬಯಕೆಯಾಗಿತ್ತು; ಇಂದು ನಮ್ಮ ಬಯಕೆಯಾಗಿದೆ. ಈ ಹಣತೆಯಲ್ಲಿ ಎಣ್ಣೆಯಿದೆ, ಬತ್ತಿಯಿದೆ ಕುಡಿಯೂ ಹೊತ್ತಿಸಲ್ಪಟ್ಟಿದೆ; ಆದರೆ ಆ ಕುಡಿಗೆ ಹೊತ್ತಿಕೊಂಡ ಕರಿಕನ್ನು ಚಿವುಟಿಹಾಕಿ ಉಜ್ಜ್ವಲಗೊಳಿಸಬೇಕಾದ ಒಬ್ಬ ವ್ಯಕ್ತಿಯ ಮುಂದಾಳುತನ ಬೇಕಾಗಿದೆ. ಕನ್ನಡನಾಡಿನ ಎರಡು ಕೋಟಿ ಜನದ ಆಶಾಕಿರಣವಾದ, ಕನ್ನಡ ಸಾಂಸ್ಕೃತಿಕ ಪ್ರಪಂಚದ ಏಕಮೇವಾದ್ವಿತೀಯ ನಾಯಕರಾದ ಕವಿ ಕುವೆಂಪು ಅವರು ಇಂದು ಆ ಮುಂದಾಳಾಗಲು, ಆ ಹೊಣೆ ಹೊರಲು ತಕ್ಕವರಾಗಿದ್ದಾರೆ. ಶಕ್ತರಾಗಿದ್ದಾರೆ, ಸಮರ್ಥರಾಗಿದ್ದಾರೆ. ಆ ಮಹತ್ತಾದ ಕಾರ್ಯವನ್ನು ನೆರವೇರಿಸಲು ತಕ್ಕ ಅವಕಾಶವನ್ನು—ಅಧಿಕಾರವನ್ನು ಶ್ರೀರಾಮನು ಅವರಿಗೆ ಬೇಗನೆ ಕರುಣಿಸಲಿ ಎಂಬುದೇ ನಮ್ಮ ಹೃದಯದ ಹಾರೈಕೆಯಾಗಿದೆ.

Be, thou tints tomorrow with the prophetic ray—ಎಂಬ ಕವಿವಾಣಿ ಇಂತಹ ವ್ಯಕ್ತಿ-ಶಕ್ತಿಗಳಿಗಲ್ಲದೆ ಇನ್ನು ಯಾರಪಾಲಿಗೆ ಸತ್ಯವಾದೀತು?

* * * *

ಈ ಅಭಿನಂದನ ಸಮಾರಂಭಕ್ಕಾಗಿ ಈ ಕೆಳಗೆ ಕಂಡ ಮಹನೀಯರು ಸಂದೇಶಗಳನ್ನು ಕಳುಹಿಸಿದ್ದರು.

ಸಂದೇಶಗಳನ್ನು ಕಳುಹಿಸಿದ ಮಹನೀಯರು

೧. ಡಾ॥ ಎಸ್. ರಾಧಾಕೃಷ್ಣನ್, ಉಪರಾಷ್ಟ್ರಾಧ್ಯಕ್ಷರು
೨. ಶ್ರೀ ರಂ. ರಾ. ದಿವಾಕರ್, ಬಿಹಾರಿನ ಲೋಕಪಾಲರು
೩. ಶ್ರೀ ಕೆ. ಸಿ. ರೆಡ್ಡಿ, ಉತ್ಪನ್ನ ಶಾಖಾಸಚಿವರು, ಕೇಂದ್ರ ಸರ್ಕಾರ
೪. ಶ್ರೀ ಪಿ. ವಿ. ರಾಜಮನ್ನಾರ್, ಮದ್ರಾಸ್ ಹೈಕೋರ್ಟಿನ ಶ್ರೇಷ್ಠ ನ್ಯಾಯಾಧೀಶರು

೫. ಶ್ರೀ ಆಚಾರ್ಯ ನರೇಂದ್ರದೇವ್, ಕಲ್ಕತ್ತ

೬. ಶ್ರೀ ಕಡಿದಾಳ್ ಮಂಜಪ್ಪ, ಮೈಸೂರಿನ ರೆವಿನ್ಯೂ ಮಂತ್ರಿಗಳು

೭. ಶ್ರೀ ವಲ್ಲತ್ತೋಳ್, ಮಳೆಯಾಳದ ಕವಿವರ್ಯರು

೮. ಶ್ರೀ ಕೆ. ಟಿ. ಭಾಷ್ಯಂ, ಎಂ.ಎಲ್.ಸಿ, ಬೆಂಗಳೂರು

೯. ಶ್ರೀ ಎಂ. ಗೋವಿಂದ ಪೈ, ರಾಷ್ಟ್ರಕವಿ, ಮದ್ರಾಸು

೧೦. ಶ್ರೀ ಆರ್ ಅನಂತಕೃಷ್ಣಶರ್ಮ, ತಿರುಪತಿ ವೆಂಕಟೇಶ್ವರ ಕಾಲೇಜು

೧೧. ಶ್ರೀ ಎಸ್. ಸಿ. ನಂದಿಮಠ, ಪ್ರಿನ್ಸಿಪಾಲರು, ಬಸವೇಶ್ವರ ಕಾಲೇಜು, ಬಾಗಲಕೋಟೆ

೧೨. ಡಾ|| ಟಿ. ಎ. ಪುರುಷೋತ್ತಂ, ನಿವೃತ್ತ ಪ್ರಿನ್ಸಿಪಾಲರು, ಮಹಾರಾಜಾ ಕಾಲೇಜು, ಮೈಸೂರು

೧೩. ಶ್ರೀ ವೈ. ನಾಗೇಶಶಾಸ್ತ್ರಿಗಳು, ಬಳ್ಳಾರಿ

೧೪. ಡಾ|| ವಿ. ರಾಘವನ್, ಸಂಸ್ಕೃತ ಪ್ರಾಧ್ಯಾಪಕರು, ಮದ್ರಾಸು

೧೫. ಶ್ರೀ ಎಸ್. ಎಂ. ಕತ್ರೇ, ಡೆಕ್ಕನ್ ಕಾಲೇಜ್ ಪೋಸ್ಟ್ ಗ್ರಾಜುಯೇಟ್ ಮತ್ತು ರೀಸರ್ಚ ಇನ್‌ಸ್ಟಿಸ್ಟೂಟ್‌ನ ನಿರ್ದೇಶಕರು, ಪೂನ

೧೬. ಪ್ರೊ|| ತೀ. ನಂ. ಶ್ರೀಕಂಠಯ್ಯ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ

೧೭. ಪ್ರೊ|| ಮರಿಯಪ್ಪಭಟ್ಟರು, ವಿಶ್ವವಿದ್ಯಾನಿಲಯ, ಮದ್ರಾಸು

೧೮. ಪ್ರೊ|| ಎಸ್. ಎಸ್. ಮಾಳವಾಡರು, ನಿರ್ದೇಶಕರು: ಕರ್ನಾಟಕ ರೀಸರ್ಚ್ ಇನ್‌ಸ್ಟಿಟ್ಯೂಟ್, ಧಾರವಾಡ

೧೯. ಪ್ರೊ|| ಡಿ. ಎಲ್. ನರಸಿಂಹಾಚಾರ್ಯರು, ಸಂಪಾದಕರು, ಕನ್ನಡ ಕನ್ನಡ ಕೋಶ, ಬೆಂಗಳೂರು

೨೦. ಪ್ರೊ|| ರಂ. ಶ್ರೀ ಮುಗಳಿ, ವಿಲ್ಲಿಂಗ್‌ಡನ್ ಕಾಲೇಜು, ಸಾಂಗ್ಲಿ

೨೧. ಶ್ರೀ ಶಂ. ಬಾ. ಜೋಷಿ, ಧಾರವಾಡ

೨೨. ಶ್ರೀ ಪು. ತಿ. ನರಸಿಂಹಾಚಾರ್ಯರು, ಬೆಂಗಳೂರು

೨೩. ಶ್ರೀ ಡಿ. ಎಸ್. ಕರ್ಕಿ, ಕಾಡಸಿದ್ಧೇಶ್ವರ ಕಾಲೇಜು, ಹುಬ್ಬಳ್ಳಿ

೨೪. ಡಾ|| ವಿ. ಕೆ. ಆರ್. ವಿ. ರಾವ್; ದೆಹಲಿಯ ಅರ್ಥಶಾಸ್ತ್ರದ ಶಾಲೆ, ದೆಹಲಿ

೨೫. ಶ್ರೀ ವರದರಾಜ ಆದ್ಯ, ಬೊಂಬಾಯಿ

೨೬. ಶ್ರೀ ಕಯ್ಯಾರ ಕಿಞ್ಞಣ್ಣರೈ, ಪೆರುಡಾಲ, ದ.ಕ.

೨೭. ಶ್ರೀ ಡಿ. ಆರ್. ಚನ್ನೇಗೌಡ, ಬೆಂಗಳೂರು

೨೮. ಶ್ರೀ ಮಿರ್ಜಾ ಅಣ್ಣಾರಾಯ, ಶೇಡಬಾಳ, ಬೆಳಗಾಂ

೨೯. ಶ್ರೀ ಆರ್. ದಯಾನಂದಸಾಗರ್, ಕಾರ್ಯದರ್ಶಿ, ಪ್ರಜಾಸೋಷಿಯಲಿಸ್ಟ್ ಪಾರ್ಟಿ, ಮೈಸೂರು

೩೦. ಶ್ರೀ ಎಚ್. ಎಸ್. ಪಾಟೀಲ್, ದೆಹಲಿ

೩೧. ಸೂಪರಿನ್‌ಟೆನ್‌ಡೆಂಟರು, ಅಧ್ಯಾಪಕರು, ವಿದ್ಯಾರ್ಥಿಗಳು, ಇಂಟರ್‌ಮೀಡಿಯೆಟ್ ಕಾಲೇಜು, ಕೋಲಾರ

೩೨. ಶ್ರೀ ಬಿ. ಎಚ್. ಶ್ರೀಧರ, ಕೆನರಾ ಕಾಲೇಜು, ಕುಮಟಾ

೩೩. ಶ್ರೀ ಮಹಾಬಲೇಶ್ವರಪ್ಪ, ಬಳ್ಳಾರಿ

ಯುವರಾಜಾ ಕಾಲೇಜಿನ ರಸಾಯನಶಾಸ್ತ್ರದ ಪ್ರಾಧ್ಯಾಪಕರಾದ ಶ್ರೀ ಷಡಕ್ಷರ ಸ್ವಾಮಿಯವರು ಸಂದೇಶಗಳಲ್ಲಿ ಮುಖ್ಯವಾದವುಗಳನ್ನು ಓದಿದರು. ಕೆಲವು ಸಂದೇಶಗಳ ಕೆಲಕೆಲವು ಭಾಗಗಳನ್ನು ಇಲ್ಲಿ ಪ್ರಕಟಮಾಡಿದ್ದೇವೆ.

Many thanks for your kind invitation to the 'Abinandana Samarambha' to be held in honour of Sri Kuvempu, the recipient of the Sahitya Akademi Award from Delhi.

None would have been more pleased than my humble self if I could manage by any means to join with you and take part in this happy occasion.

Unfortunately I am staying at a thousand and odd miles away from you, yet I can assure you that my heart will be with all of you there.

I enclose herewith the following lines in my respectful appreciation and best regards for that illustrious writer of India.

AN OVATION TO KUVEMPU

Acharya Narendra Dev

What Delhi Award and Akademi Prize
Can make our Kuvempu further rise
Above the eloquent estimation
Of his proud land and adoring nation!
For the unique 'Ramayana Darshanam'
Bengal presents her revered pronamam
Through a distant devotee, a friend unknown,
Who raises his praises in a sincere tone.

With my all good wishes and greetings.

Yours sincerely,

NARENDRA DEV, Calcutta.

ಅನುವಾದ

ದೆಹಲಿಯ ಸಾಹಿತ್ಯ ಅಕಾಡೆಮಿಯ ಬಹುಮಾನವನ್ನು ಗಳಿಸಿದ ಶ್ರೀ ಕುವೆಂಪು ಅಭಿನಂದನ ಸಮಾರಂಭಕ್ಕೆ ಬರಬೇಕೆಂದು ನೀವು ಕಳುಹಿಸಿದ ವಿಶ್ವಾಸದ ಕರೆಗೆ ಅನೇಕ ವಂದನೆಗಳು. ಯಾವ ರೀತಿಯಿಂದಾದರೂ ನಿಮ್ಮೊಡಗೂಡಿ ನಿಮ್ಮ ಸಂತೋಷ ಕೂಟದಲ್ಲಿ ಸೇರಿ ಭಾಗವಹಿಸುವುದಕ್ಕೆ ಅವಕಾಶ ದೊರಕಿದ್ದರೆ ಪಾಮರನಾದ ನನಗಾಗುವ ಸಂತೋಷ ಮತ್ತಾರಿಗೂ ಆಗುತ್ತಿರಲಿಲ್ಲವೆಂದು ನನಗನಿಸುತ್ತದೆ. ಅದೃಷ್ಟವಿಲ್ಲದೆ, ನಿಮ್ಮಿಂದ ನಾನು ಸಾವಿರಾರು ಮೈಲಿಗಳ ದೂರದಲ್ಲಿದ್ದೇನೆ. ಆದರೂ ನನ್ನ ಮನಸ್ಸು ನಿಮ್ಮೊಡನೆಯೇ ಇದೆ ಎಂದು ಹೇಳಬಯಸುತ್ತೇನೆ. ಸುವಿಖ್ಯಾತರಾದ ಈ ಭಾರತದ ಕವಿವರ್ಯರಿಗೆ ನನ್ನ ಗೌರವವನ್ನೂ ಪ್ರಶಂಸೆಯನ್ನೂ ಈ ರೀತಿಯಾಗಿ ನಿವೇದಿಸುತ್ತೇನೆ:

ಶ್ರೀ ಕುವೆಂಪು ಜಯಘೋಷ

ದೆಹಲಿ, ಕವಿಗಿತ್ತಿರುವ ಅಕೆಡೆಮಿಯ ಬಹುಮಾನ
ಮಿಗಿಲೇನು ನಮ್ಮೀ ಮಹಾಕವಿ ಕುವೆಂಪುವಿಗೆ?
ತನ್ನ ಹಿರಿಮೆಯ ನೆಲದ ಜನಮನದ ಜಯಘೋಷ
ದೌನ್ನತ್ಯಕ್ಕೇರಿಪುದೆ ಈವೊಂದು ಹಿರಿ ಕೊಡುಗೆ?
ಅಜ್ಞಾತ ಮಿತ್ರನಿಂದಕುಟಿಲ ಮನಸ್ಕನಿಂ
ದರ್ಶಿಸುವ ಸಂಸ್ತುತಿಯ ರೂಪದಿಂ ಬಂಗಾಳ,
ಭಕ್ತಿ ಪ್ರಣಾಮಮಂ ಸಂತಸದಿ ಸಲಿಸುತಿದೆ
ಶ್ರೀ ರಾಮಾಯಣದರ್ಶನಂ ಮೇರುಕೃತಿಗೆ!

ನಿಮ್ಮ ವಿಶ್ವಾಸಿ
ನರೇಂದ್ರ ದೇವ್, ಕಲ್ಕತ್ತ

* * * *

I an extremely happy to learn that poet Puttappa is going to be honoured for his having received the Sahitya Akademi Award of the Government of India.

I associate myself with you in honouring him on this occasion.

His creative faculties in the field of literary production have shown a rare versatility.

I wish him long life and a further flowering of his poetic genius.

Yours sincerely,
RANGANATHA DIWAKAR,
Bihar Governor's Camp, Patna.

ಭಾರತ ಸರ್ಕಾರದ ಸಾಹಿತ್ಯ ಅಕಾಡೆಮಿಯ ಪಾರಿತೋಷಿಕವನ್ನು ಪಡೆದುದಕ್ಕಾಗಿ ಕವಿವರ್ಯ ಶ್ರೀ ಪುಟ್ಟಪ್ಪನವರನ್ನು ಗೌರವಿಸುತ್ತೀರಿ ಎಂಬುದನ್ನು ಕೇಳಿ ನನಗೆ ಬಹಳ ಸಂತೋಷವಾಯಿತು.

ಅವರನ್ನು ಗೌರವಿಸುವ ಸಂದರ್ಭದಲ್ಲಿ ನಾನೂ ಭಾಗಿಯಾಗಿದ್ದೇನೆ. ಸಾಹಿತ್ಯ ರಚನೆಯ ಕ್ಷೇತ್ರದಲ್ಲಿ ಅವರ ಕಾರಯಿತ್ರೀ ಪ್ರತಿಭೆ ಅಪೂರ್ವವಾದ ವೈವಿಧ್ಯವನ್ನು ಪ್ರದರ್ಶಿಸಿದೆ.

ಅವರಿಗೆ ದೀರ್ಘಾಯುಸ್ಸನ್ನೂ ಉತ್ತರೋತ್ತರ ಕಾವ್ಯಪ್ರತಿಭಾ ವಿಕಾಸವನ್ನೂ ಕೋರುತ್ತೇನೆ.

ಇತಿ ನಿಮ್ಮ ವಿಶ್ವಾಸಿ
ರಂ. ರಾ. ದಿವಾಕರ

* * * *

I have profound pleasure in congratulating Sri Kuvempu along with you and the members of the University for having won the recognition of the 'Sahitya Akademi' for his outstanding work 'Ramayana Darshanam'.

My hearty greetings and admiration may please be conveyed to him.

I very much regret my inability to be present on the occasion.

Yours sincelely,
VALLATHOL,
Malayalam Poet.

ಅವರ ಮೇರುಕೃತಿಯಾದ ಶ್ರೀ ರಾಮಾಯಣದರ್ಶನಂ ಕಾವ್ಯವನ್ನು ಸಾಹಿತ್ಯ ಅಕಾಡೆಮಿಯವರು ಪುರಸ್ಕರಿಸಿರುವ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದವರು ಶ್ರೀ ಕುವೆಂಪು ಅವರನ್ನು ಅಭಿನಂದಿಸುವ ನಿಮ್ಮೆಲ್ಲರೊಡನೆ ಸೇರಲು ನನಗೆ ತುಂಬ ಸಂತೋಷವಾಗಿದೆ.

ನನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನೂ ಮೆಚ್ಚಿಕೆಯನ್ನೂ ದಯವಿಟ್ಟು ಅವರಿಗೆ ತಿಳಿಸಬೇಕಾಗಿ ಪ್ರಾರ್ಥನೆ.

ಈ ಸಂದರ್ಭದಲ್ಲಿ ಪ್ರತ್ಯಕ್ಷ ಭಾಗಿಯಾಗಲು ಸಾಧ್ಯವಿಲ್ಲದುದಕ್ಕಾಗಿ ವಿಷಾದಿಸುತ್ತೇನೆ.

ನಿಮ್ಮ ವಿಶ್ವಾಸಿ
ವಲ್ಲತ್ತೋಳ್,
ಮಲೆಯಾಳಂ ಕವಿ

* * * *

I beg leave to be permitted to be absent out of Mysore tomorrow the 2nd April. My journey to Allahabad was booked long in advance and I cannot help being absent at the function which you have graciously arranged to felicitate Prof. K. V. Puttappa.

I desire to convey through you my own felicitations to the Poet of Karnatak and my homage to the Chief Minister who has so graciously consented to preside.

Yours Faithfully,
Dr. T. A PURUSHOTTAM

೨-೪-೫೫ ರಂದು ಮೈಸೂರಿನಿಂದ ತೆರಳಬೇಕಾಗಿರುವ ನನಗೆ ಅವಕಾಶ ನೀಡಬೇಕೆಂದು ಬೇಡುತ್ತೇನೆ. ಈ ಮೊದಲೇ ನನ್ನ ಅಲಹಾಬಾದಿನ ಪ್ರಯಾಣ ನಿಶ್ಚಿತವಾಗಿದ್ದಿತು. ಆದ್ದರಿಂದ ಪ್ರೊ|| ಕೆ. ವಿ. ಪುಟ್ಟಪ್ಪನವರನ್ನು ಗೌರವಿಸುವ ನಿಮ್ಮ ವೈಭವಪೂರ್ಣವಾದ ಸಮಾರಂಭದಲ್ಲಿ ನಾನು ಭಾಗವಹಿಸುವುಕ್ಕೆ ಅಸಮರ್ಥನಾಗಿದ್ದೇನೆ.

ಈ ಸಂದರ್ಭದಲ್ಲಿ ನಿಮ್ಮ ಮೂಲಕ ನನ್ನ ಅಭಿನಂದನಗಳನ್ನು ಕರ್ನಾಟಕದ ಕವಿವರ್ಯರಿಗೆ ತಿಳಿಸಬೇಕೆಂದು ಇಚ್ಛಿಸುತ್ತೇನೆ. ಅಧ್ಯಕ್ಷತೆ ವಹಿಸಲು ದಯವಿಟ್ಟು ಒಪ್ಪಿ ಬಂದಿರುವ ಮುಖ್ಯಮಂತ್ರಿಗಳಿಗೆ ನನ್ನ ಭಕ್ತಿಗೌರವವನ್ನು ಸಮರ್ಪಿಸಲು ಇಚ್ಛಿಸುತ್ತೇನೆ.

ನಿಮ್ಮವ
ಡಾ|| ಟಿ. ಎ. ಪುರುಷೋತ್ತಮ್.

* * * *

ಕವಿವರ್ಯ ಶ್ರೀ ಕುವೆಂಪು ಅವರ 'ಶ್ರೀ ರಾಮಾಯಣದರ್ಶನ'ಕ್ಕೆ ಭಾರತ ಸರ್ಕಾರದಿಂದ ಉನ್ನತ ಸಂಭಾವನೆ ದೊರೆತಿರುವ ಶುಭಸಂದರ್ಭದಲ್ಲಿ ಅವರನ್ನು ಗೌರವಿಸಿ ಅಭಿನಂದಿಸಲು ಏಪ್ರಿಲ್ ಎರಡನೆಯ ತಾರೀಖಿನಂದು ಸಭೆ ಸೇರುವಿರೆಂದು ತಿಳಿದು ತುಂಬ ಸಂತೋಷವಾಯಿತು. ಭಾರತವು ಸ್ವಾತಂತ್ರ್ಯವನ್ನು ಪಡೆದೀಚೆಗೆ ಕನ್ನಡದಲ್ಲಿ ಪ್ರಕಟವಾಗಿರುವ ಉತ್ಕೃಷ್ಟ ಕೃತಿಗಳಲ್ಲಿ 'ಶ್ರೀ ರಾಮಾಯಣದರ್ಶನ'ಕ್ಕೆ ಅಗ್ರಸ್ಥಾನ. ಅದರಲ್ಲಿ ಶ್ರೀ ಕುವೆಂಪು ಅವರು ಪ್ರಾಚೀನವಾದರೂ ನಿತ್ಯನೂತನವಾದ ವಸ್ತುವನ್ನು ಸ್ವಾಯತ್ತವಾದ ಧೀರವಾಣಿಯಲ್ಲಿ ಸ್ಫೂರ್ತಿವಿಲಸಿತವಾದ ಮಹಾಛಂದಸ್ಸಿನಲ್ಲಿ ಅನೇಕ ವರ್ಷಗಳ ಏಕನಿಷ್ಠೆಯ ಕವಿಕರ್ಮದಿಂದ ರೂಪಿಸಿ ನಮ್ಮ ಜನಕ್ಕೆ ಓದಿಸಿದ್ದಾರೆ. ಈ ಮಹಾಕಾವ್ಯದ ಹಿರಿಮೆಯನ್ನು ಕನ್ನಡದ ಸಹೃದಯರಂತೆಯೇ ಭಾರತದ ಪ್ರಭುತ್ವದವರೂ ಮನಗಂಡು ತಮ್ಮ ಮೆಚ್ಚಿಕೆಯನ್ನು ನಿಧಿ

ರೂಪದಲ್ಲಿ ಸಲ್ಲಿಸಿರುವುದು ಸಾಹಿತ್ಯಪ್ರೇಮಿಗಳಿಗೆಲ್ಲ ಸಂತುಷ್ಟಿ ಸಂತೃಪ್ತಿಗಳನ್ನು ತಂದಿದೆ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡದ ಆಚಾರ್ಯರಾಗಿರುವ ಶ್ರೀ ಕೆ. ವಿ. ಪುಟ್ಟಪ್ಪನವರ ಕಾವ್ಯಸಿದ್ಧಿಗೆ ಅವರ ಕಾರ್ಯಕ್ಷೇತ್ರದ ಸ್ಥಾನಪತಿಗಳಾದ ತಾವೂ ಅಲ್ಲಿಯ ಅಧ್ಯಾಪಕವರ್ಗವೂ ವಿದ್ಯಾರ್ಥಿಸಮುದಾಯವೂ ಹೀಗೆ ಅಧಿಕೃತ ಸನ್ಮಾನವನ್ನು ಸಲ್ಲಿಸುತ್ತಿರುವುದು ತುಂಬ ಉಚಿತವೆಂದೂ ಈ ಸಮಾರಂಭದ ಅಧ್ಯಕ್ಷತೆಯನ್ನು ಮೈಸೂರು ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ವಹಿಸುತ್ತಿರುವುದು ಇದಕ್ಕೊಂದು ಹೆಚ್ಚಿನ ಭೂಷಣವೆಂದೂ ಬೇರೆಯಾಗಿ ಹೇಳಬೇಕಾಗಿಲ್ಲ.

ಶ್ರೀ ತೀ. ನಂ. ಶ್ರೀಕಂಠಯ್ಯ

* * * *

ಶ್ರೀ ಕುವೆಂಪು ಅಭಿನಂದನ ಸಮಾರಂಭದ ಕರೆಯೋಲೆ ನನಗೆ ಎರಡು ದಿವಸಗಳ ಹಿಂದೆ ಬಂತು. ಮಹಾಕವಿ ಕುವೆಂಪು ಅವರಿಗೆ ಸಂದಿರುವ ಗೌರವವು ಪೂರ್ಣ ವೈಯಕ್ತಿಕವಾದುದಾದರೂ ಅದರಲ್ಲೂ ಮೈಸೂರು ವಿಶ್ವವಿದ್ಯಾನಿಲಯವೂ ಕನ್ನಡ ನಾಡೂ ಸ್ವಲ್ಪಮಟ್ಟಿಗೆ ಭಾಗವಹಿಸಿರುವುದರಿಂದ ಆ ಗೌರವದ ತೇಜಸ್ಸು ಸರ್ವ ವ್ಯಾಪಿಯಾಗಿದೆ.

ನಮ್ಮ ವಿಶ್ವವಿದ್ಯಾನಿಲಯದ ಚರಿತ್ರೆಯಲ್ಲಿ ಇಂಥ ಗೌರವ ಇದುವರೆಗೆ ಯಾರಿಗೂ ಸಂದಿರುವಂತೆ ತೋರುವುದಿಲ್ಲ. ಈ ಅಭೂತಪೂರ್ವವಾದ ಕೀರ್ತಿ ದೇವರ ಮನುಷ್ಯರಾದ ಮಹಾಕವಿ ಪುಟ್ಟಪ್ಪನವರಿಂದ ನಮ್ಮ ವಿಶ್ವವಿದ್ಯಾನಿಲಯಕ್ಕೆ ಬಂದಿದೆ. ಅದಕ್ಕಾಗಿ ವಿಶ್ವವಿದ್ಯಾನಿಲಯಕ್ಕೆ ಸೇರಿದ ನಮಗೆಲ್ಲರಿಗೂ ಈ ದಿವಸ ಆನಂದಮಯವಾದ ದಿವಸ. ಇದು ನಮ್ಮ ವಿಶ್ವವಿದ್ಯಾನಿಲಯಕ್ಕೆ ಒಂದು ದೊಡ್ಡ ಗೌರವ. ಅದರ ಜೀವಿತ ಇಂದು ಸಾರ್ಥಕವಾಗಿದೆ. ಈ ಸಮಾರಂಭವು ಅತ್ಯಂತ ವೈಭವದಿಂದ ನಡೆದು ಮುಂದೆ ಬರುವ ತಲೆಮಾರುಗಳ ವಿದ್ಯಾರ್ಥಿಗಳಿಗೂ ಇತರರಿಗೂ ಸ್ಫೂರ್ತಿದಾಯಕವಾಗಿ ಪರಿಣಮಿಸಲಿ. ಶ್ರೀ ಕುವೆಂಪು ಅವರಿಗೆ ಪರಮಾತ್ಮನು ಸಕಲ ಸೌಭಾಗ್ಯಗಳನ್ನೂ ಕರುಣಿಸಲಿ.

ಡಿ. ಎಲ್. ನರಸಿಂಹಾಚಾರ್

* * * *

ಈ ಸಮಾರಂಭದಿಂದ ನನಗೆ ನಿಜವಾಗಿ ಸಂತೋಷವಾಗಿದೆ. ಕನ್ನಡನಾಡಿನ ಸುವಿಖ್ಯಾತಕವಿಯನ್ನು ಭಾರತರಾಷ್ಟ್ರ ಮತ್ತು ನಮ್ಮ ವಿಶ್ವವಿದ್ಯಾನಿಲಯ ಹೀಗೆ ಪುರಸ್ಕರಿಸುವುದೂ ಮತ್ತು ಕನ್ನಡದ ಪ್ರಾಧ್ಯಾಪಕರು ಕಾಲೇಜಿನ ಆಡಳಿತ ಸೂತ್ರವನ್ನು ವಹಿಸುವುದೂ ನಮ್ಮ ಇತಿಹಾಸದಲ್ಲೇ ಅಪೂರ್ವವಾದ ವಿಷಯ.

ಕನ್ನಡಕ್ಕೆ ತನ್ನ ಗದ್ದುಗೆ ತನಗಾಗುವ ಈ ಶುಭಸಂದರ್ಭದಲ್ಲಿ ಈ ಏರುವೆಯನ್ನು ತಾಯ್ನುಡಿಗೆ ತಂದ ಮಿತ್ರವರ್ಯ ಶ್ರೀ ಕುವೆಂಪು ಅವರಿಗೆ ನನ್ನ ಹಾರ್ದಿಕವಾದ ಅಭಿನಂದನೆಗಳು.

ಪು. ತಿ. ನರಸಿಂಹಾಚಾರ್.

* * * *

ಭಾರತ ಸರಕಾರದ ಸಾಹಿತ್ಯ ಅಕಾಡೆಮಿಯು ಶ್ರೀ ಕುವೆಂಪು ಅವರ 'ಶ್ರೀ ರಾಮಾಯಣದರ್ಶನಂ' ಮಹಾಕಾವ್ಯಕ್ಕೆ ಪಾರಿತೋಷಿಕವಿತ್ತ ಬಗ್ಗೆ ಮೈಸೂರು ವಿಶ್ವವಿದ್ಯಾನಿಲಯದ ವೈಸ್-ಚಾನ್ಸೆಲರೂ, ಅಧ್ಯಾಪಕರೂ, ವಿದ್ಯಾರ್ಥಿಗಳೂ ಮುಖ್ಯ ಮಂತ್ರಿಗಳಾದ ಶ್ರೀ ಹನುಮಂತಯ್ಯನವರ ಸಮಕ್ಷಮದಲ್ಲಿ ಇಂತು ಸಂಭ್ರಮದ ಸಮಾರಂಭವನ್ನೇರ್ಪಡಿಸಿದುದು, ಸಂತೋಷಪಡುವುದೂ ಅತೀವ ಸಹಜವೂ ಸಂದ ರ್ಭೋಚಿತವೂ ಆಗಿದೆ. ಪ್ರಚಲಿತ ಯುಗದ ಮಹಾಕವಿಯನ್ನು, ಆ ಮಹಾಕವಿಯ ನಿತ್ಯಸಹವಾಸಸಾನ್ನಿಧ್ಯವನ್ನು ಪಡೆದ ನಿಮ್ಮ ವಿಶ್ವವಿದ್ಯಾನಿಲಯವೂ ನೀವೂ ಪರಮ ಪುಣ್ಯವಂತರೇ ಸರಿ. ಶ್ರೀ ಕುವೆಂಪು ಅವರಿಂದ ಹಾಗೂ ಅವರ ಮಹಾಕೃತಿಯಿಂದ ನಮ್ಮ ನಾಡುನುಡಿಗಳು ಪಾವನವಾದುವು. ಅವರಿಗೆ ಅರ್ಥಾತ್ ಅವರ ಕೃತಿಗೆ ಇಂತು ಬಹುಮಾನವಿತ್ತ ಭಾರತ ಸರಕಾರ ತನ್ನ ಗೌರವವನ್ನು ಇನ್ನಷ್ಟು ಹೆಚ್ಚಿಸಿ ಕೊಂಡಿತು. ಈ ಸಂತೋಷ ಇಡೀ ನಮ್ಮ ನಾಡಿನದ್ದು, ಸಮಸ್ತ ಭಾರತದ್ದು, ವಿಶ್ವ ಮಹಾಕವಿಯದ್ದಾಗಿದೆ. ಇಂತಹ ಸಮಾರಂಭದ ಸಂದರ್ಭದಲ್ಲಿ ನಿಮ್ಮೊಡನೆ ಬಂದು ಸಹಕರಿಸಲು ನನಗೆ ಅನಾನುಕೂಲವಾದಬಗ್ಗೆ ವಿಷಾದಿಸುತ್ತೇನೆ.

ಮಹಾಕವಿ ಶ್ರೀ ಕುವೆಂಪು ಅವರಿಗೆ ಪರಮಾತ್ಮನು ಇತೋಪ್ಯತಿಶಯ ಉತ್ಸಾಹಶಕ್ತಿಯನ್ನು ದಯಪಾಲಿಸಿ, ಮಹಾಮಹಾ ಕೃತಿಗಳನ್ನು ಸೃಷ್ಟಿಸುವಂತೆಸಗಿ, ಇನ್ನಷ್ಟು ಕೀರ್ತಿಗೌರವಗಳನ್ನು ಒದಗಿಸಲೆಂದು ನಾನು ಮನಸಾರೆ ಹಾರೈಸುತ್ತೇನೆ.

ಕಯ್ಯಾರ ಕಿಞ್ಞಣ್ಣರೈ

* * * *

ಸ್ವತಂತ್ರ ಭಾರತದ ಸರ್ಕಾರದಿಂದ ಮೊದಲನೆಯ ಸಾಹಿತ್ಯ ವಿಷಯಕವಾದ ಗೌರವವನ್ನೂ ಪಾರಿತೋಷಿಕವನ್ನೂ ಪಡೆದಿರುವ ಶ್ರೀ ಕುವೆಂಪು ಅವರಿಗೆ ನನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನೂ ವಂದನೆಗಳನ್ನೂ ಸಲ್ಲಿಸುತ್ತೇನೆ. ಈ ಶುಭವಾದ ಘಟನೆಯಿಂದ ಅವರ ಕೀರ್ತಿ ಹೆಚ್ಚಿರುವುದಲ್ಲದೆ ಕನ್ನಡದ ಕೀರ್ತಿಯೂ ಹೆಚ್ಚಿದೆ.

ರಂ. ಶ್ರೀ. ಮುಗಳಿ

* * * *

ಶ್ರೀ ಕುವೆಂಪು ಅವರ 'ಶ್ರೀ ರಾಮಾಯಣದರ್ಶನಂ' ಮಹಾಕಾವ್ಯಕ್ಕೆ ಭಾರತ ಸರ್ಕಾರದ ಸಾಹಿತ್ಯ ಅಕಾಡೆಮಿಯಿಂದ ದೊರೆತ ಗೌರವ ಪಾರಿತೋಷಿಕದಿಂದಾಗಿ ಇಡಿಯ ಕನ್ನಡನಾಡೇ ಸಂತೋಷಪಟ್ಟಿದೆ. ಕನ್ನಡನಾಡಿನ ಕವಿಗಳಿಗಂತೂ ವಿಶೇಷದ ಆನಂದವೂ ಅಭಿಮಾನವೂ ಉಂಟಾಗಿದೆ. ಕವಿಯಿಂದ ನಾಡು ಧನ್ಯವಾಗುವುದು ಹೀಗೆಯೇ.

ಈ ಸಂಬಂಧದಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಶ್ರೀ ಕುವೆಂಪು ಅವರ ಅಭಿನಂದನ ಸಮಾರಂಭವನ್ನು ದಿ. ೨-೪-೫೪ ರಂದು ಏರ್ಪಡಿಸಿದುದು ಯಥಾ ಯೋಗ್ಯವೇ ಸರಿ. ಅಂದು ಕನ್ನಡನಾಡಿನ ಎಲ್ಲ ಭಾಗಗಳ ಜನರ ಅಂತರಂಗವು ಹೆಮ್ಮೆಯಿಂದ ತುಂಬಿ ತುಳುಕಿದರೆ ಅದು ಸಹಜವೇ. ಶ್ರೀ ಕುವೆಂಪು ಅವರಿಗೆ ಪರಮಾತ್ಮನು ಆಯುರಾರೋಗ್ಯವನ್ನು ದಯಪಾಲಿಸಲಿ ಎಂದೂ ಅವರ ಕಾವ್ಯ ಸ್ಫೂರ್ತಿಯಿಂದ ಇದೇ ಬಗೆಯ ಕೀರ್ತಿ ಕನ್ನಡನಾಡಿಗೆ ಹೆಚ್ಚು ಹೆಚ್ಚಾಗಿ ಒದಗಲಿ ಎಂದೂ ಯಾರು ತಾನೇ ಹಾರೈಸರು?

ಡಿ. ಎಸ್. ಕರ್ಕಿ

* * * *

ಮಿತ್ರರಾದ ಶ್ರೀ ಪುಟ್ಟಪ್ಪನವರನ್ನು ಅಭಿನಂದಿಸುವ ಸಮಾರಂಭವನ್ನು ತಾವು ನಮ್ಮ ಮಹಾರಾಜಾ ಕಲಾಶಾಲೆಯಲ್ಲಿ ಏರ್ಪಡಿಸಿರುವುದು ಬಹಳ ರಮಣೀಯವಾದ ವಿಷಯ.

ಶ್ರೀ ಪುಟ್ಟಪ್ಪನವರು ನಮ್ಮ ಕಾಲೇಜಿನಲ್ಲಿಯೇ ಮೊದಲಿಂದಲೂ ವ್ಯಾಸಂಗ ಮಾಡಿ ಅದರಲ್ಲಿಯೇ ಉಪಾಧ್ಯಾಯ ಕೈಂಕರ್ಯಕ್ಕೆ ಜೀವಿತವನ್ನು ಮೀಸಲಾಗಿಸಿ ಹಲವು ವಿಧಗಳಲ್ಲಿ ಅಸಾಧಾರಣ ಕೀರ್ತಿಯನ್ನು ತಂದವರು; ತರುತ್ತಿರುವವರು. ಅವರ ಬಹುಮುಖವಾದ ಅವಿಚ್ಛಿನ್ನ ಸಾಹಿತ್ಯಸೇವೆಗೆ 'ಶ್ರೀ ರಾಮಾಯಣದರ್ಶನಂ' ಒಂದು ಉಪಲಕ್ಷಣ ಮಾತ್ರ. ಭಾರತ ಸಾಹಿತ್ಯ ಪರಿಷತ್ತಿನವರು ಅದಕ್ಕೆ ಗೌರವ ಪಾರಿತೋಷಿಕವನ್ನು ನೀಡಿ ಸ್ವಧರ್ಮವನ್ನೂ ನೆರವೇರಿಸಿ ಧನ್ಯರಾಗಿದ್ದಾರೆ.

ಶ್ರೀ ಪುಟ್ಟಪ್ಪನವರಿಗೆ ಭಗವಂತನಾದ ಶ್ರೀನಿವಾಸನು ಇನ್ನೂ ಹೆಚ್ಚು ಹೆಚ್ಚಾಗಿ ಜ್ಞಾನವಿಜ್ಞಾನಗಳನ್ನು ಬೆಳೆಯಿಸಿ ಸರ್ವ ಸೌಭಾಗ್ಯಗಳನ್ನೂ ದಯಪಾಲಿಸಲೆಂದು ನನ್ನ ಮಂಗಳ ಶಾಸನಗಳು.

ಆರ್. ಅನಂತಕೃಷ್ಣ ಶರ್ಮ

* * * *

ಶ್ರೀ ಕುವೆಂಪು ಅವರ ಮಹಾಕೃತಿಗೆ ಭಾರತದ ಸಾಹಿತ್ಯ ಅಕಾಡೆಮಿಯಿಂದ ಗೌರವ ಪಾರಿತೋಷಿಕ ಬಂದಿರುವುದು ಅತ್ಯಂತ ಸಂತೋಷದ ವಿಷಯ. ಇದರಿಂದ

ಕನ್ನಡನಾಡಿಗೆ ನಾಡೇ ಹಿಗ್ಗುತ್ತಿದೆ. ಇದೊಂದು ಗುಣಗ್ರಹಣಕ್ಕೆ ಸೂಕ್ತನಿದರ್ಶನ. ಈ ಘಟನೆಯಿಂದ ಕುವೆಂಪು ಅವರ ಕೀರ್ತಿಯು ದಿಗಂತವನ್ನು ವ್ಯಾಪಿಸಿದಂತೆಯೇ ಆ ಪಾರಿತೋಷಿಕದ ಘನತೆಯೂ ಏರುವುದೆನ್ನಬಹುದು.

ಎಂ. ಮರಿಯಪ್ಪಭಟ್ಟ.

* * * *

ನಾಡಿನ ಯಾವ ಮೂಲೆಯಲ್ಲಿದ್ದರೂ ಕವಿದೇವನ ಈ ಸತ್ಕಾರಕ್ಕೆ ರಸಿಕರು ಬಂದೇ ಬರಬೇಕು. ಕವಿಶ್ರೇಷ್ಠ ಕುವೆಂಪು ಅವರಿಗೆ ಕೇಂದ್ರ ಸರ್ಕಾರದಿಂದ ತಂದ ಈ ಗೌರವವು ಕನ್ನಡನಾಡಿಗೇನೇ ಭೂಷಣಸ್ವರೂಪವಾಗಿದೆ. ನಮ್ಮೆಲ್ಲರಿಗೂ ಅಭಿಮಾನಾಸ್ಪದವಾಗಿದೆ. 'ಶ್ರೀ ರಾಮಾಯಣದರ್ಶನಂ' ಎಂದಿಗೂ ನಿಲ್ಲುವ ವಿಶ್ವ ಸಾಹಿತ್ಯಕೃತಿ; ಈ ಯುಗದ ಮಹಾಕೃತಿ. ಅದರಂತೆ ಅದರ ಕರ್ತೃಗಳೂ ವಿಶ್ವಕವಿ.

ಮಿರ್ಜಿ ಅಣ್ಣಾರಾಯ

* * * *

ನನ್ನ ಮಿತ್ರವರ್ಯರಾದ ಕನ್ನಡ ಮಹಾಕವಿ ಶ್ರೀ ಕುವೆಂಪು ಅವರಿಗೆ ಈ ಪಾರಿತೋಷಿಕ ದೊರೆತಿರುವ ಬಗ್ಗೆ ನಾನು ತುಂಬಾ ಸಂತೋಷಪಡುತ್ತೇನೆ. ಶ್ರೀ ದೇವರು ಅವರಿಗೆ ದೀರ್ಘಾಯುರಾರೋಗ್ಯಾದಿ ಸಕಲ ಭಾಗ್ಯವನ್ನಿತ್ತು ಅವರಿಂದ ಇನ್ನೂ ಮೇಲುಮೇಲಾದ ಕೃತಿರತ್ನಗಳನ್ನು ಬರೆಯಿಸಿಕೊಂಡು ಮತ್ತು ಮೇಲು ಮೇಲಾದ ಉಡುಗೊರೆಗಳನ್ನೂ ಬಿರುದುಗಳನ್ನೂ ಪಡೆಯುವಂತೆ ಕರುಣಿಸಲಿ.

ಗೋವಿಂದ ಪೈ.

* * * *

ಮೈಸೂರು ವಿದ್ಯಾಪೀಠದ ವೈಸ್-ಚಾನ್ಸೆಲರ್, ಅಧ್ಯಾಪಕರು, ವಿದ್ಯಾರ್ಥಿಗಳ ಪರವಾಗಿ ಶ್ರೀ ಕುವೆಂಪು ಅವರ ಅಭಿನಂದನ ಸಮಾರಂಭವನ್ನು ಏರ್ಪಡಿಸಿದುದು ನಮಗೆಲ್ಲ ಅಭಿಮಾನದ ಮಾತು; ಆನಂದದ ಸಂಗತಿ. ಕನ್ನಡ ಸಾಹಿತ್ಯ ಸಂಸ್ಕೃತಿಗಳ ಸಂವರ್ಧನಕ್ಕಾಗಿ ಬೆಲೆಯುಳ್ಳ ಕಾಣಿಕೆ ಸಲ್ಲಿಸಲು ಮುಂದಾಗಿರುವ, ರಾಜ್ಯದ ಮುಖ್ಯ ಮಂತ್ರಿಗಳಾದ ಮಾನ್ಯ ಕೆ. ಹನುಮಂತಯ್ಯನವರು ಈ ಸಮಾರಂಭದ ಅಧ್ಯಕ್ಷತೆ ವಹಿಸುತ್ತಿರುವುದು ಬಂಗಾರಕ್ಕೆ ಕುಂದಣವಿಟ್ಟಂತಾಗಿದೆ.

ಕನ್ನಡದ ಒಬ್ಬ ಕವಿಯನ್ನು, ಕವಿಯೆಂಬ ಕಾರಣಕ್ಕಾಗಿ ವಿದ್ಯಾಪೀಠ ದಂತಹ ಘನವಾದ ಸಂಸ್ಥೆ ರಾಜ್ಯದ ಮುಖ್ಯಸಚಿವರ ನೇತೃತ್ವದಲ್ಲಿ ಗೌರವಿಸುತ್ತಿರು ವುದು, ಪ್ರಾಚೀನ ಕರ್ನಾಟಕದ ಇಂತಹ ಉಜ್ವಲ ಸನ್ನಿವೇಶಗಳನ್ನು ನೆನಪಿಗೆ ತರುವಂತಿದೆ. ಈ ದೃಷ್ಟಿಯಿಂದ ಈಗ ನಡೆಯಲಿರುವ ಅಭಿನಂದನ ಸಮಾರಂಭವು

ನಮ್ಮ ಹರುಷವನ್ನು ಹೆಚ್ಚಿಸುತ್ತಿದೆ. ಅಂದಿನ ಅರಸರು ಅಂದಿನ ಕವಿಗಳಿಗೆ ಸಲ್ಲಿಸುತ್ತಿದ್ದ ಗೌರವದ ರೋಮಾಂಚಕಾರಿಯಾದ ಸನ್ನಿವೇಶಗಳನ್ನು ನೆನೆದಾಗ, ಇಂದಿನ ಜನತಾರಾಜ್ಯದಲ್ಲಿ ಈಗಿನ ಯುಗಧರ್ಮವನ್ನನುಸರಿಸಿ ಆ ಪರಂಪರೆಯನ್ನು ನಾವು ಕಾಯ್ದುಕೊಳ್ಳುತ್ತಿದ್ದೇವೆ ಎಂದೆನಿಸುತ್ತಿದೆ.

ಇಂದಿನ ಸಾಹಿತ್ಯೋಪಾಸಕರಲ್ಲಿ ಕುವೆಂಪು ಅವರ ಸ್ಥಾನ ಬಹು ಎತ್ತರದಲ್ಲಿದೆ. ಅತಿಯಾದ ಎತ್ತರವನ್ನು ಗುರುತಿಸಿಕೊಂಡು ಅನುಭವಿಸುವುದು ಅಷ್ಟೊಂದು ಸುಲಭವೂ ಆಗಲಿಕ್ಕಿಲ್ಲ. ಈಗ ಭಾರತ ಸರಕಾರದ ಮನ್ನಣೆಯ ರೂಪದಲ್ಲಿ ಕುವೆಂಪು ಅವರ ಎತ್ತರದ ಅನುಭವ ಎಲ್ಲರಿಗೂ ಆಗುತ್ತಿರಬೇಕು. ಅದಕ್ಕೊಂದು ತಾವೆಲ್ಲ ಅನುಕೂಲಸಂದರ್ಭ ಕಲ್ಪಿಸಿರುವುದು ತಮ್ಮೆಲ್ಲರ ಕಲ್ಪನಾಶಕ್ತಿ ಅದೆಷ್ಟು ಸಮುಚಿತವಾಗಿದೆ ಎಂಬುದನ್ನು ತೋರಿಸುತ್ತಿದೆ.

ಆಧುನಿಕ ಕಾಲದ ಬಹು ಎತ್ತರದ ಹಂತದ ಕವಿ ಮಾತ್ರವಲ್ಲ ಕುವೆಂಪು. ಸಾವಿರಾರು ಮನ ಹೃದಯ ಆತ್ಮಗಳನ್ನು ಪ್ರಚೋದಿಸುವ ಮಹಾಶಕ್ತಿಯೂ ಆಗಿದ್ದಾರೆ. ಪೂರ್ಣದೃಷ್ಟಿಯ ದೈವೀಚೇತನವನ್ನು ಹರಿಸುತ್ತಿರುವ ಅನಂತತ್ವದ ಉಪಾಸಕರೂ ಅವರಾಗಿದ್ದಾರೆ. ಅತೀಂದ್ರಿಯದ ಘನವಾದ ಮೌಲ್ಯಗಳ ಅನುಭವವನ್ನು ಜನತೆಗೆ ತಮ್ಮ ಸುರಮ್ಯವಾಣಿಯಿಂದ ಒದಗಿಸುವ ರಸಯೋಗಿಯಾಗಿದ್ದಾರೆ ಅವರು. ಇಂದಿನ ಯುಗದಲ್ಲಿಯೂ ಕಾವ್ಯಕ್ಕೆ ಆಧ್ಯಾತ್ಮವು ಪ್ರಚೋದನೆ ಎಂಬುದನ್ನು ಸಾರ್ಥಕಗೊಳಿಸುತ್ತಿರುವ 'ಗಭೀರಚಿತ್ತರ್' ಆಗಿದ್ದಾರೆ. ಅಲ್ಪಸಂತುಷ್ಟಿಯ, ಸುಲಭ ಜನಪ್ರಿಯತೆಯ ಅಭಿರುಚಿಗಳ ಈ ಕಾಲದಲ್ಲಿ, ದ್ವಂದ್ವಮೌಲ್ಯಗಳ ಇಂದಿನ ಯುಗದಲ್ಲಿ, ಸರ್ವಜೀವಿಗಳ ಎಲ್ಲ ಜಡಗಳ ಹಿಂದಿರುವ ಚೇತನವನ್ನು ಗುರುತಿಸಿ ಭೂಮಾನುಭವವನ್ನು ರಸವಾಣಿಯಲ್ಲಿ ಜನತೆಗೆ ಒದಗಿಸುತ್ತಿರುವ ಕುವೆಂಪು, ಕನ್ನಡವು ಇಂದಿನ ವಿಶ್ವಕ್ಕೆ ನೀಡಿದ ಉದಾತ್ತ ಕಾಣಿಕೆಯಾಗಿದ್ದಾರೆ. ಆದರ್ಶದ ಸ್ಥಾನದಲ್ಲಿ ಕುವೆಂಪು ನಾಗಿದ್ದಾರೆಂದು ನಾನು ತಿಳಿಯುತ್ತೇನೆ.

ಭಗವಂತನ ಸೃಷ್ಟಿಯ ಆಳದಲ್ಲಿ ಅಡಕವಾಗಿರುವ ಸೊಬಗನ್ನು ಎತ್ತಿ ತೋರುತ್ತ ಆ ಅಗಮ್ಯಸೃಷ್ಟಿಯ ರಹಸ್ಯದ ಉದ್ಘಾಟನೆಮಾಡುತ್ತ, ಚಿರಂತನಮೌಲ್ಯಗಳನ್ನು ಅತಿಮಾನಸಿಕ ಆನಂದವನ್ನು ಗುರುತಿಸಿಕೊಂಡು ಕನ್ನಡನುಡಿಯ ಮೂಲಕ ಜನತೆಗೆ ನೀಡುತ್ತಿರುವ, ಎತ್ತರದ ಹಂತದ, ಆದರೆ ನಮ್ಮಲ್ಲಿ ಅನೇಕರ ಹೃದಯಗಳಿಗೆ ಅತಿ ಸಮೀಪವಾಗಿರುವ ಭವ್ಯಚೇತನವೊಂದು ಇಂದು ನಮ್ಮ ಕಣ್ಮುಂದೆ, ಮನದ ಮುಂದೆ, ಆತ್ಮದ ಸನಿಹದಲ್ಲಿ ಗೋಚರಿಸುತ್ತಿರುವುದು ಅದೆಷ್ಟು ಹೆಮ್ಮೆಯ ಮಾತು! ಅದನ್ನರಿತುಕೊಂಡು ನಮ್ಮ ಗೌರವದ ಕಾಣಿಕೆಯನ್ನು ಸಲ್ಲಿಸಲು ನಾವು ಮುಂದಾಗುತ್ತಿರುವುದು

ಅದೆಷ್ಟು ಉಚಿತವಾದ ಸಂಗತಿ! ಕನ್ನಡದ ಈ ಭವ್ಯಚೇತನವು ಚಿರಂತನಮೌಲ್ಯಗಳನ್ನು ಚಿರಂತದ ಆನಂದದ ಝರಿಗಳನ್ನು ಸುಮನೋಹರವಾಗಿ, ಸಾರ್ಥಕವಾಗಿ ಕನ್ನಡದ ವಾಣಿಯಲ್ಲಿ ಹೀಗೆಯೆ ಹರಿಸುತ್ತಿರಲಿ. ಭಗವಂತನ ಕೃಪೆ ಕುವೆಂಪು ಅವರತ್ತ ಎಂದೆಂದಿಗೂ ಹರಿಯುತ್ತಿರಲಿ.

ದೇಹದಿಂದಲ್ಲವಾದರೂ ಮನ-ಹೃದಯ-ಆತ್ಮಗಳ ಮೂಲಕವಾಗಿ ಕುವೆಂಪು ಅಭಿನಂದನ ಸಮಾರಂಭದಲ್ಲಿ ನಾನೂ ತಮ್ಮೆಲ್ಲರೊಂದಿಗೆ ಪಾಲುಗಾರನಾಗುತ್ತೇನೆ.

ಸ. ಸ. ಮಾಳವಾಡ.

* * * *

ನಾಡು ಹೆಮ್ಮೆಯಿಂದ ನಿಮ್ಮನ್ನು ಗೌರವಿಸುತ್ತಿರುವ ಈ ಶುಭಮುಹೂರ್ತದಲ್ಲಿ ನಮ್ಮ ಹೃದಯ ತುಂಬಿಬಂದ ಅಭಿನಂದನೆಗಳನ್ನು ದಯವಿಟ್ಟು ಸ್ವೀಕರಿಸಿ.

'ಋಷಿಯಲ್ಲದವನು ಕವಿಯಾಗಲಾರ' ಎಂಬ ಸಂಪ್ರದಾಯಕ್ಕೆ ಹೊರತಾಗದೆ, ಅಂತಹ ದಿವ್ಯಜೀವನವನ್ನು ಬಾಳಿ, ಕೀರ್ತಿಶನಿಯನ್ನು ಅತ್ತ ನೂಕಿ ಸ್ಪರ್ಧಾವಿದೂರೆಯೂ ಅಮೃತೆಯೂ ತಪಸ್ವಿನಿಯೂ ಆದ ಯಶೋಲಕ್ಷ್ಮಿಯನ್ನು ಪ್ರಾರ್ಥಿಸಿದಿರಿ. ಇಂದು ಆಕೆ ವ್ಯೋಮಗೋಪುರ ಶಿಖರದಿಂದಿಳಿದುಬಂದಿದ್ದಾಳೆ. ಸಾಹಿತ್ಯ ಅಕಾಡೆಮಿಯು ಸಲ್ಲಿಸಿರುವ ಗೌರವದ ಮೂಲಕ ನಮ್ಮ ನಾಡುನುಡಿಗೆ ವಿಶಿಷ್ಟ ಸ್ಥಾನವನ್ನು ದೊರಕಿಸಿದ್ದೀರಿ. ನಮ್ಮ ನಾಡುನುಡಿಗಳು ತಮ್ಮಿಂದ ಉಜ್ವಲವಾಗಿ ಎಲ್ಲರ ಗೌರವವನ್ನು ಸಂಪಾದಿಸುತ್ತವೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ತಮ್ಮ ಜಗದ್ಭವ್ಯ ಮೇರುಕೃತಿ 'ಶ್ರೀ ರಾಮಾಯಣದರ್ಶನಂ' ಮಹಾಕಾವ್ಯವನ್ನು ಓದಿದ್ದೇವೆ. ತಮ್ಮ ದೀರ್ಘವಾದ ಸಾರಸ್ವತ ತಪಸ್ಸು ಆ ಕೃತಿಯಲ್ಲಿ ಆಕಾರವನ್ನು ತಾಳಿ ಹಣ್ಣಾಗಿದೆ. ಅದು ಇನ್ನು ಮೇಲೆ ನಮ್ಮ ನಾಡಜನರ ಅದರಲ್ಲೂ ಅವಿದ್ಯಾವಂತರ ಹಳ್ಳಿಗರ ಹೃದಯವನ್ನು ಹೊಗುವಂತಾದರೆ ನಮ್ಮ ಜನತೆಯಲ್ಲಿ ಸುಪ್ತವಾಗಿರುವ ಭಾರತೀಯತ್ವವು ಉಜ್ವಲವಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ತಮ್ಮ ಕೃತಿ ಬೇರೆ ಭಾಷೆಗಳಿಗೆ ಭಾಷಾಂತರವಾಗಿ ನಮ್ಮಂತೆಯೇ ಅವರೂ ತಮ್ಮ ಕೃತಿಲಾಭವನ್ನು ಪಡೆಯಲೆಂಬುದೇ ನಮ್ಮ ಹಾರೈಕೆ.

ಮತ್ತೊಮ್ಮೆ ತಮ್ಮನ್ನು ಅಭಿನಂದಿಸಿ ತಮಗೆ ಇನ್ನೂ ಉತ್ತಮ ಕೃತಿಗಳ ರಚನೆಯ ಮೂಲಕ ಸೇವೆಯನ್ನು ಸಲ್ಲಿಸಲು ಸಾಮರ್ಥ್ಯವನ್ನು ಕರುಣಿಸುವಂತೆ ಈಶ್ವರನಲ್ಲಿ ಭಕ್ತಿಯಿಂದ ಪ್ರಾರ್ಥಿಸುತ್ತೇವೆ.

ಇತಿ ತಮ್ಮ ವಿಶ್ವಾಸಿಗಳು
ಮುಖ್ಯಾಧಿಕಾರಿಗಳು, ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು
ಇಂಟರ್‌ಮೀಡಿಯೇಟ್ ಕಾಲೇಜ್, ಕೋಲಾರ.

* * * *



ಮಹಾರಾಣಿ ಕಾಲೇಜಿನ ಪ್ರಿನ್ಸಿಪಾಲ್ ಶ್ರೀಮತಿ ಜಯಲಕ್ಷ್ಮಮ್ಮಣ್ಣಿಯವರು ಅಭಿನಂದನ ಪತ್ರ ಓದುತ್ತಿರುವುದು

ಮಹಾರಾಣಿ ಕಾಲೇಜಿನ ಪ್ರಿನ್ಸಿಪಾಲ್ ಶ್ರೀಮತಿ ಜಯಲಕ್ಷ್ಮಮ್ಮಣ್ಣಿಯವರು ಕವಿವರ್ಯರಿಗೆ ಮೈಸೂರು ವಿಶ್ವವಿದ್ಯಾನಿಲಯದ ವೈಸ್-ಚಾನ್ಸೆಲರೂ ಅಧ್ಯಾಪಕರೂ ಮತ್ತು ವಿದ್ಯಾರ್ಥಿಗಳೂ ಸಲ್ಲಿಸಿದ ಅಭಿನಂದನ ಪತ್ರವನ್ನು ಓದಿ ಸುಂದರವಾದ ಚೌಕಟ್ಟಿನಲ್ಲಿ ಅಲಂಕೃತವಾದ ಅಭಿನಂದನ ಪತ್ರವನ್ನು ಶ್ರೀ ಕುವೆಂಪು ಅವರಿಗೆ ಅರ್ಪಿಸಿದರು.

* * * *

ಶ್ರೀ ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪನವರಿಗೆ

ಮೈಸೂರು ವಿಶ್ವವಿದ್ಯಾನಿಲಯದ

ವೈಸ್-ಚಾನ್ಸೆಲರೂ ಅಧ್ಯಾಪಕರೂ ವಿದ್ಯಾರ್ಥಿಗಳೂ ಸಲ್ಲಿಸಿದ

ಅಭಿನಂದನ ಪತ್ರ

ಕವಿವರ್ಯ ಕುವೆಂಪು ಅವರೆ,

ಭಾರತ ಸರ್ಕಾರದ ಸಾಹಿತ್ಯ ಅಕಾಡೆಮಿಯವರು ತಮ್ಮ "ಶ್ರೀ ರಾಮಾಯಣ ದರ್ಶನಂ" ಮಹಾಕಾವ್ಯಕ್ಕೆ ರಾಷ್ಟ್ರೀಯ ಪಾರಿತೋಷಿಕವನ್ನು ನೀಡಿ ಗೌರವಿಸಿರುವ ಶುಭಸಂದರ್ಭದಲ್ಲಿ ನಮ್ಮೆಲ್ಲರ ಮೆಚ್ಚುಗೆ ಮರ್ಯಾದೆಗಳನ್ನು ಈ ಮೂಲಕ ಸಲ್ಲಿಸುತ್ತೇವೆ.

ತಾವು ಮಂತ್ರದ್ರಷ್ಟಾರರಾದ ರಸಋುಷಿಗಳಾಗಿದ್ದೀರಿ; ತತ್ತ್ವವೇತ್ತರಾದ ಅನುಭಾವಿಗಳಾಗಿದ್ದೀರಿ; ದರ್ಶನಸಂಪನ್ನರಾದ ವರಕವಿಗಳಾಗಿದ್ದೀರಿ. ಅಪೂರ್ವವಾದ ಧೀಶಕ್ತಿ, ಚಿತ್‌ತಪಸ್ಸು, ರಸಾನುಭೂತಿ ಇವುಗಳಿಂದ ತಮ್ಮ ಚೇತನ ಸಂಸ್ಕಾರಗೊಂಡಿದೆ. ಪೂರ್ವ ಪಶ್ಚಿಮ ದೇಶಗಳ ಧರ್ಮದರ್ಶನಗಳನ್ನೂ ಚರಿತ್ರೆ ವಿಜ್ಞಾನಗಳನ್ನೂ ಸಾಹಿತ್ಯ ಸಂಸ್ಕೃತಿಗಳನ್ನೂ ಆಳವಾಗಿ ಅಭ್ಯಾಸಮಾಡಿರುವುದರಿಂದ ತಮ್ಮ ಧೀಶಕ್ತಿ ಪ್ರಖರವಾಗಿದೆ. ಶ್ರೀ ರಾಮಕೃಷ್ಣ ಪರಮಹಂಸ, ಶ್ರೀ ಸ್ವಾಮಿ ವಿವೇಕಾನಂದ, ಶ್ರೀ ಅರವಿಂದ ಈ ಮಹರ್ಷಿಗಳ ಅನುಭಾವಸರೋವರದ ತೀರ್ಥಸ್ನಾನದಿಂದ ತಮ್ಮ ಚಿತ್‌ತಪಶ್ಯಕ್ತಿ ಪವಿತ್ರವಾಗಿದೆ. ವ್ಯಕ್ತಾವ್ಯಕ್ತ ಸೃಷ್ಟಿಯ ಚರಾಚರ ವಸ್ತುಗಳಲ್ಲಿ ಸರ್ವಾಂತರ್ಯಾಮಿಯಾಗಿರುವ ಪರಾಪ್ರಕೃತಿಯ ಲೀಲಾವಿಲಾಸಗಳ ಪ್ರತ್ಯಕ್ಷಾನುಭವದಿಂದ ತಮ್ಮ ರಸಾನುಭೂತಿ ಸತ್ಯಸೌಂದರ್ಯದರ್ಶಕವಾಗಿದೆ. ಇವೆಲ್ಲದರ ಪರಿಣಾಮವಾಗಿ, ಪರಿಪಾಕವಾಗಿ, ತಮ್ಮ ಕೃತಿಗಳಲ್ಲಿ ಅನನ್ಯಸಾಧಾರಣವಾದ ತಾರಕ ಸಾರಸ್ವತಶ್ರೀ ವ್ಯಕ್ತವಾಗಿದೆ. ದಿವ್ಯದರ್ಶನ ಪ್ರತಿಭಾಸಂಪನ್ನರಾದ ತಮ್ಮಂತಹ ದಾರ್ಶನಿಕ ಕವಿಗಳಿಂದ ಕನ್ನಡ ಸಾರಸ್ವತ ಭಂಡಾರ ಸರ್ವಸಂಪನ್ನವಾಗಿದೆ.

ಸರಳವೂ ಶುದ್ಧವೂ ಆದ ನಡೆಯಿಂದ, ಹಿತವೂ ಮಿತವೂ ಆದ ನುಡಿಯಿಂದ, ತಾವು ಆದರ್ಶವ್ಯಕ್ತಿಯಾಗಿದ್ದೀರಿ. ತಮ್ಮ ಕೃತಿಗಳಿಂದ ಮಾತ್ರವೆ ಅಲ್ಲದೆ ಆಚಾರ ಶೀಲಗಳಿಂದಲೂ ಜನತೆಗೆ ಮಾರ್ಗದರ್ಶಕರಾಗಿದ್ದೀರಿ. ನಮ್ಮ ವಿಶ್ವವಿದ್ಯಾನಿಲಯದಲ್ಲಿ ಕನ್ನಡದ ಪ್ರಾಧ್ಯಾಪಕರಾಗಿದ್ದು ಜ್ಞಾನಾರ್ಜನೆಗಾಗಿ ಬರುತ್ತಿರುವ ವಿದ್ಯಾರ್ಥಿಗಳಿಗೆ ಕನ್ನಡ ಭಾಷಾಸಾಹಿತ್ಯ ಸಂಸ್ಕೃತಿಗಳ ಸಮ್ಯಕ್‌ದೃಷ್ಟಿಯನ್ನು ನೀಡುವುದು ಮಾತ್ರವಲ್ಲದೆ ಸಂಸ್ಕೃತ ಇಂಗ್ಲಿಷ್ ಸಾಹಿತ್ಯಗಳ ಅಂತರ್‌ದರ್ಶನವನ್ನೂ ಮಾಡಿಕೊಟ್ಟು ಅವರ ಆತ್ಮವಿಕಾಸಕ್ಕೂ ಆತ್ಮೋದ್ಧಾರಕ್ಕೂ ಪ್ರೇರಕರಾಗಿದ್ದೀರಿ. ತಮ್ಮ ಸಂಯಮ ಶ್ರದ್ಧೆ ಗಾಂಭೀರ್ಯಗಳು ವಿದ್ಯಾರ್ಥಿವೃಂದಕ್ಕೆ ಮಾತ್ರವಲ್ಲದೆ ಅಧ್ಯಾಪಕ ವೃಂದಕ್ಕೂ ಮೇಲ್ಪಂಕ್ತಿಯಾಗಿವೆ.

ಭಾರತೀಯರಿಗೆ ಪರಮಪೂಜ್ಯವಾದ ರಾಮಾಯಣ ಮಹಾಕಾವ್ಯ, ಶತಶತಮಾನಗಳ ಲೋಕಲೋಕಗಳ ಸರ್ವಧರ್ಮ ದರ್ಶನಸಾರವನ್ನು ಮೈಗೂಡಿಸಿಕೊಂಡಿದೆ; ಇಂದಿನ ಜಗತ್ತಿಗೆ, ಮಹಾಛಂದಸ್‌ಶರೀರಿಯಾಗಿ ಕನ್ನಡದಲ್ಲಿ ಅವತರಿಸಿಬಂದಿದೆ. ಸೃಷ್ಟಿಶಕ್ತಿಯ ಪರಮೋದ್ದೇಶವಾದ, ಆಧ್ಯಾತ್ಮಿಕ ಸರ್ವೋದಯದ ಶ್ರೀ ರಾಮರಾಜ್ಯ ಸಂಸ್ಥಾಪನಾರ್ಥವಾಗಿ ಅನವರತವೂ ಆಗುತ್ತಿರುವ ನಿತ್ಯ ರಾಮಾವತಾರದ ಪೂರ್ಣದೃಷ್ಟಿಗೂ, ನಿತ್ಯಾನಿತ್ಯತೆಗಳ ಸಮನ್ವಯದರ್ಶನಕ್ಕೂ ಒಡ್ಡಿದ ಪೂರ್ಣಪ್ರತಿಮೆಯಾದ ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯಾವತಾರದಿಂದ ಕನ್ನಡ ಸಾಹಿತ್ಯವು ಪ್ರಾದೇಶಿಕತೆಯ ಸಂಕುಚಿತ ನಶ್ವರ ಪರಿನೇಮಿಯನ್ನು ದಾಟಿ ವಿಶ್ವತೆಯ ನಿತ್ಯತೆಯಲ್ಲಿ ವಿಲೀನವಾಗಿದೆ. ಕೇವಲ ಭಾಷಾದೃಷ್ಟಿಯಿಂದ ನೋಡಿದರೂ ಲೋಕಾತೀತವೂ ಗುಹ್ಯಾತ್‌ಗುಹ್ಯತರವೂ ಆದ ನಿತ್ಯ ಸತ್ಯದರ್ಶನವನ್ನು ಭವ್ಯಸುಂದರವಾಗಿ ಅಭಿವ್ಯಕ್ತಗೊಳಿಸಬಲ್ಲ ಅಪೂರ್ವಶಕ್ತಿಯನ್ನು ಕನ್ನಡಭಾಷೆ ತಮ್ಮ ಕೃತಿಯಲ್ಲಿ ಪಡೆದು ಪ್ರಪಂಚದ ಅತ್ಯಂತ ವರಿಷ್ಠಭಾಷೆಯೊಡನೆಯೂ ಹೆಗಲೆಣೆಯಾಗಿ ನಿಂತಿದೆ. ಆದ್ದರಿಂದ ಕನ್ನಡ ಭಾಷಾಸಾಹಿತ್ಯಗಳ ವಿಚಾರವಾಗಿ ಅಲ್ಪಾಭಿಪ್ರಾಯವನ್ನು ತಾಳುತ್ತಿದ್ದವರಿಗೆಲ್ಲ ಒಂದು ಮುಡಿಗೆಯಾಗಿರುವುದು ಮಾತ್ರವಲ್ಲದೆ ಅಂತಹವರಿಗೆ ನಮ್ಮ ನಾಡುನುಡಿಗಳ ಹಾಗೂ ನಮ್ಮ ಅಂತರ್ಗತ ಸಿಂಹಶಕ್ತಿಯ ದರ್ಶನವನ್ನು ಮಾಡಿಸುತ್ತಿದೆ.

ಇಂತಹ ಮಹಾಕೃತಿಯ ಅವತಾರಕ್ಕೆ ಪಾತ್ರವಾಗುವ, ಪ್ರಣಾಳಿಕೆಯಾಗುವ, ಭಾಗ್ಯ ತಮ್ಮದಾಯಿತು. ಅಂತಹ ಕಾವ್ಯಕರ್ತೃಗಳನ್ನು ಗೌರವಿಸುವ ಭಾಗ್ಯ ನಾಡಿನ ಜನತೆಗೆ ಬಂದಿದೆ; ಆ ಕಾರ್ಯಭಾರಕ್ಕೆ ಮುನ್ನುಡಿಯನ್ನು ಬರೆದು ಭಾರತ ತನ್ನನ್ನು ತಾನು ಗೌರವಿಸಿಕೊಂಡಿದೆ.

ಈ ಸಂತೋಷ ಸಂದರ್ಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವೈಸ್-

ಚಾನ್ಸೆಲರೂ ಅಧ್ಯಾಪಕರೂ ವಿದ್ಯಾರ್ಥಿಗಳೂ ಗೌರವಾದರಪೂರ್ವಕವಾದ ಅಭಿನಂದನೆಗಳನ್ನು ತಮಗೆ ಸಲ್ಲಿಸುತ್ತೇವೆ.

ಸರಸ್ವತಿಯ ವರಪುತ್ರರಾದ ತಮಗೆ ಋತಚಿನ್ಮಯೀ ಜಗನ್ಮಾತೆ ಇತೋಪ್ಯತಿಶಯವಾಗಿ ಆಯುರಾರೋಗ್ಯಾದಿ ಸಕಲ ಸನ್ಮಂಗಳಗಳನ್ನೂ ಕರುಣಿಸಲಿ. ತಮ್ಮ ಮೂಲಕ ನಾಡುನುಡಿಗಳ ಸೇವೆ ಇನ್ನೂ ನೂರುಕಾಲ ನಡೆಯಲಿ.

ತಮ್ಮ ಶ್ರೇಯೋಭಿವೃದ್ಧಿಕಾಂಕ್ಷಿಗಳಾದ
ಮೈಸೂರು ವಿಶ್ವವಿದ್ಯಾನಿಲಯದ ವೈಸ್-ಚಾನ್ಸೆಲರು, ಅಧ್ಯಾಪಕರು, ವಿದ್ಯಾರ್ಥಿಗಳು.

* * * *

ಆ ಬಳಿಕ ಮೈಸೂರು ಮತ್ತು ಕರ್ಣಾಟಕದ ಬೇರೆ ಬೇರೆ ಭಾಗದ ವಿವಿಧ ಸಂಸ್ಥೆಯವರು ಸುಂದರವಾದ ಹಾರಗಳನ್ನು ಗೌರವಭಕ್ತಿಸೂಚಕವಾಗಿ ಅರ್ಪಿಸಿದರು. ಆಗ ದೀರ್ಘ ಕರತಾಡನಮಾಡಿ ಸಭೆಗೆ ಸಭೆಯೇ ಆನಂದದಿಂದ ಮೈಮರೆಯಿತು.

ಅನಂತರ ಮುಖ್ಯ ಅತಿಥಿಗಳಾದ ಶ್ರೀ ಕುವೆಂಪು ಅವರು ತಮ್ಮ ಕವಿಸಹಜವಾದ ಧೀರ ಗಂಭೀರವಾಣಿಯಿಂದ ನುಡಿದ ವಂದನೋಕ್ತಿಯ ಸಾರಾಂಶವನ್ನಿಲ್ಲಿ ಕೊಟ್ಟಿದ್ದೇವೆ:

ಮಾನ್ಯ ಹನುಮಂತಯ್ಯನವರೇ, ವೈಸ್-ಚಾನ್ಸೆಲರ್ ಡಿ'ಸೋಜಾ ಅವರೆ ಸ್ನೇಹಿತರೆ, ಮಹನೀಯರೆ, ಮಹಿಳೆಯರೆ, ಸರಸ್ವತಿಯ ಪುತ್ರಪುತ್ರಿಯರೆ,—ಸರಸ್ವತಿಯ ಕೃಪೆ ಅನಂತವಾದುದು ಬಹುಮುಖವಾದುದು. ಕಾಡುಜೀವಿಯಾದ ನನ್ನನ್ನು 'ಶ್ರೀ ರಾಮಾಯಣದರ್ಶನಂ' ಕಾವ್ಯದ ನಿರ್ಮಾಣಕ್ಕೆ ಉಪಯೋಗಿಸಿಕೊಂಡು ಈ ಮರ್ತ್ಯಜಿಹ್ವೆಯಲ್ಲಿ ದಿವ್ಯಚೇತನವನ್ನು ತುಂಬಿ ನವೋದಯದ ಮಹಾಕಾವ್ಯವನ್ನು ರಚಿಸುವ ಶಕ್ತಿಯನ್ನು ನೀಡಿದುದಕ್ಕಾಗಿ ಆ ವಾಗ್ದೇವಿಗೆ ಅನಂತಾನಂತ ವಂದನೆಗಳನ್ನು ಅರ್ಪಿಸುತ್ತೇನೆ. ಆ ವಾಗ್ದೇವಿ ಅರೂಪೆ, ಅತೀತೆ, ಅನಂತೆ. ಆದರೆ ಸರ್ವದೇಶ ಸರ್ವಕಾಲಗಳ ಮತ್ತು ಸರ್ವಕವಿಗಳ ಕೃತಿಸಮಷ್ಟಿಯ ರೂಪದಲ್ಲಿ ಆಕೆ ಅಂತರ್ಯಾಮಿಯಾಗಿದ್ದಾಳೆ, ಲೋಕಗೋಚರೆಯಾಗಿದ್ದಾಳೆ. ಜಗನ್ಮಾತೆ ಪ್ರತಿಯೊಬ್ಬನಿಗೂ ತನ್ನ ತನ್ನ ತಾಯಿಯಾಗಿ ಗೋಚರಿಸುವಂತೆ ಸರ್ವಭಾಷಾಮಯಿ ಸರಸ್ವತಿ ನಮನಮಗೆ ನಮ್ಮನಮ್ಮ ಭಾಷಾರೂಪಗಳಲ್ಲಿ ಆವಿರ್ಭವಿಸಿದ್ದಾಳೆ. ಆದ್ದರಿಂದ ಎಲ್ಲ ಕಾಲ, ಎಲ್ಲ ದೇಶ, ಎಲ್ಲ ಭಾಷೆಯ ಎಲ್ಲ ಕವಿಗಳಿಗೂ ನನ್ನ ಅನಂತ ವಂದನೆಗಳು. ಆ ಜಗನ್ಮಾತೆ ಕನ್ನಡಿಗರಾದ ನಮಗೆ ನಮ್ಮ ಮಾತೆಯಾಗಿ ಬಂದು ನಮ್ಮನ್ನು ಉದ್ಧರಿಸುತ್ತಿದ್ದಾಳೆ. ಆದ್ದರಿಂದ ಕನ್ನಡದ ಆದಿಕವಿ ಪಂಪನಿಂದ ಈ ವರೆಗೆ ಬಂದ ಎಲ್ಲ ಮಹಾಕವಿಗಳಿಗೂ ನನ್ನ ಅನಂತ ವಂದನೆಗಳು.

ಕವಿಸರಸ್ವತಿಯ ಒಂದು ಕಣ್ಣು, ಸಹೃದಯ ಆಕೆಯ ಮತ್ತೊಂದು ಕಣ್ಣು. ಸಹೃದಯರಾದ ತಮಗೆಲ್ಲರಿಗೂ ಅನಂತ ವಂದನೆಗಳು. ಎಲ್ಲ ಜನಮನದ ಆಶೆ, ಆಕಾಂಕ್ಷೆ ಅಭೀಪ್ಸೆಗಳು ಒಬ್ಬ ಕವಿಯಲ್ಲಿ ಮೂಡುತ್ತವೆ. ಆಗ ಅವನಿಂದ ಯಾವುದಾದರೂ ಮಹಾಕೃತಿ ಸೃಷ್ಟಿಯಾಗುತ್ತದೆ. ಆದ್ದರಿಂದ ಇಂತಹ ಸಂರ್ಭಗಳಲ್ಲಿ ಕವಿಯೊಬ್ಬನೆ ಅಭಿನಂದನೀಯನಲ್ಲ, ಜನತೆಯೂ ಅಷ್ಟೇ ಅಭಿನಂದನಾರ್ಹ. ಸಾಹಿತ್ಯ ಅಕಾಡೆಮಿಯ ಇಂಥ ಬಹುಮಾನಗಳು ಕವಿಗೆ ಒಂದು ದೃಷ್ಟಿಯಿಂದ ಅವಶ್ಯಕವಾಗಬಹುದು. ಆಗ ತಾನೆ ಹುಟ್ಟಿದ ಕರುವನ್ನು ಗೌಳಿಗನು ಹಸುವಿನ ಕೆಚ್ಚಲಿನ ಬಳಿಗೆ ಬಿಡುವಂತೆ ಇಂಥ ಬಹುಮಾನಗಳು ಜನತೆಯನ್ನು ಕೃತಿಯ ಹತ್ತಿರಕ್ಕೆ ತೆಗೆದುಕೊಂಡು ಹೋಗಿಬಿಡುತ್ತವೆ. ಭಾರತದ ಒಂದು ಭಾಷೆ ಕನ್ನಡ. ಭಾರತಿಗೆ ಒಂದು ಬಾಹು ಕನ್ನಡ. ನಾನೇನಾದರೂ ಚಿತ್ರಕಾರನಾಗಿದ್ದರೆ ಭಾರತಿಗೆ ಹದಿನಾಲ್ಕು ಬಾಹುಗಳನ್ನು ಚಿತ್ರಿಸುತ್ತಿದ್ದೆ. ಆ ಹದಿನಾಲ್ಕು ಬಾಹುಗಳು ಭಾರತದ ಹದಿನಾಲ್ಕು ಮುಖ್ಯಭಾಷೆಗಳನ್ನು ಪ್ರತಿನಿಧಿಸುತ್ತವೆ. ಕೇಂದ್ರಸರಕಾರದವರು ಈ ಒಂದೊಂದು ಭಾಷೆಗೂ ಒಂದೊಂದು ಬಹುಮಾನವನ್ನು ನೀಡಿ ಗೌರವಿಸಿದ್ದಾರೆ. ಕನ್ನಡ ಜನಮನದ ಮಹಾ ಅಭೀಪ್ಸೆಗಳು ಮೂಡಿರುವ 'ಶ್ರೀ ರಾಮಾಯಣದರ್ಶನಂ' ಕಾವ್ಯಕ್ಕೆ ಸಂದ ಗೌರವಕ್ಕಾಗಿ ನಿಮ್ಮಿಂದ ಹರಿದುಬರುತ್ತಿರುವ ಸಂತೋಷ ತರಂಗಗಳು ಆ ಚತುರ್ದಶ ಭುಜ ವಿರಾಜಿತೆಯಾದ ದೇವಿಯ ಅಡಿಗಳಿಗೆ ಸಮರ್ಪಿತವಾಗಲಿ!

ವಿದ್ಯೆ, ಅಧಿಕಾರ, ಅರ್ಹತೆಗಳಲ್ಲಿ ನನಗಿಂತ ಮೇಲಾದವರು ಇಲ್ಲಿ ಸೇರಿ ನನ್ನನ್ನು ಅಭಿನಂದಿಸಲು ಈ ಸಮಾರಂಭವನ್ನು ಏರ್ಪಡಿಸಿದ್ದೀರಿ. ಈ ಹೊತ್ತಿನ ಈ ಸಮಾರಂಭವನ್ನು ನೋಡಿ ನಾನು ಮೊಟ್ಟಮೊದಲು ಹಳ್ಳಿಯಿಂದ ಇಲ್ಲಿ ಬಂದು ರಾತ್ರಿಯ ಹೊತ್ತು ಬೆಳಗಿದ ಅರಮನೆಯ ಅಸಂಖ್ಯಾತ ದೀಪಗಳನ್ನು ನೋಡಿ ದಿಗ್ಭ್ರಮೆಗೊಂಡಂತೆ ದಿಗ್ಭ್ರಮೆಗೊಂಡಿದ್ದೇನೆ.

ನಾನು ಮೊದಲು ಹೇಳಿದಂತೆ ಯಾವ ಒಂದು ಮಹಾಕಾರ್ಯಕ್ಕೂ ವ್ಯಕ್ತಿಯೇ ಕಾರಣವಾಗುವುದಿಲ್ಲ, ಆ ವ್ಯಕ್ತಿಯ ಹಿಂದಿರುವ ಅವ್ಯಕ್ತಶಕ್ತಿಯೇ ಕಾರಣವಾಗಿರುತ್ತದೆ. ಹಾಗೆಯೆ ಮಹಾಕಾವ್ಯದ ಸೃಷ್ಟಿಗೆ ಒಬ್ಬ ವ್ಯಕ್ತಿ ಕಾರಣನಲ್ಲ. ಯುಗದ ಚೇತನಗರ್ಭದಲ್ಲಿ ಸಂಸ್ಕಾರರೂಪವಾಗಿಯೂ ಅಭೀಪ್ಸಾರೂಪವಾಗಿಯೂ ಹುದುಗಿರುವ ಅನೇಕ ದಿವ್ಯಶಕ್ತಿಗಳು ಕಾರಣ. ವ್ಯಕ್ತಿ ನಿಮಿತ್ತಮಾತ್ರ, ಒಂದು ಪ್ರಣಾಳಿಕೆ.

ಶ್ರೀ ರಾಮಾಯಣದರ್ಶನದ ಪ್ರಾರಂಭದಲ್ಲಿ ಹೀಗೆ ಪ್ರಾರ್ಥಿಸಿದ್ದೇನೆ;

ಹೋಮರಗೆ ವರ್ಜಿಲಗೆ ಡಾಂಟೆ ಮೇಣ್ ಮಿಲ್ಟನಗೆ
ನಾರಣಪ್ಪಂಗೆ ಮೇಣ್ ಪಂಪನಿಗೆ, ಋಷಿವ್ಯಾಸ

ಭಾಸ ಭವಭೂತಿ ಮೇಣ್ ಕಾಳಿದಾಸಾದ್ಯರಿಗೆ,
ನರಹರಿ ತುಲಸಿದಾಸ ಮೇಣ್ ಕೃತ್ತಿವಾಸಾದಿ
ನನ್ನಯ್ಯ ಫಿರ್ದೂಸಿ ಕಂಬಾರವಿಂದರಿಗೆ,
ಹಳಬರಿಗೆ ಹೊಸಬರಿಗೆ ಹಿರಿಯರಿಗೆ ಕಿರಿಯರಿಗೆ,
ಕಾಲದೇಶದ ನುಡಿಯ ಜಾತಿಯ ವಿಭೇದಮಂ
ಲೆಕ್ಕಿಸದೆ ಜಗತೀಕಲಾಚಾರ್ಯರೆಲ್ಲರ್ಗೆ,
ಜ್ಯೋತಿಯಿರ್ಪೆಡೆಯಲ್ಲಿ ಭಗವದ್‌ವಿಭೂತಿಯಂ
ದರ್ಶಿಸುತೆ, ಮುಡಿಬಾಗಿ ಮಣಿದು ಕೈಜೋಡಿಸುವೆ ನಾಂ
ಲೋಕ ಗುರುಕೃಪೆಯಿರಲಿ, ಲೋಕಕವಿಕೃಪೆ ಬರಲಿ ;
ಲೋಕ ಹೃದಯದ ಬಯಕೆಯಾಶೀರ್ವಾದವೈತರಲಿ.
ಮಣಿದಿರಲಿ ಮುಡಿ, ಮತ್ತೆ ಮುಗಿದಿರಲಿ ಕಯ್, ಮತ್ತೆ
ಮಡಿಯಾಗಿರಲಿ ಬಾಳ್ವೆ ; ಜಯಿಸುಗೆ ರಸತಪಸ್ಯೆ ;
ದೊರೆಕೊಳುಗೆ ಚಿರಶಾಂತಿ ; ಸಿರಿಗನ್ನಡಂಗಲ್ಗೆ !

ಇಂತಹ ಪ್ರಾರ್ಥನೆ ಔಪಚಾರಿಕವೂ ಅಲ್ಲ ಆಲಂಕಾರಿಕವೂ ಅಲ್ಲ. ವೀರ ನಾರಾಯಣನೆ ಕವಿ, ಲಿಪಿಕಾರ ಕುವರವ್ಯಾಸ ಎಂಬ ಕವಿವಾಣಿ ಅಕ್ಷರಶಃ ಸತ್ಯ. ಇಂಥ ಮಹಾಕೃತಿಯನ್ನು ಆಶಿಸುತ್ತದೆ ಆಶೀರ್ವದಿಸುತ್ತದೆ ಆ ಶಕ್ತಿ. ಅಣುವನನ್ನು ಆಂಜನೇಯ ನನ್ನಾಗಿಸುವ, ಅಲ್ಪವನ್ನು ಭೂಮತ್ವಕ್ಕೇರಿಸುವ ವಿರಾಟ್ ಶಕ್ತಿ ಈ ಯುಗಪ್ರಭಾವ ದಲ್ಲಿದೆ. ಯುಗದ ಸಾಮೂಹಿಕ ಪ್ರಜ್ಞಾಬಲದಿಂದಲೇ ಮಹತ್ಕಾರ್ಯಗಳು ಸಾಧಿತ ವಾಗುತ್ತವೆ. 'ಶ್ರೀರಾಮಾಯಣದರ್ಶನಂ' ಕಾವ್ಯದ ಕೊನೆಯ ಭಾಗದಲ್ಲಿ ಬರುವ ಒಂದು ಸನ್ನಿವೇಶ ಹೀಗಿದೆ—

"ಆರ ಆಜ್ಞೆಗೊ ಕಣ್
ತೆರೆದತ್ತತೀಂದ್ರಿಯಕೆ. ಕಂಡೆನಚ್ಚರಿಯೆನಲ್
ನಿರಾಕಾರನೋರ್ವನಂ ! ಭಯಭಕ್ತಿ ಗೌರವದಿ
ರೋಮಹರ್ಷದಿ ಬಾಗಿ ಕೇಳ್ದೆನಾ ಸಾನ್ನಿಧ್ಯ
ಮಾತ್ರ ತನುಸೂಕ್ಷ್ಮನಂ : "ನೀನಾರ್ ಮಹಾ ಪುರುಷ !"
"ಗುರುವನೆಯೆ ಗುರುತಿಸದವಂ ಶಿಷ್ಯನೆಂತಹನೊ ?"
ವಾತ್ಸಲ್ಯದಿಂದೊರೆದುದಾಭವ್ಯ ಸಾನ್ನಿಧ್ಯ
ಸತ್ವಂ : "ಅನಾದಿಕವಿ ನಾಂ ಕಣಾ ! ವಾಲ್ಮೀಕಿ

ವ್ಯಾಸ ಹೋಮರ್ ದಾಂತೆ ಫಿರ್ದೂಸಿ ಮಿಲ್ಟನ್
ಮಹಾಕವೀಶ್ವರರೆನಗೆ ಬಾಹುಮಾತ್ರಗಳಲ್ತೆ ?
ಬಹುನಾಮರೂಪಗಳ್, ಬಹುಕಾಲದೇಶಗಳ್
ನನಗೆ. ನೀನುಂ ನಾನೆಯೆ, ಕುವೆಂಪು !"

ಆದ್ದರಿಂದ ಈ ಸಮಾರಂಭ, ಈ ಸ್ತುತಿ, ಈ ಕೀರ್ತಿ ನಾನೆಂಬ ಕೊಳವೆಯ ಮೂಲಕ ಸರಸ್ವತಿಯ ಚರಣಾರವಿಂದಕ್ಕೆ ಹರಿಯುವ ತೀರ್ಥಪ್ರವಾಹ.

ಲೌಕಿಕ ಪದವಿಗಳಿಗೆ ನಾನೆಂದೂ ಆಶಿಸಲಿಲ್ಲ. ಅಧ್ಯಾತ್ಮ ಪ್ರಪಂಚದಲ್ಲಿ ನಾನೇರ ಬೇಕಾದ ಗಿರಿಗಳೂ ಗೌರಿಶಂಕರಗಳೂ ಅನೇಕವಿವೆ. ನನಗೆ ಯಾವ ಪದವಿಯೂ ದೊಡ್ಡದಲ್ಲ ಅಥವಾ ಯಾವುದೂ ಹೀನವಲ್ಲ. ಒಮ್ಮೆ ಶಿಷ್ಯನೊಬ್ಬ ಮಹರ್ಷಿ ಅರವಿಂದರನ್ನು 'ಕೀರ್ತಿಯ ಪ್ರಯೋಜನವೇನು ?' ಎಂದು ಕೇಳಿದುದಕ್ಕೆ "ಕೀರ್ತಿಯಿಂದ ಯಾವ ಆಧ್ಯಾತ್ಮಿಕ ಪ್ರಯೋಜನವೂ ಇಲ್ಲ. ಆದರೂ ಒಬ್ಬನ ಸಾಧನ ನೂರಾರು ಜನಕ್ಕೆ ಗೊತ್ತಾಗುವಂತೆ ಮಾಡಬಲ್ಲುದು ಎಂದರಂತೆ !" ಕವಿ ರವೀಂದ್ರರು ಲೋಕ ವಿಖ್ಯಾತರಾಗಿ ಅವರ ಕೃತಿಸತ್ವ ಲೋಕಕ್ಕೆ ಹರಡುವುದಕ್ಕೆ ನೊಬೆಲ್ ಬಹುಮಾನ ಸಹಾಯಕವಾಯಿತು. ಜನತೆಯನ್ನು 'ರಾಮಾಯಣದರ್ಶನಂ' ಕಾವ್ಯದೆಡೆಗೆ ತಿರುಗಿಸುವುದಕ್ಕೆ ಈ ಬಹುಮಾನವು ಬಹುಮಟ್ಟಿಗೆ ಕಾರಣವಾಗಬಹುದು.

ಈ ಸಮಾರಂಭಕ್ಕೆ ಬರಲು ಒಪ್ಪಿಕೊಂಡದ್ದಕ್ಕೆ ಒಂದು ಕಾರಣವಿದೆ. ಅದು ಅತ್ಯಂತ ರಹಸ್ಯವಾದುದು. ಇದುವರೆಗೆ ಅದು ಯಾರಿಗೂ ತಿಳಿದಿಲ್ಲ. ಕನ್ನಡದ ಜನರ ಏಳಿಗೆಗೆ, ಕೀರ್ತಿಗಳಿಗೆ ಕಾರಣವಾದೀತೆಂದೂ ಈ ಸಮಾರಂಭದಿಂದಲಾದರೂ ರಾಮಾಯಣದರ್ಶನದ ಕಡೆಗೆ ನೋಡದಿರುವವರೂ ನೋಡುವಂತಾಗಬಹುದೆಂದೂ ಇದರ ಪರಿಣಾಮದಿಂದ ದೇಶಭಾಷೆಗೆ ಪ್ರಥಮಸ್ಥಾನ ದೊರಕುವುದು ಸುಲಭವಾಗಬಹುದೆಂಬ ಆಶಯವೂ ಈ ಸಮಾರಂಭಕ್ಕೆ ನನ್ನನ್ನು ಕರೆತಂದಿತು. ನನ್ನ ವಿದ್ಯಾರ್ಥಿ ಮಿತ್ರರು ನನ್ನನ್ನು ಅಭಿನಂದಿಸಲು ಬಂದಾಗ ನಾನೇ ಮೊದಲು ಅವರನ್ನು ಅಭಿನಂದಿಸಿದೆ. ಏಕೆಂದರೆ ಕವಿಯೆಷ್ಟು ಅಭಿನಂದನೀಯನೋ ಅಷ್ಟೇ ಕೃತಿಯನ್ನು ಅಭಿನಂದಿಸುವ ಜನರೂ ಅಭಿನಂದನೀಯರು.

ಈ ಮಹಾಕೃತಿ ರಚನೆಗೆ ಒಂಭತ್ತು ವರ್ಷ ಕಾಲದ ತಪಸ್ಸು ಬೇಕಾಯಿತು. ನಾನು ಸಾಮಾನ್ಯವಾಗಿ ಯಾವ ಸಮಾರಂಭಗಳಿಗೂ ಹೋಗುವುದಿಲ್ಲ. ನನ್ನದು ಒಂದು ರೀತಿಯ ವಲ್ಮೀಕ ವಾಸ. ಆದರೆ ನಾನಾ ಹಸ್ತಗಳು ಆ ಹುತ್ತವನ್ನು ಒಡೆದುಹಾಕಿ ನನ್ನನ್ನು ಬಯಲಿಗೆಳೆದುವು.

ನಮಗೆ ಮೊದಲು ಅನ್ನ ಬೇಕು ಅನಂತರ ಬಟ್ಟೆ. ಆದರೆ ಇಷ್ಟರಿಂದಲೇ ತೃಪ್ತ ರಾದರೆ ಸಾಲದು. ನಮಗೆ ಮನಸ್ಸಿದೆ, ಹೃದಯವಿದೆ. ಆ ಹೃದಯವನ್ನು ಉದ್ಧಾರ ಮಾಡಿಕೊಳ್ಳದಿದ್ದರೂ ಹಾಳಾಗದಂತೆ ನೋಡಿಕೊಳ್ಳುವುದು ನಮ್ಮ ಕರ್ತವ್ಯ. ಚೇತನದ ಮೂಲಸ್ವರೂಪ ಜಡವಾಗದಂತೆ ನೋಡಿಕೊಳ್ಳಬೇಕು. ಇದು ಸಾಹಿತ್ಯ ಸಂಸ್ಕೃತಿ ಗಳಿಂದ ಆಗುವ ಕೆಲಸ. ಭಾರತ ಸರ್ಕಾರದವರು ಈಗ ಭಾರತದ ಹದಿನಾಲ್ಕು ಭಾಷೆ ಗಳಲ್ಲಿ ಮೂಡಿದ ಉತ್ತಮ ಕೃತಿಗಳಿಗೆ ಬಹುಮಾನ ನೀಡಿದ್ದಾರೆ. ಸಂಸ್ಕೃತಿ ಸಾಹಿತ್ಯ ಗಳಿಗೆ ಇನ್ನೂ ಹೆಚ್ಚು ಹಣವನ್ನು ಬಳಸಿದರೆ ಹೆಚ್ಚೇನೂ ಅಲ್ಲ. ಈ ವೆಚ್ಚವನ್ನು ಹೊಸ ದೃಷ್ಟಿಯಿಂದಲೇ ನೋಡಬೇಕಾಗುತ್ತದೆ. ಸರಕಾರ, ಅನ್ನಬಟ್ಟೆಗಳನ್ನು ಮಾತ್ರ ಒದಗಿಸುವ ಮೂಲಕ ಪ್ರಜೆಗಳ ಅನ್ನಮಯಕೋಶವನ್ನು ತೃಪ್ತಿಪಡಿಸಿದರೆ ಸಾಲದು. ಮನೋಮಯ ವಿಜ್ಞಾನಮಯಾದಿ ಕೋಶಗಳು ತೃಪ್ತಿಗೊಳ್ಳಬೇಕು. ರೋಗಿಯು, ನಿರೋಗಿಯೂ, ಅಬಲನು ಸಬಲನೂ, ಮೂರ್ಖನೂ ಪಂಡಿತನೂ ಆಗುವುದು ಮನೋಮಯಾದಿ ಕೋಶಗಳು ತೃಪ್ತಿಗೊಂಡಾಗ. ಸಾಹಿತ್ಯ ಸಂಸ್ಕೃತಿಗಳ ಅರಿವಿ ನಿಂದ ಈ ತೃಪ್ತಿ ಸಾಧಿತವಾಗುತ್ತದೆ.

ಈ ಮಹಾರಾಜಾ ಕಾಲೇಜಿನ ಒಳ ಅಂಗಣದಲ್ಲಿ ನೀವು ನನಗೆ ಅಭಿನಂದನ ಸಮಾರಂಭವನ್ನು ಏರ್ಪಡಿಸಿದ್ದೀರಿ. ಈ ಒಳ ಅಂಗಣದ ಈ ದೃಶ್ಯ ನನ್ನನ್ನು ಹಿಂದಕ್ಕೆ, ಬಹಳ ಹಿಂದಕ್ಕೆ ಕರೆದೊಯ್ಯುತ್ತದೆ. ೧೯೨೪ ರಲ್ಲಿ ನಾನು ಮೊಟ್ಟ ಮೊದಲು ಈ ಕಾಲೇಜಿಗೆ ಪ್ರವೇಶಿಸಿದೆ. ಇಲ್ಲಿಗೆ ಬರುವ ಮುನ್ನವೆ ಸರಸ್ವತಿ ನನ್ನ ಮೇಲೆ ಕೃಪೆಮಾಡಿದ್ದಳು. ಸ್ವಲ್ಪ ಹೆಚ್ಚುಕಡಿಮೆ ಹುಚ್ಚನಂತೆಯೇ ಇಲ್ಲಿ ಓಡಾಡಿ ಕೊಂಡಿದ್ದೆ. ಮಾರ್ಜಾಲಶಾಬಕ ನ್ಯಾಯದಿಂದ ಸರಸ್ವತಿ ನನ್ನನ್ನು ಕಾಪಾಡಿ ದಳು. ಆ ಮಾತೆ ನನ್ನನ್ನು ಎಲ್ಲಿ ಇಟ್ಟರೂ "ನಿನ್ನ ಪದಕಮಲದಲಿ ಮನೆಮಾಡಿರುವ ನನಗೆ ಆ ಸ್ಥಾನ ಈ ಸ್ಥಾನ ಎಲ್ಲವಾಸ್ಥಾನ" ಎಂದು ಭಾವಿಸಿ ನಡೆದುಕೊಂಡೆ. ಆ ವಾಗ್ದೇವಿಯ ಕೃಪೆಯಿಂದಲೇ ನಾನು ಕವಿಯಾಗಿ, ಧರ್ಮಕರ್ಮ ಸಂಯೋಗ ದಿಂದ ಇಲ್ಲಿಯೇ ಅಧ್ಯಾಪಕನಾದೆ.

ಒಂದು ಕಾಲದಲ್ಲಿ ಕೀರ್ತಿ, ಪ್ರತಿಷ್ಠೆ, ಧನ, ಸಂಪತ್ತು, ಏಳಿಗೆ, ಇವುಗಳು ಇಂಗ್ಲಿಷ್ ಮೂಲಕ ಬರುತ್ತದೆಂದು ಜನ ಭಾವಿಸಿದ್ದರು. ಈಗ ದೇಶಭಾಷೆಗಳ ಮೂಲಕವೇ ಅವುಗಳನ್ನು ಪಡೆಯಬಹುದೆಂಬುದು ಸರ್ವವಿದಿತ.

ಇಂದು ಇಂಗ್ಲಿಷ್ ಕಲಿಯುತ್ತಿರುವುದರಿಂದ ಆಗುವ ಮನಃಶಕ್ತಿಯ ದುರ್ವ್ಯಯ ನಿಲ್ಲಬೇಕಾಗಿದೆ. ಇಂಗ್ಲಿಷ್ ಕಲಿಸುವವರ, ಹಾಗೂ ಕಲಿಯುವವರ, ವಿಲಕ್ಷಣವೂ ಶೋಚನೀಯವೂ ಆದ ಸ್ಥಿತಿ ಹೋಗಬೇಕಾಗಿದೆ. ಮೈಸೂರು

ವಿಶ್ವವಿದ್ಯಾನಿಲಯವು ಪ್ರಕಟಿಸಿರುವ ಕಲೆ, ತತ್ತ್ವ, ಸಾಹಿತ್ಯ, ಮೊದಲಾದ ವಿಷಯಗಳಿಗೆ ಸಂಬಂಧಪಟ್ಟ ಪುಸ್ತಕಗಳನ್ನು ನೋಡಿದರೆ ಕನ್ನಡದ ಸತ್ವ ಅರ್ಥವಾಗುತ್ತದೆ. ಆದ್ದರಿಂದ ಇಂಗ್ಲಿಷ್‌ಭಾಷಾ ಮಾಧ್ಯಮದ ಮೂಲಕವಾಗಿಯೇ ಪ್ರಗತಿಯನ್ನು ಸಾಧಿಸಬಹುದೆಂಬ ವಾದದ ಜಳ್ಳು ಇದರಿಂದ ವ್ಯಕ್ತವಾಗುತ್ತದೆ. ಯಾವ ಜನ, ಬ್ರಿಟಿಷರು ಭಾರತದಿಂದ ಕಾಲ್ತೆಗೆದರೆ ದೇಶ ಹಾಳಾಗುತ್ತದೆ ಎಂದು ಭಾವಿಸಿದ್ದರೋ ಅಂತಹ ಜನ ಇಂದು ಇಂಗ್ಲಿಷ್ ಹೋದರೆ ನಾವು ಹಾಳಾಗುತ್ತೇವೆ ಎಂದು ಕೂಗುತ್ತಿದ್ದಾರೆ. ಇಂಗ್ಲಿಷರು ಹೋದರು; ಆದರೆ ಭಾರತವೇನೂ ಅಳಿಯಲಿಲ್ಲ! ಅವರ ಆಳ್ವಿಕೆಯಲ್ಲಿದ್ದುದಕ್ಕಿಂತಲೂ ನೂರ್ಮಡಿಯಾಗಿ ಇಂದು ಭಾರತ ಪ್ರಗತಿ ಪಥದಲ್ಲಿ ಸಾಗುತ್ತಿದೆ. ಈಗಾಗಲೇ ಪ್ರಗತಿಯನ್ನು ಸಾಧಿಸಿದೆ. ಈಗ ಪ್ರಾಂತಭಾಷೆಗಳ ವಿಷಯದಲ್ಲಿ, ಅವುಗಳ ಸಾಮರ್ಥ್ಯದಲ್ಲಿ ಎಳ್ಳಷ್ಟೂ ಅಧೈರ್ಯಪಡಬೇಕಾಗಿಲ್ಲ. ಇಂಗ್ಲಿಷಿಗೆ ಸರಿದೊರೆಯಾಗಿ, ಹೆಗಲೆಣೆಯಾಗಿ ನಿಲ್ಲಬಲ್ಲ ಕನ್ನಡದಂತಹ ಭಾಷೆಗಳು ಭಾರತದಲ್ಲಿವೆ. ಎಂತಹ ಗಹನವಾದ ವಿಷಯವನ್ನಾಗಲಿ, ಸೂಕ್ಷ್ಮವಾದ ಭಾವವನ್ನಾಗಲಿ, ಕನ್ನಡದಲ್ಲಿ ಸರಳವಾಗಿಯೂ ಸುಲಭವಾಗಿಯೂ ಶಕ್ತಿಪೂರ್ಣವಾಗಿಯೂ ವಿವರಿಸುವುದು ಸಾಧ್ಯ. ಕನ್ನಡಿಗರ ಸರ್ವತೋಮುಖವಾದ ಉದ್ಧಾರ ಕನ್ನಡದಿಂದಲೇ ಸಾಧ್ಯ. ಕನ್ನಡಿಗರಿಗೆ ಕನ್ನಡವೇ ಗತಿ!

ನೀವು ನನಗೆ ಸಲ್ಲಿಸಿದ ಅಭಿನಂದನ ಪತ್ರದಲ್ಲಿ "ಶ್ರೀ ರಾಮಾಯಣದರ್ಶನಂ ಮಹಾಕಾವ್ಯಾವತಾರದಿಂದ ಕನ್ನಡ ಸಾಹಿತ್ಯವು ಪ್ರಾದೇಶಿಕ ನಶ್ವರತೆಯ ಪರಿಸೀಮಿಯನ್ನು ದಾಟಿ ವಿಶ್ವತೆಯ ನಿತ್ಯತೆಯಲ್ಲಿ ವಿಲೀನವಾಗಿದೆ" ಎಂದು ಹೇಳಿದ್ದೀರಿ. ಈ ಮಾತು ಸತ್ಯವಾದರೆ ನಮ್ಮ ಹೃದಯವನ್ನು ಸರೋವರತ್ವದಿಂದ ಸಾಗರತ್ವಕ್ಕೆ ಕೊಂಡೊಯ್ಯುತ್ತದೆ, ಶ್ರೀ ರಾಮಾಯಣದರ್ಶನಂ! ಆ ಕಾವ್ಯದ ಕೃತವಾದ ನಾನು ಕೇವಲ ನಿಮಿತ್ತಮಾತ್ರ.

ಇಂದು ನಿಮ್ಮೆಲ್ಲರ ಮನಸ್ಸು ರಾಮಾಯಣದ ಕಡೆಗೆ, ಸೌಂದರ್ಯದ ಕಡೆಗೆ, ಸೊಬಗಿನ ಕಡೆಗೆ ತಿರುಗಿದೆ. ರಾಮಾಯಣದರ್ಶನದಲ್ಲಿ ಬರುವ ಒಂದು ಸಂದರ್ಭವನ್ನು ಇಲ್ಲಿ ಉದಾಹರಿಸುತ್ತೇನೆ: ಸೀತಾನ್ವೇಷಣೆಗೆ ಹೋದ ಹನುಮಂತ ರಾಕ್ಷಸರ ಮನೆಗಳನ್ನು ಶೋಧಿಸುವಾಗ, ಆ ಆ ರಾಕ್ಷಸರ ಸಂಸ್ಕಾರ ಮನೋಧರ್ಮಕ್ಕನುಸಾರವಾಗಿ ಬೇರೆಬೇರೆ ರೂಪತಾಳಿ ಅವರವರ ಮನೆಗಳನ್ನು ಪ್ರವೇಶಿಸುತ್ತಾನೆ. ವಿಭೀಷಣನ ಮನೆಯನ್ನು ಪ್ರವೇಶಿಸುವಾಗ ಓಂಕಾರರೂಪವನ್ನು ತಾಳುತ್ತಾನೆ. ಏಕೆಂದರೆ ಅಲ್ಲಿ ಆ ಸಮಯದಲ್ಲಿ ರಸಸೌಂದರ್ಯದ ಆರಾಧನೆ ನಡೆಯುತ್ತಿತ್ತು. ಆ ಆರಾಧನೆ ಎಲ್ಲಿ ನಡೆಯುತ್ತಿದ್ದರೂ ಅಲ್ಲಿಗೆ ದೇವತೆಗಳು ಬರುತ್ತಾರೆ. ಇಂದು ಇಲ್ಲಿ



ಮುಖ್ಯಮಂತ್ರಿಗಳು ಅಧ್ಯಕ್ಷಭಾಷಣ ಮಾಡುತ್ತಿರುವುದು



ಸಾಹಿತ್ಯಪರಿಷತ್ತಿನ ಅಧ್ಯಕ್ಷರೊಡನೆ ಶ್ರೀ ಕುವೆಂಪು

ಸತ್ಯಸೌಂದರ್ಯದ ಆರಾಧನೆ ನಡೆಯುತ್ತಿದೆ. ಆದ್ದರಿಂದ ಲೋಕಗುರುಗಳೂ, ಲೋಕ ಕವಿಗಳೂ, ಕನ್ನಡಕ್ಕಾಗಿಯೇ ದುಡಿದು ಮಡಿದ ಮಹಾಚೇತನಗಳೂ ಇಲ್ಲಿ ಅದೃಶ್ಯರಾಗಿ ಸುಳಿಯುತ್ತಿರಬಹುದು. ನಿಮ್ಮನ್ನೂ ನನ್ನನ್ನೂ ಆಶೀರ್ವದಿಸುತ್ತಿರಬಹುದು, ದೇವತಾಶಕ್ತಿಗಳೂ ಇಲ್ಲಿ ಭಾಗಿಗಳಾಗಿರಬಹುದು. ಏಕೆಂದರೆ "ರಸಮೆ ಅವರುಣ್ಬ ಮೃತಮಲ್ತೆ" ಎಂದು ವಿಭೀಷಣ ಶ್ರೀ ರಾಮಾಯಣದರ್ಶನಂ ಕಾವ್ಯದಲ್ಲಿ ಒಂದು ಕಡೆ ಹೇಳಿದ್ದಾನೆ.

ಭಾರತ ಜನನಿಯ ತನುಜಾತೆಯಾದ ಕನ್ನಡಮಾತೆಯ ಸೇವೆಗೆ ನಾವೆಲ್ಲರೂ ಸಿದ್ಧರಾಗಬೇಕು. ಈ ಬಹುಮಾನ ಬಂದುದಕ್ಕಿಂತ ಹೆಚ್ಚಿನ ಸಂತೋಷ ನಮಗಾಗಬೇಕಾದರೆ ಕನ್ನಡನಾಡಿನಲ್ಲಿ ವಿದ್ಯಾಭ್ಯಾಸದ ಎಲ್ಲ ಘಟ್ಟಗಳಲ್ಲೂ ಕನ್ನಡವೇ ಶಿಕ್ಷಣ ಮಾಧ್ಯಮವಾಗಬೇಕು; ಕನ್ನಡವೇ ಪ್ರಧಾನಭಾಷೆಯಾಗಬೇಕು. ಅಂದೇ ನಮ್ಮೆಲ್ಲರಿಗೂ ಅಮೃತಪಾನ, ಅಮೃತಸ್ನಾನ. ಆ ದಿವ್ಯ ಮುಹೂರ್ತ ಬೇಗನೆ ಒದಗಿ ಬರುವಂತೆ ಭಾರತಿ ನಮ್ಮನ್ನು ಆಶೀರ್ವದಿಸಲಿ, ಅನುಗ್ರಹಿಸಲಿ.

ಹೀಗೆ ತಮ್ಮ ವಂದನೋಕ್ತಿಯನ್ನು ಶ್ರೀ ಕುವೆಂಪು ಅವರು ಮುಕ್ತಾಯಗೊಳಿಸಿದಾಗ, ಸಭಿಕರು ಸುದೀರ್ಘವಾಗಿ ಚಪ್ಪಾಳೆಯ ಮಳೆಗರೆದು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಆ ಬಳಿಕ ಅಂದಿನ ಸಮಾರಂಭದ ಅಧ್ಯಕ್ಷತೆ ವಹಿಸಿದ ಮಾನ್ಯ ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರು ತಮ್ಮ ಅಧ್ಯಕ್ಷ ಭಾಷಣ ಮಾಡಿದರು. ಆ ಭಾಷಣದ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ.

"ಸರಸ್ವತಿಯ ವರಪುತ್ರರಾದ ಕುವೆಂಪುರವರ ಸನ್ನಿಧಿಯಲ್ಲಿ, ನನ್ನ ಗುರುಗಳಾದ ಪ್ರೊ|| ಡಿ'ಸೋಜಾರವರ ಸನ್ನಿಧಿಯಲ್ಲಿ ಮತ್ತು ಭಾಷಾಭಿಮಾನಿಗಳೂ ಸಹೃದಯರೂ ಆದ ನಿಮ್ಮೆಲ್ಲರ ಸಮ್ಮುಖದಲ್ಲಿ ರಾಜಕೀಯ ವ್ಯಕ್ತಿಯಾದ ನಾನು ಮಾತನಾಡುವುದು ಕಷ್ಟವೆಂದು ನನಗನ್ನಿಸುತ್ತದೆ.

ಕವಿವರ್ಯ ಶ್ರೀ ಕುವೆಂಪುರವರಿಗೆ ಕೇಂದ್ರ ಸರ್ಕಾರದ ಪಾರಿತೋಷಿಕದೊರೆತುದಕ್ಕೆ ವೈಯಕ್ತಿಕವಾಗಿಯೂ ಮೈಸೂರು ಮುಖ್ಯಮಂತ್ರಿಯಾಗಿ ನಾನು ಸರ್ಕಾರದ ಪರವಾಗಿಯೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅಮೋಘವಾದ ಶ್ರೇಷ್ಠ ಸಾಹಿತ್ಯದಲ್ಲಿ ಸಾಹಿತ್ಯ, ಸಂಗೀತ, ಭಕ್ತಿ ಈ ಮೂರರ ಮಿಲನವನ್ನು ನೋಡುತ್ತೇವೆ. ಈ ಪವಿತ್ರ ಸಮ್ಮೇಳನ ಭಕ್ತನನ್ನು ದೇವರ ಅಡಿಗೊಯ್ಯುವ ಸಾಧನ. ಶ್ರೀ ಕುವೆಂಪು ವಿರಚಿತ 'ಶ್ರೀ ರಾಮಾಯಣದರ್ಶನ'ದಲ್ಲಿ ಈ ಪವಿತ್ರ ಮಿಲನವನ್ನು ಕಾಣುತ್ತೇವೆ. ಈ ಮೂರನ್ನೂ ಅನುಭವಿಸುವ ವಿಶೇಷ ಶಕ್ತಿಯೊಂದು ಮನುಷ್ಯನಿಗಿದೆ. ಅದೇ ಸಂಸ್ಕೃತಿ. ಆ ಸಂಸ್ಕೃತಿಯನ್ನು ಬೆಳಗಲು ಬೆಳೆಸಲು ನಮ್ಮ ಸರ್ಕಾರ ಸಂಸ್ಕೃತಿ

ಪ್ರಚಾರವನ್ನು ಕೈಗೊಂಡಿತು. ಆದರೆ ದುರ್ದೈವವಶಾತ್ ಅದು ಬಹಳ ಹಗರಣಕ್ಕೆ ಇಟ್ಟುಕೊಂಡಿತು. ಹಿಂದಿನ ಕಾಲದ ನಡೆ, ನುಡಿ, ಸಂಸ್ಕೃತಿಯನ್ನು ಪ್ರತಿಬಿಂಬಿಸುವ ರಾಮಾಯಣ ಭಾರತಗಳಂತಹ ಗ್ರಂಥಗಳು ಇವೆ. ಸತ್ಯ ಹರಿಶ್ಚಂದ್ರನ ನಿಲುವೇ ಧರ್ಮವೆಂದು ಕವಿ ಸಾರಿದ್ದಾನೆ. ಹರಿಶ್ಚಂದ್ರ ಹೊಲತಿಯರನ್ನು ಮದುವೆಯಾಗಲು ಅವರು ಅಸ್ಪೃಶ್ಯರೆಂದು ನಿರಾಕರಿಸಿದನೆ ಹೊರತು ತಾನು ಏಕಪತ್ನೀವ್ರತಸ್ಥನೆಂದಲ್ಲ. ಆದರೆ ಅವನ ಧರ್ಮವೇ ಸರ್ವಕಾಲಕ್ಕೂ ಅನ್ವಯಿಸುವ ಧರ್ಮವಾಗಲಿಲ್ಲ. ಆ ಕಾಲಕ್ಕೆ ಆ ದೇಶಕ್ಕೆ ಅದು ಉಚಿತವಾಗಿತ್ತು. ಇಂದು ಈ ಯುಗದಲ್ಲಿ ಗಾಂಧೀಜಿಯವರು ಹರಿಜನರನ್ನೂ ಸೇರಿಸಿಕೊಂಡರು. ಇತರರನ್ನು ಗೌರವಿಸುವಂತೆ ಪ್ರೀತಿಸುವಂತೆ ಅವರನ್ನು ಕಂಡರು. ಎಲ್ಲ ಕಾಲಕ್ಕೂ ಎಲ್ಲ ದೇಶಕ್ಕೂ ಅನ್ವಯವಾಗುವ ನೀತಿಧರ್ಮಗಳು ರಾಮಾಯಣ ಭಾರತದಲ್ಲಿವೆ. ಆದ್ದರಿಂದ ಅವನ್ನು ಒಪ್ಪಿ ನಾನು ಗೌರವಿಸುತ್ತೇನೆ. ಪೂರ್ವಕಾವ್ಯದ ಸೊಬಗನ್ನೂ ಸತ್ಯವನ್ನೂ ದರ್ಶನವನ್ನೂ ಬದಲಾವಣೆಯಾಗುವಂತೆ ಹೊಸದೃಷ್ಟಿಗೆ ಹೊಂದುವಂತೆ ಹೊಸರೂಪದಲ್ಲಿ ಹೊಸ ಛಂದಸ್ಸಿನಲ್ಲಿ ರಚಿತವಾಗಿರುವ ಶ್ರೀ ರಾಮಾಯಣದರ್ಶನ ಆದರ್ಶನೀಯ, ಶ್ಲಾಘ್ಯಾರ್ಹ. ಅದನ್ನು ಪಡೆದ ನಾಡೂ ನಾವೂ ಧನ್ಯ. ಜನರು ಶ್ರೀ ರಾಮಾಯಣದರ್ಶನವನ್ನು ಕಠಿಣವೆನ್ನುತ್ತಾರೆ, ಸುಲಭಗ್ರಾಹ್ಯವಲ್ಲವೆನ್ನುತ್ತಾರೆ. ಮೊದಲು ಮೊದಲು ನನಗೂ ಭಾಸವಾದುದು ಹಾಗೆಯೆ. ಒಮ್ಮೆ ಇದರ ವಿಷಯವಾಗಿ ಶ್ರೀ ಪುಟ್ಟಪ್ಪನವರೊಡನೆ ಪ್ರಸ್ತಾಪಮಾಡಿದೆ: "ನಿಮ್ಮ ಮೊದಲಿನ ಕೃತಿಗಳಾದ 'ಜಲಗಾರ' ಮೊದಲಾದುವು ಸುಲಭವಾಗಿವೆ, ಪಾಮರರಿಗೂ ರಂಜಕವಾಗಿವೆ. ಆದರೆ ನಿಮ್ಮ ಶ್ರೀ ರಾಮಾಯಣದರ್ಶನ ಕಠಿನ" ಎಂದೆ. ಅದಕ್ಕೆ ಅವರು "ನಾನು ಮಗುವಾಗಿದ್ದಾಗ ಮುದ್ದುಮುದ್ದಾಗಿದ್ದೆ, ಈಗ ಬೆಳೆದು ಬಲಿಷ್ಠನಾಗಿದ್ದೇನೆ, ಬಲಿಷ್ಠತೆಯ ಜೊತೆಗೆ ಸ್ವಲ್ಪ ಒರಟು ಸೇರಿಯೆ ಸೇರುತ್ತದೆ" ಎಂದು ಉತ್ತರಿಸಿದರು. ಆಮೇಲೆ ನನಗೆನ್ನಿಸಿತು ಕಾವ್ಯ ಕಠಿಣವಾಗಿದ್ದಷ್ಟೂ ಒಳ್ಳೆಯದು ಎಂದು. ಅದು ಹಾಗೆಯೇ ಇರಬೇಕು. ಅದರ ಜಾಯಮಾನವೇ ಹಾಗೆ, ಎಷ್ಟೇ ಆದರೂ ಅದು ಮಹಾಕಾವ್ಯವಲ್ಲವೆ? ಸುಲಭಸಾಧ್ಯವಾದುದು ಲಘುವಾಗುತ್ತದೆ. ಮಹಾಕಾರ್ಯವನ್ನು ಸಾಧಿಸಬೇಕಾದರೆ ಮಹಾಸಾಧನೆ, ಶ್ರಮ ಅಗತ್ಯ. ಶ್ರಮರಹಿತ ಕಾರ್ಯ ಸುಖದಾಯಕವಲ್ಲ ಅಥವಾ ಆ ಸುಖ ಅಷ್ಟು ಶ್ಲಾಘನೀಯವಾದುದೂ ಅಲ್ಲ. ನಮ್ಮ ಹಿರಿಯರು ಹಿಮಾಲಯ ಪರ್ವತದ ಮೇಲೆ ಗೌರಿಶಂಕರವಿದೆಯೆನ್ನುವರು. ಚಾಮುಂಡಿ ಎಲ್ಲಿದ್ದಾಳೆಂದರೆ ಚಾಮುಂಡಿ ಬೆಟ್ಟದ ಮೇಲಿದ್ದಾಳೆನ್ನುವರು. ತಿರುಪತಿ ಎಲ್ಲಿದೆಯೆಂದರೆ ಏಳು ಬೆಟ್ಟದ ಮೇಲಿದೆಯೆನ್ನುವರು. ಅವರು ಬೆಟ್ಟಗಳ ಮೇಲೆ

ದೇವಾಲಯಗಳನ್ನು ಕಟ್ಟಿದರು. ಏಕೆಂದರೆ ಅವನ್ನು ಸಂದರ್ಶಿಸಬೇಕಾದರೆ ಪರ್ವತಾರೋಹಣ ಸಾಹಸಕ್ಕೂ, ಶ್ರಮಕ್ಕೂ ಸಿದ್ಧರಾಗಿರಲೆಂದು. ಇದರ ಉದ್ದೇಶ ದಿವ್ಯವಾದುದನ್ನೂ ಭವ್ಯವಾದುದನ್ನೂ ಪ್ರಯತ್ನದಿಂದ ಶ್ರಮದಿಂದ ಸಾಧಿಸಬೇಕೆಂದು. ಹಾಗೆಯೇ ಶ್ರೀ ರಾಮಾಯಣದರ್ಶನವನ್ನು ಓದುವಾಗ ಸುಲಭವಾಗಿ ಅರ್ಥಮಾಡಿಕೊಳ್ಳಲಾರದೆ ಪ್ರಯತ್ನಿಸಿ ಕಷ್ಟಪಟ್ಟು ಯೋಚಿಸಿ ಯೋಚಿಸಿ ಅದರ ದರ್ಶನ, ದೈವಭಕ್ತಿ, ರಸಗಳನ್ನು ಆಸ್ವಾದಿಸುತ್ತೇವೆ. ಇಲ್ಲಿ ಯೋಚನೆಯೇ ಶ್ರಮ. ಶ್ರಮಪಡುವುದರಿಂದ ಮುಂದೆ ಲೇಸಾಗುವುದು. ಆದ್ದರಿಂದ ಈ ಮಹಾಕೃತಿಯನ್ನು ಓದುವುದು ಅಗತ್ಯ.

ವೇದಿಕೆಯ ತೆರೆಯ ಮೇಲೆ ರಂಜಿಸುವ ಬೃಹತ್ ಲಿಪಿಯ 'ಸಿರಿಗನ್ನಡಂ ಗೆಲ್ಗೆ' ಎಂಬ ಬರಹ ನನ್ನನ್ನು ಬಹುವಾಗಿ ಆಕರ್ಷಿಸಿದೆ. ಹಾಗೆಯೇ ಸಭಿಕರ ಮನವನ್ನೂ ಸೂರೆಗೊಂಡಿರುವುದರಲ್ಲಿ ಆಶ್ಚರ್ಯವಿಲ್ಲ. ಅದನ್ನು ಓದಿದ ನನಗೆ ಆದ ಆನಂದ ಅಪಾರವಾದುದು. ಇಂದು ನಿಜವಾಗಿಯೂ ಸಿರಿಗನ್ನಡ ಗೆದ್ದಿತು. ತೆರೆಯ ಮೇಲೆ ಮಾತ್ರವಲ್ಲ ಕಾರ್ಯತಃ ಗೆದ್ದಿದೆ. ಹೇಗೆಂದರೆ ಶ್ರೀ ರಾಮಾಯಣದರ್ಶನಕ್ಕೆ ಕೇಂದ್ರ ಸರ್ಕಾರದ ಬಹುಮಾನ ಬಂದಿರುವುದರಿಂದ ಕನ್ನಡ ಗೆದ್ದಿತು. ಅಲ್ಲದೆ ಯಾವಾಗಲೂ ಇಂಗ್ಲಿಷಿನಲ್ಲೇ ವ್ಯವಹರಿಸುವ ಪ್ರೊ॥ ಡಿ'ಸೋಜಾ ಅಂತಹವರು ತಮ್ಮ ಸ್ವಾಗತ ಭಾಷಣವನ್ನು ಕನ್ನಡದಲ್ಲಿ ಮಾಡಿದುದರಿಂದ ಕನ್ನಡ ಇನ್ನೊಂದು ರೀತಿಯಲ್ಲಿಯೂ ಗೆದ್ದಿತು. ಇದೇ ಕಾಲೇಜಿನಲ್ಲಿ ನಾನು ವಿದ್ಯಾರ್ಥಿಯಾಗಿದ್ದಾಗ ಇವರ ಶಿಷ್ಯನಾಗಿದ್ದೆ. ಆದರೆ ಅವರು ಇಷ್ಟು ಶುದ್ಧವಾದ ಸೊಗಸಾದ ಕನ್ನಡದಲ್ಲಿ ಮಾತನಾಡುವುದು ನನಗೆ ಗೊತ್ತಿರಲಿಲ್ಲ. ಅದು ಆಶ್ಚರ್ಯವೇ ಸರಿ! ಅವರಿಂದ ಮಾತನಾಡಿಸಿದ ಕನ್ನಡ ಗೆಲ್ಲಲಿಲ್ಲವೆ!

ಹೇಗೆ ನೀವೆಲ್ಲಾ ಪರಮಸಂತೋಷದಿಂದ ಇಲ್ಲಿ ಸೇರಿ ಶ್ರೀ ಕುವೆಂಪುರವರನ್ನು ಅಭಿನಂದಿಸುತ್ತೀರೊ ಹಾಗೆ ನಾನೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಈ ಅಭಿನಂದನ ಸಮಾರಂಭದಲ್ಲಿ ನಾನು ಭಾಗಿಯಾಗಿರುವುದು ಭಾಗ್ಯವೆಂದು ಭಾವಿಸುತ್ತೇನೆ.

ತ್ರೇತಾಯುಗದಲ್ಲಿ ಶ್ರೀರಾಮ ಮಹಾಕಾರ್ಯಗಳನ್ನು ಸಾಧಿಸಿದಂತೆ ಅವಕ್ಕೂ ಮಿಗಿಲಾದ ಕಾರ್ಯಗಳನ್ನೂ ಗಾಂಧೀಜಿಯವರು ಈ ಯುಗದಲ್ಲಿ ಇಂದು ಸಾಧಿಸಿದ್ದಾರೆ ಎನ್ನಬಹುದು. ತಮ್ಮದೇ ಆದ ದರ್ಶನವನ್ನು ಪ್ರಪಂಚಕ್ಕೆ ಕೊಟ್ಟಿದ್ದಾರೆ. ಈಗ ಶ್ರೀ ರಾಮಾಯಣದರ್ಶನವನ್ನು ರಚಿಸಿದಂತೆ ಶ್ರೀ ಗಾಂಧೀದರ್ಶನವನ್ನು ರಚಿಸಬೇಕಾಗಿದೆ. ಅದರ ಅವಶ್ಯಕತೆ ಹೆಚ್ಚಾಗಿದೆ. ಅಂಥ ಒಂದು ಮಹಾ

ಕಾವ್ಯ ಬೇಗ ಕನ್ನಡದಲ್ಲಿ ರಚಿತವಾಗಲೆಂಬುದು ನನ್ನ ಆಶೆ. ಅದನ್ನು ಕವಿಗಳು ಕೂಡಲೆ ಕೈಗೊಳ್ಳಬೇಕು. ಹಿಂದಿನ ಕಾಲದಲ್ಲಿ ರಾಜರು ಕವಿಗಳಿಗೆ ಪ್ರೋತ್ಸಾಹ, ಆಶ್ರಯ, ಬಿರುದುಗಳನ್ನು ಕೊಡುತ್ತಿದ್ದರು. ಹಾಗೆಯೇ ಈಗಿನ ಪ್ರಜಾಪ್ರಭುತ್ವದಲ್ಲಿಯೂ ಕವಿಗಳಿಗೆ ಪ್ರೋತ್ಸಾಹ ಆಶ್ರಯವನ್ನು ಸರ್ಕಾರ ಕೊಡಲು ಸಿದ್ಧವಿದೆ. ಆಶ್ರಯವಿಲ್ಲವೆನ್ನಬಾರದು. ಅದು ಇದ್ದೇ ಇದೆ. ಇಲ್ಲವೆನ್ನುವವರಿಗೆ ನನ್ನದೊಂದು ಸವಾಲು. 'ಗಾಂಧೀ ದರ್ಶನ'ವನ್ನು ಯಾರಾದರೂ ಬರೆದುಕೊಟ್ಟರೆ ಅವರನ್ನು ಬಹುಮಾನಿಸಿ ಅದನ್ನು ಅಚ್ಚುಮಾಡಿಸಲು ಸರ್ಕಾರ ಸದಾ ಸಿದ್ಧವಾಗಿದೆ. ಆ ಗ್ರಂಥ ಕನ್ನಡದಲ್ಲಿ ಬೇಗ ಬರಲೆಂಬುದೇ ನನ್ನ ಹಾರೈಕೆ.

ಶ್ರೀ ಕ. ವೆಂ. ರಾಘವಾಚಾರ್ಯರವರಿಂದ ವಂದನಾರ್ಪಣೆಯಾದ ಮೇಲೆ ರಾಷ್ಟ್ರಗೀತೆಯೊಂದಿಗೆ ಸಮಾರಂಭವು ಮುಕ್ತಾಯವಾಯಿತು.

ಸಿರಿಗನ್ನಡಂ ಆಳ್ಗೆ



ವೈಸ್-ಚಾನ್ಸೆಲರ್ ಮತ್ತು ಮುಖ್ಯಮಂತ್ರಿಗಳೊಡನೆ ಶ್ರೀ ಕುವೆಂಪು

ಸಾದರ ಸ್ವೀಕಾರ

ಕೊಂಡುಗೂಳಿ ಕೇಶಿರಾಜ ವಿರಚಿತ ಷಡಕ್ಷರ ಮಂತ್ರಮಹಿಮೆ—ಸಂಪಾದಕರು: ಆಸ್ಥಾನವಿದ್ವಾನ್, ಪಂಡಿತರತ್ನಂ, ಕೀರ್ತನಾಚಾರ್ಯ ಬಿ. ಶಿವಮೂರ್ತಿಶಾಸ್ತ್ರೀ; ಪ್ರಕಾಶಕರು: ಶರಣಸಾಹಿತ್ಯ ಗ್ರಂಥಮಾಲೆ, ಬೆಂಗಳೂರು; ಪುಟಗಳು ೫೦+೪; ಬೆಲೆ, ರೂ. ೧-೦-೦.

ಮಧುಚಂದ್ರ (ಪ್ರೇಮಗೀತೆಗಳು)—ಲೇಖಕರು: ಶ್ರೀ ಚೆನ್ನವೀರ ಕಣವಿ; ಪ್ರಕಾಶಕರು: ಶಾರದಾ ಪ್ರಕಟನಾಲಯ, ಅರಳೇಪೇಟೆ, ಬೆಂಗಳೂರು ೨; ಪುಟಗಳು ೫೯; ಬೆಲೆ, ರೂ. ೦-೧೨-೦.

ರಾಗಿಣಿ—ಕಾದಂಬರಿಕಾರರು: ಭಾರತೀಪ್ರಿಯ; ಪ್ರಕಾಶಕರು: ಶಾರದಾ ಪ್ರಕಟನಾಲಯ, ಅರಳೇಪೇಟೆ, ಬೆಂಗಳೂರು ೨; ಪುಟಗಳು ೨೬೯; ಬೆಲೆ, ರೂ. ೧-೮-೦.

ನವರಾತ್ರಿ ಭಾಗ ೧, ೨, ೩, ೪, ೫—ಲೇಖಕರು: ಶ್ರೀ ಶ್ರೀನಿವಾಸ; ಪ್ರಕಾಶಕರು: ಜೀವನಕಾರ್ಯಾಲಯ, ಬೆಂಗಳೂರು ೪; ಪುಟಗಳು (ಅನುಕ್ರಮವಾಗಿ) ೪೬, ೭೯, ೮೦, ೮೦, ೮೮; ಬೆಲೆ, (ಕ್ರಮವಾಗಿ) ೦-೮-೦, ೧-೦-೦, ೧-೦-೦, ೧-೦-೦, ೧-೦-೦.

ಪರ್ಲ್‌ಬಕ್ ಸಣ್ಣ ಕತೆಗಳು—ಅನುವಾದಕರು: ಲಲಿತಾಂಬಾ; ಪ್ರಕಾಶಕರು: ಜೀವನ ಕಾರ್ಯಾಲಯ, ಬಸವನಗುಡಿ, ಬೆಂಗಳೂರು ೪; ಪುಟಗಳು ೧೦೯; ಬೆಲೆ, ರೂ. ೧-೮-೦.

ಮಾಸತಿ—ಲೇಖಕರು: ಶ್ರೀ ಶ್ರೀನಿವಾಸ; ಪ್ರಕಾಶಕರು: ಜೀವನಕಾರ್ಯಾಲಯ, ಬಸವನಗುಡಿ, ಬೆಂಗಳೂರು ೪; ಪುಟಗಳು ೪೮; ಬೆಲೆ, ರೂ. ೦-೧೨-೦.

ಸಣ್ಣ ಕತೆಗಳು—ಕತೆಗಾರ್ತಿ: ಉಮಾದೇವಿ; ಪ್ರಕಾಶಕರು: ಜೀವನಕಾರ್ಯಾಲಯ, ಬಸವನಗುಡಿ, ಬೆಂಗಳೂರು ೪; ಪುಟಗಳು ೧೦೩; ಬೆಲೆ, ರೂ. ೧-೮-೦.

ನಾಗರಿಕತೆ—ಲೇಖಕರು: ಬಡೇಕಿಲ್ ಕೃಷ್ಣಭಟ್ಟ; ಪ್ರಕಾಶಕರು: ಜೀವನಕಾರ್ಯಾಲಯ, ಬಸವನಗುಡಿ, ಬೆಂಗಳೂರು ೪; ಪುಟಗಳು ೧೧೫; ಬೆಲೆ, ರೂ. ೧-೮-೦.

ಭಾರತ ತೀರ್ಥ—ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು; ಪ್ರಕಾಶಕರು: ಜೀವನಕಾರ್ಯಾಲಯ, ಬಸವನಗುಡಿ, ಬೆಂಗಳೂರು ೪; ಪುಟಗಳು ೩೨೦; ಬೆಲೆ, ರೂ. ೪-೮-೦.

ಭಗವದ್ಗೀತೆ (ಕನ್ನಡ ಪದ್ಯಾನುವಾದ)—ಅನುವಾದಕರು: ಶ್ರೀ ಪು. ತಿ. ನರಸಿಂಹಾಚಾರ್ ಅವರು; ಪ್ರಕಾಶಕರು: ಜೀವನಕಾರ್ಯಾಲಯ, ಬಸವನಗುಡಿ, ಬೆಂಗಳೂರು ೪; ಪುಟಗಳು ೮೮; ಬೆಲೆ, ರೂ. ೧-೮-೦.

ಪದ್ಮಿನಿ—ಲೇಖಕರು: ಶ್ರೀ ಹೊಯಿಸಳ; ಪ್ರಕಾಶಕರು: ಜೀವನಕಾರ್ಯಾಲಯ, ಬಸವನಗುಡಿ, ಬೆಂಗಳೂರು ೪; ಪುಟಗಳು ೪೩; ಬೆಲೆ, ರೂ. ೦-೬-೦.

ಧ್ಯಾನ—ಸ್ವಾಮಿ ವಿವೇಕಾನಂದ; ಪ್ರಕಾಶಕರು: ಶ್ರೀ ರಾಮಕೃಷ್ಣಾಶ್ರಮ, ಮೈಸೂರು; ಪುಟಗಳು ೨೪; ಬೆಲೆ, ರೂ. ೦-೪-೦,

ಪ್ರಭುವಿನ ಪ್ರಭೆ—ಸಂಪಾದಕರು: ಶ್ರೀ ಮ. ಶ್ರೀ ದೇಶಪಾಂಡೆ; ಪ್ರಕಾಶಕರು: ಶ್ರೀ ಶಿ. ಶಿ. ಅಣೆಪ್ಪನವರ, ಅಥಣಿ; ಪುಟಗಳು (ಫೂಲ್‌ಸ್ಕ್ಯಾಪ್ ಅಷ್ಟದಳ) ೨೩೦+೩೬; ಬೆಲೆ, ರೂ. ೨-೦-೦.

ಹರಪ್ಪಾ ಸಂಸ್ಕೃತಿ—ಲೇಖಕರು: ಡಾ|| ಎಂ. ಶೇಷಾದ್ರಿ; ಪ್ರಕಾಶಕರು: ಸಾರ್ವಜನಿಕ ವಿಚಾರಸಂಸ್ಥೆ, ಮೈಸೂರು; ಪುಟಗಳು x+೯೩; ಬೆಲೆ, ರೂ. ೧-೦-೦.

ತ್ಯಾಗ (ಕಿರು ಕಾದಂಬರಿ)—ಲೇಖಕರು: ಶ್ರೀ ಕುಮುದ; ಪ್ರಕಾಶಕರು: ಶ್ರೀ ಜಿ. ಗುಂಡಣ್ಣ, ಕನ್ನಡ ಅಧ್ಯಾಪಕರು, ಇಂಟರ್‌ಮೀಡಿಯೆಟ್ ಕಾಲೇಜ್, ಮಂಡ್ಯ; ಪುಟಗಳು iv+೧೪೨; ಬೆಲೆ, ಸಾಮಾನ್ಯಪ್ರತಿ ರೂ. ೧-೪-೦; ಉತ್ತಮಪ್ರತಿ ರೂ. ೨-೦-೦.

ವಿಷಬಿಂದು (ಕವನ ಸಂಕಲನ)—ಬರೆದವರು: ಶ್ರೀ 'ಮರುಳಸಿದ್ಧ'; ಪ್ರಕಾಶಕರು: ಸುತ್ತೂರು ವಿದ್ಯಾರ್ಥಿ ಸಾಹಿತ್ಯಮಂಡಲಿ; ಪುಟಗಳು viii+೭೦.

ಜನಪ್ರಿಯವಿಜ್ಞಾನ (ಪ್ರಬಂಧಗಳು)—ಲೇಖಕರು: ಸೆಂಟ್ರಲ್ ಕಾಲೆಜ್ ವಿದ್ಯಾರ್ಥಿಗಳು; ಸಂಪಾದಿಸಿದವರು: ಸೆಂಟ್ರಲ್ ಕಾಲೇಜ್ ಅಧ್ಯಾಪಕರು; ಪುಟಗಳು iv+೧೨೦; ಬೆಲೆ, ೧-೮-೦.

ಸೂತಪುತ್ರ ಕರ್ಣ—ಲೇಖಕರು: ಶ್ರೀ ಯನ್. ವೀರಮಂಗಳ, ಜ್ಯೂನಿಯರ್ ಬಿ.ಎ., ವೀರಶೈವ ಕಲಾಶಾಲೆ, ಬಳ್ಳಾರಿ; ಪುಟಗಳು ೧೧.

ಕಾಶಿ ಕಾವೇರಿ—ಲೇಖಕರು: ಶ್ರೀ ಕಾಶಿ ವಿಶ್ವನಾಥಶೆಟ್ಟಿ; ಪ್ರಕಾಶಕರು: ಕನ್ನಡ ಸಾಹಿತ್ಯ ಮಂಟಪ, ತುಮಕೂರು; ಪುಟಗಳು ೯೫; ಬೆಲೆ, ರೂ. ೧-೦-೦.

ಗಾಳಿಯಲ್ಲಿನ ಅಗೋಚರಶತ್ರುಗಳು (ಸಚಿತ್ರ)—ಲೇಖಕರು: ಡಾ|| ಎಸ್. ಟಿ. ಪುಟ್ಟಣ್ಣ; ಪ್ರಕಾಶಕರು: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೨; ಪುಟಗಳು iv+೧೧೬; ಬೆಲೆ, ರೂ. ೧-೪-೦.

ನಕ್ಷತ್ರ ದರ್ಶನ (ಸಚಿತ್ರ)—ಲೇಖಕರು: ಆರ್. ಎಲ್. ನರಸಿಂಹಯ್ಯ; ಪ್ರಕಾಶಕರು: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು; ಪುಟಗಳು xi+೧೮೪.

ಮನೆ-ಜಗತ್ತು—ಮೂಲಲೇಖಕರು: ರವೀಂದ್ರನಾಥ ಠಾಕೂರ್; ಅನುವಾದಕರು: ಶ್ರೀಮತಿ ಎಚ್. ವಿ. ಸಾವಿತ್ರಮ್ಮ; ಪ್ರಕಾಶಕರು: ಕಾವ್ಯಾಲಯ, ಮೈಸೂರು; ಪುಟಗಳು ೨೫೦; ಬೆಲೆ, ಸಾದಾಪ್ರತಿ ರೂ. ೧-೮-೦; ಬಿಳಿಯ ಕಾಗದದ ಪ್ರತಿ ರೂ. ೨-೮-೦.

ಸಾಹಿತ್ಯೋಪಾಸನೆ—ಲೇಖಕರು: ಶ್ರೀ ರಂ. ಶ್ರೀ. ಮುಗಳಿ; ಪ್ರಕಾಶಕರು; ಶಾರದಾ ಮಂದಿರ, ೫೭೮, ಕೃಷ್ಣರಾಜವನಂ, ಮೈಸೂರು; ಪುಟಗಳು ಕ್ರೌನ್ ಅ. ಪ. ೧೫೨; ಬೆಲೆ, ಸಾಧಾರಣಪ್ರತಿ ರೂ. ೨-೦-೦; ಕ್ಯಾಲಿಕೊಪ್ರತಿ ರೂ. ೩-೮-೦.

ಮುದ್ದಣ ಕವಿ ವಿರಚಿತ ಶ್ರೀರಾಮ ಪಟ್ಟಾಭಿಷೇಕಂ—ಸಂಪಾದಕರು: ಶ್ರೀ ಎಸ್. ವಿ. ಪರಮೇಶ್ವರಭಟ್ಟ; ಪ್ರಕಾಶಕರು: ಉಷಾ ಸಾಹಿತ್ಯಮಾಲೆ, ಮೈಸೂರು; ಪುಟಗಳು ಕ್ರೌ. ಅ. ಪುಟಗಳು ೮೪; ಬೆಲೆ, ರೂ. ೧-೦-೦.

ಎಂದೆಂದೂ ಮುಗಿಯದ ಕಥೆ—ಲೇಖಕರು : ಶ್ರೀ ಯು. ಆರ್. ಅನಂತಮೂರ್ತಿ ; ಪ್ರಕಾಶಕರು : ಸುರುಚಿ ಪ್ರಕಾಶನ, ಮೈಸೂರು ; ಪುಟಗಳು ಕ್ರಾ. ಅ. ಪ. xx+೮೦ ; ಬೆಲೆ, ರೂ. ೧-೦-೦.

ಸ್ವಪ್ನನೌಕೆ—ಕವಿ : ಶ್ರೀ ಕುಸುಮಾಕರ, ದೇವರಗೆಣ್ಣೂರು ; ಪ್ರಕಾಶಕರು : ಶ್ರೀ ಕೆ. ಜಿ. ಪುರೋಹಿತ, ಪುರೋಹಿತ ಪಬ್ಲಿಷಿಂಗ್ ಹೌಸ್, ೧೨/೮, ನೀಲಾನಗರ, ಸೊಲ್ಲಾಪುರ ; ಪುಟಗಳು ಕ್ರಾನ್ ಅ. ಪ. ೭೨ ; ಬೆಲೆ, ರೂ. ೦-೧೨-೦.

ಭಾವತೀರ್ಥ—ಕವಿ : ಶ್ರೀ ಡಿ. ಎಸ್. ಕರ್ಕಿ ; ಪ್ರಕಾಶಕರು : ಶ್ರೀ ಬ. ಗಂ ತುರಮರಿ ಬಿ.ಎ., ಬಿ.ಟಿ., ಉದಯ ಸಾಹಿತ್ಯ ಪ್ರಕಾಶನ, ಬೆಳಗಾವಿ ; ಪುಟಗಳು, ಕ್ರಾನ್ ಅ. ಪ. ೬೪ ; ಬೆಲೆ ?

ವಂಶವೃಕ್ಷ—ವಿವಿಧ ಕವಿಗಳ ಕವಿತಾಸಂಕಲನ ; ಪ್ರಕಾಶಕರು : ಶ್ರೀ ಎಸ್. ಆರ್. ಮಳಗಿ ಎಂ.ಎ., ಬಿ.ಟಿ., ಕಮಲಮಂಡಲ, ಕರ್ನಾಟಕ ಕಾಲೇಜು, ಧಾರವಾಡ ; ಪುಟಗಳು, ಕ್ರಾನ್ ಅ. ಪ. ೧೦೬ ; ಬೆಲೆ, ರೂ. ೧-೪-೦.

ಸೆರೆಯ ಮನೆಯಲ್ಲಿ ಮತ್ತು ಪ್ರೇಮಪ್ರಕರಣ—ಲೇಖಕರು : ಶ್ರೀ ಕ. ಶಂಕರ ; ಪ್ರಕಾಶಕರು : ಕಾವ್ಯಾಲಯ, ಮೈಸೂರು ; ಪುಟಗಳು, ಫೂಲ್ಸ್‌ಕ್ಯಾಪ್ ಆಕಾರದ ೩೦೪ ; ಬೆಲೆ, ರೂ. ೧-೮-೦.

ಕನ್ನಡ ಕಾವ್ಯಾಲಂಕಾರ (ಪೀಠಿಕೆ ಮತ್ತು ದಂಡಿಯ ಕಾವ್ಯಾದರ್ಶದೊಡನೆ)—ಲೇಖಕರು : ಡಾ|| ಕೆ. ಕೃಷ್ಣಮೂರ್ತಿ, ಎಂ.ಎ., ಬಿ.ಟಿ., ಪಿಎಚ್.ಡಿ.; ಪ್ರಕಾಶಕರು : ಶಾರದಾ ಮಂದಿರ, ೫೭೮ ಕೃಷ್ಣರಾಜವನಂ, ಮೈಸೂರು ; ಪುಟಗಳು, ೧೭೬+೫೨ ; ಬೆಲೆ, ಸಾಧಾರಣ ಪ್ರತಿ ರೂ. ೬-೦-೦, ಕ್ಯಾಲಿಕೊ ರೂ. ೮-೦-೦.

ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕಮಾಲೆ

೧. ಖಗೋಳಶಾಸ್ತ್ರಪ್ರವೇಶ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.
೨. ಸಮಾಜದ ರೋಗರುಜಿನಗಳು—ಜಿ. ಹನುಮಂತರಾವ್, ಎಂ.ಎ.
೩. ತೆರಿಗೆ—ಬಿ. ಆರ್. ಸುಬ್ಬರಾವ್, ಎಂ.ಎ.
೪.*ನವರತ್ನಗಳು—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೫. ನಮ್ಮ ಹಳ್ಳಿಗಳು—ಜಿ. ಎನ್. ಕೃಷ್ಣಮೂರ್ತಿ, ಎಂ.ಎ.
೬. ಕುಮಾರವ್ಯಾಸ—ಎಸ್. ವಿ. ರಂಗಣ್ಣ, ಎಂ.ಎ.
೭. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್, ಎಂ.ಎ.
೮. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ, ಎಂ.ಎ.
೯. ವಿದ್ಯುಚ್ಛಕ್ತಿಯ ವೈಭವ—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.
೧೦. ಪಂಪ—ಟಿ. ಎನ್. ಶ್ರೀಕಂಠಯ್ಯ, ಎಂ.ಎ.
೧೧. ಪ್ರಾಣಿಜೀವನ—ಎ. ನಾರಾಯಣರಾವ್, ಎಂ.ಎಸ್‌ಸಿ.
೧೨. ಕನಸುಗಳು—ಡಾ|| ಎನ್. ಎಸ್. ನಾರಾಯಣಶಾಸ್ತ್ರೀ, ಎಂ.ಎ., ಡಿ.ಲಿಟ್.
೧೩. ಮದುವೆ—ಎನ್. ಕಸ್ತೂರಿ, ಎಂ.ಎ., ಬಿ.ಎಲ್.
೧೪. ನಮ್ಮ ಆರ್ಥಿಕದೃಷ್ಟಿ—ಎಸ್. ಗೋಪಾಲಸ್ವಾಮಿ, ಎಂ.ಎ.
೧೫. ವಾಯುಗುಣ—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೧೬. ಬೆಳಕು—ಟಿ. ಎಸ್. ಸುಬ್ಬರಾಯ, ಎಂ.ಎಸ್‌ಸಿ.
೧೭. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ, ಎಂ.ಎ.
೧೮. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್, ಎಂ.ಎ.
೧೯. ಇಂಗ್ಲೆಂಡಿನ ರಾಜಕೀಯ ಬೆಳವಣಿಗೆ—ಪಿ. ಜಿ. ಸತ್ಯಗಿರಿನಾಥನ್, ಎಂ.ಎ.
೨೦. ಕಣ್ಣು ಮತ್ತು ಅದರ ರಕ್ಷಣೆ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೨೧.*ಸಾರ್ವಜನಿಕ ವೆಚ್ಚ—ಡಾ|| ಎಂ. ಎಚ್. ಗೋಪಾಲ್, ಎಂ.ಎ., ಪಿಎಚ್.ಡಿ.
೨೨. ಶಿಶುವಿಹಾರಗಳು—ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್.
೨೩. ಸಂಖ್ಯೋದ್ಯಾನ—ಬಿ. ಸೀತಾರಾಮಶಾಸ್ತ್ರೀ, ಎಂ.ಎ.
೨೪. ವಿಡಂಬನ—ಎಸ್. ವಿ. ರಂಗಣ್ಣ, ಎಂ.ಎ.
೨೫.*ಎಲ್ಲೋರ ಮತ್ತು ಅಜಂತಾ—ಡಾ|| ಎಂ. ಎಚ್. ಕೃಷ್ಣ, ಎಂ.ಎ., ಡಿ.ಲಿಟ್.
೨೬. ಸಾರಜನಕದ ಮಹತ್ವ—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೨೭. ಭಾಸ—ಡಾ|| ಎಚ್. ಎಲ್. ಹರಿಯಪ್ಪ, ಎಂ.ಎ., ಪಿಎಚ್.ಡಿ.
೨೮. ಪಾಶ್ಚಾತ್ಯ ರಾಜಕೀಯ ತತ್ವಗಳು—ಎಂ. ಯಾಮುನಾಚಾರ್ಯ, ಎಂ.ಎ.
೨೯. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೩೦. ರಕ್ತ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೩೧. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜುನಾಥ್, ಎಂ.ಎ.
೩೨. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ, ಎಂ.ಎ.
೩೩. ಗಣಿತಶಾಸ್ತ್ರದ ಸ್ವರೂಪ—ಡಾ|| ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.
೩೪. *ಋಗ್ವೇದ—ಎಂ. ಎ. ಕೃಷ್ಣಸ್ವಾಮಿ, ಎಂ.ಎ.
೩೫. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ, ಎಂ.ಎ.
೩೬. ಆಳ್ವಾರುಗಳು—ಎಂ. ಯಾಮುನಾಚಾರ್ಯ, ಎಂ.ಎ.
೩೭. ಹಿಂದು ಮುಸ್ಲಿಂ ಮೈತ್ರಿಯನ್ನು ಬೆಳಸಿದ ರಾಜರು— ವಿ. ರಾಘವೇಂದ್ರರಾವ್, ಎಂ.ಎ., ಬಿ.ಟಿ.
೩೮. ಸುಭಾಷಿತ ಸಂಗ್ರಹಗಳು—ಎಂ. ವಿ. ಲಕ್ಷ್ಮೀನರಸಿಂಹಶಾಸ್ತ್ರೀ, ಎಂ.ಎ.
೩೯. ಮಕ್ಕಳ ಭಾವಜೀವನ—ಡಾ|| ಬಿ. ಕುಪ್ಪುಸ್ವಾಮಿ ನಾಯಿಡು, ಎಂ.ಎ., ಡಿ.ಲಿಟ್.
೪೦. ಸಹಕಾರ—ಎಸ್. ಗೋಪಾಲಸ್ವಾಮಿ, ಎಂ.ಎ.
೪೧. *ನಯಸೇನ—ಜಿ. ವೆಂಕಟಸುಬ್ಬಯ್ಯ, ಎಂ.ಎ., ಬಿ.ಟಿ.
೪೨. ಕೌಟಿಲ್ಯ—ಡಾ|| ಎಂ. ವಿ. ಕೃಷ್ಣರಾವ್, ಎಂ.ಎ., ಬಿ.ಟಿ., ಡಿ.ಲಿಟ್.
೪೩. ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ, ಎಂ.ಎ.
೪೪. ಮುನಿಸಿಪಾಲಿಟಿಗಳು—ಎಚ್. ಕೃಷ್ಣರಾವ್, ಎಂ.ಎ.
೪೫. ಲಕ್ಷ್ಮೀಶ—ಎನ್. ಅನಂತರಂಗಾಚಾರ್, ಎಂ.ಎ., ಬಿ.ಟಿ.
೪೬. ರುಚಿ—ಎಸ್. ವಿ. ರಂಗಣ್ಣ, ಎಂ.ಎ.
೪೭. ಕೀಟಗಳು—ಡಿ. ಎಸ್. ವೀರಯ್ಯ, ಎಂ.ಎಸ್‌ಸಿ.
೪೮. ಅಲೆಗಳು—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೪೯. ಮುದ್ದಣ—ಟಿ. ಎಸ್. ಶಾಮರಾವ್, ಎಂ.ಎ.
೫೦. ಐವರು ಭೌತವೈಜ್ಞಾನಿಕರು—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.
೫೧. *ಕೃತಕ ರೇಷ್ಮೆ—ಎಂ. ಷಡಕ್ಷರಸ್ವಾಮಿ, ಎಂ.ಎಸ್‌ಸಿ.
೫೨. *ಚೀನರ ಇತಿಹಾಸ ಮತ್ತು ನಾಗರಿಕತೆ—ಎಸ್. ವೆಂಕಟದೇಶಿಕಾಚಾರ್, ಎಂ.ಎ.
೫೩. *ಯುದ್ಧಕಾಲದ ಆರ್ಥಿಕ ಸಮಸ್ಯೆಗಳು—ಎಸ್. ಲಕ್ಷ್ಮೀನರಸಿಂಹನ್, ಎಂ.ಎ.
೫೪. *ಆಹಾರ—ಜೆ. ಆರ್. ಲಕ್ಷ್ಮಣರಾವ್, ಎಂ.ಎಸ್‌ಸಿ.
೫೫. *ಇಬ್ಸನ್ನನ ಕೆಲವು ನಾಟಕಗಳು—ಎಸ್. ಮಂಜುನಾಥ್, ಎಂ.ಎ.
೫೬. ಶಬ್ದಪ್ರಪಂಚ—ಆರ್. ಎಲ್. ನರಸಿಂಹಯ್ಯ, ಎಂ.ಎಸ್‌ಸಿ.

೫೭. ಪ್ರಜಾಭಿಪ್ರಾಯ—ಟಿ. ಎಸ್. ರಾಜಗೋಪಾಲ ಅಯ್ಯಂಗಾರ್, ಎಂ.ಎ., ಎಲ್.ಎಲ್.ಬಿ.

೫೮. ಕಲ್ಲಿದ್ದಲು—ಕೆ. ಎಸ್. ಲಕ್ಷ್ಮಣರಾವ್, ಎಂ.ಎಸ್‌ಸಿ.

೫೯. ಜನಪದಮುಕ್ತಕಗಳು—ಎಚ್. ಎಂ. ಶಂಕರನಾರಾಯಣರಾವ್, ಎಂ.ಎ.

ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸದ ಪುಸ್ತಕಗಳನ್ನು ಕೊಳ್ಳುವವರಿಗೆ ಈ ಕೆಳಗೆ ಕಂಡಂತೆ ಕಮೀಷನ್ ಕೊಡಲಾಗುವುದು. ಅಂಚೆ ಮತ್ತು ಪುಸ್ತಕವನ್ನು ಕಳುಹಿಸುವ ಖರ್ಚು ಪ್ರತ್ಯೇಕ.

ಶೇಕಡ ೧೬ ೨/೩ ರಂತೆ ೨೦ ಪುಸ್ತಕಗಳನ್ನು ಕೊಳ್ಳುವವರಿಗೆ
ಶೇಕಡ ೨೦ ರಂತೆ ೨೦೦ ಪುಸ್ತಕಗಳನ್ನು ಕೊಳ್ಳುವವರಿಗೆ
ಶೇಕಡ ೨೫ ರಂತೆ ೫೦೦ ಪುಸ್ತಕಗಳನ್ನು ಕೊಳ್ಳುವವರಿಗೆ
ಶೇಕಡ ೩೩ ೧/೩ ರಂತೆ ೨೦೦೦ ಪುಸ್ತಕಗಳನ್ನು ಒಂದು ವರ್ಷದಲ್ಲಿ ಕೊಳ್ಳುವವರಿಗೆ

ಸಾಧಾರಣ ಪ್ರತಿ ೩ ಆಣೆ. ಉತ್ತಮ ಪ್ರತಿ ೪ ಆಣೆ.

ಕಾರ್ಯದರ್ಶಿ, ಪ್ರಚಾರ ಮತ್ತು ಪ್ರಕಾಶನಕಾರ್ಯ,
ಯೂನಿವರ್ಸಿಟಿ ಆಫೀಸ್ ಕಟ್ಟಡ, ಮೈಸೂರು.

* ಈ ಪುಸ್ತಕಗಳು ನಮ್ಮಲ್ಲಿ ಸಿಗುವುದಿಲ್ಲ.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆ

ಪ್ರಧಾನಸಂಪಾದಕರು : { ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್., ೧೯೪೨ ರವರೆಗೆ
ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ., ೧೯೪೨ರಿಂದ ೧೯೪೭ರ ವರೆಗೆ
ಕೆ. ವಿ. ಪುಟ್ಟಪ್ಪ, ಎಂ.ಎ., ೧೯೪೭ ರಿಂದ

೧. **ಹರಿಶ್ಚಂದ್ರಕಾವ್ಯ ಸಂಗ್ರಹ** (ಐದನೆಯ ಮುದ್ರಣ)—ಸಂಪಾದಕರು : ಟಿ. ಎಸ್. ವೆಂಕಣ್ಣಯ್ಯ, ಎಂ.ಎ. ಮತ್ತು ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೨. **ಕರ್ಣಾಟಕ ಕಾದಂಬರೀ ಸಂಗ್ರಹ**—(ಮೂರನೆಯ ಮುದ್ರಣ) ಸಂಪಾದಕರು : ಟಿ. ಎಸ್. ವೆಂಕಣ್ಣಯ್ಯ, ಎಂ.ಎ.

೩. ***ಪ್ರಭುಲಿಂಗಲೀಲೆಯ ಸಂಗ್ರಹ** (ಸಚಿತ್ರ)—ಸಂಪಾದಕರು : ಎಂ. ಎಸ್. ಬಸವಲಿಂಗಯ್ಯ, ಎಂ.ಎ., ಬಿ.ಎಲ್. ಮತ್ತು ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ.

೪. ***ಸಾಕ್ರೆಟೀಸನ ಕೊನೆಯ ದಿನಗಳು** (ಸಚಿತ್ರ)—ಅನುವಾದಕರು : ಎ. ಎನ್. ಮೂರ್ತಿರಾವ್, ಎಂ.ಎ.

೫. ***ಶ್ರೀರಾಮಕೃಷ್ಣ ಪರಮಹಂಸ**—ಲೇಖಕರು : ಕೆ. ವಿ. ಪುಟ್ಟಪ್ಪ, ಎಂ.ಎ.

೬. ***ರವೀಂದ್ರನಾಥ ಠಾಕೂರರು** (ಸಚಿತ್ರ)—ಲೇಖಕರು : ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಂ.ಎ.

೭. **ಆರೋಗ್ಯ, ಅದರ ಜ್ಞಾನ ಮತ್ತು ಸಾಧನ** (ಸಚಿತ್ರ)—ಲೇಖಕರು : ಜೆ. ಎ. ಈಶ್ವರ ಮೂರ್ತಿ, ಬಿ.ಎ., ಎಲ್.ಎಂ.ಎಸ್., ಬಿ.ಎಸ್‌ಸಿ.

೮. **ಪಂಪರಾಮಾಯಣ ಸಂಗ್ರಹ**—ಸಂಪಾದಕರು : ಆಸ್ಥಾನ ಮಹಾವಿದ್ವಾನ್ ತಿರುವಳ್ಳೂರ್ ಶ್ರೀನಿವಾಸರಾಘವಾಚಾರ್ ಮತ್ತು ಡಿ. ಎಲ್. ನರಸಿಂಹಾಚಾರ್, ಎಂ.ಎ.

೯. **ಹಣಪ್ರಪಂಚ**—ಲೇಖಕರು : ವಿ. ಸೀತಾರಾಮಯ್ಯ, ಎಂ.ಎ.

೧೦. **ಸಂಸ್ಕೃತ ನಾಟಕ**—ಲೇಖಕರು : ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೧೧. **ಜೀವವಿಜ್ಞಾನ**—ಲೇಖಕರು : ಬಿ. ವೆಂಕಟನಾರಾಯಣಪ್ಪ, ಎಂ.ಎ.

೧೨. **ಹಿಂದೂದರ್ಶನಸಾರ**—ಲೇಖಕರು : ಮಹಾಮಹೋಪಾಧ್ಯಾಯ ಪಂಡಿತರತ್ನಂ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯ.

೧೩. **ರಾಜನೀತಿ**—ಲೇಖಕರು : ಎಚ್. ಕೃಷ್ಣರಾವ್, ಎಂ.ಎ.

೧೪. **ಹದಿಬದೆಯ ಧರ್ಮ**—ಸಂಪಾದಕಿಯರು: ಡಿ. ಚಂಪಾಬಾಯಿ, ಎಂ.ಎ.

೧೫. ***ಪುರಾಣನಾಮಚೂಡಾಮಣಿ**—ಲೇಖಕರು : ಬೆನಗಲ್ ರಾಮರಾವ್, ಎಂ.ಎ., ಎಲ್‌ಎಲ್.ಬಿ. ಮತ್ತು ಪಾನ್ಯಂ ಸುಂದರಶಾಸ್ತ್ರಿ.

೧೬. ಯಶೋಧರ ಚರಿತೆಯ ಸಂಗ್ರಹ—ಸಂಪಾದಕರು: ಕೆ. ವಿ. ರಾಘವಾಚಾರ್, ಎಂ.ಎ., ಬಿ.ಟಿ.

೧೭.*ಗ್ರೀಕರ ತತ್ವಶಾಸ್ತ್ರಸಾರಸಂಗ್ರಹ—ಲೇಖಕರು: ಕೆ. ಆರ್. ಶ್ರೀನಿವಾಸ ಅಯ್ಯಂಗಾರ್, ಎಂ.ಎ.

೧೮. ಹಿಂದೂ ದೇಶದ ಭೂಚರಿತ್ರೆ—ಲೇಖಕರು: ವೈ. ನಾಗಪ್ಪ, ಎಂ.ಎಸ್‌ಸಿ.

೧೯. ವಚನಧರ್ಮಸಾರ—ಲೇಖಕರು: ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ.

೨೦. ಪ್ರಾಣಿಶಾಸ್ತ್ರ—ಡಾ|| ಎ. ಸುಬ್ಬರಾವ್, ಬಿ.ಎ., ಡಿ.ಎಸ್‌ಸಿ., ಮತ್ತು ಎ. ನಾರಾಯಣರಾವ್, ಎಂ.ಎಸ್‌ಸಿ.; ಬೆಲೆ, ಸಾದಾ ರೂ. ೧-೪-೦; ಕ್ಯಾಲಿಕೊ ರೂ. ೧-೮-೦.

೨೧.*ಆಧುನಿಕ ತತ್ವಶಾಸ್ತ್ರಸಮಸ್ಯೆಗಳು—ಜಿ. ಹನುಮಂತರಾವ್, ಎಂ.ಎ.: ಬೆಲೆ, ಸಾದಾ ರೂ. ೧-೦-೦.

೨೨. ಕನ್ನಡ ಕೈಪಿಡಿ (ಭಾಗ ೫, ಸಾಹಿತ್ಯಚರಿತ್ರೆ)—ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.; ಬೆಲೆ, ಸಾದಾ ರೂ. ೧-೪-೦; ಕ್ಯಾಲಿಕೊ ರೂ. ೨-೪-೦.

೨೩. ಇಸ್ಲಾಂ ಸಂಸ್ಕೃತಿ—ಮೂಲಲೇಖಕರು: ಪ್ರೊ|| ಮಹಮದ್ ಅಬ್ಬಾಸ್ ಷೂಸ್ತ್ರಿ; ಅನುವಾದಕರು: ರಾಜಸೇವಾಸಕ್ತ ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.; ಬೆಲೆ, ರೂ. ೨-೦-೦.

೨೪. ತಮಿಳು ಪಾಠಗಳು—ಲೇಖಕರು: ಎಸ್. ರುದ್ರಪತಿ, ಎಂ.ಎ.; ಬೆಲೆ, ಸಾದಾ ರೂ. ೩-೪-೦.

೨೫. ಅಶೋಕ—ಲೇಖಕರು: ಎನ್. ಕಸ್ತೂರಿ, ಎಂ.ಎ., ಬಿ.ಎಲ್.; ಬೆಲೆ, ಸಾದಾ ರೂ. ೧-೨-೦.

೨೬. ಭಾರತೀಯ ಕಾವ್ಯಮೀಮಾಂಸೆ—ಲೇಖಕರು: ಪ್ರೊ|| ತೀ. ನಂ. ಶ್ರೀಕಂಠಯ್ಯ, ಎಂ.ಎ.; ಬೆಲೆ, ಸಾದಾ ರೂ. ೩-೮-೦; ಉತ್ತಮ ರೂ. ೪-೦-೦.

೨೭. ಭಾರತೀಯ ಸಂಸ್ಕೃತಿ—ಲೇಖಕರು: ಡಾ|| ಎಸ್. ಶ್ರೀಕಂಠಶಾಸ್ತ್ರೀ, ಎಂ.ಎ., ಡಿ.ಲಿಟ್.; ಬೆಲೆ, ಸಾದಾ ರೂ. ೩-೦-೦; ಉತ್ತಮ ರೂ. ೪-೦-೦.

೨೮. ಸಾರ್ವಜನಿಕ ಹಣಕಾಸು—ಲೇಖಕರು: ಶ್ರೀ ವಿ. ಎಲ್. ಡಿ'ಸೋಜ, ಬಿ.ಎ., ಬಿ.ಕಾಂ. (ಲಂಡನ್) ಮತ್ತು ಶ್ರೀ ಬಿ. ಆರ್. ಸುಬ್ಬರಾವ್, ಎಂ.ಎ., ಡಿಪ್-ಇನ್-ಕಾಂ; ಬೆಲೆ, ಸಾದಾ ರೂ. ೨-೮-೦; ಉತ್ತಮ ರೂ. ೩-೮-೦.

೨೯. ಆದಿಪುರಾಣ ಸಂಗ್ರಹ—ಸಂಪಾದಕರು: ಶ್ರೀ ಎಲ್. ಗುಂಡಪ್ಪ ಎಂ.ಎ.; ಬೆಲೆ, ಸಾದಾ ರೂ. ೨-೪-೦; ಕ್ಯಾಲಿಕೋ ರೂ. ೨-೧೨-೦.

೩೦. ಪಂಪ ಭಾರತ—(೯-೧೪ ಆಶ್ವಾಸಗಳು) ಬೆಲೆ. ಸಾದಾ ೧-೧೨-೦ ; ಉತ್ತಮ ೨-೪-೦.

೩೧. ಕಾಳಿದಾಸ—ಲೇಖಕರು : ಶ್ರೀ ಎಂ. ಲಕ್ಷ್ಮೀನರಸಿಂಹಯ್ಯ, ಎಂ.ಎ. ; ಬೆಲೆ, ಸಾದಾ ರೂ. ೨-೦-೦ ; ಉತ್ತಮ ರೂ. ೨-೮-೦.

ಬರಲಿವೆ

೩೨. ಭರತೇಶ ವೈಭವ ಸಂಗ್ರಹ—ಸಂಪಾದಕರು: ಶ್ರೀ ತ. ಸು. ಶಾಮರಾವ್, ಎಂ.ಎ.

೩೩. ಶ್ರೀ ಕೃಷ್ಣ ಚರಿತೆ—ಸಂಪಾದಕರು : ಶ್ರೀ ಕೆ. ವೆಂಕಟರಾಮಪ್ಪ, ಎಂ.ಎ.

ಈ ಗ್ರಂಥಮಾಲೆಯ ಪುಸ್ತಕಗಳನ್ನು ತರಿಸಿಕೊಳ್ಳಲಿಚ್ಛಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆಯಬೇಕು.

ಕಾರ್ಯದರ್ಶಿ,
ವಿಶ್ವವಿದ್ಯಾನಿಲಯದ ಪ್ರಕಟನ ಮತ್ತು
ಪ್ರಚಾರೋಪನ್ಯಾಸ ಶಾಖೆ, ಮೈಸೂರು

ಸರ್ ಕೆ. ಪಿ. ಪುಟ್ಟಣ್ಣಚೆಟ್ಟರ ಪುದುವಟ್ಟಿನ ಪ್ರಕಟನಮಾಲೆ

೧. *ಟಪಾಲ್ ಸಂಸ್ಥೆಯ ವಿವರ—ಕೆ. ಲಕ್ಷ್ಮೀನರಸಿಂಹಯ್ಯ, ಬಿ.ಎ., ಎಲ್ ಎಲ್. ಬಿ.
೨. *ವಿಶ್ವವಿಸರಣ—ಜಿ. ಎಸ್. ಪರಮಶಿವಯ್ಯ, ಎಂ.ಎಸ್‌ಸಿ.
೩. *ಸರ್ಕಾರದ ಪದ್ಧತಿ ಮತ್ತು ರಚನಾಕ್ರಮ—ಎಚ್. ಕೃಷ್ಣರಾವ್, ಎಂ.ಎ.
೪. *ವ್ಯವಸಾಯದ ಮಣ್ಣುಗಳು—ಕೂರಪಾಡು ಗುಂಡಪ್ಪ, ಬಿ.ಎ.
೫. *ಆಕಾಶಯಾನ—ಬಿ. ಕೆ. ಎಽ. ರಾವ್.
೬. *ವಿಶ್ವವಿದ್ಯಾನಿಲಯಗಳು—ಡಾ|| ಎಂ. ಸಿದ್ದಲಿಂಗಯ್ಯ, ಎಂ.ಎ., ಬಿ.ಟಿ., ಪಿಎಚ್.ಡಿ., ಡಿಪ್.ಎಡ್. ಮತ್ತು ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್.
೭. *ಹೆರಿಗೆ ಮತ್ತು ಶಿಶುಪೋಷಣೆ—ಡಾ|| ರತ್ನಮ್ಮ ಐಸಾಕ್, ಎಲ್.ಎಂ.ಎಸ್., ಎಂ.ಆರ್.ಸಿ.ಎಸ್., ಎಲ್.ಆರ್.ಸಿ.ಪಿ.
೮. *ಮಲೇರಿಯಾ ನಿರೋಧ—ಬಿ. ಅನಂತಸ್ವಾಮಿರಾವ್, ಬಿ.ಎಸ್‌ಸಿ., ಎಂ.ಬಿ., ಬಿ.ಎಸ್., ಎಂ.ಪಿ.ಎಚ್.
೯. *ಗ್ರಾಮ ನೈರ್ಮಲ್ಯ—ಎಸ್. ಡಿ. ನಾರಾಯಣಗೌಡ, ಎಂ.ಬಿ., ಬಿ.ಎಸ್., ಡಿ.ಪಿ., ಎಚ್.
೧೦. ಪಶುಪಾಲನೆ—ಎಂ. ಕೃಷ್ಣಶಾಸ್ತ್ರೀ ಬಿ.ಎ., ಐ.ಡಿ.ಡಿ., ಅಸೋಸಿಯೇಟ್ ಐ.ಡಿ.ಆರ್.ಐ.
೧೧. *ಯೋಗಾಸನಗಳು—ವಿದ್ವಾನ್ ಟಿ. ಕೃಷ್ಣಮಾಚಾರ್ಯ.
೧೨. ಮೈಸೂರು ದೇಶದ ರಸಾಯನಿಕ ಕೈಗಾರಿಕೆಗಳು—ಕೆ. ಅಶ್ವತ್ಥನಾರಾಯಣ ರಾವ್, ಡಿ.ಎಸ್‌ಸಿ.
೧೩. ವಿದ್ಯುಚ್ಛಕ್ತಿಯ ಉಪಯೋಗ—ಎಂ. ಬಿ. ತಿರುನಾರಾಯಣ, ಬಿ.ಎ., ಬಿ.ಎಸ್‌ಸಿ. (ಆನರ್ಸ್, ಇ.ಇ.) ಸಿ.ಪಿ., ಇ.ಟಿ. (ಐ.ಐ.ಎಸ್.)
೧೪. ಮಕ್ಕಳ ಬೆಳವಣಿಗೆ—ಡಾ|| ಬಿ. ಕುಪ್ಪುಸ್ವಾಮಿನಾಯಿಡು, ಎಂ.ಎ., ಡಿ.ಲಿಟ್.
೧೫. ರೇಡಾರ್—ಆರ್. ಎಲ್. ನರಸಿಂಹಯ್ಯ, ಎಂ.ಎಸ್‌ಸಿ. ಸಾಧಾರಣ ಪ್ರತಿ ೬ ಆಣೆ, ಉತ್ತಮ ಪ್ರತಿ ೮ ಆಣೆ.
೧೬. ಗಣಿಕೆಲಸದ ಕೈಪಿಡಿ—ಜೆ. ಪಿ. ಡೇವಿಡ್, ಬಿ.ಎಸ್‌ಸಿ. ಸಾಧಾರಣ ಪ್ರತಿ ೬ ಆಣೆ, ಉತ್ತಮ ಪ್ರತಿ ೮ ಆಣೆ.

ಸಾಧಾರಣ ಪ್ರತಿ ೨ ಆಣೆ; ಉತ್ತಮ ಪ್ರತಿ ೩ ಆಣೆ.

ಕಾರ್ಯದರ್ಶಿ,
ಪ್ರಕಟನಶಾಖೆ ಮತ್ತು ವಿಶೇಷೋಪನ್ಯಾಸಗಳು,
ಯೂನಿವರ್ಸಿಟಿ ಆಫೀಸ್, ಮೈಸೂರು.

ಪ್ರಬುದ್ಧ ಕರ್ಣಾಟಕ

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪತ್ರಿಕೆ

'ಪ್ರಬುದ್ಧ ಕರ್ಣಾಟಕ'ವು ಚೈತ್ರ, ಆಷಾಢ, ಆಶ್ವಯುಜ, ಪುಷ್ಯಮಾಸಗಳಲ್ಲಿ ಆಯಾ ತಿಂಗಳ ಹುಣ್ಣಿಮೆಯ ಹೊತ್ತಿಗೆ ವರ್ಷಕ್ಕೆ ನಾಲ್ಕು ಸಲ ಹೊರಡುತ್ತದೆ.

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ):

ಸಾಮಾನ್ಯ ಚಂದಾದಾರರಿಗೆ	ರೂ.	೩	೮	೦
ವಾಚನಾಲಯ ಮುಂತಾದ ಸಂಸ್ಥೆಗಳಿಗೆ	ರೂ.	೪	೮	೦
ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಮಾತ್ರ	ರೂ.	೨	೮	೦

ಸಂಚಿಕೆಗಳನ್ನು ರಿಜಿಸ್ಟರ್ ಮೂಲಕ ತರಿಸಿಕೊಳ್ಳಬೇಕೆನ್ನುವವರು ಚಂದಾ ಹಣದ ಜೊತೆಗೆ ರೂ. ೧-೨-೦ ಕಳುಹಿಸಬೇಕು.

ಚಂದಾಹಣವನ್ನೂ ಅದರ ವಿಚಾರವಾಗಿ ಪತ್ರಗಳನ್ನೂ ಕಾರ್ಯದರ್ಶಿ, ಪ್ರಚಾರ ಮತ್ತು ಪ್ರಕಾಶನ ಕಾರ್ಯ, ಯೂನಿವರ್ಸಿಟಿ ಆಫೀಸು, ಮೈಸೂರು, ಎಂಬ ವಿಳಾಸಕ್ಕೆ ಕಳುಹಿಸಬೇಕು. ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರವರಿಗಾಗಲಿ, ಪ್ರಬುದ್ಧ ಕರ್ಣಾಟಕದ ಸಂಪಾದಕರಿಗಾಗಲಿ ಕಳುಹಿಸಬಾರದು. ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಚಂದಾಹಣವನ್ನು ತಮ್ಮ ತಮ್ಮ ಕಾಲೇಜಿನ ಅಕೌಂಟ್ಸ್ ಅಧಿಕಾರಿಗಳಿಗೆ ಮುಂಗಡವಾಗಿ ಸಲ್ಲಿಸಿ, ಪಡೆದ ರಸೀತಿಯನ್ನು ತಮ್ಮ ವಿಳಾಸದೊಂದಿಗೆ ಕಳುಹಿಸಿಕೊಡಬೇಕು. ಕಾಲೇಜುಗಳ ಅಧ್ಯಾಪಕ ವರ್ಗದವರೂ ಇದೇ ರೀತಿ ಮಾಡಬಹುದು. ವಿದ್ಯಾರ್ಥಿಗಳು ತಾವು ವಿದ್ಯಾರ್ಥಿಗಳೆಂಬ ಬಗ್ಗೆ ತಮ್ಮ ಪಾಠಶಾಲೆಯ ಮುಖ್ಯೋಪಾಧ್ಯಾಯರಿಂದ ಒಂದು ಪ್ರಮಾಣಪತ್ರವನ್ನು ಪಡೆದು ಅದನ್ನು ಚಂದಾ ಹಣದೊಡನೆ ಕಳುಹಿಸಬೇಕು. ಚಂದಾದಾರರು ತಮ್ಮ ಚಂದಾ ಹಣವನ್ನು (ಸರ್ಕಾರಿ ಖಜಾನೆಯಲ್ಲಿ 'ಯೂನಿವರ್ಸಿಟಿ ಫಂಡ್'ಗೆ ಕಟ್ಟಿ ಖಜಾನೆ ರಸೀತಿಯನ್ನು ತಮ್ಮ ವಿಳಾಸದೊಡನೆ ಪ್ರಬುದ್ಧ ಕರ್ಣಾಟಕದ ಆಫೀಸಿಗೆ ಕಳುಹಿಸಬಹುದು.)

ಪ್ರಬುದ್ಧ ಕರ್ಣಾಟಕದ ೨೭, ೨೮, ೨೯, ೩೧, ೩೨, ೩೩, ೩೪, ೩೫, ೩೬ ನೆಯ ಸಂಪುಟಗಳು ನಮ್ಮಲ್ಲಿ ಸಿಕ್ಕುತ್ತವೆ. ಇವುಗಳ ಪೈಕಿ ೨೭, ೨೮, ೨೯, ೩೧, ೩೨ ನೆಯ ಸಂಪುಟಗಳನ್ನು ಸಂಪುಟ ಒಂದಕ್ಕೆ ಒಂದು ರೂಪಾಯಿಯಂತೆ ರಿಯಾಯಿತಿ ದರದಲ್ಲಿ ಪಡೆಯಬಹುದು. ೩೩, ೩೪, ೩೫, ೩೬ ನೆಯ ಸಂಪುಟಗಳನ್ನು ತುಂಬು ಬೆಲೆಗೆ ಮಾರಲಾಗುವುದು. ಅಂಚೆಯ ಮೂಲಕ ತರಿಸಿಕೊಳ್ಳುವವರು ಸಂಪುಟ ಒಂದಕ್ಕೆ ಹದಿಮೂರು ಆಣೆ, ಸಾಮಾನ್ಯ ಸಂಚಿಕೆ ಒಂದಕ್ಕೆ ಏಳು ಆಣೆ, ಎರಡು ಸಂಚಿಕೆಗಳನ್ನು ಒಳಗೊಂಡ ಸಂಚಿಕೆಗೆ ಒಂಬತ್ತು ಆಣೆಯಂತೆ ಅಂಚೆ ವೆಚ್ಚವನ್ನು ಕಳುಹಿಸಬೇಕು.

'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟನೆಗೆ ಲೇಖನಗಳನ್ನೂ ವಿಮರ್ಶೆಗೆ ಗ್ರಂಥಗಳನ್ನೂ ವಿನಿಮಯಕ್ಕೆ ಪತ್ರಿಕೆಗಳನ್ನೂ ಪ್ರಬುದ್ಧ ಕರ್ಣಾಟಕದ ಸಂಪಾದಕ (ಮಹಾರಾಜರವರ ಕಾಲೇಜು, ಮೈಸೂರು) ರಿಗೆ ಕಳುಹಿಸಬೇಕು.

ಕಾರ್ಯದರ್ಶಿ,

ವಿಶ್ವವಿದ್ಯಾನಿಲಯದ ಪ್ರಕಟನ ಮತ್ತು ಪ್ರಚಾರೋಪನ್ಯಾಸ ಶಾಖೆ, ಮೈಸೂರು

ಪ್ರಬುದ್ಧ ಕರ್ಣಾಟಕಕ್ಕೆ ವಿನಿಮಯವಾಗಿ ಬರುವ ಪತ್ರಿಕೆಗಳು

ಇಂಗ್ಲಿಷ್ ಪತ್ರಿಕೆಗಳು

Annals of the Oriental Research Institute, University, Madras; *Bramhavidya*, Adyar, Madras; *Bulletin of the School of Oriental Studies*, London; *Journal of the Andhra Historical Research Society*, Rajahmundry; *Journal of the Karnataka Historical Research Society*, Dharwar; *Quarterly Journal of the Mythic Society*. Bangalore; *The Indian* P.E.N., Bombay; *Annals of the Venkateswara Oriental Institute*, Tirupati; *The Jaina Siddhanta Bhaskara* and *The Jaina Gazette*, Arrah; *Bulletin of the Deccan College Research Institute*, Poona; *Publication of the Kannada Research Office*, Dharwar; *The Journal of the Literary Committee of the L.E. Association*, Dharwar; *Annals of Bhandarkar Oriental Research Institute*, Poona.

ವಾರಪತ್ರಿಕೆಗಳು

'ಒಕ್ಕಲಿಗರ ಪತ್ರಿಕೆ', ಬೆಂಗಳೂರು; 'ಕಂಠೀರವ', ಮಂಗಳೂರು; 'ಚೇತನಾ', ಬೆಂಗಳೂರು; 'ಕರ್ಣಾಟಕ ವೈಭವ', ಬಿಜಾಪುರ; 'ಪ್ರಭಾತ', ಮಂಗಳೂರು.

ಮಾಸಪತ್ರಿಕೆಗಳು

ಆಂಧ್ರ ಸಾಹಿತ್ಯ ಪರಿಷತ್ಪತ್ರಿಕೆ' (ತೆಲುಗು), ಕಾಕಿನಾಡ; 'ಕತೆಗಾರ', ಬೆಂಗಳೂರು; 'ಕನ್ನಡ ಸಹಕಾರಿ', ಮಂಗಳೂರು; 'ಜಯಕರ್ನಾಟಕ' ಧಾರವಾಡ; 'ಜಯಂತಿ', ಧಾರವಾಡ; 'ಮೈಸೂರು ವ್ಯವಸಾಯ ಶೋಧಕ ಸಂಘದ ಪತ್ರಿಕೆ', ಬೆಂಗಳೂರು; 'ಮಕ್ಕಳ ಪುಸ್ತಕ', ಬೆಂಗಳೂರು; 'ಮೈಸೂರು ಸಹಕಾರ ಪತ್ರಿಕೆ', ಬೆಂಗಳೂರು; 'ವಿದ್ಯಾದಾಯಿನಿ', ಮೈಸೂರು; 'ವಿವೇಕಾಭ್ಯುದಯ', ಮೈಸೂರು; 'ಶರಣಸಾಹಿತ್ಯ', ಬೆಂಗಳೂರು; 'ಶಿವಾನುಭವ', ಬಿಜಾಪುರ; 'ಸದ್ಬೋಧಚಂದ್ರಿಕೆ, ಅಗಡಿ; 'ಸರಸ್ವತಿ', ಬೆಂಗಳೂರು; 'ಸುಬೋಧ', ಬೆಂಗಳೂರು; 'ಜೀವನ', ಬೆಂಗಳೂರು: 'ಕಥಾವಳಿ', ಬೆಂಗಳೂರು; 'ಪುಸ್ತಕ ಪ್ರಪಂಚ', ಮೈಸೂರು; 'ಕನ್ನಡ ನುಡಿ', ಬೆಂಗಳೂರು;

ತ್ರೈಮಾಸಿಕಪತ್ರಿಕೆಗಳು

'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ', ಬೆಂಗಳೂರು; 'ಭಾರತ ಇತಿಹಾಸ ಸಂಶೋಧನ ಮಂಡಲದ ಪತ್ರಿಕೆ' (ಮರಾಠಿ), ಪೂನಾ.

ಗ್ರಂಥಮಾಲೆ

'ಮನೋಹರ ಗ್ರಂಥಮಾಲೆ,' ಧಾರವಾಡ; 'ಮಿಂಚಿನಬಳ್ಳಿ', ಧಾರವಾಡ.

ಮೈಸೂರು ಮಹಾರಾಜರವರ ಕಾಲೇಜಿನ
ಕರ್ಣಾಟಕ ಸಂಘದ ಪ್ರಕಟನೆಗಳು

೧. ನಾಗಾನಂದನಾಟಕ (ಶ್ರೀ ಅನಂತನಾರಾಯಣ ಶಾಸ್ತ್ರಿಗಳವರಿಂದ)— ಬೆಲೆ, ರೂ. ೧-೦-೦; ಮಾರಾಟಗಾರರು: ಪ್ರೋಗ್ರೆಸ್ ಬುಕ್ ಸ್ಟಾಲ್, ಮೈಸೂರು.

೨. ಕರ್ಣಾಟಕ ಮೃಚ್ಛಕಟಿಕಪ್ರಕರಣಂ (ಆಸ್ಥಾನ ಕವಿ ನಂಜನಗೂಡು ಸುಬ್ಬಾಶಾಸ್ತ್ರಿಗಳವರಿಂದ) ರೂ. ೧-೧೨-೦; ಮಾರಾಟಗಾರರು: ಶ್ರೀ ರಾಮಚಂದ್ರ ಬುಕ್ ಡಿಪೊ, ಮೈಸೂರು.

ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಪ್ರಕಟಣೆಗಳು

೧. ಶ್ರೀ ಕೈಲಾಸಂ ಅವರ ಸ್ಮರಣೆ—ಶ್ರೀ ಕೆ. ವಿ. ಅಯ್ಯರ್; ರೂ. ೨-೪-೦.
೨. ಕರ್ಣಾಟಕ ಮಾಲವಿಕಾಗ್ನಿಮಿತ್ರ ನಾಟಕಂ—ಶ್ರೀ ಮೋಟಗಾನಹಳ್ಳಿ ಶಂ. ಸುಬ್ರಹ್ಮಣ್ಯಶಾಸ್ತ್ರೀ; ರೂ. ೧-೧೨-೦.
೩. ಮೊನ್ನ ವನ್ನ (ಮಾರಿಸ್ ಮ್ಯಾಟರ್‌ಲಿಂಕನ ಮೂರಂಕದ ನಾಟಕ)—ಶ್ರೀ ಎಸ್. ಜಿ. ಶಾಸ್ತ್ರಿ; ರೂ. ೨-೦-೦.
೪. ನಾಗನ ಪದಗಳು—ಶ್ರೀ ಜಿ. ಪಿ. ರಾಜರತ್ನಂ; ರೂ. ೧-೪-೦.
೫. ಶಕ್ತಿ (ಸಚಿತ್ರ)—ಶ್ರೀ ಆರ್. ಎಲ್. ನರಸಿಂಹಯ್ಯ; ರೂ. ೩-೦-೦.
೬. ಬಾಲಸರಸ್ವತಿ (ಕತೆ, ಪ್ರಬಂಧ, ಸಂವಾದ); ರೂ. ೨-೮-೦.
೭. ನಮ್ಮ ನಮ್ಮವರು (ಚಿತ್ರಗಳು, ಪ್ರಬಂಧಗಳು); ರೂ. ೨-೮-೦
೮. ಚಿನ್ನದ ದೋಸೆ—(ಜಾನಪದ ಕತೆಗಳು); ೧೨ ಆಣೆ.
೯. ಮಕ್ಕಳ ಮಾತು—(ಎಸ್ಸೆಗಳು); ರೂ. ೧-೦-೦.
೧೦. ಪಚ್ಚೆಯ ತೆನೆ—(ಎಸ್ಸೆಗಳು); ರೂ. ೧-೦-೦.
೧೧. ಗಂಧದ ಹುಡಿ—(ಎಸ್ಸೆಗಳು); ರೂ. ೧-೦-೦.
೧೨. ದುರಾಸೆಯ ದಂಡ—(ಐದು ಏಕಾಂಕ ನಾಟಕಗಳು); ರೂ. ೧-೪-೦.

(ಪ್ರಕಟನೆ ೬ ರಿಂದ ೧೨ ಕಾಲೇಜ್ ಬರವಣಿಗೆಯ ಉತ್ತಮ ಉದಾಹರಣೆಗಳು)

Edited by Sri S. V. Parameswara Bhatta, M.A. and Sri U. K. Subbarayachar, M.A.
Published by The University of Mysore, Mysore.
Printed by K. A. Korula at the Wesley Press and Publishing House, Mysore City

ಪ್ರಬುದ್ಧ ಕರ್ಣಾಟಕ

ಸಂಪುಟ ೩೭—ಸಂಚಿಕೆ ೨


೧೪೪

ಮನ್ಮಥ ಸಂವತ್ಸರ

ಆಷಾಢ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೫೫

ಮೂವತ್ತೇಳನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಒಂದು ಚಿತ್ರ



ತಾಯಿನಾಡು ಕೃಪೆ

ಪ್ರಬುದ್ಧ ಕರ್ಣಾಟಕ

ಮನ್ಮಥ ಸಂವತ್ಸರ	೧೪೪	ಆಷಾಢ ಸಂಚಿಕೆ

ತ್ರಯೀ ಸಾಂಖ್ಯಂ*

ವೇದತ್ರಯಂ ಸಾಂಖ್ಯಂ ಯೋಗಂ ಪಶುಮತಿಮತಂ ವೈಷ್ಣವಂ ಮೇಣ್
ಭಿನ್ನಭಿನ್ನ ಸ್ಥಾನದಿಂ ಪರಮದಂ ಪರಮಿದಂ ಪಥ್ಯಮೆಂಬರ್ :
ರುಚಿಗಳೊಳ್ ವೈಚಿತ್ರ್ಯದಿಂ ಋಜುಕುಟಿಲ ನಾನಾ ಪಥಂಗಳಲ್ತೆ ಪೇಳ್ ?
ದಿಟದಿ ನೀನೊರ್ವನೆಯೆ ಗಮ್ಯನೈ, ಪೊಳೆಗಳ್ಗೆ ಪೆರ್ಗಡಲವೋಲ್ !

—ಕುವೆಂಪು

---

* ತ್ರಯೀ ಸಾಂಖ್ಯಂ ಯೋಗಃ ಪಶುಪತಿಮತಂ ವೈಷ್ಣವಮಿತಿ
ಪ್ರಭಿನ್ನೇ ಪ್ರಸ್ಥಾನೇ ಪರಮಿದಮದಃ ಪಥ್ಯಮಿತಿ ಚ |
ರುಚೀನಾಂ ವೈಚಿತ್ರ್ಯಾದ್ ಋಜುಕುಟಿಲ ನಾನಾ ಪಥಜುಷಾಂ
ನೃಣಾಮೇಕೋ ಗಮ್ಯಸ್ತ್ವಮಸಿ ಪಯಸಾಮರ್ಣವ ಇವ ||

" ಸಂಭವಾಮಿ ಯುಗೇಯುಗೇ ! "

ಅಥವಾ

ಉದ್ಯಾನದಲ್ಲಿ ಧ್ಯಾನಯೋಗಿ

ಬಾ, ನಮಸ್ಕರಿಸು, ಸೌಂದರ್ಯರೂಪಿ ಭಗವಂತನಿಲ್ಲಿ ಪುಷ್ಪವೇಷಿ :
ಬಣ್ಣ ಬಣ್ಣವಾಶೀರ್ವದಿಸೆ, ಬರಿಯ ಉದ್ಯಾನವಲ್ತೊ ಇದು ಪುಷ್ಪಕಾಶಿ !
ನೋಡು ಏನೆಂಬೆ ಈ ಕಾಶಿತುಂಬೆ ? ಭಾವದಿಂದೆ ನೀನೊಲಿದು ನಂಬೆ
ಕೆಂಪು ಕೆಂಪಲ್ಲೊ : ದೇವರನುರಾಗವಿಳಿದು ಬರುವ ರಸರಾಮಸೇತು !
ಕಾಣು ಈ ಪೊದೆಯ ಬಿಳಿಯ ಹೂವೆದೆಯ: ಅಬ್ಧಿ ಬೆಳ್ಳಂಗೆಡೆಯುವಂತೆ ಸೂದೆಯು
ಸ್ವರ್ಗ ಸತ್ತ್ವ ತಾ ಮರ್ತ್ಯ ಭಕ್ತಿಗೋತವತರಿಸುತಿರ್ಪ ರಥಾಗ್ರಕೇತು !
ಸಟೆಯೊ ಈ ನೀಲಕುಸುಮ ಕಲ್ಲೋಲ ! ದಿಟದಿ ದೇವಕಿಯ ದಿವ್ಯ ಗರ್ಭ ·
ಧ್ಯಾನಿಗುದ್ಯಾನ ಶ್ರೀ ಕೃಷ್ಣ ಸಂಭವಕ್ಕೊಡ್ಡಿರುವ ಯೋಗಸಂದರ್ಭ !

—ಕುವೆಂಪು

ಶ್ರೀ ರಾಮಾವತಾರದ ಸಾರ್ಥಕತೆ ಶ್ರೀ ರಾಮಾಯಣಾವತಾರದಲ್ಲಿ

'ಸೃಷ್ಟಿಯ ಸಮಷ್ಟಿ ಪ್ರಜ್ಞೆಯ ಸಾಮೂಹಿಕ ವಿಕಾಸಕ್ಕಾಗಿಯೂ,
ಸರ್ವತೋಮುಖವಾದ ಚೈತನ್ಯೋನ್ಮೇಷನಕ್ಕಾಗಿಯೂ,
ನವೋನವ ಋತಶಕ್ತಿ ಪ್ರಕಾಶನಕ್ಕಾಗಿಯೂ,
ಭಗವದವತಾರದ ಆವಶ್ಯಕತೆ ಒದಗುತ್ತದೆ'

—ಶ್ರೀ ಕುವೆಂಪು.

'We must . . . take the idea of the Dharma in its fullest, deepest and largest conception, as the inner and outer law by which the divine Will and Wisdom work out the spiritual evolution of mankind and its circumstances and results in the life of the race."

SRI AUROBINDO
(Essays on the *Gita*—I Series)

೧

"ಧರ್ಮವು ಕುಗ್ಗಿ, ಅಧರ್ಮವು ಹಿಗ್ಗಿದಾಗ, ಧರ್ಮಸಂಸ್ಥಾಪನೆಗಾಗಿ ಯುಗಯುಗದಿ ನಾನು ಸಂಭವಿಸುತ್ತೇನೆ"* ಎಂದು ಭಗವಾನ್ ಶ್ರೀ ಕೃಷ್ಣ ಪರಮಾತ್ಮನು ಗೀತೆಯಲ್ಲಿ ಸಾರಿದ್ದಾನೆ. ಈ ಗೀತಾವಾಕ್ಯದಲ್ಲಿ ಬರುವ 'ಧರ್ಮ' ಎಂಬ ಪದಕ್ಕೆ ಸರ್ವಸಾಧಾರಣವಾಗಿ ಇದುವರೆಗೂ ಅದರ ನೈತಿಕಾರ್ಥವನ್ನೇ ಗ್ರಹಿಸಿ, ನೀತಿಬಾಹಿರರಿಂದಲೂ, ಲೋಕಕಂಟಕರಿಂದಲೂ, ದುರ್ಮಾರ್ಗವರ್ತಿಗಳಿಂದಲೂ, ಲೋಕಕ್ಕೆ ಉಂಟಾಗಿದ್ದ ಸಂಕಟ ಪರಿಹಾರಮಾಡಿ ಮತ್ತೆ ನೀತಿ, ನ್ಯಾಯ, ಸದ್ವರ್ತನೆಗಳನ್ನು ಸ್ಥಾಪಿಸಲೋಸುಗವೆ ಭಗವಂತನು ಅವತಾರ ಮಾಡಬೇಕಾಯಿತು ಎಂದು ಭಾವಿಸಿದ್ದಾರೆ. ಆದ್ದರಿಂದಲೇ, ಕೌರವರ ಅನ್ಯಾಯ, ಅನೀತಿಯು ಭೂದೇವಿಗೆ ಸಹಿಸಲಾರದ ಭಾರವಾಗಿ, ಆ ಭಾರವನ್ನು ಇಳುಹಬೇಕೆಂದು ದೇವರಲ್ಲಿ ಮೊರೆಯಿಟ್ಟಳು. ಆಗ ದೌರ್ಜನ್ಯಕ್ಕೆ ಒಳಗಾಗಿದ್ದ ಪಾಂಡವರ ಕ್ಷೇಮಕ್ಕಾಗಿ, ಕೌರವರ ಧ್ವಂಸಮಾಡಲು ಶ್ರೀ ಕೃಷ್ಣನು ಅವತರಿಸಿದನು. ಅಂತೆಯೇ ರಾವಣನ ಪೀಡೆಯನ್ನು

* ಯದಾಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ|
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ|| ಗೀತೆ. ಅ. ೪, ಶ್ಲೋ. ೭.

ತಪ್ಪಿಸಲು ಶ್ರೀ ರಾಮನೂ, ಕ್ಷತ್ರಿಯರ ದೌರ್ಜನ್ಯ ನಿರ್ಮೂಲಕ್ಕಾಗಿ ಪರಶುರಾಮನೂ, ಬಲಿಯ ಅಹಂಕಾರವನ್ನು ಮೆಟ್ಟುವುದಕ್ಕಾಗಿ ವಾಮನನೂ ಅವತಾರಮಾಡಿದರೆಂದು ಪುರಾಣದಲ್ಲಿ ಜನಜನಿತವಾಗಿದೆ.

"ಆದರೆ ನಿಜವಾಗಿಯೂ ರಾವಣ, ಕಂಸರನ್ನು ವ್ಯಕ್ತಿಶಃ ಕೊಲ್ಲುವುದಕ್ಕೆ ಮಾತ್ರವೆ ಭಗವಂತನು ಅವತರಿಸುತ್ತಾನೆ ಎಂಬುದು ಅಯೋಗಮತಿಗಳಿಗಾಗಿ ಇರುವ ಕವಿಕಲ್ಪನೆಯುಷ್ಟೆ. ಭಗವಂತ ಅವತರಿಸದಿದ್ದರೂ ಅವರು ಕಾಲಧರ್ಮದಿಂದಲೆ ಸ್ವಲ್ಪ ತಡವಾಗಿ ಆದರೂ ಸಾಯುತ್ತಿದ್ದರು. ಆದ್ದರಿಂದ ಎಷ್ಟೇ ದುಷ್ಟರಾಗಿದ್ದರೂ ಎಂತಹ ಬೃಹತ್‌ಪ್ರಮಾಣದ ಕೇಡಿಗಳಾಗಿದ್ದರೂ ಕೆಲವು ವ್ಯಕ್ತಿಗಳನ್ನು ಕೊಲ್ಲುವುದಕ್ಕಾಗಿಯೇ ದೇವರು ಅವತರಿಸುತ್ತಾನೆ ಎಂಬುದು ಮನುಷ್ಯನ್ಯಾಯಕ್ಕೆ ಸಂಬಂಧಪಟ್ಟ 'ಅಲ್ಪ'ವಾಗುತ್ತದೆ. ಅದಕ್ಕಿಂತಲೂ 'ಭೂಮ'ವಾದ ಉದ್ದೇಶವಿರಬೇಕು ಭಗವಂತನ ಅವತಾರಕ್ಕೆ!"[1]

ಒಂದು ವೇಳೆ, ಭಗವಂತನ ಅವತಾರ ಕೆಲವರನ್ನು ವ್ಯಕ್ತಿಶಃ ಕೊಲ್ಲುವುದಕ್ಕಾಗಿಯೇ ಆಗುತ್ತದೆ ಎಂದು ವಾದಿಸುವುದಾದರೆ, ಯಾರನ್ನೂ ಕೊಲ್ಲುವ ಉದ್ದೇಶವಿಲ್ಲದ ಬುದ್ಧ, ಕ್ರೈಸ್ತ, ಶ್ರೀ ರಾಮಕೃಷ್ಣಾವತಾರಗಳನ್ನು ಅವತಾರಗಳಲ್ಲವೆಂದು ಅಲ್ಲಗಳೆಯಬೇಕಾಗುತ್ತದೆ.[2] ಆದ್ದರಿಂದ ಭಗವಂತನು ಅವತರಿಸುವುದಕ್ಕೆ ಮೇಲೆ ಹೇಳಿದಂತೆ ಭೂಮವಾದ ಉದ್ದೇಶವಿರಬೇಕು.

ಹಾಗಾದರೆ, ಭಗವದ್ಗೀತೆಯಲ್ಲಿ ಕೃಷ್ಣಪರಮಾತ್ಮನು ಹೇಳಿದ ಗೀತಾವಾಕ್ಯ ಧರ್ಮವು ಕುಗ್ಗಿದಾಗ, ಅಧರ್ಮವು ಹಿಗ್ಗಿದಾಗ ಯುಗಯುಗದಿ ಸಂಭವಿಸುವೆನೆಂಬ ಭಗವದ್ದಿವ್ಯವಾಕ್ಯ ಅತಿಸತ್ಯವೆ? ಅಲ್ಪಸತ್ಯವೆ? ಎಂಬ ಸಂಶಯವುಂಟಾಗಬಹುದು. ಆದರೆ, ಅಂತಹ ಸಂಶಯ ಹುಟ್ಟಿದರೆ, ಅದಕ್ಕೆ ಮತ್ತೆ ನಮ್ಮ ಅಲ್ಪಮತಿಯೇ ಕಾರಣ. ಏಕೆಂದರೆ, ಗೀತಾವಾಕ್ಯದಲ್ಲಿ ಬರುವ 'ಧರ್ಮ' ಎಂಬ ಪದದ ಪೂರ್ಣಾರ್ಥವನ್ನು ಗ್ರಹಿಸಬೇಕು.

'ಧರ್ಮ' ಎಂಬ ಪದಕ್ಕೆ ಕನಿಷ್ಠ ಮೂರು ಅರ್ಥಗಳಿವೆ. ಅದನ್ನು ನೈತಿಕ ಅರ್ಥದಲ್ಲಿ, ತಾತ್ವಿಕ ಅರ್ಥದಲ್ಲಿ, ಆಧ್ಯಾತ್ಮಿಕ ಅರ್ಥದಲ್ಲಿ ಉಪಯೋಗಿಸಬಹುದು.

---

[1] ಶ್ರೀ ಕೃಷ್ಣಜನ್ಮಾಷ್ಟಮಿ—ಶ್ರೀ ಕುವೆಂಪು. ಪ್ರಬುದ್ಧ ಕರ್ಣಾಟಕ, ಸಂಪುಟ ೩೬, ಸಂಚಿಕೆ ೪, ಪುಟ ೯.

[2] '. . . We should have to exclude Buddha and Christ whose mission was not at all to destroy evil-doers and deliver the good. . . .'

—SRI AUROBINDO
Essay on the *Gita*—I Series, p. 212.

ಅದರ ನೈತಿಕಾರ್ಥದಲ್ಲಿ, ನ್ಯಾಯ, ಸನ್ಮಾರ್ಗವರ್ತನೆ, ಸಾಮಾಜಿಕ ಮತ್ತು ರಾಜಕೀಯ ನಿಯಮಗಳು ಎಂದಾಗುತ್ತದೆ. ಈ ಅರ್ಥದಲ್ಲಿ ಉಪಯೋಗಿಸಿದರೆ ಭಗವಂತನು ಕೇಡಿಗಳನ್ನು ಧ್ವಂಸಮಾಡಿ, ಅನ್ಯಾಯ, ದೌರ್ಜನ್ಯಗಳನ್ನು ಮುರಿದು, ಸಜ್ಜನರನ್ನು ಸಂರಕ್ಷಿಸಿ ಮಾನವಕುಲದ ನೈತಿಕ ಸಮತೋಲನವನ್ನು ಸ್ಥಾಪಿಸಲಿಕ್ಕಾಗಿ ಅವತರಿಸುತ್ತಾನೆ ಎಂದು ಭಾವಿಸುತ್ತಾರೆ. ಇದರಲ್ಲಿ 'ಧರ್ಮ' ಶಬ್ದದ ಆಧ್ಯಾತ್ಮಿಕ ಅರ್ಥವು ವ್ಯಕ್ತವಾಗಿಲ್ಲ. ಹಾಗೆಯೇ 'ಧರ್ಮ' ಶಬ್ದಕ್ಕೆ ಕೇವಲ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಅರ್ಥವನ್ನು ಮಾತ್ರ ಆರೋಪಿಸಿದರೆ, ಅದರ ನಿಜವಾದ ಅರ್ಥವನ್ನೂ ತಿರುಳನ್ನೂ ಗ್ರಹಿಸಿದಂತಾಗುತ್ತದೆ. ಆದರೂ, ಅವತಾರ ನೆರವೇರಿಸುವ ದ್ವಿಮುಖ ಕಾರ್ಯದಲ್ಲಿ ಒಂದನ್ನು—ಜೀವನದ ಬಾಹ್ಯಪರಿವರ್ತನೆಯನ್ನು—ಕಡೆಗಣಿಸಿದಂತಾಗುತ್ತದೆ. ಏತಕ್ಕೆಂದರೆ, ಅವತಾರಿಯು, ಮನುಷ್ಯರೂಪಧಾರಣೆ ಮಾಡಿ ದೇವರ ಕಾರ್ಯವನ್ನು ಕೈಕೊಳ್ಳುತ್ತಾನೆ. ದೈವೇಚ್ಛೆಯು, ದೈವಪ್ರಜ್ಞೆಯು ಮಾನವನ ಅಂತರಂಗದ ಆತ್ಮದ ಪ್ರಗತಿಯನ್ನೂ, ಬಾಹ್ಯಜೀವನದ ಪರಿವರ್ತನೆಯನ್ನೂ ಉಂಟುಮಾಡುವುದನ್ನು ಅವತಾರಗಳ ಇತಿಹಾಸ ಹೇಳುತ್ತಿದೆ.[3]

ಆದಕಾರಣ, ಗೀತೆಯಲ್ಲಿ ಹೇಳುವ ಅವತಾರದ ಕೆಲಸವನ್ನು ಪರಿಪೂರ್ಣವಾಗಿ ಗ್ರಹಿಸಬೇಕಾದರೆ, 'ಧರ್ಮ' ಶಬ್ದದ ಪೂರ್ಣವಾದ, ಆಳವಾದ, ವಿಶಾಲವಾದ ಅರ್ಥವನ್ನು ತಿಳಿಯಬೇಕು. ಆ ಆಳವಾದ, ವಿಶಾಲವಾದ, ಪೂರ್ಣವಾದ ಅರ್ಥದಲ್ಲಿ ಧರ್ಮ ಎಂದರೆ: ಮಾನವಕುಲದ ಹಾಗೂ ಅದರ ಸನ್ನಿವೇಶಗಳ ಆಧ್ಯಾತ್ಮಿಕ ವಿಕಾಸವನ್ನು ಮಾಡಲು ದೈವೇಚ್ಛೆಯೂ, ದೈವೀಪ್ರಜ್ಞೆಯೂ ಅನುಸರಿಸುವ ಅಂತರಂಗ ಬಾಹ್ಯ ನಿಯತಿಯೇ ಧರ್ಮ.[4] ಶ್ರೀ ಕುವೆಂಪು ಅವರು ಹೇಳುವಂತೆ: "ಸೃಷ್ಟಿಯ ಸಮಷ್ಟಿ ಪ್ರಜ್ಞೆಯ ಸಾಮೂಹಿಕ ವಿಕಾಸಕ್ಕಾಗಿಯೂ, ಸರ್ವತೋಮುಖವಾದ ಚೈತನ್ಯೋನ್ಮೇಷನಕ್ಕಾಗಿಯೂ, ನವೋನವ ಋತಶಕ್ತಿ ಪ್ರಕಾಶನಕ್ಕಾಗಿಯೂ ಭಗವದವತಾರದ ಆವಶ್ಯಕತೆ ಉಂಟಾಗುತ್ತದೆ"[5] ಆದಕಾರಣ ಸೃಷ್ಟಿಯ ಸಮಷ್ಟಿಪ್ರಜ್ಞೆಯ ಸಾಮೂಹಿಕ ವಿಕಾಸವನ್ನುಂಟುಮಾಡಲು, ಸರ್ವತೋಮುಖವಾದ ಚೈತನ್ಯೋನ್ಮೇಷನಕ್ಕಾಗಿಯೂ ಅನುಸರಿಸುವ ನಿಯತಿಯೆ ಧರ್ಮ. ಅದನ್ನು ಸಂಸ್ಥಾಪಿಸುವುದೇ ಅವತಾರದ ಕೆಲಸ.

ಶ್ರೀ ರಾಮಾವತಾರದ ಭೂಮವಾದ ಉದ್ದೇಶ ರಾವಣನ ಸಂಹಾರ ಮಾತ್ರವಲ್ಲ. 'ಸೃಷ್ಟಿಯ ಸಮಷ್ಟಿಪ್ರಜ್ಞೆಯ ಸಾಮೂಹಿಕ ವಿಕಾಸಕ್ಕಾಗಿ' ಎಂಬುದನ್ನು

---

[3] Sri Aurobindo—Essays on the *Gita*—I Series, p. 212.

[4] Ibid, p. 213.

[5] ಶ್ರೀ ಕೃಷ್ಣಜನ್ಮಾಷ್ಟಮಿ—ಶ್ರೀ ಕುವೆಂಪು. ಪ್ರ. ಕ. ಸಂಪುಟ ೩೬, ಸಂಚಿಕೆ ೪, ಪು. ೯.

ಯೋಗಮತಿಗಳೆಲ್ಲರೂ ಒಪ್ಪಿಕೊಳ್ಳಬೇಕು. ಹಾಗಾದರೆ, ಶ್ರೀ ರಾಮಚಂದ್ರ ಆ ಯುಗದ ಸೃಷ್ಟಿಯ ಸಮಷ್ಟಿಪ್ರಜ್ಞೆಯ ಸಾಮೂಹಿಕ ವಿಕಾಸವನ್ನು ಹೇಗೆ ಉಂಟುಮಾಡಿದನು? ಅದನ್ನುಂಟುಮಾಡುವುದಕ್ಕೆ ಯಾವ ನಿಯತಿನಿಯಮವನ್ನು ಅನುಸರಿಸಿದನು ಎಂಬುದನ್ನು ಶ್ರೀ ರಾಮಾಯಣದರ್ಶನಂ ಮಹಾಕಾವ್ಯದಿಂದ ಕಾಣಲು ಪ್ರಯತ್ನಿಸೋಣ.

ಶ್ರೀ ರಾಮಾಯಣದರ್ಶನ :

'ಇತಿಹಾಸಮಲ್ತು ; ಬರಿ ಕಥೆಯಲ್ತು ; ಕಥೆ ತಾಂ
ನಿಮಿತ್ತಮಾತ್ರಂ, ಆತ್ಮಕೆ ಶರೀರದೋಲಂತೆ.
ಮೆಯ್ವೆತ್ತುದಿಲ್ಲಿ ರಾಮನ ಕಥೆಯ ಪಂಜರದಿ
ರಾಮರೂಪದ ಪರಾತ್ಪರನ ಪುರುಷೋತ್ತಮನ
ಲೋಕಲೀಲಾ ದರ್ಶನಂ . . .'[6]

ಹಾಗಾದರೆ, 'ಪರಾತ್ಪರನ ಪುರುಷೋತ್ತಮನ ಲೋಕಲೀಲೆ' ಯಾವುದು? ಆದಿಯೂ ಅಂತ್ಯವೂ ಇಲ್ಲದ ಅನಾದಿ ಪುರುಷೋತ್ತಮನು, ನಿರಾಕಾರ ನಿರ್ಗುಣಸ್ವರೂಪಿಯಾದ ಪರಬ್ರಹ್ಮಶಕ್ತಿಯು, ನಿತ್ಯವೂ ಶುದ್ಧವೂ ಆದ ಚಿದಾನಂದ ಪೂರ್ಣ ಪರಾತ್ಪರ ವಸ್ತುವು, ಏಕವಾಗಿದ್ದದ್ದು ಅನೇಕವಾಗಿ, ಅವ್ಯಕ್ತವಾಗಿದ್ದದ್ದು ವ್ಯಕ್ತವಾಗಿ, ಮಾಯಾತೀತವಾದದ್ದು ತನ್ನ ಮಾಯೆಯ ಶಕ್ತಿಯಿಂದಲೇ ತನ್ನ ಸೃಷ್ಟಿಯನ್ನು ತಾನೇ ಮಾಡಿಕೊಂಡು, ಸಮಷ್ಟಿಯಾದದ್ದು ವ್ಯಷ್ಟಿಯಾಗಿ ಅವತರಿಸಿ, ತಾನೇ ಏರ್ಪಡಿಸಿದ ವಿಕಾಸಕ್ರಮದಿಂದ ಮತ್ತೆ ತಾನು ಯಾವುದರಿಂದ ಆದನೋ, ಅದರಲ್ಲಿಯೇ ಆಗುವುದು 'ಪರಾತ್ಪರನ ಪುರುಷೋತ್ತಮನ ಲೋಕಲೀಲೆ.'

ಶ್ರೀ ರಾಮಚಂದ್ರನು, ಅನಾದಿ ಪುರುಷೋತ್ತಮನ ಅವ್ಯಕ್ತ ಸಮಷ್ಟಿಶಕ್ತಿಯ ವ್ಯಷ್ಟಿಸ್ವರೂಪ. ದಶರಥ ಚಕ್ರವರ್ತಿಯು 'ತನುಜಾತ ಕಾಮೇಷ್ಟಿಯಂ ಕೈಕೊಂಡು . . . ಋತ್ವಿಜರೊಡನೆ ಹೋಮಕುಂಡದೆಡೆ ಪೂಜೆಯೊಳ್ . . . ಸಮಾಧಿಯೊಳ್ ತಾನಿರಲ್

'. . . ಪೊಳೆದುದು ಕಣ್ಗೆ
ಮಂಗಳದಮರಮೂರ್ತಿ ಆ ಯಾಜಕರ ಮುಂದೆ.
. . . .
ಪೇಳ್ದನಾಶೀರ್ವಾದಮಂ . . .
. . . : 'ಸೃಷ್ಟಿಯ ಶಕ್ತಿ ದೂತನೆಂ, ರಾಜೇಂದ್ರ,
ಋತಚಿನ್ಮಯೀ ಲೀಲೆಗಾಂ ಕವಿಕ್ರತು ಕಣಾ.

[6] ಶ್ರೀ ರಾ.ದ., ಮಹಾಸಂಪುಟ ೨, ಪುಟ, ೮೬೮, ಸಾಲು ೧೯ ರಿಂದ ೨೩ ರ ವರೆಗೆ.

ಕೊಳ್ಳಿದಂ, ಕಾಮಧೇನುವಿನ ಕೊಡಗೆಚ್ಚಲಂ
ಪಾಲ್ಗರೆದು ಗೆಯ್ದ ಪಾಯಸಮಿದಂ . . .'[7]

ಎಂದು ಅಗ್ನಿದೇವನಿತ್ತ ಪಾಯಸವನ್ನು ದಶರಥನು ತನ್ನ ಸತಿಯರಿಗೆ ಹಂಚಿಕೊಡುತ್ತಾನೆ. ಅದರ ಫಲವಾಗಿ ಶ್ರೀ ರಾಮಚಂದ್ರ ಹುಟ್ಟುತ್ತಾನೆ:

'ನಾಮದನ್ನವತಾರಮೆಂದು ಪೂಜಿಪೆವಲ್ತೆ ಪೇಳ್
ವ್ಯಷ್ಟಿ ರೂಪದಿನಿಳಿವ ಸೃಷ್ಟಿಯ ಸಮಷ್ಟಿಯಂ?'[8]

ಹೀಗೆ ಸೃಷ್ಟಿಯ ಸಮಷ್ಟಿಯಿಂದ ವ್ಯಷ್ಟಿರೂಪವಾಗಿ ಇಳಿದುಬಂದು, ಮತ್ತೆ ಸಮಷ್ಟಿಯಲ್ಲಿ ಸಾಮರಸ್ಯ ಹೊಂದಿದ ಕಥೆಯೇ ಶ್ರೀ ರಾಮಾಯಣದರ್ಶನಂ.

ಶ್ರೀ ರಾಮಚಂದ್ರ ಭಗವಂತನ ಅವತಾರವಾದರೂ, ಅವನೂ ದೇಹಧಾರಣೆ ಮಾಡಿ ಮಾನವನಾಗಿ ಹುಟ್ಟಿದ ಮೇಲೆ, ಮಾನವನಂತೆ ತಾನೇ ಸುತ್ತಿಕೊಂಡಿದ್ದ ಮಾಯೆಯನ್ನು ಸಾಧಿಸಿ ಗೆಲ್ಲಬೇಕಾಯಿತು. ಶ್ರೀ ರಾಮಾಯಣದರ್ಶನದಲ್ಲಿ ಶ್ರೀ ರಾಮ ತನ್ನ ಆತ್ಮಸಾಕ್ಷಾತ್ಕಾರಕ್ಕಾಗಿ ಕಠೋರವಾದ ತಪಸ್ಸನ್ನಾಚರಿಸಿದನೆಂಬುದನ್ನು ಲಕ್ಷ್ಯಯಿಟ್ಟು ಅಭ್ಯಾಸಿಸಿದವರಿಗೆ ಗೋಚರಿಸುವುದು. ಅಗ್ನಿಯಿಂದ ಅವತರಿಸಿದ ಶ್ರೀ ರಾಮ ಮತ್ತೆ ಅಗ್ನಿಯಲ್ಲೇ ಹೊಗುತ್ತಾನೆ:

ನಿಷ್ಪಂದನಾಗಿ ನಿಂದನಿತುಮಂ ಸಾಕ್ಷಿಯೊಲ್
ನಿಟ್ಟಿಸುತ್ತಿರ್ದ ರಾಮಾನನಂ ತಾನಾಯ್ತು
ದೀಪ್ಯಮಾನಂ. ಚಲಿಸಿದನು ಚಿತೆಗೆ, ನೋಳ್ಪರಾ
ವಿಸ್ಮಯಂ ಚಿಂತೆಗೆ ತಿರುಗುವಂತೆ, ಓವೊವೋ
ಎಂಬನಿತರೊಳೆ ತಾಂ ಪ್ರವೇಶಿಸುತ್ತುಜ್ಜ್ವಲಿಪ
ಗೋಪುರೋಪಮದಗ್ನಿ ಮಧ್ಯೆ ಮರೆಯಾದನೈ
ಜಮದಗ್ನಿಜಾತನಂ ಜಯಸಿದಾತಂ.'[9]

'ಅಗ್ನಿ, ವಿರಾಟ್‌ಶಕ್ತಿಯ ಪ್ರಪ್ರಥಮ ವ್ಯಕ್ತಸ್ವರೂಪ'[10] ಅಗ್ನಿ—ಅರ್ಥಾತ್ ವಿರಾಟ್‌ಶಕ್ತಿಯಿಂದಲೇ ಮೂಡಿಬಂದ ಶ್ರೀ ರಾಮಚಂದ್ರ ಮತ್ತೆ ಅದೇ ಶಕ್ತಿಯಲ್ಲಿ

---

7 ಶ್ರೀ ರಾ.ದ. ಮ. ಸಂ. ೧, ಪು. ೧೩-೧೪.

8 ಅದನ್ನೇ ನೋಡಿ. ಪು. ೧೧, ಸಾಲುಗಳು ೨೯೫-೯೬.

9 ಶ್ರೀ ರಾ.ದ. ಮ. ಸಂ. ೨, ಪು. ೮೪೫-೪೬. ಸಾಲುಗಳು ೫೧೩ ರಿಂದ ೫೧೮.

10 ಈ ವಿಚಾರವಾಗಿ ಹೆಚ್ಚು ತಿಳಿಯುವ ಕುತೂಹಲವುಳ್ಳವರು ಶ್ರೀ ಕುವೆಂಪು ಸಂದರ್ಶನ ಎಂಬ ಗ್ರಂಥದಲ್ಲಿ ಶ್ರೀ ದೇ. ಜವರೇಗೌಡರ 'ಶ್ರೀ ಕವಿಕ್ರತು ದರ್ಶನಂ' ಎಂಬ ಲೇಖನವನ್ನು ಓದಬಹುದು.

ಐಕ್ಯವಾದ ಸೀತಾದೇವಿಯೊಡನೆ ರಾಮಚಂದ್ರನೂ ಅಗ್ನಿಪ್ರವೇಶಮಾಡಿದನೆಂಬುದರ ದರ್ಶನಧ್ವನಿಯ ಅರ್ಥವಿದು.

ರಾಮಚಂದ್ರನೊಬ್ಬನೇ ಆತ್ಮಸಾಕ್ಷಾತ್ಕಾರ ಪಡೆಯುವುದು ರಾಮಾವತಾರದ ಉದ್ದೇಶವಾಗಿರಲಿಲ್ಲ. ಸೃಷ್ಟಿಯ ಸಮಷ್ಟಿಪ್ರಜ್ಞೆಯ ಸಾಮೂಹಿಕ ವಿಕಾಸ ಅವನಿಂದ ಆಗಬೇಕಾಗಿದೆ. ಹಾಗೆ ಆದಾಗಲೇ ಅವನ ಅವತಾರದ ಸಾರ್ಥಕತೆ ಆದೀತು. ಶ್ರೀ ರಾಮಾಯಣದರ್ಶನದಲ್ಲಿ ಸಾಮೂಹಿಕ ವಿಕಾಸವಾದುದನ್ನು ನಾವು ನೋಡುತ್ತೇವೆ. ಆ ವಿಕಾಸನದ ಕೆಲಸ ಇನ್ನೂ ನಡೆಯುತ್ತಲೇ ಇದೆ ಶ್ರೀ ರಾಮಾಯಣದರ್ಶನದಲ್ಲಿ. ಈ ಜಗದ್ಭವ್ಯ ಮೇರುಕೃತಿ ರಾಮಾಯಣಾವತಾರವಾಗಿ ಅವತರಿಸಿದಂದಿನಿಂದ, ಶ್ರೀ ರಾಮಚಂದ್ರನ ವಾಕ್‌ಶರೀರವಾಗಿ ನಮ್ಮೆಲ್ಲ ಆತ್ಮೋನ್ನತಿಯನ್ನು ನಿಮಿಷ ನಿಮಿಷವೂ ಸಾಧಿಸುತ್ತಿದೆ. ರಾಮಾಯಣದರ್ಶನದ ಒಂದೊಂದು ಪಾತ್ರವೂ ಪ್ರತಿಮಾ ರೂಪದಿಂದ ಅಲ್ಲಿ ಉದ್ಧಾರವಾಗಿದೆ. ಇಲ್ಲಿ, ಈಗ, ರಾಮಾಯಣಾವತಾರವು ಪ್ರತಿಯೊಬ್ಬರನ್ನೂ ಅವರವರ ಯೋಗ್ಯತೆಗೆ, ಸುಕೃತಕ್ಕೆ ಸಾಧ್ಯವಾದಷ್ಟು ಉದ್ಧಾರ ಮಾಡುತ್ತಿದೆ. 'ಕಣ್ಣಿ'ದ್ದವರು ಅದನ್ನು ನೋಡಬಲ್ಲರು. 'ಕಿವಿ'ಯಿದ್ದವರು 'ನಿತ್ಯ ರಾಮಾಯಣದ ರಾಮಂಗೆ ನಿಚ್ಚಮುಂ ನಡೆವ ಪಟ್ಟೋತ್ಸವ ಸ್ತೋತ್ರಮಂ, ಕೇಳ ಬಹುದು. ಶ್ರೀ ರಾಮ ಸ್ವತಃ ತನ್ನ ಆತ್ಮಸಾಕ್ಷಾತ್ಕಾರವನ್ನು ಮಾಡಿಕೊಂಡ. ತನ್ನ ತಂದೆ, ತಾಯಿ, ಮಡದಿ, ತಮ್ಮಂದಿರೇ ಮೊದಲಾದ ತನ್ನ ಕುಟುಂಬದವರಿಗೆಲ್ಲ ಸಾಕ್ಷಾತ್ಕಾರವನ್ನು ದೊರಕಿಸಿದ. ತನ್ನ ಸೇವಕವರ್ಗದ ಮಂಥರೆಗೂ ಮುಕ್ತಿ ಕೊಟ್ಟ. ಕಲ್ಲಾಗಿದ್ದ ಅಹಲ್ಯೆಗೆ, ಖಗವಾಗಿದ್ದ ಜಟಾಯುವಿಗೆ, ಮೃಗವಾಗಿದ್ದ ಮಾರೀಚನಿಗೆ, ಕಾಡುಮನುಷ್ಯಳಾಗಿದ್ದ ಶಬರಿಗೆ, ವಾನರರಾಗಿದ್ದ ವಾಲಿಸುಗ್ರೀವ ಆಂಜನೇಯರಿಗೆ, ರಾಕ್ಷಸರಾಗಿದ್ದ ವಿಭೀಷಣ, ರಾವಣ, ತ್ರಿಜಟೆಯರಿಗೆಲ್ಲ ಮುಕ್ತಿಯನ್ನು ದಯಪಾಲಿಸಿದ. ಆತ್ಮೋದ್ಧಾರವು ಕೇವಲ ಮನುಷ್ಯರಿಗೇ ಮಾತ್ರ ಮೀಸಲಲ್ಲ. ಸೃಷ್ಟಿಯ ಸಕಲ ಚರಾಚರ, ಜಡಚೇತನಗಳೆಲ್ಲವೂ ಭಗವತ್‌ಕೃಪೆಯಿಂದ, 'ಸುಪ್ತಚಿತ್ತದ ಗುಪ್ತತಿಮಿರದ ಸೆರೆಯ ಚೈತ್ಯಸಂಪ್ರಜ್ಞೆಯಂ' ದರ್ಶಿಸಬಹುದೆಂಬುದನ್ನು ಶ್ರೀ ರಾಮಾಯಣದರ್ಶನದಲ್ಲಿ ಕಾಣಬಹುದು.

ಸೃಷ್ಟಿಯ ಸಮಷ್ಟಿಪ್ರಜ್ಞೆಯ ಸಾಮೂಹಿಕ ವಿಕಾಸವಾಯಿತೆಂದೇ ಇದುವರೆಗೆ ಲೋಕನಿಷ್ಠುರಕ್ಕೂ, ನಿಂದೆಗೂ, ದೂಷಣೆಗೂ, ಕೋಪಕ್ಕೂ ಪಾತ್ರಳಾಗಿದ್ದ ಮಂಥರೆ,

> '. . . ಲೋಕ ಕ್ರೋಧ ಮದಹಸ್ತಿ
> ಪದದಲನ ರೋಷದಾವಾಗ್ನಿಗಾಹುತಿಯಾಗಿ

ಬಿಳ್ದ ನಿನ್ನಾ ಭಸ್ಮರಾಸಿಯಂ ತೊಳೆವುದಿದೊ
ಕಣ್ಗಂಗೆ ಕಾವ್ಯಮಹಿಮಾ ಸಿಂಧುತೀರ್ಥಕ್ಕೆ !'[11]

ಪತಿತೆಯಾಗಿದ್ದವಳು ಪಾವನೆಯಾಗಿದ್ದಾಳೆ. ಇದುವರೆಗೆ ರಾಮಾಯಣದ ಪುಟಗಳನ್ನು ಮಲಿನಮಾಡಲೆಂದೇ ಮೂಡಿದ್ದ ಮಂಥರೆ ಶ್ರೀ ರಾಮಾಯಣದರ್ಶನದಲ್ಲಿ

' ವಿಶ್ವದೇಶಮಂ
ಪರಿಮಳದ ಪುಣ್ಯಪವನಂ ಪಸರಿಪೋಲಂತೆ
ತುಂಬದೇನಿದ್ದಪಳೆ, ಪೇಳ್, ಲೋಕಲೋಕಂಗಳೊಳ್
ದೇವಿ ಮಂಥರೆಯಂತರಾತ್ಮದ ದಯಾಲಕ್ಷ್ಮಿ ತಾಂ
ತನ್ನ ಕೀರ್ತಿಯ ಸಯ್ಪಿನಮೃತಮಯ ಸೌಂದರ್ಯಮಂ ?'[12]

ಎಂಬಷ್ಟು ಶ್ರೇಷ್ಠತೆಗೆ ಏರಿದ್ದಾಳೆ. ಮಂಥರೆಯಂಥ ಬರಡುಬಾಳಿಗೂ ಸಾಕ್ಷಾತ್ಕಾರ ಕೊಡದೆ ಇದ್ದಿದ್ದರೆ ಶ್ರೀ ರಾಮಾವತಾರದ ಸಾರ್ಥಕತೆ ಪೂರ್ಣವಾಗುತ್ತಿರಲಿಲ್ಲ. ಶ್ರೀ ರಾಮಚಂದ್ರ ಅವತಾರಪುರುಷನೆಂಬುದು ಸತ್ಯವಾದರೆ, ಅವನ ಆ ಯುಗದ ವ್ಯಕ್ತಿ, ಸಮಾಜ, ಸೃಷ್ಟಿಯ ಸಾಮೂಹಿಕ ಪ್ರಜ್ಞೆ ವಿಕಾಸವಾಗಲೇಬೇಕು. ಆದ್ದರಿಂದಲೇ ಇದುವರೆಗೆ ರಾಕ್ಷಸನಾಗಿದ್ದ ರಾವಣನೂ ಶ್ರೀ ರಾವಣನಾಗಿ ಶ್ರೀ ರಾಮಾಯಣದರ್ಶನದಲ್ಲಿ ಮೂಡಿದ್ದಾನೆ. ಯಾವ ರಾವಣನನ್ನು ನೋಡಿದರೆ, ಕಣ್ಮುಚ್ಚುವಂತಾಗುತ್ತಿತ್ತೊ, ಹೆಸರು ಕೇಳಿದರೆ ಕಿವಿ ಮುಚ್ಚಿಕೊಳ್ಳುವಂತಾಗುತ್ತಿದೆಯೋ ಅದೇ ರಾವಣ ಶ್ರೀ ಕುವೆಂಪು ರಾಮಾಯಣದಲ್ಲಿ ಸಕಲಜನ ಗೌರವಕ್ಕೆ ಭಾಜನನಾಗಿದ್ದಾನೆ. ಸ್ವತಃ ಸೀತೆಯೇ ಅವನಿಗೆ ಕೃತಜ್ಞತೆಯನ್ನು ಅರ್ಪಿಸುತ್ತಾಳೆ. ಅವನ ಒಗರುತನ ಹೋಗಿ ಹಣ್ಣುತನವುಂಟಾಗುತ್ತದೆ. ಅವನ ಇದ್ದಲುತನ ಹೋಗಿ ವಜ್ರತ್ವವುಂಟಾಗುತ್ತದೆ. ಹೀಗೆ ಇದ್ದಿಲನ್ನು ವಜ್ರವನ್ನಾಗಿ ಮಾರ್ಪಡಿಸುವುದೇ ಅವತಾರದ ಉದ್ದೇಶ. ಮಂಥರೆಯೂ ರಾವಣನೂ ಹಾಗೆ ಪರಿವರ್ತನೆ ಹೊಂದದೆ ಹೋಗಿದ್ದರೆ ರಾಮಾವತಾರದ ಅಗತ್ಯವಾದರೂ ಏನಿತ್ತು? ಭಗವಂತನ ಕೃಪೆ, ಆಶೀರ್ವಾದ, ಕರುಣೆ, ದಯೆ ಬೇಕಾದುದು ಪುಣ್ಯವಂತರಿಗೆ ಅಲ್ಲ. ಅವು ಪ್ರಪ್ರಥಮವಾಗಿ ಪಾಪಿಗಳಿಗೆ, ಪತಿತರಿಗೆ ಬೇಕು.

ರಾಮಾಯಣದಲ್ಲಿ ಬರುವ ಮತ್ತೊಬ್ಬ ಪ್ರಸಿದ್ಧ ಕೇಡಿಗನಾದ ವಾಲಿಯ ವಿಚಾರದಲ್ಲೂ ಇದೇ ಪರಿವರ್ತನೆಯನ್ನು ನಾವು ಶ್ರೀ ರಾಮಾಯಣದರ್ಶನದಲ್ಲಿ ಕಾಣಬಹುದು. ಗುಹೆಯೊಳು ತನ್ನನ್ನು ಮುಚ್ಚಿಬಂದನೆಂಬ ಆಕ್ರೋಶದಿಂದ, ಅವನು

---

11 ಶ್ರೀ ರಾ.ದ. ಮ. ಸಂ. ೧.

12 ,, ಮ. ಸಂ. ೧, ಪು. ೧೨೪.

ಮೊದಲು ತನ್ನ ತಮ್ಮನ ವಿನಯವನ್ನು ಕಿವುಡುಗೇಳ್ದು ಹುಟ್ಟೂರಿನಿಂದ ಹೊರಗಟ್ಟು ತ್ತಾನೆ. ರುಮಾದೇವಿಯನ್ನು ಸೆರೆಮನೆಯೊಳಿಟ್ಟು ಬೇಯಿಸುತ್ತಾನೆ. ಒಂದೊಂದು ಸಾರಿ ಮನಸ್ಸು ತಮ್ಮನನ್ನು ತಾಯ್ನಾಡಿಗೆ ಕರೆತರಲು ತವಕಿಸುತ್ತದೆ. ಆದರೆ ಆತನ ಅಹಂಕಾರ ಅಡ್ಡವಾಗುತ್ತದೆ. ಸುಗ್ರೀವನೂ ಕರುಣೆಯನ್ನು ಹುಟ್ಟಿಸುವ ಮಾರ್ಗವನ್ನು ಬಿಟ್ಟು ಮುಯ್ಗೆ ಮುಯ್ಯಾಗಿ ಕೋಪವನ್ನೇ ಹುಟ್ಟಿಸುವ ರೀತಿ ವರ್ತಿಸುವನು. ಆಗ ವಾಲಿಯ ಮಡದಿ ತಾರೆ, ಗಂಡನ ಕಾಲ್ವಿಡಿದು ಕಣ್ಣೀರುತಂದು ಬೇಡಿಕೊಳ್ಳುತ್ತಾಳೆ. ವೀರರ ಔದಾರ್ಯವನ್ನೇ ಹಿಡಿಯುವಂತೆ ಪ್ರಾರ್ಥಿಸುತ್ತಾಳೆ. ಅವಳ ಪ್ರಾರ್ಥನೆಗೆ ಬಗೆಸೋತು ;

"． ． ． ． ． ． ． ．ವೈರಂ
ವೈರಾಗ್ಯವೊಂದಿರ್ದ್ದೆರ್ದೆಗೆ ಕರುಣೆಯುಕ್ಕುತಿರೆ
ಮುನ್ನುಗ್ಗಿದನೊ ಅಣ್ಣನಪ್ಪಲಿಂದಾ ತಮ್ಮನಂ.
ಅಗ್ರಜನ ಹೃದಯಪರಿವರ್ತನೆಯನರಿಯದಾ
ಸುಗ್ರೀವನಿಕ್ಕಿದರೆಬಂಡೆಗಳನಂಗೈಯ
ದಾಂಡಿನಿಂ ಪೊಡೆಸೆಂಡನಾಡುತೆ ಕೆಲಕ್ಕೆಣೆದು
． ． ． ． ． ． ． ． ． ．
ತಮ್ಮನಂ ಪೊತ್ತು, ತಾಯೂರ್ಗೆ ಧಾವಿಸಿದನೈ "[13]

ಆಗ ಶ್ರೀ ರಾಮಚಂದ್ರ ವಾನರನ ಬೆನ್ಗೆ ಕಠೋರಶರಮೃತ್ಯುವನ್ನು ಬಿಟ್ಟು ಕೆಡಹು ತ್ತಾನೆ. ಮರೆಯಲ್ಲಿ ನಿಂತು ಬೆನ್ನಿಗೆ ಬಾಣಬಿಟ್ಟ ರಾಮನನ್ನು ವಾಲಿ ಮನಬಂದಂತೆ ನಿಂದಿಸುತ್ತಾನೆ. ಪ್ರೀತಿ, ಪಶ್ಚಾತ್ತಾಪ, ಭ್ರಾತೃಮೈತ್ರಿಯಿಂದ ಪರಿಶುದ್ಧನಾಗಿದ್ದ ವೈರವಿಲ್ಲದ ತನ್ನ ಬೆನ್ನಿಗೆ ಅಂಬುಬಿಟ್ಟ 'ಹೀನ'ಕೃತ್ಯವನ್ನು ಜರಿಯುತ್ತಾನೆ. ಆಗ ಶ್ರೀ ರಾಮಚಂದ್ರ ನೆಲಕ್ಕೆ ಕುಸಿದು :

'ಮನ್ನಿಸೆನ್ನಂ, ಮಹಾ
ವೀರ ! ತಪ್ಪಿದೆನಯ್ಯೊ. . .
. . . ಮಾಡಿದ ತಪ್ಪನೊಪ್ಪಿಕೊಳ್ವುದೆ ಲೌಕಿಕದ
ಬೀರಕ್ಕೆ ಸಲ್ಲಕ್ಷಣಂ : "[14]

ಎಂದು ತನ್ನ ತಪ್ಪನ್ನು ಒಪ್ಪಿಕೊಳ್ಳುತ್ತಾನೆ. ಅದ್ವಿತೀಯ ಕೇಡಿಗನೆಂದು ಬಗೆದ ವಾಲಿ, ಹೀಗೆ ಪರಿವರ್ತನೆ ಹೊಂದಿ ರಾಮಚಂದ್ರನಿಂದಲೂ ಕ್ಷಮೆಯ ಯಾಚನೆ

---

13 ಶ್ರೀ ರಾ.ದ. ಮ. ಸಂ. ೧, ಪು. ೩೧೧.

14 ಶ್ರೀ ರಾ.ದ. ಮ. ಸಂ. ೧, ಪು ೩೧೪, ಸಾ. ೩೫೫ ರಿಂದ ೩೬೦.

ಮಾಡುವಂತೆ ಆಗಿದೆ ಶ್ರೀ ರಾಮಾಯಣದರ್ಶನದಲ್ಲಿ. ಇದುವರೆಗೆ, ಶಿಷ್ಟರಕ್ಷಣೆಗಾಗಿ, ದುಷ್ಟನಿಗ್ರಹ ಆವಶ್ಯಕವೆಂದು ಲೋಕವೆಲ್ಲ ಬಗೆದಿದ್ದರೂ, ಶ್ರೀ ರಾಮಾಯಣದರ್ಶನದಲ್ಲಿ ನಿಗ್ರಹ ದಂಡನೆ ಎಂಬುದಕ್ಕೆ ಸ್ಥಾನವೇ ದೊರೆತಿಲ್ಲ ಅಥವಾ ಅರ್ಥವೇ ಬೇರೆಯಾಗಿದೆ. ದುಷ್ಟನಿಗ್ರಹಕ್ಕಿಂತಲೂ, ದುಷ್ಟರ ಪರಿವರ್ತನೆ ಆಗಬೇಕಾದುದು ಕರುಣಾಕರನಿಗೆ ಒಪ್ಪುವ ಗುಣ.

ಇಂತಹ ಪರಿವರ್ತನೆಯನ್ನೂ ವಿಕಾಸವನ್ನೂ ರಾಮಚಂದ್ರ ಉಂಟುಮಾಡದೆ ಇದ್ದಿದ್ದರೆ ಅವನ ಅವತಾರವೇ ವ್ಯರ್ಥವಾಗಿ ಹೋಗುತ್ತಿತ್ತು. ಈ ದೃಷ್ಟಿಯಿಂದ ರಾಮಾವತಾರದ ಸಾರ್ಥಕತೆ ಶ್ರೀ ರಾಮಾಯಣಾವತಾರದಲ್ಲಿ ಆಗಿದೆ!

೩

ರಾಮಾಯಣ ಮಹತ್‌ಕಾವ್ಯದಲ್ಲಿ ಸೃಷ್ಟಿಯಾಗಿರುವ ಪ್ರತಿಯೊಂದು ಪಾತ್ರವೂ ತನ್ನ ಆಯಾ ಉದ್ದೇಶಗಳನ್ನು ಪರಿಪೂರ್ಣವಾಗಿ ನೆರವೇರಿಸುತ್ತದೆ. ಶ್ರೀ ರಾಮಚಂದ್ರ ಆದರ್ಶ ಪುತ್ರ; ಆದರ್ಶ ಪತಿ; ಆದರ್ಶ ವೀರ. ಲಕ್ಷ್ಮಣನ ಸೋದರಪ್ರೇಮ, ಭರತನ ಭ್ರಾತೃಪ್ರೇಮ, ಸೀತೆಯ ಪತಿಭಕ್ತಿ, ಸುಗ್ರೀವನ ಸ್ನೇಹ, ಆಂಜನೇಯನ ಭಕ್ತಿ, ಎಲ್ಲವೂ ಲೋಕಕ್ಕೆ ಆದರ್ಶಪ್ರಾಯವಾಗಿದೆ. ಆದರ್ಶ ಎಂದರೆ ಎಲ್ಲರೂ ನಿಲುಕಬೇಕಾದ್ದು, ಪಡೆಯಬೇಕಾದ್ದು. ಆದ್ದರಿಂದಲೇ ಏನೋ, ಕೆಲವರು, ರಾಮಾಯಣ ಸಾಧಾರಣ ಜನರ ಸಾಧಾರಣ ಸಾಮರ್ಥ್ಯಕ್ಕೆ ನಿಲುಕಲಾರದ ಆದರ್ಶವನ್ನು ಓದುಗನ ಮುಂದಿಟ್ಟಿದೆ ಎಂದು ಹೇಳುವುದುಂಟು. ಅದೇನೇ ಇರಲಿ, ಶ್ರೀ ರಾಮಚಂದ್ರ ಆದರ್ಶಪುತ್ರನೆಂಬುದು ಮಾತ್ರವಲ್ಲದೆ, ಆದರ್ಶಮಾನವ ಎಂದು ಭಾವಿಸುವವರು ಬಹುಜನರಿದ್ದಾರೆ. ರಾಮಾಯಣ ರಚನೆಯಿಂದ ಆದಿಕವಿ, ಭರತಖಂಡದ ಕಣ್ಮುಂದೆ ಕಟ್ಟಿದ ಆದರ್ಶ : ರಾಮನ ಜೀವನ.

ಆದರ್ಶಪುರುಷನ ಲಕ್ಷಣವೇನು? ಈ ಪ್ರಶ್ನೆಗೆ ಅತ್ಯಂತ ಸಮರ್ಪಕವಾದ ಉತ್ತರವನ್ನು ನಾವು ಗೀತೆಯಲ್ಲಿ ಕಾಣಬಹುದು. ಸುಖದುಃಖಗಳಲ್ಲೂ, ಮಾನಾಪಮಾನಗಳಲ್ಲೂ ದೇಹೇಂದ್ರಿಯಗಳನ್ನು ಅಂಕೆಯಲ್ಲಿಟ್ಟುಕೊಂಡವನಾಗಿ; ಶಾಸ್ತ್ರದ ತಿಳಿವಿನಿಂದಲೂ ಅನುಭವದಿಂದಲೂ ತೃಪ್ತಿಯನ್ನು ತಂದುಕೊಂಡಿರುವವನಾಗಿ, ಯಾವಾಗಲೂ ಒಂದೇ ರೀತಿಯಾಗಿರುವವನಾಗಿಯೂ, ಮಣ್ಣನ್ನೂ ಬಂಗಾರವನ್ನೂ ಸಮದೃಷ್ಟಿಯಿಂದ ಕಾಣುವವನೂ; ಒಳ್ಳೆಯವರನ್ನೂ, ಕೆಟ್ಟವರನ್ನೂ, ಸ್ನೇಹಿತರನ್ನೂ, ಶತ್ರುಗಳನ್ನೂ—ಎಲ್ಲರನ್ನೂ ಸಮದೃಷ್ಟಿಯಿಂದ ಕಾಣುವವನೂ ಆದರ್ಶಪುರುಷ.[15] ಅಂಥವನ

15 ಭಗವದ್ಗೀತೆ, ಅ. ೬, ಶ್ಲೋಕಗಳು ೭-೮-೯.

ದೃಷ್ಟಿಯಲ್ಲಿ ವಿದ್ಯಾವಿನಯಸಂಪನ್ನನಾದ ಬ್ರಾಹ್ಮಣನೂ, ಹಸುವೂ, ಆನೆಯೂ, ಹೊಲೆಯನೂ—ಸಮಾನರು.[16] ಅವನಿಗೆ ಮೇಲುಕೀಳುಗಳಿಲ್ಲ. ತನ್ನನ್ನು ಎಲ್ಲ ಪ್ರಾಣಿಗಳಲ್ಲೂ, ಎಲ್ಲ ಪ್ರಾಣಿಗಳನ್ನು ತನ್ನಲ್ಲಿಯೂ ಅಡಕವಾಗಿರುವವೆಂದು ನೋಡುತ್ತಾನೆ. ಯಾರು ಎಲ್ಲೆಲ್ಲಿಯೂ ಭಗವಂತನನ್ನೇ ಕಾಣುತ್ತಾನೋ, ಭಗವಂತನಲ್ಲಿಯೇ ಎಲ್ಲವುದನ್ನೂ ಕಾಣುತ್ತಾನೋ[17] ಅಂಥವನು ಆದರ್ಶಪುರುಷ ಎಂದು ಹೇಳಬಹುದು.

ಶ್ರೀ ರಾಮಾಯಣದರ್ಶನದಲ್ಲಿ ಶ್ರೀ ರಾಮ ಇಂಥ ಆದರ್ಶಪುರುಷನಾಗಿ ಬೆಳಗುತ್ತಿದ್ದಾನೆ. 'ಕಾಮಾಂಧವಶನಾಗಿ ಲಂಪಟನೊರ್ವ, ಮತಿಗೆಟ್ಟ ಮುಪ್ಪುದೊರೆ, ಹೆಂಗುಸೊರ್ವಳ ಪದಕ್ಕೆ ದಾಸನಾಗುರುಳಿದರೆ, ಪೂಜ್ಯನೀ ರಾಮಚಂದ್ರಂ ರಾಜ್ಯಮಂ ತ್ಯಜಿಸಿ ವಿಪಿನಾಂತರದ ವಾಸಮಂ ಕೈಕೊಳ್ವುದೇಕೆ?[18] ಎಂದು ಲಕ್ಷ್ಮಣನು ಕ್ರೋಧದಿಂದ ನುಡಿದಾಗ ಶ್ರೀ ರಾಮಚಂದ್ರ:

"। . . . . ಮುನಿಯದಿರ್, ಸೌಮಿತ್ರಿ,
ಬರಿದೆ ಬಯ್ವುದೆ ತಂದೆಯಂ, ತಿಳಿಯದಾಂತರ್ಯಮಂ?
ಕೋಸಲದ ನೆಲದ ದೊರೆತನವೆನಗೆ ದೊರೆಯದಿರೆ
ಕೇಡೆಂದು ಬಗೆಯದಿರ್! ಲೇಸನೆಸಗುವ ವಿಧಿಗೆ
ಬಹುಪಥಗಳುಂಟು ನಡೆಯಲ್ . . . ."[19]

ಎಂದು ವನವಾಸವನ್ನೂ ದೊರೆತನವನ್ನೂ ಸಮದೃಷ್ಟಿಯಿಂದ ಕಂಡು ತಮ್ಮನನ್ನು ಸಂತಯಿಸುತ್ತಾನೆ. ಹಾಗೆಯೇ ತನ್ನನ್ನು ಕಾಡಿಗಟ್ಟಿದ ಕೈಕೆಯ ಬಗೆಗೆ:

'. . . . . ಕಿರಿಯ ತಾಯ್
ನಿಯತಿ ಹಸ್ತದೊಳೊಂದು ಕೈದು ತಾಂ. ಕೀರ್ತಿಯಂ
ಮೇಣ್ ಜನಪ್ರೀತಿಯಂ ತೆತ್ತಾಕೆ ತಾಂ ಧನ್ಯೆ,
ದೇವ ಸನ್ಮಾನ್ಯೆ: ಮರೆವುದು ತುದಿಯೊಳಾ ನನ್ನಿ!'[20]

ಎಂದು ಮಲತಾಯಿಯ ಬಗೆಗೆ ಒಂದಿನಿತೂ ದ್ವೇಷವನ್ನು ವ್ಯಕ್ತಪಡಿಸುವುದಿಲ್ಲ.

---

[16] ಭಗವದ್ಗೀತೆ, ಅ. ೫, ಶ್ಲೋಕ ೧೮.

[17] ಅದರಲ್ಲಿಯೇ. ಅ. ೬, ಶ್ಲೋ. ೨೯-೩೦.

[18] ಶ್ರೀ ರಾ.ದ. ಮಹಾಸಂಪುಟ ೧, ಪುಟ ೮೦.

[19] ಶ್ರೀ ರಾ.ದ. ಮ. ಸಂ. ೧, ಪುಟ. ೮೧, ಸಾ. ೮೫ ರಿಂದ ೯೦.

[20] ಅದೇ. ಪು. ೧೭೧, ಸಾಲು ೫೨೪ ರಿಂದ ೫೨೮.

ಇವರೆಲ್ಲರೂ ತನ್ನವರು. ಅವರ ಬಗ್ಗೆ ಆ ದೃಷ್ಟಿ ತಳೆದದ್ದು ಅಷ್ಟೇನೂ ದೊಡ್ಡ ಮಾತಾಗಿ ಕಾಣದಿರಬಹುದು. ಆದರೆ, ತನ್ನ ಪ್ರೀತಿಯ ಮಡದಿಯನ್ನೇ ಕದ್ದೊಯ್ದು ಲಂಕೇಶ ರಾವಣನ ಬಗ್ಗೆ ರಾಮಚಂದ್ರನು ಒಂದಿನಿತು ಔದಾರ್ಯವನ್ನೂ* ತೋರಿಸುವ ಕಾರಣ ಎಳ್ಳಷ್ಟೂ ಇರಲಾರದು. ಆದರೆ ಶ್ರೀ ರಾಮಚಂದ್ರನಂತಹ ಅವತಾರಪುರುಷನಿಗೆ ಯಾರಾದರೂ ವೈರಿಗಳು ಇದ್ದಾರೆಂದು ನಂಬುವುದು ಶುದ್ಧ ತಪ್ಪಾಗುತ್ತದೆ. ವಿದ್ಯಾವಿನಯಸಂಪನ್ನನಾದ ಬ್ರಾಹ್ಮಣನೂ, ಹಸುವೂ, ಆನೆಯೂ, ನಾಯಿಯೂ, ಚಾಂಡಾಲನೂ ಸಮಾನರೆಂದು ಕಾಣುವ ಶ್ರೀ ರಾಮನಿಗೆ ರಾವಣ ವೈರಿ ಎಂದರೇನು? ಯಾರು ಎಲ್ಲರಲ್ಲೂ ತನ್ನನ್ನೇ, ತನ್ನಲ್ಲಿಯೇ ಎಲ್ಲರನ್ನೂ ನೋಡುತ್ತಾನೋ ಅವನಿಗೆ ಶತ್ರುವಾರು? ಮಿತ್ರನಾರು? ಶ್ರೇಷ್ಠನಾರು, ಕನಿಷ್ಠನಾರು? ಇಂಥ ಸ್ಥಿತಪ್ರಜ್ಞನಾಗಿದ್ದರಿಂದಲೆ ಶ್ರೀ ರಾಮಾಯಣದರ್ಶನದ ರಾಮ, ರಾವಣನನ್ನು :

> 'ನಾನೆ ಅವನಲ್ಲದಿರೆ, ಆ ದಶಗ್ರೀವಂಗದೇನ್,
> ಸೀತೆಯನ್ನೊಲಿವುದುಂ, ಮೇಣವಳನುಯ್ವುದುಂ
> ಕೇಳ್ ಮೊರ್ಗೆ?[21]

* ಮಾನವ ವ್ಯಾಪಾರದ ನೈತಿಕ ಮಾನದಂಡದಿಂದ ಶ್ರೀ ರಾಮಚಂದ್ರನ ನಡವಳಿಕೆಯನ್ನು ತೂಗಿ ನೋಡುವ ನರಮತಿಗೆ 'ಔದಾರ್ಯ'ವಾಗಿ ತೋರುತ್ತದೆ. ಆದರೆ, ಶ್ರೀ ರಾಮಚಂದ್ರನಂತಹ ಅವತಾರಪುರುಷನಿಗೆ ಆ ವಿಶೇಷಣ ಅರ್ಥವಿಲ್ಲದ್ದು. ಶ್ರೀ ರಾಮಚಂದ್ರ ಹಾಗಲ್ಲದೆ ಇನ್ನು ಮತ್ತಾವ ರೀತಿಯಲ್ಲೂ ನಡೆದುಕೊಳ್ಳಲಾರ. ಅದು ಅವನ ಸಹಜಸ್ವಭಾವ. (ಸ್ವಭಾವ ಎಂದರೇನು ಎಂಬುದನ್ನು ಶ್ರೀ ಅರವಿಂದರ Essays on the *Gita* : Second Series, pp. ೨೧-೨೨ ರಲ್ಲಿ ನೋಡಿ). ಮನುಷ್ಯ ಉಸಿರಾಡುವುದು ಹೇಗೆ ತನ್ನ ಬದುಕಿಗೆ ಅನಿವಾರ್ಯವೋ, ಸಹಜವೋ, ನೈಸರ್ಗಿಕ ನಿಯಮವೋ ಹಾಗೆಯೇ ಶ್ರೀ ರಾಮಚಂದ್ರ ರಾವಣನೊಡನೆ ನಡೆದುಕೊಂಡ ರೀತಿಯೂ ಕೂಡ. ಮನುಷ್ಯ ಉಸಿರಾಡಿ ಸಸ್ಯಜೀವಿಗಳಿಗೆ ಇಂಗಾಲಾಮ್ಲವನ್ನು ಒದಗಿಸಿ ಉಪಕಾರಮಾಡುತ್ತಿದ್ದಾನೆ ಎಂಬುದು ಹೇಗೋ ಹಾಗೆಯೇ ಶ್ರೀ ರಾಮಚಂದ್ರ ಲಂಕೇಶನ ಬಗ್ಗೆ 'ಔದಾರ್ಯ'ವನ್ನು ತೋರಿಸಿದನೆಂಬುದೂ ಕೂಡ. ಶ್ರೀ ರಾಮಚಂದ್ರನ ಕರ್ಮಗಳೆಲ್ಲ ವಿಜ್ಞಾನಮಯ ಆನಂದಮಯ ಭೂಮಿಕೆಯಲ್ಲಿ ನಡೆಯುವ ಘಟನೆಗಳು, ಅವನು ಆಗ,

> "ದ್ವೇಷರಾಗಗಳಿಲ್ಲ ಲೋಭಮೆನಗಿಲ್ಲ;
> ಮೋಹಮದ ಮಾತ್ಸರ್ಯ ಭಾವಮೆನಗಿಲ್ಲ;
> ಧರ್ಮಾರ್ಥ ಕಾಮಾದಿ ಮೋಕ್ಷನಾನಲ್ಲ"

ಎಂದು ಹಾಡಿಕೊಳ್ಳುವ ನಿರ್ವಾಣಸ್ಥಿತಿಯಲ್ಲಿದ್ದಾನೆ. ಆದಕಾರಣ ವಿಶೇಷಣರಹಿತನಾದ ಅವನ ನಡತೆಯನ್ನು ವಿಶೇಷಣಗಳಿಂದ ಬಣ್ಣಿಸುವುದು ನಮ್ಮ ನರಮತಿಯ ಇತಿಮಿತಿಯಿಂದ ನೋಡಿದಾಗ ಉಂಟಾದ ಪರಿಮಿತ ಬುದ್ಧಿ ಗ್ರಾಹ್ಯ ಸತ್ಯವೇ ಹೊರತು ಅತೀಂದ್ರಿಯಗೋಚರವಾದ ನಿತ್ಯಸತ್ಯವಲ್ಲ.

[21] ಶ್ರೀ ರಾ.ದ. ಮ. ಸಂ. ೨, ಪು. ೭೬೨.

ಎಂದು, ತನ್ನ ಸಮಾನನೆಂದು ತಾನೇ ಹೇಳುತ್ತಾನೆ. ಇದಕ್ಕಿಂತಲೂ ಸ್ಪಷ್ಟವಾಗಿ, ಇದೇ ಮಾತನ್ನು ಇನ್ನೊಂದು ಕಡೆ ಹೇಳುತ್ತಾನೆ. ರಾವಣನು ಯೋಗನಿದ್ರೆಗೆ ಸಂದಮೇಲೆ, ವಿಭೀಷಣನು ತನ್ನಣ್ಣನಿಗೆ ವೀರಾರ್ಹಮರ್ಯಾದೆಯಿಂದ ಅಗ್ನಿ ಕಾರ್ಯವನ್ನು ಮಾಡಬಹುದೇ ಎಂದು ಕೇಳಿದಾಗ, ರಾಮದೇವರು :

'ನೀನಿಂದು ರಾವಣಂಗೆಸಪ ಸತ್‌ಕ್ರಿಯೆಯೊಳಾಂ
ಸುಪ್ರೀತನೆಂ! ವೈರಿಯಾದೊಡಮೆನಗೆ ಸಮಂ
ಆ ದಿವಂಗತ ದೈತ್ಯನತುಳ ವೀರ್ಯದೊಳಾತ್ಮ
ಸತ್ತ್ವದೊಳ್ ನಿರ್ಭೀತಿಯೊಳ್ ತೇಜದೊಳ್ ಮತ್ತೆ
ಚಿತ್ತಶುದ್ಧಿಯೊಳಂತೆ ಚಿತ್‌ತಪಸ್ ಶಕ್ತಿಯಲಿ!'[22]

ಹೀಗೆ ಶ್ರೀ ರಾಮಾಯಣದರ್ಶನದಲ್ಲಿ ಶ್ರೀ ರಾಮ ತನ್ನ ಅವತಾರದ ಉದ್ದೇಶವನ್ನು ನೆರವೇರಿಸಿಕೊಂಡಿರುವುದಲ್ಲದೆ, ತಾನು ಅವತಾರಪುರುಷನಂತೆ ನಡೆದುಕೊಂಡಿದ್ದಾನೆ. ಶ್ರೀ ರಾಮಾಯಣದಲ್ಲಿ ಮೈದೋರಿರುವ ಈ ರಾಮ, ಸೃಷ್ಟಿಯ ಸಮಷ್ಟಿಪ್ರಜ್ಞೆಯ ಸಾಮೂಹಿಕ ವಿಕಾಸವನ್ನುಂಟುಮಾಡುವ ಧರ್ಮಸಂಸ್ಥಾಪನೆ ಮಾಡುವುದರಲ್ಲಿ ದುಷ್ಟನಿಗ್ರಹ ಕ್ರಮ ಕೈಕೊಳ್ಳುವುದಿಲ್ಲ. ದುಷ್ಟಪರಿವರ್ತನೆ, ದುಷ್ಟರ ದೈವೀಪ್ರಜ್ಞೆಯ ವಿಕಾಸಕ್ರಮವನ್ನು ಕೈಕೊಳ್ಳುತ್ತಾನೆ. ಈ ಮಹಾಕವಿ ಶ್ರೀ ರಾಮಚಂದ್ರನನ್ನು ಕೊಂಡಾಡುವುದು ಅವನು ರಾವಣನನ್ನು ಕೊಂದನೆಂಬ ಕಾರಣದಿಂದ ಅಲ್ಲ :

' ಕೊಂದ ಕತದಿಂದೇಂ
ಪೆರ್ಮನಾದನೆ ರಾಮನಾ ಮಾತನುಳಿ : ಪಗೆಯೆ ?
ತೆಗೆತೆಗೆ! ಪೆರ್ಮೆಗೊಲ್ಮೆಯೆ ಚಿಹ್ನೆ. ಮಹತ್ತಿಗೇಂ
ಬೆಲೆಯೆ ಪೇಳ್ ಕೊಲೆ? ದೈತ್ಯನ ಗೆಲಿದಕಾರಣಕಲ್ತು,
ತನ್ನ ದಯಿತೆಯನೊಲಿದ ಕಾರಣಕೆ, ಗುರು ಕಣಾ
ರಾಮಚಂದ್ರಂ. ಕೋಲಾಹಲದ ರುಚಿಯ ಮೋಹಕ್ಕೆ
ಮರುಳಾದ ಮಾನವರ್ ರಾವಣನ ಕೊಲೆಗಾಗಿ
ರಾಮನಂ ಕೊಂಡಾಡಿದೊಡೆ ಕವಿಗುಮಾ ಭ್ರಾಂತಿ
ತಾನೇಕೆ?''[23]

ಆದಕಾರಣ ಮಹಾಕವಿ ಕುವೆಂಪು ಅವರ ದರ್ಶನದಲ್ಲಿ "ಕೊಲೆ," "ಹಗೆ"*—

[22] ಅದೇ. ಪು. ೮೧೭.

[23] ಶ್ರೀ ರಾ.ದ. ಮ. ಸಂ. ೧, ಪು ೧೪೯, ಸಾ. ೧೯೩ರಿಂದ ೨೦೦.

* 'ಕೊಲೆ'—'ಹಗೆ' ಎಂಬುವು ಲೋಕವ್ಯವಹಾರದೃಷ್ಟಿಯಿಂದ ಇಲ್ಲಿಯೂ ಇವೆ.

ಎಂಬುವು ಕಾವ್ಯದಲ್ಲಿ ಎಲ್ಲಿಯೂ ಇಲ್ಲ. ಹೀಗಲ್ಲದೆ, ಮತ್ತೆ ಇನ್ನು ಯಾವ ರೀತಿಯಿಂದಲಾದರೂ ರಾಮನನ್ನು ಚಿತ್ರಿಸಿದ್ದರೆ ಅದು ಖಂಡಮನಸ್ಸಿನ, ಖಂಡದೃಷ್ಟಿಯ ಭ್ರಮಾಶೀಲ ದರ್ಶನವಾಗುತ್ತಿತ್ತು. ರಾಮಾವತಾರಕ್ಕೂ ಅಪಚಾರವಾಗುತ್ತಿತ್ತು. ಈ ದೃಷ್ಟಿಯಿಂದಲೂ ಶ್ರೀ ರಾಮಾವತಾರದ ಸಾರ್ಥಕತೆ ಶ್ರೀ ರಾಮಾಯಣದರ್ಶನದಲ್ಲಿ ಆಗಿದೆ.

—ಕೋ. ಚೆನ್ನಬಸಪ್ಪ.

ಆದರೆ, ಶ್ರೀ ರಾಮಚಂದ್ರನಂಥ ಮುಕ್ತಾತ್ಮನ ಕರ್ಮದಲ್ಲಿ ಅವುಗಳಿಗೆ ಬೇರೆಯ ಸ್ವರೂಪವೇ ಉಂಟಾಗಿದೆ. 'He has no personal enemies to be conquered or slain, but sees only men who have been brought up against him by circumstances and the will in things to help by their opposition the march of destiny. Against them he can have no wrath or hatred; for wrath and hatred are foreign to the divine nature.'

—Essays on the *Gita*—I Series, p. 228.

ಗಾಥಾಸಪ್ತಶತಿಯಿಂದ

೧

ಕಿವುಡರು ಕುರುಡರು ಇಬ್ಬರೆ ಧನ್ಯರು
ನಮ್ಮ ಈ ಮಾನವಲೋಕದೊಳು :
ಕೇಳಿಸಿಕೊಳ್ಳರು ಚಾಡಿಯ ಸುದ್ದಿಯ,
ಕಾಣರು ಕೆಟ್ಟವರೇಳಿಗೆಯ.

೨

ನಲ್ಲೆಯ ಚಂದದ ಮೊಗವನು ನೋಡುವ—
ಮೂಲ್ಯದ ಸೌಖ್ಯವದೊತ್ತಟ್ಟಿಗಿರಲಿ ;
ಬಗೆಯುಬ್ಬಿ ನಲಿಯುವುದೂರಿನ ಗಡಿಯನು
ಕಂಡಷ್ಟುಮಾತ್ರದೊಳೇನೆನ್ನಲಿ !

೩

ಜನರೆಲ್ಲ ನೊಂದರು ಊರೆಲ್ಲವೂ ಬೆಂದು
ನನ್ನದೆ ನಲಿಯುತಲಿದ್ದಿತಂದು :
ನಾವಿಬ್ಬರೂ ಕೂಡಿ ಗಡಿಗೆಯ ನೀರನು
ಕೈಕೈಯ ಸೋಂಕಿಸುತೊಯ್ದವೆಂದು.

೪

ವಾದ್ಯವು ಮೊಳಗಿದೆ, ಕಲಕಲವೆದ್ದಿದೆ ;
ಜನರ ಓಡಾಟವು ಹೆಚ್ಚುತಿದೆ.
ಹಬ್ಬದ ಹಳ್ಳಿಯೊಳವನೊಬ್ಬನಿಲ್ಲದೆ
ನನಗೇನೊ ಉರಿಬಿದ್ದವೋಲಾಗಿದೆ !

—ಎಸ್. ವಿ. ಪರಮೇಶ್ವರಭಟ್ಟ

ಮಾಧೂ ಮರುಳು

(ನಾಟಕ)

'ಮಂ'

ಪಾತ್ರಗಳು

ಭೀಮಣ್ಣ	ಆನಂದ
ಕಿಟ್ಟ	ರಮಾ
ಮಾಧವ	ಯಜಮಾನಿ

ಸೂಚನೆ: ಷೇಕ್ಸ್‌ಪಿಯರ್ ಕವಿಯ 'Twelfth Night' ನಾಟಕದಲ್ಲಿ, 'Fooling of Malvolio' ಎನ್ನುವ ಭಾಗದ ಕನ್ನಡ ಅನುವಾದ. ತುಮಕೂರಿನಲ್ಲಿ ಇದನ್ನು ರಂಗಭೂಮಿಯಲ್ಲಿ ಜಯಪ್ರದವಾಗಿ ಪ್ರದರ್ಶಿಸಲಾಯಿತು.

ಮಂ.

ಮಾಧೂ ಮರುಳು

ದೃಶ್ಯ ೧

ದೊಡ್ಡ ಬಂಗಲೆಯಲ್ಲಿ ಒಂದು ಮಹಲು. ಪ್ರವೇಶ ಭೀಮಣ್ಣ, ಆನಂದರಾಯ.

ಭೀಮಣ್ಣ—ಬಾರೋ ಆನಂದರಾಯ! ನಡುರಾತ್ರೆಯಾದ ಮೇಲೆ ಹಾಸಿಗೆಯಲ್ಲಿ ಮಲಗದೆ ಇದ್ದರೆ ಬಹಳ ಜಾಗ್ರತೆ ಎದ್ದ ಹಾಗೆ. ನಿನಗೆ ಗೊತ್ತಿಲ್ಲವೆ—ಬ್ರಾಹ್ಮೀಮುಹೂರ್ತೇಚ ಉತ್ಥಾಯ . . . ಇತ್ಯಾದಿ.

ಆನಂದ—ಇಲ್ಲ, ನಿಜವಾಗಿ ನನಗೆ ಗೊತ್ತಿಲ್ಲ. ಆದರೆ ಇಷ್ಟು ಮಾತ್ರ ಗೊತ್ತು. ಹೊತ್ತಾಗಿ ಎಚ್ಚರವಾಗಿರೋದು ಅಂದರೆ ಹೊತ್ತಾಗಿ ಎಚ್ಚರವಾಗಿರೋದು ಅಂತ.

ಭೀಮಣ್ಣ—ಆ ಸಿದ್ಧಾಂತ ತಪ್ಪು. ಖಾಲಿ ಸೀಸೆ ಕಂಡರೆ ನನಗೆ ಹೇಗೆ, ಆಗುವುದಿಲ್ಲವೋ ಹಾಗೇ ಆ ಸಿದ್ಧಾಂತ ಕಂಡರೆ. ನಡುರಾತ್ರೆ ವರೆಗೂ ಎಚ್ಚರವಾಗಿದ್ದು ಆ ಮೇಲೆ ಮಲಗಿದರೆ ಬಹಳ ಜಾಗ್ರತೆ ಮಲಗಿದ ಹಾಗೆ. ಆದುದರಿಂದ ನಡುರಾತ್ರಿ ಕಳೆದ ಮೇಲೆ ಮಲಗುವುದು ಬಹು ಜಾಗ್ರತೆ ಮಲಗಿದ ಹಾಗೆ. ನಮ್ಮ ಜೀವನ ಪಂಚಭೂತಾತ್ಮಕವಲ್ಲವೇನಯ್ಯ?

ಆನಂದ—ದೊಡ್ಡವರು ಹಾಗೆ ಹೇಳುತ್ತಾರೆ. ಆದರೆ ನನಗೆ ತಿಳಿದಂತೆ ಅದರಲ್ಲಿರುವುದು ಎರಡೇ ಕೆಲಸ: ತಿನ್ನುವುದು, ಕುಡಿಯುವುದು.

ಭೀಮಣ್ಣ—ನೀನು ಪಂಡಿತನೇ ಸರಿ. ಆದುದರಿಂದ ನಾವು ತಿನ್ನೋಣ, ಕುಡಿಯೋಣ—ರಮಾ, ರಮಾ, ಮದ್ಯದ ಪಾತ್ರೆಗಳನ್ನು ತೆಗೆದುಕೊಂಡು ಬಾ.

ಆನಂದ—ಅಗೋ, ನಕಲಿ ಕಿಟ್ಟ ಬಂದ.

(ನಕಲಿ ಕಿಟ್ಟನ ಪ್ರವೇಶ)

ಕಿಟ್ಟ—ಏನ್ರಯ್ಯ ಮಿತ್ರವರ್ಯರೇ! "ನಾವು ಮೂವರು" ಎನ್ನುವ ಚಿತ್ರವನ್ನು ಯಾವತ್ತಾದರೂ ನೋಡಿದ್ದೀರೋ?

ಭೀಮಣ್ಣ—ಬಾರೋ ಕತ್ತೆ! ಹೇಳೋ ಒಂದು ಹಾಡು.

ಆನಂದ—ನಿಜವಾಗಿ ಈ ನಕಲಿ ಕಿಟ್ಟನಿಗೆ ಒಳ್ಳೆ ಎದೆ ಇದೆ. ಇವನ ಹಾಗೆ ಕಾಲು, ಕೋಗಿಲೆ ಕಂಠ ಇದ್ದರೆ ನನಗೆ ಜೇಬಿನಲ್ಲಿ ಐವತ್ತು ರೂಪಾಯಿ ಇದ್ದುದಕ್ಕಿಂತ ಹೆಚ್ಚು ಸಂತೋಷ. ನಿಜವನ್ನು ಹೇಳುತ್ತೇನೆ, ಕೇಳು. ನೆನ್ನೆ ರಾತ್ರಿ ನಿನ್ನ ನಕಲಿ ಬಹು ಸೊಗಸಾಗಿತ್ತು. ಪಂಡಿತ ಪಿಗ್ರೋಗ್ರೋಮಿತ್ರ, ವಾಪನಾಯನ, ಇತ್ಯಾದಿ

ಸರಕುಗಳನ್ನೆಲ್ಲ ಎಲ್ಲಿಟ್ಟಿದ್ದೆಯೋ ? ನಿಜವನ್ನೆ ಹೇಳುತ್ತೇನೆ—ನಕಲಿ ಬಹಳ ರಮ್ಯ ವಾಗಿತ್ತು. ಸೆಶ್ಯಕ್ಕಿರಲಿ ಎಂದು ಎಂಟಾಣೆ ಕಳುಹಿಸಿದೆ, ತಲಪಿತೋ ?

ಕಿಟ್ಟ—ಪಾರಿತೋಷಕವನ್ನು ಪಾಕೆಟ್ಟಿನಲ್ಲಿ ಪ್ರಕ್ಷಿಪ್ತಮಾಡಿದೆ; ಮಾಧವ ಮೂರ್ತಿಯ ಮೂಗು ಬಾರ್‌ಕೋಲಲ್ಲ. ನನ್ನ ಯಜಮಾನಿ ಕೈ ಬೆಳ್ಳಗಿದೆ; ಪೋಲೀಸಿ ನವರು ಪಡಖಾನೆ ಮನೆಗಳಲ್ಲ.

ಆನಂದ—ಭಲಾ ! ಭಲಾ ! ! ಒಟ್ಟಿನಲ್ಲಿ, ಏನು ಸೊಗಸಾದ ನಕಲಿಯೋ ನಿನ್ನದು ! ಬಾ, ಬಾ, ಒಂದು ಹಾಡು.

ಭೀಮಣ್ಣ—ಬಾರಮ್ಮ, ಬಾರೋ. ಎಂಟಾಣೆ ತೆಗೆದುಕೋ : ಹೇಳೋ ಒಂದು ಹಾಡು.

ಆನಂದ—ನನ್ನದೂ ಎಂಟಾಣೆ ತೆಗೆದುಕೋ. ಒಬ್ಬ ಸರದಾರ ಕೊಟ್ಟರೆ—

ಕಿಟ್ಟ—ನಿಮಗೇನು ಪ್ರೇಮಗೀತೆ ಬೇಕೋ ; ನೀತಿಶತಕದ ಶ್ಲೋಕ ಬೇಕೋ ?

ಭೀಮಣ್ಣ—ಪ್ರೇಮಗೀತೆ, ಪ್ರೇಮಗೀತೆ.

ಆನಂದ—ಹೌದು, ಹೌದು. ನೀತಿ ಕಟ್ಟಿಕೊಂಡು ನನಗೇನಾಗಬೇಕೋ ?

ಕಿಟ್ಟ—ಓ ಪ್ರಿಯತಮೆ, ಪ್ರೇಮಮೂರುತಿ ಅಲೆಯುತಿಹೆ ನೀನೆಲ್ಲಿ ! ನಿಲ್ಲು, ನಿಂತು ಕೇಳು ; ನಿನ್ನ ಪ್ರೇಮದೇವನು ಬರುತಿಹನು ಇಲ್ಲಿ. ಅವನ ಗೀತದ ಇಂಚರವ ನಿಂತು ಕೇಳು. ಮಧುರ ಚೆನ್ನೆ ! ಹೆಜ್ಜೆ ಇಡಬೇಡ, ಮುಂದೆ. ಪ್ರಿಯಪ್ರೇಯಸಿಯರ ಸಮಾಗ ಮವೆ ಎಲ್ಲ ಪಯಣದ ಕೊನೆಯು. ಇದನರಿಯದೆ ಮಾನವನು, ಆ ಪಂಡಿತಪುತ್ರನು !

ಆನಂದ—ಬಹಳ ಚೆನ್ನಾಗಿದೆ ; ನಿಜವಾಗಿಯೂ ಸೊಗಸಾಗಿದೆ.

ಭೀಮಣ್ಣ—ಭಲಾ ! ಭಲಾ ! !

ಕಿಟ್ಟ—ಪ್ರೇಮವೆನಲೇನು ! ಪರಲೋಕದಲ್ಲಿಲ್ಲವದು ; ಈಗಿನ ಸಂತೋಷವೆ, ಈಗಿನ ನಗೆಗೆ ಮೂಲ ; ಮುಂದೆ ಬರಲಿರುವುದನು, ಹೀಗೆ ಎನುವವರಾರು ? ಸಾವಕಾಶ ದೊಳಗಿಲ್ಲ, ಇಲ್ಲ ಸುಸಮೃದ್ಧಿ. ಪ್ರಿಯೆ, ಪ್ರಿಯತಮೆ, ಬಾ ರನ್ನೆ, ಮುತ್ತನೀಡು, ಯೌವನದ ಹೂ ಬಾಡುವುದು ಬೇಗ, ಬೇಗ.

ಆನಂದ—ಏನು ಕೋಮಲಕಂಠ ! ಆಹಾ !

ಭೀಮಣ್ಣ—ಕೋಕಿಲಕಂಠವೇ ಸರಿ !

ಆನಂದ—ಏನು ಮಾಧುರ್ಯ ! ಎಷ್ಟು ಕೋಮಲತೆ !

ಭೀಮಣ್ಣ—ಮೂಗಿನಿಂದ ಕೇಳಿದರೆ ಅದರ ಮಾಧುರ್ಯ ಸರ್ವವ್ಯಾಪಿಯಾಗಿರು ತ್ತದೆ. ಆಕಾಶ ಗಿರ್ರನೆ ತಿರುಗುವಂತೆ ಮಾಡೋಣವೋ ? ನಿದ್ರೆಮಾಡುತ್ತಿರುವ

ಗೂಬೆಯನ್ನು ನಮ್ಮ ಹಾಡಿನಿಂದ ಎಚ್ಚರಿಸೋಣವೋ? ಯಾವ ಕೆಲಸವನ್ನು ಮಾಡೋಣ?

ಆನಂದ—ಮಿತ್ರ, ಪ್ರಿಯಮಿತ್ರಾ! ಹಾಡೋಣ . . . ನಾನೂ ಹಾಡುವುದರಲ್ಲಿ ಬುದ್ಧಿವಂತ.

ಕಿಟ್ಟ—ಹೌದು, ಕೆಲವರಿಗೆ ಹಾಡುವುದು ಹುಟ್ಟಿದ ಹೊತ್ತಿನಿಂದಲೆ ಬರುತ್ತದೆ.

ಆನಂದ—ಸತ್ಯವಾದ ಮಾತು. ನಮ್ಮ ಹಾಡು ಆರಂಭವಾಗುವುದು "ಏನೋ ಗುಲಾಮ."

ಕಿಟ್ಟ—"ಮುಚ್ಚೊ ಬಾಯಿ, ಗುಲಾಮ" ಅಂತಲೋ? ಅದನ್ನು ಹಾಡಿದರೆ ನಿನ್ನನ್ನು ನಾನು ಗುಲಾಮ ಎಂದು ಕರೆಯಬೇಕಾಗುತ್ತದೆ.

ಆನಂದ—ಇದೇ ಮೊದಲುಸಲ ಅಲ್ಲ—ನಾನು 'ಗುಲಾಮ' ಎಂದು ಕರೆಯಿಸಿಕೊಂಡಿರುವುದು. ಆರಂಭಮಾಡೋ ನಕಲಿ! ಅದರ ಮೊದಲು "ಮುಚ್ಚೋ ಬಾಯಿ."

ಕಿಟ್ಟ—ನಾನು ಬಾಯಿ ಮುಚ್ಚಿಕೊಂಡರೆ, ಆರಂಭಮಾಡುವುದು ಹೇಗೋ?

ಆನಂದ—ನೀನು ಹೇಳುವುದು ನಿಜ. ಬಾ, ಆರಂಭಿಸು.

[ಮೊದಲುಮಾಡುವರು]

(ರಮಾಬಾಯಿ ಬರುವಳು)

ರಮಾ—ಬೆಕ್ಕಿನ ಜಗಳದಂತೆ ಏನು ಗಲಾಟೆ ಇಲ್ಲಿ! ನನ್ನ ಮಾತನ್ನು ನಂಬಿದರೆ ನಂಬಿ; ಬೇಡವಾದರೆ, ಬಿಡಿ. ಪಾರುಪತ್ಯೇಗಾರ ಮಾಧವಮೂರ್ತಿಯನ್ನು ಕರೆದು ಯಜಮಾನಿ ಆಜ್ಞೆಮಾಡಿದಾಳೆ—ನಿಮ್ಮನ್ನು ಮನೆಬಿಟ್ಟು ಹೊರಕ್ಕೆ ಓಡಿಸೂ ಅಂತ.

ಭೀಮಣ್ಣ—ಅವಳೊಂದು ವಿಚಿತ್ರ ಮೃಗ; ನಾವೋ ರಾಜಕಾರಣ ಪಟುಗಳು; ಮಾಧವಮೂರ್ತಿ—ಒಬ್ಬ ಹುಚ್ಚ. "ನಾವು ಮೂರು ಮಂದಿ ಪೋಕಿಗಳು" ನಾನು ಅವಳ ರಕ್ತಸಂಬಂಧಿ ಅಲ್ಲವೆ? ಹೋಗೆ ಹೋಗೆ ಹುಚ್ಚಿ! "ಉಜ್ಜಯಿನಿಯಲ್ಲಿದ್ದ ಒಬ್ಬ ಅಜ್ಜಪ್ಪ." ಹುಚ್ಚೀ, ಕೇಳು "ಉಜ್ಜಯಿನಿಯಲ್ಲಿದ್ದ ಒಬ್ಬ ಅಜ್ಜಪ್ಪ!".

ಕಿಟ್ಟ—ಭೀಮಣ್ಣನ ನಕಲಿ ಇವತ್ತು ಅಚ್ಚರಿಯಾಗಿದೆ, ಅದ್ಭುತವಾಗಿದೆ.

ಆನಂದ—ಹೌದು. ಮನಸ್ಸುಮಾಡಿದರೆ ಅವನು ಚೆನ್ನಾಗಿಯೇ ಮಾಡುತ್ತಾನೆ. ನಾನೂ ಅಷ್ಟೆ. ಆದರೆ ಅವನಲ್ಲಿ ನಯ ನಾಜೋಕು ಹೆಚ್ಚು; ನನ್ನದು ಹೆಚ್ಚು ಸ್ವಾಭಾವಿಕ.

ಭೀಮಣ್ಣ (ಹಾಡುವನು)—"ಬಂದಿತು, ಬಂದಿತು ಮಧುಮಾಸ."

ರಮಾ—ದೇವರಾಣೆ, ಸದ್ದು ಮಾಡಬೇಡಿ.

(ಪ್ರವೇಶ ಮಾಧವಮೂರ್ತಿ)

ಮಾಧವ—ಯಜಮಾನರೆ, ನಿಮಗೆ ಹುಚ್ಚೋ? ಏನಿದು ಗಲಾಟೆ? ನಿಮಗೆ ಜ್ಞಾನ, ಬುದ್ಧಿ, ನಡತೆ, ನುಡಿ, ಏನೂ ಇಲ್ಲವೋ? ರಾತ್ರಿ ಈ ಹೊತ್ತಿನಲ್ಲಿ ಕುಡುಕರಂತೆ ಅರಚುತ್ತಿದ್ದೀರಿ! ಈ ನನ್ನ ಯಜಮಾನಿ ಮನೆಯನ್ನು ಪಡಖಾನೆ ಎಂದು ತಿಳಿದಿದ್ದೀರೋ? ನಿಮ್ಮ ಗಂಟಲೇನು! ನಿಮ್ಮ ದರಿದ್ರ ಹಾಡುಗಳೇನು! ಸ್ಥಳ ಯಾವುದು, ಜನ ಯಾರು, ಹೊತ್ತೇನು ಎನ್ನುವ ಯೋಚನೆಯೇ ಇಲ್ಲ! ಯಾವುದಕ್ಕೂ ಮರ್ಯಾದೆಯೇ ಇಲ್ಲವೋ!

ಭೀಮಣ್ಣ—ನಮಗೆ ಕಾಲಜ್ಞಾನ ಚೆನ್ನಾಗಿಯೇ ಇದೆ. ನಮ್ಮ ಹಾಡಿನಲ್ಲಿ ತಾಳ ಸರಿಯಾಗಿಯೇ ಇದ್ದಿತು. ನಮ್ಮ ಗೊಡವೆ ನಿನಗೇಕೋ, ತೊಲಗೊ.

ಮಾಧವ—ಭೀಮಣ್ಣ, ನಿನಗೆ ಸ್ಪಷ್ಟವಾಗಿ ನಾಲ್ಕು ಮಾತುಗಳನ್ನು ಹೇಳಬೇಕಾಗಿದೆ. ನೀನು ಯಜಮಾನಿಯ ಚಿಕ್ಕಪ್ಪನ ಮಗ, ಆದುದರಿಂದ ಅವಳು ನಿನಗೆ ಈ ಮನೆಯಲ್ಲಿ ಸ್ಥಳವನ್ನು ಕೊಟ್ಟಿದಾಳೆ. ಆದರೂ, ನೀನು ಬೇಕೇ ಹೊರತು, ನಿನ್ನ ಈ ದುರ್ಗುಣಗಳು ಅವಳಿಗೆ ಬೇಕಿಲ್ಲವಂತೆ. ಅವಳ ಮಾತುಗಳನ್ನೇ ನಿನಗೆ ಹೇಳಿದೇನೆ. ದುರ್ಗುಣಗಳನ್ನು ದೂರಮಾಡಿದರೆ ಮಾತ್ರವೇ, ನೀನು ಈ ಮನೆಯಲ್ಲಿ ಇರುವುದು ಸಾಧ್ಯ. ಇಲ್ಲವಾದರೆ, ಈ ಮನೆಯನ್ನು ಬಿಟ್ಟು ಹೊರಡು. ನಿನ್ನನ್ನು ಕಳುಹಿಸಿಕೊಡಲು ಅವಳು ಸಂತೋಷದಿಂದ ಸಿದ್ಧಳಾಗಿದಾಳೆ.

ಭೀಮಣ್ಣ—"ಪೋಗಲೇ ಬೇಕೆಂದಾಗ ನಾನೇನಮಾಡಲಿ, ಪೋಗಿಬರುವೆನು ನಾನು, ನಿನಗೆ ನಮೋ ನಮೋ!"

ರಮಾ—ಹಾಗಲ್ಲ, ಭೀಮಣ್ಣ.

ಕಿಟ್ಟು—ಅವನ ಕಣ್ಣುಗಳನ್ನು ನೋಡು, ಅವಸಾನಕಾಲ ಬಂದಹಾಗಿದೆ."

ಮಾಧವ—ಹಾಗೇ?

ಭೀಮಣ್ಣ—"ಮರಣವೆಂಬುದು ಎನಗಿಲ್ಲವಯ್ಯ."

ಕಿಟ್ಟ—ಭೀಮಣ್ಣ, ಆ ಮಾತು ಅನೃತವಯ್ಯ.

ಮಾಧವ—ನೀನು ಹೇಳಿದ್ದು ಸರಿಯಾದ ಮಾತು.

ಭೀಮಣ್ಣ—"ಪೋಗೆಂದು ಪೇಳಲೋ ನಾನು ಅವಗೆ?"

ಕಿಟ್ಟ—"ಪೋಗೆಂದು ನೀ ಪೇಳಿದರೆ ಆದುದೇನು?"

ಭೀಮಣ್ಣ—'ಪೋಗೆಂದು ಪೇಳಲೋ ನಾನವಗೆ ನಿರ್ದಾಕ್ಷಿಣ್ಯದಿಂದ?'

ಕಿಟ್ಟ—ಅಹಹಾ! ನಿನಗೆಲ್ಲಿ ಬಂದಿತೋ ಆ ಧಾರ್ಷ್ಟ್ಯ?

ಭೀಮಣ್ಣ—ರಾಗ ಕೆಟ್ಟುಹೋಯಿತು ಎಂದೆಯಾ? ನಿನ್ನ ಮಾತು ಸುಳ್ಳು—ಪಾರುಪತ್ತೇಗಾರನಿಗೆ ಎಷ್ಟೋ ಜಂಭ? ನೀನು ಮಡಿಮಾಡಿದರೆ, ಉಪವಾಸ ಮಾಡಿದರೆ ಮಾಡು. ಇತರರಿಗೆಲ್ಲಾ ಯಾತಕ್ಕೆ ತಪ್ಪಿಸುವೆಯೋ ಊಟ, ತಿಂಡಿ, ಪಾನ, ಫಣಿಯಾರಗಳನ್ನು?

ಕಿಟ್ಟ—ನಿನಗೆ ಮಸಾಲೆ ಬೇಡವಾದರೆ ಬಿಡು; ನಮಗಿರಲಿ.

ಭೀಮಣ್ಣ—ನೀನು ಹೇಳಿದ್ದು ಸರಿ—ಹೋಗೋ, ಹುಣಿಸೇ ಹಣ್ಣನ್ನು ತೆಗೆದುಕೊಂಡು ಬೀಗದಕೈಯಿನ ಹಿತ್ತಾಳೇ ಸರಪಣಿಯನ್ನು ಉಜ್ಜೋ ಹೋಗೋ—ರಮಾ, ರಮಾ, ಮಧುಪಾತ್ರೆಯನ್ನು ತೆಗೆದುಕೊಂಡು ಬಾ.

ಮಾಧವ—ರಮಾಬಾಯಿ, ನನ್ನ ಯಜಮಾನಿ ನಿನ್ನಲ್ಲಿಟ್ಟಿರುವ ವಿಶ್ವಾಸವನ್ನು ನೀನು ಉಳಿಸಿಕೊಳ್ಳುವುದಾದರೆ ಈ ದುರ್ನಡತೆಗೆ ಅನುಕೂಲಗಳನ್ನು ಕಲ್ಪಿಸಿಕೊಡಬೇಡ. ಈ ಕೈ ಆಣೆಗೂ ಈಗಲೇ ಅವಳಿಗೆ ತಿಳಿಸುತ್ತೇನೆ.

[ಹೋಗುವನು].

ರಮಾ—ಹೋಗೋ, ಅವಿವೇಕಿ.

ಆನಂದ—ಇನ್ನೊಬ್ಬ ಹಸಿವಿನಿಂದ ಸಾಯುತ್ತಿರಬೇಕು; ಆಗ ನಾವು ಕುಡಿದಿರಬೇಕು. ಅವನನ್ನು ಕುಸ್ತಿಗೆ ಕರೆಯಬೇಕು, ಅಖಾಡಕ್ಕೆ ಇಳಿದ ಮೇಲೆ, ಕುಸ್ತಿಯನ್ನು ಮಾಡುವುದಿಲ್ಲ ಎನ್ನಬೇಕು; ಅವನನ್ನು ಹಾಸ್ಯಮಾಡಬೇಕು.

ಭೀಮಣ್ಣ—ಹಾಗೇಮಾಡು. ಅವನನ್ನು ಜಗಳಕ್ಕೆ ಕರೆಯುವ ಕಾಗದವನ್ನು ನಾನು ಬರೆದುಕೊಡುತ್ತೇನೆ. ಅಥವಾ ನಿನ್ನ ಕೋಪತಾಪ ಎಷ್ಟಿದೆ ಎಂದು ನಾನೇ ಹೋಗಿ ಹೇಳುತ್ತೇನೆ.

ರಮಾ—ಭೀಮಣ್ಣ, ಈ ರಾತ್ರಿ ಸುಮ್ಮನಿರಿ. ಯಜಮಾನಿಗೆ ಆಲಸ್ಯವಾಗಿದೆ. ಮಾಧವಮೂರ್ತಿಯ ವಿಚಾರ ನನಗಿರಲಿ. ಅವನನ್ನು ನಗೆಗೆ ಈಡುಮಾಡಿ, ಅವನ ಹೆಸರು ನಾಣ್ಣುಡಿಯಾಗುವಂತೆ ಮಾಡದೇ ಇದ್ದರೆ, ಕಾಲುಚಾಚಿ ಹಾಸಿಗೆಯಲ್ಲಿ ನೆಟ್ಟಗೆ ಮಲಗುವಷ್ಟು ಬುದ್ಧಿಯೂ ನನಗಿಲ್ಲವೆನ್ನಿ. ನಾನು ಆ ಕೆಲಸವನ್ನು ಮಾಡಬಲ್ಲೆ, ನನಗೇ ಗೊತ್ತು.

ಭೀಮಣ್ಣ—ಅದೇನದು, ಸ್ವಲ್ಪ ಹೇಳು. ಅವನ ವಿಚಾರ ಸ್ವಲ್ಪ ಹೇಳು.

ರಮಾ—ನಿಮಗೇ ಗೊತ್ತಿದೆಯಲ್ಲ. ಅವನ ಮಡಿ, ಆಚಾರ, ಉಪವಾಸಗಳು.

ಆನಂದ—ಹಾಗೆಂದು ತಿಳಿದಿದ್ದರೆ ಅವನನ್ನು ನಾಯಿಯಂತೆ ಬಲಿಹಾಕುತ್ತಿದ್ದೆ.

ಭೀಮಣ್ಣ—ಏನು ! ಅವನ ಮಡಿ ಆಚಾರಗಳಿಗೋಸ್ಕರವೆ ? ಬಹಳ ಸೊಗಸಾದ ಕಾರಣ ಹುಡುಕಿದೆ ! ನೀನು ಘನವಾದ ಸರದಾರನೇ !

ಆನಂದ—ಅಮೋಘವಾದ ಕಾರಣಗಳಿಲ್ಲ; ಆದರೂ ಅವು ಸಾಕಾದಷ್ಟು ಕಾರಣಗಳೇ.

ರಮಾ—ಒಳ್ಳೆ ಮಡಿ, ಒಳ್ಳೆ ಆಚಾರ ಅವನಿಗೇನೂ ಇಲ್ಲ. ಕಾಲಕ್ಕೆ ತಕ್ಕಂತೆ ಬದಲಾಯಿಸುವನು. ಅವನ ಪ್ರಯೋಗಪುಸ್ತಕ ಅನುಕೂಲಸಿಂಧು. ಅವನು ವೇಷ ಧಾರಿಯಾದ ಕತ್ತೆ. ಹತ್ತು ಸಂಸ್ಕೃತ ಶ್ಲೋಕಗಳನ್ನು ಉರುಹಾಕಿದ್ದಾನೆ. ಅವು ಗಳನ್ನೇ ಅಟ್ಟಹಾಸದಿಂದ ಹೇಳುತ್ತಾನೆ. ಅವನು ಸುಗುಣಗಳ ರಾಶಿಯೆಂದೂ, ಅವನ ಸಮಾನ ಮನುಷ್ಯನೇ ಹುಟ್ಟಿಲ್ಲವೆಂದೂ ಅವನ ಭಾವನೆ. ಅವನಿಗೆ ಇನ್ನೊಂದು ಭ್ರಾಂತಿ : ಅವನನ್ನು ನೋಡಿದವರೆಲ್ಲ ಅವನ ಪ್ರೇಮಪಾಶಕ್ಕೆ ಬಿದ್ದಿರುವರಂತೆ. ಈ ಹೆಮ್ಮೆಯ ಮೇಲೆ ನನ್ನ ಮುಯ್ಯಿ ತೀರಿಸಿಕೊಳ್ಳುತ್ತೇನೆ.

ಭೀಮಣ್ಣ—ಏನುಮಾಡುತ್ತೀ, ಹಾಗಾದರೆ ?

ರಮಾ—ಅಸ್ಪಷ್ಟವಾದ ಕೆಲವು ಪ್ರೇಮಪತ್ರಗಳನ್ನು ಅವನು ತಿರುಗಾಡುವ ದಾರಿ ಯಲ್ಲಿ ಹಾಕುತ್ತೇನೆ. ಅವುಗಳಲ್ಲಿ ವರ್ಣಿತವಾಗಿರುವ ಅವನ ಮೋರೆ, ಮೂರ್ತಿ ; ಕಣ್ಣು, ನೋಟ ; ನಡೆ, ನುಡಿ ; ಬಾಯಿ, ಬಣ್ಣ ; ಅವುಗಳನ್ನೋದಿ ಅವನನ್ನೇ ಸಂಬೋಧಿಸಿದ ಕಾಗದಗಳು ಎಂದು ತಿಳಿದುಕೊಳ್ಳುವನು. ನಾನು ನನ್ನ ಯಜಮಾನಿಯಂತೆಯೇ ಬರೆಯಬಲ್ಲೆ. ಹಳೆಯ ಕಾಗದಪತ್ರಗಳನ್ನು ಪರೀಕ್ಷೆಮಾಡಿದರೆ ಅವಳು ಬರೆದುದು ಯಾವುದು ನಾನು ಬರೆದುದು ಯಾವುದು ಎಂದು ಹೇಳುವುದು ಸಾಧ್ಯವಿಲ್ಲ.

ಭೀಮಣ್ಣ—ಭಲಾ ! ನಿನ್ನ ಉಪಾಯದ ವಾಸನೆ ಹಿಡಿದೆ.

ಆನಂದ—ನನ್ನ ಮೂಗಿಗೂ ಆ ವಾಸನೆ ಹೊಕ್ಕಿದೆ.

ಭೀಮಣ್ಣ—ನೀನು ಹಾಕುವ ಕಾಗದಗಳನ್ನೋದಿ, ಅವು ಯಜಮಾನಿಯಿಂದ ಬಂದುವೆಂದೂ, ಅವಳು ಅವನಲ್ಲಿ ಅನುರಕ್ತಳಾಗಿರುವಳೆಂದೂ ಭಾವಿಸುವನು.

ರಮಾ—ನಾನು ಯೋಚಿಸುತ್ತಿರುವುದ ಅದೇ ಬಣ್ಣದ ಕುದುರೆಯನ್ನು ಬಿಡಬೇಕೆಂದು.

ಆನಂದ—ನಿನ್ನ ಕುದುರೆ ಅವನನ್ನು ಕತ್ತೆಯನ್ನಾಗಿ ಮಾಡುವುದು.

ರಮಾ—ಅದರಲ್ಲಿ ಯಾವ ಸಂಶಯವೂ ಇಲ್ಲ.

ಆನಂದ—ಓಹೋ ! ಈ ತಮಾಷೆ ಅದ್ಭುತವಾಗಿರುತ್ತದೆ.

ರಮಾ—ಖಂಡಿತ, ಅಮೋಘವಾಗಿರುತ್ತದೆ. ನನ್ನ ಔಷಧಿ ಅವನ ಮೇಲೆ ಚೆನ್ನಾಗಿ ಕೆಲಸಮಾಡುತ್ತದೆ ಎಂದು ನನಗೆ ಗೊತ್ತು. ನೀವಿಬ್ಬರು, ಕಿಟ್ಟು,

ಮೂವರೂ ಒಂದು ಕಡೆ ಅವಿತುಕೊಂಡಿರಬೇಕು. ಅವನು ಆ ದಾರಿಯಲ್ಲಿ ಬಂದು ಕಾಗದ ತೆಗೆದುಕೊಳ್ಳುವುದನ್ನು, ಅದಕ್ಕೆ ಅವನು ಕೊಡುವ ಅರ್ಥವನ್ನು ನೀವು ಗಮನಿಸಬೇಕು. ಈಗ ಹೋಗಿ ಮಲಗಿಕೊಳ್ಳಿ ; ಈ ವಿಚಾರ ಕನಸು ಕಾಣಿರಿ.

[ಹೋಗುವಳು].

ಭೀಮಣ್ಣ—ಏನು ಗಂಡುಬೀರಿಯಪ್ಪ, ಇವಳು !

ಆನಂದ—ಹೌದು, ಬಹಳ ಗಟ್ಟಿಗಿತ್ತಿ.

ಭೀಮಣ್ಣ—ಒಳ್ಳೆಜಾತಿಗೆ ಸೇರಿದ ಬೇಟೆನಾಯಿ. ನನ್ನನ್ನು ಮೆಚ್ಚಿದಾಳೆ, ಅದಕ್ಕೆ ಏನು ಹೇಳುತ್ತಿ ?

ಆನಂದ—ನನ್ನನ್ನೂ ಒಂದುಸಲ ಮೆಚ್ಚಿದ್ದಳು.

ಭೀಮಣ್ಣ—ಈಗ ಹೋಗಿ ಮಲಗೋಣ ಇನ್ನು—ಮತ್ತೆ, ೨೦೦ ರೂಪಾಯಿ ಕಳುಹಿಸುವಂತೆ ಊರಿಗೆ ಕಾಗದ ಬರಿ.

ಆನಂದ—ಇಷ್ಟೆಲ್ಲಾ ಖರ್ಚುಮಾಡಿಯೂ ನಿನ್ನ ತಂಗಿಯನ್ನು ಮದುವೆಯಾಗದೇ ಹೋದರೆ ?

ಭೀಮಣ್ಣ—ನಿನಗೇಕಯ್ಯ ಆ ಯೋಚನೆ ! ಹಣವನ್ನು ಕಳುಹಿಸುವಂತೆ ಕಾಗದವನ್ನು ಬರಿ. ಕಡೆಗೆ ಅವಳನ್ನು ಮದುವೆ ಆಗದೆ ಹೋದರೆ, ನನ್ನನ್ನು ಗುಗ್ಗು ಅನ್ನು.

ಆನಂದ—ನಾನು ಈಗಲೇ ಕಾಗದ ಬರೆಯದಿದ್ದರೆ ನೀನು ನನ್ನನ್ನು ನಂಬಲೇ ಬೇಡ.

ಭೀಮಣ್ಣ—ಬಾ, ಬಾ, ಇನ್ನೊಂದು ಸ್ವಲ್ಪ ಕುಡಿಯೋಣ, ಮಲಗುವುದಕ್ಕೆ ಈಗ ಬಹಳ ಹೊತ್ತಾಯಿತು. ಬಾರಯ್ಯ ! ಬಾ !

ತೆರೆ

ದೃಶ್ಯ ೨

[ವಿಶಾಲವಾದ ತೋಟ. ಭೀಮಣ್ಣ, ಆನಂದರಾಯ, ನಕಲಿ ಕಿಟ್ಟ ಬರುವರು]

ಭೀಮಣ್ಣ—ಬಾರೋ ಕಿಟ್ಟು, ಬೇಗ ಬಾ.

ಕಿಟ್ಟು—ಬಂದೆ, ಬಂದೆ. ಈ ತಮಾಷೆಯಲ್ಲಿ ಎಳ್ಳಷ್ಟನ್ನೂ ಕಳೆದುಕೊಳ್ಳುವುದಿಲ್ಲ. ಹಾಗೇನಾದರೂ ಕಳೆದುಕೊಂಡರೆ ದುಃಖಸಾಗರದಲ್ಲಿ ಹೋಗಿ ಮಗುಚಿಕೊಳ್ಳುತ್ತೇನೆ.

ಭೀಮಣ್ಣ—ಈ ಅಳುಮೋರೆ ಆಚಾರಿ, ಕಳ್ಳಕೊರಮ, ತಾನೂ ತಿನ್ನ ಪರರಿಗೂ ಕೊಡ. ಅವನಿಗೆ ಅವಮಾನಮಾಡುವುದು ನಿನಗೆ ಒಂದು ಸಂತೋಷ ಅಲ್ಲವೆ ?

ಕಿಟ್ಟ—ಪರಮಾನಂದ, ನನ್ನ ಮೇಲೆ ಚಾಡಿ ಹೇಳಿ ನನ್ನನ್ನು ಬಯ್ಯಿಸಿದ್ದುದನ್ನು ನಾನು ಮರತಿದ್ದೇನೆಯೆ?

ಭೀಮಣ್ಣ—ಈಗ ಅವನನ್ನು ರೇಗಿಸಬೇಕು. ಹಾಸ್ಯಕ್ರೀಡುಮಾಡಬೇಕು, ಅಲ್ಲವೇ ಆನಂದ?

ಆನಂದ—ಮಾಡದಿದ್ದರೆ, ನಾವು ಬದುಕಿದ್ದು ಏನು ಪ್ರಯೋಜನ!

ಭೀಮಣ್ಣ—ಅಗೋ, ಅಲ್ಲಿ ಬಂದಳು ಕುಳ್ಳಿ!

(ರಮಾಬಾಯಿ ಬರುವಳು)

ಏನು ಸಮಾಚಾರ, ನನ್ನ ಚಿನ್ನ!

ರಮಾ—ಆ ಮಾವಿನ ಮರದ ಹಿಂದೆ ಅವಿತುಕೊಳ್ಳಿ. ಮಾಧವಮೂರ್ತಿ ಇದೇ ದಾರಿಯಲ್ಲಿ ಬರುತ್ತಿದಾನೆ. ಅರ್ಧಗಂಟೆಯ ಕಾಲ ಬಿಸಿಲಲ್ಲಿ ನಿಂತು ಅವನ ನೆರಳನ್ನೇ ಸಂಬೋಧಿಸಿ ಮಾತನಾಡುತ್ತಿದ್ದ. ಶ್ರೀಮಂತರ ನಡೆನುಡಿಗಳನ್ನು ಅಭ್ಯಾಸಮಾಡುತ್ತಿದ್ದ. ಅಣಕದ ಮೇಲಿನ ಪ್ರೀತಿಗಾದರೂ ಅವನನ್ನು ಗಮನಿಸಿ. ನನಗೆ ಚೆನ್ನಾಗಿಯೂ ಗೊತ್ತು—ಈ ಕಾಗದ ಅವನನ್ನು ಖಂಡಿತವಾಗಿ ಮರುಳುಮಾಡುತ್ತೆ. ತಮಾಷೆ ತಪ್ಪಿಹೋದೀತು! ಅವಿತುಕೊಳ್ಳಿ! ನೀನು ಅಲ್ಲಿ ಬಿದ್ದಿರು (ಒಂದು ಪತ್ರವನ್ನು ಎಸೆಯುವಳು) ಈ ಗಾಳದಿಂದ ಹಿಡಿಯಬೇಕಾದ ಮೀನು ಇಲ್ಲಿಯೇ ಬರುತ್ತಿದೆ.

[ಹೋಗುವಳು]

(ಮಾಧವಮೂರ್ತಿ ಬರುವನು)

ಮಾಧವ—ಎಲ್ಲಾ ಅದೃಷ್ಟ; ಎಲ್ಲವೂ ಅದೃಷ್ಟವೆ. ರಮಾಬಾಯಿ ಒಂದು ದಿನ ಹೇಳಿದಳು: ಯಜಮಾನಿ ನನ್ನ ವಿಚಾರವನ್ನು ಬಹಳವಾಗಿ ಕೇಳಿದಳು ಎಂದು. ನಾನೂ ಅವಳ ಮಾತನ್ನು ಗಮನಿಸಿ ನೋಡಿರುವುದರಲ್ಲಿ ಇಷ್ಟು ಗೋಚರವಾಗಿದೆ: ಅವಳು ಅನುರಾಗ ತೋರಿಸುವುದಾದರೆ ನನ್ನಂಥವನಿಗೇ. ಅದೂ ಅಲ್ಲದೆ, ಅವಳ ಪರಿವಾರದಲ್ಲಿ ನನಗೆ ತೋರಿಸುವಷ್ಟು ಮರ್ಯಾದೆಯನ್ನು ಇನ್ನು ಯಾರಿಗೂ ಅವಳು ತೋರಿಸುವುದಿಲ್ಲ. ಇದರ ಮೇಲೆ ನಾನು ಏನು ಯೋಚನೆ ಮಾಡಬೇಕು?

ಭೀಮಣ್ಣ—ಎಲಾ ಕಳ್ಳ ಭಡವ!

ಕಿಟ್ಟ—ಹುಶ್! ಅವನು ಯೋಚನೆಮಾಡುತ್ತಾ ಮಾಡುತ್ತಾ ಅವನ ಜಂಭ ಹೆಚ್ಚುತ್ತದೆ. ಪುಕ್ಕ ಕೆದರಿಕೊಂಡು ಹೇಗೆ ಸಲಿಯುತ್ತದೆ ಈ ಕೋಳಿ ನೋಡಿರೊ!

ಆನಂದ—ಅವನ ಬೆನ್ನುಮೂಳೆಯನ್ನು ಮುರಿದು ಹಾಕಬಲ್ಲೆ.

ಭೀಮಣ್ಣ—ಈಗ ಸುಮ್ಮನಿರು!

ಮಾಧವ—ಜೋಡಿದಾರ್ ಮಾಧವಮೂರ್ತಿರಾಯರು, ಅಂದರೆ—

ಭೀಮಣ್ಣ—ಕಳ್ಳಕೊರಮ!

ಆನಂದ—ಸುಡೋ ಅವನನ್ನು.

ಭೀಮಣ್ಣ—ಹುಶ್! ಹುಶ್!

ಮಾಧವ—ಯಾತಕ್ಕೆ ಆಗಬಾರದು? ಹಿಂದೆ ಈ ರೀತಿಯಾಗಿ ನಡೆದಿದೆ: ಹಸುಮನಪುರದ ಜೋಡೀದಾರರ ಮಗಳು ಅವರ ಮನೆಯ ಪೂಜೆ ಆಚಾರಿಯನ್ನೆ ಮದುವೆ ಆದಳು.

ಆನಂದ—ಥೂ, ನಿನ್ನ ಬುದ್ಧಿಗೆ!

ಕಿಟ್ಟ—ಈಗ ಸುಮ್ಮನಿರಿ. ಯೋಚನೆ ಮಾಡುತ್ತಿದ್ದಾನೆ. ಹೆಮ್ಮೆಯಿಂದ ಅವನ ಮೈ ಹೇಗೆ ಉಬ್ಬುತ್ತಿದೆ ನೋಡಿ.

ಮಾಧವ—ಮದುವೆ ಆಗಿ ಮೂರು ತಿಂಗಳ ಮೇಲೆ—ಒಂದು ದಿನ, ಜೋಡೀದಾರರ ಕುರ್ಚಿಯಲ್ಲಿ, ಪೋಷಾಕು ಧರಿಸಿ ಕುಳಿತುಕೊಂಡು—

ಭೀಮಣ್ಣ—ಒಂದು ಕವಣೆ ಇದ್ದರೆ ಅವನ ಕಣ್ಣಿಗೆ ಕಲ್ಲು ಹೊಡಿಯುತ್ತಿದ್ದೆ.

ಮಾಧವ—ಕಿಂಕಾಪಿನಿಂದ ಅಲಂಕೃತವಾದ ಮಖಮಲ್ ನಿಲುವಂಗಿಯನ್ನು ತೊಟ್ಟು ನನ್ನ ಸೇವಕರನ್ನೆಲ್ಲ ಬರಹೇಳುತ್ತೇನೆ; ಆಗ ತಾನೆ ಇಂದಿರಮ್ಮನ ಸಂಗಡ ಮಾತುಕತೆ ಮುಗಿಸಿ ಹಗಲು ಶಯ್ಯೆಯಿಂದ ಬಂದಿರುವುದರಿಂದ—

ಭೀಮಣ್ಣ—ನಿನ್ನ ನಾಲಿಗೆಯನ್ನು ಸುಡಬೇಕು!

ಕಿಟ್ಟ—ಹುಶ್, ಶ್! ಸದ್ಯಕ್ಕೆ ಸುಮ್ಮನಿರು.

ಮಾಧವ—ಶ್ರೀಮಂತರ ಗಾಂಭೀರ್ಯವನ್ನು ತೋರುತ್ತ, ದರ್ಪ ಮರ್ಯಾದೆಗಳಿಂದ ಕೂಡಿದ ದೃಷ್ಟಿಯಿಂದ ಎಲ್ಲರನ್ನೂ ಒಂದು ಸಲ ಅವಲೋಕಿಸಿ, ನನಗೆ ನನ್ನ ಸ್ಥಾನ ಗೊತ್ತೆಂದೂ, ಅವರು ಅವರ ಸ್ಥಾನಗಳನ್ನು ತಿಳಿಯಬೇಕೆಂದೂ ಹೇಳುವೆನು. ಆಮೇಲೆ ನನ್ನ ಮೈದುನ ಭೀಮಣ್ಣನಿಗೆ ಹೇಳಿಕಳುಹಿಸುವೆನು.

ಭೀಮಣ್ಣ—ನಿನ್ನ ಹಲ್ಲುಗಳನ್ನು ಉದುರಿಸುವೆನು.

ಕಿಟ್ಟ—ಈಗ ಸುಮ್ಮನಿರು, ಈಗ ಸುಮ್ಮನಿರು.

ಮಾಧವ—ಏಳು ಸೇವಕರು ನನ್ನ ಆಜ್ಞಾಧಾರಕರಾಗಿ ಕೂಡಲೇ ಹೊರಡುವರು: ನಾನು ಹುಬ್ಬು ಗಂಟಿಕ್ಕುವೆನು; ಗಡಿಯಾರಕ್ಕೆ ಕೀಲು ಕೊಡುವೆನು; ಅಥವಾ ನನ್ನ ಸರಪಣಿ—ಇಲ್ಲ, ರತ್ನದ ಉಂಗುರವನ್ನು ನೋಡುತ್ತಿರುವೆನು. ಭೀಮಣ್ಣ ಬರುವನು, ದೂರದಿಂದಲೇ ನನಗೆ ನಮಸ್ಕರಿಸುವನು—

ಭೀಮಣ್ಣ—ಇವನನ್ನು ಜೀವಸಹಿತ ಬಿಡುವುದೆ ಇನ್ನು?

ಕಿಟ್ಟ—ಗಾಡಿಗೆ ಕಟ್ಟಿ ಎಳೆಯಿಸಿದರೂ ಈಗ ನಾವು ಬಾಯಿ ಬಿಡಬಾರದು, ಮೌನವಾಗಿರಬೇಕು.

ಮಾಧವ—ನನಗೆ ಸಹಜವಾದ ಕಿರುನಗೆಯನ್ನು ನಿಗ್ರಹಿಸಿ ದರ್ಪನಿಷ್ಠುರತೆಗಳನ್ನು ತೋರುವ ದೃಷ್ಟಿಯನ್ನು ಬೀರಿ, ಹಸ್ತಲಾಘವ ಕೊಡಲು ಕೈಯನ್ನು ಹೀಗೆ ಮುಂದಕ್ಕೆ ನೀಡುವೆನು—

ಭೀಮಣ್ಣ—ಆಗ ಭೀಮಣ್ಣನು ನಿನ್ನ ದವಡೆಗೆ ಹೊಡೆಯುವನೊ!

ಮಾಧವ—ಅವನಿಗೆ ಹೇಳುವೆನು: ನೋಡು ಭೀಮಣ್ಣ, ನನ್ನ ಸುಯೋಗದಿಂದ ನಿನ್ನ ದೊಡ್ಡಪ್ಪನ ಮಗಳನ್ನು, ನಿನ್ನ ತಂಗಿಯನ್ನು ಮದುವೆಯಾಗಿದೇನೆ; ಆದುದರಿಂದ ನಿನಗೆ ಬುದ್ಧಿಹೇಳುವ ಹಕ್ಕು ನನಗೆ ಉಂಟು—

ಭೀಮಣ್ಣ—ಏನು, ಏನದು?

ಮಾಧವ—'ನಿನ್ನ ಕುಡಿಯುವ ಚಾಳಿಯನ್ನು ಬಿಡಬೇಕು.'

ಭೀಮಣ್ಣ—ತೊಲಗೋ, ಗುಲಾಮ!

ಕಿಟ್ಟ—ಸ್ವಲ್ಪ ಸುಮ್ಮನಿರು; ಇಲ್ಲವಾದರೆ ನಮ್ಮ ತಮಾಷೆಯ ರಚನೆಯೇ ಹಾಳಾಗುವುದು.

ಮಾಧವ—"ಅಲ್ಲದೆ, ಇನ್ನೊಬ್ಬ ಅವಿವೇಕಿ ಸರದಾರನೊಡನೆ ನೀನು ವ್ಯರ್ಥ ಕಾಲಕ್ಷೇಪ ಮಾಡುತ್ತಿರುವೆ"—

ಆನಂದ—ನನಗೆ ತಿಳಿಯಿತು; ಅವನು ಹೇಳುವುದು ನನ್ನ ವಿಚಾರ.

ಮಾಧವ—"ಅವನ ಹೆಸರು ಆನಂದರಾಯ."

ಆನಂದ—ನಾನು ಆಗಲೇ ಹೇಳಲಿಲ್ಲವೆ, ನಾನೇ ಎಂದು? ಹಲವರು ನನ್ನನ್ನು ಅವಿವೇಕಿ ಎನ್ನುವರು.

ಮಾಧವ—ಓಹೋ, ಇದೇನಿದು, ಈ ಕಾಗದ?

(ಕಾಗದವನ್ನು ತೆಗೆದುಕೊಳ್ಳುವನು.)

ಕಿಟ್ಟ—ಕಾಡುಕೋಳಿ, ಪೆದ್ದುಮುಂಡೇದು, ಬಲೆಯ ಹತ್ತಿರ ಬಂದಿದೆ ಸುಮ್ಮನಿರಿ.

ಭೀಮಣ್ಣ—ಹುಶ್, ಸುಮ್ಮನಿರಿ! ಹಾಸ್ಯದೇವತೆಯೇ, ಗಟ್ಟಿಯಾಗಿ ಓದುವಂತೆ ಅವನನ್ನು ಪ್ರೇರೇಪಿಸು!

ಮಾಧವ—ನನ್ನ ಜೀವದಾಣೆ, ಇದು ನನ್ನ ಯಜಮಾನಿಯ ಬರಹ: ಅವಳ 'ಕ'ಗಳು, 'ಮ'ಗಳು, 'ಈ'ಗಳು ಹೀಗೇ ಇರುವುವು. ಅವಳು 'ಪ'ವನ್ನು ಬರೆಯುವುದು ಹೀಗೆಯೇ. ಇದು ಅವಳ ಬರಹ ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ.

ಆನಂದ—ಅವಳ ‘ ಕ ’ಗಳು, ‘ ಮ ’ಗಳು, ‘ ಈ ’ಗಳು ಇವೆಲ್ಲಾ ಏಕೆ?

ಮಾಧವ (ಓದುವನು)—“ಅಜ್ಞಾತನಾದ ನನ್ನ ಪ್ರಿಯನಿಗೆ, ಇದು ಮತ್ತು ನನ್ನ ಇತರ ಪ್ರಾರ್ಥನೆಗಳು ”—ಅವಳು ಉಪಯೋಗಿಸುವ ಪದಗಳೇ ! . . . ಮುದ್ರೆಯನ್ನು ಹೊತ್ತಿರುವ ಅರಗೇ, ಕ್ಷಮಿಸು, ನಿನ್ನನ್ನೊಡೆಯುವೆನು . . . ನಿಧಾನಿಸು ! ಅವಳು ಉಪಯೋಗಿಸುವ ಅರುಂಧತಿ ಮುದ್ರೆಯೇ ಇದು: ನಿಜವಾಗಿ, ಇದು ಯಜಮಾನಿ ಬರೆದ ಕಾಗದವೇ, ಇದು ಯಾರಿಗಿರಬಹುದು ?

ಕಿಟ್ಟ—ಇವನು ಬಿದ್ದ ಬಲೆಗೆ, ಪೂರ್ತಿಯಾಗಿ ಬಿದ್ದ !

ಮಾಧವ—

“ ದೇವನರಿವನು ಎನ್ನ ಪ್ರೇಮವನು :
ಯಾರಿಗೆನ್ನುವೆಯೋ ?
ಅಧರಗಳೇ ಅಲುಗಬೇಡಿ ;
ಮಾನವನಾರೂ ಅರಿಯಲಾಗದು.”

“ ಮಾನವನಾರೂ ಅರಿಯಲಾಗದು ”—ಮುಂದೆ ಇನ್ನೇನಿದೆ ? ವೃತ್ತ ಬದಲಾಯಿಸಿದೆ—“ ಮಾನವನಾರೂ ಅರಿಯಲಾಗದು ”—ಇದು ನಿನಗೇ ಆದರೋ, ಮಾಧವ ಮೂರ್ತಿ ?

ಭೀಮಣ್ಣ—ಈ ಹೆಗ್ಗಣವನ್ನು ಬಡಿದುಹಾಕಿರೊ !

“ ನಾ ಮೆಚ್ಚುವೆಡೆ ಆಜ್ಞೆ ವಿಧಿಸಬಲ್ಲೆ ;
ಪತಿವ್ರತೆಯ ಖಡ್ಗದಂತಿರುವ ಮೌನ
ರಕ್ತ ಸುರಿಸದೆ ಎನ್ನ ಎದೆಯ ನಿರಿಯುವುದು ;
‘ ಪ ಫ ಬ ಭ ಮ ’ ಎನ್ನ ಜೀವನವನಾಳುವುದು ”

ಕಿಟ್ಟ—ಇದೊಂದು ಅಸಂಬದ್ಧ ಒಗಟಿ.

ಭೀಮಣ್ಣ—ಒಳ್ಳೆ ಚತುರೆ, ಈ ರಮಾ.

ಮಾಧವ—‘ ಪಫಬಭಮ ’ ಎನ್ನ ಜೀವನವನಾಳುವುದು—ಇದೇನಿದು !—ಇರಲಿ, ನೋಡೋಣ.

ಕಿಟ್ಟ—ಎಂಥ ವಿಷದ ಲಡ್ಡುಗೆ ಕೊಟ್ಟಳೋ ಇವನಿಗೆ !

ಭೀಮಣ್ಣ—ಹೆಜ್ಜೆ ಹೆಜ್ಜೆಗೂ ಹೇಗೆ ಮುಗ್ಗರಿಸುತ್ತಿದಾನೆ ನೋಡು.

ಮಾಧವ—“ ನಾಮೆಚ್ಚುವೆಡೆ ಆಜ್ಞೆ ವಿಧಿಸಬಲ್ಲೆ ” ಹೌದು, ಅವಳು ನನ್ನನ್ನು ಆಜ್ಞಾಪಿಸಬಹುದು : ನಾನಿರುವುದು ಅವಳ ಸೇವೆಯಲ್ಲಿ ; ಅವಳು ನನ್ನ ಯಜಮಾನಿ. ಸಾಧಾರಣಬುದ್ಧಿಗೂ ಇದು ತಿಳಿಯುವುದು. ಇದರಲ್ಲಿ ಯಾವ ತೊಡಕೂ ಇಲ್ಲ.

ಕೊನೆಯದು, ಪವರ್ಗದ ಅಕ್ಷರಗಳು. ಅವುಗಳ ಅರ್ಥವೇನು? ನನಗೂ ಅವಕ್ಕೂ ಏನಾದರೂ ಒಂದು ಸಂಬಂಧ ಅಥವಾ ಹೋಲಿಕೆಯನ್ನು ಕಲ್ಪಿಸಬಲ್ಲೆನಾದರೆ—ನಿಧಾನ—ಪ, ಫ, ಬ, ಭ, ಮ—

ಭೀಮಣ್ಣ—ಅದರ ಅರ್ಥ ಹೇಳು ನೋಡೋಣ. ಅವನ ಬುದ್ಧಿ ಇನ್ನು ಮುಂದೆ ಓಡುವುದಿಲ್ಲ.

ಕಿಟ್ಟ—ಹಾಗೆನ್ನಬೇಡ, ಈ ನಾಯಿ ಏನನ್ನಾದರೂ ಬೊಗಳಿಯೇ ಬೊಗಳುವುದು.

ಮಾಧವ—ಪವರ್ಗವನ್ನು ಕೊನೆಯಿಂದ ಹಿಂದಕ್ಕೆ ಓದಿದರೆ—'ಮ' ಮೊದಲನೆಯ ಅಕ್ಷರವಾಗುವುದು. . . 'ಮಾ'—ಆಹಾ! ಅದೇ ನನ್ನ ಹೆಸರಿನ ಮೊದಲನೆಯ ಅಕ್ಷರ.

ಕಿಟ್ಟ—ನಾನು ಹೇಳಲಿಲ್ಲವೇ—ಏನನ್ನಾದರೂ ಪತ್ತೆ ಮಾಡುವನೆಂದು? ತಪ್ಪು ದಾರಿಯನ್ನು ಹಿಡಿಯುವುದರಲ್ಲಿ ಇದು ಬಹು ಶಕ್ತನಾದ ನಾಯಿ.

ಮಾಧವ—'ಮಾ' ಮೊದಲನೆಯ ಅಕ್ಷರವೇನೋ ಸರಿ; ಆದರೆ ಮುಂದಿನ ಅಕ್ಷರಗಳು ಸರಿಯಾಗಿಲ್ಲ; ಅವನ್ನು ಪರೀಕ್ಷೆಮಾಡಬೇಕು. ಆ ಮೇಲೆ 'ಧ' ಬರುವ ಬದಲು 'ಭ' ಬಂದಿದೆ.

ಕಿಟ್ಟ—ನಿನಗೆ ಕಡೆಗೆ ಬರುವುದು ಒಂದೇ.

ಭೀಮಣ್ಣ—ಅವನನ್ನು ಬಡಿದುಹಾಕಿ, 'ಅಯ್ಯೋ' ಎನ್ನಿಸಬೇಕು. ಅಷ್ಟು ಮಾಡದೆ ಬಿಡುವೆನೇ ನಾನು!

ಮಾಧವ—ಅದರ ಮುಂದಿನ ಅಕ್ಷರವೂ ಸರಿಯಾಗಿಲ್ಲ. ಇದೇನೆಂದು ಕಾಣಲಿ.

ಕಿಟ್ಟ—ನಿನ್ನ ಬೆನ್ನಿನಲ್ಲಿ ಎರಡು ಕಣ್ಣುಗಳಿದ್ದರೆ ನಿನ್ನ ಹಿಂದೆ ಬರುವ ಅನಿಷ್ಟವನ್ನೆಲ್ಲಾ ಕಾಣಬಹುದಾಗಿತ್ತು.

ಮಾಧವ—"ಪ, ಫ, ಬ, ಭ, ಮ"—ಈ ವೇಷ ಮೊದಲವೇಷದ ಹಾಗಿಲ್ಲ. ಇದು ಹೇಗಾದರೂ ನನ್ನ ಹೆಸರಿಗೆ ಅನ್ವಯಿಸುವಂತೆ ಮಾಡಬೇಕು. ಇವನ್ನು ಕಡೆಯಿಂದ ಓದಿದರೆ ಮೊದಲಕ್ಷರ "ಮ"; ಅದರಿಂದಲೇ ನನ್ನ ಹೆಸರು ಆರಂಭಿಸುವುದು. ಇಲ್ಲಿಯೂ ಐದು ಅಕ್ಷರಗಳು; ನನ್ನ ಹೆಸರಿನಲ್ಲಿಯೂ ಐದು ಅಕ್ಷರಗಳು; ಆದುದರಿಂದ ಈ ಪವರ್ಗದಿಂದ ನನ್ನನ್ನೆ ಸಂಬೋಧಿಸಿರುವಳು. ಸರಿ, ಇನ್ನು ಗದ್ಯಭಾಗ.

(ಓದುವನು)

ಇದು ನಿನಗೆ ತಲಪಿದರೆ, ಆಲೋಚಿಸು. ನನ್ನ ಅದೃಷ್ಟಭಾಗ್ಯ ನಿನಗೆ ಹೆಚ್ಚಿನದು; ಆದರೆ ದೊಡ್ಡಸ್ತಿಕೆಗೆ ಹೆದರಬೇಡ; ಕೆಲವರು ಹುಟ್ಟುವಾಗಲೇ ದೊಡ್ಡವರು; ಕೆಲವರು ದೊಡ್ಡತನವನ್ನು ಸಂಪಾದಿಸುವರು; ಇನ್ನು ಕೆಲವರ ಮೇಲೆ ದೊಡ್ಡತನ ಬಂದು ಬೀಳು

ವುದು. ವಿಧಿಯು ನಿನ್ನನ್ನು ಕೈತೆರೆದು ಕರೆಯುವುದು. ಧೈರ್ಯದಿಂದ ಆಲಂಗಿಸು; ಮುಂದೆ ಬರುವ ಭಾಗ್ಯಕ್ಕೆ ನೀನು ಅನುವಾಗಬೇಕಾದಲ್ಲಿ ನಿನ್ನ ಅಳುಮೋರೆಯನ್ನು ಬಿಡು, ಹೊಸತಾಗಿ ಅರಳಿರುವ ಹೂವಿನಂತೆ ಹರ್ಷವನ್ನು ಬೀರು. ಬಂಧುಗಳೊಡನೆ ಜಗಳವಾಡು; ಸೇವಕರ ಮೇಲೆ ರೇಗು; ನಿನ್ನ ನಾಲಗೆ ದೊಡ್ಡ ವಾದಗಳನ್ನು ಹೂಡಲಿ; ಶ್ರೀಮಂತನಂತೆ ನಟನೆಮಾಡು; ನಿನಗೋಸ್ಕರ ಯಾರು ನಿಟ್ಟುಸಿರುಬಿಡುವಳೋ ಅವಳು ಹೇಳುವ ನೀತಿ ಇದು; ಕೆಂಪು ಅಂಚಿನ ಕಲಾಬತ್ತು ಪಂಚೆಯನ್ನು ಉಟ್ಟುಕೊಳ್ಳಬೇಕೆಂದು, ಸರಿಗೆ ರುಮಾಲು ಧರಿಸಬೇಕೆಂದು ಹೇಳಿದವರು ಯಾರು ಜ್ಞಾಪಿಸಿಕೊ. ಜೋಡೀದಾರನಾಗುವ ಆಸೆ ಇದ್ದರೆ, ಆದಂತೆಯೆ ಸರಿ. ಇಲ್ಲವಾದರೆ ಪಾರುಪತ್ತೆಗಾರನಾಗಿಯೆ ಉಳಿಯುವೆ, ಸೇವಕರ ಒಡನಾಡಿಯಾಗಿರುವೆ, ಭಾಗ್ಯದೇವತೆಯ ಹಸ್ತವನ್ನು ಮುಟ್ಟಲೂ ನೀನು ಅನರ್ಹನಾಗುವೆ. ನಿನ್ನ ಸೇವಾವೃತ್ತಿಯನ್ನು ಬದಲು ತೆಗೆದುಕೊಳ್ಳಲು ಸಿದ್ಧಳಾಗಿರುವ,

ಶ್ರೀಮಂತಳಾದ—ಅಸುಖಿ

ಯಾವ ಬೆಳಕಿನಲ್ಲಿಯೂ ಇದಕ್ಕಿಂತ ಹೆಚ್ಚು ಏನನ್ನು ಕಾಣಬಲ್ಲೆವು. ಇದು ಸ್ಪಷ್ಟವಾಗಿಯೇ ಇದೆ. ನಾನು ಗರ್ವದಿಂದಲೇ ಇರುವೆನು; ವಿವೇಕಿಗಳ ಗ್ರಂಥಗಳನ್ನೋದುವೆನು; ಭೀಮಣ್ಣನನ್ನು ಜಗಳದಲ್ಲಿ ತುಳಿಯುವೆನು; ಸೇವಕರ ಸಹವಾಸವನ್ನು ದೂರಮಾಡುವೆನು; ಸ್ವಲ್ಪವೂ ತಪ್ಪದೆ ಮೇಲೆ ವರ್ಣಿಸಿರುವ ಮನುಷ್ಯನೇ ಆಗುವೆನು. ಈಗ ನಾನು ತಿಳಿಗೇಡಿಯಾಗುವುದಿಲ್ಲ. ಪ್ರತಿಯೊಂದು ಕಾರಣವೂ ಹೇಳುವುದು ಒಂದನ್ನೆ—ನನ್ನಲ್ಲಿ ನನ್ನ ಯಜಮಾನಿಗೆ ಅನುರಾಗವಿದೆ. ಜರತಾರಿ ಪಂಚೆಯನ್ನುಡು ಎಂದು ಹೇಳಿದವಳು ಅವಳೇ; ಸರಿಗೆ ರುಮಾಲು ನನ್ನ ತಲೆಗೆ ಒಪ್ಪುತ್ತದೆ ಎಂದು ಸೂಚಿಸಿದವಳು ಅವಳೇ; ಅವಳಿಗೆ ನನ್ನಲ್ಲಿರುವ ಅನುರಾಗ ಇದರಲ್ಲಿಯೇ ವ್ಯಕ್ತವಾಗುವುದು. ಈ ಬಟ್ಟೆಗಳು ಅವಳಿಗೆ ಇಷ್ಟವಾಗಿರಬೇಕು. ಆದುದರಿಂದಲೇ ಅವುಗಳನ್ನು ನಾನು ಧರಿಸಬೇಕೆಂದು ಅವಳು ಹೇಳುವಳು. ನನ್ನ ಗ್ರಹಗಳು ಈಗ ಉಚ್ಚದಲ್ಲಿರಬೇಕು. ಅವುಗಳಿಗೆ ನಮಸ್ಕಾರ. ಈಗ ನಾನು ಪರಮ ಸುಖಿ. ಜರತಾರಿಪಂಚೆ ಉಟ್ಟು, ಸರಿಗೆ ರುಮಾಲು ಧರಿಸಿದ ಕೂಡಲೆ ನನ್ನ ಗರ್ವ ಏರುವುದು, ನನ್ನ ವರ್ತನೆ ವಿಚಿತ್ರವಾಗುವುದು. ನನ್ನ ಗ್ರಹಗಳನ್ನು ಎಷ್ಟು ಪೂಜಿಸಿದರೂ ಸಾಲದು. ಪುನಃ ಏನೋ ಸ್ವಲ್ಪ ಬರವಣಿಗೆ ಇದೆ.

(ಓದುವನು)

ನಾನು ಯಾರೆಂದು ನಿನಗೆ ತಿಳಿಯಲೇಬೇಕು, ಬೇರೆ ಮಾರ್ಗವೇ ಇಲ್ಲ. ನನ್ನ ಪ್ರೇಮವನ್ನು ಸ್ವೀಕರಿಸುವೆಯಾದರೆ, ಅದು ನಿನ್ನ ಕಿರುನಗೆಯಲ್ಲಿ ವ್ಯಕ್ತವಾಗಲಿ;

ಕಿರುನಗೆ ನಿನ್ನ ಮುಖಕ್ಕೆ ಚೆನ್ನಾಗಿ ಒಪ್ಪುತ್ತದೆ. ಆದುದರಿಂದ ನೀನು ನನ್ನ ಮುಂದೆ ಬರುವಾಗ ಕಿರುನಗೆಯನ್ನು ಬೀರುತ್ತಲೇ ಇರಬೇಕು—ಎಂದು ನನ್ನ ಪ್ರೇಮಮೂರ್ತಿಯಲ್ಲಿ ನನ್ನ ಕೋರಿಕೆ.''

ದೇವದೇವ ನಿನಗೆ ನಮಿಸುವೆನು. ಇನ್ನು ಮುಂದೆ ನನ್ನ ಮುಖದಲ್ಲಿ ಕಿರುನಗೆ ನೆಲಸಿಯೇ ಇರುವುದು. ನೀನು ಹೇಳಿರುವಂತೆಯೇ ಪ್ರತಿಯೊಂದನ್ನೂ ಮಾಡುವೆನು.

[ಹೋಗುವನು]

ಕಿಟ್ಟ—ಒಂದು ಸಾವಿರ ರೂಪಾಯಿ ಕೊಟ್ಟರೂ ಇಂಥ ತಮಾಷೆ ಇನ್ನು ಸಿಗುವುದಿಲ್ಲ.

ಭೀಮಣ್ಣ—ಇದೊಂದೇ ಸಾಕು; ರಮೆಯನ್ನು ಕೂಡಲೇ ಮದುವೆಯಾಗಲು ನಾನು ಸಿದ್ಧ.

ಆನಂದ—ನಾನೂ ಸಿದ್ಧ.

ಭೀಮಣ್ಣ—ಅವಳು ಇನ್ನು ಯಾವ ಬಳುವಳಿಯನ್ನೂ ತರಬೇಕಾಗಿಲ್ಲ. ಈ ಬಗೆಯಲ್ಲಿ ಇನ್ನೊಂದು ತಮಾಷೆ ಮಾಡಿದರೆ ಸಾಕು.

ಆನಂದ—ನನಗಾದರೂ ಅಷ್ಟೆ.

ಕಿಟ್ಟ—ಇಂಥ ಮರುಳು ಮೃಗಗಳನ್ನು ಹಿಡಿಯುವ ಬೇಟೆನಾಯಿ ಇಲ್ಲೇ ಬರುತ್ತಿದೆ.

(ರಮಾಬಾಯಿ ಬರುವಳು)

ಭೀಮಣ್ಣ—ರಮಾ, ನಿನಗೆ ಶರಣು, ಶರಣು.

ಆನಂದ—ನಾನೂ, ನಿನಗೆ ಶರಣು, ಶರಣು.

ಭೀಮಣ್ಣ—ಇಂದಿನಿಂದ ನಾನು ನಿನ್ನ ಸೇವಕ.

ಆನಂದ—ನಾನೂ, ನಿನ್ನ ಸೇವಕ.

ಭೀಮಣ್ಣ—ಎಂಥ ಕನಸಿನ ಜಾಲದಲ್ಲಿ ಅವನನ್ನು ಬಂಧಿಸಿರುವೆ. ಈ ಕನಸು ಒಡೆದ ಕೂಡಲೆ ಅವನಿಗೆ ಹುಚ್ಚು ಹಿಡಿಯುವುದು ಖಂಡಿತ.

ರಮಾ—ನನಗೆ ನಿಜ ಹೇಳಿ. ಅದರಿಂದ ಅವನ ಮೇಲೆ ಪರಿಣಾಮವಾಗಿದೆಯೋ?

ಭೀಮಣ್ಣ—ಖಂಡಿತವಾಗಿ.

ರಮಾ—ಈ ಆಟದ ಫಲವನ್ನು ನೋಡುವ ಇಚ್ಛೆ ಇರುವುದಾದರೆ ಅವನು ಯಜಮಾನಿಯ ಬಳಿಗೆ ಹೋಗುವುದನ್ನು ಗಮನಿಸಿ. ಅವಳಿಗೆ ಜರತಾರಿ, ಕೆಂಪು ಬಣ್ಣ ಕಂಡರೆ ಆಗುವುದಿಲ್ಲ. ಸರಿಗೆ ರುಮಾಲಿಗೂ ಅವಳಿಗೂ ಬದ್ಧದ್ವೇಷ. ಈಗ ಅವಳಿಗೆ ಆಲಸ್ಯ, ಮನಸ್ಸಿಗೆ ಹಿತವಿಲ್ಲ. ಅವನ ಕಿರುನಗೆ ಅವಳಿಗೆ ಬೇಕಾಗಿಲ್ಲ.

ಆವಳು ಅವನನ್ನು ತುಚ್ಛವಾಗಿ ಕಾಣುವುದು ಖಂಡಿತ. ಇದನ್ನೆಲ್ಲಾ ನೋಡುವ ಆಸೆ ಇದ್ದರೆ, ನನ್ನ ಹಿಂದೆ ಬನ್ನಿ.

ಭೀಮಣ್ಣ—ನಿನ್ನನ್ನು ಹಿಂಬಾಲಿಸುವುದಾದರೆ, ನರಕಕ್ಕಾದರೂ ಬರಲು ನಾನು ಸಿದ್ಧ.

ಆನಂದ—ನಾನೂ ನಿನ್ನ ಸಂಗಡ ಬರುತ್ತೇನೆ.

ತೆರೆ

ದೃಶ್ಯ ೩

(ತೋಟದ ಇನ್ನೊಂದು ಭಾಗ. ಯಜಮಾನಿ, ರಮಾಬಾಯಿ ಬರುವರು)

ಯಜಮಾನಿ—ಮಾಧವಮೂರ್ತಿ ಎಲ್ಲಿ? ನನ್ನ ಅದೃಷ್ಟಕ್ಕೆ ಸರಿಯಾಗಿ ಸಿಕ್ಕಿದಾನೆ ಅವನು. ಅವನ ಗಾಂಭೀರ್ಯ, ಸೌಜನ್ಯ ನನ್ನ ಸ್ಥಿತಿಗೆ ಸರಿಯಾಗಿ ಹೊಂದುತ್ತದೆ. ಎಲ್ಲಿ ಮಾಧವಮೂರ್ತಿ?

ರಮಾ—ತಾಯಿ, ಬರುತ್ತಿದ್ದಾನೆ. ಆದರೆ ಅವನ ಸ್ಥಿತಿ ಸ್ವಲ್ಪ ವಿಚಿತ್ರವಾಗಿದೆ. ಅವನಿಗೆ ಪಿಶಾಚಿ ಹಿಡಿದಿರಬಹುದು.

ಯಜ.—ಏನು ಸಮಾಚಾರ? ಹುಚ್ಚಾಪಟ್ಟೆ ಕೂಗುವನೇನು?

ರಮಾ—ಇಲ್ಲ ತಾಯಿ; ಯಾವಾಗಲೂ ಕಿರುನಗೆಯನ್ನು ಬೀರುತ್ತಿದಾನೆ. ಅವನು ಬರುವ ಸಮಯಕ್ಕೆ ನಿಮ್ಮ ಬಳಿಯಲ್ಲಿ ಸೇವಕರು ಇರುವುದು ಮೇಲು, ಖಂಡಿತವಾಗಿ ಅವನ ಜ್ಞಾನ ಶುದ್ಧವಾಗಿಲ್ಲ.

ಯಜ.—ಹೋಗಿ ಅವನನ್ನು ಕರೆದುಕೊಂಡು ಬಾ. (ರಮಾಬಾಯಿ ಹೋಗುವಳು) ನಾನೂ ಅವನಂತೆಯೇ ಹುಚ್ಚಿ. ನನ್ನ ಹುಚ್ಚಿಗೆ ದುಃಖ ಮೂಲವಾಗಿದ್ದರೆ, ಅವನ ಹುಚ್ಚಿಗೆ ಸಂತೋಷ ಮೂಲವಾಗಿದೆ.

(ರಮಾಬಾಯಿ, ಮಾಧವಮೂರ್ತಿ ಬರುವರು)

ಯಜ.—ಮಾಧವಮೂರ್ತಿ, ಕ್ಷೇಮವೆ?

ಮಾಧವ—ಹೊ! ಹೊ! . . .

[ಎಂದು ಕಿರುನಗೆ ಬೀರುವನು]

ಯಜ.—ಇದೇನು! ಈ ನಗು! ನಾನು ನಿನಗೆ ಹೇಳಿಕಳುಹಿಸಿರುವುದು ದುಃಖ ಮಯವಾದ ಸಂದರ್ಭದಲ್ಲಿ.

ಮಾಧವ—ದುಃಖಮಯವಾದ ಸಂದರ್ಭವೆ! ನಾನೂ ದುಃಖಿತನಾಗಿ ಇರಬಲ್ಲೆ. ಈ ಸರಿಗೆ ರುಮಾಲು ಬಹು ಭಾರ, ತಲೆ ನೋಯುತ್ತಿದೆ; ಆದರೇನು?

ಆದರಿಂದ ಒಬ್ಬರಿಗೆ ಸಂತೋಷವಾದರೂ ಸಾಕು. ನನಗೆ ಚೆನ್ನಾಗಿ ನೆನಪಿಗೆ ಬರುತ್ತದೆ: "ಒಬ್ಬರನ್ನು ಸಂತೋಷಪಡಿಸಿದರೆ, ಎಲ್ಲರನ್ನು ಸಂತೋಷಪಡಿಸಿದಂತೆ" ಎನ್ನುವ ಮಾತು.

ಯಜ.—ಮೂರ್ತಿ, ನಿನ್ನ ದೇಹಸ್ಥಿತಿ ಹೇಗಿದೆ? ನಿನಗೆ ಏನು ಕಾಯಿಲೆ?

ಮಾಧವ—ನನ್ನ ಮನಸ್ಸಿನಲ್ಲಿ ಕೆಟ್ಟ ಯೋಚನೆಗಳು ಯಾವುವೂ ಇಲ್ಲ. ಅದು ಅವನ ಕೈಯನ್ನೇ ಸೇರಿತು. ಆಜ್ಞೆಗಳೆಲ್ಲ ನಡೆಸಲ್ಪಡುತ್ತವೆ. ಆ ಬರಹ ಎಲ್ಲರಿಗೂ ತಿಳಿದದ್ದು ಎಂದು ನನ್ನ ಭಾವನೆ.

ಯಜ.—ಮಾಧವಮೂರ್ತಿ, ಹೋಗಿ ಹಾಸಿಗೆಯಲ್ಲಿ ಮಲಗುವೆಯಾ?

ಮಾಧವ—ಹಾಸಿಗೆ! ಆಗಲಿ, ಹಾಗೇ ಆಗಲಿ.

ಯಜ.—ದೇವರೇ ನನ್ನನ್ನು ಕಾಪಾಡಬೇಕು. ಇದೇಕೆ ಇಷ್ಟು ನಗು? ಕೈಗಳನ್ನು ಇಷ್ಟುಬಾರಿ ಮುತ್ತಿಡುವುದೇಕೆ!

ರಮಾ—ಮಾಧವಮೂರ್ತಿ, ಕ್ಷೇಮವಾಗಿದ್ದೀಯಾ?

ಮಾಧವ—ಎಲ್ಲವು ನೀನು ಹೇಳಿದಂತೆ ಆಗಲಿ! ಹೌದು, ಹೌದು. ನವಿಲುಗಳು ಕೆಂಬೂತಕ್ಕೆ ಉತ್ತರಕೊಡುತ್ತಿವೆ.

ರಮಾ—ಯಜಮಾನಿಯ ಮುಂದೆ ಇದೇತಕ್ಕೆ ಈ ವಿಚಿತ್ರ ನಡತೆ, ಈ ಧಾಷ್ಟ್ರ್ಯ?

ಮಾಧವ—"ದೊಡ್ಡದನ್ನು ಕಂಡು ಹೆದರಬೇಡ" ಎಂದು ಬರೆದಿದ್ದುದು ಸರಿಯಾಗಿತ್ತು.

ಯಜ.—ಮಾಧವಮೂರ್ತಿ, ನಿನ್ನ ಮಾತಿನ ಅರ್ಥವಾದರೂ ಏನು?

ಮಾಧವ—"ಕೆಲವರು ಹುಟ್ಟುವಾಗಲೇ ದೊಡ್ಡವರು."

ಯಜ.—ಏನೆಂದೆ?

ಮಾಧವ—"ಕೆಲವರು ದೊಡ್ಡತನವನ್ನು ಸಂಪಾದಿಸುವರು."

ಯಜ.—ಏನು ನೀನು ಹೇಳುವುದು?

ಮಾಧವ—"ಕೆಲವರ ಮೇಲೆ ದೊಡ್ಡತನ ಬಂದು ಬೀಳುವುದು."

ಯಜ.—ದೇವರೇ ನಿನ್ನ ಬುದ್ಧಿಯನ್ನು ನೆಟ್ಟಗೆ ಮಾಡಬೇಕು!

ಮಾಧವ—"ಕೆಂಪಂಚಿನ ಕಲಾಬತ್ತು ಪಂಚೆಯನ್ನುಡು ಎಂದು ಹೇಳಿದವರು ಯಾರು ಜ್ಞಾಪಿಸಿಕೊ."

ಯಜ.—ಕೆಂಪಂಚಿನ ಕಲಾಬತ್ತಿನ ಪಂಚೆ!

ಮಾಧವ—“ನೀನು ಸರಿಗೆ ರುಮಾಲು ಧರಿಸಿರುವುದನ್ನು ನೋಡಲು ಆಶಿಸಿದವರು ಯಾರು . . .”

ಯಜ.—ಸರಿಗೆ ರುಮಾಲು !!

ಮಾಧವ—“ನೀನು ಮನಸ್ಸುಮಾಡಿದರೆ ದೊಡ್ಡಮನುಷ್ಯನಾದಂತೆಯೇ ಸರಿ.”

ಯಜ.—ಇದೇನು, ಈ ಅಸಂಬದ್ಧವಾದ ಮಾತು ?

ಮಾಧವ—“ಇಲ್ಲವಾದರೆ, ನೀನು ಸೇವಕನಾಗಿಯೇ ಉಳಿಯುವೆ.”

ಯಜ.—ಸರಿ, ಸರಿ; ಇವನಿಗೆ ಹುಚ್ಚೇ ಹಿಡಿದಿದೆ. . . .

(ಕೂತಿದ್ದವಳು ಎದ್ದುಹೋಗುತ್ತಾ)

ರಮಾಬಾಯಿ ಈತನನ್ನು ಎಚ್ಚರಿಕೆಯಿಂದ ನೋಡಿಕೊಳ್ಳಿ. ನನ್ನ ಚಿಕ್ಕಪ್ಪನ ಮಗ ಭೀಮಣ್ಣನೆಲ್ಲಿ? ನನ್ನವರು ಕೆಲವರು ಈತನನ್ನು ವಿಶೇಷ ಎಚ್ಚರಿಕೆಯಿಂದ ನೋಡಿಕೊಳ್ಳಬೇಕು. ನನ್ನ ಜೋಡಿಗ್ರಾಮಗಳಲ್ಲಿ ಅರ್ಧಭಾಗ ಹೋದರೂ ನಷ್ಟವಿಲ್ಲ. ಈತನಿಗೆ ಹುಚ್ಚು ಹಿಡಿಯದೆ ಇರಲಿ.

(ಯಜಮಾನಿ, ರಮಾಬಾಯಿ ಹೋಗುವರು)

[ಮಾಧವಮೂರ್ತಿ ಬಹಳ ತೃಪ್ತನಾಗಿ ಗರ್ವಸಂತೋಷಗಳಿಂದ ತುಂಬಿದವನಾಗಿ ಹಾವಭಾವಗಳನ್ನು ತೋರುತ್ತಲಿರುವನು.]

ಮಾಧವ—ಓಹೊ, ಹೊ! ನನ್ನ ಸಮೀಪಕ್ಕೆ ಬರುವೆಯೋ ಈಗ ನೀನು? ನನ್ನನ್ನು ನೋಡಿಕೊಳ್ಳುವುದಕ್ಕೆ ಭೀಮಣ್ಣನೇ ಆಗಬೇಕು! ಆ ಕಾಗದಕ್ಕೂ ಈ ಮಾತಿಗೂ ಸರಿಹೋಗುತ್ತದೆ. ಉದ್ದೇಶಪೂರ್ವಕವಾಗಿಯೇ ಅವನನ್ನು ಕಳುಹಿಸುತ್ತಿದಾಳೆ; ಅವನು ಬರಲಿ, ನಾನು ರೇಗುತ್ತೇನೆ. ಆ ಕಾಗದದಲ್ಲಿ ಅವಳು ಹೇಳುವುದು ಅದನ್ನೆ: “ನಿನ್ನ ನಮ್ರತೆಯನ್ನು ಬಿಡು, ಬಂಧುಗಳೊಡನೆ ಜಗಳವಾಡು; ಸೇವಕರ ಮೇಲೆ ರೇಗು; ಘನವಾದ ದೊಡ್ಡಮಾತುಗಳನ್ನಾಡು; ನಿನ್ನ ನಡೆನುಡಿ ಸ್ವಲ್ಪ ವಿಚಿತ್ರವಾಗಿರಲಿ” ಹೀಗೆ ಹೇಳಿ, ಯಾವ ರೀತಿ ಇರಬೇಕು ಎಂದು ವರ್ಣಿಸಿದಾಳೆ; ಮುಖದಲ್ಲಿ ಗಾಂಭೀರ್ಯ, ಪೂಜ್ಯರಾದವರ ನಡೆ; ಅರಸುಮನೆತನದವರಂತೆ ನಿಧಾನವಾದ ಮಾತು, ಇತ್ಯಾದಿ. ನಾನು ಅವಳನ್ನು ಹಿಡಿದಂತೆಯೇ ಆಯಿತು. ಆದರೆ ಇದೆಲ್ಲ ಈಶ್ವರನ ಇಚ್ಛೆ, ಅವನನ್ನು ನಾನು ಪೂಜಿಸಬೇಕು. ಈಗ ತಾನೆ ಅವಳು ಇಲ್ಲಿಂದ ಹೋಗುವಾಗ “ಈತನನ್ನು ಎಚ್ಚರಿಕೆಯಿಂದ ನೋಡಿಕೊಳ್ಳಿ” ಎಂದು ಹೇಳಿದಳು. “ಈತನನ್ನು”, ಮಾಧವಮೂರ್ತಿಯನ್ನಲ್ಲ, ಸೇವಕನನ್ನಲ್ಲ . . . “ಈತನನ್ನು”. ಇನ್ನೇನು, ಎಲ್ಲವೂ ಒಟ್ಟುಗೂಡುತ್ತವೆ; ಹೊಂದಿಕೊಳ್ಳುತ್ತವೆ.

ಯಾವ ಸಂಶಯವೂ ಇಲ್ಲ—ಎಳ್ಳಷ್ಟು, ಸಾಸುವೆಯಷ್ಟು ಸಂಶಯಕ್ಕೆ ಮಾರ್ಗವಿಲ್ಲ. ಇನ್ನು ಅಡಚಣೆಯಾಗಲಿ, ಅಪನಂಬಿಕೆಯಾಗಲಿ, ಅಪಾಯವಾಗಲಿ—ಯಾವುದೂ ಇಲ್ಲ—ಇನ್ನೇನು? ನನ್ನ ಆಸೆಗಳ ಪೂರೈಕೆಗೂ ನನಗೂ ಮಧ್ಯೆ ಯಾವುದೂ ಬರಲಾರದು. ಇದು ನನ್ನ ಪ್ರಯತ್ನದ ಫಲವಲ್ಲ. ಈಶ್ವರಸಂಕಲ್ಪ; ಅವನನ್ನು ಸ್ತುತಿಸಬೇಕು.

(ರಮಾಬಾಯಿ, ಭೀಮಣ್ಣ, ನಕಲಿಕಿಟ್ಟ ಬರುವರು)

ಭೀಮಣ್ಣ—ದೇವರಾಣೆ! ಎಲ್ಲಿ ಅವನು? ನರಕದಲ್ಲಿರುವ ಪಿಶಾಚಿಗಳೆಲ್ಲ ಅವನಲ್ಲಿದ್ದರೂ ಸರಿ, ನಾನು ಮಾತನಾಡಿಸುತ್ತೇನೆ.

ನಕಲಿಕಿಟ್ಟ—ಇಗೋ! ಇಲ್ಲಿ, ಇಲ್ಲಿ! ಹೇಗೆ ಸ್ವಾಮಿ ಇದ್ದೀರಿ? ಏನಯ್ಯ ನಿನ್ನ ದೇಹಸ್ಥಿತಿ ಹೇಗಿದೆ?

ಮಾಧವ—ತೊಲಗಿ, ತೊಲಗಿ! ನಿಮ್ಮನ್ನು ಕರೆದವರು ಯಾರು? ನಾನು ಏಕಾಂತದಲ್ಲಿದೇನೆ. ನನ್ನಗೊಡವೆ ನಿಮಗೇಕೆ? ತೊಲಗಿ, ತೊಲಗಿ!

ರಮಾ—ಇವನನ್ನು ಹಿಡಿದಿರುವ ಪಿಶಾಚಿ ಏನು ಗಟ್ಟಿ! ಅದರ ಮಾತಿನ ಜೋರು ನೋಡಿ! ನಾನು ಹೇಳಲಿಲ್ಲವೆ, ನಿಮಗೆ? ಅವನನ್ನು ನೀನು ಎಚ್ಚರಿಕೆಯಿಂದ ನೋಡಿಕೊಳ್ಳಬೇಕೆಂದು ಯಜಮಾನಿ ನಿನ್ನನ್ನು ಪ್ರಾರ್ಥಿಸಿರುವಳು.

ಮಾಧವ—ಆಹಾ! ಆಹಾ! ಅವಳು ಹಾಗೆ ಹೇಳಿದಳೇನು?

ಭೀಮಣ್ಣ— ಸಾಕು, ಸಾಕು : ಉಶ್! ಉಶ್!! ಬಹಳ ಮೃದುವಾಗಿ ಅವನನ್ನು ಮಾತನಾಡಿಸಬೇಕು. ಆ ಕೆಲಸ ನನಗೆ ಬಿಡಿ. ಮಾಧು, ಹೇಗಿರುವೆಯಪ್ಪ? ನಿನ್ನ ದೇಹಸ್ಥಿತಿ ಹೇಗಿದೆ? ಏನಯ್ಯ, ಪಿಶಾಚಿಯನ್ನು ಬಡಿದು ಓಡಿಸಬೇಕು. ಅದು ಮನುಷ್ಯವರ್ಗಕ್ಕೇ ಶತ್ರುವಲ್ಲವೆ ಯೋಚನೆಮಾಡು.

ಮಾಧವ—ನೀನು ಹೇಳುತ್ತಿರುವುದೇನು, ನಿನಗೆ ಗೊತ್ತೋ?

ರಮಾ—ಭಲಾ, ಭಲಾ! ನೋಡಿದೆಯಾ, ಪಿಶಾಚಿಯನ್ನು ಬೈದರೆ ಇವನ ಮನಸ್ಸು ಹೇಗೆ ಅಳುಕುತ್ತದೆ! ಇವನಿಗೆ ಪಿಶಾಚಿ ಹಿಡಿಯದೇ ಇರಲಿ ಎಂದು ದೇವರಿಗೆ ಮೊರೆ ಇಡಬೇಕು.

ಕಿಟ್ಟ—ಇವನ ರಕ್ತವನ್ನು ಪರೀಕ್ಷೆ ಮಾಡಿಸಬೇಕು.

ರಮಾ—ಅದಕ್ಕೇನು, ಬದುಕಿದ್ದರೆ, ನಾಳೆ ಬೆಳಗಾಗಲಿ. ಯಜಮಾನಿಗೆ ಇವನನ್ನು ಕಳೆದುಕೊಳ್ಳುವುದರಲ್ಲಿ ಇಷ್ಟವಿಲ್ಲ.

ಮಾಧವ—ಏನಂದೆ . . . ಯಜಮಾನಿ . . . ?

ರಮಾ—ರಾಮ, ರಾಮ! ಸರಿಹೋಯಿತು!

ಭೀಮಣ್ಣ—ಮಹಾತಾಯಿ, ಸುಮ್ಮನಿರು. ಹೀಗಲ್ಲ, ಇದರ ಮಾರ್ಗ. ನೋಡಿದೆಯಾ ನಿನ್ನ ಮಾತಿನ ಪರಿಣಾಮವನ್ನು ! ಅವನ ಪ್ರಸಂಗವನ್ನು ನನಗೆ ಬಿಡಿ.

ಕಿಟ್ಟ—ನಯ ಬಿಟ್ಟು ಬೇರೆ ದಾರಿಯಿಲ್ಲ; ನಿಧಾನ, ನಿಧಾನ; ಅದು ಒರಟು ಪಿಶಾಚಿ; ಅದಕ್ಕೆ ಒರಟುಮಾರ್ಗ ಪ್ರಯೋಜನವಿಲ್ಲ.

ಭೀಮಣ್ಣ—ಏನಯ್ಯ ಮೂರ್ತಿ, ಹೇಗಯ್ಯ ಇದೀಯೆ? . . . ಮಾಧೂ, ಏನ್ಮಗು?

ಮಾಧವ—ಅಯ್ಯಾ!

ಭೀಮಣ್ಣ—ಬಾ ಮಗು, ನನ್ನ ಜತೆಯಲ್ಲಿ ಬಾಮ್ಮ. ಏನಯ್ಯ ನಿನ್ನಂಥ ವಿವೇಕಿಗಳು ದೆವ್ವದ ಸಂಗಡ ಆಟ ಆಡಬಾರದು. ಅದನ್ನು ಶೂಲಕ್ಕೆ ಹಾಕಬೇಕು.

ರಮಾ—ಅವನ ಬಾಯಲ್ಲಿ ದೇವರ ಸ್ತೋತ್ರ ಹೇಳಿಸು, ಭೀಮಣ್ಣ, ಎರಡು ದೇವರನಾಮ ಹೇಳಿಸು.

ಮಾಧವ—ಏನೆಂದೆ? ನನ್ನ ಬಾಯಲ್ಲಿ ದೇವರನಾಮವೆ?

ರಮಾ—ನೋಡಿದೆಯಾ? ದೇವರ ಹೆಸರು ಎಂದರೆ ಆಗುವುದಿಲ್ಲ.

ಮಾಧವ—ನಿಮಗೆ ಮಾಡುವುದಕ್ಕೆ ಕೆಲಸವಿಲ್ಲ! ಸೋಮಾರಿಗಳು. ತೊಲಗಿ ಇಲ್ಲಿಂದ! ನಾನು ನಿಮ್ಮಂತೆ ಅಯೋಗ್ಯನಲ್ಲ. ಆಗಲಿ, ನಿಮಗೇ ತಿಳಿಯುತ್ತದೆ, ಇನ್ನೆರಡು ದಿನಗಳಾದ ಮೇಲೆ.

(ಮಾಧವಮೂರ್ತಿ ಹೋಗುವನು)

ಭೀಮಣ್ಣ—ಏನಯ್ಯ ಇದು?

ಕಿಟ್ಟ—ಇದನ್ನೆ ನಾಟಕವೆಂದು ಆಡಿದ್ದರೆ, ಶುದ್ಧ ಸುಳ್ಳು, ಅಸಾಧ್ಯ ಎಂದು ನಾನು ಧಿಕ್ಕರಿಸುತ್ತಿದ್ದೆ.

ಭೀಮಣ್ಣ—ಈ ನಮ್ಮ ಯುಕ್ತಿ ಅವನ ಹೃದಯವನ್ನೆ, ಆತ್ಮವನ್ನೆ ಆವರಿಸಿದೆ.

ರಮಾ—ಅವನನ್ನು ಈಗ ಬಿಡಬಾರದು, ಹಿಂಬಾಲಿಸಿ ಹಿಡಿಯಬೇಕು; ಇಲ್ಲವಾದರೆ ಈ ಯುಕ್ತಿ ಅವನ ಮೇಲೆ ಇನ್ನೂ ಕೆಲಸಮಾಡುತ್ತದೆ.

ಕಿಟ್ಟ—ಅದೇಕೆ; ಅವನಿಗೆ ನಿಜವಾಗಿಯೂ ಹುಚ್ಚು ಹಿಡಿಸೋಣ.

ರಮಾ—ಮನೆಯಲ್ಲಿ ಗಲಾಟೆ ಕಡಿಮೆಯಾಗುವುದು.

ಭೀಮಣ್ಣ—ಬನ್ನಿ. ಕೈಕಾಲುಗಳನ್ನು ಕಟ್ಟಿ ಅವನನ್ನು ಕತ್ತಲೆ ಕೋಣೆಯಲ್ಲಿ ಹಾಕೋಣ. ಅವನು ಹುಚ್ಚ ಎನ್ನುವ ನಂಬಿಕೆ ಯಜಮಾನಿಗೆ ಬಂದಿದೆ. ನಾವು ಅದನ್ನೇ ಹಿಡಿಯಬೇಕು. ಅದರಿಂದ ನಮಗೆ ಸಂತೋಷ, ಅವನಿಗೆ ಪ್ರಾಯಶ್ಚಿತ್ತ. "ಇನ್ನು ತಮಾಷೆ ಸಾಕಪ್ಪಾ, ಸಾಕು" ಎಂದು ನಮಗೆ ತೋರುವ ವರೆಗೂ,

ಅವನಲ್ಲಿ ನಮಗೆ ಮರುಕ ಹುಟ್ಟುವ ವರೆಗೂ ಇದು ಮುಂದುವರಿಯಲಿ. ಆಮೇಲೆ ನಮ್ಮ ಯುಕ್ತಿಯನ್ನು ಹೊರಹಾಕಿ, 'ಹುಚ್ಚರನ್ನು ಹಿಡಿಯುವ ಜಾಣೆ' ಎಂದು ರಮಾಬಾಯಿಗೆ ಮರ್ಯಾದೆ ಮಾಡಬೇಕು.

ತೆರೆ

ದೃಶ್ಯ ೪

(ಯಜಮಾನಿಯ ಮನೆಯಲ್ಲಿ ಒಂದು ಕೋಣೆ. ಮಾಧವಮೂರ್ತಿ ಒಳ ಕತ್ತಲ ಕೋಣೆಯಲ್ಲಿರುವನು. ಅವನು ಯಾರಿಗೂ ಕಾಣಿಸುವುದಿಲ್ಲ. ರಮಾಬಾಯಿ, ನಕಲಿಕಿಟ್ಟ ಬರುವರು.)

ರಮಾ—ಹಾಗಲ್ಲ; ನನ್ನ ಮಾತನ್ನು ಕೇಳು. ಈ ಶಾಲು ರುಮಾಲನ್ನು ಧರಿಸು, ಈ ಅಂಚಿನ ಪಂಚೆಯನ್ನು ಹೊದೆದುಕೊ, ಈ ಗಡ್ಡವನ್ನು ಕಟ್ಟಿಕೊ. ನೀನು ಶಾಸ್ತ್ರಿಗಳು ಎಂದು ಅವನಿಗೆ ನಂಬಿಕೆ ಬರುವಹಾಗೆ ಮಾಡು. ಬೇಗ, ಬೇಗ! ಅಷ್ಟರಲ್ಲಿ ನಾನು ಭೀಮಣ್ಣನನ್ನು ಕರೆದುಕೊಂಡು ಬರುತ್ತೇನೆ.

[ರಮಾಬಾಯಿ ಹೋಗುವಳು]

ಕಿಟ್ಟ—ಆಗಲಿ, ಈ ವೇಷವನ್ನು ಧರಿಸುವೆನು; ನಟನೆಯನ್ನೂ ಮಾಡುವೆನು. ಈ ವೇಷವನ್ನು ಧಾರಣೆ ಮಾಡುವುದರಲ್ಲಿ ನಾನೇ ಮೊದಲಿಗನಿರಬಹುದು. ನನ್ನ ಎತ್ತರ ಸಾಲದು; ಒಳ್ಳೆಯ ವಿದ್ಯಾವಂತ ಎನ್ನಿಸಿಕೊಳ್ಳುವಷ್ಟು ತೆಳ್ಳಗಿಲ್ಲ; ಆದರೆ ನಾನು ಸತ್ಯವಂತ, ಗೃಹಸ್ಥ; ವಿವೇಕಿ, ವಿದ್ಯಾವಂತ ಎನ್ನಿಸಿಕೊಂಡಂತೆಯೇ ಆಯಿತು. ಅಗೋ ಅವರೂ ಬಂದರು.

(ಭೀಮಣ್ಣ, ರಮಾಬಾಯಿ ಬರುವರು)

ಭೀಮಣ್ಣ—ಶಾಸ್ತ್ರಿಗಳೆ, ನಮಸ್ಕಾರ.

ಕಿಟ್ಟ—ಭೀಮಣ್ಣ, ದೀರ್ಘಾಯುಷ್ಮಾನ್‌ಭವ. ಕಾಗದ, ಕಡ್ಡಿ ಕಾಣದ ಕಾತ್ಯಾಯನ ಋಷಿ, ಕಪಿಲವಸ್ತುವಿನ ರಾಜ ಗೋಪೀಚಂದನ ಸೋದರಸೊಸೆಗೆ ಬಹು ಚಮತ್ಕಾರದಿಂದ ಹೇಳಿದಂತೆ "ತದಸ್ತಿ ಇತಿ, ತದಸ್ತಿ." ನಾನು ಶಾಸ್ತ್ರಿಯಾಗಿರುವುದರಿಂದ, ನಾನು ಶಾಸ್ತ್ರಿಯಾಗಿದೇನೆ. ಹೇಗೇ ಎಂದರೆ—ತತ್ ಎಂದರೆ ತತ್, ಅದು; ಅಸ್ತಿ ಎಂದರೆ ಅಸ್ತಿ, ಇದೆ.

ಭೀಮಣ್ಣ—ಶಾಸ್ತ್ರಿಗಳೆ, ಮೂರ್ತಿಯನ್ನು ನೋಡಿ ಅಲ್ಲಿ.

ಕಿಟ್ಟ (ಧ್ವನಿಯನ್ನು ಬದಲಾಯಿಸಿ)—ಮಾಧೂ, ಮಾಧೂ! ಅಸ್ಮಿನ್‌ಗೃಹೆ ಶಾಂತಿರಸ್ತು, ಶಾಂತಿರಸ್ತು! ಶಾಂತಿ ಶ್ಯಾಂತಿ ಶ್ಯಾಂತಿಃ!

ಭೀಮಣ್ಣ—ಕೊರಮ ಚೆನ್ನಾಗಿ ನಟನೆ ಮಾಡುತ್ತಾನೆ. ಭಲಾ!

ಮಾಧವ—ಯಾರದು, ಕೂಗುವರು?

ಕಿಟ್ಟ—ಶಾಸ್ತ್ರಿಗಳಯ್ಯ, ಶಾಸ್ತ್ರಿಗಳು . . . ಹುಚ್ಚು ಹಿಡಿದಿರುವ ಮಾಧವ ಮೂರ್ತಿಯ ದರ್ಶನಕ್ಕೆ ಬಂದಿದಾರೆ.

ಮಾಧವ—ಶಾಸ್ತ್ರಿಗಳೆ, ಶಾಸ್ತ್ರಿಗಳೇ, ನೀವು ಒಳ್ಳೆಯವರು ಶಾಸ್ತ್ರಿಗಳೆ. ನನ್ನ ಯಜಮಾನಿಯ ಬಳಿಗೆ ಹೋಗಿ ಶಾಸ್ತ್ರಿಗಳೆ.

ಕಿಟ್ಟ—ಹೂ, ಫಟ್, ಫಟ್—ಎಲಾ ಬ್ರಹ್ಮೇತಿ, ಹೊರಕ್ಕೆ ಬಾ. ಇವನನ್ನು ಯಾತಕ್ಕೆ ಹಿಂಸಿಸುವೆ? ಏನು, ಹೆಂಗಸರ ವಿಷಯವನ್ನುಳಿದು ಬೇರೆ ಮಾತೇ ಇಲ್ಲವೋ ನಿನಗೆ?

ಭೀಮಣ್ಣ—ಶಾಸ್ತ್ರಿಗಳೆ, ನಿಮ್ಮ ಮಾತು ಸರಿ.

ಮಾಧವ (ಒಳಗಿನಿಂದಲೆ)—ಶಾಸ್ತ್ರಿಗಳೆ, ನನಗೆ ಮಾಡಿರುವಷ್ಟು ಅನ್ಯಾಯವನ್ನು ಇನ್ನು ಯಾರಿಗೂ ಮಾಡಿಲ್ಲ, ಶಾಸ್ತ್ರಿಗಳೆ. ನಾನು ಹುಚ್ಚನೆಂದು ನೀವು ಭಾವಿಸ ಬೇಡಿ. ಆ ಹಾಳುಜನರು ನನ್ನನ್ನು ಈ ಕಡುಗತ್ತಲೆಯಲ್ಲಿ ಕೂಡಿಹಾಕಿದಾರೆ.

ಕಿಟ್ಟ—ಹೇ ಬ್ರಹ್ಮೇತಿ, ನಿನ್ನ ಮಾತೆಲ್ಲ ಅನೃತದ ಕಂತೆ! ನಾನು ಒಳ್ಳೆ ಯವನು, ನಿನ್ನನ್ನು ವೃಥಾ ಬಯ್ಯುವುದಿಲ್ಲ, ಹಿಂಸಿಸುವುದಿಲ್ಲ. ಏನೆಂದೆ? ಕೋಣೆ ಕತ್ತಲು ಎಂದೆಯಾ?

ಮಾಧವ—ಪಾತಾಳಲೋಕದಷ್ಟು ಕತ್ತಲೆ, ಶಾಸ್ತ್ರಿಗಳೆ.

ಕಿಟ್ಟ—ಇದೇನಯ್ಯ, ಹೀಗೆ ಹೇಳುತ್ತೀಯೆ? ಈ ಕೋಣೆಗೆ ನೀಳ್‌ಕಿಟಕಿ ಗಳಿವೆ, ಮೇಲ್‌ಕಿಟಕಿಗಳಿವೆ, ಗವಾಕ್ಷಗಳಿವೆ; ಬೆಳಕಿಲ್ಲವೆಂದು ಹೇಳುವೆಯಾದರೂ ಹೇಗೆ?

ಮಾಧವ—ನನಗೆ ಹುಚ್ಚು ಹಿಡಿದಿಲ್ಲ, ಶಾಸ್ತ್ರಿಗಳೆ. ಈ ಕೋಣೆ ಕತ್ತಲು ಶಾಸ್ತ್ರಿಗಳೆ.

ಕಿಟ್ಟ—ಹುಚ್ಚ, ನೀನು ಹೇಳುವುದು ತಪ್ಪು. ನಾನು ಹೇಳುವುದನ್ನು ಕೇಳು. ಅಜ್ಞಾನವನ್ನು ಬಿಟ್ಟು ಬೇರೆ ಅಂಧಕಾರವಿಲ್ಲ. ಈ ಅಜ್ಞಾನಾಂಧಕಾರದಲ್ಲಿ ನೀನು ಮುಗ್ಗುರಿಸುತ್ತಾ ಇರುವೆ.

ಮಾಧವ—ಶಾಸ್ತ್ರಿಗಳೆ ಈ ಕೋಣೆಯ ಕತ್ತಲು ಅಜ್ಞಾನದಷ್ಟೆ ಇದೆ; ಅಜ್ಞಾ ನಾಂಧಕಾರ ಪಾತಾಳದ ಕತ್ತಲಿನಷ್ಟು ಇದ್ದರೂ ಸರಿ. ಆದರೆ ನನಗೆ ಆಗಿರುವಷ್ಟು ಅನ್ಯಾಯ ಇನ್ನು ಯಾರಿಗೂ ಆಗಿಲ್ಲ. ನಿಮಗಿಂತ ಹೆಚ್ಚಿನ ಹುಚ್ಚು ನನಗೆ ಹಿಡಿದಿಲ್ಲ. ನನ್ನನ್ನು ಪರೀಕ್ಷೆಮಾಡಿ, ಪ್ರಶ್ನೆಕೇಳಿ, ಉತ್ತರಕೊಡುತ್ತೇನೆ.

ಕಿಟ್ಟ—ಕಾಡುಕೋಳಿಯ ವಿಚಾರವಾಗಿ ಪಿತ್ತಂಫೋರಂ ಭಟ್ಟರ ಅಭಿಪ್ರಾಯವೇನು?

ಮಾಧವ—ನನ್ನ ಅಜ್ಜಿಯ ಜೀವ ಒಂದು ಪಕ್ಷಿಯ ಶರೀರದಲ್ಲಿ ಸುಖವಾಗಿ ವಾಸಿಸಬಹುದು—ಎಂದು.

ಕಿಟ್ಟ—ಆ ಅಭಿಪ್ರಾಯದ ವಿಚಾರದಲ್ಲಿ, ನಿನ್ನ ಅಭಿಪ್ರಾಯವೇನು?

ಮಾಧವ—ಮಾನವನ ಆತ್ಮ ಘನವಾದ ವಸ್ತು: ಭಟ್ಟರ ಅಭಿಪ್ರಾಯವನ್ನು ನಾನು ಅನುಮೋದಿಸುವುದಿಲ್ಲ.

ಕಿಟ್ಟ—ಇಗೋ, ನಿನಗೆ ನಮಸ್ಕಾರ. ಅಂಧಕಾರದಲ್ಲಿಯೇ ಇನ್ನೂ ಇರು: ನಿನ್ನ ಜ್ಞಾನ ಶುದ್ಧವಾಗಿದೆ ಎಂದು ನಾನು ಹೇಳುವ ಮೊದಲು, ನೀನು ಭಟ್ಟರ ಅಭಿಪ್ರಾಯವನ್ನು ಒಪ್ಪಲೇಬೇಕು. ನಿನ್ನ ಅಜ್ಜಿಯ ಆತ್ಮ ಎಲ್ಲಿ ಹೋಗುವುದೊ ಎನ್ನುವ ಭೀತಿಯಿಂದ ನೀನು ಕಾಡುಕೋಳಿಯನ್ನು ಕೊಲ್ಲದೆ ಬಿಡಬೇಕು. ನಮಸ್ಕಾರ, ನಾನು ಹೋಗಿಬರುವೆನು.

ಮಾಧವ—ಶಾಸ್ತ್ರಿಗಳೆ! ಶಾಸ್ತ್ರಿಗಳೇ!!

ಭೀಮಣ್ಣ—ಘನಂದಾರ ಶಾಸ್ತ್ರಿಗಳೇ ಸರಿ, ನೀನು.

ಕಿಟ್ಟ—ಹಾಗಲ್ಲವಯ್ಯಾ, ನಾನು ಎಲ್ಲಕ್ಕೂ ಸಿದ್ಧ.

ರಮಾ—ಗಡ್ಡ, ಶಾಲು ಇಲ್ಲದೇನೆ ಈ ಕೆಲಸ ಮಾಡಬಹುದಾಗಿದ್ದಿತು. ಅವನಿಗೆ ನೀನು ಕಾಣಿಸುವುದಿಲ್ಲ.

ಭೀಮಣ್ಣ—ಈಗ ನಿನ್ನ ಧ್ವನಿಯಲ್ಲೆ ಅವನನ್ನು ಮಾತನಾಡಿಸು. ಆಗ ಏನು ಹೇಳುವನೋ ನೋಡೋಣ. ಅವನ ಕೊರಮತನಕ್ಕೆ ಬೆಂಕಿಹಾಕಿ ಸುಡಬೇಕು. ಆದರೆ ಈಗ ಅವನನ್ನು ಬಿಡುಗಡೆ ಮಾಡುವುದು ಒಳ್ಳೆಯದು. ಯಜಮಾನಿಗೆ ನನ್ನ ಮೇಲೆ ಆಗ್ರಹ ಹೆಚ್ಚಿದೆ; ಆದುದರಿಂದ ಈ ತಮಾಷೆಯನ್ನು ಕೊನೆಯ ವರೆಗೂ ನಡೆಯಿಸುವಹಾಗಿಲ್ಲ. ಆ ಮೇಲೆ ನನ್ನ ಕೋಣೆಗೆ ಬಾ.

(ಭೀಮಣ್ಣ, ರಮಾಬಾಯಿ ಹೋಗುವರು)

ಕಿಟ್ಟ (ಹಾಡುವನು, ಧ್ವನಿಯನ್ನು ಬದಲಾಯಿಸಿ)—

'ಹೇ ರಾಮಮೂರುತಿ, ನೀ ಹರ್ಷ ಮೂರುತಿ.
ಪೇಳಯ್ಯ ಎನಗೆ ನಿನ್ನ ಸತಿಯ ಕ್ಷೇಮವ'

ಮಾಧವ—ನಕಲಿಕಿಟ್ಟಾ!

ಕಿಟ್ಟ—ನನ್ನ ಸತಿಗೆ ಕರುಣೆ ಇಲ್ಲ, ದೇವರಾಣೆಗೂ.

ಮಾಧವ—ಕಿಟ್ಟಾ, ನಕಲಿಕಿಟ್ಟಾ!

ಕಿಟ್ಟ—ಅಯ್ಯೋ! ಅವಳು ಹಾಗಿರುವುದೇಕೆ?

ಮಾಧವ—ನಕಲಿಕಿಟ್ಟಾ, ಕೂಗುತ್ತಿರುವವನು ನಾನು.

ಕಿಟ್ಟ—ಅವಳಿಗೆ ಇನ್ನೊಬ್ಬರಲ್ಲಿ ಅಸುರಾಗ—ಆಹಾ! ಕೂಗಿದವರು ಯಾರು?

ಮಾಧವ—ನಕಲಿಕಿಟ್ಟ, ನೀನು ಒಳ್ಳೆಯವನು. ನಾನು ನಿನಗೆ ಯಾವಾಗಲೂ ಒಳ್ಳೆಯದನ್ನೆ ಮಾಡಿರುವೆನು, ಮುಂದಕ್ಕೂ ಮಾಡುವೆನು. ಒಂದು ದೀಪ, ಕಾಗದ, ಕಡ್ಡಿ, ಮಸಿ ಇವುಗಳನ್ನು ತಂದುಕೊಡಯ್ಯ. ಈ ಉಪಕಾರವನ್ನು ಯಾವತ್ತಿಗೂ ಮರೆಯುವುದಿಲ್ಲ.

ಕಿಟ್ಟ—ಯಾರದು. ಮಾಧವಮೂರ್ತಿರಾಯರೆ?

ಮಾಧವ—ಹೌದಯ್ಯ, ಕಿಟ್ಟ.

ಕಿಟ್ಟ—ಅಯ್ಯೋ ಪಾಪ, ನಿಮಗೆ ಹೇಗೆ ಸ್ವಾಮಿ ಹುಚ್ಚು ಹಿಡಿಯಿತು?

ಮಾಧವ—ಅಯ್ಯಾ ನಕಲಿಕಿಟ್ಟ! ನನಗೆ ಮಾಡಿರುವಷ್ಟು ಅನ್ಯಾಯವನ್ನು ಯಾರಿಗೂ ಯಾವತ್ತೂ ಮಾಡಲಿಲ್ಲ. ನಿನ್ನ ಬುದ್ಧಿ ಎಷ್ಟು ನೆಟ್ಟಗಿದೆಯೊ, ಅಷ್ಟೇ ನೆಟ್ಟಗಿದೆ ನನ್ನ ಬುದ್ಧಿಯೂ.

ಕಿಟ್ಟ—ಅಷ್ಟು ಮಾತ್ರವೆ ನೆಟ್ಟಗಿದೆಯೆ? ನಕಲಿಕಿಟ್ಟನ ಬುದ್ಧಿಗಿಂತ ನಿನ್ನ ಬುದ್ಧಿ ಹೆಚ್ಚು. ನೆಟ್ಟಗಿಲ್ಲವಾದರೆ, ನಿನಗೆ ಹುಚ್ಚು ಹಿಡಿದಿರುವುದು ಖಂಡಿತ.

ಮಾಧವ—ನನ್ನನ್ನು ಇಲ್ಲಿ ಕೂಡಿಹಾಕಿದಾರೆ; ಕತ್ತಲಲ್ಲಿಟ್ಟಿದಾರೆ. ಶಾಸ್ತ್ರಿಗಳನ್ನು ಕಳುಹಿಸಿದ್ದರು ಇಲ್ಲಿಗೆ. ಹಾಳುಜನ, ನನಗೆ ಹುಚ್ಚು ಹಿಡಿಸುವುದಕ್ಕೆ ಬೇಕಾದುದನ್ನೆಲ್ಲ ಮಾಡುತ್ತಿದಾರೆ.

ಕಿಟ್ಟ—ಶಾಸ್ತ್ರಿಗಳು ಇಲ್ಲೇ ಇರುವರು. ಏನು ವಿವೇಕವನ್ನು ಬೇಕೋ ಕೇಳಿ ತಿಳಿದುಕೊ.

(ಧ್ವನಿಯನ್ನು ಬದಲಾಯಿಸುವನು)

ಮಾಧು, ಮಾಧು! ದೇವರೇ ನಿನ್ನ ಬುದ್ಧಿಯನ್ನು ನೆಟ್ಟಗೆ ಮಾಡಬೇಕು. ಹುಚ್ಚು ಮಾತುಗಳನ್ನು ನಿಲ್ಲಿಸು. ಪ್ರಯತ್ನಪೂರ್ವಕವಾಗಿ ಸ್ವಲ್ಪ ನಿದ್ರೆಮಾಡು.

ಮಾಧವ—ಶಾಸ್ತ್ರಿಗಳೇ!

ಕಿಟ್ಟ (ಧ್ವನಿ ಬದಲಾಯಿಸಿ)—ಅವನ ಸಂಗಡ ಏನು ಮಾತು ಶಾಸ್ತ್ರಿಗಳೆ—

(ಪುನಃ ಬದಲಾಯಿಸಿ)—ನನಗೇನಯ್ಯ ನೀನು ಹೇಳಿದ್ದು? ನಾನು ಮಾತನಾಡುವುದಿಲ್ಲ. ನಮಸ್ಕಾರ, ಶಾಸ್ತ್ರಿಗಳೆ, ಹೋಗಿಬನ್ನಿ—ದೀರ್ಘಾಯುಷ್ಮಾನ್‌ಭವ. ಶೀಘ್ರ

ಮೇವ ವಿವಾಹ ಮಹೋತ್ಸವ ಪ್ರಾಪ್ತಿರಸ್ತು, ತಥಾಸ್ತು—ಹಾಗೇ ಆಗಲಿ, ಶಾಸ್ತ್ರಿಗಳೆ. ನಾನು ಮದುವೆ ಆಗುತ್ತೇನೆ, ಶಾಸ್ತ್ರಿಗಳೆ.

ಮಾಧವ—ಕಿಟ್ಟಾ, ಕಿಟ್ಟಾ, ನಕಲಿ ಕಿಟ್ಟಾ !

ಕಿಟ್ಟ—ಅಯ್ಯೋ ಪಾಪ. ಸಹಿಸಿಕೊಳ್ಳಬೇಕಯ್ಯ. ನೀನು ಹೇಳುವುದೇನು? ನಿನ್ನ ಸಂಗಡ ಮಾತನಾಡಿದರೆ ನನ್ನನ್ನು ಬಯ್ಯುವರಯ್ಯ.

ಮಾಧವ—ಕಿಟ್ಟ, ನೀನು ಬಹು ಒಳ್ಳೆಯವನು. ಒಂದು ದೀಪ, ಒಂದು ಕಾಗದ ತಂದುಕೊಡಯ್ಯ. ನನ್ನ ಜ್ಞಾನ ಶುದ್ಧವಾಗಿದೆ, ನನಗೆ ಹುಚ್ಚು ಹಿಡಿದಿಲ್ಲ.

ಕಿಟ್ಟ—ನೀನು ಹೇಳುವಂತೆ ಇದ್ದರೆ ಎಷ್ಟು ಚೆನ್ನಾಗಿತ್ತೊ !

ಮಾಧವ—ನನ್ನ ಕೈಮೇಲಿನ ಆಣೆ, ನಾನು ಚೆನ್ನಾಗಿಯೆ ಇದೇನೆ. ಕಿಟ್ಟ, ಸ್ವಲ್ಪ ಮಸಿ, ಕಾಗದ, ದೀಪ ತಂದುಕೊಡು. ನಾನು ಒಂದು ಕಾಗದವನ್ನು ಬರೆಯುವೆನು. ಅದನ್ನು ಯಜಮಾನಿಗೆ ನೀನೇ ತಲಪಿಸು. ನಿನಗೆ ದೊಡ್ಡ ಬಹುಮಾನ ಕೊಡುವೆನು.

ಕಿಟ್ಟ—ಆಗಲಿ, ತಂದುಕೊಡುವೆನು. ನಿಜವಾಗಿ ಹೇಳು, ನಿನಗೆ ಖಂಡಿತವಾಗಿ ಹುಚ್ಚು ಹಿಡಿದಿಲ್ಲವೆ? ಹಾಗಾದರೆ ಹುಚ್ಚನಂತೆ ನಟನೆ ಮಾಡುತ್ತಿರುವೆಯಾ?

ಮಾಧವ—ನನ್ನ ಮಾತನ್ನು ನಂಬಯ್ಯ ನನಗೆ ಸತ್ಯವಾಗಿ ಹುಚ್ಚಿಲ್ಲ ನಾನು ನಿಜ ಹೇಳುತ್ತಿದೇನೆ.

ಕಿಟ್ಟ—ಹುಚ್ಚನ ಮೆದುಳನ್ನು ನೋಡುವ ವರೆಗೂ ನಾನು ಅವನನ್ನು ನಂಬಲಾರೆ. ನಾನು ನಿನಗೆ ದೀಪ, ಕಾಗದ, ಮಸಿಯನ್ನು ತಂದುಕೊಡುವೆನು.

ಮಾಧವ—ಕಿಟ್ಟ ನಿನಗೆ ಅದಕ್ಕಾಗಿ ದೊಡ್ಡ ಬಹುಮಾನ ಕೊಡುವೆನು. ದಯೆಯಿಟ್ಟು, ಹೋಗಿಬಾರಯ್ಯ.

ಕಿಟ್ಟ—(ಹಾಡುವನು)—

"ಪೋಗುವೆನಯ್ಯ, ಪೋಗುವೆನು, ಈಗಲೇ,
ಬರುವೆನಯ್ಯ, ಬರುವೆನು, ಕೂಡಲೇ."

ಮಂ.

ಕನ್ನಡ ಕಾವ್ಯಪ್ರಕಾಶ

ಮೂರನೆಯ ಉಲ್ಲಾಸ

ಅರ್ಥಾಃ ಪ್ರೋಕ್ತಾಃ ಪುರಾ ತೇಷಾಮ್ ‖೧ *a*‖

ಅವುಗಳ (=ಶಬ್ದಗಳ) ಅರ್ಥಗಳನ್ನು ಹಿಂದೆ ಹೇಳಲಾಯಿತು.[1] ಅರ್ಥಗಳೆಂದರೆ ವಾಚ್ಯ, ಲಕ್ಷ್ಯ ಮತ್ತು ವ್ಯಂಗ್ಯವೆಂಬವು. 'ಅವುಗಳ' ಎಂದರೆ ವಾಚಕ, ಲಾಕ್ಷಣಿಕ ಮತ್ತು ವ್ಯಂಜಕಗಳ ಎಂದಭಿಪ್ರಾಯ.

ಅರ್ಥವ್ಯಂಜಕತೋಚ್ಯತೇ ‖೧*b*‖

ಈಗ ಅರ್ಥಕ್ಕಿರುವ ವ್ಯಂಜಕತ್ವವನ್ನು ವಿವರಿಸಲಾಗುತ್ತದೆ.[2] ಅದೆಂತೆಂದರೆ—

ವಕ್ತೃಬೋದ್ಧವ್ಯಕಾಕೂನಾಂ ವಾಕ್ಯವಾಚ್ಯಾನ್ಯಸನ್ನಿಧೇಃ ‖೧ *c d*‖

ಪ್ರಸ್ತಾವ ದೇಶ ಕಾಲಾದೇಃ ವೈಶಿಷ್ಟ್ಯಾತ್ ಪ್ರತಿಭಾಜುಷಾಮ್ ।

ಯೋಽರ್ಥಸ್ಯಾನ್ಯಾರ್ಥಧೀಹೇತುಃ ವ್ಯಾಪಾರೋ ವ್ಯಕ್ತಿರೇವ ಸಾ ‖೨‖

ಮಾತಾಡುವವ, ಕೇಳತಕ್ಕವ, ಕಾಕು,[3] ವಾಕ್ಯ, ವಾಚ್ಯವಿಷಯ, ಅನ್ಯರ ಸನ್ನಿಧಿ,[4] ಪ್ರಸ್ತಾವ, ದೇಶ, ಕಾಲ, ಇತ್ಯಾದಿಗಳ ವೈಶಿಷ್ಟ್ಯದಿಂದ ಪ್ರತಿಭಾ

---

[1] 'ಹಿಂದೆ' ಎಂದರೆ ಎರಡನೆಯ ಉಲ್ಲಾಸದಲ್ಲಿ. ಈ ವಾಕ್ಯವು ಹಿಂದಿನ ಉಲ್ಲಾಸಕ್ಕೂ ಈ ಉಲ್ಲಾಸಕ್ಕೂ ಇರುವ 'ಸಂಗತಿ'ಯನ್ನು ಸಮನ್ವಯಮಾಡಿ ತೋರಿಸುತ್ತದೆ.

[2] ಮಾಣಿಕ್ಯಚಂದ್ರನು ಕಾರಿಕೆಯ ಪ್ರಥಮಪಾದದಲ್ಲಿರುವ 'ತೇಷಾಮ್' ಎಂಬುದಕ್ಕೆ ದ್ವಿತೀಯಪಾದದೊಡನೆ ಅನ್ವಯ ಹೇಳುತ್ತಾನೆ.

ಶಬ್ದವ್ಯಂಜಕತೆಗಿಂತ ಭಿನ್ನವಾದುದೇ ಅರ್ಥವ್ಯಂಜಕತೆ. ಸ್ವಪ್ರಯೋಜನವಾದ ಲಾಕ್ಷಣಿಕ ಶಬ್ದಪ್ರಯೋಗವೆಲ್ಲ ಲಕ್ಷಣಾಮೂಲ ವ್ಯಂಜನೆ; ಶಬ್ದಗಳ ಅನೇಕಾರ್ಥ ಬಲದಿಂದ ಬರುವ ವ್ಯಂಜನೆಯೆಲ್ಲ ಅಭಿಧಾಮೂಲ ವ್ಯಂಜನೆ. ಇವೆರಡೂ ಶಬ್ದವ್ಯಂಜಕತೆಯ ಪ್ರಪಂಚದಲ್ಲಿ ಬರುತ್ತವೆ. ಇವೆರಡೂ ಅಲ್ಲದ ವ್ಯಂಜಕತ್ವವೇ ಅರ್ಥವ್ಯಂಜಕತೆ. ಶಬ್ದವ್ಯಂಜಕತೆಯಲ್ಲಿ ಆ ಶಬ್ದವನ್ನು ಸಮಾನಾರ್ಥಕ ಶಬ್ದವನ್ನು ಇಟ್ಟರೆ ವ್ಯಂಜಕತ್ವ ಮಾಯವಾಗುತ್ತದೆ. ಅರ್ಥವ್ಯಂಜಕತೆಯಲ್ಲಿ ಮಾತ್ರ ಉಳಿಯುತ್ತದೆ.

[3] ಶೋಕ, ಭಯ, ಮುಂತಾದ ಚಿತ್ತೋದ್ವೇಗಗಳಿಂದ ಮಾತಾಡುವಾಗ ಉಂಟಾಗುವ ಧ್ವನಿ ವಿಕಾರವೇ 'ಕಾಕು.'

[4] ಜತೆಯಲ್ಲಿ ಇರುವಿಕೆ.

ವಂತರಿಗೆ[5] ಒಂದರ್ಥದಿಂದ ಮತ್ತೊಂದರ್ಥವು ಸ್ಫುರಿಸುತ್ತಿದ್ದರೆ, ಅದಕ್ಕೆ ಕಾರಣವಾದ ವ್ಯಾಪಾರವು ವ್ಯಂಜನೆಯೇ ಸರಿ.[6]

'ಬೋದ್ಧವ್ಯ' ಎಂದರೆ ಯಾರನ್ನು ಕುರಿತು ವಕ್ತೃವು ಹೇಳುತ್ತಾನೋ ಅವನು. 'ಕಾಕು' ಎಂದರೆ ಧ್ವನಿವಿಕಾರ. 'ಪ್ರಸ್ತಾವ'ವೆಂದರೆ ಸಂದರ್ಭ. 'ಒಂದರ್ಥದಿಂದ' ಎನ್ನುವಾಗ ಅರ್ಥವೆಂದರೆ ವಾಚ್ಯ, ಲಕ್ಷ್ಯ, ವ್ಯಂಗ್ಯಗಳಲ್ಲೊಂದೆಂದು ಭಾವ.[7] ಈಗ ಕ್ರಮವಾಗಿ[8] ಉದಾಹರಣೆಗಳನ್ನು ಕೊಡಲಾಗುತ್ತದೆ:—

ಅಇ ಪಿಹುಲಂ ಜಲಕುಂಭಂ ಘೇತ್ತೂಣ ಸಮಾಗದಮ್ಹಿ ಸಹಿ ತುರಿಅಮ್ ।
ಸಮಸೇಅಸಲಿಲಣೀಸಾಸಣೀಸಹಾ ವೀಸಮಾಮಿ ಖಣಮ್ ॥

ಕೆಳದಿಯೆ, ಬಹುಭಾರದ ಕೊಡ-
ದೊಳೆ ನೀರಂ ಪೊತ್ತು ಬಂದೆನಾತುರದಿಂದಂ ।
ಬಳಲಿಕೆಯಿಂ ಬೆಮರ್ವುದು ಮೈ,
ಬಳೆವುದಿಸಿರ್, ವಿಶ್ರಮಿಪ್ಪೆನಾನೊಂದು ಚಣಂ ॥[9]

ಇಲ್ಲಿ ಚೌರ್ಯರತವನ್ನು ಮರೆಮಾಚುತ್ತಿರುವುದು ವ್ಯಂಗ್ಯ.[10]

---

[5] ಕಾವ್ಯರಸಾಸ್ವಾದದ ಸಂಸ್ಕಾರವುಳ್ಳವರಿಗೆ ಮಾತ್ರ; ಜೆಳ್ಳಕ್ಕರಿಗಂಗೂ ಶುಷ್ಕವೈಯಾಕರಣಗಳಿಗೂ ವೇದಾಭ್ಯಾಸಜಡರಿಗೂ ಅಲ್ಲ. ಹೋಲಿಸಿ—

"ಸವಾಸನಾನಾಂ ಸಭ್ಯಾನಾಂ ರಸಸ್ಯಾನುಭವೋ ಭವೇತ್ ।
ನಿರ್ವಾಸನಾಸ್ತು ರಂಗಾಂತರ್ವೇಶ್ಮಕುಡ್ಯಾಶ್ಮಸನ್ನಿಭಾಃ" ॥

—ಸಾಹಿತ್ಯದರ್ಪಣದಲ್ಲಿ ಉದಾಹೃತ.

[6] ಅರ್ಥಕ್ಕೆ ಅರ್ಥಾಂತರವನ್ನು ಬೋಧಿಸುವ ಶಕ್ತಿಯು ವ್ಯಂಜನೆಯೇ ಎಂಬುದನ್ನು ಹಿಂದಿನ ಉಲ್ಲಾಸದಲ್ಲಿ ಉಪಪಾದಿಸಿದೆ. ತಾತ್ಪರ್ಯ, ಅರ್ಥಾಪತ್ತಿ, ಅನುಮಾನಗಳಿಗಿಂತ ಅದು ಭಿನ್ನವೆಂಬುದು ಧ್ವನಿವಾದಿಗಳ ಸಿದ್ಧಾಂತ.

[7] ಈ ಮೂರರಲ್ಲಿ ವಾಚ್ಯಾರ್ಥದ ವ್ಯಂಜಕತ್ವವನ್ನು ಮಾತ್ರ ಮಮ್ಮಟನು ವಿವರವಾಗಿ ಉದಾಹರಿಸಿದ್ದಾನೆ. ಅದರಂತೆಯೇ ಲಕ್ಷ್ಯಾರ್ಥ, ವ್ಯಂಗ್ಯಾರ್ಥಗಳ ವ್ಯಂಜಕತ್ವವನ್ನೂ ವಾಚಕರೇ ಊಹಿಸಿಕೊಳ್ಳಬಹುದೆಂದು ಕಡೆಗೆ ತಿಳಿಸುತ್ತಾನೆ.

[8] ಅರ್ಥವ್ಯಂಜಕತೆಯ ಸಾಧಕಗಳಲ್ಲಿ ಒಂದೊಂದನ್ನೂ ಕಾರಿಕೆಯಲ್ಲಿ ಹೇಳಿರುವ ಅನುಕ್ರಮದಲ್ಲಿಯೇ ಉದಾಹರಿಸಲಾಗುತ್ತದೆ.

[9] ಇದು ವಕ್ತೃವೈಶಿಷ್ಟ್ಯಕ್ಕೆ ಉದಾಹರಣೆ.

[10] ಈ ವ್ಯಂಗ್ಯಾರ್ಥಕ್ಕೆ, ವಕ್ತೃವು ಜಾರಿಣಿಯೆಂಬ ವೈಶಿಷ್ಟ್ಯವೇ ಕಾರಣ. ಅವಳು ಪತಿವ್ರತೆಯೇ ಆಗಿದ್ದ ಪಕ್ಷಕ್ಕೆ ವ್ಯಂಗ್ಯಾರ್ಥವೇನೂ ಹೊರಡುತ್ತಿರಲಿಲ್ಲ.

ಓಣ್ಣಿದ್ದಂ ದೋಬ್ಬಲ್ಲಂ ಚಿಂತಾ ಅಲಸತ್ತಣಂ ಸಣೀಸಸಿಲಿಮ್ ।
ಮಮ ಮಂದಭಾಇಣೀಏ ಕೇರಂ ಸಹಿ ತುಹವಿ ಅಹಹ ಪರಿಹವಇ ॥

ಜಾಗರಮಶಕ್ತಿ ಚಿಂತಾ-
ವೇಗಂ ನಿಡುಸುಯ್ಗಳಂತೆ ಬಳಲಿಕೆ ನಿನಗಂ।
ಸಂಗಡಿಸಿರ್ಪುವು ಭರದಿಂ-
ದೀಗಳ್ ತಾಮೆನ್ನ ಮಂದಭಾಗೆಯ ಕತದಿಂ ॥[11]

ಇಲ್ಲಿ ದೂತಿಯು ನಾಯಿಕೆಯ ಕಾಮುಕನನ್ನೇ ಉಪಭೋಗಿಸಿರುವಳೆಂಬುದು ವ್ಯಂಗ್ಯ.[12]

ತಥಾಭೂತಾಂ ದೃಷ್ಟ್ವಾ ನೃಪಸದಸಿ ಪಾಂಚಾಲತನಯಾಂ
ವನೇ ವ್ಯಾಧೈಃ ಸಾರ್ಧಂ ಸುಚಿರಮುಷಿತಂ ವಲ್ಕಲಧರೈಃ।
ವಿರಾಟಸ್ಯಾವಾಸೇ ಸ್ಥಿತಮನುಚಿತಾರಂಭನಿಭೃತಂ
ಗುರುಃ ಖೇದಂ ಖಿನ್ನೇ ಮಯಿ ಭಜತಿ ನಾದ್ಯಾಪಿ ಕುರುಷು ॥[13]

ರಾಜಸಭೆಯೊಳಗಂದು ಪಾಂಚಾಲನಂದನೆಯು
ಆ ತೆರದೊಳಾದುದನು ನಾಡೆ ನೋಡಿ,
ಬೇಡರೊಡನಾಡಿಯೆನೆ ಚಿರಕಾಲ ನೆಲಸಿದೆನು
ಕಾಡೊಳಗೆ ನಾರುಡೆಯನುಟ್ಟು ನಾನು ;

---

[11] ಈ ಉಲ್ಲಾಸದುದ್ದಕ್ಕೂ ಮಮ್ಮಟನು ಜನಪದಸಾಹಿತ್ಯದಿಂದಲೇ ಹೆಚ್ಚಾಗಿ ಪ್ರಾಕೃತ ಶ್ಲೋಕಗಳನ್ನಾರಿಸುತ್ತಿರುವುದು ಗಮನಾರ್ಹ. ಈ ಪದ್ಯವು ಕೇಳುವವನ ವೈಶಿಷ್ಟ್ಯದಿಂದ ವ್ಯಂಜಕತ್ವ ಉಂಟಾಗುವುದಕ್ಕೆ ಉದಾಹರಣೆ.

[12] ಇದನ್ನು ಮೊದಲನೆಯ ಉಲ್ಲಾಸದ "ನಿಶ್ಶೇಷ ಚ್ಯುತ ಚಂದನಂ" ಎಂಬ ಧ್ವನಿಕಾವ್ಯದ ಉದಾಹರಣೆಯೊಡನೆ ಹೋಲಿಸಿ. "ಧ್ವನಿ"ಕಾವ್ಯವು ಉತ್ತಮಕಾವ್ಯವೆನಿಸಲು ಶಬ್ದವ್ಯಂಜಕತೆಗಿಂತ ಅರ್ಥವ್ಯಂಜಕತೆಯೇ ಹೆಚ್ಚು ಸಾಧಕವೆಂಬುದು ನವೀನಾಲಂಕಾರಿಕರ ರಹಸ್ಯ. ಇದನ್ನರಿಯದೆ ಇಂದಿನ ಕವಿಗಳಲ್ಲಿ ಕೆಲವರು ಅರ್ಥವ್ಯಂಜಕತಾಶೂನ್ಯವಾದ, ನೇಯ ಶಬ್ದಭೂಯಿಷ್ಠವಾದ, ಕ್ಲಿಷ್ಟಪ್ರಯೋಗಗಳನ್ನೆಲ್ಲ ಧ್ವನಿಮಯವೆಂದು ಹೊಗಳಿಕೊಳ್ಳುವುದು ಹಾಸ್ಯಾಸ್ಪದ.

ಉದಾಹರಣೆಯಲ್ಲಿ 'ಬೋದ್ಧವ್ಯ'ಳಾದ ದೂತಿಯು ಜಾರಿಣಿಯೆಂಬ ವೈಶಿಷ್ಟ್ಯವನ್ನುಳ್ಳ ಕಾರಣ ವ್ಯಂಗ್ಯಾರ್ಥಕ್ಕವಕಾಶವಿದೆ.

[13] ಭಟ್ಟನಾರಾಯಣನ ವೇಣೀಸಂಹಾರ ನಾಟಕ, I. 11. ಈ ಪದ್ಯವು ಏಳನೆಯ ಉಲ್ಲಾಸದಲ್ಲೂ ಉದಾಹೃತವಾಗಿದೆ.

ಆ ವಿರಾಟನ ಬೀಡೊಳಾಳ್ವೆಸವ ಗೈಯುತ್ತೆ,
ಮಾನವನೆ ನೀಗುತ್ತೆ, ವಾಸಗೈದೆ;
ಅಣ್ಣಗಪ್ಪುದು ಖೇದವೆನ್ನೊಳೇ ಖಿನ್ನನೊಳು,
ಇನ್ನುಮಾಗದು ನೋಡೆ ಕೌರವರೊಳು.[14]

ಇಲ್ಲಿ, 'ಖೇದವು ನನ್ನ ವಿಷಯದಲ್ಲಿ ಯೋಗ್ಯವಲ್ಲ, ಕೌರವರ ವಿಷಯದಲ್ಲಿಯಾದರೆ ಯೋಗ್ಯ'ವೆಂಬುದು ಕಾಕುವಿನಿಂದ[15] ವ್ಯಂಗ್ಯ. ಇಲ್ಲಿಯೂ ವಾಚ್ಯಾರ್ಥದ ಸಿದ್ಧಿಗಾಗಿಯೇ ಕಾಕುವು ಉಪಯುಕ್ತವಾಗಿದೆಯೆಂದು ತಿಳಿದು ಇದನ್ನು ಗುಣೀಭೂತ ವ್ಯಂಗ್ಯಕ್ಕೆ ಲಕ್ಷ್ಯವೆಂದು ಭ್ರಮಿಸಬಾರದು. ಏಕೆಂದರೆ ವಾಕ್ಯವು ಪ್ರಶ್ನಾರ್ಥಕವೆಂಬುದನ್ನು ಸೂಚಿಸುವಷ್ಟರಿಂದಲೇ ಕಾಕುವಿನ ಕೆಲಸ ಮುಗಿಯಲವಕಾಶವುಂಟು.[16]

---

[14] 'ನಿನ್ನ ಕೋಪಾಟೋಪವು ಅತಿಯಾದರೆ ಅಣ್ಣನು ಕೋಪಿಸಬಹುದು' ಎಂದು ಹೇಳುವ ಸಹದೇವನಿಗೆ ಭೀಮನು ಉತ್ತರ ಕೊಡುತ್ತಿದ್ದಾನೆ.

[15] ಕಾಕುವನ್ನು ಕಡೆಯ ಸಾಲಿನಲ್ಲಿ ಕಾಣಬಹುದು. ಸುಮ್ಮನೆ ಓದಿದರೆ ಶೋಚ್ಯಸತ್ಯದ ಸಾಮಾನ್ಯ ನಿರೂಪಣೆ (= Statement) ಯೆನಿಸುತ್ತದೆ. ಆದರೆ ಧ್ವನಿಯನ್ನು ಬದಲಾಯಿಸಿಕೊಂಡು ಓದಿದರೆ ಎರಡು ಪ್ರಶ್ನಾರ್ಥಕ ವಾಕ್ಯ (= Questions) ಗಳಾಗುತ್ತವೆ:—ಅಣ್ಣಗಪ್ಪುದು ಖೇದವೆನ್ನೊಳೇ? ಇನ್ನುಮಾಗದು ನೋಡೆ ಕೌರವರೊಳು? ಇವುಗಳಲ್ಲಿ 'ಅಪ್ಪುದು', 'ಆಗದು', ಎಂಬ ಕ್ರಿಯೆಗಳು ಅಪ್ಪುದೇ? ಆಗದೇ? ಎಂಬ ಪ್ರಶ್ನೆಯನ್ನೇ ಕಾಕುವಿನಿಂದ ಎತ್ತಿ ತೋರಿಸುತ್ತವೆ. ಈ ಪ್ರಶ್ನೆಗಳು 'ಇದು ಯೋಗ್ಯವಲ್ಲ', ಇತ್ಯಾದಿ ವ್ಯಂಗ್ಯಾರ್ಥವನ್ನು ಧ್ವನಿಸುತ್ತವೆ.

[16] ಲಕ್ಷ್ಯದಲ್ಲಿ ವ್ಯಂಗ್ಯಾರ್ಥದ ಪ್ರತೀತಿ ಬಂದಮೇಲೆ, ಅದು ಮುಖ್ಯವೋ ಅಮುಖ್ಯವೋ ಎಂಬುದನ್ನು ನಿರ್ಧರಿಸುವುದೇ ಸಹೃದಯನ ಮುಖ್ಯ ಕಾರ್ಯ. ಈ ಸೂಕ್ಷ್ಮನಿರ್ಧಾರವನ್ನು ಮಾಡಬಲ್ಲ ಯೋಗ್ಯತೆಯಿಲ್ಲದವನು ಧ್ವನಿವಾದಿಗಳ ದೃಷ್ಟಿಯಲ್ಲಿ ವಿಮರ್ಶಕನೇ ಅಲ್ಲ. ಆನಂದವರ್ಧನನು ಈ ಸೂಕ್ಷ್ಮವಿಚಾರವನ್ನು ಹೇಗೆ ಮಾಡಬೇಕೆಂದು ದಾರಿಯನ್ನಾಗಲೇ ತೋರಿಸಿದ್ದನು. ಆದರೆ ಮಮ್ಮಟನು ದಾರಿಯನ್ನು ಶಾಸ್ತ್ರದೃಷ್ಟಿಯಿಂದ ಪರಿಪುಷ್ಟಗೊಳಿಸಿ, ನಿಷ್ಕೃಷ್ಟ ವಿವೇಚನೆಯನ್ನು ಐದನೆಯ ಉಲ್ಲಾಸದಲ್ಲಿ ಮಾಡಿದ್ದಾನೆ. ವ್ಯಂಗ್ಯಾರ್ಥವು ಮುಖ್ಯವಾಗಿದ್ದಾಗ ಕಾವ್ಯವು 'ಧ್ವನಿಕಾವ್ಯ'; ಅಮುಖ್ಯವಾಗಿದ್ದಾಗ 'ಗುಣೀಭೂತ ವ್ಯಂಗ್ಯ' ಅಥವಾ ಮಧ್ಯಮಕಾವ್ಯವೆಂಬ ಮಾತು ಮೊದಲನೆಯ ಉಲ್ಲಾಸದಲ್ಲೇ ಬಂದಿವೆ. ಈಗ ಪ್ರಸ್ತುತವಾದ ಪದ್ಯದಲ್ಲಿ ವ್ಯಂಗ್ಯಾರ್ಥವು ಮುಖ್ಯವೋ, ಅಮುಖ್ಯವೋ ಎಂಬುದೇ ಪ್ರಶ್ನೆ. ಮಮ್ಮಟನೇ ಐದನೆಯ ಉಲ್ಲಾಸದ ಪ್ರಾರಂಭದಲ್ಲಿ ಹೇಳುವಂತೆ ವ್ಯಂಗ್ಯಾರ್ಥವು (೧) ಅಗೂಢವಾಗಿದ್ದರೆ, (೨) ಮತ್ತೊಂದಕ್ಕೆ ಅಂಗವಾಗಿದ್ದರೆ, (೩) ವಾಚ್ಯಾರ್ಥವು ಸಿದ್ಧಿಸುವುದಕ್ಕೆ ಅಗತ್ಯವಾಗಿದ್ದರೆ, (೪) ಅಸ್ಫುಟವಾಗಿದ್ದರೆ, (೫) ಸಂಶಯಾಸ್ಪದವಾದ ಪ್ರಧಾನ್ಯವನ್ನು ಪಡೆದಿದ್ದರೆ. (೬) ವಾಚ್ಯದೊಡನೆ ಸಮಪ್ರಾಧಾನ್ಯವನ್ನು ಪಡೆದಿದ್ದರೆ, (೭) ಕಾಕುವಿನಿಂದ ಸೂಚಿತವಾಗಿದ್ದರೆ ಮತ್ತು (೮) ಅಸುಂದರವಾಗಿದ್ದರೆ, ಅದನ್ನು ಗುಣೀಭೂತ ವ್ಯಂಗ್ಯವೆಂದೇ ಪರಿಗಣಿಸಬೇಕು. ಪ್ರಕೃತದಲ್ಲಿ ೧, ೨, ೪, ೫, ೬, ೮ ನೆಯ ನಿಯಮಗಳಾವುವೂ

ತಇಅ ಮಹ ಗಂಡತ್ಥಲಣಿಮಿಅಂ ದಿಟ್ಠಿಂ ಣ ಣೇಸಿ ಅಣ್ಣತ್ತೋ ।
ಏಣ್ಹಿಂ ಸಚ್ಚೇ ಅ ಅಹಂ ತೇ ಅ ಕವೋಲಾ ಣ ಸಾ ದಿಟ್ಠೀ ॥

ನೀನಾಗ ಕೆನ್ನೆಯೊಳು ನೆಟ್ಟಿರುವ ದಿಟ್ಟಿಯನು
ಬಂದಿನಿತು ಬೇರೆಡೆಗೆ ಕಳಿಸಲಿಲ್ಲ ।
ಈಗಳದೆ ನಾನಿರುವೆ, ಅವೆ ನೋಡೆ ಕೆನ್ನೆಗಳು
ದಿಟ್ಟಿಯಾದೊಡೆ ತಾನು ಮೊದಲದಲ್ಲ ॥[17]

ಇಲ್ಲಿ, 'ನನ್ನ ಕೆನ್ನೆಯಲ್ಲಿ ಪ್ರತಿಬಿಂಬಿತಳಾದ ನನ್ನ ಸಖಿಯನ್ನು ನೀನು ನೋಡುತ್ತಿದ್ದ ದೃಷ್ಟಿಯೇ ಬೇರೆಯಾಗಿದ್ದಿತು; ಅವಳು ಹೋದಮೇಲೆ ನಿನ್ನ ದೃಷ್ಟಿಯು ಬೇರೊಂದಾಗಿಬಿಟ್ಟಿದೆ; ನಿಜವಾಗಿಯೂ ನೀನವಳ ಗುಪ್ತಕಾಮುಕನೇ,' ಎಂಬುದು ವ್ಯಂಗ್ಯ.[18]

ಅನ್ವಯಿಸುವುದಿಲ್ಲ. ಆದರೆ ೪ ಮತ್ತು ೭, ಈ ನಿಯಮಗಳು ಅನ್ವಯಿಸುವಂತೆ ಭಾಸವಾಗಬಹುದು. ಮಮ್ಮಟನು ಹಾಗೆ ತಿಳಿಯುವುದು ಸರಿಯಲ್ಲವೆಂದು ಸಂಶಯಪರಿಚ್ಛೇದ ಮಾಡುತ್ತಿದ್ದಾನೆ. ಇಲ್ಲಿ ವಾಚ್ಯಾರ್ಥವು ಸ್ವತಃ ಅಸಂಭವವಾಗಿದ್ದಿದ್ದರೆ ಮಾತ್ರ ೪ ನೆಯ ನಿಯಮವು ಅನ್ವಯಿಸಬಹುದಿತ್ತು. ಆದರೆ ವಸ್ತುತಃ ಕಾಕುವಿಲ್ಲದೆ ಓದಿದರೂ ವಾಚ್ಯಾರ್ಥವು ಅಸಂಭವವಾಗುವಂತಿಲ್ಲ. ಸ್ವತಃ ವಾಚ್ಯಾರ್ಥವು ಅಸಂಭವವಲ್ಲವೆನಿಸುವ ಸ್ಥಳದಲ್ಲಿ ಕಾಕುವು ಬಂದರೆ ಅದು ೭ ನೆಯ ನಿಯಮವೆನಿಸುವುದಿಲ್ಲ; ಏಕೆಂದರೆ ಅನಿವಾರ್ಯವಾಗಿ ಕಾಕುವನ್ನು ಶರಣುಹೋಗಲೇಬೇಕಾದಾಗ ಮಾತ್ರ, ಆ ಕಾಕುವಿನಿಂದ ಬಂದ ವ್ಯಂಗ್ಯಾರ್ಥವು ಗುಣೀಭೂತವೆನಿಸುತ್ತದೆ. ಇಲ್ಲಿ ಕಾಕುವಿನಿಂದ ವ್ಯಂಗ್ಯಾರ್ಥ ಬರಲಿಲ್ಲವೆಂದರೆ ವಾಚ್ಯದ ಸಿದ್ಧಿಗೆ ಯಾವ ಆತಂಕವೂ ಇಲ್ಲ. ಅಷ್ಟೇ ಅಲ್ಲ; ಕಾಕುವಿನ ವ್ಯಾಪ್ತಿಯು ಪ್ರಶ್ನಾರ್ಥಬೋಧನಮಾಡಿದೊಡನೆ ಮುಗಿಯಿತೆನ್ನಲೂ ಅವಕಾಶವಿದೆ. ಹೀಗೆ ಅದರ ಕೆಲಸ ತೀರಿದನಂತರ 'ನನ್ನ ಮೇಲೆ ಕೋಪ ಯೋಗ್ಯವಲ್ಲ'ವೆಂದರ್ಥವು ರಸಿಕರಿಗೆ ಬರುತ್ತಿದ್ದರೆ, ಆ ವ್ಯಂಗ್ಯಾರ್ಥವು ಪ್ರಧಾನವಾಗುತ್ತದೆಯೇ ಹೊರತು, ಗುಣೀಭೂತ ಅಥವಾ ಅಪ್ರಧಾನವೆನಿಸುವುದಿಲ್ಲ. "ಕಾಕ್ವಾಕ್ಷಿಪ್ತ"ವಾದ ಗುಣೀಭೂತವ್ಯಂಗ್ಯದಲ್ಲಿಯಾದರೋ ಚರಮವ್ಯಂಗ್ಯಾರ್ಥದಲ್ಲಿ ಕಾಕು ಪರ್ಯವಸಾನ ಹೊಂದುವುದೇ ಹೊರತು, ತನ್ನರ್ಥ್ಯೆ ವಿಶ್ರಾಂತವಾಗುವುದಿಲ್ಲ ಉದಾ.' 'ಮಥ್ನಾಮಿ ಕೌರವಶತಂ . . .' (ಮತ್ತೂ ಹೆಚ್ಚಿನ ವಿವರಗಳಿಗೆ ಮುಂದೆ ಐದನೆಯ ಉಲ್ಲಾಸವನ್ನೋದಿ).

17 ಇದು ವಾಕ್ಯವೈಶಿಷ್ಟ್ಯವು ವ್ಯಂಜಕವಾಗುವುದಕ್ಕೆ ಉದಾಹರಣೆ. ಇಲ್ಲಿಯೂ ವಕ್ತೃ, ಬೋದ್ಧವ್ಯರ, ವೈಶಿಷ್ಟ್ಯವೂ ಉಂಟು. ಆದರೆ ಅಷ್ಟರಿಂದಲೇ ವ್ಯಂಗ್ಯಾರ್ಥ ಸಿದ್ಧಿಸುವುದಿಲ್ಲ.

18 ಹೇಳಲಾದ ವ್ಯಂಗ್ಯಾರ್ಥದ ಸಿದ್ಧಿಗೆ ವಾಕ್ಯದಲ್ಲಿ ಬರುವ 'ಆಗ, ಈಗ, ಮೊದಲದು: ಎಂಬ ವಿಶಿಷ್ಟ ಪದಗಳು ಕಾರಣ. ಇವುಗಳಿರುವುದರಿಂದಲೇ ರಸಿಕರು ಸೂಕ್ಷ್ಮವಾದ ಪರಾಮರ್ಶಕ್ಕೆ

ಉದ್ದೇಶೋಽಯಂ ಸರಸಕದಲೀಶ್ರೇಣಿಶೋಭಾತಿಶಾಯೀ
ಕುಂಜೋತ್ಕರ್ಷಾಂಕುರಿತರಮಣೀವಿಭ್ರಮೋ ನರ್ಮದಾಯಾಃ।
ಕಿಂಚೈತಸ್ಮಿನ್ ಸುರತಸುಹೃದಸ್ತನ್ವಿ ತೇ ವಾನ್ತಿ ವಾತಾಃ
ಯೇಷಾಮಗ್ರೇ ಸರತಿ ಕಲಿತಾಕಾಂಡಕೋಪೋ ಮನೋಭೂಃ॥

ನೋಡು ನರ್ಮದೆಯೆಡೆಯ ಕಂಗೊಳಿಪೆಳೆಯ ಬಾಳೆಯ ಸಾಲನು
ಬಳ್ಳಿವನೆಗಳ ಸೊಬಗು ಕುದುರಿಸೆ ಚೆನ್ನೆಯರ ವೈಚೆಲುವನು।
ಸುರತಸಖರೆನಲಿಲ್ಲಿ ತಣ್ಣನೆ ಗಾಳಿ ನಿನಗಿದೊ ಸುಳಿವುವು
ಗಾಳಿಗಳ ಮುಂದಾಳು ಕಾಮನು ಮುನಿದು ಕೆಮ್ಮನೆ ನಡೆವನು॥[19]

ಇಲ್ಲಿ, 'ರತಕ್ರೋಽಸ್ಕರ ಪ್ರವೇಶಿಸು' ಎಂಬುದು ವ್ಯಂಗ್ಯ,[20]

ಣೋಲ್ಲೇಇ ಅಣಣ್ಣಮಣಾ[21]ಅತ್ತಾ ಮಂ ಘರಭರಮ್ಮಿ ಸಅಲಮ್ಮಿ।
ಖಣಮೇತ್ತಂ ಜಇ ಸಂಝಾಇ ಹೋಇ ಣ ವ ಹೋಇ ವೀಸಾಮೋ॥[22]

ಅತ್ತೆ ನೂಕುವಳೆನ್ನನೆಲ್ಲ ಮನೆಗೆಲಸದೊಳು
ಬೇರೊಂದು ಯೋಚನೆಯೆ ಅವಳಿಗಿಲ್ಲ।
ಒಂದು ಚಣ ಸಂಜೆಯಲಿ ಸಿಕ್ಕಿದೊಡೆ ವಿಶ್ರಾಂತಿ—
ಯೆನಗುಂಟು ಸಿಕ್ಕದೊಡೆ ಬಿಡುವೆಯಿಲ್ಲ॥

ಹೊರಡುತ್ತಾರೆ, ವಾಚ್ಯಾರ್ಥವನ್ನು ಮಾತ್ರ ಗ್ರಹಿಸುವುದರ ಬದಲು ವ್ಯಂಗ್ಯಾರ್ಥವನ್ನು ಕಲ್ಪಿಸುತ್ತಾರೆ.

ನಾಯಿಕೆಯ ಕೆನ್ನೆಗಳು ಕನ್ನಡಿಯಂತೆ ನಿರ್ಮಲವಾಗಿದ್ದು ಸಖಿಯ ಮುಖವು ಅದರಲ್ಲಿ ಪ್ರತಿಬಿಂಬಿತವಾಗಿತ್ತೆನ್ನುವುದು ಸ್ವಭಾವೋಕ್ತಿಯೋ, ಅತಿಶಯೋಕ್ತಿಯೋ ವಾಚಕರೇ ನಿರ್ಧರಿಸಬಹುದು. ಇದರಿಂದ ನಾಯಿಕೆಯ ಲಾವಣ್ಯವನ್ನು ವರ್ಣಿಸುತ್ತಿರುವಂಶ ಸ್ಪಷ್ಟ.

19 ಇದು ವಾಚ್ಯಾಂಶದ ವೈಶಿಷ್ಟ್ಯವು ವ್ಯಂಜಕವಾಗುವುದಕ್ಕೆ ಉದಾಹರಣೆ.

20 ಇಲ್ಲಿ ವರ್ಣಿತವಾಗಿರುವ ನದೀತೀರ, ಬಳ್ಳಿವನೆ, ತೆಂಗಾಳಿ, ಮುಂತಾದುವುಗಳ ವಿಶೇಷಣಗಳೆಲ್ಲವೂ ಸುರತಾಭಿಪ್ರಾಯವನ್ನು ಸೂಚಿಸುವುವಲ್ಲದೆ ಕಡೆಯ ಸಾಲು ಮನ್ಮಥನ ಮುಂದಾಳ್ತನವನ್ನು ಎಂದರೆ ನಾಯಕನ ಕಾಮಾತುರವನ್ನು ಎತ್ತಿ ತೋರಿಸುತ್ತದೆ. ವ್ಯಂಗ್ಯಾರ್ಥವನ್ನು ಹುಟ್ಟಿಸಲು ಈ ವಿಶಿಷ್ಟ ವರ್ಣನಾವಿಷಯಗಳೇ ಸಾಕಾಗಿವೆ.

21 ಪಾಠಾಂತರ—'ಅಣೋಲ್ಲಮಣಾ' (=ಅನಾರ್ದ್ರಮನಾ=ಕಠಿನಹೃದಯಳು).

22 ಇದು 'ಅನ್ಯಸನ್ನಿಧಿ'ಯ ವೈಶಿಷ್ಟ್ಯದಿಂದುಂಟಾಗುವ ವ್ಯಂಜಕತ್ವಕ್ಕೆ ನಿದರ್ಶನ.

ಇಲ್ಲಿ ಸಂಜೆಯು ಸಂಕೇತ ಕಾಲವೆಂಬುದನ್ನು ತಟಸ್ಥನೊಬ್ಬನಿಗೆ ಒಬ್ಬಾಕೆಯು ಸೂಚಿಸುತ್ತಿದ್ದಾಳೆ.[23]

ಸುವ್ವ ಇ ಸಮಾಗಮಿಸ್ಸದಿ ತುಜ್ಝ ಪಿಓ ಅಜ್ಜ ಪಹರಮೇತ್ತೇಣ।
ಏಮೆಅ ಕಿತ್ತಿ ಚಿಟ್ಠಿಸಿ ತಾ ಸಹಿ ಸಜ್ಜೇಸು ಕರಣಿಜ್ಜಂ ॥

ಒಂದು ಪ್ರಹರದೊಳಗೆ ನಿನ್ನ
ಕಾಂತ ಬರುವನಂತೆ।
ಕೆಳದಿ, ಕೆಲಸವನ್ನು ನೋಡು,
ಸುಮ್ಮನೇಕೆ ನಿಂತೆ ॥[24]

ಇಲ್ಲಿ, ಉಪಪತಿಯನ್ನು ಕೂಡಲು ಹೋಗುತ್ತಿರುವ ಅಭಿಸಾರಿಕೆಯನ್ನು ಒಬ್ಬಳು ತಡೆಯುತ್ತಿದ್ದಾಳೆ, ಸಂದರ್ಭವು ಯೋಗ್ಯವಾಗಿಲ್ಲವೆಂದು.[25]

ಅನ್ಯತ್ರ ಯೂಯಾ ಕುಸುಮಾವಚಾಯಂ
ಕುರುಧ್ವಮತ್ರಾಸ್ಮಿ ಕರೋಮಿ ಸಖ್ಯಃ।
ನಾಹಂ ಹಿ ದೂರಂ ಭ್ರಮಿತುಂ ಸಮರ್ಥಾ ॥
ಪ್ರಸೀದತಾಯಂ ರಚಿತೋಽಞ್ಜಲಿರ್ವಃ ॥

ಬೇರೆಡೆಗೆ ಪೂಗಳನು ಕೊಯ್ಯಿರೌ, ಕೆಳದಿಯರೆ
ನಾನಿಲ್ಲೆ ಹತ್ತಿರದೆ ಕೊಯ್ಯುತಿರುವೆ।
ನಡೆಯಲಾರೆನು ದೂರ, ಕನಿಕರವ ತೋರುವುದು
ಇದೊ ಕೈಯ ಮುಗಿಯುತ್ತೆ ಬೇಡುತಿರುವೆ[26] ॥

---

[23] ಇಬ್ಬರು ಹೆಂಗಸರು ಎಂದಿನಂತೆ ಮಾತನಾಡುತ್ತಿದ್ದಾರೆ; ಅಲ್ಲೇ ಸಮೀಪದಲ್ಲಿ ಮರೆಯಾಗಿ ಮೂರನೆಯವನೊಬ್ಬನಿದ್ದಾನೆ. ಇದು ಹೇಳುವವಳಿಗೆ ಗೊತ್ತಿದೆ; ಕೇಳುವವಳಿಗೆ ಗೊತ್ತಿಲ್ಲ. ಆ ಮೂರನೆಯವನ ಇರುವಿಕೆಯಿಂದ ವಾಕ್ಯಕ್ಕೆ ಹೇಳಲಾದ ವ್ಯಂಗ್ಯಾರ್ಥವುಂಟಾಗುತ್ತದೆ. ಇಂತಹ ವ್ಯಂಗ್ಯಪೂರ್ಣ ಶ್ಲೋಕಗಳನ್ನೋದುವಾಗ ರಸಿಕರೇ ಅವುಗಳ ಆವರಣವನ್ನೆಲ್ಲ ಕಲ್ಪಿಸಿಕೊಳ್ಳಬೇಕಾಗುತ್ತದೆ. ಹಾಗೆ ಸ್ವಂತವಾಗಿ ಕಲ್ಪಿಸಿಕೊಂಡಾಗ ಬರುವ ಆನಂದವು ಬಿಡಿಸಿ ಟೀಕೆಯಲ್ಲಿ ಬರೆದಾಗ ಬರುವುದಿಲ್ಲ. ಕಾವ್ಯವು ಬುದ್ಧಿಗಮ್ಯವೆನ್ನುವುದಕ್ಕಿಂತಲೂ ಭಾವೈಕವೇದ್ಯವೆನ್ನುವುದು ಈ ಕಾರಣದಿಂದಲೇ. ವಸ್ತುವಿನಲ್ಲಿರುವ ಗ್ರಾಮ್ಯತ್ವ ಅಥವಾ ಅಶ್ಲೀಲ ದೋಷವು ಅರ್ಥವ್ಯಂಜಕತೆಯ ಪ್ರಭಾವದಿಂದ ಹೇಗೆ ದೂರವಾಗಿದೆಯೆಂಬುದನ್ನು ಗಮನಿಸಬೇಕು.

[24] ಸಂದರ್ಭದ ವೈಶಿಷ್ಟ್ಯವು ವ್ಯಂಜಕವಾಗುವುದಕ್ಕೆ ಇದು ಉದಾಹರಣೆ.

[25] ಇಲ್ಲಿ ನಾಯಿಕೆಯು ಅಭಿಸಾರಿಕೆಯಾಗಿ ಹೊರಟಿರುವಳೆಂಬ ಸಂದರ್ಭವಿಶೇಷವನ್ನು ಕಲ್ಪಿಸಿಕೊಂಡಾಗ ಮಾತ್ರ 'ಈಗ ಬೇಡ'ವೆಂಬ ನಿಷೇಧವು ವ್ಯಂಗ್ಯ.

[26] ಇದು ದೇಶದ ವೈಶಿಷ್ಟ್ಯದಿಂದ ವ್ಯಂಗ್ಯಾರ್ಥ ಬರುವುದಕ್ಕೆ ಉದಾಹರಣೆ.

ಇಲ್ಲಿ, 'ಈ ಸ್ಥಳವು ಏಕಾಂತವಾಗಿದೆ, ಪ್ರಚ್ಛನ್ನಕಾಮುಕನನ್ನು ಕರೆತರಲು ಹೋಗು' ಎಂಬುದನ್ನು ಒಬ್ಬಳು ತನ್ನ ನೆಚ್ಚಿನ ಕೆಳದಿಗೆ ಸೂಚಿಸುತ್ತಿದ್ದಾಳೆ.[27]

ಗುರುಅಣಪರವಸ ಪಿಅ ಕಿಂ ಭಣಾಮಿ ತುಹ ಮಂದಭಾಇಣೀ ಅಹಕಮ್ ।
ಅಜ್ಜ ಪವಾಸಂ ವಚ್ಚಸಿ ವಚ್ಚ ಸಅಂ ಜೇವ್ವ ಸುಣಸಿ ಕರಣಿಜ್ಜಮ್ ॥

ಇನಿಯನೆ, ಪಿರಿಯರ ಆಜ್ಞಾಧೀನನೆ
ಹತಭಾಗ್ಯಳು ನಿನಗೇನೊರೆವೆ।
ಪಯಣವನಿಂದೇ ಗೈವೊಡೆ ಗೈವುದು
ಮುಂದಿನದನು ನೀನಾಲಿಸುವೆ ॥[28]

ಇಲ್ಲಿ, 'ಈ ವಸಂತಕಾಲದಲ್ಲಿ ನೀನು ಹೋಗಿಬಿಡುವುದಾದರೆ ನಾನಂತೂ ಉಳಿಯುವುದಿಲ್ಲ, ನಿನ್ನ ಗತಿಯನ್ನು ಕಾಣೆ' ಎಂಬುದು ವ್ಯಂಗ್ಯ.[29] "ಇತ್ಯಾದಿಗಳು" ಎಂದಿರುವುದರಿಂದ ಅಭಿನಯ ಮುಂತಾದುವನ್ನು ಗ್ರಹಿಸಬೇಕು.[30] ಅಭಿನಯದ ವೈಶಿಷ್ಟ್ಯಕ್ಕೆ ಉದಾಹರಣೆ :—

ದ್ವಾರೋಪಾನ್ತನಿರನ್ತರೇ ಮಯಿ ತಯಾ ಸೌಂದರ್ಯಸಾರಶ್ರಿಯಾ
ಪ್ರೋಲ್ಲಾಸ್ಯೋರುಯುಗಂ ಪರಸ್ಪರಸಮಾಸಕ್ತಂ ಸಮಾಸಾದಿತಮ್ ।
ಆನೀತಂ ಪುರತಶ್ಶಿರೋಂಶುಕಮಧಃ ಕ್ಷಿಪ್ತೇ ಚಲೇ ಲೋಚನೇ
ವಾಚಸ್ತತ್ರ ನಿವಾರಿತಂ ಪ್ರಸರಣಂ ಸಂಕೋಚಿತೇ ದೋರ್ಲತೇ ॥

ಬಾಗಿಲೆಡೆಯೊಳು ನಾನು ಹತ್ತಿರವಿರಲು ಚೆಲುವಿನ ಚೆನ್ನೆಯು
ಕುಣಿಸಿ ತೊಡೆಗಳನೊಂದನೊಂದರೊಳಿರಿಸಿ ಕೂಡಿಸುತಿರ್ದಳು।
ತಲೆಯ ಸೆರಗನು ಮುಂದಕೆಳೆದಳು ಬೀರಿ ನೋಟವ ಕೆಳಗಡೆ
ಮಾತನರ್ಧಕೆ ಬಿಟ್ಟು ಭುಜಲತೆಯನ್ನು ಕುಸುಗಿಸುತಿರ್ದಳು ॥[31]

---

[27] ಪೋಲಿನ ಉದ್ದೇಶೋಯಂ' (ಅಡಿಟಿಪ್ಪಣಿ 19-20) ಎಂಬ ಶ್ಲೋಕದಲ್ಲಿ ಸಮಗ್ರ ವಾಚ್ಯಾಂಶವೂ ವ್ಯಂಜಕ; ದೇಶವೊಂದೇ ಅಲ್ಲ. ಈ ಉದಾಹರಣೆಯಲ್ಲಿ ದೇಶವೊಂದೇ ವ್ಯಂಜಕ (ಮಾಣಿಕ್ಯಚಂದ್ರ).

[28] ವಾಚ್ಯಾರ್ಥದ ಕಾಲವೈಶಿಷ್ಟ್ಯದಿಂದ ವ್ಯಂಜಕತ್ವ ಬರುವುದಕ್ಕೆ ಇದು ಲಕ್ಷ್ಯ.

[29] ಇಲ್ಲಿ ಪ್ರಸ್ತುತವಾದ ಕಾಲವು ವಸಂತಕಾಲವಲ್ಲದಿದ್ದರೆ ಉಕ್ತ ವ್ಯಂಜಕತ್ವವಿರುತ್ತಿರಲಿಲ್ಲ.

[30] ಮೂಲದಲ್ಲಿರುವ ಪದ 'ಚೇಷ್ಟೆ'. ಸಂಸ್ಕೃತದಲ್ಲಿ ಚೇಷ್ಟೆಯೆಂದರೆ ಅಭಿನಯ.

[31] ಪ್ರಥಮಾರ್ಧದಲ್ಲಿ 'ಸ್ಪೃಷ್ಟಕ'ವೆಂಬ ಆಲಿಂಗನಪ್ರಕಾರವೂ, ಸೆರಗನ್ನೆಳೆಯುವುದರಿಂದ

ಇಲ್ಲಿ, ಅಂಗಗಳ ಅಭಿನಯದಿಂದ ಪ್ರಚ್ಛನ್ನರಮಣನ ವಿಷಯದಲ್ಲಿ (ತರುಣಿಯ) ವಿಶಿಷ್ಟಾಭಿಪ್ರಾಯವು ವ್ಯಂಗ್ಯವಾಗಿದೆ.

ವಾಚಕರ ಆಕಾಂಕ್ಷೆಯೆಲ್ಲವೂ ಪರಿಹಾರವಾಗಬೇಕೆಂದು, ಮತ್ತು ಒಂದೊಂದರ ಉದಾಹರಣೆಯೂ ಅವಸರಪ್ರಾಪ್ತವೆಂದು ತಿಳಿದು, ಹೀಗೆ ಮತ್ತೆ ಮತ್ತೆ ಉದಾಹರಣೆಗಳನ್ನು ತೋರಿಸುತ್ತಿದ್ದೇವೆ.[32] 'ಮಾತಾಡುವವ' ಮುಂತಾದುವಲ್ಲಿ ಅನ್ಯೋನ್ಯ ಸಂಯೋಗವೊದಗುತ್ತಿದ್ದರೆ, ಎರಡು ಕೂಡಿ ಆದ ಸಂಯೋಗ ಮುಂತಾದುವುಗಳ ಉದಾಹರಣೆಗಳನ್ನೂ, ಹಾಗೆಯೇ ಲಕ್ಷ್ಯಾರ್ಥ, ವ್ಯಂಗ್ಯಾರ್ಥಗಳಿಗೆ ಬರುವ ವ್ಯಂಜಕತ್ವದ ಉದಾಹರಣೆಗಳನ್ನೂ ವಾಚಕರೇ ಊಹಿಸಿಕೊಳ್ಳಬಹುದು.[33]

[ಎರಡು ಕೂಡಿದ ಸಂಯೋಗದಲ್ಲಿ 'ಮಾತಾಡುವವ' ಮತ್ತು 'ಕೇಳತಕ್ಕವರ' ವೈಶಿಷ್ಟ್ಯ ಕೂಡಿದ ಉದಾಹರಣೆ :—

ಅತ್ತಾ ಏತ್ಥ ಣಿಮಜ್ಜಇ ಏತ್ಥ ಅಹಂ ದಿಅಸಏ ಪಲೋಏಹಿ ।
ಮಾ ಪಹಿಅ ರತ್ತಿಅಂಧಿಅ ಸೆಜ್ಜಾಏ ಮಹ ಣಿಮಜ್ಜಿಹಿಸಿ ॥

ಅತ್ತೆಯಿಲ್ಲಿ ನಿದ್ದೆಗೈವಳಿಲ್ಲಿ ನಾನು ಎಂಬುದನ್ನು
ಹಗಲಿನಲ್ಲೆ ಕಣ್ಣತುಂಬ ಪಾಂಥ ನೋಡಿರು ।

ಗುಪ್ತವಾಗಿ ಬರಬೇಕೆಂಬ ಸೂಚನೆಯೂ, ನೋಟವನ್ನು ಕೆಳಗೆ ಬೀರುವ ಮತ್ತು ಮಾತನ್ನು ನಿಲ್ಲಿಸುವ ಕ್ರಿಯೆಗಳಿಂದ ಸೂರ್ಯಾಸ್ತಮಯದ ವಿವಿಕ್ತಕಾಲವೂ, ಕಡೆಯ ವಾಕ್ಯದಿಂದ ಆಲಿಂಗನಾಭಿಪ್ರಾಯವೂ ವ್ಯಂಗ್ಯವೆಂದು ಪ್ರದೀಪಕಾರನು ಬರೆಯುತ್ತಾನೆ.

[32] ಎರಡನೆಯ ಉಲ್ಲಾಸದಲ್ಲೇ ವಾಚ್ಯಾದಿ ಅರ್ಥಗಳ ವ್ಯಂಜಕತ್ವವನ್ನು ಹೇಳಿದ್ದರೂ ವಾಚಕರ ಬುದ್ಧಿವೈಶದ್ಯಕ್ಕೋಸ್ಕರ ಬಿಡಿಸಿ ಬಿಡಿಸಿ ಉದಾಹರಿಸಲಾಯಿತೆಂದು ಮಮ್ಮಟನು ಸಮಾಧಾನ ಹೇಳುತ್ತಿದ್ದಾನೆ; ಅಲ್ಲದೆ ಅರ್ಥವ್ಯಂಜಕಗಳು ಇಂತಿಷ್ಟೆಂದು ತಿಳಿಸಿದ ಮೇಲೆ ಒಂದೊಂದನ್ನೂ ಉದಾಹರಿಸಿ ವಿವರಿಸುವುದು ಕ್ರಮಪ್ರಾಪ್ತವೂ ಆಗಿದೆ.

[33] ವಸ್ತುತಃ ಮೇಲೆ ನಿರ್ದೇಶಿಸಲಾದ ಹತ್ತು ಸಾಮಗ್ರಿಗಳಲ್ಲಿ ಒಂದಕ್ಕಿಂತ ಹೆಚ್ಚು ಸಾಮಗ್ರಿಗಳು ಕೂಡಿಯೇ ವಿಶಿಷ್ಟ ಉದಾಹರಣೆಗಳಲ್ಲಿ ವ್ಯಂಜಕತ್ವವನ್ನು ಪಡೆಯುತ್ತವೆ. ಆ ದೃಷ್ಟಿಯಿಂದ ಪರಸ್ಪರ ಸಂಪರ್ಕವೇ ಇಲ್ಲದ ಉದಾಹರಣೆ ಸಿಕ್ಕುವುದೇ ಕಷ್ಟ. ಯಾವ ಉದಾಹರಣೆಯಲ್ಲಿ ಎಷ್ಟು ಸಾಮಗ್ರಿಗಳು ಕೂಡಿಕೊಂಡಿರುವುವೆಂಬುದನ್ನು ವಾಚಕರೇ ನಿರ್ಧರಿಸಬಹುದೆಂದು ಮಮ್ಮಟನ ಅಭಿಪ್ರಾಯ.

ಹಾಗೆಯೇ ಲಕ್ಷ್ಯಾರ್ಥ, ವ್ಯಂಗ್ಯಾರ್ಥಗಳ ವ್ಯಂಜಕತ್ವವನ್ನೂ ವಾಚಕರೇ ಊಹಿಸಿಕೊಳ್ಳಬಹುದೆನ್ನುತ್ತಾನೆ. ಏಕೆಂದರೆ ವ್ಯಂಜಕತ್ವದ ಸ್ವರೂಪದಲ್ಲಿ ವಾಚ್ಯಾರ್ಥಕ್ಕೂ ಲಕ್ಷ್ಯ, ವ್ಯಂಗ್ಯಾರ್ಥಗಳಿಗೂ ಯಾವ ಭೇದವೂ ಇಲ್ಲ.

ಕತ್ತಲಲ್ಲಿ ಕುರುಡ ನೀನು, ನಮ್ಮ ಸೆಜ್ಜೆಗಳಲಿ ಬಂದು
ಬಿದ್ದು ಬಿಡುವ ಭಂಗ ನಿನಗೆ ಬಾರದಂತಿರು ||][34]

ಶಬ್ದಪ್ರಮಾಣವೇದ್ಯೋಽರ್ಥೋ ವ್ಯನಕ್ತ್ಯರ್ಥಾನ್ತರಂ ಯತಃ |
ಅರ್ಥಸ್ಯ ವ್ಯಂಜಕತ್ವೇ ತಚ್ಛಬ್ದಸ್ಯ ಸಹಕಾರಿತಾ || ೩ ||

ಶಬ್ದಪ್ರಮಾಣದಿಂದ ವೇದ್ಯವಾದ ಅರ್ಥ ಮಾತ್ರ ಅರ್ಥಾಂತರವನ್ನು ಧ್ವನಿಸಲು ಸಮರ್ಥವಾಗುವುದರಿಂದ, ಅರ್ಥವು ವ್ಯಂಜಕವಾದಾಗ ಅದಕ್ಕೆ ಶಬ್ದದ ಸಹಕಾರಿತ್ವವುಂಟೇ ಉಂಟು.[35]

'ಶಬ್ದ . . .' ಎನ್ನುವುದರ ತಾತ್ಪರ್ಯವಿಷ್ಟೆ :—ಬೇರೆ ಪ್ರಮಾಣಗಳಿಂದ ವೇದ್ಯವಾದ ಅರ್ಥ ಎಂದೂ ವ್ಯಂಜಕವಾಗದು.[36]

ಇಲ್ಲಿಗೆ ಕಾವ್ಯಪ್ರಕಾಶದಲ್ಲಿ 'ಅರ್ಥ-ವ್ಯಂಜಕತಾ-ನಿರ್ಣಯ'ವೆಂಬ
ಮೂರನೆಯ ಉಲ್ಲಾಸ ಮುಗಿದುದು.

ತಿರುಳಿನೆ ಕಾವ್ಯದೊಳರ್ಥದೆ
ಪೊರಮಡುವೀ ವ್ಯಂಜಕತ್ವಮುಂ ಪರಿಪರಿಯಿಂ |
ಪರಿಭಾವಿಸೆ ಕನ್ನಡದೊಳ್
ಸುರುಚಿರ ರುಚಿಶುದ್ಧಿ ಸಿದ್ಧಮುಪ್ಪುದು ಸಹಜಂ ||

—ಡಾ || ಕೆ. ಕೃಷ್ಣಮೂರ್ತಿ

---

34 ಮೇಲಿನ ಮಾತುಗಳನ್ನು ನೋಡಿದರೆ ಮಮ್ಮಟನು ಈ ಉದಾಹರಣೆಯನ್ನು ಗ್ರಂಥದಲ್ಲಿ ಸೇರಿಸಿಲ್ಲವೆಂದು ತೋರುತ್ತದೆ. ಗೋವಿಂದ, ಮಹೇಶ್ವರ, ಮುಂತಾದವರು ಇದನ್ನು ಮಮ್ಮಟನ ಮೂಲದಲ್ಲಿ ಸೇರಿಸುವುದಿಲ್ಲ. ಆದರೆ ಮಾಣಿಕ್ಯಚಂದ್ರನು ಮೂಲದಲ್ಲಿಯೇ ಸೇರಿಸಿದ್ದಾನೆ.

ಹೋಲಿಸಿ—**ಕನ್ನಡ ಧ್ವನ್ಯಾಲೋಕ**, ಪು. ೬.

35 ಅರ್ಥವು ವ್ಯಂಜಕವೆಂದು ಇದುವರೆಗೂ ವಿವರಿಸಲಾಯಿತು. ಆದರೆ ಮೊದಲು ಅರ್ಥಜ್ಞಾನವಾಗುವುದು ಹೇಗೆ? ಕಾವ್ಯದಲ್ಲಿ ಶಬ್ದಜ್ಞಾನವಿಲ್ಲದೆ ಅರ್ಥಜ್ಞಾನವಾಗುವುದೇ ಸಾಧ್ಯವಿಲ್ಲ. ಆದ್ದರಿಂದ ಅರ್ಥವನ್ನು ವ್ಯಂಜಕವೆನ್ನುವಾಗಲೂ ಶಬ್ದವು ಅದಕ್ಕೆ ಸಹಕಾರಿಯೆಂದೊಪ್ಪಲೇ ಬೇಕು.

36 ದರ್ಶನದಲ್ಲಿ 'ಪ್ರಮಾಣ'ಗಳನ್ನು ಪ್ರತ್ಯಕ್ಷ, ಅನುಮಾನ, ಶಬ್ದ, ಮುಂತಾಗಿ ವಿಂಗಡಿಸಿ ತೋರಿಸುತ್ತಾರೆ. 'ಅರ್ಥ'ವೆಂಬುದಕ್ಕೆ 'ವಸ್ತು'ವೆಂಬ ವಿಶಾಲಾರ್ಥ ಕಲ್ಪಿಸಿಕೊಂಡರೆ ಪ್ರತ್ಯಕ್ಷವೂ ಅರ್ಥಬೋಧಕವಾಗುತ್ತದೆ; ಅನುಮಾನವೂ ಅರ್ಥಬೋಧಕವಾಗುತ್ತದೆ. ನಾವು ಪರ್ವತವನ್ನು ಕಣ್ಣಿನಿಂದ ನೋಡುತ್ತಿರುವಾಗ ಪರ್ವತವೆಂಬ ಅರ್ಥ (= ವಸ್ತು) ಜ್ಞಾನಕ್ಕೆ ಪ್ರತ್ಯಕ್ಷವೇ ಪ್ರಮಾಣ. ಆದರೆ ಈ ಪ್ರತ್ಯಕ್ಷಪ್ರಮಾಣ ಲಭ್ಯವಾದ ಅರ್ಥವು ಯಾವುದಕ್ಕೂ ವ್ಯಂಜಕವಲ್ಲ. ಕಾವ್ಯದಲ್ಲಿ ಹಾಗಲ್ಲ. ಅಲ್ಲಿ ಶಬ್ದಬೋಧ್ಯವಾದ ಅರ್ಥಮಾತ್ರವಿರುತ್ತದೆಯೇ ಹೊರತು ಪ್ರಮಾಣಾಂತರಲಭ್ಯವಾದ ಅರ್ಥಗಳಲ್ಲ. ಇಂತಹ ಶಬ್ದ ಪ್ರಮಾಣವೇದ್ಯವಾದ ಅರ್ಥದಲ್ಲಿ ಮಾತ್ರ ವ್ಯಂಜಕತ್ವವು ಸಾಧ್ಯ. ಎಂದಮೇಲೆ ಅರ್ಥವ್ಯಂಜಕತ್ವವು ಕಾವ್ಯಮಾತ್ರಸಿದ್ಧವೆಂಬುದನ್ನು ಬೇರೆಯಾಗಿ ಹೇಳಬೇಕಾಗಿಲ್ಲ. ನಾಟ್ಯದಲ್ಲಿ ಪ್ರತ್ಯಕ್ಷದೃಷ್ಟವಾದ ಅರ್ಥಕ್ಕೂ ವ್ಯಂಜಕತ್ವವುಂಟೆಂದು ಮಹೇಶ್ವರನು ಬರೆಯುತ್ತಾನೆ.

ವಿಜಯನಗರದ ಸಾಹಿತ್ಯ ಸಾಮ್ರಾಜ್ಯ

ಸಂಗಮ ರಾಜರ ಮಂತ್ರಿಗಳು ಇತ್ತ ರಾಜಧಾನಿಯಲ್ಲಿ ಈ ರೀತಿಯಾಗಿ ಸಾಹಿತ್ಯ ಸೇವೆಯನ್ನು ಮಾಡುತ್ತಿರಲಾಗಿ ಅತ್ತ ಶೃಂಗೇರಿಯಲ್ಲಿ ಅವರ ಗುರುಗಳಾದ ವಿದ್ಯಾತೀರ್ಥ ಭಾರತೀತೀರ್ಥ, ವಿದ್ಯಾರಣ್ಯ[18] ಮೊದಲಾದವರು ಸ್ವತಃ ಗ್ರಂಥರಚನೆ

---

[18] ಶೃಂಗೇರಿ ಮಠದ ಸ್ವಾಮಿಗಳಾದ ವಿದ್ಯಾರಣ್ಯರು ಹಿಂದೂ ರಾಜ್ಯಸ್ಥಾಪನೆಯ ಮೂಲಕ ಧರ್ಮಸಂಸ್ಥಾಪನೆಯನ್ನು ಮಾಡಬೇಕೆಂಬ ಉದ್ದೇಶದಿಂದ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪನೆ ಮಾಡಿ ಅದರ ಪ್ರಥಮ ರಾಜರುಗಳಾದ ಹಕ್ಕಬುಕ್ಕರಿಗೆ ಮಾಧವರೆಂಬ ಅಪರ ನಾಮಧೇಯದಿಂದ ಮಂತ್ರಿಗಳಾಗಿದ್ದು ಅನೇಕ ಯುದ್ಧಗಳನ್ನು ಜಯಿಸಿ ರಾಜ್ಯವಿಸ್ತರಣೆಯನ್ನು ಮಾಡಿದರೆಂದೂ ರಾಜ್ಯಭಾರ ನಿರ್ವಹಣಕ್ಕಾಗಿಯೂ ಧರ್ಮಪ್ರಸಾರಣಕ್ಕಾಗಿಯೂ 'ಪರಾಶರಸ್ಮೃತಿವ್ಯಾಖ್ಯೆ' 'ವೇದಭಾಷ್ಯ' ಮೊದಲಾದುವುಗಳನ್ನು ತಮ್ಮ ತಮ್ಮಂದಿರಾದ ಸಾಯಣರ ಸಹಾಯದಿಂದ ರಚಿಸಿದರೆಂದೂ ಅನೇಕ ನವೀನ ಗ್ರಂಥಗಳಲ್ಲಿ ಹೇಳಿದೆ. ಇದನ್ನು ಪೋಷಿಸುವ ಲೋಕವಾರ್ತೆಯೂ ಉಂಟು. ಇವುಗಳ ಆಧಾರದ ಮೇಲೆ ಅನೇಕ ಚರಿತ್ರಕಾರರು ತಮ್ಮ ಗ್ರಂಥಗಳಲ್ಲಿ ಹಾಗೆಯೇ ಬರೆದಿದ್ದಾರೆ. ಆದರೆ ಈ ವಿಷಯವು ಶುದ್ಧ ಐತಿಹಾಸಿಕ ದೃಷ್ಟಿಯಿಂದ ಅಷ್ಟು ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲವೆಂದು ತೋರುತ್ತದೆ. ಈ ವಿಷಯವನ್ನು ಕುರಿತು ಶ್ರೀಮಾನ್ ಆರ್. ನರಸಿಂಹಾಚಾರ್ಯರು ೧೯೧೬ ನೆಯ ವರ್ಷದ 'ಇಂಡಿಯನ್ ಆಂಟಿಕ್ವೆರಿ' ಪತ್ರಿಕೆಯಲ್ಲಿ 'ಮಾಧವಾಚಾರ್ಯನೂ ಅವನ ಸಹೋದರರೂ' ಎಂಬ ಲೇಖನದಲ್ಲಿ ಹೀಗೆಂದು ಹೇಳಿದ್ದಾರೆ: 'ಮಾಧವ ವಿದ್ಯಾರಣ್ಯರು ಏಕವ್ಯಕ್ತಿಗಳು ಎಂಬದಾಗಿ ಯಾವ ನಂಬಬಹುದಾದ ಶಾಸನದಲ್ಲಿಯೂ ಹೇಳಿಲ್ಲ. ಒಂದು ವೇಳೆ ಇದ್ದರೂ ಇರಬಹುದು'. ಶ್ರೀಮಾನ್ ಡಿ. ವಿ. ಗುಂಡಪ್ಪನವರು ತಮ್ಮ 'ವಿದ್ಯಾರಣ್ಯರ ಕಾಲವಿಚಾರ' 'ವಿದ್ಯಾರಣ್ಯರ ಸಮಕಾಲೀನರು' ಎಂಬ ಗ್ರಂಥಗಳಲ್ಲಿ ಮಾಧವ ವಿದ್ಯಾರಣ್ಯರು ಏಕವ್ಯಕ್ತಿಗಳೆಂದೂ ವಿದ್ಯಾರಣ್ಯರೇ ವಿದ್ಯಾನಗರಿಯನ್ನು ೧೩೩೬ ರಲ್ಲಿ ಸ್ಥಾಪಿಸಿದರೆಂದೂ ಸಾಯಣ ಭೋಗನಾಥರು ವಿದ್ಯಾರಣ್ಯರ ಸಹೋದರರೆಂದೂ 'ಪರಾಶರಸ್ಮೃತಿವ್ಯಾಖ್ಯಾನಾ'ದಿ ಗ್ರಂಥಗಳು ವಿದ್ಯಾರಣ್ಯಕೃತವೆಂದೂ ಹೇಳಿ ತಮ್ಮ ಹೇಳಿಕೆಗೆ ಆಧಾರಭೂತವಾಗಿ ಹಂಪೆಯ ಶಾಸನ, ಬಾಗೆಪಲ್ಲಿಯ ೭೦ ನೆಯ ಶಾಸನ, ಮುಳುಬಾಗಿಲಿನ ಶಾಸನ, ಶೃಂಗೇರಿಯ ಶಾಸನ, ಅಹೋಬಲ ಪಂಡಿತೀಯವೆಂಬ ಆಂಧ್ರ ವ್ಯಾಕರಣ ಮೊದಲಾದುವುಗಳಿಂದ ಕೆಲವು ಭಾಗಗಳನ್ನು ಎತ್ತಿ ತೋರಿಸಿದ್ದಾರೆ. ಇವುಗಳಲ್ಲಿ ಯಾವ ಶಾಸನವೂ ಶಾಸ್ತ್ರೀಯ ದೃಷ್ಟಿಯಿಂದ ನಂಬಲರ್ಹವಲ್ಲ. ಹಂಪೆ, ಬಾಗೇಪಲ್ಲಿ ಶೃಂಗೇರಿ ಶಾಸನಗಳಿಗೆ ಮೂಲಪ್ರತಿಗಳೇ ಸಿಕ್ಕಿಲ್ಲ. ಉಳಿದುವು ಕೃತಕಗಳೆಂಬಹುದೆಂದು ಪಂಡಿತರು ಅಭಿಪ್ರಾಯಪಡುತ್ತಾರೆ. 'ಆಂಧ್ರಶಬ್ದಾನುಶಾಸನ' ಕರ್ತೃವಾದ ಅಹೋಬಿಲ ಪಂಡಿತನು ವಿದ್ಯಾರಣ್ಯರ ಸಮಕಾಲೀನನಲ್ಲವೆಂದೂ ಅವರಿಂದ ಮುನ್ನೂರು ವರ್ಷಗಳಾದರೂ ಈಚೆಗೆ ಇದ್ದವನೆಂದೂ ಆಂಧ್ರ ಸಾಹಿತ್ಯ ಚರಿತ್ರಕಾರರು ಅಭಿಪ್ರಾಯಪಡುತ್ತಾರೆ. ಆದುದರಿಂದ ಆತನ

ಯನ್ನು ಮಾಡುತ್ತಿದ್ದುದಲ್ಲದೆ ತಮ್ಮ ಶಿಷ್ಯರನೇಕರನ್ನು ಆ ಕಾರ್ಯದಲ್ಲಿ ನಿಯೋಜಿಸಿ ಅವರಿಂದಲೂ ಆ ಕೆಲಸವನ್ನು ಮಾಡಿಸುತ್ತಿದ್ದರು. 'ಅಪರೋಕ್ಷಾನುಭೂತಿ'

ಮಾತಿಗೂ ಪೂರ್ಣವಾದ ಬೆಲೆಯನ್ನು ಕೊಡಲು ಸಾಧ್ಯವಿಲ್ಲ. ಸಾಯಣ ಭೋಗನಾಥರು ವಿದ್ಯಾರಣ್ಯರ ಸಹೋದರರೆಂಬ ವಾದವು ಮಾಧವ ವಿದ್ಯಾರಣ್ಯರು ಏಕವ್ಯಕ್ತಿಯೆಂದು ಒಪ್ಪಿಕೊಂಡಮೇಲೆ ಹೇಳುವ ಮಾತು. ಈ ವಿಷಯವು ಪೂರ್ಣವಾಗಿ ನಂಬಬಹುದಾದ ಯಾವ ಶಾಸನದಲ್ಲಿಯಾಗಲಿ ಅಥವಾ ಆ ಕಾಲದ ಗ್ರಂಥಗಳಲ್ಲಾಗಲಿ ಅನುಮೋದಿತವಾಗಿಲ್ಲ. ಇದೇ ವಿಷಯದಲ್ಲಿ ಮೈಸೂರು ಶಾಸನದ ಇಲಾಖೆಯ ಶ್ರೀ ಆರ್. ರಾಮರಾವ್, ಬಿ.ಎ. ಅವರು ೧೯೩೫ ನೆಯ ವರ್ಷದ 'ಇಂಡಿಯನ್ ಹಿಸ್ಟಾರಿಕಲ್ ಕ್ವಾರ್ಟರ್ಲಿ' ಎಂಬ ತ್ರೈಮಾಸ ಪತ್ರಿಕೆಯಲ್ಲಿ 'ಮಾಧವ ವಿದ್ಯಾರಣ್ಯರ ಐಕ್ಯತಾ ವಾದ' ಎಂಬ ಲೇಖನದಲ್ಲಿ ಇವರಿಬ್ಬರೂ ಭಿನ್ನವ್ಯಕ್ತಿಗಳಿರಬಹುದೆಂಬುದಕ್ಕೆ ಮುಂದಿನ ಕಾರಣ ಗಳನ್ನು ಕೊಟ್ಟಿದ್ದಾರೆ:—

(ಅ) ಶೃಂಗೇರಿಯ ಸಂಪ್ರದಾಯಗಳನ್ನು ತಿಳಿಸುವ 'ವಿದ್ಯಾರಣ್ಯ ಕಾಲಜ್ಞಾನ' 'ಗುರುವಂಶ ಕಾವ್ಯ' ಮೊದಲಾದುವುಗಳಲ್ಲಿ ವಿದ್ಯಾರಣ್ಯರು ಮಾಧವಾಚಾರ್ಯರಿಗಿಂತ ಭಿನ್ನವ್ಯಕ್ತಿಯೆಂದು ಹೇಳಿದೆ.

(ಆ) ಸು. ೧೭೦೪ ರಲ್ಲಿ ರಚಿತವಾದ 'ಶಿವತತ್ತ್ವರತ್ನಾಕರ'ದಲ್ಲಿ ವಿದ್ಯಾರಣ್ಯರ ಪೂರ್ವ ನಾಮಧೇಯವು ಶಿವಧರ್ಮ ಎಂದು ಹೇಳಿರುವುದಲ್ಲದೆ ಅವರು ಮಾಧವಾಚಾರ್ಯರಿಂದ ಭಿನ್ನರೆಂದೂ ಹೇಳಿದೆ.

(ಇ) ನಂಬಬಹುದಾದ ಯಾವ ಶಾಸನದಲ್ಲಿಯೂ ಈ ಐಕ್ಯತೆಯು ಹೇಳಿಲ್ಲ.

ಈ ಮಾಧವಸಾಯಣರ ಗ್ರಂಥಗಳಲ್ಲಿ ಈ ಐಕ್ಯತೆಯು ಹೇಳಿಲ್ಲದೇ ಇರುವುದಲ್ಲದೇ ಭಿನ್ನತೆಯೇ ವ್ಯಕ್ತಪಡುತ್ತದೆ.

(ಉ) ವಿದ್ಯಾರಣ್ಯರು ಸಂನ್ಯಾಸಿಗಳು. ಇವರ ಹೆಸರು ಬರುವ ಶಾಸನಗಳಲ್ಲೆಲ್ಲಾ ರಾಜನು ಇವರನ್ನು ಗುರುವೆಂಬುದಾಗಿ ಸ್ತೋತ್ರಮಾಡಿ ಅವರ ಆಜ್ಞೆಯ ಪ್ರಕಾರ ದಾನಗಳನ್ನು ಕೊಟ್ಟಿದ್ದಾನೆ. ಮಾಧವನು ಗೃಹಸ್ಥ. ಯಜ್ಞಯಾಗಾದಿಗಳನ್ನು ಮಾಡಿದವನು. ಈತನು ರಾಜನ ವಿಧೇಯನಾಗಿ ಆತನ ಆಜ್ಞೆಯ ಪ್ರಕಾರ ಕೆಲಸಮಾಡಿರುವುದು ಗ್ರಂಥಗಳಲ್ಲಿ ಲಿಖಿತವಾಗಿದೆ.

(ಊ) ಮಾಧವಾಚಾರ್ಯನು ಒಂದನೆಯ ಬುಕ್ಕಮಹಾರಾಯನ ಕಾಲದವನು. ವಿದ್ಯಾರಣ್ಯರ ಶಾಸನಗಳೆಲ್ಲವೂ ವಿಶೇಷವಾಗಿ ಇಮ್ಮಡಿ ಹರಿಹರನ ಕಾಲದವು. ಕ್ರಿ.ಶ. ೧೩೭೫ ನೆಯ ವರ್ಷಕ್ಕಿಂತ ಹಿಂದೆ ವಿದ್ಯಾರಣ್ಯರ ಹೆಸರು ಬರುವ ಯಾವ ನಂಬಬಹುದಾದ ಶಾಸನವೂ ಇದುವರೆಗೆ ದೊರೆತಿಲ್ಲ. ಆದುದರಿಂದ ಮಾಧವ ವಿದ್ಯಾರಣ್ಯರು ಭಿನ್ನವ್ಯಕ್ತಿಗಳಿರಬಹುದು. ಇದು ಶ್ರೀ ರಾಮರಾಯರ ವಾದ.

ಇದಕ್ಕೆ ಪ್ರತಿಯಾಗಿ ಶ್ರೀ ಮಾರ್ಕಂಡೇಯಶರ್ಮರೆಂಬುವರು ಮಾಧವ ವಿದ್ಯಾರಣ್ಯರ ಐಕ್ಯತೆ ಯನ್ನು ಸ್ಥಾಪಿಸಲು ಕೆಲವು ಕಾರಣಗಳನ್ನು ಸೂಚಿಸಿದ್ದಾರೆ. ಅದಕ್ಕೆ ರಾಯರು ಸಮಂಜಸವಾದ ಉತ್ತರವನ್ನು ಕೊಟ್ಟು ತಮ್ಮ ಸಿದ್ಧಾಂತವನ್ನು ಪುಷ್ಟೀಕರಿಸಿದ್ದಾರೆ. ಶ್ರೀ ಎಂ. ಎ. ದೊರೆಸ್ವಾಮಿ ಯ್ಯಂಗಾರ್ಯರು 'ಜರ್ನಲ್ ಆಫ್ ಇಂಡಿಯನ್ ಹಿಸ್ಟರಿ' ಪತ್ರಿಕೆಯಲ್ಲಿ (೧೯೩೬) ಶ್ರೀ ರಾಮ

'ವಿವರಣಪ್ರಮೇಯ ಸಂಗ್ರಹ' ಇವೆರಡೂ ವಿದ್ಯಾರಣ್ಯಕೃತವಾದುವು. 'ಶಂಕರ

ರಾಯರ ವಾದವನ್ನೇ ಅನುಮೋದಿಸಿದ್ದಾರೆ. ಫಾ|| ಹಿರಾಸ್ ಅವರು ಮೈಸೂರು ವಿಶ್ವವಿದ್ಯಾ ನಿಲಯದ ಆಶ್ರಯದಲ್ಲಿ ಮಾಡಿದ ಎರಡು ಭಾಷಣಗಳಲ್ಲಿ ಭಿನ್ನತೆಯನ್ನೇ ಸ್ಥಾಪಿಸಿದ್ದಾರೆ. ಅವರಿಗೆ ಉತ್ತರವಾಗಿ ಮಿಥಿಕ್ ಸೊಸೈಟಿಯ ಶ್ರೀ ಎಸ್. ಶ್ರೀಕಂಠಯ್ಯನವರು ತಮ್ಮ 'Founders of Vijayanagar' ಎಂಬ ಭಾಷಣಮಾಲೆಯಲ್ಲಿ (ಪುಸ್ತಕರೂಪದಲ್ಲಿ ಅಚ್ಚಾಗಿಯೂ ಇದೆ) ಹೀರಾಸರ ವಾದವನ್ನು ಖಂಡಿಸಿ ಐಕ್ಯತಾವಾದವನ್ನು ಸ್ಥಾಪಿಸಲು ಪ್ರಯತ್ನಪಟ್ಟಿದ್ದಾರೆ. ಆದರೆ ಆ ಕಾರ್ಯದಲ್ಲಿ ಅವರು ಕೃತಕೃತ್ಯರಾದಂತೆ ಕಂಡುಬರುವುದಿಲ್ಲ. ಅವರು ತಮ್ಮ ಲೇಖನದ ಉದ್ದಕ್ಕೂ ಶೃಂಗೇರಿ ಮಠಕ್ಕೂ ವಿಜಯನಗರ ಸ್ಥಾಪನೆಗೂ ಇರುವ ಸಂಬಂಧವನ್ನೂ ಮಾಧವಸಾಯಣರ ಪಾತ್ರವನ್ನೂ ವಿವರಿಸಿ ಕೃತಾರ್ಥರಾಗಿರುವಂತೆ ಕಾಣುತ್ತದೆ. ಅವರು ಇದೇ ವಿಷಯವನ್ನು ವಿಜಯನಗರ ಷಟ್‌ಶತಮಾನೋತ್ಸವ ಸಂಚಿಕೆಯ 'ವಿಜಯನಗರ ಮತ್ತು ವಿದ್ಯಾರಣ್ಯ' ಎಂಬ ಲೇಖನದಲ್ಲಿಯೂ ಸಿದ್ಧಾಂತಮಾಡಲು ಹೋಗಿ ಅಷ್ಟೇ ಪ್ರಯೋಜನವನ್ನು ಪಡೆದಿರುವಂತೆ ಕಾಣುತ್ತದೆ. ತಮ್ಮ ಸಿದ್ಧಾಂತವನ್ನು ಸ್ಥಾಪಿಸುವುದಕ್ಕೆ ಅವರಿವರ ಉಕ್ತಿಗಳನ್ನು ಉದ್ಧರಿಸಿದ್ದಾರೆಯೇ ವಿನಾ ಈ ಕೆಳಗೆ ಕಂಡ ವಿಷಯಗಳಿಗೆ ಉತ್ತರ ಕೊಟ್ಟು ಸಮಾಧಾನ ಮಾಡಿರುವಂತೆ ತೋರುವುದಿಲ್ಲ. (೧) ವಿದ್ಯಾರಣ್ಯರೂ ಮಾಧವಾಚಾರ್ಯರೂ ಏಕವ್ಯಕ್ತಿಯೆಂದು ಎಲ್ಲಿ ಉಕ್ತವಾಗಿದೆ? (೨) ಮಾಧವಾಚಾರ್ಯರು ವಿದ್ಯಾರಣ್ಯರಾದುದಾವಾಗ? (೩) ರಾಜ್ಯಸ್ಥಾಪನೆಗೆ ಪೂರ್ವಭಾವಿಯಾಗಿಯೇ ಆಮೇಲೆಯೆ? (೪) ಮೊದಲೇ ಸಂನ್ಯಾಸಿಯಾಗಿದ್ದರೆ ಮಾಧವರೆಂಬ ಪೂರ್ವನಾಮ ಹೇಗೆ ಉಳಿಯಿತು? (೫) ವೇದಭಾಷ್ಯವನ್ನು ರಚಿಸಿದ್ದು ಮಾಧವಾಚಾರ್ಯರಾಗಿದ್ದಾಗಲೆ ವಿದ್ಯಾರಣ್ಯರಾಗಿದ್ದಾಗಲೆ? (೬) ಮಾಧವಾಚಾರ್ಯರಾಗಿದ್ದಾಗಲೇ ಆದರೆ ಬುಕ್ಕ ಮಹೀಪತಿಯ ಆಜ್ಞೆ ಎಲ್ಲಿಂದ ಬಂದಿತು? (೭) ವಿದ್ಯಾರಣ್ಯಕೃತವೆಂಬ ಕೆಲವು ಗ್ರಂಥಗಳೂ ಮಾಧವಾಚಾರ್ಯಕೃತವೆಂಬ ಕೆಲವು ಗ್ರಂಥಗಳೂ ಇರಲು ಕಾರಣವೇನು? ಈ ಪ್ರಶ್ನೆಗಳು ಯಾವುದಕ್ಕೂ ಅವರಿಂದ ಸಮಂಜಸ ವಾದ ಉತ್ತರ ಬಂದಿಲ್ಲ. ಉಳಿದ ಅವರು ಹೇಳುವ ಶೃಂಗೇರಿ ಮಠದ ಸಹಾಯ, ವಿದ್ಯಾರಣ್ಯರ ಪ್ರಭಾವ, ಮೇಲ್ಮೆ ಗ್ರಂಥರಚನಾಶಕ್ತಿ ಮೊದಲಾದ ವಿಷಯಗಳಲ್ಲಿ ಯಾವ ಭಿನ್ನಾಭಿಪ್ರಾಯಗಳೂ ಇರಬೇಕಾದುದಿಲ್ಲ. ಅವುಗಳಿಂದ ಈ ಸಮಸ್ಯೆಯ ಪರಿಹಾರಕ್ಕೆ ಯಾವ ಸಹಾಯವೂ ಆಗಲಾರದು.

ಡಾ|| ಎಸ್. ಶ್ರೀಕಂಠಶಾಸ್ತ್ರಿಗಳವರು ಮೇಲ್ಕಂಡ ಶತಮಾನೋತ್ಸವ ಸಂಚಿಕೆಯ ತಮ್ಮ ಲೇಖನದಲ್ಲಿ (ಪುಟ ೩೦೦) ಭಿನ್ನತಾವಾದವು ನಿರಾಧಾರವಾದುದೆಂದು ಮಾತ್ರ ಹೇಳಿ ತೃಪ್ತಿ ಪಟ್ಟುಕೊಂಡಿದ್ದಾರೆ.

ಶ್ರೀ ಆರ್. ಎ. ಸಾಲತ್ತೊರೆಯವರು ವಿಜಯನಗರ ಸಾಮ್ರಾಜ್ಯ ಸಂಚಿಕೆಯ 'ವಿಜಯನಗರ ಸಂಸ್ಥಾಪಕ ರಾಜಗುರುಗಳು ಹಾಗೂ ಶೃಂಗೇರಿ ಮಠದ ಜಗದ್ಗುರುಗಳು' ಎಂಬ ತಮ್ಮ ಲೇಖನದಲ್ಲಿ (ಪುಟ ೭೮) ವಿಜಯನಗರಕ್ಕೂ ವಿದ್ಯಾರಣ್ಯರಿಗೂ ಕ್ರಿ.ಶ. ೧೩೭೫ ರ ಮುಂದಕ್ಕೆ ಮಾತ್ರ ಸಂಬಂಧ ವುಂಟಾಯಿತೆಂದು ಸಿದ್ಧಾಂತಮಾಡಿದ್ದಾರೆ (ಆದರೆ ಆ ಲೇಖನದಲ್ಲಿ ಅವರು ಮಾಧವ ವಿದ್ಯಾರಣ್ಯರು ಏಕವ್ಯಕ್ತಿಗಳೇ ಎನ್ನುವ ವಿಷಯದ ಚರ್ಚೆ ಅಪ್ರಯೋಜಕ, ಅಮುಖ್ಯ ಎಂದು ಒಂದು ಮಾತಿನಲ್ಲಿ ಮುಗಿಸಿಬಿಟ್ಟಿದ್ದಾರೆ).

ಆದುದರಿಂದ ಈ ಲೇಖನದಲ್ಲಿ ಮಾಧವ ವಿದ್ಯಾರಣ್ಯರನ್ನು ಭಿನ್ನವ್ಯಕ್ತಿಗಳೆಂದು ಪರಿಗಣಿಸಿದೆ.

ವಿಜಯ' 'ವೈಯಾಸಿಕ ನ್ಯಾಯಮಾಲಾ' ಮೊದಲಾದುವು ವಿದ್ಯಾರಣ್ಯಕೃತ[19]ವೆಂಬ ಪ್ರತೀತಿ ಇದೆ. 'ವೇದಾಂತಪಂಚದಶಿಯು' ವಿದ್ಯಾರಣ್ಯ ಭಾರತೀತೀರ್ಥರಿಬ್ಬರಿಂದಲೂ ರಚಿತವಾದುದು.

ರಾಜಧಾನಿಯಲ್ಲಿ ಪ್ರಾರಂಭವಾದ ಸಾಹಿತ್ಯಸ್ರೋತವು ಅತಿ ಶೀಘ್ರದಲ್ಲಿ ನಾನಾಮುಖವಾಗಿ ಹರಿಯಲಾರಂಭಿಸಿತು. ಪಂಡಿತರ ಸಂಸರ್ಗದಿಂದ ಅನೇಕ ರಾಜಮನೆತನದವರೂ ಮಂತ್ರಿಗಳೂ ದಂಡನಾಯಕರೂ ಸ್ವತಃ ಗ್ರಂಥಗಳನ್ನು ರಚಿಸಿದರು. ಇಮ್ಮಡಿ ಕಂಪರಾಯನ ಪತ್ನಿಯಾದ ಗಂಗಾದೇವಿಯು ತನ್ನ ಪತಿಯ ವಿಜಯಯಾತ್ರೆಯನ್ನು ಚಿರಸ್ಥಾಯಿಯನ್ನಾಗಿ ಮಾಡುವುದಕ್ಕಾಗಿ 'ವೀರಕಂಪ ರಾಯ ಚರಿತಂ' ಎಂಬ ಉತ್ಕೃಷ್ಟವಾದ ಕಾವ್ಯವನ್ನು ರಚಿಸಿದಳು[20]. ಗೋವಾ ಪ್ರಾಂತದ ರಾಜಪ್ರತಿನಿಧಿಯಾಗಿದ್ದ ಮಾರಪ್ಪ ಒಡೆಯರ ಮಂತ್ರಿಯಾದ ಮಾಧವನು 'ಸೂತಸಂಹಿತೆ'ಗೆ ತರ್ಕದೀಪಿಕೆಯೆಂಬ ವ್ಯಾಖ್ಯಾನವನ್ನು ರಚಿಸಿದನು [21]ಇದರಲ್ಲಿ ಇವನು ತನ್ನನ್ನು 'ಉಪನಿಷನ್ಮಾರ್ಗ ಪ್ರತಿಷ್ಠಾಪನಾಚಾರ್ಯ' ಎಂಬುದಾಗಿ ಸಂಬೋಧಿಸಿಕೊಂಡಿದ್ದಾನೆ. ಸೊರಬದ ೧೭೫೫ ನೆಯ ಶಾಸನದಿಂದ 'ಶೈವಾಗಮ ಸಾರಸಂಗ್ರಹ'ವನ್ನು ರಚಿಸಿದ ಮಾರಪ್ಪ ಒಡೆಯರಿಗೆ ಈತನು ಗ್ರಂಥರಚನೆಯಲ್ಲಿ ಸಹಾಯಮಾಡಿದಂತೆ ತಿಳಿದುಬರುತ್ತದೆ. ಇದೇ ಕಾಲದಲ್ಲಿ ಚನ್ನಭಟ್ಟನೆಂಬುವನು ಹರಿಹರರಾಯನ ಆಶ್ರಯದಲ್ಲಿ 'ತರ್ಕಭಾಷಾವ್ಯಾಖ್ಯೆ'ಯನ್ನು ರಚಿಸಿರುವನೆಂಬುದು ಆ ಗ್ರಂಥಾಂತ್ಯದ 'ಇತಿ ಶ್ರೀಹರಿಹರ ಪಾಲಿತೇನ ಸಹಜ ಸರ್ವಜ್ಞ ವಿಷ್ಣುದೇವಾರಾಧ್ಯ ತನೂಜೇನ ವಿರಚಿತಾಯಾಂ ತರ್ಕಭಾಷಾವ್ಯಾಖ್ಯಾಯಾಂ' ಎಂಬ ವಾಕ್ಯದಿಂದ ಶ್ರುತಪಡುತ್ತದೆ. ಜೈನಮತೀಯನಾದ ಇರುಗಪ್ಪದಂಡನಾಥನು ತನ್ನ 'ನಾನಾರ್ಥ ರತ್ನಮಾಲೆ'ಯೆಂಬ ಕೋಶವನ್ನು ರಚಿಸಿದುದು ಹರಿಹರನ ಆಶ್ರಯದಲ್ಲಿಯೇ.[22]

---

[19] ತಂಜಾವೂರಿನ ರಘುನಾಥನಾಯಕನ 'ಸಂಗೀತಸುಧೆ'ಯ ೨ ನೆಯ ಅಧ್ಯಾಯದಲ್ಲಿ ಬರುವ 'ಸಂಗೀತಸಾರಂ ಸಮವೇಕ್ಷ್ಯ ವಿದ್ಯಾರಣ್ಯಾಭಿದ ಶ್ರೀರಚರಣಪ್ರಣೀತಂ' ಎಂಬ ವಾಕ್ಯದಿಂದ ವಿದ್ಯಾರಣ್ಯರು ಆ ಹೆಸರಿನ ಒಂದು ಗ್ರಂಥವನ್ನು ರಚಿಸಿರುವಂತೆ ತೋರುತ್ತದೆ. ಸುಧೆಯಲ್ಲಿ ಸಾರದಿಂದ ಅನುವಾದ ಮಾಡಿರುವ ಸ್ಥಳಗಳಲ್ಲೆಲ್ಲಾ 'ವಿದ್ಯಾರಣ್ಯಮತಮ್' ಎಂದು ನಿರ್ದೇಶಿಸಿದೆ. ಆಕ್ಷಿಪ್ತಿಕಾ, ರಾಗವರ್ಧಿನಿ, ವಿದಾರಿ, ಸ್ಥಾಯಿ, ವರ್ತಿನಿ, ನ್ಯಾಸ ಎಂಬ ರಾಗಾಲಾಪಾಂಗಗಳು ಸಾರದಿಂದ ಅನುವಾದಿತವಾಗಿವೆ. ಪ್ರಕೀರ್ಣಕಾಧ್ಯಾಯದಲ್ಲಿ ವಿದ್ಯಾರಣ್ಯರು ದೋಷನಿರೂಪಣೆ ಯನ್ನು ಮಾಡಿದ್ದಾರೆಂದೂ ಇದರಲ್ಲಿ ಉಕ್ತವಾಗಿದೆ.

[20] ಆಧಾರಗ್ರಂಥಗಳು ಪು. ೨೩.

[21] ಆಧಾರಗ್ರಂಥಗಳು, ಪು. ೫೧.

[22] ಅದೇ. ಪು. ೫೨.

ಈತನು ತನ್ನ ಗ್ರಂಥದಲ್ಲಿ ತನ್ನನ್ನು 'ಹರಿಹರಸ್ಯ ದ್ವಿತೀಯಮಂತಃಕರಣಂ' ಎಂಬುದಾಗಿ ವಿಶೇಷಿಸಿಕೊಂಡಿದ್ದಾನೆ. ಹರಿಹರನ ಮಗನಾದ ಯುವರಾಜ ವಿರೂಪಾಕ್ಷ ಅಥವಾ ವಿರುಪಣ್ಣ ಒಡೆಯರು 'ನಾರಾಯಣವಿಲಾಸ' ವೆಂಬ ನಾಟಕವನ್ನು ತನ್ನ ತಂದೆಯ ಪ್ರೋತ್ಸಾಹದಿಂದ ರಚಿಸಿದನು.[23] ಇದರ ಪ್ರಾರಂಭದಲ್ಲಿ ಸೂತ್ರಧಾರನು ಇವನನ್ನು 'ಸಕಲಕಲಾವಿಲಾಸಿನೀ ಸ್ವಯಂಪರಪತಿಃ' ಎಂಬುದಾಗಿ ಕರೆದಿದ್ದಾನೆ.

ಈ ಕಾಲದಲ್ಲಿ ಶಾಸ್ತ್ರಗ್ರಂಥಗಳು ಹೇರಳವಾಗಿ ರಚಿತವಾದುವು. ಇವುಗಳಲ್ಲಿ ಅನೇಕ ಟೀಕಾತ್ಮಕವಾದವು. ಮಾಧವಭಟ್ಟನ 'ತರ್ಕಭಾಷಾವಿವರಣ,' ಬಲಭದ್ರನ 'ತರ್ಕಭಾಷಾಟೀಕು' ನಾರಾಯಣಭಟ್ಟನ 'ತರ್ಕಭಾಷಾಪ್ರಕಾಶ', ಮುರಾರಿ ಭಟ್ಟನ 'ತರ್ಕಪ್ರಕಾಶ' ವಿದ್ಯಾರಣ್ಯ ಶಿಷ್ಯನಾದ ನರಹರಿಯ 'ಕಾವ್ಯಪ್ರಕಾಶ ವ್ಯಾಖ್ಯಾ' ಮತ್ತು 'ನೈಷಧಟೀಕಾ' ವಿಧ್ಯಾಮಾಧವನ 'ಕುಮಾರಸಂಭವ' ಮತ್ತು 'ಕಿರಾತಾರ್ಜುನೀಯ ವ್ಯಾಖ್ಯಾನ' ಮೊದಲಾದುವು ಈ ಜಾತಿಗೆ ಸೇರಿ ದವು. ಬುಕ್ಕನ ಮಗನಾದ ಮಲ್ಲಪ್ಪ ಒಡೆಯರ ಕೃಪಾಪೋಷಿತನಾದ ವಿಷ್ಣು ಸೂರಿಯು 'ಮುಹೂರ್ತದೀಪಿಕೆ'ಯನ್ನು ಇದೇ ಕಾಲದಲ್ಲಿ ರಚಿಸಿದನು.

ದ್ವೈತಮತಾಚಾರ್ಯರಾದ ಅಕ್ಷೋಭ್ಯತೀರ್ಥ ಮತ್ತು ಈತನ ಶಿಷ್ಯ ಜಯ ತೀರ್ಥ ಟೀಕಾಚಾರ್ಯರು ದ್ವೈತಮತ ಪೋಷಕವಾದ ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. 'ಮಾಧ್ವ ತತ್ತ್ವಸಾರಸಂಗ್ರಹ' ಅಕ್ಷೋಭ್ಯತೀರ್ಥರ ಗ್ರಂಥ. 'ತತ್ತ್ವ ಪ್ರಕಾಶಿಕಾ' 'ಸುಧಾ' 'ನ್ಯಾಯವಿವರಣ' 'ಪ್ರಮೇಯದೀಪಿಕಾ' 'ನ್ಯಾಯ ದೀಪಿಕಾ', ಪ್ರಮಾಣಪದ್ಧತಿ', 'ವಾದಾವಳಿ' 'ಅಧ್ಯಾತ್ಮಾಮೃತತರಂಗಿಣಿ' ಮೊದಲಾದ ೨೩ ಗ್ರಂಥಗಳು ಟೀಕಾಚಾರ್ಯರದು.

ಇದುವರೆಗೆ ಪ್ರಸ್ತಾಪಿಸಿದ ಗ್ರಂಥಗಳೆಲ್ಲವೂ ಸಂಸ್ಕೃತ ಭಾಷೆಯವು. ಸಂಗಮ ರಾಜರ ಕೃಪಾಕಟಾಕ್ಷವು ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಪ್ರಸರಿಸದೇ ಇರಲಿಲ್ಲ. ಈ ಕಾಲಕ್ಕೆ ಕನ್ನಡ ಸಾಹಿತ್ಯದಲ್ಲಿ ಚಂಪೂ ಮತ್ತು ವಚನ ಶೈಲಿಗಳ ಉದ್ದಾಮಕಾಲ ಕಳೆದುಹೋಗಿದ್ದಿತು. ಷಟ್ಪದಿ, ಸಾಂಗತ್ಯಗಳು ತಮ್ಮ ವೈಭವವನ್ನು ಪ್ರಚಾರಪಡಿಸು ತ್ತಿದ್ದವು. ಪ್ರತಿಭಾಯುತವಾದ ಮೂಲಗ್ರಂಥಗಳ ಕಾಲ ಮುಗಿದು ಟೀಕಾಟಿಪ್ಪಣಿ ಮತ್ತು ಸಂಗ್ರಹಗಳ ಕಾರ್ಯವು ಪ್ರಾರಂಭವಾಗಿದ್ದವು. ಕನ್ನಡ ಸಾಹಿತ್ಯವು ಬುಕ್ಕ ಹರಿಹರರ ಕಾಲದಲ್ಲಿ ಸಾಮಾನ್ಯವಾದ ಪ್ರೋತ್ಸಾಹವನ್ನು ಪಡೆದು ಕ್ರಮೇಣ ಬಂದ ರಾಜರ ಕಾಲದಲ್ಲಿ ಸ್ವಲ್ಪಸ್ವಲ್ಪವಾಗಿ ತನ್ನ ಸ್ಥಾನವನ್ನು ಬಲಪಡಿಸಿಕೊಂಡು ಆ ವಂಶದ

---

23 ಅದೇ. ಪು. ೫೩.

ಕೊನೆಯ ಅರಸರಾದ ಪ್ರೌಢದೇವರಾಯ ಮಲ್ಲಿಕಾರ್ಜುನರ ಕಾಲಕ್ಕೆ ವಿಶೇಷವಾದ ಔನ್ನತ್ಯವನ್ನು ಹೊಂದಿತು. ಈ ಕಾಲದ ಸಂಸ್ಕೃತ ಸಾಹಿತ್ಯದಂತೆ ಕನ್ನಡ ಸಾಹಿತ್ಯವೂ ಮತಗ್ರಂಥಗಳಿಂದ ತುಂಬಿದೆ. ಅದರಲ್ಲಿಯೂ ವೀರಶೈವ ಗ್ರಂಥಗಳೇ ಬಹಳ. ವಿಜಯ ನಗರ ಸಾಮ್ರಾಜ್ಯದ ಪ್ರಾರಂಭದೆಶೆಯಲ್ಲಿದ್ದ ಕನ್ನಡ ಗ್ರಂಥಕರ್ತರಲ್ಲಿ ಗುರುದೇವ, ಭೀಮಕವಿ, ಪದ್ಮಣಾಂಕ ಮತ್ತು ನೀಲಕಂಠಶಿವಾಚಾರ್ಯ ಈ ನಾಲ್ವರು ಮುಖ್ಯರು. ಗುರುದೇವನು 'ವೀರಶೈವ ಪಂಚಸ್ತೋತ್ರ'ಗಳಿಗೆ ಟೀಕೆಗಳನ್ನು ಬರೆದಿದ್ದಾನೆ.[24] ಒಬ್ಬ ಸಿದ್ಧದೇವನಿಗೋಸ್ಕರ ಸಂಸ್ಕೃತದಲ್ಲಿ 'ವೀರಶೈವಾಚಾರ ದೀಪಿಕೆ' ಎಂಬ ಗ್ರಂಥವನ್ನು ಬರೆದಿರುವುದಾಗಿಯೂ ತನ್ನ ಗ್ರಂಥದಲ್ಲಿ ಹೇಳಿಕೊಂಡಿದ್ದಾನೆ. ಟೀಕೆಯ ಕೊನೆಯಲ್ಲಿ ತಾನು 'ಶ್ರೀಮದ್ವೇದಾಗಮೋಪನಿಷತ್ಪುರಾಣೋಕ್ತ ಮಾರ್ಗಪ್ರವೀಣ'ನೆಂಬುದಾಗಿ ಹೊಗಳಿಕೊಂಡಿದ್ದಾನೆ. ಕನ್ನಡಾಂಧ್ರಭಾಷಾ ಪಂಡಿತನಾದ ಭೀಮಕವಿಯು ಅಸಮಲಿಂಗೈಕ್ಯಾನುಭವಪ್ರಸರಮತಿಯಾದ ಪಾಲ್ಕುರಿಕೆ ಸೋಮನು ತೆಲುಗಿನಲ್ಲಿ ರಚಿಸಿದ 'ಬಸವಪುರಾಣ'ವನ್ನು ಕನ್ನಡದಲ್ಲಿ ಬರೆದಿದ್ದಾನೆ.[25] ಉಭಯಭಾಷಾ ಕವಿಯಾದ ಪದ್ಮಣಾಂಕನು ಕೆರೆಯ ಪದ್ಮರಸನ ಚರಿತ್ರವಾದ 'ಪದ್ಮರಾಜಪುರಾಣ'ವನ್ನು ರಚಿಸಿದನು.[26] ನೀಲಕಂಠ ಶಿವಾಚಾರ್ಯನು ಬ್ರಹ್ಮಸೂತ್ರ ವ್ಯಾಖ್ಯಾನರೂಪವಾದ 'ಕ್ರಿಯಾಸಾರ'ವೆಂಬ ಒಂದು ಸಂಸ್ಕೃತ ಗ್ರಂಥವನ್ನೂ ಅದೇ ವಿಷಯವನ್ನು ಕುರಿತ ಒಂದು ಭಾಷಾಪ್ರಬಂಧವನ್ನೂ ರಚಿಸಿರುವಂತೆ ತೋರುತ್ತದೆ.[27] ಶಿವಪಕ್ಷಪಾತಿಗಳಾದ ರಾಜರ ಆಶ್ರಯದಲ್ಲಿ ವೀರಶೈವರೇ ವಿಶೇಷವಾಗಿ ಗ್ರಂಥರಚನೆ ಮಾಡಿದರೂ ರಾಜರ ಕೈಕೆಳಗಿದ್ದ ಅನೇಕ ಅನ್ಯಮತೀಯ ಮಂತ್ರಿಗಳ ಮತ್ತು ದಂಡನಾಯಕರ ಆಶ್ರಯದಲ್ಲಿ ಇತರರೂ ಗ್ರಂಥರಚನೆಯನ್ನು ಮಾಡಿದ್ದಾರೆ. 'ಧರ್ಮನಾಥಪುರಾಣ' ಕರ್ತೃವಾದ ಮಧುರನು ಬುಕ್ಕರಾಯಸುತ ಹರಿಹರರಾಯನ ಪ್ರಧಾನನಾದ ಮುದ್ದಣ್ಣದಂಡೇಶನ ಆಸ್ಥಾನ ಚೂಡಾಮಣಿಯಾಗಿದ್ದನು. ಇವನಿಗೆ 'ಮಧುರಮಾಧವ' 'ಸರಸಕವಿರಸಾಲವಸಂತ' 'ವಿಶ್ವವಿದ್ಯಾಸಮುದಯ ಸುಮನಸ್ಸಂಚರಚ್ಚಂಚರೀಕ' ಎಂಬ ಬಿರುದುಗಳಿದ್ದವು. ಇವನ ಕವಿತ್ವವು ಬಹು ಸರಸವಾಗಿಯೂ ಪ್ರೌಢವಾಗಿಯೂ ಇದೆ.[28] 'ಗೊಮ್ಮಟಸಾರಕ್ಕೂ' ಅಮಿತಗತಿಯ

---

24 ಕ. ಚ. ಸಂ ೨. ಪು. ೩೪.

25 ಅದೇ. ಪು. ೩೬.

26 ಕ. ಚ ; ಸಂ. ಪು. ೪೪೩.

27 ಅದೇ. ಪು. ೪೪೪.

28 ಅದೇ. ಪು. ೪೨೭.

'ಶ್ರಾವಕಾಚಾರ'ಕ್ಕೂ ವ್ಯಾಖ್ಯಾನವನ್ನು ಬರೆದ ಕೇಶವವರ್ಣಿಯೂ 'ಖಗೇಂದ್ರ ಮಣಿದರ್ಪಣ'ಕಾರನಾದ ಮಂಗರಸನೂ ಮಲ್ಲಿಸೇನನ 'ಚಿತ್ತವಲ್ಲಭ'ದ ವ್ಯಾಖ್ಯಾಕಾರನಾದ ಅಭಿನವ ಶ್ರುತಿಮುನಿಯೂ ಹರಿಹರರಾಯನ ಕಾಲದಲ್ಲಿ ಅವನಿಂದ ಪರೋಕ್ಷವಾದ ಸಹಾಯವನ್ನು ಪಡೆದು ಗ್ರಂಥಗಳನ್ನು ರಚಿಸಿದರು. ಕನ್ನಡ ಸಾಹಿತ್ಯದಲ್ಲಿ ಹರಿಹರರಾಯನು ಇಷ್ಟು ಅಭಿಮಾನವನ್ನು ತೋರಿಸುತ್ತಿದ್ದುದರಿಂದಲೇ ೧೩೮೬ನೆಯ ಶಾಸನವೊಂದರಲ್ಲಿ ಅವನನ್ನು 'ಕರ್ಣಾಟಕ ವಿದ್ಯಾವಿಲಾಸ' ಎಂಬದಾಗಿ ಕರೆದಿದೆ.[28]

ಆದರೂ ಕನ್ನಡ ಸಾಹಿತ್ಯಕ್ಕೆ ವಿಶೇಷ ಪ್ರೋತ್ಸಾಹ ದೊರೆತುದು ವಿಜಯನಗರದ ಪ್ರೌಢದೇವರಾಯನ ಕಾಲದಲ್ಲಿ. ಪ್ರೌಢದೇವರಾಯನೂ ಅವನ ಅಧಿಕಾರಿಗಳೂ ಅನೇಕ ಕನ್ನಡ ವೀರಶೈವ ಗ್ರಂಥಕರ್ತರಿಗೆ ಪ್ರೋತ್ಸಾಹವನ್ನಿತ್ತರು. ಇವರ ಆಶ್ರಯದಲ್ಲಿದ್ದವರಲ್ಲಿ 'ಏಕೋತ್ತರಶತಸ್ಥಲ' 'ಷಟ್ಸ್ಥಲವಿವೇಕ'ಗಳ ಕರ್ತೃವೂ ವೀರಶೈವ ಗಣಾಚಾರ್ಯನೂ ಆದ ಮಹಾಲಿಂಗದೇವನು ಮುಖ್ಯನಾದವನು. ಇವನು ತನ್ನ ಶಿಷ್ಯನಾದ ಪ್ರೌಢದೇವರಾಯನ ದಂಡನಾಥನಾದ ಜಕ್ಕಣ್ಣನ ಉಪದೇಶಾರ್ಥವಾಗಿ ಇವುಗಳನ್ನು ರಚಿಸಿದಂತೆ ಹೇಳಿಕೊಂಡಿದ್ದಾನೆ.[29] 'ಶಿವತತ್ತ್ವಚಿಂತಾಮಣಿ'ಯ ಕರ್ತೃವಾದ ಲಕ್ಕಣ್ಣದಂಡೇಶನು ಪ್ರೌಢದೇವರಾಯನ ಆಸ್ಥಾನದಲ್ಲಿದ್ದ ಮತ್ತೊಬ್ಬ ಕವಿ.[30] ಇವನು ತನ್ನ ಗ್ರಂಥವನ್ನು 'ವೀರಶೈವ ಸಿದ್ಧಾಂತ ತಂತ್ರದ ಸೂತ್ರವಿದು ಸಕಲ ವೇದಾಗಮದ ಶಿಖಾಸೂತ್ರವಿಂತಿದು ಪರಮನಿರ್ವಾಣಪದವೆನಿಪ ಶಾಂಭವೀ ಯೋಗಸೂತ್ರವು' ಎಂದು ಹೊಗಳಿಕೊಂಡಿದ್ದಾನೆ. ಜಕ್ಕಣ್ಣ ದಂಡನಾಥನೂ ಅವನ ಗುರುವಾದ ಕುಮಾರ ಬಂಕನಾಥನೂ ಅನೇಕ ಗ್ರಂಥಗಳನ್ನು ಸ್ವತಃ ರಚಿಸಿದುದಲ್ಲದೆ ಅನೇಕ ಕವಿಗಳಿಗೆ ಪೋಷಕರಾಗಿದ್ದರು. 'ಪ್ರಭುಲಿಂಗಲೀಲೆ'ಯನ್ನು ರಚಿಸಿದ ಚಾಮರಸನೂ ಭಾರತವನ್ನು ರಚಿಸಿದ ಕುಮಾರವ್ಯಾಸನೂ ಪ್ರೌಢದೇವರಾಯನ ಆಸ್ಥಾನದಲ್ಲಿದ್ದಂತೆಯೂ ಅವರಿಬ್ಬರಿಗೂ ಸ್ಪರ್ಧೆ ನಡೆದು ಚಾಮರಸನೇ ಜಯಶಾಲಿಯಾದಂತೆಯೂ 'ಭೈರವೇಶ್ವರಕಥಾಸೂತ್ರರತ್ನಾಕರ'ದಲ್ಲಿಯೂ 'ಗುರುರಾಜ ಚಾರಿತ್ರ'ದಲ್ಲಿಯೂ ಹೇಳಿದೆ.[31] ಆದರೆ ನವೀನ ಸಂಶೋಧನೆಯಿಂದ ಈ ಕಥೆಯು ಬಹುಮಟ್ಟಿಗೆ ನಂಬಲರ್ಹವಲ್ಲವೆಂಬುದಾಗಿ ತೋರಿಬಂದಿದೆ. ಚಾಮರಸನು ಮಾತ್ರ

28 ಎ. ಕ. ೬, ಕೊಪ್ಪ ೩೪.

29 ಕ. ಚ. ಸಂ. ೨, ಪು. ೫೦.

30 ಅದೇ. ಪು. ೫೩.

31 ಅದೇ. ಪು. ೫೯.

ಪ್ರೌಢದೇವರಾಯನ ಕಾಲದಲ್ಲಿ ಗ್ರಂಥರಚನೆಯನ್ನು ಮಾಡಿರಬಹುದು. ಮೇಲೆ ಹೇಳಿದವರೇ ಅಲ್ಲದೆ 'ಲಿಂಗಲೀಲಾವಿಲಾಸಚಾರಿತ್ರ'ವನ್ನು ಬರೆದ ಕಲ್ಲುಮಠದ ಪ್ರಭುದೇವನೂ ಜಕ್ಕಣ್ಣಾರ್ಯನ 'ಏಕೋತ್ತರಶತಸ್ಥಲ'ಕ್ಕೆ ಟೀಕೆಯನ್ನು ಬರೆದ ಗಿರೀಂದ್ರನೂ 'ಕರಸ್ಥಳದನಾಗಲಿಂಗ ತ್ರಿಪದಿ'ಯನ್ನು ಬರೆದ ನಾಗದೇವನೂ 'ಶಿವಯೋಗಾಂಗಭೂಷಣ'ದ ಕರ್ತೃವಾದ ಗುರುಬಸವನೂ 'ಅನುಭವಸೂತ್ರ'ಕಾರನಾದ ಮೊಗ್ಗಿಯ ಮಾಯಿದೇವನೂ ದೇವರಾಯನ ಕಾಲದಲ್ಲಿ ಗ್ರಂಥರಚನೆಯನ್ನು ಮಾಡಿ ಕನ್ನಡ ಸಾಹಿತ್ಯವನ್ನು ಸಮೃದ್ಧವನ್ನಾಗಿಮಾಡಿದರು.

ಪ್ರೌಢದೇವರಾಯನು ವಿದ್ಯಾಪಕ್ಷಪಾತಿ[32]ಯೂ ಕವಿಜನಾಶ್ರಯನೂ ಆಗಿದ್ದುದರಿಂದ ನಾನಾದೇಶದ ಕವಿಗಳು ಅವನ ಆಸ್ಥಾನಕ್ಕೆ ಬಂದು ತಮ್ಮ ವೈದುಷ್ಯವನ್ನು ಪ್ರಕಟಣೆಮಾಡಿ ಅವನಿಂದ ಸನ್ಮಾನಿತರಾಗುತ್ತಿದ್ದರು. 'ಗಂಗಾದಾಸ ಪ್ರತಾಪವಿಲಾಸ'ವನ್ನು ರಚಿಸಿದ ಗಂಗಾಧರನು ತಾನು ಪ್ರೌಢದೇವರಾಯನ ಆಸ್ಥಾನಕವಿಯಾಗಿದ್ದಂತೆಯೂ ಅವನಿಂದ ವಿಶೇಷ ಸನ್ಮಾನವನ್ನು ಪಡೆದಂತೆಯೂ ತನ್ನ ಗ್ರಂಥದಲ್ಲಿ ಹೇಳಿದ್ದಾನೆ.[33] ಆಂಧ್ರಸಾಹಿತ್ಯದಲ್ಲಿ ಸುಪ್ರಸಿದ್ಧನಾದ ಶ್ರೀನಾಥನು ಪ್ರೌಢದೇವರಾಯನ ಆಸ್ಥಾನಕ್ಕೆ ಹೋಗಿದ್ದ ವಿಷಯವನ್ನು ಕುರಿತು ಅನೇಕ ಚಾಟುಶ್ಲೋಕಗಳಿವೆ. ಶ್ರೀನಾಥನು ವೇಲಮರಾಜನಾದ ಸರ್ವಜ್ಞಭೂಪಾಲನ ಆಸ್ಥಾನದಲ್ಲಿದ್ದಾಗ ಸರಸ್ವತೀಪ್ರಾರ್ಥನಾರೂಪವಾಗಿ ರಚಿಸಿರುವುದೆಂದು ಪ್ರತೀತಿ ಇರುವ

ಸೀ || ದೀನಾರಟಂಕಾಲಂ ದೀರ್ಥಮಾಡಿಂಚಿತಿ
ದಕ್ಷಿಣಾಧೀಶು ಮುತ್ಯಾಲ ಶಾಲ
ಪಲುಕುಂದೋಡೈತಾಂಧ್ರಭಾಷಾಮಹಾಕಾವ್ಯ
ನೈಷಧಗ್ರಂಥ ಸಂದರ್ಭಮುನುಕು

---

[32] ಪ್ರೌಢದೇವರಾಯನು ಒಂದು ಬ್ರಹ್ಮಸೂತ್ರವೃತ್ತಿಯನ್ನು ಬರೆದಿರುವುದು ಈಚೆಗೆ ಗೊತ್ತಾಗಿದೆ. (ಪ್ರಾ. ಕೋ. ಮೈ. ನಂಬರ್ ೪೯೫೦) ಇದು ಅದ್ವೈತಪಂಥದ ವ್ಯಾಖ್ಯಾನ. ಇದು ಶಂಕರಭಾಷ್ಯ ಮತ್ತು ಭಾಮತಿಗಳನ್ನು ಬಹುಮಟ್ಟಿಗನುಸರಿಸುತ್ತದೆ. ಕವಿಯು 'ಗಜಮೃಗಯೂಥಿರಾಜ' ಎಂದು ಕರೆದುಕೊಂಡಿರುವುದರಿಂದ ಇದು ಗಜವೇಂಟೆಗಾರ ಎಂಬುದರ ಭಾಷಾಂತರವಿರಬಹುದು. ಈ ವೃತ್ತಿಗೆ 'ಪಂಪಾ' ಎಂದು ಹೆಸರು. ಇದನ್ನು 'ಮಹಾನಾಟಕಸುಧಾನಿಧಿ'ಯ ಕರ್ತೃವಾದ ಶೋಣಾದ್ರಿನಾಥನೋ ಕಲ್ಲಿನಾಥನೋ ರಚಿಸಿ ರಾಜನ ಹೆಸರಿನಲ್ಲಿ ಪ್ರಚಾರಪಡಿಸಿರಬಹುದು. ಪ್ರೌಢದೇವರಾಯನು 'ರತಿರತ್ನಪ್ರದೀಪಿಕೆ' ಎಂಬ ಮತ್ತೊಂದು ಗ್ರಂಥವನ್ನು ರಚಿಸಿರುವಂತೆ 'ಇತಿ ಶ್ರೀ ಪ್ರೌಢದೇವ ವಿರಚಿತಾಯಾಂ ರತಿರತ್ನ ಪ್ರದೀಪಿಕಾಯಾಂ' ಎಂಬ ವಾಕ್ಯದಿಂದ ಶ್ರುತಪಡುತ್ತದೆ.

[33] ಆಧಾರಗ್ರಂಥಗಳು, ಪು. ೬೫.

ಪಗಲುಂಗೊಟ್ಟಂಚಿತುದ್ಭಟವಿವಾದ ಪ್ರೌಢಿ
ಗೌಡಡಿಂಡಿಮಭಟ್ಟ ಕಂಚುಢಕ್ಕ
ಚಂದ್ರಭೂಷಕ್ರಿಯಾಶಕ್ತಿರಾಯಲುಯೊದ್ದ
ಬಾದುಕೊಲ್ಪಿತಿ ಸಾರ್ವಭೌಮಬಿರುದ

ಗೀ || ಮೆಟಿಲಮೆಪ್ಪಿಂಚಿದೋ ನನ್ನು ನಿಂಕವೀದ
ರಾವುಸಿಂಗಮಹೀಪಾಲು ಧೀವಿಶಾಲು
ನಿಂಡುಕೊಲುವುನ ನೆಲಕೊನಿಯುಂಡಿ ನೀವು
ಸಕಲಸದ್ಗುಣ ನಿಕುರುಂಬ ಶಾರದಾಂಬ.

ಎಂಬ ಪದ್ಯದಿಂದ ಶ್ರೀನಾಥನು ದಕ್ಷಿಣದೇಶದ ರಾಜನ (ವಿಜಯನಗರ) ಆಸ್ಥಾನದಲ್ಲಿ ಕನಕಾಭಿಷಿಕ್ತನಾದನೆಂಬುದೂ ಡಿಂಡಿಮಭಟ್ಟನನ್ನು ವಾದದಲ್ಲಿ ಸೋಲಿಸಿ ಅವನ ಕಂಚುಢಕ್ಕವನ್ನು ಕಳಸಿದನೆಂಬುದೂ ಚಂದ್ರಭೂಷಕ್ರಿಯಾಶಕ್ತಿಯ ಸನ್ನಿಧಾನದಲ್ಲಿ 'ಕವಿಸಾರ್ವಭೌಮ'ನೆಂಬ ಬಿರುದನ್ನು ಪಡೆದನೆಂಬುದೂ, ಶ್ರುತಪಡುತ್ತದೆ. ಇದೇ ವಿಷಯವು ಶ್ರೀನಾಥನಿಂದ ರಚಿತವಾದ 'ಕಾಶೀಖಂಡ'ದ ಈ ಕೆಳಗಿನ ಶ್ಲೋಕದಿಂದ ದೃಢೀಕೃತವಾಗಿದೆ

ಕರ್ಣಾಟಾಕ್ಷಿತಿಪಾಲ ಮೌಕ್ತಿಕಸಭಾಗಾರಾಂತರಾಕಲ್ಪಿತ
ಸ್ವರ್ಣಸ್ನಾನ ಜಗತ್ಪ್ರಸಿದ್ಧ ಕವಿರಾಟ್ಸಂಸ್ತುತ್ಯ ಚಾರಿತ್ರದು
ಗ್ಧಾರ್ಣೋರಾಶಿಗಭೀರ ಪ್ರಾಹ್ಣಮುಖಮಧ್ಯಾಹ್ನಾಪರಾಹ್ಣಾರ್ಚಿತಾ
ಪರ್ಣಾವಲ್ಲಭ ರಾಜಶೇಖರ ಮಣೀ ಪಂಟಾನ್ವಯಗ್ರಾಮಣೀ.

ಶ್ರೀನಾಥನು ಕೊಂಡುವೀಡು ರಾಜ್ಯದ ರೆಡ್ಡಿ ಅರಸರ ಆಸ್ಥಾನಕವಿ. ಈತನು 'ಶೃಂಗಾರ ನೈಷಧಮು' 'ಕಾಶೀಖಂಡಮು' 'ಹರವಿಲಾಸಮು' 'ಮರುದ್ರಾಜಚರಿತ್ರಮು' 'ಪಂಡಿತಾರಣ್ಯಚರಿತ್ರಮು' 'ಶಾಲೀವಾಹನ ಸಪ್ತಶತೀ' 'ಭೀಮಪುರಾಣಮು' 'ವಿಧಿನಾಟಕಮು' ಮೊದಲಾದುವನ್ನು ಬರೆದಿದ್ದಾನೆ. ಈತನ ಚಾಟುಶ್ಲೋಕಗಳು ಬಹು ಪ್ರಸಿದ್ಧವಾಗಿವೆ.[34]

ದೇವರಾಯನ ಆಸ್ಥಾನ ಕವಿಯಾದ ಚತುರಕಲ್ಲಿನಾಥನು ಶಾರ್ಙ್ಗದೇವನ 'ಸಂಗೀತರತ್ನಾಕರ'ಕ್ಕೆ 'ಸಂಗೀತರತ್ನಾಕರಕಲಾನಿಧಿ' ಎಂಬ ವ್ಯಾಖ್ಯಾನವನ್ನು ರಚಿಸಿದನು. ಇದು ಸಂಗೀತ ಶಾಸ್ತ್ರ ಪ್ರಪಂಚದಲ್ಲಿ ಬಹು ಉನ್ನತಸ್ಥಾನವನ್ನು ಪಡೆದಿದೆ. ಸಂಗೀತಶಾಸ್ತ್ರದಲ್ಲಿ ಭರತಮುನಿಯ ಭರತಶಾಸ್ತ್ರವೇ ನಾಟ್ಯಶಾಸ್ತ್ರ, ಪರಮಪ್ರಾಚೀನವಾದುದು. ಅವನ ಕಾಲಕ್ಕೇ ಭಾರತೀಯ ಸಂಸ್ಕೃತಿ ವಿಶೇಷವಾಗಿ

34 ವೀ. ಲಿಂ. ಪಂ. ೧೦, ಪು. ೧೩೩-೫.

ಬೆಳೆದು ನಿಷ್ಕೃಷ್ಟರೂಪವನ್ನು ತಾಳಿತ್ತು. ಅವನು ಸಂಗೀತಶಾಸ್ತ್ರದಲ್ಲಿ ದಾಕ್ಷಿಣಾತ್ಯ ಔತ್ತರೇಯ ಮಾರ್ಗಗಳನ್ನು ಸಮನ್ವಯಮಾಡಿ ಉತ್ತಮವಾದ ಗ್ರಂಥವನ್ನು ರಚನೆ ಮಾಡಿದನು. ಆ ಗ್ರಂಥದ ಆಧಾರದ ಮೇಲೆ ಕಲ್ಲಿನಾಥನ ಕಾಲದ ವರೆಗೆ ಅಂದರೆ ಸುಮಾರು ಹದಿನೈದು ಶತಮಾನಗಳ ಕಾಲದಲ್ಲಿ ಸಂಗೀತ ಶಾಸ್ತ್ರ ವಿಷಯಕವಾದ ಅನೇಕ ಸ್ವತಂತ್ರ ಗ್ರಂಥಗಳೂ ವ್ಯಾಖ್ಯಾನಗಳೂ ರಚಿತವಾದುವು. ಆದರೂ ಸಂಗೀತ ವಿಷಯಕವಾದ ಸರ್ವವಿಷಯ ಸಂಗ್ರಹದಂತಿರುವ ಭರತನ ಗ್ರಂಥವನ್ನು ಯಾರೂ ಸರಿಯಾಗಿ ಅರ್ಥಮಾಡಿಕೊಂಡಿರಲಿಲ್ಲ. ಅದಕ್ಕೆ ಬಹುಮಟ್ಟಿಗೆ ಸಹಾಯಕವಾಗ ಬಹುದಾಗಿದ್ದ ಶಾರ್ಙ್ಗದೇವನ ಗ್ರಂಥವೂ ವ್ಯಾಖ್ಯಾನವಿಲ್ಲದೇ ಅರ್ಥವಾಗುತ್ತಿರಲಿಲ್ಲ. ಕಲ್ಲಿನಾಥನ ವ್ಯಾಖ್ಯಾನವು ಈ ದೃಷ್ಟಿಯಿಂದ ಬಹು ಉಪಯುಕ್ತವಾಗಿ ಪರಿಣಮಿಸಿತು. ಕಲ್ಲಿನಾಥನೊಬ್ಬನೇ ಭರತನ ಮತವನ್ನು ಸರಿಯಾಗಿ ಗ್ರಹಿಸಿರುವವನು. ಅವನು ತನ್ನ ವ್ಯಾಖ್ಯಾನದಲ್ಲಿ ತನ್ನ ಹಿಂದಿನ ಎಲ್ಲ ಶಾಸ್ತ್ರಕಾರರ ಮತವನ್ನು ಸವಿಸ್ತಾರವಾಗಿ ವಿಮರ್ಶಿಸಿ ಭರತನ ಮತವನ್ನು ಸಿದ್ಧಾಂತಮಾಡಿದ್ದಾನೆ.

ಹದಿನಾಲ್ಕನೆಯ ಶತಮಾನದಲ್ಲಿ ಕರ್ಣಾಟಕದಲ್ಲಿ ಊಗಾಭೋಗಗಳೆಂಬ ಸಂಗೀತ ಮಾರ್ಗ ಪ್ರಾರಂಭವಾಯಿತು. 'ಸಂಗೀತರತ್ನಾಕರ'ದಲ್ಲಿ ಇದರ ಮೂಲವನ್ನು ಕಾಣಬಹುದು, 'ಉದ್ಗ್ರಾಹ ಆಭೋಗ' ಎಂಬ ಶಬ್ದಗಳ ಅಪಭ್ರಂಶವೇ ಉಗಾಭೋಗ. ಇವು ರಾಗಪ್ರಧಾನವಾದುವು. ಸುಲ್ತಾನ್ ಅಲ್ಲಾವುದ್ದೀನ್ ಖಿಲ್ಜಿಯ ಆಶ್ರಯದಲ್ಲಿದ್ದ ಪರಮ ಮೇಧಾವಿಯಾದ ಕರ್ಣಾಟಕ ವಾಗ್ಗೇಯಕಾರನಾದ ಗೋಪಾಲನಾಯಕನಿಂದ ಈ ಮಾರ್ಗವು ಉತ್ತರಕ್ಕೆ ಒಯ್ಯಲ್ಪಟ್ಟು ನಾನಾರೂಪ ಗಳನ್ನು ತಾಳಿ ಹದಿನೆಂಟನೆಯ ಶತಮಾನದ ವೇಳೆಗೆ ಈಗಿನ ಔತ್ತರೇಯ 'ಧ್ರುವ' ಮತ್ತು 'ಖ್ಯಾಲ' ರೀತಿಯಾಗಿ ಪರಿಣಮಿಸಿತು. ಆದರೆ ಕರ್ಣಾಟಕದಲ್ಲಿ ಕಲ್ಲಿನಾಥನ ವಿಶೇಷ ಸಾಧನೆಯಿಂದ ಆಗಲೇ ಉಗಾಭೋಗವೆಂಬ ಹೆಸರಿನಿಂದ ಕರ್ಣಾಟಕ ದಲ್ಲೆಲ್ಲಾ ಬಹುಜನಪ್ರಿಯವಾಯಿತು. ವಿಜಯನಗರದಲ್ಲಿ ಬಹು ಪ್ರಸಿದ್ಧ ವಿದ್ವಾಂಸರು ಗಳಾಗಿದ್ದ ಶ್ರೀಪಾದರಾಜ, ವ್ಯಾಸರಾಜ, ವಾದಿರಾಜ ಮೊದಲಾದವರು ದಾಸಕೂ ಟವನ್ನು ಬೆಳಸಿ ಲಯತಾಲಪ್ರಧಾನಗಳಾದ ಗೀತ ಮತ್ತು ಪ್ರಬಂಧಗಳನ್ನೂ ರಾಗ ಪ್ರಧಾನವಾದ ಉಗಾಭೋಗಗಳನ್ನೂ ಯಥೇಷ್ಟವಾಗಿ ರಚಿಸಿ ಮನೆ ಮನೆಗೂ ಹೋಗಿ ಹಾಡಿ ಅವು ಪ್ರತಿಯೊಬ್ಬರ ಹೃದಯದಲ್ಲಿಯೂ ನೆಲಸುವಂತೆ ಮಾಡಿದರು.

ಕಲ್ಲಿನಾಥನು ಈಗ ಉಪಯೋಗದಲ್ಲಿರುವ ರಾಗಗಳನ್ನು ಮೇಲಪದ್ಧತಿಯಲ್ಲಿ ವಿಭಾಗಿಸುವುದಕ್ಕೆ ಕಾರಣಕರ್ತ. ಹಿಂದಿನಿಂದ ಪ್ರಚಾರದಲ್ಲಿದ್ದ ಗ್ರಾಮ ಮೂರ್ಛನ ಜಾತಿ ರಾಗ ಪದ್ಧತಿಯನ್ನು ಪರಿಷ್ಕರಿಸಿ ಪ್ರಚಾರಪಡಿಸಿದನು. ಲಯವಿವೇಕಕ್ಕೆ

ಸೇರಿದ (ಮಾರ್ಗತಾಲ, ದೇಶಿತಾಲ, ಪ್ರಸ್ತಾರೋಕ್ತ ತಾಲಗಳಲ್ಲಿ) ಪ್ರಸ್ತಾರೋಕ್ತ ತಾಲಗಳನ್ನು ವಿಸ್ತಾರವಾಗಿಯೂ ಕ್ರಮಬದ್ಧವಾಗಿಯೂ ವಿಚಾರಮಾಡಿ 'ನಾಸ್ತಿ ಕಿಂಚದವೃತ್ತಂತು ಪರಂ ಗಾನ ಸಮಾಶ್ರಯಮ್' ಎಂಬ ತತ್ತ್ವವನ್ನು ಸಾರಿದ್ದಾನೆ.

ಕಲ್ಲಿನಾಥನ ಮಾರ್ಗವನ್ನು ಅನುಸರಿಸಿ ಮುಂದೆ ೧೫೯೦ರಲ್ಲಿ ಮೈಸೂರು ಬೆಟ್ಟದ ಚಾಮರಾಜ ಒಡೆಯರ ಕಾಲೀನನಾದ ಶುದ್ಧ ಕರ್ಣಾಟಕ ಪಂಡಿತನಾದ ಪುಂಡರೀಕ ವಿಠಲನೆಂಬುವನು ಖಾನ್‌ದೇಶದ ಬರ್ಹಾಂಖಾನನ ಆಶ್ರಯದಲ್ಲಿ 'ಮೇಲಪ್ರಸ್ತಾರ' 'ಷಡ್ರಾಗಚಂದ್ರೋದಯ' 'ರಾಗಮಂಜರಿ' 'ರಾಗಮಾಲಾ' ಮತ್ತು 'ನರ್ತನನಿರ್ಣಯ' ಎಂಬ ಗ್ರಂಥಗಳನ್ನು ರಚಿಸಿ ಮೇಳ ಮತ್ತು ಜನ್ಯರಾಗ ಗಳ ಜನಕನೆಂದೆನಿಸಿಕೊಂಡಿದ್ದಾನೆ. ಇವನ ಸಮಕಾಲೀನನೂ ಕಲ್ಲಿನಾಥನ ಪೌತ್ರನೂ ಆದ ರಾಮಾಮಾತ್ಯನು ರಾಮರಾಜನಿಂದ ಪ್ರೋತ್ಸಾಹಿತನಾಗಿ 'ಸ್ವರಮೇಳಕಳಾನಿಧಿ' ಯೆಂಬ ಗ್ರಂಥವನ್ನು ಕಲ್ಲಿನಾಥನನ್ನನುಸರಿಸಿಯೇ ರಚಿಸಿದ್ದಾನೆ. ಇದರಿಂದ ಕಲ್ಲಿನಾಥನ ಸ್ಥಾನವೆಂತಹುದೆಂಬುದನ್ನು ಸುಲಭವಾಗಿ ಊಹಿಸಬಹುದು.

ಜಕ್ಕನ್ನನೂ ಇವನ ಮಗನಾದ ಜನ್ನಮಂತ್ರಿಯೂ ಪ್ರೌಢದೇವರಾಯನ ಅನುಗ್ರಹಕ್ಕೊಳಪಟ್ಟ ಆಂಧ್ರಕವಿಗಳು. ಜಕ್ಕನ್ನನು 'ವಿಕ್ರಮಾರ್ಕಚರಿತ್ರೆ'ಯನ್ನು ಬರೆದು ದೇವರಾಯನ ಮಂತ್ರಿಯಾದ ಸಿದ್ಧಮಂತ್ರಿಗೆ ಒಪ್ಪಿಸಿದನು. ಆತನು ಇವನ ಕವಿತ್ವವನ್ನು ನೋಡಿ ಸಂತೋಷಪಟ್ಟು ಕವಿಯನ್ನು ಈ ಕೆಳಗೆ ಕಂಡಂತೆ ಕೊಂಡಾಡಿದನಂತೆ:—

> 'ಜಕ್ಕನ ನೀ ವೈದುಷ್ಯಮು ಜಕ್ಕನ ನೀ ಕಾವ್ಯರಚನಾಚಾತುರ್ಯಂಬುನ್ |
> ಜಕ್ಕನ ನೀ ವಾಗ್ವೈಖರಿ, ಜಕ್ಕನ ನೀಯಾಶುಮಹಿಮ ಜಕ್ಕನ ಸುಕವಿ ||'[35]

ಪ್ರೌಢದೇವರಾಯನ ಕಾಲದಲ್ಲಿ ವಿಶೇಷವಾಗಿ ಸಂಸ್ಕೃತ ಗ್ರಂಥಗಳು ರಚಿತ ವಾಗಿರುವಂತೆ ಕಾಣುವುದಿಲ್ಲ. ಆದರೆ 'ಮಹಾನಾಟಕಸುಧಾನಿಧಿ'ಯ[36]

> ಶ್ರೀಮಾನಿಮ್ಮಡಿದೇವರಾಯನೃಪತಿಃಸ್ವರ್ಲೋಕಕಲ್ಲೋಲಿನೀ
> ಕಲ್ಲೋಲ ಪ್ರತಿಮಲ್ಲಸೂಕ್ತಿವಿಭವೋ ವಿದ್ವಜ್ಜನಶ್ಲಾಘಿತಃ |
> ಧೀಮಾನಾದಿಮಕಾಂಡ ವಿಷಯಾನ್ವ್ಯಸ್ತಾನ್ಮಹಾನಾಟಕ
> ಶ್ಲೋಕಾನ್ವರ್ಣಪದಕ್ರಮೋಜ್ವಲಕರಾನ್ ರಮ್ಯಾನಕಾರ್ಷೀದ್ವಿಭುಃ ||

ಎಂಬ ಶ್ಲೋಕದಿಂದ 'ಮಹಾನಾಟಕ'ವೆಂಬ ರಾಮಾಯಣ ವಿಷಯಕವಾದ ಚಂಪೂ ಗ್ರಂಥವು ದೇವರಾಯ ಕೃತವೆಂದೇ ತೋರುತ್ತದೆ. ದೇವರಾಯನ ಸೋದರಳಿಯನಾದ

---

[35] ಅದೇ, ಪು ೧೫೩.

[36] ಆಧಾರಗ್ರಂಥಗಳು, ಪು. ೬೦.

ಸಾಲುವ ಗೋಪತಿಪ್ಪ ಭೂಪಾಲನೆಂಬುವನು ಮುಳುಬಾಗಿಲಿನಲ್ಲಿ ದೇವರಾಯನ ರಾಜಪ್ರತಿನಿಧಿಯಾಗಿದ್ದನು. ಇವನು ವಾಮನನ 'ಕಾವ್ಯಾಲಂಕಾರಸೂತ್ರ'ಕ್ಕೆ 'ಕಾಮಧೇನು'ವೆಂಬ ವ್ಯಾಖ್ಯಾನವನ್ನೂ ತಾಲಲಯಾದಿಗಳ ಕ್ರಮವನ್ನು ಬೋಧಿಸುವ 'ತಾಲದೀಪಿಕೆ'ಯೆಂಬ ಗ್ರಂಥವನ್ನೂ ರಚಿಸಿದ್ದಾನೆ. 'ತಾಲದೀಪಿಕೆ'ಯ ಆಶ್ವಾಸಾಂತ್ಯಗದ್ಯದಲ್ಲಿ ತಿಪ್ಪಭೂಪಾಲನು ತನ್ನನ್ನು 'ಭರತಮತಪಾರಾವಾರ ಪಾರೀಣ' ಎಂಬುದಾಗಿ ವಿಶೇಷಿಸಿಕೊಂಡಿದ್ದಾನೆ.[37]

ಪ್ರೌಢದೇವರಾಯನ ತರುವಾಯ ಮಲ್ಲಿಕಾರ್ಜುನನೂ ವಿರೂಪಾಕ್ಷನೂ ವಿಜಯನಗರದ ಸಿಂಹಾಸನವನ್ನು ಹತ್ತಿದರು. ಇವರೇ ಸಂಗಮವಂಶದ ಕಡೆಯ ಅರಸರು. ಇವರ ಕಾಲದಲ್ಲಿ ರಾಜಕೀಯಪರಿಸ್ಥಿತಿಯು ಬಹಳ ಕಠಿಣವಾಗಿತ್ತು. ಅನೇಕ ಕಡೆಗಳಿಂದ ಶತ್ರುಗಳು ವಿಜಯನಗರದ ಮೇಲೆ ದಂಡೆತ್ತಿಬಂದರು. ಕ್ಷಾಮಗಳು ತಲೆದೋರಿ ರಾಜ್ಯದಲ್ಲಿ ಕ್ಷೋಭೆಯನ್ನುಂಟುಮಾಡಿದವು. ರಾಜಮನೆತನದವರಲ್ಲಿಯೇ ಒಳಜಗಳವು ಪ್ರಾರಂಭವಾಗಿ ಸಂಗಮ ವಂಶದವರು ಮೂಲೆಗೊತ್ತಲ್ಪಟ್ಟು ರಾಜ್ಯವು ಸಾಳುವ ವಂಶದ ನರಸಿಂಹನ ಕೈವಶವಾಯಿತು.

ರಾಜ್ಯದಲ್ಲಿ ಇಷ್ಟು ವಿಪತ್ತುಗಳೂ ಕಷ್ಟಪರಂಪರೆಗಳೂ ಪ್ರಾಪ್ತವಾದರೂ ಈ ಕಾಲವು ಸಾಹಿತ್ಯದೃಷ್ಟಿಯಿಂದ ಸ್ವಲ್ಪವೂ ಹಿಂದುಳಿದಿಲ್ಲ. ಮಲ್ಲಿಕಾರ್ಜುನನ ಪಾವುಗಡದ ೬೯ ನೆಯ ಶಾಸನದ[38]

> . . . ಆದಿತ್ಯಾರ್ಯಾಯಾಧೀಮತೆ |
> ಷಡ್ದರ್ಶನವಿದೇ ತದ್ವತ್ ಷಟ್ಕರ್ಮ ನಿರತಾಯಚ |
> ನೀತಿಶಾಸ್ತ್ರ ವಿದೇ ತದ್ವತ್ ಸಕಲಾಗಮವೇದಿನೆ |
> ಸರ್ವಶಾಸ್ತ್ರವಿದೇ ನಿತ್ಯ ಸರ್ವಜ್ಞಾಯಾಥ ಭೂಪತಿಃ |
> ಸರ್ವೈಃ ಪರೀಕ್ಷಿತೋ ವಿದ್ವಾನ್ ಸಕಲಾಸು ಕಲಾಸ್ವಪಿ |
> ನೈಪುಣ್ಯಂ ಪ್ರಾಪ್ಯ ಸಂತುಷ್ಟ ವಿದ್ವದ್ಭಿಃ ಸಹಸಂಸ್ಥಿತಂ |
> ತಸ್ಮೈದ್ವಿಜಾಯ. . . ಪ್ರಾದಾದಾಚಂದ್ರತಾರಕಂ ||

ಎಂಬ ಶ್ಲೋಕಗಳಿಂದ ಮಲ್ಲಿಕಾರ್ಜುನನು ಆದಿತ್ಯಾರ್ಯನನ್ನೂ ಅವನ ಜೊತೆಯಲ್ಲಿದ್ದ ವಿದ್ವಾಂಸರನ್ನೂ ಅವರವರಿಗೆ ತಿಳಿದ ಎಲ್ಲಾ ಕಲೆಗಳಲ್ಲಿಯೂ ಪರೀಕ್ಷೆಮಾಡಿ ಅವರ ವಿದ್ವತ್ತಿನ ವಿಷಯದಲ್ಲಿ ಸಂತುಷ್ಟನಾಗಿ ಅವರುಗಳಿಗೆ ಗ್ರಾಮವನ್ನು ಕೊಟ್ಟಿರುವುದು ವಿಶದಪಡುವುದು. ಪಂಡಿತರನ್ನು ಪರೀಕ್ಷೆಮಾಡುವಷ್ಟು ಶಕ್ತಿ ಇವನಿಗಿರ

---

[37] ಅದೇ. ಪು. ೬೨-೩.

[38] ಎ. ಕ. ಪಾವುಗಡ ೬೯.

ಬೇಕಾದರೆ ಇವನು ನಿಜವಾಗಿಯೂ ಪ್ರೌಢವಿದ್ವಾಂಸನಾಗಿರಬೇಕು. ಆದುದರಿಂದಲೇ ಇವನ ಕಾಲದಲ್ಲಿ ಗ್ರಂಥಕರ್ತರಿಗೆ ವಿಶೇಷ ಪ್ರೋತ್ಸಾಹ ದೊರೆಕಿರುವುದು.

ಮಲ್ಲಿಕಾರ್ಜುನ ವಿರೂಪಾಕ್ಷರ ಕಾಲವು ಕನ್ನಡ ಸಾಹಿತ್ಯ ದೃಷ್ಟಿಯಿಂದ ಬಹು ಉತ್ತಮವಾದ ಕಾಲ. ಹಿಂದಿನಂತೆಯೇ ಈಗಲೂ ವೀರಶೈವ ಗ್ರಂಥಕರ್ತರು ಗಳೇ ಹೆಚ್ಚುಮಂದಿ. ಬೊಮ್ಮರಸನು ಹಿಂದೆ ಹರಿಹರೇಶ್ವರ ಸೋಮನಾಥ ಮೊದಲಾದವರು ವಿಸ್ತರಿಸಿದ ನಂಬ್ಯಣಾಂಕನ ಪುಣ್ಯಚರಿತ್ರೆಯನ್ನು 'ಸೌಂದರ ಪುರಾಣ'ವೆಂಬ ಹೆಸರಿನಿಂದ ಬರೆದನು[39]. ಧಾತ್ರೀಶ ದೇವನೃಪಪುತ್ರ ಮೂರು ರಾಯರಗಂಡ ವೈರಿನೃಪಗಜ ಗಂಡಭೇರುಂಡ, ಯದುವಂಶವನಧಿವಿಧು ಮಲ್ಲಿ ಕಾರ್ಜುನಧರಾವಲ್ಲಭನೊಸೆದು ತನ್ನ ನಲ್ಲಳಱಿವಂತೊರೆದ 'ಜನವಶ್ಯ'ವನ್ನು ಸಲ್ಲಲಿತವಾಣಿ ಕವಿ ಕಲ್ಲರಸನಱಿವವರ ಮೆಲ್ಲೆರ್ದೆಯನಿಂಬುಗೊಳ್ವಂತೆ ರಚಿಸಿದನು.[40] ಇದಕ್ಕೆ 'ಮಲ್ಲಿಕಾರ್ಜುನ ವಿಜಯ'ವೆಂಬ ಹೆಸರೂ ಉಂಟು. ಇದು ವಾತ್ಸ್ಯಾಯನನ ಕಾಮಶಾಸ್ತ್ರದ ಆಧಾರದ ಮೇಲೆ ಬರೆದಿರುವಹಾಗೆ ಕಾಣುತ್ತದೆ. ಹರಪನಹಳ್ಳಿ ಮಠದ ಗೋಸಲ ಬಸವೇಶ್ವರನ ಶಿಷ್ಯನಾದ ತೋಂಟದ ಸಿದ್ಧಲಿಂಗನು ಆ ಕಾಲದ ಪ್ರಸಿದ್ಧನಾದ ಮತ್ತೊಬ್ಬ ವೀರಶೈವ ಕವಿ. ಅವನ ತರುವಾಯ ಇದ್ದ ವೀರಶೈವ ಕವಿ ಗಳು ಅವನನ್ನು ನಿರಂಜನ ಗಣೇಶನ ಅಪರಾವತಾರವೆಂದು ಕರೆದಿದ್ದಾರೆ. ಈತನು 'ಷಟ್ಸ್ಥಲಜ್ಞಾನಸಾರಾಮೃತ' ಎಂಬ ವೀರಶೈವ ಗ್ರಂಥವನ್ನು ಬರೆದಿದ್ದಾನೆ. ಇವನ ಶಿಷ್ಯರಲ್ಲನೇಕರು ಇವನ ಪ್ರೋತ್ಸಾಹದಿಂದ ಅನೇಕ ಮತಗ್ರಂಥಗಳನ್ನು ರಚಿಸಿದರು. 'ಚನ್ನಬಸವಪುರಾಣ'ದಲ್ಲಿಯೂ 'ಸಿದ್ಧೇಶ್ವರಪುರಾಣ'ದಲ್ಲಿಯೂ ತೋಂಟದ ಸಿದ್ಧಲಿಂಗನು ವೀರಶೈವಗಣಾಚಾರ್ಯನೆಂದೂ ಗುಬ್ಬಿಯ ಮಲ್ಲಣ್ಣ, ಸಿದ್ಧಲಿಂಗೇಶ್ವರ, ದೊಡ್ಡಲಿಂಗೇಶ್ವರ, ಗುಮ್ಮಳಾಪುರದ ಸಿದ್ಧಲಿಂಗೇಶ್ವರ ಮೊದಲಾದ ವರ ಗುರುವೆಂದೂ ಹೇಳಿದೆ[41] ಇವರಲ್ಲಿ ಗುಬ್ಬಿಯ ಮಲ್ಲಣನು ಭಾವಚಿಂತಾರತ್ನ ವನ್ನು ರಚಿಸಿದ ಕವಿಮಲ್ಲಣಾರ್ಯನ ಪಿತಾಮಹ. ಈತನು 'ಗಣಭಾಷ್ಯರತ್ನ ಮಾಲೆ' 'ವಾತೂಲತಂತ್ರಟೀಕೆ' ಎಂಬೆರಡು ಗ್ರಂಥಗಳನ್ನು ಬರೆದಿದ್ದಾನೆ. ಸಿದ್ಧ ಲಿಂಗೇಶ್ವರನು 'ಸ್ವತಂತ್ರಸಿದ್ಧಲಿಂಗೇಶ್ವರ ವಚನ' 'ಮುಕ್ತ್ಯಂಗನಾಕಂಠಮಾಲೆ' ಇವುಗಳ ಕರ್ತೃವಿರಬಹುದು; ಗುಮ್ಮಳಾಪುರದ ಸಿದ್ಧಲಿಂಗೇಶ್ವರನು 'ಷಟ್ಸ್ಥಲದ ಲಿಂಗಾಗ ಸಂಬಂಧದ ನಿರ್ವಚನ'ವನ್ನು ಬರೆದವನು. ಗುಬ್ಬಿಯ ಮಲ್ಲಣಾರ್ಯನ

39 ಕ. ಚ. ೨, ಪು. ೮೮.

40 ಅದೇ. ಪು. ೯೩.

41 ಅದೇ. ಪು. ೯೭.

ಶಿಷ್ಯನಾದ ಮಲ್ಲಿಕಾರ್ಜುನ ಕವಿಯು 'ಶ್ವೇತಸಸಾಂಗತ್ಯ'ವನ್ನೂ ಕಾಸಂದ ಶಿವಯೋಗಿಯು 'ವೀರಮಾಹೇಶ್ವರಾಚಾರಸಾರೋದ್ಧಾರ'ಕ್ಕೆ ವ್ಯಾಖ್ಯಾನವನ್ನೂ ಇದೇ ಕಾಲದಲ್ಲಿ ರಚಿಸಿದುದು. ನೀಲಕಂಠಾಚಾರ್ಯನು ಮಲ್ಲಿಕಾರ್ಜುನನ ಮಗನಾದ ಮಹಾಮಂಡಲೇಶ್ವರ ವೀರನಂಜೇಂದ್ರ ಒಡೆಯರ ಆಶ್ರಯದಲ್ಲಿ 'ಆರಾಧ್ಯಚರಿತ್ರೆ'ಯನ್ನು ರಚಿಸಿದನು.

ಈ ಕಾಲದಲ್ಲಿ ಜೈನ ಮತ್ತು ವೈದಿಕ ಗ್ರಂಥಗಳು ವಿಶೇಷವಾಗಿಲ್ಲದಿದ್ದರೂ ಸಂಪೂರ್ಣವಾಗಿಲ್ಲದೇನೇ ಇಲ್ಲ. ಜೈನನಾದ ತೆರಕಣಾಂಬಿ ಬೊಮ್ಮರಸಕೃತವಾದ 'ಸನತ್ಕುಮಾರಚರಿತೆ' ಮತ್ತು 'ಜೀವಂಧರ ಸಾಂಗತ್ಯ'ವೂ ಬ್ರಾಹ್ಮಣನಾದ ನಾರಾಯಣಕವಿಯ 'ಭಾಗವತಸಂಹಿತಾರ್ಥ'ವೂ ಇದೇ ಕಾಲದವು.

ಸಂಗಮರ ಕಾಲದ ಸಾಹಿತ್ಯಕ್ಷೇತ್ರದ ಮೇಲೆ ವಿಶೇಷ ಪ್ರಭಾವವನ್ನು ಬೀರಿದ ಸಾಹಿತ್ಯಕೇಂದ್ರವೆಂದರೆ ಕೊಂಡುವೀಡು ಮತ್ತು ರಾಜಮಹೇಂದ್ರಿಯ ರೆಡ್ಡಿಗಳ ಆಸ್ಥಾನ. ಅಲ್ಲಿಯ ರಾಜರಲ್ಲನೇಕರು ಉದ್ದಾಮ ವಿದ್ವಾಂಸರು, ಕವಿಗಳು, ಕವಿಜನಾಶ್ರಯರು. ಕರ್ಪೂರವಸಂತರಾಯನೆಂದು ಪ್ರಸಿದ್ಧನಾಗಿದ್ದ ಕೊಂಡುವೀಡಿನ ಅನ ವೇಮನು ತ್ರಿಲೋಚನಾಚಾರ್ಯರಿಗೆ ಆಶ್ರಯದಾತ. ಇಮ್ಮಡಿ ಹರಿಹರನ ಸಮಕಾಲೀನನಾದ ಅದೇ ವಂಶದ ಕುಮಾರಗಿರಿಯು ಶ್ರೀನಾಥನಿಗೆ ಪೋಷಕನಾಗಿದ್ದನು. ಪೆದ್ದಕೋಮಟಿಯು ಸ್ವಯಂಕವಿಯಾಗಿದ್ದು ಶ್ರೀನಾಥ (ಅವನ ವಿದ್ಯಾಧಿಕಾರಿ) ಮತ್ತು ಅಭಿನವಭಟ್ಟ ಬಾಣವಾಮನಭಟ್ಟರಿಗೆ ಪ್ರೋತ್ಸಾಹಕನಾಗಿದ್ದ. ಪೆದ್ದಕೋಮಟಿಯು 'ಶೃಂಗಾರದೀಪಿಕೆ'ಯೆಂಬ ಅಮರುಕ ವ್ಯಾಖ್ಯಾಕರ್ತೃ. ವಾಮನಭಟ್ಟಬಾಣನು ತನ್ನ 'ವಿಪ್ರನಾರಾಯಣಚರಿತ್ರ' ಅಥವಾ 'ವೇಮಭೂಪಾಲೀಯ'ವನ್ನು ವೇಮನಿಗೆ ಅಂಕಿತಮಾಡಿದ್ದಾನೆ. ಇವನು ವಿಜಯನಗರದಲ್ಲಿಯೇ ಇದ್ದುಕೊಂಡು 'ಶೃಂಗಾರಭೂಷಣ ಭಾಣ'ವನ್ನು ರಚಿಸಿರಬೇಕೆಂಬುದು ಅದರ ಪ್ರಾರಂಭದಲ್ಲಿ ಬರುವ "ಅದ್ಯಖಲು ಚರಾಚರಗುರೋರ್ತುಂಗತುಂಗಭದ್ರಾತರಂಗತಾಳವೃಂತಾಪನೀಯಮಾನ ಸಂಧ್ಯಾತಾಂಡವ ಪರಿಶ್ರಮಸ್ಯ ಹೇಮಗಿರಿಕೂಟ ಪ್ರೇಳಾಕರ ಹೇಮಕೂಟಶೃಂಗವಿಹಿತ ಮಂಗಳಾಯತನಸ್ಯ ಕಾಮಾಗಮನಿಧಿ ವಾಮಭಾಗಸ್ಯ ಶೇಖರೀಭೂತ ಶೀತಭಾನು ಶಕಲಸ್ಯ ಭಗವತೋ ವಿರೂಪಾಕ್ಷಸ್ಯ ಚೈತ್ರಯಾತ್ರಾ ಮಹೋತ್ಸವೇ"

"ರತಿತಂತ್ರ ದೇಶಿಕಾನಾಂ ರತಿಪತಿನಿಗಮಾಂತವಾವದೂಕಾನಾಮ್ |
ವೈದಗ್ಧ್ಯ ಭೂಷಣಾನಾಮೇಷಾ ಪರಿಷತ್ಸಮಾಗತಾ ವಿದುಷಾಂ ||"

ಎಂಬ ಭಾಗಗಳಿಂದ ಶ್ರುತಪಡುತ್ತದೆ.

ಬಹುಶಃ ವಾಮನನೇ ಅನುರುಕ ವ್ಯಾಖ್ಯಾಕಾರನಾಗಿರಬೇಕು. ಪೆದ್ದ ಕೋಮಟಿಯ ಒಂದು ಶಾಸನದಲ್ಲಿ (ಎ. ಇಂ. ೧೧-೩೧೫) ಒಬ್ಬ ವಿಶ್ವೇಶ್ವರಭಟ್ಟನ ಸೂಚನೆ ಇದೆ. ಇವನು ಸರ್ವಜ್ಞಸಿಂಗನ ಆಶ್ರಯದಲ್ಲಿ 'ಚಮತ್ಕಾರ ಚಂದ್ರಿಕೆ'ಯನ್ನು ರಚಿಸಿದ ವಿಶ್ವೇಶ್ವರ ಕವಿಯಾಗಿರಬಹುದು. ಪೆದ್ದಕೋಮಟಿಯು 'ಸಂಗೀತ ಚಿಂತಾಮಣಿ'ಯೆಂಬ ಮತ್ತೊಂದು ಗ್ರಂಥವನ್ನೂ ರಚಿಸಿದ್ದಾನೆ.

ರೆಡ್ಡಿಗಳಲ್ಲೆಲ್ಲ ಸರ್ವಜ್ಞಸಿಂಗಮನೇ ಬಹು ಪ್ರಸಿದ್ಧನಾದವನು. ಇವನು 'ನಾಟಕ ಪರಿಭಾಷಾ' 'ಸಂಗೀತಸುಧಾಕರ' (ಸಂಗೀತರತ್ನಾಕರದ ವ್ಯಾಖ್ಯಾನ) 'ರಸಾರ್ಣವ ಸುಧಾಕರ' (ನಾಟ್ಯಾಲಂಕಾರ) ಮೊದಲಾದುವುಗಳನ್ನು ರಚಿಸಿದ್ದಾನೆ. ಇವನ ಆಶ್ರಯದಲ್ಲಿ ಪ್ರಸಿದ್ಧ ಪಂಡಿತರುಗಳಾದ ಪೆದ್ದಭಟ್ಟ, ಕೋಲಾಚಲಮಲ್ಲಿನಾಥ, ಬೊಮ್ಮಲಕಂಟಿ, ಅಪ್ಪಲಾಚಾರ್ಯ, ಶ್ರೀನಾಥ, ವಿಶ್ವೇಶ್ವರ ಮೊದಲಾದವರು ಗ್ರಂಥ ರಚನೆ ಮಾಡಿದ್ದಾರೆ. ಮಲ್ಲಿನಾಥನು ನೈಷಧವೇ ಮೊದಲಾದ ಅನೇಕ ಗ್ರಂಥಗಳಿಗೆ ವ್ಯಾಖ್ಯಾನವನ್ನೂ 'ವೈಶ್ಯವಂಶಸುಧಾರ್ಣವ'ವೆಂಬ ಗ್ರಂಥವನ್ನೂ ರಚಿಸಿದ್ದಾನೆ. 'ಸರಸಸಾಹಿತ್ಯಚಾತುರೀಧುರೀಣ'ನಾದ ವಿಶ್ವೇಶ್ವರ ಕವಿಯು ಸಿಂಗನೃಪ ಗುಣೋದಾಹರಣಕ್ಕಾಗಿ 'ಚಮತ್ಕಾರ ಚಂದ್ರಿಕೆ'ಯೆಂಬ ಗ್ರಂಥವನ್ನೂ 'ಪದ ವ್ಯಾಖ್ಯಾರ್ಥಪಂಚಿಕೆ'ಯೆಂಬ ನೈಷಧವ್ಯಾಖ್ಯಾನವನ್ನೂ 'ಶಂಕರವ್ಯಾಖ್ಯಾವೃತ್ತಿ'ಯನ್ನೂ ರಚಿಸಿದ್ದಾನೆ. ಬೊಮ್ಮಲಕಂಠಿಯು ಅಮರವ್ಯಾಖ್ಯಾಕಾರ. ವೇದಾಂತ ದೇಶಿಕರ ಪುತ್ರರಾದ ನಯನಾರ್ ವರದಾಚಾರ್ಯರಿಂದ ಪರಾಜಿತನಾದ ವಾಕಲ್ಯನ ಮಲ್ಲನೂ ಸಿಂಗಮನ ಆಸ್ಥಾನ ಪಂಡಿತ.

ಕುಮಾರಗಿರಿಯ ಭಾವನಾದ ಕಾಟಿಯ ವೇಮನು ಕೊಂಡವೀಡುವಿನ ಪೆದ್ದ ಕೋಮಟಿಯನ್ನು ಸೋಲಿಸಿ ರಾಜಮಹೇಂದ್ರದ ದೊರೆಯಾದನು. ಈತನು ಕಾಲಿದಾಸನ 'ಶಾಕುಂತಲ'ವೇ ಮೊದಲಾದುವುಗಳಿಗೆ ವ್ಯಾಖ್ಯಾನವನ್ನು ಬರೆದಿರುವುದಲ್ಲದೆ ತನ್ನ ಭಾವಮೈದುನನ ವಿಷಯಕವಾದ 'ಕುಮಾರಗಿರಿ ವಿಜಯಮ್' ಎಂಬ ಗ್ರಂಥವನ್ನೂ ರಚಿಸಿದ್ದಾನೆ. ಸುಮಾರು ೧೪೪೩ರಲ್ಲಿ ಇಮ್ಮಡಿ ದೇವರಾಯನು ಕೊಂಡವೀಡು ಮತ್ತು ರಾಜಮಹೇಂದ್ರದ ರೆಡ್ಡಿಗಳನ್ನು ಸೋಲಿಸಿ ಕಳಿಂಗವನ್ನು ಸ್ವಾಧೀನಪಡಿಸಿಕೊಂಡ ಮೇಲೆ ಅಲ್ಲಿನ ಅನೇಕ ಪಂಡಿತರು ವಿಜಯನಗರದ ಆಸ್ಥಾನಕ್ಕೆ ಬಂದು ಸೇರಿದರು.

೨

ಮಲ್ಲಿಕಾರ್ಜುನ ವಿರೂಪಾಕ್ಷರು ವಿಜಯನಗರ ಸಿಂಹಾಸನಾಸೀನರಾಗಿರುವಾಗಲೇ ಅವರ ಪ್ರತಿನಿಧಿಯಾಗಿದ್ದ ಸಾಳುವ ವಂಶದ ನರಸಿಂಗರಾಯನು ತನ್ನ ಸ್ಥಾನ

ವನ್ನು ಸ್ವಲ್ಪಸ್ವಲ್ಪವಾಗಿ ಬಲಪಡಿಸಿಕೊಂಡು ಕೊನೆಗೆ ಸಂಗಮ ವಂಶೀಯರನ್ನು ಮೂಲೆಗೊತ್ತಿ ತಾನೇ ವಿಜಯನಗರ ಸಾಮ್ರಾಜ್ಯಕ್ಕೆ ಅಧಿಪತಿಯಾದನು. ಇವನನಂತರ ಇವನ ಮಗನಾದ ಇಮ್ಮಡಿ ಸಾಳುವ ನರಸಿಂಹನು ರಾಜನಾದನು. ಇವರಿಬ್ಬರೂ ಸ್ವತಃ ಪಂಡಿತರೂ ವಿದ್ಯಾಪಕ್ಷಪಾತಿಗಳೂ ಆದುದರಿಂದ ಇವರು ಆಳಿದ ಅತ್ಯಲ್ಪ ಕಾಲವಾದ ಹದಿಮೂರು ವರ್ಷಗಳಲ್ಲಿ ಅನೇಕ ಪಂಡಿತರು ಇವರ ಆಶ್ರಯವನ್ನು ಪಡೆದು ಸಾಹಿತ್ಯರಚನೆ ಮಾಡಿದರು. ಸಾಳುವ ಅರಸರು ಕ್ರಮಕ್ರಮವಾಗಿ ವೈಷ್ಣವರಲ್ಲಿ ಹೆಚ್ಚು ವಿಶ್ವಾಸವನ್ನು ತೋರಿಸುತ್ತ ಬಂದುದರಿಂದ ಸಂಗಮ ವಂಶೀಯರ ಆಶ್ರಯದಲ್ಲಿದ್ದ ವೀರಶೈವರ ಪ್ರಾಬಲ್ಯವು ಇವರ ಕಾಲದಲ್ಲಿ ಕಡಿಮೆಯಾಗುತ್ತಾ ಬಂದಂತೆ ತೋರುತ್ತದೆ.

ಸಾಳುವ ನರಸಿಂಹನು* ಉದಾರಿ. 'ನವರತ್ನಮುಲು' ಎಂಬ ಒಂದು ಗ್ರಂಥದಲ್ಲಿ ಇವನು 'ಸಹಜದಾನಶಿಬೀಂದ್ರ' ಎಂಬುದಾಗಿ ಸಂಬೋಧಿಸಲ್ಪಟ್ಟಿದ್ದಾನೆ[42]. 'ಸಾಲುವಾಭ್ಯುದಯ'ದ ಹನ್ನೊಂದು ಮತ್ತು ಹನ್ನೆರಡನೆಯ ಸರ್ಗಗಳಲ್ಲಿ ಬರುವ

ಅಥವಾಯು ಲಿಂಗಧರ ಸಾತ್ಕೃತಾಖಿಲದ್ರವಿಣೋಪಿ ಶಂಭು ನಿಶಿಥಿರ ಧೀರಸೌ|
ವಿದುಷಾಂ ಚಿಕೀರ್ಷುರವನಂ ವಿಶಾಂಪತಿಃ ದ್ರವಿಣೈರಭೂಜ್ಜಿತನೃಪೋಪಹಾರಿತೈಃ||
ಸಚಿವಸ್ತದಿಂಗಿತ . . . ತನೋತ್ತತತ್ಸಹಸಾ ಸುವರ್ಣಮುಖರೀತಟಾಂತರೇ |
ನಗರೀಂ ವಸಂತ ದಿನದಾನಹೇತವೇ ನವರತ್ನ ಸಾಲಗೃಹಭಾಸುರಾಂ ನವಾಂ||
ಆದಾಯ ವರ್ಷವರವೇಷಮಶೇಷಭೂಪೈಃ ಅಗ್ರೇಸರದ್ಭಿರವಲೋಕನಮಾತ್ರಧನ್ಯೈಃ|
ಆಸೇವಿತಸ್ತತಇತೋ ನಿರಗಾತ್ಕವೀನಾಮಾತರ್ಷಣಾಯ ಕುತಕೀನರಸಿಂಹರಾಜಃ||
ಅಂಭೋಧರಂಧಿಗವಿಶೇಷವಿದಂ ಪ್ರದೇಶೇ ಯಸ್ಯೋತ್ತರೇ ಸದೃಶವರ್ಷಣಮೂಷರೋಪಿ|
ಸರ್ವಸ್ವದಸ್ಯಶಿವರಾತ್ರಿತಿಥೌ ತವೇಶೋ . . . ಮಚಲಂ ವಿರಚಯ್ಯಹೈಮಮ್ ||
ಆಕರ್ಣ್ಯವಾಚಮಿತಿಸಾದರಮುಂಚಿತಾರ್ಥಾಮಭ್ಯರ್ಹಣಾಂವಿರಚಯನ್ನುಚಿತಾಮಮುಷ್ಯೈ |
ಅವ್ಯಾಜಬಂಧುರವತಿಸ್ಮಮಹೀಮಶೇಷಾಂ ಆಶ್ಚರ್ಯಹೇತುಚರಿತೋನರಸಿಂಹರಾಜಃ||

---

* ನರಸಿಂಹ ಪರಮವೈಷ್ಣವ. ತಾನು ಅಹೋಬಿಲ ನೃಸಿಂಹರ ಪ್ರಸಾದದಿಂದ ಜನಿಸಿದವನೆಂದೂ ಅದೇ ತನ್ನ ಕುಲದೈವವೆಂದೂ ರಾಮಾಭ್ಯುದಯದಲ್ಲಿ ಹೇಳಿಕೊಟ್ಟಿದ್ದಾನೆ. ಈತನು ಶ್ರೀಪಾದರಾಜರ ಶಿಷ್ಯನಾಗಿದ್ದಂತೆಯೂ ಅವರ ಕೃಪೆಯಿಂದ ಬ್ರಹ್ಮಹತ್ಯಾದೋಷವು ಪರಿಹಾರವಾಗಿ ಸಿಂಹಾಸನ ಪ್ರಾಪ್ತವಾದಂತೆಯೂ ಕೆಳಗಿನ ಶ್ಲೋಕದಿಂದ ತಿಳಿದುಬರುತ್ತದೆ.

ಶ್ರೀಮದ್ವೀರನೃಸಿಂಹರಾಯನೃಪತೇಃ ಭೂದೇವಹತ್ಯಾವ್ಯಥಾಂ
ದೂರೀಕೃತ್ಯತದರ್ಪಿತೋಜ್ವಲಮಹಾಸಿಂಹಾಸನೇಸಂಸ್ಥಿತಃ
ಶ್ರೀಮತ್ಪೂರ್ವಕವಾಟನಾಮಕಪುರೇಸರ್ವೇಷ್ಟಸಿದ್ಧಿಪ್ರದಃ
ಶ್ರೀ ಶ್ರೀಪಾದಯತೀಂದ್ರಶೇಖರಮಣಿಃ ಭೂಯಾತ್ ಸ ನಃ ಶ್ರೇಯಸಮ್

[42] ವೀ. ಲಿಂ. ಪಂ. ೧೦, ಪು. ೧೫೬.

ಎಂಬ ಶ್ಲೋಕಗಳಿಂದ ಸಾಳುವ ನರಸಿಂಹನು ಶಿವರಾತ್ರಿಯ ಕಾಲದಲ್ಲಿ ಸುವರ್ಣ ಮೇರುದಾನವನ್ನು ಮಾಡುತ್ತಿದ್ದನೆಂಬುದಾಗಿಯೂ ತನಗೆ ಸಾಮಂತ ರಾಜರುಗಳಿಂದ ಬರುತ್ತಿದ್ದ ಕಾಣಿಕಾದ್ರವ್ಯವನ್ನೆಲ್ಲಾ ರಾಶಿಹಾಕಿಸಿ ಅವಲೋಕನ ಮಾತ್ರದಿಂದಲೇ ಸಂತುಷ್ಟನಾಗಿ ಸುತ್ತಲೂ ಇದ್ದ ಕವಿಗಳಿಗೂ ವಿದ್ವಾಂಸರಿಗೂ ದಾನಮಾಡುತ್ತಿದ್ದ ನೆಂಬುದಾಗಿಯೂ ಅವನ ಕವಿಜನಾಶ್ರಯವು ಅವನ ಕಾಲದಲ್ಲಿಯೇ ಆಶ್ಚರ್ಯ ಜನಕವಾಗಿದ್ದಿತೆಂಬುದಾಗಿಯೂ ತಿಳಿದುಬರುತ್ತದೆ[43]. ಇಮ್ಮಡಿ ನರಸಿಂಹನೂ ತಂದೆ ಯಂತೆಯೇ ವಿದ್ವಾಂಸರಿಗೆ ಪ್ರತಿನಿತ್ಯವೂ ಷೋಡಶಮಹಾದಾನಗಳನ್ನು ಮಾಡು ತ್ತಿದ್ದನೆಂಬುದು ಅನೇಕ ಶಾಸನಗಳಿಂದ ವ್ಯಕ್ತವಾಗುತ್ತದೆ. ಚಾಕನಹಳ್ಳಿ ತಾಮ್ರ ಶಾಸನದಲ್ಲಿ ಇಮ್ಮಡಿ ನರಸಿಂಹನ ದಂಡನಾಥನಾದ ನಾಗನಾಯಕನು ತನ್ನ ಯಜಮಾನನ ಆಜ್ಞೆಯ ಪ್ರಕಾರ ಮೀಮಾಂಸ, ನ್ಯಾಯ, ಋಗ್ಯಜುಸ್ಸಾಮವೇದ, ಪುರಾಣ, ಸ್ಮೃತಿ, ತಂತ್ರ, ಮಂತ್ರ ಮೊದಲಾದುವುಗಳಲ್ಲಿ ಪಾಂಡಿತ್ಯವನ್ನು ಪಡೆದಿದ್ದ ನಲವತ್ತು ಜನ ವಿದ್ವಾಂಸರನ್ನು ರಾಜಾಸ್ಥಾನಕ್ಕೆ ಕರೆದುಕೊಂಡು ಹೋಗಿ ಅವರೆಲ್ಲರೂ ರಾಜನಿಂದ ಸನ್ಮಾನಪಡೆಯಲು ಅರ್ಹರೆಂದು ತಿಳಿಸಲು ರಾಜನಾದ ಇಮ್ಮಡಿ ನರಸಿಂಹನು ಅವರೆಲ್ಲರನ್ನು ಪರೀಕ್ಷೆಮಾಡಿ ಅವರೆಲ್ಲರಿಗೂ ಅಗ್ರಹಾರ ವನ್ನು ದಾನಮಾಡಿದ ಹಾಗೆ ಹೇಳಿದೆ. ಗುಂಡಲಪೇಟೆ ೬೭ನೆಯ ಶಾಸನದಿಂದ ಈತನು ಕಾವೇರಿಯ ಸಂಗಮದಲ್ಲಿ ಷಡ್ದರ್ಶನಾಚಾರ್ಯರಾದ ತನ್ನ ಆಚಾರ್ಯರಿಗೆ 'ಮಹಾಭೂತ ಘಟದಾನ'ವನ್ನು ಮಾಡಿದಂತೆ ತಿಳಿದುಬರುತ್ತದೆ.

ಇಷ್ಟು ಪ್ರೋತ್ಸಾಹವಿದ್ದ ಕಾಲದಲ್ಲಿ ಸಾಹಿತ್ಯಾಭಿವೃದ್ಧಿಯಾಗುವುದೇನೂ ಆಶ್ಚರ್ಯವಲ್ಲ. ಸಾಳುವ ನರಸಿಂಹನು ಕವಿಗಳ ಗೋಷ್ಠಿಯಲ್ಲಿ ಕಾಲ ಕಳೆಯುತ್ತಿ ದ್ದಾಗ ಒಂದು ದಿನ ಕವಿಗಳು ರಾಜನು ತನ್ನ ಕವಿತಾ ಪ್ರೌಢಿಮೆಯನ್ನು ತೋರಿಸುವ ಒಂದು ಉತ್ತಮ ಕಾವ್ಯವನ್ನು ರಚಿಸಬೇಕೆಂದು ಕೇಳಿಕೊಂಡ ಹಾಗೂ ಅದಕ್ಕೆ ಉತ್ತರವಾಗಿ ನರಸಿಂಹನು 'ರಾಮಾಭ್ಯುದಯ'ವನ್ನು ರಚಿಸಿದ ಹಾಗೂ ರಾಮಾ ಭ್ಯುದಯದ ಈ ಕೆಳಗಿನ ಪೀಠಿಕಾ ಮತ್ತು ಗ್ರಂಥಾಂತ್ಯ ಶ್ಲೋಕಗಳಿಂದ ಊಹಿಸ ಬಹುದಾಗಿದೆ.

ಕಾವ್ಯೇ ದರ್ಶಯ ಸಾಮರ್ಥ್ಯಂ ಇತ್ಯಸೌ ಕಥಿತೋ ಬುಧೈಃ|
ತದಿದಂ ರಾಮಚಂದ್ರಸ್ಯ ಚರಿತಂ ತತ್ವಸಾರತಃ||
ಉಚ್ಯತೇ ತೇನ ವಿದುಷಾ ನರಸಿಂಹಮಹೀಭುಜಾ|
. . . .

[43] ಆಧಾರಗ್ರಂಥಗಳು, ಪು. ೧೦೦-೧.

ಇತ್ಯುದ್ದಾಮ ವರಪ್ರಸಾದ ಕವಿತಾಸಿಂಹಾಸನಾಧ್ಯಾಸಿನಃ
ಕ್ಷೋಣೀವಿೀಸರಗಂಡ ಗುಂಡಯಪತೇಃ ಕ್ಷ್ಮಾಕಂಟಕೋತ್ಖಂಡಿನಃ ||
ವಿಷ್ಣೋಃ ಶ್ರೀ ನರಸಿಂಹವಿಗ್ರಹಭೃತೋ ಭಾವೋರ್ವಿರ್ಸೇತೌಕೃತೌ |
ಶ್ರೀ ರಾಮಾಭ್ಯುದಯೇತ್ರಪೂರ್ತಿಮಗಮತ್ ಸರ್ಗಶ್ಚತುರ್ವಿಂಶತಃ ||

ಆದರೆ ಇದೇ ‘ ರಾಮಾಭ್ಯುದಯ ’ದ ಅಯ್ದನೆಯ ಸರ್ಗದ

ಶೋಣಾದ್ರೀಂದ್ರಂ ಕವೀಂದ್ರಂ ಶ್ರವಣಕಟುರಟಡ್ಡಿಂಡಿಮಂ[44] ಸಾರ್ವಭೌಮಂ |
ಪ್ರಾಸೂತಾಂಬಾಭಿರಾಮಾ ನವನವ ಕವಿತಾಭಾಜನಂ ರಾಜನಾಥಾತ್

---

[44] ಡಿಂಡಿಮ ಎಂಬುದು ಒಂದು ವಂಶದ ಹೆಸರೆಂದು ತೋರುತ್ತದೆ. ದಕ್ಷಿಣ ಭಾರತದ ಸಾಹಿತ್ಯದಲ್ಲಿ ಅಂತಹ ಅನೇಕ ಹೆಸರುಗಳು ಬರುತ್ತದೆ. ಹರಿಹರ ಬುಕ್ಕನ ಸಮಕಾಲೀನನಾದ ಶೋಣಾದ್ರಿ ಡಿಂಡಿಮ ಒಬ್ಬನು. ಇಮ್ಮಡಿ ದೇವರಾಯನ ಕಾಲದಲ್ಲಿ ‘ ಯೋಗಾನಂದಪ್ರಹಸನ ವನ್ನೂ ‘ ಸೌಂದರ್ಯಲಹರಿ ’ಗೆ ‘ ವಿಭಾಗರತ್ನಮಾಲಾ ’ ಎಂಬ ವ್ಯಾಖ್ಯಾನವನ್ನೂ ರಚಿಸಿದ ಅರುಣಗಿರಿ ಎರಡನೆಯವನು. ಸಾಲುವ ನರಸಿಂಹನ ಕಾಲದಲ್ಲಿ ‘ ಸಾಲುವಾಭ್ಯುದಯ ’ವನ್ನು ರಚಿಸಿದವನು ಮೂರನೆಯವನು. ಇವನ ಹೆಸರು ರಾಜನಾಥ. ‘ ರಾಮಾಭ್ಯುದಯ ’ವನ್ನೂ ವೀರಭದ್ರ ವಿಜಯವನ್ನೂ ರಚಿಸಿದವನು ಮತ್ತೊಬ್ಬ. ಈತನಿಗೆ ಶೋಣಾದ್ರಿ ಅಥವಾ ಅರುಣಗಿರಿ ಎಂದು ಹೆಸರು. ‘ ಅಚ್ಯುತರಾಮಾಭ್ಯುದಯ ’ವನ್ನು ರಚಿಸಿದ ರಾಜನಾಥ ಮಗದೊಬ್ಬ. ‘ ರಾಮಾಭ್ಯುದಯ ’ದ ಕರ್ತೃವಿಗೂ ವೇದಾಂತ ದೇಶಿಕರಿಗೂ ವಾದ ನಡೆದು ಅವನನ್ನು ಸೋಲಿಸುವುದಕ್ಕಾಗಿ ವೇದಾಂತ ದೇಶಿಕರು ಒಂದೇ ರಾತ್ರಿಯಲ್ಲಿ ‘ ಯಾದವಾಭ್ಯುದಯ ’ವನ್ನು ರಚಿಸಿದರೆಂಬುದು ಮುಂದಿನ ಉಪಾಖ್ಯಾನದಿಂದ ಸ್ಪಷ್ಟವಾಗುತ್ತದೆ. ಡಿಂಡಿಮನು ತನ್ನ ‘ ರಾಮಾಭ್ಯುದಯ ’ ವನ್ನು ಮುಂದಿಟ್ಟುಕೊಂಡು ಶ್ರೀರಂಗಕ್ಕೆ ಹೋಗಿ ಕವಿತಾರ್ಕಿಕಸಿಂಹರೆಂದು ಪ್ರಸಿದ್ಧರಾಗಿದ್ದ ವೇದಾಂತ ದೇಶಿಕರನ್ನು ಮುಂದಿನ ವಾಕ್ಯಗಳಿಂದ ಸ್ಪರ್ಧಿಸಿದನಂತೆ:—

ಭಿತ್ವಾ ಸರ್ವಾಣ್ಯರಣ್ಯಾನ್ ಸತಿ ವಿಷಮಲತಾಗುಲ್ಮದುರ್ಗಾಣಿಸದ್ಯಃ
ಪ್ರಾಪ್ತಾಯಾಂ ಪಕ್ಕಣಾಂತಂ ಬತ ಭಷ ಕತತಿರ್ಬುಕ್ಕ್ರಣೈರ್ಧಿಕ್ಕರೋತಿ |
ಲಜ್ಜಂತೇಹಂತುಮೇಸಾಂ ಮರಕರಟಿಘಟಾಕುಂಭಪೀಡೀವಿಪಾಟ
ಕ್ರೀಡಾಧೌರೇಯಧಾರಾ ಮಮಖಲುನಖರಾಃ ಕಿಂಕರೋಮಿ ಕ್ರಿಯಾಮಿ ||
ಪ್ರಾಜ್ಞಾನಾಮೇವರಾಜ್ಞಾಂ ಸದಸಿನಸಹತೇ ಜಲ್ಪಮಲ್ಪೇತರೇಷಾಂ
ಕ್ಷುತ್ರೇಷ್ವಾಕ್ಷೇಪಮುದ್ರಾಂ ನಖಲು ಗಣಯತೇ ಡಿಂಡಿಮಸ್ಸಾರ್ವಭೌಮಃ
ಭಾಂಕುರ್ವದ್ಭೇಕಕುಕ್ಷಿಂಭರಿಷು ಭಯಭರಭ್ರಾಂತ ಭೋಗೀಂದ್ರಸುಭ್ರೂ
ಭ್ರೂಣಭ್ರಂಶೀ ಕಿಮಂಭಃ ಫಣಿಷು ಪತಗರಾಟ್ ಸಂಭ್ರಮೀ ಬಂಭ್ರಮೀತಿ ||

ಅದಕ್ಕೆ ವೇದಾಂತ ದೇಶಿಕರು

ಸ್ಪರ್ಧಂತಾಂ ಸಹಜಂ ನು ಕುಂಜರತಯಾ ದಿಕ್ಕುಂಜರೈಃ ಕುಂಜರಾ
ಗ್ರಾಮ್ಯಾವಾವನವಾಸಿನೋ ಮದಜಲಪ್ರಸ್ವಿನ್ನಗಂಡಸ್ಥಲಾಃ |
ಆಃ ಕಾಲಸ್ಸವಿಪರ್ಯಯಂ ಶೃಣುಸಖೇ ಪ್ರಾಚೀನಪಲ್ಲಿಮಲಾ
ಸ್ವಾದಸ್ನಿಗ್ಧಕಪೋಲಭಿತ್ತಿರಧಮಃ ಕೋಲ್ಯೋಪಿ ಸಂಸ್ಪರ್ಧತೇ |

ತಸ್ಮೈತಸ್ಮಿನ್ನಯಾತಿ ಕ್ರಮವಿಷಯ ಮಹಾನಾಟಕಸ್ಯಾಗ್ರಜಾತೇ |
ಕಾವ್ಯೇ ಸರ್ಗೇ ನಿಸರ್ಗೋಜ್ವಲ ರಸವಿಲಸತ್ಪಂಚಮೋಯಂ ಜಗಾಮ ||

ಇತಿ ಡಿಂಡಿಮಸಾರ್ವಭೌಮಕೃತೌ ರಾಮಾಭ್ಯುದಯೇ ಪಂಚಮಸ್ಸರ್ಗಃ— ಎಂಬ ಭಾಗದಿಂದ 'ರಾಮಾಭ್ಯುದಯ'ವನ್ನು ರಾಜನಾಥ ಕವಿಯ ಮಗನಾದ ಡಿಂಡಿಮ ಸಾರ್ವಭೌಮ ಕವಿಯೇ ರಚಿಸಿರಬಹುದೆಂದು ತೋರುತ್ತದೆ[45]. ಇದೇ ಸತ್ಯಾಂಶವಿದ್ದರೂ ಇರಬಹುದು. ಡಿಂಡಿಮ ಸಾರ್ವಭೌಮನು ಸಾಳುವ ನರಸಿಂಹನ ಆಸ್ಥಾನ ಕವಿಯಾಗಿದ್ದುದರಿಂದ ಅವನು 'ರಾಮಾಭ್ಯುದಯ'ವನ್ನು ರಚಿಸಿ ತನ್ನ ಪೋಷಕನ ಹೆಸರಿನಲ್ಲಿ ಪ್ರಕಟಪಡಿಸಿರಬಹುದು. ಇದು ಹೇಗಾದರೂ ನರಸಿಂಹನು ಕವಿತಾಶಕ್ತಿಯುಳ್ಳವನಾಗಿದ್ದನೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಇವನ ಆಸ್ಥಾನಕವಿಗಳಲ್ಲಿ ರಾಜನಾಥನು ಪ್ರಸಿದ್ಧನು. ಈತನು ತನ್ನ ಪೋಷಕನ ಸಾಹಸ ಕಾರ್ಯಗಳನ್ನು ವರ್ಣಿಸುವುದಕ್ಕಾಗಿ 'ಸಾಲುವಾಭ್ಯುದಯ'ವೆಂಬ ಉತ್ತಮ ಕಾವ್ಯವನ್ನು ರಚಿಸಿದನು[46]. ಸಾಹಿತ್ಯದೃಷ್ಟಿಯಿಂದಲೇ ಅಲ್ಲದೆ ಐತಿಹಾಸಿಕದೃಷ್ಟಿಯಿಂದಲೂ ಇದು ಉತ್ತಮವಾದ ಕಾವ್ಯ. ಪಿಲ್ಲಲಮಱ್ಱಿ ವೀರಭದ್ರನೆಂಬ ಆಂಧ್ರ ಕವಿಯು ನರಸಿಂಹನ ಆಸ್ಥಾನದಲ್ಲಿದ್ದ ಮತ್ತೊಬ್ಬ ಕವಿ. ಈತನು 'ಶೃಂಗಾರ ಶಾಕುಂತಲ' 'ಅವತಾರದರ್ಪಣ', 'ನಾರದೀಯ' 'ಮಾಘಮಾಹಾತ್ಮ್ಯ' 'ಪುರುಷಾರ್ಥಸುಧಾನಿಧಿ' 'ಮಾನಸೋಲ್ಲಾಸಸಾರ' ಮೊದಲಾದುವುಗಳನ್ನು ರಚಿಸಿರುವಂತೆ ತೋರುತ್ತದೆ. ಈತನು 'ಜೈಮಿನಿಭಾರತಮು' ಎಂಬ ಗ್ರಂಥವನ್ನು ರಚಿಸಿ ನರಸಿಂಹನಿಗೆ ಅರ್ಪಿಸಿದ್ದಾನೆ. 'ನವರತ್ನಮುಲು' 'ಸಪ್ತಾಂಗಮುಲು' ಎಂಬ ಮತ್ತೆರಡು ತೆಲುಗು ಗ್ರಂಥಗಳು ಏತತ್ಕೃತವೇ ಇರಬಹುದು. 'ನವರತ್ನಮುಲು' ಎಂಬುದು ರಾಜನಿಗೆ ಅತ್ಯಾವಶ್ಯಕವಾಗಿರಬೇಕಾದ ಗುಣಗಳನ್ನು ಕುರಿತ ಉಪದೇಶಗ್ರಂಥ. 'ಸಪ್ತಾಂಗ ಪದ್ಧತಿ'ಯು ರಾಜ್ಯಾಂಗಗಳಾದ ಸ್ವಾಮಿ, ಅಮಾತ್ಯ, ಸುಹೃತ್, ರಾಷ್ಟ್ರ, ಕೋಶ, ದುರ್ಗ, ಬಲ ಮೊದಲಾದುವುಗಳನ್ನು ವರ್ಣಿಸುವುದು. ಈ ಗ್ರಂಥದ ಪ್ರತಿ ಪದ್ಯವೂ 'ಗುಂಡಭೂಪಾಲ ನರಸಿಂಹಮಂಡಲೇಂದ್ರ' ಎಂಬು

ಬಾಹ್ಯೈರ್ವರ್ಣಾಡಂಬರೈಃ ಮಾ ಭ್ರಮಂತು
ಛಿತ್ವಾ ಗರ್ಭಾಂತರಂ ಶೋಧಯಂತು |
ನಿರ್ಣೇತಾರೋ ನೀರಸತ್ವೇನ ಕೋವಾ
ಡಿಂಡೀರಾರಣಾಂ ಡಿಂಡಿಮಾನಾಂ ಚ ಭೇದಃ ||

ಎಂದು ಹೇಳಿ ಒಂದೇ ರಾತ್ರಿಯಲ್ಲಿ ಒಂದು ಸಹಸ್ರ ಸಮಸ್ಯೆಗಳನ್ನು ಪೂರ್ಣಮಾಡಿ 'ಯಾದವಾಭ್ಯುದಯ'ವೆಂಬ ಮಹಾ ಕಾವ್ಯವನ್ನು ರಚಿಸಿ ಅವನ ಗರ್ವ ಪರ್ವತವನ್ನು ಚೂರ್ಣಮಾಡಿದರಂತೆ.

45 ಆಧಾರಗ್ರಂಥಗಳು, ಪು. ೮೫.

46 ಅದೇ. ಪು. ೧೯೦.

ದಾಗಿ ಮುಗಿಯುತ್ತದೆ[47]. ಈ ಎರಡು ಗ್ರಂಥಗಳಿಂದ ಆ ಕಾಲದ ರಾಜ್ಯವ್ಯವಸ್ಥೆಯು ಸ್ವಲ್ಪಮಟ್ಟಿಗೆ ವಿಶದಪಡುತ್ತದೆ. ನಂದೀಮಲ್ಲಯ್ಯ, ಘಂಟಾಸಿಂಗಯ್ಯ ಎಂಬುವರು ಈ ಕಾಲದ ಮತ್ತಿಬ್ಬರು ಆಂಧ್ರಕವಿಗಳು. ಇವರು 'ಪ್ರಬೋಧಚಂದ್ರೋದಯಮು' ಮತ್ತು 'ವರಹಾಪುರಾಣಮು' ಎಂಬ ಎರಡು ಗ್ರಂಥಗಳನ್ನು ರಚಿಸಿದ್ದಾರೆ. ಇವುಗಳಲ್ಲಿ 'ಪ್ರಬೋಧಚಂದ್ರೋದಯ'ವು ಗಂಗಯ್ಯ ಮಂತ್ರಿಗೂ 'ವರಾಹಪುರಾಣ'ವು ಸಾಳುವ ನರಸಿಂಹನ ದಂಡನಾಯಕನಾದ ನರಸನಾಯಕನಿಗೂ ಅಂಕಿತವಾಗಿವೆ. 'ವರಾಹಪುರಾಣ'ದಲ್ಲಿ ನರಸನಾಯಕನು ವಿದ್ವತ್ಪಕ್ಷಪಾತಿಯೆಂದೂ 'ವರಲಕ್ಷ್ಮೀ ಕಲ್ಯಾಣಂ' 'ನರಸಿಂಹಪುರಾಣಂ' ಎಂಬ ಎರಡು ಗ್ರಂಥಗಳನ್ನು ತನ್ನ ಅಂಕಿತದಲ್ಲಿ ಬರಸಿಕೊಂಡಿರುವನೆಂದೂ ಉಕ್ತವಾಗಿದೆ[48]. ಕನ್ನಡದಲ್ಲಿ ಶೃಂಗಾರ ಪದಗಳನ್ನು ರಚಿಸಿರುವ ಕವಿ ಲಿಂಗನು ಸಾಲುವ ನರಸಿಂಹನ ಆಸ್ಥಾನ ಕವಿಯಾಗಿದ್ದನಂತೆ.

ಇಂಗಿತವನರಿಯಲೆಂದು ನಾರಿಯರಿಗಿತ್ತ | ಮಂಗಳಾಲಂಕಾರಸಮವಾಗಿರೆ |
ಅಂಗಜಕಲಾನಿಪುಣ ಗಂಡಭೇರುಂಡ ಕವಿ | ಲಿಂಗ ನುಡಿಜಾಣ ಕವಿಸಾಳ್ವಗೆ ||
ಮಲೆವರಿಪುರಾಯ ಗಿರಿವಜ್ರವನದಾವಾ | ನಲವೈರಿವಾರ್ಧಿವಡಬಸಾಳ್ವ |
ಕುಲರತ್ನ ಗುಂಡಭೂವರ ನರಸಿಂಗಗೆ | ತಲೆಯೊಡ್ಡಿ ಬಾಳ್ವಭೂಭುಜರುಂಟೆ ||

ಎಂಬ ಅವನ ಪದಗಳಿಂದ ತಿಳಿಯಬಹುದಾಗಿದೆ.

ಎಸ್. ಅನಂತರಂಗಾಚಾರ್

ಸಶೇಷ

---

[47] ವೀ. ಲಿಂ. ಪಂ. ಕಾಂ. ಪು. ೧೫೬.

[48] ಅದೇ. ಪು. ೧೬೧.

ಮುಂದಿನ ಶ್ಲೋಕಗಳೂ ಈ ಅಂಶವನ್ನು ದೃಢೀಕರಿಸುತ್ತವೆ.

ಸ್ವಕವಿತಿಹರಿದತ್ತಂ ಯಾಮುನಸ್ತೇ ಪ್ರವೃತ್ತ್ಯೈ
ವ್ಯವೃಣುತನಿಗಮಾಂತಾಚಾರ್ಯಕಂ ವೇಂಕಟೇಶಃ ||
ಅಗಣಿ ಸದಸಿಸದ್ಭಿಃ ಯಸ್ಸಮಸ್ಯಾಸಹಸ್ರೇ
ಕವಿಕಥಕಮೃಗೇಂದ್ರಃ ಸರ್ವತಂತ್ರಸ್ವತಂತ್ರಃ ||

ಘೋಟೀಘೋಟೀಕಠೋರ ಸ್ಫುಟವಿಕಟಕಥಾಟೋಪ ವಾಚಾಟಪೋಟೀ
ಕೋಟೀರಾಘಾಟಪೇಟೀ ಪುಟಘಟಿತಮಣೀಸಂಘಸಂಘಟ್ಟಿತಾಂಘ್ರಿಃ
ಖರ್ವೀ ಕುರ್ವನ್ ಸಗರ್ವಂ ಜಯತಿ ಕವಿತತೇಸ್ಸರ್ವತಂತ್ರಸ್ವತಂತ್ರೋ
ವೇದಾಂತಾಚಾರ್ಯವರ್ಯೋ ವಿಘಟಿತ ಜಡಧೀಸಂಕಟೋ ವೆಂಕಟೇಶಃ ||

ದ್ವಿಚತುಷ್ಪದ ಪರಿವರ್ತನ ಗರ್ವಿತ ಕವಿಶರಭಗಂಡಭೇರುಂಡಃ
ಖಂಡನ ಖಂಡನ ಕವಿರಿಹ ಕವಿಗಂಡ ಡಿಂಡಿಮೋ ಜಯತಿ

. . . .

ಜಿತ್ವಾಕವಿ ಡಿಂಡಿಮಸಾರ್ವಭೌಮಂ ಕೃತ್ವಾ ಚ ಕೃಷ್ಣಾಭ್ಯುದಯಂ ಮನೋಜ್ಞಂ ||

ಉದ್ಧಾರ ಭ್ರಾಂತಿ*

ತಪೋಭೂಮಿಯಾದ ಋಷಿಕೇಶ! ಪಾವನಗಂಗೆ ತನ್ನ ಓಂಕಾರ ನಿನದದೊಡನೆ ಭೋರ್ಗರೆಯುತ್ತ ಹರಿಯುವ ಸುಂದರ ದೃಶ್ಯ! ಗಿಡ ಮರಗಳ ಮರೆಯಲ್ಲಿ ಮೆಲ್ಲಮೆಲ್ಲನೆ ಸೂರ್ಯನು ಮರೆಯಾಗುತ್ತಿದ್ದನು. ಗಂಗೆಯ ಮಂಜುಳರವ ಸಂಜೆಯ ನಿಶ್ಶಬ್ದ ಸಾನ್ನಿಧ್ಯದಲ್ಲಿ ಮರುದನಿಗೊಡುತ್ತಿತ್ತು. ಸಮಸ್ತ ಪ್ರಕೃತಿಯೂ ಮೌನವಾಗಿ ಭಗವಂತನನ್ನು ಆರಾಧಿಸುತ್ತ ಧ್ಯಾನಗಂಭೀರವಾಗಿತ್ತು.

ನದಿಯ ತೀರದ ಕುಟೀರವೊಂದರಲ್ಲಿ ಯುವಕನೊಬ್ಬನು ಅಸ್ತನಾಗುತ್ತಿದ್ದ ಸೂರ್ಯನನ್ನು ನೋಡುತ್ತಾ ಯಾವುದೋ ಯೋಚನೆಯಲ್ಲಿ ಮಗ್ನವಾಗಿದ್ದನು. ಗೌರವವರ್ಣದ ಅವನ ಮುಖವೆಲ್ಲ ಗಡ್ಡದಿಂದ ತುಂಬಿಹೋಗಿತ್ತು. ಕಾಲವು ಮೆಲ್ಲನೆ ಜುಣುಗುತ್ತಿತ್ತು. ಎಂದಿನಂತೆ ನದಿಯ ತೀರದಲ್ಲಿ ಧ್ಯಾನಮಾಡುವುದನ್ನು ಬಿಟ್ಟು ಅವನ ಮನಸ್ಸು ಯಾವುದೋ ಭಯಂಕರ ಹೋರಾಟದಲ್ಲಿ ತೊಡಗಿತ್ತು.

* * * *

ರಮೇಶನು ಮೈಸೂರು ಕಾಲೇಜಿನಲ್ಲಿ ಓದಿ ಪದವೀಧರನಾದವನು. ರಾಮಕೃಷ್ಣರಾಯರು ಬಡವಿದ್ಯಾರ್ಥಿಯಾದ ಅವನಿಗೆ ತಮ್ಮ ಮನೆಯಲ್ಲಿ ಆಶ್ರಯ ಕೊಟ್ಟಿದ್ದರು. ರಮೇಶ, ಅವರ ಮಗಳು ಜಾನಕಿಗೆ ಪಾಠ ಹೇಳಿಕೊಡುತ್ತಿದ್ದ. ಜಾನಕಿಯ ಅಕ್ಕ ಮಂಜುಳ ಚಿಕ್ಕ ವಯಸ್ಸಿನಲ್ಲಿಯೆ ವಿಧವೆಯಾಗಿ ಮನೆ ಸೇರಿದ್ದಳು. ತಂದೆಯ ಮುದ್ದುಮಗಳಾದುದರಿಂದ ಅವಳಿಗೆ ಮನೆಯಲ್ಲಿ ಹೆಚ್ಚಿನ ಸ್ವಾತಂತ್ರ್ಯ. ಅವಳ ಸೌಂದರ್ಯವನ್ನು ಕಂಡು ಆಕರ್ಷಿತರಾಗದವರಿಲ್ಲ. ಅಂತಹ ಮನೋಮೋಹಕವಾದ ರೂಪ ಅವಳದು! ಮಂಜುಳ ತಾನು ಸುಂದರಿ ಎಂಬುದನ್ನು ಅರಿತಿದ್ದಾಳೆ. ಅಂತೆಯೆ ತನ್ನ ಬಳಿ ಬಂದ ಸೌಂದರ್ಯೋಪಾಸಕರ ಬಲೆಗೂ ಬಿದ್ದಿದ್ದಾಳೆ. ರಮೇಶನು ಅವಳ ವಿಲಾಸಜೀವನವನ್ನು ಕಂಡು ದುಃಖಿಸಿದ್ದ. ಇಂತಹ ಸುಮಕೋಮಲೆಯಾದ ತರುಣಿ ಕಾಮುಕರ ಭೋಗಕ್ಕೆ ಸಿಲುಕಿ ಬಾಡಿಹೋಗಿ ಅತಿದಾರುಣವಾದ ದುಃಖಕ್ಕೀಡಾಗುವಳಲ್ಲವೆ? ಎಂದು ಚಿಂತಿಸಿದ್ದ.

ರಮೇಶನ ಎಂ.ಎ. ಮುಗಿಯಿತು. ಮೈಸೂರು ಕಾಲೇಜಿನಲ್ಲಿಯೆ ಅಧ್ಯಾಪಕರ ಕೆಲಸ ದೊರಕಿತು. ಆಗ ಅವನ ಮನಸ್ಸಿನಲ್ಲಿ ಹೊಸದೊಂದು ಆಸೆ ಅಂಕುರಿಸಿತು. ದುರ್ಮಾರ್ಗಕ್ಕಿಳಿದು ಬಾಳನ್ನು ಹಾಳುಮಾಡಿಕೊಳ್ಳುತ್ತಿದ್ದ ಮಂಜುಳೆಯನ್ನು ಮದುವೆ

* Anatole France ವಿರಚಿತ Thais ಕಾದಂಬರಿಯ ಪ್ರಭಾವದಿಂದ ಮೂಡಿದ ಕಥೆ.

ಯಾದರೆ ಅವಳ ಉದ್ಧಾರಮಾಡಿದಂತಾಗುವುದೆಂಬ ಯೋಚನೆ ಮತ್ತೆ ಮತ್ತೆ ಅವನ ಮನಸ್ಸಿನಲ್ಲಿ ತೇಲಿಬರಲಾರಂಭಿಸಿತು. ಆದರೆ ಅದರೊಡನೆ "ಛೀ! ಎಂತಹ ದುಷ್ಟ ಯೋಚನೆ" ಎನ್ನಿಸಿತು. ಹೀಗೆ ತೂಗುಯ್ಯಾಲೆಯಾಗುತ್ತಿದ್ದ ಅವನ ಮನಸ್ಸಿನಲ್ಲಿ ಮಂಜುಳೆಯ ಸೌಂದರ್ಯ ಬೇರುಬಿಟ್ಟಿತು. ಅವಳ ಸಂಪಿಗೆಯಂತಹ ಮೂಗು, ವಿಶಾಲವಾದ ಕಣ್ಣು, ಜಿಂಕೆಯ ನಡಿಗೆ—ಈ ದೃಶ್ಯಗಳು ಅವನ ಮನಃಪಟಲದಲ್ಲಿ ಮತ್ತೆ ಮತ್ತೆ ಸಂಚರಿಸುತ್ತಿದ್ದುವು.

ರಮೇಶನಿಗೆ ಮತ್ತೊಂದು ಯೋಚನೆ ಹೊಳೆಯಿತು. ಮಾಧ್ಯಮಿಕ ಶಾಲೆಯ ಮೂರನೆ ತರಗತಿಯ ವರೆಗೆ ಓದಿದ ಮಂಜುಳೆಗೆ ಪಾಠಹೇಳಿ ಎಸ್.ಎಸ್.ಎಲ್.ಸಿ. ಮಾಡಿಸಿ ಕಾಲೇಜಿಗೆ ಸೇರಿಸಿದರೆ ಎಲ್ಲವೂ ಸರಿಹೋಗುವುದೆನ್ನಿಸಿತು. ಸರಿ, ಪಾಠ ಪ್ರಾರಂಭವಾಯಿತು. ಮಂಜುಳ ಬೇಗಬೇಗ ಕಲಿತಳು. ಅವಳ ಚಂಚಲವಾದ ಮನಸ್ಸು ಸ್ವಲ್ಪಮಟ್ಟಿಗೆ ಏಕಾಗ್ರವಾಗತೊಡಗಿತು. ಆದರೆ ರಮೇಶನಿಗೆ ಶಿಷ್ಯಳ ಸಾಮೀಪ್ಯದಿಂದ ಅಸ್ವಸ್ಥತೆಯೇ ಉಂಟಾಯಿತು. ಶಿಷ್ಯಳನ್ನು ಉದ್ಧಾರಮಾಡಲು ಹೊರಟ ಗುರುವನ್ನು ಉದ್ಧರಿಸುವವರು ಮತ್ತೊಬ್ಬರು ಬೇಕಾಯಿತು!

ಮಂಜುಳೆಗೆ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾಯಿತು. ರಮೇಶನಿಗೆ ಬೆಂಗಳೂರಿಗೆ ವರ್ಗವಾಯಿತು. ಆದರೆ ಅವನ ಮನಸ್ಸು ವರ್ಗವಾಗ ಲಿಲ್ಲ. ಅದು ಸದಾ ಮಂಜುಳೆಯನ್ನೆ ಕುರಿತು ಯೋಚಿಸುತ್ತಿತ್ತು. ತನ್ನ ಮನಸ್ಸಿನಲ್ಲಿದ್ದ ಆಶೆಗಳನ್ನು ಕಾರ್ಯರೂಪಕ್ಕೆ ತರಲು ಅವನಿಗೆ ಸಮಾಜದ ಭೀತಿ ಬೇರೆ. ಅಷ್ಟೇ ಅಲ್ಲ, ಆದರ್ಶವ್ಯಕ್ತಿಯಾಗಿ ವೈರಾಗ್ಯಜೀವನ ನಡೆಸಬೇಕೆಂಬ ಹಂಬಲ ಬೇರೆ! ಹೀಗೆ ಅವನ ಮನಸ್ಸು ಯುದ್ಧದಲ್ಲಿ ತೊಡಗಿದಾಗ ಋಷಿಕೇಶದಿಂದ ಬಂದ ಸಾಧು ಗಳೊಬ್ಬರ ಸಂದರ್ಶನವಾಯಿತು. ಅವರ ಪ್ರಭಾವಕ್ಕೆ ಸಿಕ್ಕಿದ ರಮೇಶ ಕೆಲಸಕ್ಕೆ ರಾಜಿನಾಮೆ ಕೊಟ್ಟು ಋಷಿಕೇಶಕ್ಕೆ ಹೋಗಿ ಸಾಧಕನಾದನು.

ನಾಲ್ಕು ವರುಷ ಕಳೆಯಿತು. ಮಂಜುಳೆಯನ್ನು ಮರೆಯುವುದು ಅವನಿಂದ ಸಾಧ್ಯವಾಗಲಿಲ್ಲ. ಒಂದು ದಿನ ಕನಸಿನಲ್ಲಿ ಅವಳು ಕಾಮುಕನೊಬ್ಬನ ಕೈಗೆ ಸಿಕ್ಕಿ ದಾರುಣವಾದ ಕಷ್ಟಕ್ಕೆ ಗುರಿಯಾಗಿ ನರಳುವುದು ಕಂಡಿತು. ಮರುದಿನವೇ ಹೊರಟು ರಮೇಶ ಐದು ದಿನಗಳಲ್ಲಿ ಮೈಸೂರನ್ನು ಸೇರಿದ.

ರಾಮಕೃಷ್ಣರಾಯರ ಮನೆಯ ಹತ್ತಿರ ಬಂದು ನೋಡಿದರೆ ಅದು ಮಳೆಯಲ್ಲಿ ನೆನೆದ ಹಕ್ಕಿಯಂತಿತ್ತು. ಮನೆಯ ಮುಂದೆ ಹೂವಿನ ಗಿಡಗಳೆ ಇರಲಿಲ್ಲ. ಒಂದೆರಡು ಮರಗಳು ಮಾತ್ರ ತಮ್ಮ ಸ್ವಾವಲಂಬನೆಯಿಂದ ಹಸುರಾಗಿದ್ದುವು. ಮನೆಯನ್ನು ಪ್ರವೇಶಿಸಿದರೆ ಹಜಾರದಲ್ಲಿ ಮೈತುಂಬಿ ನಗುತ್ತಿದ್ದ ಸೋಫಾಗಳು ದಾರಿದ್ರ್ಯದ

ಕಂಬನಿ ಸುರಿಸುತ್ತಿದ್ದುವು. ಒಳಗಡೆ ಬಂದು ಕುಳಿತ ರಮೇಶ ತನ್ನ ದೃಷ್ಟಿಯನ್ನು ಸುತ್ತಲೂ ಚೆಲ್ಲಿದ. ಎತ್ತ ನೋಡಿದರೂ ಯಾವುದೋ ವೇದನೆಯೊಂದು ಬೋಧೆಯಾಗುತ್ತಿತ್ತು. ಧೂಳು ಹಿಡಿದ ಕಿಟಕಿಗಳು, ಬಿಳಿಬಣ್ಣವನ್ನು ಕಳೆದುಕೊಂಡ ಗೋಡೆಗಳು, ಜೇಡರ ಬಲೆಗಳು ಇವು ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಿದ್ದುವು.

ರಮೇಶ ಹೀಗೆಯೆ ಎಲ್ಲವನ್ನು ಕಂಡು ಚಿಂತಾಕ್ರಾಂತನಾಗಿದ್ದಾಗ, ಸಾಮಾನ್ಯ ಸೀರೆಯನ್ನುಟ್ಟು ಅಂಗಡಿಯಿಂದ ಸಾಮಾನನ್ನು ಹೊತ್ತು ಮಂಜುಳ ಒಳಗಡೆ ಕಾಲಿಟ್ಟಳು. ಅವಳಿಗೆ ಈ ದಾಡಿ ಮಹಾಪುರುಷನ ಗುರುತು ಸಿಕ್ಕಲಿಲ್ಲ.

"ಯಾರು ನೀವು, ಯಾರನ್ನು ನೋಡಬೇಕಾಗಿದೆ?" ಎಂದಳು.

"ಮಂಜುಳ, ಎಂಬುವವರನ್ನು ಕಾಣಬೇಕಾಗಿದೆ" ಎಂದು ಹೇಳಿ ರಮೇಶ ಸಸುನಕ್ಕ.

ಮರೆವಿನ ತೆರೆಗಳನ್ನು ದಾಟಿ ಮಂಜುಳೆಗೆ ನೆನಪು ಬಂತು.

"ಏನು, ರಮೇಶ ಹೀಗಿದ್ದೀಯಾ?"

"ಏನು ಮಂಜುಳ, ನೀನೂ ಹೀಗಿದ್ದೀಯಾ?"

"ಸರಿ ಬಿಡು, ಇಬ್ಬರೂ ಸರಿಯಾಗಿದ್ದೇವೆ."

ರಮೇಶನಿಗೆ, ಮನೆಯ ನಾಲ್ಕು ವರ್ಷದ ಕಥೆಯೆಲ್ಲ ತಿಳಿಯಿತು. ಮಂಜುಳೆಯ ಅಣ್ಣ ಮನೆಯನ್ನು ಮತ್ತೊಬ್ಬರಿಗೆ ಆಧಾರಮಾಡಿ ಹತ್ತು ಸಾವಿರ ರೂಪಾಯಿ ತೆಗೆದುಕೊಂಡು ದುಂದುವೆಚ್ಚ ಮಾಡಿದುದು; ತಂದೆಯ ಮರಣ, ತಾಯಿ ಚಿಂತೆಯಿಂದ ಕಾಲವಾದುದು, ಅಣ್ಣ ಬೆಂಗಳೂರಿನಲ್ಲಿ ಕೆಲಸಕ್ಕಾಗಿ ಅಲೆಯುತ್ತಿರುವುದು, ಕೆಲವು ದಿನಗಳಲ್ಲಿ ಹಣಕೊಟ್ಟವರು ಮನೆಯನ್ನು ಸ್ವಾಧೀನಮಾಡಿಕೊಳ್ಳುವುದು—ಹೀಗೆ ನಾಲ್ಕು ವರ್ಷದ ಘಟನೆಗಳು ಅವನಿಗೆ ತಿಳಿಯಿತು. ಮಂಜುಳ ದುಃಖಕರವಾದ ಕಥೆಯನ್ನು ಹೇಳಿ ಕಣ್ಣೀರಿಟ್ಟಳು.

ರಮೇಶನ ಕಣ್ಣೂ ಒದ್ದೆಯಾಯಿತು. ತನ್ನ ಕನಸು ಒಂದು ರೀತಿಯಲ್ಲಿ ಸತ್ಯವೆನಿಸಿತು ಅವನಿಗೆ. ಅವಳನ್ನು ಹೇಗಾದರೂ ಉದ್ಧಾರಮಾಡಬೇಕೆನಿಸಿತು. ಕಲ್ಕತ್ತೆಯ ಮಹಿಳೆಯರ ಆಶ್ರಮಕ್ಕೆ ಸೇರಿ ಭಗವಂತನ ಧ್ಯಾನಮಾಡುತ್ತ ಶಾಂತಜೀವನ ನಡೆಸಬಹುದೆಂದು ಅವಳಿಗೆ ಹೇಳಿದಾಗ, ಅವಳ ಮನಸ್ಸು ಪ್ರಸನ್ನವಾಯಿತು. ಪ್ರಾಪಂಚಿಕ ಭೋಗದ ಹಲವು ಮುಖಗಳನ್ನು ಕಂಡು ಬೇಸತ್ತಿದ್ದ ಅವಳಲ್ಲಿ ಸಹಜ ವಿರಕ್ತಿ ಮೂಡಿತ್ತು.

ಕಲ್ಕತ್ತೆಯ ಆಶ್ರಮಕ್ಕೆ ಸೇರಿದಂದಿನಿಂದ ಮಂಜುಳೆಯ ಜೀವನದಲ್ಲಿ ಹೊಸ ಅಧ್ಯಾಯವೆ ಆರಂಭವಾಯಿತು. ಅವಳ ಸಹಜ ದೇಹ ಸೌಂದರ್ಯದೊಡನೆ ಧ್ಯಾನ ಸಂಲಗ್ನವಾದ ಮನಸ್ಸೂ ಸೇರಿ ಹೊಸ ಶೋಭೆಯನ್ನುಂಟುಮಾಡಿತು. ಅಲ್ಲಿನ ಎಲ್ಲ

ಸಾಧಕರಿಗೂ ಅವಳು ಮಾರ್ಗದರ್ಶಕಳಾದಳು. ಅವಳು ಭಕ್ತಿಪರವಶಳಾಗಿ ಕೀರ್ತನೆಗಳನ್ನು ಹಾಡಿದಾಗ ಆಶ್ರಮವೇ ಪುಲಕಿತವಾಗುತ್ತಿತ್ತು. ದಿನದ ಪ್ರಾರ್ಥನೆ ಮಾಡುವಾಗ ಕಣ್ಣೀರು ಸುರಿಸುತ್ತ ಭಗವಂತನಲ್ಲಿ ತನ್ನೆಲ್ಲ ಅಪರಾಧಕ್ಕಾಗಿ ಕ್ಷಮೆ ಬೇಡುತ್ತಿದ್ದಳು. ಅವಳ ಆತ್ಮ ಗರಿಗೆದರಿ ಅಧ್ಯಾತ್ಮದ ನೀಲಾಕಾಶದಲ್ಲಿ ಹಂಸಯಾನದಲ್ಲಿ ತೊಡಗಿತ್ತು.

ಮಂಜುಳೆಯನ್ನು ಕಲ್ಕತ್ತೆಯ ಆಶ್ರಮಕ್ಕೆ ಸೇರಿಸಿ ಋಷಿಕೇಶವನ್ನು ಸೇರುವಾಗ ರಮೇಶನಿಗೆ ಒಂದು ರೀತಿಯ ತೃಪ್ತಿ ಮೈದೋರಿತ್ತು. ಆದರೆ ಕೆಲವು ದಿನಗಳು ಕಳೆದ ಮೇಲೆ "ಛೀ, ಎಂತಹ ತಪ್ಪುಮಾಡಿದೆ. ಅಂತಹ ಸುರಸುಂದರಿಯನ್ನು, ಹೇಳಿದಂತೆ ಕೇಳಿ ತನ್ನೊಡನೆ ಬಂದವಳನ್ನು ವರಿಸಿ ಮನಬಂದಂತೆ ಮಧುಮಯಜೀವನದಲ್ಲಿ ತೇಲಿ ಹೋಗುವುದನ್ನು ಬಿಟ್ಟುಬಂದುದು ಎಂತಹ ಅವಿವೇಕ?" ಎನ್ನಿಸಿತು ಅವನಿಗೆ. ದಿನ ಕಳೆದಂತೆ ಈ ಯೋಚನೆ ಬೃಹತ್ತಾಗಿ ಬೆಳೆಯಿತು. ಅವಳನ್ನು ಹೇಗಾದರೂ ಮರೆಯ ಬೇಕೆಂದು, ಉತ್ತರಕಾಶಿ ಬದರೀನಾಥಗಳಿಗೆ ಯಾತ್ರೆಹೋಗಿ ಬಂದ. ಉಪವಾಸಾದಿ ವ್ರತಗಳನ್ನು ಆಚರಿಸಿದ. ತ್ರಿಕಾಲ ಸ್ನಾನಜಪಗಳನ್ನು ಮಾಡಿದ. ಏನು ಮಾಡಿದರೂ ಅವಳನ್ನು ಮರೆಯುವುದು ಅವನಿಗೆ ಅಸಾಧ್ಯವಾಯಿತು. ಇಂದು ಶಾಂತಿ ಲಭಿಸುತ್ತದೆ, ನಾಳೆ ಲಭಿಸುತ್ತದೆ, ಎಂದು ಯೋಚಿಸುತ್ತ ಆರು ವರುಷಗಳು ಮತ್ತೆ ಕಳೆದು ಹೋದುವು.

ಒಂದು ದಿನ ಬೆಳಗ್ಗೆ ಸೂರ್ಯನು ಋಷಿಕೇಶದ ಬೆಟ್ಟಗಳನ್ನು ಹತ್ತಿಬರುವ ಮೊದಲು, ಕುಟೀರವನ್ನು ಬಿಟ್ಟು ರಮೇಶ ಹೊರಟನು. ಹರಿದ್ವಾರಕ್ಕೆ ಬರುವಾಗ ಬೇಸಗೆಯ ಬಿಸಿಲು ಸುಡುತ್ತಿತ್ತು. ಹೇಗೋ ಹೆಜ್ಜೆಗಳು ಮುಂದೆ ಸಾಗುತ್ತಿದ್ದುವು. ಅವನ ಮನಸ್ಸು ಬಿಸಿಲಿನ ಬೇಗೆಗಿಂತಲೂ ಕಾದು ಕೆಂಡವಾಗಿತ್ತು.

ಸಂಜೆಯ ಬೆಳಕು ಕಲ್ಕತ್ತೆಯ ಮಹಿಳೆಯರ ಆಶ್ರಮದಿಂದ ದೂರಸಾಗುತ್ತಿತ್ತು. ಪಕ್ಷಿಗಳು ಮೂಕವಾಗಿದ್ದುವು. ಗಾಳಿಯೂ ದುಃಖಭರದಿಂದ ನಿಡುಸುಯ್ಯುತ್ತಿತ್ತು. ಆಶ್ರಮದ ತೋಟದ ಹೂವುಗಳು ಬಾಡಿ ಮೆಲ್ಲನೆ ಉದುರುತ್ತಿದ್ದುವು. ರಮೇಶ, ಮೆಲ್ಲನೆ ತೋಟವನ್ನು ದಾಟಿ ಆಶ್ರಮದ ಬಳಿಗೆ ಕಾಲಿಟ್ಟ. ಆಶ್ರಮವಾಸಿಗಳ ರೋದನಧ್ವನಿ ಮೆಲ್ಲಗೆ ಗಾಳಿಯಲ್ಲಿ ತೇಲಿಬರುತ್ತಿತ್ತು. ದುಃಖದ ದನಿ ಬರುತ್ತಿದ್ದ ಕಡೆಗೆ ಧಾವಿಸಿದ ರಮೇಶ. . . .

ನೋಡುವುದೇನು? ಮಂಜುಳೆಯ ಹಾಸಿಗೆಯ ಸುತ್ತಲೂ ಸಂನ್ಯಾಸಿನಿಯರು ರೋದಿಸುತ್ತ ದೇವರನ್ನು ಸ್ತುತಿಸಿ ಆಕೆಯ ಆತ್ಮಕ್ಕೆ ಶಾಂತಿಯಾಗಲೆಂದು ಜಪಿಸುತ್ತಿದ್ದರು. ಮಂಜುಳೆಯ ಮುಖ ಪ್ರಶಾಂತವಾಗಿತ್ತು. ಕಣ್ಣುಮುಚ್ಚಿದ್ದ ಅವಳ

ಮುಖ ಧ್ಯಾನಸ್ತಿಮಿತಮೂರ್ತಿಯಂತೆ ಶೋಭಿಸುತ್ತಿತ್ತು. ರಮೇಶನನ್ನು ಕಂಡೊಡನೆ ತಪಸ್ವಿನಿಯರು ಭಕ್ತಿಯಿಂದ ಬರಮಾಡಿಕೊಂಡರು. ತಮ್ಮಲ್ಲಿಗೆ ಪರಮಸಾತ್ವಿಕಳನ್ನು ಕರೆದುತಂದು ಬಿಟ್ಟ ಮಹಾತ್ಮನೆಂದು ಗೌರವಿಸಿದರು. ಮಂಜುಳೆಗೆ ಒಂದು ವಾರ ದಿಂದ ಬಂದ ಕಾಹಿಲೆಯನ್ನು ತಿಳಿಸಿ ಅಂದಿನ ವಿಷಮಸ್ಥಿತಿಯನ್ನು ವಿವರಿಸಿದರು.

"ಹೇ ದಯಾಮಯ, ಭಗವನ್, ನಿನ್ನ ಪಾದಾರವಿಂದದೆಡೆಗೆ ನನ್ನನ್ನು ಸೇರಿಸಿಕೊ. ನನ್ನ ಪಾಪಗಳನ್ನು ಮರೆತುಬಿಡು" ಎಂದು ಮೆಲುದನಿಯಲ್ಲಿ ಉಸಿರಿ ಕೈಮುಗಿದು, ಮಂಜುಳ ಮೆಲ್ಲನೆ ತನ್ನ ಕೊನೆಯುಸಿರನ್ನೆಳೆದುಬಿಟ್ಟಳು.

"ಮಂಜುಳ, ಬೇಡ, ಬೇಡ, ನೀನು ಹೋಗಬೇಡ, ನನ್ನನ್ನು ತ್ಯಜಿಸಬೇಡ. ನಡೆ, ನಾವು ಹೋಗೋಣ. ಸಾಕು ಈ ವೈರಾಗ್ಯ. ನಾವಿಬ್ಬರೂ ಸುಖದಿಂದ ಬದುಕೋಣ" ಎಂದು ಹೇಳುತ್ತ ಮಂಜುಳೆಯ ಎದೆಯ ಮೇಲೆ ಬಿದ್ದು ರಮೇಶ ಬಿಕ್ಕಿಬಿಕ್ಕಿ ಅಳು ವುದಕ್ಕೆ ಪ್ರಾರಂಭಿಸಿದ. ಆ ವಿಕಾರದೃಶ್ಯವನ್ನು ಕಂಡು ಸಂನ್ಯಾಸಿನಿಯರು, "ಛಿ! ಛಿ! ಎಂತಹ ಪಾಪಿ ಇವನು" ಎಂದು ದೂರ ಸರಿದರು ; ಆ ಭಯಂಕರ ದೃಶ್ಯದಿಂದ ಮುಖ ತಿರುಗಿಸಿದರು.

* * * *

ಋಷಿಕೇಶದ ಕುಟೀರದಲ್ಲಿ ಕುಳಿತು ಕಳೆದ ಕಾಲವನ್ನು ನೆನೆದು ಚಿಂತಿಸುತ್ತಿದ್ದ ರಮೇಶ. ಸೂರ್ಯನು ಅಸ್ತವಾಗುತ್ತಿದ್ದ. ಕಾಲವು ಮೆಲ್ಲನೆ ಜಾರುತ್ತಿತ್ತು. ಅವನ ಮನಸ್ಸು ಯಾವುದೋ ಭಯಂಕರ ಹೋರಾಟದಲ್ಲಿ ತೊಡಗಿತ್ತು!

'ವೇಣು'

ಹೋರಾಟ

ನಿದ್ದೆವೊನಲಿನ ನಡುವೆ ಎಚ್ಚರದ ಬಂಡೆ! ಇದೊ
ಸುತ್ತ ಹರಿದಿದೆ ಹೊನಲು ಅರಿವು ನಿಲುಕದ ಕಡೆಗೆ.
ನಾನಿಲ್ಲೆ ನಿಂತೆ. ಹರಿಯಲಾರದ ಕರಗಲಾ-
ರದ ಜಡದ ಮುದ್ದೆ. ದೂರ ಕನಸಿನ ನೆರಳು ಹುಡು-
ಗಾಟವಾಡುತಿವೆ ಸೋತ ಕಣ್ಣಿನ ಸುತ್ತ! ದಿನ
ದಿನದ ಜಂಜಡದ ಧೂಳು ಕವಿದಿಹ ಚಿತ್ತದಲಿ
ಒಳಸಂಚು ನಡೆಸುತಿವೆ ಮುರಿದ ಬಯಕೆಯ ಮುರುಕು!

ಸೊಳ್ಳೆಪರದೆಯ ಹೊರಗೆ ಸಿಳ್ಳುಹಾಕಿತು ಸೊಳ್ಳೆ!
ಲಕ್ಷ ತೂತಿನ ಪಹರೆ ಕೋಂಟೆ ಬಳಸಿದೆ ಸುತ್ತ.
ಆಚೆ ಕತ್ತಲ ಕಡಲು, ಅದರೊಳೀದನಿದೋಣಿ
ತೇಲಿಬರುತಿದೆ ಹುಡುಕಿ ತನ್ನ ತೃಪ್ತಿಯ ದಡವ!
(ಎಲ್ಲೆಲ್ಲಿಯೂ ಅದೇ! ಹೊಟ್ಟೆಪಾಡಿನ ಯಾತ್ರೆ!)
ಹಗಲು ಇರುಳೂ ಲೋಕ ಹುಡುಕಾಟಗಳ ಕಂತೆ!
ಇಷ್ಟೊಂದು ಚಿಂತೆಯೊಳು ನಮ್ಮದೇತರ ಚಿಂತೆ?

ಜಿ. ಎಸ್. ಶಿವರುದ್ರಪ್ಪ

ಅರಿಸ್ಟಾಟಲಿನ ಸಾಹಿತ್ಯ ವಿಮರ್ಶೆ

೪

ಪ್ಲೇಟೋ ತನ್ನ 'ರಿಪಬ್ಲಿಕ್'ನ ಹತ್ತನೆಯ ವಿಭಾಗದಲ್ಲಿ ಕವಿಗಳ ಖಂಡನೆಯನ್ನು ಮುಕ್ತಾಯಗೊಳಿಸುತ್ತಾ, ಯಾರಾದರೂ ಕಾವ್ಯಪ್ರೇಮಿಗಳು ಕಾವ್ಯದ ಪರ ತರ್ಕಬದ್ಧವಾಗಿ ತನ್ನ ಆಕ್ಷೇಪಣೆಗಳಿಗೆ ಸಮಾಧಾನ ಕೊಡುವಹಾಗಿದ್ದರೆ, ಕಾವ್ಯವು ಸಮಾಜಕ್ಕೆ ಮತ್ತು ಮಾನವಜೀವನಕ್ಕೆ ಪ್ರೇಯಮಾತ್ರವಲ್ಲದೆ, ಶ್ರೇಯವೂ ಆಗುತ್ತದೆಂದು ಸಿದ್ಧಪಡಿಸಿದರೆ, ತಾನು ಆ ವಾದವನ್ನು ಹೃತ್ಪೂರ್ವಕವಾಗಿ ಆದರಿಸುವೆನೆಂದು ಹೇಳಿದ್ದನು. ಈ ಮಾತುಗಳು ಅರಿಸ್ಟಾಟಲಿನ ಮನಸ್ಸಿನಲ್ಲಿದ್ದುವು ; ಅವನ ಕಾವ್ಯಮೀಮಾಂಸೆ ಪ್ಲೇಟೋವಿನ ವಿವಾದಕ್ಕೆ ಪ್ರತಿಭಟನೆಯಂತೆ ತೋರುತ್ತದೆ. ಗ್ರಂಥದುದ್ದಕ್ಕೂ ಪ್ಲೇಟೋವಿನ ಹೆಸರು ಕೇಳಬರದಿದ್ದರೂ, ಅರಿಸ್ಟಾಟಲಿನ ಪ್ರತಿಯೊಂದು ವಾಕ್ಯವೂ ಪ್ಲೇಟೋವಿನ ಅಧ್ಯಾಹೃತ ಪ್ರಶ್ನೆಗಳಿಗೆ ಉತ್ತರವಿತ್ತಂತಿದೆ.

ಅರಿಸ್ಟಾಟಲಿನ ಶಾಸ್ತ್ರಗಳು ಮೂರು ಭಾಗಗಳಾಗಿ ವಿಂಗಡಿಸಲ್ಪಟ್ಟಿವೆ. ಅವುಗಳಲ್ಲಿ ಗಣಿತ, ಭೌತಶಾಸ್ತ್ರ, ಅಧಿಭೌತಶಾಸ್ತ್ರ ಕೇವಲ ಜ್ಞಾನಾತ್ಮಕಶಾಸ್ತ್ರಗಳು ; ರಾಜನೀತಿ, ನೀತಿಶಾಸ್ತ್ರಗಳು ಪ್ರಾಯೋಗಿಕಶಾಸ್ತ್ರಗಳು ; ಭಾಷಣಶಾಸ್ತ್ರ, ಕಾವ್ಯಮೀಮಾಂಸೆ ನಿರ್ಮಾಪಕಶಾಸ್ತ್ರಗಳು. ಇವು ಮೂರರ ಗುರಿಯೂ ಜ್ಞಾನವಾದರೂ, ಅವುಗಳ ಅಂತಿಮ ಉದ್ದೇಶಗಳು ಭಿನ್ನವಾದುವುಗಳು. ಜ್ಞಾನಾತ್ಮಕಶಾಸ್ತ್ರಗಳ ಗುರಿ ಕೇವಲ ಜ್ಞಾನ ಮತ್ತು ಜ್ಞಾನದ ಧ್ಯಾನ; ಆದರೆ ಪ್ರಾಯೋಗಿಕ ಮತ್ತು ನಿರ್ಮಾಪಕಶಾಸ್ತ್ರಗಳ ಅಂತಿಮ ಉದ್ದೇಶ ಒಂದು ನಿರ್ದಿಷ್ಟ ಫಲಕ್ಕಾಗಿ ಈ ಜ್ಞಾನದ ಉಪಯೋಗ. ಪ್ರಾಯೋಗಿಕಶಾಸ್ತ್ರಗಳು ಜ್ಞಾನವನ್ನೂ ಜನರ ಶೀಲವನ್ನೂ ಮಾರ್ಪಾಟುಮಾಡಲು ಉಪಯೋಗಿಸುತ್ತವೆ; ನಿರ್ಮಾಪಕಶಾಸ್ತ್ರಗಳ ಗುರಿ ಜ್ಞಾನವನ್ನು ಪ್ರಯೋಜಕ ಮತ್ತು ಸುಂದರ ವಸ್ತುಗಳ ನಿರ್ಮಾಣಕ್ಕೆ ಉಪಯೋಗಿಸುವುದು. ಅರಿಸ್ಟಾಟಲಿನ ಭಾಷಣಶಾಸ್ತ್ರ ಮತ್ತು ಕಾವ್ಯಮೀಮಾಂಸೆಗಳು ನಿರ್ಮಾಪಕಶಾಸ್ತ್ರಗಳು. ಒಂದರ ಅಧ್ಯಯನದಿಂದ ಭಾಷಣದ ಲಕ್ಷಣಗಳ ಅರಿವಾದರೆ ಸಾಲದು; ಅದನ್ನು ಓದಿದವನು ಒಳ್ಳೆ ವಾಗ್ಮಿಯೂ ಆಗಬಹುದು. ಹಾಗೆಯೇ ಕಾವ್ಯಮೀಮಾಂಸೆಯ ಗುರಿ ಕಾವ್ಯವಿಮರ್ಶಾಶಕ್ತಿಯನ್ನು ಕೊಡುವುದು ಮಾತ್ರವಲ್ಲದೆ, ಕವಿಗೆ ಸತ್ಕಾವ್ಯವನ್ನು ಬರೆಯುವ ರೀತಿಯನ್ನೂ ಒದಗಿಸುವುದು. ಅರಿಸ್ಟಾಟ

ಲಿನ ಕಾವ್ಯಮೀಮಾಂಸೆಯನ್ನು ಓದುವಾಗ ಈ ಅಂಶಗಳನ್ನು ಗಮನದಲ್ಲಿಡುವುದು ಅತ್ಯಾವಶ್ಯಕ.

ಕಾವ್ಯಮೀಮಾಂಸೆ ಗಾತ್ರದಲ್ಲಿ ಚಿಕ್ಕದಾದರೂ, ಅದರಲ್ಲಿ ಇಪ್ಪತ್ತಾರು ಅಧ್ಯಾಯಗಳಿವೆ. ಇದು ಪೂರ್ಣಗ್ರಂಥವಲ್ಲವೆಂದೂ, ಇದರ ಎರಡನೆಯ ಭಾಗದಲ್ಲಿ ವೈನೋದಿಕ, ಭಾವಗೀತ, ಶಮನದ ವಿಷಯಗಳ ಚರ್ಚೆ ಇದ್ದಿರಬಹುದೆಂದೂ ಊಹಿಸಿದ್ದಾರೆ. ಮೊದಲನೆಯ ಐದು ಅಧ್ಯಾಯಗಳು ಮುನ್ನುಡಿಯ ರೂಪದಲ್ಲಿವೆ. ಅಲ್ಲಿ ಅರಿಸ್ಟಾಟಲನು ಕಲೆಯ ಮೇಲೆ ಕೆಲವು ಸಾಮಾನ್ಯಾಭಿಪ್ರಾಯಗಳನ್ನು ಕೊಟ್ಟು, ವಿವಿಧ ಅನುಕರಣ ಕಲೆಗಳು ಮತ್ತು ಅವುಗಳ ಉದ್ದೇಶಗಳನ್ನು ತಿಳಿಸುತ್ತಾನೆ; ನಂತರ ಕಾವ್ಯದ ಇತಿಹಾಸ, ಮತ್ತು ಅದರ ಪ್ರಕಾರಗಳ ಬೆಳೆವಣಿಗೆಯನ್ನು ಸ್ಥೂಲವಾಗಿ ವಿವರಿಸುತ್ತಾನೆ. ಮುಂದಿನ ಹದಿಮೂರು ಅಧ್ಯಾಯಗಳು ರುದ್ರನಾಟಕದ ವಿಮರ್ಶೆಗೆ ಮೀಸಲು. ಅದರ ಲಕ್ಷಣ, ಅದರ ಅಂಗಗಳು, ಅಂದರೆ, ವಸ್ತು, ಪಾತ್ರ, ಮುಂತಾದುವುಗಳು ವಿಶದವಾಗಿ ಚರ್ಚಿಸಲ್ಪಟ್ಟಿವೆ; ಚರ್ಚೆಯ ಬಹುಭಾಗ ವಸ್ತುವನ್ನು ಕುರಿತಿದೆ; ಒಂದು ಅಧ್ಯಾಯದಲ್ಲಿ (XV) ಪಾತ್ರ, ಇನ್ನೆರಡು ಅಧ್ಯಾಯಗಳಲ್ಲಿ (XVII-XVIII) ರುದ್ರಕವಿಗೆ ಉಪಯುಕ್ತವಾದ ಸಲಹೆಗಳು ವಿವರಿಸಲ್ಪಟ್ಟಿವೆ. ಮುಂದಿನ ನಾಲ್ಕು ಅಧ್ಯಾಯಗಳಲ್ಲಿ (XIX-XXII) ಶೈಲಿಯ ವಿಮರ್ಶೆಯಿದೆ; ಇದರಲ್ಲಿ ವ್ಯಾಕರಣಾಂಶಗಳಿಗೆ ಕೊಟ್ಟಿರುವ ಅವಕಾಶ ಸ್ವಲ್ಪ ಹೆಚ್ಚೆಂದೇ ಹೇಳಬೇಕು. ಮಹಾಕಾವ್ಯದ ವಿಷಯ ಸ್ಥೂಲವಾಗಿ ಉಳಿದ ನಾಲ್ಕು ಅಧ್ಯಾಯಗಳಲ್ಲಿ (XXIII-XXVI) ವರ್ಣಿತವಾಗಿದೆ; ರುದ್ರನಾಟಕದೊಡನೆ ಅದರ ಹೋಲಿಕೆ ಇದೆ. ಅಂದಿನ ಕಾಲದ ಕೆಲವು ಸಮಸ್ಯೆಗಳೂ, ಅವುಗಳ ಪರಿಹಾರಕ್ರಮವೂ ಇಪ್ಪತ್ತೈದನೆಯ ಅಧ್ಯಾಯದಲ್ಲಿ ಸೂಚಿತವಾಗಿವೆ. ಇದು ಕಾವ್ಯಮೀಮಾಂಸೆಯ ವಿಷಯದ ಸಂಕ್ಷಿಪ್ತ ಪರಿಚಯ. ವಿಮರ್ಶೆಗೆ ಸಂಬಂಧಪಟ್ಟ ಇನ್ನೊಂದು ಗ್ರಂಥ, ಅರಿಸ್ಟಾಟಲಿನ ಭಾಷಣಶಾಸ್ತ್ರ. ಅದರ ಮೂರನೆ ಭಾಗದಲ್ಲಿ ಶೈಲಿಯ ದೀರ್ಘ ಚರ್ಚೆಯಿದೆ; ಅದು ಮಾತ್ರವೇ ಸಾಹಿತ್ಯವಿಚಾರಕ್ಕೆ ಉಪಯುಕ್ತವಾದುದು.

೫

ಕಾವ್ಯದ ಸ್ವರೂಪದ ವಿಷಯವಾಗಿ ಅರಿಸ್ಟಾಟಲ್ ಪಟ್ಟಿರುವ ಅಭಿಪ್ರಾಯಗಳು ಬಹಳ ಮುಖ್ಯವಾದುವು ಮತ್ತು ವಿಚಾರಪ್ರಚೋದಕವಾದುವು. ಗ್ರಂಥದ ಆದಿಯಲ್ಲಿಯೇ ಕಾವ್ಯ 'ಅನುಕರಣ' ಕಲೆಗಳಲ್ಲೊಂದು ಎಂದು ಅರಿಸ್ಟಾಟಲ್ ಹೇಳುತ್ತಾನೆ. ಈ ಪದದ ಮೇಲೆ ವಿಮರ್ಶಕರ, ಪಂಡಿತರ ವ್ಯಾಖ್ಯಾನ ವಿಪುಲವಾಗಿದೆ.

ಅರಿಸ್ಟಾಟಲನು ಈ ಪದವನ್ನು ಹೊಸದಾಗೇನೂ ಸೃಷ್ಟಿಸಲಿಲ್ಲ ಮತ್ತು ಕಾವ್ಯಕ್ಕೆ ಅದನ್ನು ಅನ್ವಯಿಸಿದವರಲ್ಲಿ ಅವನು ಮೊದಲಿಗನೂ ಅಲ್ಲ. ತತ್ಕಾಲದ ಗ್ರೀಕರ ವಿಮರ್ಶೆಯಲ್ಲಿ ಈ ಪದದ ಪ್ರಯೋಗವಿದ್ದಿತು. ಪ್ಲೇಟೋ ಸಾಹಿತ್ಯಖಂಡನೆಯಲ್ಲಿ ಈ ಪದವನ್ನೇ ತನ್ನ ಮುಖ್ಯವಾದ ಆಯುಧವನ್ನಾಗಿ ಉಪಯೋಗಿಸಿರುತ್ತಾನೆ. ನಮ್ಮ ದೃಶ್ಯಜಗತ್ತು, ಜೀವನಗಳು ಅದೃಷ್ಟಸತ್ಯದ ಅಸಂಪೂರ್ಣ, ಅನಿತ್ಯ ಪ್ರತಿಬಿಂಬ; ಕಾವ್ಯವಾದರೋ ಈ ಪ್ರತಿಬಿಂಬದ ಅನುಕರಣ; ಆದ್ದರಿಂದ ಅದರಲ್ಲಿ ನಾವು ಕಾಣುವುದೆಲ್ಲಾ ಕೇವಲ ಮಿಥ್ಯೆ, ಭ್ರಾಂತಿ; ಅದರ ವಾಸಸ್ಥಾನ ಆದರ್ಶರಾಜ್ಯದ ಆಚೆ ಇರಬೇಕೆನ್ನುತ್ತಾನೆ ಪ್ಲೇಟೊ. ಅರಿಸ್ಟಾಟಲನು ಪ್ಲೇಟೋವಿಗೆ ಉತ್ತರವನ್ನು ಕೊಡಲು ಆ ಪದವನ್ನೇ ಆರಿಸಿದ್ದಾನೆ, ಆದರೆ ಅದಕ್ಕೊಂದು ನೂತನ ಮೆರಗನ್ನೂ, ಅರ್ಥವೈಶಾಲ್ಯವನ್ನೂ ಕಲ್ಪಿಸುತ್ತಾನೆ. ಈ ಅರ್ಥವನ್ನು ಅವನು ನೇರವಾಗಿ ವಿವರಿಸದಿದ್ದರೂ, ಅವನ ಇತರ ಶಾಸ್ತ್ರಗಳಲ್ಲಿ ಆ ಪದದ ಪ್ರಯೋಗ ಮತ್ತು ಕಾವ್ಯದ ಅನುಕರಣರೀತಿಯನ್ನು ಕುರಿತು ಅವನು ಆಡಿರುವ ಇತರ ಮಾತುಗಳಿಂದ ಅವನ ಅಭಿಪ್ರಾಯವನ್ನು ಗ್ರಹಿಸಬಹುದು. ಅವನ ಭೌತಶಾಸ್ತ್ರದಲ್ಲಿ "ಕಲೆ ಪ್ರಕೃತಿಯನ್ನು ಅನುಕರಿಸುತ್ತದೆ" ಎಂದು ಹೇಳುತ್ತಾನೆ. ಆದರೆ ಈ ವಾಕ್ಯದ ಅರ್ಥ ಕಲೆಯು ಬಾಹ್ಯಪ್ರಕೃತಿಯನ್ನು ಚಿತ್ರಿಸುತ್ತದೆ ಎಂದಲ್ಲ. ಅನುಕರಣ ರೀತಿಯಲ್ಲಿ ಕಲೆ ಪ್ರಕೃತಿಯ ರೀತಿಯನ್ನು ಹೊಂದಿದೆ ಎಂದು. ವಸ್ತುಗಳ ಸೃಷ್ಟಿಯಲ್ಲಿ ಪ್ರಕೃತಿಯ ಗುರಿ ಆ ವಸ್ತುಗಳ ಆದರ್ಶರೂಪಗಳ ಸಿದ್ಧಿ. ಹಾಗೆಯೇ ವ್ಯಕ್ತಿಗಳ, ವಸ್ತುಗಳ ನಿರೂಪಣದಲ್ಲಿ ಕಲೆಯ ಉದ್ದೇಶವೂ ಆ ವ್ಯಕ್ತಿ, ವಸ್ತುಗಳ ಆದರ್ಶ ರೂಪಗಳ ಆವಿರ್ಭಾವವೇ ಹೊರತು, ಅವುಗಳನ್ನು ಅವು ಇರುವಂತೆ ಪ್ರತಿಬಿಂಬಿಸುವುದಲ್ಲ. ಈ ಭಾವ ಕಾವ್ಯಮೀಮಾಂಸೆಯಲ್ಲಿನ ಇತರ ವಾಕ್ಯಗಳಿಂದ ಪುಷ್ಟಿತವಾಗಿದೆ.

ಕಾವ್ಯವನ್ನು ಅನುಕರಣ ಕಲೆಯೆಂದು ಕರೆದಾದ ನಂತರ, ಕಾವ್ಯದ ಪ್ರಕಾರಗಳನ್ನು ಉಲ್ಲೇಖಿಸುವಲ್ಲಿ, ಈ ಪ್ರಕಾರಗಳು ಅವುಗಳ ಅನುಕರಣ ರೀತಿಗಳನ್ನವಲಂಬಿಸಿವೆ ಎನ್ನುತ್ತಾನೆ ಅರಿಸ್ಟಾಟಲ್. ಈ ಅನುಕರಣ ರೀತಿಗಳು ಮೂರು ಬಗೆಯಂತೆ: ವಸ್ತುಗಳನ್ನು ಅವು ಇರುವುದಕ್ಕಿಂತ ಉತ್ತಮವಾಗಿ ವರ್ಣಿಸುವುದು ಒಂದು ಬಗೆ; ಅಧಮವನ್ನಾಗಿ ವರ್ಣಿಸುವುದು ಇನ್ನೊಂದು ಬಗೆ; ಇರುವಂತೆ ಚರ್ಚಿಸುವುದು ಮೂರನೆಯ ಬಗೆ. ಇದಕ್ಕೆ ನಿದರ್ಶನಗಳನ್ನು ಚಿತ್ರಕಲೆಯಿಂದ, ನಾಟಕಗಳಿಂದ ಕೊಡುತ್ತಾನೆ. ಆದ್ದರಿಂದ ಅನುಕರಣವೆಂದರೆ ಪ್ರತಿಬಿಂಬಿಸುವುದಲ್ಲ ಎಂದಾಯಿತು.

ಕಾವ್ಯಮೀಮಾಂಸೆಯ ಒಂಬತ್ತನೆಯ ಅಧ್ಯಾಯದಲ್ಲಿ ಕಾವ್ಯ ಇತಿಹಾಸ

ಗಳನ್ನು ಹೋಲಿಸುತ್ತಾ, ಇತಿಹಾಸಕ್ಕಿಂತ ಕಾವ್ಯವೇ ಹೆಚ್ಚು ತಾತ್ವಿಕ ಮತ್ತು ಘನೋದ್ದೇಶವುಳ್ಳದ್ದೆಂದು ಹೇಳುತ್ತಾನೆ. ಇದಕ್ಕೆ ಕಾರಣ ಇತಿಹಾಸಕ್ಕಿಂತ ಸೂಕ್ಷ್ಮತರವಾಗಿ ಭೂತ ಅಥವಾ ವರ್ತಮಾನ ಸಂಗತಿಗಳನ್ನು ಕಾವ್ಯವು ಪ್ರದರ್ಶಿಸುತ್ತದೆ ಎಂಬುದಲ್ಲ. ತಾತ್ಕಾಲಿಕವಾದ, ವ್ಯಕ್ತಿಗತವಾದ ಸಿದ್ಧಿ ಸಾಹಿತ್ಯಗಳನ್ನು ಇತಿಹಾಸ ಚಿತ್ರಿಸಿದರೆ, ಕಾವ್ಯ ಸಾರ್ವತ್ರಿಕವಾದ ಸಂಭವ ಸತ್ಯವನ್ನು ಅನುಕರಣ ಮಾಡುವುದರಿಂದ. ಸಿದ್ಧಸತ್ಯವು ಕಾವ್ಯದ ವಸ್ತುವಾಗಬಾರದೆಂದಲ್ಲ; ಆದರೆ ಸಂಭವನೀಯ ಸತ್ಯವೇ ಅದಕ್ಕಿಂತ ಉತ್ತಮ ಎನ್ನುತ್ತಾನೆ ಅರಿಸ್ಟಾಟಲ್. ಮತ್ತು ಕವಿಯ ಉದ್ದೇಶ, ನಡೆದ ಸಂಗತಿಯನ್ನು ತಿಳಿಸುವದಲ್ಲ, ನಡೆಯಬಹುದಾದುದನ್ನು; ಸಿದ್ಧವಾದುದಕ್ಕಿಂತ ಸಾಧ್ಯವಾದುದನ್ನು ಚಿತ್ರಿಸುವುದು. ಇಪತ್ತೈದನೆಯ ಅಧ್ಯಾಯದಲ್ಲಿ ಕವಿಯು ತನ್ನ ವಸ್ತುವನ್ನು "ವಸ್ತುಗಳು ಇದ್ದ ಅಥವಾ ಇರುವ ಹಾಗೆ; ವಸ್ತುಗಳು ಅವುಗಳು ಹೀಗಿವೆ ಎಂದು ಹೇಳಲ್ಪಟ್ಟ ಅಥವಾ ಭಾವಿಸಲ್ಪಟ್ಟ ಹಾಗೆ; ಅಥವಾ ವಸ್ತುಗಳು ಅವು ಇರಬೇಕಾದ ಹಾಗೆ" ತೆಗೆದುಕೊಳ್ಳಬಹುದೆಂದೆನ್ನುತ್ತಾನೆ. ಕಾವ್ಯದ ಉದ್ದೇಶಕ್ಕೆ ಅನುಕೂಲವಾಗಿದ್ದರೆ, ಅವನ ವರ್ಣನೆಯಲ್ಲಿ ವಾಸ್ತವಾಂಶಗಳ ದೋಷಗಳಿದ್ದರೂ ಬಾಧೆಯಿಲ್ಲವಂತೆ. ಜಿಂಕೆಯನ್ನು ಗುರುತಿಸಲಾಗದ ಹಾಗೆ ರೂಪಿಸುವುದಕ್ಕಿಂತ, ಅದಕ್ಕೆ ಕೊಂಬುಗಳಿವೆ ಎಂಬುದನ್ನು ತಿಳಿಯದಿರುವುದು ಕಲಾವಿದನ ಕ್ಷಮ್ಯದೋಷ ಎನ್ನುತ್ತಾನೆ. ಅಷ್ಟೇ ಅಲ್ಲದೆ ಹೋಮರನ ಓಡಿಸ್ಸಿಯನ್ನು ಅಲ್ಕಿಡಮಾಸ್ ಎಂಬ ವಿಮರ್ಶಕ "ಕನ್ನಡಿ"ಗೆ ಹೋಲಿಸಿದ್ದನ್ನು ಖಂಡಿಸುತ್ತಾನೆ.

ಇದೇ ಮನೋಭಾವ ಅರಿಸ್ಟಾಟಲನು ರುದ್ರನಾಟಕದ ವಸ್ತುಸಂವಿಧಾನವನ್ನು ವಿವರಿಸುವಲ್ಲಿ ಕಂಡುಬರುತ್ತದೆ. ರುದ್ರನಾಟಕದ ವಸ್ತು ಸಾರ್ವತ್ರಿಕವಾಗಲು, ಕವಿ ಕಥೆಯಲ್ಲಿನ ಎಲ್ಲಾ ಸಂಗತಿಗಳನ್ನೂ ನಾಟಕದಲ್ಲಿ ತುಂಬಬಾರದಂತೆ. ಜೀವನದಲ್ಲಿರುವ ಗೊಂದಲವ ಸ್ಥಿತಿಯನ್ನು ಅನುಸರಿಸದೆ, ಕಾರ್ಯಕಾರಣ ಭಾವದಿಂದ ಬದ್ಧವಾಗಬಹುದಾದ ಸಂಗತಿಗಳನ್ನು ಮಾತ್ರ ಆರಿಸಿ, ಜೋಡಿಸಬೇಕಂತೆ. ಆಗಲೇ ಅವನ ನಾಟಕ ಇತಿಹಾಸಕ್ಕಿಂತ ಹೆಚ್ಚು ನಿತ್ಯವೂ, ಸಾರ್ವತ್ರಿಕವೂ ಆಗುವುದಂತೆ.

ಆದ್ದರಿಂದ 'ಅನುಕರಣ'ವೆಂದರೆ ವಸ್ತುವನ್ನು ಇರುವ ಹಾಗೆ ಪ್ರತಿಬಿಂಬಿಸುವದಲ್ಲ. ಕಾವ್ಯ ನಮಗೆ ಕೊಡುವುದು ಪ್ರಕೃತಿಸೃಷ್ಟ ವಸ್ತುವಿನ ಆದರ್ಶರೂಪದ ಪುನಸ್ಸೃಷ್ಟಿ. ಆದ್ದರಿಂದಲೇ ಕಾವ್ಯದ ಮತ್ತು ತತ್ತ್ವಶಾಸ್ತ್ರದ ಮಾರ್ಗಗಳು ಬೇರೆಯಾದರೂ ಗುರಿ ಮತ್ತು ಫಲ ಒಂದೇ. ಕಾವ್ಯದ ಕ್ರಿಯೆ ವಸ್ತುಗಳ ಅನುಕರಣವಾದುದರಿಂದ ಅದು ಸತ್ಯಕ್ಕೆ ಎರಡು ಹಂತ ಕೆಳಗೆ ಎಂದು ಪ್ಲೇಟೋ ವಾದಿಸಿದರೆ,

ಕಾವ್ಯ ಪ್ರದರ್ಶಿಸುವುದೂ ವಸ್ತುಗಳ ಹಿಂಬದಿಯಲ್ಲಿರುವ ಸತ್ಯವನ್ನೇ ; ಆದರೆ ತರ್ಕಮಾರ್ಗದಿಂದಲ್ಲ, ಅನುಕರಣಮಾರ್ಗದಿಂದ ಎಂದು ಅರಿಸ್ಟಾಟಲಿನ ಪ್ರತಿವಾದ. ಈ ಅಭಿಪ್ರಾಯ ಅರಿಸ್ಟಾಟಲಿನ ಸಾಹಿತ್ಯ ಸಿದ್ಧಾಂತದಲ್ಲಿ ಬಹು ಮುಖ್ಯವಾದುದು. ಅವನ ಮತದಲ್ಲಿ 'ಅನುಕರಣ' ಕಲೆಯ ಮುಖ್ಯಲಕ್ಷಣ; ಅದಿಲ್ಲದ ಯಾವ ಕೃತಿಯೂ ಕಲೆಯೆನ್ನಿಸಿಕೊಳ್ಳುವುದಿಲ್ಲ. ಆದ್ದರಿಂದಲೇ ಕಾವ್ಯಲಕ್ಷಣವನ್ನು ಹೇಳುತ್ತ ವೃತ್ತ ಅಥವಾ ಛಂದಸ್ಸು ಕಾವ್ಯದ ಮುಖ್ಯ ಲಕ್ಷಣವಲ್ಲವೆನ್ನುತ್ತಾನೆ. ಎರಡು ಕೃತಿಗಳೂ ಛಂದಸ್ಸಿನಿಂದ ಕೂಡಿದ್ದರೂ, ಹೋಮರನದು ಮಾತ್ರ ಕಾವ್ಯವಾಗಿ ಎಂಪಿಡಾಕ್ಲಿಸನದು ಶಾಸ್ತ್ರ ಮಾತ್ರವೇ ಆಗಿರುವುದು ಒಂದು ಅನುಕರಣವಾಗಿದ್ದು ಇನ್ನೊಂದು ಅಲ್ಲದಿರುವುದರಿಂದ. ಕಲೆಯ ಮುಖ್ಯಲಕ್ಷಣ ಒಂದು ವಿಧವಾದ ಆದರ್ಶಾನುಕರಣವೆಂದು ಸಾಧಿಸಿದ ಅರಿಸ್ಟಾಟಲಿನ ಪ್ರಭಾವ ಪಾಶ್ಚಾತ್ಯರ ಶ್ರೇಷ್ಠ ವಿಮರ್ಶಕ, ತಾತ್ವಿಕರೆಲ್ಲರ ಮೇಲೂ ಕಂಡುಬರುತ್ತದೆ. ಲಾಂಜೀನಸ್‌ನಿಂದ ಹಿಡಿದು ಡ್ರೈಡನ್, ಕೋಲೆರಿಡ್ಜ್, ಸೇಂತ್ ಬ್ಯೋ ಮತ್ತು ಅರ್ನಾಲ್ಡ್ ಇವರೆಲ್ಲರ ವಿಮರ್ಶೆ ಅರಿಸ್ಟಾಟಲಿನ ಮತವನ್ನು ಎತ್ತಿಹಿಡಿಯುತ್ತದೆ. ಇಂದಿಗೂ ಕೂಡ ಕಲಾಕೃತಿ ಒಂದು ವಿಶಿಷ್ಟ ಅನುಭವದ ಸಂಕೇತ ಮಾತ್ರ, ಯಾವ ವಸ್ತುವಿನ ಅನುಕೃತಿಯೂ ಅಲ್ಲವೆಂದು ಸಾರುವ ಆಧುನಿಕ ಸಂಕೇತವಾದಿಗಳೂ (Symbolists) ಕೂಡ ಕಲಾಕೃತಿಯಲ್ಲಿನ ವಸ್ತುವಿಗೂ, ದೈನಂದಿನ ಜೀವನದ ವಸ್ತುಗಳಿಗೂ ಕಂಡುಬರುವ ಸಾದೃಶ್ಯಗಳನ್ನು 'ಅನುಕರಣ'ವಾದವನ್ನು ಬಿಟ್ಟು, ಅವರ 'ಸಂಕೇತವಾದ'ದ ಮೂಲಕ ವಿವರಿಸಲಾಗದಿರುವುದು ಅರಿಸ್ಟಾಟಲಿನ ವಿಮರ್ಶಾದೃಷ್ಟಿಗೆ ಪ್ರಚ್ಛನ್ನ ಪುರಸ್ಕಾರವಿತ್ತಂತಿದೆ.

ಕಲೆಯ ವಿಧಾನ 'ಅನುಕರಣ'ವಾದರೆ, ಅದರ ವಸ್ತು "ಕಾರ್ಯದಲ್ಲಿ ನಿರತರಾಗಿರುವ ವ್ಯಕ್ತಿಗಳು" ಎನ್ನುತ್ತಾನೆ ಅರಿಸ್ಟಾಟಲ್. ಇಲ್ಲಿಯೂ ಕೂಡ ಉಪಯುಕ್ತ ಪದಗಳ ಸಂದಿಗ್ಧತೆಯಿಂದ, ವಾದವಿವಾದ ಶ್ರೇಣಿಗಳಿಗೆ ಅವಕಾಶವಾಗಿದೆ. ಈ ವಾಕ್ಯವನ್ನು ಅದರ ಏಕದೇಶೀಯವಾದ ಅರ್ಥದಲ್ಲಿ ತೆಗೆದುಕೊಂಡು, ಈ ಲಕ್ಷಣದ ಪ್ರಕಾರ ಈಸ್ಕಿಲಸಿನ ಪ್ರಾಮಿಥ್ಯೂಸ್ ; ಲುಕ್ರೀಷಸ್, ವರ್ಡ್ಸ್‌ವರ್ತರ ಕೃತಿಗಳು ; ಭಾವಗೀತ ಇವು ಯಾವುವೂ ಕಲೆ, ಕಾವ್ಯವಾಗಲು ಸಾಧ್ಯವೇ ಇಲ್ಲವೆಂದು ಸಾಧಿಸಿ, ಈ ವಿಷಯದಲ್ಲಿ ಅರಿಸ್ಟಾಟಲಿನ ಬುದ್ಧಿ ಪ್ರಚಲಿತ ಗ್ರೀಕ್ ಭಾವನೆಗಳಿಂದ ಅವಕುಂಠಿತವಾಗಿತ್ತೆಂದು ಕೆಲವು ವಿದ್ವಾಂಸರ ಟೀಕೆ. ಆದರೆ ಈ ಟೀಕೆಗೆ ಆಧಾರ ಸಾಲದು, ಮತ್ತು ಅರಿಸ್ಟಾಟಲನು ಉಪಯೋಗಿಸಿದ ಗ್ರೀಕ್‌ಪದದ ಅನುವಾದದಲ್ಲಿನ ದೋಷವನ್ನವಲಂಬಿಸಿದೆ. ಮೂಲದ 'ಕಾರ್ಯ' ಎಂಬ ಪದಕ್ಕೆ ಒಬ್ಬ ವ್ಯಕ್ತಿಯ ಮಾಡುವ ಕೆಲಸವಷ್ಟಲ್ಲದೆ, ಅವನಿಗೆ ಸಂಭವಿಸುವುದೂ ಕೂಡ ಎಂಬ ಅರ್ಥವಿದೆ. ಆದ್ದರಿಂದ

ಮೇಲಿನ ವಾಕ್ಯದ ಪೂರ್ಣವಾದ ಅನುವಾದ : "ಕಾರ್ಯವನ್ನು ಮಾಡುತ್ತಿರುವ ಮತ್ತು ಅನುಭವಿಸುತ್ತಿರುವ ವ್ಯಕ್ತಿಗಳು" ಎಂದಾಗುತ್ತದೆ. ಈ ಅರ್ಥ ಅರಿಸ್ಟಾಟಲಿನಿಂದ ಕಲ್ಪಿತವಲ್ಲ. ಅವನ ಕಾಲದ ವಿಮರ್ಶಕರೂ, ಪ್ಲೇಟೋ ಕೂಡ ಈ ಅರ್ಥದಲ್ಲಿ ಈ ಪದವನ್ನು ಉಪಯೋಗಿಸಿರುತ್ತಾರೆ. 'ರಾಜನೀತಿ'ಯಲ್ಲಿ ಅರಿಸ್ಟಾಟಲನು ಸಂಗೀತದ ಪ್ರಭಾವವನ್ನು ಪ್ರಸ್ತಾಪಿಸುತ್ತಾ, "ಸಂಗೀತ ಅನುಕರಣತಮ ಕಲೆ" ಎನ್ನುತ್ತಾನೆ. ಅಂದರೆ ಭಾವಗಳನ್ನು ಪ್ರದರ್ಶಿಸುವುದರಲ್ಲಿ ಅದಕ್ಕಿರುವ ಶಕ್ತಿ ಇನ್ನಾವ ಕಲೆಗೂ ಇಲ್ಲವೆಂದು ಅವನ ಅಭಿಪ್ರಾಯ. ಇದು ಪ್ಲೇಟೋವಿಗೂ ಸಮ್ಮತವೇ. ಏಕೆಂದರೆ ಸಂಗೀತ ಮನುಷ್ಯರ ಸ್ವಭಾವವನ್ನು ಪ್ರದರ್ಶಿಸುತ್ತದೆಂದು ಅವನ ಮತ. ಆದರೆ ಸಂಗೀತ ಯಾವ ಬಾಹ್ಯವಸ್ತುವನ್ನೂ ಪ್ರತಿಬಿಂಬಿಸುವುದಿಲ್ಲವೆಂಬುದು ನಮ್ಮೆಲ್ಲರ ಸಾಮಾನ್ಯಾನುಭವ. ಅಲ್ಲಿಯೂ ಪ್ರದರ್ಶಿತವಾಗುವುದು ಜನರ ಸ್ವಭಾವವೆಂದು ಗ್ರೀಕರ ನಂಬುಗೆ. ಅಂದರೆ ಜನರಲ್ಲಿ ಉದ್ಭವಿಸುವ ಭಾವಗಳ ಪ್ರದರ್ಶನವೆಂದು ಅವರ ಅಭಿಪ್ರಾಯ. ಆದ್ದರಿಂದ ಕಾವ್ಯ ಜನರ ಕಾರ್ಯದ ಅನುಕರಣವೆಂದರೆ, ಜನರ ಕ್ರಿಯೆ, ಅನುಭವಗಳ ಅನುಕರಣವೆಂದಾಯಿತು. ಈ ವಿವರಣೆಯ ದೃಷ್ಟಿಯಲ್ಲಿ ಅರಿಸ್ಟಾಟಲಿನ ಅಭಿಪ್ರಾಯ ಸಾಧುವಾದುದೆಂದೇ ತೋರುತ್ತದೆ. ಆಗ ಭಾವಗೀತ ಕಾವ್ಯವಾಗುತ್ತದೆ. ಮತ್ತು ಕಾವ್ಯದಲ್ಲಿ ಬರುವ ವರ್ಣನೆಗಳೆಲ್ಲವೂ ಭಾವದ ಬಣ್ಣದಿಂದ ಕೂಡಿರುತ್ತವೆಯೇ ಹೊರತು, ಕೇವಲ ವಾಸ್ತವಿಕದ ವರ್ಣನೆಗಳಾಗಿರುವುದಿಲ್ಲ. ವರ್ಣನೆಯ ಜೊತೆಯಲ್ಲಿಯೇ ವರ್ಣಿತವಸ್ತುಗಳು ಮಾನವ ಹೃದಯದ ಮೇಲೆ ಮಾಡುತ್ತಿರುವ ಪರಿಣಾಮಗಳೂ ಪ್ರದರ್ಶಿತವಾಗುತ್ತವೆ. ಆದ್ದರಿಂದ ಅವನ್ನೂ 'ಜನರ ಕಾರ್ಯ'ವೆಂದೇ ಕರೆಯುವುದು ಅರಿಸ್ಟಾಟಲನಿಗೆ ಸಮ್ಮತವಾದುದು.

ಆದರೆ ಕಾವ್ಯರಚನೆಯಲ್ಲಿ ಸ್ಫೂರ್ತಿಗಿರುವ ಸ್ಥಾನವನ್ನೇನೂ ಅರಿಸ್ಟಾಟಲನು ನಿರ್ಲಕ್ಷಿಸಿಲ್ಲ. "ಕಾವ್ಯ ಸ್ಫೂರ್ತಿಯುತವಾದ ವಸ್ತು" ಎಂದು 'ಭಾಷಣಶಾಸ್ತ್ರ'ದಲ್ಲಿ ಹೇಳುತ್ತಾನೆ. ಆದರೆ ಆ ಸ್ಫೂರ್ತಿಯ, ಪ್ರತಿಭೆಯ, ಕಲ್ಪನಾಶಕ್ತಿಯ ಮೀಮಾಂಸೆ ವಿಮರ್ಶೆಗೆ ಸಂಬಂಧಪಟ್ಟುದಲ್ಲವೆಂದು ಅವನು ಭಾವಿಸಿರಬೇಕು; ಅದರ ಸ್ಥಾನ ಮನಶ್ಶಾಸ್ತ್ರದಲ್ಲಿ ಮತ್ತು ಕಾವ್ಯದ ಮೇಲಿನ ಪ್ಲೇಟೋವಿನ ಆರೋಪಗಳಲ್ಲಿ ಇದೂ ಒಂದು. ಕವಿಗಳು ಕಾವ್ಯಗಳನ್ನು ತಮ್ಮ ಭಾವೋನ್ಮಾದದ, ಆವೇಶದ ಸ್ಥಿತಿಯಲ್ಲಿ ರಚಿಸುತ್ತಾರಂತೆ. ಆಗ ಅವರ ಜ್ಞಾನೇಂದ್ರಿಯಗಳು ಸುಪ್ತವಾಗಿರುತ್ತವಂತೆ. ಅಂತಹ ಸ್ಥಿತಿಯಲ್ಲಿ ಉತ್ಪನ್ನವಾದ ಅವರ ಕೃತಿಗಳು ಅಜ್ಞಾನಾವಸ್ಥೆಯ ಫಲಗಳಾದುದರಿಂದ, ಅವುಗಳಲ್ಲಿರುವುದು ಕೇವಲ ಮಿಥ್ಯೆ; ಆದ್ದರಿಂದ ಅವು ತ್ಯಾಜ್ಯಗಳೆನ್ನುತ್ತಾನೆ ಪ್ಲೇಟೋ. ಅರಿಸ್ಟಾಟಲನಾದರೋ ಕಾವ್ಯದ ಜನನಕ್ಕೆ ಸ್ಫೂರ್ತಿ

ಆವಶ್ಯಕವೆಂದು ಒಪ್ಪಿದರೂ, ಆ ಸ್ಫೂರ್ತಿಯಲ್ಲಿ ಅನೇಕ ವಿಧಗಳಿವೆಯೆನ್ನುತ್ತಾನೆ. ಕವಿಗಳು ಎರಡು ಬಗೆಯಾಗಿದ್ದಾರೆ. ಎರಡು ವಿಧದವರೂ ಸ್ಫೂರ್ತಿಯಿಂದ ಪ್ರಚೋದಿತ ರಾದರೂ, ಅವರಲ್ಲಿ ಕೆಲವರು ಸ್ಫೂರ್ತಿಯನ್ನು ತಮ್ಮ ಜ್ಞಾನದ ಅಧೀನದಲ್ಲಿಟ್ಟಿರುತ್ತಾರೆ; ಇತರರು ಸ್ಫೂರ್ತಿಪರವಶರಾಗುತ್ತಾರೆ. ಕೆಲವರ ಕವಿತಾಶಕ್ತಿ ಸ್ವಾಭಾವಿಕವಾಗಿದ್ದು ಅವರು ಎಲ್ಲಾ ಸಂದರ್ಭಗಳಲ್ಲೂ, ಎಲ್ಲಾ ವಸ್ತುಗಳ ಮೇಲೆ ಕಾವ್ಯವನ್ನು ಬರೆಯ ಬಲ್ಲವರಾದರೆ, ಇನ್ನಿತರರು 'ಭಾವೋನ್ಮಾದ'ದ ಸ್ಥಿತಿಯಲ್ಲಿ ಮಾತ್ರ. ಇವರಲ್ಲಿ ಅರಿಸ್ಟಾಟ ಲಿನ ಒಲವು 'ಭಾವೋನ್ಮತ್ತ'ರ ಕಡೆಗಲ್ಲ. ಪ್ಲೇಟೋ ಈ ಎರಡು ವಿಧವಾದ ಕವಿ ಗಳನ್ನು ಗಮನಿಸದೆ, ಎಲ್ಲರನ್ನೂ ಒಂದೇ ರೀತಿಯಾಗಿ ಕಂಡುದು ಸಾಧುವಲ್ಲವೆಂದು ಅರಿಸ್ಟಾಟಲಿನ ಸೂಚನೆ. ಈ ವಾದ ಅನೇಕ ವಿಮರ್ಶಕರಿಗೆ ಸರಿದೋರಿಲ್ಲ. ಈ ವಿಷಯದಲ್ಲಿ ಅರಿಸ್ಟಾಟಲಿನ ದೃಷ್ಟಿ ಅವನ ತಾರ್ಕಿಕ ಪ್ರಕೃತಿಯಿಂದ ಮಂದವಾಗಿತ್ತೆನ್ನು ತ್ತಾರೆ; ಲಾಂಜಿನಸ್ಸಿನ ಕವಿಹೃದಯ ಅರಿಸ್ಟಾಟಲಿನಿಗಿಲ್ಲದುದೇ ಇದಕ್ಕೆ ಕಾರಣವೆನ್ನು ತ್ತಾರೆ. ಆದರೆ ಕಾವ್ಯವಿಮರ್ಶೆಯಲ್ಲಿ ಸ್ಫೂರ್ತಿಯ ಸ್ವರೂಪ, ಸ್ವಭಾವಗಳ ವಿವರಣೆ ಅಪ್ರಕೃತ; ಅದು ಮನಶ್ಶಾಸ್ತ್ರಕ್ಕೆ ಸಂಬಂಧಪಟ್ಟ ಪ್ರಶ್ನೆ. ಅದೂ ಅಲ್ಲದೆ ಕಾವ್ಯ ಕಲೆ ಹುಟ್ಟಲು ಸ್ಫೂರ್ತಿ ಇರಬೇಕಾದರೂ, ಕಾವ್ಯದ ಕೃತಿ, ಕಲಾಕೃತಿ ನಿರ್ಮಾಣ ವಾಗುವಾಗ ಕೇವಲ ಸ್ಫೂರ್ತಿಯಿದ್ದರೆ ಸಾಲದು ; ಸಾಧನಸಾಮಗ್ರಿಯನ್ನು ಭಾವದ ಆವಿರ್ಭಾವಕ್ಕಾಗಿ ಉಪಯೋಗಿಸುವಲ್ಲಿ ಜ್ಞಾನದ ಅವಶ್ಯಕತೆಯನ್ನು ಅಲ್ಲಗಳೆಯ ಲಾಗುವುದಿಲ್ಲ. ಕೇವಲ ಜ್ಞಾನದಿಂದ ನೀರಸಕಾವ್ಯ ರಚಿತವಾಗಬಹುದಾದರೆ, ಕೇವಲ ಸ್ಫೂರ್ತಿಯಿಂದ ಅನರ್ಥಕಸಾಹಿತ್ಯ ನಿರ್ಮಾಣವಾಗಬಹುದು. ಗ್ರೀಸಿನಲ್ಲಿ ಅಂತಹ ಕಾವ್ಯಗಳು ಇರಲಿಲ್ಲವೆಂದು ಹೇಳಲಾಗುವುದಿಲ್ಲ; ಬ್ಲೇಕ್ ಕವಿಯ ಕವನಗಳನ್ನು ಓದಿದವರಿಗೆ ಕಾವ್ಯರಚನೆಯಲ್ಲಿ ಜ್ಞಾನದ ಸಹಕಾರದ ಅವಶ್ಯಕತೆ ಗೊತ್ತಾಗುತ್ತದೆ. ಅರಿಸ್ಟಾಟಲ್ ಇದ್ದುದು ಕ್ರಿ.ಪೂ. ನಾಲ್ಕನೆಯ ಶತಮಾನದ ಗ್ರೀಸಿನಲ್ಲಿ. ಗ್ರೀಸ್ ಸಂಸ್ಕೃತಿಯಾದರೋ ಜ್ಞಾನಪ್ರಧಾನವಾದದ್ದು. ಆದ್ದರಿಂದ ಅರಿಸ್ಟಾಟಲ್ ಜ್ಞಾನ ಪ್ರಧಾನವಾದ ಸ್ಫೂರ್ತಿಗೆ ಹೆಚ್ಚು ಬೆಲೆ ಕೊಟ್ಟದ್ದು ಆಶ್ಚರ್ಯವೇನೂ ಅಲ್ಲ. ಹತ್ತೊಂಬತ್ತನೆಯ ಶತಮಾನದ ಭಾವಪ್ರಧಾನಸಂಸ್ಕೃತಿಯಿಂದ ಪೋಷಿತರಾದ ಕವಿ ವಿಮರ್ಶಕರಿಗೆ ಈ ಮತ ಸರಿಬೀಳದಿದ್ದರೂ, ಗಯಟೆ ಮತ್ತು ಇಪ್ಪತ್ತನೆಯ ಶತಮಾ ನದ ನವ್ಯ ಸಾಹಿತ್ಯಪ್ರೇಮಿಗಳಿಗೆ ಅರಿಸ್ಟಾಟಲಿನ ಅಭಿಪ್ರಾಯ ಸಮ್ಮತವಾಗುತ್ತದೆ.

ಕಲಾವಿಮರ್ಶೆಗೆ ಅರಿಸ್ಟಾಟಲಿನ ಮತ್ತೊಂದು ಕಾಣಿಕೆಯೆಂದರೆ ಅವನು ಕಲೆಗಳನ್ನು ಲಲಿತ ಮತ್ತು ಪ್ರಯೋಜಕ ಕಲೆಗಳೆಂದು ವಿಭಾಗಮಾಡಿದುದು, ಮತ್ತು ಅವುಗಳ ಉದ್ದೇಶಗಳನ್ನು ನಿರ್ದೇಶಿಸಿದುದು. ಈ ವಿಭಾಗದ ಆದ್ಯ ಕರ್ತ

ಅರಿಸ್ಟಾಟಲೆಂದು ಕಾಣುತ್ತದೆ. ಏಕೆಂದರೆ ಪ್ಲೇಟೋವಿನಲ್ಲಿ ಇದರ ಸುಳಿವಿಲ್ಲ. ಅವನು ಲಲಿತಕಲೆಗಳನ್ನು ಪ್ರಯೋಜಕಕಲೆಗಳ ಮಾನದಂಡದಿಂದ ಅಳೆದುದು ಲಲಿತಕಲೆಗಳಲ್ಲಿ ಅವನ ಅಸಂತೃಪ್ತಿಗೆ ಒಂದು ಕಾರಣ. ಪ್ರಯೋಜಕಕಲೆಗಳು ನಮ್ಮ ಜೀವನಕ್ಕೆ ಉಪಯುಕ್ತವಾಗುವ ವಸ್ತುಗಳ ನಿರ್ಮಾಣದಲ್ಲಿ ಸಹಕಾರಿಗಳಾಗುತ್ತವೆ. ತತ್ತ್ವಶಾಸ್ತ್ರದ ಫಲ ಅದರಲ್ಲಿನ ಸತ್ಯದರ್ಶನ. ಆದರೆ ಲಲಿತಕಲೆಗಳು ಇವೆರಡರಲ್ಲಿ ಒಂದನ್ನೂ ಮಾಡದಿರುವುದರಿಂದ, ಮತ್ತು ಅಜ್ಞಾನವನ್ನು ಹರಡುವುದರಿಂದ, ಅವುಗಳಿಂದ ಆಕರ್ಷಿತನಾದರೂ ಅವುಗಳನ್ನು ಕಂಡರೆ ಕಡುಕೋಪ ಪ್ಲೇಟೋವಿಗೆ. ಅರಿಸ್ಟಾಟಲ್ ತನ್ನ ಗ್ರಂಥದಲ್ಲಿ ಪ್ಲೇಟೋ ಮಾಡಿದ ತಪ್ಪನ್ನು ತಿದ್ದಿದನು. ಲಲಿತಕಲೆಗಳು ತತ್ತ್ವಶಾಸ್ತ್ರದಂತೆಯೇ ಸತ್ಯಾನ್ವೇಷಿಗಳೆಂದು ಅವನು ಸಾಧಿಸಿದುದನ್ನು ನಾವು ನೋಡಿಯಾಯಿತು. ಅವುಗಳ ಉಪಯೋಗವನ್ನು ಅರಿಸ್ಟಾಟಲನು ವಿವರಿಸುವುದನ್ನು ಈಗ ನೋಡಬೇಕು. ಪ್ರಯೋಜಕ ಕಲೆಗಳು ಸ್ವಾಂತಗಳಲ್ಲ; ಅವು ಇನ್ನೊಂದರ ಲಾಭಕ್ಕೆ ಸಾಧನಗಳು. ಅವುಗಳ ಮಹತ್ವ, ಉದ್ದಿಷ್ಟ ವಸ್ತುಗಳ ಪ್ರಾಪ್ತಿಯ ಸೌಲಭ್ಯ ಸಂಪೂರ್ಣತೆಗಳನ್ನವಲಂಬಿಸಿವೆ. ಆದರೆ ಲಲಿತಕಲೆಗಳ ಉದ್ದೇಶ ಆನಂದ; ಆ ಆನಂದವೂ ಕೂಡ ಅವುಗಳಲ್ಲೇ ನೆಲಸಿರುವ ಆನಂದವೇ ಹೊರತು ಬೇರೆಯದಲ್ಲ. ಅವುಗಳ ಶ್ರೇಷ್ಠತೆ ಈ ಆನಂದದ ಸ್ವಭಾವವನ್ನವಲಂಬಿಸಿದೆ ಎನ್ನುತ್ತಾನೆ ಅರಿಸ್ಟಾಟಲ್.

ಈ ಅಭಿಪ್ರಾಯ ನಮಗೆ ತೀರ ಬಳಕೆಯ, ಚರ್ವಿತ ಚರ್ವಣದಂತೆ ಕಾಣಬಹುದು. ಆದರೆ ಸಾಹಿತ್ಯ ವಿಮರ್ಶೆಯ ಇತಿಹಾಸದಲ್ಲಿ ಇದರ ಮೇಲಿನ ಚರ್ಚೆ ಇನ್ನೂ ನಿಂತಿಲ್ಲ. ಸುಖ, ಸಂತೋಷಗಳನ್ನು ಕಂಡರೆ ಪ್ಲೇಟೋವಿಗೆ ಒಂದು ಬಗೆಯ ಅನುಮಾನ. ಅವನ ಆದರ್ಶರಾಜ್ಯದ ಘನತೆ, ಗಾಂಭೀರ್ಯಗಳಿಗೆ ಅವು ತಕ್ಕುದಲ್ಲವೆಂದು ಅವನ ಭಾವನೆ. ಅವುಗಳ ಅನ್ವೇಷಣೆ ಕೇವಲ ಪಾಮರರ ಕಾರ್ಯವೆನ್ನುತ್ತಾನೆ. ಅದೂ ಅಲ್ಲದೆ ಕಾವ್ಯ, ನಾಟಕಗಳು ಚಿತ್ತವನ್ನು ಕಲಕಿಬಿಟ್ಟು ಅಶಾಂತತೆಯನ್ನುಂಟುಮಾಡುತ್ತವೆಂದು ಅವನ ವಾದ. ಆದರೆ ಅರಿಸ್ಟಾಟಲಿನ ಉತ್ತರ ಹೆಚ್ಚು ಸಮರ್ಪಕವಾಗಿ ಕಾಣುತ್ತದೆ. ಸುಖ, ಆನಂದಗಳು ಕೆಟ್ಟವೂ ಅಲ್ಲ, ಒಳ್ಳೆಯವೂ ಅಲ್ಲ. ಅವುಗಳನ್ನು ಕೊಡುವ ವಸ್ತುಗಳು ಒಳ್ಳೆಯವಾಗಿದ್ದರೆ ಒಳ್ಳೆಯವು, ಕೆಟ್ಟವಾಗಿದ್ದರೆ ಕೆಟ್ಟವು. ಈ ಉತ್ತಮಾಧಮಗಳ ನಿರ್ಣಯ ನೀತಿಶಾಸ್ತ್ರವನ್ನವಲಂಬಿಸುತ್ತದೆ. ಕಾವ್ಯ, ನಾಟಕಗಳು ತಮ್ಮ "ಶಮನ" ಕ್ರಿಯೆಯಿಂದ ಶಾಂತಿಯನ್ನು ಕೊಡುತ್ತವೆಯೇ ಹೊರತು, ಅಶಾಂತಿಯನ್ನಲ್ಲ ಎನ್ನುತ್ತಾನೆ ಅರಿಸ್ಟಾಟಲ್. ಕಾವ್ಯ ಕೊಡಬೇಕಾದುದು ಆನಂದ, ನೀತಿಬೋಧೆಯಲ್ಲ ಎಂಬ ವಿಷಯದಲ್ಲಿ ಅರಿಸ್ಟಾಟಲ್ ಹೋಮರನ ಪಂಥದವನು. ನಮ್ಮ ಆಲಂಕಾರಿಕರು ಈ

ವಿಷಯದಲ್ಲಿ ಅರಿಸ್ಟಾಟಲನ್ನು ಅನುಮೋದಿಸುತ್ತಾರೆ. ಪಾಶ್ಚಾತ್ಯ ವಿಮರ್ಶೆಯಲ್ಲಿ ಡ್ರೈಡನ್, ಕೋಲೆರಿಡ್ಜ್ ಮತ್ತು ಐ. ಎ. ರಿಚರ್ಡ್ಸ್ ಈ ಪಂಥದವರು. ಆದರೆ ಇದಕ್ಕೆ ವಿರುದ್ಧಪಂಥ, ನೀತಿಯೇ ಸಾಹಿತ್ಯದ ಪರಮಫಲವೆನ್ನುವವರ ಪಂಥ, ಕ್ಸೆನೊಫಾನ್, ಪ್ಲೇಟೋ, ಜಾನ್‌ಸನ್, ಆರ್ನಾಲ್ಡ್, ಮತ್ತು ಟಿ. ಎಸ್. ಎಲಿಯಟ್ಟರದು. ಸಾಹಿತ್ಯಕ್ಕೂ ನೀತಿಗೂ ಸಂಬಂಧವೇ ಇಲ್ಲವೆಂಬುವರ ಗುಂಪಿಗೆ ಅರಿಸ್ಟಾಟಲ್ ಸೇರಿಲ್ಲ; ಆದರೆ ನೀತಿಬೋಧೆಯೇ ಸಾಹಿತ್ಯದ ಏಕೋದ್ದೇಶವೆನ್ನುವವರ ಪಂಥವೂ ಅವನದಲ್ಲ. ಇಲ್ಲಿಯೂ ಅವನದು ಮಧ್ಯಮಾರ್ಗ. ಇದಕ್ಕೆ ಕಾರಣವೂ ಸ್ಪಷ್ಟವಾಗಿದೆ. ಅರಿಸ್ಟಾಟಲನಾಗಲೀ, ಅವನ ಕಾಲದವರಾಗಲೀ, ಧರ್ಮವನ್ನು ಸಾಹಿತ್ಯದಲ್ಲಿ ಹುಡುಕಬೇಕಾಗಿರಲಿಲ್ಲ; ಅದಕ್ಕೆ ಅವರು ಅವರ ಧರ್ಮಶಾಸ್ತ್ರಗಳನ್ನು ನೋಡುತ್ತಿದ್ದರು. ಆದ್ದರಿಂದ ಸಾಹಿತ್ಯದಲ್ಲಿ ಅವರು ಅಪೇಕ್ಷಿಸುತ್ತಿದ್ದುದು ಆನಂದವನ್ನು. ಇದೇ ಕಾರಣದಿಂದಲೇ ನಮ್ಮ ಅಲಂಕಾರಗ್ರಂಥಗಳಲ್ಲಿ ಸಾಹಿತ್ಯದ ರಸವಿಮರ್ಶೆಯಿದೆಯೇ ಹೊರತು, ಅದರಲ್ಲಿನ ಧರ್ಮತತ್ತ್ವಗಳಲ್ಲ. ಧರ್ಮಶಾಸ್ತ್ರ, ಮತಗ್ರಂಥಗಳಲ್ಲಿ ನಂಬಿಕೆಯು ನಶಿಸಿದ ಆಧುನಿಕ ಕಾಲದಲ್ಲಿ ಮಾತ್ರ ಸಾಹಿತ್ಯದಲ್ಲಿ ಧರ್ಮದ ಅನ್ವೇಷಣ ಆರಂಭವಾಗಿರುವುದು.

ಪ್ಲೇಟೋ ತನ್ನ ವಾದದ ಕೊನೆಯಲ್ಲಿ ಕವಿಗಳನ್ನು ತನ್ನ ಆದರ್ಶರಾಜ್ಯದಿಂದ ಬಹಿಷ್ಕರಿಸಿದನು. ಈ ಬಹಿಷ್ಕಾರ ಕಾರ್ಯಗತವಾಗಲಾರದೆಂದು ಅರಿಸ್ಟಾಟಲ್ ಸೂಚಿಸುತ್ತಾನೆ. ಏಕೆಂದರೆ: "ಅನುಕರಣ ಮನುಷ್ಯನಲ್ಲಿ ಬಾಲ್ಯದಿಂದಲೂ ಕಂಡು ಬರುವ ಸ್ವಭಾವ; ಅವನು ಪ್ರಪಂಚದಲ್ಲಿನ ಶ್ರೇಷ್ಠ ಅನುಕರಣಿ ಪ್ರಾಣಿಯಾಗಿರುವುದು ಇತರ ಪ್ರಾಣಿಗಳ ಮೇಲಿರುವ ಅವನ ಪ್ರಾಧಾನ್ಯಾಂಶಗಳಲ್ಲಿ ಒಂದು; ಮೊದಲು ಅವನು ಕಲಿಯುವುದು ಅನುಕರಣದಿಂದ ಮತ್ತು ಅನುಕರಣಮಾಡಿದ ವಸ್ತುಗಳಲ್ಲಿ ಪಡೆಯುವ ಸಂತೋಷ ಎಲ್ಲರಿಗೂ ಸ್ವಾಭಾವಿಕವಾದುದು" ಎನ್ನುತ್ತಾನೆ. ಕಾವ್ಯದ ಹುಟ್ಟಿಗೆ ಕಾರಣಗಳೂ ಮಾನವಸ್ವಭಾವದ ಅಂಶಗಳಾದ ಇವೆರಡೇ. ಗತಿ, ಲಯಗಳಲ್ಲಿನ ನಮ್ಮ ಆದರವೂ ಪ್ರಕೃತಿದತ್ತವೇ. ಆದ್ದರಿಂದ ಕಾವ್ಯವನ್ನು ಬಹಿಷ್ಕರಿಸುವುದು ಅಸಾಧ್ಯ ಎಂದು ಅರಿಸ್ಟಾಟಲ್ ಅಭಿಪ್ರಾಯಪಡುತ್ತಾನೆ.

ಹೀಗೆ ಕಲೆ, ಕಾವ್ಯಗಳ ಸಾಮಾನ್ಯ ತತ್ತ್ವಗಳನ್ನು ನಿರೂಪಿಸುವಲ್ಲಿ ಅರಿಸ್ಟಾಟಲ್ ಪ್ಲೇಟೋವಿನ ಖಂಡನೆಯಿಂದ ಕಾವ್ಯವನ್ನು ರಕ್ಷಿಸಿದುದಲ್ಲದೆ, ಅವುಗಳ ಮೂಲತತ್ತ್ವಗಳನ್ನು ತನ್ನ ಗಂಭೀರವಾದ, ಮಿತವಾದ ಶೈಲಿಯಲ್ಲಿ ಹೊರಗೆಡಹಿದ್ದಾನೆ.

ಎನ್. ಬಾಲಸುಬ್ರಹ್ಮಣ್ಯ

(ಸಶೇಷ)

ದೀಪಧಾರಿ

೧

ಒಂದು . . . ಎರಡು . . . ಮೂರು . . .
ಒಂದೊಂದು ಹೂಹಗುರು
ಮಗುವಿಡುವ ಮೊಟ್ಟಮೊದಲಿನ ಪುಟ್ಟ ಹೆಜ್ಜೆಗಳನೆಣಿಸಿದನು
ಸೃಷ್ಟಿಕರ್ತ !
ದಟ್ಟಡಿಯನಿಡುತಲಿವ ನಡೆಗಲಿತುದೇ ಒಂದು
ಶುಭಮುಹೂರ್ತ !

ಭೂಮಂಡಲದ ನೆತ್ತಿಯಲಿ ಹೊತ್ತು ಮೇಲೆತ್ತುವೊಲು
ಏಳುವನನಾಮತ್ತು,
ಜೋಲಿಹೊಡೆಯುತ ತಂತಿಮೇಲೆ ಓಡುವ ನಡೆವ
ವಿವಿಧ ಕಸರತ್ತು—
ಅದರ ಗತ್ತುಗಳೆಲ್ಲ ಇವನಿಗೂ ಗೊತ್ತು
ಬಂದು ನೋಡಿರಿ ಒಮ್ಮೆ ಗರ್ದಿಗಮ್ಮತ್ತು !

೨

ಪದವಿಟ್ಟುದೇ ಭಂಗಿ
ನಡೆದದ್ದೆ ದಾರಿ,
ಕಣ್ಣುತಪ್ಪಿದರಿವನು ವಿಶ್ವಸಂಚಾರಿ !
ಹಿಡಿದದ್ದೆ ಹಟ
ಇವನು ನುಡಿದದ್ದೆ ವೇದ
ತಳಕಿತ್ತು ಓಡುವವು ಎಲ್ಲ ವಾಗ್ವಾದ ;
ಎದ್ದನೊ—
ತೊತ್ತಳಂದುಳಿವ ಯಜ್ಞದ ಕುದುರೆ !
ಬಿದ್ದನೊ—
ಇವಗಿಲ್ಲ ಅದರ ಪರಿವೆ ;
ಎದ್ದೆದ್ದು ಬಿದ್ದು ಮುನ್ನುಗ್ಗಿ ನಡೆಯುವ ಹಿಗ್ಗು
ಸಾಹಸದ ದಂಡಯಾತ್ರೆ !
ನಡೆಯುತಿದೆ ಈಗಿನಿಂದಲೆ ಮುಂದಿನಾವ ಹೋರಾಟಕ್ಕೊ ಈ ಸಿದ್ಧತೆ !

೩

ಇವನ ಅಧ್ಯಕ್ಷತೆಯ ಕೆಳಗೆ ಜರುಗಲು ಬೇಕು
ಈ ಮನೆಯ ಪ್ರತಿಯೊಂದು ಕೆಲಸಕಾರ್ಯ ;
ತಪ್ಪಿತೋ—
ಹಿಂದುಮುಂದೂ ನೋಡದಿವನು ಊದಿಯೆ ಬಿಡುವ
ಸಮರ ತೂರ್ಯ !
ಸಮಗಿಲ್ಲ ಇವನೆದುರು ನಿಂತು ಸುಡಿಯುವ ಧೈರ್ಯ
ಬೆಳಗಿನಿಂದಲು ಸಂಜೆವರೆಗು ಒಂದೇ ಸಮನೆ ಉರಿವ ಸೂರ್ಯ !

ಆಡಿದರೆ ಆಡಿಯೇ ಆಡುವನು, ಮನಸುಖರಾಯ
(ನಮೋ, ವಿಘ್ನೇಶ್ವರಾಯ !)
ಕಲ್ಲೊ ಮುಳ್ಳೊ—ಇವನು ಒಂದನೂ ಲೆಕ್ಕಿಸನು
ವಜ್ರಕಾಯ !
(ಇತ್ತೀಚೆ ಬೇರೆ ಕಲಿತಿಹನು
ಕಣ್ಣಿನಲಿ ನೀರಿಲ್ಲದೆಯೆ ಅಳುವ ಹೊಸ ಉಪಾಯ !)
ಮರುಗಳಿಗೆ—ಶುಭಗಳಿಗೆ—ಏನುಹೊಳೆವುದೊ ಏನೊ
ಏನಿಳಿವುದೋ ಚಂದ್ರಲೋಕದಿಂದ
ಇಷ್ಟಗಲ ಅರಳುವದು ದುಂಡುಮಲ್ಲಿಗೆ ನಗೆಯು
ಹೊಮ್ಮಿದೊಲು ಈ ಬಾಳಿನೆಲ್ಲ ಚೆಂದ !

೪

ಎತ್ತಲೋ ಹತ್ತು ದಿಕ್ಕಿಗು ಕೈಯನೆತ್ತುವನು
ಕಾಣದುದ ಕೈಮಾಡಿ ಕರೆಯುತಿಹನು ;
ಇವನ ಕಲ್ಪನೆ ಕಣ್ಣಿಗಿದಿರು ಕುಣಿಯುವ ನವಿಲು
ಯಾವುದೊ, ಬೆರಳೆತ್ತಿ ತೋರಿಸುವನು !

ಬಾನ ಮರೆಗಿರುವ ಚಂದ್ರನ ಹುಡುಕಿ ತೆಗೆಯುವನು
ಒಂದೆನೋಟಕೆ ಚಿಕ್ಕೆ ಜಾಲಾಡಿಸುವನು.
ಹೂವಕಂಡರೆ ಹಿಗ್ಗಿ ಮೂಸುವನು ಈ ರಸಿಕ—
ಬಾನುಲಿಗೆ ತಾನೆ ಹೊಸ ಹಾಡು ಕಲಿಸುವನು !

ಬಿಸಿಲಕೋಲನು ಹಿಡಿದು ಮೇಲೇರಬಯಸುವನು,
ಮಣ್ಣಿನಲಿ ಹೊನ್ನಕಣವಾರಿಸುವನು,
ಮೇಲೆ ಹಾರುವ ಹಕ್ಕಿ ಪುಚ್ಚಗಳನೆಣಿಸುವನು,
ಮೌನಗಾಳಿಯ ಹಿಡಿದು ಮಾತಾಡಿಸುವನು!

ಹಗಲು ಸತತೋದ್ಯೋಗಿ ಇರುಳು ಕಿಂದರಿಜೋಗಿ,
ನಿದ್ದೆ ಎಲ್ಲೊ ಯಕ್ಷಲೋಕ ಸಂಚಾರಿ.
ಇವನೆಳೆಯ ಕಂಗಳಲಿ ಹೊಳೆವ ತಿಂಗಳಬೆಳಕು
ದಿನದ ದಾರಿಯೊಳೆಮಗೆ ದೀಪಧಾರಿ!

—ಚೆನ್ನವೀರ ಕಣವಿ.

ಅಂತರರಾಷ್ಟ್ರೀಯ ನ್ಯಾಯಶಾಸ್ತ್ರದ ಮೂಲತತ್ತ್ವಗಳು

೧

ಮನುಷ್ಯನು ಸ್ವಭಾವತಃ ಸಂಘಾವಲಂಬಿ. ಇದು ಅವನ ಸ್ಥಿತಿ, ಸಂಸ್ಕೃತಿ ಪ್ರಗತಿಗಳಿಗೆ ಮೂಲಕಾರಣವೊಂದೆಂದು ಮಾನವಶಾಸ್ತ್ರಜ್ಞರ ಮತ. ಆ ಸಂಘ ಕುಟುಂಬವಾಗಬಹುದು, ಕುಲವಾಗಬಹುದು, ಪುರವಾಗಬಹುದು, ದೇಶವಾಗಬಹುದು, ಕೊನೆಯಲ್ಲಿ ಇಡೀ ವಿಶ್ವವೇ ಆಗಬಹುದು. ಹೀಗೆ ಅವನು ಸಂಘದಲ್ಲಿ ಸೇರಿದಾಗ, ತನ್ನ ಮತ್ತು ಇತರರ ಜೀವನದ ಸುವ್ಯವಸ್ಥೆಗಾಗಿ ತನ್ನ ವ್ಯವಹಾರ ನಡತೆಗಳಲ್ಲಿ ಕೆಲವು ನಿಯಮಗಳನ್ನು ಅನುಸರಿಸಬೇಕಾಗುತ್ತದೆ. ಈ ನಿಯಮಗಳೇನೋ ಅವನ ಮತ್ತು ಇತರರ ಸ್ವೇಚ್ಛಾಪ್ರವೃತ್ತಿಗೆ ಅಡ್ಡಿಯಾಗಬಹುದು. ಆದರೆ ಅವು ಇಲ್ಲದಿದ್ದರೆ, ಇತರರ ನಡವಳಿಕೆಯಲ್ಲಿ ಸಂದೇಹ ಮತ್ತು ಅವಿಶ್ವಾಸಗಳಿಂದ, ಅವನಿಗೆ ಜೀವನವನ್ನು ಸುಗಮವಾಗಿ ನಡೆಸಲು ಅವಶ್ಯಕವಾದ ಧೈರ್ಯವೇ ಇರುವುದಿಲ್ಲ. ಆದ್ದರಿಂದ ಈ ನಿಯಮಗಳು ಅವನಿಗೆ ಇತರರ ವಿಷಯದಲ್ಲಿ ಮತ್ತು ಇತರರಿಗೆ ಅವನ ವಿಷಯದಲ್ಲಿ ಅಭಯವನ್ನು ಕೊಡುತ್ತವೆ. ಆದ್ದರಿಂದ ಈ ನಿಯಮಗಳ ಆಚರಣೆ ಮತ್ತು ಪಾಲನೆ, ಮಾನವಸಮಾಜಕ್ಕೇ ಅತ್ಯಂತ ಮುಖ್ಯವಾದುವು. ಅವೇ ನ್ಯಾಯಶಾಸ್ತ್ರದ ಉದ್ಭವಸ್ಥಾನ. ಹೀಗೆ ಒಂದು ಸಮಾಜದ ವ್ಯಕ್ತಿಗಳು, ಅನುಸರಿಸಲು ಅಂಗೀಕರಿಸಿದ, ಶಾಸನಸಭಾರಚಿತವಾದ ಅಥವಾ ಸಂಪ್ರದಾಯರೂಢವಾದ, ವ್ಯವಹಾರ ನಿಬಂಧನೆಗಳೇ "ನ್ಯಾಯಶಾಸ್ತ್ರ". ಇತಿಹಾಸದ ಆದಿಯಲ್ಲಿ ಮನುಷ್ಯರ ಜೀವನಕ್ಕೆ ಕುಟುಂಬದ ಸಹಕಾರ ಮಾತ್ರ ಸಾಕಾಗಿದ್ದಿತು. ಆಗ ತನ್ನ ಕುಟುಂಬದವರ ವೃತ್ತಿಗನುಸಾರವಾಗಿ ನಿಯಮಗಳ ರಚನೆಯಾಯಿತು. ಅನಂತರ ಅನೇಕ ಕುಟುಂಬಗಳು ಸೇರಿ ಕುಲವಾಯಿತು. ಆಗ ಅದಕ್ಕೆ ಸೂಕ್ತವಾದ ನಿಯಮಗಳೇರ್ಪಟ್ಟವು. ಐತಿಹಾಸಿಕ ಕಾರಣಗಳಿಂದ ಮತ್ತು ವ್ಯವಹಾರಸೌಲಭ್ಯಗಳು ಹೆಚ್ಚಿದ್ದರಿಂದ ಕುಲಗಳು ರಾಷ್ಟ್ರಗಳಾದವು ಮತ್ತು ರಾಷ್ಟ್ರಗಳೂ ಕೂಡ ಆದಿಯಲ್ಲಿನ ಮನುಷ್ಯರಂತೆ ಸಂಘಾವಲಂಬಿಗಳಾಗಬೇಕಾದವು. ಈ ಕಾರಣದಿಂದ ಕೆಲವೇ ವ್ಯಕ್ತಿಗಳ ಸೌಲಭ್ಯಕ್ಕಾಗಿ ನಿಯಮಿಸಿಕೊಂಡ ಕಟ್ಟಳೆಗಳು, ರಾಷ್ಟ್ರಗಳ

ಪರಸ್ಪರ ವ್ಯವಹಾರಗಳನ್ನು ವ್ಯವಸ್ಥಾಪಿಸುವ "ಅಂತರರಾಷ್ಟ್ರೀಯ ನ್ಯಾಯಶಾಸ್ತ್ರ" ವಾಯಿತು.

ಇಪ್ಪತ್ತನೆಯ ಶತಮಾನದ ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ, ವ್ಯಕ್ತಿಗಳೆಲ್ಲ ತಮಗಿಂತಲೂ ಮಿಗಿಲಾದ ಒಂದು ಶಕ್ತಿಗೆ ಅಧೀನರಾಗಿ, ಅದರ ಆಳ್ವಿಕೆಗೆ ತಮ್ಮ ಒಪ್ಪಿಗೆಯನ್ನಿತ್ತಿರುವುದು, ಕಾಣುತ್ತದೆ. ರಾಷ್ಟ್ರಗಳ ಮತ್ತು ಮಾನವನ ಇತಿಹಾಸ ದಲ್ಲೇ ಇಷ್ಟು ಪ್ರಮುಖವೂ ಪ್ರಭಾವಶಾಲಿಯೂ ಆಗಿರುವ ಆ ಶಕ್ತಿ ಯಾವುದು ಎಂದು ವಿಚಾರಮಾಡುವುದು ಸಹಜ. ರಾಷ್ಟ್ರಗಳಿಗಿಂತಲೂ ಹಿರಿದಾಗಿ, ರಾಷ್ಟ್ರಗಳ ಸಮ್ಮತಿ, ಸಂಪ್ರದಾಯ ಅಥವಾ ಅವಶ್ಯಕತೆಗಳಿಂದ, ಅಗೋಚರವಾಗಿ ಬೆಳೆದುಬಂದ ವ್ಯವಹಾರಧರ್ಮವೇ ಅಂತರರಾಷ್ಟ್ರೀಯ ನ್ಯಾಯ. 'ಅಂತರರಾಷ್ಟ್ರೀಯ'ವೆಂದದ್ದ ರಿಂದ ರಾಷ್ಟ್ರಗಳು ಹುಟ್ಟಿದನಂತರವೇ ಈ ನ್ಯಾಯಶಾಸ್ತ್ರ ರೂಢಿಗೆ ಬಂದಿರಬೇಕು. ಅದರ ಲಕ್ಷಣ, ಹುಟ್ಟು ಮತ್ತು ಅಭಿವೃದ್ಧಿಗಳನ್ನು ನಿರೂಪಿಸುವುದು ಈ ಮೊದಲ ನೆಯ ಲೇಖನದ ಉದ್ದೇಶ.

೨

ಅಂತರರಾಷ್ಟ್ರೀಯ ನ್ಯಾಯದ ಲಕ್ಷಣವನ್ನು ಹೀಗೆಂದೇ ಖಚಿತವಾಗಿ ಹೇಳ ಲಾಗುವುದಿಲ್ಲ. ಒಂದೊಂದು ರಾಷ್ಟ್ರದ ಬರಹಗಾರರು ಅದನ್ನು ಒಂದೊಂದು ವಿಧದಲ್ಲಿ ನಿರ್ದೇಶಿಸಿದ್ದಾರೆ. ನಾವು ಎಲ್ಲಾ ನಿರೂಪಣೆಗಳನ್ನೂ ಸೂಕ್ಷ್ಮವಾಗಿ ಪರಿಶೀಲಿಸಿದರೆ, ಭೇದವೇನೂ ಹೆಚ್ಚಾಗಿ ಕಾಣದೆ, ಎಲ್ಲವುಗಳ ಹಿಂದೆಯೂ ಒಂದೇ ಮೂಲತತ್ತ್ವ ಬೆಳಗುವುದು ಗೋಚರವಾಗುತ್ತದೆ. ಅವುಗಳಲ್ಲಿ ನಾಲ್ಕಾರು ನಿರೂಪಣೆಗಳನ್ನು ಇಲ್ಲಿ ತಿಳಿಸುವುದು ಅತ್ಯಾವಶ್ಯಕ. ಅಂತರರಾಷ್ಟ್ರೀಯ ನ್ಯಾಯದ ಬರಹಗಾರರಲ್ಲೆಲ್ಲಾ ಅಗ್ರಗಣ್ಯನೆನಿಸಿದ ಲಾಸಾ ಫ್ರಾನ್ಸಿಸ್ ಲಾರೆನ್ಸ್ ಓಪನ್‌ಹೀಮ್, "ನಾಗರಿಕ ರಾಷ್ಟ್ರಗಳು ತಮ್ಮ ಪರಸ್ಪರ ವ್ಯವಹಾರದಲ್ಲಿ ನ್ಯಾಯಬದ್ಧವೆಂದು ವಿಧಿಸಿಕೊಂಡಿರುವ ಸಾಂಪ್ರದಾಯಿಕ ನಿಯಮ ಸಮೂಹ"ವೇ ಅಂತರರಾಷ್ಟ್ರೀಯ ನ್ಯಾಯಶಾಸ್ತ್ರ ವೆಂದು ಹೇಳುತ್ತಾನೆ. "ಅಂತರರಾಷ್ಟ್ರೀಯ ಜನಾಂಗದ ಸದಸ್ಯರು ತಮ್ಮ ಪರಸ್ಪರ ವ್ಯವಹಾರಗಳಲ್ಲಿ ತಾವು ಬದ್ಧರೆಂದು ಒಪ್ಪಿಕೊಂಡಿರುವ ಸಾಮಾನ್ಯ ತತ್ತ್ವಗಳ ಮತ್ತು ವಿಶೇಷ ನಿಯಮಗಳ ಸಂಚಯವೇ ಅಂತರರಾಷ್ಟ್ರೀಯ ನ್ಯಾಯಶಾಸ್ತ್ರ"ವೆಂದು ಅಮೆರಿಕದ ನ್ಯಾಯಶಾಸ್ತ್ರಪಾರಂಗತ ಫೆನ್ವಿಕ್ಕನ ಅಭಿಮತ. "ಸ್ವತಂತ್ರ ನಾಗರಿಕ ರಾಷ್ಟ್ರಗಳು ತಮ್ಮ ಸಮಾಜದ ಪ್ರಕೃತಿಗೆ ತಕ್ಕಂತೆ ನ್ಯಾಯಸಮ್ಮತವೆಂದು, ವಿವೇಚನೆ ಯಿಂದ ನಿರ್ಧಾರವಾದ ಕೆಲವು ನೀತಿನಡೆಗಳ ಕಟ್ಟಳೆಗಳನ್ನು ನಿರ್ಮಿಸಿಕೊಂಡವು. ಆ ಕಟ್ಟಳೆಗಳೇ ಅಂತರರಾಷ್ಟ್ರೀಯ ನ್ಯಾಯಶಾಸ್ತ್ರ"ವೆಂದು ವ್ಹೀಟನ್ನನ ವಾದ.

"ನಾನಾ ಅಂಶಗಳಿಂದ ಕೂಡಿದ ಒಂದು ಸಂಕೀರ್ಣ ವ್ಯವಸ್ಥೆಯೇ ಅಂತರರಾಷ್ಟ್ರೀಯ ನ್ಯಾಯಶಾಸ್ತ್ರ. ಸ್ವಾಭಾವಿಕ ಧರ್ಮನ್ಯಾಯಗಳ (Natural Equity) ಸ್ಥಿತಿಯಲ್ಲಿರುವ ವ್ಯಕ್ತಿಗಳ ನಡತೆ, ಮತ್ತು ರಾಷ್ಟ್ರಗಳ ಸಂಬಂಧಗಳು ಮತ್ತು ನಡತೆಗೆ ಸಂಬಂಧಿಸಿದ ಸಾಮಾನ್ಯ ತತ್ತ್ವಗಳನ್ನು ಹೊಂದಿರುತ್ತದೆ. ಇಷ್ಟಲ್ಲದೆ ಪದ್ಧತಿ, ಸಂಪ್ರದಾಯ ಮತ್ತು ಅಭಿಪ್ರಾಯಗಳ ಸಂಗ್ರಹವನ್ನೂ, ನಾಗರಿಕತೆ ಮತ್ತು ವಾಣಿಜ್ಯದ ಬೆಳವಣಿಗೆಯನ್ನೂ ನಿರೂಪಿಸುವ ವಾಸ್ತವಿಕ ನ್ಯಾಯಸೂತ್ರ" ಎಂದು ಸರ್ ಹೆನ್ರಿ ಮೇಯ್ನ್ ಹೇಳುತ್ತಾನೆ. ಆದರೆ ಕಾಲ್‌ವೋವಿನ ದೃಷ್ಟಿಕೋಣವೇ ಬೇರೆ; "ನಾನಾ ರಾಷ್ಟ್ರಗಳು ತಮ್ಮ ಪರಸ್ಪರ ವ್ಯವಹಾರದಲ್ಲಿ ಅನುಸರಿಸುವ ನಡತೆ ನಿಯಮಗಳ ಸಂಕಲನವೇ ಅಂತರರಾಷ್ಟ್ರೀಯ ನ್ಯಾಯಶಾಸ್ತ್ರ." "ರಾಷ್ಟ್ರಗಳು ಪರಸ್ಪರವಾಗಿ ಮಾಡಲೇಬೇಕಾದ ಕರ್ತವ್ಯಗಳಿಗೆ ಮತ್ತು ಹಕ್ಕುಗಳ ಪರಿಪಾಲನೆಗೆ ಸಂಬಂಧಿಸಿದ ಋಣಗಳ ಸಂಚಯವೆಂದು ಬೇರೆಯ ಮಾತುಗಳಲ್ಲಿ ಹೇಳಬಹುದು" ಎಂದು ಕಾಲ್‌ವೋ ತಿಳಿಸುತ್ತಾನೆ. ಹಾಲ್‌ನ ದೃಷ್ಟಿಯಲ್ಲಿ "ಅಂತರರಾಷ್ಟ್ರೀಯ ನ್ಯಾಯಶಾಸ್ತ್ರ, ಆಧುನಿಕ ನಾಗರಿಕ ರಾಷ್ಟ್ರಗಳು ತಮ್ಮ ಪರಸ್ಪರ ವ್ಯವಹಾರಗಳಲ್ಲಿ ತಾವು ಬದ್ಧರೆಂದು ಆಚರಿಸುವ ನಿಯಮಗಳ ಸಂಗ್ರಹ. ಧರ್ಮನಿಷ್ಠನಾದ ಒಬ್ಬ ವ್ಯಕ್ತಿ ಹೇಗೆ ತನ್ನ ರಾಷ್ಟ್ರದ ಕಾಯಿದೆಗಳಿಗೆ ತಲೆಬಾಗುವನೋ ಹಾಗೇ ರಾಷ್ಟ್ರಗಳು ಬಾಗಬೇಕು. ನಿಯಮಗಳನ್ನು ಉಲ್ಲಂಘಿಸಿದಾಗ ಅದಕ್ಕೆ ತಕ್ಕ ಶಿಕ್ಷೆಯನ್ನು ಅನುಭವಿಸಲು ಸಿದ್ಧರಿರಬೇಕು. ಹಾಗಾದಲ್ಲಿ ಮಾತ್ರ ಅಂತರರಾಷ್ಟ್ರೀಯ ನ್ಯಾಯಶಾಸ್ತ್ರಕ್ಕೆ ಬೆಲೆಯುಂಟು." ಆದರೆ ಅದಕ್ಕೆ "ಸ್ವತಂತ್ರ ಸಾರ್ವಭೌಮ ರಾಷ್ಟ್ರಗಳ ಒಪ್ಪಿಗೆ ಇರಬೇಕು" ಎಂದ ಹ್ಯೂಗ್ಸ್‌ನ ವಾದ.

ಮೇಲ್ಕಂಡ ಲಕ್ಷಣಗಳೆಲ್ಲಾ ಅಂತರರಾಷ್ಟ್ರೀಯ ನ್ಯಾಯ, ರಾಷ್ಟ್ರಗಳದೇ ವಿನಾ ವ್ಯಕ್ತಿಗಳದಲ್ಲ ಮತ್ತು ಆ ಶಾಸ್ತ್ರಕ್ಕೆ ಒಪ್ಪಿಗೆಯೂ ಸಹ ರಾಷ್ಟ್ರಗಳಿಂದಲೇ ವಿನಾ ವ್ಯಕ್ತಿಗಳಿಂದಲ್ಲ, ಎಂದು ಸೂಚಿಸುತ್ತವೆ. ಆದರೆ ಈ ವಾದ ಸರ್ವಸಮ್ಮತವಲ್ಲ. ಇದಕ್ಕೆ ಪ್ರತಿಯಾಗಿ ಅನೇಕರು ರಾಷ್ಟ್ರ ಮತ್ತು ವ್ಯಕ್ತಿ ಬೇರೆಯಲ್ಲ. ವ್ಯಕ್ತಿಗಳು ತಾವು ನಿರ್ಮಿಸಿರುವ ಪೌರನ್ಯಾಯಗಳಲ್ಲಿ ಅಂತರರಾಷ್ಟ್ರೀಯ ನ್ಯಾಯಕ್ಕೆ ಮನ್ನಣೆ ಯಿತ್ತಿದ್ದಾರೆ ಎಂದು ತಿಳಿಸುತ್ತಾರೆ. ಈ ಎರಡನೆಯ ವಾದ ಸಮಾಧಾನವನ್ನು ಕೊಡುವುದರ ಬದಲು ಸಮಸ್ಯೆಗಳನ್ನೆಬ್ಬಿಸಿತು. ಪೌರನ್ಯಾಯ (Municipal Law) ಮತ್ತು ಅಂತರರಾಷ್ಟ್ರೀಯ ನ್ಯಾಯ ಬೇರೆಯೇ ಅಥವಾ ಒಂದೇ? ಎಂಬುದು ಅತಿ ಪ್ರಾಮುಖ್ಯವಾದುದು. ಅವು ಬೇರೆ ಎಂದವರೇ ದ್ವಿತತ್ವವಾದಿಗಳು (Dualists) ಅವರು ತಮ್ಮ ವಾದವನ್ನು ಮೂರು ಅಂಶಗಳಿಂದ ಸ್ಥಿರಪಡಿಸುತ್ತಾರೆ. ಮೊದಲನೆ

ಯದಾಗಿ—ಪೌರನ್ಯಾಯ ರಾಷ್ಟ್ರದ ಎಲ್ಲೆಯೊಳಗೆ ಅಂಗೀಕೃತಶಾಸನ (Statutes) ಗಳಿಂದ ಹುಟ್ಟುತ್ತದೆ. ಆದರೆ ಅಂತರರಾಷ್ಟ್ರೀಯ ಸಮಾಜದಲ್ಲಿ ಸಂಪ್ರದಾಯ ಗಳಿಂದ ಮತ್ತು ನ್ಯಾಯನಿರ್ಮಾಪಕ ಒಪ್ಪಂದ (Law-making Treaties)ಗಳಿಂದ ಅಂತರರಾಷ್ಟ್ರೀಯ ನ್ಯಾಯ ಹುಟ್ಟುತ್ತದೆ. ಎರಡನೆಯದಾಗಿ—ಪೌರನ್ಯಾಯ, ರಾಷ್ಟ್ರ ಮತ್ತು ವ್ಯಕ್ತಿಗಳ ಸಂಬಂಧವನ್ನು ನಿರ್ಣಯಿಸುತ್ತದೆ. ಅಂತರರಾಷ್ಟ್ರೀಯ ನ್ಯಾಯವಾದರೋ ರಾಷ್ಟ್ರಗಳ ಪರಸ್ಪರ ನಡವಳಿಕೆಗಳನ್ನು ನಿರ್ಣಯಿಸುತ್ತದೆ. ಕೊನೆಯದಾಗಿ—ಪೌರನ್ಯಾಯ, ವ್ಯಕ್ತಿಗಳ ಮೇಲಿರುವ ಸಾರ್ವಭೌಮನ ಅಧಿಕಾರ. ಆದರೆ ಅಂತರರಾಷ್ಟ್ರೀಯ ನ್ಯಾಯ, ಅಧಿರಾಷ್ಟ್ರವಲ್ಲ. ರಾಷ್ಟ್ರಗಳ ಮಧ್ಯೆ ಇರುವ ವ್ಯವಹಾರಧರ್ಮ ಮಾತ್ರ. ಈ ಕೊನೆಯ ಅಂಶವೇ ಅಂತರರಾಷ್ಟ್ರೀಯ ನ್ಯಾಯದ ದೌರ್ಬಲ್ಯವನ್ನು ಚೆನ್ನಾಗಿ ವ್ಯಕ್ತಪಡಿಸುತ್ತದೆ. ದ್ವಿತತ್ತ್ವವಾದಿಗಳು ಮುಂದುವರಿ ಯುತ್ತಾ, "ಅಂತರರಾಷ್ಟ್ರೀಯ ನ್ಯಾಯಕ್ಕೂ, ಪೌರನ್ಯಾಯಕ್ಕೂ ಘರ್ಷಣೆ ಸಂಭವಿಸಿದಾಗ ಪೌರನ್ಯಾಯಕ್ಕೇ ಜಯ ಖಂಡಿತವೆಂದು ತಿಳಿಸುತ್ತಾರೆ. ಮೇಲಿನ ತತ್ತ್ವವನ್ನು ವಿರೋಧಿಸಿದವರು ಏಕತತ್ತ್ವವಾದಿಗಳು (Monists). ಅವರ ದೃಷ್ಟಿಯಲ್ಲಿ ಪೌರನ್ಯಾಯ ಅಂತರರಾಷ್ಟ್ರೀಯ ನ್ಯಾಯ ಬೇರೆಯಲ್ಲ. ಎರಡೂ ಒಂದೇ. ವ್ಯಕ್ತಿಗಳ ನಡತೆಯನ್ನು ದಿಗ್ದರ್ಶಿಸುವುದೇ ಎರಡರ ಮೂಲತತ್ತ್ವ. ಎರಡರ ನ್ಯಾಯವೂ ಜನಗಳ ಸ್ವತಂತ್ರಪ್ರವೃತ್ತಿಗೆ ವಿರುದ್ಧವಾಗಿ ವಿಧಿಸಿರುವ ನಿಯಮಗಳಿಂದ ಕೂಡಿದ್ದು. ಎರಡೂ ಒಂದೇ ನ್ಯಾಯಶಾಸ್ತ್ರದ ಭಿನ್ನಾವತಾರಗಳು. ಒಂದು ಮಹತ್ತರ ನ್ಯಾಯ ಕ್ರಮದಿಂದ ಭಿನ್ನಕಾರ್ಯರಂಗಗಳಲ್ಲಿ ಅವು ಚಿಗುರಿದವು ಎಂದು ವಾದಿಸುತ್ತಾರೆ. ಈ ರೀತಿಯಾಗಿ ಏಕತತ್ತ್ವವಾದಿಗಳು ದ್ವಿತತ್ತ್ವವಾದವನ್ನು ಖಂಡಿಸಿದ್ದಾರೆ. ಅವರಲ್ಲಿ ಹಾನ್ಸ್‌ಕೆಲ್ಸನ್ ಪ್ರಮುಖನಾದವನು. ದ್ವಿತತ್ತ್ವವಾದಿಗಳಲ್ಲಿ ಪ್ರಮುಖನಾದವನೆಂದರೆ ಆನ್ಜಿಲೋಟಿ.

ಎರಡು ವಾದಗಳನ್ನೂ ವಿಮರ್ಶಿಸಿದ ನಂತರ, ನಮಗೆ ಒಂದು ರಾಷ್ಟ್ರದ ರಾಜ್ಯಾಂಗದಲ್ಲಿ (Constitution) ಅಂತರರಾಷ್ಟ್ರೀಯ ನ್ಯಾಯಕ್ಕಿರುವ ಸ್ಥಾನ ವೇನು? ಎಂಬ ಪ್ರಶ್ನೆ ಏಳುವುದು ಸ್ವಾಭಾವಿಕ. ಆದರೆ ಈ ಪ್ರಶ್ನೆಯ ತಾತ್ವಿಕ ಚರ್ಚೆಯ ಬದಲು, ಒಂದೆರಡು ಪ್ರಮುಖರಾಷ್ಟ್ರಗಳು ತಮ್ಮ ರಾಜ್ಯಾಂಗದಲ್ಲಿ ಮತ್ತು ಅನುದಿನದ ನಡವಳಿಕೆಗಳಲ್ಲಿ, ಅಂತರರಾಷ್ಟ್ರೀಯ ನ್ಯಾಯಶಾಸ್ತ್ರಕ್ಕೆ ಕೊಟ್ಟಿರುವ ಸ್ಥಾನವನ್ನು ವಿಚಾರಿಸುವುದು ಹೆಚ್ಚು ಉಪಯೋಗಕರ. ಇಂಗ್ಲೆಂಡಿನ ಸುಪ್ರಸಿದ್ಧ ನ್ಯಾಯಾಧೀಶ ಬ್ಲಾಕ್‌ಸ್ಟನ್ ತನ್ನ ಮಹತ್ತರವಾದ ತೀರ್ಪು ಗಳಲ್ಲೊಂದರಲ್ಲಿ—

(೧) ಅಂತರರಾಷ್ಟ್ರೀಯ ನ್ಯಾಯದ ಸಾಂಪ್ರದಾಯಿಕ ನಿಯಮಗಳು ನಮ್ಮ ದೇಶದ ಪೌರನ್ಯಾಯದ ಒಂದು ಭಾಗ.

(೨) ದೇಶದ ನ್ಯಾಯವಿಧಾಯಕ ಶಾಸನಗಳನ್ನು ನ್ಯಾಯಸ್ಥಾನಗಳು ಅವಶ್ಯವಾಗಿ ಅನುಸರಿಸಬೇಕು. ಆದರೆ ಇಂಗ್ಲೆಂಡಿನ ಪಾರ್ಲಿಮೆಂಟಿನ ಶಾಸನಗಳಾವುವೂ, ಅಂತರರಾಷ್ಟ್ರೀಯ ನ್ಯಾಯವನ್ನು ಅಧಿರೋಹಿಸುವುದಿಲ್ಲ ಎಂಬುದು ನಮ್ಮೆಲ್ಲರ ಭಾವನೆ ಎಂದು ತಿಳಿಸಿದನು. (Westrand Gold Mining Company vs. the King, 1905).

ಆದರೆ ಅಮೆರಿಕದ ಸಂಯುಕ್ತ ಸಂಸ್ಥಾನದಲ್ಲಿ ಅಂತರರಾಷ್ಟ್ರೀಯ ನ್ಯಾಯ ಪೌರನ್ಯಾಯದ ಒಂದು ಭಾಗ. ಅಂತರರಾಷ್ಟ್ರೀಯ ನ್ಯಾಯದ ಸಾಂಪ್ರದಾಯಿಕ ನಿಯಮಗಳು ಮತ್ತು ಒಪ್ಪಂದಗಳು ರಾಷ್ಟ್ರಶಾಸನಗಳಿಗೆ ವಿರುದ್ಧವಾಗಿದ್ದರೂ, ನ್ಯಾಯಾಲಯಗಳು ಅವುಗಳನ್ನು ಪಾಲಿಸಬೇಕು. ಆದರೆ ಆ ಒಪ್ಪಂದಗಳು ಮತ್ತು ನಿಯಮಗಳು ಅಮೆರಿಕದ ಸಂಯುಕ್ತ ಸಂಸ್ಥಾನದ ಮೂಲರಾಜ್ಯಾಂಗಕ್ಕೆ ವಿರೋಧವಾಗಿರಕೂಡದು. ಫ್ರಾನ್ಸ್, ಜರ್ಮನಿ, ಬೆಲ್ಜಿಯಂ, ಸ್ವಿಟ್ಜರ್ಲೆಂಡ್ ಮತ್ತು ಇತರ ಐರೋಪ್ಯರಾಷ್ಟ್ರಗಳು ಅಮೆರಿಕಾ ಸಂಯುಕ್ತ ಸಂಸ್ಥಾನದ ಮಾದರಿಯನ್ನೇ ಅನುಸರಿಸಿವೆ. ನಮ್ಮ ಭಾರತದೇಶವೂ, ಅಮೆರಿಕದ ಮಾದರಿಯನ್ನೇ ಅನುಸರಿಸಿದೆಯೆಂದು ಹೇಳಬಹುದಾದರೂ, ಅದು ಅಷ್ಟಾಗಿ ಸರಿಯಲ್ಲ. ಪ್ರತಿಯೊಬ್ಬ ಭಾರತೀಯನೂ ನ್ಯಾಯಕ್ಕೆ ನೂರಾರು ವರ್ಷಗಳಿಂದ ಮನ್ನಣೆಯಿತ್ತಿದ್ದಾನೆ. ಅವನಿಗೆ ನ್ಯಾಯ ಒಂದೇ. ಅದರಲ್ಲಿ 'ಅಂತರರಾಷ್ಟ್ರೀಯ' 'ರಾಷ್ಟ್ರೀಯ' ಎಂಬ ಭೇದಭಾವನೆಗಳೇ ಇಲ್ಲ. ಆದರೆ ಭಾರತ ಈಗ ಅಂತರರಾಷ್ಟ್ರೀಯ ಸಮಾಜದಲ್ಲಿ ಭಾಗಿಯಾಗಿರುವುದರಿಂದ, ಭಾರತದಲ್ಲಿ ಅಂತರರಾಷ್ಟ್ರೀಯ ನ್ಯಾಯಕ್ಕಿರುವ ಸ್ಥಾನವನ್ನು ಕುರಿತು ನಿರ್ದಿಷ್ಟವಾದ ಒಂದು ಅಭಿಪ್ರಾಯವನ್ನು ಕೊಡಬೇಕು. ಭಾರತದ ಇತ್ತೀಚಿನ ವಿದೇಶಾಂಗ ನೀತಿಯನ್ನು ನೋಡಿದರೆ (ಶಾಂತಿ ಮತ್ತು ಸಹಜೀವನ) ಅದು ನಿಷ್ಪಕ್ಷಪಾತವಾದ ಅಂತರರಾಷ್ಟ್ರೀಯ ನ್ಯಾಯದ ಸಾರ್ವಭೌಮತ್ವಕ್ಕೆ ತನ್ನ ಒಪ್ಪಿಗೆಯನ್ನು ಸೂಚಿಸಿರುವುದು ಕಾಣುತ್ತದೆ. ಈ ವಿಷಯದಲ್ಲಿ ಭಿನ್ನಾಭಿಪ್ರಾಯವೇ ಇಲ್ಲವೆಂದು ಖಚಿತವಾಗಿ ಹೇಳಬಹುದು.

ಕಾಲಕ್ರಮೇಣ ಅಂತರರಾಷ್ಟ್ರೀಯ ಸಂಬಂಧಗಳು ಶೀಘ್ರವಾಗಿ ಅಭಿವೃದ್ಧಿಯನ್ನು ಹೊಂದುತ್ತಿವೆ. ಅಂತರರಾಷ್ಟ್ರೀಯ ನ್ಯಾಯ, ಪೌರನ್ಯಾಯ ಒಂದೇ ಎಂಬ ಭಾವನೆ ಹೆಚ್ಚುತ್ತಿದೆ. ದ್ವಿತತ್ತ್ವವಾದ ಅಧೋಗತಿಯಲ್ಲಿದೆ. ಜನಸಾಮಾನ್ಯರ ಮತ್ತು ರಾಷ್ಟ್ರಗಳ ಪರಸ್ಪರ ನೀತಿ ನಡವಳಿಕೆಗಳು ಪೌರಶಾಸನಗಳ (Municipal Statutes)

ನಿರಂಕುಶ ವರ್ತನೆಯನ್ನು ಬಹಳಮಟ್ಟಿಗೆ ತಡೆದು ತನ್ಮೂಲಕ ಪೌರಶಾಸನಗಳು ಅಂತರರಾಷ್ಟ್ರೀಯ ನ್ಯಾಯಕ್ಕನುಗುಣವಾಗಿರುವಂತೆ ಮಾಡಿವೆ. ಓಪನ್‌ಹೀಮನ, ದ್ವಿತತ್ತ್ವವಾದಕ್ಕೆ ವಿರುದ್ಧದ ಭಾವನೆಗಳನ್ನು ಇಲ್ಲಿ ತಿಳಿಸುವುದು ಉಚಿತ. ಅದರ ಪ್ರಕಾರ—

(೧) ರಾಷ್ಟ್ರಗಳ ಕುಲಕ್ಕೆ ಸೇರಿದ ರಾಷ್ಟ್ರವಾವುದೂ ತನ್ನ ಪೌರಶಾಸನಗಳನ್ನು ಅಂತರರಾಷ್ಟ್ರೀಯ ನ್ಯಾಯಕ್ಕೆ ವಿರುದ್ಧವಾಗಿ ವಿಧಿಸುವುದಿಲ್ಲ ಮತ್ತು ವಿವರಿಸುವುದಿಲ್ಲ.

(೨) ಪೌರನ್ಯಾಯದಲ್ಲಿನ ಹಲವು ಅಂತರರಾಷ್ಟ್ರೀಯ ನ್ಯಾಯದ ಮೂಲತತ್ತ್ವಗಳ ಅಭಾವವು, ಪೌರನ್ಯಾಯಾಲಯಗಳಿಂದ ಅಂಗೀಕೃತವಾದುವುಗಳೆಂದೇ ಭಾವಿಸಲ್ಪಡಬೇಕು.

(೩) ಶಾಸನದಲ್ಲಿ ಪ್ರತಿಯೊಂದನ್ನೂ ವಿಧಿಸುವುದು ಅಸಾಧ್ಯ. ಆದುದರಿಂದ ಹಲವು ವೇಳೆ ಕೆಲವು ಅಂತರರಾಷ್ಟ್ರೀಯ ಹಕ್ಕುಬಾಧ್ಯತೆಗಳನ್ನು ಪೌರಶಾಸನಗಳಲ್ಲಿ ವಿಧಿಸದಿದ್ದರೂ, ಪೌರನ್ಯಾಯಾಲಯಗಳು ಅವನ್ನು ಗೌರವಿಸಬೇಕು.

೩

ಇನ್ನು ಅಂತರರಾಷ್ಟ್ರೀಯ ನ್ಯಾಯದ ಉತ್ಪತ್ತಿ ಮತ್ತು ಬೆಳವಣಿಗೆಗಳನ್ನು ವಿಚಾರಮಾಡೋಣ, ಒಂದು ನದಿಯ ಮೂಲ (Source) ಅದರ ಕಾರಣ (Cause) ವಾಗಬೇಕಾದ ಅಗತ್ಯವೇನಿಲ್ಲ. ನ್ಯಾಯ ಭೂಮಿಯ ಮೇಲೆ ಕಟ್ಟಳೆಗಳೆಂಬ ನದಿಗಳು ಎಲ್ಲಿಂದ ಹರಿಯುವುವೋ ಅದೇ ಅವಕ್ಕೆ ಮೂಲಸ್ಥಾನವೆಂದೆನಿಸಿಕೊಳ್ಳುತ್ತದೆ. ಯಾವ ಐತಿಹಾಸಿಕ ಘಟನೆಯಿಂದ ವ್ಯವಹಾರ ನಿಯಮಗಳು ಉದ್ಭವಿಸುವುವೋ ಮತ್ತು ಶಾಸನಶಕ್ತಿಯನ್ನು ಪಡೆಯುವುವೋ, ಅದೇ ನ್ಯಾಯಮೂಲವೆಂದು ನಾವು ಹೇಳಬಹುದು. ಡಾ॥ ಓಪನ್‌ಹೀಮನ ಪ್ರಕಾರ—

(೧) ವ್ಯಕ್ತ ಸಮ್ಮತಿ (Express Consent)—ಎಂದರೆ ಅಂತರರಾಷ್ಟ್ರೀಯ ನಡತೆಗಳ ವಿಷಯದಲ್ಲಿ ಒಪ್ಪಂದವಾದ ನಂತರ ರಾಷ್ಟ್ರಗಳು ವ್ಯಕ್ತಪಡಿಸಿದ ಸಮ್ಮತಿ.

(೨) ಮೌನ ಸಮ್ಮತಿ—(Tacit Consent) ವ್ಯವಹಾರಗಳಲ್ಲಿ ಕೆಲವು ಅಂತರರಾಷ್ಟ್ರೀಯ ನಿಯಮಗಳಿಗೆ ಅಧೀನರಾಗಿರುವುದರಿಂದ ಸೂಚಿತವಾದ ಸಮ್ಮತಿ.

ಈ ಮೇಲ್ಕಂಡವುಗಳು ಅಂತರರಾಷ್ಟ್ರೀಯ ನ್ಯಾಯದ ಎರಡು ಉತ್ಪತ್ತಿ ಸ್ಥಾನಗಳು.

ಸರ್ವಾನುಮತದಿಂದ ಅಂಗೀಕೃತವಾಗಿರುವ ಆರು ಮೂಲಸ್ಥಾನಗಳೆಂದರೆ (೧) ಸಂಪ್ರದಾಯಗಳು, (೨) ಒಪ್ಪಂದಗಳು, (೩) ಶಾಸನಗಳು, (೪) ನ್ಯಾಯಪೀಠಗಳ

(Tribunals) ತೀರ್ಪುಗಳು, (೫) ನ್ಯಾಯಶಾಸ್ತ್ರಜ್ಞರ ಗ್ರಂಥಗಳು, (೬) ಅಂತರ ರಾಷ್ಟ್ರೀಯ ಸೌಹಾರ್ದ (Comity). ಪ್ರತಿಯೊಬ್ಬ ಶಾಸ್ತ್ರಜ್ಞನೂ ಈ ಆರನ್ನು ಒಪ್ಪಿದರೂ, ಅವುಗಳ ಯಥಾಕ್ರಮದಲ್ಲಿ ಭಿನ್ನಾಭಿಪ್ರಾಯವಿದೆ. ಕೆಲವು ಬರಹಗಾರರು ಅಂತರರಾಷ್ಟ್ರೀಯ ಸೌಹಾರ್ದವನ್ನು ಮೂಲವಾಗಿ ಗಣಿಸುವುದಿಲ್ಲ.

ಸಾಮಾನ್ಯವಾಗಿ ನ್ಯಾಯಶಾಸ್ತ್ರಕ್ಕೆ ಮೂಲಸಂಪ್ರದಾಯ (Custom) ಪ್ರಮುಖವಾಗಿ ಅಂತರರಾಷ್ಟ್ರೀಯ ನ್ಯಾಯಶಾಸ್ತ್ರಕ್ಕೆ ಕೆಲವು ಕಾರ್ಯಗಳ ನಿಸ್ಸಂದೇಹವಾದ ಮತ್ತು ಸಂತತವಾದ ಆಚರಣೆಯ ರೂಢಿ ಸಂಪ್ರದಾಯದ ಪೋಷಣೆಯಲ್ಲಿ ಬೆಳೆದು ಬಂದದ್ದಾದರೆ ಆಗ ಆ ಕಾರ್ಯಗಳು ಅಂತರರಾಷ್ಟ್ರೀಯ ನ್ಯಾಯದ ಪ್ರಕಾರ ಕರ್ತವ್ಯ ಅಥವಾ ಹಕ್ಕುಗಳಾಗುತ್ತವೆ. ಒಪ್ಪಂದಗಳಲ್ಲಿ ಮುಖ್ಯ ವಾದವು ನ್ಯಾಯನಿರ್ಮಾಪಕ ಒಪ್ಪಂದಗಳು. ಅವು ಆಚರಣೆಯಲ್ಲಿರುವ ಸಾಮಾನ್ಯ ರೀತಿಯ ಸಾಂಪ್ರದಾಯಕ ನಿಯಮಗಳನ್ನು ದೃಢಪಡಿಸುವುದು, ನಿರ್ದೇಶಿಸುವುದು ಅಥವಾ ತಿರಸ್ಕರಿಸುವುದು ಇವುಗಳನ್ನು ಮಾತ್ರವಲ್ಲದೆ ಭಾವೀ ಅಂತರರಾಷ್ಟ್ರೀಯ ನಡತೆಗಾಗಿ ಹೊಸದಾದ ಸಾಮಾನ್ಯ ನಿಯಮಗಳನ್ನು ನಿರ್ಧರಿಸುತ್ತವೆ. "ಅಂತರ ರಾಷ್ಟ್ರೀಯ ನ್ಯಾಯಕ್ಕೆ ಸಂಪ್ರದಾಯವೇ ಮೂಲ. ಅಂತಹ ಸಂಪ್ರದಾಯಗಳಿಂದ ಬಲಯುತವಾದವುಗಳೇ ಒಪ್ಪಂದಗಳು" ಎಂದು ಓಪನ್‌ಹೀಮನ ಅಭಿಪ್ರಾಯ. ಅಂತರರಾಷ್ಟ್ರೀಯ ನ್ಯಾಯಾಲಯದ ಶಾಸನವು ಆ ನ್ಯಾಯಾಲಯದ ಕರ್ತವ್ಯವನ್ನು ನಿರೂಪಿಸುತ್ತಾ "ಸಂಪ್ರದಾಯ, ಒಪ್ಪಂದಗಳ ಜೊತೆಗೆ, ನಾಗರಿಕರಾಷ್ಟ್ರಗಳಿಂದ ಅಂಗೀಕೃತವಾಗಿರುವ ನ್ಯಾಯಶಾಸ್ತ್ರದ ಸಾಮಾನ್ಯ ಮೂಲತತ್ತ್ವಗಳನ್ನು" ಅನುಸ ರಿಸುವಂತೆ ಕಟ್ಟುಮಾಡಿತು. ಈ ಸಂದರ್ಭದಲ್ಲಿ ಅಂತರರಾಷ್ಟ್ರೀಯ ಮಧ್ಯಸ್ಥ ನ್ಯಾಯ ಪೀಠಗಳ (Arbitral Tribunals) ಸ್ಥಾಪನೆಯು ಅತಿ ಮುಖ್ಯವಾದುದು. ಸ್ವಾರ್ಜೆನ್ ಬರ್ಗರನು "ನ್ಯಾಯಪೀಠಗಳ ತೀರ್ಪುಗಳು ಸಹಾಯಕವಾದ ಮತ್ತು ಪರೋಕ್ಷವಾದ ಮೂಲಕಾರಣಗಳು" ಎಂದು ತಿಳಿಸುತ್ತಾನೆ. ಪೌರ ನ್ಯಾಯಾಲಯಗಳ ಕಾರ್ಯ ಕ್ಷೇತ್ರ ರಾಷ್ಟ್ರದ ಎಲ್ಲೆಗಳಿಗೆ ಪರಿಮಿತವಾಗಿದ್ದರೂ, ಅವು ಅಂತರರಾಷ್ಟ್ರೀಯ ನೀತಿನಿಯಮಗಳನ್ನು ನಿಷ್ಪಕ್ಷಪಾತವಾಗಿ ವ್ಯಕ್ತಪಡಿಸುತ್ತವೆ. ಆದುದರಿಂದಲೇ ಅವು ಅಂತರರಾಷ್ಟ್ರೀಯ ನ್ಯಾಯದ ಸರಿಯಾದ ಶಾಸನಾರ್ಹತೆಯ ನಿರೂಪಣೆ ಯಲ್ಲಿ ಅತಿ ಪ್ರಾಮುಖ್ಯವಾದುವು. ಓಪನ್‌ಹೀಮನನ್ನು ಬಿಟ್ಟು, ಫೆನ್ವಿಕ್, ವಿಲ್ಸನ್, ಟಕರ್, ಸ್ವಾರ್ಜೆನ್‌ಬರ್ಗರ್, ಹೈಡ್, ಸ್ಟಾರ್ಕ್, ಬ್ರೈರ್ಲಿ, ಜೆಸ್ಸೂಪ್ ಎಲ್ಲರೂ ನ್ಯಾಯ ಶಾಸ್ತ್ರಜ್ಞರ ಬರಹಗಳನ್ನು ಪ್ರಮುಖವಾದ ಮೂಲಕಾರಣವಾಗಿ ಪರಿಗಣಿಸುತ್ತಾರೆ. ಆದರೆ ಅವು "ನ್ಯಾಯಾಲಯಗಳ ಕಾರ್ಯಾಚರಣೆಗಳನ್ನು ಕುಂದಿಸುತ್ತದೆಯೆಂದೂ,

ಆದುದರಿಂದ ಅದನ್ನು ನಾವು ಅಂತರರಾಷ್ಟ್ರೀಯ ನ್ಯಾಯದ ಸಾಕ್ಷಿಯಾಗಿ ಪರಿಗಣಿಸಬಹುದೇ ವಿನಾ, ಮೂಲಕಾರಣವಾಗಲ್ಲ" ಎಂದು ಓಪನ್‌ಹೀಮನ ಅಭಿಪ್ರಾಯ. ನ್ಯಾಯಶಾಸ್ತ್ರ ಪಾರಂಗತರ ಬರಹಗಳು ನ್ಯಾಯಾಧೀಶರ ತೀರ್ಪಿನ ಮೇಲೆ ತಮ್ಮ ಪ್ರಭಾವವನ್ನು ಬೀರುತ್ತವೆ. ಆದುದರಿಂದ ಅಂತಹ ಬರವಣಿಗೆಗಳೂ ಅಂತರರಾಷ್ಟ್ರೀಯ ನ್ಯಾಯಕ್ಕೆ ಪ್ರಮುಖವಾದ ಮೂಲಗಳು ಎಂದು ಮಿಕ್ಕವರ ವಾದ. ಕೊನೆಯದಾಗಿ ಅಂತರರಾಷ್ಟ್ರೀಯ ಸೌಹಾರ್ದ ಹೇಗೆ ಮೂಲಕಾರಣ ವೆಂಬುದನ್ನು ತಿಳಿಯೋಣ. ಪರರಾಷ್ಟ್ರಗಳಲ್ಲಿ ಒಂದು ರಾಷ್ಟ್ರದ ರಾಯಭಾರಿಗೆ ಸಲ್ಲಿಸತಕ್ಕ ಮನ್ನಣೆ ಗೌರವಗಳು, ರಾಷ್ಟ್ರಗಳ ಪರಸ್ಪರ ವಿನಯ, ಅನುಕೂಲ ಮತ್ತು ಸದ್ಭಾವದ ನಿಯಮಗಳು, ಅಂತರರಾಷ್ಟ್ರೀಯ ಸೌಹಾರ್ದದಿಂದ ಅನುಗ್ರಹಿಸಲ್ಪಟ್ಟವುಗಳೇ ವಿನಾ ಅಂತರರಾಷ್ಟ್ರೀಯ ನ್ಯಾಯದಿಂದಲ್ಲ. ಅಮೆರಿಕಾ ಸಂಯುಕ್ತ ಸಂಸ್ಥಾನದ ಮತ್ತು ಇತರ ಅಮೆರಿಕದ ರಾಷ್ಟ್ರಗಳ ನ್ಯಾಯಾಲಯಗಳೆಲ್ಲವೂ, ಅಂತರರಾಷ್ಟ್ರೀಯ ಸೌಹಾರ್ದ ನಿಯಮಗಳಿಗೇ ಬೆಲೆಕೊಡುತ್ತವೆ. ಆದರೆ ಇಂಗ್ಲೆಂಡ್ ಹಾಗಲ್ಲ. ಆದುದರಿಂದ ಕಾರ್ಯಕ್ಷೇತ್ರಗಳಲ್ಲಿ ಅದರ ಪ್ರಭಾವವನ್ನು ಕಂಡ ಮೇಲಂತೂ ಸೌಹಾರ್ದ ನಿಯಮಗಳು ಅಗತ್ಯವಾದ ಮೂಲಕಾರಣಗಳೆಂದು ಧೈರ್ಯವಾಗಿ ಹೇಳಬಹುದು.

೪

ಅಂತರರಾಷ್ಟ್ರೀಯ ನ್ಯಾಯದ ಅಭಿವೃದ್ಧಿಯು ಗಮನೀಯವಾದುದು. ಅದು ಹುಟ್ಟಿದಾಗಿನಿಂದ ಇಂದಿನ ವರೆಗೆ ಅದರ ಬೆಳವಣಿಗೆ, ಪರಿವರ್ತನೆಗಳು ಬಹಳ ವಿಚಿತ್ರ ವಾಗಿದೆ. ಡಾ || ಓಪನ್‌ಹೀಮನು ಅಂತರರಾಷ್ಟ್ರೀಯ ನ್ಯಾಯದ ಬೆಳವಣಿಗೆಯನ್ನು ಪ್ರಕೃತಿವಾದಿ (Naturalist) ಹ್ಯೂಗೋ ಗ್ರೋಷಸ್‌ಗಿಂತ ಮುಂಚೆ ಮತ್ತು ನಂತರ ಹೀಗಿತ್ತೆಂದು ಎರಡು ಭಾಗಗಳಾಗಿ ವಿಂಗಡಿಸುತ್ತಾನೆ. ಮಿಕ್ಕವರಾರೂ ಆ ರೀತಿಯ ವಿಭಾಗವನ್ನು ಮಾಡುವುದಿಲ್ಲ. ಆದರೆ ಯಾರೂ ಆ ವಿಭಾಗವನ್ನು ವಿರೋಧಿಸಿಯೂ ಇಲ್ಲ.

ಗ್ರೋಷಸ್ಸನು ಹುಟ್ಟುವುದಕ್ಕೆ ಮುಂಚೆ ಅಂತರರಾಷ್ಟ್ರೀಯ ನ್ಯಾಯದ ಬೆಳವಣಿಗೆ ಹೇಗಿತ್ತೆಂದು ವಿಚಾರಮಾಡಿದಲ್ಲಿ ಹಲವಾರು ಪುರಾತನ ರಾಷ್ಟ್ರಗಳು ನಮ್ಮ ದೃಷ್ಟಿಪಥದಲ್ಲಿ ಕಂಡುಬರುತ್ತವೆ. ಆ ರಾಷ್ಟ್ರಗಳು ವಿವಿಧೋದ್ದೇಶಗಳು, ಸಂಸ್ಕೃತಿ, ನಾಗರಿಕತೆ ಮತ್ತು ಮತಗಳುಳ್ಳವುಗಳಾಗಿದ್ದರೂ ತಮ್ಮ ಹೊರಗಣ ವ್ಯವಹಾರಗಳಲ್ಲಿ ಯುದ್ಧ, ಒಪ್ಪಂದಗಳು, ಯುದ್ಧ ಕೈದಿಗಳು ಮತ್ತು ರಾಜಕೀಯ ಕೈದಿಗಳ ವಿಷಯವಾಗಿ ಕೆಲವು ನೀತಿನಿಯಮಗಳನ್ನು ಅನುಸರಿಸುತ್ತಿದ್ದವು. ಈ

ನಿಯಮಗಳೆಲ್ಲವೂ ದೈವರಕ್ಷಣೆಯಲ್ಲಿವೆಯೆಂದು ಅವು ಭಾವಿಸಿದ್ದವು. ಅಂತಹ ನಿಯಮಗಳನ್ನು ಉಲ್ಲಂಘಿಸಿದವರು ತೀವ್ರವಾದ ಪ್ರಾಯಶ್ಚಿತ್ತಗಳಿಗೆ ಗುರಿಯಾಗಬೇಕಾಗಿದ್ದಿತು. ಆ ರಾಷ್ಟ್ರಗಳಲ್ಲಿ ಮುಖ್ಯವಾದುವು ಪುರಾತನ ಯೆಹೂದ್ಯ, ಗ್ರೀಕ್, ರೋಮ್, ಚೀನಾ ಮತ್ತು ಭಾರತ ರಾಷ್ಟ್ರಗಳು.

ನಾವು ಸ್ಥೂಲವಾಗಿ ಪರಿಶೀಲಿಸಿದರೆ, ಅಂತರರಾಷ್ಟ್ರೀಯ ನ್ಯಾಯದ ಇತಿಹಾಸವು ಮಾನವನ ಇತಿಹಾಸದೊಂದಿಗೆ ಸಮಾನಾದಿಯಾಗಿದೆ. ವಿಶ್ವದ ಇತಿಹಾಸದಲ್ಲೇ ಮೊದಲನೆಯ ಒಪ್ಪಂದವೆಂದರೆ ಕ್ರಿ.ಪೂ. ೪೦೦೦ ವರ್ಷಗಳ ಹಿಂದೆ ಮೆಸಪೊಟಾಮಿಯದ ಲಾಗಾಷ್ ನಗರ ರಾಷ್ಟ್ರದ ಇಯನೇಟಂನಿಗೂ ಮತ್ತು ಇನ್ನೊಂದು ನಗರ ರಾಷ್ಟ್ರವಾದ 'ಉಮ್ಮಾ'ದ ಜನಗಳಿಗೂ ನಡೆದುದು. ಪುರಾತನ ಗ್ರೀಸ್ ದೇಶವು, ಮಾಯಾಗೋಳದಲ್ಲಿರುವಂತೆ, ಅಂತರರಾಷ್ಟ್ರೀಯ ನ್ಯಾಯದಂತಿರುವ, ಶೀಘ್ರವಾಗಿ ನಶಿಸಿಹೋಗುತ್ತಿರುವ ಸೂಕ್ಷ್ಮ ಸ್ವರೂಪವೊಂದನ್ನು ಪ್ರದರ್ಶಿಸುತ್ತದೆ. ಪ್ರಕೃತಿನಿಯಮದ (Natural Law) ಮೂಲಭಾವನೆಗಳು ಗ್ರೀಸ್ ದೇಶದಲ್ಲಿ ಮೂಡಿದ್ದವು. ಇದಕ್ಕಾಗಿ ನಾವು ಆ ರಾಷ್ಟ್ರಕ್ಕೆ ಚಿರಋಣಿಗಳು. ರೋಮನರ ಉಜ್ವಲ ವಿಚಾರಶಕ್ತಿ ಈ ಭಾವಗಳಿಗೆ ತಮ್ಮ ನ್ಯಾಯವ್ಯವಹಾರದ ಮೂಲತತ್ತ್ವಗಳಾದ 'ರಾಷ್ಟ್ರಗಳ ನ್ಯಾಯ' (Law of Nations or Jus Gentium) ಮತ್ತು 'ಧರ್ಮಯುದ್ಧ' (Bellum Justum)ಗಳನ್ನು ಸೇರಿಸಿತು. ಪುರಾತನ ಕಾಲದಲ್ಲಿಯೂ ಒಪ್ಪಂದಗಳು ಆಚರಣೆಯಲ್ಲಿದ್ದವು. ಆದರೆ ಅವು ರೋಮನರ ಆಳ್ವಿಕೆಯಲ್ಲಿ ಅಷ್ಟು ಪ್ರಾಮುಖ್ಯತೆಯನ್ನು ಹೊಂದಿರಲಿಲ್ಲ. ಗ್ರೋಷಿಯಸ್ಸನ ಅತಿ ಮುಖ್ಯವಾದ ಕಾಣಿಕೆಯೆಂದರೆ ಅವನು ಬರೆದ "ಶಾಂತಿ ಮತ್ತು ಯುದ್ಧಕ್ಕೆ ಸಂಬಂಧಿಸಿದ ನ್ಯಾಯಶಾಸ್ತ್ರ" (*De jure belli ac pacis librii*) ಎಂಬ ಗ್ರಂಥ. ಆ ಗ್ರಂಥ ಅಂದಿನ ಯುಗದಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ಮಾಡಿತು. ಅಂದಿನ ಅಂತರರಾಷ್ಟ್ರೀಯ ನ್ಯಾಯದ ಮೂಲತತ್ತ್ವಗಳಿಗೆ ಆಧುನಿಕವಾದ ಮೆರಗನ್ನು ಕೊಟ್ಟಿತು. ಅದರ ಫಲವಾಗಿ ಮತೀಯ ಶಾಸನಗಳಿಂದ (Religious Laws) ಬೇರೆಯಾದ, ಪಂಥಾತೀತವಾದ, ಮಾನವನಲ್ಲಿ ನೀತಿಧರ್ಮಗಳಿಗನುಸಾರವಾದ, ಕ್ರೈಸ್ತನೀತಿ ಮತ್ತು ಧರ್ಮಗಳನ್ನು ಇನ್ನೂ ತನ್ನಲ್ಲುಳ್ಳ, ಒಂದು ಹೊಸ ರೂಪವನ್ನು ಅಂತರರಾಷ್ಟ್ರೀಯ ನ್ಯಾಯ ತಾಳಿತು. ಹದಿನೆಂಟನೆಯ ಶತಮಾನದ ಶಾಂತ ವಾತಾವರಣ ಅದರ ಬೆಳವಣಿಗೆಯನ್ನು ಪ್ರೋತ್ಸಾಹಿಸಿತು. ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಅಂತರರಾಷ್ಟ್ರೀಯ ನ್ಯಾಯಪುಷ್ಪವು ವಿಕಸಿತವಾಯಿತು. ಹತ್ತೊಂಬತ್ತನೆಯ ಶತಮಾನದವರೆಗೆ ಅದು ತತ್ತ್ವರೂಪದಲ್ಲಿತ್ತೇ ವಿನಾ ರಾಷ್ಟ್ರಗಳು ಅದನ್ನು ಅನುಷ್ಠಾನಕ್ಕೆ

ತಂದಿರಲಿಲ್ಲ. ಆ ಕಾಲದಲ್ಲಿ ಅಂತರರಾಷ್ಟ್ರೀಯ ನ್ಯಾಯವಿಜ್ಞಾನವು ತನ್ನ ಐತಿಹಾಸಿಕ ಪ್ರಾಮುಖ್ಯತೆಯನ್ನು ಕಳೆದುಕೊಂಡಿದ್ದರೂ, ರಾಷ್ಟ್ರಗಳು ಅದನ್ನು ಅನುಷ್ಠಾನಕ್ಕೆ ತಂದುದರ ಫಲವಾಗಿ ಅದು ಇಮ್ಮಡಿಯಾಗಿ ವೃದ್ಧಿ ಹೊಂದಿ, ಎಲ್ಲೆಡೆಯಲ್ಲಿಯೂ ಹರಡಿ, ಒಂದು ನವಯುಗವನ್ನೇ ಉತ್ಪಾಟಿಸಿದರೆ ಆಶ್ಚರ್ಯವೇನಿಲ್ಲ. ಆ ಕ್ಷೇತ್ರದಲ್ಲಿ ಅಭಿವೃದ್ಧಿ ಹೊಂದಲು ಸಹಾಯಕವಾದ ಅತಿ ಮುಖ್ಯ ಸಾಧನೆಗಳೆಂದರೆ "ಬಹು ರಾಷ್ಟ್ರೀಯ ಒಪ್ಪಂದಗಳು" (Multilateral Treaties). ಅಂತಹ ಒಪ್ಪಂದಗಳಲ್ಲನೇಕವು ಫಲಕಾರಿಯಾಗದಿರಲು ಅವಕ್ಕೆ ಸಹಿಹಾಕಿದ ರಾಷ್ಟ್ರಗಳು ಮುಖ್ಯವಲ್ಲದಿರುವುದು ಇಲ್ಲವೇ ರಾಷ್ಟ್ರಗಳು ಅಲ್ಪಸಂಖ್ಯೆಯಲ್ಲಿ ಸೇರಿರುವುದೇ ಕಾರಣವಾಯಿತು. ನಂತರ ರಚಿತವಾದ "ರಾಷ್ಟ್ರಗಳ ಸಂಘ" (League of Nations)ದ ಅಪಜಯ ಮತ್ತು ಸಧ್ಯದಲ್ಲಿ ರಚಿತವಾಗಿರುವ "ವಿಶ್ವಸಂಸ್ಥೆ"ಗೆ (United Nations) ಅಪಜಯ ಒದಗಬಹುದಾದರೂ, ಆ ಕ್ಷೇತ್ರದಲ್ಲಿ ಮುನ್ನುಗ್ಗಿ ಧ್ಯೇಯಸಾಧನೆ ಮಾಡಬೇಕೆಂಬ ಆಶಾಭಾವನೆ ಜನಗಳಲ್ಲಿರುವುದು ಚೆನ್ನಾಗಿ ವ್ಯಕ್ತವಾಗುತ್ತಿದೆ. ಮಾನವ ಜನಾಂಗವೇನೋ ಅಂತ್ಯದಲ್ಲಿ ಅಂತರರಾಷ್ಟ್ರೀಯ ನ್ಯಾಯದ ಇನ್ನೂ ಸ್ಥಿರವಾದ ಭವ್ಯಭವನವೊಂದರ ನಿರ್ಮಾಣದಲ್ಲಿ ಪಣತೊಟ್ಟಿರುವುದು ಭಾಸವಾಗುತ್ತದೆ. "ಸದಾ ಕೇಡನ್ನೇ ಬಯಸುವ ಮತ್ತು ಸತ್ಕಾರ್ಯವನ್ನೇ ಸಾಧಿಸುವ" ಅಣು ಆಸ್ಫೋಟಕಗಳು ಆ ಶಕ್ತಿಯ ಅಂಶವಾಗಬಹುದೆಂದು ತೋರುತ್ತದೆ ಎಂದು ಆರ್ಥರ್ ನಸ್‌ಬಾಂ ತನ್ನ ಗ್ರಂಥದಲ್ಲಿ ತಿಳಿಸುತ್ತಾನೆ.

೩

ಪ್ರಾಚೀನ ರಾಷ್ಟ್ರಗಳು ತಮ್ಮ ದೈನಂದಿನ ವ್ಯವಹಾರಗಳಲ್ಲಿ ಅನುಸರಿಸುತ್ತಿದ್ದ ನೀತಿಪದ್ಧತಿಗಳನ್ನು ಕೂಲಂಕಷವಾಗಿ ಪರಿಶೀಲಿಸೋಣ. ಅತಿ ಪುರಾತನ ರಾಷ್ಟ್ರವಾದ ಇರಾಕ್ವಾಯಿಸ್‌ನಲ್ಲಿ ತಮ್ಮ ಕೈದಿಗಳನ್ನು ತಾವೇ ತಿನ್ನುತ್ತಿದ್ದರು. ಮಾಂಟೇಸ್ಕನು ಅಂತಹ ರಾಷ್ಟ್ರದಲ್ಲೂ ಅಂತರರಾಷ್ಟ್ರೀಯ ನ್ಯಾಯವಿತ್ತೆಂದು ಒತ್ತಿ ಹೇಳುತ್ತಾನೆ. ಇರಾಕ್ವಾಯಿಸ್‌ನ ಜನಗಳಲ್ಲಿ ಪರದೇಶೀಯನೆಂದರೆ ಶತ್ರುವೆಂದೇ ಭಾವನೆ. ಅಂತಹ ಇರಾಕ್ವಾಯಿನರೂ ರಾಯಭಾರಪದ್ಧತಿಯನ್ನಿಟ್ಟುಕೊಂಡು ಯುದ್ಧದಲ್ಲಿ ಅಶಕ್ತರನ್ನೂ ಅಸಹಾಯರನ್ನೂ ಬಿಟ್ಟುಬಿಡುತ್ತಿದ್ದರು ಎಂದು ಮಾಂಟೇಸ್ಕ್ಯೂ ಹೇಳುತ್ತಾನೆ. ಅಂದಿನ ಕಾಲದ ಮಾನವನ ಮನಸ್ಸಿನಲ್ಲಿ ಅಂತರರಾಷ್ಟ್ರೀಯ ನ್ಯಾಯದ ಮೂಲತತ್ತ್ವಗಳು ಸ್ವಾಭಾವಿಕವಾಗಿಯೇ ಹುದುಗಿದ್ದವು ಎಂಬ ಮಾಂಟೇಸ್ಕನ ವಾದವನ್ನು ನಸ್‌ಬಾಂ ಒಪ್ಪುವುದಿಲ್ಲ. ಪ್ರಾಚೀನ ಅಂತರ್ದೇಶೀಯ ಒಪ್ಪಂದಗಳಿಗೆ ದೇವತೆಗಳೇ ಸಾಕ್ಷಿಗಳು. ನಾವು ಹಿಂದೆ ತಿಳಿಸಿದ ಮೆಸಪೊಟಾಮಿಯದ ಒಪ್ಪಂದವು

ಅದೇ ರೀತಿ ನಡೆದಿತ್ತು. ಆ ಒಪ್ಪಂದ ಸುಮೇರಿಯದ ದೇವತೆಗಳನ್ನು ಸಾಕ್ಷಿಯಾಗಿಟ್ಟು ನಿಯಮೋಲ್ಲಂಘನೆ ಮಾಡಿದವರು ಆ ದೇವತೆಗಳ ಕ್ರೋಧಾಗ್ನಿಗೆ ತುತ್ತಾಗುವರೆಂಬ ನಂಬಿಕೆ ಆಗಿನ ಜನರಲ್ಲಿತ್ತು. ಕ್ರಿ.ಪೂ. ೨೦೦೦ ವರ್ಷಗಳ ಹಿಂದೆ ಈಜಿಪ್ಟಿನವರಿಗೂ ಮತ್ತು ಹಿಟ್ಟೈಟ್ ಜನಾಂಗದವರಿಗೂ ಇದೇ ರೀತಿ ಒಪ್ಪಂದಗಳಾದವು.

ಅಂತರರಾಷ್ಟ್ರೀಯ ನ್ಯಾಯದ ಇತಿಹಾಸಕ್ಕೇ ಅತಿ ಪ್ರಮುಖವಾದ ಕಾಣಿಕೆ ಯೆಂದರೆ ಯೆಹೂದ್ಯರದು. ಅವರ 'ಉದ್ಧಾರಕನ ಧ್ಯೇಯಗಳು' (Messianic Ideals) ಅವರ ಪಾತ್ರವನ್ನು ಸಮರ್ಥಿಸುತ್ತವೆ. ತಮ್ಮ ಪೌರಸ್ತ್ಯಾಯ ನಿರೂಪಣೆ ಯಲ್ಲಿ ಈ ಧ್ಯೇಯಗಳಿಗೆ ಮನ್ನಣೆಯಿತ್ತರು. ಉದಾಹರಣೆಗೆ "ಒಂದು ರಾಷ್ಟ್ರ ಮತ್ತೊಂದು ರಾಷ್ಟ್ರದ ಮೇಲೆ ಕತ್ತಿಯನ್ನೆತ್ತದಿರಲಿ. ಇನ್ನು ಮುಂದೆ ಅವು ಕಲಿಯುವುದೂ ಬೇಡ", "ಪರಕೀಯರನ್ನು ವಿಶ್ವಾಸದಿಂದ ಕಾಣಿರಿ, ಏಕೆಂದರೆ ನೀವೇ ಈಜಿಪ್ಟ್ ದೇಶದಲ್ಲಿ ಪರಕೀಯರಾಗಿದ್ದಿರಿ", "ನಿನ್ನ ಸ್ವದೇಶೀಯನಿಗೆ ಯಾವ ಕಾಯಿದೆಯೊ, ಅದೇ ಪರದೇಶೀಯನಿಗೂ ಇರಲಿ. ಭೇದಭಾವ ಬೇಡ" ಮುಂತಾದ ತತ್ತ್ವಗಳು ಯೆಹೂದ್ಯರ ವ್ಯವಹಾರಗಳ ಮೇಲೆ ಪ್ರಬಲವಾದ ಪ್ರಭಾವವನ್ನು ಬೀರಿದವು. ಅಂತರರಾಷ್ಟ್ರೀಯ ದೃಷ್ಟಿಯಿಂದ ಇದು ಮುಖ್ಯವಾದದ್ದು. ಯೆಹೂದ್ಯರು ಏಕದೇವತಾರಾಧಕರು. ಅವರ ನೈತಿಕಮಟ್ಟ ನೆರೆಹೊರೆ ವಿಧರ್ಮಿ ರಾಷ್ಟ್ರಗಳದಕ್ಕಿಂತಲೂ ಉನ್ನತವಾದುದು. ವಾಣಿಜ್ಯ ಅವರ ವೃತ್ತಿಯಾದುದರಿಂದ ವಿದೇಶಿಯರೊಡನೆ ಅಗತ್ಯವಾಗಿ ವ್ಯವಹರಿಸಬೇಕಾಗಿತ್ತು. ಅವರು ಬಹುದೇವತಾರಾಧಕರ ಆಜನ್ಮವಿರೋಧಿಗಳು. ಯುದ್ಧದಲ್ಲಾದರೋ ಅತ್ಯಂತ ಕ್ರೂರಿಗಳು. ಮಿತ್ರ ರಾಷ್ಟ್ರಗಳೊಡನೆ ಸಂಬಂಧವನ್ನಿಟ್ಟುಕೊಂಡಿದ್ದರೇ ವಿನಾ ಬಾಕಿಯವರೊಡನಲ್ಲ. ರಾಯಭಾರಿಗಳನ್ನು ಕಂಡರೆ ಪೂಜ್ಯಭಾವ ಮತ್ತು ಒಪ್ಪಂದಗಳನ್ನು ನಿಯಮಾನುಸಾರವಾಗಿ ಆಚರಿಸುವುದು ಅವರಲ್ಲಿ ವಾಡಿಕೆಯಲ್ಲಿತ್ತು. ದಾಸ್ಯಪದ್ಧತಿ ಆಚರಣೆ ಯಲ್ಲಿದ್ದರೂ ದಾಸರನ್ನು ಕಂಡರೆ ಮಿಕ್ಕವರಷ್ಟು ಕ್ರೂರಿಗಳಾಗಿರಲಿಲ್ಲ. ಇಷ್ಟೆಲ್ಲಾ ನೋಡಿದರೆ ಭಾವೀ ಜಗತ್ತಿನಲ್ಲಿ ವಿಶ್ವರಾಷ್ಟ್ರಗಳ ಶಾಂತಿಯುತ ಒಕ್ಕೂಟವೊಂದರ ಛಾಯೆಯನ್ನು ಗುರುತಿಸಿದ್ದರೆಂದು ಹೇಳಬಹುದು. ಈ ಧ್ಯೇಯವನ್ನು ಕಾರ್ಯರೂಪಕ್ಕೆ ತರದಿದ್ದರೂ, ಅದು ಅವರಲ್ಲೇ ಬೇರೂರಿತ್ತೆಂದು ಖಚಿತವಾಗಿ ಹೇಳಬಹುದು.

ನಾವು ಇನ್ನು ಅಂತರರಾಷ್ಟ್ರೀಯ ನ್ಯಾಯಕ್ಕೆ ಭಾರತದ ಕಾಣಿಕೆ ಏನು ಎಂಬುದನ್ನು ಪರಿಶೀಲಿಸೋಣ. ಪರಿಶೀಲಿಸುವ ಮುನ್ನ ಪ್ರಾಚೀನ ಭಾರತದ ವಿಷಯವಾಗಿ ಪಾಶ್ಚಿಮಾತ್ಯ ಅಂತರರಾಷ್ಟ್ರೀಯ ನ್ಯಾಯದ ಬರಹಗಾರರ ಅಭಿಪ್ರಾಯಗಳನ್ನು ತಿಳಿಸಿ ನಂತರ ಅವುಗಳ ಬೆಲೆಯನ್ನು ನಿರ್ಧರಿಸುವುದು ಯುಕ್ತವಾದುದು.

ಫೆನ್ವಿಕ್, ಹಾಲ್, ಹ್ಯೂಗ್ಸ್ ಮುಂತಾದ ಬರಹಗಾರರು ಪ್ರಾಚೀನ ಭಾರತದಲ್ಲಿ ಅಂತರರಾಷ್ಟ್ರೀಯ ನ್ಯಾಯದ ಇರುವಿಕೆಯನ್ನೇ ಒಪ್ಪುವುದಿಲ್ಲ. "ಮನುಧರ್ಮ ಶಾಸ್ತ್ರ ಯುದ್ಧಕಾಲದಲ್ಲಿ ಅನುಸರಿಸಬೇಕಾದ ಕೆಲವು ನೀತಿಧರ್ಮಗಳನ್ನು ವಿವರಿಸು ವುದೇ ವಿನಾ ಅವು ನಿಯಮಗಳಲ್ಲ" ಎಂದು ಅಭಿಪ್ರಾಯಪಡುತ್ತಾರೆ. ಯುದ್ಧಕ್ಕೆ ಸಂಬಂಧಿಸಿದ ನ್ಯಾಯಶಾಸ್ತ್ರವೆಲ್ಲಾ "ಅಂತರ್ಭಾರತೀಯ ಕಲಹ"ಗಳಿಗೆ ಸಂಬಂಧಿ ಸಿದುದೇ ವಿನಾ "ಅಂತರ್ದೇಶೀಯ ಯುದ್ಧ"ಗಳಿಗಲ್ಲ. ಇಷ್ಟಲ್ಲದೆ ನಸ್‌ಬಾಂ ಮುಂದು ವರೆಯುತ್ತಾ "ಭಾರತೀಯ ಸಮರದಲ್ಲಿ ಪಾಲಿಸಬೇಕೆನ್ನುವ ಭಾರತೀಯ ನಿಯಮ ಗಳನ್ನು ಕಾರ್ಯರೂಪಕ್ಕೆ ತರಲು ಸರಿಯಾದ ನ್ಯಾಯರಕ್ಷಣೆಯೇ ಇಲ್ಲ, ಅಂದರೆ ನಿಯಮೋಲ್ಲಂಘನೆ ಮಾಡಿದವರನ್ನು ಶಿಕ್ಷಿಸಲು ಒಂದು ಉನ್ನತವಾದ ನ್ಯಾಯರಕ್ಷಿತ ವ್ಯವಧಾನವೇ ಇಲ್ಲ" ಎಂದು ತಿಳಿಸುತ್ತಾನೆ. ಮೇಲ್ಕಂಡ ಅಂಶಗಳನ್ನು ಯೋಚಿಸಿ ದರೆ ನಮಗೆ ಕೆಲವು ವಿಷಯಗಳು ಗೋಚರವಾಗುತ್ತವೆ. ಮೊದಲನೆಯದಾಗಿ ಪಾಶ್ಚಿಮಾತ್ಯರ ದೃಷ್ಟಿಯಲ್ಲಿ ಭಾರತದಲ್ಲಿ ರಾಷ್ಟ್ರಗಳೇ ಇರಲಿಲ್ಲ. ಎರಡನೆಯದಾಗಿ ಅವರ ಧರ್ಮಶಾಸ್ತ್ರಗಳಿಗೆ ಪೌರನ್ಯಾಯದಷ್ಟು ಶಕ್ತಿ ಇಲ್ಲವೆಂದೂ, ಆದುದರಿಂದ ಅವು ಕೇವಲ ಬೋಧನೆಗಳೇ ವಿನಾ ಸ್ವೇಚ್ಛಾಪ್ರವೃತ್ತಿಯನ್ನು ತುಳಿದಾಳುವ ಶಕ್ತಿ ಧರ್ಮಶಾಸ್ತ್ರಗಳಿಗಿಲ್ಲ ಎಂದು ತಿಳಿದುದು. ಪ್ರತಿಯೊಬ್ಬರಿಗೂ ಬೇರೆಬೇರೆಯಾಗಿ ಉತ್ತರಗಳನ್ನು ಕೊಡುವುದರ ಬದಲು, ಒಟ್ಟಿನಲ್ಲಿ ಪ್ರಾಚೀನ ಭಾರತ ಹೇಗಿತ್ತೆಂದು ವಿವರಿಸಿದರೆ ಪಾಶ್ಚಿಮಾತ್ಯ ಬರಹಗಾರರ ಸಂಶಯ ನಿವಾರಣೆಯಾಗುತ್ತದೆ. ಭಾರತದ ಅಂತರರಾಷ್ಟ್ರೀಯ ನ್ಯಾಯಕ್ಕೆ ಧರ್ಮವೇ ಅಡಿಗಲ್ಲು. ಧರ್ಮವೇ ಸಮಾಜದ ವ್ಯಕ್ತಿಗಳ ಪರಸ್ಪರ ವ್ಯವಹಾರಗಳನ್ನು ಗೊತ್ತುಮಾಡುತ್ತಿತ್ತು. ಆದುದ ರಿಂದ ರಾಷ್ಟ್ರಗಳೂ ಜನತೆಯೂ ಸಂಘಟನಾಶಕ್ತಿಯುತವಾದ ಒಂದೇ ಧರ್ಮಕ್ಕೆ ದಾಸರಾದರು. "ಧರ್ಮಕ್ಕೆ ಚ್ಯುತಿಬಂದಾಗ ಅದರ ಪುನರುದ್ಧಾರಕ್ಕಾಗಿ ಪುನಃ ಅವತರಿಸುವೆನು" ಎಂಬ ಗೀತೆಯಲ್ಲಿನ ಕೃಷ್ಣವಾಕ್ಯ, ಧರ್ಮಕ್ಕೆ ನಮ್ಮ ದೇಶದಲ್ಲಿ ಪ್ರಾಚೀನಕಾಲದಿಂದಲೂ ಯಾವ ಸ್ಥಾನವಿತ್ತೆಂದು ತಿಳಿಸುತ್ತದೆ. ಅಧರ್ಮವಾದ ನಡವಳಿಕೆ ತನ್ನ ಮೇಲೆ ದೈವಾಗ್ರಹವನ್ನು ತರುವುದೆಂಬ ಭಾವನೆ ಭಾರತೀಯನಿಗಿತ್ತು. ಧರ್ಮ, ರಾಷ್ಟ್ರಕ್ಕೂ ಪೂರ್ವವಾದುದು. ರಾಷ್ಟ್ರಗಳು ಅದರಂತೆ ನಡೆದವೇ ವಿನಾ ರಾಷ್ಟ್ರಕ್ಕಾಗಿ ಧರ್ಮವಿರಲಿಲ್ಲ. ಆಧುನಿಕ ಐರೋಪ್ಯ ಅಂತರರಾಷ್ಟ್ರೀಯ ನ್ಯಾಯಕ್ಕೂ, ಪ್ರಾಚೀನ ಭಾರತದ ಅಂತರರಾಷ್ಟ್ರೀಯ ನ್ಯಾಯಕ್ಕೂ ಇಷ್ಟೇ ವ್ಯತ್ಯಾಸ. ಯೂರೋಪಿನಲ್ಲಿ "ರಾಷ್ಟ್ರಗಳ ಒಪ್ಪಿಗೆ"ಯಿಂದ ಆ ನ್ಯಾಯಶಾಸ್ತ್ರ ಆಚರಣೆಗೆ ಬಂದಿತು. ಭಾರತದಲ್ಲಾದರೋ ಧರ್ಮ, ನ್ಯಾಯಗಳಿಗೆ ಅವಶ್ಯವಾಗಿ ತಲೆ

ಬಾಗಲೇ ಬೇಕು. 'ಒಪ್ಪಿಗೆ' ಎಂಬ ಮಾತೇ ಇಲ್ಲ. ಏಕೆಂದರೆ ಆ ಧರ್ಮಗಳೆಲ್ಲವೂ ಒಂದು ಉನ್ನತವಾದ ಜ್ಞಾನಕ್ಕೆ ಗೋಚರವಾಗಿ ಪ್ರಚಾರಕ್ಕೆ ಬಂದವು.

ಭಾರತದಲ್ಲಿ ರಾಷ್ಟ್ರಗಳಿದ್ದವೇ ಎಂದು ವಿಚಾರಮಾಡೋಣ. ಅನಾದಿಕಾಲದಿಂದಲೂ ಭಾರತದಲ್ಲಿ 'ಆರ್ಯರ' ಮತ್ತು 'ಅನಾರ್ಯರ' ರಾಜಕೀಯ ಭಾಗಗಳಿದ್ದವು. ಅಂದಿನ ರಾಜ್ಯ ಪರಿಮಾಣವೆಂದರೆ "ಕುಲ" (Tribe) ಅಥವಾ "ಜನ". ಒಂದೇ ಆಡಳಿತಾಂಗಕ್ಕೆ ಒಳಪಟ್ಟಿರುವ ನೂರಾರು ಗ್ರಾಮಗಳ ಸಂಘಟನೆಯೇ "ಜನ". ಅಂತಹ "ಜನ"ಗಳನ್ನು ರಾಜರು ವಂಶಾನುವಂಶವಾಗಿಯೋ ಅಥವಾ ಚುನಾಯಿತರಾಗಿಯೋ ಆಳುತ್ತಿದ್ದರು. ಅನಾರ್ಯರಲ್ಲೂ ಇಂತಹ ವ್ಯವಸ್ಥೆ ಇತ್ತು. ಈ 'ತಂಡ' ಅಥವಾ 'ಜನ'ಗಳಿಗೆ ಹೆಸರುಗಳು ಕೂಡ ಇದ್ದವು. ಉದಾಹರಣೆಗೆ ತ್ರಿತ್ಸ್ಯುಗಳು, ಪುರು, ಯದು, ಅನು, ತುರ್ವಸು ಮತ್ತು ದ್ರುಹ್ಯುಗಳು. "ಜಾನಪದ ಪ್ರಭುತ್ವವು" ಹೇಗೆ 'ಪ್ರಾದೇಶಿಕ ಪ್ರಭುತ್ವವಾಗಿ' (Territorial Sovereignty) ರೂಪಾಂತರ ಹೊಂದಿದವೆಂಬುದನ್ನು ಯಜುರ್ವೇದವು ತಿಳಿಸುತ್ತದೆ. ಗಂಗಾನದಿಯ ಕಣಿವೆಯಲ್ಲಿದ್ದ ಆರ್ಯರ ತಂಡಗಳು ಸುಸಂಘಟಿತ ರಾಷ್ಟ್ರಗಳೆಂಬುದು ನಿಸ್ಸಂದೇಹವಾದುದು. ಅವುಗಳಲ್ಲಿ ಸುಪ್ರಸಿದ್ಧವಾದುವುಗಳು ಪಾಂಚಾಲ, ಕೋಸಲ, ವಿದೇಹ ಮತ್ತು ಕಾಶಿ ರಾಷ್ಟ್ರಗಳು. ಅಥರ್ವವೇದವು ಈ ರಾಷ್ಟ್ರಗಳ ಹೊರಗೆ ಗಾಂಧಾರರು ಬಾಹ್ಲಿಕರು ಮತ್ತಿತರರು ವಾಸಿಸುತ್ತಿದ್ದರೆಂದು ತಿಳಿಸುತ್ತದೆ. ಇನ್ನು ಬೌದ್ಧರಕಾಲಕ್ಕೆ ಬಂದರೆ ನಮಗೆ ತಂಡಗಳ ರಾಜಕೀಯ ಒಕ್ಕೂಟದ ಫಲವಾಗಿ ಹದಿನಾರು ಮಹಾರಾಷ್ಟ್ರಗಳಿದ್ದವೆಂದು ತಿಳಿಯುತ್ತದೆ. ಅವೆಲ್ಲವೂ ರಾಜಪ್ರಭುತ್ವ ಇಲ್ಲವೇ ಪ್ರಜಾಪ್ರಭುತ್ವವುಳ್ಳ ರಾಷ್ಟ್ರಗಳಾಗಿದ್ದವು. ಆ ಕಾಲದಲ್ಲಿ ಆ ರಾಷ್ಟ್ರಗಳಲ್ಲಿ ಯುದ್ಧ ಮತ್ತು ಶಾಂತಿಗೆ ಸಂಬಂಧಿಸಿದ ಪರಸ್ಪರ ವ್ಯವಹಾರಗಳಿತ್ತೆನ್ನುವುದಕ್ಕೆ ಅಂದಿನ ಕಾಲದ ಸಾಹಿತ್ಯದಲ್ಲಿ ನಿದರ್ಶನಗಳು ಸಿಗುತ್ತವೆ. ದಕ್ಷಿಣ ಭಾರತದಲ್ಲೂ ಅದೇ ಕಾಲದಲ್ಲಿ ದ್ರಾವಿಡ ರಾಷ್ಟ್ರಗಳಿದ್ದವು ಎಂದು ಪಾಣಿನಿಯ ಸೂತ್ರಗಳು ಮತ್ತು ಅಶೋಕನ ಶಾಸನಗಳು ನಮಗೆಲ್ಲಾ ತಿಳಿಸುತ್ತವೆ. ಯೂರೋಪಿನ ಸಣ್ಣಪುಟ್ಟ ರಾಜಕೀಯ ವಿಭಾಗಗಳನ್ನೆಲ್ಲಾ 'ರಾಷ್ಟ್ರ'ಗಳೆಂದು ಕರೆಯುವ ಪಾಶ್ಚಿಮಾತ್ಯ ಬರಹಗಾರರಿಗೆ ಭಾರತದಲ್ಲಿ ರಾಷ್ಟ್ರಗಳಿರಲಿಲ್ಲವೆಂಬ ಭಾವನೆ ಏಕೆ ಬಂದಿತೋ ತಿಳಿಯದಾಗಿದೆ.

ಉತ್ತರ ಭಾರತದ ರಾಷ್ಟ್ರಗಳು ತಮ್ಮ ದೇಶೀಯ ವ್ಯವಹಾರಗಳಲ್ಲಿ ಮನು ಸ್ಮೃತಿ, ಯಾಜ್ಞವಲ್ಕ್ಯಸ್ಮೃತಿಗಳನ್ನು ಅನುಸರಿಸುತ್ತಿದ್ದರು. ಕೌಟಿಲ್ಯನ ಅರ್ಥಶಾಸ್ತ್ರ ರಾಜರಿಗೂ ಸಚಿವರಿಗೂ ಮಾರ್ಗದರ್ಶಕವಾಗಿತ್ತು. ಮೌರ್ಯರ ಮತ್ತು ಗುಪ್ತರ

ಸಾಮ್ರಾಜ್ಯಶಾಹಿ ಆಡಳಿತದಲ್ಲೂ ಅಧೀನ ರಾಷ್ಟ್ರಗಳ ವ್ಯಕ್ತಿತ್ವಕ್ಕೆ ಮನ್ನಣೆ ಗೌರವ ಗಳಿತ್ತು. ಇನ್ನು ಕಾವ್ಯಗಳ ಮತ್ತು ಪುರಾಣಗಳ ಕಾಲವನ್ನು ತೆಗೆದುಕೊಂಡರೆ ಅಂತರರಾಷ್ಟ್ರೀಯ ನ್ಯಾಯಸೂತ್ರಗಳ ಇರುವಿಕೆಯು ಕಂಡುಬರುತ್ತದೆ. ಈ ಸೂತ್ರ ಗಳಿಂದ ನಮಗೆ ಬಹಳ ಸಾಮಗ್ರಿ ದೊರೆಯುತ್ತದೆ. ಆದರೆ ಅದನ್ನು ನಾವು ವಿವೇಚನಾ ಯುತವಾಗಿ ಉಪಯೋಗಿಸಬೇಕು. ಕಮಂಡಕರ 'ಶುಕ್ರನೀತಿ' ಮತ್ತು 'ನೀತಿ ಸಾರ' ಮತ್ತು ಕೌಟಿಲ್ಯರ ಬರಹಗಳು ನಮಗೆ ಆಗಿನಕಾಲದ ರಾಷ್ಟ್ರಗಳ ಸರ್ಕಾರಗಳು ಹೇಗಿದ್ದುವೆಂದು ಸೂಚಿಸುತ್ತವೆ. ಇಷ್ಟಲ್ಲದೆ ಭಾರತಕ್ಕೆ ಬಂದಿದ್ದ ಹ್ಯೂಯನ್‌ತ್ಸಾಂಗ್, ಫಾಹಿಯಾನ್ ಮುಂತಾದ ಯಾತ್ರಿಕರ, ಮತ್ತು ರಾಯಭಾರಿ ಮೆಗಾಸ್ತನೀಸನ ಬರವಣಿಗೆಗಳು, ರಾಜಶಾಸನಗಳು ಅಂದಿನ ಭಾರತದಲ್ಲಿ ಅಂತರರಾಷ್ಟ್ರೀಯ ನ್ಯಾಯ ಇತ್ತೆಂದು ತೋರುವುವಲ್ಲದೆ, ಆ ಶಾಸ್ತ್ರ ಶುಷ್ಕಮೀಮಾಂಸೆಯಾಗಿರದೆ ಅನುಷ್ಠಾನ ದಲ್ಲೂ ಇತ್ತೆಂದು ಸಾಧಿಸುತ್ತವೆ. ಅಂತರರಾಷ್ಟ್ರೀಯ ವ್ಯವಹಾರದ ಇದೇ ಸಾಮಾನ್ಯ ನೀತಿ ನಿಯಮಗಳು ದಕ್ಷಿಣಭಾರತದ ಪಾಂಡ್ಯ, ಚೋಳ ಮತ್ತು ಚೇರರಾಷ್ಟ್ರಗಳಲ್ಲೂ ಇದ್ದವು. ಉತ್ತರದೇಶದ ಸಂಸ್ಕೃತ ಮತ್ತು ಬೌದ್ಧಗ್ರಂಥಗಳು ಒದಗಿಸಿರುವ ವಿಷಯ ಗಳನ್ನು ಪ್ರಾಚೀನ ತಮಿಳು ಸಾಹಿತ್ಯದ ಗ್ರಂಥಗಳು ಸಮರ್ಥಿಸುತ್ತವೆ. ಸುಪ್ರಸಿದ್ಧ ವಾದ ಗ್ರಂಥವಾದ 'ಕುರುಳ್'ನಲ್ಲಿ ರಾಯಭಾರನೀತಿ, ಸಮರನೀತಿ ಮತ್ತು ಸಮರ ತತ್ತ್ವಗಳನ್ನು ವಿಧಿಸಿರುವುದು ಕಂಡುಬರುತ್ತದೆ. ಪ್ರಾಚೀನ ಭಾರತೀಯನ ವಿಚಾರ ಶಕ್ತಿಗೆ ಸಾಮಾನ್ಯವಾಗಿ ಅಂತರರಾಷ್ಟ್ರೀಯ ನ್ಯಾಯದ ವಿಷಯಗಳೆಲ್ಲವೂ ಸಿಲುಕಿ ದವು. ಆದರೆ ಕೆಲವು ನಿಯಮಗಳನ್ನು ಅನುಷ್ಠಾನಕ್ಕೆ ತರದಿದ್ದುದಕ್ಕೆ ರಾಷ್ಟ್ರಗಳ ದೌರ್ಬಲ್ಯ ಕಾರಣವೇ ವಿನಾ ಬರಹಗಾರನೆಂದಿಗೂ ಅಲ್ಲ. ಹೇಗ್‌ನಲ್ಲಿ ೧೮೯೯ ಮತ್ತು ೧೯೦೭ರಲ್ಲಿ ಅಂಗೀಕೃತವಾದ ಸಮರಸಂಬಂಧವಾದ ನೀತಿಕಟ್ಟಳೆಗಳೆಲ್ಲಾ ಮೊದಲ ನೆಯ ಮಹಾಯುದ್ಧದಲ್ಲಿ ನುಚ್ಚುನೂರಾಗಲಿಲ್ಲವೇ? ೧೯೨೦ ರಲ್ಲಿ ಸ್ಥಾಪಿತವಾದ 'ರಾಷ್ಟ್ರಗಳ ಸಂಘ'ದ ಪರಸ್ಪರ ಕಟ್ಟು, ನೀತಿ, ನಿಯಮಗಳೆಲ್ಲಾ ಎರಡನೆಯ ಮಹಾ ಯುದ್ಧದಲ್ಲಿ ಉಲ್ಲಂಘಿಸಲ್ಪಡಲಿಲ್ಲವೇ? ಆದುದರಿಂದ ಅಂತರರಾಷ್ಟ್ರೀಯ ನ್ಯಾಯ ಒಂದು ಕಾಲದಲ್ಲಿ ಇತ್ತೇ ಇಲ್ಲವೇ ಎಂಬುದನ್ನು ಅದರ ಕಾರ್ಯಶೀಲತೆಯಿಂದ ನಿಶ್ಚಯಿಸುವುದು ಸಾಧುವಲ್ಲ. ಕೊನೆಯದಾಗಿ ಭಾರತದ 'ಏಕಚಕ್ರಾಧಿಪತ್ಯ'ದ ಮತ್ತು ಯೂರೋಪಿನ ಮಧ್ಯಯುಗದ 'ಪವಿತ್ರ ಸಂಘ'ದ (Holy Alliance) ಮೂಲತತ್ತ್ವಗಳು ಒಂದೇ. ಎರಡರ ಆಳ್ವಿಕೆಯನ್ನೂ ನಿರ್ವಹಿಸಬೇಕಾಗಿದ್ದವನು ಸಾರ್ವಭೌಮ. ಆದರೆ ವಾಸ್ತವಿಕವಾಗಿ ನೋಡಿದರೆ ಎರಡರಲ್ಲೂ ರಾಷ್ಟ್ರಗಳು ಚಕ್ರಾಧಿಪತ್ಯದೊಳಗೆ ಸ್ವತಂತ್ರವಾಗಿದ್ದರೂ ಸಾರ್ವಭೌಮನನ್ನು ಒಕ್ಕೂಟದ ಚಿನ್ಹೆ

ಯಾಗಿ ಕಾಣುತ್ತಿದ್ದರು. ಅಂತಹ ಐರೋಪ್ಯ ರಾಷ್ಟ್ರಗಳ 'ಪವಿತ್ರ ಸಂಘ'ದಲ್ಲಿ ಅಂತರರಾಷ್ಟ್ರೀಯ ನ್ಯಾಯವಿತ್ತೆಂದು ಒಪ್ಪುವ ಪಾಶ್ಚಿಮಾತ್ಯ ಬರಹಗಾರರು, ಏಕೆ ಭಾರತದ ಏಕಚಕ್ರಾಧಿಪತ್ಯದಲ್ಲೂ ಇತ್ತೆಂದು ಒಪ್ಪುವುದಿಲ್ಲವೋ ತಿಳಿಯದಾಗಿದೆ. ಆದುದರಿಂದ ಭಾರತದಲ್ಲಿದ್ದುದು 'ಅಂತರ್ಭಾರತೀಯ ಕಲಹ'ವೇ ಹೊರತು 'ಅಂತರ ರಾಷ್ಟ್ರೀಯ ನ್ಯಾಯವಲ್ಲ'ವೆನ್ನುವ ವಾದಕ್ಕೆ ಬೆಲೆ ಇಲ್ಲದಂತಾಯಿತು. ಒಟ್ಟಿನಲ್ಲಿ ಹೇಳುವುದಾದರೆ ಪ್ರಾಚೀನ ಭಾರತವೂ ಅಂತರರಾಷ್ಟ್ರೀಯ ನ್ಯಾಯಶಾಸ್ತ್ರದ ಬೆಳವಣಿಗೆಗೆ ಮಹತ್ತರ ಕಾಣಿಕೆಯೊಂದನ್ನಿತ್ತಿದೆ ಎಂಬುದು ನಿರ್ವಿವಾದವಾದ ಸಂಗತಿ.

ಕ್ರಿ.ಪೂ. ೧೦೦೦ ದಲ್ಲಿ ಪ್ರಾಚೀನ ಚೀನಾದೇಶದಲ್ಲೂ ಕೆಲವು ಅಂತರ ರಾಷ್ಟ್ರೀಯ ನ್ಯಾಯದ ತತ್ತ್ವಗಳು ಇದ್ದುದು ಕಂಡುಬರುತ್ತದೆ. ಎರಡು ರಾಷ್ಟ್ರಗಳಿಗೆ ಯುದ್ಧ ಸಂಭವಿಸಿದಾಗ ಆ ರಾಷ್ಟ್ರಗಳ ಸೈನಿಕರು ಮಾತ್ರ ಶತ್ರುಗಳೇ ವಿನಾ ಪ್ರಜೆ ಗಳಲ್ಲ. ಶಾಂತಿಕಾಲದಲ್ಲಿ ರಾಷ್ಟ್ರಗಳು ರಾಯಭಾರ ಮತ್ತು ಪರಸ್ಪರ ವ್ಯವಹಾರ ಗಳನ್ನು ಅತಿ ವೈಭವಯುತವಾದ ಸಮಾರಂಭಗಳಿಂದ ನಡೆಸುತ್ತಿದ್ದರು. ಈ ರೀತಿ ಯಾಗಿ ಚೀಣಾದೇಶವೂ ತನ್ನ ಕಾಣಿಕೆಯನ್ನು ನೀಡಿದೆ.

ಸಿ. ಕೆ. ಎನ್. ರಾಜ

(ಸಶೇಷ)

ವಿರಹಭ್ರಮೆ

ವೃಕ್ಷದೇಹದಾಲಿಂಗನ ಸುಖದಲಿ
ಮಧುಲತೆ ಮೈಮರೆದೊರಗಿತ್ತು ;
ಪ್ರಿಯ ಸಂಸ್ಪರ್ಶನ ಸುಖ ರೋಮಾಂಚನ
ಗೋಚರವೆನೆ ಹೂವರಳಿತ್ತು !

ಸಾಕ್ಷೀಪ್ರಜ್ಞೆಯ ಮಹಾಂತ ತರುವೋ
ಕಣ್ಣೆವೆಯಿಕ್ಕದೆ ನೋಡಿತ್ತು ;
ಹರ್ಷಾಹರ್ಷಗಳೆಲ್ಲೆಯ ನಗುವೊಲು
ಕಿಸಲಯ ಸುಸ್ಮಿತ ಮೂಡಿತ್ತು !

ಪ್ರಿಯ ವಕ್ಷಸ್ಥಲ ಮೃದುಲ ಸ್ಥಿತೆ ಲತೆ
ಇರೆ ಸುವರ್ಣಸ್ವಪ್ನ ಸೃಷ್ಟಿಯಲಿ,
ಎಚ್ಚರು ಸ್ವಪ್ನಗಳೆರಡರ ಮಿಥ್ಯೆಯ—
ನರಿತಾ ತರು ಅಲಿಪ್ತ ದೃಷ್ಟಿಯಲಿ,

ಒಮ್ಮೆಲೆ ಬೀಸಿತು ತೆಂಕಣ ಗಾಳಿ
ಲತೆಯೆದೆಯಲಿ ಭಯ ರೂಪವ ತಾಳಿ !

ಲತೆ ಮೈ ನಡುಗಿತು, ನಿದ್ದೆಯು ಸರಿಯಿತು,
ಪ್ರಿಯನಿರ್ಗಮನದ ಬರಿ ಬಯಲಿನ ಸಂದೇಹದಲಿ !

ಅಸಂಖ್ಯ ಪುಷ್ಪದ ಅನಂತ ಬಾಹುವನೆಸೆದು
ಮತ್ತಪ್ಪಿತು ಹೃದಯ ಪ್ರಿಯನನು ಒಸೆದು !

ವೃಕ್ಷದೇಹದಾಲಿಂಗನ ಸುಖದಲಿ
ಮಧುಲತೆ ಮೈಮರೆದೊರಗಿತ್ತು,
ಪ್ರಿಯ ಸಂಸ್ಪರ್ಶನ ಸುಖ ರೋಮಾಂಚನ
ಗೋಚರವೆನೆ ಹೂವರಳಿತ್ತು !

ಸಾಕ್ಷೀಪ್ರಜ್ಞೆಯ ಮಹಾಂತ ತರುವೋ
ಕಣ್ಣೆವೆಯಿಕ್ಕದೆ ನೋಡಿತ್ತು ;
ಹರ್ಷಾ ಹರ್ಷಗಳೆಲ್ಲೆಯ ನಗುವೊಲು
ಕಿಸಲಯ ಸುಸ್ಮಿತ ಮೂಡಿತ್ತು !

ಪ್ರಭುಶಂಕರ

ಮುದ್ದಣನರಸಿ ಮನೋರಮೆ*

ಓ ಮನೋರಮೆ, ಮುದ್ದಣನ 'ಮೋಹದರಗಿಳಿಯೆ'
ಯಾವದೇವತೆ ನೀನು? 'ರತಿದೇವಿ,' ಮುದ್ದಣಗೆ—
ಕನ್ನಡದ ಮನೆಮನೆಗೆ ನೀನಿಂದು ಮನೆದೇವಿ.
'ತನಿವಣ್ಣು ಕೆನೆವಾಲು ಕಡುಬುಕಜ್ಜಾಯ'ವನು
ಅಳವಡಿಸಿ ನಲವಡಸಿ ಸವಿಯೂಟವುಣಿಸುತಿಹೆ.
'ಬಿನ್ನಣದ ಬಣ್ಣನೆಯ ನುಡಿ'ಯ ನುಡಿವವಳಲ್ಲ
'ಜಾಣೆಲ್ಲ'ವೆಂದಿಲ್ಲ, ನೀ 'ಮೋಡಿ'ಯೇನಲ್ಲ
'ಮಿಡಿಮೊಲೆಯ ಪಿಡಿನಡೆಯ ಬಿಡುಜಡೆಯ ಕುಲದೇವಿ'

ಬೇಸರವಕಳೆಯಲ್ಕೆ ಕಥೆಯನ್ನು ಹೇಳಿಸುವೆ,
ಆದರಾಕಥೆ, ಅಳಿದರೂ ಉಳಿದರೂ ದಾರಿ
ತೋರಿಸುವ 'ರಸಭರಿತ ಚರಿತ'ವಾಗಿರಬೇಕು.
ಆವ ರಸ—'ಶೃಂಗಾರ ವೀರಹಾಸ್ಯಂಗ'ಳಲಿ?
'ನವರಸದ ತನಿರಸ'ವೊ! ಆಗಲೌ, ಆವ ನುಡಿ?
ಸಂಸ್ಕೃತದ ಸೊಗಸಿರಲಿ, ಕನ್ನಡವು ಕಸ್ತೂರಿ
ಹುರುಳಿರುವ ತಿರುಳುಗನ್ನಡದ ಬೆಳ್ನುಡಿಬೇಕು!
ಯಾವ ಧಾಟಿಯೊಳಿಷ್ಟ—ಪದ್ಯವೋ ಗದ್ಯವೋ?
ಹೃದ್ಯವಹ ಗದ್ಯದೊಳೆ ಹೇಳಬೇಕಲ್ಲವೇ!

ಈ ನಿನ್ನ ನಿರ್ಣಯವನೊಪ್ಪುವನು ಪತಿದೇವ—
'ಅರಮನೆಯೊಳಿಂತಪ್ಪ ನಲ್ಗತೆಯ ಬಿತ್ತರಿಸೆ
ಪೊನ್ನ ಕಂಟಿಕೆ ರನ್ನಗಡಗಮನ್ನೀಯುವರು.
ನೀನೀವ ಮೆಚ್ಚೇನು'?—ಕಬ್ಬಿಗನು ಕೇಳುವನು

---

* ಮನೋರಮೆಯು ಮುದ್ದಣನ ಪತ್ನಿಯೊ, ಪ್ರೇಯಸಿಯೊ, ಕಲ್ಪಿತಕಾಂತೆಯೊ ಎಂಬುದು ಸಮಸ್ಯೆ. ಯಾರಾದರಾಗಿರಲಿ, ಪ್ರೌಢೆಯಾದ ಪ್ರೇಮಮಯಿಯೊಬ್ಬಳು ಅವನನ್ನಾವರಿಸಿದ್ದಾಳೆ. ಇದನ್ನು ನಿರಾಕರಿಸುವುದು ಸಾಧ್ಯವಿಲ್ಲ. ಅವಳನ್ನು ಕುರಿತದ್ದು—ಈ ಭಾವಗೀತೆ.

'ನನ್ನ ಸೇನಾನೀವೆ'ಸೆಂದು ಸಂಭ್ರಮಿಸುವೆಯ ?
ಆಃ ! 'ಬಲ್ಗಡಸುಗಾರ್ತಿ, ಅರಿಯೆಯಾ, ಮುನ್ನವೇ
ತಾಯ್ತಂದೆಯರು ಮುದ್ದಣಂಗಿತ್ತರೆಂಬುದಂ' ?
ಮತ್ತೇನು ? 'ಕತೆಗೇಳಿ ಸೊಗಸಾಗೆ ಬಲ್ಲಂತೆ
ಮುನ್ನಿಸುವೆ'ಸೆಂದು ಮುಂಬರಿಸಿದೆಯು, ಪಣವನ್ನು ?
'ಮುದ್ದಣನ ಠಕ್ಕಿಸುವ ಪೆಂಡಿರಾ'ರ್, 'ಪೆಣ್ಮಣಿ'ಯೆ,
ಕತೆಮುಗಿಯೆ ಬಳಿಕ ನೀನೀಯೆಸೆಂದೊಡೆ ಬಿಡಸು—
'ಕತೆಯ ಹುರುಳೆಂತಿರುವುದೆಂ'ದು ನೀ ನೋಡುವೆಯ ?
'ಕಾಮಕಾಳೋರಗಿಯೆ, ಗಂಧಸಿಂಧುರಯಾನೆ'
ನಿಮ್ಮ ಸೆಣಸಿನ ಪರಿಯ ಪರಿಕಿಪೆವು ನಾವೆಲ್ಲ—
ಸಪ್ತಾಕ್ಷರೀ* ಮಂತ್ರ ಸಿದ್ಧಿಯನು ಪಡೆದು ತ
ಮ್ಮೊಂದೆ ನುಡಿಬಲ್ಪಿನಿಂ ಮೂಜಗವನಳಿಯಿಸುವ
ಪೊಗಳ್ವ ಕೊಳ್ವಾಳ್ವ ತಾಳ್ವತೂಳ್ವ ಪೇಳ್ವಾ
ಸಿಂಗರದ ಬಣ್ಣಗಬ್ಬಿಗನನರಿಯೆಯಾ, ನೀಂ ?—

ಆದರೂ ಅರಸನೋಲಗ ಮುಗಿಯಲರಮನೆಯ
ಮರೆಯುತ್ತ ಪೊರೆವನೆಗೆ ನಡೆತರುವ ಮನದಿನಿಯ
ನನ್ನೆನೆದು ಕಾತರದೆ ಕಾಯುತ್ತ ಕುಳಿತಿರುವೆ.
ಬಂದೊಡನೆ ದೂರದೊಳೆ ಕಂಡೆದ್ದು ಇದಿರ್ವಂದು,
ಕಾಲ್ಗೆ ನೀರಂನೀಡಿ ಕೈವಿಡಿದು ಬಳಚೌಕಿ
ಗೊಯ್ದು ಮಣೆಯಿತ್ತು ಕುಳ್ಳಿರಿಸಿ, ತನಿವಣ್ಣ ತಿನ
ಲಿತ್ತು ಕೆನೆವಾಲ ಕುಡಿಯಲ್ಕೊಟ್ಟು ಉಪಚರಿಸಿ,
ಹಸಿವು ಬಳಲಿಕೆ ಪಿಂಗೆ ತಾಂಬೂಲವನು ಸವಿಯುತ್ತ
ಸಲ್ಲಾಪಗೊಳ್ಳುವಿರಿ—

ಈ ನಿಮ್ಮ ಗೆಡೆಯಾಟ
ಎಲ್ಲರನು ಕುಣಿಸುತಿದೆ, ಹೃದಯವನು ಕೆಣಕುತಿದೆ.
ಕಬ್ಬಿಗರಕಲ್ಲಾಯ್ತನಂ ಕೈವಿಡಿದ ಧನ್ಯೆ,
ಗರುಡ ಗಂಧರ್ವವಿದ್ಯಾಧರರ ನೇಹವನು

---

* ಸಪ್ತಾಕ್ಷರಿ—ಭವತಿ ಭಿಕ್ಷಾಂದೇಹಿ.

ನೆನೆಯುವಂತಿದೆ ನಿಮ್ಮ ಈ ದಿವ್ಯ ನೇಹವದು.
ಕವಡಿಲ್ಲ, ಕೊಂಕಿಲ್ಲ, ಭಿನ್ನ ಭಾವನೆಯಿಲ್ಲ,
ಪ್ರೇಮಮಯ ದಾಂಪತ್ಯವಿಂತಹದು, ಇನ್ನಿಲ್ಲ
    ನಿನ್ನ ನವನೆಂತೆಂತು ಬಣ್ಣಿಸಿಯು ತಣಿಯದಿಹ—
'ಮಲೆನಾಡ ಮುಗ್ಧಮಾಯಕದಿಂದ ಮೈವೆತ್ತ
ಮೋಹನಾಂಗಿಯು ನೀನು: ಪುಸಿನಡುವಿನಸಿದೊಡಲ
ಕಿಸುವಾಯ ಸಸಿಮೊಗದ ಪೂಗಣ್ಣ ಪೆಣ್ಣ ನೀಂ—
ಒಚ್ಚೇರೆಗಣ್ಣ ಪೆಣ್, ಸಿಂಗರದ ಸಿರಿಯರಸಿ
ಪೊನ್ನರಸಿ, ರಮಣೀಯರಮಣಿಮಣಿ, ಸಿರಿದೇವಿ,
ಕಾಮದೇವನೆ ಬಣ್ಣಿಸಿರುವಂಥ ರತಿದೇವಿ,
ಓ—ಮನೋರಮೆ ನೀನು ಮುದ್ದಣನ ಮುದ್ದಿನರಸಿ,
ನಿಚ್ಚ ಪೂಜಿಸುವ ಕಟ್ಟಚ್ಚಿನಾ ಪ್ರಾಣಲಿಂ
ಗವು ನೀನು ಮತ್ತವನ ಬಾಳ್ವಣವು, ಕೈಗಳಸ
ಅವನ ಪ್ರಾಣೇಶ್ವರಿಯು—
                ಮುದ್ದಿನರಸನ ಜಾಣ
ಮುದ್ದಣನ ಸತಿದೇವಿ, ನಿನ್ನ ಪಡೆದವ ಧನ್ಯ,
ನಸುಮುನಿಸಿನಿಂದೊಮ್ಮೆ ಹುಸಿಹುರುಡಿನಿಂದೊಮ್ಮೆ ;
ಭ್ರೂಭಂಗದಿಂದೊಮ್ಮೆ ಮೃದುಹಾಸದಿಂದೊಮ್ಮೆ !
ಎನಿತು ಚಲ್ಲಾಟದಿಂದವನನೀಂ ಸೆಳೆದೆಯೋ !
ಕನ್ನಡಿತಿ, ಕನ್ನಡವನವನೆದೆಯೊಳುಕ್ಕಿದೆಯೊ !
ನುಡಿಬೆಡಗನಿಕ್ಕಿದೆಯೊ ನಡೆ ನೋಡಿ ಸೊಕ್ಕಿದೆಯೊ !
    ಕತೆಯ ಮುಗಿಸಿದೆ, ದೇವಿ, 'ಜಗಕೆ ಮೆಚ್ಚುಗೆಯಾಯ್ತು'
ಅವನ 'ಹೆಸರೆಂತಂತು' ಕತೆ 'ಮುದ್ದು ಮುದ್ದಾಯ್ತು'
'ಮತ್ತೆ ಮತ್ತೆಯು ಕೇಳ್ವೆನೆಂಬಾಸೆ ನಿನಗಾಯ್ತು'
ಇಂತು ಹೇಳಿಸಿ ನಿನ್ನ ನಿನ್ನಿಂದ ಕಟ್ಟಿಸಿದ
ದಿಟ್ಟಮುದ್ದಣ ನೀಗ ಮೆಚ್ಚಿನುಡುಗೊರೆಗಾಗಿ
ನುಸುಳುವಾ ನಿನ್ನನ್ನು ಸೆರಗೆಳೆದು ತಡೆದಿಹನು.
    ಕನ್ನಡರ ಕುಲದೇವಿ, ಮೆಚ್ಚನೀಕೊಡಬೇಕು—
ಗುಣಕೆ ಹುರುಡಿಪುದುಂಟೆ ಮುದ್ದಣನು ಗೆದ್ದಿಹನು.

ನೀಂ ಪರಾಧೀನೆ? ನಿಜ, ಒಡವೆಯೂ ನಿನಗಿಲ್ಲ,
ನಾಡೊಳಗೆ ಎಲ್ಲರೂ ಮೆಚ್ಚುವಾ ಸಲ್ಲ್ವತೆಗೆ—
ಕವಿ ಮೆಚ್ಚುವಂತಹುದು, ಕಲೆಗೊಪ್ಪುವಂತಹುದು,
ನಾಲ್ಕು ಜನ ತಲೆದೂಗುವಂತಹುದು ನೀನೀವ
ಉಡುಗೊರೆಯದಾವುದೌ? ಕೇಳಲಾಶಿಸುತಿಹೆವು—
ನಿನ್ನ ಋಣಮುಕ್ತತೆಗೆ ನಾವು ನೆರವಾಗುವೆವು—

'ಜಾಣರೇವಗೆಯನೀಯೆಂಬರದನೀವೆ'ಯೆಂ
ದೆಮ್ಮವರನಿಟ್ಟಿಸುತ ಮುಗ್ಧಭಾವನೆಯಿಂದ
ಓದುಗರ ಮೇಣ್ ಸಲ್ಲನಾಸಡುವೆ ಭಯಚಕಿತ
ಕಾತರೇಕ್ಷಣೆಯಾಗಿ ತವಕಿಸುತ ನಿಂದಿರುವೆ!

ಮೆಯ್ವೊಬಗ ಸೂರ್ಮಡಿಸಿ ಮಹದಾತ್ಮವಾಗಿರುವ
ನಿನ್ನಾತ್ಮವೈಭವದ ಮುಂದೇಸು? ಅದರ ಬ
ಲ್ಮೆಯೆ ಮುದ್ದಣನ ಕೀರ್ತಿ ಕಾರಣವು. ಅಂತು ನೀ
ನಿತ್ತ ದಿವ್ಯಾತ್ಮಸಿರಿ ಯೆರಕಗೊಂಡದು ಬೆಳಗಿ
ಕನ್ನಡಿಗರೆದೆಗುಡಿಯ ಬೆಳಗುತಿದೆ, ಮಿಂಚುತಿದೆ,
ಮುದ್ದಣನ ಜೊತೆಯಲ್ಲಿ ಬಾಳುಗೊಂಡಿಹ ದೇವಿ,
ಚಿರಸುಮಂಗಳೆ ಬಾಲೆ, ಬಾಲೇಂದು ಫಾಲೆ ನೀಂ'
ಕನ್ನಡಿತಿಯರ್ಗೆ ಕಣ್ಮಣಿಯಾಗಿ ಚಿರಕಾಲ
ಬಾಳ್ವ ನಿನ್ನಮರಜೀವನಕಿದೊ ನಮೋ ನಮೋ.

ಕ. ನರಸಿಂಹಶಾಸ್ತ್ರಿ

ಕಾಶ್ಮೀರದೇಶದ ಲಲ್ಲಯೋಗೀಶ್ವರಿಯ ಸೂಕ್ಷ್ಮಪರಿಚಯ

ಪರಿಪೂರ್ಣ ಬ್ರಹ್ಮಾನುಭವವು ಈ ಜನ್ಮದಲ್ಲಿಯೇ ಉಂಟಾಗಬೇಕೆಂಬುದು ಸಾಧಕರ ಉದ್ದೇಶ. ಇದಕ್ಕೆ ಸ್ವಪ್ರಯತ್ನ, ಸತ್ಸಂಗ, ಪೂರ್ವಜನ್ಮ ಸಂಸ್ಕಾರ ಇವು ಮೂರೂ ಬೇಕಾಗಿವೆ. ಇದು ಮಹಾ ಸಿದ್ಧಿಯಾದುದರಿಂದ ಒಂದೇ ಜನ್ಮದಲ್ಲಾಗುವುದು ಕಷ್ಟ. ಜನ್ಮಾಂತರ ಸಂಸ್ಕಾರವಿದ್ದರೆ ಸುಲಭವಾಗಿ ಮುಂದುವರಿಯಬಹುದು. ತತ್ತ್ವಸ್ಥಿತಿ ಹೀಗಿದ್ದರೂ ಅನುಭವಿಗಳ ಜೀವನದಲ್ಲಿ ಕೆಲವು ಮಾರ್ಪಾಡುಗಳುಂಟಾಗಿರುವುವೆಂದು ಅವರ ವಾಕ್ಯಗಳಿಂದಲೇ ತಿಳಿಯಬಹುದಾಗಿದೆ. ಈ ಅನುಭವಿಗಳು ವಿಶ್ವದ ಎಲ್ಲಾ ಭಾಗಗಳಲ್ಲಿಯೂ, ಒಂದಲ್ಲ ಒಂದು ರೂಪದಲ್ಲಿ ಆಗಿಹೋಗಿರುತ್ತಾರೆ. ಶಾಸ್ತ್ರೀಯವಾದ ಊಹೆಗಳು ಬೇರೆಯಾಗಬಹುದು. ಆದರೆ ಅನುಭವಿಗಳ ಅನುಭವವು ಒಂದೇ ರೀತಿಯಾಗಿ ಕೊನೆಗೊಳ್ಳುತ್ತದೆ. ಇವರು ಪ್ರಾರಂಭದೆಶೆಯಲ್ಲಿ ತಾವು ಅನುಸರಿಸಿರುವ ಯಾವುದೋ ಒಂದು ಪಂಥದ ಭಾವನೆಗಳನ್ನು ಅನುಸಂಧಾನ ಮಾಡುವುದೂ ಉಂಟು. ಉಪದೇಶಿಸುವುದೂ ಉಂಟು. ಪರಿಪಾಕಾವಸ್ಥೆಯಲ್ಲಿ ಪಂಥಗಳ ಭೇದದೃಷ್ಟಿಯು ಮಾಯವಾಗಿ ಸಾರ್ವಾತ್ಮ್ಯಭಾವನೆಯು ಸ್ಥಿರವಾಗುತ್ತದೆ. ಇದು ಅಂತರೀಯ ಪರಿವರ್ತನೆಯ ಪರಿಣಾಮ. ಪರಿಪಾಕದ ತುದಿಯನ್ನು ಮುಟ್ಟಿದ ಎಲ್ಲಾ ಅನುಭವಿಗಳೂ ಈ ಅಂಶದಲ್ಲಿ ಒಮ್ಮತವನ್ನು ಪಡೆದಿರುತ್ತಾರೆ. ಈ ಕಾರಣದಿಂದಲೇ ಈ ಅನುಭವಿಗಳ ಉದ್ಗಾರಗಳು ಕೆಲವೆಡೆಗಳಲ್ಲಿ ಹಿಂದು ಮುಂದು ವಿರುದ್ಧವಾಗಿ ತೋರುವುದುಂಟು. ಒಂದು ಕಡೆ ದ್ವೈತಭಾವನೆ, ಮತ್ತೊಂದು ಕಡೆ ಅದ್ವೈತಭಾವನೆ. ಹಾಗೆಯೇ ಶೈವ, ವೈಷ್ಣವ, ಶಾಕ್ತ ಮೊದಲಾದ ಭೇದ ಜ್ಞಾನಕ್ಕೆ ವಿಷಯವಾಗುವ ಪಂಥಗಳ ಅಭಿಪ್ರಾಯಗಳನ್ನು ಪ್ರಸ್ತಾಪಿಸುವುದುಂಟು. ಅನುಭವವು ನಿರ್ಮೂಲವಾದರೆ ಸ್ವಯಂಪ್ರಕಾಶವಾಗಿ, ಏಕರೂಪವಾಗಿ, ಅಖಂಡವಾಗಿ ನಿಲ್ಲುತ್ತದೆ. ಇಂತಹ ಸನ್ನಿವೇಶಗಳು ಅನುಭವಕ್ಕೆ ಬಂದಾಗ ಹಿಂದೆ ಈ ಅನುಭವಿಯು ಉಪಾಸನೆ ಮಾಡುತ್ತಿದ್ದ ಅಥವಾ ಅನುಸರಿಸುತ್ತಿದ್ದ ಭಾವನಾ ವಿಷಯಗಳಲ್ಲಿ ಉದಾಸೀನ ತೋರಿಸುವುದುಂಟು. ಅಥವಾ ಬೇರೆ ಬೇರೆ ಭಾವನೆಗಳಲ್ಲಿರುವ ಐಕ್ಯಭಾವನೆಯೇ ಸತ್ಯವೆಂದು ಭೇದಭಾವನೆಗಳೆಲ್ಲಾ ಅಖಂಡವಾದ

ಈಕೆಯ ಉಪದೇಶವಚನಗಳು ಬಹಳ ಇವೆಯೆಂದು ಕೇಳುತ್ತೇವೆ. ಆದರೆ ಅವುಗಳ ಸಾರಸಂಗ್ರಹರೂಪವಾಗಿ ಭಾಸ್ಕರಾಚಾರ್ಯನೆಂಬ ಪಂಡಿತನು ಅರವತ್ತು ಸಂಸ್ಕೃತ ಪದ್ಯಗಳಲ್ಲಿ ಈಕೆಯ ಮುಖ್ಯವಾದ ಹಾಡುಗಳನ್ನೂ ವಚನಗಳನ್ನೂ ಕಾಶ್ಮೀರಿ ಭಾಷೆಯಿಂದ ಸಂಸ್ಕೃತಭಾಷೆಗೆ ಪರಿವರ್ತನಮಾಡಿದ್ದಾನೆ. ಗ್ರಿಯರ್‌ಸನ್ ಮತ್ತು ಬಾರ್ನೆಟ್ ಎಂಬ ಆಂಗ್ಲ ಪಂಡಿತರು ಈಕೆಯ ಇನ್ನೂ ಹೆಚ್ಚಿನ ವಚನಗಳನ್ನು ಸಂಗ್ರಹಿಸಿ ದೀರ್ಘವಾದ ಪೀಠಿಕೆಯೊಂದಿಗೆ ಇಂಗ್ಲಿಷಿಗೆ ಭಾಷಾಂತರಿಸಿರುತ್ತಾರೆ. ಅನುಭಾವಿಗಳ ವಚನಗಳು ವಿಶೇಷ ಪ್ರಚಾರದಲ್ಲಿರುವ ಕರ್ಣಾಟಕದ ವಾಚಕರ ಅವಗಾಹನೆಗಾಗಿ, ಯೋಗದ ನೆಲೆಯಿಂದ ಕೂಡಿರುವ ಈ ಲಲ್ಲೇಶ್ವರಿಯ ವಚನೋದ್ಗಾರಗಳು ಸ್ಫೂರ್ತಿದಾಯಕವಾಗಿರುತ್ತವೆಂಬ ಉದ್ದೇಶದಿಂದ ಭಾಸ್ಕರಾಚಾರ್ಯರ ಸಂಸ್ಕೃತ ಶ್ಲೋಕಗಳನ್ನು ಕನ್ನಡಕ್ಕೆ ಭಾಷಾಂತರಿಸಿ ಕನ್ನಡಿಗರ ಮುಂದಿಟ್ಟಿದ್ದೇನೆ. ಲಲ್ಲಾದೇವಿ ಜನ್ಮಾಂತರ ಪರಿಪಾಕದಿಂದ ಕೂಡಿದ್ದರೂ ಈಕೆಯ ವಾಕ್ಯಗಳಿಂದಲೇ ಈಕೆಯ ಜೀವನದಲ್ಲಿ ಪ್ರಾರಂಭದೆಶೆ, ಶಾಸ್ತ್ರವಿಶ್ವಾಸ, ಅಭ್ಯಾಸ, ಫಲೌನ್ಮುಖ್ಯ, ಸಿದ್ಧಾವಸ್ಥೆ—ಈ ಐದು ಆಧ್ಯಾತ್ಮಿಕ ಹಂತಗಳನ್ನು ತಿಳಿಯಬಹುದಾಗಿದೆ.

ಇವುಗಳ ಮೂಲಕ ಈಕೆಯ ಅನುಭವದ ಪರಿಪಾಕವನ್ನೂ ಸರಳತೆಯಲ್ಲಿ ಗಹನವಾದ ತತ್ತ್ವಗಳನ್ನೂ ಸಾಕ್ಷಾತ್ಕರಿಸುವ ಕ್ರಮಗಳನ್ನೂ ಅರಿಯಬಹುದು. ಸಾಮಾನ್ಯವಾಗಿ ಅನುಭಾವಿಗಳು ವಿಶ್ವವನ್ನೆಲ್ಲಾ ತನ್ಮಯವಾಗಿ ನೋಡುವರು. ಪ್ರಪಂಚವೆಲ್ಲಾ ಒಂದೇ ಎನ್ನುವರು, ಇವೇ ಮೊದಲಾದ ಪಾರಲೌಕಿಕ ಆಶಯಗಳನ್ನೇ ಹೆಚ್ಚಾಗಿ ಹೇಳುವುದು ಸಂಪ್ರದಾಯ. ಈಕೆಯ ಹಿರಿಮೆ ಏನೆಂದರೆ ಅನುಭವದಿಂದ ಉಂಟಾಗುವ ಶಾರೀರಿಕವಾದ ವ್ಯತ್ಯಾಸಗಳನ್ನೂ ಪ್ರಾಣಕ್ರಿಯೆಗಳ ನಿರೋಧದಿಂದುಂಟಾಗುವ ಏಕಾಗ್ರತೆಯನ್ನೂ ವಿಶದಪಡಿಸಿರುತ್ತಾಳೆ. ಮನಸ್ಸಿನ ಏಕಾಗ್ರತೆಯಿಂದ ಅನುಭವಕ್ಕೆ ಬರುವ ಪವಿತ್ರತೆ, ಸ್ಥೈರ್ಯ, ಕಾರ್ಯತತ್ಪರತೆಗಳನ್ನು ಯಾವ ರೀತಿ ಅನುಸರಿಸಬೇಕು, ಸಿದ್ಧಾವಸ್ಥೆಯಲ್ಲಿದ್ದರೂ ಪ್ರಾಪಂಚಿಕವಾದ ಮತ್ತು ಸಾಂಪ್ರದಾಯಿಕವಾದ ರೀತಿ ಮತ್ತು ನೀತಿಗಳನ್ನು ಯಾವ ದೃಷ್ಟಿಯಿಂದ ಆಚರಿಸಬೇಕೆಂಬುದನ್ನು ಸೂಚಿಸಿರುತ್ತಾಳೆ. ಸಾಮಾಜಿಕ ಆಚಾರಗಳೂ ನೀತಿಗಳೂ ಅಕ್ಷರಶಃ ಪಾಲಿಸಲು ಯಾರಿಗೂ ಸಾಧ್ಯವಾಗಲಾರದೆಂದು ಖಚಿತವಾಗಿ ಹೇಳಿ, ಹೊರಗಿನ ಪರಿಸ್ಥಿತಿಗಳಿಂದ ಜೀವನಕ್ರಮವು ಯಾವ ಆಶ್ರಮರೂಪದಲ್ಲಿದ್ದರೂ ಭಾವನಾಕ್ರಮವು ಒಂದೇ ರೂಪದಲ್ಲಿರಬೇಕೆಂದು ಸಿದ್ಧಾಂತಮಾಡಿರುತ್ತಾಳೆ. ಹೀಗೆ ಪ್ರಾಣಶಕ್ತಿಯ ನಿರೋಧ, ಮನಸ್ಸಿನ ಏಕಾಗ್ರತೆ, ಅದರಿಂದುಂಟಾಗತಕ್ಕ ಸಿದ್ಧಿ, ಬಾಹ್ಯ

ವ್ಯಾಪಾರಗಳನ್ನು ನೋಡಬೇಕಾದ ದೃಷ್ಟಿ, ಅದರಿಂದ ತನ್ನಲ್ಲಿ ಏರ್ಪಡುವ ನಿರ್ಲಿಪ್ತತೆಯನ್ನು ಒಂದು ಘಟ್ಟದಲ್ಲಿ ವಿವರಿಸಿ ಅಂತರ್ಯತೆಯ ಪರಿಪಾಕವನ್ನು ಪ್ರತ್ಯೇಕವಾಗಿ ಹೇಳಿದ್ದಾಳೆ. ವಿಕಲ್ಪಕ್ಕಾಶ್ರಯವಾಗಿರುವ ಚಿತ್ತವೃತ್ತಿಗಳನ್ನು ಮೀರಿ ಚಿದನುಭವವನ್ನು ಪಡೆಯಲಾಗಿ ಈ ವಿಶ್ವವೆಲ್ಲಾ ಹೇಗೆ ಚಿದಭಿನ್ನವೆಂಬುದನ್ನು ತೋರಿಸಿದ್ದಾಳೆ. ಹಾಗೆಯೇ ಕೆಲವು ಮಟ್ಟಗಳಲ್ಲಿ ವಿಗ್ರಹಧ್ಯಾನ, ತೀರ್ಥಯಾತ್ರೆ ಮೊದಲಾದುವುಗಳು ಒಂದು ಹಂತದಲ್ಲಿ ಸಹಕಾರಿಗಳಾಗಿರುತ್ತವೆ, ಮತ್ತೊಂದು ಹಂತದಲ್ಲಿ ಅವುಗಳು ಹೇಗೆ ಸಹಕಾರಿಗಳಲ್ಲವೆಂದು ನಿರೂಪಿಸಿದ್ದಾಳೆ. ವಿಶ್ವವು ಚಿದಭಿನ್ನವೆಂದು ಅನುಭವಕ್ಕೆ ಬಂದಾಗ ತಾನು ವಿಶ್ವವ್ಯಾಪಿಯಾದ ಶಿವನ ಅಂಶವೆಂದು ಶಿವನ ಸರ್ವಜ್ಞತ್ವಾದಿ ಗುಣಗಳು ತನ್ನಲ್ಲಿ ಸಂಕುಚಿತವಾಗಿರುವುದೊಂದೇ ಜೀವಭಾವಕ್ಕೆ ಹೇತುವೆಂದು ಯುಕ್ತಿಯಿಂದಲೂ ಅನುಭವದಿಂದಲೂ, ವಿವರಿಸಿದ್ದಾಳೆ. ಈ ಸ್ಥಿತಿಯನ್ನು ಅನುಭವಿಸಿ, ಈಕೆ ತನಗೆ ಯಾರೂ ಬಂಧುಗಳಿಲ್ಲ, ತಾನು ಯಾರಿಗೂ ಬಂಧುವಲ್ಲ ಎಂಬ ನಿರ್ಲಿಪ್ತತೆಯನ್ನು ಬೋಧಿಸಿರುತ್ತಾಳೆ. ತಾನು ಮಾಡುವ ಎಲ್ಲಾ ಬಾಹ್ಯವ್ಯಾಪಾರಗಳೂ ಆ ಪರಾಶಕ್ತಿಯ ಲೀಲೆಯೆಂದು ತನ್ನ ಜೀವನ ಅವಧಿಯಲ್ಲಿಯೇ ಆ ಪರಾನಂದವನ್ನು ಅನುಭವಿಸುತ್ತಿರುವ ಹಾಗೆ ತನ್ನ ಸ್ಥಿತಿಯನ್ನು ಹೇಳಿಕೊಂಡಿರುತ್ತಾಳೆ. ಪಂಡಿತಮನೆತನದಲ್ಲಿ ಬೆಳೆದ ಈಕೆಯ ಮಾತುಗಳು ಶಾಸ್ತ್ರೀಯ ಪರಿಭಾಷೆಯಿಂದಲೂ ಅನುಭವದ ಸ್ಫೂರ್ತಿಯಿಂದಲೂ ರೂಪುಗೊಂಡಿವೆ. ಕಾಶ್ಮೀರದ ಶೈವಸಿದ್ಧಾಂತದ ಪ್ರಮೇಯಗಳು ಮತ್ತು ಸಾಧನಾಕ್ರಮಗಳು ಈಕೆಯ ವಾಕ್ಯಗಳಲ್ಲಿ ಸಮಂಜಸವಾಗಿ ಹೊಂದಿವೆ. ಈಕೆಯ ವಚನಗಳನ್ನು ವಿವರಗಳೊಡನೆ ಅನುಸಂಧಾನಮಾಡಿದರೆ ಪಂಡಿತರಿಗೆ ವಿಮರ್ಶನ ಭೂಮಿಕೆಯಾಗುತ್ತದೆ. ಭಾವನಾಶಾಲಿಗಳಿಗೆ ಪ್ರಬೋಧಕವಾಗುತ್ತದೆ. ಸಾಧಕರಿಗೆ ಪ್ರೇರಕವಾಗುತ್ತದೆ. ವಿಮರ್ಶಕರು ಅನುಭಾವಿಗಳ ವಚನಗಳನ್ನು ಅಸಂಕೀರ್ಣವಾದ ದೃಷ್ಟಿಯಿಂದ ಅಧ್ಯಯನಮಾಡಿದರೆ ಅನುಭಾವಿಗಳ ಹಿರಿಮೆ ಮನವರಿಕೆಯಾಗುತ್ತದೆ.

ಜಿ. ರುದ್ರಪ್ಪ.

(ಸಶೇಷ)

ಅಣ್ಣ — ತಂಗಿ

ಈ ತಾಯಿಯೊ, ಆ ತಾಯಿಯೊ
ಯಾವ ತಾಯಿಯಾದರೇನು ?
ಭೂತಾಯಿಯ ಮಕ್ಕಳಾವು !
ಅಣ್ಣತಂಗಿ, ಅಕ್ಕತಮ್ಮನಾಗಲಾರೆವೆ ?
ನೆಲವಾಗಲಿ ಬುವಿಯಾಗಲಿ
ಜಲವಾಗಲಿ ಬಯಲಾಗಲಿ
ಹಲವು ರೂಪ ಸೃಷ್ಟಿಯೊಲವು !
ಜೀವ ಜೀವ ಕೂಡಿಯಾಡಿ ಕುಣಿಯಲಾರೆವೆ ?
ಅಕ್ಕರೆಯಲಿ ಮಾತಸೋವ ಮುರಿಯಲಾರೆವೆ ?

ನನ್ನ ಹೃದಯ ನಿನ್ನ ಹೃದಯ
ಮೌನದಲ್ಲೆ ಜಗದ ಎದೆಯ
ತುಂಬಿತೂರಿ ಉರಿಪ ನೋವ
ಕಂಡು ಕಂಗಳಲ್ಲಿ ಸುರಿವ ನೀರು ಬೇರೆಯೆ ?
ನಾ ನೋಡಿದ ನೀ ನೋಡಿದ
ಬಾಳಿನೊಳಗೆ ಬಡಿದಾಡಿದ
ಜೀವಜೀವಕಾಗಿ ತೇದ
ಹಿರಿಯ ಜೀವಿ ಗಾಂಧಿಮಾತು ಬೇರೆಯಿರುವುದೇ ?
ಅಕ್ಕರೆಯಲಿ ಬಾಳಸೋವ ಮುರಿಯಲಾರೆವೆ ?

ನೆಲ ಬೇರೆಯೆ ಜಲ ಬೇರೆಯೆ
ಬೆಸೆದೊಲವಿನ ಬೆಳೆ ಬೇರೆಯೆ
ಇಳಿಯುತಿರುವ ಬೆಳುದಿಂಗಳ
ತೊರೆಯಲೆಗಳ ಸೆಳೆತದಾಟ ಬೇರೆಬೇರೆಯೆ ?
ನೀ ಕಂಡುದೆ ನಾನುಂಡುದು,
ನಾ ಕಡೆದುದೆ ನೀ ಕಂಡುದು,
ನಮ್ಮಿಬ್ಬರ ಹೃದಯವೊಂದು
ಜೀವ ಜೀವ ಭೇದ ಮರೆತು ಬೆರೆಯಲಾರೆವೆ ?
ಅಣ್ಣತಂಗಿ ಅಕ್ಕತಮ್ಮನಾಗಲಾರೆವೆ ?

ಎಸ್. ಅನಂತನಾರಾಯಣ.

ಕಲಾಯ್ಡ್ ವಿಜ್ಞಾನ ಮತ್ತು ನಮ್ಮ ನಾಗರಿಕತೆ

ಈಗಿನ ಜನಾಂಗದವರು ವಿಜ್ಞಾನದ ಮುಂದುವರಿಯುವಿಕೆಯನ್ನು ಅನೇಕ ರೀತಿಯಲ್ಲಿ ಉಪಯೋಗಿಸಿಕೊಂಡಿರುತ್ತಾರೆ. ಈ ವಿಜ್ಞಾನಗಳಲ್ಲಿ ಭೌತಶಾಸ್ತ್ರ, ಗಣಿತ ಶಾಸ್ತ್ರ, ಮತ್ತು ರಸಾಯನಶಾಸ್ತ್ರಗಳು ಜನಗಳಿಗೆ ಉಪಯೋಗಕರವಾದ ರೀತಿಯಲ್ಲೂ, ಹಾನಿಕರವಾದ ರೀತಿಯಲ್ಲೂ, ಪರಿಣಾಮಗಳನ್ನುಂಟುಮಾಡಿವೆ. ವಿಜ್ಞಾನವನ್ನು ನಾವು ಯಾವ ರೀತಿಯಲ್ಲಾದರೂ ಉಪಯೋಗಿಸಬಹುದು. ಇದಕ್ಕೆ ನಮ್ಮ ಅಂತರ್ಯವೇ ಕಾರಣ. ಉದಾಹರಣೆಗಾಗಿ ಬೆಂಕಿಯನ್ನು ತೆಗೆದುಕೊಂಡರೆ, ಇದನ್ನು ಕಾಯಿಸುವುದಕ್ಕೆ ಉಪಯೋಗಿಸಿದರೆ, ಅದರಿಂದ ಅನೇಕ ಪದಾರ್ಥಗಳನ್ನು ತಯಾರುಮಾಡಬಹುದು. ಸ್ವಲ್ಪ ಎಚ್ಚರಿಕೆ ತಪ್ಪಿಹೋದರೆ ಅದು ಮನುಷ್ಯನನ್ನು ಸುಟ್ಟು ಹಾನಿಯುಂಟುಮಾಡುವುದು. ಮನುಷ್ಯನೂ ಸಹ ಅದನ್ನು ಹಾನಿಯುಂಟುಮಾಡುವುದಕ್ಕೆ ಉಪಯೋಗಿಸಬಹುದು. ಆದರೆ ವಿಜ್ಞಾನವು ಹೆಚ್ಚುಹೆಚ್ಚಾಗಿ ಬೆಳೆದು, ಅನೇಕ ಆಶ್ಚರ್ಯಕರವಾದ ಪರಿಣಾಮಗಳನ್ನುಂಟುಮಾಡಿರುವುದಕ್ಕೆ ನಮಗೆ ಕಣ್ಣಿಗೆ ಗೋಚರವಾಗದಿರುವ ಪರಮಾಣುಗಳೇ ಕಾರಣ. ಪರಮಾಣುಗಳಲ್ಲೆಲ್ಲಾ ಅತ್ಯಂತ ಹಗುರವಾದ ಜಲಜನಕದ ಪರಮಾಣುವು ಈ ಪ್ರಪಂಚವನ್ನೆಲ್ಲಾ ನಿರ್ನಾಮಮಾಡಬಲ್ಲುದು ಎಂಬುದರಲ್ಲಿ ಈಗ ಸಂದೇಹವಿಲ್ಲ. ಅದು ಈಗಿನ ಪ್ರಪಂಚದಲ್ಲಿ ಮುಖ್ಯವಾದ ಪಾತ್ರವನ್ನು ವಹಿಸಿದೆ. ಇದರ ವಿಷಯವಾಗಿ ಇತರ ದೇಶಗಳಲ್ಲಿ ಅನೇಕ ಪರಿಶೋಧನೆಗಳು ನಡೆಯುತ್ತಿವೆ. ಇದರಿಂದ ವಿಶ್ವಶಾಂತಿಯು ಕಲಕಿ, ಪ್ರಪಂಚಕ್ಕೆ ಹಾನಿಯುಂಟಾಗಬಹುದೆಂದು ನಾವು ಭೀತರಾಗಿದ್ದೇವೆ. ಆದರೆ ಇದು ಪರಿಣಮಿಸದೇ ಇರುವ ಹಾಗೆ ನೋಡಿಕೊಳ್ಳುವುದು, ಈಗಿನ ಯುಗದಲ್ಲಿ ಪ್ರತಿಯೊಬ್ಬ ಮಾನವನ ಒಂದು ದೊಡ್ಡ ಕರ್ತವ್ಯವಾಗಿದೆ.

ಈ ಪರಮಾಣುಗಳಿಗಿಂತ ಹೆಚ್ಚು ಗಾತ್ರವುಳ್ಳ ಅಣುಗಳು ಅಷ್ಟು ಚುರುಕಲ್ಲ. ಆದರೆ ಅವುಗಳಿಗೆ ನಾನಾತರದ ಗುಣಗಳುಂಟು. ಈ ಅಣುಗಳಿಗಿಂತ ಹೆಚ್ಚು ಗಾತ್ರವುಳ್ಳ ಮತ್ತು ನೀರು ಅಥವಾ ಇತರ ದ್ರವಗಳಲ್ಲಿ ತೇಲಾಡುವ ಇತರ ಕಣಗಳಿಗಿಂತ ಕಡಿಮೆ ಗಾತ್ರವುಳ್ಳ ಬೇರೆ ರೀತಿಯ ಕಣಗಳುಂಟು. ಅವುಗಳನ್ನು "ಕಲಾಯ್ಡ್" ಕಣಗಳೆಂದು ಕರೆಯುತ್ತಾರೆ. ಈ ಕಣಗಳ ಅಳತೆಯು ಸುಮಾರು $\frac{೧}{೨೫,೦೦೦}$ ಅಂಗುಲಕ್ಕೆ ಒಳಪಟ್ಟು $\frac{೧}{೫೨,೦೦,೦೦೦}$ ಅಂಗುಲಕ್ಕೆ ಹೆಚ್ಚಾಗಿ ಇರುತ್ತದೆ. ಇವುಗಳು ನಮ್ಮ

ಕಣ್ಣಿಗೆ ಗೋಚರವಾಗುವುದಿಲ್ಲ. ಸಾಮಾನ್ಯ ಸೂಕ್ಷ್ಮದರ್ಶಕದಲ್ಲಿಯೂ ಕಾಣಿಸುವುದಿಲ್ಲ. ಈ ಕಣಗಳನ್ನು ವಿಶೇಷ ಸೂಕ್ಷ್ಮದರ್ಶಕದ ಮೂಲಕ (Ultramicroscope) ವೇ ನೋಡಬೇಕು. ಹಾಗೆ ಪರೀಕ್ಷೆಮಾಡಲ್ಪಟ್ಟ ಕಣಗಳು ಮಿಂಚಿನೋಪಾದಿಯಲ್ಲಿ ಮಿರುಗುತ್ತ ಚಲಿಸುತ್ತಿರುವುದು ನಮಗೆ ಗೋಚರವಾಗುತ್ತದೆ. ಈ ರೀತಿಯಾದ ಚಲನೆಯನ್ನು ಮೊಟ್ಟಮೊದಲು ಕಂಡುಹಿಡಿದವರು ಡಾ|| ಬ್ರಾನ್.

ಮೇಲೆ ವಿವರಿಸಿದ ಈ ಕಣಗಳು ತಮ್ಮ ಗಾತ್ರಕ್ಕೆ ಅನುಸಾರವಾಗಿ ವಿಶೇಷ ಗುಣಗಳನ್ನು ಹೊಂದಿರುತ್ತವೆ. ಕಣಗಳು ಸಣ್ಣಗಾದ ಹಾಗೆ, ಅವುಗಳನ್ನು ನೀರಿನಲ್ಲಿ ಚದುರಿಸಿದರೆ, ಕೆಳಗೆ ಬೀಳದ ಹಾಗೆ ನಿಲ್ಲುತ್ತವೆ. ಹಾಗೆ ಅವುಗಳು ನಿಲ್ಲುವುದರಿಂದ, ನೀರಿಗೆ ಬಣ್ಣವನ್ನು ಕೊಡುತ್ತವೆ. ಈ ಕಣಗಳು ತಮ್ಮ ಗಾತ್ರ ಬದಲಾವಣೆಯಾದ ಹಾಗೆಲ್ಲ, ಆ ನೀರಿಗೆ ವಿವಿಧ ಬಣ್ಣಗಳನ್ನು ಕೊಡುತ್ತವೆ. ಚಿನ್ನದ ನೀರುಗಳಲ್ಲಿ ಸಾಮಾನ್ಯವಾಗಿ ಕೆಂಪು ಮತ್ತು ನೀಲಿಯ ಬಣ್ಣಗಳುಳ್ಳ ಎರಡು ಜಾತಿಗಳುಂಟು. ಕೆಂಪುನೀರಿನಲ್ಲಿ ಚಿನ್ನದ ಕಣಗಳು ಅತ್ಯಂತ ಸಣ್ಣಪ್ರಮಾಣದಲ್ಲಿ ಇರುತ್ತವೆ. ಈ ಕಣಗಳು ಒಂದಕ್ಕೊಂದು ಸೇರಿ ಹೆಚ್ಚಿನ ಗಾತ್ರವನ್ನು ಹೊಂದಿದರೆ, ನೀರಿಗೆ ನೀಲಿಯ ಬಣ್ಣ ಬರುತ್ತದೆ. ಈ ಬಣ್ಣಗಳಿಗೆ ಚಿನ್ನದ ಕಣಗಳೇ ಕಾರಣ. ಅವುಗಳ ಮೇಲೆ ಸೂರ್ಯರಶ್ಮಿ ಬಿದ್ದಾಗ, ಅವುಗಳು ರಶ್ಮಿಯನ್ನು ಚದುರಿಸಿ, ನಮಗೆ ಬೇರೆಬೇರೆ ಬಣ್ಣಗಳನ್ನು ಗೋಚರಮಾಡಿಸುತ್ತವೆ. ಈ ರೀತಿಯ ಬಣ್ಣಗಳಿಗೆ ಕಣಗಳ ಗಾತ್ರವೇ ಆಧಾರ. ಅದಕ್ಕೆ ಮತ್ತೊಂದು ಉದಾಹರಣೆಯನ್ನು ಕೊಡುವುದಾದರೆ, ಚಿನ್ನದ ತಗಡನ್ನು ಹೆಚ್ಚು ತಟ್ಟಿದ ಹಾಗೆ, ಅದರ ಮಂದವು ಕಡಿಮೆಯಾಗಿ, ಅದು ನೀಲಿ, ಹಳದಿ, ಮತ್ತು ಕೆಂಪುಬಣ್ಣದ ತಗಡಾಗಿ ಕಾಣುತ್ತದೆ. ಚಿನ್ನದ ತಗಡು ಬಹಳ ತೆಳ್ಳಗಿರುವಾಗ, ಸೂರ್ಯರಶ್ಮಿಯು ಅದರ ಮೇಲೆ ಬಿದ್ದರೆ, ನಮ್ಮ ಕಣ್ಣಿಗೆ ಕೆಂಪುಬಣ್ಣ ಕಾಣುತ್ತದೆ. ಸ್ವಲ್ಪ ದಪ್ಪವಾಗಿರುವಾಗ ಹಳದಿ ಅಥವಾ ನೀಲಿಬಣ್ಣವುಳ್ಳದ್ದಾಗಿರುತ್ತದೆ. ಇದು ಸಾಮಾನ್ಯವಾಗಿ ಎಲ್ಲರೂ ನೋಡಿರುವ ವಿಷಯ. ಇದರಿಂದ ನಾವು ತಿಳಿದುಕೊಳ್ಳಬೇಕಾದ ಮುಖ್ಯವಾದ ವಿಷಯವೇನೆಂದರೆ, ಕಣಗಳ ಗಾತ್ರ ಬದಲಾಯಿಸಿದರೆ, ಅವುಗಳ ಅನೇಕ ಗುಣಗಳು ಬದಲಾಯಿಸುತ್ತವೆ ಎಂಬುದು. ಆದರೆ ನಾವು ಈಗ ತಿಳಿಸಿರುವುದು ಬಣ್ಣದ ವಿಷಯ ಮಾತ್ರ. ಇನ್ನು ಮುಂದೆ, ಗಾತ್ರ ಬದಲಾವಣೆಯಿಂದ ಮತ್ತೆ ಯಾವ ಗುಣಗಳು ಬದಲಾಯಿಸುತ್ತವೆ ಎಂಬುದನ್ನು ತಿಳಿಸುತ್ತೇನೆ. ಈ ವಿಜ್ಞಾನದಲ್ಲಿ ನಾವು ಪರೀಕ್ಷೆಮಾಡುವ ಕಣಗಳೆಲ್ಲಾ ಒಂದು ಗುಂಪಿಗೆ ಸೇರಿವೆ. ಅವುಗಳನ್ನೆಲ್ಲಾ "ಕಲಾಯ್ಡ್" ಕಣಗಳೆಂದು ಕರೆಯುತ್ತೇವೆ. ಈ ಕಣಗಳ ಗುಣವಿಶೇಷಗಳು, ಅವುಗಳ ಉಪಯೋಗಗಳು, ಮುಂತಾದುವುಗಳನ್ನು ವಿವರಿಸುವುದೇ "ಕಲಾಯ್ಡ್"

ವಿಜ್ಞಾನ. ಚಿನ್ನ ಒಂದೇ ಅಲ್ಲ. ಈ ಗಾತ್ರವುಳ್ಳ ಬೇರೆ ಯಾವ ಪದಾರ್ಥದಲ್ಲಿಯಾದರೂ ಈ ಲಕ್ಷಣವುಂಟು. ಉದಾಹರಣೆಗಾಗಿ ಗಂಧಕದ ಪುಡಿಯನ್ನು ತೆಗೆದುಕೊಳ್ಳೋಣ. ಈ ಕಣಗಳನ್ನು ನೀರಿನಲ್ಲಿ ಚಲಿಸಿದರೆ ಹಳದಿ, ಕೆಂಪು, ಕಂದು, ಮತ್ತು ಬಿಳಿಯಬಣ್ಣಗಳ ನೀರುಗಳು ಉತ್ಪತ್ತಿಯಾಗುತ್ತವೆ. ಈ ವಿವಿಧ ಬಣ್ಣಗಳ ನೀರನ್ನು ಪ್ರಯೋಗಶಾಲೆಯಲ್ಲಿ ತಯಾರಿಸಬಹುದು.

ಈ ಕಣಗಳು ಒಡೆದಹಾಗೆಲ್ಲಾ ಅವುಗಳ ವಿಸ್ತೀರ್ಣವು ಅಧಿಕಪ್ರಮಾಣದಲ್ಲಿ ಹೆಚ್ಚಾಗಿ, ಇನ್ನೂ ವಿಶೇಷ ಗುಣಗಳುಂಟಾಗುತ್ತವೆ. ವಿಸ್ತೀರ್ಣವು ಹೆಚ್ಚಾದ ಹಾಗೆ, ಆ ಕಣಗಳಿಗೆ ವಿದ್ಯುದ್ವಾಹಿ ಕಣಗಳನ್ನು ಆಕರ್ಶಿಸುವ ಶಕ್ತಿಯುಂಟಾಗಿ, ತಾವು ವಿದ್ಯುತ್ತಿನ ಹೊರೆಯನ್ನು ಪಡೆಯುತ್ತವೆ. ಹೀಗೆ ಎಲ್ಲಾ ಕಣಗಳೂ, ಒಂದೇ ರೀತಿಯ ವಿದ್ಯುತ್ತಿನ ಹೊರೆಯನ್ನು ಪಡೆಯುವುದರಿಂದ, ಅವುಗಳು ಪಕ್ಕದಲ್ಲಿದ್ದರೂ, ಸೇರದೆ ನಿಲ್ಲುತ್ತವೆ. ಹೀಗೆ ನೀರು ಅಥವಾ ಬೇರೆ ಯಾವ ದ್ರವದಲ್ಲಿಯಾದರೂ ಇರುವ ಕಣಗಳು ದ್ರಾವಣಕ್ಕೆ ಒಂದು ಬಣ್ಣವನ್ನು ಕೊಡುತ್ತವೆ. ಆ ದ್ರಾವಣವು ಲವಣಗಳ ದ್ರಾವಣಗಳಂತೆ ಕಾಣುವುದಿಲ್ಲ. ಗಟ್ಟಿಯಾಗಿ ಜೇನುತುಪ್ಪದ ರೀತಿಯಲ್ಲಿ ಕಾಣುತ್ತದೆ. ಇದನ್ನು 'ಕಲಾಯ್ಡ್' ದ್ರಾವಣವೆಂದು ಕರೆಯುತ್ತಾರೆ. ಇದರ ಮೂಲಕ ಬೆಳಕಿನ ಕಿರಣಗಳನ್ನು ಹಾಯಿಸಿದರೆ, ಅವು ಕವಲೊಡೆದು ಒಂದು ಬೆಳಕಿನ ಜ್ಯೋತಿಯನ್ನು ಉತ್ಪತ್ತಿಮಾಡುತ್ತವೆ. ಆದರೆ ಲವಣಗಳ ದ್ರಾವಣಗಳ ಮೂಲಕ ಹೋಗುವ ಕಿರಣಗಳು, ತಮ್ಮ ಪಥವನ್ನು ಬದಲಾಯಿಸದೆ, ಒಂದೇ ರೀತಿಯಲ್ಲಿ ಹೋಗುವುದರಿಂದ, ಅವುಗಳು ಜ್ಯೋತಿಯನ್ನು ಉತ್ಪತ್ತಿಮಾಡಲಾರವು. ಈ ರೀತಿಯ ಜ್ಯೋತಿಯನ್ನು ಉತ್ಪತ್ತಿಮಾಡುವ ಗುಣವನ್ನು ಕಂಡುಹಿಡಿದವರು ಜೇಮ್ಸ್ ಟಿಂಡಾಲ್ ಎಂಬಾತರು. ನಾವು ಕತ್ತಲೆಕೋಣೆಯ ಕಿಟಕಿಯನ್ನು ತೆಗೆದರೆ, ಸೂರ್ಯನ ಕಿರಣಗಳ ಜ್ಯೋತಿಯೊಂದು ನಮಗೆ ಕಾಣುತ್ತದೆ. ಅದರ ಮೂಲಕ ಕೋಣೆಯಲ್ಲಿರುವ ಸಣ್ಣಗಿರುವ ಧೂಳಿನ ಕಣಗಳು ನಮ್ಮ ಕಣ್ಣಿಗೆ ಗೋಚರವಾಗುತ್ತವೆ. ಇದು ಎಲ್ಲರೂ ನೋಡಿರುವ ವಿಷಯ. ಈ ಧೂಳಿನ ಕಣಗಳು ಗಾಳಿಯಲ್ಲಿ ಯಾವ ರೀತಿ ಚಲಿಸುತ್ತಾ ಇವೆಯೋ ಅದೇ ರೀತಿಯಲ್ಲಿ "ಕಲಾಯ್ಡ್" ಕಣಗಳು ದ್ರಾವಣದಲ್ಲಿ ಚಲಿಸುತ್ತಾ ಇವೆ. ಅವುಗಳು ನಮ್ಮ ಕಣ್ಣಿಗೆ ಗೋಚರವಾಗುವುದಿಲ್ಲ. ದೀಪದ ರಶ್ಮಿ ಬಿದ್ದಾಗಲೇ ಅವುಗಳು ನಮಗೆ ತಿಳಿಯುತ್ತವೆ.

ಕಣಗಳು ಸಣ್ಣಗಾದರೆ, ಅವುಗಳ ವಿಸ್ತೀರ್ಣವು ಹೆಚ್ಚುತ್ತದೆ ಎಂಬುದಾಗಿ ತಿಳಿಸಿದೆ. ಹೀಗೆ ಒಂದು ಘನ ಸೆಂಟಿಮೀಟರ್‌ನಷ್ಟು ಪದಾರ್ಥವನ್ನು ಅನೇಕ ಎಕರೆಗಳಷ್ಟು ವಿಸ್ತೀರ್ಣದಲ್ಲಿ ಚೂರುಮಾಡಿ ಹರಡಬಹುದು. ಹೀಗೆ ಮಾಡಿದರೆ,

ವಿಸ್ತೀರ್ಣವು ಹೆಚ್ಚಾಗುವುದಲ್ಲದೆ, ಅದರಿಂದ ಅನೇಕ ಹೊಸ ಗುಣಗಳು ಉತ್ಪತ್ತಿಯಾಗುತ್ತವೆ. ವಿಸ್ತೀರ್ಣ ಹೆಚ್ಚಿಸಲ್ಪಟ್ಟ ಈ ಸಣ್ಣ ಕಣಗಳಿಗೆ ರಾಸಾಯನಿಕ ಕ್ರಿಯೆಯನ್ನು ಚುರುಕುಮಾಡುವ ಶಕ್ತಿಯುಂಟಾಗುವುದರಿಂದ, ಅವುಗಳನ್ನು ವೇಗವರ್ಧಕಗಳನ್ನಾಗಿ ಉಪಯೋಗಿಸಬಹುದು. ಸಣ್ಣಗೆ ಚೂರುಮಾಡಿದ ಚಿನ್ನ, ಬೆಳ್ಳಿ, ನಿಕ್ಕಲ್, ತಾಮ್ರ ಮತ್ತು ಪ್ಲಾಟಿನಮ್ ಲೋಹಗಳನ್ನು ಅನೇಕ ರಾಸಾಯನಿಕ ಕ್ರಿಯೆಗಳಲ್ಲಿ ವೇಗವರ್ಧಕಗಳನ್ನಾಗಿ ಉಪಯೋಗಿಸುತ್ತಾರೆ. ಎಣ್ಣೆಯ ಮೇಲೆ ಜಲಜನಕವನ್ನು ಒತ್ತಡದಿಂದ ಸಾಗಿಸಿ, ಅದರಿಂದ ಕೃತಕ ತುಪ್ಪ (ಡಾಲ್ಡಾ) ವನ್ನು ತಯಾರಿಸುವ ವಿಧಾನದಲ್ಲಿ ನಿಕ್ಕಲ್ ವೇಗವರ್ಧಕವನ್ನು ಉಪಯೋಗಿಸುತ್ತಾರೆ. ವಿಸ್ತೀರ್ಣವು ಹೆಚ್ಚಾದಷ್ಟು, ಈ ಪದಾರ್ಥಗಳಿಗೆ ಅನಿಲರೂಪದಲ್ಲಿರುವ ಪದಾರ್ಥಗಳನ್ನು ಆಕರ್ಷಿಸುವ ಶಕ್ತಿ ಹೆಚ್ಚಾಗಿ, ಅವುಗಳನ್ನು ಸಂಯೋಜಿಸುವ ಶಕ್ತಿಯೂ ಸಹ ಉಂಟಾಗುತ್ತದೆ. ಪದಾರ್ಥಗಳ ವಿಸ್ತೀರ್ಣವು ಹೆಚ್ಚಾದಹಾಗೆಲ್ಲ, ಆಕರ್ಷಣಶಕ್ತಿಯು ಹೆಚ್ಚಾಗುವುದು ಎಂಬುದಕ್ಕೆ ಒಂದು ಉದಾಹರಣೆಯನ್ನು ಕೊಡಬಹುದು. ಸಣ್ಣಗೆ ಪುಡಿಮಾಡಿದ ಇದ್ದಲನ್ನು ಒಂದು ಸೀಸೆಗೂ ಗಟ್ಟಿಯಾಗಿರುವ ಇದ್ದಲನ್ನು ಮತ್ತೊಂದು ಸೀಸೆಗೂ ಹಾಕಿ, ಎರಡಕ್ಕೂ "ಮೆಥಿಲೀನ್ ಬ್ಲ್ಯೂ" ಎಂಬ ಹೆಸರುಳ್ಳ ನೀಲಿಬಣ್ಣದ ದ್ರಾವಣವನ್ನು ಹಾಕಿದರೆ, ಮೊದಲನೆಯ ಸೀಸೆಯಲ್ಲಿ ಹಾಕಲ್ಪಡುವ ದ್ರಾವಣದ ಬಣ್ಣವು ಹೋಗುತ್ತದೆ, ಎರಡನೆಯ ಸೀಸೆಯಲ್ಲಿ ಬಣ್ಣವು ಸ್ವಲ್ಪವೂ ಹೋಗುವುದಿಲ್ಲ. ಮೊದಲನೆಯ ಸೀಸೆಯಲ್ಲಿರುವ ಇದ್ದಲು ಪುಡಿಯ ರೂಪದಲ್ಲಿರುವುದರಿಂದ, ಗಟ್ಟಿ ಇದ್ದಲಿಗಿಂತ ಹೆಚ್ಚು ವಿಸ್ತೀರ್ಣವುಳ್ಳದ್ದಾಗಿರುತ್ತದೆ. ವಿಸ್ತೀರ್ಣವು ಹೆಚ್ಚಾದಷ್ಟು ಬಣ್ಣವನ್ನು ಹೀರುವ ಶಕ್ತಿಯು ಹೆಚ್ಚುವುದರಿಂದ ಬಣ್ಣವು ಹೋಗುತ್ತದೆ. ಎರಡನೆಯ ಸೀಸೆಯಲ್ಲಿರುವ ಇದ್ದಲಿನ ವಿಸ್ತೀರ್ಣ ಕಡಿಮೆಯಾದುದರಿಂದ, ಬಣ್ಣವು ಹೋಗುವುದಿಲ್ಲ.

"ಕಲಾಯ್ಡ್" ದ್ರಾವಣಗಳಲ್ಲಿ ಅನೇಕ ಜಾತಿಗಳುಂಟು. ಕೆಲವು ದ್ರಾವಣಗಳು, ಸಣ್ಣಗೂ ಗಟ್ಟಿಯಾಗಿಯೂ ಇರುವ ಕಣಗಳು ದ್ರವರೂಪದ ಪದಾರ್ಥಗಳಲ್ಲಿ ಚಲಿಸಿದರೆ ಉಂಟಾಗುತ್ತವೆ. ಮತ್ತೆ ಕೆಲವು ದ್ರಾವಣಗಳು ಗಟ್ಟಿಯಾದ ಕಣಗಳನ್ನು ಅನಿಲರೂಪದ ದ್ರಾವಣದಲ್ಲಿ ಚಲಿಸಿದಾಗ ಬರುತ್ತವೆ. ಮೂರನೆಯದು, ಒಂದು ದ್ರವವನ್ನು ಮತ್ತೊಂದು ದ್ರವದ ಜೊತೆಯಲ್ಲಿ ಸೇರಿಸಿ ಮಿಲೀಕರಣ ಮಾಡಿದರೆ ಬರುವ ದ್ರಾವಣಗಳು. ಮೊದಲನೆಯ ಜಾತಿಯ ದ್ರಾವಣವನ್ನು "ಸಾಲ್" ಎಂಬುದಾಗಿ ಕರೆಯುತ್ತಾರೆ. ಚಿನ್ನದಿಂದ ಬರುವ ಕೆಂಪು ಮತ್ತು ನೀಲಿಬಣ್ಣಗಳುಳ್ಳ ಎರಡು ತರಹ ನೀರುಗಳನ್ನೂ ಪ್ಲಾಟಿನಂ ನೀರನ್ನೂ ಗಂಧಕದ ದ್ರಾವಣವನ್ನೂ,

ಕಪ್ಪು ಶಾಯಿಯನ್ನೂ, ಉದಾಹರಣೆಗಾಗಿ ತಿಳಿಸಬಹುದು. ಹೊಗೆ, ಮಂಜು, ಮುಂತಾದುವುಗಳನ್ನು ಎರಡನೆಯ ಜಾತಿಗೆ ಸೇರಿಸಿ "ಏರೋಸಾಲ್ಸ್" ಎಂಬುದಾಗಿ ಕರೆಯುತ್ತಾರೆ. ಮೂರನೆಯ ಗುಂಪಿಗೆ ಸೇರಿದ ಜಿಡ್ಡಿನ ಕಣಗಳುಳ್ಳ ದ್ರಾವಣಗಳನ್ನು "ಎಮಲ್ಷನ್"ಗಳೆಂದು ಕರೆಯುತ್ತಾರೆ. ಹರಳೆಣ್ಣೆ ಮತ್ತು ನೀರನ್ನು ಮಿಲೀಕರಣ ಮಾಡಿದರೆ, ಹಾಲಿನಂತೆ ಬೆಳ್ಳಗಿರುವ ಪದಾರ್ಥವು ಉಂಟಾಗುತ್ತದೆ. ಇದೇ ತರಹ ಪದಾರ್ಥಗಳು ಕಾರ್ಬಾಲಿಕ್ ಆಮ್ಲದಿಂದಲೂ, ಮತ್ತು ಕೆಲವು ಎಣ್ಣೆಗಳಿಂದಲೂ ಉತ್ಪತ್ತಿಯಾಗುತ್ತವೆ. ಇವು ಮುಖ್ಯವಾದ "ಎಮಲ್ಷನ್" ಪದಾರ್ಥಗಳು.

ಮೇಲೆ ತಿಳಿಸಿದ ಮೂರು ತರಹ ದ್ರಾವಣಗಳಲ್ಲೂ ಇರುವ ಸಣ್ಣಗಿರುವ ಕಣಗಳನ್ನು ಒಟ್ಟುಗೂಡಿಸಿದರೆ ಅವು ಭಾರವಾದ ಕಣಗಳಾಗಿ ಕೆಳಗೆ ಬೀಳುತ್ತವೆ. ಕಣಗಳು ಹಗುರವಾಗಿರುವ ತನಕ ಅವುಗಳು ಕೆಳಗೆ ಬೀಳುವುದಿಲ್ಲ. ಇದಕ್ಕೆ ಆವಿರೂಪವನ್ನು ಹೊಂದಿ ಮೋಡಗಳಾಗಿ ಪರಿಣಮಿಸಿ, ಆಕಾಶದಿಂದ ತಣ್ಣಗಾದ ಮೇಲೆ ಭೂಮಿಯ ಮೇಲೆ ಸುರಿಯುವ ಮಳೆಯೇ ಒಂದು ದೃಷ್ಟಾಂತ. ಚಳಿಗಾಲದಲ್ಲಿ ನಾವು ಬಾಯಿಯಿಂದ ಆವಿಯನ್ನು ಬಿಟ್ಟು ಒಂದು ತಣ್ಣಗಿರುವ ತಟ್ಟೆಯನ್ನಾಗಲೀ ಅಥವಾ ಕನ್ನಡಿಯನ್ನಾಗಲೀ ಆ ಆವಿಗೆ ಹಿಡಿದರೆ, ಅದರ ಮೇಲೆ ತಣ್ಣಗಾದ ನೀರಿನ ಹನಿಗಳು ತುಂತುರಾಗಿ ನಿಲ್ಲುತ್ತವೆ. ಸ್ನಾನದ ಮನೆಯಲ್ಲಿ ಕನ್ನಡಿ ಇದ್ದರೆ ಕೊಪ್ಪರಿಗೆಯಿಂದ ಬರುವ ಆವಿಯು ಅದರ ಮೇಲೆ ತಣ್ಣಗಾಗಿ ಹಿಮವು ಕನ್ನಡಿಯನ್ನು ಮುಚ್ಚುವುದು ಎಲ್ಲರೂ ನೋಡಿರಬಹುದು. ಹಾಲನ್ನು ಕಾಯಿಸಿದಾಗ ಕೆನೆ ಕಟ್ಟುವುದಕ್ಕೆ ಅದರಲ್ಲಿರುವ ಕೇಸೀನ್ ಎಂಬ ಸಸಾರಜನಕ ಪದಾರ್ಥವೇ ಕಾರಣ. ಉಷ್ಣವು ಹೆಚ್ಚಿದ ಹಾಗೆ ಈ ಕೇಸೀನ್ ಕಣಗಳು ಒಟ್ಟುಗೂಡಿ ಮೇಲಕ್ಕೆ ಕೆನೆಯ ರೂಪದಲ್ಲಿ ಬರುವುದೇ ಇದಕ್ಕೆ ಕಾರಣ. ಇದೇ ರೀತಿಯಲ್ಲಿ ಕುಡಿಯುವುದಕ್ಕೆ ಉಪಯೋಗಿಸಲ್ಪಡಲು ಯೋಗ್ಯವಲ್ಲದ ಕೊಳೆಯ ನೀರನ್ನು ಶುದ್ಧಿ ಮಾಡಬೇಕಾದರೆ, ಅದರಲ್ಲಿರುವ ಹಗುರವಾದ ಮಣ್ಣಿನ ಕಣಗಳನ್ನು ಒಟ್ಟುಗೂಡಿಸಿ ಕೆಳಗೆ ಬರುವ ಹಾಗೆ ಮಾಡಬೇಕು. ಹೀಗೆ ಮಾಡಿದ ನಂತರ, ಮೇಲೆ ಶುದ್ಧವಾದ ನೀರು ನಿಲ್ಲುತ್ತದೆ. ಅದನ್ನು ಕುಡಿಯುವುದಕ್ಕೆ ಉಪಯೋಗಿಸಬಹುದು. ಹೀಗೆ ಕೊಳೆಯ ನೀರನ್ನು ಶುದ್ಧಿಮಾಡಬೇಕಾದರೆ, ಸ್ಫಟಿಕಲವಣದ ದ್ರಾವಣವನ್ನು ಹಾಕಬೇಕು. ಈ ಲವಣವು ಮಣ್ಣಿನ ಸಣ್ಣ ಕಣಗಳನ್ನೆಲ್ಲಾ ಒಟ್ಟುಗೂಡಿಸಿ ಕೆಳಗೆ ಬರುವ ಹಾಗೆ ಮಾಡುತ್ತದೆ. ಇದನ್ನು ಹೆಪ್ಪುಗಟ್ಟಿಸುವ ವಿಧಾನವೆಂದು (Coagulation) ಕರೆಯುತ್ತಾರೆ.

ಈ ರೀತಿಯಾಗಿ "ಕಲಾಯ್ಡ್" ದ್ರಾವಣದಲ್ಲಿರುವ ಸಣ್ಣ ಕಣಗಳನ್ನು ಒಟ್ಟು

ಗೂಡಿಸಬೇಕಾದರೆ, ಆ ಕಣಗಳ ಕೂಡ ಸೇರಿರುವ ಮತ್ತು ಒಂದು ಕಣವು ಮತ್ತೊಂದು ಕಣದಿಂದ ವಿಕರ್ಷಿಸಲ್ಪಡುವುದಕ್ಕೆ ಸಹಾಯಕರವಾದ ಒಂದೇ ತೆರನಾದ ವಿದ್ಯುತ್ತಿನ ಹೊರೆಯನ್ನು ನಿರ್ನಾಮಮಾಡಬೇಕು. ಇದಕ್ಕೆ ವಿದ್ಯುದ್ವಿಶ್ಲೇಷ್ಯಗಳನ್ನು ಉಪಯೋಗಿಸಬೇಕು. ಇವು ನೀರಿನಲ್ಲಿ ಕರಗಿದಾಗ ವಿಭಜನೆ ಹೊಂದಿ ಎರಡು ತರಹ ಕಣಗಳನ್ನು ಉತ್ಪತ್ತಿಮಾಡುತ್ತವೆ. ಎರಡು ತರಹ ಕಣಗಳಲ್ಲೂ, ವಿದ್ಯುತ್ತಿನ ಹೊರೆಯು ಇರುತ್ತದೆ. ಆದರೆ ಒಂದು ಗುಂಪಿನ ಕಣಗಳಿಗೆ ಧನ ವಿದ್ಯುದ್ವಾಹಿ ಕಣಗಳೆಂದೂ (+ve), ಮತ್ತೊಂದು ಗುಂಪಿನ ಕಣಗಳಿಗೆ ಋಣ ವಿದ್ಯುದ್ವಾಹಿ ಕಣಗಳೆಂದೂ (—ve) ಕರೆಯುತ್ತಾರೆ. ವಿದ್ಯುತ್ತಿನ ಹೊರೆಯುಳ್ಳ "ಕಲಾಯ್ಡ್" ಕಣಗಳ ಜೊತೆಯಲ್ಲಿ, ವಿದ್ಯುದ್ವಿಶ್ಲೇಷ್ಯಗಳನ್ನು ಸೇರಿಸಿದರೆ ಕಣಗಳ ಮೇಲಿರುವ ವಿದ್ಯುತ್ತಿನ ಹೊರೆಯು ನಿರ್ನಾಮವಾಗುತ್ತದೆ. ಈ ರೀತಿಯಾಗಿ ಕಲಾಯ್ಡ್ ಕಣಗಳು ತಮ್ಮ ವಿದ್ಯುತ್ ಹೊರೆಯಿಂದ ರಹಿತವಾಗಿ, ಒಟ್ಟುಗೂಡಿ ಭಾರವಾದ ಕಣಗಳಾಗಿ ಕೆಳಗೆ ಬೀಳುತ್ತವೆ. ದ್ರಾವಣದಲ್ಲಿರುವ ಕಣಗಳು 'ಕಲಾಯ್ಡ್' ರೂಪವನ್ನು ಹೊಂದಬೇಕಾದರೆ, ಅವುಗಳು ಒಂದೇ ತರಹ ವಿದ್ಯುತ್ತಿನ ಹೊರೆಯನ್ನು ಪಡೆದಿರಬೇಕು. ಹೀಗೆ ವಿದ್ಯುತ್ತಿನ ಹೊರೆಯನ್ನು ಹೊಂದಿದ ಕಣಗಳು ನೀರಿನಲ್ಲಿ ಒಂದೊಂದೂ ಸೇರದೆ ಎಷ್ಟು ಕಾಲವಾದರೂ 'ಕಲಾಯ್ಡ್' ರೂಪದಲ್ಲೇ ಇರುತ್ತವೆ. ಈ ರೀತಿಯಾಗಿರುವ ಕಣಗಳನ್ನು ಸೇರುವ ಹಾಗೆ ಮಾಡಬೇಕಾದರೆ, ವಿರುದ್ಧವಾದ ವಿದ್ಯುತ್ತಿನ ಹೊರೆಯನ್ನು ಉತ್ಪತ್ತಿಮಾಡುವ ವಿದ್ಯುದ್ವಿಶ್ಲೇಷ್ಯಗಳೇ ಕಾರಣವೆಂದು ನಮಗೆ ಗೊತ್ತಾಗುತ್ತದೆ. ಈ ವಿದ್ಯುದ್ವಿಶ್ಲೇಷ್ಯಗಳಲ್ಲಿ ಹೆಚ್ಚು ವಿದ್ಯುತ್ತಿನ ಹೊರೆಯಿದ್ದರೆ, 'ಕಲಾಯ್ಡ್' ಕಣಗಳು ಬಹಳ ಜಾಗ್ರತೆಯಾಗಿ ಘನೀಕರಿಸುತ್ತವೆ. ವಿದ್ಯುದ್ವಿಶ್ಲೇಷ್ಯದ ಕಣಗಳಲ್ಲಿ ವಿದ್ಯುತ್ತಿನ ಹೊರೆಯು ಹೆಚ್ಚಿದ ಹಾಗೆ, ಘನೀಕರಿಸುವ ವೇಗವೂ ಕೂಡ ಹೆಚ್ಚುತ್ತದೆ ಎಂಬುದಾಗಿ ಷೂಲ್ಸ್ ಮತ್ತು ಹಾರ್ಡಿ ತಮ್ಮ ಸೂತ್ರದಲ್ಲಿ ತಿಳಿಸಿದ್ದಾರೆ.

ಈ 'ಕಲಾಯ್ಡ್' ದ್ರಾವಣಗಳು ಯಾವಾಗ ಮತ್ತು ಹೇಗೆ ಉತ್ಪತ್ತಿಯಾದವು ಮತ್ತು ಅವುಗಳ ಗುಣವಿಶೇಷಣಗಳನ್ನು ಕಂಡುಹಿಡಿದವರು ಯಾರು ಎಂಬ ವಿಷಯವನ್ನು ತಿಳಿದುಕೊಳ್ಳುವುದಕ್ಕೆ ನಾವು ಕುತೂಹಲಿಗಳಾಗಿದ್ದೇವೆ. ಈ ವಿಜ್ಞಾನವು ೧೭ ನೆಯ ಶತಮಾನದ ಮೊಟ್ಟಮೊದಲು ಎಲ್ಲರಿಗೂ ತಿಳಿದಿತ್ತು. ಚಿನ್ನದ ನೀರನ್ನು ೧೬೧೮ ನೆಯ ವರ್ಷದಲ್ಲಿ ಔಷಧಿಗಾಗಿ ಉಪಯೋಗಿಸುತ್ತಿದ್ದರು. ಕಾಯಿಲೆಯನ್ನು ಉತ್ಪತ್ತಿಮಾಡುವ ಕ್ರಿಮಿಗಳ ಮೇಲೆ ಇದು ಒಂದು ಚಿನ್ನದ ಕವಚವನ್ನು ಉಂಟುಮಾಡಿ ಅವುಗಳು ಕಾಯಿಲೆಯನ್ನು ಹರಡದ ಹಾಗೆ ಮಾಡು

ತ್ತಿದ್ದುದೇ ಇದರ ಉಪಯೋಗಕ್ಕೆ ಕಾರಣವಾಯಿತು. ಕೆಲವು ದಿವಸಗಳ ನಂತರ ಚಿನ್ನದಿಂದ ಕೆಂಪು ಮತ್ತು ನೀಲಿಬಣ್ಣಗಳುಳ್ಳ ನೀರನ್ನು ತಯಾರಿಸಿದರು. ಚಿನ್ನದಂತೆ ಅನೇಕ ಪದಾರ್ಥಗಳನ್ನು ಉಪಯೋಗಿಸಿ, "ಕಲಾಯ್ಡ್" ದ್ರಾವಣಗಳನ್ನು ತಯಾರಿಸಿ, ಬಣ್ಣಗಳ ಉತ್ಪತ್ತಿಗೆ, ಕಣಗಳ ಗಾತ್ರವೇ ಆಧಾರ ಎಂಬುದನ್ನು ತಿಳಿಸಿದವರು ಮೈಕೇಲ್ ಫ್ಯಾರಡೆ.

"ಈ 'ಕಲಾಯ್ಡ್' ವಿಜ್ಞಾನವು ಕಾಳುಗಳು, ಹನಿಗಳು, ಗುಳ್ಳೆಗಳು, ನಾರುಗಳು, ಮತ್ತು ಪೊರೆಗಳು ಮುಂತಾದ ಆಕಾರದಲ್ಲಿರುವ ಪದಾರ್ಥಗಳ ವಿಚಾರವನ್ನು ವ್ಯಕ್ತಪಡಿಸುವುದು" ಎಂಬುದಾಗಿ ಬ್ಯಾಂಕ್ರಾಫ್ಟರು ತಿಳಿಸಿದ್ದಾರೆ. ಈ ವಿಜ್ಞಾನದಲ್ಲಿ ನಡೆಸಿದ ಪರಿಶೋಧನೆಗಳಿಗೆ ಅನೇಕ ಕಾರಣಕರ್ತರು ಇದ್ದಾರೆ. ಅವರು ಯಾರು ಯಾರೆಂದರೆ, ಥಾಮಸ್ ಗ್ರೇಹಾಮ್, ಫ್ರಾಯಿಂಡ್‌ಲಿಹ್, ವೈಸರ್, ಹೌಸರ್, ಲೀಸ್‌ಗಾಂಗ್ ಮತ್ತು ಮೆಕ್‌ಬೇನ್. ಥಾಮಸ್ ಗ್ರೇಹಾಮ್ ಎಂಬುವವರು ಇವುಗಳಲ್ಲಿ ಮುಖ್ಯವಾದ ಒಂದು ಅಂಶವನ್ನು ಕಂಡುಹಿಡಿದು, ಅವುಗಳನ್ನು ಸ್ಫಟಿಕಾಕೃತಿಯ ಲವಣಗಳಿಂದ ವಿಂಗಡಿಸಿದ್ದಾರೆ: 'ಕಲಾಯ್ಡ್' ದ್ರಾವಣಗಳು ಸ್ಫಟಿಕಾಕೃತಿಯ ಲವಣಗಳ ದ್ರಾವಣಕ್ಕಿಂತಲೂ ನಿಧಾನವಾಗಿ ಹರಡುತ್ತವೆ ಎಂದಿದ್ದಾರೆ.

ಮೇಲೆ ವಿವರಿಸಿದ "ಕಲಾಯ್ಡ್" ದ್ರಾವಣಗಳನ್ನು ನಾವು ಅನೇಕ ವಿಧಾನಗಳಲ್ಲಿ ತಯಾರಿಸಬಹುದು. ಕೆಲವು ಪದಾರ್ಥಗಳನ್ನು ಕಲಾಯ್ಡ್ ಗಾತ್ರಕ್ಕೆ ತಂದು ನೀರು ಅಥವಾ ಬೇರೆ ಯಾವುದಾದರೂ ದ್ರಾವಣದ ಜೊತೆಯಲ್ಲಿ ಚದುರಿಸಿದರೆ, ಅವು ದ್ರಾವಣದ ರೂಪಕ್ಕೆ ಬರುತ್ತವೆ. ಜಿಲೆಟಿನ್ ದ್ರಾವಣ, ಗಂಜಿ, ಕಲೋಡಿಯಮ್ ಮುಂತಾದ ಅನೇಕ ದ್ರಾವಣಗಳನ್ನು ಮೇಲೆ ತಿಳಿಸಿದ ವಿಧಾನದಿಂದ ತಯಾರಿಸಬಹುದು. ಇತರ ದ್ರಾವಣಗಳನ್ನು ರಾಸಾಯನಿಕ ಬದಲಾವಣೆಗಳುಂಟುಮಾಡಿ ತಯಾರಿಸಬೇಕು. ಸೋಡಿಯಂ ಥಯೋಸಲ್ಫೇಟು ದ್ರಾವಣಕ್ಕೆ ಹೈಡ್ರೋಕ್ಲೋರಿಕ್ ಆಮ್ಲವನ್ನು ಬೆರಸಿದರೆ, ಸ್ವಲ್ಪಕಾಲವಾದ ಮೇಲೆ, ಅದರಿಂದ ಗಂಧಕದ ದ್ರಾವಣವು ಉತ್ಪತ್ತಿಯಾಗುತ್ತದೆ. ಇದಕ್ಕೆ ಬೇರೆಬೇರೆ ಬಣ್ಣಗಳುಂಟು. ಕೆಲವು 'ಕಲಾಯ್ಡ್' ಕಣಗಳಿಗೆ ನೀರಿನ ಮೇಲೆ ಅಥವಾ ಬೇರೆ ದ್ರವಗಳ ಮೇಲೆ ಪ್ರೇಮವುಂಟು. ಅವುಗಳು ಬೇಗನೆ ಕಲಾಯ್ಡ್ ದ್ರಾವಣಗಳನ್ನು ಕೊಡುತ್ತವೆ.

ಕೆಲವು "ಕಲಾಯ್ಡ್" ದ್ರಾವಣಗಳ ತಯಾರಿಕೆಯಲ್ಲಿ ವಿದ್ಯುದ್ವಿಶ್ಲೇಷ್ಯಗಳನ್ನು ಉಪಯೋಗಿಸಬೇಕು. ಹೀಗೆ ಅವುಗಳನ್ನು ಉಪಯೋಗಿಸುವುದರಿಂದ, ಅವುಗಳೂ ಸ್ವಲ್ಪ ಉಳಿದು ಅಶುದ್ಧವಾದ ದ್ರಾವಣವು ನಿಲ್ಲುತ್ತದೆ. ಈ ರೀತಿಯಾಗಿ ತಯಾರಿಸಲ್ಪಟ್ಟ ಅಶುದ್ಧವಾದ ದ್ರಾವಣವನ್ನು ಶುದ್ಧಿಮಾಡುವುದಕ್ಕೆ ಪಾರಪೃಥಕ್ಕರಣ ಎಂಬ

ವಿಧಾನವನ್ನು (Dialysis) ಕಂಡುಹಿಡಿದಿದ್ದಾರೆ. ಇದು ಒಂದು ತರಹ ಶೋಧನೆ. ಇದನ್ನು ಕಂಡುಹಿಡಿದವರು ಥಾಮಸ್ ಗ್ರೆಹಾಮ್ ಎನ್ನುವವರು. ವಿದ್ಯುದ್ವಿಶ್ಲೇಷ್ಯ ಗಳೊಡನೆ ಕೂಡಿದ 'ಕಲಾಯ್ಡ್' ದ್ರಾವಣವನ್ನು ಅತ್ಯಂತ ಸಣ್ಣ ರಂಧ್ರಗಳುಳ್ಳ ಕಲೋಡಿಯನ್ ಪರೆಯಿಂದ ಮಾಡಿದ ಚೀಲಕ್ಕೆ ಹಾಕಿ, ಆ ಚೀಲವನ್ನು ನೀರಿನೊಳಗೆ ತಗಲುಹಾಕಿದರೆ, ಚೀಲದ ಒಳಗಿರುವ ಸ್ಫಟಿಕ ಭಾಗ ಲವಣಗಳ ದ್ರಾವಣವು ಚೀಲದ ಸಣ್ಣ ರಂಧ್ರಗಳ ಮೂಲಕ ಹಾಯ್ದುಹೋಗಿ ನೀರೊಳಗೆ ಸೇರುತ್ತವೆ. ಚೀಲದ ಒಳಗೆ 'ಕಲಾಯ್ಡ್' ದ್ರಾವಣವು ಗಟ್ಟಿಯಾಗಿ ನಿಲ್ಲುತ್ತದೆ. ಈ ರೀತಿಯಲ್ಲಿ ನಾವು ಕೆಂಪು ಬಣ್ಣವುಳ್ಳ ಫೆರಿಕ್ ಹೈಡ್ರಾಕ್ಸೈಡಿನ ದ್ರಾವಣವನ್ನು ತಯಾರಿಸ ಬಹುದು. ಬಿಸಿಯಾದ ದ್ರಾವಣವನ್ನು ಚೀಲಕ್ಕೆ ಹಾಕಿದರೆ, ಆ ದ್ರಾವಣವನ್ನು ಇನ್ನೂ ಹೆಚ್ಚಿನ ವೇಗದಿಂದ ಶುದ್ಧಿಮಾಡಬಹುದು. ಈ ಶುದ್ಧೀಕರಣವನ್ನು ವಿದ್ಯು ಚ್ಛಕ್ತಿಯ ಸಹಾಯದಿಂದಲೂ ಮಾಡುತ್ತಾರೆ.

ಇನ್ನೂ ಅನೇಕ ವಿಧಾನಗಳಲ್ಲಿ 'ಕಲಾಯ್ಡ್' ದ್ರಾವಣಗಳನ್ನು ತಯಾರಿಸ ಬಹುದು. ಗಟ್ಟಿಯಾಕಾರದ ಚಿನ್ನ, ಬೆಳ್ಳಿ, ಮತ್ತು ಪ್ಲಾಟಿನಮ್ ಲೋಹಗಳನ್ನು 'ಕಲಾಯ್ಡ್' ಗಾತ್ರಕ್ಕೆ ತಂದು, ಅವುಗಳನ್ನು ನೀರಿನೊಳಗೆ ಚದುರಿಸಿ ವಿವಿಧ ಬಣ್ಣ ಗಳನ್ನು ಪಡೆದಿರುವ ನೀರುಗಳನ್ನು ತಯಾರಿಸಲು ಒಂದು ವಿಧಾನವುಂಟು. ಇದನ್ನು ಕಂಡುಹಿಡಿದವರು ಬ್ರೆಡಿಗ್ ವಿಜ್ಞಾನಿಗಳು. ಇವರು ವಿದ್ಯುನ್ಮಿಂಚಿನ ಮೂಲಕ, ಈ ದ್ರಾವಣಗಳನ್ನು ತಯಾರಿಸಿದ್ದಾರೆ. ಇವರ ವಿಧಾನದಲ್ಲಿ, ಲೋಹಗಳ ವಿದ್ಯುದ್ರುವ ಗಳನ್ನು ನೀರಿನಲ್ಲಿರಿಸಿ, ವಿದ್ಯುನ್ಮಿಂಚನ್ನು ಉಂಟುಮಾಡಿದರೆ, ಆಯಾ ಲೋಹಗಳು ಆವಿರೂಪಕ್ಕೆ ಬರುತ್ತವೆ. ಆ ಆವಿಗಳನ್ನು ಮಂಜುಗೆಡ್ಡೆಯ ಮೂಲಕ ತಣ್ಣಗೆ ಮಾಡಿದರೆ ಅವು ನೀರಿನಲ್ಲಿ ಚದುರಿಸಲ್ಪಟ್ಟು "ಕಲಾಯ್ಡ್" ದ್ರಾವಣವು ಉಂಟಾಗು ತ್ತದೆ. ಇದೇ ರೀತಿಯಲ್ಲಿ ಹೆಚ್ಚು ವೇಗವುಳ್ಳ ವಿದ್ಯುನ್ಮಿಂಚನ್ನು ಉಪಯೋಗಿಸಿ, ಸ್ವೆಡ್‌ಬರ್ಗ್ ಎನ್ನುವವರು ಅನೇಕ "ಕಲಾಯ್ಡ್" ದ್ರಾವಣಗಳನ್ನು ತಯಾರಿಸಿದ್ದಾರೆ.

ಹಲವು "ಕಲಾಯ್ಡ್" ದ್ರಾವಣಗಳನ್ನು ಬೇರೆ ವಿಧಾನದಿಂದಲೂ ತಯಾರಿಸ ಬಹುದು. ಮತ್ತೊಂದು ವಿಧಾನದಲ್ಲಿ "ಕಲಾಯ್ಡ್ ಗಿರಣಿ" ಎಂಬ ಸಲಕರಣೆಯನ್ನು ಉಪಯೋಗಿಸುತ್ತಾರೆ. ಈ ಸಲಕರಣೆಯಲ್ಲಿರುವ ಎರಡು ಅತಿ ಸಮೀಪದಲ್ಲಿರುವ ತಟ್ಟೆಗಳ ಮಧ್ಯದಲ್ಲಿ ಪದಾರ್ಥವನ್ನು ಹನಿಗಳ ರೂಪದಲ್ಲಿಯಾಗಲೀ ಅಥವಾ ಕಣಗಳ ರೂಪದಲ್ಲಿಯಾಗಲೀ ಇರಿಸಿ, ಆ ತಟ್ಟೆಗಳನ್ನು ನೀರಿನೊಳಗೆ ಇಟ್ಟು, ಯಂತ್ರಗಳ ಮೂಲಕ ಆ ತಟ್ಟೆಗಳನ್ನು ವಿರುದ್ಧಮಾರ್ಗದಲ್ಲಿ, ಒಂದಕ್ಕೆ ಒಂದು ತಗುಲದ ರೀತಿಯಲ್ಲಿ, ತಿರುಗಿಸಬೇಕು. ಹೀಗೆ ಅತಿರಭಸದಿಂದ ತಿರುಗುತ್ತಿರುವ ತಟ್ಟೆಗಳು, ಕಣಗಳನ್ನು

ಅಥವಾ ಹನಿಗಳನ್ನು ಅನೇಕ ತುಂಡುಗಳಾಗಿ ಕತ್ತರಿಸುತ್ತವೆ. ಈ ರೀತಿ ತಯಾರಿಸಲ್ಪಟ್ಟ ಅನೇಕ ತುಂಡುಗಳು ನೀರಿನಲ್ಲಿ ಚದುರಿಸಲ್ಪಟ್ಟು, "ಕಲಾಯ್ಡ್" ದ್ರಾವಣವನ್ನುಂಟುಮಾಡುತ್ತವೆ. ಹನಿರೂಪದಲ್ಲಿರುವ ದ್ರವಪದಾರ್ಥಗಳಿಂದ ಎಮಲ್ಷನ್‌ಗಳು ಬರುತ್ತವೆ. ಚಿತ್ರಗಳಿಗೆ ಬಣ್ಣ ಕೊಡುವುದಕ್ಕೆ ಯೋಗ್ಯವಾದ ಕಪ್ಪುಶಾಯಿಯನ್ನು ಇದೇ ವಿಧಾನದಿಂದ ತಯಾರಿಸುತ್ತಾರೆ. ಇದರ ತಯಾರಿಕೆಯಲ್ಲಿ ಇಂಗಾಲವನ್ನು "ಕಲಾಯ್ಡ್" ಗಿರಣಿಯಲ್ಲಿರಿಸಿ, ಚೆನ್ನಾಗಿ ಪುಡಿಮಾಡಿ ಅದನ್ನು ನೀರಿನಲ್ಲಿ ಚದುರಿಸಿ, ಸ್ವಲ್ಪ ಗೋಂದನ್ನು ಹಾಕುತ್ತಾರೆ.

ಈ ಕಲಾಯ್ಡ್ ದ್ರಾವಣಗಳಲ್ಲಿರುವ ಕಣಗಳಿಗೆ ವಿದ್ಯುತ್ತಿನ ಹೊರೆಯಿದೆ ಎಂಬುದನ್ನು ಹಿಂದೆಯೇ ತಿಳಿಸಿದ್ದೇನೆ. ಆದರೆ ಇದನ್ನು ಪ್ರಯೋಗಗಳ ಮೂಲಕ ಪ್ರದರ್ಶಿಸಬಹುದು ಮತ್ತು ಕಲಾಯ್ಡ್ ದ್ರಾವಣದಲ್ಲಿ ಯಾವ ಜಾತಿಯ ಅಂಶವಿದೆ ಎಂಬುದನ್ನು ತಿಳಿಯಬಹುದು. ಈ ದ್ರಾವಣದಲ್ಲಿ ಎರಡು ವಿದ್ಯುದ್ಧ್ರುವಗಳನ್ನಿರಿಸಿ, ಅವುಗಳ ಮೂಲಕ ವಿದ್ಯುಚ್ಛಕ್ತಿಯನ್ನು ಹಾಯಿಸಿದರೆ, ಈ ಕಣಗಳು ಅವುಗಳ ಮೇಲಿರುವ ವಿದ್ಯುತ್ತಿನ ಹೊರೆಗೆ ವಿರುದ್ಧವಾದ ಹೊರೆಯು ಯಾವ ವಿದ್ಯುದ್ಧ್ರುವದ ಮೇಲಿದೆಯೋ ಅದರ ಕಡೆಗೆ ಚಲಿಸುತ್ತದೆ. ಈ ಚಲನೆಗೆ "ಎಲೆಕ್ಟ್ರೋಫಾರೆಸಿಸ್" ಎನ್ನುತ್ತಾರೆ. ಇದರಿಂದ ಕಣಗಳಲ್ಲಿ ಸೇರಿರುವ ವಿದ್ಯುತ್ತಿನ ಹೊರೆಯ ಲಕ್ಷಣವನ್ನು ನಾವು ಕಂಡುಹಿಡಿಯಬಹುದು.

ಮೇಲೆ ತಿಳಿಸಿದ ಅನೇಕ ವಿಧಾನಗಳಿಂದ ತಯಾರಿಸಲ್ಪಡುವ "ಕಲಾಯ್ಡ್" ದ್ರಾವಣಗಳು ನೋಡುವುದಕ್ಕೆ ಆಕರ್ಷಣೀಯವಾದ ಕೆಲವು ಬದಲಾವಣೆಗಳನ್ನುಂಟುಮಾಡಿ, ಪದಾರ್ಥಗಳಲ್ಲಿ ಗೂಢವಾಗಿರುವ ಅನೇಕ ಗುಣವಿಶೇಷಗಳನ್ನು ಪ್ರಯೋಗಗಳ ಮೂಲಕ ಹೊರಪಡಿಸುತ್ತವೆ. ಆದುದರಿಂದ ಪ್ರಯೋಗಶಾಲೆಗಳಲ್ಲಿ ಇವುಗಳನ್ನು ತಯಾರಿಸಿ, ಅವುಗಳ ಲಕ್ಷಣಗಳನ್ನು ಪ್ರದರ್ಶಿಸುತ್ತಾರೆ. ಇದಲ್ಲದೆ, ಈ ದ್ರಾವಣಗಳಲ್ಲಿರುವ ಅತ್ಯಂತ ಸಣ್ಣ ಕಣಗಳಿಗೆ ಇರುವ ಮುಖ್ಯವಾದ ಗುಣಗಳನ್ನು ನಾವು ತಿಳಿಯುವುದರಿಂದ ಮನುಷ್ಯನಿಗೆ ಪ್ರತಿದಿವಸವೂ ಅತ್ಯಾವಶ್ಯಕವಾಗಿರುವ ಆಹಾರಪದಾರ್ಥಗಳನ್ನೂ, ಅವನಿಗೆ ಬೇಕಾದ ಮನರಂಜಕ ವಸ್ತುಗಳನ್ನೂ, ತಯಾರುಮಾಡುವ ವಿಧಾನವು ನಮಗೆ ಗೋಚರವಾಗುತ್ತದೆ. ಇದರ ಫಲವಾಗಿ, ನಾವು ಆ ಪದಾರ್ಥಗಳ ಉತ್ಪತ್ತಿಯನ್ನು ತಿಳಿಯುವುದಲ್ಲದೆ, ಅವುಗಳ ಗುಣಗಳನ್ನು ಯಾವ ರೀತಿಯಲ್ಲಿ ಉತ್ತಮಗೊಳಿಸಬಹುದು ಎಂಬುದನ್ನು ಪರಿಶೋಧನೆಗಳ ಮೂಲಕ ತಿಳಿಯಬಹುದು. ಈ ವಿಜ್ಞಾನದ ಅನೇಕ ತತ್ವಗಳು ಸಾಮಾನ್ಯರೀತಿಯಲ್ಲಿ ತಿಳಿಯಬಹುದಾಗಿದ್ದರೂ, ಅನೇಕ ವರ್ಷಗಳ ಕಾಲ ಗೋಚರಕ್ಕೆ ಬಂದಿರಲಿಲ್ಲ. ಇದಕ್ಕೆ

ಅನೇಕ ಕಾರಣಗಳಿವೆ. ಮುಖ್ಯವಾಗಿ, ಈ ದ್ರಾವಣಗಳಿಗಿರುವ ಅಂಟುಸ್ವಭಾವದಿಂದ ಅವುಗಳ ವಿಷಯವಾಗಿ, ಏನು ಪರಿಶೋಧನೆ ನಡೆಸಬೇಕಾದರೂ ಬಹಳ ಕಷ್ಟವಾಗಿದ್ದಿತು. ಆದರೂ ಸಹ, ಅದರಿಂದ ಉಂಟಾದ ಅನೇಕ ತೊಂದರೆಗಳನ್ನು ಸಹಿಸಿಕೊಂಡು ಪರಿಶೋಧನೆಗಳನ್ನು ಮುಂದುವರಿಸಿ, ಈ ವಿಜ್ಞಾನಕ್ಕೆ ಬೆಳಕನ್ನು ನೀಡಿದ ಮಹನೀಯರುಗಳಿಗೆ ನಾವು ಕೃತಜ್ಞರಾಗಿದ್ದೇವೆ.

ಇವಲ್ಲದೆ, ಈ ವಿಜ್ಞಾನದಲ್ಲಿ ಅಡಕವಾಗಿರುವ ಅನೇಕ ಅಂಶಗಳು ನಮ್ಮ ಜೀವನವನ್ನೇ ಯಾವ ರೀತಿ ಮಾರ್ಪಾಡು ಮಾಡಿವೆ ಎಂಬುದನ್ನು ನಾವು ಈಗ ತಿಳಿಯಬಹುದು. ನಮ್ಮ ದೇಹದಲ್ಲಿರುವ ಮತ್ತು ನಾವು ಉಪಯೋಗಿಸುವ ಅನೇಕ ಪದಾರ್ಥಗಳು, "ಕಲಾಯ್ಡ್" ರೂಪದಲ್ಲೇ ಇರುತ್ತವೆ. ಉದಾಹರಣೆಗೆ ನಮ್ಮ ದೇಹದಲ್ಲಿರುವ ರಕ್ತವನ್ನೂ, ನಾವು ಉಪಯೋಗಿಸುವ ಹಾಲನ್ನೂ, ನಮ್ಮ ಪ್ರತಿಯೊಂದು ಕೋಶದಲ್ಲಿಯೂ ಇರುವ ಜೀವದ್ರವ್ಯಗಳನ್ನೂ, (Protoplasm) ಮತ್ತು ಮನುಷ್ಯನ ಸ್ವಭಾವ, ಬುದ್ಧಿಶಕ್ತಿ, ಗುಣಗಳೆಲ್ಲವನ್ನೂ ತೀರ್ಮಾನಮಾಡುವ ಸೂಕ್ಷ್ಮದಂಡಗಳನ್ನೂ (Chromosomes) ತಿಳಿಸಬಹುದು. ಇವೆಲ್ಲವೂ "ಕಲಾಯ್ಡ್" ರೂಪದಲ್ಲಿಯೇ ಇರುತ್ತವೆ.

ಇವುಗಳಲ್ಲಿಯೂ ಮತ್ತು ಇತರ "ಕಲಾಯ್ಡ್" ಪದಾರ್ಥಗಳಲ್ಲಿಯೂ ಎರಡು ಉದಾಹರಣೆಗಳನ್ನು ಆರಿಸಿಕೊಂಡು ಅವುಗಳಲ್ಲಿ ಈ ವಿಜ್ಞಾನದ ತತ್ತ್ವಗಳು ಹೇಗೆ ಉಪಯೋಗ ಹೊಂದಿವೆ ಎಂಬುದನ್ನು ತಿಳಿಯೋಣ. ಮನುಷ್ಯನಿಗೆ ಪ್ರತಿದಿವಸವೂ ಅತ್ಯಾವಶ್ಯಕವಾಗಿ ಬೇಕಾಗಿರುವ ಹಾಲು ಒಂದು "ಕಲಾಯ್ಡ್" ದ್ರಾವಣ. ಇದನ್ನು ಒಂದು "ಎಮಲ್ಷನ್" ಎಂಬುದಾಗಿಯೂ ಕರೆಯಬಹುದು. ಇದರಲ್ಲಿ ಅನೇಕ ಪದಾರ್ಥಗಳು ಅಡಕವಾಗಿವೆ. ಹಸುವಿನ ಹಾಲಿನಲ್ಲಿ ಶೇಕಡ ೮೭ ರಷ್ಟು ನೀರೂ, ಸೇಕಡ ೫ ರಷ್ಟು "ಲ್ಯಾಕ್ಟೋಸ್" ಎಂಬ ಹೆಸರುಳ್ಳ ಸಕ್ಕರೆಯೂ ಸೇಕಡ ೩.೭ ರಷ್ಟು ಬೆಣ್ಣೆಯೂ ಸೇಕಡ ೩ ರಷ್ಟು ಕೇಸೀನೆಂಬ ಸಸಾರಜನಕ ಪದಾರ್ಥವೂ ಲ್ಯಾಕ್ಟಾಲ್ಬುಮಿನ್ ಮತ್ತು ಇತರ ಸಸಾರಜನಕ ವಸ್ತುಗಳೂ ಇರುತ್ತವೆ. ಇವುಗಳ ಜೊತೆಯಲ್ಲಿ ಸ್ವಲ್ಪ ಪ್ರಮಾಣದಲ್ಲಿ ಕ್ಯಾಲ್ಸಿಯಮ್, ರಂಜಕ ಮತ್ತು ಪೊಟಾಸಿಯಮ್ ಲೋಹವೂ, ವೈಟಮಿನ್ ಎ, ಬಿ, ಸಿ, ಮತ್ತು ಡಿ, ಗಳು ಸೇರಿರುತ್ತವೆ. ಮನುಷ್ಯನಿಗೆ ಪುಷ್ಟಿಕರವಾದ ಅನೇಕ ಪದಾರ್ಥಗಳು ಅಡಕವಾಗಿರುವ ಹಾಲು ಬಹಳ ಪ್ರಾಮುಖ್ಯತೆಯುಳ್ಳದ್ದು. ಇದರಲ್ಲಿರುವ ಕೇಸೀನ್ ಎಂಬ ಸಸಾರ ಜನಕ ವಸ್ತುವು ಕಲಾಯ್ಡ್ ರೂಪದಲ್ಲಿರುತ್ತದೆ. ಹಾಲನ್ನು ಸ್ವಲ್ಪ ಕಾಯಿಸಿದರೂ ಅದರಲ್ಲಿರುವ ಸಸಾರಜನಕಪದಾರ್ಥಗಳು ಒಟ್ಟುಗೂಡಿ ಕೆನೆಯ ರೂಪದಲ್ಲಿ ಮೇಲಕ್ಕೆ

ಬರುತ್ತವೆ. ಇನ್ನೂ ಹೆಚ್ಚಾಗಿ ಕಾಯಿಸಿದರೆ, ಅವುಗಳಲ್ಲಿರುವ ಅನೇಕ ಮುಖ್ಯಾಂಶಗಳು ನಾಶವಾಗುವುದರಿಂದ ಹಾಲನ್ನು ಹೆಚ್ಚಾಗಿ ಕಾಯಿಸಬಾರದು. ಹಾಲಿನಲ್ಲಿರುವ ಸಸಾರಜನಕ ಪದಾರ್ಥಗಳು, ಅದಕ್ಕೆ ಉಕ್ಕುವ ಲಕ್ಷಣವನ್ನು ಉಂಟುಮಾಡಿವೆ. ಹಾಲಿಗೆ ದ್ರಾವಕಗಳನ್ನು ಸೇರಿಸಿದರೆ, ಅದರಲ್ಲಿರುವ ಸಸಾರಜನಕ ವಸ್ತುಗಳು ಕೆಳಗೆ ಘನೀಕರಿಸುತ್ತವೆ. ನಾವು ಹಾಲಿಗೆ ಸ್ವಲ್ಪ ಹುಳಿಮೊಸರನ್ನು ಹಾಕಿ, ಸ್ವಲ್ಪ ಕಾಲ ಬಿಟ್ಟರೆ, ಅದು ಹೆಪ್ಪು ಮೊಸರಾಗುವುದಕ್ಕೆ ಇದೇ ಕಾರಣ. ಹಾಲು ಮೊಸರಾಗುವಾಗ, ಅದರಲ್ಲಿರುವ ಸಸಾರಜನಕಗಳು ಗೆಡ್ಡೆಕಟ್ಟಿ, ಗರಣೆಗಳ ರೂಪಕ್ಕೆ ಬರುತ್ತವೆ. "ಸ್ತನಗಳಿಂದ ಉತ್ಪತ್ತಿಯಾಗುವ ಹಾಲಿನಲ್ಲಿ ಹಸುವಿನ ಹಾಲಿಗಿಂತ ಹೆಚ್ಚು ಸಕ್ಕರೆಯೂ ಮತ್ತು ಕೇವಲ ಮೂರನೆಯ ಒಂದು ಪ್ರಮಾಣದಷ್ಟು ಸಸಾರಜನಕವೂ ಇವೆ. ಇದರಲ್ಲಿ ಸ್ವಲ್ಪಪ್ರಮಾಣದಲ್ಲೇ ಸಸಾರಜನಕವು ಇರುವುದರಿಂದ ಶಿಶುವು ಬೇಗನೆ ಜೀರ್ಣಮಾಡಿಕೊಳ್ಳುತ್ತದೆ. ಹಸುವಿನ ಹಾಲಿನಲ್ಲಿರುವ ಕೊಬ್ಬಿನ ಕಣಗಳು ದೊಡ್ಡದಾಗಿರುವುದರಿಂದಲೂ ಮತ್ತು ಅದರಲ್ಲಿರುವ ಸಸಾರಜನಕ ವಸ್ತುಗಳು ಹೊಟ್ಟೆಯಲ್ಲಿ ಗೆಡ್ಡೆಕಟ್ಟಿ ತೊಂದರೆಯನ್ನುಂಟುಮಾಡುವ ಸಂಭವವಿರುವುದರಿಂದಲೂ ಆ ಹಾಲನ್ನು ಸಾಮಾನ್ಯವಾಗಿ ಶಿಶುಗಳಿಗೆ ಕೊಡುವುದಿಲ್ಲ." ಈ ರೀತಿಯಾಗಿ ಹಾಲಿನಲ್ಲಿರುವ ವಿಶೇಷ ಗುಣಾಂಶಗಳನ್ನು ಮತ್ತು ಅವುಗಳನ್ನು ಮನುಷ್ಯನಿಗೆ ಹೆಚ್ಚಿನ ರೀತಿಯಲ್ಲಿ ಉಪಯೋಗಮಾಡುವ ವಿಧಾನಗಳನ್ನು ಈ ವಿಜ್ಞಾನದ ಮೂಲತತ್ತ್ವಗಳ ಮೂಲಕ ವಿಶದಪಡಿಸಬಹುದು.

ಹಾಲಿನಲ್ಲಿರುವ ಕೇಸೀನಿಗೆ ಆಹಾರವಲ್ಲದೆ ಬೇರೆ ಉಪಯೋಗಗಳೂ ಉಂಟು. ಈಚೆಗೆ ಇದರಿಂದ ಅಡಿಗೆ ಕೋಣೆಗಳ ಗೋಡೆಗೆ ಬೇಕಾದ ಒಂದು ತರಹ ಬಿಳಿಯ ಬಣ್ಣವನ್ನೂ, ಜೇಡಿ ಪದಾರ್ಥಗಳನ್ನೂ (Plastics) ತಯಾರಿಸುತ್ತಿದ್ದಾರೆ. ೧೮೯೦ ನೆಯ ಇಸವಿಯಲ್ಲಿ ಒಬ್ಬ ಜರ್ಮನ್ ವಿಜ್ಞಾನಿಯು ಇದರಿಂದ ಜೇಡಿ ಪದಾರ್ಥವನ್ನು ಮೊಟ್ಟಮೊದಲು ತಯಾರಿಸಿ, ಅದರಿಂದ ತನ್ನ ಪಾಠದ ಕೋಣೆಗೆ ಬೇಕಾದ ಬಿಳಿಯ ಬಣ್ಣದ ಹಲಗೆಯೊಂದನ್ನು ಮಾಡಿಸಿದನು. ಕೇಸೀನಿನಿಂದ ಇನ್ನೂ ಅನೇಕ ಪದಾರ್ಥಗಳನ್ನು ತಯಾರಿಸಬಹುದು. ಇದರಿಂದ ಬರುವ ಕೃತಕವಾದ ನೂಲಿನಿಂದ ಬಟ್ಟೆಗಳನ್ನು ತಯಾರಿಸುತ್ತಾರೆ. ಇದನ್ನು ನಾವು ಕೃತಕ ರೇಷ್ಮೆಗೂ (Rayon), ನೈಲಾನ್ ನೂಲುಗಳಿಗೂ ಹೋಲಿಸಬಹುದು.

ಹಾಲಿನಂತೆ ಪ್ರತಿಯೊಬ್ಬ ಮನುಷ್ಯನಿಗೂ ಹೆಚ್ಚಾಗಿ ಉಪಯೋಗವಾಗುವ ಮತ್ತೊಂದು ಪದಾರ್ಥ ಸಾಬೂನು. ಇದನ್ನು ದೊಡ್ಡ ಕಾರ್ಖಾನೆಗಳಲ್ಲಿ ತಯಾರಿಸುತ್ತಾರೆ. ಇದಕ್ಕೆ ಇರುವ ಒಂದು ಮುಖ್ಯವಾದ ಗುಣವೇ, ಇದರ ಹೆಚ್ಚಿನ

ತಯಾರಿಕೆಗೆ ಕಾರಣವಾಗಿದೆ. ಬಟ್ಟೆಗಳ ಮೇಲಾಗಲೀ, ಅಥವಾ ಚರ್ಮದ ಮೇಲಾಗಲೀ, ಸೇರುವ ಸಣ್ಣಗಿರುವ ಧೂಳಿನ ಕಣಗಳನ್ನು ಬೇರೆಮಾಡಿ ತೆಗೆಯುವ ಶಕ್ತಿಯು ಸಾಬೂನಿಗೆ ಇದೆ. ಸಾಬೂನನ್ನು ನೀರಿಗೆ ಹಾಕಿ ಕರಗಿಸಿದರೆ, ಒಂದು "ಕಲಾಯ್ಡ್" ದ್ರಾವಣವು ಉತ್ಪತ್ತಿಯಾಗುವುದಲ್ಲದೆ, ಅದರ ಜೊತೆಗೆ ವಿದ್ಯುತ್ತಿನ ಹೊರೆಗಳುಳ್ಳ ಎರಡು ತರಹ ಕಣಗಳು ಉತ್ಪತ್ತಿಯಾಗುತ್ತವೆ. ಅವುಗಳು ಯಾವುವೆಂದರೆ, ಸೋಡಿಯಂ ಮತ್ತು ಸ್ಟಿಯರೇಟು ಕಣಗಳು. ಆದುದರಿಂದ ಸಾಬೂನಿಗೆ 'ಕಲಾಯ್ಡ್' ದ್ರಾವಣಗಳ ಗುಣವೂ, ಮತ್ತು ವಿದ್ಯುದ್ವಿಶ್ಲೇಷ್ಯಗಳ ಗುಣವೂ ಉಂಟು. (Colloidal Electrolyte) ಸಾಬೂನನ್ನು ಎಮಲ್ಷನ್‌ಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. ಸಾಬೂನು ಹಾಕಲ್ಪಟ್ಟ ಎಮಲ್ಷನ್‌ಗಳು ಎಷ್ಟು ದಿವಸಗಳಾದರೂ ಕೆಡದೆ ಇರುತ್ತವೆ. ಇದಕ್ಕೆ ಕಾರಣವನ್ನು ಕೆಳಗೆ ತಿಳಿಸುತ್ತೇನೆ. ಸಾಬೂನಿನಿಂದ ಉತ್ಪತ್ತಿಯಾಗುವ ಸೋಡಿಯಂ ಕಣಗಳಿಗೆ ನೀರಿನ ಮೇಲೆ ಪ್ರೇಮ. ಆದರೆ, ಇದರ ಜೊತೆಗೆ ಬರುವ ಸ್ಟಿಯರೇಟು ಕಣಗಳಿಗೆ ಎಣ್ಣೆಯ ಅಥವಾ ಆ ಜಾತಿಗೆ ಸೇರಿದ ಪದಾರ್ಥಗಳ ಮೇಲೆ ಮಾತ್ರ ಪ್ರೇಮ. ಆದುದರಿಂದ, ಈ ಕಣಗಳು, ನೀರಿನಿಂದ ಬೇರೆಯಾಗುತ್ತವೆ. ಸಾಬೂನನ್ನು ನೀರಿಗೆ ಹಾಕಿದಾಗ, ಅದರ ಅಣುಗಳು ಕ್ಷೇತ್ರದಲ್ಲಿ ಮಾತ್ರ ತೇಲುತ್ತವೆ. ಹೀಗೆ ತೇಲುವಾಗ, ಸ್ಟಿಯರೇಟು ಭಾಗವು ಹೊರಗೂ ಸೋಡಿಯಂ ಭಾಗವು ನೀರಿನ ಕಡೆಗೂ ಇರುತ್ತವೆ. ಈ ತರಹ ಎಣ್ಣೆ ಹನಿಗಳ ಸುತ್ತಲೂ ಬೇಲಿಯೋಪಾದಿಯಲ್ಲಿರುವ ಸಾಬೂನು ಒಂದು ಎಣ್ಣೆ ಹನಿಯು ಮತ್ತೊಂದು ಹನಿಯ ಜೊತೆಗೆ ಸೇರದ ಹಾಗೆ ಮಾಡುತ್ತದೆ. ಹೀಗೆ ಉತ್ಪತ್ತಿಯಾಗುವ ಎಮಲ್ಷನ್‌ಗಳಲ್ಲಿರುವ ಎಣ್ಣೆಯ ಕಣಗಳ ವಿಸ್ತೀರ್ಣವು ಹೆಚ್ಚಾಗುವುದರಿಂದ, ಆ ಕಣಗಳು ಚರ್ಮದ ಅಥವಾ ಬಟ್ಟೆಯ ಮೇಲಿನ ಕೊಳೆಯನ್ನು ಬೇಗನೆ ಹೀರುತ್ತವೆ. ನಮಗೆ ಇದರಿಂದ ಸಾಬೂನು ಹೇಗೆ ಕೆಲಸಮಾಡುತ್ತದೆ ಎಂಬುದು ಗೋಚರವಾಗುತ್ತದೆ.

ಇವಲ್ಲದೆ, ಕಾರ್ಖಾನೆಗಳಲ್ಲಿ ತಯಾರಾಗುವ ಅನೇಕ ಪದಾರ್ಥಗಳು 'ಕಲಾಯ್ಡ್' ರೂಪದಲ್ಲಿರುತ್ತವೆ ಮತ್ತು ಅವುಗಳ ತಯಾರಿಕೆಯಲ್ಲಿ ಈ ವಿಜ್ಞಾನವು ಹೆಚ್ಚು ಉಪಯೋಗವನ್ನು ಹೊಂದಿರುತ್ತದೆ. ಇದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ದೊಡ್ಡ ಪಟ್ಟಣಗಳಲ್ಲಿರುವ ಕಾರ್ಖಾನೆಗಳಿಂದ ಹೊಗೆಯು ಹೇರಳವಾಗಿ ಉತ್ಪತ್ತಿಯಾಗಿ, ಅಲ್ಲಿಯ ವಾತಾವರಣವನ್ನು ಕೆಡಿಸುತ್ತದೆ ಎಂಬುದು ಎಲ್ಲರಿಗೂ ತಿಳಿದಿರುವ ವಿಷಯ. ಇದನ್ನು ನಿವಾರಣೆ ಮಾಡಬೇಕಾದರೆ, ಆ ಹೊಗೆಯ ಲಕ್ಷಣವನ್ನು ನಾವು ತಿಳಿಯಬೇಕು. ಅದನ್ನು ಮೊಟ್ಟಮೊದಲು ತಿಳಿದು, ಅದರಿಂದ ಯಾವ ರೀತಿಯಲ್ಲಿ ಮೇಲೆ ತಿಳಿಸಿದ ತೊಂದರೆಯನ್ನು ನಿವಾರಣೆ ಮಾಡಬಹುದು

ಎಂಬುದನ್ನು ಕಂಡುಹಿಡಿದವರು ಕಾಟ್ರೆಲ್ ಎನ್ನುವವರು. ಹೊಗೆಯಲ್ಲಿ ಅನೇಕ ವಿದ್ಯುತ್ತಿನ ಹೊರೆಯುಳ್ಳ ಇಂಗಾಲದ ಕಣಗಳು ಇವೆ. ಈ ಹೊಗೆಯನ್ನೆಲ್ಲಾ ಒಂದು ಕೋಣೆಯಲ್ಲಿ ಸೇರಿಸಿ, ಆ ಕಣಗಳ ಮೇಲಿರುವ ವಿದ್ಯುತ್ತಿನ ಹೊರೆಯನ್ನು ತೆಗೆದರೆ, ಆ ಕಣಗಳೆಲ್ಲಾ ಒಟ್ಟುಗೂಡಿ ದೊಡ್ಡದಾದ ಮತ್ತು ಭಾರವಾದ ಕಣಗಳಾಗಿ ಕೆಳಗೆ ಪ್ರಕ್ಷೇಪಿಸುತ್ತವೆ. ಹೀಗೆ ಇಂಗಾಲರಹಿತವಾದ ಗಾಳಿಯು ಶುದ್ಧವಾಗಿರುತ್ತದೆ. ಈ ವಿಧಾನದಿಂದ, ಕಣಗಳ ಜೊತೆಗೆ ಬರುವ ಸಣ್ಣ ಕ್ರಿಮಿಗಳೆಲ್ಲಾ ನಾಶವಾಗಿ, ವಾತಾವರಣವು ಶುದ್ಧಿಯಾಗುತ್ತದೆ. ಹೀಗೆ ಕಣಗಳನ್ನೆಲ್ಲಾ ಒಟ್ಟುಗೂಡಿಸ ಬೇಕಾದರೆ, ಅವುಗಳ ಮೇಲಿರುವ ವಿದ್ಯುತ್ತಿನ ಹೊರೆಯನ್ನು ನಿರ್ನಾಮಮಾಡುವ ಹೆಚ್ಚು ವೇಗದ ವಿದ್ಯುಚ್ಛಕ್ತಿಯನ್ನು ಹಾಯಿಸಬೇಕು. ಮೇಲೆ ವಿವರಿಸಿದ ಕಾಟ್ರೆಲ್ ವಿಧಾನದಿಂದ ಸೀಮೆಂಟು ಕಾರ್ಖಾನೆಗಳಲ್ಲಿ ಉತ್ಪತ್ತಿಯಾಗುವ ಸೀಮೆಂಟ್ ಧೂಳನ್ನೂ, ಹಿಟ್ಟಿನ ಗಿರಣಿಗಳಲ್ಲಿ ಬರುವ ಹಿಟ್ಟಿನ ಧೂಳನ್ನೂ, ಇದೇ ರೀತಿಯಲ್ಲಿ ತೆಗೆಯುತ್ತಾರೆ. ಈ ವಿಧಾನವು ಹೀಗೆ ಜನಾಂಗದ ಆರೋಗ್ಯವನ್ನು ಉತ್ತಮಗೊಳಿಸು ವುದರಿಂದ, ಎಷ್ಟು ಉಪಯೋಗಕರವಾಗಿದೆಯೆಂದು ನಾವು ತಿಳಿಯಬಹುದು.

ಇದಲ್ಲದೆ ರಸ್ತೆಯ ಮೇಲೆ ಹೆಚ್ಚಾಗಿ ಉಪಯೋಗಿಸಲ್ಪಡುವ ರಬ್ಬರ್ ಟೈರುಗಳ ತಯಾರಿಕೆಯಲ್ಲಿಯೂ, ಈ ವಿಜ್ಞಾನದ ತತ್ತ್ವಗಳು ಅಡಕವಾಗಿವೆ. ಉದಾಹರಣೆಗಾಗಿ, ರಬ್ಬರು ಹೇಗೆ ಉತ್ಪತ್ತಿಯಾಗುತ್ತದೆ ಎಂಬುದನ್ನು ತಿಳಿದುಕೊಳ್ಳೋಣ. ಅದು ಗಿಡ ಮರಗಳಿಂದ ಉತ್ಪತ್ತಿಯಾಗುವ, ಲ್ಯಾಟೆಕ್ಸ್ ಎಂದು ಕರೆಯಲ್ಪಡುವ, ಗೋಂದಿನಂತೆ ಮೆತ್ತಗೂ ಗಟ್ಟಿಯಾಗಿಯೂ ಹಾಲಿನಂತೆ ಬೆಳ್ಳಗೂ ಇರುವ ಒಂದು ದ್ರವಪದಾರ್ಥ ದಿಂದ ಉತ್ಪತ್ತಿಯಾಗುತ್ತದೆ. ಈ ದ್ರವವಸ್ತುವಿನಲ್ಲಿ ರಬ್ಬರು 'ಕಲಾಯ್ಡ್' ರೂಪ ದಲ್ಲಿರುತ್ತದೆ. ಇದನ್ನು ಪ್ರಕ್ಷೇಪಿಸಿ, ಅದರಿಂದ ರಬ್ಬರನ್ನು ಪಡೆಯುತ್ತಾರೆ. ಇದಲ್ಲದೆ ಹೀಗೆ ದೊರಕಿದ ಸ್ವಾಭಾವಿಕವಾದ ರಬ್ಬರಿನ ಗುಣಗಳನ್ನು ಉತ್ತಮಗೊಳಿಸಲು, ಅದರ ಜೊತೆಗೆ ಅನೇಕ ಪದಾರ್ಥಗಳನ್ನು ಸೇರಿಸುತ್ತಾರೆ. ಅವುಗಳಲ್ಲಿ ಇಂಗಾಲ ಮತ್ತು ಗಂಧಕಗಳನ್ನು ಇಲ್ಲಿ ತಿಳಿಸಬಹುದು. ಇಂಗಾಲವು ರಬ್ಬರ್ ಟೈರುಗಳಲ್ಲಿ ಯಾವ ರೀತಿಯಲ್ಲಿ ಹರಡಿದೆ ಎಂಬುದನ್ನು ನಾವು ತಿಳಿಯಬೇಕಾದರೆ, ಒಂದು ರಬ್ಬರ್ ಟೈರಿನ ಚೂರನ್ನು ವಿದ್ಯುನ್ಮಾನ ಸೂಕ್ಷ್ಮದರ್ಶಕದಲ್ಲಿರಿಸಿ (Electron Microscope) ಪರೀಕ್ಷೆ ಮಾಡಬೇಕು. ಹಾಗೆ, ಪರೀಕ್ಷಿಸಿದಾಗ, ಸಣ್ಣ ಇಂಗಾಲದ ಕಣಗಳು ಯಾವ ರೀತಿ ಹರಡಿವೆ, ಮತ್ತು ಅವು ಎಷ್ಟು ಅತ್ಯಲ್ಪಪ್ರಮಾಣದಲ್ಲಿರುತ್ತವೆ ಎಂಬುದನ್ನು ಊಹಿಸಬೇಕಾದರೆ, ಒಂದು ಸಣ್ಣ ಉದಾಹರಣೆಯನ್ನು ಕೊಡಬಹುದು. ಗಂಧಕ ಸಂಸ್ಕಾರಪಡೆದ ಒಂದೊಂದು ಸಾಧಾರಣ ರಬ್ಬರ್ ಟೈರಿನಲ್ಲಿರುವ ಇಂಗಾಲವು

ವೆಣಸಿನಕಾಳಿಸೋಪಾದಿಯಲ್ಲಿರುತ್ತವೆ ಮತ್ತು ಹರಡಿದರೆ ಐವತ್ತು ಎಕರೆ ವಿಸ್ತೀರ್ಣಕ್ಕಿಂತ ಮೇಲ್ಪಟ್ಟ ಸ್ಥಳವನ್ನು ತೆಗೆದುಕೊಳ್ಳುತ್ತದೆ.

ಇದಲ್ಲದೆ ನಾನು ಹಿಂದೆಯೇ ತಿಳಿಸಿದಂತೆ, ನೀರನ್ನು ಶುದ್ಧಿಮಾಡಬೇಕಾದರೂ, 'ಕಲಾಯ್ಡ್' ವಿಜ್ಞಾನದ ಒಂದು ಮುಖ್ಯತತ್ತ್ವವನ್ನು ಅನುಸರಿಸಿಯೇ ಮಾಡುತ್ತಾರೆ.

ಈ ರೀತಿಯಲ್ಲಿ ಹೊರಗಡೆ ಅನೇಕ ಮುಖ್ಯವಾದ ಉಪಯೋಗಗಳನ್ನು ಪಡೆದಿರುವ 'ಕಲಾಯ್ಡ್' ವಿಜ್ಞಾನವು ನಮ್ಮ ಅಡಿಗೆ ಮನೆಯಲ್ಲಿ ತಯಾರಾಗುವ ಅನೇಕ ಪಾಕಗಳಿಗೂ, ಮುಖ್ಯಾಧಾರವಾಗಿದೆ. ಅನೇಕ ಪದಾರ್ಥಗಳ ತಯಾರಿಕೆಯಲ್ಲಿ ಈ ವಿಜ್ಞಾನದ ಮೂಲತತ್ತ್ವಗಳು ಅಡಕವಾಗಿವೆ ಎಂಬುದರಲ್ಲಿ ಸಂದೇಹವಿಲ್ಲ. ಇವಲ್ಲದೆ, ಮನುಷ್ಯನ ಸಹಾಯವಿಲ್ಲದೆ ತಯಾರಿಸಲ್ಪಟ್ಟು ನಮ್ಮ ಉಪಯೋಗದಲ್ಲಿರುವ ವಿವಿಧ ಪದಾರ್ಥಗಳ ತಯಾರಿಕೆಯಲ್ಲೂ, ಈ ವಿಜ್ಞಾನವು ತನ್ನ ಪಾತ್ರವನ್ನು ನೀಡಿದೆ ಎಂಬುದನ್ನು ನಾವು ಮರೆಯಬಾರದು. ಅವು ಯಾವುವೆಂದರೆ, ರಬ್ಬರಿನ ಉತ್ಪತ್ತಿ ಮತ್ತು ಅದರಲ್ಲಿ ಅಣುಗಳ ಜೋಡಿಸುವಿಕೆ, ಜೇಡಿಮಣ್ಣಿನ ಉತ್ಪತ್ತಿ ಮತ್ತು ಅದರಲ್ಲಿರುವ ಸಿಲಿಕಾನ್, ಆಮ್ಲಜನಕ, ಮತ್ತು ಅಲ್ಯೂಮಿನಿಯಂ ಪರಮಾಣುಗಳ ಸೇರಿಸುವಿಕೆ, ಮನುಷ್ಯನ ಕೂದಲು, ಸ್ವಾಭಾವಿಕ ರೇಷ್ಮೆ, ಕುದುರೆಯ ಗೊರಸು, ಕುರಿಯ ತುಪ್ಪಟ ಮತ್ತು ಇನ್ನೂ ಅನೇಕ ಪದಾರ್ಥಗಳು. ಇವುಗಳು ಹೇಗೆ ಉತ್ಪತ್ತಿಯಾಗುತ್ತವೆ ಎಂಬುದನ್ನು ನಾವು ಪರೀಕ್ಷಿಸಿದರೆ, ಪ್ರಕೃತಿಯ ಮಹಿಮೆಯು ಅತ್ಯಂತ ದೊಡ್ಡದು ಎಂಬುದನ್ನು ನಾವು ಎಂದಿಗೂ ಮರೆಯಲಾರೆವು.

ಹೀಗೆ ಅನೇಕ ಉಪಯೋಗಗಳನ್ನು ಹೊಂದಿರುವ ಈ ವಿಜ್ಞಾನವು ಪ್ರತಿಯೊಬ್ಬ ಮನುಷ್ಯನ ಜ್ಞಾನದೃಷ್ಟಿಗೂ ಬೆಳಕನ್ನು ನೀಡಲೆಂದು ಹಾರೈಸೋಣ.

ಗ್ರಂಥಋಣ

(1) *Small Wonder* (The Story of Colloids by Gessner G. Hawley, published by Alfred A. Knopf, New York.)

(2) *Colloids in Your Daily Life* by Ernst, A. Hanser J. C. E. December 1941.

(3) *The History of Colloids* J. C. E. 1950.

[ಮೇಲೆ ತಿಳಿಸಿದ ಮೊದಲನೆಯ ಪುಸ್ತಕದ ಗ್ರಂಥಕರ್ತರು Alfred A. Knopf, New York ಅವರು ತಮ್ಮ ಪುಸ್ತಕದಿಂದ ಕೆಲವು ವಿಷಯಗಳನ್ನು ಆರಿಸಿ, ಈ ನನ್ನ ಪುಟ್ಟ ಲೇಖನದಲ್ಲಿ ಸೇರಿಸುವುದಕ್ಕೆ ಅನುಮತಿ ಕೊಟ್ಟಿರುವುದಕ್ಕಾಗಿ ಅವರಿಗೆ ಕೃತಜ್ಞನಾಗಿದ್ದೇನೆ.]

ಕೆ. ಎಸ್. ಲಕ್ಷ್ಮಣರಾವ್.

ಬೆಲಿನ್ಸ್ಕಿಯ ಕಾವ್ಯಮೀಮಾಂಸೆ

"ನಮ್ಮ ಕಾಲದ ಕಲೆ ಎಂತಹದು ? ಅದು, ಸಮಾಜವನ್ನು ಕುರಿತಾದ ತೀರ್ಪು, ಪೃಥಕ್ಕರಣ ; ಪರಿಣಾಮವಾಗಿ ಸಮಾಜದ ವಿಮರ್ಶೆ. ಈಗ ವಿಚಾರದ ಅಂಶ ಕಲೆಯ ಅಂಶದೊಡನೆ ಬೆರೆತಿದೆ. ನಮ್ಮ ಕಾಲದಲ್ಲಿ ಕಲಾಕೃತಿಯು, ಯುಗಧರ್ಮದ ಮಹತ್ತರವಾದ ಅಂತಃಸ್ಫೂರ್ತಿಯಿಂದ ಹುಟ್ಟದೆ, ಚಿತ್ರಿಸಬೇಕು ಎನ್ನುವ ಒಂದೇ ಉದ್ದೇಶಕ್ಕೋಸ್ಕರ ಬದುಕನ್ನು ಚಿತ್ರಿಸಿದರೆ, ಅದು ಸಂಕಟದ ಕೂಗು ಇಲ್ಲವೆ ಮಹದಾನಂದದ ಅಮರಗಾನವಾಗದೆ ಇದ್ದರೆ, ಒಂದು ಪ್ರಶ್ನೆಯಾಗದೆ ಅಥವಾ ಪ್ರಶ್ನೆಗೆ ಉತ್ತರವಾಗದೆ ಇದ್ದರೆ, ಆ ಕೃತಿ ನಿರ್ಜೀವವೆನ್ನಿಸಿಕೊಳ್ಳುವುದು."

—ಇದು, ಒಂದು ಶತಮಾನದ ಹಿಂದೆ, ರಷ್ಯಾ ದೇಶದ ಮಹಾವಿಮರ್ಶಕನೊಬ್ಬನು ಆಡಿದ ಮಾತು. ಆತನ ಹೆಸರು ಬೆಲಿನ್ಸ್ಕಿ.

ವಿಸಾರಿಯನ್ ಗ್ರಿಗರಿವಿಶ್ ಬೆಲಿನ್ಸ್ಕಿ ಹುಟ್ಟಿದುದು ೧೮೧೧ ರಲ್ಲಿ ; ಪ್ರಭಾವಶಾಲಿಯಾದ ಅವಿಶ್ರಾಂತವಾದ ಬದುಕನ್ನು ಬಾಳಿ ಸತ್ತುದು ೧೮೪೮ ರಲ್ಲಿ.

ಬದುಕಿದ್ದಾಗ ಆತ, ಹತ್ತೊಂಭತ್ತನೆಯ ಶತಮಾನದ ಐರೋಪ್ಯ ಸಾಹಿತ್ಯದ ಮಹಾಪ್ರಭೃತಿಗಳ ಅಗ್ರಪಂಕ್ತಿಯಲ್ಲಿ ವಿರಾಜಮಾನನಾಗಿದ್ದ. ಸತ್ತಮೇಲೆ, ವಿಶ್ವಸಾಹಿತ್ಯದ ಸೌಂದರ್ಯಮೀಮಾಂಸೆಯ ಪ್ರಾಂಗಣದಲ್ಲಿ ಭವ್ಯವಾದ ಸ್ಥಿರವಾದ ಸ್ಥಾನವನ್ನು ಪಡೆದು ಅಮರನಾದ.

ವಿಮರ್ಶಕ—ಮೀಮಾಂಸಕ ಬೆಲಿನ್ಸ್ಕಿಯ ಕಾರ್ಯಕ್ಷೇತ್ರ ವಿಸ್ತಾರವಾಗಿತ್ತು. ತತ್ತ್ವಜ್ಞಾನ, ಸಮಾಜಶಾಸ್ತ್ರ, ಇತಿಹಾಸ, ನಿರಂಕುಶ ಸರಕಾರಕ್ಕಿದಿರು ಹೋರಾಟ ; ಇವುಗಳ ಜತೆಯಲ್ಲಿ, ಇವುಗಳಿಗೆ ಪೂರಕವಾಗಿ ಹಾಗೂ ಸಾಧಕವಾಗಿ, ಸಾಹಿತ್ಯ ವಿಮರ್ಶೆ—ಸೌಂದರ್ಯಮೀಮಾಂಸೆ. ಈ ಎಲ್ಲ ಕಾರಣಗಳಿಗಾಗಿಯೂ ಆತ ಪ್ರಖ್ಯಾತನೇ.

ಎಳೆಯ ಬೆಲಿನ್ಸ್ಕಿ ೧೮೨೯ ರಲ್ಲಿ ಮಾಸ್ಕೋ ವಿಶ್ವವಿದ್ಯಾಲಯವನ್ನು ಪ್ರವೇಶ ಮಾಡಿದ. ಆದರೆ, ಅಲ್ಲಿ ವಿದ್ಯಾಭ್ಯಾಸ ಮುಕ್ತಾಯವಾಗುವುದಕ್ಕೆ ಮುಂಚೆಯೇ ವಿಶ್ವವಿದ್ಯಾಲಯದ ಅಧಿಕಾರಿಗಳು ಆತನನ್ನು ಹೊರಹಾಕಿದರು. 'ಆ ವಿದ್ಯಾರ್ಥಿ ಅನಾರೋಗ್ಯಪ್ರಕೃತಿಯವನೂ ಸ್ವಲ್ಪಮಟ್ಟಿಗೆ ದಡ್ಡನೂ' ಆಗಿದ್ದನೆಂಬುದು ಅಧಿಕಾರಿಗಳು ತೋರಿಸಿದ ಕಾರಣ. ಆದರೆ ವಸ್ತುಸ್ಥಿತಿ ಬೇರೆಯೇ ಇತ್ತು.

ವಿದ್ಯಾರ್ಥಿ ಬೆಲಿನ್ಸ್ಕಿ "ಡ್ಮಿಟ್ರಿ ಕಾಲಿನಿನ್" ಎಂಬೊಂದು ನಾಟಕವನ್ನು ಬರೆದಿದ್ದ. ಗುಲಾಮಪದ್ಧತಿಯನ್ನು ವಿರೋಧಿಸಿ ಭೂಮಾಲಿಕರ ದೌರ್ಜನ್ಯವನ್ನು ಚಿತ್ರಿಸಿತ್ತು ಆ ನಾಟಕ. ಅಂತಹ ಅಪಾಯಕಾರಿ ವ್ಯಕ್ತಿಯನ್ನು ವಿಶ್ವವಿದ್ಯಾಲಯದಲ್ಲಿ ಇರಗೊಡುವುದು ಸಾಧ್ಯವಿರಲಿಲ್ಲ. ಹೀಗಾಗಿ ಅಧಿಕಾರಿಗಳು ಸಂಶೋಧನೆ ನಡೆಸಿ, ವಿದ್ಯಾರ್ಥಿ ಬೆಲಿನ್ಸ್ಕಿ ಅನಾರೋಗ್ಯಪ್ರಕೃತಿಯವನೆಂದೂ ಸ್ವಲ್ಪಮಟ್ಟಿಗೆ ದಡ್ಡನೆಂದೂ ಕಂಡುಹಿಡಿದರು!

ಈ ರೀತಿ ವಿದ್ಯಾಭ್ಯಾಸವನ್ನು ಮುಕ್ತಾಯಗೊಳಿಸಿದ ಬೆಲಿನ್ಸ್ಕಿ, ಬರೆಹಗಾರನಾಗಿ ರಷ್ಯದ ಸಾಹಿತ್ಯಕ್ಷೇತ್ರಕ್ಕೆ ಪದಾರ್ಪಣಮಾಡಿದ.

ಆ ಕ್ಷೇತ್ರದಲ್ಲಿ ಆತ ನಡೆಸಿದುದು, ಸಾಯುವ ವರೆಗೂ—ಅಂದರೆ ಹದಿನೈದು ವರ್ಷಗಳ ಕಾಲ—ನಿರಂತರವಾದ ಸಾಹಿತ್ಯಚಟುವಟಿಕೆ. ಆ ಚಟುವಟಿಕೆಗೆ, ಹೊಗೆಯಾಡುತ್ತಿದ್ದ ರಷ್ಯಾ ಹಿನ್ನೆಲೆಯಾಗಿತ್ತು. ಹತ್ತೊಂಭತ್ತನೆಯ ಶತಮಾನದ ಆರಂಭದಲ್ಲಿ ಕ್ರಾಂತಿಕಾರಕ ಭಾವನೆಗಳು, ರಷ್ಯದ ಶ್ರೀಮಂತವರ್ಗದ ಕೆಲವರಲ್ಲಿ ಮಾತ್ರ ಮನೆಮಾಡಿದ್ದುವು. ಕ್ರಮೇಣ ಪ್ರಜಾಪ್ರಭುತ್ವ ಚಳುವಳಿ ವಿಸ್ತಾರಗೊಂಡು, ಬಂಡಾಯದ ಭಾವನೆ ಜನಸಾಮಾನ್ಯರನ್ನೂ ಆವರಿಸಿತು. ಬೆಲಿನ್ಸ್ಕಿ ಆ ಎರಡು ಘಟ್ಟಗಳ ನಡುವಿನ ಸೇತುವೆಯಾಗಿದ್ದ. ಮುಂದುವರಿದ ಇತರ ಪಾಶ್ಚಾತ್ಯ ರಾಷ್ಟ್ರಗಳ ಪ್ರಮುಖ ವಿಚಾರಧಾರೆಗಳನ್ನು ಸ್ವಾಭಾವಿಕವಾಗಿಯೇ ಬೆಲಿನ್ಸ್ಕಿ ಮನನ ಮಾಡಿದ. ಆದರೆ ಅವುಗಳನ್ನೆಂದೂ ಆತ ಕುರುಡುನಂಬಿಕೆಯಿಂದ ಪೂಜಿಸಲಿಲ್ಲ. ಬದಲು, ರಷ್ಯಾದ ವಿಶಿಷ್ಟ ಪರಿಸ್ಥಿತಿಯನ್ನೇ ಸದಾ ಗಮನದಲ್ಲಿಟ್ಟು, ಸ್ವತಂತ್ರ ವಿಚಾರ ಸರಣಿಯನ್ನು ಬೆಲಿನ್ಸ್ಕಿ ರೂಪಿಸಿಕೊಂಡ. ಆರಂಭದಲ್ಲಿ, ಜರ್ಮನಿಯ ತತ್ತ್ವವೇತ್ತರ ಪ್ರಭಾವ ಆತನ ಮೇಲೆ ಬಲವಾಗಿತ್ತು. ಆದರೆ ವಸ್ತುಸ್ಥಿತಿಯ ಉರಿಬೆಳಕಿನೆದುರು ಭಾವವಾದದ ಮಂಜು ಕರಗಿಹೋಯಿತು.

ಜನಸಮುದಾಯದ ಯಾವುದೇ ಚಳುವಳಿಗೆ ಬೆಲಿನ್ಸ್ಕಿ ನೇರವಾದ ನಾಯಕನಾಗಲಿಲ್ಲ. ಬದಲು, ನೂತನ ವಿಚಾರಧಾರೆ ಸಾಹಿತ್ಯಕ್ಷೇತ್ರದಲ್ಲಿ ಆತನನ್ನು, ನಾಯಕಮಣಿಯನ್ನಾಗಿ—ಹೊಸ ಪಂಥದ ಮಾರ್ಗದರ್ಶಕನನ್ನಾಗಿ—ಮಾಡಿತು.

ವಾಸ್ತವವಾದದ ಹೆದ್ದಾರಿ

ಬೆಲಿನ್ಸ್ಕಿ ಹಾಕಿಕೊಟ್ಟುದು ವಾಸ್ತವವಾದದ ಹೆದ್ದಾರಿ. ಆತನದು ಜನವಾದಿಯಾದ ವಾಸ್ತವತೆ. ಕ್ರಾಂತಿಕಾರನ ದೃಷ್ಟಿಯಿಂದ ಆತ ಬದುಕನ್ನು ನೋಡಿದ. ಹೀಗಾಗಿ ಬೆಲಿನ್ಸ್ಕಿಯ ವಾಸ್ತವತೆ ವಿಶಿಷ್ಟರೂಪ ತಳೆಯಿತು.

ಒಂದೆಡೆ ಆತ ಬರೆದ:

"ವಾಸ್ತವತೆ—ಇದೀಗ ಆಧುನಿಕ ಜಗತ್ತಿನ ಘೋಷ ಮತ್ತು ಕೊನೇ ಮಾತು! . . . ವಾಸ್ತವತೆ ಮಣ್ಣಿನಿಂದ ಚಿಮ್ಮುತ್ತದೆ; ಮತ್ತು ಎಲ್ಲಾ ವಾಸ್ತವತೆಯ ಮಾತೃಕೆಯಾದ ಮಣ್ಣೇ ಸಮಾಜ."

ಬೆಲಿನ್ಸ್ಕಿಯ ಸೌಂದರ್ಯಮೀಮಾಂಸೆಯ ಪ್ರವಾಹ ಹರಿಯುವುದು ಈ ಮೂಲದಿಂದ. ವಾಸ್ತವತೆ, ಕಲಾತ್ಮಕ ಪರಿಪೂರ್ಣತೆ, ಮತ್ತು ವಾಸ್ತವತೆಯ ಆಂತರಿಕವಾದ ಕ್ರಿಯಾತ್ಮಕ ಅಂಶ—ಇವು ಮೂರು, ಬೆಲಿನ್ಸ್ಕಿಯ ಪ್ರತಿಪಾದನೆಯ ಮೂಲಭೂತ ಅಂಗಗಳಾಗಿವೆ.

ಬೆಲಿನ್ಸ್ಕಿಯ ಅಭಿಪ್ರಾಯದಂತೆ, ಕಲಾತ್ಮಕ ಸೃಷ್ಟಿಯು ಬದುಕಿನ ಸತ್ಯದಿಂದಲೇ ತನ್ನ ಸೊಗಸುಗಾರಿಕೆಯನ್ನೂ ಯಥಾರ್ಥಸ್ವರೂಪವನ್ನೂ ಉದಾತ್ತ ಮಹತ್ವವನ್ನೂ ಪಡೆಯುತ್ತದೆ. ಪ್ರಾಮಾಣಿಕನಾದ ಕಲಾವಿದನಿಗೆ 'ವಾಸ್ತವತೆಯ ತಿಳಿವು' ಇದ್ದರಾಯಿತು. ಬದುಕಿನ ಯಾವುದೋ ಒಂದಂಶವನ್ನು ಮಾತ್ರ ಸರಿಯಾಗಿ ಕಾಣದೆ, ಸಮಗ್ರಸ್ವರೂಪವನ್ನೇ ವಾಸ್ತವವಾಗಿ ಕಾಣುವುದರಿಂದ ಕೃತಿ ಉತ್ತಮಗೊಳ್ಳುತ್ತದೆ.

ವಾಸ್ತವತೆಯ ಹಿರಿಮೆಯನ್ನು ಕುರಿತು ಬೆಲಿನ್ಸ್ಕಿ ವ್ಯಕ್ತಪಡಿಸಿದ ಅಭಿಪ್ರಾಯಗಳು ಗಮನಾರ್ಹವಾಗಿವೆ. ಹಿರಿದಾದ ಕಲೆ ಮಾತನಾಡುವುದು ಬದುಕಿನ ಭಾಷೆಯನ್ನು. ಪ್ರಾಮಾಣಿಕನಾದ ಹಿರಿಯ ಕಲಾವಿದ ವಾಸ್ತವವಾದಿಯಾದ ಕೃತಿ ರಚಿಸುವಾಗ, ಆತನ ಸ್ವಂತ ಅಭಿಪ್ರಾಯಗಳೇನೇ ಇರಲಿ, ವಾಸ್ತವತೆಗೇ ಜಯವಾಗುತ್ತದೆ. ಹಾಗೆಯೇ, ಉದ್ದೇಶವು ಸಾಧುವಾಗಿದ್ದರೂ ಕೂಡಾ, ವಾಸ್ತವತೆಯ ಮನೋರಾಗವಿಲ್ಲದವನ ಕೃತಿ ಸಪ್ಪಗಾಗುತ್ತದೆ.

ಈ ದೃಷ್ಟಿಕೋನವನ್ನು ಬೆಲಿನ್ಸ್ಕಿ, ಆತನ ಸಮಕಾಲೀನನಾಗಿದ್ದ ಪ್ರಖ್ಯಾತ ಸಾಹಿತಿ ಗೊಗೋಲನ ಕೃತಿವಿಮರ್ಶೆಯ ಮೂಲಕ ಸ್ಪಷ್ಟಪಡಿಸಿದ. ಗೊಗೋಲ್ ಹಿರಿಯ ಕಲಾವಿದನಾಗಿದ್ದ. ಅವನ ಕೃತಿಗಳು ರಷ್ಯದ ಜನಜೀವನಕ್ಕೆ ಕನ್ನಡಿ ಹಿಡಿಯುತಿದ್ದುವು. ಪ್ರಜಾಪ್ರಭುತ್ವ ಮನೋವೃತ್ತಿ ಜನರಲ್ಲಿ ಬೆಳೆಯಲು ಆ ಸಾಹಿತ್ಯ ಕೃತಿಗಳು ಸಹಾಯಕವಾದುವು. ಆದರೆ ವೈಯಕ್ತಿಕವಾಗಿ ಗೊಗೋಲ್‌ನಲ್ಲಿ ಪ್ರತಿಗಾಮೀ ಪ್ರವೃತ್ತಿಗಳಿದ್ದುವು. ದಿನಕಳೆದಂತೆ ಆ ಪ್ರವೃತ್ತಿಗಳು ಬಲಗೊಂಡುವು. ಹೀಗಿದ್ದರೂ ತನ್ನ ಪ್ರಾಮಾಣಿಕತೆಯ ಕುಂಚವನ್ನು ಯಥಾರ್ಥತೆಯ ಬಣ್ಣಗಳಲ್ಲಷ್ಟೇ ಆತ ಅದ್ದುತಿದ್ದುದರಿಂದ ಆತನ ಕೃತಿಗಳು ಭವ್ಯವಾಗಿಯೇ ಉಳಿದುವು.

ಒಂದು ಲೇಖನದಲ್ಲಿ ಬೆಲಿನ್ಸ್ಕಿ ಹೀಗೆ ಬರೆದಿದ್ದಾನೆ:

"ನಮ್ಮ ಸಾಹಿತ್ಯ ಯಾವಾಗಲೂ ಆಲಂಕಾರಿಕ ಸ್ವರೂಪವನ್ನು ದಾಟಿ ಸ್ವಾಭಾವಿಕವಾಗಲು ಯತ್ನಿಸಿದೆ. ಯಶಸ್ವಿಯಾಗುತ್ತ ಬಂದಿರುವ ಈ ಯತ್ನದಲ್ಲೇ ನಮ್ಮ ಸಾಹಿತ್ಯಚರಿತ್ರೆಯ ಅರ್ಥವೂ ಸ್ಫೂರ್ತಿಯೂ ಅಡಕವಾಗಿವೆ. ಈ ದಿಕ್ಕಿನಲ್ಲಿ ಗೊಗೋಲ್‌ನಷ್ಟು ಯಶಸ್ವಿಯಾದ ಬರೆಹಗಾರ ಬೇರೆ ಇಲ್ಲವೆನ್ನುವುದು ತಪ್ಪಾಗಲಾರದು. ಇತರ ಭಾವಗಳೇನೇ ಇರಲಿ, ಕಲೆಯು ವಾಸ್ತವತೆಗೆ ಅಂಟಿಕೊಂಡಿರುವುದರಿಂದಲೇ ಇದು ಸಾಧ್ಯವಾಗಿದೆ. ಇದು ಗೊಗೋಲ್ ಮಾಡಿರುವ ಮಹಾಸೇವೆ. ಆ ಮೂಲಕ, ಕಲೆಯ ವಿಷಯದಲ್ಲಿ ಜನರಿಗಿರುವ ಅಭಿಪ್ರಾಯವನ್ನೇ ಆತ ಸಂಪೂರ್ಣವಾಗಿ ಬದಲಾಯಿಸಿದ್ದಾನೆ . . . ಎಲ್ಲಾ ಬಣ್ಣಗಳಲ್ಲಿ ವಾಸ್ತವತೆಯ ಪ್ರತ್ಯುತ್ಪಾದನೆಯೇ ಗೊಗೋಲನ ಕಲೆ."

ಸಾಹಿತ್ಯಕೃತಿಯು ಅಥವಾ ಕಲಾಕೃತಿಯು ವಾಸ್ತವತೆಯ ಪ್ರತ್ಯುತ್ಪಾದನೆಯಾಗಬೇಕೆಂದು ಹೇಳುವಾಗ ಬೆಲಿನ್‌ಸ್ಕಿ, ಕಲೆಯು ವಾಸ್ತವತೆಯ ಛಾಯಾಗ್ರಹಣವಾಗಲೆಂದು ಎಂದಿಗೂ ಅಭಿಪ್ರಾಯಪಡುವುದಿಲ್ಲ. ಕಲಾವಿದ ವಾಸ್ತವತೆಯನ್ನು ತನ್ನ ಕೃತಿಯಲ್ಲಿ ಒಡಮೂಡಿಸುವಾಗ, ತಾನು ಕಂಡುದಕ್ಕೊಂದು ಅರ್ಥವನ್ನು ಕೊಡಬೇಕು. ಸಮಾಜದ ಪ್ರಾಗತಿಕ ಶಕ್ತಿಗಳ ನೆಲೆಯಲ್ಲಿ ನಿಂತು ಆತ, ತಾನು ಚಿತ್ರಿಸುವ ವಾಸ್ತವತೆಯನ್ನು ಕುರಿತು ತೀರ್ಪನ್ನೀಯಬೇಕು.

ಸೃಷ್ಟಿಯಾದ ಪ್ರತಿಬಿಂಬವನ್ನು ಮೂಲದೊಡನೆ ಹೋಲಿಸಿ ನೋಡುವುದೇ ಬೆಲಿನ್‌ಸ್ಕಿ ಅನುಸರಿಸಿದ ವಿಮರ್ಶೆಯ ವಿಧಾನ. ಈ ರೀತಿಯಾಗಿ ಕೃತಿಯ ಕಲಾತ್ಮಕ ಸ್ವರೂಪವನ್ನು ಆತ ಗೊತ್ತುಮಾಡುತಿದ್ದ. ಕಲಾತ್ಮಕ ಸ್ವರೂಪವೆಂದರೆ ವಾಸ್ತವತೆಯ ಸಮಗ್ರತೆ. ಈ ದೃಷ್ಟಿಯಿಂದ ಆಗುವ ಕಲಾತ್ಮಕ ಸೃಷ್ಟಿಯಲ್ಲಿ ಸುಳ್ಳಿಗೆ—ಕೃತ್ರಿಮವಾದುದಕ್ಕೆ—ಎಡೆಯಿಲ್ಲ. ಮಿಥ್ಯವೆಂದಿಗೂ ಕಲಾತ್ಮಕವಾಗುವುದಿಲ್ಲ. ಒಂದೇ, ತನ್ನ ಸ್ವಂತ ಅಭಿಪ್ರಾಯವೇನೇ ಇದ್ದರೂ ಕಲಾವಿದ ವಾಸ್ತವತೆಗೆ ವಿಧೇಯನಾಗಿರುತ್ತಾನೆ; ಇಲ್ಲವೆ, ಒಳ್ಳೆಯ ಕೃತಿಯನ್ನು ಸೃಷ್ಟಿಸಲಾರದೆ ವಿಫಲನಾಗುತ್ತಾನೆ. ಒಂದು ವಸ್ತು ವಿಸ್ತಾರವಾಗಿದ್ದಷ್ಟೂ ಕೃತಿ ಹೆಚ್ಚು ಕಲಾತ್ಮಕವಾಗುತ್ತದೆ. ವಾಸ್ತವತೆಯೇ ಪ್ರತಿಯೊಂದು ಕಲಾಕೃತಿಯ ಹಿಂದಿನ ಮಹಾ ಪ್ರೇರಕಶಕ್ತಿ.

ಈ ರೀತಿ ಮೀಮಾಂಸೆಯನ್ನು ಮಾಡಿದ ಬೆಲಿನ್‌ಸ್ಕಿ, "ಕ್ರಿಯಾತ್ಮಕ ಸೌಂದರ್ಯ ಮೀಮಾಂಸೆಯೇ ವಿಮರ್ಶೆ" ಎಂದು ಕರೆದ.

ಕಾವ್ಯ ಎಂದರೇನು

ಬೆಲಿನ್ಸ್‌ಕಿಯ ಅಭಿಪ್ರಾಯದಂತೆ, "ವಾಸ್ತವ ಮತ್ತು ನೈಜವಿಚಾರಗಳ ಕಲೆಯೇ ಕಾವ್ಯ, ಸಲ್ಲದ ಭಾವ ವೈಪರೀತ್ಯವಲ್ಲ." ಇದು, "ಪ್ರತಿಮಾರೂಪವಾದ ಸತ್ಯ"; "ಸಾಧ್ಯತೆಯ ರೂಪದಲ್ಲಿ ವಾಸ್ತವತೆಯ ಸೃಷ್ಟ್ಯಾತ್ಮಕ ಪ್ರತ್ಯುತ್ಪಾದನೆ."

"ಕಾವ್ಯವೆಂದರೇನು? ಅದೇನನ್ನು ಒಳಗೊಂಡಿದೆ?—ಇದೀಗ ಪ್ರಶ್ನೆ. ಸಾಮಾನ್ಯ ಬರಹಗಾರರು, ಅದು ಕಲ್ಪನೆಯ ಸೃಷ್ಟಿ ಎಂದು ಭಾವಿಸುತ್ತಾರೆ. ನಿದ್ದೆಹೋದ ಮನುಷ್ಯನ ಕನಸುಗಳೂ ಮತಿಗೆಟ್ಟ ಮನುಷ್ಯನ ಕಿರಿಚಾಟಗಳೂ ಕಲ್ಪನೆಯ ಸೃಷ್ಟಿಗಳೇ. ಆದರೆ ಅವು ಕಾವ್ಯವಲ್ಲ. ಕಾವ್ಯಸೃಷ್ಟಿಗೆ, ಬೇರೆ ರೀತಿಯ ಸೃಷ್ಟಿಯಿಂದ ಅದನ್ನು ಪ್ರತ್ಯೇಕಿಸಿ ತೋರಿಸುವಂತಹ ಯಾವುದಾದರೂ ನಿರ್ದಿಷ್ಟ ಗುಣವಿರಬೇಕು. ಸಾಧ್ಯತೆಯ ರೂಪದಲ್ಲಿ ವಾಸ್ತವತೆಯ ಸೃಷ್ಟ್ಯಾತ್ಮಕ ಪ್ರತ್ಯುತ್ಪಾದನೆಯೇ ಕಾವ್ಯ. ಆದುದರಿಂದ ವಾಸ್ತವತೆಯಲ್ಲಿ ಇಲ್ಲದುದು ಕಾವ್ಯದಲ್ಲೂ ಮಿಥ್ಯವೇ. ಬೇರೆ ಮಾತಿನಲ್ಲಿ ಹೇಳುವುದಾದರೆ, ವಾಸ್ತವತೆಯಲ್ಲಿ ಇಲ್ಲದುದು ಕಾವ್ಯವಾಗಲಾರದು."

ಬೇರೊಂದೆಡೆ ಬೆಲಿನ್ಸ್‌ಕಿ ವಿವರವಾಗಿ ಹೀಗೆ ಹೇಳಿದ್ದಾನೆ:

"ಪ್ರತಿಯೊಂದು ಕಾವ್ಯಸೃಷ್ಟಿಯೂ ಕವಿಯ ಮನಸ್ಸಿನಲ್ಲಿ ಬೇರೂರಿರುವ ಬಲಶಾಲಿಯಾದ ಭಾವದ ಫಲ. ಆ ಭಾವವು, ಆತನ ಬರೇ ಮಾನಸಿಕ ಚಟುವಟಿಕೆಯ ಪರಿಣಾಮ ಮಾತ್ರ ಎಂದು ನಾವು ಭಾವಿಸಿದರೆ, ಕಲೆಯನ್ನು ಮಾತ್ರವಲ್ಲ, ಕಲೆಯ ಸಾಧ್ಯತೆಯನ್ನೂ ನಾವು ಅಳಿಸಿಬಿಡುತ್ತೇವೆ. ಯಾವುದೋ ಭಾವವನ್ನು ಯೋಚಿಸಿ ಸರಿಯಾದ ಚೌಕಟ್ಟಿನಲ್ಲಿ ಅದನ್ನು ತುರುಕಿಸುವುದಷ್ಟೇ ಕಾವ್ಯವೆಂದಾದರೆ, ಸಂಪಾದನೆ ಇಲ್ಲದೆ ಸಂಕಟಪಡುವಾಗ ಅಥವಾ ಲಾಭದ ಆಸೆಯಿಂದ ಬಾಯಲ್ಲಿ ನೀರೂರುವಾಗ ಇಲ್ಲವೆ ಏನೋ ಖುಷಿಯಾದಾಗ ನಾವೂ ಯಾಕೆ ಕವಿಗಳಾಗಬಾರದು? ಇಲ್ಲ, ಸ್ವಾಭಾವಿಕವಾಗಿಯೇ ಸ್ವಯಂಪ್ರೇರಣೆಯಿಂದಲೇ ಕವಿಗಳಾದವರು ಹಾಗೆ ಮಾಡುವುದಿಲ್ಲ! ಸ್ವಭಾವತಃ ಕವಿಯಲ್ಲದವನು ಯಾವುದಾದರೂ ಗಹನವಾದ ಸತ್ಯವಾದ ಪರಿಶುದ್ಧವೇ ಆದ ಭಾವವನ್ನು ಯೋಚಿಸಬಹುದು. ಆದರೆ ಆತ ಬರೆಯುವುದು ಮಾತ್ರ ಅಲ್ಪವಾಗಿ ಕಪಟದ್ದಾಗಿ ಅಪ್ರಾಮಾಣಿಕವಾಗುವುದು; ಅಸಹ್ಯವಾಗಿ ನಿರ್ಜೀವವಾಗುವುದು. ಅದರಿಂದ ಯಾರಿಗೂ ಸಮಾಧಾನವಾಗದು. ಆ ಕವಿತೆ ಒಳಗೊಂಡ ಭಾವ ಎಷ್ಟೇ ಸತ್ಯವಾದರೂ ಎಲ್ಲರಿಗೂ ನಿರಾಶೆಯಾಗುವುದು. ಜನರು ಕಲೆಯನ್ನು ತಿಳಿದುಕೊಳ್ಳುವ ರೀತಿ ಇದು; ಕವಿಗಳಿಂದ ಅವರು ಕೇಳುವುದು ಇಂತಹದನ್ನು; ವಿರಾಮವಿದ್ದಾಗ ಜನರಿಗೋಸ್ಕರ ನೀವು ಸೊಗಸಾದ ಒಂದು ಭಾವವನ್ನು ಯೋಚಿಸಿ, ಬಂಗಾರದ ಕಟ್ಟಿನೊಳಗಿಡುವ ವಜ್ರದ ಹಾಗೆ ಅದನ್ನೊಂದು ಚೌಕಟ್ಟಿನಲ್ಲಿ

ಇರಿಸಿ! ಆಹಾ, ಸಿದ್ಧವಾಯಿತು ಕಾವ್ಯ! . . . ಇಲ್ಲ, ಅಂತಹ ಭಾವಗಳು ಕವಿಯ ಮನಸ್ಸನ್ನು ಆವರಿಸುವುದಿಲ್ಲ. ಜೀವಂತ ಸೃಷ್ಟಿಯ ಜೀವಂತ ಬೀಜ ಹಾಗೆ ಮೊಳೆಯುವುದಿಲ್ಲ. ಕಲೆಯು ಅಸ್ಪಷ್ಟ ತಾತ್ತ್ವಿಕ ಭಾವಗಳನ್ನಾಗಲೀ ವಿವೇಚನಾಪೂರ್ಣ ಭಾವಗಳನ್ನಾಗಲೀ ಸಹಿಸುವುದಿಲ್ಲ. ಅದು ಸಹಿಸುವುದು ಕಾವ್ಯಭಾವಗಳನ್ನು ಮಾತ್ರ. ಕಾವ್ಯಭಾವವು ಯುಕ್ತಿಸರಣಿಯಲ್ಲ, ಜಡತತ್ತ್ವವಲ್ಲ, ಯಾವುದೇ ನಿಯಮವಲ್ಲ. ಅದು ಮಿಡಿಯುತ್ತಿರುವ ಉದ್ವಿಗ್ನ ಹೃದಯ, ಅದು ಮನೋರಾಗ. . . . ಮನೋರಾಗವೆಂದರೇನು? ಕಲಾಸೃಷ್ಟಿಯು ಯಾವುದೇ ತಮಾಷೆಯಲ್ಲ. ಕಲಾಕೃತಿಯು ವಿರಾಮದ ಇಲ್ಲವೆ 'ಶೋಕಿ'ಯ ಫಲವಲ್ಲ. ಕಲಾವಿದ ಶ್ರಮಪಡುವುದರಿಂದಲೇ ಆ ಸೃಷ್ಟಿ ಸಾಧ್ಯವಾಗುತ್ತದೆ. ತನ್ನ ಆತ್ಮದಲ್ಲಿ ಹೊಸತೊಂದು ಕೃತಿಯ ಬೀಜದ ಚಿತ್ರಸೆ ಹೇಗೆ ಆಯಿತೆಂಬುದು ಆತನಿಗೇ ತಿಳಿದಿರುವುದಿಲ್ಲ. ತಾಯಿ ತನ್ನ ಗರ್ಭದಲ್ಲಿ ಶಿಶುವನ್ನು ಹೊತ್ತ ಹಾಗೆ ಕಾವ್ಯಭಾವದ ಬೀಜವನ್ನು ತನ್ನೊಳಗೆ ಆತ ಹೊರುತ್ತಾನೆ. ಕಾವ್ಯ ಸೃಷ್ಟಿಯ ಕ್ರಿಯೆಯು ಮಗುವಿನ ಜನನದ ಕ್ರಿಯೆಗೆ ಸಮಾನವಾಗಿದೆ. ದೈಹಿಕ ಶ್ರಮದೊಡನೆ ಕಂಡುಬರುವ ವೇದನೆಯೂ ಅಂತಹದೇ. ಇದು ಆತ್ಮಕ್ಕೆ ಸಂಬಂಧಿಸಿದ ಮಾನಸಿಕವಾದ ವೇದನೆ, ಅಷ್ಟೆ. ಆದುದರಿಂದ, ಕವಿಯು ಸೃಷ್ಟಿಯ ಯತ್ನಕ್ಕೂ ಸಾಹಸಕ್ಕೂ ಕೈ ಇಕ್ಕಿದರೆ, ಯಾವುದೋ ಬಲಶಾಲಿಯಾದ ಶಕ್ತಿಯಿಂದ ಅಜೇಯವಾದ ಉದ್ವೇಗದಿಂದ ಆತ ಪ್ರೇರಿತನಾಗಿದ್ದಾನೆ ಎಂಬುದು ಸ್ಪಷ್ಟ. ಆ ಶಕ್ತಿಯೇ ಉದ್ವೇಗವೇ ಮನೋರಾಗ."

ಹೀಗೆ, ವಾಸ್ತವತೆಯ ಮನೋರಾಗದಿಂದ ಸ್ಫೂರ್ತಿಗೊಂಡು ಹುಟ್ಟಿದ ಕಾವ್ಯ ಪ್ರಭಾವಶಾಲಿಯಾಗುತ್ತದೆಂದು, ಅದೇ ನಿಜವಾದ ಕಾವ್ಯವಾಗುತ್ತದೆಂದು, ಬೆಲಿನ್ಸ್ಕಿ ಹೇಳಿದ.

ಬದುಕಿಗಾಗಿ ಕಲೆ

ಈ ರೀತಿ ಹೊಸ ವಿಚಾರಗಳನ್ನು ಪ್ರತಿಪಾದಿಸಲು ಹೊರಟ ಬೆಲಿನ್ಸ್ಕಿ, ಪ್ರತಿಗಾಮಿಯಾದ ಹಳೆಯ ವಿಚಾರಗಳಿಗಿದಿರು ಎಡೆಬಿಡದೆ ಹೋರಾಡಬೇಕಾಯಿತು. ಆಳುವ ವರ್ಗದ ಆರಾಧಕರು ಬಳಸುತ್ತಿದ್ದುದು 'ಕಲೆಗಾಗಿ ಕಲೆ' ಎನ್ನುವ ಮೋಹಕ ಘೋಷ. ಹೀಗೆ ಕಲಾಸೃಷ್ಟಿಯನ್ನೆಲ್ಲ ನಿರ್ಜೀವಗೊಳಿಸಲು ಅವರು ಯತ್ನಿಸುತ್ತಿದ್ದರು. ಆ ಘೋಷದ ಹಿಂದಿನ ದುರುದ್ದೇಶವನ್ನು ಬೆಲಿನ್ಸ್ಕಿ ಬಾರಿಬಾರಿಗೂ ಬಯಲಿಗೆಳೆದ.

ಒಮ್ಮೆ ಆತ ಹೀಗೆ ಬರೆದ:

"ಪ್ರಾಸಗಳ ಕುಣಿತದ ಕಾಲ ಕಳೆಯಿತು. ಅದು ಇನ್ನೆಂದೂ ಮರಳಿ ಬರದು.

ಕ್ಷುಲ್ಲಕವಾದ ಭಾವವೈಪರೀತ್ಯಗಳಿಗೂ ಹೃದಯವಿಕಾರಗಳಿಗೂ ಈಗ ಬೆಲೆಯಿಲ್ಲ. ಆಳವಾದ ಭಾವನೆಗಳನ್ನೂ ವಿಚಾರಗಳನ್ನೂ ಕಲಾತ್ಮಕ ರೂಪದಲ್ಲಿ ವ್ಯಕ್ತಗೊಳಿಸುವುದೇ ಈಗ ಬೇಕಾದ್ದು. ಅದಕ್ಕೆ ಪ್ರಾಸವಿದ್ದರೂ ಸರಿಯೆ, ಇಲ್ಲದಿದ್ದರೂ ಸರಿಯೆ. ಈ ದಿನ ಕಾವ್ಯದಲ್ಲಿ ಯಶಸ್ಸು ಗಳಿಸಲು ಪ್ರತಿಭೆಯೊಂದೇ ಸಾಲದು. ಕಾಲಧರ್ಮವನ್ನು ಕುರಿತು ಆತ ಶಿಕ್ಷಣಪಡೆದಿರಬೇಕು. ಕನಸಿನ ಜಗತ್ತಿನಲ್ಲಿ ಕವಿ ಇನ್ನು ಬದುಕುವುದು ಸಾಧ್ಯವಿಲ್ಲ. ಆತ ಈಗಾಗಲೇ ಈ ಕಾಲದ ವಾಸ್ತವತೆಯ ರಾಜ್ಯದ ನಾಗರಿಕನಾಗಿದ್ದಾನೆ. ಆತ, ಸಂತೋಷಪಡಿಸುವ ಬರಿಯ ಭಟ್ಟಂಗಿಯಾಗಬೇಕೆಂದು ಸಮಾಜ ಈಗ ಅಪೇಕ್ಷಿಸುವುದಿಲ್ಲ. ಬದಲು ಆತ, ತನ್ನ ಅಂತಃಸ್ಫೂರ್ತಿಯ ಧ್ಯೇಯವಾದಿಯಾದ ಬದುಕಿನ ಪ್ರತಿನಿಧಿಯಾಗಬೇಕೆಂದು, ಅತ್ಯಂತ ಕಠಿನ ಪ್ರಶ್ನೆಗಳಿಗೂ ಉತ್ತರವೀಯುವ ಪ್ರವಾದಿಯಾಗಬೇಕೆಂದು, ಇತರರಲ್ಲಿನ ನೋವು ಸಂಕಟಗಳನ್ನು ಕಾಣುವುದಕ್ಕಿಂತ ಮುಂಚಿತವಾಗಿ ತನ್ನಲ್ಲೇ ಸಮಾನವಾದ ನೋವು ಸಂಕಟಗಳನ್ನು ಕಂಡು, ಕಾವ್ಯಸ್ವರೂಪದಲ್ಲಿ ಅವುಗಳನ್ನು ಒಡಮೂಡಿಸಿ, ಗುಣಪಡಿಸುವ ವೈದ್ಯನಾಗಬೇಕೆಂದು ಸಮಾಜ ಬಯಸುತ್ತದೆ."

ಬದುಕಿಗೋಸ್ಕರ ಕಲೆ ಇರಬೇಕೆಂದು ಪ್ರತಿಪಾದಿಸಿದ ಬೆಲಿನ್ಸ್ಕಿ, ಕಲೆಯ ಅಂಶದ ಮಹತ್ವವನ್ನೆಂದೂ ಕಡೆಗಣಿಸಲಿಲ್ಲ. ಸಾಮಾಜಿಕ ಸಮಸ್ಯೆಗಳನ್ನು ಸಾಹಿತ್ಯದಲ್ಲಿ ಒಡಮೂಡಿಸುವ ಆತುರದಲ್ಲಿ ಕಲೆಯ ಅಂಶದ ಬಗೆಗೆ ಅಲಕ್ಷ್ಯ ತೋರಿದ ಕವಿಗಳನ್ನೂ ಬರೆಹಗಾರರನ್ನೂ ಆತ ಕಟುವಾಗಿ ಟೀಕಿಸಿದ. ಪ್ರತಿಭೆ ಇಲ್ಲದೆ ಹೋದರೆ ಎಷ್ಟು ಒಳ್ಳೆಯ ಪ್ರವೃತ್ತಿ ಇದ್ದೇನು ಫಲ ?—ಎಂದು ಆತ ಕೇಳಿದ. ಪ್ರತಿಭೆ ಇಲ್ಲದವರು ಸಾಹಿತ್ಯ ಸೃಷ್ಟಿಗೆ ಕೈ ಇಕ್ಕಿದರೆ, ಯಾವ ಪ್ರತಿಮೆಗಳನ್ನೂ ಅವರು ಕಲ್ಪಿಸಲಾರದೆ ವಿಫಲರಾಗುತ್ತಾರೆ. ಗುಲಾಮಗಿರಿಯಲ್ಲಿದ್ದ ರೈತರ ದಾರುಣಪರಿಸ್ಥಿತಿಯನ್ನು ತೋರಿಸುವುದಕ್ಕೋಸ್ಕರ ಒಬ್ಬಾತ ಬರೆದ ಬಂದು ಕಾದಂಬರಿಯನ್ನೋದಿ ಒಮ್ಮೆ ಬೆಲಿನ್ಸ್ಕಿ ಹೀಗೆ ಹೇಳಿದ: "ಗ್ರಂಥಕರ್ತರು ಕಾದಂಬರಿ ಬರೆಯುವ ಯತ್ನಕ್ಕೆ ಕೈಹಾಕದೆ, ಅದರ ತಿರುಳನ್ನು ನಿರೀಕ್ಷಕನೊಬ್ಬನ ಟಿಪ್ಪಣಿಯಾಗಿ ಸಿದ್ಧಗೊಳಿಸಿದ್ದರೆ ಅವರ ಸದುದ್ದೇಶದ ಸಾಧನೆ ಹೆಚ್ಚು ಯಶಸ್ವಿಯಾಗುತ್ತಿತ್ತು. . . ."

ಆಯಾ ಕಾಲದ ಸಾಮಾಜಿಕ ಪ್ರವೃತ್ತಿಗಳಿಗೂ ಕಲೆಗೂ ಇರುವ ಸಂಬಂಧವನ್ನು ಕುರಿತು ಬೆಲಿನ್ಸ್ಕಿ ಈ ರೀತಿ ಬರೆದ:

"ಹಲವರು ಈಗ 'ಪ್ರವೃತ್ತಿ' ಎಂಬ ಪದದಿಂದ ಆಕರ್ಷಿತರಾಗಿದ್ದಾರೆ. ಆ ಪದದಲ್ಲೇ ಎಲ್ಲವೂ ಅಡಕವಾಗಿದೆ ಎಂದು ಅವರ ಭಾವನೆ. ಆದರೆ ನಿಜ ಸಂಗತಿ ಏನು ? ಮೊದಲಿನದಾಗಿ, ಕಲೆಯ ಕ್ಷೇತ್ರದಲ್ಲಿ ಪ್ರತಿಭೆ ಇಲ್ಲದೆ ಹೋದರೆ ಪ್ರವೃತ್ತಿಗೆ

ಚಿಕ್ಕಾಸಿನ ಬೆಲೆ ಇಲ್ಲ. ಎರಡನೆದಾಗಿ, ಪ್ರವೃತ್ತಿಯು ಬರೆಹಗಾರನ ಮನಸ್ಸಿನೊಳಗೆ ಮಾತ್ರವಲ್ಲ, ಮುಖ್ಯವಾಗಿ ಆತನ ಹೃದಯದಲ್ಲೂ ರಕ್ತದಲ್ಲೂ ಅದು ಇರಬೇಕು. ಎಲ್ಲದಕ್ಕಿಂತ ಹೆಚ್ಚಾಗಿ, ಅದು ಒಳಗಿನಿಂದಲೇ ಉದಿಸುವ ಸ್ಫುರಿಸುವ ಭಾವನೆಯಾಗ ಬೇಕು; ಕಲೆಗೋಸ್ಕರ ತಾನು ಇರುವಷ್ಟೇ ಆ ಪ್ರವೃತ್ತಿಗೋಸ್ಕರವೂ ಇರುವೆ ನೆಂಬ ಬೋಧೆ ಆತನಲ್ಲಿರಬೇಕು. ಪುಸ್ತಕ ಓದಿ ಒಂದು ಭಾವವನ್ನು ಆಯ್ದುಕೊಳ್ಳ ಬಹುದು ಅಥವಾ ಜೇರೆಯವರಿಂದ ಕೇಳಿ ತಿಳಿಯಬಹುದು. ಸರಿಯಾದ ರೀತಿಯಲ್ಲಿ ಅದನ್ನು ಅರ್ಥಮಾಡಿಕೊಳ್ಳಲೂ ಬಹುದು. ಆದರೆ ಬರೆಹಗಾರ ಸಂಪೂರ್ಣವಾಗಿ ಅದನ್ನು ಅರಗಿಸಿಕೊಂಡು ಅದರಮೇಲೆ ತನ್ನ ಸ್ವಂತ ವ್ಯಕ್ತಿತ್ವದ ಮುದ್ರೆಯನ್ನೊತ್ತದೇ ಹೋದರೆ, ಕವಿತಾರಚನೆಯಲ್ಲಿ ಮಾತ್ರವಲ್ಲ, ಎಲ್ಲಾ ರೀತಿಯ ಸಾಹಿತ್ಯ ಚಟುವಟಿಕೆ ಯಲ್ಲೂ ಅದು ನಿಷ್ಪ್ರಯೋಜಕವಾಗುವುದು. ಎಷ್ಟು ಬೇಕಿದ್ದರೂ ನಿಸರ್ಗವನ್ನು ಪ್ರತಿಬಿಂಬಿಸಿ; ಸಿದ್ಧಗೊಳಿಸಿದ ಭಾವಗಳನ್ನೂ ಸುಪ್ರಸಿದ್ಧ ಪ್ರವೃತ್ತಿಗಳನ್ನೂ ಮನಸ್ವಿಯಾಗಿ ನಿಮ್ಮ ಹಸ್ತಪ್ರತಿಯೊಳಗೆ ತುರುಕಿಸಿ;—ಆದರೆ ನಿಮ್ಮಲ್ಲಿ ಕಾವ್ಯ ಪ್ರತಿಭೆ ಇಲ್ಲದಿದ್ದರೆ, ನಿಮ್ಮ ಬರೆವಣಿಗೆ ಯಾವುದನ್ನು ಪ್ರತಿಬಿಂಬಿಸುತ್ತಿದೆ ಎಂಬುದು ಯಾರಿಗೂ ಅರ್ಥವಾಗದು. ಅದರೊಳಗಿರುವ ಭಾವಗಳೂ ಪ್ರವೃತ್ತಿಗಳೂ ಸಾಮಾನ್ಯ ವಾದ ಆಲಂಕಾರಿಕ ಅಂಶಗಳಾಗಿ ಉಳಿಯುವುವು."

—ಹೀಗೆ, ಸಾಹಿತ್ಯಸೃಷ್ಟಿಯಲ್ಲಿ ಆಂತರಿಕವಾದ ಕ್ರಿಯಾತ್ಮಕ ಅಂಶವೂ ಬಲು ಮುಖ್ಯವೆಂಬುದನ್ನು ಬೆಲಿನ್‌ಸ್ಕಿ ಸಾರಿದ.

ಸಾಮಾಜಿಕ ಹಿತಗಳಿಗೆ ಸಂಬಂಧವೇ ಇಲ್ಲದ 'ಶುದ್ಧ' ಕಲೆ ಎಂದಾದರೂ ಇತ್ತೆ? ಬೆಲಿನ್‌ಸ್ಕಿ ಹೇಳಿರುವಂತೆ "ಶುದ್ಧವಾದ ಅಸ್ಪಷ್ಟವಾದ ನಿಶ್ಯರತವಾದ ಅಥವಾ ತತ್ತ್ವಜ್ಞಾನಿಗಳು ಹೇಳುವಂತೆ ಪರಿಪೂರ್ಣವಾದ ಕಲೆ ಎಂದೂ ಎಲ್ಲಿಯೂ ಇರಲಿಲ್ಲ."

"ಮೊದಲಿನದಾಗಿ ಕವಿಯು ಒಬ್ಬ ಮನುಷ್ಯ, ಬಳಿಕ ಆತ ರಾಷ್ಟ್ರದ ಪ್ರಜೆ, ಅನಂತರ ತನ್ನ ಕಾಲದ ಕೂಸು . . . ಆದುದರಿಂದಲೇ ಕಾವ್ಯವನ್ನೂ ಕವಿಯನ್ನೂ ವಾತಾವರಣದಿಂದ ಪ್ರತ್ಯೇಕಿಸಿ ಸೌಂದರ್ಯಮೀಮಾಂಸೆಯನ್ನು ಮಾಡುವುದು ಈಗ ಸಾಧ್ಯವಿಲ್ಲ."

ಕಲೆ ಮತ್ತು ವಿಜ್ಞಾನ

ವಾಸ್ತವತೆಯ ತಳಹದಿಯ ಮೇಲೆ ಕಲೆ ಸೃಷ್ಟಿಯಾಗಬೇಕೆಂಬ ಅಂಶದಿಂದ, ಕಲೆಯ ಸಾಮಾಜಿಕ ಮೌಲ್ಯವೂ ಮಹತ್ವವೂ ಹೆಚ್ಚುತ್ತವೆ. ಪ್ರಾಮಾಣಿಕನಾದ ಕಲಾವಿದನ ಕೃತಿಯನ್ನೋದಿ ಅಲ್ಲಿ ಪ್ರತಿಬಿಂಬಿತವಾಗಿರುವ ಸಾಮಾಜಿಕ ಬದುಕಿನ

ಅಭ್ಯಾಸದಿಂದ, ಆ ಸಮಾಜದೊಳಗಿನ ವಿವಿಧ ವಿಭಾಗಗಳ ವರ್ಗಗಳ ಪರಸ್ಪರ ಸಂಬಂಧವನ್ನೂ ವರ್ಗಹಿತಗಳ ಬೆಳವಣಿಗೆಯನ್ನೂ ನಾವು ತಿಳಿಯಬಹುದು. ಬರೆದವನ ವೈಯಕ್ತಿಕ ಅಭಿಪ್ರಾಯಕ್ಕಿಂತಲೂ ಅಲ್ಲಿ ಚಿತ್ರಿಸಿರುವ ಬದುಕಿನ ಸತ್ಯತೆಯೇ ಮುಖ್ಯವಾದುದರಿಂದ ಆ ಕೃತಿಯ ಸಹಾಯದಿಂದ ನಮ್ಮ ಸಾಮಾಜಿಕ ಜ್ಞಾನವನ್ನು ಹೆಚ್ಚಿಸಬಹುದು. ಇಂತಹ ತಿಳಿವಳಿಕೆಯ ಸಾಧನೆಯಲ್ಲಿ ವಿಜ್ಞಾನದಂತೆಯೇ ಕಲೆಯೂ ಸಹಕಾರಿ.

ಈ ಸಂಬಂಧವಾಗಿ ಬೆಲಿನ್‌ಸ್ಕಿ ಹೀಗೆ ಬರೆದಿದ್ದಾನೆ:

“. . . ಕಲೆಯೂ ವಿಜ್ಞಾನವೂ ಒಂದೇ ಅಲ್ಲವೆಂಬುದನ್ನು ಜನರು ಬಲ್ಲರು. ಆದರೆ, ತಿರುಳಿಗೆ ಸಂಬಂಧಿಸಿ ವ್ಯತ್ಯಾಸವಿಲ್ಲ; ವ್ಯತ್ಯಾಸವಿರುವುದು ವಸ್ತುವನ್ನು ವಿಸ್ತರಿಸುವ ವಿಧಾನದಲ್ಲಿ ಮಾತ್ರ—ಎಂಬುದು ಅವರಿಗೆ ತಿಳಿಯದು. ತತ್ತ್ವಜ್ಞಾನಿ ಯುಕ್ತಿಸರಣಿಯಲ್ಲಿ ಮಾತನಾಡುತ್ತಾನೆ; ಕವಿ ಪ್ರತಿಮೆಗಳು ಮತ್ತು ಚಿತ್ರಗಳ ರೂಪದಲ್ಲಿ ಮಾತನಾಡುತ್ತಾನೆ. ಆದರೆ, ಇಬ್ಬರೂ ಹೇಳುವ ವಿಷಯ ಮಾತ್ರ ಒಂದೇ. ರಾಜಕೀಯ ಅರ್ಥಶಾಸ್ತ್ರಜ್ಞ ಅಂಕೆಸಂಖ್ಯೆಗಳೊಡನೆ ಸನ್ನದ್ಧನಾಗಿ, ಸಮಾಜದಲ್ಲಿ ಇಂತಹ ಇಂತಹ ವರ್ಗದ ಸ್ಥಿತಿಗತಿ ಇಂತಹ ಇಂತಹ ಕಾರಣಗಳಿಗಾಗಿ ಸುಧಾರಿಸಿದೆಯೆಂದೋ ಕೆಟ್ಟಿದೆಯೆಂದೋ ಸಿದ್ಧಪಡಿಸಿ ತೋರಿಸುತ್ತಾನೆ. ಕವಿ, ಬದುಕಿನ ಮುಖ್ಯವಾದ, ಕಣ್ಣಿಗೆ ಕಟ್ಟುವ, ವರ್ಣನೆಯಿಂದ ಪ್ರಾಮಾಣಿಕವಾದ ಚಿತ್ರವನ್ನು ಕೊಟ್ಟು ಓದುಗರ ಮನಸ್ಸನ್ನು ಪ್ರಚೋದಿಸಿ, ಸಮಾಜದಲ್ಲಿ ಇಂತಹ ಇಂತಹ ವರ್ಗದ ಸ್ಥಿತಿಗತಿ ಇಂತಹ ಇಂತಹ ಕಾರಣಗಳಿಗಾಗಿ ಸುಧಾರಿಸಿದೆ ಎಂದೋ ಕೆಟ್ಟಿದೆ ಎಂದೋ ಆ ಮನಸ್ಸಿನಲ್ಲಿ ಸ್ಪಷ್ಟವಾಗಿ ಮೂಡಿಸುತ್ತಾನೆ. ಒಬ್ಬಾತ ಸಿದ್ಧಪಡಿಸಿಕೊಟ್ಟರೆ, ಇನ್ನೊಬ್ಬ ತೋರಿಸಿಕೊಡುತ್ತಾನೆ. ಆದರೆ ಇಬ್ಬರೂ ಸತ್ಯವನ್ನೇ ಮನಗಾಣಿಸಿ ಕೊಡುತ್ತಾರೆ. ಒಬ್ಬ ತರ್ಕಬದ್ಧವಾದ ಲೆಕ್ಕಾಚಾರದಿಂದ, ಇನ್ನೊಬ್ಬ ಚಿತ್ರಗಳ ಮೂಲಕ. ಮೊದಲಿನದನ್ನು ತಿಳಿದುಕೊಳ್ಳುವವರ ಸಂಖ್ಯೆ ಮಾತ್ರ ಬಲು ಸ್ವಲ್ಪ. ಎರಡನೆಯದು ಎಲ್ಲರಿಗೂ ಅರ್ಥವಾಗುತ್ತದೆ. ಸಮಾಜವು ಅತಿ ಹೆಚ್ಚು ಹಾಗೂ ಅತ್ಯಂತ ಪವಿತ್ರ ಆಸಕ್ತಿಯನ್ನು ವಹಿಸುವುದು ತನ್ನ ಸ್ವಂತದ ಕಲ್ಯಾಣದಲ್ಲಿ. ಸಮಾಜದ ಸದಸ್ಯರೆಲ್ಲರೂ ಆ ಆಸಕ್ತಿಯನ್ನು ತೋರುತ್ತಾರೆ. ಆ ಕಲ್ಯಾಣ ಸಾಧನೆಯ ಹಾದಿಯು ತಿಳಿವಳಿಕೆ. ಕಲೆಯು ವಿಜ್ಞಾನದಷ್ಟೇ ಚೆನ್ನಾಗಿ ಆ ತಿಳಿವಳಿಕೆಯನ್ನು ಹೆಚ್ಚಿಸಬಲ್ಲುದು. ಇಲ್ಲಿ ವಿಜ್ಞಾನ ಮತ್ತು ಕಲೆ ಎರಡೂ ಏಕಪ್ರಕಾರವಾಗಿ ಅವಶ್ಯವಾಗಿವೆ. ಕಲೆಗಿಂತ ವಿಜ್ಞಾನ ಹೆಚ್ಚು ಮಹತ್ವದ್ದಾಗುವುದು ಇಲ್ಲವೆ ವಿಜ್ಞಾನಕ್ಕಿಂತ ಕಲೆ ಹೆಚ್ಚು ಮಹತ್ವದ್ದಾಗುವುದು ಸಾಧ್ಯವಿಲ್ಲ.”

ಈ ರೀತಿ ಬರೆದು ಬೆಲಿನ್ಸ್ಕಿ ಸಾಹಿತಿಯನ್ನು, ತತ್ತ್ವಜ್ಞಾನಿಯ, ರಾಜಕೀಯ ಅರ್ಥಶಾಸ್ತ್ರಜ್ಞನ, ವಿಜ್ಞಾನಿಯ ಸಾಲಿನಲ್ಲಿ ಹಿರಿಯ ಸ್ಥಾನಕ್ಕೇರಿಸಿದ.

ಕತ್ತಿಯಾದ ಲೇಖನಿ

ಹೀಗೆ ಸೌಂದರ್ಯಮೀಮಾಂಸೆಯ ಕ್ಷೇತ್ರದಲ್ಲಿ ಬೆಲಿನ್ಸ್ಕಿ ಕಟ್ಟಿದುದು ಮೂರು ಪ್ರಾಕಾರಗಳ ಅಭೇದ್ಯ ದುರ್ಗ:

ಒಂದು, ವಾಸ್ತವತೆ;

ಎರಡು, ಕಲಾತ್ಮಕ ಪರಿಪೂರ್ಣತೆ;

ಮೂರು, ಆಂತರಿಕವಾದ ಕ್ರಿಯಾತ್ಮಕ ಅಂಶ.

ಇಂತಹ ದುರ್ಗದಲ್ಲಿ ಬೆಲಿನ್ಸ್ಕಿ, ಒಂದು ಶತಮಾನದ ಹಿಂದೆ, ಒಂದೇ ಸಮನೆ ಎಲ್ಲಾ ಕಾಲಗಳಲ್ಲೂ ಬೆಳಕು ನೀಡುವಂತಹ ದೀಪಸ್ತಂಭವನ್ನು ನೆಟ್ಟ.

ಆ ಕೆಲಸ ಸುಲಭವಾಗಿರಲಿಲ್ಲ. ಅದನ್ನು ಕುರಿತು ಆತನ ಸಂಗಡಿಗನಾದ ಚೆರ್‌ನಿಷೆವ್‌ಸ್ಕಿ ಹೀಗೆ ಹೇಳಿದ್ದಾನೆ:

"ಬೆಲಿನ್ಸ್ಕಿ ಅತಿಯಾದ ಆಗ್ರಹಗಳನ್ನೇನೂ ವ್ಯಕ್ತಪಡಿಸಲಿಲ್ಲ. ಆದರೆ ಆತ ಕೇಳಿದುದೆಲ್ಲವೂ ದೃಢವಾಗಿದ್ದುವು, ಸುಸಂಬದ್ಧವಾಗಿದ್ದುವು. ಒಂದೇಸಮನೆ ಕೆಚ್ಚಿನಿಂದ ಆತ ಅವುಗಳನ್ನು ವ್ಯಕ್ತಗೊಳಿಸುತ್ತಿದ್ದ. ಅತ್ಯಂತ ಕ್ರೂರವಾದ ತೀರ್ಪನ್ನೂ ಮೃದುಮಾತುಗಳಲ್ಲಿ ಹೇಳುವುದು ಸಾಧ್ಯ. ಆದರೆ ಧೀರ ಪ್ರಕೃತಿಯವನೂ ನಿರ್ಧಾರಮನಸ್ಕನೂ ಆದ ಬೆಲಿನ್ಸ್ಕಿ, ಅಂತಹ ತಂತ್ರವನ್ನು ತುಚ್ಛೀಕರಿಸಿದ. ತಾನು ಯೋಚಿಸಿದುದನ್ನಷ್ಟೇ ಆತ ಬರೆದ. ಸತ್ಯಕ್ಕೆ ಅಪಚಾರ ವಾಗಬಾರದೆಂಬುದಷ್ಟೇ ಆತ ತೋರಿದ ಕಾತರ. ಬರೆವಣಿಗೆಯಲ್ಲಿ, ತನ್ನ ವಿಚಾರ ಗಳನ್ನು ಅತ್ಯಂತ ಸಮರ್ಪಕವಾಗಿ ವ್ಯಕ್ತಗೊಳಿಸಲು ಬೇಕಾದ ನಿರ್ದಿಷ್ಟ ಪದಗಳ ನ್ನಷ್ಟೇ ಆತ ಬಳಸುತ್ತಿದ್ದ. ಕೆಟ್ಟುದನ್ನು ನೇರವಾದ ಮಾತಿನಲ್ಲಿ ಕೆಟ್ಟುದೆಂದೇ ಆತ ಕರೆದ. ತನ್ನ ತೀರ್ಪನ್ನು ಸಂದೇಹಕ್ಕೆ ಎಡೆಕೊಡುವಂತಹ ಸೂಚ್ಯಪದಗಳಲ್ಲಾಗಲೀ ರಾಜತಾಂತ್ರಿಕ ಭಾಷೆಯಲ್ಲಾಗಲೀ ಮುಚ್ಚಿಟ್ಟು ಹೇಳಲಿಲ್ಲ. ಆದರೆ ಕೆಲವರಿಗೆ, ಸತ್ಯದ ಪ್ರತಿಯೊಂದು ಪದವೂ—ಅದೆಷ್ಟೇ ಮಿತವಾಗಿರಲಿ—ಕ್ರೂರವಾಗಿ ತೋರು ತ್ತದೆ. ಅಂತಹ ಜನರು ಬೆಲಿನ್ಸ್ಕಿಯ ಅಭಿಪ್ರಾಯಗಳನ್ನು ಕ್ರೂರವೆಂದೇ ಕರೆದರು. ಇದಕ್ಕೆ ಏನು ಮಾಡುವುದು ಸಾಧ್ಯ? ನೇರವಾದ ವರ್ತನೆಯನ್ನು ಕ್ರೂರವಾಗಿಯೇ ಯಾವಾಗಲೂ ಕಾಣುವ ಹಲವರು ಇದ್ದೇ ಇರುತ್ತಾರೆ. ಆದರೆ, ಓದಿ ಅರ್ಥ ಮಾಡಿಕೊಳ್ಳುವ ಸಾಮರ್ಥ್ಯವಿರುವವರು, ಬೆಲಿನ್ಸ್ಕಿಯ ಅಪೇಕ್ಷೆಗಳೂ ಆಸೆಗಳೂ

ಬಲು ಮಿತವಾದುವೆಂಬುದನ್ನು ಬಲ್ಲರು. ಪ್ರಬುದ್ಧವಾದ ಮನಸ್ಸಿರುವ ಪ್ರತಿಯೊಬ್ಬ ಮನುಷ್ಯನಿಗೂ ಅಗತ್ಯವಾದುದಕ್ಕಿಂತ ಹೆಚ್ಚಿನದನ್ನು ನಮ್ಮ ಬರೆಹಗಾರರಿಂದ—ಕಲಾವಿದರಿಂದ—ಬೆಲಿನ್ಸ್‌ಕಿ ಕೇಳಲಿಲ್ಲ.

"ವಿರೋಧಿಗಳೊಡನೆ ವಿವಾದದಲ್ಲಿ ಬೆಲಿನ್ಸ್‌ಕಿ ಎಂದೂ ಸೋಲುತ್ತಿರಲಿಲ್ಲ. ಪ್ರತಿಯೊಂದುಸಾರಿಯೂ ಎದುರಾಳಿಗೆ ಎಲ್ಲಾ ಅಂಶಗಳಲ್ಲೂ ಸಂಪೂರ್ಣ ಸೋಲಾಗುತ್ತಿತ್ತು. ಪ್ರತಿಯೊಂದು ಸಾಹಿತ್ಯಿಕ ವಿವಾದ ನಡೆದಾಗಲೂ ಬೆಲಿನ್ಸ್‌ಕಿಯನ್ನು ವಿರೋಧಿಸಿದವನು ಜನಸಮುದಾಯದಲ್ಲಿ ಹೆಚ್ಚಿನಂಶ ತನ್ನ ಗೌರವವನ್ನು ಕಳೆದುಕೊಳ್ಳುತ್ತಿದ್ದ. ಏಕೆ? ಹೀಗೆ ಆಗುತಿದ್ದುದಕ್ಕೆ ಬೆಲಿನ್ಸ್‌ಕಿ ವಿರೋಧಿಸುತ್ತಿದ್ದ ಅಭಿಪ್ರಾಯಗಳ ಸ್ವರೂಪವೇ ಕಾರಣ. ಖಂಡಿತವಾಗಿಯೂ ಅಪಾಯಕಾರಿಯಾದ ತೀರಾ ತಪ್ಪಾದ ಅಭಿಪ್ರಾಯಗಳನ್ನು ಮಾತ್ರವೇ ಬೆಲಿನ್ಸ್‌ಕಿ ಖಂಡಿಸುತ್ತಿದ್ದ . . ."

ಆಧುನಿಕ ಐರೋಪ್ಯ ಸಾಹಿತ್ಯದ ಪ್ರಮುಖ ವಿಮರ್ಶಕ ಪ್ರಭೃತಿಗಳಲ್ಲಿ ಒಬ್ಬನಾದ ಜಾರ್ಜ್ ಲುಕಾಸ್ ಇದೇ ವಿಷಯವಾಗಿ ಹೀಗೆ ಬರೆದಿದ್ದಾನೆ:

". . . ಬೆಲಿನ್ಸ್‌ಕಿಯ ಹಲವಾರು ಸಮಕಾಲೀನರು, ವಿಮರ್ಶಕರು ಹಾಗೂ ಕವಿಗಳು, ಆತ ಪ್ರತಿಯೊಂದನ್ನೂ ಪುಡಿಗೂಡಿಸುತ್ತಿದ್ದನೆಂದೂ ಪ್ರತಿಯಾಗಿ ಬೇರೇನನ್ನೂ ನಿರ್ಮಿಸುತ್ತಿರಲಿಲ್ಲವೆಂದೂ ದೂರುತ್ತಿದ್ದರು. ಬೆಲಿನ್ಸ್‌ಕಿ ತನ್ನ ವಿಮರ್ಶಾತ್ಮಕ ಪೃಥಕ್ಕರಣದಿಂದ ಹಲವಾರು ಸಮಕಾಲೀನರ ಸಾಹಿತ್ಯಜೀವನವನ್ನು ಮಣ್ಣುಗೂಡಿಸಿದನೆಂಬುದು ನಿಜ. ಆದರೆ ಈ ವಿವಾದಗಳಲ್ಲೆಲ್ಲ ಭವಿಷ್ಯತ್ತು ಬೆಲಿನ್ಸ್‌ಕಿಯ ತೀರ್ಪಿಗೇ ಬೆಂಬಲಕೊಟ್ಟಿದೆ. ಆ ಮಹಾ ವಿಮರ್ಶಕನ ಅತ್ಯುಗ್ರಧಾಳಿಗೆ ಒಳಗಾದ ಯಾವ ಗ್ರಂಥಕರ್ತನೂ ಅಂತಹ ಚಿಕಿತ್ಸೆಗೆ ಅರ್ಹನಾಗಿರಲಿಲ್ಲವೆಂದು ಮುಂದೆ ಕಂಡುಬಂದುದಿಲ್ಲ. ಬೆಲಿನ್ಸ್‌ಕಿಯ ವಿಮರ್ಶೆಯೆಲ್ಲ ರಷ್ಯದ ಸಾಹಿತ್ಯಾಕಾಶವನ್ನು ಶುಭ್ರಗೊಳಿಸಿದ ಗುಡುಗು—ಗಾಳಿ . . . ಬೆಲಿನ್ಸ್‌ಕಿ, ತಾನು ಬದುಕಿದ್ದಾಗಲೇ, ವಾಸ್ತವವಾದಿ ಪೀಳಿಗೆಯ ಮೊದಲ ಕೃತಿಗಳು ಪ್ರಕಟವಾದುದನ್ನು ನೋಡಿದ. ಆಗ ಈ ಅವಿಶ್ರಾಂತ ವಿಮರ್ಶಕ ಮೃದುಹೃದಯದ ತಿಳಿವಳಿಕೆಯುಳ್ಳ ವ್ಯಕ್ತಿಯಾದ; ಹೊಸ ಪ್ರತಿಭೆಯ ಉತ್ಸಾಹಿ ಶೋಧಕನಾದ. ಟರ್ಗೆನೀವ್, ಗೊಂಚರೊವ್, ಡಾಸ್ಟೊಯೀವ್‌ಸ್ಕಿ ಇವರೆಲ್ಲರ ಆಗಮನವನ್ನು ಆತ ಆತ್ಮೀಯತೆಯಿಂದ ಘೋಷಿಸಿದ. ಈ ಮಹಾ ವಾಸ್ತವವಾದಿ ಬರೆಹಗಾರರೆಲ್ಲ ರಷ್ಯದ ಸಾಹಿತ್ಯದಲ್ಲಿ ಯೋಗ್ಯಸ್ಥಾನವನ್ನು ಆಕ್ರಮಿಸುವಂತೆ ಬೆಲಿನ್ಸ್‌ಕಿ ನೆರವಾದ."

ಬೆಲಿನ್ಸ್‌ಕಿಯ ಕೃತಿಗಳಲ್ಲಿ ಮುಖ್ಯವಾದುವು: ಹತ್ತೊಂಭತ್ತನೆಯ ಶತಮಾನದ ರಷ್ಯದ ರಾಷ್ಟ್ರಕವಿ ಪುಷ್ಕಿನ್‌ನ ಕೃತಿಗಳನ್ನು ಕುರಿತು ಬರೆದ ವಿಮರ್ಶಾಲೇಖನ;

"ರಷ್ಯದ ಸಾಹಿತ್ಯವನ್ನು ಕುರಿತು ಯೋಚನೆಗಳು ಮತ್ತು ಟಿಪ್ಪಣಿಗಳು"; ೧೮೪೫ರಲ್ಲೂ ೧೮೪೭ರಲ್ಲೂ ರಷ್ಯದ ಸಾಹಿತ್ಯವನ್ನು ಕುರಿತು ಬರೆದ ಸಿಂಹಾವಲೋಕನಗಳು; ಅಸಂಖ್ಯವಾದ ಸಾಹಿತ್ಯ ನಿಬಂಧಗಳು, ಪ್ರಬಂಧಗಳು, ಪುಸ್ತಕ ವಿಮರ್ಶೆಗಳು; ಕೊನೆಯದಾಗಿ, ಸಾಯುವುದಕ್ಕೆ ಮುಂಚೆ ಆತ ಬರೆದ "ಗೊಗೋಲ್‌ಗೆ ಕಾಗದ."

ಪ್ರಭಾವಶಾಲಿಯಾದ ಈ ಲೇಖನಿಯ ಎದುರು ಸಾಹಿತ್ಯಕ್ಷೇತ್ರದ ಹಾರತುರಾಯಿಗಳು ಮಾತ್ರವಲ್ಲ, ಆಳುತ್ತಿದ್ದ ನಿರಂಕುಶಶಾಹಿಯೂ ನಡುಗಿತು. ಗುಪ್ತಪೋಲೀಸ ದಳಕ್ಕೆ ನೆರವಾಗುತಿದ್ದ ಕೆಲ ಬರೆಹಗಾರರು, ಬಂಡಾಯಗಾರ ಬೆಲಿನ್ಸ್‌ಕಿಯನ್ನು ಕುರಿತು ಸರಕಾರಕ್ಕೆ ಒಂದೇ ಸಮನೆ ವರದಿಗಳನ್ನು ಕಳುಹಿದರು. "ಸಾರ್ವಜನಿಕವಾಗಿ ರಾಜದ್ರೋಹದ ಬೀಜ ಬಿತ್ತಲು ಅವಕಾಶವಿಲ್ಲದೆ" ಪತ್ರಿಕೆಗಳ ಅಂಕಣದ ಮೂಲಕ ಬೆಲಿನ್ಸ್‌ಕಿ ಆ ಕೆಲಸ ಮಾಡುತ್ತಿದ್ದನೆಂದು ದೂರುಕೊಟ್ಟರು. ಸರಕಾರದ ವಿಜ್ಞಾನಪರಿಷತ್ತಿನ ಸದಸ್ಯನೊಬ್ಬ, ಬೆಲಿನ್ಸ್‌ಕಿಯ ಮತ್ತಿತರರ ಲೇಖನಗಳನ್ನು ಸಂಗ್ರಹಿಸಿ ವಿಂಗಡಿಸಿ ಏಳು ಬುಟ್ಟಿಗಳಲ್ಲಿ ತುಂಬಿ, 'ದೇವರಿಗಿದಿರಾಗಿ' 'ಸರಕಾರಕ್ಕಿದಿರಾಗಿ' 'ನೀತಿಗಿದಿರಾಗಿ' ಇತ್ಯಾದಿ ಹಣೆಪಟ್ಟಿಗಳನ್ನು ಅಂಟಿಸಿ, ಗುಪ್ತಪೋಲೀಸರ ಶಾಖೆಗೆ ಕಳುಹಿಕೊಟ್ಟ.

ಜಾರ್ ಚಕ್ರವರ್ತಿಯ ಹಿರಿಯ ಅಧಿಕಾರಿಗಳಲ್ಲೊಬ್ಬ ಒಮ್ಮೆ ಬೆಲಿನ್ಸ್‌ಕಿಯೊಡನೆ ಸೆಂಟ್ ಪೀಟರ್ ಮತ್ತು ಪಾಲ್ ದುರ್ಗದ ಕಾರಾಗಾರದಲ್ಲಿ, ಬೆಚ್ಚಗಿನ ಒಂದು ಪುಟ್ಟ ಕೊಠಡಿ ನಿನಗಾಗಿ ಸಿದ್ಧವಾಗಿದೆ" ಎಂದು ಹೇಳಿದ. ಬೆಲಿನ್ಸ್‌ಕಿ ಹೋದಲ್ಲೆಲ್ಲ ಸರಕಾರದ ಗೂಢಚಾರರು ಅವನನ್ನು ಹಿಂಬಾಲಿಸಿದರು. ಆತನ ಕಾಗದಪತ್ರಗಳನ್ನು ಒಡೆದು ನೋಡಿದರು. ಕಿರುಕುಳ ಕೊಟ್ಟರು.

ಬೆಲಿನ್ಸ್‌ಕಿಯನ್ನು ಕಾಡುತ್ತಿದ್ದ ಇನ್ನೊಂದು ದೊಡ್ಡ ದುಷ್ಟ ಶಕ್ತಿಯಿತ್ತು—ಬಡತನ; ಅದರ ಬೆಂಗಾವಲಿಗಿದ್ದುದು ಉಪವಾಸ. ಯೌವನ ಪ್ರಾಪ್ತವಾದಾಗಲೇ ಅನಾರೋಗ್ಯದ ಸರಸ ಆತನಿಗೆ ಲಭಿಸಿತ್ತು. ಕ್ರಮೇಣ ಆ ಅಸ್ವಾಸ್ಥ್ಯ ಕ್ಷಯವಾಗಿ ಮಾರ್ಪಟ್ಟು ದೇಹವನ್ನು ದಹಿಸಿತು. ಚಿಕಿತ್ಸೆಗೆಂದು ಬೆಲಿನ್ಸ್‌ಕಿ ಫ್ರಾನ್ಸ್-ಜರ್ಮನಿಗಳಿಗೆ ಹೋದ. ಪ್ರಯೋಜನವಾಗಲಿಲ್ಲ. ಹಾಗೆ ವಿದೇಶದಲ್ಲಿದ್ದಾಗಲೇ ಆತ "ಗೊಗೋಲ್‌ಗೆ ಕಾಗದವನ್ನು ಬರೆದ." ಅದು ಹಲವಾರು ಪೀಳಿಗೆಗಳಿಗೇ ಆತ ಬಳುವಳಿಯಾಗಿ ಬಿಟ್ಟುಹೋದ ಬರೆವಣಿಗೆ—ಆತನ ಚರಮ ಕೃತಿ.

೧೮೪೮ರ ಮೇ ೨೬ರಂದು ಬೆಲಿನ್ಸ್‌ಕಿ ಗತಿಸಿದ. ಆತನ ಅವಶೇಷಗಳನ್ನು ಸೆಂಟ್ ಪೀಟರ್ಸ್‌ಬರ್ಗಿನಲ್ಲಿ ಸಮಾಧಿ ಮಾಡಿದರು.

ಆತ ಸತ್ತರೂ ಆಳುತ್ತಿದ್ದವರ ತಲೆನೋವು ಕಡಿಮೆಯಾಗಲಿಲ್ಲ. ಆತನ

'ಗೊಗೋಲ್‌ಗೆ ಕಾಗದ'ದ ಪ್ರಕಟಣೆಯನ್ನು ಸರಕಾರ ನಿಷೇಧಿಸಿತು. ಅದನ್ನು ಓದಿದ ಪ್ರತಿಮಾಡಿದ ತಪ್ಪಿಗಾಗಿ ಹಲವರ ಬಂಧನವಾಯಿತು. "ಆತ ಬದುಕಿ ಇದ್ದಿದ್ದರೆ ದುರ್ಗದಲ್ಲಿ ಕೊಳೆಹಾಕುತ್ತಿದ್ದೆವು" ಎಂದು ಗುಪ್ತಪೋಲೀಸರ ಮುಖ್ಯಸ್ಥ ಆಕ್ರೋಶಮಾಡಿದ.

ಬೆಲಿನ್ಸ್‌ಕಿಯ ಹೆಸರನ್ನೇ ಪ್ರಸ್ತಾಪಿಸಬಾರದೆಂದು ರಷ್ಯದ ಪತ್ರಿಕೆಗಳ ಮೇಲೆಲ್ಲ ನಿಷೇಧಾಜ್ಞೆ ಹೊರಿಸಲಾಯಿತು. "ಗೊಗೋಲ್‌ಗೆ ಕಾಗದ"ವಂತೂ ಬೆಲಿನ್ಸ್‌ಕಿ ಸತ್ತು ಐವತ್ತೇಳು ವರ್ಷಗಳ ವರೆಗೆ—೧೯೦೫ರ ವರೆಗೆ—ಪ್ರಕಟ ಗೊಳ್ಳುವುದು ಸಾಧ್ಯವಾಗಲಿಲ್ಲ.

ಹೀಗಿದ್ದರೂ ಬೆಲಿನ್ಸ್‌ಕಿಯ ಕೀರ್ತಿ ರಷ್ಯದ ಆದ್ಯಂತ ಹರಡಿತು. ಆತನ ಕೃತಿಗಳ ಪ್ರಭಾವ ರಷ್ಯದ ಆಚೆಗೆ ಇತರ ದೇಶಗಳಿಗೂ ಹಬ್ಬಿತು. ಬೆಲಿನ್ಸ್‌ಕಿಯ ಸಂಗಡಿಗರು—ಮುಖ್ಯವಾಗಿ ಚೆರ್‌ನಿಷೆವ್‌ಸ್ಕಿ ಮತ್ತು ಡೊಬ್ರುಲ್ಯುಬೋವ್—ಬೆಲಿನ್ಸ್‌ಕಿಯ ಸಾಹಿತ್ಯ ಚಟುವಟಿಕೆಗಳನ್ನು ಮುಂದುವರಿಸಿ ಮುಂದಿನ ಅಧ್ಯಾಯಗಳನ್ನು ಬರೆದರು. ಆತ ಆರಂಭಿಸಿದ ಕ್ರಾಂತಿಕಾರಿ ಜನವಾದಿ ಕಾವ್ಯಮೀಮಾಂಸೆಯ ಮಾರ್ಗ, ಭವ್ಯವಾದೊಂದು ಪರಂಪರೆಯಾಯಿತು. ಆತನ ಜನವಾದಿ ವಾಸ್ತವವಾದವೇ, ಮುಂದೆ ಇಪ್ಪತ್ತನೆಯ ಶತಮಾನದಲ್ಲಿ ಮ್ಯಾಕ್ಸಿಂ ಗಾರ್ಕಿ ಮೊದಲು ಮಾಡಿದ ಸಮಾಜವಾದಿ ವಾಸ್ತವವಾದಕ್ಕೆ ಮಾತೃಕೆಯಾಯಿತು.

ನಿರಂಜನ

ಗ್ರಂಥಋಣ

1. *Selected Philosophical Works*—V. G. BELINSKY.
2. *Selected Philosophical Essays*—N. G. CHERNYSHEVSKY.
3. *Studies in European Realism*—GEORGE LUKACS.

ಬೆಳಕು

ನೆಲದ ಮೈಯ ತಾವೆ ಬಾ
ನೀರ ಮಿಂಚ ಹಾವೆ ಬಾ
ನಸುಕಿನ ಮುಂಜಾವೆ ಬಾ
ಬೆಳಕು ಬೇಕು ಬೆಳಕು.

ಗಾಳಿ ಸೊಕ್ಕಿ ದಿಕ್ಕ ತಿಕ್ಕಿ
ಬಾನ ತುಂಬ ಚುಕ್ಕಿ ಚುಕ್ಕಿ
ಬರಲಿ ಅಲ್ಲಿ ಸೂರ್ಯನುಕ್ಕಿ !
ಬೆಳಕು ಬೇಕು ಬೆಳಕು.

ಮೈಗೆ ಎಂತೊ ಕಂಗಳು
ಇರುಳಿಗಂತು ತಿಂಗಳು
ಸುತ್ತುತಿವೆ ಜಗಂಗಳು
ಬೆಳಕು ಬೇಕು ಬೆಳಕು.

ಅಂಬಿಕಾತನಯದತ್ತ

ವಿಷ್ಣುಶರ್ಮನ ಪಂಚತಂತ್ರ*

(ಸ್ಥೂಲಪರಿಚಯ)

ಸಂಸ್ಕೃತ ಸಾಹಿತ್ಯದಲ್ಲಿ ಪಂಚತಂತ್ರವು ಉಪದೇಶಾತ್ಮಕವಾದ ಗ್ರಂಥ. ಇದರಲ್ಲಿ ಧರ್ಮ ಮತ್ತು ನೀತಿಯನ್ನು ಬೋಧಿಸುವ ಸಣ್ಣ ದೊಡ್ಡ ಕಥೆಗಳು ಸೇರಿಕೊಂಡಿವೆ. ಇದಕ್ಕೆ ನೀತಿಶಾಸ್ತ್ರವೆಂದೂ ಹೆಸರಿದೆ. ಇದನ್ನು ರಚಿಸಿದವನು ವಿಷ್ಣುಶರ್ಮ. ಈತನು ಅರ್ಥಶಾಸ್ತ್ರ ನೀತಿಶಾಸ್ತ್ರಗಳಲ್ಲಿ ಉದ್ದಾಮಪಂಡಿತನು. ದಡ್ಡರಾದ ರಾಜಪುತ್ರರಿಗೆ ನೀತಿಯನ್ನು ಬೋಧಿಸಲಿಕ್ಕಾಗಿ ಪಂಚತಂತ್ರವನ್ನು ರಚಿಸಿದಂತೆಯೂ ಇದನ್ನು ಓದಿದವರು ಅಥವಾ ಓದಿಸಿ ಕೇಳಿದವರು ಇಂದ್ರನಿಂದಲೂ ಪರಾಭವವನ್ನು ಹೊಂದಲಾರದಷ್ಟು ತೇಜಸ್ವಿಗಳೂ ವೀರ್ಯವಂತರೂ ಆಗುವರೆಂದೂ ಕವಿ ವಿಶ್ವಾಸದಿಂದ ಹೇಳಿಕೊಂಡಿದ್ದಾನೆ.

ಹಿಂದೆ ಮಹಿಳಾಪುರವೆಂಬ ನಗರದಲ್ಲಿ ಅಮರಶಕ್ತಿಯೆಂಬ ರಾಜನಿದ್ದನು. ಅವನೇನೋ ಮೇಧಾವಿ, ಶಕ್ತ ಮತ್ತು ಉದಾರಿ. ಆದರೆ ಅವನ ಮಕ್ಕಳು ದುರ್ವಿನೀತರೂ ಅವಿವೇಕಿಗಳೂ ಆಗಿದ್ದರು. ಹೀಗಿರಲು ರಾಜನು ಆಸ್ಥಾನ ವಿದ್ವಾಂಸರಲ್ಲಿ ಮಕ್ಕಳ ಮುಂದಿನ ಜೀವನದ ಬಗ್ಗೆ ಆಲೋಚನೆ ಮಾಡುವನು. ಜ್ಞಾನಶೂನ್ಯರಿಗೆ ನೀತಿಶಾಸ್ತ್ರವನ್ನು ಬೋಧಿಸಿ ಯೋಗ್ಯರನ್ನಾಗಿ ಮಾಡಲು ಯಾರಿಗೂ ಒಪ್ಪಿಗೆಯಾಗಲಿಲ್ಲ. ಶಾಸ್ತ್ರಗಳಿಂದ ನೀತಿಬೋಧೆಯಾಗಲು ಬಹಳ ಕಾಲ ಹಿಡಿದೀತು. ಅನಂತವೂ ಅಪಾರವೂ ಆದ ಶಾಸ್ತ್ರಗಳ ಸಾರವನ್ನು ದಡ್ಡರಿಗೆ ತಿಳಿಸಲು ವಿಷ್ಣುಶರ್ಮನೊಬ್ಬನಿಂದ ಸಾಧ್ಯವಾದೀತೆಂದು ಎಲ್ಲರೂ ಅಭಿಪ್ರಾಯಪಡುವರು. ಆಗ ರಾಜನು ವಿಷ್ಣುಶರ್ಮನನ್ನು ಕರೆಸಿ ರಾಜಪುತ್ರರನ್ನು ಬುದ್ಧಿವಂತರನ್ನಾಗಿ ಮಾಡುವ ಗುರುತರವಾದ ಕಾರ್ಯವನ್ನು ಅವನಿಗೆ ವಹಿಸುವನು. ವಯಸ್ಸಿನಲ್ಲೂ ಅನುಭವದಲ್ಲೂ ಹಿರಿಯನಾದ ವಿಷ್ಣುಶರ್ಮನು ಪ್ರತಿಫಲಾಪೇಕ್ಷೆಯಿಲ್ಲದೆಯೇ ಈ ಕಾರ್ಯವನ್ನು ನಿರ್ವಹಿಸಲು ಸಮ್ಮತಿಸುವನು. ಕೇವಲ ಆರೇ ತಿಂಗಳಲ್ಲಿ ರಾಜಪುತ್ರರನ್ನು ಬುದ್ಧಿಶಾಲಿಗಳನ್ನಾಗಿ ಮಾಡುವುದಾಗಿ ಅವನು ಪ್ರತಿಜ್ಞೆ ಮಾಡುವನು. ಇದನ್ನು ಕೇಳಿದ ಸಭಿಕರೆಲ್ಲರಿಗೂ ಆಶ್ಚರ್ಯವೂ ಅವಿಶ್ವಾಸವೂ ಉಂಟಾಗುವುವು. ವಿಷ್ಣುಶರ್ಮನು ತನ್ನ

---

* ತಾ. ೧೯-೪-೫೫ ರಂದು ಆಲ್-ಇಂಡಿಯಾ ರೇಡಿಯೋ, ಮೈಸೂರು ಕೇಂದ್ರದಿಂದ ಪ್ರಸಾರ ಮಾಡಿದ ಭಾಷಣ.

ಪ್ರತಿಜ್ಞೆಗೆ ಭಂಗ ಬರುವುದಾದರೆ ಶ್ರೇಯಸ್ಸಿನ ಆಶೆಯನ್ನೇ ತೊರೆಯುವುದಾಗಿ ತಿಳಿಸಿ ಕಾರ್ಯವನ್ನು ಆರಂಭಿಸುವನು.

ಆತನು ರಾಜಕುಮಾರರ ಮನಃಸ್ಥಿತಿಯನ್ನು ತಿಳಿದು, ಶಾಸ್ತ್ರಗಳ ಗಹನವಾದ ತತ್ತ್ವಗಳನ್ನು ಬೋಧಿಸದೇ, ಕಥೆಗಳ ಮೂಲಕ ನೀತಿಯನ್ನು ಬೋಧಿಸತೊಡಗಿದನು. ಆ ಕಥೆಗಳನ್ನು ಕೇಳಿ ರಾಜಪುತ್ರರಿಗೆ ಆಶ್ಚರ್ಯವೂ ಉತ್ಸಾಹವೂ, ಆಕರ್ಷಣೆಯೂ ಉಂಟಾಗಿ ನೀತಿಬೋಧೆಯು ಅವರ ಮನಸ್ಸಿನ ಮೇಲೆ ಸತ್ಪರಿಣಾಮವನ್ನುಂಟು ಮಾಡಿತು. ಮಿತ್ರಭೇದ, ಮಿತ್ರಪ್ರಾಪ್ತಿ, ಕಾಕೋಲೂಕೀಯ, ಲಬ್ಧಪ್ರಣಾಶ, ಅಪರೀಕ್ಷಿತಕಾರಿತ್ವ ಎಂಬ ಐದು ತಂತ್ರಗಳಲ್ಲಿ ವಿಷ್ಣುಶರ್ಮನು ಬೋಧಿಸಿದ ನೀತಿ ಶಾಸ್ತ್ರಕ್ಕೆ ಪಂಚತಂತ್ರವೆಂದು ಹೆಸರಾಯಿತು. ಈ ಕಥೆಗಳನ್ನು ಕೇಳಿ ರಾಜಪುತ್ರರು ನೀತಿವಂತರೂ ವಿವೇಕಿಗಳೂ ಆದರು.

ಕವಿಯು ಈ ಕಥೆಗಳಲ್ಲಿ ಮನುಷ್ಯರಿಗೆ ಬದಲಾಗಿ ಮೂಕಪ್ರಾಣಿಗಳನ್ನು ಪ್ರಧಾನ ಪಾತ್ರಗಳನ್ನಾಗಿ ಮಾಡಿ ತನ್ಮೂಲಕವೇ ಸಕಲಕಾರ್ಯಗಳನ್ನೂ ಮಾಡಿಸಿರುವನು. ಪ್ರಾಣಿಗಳೂ ಸಹಜವಾಗಿ ದೈವದತ್ತವಾದ ಬುದ್ಧಿಶಕ್ತಿಯನ್ನು ತಮ್ಮ ಸುಖಸಾಧನೆಗೆ ಹೇಗೆ ಉಪಯೋಗಿಸಿಕೊಳ್ಳಬಲ್ಲವೆಂಬುದನ್ನು ಈ ಕಥೆಗಳು ಚೆನ್ನಾಗಿ ತಿಳಿಸುತ್ತವೆ. ಮಾನವರಂತೆ ಪ್ರಾಣಿಗಳೂ ವ್ಯವಹರಿಸಿ ಧರ್ಮಾಧರ್ಮಗಳ ಸೂಕ್ಷ್ಮವನ್ನು ಪರ್ಯಾಲೋಚಿಸಿ, ಧರ್ಮದಿಂದ ಸುಖವನ್ನು ಪಡೆಯುವ ಸಮಾಲೋಚನೆಯನ್ನು ನಡೆಸುತ್ತವೆ. ಅಧರ್ಮದಲ್ಲಿ ಪ್ರವರ್ತಿಸುವ ಜೀವಿಯನ್ನು ವ್ಯವಸ್ಥಿತಮಾರ್ಗದಲ್ಲಿ ವಿವೇಕದಿಂದ ನಡೆಯುವಂತೆ ಎಚ್ಚರಿಸುವುದೇ ಈ ಕಥೆಗಳ ಗುರಿ. ನಿರಾಶೆಗೊಳ್ಳದೆ, ದುರಾಶೆಗೆ ಬಲಿಯಾಗದೆ, ಯಾರಲ್ಲೂ ಸಂಶಯಪಡದೆ ಯಾರನ್ನೂ ವಿಶೇಷವಾಗಿ ನಂಬದೆ, ಮಹಾಜನರಲ್ಲಿ ವಿರೋಧಮಾಡಿಕೊಳ್ಳದೆ, ಉಪಾಯ ಅಪಾಯಗಳ ಪರಿಜ್ಞಾನದಿಂದ ಬುದ್ಧಿಶಕ್ತಿಯನ್ನು ಹೆಚ್ಚಿಸಿಕೊಂಡು, ಮನಸ್ಸನ್ನು ಪಳಗಿಸಿಕೊಂಡು ಸ್ವಾವಲಂಬಿಯಾಗಿ ಬಾಳುವುದೇ ಉತ್ತಮ ಜೀವನ. ಇಂತಹ ಆದರ್ಶಜೀವನದ ಪರಿಚಯ ಮಾಡಿಕೊಡುವುದೇ ಪಂಚತಂತ್ರದ ಕಥೆಗಳ ಗುರಿ.

"ನ ವಿಶ್ವಸೇದವಿಶ್ವಸ್ತೇ
ವಿಶ್ವಸ್ತೇ ನಾತಿ ವಿಶ್ವಸೇತ್"

ಎಂಬ ಪಂಚತಂತ್ರದ ನೀತಿ ಯಾರಿಗೆ ಸೊಗಸದೇ ಬಿಟ್ಟೀತು? ಇದು ಎಲ್ಲ ಜೀವಿಗಳಿಗೂ ಸಮನ್ವಯವಾಗುವ ಮತ್ತು ಎಲ್ಲರನ್ನೂ ಸಮಾಧಾನಪಡಿಸುವ ಸಾಮಾನ್ಯ ನೀತಿ. ಮಿತ್ರರನ್ನು ಅತಿಯಾಗಿ ನಂಬಿ ರಹಸ್ಯವನ್ನು ಹೊರಗೆಡಹದೆ, ಅನಾಪ್ತರಲ್ಲಿ ವಿರೋಧ

ವನ್ನು ಬೆಳಸದೆ, ವಿವೇಕ ಸಂಯಮಗಳಿಂದ ಬಾಳುವವನೇ ಸುಖಿಯಾಗುವನು. ಇದನ್ನು ಪಂಚತಂತ್ರವು ನಮಗೆ ಮನಮುಟ್ಟುವಂತೆ ತಿಳಿಸುವುದು.

ಜೀವನವು ಸುಂದರವೂ, ಸುಸಂಸ್ಕೃತವೂ, ಪಕ್ವವೂ ಆಗುವಂತೆ ಮಾಡುವುದೇ ವಿದ್ಯೆಯ ಅಂತಿಮಧ್ಯೇಯ. ಇದೇ ಪರಿಪೂರ್ಣತೆಯ ಚಿಹ್ನೆ, ವಿಕಾಸದ ಹೆಗ್ಗುರುತು. ಇಂತಹ ಸ್ಥಿತಿಯನ್ನು ಹೊಂದಲು ಮನಸ್ಸಿನ ಆಶಿರೋಷಗಳೂ, ಲೋಭಾವೇಶಗಳೂ, ಮೋಹಾಭಿಮಾನಗಳೂ, ರಾಗದ್ವೇಷಗಳೂ, ತೊಲಗಬೇಕು. ಮನಸ್ಸು ಯಾವ ಕಾರಣದಿಂದಲೂ ಕೆಡದಂತೆ, ದುರಾಲೋಚನೆಗೆ ಬಲಿಬೀಳದಂತೆ ಮಾನವನು ಎಚ್ಚರ ದಿಂದ ಅದನ್ನು ಆಗಾಗ್ಯೆ ಪರೀಕ್ಷೆಮಾಡಿಕೊಳ್ಳುತ್ತಿರಬೇಕು. ಪಂಚತಂತ್ರದ ಕಥೆ ಗಳಾದರೋ ಯೋಗಶಾಸ್ತ್ರದ ಗಹನಮಾರ್ಗವನ್ನು ತೊರೆದು, ಸುಲಲಿತವಾಗಿಯೇ ನಮ್ಮ ಮನಸ್ಸನ್ನು ಪಳಗಿಸಿ, ನಮ್ಮನ್ನು ನೀತಿವಂತರನ್ನಾಗಿ ಮಾಡಲು ಸಮರ್ಥ ವಿರುತ್ತವೆ.

ಪ್ರಥಮತಂತ್ರದ ನರಿಗಳ ಕಥೆಯೊಂದನ್ನು ಪರಿಶೀಲಿಸಿದರೆ ಪಂಚತಂತ್ರದ ನೀತಿ ಬೋಧೆಯ ವೈಶಿಷ್ಟ್ಯವು ನಮಗೆ ಮನವರಿಕೆಯಾಗುವುದು. ಸಿಂಹವೃಷಭಗಳಿಗೆ ಮೈತ್ರಿಯನ್ನು ಪರಿಕಲ್ಪಿಸಿ ನರಿಯ ಕೈಚಳಕದಿಂದ ಆ ಮೈತ್ರಿಯನ್ನು ಭೇದಿಸುವುದೇ ಈ ತಂತ್ರದ ಸಾರ. ಮೊದಲಾಗಿ ಸಿಂಹವೃಷಭಗಳಿಗೆ ಸ್ನೇಹ-ಸಂಬಂಧವು ಬೆಳೆಯು ವುದೇ ದುರ್ಲಭ. ಅಸಾಧ್ಯವಾದ ಕಾರ್ಯವೂ ದೈವಯೋಗದಿಂದ ಸಂಘಟಿಸುವುದು. ಈ ಕಾರ್ಯವನ್ನು ಕವಿಯು ನರಿಯ ಕೈಚಳಕದಿಂದ ಅನಾಯಾಸವಾಗಿ ಸಾಧಿಸುತ್ತಾನೆ.

"ಮಾರಾಟದ ಸಾಮಾನುಗಳನ್ನು ಹೊತ್ತು ಬಳಲಿ ಅರಣ್ಯದಲ್ಲಿ ಕೆಸರಿನಲ್ಲಿ ಸಿಕ್ಕಿಕೊಂಡುದರಿಂದ ತ್ಯಜಿಸಲ್ಪಟ್ಟ ವೃಷಭವು ದೈವಬಲದಿಂದ ಹೊರಗೆ ಬಂದು ಹಸುರಾದ ಹುಲ್ಲನ್ನು ತಿಂದು ಬೆಳೆಯುತ್ತಿರುವುದು.

"ಜೀವತ್ಯನಾಥೋಽಪಿ ವನೇ ವಿಸರ್ಜಿತಃ"

"ಅರಕ್ಷಿತಂ ತಿಷ್ಠತಿ ದೈವರಕ್ಷಿತಂ
ಸುರಕ್ಷಿತಂ ದೈವಹತಂ ವಿನಶ್ಯತಿ"

ಎಂದಂತೆ ದೈವಮಹಿಮೆ ಎಷ್ಟು ಹೇಳಿದರೂ ತೀರದು. ದೈವರಕ್ಷಿತವಾದ ವೃಷಭವು ಸಂತೋಷದಿಂದ ಗುಟಿರುಹಾಕಲಾರಂಭಿಸಿತು. ಈ ಹೊಸ ಧ್ವನಿಯನ್ನು ದೂರದಿಂದ ಕೇಳಿದ ಮೃಗರಾಜನಾದ ಸಿಂಹಕ್ಕೆ ಭಯವಾಯಿತು. ತನಗಿಂತಲೂ ಬಲಿಷ್ಠವಾದ ವಿಜಾತೀಯ ಪ್ರಾಣಿಯೊಂದು ಕಾಡಿನಲ್ಲಿ ಬಂದು ಸೇರಿಕೊಂಡಿರುವುದು ಸಿಂಹದ ಭಯವನ್ನು ಹೆಚ್ಚಿಸಿತು. ಸಿಂಹದ ಶಕ್ತಿಯು ಅನ್ಯಾದೃಶವೂ ಸಹಜವೂ ಆದುದು.

ಅದು ಅಸ್ವಮೃಗಗಳ ಗರ್ಜನೆಯನ್ನು ಹೇಗೆ ಸಹಿಸೀತು? ಇಂತಹ ಸಮಯವನ್ನು ಕಾದುಕೊಂಡಿದ್ದ ನರಿ ತನ್ನ ಕೈವಾಡವನ್ನು ತೋರಿಸಲು ಮುಂದೆ ನುಗ್ಗುವುದು. ಬರೀ ಶಬ್ದವನ್ನು ಕೇಳಿ ಇಷ್ಟು ಭಯಪಡುವುದು ಉಚಿತವಲ್ಲವೆಂದು ವಾದಿಸುವುದು. ಸಿಂಹದ ಇಚ್ಛೆಯಂತೆ ವೃಷಭದ ಬಳಿಸಾರಿ ಚಾತುರ್ಯದಿಂದ ವ್ಯವಹರಿಸಿ ಮೈತ್ರಿಯನ್ನು ಏರ್ಪಡಿಸುವುದು. ನರಿಯ ಸಂಧಾನ ಕೌಶಲವು ಈ ಸನ್ನಿವೇಶದಲ್ಲಿ ಮನೋಹರವಾಗಿ ಚಿತ್ರಿತವಾಗಿದೆ. ವೃಷಭದೊಡನೆ ಒಂದು ಬಗೆಯ ಮಾತನಾಡಿ ಅದನ್ನೇ ಸಿಂಹದೊಡನೆ ಬೇರೆ ವಿಧದಲ್ಲಿ ತಿಳಿಸಿ ಸಿಂಹ ವೃಷಭಗಳಿಗೆ ಪರಸ್ಪರ ಭಯ ಮತ್ತು ವಿಶ್ವಾಸಗಳನ್ನು ಏಕಕಾಲದಲ್ಲಿ ಹುಟ್ಟಿಸುವುದು ನರಿಯ ವೈಶಿಷ್ಟ್ಯ. ವೃಷಭವನ್ನು ಮಹೇಶ್ವರನು ಯಮುನಾತೀರದಲ್ಲಿ ವಿಹರಿಸಲು ಕಳುಹಿಸಿರುವಂತೆ ಸಿಂಹಕ್ಕೆ ತಿಳಿಸುವುದು. ಅಲ್ಲಿ ಸಿಂಹದ ಅಸದೃಶ ಪರಾಕ್ರಮವನ್ನು ಹೊಗಳಿ ವೃಷಭಕ್ಕೆ ಸಿಂಹದ ವಿಚಾರದಲ್ಲಿ ಭಯವನ್ನೂ ಹುಟ್ಟಿಸುವುದು. ಸಿಂಹವೃಷಭಗಳ ಮೈತ್ರಿ ವಿಶೇಷವಾಗಿ ಬೆಳೆದು, ಸಿಂಹವು ಸಾತ್ವಿಕಭಾವದಿಂದ ಪ್ರಾಣಿವಧೆಯನ್ನೂ ನಿಲ್ಲಿಸಿ ಶಾಂತತೆಯಿಂದ ಬಾಳಲಾರಂಭಿಸಿತು. ಇದರಿಂದ ನರಿಗೆ ಆಹಾರ ಸಿಕ್ಕುವುದೇ ಕಷ್ಟವಾಯಿತು. ಇನ್ನು ಮಿತ್ರಭೇದಕ್ಕಾರಂಭವಾಯಿತು. ಶಕ್ತಿಯಿಂದಾಗದ ಕಾರ್ಯವನ್ನು ಯುಕ್ತಿಯಿಂದ ಸಾಧಿಸುವುದೇ ಜಾಣತನ. ಸಿಂಹವೃಷಭಗಳಿಗೆ ದ್ವೇಷ-ಮಾತ್ಸರ್ಯಗಳನ್ನು ಹುಟ್ಟಿಸಿ ಬೆಳೆಸಲು ನರಿ ಪ್ರಯತ್ನಪಡುತ್ತದೆ. ವೃಷಭವನ್ನು ದ್ರೋಹಿ ಎಂದೂ, ಕೃತಘ್ನನೆಂದೂ ಸಿಂಹದ ಎದುರಿಗೆ ನರಿ ಸಾಧಿಸತೊಡಗಿತು. ಸಸ್ಯಾಹಾರಿಗಳಿಗೂ ಮಾಂಸಾಹಾರಿಗಳಿಗೂ ವೈರ ಸಹಜವೆಂದು ನರಿ ಸಮರ್ಥನೆ ಮಾಡಿತು. ನರಿಯ ದುಷ್ಪ್ರೇರಣೆಗೆ ಸಿಂಹ ಬಲಿಯಾಗುವುದು. ಸಿಂಹವು ದುರಾಶೆಯಿಂದ ವೃಷಭವನ್ನು ನುಂಗಿಹಾಕಲು ಹೊಂಚುಹಾಕುತ್ತಿರುವುದೆಂದೂ, ತಾನು ಎಷ್ಟು ಸಮಾಧಾನಮಾಡಿದರೂ ಸಿಂಹದ ಕೋಪವು ಶಮನವಾಗಲಾರದೆಂದೂ ಹೇಳಿ ವೃಷಭವನ್ನು ಸಿಂಹದ ಮೇಲೆ ಬೀಳುವಂತೆ ಹುರಿದುಂಬಿಸುವುದು. ಹೀಗೆ ಸಿಂಹವೃಷಭಗಳಿಗೆ ಈರ್ಷ್ಯಾಸೂಯೆಗಳು ಬೆಳೆದು ವಿವೇಕವು ನಾಶವಾಗಿ ಸಿಂಹದಿಂದ ವೃಷಭದ ವಧೆಯು ಸಂಭವಿಸುವುದು. ಅದೇ ನರಿ ಕೊನೆಗೆ ಮಿತ್ರದ್ರೋಹದ ಚಿಂತೆಗೆ ಒಳಗಾಗಿದ್ದ ಸಿಂಹಕ್ಕೆ ಧರ್ಮೋಪದೇಶವನ್ನೂ ಮಾಡುವುದು."

ಪ್ರಪಂಚವ್ಯವಹಾರಗಳಲ್ಲಿ ಮಗ್ನರಾದ ಜನರು ಈ ಪ್ರಕರಣವನ್ನು ಓದುವುದರಿಂದ ಹೆಚ್ಚು ಅನುಭವವನ್ನು ಪಡೆಯಬಹುದು. ಹಿಡಿದ ಕಾರ್ಯವನ್ನು ಸಾಧಿಸಲು ಯಾವ ಮಟ್ಟದ ಬುದ್ಧಿಚಾತುರ್ಯ, ಸಂಯಮನಶಕ್ತಿ, ಸಹನಶಕ್ತಿ ಮತ್ತು ಆತ್ಮವಿಶ್ವಾಸಗಳು ಆವಶ್ಯಕವೆಂಬುದು ಈ ಕಥೆಯಿಂದ ನಮಗೆ ವಿದಿತವಾಗುವುದು.

ಹೇಳಿಕೆಯ ಮಾತಿನಿಂದ ಎಂತಹ ಅನರ್ಥ ಸಂಭವಿಸುವುದೆಂಬುದಕ್ಕೆ ನರಿಯ ಕೈಚಳಕ ನಮಗೆ ನಿದರ್ಶನವಾಗಿದೆ. ನರಿಯ ಸಂಘಟನಾಕೌಶಲದಿಂದ ಪಂಚತಂತ್ರವು ಜಗತ್ತಿನ ಇತಿಹಾಸದಲ್ಲೇ ವಿಶ್ರುತವಾಗಿದೆ. ಲೋಕದಲ್ಲಿ ಇಂತಹ ಚಮತ್ಕಾರವನ್ನರಿಯದ ಜನರು ಅವಿವೇಕದಿಂದ ಕರ್ಮದ ಮರ್ಮವನ್ನರಿಯದೆ, ಸ್ವಾರ್ಥಿಗಳ ವಾಗ್ಜಾಲಕ್ಕೆ ಸಿಲುಕಿ, ಜುಗುಪ್ಸೆಯಿಂದ ಮುಂದುಗಾಣದೆ ಹತಾಶರಾಗುವರು. ಸಾಮದಾನ ಭೇದಗಳನ್ನು ಯಥೋಚಿತವಾಗಿ ಉಪಯೋಗಿಸಿ, ಹಿಡಿದ ಕಾರ್ಯವನ್ನು ಕೊನೆ ಗಾಣಿಸಿ, ಫಲವನ್ನು ಪಡೆದು ಸುಖವಾಗಿ ಬಾಳುವುದು ಲೌಕಿಕವನ್ನರಿತ ಜಾಣನಿಗೆ ಮಾತ್ರ ಸಾಧ್ಯವೆಂಬ ಅಂಶ ನರಿಯ ಕಥೆಯಿಂದಲೇ ನಮಗೆ ಹೃದಯಂಗಮ ವಾಗುವುದು.

ಹೀಗೆಯೇ ಕವಿಯು ಪ್ರತಿ ತಂತ್ರದಲ್ಲಿಯೂ ಮಾನವಜೀವನದ ವಿಕಾಸಕ್ಕೆ ಆವಶ್ಯಕವಾದ ಆದರ್ಶ ಉಪದೇಶವನ್ನು ಯಥೋಚಿತವಾಗಿ ಸೇರಿಸಿರುವನು. ಮಾನವನು ಈ ಲೋಕದಲ್ಲಿ ಸುಖ-ಶಾಂತಿಗಳ ಬೃಂದಾವನದಲ್ಲಿ ವಿಹರಿಸುತ್ತ ಉತ್ತಮ ಜೀವನವನ್ನು ನಡೆಸಲು ಬೇಕಾದ ದಿವ್ಯ ಉಪದೇಶವನ್ನು ಸಣ್ಣ ಕಥೆ ಗಳಲ್ಲಿಯೇ ಕವಿಯು ಕ್ರೋಢೀಕರಿಸಿರುವನು. ಅದಾದರೂ ಹಿತಮಿತ ವಚನಗಳಿಂದಲೇ ಹೊರಹೊಮ್ಮಿ ನಮ್ಮ ಕಣ್ಮನಗಳನ್ನು ಸೂರೆಗೊಳ್ಳುವುದು. ಪಂಚತಂತ್ರದ ಕಥೆಗಳು ಹುಡುಗರಿಗೂ, ದೊಡ್ಡವರಿಗೂ, ಹೆಂಗಸರಿಗೂ, ರೋಗಿಗಳಿಗೂ, ಸಂಶಯಗ್ರಸ್ತರಿಗೂ, ಕೋಪಿಷ್ಠರಿಗೂ, ಕಪಟಿಗಳಿಗೂ ಅವರವರ ಲೋಪದೋಷಗಳನ್ನು ನಿವಾರಿಸುವುದರ ಮೂಲಕ ಉತ್ತಮ ಶಿಕ್ಷಣವನ್ನು ದೊರಕಿಸುತ್ತವೆ. ಯುಕ್ತಿಯುಕ್ತವಾದ ಲೋಕಾನು ಭವವನ್ನು ಚಮತ್ಕಾರವಾಗಿ ಉದಾಹರಿಸಿ ಅದರಂತೆ ನಡೆಯಲೂ ನಮ್ಮನ್ನು ಪ್ರೇರಿಸುತ್ತವೆ. ಮಾನವನಿಗೆ ಪ್ರಪಂಚಾನುಭವವನ್ನೂ ಪ್ರಕೃತಿಯ ಪರಿಚಯವನ್ನೂ ದೊರಕಿಸಲು ಪಂಚತಂತ್ರವು ಎಷ್ಟು ಉಪಕಾರಿಯಾಗಿರುವುದೆಂಬುದಕ್ಕೆ ಅಲ್ಲಿನ ಕೆಲವು ಸದುಕ್ತಿಗಳನ್ನು ಇಲ್ಲಿ ವಿವರಿಸಲಾಗುವುದು.

ಲೋಕದಲ್ಲಿ ಎಂತಹ ಜೀವನವನ್ನು ಉದಾತ್ತವಾದುದೆಂದು ಭಾವಿಸಬಹುದು? ಇದಕ್ಕೆ ಪಂಚತಂತ್ರದ ಉತ್ತರವು ಸುಂದರವೂ ಅಭಿನಂದನೀಯವೂ ಆಗಿದೆ. ಯಾರ

"ಯಸ್ಮಿನ್ ಜೀವತಿ ಜೀವಂತಿ ಬಹವಃ ಸೋsತ್ರಜೀವತಿ"

ಬದುಕು ಇತರರನ್ನೂ ಬದುಕಿಸಬಲ್ಲುದೋ, ಅಂತಹವರ ಬದುಕೇ ನಿಜವಾದ ಬದುಕು. ಇಲಿಯಾಗಿ ಸಹಸ್ರವರ್ಷ ಬದುಕುವುದಕ್ಕಿಂತ ಹುಲಿಯಾಗಿ ಮೂರೇ ದಿವಸ ಬದುಕುವುದು ಉಚಿತ. ಯಾರು ಇತರರ ಹಿತಕ್ಕಾಗಿ ಬಾಳುವರೋ ಅವರೇ ಧನ್ಯರು. ಯಾರು ಆತ್ಮೀಯ ಭಾವನೆಯಿಂದ ಇತರರನ್ನೂ ಪ್ರೀತಿಸಿ ಗೌರವಿಸುವರೋ

ಅವರೇ ಜೀವನದಲ್ಲಿ ಸುಖಸಂತೋಷಗಳನ್ನು ಅನುಭವಿಸಬಲ್ಲರು. ಸಚ್ಚಾರಿತನೂ ವೀರ್ಯವಂತನೂ ಆಗಿ ಒಂದು ನಿಮಿಷಬಾಳುವುದೇ ಆದರ್ಶಜೀವನವೆಂದು ಪಂಚ ತಂತ್ರವು ಒತ್ತಿ ಹೇಳುತ್ತದೆ.

"ಕಿಂತೇನ ಜಾತು ಜಾತೇನ ಮಾತುರ್ಯೌವ್ವನಹಾರಿಣಾ"

ಸೌಜನ್ಯಸದ್ವರ್ತನೆಗಳಿಲ್ಲದವನು ತನ್ನ ಜನನದಿಂದ ತಾಯಿಯ ಯೌವ್ವನವನ್ನು ಹಾಳು ಮಾಡಿದಂತೆಯೇ ಸರಿ. ಲೋಕದಲ್ಲಿ ಯಾವನು ದೇಹಶಕ್ತಿ, ಬುದ್ಧಿಸಾಮರ್ಥ್ಯ ಗಳಿಂದ ದುಡಿದು ಇತರರಿಗೆ ಉಪಕಾರಿಯಾಗಿ ಜೀವಿಸುವನೋ ಅವನೇ ಉತ್ತಮ ಜೀವಿ. ಅವನೇ ಇಹದಲ್ಲಿ ಸುಖವನ್ನೂ ಪರದಲ್ಲಿ ಶ್ರೇಯಸ್ಸನ್ನೂ ಹೊಂದಬಲ್ಲನು.

ಮಾನವನಲ್ಲಿ ಕರ್ತವ್ಯನಿಷ್ಠೆ, ಕಾರ್ಯತತ್ಪರತೆ, ಸಾವಧಾನತೆ, ಅಪ್ರಮತ್ತತೆ, ಕೃತಿಗೌರವ ಇಂತಹ ಸದ್ಗುಣಗಳ ಅವಶ್ಯಕತೆಯನ್ನೂ ಪಂಚತಂತ್ರವು ಕಥೆಗಳ ಮೂಲಕ ಮೇಲಿಂದ ಮೇಲೆ ಒತ್ತಿ ಹೇಳುವುದು.

"ಆಲಸ್ಯಂ ಹಿ ಮನುಷ್ಯಾಣಾಂ ಶರೀರಸ್ಥೋ ಮಹಾನ್ರಿಪುಃ |
ನಾಸ್ತ್ಯುದ್ಯಮಸಮೋ ಬಂಧುಃ ಕುರ್ವಾಣೋ ನೈವ ದುಸ್ಯತಿ ||"

"ನಹಿ ಸುಪ್ತಸ್ಯ ಸಿಂಹಸ್ಯ ಪ್ರವಿಶಂತಿ ಮುಖೇ ಮೃಗಾಃ |"

"ಉದ್ಯೋಗಿನಂ ಪುರಷಸಿಂಹಮುಪೈತಿ ಲಕ್ಷ್ಮೀಃ |"

ಇತ್ಯಾದಿಗಳಿಂದ ಮಾನವನಲ್ಲಿ ಒಳಗೂ ಹೊರಗೂ ವ್ಯಾಪಿಸಿರುವ ತಮೋಮಯ ವಾದ ಆಲಸ್ಯವೆಂಬ ಶತ್ರುವನ್ನು ನಿರ್ಮೂಲಮಾಡಿ ಉದ್ಯಮವೆಂಬ ಆಪ್ತಮಿತ್ರನ ಸಮಾಗಮವನ್ನು ಮಾನವನಿಗೆ ಮಾಡಿಸಿಕೊಟ್ಟು ಅವನ ಸಕಲ ಆಧಿವ್ಯಾಧಿಗಳನ್ನೂ ನಿವಾರಿಸಲು ಪಂಚತಂತ್ರದ ಅಧ್ಯಯನವು ಜನತೆಗೆ ಎಷ್ಟು ಆವಶ್ಯಕವೆಂಬುದು ಎಲ್ಲರೂ ತಿಳಿಯಬೇಕಾದ ವಿಷಯವಾಗಿದೆ.

"ಸಮುತ್ಪನ್ನೇಷು ಕಾರ್ಯೇಷು ಬುದ್ಧಿರ್ಯಸ್ಯ ನ ಹೀಯತೇ |
ಸ ಏವ ದುರ್ಗಂ ತರತಿ"

ಸಂದಿಗ್ಧ ಸಮಯಗಳಲ್ಲಿ ಯಾವನ ಬುದ್ಧಿಯು ಕುಂಠಿತವಾಗುವುದಿಲ್ಲವೋ ಅವನೇ ಸಂಸಾರದ ದುಃಖಕ್ಲೇಶಗಳಿಂದ ಪಾರಾಗಬಲ್ಲನು. ಅವನೇ ಧೀರ, ಜಿತೇಂದ್ರಿಯ, ಯೋಗವಿತ್ತಮ.

"ಕುದೃಷ್ಟಂ, ಕುಪರಿಜ್ಞಾತಂ ಕುಶ್ರುತಂ ಕುಪರೀಕ್ಷಿತಂ |
ತನ್ನರೇಣ ನ ಕರ್ತವ್ಯಂ"

ಚೆನ್ನಾಗಿ ಪರ್ಯಾಲೋಚಿಸದೆ, ಋಜುದೃಷ್ಟಿಯಿಂದ ನೋಡದೆ, ಸಾವಧಾನವಾಗಿ ಕೇಳದೆ, ವಿಚಾರಿಸಿ ತಿಳಿಯದೆ ಆರಂಭಿಸಿದ ಕಾರ್ಯವೆಲ್ಲವೂ ವ್ಯರ್ಥವೂ ಅನರ್ಥ ಕರವೂ ಆಗುವುದು. ಆದ್ದರಿಂದ ಮಾನವನು ವಿಮರ್ಶೆಮಾಡಿ ಕೆಲಸವನ್ನು ಆರಂಭಿಸಬೇಕು. ಅವಿಮೃಶ್ಯಕಾರಿಗೆ ಹೆಜ್ಜೆಹೆಜ್ಜೆಗೂ ವಿಪತ್ತುಗಳೂ ಸಂಶಯಗಳೂ ಒದಗುತ್ತವೆ.

ಹೀಗೆ ಮಾನವನ ಮನಸ್ಸನ್ನು ಪರಿಶುದ್ಧಗೊಳಿಸಿ ವಿವೇಕಯುತ ವಿಚಾರ ಯಂತ್ರಕ್ಕೆ ಸಿಲುಕಿಸಿ ಸುವ್ಯವಸ್ಥಿತವಾಗಿ ವ್ಯವಹರಿಸುವಂತೆ ಮಾಡಲು ಪಂಚತಂತ್ರವು ಬಹಳ ಸಹಕಾರಿಯಾಗಿರುವುದು.

ವಿಷ್ಣುಶರ್ಮನ ಅಭಿಪ್ರಾಯದಲ್ಲಿ ಮಾನವನು ಧರ್ಮದಿಂದ ಹಣವನ್ನು ಗಳಿಸ ಬೇಕು. ಗಳಿಸಿದ ಹಣವನ್ನು ಹೆಚ್ಚಿಸಬೇಕು. ಹೆಚ್ಚಿಸಿದ್ದನ್ನು ಸತ್ಪಾತ್ರರಿಗೆ ದಾನ ಮಾಡಬೇಕು. ಇದು ಇಡೀ ಮಾನವವರ್ಗಕ್ಕೆ ಅನ್ವಯಿಸುವ ಸಾಮಾನ್ಯನೀತಿ. ಹಣ ವಿಲ್ಲದವನ ಬಾಳು ಬಾಳಲ್ಲ. ಮಾನವನು ಶೂರನೂ, ಸುರೂಪಿಯೂ, ಸೌಭಾಗ್ಯ ವಂತನೂ, ವಾಚಾಳಿಯೂ, ಶಸ್ತ್ರಜ್ಞನೂ, ಶಾಸ್ತ್ರಜ್ಞನೂ ಆಗಿದ್ದರೂ ಧನಹೀನನಾದರೆ ಸಮಾಜದಲ್ಲಿ ಅವನಿಗೆ ಗೌರವ ದೊರಕದು. ಯಾರ ಮನೆಯಲ್ಲಿ ಸ್ತ್ರೀ ಪ್ರಾಬಲ್ಯವೂ, ಧೂರ್ತರ ಸಮಾಗಮವೂ ಬಾಲಕರ ಯಾಜಮಾನ್ಯವೂ ಇರುವುವೋ ಅಂತಹ ಮನೆ ಹೇಳಹೆಸರಿಲ್ಲದಂತಾಗುವುದು. ಇದು ಎಲ್ಲರಿಗೂ ತಿಳಿದಿರುವ ವಸ್ತುಸ್ಥಿತಿ.

"ಅಪೂಜ್ಯಾ ಯತ್ರ ಪೂಜ್ಯಂತೇ ಪೂಜ್ಯಾನಾಂ ತು ವಿಮಾನನಾ |
ತ್ರೀಣಿ ತತ್ರ ಪ್ರವರ್ತಂತೇ ದುರ್ಭಿಕ್ಷಂ ಮರಣಂ ಭಯಂ || "

ಎಲ್ಲಿ ಧೂರ್ತರಿಗೆ ಗೌರವವೂ, ಪೂಜ್ಯರಿಗೆ ಮಾನಹಾನಿಯೂ ಆಗುವುದೋ ಅಲ್ಲಿ ದುರ್ಭಿಕ್ಷವೂ ಅಕಾಲಮರಣವೂ, ಭಯವೂ ಕಾಣಿಸಿಕೊಳ್ಳುತ್ತವೆ.

"ಮಾತಾ ಯಸ್ಯ ಗೃಹೇ ನಾಸ್ತಿ ಭಾರ್ಯಾ ಚ ಪ್ರಿಯವಾದಿನೀ |
ಅರಣ್ಯಂ ತೇನ ಗಂತವ್ಯಂ ಯಥಾರಣ್ಯಂ ತಥಾಗೃಹಂ || "

ಯಾರ ಮನೆಯಲ್ಲಿ ಹೆತ್ತತಾಯಿಯೂ, ಪ್ರಿಯವಾದಿನಿಯಾದ ಹೆಂಡತಿಯೂ ಇರು ವುದಿಲ್ಲವೋ ಅಂತಹವನು ಕಾಡಿಗೆ ಹೋಗುವುದು ಲೇಸು. ಏಕೆಂದರೆ ಅವನಿಗೆ ಮನೆಯೂ ಕಾಡೂ ಒಂದೇ ಆಗಿರುವುದು.

ಸನ್ಮಿತ್ರನ ಲಕ್ಷಣವನ್ನು ಪಂಚತಂತ್ರವು ಪುಟ್ಟ ಮಾತುಗಳಲ್ಲಿಯೇ ಅರ್ಥ ಪೂರ್ಣವಾಗಿ ತಿಳಿಸುವುದು.

"ಕೇನಾಮೃತಮಿದಂ ಸೃಷ್ಟಂ ಮಿತ್ರಮಿತ್ಯಕ್ಷರದ್ವಯಂ |
ಆಪದಾಂ ಚ ಪರಿತ್ರಾಣಂ ಶೋಕಸಂತಾಪಭೇಷಜಮ್ ||"

ಕಷ್ಟದಿಂದ ರಕ್ಷಿಸುವುದಕ್ಕೂ, ಶೋಕಸಂತಾಪಗಳನ್ನು ನಿವಾರಿಸುವುದಕ್ಕೂ ಸಮರ್ಥವಾದ 'ಮಿತ್ರ'ನೆಂಬ ಅಮೃತಾಕ್ಷರಗಳೆರಡು ಯಾರಿಂದ ನಿರ್ಮಿತವಾದುವು? ಇಂತಹ ಮಿತ್ರನೆಂಬ ಅಮೃತವನ್ನು ಪಡೆಯಲು ನಾವೂ ಪುಣ್ಯಮಾಡಿರಬೇಕಲ್ಲವೇ?

"ನ ಸ್ವಲ್ಪಸ್ಯಕೃತೇ ಭೂರಿ ನಾಶಯೇನ್ಮತಿಮಾನ್ನರಃ |
ಏತದೇವ ಹಿ ಪಾಂಡಿತ್ಯಂ ಯತ್ಸ್ವಲ್ಪಾದ್ಭೂರಿರಕ್ಷಣಂ"

ಬುದ್ಧಿಶಾಲಿಯು ಅಲ್ಪಲಾಭಕ್ಕಾಗಿ ತನ್ನ ಸರ್ವಸ್ವವನ್ನೂ ಕಳೆದುಕೊಳ್ಳಲು ಇಚ್ಛಿಸುವುದಿಲ್ಲ. ಇರುವಷ್ಟು ಸಾಧನದಿಂದಲೇ ಹೆಚ್ಚು ಸಾಧಿಸಿ ರಕ್ಷಿಸಿಕೊಳ್ಳುವುದು ವಿವೇಕದ ಲಕ್ಷಣ. ಅಲ್ಪಶ್ರಮದಿಂದ ವಿಶೇಷಫಲವನ್ನು ಪಡೆಯುವುದು ಪ್ರಜ್ಞಾಶಾಲಿಯ ಲಕ್ಷಣ, ಪ್ರಜ್ಞಾಮಯವೂ, ಪ್ರಭಾವಯುತವೂ ಆದ ಜೀವನದ ಕಡೆಗೆ ನಮ್ಮ ಮನಸ್ಸನ್ನೂ ತಿರುಗಿಸಲು ಪಂಚತಂತ್ರದ ನೀತಿಬೋಧೆಯು ಎಷ್ಟು ಫಲಕಾರಿಯಾಗಿರುವುದೆಂಬುದನ್ನು ಹೆಚ್ಚು ಹೇಳಬೇಕಾಗಿಲ್ಲ.

ಆದ್ದರಿಂದಲೇ ಪಂಚತಂತ್ರವು ನಮ್ಮ ದೇಶದಲ್ಲೇ ಅಲ್ಲದೆ ಪರದೇಶಗಳಲ್ಲಿಯೂ ಆಯಾಯ ದೇಶಭಾಷೆಗಳಿಗೆ ಪರಿವರ್ತಿಸಲ್ಪಡುವುದರ ಮೂಲಕವೂ ಚಲನಚಿತ್ರವನ್ನು ತಯಾರಿಸಿ ಪ್ರದರ್ಶಿಸುವುದರ ಮೂಲಕವೂ ಬಹಳ ಪ್ರಸಿದ್ಧಿಯನ್ನು ಹೊಂದಿರುವುದು. ಮಿತ್ರಭೇದವೆಂಬ ಪ್ರಥಮ ತಂತ್ರದ ಮುಖ್ಯಪಾತ್ರಗಳಾದ "ಕರಟಕದಮನಕ"ನರಿಗಳ ಕಥೆಯು ಪ್ರಾಚೀನ ಸಿರಿಯಕ್ ಭಾಷೆಯಲ್ಲಿ 'ಕಲಿಲಾಗ್ ಡಮನಾಗ್' ಎಂದೂ ಅರೇಬಿಯಾ ಭಾಷೆಯಲ್ಲಿ 'ಕಲೀಲಹ ಮತ್ತು ಡಿಮ್ನಹ' ಎಂದೂ ಪರಿವರ್ತಿತವಾಗಿರುವುದು. ಕ್ರಿ.ಶ. ೬ ನೇ ಶತಮಾನದಲ್ಲಿ ಪರ್ಷಿಯಾದೇಶದ ರಾಜನಾಗಿದ್ದ 'ಅನುಶರಿವಾನ್' ಎಂಬುವನ ಇಷ್ಟದಂತೆ ಪಂಚತಂತ್ರವು ಪೆಹಲ್ವಿ ಭಾಷೆಗೆ ಪರಿವರ್ತಿತವಾಗಿರುವುದು.

ಹೀಗೆ ಬಹಳ ಹಿಂದಿನಿಂದಲೂ ಸುಮಾರು ೨,೦೦೦ ವರ್ಷಗಳಿಂದಲೂ ಪ್ರಸಿದ್ಧಿಯನ್ನು ಪಡೆದು ಸರ್ವರಿಗೂ ಮಾನ್ಯವಾಗಿರುವ ಉಪದೇಶರೂಪವಾದ ಪಂಚತಂತ್ರವೆಂಬ ನೀತಿಶಾಸ್ತ್ರವು ಹೊರದೇಶದವರ ಗಮನವನ್ನು ಸೆಳೆದಿರುವುದರಲ್ಲಿ ಆಶ್ಚರ್ಯವಿಲ್ಲ. ಈಗ ಪಾಶ್ಚಾತ್ಯದೇಶಗಳಲ್ಲಿ ಸಂಸ್ಕೃತವನ್ನು ಓದಬಯಸುವವರೆಲ್ಲರೂ ಪಂಚತಂತ್ರವನ್ನು ಮೊದಲು ಓದಿ ಇದರ ಸವಿಯನ್ನು ಅನುಭವಿಸುತ್ತಿರುವರು. ಇದೊಂದರ ಅಭ್ಯಾಸದಿಂದ ಅನೇಕ ಶಾಸ್ತ್ರಗಳ ಪರಿಚಯವು ನಮಗೆ ಲಭಿಸುವುದು.

ಜ್ಯೋತಿಷ, ಧರ್ಮಶಾಸ್ತ್ರ, ಶುಕ್ರನೀತಿ, ಆಯುರ್ವೇದ, ಶಿಲ್ಪಶಾಸ್ತ್ರ, ಖಗೋಳಶಾಸ್ತ್ರ, ಮನಶ್ಶಾಸ್ತ್ರವೇ ಮೊದಲಾದ ಅನೇಕ ಶಾಸ್ತ್ರಗಳ ಅನುಭವವನ್ನು ಪಂಚತಂತ್ರವು ನಮಗೆ ದೊರಕಿಸುತ್ತದೆ. ಆದ್ದರಿಂದಲೇ ವಿಶ್ವಸಾಹಿತ್ಯದಲ್ಲಿ ಪಂಚತಂತ್ರವು ಪಡೆದಿರುವಷ್ಟು ಪ್ರಮುಖಸ್ಥಾನವನ್ನು ಮತ್ತಾವ ಭಾರತೀಯ ಸಾಹಿತ್ಯಗ್ರಂಥವೂ ಪಡೆದಿಲ್ಲವೆಂದು ಡಾ॥ ಎಡ್ಗರ್ಟನ್ನರು ಅಭಿಪ್ರಾಯಪಡುತ್ತಾರೆ. ಬೈಬಲ್ಲನ್ನು ಬಿಟ್ಟರೆ ಬೇರೆ ಯಾವ ಗ್ರಂಥವೂ ಪ್ರಂಚದಲ್ಲಿ ಇಷ್ಟು ಅದ್ಭುತವೂ ವಿಶಾಲವೂ ಆದ ಪ್ರಚಾರವನ್ನು ಪಡೆದಿಲ್ಲವೆಂದು ಪಾಶ್ಚಾತ್ಯವಿದ್ವಾಂಸರು ಮುಕ್ತಕಂಠದಿಂದ ತಿಳಿಸುತ್ತಾರೆ. ಬೈಬಲ್ಲನ್ನು ಓದಿ ಮಾನವನು ಬುದ್ಧಿವಂತನಾಗಬಹುದೆಂದು ಪಾಶ್ಚಾತ್ಯರು ನಂಬಿದ್ದಾರೆ. ಹಾಗೆಯೇ ನಮ್ಮಲ್ಲೂ ಗೀತೋಪನಿಷತ್ತು ರಾಮಾಯಣಗಳನ್ನು ಓದಿದರೆ ಮಾನವನು ಬುದ್ಧಿವಂತನಾಗಿ ಬಾಳುತ್ತ ಇಹದಲ್ಲಿ ಸಂತೋಷವನ್ನೂ ಪರದಲ್ಲಿ ಶ್ರೇಯಸ್ಸನ್ನೂ ಹೊಂದುವನೆಂಬ ವಿಶ್ವಾಸವಿದೆ. ಇದೆಲ್ಲದರ ಸಾರವನ್ನೂ ಸಂಗ್ರಹಿಸಿ, ಕಥೆಗಳ ರೂಪದಲ್ಲಿ ನೀತಿಬೋಧೆ ಮಾಡುತ್ತಿರುವ ಪಂಚತಂತ್ರವೊಂದನ್ನು ಓದಿದರೆ ಮಾನವನು ಸರ್ವತೋಮುಖವಾದ ಪ್ರಗತಿಯನ್ನು ಹೊಂದಿ ಸುಖವಾಗಿ ಬಾಳಬಹುದೆಂದು ಧಾರಾಳವಾಗಿ ಹೇಳಬಹುದು. ಸಕಲ ಶಾಸ್ತ್ರಗಳ ಪರಿಚಯ, ಮಾನವಸ್ವಭಾವದ ವಿವಿಧತೆ, ವ್ಯವಹಾರನೈಪುಣ್ಯ, ಕಾರ್ಯಾಕಾರ್ಯವಿವೇಚನೆ, ಮಾನವಜೀವನದ ಧ್ಯೇಯ ಮತ್ತು ಅದರ ಪರಿಜ್ಞಾನ ಇವಿಷ್ಟೂ ಒಂದೇ ಬಾರಿಗೆ ಲಲಿತವಾಗಿ ಮನಸ್ಸಿಗೆ ಗ್ರಾಹ್ಯವಾಗಲು ಪಂಚತಂತ್ರದ ಅಧ್ಯಯನವು ಎಷ್ಟು ಆವಶ್ಯಕವೆಂಬ ಅಂಶವನ್ನು ಜನತೆಯು ತಿಳಿಯಲೆಂದೂ, ಬುದ್ಧಿವಂತರು ಓದಿ ತಿಳಿಸಲೆಂದೂ ಹಾರೈಸುತ್ತೇನೆ.

ಶಾಸ್ತ್ರಜ್ಞಾನ, ಲೋಕಾನುಭವ, ಪ್ರಕೃತಿಯ ಪರಿಚಯ, ಕಾರ್ಯಸಾಧನವೈದಗ್ಧ್ಯ, ಕರ್ಮವಿಧಾನರಹಸ್ಯ, ಇಷ್ಟೂ ಮಾನವನ ಸುಖಸ್ಥಿತಿಗೆ ಅತ್ಯವಶ್ಯಕವೆಂಬುದು ನಿರ್ವಿವಾದ. ಇಷ್ಟನ್ನೂ ಮಾನವನಿಗೆ ದೊರಕಿಸಬಲ್ಲ ಗ್ರಂಥವೊಂದರ ಹೆಸರನ್ನು ತಿಳಿಸಬೇಕೆಂದರೆ, "ಪಂಚತಂತ್ರ"ದ ಹೆಸರನ್ನು ಹೇಳಲು ಯಾವ ಸಂದೇಹವೂ ಇಲ್ಲ.

ಟಿ. ಜಿ. ಸಿದ್ದಪ್ಪಾರಾಧ್ಯ.

ಚೆಲುವಿನ ಪುಟ

ಮುಗಿಲ ತುಂಬ ಬೆಳ್ಗುದುರೆಯ
ಮೋಡದ ಪಡೆಯೋಡಿರೆ
ಬಂದಿಯಂತೆ ಬಿದ್ದ ಗುಡ್ಡ
ನಿಡುಸುಯ್ಯುತ ನೋಡಿರೆ
ಮಳೆಯು ತೊಳೆದ ಹಸಿರ ಮೆಯ್ಯ
ಬಿಸಿಲ ಬೆರಳು ಸವರಿರೆ
ಗರಿಮೂಡಿದ ಕನಸಿನಂತೆ
ಬೆಳ್ಳಕ್ಕಿಯ ಮಾಲೆಯೊಂದು
ಮಿಂಚಿಕೊಂಡು ಹಾರಿರೆ,
ತೆಕ್ಕನೊಂದು ಚೆಲುವಿನ ಪುಟ
ಕಣ್ಣೆದುರಿಗೆ ತೆರೆದಿದೆ !
ಗಾಳಿಬೆರಳು ಮೋಡದ ಮುಸು-
ಕನ್ನು ಮೆಲನೆ ಸರಿಸಿರೆ
ಮಡುಗಟ್ಟಿದ ಮಂದಹಾಸ
ಜಲಕ್ಕನೆಯೆ ಜಾರಿರೆ,
ಬಾಸಿಂಗವ ಸೂಡಿಕೊಂಡು
ಗುಡಿಯು ಬೆಟ್ಟ ನಿಂದಿರೆ,
ಹದುಗಿ ಹರಿವ ಗುಟ್ಟಿನಂತೆ
ಹಸುರಿಗೆ ಪಿಸುಮಾತನುಸುರಿ
ನುಸುಳುತಿರಲು ಕಾಲುವೆ,
ತೆಕ್ಕನೊಂದು ಚೆಲುವಿನ ಪುಟ
ಕಣ್ಣೆದುರಿಗೆ ತೆರೆದಿದೆ !

ಜಿ. ಎಸ್. ಶಿವರುದ್ರಪ್ಪ

ಆನಂದಲಹರೀ

ಮುಖಂ ಬಿಂದುಂ ಕೃತ್ವಾ ಕುಚಯುಗಮಧಸ್ತಸ್ಯ ತದಧೋ
ಹರಾರ್ಧಂ ಧ್ಯಾಯೇದ್ಯೋ ಹರಮಹಿಷಿ ತೇ ಮನ್ಮಥಕಲಾಮ್ |
ಸಃ ಸದ್ಯಃ ಸಂಕ್ಷೋಭಂ ನಯತಿ ವನಿತಾ ಇತ್ಯತಿಲಘು
ತ್ರಿಲೋಕೀಮಪ್ಯಾಶು ಭ್ರಮಯತಿ ರವೀಂದ್ರಸ್ತನಯುಗಮ್ ||೧೯||

ಎಲೌ ಶಿವೇ, ನಿನ್ನ ಮನ್ಮಥಕಲೆಯನ್ನು, ಎಂದರೆ ಒಂದು ಬಿಂದುವು ನಿನ್ನ ಮುಖವೆಂದೂ, ಉಳಿದ ಎರಡು ಬಿಂದುಗಳು ನಿನ್ನ ಕುಚದ್ವಯವೆಂದೂ, ಅದರ ಅಧೋಭಾಗದಲ್ಲಿ 'ಹಕಾರಾರ್ಧ'ವು ರೂಪಿತವಾಗಿದೆಯೆಂದೂ ಭಾವಿಸುವವರು ತಕ್ಷಣವೇ ವನಿತೆಯರನ್ನು ವಶಪಡಿಸಿಕೊಳ್ಳುವರು. ಆದರೆ ಸೂರ್ಯಚಂದ್ರರನ್ನೇ ಸ್ತನಗಳನ್ನಾಗಿ ಪಡೆದು ತ್ರಿಭುವನಗಳನ್ನು ಕ್ಷೋಭಿಸುವವಳಿಗೆ ಇದು ಅತಿ ಲಘು ವಾದದ್ದು.

ಟೀಕೆ: 'ಶಿವಾ' ಎಂಬುದು ದೇವಿಯು, ಸಚ್ಚಿದಾನಂದ ಎಂಬುದನ್ನು ನಿರ್ದೇಶಿಸುತ್ತದೆ. ಜಗತ್ತನ್ನು ತನ್ನಲ್ಲಿ ವಿಲೀನಗೊಳಿಸುವವನು (ಹರತಿ) ಹರ. ಶ್ರೀ ವಿಕ್ರಮನು ಹೀಗೆ ಹೇಳಿದ್ದಾನೆ: ಬಿಂದುಗಳು ಮೂರು. ಮೊದಲನೆಯದು 'ಕಾಮ'. ಇದು ಅಗ್ನ್ಯಾತ್ಮಕ, ರಜೋಗುಣ ಮತ್ತು ಬ್ರಹ್ಮ, ಇದೇ ಮುಖ. ಉಳಿದ ಎರಡು ಬಿಂದುಗಳು 'ಹರಿ' ಮತ್ತು ಹರ, ಸತ್ವ ಮತ್ತು ತಮೋಗುಣಗಳು, ಇವು ಕುಚಯುಗ್ಮಗಳು. ಇದರ ಕೆಳಗಿರುವ 'ಹಕಾರಾರ್ಧವು' ಯೋನಿಸ್ಥಿತವಾಗಿರುವ ಚಿತ್ಕಲಾ. ಈ ಬಿಂದುತ್ರಯಗಳನ್ನು ರೇಖೆಗಳಿಂದ ಸಂಬಂಧಿಸಿದರೆ ಪೂರ್ವೋಕ್ತ ತ್ರಿಕೋಣ ಅಥವಾ ಯೋನಿಯು ರೂಪಿತವಾಗುತ್ತದೆ.

ಸ್ವಾಮಿ ಅಚ್ಯುತಾನಂದರ ವ್ಯಾಖ್ಯಾನರೀತ್ಯಾ ಇದು ತ್ರಿಗುಣಾತ್ಮಕ ವಿಭೂತಿ ; ಎಂದರೆ ಶಿವಶಕ್ತಿಸಂಯೋಗದಿಂದ ಉದ್ಭವಿಸಿದ ಬ್ರಹ್ಮಾಂಡ.

ಇಲ್ಲಿ ತ್ರಿಭುವನಗಳನ್ನು ಒಬ್ಬ ಸ್ತ್ರೀಗೆ ಹೋಲಿಸಿದೆ. ಸೂರ್ಯಚಂದ್ರರೇ ಆಕೆಯ ಕುಚದ್ವಯಗಳು. ಅಂತಹ ಸ್ತ್ರೀಯನ್ನು ವಶಪಡಿಸಿಕೊಳ್ಳಬಲ್ಲ ಯೋಗಿಗೆ ಸಾಧಾರಣ ಸ್ತ್ರೀಯರು ಕೇವಲ ತೃಣಸಮಾನರು.

ಕಿರಂತೀಮಂಗೇಭ್ಯಃ ಕಿರಣನಿಕುರುಂಬಾಮೃತರಸಂ
ಹೃದಿತ್ವಾಮಾಧತ್ತೇ ಹಿಮಕರ ಶಿಲಾಮೂರ್ತಿಮಿವಯಃ |
ಸ ಸರ್ಪಾಣಾಂ ದರ್ಪಂ ಶಮಯತಿ ಶಕುಂತಾಧಿಪ ಇವ
ಜ್ವರಪ್ಲುಷ್ಟಂ ದೃಷ್ಟ್ಯಾ ಸುಖಯತಿ ಸುಧಾಸಾರ ಸಿರಯಾ ||೨೦||

ಯಾವಾಕೆಯು ಹಿಮಾಲಯಸದೃಶ ಆಕಾರಯುತಳೋ, ಯಾವಾಕೆಯ ಶರೀರದ ಸರ್ವಾಂಗಗಳಿಂದಲೂ ಅಮೃತಸದೃಶವಾದ ಕಿರಣಸಮೂಹಗಳು ಹೊರ ಹೊಮ್ಮುತ್ತಿರುವುವೋ, ಅಂತಹ ನಿನ್ನನ್ನು ಕುರಿತು ಧ್ಯಾನಿಸುವವನು, ಖಗರಾಜನಾದ ಗರುಡನಂತೆ ಸರ್ಪಗಳ ದರ್ಪವನ್ನು ಅಡಗಿಸುವನು. ಅವನು ಶೀತಳವಾದ ಸುಧಾಧಾರೆಯನ್ನು ವರ್ಷಿಸುವ ತನ್ನ ದೃಷ್ಟಿಮಂತ್ರದಿಂದ ಜ್ವರಪೀಡಿತರಾದವರ ತಾಪವನ್ನು ನಿರ್ಮೂಲಗೊಳಿಸುವನು.

ಟೀಕೆ : ಇಲ್ಲಿ ಅಮೃತೇಶ್ವರೀ ಮೂರ್ತಿಯ ಧ್ಯಾನವು ಸೂಚಿತವಾಗಿದೆಯೆಂದು ವ್ಯಾಖ್ಯಾನ ಕರ್ತನಾದ ಡಿಂಡಿಮನ ಅಭಿಪ್ರಾಯ. ಅಮೃತನಾಡಿಯಿಂದ ಹೊರಹೊಮ್ಮುವ ಸುಧೆಯನ್ನು ಯೋಗಿಗಳು ಭೋಗಿಸುವರು.

ತಟಿಲ್ಲೇಖಾತನ್ವಿಂ ತಪನಶಶಿವೈಶ್ವಾನರಮಯೀಂ
ನಿಷಣ್ಣಾಂ ಷಣ್ಣಾಮಪ್ಯುಪರಿ ಕಮಲಾನಾಂ ತವ ಕಲಾಂ |
ಮಹಾಪದ್ಮಾಟವ್ಯಾಂ ಮೃದಿತಮಲಮಾಯೇನ ಮನಸಾ
ಮಹಾಂತಃ ಪಶ್ಯಂತೋ ದಧತಿ ಪರಮಾಹ್ಲಾದಲಹರೀಮ್ || ೨೧ ||

ಮಾಯಾಬಂಧನದಿಂದ ವಿಮುಕ್ತರಾದ ಮಹಾತ್ಮರು, ಪರಮಾನಂದಲಹರಿಯಲ್ಲಿ ನಿಮಗ್ನರಾದ, ಷಟ್ಚಕ್ರಗಳಿಗೆ ಅತೀತವಾಗಿರುವ ಪರಮಕಮಲವಾದ ಸಹಸ್ರಾರದ ಅರಣ್ಯದಲ್ಲಿ, ಸೂಕ್ಷ್ಮವಾದ ವಿದ್ಯುಲ್ಲೇಖೆಯಂತೆ ಗೋಚರಿಸುವ, ಸೂರ್ಯ, ಚಂದ್ರ ಮತ್ತು ಅಗ್ನ್ಯಾತ್ಮಕವಾದ ನಿನ್ನ ಕಲೆಯನ್ನು ಅನಾಯಾಸವಾಗಿ ದರ್ಶಿಸುವರು.

ಟೀಕೆ : ಬಿಂದುತ್ರಯಗಳ ಜನನಿಯಾದ ತ್ರಿಪುರಸುಂದರಿಯನ್ನು ಹತ್ತೊಂಬತ್ತನೆಯ ಶ್ಲೋಕವು ವರ್ಣಿಸುತ್ತದೆ. ಅದರಲ್ಲಿ ಕಾಮ = ಕಾಮನೀಯ ಕಲಾ = ಸೂರ್ಯ, ಚಂದ್ರ ಮತ್ತು ಅಗ್ನಿ. ಪೂರ್ವೋಕ್ತ ಧ್ಯಾನವು 'ಬಾಹ್ಯಧ್ಯಾನ.' ಈ ಶ್ಲೋಕದಲ್ಲಿ ಕೇವಲ ಮಹಾತ್ಮರಿಗೆ ಮಾತ್ರ ಲಭಿಸಬಹುದಾದ ಶುದ್ಧಸ್ವರೂಪ ಧ್ಯಾನವು ಸೂಚಿತವಾಗಿದೆಯೆಂದು ಲಕ್ಷ್ಮೀಧರ ಮತ್ತು ಅಚ್ಯುತಾನಂದರ ಅಭಿಪ್ರಾಯ. ಇದು ಆಭ್ಯಂತರ ಸೂಕ್ಷ್ಮಧ್ಯಾನ. ಇದು ಸೂಕ್ಷ್ಮರೂಪ. ಪೂರ್ವೋಕ್ತರೂಪಗಳು ಕೀಳ್ತರಗತಿಯ ಸಾಧಕರಿಗೆ ಮಾತ್ರ. ಈ ಶ್ಲೋಕದಲ್ಲಿ ಉಕ್ತವಾಗಿರುವುದು ಕಲಾದೇವಿಯ ಚಿತ್ಸ್ವರೂಪ. ಇದು ತನ್ನ ಶಕ್ತಿಪ್ರಭಾವದಿಂದ ಬಿಂದುತ್ರಯಗಳಾಗಿ ಗೋಚರಿಸುವುದು.

ಭವಾನಿ ತ್ವಂ ದಾಸೇ ಮಯಿ ವಿತರ ದೃಷ್ಟಿಂ ಸಕರುಣಾ—
ಮಿತಿಸ್ತೋತುಂ ವಾಂಛನ್ ಕಥಯತಿ ಭವಾನಿ ತ್ವಮಿತಿ ಯಃ |
ತದೈವ ತ್ವಂ ತಸ್ಮೈ ದಿಶಸಿ ನಿಜಸಾಯುಜ್ಯಪದವೀಂ
ಮುಕುಂದಬ್ರಹ್ಮೇಂದ್ರಸ್ಫುಟಮಕುಟನೀರಾಜಿತಪದಾಮ್ || ೨೨ ||

ಎಲೌ ಭವಾನಿ, ನಿನ್ನ ದಾಸನಾದ ನನ್ನ ಮೇಲೆ ನಿನ್ನ ಕೃಪಾದೃಷ್ಟಿಯನ್ನು ಬೀರು. ಈ ರೀತಿಯಲ್ಲಿ ಪ್ರಾರ್ಥಿಸುವವನಿಗೆ ವಾಂಛೆಯಿಂದ 'ಭವಾನಿತ್ವಂ' ಎಂದು ನುಡಿದ

ತಕ್ಷಣವೇ ಹರಿಹರಬ್ರಹ್ಮಾದಿಗಳ ಮುಕುಟದಿಂದ ವಿರಾಜಮಾನವಾದ ನಿನ್ನ ಚರಣಗಳನ್ನು, ಎಂದರೆ ನಿಜಸಾಯುಜ್ಯ ಪದವಿಯನ್ನು ಅನುಗ್ರಹಿಸುವೆ.

ಟೀಕೆ: ಲಕ್ಷ್ಮೀಧರನು ಹೀಗೆ ಹೇಳಿದ್ದಾನೆ: 'ಭವಾನಿ' ಎಂಬುದು ಕ್ರಿಯಾವಾಚಕ= ಭವಾವಿು. ಇದನ್ನು 'ಭೂ' ಎಂಬ ಕ್ರಿಯಾಪದದ ಏಕವಚನ ಉತ್ತಮ ಪುರುಷ ಪ್ರೇರಣಾರ್ಥದ ರೂಪವೆಂದು ತಿಳಿಯಬೇಕು. ಈ ರೀತಿಯಲ್ಲಿ ದೇವಿಯನ್ನು ಆರಾಧಿಸುವವನು ಆಕೆಯಲ್ಲಿ ಲೀನ ವಾಗುವನು. 'ಭವಾನಿ' ಎಂಬ ಉಚ್ಚಾರಣೆಯು ಆಕೆಯ ಗಮನವನ್ನು ಸೆಳೆಯುತ್ತದೆ.

'ಭವ' ಎಂದರೆ 'ಮಹಾದೇವ, ಸಂಸಾರ ಮತ್ತು ಮನ್ಮಥ.' 'ಅನ' ಎಂದರೆ 'ಪ್ರಾಣದಾನಮಾಡುವುದು.' ದೇವೀ ಪುರಾಣದಲ್ಲಿ ಈ ಪದದ ಅರ್ಥವು ಹೀಗೆ ವಿವರಿಸಲ್ಪಟ್ಟಿದೆ: ಭವ, ಎಂದರೆ ರುದ್ರ, ಕಾಮ, ಸಂಸಾರಸಾಗರ; ದೇವಿಯು ಇವು ಗಳಿಗೆ ಪ್ರಾಣದಾಯಕಿಯಾದುದರಿಂದ 'ಭವಾನಿ'ಯೆಂದು ಕರೆಯಲ್ಪಡುತ್ತಾಳೆ.

ಅಥವಾ ಶಿವನ ಜಲಮೂರ್ತಿಯು 'ಭವ' ಎಂದು ಕರೆಯಲ್ಪಡುತ್ತದೆ. ಅವನ ಪತ್ನಿ 'ಉಷಾ,' ಪುತ್ರ 'ಶುಕ್ರ.' ವಾಯು ಮತ್ತು ಲಿಂಗಪುರಾಣಗಳಲ್ಲಿ ಹೀಗೆ ಉಕ್ತವಾಗಿದೆ: ಸಮಸ್ತ ಭೂತಗಳೂ ಅವನಿಂದ ಉದ್ಭವಿಸಿ, ಜಲದಿಂದ ಜೀವಿಸು ತ್ತವೆ. ಅವನು ಸಮಸ್ತ ಭೂತಗಳ ಸೃಷ್ಟಿಕರ್ತ ಹಾಗೂ ಸಂರಕ್ಷಕನಾದುದರಿಂದ 'ಭವ'ನೆಂದು ಸಂಬೋಧಿಸಲ್ಪಡುತ್ತಾನೆ. 'ಭವ'ನಿಗೆ ಪ್ರಾಣದಾತೆಯಾದುದರಿಂದ 'ಭವಾನಿ.'

ಡಿಂಡಿಮನು ಹೀಗೆ ಹೇಳಿದ್ದಾನೆ: 'ಈವರಗೆ ಅಂತರ್ಯಾಗ ಮತ್ತು ಬಹಿರ್ಯಾಗ ಗಳನ್ನು ಕುರಿತು ಹೇಳಿದ್ದಾಯಿತು. ಇಲ್ಲಿ ಸಾಲೋಕ್ಯ, ಸಾಮಿಪ್ಯ, ಸಾರೂಪ್ಯ ಮತ್ತುಸಾಯುಜ್ಯವೆಂಬ ಚತುರ್ವಿಧ ಮುಕ್ತಿಸಾಧನೆಗೆ ಹೇತುವಾದ 'ಭಕ್ತಿಮಾರ್ಗ'ವು ವರ್ಣಿತವಾಗಿದೆ. ಈ ಶ್ಲೋಕದಲ್ಲಿ ಉಕ್ತವಾಗಿರುವುದು 'ಸಾಯುಜ್ಯಮುಕ್ತಿ'.

ತ್ವಯಾ ಹೃತ್ವಾವಾಮಂ ವಪುರಪರಿತೃಪ್ತೇನ ಮನಸಾ
ಶರೀರಾರ್ಧಂ ಶಂಭೋರಪರಮಪಿ ಶಂಕೇ ಹೃತಮಭೂತ್ |
ತಥಾಹಿ ತ್ವದ್ರೂಪಂ ಸಕಲ ಮರುಣಾಭಂ ತ್ರಿನಯನಂ
ಕುಚಾಭ್ಯಾಮಾನಮ್ರಂ ಕುಟಿಲಶಶಿಚೂಡಾಲಮುಕುಟಮ್ || ೨೩ ||

ಶಂಭುವಿನ ಶರೀರದ ಅರ್ಧಭಾಗವನ್ನು ಅಪಹರಿಸಿದ್ದರೂ, ನೀನು ಅದರಿಂದ ತೃಪ್ತಿಗೊಂಡಂತೆ ತೋರುವುದಿಲ್ಲ. ಉಳಿದ ಅರ್ಧವೂ ಸಹಾ ಅಪಹೃತವಾದಂತೆ ಕಾಣುವುದು. ಇದರಿಂದ ನೀನು ರಕ್ತದೇಹಿಯಾಗಿ, ತ್ರಿನೇತ್ರೆಯಾಗಿ, ಕುಚದ್ವಯ ಭಾರವಿನಮ್ರೆಯಾಗಿ, ಅರ್ಧೇಂದುಧರೆಯಾಗಿ ವಿರಾಜಿಸುತ್ತಿರುವೆ.

ಟೀಕೆ: ಅರ್ಧನಾರೀಶ್ವರನು 'ಕಾಂತಾಸಂಮಿಶ್ರದೇಹಿ.' ಶಿವನು ಧವಳದೇಹಿ, ಶಕ್ತಿಯು ಕಾಂಚನಾಂಗಿ. ಶಕ್ತಿಯು ಶಿವನ ತ್ರಿನೇತ್ರಗಳಲ್ಲಿ ಭಾಗವನ್ನು ಪಡೆದಳು. ಅವಳು ಏಕಕುಚಾನ್ವಿತೆಯಾಗಿ, ಏಕಮೌಳಿಯಾದ 'ಚಂದ್ರ'ನಲ್ಲಿ ಭಾಗವನ್ನು ಪಡೆದಳು. ಈಗ ಅವಳು ಉಳಿದ ಅರ್ಧವನ್ನೂ ಅಪಹರಿಸಿ ಲೋಹಿತಶರೀರೆಯಾಗಿದ್ದಾಳೆ. ಅವಳು ಶಿವನ ದೇಹದಲ್ಲಿ ಅರ್ಧಕ್ಕಿಂತ ಹೆಚ್ಚೆಂಬುದನ್ನು ಸ್ತನದ್ವಯಗಳು ತೋರಿಸುತ್ತಿವೆ. ಈ ಶ್ಲೋಕವು ಶಕ್ತಿಯ ಪಾರಮ್ಯದ್ಯೋತಕವಾಗಿದೆ.

ಈ ಶ್ಲೋಕವು ಶಿವಶಕ್ತಿಯರ ಅಭಿನ್ನತೆಯನ್ನು ವ್ಯಕ್ತಗೊಳಿಸುತ್ತದೆ. ಅವಳ ರೂಪ ಶಿವಶಕ್ತಿಸಾಮರಸ್ಯ. 'ವಾಯುವೀಯ ಸಂಹಿತೆ'ಯಲ್ಲಿ ಹೀಗೆ ಉಕ್ತವಾಗಿದೆ: 'ಶಿವೇಚ್ಛೆಯಿಂದ ಪರಾಶಕ್ತಿಯು ಶಿವತತ್ವೈಕ್ಯಳಾಗುವಳು. ಸೃಷ್ಟಿಯ ಆದಿಯಲ್ಲಿ ತಿಲದಿಂದ ತೈಲದಂತೆ ಆವಿರ್ಭವಿಸುವಳು.' ಇಲ್ಲಿ 'ಐಕ್ಯ' ಎಂದರೆ ಸಮರಸವಾದ ಸಾಮರಸ್ಯ, ಅತ್ಯಂತಾಭೇದ. 'ಸೌರಸಂಹಿತೆ'ಯಲ್ಲಿ ಹೀಗೆ ಹೇಳಲ್ಪಟ್ಟಿದೆ: ಶಕ್ತಿಯಿಂದ ಅಭಿನ್ನವಾಗಿರುವ ಬ್ರಹ್ಮವು ಶಕ್ತಿಭಿನ್ನವಾಗಿ ಗೋಚರಿಸುತ್ತದೆ. ಆದರೆ ಅವು ಅಭಿನ್ನವಾದುವು. ಮೂಢರು ಅದನ್ನು ಶಕ್ತಿಯೆಂದು ಮಾತ್ರ ಕರೆಯುತ್ತಾರೆ. ಆದರೆ 'ಶಕ್ತಿ'ಯನ್ನು 'ಶಕ್ತಿಮಂತ'ನಿಂದ ಬೇರ್ಪಡಿಸಲು ಸಾಧ್ಯವಿಲ್ಲ. ವಾಸಿಷ್ಠ ರಾಮಾಯಣದಲ್ಲೂ ಸಹಾ ಏಕಮಾತ್ರ ಪವನಸಂಚಾರ, ಜಗತ್ತಿನಲ್ಲಿ ಏಕ ಔಡ್ಯಾಣಪೀಠ, ಏಕಮಾತ್ರ ಚಿಚ್ಛಕ್ತಿಯೂ ಗೋಚರಿಸುವಂತೆ, ಶಿವಶಕ್ತಿಯರ ಏಕಾತ್ಮವು ಕಂಡುಬರುತ್ತದೆ ಎಂದು ವಿವರಿಸಲ್ಪಟ್ಟಿದೆ.

ಅಥವಾ ಇದು 'ಹಂಸಮಂತ್ರ' ಸೂಚಕವಾದದ್ದು. 'ಸೂತ ಸಂಹಿತೆ'ಯಲ್ಲಿ ಹೀಗೆ ಹೇಳಲ್ಪಟ್ಟಿದೆ: ಶಿವಶಕ್ತಿಯು 'ಸಾಂತ'ವಾದದ್ದು (ಎಂದರೆ 'ಸ') ಮತ್ತು ಅದರ ಅಂತ್ಯ (ಹ) 'ಬೀಜ'ವೆಂದು ಹೇಳಲ್ಪಟ್ಟಿದೆ. ಬೀಜವು 'ವಿದ್ಯಾಶಕ್ತಿ,' ಅದೇ ಶಿವ. ತತ್ಕಾರಣದಿಂದ 'ಪರಾಮಂತ್ರ'ವು ಶಿವಶಕ್ತಿ ಸೂಚಕವಾಗಿದೆ.

ಶಿವನ ಪಂಚಶಕ್ತಿಯರು 'ಧೂಮವತೀ' (ತಿರೋಧಾನ—ಪೃಥ್ವೀ), ಭಾಸ್ವತೀ (ಅವಭಾಸನ—ಅಗ್ನಿ), ಸ್ಪಂದಾ (ಕ್ಷೋಭೆ—ವಾಯು), ವಿಭವೀ (ವ್ಯಾಪ್ತ—ಆಕಾಶ) ಹ್ಲಾದ (ಪುಷ್ಟಿ—ಜಲ). ಜಗತ್ತು ಈ ಪಂಚಶಕ್ತಿಮಯವಾಗಿದೆ.

ಪಂಡಿತ ಅನಂತಕೃಷ್ಣ ಶಾಸ್ತ್ರಿಗಳು ಹೇಳುವಂತೆ ಇದರಲ್ಲಿ ಉತ್ತರ ಕೌಲರ ಶಿವತತ್ವ ಮತ್ತು ಶಕ್ತಿತತ್ವಗಳ 'ಅವಿನಾಭಾವ'ವು ಪ್ರತಿಪಾದಿತವಾಗಿದೆ.

ಜಗತ್ ಸೂತೇ ಧಾತಾ ಹರಿರವತಿ ರುದ್ರಃ ಕ್ಷಪಯತೇ
ತಿರಸ್ಕುರ್ವನ್ನೇತತ್ ಸ್ವಮಪಿ ವಪುರೀಶಃ ಸ್ಥಗಯತಿ |
ಸದಾಪೂರ್ವಃ ಸರ್ವಂ ತದಿದ ಮನುಗೃಹ್ಣಾತಿ ಚ ಶಿವ—
ಸ್ತವಾಜ್ಞಾ ಮಾಲಂಬ್ಯ ಕ್ಷಣಚಲಿತಯೋರ್ಭ್ರೂಲತಿಕಯೋಃ || ೨೪ ||

ನೀನು ಕಣ್ಣು ಮಿಟುಕಿಸಿದರೆ, ಬ್ರಹ್ಮನು ನಿನ್ನ ಆಜ್ಞಾಧಾರಿಯಾಗಿ ಸೃಷ್ಟಿಸುವನು, ಹರಿಯು ರಕ್ಷಿಸುವನು, ರುದ್ರನು ಜಗತ್ತನ್ನು ಲಯಗೊಳಿಸುವನು. ಈಶನು ಈ ಕಾರ್ಯಗಳನ್ನು ತಿರಸ್ಕಾರದೃಷ್ಟಿಯಿಂದ ನೋಡುತ್ತಾ ಅಚಲನಾಗಿರುವನು. ಸದಾಶಿವನು ಸರ್ವವಸ್ತುಗಳನ್ನೂ ತನ್ನಲ್ಲಿ ಐಕ್ಯಗೊಳಿಸುವನು.

ತ್ರಯಾಣಾಂ ದೇವಾನಾಂ ತ್ರಿಗುಣಜನಿತಾನಾಮಪಿ ಶಿವೇ
ಭವೇತ್ ಪೂಜಾ ಪೂಜಾತವ ಚರಣಯೋರ್ಯಾ ವಿರಚಿತಾ |
ತಥಾ ಹಿ ತ್ವತ್ ಪಾದೋದ್ವಹನ ಮಣಿಪೀಠಸ್ಯ ನಿಕಟೇ
ಸ್ಥಿತಾಹ್ಯೇತೇ ಶಶ್ವನ್ಮುಕುಲಿತ ಕರೋತ್ತಂಸ ಮಕುಟಾಃ || ೨೫ ||

ಎಲೌ ಶಿವೇ, ನಿನ್ನ ಆರಾಧನೆಯು ತ್ರಿಗುಣಜನಿತರಾದ ತ್ರಿಮೂರ್ತಿಗಳ ಆರಾಧನೆಯಾಗಿರುವುದು. ಈ ದೇವರುಗಳು ನಿನ್ನ ಚರಣಗಳಿಗೆ ಆಧಾರಭೂತವಾದ ಮಣಿಪೀಠದ ಸಮೀಪದಲ್ಲಿ ಮುಕುಲಿತಹಸ್ತರಾಗಿ ಸದಾ ನಮಿಸುತ್ತಿರುವರು.

ಟೀಕೆ : ಈಶ್ವರಿಯು ಜಗಜ್ಜನನಿ. ಸಮಸ್ತವೂ ಆಕೆಯಲ್ಲಿ ಲೀನವಾಗಿರುವುವು. ಆದುದರಿಂದ ಅವಳನ್ನು ಆರಾಧಿಸಿದರೆ, ಅವಳಲ್ಲಿ ಲೀನವಾಗಿರುವ ಹಾಗೂ ಅವಳ ವಶವಾಗಿರುವ ಸಮಸ್ತವನ್ನೂ ಆರಾಧಿಸಿದಂತಾಯ್ತು. ಸಮಸ್ತ ದೇವತೆಗಳ ಮಹತ್ವಕ್ಕೂ ದೇವಿಯ ಆರಾಧನೆಯೇ ಕಾರಣ. ಅವಳ ಪೂಜೆಯೆಂದರೆ, ಅವಳ ಮಹಾವಿಭೂತಿಯಿಂದ ಉದ್ಭವಿಸಿದ ಸಕಲ ದೇವತೆಗಳ ಪೂಜೆಯೆಂದು ತಿಳಿಯಬೇಕು.

ದೇವಿಯು 'ಬ್ರಹ್ಮರೂಪ'ದಲ್ಲಿ ಸೃಷ್ಟಿಕಾರ್ಯವನ್ನು ಮಾಡುವಳು. 'ಬ್ರಹ್ಮ'ನೆಂದರೆ ರಜೋಗುಣ ಪ್ರಧಾನಮೂರ್ತಿಯಾದ ಈಶ್ವರ. ಬ್ರಹ್ಮ=ವೇದಗಳು, ಅನ=ಉಚ್ಚಾರಣೆ. ಬ್ರಹ್ಮನು ತನ್ನ ನಾಲ್ಕು ಮುಖಗಳಿಂದ ನಾಲ್ಕು ವೇದಗಳನ್ನು ಉಪದೇಶಿಸಿದನು. ಬ್ರಹ್ಮನ ಶಕ್ತಿ 'ಬ್ರಹ್ಮಾಣಿ'.

ದೇವಿಯು 'ಗೋವಿಂದ' ರೂಪದಲ್ಲಿ ಜಗತ್ತನ್ನು ಪಾಲಿಸುವಳು. 'ಹರಿವಂಶ'ದಲ್ಲಿ ನಾರದರು ಹೇಳುತ್ತಾರೆ: 'ಪ್ರಕೃತಿಯ ಪ್ರಥಮ ಭಾಗವು ಪ್ರಸಿದ್ಧದೇವಿಯಾದ 'ಉಮಾ.' ವ್ಯಕ್ತ ಭಾಗವಾದ ವಿಷ್ಣುವು ಸರ್ವವ್ಯಾಪಿ. ಲೋಕರಕ್ಷಕ, ಸ್ತ್ರೀಯೆಂದು ಭಾವಿತನಾದವನು.

ವಿಷ್ಣುಭಾಗವತದಲ್ಲಿ ಗೋವಿಂದ ಶಬ್ದವನ್ನು ಕುರಿತು ಹೀಗೆ ಹೇಳಿದೆ: 'ನಾನು ಅಮರರ ಇಂದ್ರ, ನೀನು ಗೋವುಗಳ ಇಂದ್ರ. ತತ್ಕಾರಣದಿಂದ ಭೂಲೋಕದಲ್ಲಿ ಗೋವಿಂದನೆಂದು ಪ್ರಸಿದ್ಧನಾಗು'.

'ಹರಿವಂಶ'ವು ತಿಳಿಸುತ್ತದೆ: 'ಗೌಃ' ಎಂದರೆ ಶಬ್ದ. ಅದನ್ನು ನೀನು ಮಾತ್ರ

'ಅರಿ' (ವಿದ್)ತಿರುವೆ. ಆದಕಾರಣ ನೀನು 'ಗೋವಿಂದ'ನೆಂದು ಯೋಗಿಗಳಿಂದ ಕರೆಯಲ್ಪಡುವೆ'.

'ವಿಶ್ವಪ್ರಕಾಶಕೋಶ'ದ ಪ್ರಕಾರ 'ಗೋವಿಂದ ಎಂದರೆ ವಾಸುದೇವ, ಗೋಪಾಲ ಮತ್ತು ಬೃಹಸ್ಪತಿ'.

ದೇವಿಯು 'ರುದ್ರರೂಪ'ದಲ್ಲಿ ಜಗತ್ತನ್ನು ಲಯಗೊಳಿಸುವಳು. 'ರುದ್ರ' ಎಂದರೆ 'ರುಜ' (ಶೋಕ)ವನ್ನು ವಿನಾಶಗೊಳಿಸುವವನು. ಶ್ರುತಿಯಲ್ಲಿ ಹೀಗೆ ಉಕ್ತವಾಗಿದೆ: ಅವನು ರೋದಿಸಿದನು. ತತ್ಕಾರಣದಿಂದ "ರುದ್ರ" (ರುದ್—ರೋದನ) ಎಂದು ಕರೆಯಲ್ಪಟ್ಟನು. ಶಿವರಹಸ್ಯದಲ್ಲಿ ಹೀಗೆ ಹೇಳಲ್ಪಟ್ಟಿದೆ: ಪಶುಪತಿಯು ಶೋಕವನ್ನು ವಿನಾಶಗೊಳಿಸುವ ಕಾರಣ 'ರುದ್ರ'ನೆಂದು ಕರೆಯಲ್ಪಡುತ್ತಾನೆ. 'ಛಾಂದೋಗ್ಯ ಉಪನಿಷತ್ತು' ಹೀಗೆ ತಿಳಿಸುತ್ತದೆ: ಪ್ರಾಣಗಳೇ ರುದ್ರರು. ಏಕೆಂದರೆ ಅವು ದೇಹಗಳನ್ನು ರೋದಿಸುವಂತೆ ಮಾಡುತ್ತವೆ. 'ವಾಯುವೀಯ ಸಂಹಿತೆ' ಹೀಗೆ ತಿಳಿಸುತ್ತದೆ: "ರು ಎಂದರೆ 'ದುಃಖ'. ಇದನ್ನು ನಿರ್ಮೂಲಗೊಳಿಸುವವನು (ದ್ರ) ರುದ್ರ".

'ಈಶ್ವರ' ಎಂದರೆ 'ಮಾಯಾ'. 'ಪರಾಹಂತಾ ಈಶ್ವರನ ಪರಮಲಕ್ಷಣ'. ವಿರಲತರವಾದ ಶುದ್ಧಸತ್ವಪ್ರಧಾನನಾದ ಈಶ್ವರನು 'ಸದಾಶಿವ'ನೆಂದು ಹೇಳಲ್ಪಡುವನು. 'ಅನುಗ್ರಹ'ವು ಸದಾಶಿವನ ಕಾರ್ಯ; 'ತಿರೋಧಾನ'ವು ಈಶ್ವರನ ಕರ್ತವ್ಯ.

ವಿರಂಚಿಃ ಪಂಚತ್ವಂ ವ್ರಜತಿ ಹರಿರಾಪ್ನೋತಿ ವಿರತಿಂ
ವಿನಾಶಂ ಕೀನಾಶೋ ಭಜತಿ ಧನದೋ ಯಾತಿ ನಿಧನಮ್ |
ವಿತಂದ್ರಾ ಮಹೇಂದ್ರೀ ವಿತತಿರಪಿ ಸಮ್ಮೀಲತಿ ದೃಶಾಂ
ಮಹಾಸಂಹಾರೇಸ್ಮಿನ್ ವಿಹರತಿ ಸತಿ ತ್ವತ್ಪತಿರಸೌ || ೨೬ ||

ಎಲೌ ಸತೀ, ಮಹಾಪ್ರಳಯದಲ್ಲಿ ನಿನ್ನ ಪತಿಯು ಮಾತ್ರ ಜೀವಂತನಾಗಿರುವನು. ಉಳಿದ ಎಲ್ಲರೂ, ಬ್ರಹ್ಮ, ಹರಿ, ಯಮ, ಕುಬೇರರು ಅಳಿಯುವರು; ವಿತಂದ್ರನಾದ ಮಹೇಂದ್ರನ ಕಣ್ಣುಗಳೂ ಸಹಾ ಮುಚ್ಚಿಹೋಗುವುವು.

ಟೀಕೆ: ಮಹಾಪ್ರಳಯದಲ್ಲಿ ಸಮಸ್ತ ಜೀವಗಳೂ ಶಿವನಲ್ಲಿ ತಿರೋಧಾನ ಹೊಂದುವುವು. ಆಗ ಎಲ್ಲವೂ ಲಯವಾಗಿ ಶಿವಶಕ್ತಿಯು ಮಾತ್ರ ಉಳಿಯುವುದು. ಇಂದ್ರಭೋಗವೂ ಸಹಾ ಶಾಶ್ವತವಲ್ಲ. ದೇವಿಯು ಪರಮಶಕ್ತಿಯ ರೂಪದಲ್ಲಿ ಸದಾಶಿವಯುಕ್ತಳಾಗಿರುವಳು.

ಜಪೋ ಜಲ್ಪಃ ಶಿಲ್ಪಂ ಸಕಲಮಪಿಮುದ್ರಾವಿರಚನಂ
ಗತಿಃ ಪ್ರಾದಕ್ಷಿಣ್ಯಂ ಭ್ರಮಣಮದನಾದ್ಯಾಹುತವಿಧಿಃ |

ಪ್ರಣಾಮಃ ಸಂವೇಶಃ ಸುಖಮಖಿಲಮಾತ್ಮಾರ್ಪಣದಶಾ
ಸಪರ್ಯಾಪರ್ಯಾಯಸ್ತವ ಭವತುಯನ್ಮೇವಿಲಸಿತಮ್ || ೨೭ ||

ಎಲೌ ಜನನಿ, ನನ್ನ ವಾಕ್ಕುಗಳೆಲ್ಲವೂ ಎಷ್ಟೇ ವ್ಯರ್ಥಾಲಾಪವಾದರೂ ಜಪವಾಗಿ ಪರಿಣಮಿಸಲಿ; ಹಸ್ತಗಳಿಂದ ಮಾಡುವ ಕ್ರಿಯೆಗಳೆಲ್ಲವೂ ಮುದ್ರಾನ್ಯಾಸವಾಗಲಿ; ನನ್ನ ಸಂಚಾರವೆಲ್ಲವೂ ನಿನ್ನ ಮೂರ್ತಿಯ ಪ್ರದಕ್ಷಿಣೆಯಾಗಲಿ; ಭೋಜನಾದಿ ಕ್ರಿಯೆಗಳೆಲ್ಲವೂ ಹೋಮವಾಗಲಿ; ನನ್ನ ಸುಖಗಳೆಲ್ಲವೂ ಆತ್ಮಾರ್ಪಣೆಯಾಗಲಿ. ನಾನು ಯಾವ ಕಾರ್ಯವನ್ನು ಮಾಡಿದರೂ ನಿನ್ನ ಆರಾಧನೆಯೆಂದು ಪರಿಗಣಿಸಲ್ಪಡಲಿ.

ಟೀಕೆ: ಅಚ್ಯುತಾನಂದರ ಅಭಿಪ್ರಾಯದ ಪ್ರಕಾರ ಈ ಶ್ಲೋಕವು 'ಜ್ಞಾನಯೋಗ' ಸಾಧನೆಯ ಮೂಲತತ್ವವಾದ 'ಸರ್ವಾರ್ಪಣ ಬುದ್ಧಿ'ಯ ವರ್ಣನೆಯಾಗಿದೆ. ಇಲ್ಲಿ 'ಆತ್ಮ'ವೆಂದರೆ 'ಪರದೇವತೆ.' ಇದರ ಪ್ರಕಾರ ನಾವು ಆಚರಿಸುವ ಪ್ರತಿಯೊಂದು ಕಾರ್ಯವೂ 'ಆರಾಧನೆ'ಯೇ ಆಗಿದೆ. ನಮ್ಮ ವಾಕ್ಕೇ 'ಜಪ'; ಹಸ್ತಕ್ರಿಯೆಗಳೇ 'ಮುದ್ರಾ' ಮತ್ತು ಪಾದಕ್ರಿಯೆಗಳೇ 'ಪ್ರದಕ್ಷಿಣೆ.' ಶಯನವೇ ಪ್ರಣಾಮ. 'ಅಖಿಲಸುಖ' ಎಂದರೆ ಶಕ್ತಿಸಂಯೋಗ. ಇದು 'ಸಪರ್ಯಾಯ ಪೂಜೆ'ಯ ವರ್ಣನೆಯಾಗಿದೆ. ಲಕ್ಷ್ಮೀಧರನ ಪ್ರಕಾರ ಇದು ಸಹಸ್ರಾರದಲ್ಲಿ 'ಸಾದಾಖ್ಯ'ರೂಪಿ ದೇವಿಯ ಆರಾಧನೆ.

ಸುಧಾಮಪ್ಯಾಸ್ವಾದ್ಯ ಪ್ರತಿಭಯಜರಾಮೃತ್ಯುಹರಣೀಂ
ವಿಪದ್ಯಂತೇ ವಿಶ್ವೇ ವಿಧಿಶತಮುಖಾದ್ಯಾದಿವಿಷದಃ |
ಕರಾಲಂ ಯತ್‌ಕ್ಷ್ವೇಡಂ ಕವಲಿತವತಃ ಕಾಲಕಲನಾ
ನ ಶಂಭೋಸ್ತನ್ಮೂಲಂ ಜನನಿ ತವ ತಾಟಂಕ ಮಹಿಮಾ || ೨೮ ||

ಎಲೌ ಜನನಿ, 'ಶತಕ್ರತು'ಗಳೆಂದು ವಿಖ್ಯಾತರಾದ ಬ್ರಹ್ಮ ಮತ್ತು ಇಂದ್ರರು ಸ್ವರ್ಗವಾಸಿಗಳಾಗಿದ್ದರೂ, ಜರಾಮರಣಗಳನ್ನು ನಿರ್ಮೂಲಗೊಳಿಸುವ ಅಮೃತವನ್ನು ಪಾನಮಾಡಿದ್ದರೂ, ಅಳಿಯಲೇಬೇಕು. ಆದರೆ ಶಿವನು ಮಹಾ ಕಾಲಕೂಟವಿಷವನ್ನೇ ಪಾನಮಾಡಿದರೂ, ನಿನ್ನ ತಾಟಂಕ ಮಹಿಮೆಯಿಂದ ಮೃತನಾಗಲಿಲ್ಲ.

ಟೀಕೆ: ಸ್ವರ್ಗವು ಜರಾಮರಣರಹಿತವಾದದ್ದು. ಆದರೆ ಸ್ವರ್ಗವಾಸಿಗಳ ಸುಕೃತವು ಕ್ಷಯಿಸಿದ ಮೇಲೆ ಅವರು ಮರ್ತ್ಯಲೋಕಕ್ಕೆ ಹಿಂದಿರುಗಲೇಬೇಕು (ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ). ಮಹಾ ಪ್ರಳಯಕಾಲದಲ್ಲಿ ಸ್ವರ್ಗವು ನಾಶವಾಗುವುದು. ಕ್ಷೀರಸಾಗರ ಮಥನ ಕಾಲದಲ್ಲಿ ಉದಿಸಿದ ವಿಷವನ್ನು ಶಿವನು ಆಸ್ವಾದಿಸಿದರೂ, ದೇವಿಯ ತಾಟಂಕ ಮಹಿಮೆಯಿಂದ ಅವನು ಮೃತನಾಗಲಿಲ್ಲ. ತಾಟಂಕವು ವೈವಾಹಿಕ ಜೀವನದ ಚಿಹ್ನೆ. ಪತ್ನಿಯು ಎಷ್ಟುಕಾಲ ಸಧವೆಯಾಗಿರಬೇಕೆಂದು ವಿಧಿಸಂಕೇತವಿರುವುದೋ ಅಷ್ಟುಕಾಲ ಪತಿಯು ಜೀವಂತನಾಗಿರುವನು.

ಕಿರೀಟಂ ವೈರಿಂಚಂ ಪರಿಹರ ಪುರಃ ಕೈಟಭಭಿದಃ
ಕಠೋರೇ ಕೋಟೀರೇ ಸ್ಖಲಸಿ ಜಹಿಜಂಭಾರಿ ಮಕುಟಮ್ |

ಪ್ರಣಮ್ರೇಷ್ವೇತೇಷು ಪ್ರಸಭಮುಪಯಾತಸ್ಯ ಭವನಂ
ಭವಸ್ಯಾಭ್ಯುತ್ಥಾನೇ ತವಪರಿಜನೋಕ್ತಿರ್ವಿಜಯತೇ || ೨೯ ||

ಶಿವನು ನಿನ್ನ ಸಮೀಪಕ್ಕೆ ಅನಿರೀಕ್ಷಿತನಾಗಿ ಆಗಮಿಸಲು, ಬ್ರಹ್ಮ, ವಿಷ್ಣು ಮತ್ತು ಇಂದ್ರರು ನಿನಗೆ ಸಾಷ್ಟಾಂಗ ನಮಸ್ಕಾರ ಮಾಡುತ್ತಿರಲು, ನಿನ್ನ ಪರಿಜನರು ನಿನ್ನನ್ನು ಎಚ್ಚರಿಸುವರು—ಅವರ ಉಕ್ತಿಯು ಜಯಪ್ರದವಾಗುವುದು—"ಬ್ರಹ್ಮ (ವಿರಿಂಚಿ) ಮತ್ತು ಇಂದ್ರರ (ಜಂಭಾರಿ) ಕಿರೀಟಗಳನ್ನು ಪರಿಹರಿಸು; ಕೈಟಭಾರಿಯ ಕಠಿನವಾದ ಕೋಟೀರವನ್ನು ಎಡವೀಯೆ ಎಚ್ಚರಿಕೆ."

ಟೀಕೆ: ದೇವಿಯು ಶಿವನನ್ನು ಸ್ವಾಗತಿಸಲು ಸಿದ್ಧಳಾಗಿದ್ದಾಳೆ. ಅವಳು ತನಗೆ ಅಭಿವಾದಿಸುತ್ತಿರುವ ದೇವರುಗಳ ಕಿರೀಟವನ್ನು ಎಡವಬಹುದೆಂದು ಅವಳ ಪರಿವಾರದವರು ಎಚ್ಚರಿಸುವರು. ಕೋಟೀರವು ವಿಷ್ಣುವಿನ ಚೂಡಾಮಣಿ.

ಸ್ವದೇಹೋದ್ಭೂತಾಭಿರ್ಘೃಣಿಭಿರಣಿಮಾದ್ಯಾಭಿರಭಿತೋ
ನಿಷೇವ್ಯೇ ನಿತ್ಯೇ ತ್ವಮಹಮಿತಿ ಸದಾ ಭಾವಯತಿ ಯಃ |
ಕಿಮಾಶ್ಚರ್ಯಂ ತಸ್ಯ ತ್ರಿನಯನ ಸಮೃದ್ಧಿಂ ತೃಣಯತೋ
ಮಹಾಸಂವರ್ತಾಗ್ನಿರ್ವಿರಚಯತಿ ನೀರಾಜನವಿಧಿಮ್ || ೩೦ ||*

ಎಲೌ ದೇವಿ, ನಿತ್ಯೆಯಾದ ನೀನು ಸ್ವದೇಹೋದ್ಭೂತವಾದ ಅಣಿಮಾದಿ ಮಯೂಖಗಳಿಂದ ಪರಿವೃತಳಾಗಿ ಸೇವಿತಳಾಗಿರುವೆ. ನಿನ್ನ ತ್ರಿನಯನ ಸಮೃದ್ಧಿಯನ್ನು, ಎಂದರೆ ನೇತ್ರಾಗ್ನಿಯನ್ನು, ಕೇವಲ ತೃಣವೆಂದು ಪರಿಗಣಿಸಿ, ಯಾರು ನಿನ್ನನ್ನು ಸದಾ 'ತ್ವಂ ಅಹಂ' ಎಂದು ಭಾವಿಸುತ್ತಾರೆಯೋ, ಅವರ ಮುಂದೆ ಪ್ರಳಯಾಗ್ನಿಯು ನೀರಾಜನವಿಧಿಯನ್ನು ಆಚರಿಸುವುದರಲ್ಲಿ ಆಶ್ಚರ್ಯವೇನು?

ಟೀಕೆ: 'ನಿತ್ಯ' ಎಂದರೆ ಆದ್ಯಂತರಹಿತವಾದದ್ದು. ಸ್ವದೇಹೋದ್ಭೂತವಾದ ಮಯೂಖಗಳೆಂದರೆ ಆವರಣ ದೇವತೆಗಳ ರೀತ್ಯಾ ಶ್ರೀಚಕ್ರದ ನವಭಾಗಗಳು. ಇದು 'ಸನತ್ಕುಮಾರ ಸಂಹಿತೆ'ಯಲ್ಲಿ ವರ್ಣಿತವಾಗಿರುವ ಶ್ರೀಯಂತ್ರದ 'ಭೂಪ್ರಸ್ತಾರ'.

ಸಿ. ಬಿ. ಸೀತಾರಾಂ

(ಸಶೇಷ)

---

* ಅವೆಲಾನ್‌ರವರ ಗ್ರಂಥದಲ್ಲಿ (Avalon-loc. cit) 'ದದಾನೇ ದೀನೇಭ್ಯ . . .' ಎಂದು ೩೦ ನೇ ಶ್ಲೋಕ ಪ್ರಾರಂಭವಾಗುತ್ತದೆ. ಮದರಾಸಿನಲ್ಲಿ ಅಚ್ಚಾಗಿರುವ ಗ್ರಂಥದಲ್ಲಿ (Soundarya Lahari-Adyar-1937) 'ದದಾನೇ' ಎಂಬುದು ೯೦ ನೇ ಶ್ಲೋಕ. 'ಆನಂದಲಹರಿ'ಯ ಪ್ರತಿಯೊಂದು ಶ್ಲೋಕದಲ್ಲಿಯೂ, ಶಾಕ್ತಸಿದ್ಧಾಂತದ ಒಂದೊಂದು ತತ್ವವು ಗರ್ಭೀಕೃತವಾಗಿದೆ. 'ಸೌಂದರ್ಯಲಹರಿ'ಯು ದೇವಿಯ ಆಪಾದಮಸ್ತಕ ವರ್ಣನೆ. ಈ ಶ್ಲೋಕವು (ದದಾನೇ . . .) ಸೌಂದರ್ಯಲಹರಿಯ ಭಾಗವೆಂಬುದು ಇದರ ವರ್ಣನಾರೀತಿಯಿಂದಲೇ ಸ್ಪಷ್ಟವಾಗುತ್ತದೆ.

'ಎ' ಅನ್ನಾಂಗ

೩

ನಮ್ಮ ಆಹಾರದಲ್ಲಿ ಸಕ್ಕರೆ ಮತ್ತು ಹಿಟ್ಟು, ಸಸಾರಜನಕಪದಾರ್ಥಗಳೂ, ಕೊಬ್ಬು ಮತ್ತು ಎಣ್ಣೆ, ಲವಣಗಳು ಮತ್ತು ನೀರು, ಇವೆಲ್ಲಾ ಇರಬೇಕು ಎನ್ನುವುದು ಎಲ್ಲರಿಗೂ ತಿಳಿದ ವಿಷಯ. ಇಷ್ಟೇ ಸಾಲದು ; ಇವುಗಳೊಂದಿಗೆ ಅನ್ನಾಂಗಗಳೂ ಬೇಕು. ಈ ಅನ್ನಾಂಗಗಳು ದೇಹಕ್ಕೆ ಅತ್ಯಾವಶ್ಯಕ. ದೇಹಕ್ಕೆ ಅಲ್ಪಪ್ರಮಾಣದಲ್ಲಿ ಬೇಕಾದರೂ, ಅವು ಆಹಾರದಲ್ಲಿ ಸಾಕಷ್ಟು ಇಲ್ಲದಿದ್ದರೆ ಆಗುವ ಆಘಾತ ತೀರ ಹೆಚ್ಚು. ಉಳಿದವುಗಳೆಲ್ಲಾ ಇದ್ದರೂ, ಇವು ಸಾಕಾದಷ್ಟು ಇಲ್ಲದಿದ್ದರೆ, ಬೆಳೆಯುವ ದೇಹ ವಿರೂಪಹೊಂದಿ ಸ್ವಲ್ಪ ಕಷ್ಟವನ್ನೂ ತಡೆಯಲಾರದ ಶರೀರವಾಗಿ, ರೋಗಗಳಿಗೆ ಸುಲಭವಾಗಿ ತುತ್ತಾಗುವ ದೇಹವಾಗುವುದು. ಬೆಳೆದ ದೇಹ ತನ್ನ ಕೆಲಸಗಳನ್ನು ತಾನು ಮಾಡಲಾರದೆ, ಒಡೆಯನನ್ನು ನೋಯಿಸಿ, ಕಾಡಿಸಿ ತೊಂದರೆಪಡಿಸುವುದ ರೊಂದಿಗೆ ಸಾವಿಗೂ ಎಳತರುವುದು.

ಎಷ್ಟೋ ಕಷ್ಟಸಾಧ್ಯವಾದ ರಸಾಯನಕ್ರಿಯೆಗಳಿಂದ ತೀರ ಜಟಿಲ ಅಣುರಚನೆ ಹೊಂದಿರುವ ರಸಾಯನ ವಸ್ತುಗಳನ್ನು ದೇಹ, ತನಗೆ ದೊರಕಿರುವ ರಸಾಯನ ವಸ್ತು ಗಳಿಂದಲೇ ತಯಾರಿಸುವ ಶಕ್ತಿಯನ್ನು ಪಡೆದಿದ್ದರೂ, ಈ ಅನ್ನಾಂಗಗಳನ್ನು ದೇಹ ದಲ್ಲಿಯೇ ಸಿದ್ಧಪಡಿಸುವ ಶಕ್ತಿಯನ್ನು ಅವು ಪಡೆದಿಲ್ಲ. ಆದುದರಿಂದಲೇ ಈ ಅನ್ನಾಂಗ ಗಳು ಇಷ್ಟೊಂದು ಪ್ರಾಮುಖ್ಯತೆಯನ್ನು ಪಡೆದಿರುವುದು, "ಜೀವಸತ್ವ"ಗಳೆಂದೆನಿಸಿ ಕೊಂಡಿರುವುದು.

ಪ್ರಾರಂಭದಲ್ಲಿ, ಒಂದೆರಡು ಅನ್ನಾಂಗಗಳಿವೆಯೆಂದುಕೊಂಡು ಅವುಗಳಿಗೆ ಎ. ಬಿ. ಸಿ. . . . ಎಂದು ಹೆಸರಿಟ್ಟರು. ಆದರೆ ಈಗ ಆ ಪಟ್ಟಿ 'ಎ'ಯಿಂದ 'ಕೆ'ವರಿಗೂ ಹಬ್ಬಿ, 'ಬಿ' ಒಂದಲ್ಲ, ಒಂದು ಗುಂಪು ಎಂದು ತಿಳಿದಾಗ ; ಇವನ್ನು ರಾಸಾಯನಿಕ ಹೆಸರುಗಳಿಂದಲೇ ಕರೆಯಲು ಪ್ರಾರಂಭಿಸಿದರು.

ಈ ಅನ್ನಾಂಗಗಳನ್ನು ಎರಡು ದೊಡ್ಡ ಗುಂಪುಗಳನ್ನಾಗಿ ವಿಂಗಡಿಸಿರುವರು. ಮೊದಲನೆಯದು ನೀರಿನಲ್ಲಿ ಕರಗುವ ಅನ್ನಾಂಗಗಳು ; ನೀರಿನಲ್ಲಿ ಕರಗದೆ ಕೊಬ್ಬಿನಲ್ಲಿ ಕರಗುವ ಉಳಿದ ಅನ್ನಾಂಗಗಳು ಎರಡನೆಯ ಗುಂಪು. 'ಬಿ' ಮತ್ತು 'ಸಿ' ಅನ್ನಾಂಗಗಳು ಮೊದಲನೆಯ ಗುಂಪಿಗೂ, ಎ. ಡಿ. ಇ. ಮತ್ತು ಕೆ. ಅನ್ನಾಂಗಗಳು ಎರಡನೆಯ ಗುಂಪಿಗೂ ಸೇರಿವೆ. ಎರಡನೆಯ ಗುಂಪಿಗೆ ಸೇರಿದ 'ಎ' ಅನ್ನಾಂಗ ತುಂಬ

ಮುಖ್ಯವಾದುದು. ಇದರ ಲೋಪದಿಂದ ಬೆಳೆಯುವ ದೇಹ ತಿದ್ದಲಾರದ ಸ್ಥಿತಿಗಿಳಿಯುವುದು. ಬೆಳೆದ ದೇಹ ಒರಟಾಗಿ, ರೋಗತರುವ ಜೀವಾಣುಗಳನ್ನು ಎದುರಿಸುವ ಶಕ್ತಿಯನ್ನು ಕಳೆದುಕೊಳ್ಳುವುದು; ಕಣ್ಣು ಕುರುಡಾಗುವುದು. ಆದುದರಿಂದಲೇ ಇದಕ್ಕೆ ಅನ್ನಾಂಗಗಳಲ್ಲಿ ಅಗ್ರಸ್ಥಾನ; ಅದರ ಪ್ರಾಮುಖ್ಯತೆಯಿಂದಲೇ ಇದು ಈ ಪಟ್ಟ ಪಡೆದಿದೆ, ಹೆಸರು ಅನ್ವರ್ಥವಾಗಿದೆ.

ಈ ಅನ್ನಾಂಗದಲ್ಲಿ ಶಕ್ತಿಹೊಂದಿರುವ ಹಲವು ರಸಾಯನ ವಸ್ತುಗಳಿವೆ. ಮೊದಲನೆಯದು "ಎ" ಅನ್ನಾಂಗ, ಇದೇ ಮುಖ್ಯವಾದುದು. ಇದು ಮೀನುಗಳಲ್ಲಿಯೂ, ಬೆನ್ನುಮೂಳೆಯಿರುವ ಪ್ರಾಣಿಗಳಲ್ಲಿಯೂ ಇರುತ್ತದೆ. ದೇಹದ ಅನೇಕ ಭಾಗಗಳಲ್ಲಿದ್ದರೂ ಹೆಚ್ಚಿಗೆ ಅಂದರೆ ಸುಮಾರು ತೊಂಬತ್ತು ಭಾಗ ಪಿತ್ತಕೋಶದಲ್ಲಿ ಶೇಖರವಾಗಿರುತ್ತದೆ. ಅದರಲ್ಲೂ ಕೆಲವು ಜಾತಿ ಮೀನುಗಳ ಪಿತ್ತಕೋಶದಲ್ಲಿ ಈ ಅನ್ನಾಂಗ ವಿಶೇಷವಾಗಿರುತ್ತದೆ. ಕಾಡ್‌ಲಿವರ್ ಎಣ್ಣೆ, ಷಾರ್ಕ್‌ಲಿವರ್ ಎಣ್ಣೆಗಳು ಈ ಅನ್ನಾಂಗಕ್ಕೆ ಒಂದು ಗಣಿಯಂತಿದೆ. ಹ್ಯಾಲಿಬಟ್ ಮೀನಿನ ಎಣ್ಣೆಯ ಕೆಲವು ತೊಟ್ಟುಗಳು ಸಾಕು, ನಮಗೆ ಒಂದು ದಿನಕ್ಕೆ ಬೇಕಾಗುವಷ್ಟು ಅನ್ನಾಂಗವನ್ನು ಒದಗಿಸಲು. ಇಷ್ಟು ಮುಖ್ಯವಾದ ಅನ್ನಾಂಗವು, ಸಹಜವಾಗಿಯೇ, ತಾಯಿಯ ಹಾಲನ್ನು ನಂಬಿರುವ ಮಕ್ಕಳಿಗೆ ಎದೆಯ ಹಾಲಿನಿಂದಲೇ ದೊರೆಯುತ್ತದೆ. ಹಾಲು ಮತ್ತು ಮೊಟ್ಟೆಗಳಲ್ಲಿ ಇದು ಸಾಕಷ್ಟು ಇದೆ.

ಈ ಅನ್ನಾಂಗದೊಂದಿಗೆ ಎ$_2$ ಅನ್ನಾಂಗವೂ ದೊರೆಯುತ್ತದೆ. ಎ$_1$ ಅನ್ನಾಂಗ ಉಪ್ಪುನೀರಿನಲ್ಲಿ ಬೆಳೆಯುವ ಮೀನುಗಳಲ್ಲಿ ದೊರೆತರೆ, ಎ$_2$ ಅನ್ನಾಂಗವು ಸಿಹಿನೀರಿನ ಮೀನುಗಳಲ್ಲಿ ಹೆಚ್ಚಾಗಿ ಇರುತ್ತದೆ. ನೀರು ಮತ್ತು ಭೂಮಿ ಎರಡರಲ್ಲಿಯೂ ಜೀವಿಸಬಲ್ಲ ಪ್ರಾಣಿಗಳಲ್ಲಿ (Amphibians) ಎ$_1$ ಮತ್ತು ಎ$_2$ ಅನ್ನಾಂಗಗಳೆರಡೂ ಇದ್ದರೂ ಎ$_1$ ಅನ್ನಾಂಗವೇ ಹೆಚ್ಚು. ಎ$_3$ ಅನ್ನಾಂಗವೂ ಇರಬಹುದೆಂದು ಅಭಿಪ್ರಾಯಪಡಲಾಗಿದೆ.

ಇವು ಆಲ್ಕೋಹಾಲ್ ಗುಂಪಿಗೆ ಸೇರಿದವುಗಳು. ಪಿತ್ತಕೋಶದಲ್ಲಿ ಇವು ಎಸ್ಟರಿನ* (Ester) ರೂಪದಲ್ಲಿ ಇರುತ್ತವೆ. ತೆಗೆದುಕೊಂಡ ಆಹಾರದಲ್ಲಿ ಈ ಅನ್ನಾಂಗ ಎಸ್ಟರಿನ ರೂಪದಲ್ಲಿ ಇದ್ದರೆ, ಕರುಳಿನಲ್ಲಿರುವ ಎಸ್ಟರೇಸ್ ಎಂಬ ಎಂಜೈಮ್ (Enzyme) ನಿಂದ ವಿಭಜನೆ ಹೊಂದಿ ಆಲ್ಕೊಹಾಲ್ ರೂಪಕ್ಕೆ ಬರುತ್ತದೆ. ಅದನ್ನು ಚಿಕ್ಕ ಕರುಳು ಹೀರಿಕೊಂಡು ರಕ್ತಕ್ಕೆ ಕಳುಹಿಸುತ್ತದೆ. ರಕ್ತದಲ್ಲಿ ಸಾಧಾರಣವಾಗಿ

* ಎಸ್ಟರುಗಳು ಸಾವಯುವ ರಸಾಯನ ವಸ್ತುಗಳು. ಆಮ್ಲ ಮತ್ತು ಪ್ರತ್ಯಾಮ್ಲಗಳು ಸೇರಿ ಲವಣಗಳಾಗುವಂತೆಯೇ, ಆಮ್ಲ ಮತ್ತು ಆಲ್ಕೊಹಾಲ್‌ಗಳು ಸೇರಿ ಎಸ್ಟರುಗಳಾಗುತ್ತವೆ.

ಆಲ್ಕೊಹಾಲ್ ರೂಪದಲ್ಲಿರುತ್ತದೆಯಾದರೂ, ಆಹಾರದಲ್ಲಿ ಹೆಚ್ಚು ಅನ್ನಾಂಗವಿದ್ದರೆ ರಕ್ತದಲ್ಲಿ ಎಸ್ಟರಿನ ರೂಪದಲ್ಲಿ ಕಾಣಿಸಿಕೊಳ್ಳುವುದು. ಆಹಾರದಿಂದ ಈ ಅನ್ನಾಂಗದ ಪೂರೈಕೆ ಸಾಕಷ್ಟು ಇಲ್ಲದಿರುವಾಗ, ಪಿತ್ತಕೋಶದಲ್ಲಿ ಶೇಖರಿಸಿದ ಅನ್ನಾಂಗವು ರಕ್ತಕ್ಕೆ ಬಂದು ಅದರ ಅರಕೆಯನ್ನು ತುಂಬುವುದು. ಆದರೆ ಪಿತ್ತಕೋಶದಲ್ಲಿನ ಅನ್ನಾಂಗವೆಲ್ಲಾ ವೆಚ್ಚವಾದಮೇಲೆ ರಕ್ತದಲ್ಲಿ ಈ ಅನ್ನಾಂಗವು ಕಡಿಮೆಯಾಗುವುದು ಮತ್ತು ಅದರ ಅಭಾವದ ಕುರುಹುಗಳು ಕಾಣಿಸಿಕೊಳ್ಳುವುದು.

ಹೀಗೆ ಪಿತ್ತಕೋಶ ಬರಿದಾಗಿ, ರಕ್ತದಲ್ಲಿ ಅನ್ನಾಂಗದ ಮಟ್ಟ ಇಳಿಯಲು ಬೇರೆ ಕಾರಣಗಳೂ ಉಂಟು. ಆಹಾರ ಸರಿಯಾಗಿ ಅರಗದೇ ಇರುವುದೂ, ಅರಗಿದ ಆಹಾರವನ್ನು ಕರುಳು ಸರಿಯಾಗಿ ಹೀರದೇ ಇರುವುದೂ, ಮುಂತಾದುವುಗಳು ಇರಬಹುದು. ಇದು ಹೆಚ್ಚು ಬೇಕಾಗುವ ಕೆಲವು ಸಂದರ್ಭಗಳಲ್ಲಿ—ಉದಾಹರಣೆಗೆ ಗರ್ಭವತಿಯರಿಗೆ—ಆಹಾರದಲ್ಲಿ ಇದರ ಪೂರೈಕೆ ಸಾಕಷ್ಟು ಇಲ್ಲದೆ ಹೀಗಾಗಬಹುದು. ಮೂತ್ರಪಿಂಡದ ರೋಗ ಮುಂತಾದ ಖಾಯಿಲೆಗಳಲ್ಲಿಯೂ ಈ ಲೋಪ ಬರಬಹುದು. ಇದಲ್ಲದೆ ‘ಇ’ ಅನ್ನಾಂಗ ಸಾಕಷ್ಟು ಇಲ್ಲದೆ ‘ಎ’ ಅನ್ನಾಂಗ ನಾಶವಾಗಿ, ಈ ಲೋಪ ಬರುವುದೂ ಉಂಟು.

ಶಾಖಾಹಾರಿಗಳು ಈ ಅನ್ನಾಂಗಕ್ಕೆ ಮೀನಿನ ಎಣ್ಣೆಗಳನ್ನೇ ನಂಬಬೇಕೆಂದೇನೂ ಇಲ್ಲ. ಈ ‘ಎ’ ಅನ್ನಾಂಗದ ಶಕ್ತಿಯಿರುವ ರಸಾಯನ ವಸ್ತುಗಳು, ಕ್ಯಾರೋಟಿನ್‌ಗಳು (Carotenes), ಸಸ್ಯಗಳಲ್ಲಿ ಇರುತ್ತವೆ. [ಗೆಜ್ಜರಿಯಲ್ಲಿ (Carot) ಇವು ಇವೆ ಎಂಬುದನ್ನು ಮೊದಲು ಕಂಡುಹಿಡಿದುದರಿಂದ ಈ ಗುಂಪಿಗೆ ಈ ಹೆಸರು ಬಂತು]. ಈ ರಸಾಯನ ವಸ್ತುಗಳನ್ನು ದೇಹ ‘ಎ’ ಅನ್ನಾಂಗವಾಗಿ ಪರಿವರ್ತಿಸಿಕೊಳ್ಳಬಲ್ಲುದು. ಇವುಗಳನ್ನು “ಸಹ ಅನ್ನಾಂಗ” (Provitamins)ಗಳೆಂದು ಕರೆಯುತ್ತಾರೆ. ಇವೂ ಹಲವಾರು ಇವೆ. ಆಲ್ಫ, ಬೀಟಾ, ಗ್ಯಾಮ ಕ್ಯಾರೋಟೀನು ಮುಂತಾದ ಒಂಬತ್ತು ರಸಾಯನ ವಸ್ತುಗಳಿಗೆ ಈ ಶಕ್ತಿಯಿದೆಯೆಂಬುದು ಸ್ಪಷ್ಟವಾಗಿ ಗೊತ್ತಾಗಿದೆ.

ಈ ಕ್ಯಾರೋಟೀನುಗಳು ಹಸಿರುಸೊಪ್ಪಿನ ತರಕಾರಿಗಳಲ್ಲಿ ಹೇರಳವಾಗಿರುತ್ತವೆ. ಎಲೆಯ ಹಸುರು ಹೆಚ್ಚಿದಷ್ಟೂ ಅದರಲ್ಲಿ ಈ ಅನ್ನಾಂಗ ಇರುವುದು ಹೆಚ್ಚು. ಈ ಕ್ಯಾರೋಟೀನುಗಳಿಗೂ, ಎಲೆಯ ಹಸುರಿಗೂ (Chlorophyll) ಸಂಬಂಧವಿರಬೇಕು. ಕೊತ್ತುಂಬರಿ, ಪುದೀನಾ, ಎಳೆಯ ದಂಟು ಮುಂತಾದ ಸೊಪ್ಪುಗಳಲ್ಲಿ ಈ ಅನ್ನಾಂಗ ಹೇರಳವಾಗಿರುತ್ತದೆ. ಹಾಗೆಯೇ ಹುಲ್ಲೂ ಉತ್ತಮವಾದುದು. ಮೊದಲೇ ತಿಳಿಸಿದಂತೆ ಇದು ಗೆಜ್ಜರಿ, (Carrot) ಗೆಣಸು, ಮುಂತಾದ ಗಡ್ಡೆಗಳಲ್ಲಿಯೂ ಇರುತ್ತದೆ. ಕೆಂಪುತಾಳೆ ಎಣ್ಣೆ (Red Palm Oil)ಯಲ್ಲಿ ವಿಶೇಷವಾಗಿರುತ್ತದೆ.

ಈ ಕ್ಯಾರೋಟೀನುಗಳು ಸಾಧಾರಣವಾಗಿ ಪ್ರಾಣಿಗಳಲ್ಲಿ ಇರುವುದಿಲ್ಲ, ಆದರೂ, ಹಾಲಿನಲ್ಲಿ ಸ್ವಲ್ಪಮಟ್ಟಿಗೂ, ದೇಹದ ಅನೇಕ ಭಾಗಗಳಲ್ಲಿ ಅತ್ಯಲ್ಪ ಪ್ರಮಾಣದಲ್ಲಿಯೂ ಇರುತ್ತದೆ. ಹಾಲಿನ ಹಳದಿಯ ಬಣ್ಣಕ್ಕೆ ಇದೇ ಕಾರಣ. ಆಹಾರದಲ್ಲಿ ಇದು ತೀರ ಹೆಚ್ಚಾಗಿ ಇದ್ದಾಗ, 'ಎ' ಅನ್ನಾಂಗವಾಗಿ ಬದಲಾವಣೆ ಹೊಂದದ ಕ್ಯಾರೋಟೀನು ಪಿತ್ತಕೋಶದಲ್ಲಿ ಶೇಖರಿಸಲ್ಪಡಬಹುದು. ಕೆಲವು ಪಿತ್ತ ಕೋಶದ ಖಾಯಿಲೆಯಲ್ಲಿ ಇದು ಪಿತ್ತಕೋಶದಲ್ಲಿರುವ ಕುಪ್‌ಫರನ ಜೀವಕೋಶ ಗಳಲ್ಲಿ (Kupffer's Cells) ಶೇಖರಿಸಲ್ಪಟ್ಟಿರುವುದು ಕಂಡುಬಂದಿದೆ.

ಪ್ರಾಣಿಗಳ ಪಿತ್ತಕೋಶದಲ್ಲಿರುವ 'ಎ' ಅನ್ನಾಂಗಕ್ಕೆ ಮೂಲಾಧಾರ ಸಸ್ಯ ಗಳಲ್ಲಿನ ಕ್ಯಾರೋಟೀನೇ. ಸಸ್ಯಗಳು ಇದನ್ನು ತಯಾರಿಸುವುವು; ಅವನ್ನು ತಿಂದು ಪ್ರಾಣಿಗಳು ದೇಹದಲ್ಲಿ 'ಎ' ಅನ್ನಾಂಗ ತಯಾರಿಸಿ ಕೂಡಿಡುವುವು. ಮೀನುಗಳೂ ಅಷ್ಟೆ. ಸಮುದ್ರದ ಜೊಂಡನ್ನು ತಿಂದು ಬೆಳೆದ ಚಿಕ್ಕ ಜಲಚರಗಳನ್ನು ದೊಡ್ಡ ಮೀನು ನುಂಗಿ ಅನ್ನಾಂಗವನ್ನು ತನ್ನ ಪಿತ್ತಕೋಶದಲ್ಲಿ ಶೇಖರಿಸುವುವು. ಮಾನವನ ಕಬಂಧ ಬಾಹುವಿಗೆ ನಿಲುಕದುದು ಯಾವುದೂ ಇಲ್ಲ. ಆದ್ದರಿಂದಲೇ ಪ್ರಕೃತಿರಾಜ್ಯದ ಯಾವ ಮೂಲೆಗಾದರೂ ಕೈಚಾಚಿ 'ಎ' ಅನ್ನಾಂಗವನ್ನು ಎಳೆದುಕೊಳ್ಳಬಲ್ಲ. ಆದುದರಿಂದಲೇ ಗಿಡ, ಮೀನು, ಪ್ರಾಣಿ, ಎಲ್ಲದರಿಂದಲೂ ಅವನಿಗೆ ಈ ಅನ್ನಾಂಗದ ಸರಬರಾಜು.

ಆಹಾರದಲ್ಲಿ ತೆಗೆದುಕೊಂಡ ಕ್ಯಾರೋಟೀನು ಕರುಳಿನ ಮೂಲಕ ರಕ್ತಕ್ಕೆ ಹೋಗುತ್ತದೆ. ಹೀಗೆ ಕರುಳು ಹೀರಿಕೊಳ್ಳಲು ಪಿತ್ತರಸ ಇದ್ದೇ ಇರಬೇಕು. ಈ ರೀತಿ ಬಂದ ಕ್ಯಾರೋಟೀನು 'ಎ' ಅನ್ನಾಂಗಕ್ಕೆ ಹೇಗೆ ಬದಲಾವಣೆ ಹೊಂದುತ್ತದೆ ಎಂಬುದೂ, ಮತ್ತು ಎಲ್ಲಿ ಈ ರೂಪಾಂತರ ನಡೆಯುವುದೆಂಬುದೂ ಇನ್ನೂ ಸ್ಪಷ್ಟ ವಾಗಿ ಗೊತ್ತಿಲ್ಲ. ಕೆಲವು ಪಿತ್ತಕೋಶದ ಖಾಯಿಲೆಗಳಲ್ಲಿ ಈ ಸಹಅನ್ನಾಂಗ 'ಎ' ಅನ್ನಾಂಗವಾಗದೆ ಹಾಗೆಯೇ ಶೇಖರಿಸಲ್ಪಡುವುದೂ ಉಂಟು. ಅದಲ್ಲದೆ ಈ ಬದಲಾ ವಣೆಯ ಕಾರ್ಯದ ವೇಗ ಪಿತ್ತಕೋಶದ ಸ್ಥಿತಿಯನ್ನು ಅನುಸರಿಸಿರುವುದನ್ನು ನೋಡಿದರೆ ಅದು ಪಿತ್ತಕೋಶದಲ್ಲೇ ನಡೆಯಬಹುದೆಂದು ಹೇಳಬಹುದು. ಈ ಪರಿವರ್ತನೆ ಕರುಳಿನಲ್ಲಿ ನಡೆಯುತ್ತದೆ ಎಂಬುದಕ್ಕೂ ಕೆಲವು ಸಾಕ್ಷಿಗಳಿವೆ.

ಎಲ್ಲಾ ಪ್ರಾಣಿಗಳೂ ಈ ಬದಲಾವಣೆಯನ್ನು ಸಂಪೂರ್ಣವಾಗಿ ಮಾಡಲಾರವು. ಈ ಕಾರ್ಯದಲ್ಲಿ ಇಲಿಗಳು ಹೆಚ್ಚು ಶಕ್ತಿಯುತವಾಗಿವೆ. ಕೋಳಿ, ಮೊಲ, ಹಂದಿ ಮತ್ತು ಪಶುಗಳಿಗೆ ಅಷ್ಟೊಂದು ಶಕ್ತಿ ಇಲ್ಲದಿದ್ದರೂ, ಸಾಕಾದಷ್ಟು ಶಕ್ತಿ ಇದೆ. ಬೆಕ್ಕಿಗಂತೂ ಈ ಶಕ್ತಿ ಇಲ್ಲವೇ ಇಲ್ಲ. ಹಾಗೆಯೇ ನರಿಗಳಿಗೂ ಕೂಡ. ಮಾಂಸಾಹಾರಿ ಗಳಾದ ಈ ಪ್ರಾಣಿಗಳಿಗೆ ಆ ಅವಶ್ಯಕತೆಯೂ ಇಲ್ಲ. ಆದುದರಿಂದಲೇ ಅವುಗಳಿಗೆ


ಆ ಶಕ್ತಿಯ ಅಭಾವ. ಮನುಷ್ಯನೂ, ತಾನು ತೆಗೆದುಕೊಂಡ ಕ್ಯಾರೋಟೀನೆಲ್ಲವನ್ನೂ 'ಎ' ಅನ್ನಾಂಗವನ್ನಾಗಿ ಮಾಡಿಕೊಳ್ಳಲಾರ.

ಸಸ್ಯಗಳಲ್ಲಿ ಈ ಕ್ಯಾರೋಟೀನು ಹೇಗೆ ತಯಾರಾಯಿತು, ಅದು ತಯಾರಾಗಲು ಯಾವ ಸ್ಥಿತಿ ಆವಶ್ಯಕ ಎಂಬುದೂ ಸ್ಪಷ್ಟವಾಗಿ ಗೊತ್ತಿಲ್ಲ; ಯಾವಯಾವ ರಸಾಯನ ವಸ್ತುಗಳಿಂದ ಆಯಿತು, ಯಾವಯಾವ ರಸಾಯನಕ್ರಿಯೆಗಳಿಂದಾಯಿತು ಎಂಬುದು ಸ್ಪಷ್ಟಪಟ್ಟಿಲ್ಲ. ಕತ್ತಲೆಯಲ್ಲಿ ಬೆಳೆದ ಸಸ್ಯಗಳ ಎಲೆಗಳಲ್ಲಿ ಇದು ಇರುವುದಕ್ಕಿಂತ, ಬೆಳಕಿನಲ್ಲಿ ಬೆಳೆದ ಎಲೆಗಳಲ್ಲಿ ಇದು ಹೆಚ್ಚು ಇರುತ್ತದೆ. ಆದುದರಿಂದ ಬೆಳಕು ಈ ಅನ್ನಾಂಗದ ತಯಾರಿಕೆಗೆ ವೇಗೋತ್ಕರ್ಷಕವಾಗಿ ಕೆಲಸಮಾಡುತ್ತದೆಯೆಂದು ಕಾಣುತ್ತದೆ. ಆದರೆ ಗೆಜ್ಜರಿ ಮುಂತಾದ ಬೇರುಗಳಲ್ಲಿಯೂ ಶೇಖರಿಸಲ್ಪಟ್ಟಿರುತ್ತದೆ. ಎಲೆಯಲ್ಲಿ ಈ ಅನ್ನಾಂಗ ತಯಾರಾಗಿ, ಅನಂತರ ಬೇರಿಗೆ ಬಂದಿರಬಹುದು ಎಂದು ಹೇಳುವುದಕ್ಕಾಗುವುದಿಲ್ಲ. ಕಾರಣ ಈ ರೀತಿ ನೀರಿನಲ್ಲಿ ಕರಗದ ವಸ್ತುಗಳನ್ನು ಗಿಡದಲ್ಲಿ ಸಾಗಿಸಲು ಮಾರ್ಗಗಳಿಲ್ಲ. ನೀರಿನಲ್ಲಿ ಕರಗುವ, ಕೇವಲ ಅಲ್ಪಬದಲಾವಣೆಯಿಂದ ಅನ್ನಾಂಗವಾಗಬಹುದಾದ ರಸಾಯನ ವಸ್ತುಗಳು ಎಲೆಗಳಲ್ಲಿ ತಯಾರಾಗಿ ಅನಂತರ ಬೇರಿಗೆ ಹೋಗಿ ಅಲ್ಲಿ ರಸಾಯನಕ್ರಿಯೆಯಿಂದ ಈ ಸಹಅನ್ನಾಂಗವಾಗಿ ಅಲ್ಲಿಯೇ ಶೇಖರಿಸಲ್ಪಟ್ಟಿರಬಹುದು . . . ಅಥವಾ ಬೇರಿನಲ್ಲಿಯೇ ತಯಾರಾಗಿರಲೂ ಬಹುದು.

ಈ ಅನ್ನಾಂಗದ ಅಭಾವದ ಕುರುಹುಗಳನ್ನು ಪರಿಶೀಲಿಸಿದರೆ ಮೊದಲನೆಯದು ರಾತ್ರಿಯ ಕುರುಡು (Night Blindness ಅಥವಾ Nyctotopia). ಬಿಸಿಲಿನಲ್ಲಿ ಓಡಿಯಾಡಿ ಮನೆಯೊಳಗೆ ಬಂದಾಗ ಮೊದಲೆರಡು ನಿಮಿಷಗಳು ಸ್ಪಷ್ಟವಾಗಿ ಕಾಣಿಸುವುದಿಲ್ಲ. ಅನಂತರ ನಮ್ಮ ದೃಷ್ಟಿ ಸ್ಪಷ್ಟವಾಗುತ್ತದೆ. ಈ ಅನ್ನಾಂಗ ದೇಹದಲ್ಲಿ ಸಾಕಷ್ಟು ಇಲ್ಲದಿದ್ದರೆ ಎಷ್ಟು ಹೊತ್ತಾದರೂ ಈ ಸ್ಪಷ್ಟದೃಷ್ಟಿ ಬರುವುದೇ ಇಲ್ಲ. ರಾತ್ರಿ ಮತ್ತು ಬೆಳಕು ಹೆಚ್ಚು ಇಲ್ಲದಿರುವಾಗಲೂ ಹೀಗೆಯೇ ದೃಷ್ಟಿ ಮಸುಕಾಗುತ್ತದೆ.

ಕಣ್ಣು ಒಂದು ಬಿಂಬಗ್ರಾಹಿಯಂತೆ ಕೆಲಸಮಾಡುತ್ತದೆ. ಪಾಪೆಯು ಮಸೂರದಂತೆಯೂ, ಅದರ ಹಿಂದಿನ ಅಕ್ಷಿಪಟಲವು (Retina) ಫೊಟೋಗ್ರಾಫಿಕ್ ಪ್ಲೇಟಿನಂತೆಯೂ ಕೆಲಸಮಾಡುತ್ತದೆ. ಅಕ್ಷಿಪಟಲದ ಮೇಲೆ ಬಿದ್ದ ಪ್ರತಿಬಿಂಬದಿಂದ ರಸಾಯನಕ್ರಿಯೆಗಳು ಉಂಟಾಗುವುವು. ಈ ಕ್ರಿಯೆಗಳ ಪ್ರಭಾವದಿಂದ ಮೆದುಳಿಗೆ ಬೆಳಕಿನ ಅನುಭವವು ದೃಷ್ಟಿಯ ನರಗಳ (Optic Nerves) ಮುಖಾಂತರ ತಲುಪುವುದು. ಈ ರೀತಿಯ ಕೆಲಸದಲ್ಲಿ, ಬಣ್ಣವನ್ನು ಕಾಣಿಸುವ ಭಾರ ಅಕ್ಷಿಪಟಲದಲ್ಲಿರುವ ಶಂಕಾಕೃತಿಯ ಸ್ನಾಯು (Cones) ಗಳದ್ದು; ಸ್ಪಷ್ಟವಾಗಿ ಕಾಣಿಸುವ ಭಾರ ಅಕ್ಷಿಪಟಲದಲ್ಲಿರುವ ಸರಳು (Rods) ಗಳದ್ದು.

ಈ ಸರಳುಗಳಲ್ಲಿ ಇರುವ ಮುಖ್ಯವಾದ ಬಣ್ಣದ ವಸ್ತುವನ್ನು "ದೃಷ್ಟಿಯ ನೀಲಿಗೆಂಪು" (Visual Purple) ಎಂದೂ, "ರ್ಹೊಡೋಸ್ಪಿನ್" (Rhodospin) ಎಂದೂ ಕರೆಯುತ್ತಾರೆ. ಒಂದು ಸಸಾರಜನಕಪದಾರ್ಥವೂ ಅದರೊಂದಿಗೆ 'ಎ' ಅನ್ನಾಂಗವೂ ಸೇರಿ ಈ ಬಣ್ಣದ ವಸ್ತುವಾಗಿರುವುದು. ಇದು ಬೆಳಕು ಹೆಚ್ಚಾದಾಗ ಉತ್ಕರ್ಷಣ ಹೊಂದಿ, ಬಣ್ಣ ಕಳೆದುಕೊಂಡು "ರೆಟಿನೀನ್" (Retinene) ಅಥವಾ "ದೃಷ್ಟಿಯ ಹಳದಿ" (Visual Yellow) ಆಗುವುದು. ಕತ್ತಲಿಗೆ ಅಥವಾ ಕಡಿಮೆ ಬೆಳಕಿಗೆ ಬಂದಾಗ ಈ ಹಳದಿಯು ಮತ್ತೆ ದೃಷ್ಟಿಯ ನೀಲಿಗೆಂಪಾಗಬೇಕು. ಹಾಗೆ ಆದರೆ ಮಾತ್ರ ಕತ್ತಲೆಯಲ್ಲಿ ದೃಷ್ಟಿ ಸ್ಪಷ್ಟವಾಗಿರುವುದು, ಈ ಬದಲಾವಣೆ ಮರು ಬದಲಾವಣೆ ಆಗುವಾಗ ಸ್ವಲ್ಪಭಾಗ 'ಎ' ಅನ್ನಾಂಗವು ನಾಶವಾಗುವುದು. ಈ ರೀತಿ ನಾಶವಾದ ಅನ್ನಾಂಗದ ಜಾಗವನ್ನು ರಕ್ತದಲ್ಲಿನ 'ಎ' ಅನ್ನಾಂಗವು ತುಂಬುತ್ತದೆ. ಅನ್ನಾಂಗದ ಅಭಾವದಲ್ಲಿ ಈ ಅರಕೆಯು ತುಂಬದೆ ರಾತ್ರಿಯ ಕುರುಡು ಬರುವುದು. ಈ ರಸಾಯನಕ್ರಿಯೆಗಳನ್ನು ಈ ರೀತಿ ನಿರೂಪಿಸಬಹುದು.



ನಮ್ಮ ಎಲ್ಲಾ ಅಂಗಾಂಗಗಳಿಗೂ ಮೃದುವಾದ ಹೊದಿಕೆ (Epithelium) ಉಂಟು. ಈ ಹೊದಿಕೆಯ ಕೆಲಸ ತುಂಬ ಜವಾಬುದಾರಿಯದು. ಆ ಅಂಗವನ್ನು ಮೃದುವಾಗಿ ಇಡುವುದೂ, ಒಣಗದಿರುವಂತೆ ನೋಡಿಕೊಳ್ಳುವುದೂ ಅದರ ಕೆಲಸ. ಸ್ವಲ್ಪ ಒಣಗಿದರೂ ಆ ಅಂಗವು ತನ್ನ ಕೆಲಸವನ್ನು ಸರಿಯಾಗಿ ಮಾಡಲೂ, ತಾನು ಆರೋಗ್ಯವಾಗಿರಲೂ ಆಗುವುದಿಲ್ಲ. ಎಪಿಥೀಲಿಯಂ ಈ ರೀತಿ ಕೆಡುವುದಕ್ಕೆ ಮೆಟಪ್ಲಾಸಿಯ (Metaplasia) ಎಂದು ಹೆಸರು.

ತೀರ ಒಣಗಿ ಒರಟಾದ ಚರ್ಮ ಈ ಅನ್ನಾಂಗದ ಅಭಾವವನ್ನು ತೋರಿಸುತ್ತದೆ. ಈ ಅನ್ನಾಂಗ ಸಾಕಷ್ಟು ಇರದೆ ಈ ಎಪಿಥೀಲಿಯಂ ತನ್ನ ನೈಜರೀತಿಯನ್ನು ಕಳೆದುಕೊಂಡು ಒರಟಾಗುವುದು. ಹೀಗಾಗಿ, ಚರ್ಮಕ್ಕೆ, ಅದನ್ನು ಮೃದುವಾಗಿ

ಇರಲು ಬರುವ ಎಣ್ಣೆಗಳು ಬರಲು ಮಾರ್ಗವಿಲ್ಲದೆ, ಚರ್ಮ ತನ್ನ ಮೃದುತ್ವವನ್ನು ಕಳೆದುಕೊಂಡು ಸಣ್ಣ ಗುಳ್ಳೆಗಳು ಮೇಲೆದ್ದು, ಕಪ್ಪೆಯ ಚರ್ಮದ (Toad Skin) ರೂಪ ತಾಳುವುದು. ಈ ಖಾಯಿಲೆಗೆ ಕೆರಟೊಮಲೇಷಿಯಾ (Kerotomalacia) ಎಂದು ಕರೆಯುತ್ತಾರೆ. ಇದಿಷ್ಟೇ ಅಲ್ಲ. ಈ ಹೊದಿಕೆಯು ಕೆಟ್ಟ ಮೇಲೆ, ಅಲ್ಲಿಯ ರೋಗಕಾರಕ ಜೀವಾಣುಗಳನ್ನು ನಾಶಮಾಡಿ, ಆ ಭಾಗವನ್ನು ಶುದ್ಧಮಾಡುವ ರಸಗಳು (Secretions) ಅಲ್ಲಿಗೆ ಹರಿದು ಬರುವುದಿಲ್ಲ. ಆ ಭಾಗದಲ್ಲಿ ಈ ವಿಷ ಜೀವಾಣುಗಳು (Pathogenic Bacteria) ಸೇರಿ ಬೆಳೆಯಲು ಇನ್ನೂ ಅನುಕೂಲವಾಗುವುದು. ಆದುದರಿಂದ ಈ ಅನ್ನಾಂಗದ ಅಭಾವ ಇರುವವನು, ಈ ರೋಗಕಾರಕ ಜೀವಾಣುಗಳಿಗೆ ಸುಲಭವಾಗಿ ಬಲಿಯಾಗುವನು. ಅದರಲ್ಲೂ ಶ್ವಾಸಕೋಶದ ರೋಗಗಳಿಗೆ ತುತ್ತಾಗುವನು.

ಆದರೆ ಈ ಅನ್ನಾಂಗ ಉಳಿದ ಜೀವಾಣುನಾಶಕಗಳಂತೆ ಕೆಲಸಮಾಡುವುದಿಲ್ಲ. ಈ ಅನ್ನಾಂಗವನ್ನು ತೆಗೆದುಕೊಂಡರೆ ಜೀವಾಣು ಜನ್ಯರೋಗಗಳಿಂದ ಸಂಪೂರ್ಣವಾಗಿ ತಪ್ಪಿಸಿಕೊಳ್ಳಲು ಆಗುತ್ತದೆಯೆಂದಲ್ಲ. ಎಪಿಥೀಲಿಯಂಗೆ ಶತ್ರುಗಳೊಡನೆ ಹೋರಾಡುವ ಶಕ್ತಿಯನ್ನೂ, ಉತ್ಸಾಹವನ್ನೂ ಈ ಅನ್ನಾಂಗ ಕೊಡುತ್ತದೆ ಅಷ್ಟೆ.

ಈ ಅನ್ನಾಂಗದ ಅಭಾವದಿಂದ ಎಲ್ಲಾ ಭಾಗಗಳನ್ನೂ ಸರಿಯಾಗಿ ಇಡಲು ಆವಶ್ಯಕ ಎಂದು ಮೊದಲೇ ಹೇಳಿದೆಯಷ್ಟೆ. ಇದರ ಅಭಾವದಿಂದ ಕಣ್ಣು ಕೆಡುವುದು. ಮೊದಲು ರೆಪ್ಪೆ ಊದುವುದು. ಕಣ್ಣಿನ ಗುಡ್ಡೆಯನ್ನು ತಂಪಾಗಿ, ಮೃದುವಾಗಿ ಇಡುವ ಕಣ್ಣೀರು ಹರಿಯುವುದು ನಿಂತು ಗುಡ್ಡೆಗಳು ಒಣಗುವುವು. ಕಡೆಗೆ ಕಣ್ಣಿನಲ್ಲಿಯೇ ಹುಣ್ಣಾಗಿ, ಅದು ಒಡೆದು ಕಣ್ಣು ಕುರುಡಾಗುವುದು. ಈ ಖಾಯಿಲೆಗೆ ಒಣಗಿದ ಕಣ್ಣು (Dry Eyes) ಅಥವಾ "ಜಿರೊಫ್ಥಾಲ್ಮಿಯಾ" (Xerophthalmia) ಎಂದು ಹೆಸರು. ಬೆಳೆಯುವ ಮಕ್ಕಳು ಈ ಖಾಯಿಲೆಗೆ ಸುಲಭವಾಗಿ ತುತ್ತಾಗುವರು. ಇಂಡಿಯಾದಲ್ಲಿ ಈ ರೋಗ ಹೆಚ್ಚು. ಇರುವ ಕುರುಡರಲ್ಲಿ ಹೆಚ್ಚು ಜನ ಈ ಕಾರಣದಿಂದಲೇ ಕುರುಡಾಗಿರುವರು.

ಹಲ್ಲು ಬೆಳೆಯಲು, ಅದರಲ್ಲಿಯೂ ಹಲ್ಲಿನ ಮೇಲಿನ ಹೊಳಪು ಪೊರೆಯು (Enamel) ಸರಿಯಾಗಿ ಬೆಳೆಯಲು, ಈ ಅನ್ನಾಂಗದ ಆವಶ್ಯಕತೆಯುಂಟು. ಈ ಜೀವಸತ್ವ ಕಡಿಮೆಯಾದಾಗ ಈ ಹೊಳಪು ಪೊರೆ ತೆಳ್ಳಗಾಗುತ್ತದೆ. ಅದೂ ಅಲ್ಲದೆ ಬಂದೇ ಸಮನಾಗಿರದೆ ಹಲ್ಲು ಕೆಡಲು ಅವಕಾಶ ಉಂಟಾಗುವುದು. ಇದಲ್ಲದೆ ದೇಹದ ಬೆಳವಣಿಗೆಯೂ ಸರಿಯಾಗಿರುವುದಿಲ್ಲ. ದೇಹದ ತೂಕ ಗಾತ್ರಗಳು ಇರಬೇಕಾದಷ್ಟು ಇರುವುದಿಲ್ಲ. ಎಳೆಯ ಇಲಿಗಳಿಗೆ 'ಎ' ಅನ್ನಾಂಗವಿಲ್ಲದ ಆಹಾರವನ್ನು ಕೊಡುತ್ತಾ ಬಂದರೆ ಬೆಳವಣಿಗೆಯು

ಬರಬರುತ್ತಾ ಕಡಿಮೆಯಾಗಿ ಮೂವತ್ತೈದು ದಿನಗಳಲ್ಲಿ ನಿಂತುಹೋಗುತ್ತದೆ. ಆಗ ಆಹಾರದಲ್ಲಿ 'ಎ' ಅನ್ನಾಂಗ ಸೇರಿಸಿದರೆ ಬೆಳವಣಿಗೆ ಮತ್ತೆ ಸರಿಯಾಗುತ್ತದೆ.


'ಎ' ಅನ್ನಾಂಗವು ಘನರೂಪದಲ್ಲಿರುತ್ತದೆ. ಇದರ ಕರಗುವ ಬಿಂದು ೬೩-೬೪°C. ಇದು ಆಲ್ಕೊಹಾಲ್ ರಸಾಯನ ಗುಂಪಿಗೆ ಸೇರಿದುದು. ಆದುದರಿಂದ ಆಲ್ಕೊಹಾಲಿನ ಗುಣಗಳಾದ, ಆಮ್ಲಗಳೊಂದಿಗೆ ಸೇರಿ ಎಸ್ಟರಾಗುವುದು ಮುಂತಾದ ಗುಣಗಳನ್ನು ಹೊಂದಿರುತ್ತದೆ. ಬೀಟಾಕ್ಯಾರೋಟೀನು ೧೮೭°C ನಲ್ಲಿ ಕರಗುವ ಘನಪದಾರ್ಥ. ಅದರ ಬಣ್ಣ ಹಳದಿ.

'ಎ' ಅನ್ನಾಂಗ ಮತ್ತು ಕ್ಯಾರೋಟೀನುಗಳೆರಡೂ ಸುಲಭವಾಗಿ ಉತ್ಕರ್ಷಕ ಹೊಂದಿ ನಾಶವಾಗುವುದು. ಬೆಳಕಿನಲ್ಲಿಯೂ ಹೀಗೆಯೇ. ಇವೆರಡರಲ್ಲಿ 'ಎ' ಅನ್ನಾಂಗವೇ ಈ ವಿಷಯದಲ್ಲಿ ಉತ್ತಮ. ಇವೆರಡನ್ನು ಆಮ್ಲಜನಕವಿಲ್ಲದಿರುವಾಗ ಕಾಯಿಸಿದರೂ ಅವುಗಳ ಶಕ್ತಿ ನಾಶವಾಗುವುದಿಲ್ಲವಾದರೂ, ಆಮ್ಲಜನಕವಿರುವಾಗ ಸುಲಭವಾಗಿ ಉತ್ಕರ್ಷಕ ಹೊಂದುವುವು. ಈ ರೀತಿ ಸುಲಭವಾಗಿ ಉತ್ಕರ್ಷಕ ಹೊಂದಿ ಹಾಳಾಗುವುದನ್ನು 'ಇ' ಅನ್ನಾಂಗವು ತಡೆಗಟ್ಟುವುದು, ನಾಶವಾಗದಂತೆ ರಕ್ಷಿಸುವುದು. ಈ ಸಂರಕ್ಷಣಾಕಾರ್ಯಭಾರ 'ಇ' ಅನ್ನಾಂಗದ ಮುಖ್ಯಕಾರ್ಯಗಳಲ್ಲೊಂದು. ಈ ರಕ್ಷಣೆಯ ಕಾರ್ಯವನ್ನು ಈ ಅನ್ನಾಂಗದೊಂದಿಗೆ ಇರುವ ಎಲೆಯ ಹಸುರೂ ಮಾಡುತ್ತದೆಯೆಂದು ಕಾಣುತ್ತೆ.


ಈ ಅನ್ನಾಂಗಗಳು "ಪಾಲಿಯೀನ್ಸ್" ಗುಂಪಿಗೆ ಸೇರಿದ ರಸಾಯನ ವಸ್ತುಗಳು. ಈ ಪಾಲಿಯೀನ್ಸ್‌ಗಳ ಅಣುವಿನಲ್ಲಿ ಇಂಗಾಲದ ಪರಮಾಣುಗಳು ಒಂದಕ್ಕೊಂದು ಸೇರಿಕೊಂಡು ಉದ್ದವಾದ ಸರಪಳಿಯಂತಿರುತ್ತದೆ. ಇಂತಹ ಸರಪಳಿಯಲ್ಲಿ ದ್ವಿಬಂಧಗಳು* (Double Bonds) ಮತ್ತು ಏಕಬಂಧಗಳು (Single Bonds) ಒಂದು ಬಿಟ್ಟು ಒಂದು ಬರುತ್ತವೆ.

---

* ಇಂಗಾಲಕ್ಕೆ ಸಂಯೋಜನಾಶಕ್ತಿ (Valency) ನಾಲ್ಕು ; ಅಂದರೆ ಒಂದು ಇಂಗಾಲದ ಪರಮಾಣುವು ನಾಲ್ಕು ಜಲಜನಕದ ಪರಮಾಣುಗಳೊಂದಿಗೆ ಸೇರಬಲ್ಲುದು ; ಹಾಗೆ ಸೇರಿದಾಗ ಆಗುವ ಅಣುವಿಗೆ ಶಕ್ತಿ ಹೆಚ್ಚು. ಆ ಅಣುವನ್ನು ಒಡೆಯುವುದು ಸುಲಭಸಾಧ್ಯವಲ್ಲ. ಉತ್ಕರ್ಷಕ, ಮತ್ತು ಅಪಕರ್ಷಕಗಳು ಅವನ್ನು ಏನೂ ಮಾಡಲಾರವು. ಈ ರೀತಿ ನಾಲ್ಕು ಸಂಯೋಜನಾಶಕ್ತಿಗಳು ಪೂರ್ಣವಾಗಿ ತೃಪ್ತಿಪಡದೆ ಇದ್ದೂ, ಆಗಿರುವ ಅಣುಗಳು ಉಂಟು. ಈ ರೀತಿಯ ಅಸ್ತಿತ್ವವನ್ನು ಕೊಡುವ ಶಕ್ತಿ ಇಂಗಾಲಕ್ಕೆ ಮಾತ್ರ ಉಂಟು. ತೃಪ್ತಿಹೊಂದಿದ ಶಕ್ತಿಯನ್ನು ಒಂದು ದಂಡದಿಂದಲೂ ತೃಪ್ತಿಪಡೆಯದ ಸಂಯೋಜನಾಶಕ್ತಿಯನ್ನು ಅದರ ಕೆಳಗೆ ಮತ್ತೊಂದು ದಂಡ ಬರೆದೂ ಸೂಚಿಸುತ್ತಾರೆ. ಅವುಗಳಿಗೆ ದ್ವಿಬಂಧಗಳೆಂದು (Double Bonds) ಹೆಸರು. ಈ ದ್ವಿಬಂಧಗಳು ಸ್ಥಿರತೆಯ ಗುರುತಲ್ಲ. ಅಸ್ಥಿರತೆಯ ಗುರುತು.



'ಎ' ಅನ್ನಾಂಗ.



ಬೀಟಾ ಕ್ಯಾರೋಟೀನು

'ಎ' ಅನ್ನಾಂಗ ಮತ್ತು ಬೀಟಾಕ್ಯಾರೋಟೀನಿನ ಅಣುರಚನೆಯನ್ನು ಈ ಹಿಂದೆ ಕೊಟ್ಟಿದೆ.

ಈ ಅಣುರಚನೆಯಲ್ಲಿ ದ್ವಿಬಂಧಗಳು ಹೆಚ್ಚಾಗಿ ಇರುವುದನ್ನು ಕಾಣಬಹುದು. ಆದುದರಿಂದಲೇ ಇವಕ್ಕೆ ಅಷ್ಟು ಸ್ಥಿರತೆಯಿಲ್ಲದೆ, ಸುಲಭವಾಗಿ ಉತ್ಕರ್ಷಣ ಹೊಂದ ಬಲ್ಲುದಾಗಿದೆ. ಅದಲ್ಲದೆ ಈ ಎರಡು ಅಣುಗಳನ್ನು ಹೋಲಿಸಿ ನೋಡಿದರೆ, ಬೀಟಾ ಕ್ಯಾರೋಟೀನಿನ ಅಣುವನ್ನು × . . . . × ಎಂಬಲ್ಲಿ ಒಡೆದಾಗ 'ಎ' ಅನ್ನಾಂಗದ ಎರಡು ಅಣುಗಳಾಗುವುದು ಕಂಡುಬರುವುದು. ಆಲ್ಫಾಕ್ಯಾರೋಟೀನಿನ ಅಣು ರಚನೆಯು ಬೀಟಾದರಂತೆಯೇ ಇದ್ದರೂ '*a*'ಯಲ್ಲಿ ದ್ವಿಬಂಧವು ಇರದೆ '*b*'ಯಲ್ಲಿ ಇರುವುದರಿಂದ, ಆ ಅಣುವನ್ನು ಒಡೆಯುವುದರಿಂದ 'ಎ' ಅನ್ನಾಂಗದ ಒಂದೇ ಒಂದು ಅಣು ದೊರೆಯುತ್ತದೆ. ಈ ಅನ್ನಾಂಗದ ಶಕ್ತಿಯನ್ನು ಹೊಂದಿರಲು M ಚೌಕದಲ್ಲಿ ತೋರಿಸಿರುವ ಬೀಟಾ ಐಯನೋನ್ ಭಾಗವು ಅಣುವಿನಲ್ಲಿ ಇರ ಬೇಕೆಂಬುದು ಸ್ಪಷ್ಟಪಟ್ಟಿದೆ.

'ಎ' ಅನ್ನಾಂಗ ಮತ್ತು ಕ್ಯಾರೋಟೀನುಗಳು ನೀರಿನಲ್ಲಿ ಕರಗುವುದಿಲ್ಲ. ಆದರೆ ಸಾವಯವ ದ್ರಾವಕಗಳಾದ ಕ್ಲೋರೋಫಾರಂ, ಈಥರ್ (Ether) ಮುಂತಾದವು ಗಳಲ್ಲಿ ಕರಗುತ್ತವೆ. ಈ ಅನ್ನಾಂಗದ ದ್ರಾವಣಕ್ಕೆ (Solution) ಆಂಟಿಮೊನಿ ಟ್ರೈಕ್ಲೋರೈಡ್ (Antimony Trichloride) ಹಾಕಿದರೆ ನೀಲಿ ಬಣ್ಣ ಬರುತ್ತದೆ. ಆದರೆ ಬಂದ ಬಣ್ಣ ಸ್ವಲ್ಪ ಹೊತ್ತಿನಲ್ಲಿಯೆ ಹಸುರಾಗುವುದು. ಈ ರಸಾಯನ ಕ್ರಿಯೆ ಯನ್ನು, 'ಎ' ಅನ್ನಾಂಗದ ಇರವನ್ನು ಕಂಡುಹಿಡಿಯಲು ಉಪಯೋಗಿಸುತ್ತಾರೆ.

'ಎ' ಅನ್ನಾಂಗವು ಪಿತ್ತಕೋಶದಲ್ಲಿ, ರಕ್ತದಲ್ಲಿ ಮತ್ತು ಹಾಲು ಮೊಟ್ಟೆ ಮುಂತಾದವುಗಳಲ್ಲಿ ಇದೆಯೆಂದೂ, ಕ್ಯಾರೋಟೀನುಗಳು ಹಸಿರು ಸೊಪ್ಪಿನಲ್ಲಿಯೂ, ಗೆಜ್ಜರಿ ಮುಂತಾದ ಗಡ್ಡೆಗಳಲ್ಲಿಯೂ, ಟೊಮಾಟೊ ಮುಂತಾದ ಹಣ್ಣುಗಳಲ್ಲಿಯೂ ಇದೆಯೆಂದು ತಿಳಿಸಿದೆಯಷ್ಟೆ. ಯಾವಯಾವುದರಲ್ಲಿ ಎಷ್ಟು ಅನ್ನಾಂಗವಿದೆಯೆಂದು ತಿಳಿಯುವುದು ಆವಶ್ಯಕ.

ಈ ರೀತಿ ಎಷ್ಟು ಇದೆ ಎಂಬುದನ್ನು ಕಂಡುಹಿಡಿಯಲು ಒಂದು ಅಳತೆಗೋಲು—ಒಂದು ಮಾನ—ಬೇಕಷ್ಟೆ. ಈ ಅನ್ನಾಂಗಕ್ಕೂ ಬೆಳವಣಿಗೆಗೂ ಇರುವ ಸಂಬಂಧವನ್ನು ಉಪಯೋಗಿಸಿಕೊಂಡು, ಬೆಳೆಯುವ ಇಲಿಗಳಲ್ಲಿ ವಾರಕ್ಕೆ ಮೂರು ಗ್ರಾಂ ತೂಕ ಹೆಚ್ಚಿಸಲು ಬೇಕಾಗುವಷ್ಟು ಅನ್ನಾಂಗವನ್ನು ಒಂದು ಮಾನ (Unit) ಎಂದು ಪರಿಗಣಿಸಿದ್ದರು. ಆದರೆ ಈಗ ಬೀಟಾ ಕ್ಯಾರೋಟೀನು ಶುದ್ಧ ರೀತಿಯಲ್ಲಿ ದೊರತಿರು ವುದರಿಂದ ಅದನ್ನೇ ಆಧಾರವಾಗಿಟ್ಟುಕೊಂಡಿದ್ದಾರೆ. ೦.೦೦೦೬ ಮಿಲಿಗ್ರಾಂ ಬೀಟಾ

ಕ್ಯಾರೋಟೀನಿನಲ್ಲಿರುವ ಶಕ್ತಿಯನ್ನು ಒಂದು ಅಂತರರಾಷ್ಟ್ರೀಯ ಮಾನ (International Unit) ಎಂದು ನಿರ್ಧರಿಸಲಾಗಿದೆ. ಅಂದರೆ ೧ ಗ್ರಾಂ ಶುದ್ಧ ಬೀಟಾ ಕ್ಯಾರೋಟೀನಿನಲ್ಲಿ ೧,೬೬೬,೬೬೭ ಮಾನಗಳಿವೆ ಎಂದಾಯಿತು. ಈ ಮಾನವಲ್ಲದೆ, ಇನ್ನೂ ಕೆಲವು ಮಾನಗಳು ಬಳಕೆಯಲ್ಲಿವೆ.

ಬೀಟಾ ಕ್ಯಾರೋಟೀನು, ಅಥವಾ ಅದಕ್ಕೆ ಸರಿಸಮನಾದ ಶಕ್ತಿ ಆಹಾರದಲ್ಲಿ ಎಷ್ಟು ಇದೆಯೆಂಬುದನ್ನು ದೇಹದ ಹೊರಗಡೆ ಕಂಡುಹಿಡಿದರೆ ಸಾಲದು. ಏಕೆಂದರೆ ನಾವು ತೆಗೆದುಕೊಂಡ ಕ್ಯಾರೋಟೀನು ಎಲ್ಲವೂ, ಅಂದರೆ ನೂರಕ್ಕೆ ನೂರು ಭಾಗವೂ, 'ಎ' ಅನ್ನಾಂಗವಾಗಿ ಪರಿವರ್ತಿತವಾಗುವುದಿಲ್ಲ. ಆದ ಅನ್ನಾಂಗವೆಲ್ಲವೂ ಸಂಪೂರ್ಣವಾಗಿ ಹೀರಿಕೊಳ್ಳಲ್ಪಡುವುದೂ ಇಲ್ಲ. ಈ ರೀತಿ ಪರಿವರ್ತನ ಮತ್ತು ಹೀರಿಕೊಳ್ಳುವುದು ಆಹಾರದಲ್ಲಿನ ಉಳಿದ ರಸಾಯನ ವಸ್ತುಗಳನ್ನು ಅವಲಂಬಿಸಿರುತ್ತದೆ. ಇದಲ್ಲದೆ ಆಹಾರವಿರುವ ಸ್ಥಿತಿಯನ್ನು ಅನುಸರಿಸಿರುತ್ತದೆ. ಉದಾಹರಣೆಗೆ ಹಸಿಯ ಗೆಜ್ಜರಿಯಲ್ಲಿನ ಅನ್ನಾಂಗದಲ್ಲಿ ಕೇವಲ ಶೇಕಡ ಒಂದರಷ್ಟು ಅನ್ನಾಂಗವನ್ನು ಮಾತ್ರ ದೇಹ ಬಳಸಿಕೊಳ್ಳಬಲ್ಲುದು. ಅದೇ ಬೇಯಿಸಿದ ಗೆಜ್ಜರಿಯಿಂದ ಶೇಕಡ ೩೫ ರಷ್ಟು ಉಪಯೋಗಿಸಿಕೊಳ್ಳಬಲ್ಲುದು. ಇದರೊಂದಿಗೆ ಮನುಷ್ಯರು 'ಎ' ಅನ್ನಾಂಗವನ್ನು ಉಪಯೋಗಿಸಿಕೊಂಡಹಾಗೆ ಕ್ಯಾರೋಟೀನನ್ನು ಬಳಸಿಕೊಳ್ಳಲಾರರು. ಆದುದರಿಂದಲೇ ಒಂದು ಮಿಲಿಗ್ರಾಂ ಶುದ್ಧವಾದ 'ಎ' ಅನ್ನಾಂಗಕ್ಕೆ ಎರಡು ಮಿಲಿಗ್ರಾಂ ಬೀಟಾ ಕ್ಯಾರೋಟೀನಿನ ಶಕ್ತಿಯುಂಟು.

ಬೀಟಾ ಕ್ಯಾರೋಟೀನಿನ ಶಕ್ತಿ ೧೦೦ ಇದ್ದರೆ ಅದೇ ತೂಕದ ಉಳಿದವುಗಳ ಶಕ್ತಿಯನ್ನು ಹೋಲಿಸಲು ಈ ಪಟ್ಟಿಯನ್ನು ಕೊಟ್ಟಿದೆ.

'ಎ' ಅನ್ನಾಂಗ (ಆಲ್ಕೋಹಾಲ್ ಅಥವ ಎಸ್ಟರಿನ ರೂಪದಲ್ಲಿ)	೩೪೦
ಬೀಟಾ ಕ್ಯಾರೋಟೀನು	೧೦೦
ಆಲ್ಫಾ ,,	೫೩
ಗ್ಯಾಮ ,,	೩೮
ಕ್ರಿಪ್ಟೊ ಜ಼ಾನ್‌ಥೀನ್ (Crypto Xanthine)	೫೭

ಈ ಅನ್ನಾಂಗ ಎಷ್ಟು ಇದೆಯೆಂಬುದನ್ನು ಕಂಡಿಹಿಡಿಯಲು ಎರಡು ಮಾರ್ಗಗಳಿವೆ. ಅದರ ರಸಾಯನಗುಣವನ್ನು ಅವಲಂಬಿಸಿರುವ ಮಾರ್ಗ ಮೊದಲನೆಯದು. ಪ್ರಾಣಿಗಳಿಗೆ ಕೊಟ್ಟು, ಅವುಗಳ ಬೆಳವಣಿಗೆ, ಮುಂತಾದವುಗಳನ್ನು ಪರೀಕ್ಷಿಸುವುದರ ಮೂಲಕ ಎಷ್ಟು ಇದೆಯೆಂಬುದನ್ನು ಕಂಡುಹಿಡಿಯುವುದು ಎರಡನೆಯ ಮಾರ್ಗ.

ವಸ್ತುವನ್ನು, ಗೊತ್ತಾದ ತೂಕದಷ್ಟು ತೆಗೆದುಕೊಂಡು, ಅದನ್ನು ಪೊಟ್ಯಾಸಿಯಂ ಹೈಡ್ರಾಕ್ಸೈಡ್ (Potassium Hydroxide)ನೊಂದಿಗೆ ಕುದಿಸಿ, ಎಸ್ಟರ್ ರೂಪದಲ್ಲಿರುವ ಅನ್ನಾಂಗವನ್ನು ಆಲ್ಕೋಹಾಲ್ ರೂಪಕ್ಕೆ ತಂದು ಅನಂತರ ಈಥರ್ ಮುಂತಾದ ದ್ರಾವಕಗಳನ್ನು ಉಪಯೋಗಿಸಿಕೊಂಡು, ಉಳಿದ–ಈಥರ್‌ನಲ್ಲಿ ಕರಗದ–ವಸ್ತುಗಳಿಂದ ಬೇರ್ಪಡಿಸಬಹುದು. ಈ ರೀತಿ ಬಂದ ಅನ್ನಾಂಗವನ್ನು ಅಥವಾ ಕ್ಯಾರೋಟೀನನ್ನು ಕ್ಲೋರೋಫಾರಂ (Chloroform)ನಲ್ಲಿ ಕರಗಿಸಿ ಅದಕ್ಕೆ ಕ್ಲೋರೋಫಾರಂನಲ್ಲಿ ಕರಗಿದ ಆಂಟಿಮೊನಿ ಟ್ರೈಕ್ಲೋರೈಡನ್ನು ಹಾಕಿದರೆ ಬರುವ ನೀಲಿಯ ಬಣ್ಣವನ್ನು, ಗೊತ್ತಾದಷ್ಟು ಅನ್ನಾಂಗ ಹೊಂದಿರುವ ಮತ್ತೊಂದು ದ್ರಾವಣಕ್ಕೂ, ಇಷ್ಟೇ ಇದೇ ರಸಾಯನ ವಸ್ತುವನ್ನು ಹಾಕಿ ಬಂದ ನೀಲಿಯನ್ನೂ, ಹೋಲಿಸಿ ಎಷ್ಟು ಇದೆಯೆಂಬುದನ್ನು ಕಂಡುಹಿಡಿಯುತ್ತಾರೆ. ಈ ರೀತಿ ಬಣ್ಣಗಳನ್ನು ಹೋಲಿಸಲು ವಿಶೇಷ ಉಪಕರಣಗಳಿವೆ.

ಬಿಳಿಯ ಇಲಿಯ ಜೀರ್ಣಾಂಗಗಳೂ, ಮತ್ತು ಅದರ ದೇಹದ ಉಳಿದ ಕ್ರಿಯೆಗಳೂ ಮನುಷ್ಯರಲ್ಲಿರುವಂತೆಯೇ ಇವೆ. ಇದರೊಂದಿಗೆ ಅದು ಕೇವಲ ಕೆಲವಾರು ತಿಂಗಳಲ್ಲಿಯೇ ಮನುಷ್ಯರಲ್ಲಿ ಹತ್ತಾರು ವರ್ಷಗಳಲ್ಲಿ ಆಗುವ ಬದಲಾವಣೆಗಳನ್ನು ಹೊಂದುತ್ತದೆ. ಆದುದರಿಂದಲೇ ಬಿಳಿಯ ಇಲಿಗಳನ್ನು ಪ್ರಯೋಗಕ್ಕೆ ವಿಶೇಷವಾಗಿ ಬಳಸಿಕೊಳ್ಳುವರು. ಒಂದು ದೊಡ್ಡ ಗುಂಪು ಇಲಿಗಳನ್ನು ಒಂದೇ ಸಮನಾದ ಎರಡು ಗುಂಪುಗಳನ್ನಾಗಿ ಮಾಡಿ, ಎರಡು ಗುಂಪಿನ ಇಲಿಗಳಿಗೂ 'ಎ' ಅನ್ನಾಂಗವಿಲ್ಲದ ಆಹಾರ ಕೊಟ್ಟು ಅವುಗಳ ದೇಹದಲ್ಲಿ ಶೇಖರವಾಗಿದ್ದ ಅನ್ನಾಂಗವೆಲ್ಲವೂ ವೆಚ್ಚವಾದಮೇಲೆ, ಒಂದು ಗುಂಪಿಗೆ ಪ್ರತಿದಿನವೂ ಉಳಿದ ಆಹಾರ ಮತ್ತು ಗೊತ್ತಾದ ತೂಕದಷ್ಟು ಈ ಆಹಾರವನ್ನು ಕೊಡುತ್ತಾರೆ. ಇನ್ನೊಂದು ಗುಂಪಿಗೆ ಗೊತ್ತಾದ ತೂಕದಷ್ಟು ಬೀಟಾ ಕ್ಯಾರೋಟೀನನ್ನು, ಉಳಿದ ಆಹಾರದೊಂದಿಗೆ ಕೊಡುತ್ತಾರೆ. ಒಂದೆರಡು ವಾರಗಳು ಕಳೆದ ಅನಂತರ, ಆ ಎರಡು ಗುಂಪುಗಳ ತೂಕವನ್ನೂ ಮತ್ತು ಉಳಿದ ಅಳತೆಗೆ ಸಿಕ್ಕಬಹುದಾದ ಬದಲಾವಣೆಗಳನ್ನೂ ಹೋಲಿಸಿ ಆ ವಸ್ತುವಿನಲ್ಲಿ ಎಷ್ಟು ಅನ್ನಾಂಗವಿದೆಯೆಂದು ಕಂಡುಹಿಡಿದಿದ್ದಾರೆ.

ಬೇರೆಬೇರೆಯ ಆಹಾರಗಳಲ್ಲಿ ಈ ಅನ್ನಾಂಗ ಎಷ್ಟು ಇದೆಯೆಂಬುದನ್ನು ಈ ಕೆಳಗೆ ಕೊಟ್ಟಿದೆ:—

ಒಂದು ಗ್ರಾಂ ಆಹಾರದಲ್ಲಿ ಎಷ್ಟು 'ಎ' ಅನ್ನಾಂಗವಿದೆಯೆಂಬುದು ಈ ಪಟ್ಟಿಯಲ್ಲಿದೆ

ಕಾಡ್‌ಲಿವರ್ ಎಣ್ಣೆ	....	೬೦೦– ೨,೦೦೦	ಅಂತರರಾಷ್ಟ್ರೀಯ ಮಾನಗಳಲ್ಲಿ
ಷಾರ್ಕ್‌ಲಿವರ್ ಎಣ್ಣೆ	....	೪,೦೦೦–೧೫,೦೦೦	,,

ಹಾಲಿಬಟ್‌ಲಿವರ್ ಎಣ್ಣೆ	....	೧೯,೦೦೦–೩೯,೦೦೦	ಅಂತರರಾಷ್ಟ್ರೀಯ ಮಾನಗಳಲ್ಲಿ
ಹಾಲು (ನೂರು ಗ್ರಾಂನಲ್ಲಿ)	....	೧೬೦– ೨೨೫	„
ಮೊಟ್ಟೆ („)	....	೧,೦೦೦– ೨,೦೦೦	„
ಬೆಣ್ಣೆ („)	....	೩,೫೦೮– ೫,೦೦೦	„

ಸಸ್ಯಗಳಲ್ಲಿ ಸಹ ಅನ್ನಾಂಗದ ರೂಪದಲ್ಲಿ ನೂರು ಗ್ರಾಂ ಆಹಾರದಲ್ಲಿ ಎಷ್ಟು ಅನ್ನಾಂಗವಿದೆ ಎಂಬುದನ್ನು ಈ ಕೆಳಗೆ ಕೊಟ್ಟಿದೆ:—

ಹಸಿರು ಸೊಪ್ಪುಗಳು:

ಎಳೆ ದಂಟು	....	೨,೫೦೦–೧೧,೦೦೦	ಅಂತರರಾಷ್ಟ್ರೀಯ ಮಾನಗಳಲ್ಲಿ
ಬಸಳೆ ಸೊಪ್ಪು	....	೨,೬೦೦– ೩,೫೦೦	„
ಮೆಂತ್ಯ	....	೨,೭೦೦	„
ಅಗಸೆ	....	೯,೦೦೦	„
ಎಲೆಕೋಸು	....	೨,೦೦೦	„
ನುಗ್ಗೆ ಸೊಪ್ಪು	....	೧೧,೩೦೦	„
ಕೊತ್ತುಂಬರಿ	....	೧೦,೪೬೦–೧೨,೬೦೦	„
ಪುದೀನಾ	....	೨,೭೦೦	„
ಕರಿಬೇವು	....	೧೨,೬೦೦	„
ಬೇವು	....	೪,೬೦೦	„
ವೀಳ್ಯದೆಲೆ	....	೯,೬೦೦	„

ಉಳಿದವುಗಳು:

ಗಜ್ಜರಿ	....	೨,೦೦೦–೪,೩೦೦೦	„
ಮಾವಿನಹಣ್ಣು	....	೪,೮೦೦	„
ಪರಂಗಿಹಣ್ಣು	....	೨,೦೨೦	„
ಟೊಮ್ಯಾಟೊ	....	೩೨೦	„
ಕಿತ್ತಳೆ	....	೩೫೦	„
ಗೋಧಿ	....	೧೦೮	„
ಜೋಳ	....	೧೩೬	„
ರಾಗಿ	....	೭೦	„
ಅಕ್ಕಿ	....	ಅತ್ಯಲ್ಪ	„
ಕಡಲೇಬೇಳೆ	....	೩೧೬	„
ಹುರಳಿ	....	೧೧೯	„
ತೊಗರಿ	....	೨೨೦	„
ಸೋಯಾಬೀನ್	....	೭೧೦	„

ಕೆಂಪುತಾಳೆ ಎಣ್ಣೆ (Red Palm Oil .... ೪೦,೦೦೦–೫೦,೦೦೦ ಅಂತರರಾಷ್ಟ್ರೀಯ ಮಾನಗಳಲ್ಲಿ

(೧೦೦=೮.೬೩ ತೊಲ=೩.೫ ಔನ್ಸು)

ಈ ಅನ್ನಾಂಗ ಮನುಷ್ಯನಿಗೆ ಒಂದು ದಿನಕ್ಕೆ ಎಷ್ಟು ಬೇಕು ಎಂಬ ವಿಷಯದಲ್ಲಿ ಹಲವಾರು ಅಭಿಪ್ರಾಯಗಳಿವೆ. ಬೆಳೆಯುವ ಮಕ್ಕಳಿಗೂ, ಗರ್ಭವತಿ ಮತ್ತು ಬಾಣಂತಿಯರಿಗೂ ಸಹಜವಾಗಿಯೇ ಹೆಚ್ಚು ಬೇಕು. ನಮ್ಮ ಆಹಾರದಲ್ಲಿ ನಮಗೆ ಬೇಕಾದುದಕ್ಕಿಂತ ಸ್ವಲ್ಪ ಹೆಚ್ಚಾಗಿಯೇ ಅನ್ನಾಂಗವಿರುವುದು ಕ್ಷೇಮ. ಆದುದರಿಂದ ನಮ್ಮ ದೇಹ ಆರೋಗ್ಯವಾಗಿರುವುದಕ್ಕೆ ಮತ್ತು ಬೆಳವಣಿಗೆ ಸರಿಯಾಗಿರುವುದಕ್ಕೆ ಎಷ್ಟು ಬೇಕೆಂಬುದನ್ನು ತಿಳಿಯಬೇಕು. ಎಲ್ಲಾ ಸಸ್ತನಿಗಳಿಗೂ, ಹಕ್ಕಿಗಳಿಗೂ ಮತ್ತು ಮೀನುಗಳಿಗೂ ಈ ಅನ್ನಾಂಗ ಆವಶ್ಯಕ. ಹಾಗೆಂದರೆ ಎಲ್ಲಾ ಪ್ರಾಣಿಗಳಿಗೂ ಆವಶ್ಯಕವೆಂದಲ್ಲ. ಉದಾಹರಣೆಗಾಗಿ—ಜಿರಲೆಗಳಿಗೆ ಈ ಅನ್ನಾಂಗದ ಆವಶ್ಯಕತೆಯಿಲ್ಲ.

ಮನುಷ್ಯ, ದನ, ಕುದುರೆ, ಕುರಿ, ಇವೆಲ್ಲಕ್ಕೂ ಕನಿಷ್ಠಪಕ್ಷ ಎಷ್ಟು ಬೇಕೆಂಬುದನ್ನು ನಿರ್ಧರಿಸಿದ್ದಾರೆ. ಎಲ್ಲವುಗಳಲ್ಲಿಯೂ ಪ್ರತಿಯೊಂದು ಕಿಲೋಗ್ರಾಂ ತೂಕಕ್ಕೂ (೨⅕ ಪೌಂಡು) 'ಎ' ಅನ್ನಾಂಗದ ೨೦ ಮಾನಗಳು ಸಾಕು. 'ಎ' ಅನ್ನಾಂಗದಷ್ಟು ಚೆನ್ನಾಗಿ ಬೀಟಾ ಕ್ಯಾರೋಟೀನನ್ನು ದೇಹ ಉಪಯೋಗಿಸಿಕೊಳ್ಳವುದಿಲ್ಲವಾದುದರಿಂದ ೪೦ ಮಾನಗಳಷ್ಟು ಬೀಟಾ ಕ್ಯಾರೋಟೀನು ಬೇಕು. ಇಷ್ಟು ಕಡೆಯಪಕ್ಷ ಆಹಾರದಲ್ಲ ಇದ್ದೇ ಇರಬೇಕು. ಇಷ್ಟಿದ್ದರೆ ಅನ್ನಾಂಗ ಶೇಖರವಾಗುವುದಿಲ್ಲ. ಅಂದಿನ ಬಳಕೆಗೆ ಮಾತ್ರ ಸಾಕು. ಇವೆಲ್ಲವನ್ನೂ ಪರಿಶೀಲಿಸಿ ಸುಮಾರು ನೂರಿಪ್ಪತ್ತು ಪೌಂಡಿನ ವಯಸ್ಕನಿಗೆ ದಿನಕ್ಕೆ ಸುಮಾರು ೪,೦೦೦ I.U. ಗಳು (International Units) ಸಾಕು. ಗರ್ಭವತಿಯರಿಗೆ ಸುಮಾರು ೫,೦೦೦ ದಿಂದ ೬,೦೦೦ I.U. ಗಳು ಬೇಕು. ಬೆಳೆಯುವ ಮಕ್ಕಳಿಗೆ ಇಪ್ಪತ್ತು ವರುಷದ ವರಿವಿಗೂ, ಸುಮಾರು ೩೦೦೦-೪,೦೦೦ I.U. ಗಳು ಬೇಕು. ಅನ್ನಾಂಗ ಅಭಾವದಿಂದ ನರಳುತ್ತಿರುವವರಿಗೆ ೨೫,೦೦೦ I.U. ಗಳಷ್ಟು ಕೆಲವು ದಿನವಾದರೂ ಕೊಡಬೇಕಾಗುವುದು.

ಈ ಅನ್ನಾಂಗವನ್ನು ಹೆಚ್ಚಿಗೆ ತೆಗೆದುಕೊಂಡರೆ ವಿಷವಾದೀತು ಎಂಬ ಹೆದರಿಕೆಯೇನೂ ಇಲ್ಲ. ತೀರ ಹೆಚ್ಚಿಗೆ ತೆಗೆದುಕೊಂಡರೆ ಹಾಗೆ ಆದೀತು. ಆದರೆ ಔಷಧದಂತೆ ತೆಗೆದುಕೊಳ್ಳಬೇಕಾದಾಗಲೂ ಆ ಮಟ್ಟವನ್ನು ಮುಟ್ಟುವುದಿಲ್ಲ.

ಕ್ಯಾರೋಟೀನನ್ನು ಅದು ಸಿಗುವ ಆಹಾರದಿಂದ ಪ್ರತ್ಯೇಕಿಸುವುದು, ಹೆಚ್ಚು ಅನ್ನಾಂಗವುಳ್ಳ ಎಣ್ಣೆ (Concentrate) ಯನ್ನು ತಯಾರಿಸುವುದು, ಉಳಿದ ಅನ್ನಾಂಗಗಳ ಪ್ರತ್ಯೇಕಿಸುವಿಕೆ ಮತ್ತು ತಯಾರಿಕೆಗಿಂತ ಸುಲಭಸಾಧ್ಯ. ಗೆಜ್ಜರಿ ಅಥವಾ

ಹುಲ್ಲು, ಬೀಜದ ಎಣ್ಣೆಗಳು ಮತ್ತು ಕೆಂಪು ತಾಳೆ ಎಣ್ಣೆ ಮುಂತಾದವುಗಳು ಈ ತಯಾರಿಕೆಗೆ ಪ್ರಾರಂಭದ ವಸ್ತುಗಳು.

ಇದನ್ನು ಪ್ರತ್ಯೇಕಿಸಲು ಆ ಎಲೆಗಳ ಅಥವಾ ಎಣ್ಣೆ ಮುಂತಾದವುಗಳೊಂದಿಗಿರುವ ನೀರು ತುಂಬಾ ತೊಂದರೆ ಕೊಡುತ್ತದೆ. ಆದುದರಿಂದ ಆ ಸಸ್ಯಸಾಮಗ್ರಿಯನ್ನು ಒಣಗಿಸಬೇಕು. ಒಣಗಿಸುವಾಗ ಎಚ್ಚರಿಕೆ ತೆಗೆದುಕೊಳ್ಳದಿದ್ದರೆ ಈ ಅನ್ನಾಂಗವು ಸ್ವಲ್ಪಮಟ್ಟಿಗೆ ನಾಶವಾಗುವುದು, ಆದುದರಿಂದ ಒಂದು ವಿಶೇಷರೀತಿಯಲ್ಲಿ ಒಣಗಿಸುತ್ತಾರೆ; ಅಥವಾ ನೀರನ್ನು ಹೀರಿಕೊಳ್ಳುವ ರಸಾಯನ ವಸ್ತುಗಳನ್ನು ಉಪಯೋಗಿಸುತ್ತಾರೆ. ಅನಂತರ ಅದನ್ನು ಈಥರ್ ಮುಂತಾದ ಸಾವಯುವ ದ್ರಾವಕಗಳಿಂದ ಅನ್ನಾಂಗವನ್ನು ಉಳಿದ ಈಥರ್‌ನಲ್ಲಿ ಕರಗದ ವಸ್ತುಗಳಿಂದ ಬೇರ್ಪಡಿಸುತ್ತಾರೆ. ಗೆಜ್ಜರಿಯಿಂದ ತಯಾರಿಸಲು, ಅದರ ರಸವನ್ನು ತೆಗೆದುಕೊಂಡು, ಅದನ್ನು ಎಚ್ಚರಿಕೆಯಿಂದ ಕಾಯಿಸುವುದರಿಂದ ಅದರಲ್ಲಿರುವ ಸಸಾರಜನಕಪದಾರ್ಥಗಳು ಆ ದ್ರಾವಣಗಳಿಂದ ಹೊರಗೆ ಹಾಕಲ್ಪಡುತ್ತವೆ. ಹಾಗೆ ಘನರೂಪ ಹೊಂದುವಾಗ ಈ ಸಹ ಅನ್ನಾಂಗವನ್ನೂ ಹೀರಿಕೊಂಡಿರುತ್ತವೆ. ಆದುದರಿಂದ ಆ ಘನ ಪದಾರ್ಥವನ್ನು ಶೋಧಿಸಿ ಬೇರ್ಪಡಿಸುವರು. ಸಸಾರಜನಕಪದಾರ್ಥಗಳು ಈಥರ್‌ನಲ್ಲಿ ಕರಗದಿರುವುದರಿಂದ ಈ ರೀತಿ ಬಂದ ಘನಪದಾರ್ಥದಿಂದ ಈಥರ್‌ನ್ನು ಉಪಯೋಗಿಸಿಕೊಂಡು ಕ್ಯಾರೋಟೀನನ್ನು ಸುಲಭವಾಗಿ ಪ್ರತ್ಯೇಕಿಸುವರು.

‘ಎ’ ಅನ್ನಾಂಗದ ತಯಾರಿಕೆಗೆ ಕಾಡ್, ಹಾಲಿಬಟ್, ಮೀನುಗಳ ಮತ್ತು ಷಾರ್ಕ್‌ನ ಪಿತ್ತಕೋಶದ ಎಣ್ಣೆಗಳೇ ಪ್ರಾರಂಭದ ಸಾಮಗ್ರಿಗಳು. ಪ್ರಯೋಗಶಾಲೆಗೆ ಮಾತ್ರ ಈ ಅನ್ನಾಂಗವನ್ನು ಶುದ್ಧರೂಪದಲ್ಲಿ ತಯಾರಿಸುವರು. ಜನಗಳ ಉಪಯೋಗಕ್ಕಾಗಿ ಆ ಎಣ್ಣೆಗಳಲ್ಲಿರುವ ಉಳಿದ ವಸ್ತುಗಳನ್ನು ತೆಗೆದು ‘ಎ’ ಅನ್ನಾಂಗ ಹೆಚ್ಚಾಗಿ ಇರುವ ಎಣ್ಣೆಯನ್ನು (Concentrate) ತಯಾರಿಸುವರು. ಈ ತಯಾರಿಕೆಗೆ ಹಲವು ಮಾರ್ಗಗಳಿವೆ. ಮೊದಲು ಎಣ್ಣೆಯಲ್ಲಿ ಅನ್ನಾಂಗವನ್ನು ಆವಿಯ ರೂಪಕ್ಕೆ ತಂದು, ಆ ಆವಿಯನ್ನು ಬೇರ್ಪಡಿಸಿ, ಅನಂತರ ಅದನ್ನು ಪಂಪುಮಾಡಿ ಮತ್ತೆ ದ್ರವರೂಪಕ್ಕೆ ತರುವರು. ಈ ಎಲ್ಲ ಕಾರ್ಯಗಳನ್ನು ಎಚ್ಚರಿಕೆಯಿಂದ ಮಾಡಬೇಕು. ಇಲ್ಲದಿದ್ದರೆ ಅನ್ನಾಂಗ ನಾಶವಾಗುವುದು. ಅದಕ್ಕೋಸ್ಕರ ಒಂದು ವಿಶೇಷರೀತಿಯ ಉಪಕರಣದ (Cyclic Molemlar Still) ಸಹಾಯದಿಂದ ಈ ರೀತಿ ಪ್ರತ್ಯೇಕಿಸುವರು. ಹೀಗೆ ಬಂದ ಎಣ್ಣೆಗಳಲ್ಲಿ ೧ ಗ್ರಾಮಿಗೆ ೧೦ ಲಕ್ಷದಿಂದ ೨೦ ಲಕ್ಷ I.U. ನಷ್ಟು ಶಕ್ತಿಯಿರುವುದು.

ಈ ರೀತಿ ತಯಾರಿಸಿದ ಎಣ್ಣೆಯ ವಾಸನೆಯನ್ನು ಕಡಿಮೆಮಾಡಲು ಅನೇಕ

ಪ್ರಯತ್ನಗಳು ನಡೆದಿರುವುವು. ಆದರೆ ಯಾವ ಪ್ರಯತ್ನಗಳೂ ಅಷ್ಟು ಸಫಲವಾಗಿಲ್ಲ ಎಂದು ಎಲ್ಲರಿಗೂ ಗೊತ್ತೇ ಇದೆ. ಈ ಎಣ್ಣೆಗಳನ್ನು ಕೊಬ್ಬರಿ ಎಣ್ಣೆ, ಆಲಿವ್ ಎಣ್ಣೆ ಮುಂತಾದವುಗಳೊಂದಿಗೆ ಬೆರಸುವುದರಿಂದ ಅದರ ವಾಸನೆ ಸ್ವಲ್ಪಮಟ್ಟಿಗೆ ಕಡಿಮೆ ಯಾಗುವುದು ಮತ್ತು ಈ ಎಣ್ಣೆಗಳಿಗೆ ಅನ್ನಾಂಗ ಉತ್ಕರ್ಷಣಹೊಂದಿ ಹಾಳಾಗದಂತೆ ತಡೆಯುವ ಶಕ್ತಿಯುಂಟು.

ಗ್ರಂಥಋಣ

1. *Vitamins : A Digest of Current Knowledge*—LESLIE J. HARRIS.
2. *Vitominology*—WALTER H. EDDY.
3. *Vitamins*—ROSENBERG.
4. *Chemistry of Food and Nutrition*—SHERMAN, H. C.
5. *Health Bulletin : The Nutritive Value of Indian Foods*—NUTRITION RESEARCH LABORATORIES, COONOOR.

ಎ. ಸುಬ್ಬರಾವ್

ವಸ್ತುಕೋಶ

ಸಮ್ಮೇಳನಾಧ್ಯಕ್ಷರ ಭಾಷಣದಿಂದ ಆಯ್ದ ಮುಖ್ಯಾಂಶಗಳು

ಕನ್ನಡದೇಶದ ಇತಿಹಾಸ ವಿಸ್ತಾರವಾದ ಜೀವನದಲ್ಲಿ, ಒಂದೇ ನಾಡಿನವರಾಗಿ ಶತಮಾನ, ಶತಮಾನಗಳ ಕಾಲ ಬಾಳಿ ಬದುಕಿದ ಕನ್ನಡ ಜನರು, ಇಂದು ಭಿನ್ನ ಭಿನ್ನ ರಾಜಕೀಯ ಪ್ರಾಂತಗಳಲ್ಲಿ ಉಳಿದುಕೊಂಡು, ತಮ್ಮ ಆರ್ಥಿಕ, ಸಾಂಸ್ಕೃತಿಕ, ಇಲ್ಲವೆ ಸಾಮಾಜಿಕವಾದ ಯಾವ ಆಶೋತ್ತರಗಳನ್ನೂ ಕಾಲಕ್ಕೆ ತಕ್ಕಂತೆ ಬೆಳೆಯಿಸಿ ಕೊಳ್ಳಲಾರದೆ ನರಳುತ್ತಿರುವ ಈ ಕಾಲದಲ್ಲಿ, ಈ ಕನ್ನಡ ಸಾಹಿತ್ಯಪರಿಷತ್ತಿನಂತಹ ಒಂದು ಸಂಸ್ಥೆ ರಾಜಕೀಯ ಅಡಚಣೆ ಮತ್ತು ಮೇರೆಗಳನ್ನು ಮುರಿದು, ಹರಿದು ಹಂಚಿ ಹೋದ ಕರ್ಣಾಟಕವನ್ನು ಒಂದುಗೂಡಿಸಿ ನಾಡಿನ ಮಕ್ಕಳ ದನಿಗಳಲ್ಲಿ ಒಂದೇ ಶ್ರುತಿ ಹುಟ್ಟಿಬರುವಂತೆ, ಶ್ರಮಿಸುತ್ತಿರುವ ಸಂಸ್ಥೆಯಾಗಿದೆ. ಜೀವನದ ಇತರ ರಂಗಗಳಲ್ಲಿ ತಾವು ಬೇರೆಬೇರೆಯ 'ಗುಂಪು', 'ಬಣ' ಎಂದು ತಿಳಿದು, ಕಲಹ ಸೆಣಸಾಟಗಳು ನಡೆಯು ತ್ತಿದ್ದರೂ, ಈ ಸಾಹಿತ್ಯಕ್ಷೇತ್ರದಲ್ಲಿ, ಈ ಸಮ್ಮೇಳನದ ಆಸರೆಯಲ್ಲಿ 'ಕನ್ನಡಿಗರು' ಹಲರಲ್ಲ; ಕನ್ನಡದ ಕುಲ ಒಂದು; ಜನ ಒಂದು; ನುಡಿ ಒಂದು ಎಂದು ನಮ್ಮ ಸಾಹಿತಿಗಳು ಹಿಂದಿನಿಂದಲೂ ಹೇಳುತ್ತ ಬಂದಿದ್ದಾರೆ. ಯಾರು ಎಷ್ಟೇ ಮೂದಲಿಸಿ ದರೂ, ರಾಜಕಾರಣಿಗಳು ಎಂತಹ ವಾದ ಮಂಡಿಸಿದರೂ, ನಮ್ಮ ಕನ್ನಡ ಸಾಹಿತಿಗಳು ಮಾತ್ರ 'ಕನ್ನಡ ನಾಡು ಒಂದುಗೂಡಬೇಕು' ಎಂಬ ಹಂಬಲವನ್ನು ಇರಿಸಿಕೊಂಡೇ ಬಂದಿದ್ದಾರೆ. ಅದಕ್ಕಾಗಿ ನಾಡಿನಲ್ಲಿ ತೊಳಲಾಡಿದ್ದಾರೆ. ಅವರು ಎಂದೂ ಆ ಸವಿಗನಸನ್ನು ಬಿಟ್ಟುಕೊಟ್ಟವರಲ್ಲ; ಕೊಡುವವರೂ ಅಲ್ಲ. ಸಾಹಿತ್ಯಕ್ಷೇತ್ರದಲ್ಲಿ ದುಡಿಯುವ ಜನಗಳಿಗೆ ರಾಜಕೀಯದ ಜಾಣ್ಮೆ, ಚಾತುರ್ಯ, ತಂತ್ರ ಹೆಚ್ಚಾಗಿ ತಿಳಿಯದು. ಕನ್ನಡದ ವಿವಿಧ ಭಾಗಗಳನ್ನು ಅವರು ಚೆನ್ನಾಗಿ ಬಲ್ಲರು. ಸ್ವಲಾಭ ಸ್ವಕಾರ್ಯ ಸಾಧನೆಗಳ ಆಸೆಯಿಲ್ಲದೆ, ಕನ್ನಡ ಜನಗಳ ಶ್ರೇಯಸ್ಸು ಎಲ್ಲಿದೆ ಎಂಬುದ ನ್ನವರು ಊಹಿಸಬಲ್ಲರು. ಅಂತಹವರಲ್ಲಿ ಸದಾ ಸಂಚಾರಿಯಾದ ನಾನೂ ಒಬ್ಬನೆಂದು ಧೈರ್ಯವಾಗಿ ಹೇಳುತ್ತೇನೆ. ನಾನು ತುಸು ರಾಜಕೀಯವನ್ನೂ ಬಲ್ಲೆ, ಅರ್ಥಶಾಸ್ತ್ರದ ರೂಪರೇಖೆಗಳಾದರೂ ಗೊತ್ತು. ನಮ್ಮ ಜನಗಳ ಕಡುದಾರಿದ್ರ್ಯ, ಸ್ಥಿತಿ, ಗತಿ, ಕುಂದುಕೊರತೆ—ಎಲ್ಲವನ್ನೂ ಸಾಕಷ್ಟು ತಿಳಿದಿದ್ದೇನೆ. ನನ್ನ ಸಂಚಾರಗಳಾಗಲಿ, ನನ್ನ ವಿವಿಧಾನುಭವಗಳಾಗಲಿ, ಕರ್ಣಾಟಕ ಏಕೀಕರಣದ ವಿಚಾರದಲ್ಲಿ ಎಂದೂ ನನ್ನನ್ನು

ತಪ್ಪುದಾರಿಗೆ ಒಯ್ದಿರಲಿಲ್ಲ; ಒಯ್ಯಲಾರವು. ಹತ್ತು, ಹದಿನಾರು ಶತಮಾನಗಳ ಕಾಲವೇ ಒಂದುಗೂಡಿದ್ದ ದೇಶ ಇದು. ಹಾಗೆ ಬಾಳಿ—ಹಿರಿದಾದ ಸಂಸ್ಕೃತಿ, ಇತಿಹಾಸಗಳನ್ನು ಕಟ್ಟಿಕೊಂಡು ಬಂದು, ಭಾರತದ ಇತಿಹಾಸದಲ್ಲಿಯೇ ಸುವರ್ಣ ಯುಗವನ್ನು ಕಟ್ಟಿದ ಕನ್ನಡದ ಜನಗಳು—ಇಂದು ಮಾತ್ರ ಒಂದಾಗಿ ಬಾಳುವುದಕ್ಕೆ ಅಯೋಗ್ಯರು, ಹಾಗೆ ಬಾಳಲು ಹಂಬಲಿಸಿದರೆ, 'ಅದು ಭಾರತಕ್ಕೆಸೆಯುವ ದ್ರೋಹ' ಎನ್ನುವುದಾದರೆ, ಅಂಥ 'ದ್ರೋಹ' 'ಪವಿತ್ರವಸ್ತು'ವೆಂದು ನಾನು ತಿಳಿಯುತ್ತೇನೆ. ದೇಶಪ್ರೇಮಿಯಾದವನು ತನ್ನ ಹೆಂಡತಿ ಮಕ್ಕಳನ್ನೂ ತಾಯಿ ತಂದೆಯರನ್ನೂ ಪ್ರೀತಿಸ ಬಾರದು—ಎಂಬ ಅವಿಚಾರ ಇದು. ನಮ್ಮಲ್ಲಿ ರಾಜಕೀಯ ಮುಖಂಡರೆನ್ನಿಸಿಕೊಂಡ ಕೆಲವರು ತಂತಮ್ಮ ವ್ಯಕ್ತಿ ಇಲ್ಲವೆ ಗುಂಪಿನ ಸ್ವಾರ್ಥಕ್ಕಾಗಿಯೋ, ಅಧಿಕಾರ ಕ್ಕಾಗಿಯೋ ಹಸಿದು, ನಾಡು ಒಂದುಗೂಡುವ ಈ ಹಿರಿಯ ಸಂಧಿಯನ್ನು ಕಳೆದು ಕೊಂಡರೆ, ಅದಕ್ಕೆ ವಿಘ್ನ ತಂದರೆ, ನಾಳಿನ ಇತಿಹಾಸದಲ್ಲಿ ನಮ್ಮ ಮಕ್ಕಳು, ಮೊಮ್ಮ ಕ್ಕಳು, ಅಂಥವರನ್ನು, ಉಂಡಮನೆಗೆ ಎರಡೆಣಿಸಿದವರೆಂದು ಸ್ಪಷ್ಟವಾಗಿ ಸಾರಿಯಾರು. ಈ ನಾಡಿನ ಯಾವ ಕವಿಯೂ, ಬರಹಗಾರನೂ, ರಾಜಕೀಯದಿಂದ ಲಾಭವನ್ನು ಗಳಿಸಿಕೊಂಡು, ಪುಟ್ಟ ಪಾಳೆಯಗಾರನಾಗಲು ಬಯಸುತ್ತಲಿಲ್ಲವೆಂದೂ, ನಾಡಿನ ಹಿತವೇ ಒಟ್ಟು ರಾಷ್ಟ್ರದ ಹಿತ; ಅದೇ ತನ್ನ ಹಿತ—ಎಂದು ತಿಳಿದು ವರ್ತಿಸು ತ್ತಿದ್ದಾನೆಂದೂ ನಿಮ್ಮೆಲ್ಲರ ಪರವಾಗಿ ನಾನು ಆಶ್ವಾಸನೆ ಕೊಡಬಲ್ಲೆ.

ನಮ್ಮ ರಾಜಕಾರಣಿಗಳು ಗಳಿಗೆಗೊಂದು ತೆರನಾಗಿ ಮಾತನಾಡುತ್ತಿದ್ದಾರೆ; ಗಾಳಿಗೆ ತಕ್ಕಂತೆ ಹಾಯಿ ತೂರಿಸುತ್ತಿದ್ದಾರೆ. ಒಂದೊಂದು ವೇಳೆಗೆ ಒಂದೊಂದೇ ತತ್ತ್ವಬೋಧೆ ಮಾಡುತ್ತಿದ್ದಾರೆ. ಪ್ರಜಾಪ್ರಭುತ್ವದಲ್ಲಿ ರಾಜಕೀಯ ಅಧಿಕಾರ ತಿರುಕನ ಸ್ವಪ್ನದಂತೆ. ಅದು ಅಷ್ಟು ಅಲ್ಪಕಾಲದ ಸುಖ ಎಂಬುದನ್ನು—ಅವರು ಮರೆತು ಬಿಡುತ್ತಾರೆ. ಕನ್ನಡ ಏಕೀಕರಣದ ವಿಚಾರ ಬಂದಾಗಲೆಲ್ಲ 'ಆಡಳಿತೆಯ ಸೌಕರ್ಯ'ದ ಮಾತು ಹೇಳುತ್ತಾರೆ; 'ಹಣಕಾಸಿನ ಭಯ' ತೋರಿಸುತ್ತಾರೆ; ಜಾತಿ ಕೋಮುಗಳ ಭೂತ ದೆವ್ವಗಳನ್ನು ಎತ್ತಿ ಹಿಡಿಯುತ್ತಾರೆ.

ಇವುಗಳಲ್ಲಿ ಒಂದೊಂದರ ಸತ್ಯ, ತಥ್ಯ ಎಷ್ಟು? ಏನು—ಎಂದು ನಾವು ವಿಚಾರಿಸ ಬೇಡವೆ?

ಆಡಳಿತೆಯ ಸೌಕರ್ಯ; ಯಾರ ಸಲುವಾಗಿದೆ? ಜನಗಳಿಂದ ಅಧಿಕಾರ ಪಡೆಯುವ ಜನ, ಯಾರ ಸಲುವಾಗಿ ದುಡಿಯಬೇಕು? ಯಾರ ಹಿತ ನೋಡಬೇಕು? ಏಳು ಸಾವಿರ ಮೈಲು ದೂರದ ಬ್ರಿಟನಿನಿಂದ ಬಂದು ಆಳಿದವರ ಆಡಳಿತೆಯ ದೃಷ್ಟಿ, ಅದಕ್ಕೆ ಒದಗಿಬಂದ ಭಾಷೆ, ಮೇರೆಗಳು—ಇನ್ನೂ ಉಳಿಯಬೇಕೆ ದೇಶದಲ್ಲಿ?

ಸಮಾಜ ಬೆಳೆಯುವುದು, ಹುಟ್ಟುವುದು ಸಂಪರ್ಕದಿಂದ ಮತ್ತು ವಿಚಾರವಿನಿಮಯ ದಿಂದ. ನೆರೆಮನೆ ನೆರೆಮನೆಗಳೊಳಗೆ ಗೋಡೆ ನಿಲ್ಲಿಸಿ, 'ನೀವು ಬೇರೆ', 'ನಾವು ಬೇರೆ' ಎನ್ನುವುದು ಆಡಳಿತೆಯ ಸೌಕರ್ಯವೆ? ಬರಿಯ ಸೇಕಡ ಹದಿನೈದರಷ್ಟು ಓದುಬರಹವನ್ನರಿತ ಜನರುಳ್ಳ ಈ ದೇಶದಲ್ಲಿ, ಆಡಳಿತೆಯ ಭಾಷೆ ಯಾವುದಾಗಬೇಕು? ಆಡಳಿತೆಯ ಭಾಷೆ ಯಾವುದು? ವಿದ್ಯಾಭ್ಯಾಸದ ಭಾಷೆ ಯಾವುದು? ಕೋರ್ಟು ಕಚೇರಿಗಳ ಭಾಷೆ ಯಾವುದು? ಪ್ರಜಾಪ್ರಭುತ್ವವನ್ನು ಯಶಸ್ವಿಯನ್ನಾಗಿ ಮಾಡಬಲ್ಲ ಭಾಷೆ ಯಾವುದು? ಕನ್ನಡ ಜನಗಳ ಪಾಲಿಗೆ ಅದು ಕನ್ನಡ; ಅದೊಂದೇ. ಇಂಗ್ಲಿಷ್ ಅಲ್ಲ. ಹಿಂದೀ ಅಲ್ಲ. ಕನ್ನಡನಾಡಿನ ಜನಕ್ಕೆ ಕನ್ನಡವೊಂದೇನೆ. ವಿಚಾರ ವಿನಿಮಯ ದಿಂದ ಸಮಾಜ ಹುಟ್ಟುತ್ತದೆ—ಬೆಳೆಯುತ್ತದೆ ಎಂದೆ. ನಾಗರಿಕತೆ ಹುಟ್ಟಿದ್ದು ಅದ ರಿಂದಲೇ; ಬೆಳೆದುದು ಅದರಿಂದಲೇ. ಅಂಥ ವಿಚಾರವಿನಿಮಯ ನಡೆಯಬೇಕಾದ್ದು 'ಭಾಷೆ'ಯ ಮೂಲಕ, ಮಾತಿನ ಮೂಲಕ. ನಾಟ್ಯದಿಂದಲ್ಲ, ಚಿತ್ರಕಲೆಯಿಂದಲ್ಲ, ಹಾಗಾದುದರಿಂದ ಕನ್ನಡದ ಜನಕ್ಕೆ, ಕನ್ನಡ ಭಾಷೆ ಬದುಕಿನ ಉಸಿರು. ಅದನ್ನು ಬೇರೊಂದು ಭಾಷೆ ಬಂದು, ಉತ್ಪಾಟನೆ ಮಾಡಿ, ಅದರ ಸ್ಥಾನವನ್ನು ಕಸಿದುಕೊಂಡು, ಅದು ಸಲ್ಲಿಸುವ ಸೇವೆಯನ್ನು ತಾನು ಎಂದೂ ಮಾಡಲಾರದು. ಕನ್ನಡ ಹಿಂದೆ ಆಳಿದ ಭಾಷೆಯಾಗಿತ್ತು; ಇನ್ನೂ ಆಳುವ ಭಾಷೆಯಾಗಬಲ್ಲದು. ಆಗಬೇಕು. ಭಾರತದ ರಾಷ್ಟ್ರಭಾಷೆ ಹಿಂದೀ ಆಗಲಿ; ನಮಗೆ ಸಂತೋಷವೇ. ಆದರೆ ನಮ್ಮ ಪ್ರಾಂತೀಯ ಆಡಳಿತೆಯ ಭಾಷೆ ಕನ್ನಡವಾಗಿಯೇ ಉಳಿಯಬೇಕು.

'ಎರಡು ಕನ್ನಡ ನಾಡುಗಳಾಗಲಿ' ಎನ್ನುವ ಪ್ರಭೃತಿಗಳುಂಟು ಈ ದೇಶದಲ್ಲಿ. 'ಮಂತ್ರಿ'ಗಳಾಗುವ ಹೆಬ್ಬಯಕೆಯೊಂದೇ ರಾಜಕೀಯದಲ್ಲಿ ತಾಂಡವವಾಡುವಂತಿದ್ದರೆ ಎರಡಲ್ಲ, ಮಂತ್ರಿಪದಕಾಂಕ್ಷಿಗಳಿಗೆ ಸಮನಾದ ಸಂಖ್ಯೆಯಲ್ಲಿ, ಬಹುಖಂಡ ಕರ್ಣಾಟಕ ವಾಗಬೇಕಾದೀತು. ಹದಿನಾರು ಶತಮಾನಗಳ ಕಾಲವೇ ಒಟ್ಟಾಗಿ ಬಾಳಿ ಕಷ್ಟಸುಖ ಅನುಭವಿಸಿದ ಕನ್ನಡ ಜನಪದಕ್ಕೆ, ರಾಜಕಾರಣಿಗಳೇ—ದಯವಿಟ್ಟು ಈ ತಿರುಮಂತ್ರ ಕಲಿಸಲು ಬರಬೇಡಿ. ಅದು ನಿಮ್ಮ ಒಳಿತಿಗಲ್ಲ; ನಮ್ಮ ಒಳಿತಿಗೂ ಅಲ್ಲ—ಅನೇಕರ ಅಂತರಂಗದಲ್ಲಿ—ಜಾತಿ, ಬಣ, ಕೋಮುಗಳ ಭಯವಿರುವುದನ್ನು ನಾನು ಬಲ್ಲೆ, ಹಿಂದೆಯೂ ನಮ್ಮಲ್ಲಿ ಜಾತಿ ಬಣಗಳಿದ್ದವು. ನಾಳೆಯೂ ಅವು ಬೇರೆ ಬೇರೆ ರೂಪದಲ್ಲಿ ಇರಬಹುದು. ಇಂದು ಜಾತಿದ್ವೇಷವನ್ನು ಬೇಕೆಂದೇ ಬೆಳೆಯಿಸುತ್ತಿದ್ದಾರೆ. ಸರಕಾರಿ ನೌಕರಿಗಳಿಗಾಗಿ ಪೈಪೋಟಿ, ರಾಜಕೀಯ ಪಟ್ಟಗಳಿಗಾಗಿ ಸ್ಪರ್ಧೆ—ಇವು ಇದರ ಮೂಲ.

ಸರಕಾರದ ಕೆಲಸಗಳಿಗೆ ಜೋತುಬಿದ್ದೇ ತಮ್ಮ ಜೀವನ ಸಾಗಬೇಕು;

ರಾಜಕೀಯವೊಂದೇ ಗೌರವ ಪಡೆಯುವ ದಾರಿ—ಎಂಬ ಭ್ರಮೆ ನಮ್ಮಿಂದ ದೂರವಾಗಬೇಕು.

ಆದರೆ ಯಾವುದೇ ಒಂದು ಸ್ವತಂತ್ರದೇಶವು ಅಭಿವೃದ್ಧಿಗೆ ಬರಬೇಕಾದರೆ, ಎಲ್ಲ ಜನಗಳೂ ಸರಕಾರಿ ನೌಕರಿಗಳಿಗಾಗಿ ಮೊರೆಯಿಡುವ ದುಃಸ್ಥಿತಿ ತಪ್ಪಬೇಕು. ಜಾತಿದ್ವೇಷ ಹೊಡೆದಟ್ಟುವ ಒಂದೇ ಉಪಾಯ—ಎಲ್ಲರಿಗೂ, ಜೀವನದ ಅವಕಾಶ ಕಲ್ಪಿಸುವುದು; ಎಲ್ಲ ಉದ್ಯಮಗಳಲ್ಲೂ ಸಮಾನಗೌರವವಿದೆಯೆಂದು ನಡೆದು ತೋರಿಸುವುದು, ಬುದ್ಧಿಯುಳ್ಳ ಪ್ರತಿಯೊಬ್ಬನೂ, ಈ ಜಾತಿದ್ವೇಷದ ಬೆಂಕಿಯನ್ನು ತುಳಿದು ನಂದಿಸಬೇಕು. ಆ ನೆಪದಿಂದ ಸ್ವಾರ್ಥಸಾಧಿಸುವ ಪ್ರಯತ್ನ ನೀಚತನ ಎಂದು ತಿಳಿಯಬೇಕು. ಈ ವಿಷವು, ಉಳಿಯುವಲ್ಲಿ ಖಂಡ ಕರ್ನಾಟಕದಲ್ಲಿಯೂ ಉಳಿಯುತ್ತದೆ; ಅಖಂಡ ಕರ್ನಾಟಕದಲ್ಲಿಯೂ ಉಳಿಯುತ್ತದೆ. ದೇಶವನ್ನು ಯಾವ ರೀತಿ ಒಡೆದು ವಿಭಾಗಮಾಡಿದರೂ ಉಳಿದೇ ಉಳಿಯುತ್ತದೆ.

ಕರ್ಣಾಟಕ ಒಂದುಗೂಡಿದರೆ ಅದು 'ಬಡರಾಜ್ಯ'ವಾಗುತ್ತದೆ ಎನ್ನುವವರುಂಟು. ಬುದ್ಧಿ ಬಡವಾದ ಜನಗಳಿಂದ ದೇಶ ಬಡವಾದೀತೇ ಹೊರತು ಒಗ್ಗಟ್ಟಿನಿಂದ ಬಡತನ ಬರಲಾರದು. ಹಿಂದೆ ಲೆಕ್ಕಬಲ್ಲ ಪಂಡಿತರು ಸಂಯುಕ್ತ ಕರ್ನಾಟಕವು ಸ್ವಾಯತ್ತ ಪ್ರಾಂತವಾಗುವ ಶಕ್ತಿಯುಳ್ಳದ್ದು ಎಂದಿದ್ದಾರೆ. ಆ ಪರಿಸ್ಥಿತಿ ಇಂದು ಬದಲಿಸಿದ್ದರೆ, ಭಾರತಕ್ಕೇ ಬದಲಿಸಿದೆ; ಬರಿಯ ಕರ್ಣಾಟಕವೊಂದಕ್ಕೆ ಅಲ್ಲ.

ದುಡಿಯುವ ಜನರು ಈ ನಾಡಿನಲ್ಲಿ ಎಲ್ಲೆಲ್ಲೂ ಇದ್ದಾರೆ; ದುಡಿಯಲು ಬೇಕಾದ ವಿಸ್ತಾರ ಕ್ಷೇತ್ರವೂ ಇದೆ; ನಿಸರ್ಗ ಹರಸಿ ತೆತ್ತಂತಹ—ವಿಸ್ತಾರವಾದ ಕಡಲು; ಪರ್ವತಾವಳಿ; ಅರಣ್ಯದ ಸೆರಗು, ಬಯಲುಸೀಮೆಗಳು ನಮಗಿವೆ. ಹಲವು ನದಿಗಳು ಇದ್ದಾವೆ. ಈ ಕನ್ನಡ ದೇಶದಲ್ಲಿ, ಇನ್ನೂ ಐವತ್ತು ವರ್ಷಗಳ ತನಕ, ಅರ್ಧ ಭರತಖಂಡಕ್ಕೇ ವಿದ್ಯುತ್‌ಶಕ್ತಿಯನ್ನು ಒದಗಿಸಬಲ್ಲಷ್ಟು ಸಂಖ್ಯೆಯಲ್ಲಿ ಜಲಪಾತಗಳ ನೆರವು ನಮಗಿದೆ. ಅದು ಸಂಪತ್ತಲ್ಲವೆ? ನೆಲದಲ್ಲಿ ಹುದುಗಿಬಿದ್ದ ಖನಿಜ ಸಂಪತ್ತಿದೆ; ನಮ್ಮ ಅರಣ್ಯಗಳು ನಮಗೆ ವಿವಿಧ ಸಂಪತ್ತನ್ನು ಕೊಡಬಲ್ಲವು. ನಾಡಿನಲ್ಲಿ ಹುಟ್ಟಿದ ನಮ್ಮ ವಿಜ್ಞಾನಿಗಳನ್ನು, ಸಂಕುಚಿತ ಭಾವನೆಯಿಂದ ನಾವು ಪರನಾಡುಗಳಿಗೆ ಅಟ್ಟದಿದ್ದರೆ, ಅವರ ನೆರವಿನಿಂದ, ಸಮನಾದ ರಾಜಕೀಯ ದರ್ಶನದಿಂದ, ಧೋರಣೆಯಿಂದ, ಕೃಷಿ ಉದ್ಯಮಗಳಲ್ಲಿ ಮಾರ್ಗದರ್ಶನ ಮಾಡಬಲ್ಲ ತಜ್ಞರಿಂದ—ನಾಡು ಸಂಪದಭಿವೃದ್ಧಿ ಪಡೆದೀತು. ಅಖಂಡ ಕರ್ನಾಟಕ ಎಂದೂ ಬಡದೇಶವಾಗಬೇಕಿಲ್ಲ. ಹೊಯ್ಸಳ ಸಾಮ್ರಾಜ್ಯದ, ವಿಜಯನಗರ ಸಾಮ್ರಾಜ್ಯದ ಜನಗಳ ಅನುವಂಶಿಕರಾದ ನಾವು ಬೀದಿಯ ಭಿಕಾರಿಗಳಾಗಬೇಕಿಲ್ಲ. ಒಟ್ಟು ಕನ್ನಡನಾಡಿನಲ್ಲಿರುವ ನೈಸರ್ಗಿಕ

ಸಂಪತ್ತೊಂದೇ ಎರಡು ಕೋಟಿ ಜನತೆಗೆ ತಿಂದು ತೇಗಲು ಸಾಕು. ಸಂಪತ್ತು—ಎಂದರೆ ಬರಿಯ ಕರೆನ್ಸಿ ನೋಟುಗಳೇನು? ಜನರಿಂದ ಒಟ್ಟುಮಾಡಿ ವೆಚ್ಚ ಮಾಡುವ ತೆರಿಗೆಯ ಮೊತ್ತವೇನು? ಕಾರ್ಯರೂಪಕ್ಕೆ ತರಬಲ್ಲ—ನೈಸರ್ಗಿಕಶಕ್ತಿ, ಉತ್ಪನ್ನ ಶಕ್ತಿಗಳು ಸಂಪತ್ತು. ಅದು ಜನಶಕ್ತಿ; ಮನಃಶಕ್ತಿ.

ಸಂಯುಕ್ತ ಕರ್ಣಾಟಕವು—ದರಿದ್ರಕರ್ಣಾಟಕ ಎನ್ನುವ ಜನ, ನಾಡಿನ ನಾಲ್ದೆಸೆ ಒಮ್ಮೆ ಅಲೆದಾಡಿ ಬರಲಿ; ನಮ್ಮ ನೆಲ, ಜಲ, ಜನ, ಮನ ಇಣಿಕಿ ನೋಡಲಿ—ಅನಂತರ ಅಮಂಗಳದ ನಾಲಿಗೆಯನ್ನು ಕುಣಿಸಲಿ.

ಕರ್ನಾಟಕ ಒಂದಾಗಿ, ಕನ್ನಡ ಜನಗಳೊಂದಾಗಿ ತಮ್ಮ ಭವಿಷ್ಯವನ್ನು ರೂಪಿಸುವ ಸುದಿನಕ್ಕಾಗಿ ಸಾಹಿತಿಗಳು ಕಾದಿದ್ದಾರೆ. ಜನ ಸುಖಿಯಾದರೆ ಸಾಹಿತಿ ಸುಖಿ; ಅವರು ದುಃಖಿಗಳಾದರೆ ಅವರಿಗಿಂತಲೂ ಹೆಚ್ಚಿನ ದುಃಖ ಸಾಹಿತಿಗೆ.

* * * *

ನಮ್ಮ ದೇಶಕ್ಕೆ ಪ್ರಜಾಪ್ರಭುತ್ವ ಬಂದಿರುವುದೇನೋ ನಿಜ. ಅದು ಬರುವ ಮುಂಚೆಯೂ ನಾವು ಬರೆಯುತ್ತಿದ್ದೆವು; ಇಂದೂ ಬರೆಯುತ್ತಿದ್ದೇವೆ; ನಾಳೆಯೂ ಬರೆಯುವವರೇ. ಯಾರಿಗೆ ಯಾರೂ 'ಬರೆಯಬೇಡಿ' ಎನ್ನುವ ಅಧಿಕಾರವೂ ಇಲ್ಲ. ಬರೆಯುವುದು ನಮ್ಮ ಸ್ವಾತಂತ್ರ್ಯ; ಜನ್ಮಸಿದ್ಧ ಹಕ್ಕು. ನಿಜ, ನಾವು ನಿರಂಕುಶರು; ನಿರಂಕುಶಮತಿಗಳು; ನಿರಂಕುಶವಾಣಿಗಳು. ಆದರೆ ನಾವು ಬರೆದುದೆಲ್ಲ ಸಾಹಿತ್ಯ ವಾಗುತ್ತದೆ, ಆಗಬೇಕು, ಅದನ್ನು ಜನ ಓದಬೇಕು, ಓದಿ ಮೆಚ್ಚಲೇಬೇಕು—ಎಂಬ ಚಪಲ ಮಾತ್ರ ಬೇಡ. ಆ ಬಯಕೆ ನಮ್ಮಲ್ಲಿದ್ದರೆ, ಆಗ ನಾವು ಓದುಗರನ್ನು ಆಶ್ರಯಿಸಿದ್ದೇವೆ ಎಂಬುದು ಸ್ಪಷ್ಟವಾಗುತ್ತದೆ. ನಮ್ಮ ಸ್ವಾತಂತ್ರ್ಯಕ್ಕೊಂದು ಮಿತಿ ಬಂತೇ ಬಂತು. ಆ ಜನರಿಗೆ ಓದದಿರುವ ಸ್ವಾತಂತ್ರ್ಯವಿದೆ! ಓದಿ ರೇಗುವ ಸ್ವಾತಂತ್ರ್ಯವಿದೆ! ಓದಿ, ರೇಗಿ, ಉಗುಳುವ ಸ್ವಾತಂತ್ರ್ಯವೂ—ಇದೆ. ಓದಿ, ಓದಿದುದು ತಿಳಿಯದೆ ತೆಪ್ಪಗಿರುವ ಸ್ವಾತಂತ್ರ್ಯವೂ ಅವರಿಗಿದೆ. 'ಓದುಗ ಓದಲೇಬೇಕೆಂ'ಬ ಕಡ್ಡಾಯವಿಲ್ಲ. ಅದು ಹೇಗೆ ಬರಬೇಕು? ನಮ್ಮ ಇಂದಿನ ಹಲವು ಬದಲಾವಣೆಗಳೂ ಈ ತತ್ತ್ವವನ್ನು ಸಿದ್ಧಮಾಡಿ ತೋರಿಸುತ್ತವೆ. ಹೊರಗಿನ ಅಂಕುಶ ನಮಗಿಲ್ಲದೆ ಹೋದರೂ, ಸದಸದ್ವಿವೇಕದೃಷ್ಟಿಯನ್ನು ನಾವಾಗಿ ಬೆಳಸಿಕೊಳ್ಳದೆ, ಅದರ ಅಂಕುಶಕ್ಕೆ ಒಳಗಾಗಿ ಸಾಹಿತ್ಯ ನಿರ್ಮಾಣಮಾಡದೆ ಹೋದಲ್ಲಿ, ಅದರಿಂದ ಕಸದ ಬುಟ್ಟಿಗಳು ತುಂಬಬಹುದೇ ಹೊರತು ಸಾಹಿತ್ಯವೂ ತುಂಬುವುದಿಲ್ಲ, ಬದುಕೂ ತುಂಬುವುದಿಲ್ಲ. ಅಂತಹ ಬರವಣಿಗೆಗಳಿಂದ ಬಚ್ಚಲು ಬೆಳಗಬಹುದೇ ಹೊರತು, ಬದುಕು ಬೆಳಗಲಾರದು.

ಸಾಹಿತ್ಯ ಮತ್ತು ಬದುಕು ಹತ್ತಿರ ಹತ್ತಿರ; ಅವು ಅವಳಿ ಜವಳಿ; ಒಂದರ

ಉಸಿರು ಇನ್ನೊಂದರ ಉಸಿರು; ಒಂದರ ಜೀವ ಇನ್ನೊಂದರ ಜೀವ. ಬದುಕು ಪ್ರೇರಿಸದ ಸಾಹಿತ್ಯ ಬೊಬ್ಬಾಟ. ಬದುಕಿನಿಂದ, ಬದುಕಿನ ಅನುಭವದಿಂದ ಸ್ಫೂರ್ತಿ, ಸೊಗಸು ಶಕ್ತಿಗಳನ್ನು ಗಳಿಸದೆಯೇ ಸುರಿಸುವ ಮಾತಿನ ಮಳೆ, ಜನತೆಯ ಕಿವಿ ಕಣ್ಣುಗಳಿಗೆ ಕೊಡುವ ಕರಕರೆ. ಸಾಹಿತ್ಯಸೃಷ್ಟಿಯೆಂಬುದು ಕಾರ್ಖಾನೆಗಳಲ್ಲಿ ಉತ್ಪನ್ನ ಮಾಡುವಂತಹ ಸರಕು, ಸರಂಜಾಮು ಅಲ್ಲ. 'ಆರ್ಡರಿ'ಗೆ ತಕ್ಕಂತೆ, ಗಿರಾಕಿಗಳಿಗೆ ತಕ್ಕಂತೆ, ಗಿರಾಕಿಯ ಅಭಿರುಚಿಗೆ ಸಲುವಂತೆ, ಕಿಸೆಯ ಕಾಸಿಗೆ ಒಪ್ಪುವಂತೆ—ಮಾರ್ಕೆಟ್ ಪರಿಸ್ಥಿತಿಯನ್ನು ಗಮನಿಸಿ ಮಾಡುವ ಉತ್ಪನ್ನವಲ್ಲ. ಸಾಹಿತ್ಯಸೃಷ್ಟಿ ಒಳ್ಳೆಯ ಬದುಕಿನ ಪ್ರತಿಫಲವಾಗಿ ಹುಟ್ಟಬಹುದಾದ ಸವಿಗೆನೆ. ಎಲ್ಲರಂತೆ ಸಾಹಿತಿಯಾದವನೂ ಜೀವನ ಮಾಡುತ್ತಾನೆ. ಕೆಲವರಂತೆ ಆತ ಈ ಜೀವನವನ್ನು ಆದಷ್ಟು ವಿಶಾಲವಾಗಿ, ಸೂಕ್ಷ್ಮವಾಗಿ ನೋಡಲು ಕಲಿಯುತ್ತಾನೆ. ಅದರಲ್ಲಿ ಅವನ ಪಾಲಿಗೆ ತಿಳಿಯುವುದೆಷ್ಟೋ, ತಿಳಿಯಲಾರದುದೆಷ್ಟೋ. ಜೀವನ ಎಂಬುದೇನು? ತನ್ನ ಅದರ ಸಂಬಂಧವೇನು—ಎಂದು ತಿಳಿಯಲು ಪ್ರಯತ್ನಿಸಿ, ಬಾಳಲು ಪ್ರಯತ್ನಿಸುವ ಜೀವನ ಸಂಗ್ರಾಮವು, ಅವನಿಗೆ ತಂದೊಡ್ಡುವ ವಿವಿಧ ಅನುಭವ, ಭಾವ, ಆವೇಶಗಳ ಫಲವಾಗಿ, ಸಾಹಿತ್ಯಕಲೆಗಳು ಹುಟ್ಟುತ್ತವೆ. ತನ್ನ ಬದುಕಿನಲ್ಲೆಷ್ಟು ಅವನು ಪಾಲುಗಾರನೋ, ಇತರರ ಬದುಕಿನಲ್ಲೂ ಅಷ್ಟೇ ಪಾಲುಗಾರನಾಗುವಂತೆ ಸಾಹಿತಿಯೂ ಕಲಾವಿದನೂ ತನ್ನ ದೃಷ್ಟಿಯನ್ನು ವಿಶಾಲಿಸಬೇಕು. ತನ್ನ ಅನುಕಂಪವನ್ನು ವಿಸ್ತಾರವಾಗಿ ಹರಡಬೇಕು. 'ತನ್ನತನ'ವನ್ನು ಮರೆಯುತ್ತ ಬಂದು, ಅನ್ಯರ ಕಣ್ಮನಗಳಿಂದಲೂ ನೋಡಲು, ತಿಳಿಯಲು ಪ್ರಯತ್ನಿಸಬೇಕು. ಈ ಪ್ರಯತ್ನ ದೊಡ್ಡ ಬದುಕಿನಿಂದ ಮಾತ್ರ ಸಾಧ್ಯವಾದುದು. ನಮ್ಮ ಬದುಕು ದೊಡ್ಡದಾಗದೆ ನಮ್ಮ ಸಾಹಿತ್ಯ ಎಂದೂ ದೊಡ್ಡದಾಗಲಾರದು. ನಮ್ಮ ಅನುಕಂಪ ದೊಡ್ಡದಾಗದೆ, ಬದುಕಿನಲ್ಲಿ ಗೋಚರಿಸುವ—ಸರಸ ವಿರಸಗಳ, ಸುಖದುಃಖಗಳ, ಅರ್ಥ, ಬೆಲೆ ನಮಗೆ ಸಮನಾಗಿ ತಿಳಿಯಲಾರದು. ಅವನ್ನು ಸಮನಾಗಿ ತಿಳಿಯುವ ತನಕ, ನಾವೂ ಚೆನ್ನಾಗಿ ಬೆಳೆಯಲಾರೆವು. ಬರಿಗಿಸೆಯ ಭಿಕಾರಿಯೊಬ್ಬ, ಇನ್ನೊಬ್ಬ ಭಿಕ್ಷುಕನಿಗೆ ಏನು ಕೊಡಬಲ್ಲ? ತನ್ನ ದೃಷ್ಟಿಯನ್ನು ಬೆಳೆಯಿಸಿಕೊಳ್ಳದ ಕುರುಡ, ಜಗತ್ತಿಗೆ ಹೇಗೆ ದಾರಿ ತೋರಿಸಬಲ್ಲ? ತಾನು ಕಲಿಯಬೇಕಾದುದನ್ನು ಕಲಿಯಲಾರದ ಶುಂಠ ಪರರಿಗೆ ಏನು ಬೋಧನೆ ಕೊಡಬಲ್ಲ?—ಅಲ್ಲಿಯ ತನಕ ಅವನು ಕೊಡುವುದು ಶಬ್ದ, ವಾಕ್ಯ, ಪುಟಗಳೇ ಹೊರತು—ಸಾಹಿತ್ಯವನ್ನಲ್ಲ.

* * * *

ನಮ್ಮ ಕಲ್ಪನೆ, ನಮ್ಮ ಅನುರಕ್ತಿ, ನಮ್ಮ ರಾಗದ್ವೇಷ, ನಮ್ಮ ಮಾತುಗಾರಿಕೆ ಅಥವಾ ಬರಹಗಾರಿಕೆ—ಇವು ನಮ್ಮ ಸಾಹಿತ್ಯಜೀವನಕ್ಕೆ ನೆರವು ಕೊಡುತ್ತವೆ; ಪುಟ

ಕೊಡುತ್ತವೆ. ಕಲ್ಪನಾಶಕ್ತಿಯಿಲ್ಲದವನು ಇತರರ ಮನಸ್ಸನ್ನು ಅಷ್ಟೊಂದು ಸಮರ್ಥವಾಗಿ ಕೆರಳಿಸಲಾರ; ಅರಳಿಸಲಾರ. ಆದರೆ ತನ್ನ ಕೊಠಡಿಯ, ತನ್ನ ಕುರ್ಚಿಯ, ತನ್ನ ಊರಿನ, ತನ್ನ ಅಭಿನಂದಕರ ಗುಂಪಿನ ಮೇರೆಯಲ್ಲಿ ಆವೃತವಾಗಿ ಹಾರಾಡುವ ಕಲ್ಪನಾವಿಲಾಸಕ್ಕೆ, ವೈಖರಿಗೆ ಅಷ್ಟೇ ಮಿತಿಯುಂಟು. ಅದು ಪ್ರೇರಿಸಬಲ್ಲ ಶಕ್ತಿ ಉತ್ಸಾಹಗಳಿಗೂ ಆ ಮಿತಿಯುಂಟು. ಎಳೆಯರಾಗಿದ್ದಾಗ ನಾವೆಲ್ಲರೂ ಇಂಥ ಅನೇಕ ಕಲ್ಪನಾವಿಲಾಸಗಳಲ್ಲಿ ಮೈಮರೆತು ಘಂಟೆ, ದಿನಗಳನ್ನು ಕಳೆದಿದ್ದೆವು. ನಮ್ಮ ಜೀವನ ಬೆಳೆದು ಬಂದಂತೆ ಏನಾಯಿತು? ನಮ್ಮಷ್ಟೇ ಸ್ವಾರ್ಥಪರವಾದ ಅನೇಕ ಜೀವಗಳು—ನಮಗೆದುರಾದವು. ಬದುಕಿನ ಪ್ರಶ್ನೆಗಳು ಎದುರುಬಂದವು; ಕಷ್ಟಕಾರ್ಪಣ್ಯಗಳಿಗೆ ಗುರಿಯಾದೆವು. ಒಂದು ಕಾಲದ ಕಲ್ಪನೆಯ ಹೂವಿನ ಹಾಸಿಗೆಯು ಕಲ್ಲುಮುಳ್ಳುಗಳಿಂದ ತುಂಬಿದ ಕಠಿಣ ಮಾರ್ಗವಾಗಿ ಕಾಣಿಸತೊಡಗಲಿಲ್ಲವೆ? ದಾರಿಯ ಕಲ್ಲುಮುಳ್ಳುಗಳನ್ನು 'ಪುಷ್ಪಸದೃಶ'ವಾಗಿ ಮನಸ್ಸಿನಲ್ಲಿ ತಿಳಿದುಕೊಂಡುದರಿಂದಲೇ ದಿನ ಸಾಗಲಾರದು, ಬದುಕು ನಡೆಯಲಾರದು. ಕಲ್ಪನಾಲೋಕಕ್ಕೂ ವಾಸ್ತವ ಬದುಕಿಗೂ ಇರುವ ಅಂತರ ಕಡಿಮೆಯಾಗದೆ ಹೋದರೆ, ನಾವು ಸುಖಸ್ವಪ್ನಕಥಾನಕಗಳನ್ನು ಹೇಳಬಲ್ಲೆವೇ ಹೊರತು ಬದುಕಿನ ಅರ್ಥವನ್ನು ತಿಳಿಯಲಾರೆವು; ಹೇಳಲಾರೆವು.

ನಾವು ದುಡಿಯುತ್ತಿರುವ ಕ್ಷೇತ್ರ ಗದ್ಯವಿರಲಿ, ಪದ್ಯವಿರಲಿ—ಅದು ಸಾಕಷ್ಟು ಆಳವಾದ ಬದುಕಿನ ಅನುಭವಗಳಿಂದ ಪ್ರೇರಣೆಗೊಳ್ಳದೆ ಹೊರಡುವ ಕಲ್ಪನಾವಿಲಾಸವಾದರೆ ಅದಕ್ಕೆಷ್ಟು ಬೆಲೆ? ಇಂದು,—ಕಾದಂಬರಿಗಳ ಮಹಾಪೂರವೇ ಕಾಣಿಸುತ್ತಿರುವ ಈ ಕಾಲದಲ್ಲಿ ನಾನು ಈ ಸಂಗತಿಯನ್ನು ಇನ್ನಷ್ಟು ಒತ್ತಿ ಹೇಳಿದರೂ ತಪ್ಪಿಲ್ಲ. ಕನ್ನಡದ ಮುನ್ನಡೆ ನಮ್ಮ ಜನಸಂಖ್ಯೆಯ ಮಾನದಿಂದ ಹೇಗೆ ಸಿದ್ಧವಾಗುವುದಿಲ್ಲವೋ, ಪುಟ, ಪುಸ್ತಕಗಳ ಸಂಖ್ಯೆ, ಬೆಡಗಿನ ಶಿರೋನಾಮೆ ರಕ್ಷಾಪತ್ರಗಳಿಂದಲೂ ಅದು ಸಿದ್ಧವಾಗುವುದಿಲ್ಲ. ತನ್ನ ಸತ್ವದಿಂದ, ಸತ್ಯದಿಂದ, ಸೌಂದರ್ಯದಿಂದ ಅದರ ಯೋಗ್ಯತೆ ನಿರ್ಮಾಣವಾಗಬೇಕು. ಆತ್ಮ ಪ್ರಸಂಶೆಯಿಂದಲ್ಲ; 'ಉಭಯ ಕುಶಲೋಪರಿ ಸಾಂಪ್ರತ'ದಿಂದಲ್ಲ.

* * * *

ಬದುಕಿನಲ್ಲಿ ಗಂಡು ಹೆಣ್ಣುಗಳ ಸಮಸ್ಯೆ ಅನಾದಿಯಿಂದಲೂ ಬಂದದ್ದು; ಬಹು ಮುಖ್ಯವಾಗಿ ಬಂದದ್ದು. ಜೀವನದ ಬಹು ದೊಡ್ಡ ಭಾಗ ಅದರಲ್ಲಿಯೇ ಮುಳುಗಿ ತೇಲುತ್ತದೆ, ಸುಖದುಃಖಗಳಿಗೊಳಗಾಗುತ್ತದೆ ಎಂಬುದರಿಂದ—ಅಂಥ ಬೃಹತ್ಪ್ರಶ್ನೆ ಎಲ್ಲಾ ದೇಶಗಳ, ಎಲ್ಲಾ ಜನಗಳ ಸಾಹಿತ್ಯದಲ್ಲಿ ಪ್ರಧಾನ ವಸ್ತುವಾಗಿಯೇ ಕಾಣಿಸಿಕೊಂಡಿದೆ. ಬದುಕನ್ನು ಕೆಣಕುವ ಈ ಪ್ರಶ್ನೆಯು ಸಾಹಿತ್ಯಕ್ಕೆ

ವಸ್ತುವಾಗದಿದ್ದರೆ ಇನ್ನಾವುದಕ್ಕಾಗಬೇಕು? ಈ ಲೈಂಗಿಕ ಪ್ರಶ್ನೆಗಳಿಗೆ ಸಂಬಂಧಿಸಿದಂತೆ, ನೀತಿಯ ಪ್ರಶ್ನೆಯೊಂದಿದೆ. ಇದು ಕಾಲಕಾಲಕ್ಕೆ, ಜನಜನಕ್ಕೆ ಮಾರ್ಪಟ್ಟಿದೆ. ಬೇರೆಬೇರೆ ಅರ್ಥಕೊಟ್ಟಿದೆ. ಸಾಹಿತಿಯಾದವನು 'ನೀತಿ, ಅನೀತಿ'ಗಳಿಗೆ ಅತೀತನಾಗಿ ನಿಂತು ನಿರೀಕ್ಷಿಸಿ ನೋಡಬೇಕಾದ ಪ್ರಶ್ನೆಯಿದು. ಕಲೆ ಮತ್ತು ಸಾಹಿತ್ಯಗಳ ನೋಟವೆಲ್ಲವೂ, ಲೈಂಗಿಕ ಪ್ರಶ್ನೆಗಳಲ್ಲಿ ಮಾತ್ರವಲ್ಲ, ಪ್ರಪಂಚದ ಮನವನ್ನು ಕೆಣಕುವ ಎಲ್ಲ ಪಶ್ನೆಗಳಲ್ಲೂ ಈ ಬಗೆಯಿಂದಲೇ ನೋಡಬೇಕು. ಆತ ಪಕ್ಷಾನುವರ್ತಿಯಾಗಕೂಡದು. ಅದರಲ್ಲಿಯೂ ಲೈಂಗಿಕ ಪ್ರಶ್ನೆಗಳ ವಿಚಾರದಲ್ಲಿ, ಶೃಂಗಾರ, ಒಲುಮೆ, ಸ್ನೇಹಗಳ ವಿಚಾರದಲ್ಲಿ, ಜನತೆ, ಹೇಳುತ್ತಿರುವ ಆದರ್ಶ ಒಂದು, ಸಾರುವ ನೀತಿಯೊಂದು, ನಡಸುತ್ತಿರುವ ಜೀವನ ಮತ್ತೊಂದು. ಈ ವಿಷಯದಲ್ಲಿ ಜನಗಳದು ಇಬ್ಬಗೆಯ ಬಾಳು. ಬಹುಕಾಲದಿಂದಲೂ ನಡೆದುಬಂದ ವಿಷಯವಿದು. ಅದನ್ನು ಕತ್ತರಿಸಿ, ಚುಚ್ಚಿ, ಎತ್ತಿತೋರಿಸಿ—ಸತ್ಯಕ್ಕೆ ಕನ್ನಡಿ ಹಿಡಿಯುತ್ತೇವೆಂದು ನಮ್ಮ ಸಾಹಿತಿಗಳು ಹೇಳುತ್ತಾರೆ. ಸೋಜಿಗವೇನಿಲ್ಲ. ಆದರೆ ಈ ಸತ್ಯ ಎಷ್ಟು ವಿಸ್ತಾರಕ್ಕೆ ಹರಡಿ ಚೆಲ್ಲಿಬಿದ್ದಿದೆ; ಎಷ್ಟು ಮನೋಧರ್ಮಗಳ ಪರಿಪಾಕದಿಂದ ರೂಪಿತವಾಗಿದೆ; ಎಷ್ಟು ಕಟ್ಟಲೆಗಳ ಸೆರಗಿನಲ್ಲಿ ಸಿಕ್ಕಿಕೊಂಡಿದೆ—ಎಂಬುದನ್ನು ತಿಳಿಯುವುದಕ್ಕೆ ನಾವು ಏನು ಪ್ರಯತ್ನ ಮಾಡುತ್ತಿದ್ದೇವೆ? ಅದರ ಒಂದೊಂದು ಸೆರಗೂ ಹಲವಾರು ಕನಸು, ಯಾತನೆ, ಸುಖ, ದುಃಖಗಳನ್ನು ಕೆರಳಿಸಬಲ್ಲುದು. ನಮ್ಮ ಬರವಣಿಗೆಗಳಿಗೆ ಮನಃಶ್ಶಾಸ್ತ್ರದ ಆಧಾರ ಹೇಳಿ—ಎಡ್ಲರ್, ಯುಂಗ್, ಫ್ರೋಯಿಡ್ ಇವರುಗಳು ತೋರಿಸುವ ಬೇತಾಳರೂಪವನ್ನು ಜನಕ್ಕೆ ತೋರಿಸಿ, ಜನಗಳನ್ನು ಬೆದರಿಸಬೇಕಾದರೂ ಏಕೆ? ಮನಃಶ್ಶಾಸ್ತ್ರವೆಂಬುದು ಲೈಂಗಿಕ ವಿಚಾರದಲ್ಲಿ ಅಷ್ಟು ಸರಳವಾದ, ಸುಲಭವಾದ—ಶಾಸ್ತ್ರವೆಂದು ನಾನಂತೂ ತಿಳಿದಿಲ್ಲ. ಸ್ವತಃ ಗಂಡಹೆಂಡಿರೇ ತಮ್ಮೊಂದು ಜೀವನದಲ್ಲಿ ದಾಂಪತ್ಯ, ಕಾಮ, ಪ್ರೇಮಗಳ ಪ್ರಶ್ನೆಯನ್ನು ಸಹಜವಾಗಿ, ಸರಳವಾಗಿ, ಸಂಕೋಚವಿಲ್ಲದೆ ಚರ್ಚಿಸಲು ಅಳುಕುತ್ತಿರುವಾಗ, ಅದರ ಸತ್ಯದ ಹಿನ್ನೆಲೆಯನ್ನು ತಿಳಿಯುವುದು ಕಷ್ಟವಾಗಿರುವಾಗ—ಒಬ್ಬ ಸೂಳೆಯ, ವೈಯಾರಿಯ, ಬೀದಿ ಹುಡುಗಿಯ, ಪ್ರಮದೆಯ, ತಾಯಿಯ, ಮಗಳ ಅಥವಾ ಇಂಥ ನೂರಾರು ವಿಭಿನ್ನ ಶೀಲಗಳುಳ್ಳ ಜೀವರುಗಳ ಮನಸ್ಸಿನ ತೆರೆಯಲ್ಲಿ ಮೂಡಿ ಮಾಯವಾಗುವ, ಬಹಿರಂಗದಲ್ಲಿ ಅವರವರಿಗೇ ಅದರ ನೆಲೆಯು ಗೊತ್ತು ಸಿಗದಂತೆ ನಲಿಯುತ್ತಿರುವ, ಅಷ್ಟು ಸುಲಭದಲ್ಲಿ ಪ್ರಕಟವಾಗದ, 'ಮನೋಧರ್ಮ'ವನ್ನು ತಿಳಿದು ಬರೆಯುತ್ತಿದ್ದೇನೆ ಎನ್ನುವುದು ಧಾರ್ಷ್ಟ್ಯದ ಮಾತು. ಈ ಮಾತು ಸಾಕಾಗದೆಂದೋ ಏನೋ, ನಮ್ಮಲ್ಲಿ ಕೆಲವರು ಈ ದಾರುಣಚಿತ್ರವೇನೆಂದು ತಿಳಿಯುವುದಕ್ಕಾಗಿಯೆ, ದುಡ್ಡು ತೆತ್ತು

ಗಲ್ಲಿಯ ಗುಡಿಸಲುಗಳಿಗೆ ಹೋದವರುಂಟಂತೆ. ಅಂಥವರ ಅನ್ವೇಷಣೆಯ ಕಾರ್ಯ ಮುಗಿಯದ್ದರಿಂದ, ನಿತ್ಯವೂ ಹೋಗುತ್ತಲೇ ಇದ್ದಾರೆ—ಎಂದೂ ಕೇಳಿದ್ದೇನೆ. ಅಂಥವರಾದರೂ ಸರಿಯೇ—ತಮ್ಮ ಮಡದಿಯರೊಡನಾಗಲಿ, ಬೆಲೆಗೆ ಕೊಂಡ ಪ್ರೇಯಸಿಯರೊಡನಾಗಲಿ ಈ ಲೈಂಗಿಕ ಮನಃಶ್ಶಾಸ್ತ್ರವನ್ನು ಕುರಿತು ನೇರಾಗಿ ಎಷ್ಟು ಚರ್ಚಿಸಿದ್ದಾರಂತೆ? ಮನಃಶ್ಶಾಸ್ತ್ರದ ಏನೇನು ದಾಖಲೆಗಳನ್ನು ಸಂಗ್ರಹಿಸಿದ್ದಾರಂತೆ? ಜನ—ಯಾರನ್ನು ಬೆದರಿಸುವುದಕ್ಕಾಗಿ ಮನಃಶ್ಶಾಸ್ತ್ರದ ಬೆದರಿಕೆ ಹಾಕುತ್ತಾರೋ ನಾನು ಬೇರೆ ಕಾಣೆ.

ಸಾಹಿತ್ಯದಲ್ಲಿ ರುಚಿ ಹೇಗೆ ಬೇಕೋ, ಹಾಗೆ ಶುಚಿಯೂ ಬೇಕು. ಕದ್ದು, ಮರೆಯಲ್ಲಿ, ತಮ್ಮವರಿಂದ ಅಡಗಿ ಕುಳಿತು ಓದುವ ಸಾಹಿತ್ಯ, ರುಚಿಯಾದ ಸಾಹಿತ್ಯವಾಗಿರಬಹುದು. ಅದಂತೂ ಶುಚಿಯಾದ ಸಾಹಿತ್ಯದ ಲಕ್ಷಣವಲ್ಲ.

* * * *

ಇವೊತ್ತಿನ ದಿನ, ಜನಗಳಲ್ಲಿ ವಾಚನಾಭಿರುಚಿ ಹೆಚ್ಚಾಗಿ ಬೆಳೆದಿಲ್ಲ. ಅಥವಾ ಸಾಕಷ್ಟು ಬೆಳೆದಿಲ್ಲ—ಎಂಬುದು ನಾವೆಲ್ಲರೂ ಒಪ್ಪುವ ಮಾತು. ನಮ್ಮಲ್ಲಿ ಓದುಬರಹ ಕಲಿತವರ ಸಂಖ್ಯೆ ಕಡಿಮೆ (ಸೇಕಡಾ ೧೫ರಷ್ಟು) ಎಂಬುದು ನಿಜ. ಜನಗಳಲ್ಲಿ ವಾಚನಾಭಿರುಚಿ ಬೆಳೆಯುವುದಕ್ಕೆ ನಾವು ಏನು ಪ್ರಯತ್ನ ಮಾಡುತ್ತಿದ್ದೇವೆ; ಅದು ಪರಿಣಾಮಕಾರಿಯಾಗಿದೆಯೆ—ಎಂಬುದನ್ನು ಕುರಿತು ವಿಚಾರ ಮಾಡಬೇಕು. ನಮ್ಮ ಹೆಚ್ಚಿನ ಬರವಣಿಗೆಗಳು ಅಪ್ರಬುದ್ಧತೆಯ ಪ್ರದರ್ಶನವಾಗಿ ಕಾಣಿಸುತ್ತದೆಯಾದರೂ, ನಾವು ಬರೆಯುತ್ತಿರುವುದೇನೋ ಪ್ರಬುದ್ಧರಿಗಾಗಿ. ಆ ಪ್ರಬುದ್ಧಾವಸ್ಥೆ ಬರುವ ತನಕ, ಅಂದರೆ, ಐದಾರು ವರ್ಷಗಳಿಂದ ತೊಡಗಿ, ಸುಮಾರು ಇಪ್ಪತ್ತು ವರ್ಷ ಪ್ರಾಯ ಆಗುವ ತನಕ, ನಮ್ಮ ಜನರು ಏನನ್ನು ಓದಬೇಕು? ಹತ್ತು ಹನ್ನೆರಡು ವಯಸ್ಸಿನ ಬಾಲಕರು ಕೂಡ ಶಾಲೆಯ ವಾಚನಾಲಯಗಳಿಂದ 'ರಮೇಶ ಲಲಿತೆಯರ ಪ್ರಣಯ' ಕಥಾನಕವನ್ನೇ ಕೊಂಡು ಓದಬೇಕಲ್ಲದೆ, ಅಲ್ಲಿ ಬೇರೇನಿದೆ? ಶಿಶುಸಾಹಿತ್ಯವೆಷ್ಟಿದೆ? ಮಕ್ಕಳ ಸಾಹಿತ್ಯದಲ್ಲಿ ಭೇತಾಳ, ಬ್ರಹ್ಮರಾಕ್ಷಸ, ಇವರುಗಳೆಲ್ಲ ತುಂಬಿದ್ದರೆ ಸಾಕೆ? ಬೇರೇನೂ ವಿಷಯ, ವೈವಿಧ್ಯಗಳು ಬೇಡವೆ? ಪ್ರಪಂಚವನ್ನು ಕುರಿತು ಅದರಲ್ಲಿ ಆಸಕ್ತಿ, ಅಭಿರುಚಿ ಬೆಳೆಯುವುದಕ್ಕೆ, ಅವರ ಮನಸ್ಸು ಅರಳುವುದಕ್ಕೆ, ಅವರಿಗೆ ಪ್ರಿಯವಾದ ಪ್ರಪಂಚದಲ್ಲಿ ಆಸಕ್ತಿ ಹುಟ್ಟಿಸುವುದಕ್ಕೆ,—ತಕ್ಕ ಪುಸ್ತಕಗಳಿವೆಯೆ? ಇರುವವುಗಳ ಅಂದಚೆಂದವಾದರೂ ಏನು?

ತಾರುಣ್ಯದಲ್ಲಿ ಕಾಲಿರಿಸುತ್ತಿರುವ ಹುಡುಗ ಹುಡುಗಿಯರಿಗೆ—ಮನಸ್ಸನ್ನರಳಿಸುವ

ಯಾವ ಕಥೆಗಳುಂಟು ? ಯಾವ ಬಣ್ಣನೆಗಳುಂಟು ? ವೈಜ್ಞಾನಿಕ ಕುತೂಹಲ ಕೆರಳಬಲ್ಲ ಯಾವ ಬರಹ ಉಂಟು ? ನಮ್ಮ ಆಬಾಲವೃದ್ಧರೆಲ್ಲರೂ ಚಂದಮಾಮದ ಕಥೆಗಳಿಂದ, ರಮೇಶ ಲಲಿತೆಯರ ಕನಸಿನ ಪ್ರಣಯಗಳಿಂದ, ತಮ್ಮ ಹೃದಯ ಮನಸ್ಸುಗಳೆರಡನ್ನೂ ತುಂಬಿಸಿಕೊಂಡು ಬೆಳೆಯಬೇಕಾದಲ್ಲಿ, ಆಗ ಹೇಗೆ ಬೆಳೆದಾರು ? ನಾವು ವಾಚನಾಭಿರುಚಿಯನ್ನು ಬೆಳೆಯಿಸಬೇಕಾದ ಈ ಪ್ರಾಮುಖ್ಯವಯಸ್ಸಿನಲ್ಲಿಯೇ ಅವರಿಗೆ ತಕ್ಕ ಆಹಾರವನ್ನು ಒದಗಿಸದೆ ಹೋದರೆ, ಅದು ಹೇಗೆ ತಾನೆ ಬೆಳೆದೀತು ?

* * * *

ನಮ್ಮ ವಿಶ್ವವಿದ್ಯಾಲಯಗಳು ಸ್ನಾತಕ ಪದವಿಯ ಕಾರ್ಖಾನೆಯೊಂದನ್ನು ಹೊರಡಿಸಿ ಅಷ್ಟರಿಂದಲೇ ತೃಪ್ತಿಗೊಂಡಂತಿದೆ. ಸಂಶೋಧನೆಯಿಲ್ಲ ; ಜ್ಞಾನಾರ್ಜನೆಗೆ ಬೇಕಾದ ತಕ್ಕ ಪ್ರೋತ್ಸಾಹ, ಪ್ರವೇಶಗಳಿಲ್ಲ ; ಜ್ಞಾನಕ್ಕೆ ಸಲ್ಲಬೇಕಾದ ಗೌರವವಿಲ್ಲ. ಇವೊತ್ತು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ನಡೆದಿರುವ ಜ್ಞಾನದ ಪ್ರಗತಿಯನ್ನು ಕಾಣು ವಾಗ, ನಮ್ಮ 'ಸ್ನಾತಕ' ಬಿರುದು ಆ ಮಹಾಕ್ಷೇತ್ರಕ್ಕೆ ವಿದ್ಯಾರ್ಥಿಯಾಗಿ ಪ್ರವೇಶಿಸುವುದಕ್ಕಷ್ಟೇ ಅಧಿಕಾರಪತ್ರ—ಎನ್ನಬಹುದೇ ಹೊರತು, ಪಾಂಡಿತ್ಯದ ಬಿರುದು ಎಂದೆನಿಸುವುದಿಲ್ಲ. ಜ್ಞಾನವನ್ನು ಜ್ಞಾನಕ್ಕಾಗಿ, ಪಾಂಡಿತ್ಯವನ್ನು ಪಾಂಡಿತ್ಯಕ್ಕಾಗಿ ಗೌರವಿಸಲು ನಾವು ಎಂದು ಕಲಿಯುತ್ತೇವೆ ? ಈ ನಾಡಿನಲ್ಲಿ ಯಾವುದೇ ವಿಷಯದಲ್ಲಿ ಪಂಡಿತನಾದವನಿಗೆ, ಒಬ್ಬ ಸಾಮಾನ್ಯ ಮುನಿಸಿಪಲ್ ಕೌನ್ಸಿಲರನಿಗೆ ದೊರೆಯಬಹುದಾದ ಮನ್ನಣೆ, ಗೌರವಗಳಾದರೂ ಉಂಟೆ ? ನಮ್ಮ ಕಣ್ಣೆಲ್ಲ, ಅಧಿಕಾರ ಹಣಗಳ ಕಡೆಗೆ ಹರಿದಂತಿದೆ ; ಜೀವನದ ಇತರ ರಂಗಗಳು ನಮಗೆ ನಿರಾಕರ್ಷಕವೆನಿಸುತ್ತಿವೆ. ನಮ್ಮ ಸರಕಾರಗಳ ದೃಷ್ಟಿ, ವಿಶ್ವವಿದ್ಯಾಲಯದ ದೃಷ್ಟಿಗಳಾದರೂ ಈ ವಿಷಯದಲ್ಲಿ ಬೆಳೆದಿವೆಯೆ ? ನಮ್ಮ ನಮ್ಮ ಜಾತಿಯ ಜನಗಳಿಗೆ—ಅನ್ನ, ಕೆಲಸ ಒದಗಿಸುವ ಚಾಪಲ್ಯದಲ್ಲಿ, 'ಜ್ಞಾನ' 'ಪಾಂಡಿತ್ಯ'ಗಳು ಇವರಿಗೂ ಅಲ್ಪವಿಷಯಗಳಾಗಿ ಕಾಣಿಸುತ್ತಿವೆ. ಕನ್ನಡ ನಾಡಿನಲ್ಲಿ ಹುಟ್ಟಿ ಬೆಳೆದ ಅನೇಕ ಸಮರ್ಥರು ತಮ್ಮ ಉಪಜೀವನಕ್ಕಾಗಿ ಎಲ್ಲೆಲ್ಲಿ ಉದ್ಯೋಗ, ಭಿಕ್ಷಾವೃತ್ತಿಯನ್ನು ಕೈಗೊಳ್ಳುತ್ತಿದ್ದಾರೆ. ಹೀಗಾದಲ್ಲಿ ನಮ್ಮ ಕರ್ಣಾಟಕ ಬೆಳೆಯಲಾರದು. ಯಾವ ನಾಡಿನಲ್ಲಿ ಯೋಗ್ಯತೆ, ಬುದ್ಧಿಶಕ್ತಿ, ವಿದ್ವತ್ತು, ಅನ್ವೇಷಣಾಪರತೆಗಳು, ಗೌರವಿಸಲ್ಪಡುವುದಿಲ್ಲವೋ, ಅದರ ಬದಲು, ಅವು ಅಪರಾಧವಾಗಿ ತಿಳಿಯಲ್ಪಡುತ್ತವೆಯೋ, ಆ ನಾಡು ಬರಡಾಗುತ್ತದೆ ; ಬೆಂಡಾಗುತ್ತದೆ. ಕೇವಲ ಹೊಟ್ಟೆಬಾಕರಿಂದ ತುಂಬಿದ, ಕಾಲಕ್ಷೇಪಿಗಳ ದೇಶವಾಗುತ್ತದೆ. ಒಟ್ಟು ಜನತೆ ಬಹುಕಾಲ ಈ ಪರಿಸ್ಥಿತಿಯ ಶಾಪದಿಂದ ನರಳಬೇಕಾಗುತ್ತದೆ.

ವಿಜ್ಞಾನದ ಮಾತನ್ನಾಡಿದೆ. ಈ ಹೊತ್ತು ನಮಗೆ ಅದರ ಅರಿವಿಗೆ ಇಂಗ್ಲಿಷಿ

ನಂಥ ಭಾಷೆಯು ತುಂಬಾ ಸಹಾಯಮಾಡಿದೆ. ಆದರಿಂದಾಗಿ ವಿಜ್ಞಾನದ ಶಿಕ್ಷಣ, ಪ್ರಚಾರಗಳೆಲ್ಲವೂ ಇಂಗ್ಲಿಷಿನಿಂದಾಗಬೇಕೆಂದು ನಾವೆಂದೂ ತಿಳಿಯಬಾರದು—ಇಂಗ್ಲಿಷ್ ಮಾತೃಭಾಷೆಯಲ್ಲದ ಯಾವ ಸ್ವತಂತ್ರ ರಾಷ್ಟ್ರವೂ ಹಾಗೆ ಮಾಡುವುದಕ್ಕೆ ಸಿದ್ಧವಿಲ್ಲ; ಮಾಡಬೇಕಾಗಿಯೂ ಇಲ್ಲ. ನಮ್ಮ ವಿಶ್ವವಿದ್ಯಾಲಯಗಳ ಶಿಕ್ಷಣ ಮಾಧ್ಯಮ, ನಮ್ಮ ಯಾವತ್ತು ಶಿಕ್ಷಣದ ಮಾಧ್ಯಮ ಕನ್ನಡವೇ ಆಗಬೇಕು. ಈ ಕೆಲಸಕ್ಕೆ, ಶಾಸ್ತ್ರೀಯ ಶಬ್ದಗಳನ್ನು ನಾವು ಅಂತರರಾಷ್ಟ್ರೀಯ ರೂಪಗಳಲ್ಲೇ ಇರಿಸಿಕೊಳ್ಳಬೇಕಾದ್ದು ಅನಿವಾರ್ಯ. ಕೆಳಹಂತದಲ್ಲಿ, ಸಮಾಜವಿಜ್ಞಾನದಂಥ ಕೆಲವೊಂದು ಶಾಸ್ತ್ರಗಳ ವಿಚಾರದಲ್ಲಿ—ಸಮಾನ ಪರಿಭಾಷೆಯನ್ನು ಕನ್ನಡದಲ್ಲಿ ನಿರ್ಮಿಸಿಕೊಳ್ಳಲು ಕಷ್ಟವಿಲ್ಲ. ಇವೊತ್ತು,—ಒಡೆದ ಕನ್ನಡ ನಾಡಿನಲ್ಲಿ, ಇರುವ ನಾಲ್ಕು ಶಾಸ್ತ್ರೀಯ ಪಠ್ಯಪುಸ್ತಕಗಳನ್ನು ಹಿಡಿದುಕೊಂಡರೆ, ಒಂದೊಂದು ಕಡೆ ಒಂದೊಂದು ಪರಿಭಾಷೆ ಬಳಕೆಯಲ್ಲಿರುವುದು ಕಾಣುತ್ತದೆ. ಮಂಗಳೂರು, ಮುಂಬಯಿ, ಮೈಸೂರು—ಪ್ರಾಂತಗಳಲ್ಲಿ ಒಂದೇ ಪದಕ್ಕೆ ಮೂರು ಬೇರೆಬೇರೆ ಪಾರಿಭಾಷಿಕ ಶಬ್ದಗಳನ್ನು ಕಾಣಬಹುದು. ಇದು ಸಾಲದೆಂಬಂತೆ ನಮ್ಮ ಗ್ರಂಥಕರ್ತರು ಶಬ್ದನಿರ್ಮಾಣ ಚಾಪಲ್ಯದಿಂದ, ಮೂಲದ ಇಂಗ್ಲಿಷಿಗಿಂತಲೂ ಕಷ್ಟವಾದ ಅನೇಕಾನೇಕ ಹೊಸಪದಗಳನ್ನು ನಿರ್ಮಿಸಿ ಬಳಸುತ್ತಿದ್ದಾರೆ. ಅಖಂಡ ಕರ್ಣಾಟಕವು ಈ ವಿಚಾರದಲ್ಲಿ ಒಂದುಗೂಡಿ ನಡೆಯಿಸಬೇಕಾದ ಕೆಲಸ ಬಹುವಾಗಿದೆ. ಭಾಷಾಪಾಂಡಿತ್ಯ, ವಿಜ್ಞಾನಪಾಂಡಿತ್ಯ ಎರಡೂ ಉಳ್ಳವರನ್ನು ಕೂಡಿಸಿ ಮಾಡಬೇಕಾದ ಕೆಲಸ ಇದು. ಹೀಗೆ ಮಾಡಿದಲ್ಲಿ ಮಾತ್ರ, ವಿವಿಧ ಶಾಸ್ತ್ರಗ್ರಂಥಗಳು ಬೆಳಕಿಗೆ ಬರುವುದೂ, ಅವುಗಳಿಂದ ಜನಕ್ಕೆ ಪ್ರಯೋಜನವಾಗುವುದೂ ಸಾಧ್ಯ. ಕನ್ನಡನುಡಿ ಶಿಕ್ಷಣಮಾಧ್ಯಮವಾಗುವುದು ಸಾಧ್ಯ. ಕನ್ನಡದಲ್ಲಿ ಈ ಭಾಗದಲ್ಲಿ ಏನೇನೂ ಕೆಲಸ ನಡೆದಿಲ್ಲ ಎಂದು ನಾನು ಹೇಳುತ್ತಿಲ್ಲ. ಕೆಲವೊಂದು ಮಹನೀಯರು ಪ್ರೋತ್ಸಾಹವಿಲ್ಲದಲ್ಲಿಯೂ ಮುಂದೆ ಬಂದು, ಶಾಸ್ತ್ರೀಯ ಗ್ರಂಥಗಳನ್ನು ಬರೆದು ಪ್ರಕಟಿಸಿದ್ದಾರೆ. ಅವರ ಕೆಲಸ ಅಭಿನಂದನೀಯವಾದುದು. ನಾನು ಹೇಳುವುದು—ಆದ ಕೆಲಸ ಸಾಲದು, ಏನೇನೂ ಸಾಲದು—ಎಂದು. ಈ ಬಗೆಯ ಕೆಲಸ ವಿಪುಲವಾಗಿ ನಡೆಯಬೇಕು. ಕೆಲಸ ನಡಸುವವರು—ನಾವು ಬರೆದುದನ್ನು ಜನ ಓದುತ್ತಿದ್ದಾರೆಯೆ? ಅದು ಜನರಿಗೆ, ವಿದ್ಯಾರ್ಥಿಗಳಿಗೆ ಅರ್ಥವಾಗುತ್ತಿದೆಯೆ, ಅವರಲ್ಲಿ ಅಭಿರುಚಿ ಬೆಳೆಯಿಸುತ್ತಿದೆಯೆ—ಎಂದು ಪರಿಶೀಲಿಸಬೇಕು. ತಕ್ಕ ಪ್ರಯೋಗಗಳಿಂದ, ನಮ್ಮ ಕೆಲಸಗಳಲ್ಲಿನ ಕೊರತೆಯೇನೆಂದು ತಿಳಿದು, ತಿದ್ದಿಕೊಂಡು ಮುಂದುವರಿಯಬೇಕು. ಈ ಕೆಲಸದಲ್ಲಿ ನಮ್ಮ ವಿಶ್ವವಿದ್ಯಾಲಯಗಳೂ ಅತಿ ಹೆಚ್ಚಿನ ಶ್ರಮ, ಹೊಣೆ ವಹಿಸಬೇಕಾಗಿದೆ. ಖಾಸಗಿ ಲೇಖಕರು, ಪ್ರಕಾಶಕರು—ಮುಂದಿನ

ಹಂತಗಳಲ್ಲಿ ಬೇಕಾಗುವ ಆಧಾರಗ್ರಂಥಗಳನ್ನು ಪ್ರಕಟಿಸುವುದು ಕಷ್ಟ. ವಿಕ್ರಯವಾಗುವ ಗ್ರಂಥಗಳ ಸಂಖ್ಯೆ ಕಡಿಮೆ: ಪ್ರಕಟನೆಯ ವೆಚ್ಚ ಅಧಿಕ.

* * * *

ಶಾಸ್ತ್ರ ಸಾಹಿತ್ಯಗೋಷ್ಠಿಯ ಅಧ್ಯಕ್ಷರ ಭಾಷಣದ ಮುಖ್ಯಾಂಶಗಳು

ನೈಋತ್ಯ ಜರ್ಮನಿಯ ಸ್ವಾಬಿಯ ಪ್ರಾಂತದಲ್ಲಿರುವ ಉಲ್ಮ್ ಎಂಬ ಒಂದು ಹಳ್ಳಿಯಲ್ಲಿ ಒಂದು ಯೆಹೂದ್ಯ ಮನೆತನದಲ್ಲಿ ೧೮೭೯ನೆಯ ಮಾರ್ಚಿ ೧೪ರಲ್ಲಿ ಆಲ್ಬರ್ಟ್ ಐನ್‌ಸ್ಟೈನ್ ಜನಿಸಿದನು. ಈತನ ವಿದ್ಯಾಭ್ಯಾಸವು ಮ್ಯೂನಿಚ್ ನಗರದ ಪ್ರಾಥಮಿಕ ಪ್ರೌಢಶಾಲೆಗಳಲ್ಲಿಯೂ, ಸ್ವಿಟ್ಜರ್ಲೆಂಡಿನ ಜೂರಿಚ್ ನಗರದ ಪಾಲಿಟೆಕ್ನಿಕ್‌ನಲ್ಲಿಯೂ ಜರುಗಿತು. ಪಾಲಿಟೆಕ್ನಿಕ್‌ನ ಡಿಗ್ರಿಯನ್ನು ಐನ್‌ಸ್ಟೈನ್ ತನ್ನ ೨೧ನೆಯ ವಯಸ್ಸಿನಲ್ಲಿಯೇ ಪಡೆದರೂ ಯಾವ ಅಧ್ಯಾಪಕನೂ ಈತನನ್ನು ಅಂಥ ಮೇಧಾವಿ ಎಂದು ಗಣಿಸಿರಲಿಲ್ಲ. ಪರೀಕ್ಷೆಗಳಲ್ಲಿ ನಂಬರುಗಳನ್ನು ಗಳಿಸುವ ಚಾತುರ್ಯ ಆಲ್ಬರ್ಟಿಗಿರಲಿಲ್ಲ. ವಿಷಯಸಂಗ್ರಹಣಕ್ಕಿಂತ ವಸ್ತುಜ್ಞಾನಕ್ಕೆ ಹೆಚ್ಚು ಬೆಲೆ ಕೊಡುವುದು ಈತನ ಹುಟ್ಟುಗುಣ. ಜಗದ್ವ್ಯಾಪಾರದಲ್ಲಿ ಕಂಡುಬರುವ ನೈಸರ್ಗಿಕ ನಿಯಮಗಳನ್ನು ನೋಡಿ ಆಶ್ಚರ್ಯಮಗ್ನನಾಗುವ ಸ್ವಭಾವ ಈತನದು. ಪರೀಕ್ಷೆಗಳಲ್ಲಿ ವಿಷಯಗಳ ಪಟ್ಟಿಗೆ ನಂಬರು ದೊರಕುತ್ತದೆ: ಜ್ಞಾನ, ಆಶ್ಚರ್ಯಗಳಿಗೆ ಯಾವ ಪರೀಕ್ಷಕನು ನಂಬರುಗಳನ್ನು ಕೊಟ್ಟಾನು?

ಪದವೀಧರನಾದ ಮೇಲೆ ಅವನು ಬಯಸಿದಷ್ಟು ಉಪಾಧ್ಯಾಯವೃತ್ತಿಯನ್ನು ದೊರಕಿಸಿಕೊಳ್ಳುವುದು ಐನ್‌ಸ್ಟೈನ್‌ಗೆ ಸಾಧ್ಯವಾಗಲಿಲ್ಲ. ಈತನ ಸಹಪಾಠಿಯೊಬ್ಬನ ಶಿಫಾರಸುಮೇಲೆ ಬರ್ನ್ ನಗರದ ಪೇಟೆಂಟ್ ಕಛೇರಿಯಲ್ಲಿ ಒಂದು ಗುಮಾಸ್ತೆ ಕೆಲಸ ಸಿಕ್ಕಿತು ಈತನಿಗೆ. ಕಛೇರಿಯ ಕೆಲಸ ಆಲ್ಬರ್ಟ್‌ಗೆ ಹಗುರವಾಗಿಯೇ ಇತ್ತು. ವಿರಾಮ ಕಾಲದಲ್ಲಿ ಅವನ ಬುದ್ಧಿ ಯಾವಾಗಲೂ ಭೌತನಿಯಮಚಿಂತನೆಯಲ್ಲಿ ಹರಿದಾಡುತ್ತಿತ್ತು. ಇದರ ಫಲವಾಗಿ ಬರ್ಲಿನ್‌ನ ಪ್ರಸಿದ್ಧ "ಅನಲೆನ್ ಡೆರ್ ಫಿಸಿಕ್" ಎಂಬ ವೈಜ್ಞಾನಿಕ ಪತ್ರಿಕೆಯಲ್ಲಿ ೧೯೦೫ರ ಒಂದು ವರ್ಷದಲ್ಲಿ ಐನ್‌ಸ್ಟೈನ್‌ನ ಐದು ಲೇಖನಗಳು ಪ್ರಕಟವಾದುವು. ಅವುಗಳಲ್ಲಿ ಎರಡರಲ್ಲಿ ಈಗ ಜಗದ್ವಿಖ್ಯಾತವಾಗಿರುವ "ವಿಶಿಷ್ಟ ಸಾಪೇಕ್ಷತಾತತ್ತ್ವ"ದ (Special Principle of Relativity) ಪ್ರಥಮ ಪ್ರತಿಪಾದನೆ ಇದೆ.

ವಸ್ತುಗಳ ಚಲನೆ ಎಲ್ಲ ಸಾಪೇಕ್ಷ, ನಿರಪೇಕ್ಷ ಚಲನೆ ಎಂಬ ಪದಪ್ರಯೋಗಕ್ಕೆ ಅರ್ಥವೇ ಇಲ್ಲ: ಹಲವು ಕಾಯಗಳು ಅಥವಾ ವ್ಯೂಹಗಳು ಪರಸ್ಪರವಾಗಿ ಸಾಪೇಕ್ಷ ಸಮವೇಗಗಳಲ್ಲಿ ಚಲಿಸುತ್ತಿದ್ದರೆ, ಆ ಕಾಯಗಳು ಪಾಲಿಸುವ ಚಲನನಿಯಮಗಳನ್ನು

ಒಂದು ವ್ಯೂಹದಲ್ಲಿರುವ ವೀಕ್ಷಕನು ಯಾವ ರೂಪದ ಗಣಿತೋಕ್ತಿ ಅಥವಾ ಗಣಿತ ಸೂತ್ರಗಳಿಂದ ನಿರೂಪಿಸುತ್ತಾನೆಯೋ ಅದೇ ರೂಪದ ಗಣಿತೋಕ್ತಿಗಳಿಂದಲೇ ಇತರ ವ್ಯೂಹಗಳ ವೀಕ್ಷಕರೂ ನಿರೂಪಿಸುತ್ತಾರೆ—ಇವು ಸಂಗ್ರಹವಾಗಿ ವಿಶಿಷ್ಟ ಸಾಪೇಕ್ಷತಾತತ್ತ್ವದ ಪ್ರಧಾನಸೂತ್ರಗಳು.

ಒಂದು ಪದಾರ್ಥವು ನಮ್ಮ ಎಡಕ್ಕಿದೆಯೋ, ಬಲಕ್ಕಿದೆಯೋ, ಮೇಲಿದೆಯೋ, ಕೆಳಗಿದೆಯೋ ಎಂಬುದು ಪದಾರ್ಥಕ್ಕೆ ಸಾಪೇಕ್ಷವಾಗಿ ನಮ್ಮ ಸ್ಥಾನವನ್ನವಲಂಬಿಸುತ್ತದೆ ಎಂಬುದು ನಮಗೆಲ್ಲ ತಿಳಿದ ವಿಷಯ. ಆದರೆ ಪದಾರ್ಥದ ಉದ್ದವು ವೀಕ್ಷಕನ ಸ್ಥಾನವನ್ನವಲಂಬಿಸುವುದಿಲ್ಲ, ಅದು ಅಚಲ ಎಂದೂ ನಮಗೆ ಗೊತ್ತಿದೆ. ಸಾಪೇಕ್ಷತಾತತ್ತ್ವದಂತೆ ವಸ್ತುವೊಂದರ ಉದ್ದ, ಅಗಲ, ದಪ್ಪಗಳೂ ವಸ್ತುವಿಗೆ ಸಾಪೇಕ್ಷವಾಗಿ ವೀಕ್ಷಕನ ಚಲನವೇಗವನ್ನು ಅವಲಂಬಿಸುತ್ತವೆ. ಹಾಗೆಯೇ ಒಂದು ವ್ಯೂಹದಲ್ಲಿ ಜರುಗುವ ಎರಡು ಘಟನೆಗಳಿಗಿರುವ ಕಾಲಾಂತರವೂ ವೀಕ್ಷಕನ ಸಾಪೇಕ್ಷವೇಗವನ್ನು ಅವಲಂಬಿಸುತ್ತದೆ. ಇದರ ಅರ್ಥ ಒಂದು ಕಡೆ ನಿಂತಿರುವವನಿಗೆ ತನ್ನ ಎಡಕ್ಕಿದ್ದಂತೆ ಕಾಣುವ ವಸ್ತು ಇನ್ನೊಬ್ಬನಿಗೆ ಹೇಗೆ ಅವನ ಬಲಕ್ಕಿದ್ದಂತೆ ಕಾಣಬಹುದೋ, ಹಾಗೆಯೇ ಒಬ್ಬ ವೀಕ್ಷಕನಿಗೆ ಎರಡು ಘಟನೆಗಳ ನಡುವೆ ಕಾಲಾಂತರವಾಗಿ ಕಂಡುಬರುವ ಅವಧಿಯು ಮತ್ತೊಬ್ಬನಿಗೆ ದೇಶದ—ಸ್ಥಾನದ—ಅಂತರವಾಗಿ ಕಾಣಬಹುದು. ಹೀಗಿದ್ದಲ್ಲಿ ಎಡಬಲಗಳ ವಿನಿಮಯವಾದರೂ, ಉದ್ದ ಅಚಲವಾಗಿರುತ್ತದೆ ಎಂದು ನಾವು ಸಾಮಾನ್ಯವಾಗಿ ಹೇಳುವಂತೆ ಈ ಸಾಪೇಕ್ಷತಾತತ್ತ್ವದಲ್ಲಿ ಯಾವುದು ಅಚಲ ಎಂಬ ಪ್ರಶ್ನೆ ಬರುತ್ತದೆ. ಎರಡು ಘಟನೆಗಳ ದೇಶಕಾಲ ಸಮಷ್ಟಿಯ ಅಂತರ ಅಚಲ ಎಂಬುದೇ ಈ ತತ್ತ್ವದ ಉತ್ತರ. ಹೀಗೆ ವಿಶಿಷ್ಟ ಸಾಪೇಕ್ಷತಾತತ್ತ್ವವು ದೇಶಕಾಲಗಳ ಸ್ವರೂಪದ ಒಂದು ಹೊಸಮುಖವನ್ನು ನಮಗೆ ತೋರಿಸಿಕೊಡುತ್ತದೆ.

ಐನ್‌ಸ್ಟೈನ್ ೧೯೦೫ ರಲ್ಲಿ ಪ್ರಕಟಿಸಿದ ಇನ್ನೊಂದು ಲೇಖನವು ಬ್ರೌನಿಯನ್ ಚಲನೆಯನ್ನು ಕುರಿತದ್ದು. ಈ ಲೇಖನವು ಅಣುಗಳ ಅಸ್ತಿತ್ವವನ್ನು ಪ್ರಾಯೋಗಿಕವಾಗಿ ಸಾಧಿಸುವ ಮಾರ್ಗವನ್ನು ಮೊಟ್ಟಮೊದಲಿಗೆ ತೋರಿಸಿಕೊಟ್ಟಿತು.

ಇದೇ ವರ್ಷದ ಮತ್ತೊಂದು ಲೇಖನದಲ್ಲಿ ಐನ್‌ಸ್ಟೈನ್ ಪ್ರಭಾವಿದ್ಯುತ್ಪರಿಣಾಮದ ಖಂಡವಾದವನ್ನು (Quantum Theory of the Photo-electric Effect) ಪ್ರತಿಪಾದಿಸಿದ್ದಾನೆ. ಇದಕ್ಕೆ ಮುಂಚೆಯೇ ಕೋಪನ್‌ಹೇಗನ್ನಿನ ವಿಖ್ಯಾತ ಭೌತಜ್ಞ ನೀಲ್ಸ್ ಬೋರ್ ಖಂಡವಾದವನ್ನು ಮಂಡಿಸಿದ್ದನಾದರೂ ಆತನು ಒಂದು ಬಗೆಯ ಅರೆಮನಸ್ಸಿನಿಂದ ಕೃತಕವಾಗಿ—ಹುಡುಗರು ಒಂದೊಂದು ಸಲ ನಿರೀಕ್ಷಿತ ಉತ್ತರ

ಬರಲೆಂದು ಗುಣಾಕಾರ, ಭಾಗಹಾರಗಳನ್ನು ಸ್ಪಷ್ಟವಾಗಿ ಕಾರಣ ತೋರಿಸದೆ ಮಾಡುವುದಿಲ್ಲವೆ? ಹೆಚ್ಚು ಕಡಮೆ ಆ ರೀತಿಯಲ್ಲಿ—ತನ್ನ ಲೇಖನದಲ್ಲಿ ಈ ಖಂಡವಾದ ವನ್ನು ಸೇರಿಸಿದ್ದನು. ಐನ್‌ಸ್ಟೈನ್ ಮೊಟ್ಟಮೊದಲಿಗೆ ನಿರ್ಭೀತನಾಗಿ ಖಂಡವಾದ ವನ್ನು ಪುಷ್ಟೀಕರಿಸಿ ಅದಕ್ಕೆ ತತ್ತ್ವಸಮರ್ಥನೆಯನ್ನು ಒದಗಿಸಿದನೆಂದು ಹೇಳಬಹುದು.

ಇಷ್ಟೆಲ್ಲ ಸಾಧಿಸಿದಾಗ ಐನ್‌ಸ್ಟೈನ್‌ಗೆ ಕೇವಲ ೨೬ ವರ್ಷಗಳಾಗಿತ್ತು. ಪೇಟೆಂಟ್ ಕಛೇರಿಯ ಗುಮಾಸ್ತನಾಗಿದ್ದ. ಮೂರು ನಾಲ್ಕು ವರ್ಷಗಳಲ್ಲಿ ಇಷ್ಟು ಮೂಲಭೂತವಾದ, ಅದ್ಭುತವಾದ ಹೊಸ ತತ್ತ್ವಗಳನ್ನು ಪ್ರಪಂಚದ ಮುಂದಿಟ್ಟ ವಿಭೂತಿಪುರುಷನ ಪ್ರತಿಭೆಗೆ ತಲೆದೂಗದಿರುವವರು ಯಾರೂ ಇರಲಾರರು.

ಹೀಗೆ ಕೀರ್ತಿ ಸಂಪಾದಿಸಿದ್ದ ಐನ್‌ಸ್ಟೈನನ್ನು ಪೇಟೆಂಟ್ ಕಛೇರಿಯಲ್ಲಿಯೇ ಕೊಳೆಹಾಕಿದ್ದರೆ ಲೋಕ ತಮ್ಮನ್ನು ಏನಂದೀತು ಎಂದು ಸ್ವಿಟ್‌ಜರ್ಲೆಂಡಿನ ವಿಶ್ವವಿದ್ಯಾ ಲಯದ ಅಧಿಕಾರಿಗಳು ನಾಲ್ಕೈದು ವರ್ಷಗಳು ದೀರ್ಘವಾಗಿ ಆಲೋಚಿಸಿ ಆತನನ್ನು ಮ್ಯೂನಿಚ್ ವಿಶ್ವವಿದ್ಯಾಲಯದಲ್ಲಿ ಅಸಾಧಾರಣ ಪ್ರಾಧ್ಯಾಪಕ (Professer Extraordinary)ನ ಕೆಲಸಕ್ಕೆ ನೇಮಕಮಾಡಿಕೊಂಡರು. ಹೆಸರು "ಅಸಾಧಾರಣ"ವೆಂದು ಗೌರವಾಧಿಕ್ಯವನ್ನು ಸೂಚಿಸಿದರೂ ವೇತನ "ಸಾಧಾರಣ" ಪ್ರಾಧ್ಯಾಪಕನದಕ್ಕಿಂತ ಕಡಿಮೆ, ಅಷ್ಟೇ ಅಲ್ಲ ಪೇಟೆಂಟ್ ಗುಮಾಸ್ತೆಯದಕ್ಕಿಂತ ಕೂಡ ಹೆಚ್ಚಾಗಿರಲಿಲ್ಲ. ಹುದ್ದೆಯ ಗೌರವವನ್ನು ಉಳಿಸಿಕೊಳ್ಳಲು ಐನ್‌ಸ್ಟೈನ್‌ನ ಹೆಂಡತಿಯು ಒಬ್ಬಿಬ್ಬರು ವಿದ್ಯಾರ್ಥಿಗಳಿಗೆ ಮನೆಯಲ್ಲಿ ಊಟ ವಸತಿಗಳನ್ನು ಒದಗಿಸಿಕೊಡುವ ಕೆಲಸಕ್ಕೆ ಕೈಹಾಕಬೇಕಾಯಿತು. ಈ ಸಂದರ್ಭದಲ್ಲಿ ಆತನು ಒಂದು ಕಡೆ ಹೀಗೆ ಹೇಳಿದ್ದಾನೆ: "ನನ್ನ ಸಾಪೇಕ್ಷತಾವಾದದಲ್ಲಿ ನಾನು ದೇಶದ ಪ್ರತಿಯೊಂದು ಬಿಂದುವಿನಲ್ಲಿಯೂ ಒಂದೊಂದು ಗಡಿಯಾರವನ್ನು ಸ್ಥಾಪಿಸಿದೆ. ಆದರೆ ವಾಸ್ತವವಾಗಿ ನನ್ನ ಕೊಠಡಿಯಲ್ಲಿ ಒಂದು ಗಡಿಯಾರವನ್ನು ಇಟ್ಟುಕೊಳ್ಳುವುದೇ ನನಗೆ ಕಷ್ಟವಾಗಿದೆ."

ಮ್ಯೂನಿಚ್ ವಿಶ್ವವಿದ್ಯಾಲಯದಲ್ಲಿ ಒಂದು ವರ್ಷ ಕಳೆಯುವುದರೊಳಗಾಗಿಯೆ ಪ್ರಾಹಾದ ಜರ್ಮನ್ ವಿಶ್ವವಿದ್ಯಾಲಯದ ಭೌತಪ್ರಾಧ್ಯಾಪಕ ಪೀಠವನ್ನಲಂಕರಿಸಲು ಐನ್‌ಸ್ಟೈನ್‌ಗೆ ಆಹ್ವಾನ ಬಂದಿತು. ಈ ಪ್ರಾಧ್ಯಾಪಕತ್ವವು ಅಸಾಧಾರಣವಾದ ದ್ದಾಗಿರಲಿಲ್ಲವಾದ್ದರಿಂದ ವೇತನ ಹೆಚ್ಚಾಗಿತ್ತು, ಇವರಿಗೆ ಹಣಕಾಸಿನ ಮುಗ್ಗಟ್ಟು ಕಡಿಮೆಯಾಯಿತು.

ಪ್ರಾಹಾದಲ್ಲಿದ್ದಾಗ ಐನ್‌ಸ್ಟೈನ್ ತನ್ನ "ಸಾಮಾನ್ಯ ಸಾಪೇಕ್ಷತಾವಾದ'ದ (General Theory of Relativity) ಪ್ರಥಮ ಭಾಗವನ್ನು ಪ್ರಕಟಿಸಿದನು; ಬೆಳಕಿನ ಖಂಡವಾದವನ್ನೂ ಮುಂದುವರಿಸಿದನು. ಪ್ರಾಹಾದಲ್ಲಿ ಎರಡು ವರ್ಷಗಳ

ಪ್ರಾಧ್ಯಾಪಕವೃತ್ತಿಯನ್ನು ಮುಗಿಸುವಷ್ಟರಲ್ಲಿಯೇ ತಾನು ವಿದ್ಯಾರ್ಥಿಯಾಗಿದ್ದ ಜೂರಿಚ್ ಪಾಲಿಟೆಕ್ನಿಕ್‌ನಲ್ಲಿ ಪ್ರಾಧ್ಯಾಪಕನಾಗಬೇಕೆಂದು ಅಲ್ಲಿಂದ ಕರೆ ಬಂದಿತು. ಅಲ್ಲಿಯೂ ಒಂದು ವರ್ಷದ ಮೇಲಿರಲಿಲ್ಲ—ಬರ್ಲಿನ್‌ನ ಕೈಜರ್ ವಿಲ್ಹೆಲ್ಮ್ ಸಂಸ್ಥೆಯ ಪ್ರಾಧ್ಯಾಪಕ ಪೀಠವನ್ನು ನಿನಗಾಗಿಯೇ ನಿರ್ಮಾಣಮಾಡಿದ್ದೇವೆಂದು ಜರ್ಮನಿಯ ಪ್ರಸಿದ್ಧ ಭೌತಜ್ಞರಾದ ಪ್ಲಾಂಕ್ ಮತ್ತು ನರ್ನ್‌ಸ್ಟ್‌ರು ಐನ್‌ಸ್ಟೈನನ್ನು ಒತ್ತಾಯದಿಂದ ಬರ್ಲಿನ್‌ಗೆ ಎಳೆದುಕೊಂಡುಹೋದರು. ಇಲ್ಲಿ ೧೯೧೫ರಲ್ಲಿ ಐನ್‌ಸ್ಟೈನ್ ತನ್ನ "ಸಾಮಾನ್ಯ ಸಾಪೇಕ್ಷತಾವಾದ"ವನ್ನು ಪರಿಷ್ಕೃತ ರೂಪಕ್ಕೆ ತಂದನು.

*   *   *   *

ಬುಧಗ್ರಹಪಥದ ವೈಪರೀತ್ಯವನ್ನು ಸಮರ್ಪಕವಾಗಿ ವಿವರಿಸಿದ್ದು ಸಾಮಾನ್ಯ ಸಾಪೇಕ್ಷತಾವಾದದ ಮತ್ತೊಂದು ಮಹಾಸಾಧನೆ ಎಂದು ಹೇಳಬಹುದು. ಭಾರ ಕಾಯಗಳು ದೇಶವನ್ನು ವಕ್ರಮಾಡುತ್ತವೆ; ವಸ್ತುಶಕ್ತಿಗಳು ಪರಸ್ಪರ ಪರಿವರ್ತನೀಯ; ವಿಶ್ವಕ್ಕೆ ಎಲ್ಲೆ ಇಲ್ಲ, ಆದರೂ ಅದು ಅನಂತವಲ್ಲ; ಮುಂತಾದ ಪ್ರಮೇಯಗಳೂ ಸಾಪೇಕ್ಷತಾವಾದದಿಂದ ಸಿದ್ಧಿಸುತ್ತವೆ. ೧೯೨೨ರಲ್ಲಿ ನ್ಯೂಯಾರ್ಕ್ ಬಂದರಿನಲ್ಲಿ ಐನ್‌ಸ್ಟೈನ್ ದಂಪತಿಗಳು ಹಡಗಿನಿಂದ ಇಳಿಯುತ್ತಿರುವಾಗಲೇ ಅಮೆರಿಕದ ಪತ್ರಿಕೋದ್ಯೋಗಿಗಳು "ಸಾಪೇಕ್ಷತಾವಾದದ ತಿರುಳನ್ನು ಒಂದೆರಡು ವಾಕ್ಯಗಳಲ್ಲಿ ವಿವರಿಸುವುದು ಹೇಗೆ?" ಎಂದು ಕೇಳಿದರು. ಆತನು "ನನ್ನ ಉತ್ತರಕ್ಕೆ ನೀವು ಅತಿಯಾಗಿ ಬೆಲೆ ಕಟ್ಟದಿದ್ದರೆ, ವಿನೋದಕ್ಕಾಗಿ ಈ ರೀತಿ ವಿವರಿಸಬಲ್ಲೆ. ಈ ವಿಶ್ವದಿಂದ ಎಲ್ಲ ಪದಾರ್ಥಗಳೂ ಮಾಯವಾದರೆ ದೇಶಕಾಲಗಳು ಉಳಿಯುತ್ತವೆ ಎಂದು ಇದುವರೆಗೆ ನಂಬಿದ್ದರು. ಸಾಪೇಕ್ಷತಾವಾದದಂತಾದರೋ ವಸ್ತುಗಳೊಂದಿಗೇ ದೇಶಕಾಲಗಳೂ ಮಾಯವಾಗುತ್ತವೆ" ಎಂದು ಉತ್ತರಕೊಟ್ಟನು. ಸಾಪೇಕ್ಷತಾವಾದದ ಸೌಂದರ್ಯವನ್ನು ಅನುಭವಿಸಲು ಗಣಿತಜ್ಞಾನವು ಅತ್ಯವಶ್ಯವಾದ್ದರಿಂದ ಇಲ್ಲಿ ಹೆಚ್ಚಿಗೆ ಹೇಳುವುದು ಅಪ್ರಕೃತ.

೧೯೩೨ರ ಹೊತ್ತಿಗಾಗಲೆ ಐನ್‌ಸ್ಟೈನ್‌ಗೆ ಜರ್ಮನಿಯ ವಾತಾವರಣ ದುಸ್ಸಹವಾಗಿ ಕಂಡಿತು. ಬರ್ಲಿನ್‌ನ ಲೆನಾರ್ಡ್ ಎಂಬ ಭೌತಜ್ಞನು "ಐನ್‌ಸ್ಟೈನನ ಸಾಪೇಕ್ಷತಾವಾದ ಅನಾರ್ಯವಿಜ್ಞಾನ. ಆ ವಾದದ ಪ್ರಧಾನ ತೀರ್ಮಾನವಾದ $E=Mc^2$ ಎಂಬ ವಸ್ತು ಶಕ್ತಿ ಸಮತ್ವದ ಸಮೀಕರಣವನ್ನು ಐನ್‌ಸ್ಟೈನ್‌ಗಿಂತ ಮುಂಚೆ ಹಾಸೆನಾಃರ್ಲ್ ಎಂಬ ಶುದ್ಧ ಆರ್ಯವಿಜ್ಞಾನಿ ಕಂಡುಹಿಡಿದಿದ್ದನು. ಯೆಹೂದ್ಯರು ಮತ್ತು ಅವರ ಬೆಂಬಲಿಗರ ಪಿತೂರಿಯಿಂದ 'ಹಾಸೆನಾಃರ್ಲ್‌ನ ತತ್ತ್ವ' ಎಂದು ಕರೆಯಬೇಕಾದದ್ದನ್ನು ಐನ್‌ಸ್ಟೈನನ ಸಾಪೇಕ್ಷತಾವಾದ ಎಂದು ಈಗ

ಲೋಕ ಕರೆಯುತ್ತಿದೆ" ಮುಂತಾಗಿ ಪ್ರಚಾರಮಾಡಿದನು. ಐನ್‌ಸ್ಟೈನನ ಮನೆ ಮಠಗಳನ್ನು ಸರ್ಕಾರ ವಶಪಡಿಸಿಕೊಂಡಿದ್ದೇ ಅಲ್ಲದೆ ಅವನನ್ನು ಹಿಡಿದುಕೊಟ್ಟವರಿಗೆ ಪಾರಿತೋಷಕ ಕೊಡುವುದಾಗಿಯೂ ಹೇಳಿತು. ಆಗ ಐನ್‌ಸ್ಟೈನ್ ಹಾಲೆಂಡ್‌ನ ರಾಣಿಯ ಅತಿಥಿಯಾಗಿದ್ದನು.

ಈ ಎಲ್ಲ ಕಾರಣಗಳಿಂದ ಐನ್‌ಸ್ಟೈನ್ ಅಮೆರಿಕದ ಪ್ರಿನ್ಸ್‌ಟನ್‌ನ ಪ್ರೌಢ ವ್ಯಾಸಂಗ ಸಂಸ್ಥೆ (Institute of Advanced Studies) ಯಲ್ಲಿ ಪ್ರಾಧ್ಯಾಪಕ ನಾಗಿರಲು ಒಪ್ಪಿ ಅದುವರೆಗೆ ಯೂರೋಪಿಯನ್ ಆಗಿದ್ದವನು ೧೯೩೩ ರಲ್ಲಿ ಅಮೆರಿಕನ್ ಆದನು. ಅಷ್ಟಕ್ಕೆ ಮುಂಚೆಯೇ ಆತನು ರಷ್ಯ ಉಳಿದು ಯೂರೋಪಿನ ಇತರ ರಾಷ್ಟ್ರಗಳಲ್ಲಿಯೂ, ಚೀನಾ, ಜಪಾನ್, ಪಾಲೆಸ್ಟೈನ್, ಅಮೆರಿಕಗಳಲ್ಲಿಯೂ ಪ್ರವಾಸಮಾಡಿ ಅನೇಕ ವೈಜ್ಞಾನಿಕ ಸಂಸ್ಥೆ, ಸಾರ್ವಜನಿಕ ಸಂಸ್ಥೆಗಳ ಆದರ ಸತ್ಕಾರಗಳ ಸವಿಯನ್ನು ಅನುಭವಿಸಿದ್ದನು. ೧೯೩೩ ರಿಂದ ಆತನ ಅಂತ್ಯಕಾಲದ ವರೆಗೂ ಈ ಮಹರ್ಷಿಯನ್ನು ತನ್ನಲ್ಲಿಯೇ ಇರಿಸಿಕೊಳ್ಳುವ ಪುಣ್ಯ ಜರ್ಮನಿಯ ದೌರ್ಭಾಗ್ಯದಿಂದ ಅಮೆರಿಕಕ್ಕೆ ಲಭಿಸಿತು.

ಐನ್‌ಸ್ಟೈನ್‌ಗೆ ಇನ್ನೂ ೧೭ ವರ್ಷಗಳಾಗಿದ್ದಾಗಲೇ "ಪ್ರಕೃತಿಯಲ್ಲಿ ನಮಗೆ ಕಾಣುವ ಅತ್ಯಂತ ತೊಡಕಾದ ವಿವಿಧ ಘಟನೆಗಳನ್ನು ಸರಳ ಗಣಿತೋಕ್ತಿಗಳಿಗೆ ಇಳಿಸಲು ಹೇಗೆ ಸಾಧ್ಯ?" ಎಂಬ ಪ್ರಶ್ನೆ ಅವನ ಮನಸ್ಸನ್ನು ತುಂಬಿತ್ತು. ಈ ಪ್ರಶ್ನೆಗೆ ಉತ್ತರವನ್ನು ಅರಸುತ್ತ ಆತನು ಸಾಪೇಕ್ಷತಾವಾದವನ್ನು ಸೃಷ್ಟಿಸಿದನು. ಆದರೆ ಈ ಸಾಮಾನ್ಯ ಸಾಪೇಕ್ಷತಾವಾದ ಕೂಡ ಅರ್ಧ ಉತ್ತರ ಮಾತ್ರ. ಏಕೆಂದರೆ ವಿದ್ಯುದಾಕರ್ಷಣ ಬಲಗಳೂ ಗುರುತ್ವಾಕರ್ಷಣ ಬಲಗಳೂ ಸಾಪೇಕ್ಷತಾವಾದದಲ್ಲಿ ಪರಸ್ಪರ ಸಂಬಧವಿಲ್ಲದ ಪ್ರತ್ಯೇಕ ಬಲಗಳಾಗಿ ಉಳಿಯುತ್ತವೆ. ಆದ್ದರಿಂದ ಪ್ರಿನ್ಸ್‌ಟನ್‌ಗೆ ಬಂದ ಮೇಲೆ ಐನ್‌ಸ್ಟೈನ್ ತನ್ನ ಸರ್ವಶಕ್ತಿಯನ್ನೂ ಗುರುತ್ವ ಮತ್ತು ವಿದ್ಯುತ್ಕಾಂತ ಕ್ಷೇತ್ರಗಳೆರಡನ್ನೂ ಒಂದೇ ಸೂತ್ರದಲ್ಲಿ ಹೆಣೆಯಬಲ್ಲ ಏಕೀಕೃತ ಕ್ಷೇತ್ರವಾದ (Unified Field Theory) ದ ಸೃಷ್ಟಿಕಾರ್ಯಕ್ಕೆ ಧಾರೆ ಎರೆದನು. ಇಪ್ಪತ್ತು ವರ್ಷಗಳ ದೀರ್ಘತಪಸ್ಸಿನ ಫಲವಾಗಿ ೧೯೪೯ ರಲ್ಲಿ ಏಕೀಕೃತ ಕ್ಷೇತ್ರವಾದದ ಗಣಿತಸೂತ್ರವನ್ನು ಈತನು ಕಂಡನು.

* * * *

ಇಷ್ಟೆಲ್ಲ ಕೇಳಿ, ಐನ್‌ಸ್ಟೈನ್ ಅದ್ವಿತೀಯ ಪ್ರತಿಭೆಯ ಮೂಲಭೂತ ಭೌತತತ್ತ್ವ ಪ್ರಣೇತೃವೆಂದು ತಮಗೆಲ್ಲರಿಗೂ ಮನವರಿಕೆಯಾಗಿರಬೇಕು. ಆದರೆ ಆತನ ಹಿರಿಮೆ ಇದಕ್ಕೂ ಮಿಗಿಲಾದದ್ದು. ಏಕೆಂದರೆ ಆತನು ಭೌತತತ್ತ್ವದಾರ್ಶನಿಕನೂ ಆಗಿದ್ದಾನೆ.

ಬಾಹ್ಯ ವಿಶ್ವವರ್ಣನೆಯಲ್ಲಿ ವೈಜ್ಞಾನಿಕ ವಾದ, ತತ್ತ್ವಗಳಿಗೆ ಈತನು ಹೊಸ ಸ್ಥಾನವನ್ನು ಕೊಟ್ಟಿದಾನೆ. ಭೌತನಿಯಮಗಳೂ ಭಾವನೆಗಳೂ ಜಗದ್ವ್ಯಾಪಾರವನ್ನು ಸಂಗ್ರಹವಾಗಿ ವರ್ಣಿಸುವ ಗಣಿತಸೂತ್ರಗಳೆಂದು ಹಿಂದಿನ ವಿಜ್ಞಾನಿಗಳು ತಿಳಿದಿದ್ದರು. ಐನ್‌ಸ್ಟೈನ್‌ನಂತೆ ಭೌತನಿಯಮಗಳು ಪ್ರಯೋಗಗಳಿಂದ ತಾರ್ಕಿಕವಾಗಿ ಸಿದ್ಧಿಸುವ ತೀರ್ಮಾನಗಳಲ್ಲ, ಮಾನವನ ತರ್ಕಬದ್ಧ ಮನಸ್ಸಿನ ಸ್ವತಂತ್ರ ನಿರ್ಮಾಣಗಳು. ಈ ನಿರ್ಮಾಣಗಳ ಬೆಲೆ ಅವುಗಳಿಗೆ ದೊರಕುವ ಪ್ರಾಯೋಗಿಕ ಸಮರ್ಥನೆಯನ್ನವಲಂಬಿಸುತ್ತದೆ. ಭೌತವಿಜ್ಞಾನದ ಮೂಲತತ್ತ್ವಗಳ ರೂಪ ಸರಳವಾದಷ್ಟೂ, ಅವುಗಳ ಆಧಾರಸೂತ್ರಗಳ ಸಂಖ್ಯೆ ಕಡಿಮೆಯಾದಷ್ಟೂ ತತ್ತ್ವಗಳಿಗೂ ನಮ್ಮ ಪ್ರಾಪಂಚಿಕ ಅನುಭವಗಳಿಗೂ ಇರುವ ಅಂತರ ಹೆಚ್ಚುತ್ತ ಹೋಗುತ್ತದೆ. ಭೌತತತ್ತ್ವಗಳು ಹೀಗೆ ಮಾನವನ ಮನೋನಿರ್ಮಾಣಗಳಾದರೆ ನಿರ್ದುಷ್ಟವಾದ ಭೌತತತ್ತ್ವ ಎಂಬುದಿಲ್ಲವೇ ಅಥವಾ ಬಾಹ್ಯಜಗತ್ತೂ ನಮ್ಮ ಮನಸ್ಸಿನ ಶುದ್ಧ ಕಲ್ಪನೆಯೇ ಎಂಬ ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಇದಕ್ಕೆ ಐನ್‌ಸ್ಟೈನನ ಉತ್ತರ—"ಬಾಹ್ಯ ಜಗತ್ತು ಸತ್ಯವೇ, ಆದರೆ ನಿರ್ದುಷ್ಟವಾದ ಭೌತತತ್ತ್ವ ಯಾವುದು ಎಂಬ ಪ್ರಶ್ನೆ ವಿಮಾನದ ನಿರ್ದುಷ್ಟವಾದ ಆಕಾರ ಹೇಗಿರಬೇಕು ಎಂಬ ಪ್ರಶ್ನೆಯಂತೆ"—ಎಂದು. "ಯಥಾರ್ಥವನ್ನು ಗ್ರಹಿಸುವ ಶಕ್ತಿ ಕೇವಲ ಧ್ಯಾನಕ್ಕಿದೆ ಎಂದು ನಮ್ಮ ಪುರಾತನರು ಕಂಡ ಕನಸು ಒಂದು ದೃಷ್ಟಿಯಿಂದ ಸತ್ಯ ಎಂದು ನಾನು ತಿಳಿದಿದ್ದೇನೆ" ಎಂದು ಐನ್‌ಸ್ಟೈನ್ ಒಂದು ಕಡೆ ಹೇಳಿದ್ದಾನೆ.

* * * *

ಇಷ್ಟನ್ನೆಲ್ಲ ಸಾಧಿಸಿದ ಐನ್‌ಸ್ಟೈನ್ ಬಹಳ ಸರಳಜೀವಿ. ಆತನ ಕೋಟು ಷರಾಯಿಗಳು ಇಸ್ತ್ರಿ ಮಡಿಕೆಯನ್ನು ಕಂಡವಲ್ಲ, ಟೈಯನ್ನು ಕಂಠಾಭರಣವನ್ನಾಗಿ ಕಟ್ಟಿಕೊಂಡವನಲ್ಲ ಆತ. ಎಷ್ಟೋ ಸಲ ಕಾಲುಚೀಲಗಳಿಲ್ಲದೆ ಪಾದರಕ್ಷೆಗಳನ್ನು ಹಾಕಿಕೊಂಡೇ ತಿರುಗಾಡುವ ರೂಢಿ ಆತನದು. ಛಳಿಗಾಲದಲ್ಲಿ ಚರ್ಮದ ಒರಟು ಅಂಗಿ ತಗಲುಹಾಕಿಕೊಂಡರೆ ತೊಂದರೆ ತೀರಿತು. ಆತನ ಕೂದಲಂತೂ ಎಣ್ಣೆ ಬಾಚಣಿಗೆಗಳನ್ನು ಕಂಡದ್ದಿಲ್ಲ. ಗುರುತ್ವಕ್ಷೇತ್ರ, ವಿದ್ಯುತ್ಕಾಂತ ಕ್ಷೇತ್ರಗಳೆರಡೂ ಪ್ರತ್ಯೇಕವೆಂದು ಹೇಳಿ ವಿಶ್ವವರ್ಣನೆಯಲ್ಲಿ ಭೌತವಾದಗಳು ತೊಡಕನ್ನು ತಂದೊಡ್ಡಿವೆ ಎಂದೆಸ್ನುವ ಈ ಮಹಾನುಭಾವನಿಗೆ ಸ್ನಾನಕ್ಕೊಂದು ಸಾಬೂನು, ಮುಂಡಸಕ್ಕೊಂದು ಸಾಬೂನು ಎಂಬ ವಾದ ರುಚಿಸದಿರುವುದರಲ್ಲೇನಾಶ್ಚರ್ಯ!

ಐನ್‌ಸ್ಟೈನನ ವೇಷ ಪೋಷಾಕುಗಳು ಎಷ್ಟು ಸರಳವೋ ಆತನ ಹೃದಯವೂ ಅಷ್ಟೇ ಸರಳ. ಉನ್ನತ ಅಧಿಕಾರಿಯೊಬ್ಬನೊಡನೆ, ಅಥವಾ ಕೀರ್ತಿವಂತ ವಿಜ್ಞಾನಿ

ಯೊಡನೆ ಮಾತನಾಡುವಾಗ ಆತನ ತಿಳಿನಗೆಯು ಕಣ್ಣುಗಳು ಎಷ್ಟು ಕುತೂಹಲದಿಂದ ಕುಣಿಯುತ್ತಿದ್ದುವೋ, ವಿಜ್ಞಾನದ ಗಂಧವನ್ನೇ ಅರಿಯದ ಸಾಮಾನ್ಯರನ್ನು ಅಥವಾ ಏನೂ ತಿಳಿಯದ ಹಸುಮಗುವನ್ನು ಮಾತನಾಡಿಸುವಾಗಲೂ ಅದೇ ಕುತೂಹಲ ದಿಂದ, ಆ ಕಣ್ಣುಗಳು ಅವರನ್ನು ಭೇದಿಸುತ್ತಿದ್ದುವು. ಈತನ ಗೌರವಾರ್ಥವಾಗಿ ಏರ್ಪಟ್ಟ ಹಲವು ಅಭಿನಂದನ ಸಭೆಗಳಲ್ಲಿ, ಅನೇಕ ವಿದ್ವಾಂಸರು ಈತನನ್ನು ಪ್ರಶಂಸಿಸಿ ಮಾಡಿದ ಭಾಷಣಗಳ ಅನಂತರ, ಆ ಭಾಷಣಗಳಿಗೆ ಉತ್ತರರೂಪವಾಗಿ ಈತ ಯಾವ ಆಡಂಬರವೂ ಇಲ್ಲದೆ ನಿಸ್ಸಂಕೋಚವಾಗಿ ಕೆಲವು ನಿಮಿಷಗಳು ಪಿಟೀಲು ವಾದನಮಾಡಿ ಸಭಿಕರನ್ನು ಆನಂದಗೊಳಿಸಿ ಸಭೆಯನ್ನು ಮಾತಿಲ್ಲದೆ ಮುಕ್ತಾಯಮಾಡಿದ್ದುಂಟು. ಒಂದು ಸಲ ಸ್ನೇಹಿತನ ಮನೆಗೆ ಊಟಕ್ಕೆ ಹೋಗಿದ್ದಾಗ ಆತನ ಹೆಂಡತಿಗೆ ಕರುವಿನ ಯಕೃತ್ತನ್ನು (Liver) ಕರಿಯುವ ಸರಿಯಾದ ವಿಧಾನ ಐನ್‌ಸ್ಟೈನ್ ಹೇಳಿ ಕೊಟ್ಟನು. ಅಂದಿನಿಂದ ಆಕೆಗೆ ಸಾಪೇಕ್ಷತಾವಾದದ ನಿರ್ಮಾತೃವಿನ ಕೀರ್ತಿ ಸಾಧಾರವಾದದ್ದೋ ಅಲ್ಲವೋ ಎಂಬ ಶಂಕೆ ಇದ್ದರೂ, ಯಕೃತ್ಪಾಕದ ನಿರ್ಮಾ ತೃವಿಗೆ ಕೀರ್ತಿಬರಬೇಕಾದದ್ದು ನ್ಯಾಯವೆಂದು ಆಕೆ ನಿರ್ಧರಿಸಿದಳು.

ಇಷ್ಟಾಗಿಯೂ ಐನ್‌ಸ್ಟೈನ್ ಪ್ರಪಂಚದಲ್ಲಿ ವಿವಿಕ್ತನಾಗಿಯೇ, ಏಕಾಕಿ ಯಾಗಿಯೇ ಇದ್ದನು. ತನ್ನ ಸ್ವಭಾವವನ್ನು ತಾನೇ ಆತ ಹೀಗೆ ವಿವರಿಸಿದ್ದಾನೆ:

"ಸಾಮಾಜಿಕ ನ್ಯಾಯ, ಸಾಮಾಜಿಕ ಹೊಣೆಗಳ ವಿಚಾರವಾಗಿ ನಾನು ಉತ್ಕಟ ಆಸಕ್ತಿಯುಳ್ಳವನಾದರೂ, ನೆರೆಹೊರೆಯ ಸ್ತ್ರೀಪುರುಷರೊಂದಿಗೆ ಬೆರೆದು ಬಾಳುವ ಉತ್ಸಾಹದ ಲವಲೇಶವೂ ನನ್ನಲ್ಲಿಲ್ಲದಿರುವುದು ನನ್ನ ವಿಲಕ್ಷಣಸ್ವಭಾವ. ನಾನು ಒಂಟಿ ನೊಗದ ಒಂಟಿ ಎತ್ತಾಗಿ ಎಳೆಯಬಲ್ಲೆನೇ ಹೊರತು ಜೋಡಿ ನೊಗ ಕ್ಕಾಗಲಿ ಸಾಲು ಬಂಡಿಗಳಿಗಾಗಲಿ ಬಗ್ಗಲಾರೆ. ನಾನು ಯಾವ ದೇಶಕ್ಕಾಗಲಿ, ರಾಷ್ಟ್ರಕ್ಕಾಗಲಿ, ನನ್ನ ಸ್ನೇಹಿತರ ಗೋಷ್ಠಿಗಾಗಲಿ, ಕೊನೆಗೆ ನನ್ನ ಮನೆಯ ಸಂಸಾರಕ್ಕಾಗಲಿ ಪೂರ್ಣಮನಸ್ಸಿನಿಂದ ಸೇರಿಲ್ಲ. ಈ ಬಂಧನಗಳೊಂದಿಗೆ ಯಾವಾ ಗಲೂ ಒಂದು ಬಗೆಯ ಅಸ್ಪಷ್ಟ ವಿವಿಕ್ತತೆ ಬೆರೆದೇ ಇರುತ್ತದೆ. ವಯಸ್ಸಾದಂತೆಲ್ಲ ನನ್ನೊಳಗೆ ನಾನೇ ಸರಿದುಕೊಳ್ಳುವ ಈ ಅಪೇಕ್ಷೆ ಹೆಚ್ಚುತ್ತಿದೆ. ಹೀಗೆ ಒಬ್ಬಂಟಿಗ ನಾಗಿರುವುದರಿಂದ ಒಂದೊಂದು ಸಲ ಮನಸ್ಸು ಕಹಿಯಾಗುವುದುಂಟು. ಆದರೆ ಇತರ ಜನಗಳ ಸಹಾನುಭೂತಿ ಮತ್ತು ಒಮ್ಮತಗಳಿಂದ ಹೊರಗಾಗಿರುವುದು ನನಗೆ ವ್ಯಥೆ ಉಂಟುಮಾಡುವುದಿಲ್ಲ. ಇದರಿಂದ ನನಗೆ ಸ್ವಲ್ಪ ನಷ್ಟವಾಗಿದೆ ಎಂಬುದು ಒಪ್ಪತಕ್ಕದ್ದೇ ಸರಿ, ಆದರೆ ಇತರರ ಆಚಾರ, ಅಭಿಪ್ರಾಯ, ಅಪವಾದಗಳು ನನ್ನನ್ನು ಸೋಂಕುವುದೂ ಇಲ್ಲ, ಅಲ್ಲದೆ ಅಂಥ ನಶ್ವರವಾದ ಅಸ್ತಿಭಾರಗಳ ಮೇಲೆ ನನ್ನ

ಪುನಶ್ಶಾಂತಿಯನ್ನು ವಿರಮಿಸುವ ಚಪಲವೂ ನನಗಿಲ್ಲವಾದ್ದರಿಂದ ಆ ನಷ್ಟಕ್ಕೆ ತಕ್ಕ ಪ್ರತಿಲಾಭ ನನಗೆ ದೊರಕಿದೆ."

ನಮ್ಮ ಯೋಗಿಗಳು ಹೇಳಿರುವ "ಪದ್ಮಪತ್ರಮಿವಾಂಭಸಿ" ಎಂಬ ಉಕ್ತಿಗನು ಸಾರವಾಗಿ ಐನ್‌ಸ್ಟೈನ್ ತನ್ನ ಜೀವನಯಾತ್ರೆಯನ್ನು ಸಾಗಿಸಿದಂತೆ ಕಾಣುತ್ತದೆ.

"ಮಾನವಕುಲದ ಒಂದು ಗುಂಪು ಮತ್ತೊಂದು ಗುಂಪಿನ ಮೇಲೆ ಹೊರಿಸ ಬಯಸುವ ಕೃತಕ ಕಾನೂನುಗಳ ದ್ವೇಷ ಮತ್ತು ನೈಸರ್ಗಿಕ ವಿಶ್ವನಿಯಮಗಳಲ್ಲಿ ಅಪಾರ ಭಕ್ತಿ"—ಇವು ಐನ್‌ಸ್ಟೈನ್‌ನಲ್ಲಿ ರಕ್ತಗತವಾಗಿದ್ದುವು. ಆದ್ದರಿಂದ ಆತನು ಶಾಂತಿಪ್ರೇಮಿಯಾಗಿದ್ದನು. ಸೈನಿಕ ಮನೋಭಾವ ಕಂಡರೆ ಆತನಿಗೆ ದುರ್ದಮ್ಯ ಜುಗುಪ್ಸೆ ಆಗುತ್ತಿತ್ತು. "ಯುದ್ಧಗೀತೆಗಳ ಸ್ವರಕ್ಕೆ ತಾಳವಾಗಿ ಹೆಜ್ಜೆ ಹಾಕಿಕೊಂಡು ಸೈನಿಕರ ಸಾಲಿನಲ್ಲಿ ನಡೆಯುವುದರಿಂದ ಆನಂದ ಹೊಂದುವವನು ನನ್ನ ತಿರಸ್ಕಾರಕ್ಕೂ ಕೀಳಾದವನು. ಏನೋ ಪ್ರಮಾದದಿಂದ ಅವನು ದೊಡ್ಡ ಮೆದುಳನ್ನು ಪಡೆದ, ಮೆದುಳುಬಳ್ಳಿಯೇ ಅವನಿಗೆ ಸಾಕಾಗಿತ್ತು. ಹುಕುಂಗೆ ಅಡಿಯಾಳಾದ ಈ ವೀರ್ಯ, ನಿರರ್ಥಕವಾದ ಈ ಕ್ರೌರ್ಯ, ದೇಶಭಕ್ತಿಯ ಈ ನಿಖರ ಆಡಂಬರದ ಆರ್ಭಟ—ಛೆ, ಇವಕ್ಕಿಂತ ತುಚ್ಛವಾದದ್ದು ಉಂಟೆ!" ಎಂದು ಆತನ ಉದ್ಗಾರ.

ಹುಟ್ಟಿನಿಂದ ಆತನು ಯೆಹೂದ್ಯನಾದರೂ ಐನ್‌ಸ್ಟೈನ್ ಸಂಪ್ರದಾಯಬದ್ಧವಾದ ಯಾವ ಮತಕ್ಕೂ ಸೇರಿದವನಲ್ಲ. ಕ್ರೈಸ್ತರ ಆತ್ಮೀಯ ಈಶ್ವರವಾದವನ್ನೂ ಆತ ಒಪ್ಪಲಿಲ್ಲ. ಇದರಿಂದ ಅನೇಕರು ಆತನನ್ನು ನಾಸ್ತಿಕನೆಂದು ಕರೆದದ್ದುಂಟು. ಆದರೆ ಇದು ಸರಿಯಲ್ಲ, ಏಕೆಂದರೆ ಆತನು ಕೊಟ್ಟಿರುವ ಈ ಹೇಳಿಕೆಗಳನ್ನು ಕೇಳಿ.

"ವಿಶ್ವರಚನೆಯಲ್ಲಿ ನಿಯಮವಿದ್ದೇ ಇದೆ ಎಂಬುದರಲ್ಲಿ ಎಂಥ ಆಳವಾದ ನಂಬುಗೆ, ಪ್ರಪಂಚದಲ್ಲಿ ಶ್ರುತವಾಗಿರುವ ನಿಯಮದ ಒಂದು ಸಣ್ಣ ಕಿಡಿಯನ್ನಾದರೂ ನೋಡಿ ಅರಿತುಕೊಳ್ಳಬೇಕೆಂಬ ಎಂಥ ಉತ್ಕಟವಾದ ಆಕಾಂಕ್ಷೆ ಇದ್ದಿರಬೇಕು—ಆ ಕೆಪ್ಲರ್, ನ್ಯೂಟನರಲ್ಲಿ!" ಮತ್ತು "ನಾವು ಅನುಭವಿಸಬಲ್ಲ ಭಾವಗಳಲ್ಲೆಲ್ಲ ಅತ್ಯಂತ ಸುಂದರ ಭಾವ ಅನುಭಾವಿಯದು. ನಿಜವಾದ ಎಲ್ಲ ಕಲೆ ಮತ್ತು ವಿಜ್ಞಾನಗಳೂ ಅದರ ಬಿತ್ತನೆಯಿಂದಲೆ ಹುಟ್ಟಿಕೊಳ್ಳುವುದು. ಯಾವನು ಈ ಭಾವಕ್ಕೆ ಅಪರಿಚಿತನೋ, ಯಾವನು ಭಯಭಕ್ತಿಗಳಿಂದ ಮಗ್ನನಾಗಿ ನಿಂತು ವಿಸ್ಮಿತನಾಗಲಾರನೋ ಅವನು ಸತ್ತಂತೆಯೇ ಸರಿ. ನಮ್ಮಿಂದ ನಿರ್ಭೇದ್ಯವಾದದ್ದು ನಿಜವಾಗಿಯೂ ಇದೆ; ಅದೇ ಅತ್ಯುನ್ನತ ಪ್ರಜ್ಞೆಯಾಗಿ, ಸುಂದರತಮ ತೇಜಸ್ಸಾಗಿ ವ್ಯಕ್ತವಾಗುತ್ತಿದೆ; ನಮ್ಮ ಮಂದೇಂದ್ರಿಯಗಳು ಆ ಪ್ರಜ್ಞೆಸೌಂದರ್ಯಗಳ ಅತ್ಯಂತ ಪ್ರಾಕೃತ ರೂಪಗಳನ್ನು ಮಾತ್ರ ಗ್ರಹಿಸಬಲ್ಲವು—ಈ ತಿಳಿವಳಿಕೆ, ಈ ಚಿತ್ತವೃತ್ತಿಗಳೇ ನಿಜವಾದ ಧರ್ಮಶ್ರದ್ಧೆಯ ತಿರುಳು.

ಈ ಅರ್ಥದಲ್ಲಿ ಮತ್ತು ಈ ಅರ್ಥದಲ್ಲಿ ಮಾತ್ರವೇ ನಾನು ಶ್ರದ್ಧಧಾನರಾದ ಭಕ್ತರ ಗುಂಪಿಗೆ ಸೇರಿದವನು."

ಐನ್‌ಸ್ಟೈನನ, ಅಭಿಪ್ರಾಯದಂತೆ "ಭಗವಂತನು ಒಂದೊಂದು ಸಲ ವಿತರ್ಕಿಯಾದಾನು, ಆದರೆ ಅವನು ಎಂದೂ ಕೇಡಿಗನಲ್ಲ." ಇಂಥವನನ್ನು ನಾಸ್ತಿಕನೆಂದು ಯಾರೂ ಕರೆಯಲಾರರು. ಈತನು ಕ್ರೈಸ್ತರ ವೈಯಕ್ತಿಕ ಈಶ್ವರನನ್ನು ಒಪ್ಪದಿದ್ದರೂ ಭರ್ತೃಹರಿಯ ಈ ಪ್ರಾರ್ಥನಾರೂಪವಾದ ಮಂಗಳಶ್ಲೋಕವನ್ನು ಮನಸಾರ ಮೆಚ್ಚುತ್ತಿದ್ದನು ಎಂದು ನನಗನ್ನಿಸುತ್ತದೆ.

ದಿಕ್ಕಾಲಾದ್ಯನವಚ್ಛಿನ್ನಾನಂತ ಚಿನ್ಮಾತ್ರ ಮೂರ್ತಯೇ |
ಸ್ವಾನುಭೂತ್ಯೇಕಮಾನಾಯ ನಮಃಶ್ಶಾಂತಾಯ ತೇಜಸೇ ||

* * * *

ಲೇಖಕರ ಗೋಷ್ಠಿಯ ಅಧ್ಯಕ್ಷರ ಭಾಷಣದ ಮುಖ್ಯಾಂಶಗಳು

ಎಲ್ಲ ಕಲೆಗಳಂತೆ ಲೇಖನವೂ ಒಂದು ಕಲೆಯೆಂಬುದು ನಿಜವಾದರೂ ಉಳಿದ ಕಲಾಕರ್ಮಗಳಿಗಿಂತ ಲೇಖಕನ ಕಲಾಕರ್ಮ ಕಷ್ಟತರವಾದುದು. ಇದಕ್ಕೆ ಕಾರಣ ಲೇಖಕನ ಆತ್ಮಾಭಿವ್ಯಕ್ತಿಯ ಮಾಧ್ಯಮವಾದ ಮಾತಿನ ಸ್ವರೂಪ. ಮಾತಿನಲ್ಲಿ ಸಾಮಾನ್ಯತೆ ಅಸಾಮಾನ್ಯತೆಗಳೆರಡೂ ಸೇರಿವೆ. ಸಾಮಾನ್ಯವಾದ ಮಾತಿನಲ್ಲಿ ಬರೆದರೆ ಸಾಹಿತ್ಯವಾಗುವುದಿಲ್ಲ. ಅಸಾಮಾನ್ಯವಾದ ಮಾತಿನಲ್ಲಿ ಬರೆದರೆ ಎಲ್ಲರಿಗೆ ಸುಲಭವಾಗಿ ಅರ್ಥವಾಗುವುದಿಲ್ಲ. "ವಾಚಾಮೇವ ಪ್ರಸಾದೇನ ಲೋಕಯಾತ್ರಾ ಪ್ರವರ್ತತೇ, ಇದಮಂಧಂ ತಮಃ ಕೃತ್ಸ್ನಂ ಜಾಯೇತ ಭುವನತ್ರಯಂ| ಯದಿ ಶಬ್ದಾಹ್ವಯಂ ಜ್ಯೋತಿರಾಸಂಸಾರಾನ್ನ ದೀಪ್ಯತೇ ‖ ಎಂಬ ಕಾವ್ಯಾದರ್ಶಕಾರನ ನುಡಿ ನಿಜವಾದರೂ ಮಾತು ಜ್ಯೋತಿಯಾಗುವುದು, ಜ್ಯೋತಿರ್ಲಿಂಗವಾಗುವುದು ಸಾಮಾನ್ಯ ಸಾಧನೆಯಿಂದ ಸಿದ್ಧಿಸುವ ವಿಷಯವಲ್ಲ. ಪಾಠಕರ ಪ್ರಶ್ನೆ ದೂರ ಉಳಿಯಿತು, ಕೆಲವು ಲೇಖಕರು ಕೂಡ ಇದನ್ನು ಗಮನಿಸುವಂತೆ ತೋರುವುದಿಲ್ಲ—ಲೆಕ್ಕಣಿಕೆಯನ್ನೆತ್ತುವ ಮೊದಲು ಮಾತಿನ ಮರ್ಮವನ್ನು, ಅದರ ನೂರು ಮುಖಗಳನ್ನು, ಅದರ ಅಂತರ್ಬಾಹ್ಯ ಸೌಂದರ್ಯಗಳನ್ನು, ಅದರ ಸೂಕ್ಷ್ಮತೆ ತೀಕ್ಷ್ಣತೆಗಳನ್ನು, ಅದರ ಅನಂತ ಲೀಲಾ ವಿನ್ಯಾಸಗಳನ್ನು, ಅದರ ಶಕ್ಯಾಶಕ್ಯತೆ ಸೀಮಾಸೀಮತೆಗಳನ್ನು ಅರಿತುಕೊಳ್ಳುವುದು ಆವಶ್ಯಕವೆಂಬುದನ್ನು ಒಪ್ಪುವಂತೆ ತೋರುವುದಿಲ್ಲ. ಎಂತಲೇ ವಸ್ತುವಿನ ಉತ್ತಮಿಕತೆ ಅನೇಕ ಸಂದರ್ಭಗಳಲ್ಲಿ ಮಾತಿನ ಅಸಮರ್ಪಕತೆಯಲ್ಲಿ ಅಡಗಿ ರಸ ಪ್ರಕಾಶಕ್ಕೆ ಪ್ರತಿಯಾಗಿ ರಸಾಭಾಸದಲ್ಲಿ ಪರ್ಯವಸಾನವನ್ನು ಹೊಂದುವುದುಂಟು. "ಅನುದ್ವೇಗಕರಂ ವಾಕ್ಯಂ ಸತ್ಯಂ ಚ ಪ್ರಿಯಹಿತಂ ಚ ಯತ್ " ಎಂಬ ಸರ್ವವ್ಯಾಪಿಯಾದ

ವ್ಯಾಖ್ಯೆಯಲ್ಲಿ ಭಗವಂತನೇ ಮಾತಿನ ನೀತಿಯನ್ನು ಚಿತ್ತರಿಸಿದ್ದಾನೆ. ಈಗಿನ ಎಷ್ಟು ಕೃತಿಗಳ ಭಾಷೆ ಈ ಒರೆಗಲ್ಲಿಗೆ ಹತ್ತುತ್ತದೆ?

ವಾಙ್ಮಯಂ ತಪ ಉಚ್ಯತೇ

ಭಾಷೆಯ ಹುರುಳು ತಿರುಳುಗಳನ್ನರಿತುಕೊಂಡ ಮೇಲೂ ತೀರುವುದಿಲ್ಲ ಲೇಖಕನ ಪೂರ್ವಸಿದ್ಧತೆ. ಸ್ವಾಧ್ಯಾಯ ಅಭ್ಯಸನಗಳೂ ಆ ಪೂರ್ವಸಿದ್ಧತೆಯ ಅಪರಿಹಾರ್ಯ ಅಂಗಗಳು. 'ಮುತ್ತಿನ ಹಾರದಂತೆ, ಲಿಂಗ ಮೆಚ್ಚಿ ಅಹುದೆನುವಂತೆ' ನುಡಿಯುವುದನ್ನು ಕಲಿಯುವುದರ ಜೊತೆಗೆ ಲೇಖಕನಾಗುವವನಿಗೆ ಜ್ಞಾನ, ಅನುಭವ ವಿವೇಕಗಳೂ ಬೇಕೆಂಬುದನ್ನು ಸ್ವಾಧ್ಯಾಯಪದ ಸೂಚಿಸುತ್ತದೆ; ಪ್ರತಿಭೆಗೆ ವ್ಯುತ್ಪತ್ತಿಯ ಸಂಸ್ಕರಣ ಬೇಕೆಂಬುದನ್ನು ಅಭ್ಯಸನ ಪದ ಸೂಚಿಸುತ್ತದೆ—ಭಗವಂತನೇ ಗೈದ ವಾಙ್ಮಯತಪದ ವ್ಯಾಖ್ಯೆಯಲ್ಲಿ. ಇವುಗಳಲ್ಲಿ ಒಂದೊಂದು ಪದಕ್ಕೂ ಒಂದು ಬ್ರಹ್ಮಾಂಡದಷ್ಟು ಅರ್ಥ. ಜ್ಞಾನವು ಔಚಿತ್ಯಜ್ಞಾನ, ಪರಿಪೂರ್ಣಜ್ಞಾನ, ವಸ್ತುಜ್ಞಾನ ಇತ್ಯಾದಿ ನೂರು ರೂಪಗಳಲ್ಲಿ ರಾರಾಜಿಸುವ ಜ್ಞಾನ; ಅನುಭವವು ಅಂತರಂಗದ ರತ್ನ—ಅದರ ಹೊಳಪಿಲ್ಲದ ಬರೆವಣಿಗೆ ಬರಿ ಶಬ್ದ ಸಮುಚ್ಚಯ; ವಿವೇಕವು ಸದಸದ್ವಿವೇಕ, ಹಿತಾಹಿತ ವಿವೇಕ, ಸಾರಾಸಾರ ವಿವೇಕ ಇತ್ಯಾದಿ ಅನೇಕ ಮುಖಗಳುಳ್ಳ ವಿವೇಕ. ಇದೇ ವ್ಯುತ್ಪತ್ತಿ. 'ಉಚಿತಾನುಚಿತವಿವೇಕೋ ವ್ಯುತ್ಪತ್ತಿಃ' 'ವ್ಯುತ್ಪತ್ತಿಃ ತದುಪಯೋಗಿ ಸಮಸ್ತ ವಸ್ತು ಪೌರ್ವಾಪರ್ಯ ಪರಾಮರ್ಶ ಕೌಶಲಂ.' ಈ ವ್ಯುತ್ಪತ್ತಿ ಪ್ರತಿಭೆಯೊಡನೆ ಒಡವೆರೆದು ಅನುದ್ವೇಗಕರ, ಹಿತಕರ, ಪ್ರಿಯಕರ ಮತ್ತು ಋತಂಧರ ವಾಕ್ಯಗಳಲ್ಲಿ ವ್ಯಕ್ತವಾದಾಗ ಉತ್ತಮ, ಉದಾತ್ತ, ಪವಿತ್ರ ಸಾಹಿತ್ಯದ ಪ್ರಾದುರ್ಭಾವ.

* * * *

ಸಖಾಯಃ, ಕ್ರತುಂ ಇಚ್ಛತ!

ಇವೆಲ್ಲವನ್ನೂ ಮೇಳವಿಸಿ ಋಗ್ವೇದದ ಕ್ರತು ಶಬ್ದದಲ್ಲಿ ಅಡಗಿಸಬಹುದು. ಈ ಕ್ರತುದರ್ಶನವನ್ನು ಲೇಖಕನು ಮೊದಲು ಪಡೆಯಬೇಕು. ಸ್ವಯಂ ವಾಗ್ದೇವಿಯೇ ಸಾರುತ್ತಿದ್ದಾಳೆ, "ಯಂ ಕಾಮಯೇ ತಂ ತಂ ಉಗ್ರಂ ಕರೋಮಿ, ತಂ ಬ್ರಹ್ಮಾಣಂ ತಮ್ ಋಷಿಂ ತಂ ಸುಮೇಧಾಮ್" ಎಂದು. ಆಕೆಯ ಈ ಅಭಯವಾಣಿಗೆ ಓಗೊಟ್ಟು ಬ್ರಹ್ಮಾನಂದ ಸಹೋದರವಾದ ಸಾಹಿತ್ಯ ಸೃಷ್ಟಿಗೆ ಕೈಹಾಕುವ ಮುನ್ನ ಕ್ರತುಶಕ್ತಿ ಸಾಕ್ಷಾತ್ಕಾರ ಮಾಡಿಕೊಳ್ಳುವವರೇ ಸಾರ್ಥಕ ಸಾಹಿತಿಗಳಾಗಬಲ್ಲರು. ಈ ನಿರ್ಮಾಣಶಕ್ತಿ, ಕ್ರತುಶಕ್ತಿಗಳೇ ವ್ಯಕ್ತಿತ್ವದ ಕೀಲಿಯ ಕೈ. ಸ್ವಂತ ವ್ಯಕ್ತಿತ್ವದಿಂದ ಸ್ವಂತ ಶೈಲಿ, ಸ್ವಂತ ಶೈಲಿಯಿಂದ ಸ್ವಂತ ಸಾಹಿತ್ಯ. ಸಾಹಿತ್ಯಕ್ಕೆ ಸ್ವಂತಿಕೆ

ಬರುವುದು ಸ್ವಂತದ ಶಕ್ತಿ ವಿಕಾಸದಿಂದ—ಅದರ ಅನುಕರಣದಿಂದಲ್ಲ, ಆತ್ಮಸ್ತುತಿ ಪರನಿಂದೆಗಳಿಂದಲ್ಲ, ಉದ್ವೇಗ, ಅಬ್ಬರ, ಉಬ್ಬರಗಳಿಂದಲ್ಲ, ವಿದ್ರೋಹಿ—ವಿಧ್ವಂಸಕ—ವಿಪರೀತ ಬುದ್ಧಿಗಳಿಂದಲ್ಲ, ವಿಲಾಸಮತಿ—ಪರಾಜಯಮತಿ—ಪಲಾಯನ ಮತಿಗಳಿಂದಲ್ಲ,—ತನ್ನಲ್ಲಿಯೇ ಸುಪ್ತವಾಗಿರುವ ಶಕ್ತಿಯ ಸಾಕ್ಷಾತ್ಕಾರದಿಂದ. ರಾಜಶೇಖರನೆಂದಂತೆ, "ಶಕ್ತಸ್ಯ ಪ್ರತಿಭಾತಿ, ಶಕ್ತಶ್ಚ ವ್ಯುತ್ಪದ್ಯತೇ." ಉಪನಿಷದೃಷಿಗಳೂ ಸಾರಿದ್ದಾರೆ, "ನಾಯಮಾತ್ಮಾ ಬಲಹೀನೇನ ಲಭ್ಯಃ" ಎಂದು. ಆತ್ಮ ಲಭಿಸದವನಿಗೆ ಆತ್ಮಾಭಿವ್ಯಕ್ತಿಯಾದ ಸಾಹಿತ್ಯವು ಲಭಿಸುವುದೆಂತು?

ಋಷಿಶ್ಚ ಕಿಲ ದರ್ಶನಾತ್

ವಾಗ್ದೇವಿ ನಮ್ಮನ್ನು ಋಷಿಗಳನ್ನಾಗಿ ಮಾಡುವೆನೆಂದು ಅಭಯವೀಯುತ್ತಲಿದ್ದಾಳೆ. ಋಷಿಯಾಗದೆ ಕವಿಯಾಗಲಾರೆ ಅರ್ಥಾತ್ ಸಾಹಿತ್ಯ ನಿರ್ಮಾತನಾಗಲಾರೆಯೆಂದು ಕಲಾದರ್ಶನ ಪರಿಣತರೂ ಪ್ರವಾದಿಗಳೂ ಎಚ್ಚರಿಸುತ್ತಲಿದ್ದಾರೆ. ಋಷಿ ಯಾರು? 'ನಾರು ಬೇರಿನ ಕುಟಿಲ ಕುಹಕದ ಕಪಟಯೋಗ'ಕ್ಕೆ ಋಷಿಯೆಂಬ ಹೆಸರೆ? ಅಲ್ಲ. ದರ್ಶನವುಳ್ಳವನು ಋಷಿ. ದರ್ಶನವೆಂದರೇನು? "ವಿಚಿತ್ರಭಾವಧರ್ಮಾಂಶತತ್ತ್ವಪ್ರಖ್ಯಾ ಚ ದರ್ಶನಂ"—ಜಗತ್ತಿನ ವಿವಿಧ ವಸ್ತುಗಳ ಧರ್ಮಾಂಶದ ತತ್ತ್ವವನ್ನು ಕಾಣುವುದೇ ದರ್ಶನ. ಇದು ಸಾಧ್ಯವಾಗುವುದು ಹೇಗೆ? "ಮತಿ ದರ್ಪಣೇ ಕವೀನಾಂ ವಿಶ್ವಂ ಪ್ರತಿಫಲತಿ." ಪ್ರತಿಫಲಿಸಬೇಕು. ವಿಶ್ವರಹಸ್ಯ ಭೇದನ ಕುತೂಹಲ ಆತ್ಮ ರಹಸ್ಯ ಶೋಧನ ಕುತೂಹಲಗಳ ಸಂಯೋಗದಲ್ಲಿ ದರ್ಶನದ ಅವತಾರ. ತಾನು ತನ್ನನ್ನು ತಿಳಿದುಕೊಳ್ಳಬೇಕೆನ್ನುವ, ತನ್ನ ಸುತ್ತುಮುತ್ತಲಿನ ಜನ ಜೀವನವನ್ನು ತಿಳಿದುಕೊಳ್ಳಬೇಕೆನ್ನುವ, ಇವೆಲ್ಲವುಗಳಿಗೂ ಆಶ್ರಯವಾಗಿ ಆವರಿಸಿರುವ ವಿಶ್ವರಹಸ್ಯವನ್ನು ತಿಳಿದುಕೊಳ್ಳಬೇಕೆನ್ನುವ ಋತಂಭರ ಪ್ರಜ್ಞೆಯ ಪರಿಪಾಕವೇ ದರ್ಶನ. ದೃಷ್ಟಿಯು ಎಷ್ಟು ದೊಡ್ಡದಾಗಿ ಎಷ್ಟು ಹೆಚ್ಚು ಹೆಚ್ಚು ಜೀವನವನ್ನೂ, ಜಗತ್ತನ್ನೂ ನೋಡಿ ಅವುಗಳ ಅಗಲಕ್ಕೆ ಹಬ್ಬಿ, ಆಳಕ್ಕೆ ಇಳಿದು, ಎತ್ತರಕ್ಕೆ ಏರಲು ಹವಣಿಸುವುದೋ ಅಷ್ಟು ದರ್ಶನವೂ ವಿಶಾಲ. ವ್ಯಾಪಕ ಮತ್ತು ಅರ್ಥಪೂರ್ಣವಾಗುತ್ತದೆ. ಲೇಖಕ ಯಾವುದನ್ನು ನೋಡಲೂ ಒಲ್ಲೆನೆನ್ನಲಾರ. God gave all men all earth to love. ನಾವೇಕೆ ಎಲ್ಲವನ್ನೂ ಕಣ್ತೆರೆದು ನೋಡುವ ಅವಕಾಶವನ್ನು ಕಳೆದುಕೊಳ್ಳಬೇಕು? 'ಅಷ್ಟಕೋಟಿ ರೋಮಗಳೆಲ್ಲ ಕಂಗಳಾಗಿ' ಜೀವನವನ್ನೂ ಜಗತ್ತನ್ನೂ ಮತ್ತು ತನ್ನನ್ನೇ ತಾನು ನೋಡುವುದರಲ್ಲೇಕೆ ಕೊರತೆಮಾಡಬೇಕು—ಕೃಪಣತನ ತೋರಬೇಕು?

ಇದೂ ಸಾಲದು. ಯುಗಯುಗಗಳಿಂದ ಬೆಳೆದುಬಂದಿರುವ ಜ್ಞಾನಭಾಂಡಾರವನ್ನೂ ಸೂರೆಗೊಳ್ಳಬೇಕವನು. ಇದು ನನ್ನ ಕ್ಷೇತ್ರವಲ್ಲ, ಇದರೊಡನೆ ನನ್ನ ಸಂಬಂಧವಿಲ್ಲ. ಇದರಗೊಡವೆ ನನಗೇಕೆ—ಎಂಬ ಸೊಲ್ಲು ಹೊಲ್ಲ. ಹೆಗೆಲ್ ಹೇಳಿದಂತೆ ಸಾಹಿತ್ಯವು, "The comprehensive essence of the intellectual life of a nation" ಆಗಬೇಕಾದರೆ, "The whole mind-life of the successive generations of men," ಆಗಬೇಕಾದರೆ ಎಲ್ಲ ವಿದ್ಯೆಗಳ, ಎಲ್ಲ ಶಾಸ್ತ್ರಗಳ, ಎಲ್ಲ ಕಲೆಗಳ ಸಾರಸತ್ವಗಳೂ ನನ್ನವೆಂಬ ಮನೋಧರ್ಮ ಲೇಖಕನದಾಗಬೇಕು. ಕ್ಷೇಮೇಂದ್ರ ಮೊದಲಾದ ಲಾಕ್ಷಣಿಕರು ಏನೇನು ಅರಿತಿರಬೇಕೆಂಬುದನ್ನು ವಿವರಿಸಿರುವುದನ್ನು ನೋಡಿದರೆ ಅದಕ್ಕೆ ಇತಿಮಿತಿಗಳಾವುವೂ ಇಲ್ಲವೆಂದೆನಿಸುತ್ತದೆ. ನಿಜ, ಜ್ಞಾನದ ಜಗತ್ತಿನಲ್ಲಿ ಗಡಿಗೆರೆಗಳಿಲ್ಲ. ಸ್ಪೃಶ್ಯಾಸ್ಪೃಶ್ಯತೆಗಳಿಲ್ಲ, ವಾಂಛನೀಯ ಅವಾಂಛನೀಯಗಳಿಲ್ಲ.

ಲೇಖಕನ ದೃಷ್ಟಿಯಲ್ಲಿ, ತತ್ಪರಿಣಾಮವಾದ ಸೃಷ್ಟಿಯಲ್ಲಿ ಏಕಾಗ್ರತೆ ಸಮಗ್ರತೆಗಳ, ಅಂತರ್ಮುಖತೆ, ಬಹಿರ್ಮುಖತೆಗಳ, ಸಾಮಯಿಕತೆ ಸಾರ್ವಕಾಲಿಕತೆಗಳ, ಪ್ರತಿಭೆ ಪ್ರಜ್ಞೆಗಳ, ಅನುಕರಣ ನಿರ್ಮಾಣಗಳ, ಆತ್ಮನಿಷ್ಠತೆ ವಸ್ತುನಿಷ್ಠತೆಗಳ, ನೂತನ ಸನಾತನಗಳ, ಸಂಪ್ರದಾಯ ಹೊಸ ರೀತಿಗಳ, ವ್ಯಷ್ಟಿ ಸಮಷ್ಟಿಗಳ ಹೃದಯಂಗಮ ಸಂಗಮವಾದಾಗ ಅವನು ರಸಋಷಿಯಾಗುವನು; ಅವನದೇ ಆದ ದಿವ್ಯದರ್ಶನವು ರೂಪುಗೊಳ್ಳುವುದು; ಅವನ ವೈಯಕ್ತಿಕವಾಣಿ ವಿಶ್ವವಾಣಿಯಾಗಿ, ಮನುಕುಲದ ಮಂಗಲಗೀತೆಯಾಗಿ ಹೊರಹೊಮ್ಮುವುದು.

ದರ್ಶನವೆಂದೊಡನೆ ಅದು ಎಲ್ಲ ಲೇಖಕರಿಗೆ ಸಮಾನವಾದ ಜೀವನ ದರ್ಶನವಾಗಿರಬೇಕೆಂದು ಹೇಳಲಾಗದು. ಅದು ಯಾವುದೇ ಒಂದು ಹಳೆಯ ಇಲ್ಲವೆ ಹೊಸ ಧರ್ಮ, ಮತ, ತತ್ತ್ವ, ಸಂಪ್ರದಾಯ, ವಿಚಾರಪ್ರಣಾಲಿ, ನಂಬಿಕೆಗಳ ಅಂಧಾನುಕರಣ ಇಲ್ಲವೆ ಸ್ವೀಕರಣವಲ್ಲ. ಅದು ಲೇಖಕನ ಸ್ವಂತ ಜೀವನಾನುಭವ ರಸಾನುಭವಗಳಿಂದ ರೂಪಗೊಂಡ ಜೀವನದೃಷ್ಟಿ, ರಸದೃಷ್ಟಿ, ಅದು ಪ್ರತಿಯೊಬ್ಬ ಲೇಖಕನ ವಿಶಿಷ್ಟ ಪರಿಸರ, ಸಂಸ್ಕಾರ, ಮನೋಧರ್ಮ, ಅನುಭವ, ಆವರಣ, ವ್ಯಕ್ತಿ-ಯುಗ-ಪ್ರಭಾವಗಳಿಂದ ವ್ಯಕ್ತಿ ವ್ಯಕ್ತಿಯಲ್ಲಿ ವಿವಿಧರೂಪ ತಾಳುತ್ತದೆ. ಎಲ್ಲ ಲೇಖಕರೂ ತಮ್ಮ ತಮ್ಮ ಜೀವನದರ್ಶನವನ್ನು ತಾವೇ ಕಂಡುಕೊಳ್ಳಬೇಕು. ಹೀಗೆಂದ ಮಾತ್ರಕ್ಕೆ ಎಲ್ಲರೂ ಹೊಸ ದರ್ಶನವನ್ನೇ ಹುಡುಕಲು ಹಟತೊಡಬೇಕೆಂದಲ್ಲ. ತನ್ನ ಅನ್ವೇಷಣೆಯ, ಆವಿಷ್ಕಾರದ, ಪೃಥಕ್ಕರಣದ, ಚಿಂತನದ, ಮಂಥನದ, ಜೀವಾನುಭವದ, ಸೌಂದರ್ಯಾನುಭೂತಿಯ, ರಸಪ್ರಜ್ಞೆಯ, ಕಲಾಚೇತನದ, ವಿಶಿಷ್ಟ ರುಚಿಯ,

ನೋಟದ, ನಿಲುಮೆಯ, ಹಂಬಲದ, ಹಾರೈಕೆಯ ಸಹಜ ಸಿದ್ಧಿಯಾಗಿ ಈಗಿರುವ ದರ್ಶನಗಳಲ್ಲಿಯೇ ಯಾವುದೋ ಒಂದು ಅವನ ದರ್ಶನವಾಗಿ ಪರಿಣಮಿಸಿ, ಅವನ ವ್ಯಕ್ತಿತ್ವದ ಮುದ್ರೆ ಧರಿಸಿ, ಅವನ ಕಾಂತಿಯನ್ನು ತಳೆದು ಚೆಲುವಾಗಿ ಮೈದುಂಬಿ ನಿಂತರೆ ಅದು ಅವನ ದರ್ಶನವೇ.

ಸರಸ್ವತ್ಯಾಸ್ತತ್ತ್ವಂ ಕವಿ ಸಹೃದಯಾಖ್ಯಂ

ಲೇಖಕರು ಎದುರಿಸಬೇಕಾದ ಸಮಸ್ಯೆಗಳು ಅನೇಕ. ಅವರ ಮಾಧ್ಯಮದ ಸಮಸ್ಯೆಯ ಬಗ್ಗೆ ಈ ಮೊದಲು ಉಲ್ಲೇಖಿಸಲಾಗಿದೆ. ಲೇಖಕರ ಮುಖ್ಯ ಸಮಸ್ಯೆ ಪಾಠಕ. ಲೇಖಕರು ಎಂಥ ಸತ್ಕೃತಿಗಳನ್ನು ರಚಿಸಿದರೇನಾಯಿತು, ಅವುಗಳನ್ನು ಅವಲೋಕಿಸಿ ಆಸ್ವಾದಿಸುವ ಸಹೃದಯರಿಲ್ಲದಿದ್ದರೆ "ಕಟ್ಟಿಯುಮೇನೊ? ಮಾಲೆಗಾಱನ ಪೊಸಬಾಸಿಗಂ ಮುಡಿವ ಭೋಗಿಗಳಿಲ್ಲದೆ ಬಾಡಿಪೋಗದೇ!" ಎಂದು ಜನ್ನನಂತೆಯೂ, "ಕವಿಯಧಿಕನಿರ್ದೋಷೇಂ ತವೆ ಕೇಳ್ವರಿಲ್ಲದೊಡೆ?" ಎಂದು ರಾಘವಾಂಕನಂತೆಯೂ ಉದ್ಗಾರ ತೆಗೆಯಬೇಕಾಗುತ್ತದೆ. ಆದುದರಿಂದಲೇ ಸರಸ್ವತೀ ತತ್ತ್ವವು ಕವಿ—ಸಹೃದಯರಿಬ್ಬರನ್ನೂ ಒಳಕೊಂಡಿದೆಯೆಂದು ಅಭಿನವಗುಪ್ತರು ಸಾರಿದ್ದಾರೆ.

ಸಹೃದಯನಾರು? ಲೇಖಕನ ಹೃದಯಕ್ಕೆ ಸಮಾನವಾದ ಹೃದಯವುಳ್ಳವನೇ ಸಹೃದಯ. ಅವನು ಹಾಗಿಲ್ಲದಿದ್ದರೆ ಸಾರಸ್ವತ ತತ್ತ್ವದ ಒಂದು ಅಂಗ ಭಂಗವಾದಂತೆ. ಒಂದು ಸತ್ಕೃತಿಯ ಸಾರವನ್ನು ಹೀರಲು ಸಹೃದಯನಿಗೂ ಶಕ್ತಿ ಬೇಕು, ಸಿದ್ಧತೆ ಬೇಕು, ಸುರುಚಿ ಬೇಕು, ರಸಜ್ಞತೆ ಬೇಕು, ವರ್ಣನೀಯ ತನ್ಮಯೀಭವನಯೋಗ್ಯತೆ ಬೇಕು. ಒಂದು ಮಾತಿನಲ್ಲಿ ಹೇಳುವುದಾದರೆ ಅವನು ಪರಕಾಯಪ್ರವೇಶ ವಿದ್ಯೆಯನ್ನು ಕಲಿಯಬೇಕು. ಉತ್ತಮ ರುಚಿಯ ಓದುಗರಿಲ್ಲದೆ ಉತ್ತಮ ಶ್ರೇಣಿಯ ಸಾಹಿತ್ಯ ಹುಟ್ಟದು. ಲೇಖಕನ ಸಮಸ್ಯೆ ಇದು; ಅವನು ಓದುಗರ ಮಟ್ಟಕ್ಕೆ ಮೀರಿದ ಕೃತಿರಚನೆ ಮಾಡಿದರೆ ಓದುಗರಿಗೆ ಅರ್ಥವಾಗದಂತೆ ಬರೆಯುವನೆಂಬ ಆಪಾದನೆಗೆ ಗುರಿಯಾಗುತ್ತಾನೆ; ಓದುಗರ ಮಟ್ಟಕ್ಕೆ ಅವನೇ ಇಳಿದರೆ ಅವನು ಕೆಳಮಟ್ಟಕ್ಕಿಳಿದ ಆಪಾದನೆಗೆ ಗುರಿಯಾಗುತ್ತಾನೆ. ಹಾಗಾದರೆ ಹೇಗೆ ಬರೆಯಬೇಕವನು? "ಉತ್ಪತ್ಸ್ಯತೇಽಸ್ತಿಮಮ ಕೋಽಪಿ ಸಮಾನ ಧರ್ಮಾ| ಕಾಲೋಹ್ಯಯಂ ನಿರವಧಿರ್ವಿಪುಲಾ ಚ ಪೃಥ್ವೀ ||" ಎಂದು ಭವಭೂತಿಯಂತೆ ಎಲ್ಲ ಲೇಖಕರೂ ಎದೆಯುಬ್ಬಿಸಿ ಹೇಳುವುದು ಸಾಧ್ಯವೆ? ಹೀಗೆಂದರೆ ಲೇಖನ ವ್ಯವಸಾಯದಿಂದಲೇ ಬದುಕುವ ಬರೆಹಗಾರರ ಗತಿಯೇನು?

* * * *

ವಿಮರ್ಶಾಗೋಷ್ಠಿಯ ಅಧ್ಯಕ್ಷರ ಭಾಷಣದ ಮುಖ್ಯಾಂಶಗಳು

ಸಾಹಿತ್ಯ ಮತ್ತು ವಿಮರ್ಶೆ ಇವೆರಡಕ್ಕೂ ಮೂಲವಾದದ್ದು ಜೀವನ—ರಸಿಕತೆ, ಸೌಂದರ್ಯೋಪಾಸನೆ. ಇವೆರಡೂ ಸಾಕ್ಷಿಭಾವ, ಸ್ನೇಹಭಾವ, ಸೌಂದರ್ಯಭಾವ ಈ ಮೂರು ಮನೋಭಾವಗಳಿಂದ ಕೂಡಿದ ರಸಪ್ರಜ್ಞೆಯಲ್ಲಿ ಉಗಮ ಹೊಂದುತ್ತವೆ. ಸಾಕ್ಷಿಭಾವದಿಂದ, ಮೋಹರಹಿತವಾಗಿ ರಾಗದ್ವೇಷಗಳನ್ನು ಮೀರಿ ಜೀವನವನ್ನು ನೋಡುವ ಸಮದೃಷ್ಟಿ—ಸಮ್ಯಕ್‌ದೃಷ್ಟಿಗಳು ದೊರೆಯುತ್ತವೆ. ಸ್ನೇಹಭಾವದಿಂದ ಪ್ರಪಂಚದಲ್ಲಿಯ ಎಲ್ಲ ವಸ್ತುಗಳ ಮತ್ತು ಪ್ರಾಣಿಗಳ ಬಗ್ಗೆ ನಿರ್ಮಲವಾದ, ಉತ್ಕಟವಾದ ಸ್ನೇಹವು ಉಕ್ಕಿಬರುತ್ತದೆ. ಸಾಕ್ಷಿಭಾವವು ಮಾಗಿದ ಹಾಗೆ ಸ್ನೇಹಭಾವವು ತನಿಗೊಳ್ಳುತ್ತದೆ. ಅವೆರಡೂ ಪರಿಣತವಾದಂತೆ ಸೌಂದರ್ಯಭಾವವು ಬೆಳೆಯುತ್ತ ಹೋಗಿ ವಿಶ್ವವ್ಯಾಪಿಯಾಗುತ್ತದೆ. ಈ ಮೂರು ಭಾವಗಳ ಸಮನ್ವಿತ ಸಾಕ್ಷಾತ್ಕಾರವೆಂದರೆ ಸಾಹಿತ್ಯ ಮತ್ತು ವಿಮರ್ಶೆ. ಸಾಹಿತ್ಯದಲ್ಲಿ ಅದು ಸೌಂದರ್ಯನಿರ್ಮಿತಿಯಾದರೆ, ವಿಮರ್ಶೆಯಲ್ಲಿ ಅದು ಸೌಂದರ್ಯಸಮೀಕ್ಷೆಯಾಗುತ್ತದೆ. ನಿರ್ಮಿತಿಗೆ ಪ್ರೇರಕ ಈಶ್ವರ ಸೃಷ್ಟಿಯ ಸೌಂದರ್ಯ, ಸಮೀಕ್ಷೆಗೆ ಪ್ರೇರಕ ಕಲಾಸೃಷ್ಟಿಯ ಸೌಂದರ್ಯ. ನಿರ್ಮಿತಿಯಲ್ಲಿ ಅಚಿಂತ್ಯವಾದ ಪ್ರತಿಭೆ ಕೃತಿಯನ್ನು ಅರಳಿಸುತ್ತದೆ, ಸಮೀಕ್ಷೆಯಲ್ಲಿ ಚಿಂತನಪರವಾದ ಪ್ರಜ್ಞೆ ಕೃತಿಯ ಚೆಲುವನ್ನು ಅರಿಯುತ್ತದೆ. ಎರಡರ ಮೂಲ ಮಾತ್ರ ಒಂದೇ, ಎರಡರ ಸಾಫಲ್ಯವೂ ಅಷ್ಟೇ. ವಿಶಾಲವಾದ ಅರ್ಥದಲ್ಲಿ ವಿಮರ್ಶೆಯಲ್ಲಿಯ ಸೌಂದರ್ಯ ಸಮೀಕ್ಷೆಯನ್ನೊಳಗೊಂಡೇ ಸಾಹಿತ್ಯದಲ್ಲಿಯ ಸೌಂದರ್ಯನಿರ್ಮಿತಿಯಾಗುತ್ತದೆ. ಮರ್ಯಾದಿತವಾದ ಅರ್ಥದಲ್ಲಿ ಮಾತ್ರ ಸೌಂದರ್ಯನಿರ್ಮಿತಿಯ ತರುವಾಯ ಸೌಂದರ್ಯಸಮೀಕ್ಷೆ.

* * * *

ಸಾಹಿತ್ಯ ನಿರ್ಮಿತಿ ಮತ್ತು ಸಮೀಕ್ಷೆಗೆ ಸಮಾನವಾದ ರಸಪ್ರಜ್ಞೆ ಇರುವುದೆಂದು ಆಗಲೆ ಹೇಳಿದೆ. ಸಾಹಿತ್ಯಿಕ ಮತ್ತು ವಿಮರ್ಶಕರ ಮನೋಭೂಮಿಯಲ್ಲಿ ಆ ಪ್ರಜ್ಞೆ ಇರುವುದೆಂಬುದನ್ನು ಬೇರೆ ಹೇಳಬೇಕಾಗಿಲ್ಲ. 'ಸರಸ್ವತ್ಯಾಃ ತತ್ವಕವಿಸಹೃದಯಾಖ್ಯಂ ವಿಜಯತೇ' ಎಂದು ಅಭಿನವಗುಪ್ತನು ಹೇಳಿದ್ದರಲ್ಲಿ ಇದೇ ತಾತ್ಪರ್ಯವು ಹೊರಪಡುತ್ತದೆ. ಕವಿ, ಸಹೃದಯರಿಬ್ಬರೂ ಸರಸ್ವತಿಯ ಒಂದೇ ತತ್ತ್ವಕ್ಕೆ ಕೊಟ್ಟ ಎರಡು ಹೆಸರು ಮಾತ್ರ. ಸಾರಸ್ವತ ಪುತ್ರರು ಕವಿಗಳೂ ಆಗಿರುತ್ತಾರೆ, ಸಹೃದಯರೂ ಆಗಿರುತ್ತಾರೆ. ಮೂಲಪ್ರಜ್ಞೆಯ ದೃಷ್ಟಿಯಿಂದ ಈ ಮಾತು ನಿಜವಾದರೂ ಪ್ರತ್ಯಕ್ಷ ಕೃತಿಯಲ್ಲಿ ಹಾಗೂ ಅದನ್ನು ಹೊರಪಡಿಸುವ ಪ್ರಕ್ರಿಯೆಯಲ್ಲಿ ಕವಿಗಳು ಕವಿಗಳೇ ಆಗುತ್ತಾರೆ, ಸಹೃದಯರು ಸಹೃದಯರೇ ಆಗುತ್ತಾರೆ. ಅವರಿಬ್ಬರೂ ಬೇರೆ ವ್ಯಕ್ತಿಗಳೇ

ಆಗಿರಬೇಕಾಗಿಲ್ಲ, ಆದರೆ ಅವರಿಬ್ಬರ ಅಭಿವ್ಯಕ್ತಿ ಆಯಾ ಸ್ಥಾನದಲ್ಲಿ ಬೇರೆಬೇರೆ ಯಾಗಿರುತ್ತದೆ.

* * * * *

ಸಾಹಿತ್ಯ ಸಮೀಕ್ಷೆಗೆ ಪರಿಣತನಾದ ಸಹೃದಯನೇ ಸಮರ್ಥನು. ಸಹೃದಯ ನೆಂದರೆ ಕವಿಹೃದಯಕ್ಕೆ ಸಮಾನವಾದ ಹೃದಯವುಳ್ಳವನು ಎಂದೂ 'ಕಾವ್ಯವನ್ನು ಓದುವಾಗ, ಕವಿಯ ಹೃದಯದೊಂದಿಗೆ ಇವನ ಹೃದಯವೂ ಸಮತಾನವಾಗಿ ಮಿಡಿಯುತ್ತದೆ' ಎಂದೂ ಅರ್ಥವಿಸಲಾಗಿದೆ. ವರ್ಣಿತವಾದ ವಿಷಯದಲ್ಲಿ ತನ್ಮಯ ವಾಗುವ ಯೋಗ್ಯತೆ ಯಾರಿಗುಂಟೋ ಆ ಹೃದಯಸಂವಾದವುಳ್ಳವರೇ ಸಹೃದಯರು ಎಂದು ಅಭಿನವಗುಪ್ತನು ಸಮರ್ಪಕವಾಗಿ ಬಣ್ಣಿಸಿದ್ದಾನೆ. ಕಾವ್ಯಗಳನ್ನು ತಿರುತಿರುಗಿ ಓದಿ, ಸವಿದು, ಮನನಮಾಡುವುದರಿಂದ ಅಂಥವರ ಮನಸ್ಸಿನ ಕನ್ನಡಿ ಹಸನಾಗಿರು ತ್ತದೆ, ಸಾಹಿತ್ಯದ ಚೆಲುವೆಲ್ಲ ಅಲ್ಲಿ ತಿಳಿಯಾಗಿ ಮೂಡುತ್ತದೆ. 'ತನ್ಮಯೀ ಭವನ ಯೋಗ್ಯತೆ' ಅದರಿಂದ ಬರುತ್ತದೆ ಎಂಬ ಅವನ ವಿವರಣೆ ಗಮನೀಯವಾಗಿರುತ್ತದೆ. ಸಹೃದಯನು ಸಮಾನಹೃದಯ, ಸಮಾನಧರ್ಮ ಎಂದರೆ ಸಮಾನವಾದ ರಸಪ್ರಜ್ಞೆ ಯುಳ್ಳವನು. ಅದರಿಂದಲೇ ತನ್ಮಯನಾಗಬಲ್ಲವನು ಎಂದು ತಿಳಿಯಬೇಕಲ್ಲದೆ ಸಮಾನ ವಾದ ವಿಚಾರ—ಭಾವನೆ ಅಥವಾ ಸಮಾನವಾದ ವ್ಯಕ್ತಿತ್ವವುಳ್ಳವನು ಎಂದಲ್ಲ. ಅವನ ವಿಚಾರ—ಭಾವನೆ, ವ್ಯಕ್ತಿತ್ವ ಎಲ್ಲವೂ ಸಾಹಿತ್ಯಿಕನಿಗಿಂತ ಬೇರೆಯಾಗಿರಬಹುದು: ಯಾವೊಂದು ಸಾಹಿತ್ಯಕೃತಿಯ ವಿಷಯ, ವಿನ್ಯಾಸ ಎಲ್ಲವೂ ಅವನ ಮನಃಪ್ರಕೃತಿಗೆ ಹೊರತೆಂದು ತೋರಬಹುದು. ಆದರೂ ಅವನು ಆ ಸಾಹಿತ್ಯಿಕನ ಗುಣಗ್ರಹಣವನ್ನು ಸರಿಯಾಗಿ ಮಾಡಬಲ್ಲನು, ಅವನ ಕೃತಿಯನ್ನು ಸರಿಯಾಗಿ ಮೆಚ್ಚಬಲ್ಲನು. ಸಾಹಿತ್ಯ ದೃಷ್ಟಿಯಿಂದ ಗುಣದೋಷಪರೀಕ್ಷೆಯನ್ನು ಮಾಡಬಲ್ಲನು.

* * * *

ತನ್ನೊಂದು ಪದ್ಯದಲ್ಲಿ ಉತ್ತಮ ವಿಮರ್ಶಕನ ಮನೋಧರ್ಮ ಮತ್ತು ಸನ್ನದ್ಧತೆ (Equipment) ಹೇಗಿರಬೇಕೆಂದು 'ಕಾವ್ಯಾವಲೋಕನ'ಕಾರನಾದ ನಾಗವರ್ಮನು ಮಾರ್ಮಿಕವಾಗಿ ಹೇಳಿದ್ದಾನೆ:

ಸಾರವಿಚಾರ ಬಂಧುರಮತಿಪ್ರಸರಂ ಪರಿಪಕ್ವಶಾಸ್ತ್ರ ಸಂ-|
ಸ್ಕಾರನುಪೇತಕೌತುಕರಸಂ ವಿದಿತಾಗಮಲೋಕವೃತ್ತನು-|
ತ್ಸಾರಿತಮತ್ಸರಂ ಸುಜನವತ್ಸಲನೆಲ್ಲಿಯುಮಾತನೆಂದು ಕೆ-
ಯ್ವಾರದೆ ಬಣ್ಣಿಕುಂ ವಿಬುಧಮಂಡಳಿ ಪಂಡಿತನಾಗವರ್ಮನಂ||

'ಉತ್ತಮ ವಿಮರ್ಶಕನು ಸಾರಭೂತವಾದ ವಿಚಾರಗಳನ್ನೆಲ್ಲ ಅರಿತು ಅರಗಿಸಿಕೊಳ್ಳ ಬೇಕು. ಅದರಿಂದ ಅವನ ಬುದ್ಧಿ ವಿಸ್ತಾರವಾಗಬೇಕು, ಸುಂದರವಾಗಬೇಕು.

ಪರಿಪಕ್ವವಾದ ಶಾಸ್ತ್ರಸಂಸ್ಕಾರವನ್ನು ಅವನು ಪಡೆದಿರಬೇಕು. ಕೌತುಕರಸದಿಂದ ಕೂಡಿದವನಾಗಿರಬೇಕು. ತತ್ತ್ವವನ್ನೂ ಲೋಕವೃತ್ತ ಅಂದರೆ ಜನಜೀವನವನ್ನೂ ತಿಳಿದಿರಬೇಕು. ತನ್ನ ಹೃದಯದಿಂದ ಮತ್ಸರವನ್ನು ಹೊಡೆದುಹಾಕಬೇಕು. ಒಳ್ಳೆಯ ಜನರನ್ನು ಪ್ರೀತಿಸಬೇಕು.'

* * * *

ಸಾಹಿತ್ಯಕ್ಷೇತ್ರದಲ್ಲಿ ಯಾವ ಅಭಿಪ್ರಾಯವೂ ಎಲ್ಲರ ಸ್ವೀಕಾರಮುದ್ರೆಯನ್ನು ಪಡೆಯುವುದೆಂಬ ಭರವಸೆಯಿಲ್ಲ. ಆದರೆ ಎಲ್ಲರೂ ಅದನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಬೇಕು, ಅದರ ವಿಮರ್ಶೆಯನ್ನು ಅಷ್ಟೇ ಪ್ರಾಮಾಣಿಕವಾಗಿ ಮಾಡಬೇಕು. ನಮ್ಮ ರಾಷ್ಟ್ರ ಈಗ 'ಸೆಕ್ಯುಲರ್' ಆಗಿದೆ ಎಂದು ಮುಂದಾಳುಗಳು ಹೇಳುತ್ತಾರೆ. ನಮ್ಮ ವಿಮರ್ಶೆಯೂ ನಮ್ಮ ರಾಷ್ಟ್ರದಂತೆ 'ಸೆಕ್ಯುಲರ್' ಆಗಬೇಕು. 'ಸೆಕ್ಯುಲರ್' ಆದ ರಾಷ್ಟ್ರದಲ್ಲಿ ಎಲ್ಲ ಮತಗಳಿಗೆ, ಧರ್ಮಗಳಿಗೆ ಸಮಾನ ಅವಕಾಶವಿದೆ, ಯಾವ ಒಂದಕ್ಕೆ ಹೆಚ್ಚಿನ ಅವಕಾಶವಿಲ್ಲ. ಅಂದರೆ ಅದು ಧರ್ಮಾತೀತ ಅಥವಾ ಸಮವರ್ತಿ ಯಾಗಿದೆ ಎಂದರ್ಥ. ನಮ್ಮ ಸಾಹಿತ್ಯ ವಿಮರ್ಶೆಯೂ ಅದಕ್ಕನುಗುಣವಾಗಿ ವಿಶಾಲ ಅರ್ಥದಲ್ಲಿ ಎಲ್ಲ ಮತಗಳಿಗೆ ಸಮಾನ ಅವಕಾಶಕೊಡುವ ಸಮದರ್ಶಿಯಾಗಬೇಕು. ಮತೀಯ ಪಕ್ಷಪಾತವು ಸಮದರ್ಶಿಯಾದ ರಾಷ್ಟ್ರಕ್ಕೂ ಸಮದರ್ಶಿಯಾದ ಸಾಹಿತ್ಯ ವಿಮರ್ಶೆಗೂ ಸಲ್ಲುವುದಿಲ್ಲ. ಸಾಹಿತ್ಯ ವಿಮರ್ಶೆ ಸಾಹಿತ್ಯ ದೃಷ್ಟಿಯಿಂದಲೇ ಪ್ರೇರಿತ ವಾಗಬೇಕು. ಅಂಥ ವಿಮರ್ಶೆಯ ವಿಮರ್ಶೆಯೂ ಸಹ ಅದೇ ದೃಷ್ಟಿಯಿಂದ ನಡೆಯಬೇಕು. ಹೀಗಾದರೆ ಮಾತ್ರ ಪ್ರಾಮಾಣಿಕ ವಿಮರ್ಶೆ ಬೆಳೆಯುತ್ತದೆ.

* * * *

ವಿಮರ್ಶಕನು ಸಹೃದಯ ಎಂದರೆ ಹಿಂದೆ ಹೇಳಿದಂತೆ ಆ ಮೂರು ಭಾವಗಳ ಮುಪ್ಪುರಿಯಾದ ರಸಪ್ರಜ್ಞೆಯಿಂದ ಸಾಹಿತ್ಯಕೃತಿಯ ಸೌಂದರ್ಯವನ್ನು ಸವಿಯಲು ಅದರಲ್ಲಿ ತನ್ಮಯನಾಗುವನು. ಈ ತನ್ಮಯತೆಯಲ್ಲಿ ಸೌಂದರ್ಯವನ್ನು ಗ್ರಹಿಸುವ ಮಟ್ಟಿಗೆ ಬೇಕಾದ ಸಮರಸತೆಯಿದೆ, ಆದರೆ ತನ್ನನ್ನು ಇಲ್ಲವೆ ವಿಮರ್ಶೆಯ ವಿವೇಕವನ್ನು ಮರೆಯದಷ್ಟು ತಟಸ್ಥತೆಯಿದೆ. ಅವನ ರಸಪ್ರಜ್ಞೆಯಲ್ಲಿಯ ಸ್ನೇಹಭಾವದಿಂದ ಸಮ ರಸತೆ, ಸಾಕ್ಷಿಭಾವದಿಂದ ತಟಸ್ಥತೆ, ಸೌಂದರ್ಯಭಾವದಿಂದ ರಸಸ್ವಾದ ಇವು ಒಂದ ರೊಳಗೊಂದು ಹೊಂದಿಕೊಂಡು ರಸಾನುಭವ ಪ್ರಕ್ರಿಯೆಯಲ್ಲಿ ಪ್ರಕಟವಾಗುತ್ತವೆ. ತಟಸ್ಥತಾಪೂರ್ವಕವಾದ ಸಮರಸತೆಯಿಂದ ರಸಾಸ್ವಾದ ಮಾಡುವುದೇ ವಿಮರ್ಶಕನ ಭೂಮಿಕೆ ಮತ್ತು ಕಾರ್ಯ. ವಿಮರ್ಶಕನು ಸೌಂದರ್ಯವನ್ನು ಎಲ್ಲಿದ್ದಲ್ಲಿ ಕಾಣಲು ಮತ್ತು ಸವಿಯಲು ಅತ್ಯಂತ ಉತ್ಸುಕನು, ಅಂತೇ ಅವನು ಮುಖ್ಯವಾಗಿ ರಸಿಕ,

ರಸಜ್ಞ. ತಾನು ಕಂಡ ಸೌಂದರ್ಯವು ಎಷ್ಟೇ ಇರಲಿ—ಅಲ್ಪವಾಗಿರಲಿ ಅನಂತ ವಾಗಿರಲಿ—ಅದನ್ನು ಇತರರಿಗೆ ಕಾಣಿಸಲು ಅವನು ಅಷ್ಟೇ ಉತ್ಸುಕನು. ಅದರಿಂದ ಅವನ ರಸಾಸ್ವಾದವು ಅವನ ಮಟ್ಟಿಗೆ ಉಳಿಯದೆ ಎಲ್ಲರಿಗಾಗಿ ಹೊರಬರುತ್ತದೆ. ಎಲ್ಲರಿಗಾಗಿ ಹೊರಬರುವಾಗ ಎಲ್ಲರ ಹೃದಯ-ಮನಸ್ಸುಗಳಿಗೆ ಮುಟ್ಟುವಂತೆ ಅವನು ತನ್ನ ಆಸ್ವಾದವನ್ನು ಮಂಡಿಸಬೇಕಾಗುತ್ತದೆ. ಹೀಗೆ ಎಲ್ಲರಿಗೆ ಹೃದಯಸ್ಪರ್ಶಿಯೂ ಬುದ್ಧಿಗಮ್ಯವೂ ಆಗುವಂತೆ ಮಾಡುವ ಆಸ್ವಾದವೇ ವಿಮರ್ಶೆ.

* * * *

ವಿಮರ್ಶೆ ಕಲಾಸೌಂದರ್ಯವನ್ನು ಕುರಿತು ರಸಾನುಭವದ ವಿಶ್ಲೇಷಣವೆಂಬರ್ಥ ದಲ್ಲಿ ಶಾಸ್ತ್ರಗುಣವುಳ್ಳುದಾದರೂ ರಸಾನುಭವದ ನಿವೇದನವೆಂಬರ್ಥದಲ್ಲಿ ಅದು ಕಲಾಗುಣವುಳ್ಳುದು. ಆದ್ದರಿಂದ ವಿಮರ್ಶೆಯ ವಿಧಾನವನ್ನು ವಿಮರ್ಶಕರೇ ಕಂಡು ಕೊಳ್ಳಬೇಕು. ಆದರೂ ಉದಯೋನ್ಮುಖ ವಿಮರ್ಶಕರಿಗೆ ಕೆಲವು ಸಾಮಾನ್ಯ ಸೂಚನೆ ಗಳನ್ನು ಮಾಡಿದರೆ ತಪ್ಪಲ್ಲ. ಯಾವೊಂದು ಕೃತಿಯ ವಿಮರ್ಶೆಗೆ ಕೈಯಿಕ್ಕುವ ಮೊದಲು ಸಾಹಿತ್ಯ ವಿಮರ್ಶೆಯ ಸಾಮಾನ್ಯ ತತ್ತ್ವಗಳನ್ನು ವಿಮರ್ಶಕನು ತಿಳಿದಿರ ಬೇಕು. ಸೌಂದರ್ಯ, ಕಲೆ, ಸಾಹಿತ್ಯಗಳ ಭಿನ್ನ ಭಿನ್ನ ರೂಪಗಳು ಮುಂತಾದ್ದರ ಲಕ್ಷಣ ವನ್ನು ಕುರಿತು ನಡೆದಿರುವ ಚರ್ಚೆಯನ್ನು ಪರಾಮರ್ಶಿಸಬೇಕು, ಸ್ವಂತದ ತಿಳಿವಳಿಕೆ ಯನ್ನು ನಿಚ್ಚಳಗೊಳಿಸಬೇಕು. ವಿಮರ್ಶೆಗೆ ಒಂದು ಸಾಹಿತ್ಯ ಕೃತಿಯನ್ನು ಎತ್ತಿ ಕೊಂಡಮೇಲೆ ಅದನ್ನು ಓದುತ್ತಿರುವಾಗಲೂ ಓದಿದ ಮೇಲೆಯೂ ಕೆಳಗಿನ ಮೂರು ಪ್ರಶ್ನೆಗಳಿಗೆ ಉತ್ತರ ಪಡೆಯಲು ಹವಣಿಸಬೇಕು:

(೧) ಅದು ತಾಳಿದ ಸಾಹಿತ್ಯರೂಪಕ್ಕೆ ಅನುಗುಣವಾಗಿ ನಿರ್ಮಿತಿ ಆಗಿದೆಯೇ?

(೨) ಆ ರೂಪದಲ್ಲಿಯ ಯಾವ ವಿಶಿಷ್ಟ ಪ್ರಕಾರವು ಎಷ್ಟು ಯಶಸ್ವಿಯಾಗಿ ಮತ್ತು ವಿಷಯ ವಿನ್ಯಾಸಗಳ ಹೊಂದಿಕೆಯಲ್ಲಿ ಮೈದಾಳಿದೆ?

(೩) ಸಾಹಿತ್ಯಿಕನ ವ್ಯಕ್ತ ಅಥವಾ ಅವ್ಯಕ್ತವಾದ ಯಾವುದಾದರೂ ಉದ್ದೇಶ ಅಥವಾ ಜೀವನದರ್ಶನವು ಅದರಲ್ಲಿ ಕಲಾವಂತಿಕೆಗೆ ಬಾಧೆ ಬರದಂತೆ ಮೂಡಿದೆಯೆ?

* * * *

ವ್ಯಕ್ತಿ ನಿರಪೇಕ್ಷವಾಗಿ ನೋಡುವುದಾದರೆ, ಒಳ್ಳೆಯ ಕೃತಿಯಲ್ಲಿ ಸಾಹಿತ್ಯದ ಅವಶ್ಯಘಟಕಗಳ ಸಂಯೋಜನೆಯಿಂದ ಉಂಟಾದ ಒಂದು ಸೌಮ್ಯಸೌಂದರ್ಯ ಹಾಗೂ ಕಲಾವಿಷಯಕವಾದ ಏಕತೆ ಎದ್ದು ಕಾಣುತ್ತಿರಬೇಕು. ವಿಷಯ, ವಸ್ತು, ಪಾತ್ರ, ಶೈಲಿ, ನಾದ ಇವೇ ಆ ಘಟಕಗಳು. ಯಾವೊಂದು ಕೃತಿಯಲ್ಲಿ ಒಂದೆರಡು ಘಟಕಗಳು ಹೆಚ್ಚು ಪ್ರಧಾನವಾಗಿರಬಹುದು. ಆದರೆ ಇತರ ಘಟಕಗಳನ್ನು ಅಲಕ್ಷ್ಯ

ಮಾಡುವಷ್ಟು ಇಲ್ಲವೆ ಒಟ್ಟಿನ ಏಕತೆಗೆ ಬಾಧೆ ಬರುವಷ್ಟು ಆ ಒಂದೆರಡರ ಪ್ರಸ್ಥವು ಬೆಳೆಯಬಾರದು. ಅದು ಬೆಳೆದರೆ ಕೃತಿಯ ಒಳ್ಳೆಯತನಕ್ಕೆ ಕೊರತೆಯುಂಟಾಗುತ್ತದೆ. ಕೃತಿಯ ದೃಷ್ಟಿಯಿಂದ ಈ ಘಟಕಗಳಿರುವಂತೆ ಕೃತಿಕಾರನ ದೃಷ್ಟಿಯಿಂದ ಕಲ್ಪನೆ, ಭಾವನೆ, ಚಿಂತನೆ, ಅಭಿವ್ಯಂಜನ ಎಂಬ ಘಟಕಗಳಿರುತ್ತವೆ. ಒಳ್ಳೆಯ ಕೃತಿಯಲ್ಲಿ ಅವು ಸೊಗಸಾದ ವಾದ್ಯಮೇಳದಂತೆ ಒಂದಕ್ಕೊಂದು ಹೊಂದಿಕೊಂಡು ಅಪಸ್ವರ ವಾಗದೆ ತೋರಬೇಕು. ಸಾಹಿತ್ಯಿಕನು ಆಯ್ದ ರೂಪ ಇಲ್ಲವೆ ಪ್ರತಿಮೆ, ಅವನ ಉದ್ದಿಷ್ಟ ಅಥವಾ ದರ್ಶನ ಒಟ್ಟಿನಲ್ಲಿ ಸಫಲವಾಗಿ ಕಂಡಾಗಲೂ ಒಳ್ಳೆಯ ಕೃತಿ ಯೆಂದು ಕರೆಯಬಹುದು. ಇಂಥ ಗುಣನಿರ್ಣಯವು ಸಂಪೂರ್ಣವಾಗಿ ವ್ಯಕ್ತಿ ನಿರಪೇಕ್ಷವಾಗಲಾರದು ಎಂಬುದನ್ನು ನಾವು ಅರಿತಿದ್ದೇವೆ. ಸಾಹಿತ್ಯದಲ್ಲಿಯ ಸೌಂದರ್ಯಗ್ರಹಣ, ರಸಾನುಭವ, ಆಸಂದಾಸ್ವಾದ ಇವು ವ್ಯಕ್ತಿಸಾಪೇಕ್ಷವಾದು ವೆಂಬುದು ನಿಜ. ಆದರೆ ವ್ಯಕ್ತಿಯ ಆಂತರಿಕ ಅನುಭವಕ್ಕೆ ವ್ಯಕ್ತಿನಿರಪೇಕ್ಷವಾದ ಕೆಲವು ಸೂತ್ರಗಳು ನೆರವಾಗುತ್ತವೆ ಎಂಬುದೂ ಅಷ್ಟೇ ನಿಜ. ಒಳ್ಳೆಯ ಕೃತಿಯಲ್ಲಿ ಸೌಮ್ಯಸೌಂದರ್ಯವು ಪ್ರತೀತವಾದರೆ ಹಿರಿಯ ಕೃತಿಯಲ್ಲಿ ಭವ್ಯಸೌಂದರ್ಯವು ಪ್ರತೀತವಾಗುತ್ತದೆ. ಒಂದರಲ್ಲಿ ಚೆಲುವು ಸಾಂತವಾಗಿ ಕಾಣುತ್ತದೆ, ಇನ್ನೊಂದರಲ್ಲಿ ಪೆಂಪು ಅನಂತವಾಗಿ ಕಾಣುತ್ತದೆ. ಒಂದು ಬರೀ ಹಿಗ್ಗನ್ನು ತರುತ್ತದೆ, ಇನ್ನೊಂದು ಹಿಗ್ಗಿನೊಡನೆ ಬೆರಗನ್ನು ಉಂಟುಮಾಡುತ್ತದೆ. ಈ ಸೂಕ್ಷ್ಮಸಂವೇದನೆಗೆ ಮಾರ್ಗ ದರ್ಶಿಯಾದ ಸೂತ್ರಗಳು ಯಾವುವು? ಸಂಗ್ರಹವಾಗಿ ಹೇಳುವುದಾದರೆ, ಕೃತಿಯ ಮತ್ತು ಕೃತಿಕಾರನ ದೃಷ್ಟಿಯಿಂದ ಅವಶ್ಯವಾದ ಘಟಕಗಳ ಸಂಯೋಜನೆ ತನ್ನ ಪರಮಾವಧಿಯನ್ನು ಮುಟ್ಟಿ ಸಾಧ್ಯವಾದಷ್ಟು ಸಮಗ್ರವಾದ ಸಾಮರಸ್ಯವನ್ನು ಪಡೆಯಲು ಆಯಾ ಕೃತಿ ಮಹಾಕೃತಿಯಾಗುತ್ತದೆ, ಆಯಾ ಕೃತಿಕಾರನು ಮಹಾ ಕೃತಿಕಾರನಾಗುತ್ತಾನೆ. ಸಂಯೋಜನೆ ಪರಮಾವಧಿಯನ್ನು ಮುಟ್ಟಿದೆ ಎನ್ನುವುದನ್ನು ಆಯಾ ಘಟಕಗಳ, ವಿಶೇಷವಾಗಿ ವಸ್ತುಪಾತ್ರಗಳ ಪೃಥಕ್ಕರಣದಿಂದ ಅರಿತುಕೊಳ್ಳ ಬಹುದು. ಸಾಮಾನ್ಯವಾಗಿ ಜೀವನದ ಅನಂತ ವಿಸ್ತಾರ ಮತ್ತು ಅಗಾಧ ಆಳವನ್ನು ಮಹಾಕೃತಿ ರೂಪಿಸಿ ತೋರುತ್ತದೆ, ಅದರಿಂದ ಅದು 'ಸಂಸಾರಸಾರೋದಯ' ವಾಗುತ್ತದೆ. ಅದು ಗಾತ್ರದಲ್ಲಿ ಹಿರಿದಾಗಿರಬಹುದು, ಕಿರಿದಾಗಿರಬಹುದು. ಆದರೆ ಜೀವನದ ಭವ್ಯತೆಯ, ಅನಂತತೆಯ ಸಂಸ್ಪರ್ಶವನ್ನು ಮಾಡಿಸಬೇಕು. ಆಗ ಅದು ಮಹಾಕೃತಿಯಾಗುತ್ತದೆ. ಕೆಲವು ಸಲ ಸತ್ಕೃತಿಗಳಲ್ಲಿ ಈ ಸಂಸ್ಪರ್ಶದ ಸಂದರ್ಭಗಳು, ಭಾವರಸೋತ್ಕರ್ಷಗಳು, ಭವ್ಯಕಲ್ಪನೆಗಳು ತಲೆದೋರಿದರೂ ಸಮಗ್ರಕೃತಿಯಲ್ಲಿ ಹಿರಿಮೆ ಕಾಣದೊರೆಯುವುದಿಲ್ಲ. ಇಂಥಲ್ಲಿ ವಿಮರ್ಶೆಯ ವಿವೇಕವನ್ನು ಉಪಯೋಗಿಸ

ಬೇಕಾಗುತ್ತದೆ. ಕೆಲವು ಸಲ ನಿರ್ಮಿತಿಕಾರನ ವ್ಯಕ್ತಿತ್ವದ ಹಿರಿಮೆಯಿಂದ ಅಥವಾ ಅವನು ನಿರೂಪಿಸಲೆತ್ತಿಕೊಂಡ ವಿಷಯ ಅಥವಾ ವ್ಯಕ್ತಿಯ ಹಿರಿಮೆಯಿಂದ ಮಾತ್ರ ಕೃತಿಯ ಹಿರಿಮೆಯನ್ನು ಕೊಂಡಾಡುವ ಪ್ರವೃತ್ತಿಯಿರುತ್ತದೆ. ಸಾಹಿತ್ಯಸೌಂದರ್ಯಕ್ಕೆ ಸಂಬಂಧವಿಲ್ಲದ ಇಂಥ ಪ್ರಮಾಣಗಳಿಂದ ಗುಣನಿರ್ಣಯಮಾಡುವುದು ಅಯುಕ್ತ ವೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಭವ್ಯ ಸೌಂದರ್ಯಶಾಲಿಯಾದ, ಕೃತಿಗಳಲ್ಲಿಯೂ ಹಿರಿಮೆಯ ತರಗತಿಗಳಿರುತ್ತವೆ. ಭಾರತೀಯ ದೃಷ್ಟಿಯಿಂದ ನೋಡಿದರೆ ಯಾವ ಮಹಾಕೃತಿಯಲ್ಲಿ ಒಂದು ಜೀವಂತ ವಾದ ಜೀವನದರ್ಶನವು ಅನುಸ್ಯೂತವಾಗಿರುವುದೋ ಅದು ಹಿರಿಮೆಯಲ್ಲಿ ಮೇಲಾ ದದ್ದು ಎಂದು ತಿಳಿಯಬಹುದು. ಆದರೆ ದರ್ಶನವು ಶ್ರೇಷ್ಠವಾಗಿ ಸಾಹಿತ್ಯ ಸೌಂದರ್ಯವು ಕನಿಷ್ಟ ಇಲ್ಲವೆ ಸಾಧಾರಣವಾದರೆ ದರ್ಶನಪ್ರಮಾಣದಿಂದ ಅದನ್ನು ಸಾಹಿತ್ಯದ ಉನ್ನತತರ ಪೀಠದಲ್ಲಿ ಕೂರಿಸುವುದು ಯೋಗ್ಯವಾಗಲಾರದು. ಪಾಶ್ಚಾತ್ಯ ವಿಮರ್ಶಕರಲ್ಲಿಯೂ ಈ ವಿಷಯ ಚರ್ಚೆಯಾಗಿದೆ. ಎಬರಕ್ರೊಂಬಿ ಎಂಬ ವಿಮರ್ಶಕನು ತನ್ನ *The Idea of Great Poetry* ಎಂಬ ಸುಂದರಗ್ರಂಥದಲ್ಲಿ ವಾಸ್ತವ ಜೀವನದ ಕಷ್ಟಕಾರ್ಪಣ್ಯಗಳನ್ನು ಮರೆಯುವಂತೆ ಮಾಡುವ ಕಾಲ್ಪನಿಕ ಸ್ವರ್ಗದ ಅಥವಾ ಆಸರೆಯ ಕಾವ್ಯಕ್ಕಿಂತ ಅವನ್ನು ಅರಿಯುವಂತೆ ಮಾಡುವ ಅರ್ಥನಿರೂಪಣೆಯ ಅಥವಾ ದರ್ಶನದ ಕಾವ್ಯವು ಶ್ರೇಷ್ಠತರವೆಂದು ಹೇಳಿದ್ದಾನೆ.

* * * *

ಅರ್ಥನಿರೂಪಣೆಯ ಪ್ರಪಂಚವೇ ಮಹಾಕಾವ್ಯದ ಪ್ರಪಂಚವೆಂದೂ ಮಹಾ ಕಾವ್ಯದ ಮಹತಿ ಅದರ ಅರ್ಥವಿಶೇಷ (Significance)ದಲ್ಲಿರುತ್ತದೆಂದೂ ಅದು ಎಲ್ಲ ಅನುಭವಗಳನ್ನು ಒಟ್ಟುಗೂಡಿಸುವ ಸಾಮರಸ್ಯದಲ್ಲಿರುವುದೆಂದೂ ಅವನು ಮುಂದೆ ಹೇಳಿದ್ದಾನೆ. ಕಾವ್ಯವು ತನ್ನ ಮೂಲಸ್ವರೂಪದಲ್ಲಿ ಋತು-ಸತ್ಯದ ಮಂತ್ರವೆಂದೂ ಋಷಿತ್ವದ ವಾಣಿಯೆಂದೂ ಶ್ರೀ ಅರವಿಂದರು ಸಾರಿದ್ದಾರೆ. ಬರಲಿರುವ ಶ್ರೇಷ್ಠತಮ ಕಾವ್ಯದಲ್ಲಿ ಸತ್ಯ, ಸೌಂದರ್ಯ, ಆನಂದ, ಪ್ರಾಣ, ಚೈತನ್ಯ ಈ ಐದು ನಿತ್ಯಶಕ್ತಿಗಳ ಪರಮಾವಧಿ ಸಾಮರಸ್ಯವಿರುವುದೆಂದೂ ಅವರು *The Future Poetry* ಎಂಬ ತಮ್ಮ ಗ್ರಂಥದಲ್ಲಿ ಕಾಣಿಸಿದ್ದಾರೆ. ಇಂದಿನ ವಿದ್ಯಾವಂತರಲ್ಲಿ ಬುದ್ಧಿ ಪ್ರಾಮಾಣ್ಯ ವಾದಿಗಳಾದ ಕೆಲವರು ಈ ಬಗೆಯ ಅನುಭಾವ ರಾಜ್ಯದಿಂದ ತಮ್ಮ ಮನಸ್ಸನ್ನು ದೂರವಿರಿಸುವರಲ್ಲದೆ ಸಾಹಿತ್ಯಕ್ಷೇತ್ರದಲ್ಲಿ ಈ ರಾಜ್ಯದ ಅಧಿಕಾರವು ನಡೆಯಕೂಡ ದೆಂದು ಅಭಿಪ್ರಾಯಪಡುತ್ತಾರೆ. ಅವರ ಈ ಪ್ರಾಮಾಣಿಕವಾದ ನಿಲುವೆ ಅವರ ಮಟ್ಟಿಗೆ ಸಹಜವಾಗಿದೆ. ಆದರೆ ತಮ್ಮ ಅನುಭವಕ್ಕೆ ಇಂದು ನಿಲುಕದ ವಿಷಯವು

ಎಲ್ಲರಿಗೂ ಎಂದಿಗೂ ನಿಲುಕದ್ದು ಎಂದು ಅವರು ಭಾವಿಸಿದರೆ ಬುದ್ಧಿಪ್ರಾಮಾಣ್ಯ ವಾದಿಗಳ ಬುದ್ಧಿ ಮುಚ್ಚಿದ ಮನೆ ಎಂದು ತಿಳಿಯಬೇಕಾದೀತು. ಹಿರಿಯ ಸಾಹಿತ್ಯದ ತರಗತಿಗಳನ್ನು ಕುರಿತು ಯೋಚಿಸುವಾಗ ಸಾಹಿತ್ಯದೃಷ್ಟಿಯನ್ನು ಕಳೆದುಕೊಳ್ಳದೆ, ಉನ್ನತವಾದ ಕಾವ್ಯಶಿಖರಗಳು ನಮಗೆ ಇಂದು ತಿಳಿಯದ ಎತ್ತರದಲ್ಲಿ ಹೇಗಿರ ಬಹುದು ಎಂಬುದನ್ನು ವಿಮರ್ಶಕರು ತೆರೆದ ಮನಸ್ಸಿನಿಂದ, ದೂರಗಾಮಿಯಾದ ಊಹೆಯಿಂದ ತಿಳಿಯುವ ಪ್ರಯತ್ನ ಮಾಡಬೇಕು.

* * * *

ಕನ್ನಡದಲ್ಲಿ ವಿಮರ್ಶೆಯ ಮುನ್ನಡೆಗಾಗಿ ಮಾಡಬೇಕಾದ್ದೇನು ? ಎಂಬುದನ್ನು ಆಲೋಚಿಸಿ ನಿಶ್ಚಿತ ಹೆಜ್ಜೆಗಳನ್ನಿಡುವ ಕಾಲ ಬಂದಿದೆ. ನನಗೆ ತೋರಿದ ಕೆಲವು ಅಂಶಗಳನ್ನು ಇಲ್ಲಿ ಸೂಚಿಸುತ್ತೇನೆ.

(೧) ವಿಮರ್ಶಕರಾಗ ಬಯಸುವವರು ವಿಮರ್ಶಕನ ಮನೋಧರ್ಮವನ್ನೂ ವ್ಯುತ್ಪತ್ತಿಯನ್ನೂ ಪಡೆಯಬೇಕು. ಯಾವಾಗಲೂ ಪಡೆಯುತ್ತಿರಬೇಕು.

(೨) ವಿದ್ಯಾವಂತರು ಪ್ರಾಮಾಣಿಕ ವಿಮರ್ಶೆಗೆ ಅನುಕೂಲ ವಾತಾವರಣವನ್ನು ಕಲ್ಪಿಸಿಕೊಡಬೇಕು.

(೩) ವಿಮರ್ಶಶಾಸ್ತ್ರ, ಸೌಂದರ್ಯಶಾಸ್ತ್ರ, ಪ್ರಖ್ಯಾತಗ್ರಂಥಗಳನ್ನೂ ಮತ್ತು ಗ್ರಂಥಕಾರರನ್ನೂ ಕುರಿತು ಕೂಲಂಕಷವಾದ ವಿಮರ್ಶನ ಇವಕ್ಕೆ ಸಂಬಂಧಿಸಿದ ಅನೇಕ ಗ್ರಂಥಗಳು ಕನ್ನಡದಲ್ಲಿ ಇನ್ನೂ ಹುಟ್ಟಬೇಕು.

(೪) ದಿನಪತ್ರಿಕೆ—ವಾರಪತ್ರಿಕೆಗಳಲ್ಲಿ ಗಣ್ಯವಾದ ಹೊಸ ಪುಸ್ತಕಗಳನ್ನು ಕುರಿತು ಪರಿಚಯ ಪ್ರಧಾನ ಲೇಖನಗಳು ಮಾತ್ರ ಬರಬೇಕು. ವಿಮರ್ಶೆಯೆಂಬ ಹೆಸರಿನಲ್ಲಿ ಬರುವ ಅವಲೋಕನಗಳು ಮಾಸಪತ್ರಿಕೆ, ತ್ರೈಮಾಸಿಕಗಳಲ್ಲಿ, ಅಥವಾ ದಿನಪತ್ರಿಕೆ—ವಾರಪತ್ರಿಕೆಗಳು ೩-೪ ತಿಂಗಳಿಗೊಮ್ಮೆ ಹೊರಡಿಸಬಹುದಾದ ವಿಶೇಷ ಸಾಹಿತ್ಯ ಸಂಚಿಕೆಗಳಲ್ಲಿ ಪ್ರಕಟವಾಗಬೇಕು.

(೫) ಹೊಸಹೊಸದಾಗಿ ಬರೆಯುತ್ತಿರುವ ಅಥವಾ ಈಗಾಗಲೆ ಹಲಕೆಲವು ಕೃತಿಗಳನ್ನು ಬರೆದು ಪ್ರಕಟಿಸಿರುವ ತರುಣ ಲೇಖಕರಿಗೆ ಸರಿಯಾದ ವಿಮರ್ಶೆಯಿಂದ ಉತ್ತೇಜನ, ಮಾರ್ಗದರ್ಶನಗಳು ಅತ್ಯಂತ ಆವಶ್ಯಕವಾಗಿರುತ್ತವೆ. ಶಾಲೆ-ಕಾಲೇಜಿನ ಕೈಬರಹದ ಪತ್ರಿಕೆಗಳ ಸಂಪಾದನದಲ್ಲಿಯೇ ಈ ಕಾರ್ಯವು ಮೊದಲಾಗಬೇಕು.

(೬) ಶಕ್ಯವಿರುವಲ್ಲಿ ಕೆಳಮಟ್ಟದ ಪುಸ್ತಕಗಳು ಪ್ರಕಟವಾಗದಂತೆ, ಪ್ರಕಟವಾದರೂ ಪ್ರಚಾರವಾಗದಂತೆ ವಿಮರ್ಶಕರು ತಮ್ಮ ಅಭಿಪ್ರಾಯಬಲದಿಂದ ಮಾಡುವಂತಿದೆ. ಅದನ್ನವರು ಮಾಡುತ್ತ ಹೋದರೆ ಕ್ರಮೇಣ ಅದರ ಪರಿಣಾಮವಾಗುತ್ತದೆ.

(೭) ಬಾಹ್ಯನಿಯಂತ್ರಣಕ್ಕಿಂತ ಆಂತರಿಕವಾದ ಮತ್ತು ಸ್ವೇಚ್ಛೆಯಿಂದ ಮಾಡುವ ನಿಯಂತ್ರಣ ಯಾವಾಗಲೂ ಒಳ್ಳೆಯದು. ಈ ದೃಷ್ಟಿಯಿಂದ ಆರಂಭ ಲೇಖಕರಿರಲಿ, ನುರಿತ ಲೇಖಕರಿರಲಿ ತಮ್ಮ ಹೊಸ ಕೃತಿಯನ್ನು ಒಬ್ಬರಾದರೂ ವಿಮರ್ಶಕರಿಗೆ ತೋರಿಸದೆ ಪ್ರಕಟಿಸಲಾಗದು ಎಂಬ ನಿರ್ಧಾರಮಾಡಬೇಕು.

* * * *

ನವ್ಯಕಾವ್ಯದ ಹೊಸತನವನ್ನು ಸ್ಥಾಪಿಸಲು 'ರೊಮ್ಯಾಂಟಿಕ್' ಕಾವ್ಯದ ಕಾಲ ಮುಗಿದಿದೆ ಎಂದು ಹೇಳುವುದು ಸತ್ಯದ ವಿಪರ್ಯಾಸ. 'ರೊಮ್ಯಾಂಟಿಕ್' ಎಂಬ ಪದಪ್ರಯೋಗವೇ ಅರ್ಧಸತ್ಯದ ಆಲಾಪ. ಹೊಸಕಾವ್ಯ ಭಾವಗೀತಾತ್ಮಕವಾಗಿದೆ ಎಂದರೆ ವಾಸ್ತವಜೀವನದಿಂದ ದೂರವಾಗಿದೆ ಅಥವಾ ಬರೀ ಕನಸುಣಿಯಾಗಿದೆ ಎಂದು ತಿಳಿಯುವುದು ಉಚಿತವಲ್ಲ. ಅದರಲ್ಲಿ ಭಾವನಿರ್ಭರತೆ, ಅಧ್ಯಾತ್ಮ ಪ್ರವಣತೆ, ನಾದ ಪ್ರಿಯತೆಗಳು ಹೊಮ್ಮಿದಂತೆ ಸಾಮಾಜಿಕ ರಾಷ್ಟ್ರೀಯ ಪ್ರಜ್ಞೆಯೂ ತೀವ್ರವಾಗಿ ತೋರ್ಪಟ್ಟಿದೆ. ಅದರಲ್ಲಿಯ ದೋಷಗಳನ್ನು ದೊಡ್ಡದು ಮಾಡಿದರೆ ನವ್ಯಕಾವ್ಯದ ದೋಷಗಳೂ ಕೆಲವರ ನೋಟದಲ್ಲಿ ದೊಡ್ಡವಾಗಿ ಅದರ ಕಾಲಮುಗಿಯಿತೆಂದು ಅವರು ಹೇಳುತ್ತ ಹೋದಾರು. ಹೊಸಕಾವ್ಯ ಜೀವಂತವಾಗಿದೆ. ಸತ್ವಯುತವಾಗಿದೆ, ವೈವಿಧ್ಯ ಪೂರ್ಣವಾಗಿದೆ. ಅದರ ವಿಶಾಲಪ್ರವಾಹದಲ್ಲಿ ನವ್ಯಕಾವ್ಯದ ಹೊನಲು ಬಂದು ಸೇರಿ ಕೊಂಡಿದೆ ಎಂದು ಹೆಮ್ಮೆಯಿಂದ ಹೇಳೋಣ. ಒಂದು ಇನ್ನೊಂದನ್ನು ರದ್ದುಪಡಿಸ ಬೇಕಾಗಿಲ್ಲ. ನವ್ಯಕಾವ್ಯ ಎಂಬುದರ ಚರಿತ್ರೆಯನ್ನು ನೋಡಿದರೆ 'ರೊಮ್ಯಾಂಟಿಕ್' ಸಂಪ್ರದಾಯದವರಿಂದಲೂ ನವ್ಯಕವನಗಳ ರಚನೆಯಾಗಿದೆ ಎಂಬುದನ್ನೂ ನವ್ಯಕವಿ ಗಳೂ 'ರೊಮ್ಯಾಂಟಿಕ್' ಜಾತಿಯ ಕವನಗಳನ್ನು ಬರೆದಿರುವರೆಂಬುದನ್ನೂ ಗಮನಿಸ ಬೇಕು. ನವ್ಯಕಾವ್ಯದಲ್ಲಿ ಸಾಮಾಜಿಕ ಪ್ರಜ್ಞೆಯ ಮತ್ತು ವಾಸ್ತವಜೀವನದ ವಿಕೃತಿಯ ಪಡಿನೆಳಲು ತೀವ್ರಕರವಾಗಿ ಮೂಡುತ್ತಲಿದೆ. ಇಂದಿನ ಜೀವನದ ವೈಫಲ್ಯ—ನೈರಾಶ್ಯಗಳೂ ವೈಷಮ್ಯಗಳೂ ಎಲ್ಲ ಕಲಾವಿದರ ಕರುಳನ್ನು ಹಿಂಡುತ್ತವೆ. ನವ್ಯಕವಿಗಳ ಹೃದಯವು ಅವುಗಳಿಂದ ವಿಶೇಷವಾಗಿ ಕೆರಳಿದೆ, ಕೆಣಕಿದಂತಾಗಿದೆ. ನವ್ಯಕಾವ್ಯದಲ್ಲಿ ಅದು ಸ್ವಾಭಾವಿಕವಾಗಿ ರೂಪತಾಳಿ ನಿಲ್ಲುತ್ತದೆ. ಪ್ರಳಯರುದ್ರನು ತಾಂಡವನೃತ್ಯದಲ್ಲಿ ಕೈಗಳನ್ನು ಅಡ್ಡಡ್ಡಲಾಗಿ ಚೆಲ್ಲುವಂತೆ ನವ್ಯಕಾವ್ಯವು ತನ್ನ ಗತಿಯಲ್ಲಿ ಮಾತಿನಲ್ಲಿ ಸ್ವಚ್ಛಂದವೂ ವಿಕಟವೂ ಆದ ಅಭಿವ್ಯಕ್ತಿಯನ್ನು ಪಡೆದಿದೆ. ಇದರಲ್ಲಿ ತುಂಬ ಮೆಚ್ಚ ಬೇಕಾದ ನವೀನಪ್ರಜ್ಞೆಯಿದೆ, ಕವಿತಾಗುಣವಿದೆ ಎಂಬುದನ್ನು ವಿಮರ್ಶಕರು ಅರಿಯ ಬೇಕು. ಅದರೊಂದಿಗೆ ನವ್ಯಕವಿಗಳು ಸಹ ತಮ್ಮ ಸಂಪ್ರದಾಯ ಹಟವನ್ನು ಬಿಟ್ಟು ತಮ್ಮ ಪ್ರಜ್ಞೆಯನ್ನು ಪ್ರಾಮಾಣಿಕವಾಗಿ ಬೆಳೆಸಿಕೊಳ್ಳಬೇಕು, ಅಭಿವ್ಯಕ್ತಿಯಲ್ಲಿಯ

ಅರೆತನವನ್ನೂ ಅಸ್ಪಷ್ಟತೆಯನ್ನೂ ಕಳೆದುಕೊಳ್ಳಬೇಕು. ಜೀವನದಲ್ಲಿ ಇಂದು ಸಾಕಷ್ಟು ದುಃಖದುರಂತಗಳೂ ಇರುತ್ತವೆ. ಅವನ್ನು ಚಿತ್ರಿಸುವಾಗ, ಹೊಸಹೊಸ ಪ್ರತಿಮೆಗಳನ್ನು ಕಲ್ಪಿಸುವಾಗ, ವಿಧಾಯಕ ಮನೋಭಾವದ ಹಿನ್ನೆಲೆಯನ್ನು ಇಟ್ಟುಕೊಂಡರೆ ಕನಿಕರದೊಡನೆ ನವಸಮಾಜನಿರ್ಮಿತಿಯ ಆವೇಶವೂ ಉಂಟಾದೀತು. ಇಲ್ಲವಾದರೆ ಇದ್ದ ದುಃಖಕ್ಕೆ ನವಸಾಹಿತ್ಯದ ವಾಚನದಿಂದ ಹೊಸ ದುಃಖದ ಸೇರ್ಪಡೆಯಾದೀತು.

ಸ್ವಾತಂತ್ರ್ಯೋತ್ತರಕಾಲದ ಕಾದಂಬರಿಯನ್ನು ಕುರಿತು ಚರ್ಚೆಯಲ್ಲಿಯೂ ನವ್ಯತೆ ಹಣಿಕಬಹುದು. ಕೆಲವು ಕಾದಂಬರಿಗಳಲ್ಲಿ ಕಾವ್ಯದಲ್ಲಿ ಹೇಗೋ ಹಾಗೆ ಸಾಮಾಜಿಕ ಪ್ರಜ್ಞೆ ಒತ್ತಾಸೆಯಾಗಿ ಬಂದಿದೆ, ವಾಸ್ತವಜೀವನದ ವಿಕೃತಿ ಇನ್ನೂ ವಿಕಾರವಾಗಿ ಮೂಡಿದೆ. ಇದರಲ್ಲಿ ಗ್ರಾಹ್ಯ ಯಾವುದು ತ್ಯಾಜ್ಯ ಯಾವುದು ಎಂಬುದನ್ನು ವಿಂಗಡಿಸಿ ತಿಳಿಯಬೇಕು. ಸಾಮಾಜಿಕ ಪ್ರಜ್ಞೆ ಎಂದರೆ ಏನು, ವಾಸ್ತವ ವಾದ ಎಂದರೇನು, ಪ್ರಪಂಚದಲ್ಲಿ ಅವುಗಳ ಪರಿಮಿತಿ ಏನು ಎಂಬುದನ್ನೂ ತಿಳಿಯುವುದು ಅಗತ್ಯ. ಸಾಮಾಜಿಕಪ್ರಜ್ಞೆ ಇದು ಸುತ್ತುಮುತ್ತಿನ ಸಮಾಜಜೀವನದ ಸುಖದುಃಖದ ಅರಿವು ಮಾತ್ರವಲ್ಲ, ಅದರೊಡನೆ ಅತ್ಯಂತ ಸಹಾನುಭೂತಿ ಎಂಬ ಸ್ವರೂಪದಲ್ಲಿ ಎಲ್ಲ ಕಲಾವಿದರೂ ಅದನ್ನು ಪಡೆದಿರಬೇಕು. ಆದರೆ ಅದೊಂದು ನಿಶ್ಚಿತವಾದ ಸಮಾಜರಚನೆಯ ಸಿದ್ಧಾಂತದಿಂದ ಕೂಡಿದಾಗ ಮತ್ತು ಅದರ ಅಭಿನಿವೇಶದಿಂದ ಕಾವುಗೊಂಡಾಗ ಕಲಾಕೃತಿಯ ಮೇಲೆ ಅದರ ಪರಿಣಾಮವು ಬಾಧಕವಾಗುವ ಸಂಭವವಿರುತ್ತದೆ. ಈ ಬಗೆಯ ಸಾಮಾಜಿಕಪ್ರಜ್ಞೆ ಇರುವುದು ಸ್ವತಃ ತಪ್ಪಲ್ಲ. ಆದರೆ ಇದುಳ್ಳ ಕಲಾವಿದರು ತಮ್ಮ ಪ್ರಜ್ಞೆ ಮತ್ತು ಕಲೆ ಇವುಗಳ ಸಂಮಿಲನವನ್ನು ಮಾಡುವಲ್ಲಿ ಅಸಿಧಾರಾವ್ರತವನ್ನು ಪಾಲಿಸಬೇಕಾಗುತ್ತದೆ ಎಂಬುದನ್ನು ನೆನೆದಿರಬೇಕು.

ವಾಸ್ತವ ವಾದವು ಸಾಮಾಜಿಕಪ್ರಜ್ಞೆಯ ಒಂದು ಆವಿಷ್ಕಾರ. ಸಮಾಜಜೀವನದ ವಸ್ತು-ಸ್ಥಿತಿಯನ್ನು ಇದ್ದಂತೆ ಬಣ್ಣಿಸಬೇಕೆಂಬುದು ವಾಸ್ತವದೃಷ್ಟಿ. ಇದೇ ದೃಷ್ಟಿಯಿಂದಲೇ ಜಗತ್ತನ್ನು ನೋಡಬೇಕು, ನಿರೂಪಿಸಬೇಕು ಎಂಬ ಏಕಾಂಗಿಯಾದ ಸಾಧನೆಯಿಂದ ಅದೊಂದು ವಾದವಾಗಿ ಪರಿಣಮಿಸುತ್ತದೆ. ವಾಸ್ತವದೃಷ್ಟಿ ಎಲ್ಲ ಕಲಾವಿದರಲ್ಲಿರುತ್ತದೆ, ವಾಸ್ತವ ವಾದವು ಮಾತ್ರ ಕೆಲವರ ಸೊತ್ತಾಗಿರುತ್ತದೆ. ಪಾಶ್ಚಾತ್ಯ ವಾಙ್ಮಯ ಮತ್ತು ವಿಮರ್ಶೆಯ ಪ್ರಭಾವದಿಂದ ಈ ವಾದವು ನಮ್ಮ ದೇಶದಲ್ಲಿ ರೂಢಮೂಲವಾಗುತ್ತಿದೆ. ಸ್ವಾತಂತ್ರ್ಯೋತ್ತರ ಕಾದಂಬರಿಗಳಲ್ಲಿ ಇದನ್ನು ವಿಶೇಷವಾಗಿ ಕಾಣಬಹುದು. ವಾಸ್ತವ ವಾದಿಗಳ ಪ್ರಕಾರ ಸಮಾಜದಲ್ಲಿ ಕೊಳೆಯಿದೆ, ಸಾಹಿತ್ಯದಲ್ಲಿ ಅದು ಬರಲೇಬೇಕು. ಸಮಾಜದಲ್ಲಿ ಹೀಗಿದೆ ಎಂದು ತೀವ್ರವಾಗಿ ತೋರದಿದ್ದರೆ ಕೊಳೆಯನ್ನು ತೊಳೆಯುವುದಕ್ಕೆ ಪ್ರೇರಣೆ ಎಲ್ಲಿಂದ ಬರಬೇಕು?

ಸಮಾಜಜೀವನದ ಸತ್ಯದರ್ಶನದ ಮುಖಾಂತರ ಸಂಸ್ಕರಣಪ್ರೇರಣೆಯನ್ನು ಉಂಟು ಮಾಡುವುದು ಸಾಹಿತ್ಯಿಕನ ಕಾರ್ಯಗಳಲ್ಲಿ ಒಂದಾಗಿದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಆದರೆ ಸಮಾಜ ಸಂಸ್ಕರಣದಲ್ಲಿ ಅಷ್ಟು ಆಸಕ್ತಿಯುಳ್ಳ ಕಲಾವಿದನು ತನ್ನ ಬರೆವಣಿಗೆಯಿಂದ ಇಲ್ಲದ ಉದ್ರೇಕಗಳೂ ಹೊಸ ಸಮಸ್ಯೆಗಳೂ ತಲೆದೋರದಂತೆ ನೋಡಿಕೊಳ್ಳಬೇಕು. ಇದೂ ಅವನ ಕರ್ತವ್ಯ. ಆದ್ದರಿಂದ ಕೊಳೆಯನ್ನು ನಿರೂಪಿಸುವಾಗ ಒಂದು ಬಗೆಯ ಸಂಯಮವನ್ನೂ ಸೂಚಕಕಲೆಯನ್ನೂ ಕಲಾವಿದನು ತೋರಿಸಬೇಕು; ಕೊಳೆಯ ಬಗ್ಗೆ ತೀವ್ರ ಜುಗುಪ್ಸೆಯನ್ನುಂಟುಮಾಡಬೇಕು, ವ್ಯಾಮೋಹವನ್ನಲ್ಲ.

ವಾಙ್ಮಯವೆಂದರೆ ಒಂದು ತಪಸ್ಸೆಂದು ಭಗವದ್ಗೀತೆ ಹೇಳಿದೆ. ಅದು ಕೇವಲ ಅಧ್ಯಾತ್ಮಿಗಳಿಗೆ ಮಾತ್ರವಲ್ಲ, ಎಲ್ಲ ರಸಿಕರಿಗೆ ಅನ್ವಯಿಸುವುದೆಂದು ನನ್ನ ಭಾವನೆ. ವಾಙ್ಮಯ ತಪಸ್ಸಿನಲ್ಲಿ ವಿಮರ್ಶೆ ಎಂಬುದು ವ್ರತವಾಗಬೇಕು, ಬಿಟ್ಟುಬಿಡದೆ ನಡೆಯುವ ಮಹಾವ್ರತವಾಗಬೇಕು. ಈ ವ್ರತದಲ್ಲಿ ಕಷ್ಟನಿಷ್ಠುರಗಳಿರುತ್ತವೆ. ಆದರೆ ಅವುಗಳ ಕೊನೆಗೆ ರಸಾನುಭವದ ಕಾಸಾರವಿರುತ್ತದೆ. ಅದರ ಅಮೃತಪಾನದಿಂದ ರಸಿಕ ಜೀವಕ್ಕೆ ನಿತ್ಯತೃಪ್ತಿಯಾಗುತ್ತದೆ.

ಕಾವ್ಯಾವಲೋಕನ

ಚಿರಸ್ಮರಣೆ—ಲೇಖಕರು : ನಿರಂಜನ ; ಭಾರತೀ ಪ್ರಕಾಶನ, ಕೃಷ್ಣಮೂರ್ತಿಪುರಂ, ಮೈಸೂರು ; ಪುಟಗಳು ೩೦೬ ; ಬೆಲೆ, ಒಂದೂವರೆ ರೂಪಾಯಿ.

ತಮ್ಮ ಹಲವು ಕೃತಿಗಳ ಮೂಲಕ ಕನ್ನಡಿಗರಿಗೆ ಪರಿಚಿತವಾಗಿರುವ ನಿರಂಜನರ ಕಾದಂಬರಿ ಇದು. ದಕ್ಷಿಣ ಕನ್ನಡ ಜಿಲ್ಲೆ ಮತ್ತು ಮಲಬಾರ್ ಜಿಲ್ಲೆಗಳ ಗಡಿಯಲ್ಲಿರುವ ಹಳ್ಳಿ ಕಯ್ಯೂರಿನಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ಒಂದು ರುದ್ರ ರಮಣೀಯ ಚಿತ್ರ ಈ ಕಾದಂಬರಿಯಲ್ಲಿದೆ. ಭಾರತದ ಸಾವಿರಾರು ಹಳ್ಳಿಗಳಲ್ಲಿ ಇಂಥದೊಂದು ಹೋರಾಟ ನಡೆದಿರಲಿಕ್ಕೆ ಸಾಕು. ಅಂಥ ಹೋರಾಟದ ಒಂದು ವಾಸ್ತವಿಕ ಚಿತ್ರವನ್ನು ಕಾಣಬೇಕೆಂದರೆ 'ಚಿರಸ್ಮರಣೆ'ಯನ್ನು ಓದಬೇಕು.

ಜಮೀನುದಾರ ನಂಬಿಯಾರರ ದಬ್ಬಾಳಿಕೆಯನ್ನೇ ತಮ್ಮ ಪಾಲಿಗೆ ಬಂದ ಪಂಚಾಮೃತವೆಂದು ತಿಳದು ಜೀವಿಸುತ್ತ ಬಂದಿದ್ದವರು ಕಯ್ಯೂರಿನ ಜನರು. ಇಡೀ ಭರತಖಂಡದ ಮೇಲೆ ಬೀಸಿದ ಜಾಗೃತಿಯ ಗಾಳಿ ಕಯ್ಯೂರಿನ ಮೇಲೂ ಬೀಸಿತು. ಹೊಸ ಜೀವನದ ಕನಸನ್ನು ಕಂಡವರು ಎಳೆಯರಾದ ಚಿರುಕಂಡ ಮತ್ತು ಅಪ್ಪು. ಆ ಹಳ್ಳಿಯ ಶಾಲೆಯ ಮಾಸ್ತರರು ಈ ಎಳೆಯರಿಗೆ ಜ್ಞಾನವನ್ನು ನೀಡುವವರಾದರು. ಮಾಸ್ತರರ ಮೂಲಕವೇ ಇವರು ಕಯ್ಯೂರಿನ ಹೊರಗೂ ತಲೆ ಹಣಿಕಿಹಾಕಿ ನೋಡಬಲ್ಲ ಸಾಮರ್ಥ್ಯವನ್ನು ಪಡೆದರು. ಶಾಲೆಯ ಜಗುಲಿಯ ಮೇಲೆ ಆರಂಭವಾದ ವೃತ್ತಪತ್ರಿಕಾ ವಾಚನ ಒಂದು ಸ್ವತಂತ್ರ ವಾಚನಾಲಯವಾಗಿ, ರಾತ್ರಿಯ ಶಾಲೆಯಾಗಿ ಬೆಳೆದು ಕೊನೆಗೆ ಕಯ್ಯೂರಿನ ರೈತಸಂಘಕ್ಕೆ ಹಾದಿಯಾಗುತ್ತದೆ. ಕಯ್ಯೂರಿನಲ್ಲಿ ಆ ತಾಲ್ಲೋಕಿನ ರೈತಸಂಘದ ಮಹಾಸಭೆ ಜರುಗಲಿರುವ ಪೂರ್ವದಲ್ಲಿ ಪೋಲೀಸಿನವನಾದ ಸುಬ್ಬಯ್ಯನ ಆಕಸ್ಮಿಕ ಮರಣ ಜರುಗುತ್ತದೆ. ಪ್ರಭಾತಫೇರಿಗೆ ಅಡ್ಡಿಯಾಗಿ ತನ್ನ ದರ್ಪವನ್ನು ತೋರಿಸಿದ ಸುಬ್ಬಯ್ಯ ಜನರ ಪ್ರಕೋಪಕ್ಕೆ ತುತ್ತಾಗಿ ಪ್ರಾಣ ಉಳಿಸಿಕೊಳ್ಳಲು ತೇಜಸ್ವಿನೀ ನದಿಯಲ್ಲಿ ಈಜುತ್ತಿರುವಾಗ ಮುಳುಗಿ ಸಾಯುತ್ತಾನೆ. ಇಲ್ಲಿಂದ ಮುಂದೆ ಕಯ್ಯೂರು ರಣರಂಗವಾಗುತ್ತದೆ. ನಿರಾಯುಧರಾದ ಹಳ್ಳಿಯ ರೈತರ ಮೇಲೆ ಸಶಸ್ತ್ರ ಪೋಲೀಸರ ಬಂದೂಕಿನ ಏಟುಗಳು ಬೀಳುತ್ತವೆ. ಮನೆ ಲೂಟಿಯಾಗುತ್ತದೆ, ಗುಡಿಸಲುಗಳು ಭಸ್ಮವಾಗುತ್ತವೆ. ದಸ್ತಗಿರಿಗಳು ಆಗಿ ಅವರನ್ನು ಸೆರೆಹಿಡಿದು ತೆಗೆದುಕೊಂಡು ಹೋಗುತ್ತಾರೆ. ಮುಂದೆ ನ್ಯಾಯಾಲಯದಲ್ಲಿ ವಿಚಾರಣೆಯ ನಾಟಕ ನಡೆಯುತ್ತದೆ. ಕೆಲವರಿಗೆ ಬಿಡುಗಡೆ, ಕೆಲವರಿಗೆ ಸಶ್ರಮಶಿಕ್ಷೆ,

ನಾಲ್ಕು ಜನಕ್ಕೆ ಮರಣದಂಡನೆ. ಅಪ್ಪು, ಚಿರುಕಂಡ, ಕುಞಂಬು, ಅಬೂಬಕರ್ ಈ ನಾಲ್ವರೇ ತಮ್ಮ ಹಳ್ಳಿಗಾಗಿ, ತಮ್ಮ ದೇಶಕ್ಕಾಗಿ ದೇಹತ್ಯಾಗಮಾಡಿದ ಚಿರಸ್ಮರಣೀಯರಾದ ವ್ಯಕ್ತಿಗಳು. ಅವರ ಸ್ಮಾರಕಗಳು ಆ ಹಳ್ಳಿಯಲ್ಲಿ ಏರ್ಪಟ್ಟಿವೆ. ವರ್ಷಕ್ಕೊಂದುದಿನ ಕಯ್ಯೂರು ವೀರರ ಸ್ಮರಣೆಯ ದಿನ. ಕಾದಂಬರಿ ಆರಂಭವಾಗುವುದು ಈ ಸ್ಮರಣೆಯ ದಿನದಂದು. ತೇಜಸ್ವಿನೀ ನದಿಯ ದಡದಲ್ಲಿರುವ ಕಯ್ಯೂರಿನ ಪರಿಚಯ ಮಾಡಿಕೊಡುತ್ತ ಅಲ್ಲಿ ನಡೆಯುತ್ತಿರುವ ವೈಭವದ ಉತ್ಸವದಲ್ಲಿ 'ಕಯ್ಯೂರು ವೀರಗಾಥೆ'ಯನ್ನು ಹಾಡಿಸುತ್ತಾರೆ ಕಾದಂಬರಿಕಾರರು. ಕಾದಂಬರಿಗೆ ಇದು ಒಂದು ಉತ್ತಮ ಆರಂಭವಾಗಿ, ಪೀಠಿಕೆಯಾಗಿ ಪರಿಣಮಿಸಿದೆ. ಬೇರೆ ಯಾವ ರೀತಿ ಆರಂಭಿಸಿದ್ದರೂ ಕಾದಂಬರಿಗೆ ಈಗಿನ ಸೌಂದರ್ಯ ಬರುತ್ತಿರಲಿಲ್ಲ. ಒಳ್ಳೇ ಮೆದುಳನ್ನು ಹೊಂದಿದ್ದ ಚಿರುಕಂಡ, ಒಳ್ಳೇ ಹೃದಯವಿದ್ದ ಅಪ್ಪು ಈ ಇಬ್ಬರೂ ಈ ಕಾದಂಬರಿಯಲ್ಲಿ ಎಂದೂ ಮರೆಯಲಾರದಂಥ ಪಾತ್ರಗಳು. ಶಾಲೆಯ ಮಾಸ್ತರರು ಶಾಲೆಯ ಮುಂದೆ ನೆಟ್ಟ ಎರಡು ಮಾವಿನ ಸಸಿಗಳು ಇವರೇ. ಆ ಮಾವಿನ ಸಸಿಗಳು ಬೆಳೆದು ದೊಡ್ಡ ಮರಗಳಾಗಿ ಫಲವನ್ನಿತ್ತುವು. ನಂಬಿಯಾರರು ಆ ಫಲಕ್ಕೆ ಬಂದ ಮರಗಳನ್ನು ಕಡಿಸಿದರು. ಇತ್ತ ಸರಕಾರ ಆ ಇಬ್ಬರನ್ನೂ ನೇಣುಹಾಕಿ ಕೊಂದಿತು. ಆದರೆ ಅದರ ಫಲವನ್ನು ಉಂಡವರು ಕಯ್ಯೂರಿನ ಜನತೆ. ನಂಬಿಯಾರರು ಮರವನ್ನು ಕಡಿದೆನೆಂದು ತೃಪ್ತಿಪಟ್ಟಿಕೊಂಡರೂ ಅದರ ಫಲವನ್ನು ನಾಶಮಾಡಲಶಕ್ತರಾದರು. ಭಾರತದ ಸಹಸ್ರಾರು ಹಳ್ಳಿಗಳಲ್ಲಿ ಲಕ್ಷಗಟ್ಟಲೆ ಕೋಟಿಗಟ್ಟಲೆ ಜನ ನಡೆಸಿದ ಜನ ಜಾಗೃತಿಯ ಕ್ರಾಂತಿಯ ಫಲವನ್ನು ಇಂದು ಇಡೀ ದೇಶವೇ ಪಡೆದಿದೆ. ಬ್ರಿಟಿಷ್ ಸರಕಾರವಾಗಲಿ, ದಬ್ಬಾಳಿಕೆ ನಡೆಸುತ್ತಿದ್ದ ನಂಬಿಯಾರರಂಥ ಜಮೀನುದಾರರಾಗಲಿ ಅದನ್ನು ತಡೆಯಲಶಕ್ತರಾದರು. ಇಂಥ ಒಂದು ವಾಸ್ತವಿಕವಾದ, ಸತ್ವಯುಕ್ತವಾದ ವಸ್ತುವನ್ನು ಕಾದಂಬರಿಯಲ್ಲಿ ಯಶಸ್ವಿಯಾಗಿ ನಿರಂಜನರು ಚಿತ್ರಿಸಿದ್ದಾರೆ. ಹೇಳುವ ವಿಷಯ ಸ್ಪಷ್ಟವಾಗಿದೆ, ತಿಳಿಯಾಗಿದೆ, ತಿರುಳಿನಿಂದ ಕೂಡಿದೆ. ಕಾದಂಬರಿಗೆ ಬೇಕಿಲ್ಲದ ಯಾವ ವಿಷಯುವೂ ಇಲ್ಲಿ ಇಲ್ಲ. ಜನಜಾಗೃತಿ ನಡೆದ ರೀತಿ, ಅದು ಬೆಳೆದ ಬಗೆ, ಅದು ಫಲಿಸಿದ ಕ್ರಮ ಎಲ್ಲವೂ ಸುಸ್ಪಷ್ಟವಾಗಿವೆ. ಪಾತ್ರಗಳು ಖಚಿತವಾಗಿ ಮೂಡಿವೆ. ಅಂದಿನ ರಾಜಕೀಯ ಸ್ಥಿತಿಗತಿಗಳ ನಿರೂಪಣೆಯಲ್ಲಿ ಅತ್ಯುಕ್ತಿಯಿಲ್ಲ. "ನಿಜಾಂಶಗಳೇ ಈ ಕಾದಂಬರಿಗೆ ಅಡಿಪಾಯವಾದರೂ ಅದರ ಮೇಲೆ ನಿಂತಿರುವ ಕಟ್ಟಡವೆಲ್ಲ ನನ್ನ ಕಲ್ಪನೆಯ ಸೃಷ್ಟಿ" ಎಂದು ಕಾದಂಬರಿಕಾರರು ಹೇಳಿಕೊಂಡಿದ್ದಾರೆ. ನಿಜ, ಅವರ ಕಲ್ಪನೆಯ ಸೃಷ್ಟಿ ಕಾಲ್ಪನಿಕವಲ್ಲ ಅದು ಸಹಜ ಸತ್ಯ, ಭಾರತದ ಜನ ಜಾಗೃತಿಯ ದೇಶದ ಬಿಡುಗಡೆಯ ಚರಿತ್ರೆಯಲ್ಲಿನ ಒಂದು ಅಧ್ಯಾಯ 'ಚಿರಸ್ಮರಣೆ.'

ಸ್ವಾತಂತ್ರ್ಯ ಹೋರಾಟದ ಚಿತ್ರವೆಂದು ಕಥೆ ನೀರಸವಾಗಿಲ್ಲ. ಕಥೆಯಲ್ಲಿ ಮಧುರವಾದ ಪ್ರೇಮದ ತಿಳಿ ಹೊನಲಿದೆ, ಮಾನವಸ್ವಭಾವದ ಸಹಜ ಚಿತ್ರಣವಿದೆ, ಮನಸ್ಸನ್ನು ವ್ಯಗ್ರಗೊಳಿಸುವ ಭಯಂಕರ ಘಟನೆಯ ನಿರೂಪಣೆಯಿದೆ, ಕರುಳನ್ನು ಕೊರೆಯುವ ಕರುಣೆಯ ಕಣ್ಣೀರಿನ ಧಾರೆಯಿದೆ.

ಕೆ. ಎಸ್. ಕೆ.

***

ಎಂದೆಂದೂ ಮುಗಿಯದ ಕಥೆ—ಲೇಖಕರು : ಯು. ಆರ್. ಅನಂತಮೂರ್ತಿ ; ಸುರುಚಿ ಪ್ರಕಾಶನ, ಮೈಸೂರು ; ಪುಟಗಳು xviii + ೭೯ ; ಬೆಲೆ, ಒಂದು ರೂಪಾಯಿ.

'ಎಂದೊಂದೂ ಮುಗಿಯದ ಕಥೆ', 'ಕವಿಯ ಪೂರ್ಣಿಮೆ', 'ತಾಯಿ', 'ಪಂಜರದ ಗಿಣಿ', 'ಹುಲಿಯ ಹೆಂಗರುಳು', 'ಒಂದು ಹಿಸ್ನುಡಿ'—ಎಂಬ ಆರು ಸಣ್ಣ ಕಥೆಗಳು ಈ ಗ್ರಂಥದಲ್ಲಿವೆ. ಮೊದಲನೆಯ ಕಥೆಯ ಹೆಸರನ್ನೇ ಗ್ರಂಥಕ್ಕೆ ಇಡಲಾಗಿದೆ.

ಜೀವನದ ಪ್ರವಾಹ ನಿರರ್ಗಳವಾಗಿ ಹರಿಯುತ್ತಿದೆ. ಇದು ಎಂದಿಗೂ ಮುಗಿಯುವುದಿಲ್ಲ. ಕಾಲ ವ್ಯತ್ಯಾಸವಾದರೂ ಮಾನವಸ್ವಭಾವ ವ್ಯತ್ಯಾಸವಾಗುವುದಿಲ್ಲ. ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಎನ್ನದೆ ಸತತವಾಗಿ ಅನಂತವಾಗಿ ಒಬ್ಬರಿಂದ ಒಬ್ಬರಿಗೆ ದಾಟಿಬಂದ ಕಥೆ ಇದು. ಎಂದೆಂದಿಗೂ ಮುಗಿಯದ ಕಥೆ ಎಂಬ ತತ್ತ್ವವನ್ನು ಈ ಕಥೆಯಲ್ಲಿ ಪ್ರತಿಪಾದಿಸಲು ಪ್ರಯತ್ನಿಸಲಾಗಿದೆ. ಹಣ್ಣುಹಣ್ಣು ಮುದುಕ ಮನಸ್ಸಿನಲ್ಲಿಯೇ ಚಳಿಯನ್ನು ಕಲ್ಪಿಸಿ ನಡುಗಿ ಅಗ್ಗಿಷ್ಟಿಕೆಯಲ್ಲಿ ಮೈ ಕಾಯಿಸಿಕೊಳ್ಳುತ್ತಾ ಇರುವಂತೆ ಅವನ ಕಣ್ಣೆದುರಿಗೆ ಅದುವರೆಗಿನ ಜೀವನಚಿತ್ರಗಳು ಹಾದುಹೋಗುತ್ತವೆ. ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಎಲ್ಲರ ಸ್ವಭಾವವೂ ಒಂದೇ ರೀತಿ ನಡೆದಿದೆ ಅನ್ನಿಸುತ್ತದೆ.

ಬಹುದಿನಗಳ ಕಾಹಿಲೆಯಿಂದ ನರಳುತ್ತ ಹಾಸಿಗೆಯ ಮೇಲೆ ಉರುಳಾಡುತ್ತಿರುವ ಕವಿ ಆನಂದ ತನ್ನ ಪಾಲಿಗುಳಿದ ಜೀವನದ ಕೊನೆಯ ದಿನದಂದು ಪೂರ್ಣಿಮೆಯ ಬೆಳುದಿಂಗಳಿನ ಆನಂದವನ್ನು ಅನುಭವಿಸುತ್ತ ತನ್ನ ಕೊನೆಯ ಆಸೆಯನ್ನು ನೆನೆಯುತ್ತಾನೆ. ತನ್ನನ್ನು ಅಕ್ಕರೆಯಿಂದ ಕಾಣುತ್ತಿರುವ ಗರ್ಭಿಣಿ ಅತ್ತಿಗೆ ಸುಖವಾಗಿ ಮಗುವನ್ನು ಹಡೆಯುತ್ತಾಳೆ. ಆನಂದ ಇಲ್ಲಿ ಸತ್ತರೂ ಅಲ್ಲಿ ಪುನಃ ಹುಟ್ಟುತ್ತಾನೆ. ಈ ಸಂಸಾರದಲ್ಲಿಯೇ ಬೆಳೆಯುತ್ತಾನೆ ಎಂಬ ಕನಸು ಕವಿ ಆನಂದನದು. ಅದೇ ರೀತಿ ಅತ್ತ ಆನಂದನ ಜನನವಾಗುತ್ತದೆ; ಇತ್ತ ಕವಿ ಆನಂದ ಕಣ್ಣುಮುಚ್ಚಿರುತ್ತಾನೆ. ಜನನ ಮರಣಗಳ ನಾಟಕದ ವಾಸ್ತವಿಕತೆಯ ಕಡೆಗೆ ಓದುಗರ ಲಕ್ಷ್ಯವನ್ನು ಈ ಕಥೆ ಎಳೆಯುತ್ತದೆ.

'ತಾಯಿ' ಈ ಕಥಾಸಂಕಲನದಲ್ಲೆಲ್ಲ ಅತ್ಯುತ್ತಮವಾದ ಕಥೆ ಎನ್ನಬಹುದು. ತಾಯಿ ನಿದ್ದೆಬರದ ತನ್ನ ಮಗುವನ್ನು ತೊಟ್ಟಿಲಲ್ಲಿಟ್ಟು ತೂಗುತ್ತಿದ್ದಾಳೆ. ಪಕ್ಕದಲ್ಲಿ ಎಂಟು ವರ್ಷದ ಮುಗ್ಧ ಬಾಲಕ ಶೀನು ಮಲಗಿದ್ದಾನೆ. ತಾಯಿ ಅಬ್ಬಕ್ಕ ಮಗುವಿಗೆ ಕಥೆ ಹೇಳುತ್ತಿದ್ದಾಳೆ. ಇಡೀ ರೊಟ್ಟಿ ಬೇಕೂ ಎಂದು ಹಟಹಿಡಿದ ಮಗುವನ್ನು ಕ್ರೂರಿ ತಾಯಿ ಮನೆ ಹೊರಗೆ ಹಾಕಿ ಬಾಗಿಲು ಹಾಕಿಕೊಳ್ಳುತ್ತಾಳೆ. ಹೊರಗೆ ಕತ್ತಲು, ದುಷ್ಟ ಮೃಗಗಳ ಸಂಚಾರವುಳ್ಳ ಕಾಡು. ಮಗು ಹೆದರಿ ಅರ್ಧ ರೊಟ್ಟಿಯೇ ಸಾಕು ಎಂದು ಕಿರಿಚಿದರೂ ಬಾಗಿಲು ತೆಗೆಯಲಿಲ್ಲ ಆ ತಾಯಿ. ಪಕ್ಕದ ಬಿದಿರು ಹಿಂಡಿಲಿನಿಂದ ಬಂದ ಹುಲಿಯೊಂದು ಆ ಮಗುವನ್ನು ಕೊಂದುಹೋಯಿತು. ಶೀನುವಿಗೆ ಕಥೆಗಿಂತ ತಮ್ಮ ಮನೆ ಬಿಟ್ಟ ಹತ್ತು ವರ್ಷಗಳ ಹಿಂದೆ ಹೊರಟುಹೋದನೆಂದು ಹೇಳಲಾದ ಅಣ್ಣನ ವಿಚಾರ ತಿಳಿಯಲು ಕುತೂಹಲ. ಹನ್ನೆರಡು ವರ್ಷದ ಮಗ ಹಿಂದೆ ತನ್ನನ್ನು ಬಿಟ್ಟು ಹೋದುದರ ನೆನಪಿನಿಂದ ತಾಯಿಯ ಮನಸ್ಸಿನಲ್ಲಾದ ದುಃಖವನ್ನು ಆ ಪುಟ್ಟ ಮಗು ಏನು ತಿಳಿಯಬಲ್ಲದು. ಹುಟ್ಟುವಾಗಲೆ ಗಂಡ ತೀರಿಕೊಂಡರೂ ಹನ್ನೆರಡು ವರ್ಷಗಳ ಕಾಲ ಕೂಲಿನಾಲಿ ಮಾಡಿ ಒಬ್ಬಂಟಿಯಾಗಿ ಚೆಲುವನನ್ನು ಸಾಕಿ ಸಲಹಿದಳು. ಕೊನೆಗೆ ದೇವರಂತಹ ಮನುಷ್ಯ ಈಗಿನ ಎರಡು ಮಕ್ಕಳ ತಂದೆಯನ್ನು ಕೂಡಿಕೆ ಮಾಡಿ ಕೊಂಡಳು. ಆದರೆ ಮಗ ಇದನ್ನು ವಿರೋಧಿಸಿ ಮನೆ ಬಿಟ್ಟುಹೋದ. ಒಂದು ಕಡೆ ಮಗನ ಮೇಲಿನ ಮೋಹ. ಇನ್ನೊಂದು ಕಡೆ ಹೃದಯದ ಪ್ರೇಮದ ಕರೆ. ಈ ಎರಡರ ನಡುವೆ ಅವಳು ತೊಳಲಿದ್ದಾಳೆ. ಮಗ ಚಲುವ ಎಲ್ಲಿ ಹೋದನೋ, ಬಂದಾನೋ, ಬಾರನೋ ಎಂದು ಕನಸಿನಲ್ಲಿ ಹಲುಬುತ್ತಾಳೆ. ಅವನು ಹಿಂದಿರುಗಿ ಬಂದರೆ ಅವನಿಗೆ ಒಳ್ಳೆಯದಾದ ಏನನ್ನು ಬೇಕಾದರೂ ಮಾಡಿಯಾಳು. ತೊಟ್ಟಿಲಿನಲ್ಲಿದ್ದ ಕೂಸು ಅತ್ತು ಎಚ್ಚರವಾಗುತ್ತದೆ ಅಬ್ಬಕ್ಕನಿಗೆ; ಮಗುವಿಗೆ ಹಾಲುಕೊಡುತ್ತಾಳೆ. ಮಗುವಿನ ಮಮತೆ ಯಿಂದ ತಾಯಿಯ ಎದೆಯಿಂದ ಹಾಲು ಸುರಿಯುವಂತೆಯೇ ಅವಳ ನೊಂದ ಎದೆಯ ಕಾರಣದಿಂದ ಕಣ್ಣಿನಲ್ಲಿ ನೀರು ಸುರಿಯುತ್ತದೆ. ತಾಯಿಯ ಮನಸ್ಸಿನ ತಾಕಲಾಟದ ಚಿತ್ರವನ್ನು ರಮ್ಯಮಧುರವಾಗಿ ಲೇಖಕರು ಚಿತ್ರಿಸಿದ್ದಾರೆ. ಮಗುವನ್ನು ಹುಲಿಯ ಬಾಯಿಗೆ ನೂಕಿದ ಕ್ರೂರಿ ತಾಯಿಯ ಕಥೆಯ ಹಿನ್ನೆಲೆಯಲ್ಲಿ ಈ ತಾಯಿ ಅಬ್ಬಕ್ಕನ ಕಥೆ ಬಂದಿರುವುದು ಮಾರ್ಮಿಕವಾಗಿದೆ. ತನ್ನ ಮಗನು ಬಂದಾನೋ ಬಾರನೋ ಎಂದು ಹಲುಬುವ ಅಬ್ಬಕ್ಕನ ಕರುಣೆಯ ಕೂಗಿನಲ್ಲಿ ಕಾವ್ಯವಿದೆ.

ಈ ಕಥಾಸಂಕಲನದಲ್ಲಿ ಸುಂದರವಾದ ಯಶಸ್ವಿಯಾದ ಇನ್ನೊಂದು ಕಥೆ ಎಂದರೆ 'ಹುಲಿಯು ಹೆಂಗರುಳು.' ತುಂಗಾನದಿಯ ನೀರು ಏರುತ್ತಿರುವ ಭೀಕರ ಚಿತ್ರ ಮೊದಲು ಇಲ್ಲಿ ಬಂದಿದೆ. ದಡದಲ್ಲಿ ಪ್ರಕೃತಿಕೋಪದ ಕರಾಳಸ್ವರೂಪವನ್ನು ನೋಡುತ್ತ

ಕುಳಿತಿರುವ ಜನರ ಬಾಯಿಗೆ ಮಾತ್ರ ಕಟ್ಟಿಲ್ಲ. ಅವರ ಬಾಯೇ ಅವರ ಸ್ವಭಾವವನ್ನು ನಮ್ಮ ಮುಂದೆ ಬಿಚ್ಚಿಡುತ್ತದೆ. ನದಿಯ ನಡುವೆ ಬಂಡೆಯೊಂದರ ಮೇಲೆ ವ್ಯಕ್ತಿಯೊಂದು 'ಕಾಪಾಡಿ' ಎಂದು ಚೀರಿಡುತ್ತಿದೆ. ಆ ವ್ಯಕ್ತಿಯನ್ನು ಆ ಪ್ರವಾಹದಿಂದ ಬದುಕಿಸಲು ದೋಣಿ ತೆಗೆದುಕೊಂಡು ಹೋಗುವ ನಿಸ್ವಾರ್ಥ ವ್ಯಕ್ತಿ ಯಾರಿರುವನು! ಜಾರೆಯಾದ ಹೆಂಡತಿಯನ್ನು ಕೊಂದು ರಕ್ತಮಯವಾದ ಕತ್ತಿಯನ್ನು ಹಿಡಿದಿರುವ ಸಿದ್ದ ಸಿದ್ಧನಾಗುವನು. ಅತಿ ಪ್ರಯಾಸದಿಂದ ದೋಣಿ ತೆಗೆದುಕೊಂಡು ಬಂಡೆಯ ಬಳಿ ಹೋಗುವನು. ಉದ್ದೇಶ್ಯ ತನ್ನ ಹೆಂಡತಿಯ ಉಪಪತಿಯಾದ ಸೀನಸೆಟ್ಟಿಯನ್ನು ತೀರಿಸಿಬಿಡಬೇಕೆಂಬ ಪ್ರತೀಕಾರಬುದ್ಧಿ. ಅಲ್ಲಿ ಹೋಗಿ ನೋಡಿದರೆ ಬಂಡೆಯ ಮೇಲೆ ಬಹಳ ದೀನನಾಗಿ ನಡುಗುತ್ತ ಕುಳಿತಿರುವವನು ತನ್ನ ಶತ್ರು ಸೀನಸೆಟ್ಟಿ. 'ಇಶ್ಶಿ! ಬದುಕೇ!!' ಎಂದ. ಹೆಂಡತಿಯ ಜೀವ ತೆಗೆದುಕೊಂಡ ಕತ್ತಿ ಸಿಡಿಲಿ ಮಬ್ಬುಕತ್ತಲ ಮಳೆಯಲ್ಲಿ ಜಾರಿ ಪ್ರವಾಹದಲ್ಲಿ ಮುಳುಗಿತು. 'ಹೆಂಗರುಳಿನ ಹುಲಿ' ಸಿದ್ದನ ಮನಸ್ಸಿನಲ್ಲಿ ನಡೆಯುವ ಸೇಡು, ಆಸೆ, ಮರುಕ, ಪಶ್ಚಾತ್ತಾಪಗಳ ಚಿತ್ರ ಬಹು ಸುಂದರವಾಗಿ ಬಂದಿದೆ. ಒಂದು ಸಂದಿಗ್ಧ ಸಂದರ್ಭದಲ್ಲಿ ಹಲವಾರು ವ್ಯಕ್ತಿಗಳು ಹೇಗೆ ವ್ಯವಹರಿಸುತ್ತಾರೆಂಬುದರ ಸುಂದರ ವಾಸ್ತವ ಚಿತ್ರ ಇಲ್ಲಿದೆ. ಕೊನೆಯ ವರೆಗೂ ಕಥೆಯಲ್ಲಿ ಓದುಗರ ಮನಸ್ಸನ್ನು ಕೆರಳಿಸಿಕೊಂಡುಹೋಗುವ ಕುತೂಹಲದ ಸೆಳವು ಇದೆ. ಇಲ್ಲಿ ಬಳಸಿಕೊಂಡಿರುವ ತಂತ್ರವು ಕಥೆಗೆ ಎಲ್ಲ ರೀತಿಯಲ್ಲಿಯೂ ಸಹಾಯಕವಾಗಿದೆ.

ಕಾಮಪ್ರೇಮಗಳ ಸೆಳವಿನ ಹೋರಾಟದ ಚಿತ್ರವನ್ನು ಕೊಡಲು ಪಂಜರದ ಗಿಣಿಯಲ್ಲಿ ಪ್ರಯತ್ನಿಸಿದಂತಿದೆ. ಆದರೆ ಓದುಗನ ಮನಸ್ಸನ್ನು ಆಕರ್ಷಿಸುವಷ್ಟು ಕಥಾಪ್ರವಾಹದ ಓಟವಾಗಲಿ, ವಸ್ತುವಿನ ರಚನೆಯಾಗಲಿ ಕಂಡುಬರುವುದಿಲ್ಲ. ಹೆಚ್ಚು ಕಾವ್ಯಮಯವಾಗಲು ಹೋಗಿ ಕಥೆಯ ಸ್ವಾರಸ್ಯ ಕೈಗೆ ನಿಲುಕದಷ್ಟು ಗೂಢವಾಗಿದೆ.

ಕವಿಹೃದಯದಿಂದ ಕಾವ್ಯ ಮೂಡಿಬರುವ ರೀತಿಯನ್ನು ಸ್ವಾರಸ್ಯವಾಗಿ 'ಒಂದು ಹಿಸ್ನು ಡಿ'ಯಲ್ಲಿ ಚಿತ್ರಿಸಲಾಗಿದೆ. ಜೀವನದ ಸಮಗ್ರದರ್ಶನದಿಂದ ಕವಿಹೃದಯದಲ್ಲಿ ನಡೆಯುವ ಆನಂದದ ಅಮೃತಮಂಥನದಿಂದ ಉದಿಸುವ ಬೆಣ್ಣೆಯೇ ಕಾವ್ಯ. ಜೀವನದರ್ಶನದಿಂದ ಪುನೀತನಾದ ಕವಿ ಕಾವ್ಯನೀಡುತ್ತಾನೆ. ಕವಿಯ ಕಾವ್ಯದ ಮೂಲಕ ಸಹೃದಯ ಪುನಃ ಜೀವನದರ್ಶನ ಪಡೆಯುತ್ತಾನೆ, ತನ್ಮೂಲಕ ಚೆಲುವಿನ ದರ್ಶನ ಪಡೆಯುತ್ತಾನೆ ಎಂಬ ಸ್ವಾರಸ್ಯವಾದ ವಿಷಯವನ್ನು ಈ ಕಥೆಯಲ್ಲಿ ಕೊನೆಗೆ ತರಲಾಗಿದೆ. ಇಲ್ಲಿ ಲೇಖಕರ ಕಲ್ಪನೆ ಸುಂದರವಾಗಿರುವುದಾದರೂ ಇದು ಒಳ್ಳೆಯ ಸಣ್ಣ ಕಥೆಯಾಗಿ ಮನಸ್ಸನ್ನು ಒಲಿಸಲಾರದು.

ಇದು ಯು. ಆರ್. ಅನಂತಮೂರ್ತಿಯವರ ಪ್ರಥಮ ಪ್ರಯತ್ನವಾದರೂ

ಈ ಕಥೆಗಳ ಮೂಲಕ ಅವರ ಲೇಖನಶಕ್ತಿಯ ಅರಿವನ್ನು ಮಾಡಿಕೊಳ್ಳುವುದು ಕಷ್ಟವಲ್ಲ. ಬಹಳ ನಯವಾಗಿ, ಸರಳವಾಗಿ, ಆದರೆ ತೀವ್ರವಾಗಿ ಬರೆಯುವ ಶಕ್ತಿ ಶ್ರೀಯುತರಿಗಿದೆ ಎಂಬುದು ಇಲ್ಲಿ ನಮಗೆ ವೇದ್ಯವಾಗುತ್ತದೆ. ಕಾವ್ಯಸೌಂದರ್ಯ ವನ್ನೂ, ಭಾವಪ್ರಾಚುರ್ಯವನ್ನೂ ಸಣ್ಣ ಕಥೆಯಲ್ಲಿ ಹೇಗೆ ತರಬಹುದೆಂಬುದಕ್ಕೆ ಈ ಕಥೆಗಳೇ ಸಾಕ್ಷಿ. ಲೇಖಕರು ಹೇಳುವ ವಿಷಯ ಚಿಕ್ಕದಾದರೂ ಅದರಲ್ಲಿ ನವೀನತೆ ಮತ್ತು ಮಾರ್ಮಿಕತೆ ಎದ್ದು ಕಾಣುತ್ತದೆ. ಮಾನವಸ್ವಭಾವದ ಸೂಕ್ಷ್ಮಪರಿಶೀಲನೆ ಈ ಕಥೆಗಳ ಲೇಖಕರಿಗಿದೆಯೆಂಬುದು ಸ್ಪಷ್ಟ. ಆದುದರಿಂದಲೇ ಈ ಸಣ್ಣ ಕಥೆಗಳು ಆಕರ್ಷಕವಾಗಿರುವುದು. ಸಾಹಿತ್ಯರಚನೆಯಲ್ಲಿ ಇವರಿಗೆ ಒಳ್ಳೆಯ ಅಭಿರುಚಿ ಇರುವುದರಿಂದ ಇವರಿಂದ ಒಳ್ಳೆಯ ಕಲಾಕೃತಿಗಳನ್ನು ನಿರೀಕ್ಷಿಸಬಹುದು.

ಕೆ. ಎಸ್. ಕೆ.

*
* *

ಜ್ವಾಲಾಮುಖಿ—ಲೇಖಕರು : ಬೆಳ್ಳೂರು ರಾಮರಾವ್ ; ಪ್ರಕಾಶಕರು : ಸತ್ಯಶೋಧನ ಪುಸ್ತಕಭಂಡಾರ, ಕೋಟೆ, ಬೆಂಗಳೂರು ; ಪುಟಗಳು ೭೨ ; ಬೆಲೆ, ೧೨ ಆಣೆ.

ಶ್ರೀಮಾನ್ ಬೆಳ್ಳೂರು ರಾಮರಾಯರು ಸುಪ್ರಸಿದ್ಧ ವಿಜ್ಞಾನಿಗಳು ಮತ್ತು ಲೇಖಕರು. ಅವರ ಬರೆಹಗಳೆಲ್ಲ ಇಂಗ್ಲೀಷಿನಲ್ಲಿವೆ. ಈಗ ಎಂದರೆ ಅವರ ಪರಿಣತ ವಯಸ್ಸಿನಲ್ಲಿ ಅವರ ಗಮನ ಕನ್ನಡದಲ್ಲಿ ಬರೆಯುವ ಉದ್ಯೋಗದ ಕಡೆ ಹರಿದಿರುವುದು ಕನ್ನಡದ ಶುಭೋದಯವೆಂದೇ ಹೇಳಬೇಕು. ವಿಜ್ಞಾನದ ಅನೇಕ ಗಹನವಾದ ವಿಷಯಗಳನ್ನು ತಿಳಿಯಾದ ಕಾವ್ಯಮಯವಾದ ಭಾಷೆಯಲ್ಲಿ ಹೇಳುವುದೇ ಇವರ ಬರೆವಣಿಗೆಯ ವೈಶಿಷ್ಟ್ಯ. ತನ್ನ ಗುಟ್ಟನ್ನು ಬಿಟ್ಟುಕೊಡಲು ಪ್ರಕೃತಿ ನಿರಾಕರಿಸುತ್ತದೆ. ಆದರೆ ಮನುಷ್ಯ ಮಾತ್ರ ತನ್ನ ಹೋರಾಟವನ್ನು ಪ್ರಕೃತಿಯ ಮೇಲೆ ಸಂತತವಾಗಿ ನಡೆಸಿ ವಿಜಯಿಯಾಗಿದ್ದಾನೆ. ಮನುಷ್ಯನ ಸಾಹಸ ಕಥನ ಹಾಗೂ ಸೃಷ್ಟಿ ವೈಚಿತ್ರ್ಯದ ನಿರೂಪಣೆಯೇ ಈ ಗ್ರಂಥದ ವಸ್ತು. ಇಲ್ಲಿನ ಅನೇಕ ಕವನಗಳಲ್ಲಿ ಪ್ರಕೃತಿಯ ರುದ್ರ ರಮಣೀಯತೆ ಚೆನ್ನಾಗಿ ಪ್ರತಿಪಾದಿತವಾಗಿರುವುದರಿಂದ 'ಜ್ವಾಲಾಮುಖಿ' ಎಂಬ ಹೆಸರು ಈ ಗ್ರಂಥಕ್ಕೆ ಚೆನ್ನಾಗಿ ಒಪ್ಪುತ್ತದೆ.

ಇದರಲ್ಲಿ ೨೬ ಕವನಗಳಿವೆ. ಇವುಗಳಲ್ಲಿ ಬಹುಭಾಗ ಸೃಷ್ಟಿಯ ವೈಚಿತ್ರ್ಯವನ್ನು ವಿವರಿಸಲು ಮೀಸಲಾಗಿದ್ದರೂ, 'ಸುಂದರ ಕಾಶ್ಮೀರ್' 'ಶ್ರೀನಗರ' ಇವೇ ಮೊದಲಾದ ಕವನಗಳು ಸೃಷ್ಟಿ ಸೌಂದರ್ಯವನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸುತ್ತವೆ. 'ಇಂದಿನ ಸ್ವರ್ಗದ ಸಂದನವನವಿದು' ಎನ್ನುವಂತೆ ಕಾಶ್ಮೀರದೇಶ ಇದೆಯಂತೆ! ಸಾಲುಸಾಲಾಗಿರುವ ಹಿಮವತ್ ಪರ್ವತದ ಶಿಖರಗಳು 'ಸುಮಶರರಿಪುವಿನ ನಮಿಸುತ'

ನಡೆದಿವೆಯಂತೆ! ಸೃಷ್ಟಿವೈಚಿತ್ರ್ಯ ಸೌಂದರ್ಯ ಚಿಂತನೆಗಳ ನಡುವೆ ಕವಿಗಳು ಮಾನವ ಹೃದಯಸ್ಪರ್ಶಿಯಾದ ಭಾವಗಳ ನಿರೂಪಣೆಯನ್ನು ಮರೆತಿಲ್ಲ. 'ಅನುತಾಪ' 'ಸಮಯಾನುವರ್ತನೆ' 'ಪ್ರೇಮರೀತಿ' 'ಬಸವಿಯ ಬಾಳು' ಈ ಕವನಗಳು ಮೇಲಿನ ಜಾತಿಗೆ ಸೇರಿವೆ. 'ಕರ್ಮಯೋಗಿ' 'ಭಾರತಿಯ ಕೊರಗು' 'ಭಾರತೀಯರ ಮುನ್ನಡೆ' ಈ ಕವನಗಳಲ್ಲಿ ನಾಡತಂದೆಯಾದ ಗಾಂಧಿಯವರಲ್ಲಿ ಲೇಖಕರಿಗಿರುವ ಗೌರವವನ್ನೂ, ಉತ್ಕಟ ರಾಷ್ಟ್ರಾಭಿಮಾನವನ್ನೂ ಕಾಣಬಹುದಾಗಿದೆ. ಈ ಕವನಗಳು ಯಾರ ಮನಸ್ಸನ್ನಾದರೂ ಸೆಳೆದಾವು. ಸ್ಥಳಾಭಾವದಿಂದ ಇವುಗಳ ಸ್ವಾರಸ್ಯವನ್ನು ತೋರಿಸಲು ಸಾಧ್ಯವಾಗಿಲ್ಲ.

ಗ್ರಂಥದ ಕೊನೆಯಲ್ಲಿ ಕೊಟ್ಟಿರುವ ಪರಿಶಿಷ್ಟ ತುಂಬ ಉಪಯುಕ್ತವಾಗಿದೆ. ಅದರಲ್ಲಿ ಕವನದ ಸಂದರ್ಭವನ್ನೂ ಕವನ ಕಟ್ಟಲು ಉಪಯೋಗಿಸಿರುವ ಛಂದಸ್ಸನ್ನೂ ಸೂಚಿಸಲಾಗಿದೆ. ಕವಿಗಳ ಒಲವು ಷಟ್ಪದಿ ಅದರಲ್ಲೂ ವಿಶೇಷವಾಗಿ ಶರಷಟ್ಪದಿ, ಚೌಪದಿಗಳ ಕಡೆಗೆ ಒಲಿದಿದೆ. ಆಳವಾದ ಅನುಭವಪೂರ್ಣವಾದ ಕವನಗಳನ್ನು ರಚಿಸಿ ಕವಿಗಳು ಭಾಷಾಋಣವನ್ನು ನೀಗಿ ಧನ್ಯರಾಗಿದ್ದಾರೆ. ಅವರ ಮುಂದಿನ ಕವನ ಸಂಗ್ರಹವನ್ನು ಕುತೂಹಲದಿಂದ ನಿರೀಕ್ಷಿಸುತ್ತಿದ್ದೇವೆ.

ಸಾಹಿತ್ಯಪ್ರಿಯ

*
* *

ತ್ಯಾಗ—ಲೇಖಕರು: ಕುಮುದ; ಪ್ರಕಾಶಕರು: ಜಿ. ಗುಂಡಣ್ಣ, ಎಂ.ಎ.; ಇಂಟರ್ ಮೀಡಿಯೆಟ್ ಕಾಲೇಜು, ಮಂಡ್ಯ; ಪುಟ ೧೫೦; ಬೆಲೆ, ರೂ. ೧-೪-೦.

ಇದು ಕಾದಂಬರಿಗಳ ಸಂತೆಯ ಕಾಲ. ನೂರಾರು ಬಗೆಯಲ್ಲಿ, ನೂರಾರು ಬಣ್ಣದಲ್ಲಿ, ಕಾದಂಬರಿಗಳ ಮೊಹರಂ ಸಾಗಿದೆ: ಇವುಗಳಲ್ಲಿ ಜಳ್ಳೆಷ್ಟು ಗಟ್ಟಿಯೆಷ್ಟು ಎಂಬುದನ್ನು ನಿರ್ಣಯಿಸಲು ಇದು ಸಕಾಲವಲ್ಲವಾದರೂ, ಇವುಗಳಲ್ಲಿ ಜನಮನವನ್ನು ಸುಲಭವಾಗಿ ಸೆಳೆಯಬಲ್ಲ ಪ್ರಣಯ ಪ್ರಸಂಗಾತ್ಮಕವಾದ ಕಾದಂಬರಿಗಳೇ ಹೆಚ್ಚು ಎನ್ನುವುದಂತೂ ನಿರ್ವಿವಾದವಾದ ವಿಷಯ. ಪರಿಸ್ಥಿತಿ ಹೀಗಿರುವಾಗ ಪ್ರಣಯದ ಆದರ್ಶವನ್ನು ಕುರಿತು ಯಾರಾದರೂ ಗಂಭೀರವಾದ ಕೃತಿಯನ್ನು ಬರೆದರೆ, ಸಹಜವಾಗಿ ಜನತೆ ಅಂತಹ ಕೃತಿಯನ್ನು ಮೊದಲು ಸ್ವಾಗತಿಸಬೇಕು. ಈಗ ತಾನೇ ಪ್ರಕಟವಾಗಿರುವ ಶ್ರೀಮಾನ್ ಜಿ. ಗುಂಡಣ್ಣನವರ ಪ್ರಥಮ ಕಿರುಕಾದಂಬರಿ, ಆ ಬಗೆಯ ಆದರ್ಶಪ್ರಣಯವನ್ನು ಚಿತ್ರಿಸುವ ಕೃತಿ.

ಹೌದು, ಇದೊಂದು ಆದರ್ಶಪ್ರಣಯದ ಕಥೆ. "ಆದರ್ಶಪ್ರೇಮಕ್ಕೆ ತನುವಿನ ಹಂಬಲವೇಕೆ?" (ಪು. ೧೩೭) "ಸತಿಪತಿಗಳಾಗುವುದರಿಂದ ಬರುವ ಹಿರಿಮೆ

ಯೇನು? ಅಣ್ಣತಂಗಿಯರಾಗುವುದರಿಂದ ಬರುವ ಕಿರಿಮೆಯೇನು?" (ಪು. ೧೩೭) ಎಂಬ ವಿಚಾರದ ಜಿಜ್ಞಾಸೆ ಇದರಲ್ಲಿದೆ.

ಚಂದ್ರಣ್ಣ ಲಲಿತೆಯರ ಪ್ರೀತಿ ಬಾಲ್ಯದಿಂದಲೂ ಅಂಕುರಿಸಿ, ಪಲ್ಲವಿಸಿ, ಹೂವಾದುದು. ಲಲಿತೆಯ ತಂದೆಯಾದ ಶ್ಯಾಮಯ್ಯನವರು ತಮ್ಮ ನಂಟನಾದ ಜಯರಾಮುವಿಗೆ ಲಲಿತೆಯನ್ನು ಕೊಡಲು ನಿಶ್ಚಯಿಸಿ, ಲಲಿತೆಯಿಂದ ಭಾಷೆಯನ್ನು ತೆಗೆದುಕೊಂಡಾಗ, ಚಂದ್ರಣ್ಣ ತನ್ನ ಹೃದಯದ ತಳಮಳವನ್ನು ಅಡಗಿಸಿಕೊಂಡು ಲಲಿತೆಯನ್ನು ಜಯರಾಮನಿಗಾಗಿ ತ್ಯಾಗಮಾಡಿ, ಲಲಿತೆಯ ಬಗ್ಗೆ ಸೋದರ ವಾತ್ಸಲ್ಯವನ್ನು ಬೆಳೆಸಿಕೊಳ್ಳುತ್ತಾನೆ. ಇದಿಷ್ಟೆ ಇದರ ಕಥೆ.

ಈ ಕಾದಂಬರಿಯನ್ನು ಓದುತ್ತಾ ಹೋದಂತೆ, ಮತ್ತು ಓದಿ ಮುಗಿಸಿದ ನಂತರ ಇದರ ಕಥನರೀತಿ ಯಾವ ವೈವಿಧ್ಯದಿಂದಲೂ ಕೂಡಿರದೆ, ಹಿಂದೆ ಎಂದೋ ಒಮ್ಮೆ ಬರುತ್ತಿದ್ದ ಕಾದಂಬರಿಯ ರೀತಿಯನ್ನು ನೆನಪಿಗೆ ತರುತ್ತದೆ. ಈ ಕಥೆಯ ಆರಂಭ ಹೀಗೆ: "ಅನಂತಪುರದ ನೈರುತ್ಯಕ್ಕೆ ಉತ್ತರಪಿನಾಕಿನಿ ನದಿಯ ಪೂರ್ವಕ್ಕೆ ಗೌರೀ ಹಳ್ಳಿ ಎಂಬುದು ಒಂದು ಸಣ್ಣ ಊರು (ಪು. ೧)" ರತ್ನಯ್ಯನೆಂಬವರು ಅಲ್ಲಿಯ ಸುತ್ತಮುತ್ತಣ ಹಳ್ಳಿಗೆಲ್ಲಾ ಪ್ರಸಿದ್ಧರು . . . ಜನ್ಮತಃ ಸತ್ಪುರುಷರಾದ ಅವರಿಗೆ ಎರಡನೆಯ ಸೀತಾದೇವಿಯೆಂಬಂತಹ ಧರ್ಮಪತ್ನಿ ದೊರಕಿದ್ದರು . . . ಅವರೇ ಗೌರಮ್ಮನವರು. ರತ್ನಯ್ಯ ಗೌರಮ್ಮನವರಿಗೆ ಬಹುಕಾಲ ಮಕ್ಕಳಾಗಲಿಲ್ಲ . . . ಪತ್ನಿಯಲ್ಲಿ ಪರಮಪ್ರೇಮವನ್ನಿಟ್ಟಿದ್ದ ರತ್ನಯ್ಯನವರು ತಮಗೆ ತಿಳಿದ ದೇವರುಗಳಿಗೆಲ್ಲಾ ಪೂಜೆಮಾಡಿಸಿಕೊಂಡು ಬಂದರು . . . ಕೊನೆಗೆ ದೇವರು ಆ ಆದರ್ಶ ದಂಪತಿಗಳ ಪ್ರಾರ್ಥನೆಗೆ ಓಗೊಟ್ಟನು . . . ಅವರಿಗೆ ಒಂದು ಗಂಡು ಕೂಸಾಯಿತು. ಆ ಮಗುವು ತಾಯಿತಂದೆಗಳ ರೂಪುತೇಜಸ್ಸುಗಳನ್ನು ಪಡೆದು ಹೊಳೆಯುತ್ತಿದ್ದುದರಿಂದ ಚಂದ್ರಣ್ಣನೆಂದೇ ನಾಮಕರಣ ಮಾಡಿದರು" (ಪು. ೧-೨) ಹೀಗೆ ಕಥಾನಾಯಕನ ಪರಿಚಯದಿಂದ ಮೊದಲಾದ ಈ ಕೃತಿ ಅಲ್ಲಲ್ಲಿ "ಅದಿರಲಿ ಈ ಕಥೆಗೆ ವಸ್ತುವಾದ ಚಂದ್ರಣ್ಣ ಲಲಿತೆಯರ ಪ್ರೇಮದ ಬೆಳವಣಿಗೆಯನ್ನು ನಾವಿನ್ನು ನೋಡಬಹುದು" (ಪು. ೮). "ಎಲೈ ಮಾನವನೆದೆಯ ಹುಚ್ಚು ಹಾರೈಕೆಯೇ ತಾಂಡವನಂತೆ ನೀನು ಕುಣಿದರೇನು" (ಪು. ೧೦೮) ಎಂಬ ವ್ಯಾಖ್ಯಾನಗಳೊಡನೆ ಮುಂದುವರಿಯುತ್ತದೆ. ಕಥನರೀತಿಯಲ್ಲಿ ಹಳೆಯ ಕಾಲದ ಮುತ್ತೈದೆಯ ಸಾಂಪ್ರದಾಯಿಕ ಗತಿಯಿದೆ.

ಇಲ್ಲಿ ಬರುವ ಹಲವಾರು ವರ್ಣನೆಗಳು ಹಲವು ಸಲ ಅತ್ಯಂತ ಕಾವ್ಯಮಯವಾಗಿ ಆಹ್ಲಾದಕಾರಿಯಾಗಿವೆ. ಕಾದಂಬರಿಯ ನಾಯಕನಾದ ಚಂದ್ರಣ್ಣನನ್ನು ವರ್ಣಿಸುತ್ತ "ಆತನು ಕವಿಯಂತೆ ರಸಿಕಹೃದಯನಾಗಿದ್ದರೂ ಋಷಿಯಂತೆ ಸಂಯಮಿಯಾಗಿದ್ದನು.

ಮನ್ಮಥನಂತೆ ಸುಂದರವಾಗಿದ್ದರೂ ಶಿವನಂತೆ ಆತ್ಮವೈಭವವುಳ್ಳವನೂ ಆಗಿದ್ದನು (ಪು. ೩೨) ಎಂದೂ, ಲಲಿತೆ ಯೌವನವತಿಯಾದಾಗ "ಶರತ್ಕಾಲದ ನೀಲಾಕಾಶದಲ್ಲಿ ಹೊಂಜೊನ್ನದಲ್ಲಿ ಮಿಂದ ಮುಗಿಲರಾಶಿಯ ನಡುವೆ ಷೋಡಶ ಕಲೆಗಳಿಂದ ರಾರಾಜಿಸುವ ಪೂರ್ಣಿಮೆಯ ಚಂದ್ರಮಂಡಲವೋ? ಹೇಮಂತ ಋತುವಿನಲ್ಲಿ ತೆಳ್ಳಗೆ ಮುಸುಕಿದ ಮಂಜಿನ ದಿಗಂತದಲ್ಲಿ ಬೆಳ್ಳಗೆ ಮೂಡಿಬರುವ ತಂಪಾದ ಸೂರ್ಯಮಂಡಲವೋ (ಪು. ೧೦೫) ಎಂದೂ ವರ್ಣಿಸಿದಾಗ, ಇದೇನು ಹಳೆಯ ಕಾಲದ ಕಾವ್ಯದಲ್ಲಿ ಬರುವ ರಾಜ-ರಾಣಿಯರ ವರ್ಣನೆಯೋ, ಅಥವಾ ಹಳ್ಳಿಯ ತರುಣತರುಣಿಯರಾದ ಚಂದ್ರಣ್ಣ ಲಲಿತೆಯರ ವರ್ಣನೆಯ ರೀತಿಯೋ—ಎನ್ನಿಸುತ್ತದೆ. ಇಲ್ಲಿ ಹೀಗೆ ಬರುವ ಇನ್ನೂ ಹಲವು ವರ್ಣನೆಗಳು ಹಳಗನ್ನಡ ಕಾವ್ಯಾಭ್ಯಾಸದಿಂದ ಸಿದ್ಧವಾದಂತೆ ತೋರುತ್ತವೆ.

ಇಲ್ಲಿ ಚಿತ್ರಿತವಾಗಿರುವುದು ಗೌರೀಹಳ್ಳಿಯ ಬದುಕು. ಇಲ್ಲಿನ ಸಂಭಾಷಣೆಯ ರೀತಿಯನ್ನು ನೋಡಿದರೆ, ಅದು ವಾಸ್ತವವಾಗಿರದೆ ಕೃತಕವಾಗಿದೆ ಎನಿಸುತ್ತದೆ. ವಾಚಕರೇ ಹಲವು ಉದಾಹರಣೆಗಳನ್ನು ಗಮನಿಸಬಹುದು—ಕಾಲೇಜು ವಿದ್ಯಾರ್ಥಿಯಾದ ಚಂದ್ರಣ್ಣನು ಮತ್ತೊಬ್ಬ ವಿದ್ಯಾರ್ಥಿಯಾದ ಜಯರಾಮುವನ್ನು ಸ್ವಾಗತಿಸುತ್ತ "ಬನ್ನಿ ಸ್ನೇಹಿತರೆ, ನೀವಾರು ಸ್ವಾಮಿ? ನಿಮಗೇನು ಬೇಕು? ಒಳಗೆ ಬನ್ನಿ" (ಪು. ೨೬) ಹೀಗೆ ಮಾತನಾಡುತ್ತಾನೆ. ಗೌರಮ್ಮನವರು ಲಲಿತೆಯನ್ನು ಕುರಿತು "ಬಾ ಅಮ್ಮಾ, ಬಾತಾಯೀ, ಕುಳಿತುಕೋ" (ಪು. ೨೭) ಎನ್ನುತ್ತಾರೆ. ಚಂದ್ರಣ್ಣನು ಲಲಿತೆಯನ್ನು ಸಂಧಿಸಿದಾಗ "ಲಲಿತಾ, ನನ್ನ ಹೃದಯೇಶ್ವರೀ ನನ್ನ ಬಾಳಿನ ಬೆಳಕೇ! ನನ್ನ ಜೀವನದ ಪೂರ್ಣತೆಯೇ: ನನ್ನ ಆದರ್ಶದೇವತೆಯೇ! ನಿನ್ನ ಪಾದರೇಣುವೊಂದು ಈ ದೀನನ ಹಣೆಗೆ ಹತ್ತಿದರೆ ನನ್ನ ಜನ್ಮವು ಸಾರ್ಥಕವಾಗುವುದೆಂದು ತಿಳಿದಿದ್ದೇನೆ. ಇನ್ನು ಈ ನಿನ್ನ ಶರೀರಸ್ವರ್ಗವನ್ನು ನನಗೊಪ್ಪಿಸುವೆಯಾ ದೇವೀ ಹಾಗಾದರೆ ಈ ಭೂಮಿಯಲ್ಲಿ ನನಗಿಂತ ಧನ್ಯರಿಲ್ಲ!" ಎಂದು ಉದ್ಗಾರ ತೆಗೆಯುತ್ತಾನೆ. ಯಾವ ಹಳ್ಳಿಯ ಸಮಾಜದಲ್ಲಿ—ಕಡೆಗೆ ನಾಗರಿಕ ನಗರದಲ್ಲಿ—ಜನ ಈ ರೀತಿ ಇಷ್ಟು ವ್ಯಾಕರಣಬದ್ಧವಾಗಿ ನಾಟಕದ ಪಾತ್ರಗಳಂತೆ ಮಾತನಾಡುತ್ತಾರೆ?

ಇಲ್ಲಿನ ಪಾತ್ರಗಳನ್ನು, ಲೇಖಕರ ಶೈಲಿಯಲ್ಲೇ ಪರಿಚಯ ಮಾಡಿಕೊಡುವುದಾದರೆ—ಚಂದ್ರಣ್ಣನು "ಕವಿಯಂತೆ ರಸಿಹ ಹೃದಯನಾಗಿದ್ದರೂ ಋಷಿಯಂತೆ ಸಂಯಮಿ. . . ಮನ್ಮಥನಂತೆ ಸುಂದರನಾಗಿದ್ದರೂ ಶಿವನಂತೆ ಆತ್ಮವೈಭವ ಉಳ್ಳವನು" (ಪು. ೩೨) ಗೌರಮ್ಮನವರು "ಎರಡನೆಯ ಸೀತಾದೇವಿ" (ಪು. ೨) ರತ್ನಯ್ಯನವರು "ಜನ್ಮತಃ ಸತ್ಪುರುಷರು" ಚಿನ್ನಯ್ಯ "ಮುಗ್ಧಸ್ವಭಾವದವನು ಅಣ್ಣನಲ್ಲಿ ಪಿತೃಭಕ್ತಿಯನಿಟ್ಟಿದ್ದವನು" (ಪು. ೪) "ಭಕ್ತಿವಿನಯಗಳಿಂದ ತಲೆಬಾಗಿಸಿ ನೆಲವನ್ನು

ನೋಡುತ್ತ ಉತ್ತರ ಕೊಡುತ್ತಿದ್ದನು" (ಪು. ೧೨೪)—ಹೀಗೆ ಇಲ್ಲಿನ ಪಾತ್ರಗಳೆಲ್ಲವೂ ಆದರ್ಶದಲ್ಲಿ ಅದ್ದಿ ತೆಗೆದಂತೆ ತೋರುವುದರ ಜೊತೆಗೆ, ಆಧುನಿಕ ವೇಷದ ಪೌರಾಣಿಕ ಪಾತ್ರಗಳೋ ಎನ್ನಿಸುತ್ತವೆ.

ಈ ಕಥೆಯಲ್ಲಿ ಚಂದ್ರಣ್ಣ ಲಲಿತೆಯ ಪ್ರೇಮಕ್ಕೆ ಅಡ್ಡಬಂದು ಅದರ ಹಾದಿಯನ್ನೇ ಬದಲಾಯಿಸಲು ಕಾರಣರಾದ ಶ್ಯಾಮಯ್ಯನವರ ಮನಸ್ಸಿನ ತರ್ಕ ಅಷ್ಟು ಸಕಾರಣವಾಗಿಲ್ಲವೆಂದು ಭಾಸವಾಗುತ್ತದೆ. "ಪ್ರೇಮಪೂಜೆ" ಎನ್ನುವ ಅಧ್ಯಾಯವಂತೂ ಶ್ರೀ ಕುವೆಂಪು ಅವರ "ಕಾನೂರು ಸುಬ್ಬಮ್ಮ ಹೆಗ್ಗಡಿತಿ"ಯಲ್ಲಿ ಬರುವ ಹೂವಯ್ಯ-ಸೀತೆಯರ ಸಮಾಗಮದ ಚಿತ್ರವನ್ನು ಅನಿವಾರ್ಯವಾಗಿ ನೆನಪಿಗೆ ತರುತ್ತದೆ. ಈ ಅಧ್ಯಾಯದ ಕಡೆಯಲ್ಲಿ ಕಾಣುವ ಚಂದ್ರಣ್ಣ-ಲಲಿತೆಯರ ಸಮಾಗಮ ಅತ್ಯಂತ ಕೃತಕವಾಗಿದೆ ಎಂದು ಹೇಳದೆ ವಿಧಿಯಿಲ್ಲ. ಈ ಪುಸ್ತಕದಲ್ಲಿ ತುಂಬ ಸೊಗಸಾದ ಅಧ್ಯಾಯವೆಂದರೆ "ನೆನಪಮೃತವಾಗುವುದು" ಎಂಬುದು. ಪ್ರತಿಯೊಂದು ಅಧ್ಯಾಯಕ್ಕೆ ಕೊಟ್ಟಿರುವ ಶೀರ್ಷಿಕೆಗಳು ಬಲು ಸೊಗಸಾಗಿವೆ. ಅಲ್ಲಲ್ಲಿ ಬರುವ ಸುಂದರ ಕವನಪಂಕ್ತಿಗಳಿಂದ, ಮನೋಹರವಾದ ವರ್ಣನೆಗಳಿಂದ, ತೀವ್ರಗತಿಯಿಂದ ಸಾಗುವ ಕಥಾಸರಣಿಯಿಂದ ಈ ಕೃತಿ ಓದುಗರ ಮನವನ್ನು ಒಲಿಸಿಕೊಳ್ಳುತ್ತದೆ.

ಇದು ಒಂದು ಪ್ರಣಯಕಥೆ, ಗೌರೀಹಳ್ಳಿಯಲ್ಲಿ ನಡೆದ ಪ್ರಸಂಗ. ಆದರೆ ಇದರಲ್ಲಿ ಬರುವ ಯಾವ ಪಾತ್ರವಾಗಲಿ, ಸನ್ನಿವೇಶಗಳಾಗಲೀ, ನಮ್ಮ ಹಳ್ಳಿಯ ಜೀವನವನ್ನು ಬಿಂಬಿಸದೆ ಎಲ್ಲೋ ಮೇಲೆದ್ದು ದೂರ ನಿಂತಂತೆ ತೋರುತ್ತವೆ. ಹಳ್ಳಿಯ ಜನಜೀವನದ ಚಿತ್ರವಾಗಲೀ—ಅಲ್ಲಿನ ಹೊಲಗದ್ದೆಗಳ ವರ್ಣನೆಯಾಗಲೀ ನಮಗೆ ಇಲ್ಲಿ ದೊರೆಯದು. ನಡೆಯಲ್ಲಾಗಲೀ-ನುಡಿಯಲ್ಲಾಗಲೀ ಹಳ್ಳಿಯ ಜೀವನವನ್ನು ಹೋಲದ ಇದರಲ್ಲಿ ವಾಸ್ತವ ಮತ್ತು ಆದರ್ಶಗಳ ಸಮನ್ವಯ ಕಾಣಿಸದಿರುವುದು ಆಶ್ಚರ್ಯವೇನಲ್ಲ. ಆದರ್ಶವನ್ನು ಚಿತ್ರಿಸಬೇಕು; ನಿಜ. ಆದರೆ ಅದು ಆದರ್ಶಕ್ಕಾಗಿ ವಾಸ್ತವವನ್ನು ಬಲಿಗೊಡಬೇಕಾಗಿಲ್ಲ. ವಾಸ್ತವವನ್ನೇ ಆದರ್ಶವನ್ನಾಗಿ ಪರಿವರ್ತಿಸಿದ ಚಿತ್ರಣ ತುಂಬ ಪ್ರಭಾವಶಾಲಿಯಾಗಿರುತ್ತದೆ. ಆಂಗ್ಲ ಲೇಖಕ ಅಬರ್ ಕ್ರಾಂಬಿ ಎನ್ನುವವನು ಹೇಳುವಂತೆ, ಒಂದು ಕೃತಿ "It need not decline the actual in order to be ideal"—ಎಂಬ ಮಾತನ್ನು ಗಮನಿಸಬೇಕು.

ಇಂದು ಬರುತ್ತಿರುವ ಸಾಮಾನ್ಯ ಕಾದಂಬರಿಗಳಿಂದ ಅನ್ಯವಾಗಿರುವುದೇ ಇದರ ವೈಶಿಷ್ಟ್ಯ. ಇದು ಇನ್ನೂ ಆದಷ್ಟು ವಾಸ್ತವಿಕತೆಯನ್ನು ಮರೆಯದ ರೀತಿ ಚಿತ್ರಿತವಾಗಿದ್ದರೆ ಆದರ್ಶ ಜೀವನಚಿತ್ರಗಳಲ್ಲಿ ಇದೂ ಒಂದು ಮೈಲಿಕಲ್ಲಾಗುತ್ತಿತ್ತು. ಆದರೂ, ಕಾದಂಬರಿಗಳೆಂದರೆ ಅಗ್ಗದ ಪ್ರಣಯ ಕಥೆಯಿಂದ ತುಂಬಿರಬೇಕಾಗಿಲ್ಲ.

ಇಂತಹ ಆದರ್ಶ ಭಾವಗಳನ್ನು ಜನತೆಯ ಮುಂದಿಟ್ಟು ಅವರ ವಿಕಾಸಕ್ಕೆ, ಉದ್ಧಾರಕ್ಕೆ ನೆರವಾಗಬೇಕು ಎನ್ನುವ ಒಂದು ಉತ್ತಮ ಹಾರೈಕೆಯನ್ನೂ, ಶ್ರದ್ಧೆಯನ್ನೂ ಓದುಗರು ಈ ಕೃತಿಯಲ್ಲಿ ಗುರುತಿಸದಿರರು. ಮುಂದಿನ ಕೃತಿಗಳಲ್ಲಿ ಗುಂಡಣ್ಣನವರ ಕಲಾಪ್ರತಿಭೆ 'ವಾಸ್ತವ-ಆದರ್ಶ'ಗಳ ಸಮನ್ವಯವನ್ನು ಸಾಧಿಸಿ ಹಿರಿಯತನವನ್ನು ಪಡೆಯಲಿ ಎಂದು ಹಾರೈಸುತ್ತೇನೆ.

ಜಿ. ಎಸ್. ಶಿವರುದ್ರಪ್ಪ.

*
* *

ಸನಾತನ ಭಾರತ (ಮಹಾಕಾವ್ಯದಲ್ಲಿ ಮತ್ತು ಮಹಾವ್ಯಕ್ತಿಗಳಲ್ಲಿ)—ಮೂಲಕರ್ತೃಗಳು: ಸ್ವಾಮಿ ವಿವೇಕಾನಂದ; ಪ್ರಕಾಶಕರು: ಶ್ರೀ ರಾಮಕೃಷ್ಣಾಶ್ರಮ, ಮೈಸೂರು; ಪುಟಗಳು ೧೪೬; ಬೆಲೆ, ರೂ. ೧-೦-೦.

ಪ್ರಾಚ್ಯ ಪಾಶ್ಚಾತ್ಯ ದೇಶಗಳಲ್ಲಿ ಸನಾತನ ಭಾರತದ ದಿವ್ಯ ಸಂದೇಶವನ್ನು ಸಾರಿದ ಜ್ಯೋತಿಪುರುಷರೆ ಸ್ವಾಮಿ ವಿವೇಕಾನಂದರು. ಅವರ ಅಪ್ರತಿಮಶಕ್ತಿಯ ಪ್ರತೀಕವಾಗಿದೆ ಅವರ ಶೈಲಿ. ಆ ಮಹಾಪುರುಷರ ಕೆಲವು ಉಪನ್ಯಾಸಗಳನ್ನು ಈ ಪುಸ್ತಕದಲ್ಲಿ ಸಂಗ್ರಹಿಸಿದ್ದಾರೆ. ರಾಮಾಯಣ, ಮಹಾಭಾರತ, ಗೀತಾವಿಚಾರ, ಜಡಭರತ, ಪ್ರಹ್ಲಾದ, ಪ್ರಪಂಚದ ಮಹಾಗುರುಗಳು, ಭಗವಾನ್ ಬುದ್ಧ, ಜಗತ್ತಿಗೆ ಬುದ್ಧನ ಸಂದೇಶ, ಬಾಲಗೋಪಾಲ, ಹಿಂದೂಧರ್ಮದ ತೂರ್ಯವಾಣಿ—ಈ ಹತ್ತು ಉಪನ್ಯಾಸಗಳು ಈ ಪುಸ್ತಕದಲ್ಲಿ ಪ್ರಕಟವಾಗಿವೆ.

ರಾಮಾಯಣ ಮಹಾಭಾರತಗಳೆಂಬ ಎರಡು ಮಹಾಕಾವ್ಯಗಳು ಪ್ರಾಚೀನ ಆರ್ಯರ ಜೀವನ ಮತ್ತು ಧರ್ಮವನ್ನು ವಿವರಿಸುವ ವಿಶ್ವಕೋಶಗಳಾಗಿವೆ. ಮಾನವಕೋಟಿ ಸಾಧಿಸಬೇಕಾದ ದಿವ್ಯ ಆದರ್ಶಗಳನ್ನು ಈ ಕಾವ್ಯಗಳು ಚಿತ್ರಿಸುತ್ತವೆ. ಈ ತತ್ತ್ವವನ್ನು ಹೃದಯಕ್ಕೆ ಗೋಚರಿಸುವಂತೆ ಮೊದಲ ಎರಡು ಉಪನ್ಯಾಸಗಳಲ್ಲಿ ಸ್ವಾಮಿಜಿ ಸಾರಿದ್ದಾರೆ.

ಜೀವನದ ಸಮಸ್ಯೆಗಳನ್ನು ಎದುರಿಸುವಾಗ ಮುಮುಕ್ಷುವಿನ ಅಂತರಾಳದಲ್ಲಿ ಭಯಂಕರ ಹೋರಾಟ ನಡೆಯುತ್ತದೆ. ಅರ್ಜುನ, ಅಂತಹ ಮುಮುಕ್ಷುವಿನ ಪ್ರತೀಕವಾಗಿದ್ದಾನೆ. ಭಗವಾನ್ ಶ್ರೀಕೃಷ್ಣನ ಸಂದೇಶ ಕೇವಲ ಅರ್ಜುನನನ್ನು ಕುರಿತದ್ದಲ್ಲ. ಸಾಧಕರಾದ ಎಲ್ಲ ನರರಿಗೂ ಹೇಳಿದ ಮಾತು. ಕರ್ಮ ಭಕ್ತಿ ಜ್ಞಾನ ಈ ಎಲ್ಲ ಮಾರ್ಗಗಳನ್ನೊಳಗೊಂಡ ಪೂರ್ಣದೃಷ್ಟಿಯನ್ನು ಸಾರುತ್ತದೆ ಗೀತೆ. "ಕ್ಲೈಬ್ಯವನು ಬಿಡು, ಹೃದಯ ದೌರ್ಬಲ್ಯವನು ತೊರೆದು ಮೇಲೇಳು"—ಎಂಬುದೇ ಪ್ರಚಂಡ ಆಶಾವಾದವನ್ನು ಸಾರುವ ಗೀತೆಯ ಸಂದೇಶ. ಈ ಚಿಕ್ಕ ಉಪನ್ಯಾಸದಲ್ಲಿ ಗೀತೆಯ ತಿರುಳೇನು—ಎಂಬುದನ್ನು ಜಿಜ್ಞಾಸೆ ಮಾಡಿದ್ದಾರೆ ಸ್ವಾಮಿಜಿ.

ಅನುಭಾವಿಯಾದ ಜಡಭರತ, ಭಕ್ತವರೇಣ್ಯ ಪ್ರಹ್ಲಾದ ಇವರಿಬ್ಬರೂ ಭಗವದ್ ರೀತಿಯಲ್ಲಿ ಬದುಕುವುದು ಹೇಗೆಂಬುದನ್ನು ತೋರಿದ್ದಾರೆ. ಪ್ರಪಂಚದ ಮಹಾ ಗುರುಗಳೆಲ್ಲರೂ ದಿವ್ಯಫಲಗಳನ್ನು ನೀಡಿದ್ದಾರೆ. ಆದರೆ ಇಂದು ನಮ್ಮ ಸಂಕುಚಿತ ಮನೋಭಾವಗಳಿಂದ 'ನಮ್ಮ ಗುರು ದೊಡ್ಡವ, ನಮ್ಮ ಗುರು ದೊಡ್ಡವ' ಎಂದು ಹೋರಾಡುತ್ತೇವೆ. ಇದನ್ನು ವೀಕ್ಷಿಸಿದರೆ—ಈ ಹೋರಾಟ ಬರೀ ಕುಕ್ಕೆಗಾಗಿ ಎಂದೆನಿಸುತ್ತದೆ! ಏಕೆಂದರೆ ಈ ಹೋರಾಟದಿಂದ ಅದರಲ್ಲಿರುವ ದಿವ್ಯಫಲಗಳು ಎಲ್ಲೋ ಚದುರಿಹೋಗಿವೆ! ಲೋಕಗುರುಗಳನ್ನೆಲ್ಲ ಗೌರವಿಸಿ ಅವರಿಂದ ಬದುಕನ್ನು ನಿರ್ಮಲ ಗೊಳಿಸುವ ಹಾಗೂ ಪೂರ್ಣಗೊಳಿಸುವ ವಿಶಾಲಮನೋಭಾವ ಬೆಳೆದು ಬದುಕು ಸುಸಂಸ್ಕೃತವಾಗಬೇಕು.

ಭಗವಾನ್ ಬುದ್ಧನ ದಿವ್ಯಪ್ರಭಾವ ವಿಶ್ವವನ್ನೆ ಆವರಿಸಿದೆ. ಅವನ ಅಪಾರ ತ್ಯಾಗ, ಅನನ್ಯಪ್ರೇಮ ಎಂತಹ ಬರಡು ಹೃದಯದಲ್ಲಾದರೂ ಭಕ್ತಿಯ ಕುಡಿಯನ್ನು ಹೊಮ್ಮಿಸದಿರದು. ತನ್ನ ಮುಕ್ತಿ ಮಾತ್ರ ಅವನ ಜೀವನದ ಗುರಿಯಾಗಲಿಲ್ಲ; ಜಗತ್ತಿನ ದುಃಖದಾರಿದ್ರ್ಯಗಳನ್ನು ಪರಿಹರಿಸುವುದೆ ಅವನ ಜೀವನಸೂತ್ರವಾಯಿತು. ಅವನ ಭವ್ಯ ಜೀವನದೆದುರು ಸ್ವಾರ್ಥ, ಅಹಂಕಾರ, ಲೋಭ, ಸಂಕುಚಿತಮನೋ ಭಾವ ಇವೆಲ್ಲವೂ ಎಷ್ಟು ಕ್ಷುದ್ರವಾಗಿ ಕಾಣುತ್ತವೆ!

ಶ್ರದ್ಧೆ ಭಕ್ತಿ ವಿಶ್ವಾಸ ಇವು ಹೇಗೆ ಮಾನವನನ್ನು ಉದ್ಧಾರಮಾಡುತ್ತವೆ ಎಂಬುದನ್ನು ತೋರುತ್ತದೆ 'ಬಾಲಗೋಪಾಲ'ನ ಕಥೆ.

ಹಿಂದೂಧರ್ಮ ಯಾರನ್ನೂ ದೂಷಿಸುವುದಿಲ್ಲ. ಅಲ್ಲಿ ಎಲ್ಲರಿಗೂ ಸ್ವಾತಂತ್ರ್ಯ ವಿದೆ. ಭಗವಂತನನ್ನು ಸಾಕ್ಷಾತ್ಕಾರಮಾಡಿಕೊಳ್ಳುವುದೆ ಜೀವನದ ಪರಮಗುರಿ ಎಂದು ಸಾರುತ್ತದೆ ಹಿಂದೂಧರ್ಮ. ಸ್ವಾಮಿ ವಿವೇಕಾನಂದರು ವಿಶ್ವಗ್ರಾಸಿಯಾದ ಹಿಂದೂಧರ್ಮದ ತತ್ತ್ವಗಳನ್ನು ಗಮನಿಸಿ, ನೂರಾರು ಜನ್ಮವೆತ್ತಿಬಂದು, ನೂರಾರು ಸಂಶೋಧನೆ ನಡೆಸಿದರೂ ಆಧ್ಯಾತ್ಮದ ಗಣಿಯಂತಿರುವ ಹಿಂದೂಧರ್ಮದಲ್ಲಿ ಕಾಣದ ಭವ್ಯಭಾವನೆ ಬೇರೆಲ್ಲೂ ಸಿಗಲಾರದು—ಎಂದು ಹೇಳಿದ್ದಾರೆ.

ಸ್ವಾಮಿಜಿಯವರ ಸರಳವೂ ಸ್ಪಷ್ಟವೂ ಧೀಮಂತವೂ ಆದ ಶೈಲಿಯನ್ನು ಭಾಷಾಂತರದಲ್ಲಿ ಮೂಡಿಸಲು ಮಾಡಿದ ಪ್ರಯತ್ನ ಬಹುಮಟ್ಟಿಗೆ ಸಫಲವಾಗಿದೆ. ಮುದ್ರಣದ ತಪ್ಪುಗಳು ಕೆಲವು ಉಳಿದುಹೋಗಿವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಸೂಚಿಸಲಾಗಿದೆ:

ಪುಟ ೫೫; ವಿಶಮೇ ಸಮುಪಸ್ಥಿತಮ್—ಎಂಬಲ್ಲಿ ವಿಷಮೇ ಸಮುಪಸ್ಥಿತಮ್ ಎಂದಿರಬೇಕು . . . ನೈತತ್ವಮುಪಪದ್ಯತೆ—ಎಂಬಲ್ಲಿ ನೈತತ್ವಯ್ಯುಪಪದ್ಯತೇ—ಎಂದಿರ

ಬೇಕು. ಪುಟ ೬೩ ; ಪ್ರಹಲ್ಲಾದ—ಎಂಬಲ್ಲಿ ಪ್ರಹ್ಲಾದ ಎಂದಿರಬೇಕು. ಪುಟ ೧೦೧ ; ವಿನಃ—ಎಂಬಲ್ಲಿ ವಿನಾ ಎಂದಿರಬೇಕು. ಪುಟ ೧೩೨ ; . . . ಕರ್ಮಸಂಗಿನಾಮ— ಎಂಬಲ್ಲಿ ಕರ್ಮಸಂಗಿನಾಮ್—ಎಂದಿರಬೇಕು.

ಈಗಾಗಲೆ ವಿಪುಲಸಂಖ್ಯೆಯಲ್ಲಿ ಧಾರ್ಮಿಕಗ್ರಂಥಗಳನ್ನು ಕನ್ನಡದಲ್ಲಿ ಪ್ರಕಟಿಸಿ ಜನತೆಯ ಹೃದಯವನ್ನು ಅರಳಿಸಿದ ಶ್ರೀ ರಾಮಕೃಷ್ಣಾಶ್ರಮ, ಆ ರಸಸೃಷ್ಟಿಯನ್ನು ಬೃಹತ್ತಾಗಿ ಬೆಳಸಲೆಂದು ಪ್ರಾರ್ಥಿಸೋಣ.

ಉ. ಕಾ. ಸು.

*
* *

ಶ್ರೀಶೈಲ ಜಗದ್ಗುರು ಚರಿತಮ್—ಕವಿ: ಕವಿಶೇಖರ ನಾರಾಯಣಶಾಸ್ತ್ರಿ; ಪ್ರಕಾಶಕರು: ಜ. ನಿ. ಪುಸ್ತಕಭಂಡಾರ, ನಂ. ೪೯ ಎಚ್.ಬಿ. ಸಮಾಜರೋಡ್, ಬೆಂಗಳೂರು ; ಪುಟಗಳು ೧೬೩ ; ಬೆಲೆ, ರೂ. ೨-೦-೦.

ಇದು ಕವಿಶೇಖರ ನಾರಾಯಣಶಾಸ್ತ್ರಿಗಳಿಂದ ರಚಿತವಾದ ಸಂಸ್ಕೃತ ಪದ್ಯ ಕಾವ್ಯ. ಇದು ಶ್ರೀಶೈಲದಲ್ಲಿ ಆವಿರ್ಭವಿಸಿದ ಶಿವಾಂಶರಾದ ಭಗವದ್ವಿಭೂತಿಪುರುಷರ ಚರಿತ್ರೆ. ಸಾಮಾನ್ಯ ಸಾಧುಸಂತರ ಚರಿತ್ರೆಯೆಂದರೆ ಜನರಿಗೆ ಈ ಕಾದಂಬರಿಗಳ ಕಾಲದಲ್ಲಿ ಸ್ವಲ್ಪ ವಿರಸಭಾವ ತೋರಬಹುದು. ಆದರೆ ಸ್ವಲ್ಪ ಸಂಸ್ಕೃತಭಾಷೆ ತಿಳಿದವ ನಾದರೂ ಈ ಕಾವ್ಯವನ್ನು ಓದಲು ಆರಂಭಿಸಿದರೆ ಕೊನೆ ಕಾಣದೆ ಬಿಡಲಾರನು. ಪ್ರತಿಯೊಂದು ಸರ್ಗ ಮುಗಿದ ಮೇಲೂ ಮುಂದೇನು? ಎಂಬುವ ಕುತೂಹಲ ಉಂಟಾಗುವುದೇ ಇದರ ಕಾರಣ. ಪ್ರಾಚೀನ ಕಾವ್ಯಲಕ್ಷಣಗಳು ಸಮಗ್ರವಾಗಿರ ದಿದ್ದರೂ ಇದ್ದ ವರ್ಣನೆಯು ಸುಂದರವಾಗಿ ಆಕರ್ಷಕವಾಗಿದೆ. ಇಲ್ಲಿ ವಿಭೂತಿ ಪುರುಷರು ಶ್ರೀ ಪಂಡಿತಾರಾಧ್ಯರು ಲಿಂಗದಿಂದ ಆವಿರ್ಭೂತರಾದೊಡನೆಯೇ ತತ್ತ್ವೋಪ ದೇಶಕ್ಕೆ ಆರಂಭಿಸಿದುದು ಇತಿಹಾಸದೃಷ್ಟಿಯಲ್ಲಿ ಸತ್ಯವಾದರೂ, ವ್ಯವಹಾರದಲ್ಲಿ ಪುರಾಣ ಸರಿಸಮಾನತೆಯನ್ನು ಹೊಂದುತ್ತದೆ. ಕಥಾವತರಣವು ಸರಳವಾಗಿ ಸುಲಭ ವಾಗಿ ವರ್ಣಿತವಾಗಿದೆ. ಕೈಲಾಸವರ್ಣನೆ ಅನುಷ್ಟುಭ್‌ನಲ್ಲಿದ್ದರೂ ಮನರಂಜಕವಾಗಿದೆ, ಪುರಾಣಶೈಲಿಯಲ್ಲಿದೆ. ಶ್ರೀ ಪಂಡಿತೋತ್ಪತ್ತಿಯನ್ನು ಇನ್ನೂ ವರ್ಣಿಸಬಹುದಿತ್ತು. ಷಟ್‌ಸ್ಥಲವು ಕಾವ್ಯಶೈಲಿಯಲ್ಲಿ ವರ್ಣಿತವಾದರೂ ಶಾಸ್ತ್ರರಹಸ್ಯವನ್ನು ಚೆನ್ನಾಗಿ ತಿಳಿಸುತ್ತಲಿದೆ. ಇದು ಇನ್ನೂ ಸ್ವಲ್ಪ ವಿವರಿಸಿದರೂ ಅಲ್ಪಾಧಿಕಾರಿಗೂ ಕ್ಲೇಶದಾಯಕ ವಾಗಲಾರದು. ವಾದಸರಣಿಯು ಉತ್ತಮವಾಗಿದೆ. 'ಶರೀರಮಾತ್ಮಾ ಯದೀತೇ ಮತಂ ಸ್ಯಾತ್ ಭಿನ್ನೇಕರೇ ಜೀವತಿನೈವ ಜಂತುಃ' ದೃಷ್ಟಾಂತ ಅಷ್ಟು ಕೂಡುವುದಿಲ್ಲ. ಗೂಬೆಯ ದೃಷ್ಟಾಂತವು ಪುನಃ ಪುನಃ ಬಂದುದು ಸ್ವಲ್ಪ ಬೇಸರವಾಗುತ್ತದೆ. ಹದಿ

ನೈದನೇ ಸರ್ಗ ಕೇವಲ ಇತಿಹಾಸವನ್ನು ತಿಳಿಸುತ್ತದೆ. ಹೀಗೆ ಕೇವಲ ಒಂದೆರಡು ದೋಷ ಕಂಡುಬಂದರೂ ಕಾವ್ಯವು ಸರ್ವಾಂಶದಲ್ಲಿ ರಂಜಕವಾಗಿದೆ. ಭಾಷಾಕ್ಲೇಶವು ತೋರದಿರುವುದರಿಂದ ಕವಿಯ ಕವಿತಾಲಾಲಿತ್ಯವು ಪ್ರಶಂಸಾರ್ಹವಾಗಿದೆ. ಇಲ್ಲಿ ವರ್ಣಿತರಾದ ವಿಭೂತಿಪುರುಷರ ಚರಿತ್ರೆಯನ್ನು ಪ್ರತಿಯೊಬ್ಬರೂ ಓದಿ ಕೃತಾರ್ಥ ರಾಗಬೇಕು. ಇಲ್ಲಿ ಹೇಳಿದ ವಿಭೂತಿಪುರುಷರ ಮಹಿಮೆಯನ್ನು ಈಗಿನ ಮಠಾಧಿಪತಿ ಗಳೆಲ್ಲರೂ ಈಷತ್ತಾದರೂ ಹೊಂದಿ ಜನೋದ್ಧಾರತತ್ಪರರಾದರೆ ನಮ್ಮ ಭಾರತಭೂಮಿ ಹಿಂದಿನಂತೆ ಆಗಲು ಸಂದೇಹವಿಲ್ಲ. ಆ ದಿವಸವು ಸನ್ನಿಹಿತವಾಗಲೆಂದು ಹಾರೈಸೋಣ. ಕೆಲವು ಕಡೆ ಶಿವೋತ್ಕರ್ಷವನ್ನು ಹೇಳಿದುದರಿಂದ ಮತೀಯರಿಗೆ ಉದ್ವೇಜಕವಾಗ ಬಹುದು. ಆ ದೃಷ್ಟಿಯಿಂದ ಉಪೇಕ್ಷೆ ಮಾಡಬಾರದು. ಯಾವ ವಿಭೂತಿಪುರುಷನೂ ಸಕಲರಿಗೂ ಅನುಗುಣವಾದ ಮಾರ್ಗವನ್ನು ಇದುವರೆಗೆ ಉಪದೇಶಿಸಲಿಲ್ಲ. ಅದು ಸಾಧ್ಯವೂ ಅಲ್ಲ. ಅಂತೂ ಈ ಕಾವ್ಯವು ಪ್ರತಿಯೊಬ್ಬ ಶೈವನಿಗೂ ಇತರರಿಗೂ ಪಠ್ಯವೂ ಆದರಣೀಯವೂ ಆಗಿದೆಯೆಂದೂ ಧಾರಾಳವಾಗಿ ಹೇಳಬಹುದು. ಇದರಲ್ಲಿ ವರ್ಣಿತರಾದ ವಿಭೂತಿಪುರುಷರ ಮಹಾಪ್ರಭಾವವು ಇಂದಿನ ಶ್ರೀ ಜ. ಪ. ಚನ್ನಬಸವ ರಾಜ ದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳಲ್ಲಿಯೂ ರೂಢಮೂಲ ವಾಗಿದ್ದು ದಲಿತದುಃಖಿತ ಜನತೆಯು ಅವರ ದಿವ್ಯಕಟಾಕ್ಷದಿಂದ ಉದ್ಧೃತವಾಗಲೆಂದು ಹಾರೈಸುತ್ತೇವೆ.

ಜಿ. ವಿ. ಭ.

ಸಂಪಾದಕೀಯ

ಕಂಬನಿ

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಭಾಷಾಸಾಹಿತ್ಯಗಳ ಅಧ್ಯಾಪಕರಾಗಿ ಮೂರು ದಶಕಗಳಿಗೂ ಹೆಚ್ಚು ಕಾಲ ಪಾಠಪ್ರವಚನಗಳ ಸೇವೆ ಸಲ್ಲಿಸಿದ ಶ್ರೀ ಎಸ್. ಮಂಜುನಾಥ್, ಎಂ.ಎ., ಅವರು ಇದೇ ಮೇ ತಿಂಗಳ ಮೂರನೆಯ ತಾರೀಖು ದಿವಂಗತರಾದರೆಂಬ ವಾರ್ತೆಯನ್ನು ಕೇಳಿ ಪ್ರಬುದ್ಧ ಕರ್ಣಾಟಕ ತುಂಬ ದುಃಖಿಸುತ್ತಿದೆ. ಶ್ರೀ ಎಸ್. ಮಂಜುನಾಥ್ ಅವರು 'ಮಂ' ಎಂಬ ಕಾವ್ಯ ನಾಮದಿಂದ ಪ್ರಬುದ್ಧ ಕರ್ಣಾಟಕದ ವಾಚಕಲೋಕಕ್ಕೆ ಚಿರಪರಿಚಿತರಾಗಿದ್ದರು. 'ಮಂ' ಬರೆದ ಹರಟೆ, ಪ್ರಬಂಧ, ಶಾಸ್ತ್ರಜಿಜ್ಞಾಸೆ, ಕಥೆ, ನಾಟಕ, ಪುಸ್ತಕ ವಿಮರ್ಶೆ ಇವುಗಳನ್ನು ಕನ್ನಡಿಗರು ಪ್ರೀತ್ಯಾದರಗಳಿಂದ ಓದಿ ಸಂತೋಷಪಟ್ಟಿದ್ದರು. ನಮ್ಮ ಪ್ರಚಾರ ಪುಸ್ತಕಮಾಲೆಯಲ್ಲಿ ಇವರ 'ಇಂಗ್ಲಿಷ್ ಪ್ರಬಂಧಗಳು' 'ಇಬ್ಸನ್ನಿನ ಕೆಲವು ನಾಟಕಗಳು' ಎಂಬ ಎರಡು ಉತ್ತಮವಾದ ಪುಸ್ತಕಗಳು ಪ್ರಕಟವಾಗಿವೆ. ಈಚೆಗೆ 'ಪುಸ್ತಕವನ್ನು ಬಿಡು' ಎಂಬ ಪ್ರಬಂಧ ಸಂಕಲನವೊಂದನ್ನು ಮೈಸೂರಿನ ಶಾರದಾಮಂದಿರದವರು ಪ್ರಕಟಿಸಿದ್ದಾರೆ. ಕನ್ನಡನುಡಿ, ಪ್ರಬುದ್ಧ ಕರ್ಣಾಟಗಳಲ್ಲಿ ಇವರ ಅನೇಕ ಬರಹಗಳು ಚದುರಿಹೋಗಿವೆ. ಹಸ್ತಪ್ರತಿಯ ಹಂತದಲ್ಲಿ ಇವರ ಎಷ್ಟೋ ಬರಹಗಳು ಇನ್ನೂ ಉಳಿದಿವೆ. ಇಂಗ್ಲಿಷ್ ಸಾಹಿತ್ಯವನ್ನು ಆಳವಾಗಿ ಅಭ್ಯಸಿಸಿ ತಮ್ಮ ಜ್ಞಾನವನ್ನು ವಿದ್ಯಾರ್ಥಿಗಳಿಗೆ ದಾನಮಾಡುತ್ತಿದ್ದ ಹಾಗೂ ವಿದ್ಯಾರ್ಥಿಗಳನ್ನು ಬಹಳ ಆತ್ಮೀಯತೆಯಿಂದ ನೋಡಿಕೊಳ್ಳುತ್ತಿದ್ದ ಈ ಅಧ್ಯಾಪಕರ ನಿಧನದಿಂದ ವಿದ್ಯಾರ್ಥಿವೃಂದಕ್ಕೆ ಆಗಿರುವ ನಷ್ಟವೂ ಅಪಾರವಾದದ್ದೇ. ಬಡ ವಿದ್ಯಾರ್ಥಿಗಳ ವಿಷಯದಲ್ಲಿ ಸಹಾನುಭೂತಿ ತೋರಿ ಅವರಿಗೆ ನಾನಾ ರೀತಿಯಲ್ಲಿ ನೆರವು ನೀಡುತ್ತಿದ್ದ ಈ 'ಆಪದ್ಬಾಂಧವ'ರನ್ನು ತಂಪುಹೊತ್ತಿನಲ್ಲಿ ನೆನೆಯಬೇಕು. ಒಳ್ಳೆಯ ರಸಿಕರೂ ಗುಣಶಾಲಿಗಳೂ ಸಾಹಿತ್ಯಜ್ಞರೂ ಪ್ರಬಂಧಕಾರರೂ ಆದ ಈ ಮಹನೀಯರ ನಿಧನದಿಂದಾದ ದುಃಖವನ್ನು ಭರಿಸುವ ಶಕ್ತಿ ಇವರ ಕುಟುಂಬದವರಿಗೂ ಬಂಧುಮಿತ್ರರಿಗೂ ಒದಗಿಬರಲಿ ಎಂದೂ ದಯಾಮಯನಾದ ಭಗವಂತನು ಇವರ ಆತ್ಮಕ್ಕೆ ಶಾಂತಿಯನ್ನು ನೀಡಲಿ ಎಂದೂ ದೇವರನ್ನು ಪ್ರಾರ್ಥಿಸುತ್ತೇವೆ.

ಕಷ್ಟನಷ್ಟಗಳು ಒಂದಾದಮೇಲೆ ಒಂದರಂತೆ ಒದಗಿಬರುವುದೂ ವಿಧಿಯ ವೈಚಿತ್ರ್ಯವೇ. ದುರ್ಭರವಾದ ಒಂದು ಚೇತನದ ಅಗಲಿಕೆಯ ದುಃಖದ ಜೊತೆಗೆ ಮತ್ತೊಂದು ಚೇತನದ ಅಗಲಿಕೆಯ ದುಃಖವನ್ನೂ ವಿಧಿ ನಮ್ಮ ಪಾಲಿಗೆ ಒಡ್ಡಿದೆ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತ ಭಾಷಾಸಾಹಿತ್ಯಗಳ ಉಪಪ್ರಾಧ್ಯಾಪಕರಾದ ಡಾ|| ಎಚ್. ಎಲ್. ಹರಿಯಪ್ಪ, ಎಂ.ಎ., ಪಿಎಚ್.ಡಿ., ಅವರು ಇದೇ ಜೂನ್ ತಿಂಗಳ ಆರನೆಯ ತಾರೀಖು ವಿಧಿವಶರಾದರೆಂಬ ಸುದ್ದಿ ಕೇಳಿ ಪ್ರಬುದ್ಧ ಕರ್ಣಾಟಕ ದುಃಖಿಸಿದೆ. ಶ್ರೀ ಹರಿಯಪ್ಪನವರು ಸಂಸ್ಕೃತದಲ್ಲಿ ದೊಡ್ಡ ವಿದ್ವಾಂಸರು. 'The Rgvedic Legends through the Ages' ಎಂಬ ವಿಷಯದಲ್ಲಿ ಸಂಶೋಧನೆ ನಡೆಸಿ ಬರೆದ ಪ್ರೌಢ ಪ್ರಬಂಧವನ್ನು ಬೊಂಬಾಯಿ ವಿಶ್ವವಿದ್ಯಾನಿಲಯದವರು ಪುರಸ್ಕರಿಸಿ ಡಾಕ್ಟರೇಟ್ ಪ್ರಶಸ್ತಿಯನ್ನು ನೀಡಿದರು. 'ಭಾಸ' ಎಂಬ ಕಿರುಹೊತ್ತಗೆಯನ್ನು ನಮ್ಮ ಪ್ರಚಾರ ಪುಸ್ತಕಮಾಲೆಗೆ ಬರೆದುಕೊಟ್ಟು ಇವರು ಉಪಕಾರಮಾಡಿದ್ದಾರೆ. ಭಾಸನ ಒಂದೆರಡು ನಾಟಕಗಳನ್ನು ಇಂಗ್ಲೀಷಿಗೆ ಉತ್ತಮವಾಗಿ ಅನುವಾದಮಾಡಿದ್ದಾರೆ. ಇವರ ಕೆಲವು ವಿದ್ವತ್ಪೂರ್ಣವಾದ ಲೇಖನಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ತಾವು ಗಳಿಸಿದ ವಿದ್ಯೆಯನ್ನು ಶಿಷ್ಯರಿಗೆ ದಾನಮಾಡುವ ಪುಣ್ಯಕಾರ್ಯದಲ್ಲಿ ಶ್ರದ್ಧೆ ಉತ್ಸಾಹಗಳಿಂದ ದುಡಿದ ಈ ಶಿಷ್ಯವಾತ್ಸಲ್ಯ ಪ್ರಪೂರ್ಣರಾದ ಶ್ರೇಷ್ಠ ವಿದ್ವಾಂಸರನ್ನು ಕಳೆದುಕೊಂಡು ವಿದ್ಯಾರ್ಥಿವೃಂದವು ತಬ್ಬಲಿಯಾಗಿದೆ. ಸ್ಕೌಟ್ ಕಾರ್ಯಗಳಲ್ಲಿ ಭಾಗಿಗಳಾಗಿ ವಿಶ್ವವಿದ್ಯಾನಿಲಯದ ರೋವರ್ಸ್ ಸಂಸ್ಥೆಗೆ ಕೀರ್ತಿ ತಂದ ಮಹನೀಯರು ಹರಿಯಪ್ಪನವರು. ಸಾರ್ವಜನಿಕ ಸಮಾರಂಭಗಳಲ್ಲಿ ಸೇವಾದೃಷ್ಟಿಯಿಂದ ಇವರು ಮುನ್ನುಗ್ಗಿ ಕೆಲಸಮಾಡುತ್ತಿದ್ದರು. ಇವರ ನಿಧನದಿಂದ ನಮ್ಮ ವಿಶ್ವವಿದ್ಯಾನಿಲಯದ ರೋವರ್ಸ್ ಸಂಸ್ಥೆಗೆ ತುಂಬಲಾರದ ನಷ್ಟವಾಗಿದೆ. ಹಿರಿಯರು ಕಿರಿಯರು ಎಂಬ ಭೇದ ಭಾವವಿಲ್ಲದೆ ಎಲ್ಲರೊಡನೆಯೂ ಓಡಾಡಿ ಎಲ್ಲರ ಹಿತಚಿಂತನೆಯನ್ನು ನೆನೆಯುತ್ತ ಸ್ನೇಹಿತರಂತೆ ತಾತ್ವಿಕರಂತೆ ಮಾರ್ಗದರ್ಶಕರಂತೆ ಸುಳಿದುಬರುತ್ತಿದ್ದ ಸರಳ ಹೃದಯದ ನಗುಮುಖದ ಸ್ನೇಹಮೂರ್ತಿಯನ್ನು ಕಳೆದುಕೊಂಡು, ಅವರ ಕುಟುಂಬದವರೂ ಸ್ನೇಹಿತರೂ ಬಾಂಧವರೂ ಅನುಭವಿಸುತ್ತಿರುವ ದುಃಖದಲ್ಲಿ ನಾವೂ ಭಾಗಿಗಳಾಗಿದ್ದೇವೆ. ಬಂಧುಮಿತ್ರರಿಗೆ ದುಃಖವನ್ನು ಸಹಿಸುವ ಶಕ್ತಿ ಒದಗಲಿ, ಮೃತರ ಆತ್ಮಕ್ಕೆ ಚಿರಶಾಂತಿ ಲಭಿಸಲಿ, ಇದೇ ಪರಮಾತ್ಮನಲ್ಲಿ ನಮ್ಮ ಮೊರೆ.

* * *

ಶ್ರೀ ತೀ. ನಂ. ಶ್ರೀ ಅವರ ವಿದೇಶಪ್ರಯಾಣ

ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಭಾಷಾಸಾಹಿತ್ಯಗಳ ಪ್ರಾಧ್ಯಾಪಕರಾಗಿರುವ ಶ್ರೀ ತೀ. ನಂ. ಶ್ರೀಕಂಠಯ್ಯ, ಎಂ.ಎ. ಅವರು ರಾಕ್‌ಫೆಲರ್ ಸಂಸ್ಥೆಯವರ ಆಶ್ರಯದಲ್ಲಿ ಭಾಷಾಶಾಸ್ತ್ರದ ಪ್ರೌಢವ್ಯಾಸಂಗಕ್ಕಾಗಿ ಅಮೆರಿಕಾಕ್ಕೆ

ಈಗ ಹದಿನೈದು ದಿನಗಳ ಕೆಳಗೆ ಪ್ರಯಾಣಬೆಳಸಿದರು. ಈ ಸಂಗತಿ ತುಂಬ ಸಂತೋಷದಾಯಕವಾದದ್ದು. ಶ್ರೀಕಂಠಯ್ಯನವರಿಗೆ ಒದಗಿಬಂದಿರುವ ಈ ಸದವಕಾಶಕ್ಕಾಗಿ ನಾವು ಶ್ರೀಯುತರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ. ಸಂಸ್ಕೃತ ಕನ್ನಡ ಇಂಗ್ಲಿಷ್ ಈ ಭಾಷಾಸಾಹಿತ್ಯಗಳನ್ನು ಆಳವಾಗಿ ಅಭ್ಯಾಸಮಾಡಿರುವ ಮೇಧಾವಿಗಳೂ ಪ್ರತಿಭಾವಂತರೂ ಶಾಸ್ತ್ರಜ್ಞಾನಸಂಪನ್ನರೂ ಆಗಿರುವ ಶ್ರೀಕಂಠಯ್ಯನವರ ಈ ಪ್ರವಾಸಯಾತ್ರೆಯಿಂದ ನಮ್ಮ ನಾಡಿಗೂ ನುಡಿಗೂ ಪರಮಪ್ರಯೋಜನವಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ಶ್ರೀಯುತರ ರಸಾಭಿಜ್ಞತೆ ಶಾಸ್ತ್ರಪಾಂಡಿತ್ಯಗಳಿಂದ ಹೊರದೇಶದ ವಿದ್ವಾಂಸರುಗಳಿಗೂ ಪ್ರಯೋಜನವಾಗುತ್ತದೆ. ಆ ದೇಶಗಳ ಘನವಿದ್ವಾಂಸರೊಡನೆ ನಡೆಸುವ ವಿಚಾರವಿನಿಮಯದ ಫಲವಾಗಿ ನಮ್ಮ ಭಾಷಾಸಾಹಿತ್ಯಗಳ ಅಭ್ಯಾಸ, ವಿಮರ್ಶೆ, ಸಂಶೋಧನಗಳಿಗೆ ಶ್ರೀಯುತರ ಆರ್ಜಿತಜ್ಞಾನದ ಮೂಲಕ ಹೆಚ್ಚಿನ ಪ್ರಯೋಜನ ಲಭಿಸುವುದು ಕಟ್ಟಿಟ್ಟದ್ದು. ಅಮೆರಿಕವನ್ನು ಸುರಕ್ಷಿತವಾಗಿ ಸೇರಿರುವ ಶ್ರೀಕಂಠಯ್ಯನವರಿಗೆ ಎಲ್ಲ ಸನ್ಮಂಗಳಗಳು ಲಭಿಸಲಿ ಎಂದೂ ಅವರ ಪ್ರವಾಸಯಾತ್ರೆ ಜಯಪ್ರದವಾಗಲಿ ಎಂದೂ ಅವರು ಆರ್ಜಿಸಿದ ಜ್ಞಾನದಿಂದ ನಮ್ಮ ನಾಡುನುಡಿಗಳು ಮೇಲ್ಮೆ ಪಡೆಯಲಿ ಎಂದೂ ನಾವು ಹಾರೈಸುತ್ತೇವೆ. ಭಗವಂತನು ಶ್ರೀಯುತರಿಗೆ ಆಯುರಾರೋಗ್ಯಾದಿ ಸಮಸ್ತ ಭಾಗ್ಯಗಳನ್ನೂ ಒದಗಿಸಲಿ ಎಂದು ಆ ದಯಾಮಯನನ್ನು ಬೇಡುತ್ತೇವೆ.

*
* *

ಮಹಾಕವಿ ಕುವೆಂಪು ಅವರಿಗೆ ಇನ್ನೆರಡು ಕಡೆಗಳಲ್ಲಿ ನಡೆದ ಅಭಿನಂದನ ಸಮಾರಂಭ

ಭಾರತ ಸಾಹಿತ್ಯ ಅಕ್ಯಾಡೆಮಿಯವರಿಂದ ಬಹುಮಾನಿತರಾದ ಶ್ರೀಕುವೆಂಪು ಅವರನ್ನು ಬರಮಾಡಿಕೊಂಡು ಕನ್ನಡ ಸಾಹಿತ್ಯ ಪರಿಷತ್ತಿನವರೂ ಶಿವಮೊಗ್ಗೆಯ ನಾಗರಿಕರೂ ವಿಶೇಷರೀತಿಯಲ್ಲಿ ಗೌರವಿಸಿದರು. ಶ್ರೀ ಎ. ಆರ್. ಕೃಷ್ಣಶಾಸ್ತ್ರಿಗಳವರು ಒಂದು ಸಂದರ್ಭದಲ್ಲಿಯೂ ಶ್ರೀ ಡಾ|| ನಂದಿಮಠ ಅವರು ಇನ್ನೊಂದು ಸಂದರ್ಭದಲ್ಲಿಯೂ ಶ್ರೀಕುವೆಂಪು ಕವಿವರೇಣ್ಯರನ್ನೂ ಶ್ರೀ ರಾಮಾಯಣದರ್ಶನಮ್ ಮಹಾಕಾವ್ಯವನ್ನೂ ಕುರಿತು ಸ್ವಾರಸ್ಯಪೂರ್ಣವೂ ಅರ್ಥಗರ್ಭಿತವೂ ಸಮಯೋಚಿತವೂ ಆದ ಮೆಚ್ಚುಗೆಯ ಪ್ರಿಯವಾಕ್ಯಗಳನ್ನು ಆಡಿದರು. ಕನ್ನಡ ಜನತೆ ತನ್ನ ಆನಂದೋತ್ಕರ್ಷದ ಉದ್ಗಾರಾತಿಶಯವನ್ನು ಈ ಎರಡು ಸಂದರ್ಭಗಳಲ್ಲಿಯೂ ವ್ಯಕ್ತಪಡಿಸಿ ಮಹಾಕವಿಯನ್ನೂ ಮಹಾಕಾವ್ಯವನ್ನೂ ಗೌರವಿಸಿತು. ಇಂತಹ ಗೌರವ ನಮ್ಮ ನಾಡಿನ ಜನರಿಂದ ಶ್ರೀ ಕುವೆಂಪು ಅವರಿಗೆ ಮೇಲಿಂದ ಮೇಲೆ ಸಲ್ಲಲಿ ಎಂದು ನಾವು


ಇನ್ನೊಮ್ಮೆ ಆಶಿಸುತ್ತೇವೆ. ಇಂತಹ ಸಂತಸದ ಸುದ್ದಿಯನ್ನು ಪ್ರಬುದ್ಧ ಕರ್ನಾಟಕದ ವಾಚಕಲೋಕಕ್ಕೆ ಮತ್ತೆಮತ್ತೆ ಪ್ರಕಟಪಡಿಸುವ ಪುಣ್ಯ ನಮ್ಮದಾಗಲಿ ಎಂದು ಹಾರೈಸುತ್ತೇವೆ.

*
* *

ಮೂವತ್ತೇಳನೆಯ ಕನ್ನಡ ಸಾಹಿತ್ಯ ಸಮ್ಮೇಳನ

೧೯೫೫ನೆಯ ಜೂನ್ ತಿಂಗಳು ೧೦, ೧೧, ೧೨ ಈ ಮೂರು ದಿವಸಗಳೂ 'ಏಕೀಕೃತ ಕರ್ನಾಟಕದ ರಾಜಧಾನಿಯಂತಿರುವ' ಮೈಸೂರು ನಗರದಲ್ಲಿ ಮೂವತ್ತೇಳನೆಯ ಕನ್ನಡ ಸಾಹಿತ್ಯ ಸಮ್ಮೇಳನ ಕನ್ನಡ ಕಾದಂಬರಿಯ ಸಮ್ರಾಟರೆಂದು ಸ್ತುತರಾದ ಶ್ರೀ ಕೋಟ ಶಿವರಾಮಕಾರಂತರ ಅಧ್ಯಕ್ಷತೆಯಲ್ಲಿ ವಿಶಿಷ್ಟವಾದ ಒಂದು ಗಾಂಭೀರ್ಯದಿಂದ ನಡೆಯಿತು. ಕನ್ನಡ ಸಾಹಿತ್ಯ ಸಂಸ್ಕೃತಿಗಳ ಸಂವರ್ಧನೆಗಾಗಿಯೇ ಮುಡಿಪಾಗಿರುವಂತೆ ಉದ್ದೇಶಿಸಿ ಸ್ಥಾಪಿಸಿದ ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಈ ಸಮ್ಮೇಳನ ಜರುಗಿತು. ಈಗ್ಗೆ ಇಪ್ಪತ್ತೈದು ವರ್ಷಗಳ ಹಿಂದೆ ಕರ್ನಾಟಕ ಕುಲಪುರೋಹಿತರಾದ ಶ್ರೀಮಾನ್ ಆಲೂರು ವೆಂಕಟರಾಯರವರ ಅಧ್ಯಕ್ಷತೆಯಲ್ಲಿ ಹೀಗೆಯೇ ಸಮ್ಮೇಳನ ಇದೇ ವಿಶ್ವವಿದ್ಯಾನಿಲಯದ ಆಶ್ರಯದಲ್ಲಿಯೇ ಕೂಡಿತ್ತು. ಈ ಸಮ್ಮೇಳನ 'ಆ ಉತ್ಸವದ ಬೆಳ್ಳಿಯ ಹಬ್ಬ'ವೆಂಬಂತೆ ಮತ್ತೆ ಇಲ್ಲಿ ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ನಡೆದದ್ದು ಯುಕ್ತಿಯುಕ್ತವೂ ಅರ್ಥಪೂರ್ಣವೂ ಆಗಿದ್ದಿತು.

ಸಮ್ಮೇಳನದ ಮೊದಲನೆಯ ದಿನದ ಕಾರ್ಯಕಲಾಪಗಳು ಜೂನ್ ೧೦ನೆಯ ಶುಕ್ರವಾರ ಬೆಳಗ್ಗೆ ೧೦ ಗಂಟೆಗೆ ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ಆರಂಭವಾದವು. ಸಮ್ಮೇಳನದ ಉದ್ಘಾಟನ ಸಮಾರಂಭವನ್ನು ನಡಸಿಕೊಡಲು ಒಪ್ಪಿ ದಯಮಾಡಿಸಿದ ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜರವರಾದ ಶ್ರೀಮಜ್ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ.ಸಿ.ಬಿ., ಜಿ.ಸಿ.ಎಸ್.ಐ., ಮಹಾಸ್ವಾಮಿಯವರನ್ನು ದಿವ್ಯವಾಗಿ ಅಲಂಕರಿಸಿದ ಭವನದ ಉತ್ತರದ್ವಾರದಲ್ಲಿ ವಿಶ್ವವಿದ್ಯಾನಿಲಯದ ಉಪಸ್ಥಾನಪತಿಗಳೂ ಸ್ವಾಗತಸಮಿತಿಯ ಅಧ್ಯಕ್ಷರೂ ಆದ ಶ್ರೀ ವಿ. ಎಲ್. ಡಿ'ಸೋಜ ಅವರೂ ಮಹಾರಾಜ ಕಾಲೇಜಿನ ಪ್ರಿನ್ಸಿಪಾಲರವರೂ ಸ್ವಾಗತಸಮಿಯ ಕಾರ್ಯಾಧ್ಯಕ್ಷರೂ ಆದ ಶ್ರೀ ಕೆ. ವಿ. ಪುಟ್ಟಪ್ಪನವರೂ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಎ. ಎನ್. ಮೂರ್ತಿರಾಯರೂ ಹಿಂದಿನ ಸಮ್ಮೇಳನಾಧ್ಯಕ್ಷರಾದ ಶ್ರೀ ವಿ. ಸೀತಾರಾಮಯ್ಯನವರೂ ಈ ಅಧಿವೇಶನದ ಸಮ್ಮೇಳನಾಧ್ಯಕ್ಷರಾದ ಶ್ರೀ ಕೋಟ ಶಿವರಾಮಕಾರಂತರವರೂ ಸ್ವಾಗತಿಸಿದರು. ಅರಮನೆಯ ಬ್ಯಾಂಡಿನವರ



ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು

ಶ್ರೀ ಕೋಟ ಶಿವರಾಮಕಾರಂತರು

ಸುಶ್ರಾವ್ಯವಾದ ವಾದ್ಯರವ ಮೊಳಗುತ್ತಿದ್ದಾಗ ಶ್ರೀಮನ್ಮಹಾರಾಜರು ಸಭೆಗೆ ಚಿಜಯ ಮಾಡಿ ವೇದಿಕೆಯ ಮೇಲೆ ದಿವ್ಯವಾದ ಪೀಠದಲ್ಲಿ ಸುಖಾಸೀನರಾದರು. ಮಹಾಸ್ವಾಮಿಯವರ ಮಗ್ಗುಲಿನಲ್ಲಿ ಸಮ್ಮೇಳನಾಧ್ಯಕ್ಷರಾದ ಶ್ರೀ ಶಿವರಾಮಕಾರಂತರು ಮಂಡಿಸಿದರು. ಉಪಸ್ಥಾನಪತಿಗಳೂ ಪ್ರಿನ್ಸಿಪಾಲರವರೂ ಮಹಾರಾಜರವರ ಆಪ್ತ ಕಾರ್ಯದರ್ಶಿಗಳವರೂ ವಿದ್ವದ್ಗೋಷ್ಠಿಗಳ ಅಧ್ಯಕ್ಷರುಗಳೂ ಹಿಂದಿನ ಸಮ್ಮೇಳನದ ಅಧ್ಯಕ್ಷರೂ ಪರಿಷತ್ತಿನ ಅಧ್ಯಕ್ಷರೂ ಮತ್ತು ಕಾರ್ಯದರ್ಶಿಗಳೂ ವೇದಿಕೆಯ ಮೇಲೆ ಮಂಡಿತರಾದರು.

ಸಭಾಭವನದಲ್ಲಿ ಕರ್ಣಾಟಕದ ಬೇರೆ ಬೇರೆ ಪ್ರಾಂತಗಳಿಂದ ಬಂದಿದ್ದ ಪ್ರತಿನಿಧಿಗಳೂ ಪರಿಷತ್ ಸದಸ್ಯರೂ ಸಾಹಿತಿಗಳೂ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರುಗಳೂ ನಾನಾ ಸಂಘ ಸಂಸ್ಥೆಗಳ ಕಾರ್ಯಕರ್ತರುಗಳೂ ಕಿಕ್ಕಿರಿದು ನೆರೆದಿದ್ದರು. ಭವನದ ಕೆಳ ಅಂತಸ್ತಿನಲ್ಲಿಯೂ ಉಪ್ಪರಿಗೆಯಲ್ಲಿಯೂ ಸೇರಿದ್ದ ಕನ್ನಡಾಭಿಮಾನಿಗಳಾದ ಸ್ತ್ರೀಪುರುಷರ ಆ ಬೃಹತ್‌ಸಭೆ, ಅಪೂರ್ವವಾದ ಉತ್ಸಾಹವನ್ನೂ ಅಮಿತವಾದ ಆನಂದವನ್ನೂ ನೋಡಿದವರ ಹೃದಯದಲ್ಲಿ ಉಕ್ಕೇರಿಸುವಂತಿತ್ತು.

ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್ ಅವರಿಂದ ಶ್ರೀ ಕುವೆಂಪು ವಿರಚಿತ ಶ್ರೀ ರಾಮಾಯಣದರ್ಶನಮ್ ಮಹಾಕಾವ್ಯದ ಪ್ರಥಮಸಂಪುಟದ ಆದಿಯಲ್ಲಿ ಬರುವ ಪ್ರಾರ್ಥನಾಪಂಕ್ತಿಗಳ ಕಾವ್ಯವಾಚನದಿಂದ ಕಾರ್ಯಕ್ರಮ ಪ್ರಾರಂಭವಾಯಿತು. ಪ್ರಾರ್ಥನೆಯಾದಮೇಲೆ ಶ್ರೀಮತಿ ನೀಲಮ್ಮ ಕಡಾಂಬಿಯವರು ಶ್ರೀ ಡಿ.ವಿ.ಜಿ. ಅವರ 'ನಿತ್ಯರೂಪಿಣಿ,' ಶ್ಯಾಮಲಾದಂಡಕದ 'ಮಾಣಿಕ್ಯವೀಣಾಂ' ಜಯದೇವಕವಿಯ 'ಧೀರಸಮೀರೇ,' ಈ ಮೂರು ಗೀತಗಳನ್ನು ವೀಣಾವಾದನದೊಂದಿಗೆ ಸುಶ್ರಾವ್ಯವಾಗಿ ಹಾಡಿ ಶ್ರೋತೃವೃಂದವನ್ನು ತಣಿಸಿದರು. ಆ ಬಳಿಕ ವಿಶ್ವವಿದ್ಯಾನಿಲಯದ ಉಪಸ್ಥಾನಪತಿಗಳಾದ ಶ್ರೀ ವಿ. ಎಲ್. ಡಿ'ಸೋಜ ಅವರು ಕನ್ನಡದಲ್ಲಿ ಸ್ವಾಗತಭಾಷಣ ಮಾಡಿ ಸಮ್ಮೇಳನಕ್ಕಾಗಿ ಆಗಮಿಸಿದ ಸರ್ವರಿಗೂ ಹೃತ್ಪೂರ್ವಕವಾದ ಪ್ರೀತ್ಯಾದರಗಳ ಸ್ವಾಗತವನ್ನು ನೀಡಿದರು. ತಮ್ಮ ಭಾಷಣದಲ್ಲಿ ಉಪಸ್ಥಾನಪತಿಗಳು ಮುಖ್ಯವಾಗಿ ವಿಶ್ವವಿದ್ಯಾನಿಲಯ ಕನ್ನಡಕ್ಕೆ ಸಲ್ಲಿಸಿದ ಸೇವೆಯನ್ನು ಪ್ರಸ್ತಾಪಿಸಿ ಹೀಗೆ ಹೇಳಿದರು:

'ಈ ಸಂದರ್ಭದಲ್ಲಿ ನಮ್ಮ ವಿಶ್ವವಿದ್ಯಾನಿಲಯ ನಾಡುನುಡಿಗಳ ಮುನ್ನಡೆಯಲ್ಲಿ ಯಾವ ಮಜಲನ್ನು ಮುಟ್ಟಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುವುದು ಉಚಿತವೆಂದು ನಾನು ಭಾವಿಸಿದ್ದೇನೆ. ಮೈಸೂರು ವಿಶ್ವವಿದ್ಯಾನಿಲಯದ ಮೊದಲನೆಯ ಚಾನ್ಸೆಲರವರಾದ ಶ್ರೀ ಕೃಷ್ಣರಾಜ ಒಡೆಯರವರು ಈ ವಿಶ್ವವಿದ್ಯಾನಿಲಯ ಈಡೇರಿಸ

ಬೇಕಾದ ಹಲವು ಕರ್ತವ್ಯಗಳನ್ನು ಇದರ ಪಾಲಿಗೆ ಸೂಚಿಸಿದರು. ಇಲ್ಲಿಗೆ ಸಂಬಂಧ ಪಟ್ಟಂತೆ ಆ ಸೂಚನೆಗಳಲ್ಲಿ ಮುಖ್ಯವಾದವುಗಳನ್ನು ಹೀಗೆ ಹೇಳಬಹುದು : ತಿಳಿಯಾದ ಕನ್ನಡದಲ್ಲಿ ಬರೆದ ಒಳ್ಳೆಯ ಪುಸ್ತಕಗಳನ್ನು ಪ್ರಕಟಿಸಿ ಕನ್ನಡ ಸಾಹಿತ್ಯಕ್ಕೆ ಪ್ರೋತ್ಸಾಹ ನೀಡುವುದು, ಮತ್ತು ಕ್ರಮಬದ್ಧವಾದ ಶಿಕ್ಷಣ ಶಿಸ್ತುಗಳಲ್ಲಿ ಭಾಗವಹಿಸಿ ಜ್ಞಾನಾರ್ಜನೆಮಾಡಲು ಅನುಕೂಲವಿಲ್ಲದಂಥವರಲ್ಲಿ ಜ್ಞಾನಪ್ರಸಾರ ಮಾಡುವುದು. ಈ ಎರಡು ಧ್ಯೇಯಗಳನ್ನು ಸಾಧಿಸುವ ಸಲುವಾಗಿ ಯೋಜನಾಬದ್ಧವಾದ ಕಾರ್ಯ ಕ್ರಮವನ್ನು ವಿಶ್ವವಿದ್ಯಾನಿಲಯ ಹಾಕಿಕೊಂಡಿದೆ. ಸಾಹಿತ್ಯ ಮತ್ತು ವಿಜ್ಞಾನಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಕುರಿತ ಲಘುಪುಸ್ತಕಗಳನ್ನು ಪ್ರಕಟಿಸುತ್ತಿರಲಾಗಿದೆ. ಪ್ರಚಾರ ಪುಸ್ತಕಮಾಲೆಯ ಈ ಪ್ರಕಟನೆಗಳು ತುಂಬ ಜನಪ್ರಿಯವಾಗಿವೆ. ವಿಶ್ವವಿದ್ಯಾ ನಿಲಯದ ಕನ್ನಡ ಗ್ರಂಥಮಾಲೆಯಲ್ಲಿ ಹಳಗನ್ನಡ ಕಾವ್ಯಮೀಮಾಂಸೆ, ಸಂಸ್ಕೃತಿ, ಧರ್ಮ, ತತ್ತ್ವ, ವಿಜ್ಞಾನ, ಇತಿಹಾಸ, ಸಮಾಜಶಾಸ್ತ್ರ, ಅರ್ಥಶಾಸ್ತ್ರ ಮುಂತಾದ ವಿಷಯಗಳ ಮೇಲೆ ಘನವಿದ್ವಾಂಸರು ಬರೆದ ಅಮೂಲ್ಯವಾದ ಶಾಸ್ತ್ರಗ್ರಂಥಗಳನ್ನು ಪ್ರಕಟಿಸುತ್ತಿರಲಾಗಿದೆ. ಮೈಸೂರು ವಿಶ್ವವಿದ್ಯಾನಿಲಯದವರು ಪ್ರಕಟಿಸಿರುವ ಇಂಗ್ಲಿಷ್-ಕನ್ನಡ ನಿಘಂಟು ಕನ್ನಡದ ಮುನ್ನಡೆಯಲ್ಲಿ ಒಂದು ಮೈಲಿಗಲ್ಲು. ಕನ್ನಡ ಸಾಹಿತ್ಯಪರಿಷತ್ತಿನವರು ಕೈಗೊಂಡಿರುವ ಕನ್ನಡ-ಕನ್ನಡ ಕೋಶರಚನೆಯ ಕಾರ್ಯ ದಲ್ಲಿ ವಿಶ್ವವಿದ್ಯಾನಿಲಯದ ಪಾತ್ರವೂ ಇದೆ ಎನ್ನುವುದು ತಮಗೆ ಗೊತ್ತಿದೆ. ಕಳೆದ ಮೂವತ್ತಾರು ವರ್ಷಗಳಿಂದ ನಡೆದುಕೊಂಡು ಬರುತ್ತಿರುವ ಪ್ರಬುದ್ಧ ಕರ್ಣಾಟಕ ಪತ್ರಿಕೆ ಕನ್ನಡ ಭಾಷಾಸಾಹಿತ್ಯಗಳ ಬೆಳವಣಿಗೆಯಲ್ಲಿ ವಿಶಿಷ್ಟವಾದ ಸೇವೆಯನ್ನು ಸಲ್ಲಿಸುತ್ತಿದೆ. ಇವುಗಳಲ್ಲದೆ ಮೈಸೂರಿನ ಪ್ರಾಚ್ಯಸಂಶೋಧನ ಸಂಸ್ಥೆಯವರೂ ಪ್ರಾಕ್ತನಶಾಖೆಯವರೂ ಕೈಗೊಂಡಿರುವ ಸಂಶೋಧನೆ ಮತ್ತು ಪ್ರಕಟನೆಗಳಿಂದ ಕನ್ನಡ ಸಾಹಿತ್ಯದ ಸೆಲೆಬೆಲೆಗಳ ಅರಿವಿಗೆ ವಿಶೇಷರೀತಿಯಲ್ಲಿ ಸಹಾಯವೊದಗುತ್ತಿದೆ. ನಮ್ಮ ವಿಶ್ವವಿದ್ಯಾನಿಲಯದ ಅಧ್ಯಾಪಕವರ್ಗದವರು ಸ್ವತಂತ್ರವಾಗಿಯೂ ವಿಶ್ವವಿದ್ಯಾ ನಿಲಯದ ಆಶ್ರಯದಲ್ಲಿಯೂ ಹಲವು ವಿಷಯಗಳ ಮೇಲೆ ಉತ್ತಮಗ್ರಂಥಗಳನ್ನು ಬರೆದು ಪ್ರಕಟಿಸಿ ಗಣ್ಯರಾಗಿದ್ದಾರೆ. ಈ ಸಂದರ್ಭದಲ್ಲಿ ಭಾರತ ಸಾಹಿತ್ಯ ಅಕ್ಯಾಡೆಮಿ ಯವರಿಂದ ಬಹುಮಾನಿತರಾಗಿರುವ ಶ್ರೀ ರಾಮಾಯಣದರ್ಶನಮ್ ಕಾವ್ಯದ ಕರ್ತೃ ಗಳಾದ ಶ್ರೀ ಕೆ. ವಿ. ಪುಟ್ಟಪ್ಪನವರು ನಮ್ಮ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿರುವುದು ಮಾತ್ರವಲ್ಲದೆ ಇದೀಗ ಮಹಾರಾಜ ಕಾಲೇಜಿನ ಪ್ರಿನ್ಸಿ ಪಾಲರಾಗಿ ನೇಮಕಗೊಂಡಿದಾರೆ ಎಂಬ ಅಂಶವನ್ನು ಇಲ್ಲಿ ಹೇಳಲು ನನಗೆ ಹೆಮ್ಮೆ ಯಾಗಿದೆ.

‘ ಶ್ರೀಮನ್ಮಹಾರಾಜರವರು ನಮ್ಮ ಮೇಲೆ ಕೃಪೆಮಾಡಿ ಈ ಸಮ್ಮೇಳನವನ್ನು ಉದ್ಘಾಟಿಸುವುದಕ್ಕೆ ಈ ಹೊತ್ತು ಇಲ್ಲಿಗೆ ದಯಮಾಡಿದ್ದಾರೆ. ಕನ್ನಡದ ಮೇಲೆ ಮಹಾಸ್ವಾಮಿಗಳಿಗಿರುವ ಅಭಿಮಾನ ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಕಲಾ ಸಾಹಿತ್ಯಗಳ ಬೆಳವಣಿಗೆಗೆ ಮೈಸೂರು ದೊರೆಗಳು ನೀಡಿರುವ ಪ್ರೋತ್ಸಾಹವು ಕೂಡ ಅನ್ಯಾದೃಶವಾದದ್ದು. ಶ್ರೀ ಚಿಕ್ಕದೇವರಾಜ ಒಡೆಯರು, ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರು, ಶ್ರೀ ನಾಲ್ಮಡಿ ಕೃಷ್ಣರಾಜ ಒಡೆಯರು ಇವರುಗಳ ಆಳ್ವಿಕೆಯಲ್ಲಿ ಕನ್ನಡ ಸಾಹಿತ್ಯಕ್ಕೆ ದೊರೆತ ಪ್ರೋತ್ಸಾಹ ನೂತನವಾದದ್ದು, ವಿಶಿಷ್ಟವಾದದ್ದು. ಚಿಕ್ಕದೇವರಾಜ ಒಡೆಯರು ತಮ್ಮ ಅರಮನೆಯ ಸಂಚಿಯ ಊಳಿಗದ ಹೆಣ್ಣೊಬ್ಬಳಲ್ಲಿ, ಹೊನ್ನಮ್ಮನಲ್ಲಿ ‘ ಸಾಹಿತ್ಯದ ವರದೇವತೆ ’ಯನ್ನು ಕಂಡು ಕೃತಿರಚನೆ ಮಾಡುವಂತೆ ಪ್ರೋತ್ಸಾಹ ನೀಡಿದುದು ಎಷ್ಟು ಉದಾತ್ತವಾಗಿದೆ! ಎಷ್ಟು ಆದರ್ಶಮಯವಾಗಿದೆ! ರಾಮಾಯಣ ಮಹಾಭಾರತಾದಿ ಪುರಾಣಕಾವ್ಯಾದಿಗಳ ಅನುವಾದ; ಕಾಳಿದಾಸ ಮತ್ತು ಷೇಕ್ಸ್‌ಪಿಯರ್ ಕವಿಗಳ ನಾಟಕಗಳ ಅನುವಾದ, ಉತ್ತಮವಾದ ದೃಶ್ಯ ಕಾವ್ಯಗಳ ಪ್ರದರ್ಶನ, ಇಂಗ್ಲಿಷ್, ಸಂಸ್ಕೃತ, ಕನ್ನಡ ಈ ಭಾಷೆಗಳಲ್ಲಿ ವಿದ್ಯಾಭ್ಯಾಸಕ್ಕೆ ಉತ್ತೇಜನ, ವಿಶ್ವವಿದ್ಯಾನಿಲಯ, ಶಿಕ್ಷಣ ಶಾಖೆಗಳ ಏರ್ಪಾಟು—ಇವುಗಳೆಲ್ಲಕ್ಕೂ ಮೈಸೂರು ದೊರೆಗಳ ಉದಾರವೂ ಕೃಪಾಪೂರ್ಣವೂ ಆದ ಸತತ ಪ್ರೋತ್ಸಾಹವೇ ಕಾರಣ. ಪ್ರಜಾವತ್ಸಲರೆಂದೂ ಸಂಯಮಶೀಲರೆಂದೂ ಆದರ್ಶ ಪ್ರಭುಗಳೆಂದೂ ರಾಜರ್ಷಿಗಳೆಂದೂ ಸ್ತುತ್ಯರಾದ ನಾಲ್ಮಡಿ ಶ್ರೀ ಕೃಷ್ಣರಾಜ ಒಡೆಯರವರ ಕಾಲದಲ್ಲಿ ನಡೆದುಬಂದ ರೀತಿನೀತಿಗಳನ್ನು ಮಹಾಸ್ವಾಮಿಯವರಾಗಿರುವ ಶ್ರೀ ಜಯಚಾಮರಾಜ ಒಡೆಯರ್ ಅವರು ಮುಂದುವರಿಸಿಕೊಂಡು ಬರುತ್ತಿರುವ ಸಂಗತಿಯನ್ನು ಇಲ್ಲಿ ಪ್ರಸ್ತಾಪಿಸಲು ಅತ್ಯಂತ ಹರ್ಷವಾಗಿದೆ. ವಿದ್ಯಾವಿನಯಸಂಪನ್ನರೂ, ದೇಶಭಾಷಾಪ್ರೇಮಿಗಳೂ ಎಲ್ಲಕ್ಕೂ ಮಿಗಿಲಾಗಿ ಪರಮತತ್ತ್ವಜ್ಞಾನಿಗಳೂ ಪರಮದೈವಭಕ್ತರೂ ಆಗಿರುವ ಶ್ರೀಮನ್ಮಹಾರಾಜರವರು ಸಂಸ್ಕೃತದ ಪುರಾಣಗಳನ್ನೂ ವೇದಾಂತಗ್ರಂಥಗಳನ್ನೂ ಕನ್ನಡದಲ್ಲಿ ಮೂಲಶ್ಲೋಕ ಮತ್ತು ಅರ್ಥವಿವರಣೆಗಳೊಡನೆ ಪಂಡಿತೋತ್ತಮರಿಂದ ಬರೆಯಿಸಿ ಪ್ರಕಟಪಡಿಸುತ್ತಿರುವುದು ಅತ್ಯದ್ಭುತವಾದ ಕಾರ್ಯವಾಗಿದೆ. ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲೆಯ ಈ ಕೃತಿರತ್ನಗಳು ಕನ್ನಡಿಗರಿಗೆ ಅಮೂಲ್ಯವಾದ ಆಸ್ತಿಯಾಗಿ ಪರಿಣಮಿಸಿವೆ. ಇದಕ್ಕೂ ಮಿಗಿಲಾಗಿ ಶ್ರೀಮನ್ಮಹಾರಾಜರವರು ಸ್ವತಃ ಕೃತಿರಚನೆಯಲ್ಲಿ ತೊಡಗಿ ದತ್ತಾತ್ರೇಯಗೀತೆ, ಯೋಗವನ್ನು ಕುರಿತ ಗ್ರಂಥ, ಮುಂತಾದ ದೊಡ್ಡ ಕೃತಿಗಳನ್ನು ಬರೆದು ಕೃತಕೃತ್ಯರಾಗಿದ್ದಾರೆ. ಶ್ರೀಮನ್ಮಹಾರಾಜರವರು ಈ ದಿವಸ ತಮ್ಮ ಅನೇಕಾ

ನೇಕ ಕಾರ್ಯಗೌರವಗಳಲ್ಲಿ ಬಿಡುವುಮಾಡಿಕೊಂಡು ಕನ್ನಡದ ಮೇಲಣ ಪ್ರೇಮಗೌರವಗಳಿಂದ ಸಮ್ಮೇಳನದ ಕಾರ್ಯಕಲಾಪಗಳನ್ನು ಉದ್ಘಾಟಿಸುವ ಸಲುವಾಗಿ ಇಲ್ಲಿಗೆ ಬಿಜಮಾಡಿರುವುದು ನಮಗೆಲ್ಲರಿಗೂ ತುಂಬ ಆನಂದದಾಯಕವಾದ ಸಂಗತಿಯಾಗಿದೆ.

'ಸಮ್ಮೇಳನದ ಅಧ್ಯಕ್ಷರಾಗಿ ದಯಮಾಡಿರುವ ಶ್ರೀ ಕೋಟ ಶಿವರಾಮ ಕಾರಂತರು ಸುಪ್ರಸಿದ್ಧ ಸಾಹಿತಿಗಳು. ಕತೆ, ಕಾದಂಬರಿ, ನಾಟಕ, ನಗೆಬರಹ, ಜೀವನ ಚರಿತ್ರೆ, ದಿನಚರಿ, ವಿಡಂಬನ,—ಹೀಗೆ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಕೃತಿರಚನೆ ಮಾಡಿದ ಸಿದ್ಧಪುರುಷರು. ವಯಸ್ಕರ ಶಿಕ್ಷಣ, ಮಕ್ಕಳ ಆಟಪಾಟಗಳು, ಸಮಾಜ ಸುಧಾರಣೆ, ಪ್ರೌಢವಿದ್ಯಾಭ್ಯಾಸ, ನಾಟಕ, ಕರ್ನಾಟಕ ಏಕೀಕರಣ, ಸ್ವಾತಂತ್ರ್ಯ ಸಂಗ್ರಾಮ ಈ ಮುಂತಾದ ಬೇರೆ ಬೇರೆ ಕ್ಷೇತ್ರಗಳಲ್ಲಿ ಮುನ್ನುಗ್ಗಿ ಸೇವೆ ಸಲ್ಲಿಸಿದ ಮಹಾಸಾಹಸಿ ಕಾರಂತರು. ದೇಶವಿದೇಶಗಳಲ್ಲಿ ಪ್ರವಾಸಮಾಡಿದ ಪರಿವ್ರಾಜಕ ಮಹಾನುಭಾವರು ಇವರು. "ಕಡಲ ತಡಿಯ ಭಾರ್ಗವ" ಎಂದು ಇವರನ್ನು ಕವಿಗಳೊಬ್ಬರು ಕರೆದಿರುವುದು ಉಚಿತವಾಗಿಯೇ ಇದೆ. ಇವರು ನಡಸಿಕೊಂಡು ಬಂದ 'ಬಾಲವನ' ಇವರು ಪ್ರಕಟಿಸಿದ 'ಬಾಲಪ್ರಪಂಚ', ಇವರು ಕಟ್ಟಿದ ನಾಟ್ಯ ಸಂಸ್ಥೆ—ಇವುಗಳ ಪರಿಚಯವಿರುವವರಿಗೆ ಕಾರಂತರ ವ್ಯಕ್ತಿತ್ವವನ್ನು ವರ್ಣಿಸುವುದು ಅನಾವಶ್ಯಕ. ಸಾಹಿತ್ಯ, ಸಂಗೀತ, ಚಿತ್ರ, ನರ್ತನ, ಶಿಲ್ಪ ಇವುಗಳೆಲ್ಲದರಲ್ಲಿಯೂ ಅಧಿಕಾರವಾಣಿಯಿಂದ ಮಾತನಾಡುವ ಅರ್ಹತೆಯುಳ್ಳ ಈ ಧೀರ ಸಾಹಿತಿ ಈ ಸಮ್ಮೇಳನದ ಅಧ್ಯಕ್ಷರಾಗಿ ಬಂದಿರುವುದು ನಮ್ಮೆಲ್ಲರ ಸುದೈವ. ಸಮ್ಮೇಳನದ ಅಂಗವಾಗಿ ನಡೆಯುವ ಕವಿಮೇಳದ ಅಧ್ಯಕ್ಷರಾಗಿ ಕನ್ನಡನಾಡಿನ ಸಂತಕವಿಶ್ರೇಷ್ಠರೆಂದೂ ಮಹಾ ಅನುಭಾವಿಗಳೆಂದೂ ಗಣ್ಯರಾಗಿರುವ ಶ್ರೀ ದ. ರಾ. ಬೇಂದ್ರೆಯವರು ದಯಮಾಡಿಸಿರುವುದು ಆನಂದದ ಸಂಗತಿ. ಇದೇ ರೀತಿಯಲ್ಲಿ ಲೇಖನಗೋಷ್ಠಿ ವಿಮರ್ಶಾಗೋಷ್ಠಿ ಶಾಸ್ತ್ರಸಾಹಿತ್ಯಗೋಷ್ಠಿಗಳಲ್ಲಿ ಅಧ್ಯಕ್ಷರಾಗಿ ಕಾರ್ಯವನ್ನು ಸಾಂಗವಾಗಿ ನೆರವೇರಿಸಿಕೊಡಲು ಬಂದಿರುವ ಶ್ರೀ ಸಿದ್ಧಯ್ಯ ಪುರಾಣಿಕ, ಶ್ರೀ ರಂ. ಶ್ರೀ. ಮುಗಳಿ, ಶ್ರೀ ಆರ್. ಎಲ್. ನರಸಿಂಹಯ್ಯ ಇವರುಗಳು ದೊಡ್ಡ ವಿದ್ವಾಂಸರು, ಘನ ವಿಮರ್ಶಕರು, ಕನ್ನಡಿಗರ ಅಚ್ಚುಮೆಚ್ಚಿನ ಸಾಹಿತಿಗಳು. ಇವರೆಲ್ಲರಿಗೂ ಹೃತ್ಪೂರ್ವಕ ಸುಖಾಗಮನವನ್ನು ಬಯಸುತ್ತೇನೆ.'

* * * *

ಸ್ವಾಗತಭಾಷಣವಾದಮೇಲೆ ಶ್ರೀಮನ್ಮಹಾರಾಜರವರು ಪ್ರಸನ್ನಗಂಭೀರವಾಣಿಯಿಂದ ಭಾಷಣಮಾಡಿ ಸಮ್ಮೇಳನದ ಕಾರ್ಯಕಲಾಪಗಳನ್ನು ಉದ್ಘಾಟಿಸಿದರು. ಮಹಾಸ್ವಾಮಿಯವರು ತಮ್ಮ ಭಾಷಣದಲ್ಲಿ ಹೀಗೆ ಅಪ್ಪಣೆ ಕೊಡಿಸಿದರು :

'ಪರಿಷತ್ತು ಅಖಿಲಕರ್ಣಾಟಕ ಸಂಸ್ಥೆ. ಇಂದಿನ ಸ್ಥಿತಿಯಲ್ಲಿ ನಮ್ಮ ನಾಡಿನ ಭಾಷಾಸಾಹಿತ್ಯಗಳೇ ಕನ್ನಡಿಗರನ್ನು ಒಂದುಗೂಡಿಸುವ ಮುಖ್ಯ ಸಾಧನ. ತಾಯ್ನುಡಿಯು ಎಂಥ ಪ್ರೇಮಬಂಧನವಾಗುವುದೆಂಬುದನ್ನು ಹೊರನಾಡಿನಲ್ಲಿ ಕಾಲಿಟ್ಟವರೆಲ್ಲರೂ ಅನುಭವಿಸಬಲ್ಲರು. ನಮ್ಮ ಕಲಾಸಾಹಿತ್ಯ ಸಂಸ್ಕೃತಿಗಳಿಗೆ ಸಂಬಂಧಪಟ್ಟಂತೆ ಪ್ರತಿವರ್ಷವೂ ಸಮ್ಮೇಳನವು ನಿರ್ಣಯಗಳನ್ನು ಮಾಡುತ್ತಿದೆ. ಅವು ಪ್ರಯೋಜನಕಾರಿಯಾಗಬೇಕಾಗಿದ್ದರೆ, ಹಿಂದೆ ಹದಿನೆಂಟು ಇಪ್ಪತ್ತು ಕಡೆಗಳಿಂದ ಸಮ್ಮತಿ ದೊರೆಯಬೇಕಾಗಿತ್ತು; ಆದ್ದರಿಂದ ತಡವಾಗುತ್ತಿತ್ತು; ತೊಡಕು ಬರುತ್ತಿತ್ತು. ಈಗ ನಮಗೆ ಸ್ವಾತಂತ್ರ್ಯ ದೊರೆತು, ಪ್ರಾಂತಗಳು ಸುಸಂಘಟಿತವಾಗಿ ಕೇಂದ್ರ ಸರಕಾರವು ಕನ್ನಡಕ್ಕೆ ಒಂದು ಗಣ್ಯಸ್ಥಾನವನ್ನು ಕೊಟ್ಟಿರುವುದರಿಂದ, ನಿಮ್ಮ ಆಶೆ ಆಕಾಂಕ್ಷೆಗಳು ಹೆಚ್ಚು ಸುಲಭವಾಗಿಯೂ ಸುಸೂತ್ರವಾಗಿಯೂ ನೆರವೇರಿಯಾವು.

'ಸಾಹಿತ್ಯಪರಿಷತ್ತು ಸರಸ್ವತಿಯ ನಿಲಯ; ಸರಸ್ವತಿ ಎಲ್ಲರ ತಾಯಿ. ಅವಳದು ನಿರ್ಮಲತೇಜಸ್ಸು; ಆ ತೇಜಸ್ಸಿಗೆ ಜಾತಿಮತಭೇದಗಳಿಲ್ಲ, ವರ್ಣಭೇದವಿಲ್ಲ. ಆದ್ದರಿಂದಲೇ ಕನ್ನಡ ಸಾಹಿತ್ಯವು ಎಲ್ಲ ವಿಧವಾದ ಜನರಿಂದಲೂ ಬೆಳೆದುಬಂದಿದೆ. ಅದನ್ನು ಎಲ್ಲ ಜಾತಿಯ ಜನರೂ ಓದುತ್ತಾರೆ. ಇದರಿಂದ ಒಬ್ಬರಿಗೊಬ್ಬರಿಗೆ ಆಂತರಿಕವಾದ ಪರಿಚಯ ಸ್ನೇಹಸೌಹಾರ್ದಗಳು ಲಭ್ಯವಾಗಿವೆ. ಕನ್ನಡನಾಡಿನ ವಿಸ್ತಾರದಿಂದಲೂ ರಾಜಕೀಯ ಕಾರಣಗಳಿಂದಲೂ ಇವಕ್ಕೆ ಇದ್ದ ಅಡ್ಡಿ ಆತಂಕಗಳನ್ನು ಪರಿಷತ್ತು ಬಹುಮಟ್ಟಿಗೆ ಕಡಮೆ ಮಾಡಿ ಐಕಮತ್ಯಕ್ಕೆ ಸಹಾಯವಾಗಿದೆ. ಅದರ ಪ್ರಯತ್ನದಿಂದಲೇ ಹೀಗೆ ಹಲವು ಪ್ರಾಂತಗಳಿಂದ ಬಂದ ಸೋದರ ಸೋದರಿಯರನ್ನು ಒಟ್ಟಿಗೆ ನೋಡಲು ಸಾಧ್ಯವಾಗಿದೆ.

'ಈಗ್ಗೆ ಸುಮಾರು ಐವತ್ತು ಅರವತ್ತು ವರ್ಷಗಳ ಕೆಳಗೆ ಎಲ್ಲೋ ಅಲ್ಲೊಬ್ಬರು ಇಲ್ಲೊಬ್ಬರು ವಿದ್ವಾಂಸರಾದವರು ರಾಜಾಶ್ರಯದಲ್ಲಿ ಪ್ರೌಢಗ್ರಂಥಗಳನ್ನು ಬರೆಯುತ್ತಿದ್ದರು. ಆದರೆ ಈಗ ಕಾಲ ಬದಲಾಗಿದೆ; ಬರೆಯುವವರೂ ಓದುವವರೂ ಹೆಚ್ಚಾಗಿದ್ದಾರೆ. ಇನ್ನೂ ವಿದ್ಯಾರ್ಥಿದಶೆಯಲ್ಲಿಯೇ ಹಲವರು ಉತ್ತಮವಾದ ಬರವಣಿಗೆಯನ್ನು ಬರೆಯುತ್ತಿದ್ದಾರೆ. ಕೆಲವು ಬಗೆಯ ಸಾಹಿತ್ಯವಂತೂ ಎಷ್ಟು ಹುಲಸಾಗಿದೆಯೆಂದರೆ, ಇದು ಆಧುನಿಕ ಕನ್ನಡ ಸಾಹಿತ್ಯಕ್ಕೆ ವಸಂತಕಾಲವೆನ್ನಬಹುದು. ಸಾಹಿತ್ಯಪರಿಷತ್ತೂ ವಿಶ್ವವಿದ್ಯಾನಿಲಯವೂ ಪ್ರೌಢಗ್ರಂಥಗಳನ್ನು ಪ್ರಕಟಿಸುತ್ತಿವೆ. ಇಂದು ಯಾವ ಶಾಸ್ತ್ರದ ಮೇಲೆ ಎಂಥ ಪ್ರೌಢಗ್ರಂಥವನ್ನು ಬೇಕಾದರೂ ಕನ್ನಡದಲ್ಲಿ ಬರೆಯಬಲ್ಲ ಶಕ್ತರಿದ್ದಾರೆ. ಅವರನ್ನೂ ಅವರ ಜ್ಞಾನವನ್ನೂ

ಜನಸಾಮಾನ್ಯವು ಹೇಗೆ ಉಪಯೋಗಿಸಿಕೊಳ್ಳಬೇಕೆಂಬುದೇ ಒಂದು ಸಮಸ್ಯೆಯಾಗಿದೆ. ಇಂದಿನ ಶಿಕ್ಷಣಕ್ರಮದಲ್ಲಿ ನಡೆಯಬೇಕಾದ ಸುಧಾರಣೆಗಳೆಲ್ಲಾ ರೂಪಗೊಂಡು ಅದು ಒಂದು ನೆಲೆಗೆ ಬಂದರೆ ಈ ಸಮಸ್ಯೆ ಬಗೆಹರಿದೀತು. ಅದರಲ್ಲಿ ಏನೇ ಬದಲಾವಣೆಯಾಗಲಿ, ಎರಡು ಕೋಟಿ ಜನ ತಮ್ಮ ತಾಯ್ನುಡಿಯನ್ನು ಬಿಟ್ಟು ಮತ್ತಾವ ಭಾಷೆಯಲ್ಲೂ ವಿದ್ಯಾವಂತರೆನ್ನಿಸಿಕೊಳ್ಳಲಾರರು, ಪಂಡಿತರಾಗರು, ಕವಿಗಳಾಗರು; ಆದವರ ವಿದ್ಯೆ, ವಿದ್ವತ್ತು, ಪಾಂಡಿತ್ಯ, ಜನಸಾಮಾನ್ಯವನ್ನು ಮುಟ್ಟದು; ಫಲ ಕೊಡದು. ಅವರು ಅದರಲ್ಲಿಯೇ ಹುಟ್ಟಿ ಅದರಲ್ಲಿಯೇ ಬೆಳೆಯಬೇಕು, ಅದರಲ್ಲಿಯೇ ಗಳಿಸಬೇಕು, ಅದನ್ನೇ ಬಳಸಬೇಕು. ಆಗಲೇ ಅದರಿಂದ ಪೂರ್ಣಪ್ರಯೋಜನ ದೊರೆಯುವುದು.'

* * * *

'ಈ ಸುಸಂದರ್ಭದಲ್ಲಿ ನಮ್ಮ ಕನ್ನಡನಾಡಿನ ಪ್ರಮುಖ ಸಾಹಿತಿಗಳಾದ ಶ್ರೀಮಾನ್ ಕೆ. ವಿ. ಪುಟ್ಟಪ್ಪನವರಿಗೆ ಅವರು ರಚಿಸಿರುವ ರಾಮಾಯಣದರ್ಶನವೆಂಬ ಕಾವ್ಯವನ್ನು ಮೆಚ್ಚಿ ಭಾರತ ಸರಕಾರವು ಗಣ್ಯಪ್ರಶಸ್ತಿಯನ್ನು ನೀಡಿರುವುದನ್ನು ನಾವು ಮನಗಂಡು ಅವರಿಗೆ ನಮ್ಮ ಹೃತ್ಪೂರ್ವಕವಾದ ಮೆಚ್ಚಿಗೆ ಸಂತೋಷಗಳನ್ನು ಸೂಚಿಸುತ್ತೇವೆ. ಮತ್ತು ಇವರಿಗೆ ದೊರೆತ ಪ್ರಶಸ್ತಿಯು ಕನ್ನಡನಾಡಿಗೇ ಒಂದು ಹೆಮ್ಮೆಯೆಂದು ನಾವು ಹೇಳಬಯಸುತ್ತೇವೆ.'

ಸಿರಿಗನ್ನಡಂ ಗೆಲ್ಗೆ !

* * * *

ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿದ ಭಾಷಣದಲ್ಲಿ ಪ್ರಭುಗಳ ನಾಡುನುಡಿಗಳ ಪ್ರೇಮವೂ ಹಿತಚಿಂತನೆಯೂ ಮೇಲಿಂದ ಮೇಲೆ ವ್ಯಕ್ತವಾಗುತ್ತಿದ್ದುದನ್ನು ಸಭಿಕರು ಆನಂದದಿಂದ ಕೇಳಿ ನಲಿದರು. ಮಹಾಪ್ರಭುಗಳವರು ತಮ್ಮ ದೊಡ್ಡಪ್ಪನವರೂ ತಮ್ಮ ತೀರ್ಥರೂಪರವರೂ ಪರಿಷತ್ತಿನ ಪುರೋಭಿವೃದ್ಧಿಯಲ್ಲಿ ಆಸಕ್ತಿ ವಹಿಸಿದ್ದ ವಿಷಯವನ್ನೂ ತಾವೂ ತಮ್ಮ ಹಿರಿಯರಂತೆಯೇ ತಮ್ಮ ತಾಯ್ನುಡಿಯ ವಿಷಯದಲ್ಲಿಯೂ ಪರಿಷತ್ತಿನ ವಿಷಯದಲ್ಲಿಯೂ ಅಕ್ಕರೆ ಆಸ್ಥೆಯನ್ನು ತಳೆದಿರುವ ಸಂಗತಿಯನ್ನೂ ತಮ್ಮ ಭಾಷಣದ ಆರಂಭದಲ್ಲಿ ಪ್ರಸ್ತಾಪಿಸಿದರು. ಆಳುವ ಮಹಾಸ್ವಾಮಿಯವರ ದೇಶಭಾಷಾಪ್ರೇಮಪೂರಿತವಾದ ಉದ್ಘಾಟನಾಭಾಷಣದಿಂದ ಸಮ್ಮೇಳನದ ಸಭಾಸದರಿಗೆ ಅಮಿತವಾದ ಸಂತೋಷವಾಯಿತು.

ಶ್ರೀಮನ್ಮಹಾರಾಜರವರು ತಮ್ಮ ಭಾಷಣವನ್ನು ಮುಗಿಸಿ ಪೀಠದಲ್ಲಿ ಮಂಡಿಸಿದ ಬಳಿಕ ಸುಂದರವಾದ ಹಾರತುರಾಯಿಗಳ ಉಪಾಯನವನ್ನು ಮಹಾಸ್ವಾಮಿ

ಯವರಿಗೂ ಸಮ್ಮೇಳನಾಧ್ಯಕ್ಷರಿಗೂ ಅರ್ಪಿಸಿ ಗೌರವಿಸಲಾಯಿತು. ಆ ಬಳಿಕ ಶ್ರೀ ಕಾರಂತರನ್ನು ಅಧ್ಯಕ್ಷರನ್ನಾಗಿ ಆಯ್ಕೆಗೈದುದನ್ನು ಕುರಿತಾದ ಅಧ್ಯಕ್ಷ ಮನ್ನಣೆ ಎಂಬ ಕಾರ್ಯಕ್ರಮ ನಡೆದು ಶ್ರೀಗಳಾದ ಎ. ಎನ್. ಮೂರ್ತಿರಾವ್, ಸಿದ್ಧಯ್ಯ ಪುರಾಣಿಕ್, ಜಿ. ವೆಂಕಟಸುಬ್ಬಯ್ಯ, ದ. ರಾ. ಬೇಂದ್ರೆ ಮತ್ತು ವಿ. ಸೀತಾರಾಮಯ್ಯ—ಇವರುಗಳು ಶ್ರೀ ಕಾರಂತರ ವ್ಯಕ್ತಿಮಹಿಮೆಯನ್ನೂ ಕಾರ್ಯದಕ್ಷತೆಯನ್ನೂ ಸಾಹಿತ್ಯ ಸೇವೆಯನ್ನೂ ಹೊಗಳಿ ಶ್ರೀ ಕಾರಂತರು ಅಧ್ಯಕ್ಷಪಟ್ಟವನ್ನು ಸ್ವೀಕರಿಸಬೇಕೆಂದು ಕೇಳಿಕೊಂಡರು. ಈ ಸಂದರ್ಭದಲ್ಲಿ ಶ್ರೀ ಬೇಂದ್ರೆಯವರು 'ಸಾಹಿತ್ಯದ ಹತ್ತು ಮುಖಗಳನ್ನು ಮಾತ್ರವಲ್ಲ, ತಮ್ಮ ಬದುಕಿನ ತಮ್ಮ ದೇಶದ ಹತ್ತು ಮುಖಗಳನ್ನೂ ನೋಡಿರುವ ಕಾರಂತರು ರತ್ನಸಿಂಹಾಸನದ ಹತ್ತಿರದ ಸಾಹಿತ್ಯಸಿಂಹಾಸನವನ್ನು ಏರಿರುವುದು ಮಹತ್ತರವಾದ ವಿಷಯ' ಎಂದು ಹೇಳಿದ ಮಾತನ್ನು ಸಭೆ ದೀರ್ಘಹರ್ಷೋದ್ಗಾರ ಮತ್ತು ಕರತಾಡನಗಳ ಪ್ರದರ್ಶನದಿಂದ ಅನುಮೋದಿಸಿತು. ಬಳಿಕ ಶ್ರೀ ಕಾರಂತರು ಎದ್ದುನಿಂತು ಅಸ್ಖಲಿತವೂ ಸ್ಫುಟವೂ ಧೀರಗಂಭೀರವೂ ಆದ ವಾಣಿಯಿಂದ ತಮ್ಮ ಅಧ್ಯಕ್ಷ ಭಾಷಣವನ್ನು ಅಲ್ಲಲ್ಲಿ ವಿವರಣೆ ವ್ಯಾಖ್ಯಾನಗಳೊಡನೆ ಓದಿದರು. ಜನ, ಸೂಜಿ ಬಿದ್ದರೂ ಸದ್ದು ಕೇಳುವಂತಹ ಮನದಿಂದಿದ್ದು ಕಾರಂತರ ವೀರವಾಣಿಯನ್ನು ಗಮನವಿಟ್ಟು ಲಾಲಿಸಿದರು. ತಮ್ಮ ಮೆಚ್ಚುಗೆಯನ್ನು ನಡುನಡುವೆ ಕರತಾಡನ ಹರ್ಷೋದ್ಗಾರಗಳಿಂದ ಸೂಚಿಸಿದರು. ಶ್ರೀ ಕಾರಂತರ ಭಾಷಣದಲ್ಲಿ ವಿಶಾಲವಾದ ಲೋಕಾನುಭವವೂ ಆಳವಾದ ಸಾಹಿತ್ಯಜ್ಞಾನವೂ ಅಪಾರವಾದ ನಾಡುನುಡಿಗಳ ಮಮತೆಯೂ ಹೆಜ್ಜೆಹೆಜ್ಜೆಗೆ ವ್ಯಕ್ತವಾಗುತ್ತಿದ್ದಿತು. ಕನ್ನಡನಾಡಿನ ಏಕೀಕರಣ, ಸಾಹಿತ್ಯ ಮತ್ತು ಬದುಕಿನ ಸಂಬಂಧ, ಸಾಹಿತಿಯ ಹೊಣೆ, ಬದುಕಿನಲ್ಲಿ ಗಂಡುಹೆಣ್ಣುಗಳ ಸಮಸ್ಯೆ ಮತ್ತು ಅದನ್ನು ಸಾಹಿತ್ಯದಲ್ಲಿ ತರಬೇಕೆ ಬೇಡವೆ? ತಂದರೆ ಹೇಗೆ ತರಬೇಕು, ಕನ್ನಡ ಗ್ರಂಥಗಳ ಭಾಷಾರೂಪದಲ್ಲಿ ತರಬಹುದಾದ ಸಾಮರಸ್ಯ, ವಿಶ್ವವಿದ್ಯಾನಿಲಯಗಳ ಕರ್ತವ್ಯ, ವಯೋಧರ್ಮಕ್ಕನುಗುಣವಾಗಿ ವಾಚನಾಭಿರುಚಿಯನ್ನು ಕೆರಳಿಸಬಲ್ಲ ಸಾಹಿತ್ಯವನ್ನು ಸೃಷ್ಟಿಸುವುದರ ಅವಶ್ಯಕತೆ, ಸಮಾಜವಿಜ್ಞಾನ ನಿಶ್ಚಿತವಿಜ್ಞಾನಾದಿ ಶಾಸ್ತ್ರಗಳನ್ನು ಕನ್ನಡದಲ್ಲಿ ರಚಿಸಬೇಕಾದುದರ ಅವಶ್ಯಕತೆ, ಕನ್ನಡ-ಕನ್ನಡ ನಿಘಂಟು ಕನ್ನಡ ಕೋಶ ಇವುಗಳ ರಚನೆಯಲ್ಲಿ ಕೈಕೊಳ್ಳಬೇಕಾದ ಕ್ರಮಗಳು, ಲೇಖಕನ ಪ್ರಾಮಾಣಿಕತೆ ವಾಚನಾಲಯಗಳು ಲೇಖಕರಿಗೆ ಕೊಡಬೇಕಾದ ಪ್ರೋತ್ಸಾಹ—ಈ ವಿಷಯಗಳ ಮೇಲೆ ಶ್ರೀ ಕಾರಂತರು ತಮ್ಮ ಅನುಭವಜನ್ಯವೂ ಪಾಂಡಿತ್ಯಪೂರ್ಣವೂ ಆದ ವಿಚಾರಲಹರಿಗಳನ್ನು ಹರಿಯಿಸಿ ಉದ್ದಾಮವಾದ ಭಾಷಣವನ್ನು ಮಾಡಿದರು. ಅವರ ಕೆಚ್ಚೆದೆಯ ವೀರವಾಕ್ಕಿನಿಂದ ಸಭಿಕವೃಂದ ಜಾಗೃತವಾಯಿತು. ಪ್ರಬುದ್ಧ

ಕರ್ನಾಟಕದ ವಾಚಕರ ಸೌಕರ್ಯಕ್ಕಾಗಿ ಸಮ್ಮೇಳನಾಧ್ಯಕ್ಷರ ಮತ್ತು ಗೋಷ್ಠಿಗಳ ಅಧ್ಯಕ್ಷರ ಭಾಷಣಗಳಿಂದ ಆಯ್ದ ಕೆಲಕೆಲವು ಭಾಗಗಳನ್ನು ಇದೇ ಸಂಚಿಕೆಯ ವಸ್ತುಕೋಶದ ಭಾಗದಲ್ಲಿ ಪ್ರತ್ಯೇಕವಾಗಿ ಅಚ್ಚುಮಾಡಿದೆ. ಶ್ರೀ ಕಾರಂತರ ಭಾಷಣವಾದ ಮೇಲೆ ರಾಷ್ಟ್ರಗೀತೆಯೊಡನೆ ಬೆಳಗಿನ ಕಾರ್ಯಕ್ರಮ ಕೊನೆಗೊಂಡಿತು.

ಅದೇ ದಿನ ಮಧ್ಯಾಹ್ನ ೩ ರಿಂದ ೪.೩೦ ರ ವರೆಗೆ ಲೇಖಕರ ಗೋಷ್ಠಿ ಕನ್ನಡದ ತರುಣ ಕವಿಗಳೂ ಹೈದರಾಬಾದು ಸರಕಾರದ ವ್ಯವಸಾಯಮಂತ್ರಿಗಳ ಆಪ್ತ ಕಾರ್ಯದರ್ಶಿಗಳೂ ಆದ ಶ್ರೀ ಸಿದ್ಧಯ್ಯ ಪುರಾಣಿಕರ ಅಧ್ಯಕ್ಷತೆಯಲ್ಲಿ ನಡೆಯಿತು. ಬಳ್ಳಾರಿಯ ಶ್ರೀ ಕೋ. ಚೆನ್ನಬಸಪ್ಪನವರು ತಮ್ಮ ಸ್ವಾಗತಭಾಷಣದಲ್ಲಿ ಕವಿ ದಾರ್ಶನಿಕ, ಸತ್ಯಶ್ರುತ ಎಂದೂ ಸಾಹಿತಿ ಸಮಾಜದ ಗುರು ಎಂದೂ ಭೂಮಿಯ ಮೇಲೆ ಸ್ವರ್ಗವನ್ನು ಸೃಷ್ಟಿಸುವ ಮಹಾಕಾರ್ಯವೇ ಸ್ವತಂತ್ರಭಾರತ ದಲ್ಲಿ ಲೇಖಕರಿಗಿರುವ ಹೊಣೆಯೆಂದೂ ಸಾಹಿತಿಯ ಹೃದಯ ಶುದ್ಧವಾಗಿರಬೇಕೆಂದೂ ಮನುಷ್ಯನನ್ನು ದೇವತ್ವಕ್ಕೆ ಒಯ್ಯುವುದೇ ಸಾಹಿತ್ಯದ ಉದ್ದೇಶವೆಂದೂ ಅನ್ನ ಅರಿವೆ ಆಸರ ಆರೋಗ್ಯ ಅಕ್ಷರವಿದ್ಯೆ ಈ ಪ್ರಾಥಮಿಕ ಅವಶ್ಯಕತೆಗಳನ್ನು ಪೂರೈಸುವ, ಇದರ ತಳಹದಿಯ ಮೇಲೆ ಮಾನವನ ಅಂತರಂಗವನ್ನು ಬೆಳಗುವ ಸಾಹಿತ್ಯವನ್ನು ಸೃಷ್ಟಿಸುವ ಹೊಣೆಗಾರಿಕೆ ಲೇಖಕನದು ಎಂದೂ ಇಂತಹ ಲೇಖಕನ ಹಿತಚಿಂತನೆ ಯೋಗಕ್ಷೇಮ ಸಮಾಜಕ್ಕೂ ಸರಕಾರಕ್ಕೂ ಸೇರಿದ್ದು ಎಂದೂ ಹೇಳಿ ಅರ್ಥವತ್ತಾಗಿ ವ್ಯಾಖ್ಯಾನಮಾಡಿ ಗೋಷ್ಠಿಯ ಅಧ್ಯಕ್ಷರನ್ನೂ ಲೇಖಕರನ್ನೂ ಸ್ವಾಗತಿಸಿದರು. ಬಳಿಕ ಶ್ರೀ ಸಿದ್ಧಯ್ಯ ಪುರಾಣಿಕರು ಲಲಿತವೂ ಪ್ರಸನ್ನವೂ ಆದ ಶೈಲಿಯಲ್ಲಿ ಭಾಷಣ ಮಾಡುತ್ತ ಸಾಹಿತ್ಯ ಹೇಗೆ ಉದಾತ್ತವಾದದ್ದು, ಲೇಖಕನ ಪೂರ್ವಸಿದ್ಧತೆಯ ಸ್ವರೂಪವೇನು, ಸಾರ್ಥಕ ಸಾಹಿತಿ ಎಂದರೆ ಯಾರು? ಋತಂಭರ ಪ್ರಜ್ಞೆಯ ಪರಿಪಾಕ ರೂಪವಾದ ದರ್ಶನವನ್ನು ಪಡೆದ ಋಷಿಯೇ ಹೇಗೆ ಕವಿಯಾಗುತ್ತಾನೆ, ದರ್ಶನ ಸಂಪನ್ನನಾದ ಲೇಖಕನ ಲಕ್ಷಣಗಳಾವುವು? ದರ್ಶನದ ಸ್ವರೂಪವೇನು? ಲೇಖಕನ ಸಮಸ್ಯೆಗಳಾವುವು, ಓದುಗರ ಸಮಸ್ಯೆಗಳಾವುವು, ಸಮಾಜವೂ ಸರಕಾರವೂ ಲೇಖಕರನ್ನು ಹೇಗೆ ಗೌರವಿಸಬೇಕು, ಪ್ರಕಾಶಕರ ಮತ್ತು ಲೇಖಕರ ಸಂಬಂಧ ಯಾವುದಿರಬೇಕು, ಹೊಸ ಲೇಖಕರಲ್ಲಿ ಸಂಯಮ ಏಕೆ ಬೆಳೆಯಬೇಕು ಎಂಬ ನಾನಾ ವಿಷಯಗಳನ್ನು ಕುರಿತು ಉದಾತ್ತವಾದ ಅಭಿಪ್ರಾಯಗಳನ್ನು ಸಭೆಯ ಮುಂದೆ ಮಂಡಿಸಿದರು. ಮನನಯೋಗ್ಯವಾದ ಶ್ರೀ ಪುರಾಣಿಕರ ಅಭಿಪ್ರಾಯ ಗಳನ್ನು ಸಭಿಕರು ಆನಂದದಿಂದ ಸ್ವಾಗತಿಸಿದರು. ಅಧ್ಯಕ್ಷಭಾಷಣಾನಂತರದಲ್ಲಿ

"ಸ್ವತಂತ್ರ ಭಾರತದಲ್ಲಿ ಸಾಹಿತಿಗಳ ಹಕ್ಕುಬಾಧ್ಯತೆಗಳು ಮತ್ತು ಹೊಣೆಗಾರಿಕೆ" ಎಂಬ ವಿಷಯದಲ್ಲಿ ಚರ್ಚೆ ಪ್ರಾರಂಭವಾಯಿತು. ಶ್ರೀಗಳಾದ ಬಿ. ಎಚ್. ಶ್ರೀಧರ, ಪ್ರಭುಶಂಕರ, ಎಂ. ವಾಸುದೇವಮೂರ್ತಿ, ನಿರಂಜನ, ಬಸವಾನಿ ರಾಮಶರ್ಮ, ರಾ. ಭೀಮು, ದ. ರಾ. ಬೇಂದ್ರೆ ಇವರುಗಳು ಮಾತನಾಡಿ ಚರ್ಚಾವಿಷಯದಲ್ಲಿ ಅಡಕವಾಗಿದ್ದ ಅನೇಕ ಅಂಶಗಳ ಮೇಲೆ ಬೆಳಕು ಬೀರಿದರು. ಸಮ್ಮೇಳನಾಧ್ಯಕ್ಷರಾದ ಶ್ರೀ ಕಾರಂತರು ಸಮಾರೋಪದ ನಾಲ್ಕು ಮಾತುಗಳನ್ನಾಡಿದ ಮೇಲೆ ಸ್ವಾಗತಾಧ್ಯಕ್ಷರ ವಂದನಾರ್ಪಣೆಯೊಡನೆ ಲೇಖಕರ ಗೋಷ್ಠಿ ಮುಗಿಯಿತು.

ಗೋಷ್ಠಿಯ ಅನಂತರದಲ್ಲಿ ಅದೇ ಸಭೆಯಲ್ಲಿ ಮೈಸೂರಿನ ಪುರಸಭಾಧ್ಯಕ್ಷರಾದ ಶ್ರೀ ಕೆ. ಪುಟ್ಟಸ್ವಾಮಿಯವರು ಸಮ್ಮೇಳನದ ಅಂಗವಾಗಿ ಮಹಾರಾಜಾ ಕಾಲೇಜಿನ ಯೂನಿಯನ್ ಕಟ್ಟಡದ ಉಪ್ಪರಿಗೆಯಲ್ಲಿ ಅಳವಡಿಸಿದ್ದ ಗ್ರಂಥಪ್ರದರ್ಶನದ ಪ್ರಾರಂಭೋತ್ಸವವನ್ನು ನೆರವೇರಿಸುತ್ತ ಭಾಷಣಮಾಡಿದ ಸಂದರ್ಭದಲ್ಲಿ ಹೀಗೆ ಹೇಳಿದರು:

'ಪ್ರಕಟನೆಯ ರೀತಿಯ ವಿಚಾರವಾಗಿ ಒಂದು ಮಾತು ಹೇಳಲೇಬೇಕು. ಎಷ್ಟೋ ಪುಸ್ತಕಗಳು ಅಸಹ್ಯವಾದ ನ್ಯೂಸ್ ಪ್ರಿಂಟ್ ಕಾಗದದಲ್ಲಿ ಅಚ್ಚಾಗುತ್ತಿವೆ. ಟೆಕ್ಸ್ಟ್ ಬುಕ್‌ಗಳಂತೂ, ಅನೇಕವು ಕೆಲಸಕ್ಕೆ ಬಾರದ ಕಾಗದದಲ್ಲಿ ಅಚ್ಚಾಗುತ್ತಿವೆ. ಅಚ್ಚಿನ ಸ್ವರೂಪವಂತೂ ಸ್ವಲ್ಪವೂ ಆಕರ್ಷಕವಾಗಿರುವುದಿಲ್ಲ. ಒಳ್ಳೆಯ ಕಾಗದದ ಮೇಲೆ ಅಚ್ಚುಕಟ್ಟಾಗಿ ಮುದ್ರಿಸಿ, ಅಂದವಾದ ರಟ್ಟು ಹಾಕುವುದರಿಂದ, ಪುಸ್ತಕ ನೋಡಲು ಚೆನ್ನಾಗಿ ಕಾಣುವುದಲ್ಲದೆ ಶ್ರಮವಿಲ್ಲದೆ ಸಂತೋಷವಾಗಿ ಓದಲನುಕೂಲಿಸುತ್ತದೆ. ಒಳ್ಳೆಯ ಪುಸ್ತಕ ನೋಡಲು ಅಂದವಾಗಿರಬೇಕು. ಈ ರೀತಿಯಲ್ಲಿ ಪುಸ್ತಕ ಪ್ರಕಟನೆಯಾಗಬೇಕಾದಲ್ಲಿ ಕೊಂಡು ಓದುವ ಸಹೃದಯರು ಹೆಚ್ಚಬೇಕು. ಅಂತಹ ಸಹೃದಯರ ಸಂಖ್ಯೆ ನಿಧಾನವಾಗಿಯಾದರೂ ಹೆಚ್ಚುತ್ತಿರುವುದೆಂದು ನನ್ನ ನಂಬಿಕೆ. ಗ್ರಂಥಗಳು ಅಂದವಾಗಿ ಕಾಣುವಂತಾದರೆ ವಿಷಯ ಹಿತವಾದುದಾದರೆ ಅದನ್ನು ಮೆಚ್ಚುವ ಸಹೃದಯರೂ ಹೆಚ್ಚುತ್ತಾರೆ. ಆದರೆ ಈ ಸಂದರ್ಭಗಳಲ್ಲಿ ನಾವು ಪಠ್ಯಪುಸ್ತಕಗಳಿಗೆ ದೊರೆಯುವ ಉತ್ತೇಜನವನ್ನು ಬಯಸಬಾರದು. ಆದರೂ ನಮ್ಮ ದೇಶದಲ್ಲಿ ಲೇಖಕರಿಗೆ ಕಷ್ಟಕಾಲವಿದೆ. ಅವರ ಸಹಾಯಕ್ಕೆ ಸರಕಾರಗಳು ಸಂಸ್ಥೆಗಳು ಪುಸ್ತಕ ಮಾರಾಟಗಾರರು ನೆರವಿಗೆ ನಿಲ್ಲಬೇಕು. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳದೆ ವಿಧಿಯಿಲ್ಲ. ಈಗ ಕನ್ನಡದಲ್ಲಿ ಕಾದಂಬರಿಯುಗ ಪ್ರಾರಂಭವಾಗಿದೆ ಎನ್ನಬೇಕು. ಅದರಿಂದ ಓದುಗರ ಸಂಖ್ಯೆಯೂ ಹೆಚ್ಚುತ್ತಿದೆ. ಶುಭ ಚಿಹ್ನೆ. ಆದರೆ ಅನೇಕ ಕಾದಂಬರಿಗಳು ಏನೂ ತಿರುಳಿಲ್ಲದವು. ಅನೀತಿಪಥದವು. ಓದುಗನ ಇಂದ್ರಿಯಗಳನ್ನು ಕೆರಳಿಸಿ

ಚಪಲತೆಯನ್ನುಂಟುಮಾಡುವಂಥವು. ಇಷ್ಟು ಹೇಳಿದರೆ ಎಲ್ಲ ಕಾದಂಬರಿಗಳ ವಿಷಯದಲ್ಲೂ ಇದೇ ಮಾತಲ್ಲ. ಬಹಳ ಒಳ್ಳೆಯ ಜೀವನದ ಸತ್ಯವನ್ನೂ ತೋರಿಸುವ ಕಾದಂಬರಿಗಳೂ ಕೆಲವಿಲ್ಲದೆ ಇಲ್ಲ. ಜನಪ್ರಿಯವಾದ ಈ ಸಾಹಿತ್ಯ ಸೃಷ್ಟಿಸುವಾಗ ಲೇಖಕ ಸಮಾಜದ ಒಟ್ಟು ಸಾರವನ್ನೇ ಗುರಿಯಾಗಿ ಮಾಡಬೇಕಾದುದು ಸರಿ ಎಂಬುದನ್ನು ತಾವೆಲ್ಲರೂ ಒಪ್ಪುತ್ತೀರೆಂದು ನಂಬಿದ್ದೇನೆ.

'ನನಗೆ ಅತ್ಯಂತ ವಿಶ್ವಾಸವಿರುವ ಒಂದು ವಿಚಾರವನ್ನು ಈ ಸಂದರ್ಭದಲ್ಲಿ ಪ್ರಸ್ತಾಪಿಸಲು ಕಾತರನಾಗಿದ್ದೇನೆ. ಅದು ಕನ್ನಡ ದೇಶದಲ್ಲಿ ಕನ್ನಡ ನುಡಿಯ ಸ್ಥಾನ. ಇದು ಬಹಳ ಹಳೆಯ ಹಾಡು. ನನಗಿಂತ ಚೆನ್ನಾಗಿ, ಪರಿಣಾಮಕಾರಿಯಾಗಿ ಎಷ್ಟೋ ಹಿರಿಯರು ಹಾಡಿದ್ದಾರೆ, ಹಾಡುತ್ತಿದ್ದಾರೆ. ಆದರೂ ಕನ್ನಡ ಭಾಷೆ ತನ್ನ ಮನೆಯಲ್ಲಿಯೇ ಯಾಜಮಾನ್ಯಕ್ಕೆ ಬದಲು ದಾಸಿಯಾಗಿದೆ. "ಸಾಯುತಿದೆ ನಿಮ್ಮ ನುಡಿ ಓ ಕನ್ನಡದ ಕಂದರಿರ"! ಎಂದು ಕೂಗಿದ ಕವಿವಾಣಿ ಕೂಡ ಕಿವುಡುಗಿವಿಯ ಮೇಲೆ ಬಿದ್ದಿದೆ. ಜನತೆಯಲ್ಲಿ ಬಾಹ್ಯ ದಾಸ್ಯ ತೊಲಗಿದರೂ ಹೃದಯದ ದಾಸ್ಯ ತೊಲಗಿಲ್ಲ. ದೇಶ ಸ್ವತಂತ್ರವಾಗಿ ವರ್ಷ ಎಂಟಾದರೂ ಪರಭಾಷೆಯ ಮೂಲಕವೇ ಮಕ್ಕಳ ಶಿಕ್ಷಣ ಅವ್ಯಾಹತವಾಗಿ ನಡೆಯುತ್ತಿದೆ. ಪ್ರಪಂಚದ ಇತರ ಯಾವ ದೇಶದಲ್ಲೂ ಇಂತಹ ಅಸ್ವಾಭಾವಿಕವಾದ ವಿದ್ಯಾಭ್ಯಾಸಪದ್ಧತಿಯಿಲ್ಲ.

'ನಾನು ಸರ್ವಾಧಿಕಾರಿಯಾಗಿದ್ದರೆ ಈ ಕೂಡಲೆ ಪರಭಾಷೆಯ ಮೂಲಕದ ವಿದ್ಯಾಭ್ಯಾಸವನ್ನು ನಿಲ್ಲಿಸುತ್ತಿದ್ದೆನೆಂದು ರಾಷ್ಟ್ರಪಿತ ಗಾಂಧೀಜಿಯವರು ಹೇಳಿದರು. ಈ ದೇಶ ಸ್ವತಂತ್ರವಾದ ಕೂಡಲೆ ಶಿಕ್ಷಣಮಾಧ್ಯಮದ ಪ್ರಶ್ನೆ ಪ್ರಶ್ನೆಯಾಗುಳಿಯುವುದಿಲ್ಲ; ಪಾಠಗಳ ಪಟ್ಟಿಯನ್ನೂ ಪಠ್ಯಪುಸ್ತಕಗಳನ್ನೂ ಸಿದ್ಧಗೊಳಿಸುವುದು ಪರಿಣತರ ಪಾಲಿನ ಕೆಲಸವೆಂದು ಗಾಂಧಿ ಹೇಳಿದ್ದರೂ ಸ್ವಾತಂತ್ರ್ಯ ಬಂದು ಎಂಟು ವರ್ಷಗಳಾದರೂ ಅವರ ಮಾತುಗಳು ಕಾರ್ಯರೂಪಕ್ಕೆ ಬಂದಿಲ್ಲ. ಅಷ್ಟೇ ಅಲ್ಲ, ಅನೇಕ ಶಿಕ್ಷಣ ವೇತ್ತರರೆನ್ನಿಸಿಕೊಳ್ಳುತ್ತಿರುವ ಅಧಿಕಾರವರ್ಗದವರಲ್ಲಿ ಶಿಕ್ಷಣಮಾಧ್ಯಮ ಪ್ರಶ್ನೆಯಾಗಿಯೇ ಉಳಿದಿದೆ. ಪರಭಾಷೆಯ ಮೂಲಕ ಕಲಿಯಬೇಕಾಗಿರುವುದರಿಂದ ನಮ್ಮ ಪ್ರತಿಭಾಶಕ್ತಿ ವಿನಾಶವಾಗಿದೆ; ಬುದ್ಧಿಶಕ್ತಿ ಬರಡಾಗಿದೆ. ನಮ್ಮ ಪ್ರತಿಭೆ ಕೆರಳಬೇಕಾದರೆ, ನಮ್ಮ ಶಕ್ತಿ ಸಾಮರ್ಥ್ಯಗಳು ವಿಕಾಸಗೊಳ್ಳಬೇಕಾದರೆ, ನಮ್ಮ ಭಾಷೆಗಳ ಮೂಲಕ ಶಿಕ್ಷಣ ಏರ್ಪಡಬೇಕು ಎಂದು ರಾಷ್ಟ್ರಪತಿ ರಾಜೇಂದ್ರಪ್ರಸಾದರು ಹೇಳಿ ಐದು ವರ್ಷವಾದರೂ ಪ್ರಗತಿಸೂಚನೆಯಿಲ್ಲ, ಸ್ವಭಾಷೆಯ ಮೂಲಕ ಜ್ಞಾನಕೋಶ ವಿಕಾಸಗೊಳ್ಳುವಂತೆ ಪರಭಾಷೆಯಿಂದ ಆಗುವುದಿಲ್ಲವೆಂಬುದು ಶಿಕ್ಷಣಶಾಸ್ತ್ರ ಸಿದ್ಧಾಂತ.

'ದೇಶಭಾಷೆಯಾದ ಕನ್ನಡದಲ್ಲಿ ದೇಶದ ಎಲ್ಲ ಜನಕ್ಕೂ ಜ್ಞಾನದಾನ ಮಾಡ

ಬೇಕು. ವಿಶ್ವದ ಜ್ಞಾನಭಂಡಾರವನ್ನು ಕನ್ನಡದ ಕಣಜದಲ್ಲಿ ತುಂಬಿ ಸಾಮಾನ್ಯರಿಗೂ ನಿಲುಕುವಂತೆ, ಅವರ ತಿಳಿವು ವೃದ್ಧಿಯಾಗುವಂತೆ ಅನುಕೂಲಗಳನ್ನು ಕಲ್ಪಿಸಬೇಕು. ಆ ಗುರಿಯನ್ನು ನಿಲುಕಲು ಮೈಸೂರು ವಿಶ್ವವಿದ್ಯಾನಿಲಯ ಅವಶ್ಯವಾದ ಕಾರ್ಯಗಳನ್ನು ತೀವ್ರವಾಗಿ ಕೈಗೊಳ್ಳಬೇಕೆಂದು ಆಳಿದ ನಾಲ್ವಡಿ ಕೃಷ್ಣರಾಜ ಒಡೆಯರವರು ೧೯೧೬ ರಲ್ಲಿ ವಿಶ್ವವಿದ್ಯಾನಿಲಯ ಸ್ಥಾಪಿತವಾದಾಗ ಹೇಳಿದರು. ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಶಿಕ್ಷಣಮಾಧ್ಯಮವಾಗುವುದಿರಲಿ, ಪ್ರಥಮಭಾಷೆ ಕೂಡ ಆಗಿಲ್ಲ. ೧೯೩೧ ರಲ್ಲಿ ಹೈಸ್ಕೂಲುಗಳಲ್ಲಿ, ಕೀರ್ತಿಶೇಷ ಶ್ರೀ ಎನ್. ಎಸ್. ಸುಬ್ಬರಾಯರು ಕನ್ನಡವನ್ನು ಶಿಕ್ಷಣಮಾಧ್ಯಮವನ್ನಾಗಿ ಮಾಡಿದಾಗ ಯಾವ ಸ್ಥಿತಿಯಲ್ಲಿತ್ತೋ ಕಾಲುಶತಮಾನ ಕಳೆದಮೇಲೂ ಮುಂದುವರಿಯಲು ಅವಕಾಶವಿತ್ತಿಲ್ಲ. ಇದಕ್ಕೆಲ್ಲಾ ಕಾರಣ ಆಡಳಿತವರ್ಗದಲ್ಲಿರುವ ಅಳುಕುಭಾವನೆ. ಸ್ವಾತಂತ್ರ್ಯ ಬರುವ ಮುನ್ನ ಶಿಕ್ಷಣ ತತ್ತ್ವಗಳ ವಿಷಯವಾಗಿ ಸರಕಾರಕ್ಕೆ ಸಲಹೆಗಾರರಾಗಿದ್ದ ವರ್ಗದ ಜನರೇ ಇಂದೂ ಸಲಹೆಗಾರರಾಗಿರುತ್ತಾರೆ. ಇಂಗ್ಲಿಷರ ರಾಜ್ಯಭಾರವೇ ಶಾಶ್ವತವಾಗಿ ಉಳಿಯಬೇಕೆನ್ನುತ್ತಿದ್ದವರೇ ಇಂದೂ ಶಿಕ್ಷಣಮಾಧ್ಯಮ ಇಂಗ್ಲಿಷ್ ಇರಬೇಕೆನ್ನುತ್ತಾರೆ. ಅವರಿಗೆ ತನ್ನ ದೇಶ ತನ್ನ ಜನರ ಹಿತಕ್ಕಿಂತ ಅಂತರರಾಷ್ಟ್ರೀಯರಂಗದಲ್ಲಿ ಉದ್ಯೋಗ ಸಂಪಾದಿಸುವುದು ಮುಖ್ಯ. ರಕ್ತಪೂರ್ಣಕ್ರಾಂತಿಯಿಂದ ಸ್ವಾತಂತ್ರ್ಯ ಬಂದಿದ್ದರೆ ಸಲಹೆಗಾರರೆಲ್ಲರೂ ಬದಲಾಗಿ ದೇಶದ ಪುನರ್ನಿರ್ಮಾಣದ ಕನಸು ಕಂಡವರು ಅಧಿಕಾರಕ್ಕೆ ಬರುತ್ತಿದ್ದರು. ಆಗ ಆ ಸವಿಗನಸೆಲ್ಲಾ ನನಸಾಗುತ್ತಿತ್ತು. ಆದರೆ ರಕ್ತರಹಿತ ಕ್ರಾಂತಿಯಿಂದ ಸ್ವಾತಂತ್ರ್ಯ ಲಭ್ಯವಾದುದರಿಂದ ಎಲ್ಲಾ ಸುಧಾರಣೆಗಳಂತೆ ವಿದ್ಯಾ ಸುಧಾರಣೆಯೂ ಕಾಲವಿಳಂಬವಾಗುತ್ತಿದೆ. ತಡವಾಗಿಯಾದರೂ ಆಗಲಿ ಈಗಲಾದರೂ ಎಚ್ಚತ್ತು ಕನ್ನಡ ಪ್ರಥಮಭಾಷೆಯಾಗುವಂತೆಯೂ ಮತ್ತು ಶಿಕ್ಷಣಮಾಧ್ಯಮವಾಗುವಂತೆಯೂ ಜರೂರು ಕಾರ್ಯಕ್ರಮ ಕೈಗೊಳ್ಳುವಂತೆ ಸರಕಾರವನ್ನು ಒತ್ತಾಯಪಡಿಸುತ್ತೇನೆ.'

* * * *

ಜೂನ್ ೧೧ ನೆಯ ಶನಿವಾರ ಬೆಳಿಗ್ಗೆ ೯ ಗಂಟೆಗೆ ಶಾಸ್ತ್ರಸಾಹಿತ್ಯಗೋಷ್ಠಿ ಸೇರಿತು. ಸ್ವಾಗತಾಧ್ಯಕ್ಷರಾದ ಮೈಸೂರು ಟೀಚರ್ಸ್ ಕಾಲೇಜಿನ ಶ್ರೀ ಎನ್. ಎಸ್. ವೀರಪ್ಪನವರು ಗೋಷ್ಠಿಯ ಅಧ್ಯಕ್ಷರಾಗಿ ದಯಮಾಡಿದ ಬೆಂಗಳೂರು ಸೆಂಟ್ರಲ್ ಕಾಲೇಜಿನ ಶ್ರೀ ಆರ್. ಎಲ್. ನರಸಿಂಹಯ್ಯನವರನ್ನೂ ಸಭಿಕರನ್ನೂ ಸ್ವಾಗತಿಸುತ್ತ ತಮ್ಮ ಭಾಷಣದಲ್ಲಿ ಶಾಸ್ತ್ರ ಮತ್ತು ವಿಜ್ಞಾನ ಈ ಎರಡು ಪದಗಳ ಅರ್ಥವ್ಯಾಪ್ತಿಯನ್ನು ಪರಿಶೀಲಿಸುವುದರ ಅಗತ್ಯವನ್ನೂ ಶಾಸ್ತ್ರಸಾಹಿತ್ಯಕ್ಕೆ ಮೈಸೂರು ನಗರದಿಂದ

ಸಂದಾಯವಾದ ಕಾಣಿಕೆಯನ್ನೂ ಜನತೆಗೆ ವಿಜ್ಞಾನಪರಿಚಯದ ಅಗತ್ಯವನ್ನೂ ಕಲಾವಿದ ವಿಜ್ಞಾನಿ ಇವರಿಬ್ಬರ ನಿಸರ್ಗ ವೀಕ್ಷಣೆಯಲ್ಲಿ ಕಾಣಬರುವ ತಾರತಮ್ಯ ವನ್ನೂ ಶಾಸ್ತ್ರಸಾಹಿತ್ಯದಲ್ಲಿ ಶುದ್ಧಸಾಹಿತ್ಯ ಪ್ರಯೋಗವಿಜ್ಞಾನಗಳೆರಡನ್ನೂ ಕುರಿತ ಗ್ರಂಥಗಳೂ ಮಕ್ಕಳು ಜನಸಾಮಾನ್ಯರು ಪಂಡಿತರು ಇವರಿಗಾಗಿ ಬೇರೆ ಬೇರೆ ಹಂತದ ಗ್ರಂಥಗಳೂ ಪ್ರಕಟವಾಗಬೇಕೆಂಬುದನ್ನೂ ಪಾರಿಭಾಷಿಕ ಪದಗಳ ವಿಚಾರದಲ್ಲಿರುವ ತೊಡಕನ್ನೂ ಸಂಸ್ಕೃತಿ ಪ್ರಸಾರದ ಜೊತೆಗೆ ವಿಜ್ಞಾನಸಂಸ್ಕೃತಿ ಯನ್ನೂ ಪ್ರಸಾರಮಾಡುವುದರ ಅವಶ್ಯಕತೆಯನ್ನೂ ಕುರಿತು ವಿಚಾರಪೂರ್ಣವಾದ ಅನೇಕ ಅಂಶಗಳನ್ನು ಸಭಿಕರ ಗಮನಕ್ಕೆ ತಂದರು. ಆ ಬಳಿಕ ಗೋಷ್ಠಿಯ ಅಧ್ಯಕ್ಷ ರಾದ ಶ್ರೀ ಆರ್. ಎಲ್. ನರಸಿಂಹಯ್ಯನವರು ಅಧ್ಯಕ್ಷಭಾಷಣಮಾಡುತ್ತ ಸತ್ಕಥಾ ಕಾಲಕ್ಷೇಪವೆಂಬಂತೆ ಈ ಪರಮಾಣುಯುಗದ ಯುಗಪುರುಷನೂ ಸಾಪೇಕ್ಷತಾ ವಾದದ ಜನಕನೂ ಭೌತತತ್ತ್ವದಾರ್ಶನಿಕನೂ ಆದ ಐನ್‌ಸ್ಟೀನನ ಜೀವನವನ್ನೂ ವ್ಯಕ್ತಿ ಹಿರಿಮೆಯನ್ನೂ ಆತನ ಪ್ರತಿಭೆ ಪಾಂಡಿತ್ಯಗಳನ್ನೂ ಆತನ ಸರಳ ಸುಂದರ ಜೀವನವನ್ನೂ ಕುರಿತ ಕೆಲವು ವಿವರಗಳನ್ನು ಸಭೆಗೆ ತಿಳಿಸಿದರು. ಆ ಬಳಿಕ 'ತಕ್ಕಷ್ಟು ಪ್ರಮಾಣದಲ್ಲಿ ಶಾಸ್ತ್ರಸಾಹಿತ್ಯ ನಿರ್ಮಾಣಮಾಡಲು ಕೈಗೊಳ್ಳಬೇಕಾದ ಕ್ರಮಗಳು' ಎಂಬ ವಿಷಯವನ್ನು ಕುರಿತ ಚರ್ಚೆ ಪ್ರಾರಂಭವಾಯಿತು. ಚರ್ಚೆಯಲ್ಲಿ ಶ್ರೀಯುತರು ಗಳಾದ ಡಾ|| ಕುಪ್ಪಸ್ವಾಮಿ, ಬಿ. ಪಿ. ರಾಧಾಕೃಷ್ಣ, ಎಂ. ವಾಸುದೇವಮೂರ್ತಿ ಮುಂತಾದವರು ಭಾಗವಹಿಸಿ ವಿಷಯವನ್ನು ನಾನಾ ದೃಷ್ಟಿಗಳಿಂದ ವಿವೇಚಿಸಿದರು. ಅಧ್ಯಕ್ಷರ ಸಮಾರೋಪರೂಪವಾದ ಭಾಷಣಾನಂತರದಲ್ಲಿ ಸಭೆ ಚೆದುರಿತು.

ಅದೇ ಮಧ್ಯಾಹ್ನ ೩ ಗಂಟೆಗೆ ಜೂನಿಯರ್ ಬಿ.ಎ. ಮಂದಿರದಲ್ಲಿ ವಿಮರ್ಶಾ ಗೋಷ್ಠಿ ಸೇರಿತು. ಶ್ರೀ ಎಸ್. ವಿ. ರಂಗಣ್ಣನವರು ಸ್ವಾಗತ ಭಾಷಣಮಾಡಿ ನೈಜ ವಿಮರ್ಶೆಯ ಲಕ್ಷಣವೇನು ಎಂಬುದನ್ನೂ ವಿಮರ್ಶೆಗೆ ಚಾರಿತ್ರಕದೃಷ್ಟಿ ಹೇಗೆ ಅಗತ್ಯ ಎಂಬುದನ್ನೂ ಹೇಗೆ ವಿಮರ್ಶಕನು ಜ್ಞಾನಾರ್ಜನೆಯಲ್ಲಿ ನಿರತನಾಗಿರಬೇಕೆಂದೂ ನುಡಿದು ಗೋಷ್ಠಿಯ ಅಧ್ಯಕ್ಷರಾದ ಶ್ರೀ ರಂ. ಶ್ರೀ ಮುಗಳಿಯವರನ್ನೂ ಸಭಿಕರನ್ನೂ ಆದರದಿಂದ ಸ್ವಾಗತಿಸಿದರು. ಬಳಿಕ ಶ್ರೀ ಮುಗಳಿಯವರು ತಮ್ಮದೇ ಆದ ರಮ್ಯಶೈಲಿ ಯಲ್ಲಿ ಬಹು ಗಹನವಾದ ವಿಮರ್ಶೆಯ ತತ್ತ್ವಗಳನ್ನು ಮನಂಬುಗುವ ರೀತಿಯಲ್ಲಿ ವಿವರಿಸಿ ಹೇಳಿದರು. ಸಾಹಿತ್ಯ ಮತ್ತು ವಿಮರ್ಶೆಗಳಿಗೆ ಮೂಲ ಜೀವನರಸಿಕತೆ, ಸೌಂದರ್ಯೋ ಪಾಸನೆ ಎಂದರು. ಇವೆರಡೂ ಸಾಕ್ಷೀಭಾವ ಸ್ನೇಹಭಾವ ಸೌಂದರ್ಯಭಾವಗಳಿಂದ ಕೂಡಿದ ರಸಪ್ರಜ್ಞೆಯಲ್ಲಿ ಉಗಮಹೊಂದುತ್ತದೆ ಎಂದರು. ಸಾಹಿತ್ಯಜ್ಞ ವಿಮರ್ಶಕ ರಲ್ಲಿ ಸರಸದಾಂಪತ್ಯ ಬೆಳೆಯಬೇಕು ಎಂದರು. ಕವಿ ಮತ್ತು ಸಹೃದಯ ಈ ಶಬ್ದಗಳ

ವ್ಯಾಖ್ಯೆ ನಡಸಿದರು. ಉತ್ತಮ ವಿಮರ್ಶಕನ ಲಕ್ಷಣವನ್ನು ಕಾವ್ಯಾವಲೋಕಕಾರನ ಪದ್ಯವೊಂದರಿಂದ ವಿವರಿಸಿ ಹೇಳಿದರು. ಪ್ರಾಮಾಣಿಕವಿಮರ್ಶೆಯ ನಾನಾ ಮುಖ ಗಳನ್ನು ವಿಶದಪಡಿಸಿದರು. ನಿಜವಾದ ವಿಮರ್ಶಕನ ಲಕ್ಷಣಗಳನ್ನು ಶ್ರುತಪಡಿಸಿದರು. ಇಂಥ ವಿಮರ್ಶೆ ಬೆಳೆಯಲು ಕೈಗೊಳ್ಳಬೇಕಾದ ಕೆಲವು ಕ್ರಮಗಳನ್ನು ತಿಳಿಸಿದರು. ಸ್ವಾತಂತ್ರ್ಯೋತ್ತರ ಕನ್ನಡ ಕಾದಂಬರಿಗಳನ್ನು ಕುರಿತು ನಾಲ್ಕು ಮಾತು ಹೇಳಿದರು. ಶ್ರೀ ಮುಗಳಿಯವರ ಮಾತುಗಾರಿಕೆ ಎಲ್ಲರ ಮನಸ್ಸಿಗೂ ರುಚಿಸಿತು. ಮುಗುಳಿಯವರ ಅಧ್ಯಕ್ಷ ಭಾಷಣಾನಂತರದಲ್ಲಿ 'ಸ್ವಾತಂತ್ರ್ಯೋತ್ತರ ಕನ್ನಡ ಕಾದಂಬರಿಗಳು; ಅವುಗಳಲ್ಲಿ ಕಲಾತಂತ್ರ ಜನಜೀವನದ ಚಿತ್ರ; ಜನತೆಯ ಮೇಲೆ ಇವುಗಳ ಪ್ರಭಾವ' ಎಂಬ ವಿಷಯದ ಮೇಲೆ ಚರ್ಚೆ ನಡೆಯಿತು. ಶ್ರೀಗಳಾದ ಕೆ. ಎಸ್. ಕೃಷ್ಣಮೂರ್ತಿ, ಎಚ್. ಎಂ. ಶಂಕರನಾರಾಯಣರಾವ್, ಎಲ್. ಎಸ್. ಶೇಷಗಿರಿರಾವ್, ಕೆ. ನರಸಿಂಹಮೂರ್ತಿ, ಮಿರ್ಜಿ ಅಣ್ಣಾರಾಯರು, ನಿರಂಜನ, ಚನ್ನವೀರಕಣವಿ, ಕೆ. ಜಿ. ಶಾಸ್ತ್ರಿ, ಶ್ರೀಮತಿ ಅನುಪಮ ಇವರುಗಳು ಮಾತನಾಡಿದರು. ಇವರಲ್ಲಿ ಅನೇಕರು ಬರೆದು ತಂದ ಪ್ರಬಂಧಗಳನ್ನು ಓದಿದುದರಿಂದ ಗೋಷ್ಠಿ ತುಂಬ ಯಶಸ್ವಿಯಾಯಿತು. ಈಗ ಬರುತ್ತಿರುವ ಕಾದಂಬರಿಗಳ ವಿಷಯವಾಗಿ ವಿವೇಚನೆ ನಡೆದು ವಿಮರ್ಶಾಗೋಷ್ಠಿ ಸೇರಿದ್ದು ಸಾರ್ಥಕವೆನಿಸಿಕೊಂಡಿತು. ಶ್ರೀ ಮುಗಳಿ ಯವರ ಸಮಾರೋಪ ಭಾಷಣಾನಂತರ ಸಭೆ ಮುಗಿಯಿತು.

ಸಂಜೆ ನಡೆದ ಬಹಿರಂಗ ಅಧಿವೇಶನದಲ್ಲಿ ಹಲವು ಗೊತ್ತುವಳಿಗಳು ಅಂಗೀಕೃತ ವಾದವು. ಇವುಗಳಲ್ಲಿ ಪ್ರಾಥಮಿಕ ಮಟ್ಟದಿಂದ ವಿಶ್ವವಿದ್ಯಾನಿಲಯದ ಮಟ್ಟದ ವರೆಗೂ ಕನ್ನಡವು ಪ್ರಾದೇಶಿಕ ಭಾಷೆಯಾಗಿರುವ ಪ್ರದೇಶದಲ್ಲೆಲ್ಲಾ ಕನ್ನಡವೇ ಶಿಕ್ಷಣಮಾಧ್ಯಮವಾಗುವಂತೆ ಸಂಬಂಧಪಟ್ಟ ಸರಕಾರಗಳು ತಕ್ಷಣ ಕ್ರಮಗೊಳ್ಳ ಬೇಕೆಂಬ ನಿರ್ಣಯವು ಮುಖ್ಯವಾದದ್ದು. ಇದನ್ನು ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರರು ಮಂಡಿಸಿದರು. ಶ್ರೀ ತಿ. ತಾ. ಶರ್ಮರು ಅನುಮೋದಿಸಿದರು. ಈ ನಿರ್ಣಯ ಬೇಗ ಕಾರ್ಯರೂಪಕ್ಕೆ ಬರುವಂತಾಗಲಿ ಎಂದು ನಾವು ಮತ್ತೆ ಒತ್ತಿ ಹೇಳುತ್ತೇವೆ.

ಜೂನ್ ೧೨ ರ ಬೆಳಗ್ಗೆ ೮ ಗಂಟೆಗೆ ಕವಿವರೇಣ್ಯರಾದ ಶ್ರೀ ದ. ರಾ. ಬೇಂದ್ರೆ ಯವರ ಅಧ್ಯಕ್ಷತೆಯಲ್ಲಿ ಕವಿಮೇಳ ನಡೆಯಿತು. ಶ್ರೀಗಳಾದ ದ. ರಾ. ಬೇಂದ್ರೆ, ಸಿದ್ಧಯ್ಯ ಪುರಾಣಿಕ, ರಂ. ಶ್ರೀ. ಮುಗಳಿ, ಪು. ತಿ. ನರಸಿಂಹಾಚಾರ್, ಗೋಪಾಲ ಕೃಷ್ಣ ಅಡಿಗ, ಚನ್ನವೀರಕಣವಿ, ಬಿ. ಎಚ್. ಶ್ರೀಧರ, ರಾಮಚಂದ್ರಶರ್ಮ, ಜಿ. ಶಂ. ಪರಮಶಿವಯ್ಯ, ಕೋ. ಚನ್ನಬಸಪ್ಪ, ಎಸ್. ಅನಂತನಾರಾಯಣ,

ಕೆ. ನರಸಿಂಹಮೂರ್ತಿ, ಜೋಳದರಾಶಿ ದೊಡ್ಡಣ್ಣಗೌಡ, ಕ. ವೆಂ. ರಾಜಗೋಪಾಲ್, ವರದರಾಜರಾವ್, ವಸುದೇವ ಭೂಪಾಲಂ, ಸತ್ಯಪ್ರಚಾರಕ್ ರಾಮಚಂದ್ರಜಿ, ಹೇಮದಳ ರಾಮದಾಸ್, ಅಂಕಪ್ಪ, ಬಿ. ಎಸ್. ಸುಬ್ರಹ್ಮಣ್ಯಂ, ಮಹದೇವಶಾಸ್ತ್ರಿ, ಶಿವಲಿಂಗಯ್ಯ, ಮಹದೇವಮೂರ್ತಿ, ಮತ್ತು ಬಿ. ಎಸ್. ರಾಮಾಚಾರ್ ಇವರುಗಳು ತಮ್ಮ ಕವನಗಳನ್ನು ಓದಿದರು. ಈ ಕಾರ್ಯಕ್ರಮ ತುಂಬ ಸೊಗಸಾಗಿತ್ತು. ಸಭಿಕರಿಗೆ ಕವಿಗಳ ವ್ಯಕ್ತಿಪರಿಚಯವೂ ಅವರ ಕಾವ್ಯಗಾಯನದ ಶ್ರವಣಸುಖವೂ ಏಕಕಾಲದಲ್ಲಿ ಲಭಿಸುತ್ತಿದ್ದುದು ಈ ಕಾರ್ಯಕ್ರಮದ ವಿಶೇಷ ಲಕ್ಷಣವಾಗಿತ್ತು.

ಕವಿಮೇಳದ ಕಾರ್ಯಕ್ರಮ ಮುಗಿದಮೇಲೆ ಸಮ್ಮೇಳನದ ಸಮಾರೋಪ ಸಮಾರಂಭ ಪ್ರಾರಂಭವಾಯಿತು. ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್ ಅವರು ಶ್ರೀ ರಾಮಾಯಣದರ್ಶನಮ್ ಮಹಾಕಾವ್ಯದಿಂದ ಪ್ರಾರ್ಥನಾರೂಪವಾದ ಕೆಲವು ಪದ್ಯಗಳನ್ನು ಶ್ರಾವ್ಯವಾಗಿ ಹಾಡಿದ ಮೇಲೆ ಶ್ರೀಮತಿ ಚೊಕ್ಕಮ್ಮನವರು ವೀಣಾವಾದನದೊಡನೆ ಕೆಲವು ಗೀತಗಳನ್ನೂ ವಚನಗಳನ್ನೂ ಮಧುರವಾಗಿ ಹಾಡಿದರು. ಆ ಬಳಿಕ ಶ್ರೀ ಕುವೆಂಪು ಅವರು ತಮ್ಮ ಸಮಾರೋಪಭಾಷಣದಲ್ಲಿ ಸಮ್ಮೇಳನದ ಕಳೆದೆರಡು ದಿನಗಳ ಚಟುವಟಿಕೆಗಳನ್ನು ಸಿಂಹಾವಲೋಕನ ಕ್ರಮದಿಂದ ಸೂಕ್ತ ವ್ಯಾಖ್ಯಾನದೊಡನೆ ತಿಳಿಸಿದ ಸಂದರ್ಭದಲ್ಲಿ ಹೀಗೆ ಹೇಳಿದರು :

* * * *

“ಭಾರತ ಮತ್ತು ಕರ್ನಾಟಕದ ಬದುಕಿನಲ್ಲಿ ಸಂಧಿ ಕಾಲವಿದು. ಪ್ರಾಂತ ಪುನರ್ವಿಂಗಡನಾಸಮಿತಿಯ ಇತ್ಯರ್ಥವೇನು ? ಸರಕಾರ ಆ ಬಗ್ಗೆ ಏನು ಕಾರ್ಯಕ್ರಮ ಕೈಗೊಳ್ಳಲಿದೆ ? ಎಂದು ಕಾದು ನೋಡುತ್ತಿರುವ ಸಮಯ ಇದು. ಈ ಕಾಲದಲ್ಲಿ ಸಮ್ಮೇಳನ ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ನಡೆಯುತ್ತಿರುವುದು ಒಂದು ವಿಶೇಷ. ಕರ್ನಾಟಕ ಸಿಂಹಾಸನಾಧೀಶ್ವರರಾದ ಶ್ರೀಮನ್ ಮಹಾರಾಜರವರು ಇದನ್ನು ಉದ್ಘಾಟಿಸಿರುವುದು ಮತ್ತೂ ವಿಶೇಷ. ಇದನ್ನೆಲ್ಲಾ ನೋಡಿದರೆ ಏನೋ ಆಸೆ ಮೂಡುತ್ತದೆ. ಶಂಕೆ ಕೆರಳುವವರೂ ಇದ್ದಾರೆ. ಆದರೆ ಶಂಕೆ ಕೆರಳುವವರಿಗಿಂತ ಆಸೆ ಕೆರಳಿದವರೇ ಹೆಚ್ಚು ಮಂದಿ.”

* * * *

“ಇದುವರೆಗೆ ಸಿರಿಗನ್ನಡಂ ಗೆಲ್ಗೆ ಎನ್ನುತ್ತಿದ್ದೆವು. ಇಂದು ಅದು ಗೆದ್ದಿದೆ. ಶ್ರೀ ಡಿ'ಸೌಜಾರವರು ಶುದ್ಧ ಹಾಗೂ ಗಂಭೀರವಾದ ಭಾಷೆಯಲ್ಲಿ ಕನ್ನಡ ಮಾತ ನಾಡಿರುವುದು ಶುಭಸೂಚನೆ. ಇಂತಹ ‘ಭಯಂಕರ’ ಘಟನೆ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಎಂದೂ ನಡೆದಿರಲಿಲ್ಲ. ವೈಸ್-ಛಾನ್ಸಲರ್ ಆದವರು ದೇಶ

ಭಾಷೆಯಲ್ಲಿ ಭಾಷಣಮಾಡುವುದು ಸಾಧ್ಯವೆ? ಎನ್ನುವ ಕಾಲವೊಂದಿತ್ತು. ಅದು ಒಂದು ದುಃಸ್ವಪ್ನವಾಗಿ ಕಳೆದುಹೋಯಿತು. ಇನ್ನೆಲ್ಲಾ ಸುಖಸ್ವಪ್ನ ಮತ್ತು ಎಚ್ಚರದ ಕಾಲ."

* * * *

"ಕಾರಂತರು ಆಶಾವಾದಿಗಳು, ಧೀರರು, ತಮ್ಮ ಭಾಷಣವನ್ನು ನಿಮಗಿತ್ತಿದ್ದಾರೆ. ಅವರು ಏಕೆ ಖಾರವಾಗಿ, ಕಟುವಾಗಿ ನುಡಿಯುತ್ತಾರೆ? ಇಷ್ಟು ಸೌಮ್ಯ ಮೂರ್ತಿ ಇಷ್ಟೇಕೆ ಕಟುವಾಗಿ ನುಡಿಯುತ್ತಾರೆ? ಎಂದು ಯೋಚಿಸಿದರೆ ಬಹುಜನರು ಶ್ಲಾಘಿಸಬಹುದಾದ ಮಾತನ್ನೇ ಆಡಿದ್ದಾರೆ. ಸಾಹಿತ್ಯದ ಬಗ್ಗೆ ಕೆಲವರಿಗೆ ರುಚಿಸಬಹುದಾದ, ಕೆಲವರಿಗೆ ರುಚಿಸದ ಮಾತನ್ನೇ ಆಡಿದ್ದಾರೆ."

* * * *

"ಕನ್ನಡ ಗ್ರಂಥ ಮತ್ತು ವಿಶ್ವವಿದ್ಯಾನಿಲಯದ ಜವಾಬ್ದಾರಿ ಬಗ್ಗೆ ಸಲಹೆ ನೀಡಿದ್ದಾರೆ. ಸ್ವಾಗತಸಮಿತಿಯ ಕಾರ್ಯಾಧ್ಯಕ್ಷನಾಗಿ, ವಿಶ್ವವಿದ್ಯಾನಿಲಯದ ಪ್ರತಿನಿಧಿಯಾಗಿ ನಾನು ಆಶ್ವಾಸನೆ ನೀಡುತ್ತೇನೆ. ಕಾರಂತರು ಏನು ಅಪೇಕ್ಷಿಸುತ್ತಿದ್ದಾರೋ ಅದನ್ನು ಮೈಸೂರು ವಿಶ್ವವಿದ್ಯಾನಿಲಯ ಸ್ವಲ್ಪಮಟ್ಟಿಗೆ ನಡಸುತ್ತಿದೆ. ಅಷ್ಟೇನೂ ಮಂದಗತಿಯಿಂದ ನಡೆಯುತ್ತಿಲ್ಲ. ಶ್ರೀ ಕಾರಂತರಿಗೆ ಈ ವಿವರಗಳು ಗೊತ್ತಿದ್ದರೆ ನಮ್ಮ ಬೆನ್ನು ತಟ್ಟುತ್ತಿದ್ದರೋ ಏನೋ."

* * * *

"ಪ್ರತಿ ಪಾರಿಭಾಷಿಕ ಪದಕ್ಕೂ ಕನ್ನಡ ಪದವಿರಿಸಲು ಹೊರಟರೆ ನೂರು ವರ್ಷಗಳ ಕಾಲ ಕಾಯಬೇಕಾಗುತ್ತದೆ. ನಾವು ಕೂಡಲೇ ಕ್ರಮ ಕೈಗೊಂಡು ನಮ್ಮ ವಿದ್ಯಾರ್ಥಿಗಳ ತಲೆಯಮೇಲಿರುವ ಇಂಗ್ಲಿಷ್ ಭಾಷೆಯ ಹೊರೆಯನ್ನು ಇಳಿಸಬೇಕಾಗಿದೆ."

* * * *

"ಇದು ಮೂರು ದಿನದ ಬಾಳು ಎನ್ನುತ್ತಾರೆ ಕೆಲವರು. ಬೇಸಿಗೆಯಲ್ಲಿ ಮೂರು ದಿನ ಎಚ್ಚೆತ್ತು ಮತ್ತೆ ಒಂದು ವರ್ಷಕಾಲ ಮಲಗುತ್ತದೆಂದು ಟೀಕಿಸುತ್ತಾರೆ. ದೈಹಿಕ ಶ್ರಮದಿಂದ ಆದ ಕೆಲಸದ ಪ್ರಮಾಣ ಬೇಗ ದೃಷ್ಟಿಗೆ ಗೋಚರವಾಗುವಂತೆ ಆಲೋಚನೆಗೆ, ಬರವಣಿಗೆಗೆ ಸಂಬಂಧಿಸಿದ ಸಾಹಿತ್ಯದ ಕೆಲಸ ಬೇಗ ಗೋಚರವಾಗುವುದಿಲ್ಲ. ಅಲ್ಲದೆ ಈಗ ನಾಡಿನ ಚೇತನ ಎಚ್ಚತ್ತಿದೆ. ಇನ್ನು ನಿದ್ದೆ ಮಾಡುವುದಿಲ್ಲ. ಒಂದಲ್ಲ ಒಂದು ಕೆಲಸ ನಡೆಯುತ್ತಿರುತ್ತದೆ"

* * * *

"ನಾವು ಆಶಿಸಿದಷ್ಟು ಸಾಧನೆಯಾಗದಿದ್ದರೆ ಅದಕ್ಕೆ ಎಲ್ಲೋ ಲೋಪ,

ಎಲ್ಲೋ ದೋಷ, ಎಲ್ಲೋ ಅಹಂಕಾರವಿದೆಯೆಂದೆನಿಸುತ್ತದೆ. ಕರ್ನಾಟಕ ಬೇಕೆಂಬುವರಲ್ಲೇ ಅಹಂಕಾರವಿರಬಹುದು. ಬೇಡವೆನ್ನುವವರದೇ ಅಹಂಕಾರವಿರಬಹುದು. ಆದರೆ ಸೂಕ್ಷ್ಮದೇಹಿಯಾದ ಕನ್ನಡದೇವಿ ಅಖಂಡೆ, ಅವಿಭಕ್ತೆ. ಆದುದರಿಂದಲೇ ನಮ್ಮ ಲೋಕದಲ್ಲಿ (ಸಾಹಿತಿಗಳ) ವಿಭಜನೆ ನಡೆದಿಲ್ಲ, ಕನ್ನಡ ಜನವೆಲ್ಲಾ ಒಂದಾಗಿದೆ. ರಾಜಕೀಯವಾಗಿ ಒಂದಾಗಬೇಕೆಂಬ ಬಯಕೆ ಸೌಹಾರ್ದದಿಂದ ನಡೆಯುವುದೆಂಬ ವಿಶ್ವಾಸ ನನಗಿದೆ."

* * * *

"ಕನ್ನಡ ನಾಡಿನಲ್ಲಿ ಕನ್ನಡ ಪ್ರಥಮಭಾಷೆಯಾಗಬೇಕು. ಎಲ್ಲ ಘಟ್ಟದಲ್ಲೂ ಶಿಕ್ಷಣಮಾಧ್ಯಮ ಕನ್ನಡವಾಗಬೇಕು. ಈ ಎರಡು ಕೈಗೂಡಿದ ಹೊರತು ನಾಡಿನ ಚೇತನ ಕಲ್ಯಾಣಕಾರ್ಯದಲ್ಲಿ ಜಯಶೀಲವಾಗದು. ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳು ಯಾವ ಪ್ರಮಾಣದಲ್ಲಿರಬೇಕೋ ಇರಲಿ, ಹಿಂದಿಯು ಯಾವ ಪ್ರಮಾಣದಲ್ಲಿರಬೇಕೆಂಬ ಬಗ್ಗೆ ಮಹಾತ್ಮ ಗಾಂಧಿಯವರೇ ನಿರ್ದೇಶವಿತ್ತಿದ್ದಾರೆ. ಆ ಮಿತಿ ಬಿಟ್ಟು ಮುಂದುವರಿದರೆ ಅದು ಆಕ್ರಮಣವೇ ಆದೀತು. ನೆಹರು ಮತ್ತು ರಾಜಾಜಿಯವರು ಈ ವಿಷಯದಲ್ಲಿ ಎಚ್ಚರಿಕೆ ನುಡಿ ನುಡಿದಿರುವುದು ಗಮನಾರ್ಹವಾದುದು. ಇಂಗ್ಲಿಷ್ ಕೂಡ ಈಗಿರುವ ಪ್ರಮಾಣದಲ್ಲಿ ಇರಬೇಕಾಗಿಲ್ಲ."

* * * *

"ಶಿಕ್ಷಣ ಮಟ್ಟ ಇಳಿದಿದೆಯೆಂದರೆ ಇಂಗ್ಲಿಷ್ ಭಾಷೆಯಲ್ಲಿ ಮಾತ್ರ ಶಿಕ್ಷಣದ ಮಟ್ಟ ಇಳಿದಿದೆಯೆಂಬುದು ನನ್ನ ಅಭಿಪ್ರಾಯ. ವಿದ್ಯಾರ್ಥಿಗಳ ಮೆದುಳಿನ ಶಕ್ತಿ ಕಡಿಮೆಯಾಗಿಲ್ಲ."

ಹೀಗೆ ಹೇಳಿ ಶ್ರೀ ಕುವೆಂಪು ಅವರು ಕನ್ನಡ ಜನತೆಗೆ ಧೈರ್ಯ ಭರವಸೆಗಳನ್ನು ನೀಡಿದರು. ಭವಿಷ್ಯತ್ತು ಆಶಾದಾಯಕವಾಗಿದೆ ಎಂಬ ಉತ್ಸಾಹದಿಂದ ಕೆಲಸ ಮಾಡುವ ಪ್ರವೃತ್ತಿಯನ್ನು ಜನರಲ್ಲಿ ಮತ್ತೊಮ್ಮೆ ಜಾಗೃತಗೊಳಿಸಿದರು. ಶ್ರೀ ಕುವೆಂಪು ಅವರ ಭಾಷಣಾನಂತರದಲ್ಲಿ ಎಲ್ಲ ಗೋಷ್ಠಿಗಳಲ್ಲಿಯೂ ಎಲ್ಲ ಕಾರ್ಯಕಲಾಪಗಳಲ್ಲಿಯೂ ಅಗ್ರಾಸನಾಧಿಪತಿಗಳಾಗಿ ಕಾರ್ಯಕ್ರಮಗಳನ್ನು ನಡಸಿಕೊಟ್ಟ ಸಮ್ಮೇಳನಾಧ್ಯಕ್ಷರಾದ ಶ್ರೀ ಕಾರಂತರು ಬೀಳ್ಕೊಡಿಗೆಯ ಮಾತಾಗಿ ಕೆಲವು ನುಡಿಗಳನ್ನು ಆಡಿದರು. ಆ ಸಂದರ್ಭದಲ್ಲಿ ಅವರು ಹೀಗೆ ತಿಳಿಸಿದರು:

"ಈ ಮೂರು ದಿನಗಳಲ್ಲಿ ನಾವು ಪರಸ್ಪರ ಹೆಚ್ಚು ಹೆಚ್ಚು ತಿಳಿದಿದ್ದೇವೆ. ಇದು ಹೆಚ್ಚು ಆಸೆಯನ್ನೂ ಹುಟ್ಟಿಸಿದೆ. ಸಮ್ಮೇಳನವನ್ನು ವಿಶ್ವವಿದ್ಯಾನಿಲಯ ಕರೆದದ್ದು ಹೆಮ್ಮೆಯ ವಿಷಯ. ವಿಶ್ವವಿದ್ಯಾನಿಲಯ ಮತ್ತು ಪರಿಷತ್ತಿನ ಕೆಲಸ ಒಂದೇ".

"ನನ್ನ ಮಾತು ಕಟುವೆಂದು ಶ್ರೀ ಪುಟ್ಟಪ್ಪನವರು ಮೃದುವಾಗಿಯೇ ತಿಳಿಸಿದ್ದಾರೆ. ಒಂದೊಂದು ಬಾಳು ಒಂದೊಂದು ರೀತಿ. ಯಾರನ್ನೂ ಕಚ್ಚಬಂದ ಹಾವು ನಾನಲ್ಲ. ಯಾರನ್ನೂ ನಾನು ಟೀಕಿಸಿಲ್ಲ. ನನ್ನನ್ನೇ ನಾನು ಟೀಕಿಸಿಕೊಂಡಿದ್ದೇನೆ. ನನ್ನಲ್ಲಿ ಉಂಟಾದ ನೋವನ್ನು ತಿಳಿಸಿದ್ದೇನೆ. ನಮ್ಮ ಕೆಲಸ ಆಗಬೇಕಾದಷ್ಟು ಆಗಿಲ್ಲ.

"ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿದ ಗ್ರಂಥಗಳನ್ನು ನಾನು ನೋಡಿದ್ದೇನೆ. ಕಪಾಟಿನಲ್ಲಿ ಇಟ್ಟಿರುವ ಆ ಗ್ರಂಥಗಳನ್ನು ನೋಡಿದರೆ ನಮ್ಮ ಬಡತನದ ಅರಿವಾಗುತ್ತದೆ. ಜನ ಕನ್ನಡದ ಕೆಲಸವನ್ನು ತಮ್ಮ ಜನ್ಮದ ಆದರ್ಶವೆಂದು ಪರಿಗಣಿಸುವ ವರೆಗೆ ಗುರಿಸಾಧನೆ ಕಷ್ಟ. ನಾನು ಎಷ್ಟೋ ವಿಶ್ವವಿದ್ಯಾನಿಲಯಗಳನ್ನು ನೋಡಿದ್ದೇನೆ. ಅವುಗಳ ಕೆಲಸವನ್ನು ತಿಳಿದಿದ್ದೇನೆ. ಕನ್ನಡ ಜಾನಪದ ಗೀತೆ ಬಗ್ಗೆ ನಮ್ಮ ವಿಶ್ವವಿದ್ಯಾನಿಲಯವನ್ನಲ್ಲದೆ ಮತ್ತಾರನ್ನು ಕೇಳಲಿ? ಆಗಬೇಕಾದ್ದು ಬಹಳವಿದೆ. ಆಗಿರುವುದು ಸಾಲದೆಂದು ವಿನಯದಿಂದ ಹೇಳಿದ್ದೇನೆ. ನಾವು ಬೆಳೆಯಬೇಕು. ನಾವು ದೊಡ್ಡವರಾಗಬೇಕು. ಇದೇ ಅಲ್ಲವೆ ನಮ್ಮ ಹಂಬಲ. ಹಂಬಲ ಒಂದಿದ್ದರೆ ಅದು ಸಾಧನೆಯಾದಂತಲ್ಲ. ಏನೋ ಸ್ವಲ್ಪ ಬರೆದು ಯಾರಾದರೂ ತಾನು ಸಾಹಿತಿಯಾದೆನೆಂದುಕೊಂಡರೆ ಅದು ಅಲ್ಪತೃಪ್ತಿ. ವಿಷಯ ನನಗಿಂತ ದೊಡ್ಡದು ಎನ್ನುವ ಭಾವನೆಯುಂಟಾದ ಹೊರತು ನಾವು ದೊಡ್ಡವರಾಗುವುದಿಲ್ಲ. ಹೆಚ್ಚು ತಿಳಿದಂತೆ ಮನಸ್ಸು ದೊಡ್ಡದಾಗುತ್ತದೆ"

"ಸಾಹಿತಿಗೆ ರಾಜಕೀಯ ಬೇಡವೆನ್ನುತ್ತಾರೆ. ಎಲ್ಲಿಯ ವರೆಗೆ ನನ್ನ ಹೃದಯ ಮತ್ತು ಬುದ್ಧಿ ನನ್ನ ಕೈಲಿರುವುದೋ ಅಲ್ಲಿಯ ವರೆಗೆ ಯಾವ ರಾಜಕೀಯವೂ ನನ್ನನ್ನು ಕೊಳ್ಳಲಾರದು"

"ನನ್ನ ಕಠಿಣವಾದ ಮಾತು ಕನ್ನಡ ಜನರ ಅಂತರಂಗಧ್ವನಿ. ಮಾನವನನ್ನು ಪ್ರತಿಸ್ಪರ್ಧಿಸಿ ನಿಂತಿರುವ ಹಿಮಾಲಯದಷ್ಟು ಕೆಲಸ ನಡೆಯಬೇಕಾಗಿದೆ. ನಾವೂ ಅಷ್ಟೇ ದೊಡ್ಡವರಾಗಿ ಕಾರ್ಯ ಸಾಧಿಸುವ."

ಶ್ರೀ ಕಾರಂತರ ಬೀಳ್ಕೊಡಿಗೆಯ ಒಂದೊಂದು ಮಾತಿನಲ್ಲಿಯೂ ನಮ್ಮ ನಾಡು ನುಡಿಗಳ ಮೇಲ್ಮೆಗಾಗಿ ಅವರ ಚೇತನ ತುಯ್ಯುತ್ತಿದ್ದುದು ಸಭಿಕರಿಗೆ ಅನುಭವಕ್ಕೆ ಬಂದಿತು. ಶ್ರೀ ಕುವೆಂಪು ಶ್ರೀ ಕಾರಂತ ಮತ್ತು ಶ್ರೀ ಬೇಂದ್ರೆ ಈ ಮಹನೀಯರ ಕವಿಸಹಜವಾದ ವೀರವಾಣಿಯನ್ನು ಕೇಳಿ ಸಮ್ಮೇಳನದ ಸಭಾಸದರು ತಣಿದರು, ಉತ್ಸಾಹಭರಿತರಾದರು. ಮುಂದಿನ ಸಮ್ಮೇಳನ ರಾಯಚೂರಿನಲ್ಲಿ ನಡೆಯಬೇಕೆಂದು ಶ್ರೀ ಸಿದ್ಧಯ್ಯ ಪುರಾಣಿಕರು ಆಹ್ವಾನವಿತ್ತರು. ಕೊನೆಯಲ್ಲಿ ಸ್ವಾಗತಸಮಿತಿಯ ಕಾರ್ಯದರ್ಶಿಗಳಲ್ಲಿ ಒಬ್ಬರಾದ ಶ್ರೀ ಕ. ವೆಂ. ರಾಘವಾಚಾರ್ಯರವರು ಸಮ್ಮೇಳನ

ಯಶಸ್ವಿಯಾಗಿ ನಡೆಯುವಂತೆ ಸಹಕರಿಸಿದ ಎಲ್ಲರಿಗೂ ಹೃತ್ಪೂರ್ವಕವಾದ ವಂದನೆಗಳನ್ನು ಸಮರ್ಪಿಸಿದರು. ರಾಷ್ಟ್ರಗೀತೆಯೊಡನೆ ಸಮ್ಮೇಳನ ಕೊನೆಗೊಂಡಿತು.

ಸಮ್ಮೇಳನದ ಅಂಗವಾಗಿ ಏರ್ಪಡಿಸಿದ್ದ ಗ್ರಂಥಪ್ರದರ್ಶನ ಪ್ರಶಂಸನೀಯವಾಗಿತ್ತು. ಪ್ರಾಚ್ಯ ಸಂಶೋಧನ ಸಂಸ್ಥೆಯವರೂ ಪುರಾತತ್ತ್ವ ಶಾಖೆಯವರೂ ವಿವಿಧ ಪ್ರಕಾಶಕರೂ ಲೇಖಕರೂ ಸಹಕರಿಸಿದ ಫಲವಾಗಿ ಈ ಪ್ರದರ್ಶನ ಬೋಧಪ್ರದವಾಗಿತ್ತು. ಕನ್ನಡ ಪುಸ್ತಕಗಳು ಮಾತ್ರವಲ್ಲದೆ ಇಂಗ್ಲಿಷ್ ಭಾಷಾಸಾಹಿತ್ಯಗಳಲ್ಲಿ ಪ್ರಕಾಶನಕಲೆ ಹೇಗಿದೆ ಎಂಬುದನ್ನು ತಿಳಿಸುವಂತಹ ಪುಸ್ತಕಗಳನ್ನೂ ಪ್ರದರ್ಶಿಸಿದ್ದುದು ಸಮಂಜಸವಾಗಿತ್ತು.

ಸಮ್ಮೇಳನದ ಅಂಗವಾಗಿ ನಡೆದ ಶ್ರೀಮತಿ ಶಕುಂತಳಾಬಾಯಿ ಪಾಂಡುರಂಗರಾವ್, ಶ್ರೀ ಜೋಳದರಾಶಿ ದೊಡ್ಡನಗೌಡ, ಶ್ರೀ ಬಿ. ಎಸ್. ರಾಮಾಚಾರ್ ಇವರ ಕಾವ್ಯವಾಚನ ಸಮ್ಮೇಳನಕ್ಕೆ ಅಪೂರ್ವವಾದ ಕಳೆಯನ್ನು ತಂದುಕೊಟ್ಟಿತು. ಜುಲೈ ೧೦, ೧೧ ಈ ಎರಡು ದಿನಗಳಲ್ಲೂ ರಾತ್ರಿ ಮನೋರಂಜನ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಭಾರತ ಸರಕಾರದ ವಾರ್ತಾ ಇಲಾಖೆಯವರ ಪಂಚವಾರ್ಷಿಕ ಯೋಜನೆಯ ಸಂಬಂಧವಾದ ಚಲನಚಿತ್ರ ಪ್ರದರ್ಶನ, ಕುಮಾರಿ ಎಸ್. ಪಿ. ನಾಗರತ್ನ ಮತ್ತು ಕುಮಾರಿ ಎಚ್. ಎಲ್. ಕಮಲ ಇವರ ನರ್ತನ, ಶ್ರೀ ಕೆ. ವಿ. ಸುಬ್ಬಣ್ಣನವರ ನೀಲಕಂಠೇಶ್ವರ ನಾಟ್ಯಮಂಡಲಿ ಹೆಗ್ಗೋಡು ಇವರು ಪ್ರದರ್ಶಿಸಿದ ವೈಶಾಖ ಶುಕ್ಲ ಪೂರ್ಣಿಮೆ ಎಂಬ ನಾಟಕ, ಅಶೋಕ ಆರ್ಟ್ಸ್ ಅಕ್ಯಾಡೆಮಿಯವರು ಶ್ರೀ ಚೆಲುವಯ್ಯಂಗಾರ್ಯರವರ ಸಹಕಾರದೊಂದಿಗೆ ಪ್ರದರ್ಶಿಸಿದ ಶ್ರೀ ಪರ್ವತವಾಣಿಯವರ 'ಹಣಹದ್ದು' ನಾಟಕ, ರಾಮನಗರದ ಹಳ್ಳಿಯ ಕಲಾವಿದರು ತೋರಿಸಿದ ರಾಮಾಯಣದ ಕಥೆಯ ತೊಗಲುಗೊಂಬೆಯ ಆಟ, ಶ್ರೀ ಕೊಟ್ಟೂರ ಬಸಪ್ಪನವರೂ ಅವರ ಮಿತ್ರರೂ ಪ್ರದರ್ಶಿಸಿದ ದಾನಶೂರಕರ್ಣ ನಾಟಕದ ಕೆಲವು ದೃಶ್ಯಗಳು, ಶ್ರೀ ಎ. ಕೆ. ಶ್ರೀನಿವಾಸನ್ ಅವರ ಸಹಕಾರದಿಂದ ಪ್ರದರ್ಶಿತವಾದ ಶ್ರೀ ಕಾರಂತರ ಗರ್ಭಗುಡಿ ನಾಟಕದ ಕೆಲವು ದೃಶ್ಯಗಳು, ಶ್ರೀ ಆಸ್ಥಾನ ವಿದ್ವಾನ್ ಸಂಗೀತರತ್ನ ಟಿ. ಚೌಡಯ್ಯನವರು ಪ್ರದರ್ಶಿಸಿದ ಪೊಂಪುಳಿವೋಗುವಂತಹ ಪಿಟೀಲುವಾದನ—ಇವು ಮನೋರಂಜನೆಯ ಎರಡು ದಿನದ ಕಾರ್ಯಕ್ರಮಗಳಾಗಿದ್ದುವು.

ಆಲ್-ಇಂಡಿಯ ರೇಡಿಯೋವಿನ ಮೈಸೂರು ಕೇಂದ್ರದವರು ಸಮ್ಮೇಳನದ ಮೊದಲನೆಯ ದಿನದ ಬೆಳಗಿನ ಕಾರ್ಯಕಲಾಪಗಳನ್ನು ರೇಡಿಯೋ ವರದಿಯ ರೀತಿಯಲ್ಲಿಯೂ ಕೊನೆಯ ದಿನದ ಕವಿಮೇಳದ ಕಾರ್ಯಕಲಾಪಗಳನ್ನು ಅದೇ ಕಾಲದಲ್ಲಿ ಆಕಾಶವಾಣಿಯ ಮೂಲಕವಾಗಿಯೂ ಬಿತ್ತರಿಸಿ ಸಮ್ಮೇಳನಕ್ಕೆ ಬರಲು ಆಗದ

ಕನ್ನಡಿಗರಿಗೆ ವಿಶೇಷ ಸೌಕರ್ಯವನ್ನು ಒದಗಿಸಿಕೊಟ್ಟು ಉಪಕಾರಮಾಡಿದರು. ಆಕಾಶವಾಣಿಯವರ ಈ ಪ್ರಸಾರ ಕಾರ್ಯಕ್ರಮ ಪ್ರಶಂಸನೀಯವಾಗಿತ್ತು.

ಸಮ್ಮೇಳನಕ್ಕೆ ಕನ್ನಡನಾಡಿನ ನಾನಾ ಭಾಗಗಳಿಂದ ಸುಮಾರು ೩೦೦ ಮಂದಿ ಪ್ರತಿನಿಧಿಗಳು ಆಗಮಿಸಿದ್ದರು. ಊಟ ವಸತಿಗಳ ಸೌಕರ್ಯವನ್ನು ಬಯಸಿದ ಈ ಎಲ್ಲ ಪ್ರತಿನಿಧಿಗಳಿಗೂ ಸಮ್ಮೇಳನಾಧ್ಯಕ್ಷರೇ ಆದಿಯಾಗಿ ಎಲ್ಲ ಆಹ್ವಾನಿತ ಅತಿಥಿಗಳಿಗೂ ಮಹಾರಾಜ ಕಾಲೇಜಿನ ಹಾಸ್ಟೆಲಿನಲ್ಲಿ ಸೊಗಸಾದ ವ್ಯವಸ್ಥೆಯನ್ನು ಏರ್ಪಡಿಸ ಲಾಗಿದ್ದಿತು. ಕೊನೆಯ ದಿನ ಮಧ್ಯಾಹ್ನ ಸಿಹಿಯೂಟದ ಔತಣವನ್ನು ಇವರೆಲ್ಲರಿಗೆ ನೀಡಲಾಯಿತು.

ಇಪ್ಪತ್ತೈದು ವರುಷಗಳ ಹಿಂದೆ ನಡೆದ ಸಮ್ಮೇಳನದ ನೆನಪಿನೊಂದಿಗೆ ಅದರ ಬೆಳ್ಳಿಯ ಹಬ್ಬದಂತಿದ್ದ ಈ ಸಮ್ಮೇಳನದ ನೆನಪನ್ನೂ ಕೂಡಿಸಿಕೊಂಡು ಮೈಸೂರಿನ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿ ನಲಿದುಬಂದ ಅತಿಥಿಗಳು ತಮ್ಮ ತಮ್ಮ ಊರು ಗಳಿಗೆ ತೆರಳಿದರು.

ಎಲ್ಲರ ಸಹಕಾರದಿಂದ ಈ ಸಲದ ಸಮ್ಮೇಳನ ವಿಶ್ವವಿದ್ಯಾನಿಲಯದ ಗೌರವ ಘನತೆ ಗಳಿಗೆ ತಕ್ಕಂತೆ ನಡೆಯಿತು.

* * *

ಕೃತಜ್ಞತೆ

ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಶ್ರೀ ಕಾರಂತರ ಭಾವಚಿತ್ರದ ಪಡಿ ಯಚ್ಚನ್ನು ಮೈಸೂರಿನ ಉಷಾ ಪ್ರಕಟನಾಲಯದವರು ಕೃಪೆಯಿಟ್ಟು ಕೊಟ್ಟಿದ್ದಾರೆ. ಅವರಿಗೆ ನಮ್ಮ ನೆನಕೆಗಳು.

ಸಾದರ ಸ್ವೀಕಾರ

ನನ್ನ ಜೀವನದ ಕಥೆ—(ಡಾ|| ಹೆಲೆನ್‌ಕೆಲ್ಲರ್ ಬರೆದ ಆತ್ಮಕಥೆಯ ಕನ್ನಡದ ಅನುವಾದ) ಅನುವಾದಕರು : ಶ್ರೀ ಸುಬೋಧ ಯಂ. ರಾಮರಾವ್ ; ಪ್ರಕಾಶಕರು : ಸುಬೋಧ ಪ್ರಕಟನಾಲಯ, ಬೆಂಗಳೂರು ೨ ; ಪುಟಗಳು ಕ್ರೌ. ಅ. ಪ. ೧೬೮ ; ಬೆಲೆ, ರೂ. ೧-೮-೦.

ಸಂಯುಕ್ತ ರಾಷ್ಟ್ರಸಂಘ U. N. O.—ಲೇಖಕರು : ಶ್ರೀ ಎಚ್. ಎಸ್. ಪಾಟೀಲ, ಎಂ.ಎ., ಬಿ.ಕಾಮ್. ; ಪ್ರಕಾಶಕರು : ಮಿಂಚಿನಬಳ್ಳಿ ಕಾರ್ಯಾಲಯ, ಧಾರವಾಡ ; ಪುಟಗಳು ಕ್ರೌ. ಅ. ಪ. ೧೪೬ ; ಬೆಲೆ, ಸಾದಾಪ್ರತಿ ರೂ. ೧-೫-೦ ; ಉತ್ತಮಪ್ರತಿ ರೂ. ೨-೦-೦.

ಹರಪ್ಪಾ ಸಂಸ್ಕೃತಿ—ಲೇಖಕರು: ಡಾ|| ಎಂ. ಶೇಷಾದ್ರಿ, ಎಂ.ಎ., ಪಿಎಚ್.ಡಿ. (ಲಂಡನ್) ; ಪ್ರಕಾಶಕರು : ಸಾರ್ವಜನಿಕ ವಿಚಾರಸಂಸ್ಥೆ, ಮೈಸೂರು ; ಪುಟಗಳು ಕ್ರೌ. ಅ. ಪ. ೯೪ ; ಬೆಲೆ, ರೂ. ೧-೦-೦.

ಸಾವಿತ್ರಿ—ಲೇಖಕರು : ಶ್ರೀ ಯಂ. ರಾಮರಾವ್ ; ಪ್ರಕಾಶಕರು : ಸುಬೋಧ ಪ್ರಕಟನಾಲಯ, ಚಾಮರಾಜಪೇಟೆ, ಬೆಂಗಳೂರು ೨ ; ಪುಟಗಳು ಕ್ರೌ. ಅ. ಪ. ೩೮ ; ಬೆಲೆ, ರೂ. ೦-೬-೦.

ಶ್ರೀ ಮಧ್ವಾಚಾರ್ಯರು—ಲೇಖಕರೂ, ಪ್ರಕಾಶಕರೂ : ಮೇಲೆ ತಿಳಿಸಿದವರೇ ; ಪುಟಗಳು ಕ್ರೌ. ಅ. ಪ. ೫೪ ; ಬೆಲೆ, ರೂ, ೦-೬-೦.

ಶ್ರೀ ಪುರಂದರದಾಸರು—ಲೇಖಕರೂ, ಪ್ರಕಾಶಕರೂ : ಮೇಲೆ ತಿಳಿಸಿದವರೇ ; ಪುಟಗಳು ಕ್ರೌ. ಅ. ಪ. ೫೪ ; ಬೆಲೆ, ರೂ. ೦-೬-೦.

"ತಿರುಕ್ಕುರಲ್" (ಗ್ರಂಥದ ಪ್ರಸ್ತಾವನೆ)—ಲೇಖಕರು : ಪ್ರೊ|| ಎ. ಚಕ್ರವರ್ತಿ ; ಪ್ರಕಾಶಕರು : ಶ್ರೀ ಎಂ. ಕೆ. ದೇವರಾಜ್, ಬೆಂಗಳೂರು ; ಪುಟಗಳು ೯೧ ; ಬೆಲೆ, ರೂ. ೧-೦-೦.

ಶ್ರೀ ಪುಲ್ಲಕವಿ ವಿರಚಿತ ಶ್ರೀ ಶೈಲ ಪಂಡಿತಾರಾಧ್ಯ ಚರಿತ್ರಮು—ಪ್ರಧಾನ ಸಂಪಾದಕರು : ಶ್ರೀ ಎಂ. ಜಿ. ನಂಜುಂಡಾರಾಧ್ಯರು ಮತ್ತು ಶ್ರೀ ಜಿ. ಟಿ. ಅಕ್ಕುಲಯ್ಯ ದೀಕ್ಷಿತರು ; ಪ್ರಕಾಶಕರು : ಶ್ರೀ ಜ. ನಿ. ಪುಸ್ತಕಭಂಡಾರ, ಬೆಂಗಳೂರು ; ಪುಟಗಳು ೩೨+೧೦೭+vi+೩೭೬ ; ಬೆಲೆ, ರೂ. ೫-೦-೦.

ಆರಾಧನಾ (ಏಳು ಕಥೆಗಳು)—ಲೇಖಕರು : ಬಾಗಲೋಡಿ ದೇವರಾಯ ; ಪ್ರಕಾಶಕರು : ವಸಂತಪ್ರೇಮಿ ಮಂಡಲಿ, ಮಂಗಳೂರು ; ಪುಟಗಳು ii+೯೬ ; ಬೆಲೆ, ರೂ. ೧-೦-೦.

ಸನಾತನ ಭಾರತ (ಮಹಾಕಾವ್ಯದಲ್ಲಿ ಮತ್ತು ಮಹಾವ್ಯಕ್ತಿಗಳಲ್ಲಿ)—ಮೂಲಲೇಖಕರು : ಸ್ವಾಮಿ ವಿವೇಕಾನಂದ ; ಪ್ರಕಾಶಕರು : ಶ್ರೀ ರಾಮಕೃಷ್ಣಾಶ್ರಮ, ಮೈಸೂರು ; ಪುಟಗಳು ೧೪೬ ; ಬೆಲೆ, ರೂ. ೧-೮-೦.

ಸಂಜೆದಾರಿ (ಕವಿತಾಸಂಕಲನ)—ಕವಿ : ಶ್ರೀ ಜಿ. ಯಸ್. ಶಿವರುದ್ರಪ್ಪ ; ಪ್ರಕಾಶಕರು : ನೇತ್ರಾವತಿ ಪ್ರಕಾಶನ, ಬೆಂಗಳೂರು ; ಪುಟಗಳು ೩೦ ; ಬೆಲೆ, ರೂ. ೦-೧೨-೦.

ಕಚಗುಳಿ—ಲೇಖಕರು : ಶ್ರೀ ಜಿ. ಪಿ. ಸುಬ್ಬರಾಯ ; ಪುಟಗಳು v+೮೧ ; ಬೆಲೆ, ರೂ. ೧-೦-೦.

ಅಮೃತವಾಣಿ—ಪ್ರಕಾಶಕರು : ಶ್ರೀ ರಾಮಕೃಷ್ಣಾಶ್ರಮ, ಬೆಂಗಳೂರು ; ಪುಟಗಳು ೪೪ ; ಬೆಲೆ, ರೂ. ೦-೫-೦.

ಪ್ರಬುದ್ಧ ಕರ್ಣಾಟಕ

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪತ್ರಿಕೆ

'ಪ್ರಬುದ್ಧ ಕರ್ಣಾಟಕ'ವು ಚೈತ್ರ, ಆಷಾಢ, ಆಶ್ವಯುಜ, ಪುಷ್ಯಮಾಸಗಳಲ್ಲಿ ಆಯಾ ತಿಂಗಳ ಹುಣ್ಣಿಮೆಯ ಹೊತ್ತಿಗೆ ವರ್ಷಕ್ಕೆ ನಾಲ್ಕು ಸಲ ಹೊರಡುತ್ತದೆ.

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ):

ಸಾಮಾನ್ಯ ಚಂದಾದಾರರಿಗೆ	ರೂ.	೩	೮	೦
ವಾಚನಾಲಯ ಮುಂತಾದ ಸಂಸ್ಥೆಗಳಿಗೆ	ರೂ.	೪	೮	೦
ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಮಾತ್ರ	ರೂ.	೨	೮	೦

ಸಂಚಿಕೆಗಳನ್ನು ರಿಜಿಸ್ಟರ್ ಮೂಲಕ ತರಿಸಿಕೊಳ್ಳಬೇಕೆನ್ನುವವರು ಚಂದಾ ಹಣದ ಜೊತೆಗೆ ರೂ. ೧-೨-೦ ಕಳುಹಿಸಬೇಕು.

ಚಂದಾಹಣವನ್ನೂ ಅದರ ವಿಚಾರವಾಗಿ ಪತ್ರಗಳನ್ನೂ ಕಾರ್ಯದರ್ಶಿ, ಪ್ರಚಾರ ಮತ್ತು ಪ್ರಕಾಶನ ಕಾರ್ಯ, ಯೂನಿವರ್ಸಿಟಿ ಆಫೀಸು, ಮೈಸೂರು, ಎಂಬ ವಿಳಾಸಕ್ಕೆ ಕಳುಹಿಸಬೇಕು. ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರವರಿಗಾಗಲಿ, ಪ್ರಬುದ್ಧ ಕರ್ಣಾಟಕದ ಸಂಪಾದಕರಿಗಾಗಲಿ ಕಳುಹಿಸಬಾರದು. ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಚಂದಾಹಣವನ್ನು ತಮ್ಮ ತಮ್ಮ ಕಾಲೇಜಿನ ಅಕೌಂಟ್ಸ್ ಅಧಿಕಾರಿಗಳಿಗೆ ಮುಂಗಡವಾಗಿ ಸಲ್ಲಿಸಿ, ಪಡೆದ ರಸೀತಿಯನ್ನು ತಮ್ಮ ವಿಳಾಸದೊಂದಿಗೆ ಕಳುಹಿಸಿಕೊಡಬೇಕು. ಕಾಲೇಜುಗಳ ಅಧ್ಯಾಪಕ ವರ್ಗದವರೂ ಇದೇ ರೀತಿ ಮಾಡಬಹುದು. ವಿದ್ಯಾರ್ಥಿಗಳು ತಾವು ವಿದ್ಯಾರ್ಥಿಗಳೆಂಬ ಬಗ್ಗೆ ತಮ್ಮ ಪಾಠಶಾಲೆಯ ಮುಖ್ಯೋಪಾಧ್ಯಾಯರಿಂದ ಒಂದು ಪ್ರಮಾಣಪತ್ರವನ್ನು ಪಡೆದು ಅದನ್ನು ಚಂದಾ ಹಣದೊಡನೆ ಕಳುಹಿಸಬೇಕು. ಚಂದಾದಾರರು ತಮ್ಮ ಚಂದಾ ಹಣವನ್ನು (ಸರ್ಕಾರಿ ಖಜಾನೆಯಲ್ಲಿ 'ಯೂನಿವರ್ಸಿಟಿ ಫಂಡ್'ಗೆ ಕಟ್ಟಿ ಖಜಾನೆ ರಸೀತಿಯನ್ನು ತಮ್ಮ ವಿಳಾಸದೊಡನೆ ಪ್ರಬುದ್ಧ ಕರ್ಣಾಟಕದ ಆಫೀಸಿಗೆ ಕಳುಹಿಸಬಹುದು.)

ಪ್ರಬುದ್ಧ ಕರ್ಣಾಟಕದ ೨೭, ೨೮, ೩೧, ೩೨, ೩೩, ೩೪, ೩೫, ೩೬ ನೆಯ ಸಂಪುಟಗಳು ನಮ್ಮಲ್ಲಿ ಸಿಕ್ಕುತ್ತವೆ. ಇವುಗಳ ಪೈಕಿ ೨೭, ೨೮, ೨೯, ೩೧, ೩೨ ನೆಯ ಸಂಪುಟಗಳನ್ನು ಸಂಪುಟ ಒಂದಕ್ಕೆ ಒಂದು ರೂಪಾಯಿಯಂತೆ ರಿಯಾಯಿತಿ ದರದಲ್ಲಿ ಪಡೆಯಬಹುದು. ೩೩, ೩೪, ೩೫, ೩೬ ನೆಯ ಸಂಪುಟಗಳನ್ನು ತುಂಬು ಬೆಲೆಗೆ ಮಾರಲಾಗುವುದು. ಅಂಚೆಯ ಮೂಲಕ ತರಿಸಿಕೊಳ್ಳುವವರು ಸಂಪುಟ ಒಂದಕ್ಕೆ ಹದಿಮೂರು ಆಣೆ, ಸಾಮಾನ್ಯ ಸಂಚಿಕೆ ಒಂದಕ್ಕೆ ಏಳು ಆಣೆ, ಎರಡು ಸಂಚಿಕೆಗಳನ್ನು ಒಳಗೊಂಡ ಸಂಚಿಕೆಗೆ ಒಂಬತ್ತು ಆಣೆಯಂತೆ ಅಂಚೆ ವೆಚ್ಚವನ್ನು ಕಳುಹಿಸಬೇಕು.

'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟನೆಗೆ ಲೇಖನಗಳನ್ನೂ ವಿಮರ್ಶೆಗೆ ಗ್ರಂಥಗಳನ್ನೂ ವಿನಿಮಯಕ್ಕೆ ಪತ್ರಿಕೆಗಳನ್ನೂ ಪ್ರಬುದ್ಧ ಕರ್ಣಾಟಕದ ಸಂಪಾದಕ (ಮಹಾರಾಜರವರ ಕಾಲೇಜು, ಮೈಸೂರು) ರಿಗೆ ಕಳುಹಿಸಬೇಕು.

ಕಾರ್ಯದರ್ಶಿ,

ವಿಶ್ವವಿದ್ಯಾನಿಲಯದ ಪ್ರಕಟನ ಮತ್ತು ಪ್ರಚಾರೋಪನ್ಯಾಸ ಶಾಖೆ, ಮೈಸೂರು

ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕಮಾಲೆ

೧. ಖಗೋಳಶಾಸ್ತ್ರಪ್ರವೇಶ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.
೨. ಸಮಾಜದ ರೋಗರುಜಿನಗಳು—ಜಿ. ಹನುಮಂತರಾವ್, ಎಂ.ಎ.
೩. ತೆರಿಗೆ—ಬಿ. ಆರ್. ಸುಬ್ಬರಾವ್, ಎಂ.ಎ.
೪.*ನವರತ್ನಗಳು—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೫. ನಮ್ಮ ಹಳ್ಳಿಗಳು—ಜಿ. ಎನ್. ಕೃಷ್ಣಮೂರ್ತಿ, ಎಂ.ಎ.
೬. ಕುಮಾರವ್ಯಾಸ—ಎಸ್. ವಿ. ರಂಗಣ್ಣ, ಎಂ.ಎ.
೭. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್, ಎಂ.ಎ.
೮. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ, ಎಂ.ಎ.
೯. ವಿದ್ಯುಚ್ಛಕ್ತಿಯ ವೈಭವ—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.
೧೦. ಪಂಪ—ಟಿ. ಎನ್. ಶ್ರೀಕಂಠಯ್ಯ, ಎಂ.ಎ.
೧೧. ಪ್ರಾಣಿಜೀವನ—ಎ. ನಾರಾಯಣರಾವ್, ಎಂ.ಎಸ್‌ಸಿ.
೧೨. ಕನಸುಗಳು—ಡಾ|| ಎನ್. ಎಸ್. ನಾರಾಯಣಶಾಸ್ತ್ರೀ, ಎಂ.ಎ., ಡಿ.ಲಿಟ್.
೧೩. ಮದುವೆ—ಎನ್. ಕಸ್ತೂರಿ, ಎಂ.ಎ., ಬಿ.ಎಲ್.
೧೪. ನಮ್ಮ ಆರ್ಥಿಕದೃಷ್ಟಿ—ಎಸ್. ಗೋಪಾಲಸ್ವಾಮಿ, ಎಂ.ಎ.
೧೫. ವಾಯುಗುಣ—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೧೬. ಬೆಳಕು—ಟಿ. ಎಸ್. ಸುಬ್ಬರಾಯ, ಎಂ.ಎಸ್‌ಸಿ.
೧೭. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ, ಎಂ.ಎ.
೧೮. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್, ಎಂ.ಎ.
೧೯. ಇಂಗ್ಲೆಂಡಿನ ರಾಜಕೀಯ ಬೆಳವಣಿಗೆ—ಪಿ. ಜಿ. ಸತ್ಯಗಿರಿನಾಥನ್, ಎಂ.ಎ.
೨೦. ಕಣ್ಣು ಮತ್ತು ಅದರ ರಕ್ಷಣೆ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೨೧.*ಸಾರ್ವಜನಿಕ ವೆಚ್ಚ—ಡಾ|| ಎಂ. ಎಚ್. ಗೋಪಾಲ್, ಎಂ.ಎ., ಪಿಎಚ್.ಡಿ.
೨೨. ಶಿಶುವಿಹಾರಗಳು—ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್.
೨೩. ಸಂಖ್ಯೋದ್ಯಾನ—ಬಿ. ಸೀತಾರಾಮಶಾಸ್ತ್ರೀ, ಎಂ.ಎ.
೨೪. ವಿಡಂಬನ—ಎಸ್. ವಿ. ರಂಗಣ್ಣ, ಎಂ.ಎ.
೨೫.*ಎಲ್ಲೋರ ಮತ್ತು ಅಜಂತಾ—ಡಾ|| ಎಂ. ಎಚ್. ಕೃಷ್ಣ, ಎಂ.ಎ., ಡಿ.ಲಿಟ್.
೨೬. ಸಾರಜನಕದ ಮಹತ್ವ—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೨೭. ಭಾಸ—ಡಾ|| ಎಚ್. ಎಲ್. ಹರಿಯಪ್ಪ, ಎಂ.ಎ., ಪಿಎಚ್.ಡಿ.
೨೮. ಪಾಶ್ಚಾತ್ಯ ರಾಜಕೀಯ ತತ್ವಗಳು—ಎಂ. ಯಾಮುನಾಚಾರ್ಯ, ಎಂ.ಎ.
೨೯. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೩೦. ರಕ್ತ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.

೩೧. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜುನಾಥ್, ಎಂ.ಎ.

೩೨. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ, ಎಂ.ಎ.

೩೩. ಗಣಿತಶಾಸ್ತ್ರದ ಸ್ವರೂಪ—ಡಾ|| ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.

೩೪. ಋಗ್ವೇದ—ಎಂ. ಎ. ಕೃಷ್ಣಸ್ವಾಮಿ, ಎಂ.ಎ.

೩೫. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ, ಎಂ.ಎ.

೩೬. ಆಳ್ವಾರುಗಳು—ಎಂ. ಯಾಮುನಾಚಾರ್ಯ, ಎಂ.ಎ.

೩೭. ಹಿಂದು ಮುಸ್ಲಿಂ ಮೈತ್ರಿಯನ್ನು ಬೆಳಸಿದ ರಾಜರು—ವಿ. ರಾಘವೇಂದ್ರರಾವ್, ಎಂ.ಎ., ಬಿ.ಟಿ.

೩೮. ಸುಭಾಷಿತ ಸಂಗ್ರಹಗಳು—ಎಂ. ಪಿ. ಲಕ್ಷ್ಮೀನರಸಿಂಹಶಾಸ್ತ್ರೀ, ಎಂ.ಎ.

೩೯. ಮಕ್ಕಳ ಭಾವಜೀವನ—ಡಾ|| ಬಿ. ಕುಪ್ಪುಸ್ವಾಮಿ ನಾಯಿಡು, ಎಂ.ಎ., ಡಿ.ಲಿಟ್.

೪೦. ಸಹಕಾರ—ಎಸ್. ಗೋಪಾಲಸ್ವಾಮಿ, ಎಂ.ಎ.

೪೧. *ನಯಸೇನ—ಜಿ. ವೆಂಕಟಸುಬ್ಬಯ್ಯ, ಎಂ.ಎ., ಬಿ.ಟಿ.

೪೨. ಕೌಟಿಲ್ಯ—ಡಾ|| ಎಂ. ವಿ. ಕೃಷ್ಣರಾವ್, ಎಂ.ಎ., ಬಿ.ಟಿ., ಡಿ.ಲಿಟ್.

೪೩. ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ, ಎಂ.ಎ.

೪೪. ಮುನಿಸಿಪಾಲಿಟಿಗಳು—ಎಚ್. ಕೃಷ್ಣರಾವ್, ಎಂ.ಎ.

೪೫. ಲಕ್ಷ್ಮೀಶ—ಎನ್. ಅನಂತರಂಗಾಚಾರ್, ಎಂ.ಎ., ಬಿ.ಟಿ.

೪೬. ರುಚಿ—ಎಸ್. ವಿ. ರಂಗಣ್ಣ, ಎಂ.ಎ.

೪೭. ಕೀಟಗಳು—ಡಿ. ಎಸ್. ವೀರಯ್ಯ, ಎಂ.ಎಸ್‌ಸಿ.

೪೮. ಅಲೆಗಳು—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.

೪೯. ಮುದ್ದಣ—ಟಿ. ಎಸ್. ಶಾಮರಾವ್, ಎಂ.ಎ.

೫೦. ಐವರು ಭೌತವೈಜ್ಞಾನಿಕರು—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.

೫೧. ಕೃತಕ ರೇಷ್ಮೆ—ಎಂ. ಷಡಕ್ಷರಸ್ವಾಮಿ, ಎಂ.ಎಸ್‌ಸಿ.

೫೨. *ಚೀನರ ಇತಿಹಾಸ ಮತ್ತು ನಾಗರಿಕತೆ—ಎಸ್. ವೆಂಕಟದೇಶಿಕಾಚಾರ್, ಎಂ.ಎ.

೫೩. *ಯುದ್ಧಕಾಲದ ಆರ್ಥಿಕ ಸಮಸ್ಯೆಗಳು—ಎಸ್. ಲಕ್ಷ್ಮೀನರಸಿಂಹನ್, ಎಂ.ಎ.

೫೪. *ಆಹಾರ—ಜಿ. ಆರ್. ಲಕ್ಷ್ಮಣರಾವ್, ಎಂ.ಎಸ್‌ಸಿ.

೫೫. *ಇಬ್ಸನ್ನಿನ ಕೆಲವು ನಾಟಕಗಳು—ಎಸ್. ಮಂಜುನಾಥ್, ಎಂ.ಎ.

೫೬. ಶಬ್ದಪ್ರಪಂಚ—ಆರ್. ಎಲ್. ನರಸಿಂಹಯ್ಯ, ಎಂ.ಎಸ್‌ಸಿ.

೫೭. ಪ್ರಜಾಭಿಪ್ರಾಯ—ಟಿ. ಎಸ್. ರಾಜಗೋಪಾಲ ಅಯ್ಯಂಗಾರ್, ಎಂ.ಎ., ಎಲ್ಎಲ್.ಬಿ.

೫೮. ಕಲ್ಲಿದ್ದಲು—ಕೆ. ಎಸ್. ಲಕ್ಷ್ಮಣರಾವ್, ಎಂ.ಎಸ್ಸಿ.

೫೯. ಜನಪದಮುಕ್ತಕಗಳು—ಎಚ್. ಎಂ. ಶಂಕರನಾರಾಯಣರಾವ್, ಎಂ.ಎ.

ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸದ ಪುಸ್ತಕಗಳನ್ನು ಕೊಳ್ಳುವವರಿಗೆ ಈ ಕೆಳಗೆ ಕಂಡಂತೆ ಕಮೀಷನ್ ಕೊಡಲಾಗುವುದು. ಅಂಚೆ ಮತ್ತು ಪುಸ್ತಕವನ್ನು ಕಳುಹಿಸುವ ಖರ್ಚು ಪ್ರತ್ಯೇಕ.

ಶೇಕಡ ೧೬ ೨/೩ ರಂತೆ ೨೦ ಪುಸ್ತಕಗಳನ್ನು ಕೊಳ್ಳುವವರಿಗೆ
ಶೇಕಡ ೨೦ ರಂತೆ ೨೦೦ ಪುಸ್ತಕಗಳನ್ನು ಕೊಳ್ಳುವವರಿಗೆ
ಶೇಕಡ ೨೫ ರಂತೆ ೫೦೦ ಪುಸ್ತಕಗಳನ್ನು ಕೊಳ್ಳುವವರಿಗೆ
ಶೇಕಡ ೩೩ ೧/೩ ರಂತೆ ೨೦೦೦ ಪುಸ್ತಕಗಳನ್ನು ಒಂದು ವರ್ಷದಲ್ಲಿ ಕೊಳ್ಳುವವರಿಗೆ

ಸಾಧಾರಣ ಪ್ರತಿ ೩ ಆಣೆ. ಉತ್ತಮ ಪ್ರತಿ ೪ ಆಣೆ.

ಕಾರ್ಯದರ್ಶಿ, ಪ್ರಚಾರ ಮತ್ತು ಪ್ರಕಾಶನಕಾರ್ಯ,
ಯೂನಿವರ್ಸಿಟಿ ಆಫೀಸ್ ಕಟ್ಟಡ, ಮೈಸೂರು.

---

* ಈ ಪುಸ್ತಕಗಳು ಮುಗಿದುಹೋಗಿವೆ.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆ

ಪ್ರಧಾನಸಂಪಾದಕರು : ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್., ೧೯೪೩ ರ ವರೆಗೆ
ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ., ೧೯೪೩ರಿಂದ ೧೯೪೭ರ ವರೆಗೆ
ಕೆ. ವಿ. ಪುಟ್ಟಪ್ಪ, ಎಂ.ಎ., ೧೯೪೭ ರಿಂದ

೧. **ಹರಿಶ್ಚಂದ್ರಕಾವ್ಯ ಸಂಗ್ರಹ** (ಐದನೆಯ ಮುದ್ರಣ)—ಸಂಪಾದಕರು : ಟಿ. ಎಸ್. ವೆಂಕಣ್ಣಯ್ಯ, ಎಂ.ಎ. ಮತ್ತು ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೨. **ಕರ್ಣಾಟಕ ಕಾದಂಬರೀ ಸಂಗ್ರಹ**—(ಮೂರನೆಯ ಮುದ್ರಣ) ಸಂಪಾದಕರು : ಟಿ. ಎಸ್. ವೆಂಕಣ್ಣಯ್ಯ, ಎಂ.ಎ.

೩. ***ಪ್ರಭುಲಿಂಗಲೀಲೆಯ ಸಂಗ್ರಹ** (ಸಚಿತ್ರ)—ಸಂಪಾದಕರು : ಎಂ. ಎಸ್. ಬಸವಲಿಂಗಯ್ಯ, ಎಂ.ಎ., ಬಿ.ಎಲ್. ಮತ್ತು ಎಂ. ಆರ್. ಶ್ರೀನಿವಾಸ ಮೂರ್ತಿ, ಬಿ.ಎ.

೪. ***ಸಾಕ್ರೆಟೀಸನ ಕೊನೆಯದಿನಗಳು** (ಸಚಿತ್ರ)—ಅನುವಾದಕರು : ಎ. ಎನ್. ಮೂರ್ತಿರಾವ್, ಎಂ.ಎ.

೫. ***ಶ್ರೀರಾಮಕೃಷ್ಣ ಪರಮಹಂಸ**—ಲೇಖಕರು : ಕೆ. ವಿ. ಪುಟ್ಟಪ್ಪ, ಎಂ.ಎ.

೬. ***ರವೀಂದ್ರನಾಥ ಠಾಕೂರರು** (ಸಚಿತ್ರ)—ಲೇಖಕರು : ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಂ.ಎ.

೭. **ಆರೋಗ್ಯ, ಅದರ ಜ್ಞಾನ ಮತ್ತು ಸಾಧನ** (ಸಚಿತ್ರ)—ಲೇಖಕರು : ಜೆ. ಎ. ಈಶ್ವರ ಮೂರ್ತಿ, ಬಿ.ಎ., ಎಲ್.ಎಂ.ಎಸ್., ಬಿ.ಎಸ್‌ಸಿ.

೮. **ಪಂಪರಾಮಾಯಣ ಸಂಗ್ರಹ**—ಸಂಪಾದಕರು : ಆಸ್ಥಾನ ಮಹಾವಿದ್ವಾನ್ ತಿರುವಳ್ಳೂರ್ ಶ್ರೀನಿವಾಸರಾಘವಾಚಾರ್ ಮತ್ತು ಡಿ. ಎಲ್. ನರಸಿಂಹಾಚಾರ್, ಎಂ.ಎ.

೯. **ಹಣಪ್ರಪಂಚ**—ಲೇಖಕರು : ವಿ. ಸೀತಾರಾಮಯ್ಯ, ಎಂ.ಎ.

೧೦. **ಸಂಸ್ಕೃತ ನಾಟಕ**—ಲೇಖಕರು : ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೧೧. **ಜೀವವಿಜ್ಞಾನ**—ಲೇಖಕರು : ಬಿ. ವೆಂಕಟನಾರಾಯಣಪ್ಪ, ಎಂ.ಎ.

೧೨. **ಹಿಂದೂದರ್ಶನಸಾರ**—ಲೇಖಕರು : ಮಹಾಮಹೋಪಾಧ್ಯಾಯ ಪಂಡಿತ ರತ್ನಂ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯ.

೧೩. **ರಾಜನೀತಿ**—ಲೇಖಕರು : ಎಚ್. ಕೃಷ್ಣರಾವ್, ಎಂ.ಎ.

೧೪. **ಹದಿಬದೆಯ ಧರ್ಮ**—ಸಂಪಾದಕಿಯರು: ಡಿ. ಚಂಪಾಬಾಯಿ, ಎಂ.ಎ.

೧೫. ***ಪುರಾಣನಾಮಚೂಡಾಮಣಿ**—ಲೇಖಕರು : ಬೆನಗಲ್ ರಾಮರಾವ್, ಎಂ.ಎ., ಎಲ್‌ಎಲ್.ಬಿ. ಮತ್ತು ಪಾಸ್ಯಂ ಸುಂದರಶಾಸ್ತ್ರಿ.

೧೬. **ಯಶೋಧರ ಚರಿತೆಯ ಸಂಗ್ರಹ**—ಸಂಪಾದಕರು: ಕೆ. ವಿ. ರಾಘವಾಚಾರ್, ಎಂ.ಎ., ಬಿ.ಟಿ.

೧೭.* **ಗ್ರೀಕರ ತತ್ವಶಾಸ್ತ್ರಸಾರಸಂಗ್ರಹ**—ಲೇಖಕರು: ಕೆ. ಆರ್. ಶ್ರೀನಿವಾಸ ಅಯ್ಯಂಗಾರ್, ಎಂ.ಎ.

೧೮. **ಹಿಂದೂ ದೇಶದ ಭೂಚರಿತ್ರೆ**—ಲೇಖಕರು: ವೈ. ನಾಗಪ್ಪ, ಎಂ.ಎಸ್‌ಸಿ.

೧೯. **ವಚನಧರ್ಮಸಾರ**—ಲೇಖಕರು: ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ.

೨೦. **ಪ್ರಾಣಿಶಾಸ್ತ್ರ**—ಡಾ|| ಎ. ಸುಬ್ಬರಾವ್, ಬಿ.ಎ., ಡಿ.ಎಸ್‌ಸಿ., ಮತ್ತು ಎ. ನಾರಾಯಣರಾವ್, ಎಂ.ಎಸ್‌ಸಿ.; ಬೆಲೆ, ಸಾದಾ ರೂ. ೧-೪-೦; ಕ್ಯಾಲಿಕೊ ರೂ. ೧-೮-೦.

೨೧.* **ಆಧುನಿಕ ತತ್ವಶಾಸ್ತ್ರಸಮಸ್ಯೆಗಳು**—ಜಿ. ಹನುಮಂತರಾವ್, ಎಂ.ಎ.: ಬೆಲೆ, ಸಾದಾ ರೂ. ೧-೦-೦.

೨೨. **ಕನ್ನಡ ಕೈಪಿಡಿ** (ಭಾಗ ೫, ಸಾಹಿತ್ಯಚರಿತ್ರೆ)—ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.; ಬೆಲೆ, ಸಾದಾ ರೂ. ೧-೪-೦; ಕ್ಯಾಲಿಕೊ ರೂ. ೨-೪-೦.

೨೩. **ಇಸ್ಲಾಂ ಸಂಸ್ಕೃತಿ**—ಮೂಲಲೇಖಕರು: ಪ್ರೊ|| ಮಹಮದ್ ಅಬ್ಬಾಸ್ ಷೂಸ್ತ್ರಿ; ಅನುವಾದಕರು: ರಾಜಸೇವಾಸಕ್ತ ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.; ಬೆಲೆ, ರೂ. ೨-೦-೦.

೨೪. **ತಮಿಳು ಪಾಠಗಳು**—ಲೇಖಕರು: ಎಸ್. ರುದ್ರಪತಿ, ಎಂ.ಎ.; ಬೆಲೆ, ಸಾದಾ ರೂ. ೩-೪-೦.

೨೫. **ಅಶೋಕ**—ಲೇಖಕರು: ಎಸ್. ಕಸ್ತೂರಿ, ಎಂ.ಎ., ಬಿ.ಎಲ್.; ಬೆಲೆ, ಸಾದಾ ರೂ. ೧-೨-೦.

೨೬. **ಭಾರತೀಯ ಕಾವ್ಯಮೀಮಾಂಸೆ**—ಲೇಖಕರು: ಪ್ರೊ|| ತೀ. ನಂ. ಶ್ರೀಕಂಠಯ್ಯ, ಎಂ.ಎ.; ಬೆಲೆ, ಸಾದಾ ರೂ. ೩-೮-೦; ಉತ್ತಮ ರೂ. ೪-೦-೦.

೨೭. **ಭಾರತೀಯ ಸಂಸ್ಕೃತಿ**—ಲೇಖಕರು: ಡಾ|| ಎಸ್. ಶ್ರೀಕಂಠಶಾಸ್ತ್ರೀ, ಎಂ.ಎ., ಡಿ.ಲಿಟ್.; ಬೆಲೆ, ಸಾದಾ ರೂ. ೩-೦-೦; ಉತ್ತಮ ರೂ. ೪-೦-೦.

೨೮. **ಸಾರ್ವಜನಿಕ ಹಣಕಾಸು**—ಲೇಖಕರು: ಶ್ರೀ ವಿ. ಎಲ್. ಡಿ'ಸೋಜ, ಬಿ.ಎ., ಬಿ.ಕಾಂ. (ಲಂಡನ್) ಮತ್ತು ಶ್ರೀ ಬಿ. ಆರ್. ಸುಬ್ಬರಾವ್, ಎಂ.ಎ., ಡಿಪ್-ಇನ್-ಕಾಂ; ಬೆಲೆ, ಸಾದಾ ರೂ. ೨-೮-೦; ಉತ್ತಮ ರೂ. ೩-೮-೦.

೨೯. **ಆದಿಪುರಾಣ ಸಂಗ್ರಹ**—ಸಂಪಾದಕರು: ಶ್ರೀ ಎಲ್. ಗುಂಡಪ್ಪ ಎಂ.ಎ.; ಬೆಲೆ, ಸಾದಾ ರೂ. ೨-೪-೦; ಕ್ಯಾಲಿಕೋ ರೂ. ೨-೧೨-೦.

೩೦. **ಪಂಪ ಭಾರತ**—(೯-೧೪ ಆಶ್ವಾಸಗಳು) ಬೆಲೆ. ಸಾದಾ ೧-೧೨-೦ ; ಉತ್ತಮ ೨-೪-೦.

೩೧. **ಕಾಳಿದಾಸ**—ಲೇಖಕರು: ಶ್ರೀ ಎಂ. ಲಕ್ಷ್ಮೀನರಸಿಂಹಯ್ಯ, ಎಂ.ಎ. ; ಬೆಲೆ, ಸಾದಾ ರೂ. ೨-೦-೦ ; ಉತ್ತಮ ರೂ. ೨-೮-೦.

Other Publications

1. **Minimum Wages in India**: by V. R. PILLAI, M.A., M.SC. ಬೆಲೆ, ರೂ. ೧-೧೪-೦.

ಬರಲಿವೆ

೩೨. **ಭರತೇಶ ವೈಭವ ಸಂಗ್ರಹ**—ಸಂಪಾದಕರು: ಶ್ರೀ ತ. ಸು. ಶಾಮರಾವ್, ಎಂ.ಎ.

೩೩. **ಶ್ರೀ ಕೃಷ್ಣ ಚರಿತೆ**—ಸಂಪಾದಕರು: ಶ್ರೀ ಕೆ. ವೆಂಕಟರಾಮಪ್ಪ, ಎಂ.ಎ.

ಕನ್ನಡ ಕೈಪಿಡಿ—(ಭಾಗ ೧, ೨, ೩, ೪.)

ಈ ಗ್ರಂಥಮಾಲೆಯ ಪುಸ್ತಕಗಳನ್ನು ತರಿಸಿಕೊಳ್ಳಲಿಚ್ಛಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆಯಬೇಕು.

ಕಾರ್ಯದರ್ಶಿ,
ವಿಶ್ವವಿದ್ಯಾನಿಲಯದ ಪ್ರಕಟನ ಮತ್ತು
ಪ್ರಚಾರೋಪನ್ಯಾಸ ಶಾಖೆ, ಮೈಸೂರು
ಅಥವಾ
ಸೂಪರಿಂಟೆಂಡೆಂಟ್,
ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್,
ಮೈಸೂರು

ಸರ್ ಕೆ. ಪಿ. ಪುಟ್ಟಣ್ಣಚೆಟ್ಟರ ಪುದುವಟ್ಟಿನ ಪ್ರಕಟನಮಾಲೆ

೧. *ಟಪಾಲ್ ಸಂಸ್ಥೆಯ ವಿವರ—ಕೆ. ಲಕ್ಷ್ಮೀನರಸಿಂಹಯ್ಯ, ಬಿ.ಎ., ಎಲ್‌ಎಲ್.ಬಿ.

೨. *ವಿಶ್ವವಿಸರಣ—ಜಿ. ಎಸ್. ಪರಮಶಿವಯ್ಯ, ಎಂ.ಎಸ್‌ಸಿ.

೩. *ಸರ್ಕಾರದ ಪದ್ಧತಿ ಮತ್ತು ರಚನಾಕ್ರಮ—ಎಚ್. ಕೃಷ್ಣರಾವ್, ಎಂ.ಎ.

೪. *ವ್ಯವಸಾಯದ ಮಣ್ಣುಗಳು—ಕೂರಪಾಡು ಗುಂಡಪ್ಪ, ಬಿ.ಎ.

೫. *ಆಕಾಶಯಾನ—ಬಿ. ಕೆ. ಎಌ. ರಾವ್.

೬. *ವಿಶ್ವವಿದ್ಯಾನಿಲಯಗಳು—ಡಾ|| ಎಂ. ಸಿದ್ದಲಿಂಗಯ್ಯ, ಎಂ.ಎ., ಬಿ.ಟಿ., ಪಿಎಚ್.ಡಿ., ಡಿಪ್.ಎಡ್. ಮತ್ತು ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್.

೭. *ಹೆರಿಗೆ ಮತ್ತು ಶಿಶುಪೋಷಣೆ—ಡಾ|| ರತ್ನಮ್ಮ ಐಸಾಕ್, ಎಲ್.ಎಂ.ಎಸ್., ಎಂ.ಆರ್.ಸಿ.ಎಸ್., ಎಲ್.ಆರ್.ಸಿ.ಪಿ.

೮. *ಮಲೇರಿಯಾ ನಿರೋಧ—ಬಿ. ಅನಂತಸ್ವಾಮಿರಾವ್, ಬಿ.ಎಸ್‌ಸಿ., ಎಂ.ಬಿ., ಬಿ.ಎಸ್., ಎಂ.ಪಿ.ಎಚ್.

೯. *ಗ್ರಾಮ ಸ್ವೈರ್ಮಲ್ಯ—ಎಸ್. ಡಿ. ನಾರಾಯಣಗೌಡ, ಎಂ.ಬಿ., ಬಿ.ಎಸ್., ಡಿ.ಪಿ., ಎಚ್.

೧೦. ಪಶುಪಾಲನೆ—ಎಂ. ಕೃಷ್ಣಶಾಸ್ತ್ರೀ ಬಿ.ಎ., ಐ.ಡಿ.ಡಿ., ಅಸೋಸಿಯೇಟ್ ಐ.ಡಿ.ಆರ್.ಐ.

೧೧. *ಯೋಗಾಸನಗಳು—ವಿದ್ವಾನ್ ಟಿ. ಕೃಷ್ಣಮಾಚಾರ್ಯ.

೧೨. ಮೈಸೂರು ದೇಶದ ರಸಾಯನಿಕ ಕೈಗಾರಿಕೆಗಳು—ಕೆ. ಅಶ್ವತ್ಥನಾರಾಯಣ ರಾವ್, ಡಿ.ಎಸ್‌ಸಿ.

೧೩. ವಿದ್ಯುಚ್ಛಕ್ತಿಯ ಉಪಯೋಗ—ಎಂ. ಬಿ. ತಿರುನಾರಾಯಣ, ಬಿ.ಎ., ಬಿ.ಎಸ್‌ಸಿ. (ಆನರ್ಸ್, ಇ.ಇ.) ಸಿ.ಪಿ., ಇ.ಟಿ. (ಐ.ಐ.ಎಸ್.)

೧೪. ಮಕ್ಕಳ ಬೆಳವಣಿಗೆ—ಡಾ|| ಬಿ. ಕುಪ್ಪುಸ್ವಾಮಿನಾಯಿಡು, ಎಂ.ಎ., ಡಿ.ಲಿಟ್.

೧೫. ರೇಡಾರ್—ಆರ್. ಎಲ್. ನರಸಿಂಹಯ್ಯ, ಎಂ.ಎಸ್‌ಸಿ. ಸಾಧಾರಣ ಪ್ರತಿ ೬ ಆಣೆ, ಉತ್ತಮ ಪ್ರತಿ ೮ ಆಣೆ.

೧೬. ಗಣಿಕೆಲಸದ ಕೈಪಿಡಿ—ಜೆ. ಪಿ. ಡೇವಿಡ್, ಬಿ.ಎಸ್‌ಸಿ. ಸಾಧಾರಣ ಪ್ರತಿ ೬ ಆಣೆ, ಉತ್ತಮ ಪ್ರತಿ ೮ ಆಣೆ.

ಸಾಧಾರಣ ಪ್ರತಿ ೨ ಆಣೆ; ಉತ್ತಮ ಪ್ರತಿ ೩ ಆಣೆ.

ಕಾರ್ಯದರ್ಶಿ,
ಪ್ರಕಟನಶಾಖೆ ಮತ್ತು ವಿಶೇಷೋಪನ್ಯಾಸಗಳು,
ಯೂನಿವರ್ಸಿಟಿ ಆಫೀಸ್, ಮೈಸೂರು.

ಪ್ರಬುದ್ಧ ಕರ್ಣಾಟಕಕ್ಕೆ ವಿನಿಮಯವಾಗಿ ಬರುವ ಪತ್ರಿಕೆಗಳು

ಇಂಗ್ಲಿಷ್ ಪತ್ರಿಕೆಗಳು

Annals of the Oriental Research Institute, University, Madras; *Bramhavidya*, Adyar, Madras; *Bulletin of the School of Oriental Studies*, London; *Journal of the Andhra Historical Research Society*, Rajahmundry; *Journal of the Karnataka Historical Research Society*, Dharwar; *Quarterly Journal of the Mythic Society*. Bangalore; *The Indian* P.E.N., Bombay; *Annals of the Venkateswara Oriental Institute*, Tirupati; *The Jaina Siddhanta Bhaskara* and *The Jaina Gazette*, Arrah; *Bulletin of the Deccan College Research Institute*, Poona; *Publication of the Kannada Research Office*, Dharwar; *The Journal of the Literary Committee of the L.E. Association*, Dharwar; *Annals of Bhandarkar Oriental Research Institute*, Poona.

ವಾರಪತ್ರಿಕೆಗಳು

'ಒಕ್ಕಲಿಗರ ಪತ್ರಿಕೆ', ಬೆಂಗಳೂರು; 'ಕಂಠೀರವ', ಮಂಗಳೂರು; 'ಚೇತನಾ', ಬೆಂಗಳೂರು; 'ಕರ್ಣಾಟಕ ವೈಭವ', ಬಿಜಾಪುರ; 'ಪ್ರಭಾತ', ಮಂಗಳೂರು.

ಮಾಸಪತ್ರಿಕೆಗಳು

ಆಂಧ್ರ ಸಾಹಿತ್ಯ ಪರಿಷತ್ಪತ್ರಿಕೆ' (ತೆಲುಗು), ಕಾಕಿನಾಡ; 'ಕತೆಗಾರ', ಬೆಂಗಳೂರು; 'ಕನ್ನಡ ಸಹಕಾರಿ', ಮಂಗಳೂರು; 'ಜಯಕರ್ನಾಟಕ,' ಧಾರವಾಡ; 'ಜಯಂತಿ', ಧಾರವಾಡ; 'ಮೈಸೂರು ವ್ಯವಸಾಯ ಶೋಧಕ ಸಂಘದ ಪತ್ರಿಕೆ', ಬೆಂಗಳೂರು; 'ಮಕ್ಕಳ ಪುಸ್ತಕ', ಬೆಂಗಳೂರು; 'ಮೈಸೂರು ಸಹಕಾರ ಪತ್ರಿಕೆ', ಬೆಂಗಳೂರು; 'ವಿದ್ಯಾದಾಯಿನಿ', ಮೈಸೂರು; 'ವಿವೇಕಾಭ್ಯುದಯ', ಮೈಸೂರು; 'ಶರಣಸಾಹಿತ್ಯ', ಬೆಂಗಳೂರು; 'ಶಿವಾನುಭವ', ಬಿಜಾಪುರ; 'ಸದ್ಬೋಧಚಂದ್ರಿಕೆ', ಅಗಡಿ; 'ಸರಸ್ವತಿ', ಬೆಂಗಳೂರು; 'ಸುಬೋಧ', ಬೆಂಗಳೂರು; 'ಜೀವನ', ಬೆಂಗಳೂರು: 'ಕಥಾವಳಿ', ಬೆಂಗಳೂರು; 'ಪುಸ್ತಕ ಪ್ರಪಂಚ', ಮೈಸೂರು; 'ಕನ್ನಡ ನುಡಿ', ಬೆಂಗಳೂರು;

ತ್ರೈಮಾಸಿಕಪತ್ರಿಕೆಗಳು

'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ', ಬೆಂಗಳೂರು; 'ಭಾರತ ಇತಿಹಾಸ ಸಂಶೋಧನ ಮಂಡಲದ ಪತ್ರಿಕೆ' (ಮರಾಠಿ), ಪೂನಾ.

ಗ್ರಂಥಮಾಲೆ

'ಮನೋಹರ ಗ್ರಂಥಮಾಲೆ,' ಧಾರವಾಡ; 'ಮಿಂಚಿನಬಳ್ಳಿ', ಧಾರವಾಡ.

ಮೈಸೂರು ಮಹಾರಾಜರವರ ಕಾಲೇಜಿನ
ಕರ್ಣಾಟಕ ಸಂಘದ ಪ್ರಕಟನೆಗಳು

೧. **ನಾಗಾನಂದನಾಟಕ** (ಶ್ರೀ ಅನಂತನಾರಾಯಣ ಶಾಸ್ತ್ರಿಗಳವರಿಂದ)— ಬೆಲೆ, ರೂ. ೧–೦–೦; ಮಾರಾಟಗಾರರು: ಪ್ರೋಗ್ರೆಸ್ ಬುಕ್ ಸ್ಟಾಲ್, ಮೈಸೂರು.

೨. **ಕರ್ಣಾಟಕ ಮೃಚ್ಛಕಟಿಕಪ್ರಕರಣಂ** (ಆಸ್ಥಾನ ಕವಿ ನಂಜನಗೂಡು ಸುಬ್ಬಾಶಾಸ್ತ್ರಿಗಳವರಿಂದ) ರೂ. ೧-೧೨-೦; ಮಾರಾಟಗಾರರು: ಶ್ರೀ ರಾಮಚಂದ್ರ ಬುಕ್ ಡಿಪೊ, ಮೈಸೂರು.

ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಪ್ರಕಟಣೆಗಳು

೧. **ಶ್ರೀ ಕೈಲಾಸಂ ಅವರ ಸ್ಮರಣೆ**—ಶ್ರೀ ಕೆ. ವಿ. ಅಯ್ಯರ್; ರೂ. ೨-೪-೦.
೨. **ಕರ್ಣಾಟಕ ಮಾಲವಿಕಾಗ್ನಿಮಿತ್ರ ನಾಟಕಂ**—ಶ್ರೀ ಮೋಟಗಾನಹಳ್ಳಿ ಶಂ. ಸುಬ್ರಹ್ಮಣ್ಯಶಾಸ್ತ್ರೀ; ರೂ. ೧-೧೨-೦.
೩. **ಮೊನ್ನ ವನ್ನ** (ಮಾರಿಸ್ ಮ್ಯಾಟರ್‌ಲಿಂಕನ ಮೂರಂಕದ ನಾಟಕ)—ಶ್ರೀ ಎಸ್. ಜಿ. ಶಾಸ್ತ್ರಿ; ರೂ. ೨-೦-೦.
೪. **ನಾಗನ ಪದಗಳು**—ಶ್ರೀ ಜಿ. ಪಿ. ರಾಜರತ್ನಂ; ರೂ. ೧-೪-೦.
೫. **ಶಕ್ತಿ** (ಸಚಿತ್ರ)—ಶ್ರೀ ಆರ್. ಎಲ್. ನರಸಿಂಹಯ್ಯ; ರೂ. ೩-೦-೦.
೬. **ಬಾಲಸರಸ್ವತಿ** (ಕತೆ, ಪ್ರಬಂಧ, ಸಂವಾದ); ರೂ. ೨-೮-೦.
೭. **ನಮ್ಮ ನಮ್ಮವರು** (ಚಿತ್ರಗಳು, ಪ್ರಬಂಧಗಳು); ರೂ. ೨-೮-೦
೮. **ಚಿನ್ನದ ದೋಸೆ**—(ಜಾನಪದ ಕತೆಗಳು); ೧೨ ಆಣೆ.
೯. **ಮಕ್ಕಳ ಮಾತು**—(ಎಸ್ಸೆಗಳು); ರೂ. ೧-೦-೦.
೧೦. **ಪಚ್ಚೆಯ ತೆನೆ**—(ಎಸ್ಸೆಗಳು); ರೂ. ೧-೦-೦.
೧೧. **ಗಂಧದ ಹುಡಿ**—(ಎಸ್ಸೆಗಳು); ರೂ. ೧-೦-೦.
೧೨. **ದುರಾಸೆಯ ದಂಡ**—(ಐದು ಏಕಾಂಕ ನಾಟಕಗಳು); ರೂ. ೧-೪-೦.

(ಪ್ರಕಟನೆ ೬ ರಿಂದ ೧೨ ಕಾಲೇಜ್ ಬರವಣಿಗೆಯ ಉತ್ತಮ ಉದಾಹರಣೆಗಳು)

Edited by Sri S. V. Parameswara Bhatta, M.A. and Sri U. K. Subbarayachar, M.A.
Published by The University of Mysore, Mysore.
Printed by K. A. Korula at the Wesley Press and Publishing House, Mysore City

ಪ್ರಬುದ್ಧ ಕರ್ಣಾಟಕ

ಸಂಪುಟ ೩೭—ಸಂಚಿಕೆ ೩

೧೪೫

ಮನ್ಮಥ ಸಂವತ್ಸರ

ಆಶ್ವಯುಜ ಸಂಚಿಕೆ

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೫೫

ವಿಷಯ ಸೂಚಿಕೆ

ಪ್ರಬುದ್ಧ ಕರ್ಣಾಟಕ

ಮನ್ಮಥ ಸಂವತ್ಸರ | ೧೪೫ | ಆಶ್ವಯುಜ ಸಂಚಿಕೆ

ತಾಯಿ ಬಾರಾ

ಜನ್ಮ ಜನ್ಮದ ಸುಕೃತವೆ ಬಾ
ನನಗೆ ಬೆಂಬಲವಾಗುತ.
ಜನ್ಮ ಜನ್ಮದ ದುಷ್ಕೃತವೆ ಬಾ
ಮಾತೃಚರಣಕೆ ಬಾಗುತ.

ಯುಗಯುಗದ ವಾತ್ಸಲ್ಯವೆ ಬಾ
ಹೊಮ್ಮಿ ಹೊನಲಲಿ ಹರಿಯುತ.
ದೈವಗರ್ಭದ ಕೃಪೆಯೆ ಬಾ ಬಾ
ಕರೆದು ಅಮೃತವ ಕರೆಯುತ.

ಕಂಡಿಯಿಂದ ಕಂಡೇವೆ
ಕಣ್‌ಕಾಣಿಕೆ ಎಂದು
ಜನ ಕಾದಿದೆ
ಮನ ಕಾದಿದೆ
ಕಾದಿದೆ ತನುಬಿಂದು.

ಮೈ ಮಣ್ಣಿಗೆ
ಕುಡಿಗಣ್ಣಿಗೆ
ಈ ಹಣ್ಣಿಗೆ
ರಸಗೂಡಿಸು ಬಂದು.

ರಣಘೋಷಕೆ
ಆಕ್ರೋಶಕೆ
ಬೇಸತ್ತೆವು ಇಂದು.
ಬಾ ತಾಯಿಯೆ ಬಾರಾ
ಚಂದಿರ ಮುಖ ತೋರಾ.

ಅಂಬಿಕಾತನಯದತ್ತ.

ಕವಿಯ ಜೀವನದೃಷ್ಟಿ ಮತ್ತು ಕಾವ್ಯಸೃಷ್ಟಿ*

ಸ್ವಾನುಭವ, ದೇಶದ ಸಂಸ್ಕೃತಿ, ಪಡೆದ ವಿದ್ಯೆ, ತಾನು ಹುಟ್ಟಿದ ಮತ್ತು ಬೆಳೆದ ಸುತ್ತಣ ಸನ್ನಿವೇಶ, ಮಹಾಪುರುಷ ಸಂಶ್ರಯ ಮೊದಲಾದುವುಗಳ ಪ್ರಭಾವದಿಂದ ಮೂಡುವ ಬುದ್ಧಿಸ್ಥಿತಿಯನ್ನು ಜೀವನದೃಷ್ಟಿ ಎಂದು ಸಂಕೇತಿಸಬಹುದು. ಅಂತಹ ಜೀವನದೃಷ್ಟಿ ರಸಾನುಭೂತಿಗೇರಿದರೆ ' ದರ್ಶನ 'ವಾಗುತ್ತದೆ.

ಕವಿಯ ದರ್ಶನ ತತ್ತ್ವಶಾಸ್ತ್ರಜ್ಞನ ತರ್ಕಬದ್ಧವಾದ ದರ್ಶನವಲ್ಲ. ಅದು ಋಷಿಯ ಅಪರೋಕ್ಷಾನುಭೂತಿಗೆ ಹೆಚ್ಚು ಸಮೀಪವಾದದ್ದು. ನಿಷ್ಕೃಷ್ಟವಾದ ಕೇಂದ್ರವಾಗಲಿ ಖಚಿತವಾದ ನೇಮಿಯಾಗಲಿ ಅದಕ್ಕಿದೆ ಎಂದು ಹೇಳಲಾಗುವುದಿಲ್ಲ. ಅನುಭವ ಬದಲಾಯಿಸಿದಂತೆ ಪ್ರಜ್ಞೆ ವಿಕಾಸವಾದಂತೆ ಅದು ಪರಿಣಾಮಗೊಳ್ಳುತ್ತದೆ. ಕೇವಲವಾದ ಭೂಮಾನುಭೂತಿ ಸಿದ್ಧಿಸುವ ವರೆಗೂ ಅದರ ವೃದ್ಧಿಗಾಗಲಿ ಪರಿವರ್ತನೆಗಾಗಲಿ ಪೂರ್ಣವಿರಾಮ ಲಭಿಸುವುದಿಲ್ಲ. ಅದು ಅನಂತಕಾಲವೂ ನಿರಂತರ ವಿಕಾಸಶೀಲವಾದುದು. ಅನಂತದ ಸಿದ್ಧಿಗೆ ಅಂತವೆಲ್ಲಿ ? ಆದ್ದರಿಂದಲೆ ರಸಋಷಿ ಹೀಗೆ ಹೇಳುತ್ತಾನೆ.

ಯಾವ ಮತದವನಲ್ಲ,
 ಎಲ್ಲ ಮತದವನು ;
ಯಾವ ಪಂಥವು ಇಲ್ಲ
 ಬಹು ಪಂಥದವನು.

ಎಲ್ಲ ಬಿಡುವವನಲ್ಲ,
ಎಲ್ಲ ಹಿಡಿವವನಲ್ಲ.
ನಾನು ಉನ್ಮತ್ತನಲ್ಲ,
ಚಾರ್ವಾಕನೂ ಅಲ್ಲ.
ನೀತಿಜಡನೂ ಅಲ್ಲ,
ನೀತಿಗೇಡಿಯು ಅಲ್ಲ.
ಬರಿ ಕನಸಿನವನಲ್ಲ,
ಬರಿ ಕೆಲಸದವನಲ್ಲ !
ಎಲ್ಲ ಬಿಡಲೂ ಬಲ್ಲೆ,
ಎಲ್ಲ ಹಿಡಿಯಲು ಬಲ್ಲೆ,
. . . .

---

* ಆಕಾಶವಾಣಿಯಲ್ಲಿ ಮಾಡಿದ ಭಾಷಣ.

. . . .
ಎಲ್ಲ ನಶ್ವರವೆಂದು
ಇರುವುದನುಳಿವುದೇಕೆ ?
ಕೆಲಹಣ್ಣು ಕಹಿಯೆಂದು
ಎಲ್ಲ ಹಳಿಯುವುದೇಕೆ ?
ಕಹಿಯೆದೆಯೊಳಿಹ ಸಿಹಿಯು
ಸಿಕ್ಕಷ್ಟು ಸಿಗಲಿ !
ದುಃಖದೊಳಗಿಹ ಸುಖವು
ಬಂದಷ್ಟು ಬರಲಿ !
. . . .

. . . .
ಗುರುದೇವನನು ಭಜಿಸಿ,
ಬೇಡವಾದುದ ತ್ಯಜಿಸಿ,
ಕೈಗೆ ಬಂದುದ ಭುಜಿಸಿ,
ಬದುಕುವಂ ಬಾ !
ಭಕ್ತಿಯಲಿ, ಶಾಂತಿಯಲಿ,
ಒಂದಿನಿತು ಗೊಣಗುಡದೆ,
ನಶ್ವರದ ನಡುವೆಯಿಹ
ಶಾಶ್ವತವ ಸವಿಯುತ್ತ,
ದುಃಖಗಳ ಎದೆಯೊಳಿಹ
ಸುಖಗಳನು ಸುಲಿಯುತ್ತ,
ಇಹಪರಗಳೆರಡನೂ
ಪ್ರೇಮದಿಂ ಮುತ್ತುತ್ತ
ನಲಿಯುವಂ ಬಾ !*

ಯಾವ ದೇಶದ ಕವಿಯಾಗಲಿ ತನ್ನ ಜನತೆಯ ಪ್ರಾಚೀನ ಸಂಸ್ಕೃತಿಯ ನೆಲದಲ್ಲಿಯೆ ಮೊಳೆತು ಬೇರುಬಿಟ್ಟು ಬೆಳೆಯುತ್ತಾನೆ. ಭಾರತೀಯನಾದ ಕವಿಗೆ ವೇದ, ಉಪನಿಷತ್ತು, ಭಗವದ್ಗೀತೆ, ಷಡ್ದರ್ಶನಗಳು, ರಾಮಾಯಣ ಮಹಾಭಾರತಾದಿ ಮಹಾಕಾವ್ಯಗಳು, ಪುರಾಣಗಳು—ಇತ್ಯಾದಿ ಭಾರತೀಯ ದರ್ಶನ ಸಾಹಿತ್ಯಗಳು ಅವನ ಸಂಸ್ಕಾರಕೋಶವನ್ನು ಸಿದ್ಧಗೊಳಿಸುವ ಭಿತ್ತಿಯಾಗಿ ಪರಿಣಮಿಸುತ್ತವೆ.

ಅಸಂಖ್ಯರೂಪಧಾರಿಯಾದ ಸಚ್ಚಿದಾನಂದದ ಬೇರೆ ಬೇರೆ ಮುಖಗಳೆ ಜೀವ,

* ಷೋಡಶಿ : 'ರಸಋಷಿ', ಪುಟ ೬೫, ೭೮, ೭೯.

ಜಗತ್ತು ಮತ್ತು ಈಶ್ವರ. ಕವಿದರ್ಶನಕ್ಕೆ ಇವೆಲ್ಲವೂ ಸತ್ಯ; ನಿತ್ಯಸತ್ಯದ ಬೇರೆ ಬೇರೆ ಪ್ರಕಾರಗಳಾದ ಲೀಲಾಸತ್ಯ. ಜಡವು ಜೀವವಾಗಿ ಜೀವ ಮಾನವನಾಗಿ ಮಾನವ ದೇವನಾಗುವುದೆ ಸೃಷ್ಟಿಯ ಪರಮಗಂತವ್ಯ. ಈಶ್ವರನು ಸಗುಣನೂ ಹೌದು, ನಿರ್ಗುಣನೂ ಹೌದು. ಈಶ್ವರನ ಸಗುಣವೂ ಕ್ರಿಯಾತ್ಮಕವೂ ಆದ ಶಕ್ತಿಯೆ ಋತಚಿನ್ಮಯೀ ಜಗನ್ಮಾತೆ ಅಥವಾ ಋತಚಿತ್. ವಿಶ್ವದ ಚರಾಚರ ಸೃಷ್ಟಿಯೆಲ್ಲವೂ ಆಕೆಯ ಲೀಲಾವಿಲಾಸ. ಜಗತ್ತೆಲ್ಲವೂ ಜಗನ್ಮಾತೆಯ ರೂಪವಾದರೂ ಪ್ರಕೃತಿಯ ಹೊದಿಕೆಯಲ್ಲಿ ಅಂತರ್ಯಾಮಿಯಾಗಿರುವ ಪರಮಪುರುಷನನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದೆ ಜೀವದ ಗುರಿ. ಜೀವಿಜೀವಿಗಳ ಹೃದಯದಲ್ಲಿ ಸ್ಥಿತನಾಗಿರುವ ಆ ಅಂತರತಮನಾದ ಗುರು, 'ಜನುಮ ಜನುಮ ಶತಕೋಟಿ ಸಂಸ್ಕಾರ ಪರಮ ಚರಮ ಸಂಸ್ಕಾರಿ!' ಆತನೆ ಆತ್ಮದ ತಮಸ್ಸನ್ನು ಪರಿಹರಿಸುತ್ತಾನೆ. ಅವನಿಗೆ ಶರಣಾಗಿ ಅವನು ತೋರಿದ ದಾರಿಯಲ್ಲಿ ನಡೆದರೆ ಭಯವಿಲ್ಲ. ಆದ್ದರಿಂದ ಪೂರ್ಣ ಸಮರ್ಪಣೆಯೆ ಶಾಂತಿಯ ದಿವ್ಯಧಾಮ. ಪ್ರಾರ್ಥನೆ, ಧ್ಯಾನ, ಉದ್ಧಾರದ ಆಸಕ್ತಿ—ಇವೆಲ್ಲ ಮಾನವನನ್ನು ಸಾಕ್ಷಾತ್ಕಾರದತ್ತ ಕರೆದೊಯ್ಯುತ್ತವೆ.

ಕವಿ ಸದಾ ತತ್ತ್ವಶಿಖರಗಳಲ್ಲಿ ಮಾತ್ರ ನಿವಾಸಿಯಾಗುತ್ತಾನೆಂದು ತಿಳಿಯಬಾರದು, ಸಂಸಾರದ ಸುಖದುಃಖ ಕಷ್ಟಕಾರ್ಪಣ್ಯಗಳಲ್ಲಿಯೂ ಅವನು ಪ್ರವಾಸಿಯೆ. ಆದರೆ ಅವನ ಕಾಣ್ಕೆ ಬೇರೆ. ಅನುದಿನದ ಸಂಸಾರದಲ್ಲಿ, ಹೆಣ್ಣುಗಂಡಿನ ಬಾಳಿನ ಸರಸವಿರಸಗಳಲ್ಲಿ, ಸಾಮಾಜಿಕ ಜೀವನದ ಶೋಕತಾಪಗಳಲ್ಲಿ, ಪ್ರಪಂಚದ ವಿವಿಧ ಪ್ರಕಾರವಾದ ರಾಜಕೀಯ ಘಟನೆಗಳಲ್ಲಿ ಅವನು ಭಗವಂತನ ಲೀಲಾವಿನ್ಯಾಸಗಳನ್ನೇ ಕಾಣುತ್ತಾನೆ.

ಪ್ರಕೃತಿಯಾರಾಧನೆಯಲ್ಲಿ ಪರಮನಾರಾಧನೆಯನ್ನು ಕಾಣುವ ಕವಿಗೆ ಪ್ರಕೃತಿ ಪರಮಾತ್ಮನ ರಸಾನಂದದ ಬೃಹತ್ ಪ್ರತಿಮೆಯಾಗುತ್ತದೆ. ಮಹತ್ ಪ್ರತಿಮೆಯಾಗುತ್ತದೆ. ಅಲ್ಲಿ ಸಕಲಾರಾಧನ ಸಾಧನ ಬೋಧನದ ರಸಸಿದ್ಧಿ ಲಭಿಸುತ್ತದೆ.

ಇಂತಹ ದರ್ಶನದಿಂದ ಸಮನ್ವಿತನಾದ ಕವಿಗೆ ಬಂಧನದ ನಾಡಿಯಲ್ಲಿ ಮುಕ್ತಿನದಿ ಹರಿವುದೂ ಋತದ ನಿಯಮದಲ್ಲಿ ಪಾಪಿಗೆ ಉದ್ಧಾರವಿರುವುದೂ ಗೋಚರವಾಗುತ್ತದೆ. ಈ ಜಗತ್ತು ಅತಿಮಾನಸದಲ್ಲಿ ಪ್ರತಿಷ್ಠಿತವಾಗಲು ಕಾಲ ಬೇಕು. ಈಗ ಆಗಿರುವ ಉದ್ಧಾರಕ್ಕಿಂತ ಸಹಸ್ರಪಾಲು ಆಗುವ ಉದ್ಧಾರವಿದೆ. ಆ ಉದ್ಧಾರದ ಆಸಕ್ತಿ ಚಿರಜಾಗ್ರತವಾಗಬೇಕು. "ಭ್ರಮಾಶೀಲವಾಗಿ ಪರಿಭ್ರಮಿಸುತ್ತಿರುವ ಚಿತ್ತಕ್ಕೆ ಇಂದು ಸ್ಥೈರ್ಯ, ಶಮೆ, ತುಷ್ಟಿ, ಪ್ರಸನ್ನತೆ, ಮತಿಗೌರವ, ವಿಶ್ವಪ್ರೇಮ, ಆತ್ಮಪ್ರತ್ಯಯ—ಇವು ಬೇಕು. ಆತ್ಮಶ್ರೀಗೆ ಮೊದಲನೆಯ ಸ್ಥಾನವೂ, ರಸಪೂರ್ಣವಾದ

ಸಂಸ್ಕೃತಿಗೆ ಎರಡನೆಯ ಸ್ಥಾನವೂ, ಅಭ್ಯುದಯಕರವಾದ ಸಾಮಾಜಿಕ ನಾಗರಿಕತೆಗೆ ಮೂರನೆಯ ಸ್ಥಾನವೂ ಇವು ಮೂರಕ್ಕೂ ಆಧಾರವೂ ನಿವಾಸವೂ ಆಗಿ ಅತ್ಯಂತ ಆವಶ್ಯಕವಾದರೂ ಭಿತ್ತಿಸದೃಶ ಮತ್ತು ಸಾಧನರೂಪ ಮಾತ್ರವಾಗಿರುವ ರಾಜಕೀಯಕ್ಕೆ ಕೊನೆಯ ನಾಲ್ಕನೆಯ ಸ್ಥಾನವೂ ದೊರಕುವುದರಲ್ಲಿ ಸಮಷ್ಟಿಯ ಹಿತವಿದೆ."* ಸಮನ್ವಯ, ಸರ್ವೋದಯ ಮತ್ತು ಪೂರ್ಣದೃಷ್ಟಿ ಇವುಗಳೆ ಕವಿಯ ದರ್ಶನದ ಮುಖ್ಯಮಂತ್ರಗಳಾಗಿವೆ.

ಮೇಲೆ ಹೇಳಿದ ಕೆಲವು ಅಭಿಪ್ರಾಯಗಳಿಗೆ ನಿದರ್ಶನರೂಪವಾಗಿವೆ, ಈಗ ವಾಚನಮಾಡುವ ಕವಿತೆಗಳು.

ಕವಿಗೆ ಲೋಕವೆಲ್ಲ ಗುರು. ಲೋಕಗುರುಗಳೆಲ್ಲ ಪೂಜ್ಯರೆ. ಅವನ ದರ್ಶನ ಸಿದ್ಧಿಗೆ ಅವರೆಲ್ಲರೂ ದೀಕ್ಷೆಕೊಡುತ್ತಾರೆ.

ಮನ್ಮನೋಮಂದಿರಕೆ, ಓ
ಲೋಕಗುರುಗಳೆಲ್ಲ ಬನ್ನಿ !
ಬನ್ನಿ, ಬನ್ನಿ, ಬನ್ನಿ !—
ತುಳಿಯೆ ನಿಮ್ಮ ಪದತಲ
ದಲದಲದಲ ಅರಳ್ವುದೆನ್ನ
ಶಿರಃ ಕಮಲ ಕುಟ್ಮಲ !

ತಮೋತಿಮಿರವಳಿಯಲಲ್ಲಿ
ಪರಂಜ್ಯೋತಿ ಬೆಳಗಲಿ ;
ಋತದ ಶಿವದ ಆನಂದದ
ಚಿದ್‌ವಿಭೂತಿ ತೊಳಗಲಿ.

ಮನ್ಮನೋಮಂದಿರಕೆ, ಓ
ಲೋಕಗುರುಗಳೆಲ್ಲ ಬನ್ನಿ !
ಬನ್ನಿ, ಬನ್ನಿ, ಬನ್ನಿ† !

ಕವಿಯ ಜೀವನವನ್ನು ದೇವನೆಡೆಗೆ ಆಕರ್ಷಿಸುವ ಸಾಧನಗಳಲ್ಲಿ ಮೊದಲನೆಯದೆ ನಿಸರ್ಗ ಸೌಂದರ್ಯ. ಅದು ಅವನನ್ನು ಪ್ರಗತಿಪಥದಲ್ಲಿ ಮುಂದೆಮುಂದೆ ಕೊಂಡೊಯ್ಯುತ್ತದೆ. 'ತಾವರೆಯ ತೇರು' ಎಂಬ ಈ ಕವನದಲ್ಲಿ ಅದು ನಿದರ್ಶಿತವಾಗಿದೆ :

ಭಾವನೆಯ ಬಾನಿನಲಿ ಇಂದ್ರಧನುರ್ಯಾನದಲಿ
ನಿನ್ನೊಡನೆ ಕುಳಿತು ನಾ ತೇಲುತಿರುವೆ ;

---

* ಶ್ರೀ ರಾಮಾಯಣ ದಿವ್ಯಶಿಲ್ಪಿ ಎಂಬ ಲೇಖನದಿಂದ—ವಿಭೂತಿಪೂಜೆ.

† ಅಗ್ನಿಹಂಸ : 'ಮನ್ಮನೋಮಂದಿರಕೆ', ಪುಟ ೧.

ಮೋಹನದ ಮುಗುಳುನಗೆಯನು ಬೀರಿ, ಸುಂದರಿಯೆ,
ನೀನಗ್ನಿಮೇಘವನೆ ಹೋಲುತಿರುವೆ!
ನಾನೇರಿದೆತ್ತರವ ನೋಡಿ
ಚಿತ್ತ ಹಿಗ್ಗುತಿದೆ;
ಬೀಳುವೆನೊ ಎಂಬಳುಕು ಮೂಡಿ
ಮತ್ತೆ ಕುಗ್ಗುತಿದೆ.
ನಿನ್ನ ಮೊಗದಲಿ ಮಾಸದಿಹ ಮುಗುಳುನಗೆಯೊಂದು
ಸರ್ವದಾ ನವಿಲಂತೆ ನಲಿಯುತಿಹುದು.
ನಿನ್ನ ಮೌನದ ಅರ್ಥವೇನಿಹುದೊ ಅದನರಿಯೆ.
ನಮ್ಮ ತಾವರೆ ತೇರು ತೇಲುತಿಹುದು!

ನೀನಂದು ಕನಕ ರಥವನು ತಂದು ಬಾ ಎಂದು
ಕರೆದಂದು ನಾನು ದೂಳಾಡುತಿದ್ದೆ.
ಹೊಂಬಿಸಿಲು ಹೊಮ್ಮಿತ್ತು, ಖಗಗಾನ ಚಿಮ್ಮಿತ್ತು,
ಕಣ್ದೆರೆದುಕೊಂಡಿತ್ತು ಜಗದ ನಿದ್ದೆ!
ತೇರಿನಾ ಬಣ್ಣವನು ಕಂಡೆ
ಮೊದಲು ಮರುಳಾದೆ;
ಹುಡುಗಾಟ ಎಂದಂದುಕೊಂಡೆ
ಅದನೇರಿ ಹೋದೆ!
ಎಲ್ಲಿಗೊಯ್ಯುವೆ ಎಂದು ನಾ ಕೇಳಲಿಲ್ಲಂದು,
ಕೇಳಿದರೆ ನೀನು ನುಡಿಯದಿಹೆ ಇಂದು.
ಬರಿದೆ ಬೆರಳೆತ್ತಿ ತೋರುವೆ; ಮುಂದೆ ನೋಡಿದರೆ
ಹಬ್ಬಿಹುದು ನೀಲಿಮೆಯ ಶೂನ್ಯಸಿಂಧು!

ಶಶಿ ಸೂರ್ಯ ಗ್ರಹ ನಿಚಯ ತಾರಾಖಚಿತ ನಭದಿ
ಹಾರುತಿದೆ ನಮ್ಮಾ ಕಲಾ ವಿಮಾನ;
ಮುಂದೆನಿತು ದೂರಕೋ? ಎಂದಾವ ತೀರಕೋ?
ತೇಲುತಿಹುದೀ ನಿನ್ನ ಕಮಲಯಾನ!
ಸಂಶಯದಿ ಕಂಪಿಸುವುದೊಮ್ಮೆ
ನನ್ನಾತ್ಮಪಕ್ಷಿ;
ನಿನ್ನಯ ಮುಗುಳ್ನಗೆಯ ನೆಮ್ಮೆ
ನನಗೆ ಗುರುಸಾಕ್ಷಿ!
ಹಗಲಿರುಳು ಬೆಳಗು ಬೈಗುಗಳುರುಳಿ ಸಾಗುತಿವೆ
ಗಗನದಲಿ ರಂಗೆರಚಿ ಬಂದು ನಿಂದು!

ನಿನ್ನ ಸದ್ದಿಲಿ ಸನ್ನೆಯಲಿ ಮುಂದೆ ನೋಡಿದರೆ
ಹಬ್ಬಿಹುದು ನೀಲಿಮೆಯ ಶೂನ್ಯ ಸಿಂಧು!*

ದೇವನೆಡೆಗೆ ಸರಿಯುವ ಜೀವದ ಪಯಣ ಎಡರುತೊಡರುಗಳಿಂದ ತುಂಬಿರುತ್ತದೆ. ಆಗ ಕವಿ ಆರ್ತನಾಗಿ ಪ್ರಾರ್ಥಿಸುತ್ತಾನೆ:

ಸೋತು ಬಂದೆನೊ, ಗುರುವೆ, ನಿನ್ನ ಬಳಿಗೆ!
ಸೋತ ಜೀವವನಾತುಕೋ ಒಂದು ಗಳಿಗೆ!

ಅರಿಯ ಹಿರಿಸರಳು ಮರುವೊನೆಗೊಂಡ ಗಾಯದಲಿ
ಸುರಿಯುತಿದೆ ತೊರೆಯಂತೆ ಬಿಸಿನೆತ್ತರು;
ಗಿರುಗಿರನೆ ಗಾಳಿಯಲಿ ತಿರುಗುತಿಹ ಸರಳಗರಿ
ಕೊರೆಯುತಿಹುದೆದೆಯಲ್ಲಿ ಉರಿಹೊತ್ತಿಸಿ!

ಎತ್ತ ನೋಡಿದರೆನಗೆ ಆಶ್ರಯವೆ ತೋರದಿದೆ;
ಇತ್ತು ಕೃಪೆಯಾಶ್ರಮದಿ ತಾವನೆನಗೆ
ಹೆತ್ತ ಕಂದನ ಬಗೆಯ ಹೊತ್ತು ದುಗುಡವ ಹರಿಸಿ
ಮತ್ತೆ ನನ್ನನು ಕಳುಹೊ ರಣರಂಗಕೆ!

ಗೌರವ ರಣಾಂಗಣದಿನಳುಕಿ ಬಂದವನಲ್ಲ,
ಪೌರುಷ ವಿಹೀನತೆಯ ಪಾಪಿಯಲ್ಲ;
ಘೋರಸಂಗ್ರಾಮದಿಂ ಬಿಡುತೆ ಬೇಡುವನಲ್ಲ,
ವೈರಿಯನು ಗೆಲ್ಲದೈತರುವನಲ್ಲ!†

ಆರ್ತನ ಪ್ರಾರ್ಥನೆ 'ನಾವಿಕ' ಎಂಬ ಕವನದಲ್ಲಿ ವ್ಯೈವೆತ್ತಿದೆ.

ಕೈಬಿಟ್ಟರೆ ನೀ ಗತಿಯಾರ್ಯೈ?
ಕಿರುದೋಣಿಯಿದು ಮುಳುಗದೇನೈ?

ಮೇರೆಯನರಿಯದ ಕಡಲಿದು ಗುರುವೆ,
ಭೋರೆಂದಲೆಗಳು ಏಳುತಿವೆ;
ನೊರೆನೊರೆಯಾಗಿಹ ತೆರೆತೆರೆಯಲ್ಲಿ
ಮೃತ್ಯುವು ನೃತ್ಯವ ಮಾಡುತಿದೆ!

ಉತ್ತರಮುಖಿಯು ಪುಡಿಪುಡಿಯಾಗಿದೆ!
ಗಾಳಿಯು! ಮೋಡವು! ಮಿಂಚುತಿದೆ!

---

* ಕಲಾಸುಂದರಿ: 'ಶಾವರೆಯ ತೇರು', ಪುಟ ೨೭.

† ನವಿಲು: 'ಆರ್ತವಾಣಿ', ಪುಟ ೭೭.

ಕತ್ತಲು ಕವಿದಿದೆ, ಚಿತ್ತವದಳುಕಿದೆ,
ಕಾಣದು ಕಣ್ಣಿಗೆ ಧ್ರುವತಾರೆ!

ಹರಿದಿದೆ ಕಟ್ಟು, ಮುರಿದಿದೆ ಹುಟ್ಟು,
ಬಳಲಿಹೆ, ಬೆದರಿಹೆ ಕಂಗೆಟ್ಟು!
ಸೋದರರನಿಬರು ಮುಳುಗಿದ ಚಿಹ್ನೆಯು
ಬರಿಯ ದೋಣಿಗಳು ತೋರುತಿವೆ!*

ಕವಿಯ ಧ್ಯೇಯ ಭಗವತ್‌ಸ್ವರೂಪವನ್ನು ಅನುಸಂಧಾನಮಾಡುವುದು.

ನಿನ್ನ ಬಾಂದಳದಂತೆ
ನನ್ನ ಮನವಿರಲಿ;
ನಿನ್ನ ಸಾಗರದಂತೆ
ನನ್ನ ಎದೆಯಿರಲಿ.

ನಿನ್ನ ಸುಗ್ಗಿಯ ತೆರದಿ
ನನ್ನ ಸೊಬಗಿರಲಿ;
ನಿನ್ನ ಲೀಲೆಯ ತೆರದಿ
ನನ್ನ ಬಾಳಿರಲಿ.

ನಿನ್ನ ಬಲವಿರುವಂತೆ
ನನ್ನ ಬಲವಿರಲಿ;
ನಿನ್ನ ತಿಳಿವಿರುವಂತೆ
ನನ್ನ ತಿಳಿವಿರಲಿ.

ನಿನ್ನೊಲ್ಮೆಯಂದದಲಿ
ನನ್ನೊಲ್ಮೆಯಿರಲಿ;
ನಿನ್ನಾಳವೆನಗಿರಲಿ
ನೀನೆ ನನಗಿರಲಿ.

ನಿನ್ನಾತ್ಮದಾನಂದ
ನನ್ನದಾಗಿರಲಿ;
ನಿನ್ನೊಳಿರುವಾ ಶಾಂತಿ
ನನ್ನೆದೆಗೆ ಬರಲಿ.†

---

* ಕೊಳಲು : 'ನಾವಿಕ', ಪುಟ ೧೧೦.

† ಕೊಳಲು : 'ಪ್ರಾರ್ಥನೆ', ಪುಟ ೪೬.

ಜಿಜ್ಞಾಸುವಾಗಿ ಮುಂದಿನ ಜೀವನದ ದಾರಿ ಯಾವುದೆಂದು ಚಿಂತಿಸುವುದು.

ಮೊದಲನರಿಯದಾದಿಯಿಂದ
ಆದಿ ತಿಮಿರದುದರದಿಂದ
ಮೂಡಿ ಬಂದೆನು !
ಯಾರ ಬಯಕೆ ಎಂಬುದರಿಯೆ !
ಏಕೆ ಎಲ್ಲಿಗೆಂಬುದರಿಯೆ !
ಮುಂದೆ ಹರಿಯುವೆ !

ಮಲಗಿ ಕಲ್ಲು ಮಣ್ಣುಗಳಲಿ,
ಜಡ ಸುಷುಪ್ತಿಯಲ್ಲಿ ಬಳಲಿ,
ಯುಗಗಳಾದುವು !
ಸಸ್ಯಗಳಲಿ ಕನಸ ಕಂಡು,
ಹುಟ್ಟು ಬಾಳು ಸಾವನುಂಡು
ಕಲ್ಪ ಹೋದುವು !

ಮರಳಿ ಮೈಯ ತಿಳಿದು ತಿರುಗಿ
ಮಿಗಗಳಂತೆ ಮೂಡಿ ಮರುಗಿ
ಬಹಳ ಬಳಲಿದೆ.
ಇಂದು ಮನುಜ ಜನ್ಮದಲ್ಲಿ
ಬಂದು ಹಾಡುತಿರುವೆನಿಲ್ಲಿ !
ಮುಂದಕೆಲ್ಲಿಗೆ ?*

ಜ್ಞಾನಪಥದಲ್ಲಿ ಮುಂಬರಿದಾಗ ಪೂರ್ಣಸಮರ್ಪಣೆ.

ನಿನ್ನ ಪದಕಮಲದಲಿ ಮನೆ ಮಾಡಿರುವ ನನಗೆ
ಆ ಸ್ಥಾನ ಈ ಸ್ಥಾನ ಎಲ್ಲವಾಸ್ಥಾನ !
ಅಲ್ಲಿಲ್ಲಿ ಎನಲೇನು ? ನೀನೆ ಅಡಿಯಿಡುವಲ್ಲಿ
ದಿವ್ಯ ಪದವಿಗಳತ್ತ ಮಾನಾವಮಾನ ?

ಬೆಟ್ಟಗಳನೇರುವೆಯೊ ? ಕಣಿವೆಗಳನಿಳಿಯುವೆಯೊ ?
ಕೆಸರುಸುಬುಗಳೊಳಾಡಿ ವಿಹರಿಪೆಯೊ ನೀನು ?
ಇಲ್ಲಿ ಸಂಚರಿಸಲ್ಲಿ ಚರಿಸದಿರೆನಲು ನನಗೆ
ನಿನ್ನ ಲೀಲೆಗೆ ಗೆರೆಯನೆಳೆವ ಹಕ್ಕೇನು ?

---

* ಕೊಳಲು : 'ಮುಂದಕೆಲ್ಲಿಗೆ ?', ಪುಟ ೧೩.

ಎಲ್ಲಿ ನೀ ಪದವಿಡುವೆ ಅಲ್ಲಿ ಉತ್ತಮ ಪದವಿ ;
ನಿನ್ನ ಪದವಲ್ಲದಾ ಪದವಿಯೂ ಹೀನ ;
ನಿನ್ನಡಿಯ ಪುಡಿಯ ಬಡತನವೆ ಕಡವರ ಕಣಾ :
ನಿನ್ನಡಿಗೆ ದೂರವಿರೆ ಧನಿಕನೂ ದೀನ !*

ಜೀವನದ ಪರಮಗುರಿಯನ್ನು ಕುರಿತ ದರ್ಶನಾತ್ಮಕ ವಿವರಣೆ 'ಹಾರೈಸು' ಎಂಬ ಕವನದಲ್ಲಿ ಮೂಡಿದೆ.

ಹಾರೈಸು ಹಾರೈಸು ಹಾರೈಸು, ಜೀವ :
ಹಾರೈಸು ನೀನಾಗುವನ್ನೆಗಂ ದೇವ !

ಹಾರೈಸಿ ಹಾರೈಸಿ ಹಾರೈಸಿ
ಅನ್ನ ತಾನಾದುದೈ ಪ್ರಾಣ ;
ಹಾರೈಸಿ ಹಾರೈಸಿ ಹಾರೈಸಿ
ಹಾರಿದುದೊ ನೀರಧಿಯ ವಿಮಾನ !

ಹಾರೈಸಿ ಹಾರೈಸಿ ಹಾರೈಸಿ
ಪ್ರಾಣಿಗುದಿಸಿತು ಮನೋಜ್ಞಾನ ;
ಹಾರೈಸಿ ಹಾರೈಸಿ ಹಾರೈಸಿ
ಸಿದ್ಧಿಯಾಯ್ತಾತ್ಮವಿಜ್ಞಾನ !—

ಹಾರೈಸಿ ಹಾರೈಸಿ ಹಾರೈಸಿ
ಹಸುರನುಸುರ್ದುವೊ ಕಲ್ಲುಮಣ್ಣು ;
ಹಾರೈಸಿ ಹಾರೈಸಿ ಹಾರೈಸಿ
ಕುರುಡು ಜಡಕುದಿಸಿತಯ್ ಕಣ್ಣು !

ಹಾರೈಸಿ ಹಾರೈಸಿ ಹಾರೈಸಿ
ಚಿತ್ ಉರುಳ್ದುದು ಸುತ್ತಿಸುರುಳಿ ;
ಹಾರೈಸಿ ಹಾರೈಸಿ ಹಾರೈಸಿ
ಮೃತ್ ಅರಳ್ದುದೊ ಅತ್ತೆ ಮರಳಿ !†

ಇಂತಹ ಜೀವನದೃಷ್ಟಿಗೆ ಪೂರ್ಣತೆಯಿಂದಲೆ ಪರಮಸುಖವೆಂದು ಗೋಚರಿಸುತ್ತದೆ.

ಬೇಸರದ ಬಂದಿಳಿಕೆ ಮನದ ಮಾವಿನ ಮರಕೆ
ಹಿಡಿದದನು ತಿರುಗಿಸುವ ಮೊದಲೆ ಬೇವಿನತನಕೆ
ನಿನ್ನ ಜೀವವನು ದುಮುಕಿಸು ಜಗದ ಜೀವನಕೆ.

---

* ಅಗ್ನಿಹಂಸ : 'ನಿನ್ನ ಪದಕಮಲದಲಿ', ಪುಟ ೮೮.

† ಅಗ್ನಿಹಂಸ : 'ಹಾರೈಸು', ಪುಟ ೮೯.

ತೊರೆಯಲ್ಲಿ ತೆರೆಯಾಗಿ ಹರಿಯಲದು ಸಾಗರಕೆ !
ಪಾಲ್ಗೊಂಡು ಬೇರೆ ನಿಲ್ಲುವ ನೀರ್ಗೆ ಪರಮಗತಿ
ಪಾಚಿ ; ಹೊಳೆಗಿಳಿಯಲ್ಕೆ ತಾನೆ ಸಂಜೀವಸುಧೆ :
ಕೋಟಿ ವೀಚಿಗಳೊಡನೆ ಕುಣಿಯುವಾನಂದವಿದೆ ;
ತನ್ನಲ್ಪ ಗಾನಕ್ಕೆ ಕಲ್ಲೋಲ ಸರ್ವ ರುತಿ

ಶ್ರುತಿಯಾಗುವೊಂದತುಲ ಸಂಘಕೃಪೆ.—ಜಡತನಂ
ಸ್ವಾರ್ಥದ ತಮೋನಿದ್ರೆ : ತಳ್ಳಿ ತೊರೆದೆದ್ದೇಳು.
ಜೀವೋತ್ಸವದ ತೇರ್ಗೆ ಗಾಲಿಯಾದೊಡೆ ಬಾಳು
ಸಾರ್ಥಕಂ, ಸುಂದರಂ, ಮಧುರ ಚಿರನೂತನಂ.
ನೀರಸತೆಗಿಂ ಪಾಪವಿಲ್ಲ, ರಸಕೆಣೆಯಾಗಿ
ಪುಣ್ಯವಿಲ್ಲೆನೆ—ಪೂರ್ಣಯೋಗಿಯೆ ಪರಮಭೋಗಿ !*

ಕವಿಯ ದರ್ಶನ ಸಂಸಾರವನ್ನೂ ಜಗನ್ಮಾತೆಯ ಲೀಲೆಯೆಂದು ಕಾಣುತ್ತದೆ.

ಜಗದೀಶ್ವರನೆ ವಿಶ್ವ ಸಂಸಾರಿಯಾಗಿರಲು
ಸಂಸಾರ ಪಾಶವೆಂದೆನಬೇಡವೈ.
ಹುಟ್ಟು ಹಾಕಲು ನಿನಗೆ ಬಾರದಿರೆ, ಕೂಡದಿರೆ,
ಬರಿದೆ ನೀಂ ದೋಣಿಯನು ಶಪಿಸಬೇಡೈ !

ಮಾಡುವುದನೆಲ್ಲ ತನ್ಮಾತ್ಮ ಸಾಧನೆಯೆಂದು
ಕರ್ಮಗೈ ; ಅದುವ ಪೂಜೆಯ ಮರ್ಮವೈ.
ಶಿವನ ಕಾರ್ಯದೊಳಾವು ಶಿರಬಾಗಿ ನೆರವಾಗೆ
ನಮಗದುವೆ ಪರಮ ಪಾವನ ಧರ್ಮವೈ.

ಹಸುಳೆಯನು ಮೀಯಿಸಲು ಹರನಿಗಭಿಷೇಕವದು ;
ಶಿಶುವಿಗೂಡಿಸೆ ಶಿವಗೆ ನೈವೇದ್ಯವೈ !
ಕಂದನಲಿ ಶಿವನ ಕಾಣುವ ಬಂಧನವೆ ಮುಕ್ತಿ ;
ತಪಕೊಲ್ಲದುದು ತಾಯ್ತನಕೆ ಸಾಧ್ಯವೈ !†

ಈ ಪೂರ್ಣದೃಷ್ಟಿಯ ದರ್ಶನ 'ಋತಚಿನ್ಮಯೀ ಜಗನ್ಮಾತೆಗೆ' ಎಂಬ ಕವನದಲ್ಲಿ ನಿದರ್ಶಿತವಾಗಿದೆ.

* ಕೃತ್ತಿಕೆ: 'ಪೂರ್ಣಯೋಗಿಯೆ ಪರಮಭೋಗಿ', ಪುಟ ೪೯.
† ಪ್ರೇಮಕಾಶ್ಮೀರ: 'ಒಬ್ಬ ತಾಯಿಗೆ', ಪುಟ ೭.

ಓಂ ! ಸಚ್ಚಿದಾನಂದ ತ್ರಿತ್ವಮುಖವಾದ ಪರಬ್ರಹ್ಮದಲ್ಲಿ
ಅಭವದೊತ್ತಾದೆ, ಭವದ ಬಿತ್ತಾದೆ, ಋತದ ಚಿತ್ತಾದೆ ನೀ ;
ಇಳಿದು ಬಾ ಇಳೆಗೆ, ತುಂಬಿ ತಾ ಬೆಳಗೆ ಜೀವಕೇಂದ್ರದಲ್ಲಿ ;
ಮತ್ತೆ ಮೂಡಿ ಬಾ ಒತ್ತಿ ನೀನೆನ್ನ ಚಿತ್ತ ಪೃಥಿವಿಯಲ್ಲಿ.

ಋತದ ಚಿತ್ತಾಗಿ ವಿಶ್ವಗಳ ಸೃಜಿಸಿ ನಡಸುತಿಹ ಶಕ್ತಿಯೆ,
ಅನ್ನ ಪ್ರಾಣಗಳ ಮನೋಲೋಕಗಳ ಸೂತ್ರಧರ ಯುಕ್ತಿಯೆ,
ಅಖಿಲ ಬಂಧನದ ಹೃದಯದಲ್ಲಿ ಅವಿನಾಶಿ ಆಸಕ್ತಿಯೆ,
ನಿನ್ನ ಅವತಾರವೆನ್ನ ಉದ್ಧಾರ; ಬಾ, ದಿವ್ಯ ಮುಕ್ತಿಯೆ.

ಅವಿಭಕ್ತವಾಗಿ ಸುವಿಭಕ್ತದಂತೆ ತೋರುತಿರುವ ಮಾಯೆ,
ಪ್ರಕೃತಿ ಪುರುಷರಿಗೆ ನಿತ್ಯಜನ್ಮವನು ನೀಡುತಿರುವ ತಾಯೆ,
ಕಾಲದೇಶ ಆಕಾಶಕೋಶಗಳನೂದುತಿರುವ ಛಾಯೆ,
ಅನೃತದಲ್ಲಿ ಋತವಾಗಿ ಸಂಭವಿಸು, ಸಾವು ನೋವು ಸಾಯೆ.

ಎಲ್ಲವನು ಮಾಡಿ ಎಲ್ಲರೊಳಗೂಡಿ ನೀನೆಯೆಲ್ಲವಾದೆ.
ಜ್ಯೋತಿಯಾದರೂ ತಮೋಲೀಲೆಯಲಿ ಜಡದ ಮುದ್ರೆಯಾದೆ.
ಎನಿತು ಕರೆದರೂ ಓಕೊಳ್ಳದಿರುವ ಅಚಿನ್ನಿದ್ರೆಯಾದೆ ;
ಬೆಳಗಿ ನನ್ನಾತ್ಮಕಿಳಿದು ಬಾ, ತಾಯಿ, ನೀನೆ ಬ್ರಹ್ಮಬೋಧೆ.

ಮರೆವು ನೀನೆ ಮೇಣರಿವು ನೀನೆ ಮೇಣ್ ಗುರುವು ನೀನೆ, ದೇವಿ.
ರೋಗಶಕ್ತಿ ನೀನೌಷಧಿಯ ಶಕ್ತಿ ; ಕೊಲುವೆ ಕಾವೆಯೋವಿ.
ಮಾವಿನಲ್ಲಿ ಸಿಹಿ, ಬೇವಿನಲ್ಲಿ ಕಹಿ ; ನಿನ್ನ ಇಚ್ಛೆಯಂತೆ
ಗಾಳಿ ಸೇರಿ ನೀರಾಗಿ ತೋರಲೀ ಪ್ರಕೃತಿ ನಿಯಮವಂತೆ !

ಹುಲ್ಲು ಬೆಳೆವಲ್ಲಿ, ನೆಲ್ಲು ಮೊಳೆವಲ್ಲಿ, ಕಾಯಿ ಪಣ್ಣುವಲ್ಲಿ,
ಗೂಡುಕಟ್ಟಿ ತಾಯ್ ಮೊಟ್ಟೆಯಿಟ್ಟು ಮರಿಮಾಡಿ ಸಲಹುವಲ್ಲಿ,
ಮಮತೆಯಂತೆ ಮೇಣ್ ಕಾಮದಂತೆ ಮೇಣ್ ಪ್ರೇಮಭಾವದಲ್ಲಿ
ನಿನ್ನ ಚಿಚ್ಛಕ್ತಿ ತನ್ನ ನಿತ್ಯಸದ್ ರಸವ ಸವಿವುದಿಲ್ಲಿ !

ಏಳು ಲೋಕಗಳನಿಳಿದು ದುಮುಕಿ ಜಡವಾಗಿ ಕಡೆಗೆ ನಿಂದೆ ;
ಜಡದ ನಡುವೆ ಜೀವವನು ಕಡೆದೆ ಚಿತ್ತಪಶ್ಶಕ್ತಿಯಿಂದೆ ;
ಜೀವದಿಂದೆ ಮನಸಾಗುತರಳಿ ಪರಿಣಾಮ ಪಡೆದು ಬಂದೆ ;
ಮನವ ಮಿಾರ್ದ್ದ ವಿಜ್ಞಾನವನು ತೋರೆ ತೇರನೇರು ಇಂದೆ.

ಗಾಳಿಗುಸಿರು ನೀ ಬೆಂಕಿಗುರಿಯು ನೀನುದಕಕದರ ಜೀವ:
ಅಗ್ನಿ ಇಂದ್ರ ವರುಣಾರ್ಕ ದೇವರನು ಮಾಡಿ ನೋಡಿ ಕಾವ
ಶಿವನ ಶಕ್ತಿ ನೀ, ವಿಷ್ಣು ಲಕ್ಷ್ಮಿ ನೀ, ಚತುರ್ಮುಖನ ರಾಣಿ;
ದಿವ್ಯವಿಜ್ಞಾನ ನನ್ನೊಳುದ್ಭವಿಸೆ ಮತಿಗಾಗವಿಸು, ವಾಣಿ!

ಮೃತ್ಯುರೂಪಿ ನೀನಮೃತರೂಪಿ ನೀನಖಿಲ ಜನ್ಮದಾತೆ,
ಪರಾಪ್ರಕೃತಿ ನೀ ನಿನ್ನ ಮಾಯೆಯಲಿ ಸಕಲ ಜೀವಭೂತೆ.
ನಿನ್ನ ಕೃಪೆಯಿಲ್ಲದಿದ್ದರೆಮಗೆಲ್ಲಿ ಮುಕ್ತಿ, ಜಗನ್ನಾಥೆ?
ನಿನ್ನ ಋತಚಿತ್ತನೆಮಗೆ ಕೃಪೆಯಿತ್ತು ಕಾಯಿ, ದಿವ್ಯಮಾತೆ.

ಹೃದಯಪದ್ಮ ತಾನರಳಿ ಕರೆವೆ ಬಾರಮ್ಮ ಬಾ, ಇಳಿದು ಬಾ!
ಮನೋದ್ವಾರ ತಾ ಬಿರಿಯೆ ಕರೆವೆ, ಜಗದಂಬೆ, ಬಾ ಇಳಿದು ಬಾ!
ಅಗ್ನಿಹಂಸ ಗರಿಗೆದರೆ ಕರೆವೆ, ಬಾ ತಾಯಿ, ಬಾ, ಇಳಿದು ಬಾ!
ಚೈತ್ಯಪುರುಷ ಯಜ್ಞಕ್ಕೆ ನೀನೆ ಅಧ್ವರ್ಯು ಬಾ, ಇಳಿದು ಬಾ!

ಓಂ ಶಾಂತಿಃ ಶಾಂತಿಃ ಶಾಂತಿಃ.*

ಇಂತಹ ಪೂರ್ಣದೃಷ್ಟಿಯಿಂದ ದೀಪ್ತವಾದ ಕವಿಚೇತನ ಸರ್ವನಾಶದಲ್ಲಿಯೂ ಆಶಾವಾದಿ. ಅದಕ್ಕೆ ಅಧೈರ್ಯ, ಭಯ, ಹತಾಶೆ—ಎಂಬುವುದಿಲ್ಲ. ಪಾಂಚಜನ್ಯದಲ್ಲಿರುವ 'ಮಲ್ಲಗೀತೆ' ಎಂಬ ಕವನ ಈ ದೃಷ್ಟಿಯನ್ನು ಪ್ರತಿನಿಧಿಸುತ್ತದೆ.

ಒಳ್ಳಿತಾಗುವುದೆಲ್ಲ! ಬೇವು ತುದಿಯಲಿ ಬೆಲ್ಲ!
ಮುಂದೆ ನಡೆ, ತೀರ್ಥವಿಹುದೆಲ್ಲ ಹಾದಿಗಳು ಕೂಡುವೆಡೆಯಲ್ಲಿ!
ಬೆಳ್ಳಗಿರೆ ಹಾಲಲ್ಲ; ಬಲ್ಲವನೆ ತಾ ಬಲ್ಲ;
ಕೇಳಯ್ಯ ನಾನೊಬ್ಬ ಮಲ್ಲನೀ ಜೀವನದ ಗರಡಿಯಲ್ಲಿ!

ಕಾವಿಯೋ ಖಾದಿಯೋ? ಅಂತವೋ ಆದಿಯೋ?
ಯಾವುದೋ ಹಾದಿಯೊಂದನು ಹಿಡಿದು ನಡೆಯಲಿದ್ದೆಡೆಯೆ ಸಿದ್ಧಿ!
ಎಲ್ಲ ನದಿಗಳು ತುದಿಗೆ ಜಾರುವುವು ಜಲನಿಧಿಗೆ—
ಎಂಬ ತತ್ತ್ವವ ತಿಳಿದು ಸಮತೆಯಲಿ ಸಾಗುವುದೆ ಯೋಗಬುದ್ಧಿ!

ಸೋದರನೆ ಬಿಸಿಲಿಹುದೆ? ಹಾದಿಯಲಿ ಕೆಸರಿಹುದೆ?
ಹೊರೆ ಭಾರವಾಗಿದೆಯೆ? ನೆರೆಯ ಕರೆದವನ ಕೈಗದನು ನೀಡು.
ನಿದ್ದೆಗಳೆದಾ ವೇಳೆ ಮತ್ತೆ ಬೆನ್ನಿನ ಮೇಲೆ
ಹೊತ್ತು ನಡೆ ಕರ್ತವ್ಯವನು; ಮರಳಿ ಬಳಲಿದರೆ ನಿದ್ದೆಮಾಡು!

---

* ಅಗ್ನಿಹಂಸ: 'ಋತಚಿನ್ಮಯೀ ಜಗನ್ಮಾತೆಗೆ', ಪುಟ ೯೪.

ನೆರವಿವ ಮಿತ್ರನೈ, ಜೊತೆ ದುಡಿವ ಪುತ್ರನೈ,
ಯಜಮಾನನಿಗೆ ನೀನು ಹೊರೆಹೊರುವ ಕತ್ತೆಯೊಲು ದಾಸನಲ್ಲ !
ನಿನ್ನ ಸಾಹಸವೆಲ್ಲ ಅವನದಲ್ಲದೆ ಇಲ್ಲ ;
ಗುಡಿಯ ಕಟ್ಟುವರೂ ಕಡೆಗೆ ದೇವರಹರಿದಕೆ ಮೋಸವಿಲ್ಲ !

ನಾಕ ನರಕಗಳೆಲ್ಲ ಪಾಪ ಪುಣ್ಯಗಳೆಲ್ಲ
ನಮ್ಮಾಶೆ ಭಯಗಳಲಿ ನಿಂತಿಹವು ತಮಗಿರದ ಕಾಲನೂರಿ !
ಒಂದು ಕಲ್ಲನು ಕಡೆದೆ ; ಏನೊ ತಪ್ಪಿದೆ ; ಒಡೆದೆ !
ಬಿಸುಡದನು ಓ ಶಿಲ್ಪಿ ; ಮತ್ತೊಮ್ಮೆ ಯತ್ನಗೈಯದುವೆ ದಾರಿ !

ತಪ್ಪಿದರೆ ಏನೊರ್ಮೆ ? ಅನುಭವಕೆ ಅದೆ ಪೆರ್ಮೆ !
ತಪ್ಪಿದರೆ ತಪ್ಪಲ್ಲ ; ತಪ್ಪಿನೊಳಳುಕಿ ನಿಲ್ಲಲದುವೆ ಪಾಪ !
ಬೀಳುವುದು ಹರಿವ ಹೊಳೆ ; ಅದಕಿಹುದೆ ಕೊಳದ ಕೊಳೆ ?
ನೀರು ನಿಲ್ಲದೆ ಹರಿಯೆ ನಿರ್ಮಲದ ಗಂಗೆ ; ನಿಲೆ ಮಲದ ಕೂಪ !

ಕಡಲ ಕಡೆಯಲು ಬೆದರೆ ನಿನಗೆ ಮರಣವೆ ಮದಿರೆ !
ಕಡಲ ಕಡೆ ; ಸುಧೆಯ ಕುಡಿ ; ಹರಿಹರರ ವೀರ ಚಿರಜೀವಿಯಾಗು !
"ನಂಜುದಿಸಲೇನು ಗತಿ ?—" ಅಂಜುವರೆ ಹ್ರಸ್ವಮತಿ ?
ಅವನಿರುವುದದೆ ಕೆಲಸಕಾಗಿ ; ನಂಜುಂಡನನು ಕರೆದು ಕೂಗು !

ಮುನ್ನೇಕೆ ಬಂದೆಯೋ ? ಇನ್ನಾವ ಮುಂದೆಯೋ ?
ಆ ಮೂಲಚೂಲದಲಿ ಕಾಲಹರಣವ ಮಾಡಲಿಹುದೆ ಹೊತ್ತು ?
ಯಾತ್ರೆಗೈತಂದಿರುವೆ ; ಹೊರೆ ಹೊತ್ತು ನೊಂದಿರುವೆ ;
ನೋಡಿದರೆ ಹಾದಿಯನು ಗುರಿ ದೂರವೆಂಬುದೂ ನಿನಗೆ ಗೊತ್ತು.

ಇಂತಿರಲು ವಾದದಲಿ, ತಾರ್ಕಿಕರ ಮೋದದಲಿ,
ನನ್ನಿಯನು ಮುಟ್ಟಿನೋಡದೆ ಮಾತಿನೊಳೆ ಕಟ್ಟುವವರ ಕೂಡೆ
ಹೊತ್ತು ಕಳೆಯುವುದೇಕೆ ? ಸಾಧಕನೆ ಬಲು ಜೋಕೆ !
ಮಾಯೆಗಿಮ್ಮಡಿಮಾಯೆ ವಾದವೆಂಬುವ ಮಾಯೆ, ತಿಳಿದುನೋಡೆ !

ಬರಿಯ ನಂಬುಗೆ ಬೇಡ, ಬರಿಯ ಸಂಶಯ ಬೇಡ,
ಹಿಂದನೂ ತೊರೆಯದೆಯೆ, ಇಂದನೂ ಮರೆಯದೆಯೆ ತೆರಳು ಮುಂದೆ.
"ಅವರಿವರ ಮತವಿರಲಿ, ನನ್ನ ಪಥ ನನಗಿರಲಿ."
ಎಂದದನು ಕಂಡುಕೊಳ್ವನೆ ಜಾಣನುಳಿದವರು ಕುರಿಯ ಮಂದೆ.

ಕಣ್ ಮುಚ್ಚಿ ನಡೆಯದಿರು, ಹೃದಯವನು ಕಡಿಯದಿರು ;
ಕಾಶಿಯಲಿ ನೀನರಿವೆ ಯಾತ್ರೆಯೇ ತೀರ್ಥಕಿಂ ಶ್ರೇಷ್ಠವೆಂದು.
ಯಾತ್ರೆಗಾಗಿಯೆ ಕ್ಷೇತ್ರ, ಇದು ಸತ್ಯತಮ ಸೂತ್ರ.
ಸಾಧಕಗೆ ತಿಳಿಯುವುದು ತುದಿಯಲ್ಲಿ ಸಾಧನೆಯೆ ಸಿದ್ಧಿಯೆಂದು !

ಅದರಿಂದ ದಾರಿಯೆಡೆ ಚೆಲುವಿರಲು ನೋಡಿ ನಡೆ ;
ಗಾನವಿರೆ ಆಲೈಸು, ಕಲೆಯಿರಲು ಓಲೈಸು ಸಡ್ಡೆಯಿಂದೆ.
ಮೂಡೆ ನೇಸರು ನೋಡು, ನಾಡೆ ಬಣ್ಣಿಸಿ ಹಾಡು,
ಹಾಡಿ ಮುದವನು ಹೀರಿ, ಜನಕೆ ಹರುಷವ ಬೀರಿ ತೇಲು ಮುಂದೆ !

ಹಾಡು ಗೆಳೆಯನೆ, ಹಾಡು ! ಹಾಡಿನಿಂದಲೆ ನಾಡು
ಕಣ್ದೆರೆದು ನೆಚ್ಚುದಿಸಿ ಕೆಚ್ಚಿನಿಂ ನಿನ್ನ ಹಿಂಬಾಲಿಪಂತೆ !
ಹಾಡೆ ಬಾಳಿಗೆ ಭಕ್ತಿ, ಹಾಡೆ ಜೀವಕೆ ಶಕ್ತಿ ;
ಹಾಡು ಜನ್ಮದ ಭಾರವಳಿದು ಕರ್ತ್ರದ ಹೊರೆಯು ಕರಗುವಂತೆ !

ದಾರಿಯಲಿ ಕೊಳದ ಬಳಿ, ತೆರೆಗಳಲಿ ಮಿಂದು ನಲಿ,
ತಿಳಿನೀರನೀಂಟಿ ತಂಗಾಳಿಯಲಿ ಮೈಯೊಡ್ಡಿ ಕಳೆ ದಣಿವನು.
ಹೊಂದಾವರೆಯ ಕೊಯ್ದು ಚಂದದಿಂದಲಿ ನೆಯ್ದು
ನಿನ್ನೊಲ್ಮೆಗಣ್ಗದನು ಮುಡಿಸಿ ಮುದ್ದಿಸಿ ನಲಿಸಿ ಪಡೆ ತಣಿವನು.

ಹಾದಿಯಲಿ ಹಳ್ಳವಿದೆ, ಮುಳ್ಳಿಡಿದ ಕೊಳ್ಳವಿದೆ,
ಎಂದಳುಕಿ ಹಿಂದೆಗೆಯದಿರು ; ಮುಂದೆ ತೋರುವುದು ಹೂದೋಟವು !
ಯಾತ್ರಿಕರು ನಿನ್ನಂತೆ ಹೋದಹರಿಹರು ಮುಂತೆ ;
ಹುಡುಕುವರ ಹಜ್ಜೆಯನು ; ಕಾಣುವುದು ನೆಚ್ಚಿನಾ ಸವಿನೋಟವು !

ಕತ್ತಲೆಯು ಕವಿದು ಬರೆ ಬಿತ್ತರಿಸಿ ಕಣ್ಣು ತೆರೆ ;
ರಂಜಿಪುದು ಮುಂದೆ ತೆರಳಿದ ಮಲ್ಲರಾಂತಿರುವ ದಿವ್ಯಜ್ಯೋತಿ !
ಮೋಣವರ ಕೂಗಿ ಕರೆ ; ಕೇಳಿಸಲು ನಿನ್ನ ಮೊರೆ
ನಿಲ್ಲುವರು ; ಹಿಂದಿರುವ ಸೋದರರ ಕರೆದೊಯ್ವುದವರ ನೀತಿ !

ನೆಚ್ಚಿರಲಿ ! ಕೆಚ್ಚಿರಲಿ ! ಮುಂಬರಿವ ಹುಚ್ಚಿರಲಿ !
ಮುಂದುವರಿವುದೆ ಬಾಳು ; ಹಿಂದೆ ಸರಿವುದೆ ಸಾವು, ಆತ್ಮಹತ್ಯ !
ಹೋರುವುದೆ ಚೈತನ್ಯ ! ಸುಮ್ಮನಿರೆ ಜಡಶೂನ್ಯ !
ತುದಿಯ ಗುರಿ ಶಾಂತಿ ಎನೆ ಬರಿನಿದ್ದೆಯಲ್ಲವದು ಸತ್ಯ ಸತ್ಯ !

ಎದೆಯ ಕೊರೆಯುವ ಕೀಟ ಸಂದೇಹದೊಡನಾಟ ;
ಸಕ್ಕರೆಯು ಸಿಹಿಯೊ ಕಹಿಯೋ ತಿಂದು ನೋಡದೆಯೆ ತಿಳಿವುದೆಂತು ?
ಓರಿಯರನುಭವ ಸಿಹಿಯು ! ನಿನಗೊಬ್ಬನಿಗೆ ಕಹಿಯು ?
ಒಲಿಯದುಳಿವುದಕಿಂತಲೂ ಒಲಿದಳಿವುದೆ ಮೇಲಲ್ತೆ ಜಂತು ?

"ಮುಂದೆ ಬರಿ ಸೊನ್ನೆಯಿರೆ?" ಮರುಳೆ, ಹಾಗೆನ್ನುವರೆ ?
ಹಿಂದೆ ಬರಿಸೊನ್ನೆ, ಮುಂದೆಯು ಸೊನ್ನೆ, ನೀಂ ಮಾತ್ರ ಸೊನ್ನೆಯಲ್ಲ ?
ಹೇಡಿಗಳ ವಾದವಿದು, ಕುಮತಿಗಳ ಬೋಧವಿದು !
ಸೊನ್ನೆಯಿದ್ದರು ಇರಲಿ ! ನುಗ್ಗಿ ಮುಂದಕೆ ನೋಡು ! ನೀನು ಮಲ್ಲ !

"ಮುಂದೆ ತಾನಹೆ ಸೊನ್ನೆ" ಎಂಬನಿಂದೂ ಸೊನ್ನೆ !
ಯಾವ ಸಂಖ್ಯೆಯನೇನು ಸೊನ್ನೆಯಿಂ ಗುಣಿಸಿದರೆ ಲಭ್ಯ ಸೊನ್ನೆ !
ಹಿಂದಿಲ್ಲದಾವಿಂದು ? ಇಂದಿಲ್ಲದೇಂ ಮುಂದು ?
ಇಂದೆಂಬುದೆಂತಿರುವುದಿಲ್ಲವಾದರೆ ದಿಟದಿ ನಾಳೆ ನಿನ್ನೆ ?

ಗುರಿಗೆಂದೆ ಮುಂಗಂಡು ಹುಡುಗನೊದೆದಾ ಚೆಂಡು
ಹರಿದಾಡಲಾಡುಂಬೊಲದೊಳದಕೆ ಗುರಿಯಿಲ್ಲವೆಂಬೆಯೇನು ?
ಇರುವಂತೆ ಬಿದಿಯು ಬಗೆ ತಿರುತಿರುಗಿ ತಿರೆಯೊಳಗೆ
ಇಂದೊ ನಾಳೆಯೊ ಎಂದೊ ಒಂದು ದಿನ ಗುರಿಮುಟ್ಟಿ ಗೆಲುವೆ ನೀನು :

ಕರ್ಮ ನಿನ್ನನು ಕಟ್ಟಿ ಕೆಡಹಲದನೇ ಮೆಟ್ಟಿ
ಮುಂದೆ ಮೆಟ್ಟಲನೇರು ! ಮರಳಿ ಯತ್ನವ ಮಾಡು ಸತ್ತು ಹುಟ್ಟಿ !
ಹಚ್ಚು, ಬೆಂಕಿಯ ಹಚ್ಚು ! ಸುಡಲೆಲ್ಲವನು ಕಿಚ್ಚು !
ಹುಲ್ಲು ಸುಟ್ಟರೆ ಸುಡಲಿ ! ಲೇಸಾಯ್ತು ಟೊಳ್ಳಳಿಯುತುಳಿಯೆ ಗಟ್ಟಿ !

ಬಾಳು ಸಂದೊಡಮೇನು ? ಸಾವು ಬಂದೊಡಮೇನು ?
ಸಾವು ಬಾಳಿನ ಕುಂದನೊಂದರಿಯದಿಹ ಶಾಶ್ವತಾತ್ಮ ನೀನು !
ರವಿ ಮುಳುಗಲೇನಂತೆ ? ಇರುಳಿಳಿದರೇನಂತೆ ?
ಬಂದಿರುಳಿನುದರದಲಿ ಮಲಗಿಹುದು ಮುಂದೆ ಬಹ ಹಗಲು ತಾನು !

ಹಗಲು ಹೊಣೆ ಹತ್ತಿರಕೆ ; ಹೊಣೆಯಿರುಳು ಬಿತ್ತರಕೆ ;
ಹಗಲೆಮಗೆ ತೋರದಿಹ ಹಿರಿಯ ವಿಶ್ವವನಿರುಳು ತೋರುತಿಹುದು !
ಬಾಳು, ಮುಚ್ಚುವ ಮಣ್ಣು, ಸಾವು, ಬಿಚ್ಚುವ ಕಣ್ಣು !
ಇಲ್ಲಿ ಕಂಡರಿಯದಿಹ ಮಹಿಮೆಯನು ನಾವಲ್ಲಿ ಕಾಣಲಹುದು !

ಸೂರ್ಯಚಂದ್ರರ ಗತಿಗೆ ಕಣ್ಣಹ ಜಗನ್ಮತಿಗೆ
 ನಿನ್ನ ಗತಿ, ನಿನ್ನ ಮತಿ, ನಿನ್ನ ಸಾಹಸಕೆ ಕಣ್ಣಾಗಲರಿದೇ ?
ಭಯವ ಬಿಡು ; ನಲವಿಂದೆ ಹಾಡುತ್ತೆ ನಡೆ ಮುಂದೆ.
 ಸಂದೆಯದ ಪುಸಿತೊಟ್ಟಿಲನು ಕಟ್ಟಿ ಮಲಗಿ ಜೋಲದಿರು ಬರಿದೆ !

ಬೈಗುಗೆಂಪುರಿಯಲ್ಲಿ ಸುಡಲಿ ಸಂಶಯವಲ್ಲಿ !
 ಹುಣ್ಣಿಮೆಯ ರಾತ್ರಿಯಲಿ ಹೊರಗೆ ಬಾ ನೋಡು ! ಸಂದೆಯದ ಮುಚ್ಚು
ಎಲ್ಲಾದರಿಹುದೇನು ? ಎಳ್ಳಾದರಿಹುದೇನು ?
 ಜಗದ ನಗೆವೊನಲಿನಲಿ ಕೊಚ್ಚಿಹೋಗುವುದು ಸಂದೆಗದ ಹುಚ್ಚು !

ಏಳು, ಮಲ್ಲನೆ, ಏಳು ! ಮನವ ಮುದದಲಿ ತೇಲು !
 ಕೋಗಿಲೆಗಳುಲಿಯುತಿವೆ ಪಲ್ಲವಿತ ಚೈತ್ರಕಾನನದಿ ಕೇಳು :
ಸಾಹಸವೆ ಸವಿ ಬಾಳು ! ಸಂದೆಯವೆ ಕಹಿ ಕೂಳು !
 ನಂಬುಗೆಯ ಸುಗ್ಗಿಯನು ನೆಟ್ಟು ಸಂದೆಯದ ಮಾಗಿಯನು ಕೀಳು !

ನೋಡು, ಎಂತಿದೆ ಸುಸಿಲು ! ಹಸುರ ಮೇಲೆಳಬಿಸಿಲು
 ಮಲಗಿಹುದು ಲೀಲೆಯಲಿ ಮೈಮರೆತ ಮೋಹನದ ಶಿಶುವಿನಂತೆ !
ಅಲ್ಲಿ ಬನಬನದಲ್ಲಿ, ಮಾನವರ ಮನದಲ್ಲಿ
 ನೆಚ್ಚುದಿಸಿ ಚಿಮ್ಮುತಿದೆ ! ಕರ್ಮಮಯ ಚೇತನಕೆ ಹೊರತು ಚಿಂತೆ !

ನಂಬು ಗುರಿಯಿಹುದೆಂದು ! ನಂಬು ಗುರುವಿಹನೆಂದು !
 ನಂಬು ದಾರಿಯಲಿ ಕೃಪೆ ಕೈಹಿಡಿದು ಹಿಂದೆ ಪಾಲಿಸುವುದೆಂದು !
ಗುರುಭಕ್ತ ನಾನೆಂದು, ಗುರುಶಕ್ತಿ ನನಗೆಂದು
 ನಂಬು ! ನಿನ್ನನೆ ನಂಬು | ಮಂತ್ರದೀಕ್ಷಿತಗೆ ಗುರಿತಪ್ಪದೆಂದೂ !*

ಕುವೆಂಪು

---

* ಪಾಂಚಜನ್ಯ : 'ಮಲ್ಲಗೀತೆ', ಪುಟ ೪೬.

ಸಾತ್ವಿಕ ಶಕ್ತಿ*

ಎಂ. ರಾಮರಾವ್.

* Norman Mckinnel ರವರ " *The Bishop's Candlesticks* " ಎಂಬ ಏಕಾಂಕ ನಾಟಕದ ಆಧಾರದ ಮೇಲೆ ರಚಿತವಾದುದು.

ಪಾತ್ರಗಳು

೧. **ದಯಾನಂದ**—ವಯಸ್ಸು ಸುಮಾರು ೪೦-೪೫ ವರ್ಷಗಳು; ವಿಧುರ; ವಿರಾಗಿ; ಅನಾಥಬಂಧು; ಯೋಗಿ; ಪಾರಮಾರ್ಥಿಕ ದೃಷ್ಟಿಯುಳ್ಳವನು.

೨. **ಲಕ್ಷ್ಮಮ್ಮ**—ದಯಾನಂದನ ತಾಯಿ; ವಯಸ್ಸು ಸುಮಾರು ೬೫-೭೦ ವರ್ಷಗಳು; ಮಗ ವಿರಕ್ತನಾಗಿರುವುದನ್ನು ಸಹಿಸದೆ ವ್ಯಥೆಪಡುತ್ತಿರುವಳು; ದೃಷ್ಟಿ—ಲೌಕಿಕ; ವಿಧವೆ.

೩. **ಗೌರಿ**—ದಯಾನಂದನ ಸಹಾಯದಿಂದ ಬೆಳೆದ ನಿರ್ಗತಿಕ ಹುಡುಗಿ; ಅವನ ಮನೆಯಲ್ಲಿ ಕೈಲಾದಷ್ಟು ಸಣ್ಣಪುಟ್ಟ ಕೆಲಸಗಳನ್ನು ಮಾಡಿಕೊಂಡಿರುತ್ತಾಳೆ.

೪. **ಖೈದಿ**—ಜೈಲಿನಿಂದ ತಪ್ಪಿಸಿಕೊಂಡು ಬಂದಿರುವನು.

೫. **ಪೋಲೀಸು ಅಧಿಕಾರಿ ಮತ್ತು ಇಬ್ಬರು ಪೋಲೀಸಿನವರು**

ಸಾತ್ವಿಕ ಶಕ್ತಿ

[ದಯಾನಂದನ "ದೀನಸೇವಾಶ್ರಮ"ದ ಹಜಾರ. ರಂಗಭೂಮಿಯ ಹಿಂಭಾಗದಲ್ಲಿ ಮಧ್ಯೆ ಬೀದಿಯ ಬಾಗಿಲು; ಅದರ ಎರಡು ಪಕ್ಕದಲ್ಲೂ ಒಂದೊಂದು ಕಿಟಕಿ. ಮೂರೂ ತೆರೆದಿರುತ್ತವೆ. ಹೊರಗಡೆ ಕಗ್ಗತ್ತಲು. ರಂಗಭೂಮಿಯ ಬಲಭಾಗದಲ್ಲಿ (ಪ್ರೇಕ್ಷಕರ ಎಡಕ್ಕೆ) ದಯಾನಂದನ ಕೋಣೆಗೆ ಹೋಗುವ ಬಾಗಿಲು; ಎಡಭಾಗದಲ್ಲಿ (ಪ್ರೇಕ್ಷಕರ ಬಲಕ್ಕೆ) ಅಡಿಗೆಯ ಮನೆಗೆ ಹೋಗುವ ಬಾಗಿಲು. ರಂಗಭೂಮಿಯ ಮುಂಭಾಗದಲ್ಲಿ ಒಂದು ಗೋಡೆಯಿಂದ ಇನ್ನೊಂದು ಗೋಡೆಯ ವರೆಗೂ ಇರುವ ದೊಡ್ಡ ಜಗಲಿ. ಅದರ ಮೇಲೆ ವಿಶಾಲವಾದ ಚಾಪೆ ಹಾಸಿರುತ್ತದೆ. ಜಗಲಿಯ ಎರಡು ಕೊನೆಗಳಲ್ಲೂ ಒಂದೊಂದು ಸಣ್ಣ ಮೇಜು ಅಥವಾ ಕಾಲ್ಮಣೆ ಇರುತ್ತದೆ. ದಯಾನಂದನ ಕೋಣೆಯ ಬಾಗಿಲಿನ ಬಳಿ ಇರುವ ಕಾಲ್ಮಣೆಯ ಮೇಲೆ ಒಂದೆರಡು ಪುಸ್ತಕಗಳು, ವೃತ್ತಪತ್ರಿಕೆ, ಒಂದು ಗಡಿಯಾರ, ಬೆಳ್ಳಿಯ ಕಟ್ಟಿನಲ್ಲಿಟ್ಟಿರುವ ಅವನ ಹೆಂಡತಿಯ "ಫೋಟೊ" ಇರುತ್ತವೆ. ಅಡಿಗೆಯ ಮನೆಯ ಬಾಗಿಲಿನ ಬಳಿ ಇರುವ ಕಾಲ್ಮಣೆಯ ಮೇಲೆ ಒಂದು "ಲಾಂದ್ರ" ಉರಿಯುತ್ತಿರುತ್ತದೆ. ಗೋಡೆಗಳ ಮೇಲೆ ಗಾಂಧಿ, ನೆಹರು, ವಿವೇಕಾನಂದ, ರಾಮಕೃಷ್ಣರ ಪಠಗಳೂ ಒಂದು ಕ್ಯಾಲೆಂಡರೂ ತೂಗುಹಾಕಲ್ಪಟ್ಟಿರುತ್ತವೆ. ತೆರೆ ಎದ್ದಾಗ ಲಕ್ಷ್ಮಮ್ಮ ಕಾತರದಿಂದ ಬೀದಿಯ ಬಾಗಿಲ ಕಡೆ ನೋಡುತ್ತ ಯೋಚನಾಮಗ್ನಳಾಗಿ ಜಗಲಿ ಮೇಲೆ ಕೂತಿರುತ್ತಾಳೆ.]

ಲಕ್ಷ್ಮಮ್ಮ—[ಅಡಿಗೆಯ ಮನೆಯ ಬಾಗಿಲ ಕಡೆಗೆ ತಿರುಗಿ] ಗೌರಿ!

ಗೌರಿ—[ಒಳಗಿನಿಂದ] ಅಮ್ಮಾ! [ಬರುವಳು]

ಲಕ್ಷ್ಮಮ್ಮ—ಕರೂನ ಕಟ್ಟಿದೆಯೇನೆ?

ಗೌರಿ—ಕಟ್ಟಿದೆನಮ್ಮ.

ಲಕ್ಷ್ಮಮ್ಮ—ಹಸೂಗೆ ಹುಲ್ಲು, ನೀರು ಹಾಕಿದೆಯೋ ಇಲ್ಲವೊ?

ಗೌರಿ—ಹಾಕಿದೆ, ಅಮ್ಮ.

ಲಕ್ಷ್ಮಮ್ಮ—ಹಾಲು ಕಾಯ್ತೇನೆ?

ಗೌರಿ—ಇನ್ನೂ ಇಲ್ಲಮ್ಮ.

ಲಕ್ಷ್ಮಮ್ಮ—ಇನ್ನೂ ಇಲ್ಲ! ಇಷ್ಟೊತ್ತಾದ್ರೂ ಇನ್ನೂ ಇಲ್ಲ ಅಂದ್ರೆ ಏನೆ? ಒಲೇನ ಚೆನ್ನಾಗಿ ಉರಿಮಾಡಿದೀಯೇನೆ?

ಗೌರಿ—ನೀವೇ ಉರಿಮಾಡಿ ಬಂದಿರಲ್ಲಮ್ಮ ಈಗ ತಾನೆ!

ಲಕ್ಷ್ಮಮ್ಮ—[ಅಸಮಾಧಾನದಿಂದ] ಹಾಗೆ ಮಾತಿಗೆ ಮಾತು ಆಡೋದು ಸರಿಯಲ್ಲ, ಗೌರಿ!

ಗೌರಿ—ಆಗಲಿ, ಅಮ್ಮ.

ಲಕ್ಷ್ಮಮ್ಮ—ಇನ್ನೊಂದು ಸಾರಿ ನನಗೆ ಸಿಟ್ಟು ಬರೋಹಾಗೆ ಮಾಡಬೇಡ! ತಿಳೀತೆ?

ಗೌರಿ—ಇಲ್ಲ, ಅಮ್ಮ. [ಒಳಕ್ಕೆ ಹೋಗುವಳು.]

ಲಕ್ಷ್ಮಮ್ಮ—[ಬಾಗಿಲು ಕಡೆಗೆ ತಿರುಗಿ ನೋಡುತ್ತ, ಆತ್ಮಗತ] ಈ ಹುಡುಗ ಏಕೆ ಇನ್ನೂ ಬರಲಿಲ್ಲ? ಹತ್ತಿರ ಹತ್ತಿರ ಹತ್ತುಗಂಟೆ ಆಯ್ತು, ಅವನ ಸುದ್ದೀನೇ ಇಲ್ಲವಲ್ಲ! ರಾತ್ರೀಗೆ ಊಟಾನೂ ಮಾಡೋಲ್ಲ ಅಂದಿದ್ದ. ಎಲ್ಲೀಗ್ಹೋದನೊ? . . . ಗೌರಿ!

ಗೌರಿ—[ಒಳಗಿನಿಂದ] ಅಮ್ಮಾ! [ಬರುವಳು].

ಲಕ್ಷ್ಮಮ್ಮ—ಅಯ್ನೋರು ನನಗೇನಾದರೂ ಹೇಳು ಅಂತ ಹೇಳಿ ಹೋದರೇನೆ ನಿನಗೆ?

ಗೌರಿ—ಇಲ್ಲ, ಅಮ್ಮ.

ಲಕ್ಷ್ಮಮ್ಮ—ಎಲ್ಲಿಗೆ ಹೋಗ್ತೇನೆ ಅಂತ ಹೇಳಿದರೇನೆ ನಿನ್ನ ಮುಂದೆ?

ಗೌರಿ—ಹೂನಮ್ಮ.

ಲಕ್ಷ್ಮಮ್ಮ—[ಅಣಕಿಸುವ ಧ್ವನಿಯಲ್ಲಿ] "ಹೂನಮ್ಮ!" ಹಾಗಾದರೆ ಯಾಕಮ್ಮ ತಾವು ಇಷ್ಟೊತ್ತೂ ನನಗೆ ತಿಳಿಸದೆ ಇದ್ದದ್ದು?

ಗೌರಿ—ನೀವು ಕೇಳಲಿಲ್ಲ, ಅಮ್ಮ.

ಲಕ್ಷ್ಮಮ್ಮ—ನಾನು ಕೇಳದೆ ಹೋದರೆ ನೀನು ಹೇಳಕೂಡದೇನು?

ಗೌರಿ—ಅನಾವಶ್ಯಕವಾಗಿ ಮಾತಾಡಕೂಡದು ಅಂತ ಇವತ್ತು ಬೆಳಗ್ಗೆ ತಾನೇ ಅಪ್ಪಣೆ ಆಯ್ತಲ್ಲ, ಅಮ್ಮ. ಆದರಿಂದ, ನಾನು—

ಲಕ್ಷ್ಮಮ್ಮ—ಅಯ್ಯೋ, ದೇವರೆ! ಆದರಿಂದ ನೀನು ತಿಳಿದೂ ತಿಳಿದೂ ಬಾಯಿ ಮುಚ್ಚಿಕೊಂಡು ಸುಮ್ಮನಿದ್ದೆಯೋ, ನಾನಿಲ್ಲಿ ಒದ್ದಾಡ್ತಾ ಇದ್ರೆ? ಒಳ್ಳೆ ಸಹವಾಸ ಇದು! ನನ್ನ ಕೈಲಿ ಆಗೋದಿಲ್ಲಮ್ಮ ನಿನ್ನ ಕಟ್ಟಿಕೊಂಡು ಏಗೋಕೆ!

ಗೌರಿ—ಹೂನಮ್ಮ!

ಲಕ್ಷ್ಮಮ್ಮ—ಸುಮ್ಮನೆ ಗಿಣಿ ಹಾಗೆ "ಹೂನಮ್ಮ" "ಹೂನಮ್ಮ" ಅಂತಿರಬೇಡ ನನ್ನೆದುರಿಗೆ! ರೇಗಿಹೋಗುತ್ತೆ ನನಗೆ!

ಗೌರಿ—ಆಗಲಮ್ಮ.

ಲಕ್ಷ್ಮಮ್ಮ—ಅಯ್ಯೋ, ರಾಮ! ಹೋಗಲಿ—ಅಣ್ಣ ಎಲ್ಲಿಗೆ ಹೋಗ್ತೇನೆ ಅಂತ ಹೇಳಿದರೆ?

ಗೌರಿ—ನಮ್ಮ ಮನೆಗೆ, ಅಮ್ಮ.

ಲಕ್ಷ್ಮಮ್ಮ—ನಿಮ್ಮ ಮನೆಗೆ! ಏನು ಮಹತ್ಕಾರ್ಯ ನಿಂತ್ಹೋಗ್ತಿತ್ತು ಅಂತ ಕಳಿಸಿದರೋ ಮಹಾರಾಣಿಯವರು ಅಣ್ಣನ್ನ ತಮ್ಮ ಮನೆಗೆ?

ಗೌರಿ—ಅಮ್ಮನಿಗೆ ಹೇಗಿದೆ ಅಂತ ಕೇಳಿದರಮ್ಮ ಅವರೇ. "ಅಷ್ಟೇನೂ ಚೆನ್ನಾಗಿಲ್ಲ" ಅಂದೆ.

ಲಕ್ಷ್ಮಮ್ಮ—[ವ್ಯಂಗ್ಯವಾಗಿ] ಚೆನ್ನಾಗಿಲ್ಲ ಅಂದೆಯೋ? ನಿಮ್ಮಮ್ಮನಿಗೆ ಚೆನ್ನಾಗಿಲ್ದೇ ಇರೋದ್ರಿಂದ ಅಣ್ಣ ಹೊತ್ತಿಗ್ಹೊತ್ತಿಗೆ ಹೊಟ್ಟೆಗೆ ತಿಂಡಿ ಇಲ್ದೆ ಕಣ್ಣಿಗೆ ನಿದ್ದೆ ಇಲ್ದೆ ನಿಮ್ಮ ಮನೆಗೆ ಹೋಗಬೇಕಾಯ್ತು ಅಲ್ಲವೆ ಈ ಅರ್ಧರಾತ್ರೀಲಿ? ಸಾರ್ಥಕ ವಾಯ್ತು ನಿನ್ನನ್ನ ಚಿಕ್ಕಂದಿನಿಂದಲೂ ಅನ್ನಬಟ್ಟೆ ಕೊಟ್ಟು ಕಾಪಾಡಿದ್ದು!

ಗೌರಿ—[ಒಳಗಡೆ ಇಣಿಕಿ ನೋಡಿ] ಹಾಲು ಉಕ್ಕಿ ಮರಳ್ತಾ ಇದೆ, ಅಮ್ಮ.

ಲಕ್ಷ್ಮಮ್ಮ—ಮರಳ್ತಾ ಇದ್ರೆ ಕೆಳಗಿಳಿಸಿ ಇಡು. ಅದನ್ನೂ ಹೇಳಬೇಕೆ? [ಗೌರಿ ಒಳಕ್ಕೆ ಹೋಗುವಳು] ಈ ಹುಡುಗ ಕೆಲಸಕ್ಕೆ ಬಾರದವರನ್ನೆಲ್ಲಾ ಕಟ್ಟಿಕೊಂಡು ಮೈಗೆ ಆಲಸ್ಯಮಾಡಿಕೊಳ್ಳೋದನ್ನ ಎಷ್ಟು ಹೇಳಿದರೂ ಬಿಡೋದಿಲ್ಲವಲ್ಲಾ! ಜಗತ್ಸಂಸಾರ ಇವನ್ದು! ಜಾತಿ, ಕುಲ, ಎಲ್ಲಾ ಹೋಯ್ತು!

ಗೌರಿ—[ಪ್ರವೇಶಿಸಿ] ಇಳಿಸಿಟ್ಟು ಬಂದೆ, ಅಮ್ಮ.

ಲಕ್ಷ್ಮಮ್ಮ—ಸರಿ. ಅಣ್ಣನ ನೀರಿನ ತಂಬಿಗೇನೂ ಬೆಳ್ಳಿ ಲೋಟಾನೂ ತೊಳೆದಿಡು.

ಗೌರಿ—ಬೆಳ್ಳಿ ಲೋಟಾನೇ, ಅಮ್ಮ?

ಲಕ್ಷ್ಮಮ್ಮ—ಹೂ! ಏನು ನಿನಗೆ ಕಿವುಡೂ ಬಂತೇನು?

ಗೌರಿ—ಮಾರಿಬಿಟ್ಟರಲ್ಲಾ, ಅಮ್ಮ!

ಲಕ್ಷ್ಮಮ್ಮ—ಮಾರಿಬಿಟ್ಟರು! [ಭಯೋದ್ರೇಕದಿಂದ] ಮಾರಿಬಿಟ್ಟರು! ನಿಂಗೇನು ಹುಚ್ಚೋ ಹೇಗೆ? ಯಾರೇ ಮಾರಿದ್ದು? ಯಾತಕ್ಕೆ ಮಾರಿದರು?

ಗೌರಿ—ಅಣ್ಣ ಸಾಯಂಕಾಲ ಅದನ್ನ ಆ ಸರಾಫ್‌ಕಟ್ಟೆ ಶ್ರೀನಿವಾಸಶೆಟ್ಟರ ಹತ್ತಿರ ತಗೊಂಡು ಹೋಗಿ ಎಷ್ಟಕ್ಕೆ ಹೋದರೆ ಅಷ್ಟಕ್ಕೆ ಮಾರಿಬಿಟ್ಟು ಬಾ ಅಂದರು, ಅಮ್ಮ.

ಲಕ್ಷ್ಮಮ್ಮ—ನನ್ನನ್ನ ಕೇಳದೆ ಅದನ್ನ ಮಾರೋಕೆ ನೀನ್ಯಾರೆ?

ಗೌರಿ—[ಹೆದರಿದವಳಂತೆ] ಅಮ್ಮ, ಅಣ್ಣ ಹೇಳಿದರು, ಅಮ್ಮ!

ಲಕ್ಷ್ಮಮ್ಮ—ನಿಮ್ಮ ಅಣ್ಣನ ಮುಖಕ್ಕೊಂದಿಷ್ಟು! ಅದಿರಲಿ, ಅಷ್ಟು ಅವಸರ ವಾಗಿ ದುಡ್ಡು ಯಾತಕ್ಕೆ ಬೇಕಾಗಿತ್ತಂತೆಯೆ ಅವರಿಗೆ?

ಗೌರಿ—ನನಗೇನು ಗೊತ್ತು, ಅಮ್ಮ? ಆ ಗದ್ದೇ ಹಾಳು ಸಿದ್ದಮ್ಮನಿಗಿರ ಬಹುದು.

ಲಕ್ಷ್ಮಮ್ಮ—ಗದ್ದೆ ಹಾಳು ಸಿದ್ದಮ್ಮನಿಗೆ! ಆ ಕಸದ ಗುಂಡೀಲಿ ಗುಡಿಸಲು ಕಟ್ಟಿಕೊಂಡು ಕಾಲ ತಳ್ತಿರೋ ಕಳ್ಳಮುಂಡೇಗೆ! ಕೆಲಸ ಮಾಡೋಕೆ ಮೈಬಗ್ಗದೆ ಮೂರು ಹೊತ್ತೂ ರೋಗ ರೋಗ ಅಂತ ಸೋಗು ಹಾಕಿಕೊಂಡು ಬಿದ್ದಿರ್ತಾಳೆ ಮನೇಲಿ, ಮೂದೇವಿ! ಯಾವಾಗ ನೋಡಿದರೂ ಏನಾದರೂ ಇದ್ದೇ ಇರುತ್ತೆ ಅವಳಿಗೆ! ಯಾತಕ್ಕೆ ಬೇಕಾಯಿತಂತೆ ಇದ್ದಕ್ಕಿದ್ದಹಾಗೇನೇ ಅವಳಿಗೆ ದುಡ್ಡು?

ಗೌರಿ—ಯಾರಿಗೋ ಸಾಲ ಕೊಡಬೇಕಾಗಿತ್ತಂತೆ, ಅಮ್ಮ, ಅವಳು. ಇವತ್ತು ರಾತ್ರಿ ಒಳಗೆ ತೀರಿಸದೆ ಹೋದರೆ ಮನೇಲಿರೋ ಪಾತ್ರೆ ಪದಾರ್ಥ ಎಲ್ಲಾ ಹರಾಜು ಹಾಕಿಸ್ತೇನೆ ಅಂತ ಆತ ಹೆದರಿಸಿದನಂತೆ. ಅದಕ್ಕೆ ಅವಳು ಅಣ್ಣನ ಹತ್ತಿರಕ್ಕೆ ಹೇಳಿ ಕಳಿಸಿದ್ದಳು ಮಗಳ ಕೈಲಿ.

ಲಕ್ಷ್ಮಮ್ಮ—ಹೇಳಿ ಕಳಿಸಿದ್ದಳು! ಹೇಳಿ ಕಳಿಸಿದ್ದಳೋ ಮಹಾರಾಣಿ! ಅಯ್ಯೋ, ದೇವರೆ! ಈ ಮನೆ ವಹಿವಾಟು ಹೇಗೆ ನಡೆಸಬೇಕೋ ಆ ಪರಮಾತ್ಮನಿಗೇ ಪ್ರೀತಿ! ಇದ್ದ ಆಸ್ತಿಪಾಸ್ತಿ ಎಲ್ಲಾ ಮಾರಿಹಾಕಿದ! ಅವರು ಕೂಡಿಟ್ಟಿದ್ದ ದುಡ್ಡೆಲ್ಲಾ ಕ್ರಮೇಣ ಕರಗೀ ಕರಗೀ ಕಣ್ಣಿಗೆ ಕಾಣದೆ ಮಾಯವಾಗಿ ಹೋಯಿತು. ಏನೋ ನಮಗೂ ಒಂದು ಕೊಂಪೆ ಇದೆ ಇರೋದಕ್ಕೆ ಅಂತ ಉಳ್ಕೊಂಡಿದೆ ಈ ಮನೆ ಒಂದು. ಇದನ್ನೂ ಎಂದು ನೀಗಿಕೋತಾನೋ ಕಂಡೋರಪಾಲು ಮಾಡಿ, ಕಾಣೆ! ಇಷ್ಟೆಲ್ಲಾ ಮಾಡಿದೋನಿಗೆ ಅದೊಂದು ಕೆಲಸ ಕಷ್ಟವೆ? ನಾನು ನಮ್ಮ ಅಪ್ಪನ ಮನೇ ಇಂದ ತಂದುಕೊಂಡಿದ್ದ ನನ್ನ ಸ್ವಂತದ್ದು ಅಲ್ಪ ಸ್ವಲ್ಪ ಇರೋ ಹೊತ್ತಿಗೆ ಹೇಗೋ ಹಾಗೂ ಹೀಗೂ ಸಾಗ್ತಾ ಇದೆ ರಥ. ಅದೂ ಇವನ ಸ್ವಾಧೀನಕ್ಕೆ ಒಳಪಟ್ಟಿದ್ದಿದ್ದರೆ ಇಷ್ಹೊತ್ತಿಗೆ ಹೋಗಬೇಕಾಗಿತ್ತು ತಂಬಿಗೆ ಹಿಡುಕೊಂಡು ಮನೆಮನೆಗೂ ಒಂದು ಹಿಡಿ ಅಕ್ಕಿಕಾಳು ಹಾಕಿ ಅಂತ! . . . ಅಯ್ಯೋ, ನನ್ನ ಬೆಳ್ಳಿ ಲೋಟಾನೆ! ಎಷ್ಟು ಚೆನ್ನಾಗಿತ್ತು! ಎಷ್ಟು ದಿನದಿಂದ ಇಟ್ಟುಕೊಂಡಿದ್ದೆ! ನಮ್ಮ ಮಾವನವರಿಗೆ ಅವರ ಮಾವನವರು ಕೊಟ್ಟಿದ್ದಿದ್ದಂತೆ ಅದು! ಈಗ ಇವನ ಕೈವಾಡದಿಂದ ಈ ಗತಿ ಬಂತೆ ಅದಕ್ಕೆ! ಸಾಕಪ್ಪಾ, ಸಾಕು! ಇದನ್ನೆಲ್ಲಾ ಕಣ್ಣಾರ ನೋಡಿಕೊಂಡು ಇನ್ನೂ ಜೀವ ಇಟ್ಟುಕೊಂಡಿರಬೇಕಾಗಿದೆಯಲ್ಲ ನಾನು! [ಅಳುವಳು]

ಗೌರಿ—[ದೈನ್ಯದಿಂದ] ತಿಳೀಲಿಲ್ಲ ಅಮ್ಮ ಗೊತ್ತಿದ್ದರೆ—

ಲಕ್ಷ್ಮಮ್ಮ—[ಗೌರಿ ತನಗೆ ಸರಿಸಮಾನಳಂತೆ ಮಾತಾಡುವುದನ್ನು ಪ್ರೋತ್ಸಾಹಿಸಲು ಇಷ್ಟವಿಲ್ಲದ] ಗೊತ್ತಿದ್ದರೆ ಏನೇ ಮಾಡಿಬಿಡ್ತಾ ಇದ್ದದ್ದು ನೀನು? ಏನೋ ಕಡಿದುಬಿಡ್ತಾ

ಇದ್ದೋಳ ಹಾಗೇ ಮಾತಾಡ್ತಾಳೆ! ಪ್ರತಿಷ್ಠೆ ವಿಪರೀತವಾಯಿತು ಬರ್ತಾ ಬರ್ತಾ! ಹಿತ್ತಲ ಬಾಗಿಲು ಹಾಕಿದೀಯೋ, ಇಲ್ಲ ಹಾಗೇ ಬಂದು ಹರಟ್ತಾ ನಿಂತಿದೀಯೋ?

ಗೌರಿ—ಹಾಕಿದೇನಮ್ಮ.

ಲಕ್ಷ್ಮಮ್ಮ—ಅಡಿಗೆಮನೇಲಿ ದೀಪ ಸಣ್ಣಗೆ ಮಾಡಿದೀಯೇನೆ?

ಗೌರಿ—ಮಾಡ್ತೇನಮ್ಮ [ಎಂದು ಅಡಿಗೆಯ ಮನೆಯ ಬಾಗಿಲ ಕಡೆಗೆ ಒಂದು ಹೆಜ್ಜೆ ಇಡುವಳು. ಅಷ್ಟರಲ್ಲಿ ಬೀದಿಯ ಬಾಗಿಲಿನಿಂದ ದಯಾನಂದ ಪ್ರವೇಶಿಸಲು ತಿರುಗಿ ನೋಡಿ ಹಾಗೆಯೇ ನಿಲ್ಲುವಳು.]

[ಬೀದಿಯ ಬಾಗಿಲಿನಿಂದ ದಯಾನಂದ ಪ್ರವೇಶಿಸುವನು]

ದಯಾನಂದ—ಆಹಾ! ಎಷ್ಟು ಬೆಚ್ಚಗಿದೆ ಒಳಕ್ಕೆ ಬಂದರೆ! ಮನೆ ಒಳಗೆ ಎಷ್ಟು ಸುಖವಾಗಿರುತ್ತೆ ಅಂತ ಅರ್ಥಮಾಡಿಕೊಳ್ಳೋದಕ್ಕಾದರೂ ಹೊರಕ್ಕೆ ಹೋಗಿ ಬರಬೇಕು! [ಲಕ್ಷ್ಮಮ್ಮನ ಮುಖವನ್ನು ನೋಡಿ] ಯಾಕಮ್ಮಾ? ಏನಾಯ್ತು? ಏನು ಸಮಾಚಾರ? ಅಳ್ತಾ ಇದೀಯ ಯಾಕಮ್ಮಾ? ಗೌರಿ ಏನಾದರೂ ಕೆಲಸಗಿಲಸ ಮಾಡದೆ ಹಟಮಾಡಿದಳೇನಮ್ಮಾ?

ಲಕ್ಷ್ಮಮ್ಮ—ಇಲ್ಲ; ಅವಳೇನು ಮಾಡಿದಳು, ಪಾಪ? ಏನೂ ಇಲ್ಲ.

ದಯಾನಂದ—ಹಾಗಾದರೆ ಇನ್ನೇನಾಯಿತು? . . . ಇರಲಿ! . . . ಗೌರಿ, ನೀನಿನ್ನು ಮನೆಗೆ ಹೋಗು. ನಿಮ್ಮಮ್ಮ ಈಗ ಬಹಳ ಮಟ್ಟಿಗೆ ಉತ್ತಮವಾಗಿದಾರೆ, ನಾನು ಇಷ್ಟೊಂತ್ತೂ ಆಕೆ ಜೊತೆಲೇ ಕೂತಿದ್ದು ದೇವರಿಗೆ ಪ್ರಾರ್ಥನೆ ಸಲ್ಲಿಸಿ, ಧೈರ್ಯ ಹೇಳಿ ಬಂದಿದೇನೆ. ವೈದ್ಯರ್ನೂ ಕರೆಸಿ ತೋರಿಸಿ ಔಷಧ ಕೊಡಿಸಿದೇನೆ. ಇನ್ನೇನೂ ಭಯವಿಲ್ಲ. ನೀನಿನ್ನು ಬೇಗ ಹೋಗಿ ಮನೆ ಸೇರಿಕೊ. [ಗೌರಿ ಹೊರಡಲು ಹೊರಬಾಗಿಲಿನ ಕಡೆಗೆ ಧಾವಿಸುವಳು. ದಯಾನಂದ ಅವಳನ್ನು ಉದ್ದೇಶಿಸಿ] ಗೌರಿ, ಒಂದು ವೇಳೆ ನೀನು ಮನೆಗೆ ಹೋಗೋಹೊತ್ತಿಗೆ ನಿಮ್ಮಮ್ಮನಿಗೆ ನಿದ್ದೆ ಬಂದಿದ್ದರೆ ಆಕೇನ ಕೂಗಿ ಎಬ್ಬಿಸಿಬಿಡಬೇಡ. ಸದ್ದುಮಾಡದೆ ಒಳಕ್ಕೆ ಕಾಲಿಡು.

ಗೌರಿ—ಆಗಲಿ, ಅಣ್ಣ [ಎಂದು ಮತ್ತೆ ಬೀದಿಯ ಕಡೆಗೆ ಹೆಜ್ಜೆಯಿಡುವಳು.]

ದಯಾನಂದ—[ಮತ್ತೆ ಗೌರಿಯನ್ನು ಕೂಗಿ] ಗೌರಿ, ಇಗೋ, ಈ ಶಾಲು ಹೊದ್ದುಕೊಂಡು ಹೋಗು. ಅಸಾಧ್ಯ ಚಳಿ ಹೊರಗಡೆ! [ಎಂದು ತಾನು ಹೊದ್ದಿರುವ ಶಾಲುವನ್ನು ತೆಗೆದು ಅವಳ ಕಡೆಗೆ ಕೈಚಾಚಿ ಹಿಡಿಯುವನು.]

ಗೌರಿ—[ಸಂಕೋಚದಿಂದ] ಬ್ಯಾಡ, ಅಣ್ಣ. ಹಾಗೇ ಹೋಗ್ತೇನೆ.

ಲಕ್ಷ್ಮಮ್ಮ—ಸಾಕು, ಸುಮ್ನಿರೋ. ಮಗು, ಇದೇನು ಅವಿವೇಕ! ಎಳೇ ಹುಡುಗಿ, ಅವಳಿಗೆಂಥ ಚಳಿಯೋ?

ದಯಾನಂದ—ನಿನಗೇನು ಗೊತ್ತಮ್ಮ ? ಹೊರಗೆ ಹೋಗಿ ಬಂದಿದ್ದರೆ ತಿಳಿತಾ ಇತ್ತು ನಿನಗೂ—ಎಷ್ಟು ಚಳಿ ಇದೆ ಅಂತ. ಇಗೋ, ಗೌರಿ ಹೊದ್ದುಕೊಂಡು ಹೋಗು ಇದನ್ನ, ಹಾಗೇ ಹೋಗಬೇಡ. [ಎಂದು ತಾನೇ ಶಾಲುವನ್ನು ಅವಳಿಗೆ ಹೊದ್ದಿಸುತ್ತಾನೆ.] ಇನ್ನು ಹೋಗು; ಬಹಳ ಹೊತ್ತಾಗಿ ಹೋಯ್ತು, ಆಗಲೆ!

[ಗೌರಿ ಹೋಗುತ್ತಾಳೆ]

ಲಕ್ಷ್ಮಮ್ಮ—ಮಗು, ನಿನ್ನ ಕೆಲಸಕ್ಕೆ ಏನ್ಹೇಳಲೋ ನಾನು? ಇನ್ನು ನನ್ನ ಕೈಯಲ್ಲಾಗೋದಿಲ್ಲ! . . . ಹೋಗಲಿ, ಮೊದಲು ಕೈಕಾಲು ತೊಳೆದುಕೊಂಡು ಬಂದು ಹಾಲು ಕುಡಿ, ಆರಿ ತಣ್ಣಗಾಗಿ ಹೋಗಿರಬೇಕು ಅದು ಇಷ್ಹೊತ್ತಿಗೆ!

ದಯಾನಂದ—ಪರವಾ ಇಲ್ಲಮ್ಮ ; ಹೇಗಿದ್ದರೂ ರುಚಿಸುತ್ತೆ ನನಗೆ.

ಲಕ್ಷ್ಮಮ್ಮ—[ಬೇಸರದ ಧ್ವನಿಯಲ್ಲಿ] ಏನು ರುಚಿಸುತ್ತೋ ಅಪ್ಪ! ನಿನ್ನ ರುಚಿ ಒಂದೊಂದಲ್ಲ!

ದಯಾನಂದ—ನೀನು ಇಲ್ಲೇ ಕೂತಿರಮ್ಮ. ನಾನೇ ಹಾಲು ಬಗ್ಗಿಸಿಕೊಂಡು ಕುಡಿದುಬಿಟ್ಟು ಬರ್‍ತೀನೆ. ನಿನಗೂ ಬೆಳಗಿನಿಂದ ದುಡಿದು ದುಡಿದು ಸಾಕಾಗಿರಬೇಕು.

ಲಕ್ಷ್ಮಮ್ಮ—ಯಾಕೋ, ಮಗು, ನಾನು ಕೊಟ್ಟರೆ ಸೇರೋದಿಲ್ಲವೇನೋ ನಿನಗೆ?

ದಯಾನಂದ—ಅಯ್ಯೋ, ರಾಮ! ಅದಕ್ಕಲ್ಲಮ್ಮ ನಾನ್ಹೇಳಿದ್ದು. ಸುಮ್ಮನೆ ನಿನಗೆ ಶ್ರಮವಾಗುತ್ತಲ್ಲ ಅಂತ!

ಲಕ್ಷ್ಮಮ್ಮ—ಆದರೆ ಆಯಿತು! ನಾನು ಬದುಕಿರೋವರೆಗೂ ಮಾಡಿಬಿಡ್ತೀನೆ. ಆ ಮೇಲೆ ಇದ್ದೇ ಇದೆ ನಿನ್ನ ಪಾಡು.

ದಯಾನಂದ—ತಗೊಂಡು ಬಾರಮ್ಮ ಹಾಗಾದರೆ. ಕಾಲು ತೊಳೆದುಕೊಂಡು ಬಂದುಬಿಟ್ಟೆ [ಎಂದು ತನ್ನ ಕೋಣೆಗೆ ಹೋಗಿ, ಹೆಗಲ ಮೇಲೆ ಒಂದು ಟವಲು ಹಾಕಿಕೊಂಡು ಹಜಾರಕ್ಕೆ ಹಿಂದಿರುಗಿ ಬಂದು, ಅಡಿಗೆಯ ಮನೆಯ ಬಾಗಿಲನ್ನು ಪ್ರವೇಶಿಸುವನು. ಅನಂತರ ಲಕ್ಷ್ಮಮ್ಮನೂ ಎದ್ದು "ಉಸ್ಸಪ್ಪ!" ಎನ್ನುತ್ತ ಮೆಲ್ಲನೆ ನಡೆದು ಅದೇ ಬಾಗಿಲ ಮೂಲಕ ಹೋಗುವಳು. ಕೆಲವು ನಿಮಿಷಗಳಾದುವೆಂದು ಸೂಚಿಸಲು ಪರದೆ ಕೆಳಕ್ಕಿಳಿದು ಮೇಲಕ್ಕೇಳುತ್ತದೆ. ಅದೇ ಕೋಣೆಯಲ್ಲಿ ಮತ್ತೆ ಲಕ್ಷ್ಮಮ್ಮ ಮೊದಲಿನ ಹಾಗೆ ಕೂತಿರುತ್ತಾಳೆ. ಆಕೆಗೆ ಸ್ವಲ್ಪ ದೂರದಲ್ಲಿ ದಯಾನಂದ ಕೂತಿರುತ್ತಾನೆ. ಅವನ ಕೈಯಲ್ಲಿ ಒಂದು ಹಿತ್ತಾಳೆಯ "ಪಂಚಪಾತ್ರೆ" ಇರುತ್ತದೆ. ಅವನು ನಿಧಾನವಾಗಿ ಗುಟುಕು ಗುಟುಕಾಗಿ ಹಾಲು ಕುಡಿಯುತ್ತ ತಾಯಿಯೊಡನೆ ಮಾತಾಡುತ್ತಿರುತ್ತಾನೆ.]

ಲಕ್ಷ್ಮಮ್ಮ—ಅಲ್ಲ, ಮಗು, ನೀನು ಈ ಕಗ್ಗಾಡು ಕತ್ತಲೇಲಿ ಈ ಚಳೀಲಿ

ಇಷ್ಟೊತ್ತಿನಲ್ಲಿ ಆ ಗೌರೀಮನೇಗೆ ಹೋಗಿಬರಬೇಕಾಗಿದ್ದ ಅಗತ್ಯವೇನಿತ್ತು? ಏನು ಅವಳನ್ನ ಅಂಥ ದೊಡ್ಡ ರೋಗ ಹೊತ್ತುಕೊಂಡು ಹೋಗ್ತಾ ಇದ್ದದ್ದು? ನೀನು ಹೀಗೆ ಕರೆದಕೂಡಲೆ ತಾವಿದ್ದಕಡೇಗೆ ಎದ್ದು ಓಡಿಬರ್ತೀಯ ಅನ್ನೋ ಭರವಸೆ ಇರೋದ್ರಿಂದಲೇ ಮತ್ತೆ ಅವರು ಹಾಗೆ ಇಲ್ಲದ್ದೆಲ್ಲಾ ಕಾಯಿಲೆ ಕಸಾಲೆ ಅಂತ ನಟಿಸೋದು! ಅದರಿಂದ ನಿನಗೆ ಎಷ್ಟು ತೊಂದರೆ ಆಗುತ್ತೆ ಅನ್ನೋದು ಅವರ ತಲೇಗೇ ಹತ್ತೋಲ್ಲ ಅಂತ ಕಾಣುತ್ತೆ!

ದಯಾನಂದ—ನನ್ನನ್ನು ನೋಡಬೇಕು ಅಂತ ಅಷ್ಟೊಂದು ಇಷ್ಟಪಡಬೇಕಾದರೆ ನನ್ನ ಮೇಲೆ ಅವರಿಗೆ ಎಷ್ಟು ದಯೆ ಇರಬೇಕಮ್ಮ!

ಲಕ್ಷ್ಮಮ್ಮ—ಅವರ ದಯೇಗೆ ಬೆಂಕಿ ಇಟ್ಟರು! ಇಲ್ಲಿ ಮನೇಲಿ ನೀನು ಈಗ ಬರ್ತೀಯ, ಆಗ ಬರ್ತೀಯ, ಎಷ್ಟೊತ್ತಾದರೂ ಬರಲಿಲ್ಲವಲ್ಲ ಅಂತ ಬಕಪಕ್ಷಿ ಹಾಗೆ ಕತ್ತು ಇಷ್ಟುದ್ದ ಮಾಡಿಕೊಂಡು ಕಣ್ಣು ಅಷ್ಟಗಲ ಮಾಡಿಕೊಂಡು ಗಂಟೆಗಟ್ಟಳೆ ಕಾದು ಕೂತಿರೋಳು ನನ್ನ ಗತಿ ಏನು ಅಂತೇನೆ? ಮೊದಲು ನಮ್ಮವರು, ಆ ಮೇಲೆ ನೆರೆಯವರು ಅಂತ ಹಿರಿಯರು ಹೇಳಿರೋದು.

ದಯಾನಂದ—ಹೌದಮ್ಮ! ನಾನು ನಿನ್ನವನು ಅನ್ನೋ ಅಭಿಮಾನ ಇರೋದ್ರಿಂದಲೇ ಅಲ್ಲವೇನಮ್ಮ ನನ್ನಿಂದ ನಿನಗೆ ಎಷ್ಟೇ ಕಷ್ಟವಾಗಲಿ ಸಹಿಸಿಕೊಂಡು, ನೀನು, ನನಗೆ ಒಪ್ಪೊತ್ತು ಕೂಡ ತಪ್ಪಿಸದೆ, ಬೇಜಾರುಪಡದೆ, ಅಮೃತದ ಹಾಗಿರೋ ಅಡಿಗೆ ಮಾಡಿ ಬಡಿಸ್ತಾ, "ಬೇಡ, ಬೇಡ" ಅಂತ ಎಷ್ಟು ಬೇಡಿಕೊಂಡರೂ ಕೇಳದೆ ಪ್ರತಿದಿವಸವೂ ಹೀಗೆ ಬಿಸಿಬಿಸಿಯಾಗಿ ಹಾಲು ಕಾಸಿ ಕೊಡ್ತಿರೋದು? ನೀನಿಲ್ಲದೆ ಇದ್ದಿದ್ದರೆ ನನ್ನ ಹೀಗೆ ಯಾರು ನೋಡಿಕೋತಾ ಇದ್ದರಮ್ಮ?

ಲಕ್ಷ್ಮಮ್ಮ—[ವ್ಯಂಗ್ಯವಾಗಿ] ಅದೇನೋ ನಿಜವೇ ಅನ್ನು! ನಾನಿಲ್ಲದೆ ಹೋಗಿದ್ದರೆ ನಿನ್ನ ಗತಿ ಏನಾಗಿತ್ತು ಅಂತ ಗೊತ್ತೇ ಇದೆ—ಸುತ್ತಾ ಮುತ್ತಾ ಇರೋ ಪ್ರತಿಯೊಬ್ಬ ಸಾಲಗಾರನೂ ಸುಳ್ಳಿನ ಕಂತೆ ಹೆಣೆದು ನಿನ್ನ ಕಣ್ಣಿಗೆ ಮಂಕುಬೂದಿ ಎರಚೋದು, ನೀನು ಅವರ ಕೈಗೆ ಸಿಕ್ಕಿದ ಸೂತ್ರದ ಗೊಂಬೆ ಹಾಗೆ ಕುಣಿಯೋದು!

ದಯಾನಂದ—ಸುಳ್ಳು ಹೇಳಿ ನನಗೆ ಮೋಸ ಮಾಡಿದರೆ ಅದರಿಂದ ದುರ್ಗತಿಗಿಳಿಯೋರು ಅವರೇ ಹೊರತು ನಾನಲ್ಲವಮ್ಮ. ನನಗೇನು ನಷ್ಟ?

ಲಕ್ಷ್ಮಮ್ಮ—ನಿನಗೇನು ನಷ್ಟವೆ? ಹೀಗೇ ನಡೀತಾ ಇದ್ದರೆ ಕೊನೇಗೆ ನಿನ್ನ ಕೈಯಲ್ಲಿ ಒಂದು ಕುರುಡು ಕಾಸು ಕೂಡ ಉಳಿಯೋಲ್ಲ. ಮನೇಲಿ ಇದ್ದಬದ್ದದ್ದನ್ನೆಲ್ಲಾ ಒಂದೊಂದಾಗಿ ಒಂದೊಂದಾಗಿ ಎಲ್ಲಾನೂ ಕೊಟ್ಟುಬಿಡ್ತಾ ಇದೀಯ! ನನಗೇನು ನಷ್ಟ ಅಂತ ಬೇರೆ ಕೇಳ್ತೀಯಲ್ಲ! ಚೆನ್ನಾಗಿದೆ ಬಿಡು ನಿನ್ನ ತರ್ಕ!

ದಯಾನಂದ—ಏನುಮಾಡೋದಮ್ಮ? ಪಾಪ, ಆಕೆ ನಾನೊಬ್ಬ ದೊಡ್ಡ ಮನುಷ್ಯ, ನನ್ನಿಂದ ತನಗೆ ಏನಾದರೂ ಸಹಾಯವಾದೀತು ಅಂತ ಆಸೆಪಟ್ಟುಕೊಂಡು ಹೇಳಿಕಳಿಸಿದಳು. ನನ್ನ ಹತ್ತಿರ ಇದ್ದ ಅರ್ಧ ರೂಪಾಯ್ನೂ ಆಗ ತಾನೆ ಸ್ಕೂಲು ಹುಡುಗ ಯಾರೋ "ಫೀಸಿಗೆ ದುಡ್ಡಿಲ್ಲ" ಅಂತ ಬಂದು ಕೇಳಿದ, ಕೊಟ್ಟು ಕಳಿಸಿ ಬಿಟ್ಟಿದ್ದೆ. ವಿಧಿ ಇಲ್ದೆ ಆ ಬೆಳ್ಳಿ ಲೋಟಾನ ಮಾರಲೇಬೇಕಾಯಿತು. ಮಾರಬಹುದಾದ ಪದಾರ್ಥ ಅದಾದರೂ ಮನೇಲಿತ್ತಲ್ಲ ಅಂತ ನನಗೆ ಎಷ್ಟೋ ಸಂತೋಷವಾಗ್ತಿದೆಯಮ್ಮ! ಆದರೆ, ನಿನ್ನ ಮನಸ್ಸಿಗೆ ನೋವಾಯಿತು ಅನ್ನೋದೊಂದೇ ನನಗೆ—

ಲಕ್ಷ್ಮಮ್ಮ—ಆಗಲಪ್ಪ! ಆಗಲಿ! ನನ್ನ ಮನಸ್ಸಿಗೆ ಏನಾದರೆ ನಿನಗೇನಂತೆ? ಮಾರು! ಅಗತ್ಯವಾಗಿ ಮಾರು! ಇನ್ನು ನಿನ್ನ ಹೆಂಡತಿ ಫೋಟೋನಿಟ್ಟಿರೋ ಆ ಬೆಳ್ಳಿ ಚೌಕಟ್ಟೊಂದಿದೆಯೇನೋ—ಅದನ್ನೂ ಮಾರಿಬಿಡು ಇನ್ನ್ಯಾರ್ದಾದರೂ ಋಣ ತೀರಿಸೋಕೆ ಅಂತ! ಎಲ್ಲಾ ಹೋಯಿತು, ಅದೊಂದು ತಾನೆ ಯಾಕಿರಬೇಕು ಮನೇಲಿ ಬೆಳ್ಳಿ ಸಾಮಾನು ಅಂತ?

ದಯಾನಂದ—[ಉತ್ಸುಕತೆಯಿಂದ] ಇಲ್ಲಮ್ಮ! ಅದನ್ನ ಮಾರೋದಿಲ್ಲ! ಅವಳೂ ನಾನೂ ಬೊಂಬಾಯಿಗೆ ಹೋಗಿದ್ದಾಗ ಅದನ್ನು ಬಂದು ಅಂಗಡೀಲಿ ನೋಡ್ತಿದ್ದಾಗೇನೇ ಬಹಳ ಮೆಚ್ಚಿಗೆಯಿಂದ ಕೊಂಡುಕೊಂಡಿದ್ದಳು ಅವಳು ಅದನ್ನ. ನನ್ನ ಫೋಟೋನ ಅದರಲ್ಲಿ ಸಿಕ್ಕಿಸಿ ಕೊನೇವರೆಗೂ ಕೋಣೇಲಿಟ್ಟುಕೊಂಡಿದ್ದಳು. ತನಗೆ ಮುಡುಕೊಳ್ಳೋದಕ್ಕೆ ಹೂವಿಲ್ಲದಿದ್ದರೂ ಅದಕ್ಕೆ ಮಾತ್ರ ಹಾರ ಹಾಕೋದು ಬಂದು ದಿವಸವೂ ತಪ್ತಿರಲಿಲ್ಲ. ಅವಳಿಗೆ ಅಷ್ಟು ಇಷ್ಟವಾಗಿದ್ದದ್ದು ಅನ್ನೋ ಕಾರಣದಿಂದ ಅದನ್ನಿಟ್ಟುಕೊಂಡಿದೇನೆ ಇನ್ನೂ. ಏನೇ ಆಗಲಿ, ಅದನ್ನ ಬಿಟ್ಟುಕೊಡೋದಕ್ಕೆ ಮನಸ್ಸು ಹಿಂದೆಗೆಯುತ್ತೆ. [ಒಂದು ಕ್ಷಣ ಸುಮ್ಮನಿದ್ದು] ಆದರೂ, ಯಾವ ವಸ್ತುವೇ ಆಗಲಿ, ಅದರ ವಿಚಾರದಲ್ಲಿ ಇಷ್ಟೊಂದು ಮಮತೆ ಇಟ್ಟುಕೊಂಡಿರೋದು ಸರಿಯಲ್ಲ ಅಂತ ನನಗೇ ಅನ್ನಿಸುತ್ತೆ ಒಂದೊಂದು ಸಾರಿ.

ಲಕ್ಷ್ಮಮ್ಮ—ಮಗು, ಮಗು, ಸಾಕು ಸುಮ್ನಿರೋ ನಿನ್ನ ವೈರಾಗ್ಯ! ನಿನ್ನ ಮಾತು ಕೇಳ್ತಾ ಕೇಳ್ತಾ ನನ್ನ ಗುಂಡಿಗೆ ಒಡೆದುಹೋಗುತ್ತೆ ನೋಡು! ಇನ್ನು ನನ್ನಿಂದ ಆಗೋದಿಲ್ಲ ಸಹಿಸೋದಕ್ಕೆ! ಹೋಗಿ ಬಿದ್ದುಕೋತೇನೆ! [ಎಂದು ಎದ್ದು ಅಡಿಗೆಯ ಮನೆಯ ಒಳಕ್ಕೆ ಹೋಗುತ್ತಾ, ಬಾಗಿಲಲ್ಲಿ ನಿಂತು, ತಿರುಗಿ] ನೀನೂ ಎದ್ದು ಮಲಕ್ಕೋ. ಆಗಲೇ ಹನ್ನೆರಡೇ ಆಯ್ತೋ ಒಂದೇ ಆಯ್ತೋ ಕಾಣೆ! ಇನ್ನು ರಾತ್ರಿ ಎಲ್ಲಾ ಓದ್ತಾ ಕೂತಿರಬೇಡ!

ದಯಾನಂದ—ಇಲ್ಲಮ್ಮ ! ಮಲಗ್ತೇನೆ. [ಎಂದು ದೀಪವನ್ನು ದೊಡ್ಡದುಮಾಡಿ ಅದನ್ನು ಮೇಜಿನ ಮೇಲಿನಿಂದ ಎತ್ತಿ ಚಾಪೆಯ ಮೇಲಿಟ್ಟು, ಇನ್ನೊಂದು ಮೇಜಿನ ಮೇಲಿನಿಂದ ಒಂದು ವೃತ್ತಪತ್ರಿಕೆಯನ್ನು ತೆಗೆದುಕೊಂಡು ದೀಪದ ಮುಂದೆ ತಲೆ ಬಗ್ಗಿಸಿಕೊಂಡು ಓದುತ್ತಾ ಕುಳಿತು ಕೊಳ್ಳುತ್ತಾನೆ. ತೆರೆದೇ ಇರುವ ಬೀದಿಯ ಬಾಗಿಲಿನಿಂದ ಖೈದಿಯೊಬ್ಬನು ಪ್ರವೇಶಿಸಿ ಸಪ್ಪಳಮಾಡದೆ ಬಂದು ದಯಾನಂದನ ಕುತ್ತಿಗೆಗೆ ಹಿಂದಿನಿಂದ ಕೈಹಾಕುತ್ತಾನೆ ಅವನ ಇನ್ನೊಂದು ಕೈಯಲ್ಲಿ ಒಂದು ದೊಡ್ಡ ಚೂರಿ ಇರುತ್ತದೆ.]

ಖೈದಿ—ಕೂಗಿದೆ ಅಂದ್ರೆ ಸತ್ತೆ ಅಂತ ತಿಳ್ಕೊ !

ದಯಾನಂದ—ಓದ್ತಾ ಇದೇನೆ, ನಾನೇಕಪ್ಪ ಕೂಗಲಿ ಸುಮ್ಮ ಸುಮ್ನೆ ? ಯಾರು ನೀನು ? ಏನು ಬೇಕಪ್ಪ ನಿನಗೆ ?

ಖೈದಿ—[ಗಡುಸು ಧ್ವನಿಯಲ್ಲಿ] ತಿನ್ನಾಕೆ . . . ತಿನ್ನಾಕೆ ಯೋನಾರಾ ಕೊಡು ! ಮೂರು ದಿವಸಾತು ಕೂಳು ಕಂಡು ! ವಟ್ಯಾಗೆ ತಾಳಾ ಆಕ್ತಾ ಐತೆ ! ತಿನ್ನಾಕ್ಯೋ ನಾರಾ ಕೊಡು ! ಬ್ಯಾಗ ಕೊಡು ! ಕೊಡ್ಲೋ ! ನಿನ್ನ ಮನೆ ಆಳಾಗಲಿ !

ದಯಾನಂದ—[ಕರುಣೆಯಿಂದ] ಅಗತ್ಯವಾಗಿ ಕೊಡ್ತೇನೆ. ಮನೇಲೇನಿದ್ದರೂ ಎಲ್ಲಾ ನಿನ್ದೇ ಅಂತ ತಿಳಿದುಕೊ. ನಮ್ಮಮ್ಮ ಒಳಗೆ ಮಲಗಿದಾಳೆ. ಎಬ್ಬಿಸಿ ಏನಾದರೂ ಇದೆಯೇನೋ ಕೇಳಿಬರ್ತೇನೆ. [ಎಂದು ಏಳಲು ಪ್ರಯತ್ನಿಸುತ್ತಾನೆ]

ಖೈದಿ—ಕುಕ್ಕರಿಸು ಇಲ್ಲೇ ! ಕದಲಿದರೆ ನೋಡ್ಕೋ ನಿಂಗ್ಯೋನಾಗ್ತೈತೆ ಅಂತ ! [ದಯಾನಂದ ಮುಗುಳುನಗೆ ನಕ್ಕು ಮೊದಲಿನ ಹಾಗೆಯೇ ಕುಳಿತುಕೊಳ್ಳುತ್ತಾನೆ] ಊ ! ಈ ಆಟ ಯಲ್ಲಾ ನನ್ತಾವ ನಡೆಯಲ್ಲ ! ತಿಳೀತೆ ? ವೊಟ್ಟೆನಾಸೀಗೆ ಆರಿಬಂದು ಸಿಕ್ಕಿಬೀಳಾ ಅಕ್ಕಲ್ಲ ನಾನು ! ನಿನ್ನಂತಾರ್ನ ಬಾಳಾ ಮಂದೀನ ಕಂಡೀನಿ ! ವಳಾ ಕೋಗಿ ನಿಮ್ಮಮ್ಮನ್ನ ಕೇಳಿ ಬರ್‍ತಿ, ಅಲ್ಲೆ ? ಯಾರಾರಾ ನಂಬಿಬಿಡಬೇಕು ನಿನ್ನ ಮಾತ್ನ ! ಮನೆಯಾಗಿರಾರ್ನೆಲ್ಲಾ ಯಬ್ಬಿಸಾಕೀವುಪಾಯ ! ನಂಗೇನು ಗೊತ್ತಾಗಲ್ಲ ಅಂದ್ಕಂಡಿದೀಯ ? ಆಹಾಹಾಹಾ ! ಶಕ್ಕರು ಬೊಡ್ಡಿಮಗನೆ ! ಊ ! ಯೊಲ್ಲಿ ! ಬ್ಯಾಗ ಕೊಡು ತಿನ್ನಾಕೆ ಯೋನಾರಾ ವಂದನ್ನ ! ನನ್ನ ವಟ್ಯಾಗೆ ಯಬ್ಬುಲಿ ಸೇರ್‍ಕಂಡು ಕಳ್ಳುಕಳ್ನೇ ಕಿತ್ತು ಕಿತ್ತು ತಿಂತಾ ಐತೆ ! ನೀನು ನಿಮ್ಮ ಅಮ್ಮನ್ನ ಕೇಳಿ ಬರಾತನ್ಕ ಪುರಸತ್ತಿಲ್ಲ ಅದ್ಕೆ !

ದಯಾನಂದ—[ಸ್ವಗತ] ಏನಾದರೂ ಉಳಿದಿದೆಯೋ, ಇಲ್ಲ, ಅಮ್ಮ ರಾತ್ರಿಗೆ ಹೇಗಿದ್ದರೂ ನನಗೆ ಊಟವಿಲ್ಲ ಅಂತ ಮಧ್ಯಾಹ್ನವೇ ಮುಸುರೆ ಎಲ್ಲಾ ಮಗುಚಿ ಹಾಕಿಬಿಟ್ಟಳೋ ಕಾಣೆ. [ಖೈದಿಗೆ] ಅಪ್ಪ, ಇಲ್ಲಿ ನಿನಗೆ ಯಾವ ಭಯವೂ ಇಲ್ಲ. ನಿಶ್ಚಿಂತೆಯಾಗಿರು ನಾನು, ನಮ್ಮ ತಾಯಿ ಇಬ್ಬರೇ ಇಲ್ಲಿರೋರು.

ಖೈದಿ—ರುಜುವಾತೇನು ಅದ್ಕೆ?

ದಯಾನಂದ—ನಾನು ಹೇಳೋದೇ ರುಜುವಾತು. ನನ್ನ ಮಾತಿಗಿಂತಲೂ ಹೆಚ್ಚಿನ ಭರವಸೆ ಬೇಕೆ ನಿನಗೆ?

ಖೈದಿ—[ದಯಾನಂದನನ್ನು ದೀರ್ಘವಾಗಿ ದಿಟ್ಟಿಸಿ ನೋಡಿ] ಊ! ಆಗಲಿ! ನಿನ್ನ ಮಕ ನೋಡಿದರೆ ಯಾಕೋ ನಿನ್ನ ಮಾತು ನಿಜ ಅನ್ನಿಸ್ತೈತೆ! ನೀನು ಯೋಳಾದ್ನ್ಯೆಲ್ಲಾ ನಂಬಿಬಿಡ್ತೀನಿ. [ದಯಾನಂದ ಅಡಿಗೆಯ ಮನೆಯ ಕಡೆಗೆ ಹೆಜ್ಜೆ ಇಡುವನು,] ನಂಗ್ಯೋನಾರಾ ಮೋಸಾಗೀಸಾ ಮಾಡ್ದ್ಯೋನೋಪ್ಪಾ ಇರು ನಿಂಗ್ಯೋನಾಗ್ತೈತೆ ಅಂತ! ನಮ್ಮಪ್ಪ ನಾಣೆಗೂ ಯೋಳ್ತೀನಿ—ಈ ಚಾಕು ತಗಂಡು ನಿನ್ನ ವಟ್ಟೆ ಬಗ್ದು ಕಂಡಕಂಪಾನೇ ವರಾಕೆ ಬರಾ ಅಂಗೆ ಮಾಡಿದ್ರೇ ಔದು ಅನ್ನು! ಜ್ವಾಪಾನ! ನಾಯೋನು—ಯಂತ ಕ್ಯಲಸ್ಕೂ ಯಿಂದೇಟಾಕಾನಲ್ಲ! ಯಲ್ಲಾ ಜಟ್ಟಿರಾನು! ನಾಸ್ಕಳಕಾಬೇಕಾದ್ದು ಇನ್ನ್ಯೋನೂ ಇಲ್ಲ!

ದಯಾನಂದ—ಏಕಿಲ್ಲಪ್ಪ? ಇದೆ. ಮಿಕ್ಕಿದ್ದನ್ನೆಲ್ಲಾ ಮೀರಿಸೋ ಅಮೂಲ್ಯವಾದ ವಸ್ತು ಒಂದಿದೆ ನಿನ್ನ ಹತ್ತಿರ ಇನ್ನೂ.

ಖೈದಿ—ಯೋನಯ್ಯಾ ಅಂಗದ್ರೆ?

ದಯಾನಂದ—ನಿನ್ನ ಆತ್ಮ. ನನ್ನ ದೇಹಕ್ಕಿಂತಲೂ ಹೆಚ್ಚಾದ—ಅಮಿತವಾದ ಬೆಲೆಯುಳ್ಳದ್ದು ಅದು! [ಅಡಿಗೆಯ ಮನೆಯ ಬಾಗಿಲಲ್ಲೇ ನಿಂತು ಗಟ್ಟಿಯಾಗಿ ಕೂಗುವನು] ಅಮ್ಮಾ! ಅಮ್ಮಾ!

[ಖೈದಿ ದಯಾನಂದನ ಹಿಂದೆ ಚೂರಿಯನ್ನು ಸಿದ್ಧವಾಗಿ ಹಿಡಿದುಕೊಂಡು ನಿಲ್ಲುವನು.]

ಲಕ್ಷ್ಮಮ್ಮ—[ಒಳಗಿನಿಂದ] ಏನೋ, ಮಗು?

ದಯಾನಂದ—ಏನಾದರೂ ಅನ್ನಗಿನ್ನ ಉಳಿದಿದ್ದರೆ ಒಂದಿಷ್ಟು ಕೊಡ್ತೀಯಾ? ಈತ ಯಾರೋ, ಪಾಪ, ಬಹಳ ಹಸಿದು ಬಂದಿದಾನೆ.

ಲಕ್ಷ್ಮಮ್ಮ—[ಒಳಗಿನಿಂದ] ಏನು? ಈ ಅವೇಳೇಲಿ ಯಾರೋ ಬಂದಿದಾನೆಯೆ? ಚೆನ್ನಾಯ್ತು ಈ ಕೆಲಸ! ಇನ್ನು ನನ್ನ ಕಣ್ಣಿಗೆ ಒಂದು ಕ್ಷಣ ನಿದ್ದೇನೂ ಬೇಡ ಅಂತಲೋ ನಿನ್ನ ಅಭಿಪ್ರಾಯ ಹೇಗೆ? ಬೀದೀಲಿ ಹೋಗೋ ಭಿಕಾರಿಗಳಿಗೆಲ್ಲಾ ಬೆಳಗೂ ಬೈಗೂ ಶುಶ್ರೂಷೆ ಮಾಡೋದು ಸಾಲದೆ ನಡುರಾತ್ರೀಲೂ ಎದ್ದು ಕೂತಿರಬೇಕು ಪಿಶಾಚಿಗಳ ಹಾಗೆ ಅಂದ್ರೆ ಯಾರ ಕೈಲಾಗುತ್ತೆ?

ದಯಾನಂದ—ಕೋಪ ಮಾಡಿಕೋಬೇಡಮ್ಮ. ಆತ, ಪಾಪ, ಬಹಳ ಹಸಿದಿರೋ ಹಾಗೆ ಕಾಣುತ್ತೆ.

ಲಕ್ಷ್ಮಮ್ಮ—ಏನು ಕಾಣುತ್ತೋ ಅಪ್ಪ! ಶ್ರೀ ಹರಿ! ಸೀತಾಪತಿ! ಉಸ್ಸಪ್ಪ! ಯಾವಾಗಪ್ಪ ನಾ ನಿನ್ನ ಪಾದ ಸೇರ್‍ಕೊಳ್ಳೋದು? [ಎಂದು ಗೊಣಗುತ್ತಾ ಕೈಯಲ್ಲೊಂದು ಪಾತ್ರೆಯನ್ನು ಹಿಡಿದುಕೊಂಡು ಬಂದು ಅಡಿಗೆಯ ಮನೆಯ ಬಾಗಿಲಲ್ಲಿ ನಿಂತು ಖೈದಿಯ ಕೈಯಲ್ಲಿರುವ ಚೂರಿಯನ್ನು ಕಂಡು ಬೆಚ್ಚಿ, ನಡುಗುತ್ತಾ] ಅಯ್ಯೋ! ಅಲ್ಲಿ ನೋಡೋ, ಮಗು! ಅದೇನೋ ಅದು ಅವನ ಕೈಯಲ್ಲಿ? ಚೂರಿ ಯಾತಕ್ಕಂತೋ ಅವನಿಗೆ?

ದಯಾನಂದ—ಹೆದರಬೇಡಮ್ಮ. ಅದರಿಂದ ನಮಗೇನೂ ಅಪಾಯವಿಲ್ಲ. ನಮ್ಮನ್ನೇನು ಮಾಡ್ತಾನೆ ಆತ, ಪಾಪ?

ಲಕ್ಷ್ಮಮ್ಮ—[ಮೆಲ್ಲನೆ ದಯಾನಂದನ ಕಿವಿಯಲ್ಲಿ] ಮಗು ನಂಗೇನೋ ಬಹಳ ದಿಗಿಲಾಗುತ್ತೆ ಕಣೋ. ಒಳ್ಳೆ ಹಸಿದ ಹುಲಿ ನೋಡಿದ ಹಾಗೆ ನೋಡ್ತಾ ಇದಾನಲ್ಲೋ ನಮ್ಮಿಬ್ಬರ್‍ನೂ ಅವನು!

ಖೈದಿ—ನಿಮ್ಮ ಮಾತಿಗೆ ಬೆಂಕಿ ಇಟ್ಟರು! ತಿನ್ನಾಕೆ ಯೋನಾರಾ ಕೊಡ್ತಿರೋ ಯಮನತಾಕೆ ಕಳಸ್ಲೋ ಇಬ್ಬರ್‍ನೂ?

ದಯಾನಂದ—ಆ ತಪ್ಪಲೆ ಕೊಡಮ್ಮ ನನ್ನ ಕೈಗೆ ಇಲ್ಲಿ [ಎಂದು ಅವಳ ಕೈಯಲ್ಲಿರುವ ಪಾತ್ರೆಯನ್ನು ತೆಗೆದುಕೊಂಡು] ಇನ್ನು ನೀನು ಮಲಕ್ಕೋ ಹೋಗಮ್ಮ ಹಾಯಾಗಿ. ಈತನಿಗೆ ನಾನೇ ಎಲೆ ಹಾಕಿ ಬಡಿಸ್ತೇನೆ.

[ಲಕ್ಷ್ಮಮ್ಮ ಅಡಿಗೆಮನೆಯನ್ನು ಪುನಃ ಪ್ರವೇಶಿಸ ಹೋಗುತ್ತಾಳೆ. ಅಷ್ಟರಲ್ಲಿ ಖೈದಿ ಮುಂದಕ್ಕೆ ನುಗ್ಗಿ ಅವಳಿಗೆ ಅಡ್ಡವಾಗಿ ನಿಲ್ಲುತ್ತಾನೆ.]

ಖೈದಿ—ನಿಲ್ಲು! ನಾನಿಲ್ಲಿರಾವರೆಗೂ ನೀನಾಗಲಿ ಅವನಾಗಲಿ ಇಲ್ಲಿಂದ ಕದಲಕೂಡದು!

[ಲಕ್ಷ್ಮಮ್ಮ ದಯಾನಂದನನ್ನು ನೋಡುವಳು]

ದಯಾನಂದ—ಅಮ್ಮ, ಒಬ್ಬನೇ ಊಟಮಾಡೋಕೆ ಈತನಿಗೆ ಬೇಜಾರು ಅಂತ ಕಾಣುತ್ತೆ. ನೀನೂ ಸ್ವಲ್ಪ ಹೊತ್ತು ಇಲ್ಲೇ ಕೂತಿದ್ದು ಮಾತಾಡ್ತಾ ಇರಮ್ಮ, ಪಾಪ. ಅದರಿಂದ ಆತನ ಮನಸ್ಸಿಗೆ ಎಷ್ಟೋ ಸಂತೋಷವಾಗುತ್ತೆ.

ಲಕ್ಷ್ಮಮ್ಮ—[ಇಷ್ಟವಿಲ್ಲದಿದ್ದರೂ ಬಲವಂತಕ್ಕೆ ಕುಳಿತುಕೊಳ್ಳುವವಳ ಹಾಗೆ ಮುಖ ಮಾಡಿಕೊಂಡು] ಆಗಲಪ್ಪ! ಇನ್ನೇನು ಮಾಡೋದು? [ಎಂದು ಅಡಿಗೆ ಮನೆ ಬಾಗಿಲಲ್ಲಿ ಕುಳಿತುಕೊಂಡು ಖೈದಿಯನ್ನೇ ಭಯದಿಂದ ನೋಡುತ್ತಿರುತ್ತಾಳೆ.]

ದಯಾನಂದ—ಅಮ್ಮ, ಮಣೆ ಎಲ್ಲಿದೆಯಮ್ಮ? ಪಾಪ, ಎಷ್ಟು ಹೊತ್ತಿನಿಂದ ನಿಂತಿದಾನೆ ಆತ.

ಖೈದಿ—ನಿನ್ನ ಮನೇನ ಸುಟ್ಟೆ! ಕೊಡಯ್ಯಾ, ಇಲ್ಲಿ ತಪ್ಪಲೇನ! ಜೈಲಿನಾಗೆ ಮಣ್ಣೆ ಅಕ್ಕಿ ಮುದ್ದಾಣ ತೋಗ್ಗಿ ಪೂಜೆಮಾಡಿವಾನ್ನಾರ್ನಿಮ್ಮನ್ನ? [ಎಂದು ತಪ್ಪಲೆಯನ್ನು ಕಿತ್ತುಕೊಂಡು ಅದರಲ್ಲಿರುವ ಅನ್ನವನ್ನು ಕೈತುಂಬಾ ತೆಗೆದುಕೊಂಡು ತಿನ್ನುತ್ತಾನೆ. ಅಷ್ಟರಲ್ಲಿ ಬೆಚ್ಚಿದವನಂತೆ] ಯೇನದು? [ಹಿಂದಿರುಗಿ ಬೀದಿಯ ಬಾಗಿಲ ಕಡೆಗೆ ನೋಡಿ, ಹೋಗಿ ಬಾಗಿಲನ್ನು ಮುಚ್ಚಿ ಬಂದು] ಬುದ್ದಿಗಿದ್ದಿ ಐತೋ ಇಲ್ಲೋ ನಿಮ್ಗೆ? ಬಾಕಲ್ನ ಅಂಗೆ ತ್ವರೆದಿದೀರಲ್ಲ! ಯ್ಯಾರಂದ್ರವರು ವಳಾಕೆ ನುಗ್ಲಿ ಅಂತ್ಲೇನು?

ದಯಾನಂದ—ಹೌದು. ಬೇಕಾದವರು ತಡೆ ಇಲ್ಲದೆ ಒಳಕ್ಕೆ ಬರಲಿ ಎಂತಲೇ ಹಾಗೆ ಬಾಗಿಲು ತೆರೆದಿಟ್ಟಿರ್ತೀನೆ ಯಾವಾಗಲೂ.

ಖೈದಿ—ವಳ್ಳೆ ಬೆಪ್ಪ ನೀನು! [ಎಂದು ಅನ್ನವನ್ನು ಬೆರಳುಗಳಿಂದ ಕೆದಕಿ ತೆಗೆದುಕೊಂಡು ತಿನ್ನುತ್ತಾ ನೆಲದ ಮೇಲೆಲ್ಲಾ ಅಗುಳುಗಳನ್ನು ಚೆಲ್ಲುತ್ತಾನೆ]

ಲಕ್ಷ್ಮಮ್ಮ—[ಆತ್ಮಗತ] ಅಯ್ಯೋ ನೆಲವೆ! ಬೆಳಗ್ಗೆ ತಾನೆ ಸಾರಿಸಿ ರಂಗೋಲೆ ಇಟ್ಟಿದ್ದೆ. ಕುಲಗೆಟ್ಟು ಹೋಯಿತು! ಎಂಜಲು ಮುಸುರೆ ಏನೂ ಇಲ್ಲ ಇವನಿಗೆ!

ಖೈದಿ—[ತೃಪ್ತನಾದವನಂತೆ] ಆಹಾಹಾಹಾ! ಶಂದಾಗೈತೆ! ಬಲು ಶಂದಾಗೈತೆ! ಯೇಟು ದಿನ ಆಗಿದ್ವೋ ಯೇನೋ ಇಂತ ಅನ್ನ ತಿಂದು! ಆಹಾಹಾಹಾ! [ಎಂದು ಕಡೆಯ ತುತ್ತನ್ನು ತಿಂದು ಪಾತ್ರೆಯನ್ನು ಒಂದು ಮೂಲೆಗೆ ಎಸೆದು, ದಯಾನಂದನಿಗೆ] ಕಳ್ರನ್ನ ಕಂಡ್ರೆ ಯದರಿಕ್ಯಾಗಲ್ಲೇ ನಿಂಗೆ?

ದಯಾನಂದ—ಹೆದರಿಕೆ ಏಕೆ? "ಅಯ್ಯೋ, ಪಾಪ!" ಅನ್ನಿಸುತ್ತೆ.

ಖೈದಿ—[ದಯಾನಂದನ ಉತ್ತರದಿಂದ ಆಶ್ಚರ್ಯಚಕಿತನಾದವನಂತೆ] "ಅಯ್ಯೋ, ಪಾಪ!" ಅನ್ನಿಸ್ತೈತಾ? ಕಳ್ರನ್ನ ಕಂಡ್ರೆ "ಅಯ್ಯೋ, ಪಾಪ!" ಅನ್ನಿಸ್ತೈತಾ? ಯಾರಪ್ಪ ನೀನು?

ದಯಾನಂದ—ನಿಮ್ಮಂಥವರ ದಾಸ. ಪರಮಾತ್ಮನ ಸೇವಕ.

ಖೈದಿ—ನಮ್ಮಂತಾರ ದಾಸ! ಯೇನಯ್ಯಾ ಅಂಗಂದ್ರೆ?

ದಯಾನಂದ—[ಲಕ್ಷ್ಮಮ್ಮನಿಗೆ] ಅಮ್ಮ, ನೀನು ಹೋಗಿ ಮಲಗಿಕೊ. ಈತ ಅವಕ್ಕೆ ಇನ್ನು ಆಕ್ಷೇಪಿಸಲಾರ ಅಂತ ಅಂದ್ಕೊಂಡಿದೇನೆ. ನಾವಿಬ್ಬರೇ ಇದ್ದರೆ ನಿಸ್ಸಂಕೋಚವಾಗಿ ಮಾತಾಡೋಕೆ ಅನುಕೂಲವಾಗುತ್ತೆ, ಹೋಗು.

ಲಕ್ಷ್ಮಮ್ಮ—ಇವನ ಹತ್ತಿರ ನಿಮ್ಮೊಬ್ಬರನ್ನೇ ಬಿಟ್ಟು—

ಖೈದಿ—ಹೋಗು ಅಂದ್ರೋಗ್ಬಿಡ್ಬೇಕು! ನನ್ನತ್ರ ಅವನೊಬ್ಬನ್ನೇ ಬಿಟ್ಟೋದರೆ ನಾನೇನವನ್ನ ತಿಂದಾಕ್ತೀನೆ? ವಳ್ಳೆ ಮುದಕಿ ನೀನು! ಊ! ನಡಿ! [ಲಕ್ಷ್ಮಮ್ಮ

ಎಲ್ಲಾ ಒಳಕ್ಕೆ ಹೋಗುವನು] ಹ! ಹ! ಹ! ನನ್ನಂಥಾ ದಾಸಿಗ್ಯಾಕೆ ಹೇಳು! ನಾ ಬರೋದ್. ಗೊತ್ತಿಲ್ಲವೇನು ನಿಂಗೆ?

ದಯಾನಂದ—ಬಾಳಿನಲ್ಲಿ ಕಾಣದಾದ ಕಷ್ಟಗಳನ್ನು ಅನುಭವಿಸಿ ಬರುವಾಗ ಸೊರಗಿದವನಂತೆ ಹಾಗೆ ಕಾಣುತ್ತೆ.

ಸ್ತ್ರೀ—[ದಯಾನಂದನ ಕಡೆಗೆ ದುರುಗುಟ್ಟಿ ನೋಡಿ ತಿರಸ್ಕಾರದಿಂದ] ಅನುಭವಿಸಿ, ನೀನು ಅಂತೀಯೇನಾ? ಯಾರಿಗೆ ಗೊತ್ತು? ನಂದ್ ದಿನವೋ, ಯಾರ್ದ್ ದಿನವೋ? ಈಗ ನಿನ್ನ ಅಂತ ಅಳೆಯುವವರಾರು ಇದಾರೆ? [ಒಂದು ಕ್ಷಣ ಸುಮ್ಮನಿದ್ದು] ಅದಕೆ, ಅಪ್ಪಂದ್ರು ಮುಂದಿಟ್ಟು ಬಿಟ್ಟರು ನನ್ನ . . . ಹ! ಹ! ಹ! ಆಗ ನಾನಿನ್ನೂ ಮಗು; ಅಷ್ಟು ಗೊತ್ತಿದ್ದಿಲ್ಲ. ಈಗ ನಾನು ಮಗಳ್ಯಾಕೆ ಅಲ್ಲ! ನಾನೊಂದು ನರಕ್ಕ ಆಗ! ಗೊತ್ತೇ! ನಾನು ಪಟ್ಟದಿಂದ ನರಕಕ್ಕಾಗಿ ಬಾಳ್ತಿ ನಡಿಸ್ತೀನಿ!

ದಯಾನಂದ—[ಮರುಕದಿಂದ] ಹೇಳು, ಆ ನರಕದ ವಿಷಯ ಹೇಳು ನನಗೆ.

ಸ್ತ್ರೀ—ಯಾಕೆ? [ಅನುಮಾನದಿಂದ] ಪೋಲೀಸಿನೋರಿಗೆ ಯಾರೋ ಇವರು ನನ್ನ ವ್ಯಭಿಚಾರಕ್ಕಿಳಿಸಿದ್ರು ಅಂಗೆ ಹೇಳ್ತಾನೇನು?

ದಯಾನಂದ—ಏನ್ಮಾಡಲಿ ಅಂತೀ? ನಾನೇಕೆ ಹೇಳಲಿ ಅವರಿಗೆ?

ಸ್ತ್ರೀ—[ಕಂಠವನ್ನೇ ಬಿಟ್ಟು ನೋಡಿ] ನಿನ್ನ ಮಾತಿನ್ಯಾಗೆ ನಂಬಿಕೆ ಬರ್ತಾ ಇಲ್ಲ! [ಹಣೆಯ ಮೇಲೆ ಕೈಯಿಟ್ಟು] ಯಾಕೋ ಕಾಣೆ! ನಂಗೇ ಗೊತ್ತಾಗ್ತಾ ಇಲ್ಲ!

ದಯಾನಂದ—[ಸ್ತ್ರೀಯ ಭುಜದ ಮೇಲೆ ಕೈಯಿಟ್ಟು] ಏನೂ ಸಂದೇಹವಿಲ್ಲದೇನೆ. ಹೇಳು—ನೀನು ಆ ನರಕಕ್ಕೆ ಹೋಗೋಕೆ ಮುಂಚೆ ನಡೆದ ಸಂಗತಿಯನ್ನು ಹೇಳು.

ಸ್ತ್ರೀ—ಬಲು ದಿನ ಆಯ್ತು. ಮರ್ತ್ಹೋಗಿದೀನಿ ಅನ್ನು ಅಂಗೆ ಅನ್ನಿಸ್ತೆ ಆದೆ. ನಂದು ನನ್ನ ಗುಡಿಸಲಿನಾಗಿದ್ದೆವು, ನಾನು, ನನ್ನೇಪ್ಪ, ತಾಯಿ, ಔರು—ತಾಯಿ ಇದ್ದೆವು ಆಗ! ಒಂದ್ ದಿನ ಅವಳಿಗೆ ಜಾಸ್ತಿ ಜ್ವರ ಬಂತು. ಔಷ್ಧಿ ಕೊಡಾನೇ ಬಿಡಾ ಅಂಗಾಯ್ತು. ಅವಳ ಬಾಯಿ ನೋಡ್ತಾ ಇದೆ ಯಾರಾದಾ ಆಸ್ಪತ್ರೆ ಅಂತಾಲು ಕೊಂಡು ತರಾಣ ಅಂತ ಕಲ್ಲನಕ್ಕೆ ಕೈ ಇಟ್ಟೆ. ಸಿಕ್ಕಿದ್ದೆ. ಯಾರಾ ಪೋಲೀಸ ಯಾಳಿಗೆ ಇಷ್ಟಾಗಿ—ಯಾಕೆ ಮೋಸದಿಂದ ಕದ್ದೆ ಅವತ್ತಿನ ದಿನ ಅಂತ ನ್ಯಾಯಕ್ಕೆ ಅಂತ. ಅವರು ನನ್ನ ಮನೆ ನೋಡಿ ನಕ್ಕುದಿನ್ನೂಂದೇ ಬರಲಾರದೆ! ಬಿಟ್ಟುಕೊಂಡು ಬರೋದಕ್ಕೆ! ಸುಳ್ಳಲ್ಲ ನಾನ್ನು, ಸ್ವಾಮಿ, ಯಾರಿಲ್ಲದಿದ್ದಾರೆ ಕಷ್ಟದಲ್ಲಿ ನನ್ನಾಗೆ ಬಿಟ್ಟು ಕೊಟ್ಟಿರುವುದು. ಇದ್ದು ಇದ್ದು ಅಂತ ಇದೊಂದು ನಾನಾ ಆಕ್ಕಿದರು. ಸತ್ತವರು ನನ್ನಕ್ಕೆ! ಅಲ್ಲೀಗೆ ಹೋದ ರಾತ್ರಿನೇ ಯಾರಲ್ಲ ಡ್ರೈವರ್ನ ಬರೋದು—ನನ್ನೇನು "ನರಕದಲ್ಲಿ" ಅಂತ. [ಮುಖ ಮುಚ್ಚಿ ಅಳುವಳು]

“ನೆಗದುಬಿದ್ಳ”ಂತೆ! ಅವನ ಮನೆತನ ಮಣ್ಣುಕ್ಕಿ! [ತಲೆಯನ್ನು ಕೈಗಳ ಮೇಲಿಟ್ಟುಕೊಂಡು ಜಗಲಿಯ ಮೇಲೆ ಕುಳಿತುಕೊಂಡು ಅಳುವನು.]

ದಯಾನಂದ—ಅಳಬೇಡ. ಈಗ ಅತ್ತು ಏನು ಪ್ರಯೋಜನ? ಹೇಳು—ಆಮೇಲೆ?

ಖೈದಿ—ಆಮ್ಯಾಲೆ! ಕಾಣಾದಿಲ್ಲೆ ಆಮ್ಯಾಲೇನಾತು ಅಂತ? ಮದಲು ನಾನೂ ವಬ್ಬ ಮಸುಸ್ನಾಗಿದ್ದೆ. ಈಗ—ಈಗ—ದನಕಿಂತ್ಲೂ ಕಡೆ! ಯಲ್ಲಾ ಅವರು ಮಾಡಿದ್ದು! ದನದ ಕ್ವಟ್ಟಿಗೆ ಅಂತ ಕ್ವಳಕಲು ಕ್ವಾಣ್ಯಾಗೆ ಕೂಡಿ ದನಾನ ಬಿಗದಂಗೇ ಬಿಗದ್ರು ದಿವಸಾ ಬಾರುಕೋಲಿನಿಂದ. ವಾಷಣೆ ಬಂದ್ರೆ ಮೂಗು ಮುಚ್ಚಿಗಾ ಬೇಕು—ಅಂತಾ ಅನ್ನ ಕೊಟ್ಟರು. ಅದೂ ಅರವೊಟ್ಟೆ! ಯೋನಾರಾ ಕಮಕ್ ಕಿಮಕ್ ಅಂದ್ರೆ, ತಂದು ಅನ್ನು ಮತ್ತೆ ಬಾರುಕೋಲ್ನ! ಅಯ್ಯೋ! ಅಯ್ಯೋ! ಅಯ್ಯೋ! ಯೋಟು ಕಸುವಿತ್ತು ನನ್ನ ಮೈಯಾಗೆ! ಯಲ್ಲಾ ಓತು! ವುಲಿ ಅಂಗಿದ್ದಾನು ಇಲಿಮರೀ ಅಂಗಾಗಿಬಿಟ್ಟೆ! ನನ್ನ ನೋಡ್ಕಂಡ್ರೆ ನಂಗೇಯಸನಾ ಗ್ತೈತೆ! ನಾಕು ವರ್ಸಾ! ವಂದಲ್ಲ, ಯಳ್ಡಲ್ಲ, ಮೂರಲ್ಲ—ನಾಕು! ನನ್ನ ಕಸುವಂಗಿರ್ಲಿ; ನನ್ನ ಯಸರು ಕೂಡ ವರೆಸಾಕಿದ್ರು! ನನ್ನೆಸ್ರು ನಂಗೇ ಮರ್ತ್ಹೋಗಾ ಅಂಗ್ಮಾಡಿದ್ರು! ಮನ್ಸರ ಗುಣಾನೇ ಇಲ್ದಂಗೆ ಮಾಡಿದ್ರು ನನ್ನಾವ! . . . ಮನ್ನೀನಾಗ ಕೂಡಾಕಾದು ಮರ್ತುಬಿಟ್ರು ಅವರು ನನ್ನ. ತಗೋ—ತಪ್ಪಿಸ್ಗಂಡು ಓಡ್ದೆ! ಮೂರುದಿನಾತು ಈಗ ಮತ್ತೆ ಯಲ್ಲಿ ಸಿಕ್ಕಿಬೀಳ್ತೀನೋ ಅನ್ನಾದೊಂದೇ ಯದರ್ಕೆ! ತಿನ್ನಾಕೆ ಬ್ಯಾರೆ ಇಲ್ಲ! ಜೈಲಿನಾಗೆ ನರಳಾದು ತಪ್ಪಿಸ್ಗಂಡು ಬಂದೆ ಅಂದ್ರೆ ವಟ್ಗಿಲ್ದೆ ವುಪಾಷಾ ಸಾಯಾಗತಿ ಬಂದೈತೆ!

ದಯಾನಂದ—ಹಾಗಾದರೆ ಮೂರು ದಿನದಿಂದಲೂ ಏನೂ ಇಲ್ದೆ ಅಲೀತಾ ಇದೀಯಾ? ಅಯ್ಯೋ, ಪಾಪ!

ಖೈದಿ—ಊ! ನರಕದಾಗೆ ವತ್ತಿಗ್ಹೊತ್ತಿಗೆ ಅಳ್ಸಿದ್ರೋ ವುಳ್ಸಿದ್ರೋ ಅಂತೂ ವಂದೀಟು ಯೋನಾರಾ ಆಕೇ ಆಕ್ದಿದ್ರು. ಅಲ್ಲಿಂದ ತಪ್ಪಿಸ್ಗಂಡು ಸ್ವರ್ಗಕ್ಬಂದ್ರೆ ಗಾಳಿ ತಿಂದ್ಕಂಡಿರಬೇಕಾಗೈತೆ ಇಲ್ಲಿ! ಯಾರನ್ನ ಕೇಳಿದ್ರೂ “ಇಲ್ಲ” ಅಂತ ಅಟ್ಟಿಸ್ಗಂಡ್ಬರಾರೆ! ವುಡಾಕೆ ಆ ಜೈಲು ಬಟ್ಟೆ ಬಿಟ್ರೆ ಬ್ಯಾರೆ ಯೋನೂ ಇದ್ದಿಲ್ಲ. ಅದು ನನ್ಮ್ಯಾಗಿದ್ರೆ ಯಾರಿಗಾರಾ ಗುರ್ತು ಸಿಗಾದು ಕಂಡ್ತ ಅಂತ ಕಿತ್ತು ವಗ್ದು, ಯೊಲ್ಲೋ ವಂದ್ಕಡೆ ಈ ಪಂಚೇನೂ ಅಂಗೀನೂ ಕದ್ಕಂಡ್ಬಂದೆ. ನಾ ಇನ್ನೇನ್ಮಾಡಾಕಾದಾತು, ನೀನೇ ಯೋಳು. ನನ್ನ ಕಳ್ಳನ್ನ ಮಾಡಿದೋರೇ ಅವರು! ಅವರ ಮನೆ ನಾಸವಾಗಲಿ!

ದಯಾನಂದ—ಅಪ್ಪ, ಬಹಳ ನೊಂದವನು ನೀನು. ಆದರೂ ಧೈರ್ಯಗೆಡಬೇಡ.

ಎಂದಾದರೂ ಒಂದು ದಿನ ಈ ಕಷ್ಟವೆಲ್ಲಾ ಕಳೆದು ಸುಖ ಬಂದೇಬರುತ್ತೆ. ದೇವರು ಒಳ್ಳೇದು ಮಾಡೇಮಾಡ್ತಾನೆ. ನಂಬಿಕೆಯಿಂದಿರು.

ಖೈದಿ—ಸುಕ ಬರ್‍ತೈತಾ? ನಂಗೆ ಸುಕ? ನೀನೊಬ್ಬ ಸುದ್ದ ಬೆಪ್ಪ!

ದಯಾನಂದ—ಬಹಳ ದೂರ ನಡೆದು ಬಂದಿದೀಯ ಅಂತ ಕಾಣುತ್ತೆ. ಆಯಾಸ ವಾಗಿರಬೇಕು. ಇಗೋ—ಚಾಪೆ ಇದೆ. ಹಾಸಿಗೆ ತಂದ್ಕೊಡ್ತೇನೆ. ಮಲಗಿಕೊ ಮೈಕೈಯೆಲ್ಲಾ ಎಷ್ಟು ನೋಯ್ತಾ ಇದೆಯೋ ಏನೋ, ಪಾಪ!

ಖೈದಿ—ಯಾರಾರಾ ಬಂದುಗಿಂದ್ರೆ?

ದಯಾನಂದ—ಯಾರೂ ಬರೋಲ್ಲ. ಒಂದು ವೇಳೆ ಬಂದರೆ ತಾನೆ ಹೆದರಿಕೆ ಏನು? ನೀನು ನನ್ನ ಅತಿಥಿಯಲ್ಲವೆ? ನನ್ನ ಸ್ನೇಹಿತ? ನೀನು ಈ ಮನೇಲಿರೋವರೆಗೂ ಯಾರೊಬ್ಬರೂ ನಿನ್ನ ತಂಟೆಗೆ ಬರೋಲ್ಲ. ಆ ಯೋಚ್ನೇನೇ . . . ಬಿಟ್ಬಿಡು. ಹಾಸಿಗೆ ತರ್‍ತೇನೆ. ಬಂದ್ಬಿಟ್ಟೆ [ಎಂದು ತನ್ನ ಕೋಣೆಗೆ ಹೋಗುವನು.]

ಖೈದಿ—ನಾನು ಇವನ ಸ್ನೇಯಿತ್ನಂತೆ! ಶಂದಾಗೈತೆ ಇವನ್ಮಾತು! [ಎಂದು ಕೋಣೆಯಲ್ಲಿರುವ ಪದಾರ್ಥಗಳನ್ನು ಒಂದೊಂದಾಗಿ ನೋಡುತ್ತಾ ಜಗುಲಿಯ ಕೊನೆಯಲ್ಲಿ ಮೇಜಿನ ಮೇಲಿರುವ ಬೆಳ್ಳಿಯ ಕಟ್ಟಿನ ಫೋಟೋವನ್ನು ನೋಡಿ] ಯಾರ್‍ದೋ ಯಂಗ್ಸಿಂದು ಪಟ. ಯಾರೋ ಅವ್ಳು? ಅವ್ಳು ಯಾರಾದರೆ ನಂಗೇನು? ಆ ಕಟ್ಟು ನೋಡು—ಬೆಳ್ಳೀದಿರಾ ಅಂಗೈತೆ. [ಎಂದು ಅದನ್ನು ಕೈಯಲ್ಲಿ ತೆಗೆದುಕೊಂಡು] ಔದು! ನಿಜವಾಗ಼್ೂ ಬೆಳ್ಳೀನೇ! ಯೋಟು ದುಡ್ಡಾಗ್ತೈತೋ ಈಟು ದ್ವಡ್ಡ ಕಟ್ಟಿಗೆ? [ದಯಾನಂದ ಹಿಂದಿರುಗಿ ಬರುತ್ತಿರುವ ಸಪ್ಪಳವನ್ನು ಕೇಳಿ ಅವಸರದಿಂದ ಅದನ್ನು ಮೊದಲಿದ್ದ ಕಡೆಯೇ ಇಡುವನು.]

ದಯಾನಂದ—[ಬಂದು ಹಾಸಿಗೆಯನ್ನು ಎರಡು ಕೈಗಳಲ್ಲೂ ಹಿಡಿದುಕೊಂಡು ಪ್ರವೇಶಿಸಿ, ಅದನ್ನು ಚಾಪೆಯ ಮೇಲೆ, ಹಾಸಿ, ದಿಂಬು ಮತ್ತು ಹೊದ್ದಿಕೆಗಳನ್ನು ಸರಿಯಾಗಿಡುತ್ತಾ] ಏನು, ಫೋಟೋನ ನೋಡ್ತಿದ್ದೆಯಾ? ಅದು ನನ್ನ ಹೆಂಡತೀದು. ಅವಳಿರೋವಾಗ ಅದರ ಮೇಲೆ ಅವಳಿಗೆ ಪ್ರಾಣ. ಅವಳ ನೆನಪಿಗೋಸ್ಕರ ಇಟ್ಟುಕೊಂಡಿದೇನೆ ಅದನ್ನ ಇನ್ನೂ. ಇಲ್ಲದೆಹೋದರೆ ನಮ್ಮಂಥವರಿಗೆ ಈ ಅಲಂಕಾರವೆಲ್ಲಾ ಏಕೆ? ಇಗೋ ಹಾಸಿಗೆ ಹಾಸಿದೇನೆ. ಇನ್ನು ಮಲಗಿಕೊಂಡು ಹಾಯಾಗಿ ನಿದ್ದೆಹೋಗು. ಎಷ್ಟು ದಣಿದಿದ್ದೀಯೋ ಏನೋ, ಪಾಪ!

ಖೈದಿ—ಮಲಗ್ತೀನಿ ಆ . . . ವಂದು ಮಾತು . . . ನನ್ನ ಮ್ಯಾಗೆ ಈಟೊಂದ್ಯಲ್ಲಾ ದಯಾ ಯಾಕೆ ನಿಂಗೆ ಅಂತೀನಿ? . . . ಮೋಸಗೀಸ ಇಲ್ಲವಲ್ಲ? ನನ್ನ ಬುಟ್ಯಾಗ್ಕ್ಯಡವಾಕೆ ವುಪಾಯಾನೋ ಇದ್ಯಲ್ಲ?

ದಯಾನಂದ—ಎಲ್ಲಾದರೂ ಉಂಟೆ, ಅಪ್ಪ? ನೀನು ಆ ಅನುಮಾನಾನೇ ಇಟ್ಟುಕೋಬೇಡ. ಸುಖವಾಗಿ ನಿದ್ದೆಮಾಡು. ದೇವರು ಕಾಪಾಡ್ತಾನೆ.

ಕೈದಿ—ಓಹೋ ಹೋ! ದೇವರು ಕಾಪಾಡ್ತಾನೋ? ನೀನೊಬ್ಬ ಬೆಪ್ಪ! ...ಆ! ಈಗ ಗೊತ್ತಾತು! ನಂಗೂ ನಿನ್ನಂಗೇನೇ ದೇವ್ರುದಿಂಡ್ರು ಅಂದ್ರೆ ಬಕ್ತಿ ಬರ್ಸಾಕೆ ಈಟ್ಯೆಲ್ಲಾ ಮಾಡ್ತಿರಾದು ನೀನು ಅಂತ ಕಾಣ್ತೈತೆ. ಈಗ್ಲೆ ಯೋಳಿಬಿಡ್ತೀನಿ—ಅಂತ ಆಸೆಯೋನಾರಾ ಇದ್ರೆ ಬಿಟ್ಬಿಡು. ಅದ್ರಿಂದ ಯೋನೂ ಉಪಯೋಗಿಲ್ಲ. ಆ ಬ್ಯಾಳಿ ನನ್ನಾವ ಬೇಯಾಕಿಲ್ಲ! ದೇವ್ರುಗೀವ್ರು ಅಂದ್ರೆ ನಂಗಾಗಲ್ಲ. ದೇವ್ರಂತೆ ದೇವ್ರು! ಯಾವಾನವ್ನು ದೆವ್ವ!

ದಯಾನಂದ—ಕಷ್ಟದಲ್ಲಿರೋರನ್ನ ಕಂಡರೆ ಆತನಿಗೆ ಅಪಾರವಾದ ಪ್ರೀತೀನಪ್ಪ.

ಕೈದಿ—ಊಹೂ! ಈ ಗಿಲೀಟ್ಯೆಲ್ಲಾ ನನ್ನಾವ ನಡೆಯಾಕಿಲ್ಲ ಅಂತ ಅಂದ್ಬಿಟ್ನ್ಯೆಲ್ಲಾ ವಂದೇ ಮಾತ್ಗೇ! ಸುಮ್ಕಿರು ಇನ್ನು! ಪಿರೀತಿನಂತೆ, ಪಿರೀತಿ! ಕಳ್ಳಸೂಳೆಮಗ! ಪಿರೀತಿ ಇರಾನಾಗಿದ್ರೆ ಯೋನೂ ಅರೀದಾನಿಗೆ ನಂಗ್ಯಾಕೀಟು ಕಷ್ಟ ಕೊಟ್ಟ ಅವನು?

ದಯಾನಂದ—ಕಷ್ಟ ಕೊಡೋನೂ ಅವನೇ, ಸುಖ ಕೊಡೋನೂ ಅವನೇ. ಎಲ್ಲಾ ಅವನ ಲೀಲೆ!

ಕೈದಿ—ಸಾಕು, ನಿಲ್ಸು ನಿನ್ನ ಪುರಾಣಾನ! ಲೀಲೆ ಅಂತೆ ಲೀಲೆ! ಅವನ ಲೀಲೆ ಅವನ್ನಾವ್ಲೇ ಇರ್ಲಿ!

ದಯಾನಂದ—ಹೋಗಲಿ; ಬಹಳ ಹೊತ್ತಾಯ್ತು; ಮಲಗಿಕೊಂಡು ನಿದ್ದೆ ಮಾಡು.

ಕೈದಿ—[ಗೊಣಗುವ ಧ್ವನಿಯಲ್ಲಿ] ಮಾಡ್ತೀನಿ. [ಹಾಸಿಗೆಯ ಮೇಲೆ ಕುಳಿತುಕೊಂಡು ಬೀದಿಯ ಬಾಗಿಲ ಕಡೆ ನೋಡುತ್ತಾ] ಯಾರೂ ಬರಲ್ಲಲ್ಲಾ?

ದಯಾನಂದ—ಯಾರೂ ಇಲ್ಲ. ಇಷ್ಟರಮೇಲೆ ಬಂದರೆ ತಾನೇ ಭಯವೇನು? ನೀನೇ ಬಾಗಿಲು ಮುಚ್ಚಿ ಬಂದಿದೀಯಲ್ಲ!

ಕೈದಿ—ಬಾಕಲು ಬಲವಾಗೈತೆ ತಾನೇ? ಇನ್ನೂ ದಪ್ಪಗಿರಾ ಬಾಕ್ಲ ಒಡಿಸ್ಗಳಾಕಾಗ್ತೆ ನಿನ್ಕೈಲಿ? [ಎಂದು ಎದ್ದು ಹೋಗಿ ಬೀದಿಯ ಬಾಗಿಲನ್ನು ಪರೀಕ್ಷಿಸಿ ಬಂದು] ಇರ್ಲಿ! ಇನ್ನು ಮಲಗ್ತೀನಿ. ನೀನೂ ಹೋಗಿ ಮಲಗು. ಈ ಕ್ವಾಣ್ಯಾಗೆ ನನ್ನ ವಬ್ಬ ಇನ್ಯಾರೂ ಇರಾಕಾಗ್ದು!

ದಯಾನಂದ—ಹಾಗೇ ಆಗಲಿ. ನಿನ್ನ ಮನಸ್ಸಿಗೆ ಒಪ್ಪಿಗೆಯಾದರೆ ಸರಿ! [ಎಂದು ಒಳಕ್ಕೆ ಹೋಗುವನು]

ತ್ರೈದಿ—[ದಯಾನಂದ ಮರೆಯಾದ ಕೂಡಲೆ ಇನ್ನೊಮ್ಮೆ ಬೀದಿಯ ಬಾಗಿಲ ಬಳಿಗೆ ಹೋಗಿ ಅದನ್ನು ಪರೀಕ್ಷಿಸುವನು. ಹಿಂದಿರುಗುವಾಗ ಅವನ ದೃಷ್ಟಿ ಬೆಳ್ಳಿಯ ಫೋಟೋ ಕಟ್ಟಿನ ಮೇಲೆ ಬೀಳುವುದು. ದೂರದಿಂದಲೇ] ಹೂ! ಇನ್ನೊಂದ್ಸಟ್ಟೆ ಕೈಗೆ ತಗಂಡು ನೋಡ್ತೀನಿ ಅದನ್ನ! [ಎಂದು ಅದು ಇರುವ ಸ್ಥಳಕ್ಕೆ ಹೋಗಿ, ಅದನ್ನು ಕೈಗೆ ತೆಗೆದುಕೊಂಡು ತೂಕಮಾಡುವವನಂತೆ ಕೈಯನ್ನು ಮೇಲಕ್ಕೂ ಕೆಳಕ್ಕೂ ತೂಗುತ್ತಾ] ಜೋಟು ರೂಪಾಯಾಗ್ತಾವೋ ಇದ್ಕೆ! ನೂರರ ವಸ್ಯಾಗೇ ಇರಾ ಅಂಗೆ ಕಾಣ್ಸೈತೆ, ನೋಡಿದ್ರೆ! ಮಾರಿದರೆ ಆ ದುಡ್ಡಿಗೆ ಯೋನಾರಾ ವಲ ಗಿಲ ಕೊಂಡ್ಕಂಡು ವಬ್ಬ್ರ ಅಂಗಿಲ್ಲದೆ ಇರಬೌದು . . . ಪಾಪ, ಆ ವಜ್ಜ ಇದನ್ಕಂಡ್ರೆ ತಂಗೆ ಪರಾಣ ಅಂದ. ಅವನೇನ್ತೆ ಗುರ್ತಿಗಿಟ್ಗಂಡದಾನಂತೆ ಇದ್ನ! ಅವನೇನ್ತೆ! ನನ್ನ ಜೈಲುಕಾನೀಗೆ ಕಳಿಸಿದಾಗ ನನ್ನ ಪಣ್ತೆ ಇಶಾರ ಯಾರ ಮನಸ್ಗೂ ಬರ್ಲೇ ಇಲ್ಲ. ಅಲ್ಲೆ ××× ಪಾಪ, ಇವನು ನಂಗೆ ವಳ್ಳೆ ಮಾತಾಡಿ ಅನ್ನ ಕೊಟ್ಟು ವುಪ್ಕಾರ ಮಾಡ್ದ. ಅದೇನೋ ನಿಜವೇ. ಆದರ್, ಅವ್ನೇ ಯೋಳಿದ್ನಲ್ಲ—ತಾನು ನನ್ನಂತಾರ ಸೇವಕ ಅಂತ. ಅಂದಮ್ಯಾಗೆ ಅವನಿರಾದೇ ಇಂತ ಕ್ಯಲ್ಸಕೆ ಅಂತ ಆತು. ನನ್ನ ನಲುವಾಗಿ ಮಾಡಿದ್ನೆ ಅವನು ಒಟ್ಲಿಲ್ಲಾ? ತಂಗೆ ವುಣ್ಯಾ ಬರ್ತೈತೆ ಅನ್ನಾ ಆಸೆಯಿಂದ ಮಾಡಿರ್ತಾನೆ. . . . ಅರೆರೆರೇ, ಇದೇನಿದು, ನನ್ಮನ್ಸು ಇಂಗೆ ಮ್ಯತ್ಗಾಗ್ತಾಐತೆ? ೧೭೨೯ ಈಟು ಮ್ಯತ್ಗಾಗಿದಾನೆ, ನೂರಾರು ರೂಪಾಯಿನ ಸಾಮಾನು ಕೈಗೆ ಸಿಕ್ಕರೂ ತಗಂಡೋಗಾಕೆ ಇಂದ್ಮುಗೇತಾ ನಿಂತಿದ್ದ ಅನ್ನಾದು ಗೊತ್ತಾದ್ರೆ ಜೈಲಿನಾಗ್ನನ್ನ ಜತಿಯಾಗಿದ್ದಾರ್ಯಲ್ಲಾ ಕ್ಯಾಕೆ ಅಕ್ಕಂಡು ನಗಾಕಿಲ್ಲೆ ಈಟು ಕೈಲಾಗದಾನಾದ್ನೆ ಇವ್ನ ಅಂತ? ೧೭೨೯ ಇಂಗಾಗಾದುಂಟೆ? ಯೋನು ಜೋಜಿಗ! ಆವಜ್ಜನ ಮಸ್ಸಿಗೆ ಯನನಾಗ್ತೈತೆ ಅಂತ ಅಲ್ಲೆ? ಆದರಾತು! ನಂಗೆ ಯನನಾದಾಗ ಯಾರು ನೊಂದರು ನನ್ನ ನೋಡಿ? [ಬೆಳ್ಳಿಯ ಕಟ್ಟಿನಲ್ಲಿರುವ ಫೋಟೋವನ್ನು ಕಿತ್ತು ಕೆಳಕ್ಕೆಸೆದು, ಕಟ್ಟನ್ನು ಮಾತ್ರ ತೆಗೆದುಕೊಂಡು ಅಂಗಿಯಲ್ಲಿ ಮುಚ್ಚಿಟ್ಟುಕೊಂಡು, ಬೀದಿಯ ಬಾಗಿಲನ್ನು ತೆರೆದು ಹೊರಕ್ಕೆ ಹೋಗುವನು. ಅವನು ಹೋಗುವಾಗ ಬಾಗಿಲು ರಪ್ಪೆಂದು ಮುಚ್ಚಿಕೊಂಡು ಸದ್ದಾಗುತ್ತದೆ.]

ಲಕ್ಷ್ಮಮ್ಮ—[ಒಳಗಿನಿಂದ] ಯಾರು? ಯಾರವರು? ಇವತ್ತು ರಾತ್ರಿ ಎಲ್ಲಾ ನಾನು ನಿದ್ದೆ ಕೆಡಬೇಕು ಅಂತಲೋ ಏನು? ಯಾರದು? [ಎಂದು ಪ್ರವೇಶಿಸಿ] ಯಾರೋ ಬಾಗಿಲ್ನ ದಢಾರಂತ ನೂಕಿದ್ಹಾಗಾಯ್ತು! [ಸುತ್ತಲೂ ಪರೀಕ್ಷಿಸುವವಳಂತೆ ನೋಡಿ] ಇಲ್ಲಿ ಯಾರೂ ಇಲ್ಲ! [ನೆಲದ ಮೇಲೆ ಬಿದ್ದಿರುವ ಫೋಟೋ ಕಣ್ಣಿಗೆ ಬೀಳಲು ಅದನ್ನು ಕೈಗೆ ತೆಗೆದುಕೊಂಡು, ಅದಿದ್ದ ಮೇಜಿನ ಕಡೆಗೆ ನೋಡಿ] ಅಯ್ಯೋ! ಇದರ ಚೌಕಟ್ಟು ಏನಾಯಿತು? ಬೆಳ್ಳಿ ಚೌಕಟ್ಟು? ಇದ್ದದ್ದೊಂದು ಬೆಳ್ಳಿ ಪದಾರ್ಥ ಅಂತ! ಅದೂ ಹೋಯಿತೋ!

[ದಯಾನಂದನ ಕೋಣೆಯ ಬಾಗಿಲಿಗೆ ನಡೆದು] ಮಗೂ! ಮಗೂ! ಇಲ್ಲಿ ನೋಡೋ—ಏನಾಗಿಹೋಗಿದೆ! ಎಂದೂ ಇಲ್ದೋನಿಗೆ ಇವತ್ತೇನೋ ಇಷ್ಟು ನಿದ್ದೆ? ಏಳಬಾರ್ದೇನೋ?

ದಯಾನಂದ—[ಪ್ರವೇಶಿಸಿ] ಏನಮ್ಮ ಅದು? ಏನಾಯ್ತು? ಯಾಕ್ಹೀಗೆ ಕೂಗಿಕೊಳ್ತಾ ಇದೀಯ?

ಲಕ್ಷ್ಮಮ್ಮ—ಓಡಿಹೋಗಿದಾನಲ್ಲೋ! ಆ ಹಸಿದ ಹುಲಿಹಾಗೆ ನೋಡ್ತಾ ಇದ್ದ ರಾಕ್ಷಸ ಓಡಿಹೋಗಿರೋದು ಕಾಣ್ಸೋಲ್ಲವೇನೋ? ನಿನ್ನ ಹೆಂಡತೀ ಫೋಟೋ ಇಟ್ಟಿದ್ದ ಬೆಳ್ಳಿಕಟ್ಟು ತಗೊಂಡ್ಹೋಗಿದಾನೆ! ಇದ್ದದ್ದೊಂದು ಬೆಳ್ಳಿಪದಾರ್ಥ ಮನೇಲಿ! ಅದರದೂ ತೀರಿತೋ ಋಣಾನುಬಂಧ ಇವತ್ತಿಗೆ!

ದಯಾನಂದ—ಅದು ಅವನಿಗೆ ಸೇರೋದಿತ್ತು ಅಂತ ಕಾಣುತ್ತೆ. ಅದರಿಂದಲೇ ನಮ್ಮ ಋಣಾನುಬಂಧ ತೀರಿತಮ್ಮ ಅದಕ್ಕೆ. ಎಲ್ಲಾ ಪರಮಾತ್ಮನ ಲೀಲೆ! ಕೊಡೋನೂ ತಗೊಳ್ಳೋನೂ ಎಲ್ಲಾ ಅವನೇನಮ್ಮ. . . . ಆದರೂ . . . ಅನ್ಯಾಯ! [ಕಂಠ ಉಮ್ಮಳಿಸಿದವನಂತೆ] ಅವಳ ನೆನಪಿಗೋಸ್ಕರ ಇಟ್ಕೊಂಡಿದ್ದೆ ಇಷ್ಟು ದಿನಾನೂ ಅಷ್ಟು ಅಕ್ಕರೆಯಿಂದ ಅದನ್ನ. . . . ಅದೊಂದನ್ನ ಬಿಟ್ಟು ಇನ್ನೇನಾದರೂ ಒಯ್ಯಬಾರದಾಗಿತ್ತೆ ಅವನು!

ಲಕ್ಷ್ಮಮ್ಮ—ಈಗ ಒಯ್ದದ್ದಾಗಿಹೋಗಿದೆಯಲ್ಲೋ! ಹೋಗಿ ಪೋಲೀಸಿನೋರಿಗೆ ಹೇಳಬಾರದೇನೋ ತಕ್ಷಣ! ಇನ್ನೂ ಬಹಳ ದೂರವೇನೂ ಹೋಗಿರಲಾರ ಅವ್ನು. ಇಲ್ಲೇ ಎಲ್ಲೋ ಅವಿತ್ಕೊಂಡಿರ್ತಾನೆ. ದೇವರ ದಯದಿಂದ ಅವರು ಅವನ್ನ ಹಿಡಿದರೆ ನಿನ್ನ ಫೋಟೋ ಕಟ್ಟು ನಿಂಗೇ ಸಿಕ್ಕುತ್ತೆ. ಇಷ್ಟುಬೇಗ ಇನ್ನೇನು ಮಾಡಿದ್ದಾನು ಅವನು ಅದನ್ನ? . . . ಆದರೂ—ನಿನ್ನಂಥವನಿಗೆ ಅಂಥಾ ಪದಾರ್ಥ ಯಾತಕ್ಕೆ ಬೇಕು ಅನ್ನಿಸುತ್ತೆ ನೋಡು, ನನಗೆ! ಅವನ್ನೊಬ್ಬನ್ನೇ ಇಲ್ಲಿ ಬಿಟ್ಟು ನೀನು ಒಳಗ್ಹೋಗಿ ಮಲಗಿದೀಯಲ್ಲಾ—ಏನ್ಹೇಳ್ಲಿ ನಿನ್ನ ಬುದ್ಧೀಗೆ!

ದಯಾನಂದ—ಹೌದಮ್ಮ, ನೀನ್ಹೇಳೋದು ನಿಜ. ನನಗೆ ಬುದ್ಧಿ ಇರಲಿಲ್ಲ ಅಂತ ಈಗ ಗೊತ್ತಾಗ್ತಾ ಇದೆ ಚೆನ್ನಾಗಿ. ನಾನು ಅದರ ವಿಚಾರದಲ್ಲಿ ಅಷ್ಟು ಆಸಕ್ತಿ ಇಟ್ಕೊಂಡಿದ್ದದ್ದು ಬುದ್ಧಿಗೇಡಿತನವಲ್ಲದೆ ಇನ್ನೇನು? ಅದನ್ನು ನಾನು ಅಷ್ಟು ಅಭಿಮಾನದಿಂದ ಇಟ್ಟುಕೊಂಡಿದ್ದದ್ದರಿಂದ ಪಾಪ ಅವನಿಗೆ ಅದನ್ನು ಕದೀಬೇಕು ಅನ್ನೋ ದುರಾಸೆ ಬರೋದಕ್ಕೆ ಕಾರಣವಾಯಿತು. ನಾನು ಕೆಟ್ಟಿದ್ದಲ್ದೆ ಅವನ್ನೂ ಕೆಡಿಸಿದ್ಹಾಗಾಯ್ತು ನಾನು!

ಲಕ್ಷ್ಮಮ್ಮ—ಸಾಕ್ಕಣೋ ನಿನ್ನ ವೇದಾಂತ! ತಾನು ಕೆಟ್ಟಿದ್ದಲ್ದೆ ಅವನ್ನೂ

ಕೆಡಿಸಿದನಂತೆ! ನೀನೇ ಅಲ್ಲವೆ ಅವನ್ನ ಕೆಡಿಸಿದವನು? ಕಳ್ಳ ಸೂಳೀಮಗ, ಎಷ್ಟು ಮನೆಗಳ್ನ ಹಾಳುಮಾಡಿ ಬಂದಿದ್ದನೋ ಹೀಗೆ! ಅವನ್ನ ನೋಡ್ತಿದ್ದಾಗೇನೇ ಅಂದ್ಕೊಂಡೆ ನಾನು—ಇವನ ಸಹವಾಸ ಸರಿಯಲ್ಲ ಅಂತ! ನಾನೇನಂದ್ಕೊಂಡ್ರೆ ಏನು ಈ ಮನೇಲಿ, ನಿನ್ನ ದಾರೀನೇ ನಿನಗಾಗಿರೋವಾಗ? . . . ಹೋಗೋ—ಈಗಲಾದರೂ ಹೋಗಿ ಪೋಲೀಸಿನವರಿಗೆ ಒಂದು ಮಾತು ತಿಳಿಸಿ ಬಾ, ಹೋಗೋ!

ದಯಾನಂದ—ಅವರಿಗ್ಯಾಕಮ್ಮ ತಿಳಿಸೋದು?

ಲಕ್ಷ್ಮಮ್ಮ—ಅವರಿಗ್ಯಾಕೆ ತಿಳಿಸೋದೆ? ಸಾರ್ಥಕವಾಯ್ತು ನಿನಗೆ ವಯಸ್ಸು ಬಂದು! ಈಗೇನು ನೀನು ಹೋಗ್ತೀಯೋ ನಾನೇ ಹೋಗಲೋ? [ಎಂದು ಬೀದಿಯ ಬಾಗಿಲ ಕಡೆಗೆ ಹೆಜ್ಜೆಯಿಡುವಳು].

ದಯಾನಂದ—[ಲಕ್ಷ್ಮಮ್ಮನನ್ನು ತಡೆದು] ಹೋಗಿ ಏನು ಮಾಡ್ತೀಯಮ್ಮ? ಪೋಲೀಸಿನವರಿಗೆ ಹೇಳಿ ಅವರು ಮತ್ತೆ ಅವನ್ನ ಜೈಲಿಗೆ ಹಾಕೋಹಾಗೆ ಮಾಡ್ತೀಯ, ಅಷ್ಟೆ! ಮತ್ತೆ ಜೈಲಿಗೆ! ನರಕಕ್ಕೆ! ಬೇಡಮ್ಮ! ಬೇಡಿಕೋತೇನೆ, ಸುಮ್ನಿರು! ಅದು ಅವನ ತಪ್ಪಲ್ಲ! ನನ್ನ ತಪ್ಪು! ಅದರ ವಿಚಾರದಲ್ಲಿ ಅಷ್ಟೊಂದು ಮಮತೆ ತೋರಿಸಿದ್ದಕ್ಕೆ ಸರಿಯಾದ ಶಿಕ್ಷೆ ಆಯಿತು ನನಗೆ!

ಲಕ್ಷ್ಮಮ್ಮ—ನಿನಗ್ಯಾಕಾಗುತ್ತೆ ಶಿಕ್ಷೆ? ನನಗಾಗ್ತಾ ಇದೆ ನಿನ್ನಂಥ ಮನೆಹಾಳನ್ನ ಹೆತ್ತದ್ದಕ್ಕೆ. ಪ್ರತಿ ದಿವಸವೂ ಇಂಥಾದ್ದೇನಾದರೂ ಬಂದನ್ನ ಕಣ್ತುಂಬ ನೋಡಿ ಕೊಂಡಿರು ಅಂತ ಆಯಸ್ಸು ಕೊಟ್ಟಿದಾನಲ್ಲ ದೇವರು—ಇದಕ್ಕಿಂತ ಶಿಕ್ಷೆ ಬೇಕೆ ಇನ್ನು? ಅಯ್ಯೋ, ಗ್ರಹಚಾರವೆ? ಹಾಲುಕುಡಿಯೋ ಹಸುಳೆಗಳಾದರೂ ವಾಸಿ ನಿನಗಿಂತಲೂ ಅಂತ ಕಾಣುತ್ತೆ! ಒಳ್ಳೇನೂ, ಒಳ್ಳೇನೂ, ಧರ್ಮರಾಯ, ಸಾಧು ಅಂತ ಎಲ್ಲರೂ ಚಳ್ಳೇ ಹಣ್ಣು ತಿನ್ನಿಸೋರೇ ಆಗಿದಾರೆ ನಿನಗೆ! ನನ್ನ ಕೈಲಾಗೋದಿಲ್ಲ ಇದನ್ನೋಡಿಕೊಂಡಿರೋಕೆ! ಇಷ್ಟು ದಿವಸ ಇದ್ದದ್ದೇ ಸಾಕು! ನೀನು ಹೋಗದೆ ಇದ್ದರೆ ನಾನೇ ಹೋಗಿ ಹೇಳಿ ಬರ್ತೇನೆ ಪೋಲೀಸಿನವರಿಗೆ! [ಎಂದು ಬೀದಿಯ ಬಾಗಿಲ ಕಡೆಗೆ ನಡೆಯುವಳು.]

ದಯಾನಂದ—[ಸ್ವಲ್ಪ ಕಠಿಣವಾದ ಧ್ವನಿಯಲ್ಲಿ] ಅಮ್ಮಾ ಬೇಡ ಅಂದ್ರೆ ಕೇಳ್ಬೇಕು! ಆ ಫೋಟೋ ಕಟ್ಟು ಹಿಂದೆ ನನ್ನದಾಗಿತ್ತೆ ಹೊರ್ತು ಈಗ ಅದು ನನ್ನದಲ್ಲವೇ ಅಲ್ಲ! ಈಗ ಅದು ಅವನ್ದು! ಇದು ನನ್ನದು ಇದು ಅವನದು ಅಂತ ಭೇದ ಮಾಡೋಕೆ ನಾವು ಯಾರು, ಎಲ್ಲಾ ದೇವರಿಗೆ ಸೇರಿರೋವಾಗ? ಇಷ್ಟು ದಿನ ಅದು ನನಗೆ ಬೇಕಾಗಿತ್ತು—ನನ್ನ ಹತ್ತಿರ ಇತ್ತು. ಈಗ ಅದರ ಅಗತ್ಯ ನನಗಿಂತಲೂ ಅವನಿಗೇ ಹೆಚ್ಚಾಗಿದೆ—ಆದ್ದರಿಂದಲೇ ದೇವರು ಅದನ್ನ ಅವನಿಗೆ ಕೊಟ್ಟಿದಾನೆ.

ಅದನ್ನು ಮತ್ತೆ ಹಿಂದಕ್ಕೆ ಪಡೆಯೋಕೆ ನನಗೇಸು ಅಧಿಕಾರ? ಇಲ್ಲಿ ಸುಮ್ಮನೆ ಅಲಂಕಾರಕ್ಕೆ ಕೂತಿರೋದಕ್ಕಿಂತಲೂ ಅವನ ಕೈಸೇರಿರೋದ್ರಿಂದ ಅದು ಹೆಚ್ಚು ಪ್ರಯೋಜನಕ್ಕೆ ಬರುತ್ತೆ ಅಂತ ಕಾಣುತ್ತೆ. ಅವಳಿದ್ದಿದ್ದರೆ ಈಗ ಅವಳೂ ಕೂಡ ನನ್ನ ಅಭಿಪ್ರಾಯಾನೇ ಅನುಮೋದಿಸ್ತಿದ್ದಳು ಅಂತ ನಾನು ಧೈರ್ಯವಾಗಿ ಹೇಳಬಲ್ಲೆ.

ಲಕ್ಷ್ಮಮ್ಮ—ಅದಿರಬಹುದೋ ; ಆದರೂ—

[ಬೀದಿಯ ಬಾಗಿಲು ತಟ್ಟಿದ ಸದ್ದಾಗುವುದು]

ಪೋಲೀಸು ಅಧಿಕಾರಿ—[ಹೊರಗಿನಿಂದ] ಸ್ವಾಮಿ ! ಸ್ವಾಮಿ !

ದಯಾನಂದ—ಯಾರು ? ಬನ್ನಿ ಒಳಕ್ಕೆ. ನೂಕಿ ಬಾಗಿಲ್ನ.

[ಪೋಲಿಸು ಅಧಿಕಾರಿ ಬಾಗಿಲನ್ನು ಹಿಂದಕ್ಕೆ ನೂಕಿ ಮೊದಲು ಪ್ರವೇಶಿಸುವನು. ಅವನ ಹಿಂದೆ ಇಬ್ಬರು ಪೋಲೀಸಿನವರು ಖೈದಿಯನ್ನು ಹಿಡಿದುಕೊಂಡು ಬರುವರು. ಅವನ ಮುಂಗೈ ಗಳೆರಡಕ್ಕೂ ಕಬ್ಬಿಣದ ಸಂಕೋಲೆಗಳನ್ನು ತೊಡಿಸಿರುತ್ತಾರೆ. ಒಂದೊಂದು ಕಡೆ ಒಬ್ಬೊಬ್ಬ ಪೋಲೀಸಿನವನು ಹಿಡಿದಿರುತ್ತಾನೆ.]

ಲಕ್ಷ್ಮಮ್ಮ—[ಖೈದಿಯನ್ನು ನೋಡಿ ಸಂತೋಷದಿಂದ ಮುಖ ಅರಳಿಸಿ] ಋಣಪಾತಕ ಮುಂಡೇಮಗನೆ, ಹಿಡಿದರಲ್ಲ ನಿನ್ನ ! ಸದ್ಯ !

ಪೋಲೀಸು ಅಧಿಕಾರಿ—ಹೌದಮ್ಮ, ರಸ್ತೆ ಪಕ್ಕದಲ್ಲಿ ಮರಗಳ ಮಧ್ಯೆ ಕತ್ತಲೇಲಿ ಗುಳ್ಳೇನರಿ ಹಾಗೆ ಹೋಗ್ತಾ ಇದ್ದ—ಸುಳುವು ಸಿಕ್ಕದಿರಲಿ ಯಾರಿಗೂನೂ ಅಂತ. ನಾನು ಎಂಥೆಂಥಾ ಕಳ್ಳರ್ನೋ ಕಂಡೋನು ; ಇವನ ನಟನೇಗೆಲ್ಲಾ ಮೋಸಹೋಗಿ ಬಿಡ್ತೇನೆಯೆ ? ನೀನು ಯಾರು ಎತ್ತ ಅಂತ ಕೇಳಿದ್ದಕ್ಕೆ ಒಂದು ಪ್ರಶ್ನೆಗೂ ಸರಿಯಾದ ಜವಾಬು ಹೇಳಲಿಲ್ಲ. ಅನುಮಾನದ ಮೇಲೆ ಹಿಡಿದ್ಹಾಕಿದೆ. ಓಹೋಹೋಹೋ ! ಏನು ಬಲ ಅಂತೀರಿ ಈ ಖದೀಮನ್ದು ! ಕೈಯಿ ಕಾಲು ಎಷ್ಟು ಬಡಿದಾಡಿದ ಅಂತ ! ಕೈಗೆ ಸರಪಳಿ ತೊಡಿಸೋವಾಗ ಒಂದು ಸಾರಿ ಮೊಣಕೈಯಿಂದಲೇ ಗುದ್ದಿದ ಇವನ ಪಕ್ಕೇಗೆ [ಎಂದು ಖೈದಿಯನ್ನು ಹಿಡಿದಿದ್ದ ಒಬ್ಬ ಪೋಲೀಸಿನವನನ್ನು ತೋರಿಸುತ್ತಾನೆ.] ಪಾಪ, ತತ್ತರಿಸಿಕೊಂಡು ಬಿದ್ದೇಹೋದ ಇವನು ನೆಲಕ್ಕೆ. ಆದರೂ ಬಿಡ್ಲಿಲ್ಲ, ಸ್ಟೇಷನ್ನಿಗೆ ಕರ್ಕೊಂಡು ಹೋಗಿ ನಾಲ್ಕು ಬಿಗಿದು, ಬಟ್ಟೆಬರೆ ಎಲ್ಲಾ ಶೋಧಿಸಿದಾಗ ಈ ಫೋಟೋಕಟ್ಟು ಹೊರಕ್ಕೆ ಬಿತ್ತು ಅವನ ಅಂಗೀ ಒಳಗಿನಿಂದ. [ಅದನ್ನು ಲಕ್ಷ್ಮಮ್ಮನ ಕೈಗೆ ಕೊಡುತ್ತಾನೆ. ಆಕೆ ಅದನ್ನು ತೆಗೆದುಕೊಂಡು ಹಿಗ್ಗಿನಿಂದ ಅದನ್ನೇ ನೋಡುತ್ತಾ, ಸೀರೆಯ ಸೆರಗಿನಿಂದ ಅದರ ಮೇಲಿರಬಹುದಾದ ಕೊಳೆಯನ್ನು ಒರೆಸುತ್ತಾಳೆ [ಅಧಿಕಾರಿ ಮಾತನ್ನು ಮುಂದುವರಿಸುತ್ತಾನೆ] ಇದನ್ನು ಎಷ್ಟೋ ಸಾರಿ ಇಲ್ಲಿ ನೋಡಿದ್ದದ್ದರಿಂದ ನಮ್ಮ

ಸ್ವಾಮಿಯವರದು ಅಂತ ತಕ್ಷಣ ಗುರುತ್ತು ಹಿಡಿದೆವು. ಇದನ್ನು ನಿಮಗೆ ತೋರಿಸಿ ಬಿಟ್ಟು ಮುಂದಿನ ಕ್ರಮ ಜರುಗಿಸೋಣ ಅಂತ ಇಲ್ಲಿಗೆ ಬಂದೆವು ಅವನ್ನೂ ಕರ್ಕೊಂಡು.

[ಇಷ್ಟು ಹೊತ್ತೂ ದಯಾನಂದನೂ ಖೈದಿಯೂ ಒಬ್ಬರನ್ನೊಬ್ಬರು ನೋಡುತ್ತಿರುತ್ತಾರೆ. ಖೈದಿಯ ಕಣ್ಣುಗಳಲ್ಲಿ ಒಂದು ರೀತಿಯ ಧಿಕ್ಕಾರದ ಭಾವನೆ ಕಂಡುಬರುತ್ತದೆ.]

ದಯಾನಂದ—ಯಾರ ಮೇಲೆ, ಇನ್ಸ್ಪೆಕ್ಟರೆ, ಕ್ರಮಜರುಗಿಸೋದು? ಈತ ನನ್ನ ಸ್ನೇಹಿತ.

ಪೋಲೀಸು ಅಧಿಕಾರಿ—ಇವನು ನಿಮ್ಮ ಸ್ನೇಹಿತನೆ? ಎಲ್ಲಾದರೂ ಉಂಟೆ, ಸ್ವಾಮಿ?

ದಯಾನಂದ—ಹೌದು, ಇನ್ಸ್ಪೆಕ್ಟರೆ. ರಾತ್ರಿ ನಮ್ಮ ಮನೆಗೆ ಬಂದಿದ್ದ. ಇಲ್ಲೇ ಊಟಮಾಡಿ ಹೋದ. ಆ ಫೋಟೋಕಟ್ಟನ್ನ ನಾನೇ ಕೊಟ್ಟು ಕಳಿಸಿದೆ ಆತನಿಗೆ.

ಪೋಲಿಸು ಅಧಿಕಾರಿ—[ಸಂದೇಹಪಡುವವನಂತೆ] ನೀವೇ ಕೊಟ್ಟಿರಾ ಅದನ್ನು ಇವನಿಗೆ? ನೀವೇ?

ದಯಾನಂದ—ಹೌದು. ಆತ ಅದನ್ನ ಬಹಳ ಮೆಚ್ಚಿದ್ದರಿಂದ ನಾನೇ ಕೊಟ್ಟು ಕಳಿಸಿದೆ. ಇನ್ನಾದರೂ ಆತನ್ನ ಬಿಟ್ಟು ಹೊರಡಿ.

ಪೋಲೀಸು ಅಧಿಕಾರಿ—ತಾವು ಹೇಳಿದ ಮೇಲೆ ಅದಕ್ಕೆ ವ್ಯತಿರಿಕ್ತವಾಗಿ ನಡೆಯೋಕೆ ನನಗಿಷ್ಟವಿಲ್ಲ, ಸ್ವಾಮಿ. ಆದರೂ, "ಊರು ಕೇರಿ ಯಾವುದು, ಹೆಸರೇನು?" ಅಂದರೆ ಈತ ಏನೊಂದೂ ಉತ್ತರ ಕೊಡಲಿಲ್ಲ. ಆದ್ದರಿಂದ, ಎಲ್ಲಿ ಏನು ಮಾಡಿ ಬಂದಿದಾನೋ ಅಂತ—

ದಯಾನಂದ—ನಾನು ಭರವಸೆ ಕೊಡ್ತೇನಲ್ಲ ಈತ ನನ್ನ ಸ್ನೇಹಿತ ಅಂತ! ಇನ್ನೇಕೆ ನಿಮಗೆ ಅನುಮಾನ?

ಪೋಲೀಸು ಅಧಿಕಾರಿ—ಹಾಗಾದರೆ ಸರಿ. ತಮ್ಮ ಮಾತಿಗೆ ಎದುರಾಡೋನಲ್ಲ ನಾನು. ಅಪ್ಪಣೆ ಆದರೆ ಬರ್ತೇನೆ. [ಎಂದು ಖೈದಿಯನ್ನು ಹಿಡಿದಿರುವ ಪೋಲೀಸಿನವರಿಗೆ ಸನ್ನೆ ಮಾಡುವನು. ಅವರು ಅವನನ್ನು ಬಂಧಿಸಿರುವ ಸಂಕೋಲೆಗಳನ್ನು ಬಿಚ್ಚುವರು. ಪೋಲೀಸಿನವರು ಮೂವರೂ ದಯಾನಂದನಿಗೆ "ಸೆಲ್ಯೂಟ್" ಮಾಡಿ, ಹೊರಟುಹೋಗುವರು.]

ಖೈದಿ—[ಕನಸಿನಲ್ಲಿ ಮಾತಾಡುತ್ತಿರುವವನಂತೆ] "ನನ್ನ ಸ್ನೇಯಿತ ಆತ!" "ಆ ಫೋಟೋ ಕಟ್ನ ನಾನೇ ಕೊಟ್ಟು ಕಳಿಸಿದ್ದೆ ಆತನಿಗೆ!" "ನಾನೇ ಕೊಟ್ಟು ಕಳಿಸಿದೆ!" [ಎಂದು ದಯಾನಂದ ಆಡಿದ್ದ ಮಾತುಗಳನ್ನು ಜ್ಞಾಪಿಸಿಕೊಂಡು] ಆ ಹಾ ಹಾ! ನಮ್ಮಪ್ಪ!

ದೇವ್ರು ಅನ್ನಾ ನಿರಾದು ನಿಜ ಆದ್ರೆ ನಿನ್ನಂಗೇ ಇರ್ಬೇಕು ಅವ್ನು ! ಸತ್ತು ಬದಕ್ದಂಗಾತು ಪುಣ್ಣಾತುಮ ನಿನ್ನಿಂದ!

ಲಕ್ಷಮ್ಮ—ಪಾಪಿ ಮುಂಡೇಮಗನೆ! ಅರ್ಧರಾತ್ರೀಲಿ ನಿಂಗೆ ಬಾಗಿಲು ತೆಗೆದು, ಅನ್ನ ಕೊಟ್ಟು ಉಪಚಾರ ಹೇಳಿ ಮರ್ಯಾದೆ ಮಾಡಿ ಮಲಗಿಸಿದರೆ ಕಳ್ತನಕ್ಕಿಳಿದೆಯಾ ಉಪ್ಪು ತಿಂದೋರ ಮನೇಲೇನೇ? ನಿನ್ನ ಯೋಗ್ಯತೇಗೆ ಬೆಂಕಿ ಇಟ್ಟರು!

ದಯಾನಂದ—ಅಮ್ಮ ನೀನು ಹೋಗಿ ಮಲಗಿಕೊ ಇನ್ನು.

ಲಕ್ಷಮ್ಮ—ಏನು? ಇನ್ನೊಂದು ಸಾರಿ ಇವನ ಘಾತುಕತನಕ್ಕೆ ಗುರಿಯಾಗಲಿ ನೀನು ಅಂತ ನಿನ್ನೊಬ್ಬನ್ನೇ ಇವನ ಜೊತೇಲಿ ಬಿಟ್ಟುಹೋಗಬೇಕೋ? ಹೋಗೋಲ್ಲ! ಇಲ್ಲೇ ಇರ್ತೇನೆ ನಾನೂ!

ದಯಾನಂದ—ಅಮ್ಮ, ಹೋಗು ಅಂದ್ರೆ ಹೋಗಿಬಿಡಬೇಕು. ನೀನು ನನ್ನ ಮುಂದೆ ಹೀಗೆ ಹಟಹಿಡಿಯೋದು ಚೆನ್ನಾಗಿರೊಲ್ಲ ನೋಡು!

ಲಕ್ಷಮ್ಮ—ಹೋಗಲೇಬೇಕು ಅಂದರೆ ಹೋಗ್ತೇನೆ ಬಿಡು. ನಿನಗೇಕೆ ಅಷ್ಟು ಬೇಜಾರು? [ಎಂದು ಬೆಳ್ಳಿಯ ಫೋಟೋ ಕಟ್ಟನ್ನು ತೆಗೆದುಕೊಂಡೇ ಹೊರಡುವಳು]

ದಯಾನಂದ—ಅಮ್ಮ, ಎಲ್ಲಿ, ಆ ಕಟ್ಟನ್ನಿಲ್ಲಿ ಕೊಟ್ಟುಬಿಟ್ಟುಹೋಗು.

ಲಕ್ಷಮ್ಮ—ಇಲ್ಲ. ನನಗೆ ಬೇಕು ಅದು.

ದಯಾನಂದ—ಕೊಡಮ್ಮ; ಎಷ್ಟು ಸಾರಿ ಹೇಳಿಸಿಕೋತೀಯ!

[ಲಕ್ಷಮ್ಮ ಇಷ್ಟವಿಲ್ಲದಿದ್ದರೂ ಬಲವಂತಕ್ಕೆ ಕೊಡುವವಳ ಹಾಗೆ ಮುಖ ಸಣ್ಣಗೆ ಮಾಡಿಕೊಂಡು ಅದನ್ನು ಕೊಟ್ಟು ಹೊರಟುಹೋಗುವಳು.]

ಖೈದಿ—[ಸಂಕೋಚದಿಂದ] ನಾನದನ್ನ ತಗಂಡೋಗಿಬಿಡ್ಲಿಲ್ಲಲ್ಲ ಕೈಗೆ ಸಿಕ್ಕದಂಗೆ! ಓಟ್ಕೇ ಸಂತೋಸಾಗ್ತೈತೆ ನನ್ಮನಸಿಗೆ! ನಿಜವಾಗ಼್ಲೂ ಯೋಳ್ತೀನಿ—ಬಾಳ ಸಂತೋಸಾಗ್ತೈತೆ!

ದಯಾನಂದ—ಅಪ್ಪ, ಇನ್ನಾದರೂ ನೆಮ್ಮದಿಯಾಗಿ ಮಲಗಿಕೊಂಡು ನಿದ್ದೆ ಹೋಗು. ಅಗೋ—ನಿನಗೋಸ್ಕರ ಹಾಸಿದ ಹಾಸಿಗೆ ಹಾಗೇ ಇದೆ!

ಖೈದಿ—[ಬೆಳ್ಳಿಯ ಕಟ್ಟನ್ನೇ ನೋಡುತ್ತಾ] ಬ್ಯಾಡ! ಕಂಡ್ತ ಬ್ಯಾಡ! ನಾನಿನ್ನಿರಲ್ಲ ಇಲ್ಲಿ! ಇರಾಕೆ ದೈರ್ಯೇವು ಇಲ್ಲ. ಈ ಕೂಡ್ಲೇ ವಂಟೋಗ್ತೀನಿ ಬ್ಯಳ್ಗಾಗಾಕೆ ಮುಂಚೆ ಯೊಲ್ಲಾರಾ ದೂರ ವೋಗಿ ತಲೆ ಮರೆಸ್ಗಾತೀನಿ!

ದಯಾನಂದ—ಯಾರ ಕಣ್ಣಿಗೂ ಬೀಳ್ದೆ ನಿಶಾಚರನ್ಹಾಗೆ ಕತ್ತಲೇಲೇ ಓಡಾಡೋಗತಿ ಬಂದಿದೆಯೇ ನಿನಗೆ! ಪಾಪ!

ಖೈದಿ—ಲೋಕ್ದಾಗೆ ವಳ್ಳೇತನ ಅನ್ನಾದು ಐತೆ ಅಂತ ಕೂಡ ನಂಬ್ತಿರ್ಲಿಲ್ಲ ನಾನು. ಆ ನರಕದಾಗಿದ್ಬಂದೋನಿಗೆ ಯಾರಿಗೇ ಆಗಲಿ ಅಂತ ನಂಬಿಕೆ ಇರಾದು ಕಷ್ಟ. ಆದರೂ—ಯಾಕೋ ಯೋನೋ ತಿಳೀದು—ನೀನೊಬ್ಬನು ಮಾತ್ರ ದಯಾವಂತ ಅನ್ನಿಸ್ತೈತೆ. ನಿನ್ನೊಂದ್ಮಾತು ಕೇಳ್ಕಾತೀನಿ; ಅದನ್ನ ಇಲ್ಲ ಅನ್ನದೆ ನಡಸಿಕೊಡಬೇಕು ನೀನು. ಬಾಳ ಸಆಯ ಮಾಡ್ದಂಗಾಗ್ತೈತೆ—

ದಯಾನಂದ—ಅಗತ್ಯವಾಗಿ ಆಗಲಿ. ಏನು ಹೇಳಪ್ಪ. ನನ್ನ ಸಾಮರ್ಥ್ಯ ಇದ್ದಷ್ಟೂ ಮಾಡಿಕೊಡ್ತೇನೆ.

ಖೈದಿ—ಇನ್ನೇನೂ ಇಲ್ಲ. ನನ್ನ ತಂದೆ ಸಮಾನ ನೀನು. ಬೂಮಿಮ್ಯಾಗೆ ನನ್ನ ಪಾಲಿಗೆ ನೀನೇ ದೇವ್ರಂಗೆ ಕಾಣಸ್ತೀಯ. ನಾನು ವಂಡಾಕೆ ಮುಂಚೆ ನನ್ನ ವಂದೀಟು ಅರಸ್ಬೇಕು ನೀನು. ನೀನು ವಳ್ಳೇದಾಗಲಿ ಅಂದರೆ ಆಗೇ ಆಗ್ತೈತೆ. ನಂಗೊತ್ತು. [ಎಂದು ದಯಾನಂದನ ಪಾದಕ್ಕೆ ನಮಸ್ಕರಿಸುವನು.]

ದಯಾನಂದ—[ಕೈಯೆತ್ತಿ] ದೇವರು ನಿನಗೆ ಒಳ್ಳೇದು ಮಾಡಲಿ. ಸುಖೀಭವ.

ಖೈದಿ—[ಎದ್ದು ಮಾತಾಡಲು ಪ್ರಯತ್ನಿಸುತ್ತಾನೆ. ಪಶ್ಚಾತ್ತಾಪದಿಂದ ಮಾತು ಹೊರಡದೆ ಗದ್ಗದ ಕಂಠನಾಗಿ ಕೈಮುಗಿದು ಬೇಗನೆ ಬಾಗಿಲಕಡೆಗೆ ನಡೆಯುತ್ತಾನೆ.]

ದಯಾನಂದ—ಇಗೋಪ್ಪ, ಇದು ನಿನಗೆ ಸೇರಿದ್ದು. ಇಲ್ಲೇ ಬಿಟ್ಟೋಂಗ್ತಾ ಇದೀಯಲ್ಲ! [ಎಂದು ಫೋಟೋ ಕಟ್ಟನ್ನು ಅವನಿಗೆ ಕೊಡಲು ಕೈಚಾಚುತ್ತಾನೆ.]

ಖೈದಿ—[ವಿಸ್ಮಯಭರಿತನಾಗಿ] ಸ್ವಾಮಿ, ನಾನು—ನಾನು ಇದನ್ನ ತಗಂಡೋಗ್ಬೇಕು ಅಂತಾನೆ ನೀವೇಳಿದ್ದು ?

ದಯಾನಂದ—ಹೌದು. ಅದರಿಂದ ನಿನ್ನ ಕಷ್ಟದ ಪರಿಹಾರಕ್ಕೆ ಸ್ವಲ್ಪವಾದರೂ ಸಹಾಯವಾಗಬಹುದು. [ಖೈದಿ ಆಶ್ಚರ್ಯಪರವಶನಾಗಿ ಅದನ್ನು ತೆಗೆದುಕೊಳ್ಳುವನು.] ಇನ್ನೊಂದು ಮಾತು. ಇಲ್ಲೇ ನಮ್ಮ ಮನೇ ಪಕ್ಕದಲ್ಲೇ ಒಂದು ಓಣಿ ಇದೆ. ಅದನ್ನು ಹಿಡಿದು ಹೋಗಿಬಿಡು. ಯಾರ ಕಣ್ಣಿಗೂ ಬೀಳೋಲ್ಲ. ಅಂಥ ನಿರ್ಜನವಾದ ದಾರೀಲಿ, ಅದರಲ್ಲೂ ರಾತ್ರಿಹೊತ್ತಿನಲ್ಲಿ, ಈ ಪೋಲೀಸಿನವರ ಸುಳುವೇ ಇರೋಲ್ಲ.

ಖೈದಿ—ಬರ್ತೀನಿ, ಮಾಸ್ವಾಮಿ. ಇಗಾ, ಕೈಮುಗದೆ. ನಿಮ್ಮುಪ್ಕಾರಾನ ನಾನು—[ಅಳುಬರುತ್ತದೆ]. ಅಯ್ಯೋ! ನಾನ್ಯಂತ ಬೆಪ್ಪ! ಯಳೀಕೂಸ್ನಂಗೆ ಅಳ್ತಾ ಅದೀನಿ! . . . ಆದರೂ—ಯೋನೋ, ಯಂತೋ—ಮತ್ತೆ ನಾನೂ ವಬ್ಬ ಮನುಸ, ದನ ಅಲ್ಲ, ಅಂತ ನಂಗೇ ನೆಪ್ಪಾಗಾ ಅಂಗೆ ಮಾಡಿದೀರಿ ಮಾರಾಯ್ರು ನೀವು—ನನ್ನ ಪಾಲಿನ ದೇವ್ರು! [ಬೀದಿಯ ಬಾಗಿಲಿನಲ್ಲಿ ನಿಲ್ಲುವನು.]

ದಯಾನಂದ—[ತನ್ನ ಕೈಯನ್ನು ಜೈದಿಯ ಭುಜದಮೇಲಿಟ್ಟು] ಅಪ್ಪ, ಒಂದು ವಿಷಯಾನ ಮಾತ್ರ ಎಂದಿಗೂ ಮರೆಯಬೇಡ. ಈ ದೇಹ ಭಗವಂತನ ವಾಸಸ್ಥಾನ.

ಜೈದಿ—[ಭಯಭಕ್ತಿಪ್ರೇರಿತನಾಗಿ] ಬಗವಂತನ ವಾಸಸ್ಥಾನ! ಬಗವಂತದಾನಾ ನನ್ನ ದೇಹದಾಗೆ? ಆಹಾ ಹಾಹಾ! ಮರೆಯಲ್ಲ, ಗುರೋ, ಮರೆಯಲ್ಲ! ಇನ್ನೆಂದೆಂದಿಗೂ ಮರೆಯಲ್ಲ! [ಎಂದು ನಿಷ್ಕ್ರಮಿಸುವನು.]

[ದಯಾನಂದ ಕೋಣೆಯ ಮಧ್ಯಕ್ಕೆ ಬಂದು ಭಕ್ತಿಸೂಚಕವಾಗಿ ಕಣ್ಗಳನ್ನು ಮೇಲೆತ್ತಿ ಕೈಜೋಡಿಸುವನು, ತೆರೆ ಮೆಲ್ಲನೆ ಕೆಳಗಿಳಿಯುವುದು.]

ಎಂ. ರಾಮರಾವ್.

ಶ್ರೀ ಅರವಿಂದ ಸಾಹಿತ್ಯ ಸಮೀಕ್ಷೆ

೨. "ಪ್ರೇಮ ಮತ್ತು ಮೃತ್ಯು"[1]

ಮಿಂಚಿನಂತೆ ಚಂಚಲೆಯಾದ ಅಪ್ಸರಸಿಯೊಬ್ಬಳನ್ನು ತನ್ನ ಪ್ರೇಮ ತಪಸ್ಸಿನಿಂದ ಜೀವನದ ಶಾಶ್ವತ ಗೆಳತಿಯನ್ನಾಗಿ ಮಾಡಿಕೊಂಡು ಪ್ರೇಮದ ಇತಿಹಾಸದಲ್ಲಿ ಅಮರನಾಗಿ ನಿಂತ ಮಾನವ ವ್ಯಕ್ತಿಯೊಬ್ಬನ ಕಥೆಯನ್ನು ಶ್ರೀ ಅರವಿಂದರ 'ಊರ್ವಶಿ' ಕಾವ್ಯದಲ್ಲಿ ಕಂಡೆವು.[2] ಅನೇಕ ದಶಕಗಳ ಬಳಿಕ, ಅಧ್ಯಾತ್ಮದ ಅತಿ ಮನೋಲೋಕದ ಅನಂತ ಅನುಭವಗಳನ್ನು ದಾಟಿ ಪೂರ್ಣಯೋಗದ ಪೂರ್ಣ ಸಿದ್ಧಿಯನ್ನು ಪಡೆದುಕೊಂಡ ಅವರ ದಿವ್ಯಪ್ರಜ್ಞೆ ಸೃಷ್ಟಿಸಿರುವ 'ಸಾವಿತ್ರಿ' ಮಹಾ ಕಾವ್ಯದಲ್ಲಿ[3], ಸಾಧಾರಣಳಂತೆ ಮಾನವಲೋಕದ ಕಣ್ಣಿಗೆ ಗೋಚರಿಸುವ ಸತಿಯೊಬ್ಬಳು, ಅತೀಂದ್ರಿಯವೂ ಆತ್ಮಾನುಭವ ಮಾತ್ರ ಗೋಚರವೂ ಆದ ಪರಮಪ್ರೇಮದ ಅದಮ್ಯಶಕ್ತಿಯಿಂದ ತನ್ನ ಪತಿಯನ್ನು ಮೃತ್ಯುಗರ್ಭದಿಂದ ಹೊರಕ್ಕೆ ಎಳೆದು ತಂದು, ಅಮರ್ತ್ಯತೆಯನ್ನು ನೀಡುವ ಪರಮ ಪವಾಡವನ್ನು ಸಂದರ್ಶಿಸುತ್ತೇವೆ.[4] ಸೃಷ್ಟಿಯ ಕಾಲದ ದೃಷ್ಟಿಯಿಂದಲೂ, ಕಥಾವಸ್ತುಗಳ ಸಮಾನತೆಯ ದೃಷ್ಟಿಯಿಂದಲೂ ಈ ಎರಡು ಕಾವ್ಯಗಳಿಗೆ ಮಧ್ಯೆ ಬರುತ್ತದೆ ಅವರ "ಪ್ರೇಮ ಮತ್ತು ಮೃತ್ಯು."

ಭಗವಂತನ ಬಂಧುರ ಲೀಲೆಯ ಎರಡು ಹಿರಿಯ ಕೌತುಕಗಳು ಈ ಪ್ರೇಮ ಮೃತ್ಯುಗಳು. ಒಂದು ಬದುಕನ್ನು ನಂದನವನ್ನಾಗಿ ಮಾಡಿ ಅದಕ್ಕೆ ಕಾಮನಬಿಲ್ಲಿನ ಬಣ್ಣವನ್ನು ನೀಡುತ್ತದೆ. ಮತ್ತೊಂದು ಆ ನಂದನವನ್ನು ರುದ್ರಭೂಮಿಯನ್ನಾಗಿ ಮಾಡಿ ಅಲ್ಲಿ ಮಹಾಕಾಲನ ರುದ್ರನೃತ್ಯ ನಡೆಯುವಂತೆ ಮಾಡುತ್ತದೆ. ಒಂದರ

---

[1] *Love and Death, 1899.*

[2] ಪ್ರ.ಕ. ಸಂ. ೩೬, ಸಂ. ೨.

[3] ಜಗತ್ತು ಇದುವರೆಗೂ ಕಂಡಿಲ್ಲದಿರುವ ಈ ಕಾವ್ಯರೀತಿಯನ್ನು ಬೇರಾವ ಹೆಸರಿನಿಂದಲೂ ನಿರ್ದೇಶಿಸಲು ಸಾಧ್ಯವಾಗದೆ ಸದ್ಯಕ್ಕೆ ಮಹಾಕಾವ್ಯ ಎಂದು ಕರೆಯಬೇಕಾಗಿದೆ.

[4] ಅಮರತ್ವದ ಪಥವನ್ನು ಸಮೆಯುವುದಕ್ಕಾಗಿ ಜಗನ್ಮಾತೆಯೇ ಸಾವಿತ್ರಿಯ ರೂಪದಲ್ಲಿ ಅವತರಿಸಿದಳು ಎಂಬುದು ಶ್ರೀ ಅರವಿಂದರ ದರ್ಶನ. cf. *Letters on Savitri*, p. 823.
"Savitri is represented in the poem as an incarnation of the Divine Mother. This incarnation is supposed to have taken place in far past times when the whole thing had to be opened, so as to "shew the ways of immortality."
"SRI AURABINDO"

ವಸಂತ ಸೌರಭದ ಪ್ರಮತ್ತತೆಯಲ್ಲಿರುವ ಚೇತನಕ್ಕೆ ಮತ್ತೊಂದರ ಬರಸಿಡಿಲು ಬಡಿದು ಜೀವನದ ಭಂಗುರತೆಯ ಅಪ್ರಿಯ ಸತ್ಯದ ಬೋಧೆಯನ್ನು ನೀಡುತ್ತದೆ. ಹೀಗೆ ಆ ಎರಡು ವಿರುದ್ಧ ಶಕ್ತಿಗಳ ಹೋರಾಟ ಕ್ಷಣಕ್ಷಣವೂ ನಡೆಯುತ್ತಿದೆ. ಸಾಮಾನ್ಯ ಚೇತನಗಳು ಈ ಸಂಘರ್ಷಣೆಯ ನಡುವೆ ಸಿಕ್ಕಿ ನುಚ್ಚುನುರಿಯಾಗುತ್ತಾರೆ. ಮಹಾ ಚೇತನಗಳಾದರೋ ಒಂದರ ಬೆಂಬಲದಿಂದ ಮತ್ತೊಂದನ್ನು ಸಾಹಸದಿಂದ ಎದುರಿಸಿ ವಿಜಯಪಡೆಯುತ್ತಾರೆ.[5] ಶ್ರೀ ಅರವಿಂದರ "ಪ್ರೇಮ ಮತ್ತು ಮೃತ್ಯು" ಈ ತತ್ವಕ್ಕೆ ಒಂದು ರಸನಿದರ್ಶನವಾಗಿದೆ.

ಜಗತ್ತಿನ ತಾರುಣ್ಯದ ಆ ದಿನಗಳಲ್ಲಿ, ಪ್ರೇಮವಿನ್ನೂ ತನಗೇ ನವೀನವಾಗಿ, ಸುಖಪ್ರದವಾಗಿ, ಅಕಳಂಕಿತವಾಗಿ ಇದ್ದ ಆ ದಿನಗಳಲ್ಲಿ, ಕಳಕಳಿಸುವ ವನಗಳಲ್ಲಿ ಪುಷ್ಪದೊಂದಿಗೆ ಸುಪ್ರಭಾತ ಸರಸವಾಡುವಂತೆ ರುರು ಪ್ರಿಯವಂದೆಯೊಡನೆ ಆಟ ವಾಡುತ್ತಿದ್ದ. ನವಕಪೋಲದ ಮಂಜುಹನಿಗಣ್ಣಿನ ಆ ನವವಧು ಪ್ರಿಯಂವದೆಯೋ ತನ್ನ ಹೃದಯದ ಚೆಂಗುಲಾಬಿಯ ಮೊಗ್ಗೆಯನ್ನು ಪ್ರೇಮಕ್ಕೆ, ರುರುವಿಗೆ ಆಗಲೇ ತೆರೆದಿದ್ದಳು. ಅವನಿಗೆ ಲೋಕವೆಲ್ಲಾ ಈ ಒಂದು ಸುಂದರ ಪುಷ್ಪದ ಅರಳುವಿಕೆ ಗಾಗಿಯೇ ನಮೆದ ಭೂಮಿಯಂತಿದ್ದರೆ ಅವಳಿಗೆ ಜಗದ ತುಂಬ ಅವನ ಆಲಿಂಗನವೇ. ಸಕಲ ಸೃಷ್ಟಿಯೂ ಆನಂದದ ಇಚ್ಛೆಯಿಂದ ಮಾತ್ರ ಸಂಭೂತವಾದಂತೆ ತೋರಿತು. ತರುಣಪೃಥಿವಿಯ ಮಾಧುರ್ಯ ರುರುವಿನ ನಾಳನಾಳಗಳಲ್ಲಿ ರಸರೂಪಿಯಾಗಿ ಪ್ರವಹಿಸಿತು. ಉಲ್ಲಾಸಯುತವಾದ ಪಕ್ಷಿಯೊಂದು ಗಗನವೈಶಾಲ್ಯದಿಂದ ತನ್ನದೇ ಮನೆಗೆ ಹಿಂದಿರುಗಿಬಂದು, ತನ್ನ ಪ್ರಿಯೆಯನ್ನು, ತನ್ನ ಸಕಲ ಗುರಿಯನ್ನು, ಆಲಿಂಗಿಸಿ ನಲಿಯುವಂತೆ, ಬಿಸಿಲು ಚಳಿಗಳಿಂದ ಪರ್ವತಾರಣ್ಯಗಳಿಂದ ಹೆಚ್ಚು ಬಲಿಷ್ಠ ನಾಗಿ ರೆಕ್ಕೆ ಮೂಡಿದಂತೆ ಬಂದ ರುರು ಶ್ವೇತವಕ್ಷದ ತನ್ನ ನಲ್ಲೆಯೊಡನೆ ನಲಿಯುತ್ತಿದ್ದ; ನೂತನೆಯಾಗಿ ಎದ್ದು ತನ್ನನ್ನು ಸ್ವಾಗತಿಸುತ್ತಿದ್ದ ಅವಳ ಲಾವಣ್ಯಾದಾಳಕ್ಕೆ ಮುಳುಗುತ್ತಿದ್ದ. ಅವಳ ನಯನಗಳು ಆಳವೂ ಅನಂತವೂ ಆದ ಬಾವಿಗಳಂತೆ ಅವನ ಆತ್ಮವನ್ನು ಮೋಹಿಸಿ ಆಕರ್ಷಿಸುತ್ತಿದ್ದವು. ಅವಳ ಅಧರದ ಮಧುರತೆ ಅವನಿಗೆ ನಿತ್ಯವಿಸ್ಮಯಕಾರಿಯಾದ ಅಮೃತವಾಗಿತ್ತು! ಅವನು ಆತ್ಯಂತಿಕವಾಗಿ ಪ್ರೀತಿಸು ತ್ತಿದ್ದುದು ಅವಳ ಮುಗುಳುನಗೆಯನ್ನೋ, ಕಾರಣವಿಲ್ಲದೆ ಹರಿಯುತ್ತಿದ್ದ ಅವಳ ಕಣ್ಣೀರನ್ನೋ, ತಾತ್ಕಾಲಿಕವಾದರೂ ಶೀಘ್ರವಾದ ಕೋಪವನ್ನೋ, ಆಕೆಯ ಕಣ್ಣು ಗಳಲ್ಲಿ ನೆಲಸಿ ಒಮ್ಮೊಮ್ಮೆ ಸಲಿಲರೂಪಿಯಾಗಿ ಹರಿಯುತ್ತಿದ್ದ ದುಗುಡವನ್ನೋ,

[5] ಲೀಲಾಭೂಮಿಕೆಯಲ್ಲಿ ಮಾತ್ರ ವ್ಯವಹರಿಸುವ ಈ ಎರಡೂ ಶಕ್ತಿಗಳ ಮಿತಿಯನ್ನರಿತು ಅಲಿಪ್ತರಾಗಿರುವ ಸಿದ್ಧಪುರುಷರನ್ನು ಇಲ್ಲಿ ಗಮನಕ್ಕೆ ತೆಗೆದುಕೊಂಡಿಲ್ಲ.

ಆತ ಒಂದೂ ಅರಿಯ. ಅಂತೂ ಅವಳಲ್ಲಿ ಸುಖೋಷ್ಣಮಧುರತೆಯ ಒಂದು ಲೋಕವನ್ನೇ ಕಂಡು ಸುಭದ್ರವೆಂದು ತಿಳಿದು ಪ್ರೇಮಸಮಾಧಿಯಲ್ಲಿ ಬಾಳಿದ.

ಆದರೆ ದಿವ್ಯಚೇತನಗಳಿಗೆ ಮುಳ್ಳಿಲ್ಲದ ಗುಲಾಬಿಗಳನ್ನು ನೀಡುವುದಕ್ಕಿಂತ, ನೋವುತುಂಬಿದ ನಲಿವನ್ನು ನೀಡುವುದರಲ್ಲೇ ಪ್ರೇಮಪುರುಷನಿಗೆ ಹೆಚ್ಚು ಸಂತೃಪ್ತಿ!

ಆ ಅಂದು, ಪೂರ್ವದಿಗಂತದಲ್ಲಿ ಇನ್ನೂ ಕತ್ತಲು ತುಂಬಿರುವಾಗಲೇ ಅವನು ಅವಳ ವಕ್ಷವನ್ನುಳಿದೆದ್ದು, ನದಿಯಲ್ಲಿಳಿದು ಮಿಂದು, ತನ್ನ ಅವಯುವಗಳ ತುಂಬ ತುಂಬಿದ್ದ ಬಯಕೆಯಿಂದುಬ್ಬಿ, ಒದ್ದೆಯಾಗಿ ದಡಕ್ಕೆ ನೆಗೆದು ಕಾಡಿನೊಳಕ್ಕೆ ಹೊನಲಾಗಿ ಹರಿದ. ತರುಣ ಅಶ್ವವೊಂದು ತನ್ನ ಕೇಸರವನ್ನು ಗಾಳಿಗೊಡ್ಡಿ ಹಚ್ಚ ಹಸರು ಹುಲ್ಲುಗಾವಲಿನ ಮೇಲೆ ನಲಿಯುತ್ತ ಓಡುವಂತೆ ತಾರುಣ್ಯದ ಅಪಾರವಾದ ಆನಂದದಿಂದ ತುಂಬಿದ ಈ ಯುವಕ ಮುಂಗುರುಳುಗಳ ತೊಂಗಲನ್ನು ಕುಣಿಸುತ್ತ ಓಡಿದ. ಆಕೆಯ ಅರಳಿದ ಸೌಂದರ್ಯಕ್ಕೆ ಉಪಮೆಗಳನ್ನು ಹುಡುಕುತ್ತ, ಹೂವು ಹಣ್ಣುಗಳ ನಡುವೆ ಸುತ್ತಿದ. ಹೊಸಹೊಸ ಹೊನಲುಗಳನ್ನು ಹಿಂಬಾಲಿಸಿದ. ಮಧ್ಯಾಹ್ನದೊಂದಿಗೆ ಸಮರಸದಿಂದಿದ್ದ ಜೀವಿಗಳ ತೃಪ್ತವಾಣಿಯನ್ನಾಲಿಸಿ ಆತ ಪ್ರಿಯುಂವದೆಗಾಗಿ ಹಾತೊರೆಯುತ್ತಾ ಹಿಂದಿರುಗಿದ. ಹಸುರೆಲೆಗಳ ಮಧ್ಯದಿಂದ ಚಿಮ್ಮಿ ಸೂರ್ಯನನ್ನುದ್ದೇಶಿಸಿ ಹೇಳಿದ. "ಓ ತಂದೆ ಸೂರ್ಯ, ಒಲಿವುದು, ಒಲಿದು ಬಾಳುವುದು, ಎಷ್ಟು ಸೊಗಸು! ಖಂಡಿತ, ನಮ್ಮ ಈ ಸಂತಸ ಅಂತ್ಯವನ್ನೈದದು. ನಾವು ಮದುಕರಾಗೆವು. ಇದೊ, ಈ ಉಲ್ಲಸದ ನದಿಗಳಂತೆ, ಶುದ್ಧವಾದ ವಾಯುವಿನಂತೆ, ಮಧುರವಾಗಿ ಬಾಳುತ್ತೇವೆ. ಪುಷ್ಪಗಳಂತೆ ಮತ್ತೆಮತ್ತೆ ಅರಳುತ್ತೇವೆ. ಕೊನೆಯಪಕ್ಷ ಈ ಪ್ರಜ್ಞಾರಹಿತ ತರುಗಳಷ್ಟು ಕಾಲವಾದರೂ ಬಾಳುತ್ತೇವೆ."

ಪಾಪ. ಪ್ರೇಮಜೀವನಶೃಂಗವಿಹಾರಿಯಾದ ಇವನ ಚೇತನ ಮರ್ತ್ಯತೆಯಲ್ಲಿ ಅಮರತೆಯನ್ನು ಅರಸುತ್ತಿದೆ. ಚಿನ್ಮಯತೆಯ ಅವತಾರಕ್ರಿಯೆ ಪೂರ್ಣವಾಗದೆಯೇ ಮೃಣ್ಮಯವಾದುದಕ್ಕೆ ಶಾಶ್ವತತೆಯನ್ನು ನೀಡಲೆಳಸುತ್ತಿದೆ. ತನಗೆ ಪ್ರಿಯವಾದುದು ಎಂಬ ಕಾರಣದಿಂದಲೇ ಯಾವ ಬೆಲೆಯನ್ನೂ ಪಡೆಯದೆಯೇ ಸಾಂತವಾದುದು ಅನಂತವಾಗಬಲ್ಲುದು ಎಂಬ ಶಾಶ್ವತಭ್ರಾಂತಿಯನ್ನು ತಳೆಯುತ್ತಿದೆ! ಆದರೂ, ಯಾವ ಭೂಮಿಕೆಯಲ್ಲೇ ಆಗಲಿ ಯಾವ ಭ್ರಮೆಯಿಂದ ಪ್ರಚೋದಿತವಾಗಿಯೇ ಆಗಲಿ, ಅನಂತತೆಯ ಆಕಾಂಕ್ಷೆ, ಮಾನವಾತ್ಮವನ್ನು ಮಹತ್ಸಾಧನೆಗೆ ಪ್ರಚೋದಿಸಬಲ್ಲುದು ಎಂಬುದಕ್ಕೆ ಈತನ ಸಾಹಸ ಶ್ರದ್ಧೆಯನ್ನು ಪೋಷಿಸುತ್ತದೆ.

ಮತ್ತೆ ಅವನ ಸ್ವಪ್ನ ಮುಂದುವರೆಯಿತು. "ಓ, ಅವಳು! ಬಿರುಗಾಳಿಗಿಂತ,

ಅಥವಾ [illegible]ಪುಳೆ ಸಹಿತವಾದ ಬೆಳದಿಂಗಳಿಗಿಂತ ಸುಂದರವಾದ ಕೋಪದ ಕಂಬನಿ ತುಂಬಿದ ಕಣ್ಣ ಕೋಮಲಪದ್ಮವನ್ನು ಅವಳು ನನ್ನಿಂದ ಬೇರೆಡೆಗೆ ತಿರುಗಿಸುತ್ತಾಳೆ! ನಾನೋ ಅವಳನ್ನು ಹಿಂಬಾಲಿಸಿ ಸಾರ್ವಭೌಮಸ್ತುತಿಗಳಿಂದ ಅವಳ ಹೃದಯವನ್ನು ಸಂತೈಸುತ್ತೇನೆ.! ಇಲ್ಲವೇ ಎಲ್ಲ ಆಕ್ರಮಣಗಳನ್ನೂ ಬರಿದುಮಾಡಿ, ಆಕೆಯ ಆತ್ಮ ಅಸಹಾಯಕತೆಯಿಂದ ಪರಿತಪಿಸುತ್ತಿರುವಾಗ, ಅವಳ ಕೋಪದ ಚೆಲುವನ್ನು ಕೂಡ ಒಂದು ಹಣ್ಣನ್ನೆಂತೋ ಅಂತು ಸವಿ ನೋಡುತ್ತೇನೆ! ಅನಂತರ ಹೃದಯದ ಮೇಲೆ ಹೃದಯವನ್ನಿಟ್ಟು ಆ ಎದೆಕರಗುವಂತೆ ಮಾಡುತ್ತೇನೆ! ಅಥವಾ ಅವಳನ್ನು ಹೂವುಗಳಿಂದಲಂಕರಿಸಿ ಅವಳ ಸೌಂದರ್ಯವನ್ನು ಮತ್ತೆ ಸಂಸ್ಥಾಪಿಸುತ್ತೇನೆ! ಇಲ್ಲದಿದ್ದಲ್ಲಿ ಆಕೆಯ ಪುಟ್ಟಪಾದಗಳನ್ನು ನನ್ನ ಕೈಯಿಂದ ಮುಟ್ಟಿ ಅವಳು ಸುಪ್ರಸನ್ನಳಾಗುವಂತೆ ಮಾಡುತ್ತೇನೆ. ಒಡನೆಯೇ ಆಕೆಯ ಮುಖ ಅನಿರೀಕ್ಷಿತ ಉಷಸ್ಸಿನಂತೆ, ತಡೆತಡೆದು ನಗುವಂತೆ ಬಲಾತ್ಕರಿಸಲ್ಪಟ್ಟ ಪುಷ್ಪದಂತೆ, ಚೆಲುವನ್ನು ತಳೆಯುತ್ತದೆ."

ಇದು ಮುಗಿಯುವುದರೊಳಗೇ ಅವನು ಅವಳನ್ನು ಕಂಡ. ಆಕೆ, ನಿರೀಕ್ಷೆಯ ಹಸ್ತಗಳಿಂದ ಮಲ್ಲಿಗೆಯ ಅರಳನ್ನು ಬಿಡಿಸುತ್ತ ನಿಂತವಳು ಅವನ ಪದದ ದನಿಗೇಳಿದಳು. ಅವಳಿಗೆ ಅರಿವಾಗುವ ಮುನ್ನವೇ ಅಪಾರ ಆನಂದದ ಅನಿರೀಕ್ಷಿತ ಮಂದಸ್ಮಿತ ಅವಳ ತುಟಿಗೆ ಉಕ್ಕಿತು. ಸಂತೋಷದ ರಾಗ ಅವಳ ಕೆನ್ನೆಗಳನ್ನು ಬೆರಗುಗೊಳಿಸಿತು. ಸಾಯುವ ಮುನ್ನ ತನ್ನ ಪ್ರಿಯನೊಂದಿಗೆ ಅವಳು ಕ್ಷಣಕಾಲ ಚೆಲುವೆಯಾಗಿ ನಿಂತಳು. ಅವಳೆಡೆಗೆ ಅವನು ನಗುವಿನ ಲಹರಿಯನ್ನು ಹರಿಸಿದ. ಮರುಗಳಿಗೆಯೇ ಕರುಣೆಯುಕ್ಕಿಸುವ ದನಿಯಿಂದ ಅವಳೊಮ್ಮೆ ಬೀರಿದಳು, ನರಳಿ ಇಳೆಗುರುಳಿದಳು.

ಸಾಯುವ ಮುನ್ನ! ಹೌದು, ಅವನು ಕಂಡ. ಮಿಂಚುತ್ತ, ಸೂರ್ಯರಶ್ಮಿಯನ್ನು ನಿವಾರಿಸುತ್ತ, ದ್ವೇಷಾರ್ಹವಾದ ಹೆಡೆಯನ್ನು ಬಿಚ್ಚುತ್ತಾ, ಮೃತ್ಯು ಬುಸುಗುಟ್ಟುತ್ತ ಅಂಬಿನ ವೇಗದಿಂದ ಹಸುರಿನ ರಕ್ಷಣೆಗೆ ಓಡುವುದನ್ನು ಅವನು ಕಂಡ. ಮಾತಿಲ್ಲದೆ ಅವನೂ ಅವಳ ಪಕ್ಕದಲ್ಲಿ ಕುಸಿದು ಅಸಹಾಯಕತೆಯಿಂದ ಅವಳ ಮುಖವನ್ನು ಮುಟ್ಟಿದ, ಆಕೆಯ ಆತ್ಮವನ್ನು ಮತ್ತೆ ಬದುಕಿಗೆ ಆಕರ್ಷಿಸುವಂತೆ. ಅವಳ ಎದೆಯನ್ನು ಸ್ಪರ್ಶಿಸಿದ—ಓ ಬೆಚ್ಚಗಿದೆ! ಕ್ರೂರ ಆಶೆ ಅವನನ್ನು ಇರಿದು ಹೊಕ್ಕಿತು! ಆದರಯ್ಯೋ ಅವಳ ಕೆನ್ನೆಗಳು ಕನ್ಯೆಯ ಮಧುರವಾದ ವಕ್ಷದ ಮೇಲಿಟ್ಟು ಬಾಡಿದ ಮಲ್ಲಿಗೆಯಂತಿದ್ದವು. ಒಮ್ಮೆ ಗುಲಾಬಿಯಂತಿದ್ದುವೆಂಬುದನ್ನು ಮರೆತಿದ್ದುವು.

ಸೂರ್ಯಕಿರಣಗಳ ಸಖ್ಯವನ್ನು ಇನ್ನೂ ಬಿಡಲಾರದ, ನೋವಿನಿಂದ ಅರಳಿದ ಕಣ್ಣುಗಳನ್ನು ಅವನೆಡೆಗೆ ಹೊರಳಿಸಿ, ಅವನ ಬಾಡಿದ ಗಲ್ಲವನ್ನು ತನ್ನ ಎದೆಯ

ಮೇಲಿಟ್ಟುಕೊಂಡು ಅವಳು ನುಡಿದಳು : "ಓ. ಪ್ರಿಯ, ಓ ಪ್ರಿಯ, ಈ ಸುಂದರ ಶಾದ್ವಲ ಪ್ರಿಯಗೃಹವನ್ನು ನಾನಿಷ್ಟು ಬೇಗ ತ್ಯಜಿಸಬೇಕಲ್ಲ! ಪ್ರೇಮ ಆಲಿಂಗನಗಳು ಶತಮಾನಗಳುರುಳಿದರೂ ಮುಗಿಯುವು ಎಂದಿದ್ದೆನಲ್ಲ! ಈ ಅರಣ್ಯದ ಹಕ್ಕಿ ಹೂವು ಗಳಲ್ಲಿ ಅರ್ಧದಷ್ಟನ್ನೂ ನಾನು ಅರಿತಿಲ್ಲ. ಇಲ್ಲಿನ ಮರಗಳಲ್ಲಿ ಅರ್ಧದಷ್ಟು ಕೂಡ ನನ್ನ ಹೆಸರನ್ನು ಕಲಿತಿಲ್ಲ. ಆದರೆ, ಯಾವುದೋ ಭಯಂಕರ ಹಸ್ತ ನನ್ನನ್ನು ನಿನ್ನ ಬೆಚ್ಚ ನೆಯ ಅಂಗಸಂಗದಿಂದ ಯಾವುದೋ ಶೈತ್ಯ ಅಸ್ಪಷ್ಟ ಮಂಜುಮಾಯೆಗೆ ಎಳೆ ದೊಯ್ಯುತ್ತಿದೆ. ಕಾಳಿಮಾರಾತ್ರಿಯೊಂದು ನನ್ನ ಮೇಲಿಳಿಯುತ್ತಿದೆ. ನಾನಿನ್ನು ನಿನ್ನವಳಲ್ಲ. ಎಲ್ಲಿಗೆ ಎಂದು ಅರಿಯದಲ್ಲಿಗೆ ಹೋಗುತ್ತಿದ್ದೇನೆ. ಬಾಡಿದ ಆಕೃತಿ ಗಳನ್ನು, ನಿಸ್ತೇಜ ದೇಶಗಳನ್ನು, ಭಯಂಕರ ಪ್ರವಾಹಗಳನ್ನು ನಾನು ಕಾಣು ತ್ತಿದ್ದೇನೆ. ಪ್ರಿಯ, ಪ್ರಿಯ, ಇದಿಗೋ ನಿನ್ನಿಂದ ಅವರು ನನ್ನನ್ನು ದೂರ ಸೆಳೆ ದೊಯ್ಯುತ್ತಿದ್ದಾರೆ. ಆ ಮೃತ್ಯುವಿನ ವಿಶಾಲ ವಿದ್ರಾವಕ ಸಾಮ್ರಾಜ್ಯದಲ್ಲಿ ಮತ್ತೆ ಕಲೆಯುತ್ತೇವೆಯೋ ಇಲ್ಲವೋ ಕಾಣೆ. ನೀನು ನನ್ನನ್ನು ಮರೆಯುತ್ತೀಯೆ. ಅಥವಾ ಬದುಕು ನಿನ್ನನ್ನು ಬೇರೆಯ ತೋಳುಗಳಿಗೆ ಬಲಾತ್ಕರಿಸುತ್ತದೆ. ಆ, ನನ್ನೊಡನೆ ಬಾ! ನಿನ್ನ ಪ್ರೇಮದಿಂದ ವಂಚಿತಳಾಗಿ, ಸೂರ್ಯರಶ್ಮಿಗಳನ್ನು ಕಂಡರಿಯದ ತೊರೆಗಳ ದಡದಲ್ಲಿ ಬಿಕ್ಕುತ್ತ ಬಿಕ್ಕುತ್ತ ನಾನೊಬ್ಬಳೇ ಆ ಕ್ರೂರ ಶೈತ್ಯ ಮೃತ್ಯುಸೀಮೆಯಲ್ಲಿ ತೊಳಲ ಲಾರೆ, ಬಾ."

ಆಕೆಯ ಧ್ವನಿ ಕ್ಷೀಣಿಸಿತು. ಮೃತ್ಯು ಆಕೆಯ ಕೆನ್ನೆಯ ಮೇಲೆ ಮೃದುವಾಗಿ ಸುಳಿದ. ಮರುಕ್ಷಣವೇ ತುಂಬ ಸುಖದ ಆಟದಿಂದ ಬೇಗನೆ ಹಿಂದಕ್ಕೆ ಕರೆಯಲ್ಪಟ್ಟ ಶಿಶುವಿನಂತೆ, ಬಿಕ್ಕಿ ಬಿಕ್ಕಿ ಅಳುತ್ತ ಅವಳ ಅತೃಪ್ತ ಚೇತನ ಅವಳ ಶ್ವೇತಕಾಯದಿಂದ ಕದ್ದೋಡಿತು.

ರುರು ಏಳಲಿಲ್ಲ, ಅಳಲಿಲ್ಲ, ನುಡಿಯಲಿಲ್ಲ. ಅವಳಮೇಲೊರಗಿ, ಆ ಮೃತ ಅಧರಗಳು ನುಡಿಯುವುವೆಂದು ನಿರೀಕ್ಷಿಸುತ್ತ ಕುಳಿತ. ತಮ್ಮ ಮಾತೃವಕ್ಷದಿಂದ ಆಕೆಗೆ ಹಾಲೂಡಿದ್ದ ವನವನಿತೆಯರು ಬಂದರು. ಅವಳ ದೇಹವನ್ನು ಕೊಂಡೊಯ್ದರು. ಕೊಟ್ಟಕೊನೆಯ ನೋಟವನ್ನಾಗಲೀ ಚುಂಬನವನ್ನಾಗಲೀ ಆತ ಬಯಸಲಿಲ್ಲ. ಅವರು ಆ ಮೃತಸುಂದರಿಯನ್ನು ಯಾವುದೋ ದೂರದ ಹಸುರಿಗೆ ಒಯ್ದು ನಡೆದರು.

ಆದರೆ ರುರುವೋ ಆ ದೇಶದ ಮೌನ ಅವಳನ್ನು ನೆನೆಯುತ್ತಿದ್ದರೂ ತಾನು ಮಾತ್ರ ಸುಮ್ಮನೆ ಕುಳಿತ. ಅವನು, ತನ್ನ ಆತ್ಮವೇ ಆಗಿ ಪರಿವರ್ತಿತವಾಗಿದ್ದ ಮಹಾ ಮೌನದ ಮೂಲಕ, ಅಳಿಲೊಂದು ಎಲೆಗಳ ಮೂಲಕ ನೆಗೆಯುವುದನ್ನು, ತಲೆಯ ಮೇಲೆಯೇ ಹಕ್ಕಿಯೊಂದು ಉಲಿಯುವುದನ್ನು, ದೂರದಲ್ಲಿ ನವಿಲು ಆರ್ತಧ್ವನಿಗೈಯು

ವುದನ್ನು, ಮರಗಳ ಗಮನಿಸಲಾರದ ಅಲುಗುವಿಕೆಯನ್ನು ಆಲಿಸಿದ. ಇವೆಲ್ಲ ಅವನಿಗೆ ಯಾವುದೋ ದೂರದ ವಸ್ತುಗಳಂತೆ, ತನ್ನ ಹೃದಯದ ಶೂನ್ಯತೆಯಲ್ಲಿ ತಾನೊಬ್ಬನೇ ಇರುವಂತೆ, ಭಾಸವಾಯಿತು. ಆದರೂ ಮುಹೂರ್ತಮಾತ್ರದ ಹಿಂದೆ ಕಣ್ಮರೆಯಾದ ತನ್ನ ಪ್ರಿಯೆಯ ಆಲೋಚನೆಯೇ ಬಾರದು. ಸತ್ತ ತನ್ನ ಪ್ರಿಯೆಯೊಬ್ಬಳನ್ನುಳಿದು ಆ ಸುಂದರ ಮುಖ ತನಗಾಗಿ ಬಾಳಿದ ದಿನಗಳ ಹಿಂದಣ ಉಳಿದೆಲ್ಲ ಚಿತ್ರಗಳ, ಮೃತ್ಯು ವಶರಾದ ಇತರ ಜನಗಳ ನೆನಪು ಅವನಿಗಾಯಿತು. ಹಕ್ಕಿಗಳು ಅವನ ಪಕ್ಕದಲ್ಲಿ ಹಾರಿ ರೆಕ್ಕೆಗಳ ಬೀಸಣಿಗೆಯನ್ನು ಬೀಸಿದಾಗ ಅವನಿಗೆಚ್ಚರವಾಯಿತು. ಪರಿಸ್ಥಿತಿಯ ಅರಿವಾಯಿತು. ಅವನು ನುಡಿದ "ಓ, ಘೋರ ಶೀತಲ ಮೃತ್ಯುವೇ! ಸಾಮಾನ್ಯ ಮಾನವರಂತೆ ಕಂಬನಿಗರೆದು ನಿನ್ನನ್ನು ಒಲಿಸಲು, ಅಥವಾ ಅಪ್ರಾಮಾಣಿಕವಾಗಿ ನಿನ್ನಲ್ಲಿ ಪ್ರೇಮ ಬೆಳೆಸಲು ಯತ್ನಿಸಿ ನನ್ನ ದುಃಖವನ್ನೇ ನಿನ್ನ ನಾಟಕಶಾಲೆಯನ್ನಾಗಿ ಮಾಡಲು ಎಂದೆಂದೂ ನಾನು ಇಚ್ಛಿಸುವುದಿಲ್ಲ. ಸಾಮಾನ್ಯ ಮಾನವರಾದರೋ ನಿನ್ನ ಸಿಡಿಲಿನಿಂದ ಭೂಗತರಾಗಿ, ಇರುಳನ್ನು ತಮ್ಮ ನರಳುವಿಕೆಗೆ ಸಾಕ್ಷಿಯನ್ನಾಗಿ ಮಾಡಿ, ಅನಿರೀಕ್ಷಿತ ಸ್ಮೃತಿಖಡ್ಗಗಳು ತಮ್ಮನ್ನು ಇರಿದಾಗ ಗೋಳಿಟ್ಟು, ಅಸಹನೀಯವಾದ ಚಿಂತೆಯಿಂದ ಕ್ಷಣಕಾಲ ಶತಪಥ ತಿರುಗಿ ಹ್ರಸ್ವವೇದನೆಯಿಂದ ಬಸವಳಿದು ಕುಸಿಯುತ್ತಾರೆ. ನಾನಾದರೋ ಅದೊಂದನ್ನೂ ಮಾಡುವುದಿಲ್ಲ. ನಮ್ಮನ್ನು ನಡುಗಿಸುವ ಓ ಭಯಂಕರ—ರಹಸ್ಯವೇ, ವಿಶಾಲತಮವೇ, ಎಲ್ಲೋ ನಾನರಿಯದಲ್ಲಿ, ಎಂತೋ ನಾನರಿಯದಂತು, ಓ ಮಹಾ ಚೈತನ್ಯವೇ, ನಿನ್ನ ಆ ಘೋರ ವಿಷಣ್ಣತೆ ಯನ್ನು ಮಾರಾಂತು ನಿಂತು, ನಿನ್ನನ್ನು ಬಂಧಿಸಿ, ನಿನ್ನ ಶಕ್ತಿಯೆಷ್ಟು, ಮಾನವಶಕ್ತಿ ಯೆಷ್ಟು, ಎಂಬುದನ್ನು ಒಂದು ಕೈತೋರಿಸುತ್ತೇನೆ."

ಹೀಗೆ ನುಡಿದವನು ದುಃಖದುಃಖಗಳ ನಡುವೆ ಹೆಜ್ಜೆಹೆಜ್ಜೆಗೂ ಅವಳ ಆಲೋಚನೆ ಯನ್ನು ಮತ್ತೆಮತ್ತೆ ತಾಳುತ್ತ, ತನ್ನ ಅಮರವಾದ ಮನದಲ್ಲಿ ಆ ಅಪಾರವಾದ ಯಾತನೆಯನ್ನು ಅಳೆಯುತ್ತಾ ಅನೇಕ ಮಾಸಗಳ ಕಾಲ ಅಲ್ಲಿ ಅಲೆದ. ಅಗ್ನಿಜ್ವಾಲೆ ಕಾನನವನ್ನು ದಹಿಸುತ್ತಾ ವ್ಯಾಪಿಸಿದಾಗ ಮರದ ಶಾಖೆಗಳು ತಮ್ಮ ಭವ್ಯಯಾತನೆ ಯಲ್ಲಿ ಗಗನದತ್ತ ತಿರುಗಿ ರೋದಿಸುವಂತೆ ಅವನ ಹೃದಯ ರೋದಿಸಿತು. ಯಾತನೆ ಯಿಂದ ಗಾಂಭೀರ್ಯವನ್ನು ಪಡೆದ ತನ್ನ ಅಮಲ ತರುಣಮುಖವನ್ನು ಅವನು ನಿಶ್ಶಬ್ದವಾಗಿ ಸ್ವರ್ಗದೆಡೆಗೆ ಎತ್ತಿದ. ಅವನ ಮೌನದಿಂದ ಭೀತರಾಗಿ ದೇವತೆಗಳೂ ಅವನಿಗಾಗಿ ದುಃಖಿಸಿದರು. ವಿಧಿ ಕೂಡ ಚಲಿಸಿತು!

ದಿವ್ಯ ಶಿಖರಗಳಿಂದ ಅವತರಿಸಿಬಂದ ಅಗ್ನಿದೇವ, ಲೋಕವಿದ್ರಾವಕಧ್ವನಿಯಿಂದ ಅಶ್ವತ್ಥವೃಕ್ಷವನ್ನುದ್ದೇಶಿಸಿ ನುಡಿದ. "ನಿನ್ನ ಬೃಹತ್‌ಶಾಖೆಗಳನ್ನು ಪಸರಿಸಿ

ಅಸಂಖ್ಯಾತ ಯೋಧರಿಗೆ ಆಶ್ರಯನೀಡುವ ಓ, ವೃಕ್ಷವೇ, ಉಜ್ವಲಶರೀರಿಯಾದ ದೇವತೆಯೊಬ್ಬನಿಗೆ ಮನೆಯಾಗಿ ಯಶೋಶರೀರಿಯಾಗು. ರಭಸದಿಂದ ಹರಿದುಬರುತ್ತಿರುವ ಮಹಾ ಪ್ರವಾಹವೊಂದನ್ನು ತನ್ನ ಹೃದಯದ ಮೌನವೇದನೆಯಿಂದ ರುರು ಎದುರಿಸುತ್ತಿದ್ದಾನೆ. ಅದರಿಂದ ದೇವತೆಗಳು ಭಯಚಕಿತರಾಗಿದ್ದಾರೆ. ತನ್ನ ಶಿಶು ಜೀವಕ್ಕೆ ಗ್ರಹಣ ಹಿಡಿದೀತೆಂದು ಆಶಂಕಿತಳಾದ ಪೃಥಿವಿ ಕಂಪಿಸುತ್ತಿದ್ದಾಳೆ. ಎಲ್ಲವನ್ನೂ ಸೃಷ್ಟಿಸುವ ಪ್ರೇಮ, ಕೇವಲ ನೋವಿಗೆ ಗುರಿಯಾದೀತೆಂದು ಭಯವೊದಗಿದೆ. ಅದರಿಂದ ಓ, ತರುವೆ, ಈ ದಿವ್ಯಾಗ್ನಿಗೆ ನೆಲೆಯಾಗಿ, ನೋವನ್ನಾದರೂ ಸಹಿಸಿ, ಆತನ ಕೋಪದ ಪ್ರವಾಹದ ದಿಕ್ಕು ಬೇರೆಡೆಗೆ ತಿರುಗುವಂತೆ ಮಾಡು." ಶುದ್ಧ ವಿನಾಶಕಾರಿಯ ಮಾತು ಮುಗಿಯಿತು. ಆ ಮೂಕ ದೇವತೆ ಮೌನವಾಗಿ ತನ್ನ ಸಮ್ಮತಿಯ ಮುದ್ರೆಯನ್ನೊತ್ತಿತು.

ಆ ಮಧ್ಯಾಹ್ನವೇ ರುರು ಅಲ್ಲಿಗೆ ಬಂದ. ಆತನ ಮನದ ಓಟ ಕ್ಷಣಕಾಲ ನಿಂತಿತು. ಮೃದುವಾಗಿ ಸಂಚರಿಸುವ ನುಣ್ಬೆಳಕು, ನೋವನ್ನು ಮರೆಯುವಂತೆ ಆಕರ್ಷಿಸಿತು. ಪಿಸುಗುಟ್ಟುವ ನೆನಹುಗಳು ಮಧುರವಾಗಿ ಐತಂದು, ಅವನ ಅಂಧಹೃದಯ ಅವಳಿನ್ನೂ ಬದುಕಿದ್ದಾಳೆ, ಎಂದು ನಂಬುವಂತೆ ಮಾಡಿದುವು. ಅಶ್ವತ್ಥವೃಕ್ಷ ನಿಧಾನವಾಗಿ ತನ್ನ ಎಲೆಗಳನ್ನು ಬಾಗಿಸಿ ಅವನ ಕೆನ್ನೆಯನ್ನು ಸಂಸ್ಪರ್ಶಿಸಿ ಕೂದಲನ್ನು ತಾಗಿತು. ಜ್ಯೋತಿಯಲ್ಲಿ ಮಿಂದವನಂತೆ ರುರು ಹಿಂತಿರುಗಿದ. ಒಂದು ಕ್ಷಣ, ಆನಂದಪೂರ್ಣವಾದ ಒಂದೇ ಕ್ಷಣ ಅದು ಅವಳೇ ಎಂಬ ಅನುಭವ ಅವನಿಗಾಯಿತು. ಹೌದು, ಹಿಂದೆ ಅನೇಕಸಲ ಆಕೆ ಅವನಿಗರಿವಾಗದಂತೆ ಹಿಂದಿನಿಂದ ಬಂದು ತನ್ನ ಪುಟ್ಟ ಬೆರಳುಗಳಿಂದ ಅವನ ಸುರುಳಿಗುರುಳುಗಳನ್ನು ಮುಟ್ಟಿನಿಂತಂತೆಯೇ ಗಾಳಿ ಅವಳ ಕೇಶವನ್ನು ಅವನಿಗೆ ಬಡಿದುದುಂಟು. ಆಕೆಯ ವೇಗವಾದ ಉಸಿರು ವಸಂತನಂತೆ ಅವನನ್ನು ಸೋಂಕಿದುದುಂಟು. ಸ್ವರ್ಗದಿಂದಲೇ ಬೆರಗುಗೊಳಿಸಲ್ಪಟ್ಟವನಂತೆ ಅವನು ದಿಡೀರನೆ ಹಿಂದಿರುಗಿ ಆಲಿಂಗನಾಪೇಕ್ಷಿಯಾದ ಅವಳ ವಕ್ಷವನ್ನು ಎದೆಗಪ್ಪಿಕೊಂಡುದುಂಟು. ಆದರಯ್ಯೋ ಈಗ ಅವನು ಕಂಡುದು ಅವಳನ್ನಲ್ಲ, ಹಿಂಜರಿದು ಮುದುಡಿಕೊಳ್ಳುತ್ತಿದ್ದ ದೋಷಿ ವೃಕ್ಷವನ್ನು ! ಮತ್ತೆ ದುಃಖ ದ್ವಿಶಿಖರಗಳೊಡನೆ ಮೇಲೆದ್ದಿತು. ಅವನ ಮುಖ ಯಾತನೆಯ ಕಲೆಯನ್ನು ತೊಟ್ಟಿತು. ತಪದಿಂದ ಮೂಡಿದ, ಹಿರಿಯರ ಪರಂಪರೆಯಿಂದ ಬಂದ ಶಕ್ತಿ, ಅವನೆದೆಯಿಂದ ಜ್ವಾಲೆಯೆದ್ದಿತು. ಮೌನವನ್ನು ಸಹಿಸದೆ ಆತ ನುಡಿದ. "ಓ ಅಶ್ವತ್ಥವೃಕ್ಷವೇ, ಉದ್ದೇಶಪೂರ್ವಕವಾಗಿ ನನ್ನ ಹೃದಯದ ಯಾತನೆಯನ್ನು ಅಣಕವಾಡಿದ ನೀನು ಇನ್ನುಮುಂದೆ ತಂಗಾಳಿಯ ಸೊಗಸಿನಿಂದ, ಹಸುರಿನ ಆನಂದದಿಂದ ದೀರ್ಘಕಾಲ ವಂಚಿತನಾಗುತ್ತೀಯೆ. ಎಲ್ಲಿಯ ವರೆಗೆ ನಿನ್ನ

ಶಪಿತಛಾಯೆಯಲ್ಲಿ ಆರ್ಯಭೂಮಿಯ ರಥಗಳು ಯುದ್ಧಧ್ವನಿಯನ್ನು ಮೊಳಗು ತ್ತಿವೆಯೋ ಅಲ್ಲಿಯ ವರೆಗೆ ನಿನ್ನ ಈ ಅಪರಾಧಿಗಳಾದ ಪರ್ಣಗಳು ಅಗ್ನಿ ಜ್ವಾಲೆಯಲ್ಲಿ ಬದುಕಲಿ. ದೇವಿ ಸರಸ್ವತಿ ತನ್ನ ವಿಶಾಲವಾದ ಶೀತಲತರಂಗಗಳಿಂದ ಅಪವಿತ್ರವಾದ ನಾಡುಗಳನ್ನು ಹರಸದಿರಲಿ."

ಅಸಹನೀಯವಾದ ವೇದನೆಯ ತಪಸ್ಸಿನಿಂದ ಹೃದಯದಲ್ಲಿ ಸಂಗ್ರಹಿತವಾಗಿದ್ದ ಅದಮನೀಯವೂ ಲೋಕವಿನಾಶಸಮರ್ಥವೂ ಆದ ಶಕ್ತಿ ಹೀಗೆ ಶಾಪರೂಪದಲ್ಲಿ ಹೊರಬಂದಿತು. ಲೋಕವೇನೋ ಸಂತಸದ ನಿಟ್ಟುಸಿರನ್ನು ಬಿಟ್ಟಿತು. ಆದರೆ ಅಶ್ವತ್ಥ ವೃಕ್ಷಮಾತ್ರ ತನ್ನ ವಿಧಿಯನ್ನರಿತು ಅಸಾಧ್ಯವಾದ ವೇದನೆಯಿಂದ ಅಗ್ನಿ ಜ್ವಾಲೆಯ ನಿಟ್ಟುಸಿರನ್ನು ಬಿಡಬೇಕಾಗಿ ಬಂದಿತು.

ರುರು, ಸೂರ್ಯನೆಡೆಗೆ ಕೈಚಾಚಿ "ಪ್ರಿಯಂವದಾ" ಎಂದು ಕೂಗಿದ. ಆ ಅತಿಪ್ರಿಯವಾದ ಹೆಸರಿನ ಉಚ್ಚಾರಣೆ, ತನ್ನ ಹಿಂದೆಯೇ ನೂರು ನೆನಪುಗಳ ಮಧುರಯಾತನಾತರಂಗಗಳನ್ನು ಹೊತ್ತುತಂದಿತು. ಮತ್ತೆ ಮೆಲುವಾದ ಸರಳು ದನಿಯಲ್ಲಿ ಆತ ನುಡಿದ. "ಓ, ಮ್ಲಾನ ಪ್ರಿಯಂವದಾ! ಮೃತ್ಯುವಶಳಾದರೂ ನನ್ನ ದುಃಖಕ್ಕಾಗಿ ಇನ್ನೂ ಬದುಕಿರುವ ಸುಂದರ ಪುಷ್ಪವೇ! ಏನೂ ಅರಿಯದ ತರುವನ್ನು ಮಾತ್ರ ನಾನು ಕೊಂದೆ. ಭೃಗುವಾಗಲೀ, ಭೃಗುವಿನ ಮಗನಾದ ನನ್ನ ತಂದೆಯಾಗಲೀ ನನ್ನಂತಿರಲಿಲ್ಲ. ಅವರ ವಂಶದಲ್ಲಿ ಜನಿಸಿದ ನಾನು ಅವನತಿ ಹೊಂದು ತ್ತಿದ್ದೇನೆ. ಓ ಮೃತ್ಯುವೇ! ನಕ್ಷತ್ರಗಳಿಂದೀಚೆಗೆ ಮುಖವನ್ನು ತೋರಿಸಲು ಹಿಂಜ ರಿದು, ಮುಖವಾಡವನ್ನು ಧರಿಸಿ ಹೊರಬಂದು ನಮ್ಮ ಪ್ರಿಯರನ್ನು ಆಕ್ರಮಿಸಬಲ್ಲೆ; ಪ್ರೇಮದೊಡನೆ ಮಾತ್ರ ಸೆಣಸಲಾರೆ. ನಿನ್ನ ದುಗುಡದ ಆ ಗೃಹದಿಂದ ಯಾರೂ ಹಿಂತಿರುಗಿ ಬಂದು ಅದರ ದಾರಿಯನ್ನು ಹೇಳಲೊಲ್ಲರು. ಆದರೆ ತನಗೆ ನೆರವು ನೀಡ ಬಲ್ಲ ದೇವತೆಯೊಬ್ಬನನ್ನು ಸ್ವರ್ಗದಿಂದ ಎಳೆದುತರುವ ಶಕ್ತಿ ಪ್ರೇಮಿಯ ನಿರಂತರ ಯಾತನೆಗೆ ಇರುವುದಾದರೆ, ಪ್ರೇಮಿಯ ಯಾತನೆಯಿಂದ ಅಂತಹ ತಪಶ್ಶಕ್ತಿ ಸಾಧ್ಯ ವಾಗುವುದಾದರೆ ನನ್ನ ಈ ಮೂಕವೇದನೆ ಸರ್ವಶ್ರುತವಾಗಲಿ. ಓ, ಮೃತ್ಯುಶತ್ರು, ನೀನು ಯಾರೇ ಆಗಿರು; ಅವತರಿಸಿ ಬಂದು ನನ್ನನ್ನು ಆ ನಿಸ್ತೇಜ ದ್ವಾರದೆಡೆಗೆ ಕರೆದೊಯ್. ಏಕೆಂದರೆ ಅಗ್ನಿಯಂತೆಯೇ ಕ್ರೂರಿಯಾದ ಜ್ವಾಲೆಗಳಲ್ಲಿ ನಾನು ಬೆಂದಿದ್ದೇನೆ; ಮತ್ತು ಖಡ್ಗಗಳಿಗಿಂತ ಹರಿತವಾದ ಶಯ್ಯೆಯ ಮೇಲೆ ಪವಡಿಸಿದ್ದೇನೆ."

ಆತನ ಮಾತು ಮುಗಿಯಿತು. ಸ್ವರ್ಗರೋಮಾಂಚನಗೊಂಡಿತು. ಅಸೀಮ ನೀಲಿಮೆ ಅದೃಶ್ಯವಾದ ರೆಕ್ಕೆಗಳಿಂದ ಕೂಡಿಯೋ ಎಂಬಂತೆ ಒಮ್ಮೆ ಕಂಪಿಸಿತು.

ರುರು ರಾಗೋತ್ಕರ್ಷತೆಯಿಂದ ಕೂಡಿ, ಸಂಜೆಯೊಡನೆ ಮುಂದೆ ನಡೆದು ತಂಪುಕಾಂತಿಯಿಂದ ಕೂಡಿದ ಹಸುರು ಬಯಲಿಗೆ ಬಂದ. ಅಲ್ಲಿ, ಒಂದೇ ಒಂದು ಗಿಣಿ, ತಾರಸ್ವರದಲ್ಲಿ ಮಧುರವಾಗಿ ದನಿಗೈಯುತ್ತಿತ್ತು. ಗಂಧರ್ವಮಾರುತನಲ್ಲಿ ಮಿಂದು ನಿಂದ ತರುವೊಂದನ್ನು ನೆಮ್ಮಿ, ಅರೆನಗ್ನನಾದ ಸ್ವರ್ಣಬಾಲನೊಬ್ಬ ಮಧುರ ಕೋಮಲಾವಯವಗಳ ಕಾಂತಿಯನ್ನು ಹೊರಸೂಸುತ್ತ ನಿಂದುದನ್ನು ಕಂಡ. ಅವನ ನಿಲುವಿನ ಭಂಗಿಯು ಒಂದೊಂದು ವಂಕಿಮತೆಯೂ, ಕಣ್ಣುಗಳನ್ನು ಮಂತ್ರದಿಂದಲೋ ಎಂಬಂತೆ ತಮ್ಮೆಡೆಗೆ ಬಲವಾಗಿ ಆಕರ್ಷಿಸುತ್ತಿತ್ತು. ಹೃದಯವನ್ನು ದುರ್ಬಲತೆಗೆ ಪುಡಿ ಪುಡಿ ಮಾಡುತ್ತಿತ್ತು. ಅವನ ಕೈಯಲ್ಲಿ ಒಂದು ಬಿಲ್ಲು—ಸಾಮಾನ್ಯ ಬಿಲ್ಲುಗಾರರು ಉಪಯೋಗಿಸುವಂಥದಲ್ಲ. ಏಕೆಂದರೆ ಅದರ ಹಗ್ಗ ಅಲುಗಿದಾಗಲೆಲ್ಲ ಅಸಂಖ್ಯಾತ ದುಂಬಿಗಳು ಝೇಂಕರಿಸಿದಂತಾಗಿ ಹೆಸರಿಸಲಾಗದ ಸುಗಂಧವೊಂದು ಗಾಳಿಗೆ ವಿನಾಶ ಶಕ್ತಿಯನ್ನು ತುಂಬುತ್ತಿತ್ತು. ರುರುವಿನೆಡೆಗೆ ಅವನು ಮುಖ ತಿರುಗಿಸಿದ. ಅವನ ಮೋಹನ ರೂಪ ರುರುವಿನ ನಡೆಗೆ ಸರಪಣಿಯಿಕ್ಕಿತು. ರುರುವನ್ನು ಆತ ಪ್ರಶ್ನಿಸಿದ. "ಈ ವನಗಳಲ್ಲಿ ಅಲೆಯುತ್ತಿರುವ ನೀನಾರು ತರುಣ? ನಿನ್ನ ತರುಣಸುಂದರ ಮುಖವನ್ನು ಯಾವ ನೋವು ಗಂಭೀರಗೊಳಿಸಿದೆ? ನಿನ್ನ ಆ ಸುಂದರಿಯ ಅಧರ ಶುದ್ಧ ಜೇನಾಗಿ, ಆಕೆಯ ವಕ್ಷ ಮೋಹದ ಆಕರ್ಷಣೆಯಾಗಿ ಇದ್ದಿರಲೇ ಬೇಕು." ಆ ದೇವತೆಯ ಅಧೀನಕ್ಕೆ ಒಳಗಾಗಿ ರುರು ಉತ್ತರಿಸಿದ. "ಅನೇಕ ಜಗತ್ತುಗಳನ್ನು ಏಕೈಕ ಅಗ್ನಿಜ್ವಾಲೆಯನ್ನಾಗಿ ಮಾಡಬಲ್ಲ ನಿನ್ನ ಈ ಕ್ರೂರ ಸೌಂದರ್ಯದಿಂದ, ನೀನಾರು ಎಂಬುದನ್ನು ನಾನು ಬಲ್ಲೆ ಕಾಮ! ರಾಗಪಶ್ಚಾತ್ತಾಪಗಳನ್ನು ಹೆಚ್ಚಿಸುವುದಕ್ಕಾಗಿಯೇ ನೀನು ಅವಳ ವಿಷಯವನ್ನು ಕುರಿತು ಕೇಳುತ್ತಿರುವೆ. ಮಹಾಪ್ರೇಮ, ನೀನು ಅವಳನ್ನು ಬಲ್ಲೆ. ನನ್ನ ದುಃಖಾತ್ಮದ ಕನಸಲ್ಲದೆ ನೀನು ನಿಜವಾಗಿ ಮದನನೇ ಆಗಿರುವುದಾದರೆ, ನಿನ್ನ ಅಪ್ಸರಸಿ ಅವಳ ತಾಯಿ!"

ವಸಂತಗಳನ್ನು ಸೃಷ್ಟಿಸುವ ಶಾಶ್ವತ ಮಂದಸ್ಮಿತದೊಡನೆ ಆ ರತಿಪತಿ ರುರುವಿಗೆ ಉತ್ತರ ಕೊಟ್ಟ. "ಮರ್ತ್ಯ, ಅವನೇ ನಾನು. ತಾರೆಗಳಿಗೆ ಕಾಂತಿಯನ್ನು ನೀಡುವ ಬದುಕಿನ ವಿಶಾಲ ಚಿತ್ರಪಟದ ತುಂಬ ನೆಳಲು ಬೆಳಕುಗಳ, ನಲಿವು ಕಣ್ಣೀರುಗಳ ಚಿತ್ರವನ್ನು ಬಿಡಿಸುವ ಆ ಮದನ ನಾನು! ಸಾಮಾನ್ಯ ಮುಹೂರ್ತಗಳನ್ನು ಅದ್ಭುತಗೊಳಿಸುವ, ಸಾಮಾನ್ಯವಾಣಿಯನ್ನು ಮೋಹನಮಂತ್ರವನ್ನಾಗಿ ಮಾಡುವ ಮದನ ನಾನು! ಪರಸ್ಪರ ವಿರುದ್ಧಾತ್ಮಗಳ ಜೀವನ ಸಂಪರ್ಕಗಳು, ಆಕಸ್ಮಿಕ ಸಮಾಗಮಗಳು, ನೆರವೇರುವುದು ನನ್ನಿಂದಲೇ. ವಿವಾಹಜೀವನದ ಮಾಧುರ್ಯಗಳು, ಪತ್ನಿಯ ಬಿಡುವಿಲ್ಲದ ಆನಂದ, ರಾಗಪೂರ್ಣ ವಿಧೇಯತೆಗಳು, ಎಂದೆಂದೂ ಬೇಸರ

ತರದ, ಪ್ರೇಮಪೂರ್ಣವಾದ ಸೇವೆ, ಇವೆಲ್ಲ ನನ್ನ ಕ್ರಿಯೆಯ ಫಲವೇ! ಸಂತಸದ ಮಧುರಾಧರಗಳು, ಪೂಜಿಸುವ ಮೃದುಲ ನಯನಗಳು, ಕ್ಷುಧಿತ ಬಾಹುಗಳು, ಶತಮಾನಗಳಷ್ಟು ಹಳತಾದರೂ ಮತ್ತೆ ಉಚ್ಚರಿಸುವುದರಿಂದಲೇ ಮಧುರವಾಗಿ ತೋರುವ ಒಲವಿನ ನುಡಿಗಳು, ಎಲ್ಲವೂ ನನ್ನವೇ. ಇಷ್ಟಲ್ಲದೆ ಇನ್ನೂ ವಿಧವಿಧದ ಪ್ರೇಮಸಂಬಂಧಗಳ ಮೂಲ ಕೂಡ ನಾನೇ. ಈ ನನ್ನ ಶಕ್ತಿಗಾಗಿಯೇ ಲೋಕ ನನ್ನನ್ನು ಸ್ತುತಿಸಿ ಗೌರವಿಸುವುದು! ಆದರೆ ಇನ್ನೂ ತೀಕ್ಷ್ಣವಾದ ಬಾಣಗಳು ಕೂಡ ನನ್ನಲ್ಲುಂಟು. ಸುಸ್ಥಿರವಾದ ಮನಸ್ಸುಗಳನ್ನು ಕ್ಷಣಮಾತ್ರದಲ್ಲಿ ಉರುಳಿಸುವ, ಅಮೃತಶಿಲೆಯ ಪ್ರಕೃತಿಯನ್ನೂ ಕರಗಿಸುವ ಭೀಕರ ಜಂಝೂವಾತಗಳೂ ನನ್ನವೇ. . . ."

ಆದರೆ ಮರುಗಳಿಗೆಯಲ್ಲೆ ಆತನ ಮುಖ ಅತೃಪ್ತಿಯಿಂದ ಕ್ರುದ್ಧವಾಯಿತು. "ಮೃತ್ಯುವೊಬ್ಬನೊಂದಿಗೆ ಮಾತ್ರ ನಾನು ವ್ಯರ್ಥವಾಗಿ ಹೋರಾಡುತ್ತಿದ್ದೇನೆ. ಆಗ ನನ್ನ ದೈವತ್ವವೇ ನನಗೊಂದು ಸಂದೇಹವಾಗಿ ಪರಿಣಮಿಸುತ್ತದೆ. ಓ ಮರ್ತ್ಯ, ನಕ್ಷತ್ರಗಳ ಬೆಳಕು ನಾನು, ಪುಷ್ಪಗಳ ವಿಕಾಸ ನಾನು, ಸೃಷ್ಟಿ ಎಲ್ಲವನ್ನೂ ವ್ಯಾಪಿಸಿರುವ ಹೆಸರಿಲ್ಲದ ಸುಗಂಧ ನಾನು. ಆದರೆ ನನ್ನ ಹಿಂದೆ ನನಗಿಂತ ಸನಾತನನಾದ ಆತ, ರಾತ್ರಿಯೊಂದಿಗೆ, ಶೀತಲಾದ್ಭುತ ಛಾಯೆಯೊಂದಿಗೆ ಬರುತ್ತಾನೆ. ಅವನಿರುವ ಹಾದಿಯನ್ನು ಕಂಡುಹಿಡಿಯುವುದು ಕಷ್ಟ. ಅಲ್ಲಿಗೆ ನಡೆಯುವುದು ಕಷ್ಟತರ. ಮರ್ತ್ಯ ಪಾದಗಳಿಗಂತೂ, ಅತ್ಯಸಾಧ್ಯ. ಆದರೂ, ಓ, ಸುಂದರ ತರುಣ, ನೀನಲ್ಲಿಗೆ ಹೋಗಲೇಬೇಕಾದರೆ—ನೀನಲ್ಲಿಗೆ ಹೋಗಬಲ್ಲೆ, ಏಕೆಂದರೆ ಅತೀವವಾದ ದುಃಖದಿಂದ, ಪ್ರೇಮದ ಅನವರತತೆಯಿಂದ ನಿನ್ನ ಆತ್ಮ ಅಜೇಯವಾಗಿದೆ—ಪ್ರೇಮದ ರಕ್ಷೆಯಿಂದ ಆ ಸಾಹಸೋದ್ಯಮದಲ್ಲಿ ತೊಡಗು. ಆದರೆ ಅದಕ್ಕೆ ಮುನ್ನ ಮರ್ತ್ಯಬಾಹುಗಳಿಗೆ ಮೃತರಾದ ತಮ್ಮ ಪ್ರಿಯರನ್ನು ಪಡೆಯುವುದಕ್ಕಾಗಿ ಅವರು ಒಪ್ಪಿಸಬೇಕಾದ ಬೆಲೆಯನ್ನು ಕೇಳು." ಮನ್ಮಥ ಇದನ್ನು ನುಡಿಯುತ್ತಿರುವಂತೆಯೇ ಕಾತರ ನಯನಗಳಿಂದ ಆ ಪ್ರೇಮಿ, ಕೇಳಿದ. "ಓ, ಮಹಾಕಾಮ, ಓ ಸುಂದರ ಮದನ, ಹೇಳು. ದೇಹದ ಅಥವಾ ಮನಸ್ಸಿನ ಶಕ್ತಿಯಿಂದ ಸಾಧ್ಯವಾಗುವುದಾದರೆ, ಆತ್ಮದ ಹೋರಾಟದಿಂದ, ಕರುಣೆಯನ್ನು ಉಕ್ಕಿಸುವ ವಾಣಿಯಿಂದ, ಕ್ರೌರ್ಯ ಕೂಡ ಪರಿವರ್ತಿತವಾಗುವ ಮಾತಿನಿಂದ ಸಾಧ್ಯವಾಗುವುದಾದರೆ, ಹೇಳು. ಅಥವಾ, ಹಂಬಲದ ಸುಮಧುರ ಸಂಗೀತದಿಂದ, ಅಥವಾ ಪರಿಪೂರ್ಣವಾದ ವಾಕ್ಕಿನಿಂದ ಸಾಧ್ಯವಾಗುವುದಾದರೆ ಹೇಳು. ಎಲ್ಲ ಆಸೆಗಳನ್ನೂ ಉಳಿದಿರುವ ಈ ಕೈಗಳಿಂದಾದರೂ ಆ ಮೃತ್ಯುವಿನೊಡನೆ ಹೋರಾಡುವುದು ಸಾಧ್ಯವಾಗುವುದಾದರೆ ಹೇಳು. ಇನ್ನು ಬೆಲೆ ಕೊಟ್ಟು ಪಡೆ

ಯುವುದಾದರೆ ಎಷ್ಟೊಂದು ಸುಲಭವಾಯಿತು ! ಹೇಳು, ಯಾತನಾಪೂರ್ವಕವಾದ ಕಂಬನಿಗಳೇ ? ಅವುಗಳ ಅಸಂಖ್ಯಾತ ಕಾಲುವೆಗಳನ್ನೇ ಹರಿಸುತ್ತೇನೆ. ಅಥವಾ ಶತಮಾನಗಳ ಕಾಲ, ಆತ್ಮ ದೇಹಗಳ ಅನಂತ ಯಾತನೆ ಸಹಿಸುತ್ತೇನೆ. ಆಕೆಯ ಪುಟ್ಟ ಕೈಗಳ ಸ್ಪರ್ಶವನ್ನು ನಾನು ಮತ್ತೆ ಅನುಭವಿಸುವುದಾದರೆ, ಉಸಿರಾಡುವ ಆಕೆಯ ವಕ್ಷ ಮತ್ತೆ ನನ್ನ ವಕ್ಷವನ್ನಪ್ಪುವುದಾದರೆ, ಅದರ ಮುಂದೆ ಎಲ್ಲವೂ ಅಲ್ಪ." ಸಲಿಗೆಯ ಮುಗುಳುನಗೆಯೊಂದನ್ನು ಬೀರಿ ಮನ್ಮಥ ನುಡಿದ "ಓ, ಅಜ್ಞಪ್ರೇಮಿ, ಕ್ರೌರ್ಯಕುಂದದ ಆ ಮೃತ್ಯುವನ್ನು ನಿನ್ನ ಕಣ್ಣೀರಿನಿಂದ ಒಲಿಸಲಾರೆ. ನಿನ್ನ ಎಲ್ಲ ಯಾತನೆಗಳನ್ನೂ ಕಂಡು ಆತ ಕನಿಕರಿಸುವುದಿಲ್ಲ. ಅಥವಾ ಆತನ ಆ ಪಾಷಾಣ ನಯನಗಳು ಸಂಗೀತದಿಂದ ಮೃದುವೂ ಆಗುವುದಿಲ್ಲ. ಪ್ರೇಮದ ನುಡಿಗಳಂತೂ ಆತನಿಗೇ ಬೇಡವೇಬೇಡ. ಅಥವಾ ಒಂದೇ ಒಂದು ಸುಂದರ ಪುಷ್ಪ ಕೂಡ ಬಾಡುವುದನ್ನು ತಡೆಯಲಾರದ ಆ ನೆರಳಿನೊಂದಿಗೆ ನೀನು ಹೋರಾಡುವುದಾದರೂ ಎಂತು ? ದೇವತೆಗಳು ಮಾನವರಿಂದ ಬಯಸುವುದು ಒಂದೇ ಒಂದು. ಅದು ಯಜ್ಞ. ಅದಿಲ್ಲದೆ ಯಾವ ಮಣಿ ಮಕುಟವೂ ಸಾಧಿತವಾಗದು. ಆದರೂ ಅದರಲ್ಲಿ ಕೂಡ ಬಗೆಬಗೆಯ ಯಜ್ಞಗಳುಂಟು. ಪ್ರಾಣಿಗಳ ಆಹುತಿ, ರಕ್ತಸುರೆಗಳ ಹವಿಸ್ಸನ್ನು ನೀಡುವಿಕೆ, ಪುಷ್ಪಗಳ ಅರ್ಪಣೆ, ಇಂಥವು. ಪವಿತ್ರ ಕರ್ಮಗಳ, ಪವಿತ್ರವಾದ ಆಲೋಚನೆಗಳ ಸುಗಂಧ ಸಮರ್ಪಣೆ, ಅಥವಾ ದಾನ, ಅಥವಾ ಒಲಿದ ಹೃದಯಗಳಿಲ್ಲದ ಮರುಭೂಮಿಯ ನಿವಾಸ ಇಂಥವು. ಆದರೆ, ಮೃತ್ಯುದೇವನಿಗೆ ಇದಾವುದೂ ಬೇಡ. ಪವಿತ್ರ ಹೃದಯವನ್ನೆಂತೋ ಅಂತು ಅಪವಿತ್ರ ಹೃದಯವನ್ನೂ ಆತ ಸಂದರ್ಶಿಸುತ್ತಾನೆ. ಆ ಪೇಶಲ ಪಿಶಾಚಕ್ಕೆ ಬೇಕಾದುದು ಒಂದೇ, ಅದು ಪ್ರಾಣ. ತೀರ ಬೇಗ ಕಡಿದುಹೋದ ಆ ನಿನ್ನ ಆನಂದಾತ್ಮದ ಜೀವಸೂತ್ರವನ್ನು, ನಿನ್ನ ಮಧುರವಾದ ಜೀವನದ ಅರ್ಧವನ್ನು ತೆತ್ತು, ಮತ್ತೆ ದೀರ್ಘಗೊಳಿಸಬಲ್ಲೆ. ಓ, ರುರು. ನಿನ್ನ ಮುಂದೆ ಇರುವ ಆ ಅನಿಶ್ಚಿತ ದಿನಗಳು !—ಆದರೂ ಎಷ್ಟು ಮಧುರ !—ಸುಮ್ಮನೆ ಉಸಿರಾಡುವುದರಲ್ಲೇ ಎಂತಹ ಸುಖವಿದೆ ! ಅವುಗಳನ್ನು ಕಳೆದುಕೊಂಡ ಮೇಲೆ ಅವುಗಳ ಸೊಗಸು ನಿನಗೆ ತಿಳಿಯುತ್ತದೆ. ಹಗಲಿನ ಕಾಂತಿಯೆಷ್ಟು ! ಬರಿಯ ನಿದ್ರೆಯೇ ಎಷ್ಟು ನವುರು ! ಬಳಲಿದ ದೇಹಕ್ಕೆ ಎಂತಹ ಸ್ನೇಹಪೂರ್ಣ ಆಲಿಂಗನ ! ದಿನ ದಿನದ ಸಾಮಾನ್ಯ ಆಹಾರದಲ್ಲಿ ಕೂಡ ಎಂತಹ ರುಚಿ ! ಹೇಳು, ರುರು, ಬೆಳಕು ನಲಿವುಗಳ ನಿನ್ನ ಈ ಮಧುಜೀವನದ ಅರೆಭಾಗವನ್ನು ತೆತ್ತುಬಿಡುವೆಯೇನು ? ಮರೆಯಬೇಡ ; ಅವಳು ನೀನಲ್ಲ. ನಿನ್ನ ಹೃದಯದ ನಲಿವು ಅವಳ ಹೃದಯದಲ್ಲಿ ಪ್ರತಿಫಲಿತವಾಗುವುದಿಲ್ಲ. ಅಥವಾ ನಿನ್ನ ದೇಹಕ್ಕೆ ಯಾತನೆಯಾದಾಗ ಅವಳೇನು

ನೋವಿನಿಂದ ಕೂಗಿಕೊಳ್ಳುವುದಿಲ್ಲ. ಗಗನದ ತಾರಗೆಗಳಂತೆ ಮಾನವರು ಒಬ್ಬರು ಮತ್ತೊಬ್ಬರನ್ನೇನೋ ನೋಡುತ್ತಾರೆ. ಆದರೆ ಒಂದು ಹೃದಯದ ನೋವು ನಲಿವುಗಳು ಮತ್ತೊಂದು ಹೃದಯದ ನೋವು ನಲಿವುಗಳಾಗುವುದಿಲ್ಲ. ಇದನ್ನೂ ನೆನೆ, ರುರು; ಜಗತ್ತಿನಲ್ಲಿ ಅನೇಕ ಸುಂದರ ಮುಖಗಳಿವೆ. ಆದರೆ ನೀನು ಮಾತ್ರ ಒಬ್ಬನೇ. ಅದರಿಂದ ಯೋಚಿಸು. ಇಂತಹ ಆನಂದದ ದಿನಗಳ ಅರ್ಥವನ್ನು ತೆತ್ತು ಎಂತಹ ನೆರಳನ್ನು ಮಾತ್ರ ಪ್ರತಿಫಲವಾಗಿ ಪಡೆಯುತ್ತೀಯೆ ಎಂಬುದನ್ನು ಯೋಚಿಸು."

ರುರುವಿನ ಬಾಯಿಂದ ವೇಗವಾಗಿ ರಾಗೋತ್ಕರ್ಷದ ವರ್ಷದಂತೆ ಉತ್ತರ ಹೊಮ್ಮಿತು. "ಈ ಸೋಮಾರಿ ನುಡಿಗಳೇಕೆ ಮದನ? ಬರಿಯ ಸೂರ್ಯನ ಬೆಳಕಿನಲ್ಲೇನಿದೆ! ತೀರ ಕೊನೆಯ ವೃದ್ಧಾಪ್ಯದ ವರೆಗೂ ಬದುಕಿ ತಾಳ್ಮೆಯಿಲ್ಲದ ಜಗತ್ತಿಗೆ ಹೊರೆಯಾಗಿ, ಕೊನೆಗೆ ಕಳೆದ ವ್ಯರ್ಥವಾದ ದಿನಗಳನ್ನು ಹಿಂದಿರುಗಿ ನೋಡಿ, ಪಶ್ಚಾತ್ತಾಪದಗ್ಧವಾಗುವ ಬಾಳು ಯಾರಿಗೆ ಬೇಕಾಗಿದೆ? ಯಜ್ಞವಿಲ್ಲದ, ಪರರಲ್ಲಿ ನಮ್ಮನ್ನು ಕಾಣದ ನಿರರ್ಥಕ ಬದುಕಿನ ಅಗತ್ಯವೇನಿದೆ? ಉಳಿದವರೊಡನೆ ಹಂಚಿಕೊಳ್ಳದ ಆನಂದವಾದರೂ ಏಕೆ? ಪ್ರೇಮದ ದೇವತೆಯಾಗಿಯೂ, ಪ್ರೇಮವು ದೇಹದ ಆತಂಕಗಳನ್ನು ಸುಟ್ಟು ಬೂದಿಮಾಡುತ್ತದೆ ಎಂಬುದನ್ನರಿಯೆಯಾ? ಪ್ರೇಮಿ ತನ್ನ ಪ್ರೇಮದ ವಸ್ತುವಿನಿಂದ ಬೇರೆಯಲ್ಲ ಎಂಬುದನ್ನು, ಅವರ ಮಾತು ಮೂಕವಲ್ಲ ಎಂಬುದನ್ನು ನಾನು ಬಲ್ಲೆ. ತನ್ನ ಹೃದಯದಲ್ಲಿ ಅವಳ ಹೃದಯವನ್ನೂ, ತನ್ನ ದೇಹದಲ್ಲಿ ಅವಳ ದೇಹವನ್ನೂ, ಅವನು ಅನುಭವಿಸುತ್ತಾನೆ. ಅವರು ಸತ್ತಾಗಲೋ ಎಲ್ಲ ಶೂನ್ಯ! ಜೀವನವನ್ನು ಹ್ರಸ್ವಗೊಳಿಸಿಕೊಳ್ಳುವುದರಿಂದ ಅವಳನ್ನು ಮತ್ತೆ ಪಡೆಯಬಹುದಾದರೆ, ಆ ಬೆಲೆ ಎಷ್ಟು ಅಲ್ಪ! ಆ ಸಂತಸದ ಹ್ರಸ್ವತೆಯನ್ನು ಕಂಡು ಮನ್ವಂತರುಗಳು ಕೂಡ ಕರುಬಬಹುದು, ಏಕೆಂದರೆ ಆಗ ನಮಗೆ ಮೃತ್ಯುವಿನ ಭಯ ಇರುವುದಿಲ್ಲ. ಹುಚ್ಚು ಕಲ್ಪನೆಯೊಂದಿಗೆ ಹೋರಾಡಿ ಬದುಕಬೇಕಾದುದೂ ಇಲ್ಲ. ಶಾಂತವಾಗಿ ಆ ಛಾಯೆ ಹತ್ತಿರಕ್ಕೆ ಸುಳಿದಾಗ ಆತ್ಮ ಆತ್ಮವನ್ನಪ್ಪಿರಲು ದೀರ್ಘ ನಿಸ್ತೇಜಚುಂಬನದಲ್ಲಿರುವ ದೇಹಗಳನ್ನುಳಿದು ನಾವು ದೂರಹೋಗುತ್ತೇವೆ. ಅಲ್ಲಿ, ಸ್ವರ್ಗದಲ್ಲಿ ಸಂತಸದಿಂದ ಒಮ್ಮೊಮ್ಮೆ ಒಬ್ಬರು ಇನ್ನೊಬ್ಬರ ಕೈಯನ್ನು ಸ್ಪರ್ಶಿಸಿ—ಆ ಆನಂದವನ್ನು ಖಚಿತಪಡಿಸಿಕೊಳ್ಳುವ ಉದ್ದೇಶದಿಂದ ಮಾತ್ರ—ವಿಹರಿಸುತ್ತೇವೆ. ಅಥವಾ ನರಕದ ಭಯಂಕರ ಪ್ರವಾಹದಲ್ಲಿ ನರಳಬೇಕಾದರೆ, ಬೇರ್ಪಡದಂತೆ ಪ್ರೇಮಪೂರ್ಣವಾದ ನಮ್ಮ ದೇಹಗಳು ಬಂಧಿತವಾಗಿರಲು, ನರಕಯಾತನೆಯ ಅರ್ಥ ಒಬ್ಬೊಬ್ಬರ ಸಾಮೀಪ್ಯದಿಂದ ಆನಂದವಾಗಿ ಪರಿವರ್ತಿತವಾಗುತ್ತದೆ. ಮಾತುಗಳು ನನಗೆ ಬೇಸರತರುತ್ತವೆ ಮದನ. ಯಾವ ಶಿಶಿರ ತೀರದಲ್ಲಿಯೇ ಆಕೆ ಅಲೆಯುತ್ತಿರಲಿ, ಆ ನನ್ನ ವಸಂತರಾಣಿಯ ಬಳಿಗೆ

ನಾನು ಗರಿಮೂಡಿ ಹಾರುವಂತೆ ಮಾಡು." ಕಾತರತೆಯ ಕಣ್ಣುಗಳನ್ನರಳಿಸಿ ಆತ ಮನ್ಮಥನ ಕಡೆ ನೋಡಿದ. ಮತ್ತೊಮ್ಮೆ ಅಮರ ಸೌಂದರ್ಯಜ್ಯೋತಿಯೊಂದು ಮನ್ಮಥನ ದೇಹದಿಂದ ಹೊಮ್ಮಿತು. ಮೃದುಮಧುರವಾಗಿ ಆತ ನುಡಿದ. "ನಡೆ, ಪ್ರಿಯ ತರುಣ, ನಡೆ, ಇದೋ ಈ ಹೂವನ್ನು ನಿನ್ನ ಕೈಯಲ್ಲಿ ಹಿಡಿದಿರು. ಪರಿಶುದ್ಧ ಗಂಗೆ ಅಸ್ಪಷ್ಟ ರಭಸದ ಸಾಗರದೊಂದಿಗೆ ಒಂದಾಗುವಲ್ಲಿಗೆ ನೀನು ನಡೆ. ಅಲ್ಲಿ ಅದಕ್ಕೆ ಮೊರೆಯಿಡು."

ಶತದ್ರು, ಬಿಪಶ, ಇರಾವತಿ, ಚಂದ್ರಭಾಗಗಳನ್ನು ದಾಟಿ ಪ್ರಕೃತಿ ಮೂಕ ಸಂತಸದಿಂದ ಒರಗಿದ್ದ ವನಗಳ ಬಳಿಗೆ, ನೀರವ ಪರ್ವತಗಳ ಬಳಿಗೆ ರುರು ಬಂದ. ಗಂಗೆಯ ದಡಕ್ಕೆ ಬಂದವನು ಏಕಾಂಗಿ ಅಂಬಿಗನ ದೋಣಿಯೊಂದರಲ್ಲಿ ಕುಳಿತು ಅದು ಸಾಗರದೊಡನೆ ಸಂಗಮವಾಗುವ ವರೆಗೂ ತೇಲಿದ. ಅಲ್ಲಿ ನದಿ, ದಡಗಳು ಕಣ್ಮರೆಯಾಗುವಷ್ಟರ ಮಟ್ಟಿಗೆ ವಿಶಾಲವಾಯಿತು. ಪೃಥ್ವಿಯಲ್ಲಿ ನೀರು . . . ಗಗನವೂ ನೀರಿಗೇ ಮುಳುಗುತ್ತಿತ್ತು. ಭಯಂಕರ ತೆರೆಗಳ ನರಳುವಿಕೆ ಅವನಿಗೆ ಕೇಳಿಸಿತು. ಆ ನರಳುವಿಕೆಯನ್ನು ಮೀರಿ ಆತ ಕೂಗಿದ. "ಓ, ಅಸ್ಪಷ್ಟೋಚ್ಚಾರಣೆಯ ಸಮುದ್ರವೇ, ಕಿವಿಗೊಡು. ನಿನ್ನ ತಳವಿಲ್ಲದ ಆಳವನ್ನು ಮರ್ತ್ಯನೊಬ್ಬನ ನಡೆಗೆ ತೆರೆ. ಸಾಮಾನ್ಯ ಪಯಣಿಗನಲ್ಲ ಇವನು, ಆದರೆ ರುರು, ಮಹರ್ಷಿಪುತ್ರ. ವಿಚಿತ್ರವಾದ ನೋವಿಗೆ, ವಿಶೇಷವಾದ ಹಾನಿಗೆ, ಲೋಕದ ಎಲ್ಲ ಜನಗಳ ಮಧ್ಯೆ ಆರಿಸಲ್ಪಟ್ಟವನು." ಜೀವಂತ ವಸ್ತುವಿನಂತೆ ಆ ಮಹಾಸಾಗರ ನಡುಗಿತು. ಭಯಂಕರ ವೇಗದಿಂದ ಕ್ಷಿತಿಜದ ಮೇಲೆ ಕ್ಷಿತಿಜಗಳು ಉರುಳಿದುವು. ಮಹಾಶಬ್ದವೊಂದರೊಡನೆ ವೇಗವಾಗಿ ಸಾಗರ ಆತನನ್ನು ತನ್ನ ಒಡಲಿಗೆ ಸೆಳೆಯಿತು. ದೇವಗಂಗೆಯನ್ನು ಅಲ್ಲಿ ಆತ ಕಂಡ. ಸಹಸ್ರವಾಣಿಗಳು ಏಕಯಾತನೆಯಿಂದ ನರಳುವಂತಿದ್ದ ನುಡಿಗಳಿಂದ ಆಕೆ ನುಡಿದಳು "ಓ, ಪ್ರೇಮಿ, ನಿನ್ನ ಹೃದಯದ ರಾಗ ಇನ್ನೂ ಉಜ್ವಲವಾಗಿ ಇರುವುದಾದರೆ, ನಿನ್ನ ಉಜ್ವಲ ರಾಗದ ಹೃದಯ ಪ್ರಕೃತಿಯ ಮಹಾರಾತ್ರಿಯನ್ನು ಸಹಿಸಲು ಸಮರ್ಥವಾಗಿದ್ದರೆ, ನನ್ನೊಡನೆ ಬಾ." ಒಮ್ಮೆ ಮಾನುಷವಾಗಿದ್ದ ಆಕೆಯ ತರಂಗಗಳು ಈಗ ಮಾನವಕರಣಗಳು ಕೇಳಲಾಗದ ಯಾತನೆಯ ಕರೆಯೊಂದನ್ನು ಹೊಮ್ಮಿಸಿತು. ರುರು ಒಮ್ಮೆ ಹೆಪ್ಪುಗಟ್ಟಿದಂತಾದ. ಆದರೆ ಅವನ ಹೃದಯದ ಸಶಕ್ತಪ್ರೇಮ ಅವನಿಗೆ ತೋರ್ಬೆರಳಾಯಿತು. ಎಲ್ಲವನ್ನೂ ಸಹಿಸಿ ಆತ ಮುನ್ನಡೆದ. ನಡೆದುನಡೆದು, ಸೂರ್ಯನಾಗಲೀ ಮಳೆಯಾಗಲೀ ಇಲ್ಲದ, ಮಾನವ ಹಸ್ತದ ಕೃಷಿಗೆ ಸಿಕ್ಕದ, ಪಾತಾಳಕ್ಕೆ ಬಂದ. ಅನೇಕ ವಿಕೃತ ಸರ್ಪಾಕೃತಿಗಳ ನಡುವೆ ಅಕಂಪಿತವಾದ ಆತ್ಮದಿಂದ ಮುನ್ನಡೆದ. ಮುಂದೆ ನಡೆಯುತ್ತ, ಅನೇಕ ಚಕ್ರವರ್ತಿಗಳ, ವಿಜೇತರ, ಉನ್ನತ ಧರ್ಮಾಧಿಕಾರಿಗಳ, ಪ್ರಖ್ಯಾತ

ಮಹಿಳೆಯರ, ಕೇಳಲಾಗದ ನರಳ್ದನಿಗಳನ್ನು ಕೇಳಬೇಕಾಯಿತು. ಅವರನ್ನುದ್ದೇಶಿಸಿ ಆತ ನುಡಿದ "ಅಲ್ಪಕಾಲಮಾತ್ರ ಭೂಮಿಯಲ್ಲಿ ಸುಖದಿಂದ ಬಾಳಿ ಮತ್ತೆ ಈ ನೋವಿಗೆ ಅವತರಿಸಿ ಮತ್ತೆ ಇದನ್ನು ತೀರಿಸಿ ಮೇಲೇಳಬೇಕು. ಇದೇನು ದೌರ್ಭಾಗ್ಯ?" ಒಡನೆಯೇ ಆತನಿಗೆ ತನ್ನ ಪ್ರಿಯೆಯ ಚಿತ್ರ ಮೂಡಿತು. "ಓ, ಮಧುರ ಪುಷ್ಪವೇ ನೀನು ಕೂಡ ಈ ನೋವಿನ ಪ್ರವಾಹದಲ್ಲಿ ಸಿಕ್ಕಿ ನರಳುತ್ತಿರುವೆಯೇನು? ಅಯ್ಯೋ... ಆದರಿದೋ, ನಾನು ಧಾವಿಸಿ ಬಂದು, ಅದರ ನಿರಾಶೆಯ ಮಡುವಿನಲ್ಲಿ ಧುಮುಕಿ ನಿನ್ನ ಅಪೂರ್ವ ಸೌಂದರ್ಯವನ್ನು ಮತ್ತೆ ಹಿಂದಕ್ಕೆ ತರುತ್ತೇನೆ. ಅಥವಾ ನಿನ್ನ ಆ ಯಾತನಾ ಪೀಡಿತ ಹೃದಯವನ್ನು ಮತ್ತೆ ನನ್ನ ಎದೆಗೊತ್ತುತ್ತೇನೆ. ನಿನ್ನ ನೋವಿನ ಅರ್ಧವನ್ನು ನನ್ನ ದೇಹಕ್ಕೆ ಸೆಳೆದುಕೊಳ್ಳುತ್ತೇನೆ. ಯಾತನೆಯ ಮೇಲೆ ಸಂತಸದ ವಿಜಯವನ್ನು ಇಬ್ಬರೂ ಪಡೆಯೋಣ . . ." ಆತ ಇನ್ನೂ ಮುಂದೆ ನಡೆದ. ಮಾತಿಲ್ಲದ ದುಃಖ ಸಾಮ್ರಾಜ್ಯದಲ್ಲಿ ಸಂಚರಿಸುತ್ತಿದ್ದ ಅನೇಕ ಸುಂದರಾತ್ಮಗಳ ವೇದನಾದೀನ ವದನಗಳನ್ನು ನೋಡುತ್ತ ನೋಡುತ್ತ ಆತ ಮುಂದುವರೆದ. ಮುಂದೆ ಕಂಡ ಭವ್ಯಭವನದಲ್ಲಿ ತಕ್ಷಕ ವಾಸುಕಿಗಳನ್ನೂ ದಾಟಿದ ಮೇಲೆ ಉನ್ನತಾಸನದ ಮೇಲೆ, ಯಮ, ಧರ್ಮ, ಕೃತಾಂತ, ಇನ್ನೂ ಬಹುನಾಮಗಳನ್ನುಳ್ಳ ಮೃತ್ಯುಮೂರ್ತಿ ಮಂಡಿಸಿದ್ದ. ಯಮನಗರಿಯ ಒಂದು ವಾಣಿ ಕೇಳಿತು. "ಯಮನಗರಿಯ ಸಿಂಹಾಸನದ ಮುಂದೆ ಮಣಿದಿರುವ ಈ ಸಜೀವ ಪುರುಷನಾರು? ನರಕದ ಈ ಮೃತ್ಯುಗಾಂಭೀರ್ಯವನ್ನು ತನ್ನ ಸಜೀವಸೌಂದರ್ಯದಿಂದ ತೊಂದರೆಗೊಳಿಸುವ ಶಕ್ತಿ ಆತನ ಆತ್ಮದಿಂದ ಮೂಡಿದುದೋ, ಅಥವಾ ಹೊರಗಿನಿಂದ ಪಡೆದುಕೊಂಡುದೋ?" ಒಂದು ವಾಣಿ ಅಲ್ಲಿಯೇ ಉತ್ತರಿಸಿತು: "ದೇವಾಸುರರ ರಕ್ತಗಳೆರಡೂ ಈತನಲ್ಲಿ ಹರಿಯುತ್ತಿವೆ. ಬ್ರಹ್ಮಪುತ್ರನಾದ ಭೃಗು, ದೈತ್ಯೆ ಪುಲೋಮ, ಇವರಿಬ್ಬರ ಪುತ್ರ ಚ್ಯವನ. ಚ್ಯವನ, ಅಪ್ಸರಸೆಯರಲ್ಲಿ ಜನಿಸಿದವನು ಈತ. ಮನ್ಮಥ ಈತನಿಗೆ ಶಕ್ತಿನೀಡಿದ್ದಾನೆ. ಅದರಿಂದಲೇ ನರಕದ ಉಸಿರಿನಿಂದ ಈತ ಹೆಪ್ಪುಗಟ್ಟಲಿಲ್ಲ, ಮತ್ತೆ ನರಕವಾಹಿನಿಯ ನರಳುವಿಕೆಯಿಂದ ಶಿಲೆಯಾಗಿ ಪರಿವರ್ತಿತನೂ ಆಗಲಿಲ್ಲ." ಮನ್ಮಥನ ಹೆಸರು ಉಚ್ಚರಿಸಲ್ಪಟ್ಟೊಡನೆಯೇ ಸಕಲ ನರಕವೂ ಒಮ್ಮೆ ಚಲಿಸಿತು. ಯಮನ ಸಿಂಹಾಸನಕೂಡ ಬೈಗಿನ ಅರೆಮಂಜಾಗಿ ಪರಿವರ್ತಿತವಾಯಿತು. ಭೂತಾಕಾರದ ಸರ್ಪಗಳು ಯಾತನೆಯಲ್ಲಿಯೇ ಎಂಬಂತೆ ಭುಸುಗುಟ್ಟಿದುವು. ಅಲ್ಲೇ, ಪಕ್ಕದಲ್ಲಿ, ಕಾಲುಗಳನ್ನು ಮುಂದಕ್ಕೆಸೆದು ಮಲಗಿದ್ದ ನಾಲ್ಕು ಕಣ್ಣಿನ ನಾಯಿಗಳು ತಮ್ಮ ಭಯೋತ್ಪಾದಕ ಶಿರಗಳನ್ನು ಮೇಲೆತ್ತಿದವು. ರೋಷಾವಿಷ್ಟನಾಗಿ ಯಮ ನುಡಿದ. "ಈ ಮ್ಲಾನಸಾಮ್ರಾಜ್ಯದಲ್ಲಿ ಮನ್ಮಥನಿಗೇನು ಕೆಲಸ? ಎಲ್ಲ ಲೋಕಗಳನ್ನೂ ಆತನ ಉಸಿರು ವಿನಾಶಗೊಳಿಸಬಲ್ಲುದು. ಎಲ್ಲ

ಗಂಭೀರನಿಯಮಗಳನ್ನೂ, ದೃಢತೆಗಳನ್ನೂ ಪುಡಿಪುಡಿ ಮಾಡಬಲ್ಲುದು. ಆದರೆ ಆತನ ಪ್ರತಿನಿಧಿಗಳು ನರಕವನ್ನು ಪ್ರವೇಶಿಸಿ ಮಾತ್ರ ಹಿಂದಿರುಗಲಾರರು. ಇಲ್ಲಿ ಆತನ ವಸಂತಾಧಿಪತ್ಯಕ್ಕೆ ಎಡೆಯಿಲ್ಲ. ಆತನ ಯೌವನದ ನಿರಂಕುಶಾಧಿಕಾರವನ್ನು ಈ ಒಂದು ಲೋಕ ಮಾತ್ರ ಪ್ರತಿಭಟಿಸುತ್ತದೆ. ಇಲ್ಲಿಗೆ ಕೂಡ ಆತ ತುಮುಲ, ಸ್ವೇಚ್ಛೆಗಳನ್ನು ವ್ಯಾಪಿಸಬಲ್ಲನೇನು?" ಮತ್ತೊಂದು ವಾಣಿ ಉಚ್ಚರಿಸಿತು. "ಸ್ವರ್ಗದ ಅಪ್ಸರಸಿ ಮೇನಕೆ, ಮರ್ತ್ಯದ ಕಣಿವೆಗಳಲ್ಲಿ ಕೆಲವು ನಶ್ವರಮುಹೂರ್ತಗಳನ್ನು ಕಳೆದಳು. ಗಂಧರ್ವರಾಜನ ಸಂಪರ್ಕದಿಂದ ಆ ಅಮರ್ತ್ಯೆಯಲ್ಲಿ ಮರ್ತ್ಯಕುಸುಮವೊಂದು ಅರಳಿತು. ಆ ಪುಷ್ಪವನ್ನು ರುರು ಕಂಡು ಬಿಡಿಸಿಕೊಂಡ. ನಿನ್ನ ಮೃತ್ಯುಫಣೆಯ ಸರ್ಪವೊಂದು ಆಕೆಯನ್ನು ಬೇಗನೆ ಅಚ್ಚರಿಗೊಳಿಸಿತು. ಶೋಕಾರ್ತನಾದ ಆತ, ಮನ್ಮಥನ ಅಸ್ತ್ರದಿಂದ ರಕ್ಷಿತನಾಗಿ ಇಲ್ಲಿಯ ವರೆಗೆ ಬಂದಿದ್ದಾನೆ." ಸಕಲ ನರಕವೂ ಒಮ್ಮೆ ಬಾಗಿ, ಕೂಗಿ ನುಡಿಯಿತು "ಓ, ಹಾದಿತಪ್ಪಿದ ಮರ್ತ್ಯನೇ, ಯಜ್ಞ ಅತ್ಯಂತ ಪ್ರಬಲವಾದುದು ನಿಜ. ಅದರ ಫಲಪ್ರದವಾದ ಕರ್ಮದ ಮುಂದೆ ಸ್ವರ್ಗ ನರಕಗಳ ನಿಯಮವೆಲ್ಲ ಮಣಿಯುತ್ತವೆ ನಿಜ. ಮಡಿದ ನಿನ್ನ ಆ ಪ್ರೇಯಸಿಯನ್ನು ನಾನು ಒಪ್ಪಿಸುತ್ತೇನೆ. ಆದರೂ ಒಮ್ಮೆ ಆಲೋಚಿಸು ಮಾನವಾ! ದೇವತೆಗಳು ವಾರ್ಧಕ್ಯವನ್ನು ಕೊಟ್ಟುದು ಬಳಲಿಕೆಯ ಶಾಪವಾಗಿ ಅಲ್ಲ. ಆದರೆ ಶಾಂತ ಗಂಭೀರ ವರವಾಗಿ, ಏಕೆಂದರೆ ಅದು ಭಗವಂತನ ಕಡೆಗೆ ಸಮೆದ ಆರೋಹಣದ ಸೋಪಾನ. ಯೌವನದ ರೂಪವನ್ನೂ, ಮೃಗೀಯ ಶಕ್ತಿಯನ್ನೂ, ಕಾಲ ಎಡೆಬಿಡದೆ ಅಪ್ಪಳಿಸುತ್ತದೆ, ಮಾನವ ಮರ್ತ್ಯಮಾತ್ರನಲ್ಲ, ಆದರೆ ಆತ ನಶ್ವರತೆಯೊಡನೆ ಕ್ರೀಡಿಸುತ್ತಿರುವ ಆತ್ಮ, ಎಂಬುದನ್ನು ಎಚ್ಚರಿಸುವುದಕ್ಕಾಗಿ. ಆತ ಮೃತ್ಯುವಿನೊಂದಿಗೆ ಅಂತ್ಯವನ್ನು ಹೊಂದುವುದಿಲ್ಲ. ಅಥವಾ ತಾಯಿಯ ಬೆಚ್ಚನೆಯ ಮೂಕತೋಳುಗಳಲ್ಲಿ ಶಾಶ್ವತ ಬಂಧಿತನೂ ಅಲ್ಲ. ಅಜಾತನಾದ ಆತ, ಅಜಾತವಾದ ಸ್ವರ್ಗದಿಂದ ನಿತ್ಯ ಆಮಂತ್ರಿತ. ಬೆಳೆಯುವ ಆತ್ಮದೊಂದಿಗೆ ಆತನ ದೇಹ ಬಾಡುತ್ತದೆ. ಸಹಿಸಲಶಕ್ಯವಾದ ಅದರ ವೈಶಾಲ್ಯದಿಂದ, ಜೀವನದ ಕ್ಷಣಿಕ ಸುಖಗಳನ್ನು, ಅದು ಶಾಶ್ವತವಾದ ಆನಂದದಿಂದ ತುಂಬುತ್ತದೆ. ತಾರುಣ್ಯ, ವಯಃಪ್ರಾಪ್ತಿ, ಪರಿಣತಿ, ವಾರ್ಧಕ್ಯ ಈ ನಾಲ್ಕು ಋತುಗಳು. ತಾರುಣ್ಯ, ಆಸೆ ಆಕಾಂಕ್ಷೆ ಕನಸುಗಳ ಕಡೆಗೆ ಬಾಗುತ್ತದೆ. ವಯಃಪ್ರಾಪ್ತಿ, ರಾಗಚಿಂತನೆಗಳ ಆಳವನ್ನು ಪಡೆಯುತ್ತದೆ. ಪರಿಣತಿ, ಏಕಾಂತವಾದ ಶಿಖರದಿಂದ ತಾವು ಕೆಲಸಮಾಡಿ ನಕ್ಕು ಒಲಿದ ನಗರಗಳ ಕಡೆ ಹಿಂದಿರುಗಿ ನೋಡುವವರಂತೆ, ರಾಗ ಆಕಾಂಕ್ಷೆಗಳ ಕಡೆ ಹಿಂತಿರುಗಿ ನೋಡಿ ಚಿಂತಿಸುತ್ತದೆ. ಅದ್ಭುತವಾದ ವಾರ್ಧಕ್ಯವೋ, ಮುಂಬರಲಿರುವ ಗಗನದ ಕಡೆಗೆ ನೋಡುತ್ತದೆ. ಅಂಥದನ್ನು

ನೀನು ತ್ಯಾಗಮಾಡಬಯಸುವೆಯೇನು? ಅದಾದರೂ ಏಕೆ? ಕೆಲವೇ ವರ್ಷಗಳ ಕಾಲ ಮತ್ತೆ ಹಿಂದಿರುಗಲೇಬೇಕಾದ ಅವಳನ್ನು ಸೂರ್ಯರಶ್ಮಿಗೆ ಕರೆದೊಯ್ಯಲು. ಋಷಿಪುತ್ರ, ನಿಲ್ಲು. ಅತ್ಯಪೂರ್ವವಾಗಿ ಮಾತ್ರ ಸಡಿಲಿಸಲ್ಪಡುವ ಈ ನರಕದ ವಜ್ರ ಮುಷ್ಟಿಯನ್ನು ಸಡಿಲಿಸಿ, ನಿನ್ನ ಈ ಸುಂದರ ಜೀವವನ್ನು ತಾರಗೆಗಳಿಗೆ ಹಿಂದಿರುಗಿಸುತ್ತೇನೆ. ಅಥವಾ ನಿನ್ನ ಫಲಪೂರ್ಣವಾದ ವರ್ಷಗಳನ್ನು ಅವಿಚಲಿತವಾದ ಪೂರ್ಣತೆಗೆ ನೀಡಬೇಕಾಗುತ್ತದೆ. ಆಗ ಮಾತ್ರ ಅವಳು ಮತ್ತೆ ಅರಳುತ್ತಾಳೆ." ಮತ್ತೆ ಆ ಶತ್ರು ಛಾಯೆ ನುಡಿಯಿತು. "ಆತ ತ್ಯಾಗಮಾಡುತ್ತಿರುವ ವೈಭವವು ಅವನಿಗೆ ತೋರಿಸಲ್ಪಡಲಿ". ಮುಂದೆ ಅಗ್ನಿಜ್ವಾಲೆಯ ತ್ರಿಕೋಣಾಕೃತಿಯ ಮೇಲೆ ಲೋಕದ ಸಕಲ ವೈಭವಗಳ ಚಿತ್ರಗಳೂ ಶಿಲ್ಪಾಕೃತಿಯಲ್ಲಿ ಹಾದುಹೋದವು. ಬೌದ್ಧ ಗುಹೆಗಳಲ್ಲೋ, ಒರಿಸ್ಸದ ದೇಗುಲಗಳಲ್ಲೋ ಧ್ವನಿಪೂರ್ಣವಾದ ಶಿಲ್ಪದಿಂದ ಸೂಚಿತವಾಗಿರುವ ಸಕಲ ಆಕಾಂಕ್ಷೆಗಳ ಚಿತ್ರವೂ ಆ ಅಗ್ನಿಜ್ವಾಲೆಯಲ್ಲಿ ಗೋಚರವಾಯಿತು. ಮತ್ತೆ, ವಾರ್ಧಕ್ಯದಿಂದ ದೇವತ್ವವನ್ನು ಪಡೆದಿರುವ, ಅನಂತತೆ ತನಗೆ ಸಮೀಪದಲ್ಲೇ ಇರುವ ಒಬ್ಬ ಋಷಿಯಾಗಿ ರುರು, ತನ್ನನ್ನೇ ತಾನು ಕಂಡ. ಹಸುರು ವನಗಳಲ್ಲಿ, ಇಲ್ಲವೇ ನಾದಮಯವಾದ ನೆಳಲಿನಲ್ಲಿ, ಇಲ್ಲವೇ ಎಲ್ಲೆಯೇ ಇಲ್ಲದ ಪರ್ವತದ ತುದಿಯಲ್ಲಿ, ಸಣ್ಣ ಸಂಗತಿಗಳು ಕಲಕಲಾರದ ವೈಶಾಲ್ಯದ ಅನುಭವದಲ್ಲಿ ಆತ ಸುಳಿದ. ಆತನ ಸುತ್ತ, ಪುರಾತನ ವೃಕ್ಷವೊಂದರ ಸುತ್ತ ಎಂತೋ ಅಂತು, ಅನೇಕ ಸಸಿಗಳು ಕಾಣಿಸಿಕೊಂಡುವು, ಅವನದೇ ಕೃತಿಗಳಾದ ಅವು ಅವನ ಕೈಯ ಅಡಿಯಲ್ಲೇ ಬೆಳೆದವು. ಕಾಲವು ಮುಂದೆ ಮರೆಯದಿದ್ದ ಅನೇಕ ರಾಜರುಗಳು, ಅನೇಕ ಧೀಮಂತರು, ತಮ್ಮ ನುಡಿಗಳೇ ಮುಂದೆ ವಿಸ್ತಾರವಾದ ತತ್ತ್ವಶಾಸ್ತ್ರಗಳಿಗೆ ಬೀಜವಾಗಿ ಪರಿಣಮಿಸಿದ ಅನೇಕ ಕವಿಗಳು, ಆ ಸಸಿಗಳನ್ನು ಪೂಜಿಸಿದರು. ಮರುಕ್ಷಣವೇ, ಮೇಲೆ, ಯಾವುದೋ ರಹಸ್ಯಪೂರ್ಣವಾದ ಮುಖವು ಸುಳಿಯಿತು. ಅದರ ಸೌಂದರ್ಯದಲ್ಲಿ ಸಕಲ ಭುವನವೂ ಲೀನವಾಯಿತು. ಗಗನದಲ್ಲಿ ಪಕ್ಷಿಗಳು ಒಂದೇ ಬೀಸಿನಲ್ಲಿ ಹಾದುಹೋಗುವಂತೆ, ಬಗೆಬಗೆಯ ದರ್ಶನಗಳು ಅವನ ಬುದ್ಧಿಯಲ್ಲಿ ಮಿಂಚಿಹೋದವು. ತನ್ನ ಸಕಲ ಸಾಹಸವನ್ನು ಒಟ್ಟುಗೂಡಿಸಿ, ಆತ, ತನ್ನ ಆತ್ಮದಿಂದಲೇ ಅದರ ಅರ್ಧಜೀವನವನ್ನು ಸುಲಿದು ತೆತ್ತು ಮಿಂಚಿನಂತೆ ಉರುಳಿದ. ಶೀತಲಛಾಯೆ ಮತ್ತು ದೈತ್ಯರಾತ್ರಿಗಳು ವಿಜಯಿಯಾಗಿ ಮೇಲೆದ್ದರು. ಇದ್ದಕ್ಕಿದ್ದಂತೆಯೇ ಯಾವುದೋ ಪುಷ್ಪವರಳಿದಂತಾಗಿ ಮಹಾಸುಗಂಧವೊಂದು, ಸಕಲವನ್ನೂ ವ್ಯಾಪಿಸಿತು. ನರಕ, ಆನಂದದಿಂದ ಒಮ್ಮೆ ಕಂಪಿಸಿತು. ರುರುವಿನ ಬಳಲಿದ ಆತ್ಮದಿಂದ ಒಂದು ವಾಣಿ ನುಡಿಯಿತು. "ಏಳು, ಹೋರಾಟ ಮುಗಿಯಿತು." ಎಲ್ಲೊ

ಮೀರಿ ಬಳಲಿದ್ದ ಆ ಪ್ರೇಮಿಯ ದೇಹದಲ್ಲಿ ನವ ವಸಂತದಂತೆ ಜೀವ ಎಚ್ಚರಗೊಂಡಿತು. ಆತ ಎದ್ದ. ಮೃತ್ಯು ಅವನನ್ನು ಳಿದು ನಡೆಯಿತು. ಆದರೆ ಆತ ಎದ್ದಾಗ ಅವನು ಕಂಡ ದೃಶ್ಯವೇ ಬೇರೆ.

ಮಾಧುರ್ಯವನ್ನು ಸಾರುತ್ತಿದ್ದ ಕೋಗಿಲೆ, ಸೂರ್ಯರಶ್ಮಿಯಿಂದ ಸಂತೃಪ್ತವಾದ ಸಂತಸವನ್ನು ತಳೆದ ವಸ್ತುಗಳು. ಅವನ ಸುತ್ತ ಸುಖೋಷ್ಣತೆ. ದೇಹ ಮನಸ್ಸುಗಳನ್ನು ಶಾಂತಗೊಳಿಸಿ, ಅದರಿಂದ ಸಹಜವಾದ ಅಲೆಗಳ ನಡುವೆ ತಾವರೆ ಸಂತೋಷಿಸುವಂತೆ ತನ್ನನ್ನು ಸಂತೋಷಗೊಳಿಸುತ್ತಿದ್ದ ಪರಿಚಿತಪೃಥಿವಿ. ತನ್ನ ವಕ್ಷದ ಬಳಿ ಆಕೆಯ ವಕ್ಷವಿರುವುದನ್ನು ಅನುಭವಿಸಿ ಆತ ರೋಮಾಂಚನಗೊಂಡ. ಆ ಹಸುರಿನ ಹಿನ್ನೆಲೆಯಲ್ಲಿ ಸ್ಪಷ್ಟವಾಗಿ, ಇಂದ್ರಿಯ ಗೋಚರವಾಗಿ ಮೃತ್ಯುವಿನಿಂದ ರಕ್ಷಿತವಾಗಿ ಹಿಂತಿರುಗಿ ಬಂದ ಆ ಧವಳ ದೇಹ ಬೆಚ್ಚಗೆ ಉಸಿರಾಡುತ್ತಿದ್ದುದನ್ನು ಅವನು ಕಂಡ. ದೀರ್ಘಕಾಲ, ಅವನ ಬಯಕೆಯ ಕಣ್ಣುಗಳಿಗೆ ಅವಳ ದೇಹದ ಮಲ್ಲಿಗೆ ಆಹಾರವಾಯಿತು. ಅರೆಸಂದೇಹದಲ್ಲಿ ಆತ ಅವಳನ್ನು ಮುಟ್ಟಿ ಆಕೆ ಇರುವುದನ್ನು ಖಚಿತಪಡಿಸಿಕೊಂಡ. ನಿಟ್ಟುಸಿರು ಬಿಡುತ್ತ, ಬಿಕ್ಕುತ್ತ ಎದ್ದ ಆಕೆಯ ವಿಶಾಲ ಮರ್ತ್ಯನಯನಗಳು ಅವನ ನಯನಗಳನ್ನು ಸಂಧಿಸಿದವು. ಬಯಕೆಯ ತೋಳುಗಳನ್ನು ಆಕೆ ನೀಡಿದಳು. ಅವರ ಆತ್ಮಗಳು ಆಲಿಂಗನದಲ್ಲಿ ಒಂದಾದುವು. ತನ್ನ ದೇಹ ಸಮಸ್ತದಿಂದಲೂ ಅವನನ್ನು ಅಪ್ಪಿ, ಆಕೆ, ಬಿಕ್ಕುವ ನಗೆ, ಆನಂದದ ಕಣ್ಣೀರು, ಇವುಗಳ ನಡುವೆ ನುಡಿದಳು. "ಓ ಪ್ರಿಯ ! ಹಸುರು, ಹಸುರು ಜಗತ್ತು ! ಬೆಚ್ಚನೆಯ ಸೂರ್ಯರಶ್ಮಿ ! ಮುಂದೆ ಮಾತುಗಳು ದೊರೆಯದೆ ಆಕೆ ನಿಲ್ಲಿಸಿದಳು. ಆದರೆ ತನ್ನ ಮಕ್ಕಳ ಆನಂದದಿಂದ ಆನಂದಿತಳಾದ ಪೃಥಿವಿ, ಅವರ ಸುತ್ತ ಉಸಿರಾಡಿದಳು. ಜಗತ್ತಿನ ಪ್ರಭಾತವನ್ನು ಕೋಗಿಲೆ ತನ್ನ ಮಾಧುರ್ಯದಿಂದ ತುಂಬುತ್ತಲೇ ಇತ್ತು !

ಮಧುರಪ್ರೇಮದ ಚಿತ್ರಣದಿಂದ ಆರಂಭವಾದ ಕಾವ್ಯ, ಜಂಝಾವಾತಕ್ಕೆ ಸಿಲುಕಿದ ಪ್ರೇಮಸಾಗರದ ತೆರೆಗಳನ್ನು ದಾಟಿ, ಮತ್ತೆ ಪ್ರೇಮಿಗಳ ಮಧುರ ಮಿಲನದ ಚಿತ್ರದೊಂದಿಗೆ ಹೀಗೆ ಮುಕ್ತಾಯವಾಗುತ್ತದೆ. ತಾಯಿ ಪೃಥಿವಿಯಂತೆಯೇ ನಾವೂ ಆ ತರುಣಪ್ರೇಮಿಗಳನ್ನು ಎದೆತುಂಬಿ ಹರಸುತ್ತೇವೆ. ಅವರು ಮುಟ್ಟಿದ ಸ್ಥಿತಿ, ಜೀವನದ ಅತ್ಯುನ್ನತ ಶಿಖರ ಎಂಬ ಭ್ರಾಂತಿಯಿಂದಲ್ಲ, ಜೀವವನ್ನೇ ತೆತ್ತು ಅಂತಹ ಸ್ಥಿತಿಯನ್ನು ಮುಟ್ಟಿದರಲ್ಲ ಎಂದು.

ಅಭೂತಪೂರ್ವವಾದ ಈ ಕಾವ್ಯಸೌಂದರ್ಯದ ಹಿಂದೆ ಸಹೃದಯನ ಮತಿಗೆ ಗೋಚರವಾಗುವ ಸತ್ಯ, ಶ್ರೀ ಅರವಿಂದರು ಪ್ರತಿಪಾದಿಸಲೆಳಸುತ್ತಿರುವ ಯಜ್ಞತತ್ತ್ವ.

ಬಾಳನ್ನು ಸಂಪೂರ್ಣಗೊಳಿಸುವ ಮತ್ತೊಂದು ಪ್ರೇಮಜೀವ ತನಗೆ ನಿಜವಾಗಿಯೂ ಪ್ರಿಯವಾದುದೇ ಎಂಬ ಪ್ರಶ್ನೆಗೆ ಅರ್ಥಜೀವನದ ಉತ್ತರವನ್ನು ನೀಡಬೇಕಾಗಿ ಬರುವ ಪ್ರಸಂಗ ಅತ್ಯಪೂರ್ವವಾದದ್ದು. ಅದಿಲ್ಲದಿದ್ದರೂ ಬದುಕು ವೈಭವಪೂರ್ಣವಾಗಿರಬಲ್ಲುದು ಎಂಬ ಭರವಸೆ ಬಂದಾಗಲೂ, ಅಥವಾ ಅದಿಲ್ಲದಿದ್ದರೇ ಅದಕ್ಕಿಂತ ಮಹತೋಮಹೀಯವಾದ ಆತ್ಮವೈಭವ ಪ್ರಾಪ್ತವಾಗುತ್ತದೆ ಎಂಬ ಅರಿವು ಅಂಗೈಯ ಬಳಿಯಲ್ಲೇ ಇಡಲ್ಪಟ್ಟಾಗಲೂ, ತನ್ನ ಪ್ರೇಮದ ವಸ್ತುವಿಗಾಗಿ ತನ್ನನ್ನು ತಾನು ಯಜ್ಞಾಹುತಿಯಾಗಿ ಸಮರ್ಪಿಸಿಕೊಳ್ಳಲು ಸಿದ್ಧನಾಗುವ ವ್ಯಕ್ತಿ ಲೋಕಗೌರವಕ್ಕೆ ಪಾತ್ರನಾಗಲು ಅರ್ಹನಾಗುತ್ತಾನೆ. ಅಂತಹ ಜೀವನಾರ್ಪಣೆಯಿಂದ, ಪ್ರೇಮ ಪ್ರಪಂಚದಲ್ಲಿ ರುರು ಚಿರಂಜೀವಿಯಾಗಿ ಉಳಿದಿದ್ದಾನೆ.

—ಪ್ರಭುಶಂಕರ.

ನಿತ್ಯನಿರಂತರ*

ಅಂತರಿಕ್ಷದಾ ತೆರವಿನ ತೊರೆಯಲಿ
ತೆರೆಗಳ ಸರಿಯಿಸಿ ಸಪ್ಪಳ ಮರೆಯಿಸಿ
ಮಹದಾಕಾರದ ಭೂಮಂಡಳವಿದು
ತೂಗಿದೆ ಸಾಗಿದೆ ನಿತ್ಯನಿರಂತರವು. ‖ ೧ ‖

ಸೂರ್ಯನ ಸುತ್ತುವ ಸವಿಯಾಟದಲಿ
ಕತ್ತಲೆಬೆಳಕಿನ ಬೆರೆಯದ ಬೇಟದಲಿ
ಬೈಗುಬೆಳಗುಗಳನೆಡೆಯೆಡೆಗಳಲಿ
ಚಣಚಣ ಕುಣಿಸಿದೆ ನಿತ್ಯನಿರಂತರವು ‖ ೨ ‖

ಏನದು ಬಣ್ಣದ ಬೆರಗಿನ ಮಾಯೆ!
ನೇಸರನೆಡೆ ತಿರೆ ತೆರಳುವ ಹೊರಳುವ
ಸಮಯದಿ ಮುಗಿಲಲಿ ಸಾವಿರ ಕಿರಣದ
ಸೊಬಗದು ಸೂಮ್ಮಿದೆ ನಿತ್ಯನಿರಂತರವು. ‖ ೩ ‖

ಬಿಸಿಲೇರಾಟಕೆ ನೆರೆಕಾಯುತ ಜಲ-
ರಾಶಿಯು ಮೇಲೇರುತ ಸುರಿಸುರಿಯಲು
ನೇಹದ ಮಳೆಯುನು ತಂಪಿನ ತಳಿಯುನು
ಹಸುರಿಸುವುದು ನೆಲ ನಿತ್ಯನಿರಂತರವು. ‖ ೪ ‖

ನಸುನಸುಹೆಚ್ಚುತ ಬಿದಿಗೆಯ ಚಂದಿರ
ಹುಣ್ಣಿವೆ ಹೊಗರಲಿ ಜನಮನ ಮುಳುಗಿಸಿ
ಸೊರಗುತ ಕರಗುತ ಕತ್ತಲೆ ಬೆಳೆಯಿಸೆ
ಸಾಗಿದೆ ಸಂಸೃತಿ ನಿತ್ಯನಿರಂತರವು. ‖ ೫ ‖

ತಿಮಿರವು ತಬ್ಬಿರೆ ನೆಲದಗಲವನು
ಮೇಲದೆ ಬಗೆಯಲಿ ದಿಗಿಲನು ಬಿತ್ತುವ
ಮಿಸಲ ಮೋಹಿನಿ ತಾರೆಯ ತಿಂತಿಣಿ
ಕಣ್ಣನು ತುಂಬಿದೆ ನಿತ್ಯನಿರಂತರವು. ‖ ೬ ‖

* ಆಲ್-ಇಂಡಿಯಾ ರೇಡಿಯೋವಿನ ಮೈಸೂರು ಕೇಂದ್ರದಿಂದ ಪ್ರಸಾರಗೊಂಡ ಕವಿತೆ.

ಬೆರೆತುವೆ ಮೈಮನ, ಜನನಕೆ ಸೂಚನ
ಅಳುದನಿ ಕೇಳಿತು, ತೊಟ್ಟಿಲು ತೂಗಿತು
ಜನ್ಮದ ಯಾತ್ರೆಗೆ ಹೊಸಪಥಿಕನು ಬರೆ
ಬದುಕಿದು ನಡೆದಿದೆ ನಿತ್ಯನಿರಂತರವು. ‖ ೭ ‖

ಆಸೆಯ ಸೆಳೆತಕೆ ಜೀವಗಳೊಲಿದು
ಏನನೊ ಬಯಸಿರೆ ಏನೋ ಫಲಿಸಿರೆ
ನೋಯುತ ಬೇಯುತ ಸಾವಿನ ಬಳಿಬರೆ
ಮುಗಿಯುವುದೆಲ್ಲವು ನಿತ್ಯನಿರಂತವು. ‖ ೮ ‖

ಸತ್ವವ ಮುಸುಕುತ ಸೌಖ್ಯವ ಹಿಸುಕುತ
ನೆರೆದಿರೆ ಅಸುರರು ರಿಂಗಣಗುಣಿಯುತ
ಸುರಲೋಕದ ಸಿರಿ ತಿರೆಯಲಿ ಬರಿಸುವ
ಕನಸಿಗ ಜನಿಸುವ ನಿತ್ಯನಿರಂತರವು. ‖ ೯ ‖

ಎಂದಿನ ಸತ್ಯವು ಇಂದಿಗೆ ಕಾಂಬೊಲು
ತನ್ನದೆ ಸೂತ್ರದಿ ತಾನೇ ನಡೆಯಿಪ
ಮಾಟಕನವನಿರೆ ನೋಟಕ ನಾನಿರೆ
ನಾಟಕ ನಡೆದಿದೆ ನಿತ್ಯನಿರಂತರವು. ‖ ೧೦ ‖

—ರಂ. ಶ್ರೀ. ಮುಗಳಿ.

ಸಸ್ಯಪ್ರಪಂಚ

ಭೂಮಂಡಲದಲ್ಲಿ ಜೀವಿಸುತ್ತಿರುವ ಎಲ್ಲಾ ಜೀವಿತ ವಸ್ತುಗಳನ್ನು ಎರಡು ಗುಂಪಾಗಿ ವಿಂಗಡಿಸಬಹುದು: ಸಸ್ಯಗಳು ಮತ್ತು ಪ್ರಾಣಿಗಳು. ಸಾಮಾನ್ಯರಿಗೆ ತಿಳಿದಿರುವುದಕ್ಕಿಂತ ಹೆಚ್ಚಾಗಿ ಸಸ್ಯಗಳಿಗೂ ಪ್ರಾಣಿಗಳಿಗೂ ಹೋಲಿಕೆ ಇದೆ. ಎಷ್ಟೋ ಸಾರಿ, ಕೆಲವು ಸೂಕ್ಷ್ಮ ಜೀವಿತ ವಸ್ತುಗಳು ಪ್ರಾಣಿಗುಂಪಿಗೆ ಸೇರಿದವುಗಳೆ ಅಥವಾ ಸಸ್ಯಗುಂಪಿಗೆ ಸೇರಿದವುಗಳೆ ಎಂದು ಹೇಳುವುದೇ ಕಷ್ಟವಾಗುತ್ತದೆ. ಈಗ ನೋಡಿ, ಒಂದನೇ ಚಿತ್ರದಲ್ಲಿ ಕೊಟ್ಟಿರುವ "ಅ" ಮತ್ತು "ಆ" ಜೀವಿತ ವಸ್ತುಗಳನ್ನು— ಈ ಎರಡು ಜೀವಿಗಳು ಯಾರನ್ನಾದರೂ ದಿಗ್‌ಭ್ರಮೆಗೊಳಿಸದೆ ಇರಲಾರವು. ಇವು ಎರಡು ಬಣ್ಣವಿಲ್ಲದ, ನಿರ್ವರ್ಣ (Colourless) ಅಣುಜೀವಿಗಳು. ಇವು ನೀರಿನಲ್ಲಿ ಉಬ್ಬಿನ (Cilia) ಹಾಗಿರುವ ಸೂಕ್ಷ್ಮ ಕೂದಲಿನ ಸಹಾಯದಿಂದ ಓಡಾಡುತ್ತವೆ. "ಆ" ಅಣುವಸ್ತು ಟೈಫಾಯಿಡ್ (Typhoid Germ) ಅಥವಾ ವಿಷಮ ಶೀತಜ್ವರ ಕ್ರಿಮಿ, ಇದು ಸಸ್ಯಪ್ರಪಂಚಕ್ಕೆ ಸೇರಿದ್ದು. "ಅ" ಅಣುವಸ್ತು ಪ್ಯಾರಮೀಸಿಯ (Parameacia), ಪ್ರಾಣಿಪ್ರಪಂಚಕ್ಕೆ ಸೇರಿದ್ದು. ಇನ್ನೂ ಕೆಲವು ಅಣುಜೀವಿಗಳು ವೈಜ್ಞಾನಿಕರಿಗೂ ತಬ್ಬಿಬ್ಬು ಹಿಡಿಸುತ್ತವೆ. ವೈರಸ್ (Virus) ಎಂಬ ವಸ್ತು ಪ್ರಾಣಿಯೋ ಸಸ್ಯವೋ ಜೀವಿಯೋ ನಿರ್ಜೀವಿಯೋ ಎಂಬ ಅನುಮಾನ ಇನ್ನೂ ಇದೆ. ಇಷ್ಟಾದರೂ, ಕಣ್ಣಿಗೆ ಗೋಚರವಾಗುವ ಸಸ್ಯಗಳನ್ನು ಮತ್ತು ಪ್ರಾಣಿಗಳನ್ನು, ಇದು ಸಸ್ಯ ಇದು ಪ್ರಾಣಿ ಎಂದು ಹೇಳುವುದು ಯಾರಿಗೂ ಕಷ್ಟವಾಗಿ ತೋರುವುದಿಲ್ಲ. ಒಂದು ಬೆಕ್ಕು ಮತ್ತು ದಾಸವಾಳದ ಗಿಡ ನಿಮ್ಮ ಎದುರಿಗಿದ್ದರೆ ಪ್ರಾಣಿ ಯಾವುದು, ಸಸ್ಯ ಯಾವುದು ಎಂಬ ಅನುಮಾನದ ಪ್ರಶ್ನೆಯೇ ಬರುವುದಿಲ್ಲ.

ಸಸ್ಯಗಳ ಮತ್ತು ಪ್ರಾಣಿಗಳ ಯಾವ ಯಾವ ವಿಶೇಷ ಗುಣಗಳಿಂದ (Characteristics) ಸಸ್ಯಕ್ಕೂ ಪ್ರಾಣಿಗೂ ಇರುವ ವ್ಯತ್ಯಾಸಗಳನ್ನು ಹೇಗೆ ಸಕಾರಣವಾಗಿ ಹೇಳಬಹುದೆಂಬುದನ್ನು ಸ್ವಲ್ಪ ವಿಚಾರಮಾಡೋಣ:

(೧) ಎಲ್ಲೋ ಕೆಲವನ್ನು ಬಿಟ್ಟರೆ, ಸಸ್ಯಗಳಿಗೆ ಪ್ರಾಣಿಗಳಿಗಿರುವಂತೆ ಸ್ಥಳದಿಂದ ಸ್ಥಳಕ್ಕೆ ಚಲನೆ ಇಲ್ಲ. ಸಸ್ಯದ ಅಂಗಗಳು ಚಲಿಸಬಹುದು: ಹೂವು ಅರಳುವುದು, ಕುಡಿ ಚಾಚುವುದು, ಬಳ್ಳಿ ಟೆಂಡ್ರಿಲ್ಸ್ (Tendrils) ಮುಂತಾದ ಸಸ್ಯದ ಅಂಗಗಳು ಚಪ್ಪರಕ್ಕೆ, ಊರೆಗೆ ಹಬ್ಬಿಹೋಗುವುದು, ಅಥವಾ ಸುತ್ತಿಕೊಳ್ಳುವುದು, ಇವೆಲ್ಲಾ ಒಂದು

ರೀತಿಯ ಚಲನೆಗಳು. ಆದರೆ ಪ್ರಾಣಿಗಳು ಚಲಿಸುವಂತೆ ಸಸ್ಯಗಳು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗುವುದಿಲ್ಲ.

(೨) ಸುಮಾರು ೪/೫ ಭಾಗದಷ್ಟು ಸಸ್ಯಗಳೆಲ್ಲಾ ಹಸುರು ಬಣ್ಣದ ಸಸ್ಯಗಳು (Green Plants). ಇಂತಹ ಗಿಡಗಳಲ್ಲಿ ಕ್ಲೋರೋಫಿಲ್ (Chlorophyll) ಎಂಬ ಹಸುರು ಬಣ್ಣದ ವಸ್ತು (Sujment) ಇದೆ. ಈ ಕ್ಲೋರೋಫಿಲ್ ಸಹಾಯದಿಂದ ಸಸ್ಯಗಳು ತಮಗೆ ಬೇಕಾದ ಆಹಾರವನ್ನು ಗಾಳಿಯಲ್ಲಿರುವ ಇಂಗಾಲಾಮ್ಲ,



ಚಿತ್ರ ೧

ಬೇರಿನಿಂದ ಬರುವ ನೀರು ಮತ್ತು ಸೂರ್ಯನ ಬಿಸಿಲಿನ ಸಹಾಯದಿಂದ ಸಿದ್ಧಿಸಿ ಕೊಳ್ಳಬಲ್ಲವು. ಈ ಶಕ್ತಿ ಪ್ರಾಣಿಗಳಿಗೆ ಇಲ್ಲ, ಪ್ರಾಣಿಗಳು ಸಿದ್ಧವಾದ ಆಹಾರವನ್ನು ಮಾತ್ರ ತೆಗೆದುಕೊಳ್ಳುತ್ತವೆ. ಅಂದರೆ ಪ್ರಾಣಿಗಳ ಆಹಾರ ಸಸ್ಯಗಳಿಂದಲೇ ಬರಬೇಕು. ೧/೫ ಭಾಗ ಗಿಡಗಳಿಗೆ ಹಸುರುಬಣ್ಣ ಇಲ್ಲ. ಇವುಗಳಲ್ಲಿ ಕೆಲವು, ಸಸ್ಯದ ಅಥವಾ ಪ್ರಾಣಿಗಳ ಕೊಳೆತ ವಸ್ತುಗಳ ಮೇಲೆ ಜೀವಿಸುತ್ತವೆ. ಅಂದರೆ ಇವು ಸ್ಯಾಪ್ರೊಫೈಟ್ಸ್ (Saprophytes) ಅಥವಾ ಕೊಳೆತ ಜೈವಿಕ (Decaying Organic Matter) ಪದಾರ್ಥಗಳ ಆಧಾರದಿಂದ ಜೀವಿಸುವ ಸಸ್ಯ ಮತ್ತು ಸಸ್ಯಾಣುಗಳು. ಉಳಿದವು ಪ್ಯಾರಸೈಟ್ಸ್ (Parasites), ಅಥವಾ ಪರೋಪಜೀವಿಯಾಗಿ ಬಾಳುವ ಸಸ್ಯಗಳು.

(೩) ಸಸ್ಯಗಳು ಸಣ್ಣ ಸಣ್ಣ ಪ್ರೋಟೋಪ್ಲಾಸ್ಟ್ (Protoplast) ಎಂಬ ಮೂಲಜೀವಿತ ವಸ್ತುಕಣಗಳಿಂದ, ಪ್ರಾಣಿಗಳಂತೆಯೇ, ನಿರ್ಮಿತವಾಗಿವೆ. ಈ ಸಣ್ಣ ಸಣ್ಣ ಪ್ರೋಟೋಪ್ಲಾಸ್ಟ್ ಕಣಗಳನ್ನೇ ಸೆಲ್ಸ್ (Cells) ಎನ್ನುವುದು. ಸಾಮಾನ್ಯ

ವಾಗಿ ಸಸ್ಯದ ಸೆಲ್‌ವಾಲ್ (Cell-wall) ಅಥವಾ ಜೀವಕಣದ ಪೊರೆ ಸೆಲುಲೋಸ್ (Cellulose) ಎಂಬ ಪದಾರ್ಥದಿಂದ ಮಾಡಿದೆ. ಪ್ರಾಣಿಗಳ ಜೀವಕಣದಲ್ಲಿ ಸೆಲುಲೋಸ್ ಇರುವುದಿಲ್ಲ.



ಚಿತ್ರ ೨

(೪) ಸಸ್ಯಗಳು ಮತ್ತು ಪ್ರಾಣಿಗಳು, ಎರಡರಲ್ಲಿಯೂ ಬೆಳೆಯುವ (Growth) ಶಕ್ತಿ ಇದೆ. ಆದರೆ ಸಸ್ಯಗಳಲ್ಲಿ ಈ ಬೆಳೆಯುವ ಶಕ್ತಿ ಅವುಗಳ ಜೀವಾವಧಿ ಇರುತ್ತದೆ; ಪ್ರಾಣಿಗಳಲ್ಲಿ ಅವು ಸಾಯುವುದಕ್ಕೆ ಸ್ವಲ್ಪಕಾಲಕ್ಕೆ ಮೊದಲೇ ಈ ಬೆಳೆಯುವ ಶಕ್ತಿ ನಿಂತುಹೋಗುತ್ತದೆ.

(೫) ಸಸ್ಯ ಮತ್ತು ಪ್ರಾಣಿಗಳೆರಡರಲ್ಲೂ ಅವುಗಳ ಸನ್ನಿವೇಶಕ್ಕೆ ತಕ್ಕಹಾಗೆ ಬದಲಾವಣೆಯಾಗುವ ಶಕ್ತಿ ಇದೆ. ಅಂದರೆ ಪ್ರಾಣಿ ಸಸ್ಯಗಳೆರಡೂ ಸನ್ನಿವೇಶದ ಉತ್ತೇಜನಕ್ಕೆ ಹೊಂದಿಕೆಯಾಗುತ್ತವೆ. ಹೇಗೆಂದರೆ, ತಾವರೆ ಹೂವು ದಿನವೆಲ್ಲಾ ಅರಳಿದ್ದು ರಾತ್ರಿಯಾದರೆ ಮುಚ್ಚಿಕೊಳ್ಳುತ್ತದೆ. ನಾಯಿ ನಾವು ಕರೆದಾಗ ನಮ್ಮ ಶಬ್ದ ಕೇಳಿ ಹತ್ತಿರ ಬರುತ್ತದೆ. ಆದರೆ ಸಸ್ಯ ಉತ್ತೇಜನಕ್ಕೆ ಹೊಂದಿಕೊಳ್ಳುವುದರಲ್ಲೂ, ಪ್ರಾಣಿ ಉತ್ತೇಜನಕ್ಕೆ ಹೊಂದಿಕೊಳ್ಳುವುದರಲ್ಲೂ ವ್ಯತ್ಯಾಸವಿದೆ. ಸಹಜವಾಗಿ ಸಸ್ಯ ಉತ್ತೇಜನಕ್ಕೆ ಹೊಂದಿಕೊಳ್ಳುವುದು ಬಹಳ ನಿಧಾನ. ಒಂದು ಬೆಕ್ಕು ಅಥವಾ ನಾಯಿಯನ್ನು ಅದರ ಬೆನ್ನಿನ ಮೇಲೆ ಕಾಲುಮೇಲಾಗಿ ಮಲಗಿಸಿದರೆ, ಅದು ತಕ್ಷಣ ಸರಿಯಾಗಿ ಹೊರಳಿಕೊಂಡು ತನ್ನ ಸ್ವಭಾವರೀತಿಗೆ ಬರುತ್ತದೆ. ಹಾಗೆಯೇ ಕುಂಡದಲ್ಲಿ ನೇರವಾಗಿ ಬೆಳೆಯುತ್ತಿರುವ ಒಂದು ತುಳಸಿ ಗಿಡ ಅಥವಾ ಡಾಲಿಯ ಗಿಡವನ್ನು ಮಲಗಿಸಿಟ್ಟರೆ, ಅದರ ಕುಡಿ ಪುನಃ ನೇರವಾಗಿ ಸ್ವಭಾವರೀತಿಗೆ ತಿರುಗಲು ಕೆಲವು ದಿವಸಗಳು ಬೇಕಾಗುತ್ತದೆ.

(೬) ಸಸ್ಯಗಳಲ್ಲೂ ಕೂಡ ಪ್ರಾಣಿಗಳಲ್ಲಿರುವಂತೆ ಬೇರೆ ಬೇರೆ ಅವಯವಗಳು ಬೇರೆ ಬೇರೆ ಕಾರ್ಯಕ್ಕಾಗಿ ರಚಿತವಾಗಿವೆ. ಆದರೆ ಈ ರಚನೆ, ಅಂಗಗಳ ವ್ಯೂಹದಲ್ಲಿ ಪ್ರಾಣಿಗಳಿಗೂ ಸಸ್ಯಗಳಿಗೂ ಬಹಳ ವ್ಯತ್ಯಾಸ. ಬಹು ಮುಂದುವರಿದ ಹಸುರು ಬಣ್ಣದ ಸಸ್ಯಗಳಲ್ಲಿ, ಆಹಾರ ತಯಾರಿಸುವ ಅಂಗ ಎಲೆ. ಹೀಗೆ ಆಹಾರ ತಯಾರಿಸುವ ಅಂಗ ಪ್ರಾಣಿಗಳಲ್ಲಿ ಇಲ್ಲ. ಹಾಗೆಯೇ ಸಸ್ಯಗಳಲ್ಲಿ ನೋಡುವ ಅಂಗ, ಕೇಳುವ ಅಂಗ ಅಂದರೆ ಪ್ರಾಣಿಗಳಲ್ಲಿರುವಂತೆ ಕಣ್ಣು, ಕಿವಿ, ಮೊದಲಾದ ಪಂಚೇಂದ್ರಿಯಗಳು ಸಸ್ಯಗಳಲ್ಲಿ ಇಲ್ಲ. ಇಂತಹ ಅಂಗರಚನೆಗಳು ಪ್ರಾಣಿವರ್ಗವನ್ನು ಬಹಳ ಸುಲಭವಾಗಿ ಸಸ್ಯವರ್ಗದಿಂದ ಬೇರ್ಪಡಿಸಲು ಸಹಾಯಕವಾಗುತ್ತವೆ.

ಎಷ್ಟೊಂದು ಸಸ್ಯಗಳು ಈ ಸಸ್ಯಪ್ರಪಂಚದಲ್ಲಿವೆ ಎಂಬುದು ಯಾರಿಗೂ ಗೊತ್ತಿಲ್ಲ. ಒಂದು ರಾಗಿ ಹೊಲದಲ್ಲಿ ಅಥವಾ ಒಂದು ಭತ್ತದ ಗದ್ದೆಯಲ್ಲೇ ಕೋಟ್ಯಾಂತರ ರಾಗಿ ಅಥವಾ ಭತ್ತದ ಸಸಿಗಳಿರುವಾಗ ಭೂಭಾಗದ ಎಲ್ಲಾ ಸಸಿಗಳನ್ನು ಎಣಿಸಿದರೆ ಅದರ ಲೆಕ್ಕಕ್ಕೆ ಅರ್ಥವೇ ಇಲ್ಲದೆ ಹೋಗುತ್ತೆ. ಒಂದು ತೊಟ್ಟು ಕೊಳೆ ನೀರಿನಲ್ಲಿ ಸಾವಿರಾರು ಅಣುಸಸಿಗಳಿರುತ್ತವೆ. ಆದ್ದರಿಂದ ಭೂಮಿಯ ಮೇಲಿರುವ ಪ್ರತಿಯೊಂದು ಸಸಿಯನ್ನು ಯಾರೂ ಎಣಿಸುವ ಕೆಲಸಕ್ಕೆ ಕೈಹಾಕುವುದಿಲ್ಲ. ಆದರೆ ಈ ಲೆಕ್ಕವಿಲ್ಲದಷ್ಟು ಇರುವ ಈ ಸಸ್ಯಪ್ರಪಂಚದ ಸಸ್ಯಗಳನ್ನು ಒಂದಕ್ಕೊಂದು ಹೋಲಿಸಿ ನೋಡಿದರೆ, ಈ ಸಸ್ಯಗಳಲ್ಲೇ, ಒಂದಕ್ಕೊಂದಕ್ಕೆ ಸದೃಶವಾದವೂ ಇವೆ, ಒಂದಕ್ಕೊಂದು ವ್ಯತ್ಯಾಸವಾದವೂ ಇವೆ. ಈ ಸಾದೃಶ್ಯ ಮತ್ತು ವ್ಯತ್ಯಾಸಗಳನ್ನು ಪರಿಶೀಲಿಸಿ ನೋಡಿ, ಸಸ್ಯಜ್ಞರು ಸಸ್ಯಗಳನ್ನು ಬೇರೆ ಬೇರೆ ಗುಂಪಾಗಿ ವಿಭಾಗಿಸಿ ಹತ್ತಿರ ಸಂಬಂಧ, ದೂರದ ಸಂಬಂಧಗಳ ಮೇಲೆ ಈ ಒಂದೊಂದು ಗುಂಪನ್ನು ಇನ್ನೂ ವಿಂಗಡಿಸಿ, ಬೇರೆ ಬೇರೆ ಸದೃಶವಿರುವ ಗಿಡಗಳ ಗುಂಪಿಗೆ ತಕ್ಕ ಹೆಸರುಗಳನ್ನು ಇಟ್ಟಿದ್ದಾರೆ. ಅಂದರೆ ಸಸ್ಯಜ್ಞರು ಸಸ್ಯಗಳನ್ನು ವರ್ಗೀಕರಣಮಾಡಿದ್ದಾರೆ. ಇದು ಸರಿಯಾಗಿ ಅರ್ಥವಾಗಬೇಕಾದರೆ, ಯಾವುದಾದರೂ ಉದಾಹರಣೆ ತೆಗೆದುಕೊಂಡು ವಿಮರ್ಶೆಮಾಡಿ ತಿಳಿದುಕೊಳ್ಳೋಣ.

ಹುರುಳಿ, ಅವರೆ, ಚಪ್ಪರದವರೆ, ತೊಗರಿ, ಹೆಸರು, ಉದ್ದು ಅಥವಾ ಕುಂಬಳಕಾಯಿ, ಸೋರೆಕಾಯಿ, ಹೀರೆಕಾಯಿ, ಸೌತೇಕಾಯಿ, ಪಡವಲಕಾಯಿ, ಬೂದ ಕುಂಬಳಕಾಯಿ, ಎಲ್ಲರಿಗೂ ಗೊತ್ತಿವೆ. ಇವುಗಳಲ್ಲಿ ಈಗ ಹುರುಳಿ ಗಿಡವನ್ನು ಹೇಗೆ ವಿಂಗಡಿಸಿ ಹೆಸರಿಟ್ಟಿದ್ದಾರೆ ಎಂಬುದನ್ನು ವಿಶದವಾಗಿ ತಿಳಿದುಕೊಂಡರೆ, ಈ ಸಸ್ಯ ನಾಮಕರಣ ಸರಿಯಾಗಿ ಅರ್ಥವಾಗುತ್ತದೆ.

ಹುರುಳಿ ಹೊಲಕ್ಕೆ ಹೋಗಿ ನೋಡಿ. ಹುರುಳಿ ಗಿಡಗಳೆಲ್ಲಾ ಒಂದೇ ತೆರನಾ

ಗಿರುತ್ತವೆ. ನೂರಿರಲಿ, ಕೋಟ್ಯಾಂತರವಿರಲಿ, ಅವೆಲ್ಲಾ ಒಂದೇ ತೆರನಾಗಿರುತ್ತವೆ. ಪ್ರಪಂಚದಲ್ಲಿ ಹುರುಳಿ ಗಿಡ ಎಲ್ಲೇ ಇರಲಿ, ಎಷ್ಟೇ ಇರಲಿ, ಈ ಹುರುಳಿ ಗಿಡಗಳನ್ನೆಲ್ಲಾ ಒಂದು "ಸ್ಪೀಷೀಸ್" ಅಥವಾ ಒಂದು ಜಾತಿಯನ್ನಾಗಿ ಸಸ್ಯಜ್ಞರು ವಿಂಗಡಿಸಿದ್ದಾರೆ, ಶಾಸ್ತ್ರೀಯವಾಗಿ ಒಂದು ಹೆಸರು ಕೊಟ್ಟಿದ್ದಾರೆ. ಹೀಗೆ ಅವರೆ ಗಿಡಗಳೆಲ್ಲಾ ಒಂದು 'ಸ್ಪೀಷೀಸ್' ಆಗಿ ವಿಂಗಡಿಸಲ್ಪಟ್ಟಿದೆ. ತೊಗರಿ ಗಿಡಗಳೆಲ್ಲಾ ಸೇರಿ ಒಂದು 'ಸ್ಪೀಷೀಸ್'; ಕುಂಬಳಕಾಯಿಯ ಗಿಡಗಳೆಲ್ಲಾ ಸೇರಿ ಒಂದು 'ಸ್ಪೀಷೀಸ್'; ಸೌತೆಕಾಯಿ ಗಿಡಗಳೆಲ್ಲಾ ಸೇರಿ ಒಂದು 'ಸ್ಪೀಷೀಸ್'; ಅರಳಿ ಮರಗಳೆಲ್ಲಾ ಸೇರಿ ಒಂದು 'ಸ್ಪೀಷೀಸ್'. ಸಸ್ಯಪ್ರಪಂಚದಲ್ಲಿ ಇಂಥಹ 'ಸ್ಪೀಷೀಸ್'ಗಳು ಸುಮಾರು ೩,೨೫,೦೦೦ ಗಿಂತಲೂ ಹೆಚ್ಚಿಗೆ ಇವೆ. ಇಷ್ಟೇ 'ಸ್ಪೀಷೀಸ್'ಗಳಿವೆ ಎಂದು ಯಾರೂ ನಿರ್ಧಾರವಾಗಿ ಹೇಳಲಾಗುವುದಿಲ್ಲ. ಏಕೆಂದರೆ ಹೊಸ ಹೊಸ ಸ್ಪೀಷೀಸ್‌ಗಳನ್ನೂ ಸಸ್ಯಜ್ಞರು ಕಂಡುಹಿಡಿಯುತ್ತಿರುತ್ತಾರೆ. ಹಿಂದೆ ಮನುಷ್ಯ ಹೋಗದ ಕಾಡಿಗೆಲ್ಲಾ ಈಗ ಹೋಗಿ ಸಸ್ಯಗಳ ಸಂಶೋಧನೆ ನಡೆಯುತ್ತಲೇ ಇದೆ. ಸಸ್ಯಗಳ 'ಸ್ಪೀಷೀಸ್' ಲೆಕ್ಕ ಬೆಳೆಯುತ್ತಲೇ ಇರುತ್ತವೆ.

ಈಗ ಹುರುಳಿ ಒಂದು ಜಾತಿ (ಸ್ಪೀಷೀಸ್), ಅವರೆ ಒಂದು ಜಾತಿ, ಚಪ್ಪರದವರೆ ಒಂದು ಜಾತಿ. ಹುರುಳಿ, ಅವರೆ, ಚಪ್ಪರದವರೆ ಇವುಗಳಿಗೆ ಒಂದಕ್ಕೊಂದಕ್ಕೆ ಬಹಳ ಹೋಲಿಕೆ ಇದೆ, ಬಹಳ ಸಂಬಂಧವಿದೆ; ಇಂತಹ ಸಂಬಂಧಪಟ್ಟ, ಹೋಲಿಕೆ ಇರುವ ಜಾತಿಗಳೆಲ್ಲಾ ಸೇರಿ ಒಂದು ಕುಲ ಅಥವಾ ಜೀನಸ್ ಆಗುತ್ತದೆ. ಅಂದರೆ ಒಂದು ಅಥವಾ ಒಂದಕ್ಕಿಂತ ಹೆಚ್ಚಿಗೆ ಜಾತಿಗಳು ಸೇರಿ ಒಂದು ಕುಲವಾಗುತ್ತದೆ. ಪ್ರತಿಯೊಂದು ಸ್ಪೀಷೀಸ್ ಕೂಡ ಯಾವುದಾದರೂ ಒಂದು ಜೀನಸ್‌ಗೆ ಸೇರಿಕೊಂಡೇ ಇರುತ್ತದೆ. ಒಂದಕ್ಕಿಂತ ಹೆಚ್ಚಿಗೆ ಸ್ಪೀಷೀಸ್ ಸೇರಿ ಜೀನಸ್ ಆಗುವುದರಿಂದ, ಜನಿರಾ*ಗಳು ಸ್ಪೀಷೀಸ್‌ಗಳಿಗಿಂತ ಕಡಿಮೆ ಇರುತ್ತವೆ.

ಹುರುಳಿ ಕುಲ ಅಥವಾ ಜೀನಸ್ ಡಾಲಿಕಾಸ್ ಎಂದು. ಅವರೆ ಕುಲವೂ ಡಾಲಿಕಾಸ್. ಹುರುಳಿ ಜಾತಿ, 'ಡಾಲಿಕಾಸ್ ಬೈಫ್ಲೋರಸ್' ಎಂದು. ಅವರೆ ಜಾತಿ 'ಡಾಲಿಕಾಸ್ ಲ್ಯಾಬ್‌ಲ್ಯಾಬ್' ಎಂದು. ಹೀಗೆ ಒಂದು ಜೀನಸ್‌ನಲ್ಲಿ ಒಂದಕ್ಕಿಂತ ಹೆಚ್ಚಿಗೆ ಸ್ಪೀಷೀಸ್ ಇರಬಹುದು. ಇನ್ನೊಂದು ವಿಷಯವೇನೆಂದರೆ, ಸ್ಪೀಷೀಸ್ ಯಾವಾಗಲೂ ಜೀನಸ್‌ಗೆ ಸೇರಿಕೊಂಡೆ ಇರುತ್ತದೆ. ಡಾಲಿಕಾಸ್ ಎಂಬ ಜೀನಸ್ ಹಿಂದೆ ಇಲ್ಲದೆ ಬರಿ 'ಬೈಫ್ಲೋರಸ್' ಎಂಬ ಗುಣವಾಚಕಕ್ಕೆ ಅರ್ಥವಿಲ್ಲದೆ ಹೋಗುತ್ತದೆ. ಡಾಲಿಕಾಸ್ ಬೈಫ್ಲೋರಸ್ ಎಂದರೆ, ಎರಡು ಹೂವಿನ ಡಾಲಿಕಾಸ್

---

* ಜೀನಸ್ ಎಂಬುದರ ಬಹುವಚನ ಜನಿರಾ.

ಎಂದು ಅರ್ಥವಾಗುತ್ತದೆ. ಅನೇಕ ಡಾಲಿಕಾಸ್‌ಗಳಲ್ಲಿ, ಎರಡು ಹೂವಿನ ಡಾಲಿಕಾಸ್ ಹುರುಳಿ ಗಿಡದ ಹೆಸರು.

ಹುರುಳಿ ಮತ್ತು ಅವರೆ ಅನೇಕ ವಿಧದಲ್ಲಿ ತಿಂಗಳ ಹುರುಳಿ, ಬಟಾಣಿ, ತೊಗರಿ, ಇವುಗಳನ್ನು ಹೋಲುತ್ತವೆ. ಆದ್ದರಿಂದ ಹುರುಳಿ ಮತ್ತು ಅವರೆ ಜೀನಸ್, ಬಟಾಣಿ ಜೀನಸ್, ತೊಗರಿ ಜೀನಸ್, ಇನ್ನೂ ಅನೇಕ ಒಂದಕ್ಕೊಂದು ಸಂಬಂಧವಿರುವ ಜೀನಸ್ (ಕುಲಗಳು) ಗಳೆಲ್ಲಾ ಸೇರಿ ಒಂದು ಫ್ಯಾಮಿಲಿ ಅಥವಾ ಒಂದು ವಂಶ ಆಗುತ್ತವೆ. ಪ್ರತಿ ಜೀನಸ್ ಅದಕ್ಕೆ ಸಂಬಂಧಪಟ್ಟ ಫ್ಯಾಮಿಲಿಗೆ ಸೇರುತ್ತದೆ. ಒಂದಕ್ಕಿಂತ ಹೆಚ್ಚಿಗೆ ಜನಿರಾಗಳು ಸೇರಿ ಒಂದು ವಂಶವಾಗುವುದರಿಂದ ಜನಿರಾಗಳಿಗಿಂತ ಫ್ಯಾಮಿಲಿಗಳು ಕಡಿಮೆ.

ಈ ಹುರುಳಿ ವಂಶ "ಲೆಗುಮಿನಿಸೋಸಿ". ಈ ವಂಶಕ್ಕೆ ಸೇರಿದ ಅವರೆ, ತೊಗರಿ, ಬಟಾಣಿ ಮುಂತಾದವುಗಳೆಲ್ಲಾ ಗುಲಾಬಿವಂಶಕ್ಕೆ ಅಂದರೆ "ರೋಸೇಸೀ"ಗೆ ಸೇರಿದ ಗುಲಾಬಿ, ಸೇಬು, ಲಕ್ಕೋಟೆ, ಮರಸೇಬು, ಬಾದಾಮಿ ಮುಂತಾದ ಗಿಡಗಳಿಗೆ ಹೋಲಿಸಿದರೆ, ಈ ಎರಡು ಫ್ಯಾಮಿಲಿಯ ಸಸ್ಯಗಳಿಗೆ ಅನೇಕ ವ್ಯತ್ಯಾಸಗಳಿವೆ. ಆದರೂ ಈ ಎರಡು ವಂಶದ ಸಸ್ಯಗಳಿಗೆ ಅನೇಕ ಹೋಲಿಕೆ ಮತ್ತು ಸಂಬಂಧವಿವೆ. ಈ ವಂಶಗಳನ್ನೂ ಸೋರೆಕಾಯಿ, ಪಡವಲಕಾಯಿ, ಕುಂಬಳಕಾಯಿ, ಸೌತೆಕಾಯಿ ಮುಂತಾದ ಬಳ್ಳಿಗಳ ವಂಶಕ್ಕೆ ಹೋಲಿಸಿದರೆ, ಹುರುಳಿವಂಶಕ್ಕೂ ಗುಲಾಬಿವಂಶಕ್ಕೂ ಇರುವಷ್ಟು ಹೋಲಿಕೆ ಮತ್ತು ಸಂಬಂಧ, ಕುಂಬಳಕಾಯಿ ವಂಶದ ಜೊತೆಯಲ್ಲಿ ಇಲ್ಲ. ಅಂದರೆ ಈ ಫ್ಯಾಮಿಲಿಗಳಲ್ಲಿಯೂ ಒಂದೊಂದಕ್ಕೆ ಸಂಬಂಧ ಇರುತ್ತದೆ. ಇಂತಹ ಸಂಬಂಧ, ಹೋಲಿಕೆ ಇರುವುವುಗಳನ್ನೂ ಸೇರಿ ಉಪವರ್ಗ ಅಥವಾ ಆರ್ಡರ್‌ಗಳಾಗುತ್ತವೆ. ಮೇಲೆ ಹೇಳಿದ 'ಲೆಗುಮಿನೋಸೀ, (ಹುರುಳಿವಂಶ) ಮತ್ತು 'ರೋಸೇಸೀ' (ಗುಲಾಬಿವಂಶ)ಗಳು ಸೇರಿ, 'ರೊಸೇಲ್ಸ್' ಎಂಬ ಉಪವರ್ಗ ಅಥವಾ ಆರ್ಡರ್ ಆಗುತ್ತದೆ. ಅಂದರೆ ಪ್ರತಿಯೊಂದು ಫ್ಯಾಮಿಲಿಯೂ ಯಾವುದಾದರೂ ಅದಕ್ಕೆ ಸಂಬಂಧಪಟ್ಟ ಉಪವರ್ಗಕ್ಕೆ ಸೇರುತ್ತದೆ. ಫ್ಯಾಮಿಲಿಗಳಿಗಿಂತ ಆರ್ಡರ್‌ಗಳು ಕಡಿಮೆ ಎಂದು ಬೇರೆ ಹೇಳಬೇಕಾಗಿಲ್ಲ.

ಒಂದಕ್ಕಿಂತ ಹೆಚ್ಚಿಗೆ ಉಪವರ್ಗಗಳು ಸೇರಿ ಒಂದು ವರ್ಗ ಅಥವಾ 'ಕ್ಲಾಸ್' ಆಗುತ್ತದೆ. ಮೇಲೆ ಹೇಳಿದ 'ರೋಸೇಲ್ಸ್' ಎಂಬ ಉಪವರ್ಗ ಡೈಕಾಟ್ಸ್ ಅಥವಾ ದ್ವಿಬೀಜದಳ ಸಸ್ಯವರ್ಗಕ್ಕೆ ಸೇರುತ್ತದೆ. ಈ ಡೈಕಾಟ್ಸ್ ಸಸ್ಯವರ್ಗ ಇನ್ನೂ ದೊಡ್ಡ ಗುಂಪಿಗೆ ಸೇರಿ, ಒಂದು 'ಸಬ್‌ಫೈಲಂ' ಅಥವಾ ಉಪಮಹಾವರ್ಗವಾಗುತ್ತದೆ. ಹೂವುಬಿಡುವ ಸಸ್ಯಗಳೆಲ್ಲಾ ಈ ಉಪಮಹಾವರ್ಗಕ್ಕೆ ಸೇರಿವೆ. ಈ ಉಪಮಹಾ

ವರ್ಗ ಮತ್ತು ಕೋನಿಫರ್ಸ್, ಸೈಕ್ಯಾಸ್‌ಗಳು ಸೇರಿ ಒಂದು ಮಹಾವರ್ಗ ಅಥವಾ ಫೈಲಂ ಆಗುತ್ತದೆ. ಬೀಜದ ಸಸ್ಯಗಳೆಲ್ಲಾ ಇಂತಹ ಒಂದು ಮಹಾವರ್ಗಕ್ಕೆ ಅಥವಾ ಫೈಲಂಗೆ ಸೇರಿವೆ. ಒಟ್ಟು ಸಸ್ಯಪ್ರಪಂಚವನ್ನು ಇಂತಹ ನಾಲ್ಕು ಮಹಾವರ್ಗ ಅಥವಾ ಫೈಲಗಳಾಗಿ ವಿಂಗಡಿಸಿದ್ದಾರೆ.

ಈಗ ಮೂರನೇ ಚಿತ್ರ ನೋಡಿ. ಈ ಸಸ್ಯಪ್ರಪಂಚದಲ್ಲಿ ಹುರುಳಿಗೂ ಒಂದು ಮಹಾವರ್ಗಕ್ಕೂ ಇರುವ ಸಂಬಂಧ ಚೆನ್ನಾಗಿ ಅರ್ಥವಾಗುತ್ತದೆ. ಚಿತ್ರದಲ್ಲಿ ಹುರುಳಿ ಅನ್ನುವ ಕಡೆ ಡಾಲಿಕಾಸ್ ಬೈಫ್ಲೋರಸ್ ಅಂತಲೂ ಬರೆದಿದೆ. ಇದೇ ವಿಜ್ಞಾನಕ್ಕೆ ಸಂಬಂಧಪಟ್ಟ ಹೆಸರು. ಇದೇ ಹುರುಳಿಗೆ ಕ್ರಮಬದ್ಧವಾದ, ವ್ಯವಸ್ಥಿತವಾದ ಹೆಸರು. ಹುರುಳಿಗಿರುವಂತೆಯೇ ವ್ಯವಸ್ಥಿತವಾದ ಹೆಸರು ಪ್ರತಿಯೊಂದು ಜಾತಿಯ ಗಿಡಕ್ಕೂ ಇದೆ. ಈ ಹೆಸರು ಲ್ಯಾಟಿನ್ ಭಾಷೆಯದು. ಇನ್ನೊಂದು ವಿಷಯ ಈ ಚಿತ್ರದಲ್ಲಿ ನೋಡಬೇಕಾದ್ದು ; ಪ್ರತಿ ಫ್ಯಾಮಿಲಿ, ಆರ್ಡರ್, ವರ್ಗ ಎಲ್ಲಕ್ಕೂ ಕೂಡ ಕ್ರಮಬದ್ಧವಾದ, ವೈಜ್ಞಾನಿಕವಾದ ಲ್ಯಾಟಿನ್ ಭಾಷೆಯ ಹೆಸರುಗಳಿವೆ.


ನಾಲ್ಕನೇ ಚಿತ್ರ, ಸಸ್ಯಪ್ರಪಂಚದ ನಾಲ್ಕು ಮಹಾವರ್ಗಗಳ, ವರ್ಗ, ಉಪವರ್ಗ ಮುಂತಾದವುಗಳಲ್ಲಿರುವ ಸ್ಪಿಸೀಸ್ ವಿಚಾರ ತಿಳಿಸುತ್ತದೆ.

ಈಗ ನಮಗೆ ಗೊತ್ತಿರುವ ಈ ಸಸ್ಯಸಂಪತ್ತೆಲ್ಲಾ ಬಹು ಪುರಾತನಕಾಲದಿಂದ, ಸಾಧಾರಣವಾದ ಒಂದಣು ಸಸ್ಯದಿಂದ ಕ್ರಮಕ್ರಮವಾಗಿ ಹೊಮ್ಮಿ ಬೆಳೆದುಬಂದಿವೆ ಎಂದು ವೈಜ್ಞಾನಿಕರು ಹೇಳುತ್ತಾರೆ. ಐದನೇ ಚಿತ್ರ ನೋಡಿ ಇದು ಅರ್ಥವಾಗುತ್ತದೆ. ಬೇರೆ ಬೇರೆ ಸಸ್ಯಗಳ ಮಹಾವರ್ಗಗಳು ಹೇಗೇಗೆ ಮುಂದುವರಿದು ಬಂದಿವೆ ಎಂಬುದನ್ನು ಈ ಚಿತ್ರ ತೋರುತ್ತದೆ. ಹೂವಿನ ಗಿಡಗಳು ಸಸ್ಯಪ್ರಪಂಚದಲ್ಲಿ ಬಹು ಮುಂದುವರಿದ ವರ್ಗ ಎಂಬುದು ಚೆನ್ನಾಗಿ ಗೊತ್ತಾಗುತ್ತದೆ.


ಪ್ರತಿಯೊಂದು ಸಸ್ಯಮಹಾವರ್ಗಗಳ ವಿಷಯಕ್ಕೆ ಹೋಗುವುದಕ್ಕೆ ಮೊದಲು, ಈ ಸಸ್ಯಗಳ ವೈಜ್ಞಾನಿಕ ಹೆಸರುಗಳು, ಏಕೆ ಮತ್ತು ಹೇಗೆ ಪ್ರಾರಂಭವಾಯಿತು ಎಂಬುದನ್ನು ಸ್ವಲ್ಪ ತಿಳಿದುಕೊಳ್ಳುವುದು ಒಳ್ಳೆಯದು.

(ಸಶೇಷ)


ಡಾ|| ಎಂ. ಎಚ್. ಮರಿಗೌಡ


THALLOPHYTA
ಥ್ಯಾಲೊಫ್ಯಟ
BRYOPHYTA
ಬ್ರಯೊಫ್ಯಟ
PTERIDOPHYTA
ಟೆರಿಡೊಫ್ಯಟ
SPERMATOPHYTA
ಸ್ಪರ್ಮ್ಯಾಟೊಫ್ಯಟ
PHYLA
ಮಹಾವರ್ಗ
GYMNOSPERMAE
ಜಿಮ್ನೋಸ್ಪರ್ಮೀ
ANGIOSPERMAE
ಆಂಜಿಯೋಸ್ಪರ್ಮೀ
SUB PHYLA
ಉಪಮಹಾವರ್ಗ
MONOCOTYLEDONEAE
ಮಾನೋಕಾಟಿಲಿಡೋನೀ
DICOTYLEDONEAE
ಡೈಕಾಟಿಲಿಡೋನೀ
CLASSES
ವರ್ಗ
RANUNCULALES
ರೈನನ್‌ಕ್ಯುಲೇಲಿಸ್
GERANIALES
ಜಿರೇನಿಏಲೀಸ್
VIOLALES
ವೈಯಲೇಲೀಸ್
ROSALES
ರೋಸೇಲೀಸ್
ORDERS
ಉಪವರ್ಗ
SAXIFRAGACEAE
ಸ್ಯಾಕ್ಸಿಫ್ರಗೇಸೀ
ROSACEAE
ರೋಸೇಸೀ
CRASSULACEAE
ಕ್ರಾಸುಲೇಸೀ
LEGUMINOSEAE
ಲೆಗುಮಿನೋಸೀ
FAMILIES
ವಂಶ
PISUM
ಪೈಸಂ
LUPINUS
ಲುಪಿನಸ್
TRIFOLIUM
ಟ್ರೈಫೋಲಿಯಂ
DOLICHOS
ಡಾಲಿಖಾಸ್
GENERA
ಕುಲ
TRIFOLIUM
ಟ್ರೈಫೋಲಿಯಂ
(WHITE CLOVER)
ವ್ಹಾಯಿಟ ಕ್ಲೋವರ್
TRIFOLIUM
ಟ್ರೈಫೋಲಿಯಂ
(RED CLOVER)
ರೆಡ್ ಕ್ಲೋವರ್
DOLICHOS
LAB LAB
ಅವರೆ
DOLICHOS -
BIFLORUS
ಹುರಳಿ
SPECIES
ಜಾತಿ

ಚಿತ್ರ ೩


PLANTS ಸಸ್ಯವರ್ಗ
THALLOPHYTES
(108,000 SPECIES)
ಥಾಲೋಫೈಟ್ಸ್
(108,000 ಜಾತಿ)
ALGAE
(17,500 SPECIES)
ಆಲ್ಗಿ (17,500 ಜಾತಿ)
BLUEGREEN ALGAE
ಬ್ಲ್ಯೂಗ್ರೀನ್ ಆಲ್ಗಿ
GREEN ALGAE
ಗ್ರೀನ್ ಆಲ್ಗಿ.
DIATOMS
ಡಯಾಟಂಸ್
BROWN ALGAE
ಬ್ರೌನ್ ಆಲ್ಗಿ
RED ALGAE
ರೆಡ್ ಆಲ್ಗಿ
FUNGI
(75,000 SPECIES)
ಫಂಗಿ (75,000 ಜಾತಿ)
BACTERIA
ಬ್ಯಾಕ್ಟೀರಿಯ
SLIM MOLDS
ಸ್ಲಿಮ ಮೊಲ್ಡ್ಸ್
ALGAL FUNGI
ಆಲ್ಗಲ್ ಫಂಗಿ
SAC FUNGI
ಸ್ಯಾಕ್ ಫಂಗಿ
CLUB FUNGI
ಕ್ಲಬ್ ಫಂಗಿ
LICHENS (15,500 SPECIES)
ಲಿಚೆನ್ಸ್ (15,500 ಜಾತಿ)
BRYOPHYTES
(23,000 SPECIES)
ಬ್ರಯೋಫೈಟ್ಸ್
(23,000 ಜಾತಿ)
LIVER WORTS (9,000 SPS)
ಲಿವರ್ ವರ್ಟ್ಸ (9,000 ಜಾತಿ)
MOSSES (14,000 SPS)
ಮಾಸಸ್ (14,000 ಜಾತಿ)
PTERIDOPHYTES
(9,800 SPECIES)
ಟೆರಿಡೊಫೈಟ್ಸ್ (9,800 ಜಾತಿ)
CLUB MOSSES (775 SPS)
ಕ್ಲಬ್ ಮಾಸಸ್ (775 ಜಾತಿ)
HORSE TAILS (25 SPS.)
ಹಾರ್ಸ್ ಟೈಲ್ಸ್ (25 ಜಾತಿ)
FERNS (9,000 SPS.)
ಫರನ್ಸ್ (9,000 ಜಾತಿ)
SPERMATOPHYTES
(195,500 SPECIES)
ಸ್ಪರ್ಮಟೋಫೈಟ್ಸ್
(195,500 ಜಾತಿ)
GYMNOSPERMS, OR
CONE BEARERS (700 SPS)
ಜಿಮ್ನೋಸ್ಪರ್ಮ್ಸ ಅಥವಾ
ಕೋನ್ ಬೇರರ್ಸ್ (700 ಜಾತಿ)
CYCADES
ಸೈಕೇಡ್ಸ್
GINKGOS
ಗಿಂಕಗೋಸ್
CONIFERS
ಕೋನಿಫರ್ಸ್
ANGIOSPERMS, OR
FLOWERING PLANTS
(194,800 SPECIES)
ಆಂಗಿಯೋಸ್ಪರ್ಮ್ಸ ಅಥವಾ
ಫ್ಲವರಿಂಗ್ ಪ್ಲಾಂಟ್ಸ
(194,800 ಜಾತಿ)
MONOCOTS
ಮಾನೋಕಾಟ್ಸ
DICOTS
ಡೈಕಾಟ್ಸ

ಚಿತ್ರ ೪


DICOTS
GINKGO
CONIFERS
MONOCOTS
HORSE TAILS
ANGIOSPERMA
GYMNOSPERMS
CYCADES
FERNS
SPERMATOPHYTES
MOSSES
CLUB MOSSES
PTERIDOPHYTES
LIVER WORTS
RED ALGAE
ALGAL FUNGI
BRYOPHYTES
BROWN ALGAE
CLUB FUNGI
LICHENS
SAC FUNGI
FUNGI
ALGAE
GREEN ALGAE
SLIME MOLDS
THALLOPHYTES
DIATOMS
BACTERIA
BLUE GREEN ALGAE
ANCESTRAL PROTOPHYTA

ಚಿತ್ರ ೫

ವಿಜಯನಗರದ ಸಾಹಿತ್ಯಸಾಮ್ರಾಜ್ಯ

೩

ಸಾಳುವ ವಂಶದ ಅರಸರು ವಿಜಯನಗರದಲ್ಲಿ ಬಹುಕಾಲ ರಾಜ್ಯಭಾರಮಾಡಲಿಲ್ಲ. ತಾವು ಹೇಗೆ ತಮ್ಮ ಒಡೆಯರಾದ ಸಂಗಮ ವಂಶೀಯರನ್ನು ಹಿಂದೊತ್ತಿ ರಾಜ್ಯಕ್ಕೆ ಬಂದರೋ ಹಾಗೆಯೇ ಇವರ ದಂಡನಾಥರು ಇವರನ್ನು ವಂಚಿಸಿ ಸ್ವತಃ ಪ್ರಬಲರಾಗಿ ಸಿಂಹಾಸನವನ್ನು ಸ್ವಾಧೀನಪಡಿಸಿಕೊಂಡರು. ರಾಜ್ಯದಲ್ಲಿ ವಿಪ್ಲವವುಂಟಾಯಿತು. ಸಾಳುವರ ಸ್ಥಾನವನ್ನು ತುಳುವರು ಆಕ್ರಮಿಸಿದರು. ಆದರೆ ಸಾಹಿತ್ಯರಾಜ್ಯದಲ್ಲಿ ಮಾತ್ರ ಯಾವ ವಿಧವಾದ ತೊಂದರೆಯೂ ಉಂಟಾಗಲಿಲ್ಲ. ಹಿಂದಿನಿಂದ ಅಭಿವೃದ್ಧಿಯಾಗುತ್ತ ಹರಿದುಬಂದ ಸಾಹಿತ್ಯವಾಹಿನಿಯು ಈಗ ಮತ್ತಷ್ಟು ಪುಷ್ಟವಾಗಿ ದಡವನ್ನು ಮೀರಿ ಹರಿಯುವಂತಾಯಿತು. ಆದರೆ ಸಾಹಿತ್ಯಸ್ವಭಾವದಲ್ಲಿ ಸ್ವಲ್ಪ ಬದಲಾವಣೆಯು ತಲೆದೋರಿತು. ಸಾಳುವರ ಕಾಲದಲ್ಲಿಯೇ ಪ್ರಭಾವವನ್ನು ಬೀರಲು ಮೊದಲುಮಾಡಿದ್ದ ವೈಷ್ಣವ ಶ್ರೀವೈಷ್ಣವ ಮತಗಳು ಈ ಕಾಲದಲ್ಲಿ ಪ್ರಬಲವಾಗಿ ರಾಜರುಗಳನ್ನು ತಮ್ಮ ಸ್ವಾಧೀನಪಡಿಸಿಕೊಂಡುದರಿಂದ ಈ ಕಾಲದ ಸಾಹಿತ್ಯ ಸಾಮ್ರಾಜ್ಯವು ಹೆಚ್ಚಾಗಿ ವೈಷ್ಣವ ಗ್ರಂಥ ಭೂಯಿಷ್ಟವಾಗಿದೆ.

ತುಳುವರ ಆಶ್ರಯದಲ್ಲಿ ಸಂಸ್ಕೃತ, ತೆಲುಗು, ತಮಿಳು, ಕನ್ನಡ ಭಾಷಾ ಸಾಹಿತ್ಯಗಳು ಸರ್ವತೋಮುಖವಾಗಿ ಬೆಳೆದವು. ಇವರಲ್ಲಿ ಪ್ರಸಿದ್ಧರಾದ ಕೃಷ್ಣದೇವ ಮತ್ತು ಅಚ್ಯುತರಾಯರೂ ಇವರ ತರುವಾಯ ಬಂದ ಸದಾಶಿವರಾಯ ಮತ್ತು ಅವನ ಪೋಷಕರಾದ ರಾಮರಾಯ ತಿರುಮಲರಾಯರೂ ಸಾಹಿತ್ಯಾಭಿವೃದ್ಧಿಗೆ ಮಾಡಿದ ಸಹಾಯವು ಸುವರ್ಣಾಕ್ಷರಗಳಲ್ಲಿ ಬರೆದಿಡಲು ಅರ್ಹವಾಗಿದೆ. ವಿದ್ವಾಂಸರಿಗೆ ದಾನಮಾಡುವುದು ಕೃಷ್ಣದೇವರಾಯನಿಗೆ ಒಂದು ಹೆಮ್ಮೆಯೆಂದು ಒಂದು ಶಾಸನದಲ್ಲಿ ಹೇಳಿದೆ. ಈತನು ಸ್ವತಃ ಸಂಸ್ಕೃತಾಂಧ್ರಭಾಷೆಗಳಲ್ಲಿ ಅನೇಕ ಗ್ರಂಥಗಳನ್ನು ರಚಿಸಿದ್ದಾನೆ. ಕನ್ನಡ ಭಾಷೆಯಲ್ಲಿಯೂ ಈತನಿಗೆ ಯಥೋಚಿತವಾದ ಪಾಂಡಿತ್ಯವಿತ್ತು[49]. ಇವನ ಕಾಲದಲ್ಲಿ ಇವನಿಂದ ಸಹಾಯಪಡೆಯದ ವಿದ್ವಾಂಸರೇ ಅಪೂರ್ವವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಶಿವಮೊಗ್ಗ ಡಿಸ್ಟ್ರಿಕ್ಟಿನ ಒಂದು ಶಾಸನದಲ್ಲಿ ಕೃಷ್ಣದೇವರಾಯನು ಕಂಚಿ, ಶ್ರೀಶೈಲ, ಚಿದಂಬರ, ತಿರುವಣ್ಣಾ

---

[49] ಈತನ 'ಆಮುಕ್ತಮಾಲ್ಯದ'ದಲ್ಲಿ ಅನೇಕ ಕನ್ನಡ ಶಬ್ದಗಳ ಪ್ರಯೋಗವಿದೆ.

ಮಲೆ, ವೆಂಕಟಾದ್ರಿ ಮೊದಲಾದ ಸ್ಥಳಗಳಲ್ಲಿದ್ದ ವಿದ್ವಾಂಸರಿಗೆ ಅನೇಕ ಸಲ 'ಬ್ರಹ್ಮಾಂಡದಾನ'ವನ್ನೂ 'ಸುವರ್ಣಮೇರು'ದಾನವನ್ನೂ ಮಾಡಿದಂತೆ ಹೇಳಿದೆ[50]. ಅದೇ ಶಾಸನದಲ್ಲಿ ಶ್ರೀರಂಗದ ನಿವಾಸಿಯಾದ ಶ್ರೌತಸ್ಮಾರ್ತಪಾರಂಗತನಾದ ವೀರಶೈವನೆಂಬ ವಿದ್ವಾಂಸನು ಇವನಿಂದ ಒಂದು ಅಗ್ರಹಾರವನ್ನು ಪಡೆದಂತೆ ಉಕ್ತವಾಗಿದೆ. ಶಿವಮೊಗ್ಗದ ೮೪ ಮತ್ತು ೮೫ ನೆಯ ಶಾಸನಗಳಿಂದ ಕೃಷ್ಣದೇವರಾಯನು ಕೂಡಲೀಮಠದ ನಾರಾಯಣಯತೀಂದ್ರನಿಗೂ ವ್ಯಾಸರಾಯಮಠದ ವ್ಯಾಸತೀರ್ಥನಿಗೂ ಅನೇಕ ದತ್ತಿಗಳನ್ನು ಬಿಟ್ಟಿರುವುದನ್ನು ಕಾಣಬಹುದಾಗಿದೆ.[51] ಗೋವಿಂದರಾಜನೆಂಬುವನು ಕೃಷ್ಣದೇವರಾಯನ ರಾಜಗುರು. ಈತನಿಗೆ ೧೫೧೬ ನೆಯ ವರ್ಷದಲ್ಲಿ ಒಂದು ಅಗ್ರಹಾರವು ಕೊಡಲ್ಪಟ್ಟಿದೆ.[52] ಉದ್ದಾಮ ಶ್ರೀವೈಷ್ಣವ ಪಂಡಿತನಾದ ವೆಂಕಟತಾತಾಚಾರ್ಯನು ರಾಜನಿಂದ ವಿಶೇಷ ಸನ್ಮಾನಿತನಾಗಿ ವಿಜಯನಗರದ ಎಲ್ಲ ವಿದ್ವತ್ಸಭೆಗಳಲ್ಲಿಯೂ ಅಗ್ರಮರ್ಯಾದೆಯನ್ನು ಪಡೆಯುವ ಹಕ್ಕನ್ನೂ ಧರ್ಮಬಾಹಿರರಿಗೆ ಶಿಕ್ಷೆಮಾಡುವ ಅಧಿಕಾರವನ್ನೂ ಪಡೆದಿದ್ದನು.[53]

ಕೃಷ್ಣದೇವರಾಯನ ಆಸ್ಥಾನದಲ್ಲಿ ಅನೇಕ ಜನ ಕವಿಗಳಿದ್ದರು. ಇವರಲ್ಲಿ ಅಲ್ಲಸಾನಿ ಪೆದ್ದನ್ನ, ನಂದೀ ತಿಮ್ಮಣ್ಣ, ಅಯ್ಯಲುರಾಜು ರಾಮಭದ್ರಯ್ಯ, ಧೂರ್ಜಟಿ, ಮಾರಯ್ಯಗಾರಿ ಮಲ್ಲನ್ನ, ಪಿಂಗಲಗಾರಿ ಸೂರನ್ನ, ರಾಮರಾಜಭೂಷಣ, ತೆನ್ನಾಲಿ ರಾಮಕೃಷ್ಣ ಇವರು ಮುಖ್ಯರು. ಇವರೆಲ್ಲರೂ ಆಂಧ್ರಕವಿಗಳು. ಇವರಿಗೆ ಕೃಷ್ಣದೇವರಾಯನ ಆಸ್ಥಾನದ ಅಷ್ಟದಿಗ್ಗಜಗಳು ಎಂಬ ಬಿರುದು ಇರುವಂತೆ ತೋರುತ್ತದೆ. ಆದರೆ ಕೊನೆಯ ನಾಲ್ಕು ಜನರು ಕೃಷ್ಣದೇವರಾಯನ ಕಾಲದಲ್ಲಿದ್ದಿರಲಿಲ್ಲವೆಂದು ನವೀನ ಸಂಶೋಧನೆಯಿಂದ ವ್ಯಕ್ತಪಡುತ್ತದೆ. ಕೃಷ್ಣದೇವರಾಯನು ತನ್ನ ಆಸ್ಥಾನ ಕವಿಗಳ ಸಹಾಯದಿಂದ ಆಂಧ್ರಸಾಹಿತ್ಯದಲ್ಲಿ ಪ್ರಬಂಧಮಾರ್ಗವೆಂಬ ಹೊಸ ಮಾರ್ಗವೊಂದನ್ನು ಸ್ಥಾಪಿಸಿದನು. ಹದಿನಾರನೆಯ ಶತಮಾನದ ವರೆಗಿನ ಆಂಧ್ರಸಾಹಿತ್ಯವೆಲ್ಲ ಸಂಸ್ಕೃತ ಪುರಾಣಗಳ ಭಾಷಾಂತರ ಮಾತ್ರವಾಗಿದ್ದುವು. ಪುರಾಣಗಳು ವಿಷಯಪ್ರಧಾನವಾಗಿದ್ದುದರಿಂದ ಕವಿಯ ಶಕ್ತಿಯನ್ನೂ ಸ್ವಾತಂತ್ರ್ಯವನ್ನೂ ಅಲ್ಲಿ ಉಪಯೋಗಿಸಲು ಅವಕಾಶವಿರಲಿಲ್ಲ. ಆದುದರಿಂದ ಕವಿಯು ಕಲ್ಪನಾಕೌಶಲ್ಯವನ್ನೂ ಪಾಂಡಿತ್ಯವನ್ನೂ ಶಬ್ದವೈಖರಿಯನ್ನೂ ತೋರಿಸುವುದಕ್ಕಾಗಿ ಕಲ್ಪನಾಪ್ರಧಾನವಾಗಿಯೂ ಅಲಂಕಾರಮಯವಾಗಿಯೂ ಇರುವ ಕಾವ್ಯ ಅಥವಾ ಪ್ರಬಂಧಮಾರ್ಗವು ಈ ಕಾಲದಲ್ಲಿ ಏರ್ಪಟ್ಟಿತು, ಈ ರೀತಿಯಲ್ಲಿ ಬರೆದ ಗ್ರಂಥ

---

[50] ಎ.ಕ. ೮, ಶಿವ ೧-೪೫. [51] ಎ.ಕ. ಶಿವ ೧-೮೪.

[52] ಎ.ಕ. ೩, ಮಳವಳ್ಳಿ ೧೫. [53] ಮೈ.ಶಾ.ವ. ೧೯೧೮-೧೧೦.

ಗಳಿಗೆ ಕೃಷ್ಣದೇವರಾಯಕೃತವಾದ 'ಆಮುಕ್ತಮಾಲ್ಯದ'ವೂ ಅಲ್ಲಸಾನಿ ಪೆದ್ದನ್ನ ಕೃತವಾದ 'ಮನುಚರಿತ್ರ'ವೂ ಮಾರ್ಗದರ್ಶಿಗಳು.[54]

ಕೃಷ್ಣದೇವರಾಯನು ಉದ್ದಾಮನಾದ ಸಂಸ್ಕೃತಾಂಧ್ರಕವಿ; ಒಳ್ಳೆಯ ಕಲಾಭಿಜ್ಞ, ಶೂರ, ಸುಂದರಪುರುಷ, ದೃಢಕಾಯ, ಕುಸ್ತಿ ಮಲ್ಲಯುದ್ಧಾದಿಗಳಲ್ಲಿ ಬಹಳ ಆಸಕ್ತ, ಸ್ವತಃ ಕವಿ, ಕವಿಜನಾಶ್ರಯ. ಇವನ ಮತಸಹಿಷ್ಣುತೆಯೂ, ಮಾನವತೆಯಲ್ಲಿ ಅವನಿಗಿದ್ದ ಪ್ರೇಮವೂ ಅವನ ಆಸ್ಥಾನವನ್ನು 'ಭುವನವಿಜಯ'ವನ್ನಾಗಿ ಮಾಡಿತ್ತು. ದಕ್ಷಿಣಭಾರತದ ಸಾಹಿತ್ಯಚರಿತ್ರೆಯಲ್ಲಿ ಇವನ ಆಳ್ವಿಕೆಯು ಸುವರ್ಣಾಕ್ಷರಗಳಲ್ಲಿ ಬರೆದಿಡತಕ್ಕದ್ದಾಗಿದೆ. ನಂದೀ ತಿಮ್ಮಯ್ಯನು ತನ್ನ 'ಪಾರಿಜಾತಾಪಹರಣ'ದಲ್ಲಿ ಇವನನ್ನು 'ಕವಿತಾಪ್ರಾವೀಣ್ಯಫಣೀಶ ಕೃಷ್ಣರಾಯ ಮಹೀಶ' ಎಂದು ಸಂಬೋಧಿಸಿದ್ದಾನೆ. ಇವನ ತೆಲುಗು ಕಾವ್ಯವಾದ 'ಆಮುಕ್ತಮಾಲ್ಯದ' ಎಂಬುದರ ಪೀಠಿಕೆಯಲ್ಲಿ ಸಿಕ್ಕುವ

ಸೀ|| ಪಲಿಕಿತುತ್ಪ್ರೇಕ್ಷೋಪಮಲ ಜಾತಿಪೆಂಪಕ್ಕ ರಸಿಕುತಾನನ ಮದಾಲಸಚರಿತ್ರ
ಭಾವಧ್ವನಿವ್ಯಂಗ್ಯಸೇವಧಿಗಾಁಗ ಜೆಪ್ಪಿತಿವಿ ಸತ್ಯಾವಧೂಪ್ರೀಣನಂಬು
ಶ್ರುತಿಪುರಾಣೋಪಸಂಹಿತಲೇರ್ಚಿ ಕೂರ್ಚಿತಿ ಸಕಲಕಥಾಸಾರಸಂಗ್ರಹಂಬು
ಶ್ರೋತ್ರಘಚ್ಚಟಲು ಪಿಚ್ಚುಗ ರಚಿಂಚಿತಿ ಸೂಕ್ತಿನೈಪುಣೀಜ್ಞಾನಚಿಂತಾಮಣಿಕೃತಿ
ಮಱಿಯು ರಸಮಂಜರೀ ಮುಖ್ಯ ಮಧುರಕಾವ್ಯ
ರಚನಮೆಪ್ಪಿಂಚುಕೊಂಟಿ ಗೀರ್ವಾಣಭಾಷ
ನಂಧ್ರಭಾಷಯಸಾಧ್ಯಂಬೆ ಯಂದುನೊಕ್ಕ
ಕೃತಿವಿನಿರ್ಮಿಂಪು ಮೀಕ ಮಾಕುಁ ಬ್ರಿಯ ಮುಗಾಂಗ.

ಎಂಬ ಪದ್ಯಗಳಿಂದ ಈತನು ಸಂಸ್ಕೃತದಲ್ಲಿ 'ಮದಾಲಸಚರಿತ್ರಂ' 'ಸತ್ಯಾವಧೂಪ್ರೀಣನಂ' 'ಸಕಲಕಥಾಸಾರಸಂಗ್ರಹಂ' 'ಸೂಕ್ತಿನೈಪುಣೀಜ್ಞಾನಚಿಂತಾಮಣಿ' 'ರಸಮಂಜರಿ' ಮೊದಲಾದ ಗ್ರಂಥಗಳನ್ನು ರಚಿಸಿರುವಂತೆ ಊಹಿಸಬಹುದಾಗಿದೆ.[55] ಆದರೆ ಇವುಗಳಲ್ಲಿ ಯಾವುದೂ ಲಭ್ಯವಾಗಿಲ್ಲ.[56] 'ಜಾಂಬುವತೀ ಕಲ್ಯಾಣ'ವೆಂಬ ಸಂಸ್ಕೃತ ನಾಟಕದ 'ಸಮಾಪ್ತಮಿದಂ ರಾಜಾಧಿರಾಜ ರಾಜಪರಮೇಶ್ವರ ಸಕಲ

---

[54] ತೆಲುಗು ಸಾಹಿತ್ಯಚರಿತ್ರೆ, ಪುಟ ೭೦.

[55] ವೀ.ಲಿಂ. ಪಂ. ೧೦, ೧೭೬.

[56] 'ಪ್ರಪಂಚದರ್ಪಣ'ವೆಂಬ ಒಂದು ಸಂಕಲನ ಗ್ರಂಥದಲ್ಲಿ 'ಸತ್ಯಾವಧೂಪ್ರೀಣನ' ಮತ್ತು 'ರಸಮಂಜರಿ'ಯಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಅವು ಆಸ್ಥಾನಕವಿಯಾದ ಅಲ್ಲಸಾನಿ ಪೆದ್ದನ್ನನದೆಂದು ಸೂಚಿತವಾಗಿದೆ. ಅದರಲ್ಲಿಯೇ ಕೃಷ್ಣದೇವರಾಯನು 'ಅಲಂಕಾರ ಸಾರಸಂಗ್ರಹ'ವೆಂಬ ಮತ್ತೊಂದು ಗ್ರಂಥವನ್ನು ರಚಿಸಿರುವಂತೆ ಸೂಚಿತವಾಗಿದೆ.

ಕಲಾಭೋಜ ರಾಜವಿಭವ ಮೂರು ರಾಯರಗಂಡ ಶ್ರೀಮತ್ಕೃಷ್ಣರಾಯ ವಿರಚಿತಂ ಜಾಂಬುವತೀ ಕಲ್ಯಾಣಂ ನಾಮನಾಟಕಂ' ಎಂಬ ನಾಟಕಾಂತ ಗದ್ಯದಿಂದ ಕೃಷ್ಣ ದೇವರಾಯನೇ ಈ ಗ್ರಂಥವನ್ನು ರಚಿಸಿದ್ದಾನೆಂದು ಊಹಿಸಬಹುದು.[57] ಇದು ಅಯ್ದು ಅಂಕದ ನಾಟಕ. ಅದರ ಪ್ರಸ್ತಾವನೆಯಲ್ಲಿ ಇದು ವಿರೂಪಾಕ್ಷ ದೇವರ ಚೈತ್ರೋತ್ಸವದ ದಿನ ಅಭಿನಯಿಸಲ್ಪಟ್ಟಿತೆಂದು ಉಕ್ತವಾಗಿದೆ. ಶ್ರೀ ಕೃಷ್ಣನ ಅಷ್ಟ ಮಹಿಷಿಯರಲ್ಲೊಬ್ಬಳಾದ ಜಾಂಬುವತಿಯ ಕಲ್ಯಾಣ ಇದರ ಕಥಾವಸ್ತು. ಇದರ ಶೈಲಿಯು ಉತ್ತಮವಾಗಿದೆ.

ಕೃಷ್ಣದೇವರಾಯನ ಸಂಸ್ಕೃತ ಗ್ರಂಥಗಳಿಗಿಂತ ಅವನ ಆಂಧ್ರಗ್ರಂಥವಾದ 'ಆಮುಕ್ತಮಾಲ್ಯದ' ಅಥವಾ 'ವಿಷ್ಣುಚಿತ್ತೀಯ'ವೇ ಅವನ ಕವಿತಾಶಕ್ತಿಯನ್ನು ಶಾಶ್ವತಗೊಳಿಸಿರುವುದು. ಈ ಗ್ರಂಥವು ಆಗ ತಾನೆ ರೂಢಿಗೆ ಬರುತ್ತಿದ್ದ 'ಕಾವ್ಯಶೈಲಿ'ಯಲ್ಲಿ ರಚಿತವಾಗಿದೆ. ವಿಷ್ಣುಭಕ್ತರಾದ ಶ್ರೀ ವಿಲ್ಲಿಪುತ್ತೂರಿನ ಪೆರಿಯಾಳ್ವಾರ್ರವರ ಚರಿತ್ರೆಯು ಇದರ ಕಥಾವಸ್ತು. ಆಳ್ವಾರ್ರವರ ಪುತ್ರಿಯಾದ 'ಆಂಡಾಳ್' ಅಥವಾ ಗೋದಾದೇವಿಯೆಂಬ ಭಕ್ತೆಗೂ ಶ್ರೀ ರಂಗನಾಥಸ್ವಾಮಿಗೂ ನಡೆದ ವಿವಾಹವೇ ಇದರ ಮುಖ್ಯ ಕಥಾಗರ್ಭ. ಕೃಷ್ಣರಾಯನು ಕಳಿಂಗದೇಶದ ವಿಜಯಯಾತ್ರೆಗೆ ಹೋಗುತ್ತ ದಾರಿಯಲ್ಲಿ ಶ್ರೀಕಾಕುಳದ ಆಂಧ್ರ ಮಧುಸೂದನಸ್ವಾಮಿಯನ್ನು ದರ್ಶನಮಾಡುವುದಕ್ಕಾಗಿ ಹೋಗಿ ರಾತ್ರಿ ಅಲ್ಲಿ ತಂಗಿರಲು ದೇವರು ಸ್ವಪ್ನದಲ್ಲಿ ಬಂದು ಗೋದಾದೇವಿಯ ಚರಿತ್ರೆಯನ್ನು ದೇಶಭಾಷೆಯಲ್ಲೆಲ್ಲ ಉತ್ತಮವಾದ ತೆಲುಗು ಭಾಷೆಯಲ್ಲಿ ರಚಿಸೆಂದು ಆಜ್ಞೆಮಾಡಲು ತದನುಗುಣವಾಗಿ ತಾನು 'ಆಮುಕ್ತ ಮಾಲ್ಯದ'ವನ್ನು ರಚಿಸಿರುವಂತೆ ಕೃಷ್ಣರಾಯನೇ ತನ್ನ ಗ್ರಂಥದ ಪ್ರಾರಂಭದಲ್ಲಿ ಹೇಳಿಕೊಂಡಿದ್ದಾನೆ[58]. ಸ್ವಪ್ನದಲ್ಲಿ ಕಾಣಿಸಿಕೊಂಡ ದೇವರೂ ತೆಲುಗೇ ದೇಶಭಾಷೆಯಲ್ಲೆಲ್ಲಾ ಉತ್ತಮವಾದುದೆಂದು ಹೇಳಿದರೆಂದು ಉಲ್ಲೇಖಮಾಡಿರುವದನ್ನು ನೋಡಿದರೆ ಈತನಿಗೆ ಆ ಭಾಷೆಯಲ್ಲಿ ಎಷ್ಟು ಅಭಿಮಾನವಿತ್ತೆಂಬುದನ್ನು ಊಹಿಸಿಕೊಳ್ಳಬಹುದಾಗಿದೆ. ಹೇಗಾದರೂ 'ಆಮುಕ್ತಮಾಲ್ಯದ'* ಐತಿಹಾಸಿಕ ದೃಷ್ಟಿಯಿಂದಲೂ ಬಹು ಪ್ರಮುಖವಾದ ಗ್ರಂಥ.

---

[57] ಆಧಾರಗ್ರಂಥಗಳು, ೪೨-೩. [58] ವೀ.ಲಿಂ. ಪಂ. ೧೦, ೧೮೦.

* ಈ ಗ್ರಂಥದ ಆಶ್ವಾಸಾಂತ್ಯ ಗದ್ಯಗಳು ಇತಿಹಾಸಗಳ ವಿಷಯಕವಾದ ಭಂಡಾರದಂತಿದೆ. ಇವುಗಳಲ್ಲಿ ಕವಿಯು ತನ್ನ ದಂಡಯಾತ್ರೆಗಳನ್ನೆಲ್ಲಾ ಕ್ರಮವಾಗಿ ವರ್ಣಿಸಿದ್ದಾನೆ. ದಕ್ಷಿಣಭಾರತದ ಐತಿಹಾಸಿಕ ಹಿನ್ನೆಲೆಯಲ್ಲಿ ಅನೇಕ ವೈಷ್ಣವಾಚಾರ ಪದ್ಧತಿಗಳು ಇಲ್ಲಿ ಚಿತ್ರಿತವಾಗಿವೆ. ನಾಲ್ಕನೆಯ ಸರ್ಗದಲ್ಲಿ ತನಗೆ ಅಭಿಮತವಾದ ರಾಜನೀತಿಯನ್ನು ವಿವರಿಸಿದ್ದಾನೆ.

ಆಂಧ್ರ ಕವಿತಾಪ್ರಪಂಚದಲ್ಲಿ ಅಲ್ಲಸಾನಿ ಪೆದ್ದನ್ನನು ಕೃಷ್ಣದೇವರಾಯನ ಪ್ರಿಯ ಮಿತ್ರ. ಈತನೂ ರಾಜನಂತೆಯೇ ಶ್ರೀವೈಷ್ಣವರ ಶಿಷ್ಯನಾದುದರಿಂದ ಇವರ ಸಂಬಂಧವು ಬಲಪಟ್ಟಿರಬಹುದು. ಹಿಂದೆಯೇ ತಿಳಿಸಿರುವಂತೆ ಪೆದ್ದನ್ನನು ಪ್ರಬಂಧ ಮಾರ್ಗಸ್ಥಾಪಕ. ಆದುದರಿಂದಲೇ ಅವನಿಗೆ 'ಆಂಧ್ರಕವಿತಾಪಿತಾಮಹ' ಎಂಬ ಪ್ರೌಢಿಮೆಯು ಅಕ್ಷರಶಃ ಸಲ್ಲುತ್ತದೆ. ಇವನು ತಾನು ರಚಿಸಿದ 'ಮನುಚರಿತ್ರ'ವನ್ನು ತನ್ನ ಪೋಷಕನಿಗೆ ಅಂಕಿತವಾಗಿ ಅರ್ಪಿಸಿದ್ದಾನೆ. ಇದರ ವಿಷಯಕವಾದ, ಚಾಟುಪದ್ಯಗಳನ್ನು ನಂಬಬಹುದಾದರೆ ಕೃಷ್ಣದೇವರಾಯನು 'ಮನುಚರಿತ್ರ'ವನ್ನು ತನಗೆ ಸಮರ್ಪಣೆ ಮಾಡಿಸಿಕೊಳ್ಳುವ ಕಾಲದಲ್ಲಿ ಆ ಗ್ರಂಥವನ್ನು ಪಲ್ಲಕ್ಕಿಯಲ್ಲಿಟ್ಟು ರಾಜಧಾನಿಯಲ್ಲಿ ಮೆರವಣಿಗೆ ಮಾಡಿಸಿ ಸ್ವತಃ ಆ ಪಲ್ಲಕ್ಕಿಯನ್ನು ಹೊತ್ತು ರಾಜಸಭೆಯಲ್ಲಿ ಅದರ ಕರ್ತೃವಾದ ಪೆದ್ದನ್ನನಿಗೆ 'ಆಂಧ್ರಕವಿತಾ ಪಿತಾಮಹ' ಎಂಬ ಬಿರುದನ್ನು ಕೊಟ್ಟು ಅವನ ಕಾಲಿಗೆ ತನ್ನ ಕೈಯಿಂದಲೇ ಕಡಗವನ್ನು ತೊಡಿಸಿದನು. ಅಲ್ಲದೆ ಪೆದ್ದನ್ನನೇ ತನ್ನ ಮನುಚರಿತ್ರೆಯಲ್ಲಿ ಕೃಷ್ಣದೇವರಾಯನು ತಾನು ಕೇಳಿದ ಸ್ಥಳಗಳಲ್ಲಿ ಕೇಳಿದಾಗಲೆಲ್ಲ ಅಗ್ರಹಾರಗಳನ್ನೂ ದತ್ತಿಗಳನ್ನೂ ಕೊಡುತ್ತಿದ್ದನೆಂದು ಹೇಳಿಕೊಂಡಿದ್ದಾನೆ.[59] ಈ ಅಂಶವನ್ನು ಪೋಷಿಸುವುದಕ್ಕೆ ಅನೇಕ ಶಾಸನಗಳು ಸಿಕ್ಕುವುವು. ಮದ್ರಾಸ್ ಲಿಪ್ಯನ್ವೇಷಣ ಶಾಖೆಯ ೧೯೧೬, ೧೯೨೧, ೧೯೨೭ನೆಯ ವರ್ಷಗಳ ವರದಿಗಳಿಂದ ಪೆದ್ದನ್ನನು ಕೃಷ್ಣದೇವರಾಯನಿಂದ ಅನೇಕ ಗ್ರಾಮಗಳನ್ನು ಪಡೆದು ದೇವಾಲಯಗಳಿಗೂ ಸರ್ವತಂತ್ರಸ್ವತಂತ್ರೋಭಯವೇದಾಂತಾಚಾರ್ಯರಾದ ಪರಾಂಕುಶ ಶ್ರೀ ಶಠಗೋಪಜೀಯರವರಿಗೂ ದಾನಮಾಡಿದಂತೆ ತಿಳಿಯಬಹುದಾಗಿದೆ.[60] ಪೆದ್ದನ್ನನು ತನ್ನ ಮನುಚರಿತ್ರೆಗೆ 'ಮಾರ್ಕಂಡೇಯ ಪುರಾಣ'ದಿಂದ ವಸ್ತುವನ್ನು ಆರಿಸಿಕೊಂಡಿದ್ದಾನೆ. ಸ್ವಾರೋಚಿಷಮನುವಿನ ಕಥೆ ಇದರ ವಸ್ತು; ಮನೋಹರವಾದ ಹೊಸ ಶೈಲಿಯಿಂದ ಕೂಡಿದೆ. ಇದರಲ್ಲಿ ಉತ್ತಮ ವರ್ಣನೆಗಳೂ ಶ್ರೇಷ್ಠವಾದ ಉಪಮಾನಗಳೂ ಇಂಪಾದ ನಾದವೂ ತುಂಬಿವೆ. 'ಹರಿಕಥಾಸಾರ'ವೆಂಬ ಮತ್ತೊಂದು ಗ್ರಂಥವನ್ನೂ ಈತನು ರಚಿಸಿರುವಂತೆ ಕಾಣುತ್ತದೆ.

ಕೃಷ್ಣದೇವರಾಯನ ಇತರ ಆಸ್ಥಾನಕವಿಗಳಲ್ಲಿ ನಂದೀತಿಮ್ಮಯ್ಯನು* ತನ್ನ

[59] ಅದೇ, ಪುಟ ೧೮೯-೯೦.

[60] ಮ.ಶಾ. ವ. ೧೯೧೬-೭ ; ಅದೇ ಅನು. ಬಿ. ನಂ. ೫೩೪, ೧೯೨೧-೫೦ ; ಅನು. ಸಿ ನಂ. ೧೦೫ ; ಅದೇ ೧೯೨೭-೮೨, ಬಿ. ನಂ. ೭೧೫-೧೬.

* ಇವನು 'ವರಾಹ ಪುರಾಣ'ವನ್ನು ಬರೆದು ಕೃಷ್ಣದೇವರಾಯನ ತಂದೆಯಾದ ನರಸ ಭೂಪಾಲನಿಗೆ ಅಂಕಿತಮಾಡಿದ್ದಾನೆ. ಇವನ 'ವಾಣೀವಿಲಾಸಂ' ನಾಶವಾಗಿದೆ.

ಪೋಷಕನ ಅಂಕಿತದಲ್ಲಿ ಅನೇಕ ಚಾರಿತ್ರಾಂಶಗಳಿಂದ ಕೂಡಿದ 'ಪಾರಿಜಾತಾಪಹರಣ'ವೆಂಬ ಗ್ರಂಥವನ್ನು ರಚಿಸಿದನು.[61] 'ತ್ರಿಸ್ಥಲೀದಂಡಕ'ವೆಂಬ ಮತ್ತೊಂದು ಗ್ರಂಥವನ್ನೂ ಇವನು ರಚಿಸಿರುವಂತೆ ಕಾಣುತ್ತದೆ. ಕೃಷ್ಣದೇವರಾಯನು ಇವನಿಗೆ ಅಗ್ರಹಾರ ದಾನಮಾಡಿದ್ದಾನೆ. ಕೃಷ್ಣದೇವರಾಯನು ಭೋಜರಾಜನಂತೆ ವಸಂತೋತ್ಸವ ಕಾಲದಲ್ಲಿ ವಿದ್ವದ್ಗೋಷ್ಠಿಯನ್ನೇರ್ಪಡಿಸಿ ಸನ್ಮಾನಮಾಡುತ್ತಿದ್ದನೆಂದೂ ತುಲಾಪುರುಷ ದಾನ ಮಾಡುತ್ತಿದ್ದನೆಂದೂ ಪಾರಿಜಾತಾಪಹರಣದಲ್ಲಿ ಉಕ್ತವಾಗಿದೆ. ಕೃಷ್ಣದೇವನ ಪ್ರಧಾನನಾದ ಸಾಲುವ ತಿಮ್ಮನು ಅಗಸ್ತ್ಯನ ಚಂಪೂಭಾರತಕ್ಕೆ 'ಬಾಲಭಾರತ ವ್ಯಾಖ್ಯಾ' ಎಂಬ ವ್ಯಾಖ್ಯಾನವನ್ನು ಬರೆದಿದ್ದಾನೆ. ಇದರಲ್ಲಿ ಈತನು ತನ್ನನ್ನು 'ಸಕಲಾಗಮಪಾರಾವಾರಪಾರೀಣ' ಎಂದು ಹೇಳಿಕೊಂಡಿದ್ದಾನೆ.[62] ಈತನ ಅಳಿಯಂದಿರಾದ ನಾದಿಂದಿಲ ಅಪ್ಪ ಮತ್ತು ನಾದಿಂದಿಲ ಗೋಪ ಎಂಬುವರು ಕವಿಗಳೂ ಕವಿಜನಾಶ್ರಯರೂ ಆಗಿದ್ದರು. ಮಾದಯ್ಯಗಾರಿ ಮಲ್ಲನ್ನನು 'ರಾಜಶೇಖರ ಚರಿತಮು' ಎಂಬ ಗ್ರಂಥವನ್ನೂ ರಚಿಸಿ ಅಪ್ಪನಿಗೆ ಅಂಕಿತಮಾಡಿದ್ದಾನೆ. ಈತನು ಮೃಗೇಂದ್ರಾಗಮಕ್ಕೆ ವ್ಯಾಖ್ಯಾನವನ್ನು ಬರೆದ ಭಾಷಾಮಠದ ಅಘೋರಶಿವನ ಶಿಷ್ಯ. ಅಪ್ಪನ ತಮ್ಮನಾದ ಗೋಪನು ಕೃಷ್ಣಮಿಶ್ರನ 'ಪ್ರಬೋಧಚಂದ್ರೋದಯ'ಕ್ಕೆ 'ಚಂದ್ರಿಕೆ'ಯೆಂಬ ವ್ಯಾಖ್ಯಾನವನ್ನು ರಚಿಸಿದನು.[63] ದ್ವಿಪದೀ ಛಂದಸ್ಸಿನಲ್ಲಿ ರಚಿತವಾಗಿರುವ 'ಕೃಷ್ಣಾರ್ಜುನ ಸಂವಾದ'ವೂ ಈತನಿಂದಲೇ ರಚಿತವಾದುದು. ಗೋಪನ ಶಿಷ್ಯನಾದ ದೇಶಿಯಾಮಾತ್ಯನು 'ಮಹಿಮ್ನಸ್ತವ'ಕ್ಕೆ 'ಪಂಚಿಕೆ'ಯೆಂಬ ವ್ಯಾಖ್ಯಾನವನ್ನು ಬರೆದಿದ್ದಾನೆ. ಈತನು ಕೃಷ್ಣದೇವರಾಯನ ಖಾಜಾ ಮತ್ತು ಕೊಂಡವೀಡು ಶಾಸನಗಳ ಕರ್ತೃವಾದ ಲೊಲ್ಲಲಕ್ಷ್ಮೀಧರನ ಶಿಷ್ಯನೂ[64] ಹೌದು. ಲಕ್ಷ್ಮೀಧರನು[65] ಜ್ಯೋತಿಷ್ಯ, ಮಂತ್ರಶಾಸ್ತ್ರ, ಷಡ್ದರ್ಶನಗಳ ವಿಷಯವಾಗಿ ಅನೇಕ ಗ್ರಂಥಗಳನ್ನು ರಚಿಸಿರುವಂತೆ ದೇಶೀಯಾಮಾತ್ಯನು ತನ್ನ ಗ್ರಂಥದ ಪೀಠಿಕೆಯಲ್ಲಿ ಹೇಳಿದ್ದಾನೆ. ಈತನು ಉದ್ದಾಮಕವಿಯಲ್ಲದೆ ಉದಾತ್ತ ಪಂಡಿತ ಮನೆತನಕ್ಕೆ ಸೇರಿದವನು. ಶ್ರೀ ಶಂಕರಾಚಾರ್ಯರವರ 'ಸೌಂದರ್ಯಲಹರಿ'ಗೆ ತಾನು ರಚಿಸಿರುವ ವ್ಯಾಖ್ಯಾನದ

---

61 ವೀ.ಲಿಂ. ೧೦-೧೯೯.

62 ಆಧಾರಗ್ರಂಥಗಳು, ೧೪೩.

63 ಅದೇ, ೧೪೪.

64 ಎ.ಇಂ. ನಂ. ೬, ಪುಟ ೧೦೭.

65 ಲಕ್ಷ್ಮೀಧರ ಮತ್ತು ದಿವಾಕರರಿಬ್ಬರೂ ಮೊದಲು ವೀರರುದ್ರಗಜಪತಿಯ ಆಸ್ಥಾನದಲ್ಲಿದ್ದು ಕೃಷ್ಣದೇವನು ಅವನನ್ನು ಗೆದ್ದಮೇಲೆ ಅವನೊಡನೆ ಕೃಷ್ಣದೇವರಾಯನ ಆಸ್ಥಾನಕ್ಕೆ ಬಂದು ಸೇರಿದರು.

ಆಶ್ವಾಸಾಂತ್ಯ ಗದ್ಯದಲ್ಲಿ ತನ್ನ ವಂಶದ ಮಹಿಮೆಯನ್ನು ವಿಸ್ತಾರವಾಗಿ ವರ್ಣಿಸಿ ಕೊಂಡಿದ್ದಾನೆ.* ಪ್ರತಾಪರುದ್ರಕೃತವೆಂದು ಪ್ರತೀತಿ ಇರುವ 'ಸರಸ್ವತೀ ವಿಲಾಸ'ವೆಂಬುದೂ ಅದರ ಗ್ರಂಥಾಂತಗದ್ಯದಿಂದ ಏತತ್ಕೃತವೆಂದೇ ತೋರುತ್ತದೆ. 'ಜ್ಯೋತಿಷ್ಯದರ್ಪಣ'ದ ರಚನೆಯಲ್ಲಿ ಲಕ್ಷ್ಮೀಧರನ ಕೈವಾಡವು ಸೇರಿರುವುದು ನಿಸ್ಸಂದೇಹವಾದ ವಿಷಯ[66]. ಬಂಡಂ ಲಕ್ಷ್ಮೀನಾರಾಯಣನೆಂಬುವನು ಕೃಷ್ಣದೇವ ರಾಯನ ಅಂಕಿತದಲ್ಲಿ 'ಸಂಗೀತಸೂರ್ಯೋದಯ'ವೆಂಬ ಐಯ್ದು ಅಧ್ಯಾಯದ ಗ್ರಂಥವನ್ನು ರಚಿಸಿದ್ದಾನೆ. ಈ ಗ್ರಂಥದ ಉಪೋದ್ಘಾತದಲ್ಲಿ ಕೃಷ್ಣದೇವರಾಯನ ಆದಿಕಾಲದ ಜೈತ್ರಯಾತ್ರೆಗೆ ಸಂಬಂಧಪಟ್ಟ ಅನೇಕ ವಿಷಯಗಳು ಲಬ್ಧವಾಗುತ್ತವೆ. ಈತನು ಕೃಷ್ಣದೇವರಾಯನ ನಾಟ್ಯಾಚಾರ್ಯ. ಆ ಕಾಲದ ಪ್ರಸಿದ್ಧ ವಿದ್ವಾಂಸ. ಈತನಿಗೆ ಅಭಿನವಭರತಾಚಾರ್ಯ' 'ರಾಯಬಿರಾಯತ' 'ತೋದರಮಲ್ಲ' 'ಸೂಕ್ಷ್ಮ ಭರತಾಚಾರ್ಯ' ಎಂಬ ಬಿರುದುಗಳಿದ್ದವು. ಈತನು ತೆಲಗುಸಾಹಿತ್ಯದಲ್ಲಿಯೂ

---

* ಸೌಂದರ್ಯಲಹರಿ ವ್ಯಾಖ್ಯಾನದ ಆಶ್ವಾಸಾಂತ್ಯ ಗದ್ಯದಲ್ಲಿ ಲಕ್ಷ್ಮೀಧರನು ತನ್ನ ಮತ್ತು ತನ್ನ ಪೂರ್ವಜರ ಪ್ರಶಸ್ತಿಯನ್ನು ಹೀಗೆಂದು ವಿಸ್ತರಿಸಿದ್ದಾನೆ. 'ಶ್ರೀ ಲೊಲ್ಲಕುಲ ಸಂಪ್ರದಾಯ ಪ್ರವರ್ತಕ ಭ್ರಮರಾಂಬಿಕಾ ವರಪ್ರಸಾದ ಸಮುಲ್ಲಸಿತ ಸಾರಸ್ವತಭಟ್ಟಲೊಲ್ಲಪತಿಗ್ರಂಥ ವಿವರಣಕರ್ತೃ ಶ್ರೀ ಮಹಾಮಹೋಪಾಧ್ಯಾಯ ಮಹಾದೇವಾಚಾರ್ಯಸಪ್ತಮೇನ, 'ಸಾಹಿತ್ಯ ಪಾರಿಜಾತ.' 'ಸ್ಮೃತಿಕಲ್ಪತರು' ಪ್ರಬಂಧಲಕ್ಷ್ಮೀಧರಾರ್ಯಷಷ್ಠೇನ, ಭರತಾರ್ಣವಪೋತಾಖ್ಯ ಸಾಹಿತ್ಯಮೀಮಾಂಸಾಗ್ರಂಥದ್ವಯಪ್ರಣೇತೃ ವಿರಂಚಿಮಿಶ್ರ ಪಂಚಮೇನ, ಮೀಮಾಂಸಾದ್ವಯ ಜೀವಾತುನಿರ್ಮಾತೃ ಪುರುಷೋತ್ತಮ ಮಹೋಪಾಧ್ಯಾಯ ನಪ್ತ್ರಾ, 'ಪ್ರಾಭಾಕರಾಮೃತ ವಾಹಿನೀ' 'ಪ್ರಭಾವಳೀಖಂಡನಾ'ದ್ಯನೇಕ ಪ್ರಬಂಧ ಸಂದರ್ಭ ಪ್ರವರ್ತಕ ಬಿರುದಪರ ಮಹೋಪಾಧ್ಯಾಯ ಲಕ್ಷ್ಮಣಾರ್ಯಪೌತ್ರೇಣ, 'ನಯವಿವೇಕದಿಪಿಕಾ'ಪ್ರಬಂಧಸಂವಿಧಾತೃಮಹೋಪಧ್ಯಾಯ ವಿದ್ವತ್ಸಾರ್ವಭೌಮ ನೂತನ ವ್ಯಾಸಾರ್ದ್ಯನೇಕ ಬಿರುದಾಂಕಿತ ಶ್ರಿ ವಿಶ್ವನಾಥ ಭಟ್ಟಾರ ತನಯೇನ ಅಧೀತ ದಶಶತನಯೇನ . . . ಷಡ್ದರ್ಶನ ಪಾರದೃಶ್ವಿನಾ . . . ಆಶ್ರಯೀಕೃತ ಗಜಪತಿ ವೀರರುದ್ರೇಣ ಸರಸ್ವತೀವಿಲಾಸಾದ್ಯನೇಕ ಸ್ಮೃತಿನಿಬಂಧನ, ಲಕ್ಷ್ಮೀಧರಾದ್ಯನೇಕ ಸಾಹಿತ್ಯನಿಬಂಧನ, ನಯವಿವೇಕ ಭೂಷಣಾದ್ಯನೇಕ ಗುರುಮತ ನಿಬಂಧನ, ಯೋಗದೀಪಿಕಾದ್ಯನೇಕ ಪಾತಂಜಲಮತನಿಬಂಧನ, ಮಹಾನಿಬಂಧನಾಖ್ಯ ಮಾನವಧರ್ಮಶಾಸ್ತ್ರ, ಟೀಕಾಕರ್ಣಾವತಂಸ ಬರ್ಹಾವತಂಸಾದ್ಯನೇಕ ಕಾವ್ಯಕಲ್ಪಕೇನ . . . ಶ್ರೀ ಮಹೋಪಾಧ್ಯಾಯ ಲಕ್ಷ್ಮೀಧರ ದೇಶಿಕೇನ ಕೃತೇಯಂ . . . ಇತ್ಯಾದಿ. ಕೃಷ್ಣದೇವರಾಯನು ಪ್ರತಾಪರುದ್ರನನ್ನು ಗೆಲ್ಲುವ ಮೊದಲು ಲಕ್ಷ್ಮೀಧರನು ಅವನಲ್ಲಿದ್ದಿರಬೇಕು. ಅವನನ್ನು ಗೆದ್ದು ಕೃಷ್ಣದೇವರಾಯನು ಪ್ರತಾಪರುದ್ರನ ಮಗಳನ್ನು ಮದುವೆಯಾದಾಗ ಲಕ್ಷ್ಮೀಧರನೂ ಅವನ ಆಸ್ಥಾನಕ್ಕೆ ಬಂದಿರಬೇಕು. ಕೊಂಡುವೀಡಿನ ಅನೇಕ ಶಾಸನಗಳಲ್ಲಿ ಲಕ್ಷ್ಮೀಧರನ ಹೆಸರು ಬರುತ್ತದೆ. ಎ. ಇಂ. v, ಪು. ೨೩೦ ಕ್ರಿ.ಶ. ೧೫೩೦.

[66] ಆಧಾರಗ್ರಂಥಗಳು, ಪು. ೧೫೨.

ಬಹಳ ಆಸಕ್ತಿಯುಳ್ಳವನು. ಭಾನುಕವಿಯೆಂಬುವನು 'ಪಂಚರತ್ನ'ವನ್ನು ಭಾಷಾಂತರಿಸಿ ಈತನಿಗೆ ಅಂಕಿತಮಾಡಿದ್ದಾನೆ. ಈಶ್ವರದೀಕ್ಷಿತನು ಕೃಷ್ಣದೇವರಾಯನ ಆಜ್ಞೆಯ ಪ್ರಕಾರ ರಾಮಾಯಣಕ್ಕೆ ವ್ಯಾಖ್ಯಾನವನ್ನು ಬರೆದುದಲ್ಲದೆ ಸಪ್ತಕಾಂಡ ರಾಮಾಯಣ ವನ್ನು ೬೦ ಗಳಿಗೆಯಲ್ಲಿ ಪಠಿಸಿ ರಾಜನ ಗೌರವಕ್ಕೆ ಪಾತ್ರನಾದನು. ಗಜಪತಿಯ ಮಗಳೂ ಕೃಷ್ಣದೇವರಾಯನ ಪತ್ನಿಯೂ ಆದ ತುಕ್ಕಾದೇವಿಯು 'ತುಕ್ಕಪಂಚಕ' ವನ್ನು ರಚಿಸಿರುವಳೆಂಬ ಪ್ರತೀತಿಯುಂಟು.

ಕೃಷ್ಣದೇವರಾಯನ ಆಸ್ಥಾನದ ಇತರ ಆಂಧ್ರಕವಿಗಳಲ್ಲಿ ಧೂರ್ಜಟಿಯು 'ಕಾಳ ಹಸ್ತಿ ಮಾಹಾತ್ಮ್ಯಮು' 'ಕಾಳಹಸ್ತಿ ಶತಕಮು' ಎಂಬ ಎರಡು ಗ್ರಂಥಗಳನ್ನು ರಚಿಸಿ ದ್ದಾನೆ. ಅಯ್ಯಲುರಾಜು ರಾಮಭದ್ರಕವಿ 'ಸಕಲಮತಸಾರ ಸಂಗ್ರಹಮು' 'ರಾಮಾ ಭ್ಯುದಯಮು' ಎಂಬ ಎರಡು ಗ್ರಂಥಗಳನ್ನು ರಚಿಸಿದ್ದಾನೆ. ಕಂದಕೂರು ರುದ್ರ ಕವಿಯು ಕೃಷ್ಣನ ಆಸ್ಥಾನದಲ್ಲಿ ೧೨ ವರ್ಷಗಳಿದ್ದು 'ನಿರಂಕುಶೋಪಾಖ್ಯಾನಮು' ಎಂಬ ಉತ್ತಮ ಪ್ರಬಂಧ ಕಾವ್ಯವನ್ನೂ 'ಸುಗ್ರೀವವಿಜಯ'ವೆಂಬ ಯಕ್ಷಗಾನ ವನ್ನೂ 'ಹರಿಶತಕ'ವೆಂಬ ಒಂದು ಶತಕ ಗ್ರಂಥವನ್ನೂ ರಚಿಸಿದ್ದಾನೆ. ತಿರುಪತಿಯ ದೇವಸ್ಥಾನದ ಸಂಕರ್ಷಣಾಚಾರ್ಯರ ವಂಶಕ್ಕೆ ಸೇರಿದ ತಾಲ್ಲಪಾಕಂ ಪೆದ್ದ ತಿರುಮಲಯ್ಯನೆಂಬುವನು ಶ್ರೀ ವೆಂಕಟೇಶ್ವರನನ್ನು ಕುರಿತು ಅನೇಕ ಸಂಕೀರ್ತನೆ ಗಳನ್ನು 'ಹರಿವಂಶ'ವೆಂಬ ದ್ವಿಪದೀಗ್ರಂಥವನ್ನೂ 'ಶೃಂಗಾರ ಶತಕ' ಭಗವದ್ಗೀತೆಯ ತೆಲುಗು ವ್ಯಾಖ್ಯಾನ, ನೀತಿಸೀಸ, ಪದ್ಯಶತಕಂ, 'ವೆಂಕಟೇಶ್ವರೋದಾಹರಣಂ', ಮೊದಲಾದುವುಗಳನ್ನೂ ಒಂದು ಛಂದೋಗ್ರಂಥವನ್ನೂ ರಚಿಸಿದ್ದಾನೆ. ತಾಲ್ಲಪಾಕಂ ಚಿನ್ನಣ್ಣನು ಈತನ ಮಗ. ಈತನ ಸರಿಯಾದ ಹೆಸರು ತಿನ್ನವೆಂಗಲನಾಥ. ಈತನು ದ್ವಿಪದೀಶೈಲಿಗೆ ಎತ್ತಿದ ಕೈ. 'ಪರಮಯೋಗೀವಿಲಾಸಮು' 'ಅಷ್ಟಮಹಿಷೀ ಕಲ್ಯಾಣಮು' ಎಂಬ ಗ್ರಂಥಗಳನ್ನು ಬರೆದಿದ್ದಾನೆ. ಪೋತನಾರು ಆಸ್ಥಾನಕವಿ ಯಾಗಿದ್ದ ಚಿಂತಲಪೂರಿ ಯಲ್ಲಕವಿ ಕೃಷ್ಣದೇವರಾಯನು ಆ ರಾಜ್ಯವನ್ನು ಗೆದ್ದು ಜಯಸ್ತಂಭವನ್ನು ಸ್ಥಾಪಿಸಿದ ಮೇಲೆ ಕೃಷ್ಣರಾಯನ ಆಸ್ಥಾನದಲ್ಲಿ ಬಂದು ನೆಲ ಸಿದನು. ಈತನ 'ರಾಧಾಮಾಧವಂ' ಎಂಬ ಗ್ರಂಥವನ್ನು ಕೃಷ್ಣನು ಪರೀಕ್ಷಿಸಿ ಬಹು ತೃಪ್ತಿಪಟ್ಟು ಅವನಿಗೆ ಅದೇ ಬಿರುದನ್ನು ಕೊಟ್ಟನು. ಕೃಷ್ಣನು ಹೋಗಿಬಿಟ್ಟ ಮೇಲೆಯೂ ಈತನು ಜೀವಂತನಾಗಿದ್ದು 'ವಿಷ್ಣುಮಯ ನಾಟಕಂ', 'ತಾರಕ ಬ್ರಹ್ಮರಾಜೀಯಮ್' ಎಂಬುವುಗಳನ್ನೂ ಬರೆದು ಇವುಗಳಲ್ಲಿ ಎರಡನೆಯದನ್ನು ಅಚ್ಯುತರಾಯನ ಸೈನ್ಯಾಧಿಕಾರಿಯಾಗಿದ್ದ ನಂಜತಿಮ್ಮರಸುವಿಗೆ ಅಂಕಿತಮಾಡಿದನು. ವಲ್ಲಭಾಚಾರ್ಯನೆಂದು ಪ್ರಸಿದ್ಧನಾದ ಕವಿದೇವೇಂದ್ರನು ಭಾಸ್ಕರಾಚಾರ್ಯರ

ಲೀಲಾವತಿಯನ್ನು ಇದೇ ಕಾಲದಲ್ಲಿ ತೆಲುಗಿಗೆ ಭಾಷಾಂತರಿಸಿ ಬೊಮ್ಮಲತ ಕಾಳನೆಂಬುವನಿಗೆ ಅಂಕಿತಮಾಡಿದನು. ರಾಮಾಯಣದ ಕರ್ತೃವಾದ ಕುಮಾರಮಲ್ಲಮ್ಮ ಎಂಬುವಳು ಕೃಷ್ಣದೇವರಾಯನಿಂದ ಗೌರವಿಸಲ್ಪಟ್ಟ ಕವಿಯತ್ರಿ. 'ಕುಮಾರ ನೈಷಧಮ್' 'ಮಲ್ಲಣಚಾರಿತ್ರಂ' ಮೊದಲಾದುವಗಳ ಕರ್ತೃವಾದ ಯಡಪಾಟ್ಟಿ ಯೆರ್ರಣ್ಣನೂ 'ಕವಿಕರ್ಣರಸಾಯನ'ದ ಕರ್ತೃವಾದ ಸಂಕುಸಾಲ ನೃಸಿಂಹಕವಿಯೂ ಕೃಷ್ಣದೇವರಾಯನ ಪ್ರತ್ಯಕ್ಷ ಆಶ್ರಯದಲ್ಲಿದ್ದವರು.

ಕೃಷ್ಣದೇವರಾಯನಿಂದ ರಚಿತವಾದ ಕನ್ನಡ ಗ್ರಂಥಗಳಾವುದೂ ಇಲ್ಲದಿದ್ದರೂ ಅವನು ಕನ್ನಡಭಾಷಾಭಿಮಾನಿಯೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ತಿಮ್ಮಣ್ಣ ಕವಿಯಿಂದ ರಚಿತವಾದ ಭಾರತದಲ್ಲಿ 'ಕೃಷ್ಣರಾಯನು ಒಡ್ಡೋಲಗದೊಳಿರ್ದು ಭಾರತದ ಕಥೆಯ ಕೇಳಿ ಕವಿಜನರ ನೋಡಿ ತಿಮ್ಮಣ್ಣನ ಕರೆದು ವಸ್ತ್ರಭೂಷಣ ವ್ರಾತವನು ಕೊಟ್ಟು ಮನ್ನಿಸಿ ಲೇಸೆನಿಸಿ ಮೊದಲಾ ಕುಮಾರವ್ಯಾಸ ದಶಪರ್ವಗಳ ಹೇಳಿದ ಭಾರತದ ಉಳಿದ ಪರ್ವಗಳ ನೀ ಸಕಲಜನ ಮೆಚ್ಚುವಂತೆ ಪೇಳು . . . ಎನಲು ತಿಮ್ಮಣ್ಣನು ಹಸಾದವೆನುತ ಕೈಕೊಂಡು ಭಾರತ ಕಥೆಯ ಕಡಮೆಯ ಕೃಷ್ಣರಾಯನಿಗಂಕಿತ ಮಾಡಿದಂತೆ ಹೇಳಿದೆ. ಈ ಗ್ರಂಥಾಂತ್ಯದಲ್ಲಿ 'ನರಸನೃಪಸುತ ಕೃಷ್ಣರಾಯಂಗೆ ವರಯಶವು ನಿಲುವಂತೆ ಪೇಳ್ದ ಭಾರತವು' ಎಂದು ಕವಿಯು ಹೇಳುತ್ತಾನೆ. ಇದಕ್ಕೆ 'ಕೃಷ್ಣರಾಜ ಭಾರತ' ಅಥವಾ 'ಕರ್ಣಾಟಕ ಕೃಷ್ಣರಾಜ ಭಾರತಮಂಜರಿ' ಎಂಬ ಹೆಸರೂ ಉಂಟು.[67] ಇವೆಲ್ಲವನ್ನೂ ನೋಡಿದರೆ ತಿಮ್ಮಣ್ಣನು ಕೃಷ್ಣರಾಯನ ಪ್ರತ್ಯಕ್ಷ ಸಹಾಯದಿಂದ ಗ್ರಂಥರಚನೆ ಮಾಡಿರಬಹುದೆಂದು ತೋರುತ್ತದೆ. 'ವೀರಶೈವಾಮೃತ ಪುರಾಣ' ಮತ್ತು 'ಭಾವಚಿಂತಾರತ್ನ' ಕರ್ತೃವಾದ ಗುಬ್ಬಿಯ ಮಲ್ಲಣ್ಣ, 'ತ್ರಿಭುವನ ತಿಲಕ' ಮತ್ತು 'ಗುರುಭಕ್ತ ಚಾರಿತ್ರ'ವನ್ನು ರಚಿಸಿದ ವಿರುಪರಾಜ, 'ಕುಮಾರ ರಾಮಕತೆ'ಯನ್ನು ಬರೆದ ನಂಜುಂಡ ಇವರೆಲ್ಲರೂ ಕೃಷ್ಣದೇವರಾಯನ ಕಾಲದ ಕನ್ನಡಕವಿಗಳು. ಇವರುಗಳಲ್ಲದೆ ವ್ಯಾಸರಾಯ, ಓದುವ ಗಿರಿಯ, ಲಿಂಗಮಂತ್ರಿ, ಚೇರಮಾಂಕ, ಮುರಿಗೆಯ ಶಾಂತವೀರ ಮೊದಲಾದವರೂ ಈ ಕಾಲದಲ್ಲಿಯೇ ಕನ್ನಡದಲ್ಲಿ ಗ್ರಂಥಗಳನ್ನು ರಚಿಸಿದವರು. ಇವರಲ್ಲಿ ವ್ಯಾಸರಾಯ ವಿನಾ ಉಳಿದವರು ವೀರಶೈವರು. ಇವರಿಗೆ ಕೃಷ್ಣದೇವರಾಯನ ಪ್ರತ್ಯಕ್ಷ ಸಂಬಂಧವಿದ್ದಂತೆ ತೋರುವುದಿಲ್ಲ. ವೈಷ್ಣವನಾದ ವ್ಯಾಸರಾಯನು ಮಾತ್ರ ರಾಜನ ಸಂಪೂರ್ಣ ಸನ್ಮಾನಕ್ಕೆ ಪಾತ್ರನಾಗಿದ್ದನು. ಕೃಷ್ಣದೇವರಾಯನಿಗೆ ಈತನಲ್ಲಿ ಬಹಳ ಭಕ್ತಿಯಿತ್ತೆಂದು ಅನೇಕ ಶಾಸನಗಳಿಂದ ವ್ಯಕ್ತಪಡುತ್ತದೆ. ಅಲ್ಲದೆ ವ್ಯಾಸರಾಯನು ಸಾಲುವ ನರಸಿಂಹನ

[67] ಕ.ಚ. ಸಂ. ೨, ಪು. ೧೮೯.

ಕಾಲದಿಂದ ಅಚ್ಯುತರಾಯನ ಕಾಲದ ವರೆಗೆ ಸುಮಾರು ಅಯ್ವತ್ತು ಅರವತ್ತು ವರ್ಷಗಳ ಕಾಲ ರಾಜ್ಯಾಧಿಪತ್ಯದಲ್ಲಿ ವಿಶೇಷ ಪ್ರಭಾವವನ್ನು ಬೀರಿರುವಂತೆ ಸೋಮನಾಥ ಕವಿ ಕೃತವಾದ 'ಶ್ರೀ ವ್ಯಾಸಯೋಗ ಚರಿತ್ರಮ್' ಎಂಬ ಗ್ರಂಥ ದಿಂದ ತಿಳಿದುಬರುತ್ತದೆ. ಅದೇ ಗ್ರಂಥದ ಆಧಾರದಿಂದ ವ್ಯಾಸರಾಯನು ಕೃಷ್ಣದೇವ ರಾಯನ ಆಳ್ವಿಕೆಯ ಕಾಲದಲ್ಲಿ ಪ್ರಾಪ್ತವಾದ 'ಕುಹೂಯೋಗ' ದುಷ್ಕಾಲದಲ್ಲಿ ತಾನೇ ರಾಜನಾಗಿ ಸಿಂಹಾಸನಾಧಿಪತಿಯಾಗಿದ್ದುಕೊಂಡು ರಾಜನಿಗೆ ಬಂದ ವಿಪತ್ತನ್ನು ಪರಿಹರಿಸಿದಂತೆಯೂ ತಿಳಿದುಬರುತ್ತದೆ. ಈತನು ಬಹು ಪ್ರಸಿದ್ಧನಾದ ಮಾಧ್ವಸಂನ್ಯಾಸಿ. ಬ್ರಹ್ಮಣ್ಯತೀರ್ಥ ಮತ್ತು ಶ್ರೀಪಾದರಾಜರ ಶಿಷ್ಯ. ಪಕ್ಷಧರ ಮಿಶ್ರ, ಕಳಿಂಗದ ಬಸವಭಟ್ಟ, ವಿದ್ಯಾಧರ, ಚೈತನ್ಯ ಮತ್ತು ವಲ್ಲಭಾಚಾರ್ಯ ಮೊದಲಾದವರು ಈತನ ಸಮಕಾಲೀನರು. ವಲ್ಲಭಾಚಾರ್ಯನು ಕೃಷ್ಣರಾಯನ ಆಸ್ಥಾನವಿದ್ವಾಂಸರ ಮುಂದೆ ತನ್ನ ಮತತತ್ತ್ವಗಳನ್ನು ವಿವರಿಸುವ ಕಾಲದಲ್ಲಿ ಈತನು ಅಧ್ಯಕ್ಷನಾಗಿರಬೇಕೆಂದು ಕೇಳಿಕೊಂಡನಂತೆ.[68] ಕನ್ನಡದಲ್ಲಿ ಈತನಿಂದ ವಿರಚಿತವಾದ ಕೃಷ್ಣನಾಮಾಂಕಿತವಾದ ಅನೇಕ ಹಾಡುಗಳಿವೆ.

ಸಂಸ್ಕೃತದಲ್ಲಿ ವ್ಯಾಸರಾಯನು ಅನೇಕ ಗ್ರಂಥಗಳನ್ನು ರಚಿಸಿದ್ದಾನೆ. 'ತರ್ಕ ತಾಂಡವ' 'ನ್ಯಾಯಾಮೃತ' 'ಭೇದೋಜ್ಜೀವನ' ಮೊದಲಾದ ಗ್ರಂಥಗಳೂ 'ಮಾಯಾ ವಾದಖಂಡನ, 'ಪ್ರಪಂಚಮಿಥ್ಯಾತ್ವಾನುಮಾನ ಖಂಡನ' 'ತತ್ತ್ವೋದ್ಯೋತ,' 'ಉಪಾಧಿಖಂಡನ' ಮೊದಲಾದುವುಗಳಿಗೆ ವ್ಯಾಖ್ಯಾನಗಳೂ 'ತತ್ತ್ವಪ್ರಕಾಶ'ಕ್ಕೆ 'ಚಂದ್ರಿಕೆ'ಯೆಂಬ ಒಂದು ಅಸಮಾಗ್ರ ವ್ಯಾಖ್ಯಾನವೂ ಏತತ್ಕೃತವಾದುವು.

ಕೃಷ್ಣದೇವರಾಯನಿಂದ ತಮಿಳು ಸಾಹಿತ್ಯಕ್ಕೆ ಪ್ರೋತ್ಸಾಹ ಸಿಗದೇ ಇಲ್ಲ. ಈತನ ಆಸ್ಥಾನಕವಿಯಾದ ಕುಮಾರಸರಸ್ವತಿಯು ಕೃಷ್ಣದೇವರಾಯನಿಗೂ ಗಜಪತಿಯ ಮಗಳಿಗೂ ನಡೆದ ವಿವಾಹವನ್ನೂ ತಮಿಳಿನಲ್ಲಿ ರಚಿಸಿದ್ದಾನೆ. ಜೈನನಾದ ಮಂಡಲ ಪುರುಷನು ಕೃಷ್ಣನ ಆಶ್ರಯದಲ್ಲಿಯೇ ತಮಿಳಿನಲ್ಲಿ 'ನಿಘಂಟು ಚೂಡಾಮಣಿ'ಯನ್ನು ರಚಿಸಿದುದು. ವೆಳ್ಳಾಳವಂಶದ ಜ್ಞಾನಪ್ರಕಾಶಕನು ಕೃಷ್ಣದೇವರಾಯನಿಂದ ಪೋಷಿತ ನಾಗಿ ಅವನ ಸ್ತೋತ್ರರೂಪವಾದ 'ಮಂಜರಿಪ್ಪಾ' ಎಂಬ ಗ್ರಂಥವನ್ನೂ 'ಕಚ್ಚಿಕ್ಕ ಲಂಬಕಮ್' ಎಂಬುದನ್ನೂ ರಚಿಸಿದನು. ತಿರುವಾಂಕೂರು ದೇವಸ್ಥಾನದ ಅರ್ಚಕನಾದ ತತ್ತ್ವಪ್ರಕಾಶಕವಿಯು 'ತತ್ತ್ವಪ್ರಕಾಶ'ವೆಂಬ ತಮಿಳುಗ್ರಂಥವನ್ನೂ ಕೃಷ್ಣದೇವ ರಾಯನ 'ಸ್ತೋತ್ರಮಾಲಿಕೆ'ಯನ್ನೂ ಬರೆದಿದ್ದಾನೆ. ಶೈವನಾದ ಹರಿದಾಸನು

---

[68] ಪ್ರೊ|| ಹೆಚ್. ಶೇಷಗಿರಿರಾಯರ ಸಂಸ್ಕೃತ ಕೈಬರಹದ ಗ್ರಂಥಗಳ ಅನ್ವೇಷಣದ ೧೮೯೬ ನೆಯ ವರ್ಷದ ವರದಿ.

'ಇರುಶಮಯ ವಿಲಕ್ಕಮ್' ಎಂಬ ಗ್ರಂಥವನ್ನು ಕೃಷ್ಣದೇವರಾಯನ ಕಾಲದಲ್ಲಿಯೇ ರಚಿಸಿದನೆಂಬುದು ಆ ಗ್ರಂಥದ ಉಪೋದ್ಘಾತದಿಂದ ಶ್ರುತಪಡುತ್ತದೆ.

ವಿಜಯನಗರದ ರಾಜವಂಶೀಕರ ಶಾಸನಗಳನ್ನು ನೋಡಿದರೆ ರಾಜರ ಶಾಸನಗಳನ್ನು ರಚಿಸುವುದಕ್ಕಾಗಿಯೇ ರಾಜಾಸ್ಥಾನದಲ್ಲಿ ವಂಶಪಾರಂಪರ್ಯವಾಗಿ ಕೆಲವು ವಿದ್ವಾಂಸರಿದ್ದಂತೆ ತೋರುತ್ತದೆ. ಕೃಷ್ಣದೇವರಾಯನ ಶಾಸನವನ್ನು ಸಭಾಪತಿಯೆಂಬುವನು ರಚಿಸಿದನು ಎಂಬದಾಗಿ ಹೇಳುವ

ಕೃಷ್ಣದೇವ ಮಹಾರಾಯ ಶಾಸನೇನ ಸಭಾಪತಿಃ
ಆಭಾಣಿ ಮೃದುಸಂದರ್ಭಂ ತದಿದಂ ತಾಮ್ರಶಾಸನಂ

ಎಂಬ ಶ್ಲೋಕವು ಅನೇಕ ಶಾಸನಗಳಲ್ಲಿ ಸಿಕ್ಕುವುವು. ಈ ಸಭಾಪತಿಯು ಡಿಂಡಿಮ ವಂಶಕ್ಕೆ ಸೇರಿದವನು. ಇವನ ವಂಶಸ್ಥರಾದ ಸ್ವಯಂಭು, ಕಾಮಕೋಟಿ, ರಾಜನಾಥ, ರಾಮಕವಿ, ಮೊದಲಾದವರು ತುಳುವ ಮತ್ತು ಆರುವೀಡ ವಂಶಸ್ಥರ ಅನೇಕ ಶಾಸನಗಳನ್ನು ರಚಿಸಿದ್ದಾರೆ. ಇವರೆಲ್ಲರೂ ಉದ್ದಾಮಕವಿಗಳು. ಶಾಸನದಲ್ಲಿ ಸಿಕ್ಕುವ ಇವರ ಕೆಲವು ಕವನಗಳು ಉತ್ತಮಕಾವ್ಯಗಳನ್ನು ಮೀರಿಸಿವೆ. ಸಭಾಪತಿಯ ಸಹೋದರಿಯ ಮಗನಾದ ಅರುಣಗಿರಿನಾಥನು 'ಸೋಮವಲ್ಲೀ ಯೋಗಾನಂದ ಪ್ರಹಸನ'ವೆಂಬ ಹಾಸ್ಯರಸಪ್ರಧಾನವಾದ ಗ್ರಂಥವನ್ನು ರಚಿಸಿದ್ದಾನೆ. ಈತನಿಗೆ 'ಚೇರ ಚೋಳಪಾಂಡ್ಯ 'ಪ್ರಥಮಾರಾಧ್ಯಡಿಂಡಿಮಕವಿ' 'ದಶರೂಪನಾರಾಯಣ ಬಿರುದ ಮಂಡನಡಿಂಡಿಮ' 'ರಸಿಕಕವಿತಾಸಾಮ್ರಾಜ್ಯಲಕ್ಷ್ಮೀಪತಿ' 'ನವನಾಟಕಭರತಾಚಾರ್ಯ" ಪ್ರತಿಭಟ ಕವಿಕುಂಜರಪಂಚಾನನ' ಮೊದಲಾದ ಬಿರುದುಗಳಿದ್ದಂತೆ ತೋರುತ್ತದೆ.[69]

ಕೃಷ್ಣದೇವರಾಯನ ಸಾಹಿತ್ಯಪ್ರೇಮವನ್ನು ಕೇಳಿ ಅನೇಕ ವಿದ್ವಾಂಸರು ಈತನ ಆಸ್ಥಾನಕ್ಕೆ ಬಂದು ಇವನಿಂದ ಸನ್ಮಾನಿತರಾಗಿರುವಂತೆ ಕೆಲವು ಗ್ರಂಥಗಳಿಂದ ತಿಳಿದು ಬರುತ್ತದೆ. ಮುರಲೀದಾಸಕೃತವಾದ 'ವಲ್ಲಭರಾಯ ಚರಿತ್ರ'ದಿಂದ ಘೂರ್ಜರ ದೇಶದ ವೈಷ್ಣವಾಚಾರ್ಯನಾದ ವಲ್ಲಭನು ಕೃಷ್ಣರಾಯನ ಆಸ್ಥಾನಕ್ಕೆ ಬಂದಿದ್ದಂತೆಯೂ ಅಲ್ಲಿ ವಾದಮಾಡಿ ವೈಷ್ಣವೇತರರನ್ನು ಸೋಲಿಸಿ ಕನಕಾಭಿಷಿಕ್ತನಾದಂತೆಯೂ ಊಹಿಸಬಹುದಾಗಿದೆ.[70] ನಾರಾಯಣಕೃತವಾದ 'ರಾಘವೇಂದ್ರ ವಿಜಯ'ದಲ್ಲಿ ಕವಿಯ ಮುತ್ತಜ್ಜನಾದ ಕೃಷ್ಣನು ಕೃಷ್ಣದೇವರಾಯನ ಆಸ್ಥಾನಕ್ಕೆ ಹೋಗಿ ಅವನಿಗೆ ವೀಣಾಗಾನವನ್ನು ಹೇಳಿಕೊಟ್ಟು ಅವನಿಂದ ಮುತ್ತಿನ ಹಾರಗಳನ್ನು ಬಹುಮಾನವಾಗಿ ಪಡೆದಂತೆ ಹೇಳಿದೆ.

---

69 ಎ.ಇಂ ಸಂ. ೧೨, ಪು. ೩೪.

70 ಆಧಾರಗ್ರಂಥಗಳು, ಪು. ೧೫೫.

ಅಚ್ಯುತರಾಯ ಸದಾಶಿವರಾಯರು ಕೃಷ್ಣರಾಯನ ತರುವಾಯ ಕ್ರಮವಾಗಿ ವಿಜಯನಗರ ಸಿಂಹಾಸನಾರೂಢರಾದರು. ಸದಾಶಿವನು ರಾಜ್ಯಾಧಿಪತ್ಯವನ್ನು ವಹಿಸುವಾಗ ಪ್ರಾಪ್ತವಯಸ್ಕನಾಗಿರಲಿಲ್ಲವಾಗಿ ಕೃಷ್ಣದೇವರಾಯನ ಅಳಿಯಂದಿರಾದ ಆರುವೀಡುವಂಶದ ರಾಮರಾಯ ತಿರುಮಲರಾಯರೆಂಬ ಸಹೋದರರು ಅವನ ಪೋಷಕರಾದರು. ಇವರು ಸದಾಶಿವನ ಬಾಲ್ಯಾವಸ್ಥೆಯಲ್ಲಿಯೇ ಅವನ ಪೋಷಕರಾಗಿ ರಾಜ್ಯಾಧಿಪತ್ಯವನ್ನು ವಹಿಸಿ ಅವನು ಪ್ರಾಪ್ತವಯಸ್ಕನಾದಮೇಲೆಯೂ ಅವನಿಗೆ ರಾಜ್ಯಾಧಿಕಾರವನ್ನು ಕೊಡದೆ ಅವನನ್ನು ಸೆರೆಯಲ್ಲಿಡಿಸಿ ೧೫೬೫ ನೆಯ ವರ್ಷದ ತಾಳೀಕೋಟೆಯ ಯುದ್ಧದಲ್ಲಿ ರಾಮರಾಯನು ಗತಜೀವನಾಗುವ ವರೆಗೆ ಅವನೂ ಅನಂತರ ಅವನ ತಮ್ಮನಾದ ತಿರುಮಲರಾಯನು ರಾಜ್ಯಭಾರಮಾಡಿದರು. ಹೆಸರಿಗೆ ಮಾತ್ರ ಸದಾಶಿವನು ರಾಜನಾಗಿದ್ದರೂ ರಾಜ್ಯಾಧಿಕಾರವೆಲ್ಲವೂ ಇವರ ಕಯ್ಯಲ್ಲಿಯೇ ಇದ್ದುದರಿಂದ ಈ ಕಾಲದ ಸಾಹಿತ್ಯ ಪ್ರಪಂಚವು ಇವರ ಪ್ರೋತ್ಸಾಹಕ್ಕೆ ಸೇರಿತ್ತು.

ಅಚ್ಯುತನು ವಿದ್ವಾಂಸರಿಗೂ ವಿದ್ಯಾಸಂಸ್ಥೆಗಳಿಗೂ ದಾನಮಾಡುವುದರಲ್ಲಿ ಅಗ್ರಗಣ್ಯ. ಅನೇಕ ಶಾಸನಗಳಲ್ಲಿ ಇವನನ್ನು 'ನವಕೋಟಿ ನಾರಾಯಣ' ಎಂಬದಾಗಿ ಕರೆದಿದೆ.[71] ಇವನಿಂದ ವಿಶೇಷ ಸಹಾಯ ಪಡೆದವನು ಇವನ ಆಸ್ಥಾನಕವಿಯಾದ ರಾಜನಾಥಕವಿ. ಈತನು ಅಚ್ಯುತರಾಯನ ಸಾಹಸಕಾರ್ಯಗಳನ್ನು ವರ್ಣಿಸುವ 'ಅಚ್ಯುತರಾಯಾಭ್ಯುದಯ'ವೆಂಬ ಐತಿಹಾಸಿಕ ಕಾವ್ಯವನ್ನೂ 'ಭಾಗವತ ಚಂಪೂ'ವೆಂಬ ವೈಷ್ಣವಕಾವ್ಯವನ್ನೂ ರಚಿಸಿ ತನ್ನ ಪೋಷಕನಿಗೆ ಅಂಕಿತವಾಗಿ ಅರ್ಪಿಸಿದ್ದಾನೆ.[72] 'ವರದಾಂಬಿಕಾ ಪರಿಣಯ'ವೆಂಬ ಸಂಸ್ಕೃತ ಚಂಪೂ ಗ್ರಂಥಕರ್ತಳಾದ ತಿರುಮಲಾಂಬಾ ಎಂಬುವಳು ಅಚ್ಯುತರಾಯನ ಆಶ್ರಯದಲ್ಲಿಯೇ ತನ್ನ ಗ್ರಂಥವನ್ನು ರಚಿಸಿರಬೇಕು. ಅಚ್ಯುತರಾಯನಿಗೂ ವರದಾಂಬಿಕೆಗೂ ನಡೆದ ವಿವಾಹವು ಇದರಲ್ಲಿ ವರ್ಣಿತವಾಗಿದೆ. ಆಶ್ವಾಸಾಂತ್ಯ ಪದ್ಯದಿಂದ ತಿರುಮಲಾಂಬೆಯು ದೊಡ್ಡ ವಿದ್ವಾಂಸಳೂ ಅಚ್ಯುತರಾಯನ ಆಸ್ಥಾನದಲ್ಲಿ ವಿಶೇಷವಾಗಿ ಗೌರವಿಸಲ್ಪಟ್ಟವಳೂ ಆಗಿದ್ದಳೆಂದು ತಿಳಿದುಬರುತ್ತದೆ.[73]

'ರಾಮರಾಜಭೂಷಣ'ವೆಂಬ ಬಿರುದನ್ನು ಹೊಂದಿದ್ದ ಭಟ್ಟಮೂರ್ತಿಯು ಸದಾಶಿವನ ಪೋಷಕರಾದ ಆರುವೀಡು ಸಹೋದರ ಆಸ್ಥಾನದ ತೆಲುಗು ಕವಿ. 'ರಾಮರಾಜಭೂಷಣ' ಎಂಬುದು ರಾಮರಾಯನು ಕವಿಗೆ ಕೊಟ್ಟ ಬಿರುದು. ರಾಮರಾಜ

---

[71] ಮ.ಶಾ. ವರದಿ ೧೯೧೮, ಪು. ೭೩.

[72] ಆಧಾರಗ್ರಂಥಗಳು, ಪು. ೧೬೦-೫.

[73] ಅದೇ, ಪು. ೧೭೬.

ಭೂಷಣನೂ ಭಟ್ಟುಮೂರ್ತಿಯೂ ಏಕವ್ಯಕ್ತಿಯೇ ಅಥವಾ ಭಿನ್ನವ್ಯಕ್ತಿಗಳೇ ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯವುಂಟಾಗಿ ಏಕವ್ಯಕ್ತಿಯೆಂಬುದಾಗಿಯೇ ಅಂಗೀಕೃತವಾಗಿರುವಂತೆ ತೋರುತ್ತದೆ.[74] ಈತನು 'ವಸುಚರಿತ್ರಮು' 'ಹರಿಶ್ಚಂದ್ರನಳೋಪಾಖ್ಯನಮು' 'ನರಸಭೂಪಾಲೀಯಮು' ಎಂಬ ಮೂರು ಗ್ರಂಥಗಳನ್ನು ರಚಿಸಿದ್ದಾನೆ. ಇವುಗಳಲ್ಲಿ 'ವಸುಚರಿತ್ರೆ'ಯು ಪ್ರಸ್ಥಾನ ದೇಶದ ರಾಜನಾದ ವಸುಮಹಾರಾಜನಿಗೂ ಕೋಲಾಹಲಪರ್ವತರಾಜಪುತ್ರಿಯಾದ ಗಿರಿಕನ್ಯೆಗೂ ನಡೆದ ವಿವಾಹವನ್ನು ವರ್ಣಿಸುವ ಕಾವ್ಯ. ಅಲ್ಲಸಾನಿ ಪೆದ್ದನ್ನನ 'ಮನುಚರಿತ್ರೆ'ಯ ಮಾದರಿಯಲ್ಲಿ ಬರೆದ ಗ್ರಂಥವಿದು. ಪ್ರಬಂಧಮಾರ್ಗದಲ್ಲಿ ವಸುಚರಿತ್ರೆಯು ಮತ್ತೊಂದು ಮೆಟ್ಟಲನ್ನು ಮುಟ್ಟಿ ಮುಂದಿನ ಗ್ರಂಥಕಾರರಿಗೆ ಮಾರ್ಗದರ್ಶಕವಾಗಿದೆ. ಆದುದರಿಂದಲೇ ಮುಂದಿನ ತೆಲುಗು ಗ್ರಂಥಗಳನ್ನು 'ಪಿಲ್ಲವಸುಚರಿತ್ರಮು' ಎಂಬ ಹೆಸರಿನಿಂದ ಕರೆಯಲ್ಪಡುವ ರೂಢಿಯುಂಟಾದದು. ಇದು ತಿರುಮಲರಾಯನಿಗೆ ಅರ್ಪಿಸಲ್ಪಟ್ಟಿದೆ. 'ಹರಿಶ್ಚಂದ್ರನಳೋಪಾಖ್ಯಾನವು ಹರಿಶ್ಚಂದ್ರ ನಳಮಹಾರಾಜರ ಚರಿತ್ರೆಯನ್ನು ಏಕಾಕಾರವಾದ ಶಬ್ದಗಳಿಂದ ವರ್ಣಿಸುವ ದ್ವ್ಯರ್ಥಕಾವ್ಯ. ಈ ಗ್ರಂಥಕ್ಕೆ ಆಗಿನ ಕಾಲದಲ್ಲಿ ದೊರೆತ ಪ್ರಾಶಸ್ತ್ಯದಿಂದ ಇದೂ ಮುಂದಿನ ಆಂಧ್ರಕವಿಗಳಿಗೆ ಮಾದರಿಯಾಗಿ ಪರಿಣಮಿಸಿತು. 'ನರಸಭೂಪಾಲೀಯ'ವು ಅಲಂಕಾರಗ್ರಂಥ. ಕವಿಯು ಇದನ್ನು ತಿರುಮಲರಾಯನ ಅಳಿಯನಾದ ಪೋಚಿರಾಜ ನರಸರಾಜು ಎಂಬುವನಿಗೆ ಅಂಕಿತಮಾಡಿರುವುದರಿಂದ ಇದಕ್ಕೆ ಈ ಹೆಸರು ಬಂದಿದೆ. ಇದಕ್ಕೆ 'ಕಾವ್ಯಾಲಂಕಾರ ಚೂಡಾಮಣಿ' ಎಂಬ ಹೆಸರೂ ಉಂಟು.

ರಾಮರಾಯನ ಮಂತ್ರಿಯೂ ಕೊಂಡುವೀಡುರಾಜ್ಯದ ರಾಜಪ್ರತಿನಿಧಿಯೂ ಆದ ರಾಮಯಾಮಾತ್ಯ ತೋದರಮಲ್ಲನು ಉದ್ದಾಮನಾದ ಸಂಗೀತಶಾಸ್ತ್ರಜ್ಞನೆಂದು ತೋರುತ್ತದೆ. ಈತನು ಒಂದು ದಿವಸ ರಾಮರಾಜನ ಆಸ್ಥಾನದಲ್ಲಿ ತನಗೆ ಸಂಗೀತ ಶಾಸ್ತ್ರದಲ್ಲಿದ್ದ ಪಾಂಡಿತ್ಯವನ್ನು ಪ್ರದರ್ಶಿಸಲು ರಾಮರಾಯನು ತೃಪ್ತನಾಗಿ ತನ್ನ ತಮ್ಮನಾದ ವೆಂಕಟಾದ್ರಿಯ ಸೂಚನೆಯ ಮೇರೆ ಈತನನ್ನು ಒಂದು ಸಂಗೀತಶಾಸ್ತ್ರ ವಿಷಯಕವಾದ ಗ್ರಂಥವನ್ನು ರಚಿಸುವಂತೆ ಆಜ್ಞೆಮಾಡಿದನಂತೆ. ಅದೇ ಪ್ರಕಾರ ಈತನು 'ಸ್ವರಮೇಲಕಲಾನಿಧಿ' ಎಂಬ ಗ್ರಂಥವನ್ನು ರಚಿಸಿ ರಾಮರಾಯನಿಗೆ ಅಂಕಿತಮಾಡಿದನು. ಈ ಅಂಶವು 'ಸ್ವರಮೇಲಕಲಾನಿಧಿ'ಯ ಪೀಠಿಕಾಶ್ಲೋಕಗಳಿಂದ ಶ್ರುತಪಡುವುದು.[75]

---

74 ವೀ.ಲಿಂ. ಪಂ. ೧೦, ಪು. ೨೫೧-೩.

75 ಆಧಾರಗ್ರಂಥಗಳು, ಪು. ೧೯೧.

ಕೃಷ್ಣದೇವರಾಯನಿಂದ ವಿಶೇಷವಾಗಿ ಪ್ರೋತ್ಸಾಹವನ್ನು ಹೊಂದಿದ ವ್ಯಾಸರಾಯನೂ ಈತನ ಶಿಷ್ಯರಾದ ಕನಕದಾಸ, ಪುರಂದರದಾಸ, ವಾದಿರಾಜ, ವಿಜಯೀಂದ್ರ ಮೊದಲಾದವರೂ ಆರುವೀಡು ಸಹೋದರರಿಂದ ಸಹಾಯಪಡೆದು ಗ್ರಂಥರಚನೆಯನ್ನು ಮಾಡಿರುವುದು ಅನೇಕ ಆಧಾರಗಳಿಂದ ಶ್ರುತಪಡುತ್ತದೆ. ಕನಕದಾಸನು ವ್ಯಾಸರಾಯನ ಸೇವೆಯಿಂದ ಜ್ಞಾನಿಯಾದಂತೆ ಅನೇಕರು ಹೇಳುತ್ತಾರೆ. ಆದರೆ ಅವನ ಗ್ರಂಥಗಳಲ್ಲಿ ಎಲ್ಲಿಯೂ ಅವನು ವ್ಯಾಸರಾಯನ ಶಿಷ್ಯನೆಂಬುದಾಗಿ ಹೇಳಿಲ್ಲ. ಶ್ರೀವೈಷ್ಣವನಾದ ತಾತಾಚಾರ್ಯನ ಶಿಷ್ಯನೆಂಬದಾಗಿ ಹೇಳಿಕೊಂಡಿದ್ದಾನೆ. ಇವನು 'ಮೋಹನತರಂಗಿಣಿ' 'ರಾಮಧಾನ್ಯಚರಿತ್ರೆ' 'ನಳಚರಿತ್ರೆ' 'ಹರಿಭಕ್ತಿಸಾರ' 'ನೃಸಿಂಹಸ್ತವ' ಮೊದಲಾದ ಗ್ರಂಥಗಳನ್ನು ರಚಿಸಿದ್ದಾನೆ.[76] ಪುರಂದರದಾಸನು ೧೫೩೮ ರಲ್ಲಿ ವಿಜಯನಗರದಲ್ಲಿದ್ದಂತೆಯೂ ೧೫೬೪ ರಲ್ಲಿ ಅಲ್ಲಿಯೇ ಕಾಲವಶನಾದಂತೆಯೂ ಕೆಲವು ಕೀರ್ತನೆಗಳಿಂದ ತಿಳಿಯಬಹುದೆಂಬುದಾಗಿ ಮಿ॥ ಕಿಟ್ಟಲ್ ಅವರು 'ಛಂದೋಂಬುಧಿ'ಯ ಉಪೋದ್ಘಾತದಲ್ಲಿ ಹೇಳಿದ್ದಾರೆ.[77] ಹಾಗಾದಪಕ್ಷದಲ್ಲಿ ಈತನು ೧೫೪೨ ರಿಂದ ೬೫ ರ ವರೆಗೆ ಆಳಿದ ರಾಮರಾಯನ ಕಾಲದಲ್ಲಿಯೂ ಇದ್ದಿರಬಹುದು. ಈತನು ವಿಷ್ಣುಸ್ತುತಿ ರೂಪವಾಗಿಯೂ ವೇದಾಂತ ಬೋಧಕವಾಗಿಯೂ ಇರುವ 'ಪುರಂದರವಿಠಲ' ಎಂಬ ಅಂಕಿತದಿಂದ ಕೂಡಿದ ಅನೇಕ ಕೀರ್ತನೆಗಳನ್ನು ರಚಿಸಿದ್ದಾನೆ. ವಾದಿರಾಜನು ವ್ಯಾಸರಾಯನ ಸಾಕ್ಷಾತ್ ಶಿಷ್ಯನಾಗಿ ವ್ಯಾಸಂಗಮಾಡಿದಂತೆ ತಿಳಿದುಬಂದಿರುವುದರಿಂದ ಈತನೂ ರಾಮರಾಯನ ಕಾಲದಲ್ಲಿಯೇ ಗ್ರಂಥರಚನೆಯನ್ನು ಮಾಡಿರಬೇಕು. 'ಗುರ್ವರ್ಥದೀಪಿಕಾ' 'ಪ್ರಮೇಯಸಂಗ್ರಹ' 'ಗುರುರಾಜೀಯ' 'ತಾತ್ಪರ್ಯಪ್ರಕಾಶಿಕಾ' 'ಈಶಾಭಾಷ್ಯಟೀಕಾ' 'ತಂತ್ರಸಾರಟೀಕಾ' 'ಲಕ್ಷಾಭರಣ' 'ಸರಸಭಾರತವಿಲಾಸ' 'ರುಕ್ಮಿಣೀಶ ವಿಜಯ' 'ಯುಕ್ತಿಮಲ್ಲಿಕಾ' 'ಪಾಷಂಡಮಲಖಂಡನ' 'ನ್ಯಾಯರತ್ನಾವಳಿ' 'ಭೂಗೋಲವಿವರಣ' 'ಚಕ್ರಮೀಮಾಂಸ' 'ಹರಿಭಕ್ತಿಸಾರ' 'ಕಲ್ಪಲತಾ' 'ಗೀತಾವ್ಯಾಖ್ಯಾನವಿವರಣ' 'ಶ್ರುತಿಕಾಲಪ್ರಕಾಶಕ' 'ಏಕಾದಶೀನಿರ್ಣಯ' 'ಸಂಕಲ್ಪಪದ್ಧತಿ' 'ವಾಯುಸ್ತುತಿಪುರಶ್ಚರಣವಿಧಾನ' ಮೊದಲಾದ ಸಂಸ್ಕೃತ ಗ್ರಂಥಗಳೂ 'ವೈಕುಂಠವರ್ಣನೆ' 'ಸ್ವಪ್ನಗದ್ಯ' 'ಲಕ್ಷ್ಮಿಯ ಸೋಬಾನೆ' 'ಭಾರತ ತಾತ್ಪರ್ಯ ನಿರ್ಣಯಟೀಕೆ' ಮೊದಲಾದ ಕನ್ನಡ ಗ್ರಂಥಗಳೂ 'ಹಯವದನ' ಎಂಬ ಅಂಕಿತವಿರುವ ಕೆಲವು

---

76 ಕ.ಚ. ಸಂ. ೨, ಪು. ೨೬೩.

77 ನಾಗವರ್ಮನ ಛಂದೋಂಬುಧಿಯ ಉಪೋದ್ಘಾತ, ಪು. ೫೨.

ಕೀರ್ತನೆಗಳೂ ವಾದಿರಾಜಕೃತವಾದುವುಗಳು.[78] ನಾರಾಯಣಕೃತವಾದ 'ರಾಘವೇಂದ್ರ ವಿಜಯದ' ಎರಡನೆಯ ಸರ್ಗದಲ್ಲಿ ಬರುವ

ವಿದ್ವದ್ವರೋಸ್ಮಾದ್ವಿಜಯೀಂದ್ರಯೋಗೀ ವಿದ್ಯಾಸುಹೃದ್ಯಾಸ್ವಕುಲಪ್ರಭಾವಃ|
ರತ್ನಾಭಿಷೇಕಂ ಕಿಲರಾಮರಾಜಾತ್ ಪ್ರಾಪ್ಯಾಗ್ರಲಕ್ಷ್ಮೀಸಕೃತಾಗ್ರಹಾರಾನ್ ||

ಎಂಬ ಶ್ಲೋಕದಿಂದ ವಿಜಯೀಂದ್ರತೀರ್ಥನು ರಾಮರಾಜನ ಆಸ್ಥಾನದಲ್ಲಿ ವಿದ್ವತ್ಪ್ರದರ್ಶನದಿಂದ ಕನಕಾಭಿಷಿಕ್ತನಾದಂತೆ ತೋರುತ್ತದೆ. ಹಿಂದೆಯೇ ತಿಳಿಸಿರುವಂತೆ ಈತನು ಮಾಧ್ವಸಂನ್ಯಾಸಿ. ನೀಲಕಂಠದೀಕ್ಷಿತ ವಿರಚಿತವಾದ 'ಶಿವಲೀಲಾರ್ಣವ'ದಲ್ಲಿ ಇವನು ಪ್ರಸಿದ್ಧ ಶೈವವಿದ್ವಾಂಸನಾದ ಅಪ್ಪಯ್ಯದೀಕ್ಷಿತನ ಸಮಕಾಲೀನನೆಂದು ಹೇಳಿದೆ. ಈತನು ೧೦೪ ಗ್ರಂಥಗಳನ್ನು ರಚಿಸಿದ್ದಾನೆ.* ಅವುಗಳಲ್ಲಿ 'ಋಕ್‌ಪ್ರಶ್ನ' 'ಭೇದವಿದ್ಯಾವಿಲಾಸ' 'ನಯಮುಕುರ' 'ಮೀಮಾಂಸಾ ನ್ಯಾಯಮಾಲಾ' 'ಅಧಿಕರಣಮಾಲಾ' 'ನಯಚಂಪಕಮಾಲಾ' 'ಪರತತ್ತ್ವಪ್ರಕಾಶಿಕಾ' 'ಅಪ್ಪಯ್ಯಕಪೋಲಚಪೇಟಿಕಾ' 'ಪ್ರಮೇಯದೀಪಿಕಾಟೀಕಾ' 'ಉಪನಿಷತ್ ಪ್ರಸ್ಥಾನಟೀಕಾ' 'ನಯಮಂಜರಿ' 'ಆಮೋದ' 'ನಾರಾಯಣ ಶಬ್ದಾರ್ಥವಚನ' 'ಬ್ರಹ್ಮಸೂತ್ರಾರ್ಥ ಸಂಗ್ರಹ' 'ಕಂಟಕೋದ್ಧಾರ' 'ಚಕ್ರಮೀಮಾಂಸಾ' 'ಮಾಧವತಂತ್ರಭೂಷಣ' 'ಉಪಸಂಹಾರ ವಿಜಯ' 'ಪ್ರಮಾಣಪದ್ಧತೀಟೀಕಾ' 'ನ್ಯಾಯದೀಪಿಕಾಟೀಕಾ' 'ಮಾಯಾವಾದಖಂಡನಟೀಕಾ' ಇವು ಮುಖ್ಯವಾದುವು.[79]

---

[78] ಕ.ಚ. ಸಂ ೨, ಪು. ೨೩೩.

* ಅಪ್ಪಯ್ಯದೀಕ್ಷಿತನು ದ್ವೈತಮತವನ್ನು ಖಂಡಿಸಲು ಅವನ ಪ್ರತಿಖಂಡನಕ್ಕಾಗಿ ವಿಜಯೀಂದ್ರನು ಅನೇಕ ಗ್ರಂಥಗಳನ್ನು ರಚಿಸಿದನೆಂಬುದನ್ನು

'ದುರ್ವಾದ್ಯಪ್ಪಯ್ಯರಚಿತ ಗ್ರಂಥಾರಣ್ಯವಿನಷ್ಟಯೆ|
ಚತುಸ್ಸಂಖ್ಯಾಧಿಕಶತಗ್ರಂಥಾಗ್ನೀನಾಂ ಪ್ರಚೋದಕವ್ |
ಮಾದ್ಯದಪ್ಪಯಮಾತಂಗ ಗರ್ವನಿರ್ವಾಪಣಕ್ಷಮಃ |
ಶ್ರೀ ಜಯೇಂದ್ರೋಮೃಗೇಂದ್ರೋಮೇ ಹೃದ್ಗುಹಾವಸಥೋಭವೇತ್ ||

ಎಂಬ ಶ್ಲೋಕದಿಂದ ತಿಳಿಯಬಹುದಾಗಿದೆ. ವಿಜಯೀಂದ್ರಸ್ತೋತ್ರದ

ಜಿತ್ವಾವಾದೇ ವೀರಶೈವಗುರುಂ ವಿಸ್ತೃತತನ್ಮಠಮ್ |
ಅಪಹೃತ್ಯೇಹ ಸಂವಾಸಂ ಕೃತವಂತಂ ಸತಾಂ ಹಿತಂ ||

ಎಂಬ ಶ್ಲೋಕದಿಂದ ವಿಜಯೀಂದ್ರನು ಒಬ್ಬ ವೀರಶೈವ ಗುರುವನ್ನು ವಾದದಲ್ಲಿ ಸೋಲಿಸಿ ಅವನನ್ನು ಅವನ ಮಠದಿಂದ ಓಡಿಸಿದಂತೆ ಕಾಣುತ್ತದೆ. ವಿಜಯನಗರದ ಜಂಬುನಾಥ ಪರ್ವತದಲ್ಲಿದ್ದ ಕುಂಭಕೋಣಮಠದ ಎಮ್ಮೆಯ ಬಸವನೇ ಈತನಿರಬಹುದೆಂದು ವಿದ್ವಾಂಸರು ಊಹಿಸಿದ್ದಾರೆ.

[79] ಎ.ಇಂ. ಸಂ. ೧೨, ಪು. ೩೪೫.

ಇದೇ ಪಂಥಕ್ಕೆ ಸೇರಿದ ಉತ್ತರಾದಿಮಠದ ವಿದ್ಯಾಧೀಶನು 'ವಿಷ್ಣುತತ್ತ್ವ ನಿರ್ಣಯ' 'ಏಕಾದಶೀ ನಿರ್ಣಯ' 'ವಿಷ್ಣುಪಂಚಕೋಪವಾಸ ನಿರ್ಣಯ' 'ಸುಧಾ' 'ದ್ವೈತವಾದಾರ್ಥ' 'ತಲವಕಾರ ಖಂಡಾರ್ಥ' 'ಓಂಕಾರವಾದಾರ್ಥ' 'ತಿಥಿತ್ರಯ ನಿರ್ಣಯ' ಇವುಗಳಿಗೆ ವ್ಯಾಖ್ಯಾನಗಳನ್ನು ರಚಿಸಿದ್ದಾನೆ. ವಿಜಯೀಂದ್ರನ ಉತ್ತರಾಧಿಕಾರಿಯಾದ ರಾಘವೇಂದ್ರತೀರ್ಥನು ಚತುರ್ವೇದಗಳಿಗೂ ವ್ಯಾಖ್ಯಾನವನ್ನು ರಚಿಸಿರುವಂತೆ ಪ್ರತೀತಿ ಇದೆ. ಅವಲ್ಲದೆ ಆತನು ೪೨ ಗ್ರಂಥಗಳನ್ನು ರಚಿಸಿದ್ದಾನೆ. ಅವುಗಳಲ್ಲಿ 'ಪರಿಮಳ ಚಂದ್ರಿಕಾಪ್ರಕಾಶ' 'ನ್ಯಾಯಮುಕ್ತಾವಳಿ' 'ತತ್ತ್ವಮಂಜರಿ' 'ಭಾವದೀಪಿಕಾ' 'ದಶಪ್ರಕರಣ ಟೀಕಾ' 'ದಶೋಪನಿಷತ್ ಖಂಡಾರ್ಥ' 'ತಂತ್ರದೀಪಿಕಾ' 'ಅಣುಭಾಷ್ಯ ಟೀಕಾ' 'ಈಶಾವಾಸ್ಯ ವಿಕೃತಿ' 'ಅಥರ್ವವಿವೃತಿ' 'ಭೇದಬೋಧಿನಿ' 'ತರ್ಕತಾಂಡವ ಟಿಪ್ಪಣಿ' 'ರಾಮಕೃಷ್ಣ ಮಂಜರಿ' ಮುಂತಾದುವು ಮುಖ್ಯವಾದುವು. ವ್ಯಾಸರಾಜ ಮತ್ತು ರಘುನಾಥ ತೀರ್ಥರ ಸಮಕಾಲೀನನಾದ ಆರ್ಯವಂಶದ ವರದರಾಜಾಚಾರ್ಯನು ಆನಂದತೀರ್ಥರ ಮಹಾಭಾರತ ತಾತ್ಪರ್ಯ ನಿರ್ಣಯ'ಕ್ಕೆ 'ವರದರಾಜೀಯ'ವೆಂಬ ಟಿಪ್ಪಣಿಯನ್ನೂ ಆತನ ಮಗನಾದ ನರಹರಿಯು 'ಭಾಗವತ ತಾತ್ಪರ್ಯ ನಿರ್ಣಯ' 'ವಿಷ್ಣುಪುರಾಣ' 'ಸ್ಮೃತಿಕೌಸ್ತುಭ'ಗಳಿಗೆ ಟಿಪ್ಪಣಿಯನ್ನೂ ರಚಿಸಿದ್ದಾರೆ. ಇವರೇ ಅಲ್ಲದೆ ಈ ಪಂಥಕ್ಕೆ ಸೇರಿದ ಯಾದವಾರ್ಯ, ಶ್ರೀನಿವಾಸತೀರ್ಥ, ಪಾಂಡುರಂಗೀ ಆನಂದಭಟ್ಟ, ಶೃಂಗೇರಿ ಶ್ರೀನಿವಾಸ, ವ್ಯಾಸಾಚಾರ್ಯ, ನರಸಿಂಹ ಮೊದಲಾದವರು ಅನೇಕ ಟೀಕು, ಟಿಪ್ಪಣಿ, ವ್ಯಾಖ್ಯಾನಗಳನ್ನು ಈ ಕಾಲದಲ್ಲಿ ರಚಿಸಿ ದ್ವೈತಗ್ರಂಥ ಭಂಡಾರವನ್ನು ಬಹುಸಮೃದ್ಧವನ್ನಾಗಿ ಮಾಡಿದ್ದಾರೆ.

ಈ ಕಾಲವು ಮತತ್ರಯಗಳ ಘರ್ಷಣೆಯ ಕಾಲವಾದುದರಿಂದ ಒಂದೊಂದು ಶಾಖೆಯಲ್ಲಿಯೂ ವಾದಾತ್ಮಕವಾದ ಅನೇಕ ಗ್ರಂಥಗಳು ರಚಿತವಾದುವು. ಇವುಗಳಲ್ಲಿ ಕೇವಲ ಶುಷ್ಕವಾದ ವಾದಭರವೇ ಅಲ್ಲದೆ ಗ್ರಂಥಗಳಲ್ಲಿ ಪೂರ್ಣವಾದ ಭಕ್ತಿ ಶ್ರದ್ಧೆ ವಿಶ್ವಾಸಗಳು ಪ್ರದರ್ಶಿತವಾಗಿವೆ. ಈ ಕಾಲದ ಶ್ರೀವೈಷ್ಣವರಲ್ಲಿ 'ಚಂಡಮಾರುತ'ದ ಕರ್ತೃವಾದ ದೊಡ್ಡಯ್ಯಾಚಾರ್ಯ, ತಿರುಮಲೈ ತಾತಾಚಾರ್ಯ, ಸುದರ್ಶನಾಚಾರ್ಯ, ಸಿಂಗರಾಚಾರ್ಯ, ತಿರುಮಲೈ ತೋಳಪ್ಪಳಾಚಾರ್ಯ, 'ಸಾತ್ವಿಕ ಬ್ರಹ್ಮ ವಿದ್ಯಾವಿಲಾಸ' ಮತ್ತು 'ಪಂಚಮತಭಂಜನ'ಗಳ ಕರ್ತೃವಾದ ಕುಮಾರ ತಾತಾಚಾರ್ಯ, ಅಹೋಬಿಲಮಠದ ಶ್ರೀವಣ್ ಶಠಗೋಪಸ್ವಾಮಿ, ಕಂದಾಡೆ ಶ್ರೀರಂಗಾಚಾರ್ಯ, ಅಪ್ಪಳಾಚಾರ್ಯ, ಚಿಕ್ಕರಾಯ ಮತ್ತು ಪರಾಶರಭಟ್ಟರು ಮುಖ್ಯರಾದವರು.

ಅದ್ವೈತಮತ ಸ್ಥಾಪನೆಗಾಗಿಯೂ ಅನೇಕ ಗ್ರಂಥಗಳು ಹುಟ್ಟಿವೆ. ಕೃಷ್ಣಾನಂದ

ಅವಿಮುಕ್ತ ಕ್ಷೇತ್ರದ ನೃಸಿಂಹಸ್ವಾಮಿಯು 'ವೇದಾಂತಸಾರ', 'ತತ್ವವಿವೇಕ' 'ರತ್ನಕೋಶ ಪ್ರಕಾಶಿಕಾ' 'ಅದ್ವೈತದೀಪಿಕಾ' ಗ್ರಂಥಗಳ ಮೇಲೆ 'ಅದ್ವೈತ ದೀಪಿಕಾವಿವರಣ,' 'ಭಾವಪ್ರಕಾಶಿಕಾ' 'ಸುಬೋಧಿನಿ' ಎಂಬ ವ್ಯಾಖ್ಯಾನಗಳನ್ನು ರಚಿಸಿದ್ದಾನೆ. ಸದಾಶಿವ ಬ್ರಹ್ಮೇಂದ್ರಸರಸ್ವತಿಯು ಬ್ರಹ್ಮಸೂತ್ರಕ್ಕೆ 'ಗುರುರತ್ನ ಮಾಲಿಕಾ' ವೃತ್ತಿಯನ್ನು ರಚಿಸಿದ್ದಾನೆ. ಶ್ರೀರಂಗರಾಯನ ಕಾಲದಲ್ಲಿ ಭೈರವ ಒಡೆಯನು ಶೃಂಗೇರಿ ನೃಸಿಂಹ ಭಾರತಿಗೂ ಹರಿಹರಪುರದ ಮಾಧವ ಸರಸ್ವತಿಗೂ ದತ್ತಿಯನ್ನು ಬಿಟ್ಟಿದ್ದಾನೆ. ನೃಸಿಂಹ ಶಿಷ್ಯರಾದ ಭಟ್ಟೋಜಿ ಮತ್ತು ರಂಗೋಜಿ ದೀಕ್ಷಿತರು ಅಪ್ಪಯ್ಯದೀಕ್ಷಿತ ಮತ್ತು ಜಗನ್ನಾಥಪಂಡಿತರ ಸಮಕಾಲೀನರು. ಭಟ್ಟೋಜಿಯು 'ಸಿದ್ಧಾಂತ ಕೌಮುದಿ' ಮತ್ತು 'ಮನೋರಮಾ' ಎಂಬ ಅದರ ವ್ಯಾಖ್ಯಾನವನ್ನಲ್ಲದೆ 'ದ್ವೈತಕೌಸ್ತುಭಖಂಡನ'ವೆಂಬ ಮತ್ತೊಂದು ಗ್ರಂಥವನ್ನೂ ರಚಿಸಿದ್ದಾನೆ. ಜಗನ್ನಾಥಪಂಡಿತನು 'ಮನೋರಮಾಕುಚಮರ್ದನ' 'ರಸಗಂಗಾ ಧರ' 'ಚಿತ್ರಮೀಮಾಂಸಾಖಂಡನ' ಮೊದಲಾದುವುಗಳ ಕರ್ತೃ. ಅಪ್ಪಯ್ಯದೀಕ್ಷಿತನ ತಂದೆಯಾದ ರಂಗರಾಜನು 'ಅದ್ವೈತ ಮುಕುರ'ದ ಕರ್ತೃವಾಗಿರಬೇಕು. ಅಪ್ಪಯ್ಯ ದೀಕ್ಷಿತನು ವೆಂಕಟಪತಿ (೧೫೮೫-೧೬೧೪) ಚಿನ್ನಬೊಮ್ಮ (೧೫೪೯-೭೮) ಚಿನ್ನ ತಿಮ್ಮ (೧೫೭೮-೧೬೦೧) ರ ಸಮಕಾಲೀನ. ಆತನ ಸ್ಥಳ ಅಡಿಯಪಳಮ್. ಅಲ್ಲಿ ಅಪ್ಪಯ್ಯನು ಕಲಕಂಠೇಶ್ವರ ದೇವಾಲಯವನ್ನು ಕಟ್ಟಿಸಿ ೧೫೮೨ ರಲ್ಲಿ ಶಾಸನವನ್ನು ಹಾಕಿಸಿದ್ದಾನೆ. ಅದರಲ್ಲಿ ನೀಲಕಂಠದೀಕ್ಷಿತನು ಈತನ ಹಿರಿಯ ಮಗನೆಂದು ಉಕ್ತ ವಾಗಿದೆ. 'ವಿಶ್ವಗುಣಾದರ್ಶ'ದ ಪ್ರಕಾರ ತಾತಾಚಾರ್ಯನು ಅಪ್ಪಯ್ಯನ ಸೋದರ ಮಾವ. ಅಪ್ಪಯ್ಯನ ಭಾಗಿನೇಯ ೧೫೦೨ ನೆಯ ಶಾಸನದಲ್ಲಿ ಸೂಚಿತವಾಗಿರುವ ಸಮರಪುಂಗವದೀಕ್ಷಿತ. ಈತನು ದೊಡ್ಡಯ್ಯಾಚಾರ್ಯ ಅಥವಾ ಮಹಾಚಾರ್ಯನ ಗುರು. ಸಮರಪುಂಗವದೀಕ್ಷಿತನ 'ಯಾತ್ರಾ ಪ್ರಬಂಧ'ದಲ್ಲಿ ಅಪ್ಪಯ್ಯನ ಕನಕಾಭಿ ಷೇಕವು ಉಕ್ತವಾಗಿದೆ.

ಅಪ್ಪಯ್ಯದೀಕ್ಷಿತನು ದೊಡ್ಡ ಪಂಡಿತ. ಈತನ ಗ್ರಂಥಗಳು ಬಹುಮುಖ ವಾಗಿವೆ. ಮೇಲೆ ಹೇಳಿದಂತೆ ಈತನು ಆರುವೀಡು ಸಹೋದರರ ಕಾಲದಲ್ಲಿ ಗ್ರಂಥ ರಚನೆಯನ್ನು ಮಾಡಿದನೆಂದು ನಿಸ್ಸಂದೇಹವಾಗಿ ಹೇಳಬಹುದು. ಶ್ರೀವೈಷ್ಣವ ಆಚಾರ್ಯರಾದ ವೇದಾಂತ ದೇಶಿಕರ 'ಯಾದವಾಭ್ಯುದಯ'ಕ್ಕೆ ಈತನು ವ್ಯಾಖ್ಯಾನ ವನ್ನು ರಚಿಸಿದ್ದಾನೆ. ಈ ವ್ಯಾಖ್ಯಾನದ ಪೀಠಿಕೆಯಲ್ಲಿರುವ

ಶ್ರೀ ಚಿನ್ನತಿಮ್ಮರಾಜಃ ಪ್ರತಾಪನೀರಾಜಿತ ಕ್ಷಮಾವಲಯಃ

. . . .

ಸಾಹಿತ್ಯಗೋಷ್ಠ್ಯಾಂ ಸರಸಾಮಾಶಿಷನ್ನಯಮೇಕದಾ
ಯಾದವಾಭ್ಯುದಯಂ ಕಾವ್ಯಮಶ್ರೌಷೀದ್ವಿದುಷಾಂ ಮುಖಾತ್
ಅವ್ಯಾಖ್ಯಾತತಯಾ ಪೂರ್ವೈಃ ಅನಭಿವ್ಯಕ್ತಭಾವಕಮ್.
ಅಘೃಷ್ಟಮಿವ ಶಿಲ್ಪಜ್ಞೈಃ ಅಭಿಜಾತಂ ಪರಿನ್ಮಣಿಮ್
ತದಾಕರ್ಣನತಸ್ತಸ್ಯ ಸಮುದಂಚತ್ಕುತೂಹಲಃ|
ವಿದುಷಾಂ ಪುರತಸ್ತಸ್ಯ ವಿವೃತೌ ಮಾಂ ನ್ಯಯೋಜಯೇತ್|

ಎಂಬ ಶ್ಲೋಕಗಳಿಂದ ಅಪ್ಪಯ್ಯದೀಕ್ಷಿತನು ಚಿನ್ನತಿಮ್ಮರಾಜನ ಅಭಿಪ್ರಾಯದ ಮೇರೆ 'ಯಾದವಾಭ್ಯುದಯ'ದ ವ್ಯಾಖ್ಯಾನವನ್ನು ರಚಿಸಿದಂತೆ ತಿಳಿದುಬರುತ್ತದೆ. ಈ ಚಿನ್ನತಿಮ್ಮನು ರಾಮರಾಯನ ಜ್ಞಾತಿ. ಇವನು ರಾಮರಾಯನ ಅಧೀನದಲ್ಲಿ ಕೇರಳ ದೇಶವನ್ನು ಜಯಿಸಿ ತಾಮ್ರಪರ್ಣಿ ನದಿಯ ತೀರದಲ್ಲಿ ಜಯಸ್ತಂಭವನ್ನು ಸ್ಥಾಪಿಸಿದಂತೆ ಶಾಸನಗಳಲ್ಲಿ ಹೇಳಿದೆ. 'ಪ್ರಪನ್ನಾಮೃತ'ದ ೧೨೬ ನೆಯ ಅಧ್ಯಾಯದಲ್ಲಿ ಅಪ್ಪಯ್ಯದೀಕ್ಷಿತನು ಚಿತ್ರಕೂಟದಲ್ಲಿದ್ದುಕೊಂಡು 'ಅದ್ವೈತದೀಪಿಕೆ' ಎಂಬ ಗ್ರಂಥವನ್ನು ರಚಿಸಿ ಶೈವಮತಪ್ರಚಾರ ಮಾಡುತ್ತಿದ್ದಂತೆಯೂ ಅದಕ್ಕೆ ಪ್ರತಿಯಾಗಿ ಮಹಾಚಾರ್ಯನೆಂಬ ಶ್ರೀವೈಷ್ಣವಾಚಾರ್ಯನು 'ಚಂಡಮಾರುತ'ವೆಂಬ ಗ್ರಂಥವನ್ನು ರಚಿಸಿ 'ಅದ್ವೈತದೀಪಿಕೆ'ಯನ್ನು ಮೂಲೆಗೊತ್ತಿದಂತೆಯೂ ಆ ಮಹಾಚಾರ್ಯನ ಸಹಾಯದಿಂದ ರಾಮರಾಯನೂ ಅವನ ಗುರುವಾದ ತಾತಾಚಾರ್ಯನೂ ಚಿದಂಬರದಲ್ಲಿ ಗೋವಿಂದರಾಜಸ್ವಾಮಿಯನ್ನು ಪ್ರತಿಷ್ಠೆಮಾಡಿದಂತೆಯೂ ಹೇಳಿದೆ. ಈ ಎಲ್ಲ ಆಧಾರದಿಂದ ಅಪ್ಪಯ್ಯನು ರಾಮರಾಯನ ಕಾಲದವನೆಂದು ಧೈರ್ಯವಾಗಿ ಹೇಳಬಹುದಾಗಿದೆ. ದೀಕ್ಷಿತನು ಒಂದು ನೂರು ಗ್ರಂಥಗಳನ್ನು ರಚಿಸಿದ್ದಾನೆ. 'ಪರಿಮಳ'ವೇ ಮೊದಲಾದ ಆರು ಅದ್ವೈತ ವೇದಾಂತ ಗ್ರಂಥಗಳು. 'ಮಾನಸೋಲ್ಲಾಸ' 'ಶಿವಕರ್ಣಾಮೃತ' ಮೊದಲಾದ ಇಪ್ಪತ್ತಾರು ಶಿವೋತ್ಕರ್ಷ ಸಾಧಕವಾದವು. 'ಸವ್ಯಾಖ್ಯಾನ್ಯಾಯಮಯೂಖಮಾಲಿಕಾ' ಎಂಬುದು ವಿಶಿಷ್ಟಾದ್ವೈತ ವೇದಾಂತಕ್ಕೆ ಸಂಬಂಧಪಟ್ಟಿದೆ. 'ಸವ್ಯಾಖ್ಯಾನ್ಯಾಯರತ್ನಮಾಲಾ' ಎಂಬುದು ದ್ವೈತವಿಷಯಕವಾದುದು. 'ನಕ್ಷತ್ರಪಾದವಾದಾವಳಿ' ಎಂಬದು ವ್ಯಾಕರಣಗ್ರಂಥ. 'ಚಿತ್ರಮೀಮಾಂಸಾ' 'ಕುವಲಯಾನಂದ' ಇವೆರಡೂ ಅಲಂಕಾರಗ್ರಂಥಗಳು. 'ವಿಧಿರಸಾಯನ'ವು ಮೀಮಾಂಸಾ ಶಾಸ್ತ್ರಕ್ಕೆ ಸಂಬಂಧಪಟ್ಟುದು. 'ಯಾದವಾಭ್ಯುದಯವ್ಯಾಖ್ಯಾ' 'ಪಾದುಕಾಸಹಸ್ರವ್ಯಾಖ್ಯಾ' 'ವರದರಾಜಸ್ತವವ್ಯಾಖ್ಯಾ' ಇವು ವ್ಯಾಖ್ಯಾನಗಳು. ಸರ್ವತೋಮುಖವಾದ ಈ ಗ್ರಂಥರಾಶಿಯಿಂದ ಆಕಾಲದ ಸಾಹಿತ್ಯಪ್ರಪಂಚದಲ್ಲಿ ದೀಕ್ಷಿತನ ಸ್ಥಾನವನ್ನು ಸುಲಭವಾಗಿ ನಿಷ್ಕರ್ಷಿಸಬಹುದು.[೮೦]

80 ಕುವಲಯಾನಂದದ ಉಪೋದ್ಘಾತ. (ನಿರ್ಣಯಸಾಗರ ಮುದ್ರಣಾಲಯ)

ರಾಮರಾಯನ ತಮ್ಮನಾದ ತಿರುಮಲರಾಯನು ಸ್ವತಃ ವಿದ್ವಾಂಸನಾಗಿದ್ದಂತೆ ತೋರುತ್ತದೆ. ಈತನು ಜಯದೇವನ 'ಗೀತಗೋವಿಂದ'ಕ್ಕೆ 'ಶ್ರುತಿರಂಜಿನಿ' ಎಂಬ ವ್ಯಾಖ್ಯಾನವನ್ನು ರಚಿಸಿರುವಂತೆ ಕೆಲವು ಕೈಬರಹದ ಪ್ರತಿಗಳಲ್ಲಿ ಸೂಚಿತವಾಗಿದೆ. ಆದರೆ ಇನ್ನೂ ಕೆಲವಲ್ಲಿ ಆ ವ್ಯಾಖ್ಯಾನವು ಚರಕೂರಿ ಲಕ್ಷ್ಮೀಧರ[81] ಕೃತವೆಂದು ಹೇಳಿದೆ. ಹೇಗಾದರೂ ತಿರುಮಲರಾಯನು ವಿದ್ವಾಂಸನೂ ವಿದ್ವಜ್ಜನಪೋಷಕನೂ ಆಗಿದ್ದನೆಂಬುದರಲ್ಲಿ ಸಂದೇಹವಿಲ್ಲ. ಮಳೂರು ತಾಮ್ರಶಾಸನವೊಂದರಲ್ಲಿ ಇವನು ವಿದ್ಯಾಭೋಜನೆಂಬುದಾಗಿ ಸಂಬೋಧಿಸಲ್ಪಟ್ಟಿದ್ದಾನೆ. ಇವನ ಕಾಲದಲ್ಲಿ ರಾಮರಾಯನ ಆಸ್ಥಾನದ ಕವಿಗಳೇ ಅಲ್ಲದೇ ಇನ್ನೂ ಅನೇಕರು ಗ್ರಂಥರಚನೆ ಮಾಡಿದ್ದಾರೆ. 'ಬಾಲಭಾಗವತ'ವನ್ನು ರಚಿಸಿದ ಕೋನೇರಿನಾಥನು ತಿರುಮಲರಾಯನ ಅಳಿಯನಾದ ಚಿನ್ನತಮ್ಮನ ಆಶ್ರಯದಲ್ಲಿದ್ದವನು. ತಿರುಮಲರಾಯನ ಸೋದರ ಅಳಿಯನಾದ ಕೊಂಡುವೀಡು ರಾಜನಾದ ಸಿದ್ಧರಾಜು ತಿಮ್ಮಭೂಪಾಲನು ಸ್ವತಃ ಕವಿಯೂ ಕವಿಜನಾಶ್ರಯನೂ ಆಗಿದ್ದನು. ತೆಲುಗಿನಲ್ಲಿರುವ 'ಪರಮಯೋಗಿ ವಿಲಾಸಮು' ಎಂಬ ವೈಷ್ಣವಭಕ್ತರ ಚರಿತ್ರೆಯು ಈತನಿಂದ ರಚಿತವಾದುದು. ಇವನ ಕಾಲದಲ್ಲಿ ಏಕಾಮ್ರನಾಥನೆಂಬುವನು ಕೊಂಡುವೀಡು ರಾಜ್ಯದಿಂದ ಶ್ರೀರಂಗಪಟ್ಟಣಕ್ಕೆ ಹೋಗಿ 'ಜಾಂಬುವತೀ ಕಲ್ಯಾಣಂ' 'ಸತ್ಯಾಪರಿಣಯಂ' ಎಂಬ ಗ್ರಂಥಗಳನ್ನು ರಚಿಸಿ ತಿರುಮಲರಾಯನ ಮಗನಾದ ಮುಮ್ಮಡಿ ರಾಮರಾಯನ ಅಧಿಪತಿಯಾದ ಇಮ್ಮಡಿ ಅಂಕುಶರಾಯನಿಗೆ ಅಂಕಿತವಾಗಿ ಅರ್ಪಿಸಿದ್ದಾನೆ. ಕೃಷ್ಣದೇವರಾಯನ ಆಸ್ಥಾನದ ಅಷ್ಟದಿಗ್ಗಜಗಳಲ್ಲಿ ಒಬ್ಬನೆಂದು ಪ್ರತೀತಿ ಇರುವ ಪಿಂಗಲೀ ಸೂರನ್ನನೂ ತಿರುಮಲರಾಯನ ಕಾಲದಲ್ಲಿದ್ದವನು. 'ಪ್ರಭಾವತೀ ಪ್ರದ್ಯುಮ್ನಮು' 'ಕಲಾಪೂರ್ಣೋದಯಮು' 'ರಾಘವಪಾಂಡವೀಯಮು'—ಈ ಮೂರು ಈತನ ಗ್ರಂಥಗಳು. ಈತನು ಗಂಡೀಕೋಟೆಯ ನಂದ್ಯಾಲ ಕೃಷ್ಣರಾಜನ ಆಸ್ಥಾನಕವಿಯಾಗಿದ್ದನು. 'ಕಲಾಪೂರ್ಣೋದಯ'ದ ಕಥೆ ಪೂರ್ಣವಾಗಿ ಕವಿಯಿಂದ ಕಲ್ಪಿತವಾದುದು. ಪೌರಾಣಿಕವಲ್ಲ. ಆದರೂ ಬಹು ಸ್ವಾರಸ್ಯವಾಗಿದೆ. ದೇವೇಂದ್ರನ ಆಸ್ಥಾನವೇಶ್ಯೆಯಾದ ರಂಭೆಯು ನಳಕೂಬರನಲ್ಲಿ ಮನಸೋತು ತನ್ನ ರೂಪನ್ನು ಹೊಗಳಿಕೊಂಡು ಅವನಲ್ಲಿ ತನ್ನ ಪ್ರೇಮವನ್ನು ತೋಡಿಕೊಳ್ಳುತ್ತಾಳೆ. ತನ್ನನ್ನು ತನ್ನ ಪ್ರಿಯನಿಂದ ಯಾರೂ ಬೇರ್ಪಡಿಸಲಾಗದಷ್ಟು ಆಳವಾದ ಪ್ರೇಮ ತಮ್ಮದೆಂದು

---

[81] ಲಕ್ಷ್ಮೀಧರನು ಜಯದೇವನ 'ಪ್ರಸನ್ನ ರಾಘವ'ಕ್ಕೆ 'ಅಭೀಷ್ಟಾರ್ಥದಾಯಿನಿ' ಎಂಬ ವ್ಯಾಖ್ಯಾನವನ್ನು ರಚಿಸಿ ಸಿದ್ಧರಾಜು ತಿಮ್ಮರಾಜುವಿಗೆ ಅರ್ಪಿಸಿದ್ದಾನೆ. ಪ್ರಾಕೃತವ್ಯಾಕರಣವಾದ 'ಷಡ್ಭಾಷಾಚಂದ್ರಿಕೆ'ಯೂ ಏತತ್ಕೃತವಾದುದು.

ಜಂಬಕೊಚ್ಚಿಕೊಳ್ಳುತ್ತಾಳೆ. ಆದರೆ ನಾರದನು ಮಧ್ಯೆ ಬಂದು ಅವಳು ಬಹುಬೇಗ ಮೋಸಹೋಗುವಳೆಂದು ಸೂಚಿಸುವನು. ದೇವತೆಗಳ ನಟರಾದ ಕಲಭಾಷಿಣಿ ಮತ್ತು ಮಣಿಕಂಧರರು ರಂಭಾನಳಕೂಬರರ ಪಾತ್ರವನ್ನು ಧರಿಸಿ ಮೂಲವ್ಯಕ್ತಿಗಳಿಗೆ ಮೋಸ ಮಾಡುವರು. ರಂಭೆಯು ಕೃತಕ ನಳಕೂಬರನಲ್ಲಿಯೂ ನಳಕೂಬರನು ಕೃತಕ ರಂಭೆಯಲ್ಲಿಯೂ ಅನುರಕ್ತರಾಗಿ ಕೊನೆಯಲ್ಲಿ ವಾಸ್ತವಾಂಶ ತಿಳಿದಾಗ ಇಬ್ಬರೂ ಪೆಚ್ಚಾಗುವರು. ಕಾವ್ಯದ ಮಧ್ಯೆ ಅನೇಕ ಸೊಗಸಾದ ಹಾಸ್ಯಸನ್ನಿವೇಶಗಳೂ ಬರುತ್ತವೆ. ಇದು ಕವಿಕಲ್ಪಿತವಾಗಿ ಪ್ರಬಂಧಶೈಲಿಯಲ್ಲಿದ್ದರೂ ಬಹು ನಾಟಕೀಯವಾಗಿದೆ. ದ್ವ್ಯರ್ಥ ಕಾವ್ಯವಾದ 'ರಾಘವ ಪಾಂಡವೀಯ'ವು ಪಾಂಡಿತ್ಯ ಭೂಯಿಷ್ಠವಾಗಿದ್ದರೂ ಓದುವುದಕ್ಕೆ ಇಂಪಾಗಿದೆ. 'ಪ್ರಭಾವತೀ ಪ್ರದ್ಯುಮ್ನ'ವು ಪೌರಾಣಿಕವಾದರೂ ಹೊಸ ರೀತಿಯಲ್ಲಿ ರಚಿತವಾಗಿದೆ. ರಾಕ್ಷಸರಾಜನಾದ ವಜ್ರನಾಭನ ಮಗಳು ಪ್ರಭಾವತಿಗೂ ಪ್ರದ್ಯುಮ್ನನಿಗೂ ನಡೆದ ವಿವಾಹ ಇದರ ವಸ್ತು. ಸರಳವಾದ ಶೈಲಿ, ಹಾಸ್ಯಭರಿತವಾದ ಸನ್ನಿವೇಶ, ಸಜೀವವಾದ ಪಾತ್ರ, ಆಕರ್ಷಕವಾದ ಸಂಭಾಷಣೆ, ಹೃದಯಗ್ರಾಹಕವಾದ ನಾಟಕೀಯತೆ ಇವುಗಳಿಂದ ಸೂರನ್ನನ ಕಾವ್ಯಗಳು ಜನಪ್ರಿಯವಾಗಿವೆ.

ಸದಾಶಿವರಾಯನೂ ಇವನ ಪೋಷಕರಾದ ಆರುವೀಡು ಸಹೋದರರೂ ಶ್ರೀವೈಷ್ಣವರ ಶಿಷ್ಯರಾದುದರಿಂದ ಇವರ ಕಾಲದಲ್ಲಿ ಶ್ರೀವೈಷ್ಣವ ಮತವು ವಿಜಯನಗರದಲ್ಲೆಲ್ಲಾ ಹರಡಿತು. ಈ ಮತದ ಆಚಾರ್ಯರು ರಾಜರಿಂದ ಪ್ರೋತ್ಸಾಹಿತರಾಗಿ ತಮ್ಮ ಮತತತ್ತ್ವಗಳನ್ನು ಪ್ರತಿಪಾದಿಸುವ ಅನೇಕ ಗ್ರಂಥಗಳನ್ನು ರಚಿಸಿದರು. ತಿರುಮಲೈ ಆಕುತಾತಾಚಾರ್ಯನೆಂಬವನು ಈ ಕಾಲದ ರಾಜಗುರು. ಈತನು ಗೋವಿಂದರಾಜಪ್ರತಿಷ್ಠೆಯನ್ನು ಮಾಡಿಸಿದುದನ್ನು ಹಿಂದೆಯೇ ಹೇಳಿದೆ. ಈತನ ಮಗನಾದ ಕೋಟಿಕನ್ಯಾದಾನಂ ಲಕ್ಷ್ಮೀಕುಮಾರ ತಾತಾಚಾರ್ಯನು ಪ್ರಸಿದ್ಧ ವಿದ್ವಾಂಸ. ಇವರಿಬ್ಬರಿಗೂ ಸದಾಶಿವನು ಅನೇಕ ಅಗ್ರಹಾರಗಳನ್ನು ದಾನ ಮಾಡಿದ್ದಾನೆ. ಉಭಯ ವೇದಾಂತಪ್ರವರ್ತಕನಾದ ತಾಲ್ಲಪಾಕಂ ತಿರುಮಂಗಲ ನಾಥಯ್ಯನೂ ೧೫೪೫ನೆಯ ವರ್ಷದಲ್ಲಿ ಸದಾಶಿವನಿಂದ ಎರಡು ಗ್ರಾಮಗಳನ್ನು ದಾನವಾಗಿ ಪಡೆದಿದ್ದಾನೆ[82] ಈತನು ದೊಡ್ಡ ಪಂಡಿತನಾಗಿರಬೇಕು. ಸಿದ್ಧರಾಜು ತಿಮ್ಮರಾಜುವಿನ ಗ್ರಂಥದಿಂದ ಭಿನ್ನವಾದ 'ಪರಮಯೋಗಿವಿಲಾಸ'ವೆಂಬ ಆಳ್ವಾರ್ರ ಚರಿತ್ರೆಯು ಈತನಿಂದ ರಚಿತವಾಗಿರಬೇಕು. ತಾಲ್ಲಪಾಕಂ ಮನೆತನದವರು ಸಂಗೀತ ವಿದ್ವಾಂಸರು. ಈ ಮನೆತನದ ತಿರುಮಲಾಚಾರ್ಯ ಅನ್ನಮಾಚಾರ್ಯ ಎಂಬುವರಿಂದ ರಚಿತವಾದ ಕೃತಿಗಳು ಈಗಲೂ ತಿರುಪತಿಯ ದೇವಾಲಯದಲ್ಲಿ ಸಿಕ್ಕುವುವು.

[82] ಮ.ಶಾ. ವ. ೧೯೧೫, ನಂ. ೩೩೭.

ಇವರಿಬ್ಬರಿಗೂ ಸದಾಶಿವನು ಗ್ರಾಮಗಳನ್ನು ಕೊಟ್ಟಿದ್ದಾನೆ. ಸದಾಶಿವನಂತೆಯೇ ಇವನ ಮಂತ್ರಿಯಾದ ರಾಮರಾಯನೂ ಅನೇಕ ಶ್ರೀವೈಷ್ಣವ ವಿದ್ವಾಂಸರಿಗೆ ಸಹಾಯಮಾಡಿದ್ದಾನೆ. ಆಳ್ವಾರ್ ತಿರುಮಲೈ ಪೆನುಗೊಂಡೆ ನರಸಿಂಹಾಚಾರ್ಯನೆಂಬುವನಿಗೆ ರಾಮರಾಯನು ಗ್ರಾಮಗಳನ್ನು ಕೊಟ್ಟಂತೆ ಗೋರೀಬಿದನೂರಿನ ೩೨ ನೆಯ ಶಾಸನದಲ್ಲಿ ಹೇಳಿದೆ. ಆ ಕಾಲದ ಪ್ರಸಿದ್ಧ ವಿದ್ವಾಂಸನಾದ ಕಂದಾಡೆ ಶ್ರೀರಂಗಾಚಾರ್ಯನಿಗೆ ಸದಾಶಿವರಾಯನು ಬಹುಮಾನಮಾಡುವುದಕ್ಕೂ ರಾಮರಾಯನೇ ಕಾರಣ. ಶ್ರೀ ಪೆರಂಬೂದೂರಿನ ಆದಿಕೇಶವಸ್ವಾಮಿಯವರ ದೇವಸ್ಥಾನಕ್ಕೂ ಅಲ್ಲಿಯ ವಿದ್ವಾಂಸರಿಗೂ ಸದಾಶಿವನಿಂದ ೩೨ ಗ್ರಾಮಗಳನ್ನು ಕೊಡಿಸಿದವನೂ ರಾಮರಾಯನೇ[83]. ಇವರ ಈ ತೆರನಾದ ಪ್ರೋತ್ಸಾಹದಿಂದ ಅನೇಕ ಜನ ವಿದ್ವಾಂಸರು ಸಾಹಿತ್ಯಸೇವೆಯನ್ನು ಸಲ್ಲಿಸಿ ವಿದ್ಯಾನಗರವನ್ನು ಅನ್ವರ್ಥವಾಗಿಸಿದರು.

೪

ತಿರುಮಲರಾಯನು ಸದಾಶಿವನ ಕಾಲದಲ್ಲಿಯೇ ಪೂರ್ಣಾಧಿಕಾರವನ್ನು ಪಡೆದಿದ್ದರೂ ಅವನು ಜೀವಿಸಿರುವ ವರೆಗೆ ಸ್ವತಃ ಚಕ್ರವರ್ತಿಯೆಂದು ಕರೆಯಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಸುಮಾರು ೧೫೭೦ ರಲ್ಲಿ ಸದಾಶಿವರಾಯನು ಸ್ವರ್ಗಸ್ಥನಾಗಲು ತಿರುಮಲರಾಯನು ಪೆನುಗೊಂಡೆಯಲ್ಲಿ ಅಭಿಷಿಕ್ತನಾಗಿ ವಿಜಯನಗರ ಸಾಮ್ರಾಜ್ಯದ ಚಕ್ರವರ್ತಿಯಾದನು. ಅಂದಿನಿಂದ ಆರುವೀಡು ವಂಶಸ್ಥರ ದೊರೆತನವು ನಿಜವಾಗಿ ಪ್ರಾರಂಭವಾಯಿತು. ತಿರುಮಲರಾಯನು ತಾನು ಸುಮಾರು ಎಂಟು ವರ್ಷಗಳ ಕಾಲ ರಾಜನಾಗಿದ್ದು ತರುವಾಯ ತನ್ನ ಮಕ್ಕಳಾದ ಶ್ರೀರಂಗರಾಯ, ರಾಮರಾಯ ಮತ್ತು ವೆಂಕಟಪತಿರಾಯರಿಗೆ ರಾಜ್ಯವನ್ನು ಹಂಚಿಕೊಟ್ಟಂತೆ ಅನೇಕ ಶಾಸನಗಳಿಂದ ತಿಳಿದುಬರುತ್ತದೆ. ಆದರೆ ಇನ್ನು ಕೆಲವು ಶಾಸನಗಳಿಂದ ತಿರುಮಲರಾಯನ ಕಾಲದಲ್ಲಿಯೇ ಅವನ ಮಕ್ಕಳು ವಿಜಯನಗರ, ಶ್ರೀರಂಗಪಟ್ಟಣ, ಮಧುರೆ ಪ್ರಾಂತಗಳಲ್ಲಿ ರಾಜಪ್ರತಿನಿಧಿಗಳಾಗಿದ್ದು ತಂದೆಯು ಸತ್ತುಹೋದ ಮೇಲೆ ತಮ್ಮ ತಮ್ಮ ರಾಜ್ಯದಲ್ಲಿ ತಾವೇ ಸ್ವತಂತ್ರರಾದಂತೆ ಊಹಿಸಬಹುದಾಗಿದೆ. ಇವರಲ್ಲಿ ಶ್ರೀರಂಗರಾಜನು ಪೆನುಗೊಂಡೆಯಲ್ಲಿಯೂ ರಾಮರಾಯನು ಶ್ರೀರಂಗಪಟ್ಟಣದಲ್ಲಿಯೂ ವೆಂಕಟಪತಿಯು ಮಧುರೆಯಲ್ಲಿಯೂ ರಾಜ್ಯವಾಳಿದರು. ಇವರೂ ತಮ್ಮ ಹಿರಿಯರಂತೆ ತಮ್ಮ ಇತರ ಕಷ್ಟಪರಂಪರೆಗಳನ್ನೆಲ್ಲಾ ಲಕ್ಷಿಸದೆ ವಿದ್ಯಾಭಿವೃದ್ಧಿಗೂ ಗ್ರಂಥರಚನೆಗೂ ಬಹಳ ಸಹಾಯಮಾಡಿದರು.

---

83 ಎಂ.ಇಂ. ಸಂ. ೬, ಪು. ೧-೩೩.

ಇವರ ಕಾಲದಲ್ಲಿ ಶ್ರೀವೈಷ್ಣವಮತವು ಪ್ರಾಬಲ್ಯದ ಅತ್ಯುನ್ನತ ಶಿಖರಕ್ಕೆ ಹತ್ತಿತು. ಈ ಮತದವರಿಗೆ ಈ ಕಾಲದಲ್ಲಿ ಕೊಟ್ಟ ದತ್ತಿಗಳು ಅಸಂಖ್ಯಾತವಾಗಿವೆ. ತಾತಾಚಾರ್ಯರೇ ಆರುವೀಡು ವಂಶಸ್ಥರಿಗೂ ರಾಜಗುರು. ಏಟ್ಟೂರು ತಿರುಮಲೈ ಕುಮಾರ ತಾತಾಚಾರ್ಯನು ಶ್ರೀರಂಗರಾಜನ ಸಾಕ್ಷಾದ್ಗುರು. ಈತನ ಉಪದೇಶದ ಪ್ರಕಾರ ಶ್ರೀರಂಗರಾಜನು ಮೇಲುಕೋಟೆಯಲ್ಲಿ ಶ್ರೀರಾಮಾನುಜಾಚಾರ್ಯರ ವಿಷಯಕವಾದ ವೇದಾಂತದೇಶಿಕಕೃತ 'ಯತಿರಾಜಸಪ್ತತಿ'ಯನ್ನು ಪ್ರತಿದಿನವೂ ಪಾರಾಯಣಮಾಡುವುದಕ್ಕಾಗಿ ಒಂದು ವಿದ್ವದ್ಗೋಷ್ಠಿಗೆ ದತ್ತಿಗಳನ್ನು ಬಿಟ್ಟಿದ್ದಾನೆ. ೧೫೮೫ನೆಯ ವರ್ಷದ ಎರಡು ಶಾಸನಗಳಲ್ಲಿ ಈ ಕುಮಾರ ತಾತಾಚಾರ್ಯನಿಗೆ ಮೇಲುಕೋಟೆಯ ದೇವಸ್ಥಾನದಲ್ಲಿ ಅಗ್ರಮರ್ಯಾದೆಯು ಕೊಡಲ್ಪಟ್ಟಿದೆ[84]. ಕಂಚಿಯಲ್ಲಿರುವ ಯಥೋಕ್ತಕಾರಿ ದೇವಾಲಯದ ಶಾಸನಗಳಲ್ಲಿ ಇವನನ್ನು 'ವೇದಮಾರ್ಗ ಪ್ರತಿಷ್ಠಾಪನಾಚಾರ್ಯ ಪೆರಿಯ ತಿರುಮಲೈಸ್ವಾಮಿ ಎಂಬುದಾಗಿ ಸಂಬೋಧಿಸಿದೆ. ಈತನ ಪ್ರೇರಣೆಯಿಂದಲೇ ಶ್ರೀರಂಗನು ಅಹೋಬಿಲದಿಂದ ಮುಸಲ್ಮಾನರನ್ನು ಓಡಿಸಿ ಅಲ್ಲಿ ಸರಿಯಾಗಿ ಪೂಜೆ ನಡೆಯುವಂತೆ ಏರ್ಪಡಿಸಿದುದು. ವೆಂಕಟಪತಿರಾಯನಿಗೆ ಕಿರೀಟಧಾರಣೆ ಮಾಡಿ ಆ ಕಾಲದ ವೈಷ್ಣವ ಸಂಸ್ಥೆಗಳಿಗೆಲ್ಲಾ ಯಜಮಾನನಾಗಿದ್ದವನೂ ಇವನೇ. ಇವನು ತನ್ನ ಶಿಷ್ಯರಂತೆ ತಾನೂ ಅನೇಕ ದೇವಾಲಯಗಳಿಗೆ ದತ್ತಿಯನ್ನು ಬಿಟ್ಟಿದ್ದಾನೆ. ಕೆರೆ ಕೊಳಗಳನ್ನು ತೋಡಿಸಿದ್ದಾನೆ. ಚೆಂಗಲ್ಪಟ್ಟು ತಾಲ್ಲೋಕಿನಲ್ಲಿರುವ 'ಕೆನ್ನೇರಿ' ಎಂಬ ಕೆರೆಯನ್ನು ಈತನು ಸ್ವತಃ ತೋಡಿದುದೆಂದೂ ಈಗಲೂ ಪ್ರತೀತಿ ಇದೆ. ಈತನು 'ಸಾತ್ವಿಕಬ್ರಹ್ಮ ವಿದ್ಯಾವಿಲಾಸ'ವೆಂಬ ವೇದಾಂತ ಗ್ರಂಥವನ್ನು ರಚಿಸಿದ್ದಾನೆ. ಸಂಸ್ಕೃತದಲ್ಲಿರುವ 'ಪಾಂಡುರಂಗ ಮಹಾತ್ಮ್ಯ'ವು ಈತನಿಂದಲೇ ರಚಿತವಾಗಿರಬಹುದು. ವೆಂಕಟಪತಿರಾಯನು ಈ ವಿದ್ವಾಂಸನ ವಿಷಯದಲ್ಲಿ ತೋರಿಸಿದ ಅನನ್ಯ ಸಾಧಾರಣ ಭಕ್ತಿಯು ಅನ್ಯಾದೃಶವಾದುದು.

ವೆಂಕಟಪತಿರಾಯನಿಂದ ಸಹಾಯಪಡೆದವನು ತಾತಾಚಾರ್ಯನೊಬ್ಬನೇ ಅಲ್ಲ. ಸರ್ಜಾಪುರದ ತಾಮ್ರಶಾಸನದಲ್ಲಿ ಅಲ್ಲಾರ್ಯನ ಮಗನಾದ ರಾಮಾರ್ಯನೆಂಬ ವೇದವಿದ್ವಾಂಸನಿಗೆ ವೆಂಕಟಪತಿರಾಯನು ಒಂದು ಅಗ್ರಹಾರವನ್ನು ದಾನಮಾಡಿರುವುದು ಉಕ್ತವಾಗಿದೆ.[85] ಮಂಗಳಂಪಾಡು ಶಾಸನದಲ್ಲಿ ಪ್ರಖ್ಯಾತನೂ ಸರ್ವಶಾಸ್ತ್ರವಿದನೂ ಆದ ಶ್ರೀರಂಗರಾಜನೆಂಬುವನಿಗೆ ಗ್ರಾಮಗಳನ್ನು ಕೊಟ್ಟಿದೆ.[86] ವಿಲ್ಲಿಪಾಕಂ

---

[84] ಮೈ.ಶಾ. ವ. ೧೯೦೭-೫೦.

[85] ಮೈ.ಶಾ. ವ. ೧೯೧೮-೯೩.

[86] ನೆಲ್ಲೂರಿನ ಶಾಸನಗಳು, ನಂ. ೧-೨೫.

ತಾಮ್ರಶಾಸನವು ವೇದವೇದಾಂಗ ಜ್ಯೋತಿಷ ಶಬ್ದಶಾಸ್ತ್ರಗಳಲ್ಲಿ ಪ್ರವೀಣರಾದ ಬ್ರಾಹ್ಮಣರಿಗೆ ಕೊಟ್ಟುದು. ೧೬೧೨ನೆಯ ವರ್ಷದಲ್ಲಿ ತರ್ಕ, ಸ್ಮೃತಿ, ಸೂರ್ಯ ಸಿದ್ಧಾಂತಗಳಲ್ಲಿ ಉತ್ಕೃಷ್ಟವಾದ ಪಾಂಡಿತ್ಯವನ್ನು ಪಡೆದಿದ್ದ ರಾಮಕೃಷ್ಣಜೋಸ್ಯನು ವೆಂಕಟಪತಿರಾಯನಿಂದ ವೃತ್ತಿಗಳನ್ನು ಪಡೆದಿದ್ದಾನೆ.[87] ಅಪ್ಪಯ್ಯದೀಕ್ಷಿತನು ವೆಂಕಟ ಪತಿರಾಯನ ಆಜ್ಞೆಯ ಮೇರೆ 'ಕುವಲಯಾನಂದ'ವೆಂಬ ಅಲಂಕಾರಗ್ರಂಥವನ್ನು ಬರೆದಂತೆಯೂ ವೆಲ್ಲೂರಿನ ರಾಜಪ್ರತಿನಿಧಿಯಾದ ಚಿನ್ನಬೊಮ್ಮನಾಯಕನಿಂದ ಕನಕಾಭಿಷಿಕ್ತನಾದಂತೆಯೂ ಈ ಕೆಳಗಿನ ಶ್ಲೋಕಗಳಿಂದ ತಿಳಿದುಬರುತ್ತದೆ.[88]

ಅಮುಂ ಕುವಲಯಾನಂದಮಕರೋದಪ್ಪದೀಕ್ಷಿತಃ |
ನಿಯೋಗಾದ್ವೇಂಕಟಪತೇಃ ನಿರುಪಾಧಿ ಕೃಪಾನಿಧೇಃ ||

ಕರ್ಣಶ್ರೀಚಿನಬೊಮ್ಮಕ್ಷಿತಿಪತಿರಭಿತೋ ಲಂಭಯನ್ ಶಾತಕುಂಭ
ಸ್ತೋಮಂ ಹೇಮಾಭಿಷೇಕ ಪ್ರಣಯನ ಸಮಯೇ ಯಸ್ಯಮೂರ್ತಿ ಪ್ರಶಾಸ್ಯಮ್ |
ರೇಜೇ ಶ್ರೀರಂಗರಾಜಾಧ್ವರಿ ವರಕಲಶಾಂಭೋಧಿಲಬ್ಧಪ್ರಸೂತೇಃ |
ವಿದ್ಯಾಕಲ್ಪದ್ರುಮಸ್ಯ ಸ್ವಯಮಿವಕಲಯನ್ ಜಾತರೂಪಾಲವಾಲಮ್ ||

ಆರುವೀಡರ ಆಸ್ಥಾನದಲ್ಲಿ ದೇಶಭಾಷೆಗಳಿಗೂ ವಿಶೇಷ ಪ್ರೋತ್ಸಾಹ ದೊರೆತಿದೆ. ೧೫೯೨ನೆಯ ವರ್ಷದ ಒಂದು ಶಾಸನದ[89]

ಆತನ ಶಿಷ್ಯಂ ಸಕಲಕ | ಲಾತತ ವೈದುಷ್ಯನಖಿಲಗುಣಿಗಣಭೂಷ್ಯಂ |
ಸಾತಿಶಯಚರಿತಪೋಷ್ಯಂ | ಖ್ಯಾತಂ ಭಟ್ಟಾಕಲಂಕನನುಪಮಭಾಷ್ಯಂ ||
ಶ್ರೀರಂಗರಾಜನೃಪತಿ | ಪ್ರೇರಣೆಯಿಂ ವಿಜಯಮುನಿಪನುಪದೇಶನದಿಂ |
ಸಾರತ್ರಿತಯಮನಲಂ | ಕಾರತ್ರಿತಯಮನೋದಿ ಜಸಮಂ ಪಡೆದಂ ||

ಎಂಬ ಪದ್ಯಗಳಿಂದ 'ಕರ್ಣಾಟಕ ಶಬ್ದಾನುಶಾಸನ'ವನ್ನು ಬರೆದ ಭಟ್ಟಾಕಳಂಕನು ಶ್ರೀರಂಗರಾಜನ ಆಸ್ಥಾನಕವಿಯಾಗಿದ್ದಂತೆ ತೋರುತ್ತದೆ. ಸುಪ್ರಸಿದ್ಧವಾದ ತೆನ್ನಾಲಿ ರಾಮಕೃಷ್ಣನೂ ವೆಂಕಟಪತಿರಾಯನ ಆಸ್ಥಾನಕವಿ. ಕೃಷ್ಣದೇವರಾಯನ ಆಸ್ಥಾನದ ಅಷ್ಟದಿಗ್ಗಜಗಳಲ್ಲಿ ಇವನನ್ನೂ ಸೇರಿಸಿಬಿಟ್ಟಿದ್ದಾರೆ. ಇದು ಸರಿಯಲ್ಲ. ಇವನು ಈ ಕಾಲದಲ್ಲಿ ಇದ್ದ ಆಂಧ್ರಕವಿ—ತೆಲುಗುಸಾಹಿತ್ಯದ ಉತ್ತಮ ಕಾವ್ಯಗಳು ವಿಜಯನಗರದ ಪತನವಾದ ಮೇಲೆಯೇ ರಚಿತವಾದುದು ಅರ್ಥಗರ್ಭಿತವಾಗಿದೆ. ಕಾರಣ ಇಷ್ಟೆ. ರಾಜಕೀಯದಲ್ಲಿ ಸೋಲಾದರೂ ಸಾಹಿತ್ಯ ಬೆಳೆದೇ ಬೆಳೆಯಿತು.

---

[87] ಮ.ಶಾ. ವ. ೧೯೨೨-೩, ಅನುಬಂಧ ಎ. ನಂ. ೭.

[88] ಆಧಾರಗ್ರಂಥಗಳು, ಪು. ೨೫.

[89] ಕ.ಚ. ಸಂ. ೨, ಪು. ೩೪೯.

ಪೆನುಗೊಂಡೆ, ಚಂದ್ರಗಿರಿ, ವಿಜಯನಗರಗಳಲ್ಲಿದ್ದ ಸಾಂಸ್ಕೃತಿಕ ಜೀವನ ಭೇದನವಾಗಲಿಲ್ಲ. ಜನರು ಮಹಮ್ಮದಿಯರ ಆಘಾತಕ್ಕೆ ಸಿಕ್ಕಲಿಲ್ಲ. ರಾಜಧಾನಿಯು ಬದಲಾಯಿಸಿದರೂ ಸಾಂಸ್ಕೃತಿಕ ಸಂಪತ್ತು ದುರ್ಬಲವಾಗಲಿಲ್ಲ.

ತೆನ್ನಾಲಿ ರಾಮಕೃಷ್ಣನು ಮೊದಲು ವೀರಶೈವನಾಗಿದ್ದು ತನ್ನ ಪೋಷಕನ ಇಷ್ಟಾನುಸಾರ ತನ್ನ ಅಪರವಯಸ್ಸಿನಲ್ಲಿ ವೈಷ್ಣವನಾದಂತೆ ತೋರುತ್ತದೆ. ತೆಲುಗಿನಲ್ಲಿರುವ 'ಪಾಂಡುರಂಗ ಮಾಹಾತ್ಮ್ಯ' 'ಘಟಿಕಾಚಲ ಮಾಹಾತ್ಮ್ಯ' 'ಉದ್ಭಟಾರಾಧ್ಯ ಚರಿತ್ರೆ'—ಇವು ಏತತ್ಕೃತವಾದವು.[90] 'ಪಾಂಡುರಂಗ ಮಾಹಾತ್ಮ್ಯ'ವು ತೆಲುಗು ಪಂಚಮಹಾಕಾವ್ಯದಲ್ಲಿ ಒಂದೆಂದು ಪರಿಗಣಿತವಾಗಿದೆ. ವೆಂಕಟಪತಿರಾಯನ ಜ್ಞಾತಿ ಕೋನೇಟಿ ತಿಮ್ಮರಾಜನು 'ಸುದಕ್ಷಿಣಾಪರಿಣಯ'ವನ್ನು ತನ್ನ ಅಂಕಿತದಲ್ಲಿ ಬರೆಸಿಕೊಂಡಿದ್ದಾನೆ. ವೆಂಕಟಪತಿರಾಯನ ದಂಡನಾಯಕನಾದ ಮಾಟ್ಲ ಅನಂತ ನೆಂಬುವನು 'ಕಾಕುತ್ಸ್ಥವಿಜಯ'ವೇ ಮೊದಲಾದ ಅನೇಕ ಗ್ರಂಥಗಳನ್ನು ರಚಿಸಿದ್ದಾನೆ. ೧೬೦೫ನೆಯ ವರ್ಷದ ಸಿದ್ಧೌಟಿಯ ಶಾಸನವನ್ನು ಈತನೇ ರಚಿಸಿರಬಹುದು.[91] ವೆಂಕಟಪತಿರಾಯನ ಪ್ರಧಾನನಾದ ದತ್ತಮಂತ್ರಿಯ ಸಹೋದರನಾದ ಕರಿಗೊಪ್ಪಲ ಮಲ್ಲನ್ನನು 'ಚಂದ್ರಭಾನು ಚರಿತ್ರ'ವನ್ನು ರಚಿಸಿದ್ದಾನೆ.[92] ಮತ್ತೊಬ್ಬ ಮಂತ್ರಿಯಾದ ಪೆಮ್ಮಾಸಾನಿ ತಿಮ್ಮನ ಆಶ್ರಯದಲ್ಲಿ ಚಿನ್ನಮಹಾರಾಜ ಎಂಬ ಕವಿಯು ಅನೇಕ ಗ್ರಂಥಗಳನ್ನು ರಚಿಸಿದನು. ಆಸ್ಥಾನ ಜ್ಯೋತಿರ್ವಿದನಾದ ಭಾಸ್ಕರನು ಕನ್ನಡದಿಂದ ತೆಲುಗಿಗೆ 'ರಟ್ಟ ಮತ'ವನ್ನು ಭಾಷಾಂತರ ಮಾಡಿದನು. ಕನ್ನಡ ವ್ಯಾಕರಣ ಕರ್ತೃವಾದ ಭಟ್ಟಾಕಳಂಕನ ಶಿಷ್ಯನಾದ ಶಿಷ್ಯ ಭಟ್ಟಾಕಳಂಕನೂ[93] ಎಳ್ಳ ಮಾಧವಾರ್ಯನೂ ವೆಂಕಟಪತಿರಾಯನ ಆಸ್ಥಾನದ ಮತ್ತಿಬ್ಬರು ವಿದ್ವಾಂಸರು. ಇವರಲ್ಲಿ ಮೊದಲನೆಯವನು ೧೫೯೨ನೆಯ ವರ್ಷದ ಒಂದು ಶಾಸನವನ್ನೂ ಎರಡನೆಯವನು 'ತ್ರಿಪದ ದ್ಯೋತಿನಿ' ಎಂಬ ವ್ಯಾಕರಣ ಗ್ರಂಥವನ್ನೂ ರಚಿಸಿದ್ದಾರೆ.[94]

ವೆಂಕಟಪತಿರಾಯನ ಸಾಹಿತ್ಯಪ್ರೇಮವನ್ನೂ ವಿದ್ವತ್ಪಕ್ಷಪಾತವನ್ನೂ ಇವನ ಅಧೀನರಾದ ನಾಯಕರನೇಕರು ಅನುಕರಿಸಿದರು. ಇವರಲ್ಲಿ ತಂಜಾವೂರಿನ ರಘುನಾಥ

---

90 ತೆಲುಗುಸಾಹಿತ್ಯ, ಪು. ೮೩.

91 ಆಧಾರಗ್ರಂಥಗಳು ಪು. ೨೪೮ ಮತ್ತು ಮ.ಶಾ. ವ. ೧೯೧೫-೧೬—೭೫. ಅನುಬಂಧ ಬಿ. ನಂ ೫೬೪.

92 ಆಧಾರಗ್ರಂಥಗಳು, ಪು, ೨೪೭.

93 ಕ.ಚ. ಸಂ. ೨, ಪು. ೩೪೯.

94 ಹಿರಾಸ್, ಪು. ೫೨೧.

ನಾಯಕನು ಬಹು ಪ್ರಸಿದ್ಧನು. ಈತನು ಸ್ವತಃ ಪಂಡಿತನೂ ಕವಿಯೂ ಆಗಿದ್ದನು. ಇವನು ಅನೇಕ ಸಂಸ್ಕೃತಾಂಧ್ರ ಗ್ರಂಥಗಳನ್ನು ರಚಿಸಿದ್ದಾನೆ. ಇವನು ಉದ್ದಾಮ ಸಂಗೀತಶಾಸ್ತ್ರಜ್ಞನಾಗಿದ್ದಂತೆಯೂ ತೋರುತ್ತದೆ. ಸಂಗೀತಶಾಸ್ತ್ರ ವಿಷಯಕ ವಾದ 'ಸಂಗೀತ ಸುಧಾ'[95] ಎಂಬ ಈತನ ಗ್ರಂಥದ ಪ್ರಾರಂಭದಲ್ಲಿ ಬರುವ

ಜಯಂತಸೇನಾದಿಮರಾಗ ರಾಮಾನಂದಾದಿ ತಾಳಾನ್ ರಚಯನ್ನವೀನಾನ್ |
ಸಂಗೀತವಿದ್ಯಾಂ ಸಮುಪಾದಿಶಸ್ತ್ವಂ ವಿಪಂಚಿಕಾವಾದ ವಿಚಕ್ಷಣಾನಾಮ್ ||
ಕಿಂಚತ್ವಮುಂಚದ್ಭವವೀಯನಾಮ ಮೇಳಾಂತರಂ ಸಂಪ್ರತಿ ಕಲ್ಪಯಿತ್ವಾ |
ಮೇಳಾಂತರೇ ತತ್ರ ಸಮಸ್ತರಾಗಾನ್ ಪ್ರಕಾಶಯೋಗಾನ್ ಸುಲಭಾನ್ಕರೋಷಿ ||

ಎಂಬ ಶ್ಲೋಕದಿಂದ ಈತನು ಸಂಗೀತಶಾಸ್ತ್ರದಲ್ಲಿ ಪ್ರವೀಣನಾಗಿದ್ದಂತೆಯೂ 'ಜಯಂತಸೇನ' ಮೊದಲಾದ ರಾಗಗಳನ್ನೂ 'ರಾಮಾನಂದ' ಮೊದಲಾದ ತಾಳಗಳನ್ನೂ ಸ್ವನಾಮಾಂಕಿತವಾದ ಒಂದು ಮೇಳವನ್ನೂ ಹೊಸದಾಗಿ ಕಂಡುಹಿಡಿದಂತೆಯೂ ಅನೇಕ ವಿದ್ವಾಂಸರಿಗೆ ವೀಣಾಗಾನವನ್ನೂ ಹೇಳಿಕೊಟ್ಟಂತೆಯೂ ತಿಳಿದುಬರುತ್ತದೆ. ಈ ವಿಷಯವು ಈತನ ಆಸ್ಥಾನ ವಿದುಷೀಮಣಿಯಾದ ರಾಮಭದ್ರಾಂಬಾ ಎಂಬುವಳಿಂದ ರಚಿತವಾದ 'ರಘುನಾಥಾಭ್ಯುದಯ'ದ ಈ ಕೆಳಗಿನ ಶ್ಲೋಕದಿಂದ ದೃಢಪಡುತ್ತದೆ.[96]

ಚಂಚತ್ಪುಟಾದ್ಯೈರ್ನೃಪತೇಸ್ಸಮೀಪೆ ಭವಾನ್ಯಜಾತ್ಯೈಃ ನಟನಪ್ರಪಂಚಂ |
ಪ್ರಪಂಚಯತ್ಪಂಚವಿಧೈಸ್ಸಲೀಲಂ ಮೃಗೇಕ್ಷಣಾ ಕಾಚನಮಾರ್ಗ ತಾಳೈಃ ||
ಜಯಮಂಗಲ ಸಿಂಹಲಲೀಲಾ ಜಯನಿಸ್ಸಾರಣ ಕಚಚ್ಚರಿತ್ರಭಿನ್ನೈಃ
ರತಿಲೀಲ ತುರಂಗಲೀಲ ರಂಗಾಭರಣಾನಂಗ ಪರಿಕ್ರಮಾದಿ ತಾಳೈಃ ||
ಅಭಿನಂದನ ನಂದನಂದನಾದ್ಯೈಃ ಅಭಿಮಾಲಾದಿಭಿಃ ಅನ್ಯಕೈಶ್ಚ ತಾಳೈಃ |
ರಘುನಾಥವಿಲಾಸ ಮುಖ್ಯಲಾಸ್ಯಾನ್ ಅಬಲಾ ಕಾಚಿದಕಲ್ಪಯತ್ಸಲೀಲಂ ||

ಈ ಶ್ಲೋಕಗಳಿಂದ ರಘುನಾಥನಾಯಕನು ಸ್ವಕಲ್ಪಿತವಾದ ಜಯಮಂಗಲ ಸಿಂಹಲ ಲೀಲ, ಜಯನಿಸ್ಸಾರಣ, ಕಚಚ್ಚರಿತ್ರ, ಮೊದಲಾದ ರಾಗಗಳಿಂದಲೂ ರತಿಲೀಲ, ತುರಂಗಲೀಲ, ರಂಗಾಭರಣ, ಅನಂಗಪರಿಕ್ರಮಣ, ಅಭಿನಂದನ, ನಂದನಂದನ ಮೊದಲಾದ ತಾಳಗಳಿಂದಲೂ ಕೂಡಿದ ಸ್ವನಾಮಾಂಕಿತವಾದ 'ರಘುನಾಥ ವಿಲಾಸ' ವೆಂಬ ನಾಟ್ಯವನ್ನೂ ಗಾಯಕಿಯರಿಂದ ಆಡಿಸಿ ಅವರಿಗೆ ಬಹುಮಾನ ಮಾಡಿದ ನೆಂಬುದು ಶ್ರುತಪಡುತ್ತದೆ. ಗ್ರಂಥಕರ್ತಳಾದ ರಾಮಭದ್ರಾಂಬೆಯು ರಘುನಾಥ ನಾಯಕನಿಂದ ತಾನು ಸಂಗೀತವನ್ನು ಕಲಿತಂತೆ ಇದೇ ಗ್ರಂಥದಲ್ಲಿ ಹೇಳಿಕೊಂಡಿ

[95] ಆಧಾರಗ್ರಂಥಗಳು, ಪು. ೨೬೯.

[96] ಅದೇ, ಪು. ೩೦೧.

ದ್ದಾಳೆ. ರಘುನಾಥನಾಯಕನ ಮಗನಾದ ವಿಜಯರಾಘವನಾಯಕನೂ 'ರಘುನಾಥಾಭ್ಯುದಯ'ವೆಂಬ ಹೆಸರನ್ನುಳ್ಳ ಒಂದು ನಾಟಕವನ್ನು ರಚಿಸಿದ್ದಾನೆ. ಅದರಲ್ಲಿ ಅವನು ತಮ್ಮ ತಂದೆಯ ವಿಶೇಷವಾದ ವಿದ್ಯಾಪಕ್ಷಪಾತವನ್ನು ಬಹಳ ವಿಸ್ತಾರವಾಗಿ ವರ್ಣಿಸಿದ್ದಾನೆ. ರಘುನಾಥನಾಯಕನ ಮತ್ತು ಅವನ ತಂದೆಯಾದ ಅಚ್ಯುತನಾಯಕನ ಮಂತ್ರಿಯಾದ ಗೋವಿಂದದೀಕ್ಷಿತನು 'ಹರಿವಂಶಸಾರಚರಿತ್ರಂ' 'ಸಾಹಿತ್ಯಸುಧಾ' ಎಂಬ ಕಾವ್ಯಗಳನ್ನು ರಚಿಸಿದ್ದಾನೆ. 'ಸಂಗೀತಸುಧೆ'ಯ[97] ಈ ಕೆಳಗಣ ಶ್ಲೋಕಗಳಿಂದಲೂ ರಘುನಾಥನಾಯಕನು ಸಂಗೀತ ಸಾಹಿತ್ಯಕಲೆಗಳಲ್ಲಿ ಪ್ರವೀಣನೂ ಸಂಸ್ಕೃತ ಮತ್ತು ಭಾಷಾಪ್ರಬಂಧರಚನೆಯಲ್ಲಿ ನಿಪುಣನೂ ವಿದ್ವಾಂಸಪ್ರಿಯನೂ 'ಪಾರಿಜಾತಾಪಹರಣಂ' 'ವಾಲ್ಮೀಕಿಚರಿತ್ರಂ' 'ಅಚ್ಯುತೇಂದ್ರಾಭ್ಯುದಯಂ' 'ಗಜೇಂದ್ರಮೋಕ್ಷಂ' 'ನಳಚರಿತ್ರಂ' 'ಶ್ರೀ ರುಕ್ಮಿಣೀಕೃಷ್ಣಯಕ್ಷಗಾನಂ' ಮೊದಲಾದ ಗ್ರಂಥಗಳ ಕರ್ತೃವೂ ಆಗಿದ್ದಂತೆ ತೋರುತ್ತದೆ.

> ಆಸ್ತೇಧಿಭದ್ರಾಸನಮಚ್ಯುತೇಂದ್ರ ತನೂಭವ ಶ್ರೀರಘುನಾಥ ಭೂಪಃ|
> ಸಂಗೀತ ಸಾಹಿತ್ಯ ಕಲಾವಿಲಾಸೈಃ ಭಾಷಾಪ್ರಬಂಧೇಷು ಭೃಶಂ ಪಟಿಮ್ನಾ ||
> ಶ್ರೀಪಾರಿಜಾತಾಹರಣಪ್ರಬಂಧಂ ಚಿತ್ರಂಚ ವಾಲ್ಮೀಕಿಚರಿತ್ರಕಾವ್ಯಂ|
> ಕಥಾಚ್ಯುತೇಂದ್ರಾಭ್ಯುದಯಂ ಗಜೇಂದ್ರಮೋಕ್ಷಂ ಚರಿತ್ರಂಚ ನಳಸ್ಯಚಿತ್ರಂ||
> ಶ್ರೀರುಕ್ಮಿಣೀಕೃಷ್ಣವಿವಾಹ ಯಕ್ಷಗಾನಂ ಪ್ರಬಂಧಾನಪಿ ನೈಕಭೇದಾನ್ |
> ನಿರ್ಮಾಯ ವಾಗ್ಭಿರ್ನಿಪುಣಾರ್ಥಭಾಗ್ಭಿಃ ವಿದ್ವತ್ಕವೀನಾಂ ವಿದಧಾಸಿ ಹರ್ಷಂ||

ಗೋವಿಂದದೀಕ್ಷಿತನ ಮಗನಾದ ಯಜ್ಞನಾರಾಯಣದೀಕ್ಷಿತನೂ ರಘುನಾಥನಾಯಕನ ಆಶ್ರಯದಲ್ಲಿದ್ದುದರಿಂದ ಅವನೂ ತನ್ನ ಪೋಷಕನ ಯಶಸ್ಸನ್ನು ಚಿರಸ್ಥಾಯಿಯನ್ನಾಗಿ ಮಾಡುವುದಕ್ಕಾಗಿ 'ಸಾಹಿತ್ಯರತ್ನಾಕರ'ವೆಂಬ[98] ಒಂದು ಸಂಸ್ಕೃತ ಕಾವ್ಯವನ್ನು ರಚಿಸಿದ್ದಾನೆ. ಇದರಲ್ಲಿ ರಘುನಾಥನಾಯಕನು ನೂರಕ್ಕಿಂತ ಹೆಚ್ಚಾದ ಗ್ರಂಥಗಳನ್ನು ರಚಿಸಿರುವಂತೆ ಹೇಳಿದೆ. ರಘುನಾಥನಾಯಕ ರಚಿತವಾದ 'ಆಂಧ್ರರಾಮಾಯಣ'ವು ಈಗಲೂ ಬಹಳ ಪ್ರಸಿದ್ಧಿಯನ್ನು ಹೊಂದಿದೆ. ಈ ಗ್ರಂಥವು ಅವನ ಕಾಲದಲ್ಲಿಯೇ ಅವನ ಆಸ್ಥಾನವಿದುಷಿಯಾದ ಮಧುರವಾಣಿ ಎಂಬುವಳಿಂದ ಸಂಸ್ಕೃತ ಭಾಷೆಗೆ ಪರಿವರ್ತಿತವಾಗಿದೆ. ಯಜ್ಞನಾರಾಯಣದೀಕ್ಷಿತನು ಶುಲ್ಬಸೂತ್ರಕ್ಕೆ ವ್ಯಾಖ್ಯಾನವನ್ನು ರಚಿಸಿದ್ದಾನೆ. ಅಪ್ಪಯ್ಯದೀಕ್ಷಿತನಿಗೆ ಗ್ರಂಥರಚನೆಯಲ್ಲಿ ಈತನು ಸಹಾಯಮಾಡಿದಂತೆ ಪ್ರತೀತಿ ಇದೆ. 'ರಾಘವೇಂದ್ರವಿಜಯ'ದಲ್ಲಿ ಇವನು

---

[97] ಆಧಾರಗ್ರಂಥಗಳು, ಪು. ೬೭೭.

[98] ಅದೇ, ಪು. ೨೬೯.

ರಾಘವೇಂದ್ರತೀರ್ಥನೊಡನೆ ವಾದಮಾಡಿ ಪರಾಜಿತನಾಗಿ ಅವನಿಂದ ಮುದ್ರಾಂಕನ ವನ್ನು ಪಡೆದಂತೆ ಹೇಳಿದೆ.

ನಾಯಕಸಾಹಿತ್ಯದ ಒಂದು ಪ್ರಧಾನ ಲಕ್ಷಣವನ್ನು ಗಮನಿಸಿ ಮುಂದೆ ಹೊರಡುವುದು ಸೂಕ್ತವಾಗಿ ಕಾಣುತ್ತದೆ. ಆರುವೀಡು ಚಕ್ರವರ್ತಿಗಳ ಪ್ರತಿನಿಧಿ ಗಳು—ಅವರ ರಾಜಕೀಯ ಪ್ರಗತಿಯು ಹೇಗೆಯೇ ಇರಲಿ—ಸಾಹಿತ್ಯಕ್ಕೆ ತಮ್ಮ ಅಧಿನಾಯಕರಂತೆಯೇ ವಿಶೇಷ ಪ್ರೋತ್ಸಾಹವಿತ್ತರು. ರಾಜಕೀಯ ಅವನತಿಯೊಡನೆ ಸಾಮಾಜಿಕ ಅವನತಿಯೂ ಕಾಲಿಟ್ಟಿತು. ನಾಯಕರ ಆಸ್ಥಾನವು ಕಾಮಪಿಪಾಸಿ ಗಳಾದ ವೇಶ್ಯಾಸ್ತ್ರೀಯವರ ಕೇಂದ್ರವಾಯಿತು. ಅವರ ಸಹವಾಸದಲ್ಲಿ ನಾಯಕರು ಶೃಂಗಾರಮಗ್ನರಾದರು. ಶಾರೀರಕಸೌಖ್ಯವೇ ಅವರ ಧ್ಯೇಯರತ್ನವಾಯಿತು— ಸಾಹಿತ್ಯ ಜೀವನದ ಪ್ರತಿಬಿಂಬ—ನಾಯಕರು ನೇತ್ರ ತೃಪ್ತಿಗಾಗಿ ಅನೇಕ ದೃಶ್ಯ ಕಾವ್ಯ ಗಳಿಗೆ ಪ್ರೇರಕರಾದರು. ಅನೇಕ ಯಕ್ಷಗಾನ, ಕೊರವಂಜಿ, ಜಕ್ಕನಗಳು ನಾಯಕರ ಆಸ್ಥಾನಪಂಡಿತರಿಂದ ರಚಿತವಾದುವು. ಇವು ದೃಶ್ಯವಿವರ, ಸಂಭಾಷಣೆ ಮೊದಲಾ ದುವುಗಳಿಂದ ಕೂಡಿ ನಾಟಕಗಳಂತೆಯೇ ಮನರಂಜಕವಾಗಿವೆ. ಆದುದರಿಂದ ನಾಯಕ ಸಾಹಿತ್ಯದ ಪ್ರಧಾನಭಾಗ ಯಕ್ಷಗಾನ. ಸಾಮಾನ್ಯ ಮನುಷ್ಯರಿಗಾಗಿ ಬರೆಯ ಲ್ಪಟ್ಟುದರಿಂದ ಇವು ಸರಳವಾಗಿಯೂ ಸುಲಭವಾಗಿಯೂ ಇವೆ. ರಘುನಾಥನಾಯಕ ನೊಬ್ಬನೇ ಇನ್ನೂರಕ್ಕಿಂತ ಹೆಚ್ಚಿನ ಯಕ್ಷಗಾನಗಳನ್ನು ರಚಿಸಿರುವಂತೆ ಪ್ರತೀತಿ ಇದೆ. ಈ ಯಕ್ಷಗಾನಗಳ ವಸ್ತು ಕಾಮಶೃಂಗಾರ;—ದಾಂಪತ್ಯತೀತ ಪ್ರೇಮವೇ ಸಾಮಾನ್ಯವಸ್ತು. 'ರಾಧಾಮಾಧವ' 'ತಾರಾಶಶಾಂಕ' 'ಇಂದ್ರ ಅಹಲ್ಯ', 'ಅಹಲ್ಯಾ ಸಂಕ್ರಂದನ'—ಇವು ಕೆಲವು ಉದಾಹರಣೆಗಳು. ಸ್ವರಮೇಳನವೂ ಸರಳತೆಯೂ ಅವು ಗಳ ವೈಶಿಷ್ಟ್ಯ. ತಂಜಾವೂರು ಮಾರ್ಗದಲ್ಲಿ ಸ್ವರಮೇಳನಕ್ಕೂ, ಮಧುರೆಯ ಮಾರ್ಗ ದಲ್ಲಿ ಗದ್ಯರಚನೆಯ ಕಡೆಗೂ ಹೆಚ್ಚು ಗಮನ ಕೊಟ್ಟಂತೆ ಕಾಣುತ್ತದೆ. ಚರಕೂರು ವೆಂಕಟಕವಿ, ವೆಂಕಟಕೃಷ್ಣನಾಯಕ, ವಿಜಯರಂಗ, ಚೊಕ್ಕನಾಥ, ಅನಂತಭೂಪಾಲ ಇವರು ಈ ಮಾರ್ಗಗಳಲ್ಲಿ ಪ್ರಸಿದ್ಧರು. ಜಾತಿ ಮತ ಲಿಂಗಭೇದಗಳಿಲ್ಲದೆ ಎಲ್ಲರನ್ನೂ ಕಾವ್ಯರಚನೆಗೆ ಆಕರ್ಷಿಸುವುದು ಈ ಯಕ್ಷಗಾನಗಳ ವೈಶಿಷ್ಟ್ಯ.

ಹೀಗೆಂದ ಮಾತ್ರಕ್ಕೆ ನಾಯಕರ ಅಧೀನದಲ್ಲಿ ಪ್ರಾಚೀನ ಸಂಪ್ರದಾಯವರ್ಗಕ್ಕೆ ಆಶ್ರಯವಿರಲಿಲ್ಲವೆಂದರ್ಥವಲ್ಲ. ಅನೇಕ ವಿದ್ವಾಂಸರು ನಾಯಕರಿಂದ ಪ್ರತ್ಯಕ್ಷ ವಾಗಿಯೂ ಪರೋಕ್ಷವಾಗಿಯೂ ಸಹಾಯಪಡೆದು ವಿವಿಧರೀತಿಯ ಗ್ರಂಥಗಳನ್ನು ರಚನೆ ಮಾಡಿದ್ದಾರೆ. ಧರ್ಮರಾಜಾಧ್ವರಿಯ ಪುತ್ರ ರಾಮಕೃಷ್ಣ ('ವೇದಾಂತ ಶಿಖಾಮಣಿ, ನ್ಯಾಯಶಿಖಾಮಣಿ') ವೈದ್ಯನಾಥದೀಕ್ಷಿತ (ಸ್ಮೃತಿ ಮುಕ್ತಾಫಲ,

ರಾಮಾಯಣದೀಪಿಕಾ) ಶಿವರಾಮ (ಸ್ಮೃತಿ ಮುಕ್ತಾಫಲ) ಚೊಕ್ಕನಾಥ (ಶಬ್ದ ಕೌಮುದಿ, ಭಾಷ್ಯರತ್ನಾವಳಿ) ರಂಗನಾಥ (ಮಂಜರೀಮಕರಂದ) ಸಲ್ಲದೀಕ್ಷಿತ (ಸುಭದ್ರಾಪರಿಣಯ, ಶೃಂಗಾರ ಸರ್ವಸ್ವಾಭರಣ, ಅದ್ವೈತ ರಸಮಂಜರಿ, ಸವ್ಯಾಖ್ಯಾ ಪರಿಮಳ) ಇಕ್ಕೇರಿ ಅಪ್ಪಶಾಸ್ತ್ರಿ (ಪ್ರಾಯಶ್ಚಿತ್ತದೀಪಿಕಾ, ಉಪಗ್ರಂಥದೀಪಿಕಾ) ನಿಲಕಂಠದೀಕ್ಷಿತ, (ನೀಲಕಂಠವಿಜಯ ಚಂಪು, ಕಲಿವಿಡಂಬನಂ, ನಳಚರಿತ್ರ ನಾಟಕಂ, ಶಿವಲೀಲಾರ್ಣವಂ, ಗಂಗಾವತರಣಕಾವ್ಯಂ) ಯಜ್ಞನಾರಾಯಣದೀಕ್ಷಿತ (ಸಾಹಿತ್ಯ ರತ್ನಾಕರಂ) ರಾಮಭದ್ರದೀಕ್ಷಿತ (ಜಾನಕೀಪರಿಣಯ ನಾಟಕಂ, ಶೃಂಗಾರತಿಲಕ ಭಾಣಂ, ಪರಿಭಾಷಾವೃತ್ತಿವ್ಯಾಖ್ಯಾನಂ, ಷಡ್ದರ್ಶನ ಸಿದ್ಧಾಂತಸಂಗ್ರಹಂ, ಪತಂಜಲಿ ಚರಿತ್ರಕಾವ್ಯಂ, ಆಚಾರ್ಯ ಸ್ತವರಾಜ ಭೂಷಣಂ, ರಾಮಸತ್ವಕರ್ಣರಸಾಯನಂ, ವಿಶ್ವಗರ್ಭಸ್ತವಂ, ಪ್ರಸಾದತೂಣೀರಚಾಪಬಾಣಸ್ತವಂ) ರಾಮನಾಥಮಖಿ, ನರಹರಿ ಯಧ್ವರಿ, ಪೆರಿಯಪ್ಪಕವಿ (ಶೃಂಗಾರಮಂಜರೀ ಸಹರಾಜೀಯಂ) ಯಜ್ಞೇಶ್ವರದೀಕ್ಷಿತ, ಶ್ರೀನಿವಾಸಮಖಿ, ಭಾಸ್ಕರದೀಕ್ಷಿತ (ಕೃಷ್ಣಾನಂದ ಸರಸ್ವತಿಯ ಸಿದ್ಧಾಂತ ಸಿದ್ಧಾಂಜ ನಕ್ಕ ರತ್ನತೂಲಿಕಾವ್ಯಾಖ್ಯಾ) ವೆಂಕಟಕೃಷ್ಣ (ನಟೇಶವಿಜಯ ಕಾವ್ಯಂ, ರಾಮ ಚಂದ್ರೋದಯಕಾವ್ಯಂ, ಉತ್ತರಚಂಪು, ಕುಶಲವವಿಜಯ ನಾಟಕಂ) ವೇದಕವಿ (ಜೀವಾನಂದ ನಾಟಕಂ, ವೈದ್ಯಪರಿಣಯ ನಾಟಕಂ) ಆನಂದರಾಜಮಖಿ (ಆಶ್ವಲಾಯನ ಗೃಹ್ಯಸೂತ್ರವೃತ್ತಿ) ಮಹದೇವಕವಿ (ಅದ್ಭುತದರ್ಪಣ ನಾಟಕಂ, ಶುಕಸಂದೇಶಂ) ಮಹ ದೇವ ವಾಜಪೇಯಿ (ಶ್ರೌತಸೂತ್ರ ಸುಬೋಧಿನಿ) ಸುಧಾರವೆಂಕಟೇಶ (ಸೊಹೇಂದ್ರ ವಿಲಾಸಕಾವ್ಯಂ) ಶಿವಭಕ್ತಿಕಲ್ಪಟೀಕಾ, ಶಿವಭಕ್ತಿಲಕ್ಷಣಂ, ದಯಾಶತಕಂ, ಮಾತೃ ಭೂತ ಶತಕಸ್ತುತಿಪದ್ಧತಿ, ಆಖ್ಯಾಷಷ್ಠಿ, ತಾರಾವಳೀಸ್ತೋತ್ರಂ, ಆರ್ತಿಹರ ಸ್ತೋತ್ರಂ, ದೋಲಾರ್ಣವ ರತ್ನಮಾಲಿಕಾ, ಕುಲಿಶಾಷ್ಟಕಂ. ಸಾಮವೇದ ವೆಂಕಟೇಶ ಶಾಸ್ತ್ರಿ (ಉಪಗ್ರಂಥಭಾಷ್ಯಂ) ಮಾಯವರಂ ಅಪ್ಪಾಧ್ವರಿ (ಆಚಾರನವನೀತಂ, ಮದನಭೂಷಣಭಾಣಂ, ಗೌರೀಮಯೂರಚಂಪು) ಶ್ರೀನಿವಾದೀಕ್ಷಿತ (ಸ್ವರಸಿದ್ಧಾಂತ ಚಂದ್ರಿಕಾ) ವೆಂಕಟೇಶ್ವರ ಕವಿ (ಉಣಾದಿ ನಿಘಂಟು) ಭೂಮಿನಾಥ (ಧರ್ಮವಿಜಯ) ಚಂಪು) ವೈದ್ಯನಾಥ (ಪರಿಭಾಷಾರ್ಥಸಂಗ್ರಹಂ) ಮೊದಲಾದವರು ಬಹುಮುಖವಾಗಿ ಗ್ರಂಥರಚನೆ ಮಾಡಿ ಸಾಹಿತ್ಯಪ್ರಪಂಚವನ್ನು ಸುಪುಷ್ಟವನ್ನಾಗಿ ಮಾಡಿದ್ದಾರೆ.

ಮಧುರೆ ನಾಯಕರ ನೇತೃತ್ವದಲ್ಲಿಯೂ ಸಾರಸ್ವತಪ್ರಪಂಚವು ಬಹು ಅಭಿವೃದ್ಧಿ ಯನ್ನು ಪಡೆಯಿತು. ಪ್ರಸಿದ್ಧವೂ ಪ್ರಾಚೀನಕಾಲದಿಂದ ಬೆಳೆದುಬಂದವೂ ಆದ ತಮಿಳು ಸಂಘಗಳು ಪಾಂಡ್ಯರ ರಾಜಧಾನಿಗೆ ಅನೇಕ ಗುರುಶಿಷ್ಯರನ್ನು ಆಕರ್ಷಿಸು ತ್ತಿದ್ದವು. ಅವುಗಳನ್ನು ಪ್ರತ್ಯಕ್ಷ ನೋಡಿದ್ದ ಫಾ. ಡಿ. ನೊಬಲಿಯೆಂಬ ವಿದೇಶಿಯ

ಪ್ರವಾಸಿಯು ೧೬೧೦ ರಲ್ಲಿ ಹತ್ತು ಸಾವಿರಕ್ಕೆ ಕಡಿಮೆಯಿಲ್ಲದಷ್ಟು ವಿದ್ಯಾರ್ಥಿಗಳೂ ಅವರಿಗೆ ಸಾಕಾದಷ್ಟು ಉಪಾಧ್ಯಾಯರೂ ಈ ಸಂಘಗಳಲ್ಲಿದ್ದರೆಂದೂ, ವಿದ್ಯಾರ್ಥಿಗಳು ತಮಗೆ ಬೇಕಾದ ಆಚಾರ್ಯರನ್ನು ಆರಿಸಿಕೊಂಡು ಪಾಠಪ್ರವಚನಗಳನ್ನು ನಡಸಿ ಸಂಘಗಳಿಂದ ಪ್ರಶಸ್ತಿಗಳನ್ನು ಪಡೆಯುತ್ತಿದ್ದರೆಂದೂ, ಅಲ್ಲಿ ನ್ಯಾಯ, ವೇದಾಂತ, ಬ್ರಹ್ಮವಿದ್ಯೆ, ಧರ್ಮಶಾಸ್ತ್ರಗಳ ವ್ಯಾಸಂಗವು ಪ್ರಧಾನವಾಗಿತ್ತೆಂದೂ, ಇಮ್ಮಡಿ ವೆಂಕಟಪತಿರಾಯನೂ ಮಧುರೆಯ ನಾಯಕನಾದ ಮುತ್ತುಕೃಷ್ಣಪ್ಪನೂ ಈ ಸಂಘಗಳಲ್ಲಿರುವ ವಿದ್ಯಾರ್ಥಿ ಮತ್ತು ಉಪಾಧ್ಯಾಯರುಗಳ ಅನ್ನವಸತಿ ಗ್ರಂಥಸೌಕರ್ಯಗಳಿಗೆ ಯಾವ ಕೊರತೆಯೂ ಇಲ್ಲದಂತೆ ಗ್ರಾಮಭೂಮಿಗಳನ್ನು ದಾನಮಾಡಿರುವರೆಂದೂ ಹೇಳಿದ್ದಾನೆ. ನೊಬಿಲಿಯ ವಿವರಣೆಯನ್ನು ನೋಡಿದರೆ ಅವು ಈಗಿನ ಯಾವ ವಿಶ್ವವಿದ್ಯಾನಿಲಯಗಳಿಗೂ ಕಡಿಮೆಯಾಗಿರಲಿಲ್ಲವೆಂದೂ ಅಷ್ಟು ಸಂಖ್ಯೆಯ ವಿದ್ಯಾರ್ಥಿಗಳನ್ನು ಉಳ್ಳ ವಿಶ್ವವಿದ್ಯಾನಿಲಯಗಳು ಈಗಲೂ ಬಹಳವಿರಲಾರದೆಂದೂ ಊಹಿಸಬಹುದಾಗಿದೆ.

ವೆಂಕಟಪತಿರಾಯನ ಇತರ ಅಧೀನರಾಜರುಗಳಲ್ಲಿ ಜಿಂಜಿಯ ಸೂರಪ್ಪನಾಯಕನು ಶ್ರೀನಿವಾಸದೀಕ್ಷಿತನೆಂಬ ಕವಿಗೆ ಪೋಷಕನಾಗಿದ್ದು ಅವನ ಕವಿತಾಪ್ರೌಢಿಮೆಗೆ ಮೆಚ್ಚಿ ಅವನಿಗೆ 'ರತ್ನಖೇಟ' ದೀಕ್ಷಿತನೆಂಬ ಬಿರುದನ್ನು ಕೊಟ್ಟನು. ಶ್ರೀನಿವಾಸದೀಕ್ಷಿತನು 'ಭಾವನಾಪುರುಷೋತ್ತಮ'ವೇ ಮೊದಲಾದ ಹದಿನೆಂಟು ನಾಟಕಗಳನ್ನು 'ಶತಖಂಡವಿಜಯ'ವೇ ಮೊದಲಾದ ಅರವತ್ತು ಪುರಾಣಗಳನ್ನು ಅನೇಕ ಪ್ರಾಚೀನಗ್ರಂಥಗಳಿಗೆ ವ್ಯಾಖ್ಯಾನಗಳನ್ನೂ ಕೆಲವು ಅಲಂಕಾರಗ್ರಂಥಗಳನ್ನು ರಚಿಸಿದ್ದಾನೆ.[99]

ಈ ಕಾಲದಲ್ಲಿ ತಿರುಮಲರಾಯನು ಶ್ರೀರಂಗಪಟ್ಟಣಕ್ಕೆ ಅಧಿಪತಿಯಾಗಿದ್ದನು. ಇವನ ೧೬೧೦ ನೆಯ ವರ್ಷದ ಶಾಸನವೊಂದರಿಂದ ವೇದಮಾರ್ಗ ಪ್ರತಿಷ್ಠಾಪನಾಚಾರ್ಯನಾದ ರಾಮಾನುಜಯ್ಯನೆಂಬುವನು ಇವನ ಅಧಿಕಾರಿಗಳಲ್ಲೊಬ್ಬನಾಗಿದ್ದಂತೆ ಊಹಿಸಬಹುದು.[100] ೧೬೧೪ ರಲ್ಲಿ ತಿರುಮಲರಾಯನು ವೇದಮಾರ್ಗಪ್ರತಿಷ್ಠಾಪನಾಚಾರ್ಯನಾದ ವೆಂಕಟಯ್ಯಭಟ್ಟನೆಂಬುವನಿಗೆ ಒಂದು ಗ್ರಾಮವನ್ನು ಕೊಟ್ಟಿದ್ದಾನೆ. ಕನ್ನಡ 'ಚೆನ್ನಬಸವಪುರಾಣ' ಕರ್ತೃವಾದ ವಿರೂಪಾಕ್ಷಪಂಡಿತನೂ ತಿರುಮಲರಾಯನ ಆಳ್ವಿಕೆಯಲ್ಲಿ ಗ್ರಂಥರಚನೆ ಮಾಡಿದನು.

ಕೆಳದಿ ಮನೆತನವೂ ಸಾಹಿತ್ಯಸೇವೆಯಲ್ಲಿ ಹಿಂದಾಗಿಲ್ಲ. ತಾವು ವೀರಶೈವ ಪಂಥದವರೇ ಆದರೂ ಇತರ ಮತಗಳಲ್ಲಿ ಅವರಿಗಿದ್ದ ಸಹಾನುಭೂತಿಯು ಶಾಸನಗಳಿಂದ

---

99 ತಂಜಾವೂರು ನಾಯಕರ ಸಂಕ್ಷಿಪ್ತಚರಿತ್ರೆ, ಪು. ೭-೧೦.

100 ಎ.ಕ. ಸಂ. ೪, ವಂ ೪೦.

ಪ್ರಸಿದ್ಧವಾಗಿದೆ. ಅವರು ಶೃಂಗೇರಿಮಠಕ್ಕೆ ಅಚ್ಚಿನ್ನಭಕ್ತರಾಗಿದ್ದು ಆ ಮಠಕ್ಕೆ ಕೊಡುಗೈಯಿಂದ ದಾನಮಾಡಿದ್ದಾರೆ. 'ವಿಶುದ್ಧ ವೈದಿಕಾದ್ವೈತ ಸಿದ್ಧಾಂತಪ್ರತಿಷ್ಠಾಪಕ'ರೆಂಬ ಬಿರುದನ್ನು ವಹಿಸಿದ್ದಾರೆ. ಶೃಂಗೇರಿಯಲ್ಲಿರುವ ಶಕ ೧೫೪೨ ನೆಯ ವರ್ಷದ ಶಾಸನವೊಂದು ವೆಂಕಟಪ್ಪನಾಯಕನಿಂದ ಶೃಂಗೇರಿಯು ಪುನಃ ಪ್ರತಿಷ್ಠಿತವಾಯಿತೆಂದು ಹೇಳುತ್ತದೆ. ಅಲ್ಲಿಯೇ ಇರುವ ಮತ್ತೊಂದು ಶಾಸನವು ಶಿವಪ್ಪನಾಯಕನಿಂದ ಶೃಂಗೇರಿಯ ಮಠದ ಸನ್ನದುಗಳೆಲ್ಲ ಪುನಃ ಸ್ಥಾಪಿತವಾಯಿತೆಂದು ಘೋಷಿಸುತ್ತದೆ. ಈ ಮನೆತನದವರಿಂದ ಅನೇಕ ಕೊಡಿಗೆಗಳನ್ನು ಪಡೆದ ಶಿವಮೊಗ್ಗ ಜಿಲ್ಲೆಯ ಮುಳುಬಾಗಿಲು ಮಠದ ಅದ್ವೈತಗುರುವಾದ ಸಚ್ಚಿದಾನಂದಸ್ವಾಮಿಯವರು ಸೋಮಶೇಖರನಾಯಕನ ರಾಜ್ಯಾಭಿವೃದ್ಧಿಗಾಗಿ ಶಕ ೧೫೮೮ ರಲ್ಲಿ ಭದ್ರಸಮುದ್ರವೆಂಬ ಗ್ರಾಮವನ್ನು ದಾನಮಾಡಿದ್ದಾರೆ. ಉಡಪಿ ಮತ್ತು ಕೂಡಲಿ ಮಠದವರೂ ಕೆಳದಿಯ ನಾಯಕರಿಂದ ವಿಶೇಷಸನ್ಮಾನಿತರಾಗಿದ್ದಾರೆ. ಶಕ ೧೪೯೩ ರಲ್ಲಿ ರಾಮರಾಜನಾಯಕನು ಉಡಪಿಯ ಕೃಷ್ಣದೇವರ ನಿತ್ಯಪೂಜೆಗಾಗಿ ವಾದಿರಾಜತೀರ್ಥರಿಗೆ ದಾನವನ್ನು ಕೊಟ್ಟಿದ್ದಾನೆ. ಸದಾಶಿವನಾಯಕನು ಶಿವಸಾಯುಜ್ಯವನ್ನು ಪಡೆಯಲಿ ಎಂಬ ಉದ್ದೇಶದಿಂದ ಕೊಟ್ಟ ಕೊಡಿಗೆಯಿದು. ಶಕ ೧೫೩೬ ರಲ್ಲಿ ವೇದವೇದ್ಯತೀರ್ಥರಿಂದ ಉಡಪಿಯ ಕೃಷ್ಣನು ಪುನಃ ಪ್ರತಿಷ್ಠಿತವಾದಾಗ ವೆಂಕಟಪ್ಪನಾಯಕನು ಆ ದೇವಾಲಯಕ್ಕೆ ಬಾರಕೂರು ರಾಜ್ಯದಲ್ಲಿ ಹೂವಿನಕೆರೆ ಎಂಬ ಗ್ರಾಮವನ್ನು ದಾನವಾಗಿ ಕೊಟ್ಟಿದ್ದಾನೆ; ಕೂಡಲಿಮಠದ ರಘುರಾಜತೀರ್ಥರಿಗೆ ಮುಮ್ಮಡಿ ಸೋಮಶೇಖರನಾಯಕನು ಸಾವಗೊಂಡನಹಳ್ಳಿಯೆಂಬ ಗ್ರಾಮವನ್ನು ಇತ್ತಿದ್ದಾನೆ. ಕೆಳದಿ ನಾಯಕರು ಹಿಂದೂಗಳಿಗೇ ಅಲ್ಲದೆ ಇತರ ಮತಸ್ಥರಿಗೂ ವಿಶೇಷವಾಗಿ ಸಹಾಯ ಮಾಡಿರುವರು. ಒಂದನೆಯ ವೆಂಕಟಪ್ಪನಾಯಕನು ಶಕ ೧೫೫೦ ರಲ್ಲಿ ಭುವನಗಿರಿ ದುರ್ಗದಲ್ಲಿ ಮಸೀತಿ ಕಟ್ಟಿಸಲು ಭೂದಾನಮಾಡಿರುವುದು ಇದಕ್ಕೆ ಉತ್ತಮ ಉದಾಹರಣೆ.

ವೆಂಕಟಪ್ಪನಾಯಕನು ಸ್ವತಃ 'ಶಿವಗೀತೆ'ಗೆ ಒಂದು ಸಂಸ್ಕೃತ ವ್ಯಾಖ್ಯಾನವನ್ನು ರಚಿಸಿದ್ದಲ್ಲದೆ ತಿರುಮಲಭಟ್ಟನಿಂದ ಕನ್ನಡದಲ್ಲಿ 'ಶಿವಗೀತೆ' ಮತ್ತು 'ಶಿವಾಷ್ಟಗೀತೆ' ಎಂಬ ಎರಡು ಗ್ರಂಥಗಳನ್ನು ಬರಯಿಸಿದನು. ಕ್ರಿ.ಶ. ೧೬೩೧ ರ ವೆಂಕಟಪ್ಪನಾಯಕನ ಪೌತ್ರನಾದ ವೀರಭದ್ರನ ಶಾಸನದಲ್ಲಿ ಸೂಚಿತವಾದ ಕೌಶಿಕಗೋತ್ರ, ಆಪಸ್ತಂಭ ಸೂತ್ರ ಯಜುಶ್ಶಾಖೆಯ ಅಣ್ಣಾಗಿರೆ ತೋರವಣಭಟ್ಟನ ಪುತ್ರನಾದ ತಿರುಮಲಭಟ್ಟನು ಈತನೇ ಇರಬೇಕು. ವೆಂಕಟಪ್ಪನ ಕಾಲದಲ್ಲಿಯೇ ರಂಗನಾಥ ದೀಕ್ಷಿತನು 'ತಂತ್ರಸಾರ'ಕ್ಕೆ ವ್ಯಾಖ್ಯಾನವನ್ನು ರಚಿಸಿದನು. ಆಸ್ಥಾನಪಂಡಿತನಾದ

ಅಶ್ವಪಂಡಿತನು ‘ಮಾನಸ್ತ್ರೀಯ’ವೆಂಬ ಅಶ್ವಶಾಸ್ತ್ರವನ್ನು ರಚಿಸಿದನು. ವಿಶಿಷ್ಟಾದ್ವೈತ ವಿದ್ವಾಂಸನಾದ ರಾಮಾನುಜಯ್ಯಂಗಾರ್ಯನಿಗೆ ಈ ನಾಯಕರಿಂದ ವಿಶೇಷ ಗೌರವಸಲ್ಲುತ್ತಿದ್ದಿತು. ಮುಂದೆ ಚೆನ್ನಮ್ಮಾಜಿಯ ಸ್ವೀಕೃತ ಪುತ್ರನಾದ ಬಂದನೆಯ ಬಸವಪ್ಪನಾಯಕನು ‘ಶಿವತತ್ತ್ವ ರತ್ನಾಕರ’ ‘ಸಂಸ್ಕೃತ ಸುಭಾಷಿತ ಸುರದ್ರುಮ’ ‘ಕನ್ನಡ ಸುಧಾಕರ’ಗಳನ್ನು ರಚಿಸಿದನು. ಅನೇಕ ಕನ್ನಡ ಗೀತೆಗಳ ಕರ್ತೃವಾದ ಭಟ್ಟಕಳ್ಳಿನ ಅಪ್ಪಯ್ಯನು ಈತನ ಆಶ್ರಿತನಿರುವನು. ಇಮ್ಮಡಿ ಸೋಮಶೇಖರನ ಮಂತ್ರಿಯಾದ ನಿರ್ವಾಣಯ್ಯನು ‘ಶಿವಪೂಜಾವಿಧಾನ’ವೆಂಬ ಆಗಮಗ್ರಂಥವನ್ನು ರಚಿಸಿದ್ದಾನೆ. ಹೀಗೆ ಕೆಳದಿಯ ನಾಯಕರು ಸ್ವಯಂಸಾಹಿತಿಗಳಾಗಿ ಸಾಹಿತ್ಯಪ್ರೇಮಿಗಳೂ ಆಗಿ ಕೆಲಸಮಾಡಿದ್ದಾರೆ.

ವೆಂಕಟಪತಿರಾಯನ ತರುವಾಯ ಬಂದ ರಾಜರು ಚಕ್ರಾಧಿಪತ್ಯವನ್ನು ಮಾಡುವಷ್ಟು ಶಕ್ತರಾಗಿರಲಿಲ್ಲ. ಅವರ ದುರ್ಬಲತೆಯನ್ನು ನೋಡಿ ಅಧಿರಾಜರಲ್ಲನೇಕರು ದಂಗೆಯೆದ್ದು ಸ್ವತಂತ್ರರಾದರು. ಉತ್ತರದ ಕಡೆಯಿಂದ ಗೋಲ್ಕೊಂಡ ಮತ್ತು ಬಿಜಾಪುರದ ಸುಲ್ತಾನರು ವಿಜಯನಗರ ಸಾಮ್ರಾಜ್ಯದ ಅನೇಕ ಭಾಗಗಳನ್ನು ಆಕ್ರಮಿಸಿದರು. ದಕ್ಷಿಣ ಮತ್ತು ಪಶ್ಚಿಮ ಭಾಗಗಳಲ್ಲಿ ಶಿವಾಜಿಯ ತಂದೆಯಾದ ಷಾಹಜಿಯು ಸ್ವಲ್ಪಸ್ವಲ್ಪವಾಗಿ ಆಕ್ರಮಿಸಿ ಮಹಾರಾಷ್ಟ್ರ ಸಾಮ್ರಾಜ್ಯಕ್ಕೆ ಅಡಿಗಲ್ಲನ್ನು ಹಾಕಿದನು. ಮಧುರೆಯ ನಾಯಕರು ಸ್ವತಂತ್ರರಾದರು. ರಾಜಒಡೆಯರ ಕಾಲದಲ್ಲಿಯೇ ಪ್ರಬಲವಾಗಲು ಪ್ರಾರಂಭವಾಗಿದ್ದ ಮೈಸೂರು ಸಂಸ್ಥಾನವು (ಶ್ರೀರಂಗಪಟ್ಟಣ) ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಪೂರ್ಣ ಬಲಿಷ್ಠವಾಗಿ ವಿಜಯನಗರದ ರಾಜರನ್ನು ಸೋಲಿಸಿ ಉಳಿದಿದ್ದ ಅಲ್ಪಸ್ವಲ್ಪ ರಾಜ್ಯವನ್ನು ಅವರಿಂದ ಕಸಿದುಕೊಂಡಿತು. ಇವುಗಳ ಫಲವಾಗಿ ವಿಜಯನಗರ ಸಾಮ್ರಾಜ್ಯವು ಹದಿನೇಳನೆಯ ಶತಮಾನದ ಅಂತ್ಯಭಾಗದಲ್ಲಿ ಪೂರ್ಣವಾಗಿ ಕೊನೆಗೊಂಡಿತು. ಆದುದರಿಂದ ವಿಜಯನಗರದ ಸಾಹಿತ್ಯ ಚರಿತ್ರೆಯೂ ವೆಂಕಟಪತಿರಾಯನೊಂದಿಗೆ ಕೊನೆಗೊಂಡಿತೆಂದರೆ ತಪ್ಪಾಗಲಾರದು.

ಕೊನೆಯಲ್ಲಿ ವಿಜಯನಗರ ಸಾಮ್ರಾಜ್ಯದ ಮುನ್ನೂರು ವರ್ಷದ ಸಾಹಿತ್ಯ ಚರಿತ್ರೆಯನ್ನು ಸಿಂಹಾವಲೋಕನ ಕ್ರಮದಿಂದ ನೋಡಿದರೆ ದಕ್ಷಿಣ ಭಾರತದ ಸಾಹಿತ್ಯಚರಿತ್ರೆಯಲ್ಲಿ ವಿಜಯನಗರದ ಸ್ಥಾನವು ವಿಶದವಾಗುವುದು. ವಿಜಯನಗರ ಸಾಮ್ರಾಜ್ಯವು ದಕ್ಷಿಣದಲ್ಲಿ ಹಿಂದಿನಿಂದ ನಡೆದುಕೊಂಡು ಸುಮಾರು ಹದಿಮೂರು ಹದಿನಾಲ್ಕನೆಯ ಶತಮಾನಗಳಲ್ಲಿ ಮುಹಮ್ಮದೀಯರೆಂಬ ಬಡಬಾಗ್ನಿಯಿಂದ ನಂದಿ ಹೋಗುತ್ತಿದ್ದ ಸಾಹಿತ್ಯಪ್ರವಾಹವನ್ನು ಪುನಃ ಸಮೃದ್ಧವನ್ನಾಗಿ ಮಾಡಿ ಪೂರ್ವ

ಸ್ಥಿತಿಗೆ ತಂದಿತು. ರಾಜರ ಪೂರ್ಣವಾದ ಆಶ್ರಯದಿಂದ ಸಂಸ್ಕೃತ ಮತ್ತು ದೇಶಭಾಷಾಸಾಹಿತ್ಯಗಳು ನಾನಾಮುಖವಾಗಿ ಅಭಿವೃದ್ಧಿಯಾದವು. ಅನೇಕ ಸಂಸ್ಕೃತ ಗ್ರಂಥಗಳಿಗೆ ವ್ಯಾಖ್ಯಾನಗಳೂ ಭಾಷಾಂತರಗಳೂ ರಚಿತವಾದುವು. ದೇಶಭಾಷೆಗಳಲ್ಲಿ ಹೊಸಮಾರ್ಗಗಳು ಸ್ಥಾಪಿತವಾಗಿ ವೈವಿಧ್ಯಗಳುಂಟಾದುವು. ವೀರರ ವಿಷಯಕವಾದ ಅನೇಕ ಗ್ರಂಥಗಳು ಚರಿತ್ರೆಗಳನ್ನು ಬರೆಯಲು ಅನುಕೂಲವನ್ನುಂಟುಮಾಡಿದವು. ಹಿಂದಿನಿಂದ ಅನೂಚಾನವಾಗಿ ನಡೆದುಬಂದ ಸಂಗೀತ, ಚಿತ್ರ, ಶಿಲ್ಪಕಲೆಗಳಲ್ಲಿ ಸಂಶೋಧನೆಗಳು ನಡೆದು ಆ ವಿಷಯವಾಗಿ ಅನೇಕ ಗ್ರಂಥಗಳು ರಚಿತವಾದುವು. ಒಂದು ಮಾತಿನಲ್ಲಿ ಹೇಳುವುದಾದರೆ ಭಾರತೀಯನ ಬದುಕಿಗಾಗಿ ಆವಶ್ಯಕವಾದ ಎಲ್ಲ ಜಾತಿಯ ಗ್ರಂಥಗಳೂ ರಚಿತವಾದುವು. ಒಂದು ವೇಳೆ ವಿಜಯನಗರ ಸಾಮ್ರಾಜ್ಯವು ಸ್ಥಾಪಿತವಾಗದಿದ್ದರೆ ಸಾಹಿತ್ಯಸಾಮ್ರಾಜ್ಯಕ್ಕೆ ಬಹುಮಟ್ಟಿಗೆ ನಷ್ಟವಾಗುತ್ತಿತ್ತೆಂಬುದರಲ್ಲಿ ಸಂದೇಹವಿಲ್ಲ. ಸಾಮ್ರಾಜ್ಯದ ಆಶ್ರಯದಲ್ಲಿ ಅಭಿವೃದ್ಧವಾದ ಸಾಹಿತ್ಯರಾಶಿಯು ಆ ಚಕ್ರಾಧಿಪತ್ಯವನ್ನು ಎಂದೂ ಮರೆಯಲಾಗದ ಸಾಮ್ರಾಜ್ಯವನ್ನಾಗಿ ಮಾಡಿದೆ.

ಓಂ ತತ್ಸತ್

ಎನ್. ಅನಂತರಂಗಾಚಾರ್

ಸಂಕೇತಗಳು ಮತ್ತು ಪ್ರಮಾಣಗ್ರಂಥಗಳು

೧. ಕ. ಚ. ಕರ್ಣಾಟಕ ಕವಿಚರಿತ್ರೆ (ಮೂರು ಸಂಪುಟಗಳು)—ರಾ|| ಆರ್. ನರಸಿಂಹಚಾರ್ಯರಿಂದ.

೨. ಪ್ರಪನ್ನಾಮೃತಂ.

೩. ವೈಭವಪ್ರಕಾಶಿಕೆ.

೪. ಗುರುಪರಂಪರಾಪ್ರಭಾವಂ.

೫. ವೇದಾಂತದೇಶಿಕ ಸ್ತೋತ್ರರತ್ನಾವಳಿ.

೬. ಕೋಯಿಲುಲುಹು.

೭. ವೇದಾಂತದೇಶಿಕರೂ ಮತ್ತು ಅವರ ಗ್ರಂಥಗಳು—ಎನ್. ಅನಂತರಂಗಾಚಾರ್ಯರಿಂದ.

೮. ಇಂ. ಆ. *Indian Antiquary.*

೯. ಎ. ಕ. *Epigraphica Carnatica*, 14 Vols.

೧೦. ಎಂ. ಇ. *Epigraphica Indica*, 83 Vols.

೧೧. ಹೀರಾಸ್ *The Aravndu Dynasty of Vijayanagar.*

೧೨. ಆಧಾರಗ್ರಂಥಗಳು—*Sources of Vijayanagar History* by Rao Bhadur S. Krishna Swamy Iyangar.

೧೩. ಮ. ಶಾ. *Madras Ephigraphical Reports*

೧೪. ಮೈ. ಶಾ. *Mysore Archaeological Reports*

(೧೩–೧೪:) ಇವುಗಳ ಕೊನೆಯ ಸಂಖ್ಯೆಯು ಅಲ್ಲಿಯ 'ಪ್ಯಾರಾ' ಅಥವಾ ವಾಕ್ಯ ಬೃಂದಸಂಖ್ಯೆಯನ್ನು ಸೂಚಿಸುತ್ತದೆ.

೧೫. ನಾಗವರ್ಮನ ಛಂದಸ್ಸು ; ಕಿಟ್ಟೆಲ್ ಅವರಿಂದ ಪರಿಷ್ಕೃತ.

೧೬. *A Short History of Tanjore Naiks* by Sri S. Kuppaswamy Sastry.

೧೭. ತೆಲು. ಸಾ. *Telugu Literature ; Heritage of India-Series :* by Chenchiah and Raja Bhujanga Rao.

೧೮. ವೀ. ಲಿಂ. ಪಂ. *Complete Works of Veereshalingam Pantulu, Vijayanagarm.*

೧೯. *Sixth Centenery Commemoration Volume* Published by The Sixth Centenery Association and Karnataka Historical Research Society—

The following Articles require special mention—

(*a*) *Krishna Devaraya and his literary circle*—Sri N. Venkata Rao.

(*b*) *Development of Sanskrit literature under Vijayanagar*—Sri S. Srikanta Sastry.

೨೦. *Studies in the Third Dynasties of Vijayanagar*—Sri Venkata Ramanayya.

ಪ್ರಕೃತಿ ಪುರುಷ

ಪುರುಷ ಗಾಳಿಯೊಡನೆ ಉಲಿದು
ಹಗಲು ಇರುಳು ಬಿಡದೆ ಸುಳಿದು
ಸೂರ್ಯಕಿರಣ ವೀಣೆ ಮಿಡಿಯೆ
ಪ್ರಕೃತಿ ಹೃದಯಸ್ಪಂದಿತ !
        ಬಗೆಯ ಆಳದೊಳಗೆ ಗಾನ
        ತಾನತೇನ, ಮಧುರಜೇನ
        ಸುರಿಯೆ, ತನ್ನ ಮರೆಯಲವನ
        ಬಾಹುಗಳಲಿ ಬಂಧಿತ !

ಸೊಗದ ಚುಕ್ಕೆವೂಗಳಾಯ್ದು
ಅವಳ ಮುಗಿಲ ಹೆಳಲ ಹಿಡಿದು
ಮೆಲ್ಲನೆತ್ತಿ ತೀಡಿ ಮುಡಿಸೆ
ಸಸ್ಯರೋಮ ಪುಲಕಿತ !
        ಹಣೆಗೆ ತಟಿಲ್ಲತೆಯ ತಿಲಕ
        ಹಚ್ಚೆ, ನಡುಗಿ ಕೇಶ ಕೆದರೆ
        ಹೋಯ್ತು ಮುಚ್ಚಿ ಅವಳು ಹಿಡಿದ
        ಹೊಳೆವ ಚಂದ್ರಗನ್ನಡಿ !

ಅರ್ಧಕಣ್ಣು ತೆರೆದು ಮುಚ್ಚೆ
ಲಜ್ಜೆ ನಿಮಿಷದೊಳಗೆ ಹೆಚ್ಚೆ
ಹೊಸತು ಆಸೆ ಮೊಗವ ಮುಚ್ಚೆ
ಚಲಿಸದಿಹಳು ತನ್ನಡಿ !
        ಇಂದ್ರಚಾಪವರ್ಣದಲ್ಲಿ
        ಸೊಬಗ ಸೋಗೆ ಚೆಲುವ ಚೆಲ್ಲಿ
        ಕುಣಿಯೆ ಮಣಿಯೆ ಲಾಸ್ಯದಲ್ಲಿ
        ಅವಳ ಭಂಗಿಭೂಷಿತ !

ತನ್ನ ದಿಸೆಯ ತೋಳ ಚಾಚಿ
ಅವಳ ಮೌನವಾಗಿ ಬಾಚಿ
ಸುರಸದುಟಿಯನೊತ್ತೆನಾಚಿ
ರಾಗ ಚಿಮ್ಮೆ ಸ್ವೀಕೃತ!
ಎದೆಯ ಮಿಡಿತ ಹಿಡಿದು ಬಳಿಯೆ
ತುಳಕತೊಟ್ಟಿಲಲ್ಲಿ ಇಳಿಯೆ
ಶೂಗಿ ತೂಗಿ ಕೇಳಿಯಾಡೆ
ಅಂಗ ಅಂಗ ಹರ್ಷಿತ!

ತೊಟ್ಟ ಮಂಜುರವಿಕೆ ಸೆಳೆಯೆ
ಇಟ್ಟ ಮಿಂಚು ಪಟ್ಟಿಯುಳಿಯೆ
ಉಟ್ಟ ತಿಂಗಳುಡಿಗೆ ಕಳೆಯೆ
ಅವಳ ಮೈಯಲಂಕೃತ!
ಅರಳಿದರಳ್ಗಳಂತೆ ಹದುಳ
ಹಿಂಜಿದರಳೆಗಿಂತ ಮೃದುಲ
ಮೋಡ ಮರೆಯಶಯ್ಯೆ ಸಫಲ
ಪವಡಿಸುತಿರೆ ಸೂಸಿತ;

ದೇಹದಾದಿ ಅಂತ್ಯಸ್ಪರ್ಶ
ಪ್ರೇಮಜಲವು ತುಂಬಿ, ಹರ್ಷ
ಬಾನಿನಲ್ಲಿ ಬಾಷ್ಪವರ್ಷ
ಸುರಿಯೆ, ಬುವಿಯೆ ನರ್ತಿತ!
ಕಲ್ಲುಮಣ್ಣು ತರುಲತಾದಿ
ಸಸ್ಯ ಜೀವಕೋಟಿ ಸಹಿತ!
ತೊರೆದು ಜಡತೆ, ತಳೆಯೆ ಜೀವ
ಹೊಸತು ಸೃಷ್ಟಿ ನಿರ್ಮಿತ!

ಅಂದು ಎಂದೊ ಮುತ್ತನಿಟ್ಟು
ಪುರುಷ ತನ್ನ ಒಲವ ತೊಟ್ಟು
ಪ್ರಕೃತಿಯನ್ನು ಅಗಲಿ ಬಿಟ್ಟ
ವಿರಹಿಣಿಯೀ ವಸುಮತಿ!

ಇದನು ಕಂಡ ಕವಿಯು ಭಾವ
ಎನಿತೊ ಕಾಲದಿಂದ ಜಗವ
ಸುತ್ತಿ, ಪುರುಷ ಸಿಗದೆ, ಗೆಲವು
ವಿಫಲವಾಗೆ ಪ್ರೇರಿತ!

ಮತ್ತೆ ಮತ್ತೆ ಮೇಲೆ ಕೆಳಗೆ
ಸುತ್ತು ನೋಡಲಾಗ ಈಗ
ತಾನೆ ಮೂಕನಾಗಿ ತನ್ನ
ಅಂತರದಲಿ ಈಕ್ಷಿತ!
ಅನುಭಾವದ ಭಾವರಕ್ಷೆ
ಕವಿಯು ಕೊಳ್ವ ದಿವ್ಯದೀಕ್ಷೆ
ಚೇತನದಲಿ ಮಂಥನ!
ಇದುವೆ ಕವಿಯ ದರ್ಶನ!

ದೇವೇಂದ್ರಕುಮಾರಹಕಾರಿ 'ರವಿ'

ಅರಿಸ್ಟಾಟಲಿನ ಸಾಹಿತ್ಯವಿಮರ್ಶೆ

೬

ಅರಿಸ್ಟಾಟಲಿನ ವಿಮರ್ಶಾದೃಷ್ಟಿ ಜೀವಶಾಸ್ತ್ರದ ಪ್ರಭಾವಕ್ಕೊಳಗಾಗಿದ್ದಿತು. ಯಾವ ವಸ್ತುವಾದರೂ ಸರಿ, ಅದರ ಇಂದಿನ ಸ್ಥಿತಿಯನ್ನು ಅರಿತುಕೊಳ್ಳಬೇಕಾದಲ್ಲಿ, ಅದರ ಹುಟ್ಟು, ಬೆಳವಣಿಗೆಗಳ ಪರಿಚಯ ಅವಶ್ಯವಾದದ್ದು. ಈ ತತ್ತ್ವವನ್ನು ಅರಿಸ್ಟಾಟಲ್ ಕಾವ್ಯಕ್ಕೂ ಅನ್ವಯಿಸುತ್ತಾನೆ. ಕಾವ್ಯದ ಮುಖ್ಯಲಕ್ಷಣವಾದ 'ಅನುಕರಣ' ವನ್ನು ವಿವರಿಸಿದ ಅನಂತರ, ರುದ್ರನಾಟಕದ ವಿಮರ್ಶೆಗೆ ತೊಡಗುವ ಮುನ್ನ ಗ್ರೀಕ್ ಕಾವ್ಯದ ಸಂಕ್ಷಿಪ್ತೇತಿಹಾಸವನ್ನು ಎರಡು ಅಧ್ಯಾಯಗಳಲ್ಲಿ ಹೇಳುತ್ತಾನೆ.

ಕಾವ್ಯದ ಉಗಮಕ್ಕೆ ಕಾರಣ ಮನುಷ್ಯನ ಸಹಜಗುಣವಾದ ಅನುಕರಣ ಶಕ್ತಿ ಮತ್ತು ಅನುಕೃತವಸ್ತುಗಳಲ್ಲಿ ಅವನ ಸ್ವಾಭಾವಿಕವಾದ ಪ್ರೀತಿ. ಪ್ರಕೃತಿ ದತ್ತವಾದ ಈ ಶಕ್ತಿಯನ್ನು ಸ್ವಶಕ್ತಿಗಳಿಗನುಸಾರವಾಗಿ ಕ್ರಮವಾಗಿ ಬೆಳೆಸುತ್ತಾ ಕೆಲವು ವ್ಯಕ್ತಿಗಳು ಕಾವ್ಯದ ಆದ್ಯಕೃತಿಗಳನ್ನು ರಚಿಸಿದರು. ಅನಂತರ ಕವಿಗಳ ವ್ಯಕ್ತಿತ್ವಕ್ಕನುಸಾರವಾಗಿ ಕಾವ್ಯವಾಹಿನಿ ದ್ವಿಮುಖವಾಗಿ ಕವಲೊಡೆಯಿತು. ಗಂಭೀರ ಪ್ರಕೃತಿಯ ಕವಿಗಳು ಉದಾತ್ತಚರಿತಗಳನ್ನು ಮತ್ತು ಉದಾತ್ತರ ಚರಿತಗಳನ್ನು ಅನುಕರಿಸಿದರು; ದೇವತೆಗಳ ಸ್ತೋತ್ರಗಳನ್ನು ಮತ್ತು ಮಹದ್ವ್ಯಕ್ತಿಗಳ ಗುಣಗಾನವನ್ನು ಮಾಡಿದರು. ಸಾಧಾರಣ ಪ್ರಕೃತಿಯ ಕವಿಗಳು ಸಾಮಾನ್ಯರ ಚರಿತಗಳನ್ನು ಅನುಕರಿಸಿ, ವಿಡಂಬನೆಗಳನ್ನು ಬರೆದರು. ಈ ಎರಡು ಕಾವ್ಯಮಾರ್ಗಗಳಿಗೆ ಅನುರೂಪವಾದ ಶೈಲಿ, ಛಂದಸ್ಸುಗಳು ಕೂಡ ರಚಿತವಾದುವು. ಪ್ರಚಲಿತ ಸಾಹಿತ್ಯದಲ್ಲಿನ ವಿಡಂಬನೆಗಳಾವುವೂ ಹೋಮರನಿಗಿಂತ ಪ್ರಾಚೀನಗಳಲ್ಲವೆಂದು ಅರಿಸ್ಟಾಟಲ್ ನಿರ್ಧರಿಸುತ್ತಾನೆ. ಗಂಭೀರ ಶೈಲಿಯಲ್ಲಿ ಆದರ್ಶನಾದ ಹೋಮರನೇ ತನ್ನ ಮಾರ್ಗೈಟಿಸ್ ಕಾವ್ಯದಲ್ಲಿ ವೈನೋದಿಕದ ಮುಖ್ಯರೂಪವನ್ನು ಒದಗಿಸಿದನು. ರುದ್ರನಾಟಕ, ವೈನೋದಿಕಗಳು ಬೆಳಕಿಗೆ ಬಂದಮೇಲೂ, ಈ ಎರಡು ರೀತಿಯ ಕವಿಗಳು ತಮ್ಮ ಸ್ವಭಾವಕ್ಕನುಸಾರವಾಗಿ ಬರೆಯತೊಡಗಿದರು. ವಿಡಂಬನ ಕವಿಗಳು ವೈನೋದಿಕಗಳನ್ನು ಬರೆದರು; ಮಹಾಕಾವ್ಯವನ್ನು ಬರೆಯುತ್ತಿದ್ದವರು ರುದ್ರನಾಟಕಕಾರರಾದರು.

ಡಿಥಿರಾಂಬ್ ಎಂಬ ಆವೇಶಗೀತಗಳ ರಚಯಿತಾರರೇ ರುದ್ರನಾಟಕದ

ಪ್ರವರ್ತಕರಾದರು. ಅನಂತರ ರುದ್ರನಾಟಕ ಕ್ರಮವಾಗಿ ಮುಂದುವರೆದು, ಹೊಸ ಗುಣಗಳನ್ನು ಒಳಗೊಳ್ಳುತ್ತಾ, ರೂಪವ್ಯತ್ಯಾಸಗಳನ್ನು ಹೊಂದುತ್ತಾ, ಕೊನೆಗೆ ತನ್ನ ಸ್ವಾಭಾವಿಕವಾದ ಆಕೃತಿಯನ್ನು ತಾಳಿ, ಅಲ್ಲಿ ತನ್ನ ಬೆಳವಣಿಗೆಯನ್ನು ನಿಲ್ಲಿಸಿತೆಂದು ಅರಿಸ್ಟಾಟಲ್ ಅಭಿಪ್ರಾಯಪಡುತ್ತಾನೆ. ಗೀತ ನಾಟಕವಾಗಲು ಎರಡನೆ ನಟನನ್ನು ಒದಗಿಸಿದವನು ಈಸ್ಕಿಲಿಸ್; ಅವನು ಮುಮ್ಮೇಳದ ಪ್ರಭಾವವನ್ನು ತಗ್ಗಿಸಿದುದು ಮಾತ್ರವಲ್ಲದೆ, ಸಂಭಾಷಣೆಗೆ ಪ್ರಮುಖಸ್ಥಾನವನ್ನು ಕೊಟ್ಟನು. ಸೋಫೋಕ್ಲಿಸ್ ನಟರ ಸಂಖ್ಯೆಯನ್ನು ಮೂರಕ್ಕೆ ಏರಿಸಿದನು, ಮತ್ತು ಚಿತ್ರಗಳಿರುವ ಥರದೆಗಳನ್ನು ಉಪಯೋಗಿಸಿದನು. ಹೀಗೆಯೇ ನಾಟಕದ ವಸ್ತುವೂ ಕೂಡ ಹೆಚ್ಚು ವಿಶಾಲವೂ, ಸಂಕೀರ್ಣವೂ ಆಗತೊಡಗಿತು; ಅಂಕಗಳ ಮತ್ತು ಪ್ರಸಂಗಗಳ ಸಂಖ್ಯೆ ಹೆಚ್ಚಿತು. ಶೈಲಿಯೂ ಗಂಭೀರವಾಯಿತು. ಛಂದಸ್ಸಿನಲ್ಲಿಯೂ ನೃತ್ಯಕ್ಕೆ ಅನುಕೂಲವಾದ ಟ್ರೋಕೇಯಿಕ್ ಛಂದಸ್ಸು ಸಂಭಾಷಣೆಗೆ ಅತ್ಯಂತ ಸಮೀಪವಾಗಿರುವ ಅಯಾಂಬಿಕ್ ಛಂದಸ್ಸಿಗೆ ಎಡೆಯಿತ್ತಿತು.

ಪ್ರಾಚೀನ ಗ್ರೀಸಿನಲ್ಲಿ ಎಲ್ಲಾ ಕಡೆಗಳಲ್ಲಿಯೂ ಹರಡಿದ್ದ ಮತ್ತು ಅರಿಸ್ಟಾಟಲಿನ ಕಾಲದಲ್ಲೂ ಅನೇಕ ನಗರಗಳಲ್ಲಿ ಪ್ರಚಾರದಲ್ಲಿದ್ದ ಕಾಮಗೀತಗಳೇ ವೈನೋದಿಕದ ಉದ್ಭವಸ್ಥಾನವೆನ್ನುತ್ತಾನೆ ಅರಿಸ್ಟಾಟಲ್. ಆದರೆ ಅದಕ್ಕೆ ಸಾಕಷ್ಟು ಗೌರವವಿಲ್ಲ ದುದರಿಂದ, ಅದರ ಬೆಳವಣಿಗೆಯನ್ನು ಚಿತ್ರಿಸಲು ಸಾಕಷ್ಟು ಆಧಾರಗಳು ಸಿಕ್ಕಿಲ್ಲ ವೆನ್ನುತ್ತಾನೆ. ಅದನ್ನು ಬಹುಮಾನಕ್ಕಾಗಿ ಹಬ್ಬಗಳಲ್ಲಿ ಪ್ರದರ್ಶಿಸಲು ಅನುಜ್ಞೆ ದೊರಕಿದುದೂ ಬಹಳಕಾಲದ ಮೇಲೆಯೇ. ಅದೂ ಅಲ್ಲದೆ ವೈನೋದಿಕ ಕವಿಗಳು ಸಾಹಿತ್ಯಚರಿತ್ರೆಯಲ್ಲಿ ಕಂಡುಬರುವ ವೇಳೆಗಾಗಲೇ, ವೈನೋದಿಕದ ರೂಪ ನಿರ್ದಿಷ್ಟ ವಾಗಿದ್ದಿತು. ಅದಕ್ಕೆ ಬೇಕಾಗಿದ್ದ ಮುಖವಾಡ, ಮುನ್ನುಡಿಯ ಗೀತಗಳು, ನಟರ ಸಂಖ್ಯೆ—ಇವುಗಳನ್ನು ಯಾರು ಒದಗಿಸಿದರೆಂಬುದು ತಿಳಿಯದು. ಅದರ ವಸ್ತುವು ಮೊದಲು ಬಂದದ್ದು ಸಿಸಿಲಿಯಿಂದ; ಮತ್ತು ಅದರ ಕೇವಲ ವಿಡಂಬನ ರೂಪವನ್ನು ಬಿಟ್ಟು, ಅದರ ವಸ್ತುವಿನ ವೈಶಾಲ್ಯ, ವೈವಿಧ್ಯತೆ ಸಾಧಾರಣತೆಗಳನ್ನು ಹೆಚ್ಚಿಸಿ ದುದರಲ್ಲಿ ಅಥೆನ್ಸಿನ ಕ್ರೇಟೆಸ್‌ನೇ ಮೊದಲನೆಯವನು. ಇದಿಷ್ಟೇ ವೈನೋದಿಕದ ವಿಷಯವಾಗಿ ತಿಳಿದಿರುವುದು ಎನ್ನುತ್ತಾನೆ ಅರಿಸ್ಟಾಟಲ್.

ಸಾಹಿತ್ಯದ ಪ್ರಕಾರಗಳನ್ನು ಐತಿಹಾಸಿಕ ದೃಷ್ಟಿಯಿಂದ ನೋಡಿದವರಲ್ಲಿ ಅರಿಸ್ಟಾಟಲನನ್ನು ಮೊದಲಿಗನೆನ್ನಬಹುದು. ಆದರೆ ಸಾಹಿತ್ಯವಿಮರ್ಶೆಯಲ್ಲಿ ಅದನ್ನು ಅಂಗವಾಗಿ ಮಾತ್ರ ಸ್ವೀಕರಿಸಿರುವುದು ಅವನ ಸಮದೃಷ್ಟಿಯ ಒಂದು ಗುಣ. ಅವನು ಕೊಟ್ಟಿರುವ ಗ್ರೀಕ್ ಸಾಹಿತ್ಯದ ಚರಿತ್ರೆ ಸಂಕ್ಷಿಪ್ತವಾದುದೇನೋ ನಿಜ. ಅದನ್ನು

ಅವನೇ ಒಪ್ಪಿಕೊಂಡಿದ್ದಾನೆ. ರುದ್ರನಾಟಕದ ಬೆಳವಣಿಗೆಯ ವಿಷಯವನ್ನು ಹೇಳುತ್ತಾ, ಹೇಳಬೇಕಾದ ವಿಷಯಗಳು ಬಹಳವಿವೆಯೆಂದೂ, ಆದರೆ ಗ್ರಂಥವಿಸ್ತಾರದ ಭಯದಿಂದ ಅವುಗಳನ್ನು ಹೇಳುವುದಿಲ್ಲವೆಂದೂ ಅಂದಿದ್ದಾನೆ. ಆದರೆ ಅವನು ಈ ಭಾಗವನ್ನೇ ಬಿಟ್ಟಿದ್ದರೆ ಈಗ ಅವನಿಂದ ತಿಳಿದಿರುವ ವಿಷಯವೂ ಕೂಡ ನಮಗೆ ಗೊತ್ತಾಗುತ್ತಿರಲಿಲ್ಲ. ಮತ್ತು ಸಾಹಿತ್ಯವಿಮರ್ಶೆಯಲ್ಲಿ ಇತಿಹಾಸಕ್ಕಿರಬೇಕಾದ ಸ್ಥಾನವೂ ಮುಂದೆ ನಿರ್ಧಾರವಾಗಬೇಕಾಗಿತ್ತು. ಇಲ್ಲಿಯೂ ಅರಿಸ್ಟಾಟಲಿನದು ಮಧ್ಯಮಾರ್ಗ.

'ಕಾವ್ಯಮೀಮಾಂಸೆ'ಯ ಈ ಭಾಗದ ಮೇಲೆಯೂ ಟೀಕೆಗಳಿಲ್ಲದೆ ಇಲ್ಲ. ಗ್ರೀಕ್ ನಾಟಕ ಪ್ರಾಚೀನಗ್ರೀಕರ ಪೂಜೆ, ವ್ರತಗಳ ಅಂಗವಾಗಿ ಹುಟ್ಟಿತೆಂಬುದನ್ನೂ, ಅವುಗಳ ಕುರುಹುಗಳನ್ನು ಅದರ ರಚನೆಯಲ್ಲಿ ನಾವು ಇಂದಿಗೂ ಕಾಣಬಹುದೆಂಬುದನ್ನೂ ಆಧುನಿಕ ಇತಿಹಾಸಕಾರರ, ವಿಮರ್ಶಕರ ಸಂಶೋಧನೆಗಳು ವ್ಯಕ್ತಪಡಿಸಿವೆ. ಇವುಗಳ ಉಲ್ಲೇಖವಾಗಲೀ, ವಿವರಣೆಯಾಗಲೀ ಅರಿಸ್ಟಾಟಲಿನಲ್ಲಿಲ್ಲದಿರುವುದು ಅವನ ದೊಡ್ಡ ದೋಷವೆಂದೂ, ಅವನ ಕೇವಲ ತಾರ್ಕಿಕಪ್ರಕೃತಿಯ ಚಿಹ್ನವೆಂದೂ ಗಿಲ್ಬರ್ಟ್ ಮರ್ರೆ ಮುಂತಾದವರ ಆರೋಪ. ಇದಕ್ಕೆ ಸೈಕ್ಸ್ ಎಂಬ ವಿಮರ್ಶಕ ಒಂದು ವಿಧವಾದ ಸಮಾಧಾನವನ್ನು ಕೊಡುತ್ತಾನೆ. ಗ್ರೀಕ್ ನಾಟಕ ಪ್ರಾಚೀನ ಗ್ರೀಕರ ವ್ರತಗಳಲ್ಲಿ ಉದ್ಭವವಾಗಿದ್ದಿರಬಹುದು; ಆದರೆ ಅರಿಸ್ಟಾಟಲಿನ ಸಮಯಕ್ಕೆ ಅದು ಮತದ ವಾತಾವರಣವನ್ನು ಕಳೆದುಕೊಂಡಿದ್ದುದರಿಂದ, ಅರಿಸ್ಟಾಟಲ್ ಅದನ್ನು ಗಮನಿಸಿಲ್ಲ ಎನ್ನುತ್ತಾನೆ. ಆದರೆ ಈ ವಾದ ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಏಕೆಂದರೆ ಅರಿಸ್ಟಾಟಲ್ ವಿಮರ್ಶಿಸಿದ ಈಸ್ಕಿಲಸ್, ಸೊಫೋಕ್ಲಿಸ್, ಯೂರಿಪೈಡಿಸ್‌ರ ನಾಟಕಗಳು ಧರ್ಮಜಿಜ್ಞಾಸೆಯಿಂದ ಪೂರಿತವಾಗಿವೆ. ಯೂರಿಪೈಡಿಸ್‌ನ ಬಾಕ್ಕೆ ಎಂಬ ನಾಟಕವಂತೂ ಗ್ರೀಕರ ಅತಿ ಪ್ರಾಚೀನವಾದ ವ್ರತವನ್ನೇ ವಸ್ತುವನ್ನಾಗಿ ಹೊಂದಿದೆ. ಆದ್ದರಿಂದ ಗ್ರೀಕ್ ನಾಟಕದ ಧಾರ್ಮಿಕ ಹಿನ್ನಲೆ ಅರಿಸ್ಟಾಟಲನಿಗೆ ಗೊತ್ತಿರಲಿಲ್ಲವೆಂಬುದನ್ನು ಒಪ್ಪಲಾಗುವುದಿಲ್ಲ. ಅದಕ್ಕೆ ಕಾರಣ ಬೇರೆ ಕಡೆಯಲ್ಲಿ ಸಿಗುತ್ತದೆ.

ರುದ್ರನಾಟಕ ಮತ್ತು ನೈಸೋದಿಕ ಗ್ರೀಕರ ಡಿಥಿರಾಂಬ್ ಮತ್ತು ಕಾಮಗೀತಗಳಿಂದ ಹುಟ್ಟಿದುವೆಂಬುದನ್ನು ಅರಿಸ್ಟಾಟಲ್ ಸ್ಪಷ್ಟವಾಗಿ ಹೇಳಿದ್ದಾನೆ. ಆದರೆ ಈ ನಾಟಕಗಳ ಇತಿಹಾಸದಲ್ಲಿ ಅವನು ಮುಖ್ಯವಾಗಿ ವಿವರಿಸಬೇಕೆಂದಿದ್ದುದು ಅವುಗಳ ರಚನೆಯ ಬೆಳವಣಿಗೆಯೇ ಹೊರತು, ಅವುಗಳಲ್ಲಿನ ಧಾರ್ಮಿಕ ಅಥವಾ ಸಾಮಾಜಿಕ ತತ್ತ್ವಗಳ ಬೆಳವಣಿಗೆಯಲ್ಲ. ಅವು ಅಮುಖ್ಯವೆಂದಾಗಲೀ, ಅಲ್ಲಿ ಅವು

ಇರಲೇ ಇಲ್ಲವೆಂದಾಗಲೀ ಅರಿಸ್ಟಾಟಲ್ ಎಣಿಸಿರಲಾರ. ಆದರೆ ಅವನು ಕಾವ್ಯ ಮೀಮಾಂಸೆಯಲ್ಲಿ ಹೇಳ ಹೊರಟಿರುವುದು ನಾಟಕ, ಕಾವ್ಯದ ಕಲೆ, ಕೌಶಲ, ರಚನೆಯ ವಿಷಯವೇ ಹೊರತು ಅದರ ತಾತ್ವಿಕ, ಧಾರ್ಮಿಕ ಬೆಲೆಯ ನಿಷ್ಕರ್ಷೆಯಲ್ಲ. ಆದ್ದರಿಂದಲೇ ಅವನು ಕೊಟ್ಟಿರುವ ಕಾವ್ಯದ ಲಕ್ಷಣದಲ್ಲಿಯೂ ಕವಿತಾ ಶಕ್ತಿಯ ದೈವೀಗುಣಗಳಾಗಲೀ, ಕಾವ್ಯದ ಆಧ್ಯಾತ್ಮಿಕ ನೆಲೆ, ಗುರಿಗಳಾಗಲೀ ಉಲ್ಲೇಖವಾಗಿಲ್ಲ. ಆದ ಮಾತ್ರಕ್ಕೆ ಅರಿಸ್ಟಾಟಲನಿಗೆ ಇವುಗಳ ಅರಿವೇ ಇರಲಿಲ್ಲವೆಂದಾಗಲೀ, ಅವನು ಅವುಗಳನ್ನು ಕಡೆಗಣಿಸಿದ್ದನೆಂದಾಗಲೀ ಭಾವಿಸಿದರೆ ಆ ತಪ್ಪು ನಮ್ಮದೇ ಹೊರತು ಅವನದಲ್ಲ. ಅವನು ತನ್ನ ವಿಮರ್ಶಾರಂಗದ ಎಲ್ಲೆಯನ್ನು ರಚಿಸಿದ್ದು ಒಂದು ವಿಧದಲ್ಲಿ ವೈಶಾಲ್ಯ, ವೈವಿಧ್ಯತೆಗಳಿಗೆ ಧಕ್ಕೆ ತಂದರೂ, ಇನ್ನೊಂದು ವಿಧದಲ್ಲಿ ಅವನು ಮಾಡಬೇಕೆಂದಿದ್ದ ಕಾರ್ಯವನ್ನು ಪೂರ್ಣವಾಗಿ, ಚಿರಸ್ಥಾಯಿಯಾಗಿ ಮಾಡಲು ಅನುಕೂಲವಾಯಿತು.

(ಸಶೇಷ)

ಎನ್. ಬಾಲಸುಬ್ರಹ್ಮಣ್ಯ.

ಹುಟ್ಟಿದ ಹಬ್ಬ

ನಾ ಬಂದೆ—
ಮೊದಲ ಸ್ಪಂದನದಿಂದೆ,
ಅಂದಿನಿಂದಿಂದಿಗೂ ಸಾಕ್ಷಿಯೊಲು ನಿಂದೆ!

ಲಕ್ಷನಕ್ಷತ್ರನೀಹಾರಿಕಾನಭದ
ರಾಸಲೀಲೆಯೊಳಿದ್ದೆ;
ಒಮ್ಮೆ, ಓ ಅಂದೊಮ್ಮೆ
ಗ್ರಹದ ಘರ್ಷಣೆಯಾಯ್ತು,
ಹುಡಿಯೊಂದು ಬಿತ್ತು.

ಗಿರಗಿರನೆ ತಿರುಗಿತ್ತು ಅಗ್ನಿಗೋಳದ ಬುಗುರಿ:
ಶೂನ್ಯಸಿಂಹಾಸನದಿ ಜ್ಯೋತಿಲಿಂಗ!
ಜಡೆಯ ಜ್ವಾಲೆಗೆ ಬೆದರಿ ಮತ್ತೊಮ್ಮೆ ಸ್ಪಂದಿಸಿತು
ಈ ವಿಶ್ವರಂಗ!

ಯುಗಯುಗವನೊಂದೊಂದೆ ಬೊಗಸೆಯಲಿ ಮುಕ್ಕಳಿಸಿ
ಸಾಗಿತ್ತು ನಟರಾಜನಗ್ನಿನೃತ್ಯ!
ಉರಿಯ ಹೆಗ್ಗಡಲಲೆಯ ಕೋವರನ ಚಕ್ರದಲಿ
ರೂಪುಗೊಳ್ಳುತಲಿತ್ತು ಈ ಲೋಕಸತ್ಯ!
ಆದಿಕವಿಚಿತ್ತದಲಿ ನವಕಾವ್ಯದುದಯಕ್ಕೆ
ನಡೆಯುತಿತ್ತನಂತ ರಸಘರ್ಷಣ!
ಕಾಲಲಬ್ಧಿಗೆ ಕಾದು ಬಿಡುಗಡೆಯ ಬಯಸಿತ್ತು
ಪ್ರಾಣಭ್ರೂಣ!

ಇಲ್ಲಿ ನಿಂತಸು ಕೆಳಗೆ ಋಷಿ ಭಗೀರಥದೇವ
ವ್ಯೋಮಕೇಶನ ಪಾದಮೂಲದಲ್ಲಿ:
" ಇಳಿದು ಬಾ ತಾಯಿ ಇಳಿದು ಬಾ "

ಓಂ! ಇಳಿದು ಬಂದಳು ತಾಯಿ ಆದಿಶಕ್ತಿ,
        ರಸಾಗ್ನಿ ಗಾಗಿತ್ತು ಭಾವಮುಕ್ತಿ!
ನಕ್ಕು ತಲೆದೂಗಿದವು ಖಗ ಮಿಗ ಹಸಿರು ಹೂ ಹಣ್ಣು
ಗುಡ್ಡ ಬೆಟ್ಟ,
ಬೆಳೆದು ನಿಂತವು ಎಲ್ಲ ಒಂದೊಂದು ಮಟ್ಟ;
ನಾ ಬಂದೆ, ಎಲ್ಲ ಪರಿವರ್ತನೆಯ ಜೊತೆಗೆ ಹರಿದು
ಒಳಗೆ ಬೆರೆದು!

ಕತ್ತಲೆಯೆ ಬೆಳಕಾಯ್ತೊ
ಬೆಳಕೆ ಕತ್ತಲೆಯಾಯ್ತೊ,
ಬೆಳಕು ಕತ್ತಲ ಕದನ ಮೊದಲಾಯಿತು.
ಜೀವ ಜೀವದ ನೂರು ಹುಟ್ಟುಸಾವಿನ ಪಗಡೆ
ಸಾಗುತಿತ್ತು.

*   *   *   *

ನಾ ಬಂದೆ,
ಮೊದಲ ಸ್ಪಂದನದಿಂದೆ;
ಅಂದಿನಿಂದಿಂದಿಗೂ ಕಣ್ಣಾಗಿ ನಿಂದೆ!

ಇರವಿನಾಳವ ಕಡೆದು ಅರಿವ ಪಡೆದರು ಅವರು
ಆರ್ಯಕುಲಸಾಧಕರು ಮನುಮುನಿಗಳು.
"ಏಕಂ ಸತ್ ವಿಪ್ರಾ ಬಹುಧಾ ವದಂತಿ"
ಮಂತ್ರ ಹೊಮ್ಮಿತು ಮಿಡಿದು ವಿಶ್ವವೀಣೆಯ ತಂತಿ!
ಒಡನೆಯೇ—
ಒಳಗೆ ಮಲಗಿದ ಗರುಡ ಗರಿಗೆದರಿ ಬಂದ,
ಮುಗಿಲಿನಗಲದ ಗರಿಯ ಬೀಸಾಟದಿಂದ
ಕಾಡುಮೇಡಿಗೆ ದನಕೆ
ಮಿಗಕೆ ಹಕ್ಕಿಗೆ ಜನಕೆ
ಕಳಚಿತ್ತು ಬಂಧ!

ಅವತಾರ ಅವತಾರ, ಲೆಕ್ಕವಿಲ್ಲದ ನೂರು
ಅವತಾರ ಬಂತು;

ತನ್ನ ತಾನೇ ಸೃಜಿಸಿ ತನ್ನ ತಾನೇ ಕೊಲುವ
ಲೀಲೆಗಳ ಮಣಿಯೊಳಗೆ ಉದ್ಧಾರ ತಂತು!

ನಾ ಬಂದೆ,
ಆ ಎಲ್ಲ ಕತೆಗಳನು ನಾ ಹೊತ್ತು ತಂದೆ
ಕೂರ್ಗಣೆಯ ಸುಯ್ಲುಗಳ ಕೇಳುತ್ತ ಬಂದೆ
ಇಂದು ಸಿಡಿಗುಂಡುಗಳ ಹೊಗೆಯೊಳಗೆ ನಿಂದೆ
ರಾಮ-ರಾವಣರನ್ನು ನಾ ಕರೆದು ತಂದೆ.

* * * *

ನನಗೆ ಹುಟ್ಟಿದ ಹಬ್ಬ!
ನನಗೆಷ್ಟುವರುಷ?
"ನಾ ತೊಟ್ಟ ದೇಹಗಳ ಲೆಕ್ಕ
ಇಡುವರಾ ಸೊಕ್ಕ
ಯಮಾ ನೋಡಿ ನಕ್ಕ"
ಆದರೂ ಸುರಿದಿತ್ತು ಹರಕೆಗಳ ವರುಷ!

* * * *

ಬಂದ ಕರು ಬೆರಗುಗಣ್ಣನು ತೆರೆಯೆ,
ಮೇಲಿತ್ತು ನೊಗದ ನೇಣು!
ಎಲ್ಲಿ ಹೋಯಿತೊ ಏನೊ, ಮೊಲೆಯನುಣಿಸುವೆನೆಂದು
ಕನಸಿನಲಿ ನಚ್ಚಿತ್ತ ಕಾಮಧೇನು!
ಎತ್ತ ನೋಡಿದರೂನು, ಉರಿಯ ಕರೆಯುವ ಬಾನು,
ದಣಿದ ನಾಲಗೆಗಿಲ್ಲ ತೊಟ್ಟು ಜೇನು.
ನೊಗದ ಭಾರಕೆ ಬಾಗಿ ಕತ್ತು ಉಳುಕಿದರೇನು
ಬಾಳ ಬಂಡಿಯ ಮುಂದೆ ಎಳೆಯೊ ನೀನು.

ಇಂದು ಹುಟ್ಟಿದ ಹಬ್ಬ—ಗೆಳೆಯರೆಲ್ಲರ ಹರಕೆ
ಮನದ ಬಾಗಿಲಿಗಾಯ್ತು ಹೊಸ ತೋರಣ!
(ಇಂದುವರೆಗೇನಿಲ್ಲ; ಆದರೂ ಮುಂದೆಲ್ಲ)
ಒಳ್ಳಿತಾಗಲಿ ಎನುವ ಆಶ್ವಾಸನ!

* * * *

ನಾ ಬಂದೆ,
ಮೊದಲ ಸ್ಪಂದನದಿಂದೆ—
ಮುಂದೇನು ಎಂದೆ!
ಬಾಳ ಬೀದಿಯ ಬದಿಗೆ ಬೆಳ್ಗೊಳದ ಬೆಟ್ಟದಲಿ
ಗೊಮ್ಮಟನ ಕಂಡೆ;
ಮುಗಿಲಗಲದೆದೆಯಲ್ಲಿ ಚಿಕ್ಕೆಗಳ ದಂಡೆ!
ಚಂದ್ರಹಾಸದ ಮುಂದೆ
ಹಣತೆಯೊಲು ನಿಂದೆ!

ಜಿ. ಎಸ್. ಶಿವರುದ್ರಪ್ಪ

ಅಂತರರಾಷ್ಟ್ರೀಯ ನ್ಯಾಯಶಾಸ್ತ್ರದ ಮೂಲತತ್ತ್ವಗಳು

ಕ್ರಿಸ್ತನು ಹುಟ್ಟುವುದಕ್ಕೆ ಒಂದು ಸಾವಿರ ವರ್ಷಗಳ ಹಿಂದೆ ಐತಿಹಾಸಿಕ ವ್ಯಕ್ತಿಗಳಾದ ಗ್ರೀಕರು ಪ್ರಸಿದ್ಧರಾದರು. ಪ್ರಾಚೀನ ಗ್ರೀಸ್ ನಗರರಾಷ್ಟ್ರಗಳಾಗಿ ವಿಂಗಡವಾಗಿತ್ತು. ಪ್ರತಿಯೊಂದು ನಗರರಾಷ್ಟ್ರವೂ (City-state) ಸ್ವರಾಜ್ಯಾಧಿಕಾರವನ್ನು ಹೊಂದಿತ್ತು. ಅವಶ್ಯಕತೆಯ ಸಲುವಾಗಿ ಅವು ಪರಸ್ಪರ ವ್ಯವಹರಿಸಲೇಬೇಕಿತ್ತು. ವ್ಯವಹಾರಗಳು ಜಗಳಗಳನ್ನುಂಟುಮಾಡುವುದು ಸ್ವಾಭಾವಿಕ. ಅಂತಹ ಸಂದರ್ಭದಲ್ಲಿ ಅವರು ತೀರ್ಪಿಗಾಗಿ ಆ ವಿಷಯವನ್ನು ಒಬ್ಬ ಮಧ್ಯಸ್ತಗಾರನಿಗೆ ಅಥವಾ ನಾಲ್ಕಾರು ಮಧ್ಯಸ್ತಗಾರರಿಗೆ ಒಪ್ಪಿಸುತ್ತಿದ್ದರು. ದೂತರ ಪವಿತ್ರತೆಯನ್ನು ಎಲ್ಲರೂ ಗೌರವಿಸುತ್ತಿದ್ದರು. ದೇವಸ್ಥಾನ ಮುಂತಾದ ಪವಿತ್ರ ಗೃಹಗಳಲ್ಲಿ ಆಶ್ರಿತರಾದವರಿಗೆ ಜೀವದಾನವಾಗುತ್ತಿತ್ತು. ಯುದ್ಧಕೈದಿಗಳನ್ನು ಪರಸ್ಪರವಾಗಿ ಬದಲಾಯಿಸಿಕೊಳ್ಳುವುದು ವಾಡಿಕೆಯಲ್ಲಿತ್ತು. ದೇವಸ್ಥಾನಗಳು, ಅದರ ಅರ್ಚಕರು ಮತ್ತು ದಿವ್ಯಜ್ಞಾನಿಗಳನ್ನು ಎಲ್ಲರೂ ಗೌರವಿಸುತ್ತಿದ್ದರು. ಅವರನ್ನು ಯಾರೂ ಕೊಲ್ಲುವಂತಿರಲಿಲ್ಲ ಎಂದು ಗ್ರೀಕರು ಜಗಳಗಳನ್ನು ಮಧ್ಯಸ್ತಗಾರನೊಬ್ಬನ ತೀರ್ಪಿಗೆ ಒಪ್ಪಿಸಿದರೋ, ಅಂದೇ ಭವಿಷ್ಯಜಗತ್ತಿನ ಅಂತರರಾಷ್ಟ್ರೀಯ ಮಧ್ಯಸ್ತ ನ್ಯಾಯಪೀಠಗಳ ಬೆಳೆಗೆ ಬಿತ್ತನೆ ಮಾಡಿದಂತಾಯಿತು. ತಾವು ಒಂದು ಸುಸಂಘಟಿತ ರಾಷ್ಟ್ರವೆಂಬುದರ ಅರಿವಿಲ್ಲದುದೇ ಅವರಲ್ಲಿನ ಅಂತರ್ಯುದ್ಧಗಳಿಗೆ ಕಾರಣವಾಯಿತು. ಯುದ್ಧ ಗ್ರೀಕರಲ್ಲೇ ನಡೆದರೆ ಭಯಂಕರವಾಗಿರುತ್ತಿರಲಿಲ್ಲ. ಘೋಷಣೆಯಿಲ್ಲದೇ ಯುದ್ಧವಾಗದು. ಯುದ್ಧಘೋಷಣೆಗಾಗಿಯೇ ದೂತರನ್ನು ಕಳುಹುತ್ತಿದ್ದರು. ಗ್ರೀಕರು ಇಂದಿನ ಹಾಗೆ ನ್ಯಾಯಶಾಸ್ತ್ರ, ಧರ್ಮಶಾಸ್ತ್ರ ಮತ್ತು ನೀತಿಶಾಸ್ತ್ರಗಳನ್ನು ಬೇರೆಯಾಗಿ ಎಣಿಸಲಿಲ್ಲ. ವಿದೇಶೀಯರನ್ನು ತಮ್ಮ ನ್ಯಾಯಶಾಸ್ತ್ರದಲ್ಲಿ ಗಣನೆಗೇ ತೆಗೆದುಕೊಳ್ಳಲಿಲ್ಲ. ದಾಸ್ಯವೃತ್ತಿ ರೂಢಿಯಲ್ಲಿದ್ದು, ಪರಕೀಯರಿಗೆ ದಾಸ್ಯತ್ವವನ್ನು ಬಿಟ್ಟು ಇನ್ನಾವ ಸ್ಥಾನವನ್ನೂ ಕೊಡದಿದ್ದುದರಿಂದ ಮತ್ತು ನಿಷ್ಠುರವಾದ ಪ್ರತ್ಯೇಕ ಭಾವವನ್ನು ತಾಳಿದ್ದರಿಂದ ಗ್ರೀಕರು ಅಂತರರಾಷ್ಟ್ರೀಯ ನ್ಯಾಯಕ್ಕೆ ಯಾವ ವಿಧವಾದ ಕಾಣಿಕೆಯನ್ನು ನೀಡಲೂ ಸಮರ್ಥರಾಗಲಿಲ್ಲ. "ಸರ್ವಸಮ್ಮತವಾದ,

ನಿಯಮಬದ್ಧವಾದ ಅಂತರರಾಷ್ಟ್ರೀಯ ಜನಾಂಗ ಒಂದರ ನಿರ್ಮಾಣ ಸಾಧ್ಯತೆಯನ್ನು ಮಾತ್ರ ಗ್ರೀಕ್ ನಗರರಾಷ್ಟ್ರಗಳು ಉದಾಹರಿಸಿದವು" ಎಂದು ಓಪನ್‌ಹೀಮ್ ಅಭಿಪ್ರಾಯಪಡುತ್ತಾನೆ.

ಗ್ರೀಕರ ದೃಷ್ಟಿಯಲ್ಲಿ ಗ್ರೀಕರಲ್ಲದವರು "ಅನಾಗರಿಕರು." "ಅಂತಹ ಜನಗಳೊಡನೆ ನಡೆಯುವ ಗ್ರೀಕರ ಕದನಗಳೇ ಯುದ್ಧಗಳು" ಎಂದು ಸಾಕ್ರಟಿಸ್ ಹೇಳುತ್ತಾನೆ. ಮುಂದುವರೆಯುತ್ತಾ ಸಾಕ್ರಟಿಸ್ "ಗ್ರೀಕರಲ್ಲಿನ ಪರಸ್ಪರ ಕಲಹಗಳು ಯುದ್ಧವಲ್ಲ, ಕಾಯಿಲೆ" ಎಂದು ಸ್ಪಷ್ಟಪಡಿಸುತ್ತಾನೆ. "ಇಷ್ಟಾದರೂ ಗ್ರೀಕರಲ್ಲಿ ಯಾವ ವಿಧವಾದ ಮನುಧರ್ಮಶಾಸ್ತ್ರವಾಗಲೀ ಅಥವಾ ಭಾರತೀಯನ ವಿನೀತಭಾವವಾಗಲೀ ಇರಲಿಲ್ಲ" ಎಂದು ನಸ್‌ಬಾಂ ತಿಳಿಸುತ್ತಾನೆ. ಆದರೆ ಮೇಲೆ ತಿಳಿಸಿದ ಓಪನ್‌ಹೀಮನ ಅಭಿಪ್ರಾಯವನ್ನು ನಸ್‌ಬಾಂ ಒಪ್ಪುವುದಿಲ್ಲ. ಅವನ ದೃಷ್ಟಿಯಲ್ಲಿ ಅಂತರರಾಷ್ಟ್ರೀಯ ನ್ಯಾಯಶಾಸ್ತ್ರಕ್ಕೆ ಗ್ರೀಕರಿಂದ ಕಾಣಿಕೆಯೇ ಇಲ್ಲ. "ಆಧುನಿಕ ಅಂತರರಾಷ್ಟ್ರೀಯ ನ್ಯಾಯಕ್ಕೆ ಹೋಲುವಂತಹ ಕೆಲವು ಆಶ್ಚರ್ಯ ಪ್ರಸಂಗಗಳೇನಾದರೂ ಕಂಡುಬಂದಲ್ಲಿ, ಅದು ಕೇವಲ ಆಕಸ್ಮಿಕವಾಗಿಯೇ ವಿನಾ ಉದ್ದೇಶಪೂರಿತವಾಗಲ್ಲ" ಎಂದು ಖಚಿತವಾಗಿ ಹೇಳುತ್ತಾನೆ. ಪ್ರತಿಯೊಂದು ಅಭಿಪ್ರಾಯವನ್ನೂ ಅದರ ಯೋಗ್ಯತಾನುಸಾರ ಪರಿಶೀಲಿಸಿದಲ್ಲಿ ನಾವು ನಸ್‌ಬಾಂನ ವಾದವನ್ನು ಪೂರ್ಣವಾಗಿ ಒಪ್ಪಲಾಗುವುದಿಲ್ಲ.

ಪ್ರಾಚೀನ ರೋಮನರ ಸಾಂಸ್ಕೃತಿಕ ಫಲಗಳಲ್ಲಿ ನ್ಯಾಯಶಾಸ್ತ್ರವೂ ಒಂದು. ರೋಮಿನ ಖಾಸಗಿ ನ್ಯಾಯವು (Civil Law) ಬೈಜಂಟೈನ್ ಚಕ್ರವರ್ತಿಯಾದ ಜಸ್ಟೀನಿಯನ್ನನಿಂದ ಸಂಗ್ರಹಿಸಲ್ಪಟ್ಟು "ಪೌರ ನ್ಯಾಯ ಸಂಹಿತೆ" (Corpus Juris Civilis) ಎಂಬ ಗ್ರಂಥರೂಪವಾಗಿ ಮುಂದಿನ ಸಂತತಿಗಳಿಗೆ ಅನುಗ್ರಹಿಸಲ್ಪಟ್ಟಿತು. ಆ ಗ್ರಂಥವೇ ರೋಮಿನ ನ್ಯಾಯಶಾಸ್ತ್ರಕ್ಕೆ ಆಚಂದ್ರಾರ್ಕವಾದ ಕೀರ್ತಿಯನ್ನು ತಂದಿತು. ರೋಮನರ ನ್ಯಾಯಶಾಸ್ತ್ರಪಟುತ್ವದ ಏಕೈಕ ಸಾಮರ್ಥ್ಯವೂ ಮತ್ತು ಮಹತ್ವವೂ ಅಂತರರಾಷ್ಟ್ರೀಯ ಕ್ಷೇತ್ರದಲ್ಲೂ ವ್ಯಕ್ತವಾಗುತ್ತದೆ.

ರೋಂ ನಗರದಲ್ಲಿ ಸುಮಾರು ಇಪ್ಪತ್ತು ಮಂದಿಗಳುಳ್ಳ "ಧರ್ಮದರ್ಶಿಗಳ" (Fetials) ಸಂಸ್ಥೆಯೊಂದಿತ್ತು. ರಾಷ್ಟ್ರದ ಇತಿಹಾಸದಲ್ಲಿ ಈ 'ಧರ್ಮದರ್ಶಿ'ಗಳು ವಹಿಸಿದ ಪಾತ್ರ ಶ್ಲಾಘನೀಯವಾದುದು. ಯುದ್ಧಘೋಷಣೆಗಳನ್ನೂ ಮತ್ತು ಶಾಂತಿಗಾಗಿ ಒಪ್ಪಂದಗಳನ್ನೂ ಮಾಡುತ್ತಿದ್ದವರು ಅವರು. ಯಾವುದಕ್ಕೂ ಶತ್ರುಗಳಿಗೆ ಮೂವತ್ತು ದಿನಗಳ ಕಾಲಾವಕಾಶವಿರುತ್ತಿತ್ತು. ಅಷ್ಟು ಕಾಲದೊಳಗೆ ವೈರಿಯಿಂದ ಉತ್ತರವಾವುದೂ ಬರದಿದ್ದಲ್ಲಿ ಯುದ್ಧಘೋಷಣೆಯಾಗುತ್ತಿತ್ತು. ಅಂತಹ ಯುದ್ಧ

ವನ್ನೇ ರೋಮನರು 'ಧರ್ಮಸಮ್ಮತ'ವಾದದ್ದೆಂದು ಕರೆಯುತ್ತಿದ್ದರು. "ಧರ್ಮಯುದ್ಧ"ದ ಮೂಲತತ್ವ ಈ ರೀತಿಯಾಗಿ ಹೊರಹೊಮ್ಮಿತು. ಇಂತಹ ಧರ್ಮಯುದ್ಧಗಳಲ್ಲಿ ಮಾತ್ರ ತಮಗೆ ದೇವತೆಗಳ ರಕ್ಷಣೆಯಿದೆಯೆಂದು ರೋಮನರು ನಂಬಿದ್ದರು. "ಡೆಡಿಷಿಯೋ" ಎಂಬುದರ ಮೂಲಕ ಸೋತ ಪಕ್ಷವನ್ನು ಅದರ ಪವಿತ್ರವಾದ ಮತ್ತು ಇತರ ಆಸ್ತಿಗಳನ್ನೂ ಮತ್ತು ಜನರನ್ನೂ ಶರಣಾಗತರಾಗಿ ಒಪ್ಪಿಸುವಂತೆ ಕೇಳುತ್ತಿದ್ದರು. ಅದಕ್ಕೆ ಶರಣಾಗತರಾಗಿ ಒಪ್ಪಿದಾಗ ಮಾತ್ರ ಶತ್ರುಗಳು ರೋಮನರ ಕರುಣಾದೃಷ್ಟಿಗೆ ಪಾತ್ರರಾಗುತ್ತಿದ್ದರು. ಇಲ್ಲದಿದ್ದರೆ ಶತ್ರುವಿನ ನಾಶ ಖಂಡಿತ. ರೋಮನರು ವಿದೇಶೀಯರನ್ನು ಗ್ರೀಕರಂತೆ ಅನಾಗರಿಕರನ್ನಾಗಿ ಕಾಣುತ್ತಿರಲಿಲ್ಲ. ವಿಶ್ವದ ಇತರ ರಾಷ್ಟ್ರಗಳೊಡನೆ ರೋಮನರು, ಗ್ರೀಕರಂತೆ, ಗುಪ್ತವೈರವನ್ನು ಹೊಂದಿರಲಿಲ್ಲ. ಅದೇ ರೋಮನರಿಗೂ ಗ್ರೀಕರಿಗೂ ಇದ್ದ ವ್ಯತ್ಯಾಸ. ಅಂತರ ರಾಷ್ಟ್ರೀಯ ನ್ಯಾಯದ ವಿಜ್ಞಾನದ ಮೇಲೆ ರೋಮನರ ನ್ಯಾಯಶಾಸ್ತ್ರಕುಶಲತೆಯ ಪರೋಕ್ಷ ಪ್ರತಿಕ್ರಿಯೆಗಳು ಅತಿ ಶ್ಲಾಘನೀಯವಾದುವು.

ಹದಿನೆಂಟನೆಯ ಶತಮಾನದ ವರೆಗೂ ಅಂತರರಾಷ್ಟ್ರೀಯ ನ್ಯಾಯದ ಬರಹಗಾರರು ಉನ್ನತವಾದ ಮತ್ತು ಸುಸಂಸ್ಕೃತವಾದ ರೋಮನರ ನ್ಯಾಯಶಾಸ್ತ್ರ ಪಾಂಡಿತ್ಯದ ಪರಿಭಾಷೆಯನ್ನು ತಪ್ಪದೇ ಉಪಯೋಗಿಸುತ್ತಿದ್ದರು. ಪದಗಳ ನಿಷ್ಕೃಷ್ಟತೆ ಮತ್ತು ಸುಲಭವಾಗಿ ಅರ್ಥವಾಗುವಂತಹ ಶಬ್ದಕೋಶ ರೋಮನರ ನ್ಯಾಯಶಾಸ್ತ್ರವನ್ನು ಪಾಶ್ಚಿಮಾತ್ಯ ರಾಷ್ಟ್ರಗಳೆಲ್ಲಾ ಉಪಯೋಗಿಸಿಕೊಳ್ಳುವಂತೆ ಮಾಡಿತು. ಇಂಗ್ಲಿಷರು ರೋಮನರ ನ್ಯಾಯಶಾಸ್ತ್ರದ ಕೆಲವು ಮೂಲತತ್ವಗಳನ್ನು ಅಂಗೀಕರಿಸಿದ್ದರೂ, ತಾವು ಅದನ್ನು ಸ್ವೀಕರಿಸಿಯೇ ಇಲ್ಲವೆಂದು ಹೇಳುತ್ತಾರೆ. ಅಂತರರಾಷ್ಟ್ರೀಯ ನ್ಯಾಯಶಾಸ್ತ್ರ ಲೇಖಕರು ತಮ್ಮ ಸಿದ್ಧಾಂತಗಳಿಗೆ ಬೆಂಬಲ ಕೊಡಲು ರೋಮನರ ನ್ಯಾಯಶಾಸ್ತ್ರತತ್ತ್ವಗಳನ್ನು ಆಧಾರವಾಗಿಟ್ಟುಕೊಂಡರು. ಹದಿನೆಂಟನೆಯ, ಅದರಲ್ಲೂ ಮುಖ್ಯವಾಗಿ ಹತ್ತೊಂಬತ್ತನೆಯ ಶತಮಾನದಲ್ಲಿ ಪ್ರಾಚೀನ ರೋಮನರ ನ್ಯಾಯಶಾಸ್ತ್ರಕ್ಕೆ ಅಂತರರಾಷ್ಟ್ರೀಯ ನ್ಯಾಯಶಾಸ್ತ್ರದ ಮೀಮಾಂಸೆಯ ಮೇಲಿದ್ದ ಅಧಿಕಾರ ಮುರಿದುಬಿದ್ದಿತು. ರೋಮನರು ಲ್ಯಾಟಿನ್ ಭಾಷೆಯಲ್ಲಿ ಕರೆದ 'ಜಸ್ ಜಂಟಿಯಂ' ಎಂಬುದೇ ನಾವು ಅನುವಾದಿಸಿ ಕರೆಯುವ "ರಾಷ್ಟ್ರಗಳ ನ್ಯಾಯ." ರೋಮನರ ಚಕ್ರಾಧಿಪತ್ಯ ಹೆಚ್ಚಿದಂತೆಲ್ಲಾ, ವಿದೇಶೀಯರೊಡನೆ ಅವರ ಸಂಪರ್ಕವೂ ಹೆಚ್ಚಾಯಿತು. ಅವರ ಅಂತರರಾಷ್ಟ್ರೀಯ ನ್ಯಾಯ, ಅವರಿಗೆ ವಿದೇಶೀ ಸಂಸ್ಕೃತಿಯ ವಿಷಯದಲ್ಲಿ ಎಷ್ಟರಮಟ್ಟಿಗೆ ಉದಾರತೆಯಿತ್ತೆಂಬುದನ್ನು ಸೂಚಿಸುತ್ತದೆ. ಪೌರನ್ಯಾಯಕ್ಕೂ, ಅಂತರರಾಷ್ಟ್ರೀಯ ನ್ಯಾಯಕ್ಕೂ

ವ್ಯತ್ಯಾಸ ಸೂಚಿಸಿದವನೆಂದರೆ ಕ್ರಿ.ಶ. ಎರಡನೆಯ ಶತಮಾನದ ನ್ಯಾಯಶಾಸ್ತ್ರ ಪಾರಂಗತ ಗಯಾಸ್. "ಪೌರನ್ಯಾಯ," ಅವನ ದೃಷ್ಟಿಯಲ್ಲಿ, "ರೋಮನರು ತಮ್ಮ ರಾಷ್ಟ್ರದೊಳಗಿನ ವ್ಯವಹಾರಕ್ಕಾಗಿ ಸೃಷ್ಟಿಮಾಡಿದ್ದು. ಆದರೆ ಅವರ ಅಂತರ ರಾಷ್ಟ್ರೀಯ ನ್ಯಾಯ ಮಾನವನ ಸ್ವಾಭಾವಿಕ ವಿವೇಕದಿಂದ ಜನರೆಲ್ಲರಲ್ಲಿಯೂ ಸ್ಥಾಪಿತವಾಯಿತು. ಮತ್ತು ಎಲ್ಲಾ ರಾಷ್ಟ್ರಗಳಿಂದಲೂ ಅನುಸರಿಸಲ್ಪಟ್ಟಿತು." ನ್ಯಾಯಮಂದಿರ ಮತ್ತು ನಿಯಮಗಳಿಂದ ಗರ್ಭಿತವಾದ ಗಯಾಸನ ಈ ತಾತ್ವಿಕ ಭಾವ ಬಹು ವಿಶಾಲವಾದುದು. ಅದೊಂದು ಸರ್ವವ್ಯಾಪಿಯಾದ ನ್ಯಾಯಶಾಸ್ತ್ರ (Universal Law). ಹದಿನೇಳನೆಯ ಶತಮಾನದ ಕೊನೆಯ ಭಾಗದಲ್ಲಿ ರೋಮನರ "ರಾಷ್ಟ್ರಗಳ ನ್ಯಾಯ" ಸ್ವತಂತ್ರ ರಾಷ್ಟ್ರಗಳ ನ್ಯಾಯವಾಯಿತು.

ಪ್ರಕೃತಿನ್ಯಾಯದ ಮೂಲತತ್ತ್ವಗಳು ರೋಮಿನಲ್ಲಿರುವುದು ಇದರಿಂದ ನಮಗೆ ತಿಳಿಯುತ್ತದೆ. ಆದರೆ ಇದಕ್ಕೆ ಗ್ರೀಕರ ಸಂಪ್ರದಾಯವೇ ಕಾರಣವೆಂದು ನಾವು ಹೇಳಬಹುದು. ಕ್ರಿ.ಪೂ. ೩೦೮ ರಲ್ಲಿ ಜೀಸೋ ಸ್ಥಾಪಿಸಿದ, ಸೌಶೀಲ್ಯವೇ ಪರಮಹಿತ ವೆಂದು ಗಣಿಸುವ, ನೀತಿತತ್ತ್ವಗಳನ್ನು ಸರ್ವಶ್ರೇಷ್ಠವೆಂದೆಣಿಸಿ ಇಂದ್ರಿಯ ಸಂಯಮ ಮಾಡಿ, ಸುಖದುಃಖಗಳಿಗೆ ಉದಾಸೀನವಾಗಿರಬೇಕೆನ್ನುವ ತತ್ತ್ವಶಾಸ್ತ್ರ (Stoic Philosophy) ರೋಮನರ ಮೇಲೆ ಪ್ರಬಲವಾದ ಪರಿಣಾಮವನ್ನುಂಟುಮಾಡಿತು. ಇಂತಹವರಲ್ಲಿ ಸಿಸಿರೋ ಒಬ್ಬ. ಚಕ್ರವರ್ತಿ ಜಸ್ಟೀನಿಯನ್‌ನ "ಪೌರ ನ್ಯಾಯ ಸಂಹಿತೆ"ಯಲ್ಲಿ ಪ್ರಕೃತಿ ನೀತಿಶಾಸ್ತ್ರ ಮತ್ತು ಸ್ವಾಭಾವಿಕ ವಿವೇಚನೆ ನ್ಯಾಯಶಾಸ್ತ್ರಕ್ಕೆ ಹೇಗೆ ಮೂಲಗಳೆಂಬುದಕ್ಕೆ ಲೆಕ್ಕವಿಲ್ಲದಷ್ಟು ನಿದರ್ಶನಗಳು ದೊರಕುತ್ತವೆ. ರೋಮಿನ ನ್ಯಾಯಶಾಸ್ತ್ರ ಪಾರಂಗತ ಅಲ್ಪಿಯನ್‌ನ (Ulpian) ದೃಷ್ಟಿಯಲ್ಲಿ ಇಂತಹ ನ್ಯಾಯ ಶಾಸ್ತ್ರ, ಮನುಷ್ಯನಿಗೆ ಹೇಗೋ ಹಾಗೇ, ಪ್ರಾಣಿಗಳಿಗೂ ಅನ್ವಯಿಸತಕ್ಕುದು, ಪೈಥಾಗೊರಾಸನ ತತ್ತ್ವದ ಆಧ್ಯಾತ್ಮಿಕಭಾವಗಳಿಂದ ಪ್ರಚೋದಿತವಾದ ಅಲ್ಪಿಯನ್ನನ ಈ ಸಿದ್ಧಾಂತವನ್ನು ರೋಮಿನ ನ್ಯಾಯಶಾಸ್ತ್ರಜ್ಞರಲ್ಲಿ ಬಹುಮಂದಿ ಒಪ್ಪಲಿಲ್ಲ. ಆದರೆ ತನ್ನ ಸಿದ್ಧಾಂತ ನ್ಯಾಯಶಾಸ್ತ್ರಕ್ಷೇತ್ರದಲ್ಲಿ ಪರಿಣಾಮಕಾರಿಯಲ್ಲವೆಂದು ಅಲ್ಪಿಯನ್ನನೇ ತಿಳಿಸಿದ್ದನೆಂದರೆ ಏನಾಶ್ಚರ್ಯ.

ರೋಮನರು ಯತ್ನವಿಲ್ಲದೆ ವಿದೇಶೀಯರೊಡನೆ ಸಂಪರ್ಕ ಹೊಂದಬೇಕಾಯಿ ತೆಂದು ತಿಳಿಸಿದ್ದಾಯಿತು. ಅದಕ್ಕೋಸ್ಕರವಾಗಿಯೇ ಅವರು "ಪ್ರಧಾನ ದಂಡಾಧಿ ಕಾರಿ"ಗಳನ್ನು (Praetors) ವಿದೇಶೀಯರ ಮತ್ತು ರೋಮನರ ಅಂತರ್ವ್ಯವಹಾರಗಳ ಮೇಲ್ವಿಚಾರಣೆಗಾಗಿ ನೇಮಿಸಿದರು. ಈ ದಂಡಾಧಿಕಾರಿಗಳು ರೋಮನರ ಪೌರ ನ್ಯಾಯವನ್ನು ವಿದೇಶೀಯರಿಗೆ ಅನ್ವಯಿಸಲಾಗುತ್ತಿರಲಿಲ್ಲ. ಆದುದರಿಂದ ಅವರು

'ರಾಷ್ಟ್ರಗಳ ನ್ಯಾಯ'ದ ಸಹಾಯದಿಂದ ತಮ್ಮ ಮುಂದೆ ಬಂದ ಅಂತರರಾಷ್ಟ್ರೀಯ ಸಮಸ್ಯೆಗಳನ್ನು ಪರಿಹರಿಸುತ್ತಿದ್ದರು. ಕಾಲಕ್ರಮೇಣ ಅಂತರರಾಷ್ಟ್ರೀಯ ನ್ಯಾಯ ರೋಮನರಲ್ಲಿ ಅಭಿವೃದ್ಧಿಹೊಂದುತ್ತಾ ಬಂದಿತು. ರೋಮನರು ವಿದೇಶೀಯರೊಡನೆ ಮೈತ್ರಿತ್ವದ (Amicitia), ಆತಿಥ್ಯದ (Hospitum), ಮತ್ತು ಸಂಧಿಸಂಬಂಧವಾದ (Foedus) ಮೂರು ಬಗೆಯ ಒಪ್ಪಂದಗಳನ್ನು ಗೌರವಿಸುತ್ತಿದ್ದರು. ಒಂದು ಒಪ್ಪಂದ ವನ್ನು ರದ್ದುಮಾಡುವ ಮುನ್ನ ರಾಷ್ಟ್ರಗಳು ಸೂಚನೆ ಕೊಡಲೇಬೇಕಿತ್ತು. ಇಲ್ಲ ದಿದ್ದರೆ ಅಂತಹ ಒಪ್ಪಂದಗಳನ್ನು ಮಧ್ಯಸ್ತಗಾರನಿಗೆ ತೀರ್ಪಿಗಾಗಿ ಒಪ್ಪಿಸಬೇಕು.

ತಮ್ಮ ರಾಷ್ಟ್ರದ ಎಲ್ಲೆಗಳ, ರಾಯಭಾರಿಗಳ ಹಕ್ಕುಗಳ ಮತ್ತು ಒಪ್ಪಂದಗಳ ಉಲ್ಲಂಘನೆಯಾದಾಗ, ತನ್ನ ಮಿತ್ರರಾಷ್ಟ್ರ ತನ್ನ ಶತ್ರುವಿಗೆ ಸಹಾಯಮಾಡಿತೆಂದು ತಿಳಿದಾಗ ಮಾತ್ರ ರೋಮನರು ಯುದ್ಧದಲ್ಲಿ ತೊಡಗುತ್ತಿದ್ದರು. ಅಂತಹ ಸಂದರ್ಭಗಳಲ್ಲಿ ತಮಗಾದ ನಷ್ಟವನ್ನು ಪೂರೈಸುವುದಕ್ಕಾಗಿ ಧರ್ಮದರ್ಶಿಗಳನ್ನು ದೂತರನ್ನಾಗಿ ಕಳುಹಿಸುತ್ತಿದ್ದರು.

ಒಟ್ಟಿನಲ್ಲಿ ಅಂತರರಾಷ್ಟ್ರೀಯ ನ್ಯಾಯಕ್ಕೆ ರೋಮನರ ಪ್ರಮುಖ ಕಾಣಿಕೆ ಗಳೆಂದರೆ (೧) ಒಂದು ರಾಷ್ಟ್ರ ತನ್ನ ವಿದೇಶೀಯ ವ್ಯವಹಾರದಲ್ಲಿ ಉಪಯೋಗಿಸುವ ನ್ಯಾಯದ ನಿಯಮ ಮತ್ತು (೨) ರಾಷ್ಟ್ರಗಳ ಪರಸ್ಪರ ವ್ಯವಹಾರನೀತಿಯ ದೃಷ್ಟಿಯಿಂದ ಆಧುನಿಕ ಅಂತರರಾಷ್ಟ್ರೀಯ ನ್ಯಾಯ ತನ್ನ ಜನ್ಮಕ್ಕೇ ರೋಮನರಿಗೆ ಚಿರಋಣಿ.

೭

ರೋಮನರ ಚಕ್ರಾಧಿಪತ್ಯ ಒಡೆದುದರ ಫಲವಾಗಿ ಕ್ರಿ.ಶ. ೩೯೫ರಲ್ಲಿ ಪೂರ್ವ ಮತ್ತು ಪಶ್ಚಿಮ ಚಕ್ರಾಧಿಪತ್ಯಗಳೆರಡು ಯೂರೋಪಿನಲ್ಲಿ ಸ್ಥಾಪಿತವಾದವು. ಆದರೆ ಪಶ್ಚಿಮ ಭಾಗ ಜರ್ಮನರಿಂದ ಕ್ರಿ.ಶ. ೪೭೬ರಲ್ಲಿ ಸೋಲಿಸಲ್ಪಟ್ಟು ನಿರ್ನಾಮ ವಾಯಿತು. ತತ್ಪರಿಣಾಮವಾಗಿ ಇಟಲಿ ಮತ್ತು ಸ್ಪೇನಿನಲ್ಲಿ ಅನೇಕ ರಾಷ್ಟ್ರಗಳು ಉದ್ಭವಿಸಿದವು. ಆ ರಾಷ್ಟ್ರಗಳ ಜನಗಳೆಲ್ಲರೂ ಕ್ರೈಸ್ತರೇ ಆದರೂ ನಾಗರಿಕರಾಗಿರ ಲಿಲ್ಲ. ಎಂಟನೆಯ ಶತಮಾನದಲ್ಲಿ ಪೋಪನಿಂದ ಕಿರೀಟಧಾರಣೆ ಹೊಂದಿ ಚಾರ್ಲ್‌ಮೇಯಿ ನನು ಫ್ರಾಂಕಿಷ್ ಚಕ್ರಾಧಿಪತಿಯಾದನು. ಆಗಿನ ಶತಮಾನದಲ್ಲಿ ಚಕ್ರವರ್ತಿಯೇ ಲೌಕಿಕ ಪ್ರಭುವಾಗಿಯೂ ಮತ್ತು ಪೋಪನೇ ಧಾರ್ಮಿಕ ಪ್ರಭುವಾಗಿಯೂ ಇದ್ದರು. ಇಂತಹ ಐಕ್ಯತೆ ಮತ್ತು ಏಕಪ್ರಭುತ್ವಗಳ ದೆಸೆಯಿಂದ ಅಂತರರಾಷ್ಟ್ರೀಯ ನ್ಯಾಯದ ಅವಶ್ಯಕತೆಯೇ ಇರಲಿಲ್ಲ. ಆದರೆ ಆ ಆಡಳಿತ ಬಹುಕಾಲ ನಡೆಯದೆ

ಕ್ರಿ.ಶ. ೮೪೩ ರಲ್ಲಿ ವರ್ದೂನ್ ಒಪ್ಪಂದದಿಂದ ಮೂರು ವಿಭಾಗವಾಯಿತು. "ಏಕ ನ್ಯಾಯಾಡಳಿತವಿದ್ದ ಕಾಲದಲ್ಲೂ ಯುದ್ಧ ಕದನಗಳು ನಡೆಯುತ್ತಲೇ ಇದ್ದವು. ಕ್ರೈಸ್ತಧರ್ಮ ಯಾವ ಪ್ರಭಾವವನ್ನೂ ಹೊಂದಿದ್ದು ಕಾಣಬರಲಿಲ್ಲ" ಎಂದು ಓಪನ್‌ಹೀಮ್ ಅಭಿಪ್ರಾಯಪಡುತ್ತಾನೆ.

ಹದಿನೈದು ಹದಿನಾರನೇ ಶತಮಾನಗಳಲ್ಲಿ ಅಂತರರಾಷ್ಟ್ರೀಯ ನ್ಯಾಯಶಾಸ್ತ್ರದ ಮೇಲೆ ಪರಿಣಾಮವನ್ನುಂಟುಮಾಡಿದ ವಿಷಯಗಳೆಂದರೆ ಮೊದಲನೆಯದಾಗಿ ವ್ಯವಹಾರ ನ್ಯಾಯಶಾಸ್ತ್ರಜ್ಞರ (Civilians) ಮತ್ತು ಕ್ರೈಸ್ತಧರ್ಮಶಾಸ್ತ್ರಜ್ಞರ (Canonists) ಇರುವಿಕೆ. ಜರ್ಮನ್ ಚಕ್ರವರ್ತಿಗಳು ರೋಮನ್ ಚಕ್ರವರ್ತಿಗಳ ಉತ್ತರಾಧಿಕಾರಿಗಳೆಂದೂ, ಆದುದರಿಂದ ರೋಮನರ ನ್ಯಾಯ, ನಾಗರಿಕ ಪ್ರಪಂಚದ ನ್ಯಾಯವೆಂದೂ ವ್ಯವಹಾರ ನ್ಯಾಯಶಾಸ್ತ್ರಜ್ಞರು ವಾದಿಸುತ್ತಾರೆ. ಅವರು ಜಸ್ಟೀನಿಯನ್‌ನ "ಪೌರ ನ್ಯಾಯಸಂಹಿತೆ"ಯನ್ನು ಟೀಕಿಸಿದ್ದಾರೆ. ಅದರಲ್ಲಿ ಮುಂದೇಳಬಹುದಾದ ಅಂತರರಾಷ್ಟ್ರೀಯ ನ್ಯಾಯದ ಮೇಲಣ ಪ್ರಶ್ನೆಗಳಿಗೆಲ್ಲಾ ರೋಮನರ ನ್ಯಾಯಶಾಸ್ತ್ರದ ಆಧಾರದ ಮೇಲೆ ಉತ್ತರ ಕೊಟ್ಟಿದ್ದಾರೆ. ಆದರೆ ಕ್ರೈಸ್ತಧರ್ಮಶಾಸ್ತ್ರಜ್ಞರ ಪ್ರಭಾವ ಮತಸುಧಾರಣಾಕಾಲದ (Reformation) ವರೆಗೆ ಅಸಾಧಾರಣವಾಗಿರುವುದು. ಅಂತರರಾಷ್ಟ್ರೀಯ ನ್ಯಾಯದ, ಮುಖ್ಯವಾಗಿ ಯುದ್ಧ ಸಂಬಂಧವಾದ, ಪ್ರಶ್ನೆಗಳನ್ನು ಅವರು ನೀತಿಧರ್ಮಗಳ ಆಧಾರದ ಮೇಲೆ ಬಗೆಹರಿಸಿದರು.

ಎರಡನೆಯದು ಅಂತರರಾಷ್ಟ್ರೀಯ ವಾಣಿಜ್ಯಕ್ಕೆ ಸಂಬಂಧಿಸಿದ "ಸಮುದ್ರ ನ್ಯಾಯಶಾಸ್ತ್ರ" (Maritime Law). ರೋಮನ್ ಚಕ್ರಾಧಿಪತ್ಯದ ಪತನದ ಫಲವಾಗಿ ವಿಶ್ವವಾಣಿಜ್ಯ ಎಂಟನೆಯ ಶತಮಾನದಲ್ಲಿ ನಿರ್ಮೂಲವಾಯಿತು. ಸ್ವಲ್ಪ ಕಾಲಾನಂತರ ಪ್ರಾಚೀನ ನಾಗರಿಕತೆಯ ಪುನರುಜ್ಜೀವನ ಕಂಡುಬಂದು, ಸಮುದ್ರ ವ್ಯಾಪಾರ ಅಭಿವೃದ್ಧಿಹೊಂದುತ್ತಾ, ಅದಕ್ಕೆ ಸಂಬಂಧಿಸಿದ ಸಮುದ್ರ ನ್ಯಾಯ ಶಾಸ್ತ್ರದ ಕಟ್ಟಳೆ ಮತ್ತು ಪದ್ಧತಿಗಳೆಲ್ಲಾ ಬಲಗೊಂಡವು. ಆ ನ್ಯಾಯಕ್ಕೆ ಸಂಬಂಧಿಸಿದ ನೂರಾರು ಗ್ರಂಥಗಳು ಆ ಕಾಲದಲ್ಲಿ ಹೊರಬಿದ್ದವು. ಆ ಗ್ರಂಥಗಳಲ್ಲಿ ಸಮುದ್ರ ಸ್ವಾತಂತ್ರ್ಯದ ವಿಷಯವಾಗಿ ಕಂಡುಬಂದ ವಾದವಿವಾದಗಳು, ಅಂತರ ರಾಷ್ಟ್ರೀಯ ನ್ಯಾಯದ ಬೆಳವಣಿಗೆಯ ಮೇಲೆ ಪರೋಕ್ಷವಾಗಿ ಪರಿಣಾಮವನ್ನುಂಟುಮಾಡಿದವು.

ಮೂರನೆಯದು, ವಾಣಿಜ್ಯ ಮತ್ತು ವ್ಯಾಪಾರಿಗಳ ರಕ್ಷಣೆಗಾಗಿ ನಾನಾ ರಾಷ್ಟ್ರಗಳಲ್ಲಿ ಕಂಡುಬಂದ "ವಾಣಿಜ್ಯ ಸಂಘಗಳು" (Trading Leagues).

ಹದಿಮೂರನೆಯ ಶತಮಾನದ "ಹಾನ್ಸಿಯಾಟಿಕ್ ಸಂಘ" ಬಹು ಮುಖ್ಯವಾದುದು. ಮಧ್ಯಸ್ತನ ಮೂಲಕ ನ್ಯಾಯತೀರ್ಮಾನಿಸುವುದು, ಪರರಾಷ್ಟ್ರಗಳಲ್ಲಿ ವಾಣಿಜ್ಯಾನುಕೂಲಗಳನ್ನು ಪಡೆಯುವುದು, ಸಮಯಬಿದ್ದಲ್ಲಿ ಆ ಹಕ್ಕುಗಳಿಗಾಗಿ ಯುದ್ಧಮಾಡುವುದೇ ಈ ಸಂಘಗಳ ಮುಖ್ಯೋದ್ದೇಶವಾಗಿತ್ತು.

ಇನ್ನು ನಾವು ಮಧ್ಯಯುಗಕ್ಕೆ ಬಂದರೆ ರಾಷ್ಟ್ರಗಳು ಪರಸ್ಪರವಾಗಿ ಸ್ಥಿರವಾದ ರಾಯಭಾರ ಪದ್ಧತಿಯನ್ನು ಆಚರಣೆಗೆ ತರುವುದು ಕಂಡುಬರುತ್ತದೆ. ಮಧ್ಯಯುಗದಲ್ಲಿ ಫ್ರಾನ್ಸಿನ ದೊರೆಗಳೊಡನೆ ಸ್ಥಿರವಾದ ರಾಯಭಾರವನ್ನಿಟ್ಟುಕೊಳ್ಳುವುದು, ಪೋಪನ ಏಕಸ್ವಾಮ್ಯವಾಗಿತ್ತು. ಈ ಏಕಸ್ವಾಮ್ಯವನ್ನು ನಿರ್ಲಕ್ಷಿಸಿ ನಾನಾ ರಾಜಧಾನಿಗಳಿಗೆ ರಾಯಭಾರಿಗಳನ್ನು ಕಳುಹಿಸಿದವರು ಇಟಲಿಯ ರಾಷ್ಟ್ರಗಳಾದ ವೆನಿಸ್ ಮತ್ತು ಫ್ಲಾರೆನ್ಸ್. ಸ್ಥಿರ ರಾಯಭಾರ (Permanent Legation) ರಾಷ್ಟ್ರಗಳಲ್ಲಿ ಸ್ಥಿರವಾಗಿ ಸಂಪ್ರದಾಯವಾಗಿರುವುದು ಹದಿನೈದನೇ ಶತಮಾನದ ಅಂತ್ಯಭಾಗದಲ್ಲಿ ವ್ಯಕ್ತವಾಯಿತು. ಅಂದಿನಿಂದ ಅಂತರರಾಷ್ಟ್ರೀಯ ಪ್ರಾಮುಖ್ಯತೆಯುಳ್ಳ ಕೆಲವು ಸಾಮಾನ್ಯ ವಿಷಯಗಳನ್ನು ಚರ್ಚಿಸುವುದು ಪ್ರಾರಂಭವಾಯಿತು. ಆಗಿನಿಂದಲೇ ರಾಯಭಾರಿಗಳ ದೇಶಾಧಿಕಾರ ಬಾಹ್ಯತೆ (Exterritoriality) ಮತ್ತು ಪವಿತ್ರತೆಯ (Inviolability) ನಿಯಮಗಳು ಉದ್ಭವವಾದವು,

ಹದಿನೈದನೆಯ ಶತಮಾನದಲ್ಲಿ ಸ್ಥಾಯೀ ದಳಗಳನ್ನು (Standing Armies) ಇಟ್ಟುಕೊಳ್ಳುವುದು ರೂಢಿಯಲ್ಲಿತ್ತು. ಈ ಸೈನ್ಯಗಳ ಮೇಲೆ ವಿಧಿಸಲ್ಪಟ್ಟಿದ್ದ ತೀವ್ರವಾದ ಶಿಸ್ತು ಸಕಲ ರಾಷ್ಟ್ರಗಳಿಗೂ ಸಮ್ಮತವಾಗುವಂತಹ ಯುದ್ಧನಿಯಮಗಳ ಉತ್ಪತ್ತಿಗೆ ಅವಕಾಶ ಕೊಟ್ಟಿತು. ಅದೇ ಶತಮಾನದಲ್ಲಿ ವಿಜ್ಞಾನ ಮತ್ತು ಕಲೆಗಳ ಪುನರುಜ್ಜೀವನ, (Renaissance), ಪ್ರಾಚೀನ ಜ್ಞಾನದ ಜೀರ್ಣೋದ್ಧಾರ, ಗ್ರೀಕರ ಜೀವನದ ತಾತ್ವಿಕ ಮತ್ತು ಸೌಂದರ್ಯೋಪಾಸನೆಯ ಉದಾತ್ತಧ್ಯೇಯಗಳ ಪುನಶ್ಚೈತನ್ಯ, ಆಧುನಿಕ ಜೀವನಕ್ಕೆ ತರಲ್ಪಟ್ಟವು. ಈ ಯುಗದಲ್ಲಿನ ಕ್ರೈಸ್ತಧರ್ಮದ ಪ್ರಭಾವ ಗಮನಾರ್ಹವಾದುದು. ಕ್ರೈಸ್ತರಾಷ್ಟ್ರಗಳ ಸಂಘಟನೆಯಲ್ಲಿ ಮಾತ್ರವಲ್ಲದೆ, ಆ ರಾಷ್ಟ್ರಗಳ ಸಕಲ ವ್ಯವಹಾರಗಳ ಮೇಲೂ ಕ್ರೈಸ್ತಧರ್ಮ ತನ್ನ ಪ್ರಭಾವವನ್ನು ಉಂಟುಮಾಡಿತು. ಮಧ್ಯಯುಗದಲ್ಲಿ ಆದ ಮತಗಳ ಸುಧಾರಣೆಯಿಂದ ವಿಶ್ವದ ನಾಗರಿಕ ರಾಷ್ಟ್ರಗಳ ಮೇಲೆ ಪೋಪನಿಗಿದ್ದ ಧಾರ್ಮಿಕ ಪ್ರಭುತ್ವ ಅಳಿಸಿಹೋಯಿತು. ಬಿಕ್ಕಟ್ಟಿನ ಸಮಸ್ಯೆಗಳನ್ನು ಮಧ್ಯಸ್ತಗಾರನಾಗಿ ಬಗೆಹರಿಸುವ ಪೋಪನ ಹಕ್ಕನ್ನು ಪ್ರಾಟೆಸ್ಟೆಂಟ್ ರಾಷ್ಟ್ರಗಳು ಗೌರವಿಸಲಿಲ್ಲ.

ಹದಿನಾಲ್ಕನೆಯ ಶತಮಾನದ ಆದಿಭಾಗದಲ್ಲಿ ಅಮರಶಾಂತಿಯ ಯೋಜನೆಗಳು

ಕಂಡುಬಂದವು. ಅವುಗಳಲ್ಲಿ ಅನೇಕವು ಅಸಾಧ್ಯವಾಗಿ ಕಂಡುಬಂದರೂ ಅವು ಅಂತರರಾಷ್ಟ್ರೀಯ ಜನಾಂಗವೊಂದರ ಅವಶ್ಯಕತೆಯನ್ನು ಅಂದಿನ ರಾಜರುಗಳ ಮನಸ್ಸಿನ ಮೇಲೆ ಉಂಟುಮಾಡಿದವು. ಈ ಕಾಲದಲ್ಲಿ ಹೊರಬಿದ್ದ ನ್ಯಾಯವಾದಿಗಳ ಮತ್ತು ನ್ಯಾಯಶಾಸ್ತ್ರಜ್ಞರ ಗ್ರಂಥಗಳು ಗಮನಾರ್ಹವಾದುವು. ಪಿಯರ್ ದೂಬಾ ತನ್ನ ಗ್ರಂಥದಲ್ಲಿ (De Recuperatione Terrae Sanctae. ೧೩೦೫) ಕ್ರೈಸ್ತ ಮತಾವಲಂಬಿ ರಾಷ್ಟ್ರಗಳ ಒಕ್ಕೂಟವನ್ನೂ ಮತ್ತು ಈ ಒಕ್ಕೂಟದ ಸದಸ್ಯ ರಲ್ಲುಂಟಾಗಬಹುದಾದ ಕಲಹಗಳ ತೀರ್ಮಾನಕ್ಕೆ ಒಂದು ಸ್ಥಿರವಾದ ಮಧ್ಯಸ್ಥ ನ್ಯಾಯಪೀಠವೊಂದರ ರಚನೆಯನ್ನೂ ಒತ್ತಿ ಹೇಳಿದನು. ಬೊಹಿಮಿಯದ ಆಂಟಾಯ್ನ್ ಮೆರಿನಿ (೧೪೭೦-೧೪೭೧) ಕ್ರೈಸ್ತಮತಾವಲಂಬಿ ರಾಷ್ಟ್ರಗಳೆಲ್ಲವುಗಳ 'ಸಂಯುಕ್ತ ರಾಷ್ಟ್ರ' ರಚನೆಯಾಗಬೇಕೆಂದೂ, ಅಂತಹ ರಾಷ್ಟ್ರಗಳ ರಾಯಭಾರಿಗಳ ಸಂಘ ವೊಂದು ಸ್ಥಾಪಿತವಾಗಿ, ಆ ಸಂಘ ಸಂಯುಕ್ತ ರಾಷ್ಟ್ರದ ಅತ್ಯುನ್ನತ ಆಡಳಿತಾಂಗ ವಾಗಬೇಕೆಂದೂ ಅಭಿಪ್ರಾಯಪಟ್ಟನು. ಇಡೀ ಯೂರೋಪನ್ನೇ ಹದಿನೈದು ರಾಷ್ಟ್ರ ಗಳಾಗಿ ವಿಂಗಡಿಸಿ, ಒಂದು ಸಂಯುಕ್ತರಾಷ್ಟ್ರ ಸ್ಥಾಪನೆ ಮಾಡಬೇಕೆಂದೂ, ಸಲ್ಲಿ ಸೂಚಿಸಿದನು (೧೬೦೩). ಕ್ರೈಸ್ತಮತಾವಲಂಬಿ ರಾಷ್ಟ್ರಗಳದ್ದೊಂದೇ ಅಲ್ಲದೇ ವಿಶ್ವದ ಸಕಲ ರಾಷ್ಟ್ರಗಳ ಸ್ಥಾಪನೆಯೊಂದನ್ನು ಮನಗಂಡವನೆಂದರೆ ಎಮರಿಕ್‌ಕ್ರೂಸ್ (೧೬೨೩). ಅಂತಹ ಸಂಸ್ಥೆಗೆ ರಾಷ್ಟ್ರಗಳ ರಾಯಭಾರಿಗಳಿಂದ ಕೂಡಿದ ಸಾಮಾನ್ಯ ಸಮಿತಿಯೊಂದು ಉನ್ನತಾಂಗವಾಗಬೇಕೆಂದೂ ಮತ್ತು ವೆನಿಸ್ ನಗರವು ಅದಕ್ಕೆ ಪೀಠವಾಗಬೇಕೆಂದೂ ತಿಳಿಸಿದನು.

೮

ಇನ್ನು ನಾವು ಗ್ರೋಷಸ್ಸನ ಅನಂತರ ಅಂತರರಾಷ್ಟ್ರೀಯ ನ್ಯಾಯ ಹೇಗೆ ಅಭಿವೃದ್ಧಿಹೊಂದಿತೆಂದು ತಿಳಿಯೋಣ. ಗ್ರೋಷಸ್ಸನ ಕಾಲವಾದ ಹದಿನೇಳನೇ ಶತಮಾನದಲ್ಲಿ ನೂರಾರು ರಾಷ್ಟ್ರಗಳಿದ್ದವು. ಅನೇಕ ಧ್ಯೇಯೋದ್ದೇಶಗಳು ಆ ರಾಷ್ಟ್ರಗಳನ್ನು ಒಂದು ಜನಾಂಗವಾಗಿ ಮಾಡಿದ್ದವು. ಅಂತಹ ಪಕ್ವವಾದ ಅಂತರ ರಾಷ್ಟ್ರೀಯ ಸ್ಥಿತಿಗತಿಗಳಿರುವಾಗ ಗ್ರೋಷಸ್ಸನ ಮಹದ್ಗ್ರಂಥವಾದ "ಯುದ್ಧ, ಶಾಂತಿ ಮತ್ತು ಸ್ವಾತಂತ್ರ್ಯವನ್ನು ಕುರಿತ ನ್ಯಾಯಶಾಸ್ತ್ರ" (De jure belli ac pacis librii) ಹೊರಬಿತ್ತು. ಪ್ರತಿಯೊಂದು ರಾಷ್ಟ್ರವೂ ಇದನ್ನು ಮುಕ್ತಕಂಠ ದಿಂದ ಶ್ಲಾಘಿಸಿ ಗೌರವಿಸಿತು. ಅಂದು ಅಂತರರಾಷ್ಟ್ರೀಯ ನ್ಯಾಯವೊಂದರ ಅಗತ್ಯ ಬಹಳವಾಗಿತ್ತು. ಇಡೀ ವಿಶ್ವದಲ್ಲೇ ವಿಶಾಲವಾಗಿ ತನ್ನ ಪ್ರಭಾವವನ್ನುಂಟು

ಮಾಡಿದ ಆ ಗ್ರಂಥ ಗ್ರೋಷಸ್ಸನನ್ನು "ಅಂತರರಾಷ್ಟ್ರೀಯ ನ್ಯಾಯಶಾಸ್ತ್ರದ ಜನಕ"ನನ್ನಾಗಿ ಮಾಡಿತು. ಹದಿನೇಳನೇ ಶತಮಾನದ ಅಂತ್ಯಭಾಗದಲ್ಲಿ, ಗ್ರೋಷಸ್ಸನ ನೀತಿನಿಯಮಗಳೆಲ್ಲಾ ಅಂತರರಾಷ್ಟ್ರೀಯ ಜನಾಂಗದ ಪರಸ್ಪರ ವ್ಯವಹಾರ ನಿಯಮಗಳಾದವು. ಅಂತರರಾಷ್ಟ್ರೀಯ ನ್ಯಾಯವನ್ನು ಉಲ್ಲಂಘಿಸದಿರುವುದು ಸಕಲ ರಾಷ್ಟ್ರಗಳ ಅನುಷ್ಠಾನಕ್ಕೆ ಬಂದಿತು. ಆದರೂ ಉಲ್ಲಂಘನೆ ನಡೆದಾಗ ಆ ರಾಷ್ಟ್ರವು ತಾನು ಆ ಉದ್ದೇಶವನ್ನೇ ಹೊಂದಿರಲಿಲ್ಲವೆಂದಾಗಲೀ ಇಲ್ಲವೇ ತಮ್ಮ ಕಾರ್ಯ ಅಂತರರಾಷ್ಟ್ರೀಯ ನ್ಯಾಯಶಾಸ್ತ್ರಕ್ಕನುಗುಣವಾಗಿದೆಯೆಂದಾಗಲೀ ಸಮರ್ಥಿಸಲು ಯತ್ನಿಸುತ್ತಿದ್ದರು. ಕಾಲಚಕ್ರ ಉರುಳಿದಂತೆಲ್ಲಾ ಗ್ರೋಷಸ್ಸನ ತತ್ತ್ವಕ್ಕೆ ಹೊಸ ಹೊಸ ತತ್ತ್ವಗಳು ಅಗತ್ಯಬಿದ್ದಂತೆ ಸೇರಿಸಲ್ಪಟ್ಟವು.

೧೬೧೮ ರಲ್ಲಿ ಚರಿತ್ರಾರ್ಹವಾದ "ಮೂವತ್ತು ವರ್ಷಗಳ ಯುದ್ಧ" ಪ್ರಾರಂಭವಾಗಿ ೧೬೪೮ ರಲ್ಲಿ ಮುಕ್ತಾಯಗೊಂಡಿತು. ಮತೀಯ ಮತ್ತು ರಾಜಕೀಯ ಧ್ಯೇಯಸಾಧನೆಯೇ ಈ ಕದನದ ಉದ್ದೇಶ. ೧೬೪೮ ರಲ್ಲಿ ಆಸ್ನಬ್ರುಕ್ ಮತ್ತು ಮುನ್ಸ್ಟರ್ ಎಂಬ ಕಡೆಗಳಲ್ಲಿ ವೆಸ್ಟ್‌ಫಾಲಯನ್ ಒಪ್ಪಂದವಾಯಿತು. ಇದರ ಪರಿಣಾಮವಾಗಿ ಮುನ್ನೂರೈವತ್ತು ರಾಷ್ಟ್ರಗಳ ಸಂಘವೊಂದು ಚಕ್ರವರ್ತಿಯ ಅಧೀನದಲ್ಲಿ ಸ್ಥಾಪಿತವಾಯಿತು. ಇಷ್ಟೇ ಅಲ್ಲದೆ ಇಂದಿನ ರಾಜಕೀಯ ರಂಗದಲ್ಲೇ ಪ್ರಮುಖವೆನಿಸಿರುವ ರಾಷ್ಟ್ರಗಳ "ಸಮಾನ ಬಲತೆ" (Balance of Power) ತತ್ತ್ವ ಆ ಚಕ್ರಾಧಿಪತ್ಯದೊಳಗೆ ಕಂಡುಬಂದಿತು. ೧೭೮೯ ರಲ್ಲಿ ಫ್ರಾನ್ಸಿನ ಮಹಾಕ್ರಾಂತಿ ಪ್ರಾರಂಭವಾಯಿತು. ೧೭೯೦ ರಲ್ಲಿ ಫ್ರಾನ್ಸಿನ ರಾಷ್ಟ್ರೀಯ ಸಭೆಯು ಆಕ್ರಮಣ ಯುದ್ಧಗಳನ್ನು ತ್ಯಜಿಸಿ, ಸ್ವಾತಂತ್ರ್ಯಕ್ಕಾಗಿ ಹೋರಾಡುವ ಯಾವ ರಾಷ್ಟ್ರಕ್ಕೇ ಆಗಲೀ ತನ್ನ ಹೃತ್ಪೂರ್ವಕವಾದ ಬೆಂಬಲವಿದೆಯೆಂದು ಘೋಷಿಸಿತು. ಈ ಎರಡನೆಯ ಘೋಷಣೆಯನ್ನು ಅನೇಕ ರಾಷ್ಟ್ರಗಳು "ಸಮಾನ ಬಲತೆ"ಗೆ ವಿರೋಧವೆಂದು ಅಭಿಪ್ರಾಯಪಟ್ಟವು. ಅನಂತರ ನೆಪೋಲಿಯನ್ನನ ಕಾಲದಲ್ಲಿ ಆಕ್ರಮಣ ಯುದ್ಧಗಳು ಲೆಕ್ಕವಿಲ್ಲದಷ್ಟು ನಡೆದವು. ತತ್ಪರಿಣಾಮವಾಗಿ 'ಸಮಾನ ಬಲತೆ' ನಿರ್ದಿಷ್ಟವಾಗಿರಲು ಸಾಧ್ಯವಾಗಲಿಲ್ಲ. ೧೮೧೪ ರಲ್ಲಿ ನೆಪೋಲಿಯನ್ನನ ಪತನಾನಂತರ ಹಳೆಯ ಭಾವನೆಗಳಾದ ನಿರಂಕುಶರಾಜಪ್ರಭುತ್ವ ಮುಂತಾದುವು ಕ್ಷೀಣವಾಗಿ, ಪ್ರಜಾಪ್ರಭುತ್ವದ ಹೊಸ ಧ್ಯೇಯಗಳು ಎಲ್ಲೆಲ್ಲೂ ಹರಡಿದವು. ಊಳಿಗಮಾನ್ಯಪದ್ಧತಿ (Feudalism) ಮಾಯವಾಯಿತು. ಇಟಲಿ ಜರ್ಮನಿ ಮುಂತಾದೆಡೆಗಳಲ್ಲಿ 'ರಾಷ್ಟ್ರೀಯತೆ'ಯ (Nationalism) ಭಾವನೆಗಳು ತಲೆದೋರಿದವು. ೧೮೧೪-೧೫ ರಲ್ಲಿ ನಡೆದ ವಿಯನ್ನಾ ಸಭೆಯ ಫಲವಾಗಿ ನಾರ್ವೆ-ಸ್ವೀಡನ್,

ಬೆಲ್ಜಿಯಂ-ಹಾಲೆಂಡ್ ಒಟ್ಟುರಾಷ್ಟ್ರಗಳಾದವು. ಜರ್ಮನಿ ಮೂವತ್ತೊಂಬತ್ತು ರಾಷ್ಟ್ರಗಳುಳ್ಳ ಒಂದು "ಸಂಘರಾಷ್ಟ್ರ" (Confederation) ವಾಯಿತು. ಕಾಡು ಗಿಚ್ಚಿನಂತೆ ಹರಡುತ್ತಿದ್ದ "ರಾಷ್ಟ್ರೀಯತೆ"ಯ ಮೂಲತತ್ತ್ವಗಳನ್ನೂ ಮತ್ತು ಪ್ರಜಾಸತ್ತಾತ್ಮಕ ಚಟುವಟಿಕೆಗಳನ್ನೂ ತುಳಿಯಲು ನಿರಂಕುಶಪ್ರಭುತ್ವದ ಶಕ್ತಿಗಳಾದ ರಷ್ಯಾ, ಪ್ರಷ್ಯಾ ಮತ್ತು ಆಸ್ಟ್ರೀಯಾ ಮಾಡಿಕೊಂಡ ತ್ರಿರಾಷ್ಟ್ರಕೂಟವೇ "ಪವಿತ್ರ ಸಂಘ"ವಾಯಿತು. ಅನೇಕ ರಾಷ್ಟ್ರಗಳು ಇದರೊಡನೆ ಸೇರಿದರೂ ಇಂಗ್ಲೆಂಡ್ ಸೇರಲಿಲ್ಲ. ಪ್ರಜಾಹಿತ ಮತ್ತು ಶಾಂತಿಸ್ಥಾಪನೆಗಳ ದೃಷ್ಟಿಯಿಂದ ಕೆಲವು ಕಾಲಗಳ ಅನಂತರ ಇಂಗ್ಲೆಂಡ್ ಆ ಕೂಟವನ್ನು ಸೇರಿ ಅದು ಚತುರ್ರಾಷ್ಟ್ರ ಕೂಟವಾಯಿತು. ೧೮೧೮ ರ ಏ ಲಾ ಷಾಪೆಲ್ ಘೋಷಣೆಯಿಂದ ಫ್ರಾನ್ಸೂ ಸೇರಿ ಅದು ಪಂಚರಾಷ್ಟ್ರಕೂಟವಾಯಿತು. "ಅಂತರರಾಷ್ಟ್ರೀಯ ವ್ಯವಹಾರಗಳಿಗೆ ಮೂಲಾಧಾರವಾದುದು ಅಂತರರಾಷ್ಟ್ರೀಯ ನ್ಯಾಯವೆಂದೂ, ತಮ್ಮ ಮುಂದಿನ ವ್ಯವಹಾರಗಳಲ್ಲಿ ಅದರ ಕಟ್ಟಳೆಗಳಿಗೆ ಬದ್ಧರಾಗಿ ನಡೆಯುತ್ತೇವೆಂ"ದೂ ಪಂಚ ರಾಷ್ಟ್ರಗಳು ಆ ಘೋಷಣೆಯ ಮೂಲಕ ಪ್ರತಿಜ್ಞೆಮಾಡಿದವು. ೧೮೨೦ ರಲ್ಲಿ ನಡೆದ ಟ್ರಾಪೇ ಸಮ್ಮೇಳನದಿಂದ "ಪಂಚರಾಷ್ಟ್ರಕೂಟ", ಬ್ರಿಟನ್ ಮತ್ತು ಫ್ರಾನ್ಸ್ ತ್ಯಜಿಸಿದ್ದರಿಂದ ಮತ್ತೆ ತ್ರಿರಾಷ್ಟ್ರಕೂಟವಾಯಿತು. ಸಶಸ್ತ್ರೀಯರಾಗಿ ಇನ್ನೊಂದು ರಾಷ್ಟ್ರದ ವ್ಯವಹಾರಗಳಲ್ಲಿ ಮಧ್ಯೆ ಪ್ರವೇಶಿಸುವ (Armed Intervention) ವಿನಾಶ ಕಾರಕ ತತ್ತ್ವವನ್ನು ಈ ಸಮ್ಮೇಳನ ಪ್ರತಿಪಾದಿಸಿತು. ರಾಷ್ಟ್ರಸ್ವಾತಂತ್ರ್ಯ ಮತ್ತು ಸರಿ ಸಮಾನತೆಯ ತತ್ತ್ವಗಳಿಗೇ ಕೊಡಲಿಪೆಟ್ಟೆಂದು ಈ "ಪವಿತ್ರಸಂಘ"ವನ್ನು ಲಿಬರಲ್ ಪಕ್ಷದವರು ಖಂಡಿಸಿದರು. "ಸಮಾನ ಬಲತೆ" ರಕ್ಷಣೆಯೇ ಹತ್ತೊಂಬತ್ತನೆಯ ಶತ ಮಾನದಲ್ಲಿ ರಾಷ್ಟ್ರಗಳ ಮುಖ್ಯಗುರಿಯಾಗಿತ್ತು. ೧೮೨೦ ರಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷ ಮನ್ರೋ ಪ್ರತಿಪಾದಿಸಿದ ತತ್ತ್ವಗಳೂ 'ಸಮಾನ ಬಲತೆ'ಗನು ಗುಣವಾಗಿದ್ದವು. ಸಮಾನ ಬಲತೆಗಾಗಿ 'ಸಂಘಗಳ ಮೇಲೆ ಸಂಘಗಳು' ಸರಿತೂಗಿಸಲ್ಪಟ್ಟವು. ರಾಷ್ಟ್ರನೀತಿಯ ಸಾಧನೆಗಾಗಿ ಯುದ್ಧವೇ ಸರ್ವಸಮ್ಮತವಾದ ಅಸ್ತ್ರವಾಯಿತು. ತಟಸ್ಥರಾಷ್ಟ್ರಗಳು ಹತ್ತೊಂಬತ್ತನೆಯ ಶತಮಾನದಲ್ಲೂ ಕಂಡುಬಂದವು. ಈ ಕಾಲದಲ್ಲಿ ಲೆಕ್ಕವಿಲ್ಲದಷ್ಟು ಸಮ್ಮೇಳನಗಳು ನಡೆದು ಸಾರ್ವಜನಿಕ ಆರೋಗ್ಯ, ರಕ್ಷಣೆ ನೀತಿಗಳನ್ನು ಕುರಿತು ಅನೇಕ ನಿರ್ಣಯಗಳಾದವು. ಅವುಗಳ ಕಾರ್ಯ ಸಾಧ್ಯತೆಯನ್ನೂ ರಚನಾತ್ಮಕ ಭಾವವನ್ನೂ ನೋಡಿದರೆ ಆಗ ರಾಷ್ಟ್ರಗಳು ನಿಜವಾದ ಒಂದು ಅಂತರರಾಷ್ಟ್ರೀಯ ಜನಾಂಗವಾಗಿದ್ದವೇನೋ ಎಂಬ ಭಾವನೆ ಬರುತ್ತದೆ. ಸ್ವಯಂಪ್ರೇರಣೆಯಿಂದ ಸಹಕರಿಸಿರುವ, ಸ್ವತಂತ್ರ ಸಾರ್ವಭೌಮ ರಾಷ್ಟ್ರಗಳ

ಆಧಾರದ ಮೇಲೆ ರಚಿತವಾದ, ಮತ್ತು ಶಿಸ್ತುನ್ಯಾಯಗಳಿಂದ ಕೂಡಿದ, ಜಗತ್ತಿನ ದೃಶ್ಯ ಅಂದಿನ ರಾಜಕಾರಣಿಗಳ ಮತ್ತು ಗ್ರಂಥಕರ್ತರ ಮನಸ್ಸಿನಲ್ಲಿ ಮೂಡಲಾರಂಭಿಸಿತು.

೧೮೯೯ ರಲ್ಲಿ ಹೇಗ್‌ನಲ್ಲಿ ಒಂದು ಸಮ್ಮೇಳನ ನಡೆಯಿತು. ಶಸ್ತ್ರಗಳನ್ನು ಮಿತಿಗೊಳಿಸುವುದೇ ಅದರ ಮುಖ್ಯೋದ್ದೇಶವಾಗಿತ್ತು. ಸಾಮೂಹಿಕ ರಕ್ಷಣಾ (Collective Security) ವ್ಯವಸ್ಥೆಯೊಂದು ಇಲ್ಲದ್ದರಿಂದ ಉದ್ದೇಶಸಾಧನೆ ಆಗಲಿಲ್ಲ. ರಾಜನೀತಿ (Diplomacy) ಅಶಕ್ತವಾದೆಡೆಗಳಲ್ಲಿ ಮಧ್ಯಸ್ತಗಾರನ ಮೂಲಕ ನ್ಯಾಯ ಸಾಧನೆ ಮಾಡುವುದು ಬಹು ಪರಿಣಾಮಕಾರಿಯೂ ಶಾಂತಿಯುತವೂ ಆದ ಕ್ರಮವೆಂದು ಈ ಸಮ್ಮೇಳನ ಅಂಗೀಕರಿಸಿತು. ೧೯೦೭ ರಲ್ಲಿ ನಡೆದ ಸಮ್ಮೇಳನದಲ್ಲಿ ಲ್ಯಾಟಿನ್ ಅಮೆರಿಕದ ರಾಷ್ಟ್ರಗಳೂ ಭಾಗವಹಿಸಿದವು. ಒಟ್ಟು ನಲವತ್ತುನಾಲ್ಕು ರಾಷ್ಟ್ರಗಳು ಸೇರಿದ್ದ ಈ ಸಮ್ಮೇಳನವು ವಿಶ್ವದ ಇತಿಹಾಸದಲ್ಲೇ ಅತಿ ಪ್ರಾಮುಖ್ಯವಾದದ್ದು. ಈ ಸಮ್ಮೇಳನದಲ್ಲಿ ಸಮಸ್ಯೆಗಳನ್ನೆಲ್ಲಾ ನಿರ್ಧಾರಕ್ಕೆ ಅವಶ್ಯವಾಗಿ ಮಧ್ಯಸ್ಥನ್ಯಾಯಪೀಠಗಳಿಗೆ ಒಪ್ಪಿಸಲೇಬೇಕೆಂದು ತೀರ್ಮಾನವಾಯಿತು. ೧೯೦೮ ರಲ್ಲಿ ನಡೆದ ಲಂಡನ್ ಸಮ್ಮೇಳನದ ಘೋಷಣೆಯಿಂದ ಶತ್ರುರಾಷ್ಟ್ರಗಳಿಗೂ ಮತ್ತು ತಟಸ್ಥರಾಷ್ಟ್ರಗಳಿಗೂ ಇದ್ದ ಕಲಹಗಳು ತೀರ್ಮಾನವಾದವು. ಇಷ್ಟಾದರೂ ಹೇಗ್ ಸಮ್ಮೇಳನ ಜಯಪ್ರದವಾಗಲಿಲ್ಲ. ಯುದ್ಧವನ್ನು ನ್ಯಾಯಸಮ್ಮತವೆಂದು ಒಪ್ಪಿದುದೇ ಇದಕ್ಕೆ ಮೂಲಕಾರಣವೆಂದು ನಾವು ಹೇಳಬಹುದು. ಮೊದಲನೆಯ ಮಹಾಯುದ್ಧ ಹೇಗ್ ಸಮ್ಮೇಳನವನ್ನು ಅಣಕವನ್ನಾಗಿ ಮಾಡಿತು. ಸ್ವಲ್ಪವಾಗಲೀ ನೈತಿಕದೃಷ್ಟಿಯಿಲ್ಲದೆ ಒಪ್ಪಂದಗಳು ಮತ್ತು ತಟಸ್ಥರಾಷ್ಟ್ರಗಳ ನಿಯಮಗಳು ಮುರಿಯಲ್ಪಟ್ಟವು. ಭೂಮಿ, ಆಕಾಶ ಮತ್ತು ಸಮುದ್ರ ಯುದ್ಧಗಳಿಗೆ ಸಂಬಂಧಿಸಿದ ನ್ಯಾಯಶಾಸ್ತ್ರದ ನಿಯಮ ನಿಬಂಧನೆಗಳೆಲ್ಲಾ ತುಳಿಯಲ್ಪಟ್ಟವು. ಅನಂತರ ಸ್ಥಾಪನೆಯಾದುದೆಂದರೆ "ರಾಷ್ಟ್ರಗಳ ಸಂಘ" (೧೯೨೦). ಅದರ ಅಂಗವಾಗಿಯೇ ಡಿಸೆಂಬರ್ ೧೬, ೧೯೨೦ ರಲ್ಲಿ "ಅಂತರರಾಷ್ಟ್ರೀಯ ಸ್ಥಿರನ್ಯಾಯಾಲಯ"ವೊಂದು (Permanent Court of International Justice) ರಚಿತವಾಯಿತು. ಈ 'ಸಾಮೂಹಿಕ ರಕ್ಷಣಾ' ವ್ಯವಸ್ಥೆಯ ಮೂಲತತ್ತ್ವಗಳು ಈ "ರಾಷ್ಟ್ರಗಳ ಸಂಘ"ದಲ್ಲಿ ಸಂಘಟಿತವಾಗಿದ್ದವು. ೧೯೨೮ ರಲ್ಲಿ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಕೆಲ್ಲಾಗನಿಗೂ ಮತ್ತು ಫ್ರಾನ್ಸಿನ ಮುಖ್ಯಮಂತ್ರಿ ಬ್ರಿಯಾಂಡನಿಗೂ ಪ್ಯಾರಿಸ್ಸಿನಲ್ಲಿ ನಡೆದ ಒಪ್ಪಂದ ಅಂತರರಾಷ್ಟ್ರೀಯ ನ್ಯಾಯಶಾಸ್ತ್ರದ ಇತಿಹಾಸದಲ್ಲೇ ಅತಿ ಮುಖ್ಯವಾದುದು. "ರಾಷ್ಟ್ರನೀತಿಯ ಸಾಧನೆಗೆ ಯುದ್ಧವನ್ನೆಂದಿಗೂ ಅಸ್ತ್ರವಾಗಿ ಉಪಯೋಗಿಸ

ಕೂಡದು" ಮತ್ತು "ಸಕಲ ಕಲಹಗಳನ್ನೂ ಶಾಂತಿಯುತ ರೀತಿನೀತಿಗಳಿಂದಲೇ ಬಗೆಹರಿಸಬೇಕು" ಎಂದು ಆ ಒಪ್ಪಂದ ತೀರ್ಮಾನಿಸಿತು. ಆದರೆ 'ರಾಷ್ಟ್ರಗಳ ಸಂಘ'ದ ತತ್ತ್ವಗಳು ಜರ್ಮನಿ ಇಟಲಿ ಮುಂತಾದ ರಾಷ್ಟ್ರಗಳಿಂದ ಉಲ್ಲಂಘಿಸಲ್ಪಟ್ಟರೂ "ಸಾಮೂಹಿಕ ರಕ್ಷಣಾ ವ್ಯವಸ್ಥೆ" ಏನೂ ಮಾಡಲಾಗಲಿಲ್ಲ. 'ಸಾಮೂಹಿಕ ಕ್ರಿಯೆ'ಗೆ (Collective Action) ಅವಕಾಶವಿಲ್ಲದುದೇ ರಾಷ್ಟ್ರಗಳ ಸಂಘದ ದೌರ್ಬಲ್ಯವಾಯಿತು. ಎರಡನೆಯ ಮಹಾಯುದ್ಧದಲ್ಲೂ ಅಂತರರಾಷ್ಟ್ರೀಯ ನ್ಯಾಯದ ಯಾವ ನಿಬಂಧನೆಗಳೂ ಗೌರವಿಸಲ್ಪಡಲಿಲ್ಲ. ರಾಷ್ಟ್ರಗಳು "ಆತ್ಮರಕ್ಷಣೆ" (Self-Defence) ಯ ಮುಸುಕಿನಲ್ಲಿ ತಮ್ಮ ಕಾರ್ಯಗಳೆಲ್ಲಾ ಅಂತರರಾಷ್ಟ್ರೀಯ ನ್ಯಾಯಕ್ಕನುಗುಣವೆಂದು ಘೋಷಿಸಿದವು. ಇಷ್ಟಾದರೂ ಶಾಂತಿಗಾಗಿ ದುಡಿಯುವ ಮಾರ್ಗದಲ್ಲಿ ಮಾನವನು ನಿರಾಶನಾಗಲಿಲ್ಲ. ಆಗಸ್ಟ ೧೪, ೧೯೪೧ ರಲ್ಲಿ ಹೊರಬಿದ್ದ ಅಟ್ಲಾಂಟಿಕ್ ಸನ್ನದಿನಲ್ಲಿ (Atlantic Charter) ವಿಶ್ವದ ಮಹಾರಾಷ್ಟ್ರಗಳ ಪ್ರಧಾನಿಗಳು ವಿಶಾಲವಾದ ಮತ್ತು ಸ್ಥಿರವಾದ ವಿಶ್ವರಕ್ಷಣಾವ್ಯವಸ್ಥೆಯೊಂದರ ಸ್ಥಾಪನೆಯನ್ನು ಆಲೋಚಿಸಿದರು. ಈ ಮೂಲತತ್ತ್ವಗಳೇ "ವಿಶ್ವಸಂಸ್ಥೆ"ಯ (United Nations) ಘೋಷಣೆಯಲ್ಲಿ ಕಂಡುಬರುತ್ತವೆ. ಅನಂತರ ಮಾಸ್ಕೋವಿನಲ್ಲಿ ೧೯೪೩ ರಲ್ಲಿ ವಿಶ್ವದ ಮಹಾರಾಷ್ಟ್ರಗಳ ವಿದೇಶಾಂಗ ಮಂತ್ರಿಗಳು "ರಾಷ್ಟ್ರಗಳ ಸ್ವಾತಂತ್ರ್ಯ, ಸಾರ್ವಭೌಮತ್ವ, ಸರಿಸಮಾನತೆಗಳ ಮೂಲತತ್ತ್ವಗಳಿಗನುಗುಣವಾದ ಶಾಂತಿಪ್ರಿಯ ರಾಷ್ಟ್ರಗಳಿಂದ ಕೂಡಿದ, ಮತ್ತು ಸಕಲ ರಾಷ್ಟ್ರಗಳಿಗೂ ಶಾಂತಿ, ರಕ್ಷಣೆಗಳ ಸ್ಥಾಪನೆಗಾಗಿ ಸದಸ್ಯತ್ವವೀಯುವ, "ವಿಶ್ವಸಂಸ್ಥೆ"ಯೊಂದರ ರಚನೆಯನ್ನು ಪ್ರಸಿದ್ಧಪಡಿಸಿದರು. ೧೯೪೪ ರ ಡಂಬರ್ಟನ್ ಓಕ್ಸ್ ಸಲಹೆಗಳೂ (Dumberton Oaks Proposals) ವಿಶ್ವಸಂಸ್ಥೆಯೊಂದರ ಸ್ಥಾಪನೆಯನ್ನೇ ಒತ್ತಿ ಹೇಳಿದವು. ಫೆಬ್ರವರಿ ೧೯೪೫ ರಲ್ಲಿ ನಡೆದ ಯಾಲ್ಟಾ ಸಮ್ಮೇಳನದಲ್ಲಿ, ವಿಶ್ವಸಂಸ್ಥೆಯ ಮೊದಲನೆಯ ಸಭೆಯು ಏಪ್ರಿಲ್ ೨೫, ೧೯೪೫ ರಲ್ಲಿ ನಡೆಯುವಂತೆ ತೀರ್ಮಾನವಾಯಿತು. ಆ ಸಭೆ ವಿಶ್ವಸಂಸ್ಥೆಯ ಸನ್ನದೊಂದನ್ನು (U.N. Charter) ಡಂಬರ್ಟನ್ ಸಲಹೆಗಳ ಆಧಾರದ ಮೇಲೆ ರಚಿಸಿತು. ಅದು ಕೊನೆಗೆ ಜೂನ್ ೨೬, ೧೯೪೫ ರಲ್ಲಿ ಅಂಗೀಕೃತವಾಯಿತು. "ಅಂತರರಾಷ್ಟ್ರೀಯ ನ್ಯಾಯಾಲಯ"ದ (International Court of Justice) ಶಾಸನ ಈ ಸನ್ನದಿನ ಒಂದು ಭಾಗ.

ಕ್ರಿ.ಪೂ. ೪೦೦೦ ವರ್ಷಗಳಿಂದ ಪ್ರಾರಂಭವಾಗಿ ವಿಶ್ವಸಂಸ್ಥೆಯ ಸ್ಥಾಪನೆಯವರೆಗೆ ಅಂತರರಾಷ್ಟ್ರೀಯ ನ್ಯಾಯಶಾಸ್ತ್ರ ಯಾವ ರೀತಿ ರೂಪಾಂತರಗಳನ್ನು ಹೊಂದಿತೆಂದು ನಾವು ಸೂಕ್ಷ್ಮವಾಗಿ ತಿಳಿದಾಯಿತು. ಇಷ್ಟೆಲ್ಲಾ ನೋಡಿದರೆ ನಾವು

ಅಂತರರಾಷ್ಟ್ರೀಯ ನ್ಯಾಯಶಾಸ್ತ್ರದ ಇತಿಹಾಸದಿಂದ ಕಲಿಯಬಹುದಾದ ನಾಲ್ಕಾರು ಅಂಶಗಳಿವೆ. ಅವುಗಳನ್ನು ಈಗ ತಿಳಿಸುವುದು ಅತ್ಯವಶ್ಯಕ.

ಮೊದಲನೆಯದಾಗಿ ನಿರಂಕುಶಪ್ರಭುತ್ವದ ಮೇಲೆ ಪ್ರಜಾಪ್ರಭುತ್ವದ ಜಯ ಗಮನಾರ್ಹವಾದುದು. ಹಿಂದಿನ ಅನೇಕ ಯುದ್ಧಗಳಿಗೆ ಕಾರಣಗಳಾದ ಮಿತಿಯಿಲ್ಲದ ರಾಷ್ಟ್ರವಿಸ್ತರಣೆ ಮತ್ತು ಸ್ವಾಧಿಕಾರಸಾಧನೆಯ ತತ್ತ್ವಗಳು ಅಂತ್ಯದಲ್ಲಿ ಹೋಗಲೇ ಬೇಕಾಗುತ್ತದೆಂಬುದು ಸ್ಥಿರಪಟ್ಟಿತು.

ಎರಡನೆಯದಾಗಿ ಮಧ್ಯಯುಗಾನಂತರ ಕಂಡುಬಂದ 'ರಾಷ್ಟ್ರೀಯತೆ' ತತ್ತ್ವಗಳು. ಎಲ್ಲೇ ಆಗಲಿ ಒಂದೇ ರಕ್ತ, ಭಾಷೆ, ಧ್ಯೇಯ ಸಮಾನತೆಯಿಂದ ಸುಸಂಘಟಿತರಾದ ಲಕ್ಷಾಂತರ ವ್ಯಕ್ತಿಗಳ ಒಂದು ಜನಾಂಗವು ಪ್ರಬಲವಾಗಿ ತಮ್ಮ ಧ್ಯೇಯಸಾಧನೆಗೂ ವಿಶಿಷ್ಟರೀತಿಯ ನಾಗರಿಕತೆಯ ರಚನೆಗೂ ಅವಕಾಶಕಲ್ಪಿಸುವ ತಮ್ಮದೇ ಆದ ಒಂದು ರಾಷ್ಟ್ರಸ್ಥಾಪನೆಗಾಗಿ ಹಂಬಲಿಸುವರೋ, ಅಂತಹ ಜನಾಂಗ ಆ ರಾಷ್ಟ್ರವನ್ನು ಯಾವ ಕಾಲದಲ್ಲೇ ಆಗಲಿ ಖಂಡಿತ ಪಡೆಯುತ್ತದೆ. ಅದು ಅನಿವಾರ್ಯವಾದದ್ದು.

ಮೂರನೆಯದಾಗಿ ಅಂತರರಾಷ್ಟ್ರೀಯ ನ್ಯಾಯದಲ್ಲಿ ಕಂಡುಬರುವ ನ್ಯಾಯ ವಾದಿಗಳು (Legal School) ಮತ್ತು ರಾಜನೀತಿ ಕೌಶಲ್ಯವಾದಿಗಳು (Diplomatic School) ಅಂತರರಾಷ್ಟ್ರೀಯ ನ್ಯಾಯಾಲಯದ ನಿಯಮ ಕಟ್ಟಳೆಗಳೆಲ್ಲಾ ಪೌರ ನ್ಯಾಯಶಾಸ್ತ್ರದಂತೆ ಗ್ರಂಥರೂಪವಾಗಿ ಸಂಗ್ರಹಿಸಲ್ಪಟ್ಟು, ತನ್ಮೂಲಕ ಅಭಿವೃದ್ಧಿ ಹೊಂದಬೇಕೆಂದು ನ್ಯಾಯವಾದಿಗಳ ಮತ. ರಾಜನೀತಿ ಕೌಶಲ್ಯವಾದಿಗಳು ಇದನ್ನು ತೀವ್ರವಾಗಿ ವಿರೋಧಿಸುತ್ತಾರೆ. ಅಂತರರಾಷ್ಟ್ರೀಯ ನ್ಯಾಯಾಲಯ ಸ್ಥಾಪನೆ ಯನ್ನೇ ಅವರು ಒಪ್ಪುವುದಿಲ್ಲ. ಯಾವ ಸಮಸ್ಯೆಯನ್ನೇ ಆಗಲಿ ರಾಜನೀತಿಕೌಶಲ್ಯ ದಿಂದಲೇ ಬಗೆಹರಿಸಬೇಕೆಂದೂ, ಹಾಗಾಗದಿದ್ದಲ್ಲಿ ಮಧ್ಯಸ್ಥ ನ್ಯಾಯಪೀಠಗಳಿಗೆ ಒಪ್ಪಿಸಬೇಕೆಂದೂ, ಅವರ ದೃಢಸಂಬಿಕೆ. "ಅಂತರರಾಷ್ಟ್ರೀಯ ನ್ಯಾಯಾಲಯವು ಅಂತರರಾಷ್ಟ್ರೀಯ ನ್ಯಾಯಶಾಸ್ತ್ರದ ಅಧಿಕೃತ ವ್ಯಾಖ್ಯಾನ ಮತ್ತು ಆಡಳಿತಕ್ಕಾಗಿ ಸ್ಥಾಪಿಸಲ್ಪಟ್ಟಿರುವುದರಿಂದ ನಾವು ರಾಜನೀತಿಕೌಶಲ್ಯವಾದಿಗಳ ವಾದವನ್ನು ಒಪ್ಪುವುದಕ್ಕಾಗುವುದಿಲ್ಲ" ಎಂದು ಓಪನ್‌ಹೀಮ್ ಅಭಿಪ್ರಾಯಪಡುತ್ತಾನೆ.

ನಾಲ್ಕನೆಯದಾಗಿ ಅಂತರರಾಷ್ಟ್ರೀಯ ನ್ಯಾಯಶಾಸ್ತ್ರದ ಬೆಳವಣಿಗೆ ಸಾರ್ವ ಜನಿಕ ನೀತಿಯ ಮಟ್ಟ ಮತ್ತು ಆರ್ಥಿಕ ಸ್ಥಿತಿಗತಿಗಳನ್ನೇ ಪೂರ್ಣವಾಗಿ ಅವಲಂಬಿ ಸಿದೆ. ಅಂತರರಾಷ್ಟ್ರೀಯ ನ್ಯಾಯಶಾಸ್ತ್ರ ನೈತಿಕ ಮತ್ತು ಆರ್ಥಿಕ ಅಂಶಗಳ ಸಂಯೋಜನೆಯಿಂದ ಉಂಟಾದ ಒಂದು ಶಾಸ್ತ್ರ. ಇದು ನಿರ್ವಿವಾದವಾದುದು.

ಶಾಶ್ವತವಾದ ನೈತಿಕ ಮತ್ತು ಆರ್ಥಿಕ ವಿಷಯಗಳು ಅವಿಚ್ಛಿನ್ನವಾಗಿ ಅಂತರ ರಾಷ್ಟ್ರೀಯ ನ್ಯಾಯಶಾಸ್ತ್ರದ ಏಳಿಗೆಗಾಗಿ ದುಡಿಯುತ್ತಿರುವುದರಿಂದ, ಅದರ ಅಭಿವೃದ್ಧಿ ಖಚಿತವೆಂದು ನಾವು ಹೇಳಬಹುದು.

ಸಿ. ಕೆ. ಎನ್. ರಾಜ

ಪ್ರಮಾಣ ಲೇಖನಾವಳಿ

1. H. MAINE'S—*International Law* (1888).
2. WILSON AND TUCKER—*International Law* (1909, 5 Edi.).
3. LANSING—*Notes on Sovereignty* (1921) (Carnegie Endowment for International Peace. No. 38).
4. ALVAREZ—*International Law and Related Subjects* (1922, C.E.F.I.P. No. 48).
5. CRESSON—*Holy Alliance* (1922, C.E.F.I.P.).
6. W. E. HALL—*A Treatise on International Law* (1924, 8. Edi. Oxford).
7. F. W. KELSEY—*Translation of Hugogrotius De Jure Belli Ac Pacis Librii Tres* (1925, C.E.F.I.P.).
8. VISWANATHA—"*International Law in Ancient India*" (1925).
9. G. NICOLAS POLITIS—"*Neutrality and Peace*" (1935, C.E.F.I.P. No. 55).
10. HAYNES—"*Revival of Natural Law Concepts*" (1930).
11. GEORGE A. FINCH—"*Sources of Modern International Law*" (1937, C.E.F.I.P. Monograph-I).
12. HYDE—"*International Law*" Vol. I, II, and III (1945, Boston).
13. SCHWARZENBERGER—"*International Law*" (1945, Vol. I).
14. ARTAUR NUSSBAUM—"*Concise History of Law of Nations*" (1947).
15. JESSUP—"*Modern Law of Nations*" (1947).
16. BRIGGS—"*Law of Nations Cases, Documents and Notes*" (1947).
17. FENWICK—"*International Law*" (1948, 3 Ed.).
18. LAUTERPACHT—"*Recognition in International Law*" (1948).
19. BRIERLY—*Law of Nations* (1949, 4 Ed.).
20. OPPENHEIM—*International Law*. Vol. I Peace (1952, Ed. by Lauterpacht).
21. *American Journal of International Law*. Vol. 48.
    (*a*) METSGER—*Settlement of International Disputes by Nonjudicial Methods* (No. 3).

(*b*) Carl Lowenstein—*Sovereignty and International Co-operation* (No. 2).

(*c*) Phillip C. Jessup—*Should International Law recognise an immediate status between peace and war* (No. 1).

22. D. H. H. Ingalls—*Essay on Authority and Law in Ancient India* (Supplement to the Journal of American Oriental Society, No. 1, July-Sept. 1954).

23. Emery Reves—*Anatomy of Peace*.

ಸಾಕ್ಷಿ

ಇರುವೆನು ಎನ್ನುವ ದೇಹದ ಅರಿವೇ
ಈಗೋ ಆಗೋ ಎಣಿಸುತಿದೆ;
ಅರಿವೆನು ಎನ್ನುವ ಮನದ ಪರಿವೆಯೇ
ಅಹುದೋ ಅಲ್ಲವೊ ಎನಿಸುತಿದೆ.
ಉಸಿರುಸಿರಿಗೆ ಹೊಯ್ದಾಡುವ ಪ್ರಾಣ
ಕಂಠದಿ ಕುಂಠಿತವಾಗುತಿದೆ.
ಬೆಳಕು ಬಿಸಿಲು, ಬೆಳುದಿಂಗಳ ಇರುಳಿಗೆ
ಬೆಳೆಯುವದೇನೋ ಸಾಗುತಿದೆ.
ಕಂಡೂ ಕಾಣದೆ ಕಾಣದ ಬದುಕೂ
ಹಾಗಾಗೇ ಬಳಮಾಗುತಿದೆ.
ಹೊಮ್ಮರ ಹೆಮ್ಮರ ಹಬ್ಬಿರೆ ಬಯಲಲಿ
ಪಾಪದ ಅಡಿಯಲಿ ಬಾಗುತಿದೆ.
ನಿಮ್ಮ ಕಣ್ಣು ರವಿ ಚಂದ್ರ ಬೆಳಗುತಿರೆ
ಜೀವ ಚುಕ್ಕೆ ನೆರವಾಗುತಿದೆ.

ಅಂಬಿಕಾತನಯದತ್ತ

ಪುರಸೊತ್ತಿನ ಹವ್ಯಾಸಗಳು

(ಹರಟೆ)

ನಾವೆಲ್ಲರೂ ದಿನಂಪ್ರತಿ ನಮ್ಮ ಬಾಳ್ವೆಯನ್ನು ಸಾಗಿಸಲು ದುಡಿಯುತ್ತೇವೆ. ಇಷ್ಟವಿರಲಿ, ಇಲ್ಲದಿರಲಿ ಮೈಮುರಿಯುವಂತೆ ಕೆಲಸಮಾಡುತ್ತೇವೆ. ಕೆಲಸದ ವಿಷಯವಾಗಿ ಟೀಕೆಮಾಡುತ್ತೇವೆ; ಬೇಸರಪಡುತ್ತೇವೆ; ಆದರೆ ಬಿಡುವುದಿಲ್ಲ. ಅದು ಬಲವಂತ ಮಾಘಸ್ನಾನವಾದರೂ ಅಗತ್ಯ. ಅಪ್ರಿಯವಾದರೂ ಅನಿವಾರ್ಯ. ವಿದ್ಯಾರ್ಥಿಯಾದವನಿಗೆ ಪಠ್ಯಪುಸ್ತಕವು ಕಬ್ಬಿಣದ ಕಡಲೆಯಾಗಿದ್ದರೂ, ನೀರಸವಾಗಿದ್ದರೂ ಅದನ್ನು ಓದಲೇಬೇಕು. ಅರ್ಥಮಾಡಿಕೊಳ್ಳಲೇಬೇಕು. ಅನೇಕ ವೇಳೆ ಮಾಡಲೇಬೇಕೆಂಬ ನಿರ್ಬಂಧವೇ ಕೆಲಸದ ವಿಷಯದಲ್ಲಿ ಬೇಸರವನ್ನುಂಟುಮಾಡುತ್ತದೆ. ಆದರೇನು? ಕೈಕೊಂಡ ಕಸುಬನ್ನು ನಡೆಸಬೇಕು; ಜೀವನ ರಥ ಸಾಗಿಸಬೇಕು.

ಮನುಷ್ಯಸ್ವಭಾವದಲ್ಲಿ ಒಂದು ವೈಚಿತ್ರ್ಯವನ್ನು ನಾವು ಕಾಣಬಹುದು. ನಮ್ಮಲ್ಲಿರುವ ವಸ್ತು ನಮ್ಮ ಕಣ್ಣಿಗೆ ಚೆನ್ನಾಗಿ ಕಾಣುವುದಿಲ್ಲ. ಇತರರು ಬಳಸುವ ಪದಾರ್ಥಗಳು ಚೆನ್ನಾಗಿ ಕಾಣಿಸುತ್ತವೆ. ಹಾಗೆಯೇ ನಾವು ಕೈಕೊಂಡ ವೃತ್ತಿ ನಮಗೆ ರುಚಿಸುವುದಿಲ್ಲ. ಉಪಾಧ್ಯಾಯನಾದವನು ಗುಮಾಸ್ತನ ಕೆಲಸ ಸುಖಕರವೆನ್ನುತ್ತಾನೆ. ಗುಮಾಸ್ತನಾದವನು ಉಪಾಧ್ಯಾಯನ ವೃತ್ತಿಯೇ ಒಳ್ಳೆಯದೆನ್ನುತ್ತಾನೆ. ಇಬ್ಬರೂ ತೋಟಗಾರನ ಜೀವನ ಬಹಳ ಒಳ್ಳೆಯದೆನ್ನುತ್ತಾರೆ. ಅಂತೂ ಕೆಲಸ ರುಚಿಸದಿದ್ದರೂ ಬಿಡುವಂತಿಲ್ಲ.

ಆದರೆ ಒಮ್ಮೊಮ್ಮೆ ನಮ್ಮ ದಿನ ನಿತ್ಯದ ಕಾರ್ಯಕ್ರಮವನ್ನು ಬಿಟ್ಟು ಸ್ವಲ್ಪಕಾಲ ಪುರಸೊತ್ತಾಗಿ ಇರಬೇಕೆನ್ನಿಸುತ್ತದೆ. ಹಾಗೆಂದರೆ ಏನೂಮಾಡದೆ ಸುಮ್ಮನೇ ಸೋಮಾರಿಯಂತೆ ಕುಳಿತಿರಬೇಕೆಂದಲ್ಲ. ಯಾವ ನಿರ್ಬಂಧಕ್ಕೂ ಒಳಗಾಗದೆ ಫಲಾಪೇಕ್ಷೆಯಿಲ್ಲದೆ ತೋರಿದ ಕೆಲಸವನ್ನು ಮಾಡತೊಡಗಲು ಮನಸ್ಸು ಬಯಸುತ್ತದೆ. ಅಂಥ ಕೆಲಸವನ್ನು ಕೈಕೊಂಡಾಗ ಮನಸ್ಸಿಗೆ ಒಂದು ಬಗೆಯ ನೆಮ್ಮದಿ ಇರುತ್ತದೆ. ದೇಹಶ್ರಮವಾದರೂ, ಇತರರಿಗೆ ನಾವು ಮಾಡುವ ಕೆಲಸ ರುಚಿಸದಿದ್ದರೂ ನಮಗೇನೋ ಆನಂದ ಉಂಟಾಗುತ್ತದೆ. ಅಂಥ ಹವ್ಯಾಸಗಳಲ್ಲಿ ಕೆಲವನ್ನು ನಾವು ನೆನಪಿಗೆ ತಂದುಕೊಳ್ಳಬಹುದು.

ಕೆಲವು ವೇಳೆ ಪುರಸೊತ್ತಿದ್ದಾಗ ಜಡತ್ವ ನಮ್ಮನ್ನು ಸಂಪೂರ್ಣವಾಗಿ ಆವರಿಸಿಕೊಂಡುಬಿಡುತ್ತದೆ. ಘಳಿಗೆಗೆ ಮೂರು ವೇಳೆ ಮೈಮುರಿಯುತ್ತೇವೆ. ನಮ್ಮ

ಅಂಕೆಯೇ ಇಲ್ಲದೆ ಬಾಯಿ ಬಿರಿಯುವಂತೆ ಆಕಳಿಸುತ್ತೇವೆ. ಹಾಗೇ ಸ್ವಲ್ಪಕಾಲ ಒದ್ದಾಡಿದ ಮೇಲೆ ನಿದ್ದೆ ಬರುವುದೂ ಉಂಟು. ಹೀಗೆ ಎರಡು ಮೂರು ಗಂಟೆಗಳ ಕಾಲ ಇಹಲೋಕದ ವ್ಯಾಪಾರವನ್ನು ತೊರೆದು ಸಮಾಧಿಸ್ಥರಾಗಿರುತ್ತೇವೆ. ಅನಂತರ ಇದ್ದಕ್ಕಿದ್ದಹಾಗೆಯೇ ಎಚ್ಚರವಾಗುತ್ತದೆ. ಮಲಗಿದ್ದುದು ಮಧ್ಯಾಹ್ನವೇ ಆಗಿದ್ದರೂ ಕೆಲವು ವೇಳೆ ರಾತ್ರಿ ಕಳೆದು ಬೆಳಗಾಯಿತೆಂಬ ಭ್ರಾಂತಿಯುಂಟಾಗುತ್ತದೆ. ನೇರವಾಗಿ ಬಚ್ಚಲು ಮನೆಗೆ ಹಲ್ಲುಜ್ಜಲು ಹೊರಡುತ್ತೇವೆ. ಅನಂತರ ಸುತ್ತಿನ ಸನ್ನಿವೇಶ, ಜನರು ಮಾಡುತ್ತಿರುವ ಕೆಲಸ ಇವುಗಳನ್ನು ಗಮನಿಸಿ ವಾಸ್ತವ ಪ್ರಪಂಚಕ್ಕೆ ಕ್ರಮವಾಗಿ ಬರುವುದು ಸಾಧ್ಯವಾಗುತ್ತದೆ.

ಕೆಲವು ವೇಳೆ ಪ್ರಯತ್ನಿಸಿದರೂ ಈ ರೀತಿ ಪುರಸೊತ್ತಿದ್ದಾಗ ನಿದ್ದೆ ಬರುವುದಿಲ್ಲ. ಬೇಡದ ಕೆಲಸದ ಕಡೆಗೇ ಮನಸ್ಸು ನಮ್ಮನ್ನು ಎಳೆಯುತ್ತದೆ. ಹೀಗೆ ಬೇಡದ ಕೆಲಸ ಮಾಡಲು ಹೊರಟು ಕೈಕಾಲು ಮುರಿದುಕೊಳ್ಳುವುದೂ ಉಂಟು. ಹಾಗೆ ಅವಘಡ ವೇನಾದರೂ ಸಂಭವಿಸಿದರೆ ಅದರ ಯಾತನೆ ಅತಿಯಾಗಿ ಕಾಣುವುದಿಲ್ಲ. ಯಾರ ಬಲವಂತವೂ ಇಲ್ಲದೆ ತಾನಾಗಿಯೇ ಆ ಕೆಲಸ ಮಾಡಲು ಹೊರಟುದರಿಂದ ಆ ಯಾತನೆ ಸಹ್ಯವೆನ್ನಿಸುತ್ತದೆ.

ಪುರಸೊತ್ತಿದ್ದಾಗ ಬಗೆಬಗೆಯ ಚಪಲಗಳು ನಮ್ಮನ್ನು ಕಾಡುತ್ತವೆ. ಏನಾದರೂ ತಿಂದು ಬಾಯಾಡಿಸುತ್ತಿರಬೇಕೆಂಬುದು ಅಂಥ ಚಪಲಗಳಲ್ಲಿ ಒಂದು. ಮಧ್ಯಾಹ್ನ ಉಳಿದವರೆಲ್ಲರೂ ನಿದ್ದೆಮಾಡುವುದರಲ್ಲಿಯೋ ಅಥವಾ ಇನ್ನೇನಾದರೂ ಕೆಲಸದಲ್ಲಿ ನಿರತರಾಗಿದ್ದಾಗ ನಮಗೆ ಪಾಕಶಾಲೆಯಲ್ಲಿ ಬೇಟೆಯಾಡಬೇಕೆನ್ನಿಸುತ್ತದೆ. ಅಲ್ಲಿಗೆ ಹೋದಾಗ ನಮ್ಮ ಸ್ಥಿತಿ ಕಣ್ಣುಕಟ್ಟಿ ಕಾಡಿಗೆ ಬಿಟ್ಟಂತಾಗುತ್ತದೆ. ಸಂಸಾರ ವನ್ನು ಹೊಸದಾಗಿ ಹೂಡಿದಾಗ ಮನೆಯಾಕೆ ಉತ್ಸಾಹದಿಂದ ಸಾಮಾನಿನ ಡಬ್ಬಗಳ ಮೇಲೆಲ್ಲಾ ಅವುಗಳು ಒಳಗೊಂಡಿರುವ ಪದಾರ್ಥಗಳ ಹೆಸರಿನ ಚೀಟಿಗಳನ್ನು ಅಂಟಿಸಿರುತ್ತಾರೆ. ಆದರೆ ಕಾಲ ಸಮೆದಂತೆ ಆ ಚೀಟಿಗಳು ಹೊಗೆಹಿಡಿದು ಮಂಕಾ ಗಿಯೋ ಅಥವಾ ಹವಾಗುಣಕ್ಕೆ ಬಲಿಯಾಗಿ ಮಾಯವಾಗಿಯೋ ಇರುತ್ತವೆ. ಒಂದೊಂದು ವೇಳೆ ಅಪರೂಪವಾಗಿ ಒಂದೊಂದು ಚೀಟಿ ಡಬ್ಬಗಳನ್ನು ಬಿಡದೆ ಅಂಟಿಕೊಂಡಿದ್ದರೂ 'ನೆಲಗಡಲೆಕಾಯಿ' ಎಂದು ಅಂಟಿಸಿರುವ ಡಬ್ಬವನ್ನು ತೆಗೆಯಲು ಹೊರಟರೆ ಡಬ್ಬದ ಮುಚ್ಚಲ ಬಹಳ ಬಿಗಿಯಾಗಿದ್ದು ನಮ್ಮ ಸಾಮಾನ್ಯ ಎಳೆತಕ್ಕೆ ಬರುವುದಿಲ್ಲ. ಆದರೆ ಇಂಥ ಅಡಚಣೆಗಳಿಗೆ ಮನಸೋತು ನಿಂತರೆ ಸರಿಯೆ? ಒಂದು ಚಮಚವನ್ನೋ ಅಥವಾ ಅಂಥ ಇನ್ನಾವುದಾದರೂ ಆಯುಧವನ್ನೋ ಹೊಂದಿಸಿ ಕೊಂಡು ಆ ಮುಚ್ಚಲವನ್ನು ತೆಗೆದ ಮೇಲೆ ಆ ಡಬ್ಬದಲ್ಲಿ ಮೆಣಸಿನಕಾಯಿಯೋ

ಅಥವಾ ಸಾಸಿವೆಯೋ ಇರುತ್ತದೆ! ಅಂತೂ ಹೀಗೆ ಸಂಶೋಧನೆ ನಡೆಸಿ ಕೆಲವು ವೇಳೆ ಚೂರುಪಾರು ತಿಂಡಿಯನ್ನೋ ಅಥವಾ ಕಾಯಿ ಕೊಬ್ಬರಿಯನ್ನೋ ಹೊಂದಿಸಿ ಕೊಂಡು ಚಪಲ ತೀರಿಸಿಕೊಳ್ಳುತ್ತೇವೆ. ಆದರೆ ಅನೇಕ ವೇಳೆ ಅಂತಹುದೇನೂ ಸಿಕ್ಕು ವುದಿಲ್ಲ. ಆಗ ಭಂಡತನದಿಂದ ಒಂದು ಚಮಚ ಸಕ್ಕರೆಯನ್ನಾದರೂ ತಿಂದು ಹಿಂತಿರುಗುವುದುಂಟು.

ಇಂಥ ವಿಹಾರಸಮಯದಲ್ಲಿ ಕೆಲವು ಬಿಕ್ಕಟ್ಟಿನ ಪ್ರಸಂಗಗಳೂ ಒದಗಿ ನಮಗೆ ಬೇಸರವನ್ನುಂಟುಮಾಡುತ್ತವೆ. ಪಾಕಶಾಲೆಯನ್ನು ಪ್ರವೇಶಿಸಿದಾಗ ಎಷ್ಟೋ ಗುಟ್ಟಾಗಿ, ತುಸವೂ ಶಬ್ದವಾಗದಂತೆ ಓಡಾಡುವ ಪ್ರಯತ್ನ ಮಾಡುತ್ತೇವೆ. ಆದರೆ ಚಟುವಟಿಕೆಯನ್ನು ನಡೆಸುವಾಗ ಒಂದೊಂದು ವೇಳೆ ನಮ್ಮ ಎಚ್ಚರ ಸಾಲದಾಗು ತ್ತದೆ. ಒಂದು ಡಬ್ಬವೋ ಅಥವಾ ಅದರ ಮುಚ್ಚಲವೋ ಕೈಜಾರಿ ನೆಲಕ್ಕೆ ಬೀಳುವುದೂ ಉಂಟು. ಅಷ್ಟು ಸಾಕು; ಅಡಿಗೆಯ ಮನೆಯಲ್ಲಿ ಇಲಿಯೋ ಬೆಕ್ಕೋ ಹಾವಳಿ ಮಾಡುತ್ತಿದೆ ಎಂದುಕೊಂಡು ನಿದ್ರಾಭಂಗವಾದ ಕೋಪದಿಂದ ಕೋಲು ಹಿಡಿದು ಅಡಿಗೆ ಮನೆಗೆ ನುಗ್ಗುತ್ತಾರೆ. ಆಗ ನಮ್ಮ—ನಾವು ಎಂದು ತಿಳಿದ ಮೇಲೆ ಅವರ—ಸ್ಥಿತಿಯನ್ನು ಯೋಚಿಸಿ.

ಇಷ್ಟು ಹೇಳಿದ ಮೇಲೆ ನಮ್ಮ ಮನೆಯ ಒಂದು ವಿಶೇಷ ಪರಿಸ್ಥಿತಿಯನ್ನು ಈ ಸಂದರ್ಭದಲ್ಲಿ ತಿಳಿಸಬಹುದು.

ನಮ್ಮ ಮನೆಯಲ್ಲಿ ಒಬ್ಬರು ಅಜ್ಜಿ ಇದ್ದಾರೆ. ಆಕೆ ಹಣ್ಣು ಹಣ್ಣು ಮುದುಕಿ. ಈಗ ಸುಮಾರು ಎಂಭತ್ತು ವರ್ಷ ವಯಸ್ಸಿರಬಹುದು. ಅವರಿಗೆ ಕಣ್ಣು ಚೆನ್ನಾಗಿ ಕಾಣಿಸುವುದಿಲ್ಲ. ಆದುದರಿಂದ ನಮ್ಮ ಮನೆಯ ಉಗ್ರಾಣವನ್ನೇ ತಮ್ಮ ಮುಖ್ಯ ನೆಲೆಯನ್ನಾಗಿ ಮಾಡಿಕೊಂಡಿದ್ದಾರೆ. ನಮ್ಮ ಅಡಿಗೆಯ ಮನೆಯು ಉಗ್ರಾಣದ ಎದುರಿಗೇ ಇರುವುದರಿಂದ ಅಡಿಗೆಯ ಮನೆಗೆ ಅವರದು ಸರ್ಪಕಾವಲು. ಯಾರು ಅಡಿಗೆಯ ಮನೆಗೆ ಪ್ರವೇಶಿಸಿದರೂ ಕಾಲಸಪ್ಪಳದ ಶಬ್ದ ಕೇಳಿ ಪತ್ತೆ ಮಾಡುತ್ತಾರೆ. ಅವೇಳೆಯ ಹೊತ್ತಿನಲ್ಲಿ ಅಡುಗೆಯ ಮನೆಗೆ ಬರುವವರು ಮಕ್ಕಳು ಮಾತ್ರ ಎಂಬುದು ಅವರ ದೃಢವಾದ ನಂಬಿಕೆ. ಎಲ್ಲಿ ಮಡಿ ಹುಡಿಯಲ್ಲಿ ಮುಚ್ಚಿಟ್ಟ ಪದಾರ್ಥಗಳನ್ನು ಮುಟ್ಟಿಬಿಡುವರೋ ಎಂಬ ಆತಂಕ. ಅದರಲ್ಲೂ ಹಬ್ಬ ಹರಿದಿನಗಳ ಹಿಂದಿನ ದಿನ ಗಳಲ್ಲಂತೂ ಹಬ್ಬದ ತಿಂಡಿಗಳನ್ನೇನಾದರೂ ಮಾಡಿ ಮುಚ್ಚಿಟ್ಟಾಗಲಂತೂ ದೇವರ ನೈವೇದ್ಯಕ್ಕೆ ಮುಂಚೆ ಎಲ್ಲಿ ಈ ತುಂಟಮಕ್ಕಳು ರುಚಿ ನೋಡಿಬಿಡುವರೋ ಎಂಬ ಕಳವಳ ಅವರಿಗೆ. ದೊಡ್ಡವರು, ಜವಾಬ್ದಾರಿಯನ್ನರಿತವರು ಹಾಗೆಲ್ಲಾ ಅಡಿಗೆಯ ಮನೆಗೆ ನುಗ್ಗುವವರಲ್ಲ ಎಂಬ ಭಾವನೆ ಅವರಿಗೆ. ಆದುದರಿಂದ ಕಾಲುಸಪ್ಪಳ

ಕೇಳಿದೊಡನೆಯೇ "ಯಾರೋ ಅದು? ಕಳ್ಳ! ಯಾರೂ ಕಾಣದ ಹಾಗೆ ನುಗ್ಗಿದೆಯಾ?" ಎಂದು ಗದರಿಸುತ್ತಾರೆ. ಒಮ್ಮೊಮ್ಮೆ "ತಡಿ, ಅವಳನ್ನು ಕರೆಯುತ್ತೇನೆ" ಎಂದು ಹೆದರಿಸುವುದೂ ಉಂಟು. ಅಪರೂಪವಾಗಿ ಪುರಸೊತ್ತಾಗಿ ಅಡಿಗೆಯ ಮನೆಗೆ ನಾನೇನಾದರೂ ನುಗ್ಗಿದರೆ ಅವರಿಗೆ ಗೊತ್ತಾಗುವುದಿಲ್ಲ. ಮಕ್ಕಳೇ ಇರಬೇಕೆಂದುಕೊಂಡು ನಮಗೂ ಅದೇ ಅಸ್ತ್ರವನ್ನು ಪ್ರಯೋಗಿಸುತ್ತಾರೆ. 'ಅವಳ'ನ್ನು ಕರೆಯುವುದಾಗಿ ಬೆದರಿಸುವಾಗ ನನ್ನ ಪರಿಸ್ಥಿತಿ ಹೇಗಾಗಬಹುದು ಯೋಚಿಸಿಕೊಳ್ಳಿ. ಆದರೆ ಅದೊಂದು ರಸನಿಮಿಷವೆಂದೇ ನನ್ನ ಭಾವನೆ.

ಆಗಾಗ ಪಾಕಶಾಲೆಯಲ್ಲಿ ಪ್ರಯೋಗ ನಡೆಸಬೇಕು; ತಿನಸುಗಳ ಬಗ್ಗೆ ಪರಿಶೋಧನೆಗಳನ್ನು ನಡೆಸಬೇಕೆಂಬ ಹಂಬಲು ನಮ್ಮನ್ನು ಬಾಧಿಸುತ್ತದೆ. ತಿಂಗಳಲ್ಲಿ ಮೂರು ದಿನ ಪಾಕಶಾಲೆಯಲ್ಲಿ ಪ್ರವೇಶಕ್ಕೆ ಕರೆ ಬಂದಾಗ ವರ್ಣನಾತೀತವಾದ ಕೋಪ ಬರುತ್ತದೆ. ಮನೆಯವರ ಮೇಲೆಲ್ಲಾ ರೇಗಬೇಕೆನ್ನಿಸುತ್ತದೆ. ಆದರೆ ಮಾಡುವುದೇನು? ಹೇಳಲಾರದ ಸಂಕಟದಿಂದ ಆ ಮೂರು ದಿನ ಬದುಕನ್ನು ತಳ್ಳುತ್ತೇವೆ. ನಾವೇ ಹುಚ್ಚೆದ್ದು ಸ್ವಂತ ಇಚ್ಛೆಯಿಂದ ಪಾಕಸೃಷ್ಟಿಗೆ ತೊಡಗಿದಾಗ ಅನಿರ್ವಚನೀಯವಾದ ಆನಂದ; ಉತ್ಸಾಹ. ಹಾಗೆ ಪಾಕಶಾಲೆಗೆ ಹೊರಟರೆ ನಮ್ಮ ಮನೋರಮೆಯರು ನಮ್ಮನ್ನು ಸ್ವಾಗತಿಸಿಯಾರೇ? ಮುಖ ಸೊಟ್ಟಮಾಡಬಹುದು; ಹುಬ್ಬುಗಂಟುಹಾಕಿಕೊಳ್ಳಬಹುದು. ಸಾಕು, ನಿಲ್ಲಿಸಿ. ಇನ್ನು ಆ ಹರದ ತೆಗೆಯುವ ಹೊತ್ತಿಗೆ ಸಾಕಾಗಿಹೋಗುತ್ತೆ ಎಂದು ಮೂದಲಿಸಬಹುದು. ಈ ಬೆದರಿಕೆಗಳಿಗೆಲ್ಲಾ ಬಗ್ಗದಿದ್ದರೆ 'ಏನಾದರೂ ಮಾಡಿಕೊಳ್ಳಿ, ಹೋಗಿ. ನೀವೇನು ಎಳೆಯ ಮಕ್ಕಳೇ?' (ಹೀಗೆ ನಮ್ಮ ವಯಸ್ಸನ್ನು ನೆನಪುಮಾಡಿಕೊಟ್ಟು) ಎಂದು ತಾತ್ಸಾರದಿಂದ ಸುಮ್ಮನಾಗುತ್ತಾರೆ. ಆದರೆ ಅವರ ಈ ರೀತಿಯ ವಿರೋಧಕ್ಕೆ ಏನುಕಾರಣ ವಿರಬಹುದೆಂದು ನಾನು ಅನೇಕ ವೇಳೆ ಯೋಚಿಸಿದ್ದೇನೆ. ಓರಣವಾಗಿರುವ ಅಡಿಗೆಯ ಮನೆ ನಮ್ಮ ಕೈವಾಡದಿಂದ ಹದಗೆಡುವುದೆಂದು ಹೇಳುವ ಅವರ ವಾದವೇನೋ ನ್ಯಾಯವಾದದ್ದೇ. ಆದರೆ ಅದಕ್ಕಿಂತ ಮಿಗಿಲಾಗಿ ಅವರಿಗೆ ಒಂದು ವಿಚಿತ್ರ ಭಯವೂ ಉಂಟು. ನಾವು ನಡೆಸುವ ಪ್ರಯೋಗದಿಂದ ಸಿದ್ಧವಾಗುವ ರಸಾಯನವೇನಾದರೂ ಚೆನ್ನಾಗಿಬಿಟ್ಟರೆ ಅದರಿಂದ ಸ್ತ್ರೀಯರಿಗೆ ಅಭಿಮಾನಭಂಗವಾದಂತಲ್ಲವೆ? ಅಷ್ಟೇ ಅಲ್ಲ. ಅದರಲ್ಲಿ ಇನ್ನೂ ಸ್ವಾರಸ್ಯವಿದೆ. ಉದ್ಯೋಗದಲ್ಲಿ ಮೇಲುಗೈ ಆದರೆ ಹೆಂಗಸಿಗೆ ಬಡಾಯಿ ಹೆಚ್ಚು. ಅಡಿಗೆಯಲ್ಲಿ ಮೈಲುಗೈ ಆಗಿಬಿಟ್ಟರೆ ಅವರನ್ನು ಹಿಡಿಯುವವರುಂಟೆ? ಕೊಂಬು ಕಹಳೆಗಳನ್ನೂದಿಸಿಕೊಂಡು ನಮ್ಮ ಕೈಚಳಕದ ವಿಷಯವಾಗಿ ಜಂಭಕೊಚ್ಚಿಕೊಳ್ಳುತ್ತೇವೆ. ನಳ ಭೀಮಸೇನರ ಹೆಸರುಗಳನ್ನು ಹೇಳಿ ನಾವೂ ಅವರ

ಪಂಕ್ತಿಗೆ ಸೇರಿದವರೆನ್ನುತ್ತೇವೆ. ಅನಾದಿಯಿಂದ ಅನೂಚಾನವಾಗಿ ಅಡಿಗೆ ತಮ್ಮ ಆಜನ್ಮಸಿದ್ಧ ಹಕ್ಕು, ಪಾಕಶಾಲೆಯೇ ತಮ್ಮ ಮುಖ್ಯ ಕಾರ್ಯರಂಗವೆಂದು ಹೇಳಿ ಕೊಳ್ಳುವ ಹೆಂಗಸರನ್ನು ಹಿಯ್ಯಾಳಿಸುತ್ತೇವೆ. ಆ ಕಾರಣದಿಂದ ಹೆಂಗಸರು ನಮ್ಮ ಉತ್ಸಾಹವನ್ನು ಕುಗ್ಗಿಸಿ ಪಾಕಶಾಲೆಗೆ ಪ್ರವೇಶಮಾಡಲು ಅಡ್ಡಿಮಾಡಬಹುದು. ಆದರೆ ಅವರ ಆರ್ಭಟಕ್ಕೆ ಹೆದರಿ ಸೋತವರುಂಟೆ? ಸೋತು ಬದುಕಿದವರುಂಟೆ?

ಹಟ ಹಿಡಿದು ಅಡಿಗೆಯ ಮನೆಗೆ ಮುತ್ತಿಗೆ ಹಾಕಿ ಒಲೆಯ ಮುಂದೆ ಕುಳಿತು ಬೇಕಾದ ಸಾಮಗ್ರಿಗಳೆಲ್ಲವನ್ನೂ ಕೂತೆಡೆಗೇ ತರಿಸಿಕೊಂಡು ಒಂದು ಗತ್ತಿನಿಂದ ಪ್ರಯೋಗಕ್ಕೆ ಆರಂಭಿಸಬೇಕು. ಏನಾದರೂ ಕೆಟ್ಟಿತೋ, ಪ್ರತಿಷ್ಠೆಯನ್ನು ಬದಿಗಿಟ್ಟು ಆಳುದ್ದ ಶರೀರವನ್ನು ಗೇಣುದ್ದ ಮಾಡಿಕೊಂಡು ಮೌನವಾಗಿ ನಮ್ಮ ಕೊಠಡಿಯ ಕಡೆಗೆ ಸದ್ದಿಲ್ಲದೆ ಹೊರಡುತ್ತೇವೆ. ಆದರೆ, ಪುಣ್ಯವಶದಿಂದ ನಮ್ಮ ಪ್ರಯತ್ನ ಸಫಲ ವಾಗಿಬಿಟ್ಟರೆ ಚತುರ್ಭುಜ ಮಾಡಿಕೊಂಡು ಬೆನ್ನುತಟ್ಟಿಕೊಳ್ಳಬಹುದು. ಹೀಗೆ ಪುರ ಸೊತ್ತಿದ್ದಾಗ ಪಾಕಶಾಸ್ತ್ರದ ವಿಜ್ಞಾನಿಯಾಗುವುದೂ ಒಂದು ಹವ್ಯಾಸ.

ಸಾಮಾನ್ಯವಾಗಿ ನಿತ್ಯವೂ ನಾವು ನಡೆಸುವ ಕೆಲಸವನ್ನು ಕೇವಲ ಫಲಾಪೇಕ್ಷೆ ಯಿಂದ ಮಾಡುತ್ತೇವೆ. ನಮ್ಮ ಬುದ್ಧಿಯೆಲ್ಲವನ್ನೂ ಉಪಯೋಗಿಸುತ್ತೇವೆ. ದೇಹ ಶ್ರಮಪಡುತ್ತೇವೆ. ಈ ಕೆಲಸವನ್ನು ನಡೆಸುವುದರಲ್ಲಿ ಸಂತೋಷವೇನೂ ಇಲ್ಲ. ನಿರ್ವಾಹವಿಲ್ಲದ ದುಡಿತ ಅದು. ಆದರೆ ಈ ದುಡಿತ ಬೇಸರವಾಗಿ ಒಮ್ಮೊಮ್ಮೆ ಮೇಲೆ ಹೇಳಿರುವ ರೀತಿಗಳಲ್ಲಿ ವಿಹರಿಸಲು ತೊಡಗುತ್ತೇವೆ. ಬೇಡದ ಕೆಲಸವನ್ನು ಫಲದ ದೃಷ್ಟಿಯಿಲ್ಲದೆ ಮಾಡಲು ಹೊರಟಾಗಲೂ ದೇಹಶ್ರಮವಿದೆ. ಬುದ್ಧಿಯನ್ನು ಉಪಯೋಗಿಸಬೇಕಾದ ಅಗತ್ಯವುಂಟು. ಆದರೆ ಈ ದೇಹಶ್ರಮದಿಂದ ಮನಸ್ಸಿಗೆ ಆಯಾಸವುಂಟಾಗುವುದಿಲ್ಲ. ಇತರರ ಮೆಚ್ಚಿಗೆಗಾಗಿ ಮಾಡುವ ಕೆಲಸವಲ್ಲ; ಕೆಲಸದ ಪರಿಣಾಮ ಏನಾದರೂ ಸರಿಯೆ. ತೃಪ್ತಿಯುಂಟು; ಸಂತೋಷ ಉಂಟು.

ಅನೇಕ ವೇಳೆ ಇಂಥ ಕೆಲಸಗಳಿಂದಲೇ ನಿಜವಾದ ಪ್ರಯೋಜನ ದೊರೆಯುತ್ತದೆ. ಅನಿರೀಕ್ಷಿತವಾಗಿ ದೊರೆಯುವ ಆನಂದ ಸ್ವಚ್ಛವಾದುದು. ಆದುದರಿಂದಲೇ ಇರ ಬಹುದು ಶ್ರೀ ಕೃಷ್ಣ ಗೀತೆಯಲ್ಲಿ ಹೇಳಿದ್ದು:

'ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ'

ಎಂದು.

ಎ. ಕೃಷ್ಣಮೂರ್ತಿ.

ಗಾಥಾಸಪ್ತಶತಿಯಿಂದ

೧

ಕೈ ನೋಯುವಂದದೊಳವನನು ಹೊಡೆದಂದು
ಬಾಯಿಂದ ಊದಿದನೆಲರ
ನಗುಬಂದು ಮತ್ತೊಂದು ಕೈಯಿಂದ ನಾನೊಲಿದು
ಬರಸೆಳೆದು ತಬ್ಬಿದೆ ಕೊರಳ.

೨

ಹೊಸಹೊಸ ಹೂಗಳ ರಸವನು ಹೀರಲು
ದುಂಬಿ ತಾನಾಶಿಸಿ ಬರಲು ;
ತಪ್ಪು ದುಂಬಿಯದಲ್ಲ ರಸವನು ಕಳಕೊಂಡ
ಹೂಗಳೆ ಆಹ ದೋಷಿಗಳು !

೩

ಮರೆ ಮೋಸವಿಲ್ಲದ ಒಲುಮೆ ಇಲ್ಲವೆ ಇಲ್ಲ
ಮಾನವಲೋಕದೊಳತ್ತೆ !
ಇರೆ, ವಿರಹವಾರಿಗೆ ಬರುವುದು ? ಬಂದರೆ
ಬದುಕುವರಾರೆಂತು ಮತ್ತೆ ?

೪

ಜಿಂಕೆಯು ಚರ್ಮಕೆ ಬೇಡರ ಹುಡುಗರ-
ನಿನ್ನಾರನಾದರು ಕೇಳು
ಪಥಿಕನೆ ಯುವಕನು ನಮ್ಮ ವನೆತ್ತನು
ಬಿಲ್ಲನು ಸಾಧು ಹುಲ್ಲೆಯೊಳು.

ಎಸ್. ವಿ. ಪರಮೇಶ್ವರ ಭಟ್ಟ.

ಕವಿಗೆ ಕವಿ ಮಣಿವನ್

ಕನ್ನಡಸಾಹಿತ್ಯದ ನೆಲೆಬೆಲೆಗಳನ್ನು ಗೊತ್ತುಪಡಿಸಲು ಇಂಗ್ಲಿಷ್ ಸಾಹಿತ್ಯದಿಂದ ಪರಮಪ್ರಯೋಜನವುಂಟಾಯಿತೆಂಬುದು ನಿರ್ವಿವಾದವಾದ ವಿಷಯವಾಗಿದೆ. ಆ ಸಾಹಿತ್ಯದ ಸಂಪರ್ಕದಿಂದ ಹೊಸಕಾವ್ಯಪದ್ಧತಿಗಳು ನಮ್ಮಲ್ಲಿ ರೂಢಿಗೆ ಬಂದವು. ಹೀಗೆ ಕನ್ನಡವಾಗ್ದೇವಿಗೆ ಕಡಲರಾಣಿ ಕೊಟ್ಟ ಕಾಣಿಕೆಗಳಲ್ಲಿ ಅಷ್ಟಷಟ್ಪದಿ (Sonnet)ಯೂ ಒಂದು. ಈಗ ಕನ್ನಡದಲ್ಲಿ ಸಾಕಷ್ಟು ಬಳಕೆಯಲ್ಲಿರುವ ಈ ಪದ್ಯ ಭೇದ 'ಸುನೀತ'ವೆಂಬ ಮತ್ತೊಂದು ಹೆಸರನ್ನು ತಳೆದು ಪ್ರಚಾರದಲ್ಲಿದೆ. ಈ ಪದ್ಯಭೇದದ ಲಕ್ಷಣಗಳನ್ನು ವಿವರವಾಗಿ ಹೇಳಲು ಇಲ್ಲಿ ಸಾಧ್ಯವಿಲ್ಲ. ಸ್ಥೂಲವಾಗಿ ಇದರ ಲಕ್ಷಣವನ್ನು ಹೀಗೆ ಹೇಳಬಹುದು. ಅಷ್ಟಷಟ್ಪದಿಯ ಹೆಸರೇ ಸೂಚಿಸುವಂತೆ ಇದು ಹದಿನಾಲ್ಕು ಸಾಲಿನ ಪದ್ಯ. ಮೊದಲೆಂಟು ಸಾಲುಗಳಲ್ಲಿ ಮೂಡಿಬಂದ ಭಾವ, ಉಳಿದ ಆರು ಸಾಲುಗಳಲ್ಲಿ ವಿಸ್ತಾರಗೊಳ್ಳುವುದೇ ಈ ಸಾನೆಟ್ ಪದ್ಯದ ವೈಶಿಷ್ಟ್ಯ. ಸಣ್ಣಪುಟ್ಟ ಕವಿಗಳ ಮಾತು ಹಾಗಿರಲಿ. ಈ ತೆರನಾದ ಕೃತಿರಚನೆಯಲ್ಲಿ ಶ್ರೀಯುತರಾದ ಶ್ರೀನಿವಾಸ, ಕುವೆಂಪು, ದ. ರಾ. ಬೇಂದ್ರೆ, ಪು. ತಿ. ನರಸಿಂಹಾಚಾರ್—ಇವರು ಸಿದ್ಧಹಸ್ತರಾಗಿದ್ದಾರೆ.[1] ಈ ಮಹನೀಯರು ರಚಿಸಿರುವ ಅಷ್ಟಷಟ್ಪದಿಗಳು ಹೊರರೂಪಕ್ಕೆ ಹದಿನಾಲ್ಕು ಸಾಲುಗಳನ್ನೊಳಗೊಂಡಿದ್ದರೂ, ರಚನೆಯಲ್ಲಿ ಒಂದೇ ಕಟ್ಟಿಗೆ ಒಳಪಡದೆ ವೈವಿಧ್ಯಪೂರ್ಣವಾಗಿವೆ. ಪ್ರಕೃತದಲ್ಲಿ ಶ್ರೀ ಪು. ತಿ. ನ. ಅವರ ಸುಪ್ರಸಿದ್ಧ ಕವನಸಂಗ್ರಹವಾದ 'ಗಣೇಶದರ್ಶನ'ದಲ್ಲಿ ಬರುವ 'ಕವಿ ಬೇಂದ್ರೆಯವರನ್ನು ಕುರಿತು' ಎಂಬ ಅಷ್ಟಷಟ್ಪದಿಯನ್ನು ಕುರಿತು ಕೆಲವು ಮಾತುಗಳನ್ನು ಹೇಳಲು ಇಲ್ಲಿ ಯತ್ನಿಸಿದೆ.

ಈ ಕವನದ ಹಿರಿಮೆಯಾದರೂ ಏನು?

ಈ ಅಷ್ಟಷಟ್ಪದಿಯಲ್ಲಿ ಪ್ರತಿಪಾದಿತವಾಗಿರುವ ವಿಷಯ ವ್ಯಕ್ತಿಪ್ರಶಂಸೆ ಎನ್ನುವುದಕ್ಕಿಂತ ಕವಿಕೃತಿಗಳ ಗುಣಗಾನ ಎಂದು ಹೇಳುವುದೇ ನನಗೆ ಮೇಲೆನಿಸುತ್ತದೆ.

---

1 'ಮಲಾರ' ಎಂಬುದು ಶ್ರೀ ಶ್ರೀನಿವಾಸರಿಂದ ರಚಿತವಾದ ಅಷ್ಟಷಟ್ಪದಿಗಳನ್ನೊಳಗೊಂಡ ಕವನಸಂಗ್ರಹ. 'ಕೃತ್ತಿಕೆ' ಶ್ರೀ ಕುವೆಂಪು ಅವರ ಅಷ್ಟಷಟ್ಪದಿಗಳ ಕವನಸಂಗ್ರಹ. ಬೇಂದ್ರೆ ಶ್ರೀ ಪು.ತಿ.ನ. ರವರ ಅಷ್ಟಷಟ್ಪದಿಗಳು ಅವರ ಕವನಸಂಗ್ರಹಗಳಲ್ಲಿ ಚದುರಿಹೋಗಿವೆ. ಶ್ರೀ ಬೇಂದ್ರೆಯವರು ಅಷ್ಟಷಟ್ಪದಿಯನ್ನೇ ಕುರಿತು ಅಷ್ಟಷಟ್ಪದಿಯನ್ನು ಬರೆದಿರುವುದು ಇಲ್ಲಿ ಗಮನಾರ್ಹ.

ಪ್ರತಿಭಾನ್ವಿತರೆಂದು ಹೆಸರುಗೊಂಡು, ಅತ್ಯುತ್ಕೃಷ್ಟವಾದ ಅನೇಕ ಕೃತಿಗಳನ್ನು ರಚಿಸಿದ ಸಮಕಾಲೀನ ಕವಿಯೊಬ್ಬರು, ತಮ್ಮಷ್ಟೇ ಪ್ರತಿಭಾವಂತರೆಂದು ಕೀರ್ತಿಗೊಂಡ ಮತ್ತೊಬ್ಬ ಸಮಕಾಲೀನ ಕವಿಯನ್ನು 'ರಸಾರ್ದ್ರಸ್ವಾಂತ'ರಾಗಿ ಬಾಯಿತುಂಬ ಹೊಗಳುವದೇ ಈ ಕವನದ ಹಿರಿಮೆ. ಅರಿಷಡ್ವರ್ಗಗಳಲ್ಲಿ ಮಾತ್ಸರ್ಯವೂ ಒಂದು. ಕರುಬುವುದು ಮಾನವನ ಹುಟ್ಟುಗುಣ. ಪ್ರತಿಭೆ, ಬುದ್ಧಿ, ವಿದ್ಯೆ, ಐಶ್ವರ್ಯ ಅಧಿಕಾರಪದವಿಗಳನ್ನುಳ್ಳವರು ತಮಗೆ ಸಮಸ್ಪರ್ಧಿಗಳಾಗಿರುವವರನ್ನು ಕಂಡು ಕರುಬುವುದು ಸಹಜ. ಹಾಗಲ್ಲದಿದ್ದರೆ 'ಬೋದ್ಧಾರೋ ಮತ್ಸರಗ್ರಸ್ತಾಃ',[2] 'ವಾಕ್‌ಶ್ರೀಯುತನೊಳ್ ಅಮತ್ಸರತ್ವಂ ಆಗದು[3]', 'ಕವಿಗೆ ಕವಿ ಮುನಿವಂ'[4] ಎಂಬ ಸೂಕ್ತಿಗಳು ನಮ್ಮಲ್ಲಿ ಬಳಕೆಗೆ ಬರುತ್ತಿರಲಿಲ್ಲ. ಕುಕವಿ ನಿಂದೆಗೆ ಕಾವ್ಯದಲ್ಲಿ ಸ್ಥಾನ ದೊರೆಯುತ್ತಿರಲಿಲ್ಲ. ಷೇಕ್ಸ್‌ಪಿಯರ್ ಮಹಾಕವಿ ತನ್ನ ಜೀವಿತಕಾಲದಲ್ಲಿ ಸಮಕಾಲೀನ ನಾಟಕಕಾರನೊಬ್ಬನು ನುಡಿದ 'Upstart Crow' ಎಂಬ ಕಟೂಕ್ತಿಯನ್ನು ಕೇಳಬೇಕಾಯಿತು.[5] 'ಮಾಳವಿಕಾಗ್ನಿಮಿತ್ರ' ನಾಟಕದಲ್ಲಿ ತನ್ನನ್ನು 'ವರ್ತಮಾನ ಕವಿ'ಯೆಂದು ತೆಗಳಿದವರಿಗೆ ಕಾಳಿದಾಸನು ಎಂಥ ಸಮಾಧಾನವನ್ನು ಹೇಳಬೇಕಾಯಿತು![6] ಪಂಪನಂತಹ 'ಸುಕವಿಯಶೋನಿರ್ಮತ್ಸರ'ರಿದ್ದರೆ ಅಂತಹವರು ವಿರಳ. ಆದರೆ ಕನ್ನಡದ ಪುಣ್ಯವೆಂಬಂತೆ ಮೇಲೆ ಹೇಳಿದ ನಾಲ್ವರು ಮಹನೀಯರೂ ಸುಕವಿಯಶೋನಿರ್ಮತ್ಸರರಾಗಿದ್ದಾರೆ.[7]

ಈ ಕವನದ ವಿಷಯವನ್ನು ಮೂರು ಭಾಗವಾಗಿ ವಿಂಗಡಿಸಬಹುದು. ಕವನದ ಮೊದಲ ಐದು ಪಂಕ್ತಿಗಳು ಶ್ರೀ ಬೇಂದ್ರೆಯವರ ಕೃತಿಗಳಲ್ಲಿರುವ ಯಾವ ಗುಣಗಳು

---

[2] ಭರ್ತೃಹರಿ, ನೀತಿಶತಕ.

[3] ಗದಾಯುದ್ಧ ಸಂಗ್ರಹ ೧-೧೭.

[4] ಶಬ್ದಮಣಿದರ್ಪಣ.

[5] ಷೇಕ್ಸ್‌ಪಿಯರ್ ಸತ್ತಮೇಲೆ ಅವನ ನಾಟಕಗಳ ಸಂಪುಟಕ್ಕೆ ಮುನ್ನುಡಿಯಾಗಿ ಅವನ ಸಮಕಾಲೀನ ವಿದ್ವತ್‌ಕವಿ ಬೆನ್‌ಜಾನ್‌ಸನ್ ಒಂದು ಸೊಗಸಾದ ಕವನವನ್ನು ಬರೆದನು.

[6] ಪುರಾಣಮಿತ್ಯೇವ ನ ಸಾಧು ಸರ್ವಂ
ನ ಚಾಪಿ ಕಾವ್ಯಂ ನವಮಿತ್ಯವದ್ಯಮ್ |
ಸಂತಃ ಪರೀಕ್ಷ್ಯಾನ್ಯತರದ್ಭಜಂತೇ
ಮೂಢಃ ಪರಪ್ರತ್ಯಯನೇಯ ಬುದ್ಧಿಃ ||

[7] ಪಂಜೆಯವರನ್ನು ಕುರಿತು ಶ್ರೀ ಕುವೆಂಪು ಅವರು ಬರೆದ ಅಷ್ಟಷಟ್ಪದಿ, ಶ್ರೀಯವರನ್ನು ಕುರಿತು ಶ್ರೀ ದ. ರಾ. ಬೇಂದ್ರೆಯವರ ಸುನೀತ, ಶ್ರೀ ಶ್ರೀನಿವಾಸರು ಬರೆದಿರುವ ವ್ಯಕ್ತಿಪ್ರಶಂಸಾತ್ಮಕವಾದ ನಾಲ್ಕಾರು ಸಾನೆಟ್ಟುಗಳು ಈ ಹೇಳಿಕೆಗೆ ಸಾಕ್ಷಿ.

ಶ್ರೀ ಪು. ತಿ. ನ. ಅವರ ಮನಸ್ಸನ್ನು ಸೆರೆಹಿಡಿದವೆಯೆಂಬುದನ್ನು ವಿವರಿಸುತ್ತವೆ. ಮುಂದಿನ ಐದು ಸಾಲುಗಳು ಶ್ರೀ ಬೇಂದ್ರೆಯವರು ಮೊಟ್ಟಮೊದಲು ಕವಿಗಳಾಗಿ ಕಾಣಿಸಿಕೊಂಡಾಗ ಇದ್ದ ಕನ್ನಡ ನುಡಿಯ ದುರವಸ್ಥೆಯನ್ನು ಕಣ್ಣಿಗೆ ಕಟ್ಟುವಂತೆ ಬಣ್ಣಿಸುತ್ತವೆ. ಇನ್ನುಳಿದ ಸಾಲುಗಳಲ್ಲಿ ಹೇಳಿರುವ ವಿಷಯ ಶ್ರೀ ಬೇಂದ್ರೆಯವರಿಂದ ಕನ್ನಡಕ್ಕೆ ಸಂದಿರುವ ಸೇವೆಯನ್ನು ಕುರಿತದ್ದು.

ಈ ಕವನದ ಮೊದಲಲ್ಲಿ ಬರುವ 'ಕವೀಶ್ವರ' 'ಸುಹೃದ್ವರ' ಎಂಬ ಸಂಬೋಧನೆಗಳನ್ನು ಕುರಿತು ಎರಡು ಮಾತು :—ಈಶ್ವರ ಎಂಬ ಮಾತಿಗೆ ಶ್ರೇಷ್ಠ ಎಂಬ ಅರ್ಥವನ್ನಿಟ್ಟುಕೊಂಡರೆ ಶ್ರೀ ಬೇಂದ್ರೆಯವರು ಕವಿಶ್ರೇಷ್ಠರೆಂಬ ನಿರ್ವಿವಾದವಾದ ಅಂಶವನ್ನು ಮತ್ತೆ ಕನ್ನಡಲೋಕಕ್ಕೆ ಸಾರಬೇಕಾಗಿಲ್ಲ. ಅವರು ಸುಹೃದ್‌ವರರು (ಸುಮನಸರು, ಸಹೃದಯ ಶ್ರೇಷ್ಠರು, ಮಿತ್ರಶ್ರೇಷ್ಠರು) ಎಂಬ ಅಂಶವು ಅಷ್ಟೇ ಸತ್ಯ. ಒಮ್ಮೆ ಅವರೊಡನೆ ಮಿಳಿತವಾದರೆ ಸಾಕು, ರಸಿಕರಿಗೆ ಅವರ ಮಾತಿನಿಂದ ಎಂಥ ರಸದೌತಣ ದೊರಕುವುದೆಂಬುದು ಅನುಭವವೇದ್ಯ. ಅವರಿದ್ದ ಕಡೆ ನೂರು ಜನರ ಬಳಗ. ಶ್ರೀ ಬೇಂದ್ರೆಯವರು ವ್ಯಕ್ತಿಯಲ್ಲ; ಸಂಸ್ಥೆ. ಅವರ ಮಾತು ಕಸುವುಳ್ಳದೂ ಹಾಗೂ ಕಾಂತಿಯನ್ನು ಸೂಸತಕ್ಕದ್ದೂ ಆಗಿದೆ. ಆದ್ದರಿಂದ ಈ ಎರಡು ಪದಗಳ ಪ್ರಯೋಗ ಸಾರ್ಥಕಗೊಂಡಿದೆಯೆಂದು ನಾನು ನಂಬುತ್ತೇನೆ. ಅಲ್ಲದೆ ಇಲ್ಲಿ ಗಮನಿಸಬೇಕಾದ ಅಂಶವೊಂದಿದೆ. ಅದೇನೆಂದರೆ ತುಂಬು ಮನಸ್ಸಿನಿಂದ ಕವಿವರ್ಯರನ್ನು ಹೊಗಳಿರುವುದು ಶ್ರೀ ಪು. ತಿ. ನ. ಅವರ ಉದಾರಹೃದಯಕ್ಕೆ ಒಂದು ಸಾಕ್ಷಿ.

ಆಚಾರ್ಯ ಶ್ರೀಯವರು ಹೊಸ ಕಾವ್ಯಕ್ಕೆ ನಾಂದಿಯನ್ನು ತಮ್ಮ 'ಇಂಗ್ಲಿಷ್ ಗೀತೆಗಳ' ಮೂಲಕ ನುಡಿದೊಡನೆಯೇ ಹೊರಹೊಮ್ಮಿದ ಕಾವ್ಯಸಂಪತ್ತು ಎಂಥದು, ಎಷ್ಟು ಎಂಬುದನ್ನು ನಾನು ಇಲ್ಲಿ ಮತ್ತೆ ವಿವರಿಸಬೇಕಾಗಿಲ್ಲ. ಈ ಹೊಸ ಕಾವ್ಯಸಂಪತ್ತನ್ನು ಬೆಳೆಸಿದವರಲ್ಲಿ ನಮ್ಮ ಕಾಲಕ್ಕೆ ಮೂರು ಹೆಸರುಗಳು 'ರತ್ನತ್ರಯ'ಗಳಾಗಿ ಬೆಳಗುತ್ತವೆ.[8] ಈ ಮೂವರೂ 'ಸಿರಿಗನ್ನಡ'ವನ್ನು ಬೆಳೆಸಿದವರು. ಶ್ರೀಮಾನ್ ಪುಟ್ಟಪ್ಪನವರ ಕವಿವಾಣಿ ಹಿಮಾಲಯದಿಂದ ಧುಮ್ಮಿಕ್ಕುವ ಗಂಗಾ ಪ್ರವಾಹದಂತೆ. ಶ್ರೀ ಪು. ತಿ. ನ. ಅವರದಾದರೊ ಸಮತಲ ಪ್ರದೇಶದಲ್ಲಿ ಹರಿಯುವ ತುಂಬುಗಂಗೆಯಂತೆ. ಶ್ರೀ ಕುವೆಂಪುರವರ ಕನ್ನಡ ಸಂಸ್ಕೃತ ಮಾತುಗಳ ಪ್ರಯೋಗ ಒಂದು ರೀತಿಯಲ್ಲಿ ಅದ್ವೈತರೀತಿಯದು. ಬಗೆಯ ಭಾವದ ಭಾರವನ್ನು ಹೊರುವ ಶಕ್ತಿ ಯಾವ ಮಾತಿಗಿದೆಯೋ, ಅದು ಸಂಸ್ಕೃತವಾಗಲಿ, ಕನ್ನಡವಾಗಲಿ—ಆ ಮಾತು ಕವಿವಾಣಿಯಲ್ಲಿ ಮೂಡುತ್ತದೆ. ಶ್ರೀ ಪು. ತಿ. ನ. ಅವರಲ್ಲಿ ಸಂಸ್ಕೃತ ಕನ್ನಡ

[8] ಶ್ರೀಯುತರಾದ ಕುವೆಂಪು, ದ. ರಾ. ಬೇಂದ್ರೆ, ಪು. ತಿ. ನ.

ಮಾತುಗಳ ಶಯ್ಯೆ ಹಸುಗೆಗೊಂಡಂತೆ ತೋರುತ್ತದೆ. ಆದರೆ ಶ್ರೀ ಬೇಂದ್ರೆಯವರದು ಮೂರನೆಯ ರೀತಿ. ಅವರ ಕಾವ್ಯಪದ್ಧತಿ ಅಚ್ಚಕನ್ನಡದ ನುಡಿಕಟ್ಟನ್ನು ಬಿಡಲು ಒಪ್ಪದು. ಜನಸಾಮಾನ್ಯರ ಭಾಷೆಯನ್ನು ಅದರ ಗ್ರಾಮ್ಯತೆಯನ್ನು ಳಿದು ಬಳಸಿರುವುದೇ ಶ್ರೀ ಬೇಂದ್ರೆಯವರ ಕವನಗಳ ವೈಶಿಷ್ಟ್ಯ. ಸಂಸ್ಕೃತವನ್ನು ಸಂಪೂರ್ಣವಾಗಿ ಬಹಿಷ್ಕರಿಸಬೇಕೆಂಬ ಹಟ ಅವರಿಗಿಲ್ಲ. ಅವರ ಕವನಗಳಲ್ಲಿ ಸಂಸ್ಕೃತ ಶಬ್ದಗಳು ನುಸುಳಿಬಂದರೂ ಅಚ್ಚಗನ್ನಡದ ನುಡಿಕಟ್ಟಿನ ಮರೆಯಲ್ಲಿಯೇ ಅವುಗಳಿಗೆ ಸ್ಥಾನ. ಈ ದೃಷ್ಟಿಯಿಂದ ನೋಡಿದರೆ ಅವರ ಕವನಗಳ ನುಡಿ 'ಸಿರಿಗನ್ನಡ'. ಮಹದ್ವಿಷಯಗಳನ್ನು ಕುರಿತು ನಮ್ಮ ಮನಸ್ಸು ಈ ಲೋಕವನ್ನು ಕ್ಷಣಕಾಲವಾದರೂ ಮರೆತು ರಸಸ್ಯಂದಿಯಾಗಿ ಆನಂದದಲ್ಲಿ ಮೈಮರೆಯುವುದು ಭವ್ಯತೆಯ ಒಂದು ಲಕ್ಷಣವಾದರೆ ಶ್ರೀ ಬೇಂದ್ರೆಯವರ ಕವಿತೆಯಲ್ಲಿ ಭವ್ಯತೆಗೇರುವ ಕವನಗಳು ವಿಪುಲವಾಗಿವೆ. ಅವರ ಕವನಗಳಲ್ಲಿ ರೂಪುಗೊಳ್ಳುವ ನುಡಿಯ ಬೆಡಗು, ಉದಾರಭಾವ, ಅವುಗಳಲ್ಲಿ ಕಂಡುಬರುವ ನಾವೀನ್ಯ[9] ಇವುಗಳನ್ನು ಸವಿದು ಸಹೃದಯರು ರಸಾರ್ದ್ರಸ್ವಾಂತರಾಗುವುದು ಏನು ಆಶ್ಚರ್ಯ?

ಕವಿವರ್ಯ ಬೇಂದ್ರೆಯವರ ಕವನಗಳಿಗೆ ಮನಸೋತ ಶ್ರೀ ಪು. ತಿ. ನ. ಅವರ ಮನಸ್ಸು ಹಿಂದೆ ಕನ್ನಡಕ್ಕೆ ಒದಗಿದ್ದ ದುಃಸ್ಥಿತಿಯನ್ನೂ ಈಗ ನಾಡನುಡಿಗೆ ಒದಗಲಿರುವ ಶುಭೋದಯದ ಸೂಚನೆಗಳನ್ನೂ ಕುರಿತು ನೆನೆಯುತ್ತಿದೆ. ನಮ್ಮ ಕಾಲದಲ್ಲಿ ಕನ್ನಡನುಡಿ ಮುಂದೆ ಬಂದಿದೆ. ನಾಡಿನ ವ್ಯವಹಾರದಲ್ಲಿ ವಿಶ್ವವಿದ್ಯಾಪೀಠಗಳಲ್ಲಿ ಅದು ಅಗ್ರಸ್ಥಾನ ಪಡೆಯುವ ಸೂಚನೆಗಳು ಕಂಡುಬರುತ್ತಿವೆ. ಆದರೆ ಒಂದಾನೊಂದು ಕಾಲದಲ್ಲಿ ನಮ್ಮ ತಾಯ್ನುಡಿ 'ತನಗಾದ ನಾಡಿನೊಳೆ' ಎಂದರೆ ಕನ್ನಡನಾಡಿನಲ್ಲೇ 'ಅಮಂಗಳೆ'ಯೆನಿಸಿದ್ದಳು. ಪರಭಾಷೆಯಲ್ಲಿ ಕೃತವಿದ್ಯರಾದವರು ಇಂಗ್ಲಿಷಿನಲ್ಲಿ ಮಾತನಾಡುವುದು ಭೂಷಣವೆಂದೂ, ಕನ್ನಡದಲ್ಲಿ ನುಡಿಯುವುದು ಅವಮಾನವೆಂದೂ ಭಾವಿಸಿದ್ದ ಕಾಲ ಅದು. ಕನ್ನಡನುಡಿಗೆ ಈ ದುರವಸ್ಥೆಯೊದಗಲು ಕಾರಣವಾದರೂ ಏನು? ಯಾವ ಕೀಳು ಆಸೆಗೆ ಬಲಿಬಿದ್ದು ಯಾರ ಶಾಪ ಒದಗಿತೋ? ಯಾವ ಕೆಟ್ಟಕೆಲಸದ ಪ್ರಾಯಶ್ಚಿತ್ತದ ಫಲವೋ ಇದು! ಇದರ ಪರಿಣಾಮವಾದರೂ ಏನು? ಕನ್ನಡದೇವಿ ತನಗಾದ ನಾಡಿನಲ್ಲಿ ತಾನು ಅಮಂಗಳೆಯೆನಿಸಿದಳು, ಸಾವಿರಾರು ವರ್ಷಗಳಿಂದ ಗಳಿಸಿಟ್ಟಿದ್ದ ಹಿರಿಮೆಯನ್ನು ನೀಗಿಕೊಂಡಳು, ಹೇಳಹೆಸರಿಲ್ಲದಂತಾಗಿ ರೂವಿಲಿಯಾದಳು. ಅತಿಶಯವಾದ ಬನ್ನ (ಭಂಗ) ಪಡಬೇಕಾಯಿತು ನಾಡದೇವಿ.

[9] 'ಕುಣಿಯೋಣ ಬಾರಾ' 'ಸಚ್ಚಿದಾನಂದ' 'ಗಂಗಾವತರಣ' 'ಸಖೀಗೀತ' ಇವೇ ಮೊದಲಾದ ಇವರ ಕವನಗಳನ್ನು ಇಲ್ಲಿ ಹೆಸರಿಸಬಹುದು.

ಶ್ರೀ ಬೇಂದ್ರೆಯವರ ಕವನಗಳನ್ನು ಓದಿ ನಾಡು ಕವಿಯ ಮನಸ್ಸು ರಸಾರ್ದ್ರವಾಗಿರುವಂತೆ, ಕನ್ನಡಕ್ಕೊದಗಿದ್ದ ದುಃಸ್ಥಿತಿಯನ್ನು ನೆನೆದು ಕಕ್ಕುಲತೆಗೊಂಡಿದೆ.[10]

ಕನ್ನಡದೇವಿಯ ದುಷ್ಕೃತಿಯ ನಿಷ್ಕೃತಿ ಮುಗಿಯಿತು, ಆಕೆಯ ತಪಸ್ಸು ಫಲಿಸಿತು ಎನ್ನುವಂತೆ ಶ್ರೀ ಬೇಂದ್ರೆಯವರ ಅವತಾರವಾಯಿತು. ಜನತೆಯೂ ಅಷ್ಟೇ, ನಾಡದೇವಿಯೂ ಅಷ್ಟೇ ತನ್ನತನವನ್ನೇ ಮರೆತಿದ್ದ ಕಾಲ ಅದು. ಕವಿವರ್ಯ ಶ್ರೀ ಬೇಂದ್ರೆಯವರು ತಮ್ಮ ಪ್ರಾಸಾದಿಕ ವಾಣಿಯಿಂದ ಜನರಲ್ಲಿ 'ಕನ್ನಡತನ'ವನ್ನು ಎಚ್ಚರಿಸಿದುದೇ ಅಲ್ಲದೆ, ನಾಡನುಡಿಗಳ ದೇವಿ ಸಾಮಾನ್ಯಳಲ್ಲ, ಲೋಕಕ್ಕೆ ಆಕೆ ಆಶ್ಚರ್ಯಕರವಾದವಳು ಎಂಬ ಅಂಶವನ್ನು ಅವರು ನಮಗೆ ಮನದಟ್ಟುಮಾಡಿ ಕೊಟ್ಟರು. ಶಿಲ್ಪಿಗೆ ಸಿಕ್ಕುವುದು ಕಗ್ಗಲ್ಲು. ಆದರೆ ಅದಕ್ಕೆ ಸಾವಿರ ಉಳಿಯಪೆಟ್ಟು ಬಿದ್ದ ಮೇಲೆ ಮೂಡುವ ಭವ್ಯವಿಗ್ರಹಕ್ಕೆ ಬೆಲೆ ಕಟ್ಟಲಾದೀತೇ ? ಹಾಗೇಯೇ ಕವಿಯ ಸಾಮಗ್ರಿ ಮಾತು. ಈ ಮಾತುಗಳು ಬರವಣಿಗೆಯಲ್ಲಿ ಮೂಡಿ ಬಂದಾಗ ಮಾತ್ರ ಅವಕ್ಕೆ ಬೆಲೆ ಬಂದು ಮುಂದಿನ ಪೀಳಿಗೆಯ ಸಂಪತ್ತಾಗುತ್ತವೆ. ಇಲ್ಲವಾದರೆ ಅವು ತುಂಡುಮೋಡ; ಬರಿಯ ಗಾಳಿ. ಶ್ರೀ ಬೇಂದ್ರೆಯವರು ಶಿಲ್ಪಿಗಿಂತ ಒಂದು ಕೈ ಮೇಲು. ಏಕೆಂದರೆ ಶಿಲ್ಪಿ ಎದುರು ಕಲ್ಲುಂಟು. ಆದರೆ ಈ ನಮ್ಮ ಕವಿ ಶ್ರೀ ದತ್ತಾತ್ರೇಯರಾಮಚಂದ್ರ ಬೇಂದ್ರೆ ಗಾಳಿಯಂತಿರುವ ಮಾತುಗಳಿಗೆ ರೂಪಗೊಟ್ಟು ಸಿದ್ಧಕಾಮರಾಗಿದ್ದಾರೆ. ಹಾಡಿ ನಾಡನ್ನು ಎಚ್ಚರಗೊಳಿಸಬೇಕೆಂಬ ಅವರ ಬಯಕೆಯೂ ಸಿದ್ಧಿಸಿರುವುದಲ್ಲದೆ ನಾಡ ಜನರ ಬಯಕೆಯೂ ಕೈಗೂಡಿದೆ. ಶ್ರೀ ಬೇಂದ್ರೆಯವರು ಕವಿಗಳಾಗಿ, ಕತೆಗಾರರಾಗಿ, ಬರಹಗಾರರಾಗಿ,ವಿಮರ್ಶಕರಾಗಿ, ಆಚಾರ್ಯರಾಗಿ, ಉತ್ತಮ ವಾಗ್ಮಿಗಳಾಗಿ ನಾಡಿನ ಒಳಗೂ ಹೊರಗೂ ಹೆಸರುಪಡೆದಿದ್ದಾರೆ. ಅವರ ಈ ಎಲ್ಲ ಕೃತಿಗಳಲ್ಲಿ ಅವರ ವ್ಯಕ್ತಿತ್ವ ಮೂಡಿಬಂದಿದೆ.

ಈ ಕವನದ ವಿಷಯ ಇಲ್ಲಿಗೆ ಮುಗಿಯಿತಾದರೂ, ಇಲ್ಲಿ ಒಂದೆರಡು ಹೇಳಬೇಕಾದ ಅಂಶಗಳುಂಟು. ಅವು ಶ್ರೀ ಪು. ತಿ. ನ. ಅವರ ಕವಿತೆಯ ಲಕ್ಷಣಗಳಿಗೆ ಸಂಬಂಧಿಸಿದ ಅಂಶಗಳು. ಶ್ರೀಯುತರ ಯಾವುದೇ ಕವಿತೆಯನ್ನು ತೆಗೆದುಕೊಳ್ಳಲಿ ಅದರಲ್ಲಿ ಅನಾಯಾಸವಾಗಿ ಬರುವ ಅಂತ್ಯಪ್ರಾಸ ನಮ್ಮ ಬಗೆಯನ್ನು ಸೆರೆಹಿಡಿಯುತ್ತದೆ. ಆದರೆ ಈ ಕವನದಲ್ಲಿ ಮಾತ್ರ ದತ್ತರಾಮ, ಸಿದ್ಧಕಾಮ ಎಂಬೆರಡು ಪದಗಳಿಗೆ ಮಾತ್ರ ಪ್ರಾಸಬಂದಿದೆ. ಆದರೂ ಈ ಕವನದ ಸಾಲುಗಳನ್ನು ಸೂಕ್ಷ್ಮವಾಗಿ ಪರಿಶೀಲಿ

10 ಹೊಸಗನ್ನಡ ಕಾವ್ಯಗಳನ್ನು ಬರೆದ ಕವಿಗಳು ಒಂದಲ್ಲ ಒಂದು ರೀತಿ ಕನ್ನಡಕ್ಕೊದಗಿದ್ದ ದುರ್ಗತಿಯನ್ನು ಕುರಿತು ಹಾಡಿದ್ದಾರೆ. ಕನ್ನಡಕ್ಕಾಗಿ ಹೋರಾಡಿ ಎಂದು ಜನತೆಗೆ ಮೊರೆಯಿಟ್ಟಿದ್ದಾರೆ. ಆ ಮೊರೆ ದೇವರಿಗೆ ಸಂದು ಅದಕ್ಕೆ ತಕ್ಕ ಫಲ ದೊರಕುವ ಶುಭಸೂಚನೆಗಳು ಕಾಣುತ್ತಿವೆ.

ಸಿದರೆ ಅಲ್ಲಲ್ಲೇ 'ಒಳಪ್ರಾಸ' ಬಂದಿರುವುದನ್ನು ಗಮನಿಸಬಹುದು. 'ಕವೀಶ್ವರ, ಸುಹೃದ್ವರ' 'ಮಾತಿನೊಳು ಮೂಡುತಿಹ' 'ರಸಾರ್ದ್ರಸ್ವಾಂತ' 'ದುಷ್ಕೃತಿಯ ನಿಷ್ಕೃತಿ' 'ಗಾಳಿಗೂ ಬಾಳೀವ'—ಇವು ಕೆಲವು ಉದಾಹರಣೆಗಳು. ಸಂಸ್ಕೃತ ಕನ್ನಡ ಪದಗಳನ್ನು ಹದವಾಗಿ ಬೆರಸಿ ನಾದಮಾಧುರ್ಯವನ್ನು ಕವಿಗಳು ತರುತ್ತಾರೆ. ಮಾತುಗಳು ಸಂಸ್ಕಾರಗೊಂಡೇ ಇಲ್ಲಿ ಪ್ರಯೋಗವಾಗಿವೆ. ಕವಿಗಳ ಮಾತುಗಾರಿಕೆ ನಯ; ಭಾವಗಳು ನವುರು. ನಿರ್ದಿಷ್ಟಾರ್ಥವನ್ನು ತರಲು ಗುರ್ವಕ್ಷರಗಳಿಂದ ಕೂಡಿ ಪ್ರಯೋಗವಾಗಿರುವ 'ರಸಾರ್ದ್ರಸ್ವಾಂತ' 'ತಪೋವಿಪಾಕ' 'ದುಷ್ಕೃತಿಯ ನಿಷ್ಕೃತಿ' ಈ ಸಂಸ್ಕೃತ ಪದಗಳೊಡನೆ 'ತಿರೆಗೆ ಸೋಜಿಗಮೀಕೆ' 'ಗಾಳಿಗೂ ಬಾಳೀವ ರೂವಾರಿ' ಎಂಬ ಅಚ್ಚ ಕನ್ನಡ ಪದಗಳ ಪ್ರಯೋಗಗಳನ್ನು ಹೋಲಿಸಿದರೆ ಈ ಅಂಶ ಸ್ಪಷ್ಟವಾಗುತ್ತದೆ. ಇವರ ಕವಿತೆಯ ಉಳಿದ ಲಕ್ಷಣಗಳನ್ನು ಆಯಾ ಕವನ ಸಂದರ್ಭಗಳಿಂದ ಅರಿಯಬಹುದು*.

'ಶಂ'

ಸಶೇಷ

---

* ಶ್ರೀ ಪು.ತಿ.ನ. ಅವರ 'ಗಣೇಶದರ್ಶನ' ಕವನಸಂಕಲನದಲ್ಲಿ ಬರುವ ಅಷ್ಟಷಟ್ಪದಿಗಳನ್ನು (Sonnets) ಕುರಿತ ವಿಮರ್ಶಾತ್ಮಕಲೇಖನ.

ಕನ್ನಡ ಕಾವ್ಯಪ್ರಕಾಶ

ನಾಲ್ಕನೆಯ ಉಲ್ಲಾಸ

ಶಬ್ದ, ಅರ್ಥಗಳ ವಿವರಣೆಯಾದೊಡನೆ ದೋಷ, ಗುಣ, ಅಲಂಕಾರಗಳ ಸ್ವರೂಪವನ್ನು ಹೇಳುವುದೇ ಕ್ರಮಾಗತವೆಂಬುದೇನೋ ಸರಿಯೆ.[1] ಆದರೂ ವಿಶೇಷ್ಯದ (=ಕಾವ್ಯದ) ಪರಿಜ್ಞಾನದಿಂದ ಮಾತ್ರ ವಿಶೇಷಣಗಳ (=ದೋಷಾದಿಗಳ) ಹೇಯತೆಯಾಗಲಿ, ಉಪಾದೇಯತೆಯಾಗಲಿ ತಿಳಿಯುವುದು ಸಾಧ್ಯವೆಂದು ಭಾವಿಸಿ[2] ಮೊದಲು ಕಾವ್ಯದ ಭೇದಗಳನ್ನು ಹೇಳುತ್ತಾನೆ.

ಅವಿವಕ್ಷಿತವಾಚ್ಯೋ ಯಸ್ತತ್ರ ವಾಚ್ಯಂ ಭವೇದ್ ಧ್ವನೌ।
ಅರ್ಥಾಂತರೇ ಸಂಕ್ರಮಿತಮತ್ಯನ್ತಂ ವಾ ತಿರಸ್ಕೃತಮ್ ‖ ೧ ‖

---

[1] ಈಗಾಗಲೇ ಮೊದಲನೆಯ ಉಲ್ಲಾಸದಲ್ಲಿ ಕಾವ್ಯಲಕ್ಷಣವನ್ನೂ ವಿಭಾಗವನ್ನೂ ಹೇಳಿ ಎರಡು ಮೂರನೆಯ ಉಲ್ಲಾಸಗಳಲ್ಲಿ ಲಕ್ಷಣಾಂತರ್ಗತವಾದ ಶಬ್ದಾರ್ಥಗಳನ್ನು ವಿವರಿಸಲಾಗಿದೆ. ಅದಾದೊಡನೆ ಲಕ್ಷಣದಲ್ಲಿರುವ ಇತರ ಅಂಶಗಳ, ಎಂದರೆ ದೋಷ, ಗುಣ, ಅಲಂಕಾರಗಳ ವಿವರಣೆ ಕ್ರಮಪ್ರಾಪ್ತವೆನ್ನಿಸುವುದು ಸಹಜ. ವಸ್ತುತಃ ಧ್ವನಿಕಾರನ ಅನುಯಾಯಿಯಾದ ಮಮ್ಮಟನು ಈ ಕ್ರಮವನ್ನು ಬಿಟ್ಟುಕೊಟ್ಟು ಧ್ವನಿಯ ಭೇದಗಳ ನಿರೂಪಣೆಗೆ ಈ ನಾಲ್ಕನೆಯ ಉಲ್ಲಾಸದಲ್ಲಿ ಹೊರಡುತ್ತಿದ್ದಾನೆ, ಕಾವ್ಯಕ್ಕೆ ಪ್ರಾಣಸ್ವರೂಪವಾದ ರಸತತ್ತ್ವದ ವಿವೇಚನೆಗೆ ಪೀಠಿಕೆಯಾಗುವಂತೆ. ಪ್ರಾಚೀನಾಲಂಕಾರಿಕರು ಅನುಸರಿಸುತ್ತಿದ್ದ ಸಾಂಪ್ರದಾಯಿಕ ನಿರೂಪಣೆಯಲ್ಲಿ ಧ್ವನಿವಿವೇಚನೆಗಾಗಲಿ, ಧ್ವನಿವಿಶೇಷವಾದ ರಸಾದಿಗಳ ಮೀಮಾಂಸೆಗಾಗಲಿ ಮಹತ್ವವಿರುತ್ತಿರಲಿಲ್ಲ. ಆನಂದವರ್ಧನನ ಮಾರ್ಗದರ್ಶನವನ್ನನುಮೋದಿಸುವ ಮಮ್ಮಟನು ಧ್ವನಿವಿವೇಚನೆಯಿಲ್ಲದ ದೋಷಾದಿವಿವರಣೆ ನಿಷ್ಪ್ರಯೋಜಕವೆಂಬುದನ್ನು ಸೂಚಿಸಿ ತನ್ನ ನೂತನಮಾರ್ಗವನ್ನು ಸಮರ್ಥಿಸಿಕೊಳ್ಳುತ್ತಿದ್ದಾನೆ. ಮಮ್ಮಟನ ಶಾಸ್ತ್ರದೃಷ್ಟಿಗೆ ದ್ಯೋತಕವಾಗಿದೆ ಈ ಸಮರ್ಥನೆ.

[2] ಸ್ಥೂಲವಾಗಿ ಕಾವ್ಯವಿಭಾಗವನ್ನು ಈ ಮೊದಲೇ ಸೂಚಿಸಿದ್ದರೂ, ಒಂದೊಂದೂ ಕಾವ್ಯಪ್ರಕಾರದ ಸ್ವರೂಪವನ್ನು ವಿವರವಾಗಿ ತಿಳಿಸಿದಲ್ಲದೆ ಅದರ ಗುಣದೋಷಾದಿವಿವೇಕ ಸಾಧ್ಯವಿಲ್ಲವೆಂಬ ಅಂಶವನ್ನು ಮಮ್ಮಟನು ಸ್ಪಷ್ಟವಾಗಿ ಬರೆಯುತ್ತಿದ್ದಾನೆ. ಸಂಸ್ಕೃತ ಅಲಂಕಾರಶಾಸ್ತ್ರದ ಇತಿಹಾಸದಲ್ಲಿ ಈ ಅಂಶದ ಮಹತ್ವ ಹೆಚ್ಚಿನದು. ದೋಷಗಳಾಗಲಿ, ಗುಣಗಳಾಗಲಿ ನಿತ್ಯವಲ್ಲ ಅಥವಾ ರಸನಿರಪೇಕ್ಷವಲ್ಲ ; ಅವು ರಸಕ್ಕೆ ತರುವ ಹಾನಿ ಅಥವಾ ಪುಷ್ಟಿಯೇ ಅವುಗಳ ಮರ್ಮ. ರಸವು 'ಉತ್ತಮ ಕಾವ್ಯ'ವಾದ ಧ್ವನಿಯ ಮುಖ್ಯ ಭೇದ. ಹೀಗೆ ದೋಷಾದಿ ವಿವೇಚನೆಗೆ ಮುಂಚೆ ಧ್ವನಿಭೇದನಿರೂಪಣೆ ಸಮುಚಿತವೂ ಸಾರ್ಥಕವೂ ಆಗುತ್ತದೆ. ಈ ತತ್ತ್ವವನ್ನು ಸಾಮಾನ್ಯವಾಗಿ ಮುಂದಿನ ಎಲ್ಲ ನವೀನಾಲಂಕಾರಿಕರೂ ಒಪ್ಪುತ್ತಾರೆ.

ಅವಿವಕ್ಷಿತವಾಚ್ಯವೆಂಬ 'ಧ್ವನಿ' ಯಾವುದುಂಟೋ ಅದರಲ್ಲಿ ವಾಚ್ಯಾರ್ಥವು (೧) ಅರ್ಥಾಂತರದಲ್ಲಿ ಸೇರಿಕೊಂಡಿರಬಹುದು ಅಥವಾ (೨) ಸಂಪೂರ್ಣವಾಗಿ ಮಾಯವಾಗಿಬಿಡಬಹುದು.[3]

ಲಕ್ಷಣಾಮೂಲವಾಗಿರುವುದಲ್ಲದೆ ಗೂಢವ್ಯಂಗ್ಯವೇ ಪ್ರಾಧಾನ್ಯವನ್ನು ಪಡೆದಿರುವಾಗ ಮಾತ್ರ[4] ಅವಿವಕ್ಷಿತವಾಚ್ಯವು 'ಧ್ವನಿ'ಯೆನಿಸುತ್ತದೆ. 'ಧ್ವನಿಯಲ್ಲಿ' ಎಂದು ಸಪ್ತಮೀ ವಿಭಕ್ತಿ ಕಾರಿಕೆಯಲ್ಲಿದ್ದರೂ ಅದು 'ಧ್ವನಿ'ಯೆಂಬ ಪ್ರಥಮಾರ್ಥ 'ಯಾವ', 'ಅದರಲ್ಲಿ' ಎಂಬ ಪದಗಳ ಬಲದಿಂದ ಸಿದ್ಧಿಸುತ್ತದೆ.[5] ವಾಚ್ಯವು ಅನುಪಯುಕ್ತವೆನಿಸಿ ಅರ್ಥಾಂತರದಲ್ಲಿ ಐಕ್ಯವಾಗುವುದಕ್ಕೆ ಉದಾಹರಣೆ[6] :—

ತ್ವಾಮಸ್ಮಿ ವಚ್ಮಿ ವಿದುಷಾಂ ಸಮವಾಯೋಽತ್ರ ತಿಷ್ಠತಿ।
ಆತ್ಮೀಯಾಂ ಮತಿಮಾಸ್ಥಾಯ ಸ್ಥಿತಿಮತ್ರ ವಿಧೇಹಿ ತತ್ ॥

ಒರೆವೆನಿದಂ ನಿನಗೀಗಳ್
ವರವಿಬುಧರ ನೆರವಿಯಿಲ್ಲಿ ನೆರೆದಿರ್ಪುದರಿಂ-|
ದರಿವುಳ್ಳೊಡೆ ನಿನಗಂ ಮೇ-
ಣಿರಲಪ್ಪುದು ನೀನುಮಿಲ್ಲಿ ಭಾವಿಸಿ ನೋಡಯ್ ‖[7]

ಇಲ್ಲಿ 'ಒರೆವೆಂ' ಎಂಬುದು 'ಹಿತೋಪದೇಶಮಾಡುತ್ತೇನೆ' ಎಂಬರ್ಥದಲ್ಲಿ ಪರ್ಯವಸಾನವಾಗುತ್ತದೆ.

---

[3] ಹೆಚ್ಚಿನ ವಿವರಗಳಿಗೆ ಇದೇ ಲೇಖಕರ ಕನ್ನಡ ಧ್ವನ್ಯಾಲೋಕ, ಉದ್ಯೋತ II ನ್ನು ನೋಡಿ.

[4] ಇದು 'ಅವಿವಕ್ಷಿತವಾಚ್ಯ'ವೆಂಬ ಮೂಲಪದದ ವಿವರಣೆ. ಎರಡನೆಯ ಉಲ್ಲಾಸದಲ್ಲಿ ಲಕ್ಷಣಾಪ್ರಪಂಚವನ್ನು ವಿವರಿಸಿಯಾಗಿರುವುದರಿಂದ ತನ್ಮೂಲಕವಾಗಿ ಧ್ವನಿಪ್ರಭೇದದ ವಿವರಣೆಗಿಲ್ಲಿ ಹೊರಟಿದ್ದಾನೆ. 'ಧ್ವನಿ'ಯೆನಿಸಬೇಕಾದರೆ ಸ್ಫುರಿಸುತ್ತಿರುವ ವ್ಯಂಗ್ಯಾಂಶವು ಸ್ಪಷ್ಟವೂ ಪ್ರಧಾನವೂ ಆಗಿರಬೇಕು. ಅದು ಅಸ್ಫುಟವೋ, ಸಂದಿಗ್ಧವೋ, ಸಮಪ್ರಧಾನವೋ, ಅಸುಂದರವೋ ಆಗಿದ್ದರೆ 'ಗುಣೀಭೂತವ್ಯಂಗ್ಯ'ವೆನಿಸುವುದೇ ಹೊರತು 'ಧ್ವನಿ'ಯೆಂಬ ಕಾವ್ಯಪ್ರಕಾರವಾಗುವುದಿಲ್ಲ.

[5] ಕಾರಿಕೆಯಲ್ಲಿ ಛಂದಸ್ಸಿನ ದೃಷ್ಟಿಯಿಂದ ವಿಭಕ್ತಿಗಳನ್ನು ಅಂತಿಂತು ಯೋಜಿಸಿದ್ದರೂ ಧ್ವನಿಯ ವಿಭಾಗನಿರೂಪಣೆಯೇ ಇಲ್ಲಿ ಪ್ರಸ್ತುತವೆಂದು ಮಮ್ಮಟನು ತಿಳಿಸುತ್ತಾನೆ.

[6] ಅರ್ಥಾತ್ ಇದು ವ್ಯಂಗ್ಯಸಹಿತವಾದ ಉಪಾದಾನಲಕ್ಷಣೆಗೆ ಉದಾಹರಣೆ.

[7] ವಿದ್ವತ್ಸಭೆಗೆ ಹೋಗುತ್ತಿರುವವನನ್ನು ಕುರಿತು ಆಪ್ತನೊಬ್ಬನು ಹೇಳುವ ಬುದ್ಧಿವಾದವಿದು.

ಕೆಲವೆಡೆಗಳಲ್ಲಿ ವಾಚ್ಯವು ಅನುಪಪನ್ನವಾಗುವ ಕಾರಣ ಸಂಪೂರ್ಣವಾಗಿಯೂ ಲುಪ್ತ ಅಥವಾ ಪರಿತ್ಯಕ್ತವಾಗುವುದಕ್ಕೆ[8] ಉದಾಹರಣೆ:—

ಉಪಕೃತಂ ಬಹು ತತ್ರ ಕಿಮುಚ್ಯತೇ
ಸುಜನತಾ ಪ್ರಥಿತಾ ಭವತಾ ಪರಮ್ ।
ವಿದಧದೀದೃಶಮೇವ ಸದಾ ಸಖೇ
ಸುಖಿತಮಾಸ್ಸ್ವ ತತಃ ಶರದಾಂ ಶತಮ್ ॥

ಪಿರಿದಯ್ ನಿನ್ನುಪಕಾರಂ
ಪರಮಂ ಸೌಜನ್ಯಮಾಯ್ತು ನುಡಿಯಲ್ಕಾರೆಂ |
ಕರಮಿಂತೆಸಗುತಲನಿಶಂ
ವರಮಿತ್ರನೆ ಸುಖಮಿರಣ್ಣ ನೂರುಂ ಬರಿಸಂ ‖[9]

ಅಪಕಾರ ಮಾಡಿದವನನ್ನು ಕುರಿತು ವಿಪರೀತಲಕ್ಷಣೆ[10]ಯನ್ನಾಶ್ರಯಿಸಿ ಒಬ್ಬನು ಆಡುವ ಮಾತಿದು.

ವಿವಕ್ಷಿತಂ ಚಾನ್ಯಪರಂ ವಾಚ್ಯಂ ಯತ್ರಾಪರಸ್ತು ಸಃ । ೨ *ab* ।

ವಾಚ್ಯವು ವಿವಕ್ಷಿತವಾದರೂ ವ್ಯಂಗ್ಯಕ್ಕೆ ಪರತಂತ್ರವಾಗಿದ್ದಾಗ ಆ 'ಧ್ವನಿ' ಬೇರೆಯೆನಿಸುವುದು.[11]

'ಅನ್ಯಪರ'ವೆಂದರೆ ವ್ಯಂಗ್ಯನಿಷ್ಠ[12]ವೆಂದಭಿಪ್ರಾಯ. ಇದು [13]ಕೂಡ—

---

[8] ಇದು 'ಅತ್ಯಂತ ತಿರಸ್ಕೃತ ವಾಚ್ಯ'ವೆಂಬುದರ ವಿವರಣೆ. ಉಪಾದಾನಲಕ್ಷಣೆಯನ್ನು ಬಿಟ್ಟು ಮಿಕ್ಕ ಲಕ್ಷಣಾಪ್ರಯೋಗಗಳಲ್ಲಿ ಮಾತ್ರ ಈ ಧ್ವನಿ ಶಕ್ಯ.

[9] ಅನೇಕ ಅಪಕಾರಗಳಿಂದ ಪರಿತಪ್ತನಾದವನೊಬ್ಬನ ಮಾತೆಂದು ಮಮ್ಮಟನೇ 'ಶಬ್ದ ವ್ಯಾಪಾರ ವಿಚಾರ'ದಲ್ಲಿ ಇದರ ಸಂದರ್ಭವನ್ನು ಸೂಚಿಸಿದ್ದಾನೆ.

[10] ವಾಚ್ಯಾರ್ಥಕ್ಕೆ ತೀರ ವಿರುದ್ಧವಾದ ಅರ್ಥವನ್ನು ಕೊಡುವಂತಹ ಪದಪ್ರಯೋಗ, (ಇಂಗ್ಲಿಷಿನ *Irony* ಯನ್ನು ಹೋಲಿಸಿ) ಮೂರ್ಖನನ್ನು 'ಬೃಹಸ್ಪತಿ'ಯೆನ್ನುವಂತೆ.

[11] ಲಕ್ಷಣಾಮೂಲಧ್ವನಿಯನ್ನು ಹೇಳಿದನಂತರ ಈಗ ಅಭಿಧಾಮೂಲಧ್ವನಿಯನ್ನು ಹೇಳುತ್ತಿದ್ದಾನೆ.

[12] ಎಂದರೆ ವ್ಯಂಗ್ಯಾರ್ಥದಲ್ಲಿಯೇ ವಿಶ್ರಾಂತ ಅಥವಾ ಪರ್ಯವಸಾನಪಡೆಯುವ.

[13] ಎಂದರೆ ವಿವಕ್ಷಿತಾನ್ಯಪರವಾಚ್ಯಧ್ವನಿ.

ಕೋಽಪ್ಯಲಕ್ಷ್ಯಕ್ರಮವ್ಯಂಗ್ಯೋ ಲಕ್ಷ್ಯವ್ಯಂಗ್ಯಕ್ರಮಃ ಪರಃ ॥ ೨*cd* ॥

'ಅಲಕ್ಷ್ಯಕ್ರಮವ್ಯಂಗ್ಯ' ಮತ್ತು 'ಸಂಲಕ್ಷ್ಯಕ್ರಮವ್ಯಂಗ್ಯ' ಎಂಬುದಾಗಿ ಎರಡು ಬಗೆ.

'ಅಲಕ್ಷ್ಯ . . .'ವೆನ್ನಲು ಕಾರಣವಿಷ್ಟೆ[14] :—ವಿಭಾವ, ಅನುಭಾವ, ವ್ಯಭಿಚಾರಿ ಭಾವಗಳೇ ರಸವಲ್ಲ; ರಸವು ಅವುಗಳ ಮೂಲಕ ಉಂಟಾಗುತ್ತದೆ.[15] ಎಂದಮೇಲೆ ಕ್ರಮವುಂಟೆಂಬುದು ಸ್ಪಷ್ಟ. ಆದರೆ ಅತ್ಯಂತ ಶೀಘ್ರವಾಗಿ ನಡೆಯುವುದರಿಂದ ಆ ಕ್ರಮವು ಬುದ್ಧಿಗೆ ಗೋಚರವಾಗುವುದಿಲ್ಲ.[16] ಈ ಬಗೆಗಳಲ್ಲಿ—

ರಸಭಾವತದಾಭಾಸಭಾವಶಾನ್ತ್ಯಾದಿರಕ್ರಮಃ ।
ಭಿನ್ನೋ ರಸಾದ್ಯಲಂಕಾರಾದಲಂಕಾರ್ಯತಯಾ ಸ್ಥಿತಃ ॥ ೩ ॥

ರಸ, ಭಾವ, ರಸಾಭಾಸ, ಭಾವಾಭಾಸ, ಭಾವಶಾಂತಿ, ಮುಂತಾದುವು ಅಲಕ್ಷ್ಯಕ್ರಮಗಳು.[17] ಅಲಂಕಾರ್ಯವಾದ ರಸಾದಿಗಳೇ ಬೇರೆ; ಅಲಂಕಾರವೆನಿಸುವ ರಸಾದಿಗಳೇ ಬೇರೆ.[18]

---

[14] ಸುಲಭವಾಗಿ 'ಅಕ್ರಮ', 'ಸಕ್ರಮ'ವೆನ್ನಲು ಬರುವಾಗ 'ಅಲಕ್ಷ್ಯಕ್ರಮ', 'ಸಂಲಕ್ಷ್ಯಕ್ರಮ'ವೆಂದೇಕೆ ದೊಡ್ಡದಾಗಿ ಹೇಳಬೇಕು ? ಈ ಪ್ರಶ್ನೆಗೆ ಮಮ್ಮಟನೇ ಸಮಾಧಾನ ಹೇಳಿದ್ದಾನೆ. ಈ ಎಲ್ಲ ವಿಭಾಗಗಳಲ್ಲೂ ಮಮ್ಮಟನು ಆನಂದವರ್ಧನನನ್ನು ಅನುಸರಿಸುತ್ತಿರುವುದು ಸ್ಪಷ್ಟ.

[15] ವಿಭಾವಾದಿಗಳು ಅಭಿವ್ಯಂಜಕಗಳಾದರೆ ಅಭಿವ್ಯಂಗ್ಯವಾದುದು ರಸ. ಹೀಗೆ ವ್ಯಂಜಕಗಳು ಮೊದಲು, ವ್ಯಂಗ್ಯವು ಅನಂತರವೆಂಬ ಕಾಲಕ್ರಮ ತಪ್ಪಿದ್ದಲ್ಲ. ವ್ಯಂಜಕವಾದ ವಿಭಾವಾದಿಯೂ ವ್ಯಂಗ್ಯವಾದ ರಸವೂ ಒಂದೇ ಎನ್ನಲವಕಾಶವಿಲ್ಲ.

[16] ಒಂದರಮೇಲೊಂದಿಟ್ಟ ನೂರಾರು ತಾವರೆ ಎಲೆಗಳನ್ನು ಒಂದೇ ಸೂಜಿ ಚುಚ್ಚುವಾಗ ಒಂದೇ ಸಲ ಅಷ್ಟು ಎಲೆಗಳನ್ನೂ ಚುಚ್ಚಿದಂತೆ ಕಂಡರೂ ಮೊದಲನೆಯ ಎಲೆಯನ್ನು ಚುಚ್ಚಿದ ಅನಂತರವೇ ಎರಡನೆಯದನ್ನು, ತದನಂತರವೇ ಮೂರನೆಯದನ್ನು, ಹೀಗೆ ಭಿನ್ನಕಾಲಗಳಲ್ಲಿಯೇ ಎಲ್ಲವನ್ನೂ ಚುಚ್ಚುವುದು ನಿರ್ವಿವಾದ. ಆದರೂ ಅತ್ಯಂತ ಸೂಕ್ಷ್ಮವಾದ ಆ ಕಾಲಭೇದಗಳನ್ನು ಸಾಮಾನ್ಯವಾಗಿ ಯಾರೂ ಪರಿಗಣಿಸುವುದಿಲ್ಲ. ಇದೇ ದೃಷ್ಟಾಂತವನ್ನು ವ್ಯಂಜಕವಿಭಾವಾದಿಗಳ ಮತ್ತು ವ್ಯಂಗ್ಯರಸದ ಪ್ರತೀತಿಗೂ ಅನ್ವಯಿಸಿಕೊಳ್ಳಬಹುದು. ಇದನ್ನು 'ಶತಪತ್ರಪತ್ರಶತಭೇದನನ್ಯಾಯ'ವೆನ್ನುತ್ತಾರೆ.

[17] ಇವೆಲ್ಲವನ್ನೂ ಇದೇ ಉಲ್ಲಾಸದಲ್ಲಿ ಮುಂದೆ ವಿವರಿಸಲಾಗಿದೆ.

[18] ಈ ತತ್ತ್ವವನ್ನೂ ಮೊದಲು ಸ್ಥಾಪಿಸಿದ ಕೀರ್ತಿ ಆನಂದವರ್ಧನನದೇ. ಹೋಲಿಸಿ—"ಕನ್ನಡ ಧ್ವನ್ಯಾಲೋಕ".

ಮುಂತಾದುವು' ಎನ್ನುವುದರಿಂದ ಭಾವೋದಯ, ಭಾವಸಂಧಿ, ಭಾವಶಬಲತೆಗಳನ್ನೂ ಸೇರಿಸಿಕೊಳ್ಳಬೇಕು. ಎಲ್ಲೆಲ್ಲಿ ರಸಾದಿಗಳು ಪ್ರಧಾನವಾಗಿರುವುವೋ ಅಲ್ಲೆಲ್ಲ ಅವು ಅಲಂಕಾರ್ಯಗಳೇ (ಹೊರತು ಅಲಂಕಾರಗಳಲ್ಲ). ಉದಾಹರಣೆಗಳನ್ನು ಮುಂದೆ ಕೊಡಲಾಗಿದೆ. ಉಳಿದೆಡೆಗಳಲ್ಲಿ, ಎಂದರೆ, ಬೇರೊಂದು ವಾಕ್ಯಾರ್ಥಕ್ಕೆ ಅಂಗವಾಗಿ ರಸಾದಿಗಳು ಬರುತ್ತಿದ್ದರೆ, ಅಂತಹ 'ಗುಣೀಭೂತವ್ಯಂಗ್ಯ' ಕಾವ್ಯದಲ್ಲಿ 'ರಸವತ್', 'ಪ್ರೇಯ', 'ಊರ್ಜಸ್ವಿ', 'ಸಮಾಹಿತ' ಮುಂತಾದುವು ಅಲಂಕಾರಗಳಾಗುತ್ತವೆ.[19] ಅವುಗಳನ್ನು 'ಗುಣೀಭೂತವ್ಯಂಗ್ಯ' ನಿರೂಪಣೆಯನ್ನು ಮಾಡುವಾಗ ಉದಾಹರಿಸುತ್ತೇವೆ.

ಈಗ ರಸದ ಸ್ವರೂಪವನ್ನು ಹೇಳುತ್ತಾನೆ—

ಕಾರಣಾನ್ಯಥ ಕಾರ್ಯಾಣಿ ಸಹಕಾರೀಣಿ ಯಾನಿ ಚ।
ರತ್ಯಾದೇಃ ಸ್ಥಾಯಿನೋ ಲೋಕೇ ತಾನಿ ಚೇನ್ನಾಟ್ಯಕಾವ್ಯಯೋಃ ॥ ೪ ॥

ವಿಭಾವಾ ಅನುಭಾವಾಶ್ಚ ಕಥ್ಯಂತೇ ವ್ಯಭಿಚಾರಿಣಃ।
ವ್ಯಕ್ತಃ ಸ ತೈರ್ವಿಭಾವಾದ್ಯೈಃ ಸ್ಥಾಯೀ ಭಾವೋ ರಸಃ ಸ್ಮೃತಃ ॥ ೫ ॥

ಜೀವನದಲ್ಲಿ 'ರತಿ'ಯೇ ಮುಂತಾದ ಸ್ಥಾಯಿಭಾವಗಳಿಗೆ ಯಾವವು ಕಾರಣ, ಕಾರ್ಯ, ಮತ್ತು ಸಹಕಾರಿಗಳೆನಿಸುವುವೋ, ಅವೇ, ದೃಶ್ಯ ಅಥವಾ ಶ್ರವ್ಯಕಾವ್ಯ

---

[19] ರಸವು ಅಂಗವಾದಾಗ ರಸವದಲಂಕಾರವೆಂದೂ, ಭಾವವು ಅಲಂಕಾರವಾದಾಗ ಪ್ರೇಯೋಽಲಂಕಾರವೆಂದೂ, ರಸಾಭಾಸ ಅಥವಾ ಭಾವಾಭಾಸಗಳು ಅಲಂಕಾರವಾದಾಗ ಊರ್ಜಸ್ವಿಯೆಂಬಲಂಕಾರವೆಂದೂ ಭಾವಶಾಂತಿ ಅಂಗವಾದಾಗ ಸಮಾಹಿತಾಲಂಕಾರವೆಂದೂ ಬಾಲಬೋಧಿನೀಕಾರರು ಬರೆಯುತ್ತಾರೆ. ಈ ರಸವದಾದ್ಯಲಂಕಾರಗಳನ್ನು ಐದನೆಯ ಉಲ್ಲಾಸದಲ್ಲಿ ಮಮ್ಮಟನೇ 'ಗುಣೀಭೂತವ್ಯಂಗ್ಯ' ಪ್ರಕರಣದಲ್ಲಿ ಉದಾಹರಿಸಿದ್ದಾನೆ; ಆದರೆ ಶಬ್ದಾರ್ಥಾಲಂಕಾರಗಳನ್ನು ವಿವೇಚಿಸುವ ೯-೧೦ ನೆಯ ಉಲ್ಲಾಸಗಳಲ್ಲಿ ಇವನ್ನು ಸೇರಿಸುವುದಿಲ್ಲ. ಪ್ರಾಚೀನರು 'ಅಲಂಕಾರ'ವೆಂಬ ಸಂಜ್ಞೆಯ ವಿಶಾಲವ್ಯಾಪ್ತಿಯಲ್ಲಿ ಉಪಮಾದಿಗಳಂತೆ ರಸಾದಿಗಳನ್ನೂ ತರುತ್ತಿದ್ದರು ಆನಂದವರ್ಧನನು ಇದಕ್ಕೆ ಮೊದಲು ಆಕ್ಷೇಪಿಸಿದನು. ಮಮ್ಮಟನೂ ಕೂಡ ಅವನಂತೆಯೇ ಅಲಂಕಾರವಾಗುವ ರಸಾದಿ ಮತ್ತು ಅಲಂಕಾರ್ಯವಾಗುವ ಪ್ರಧಾನರಸವೆಂಬ ವಿಭಾಗವನ್ನಿಲ್ಲಿ ಪ್ರಸ್ತಾಪಿಸುತ್ತಿದ್ದಾನೆ. ರಸವು ಉದ್ದಿಷ್ಟವಾದ ಅರ್ಥಾಂತರಕ್ಕೆ ಪೋಷಕವಾದಾಗ ಉಪಮಾದಿಗಳಂತೆಯೇ ಅಲಂಕಾರವೆನಿಸುತ್ತದೆ. ಆ ಕಾವ್ಯವನ್ನು 'ಮಧ್ಯಮಕಾವ್ಯ'ವೆನ್ನಬೇಕೇ ಹೊರತು ರಸವಿವಕ್ಷೆಯೇ ಪ್ರಧಾನವಾದ 'ಧ್ವನಿ'ಕಾವ್ಯವೆಂದಲ್ಲ. ಇದರ ವಿಸ್ತೃತ ವಿವೇಚನೆಗೆ ಇದೇ ಲೇಖಕರ **ಆನಂದವರ್ಧನನ ಕಾವ್ಯಮೀಮಾಂಸೆ,** ಪುಟ ೮೫-೮೭ನ್ನು ನೋಡಿ.

ಗಳಲ್ಲಿ ಬಂದಾಗ 'ವಿಭಾವ', 'ಅನುಭಾವ', ಮತ್ತು 'ವ್ಯಭಿಚಾರಿ' ಗಳೆನಿಸುತ್ತವೆ. ಆ ವಿಭಾವಾದಿಗಳಿಂದ ಅಭಿವ್ಯಕ್ತವಾಗುವ ಸ್ಥಾಯಿಭಾವಕ್ಕೆ ರಸವೆಂದು ಹೆಸರು.[20]

---

[20] ವ್ಯಾವಹಾರಿಕ ಜಗತ್ತಿಗೂ ಕಾವ್ಯಜಗತ್ತಿಗೂ ಇರುವ ವ್ಯತ್ಯಾಸವನ್ನು ಈ ಲಕ್ಷಣವು ಎತ್ತಿ ತೋರಿಸುತ್ತದೆ. ನಿತ್ಯಜೀವನದಲ್ಲಿ ಪ್ರತಿಕ್ಷಣವೂ ಮನುಷ್ಯರ ಚಿತ್ತವೃತ್ತಿಗಳು ಪ್ರಕಾಶಕ್ಕೆ ಬರುತ್ತವೆ. ಚಿತ್ತವೃತ್ತಿಗಳೇ ಮನುಷ್ಯರ ವ್ಯವಹಾರಕ್ಕೆ ಪ್ರಚೋದಕಗಳು. ಇವನ್ನೇ 'ಭಾವ' ಅಥವಾ 'ಮನೋಭಾವ'ವೆನ್ನುತ್ತೇವೆ. ಇವುಗಳಲ್ಲಿ ಕಾರ್ಯದ ಆರಂಭದಿಂದ ಕಡೆಯ ವರೆಗೂ ಅನುಸ್ಯೂತವಾಗಿ ಉಳಿಯುವ ಭಾವಗಳನ್ನು 'ಸ್ಥಾಯಿ'ಗಳೆಂದೂ ಕ್ಷಣಕ್ಷಣವೂ ಬೇರೆಬೇರೆಯಾಗುವ ವೃತ್ತಿಗಳನ್ನು 'ಸಂಚಾರಿ'ಗಳೆಂದೂ ತಿಳಿಯಬಹುದು. ಜೀವನದಲ್ಲಿ ನಡೆಯುವ ಘಟನೆಗಳು ಅನಿಯತವಾದ ಪ್ರಯುಕ್ತ ಯಾವ ಒಬ್ಬ ವ್ಯಕ್ತಿಯಲ್ಲಿಯೂ ಅನುಗತವಾದ ರತ್ಯಾದಿ ಚಿತ್ತವೃತ್ತಿಗಳನ್ನು ಕಾಣುವುದು ಕಷ್ಟ. ಕಾರಣಗಳು ಬದಲಾದಂತೆ ಚಿತ್ತವೃತ್ತಿಗಳೂ ಬೇರೆಯಾಗುತ್ತವೆ; ಅವುಗಳ ಪ್ರಕಾಶದ ಪರಿಯೂ ಬೇರೆಯಾಗುತ್ತದೆ. ಆದರೆ ಸಾಹಿತ್ಯದಲ್ಲಿ ಜೀವನದ ಅನಿಯತತ್ವವು ತಪ್ಪಿ ಕವಿಯ ಪ್ರತಿಭೆಯ ಪ್ರಭಾವದಿಂದ ಹೊಸದೊಂದು ಸಮನ್ವಯವು ಚಿತ್ತವೃತ್ತಿಗಳ ಕಾರಣ, ಕಾರ್ಯ, ಸಹಕಾರಿಗಳಲ್ಲಿ ಸೇರಿಕೊಳ್ಳುತ್ತದೆ. ಹೀಗೆ ಸೇರಿಕೊಂಡಾಗ ಮಾತ್ರ ಕಾವ್ಯವು ಆಸ್ವಾದ್ಯವಾಗುತ್ತದೆ; ಚಮತ್ಕಾರ ಪೂರ್ಣವಾಗುತ್ತದೆ; ಸುಂದರವೆನಿಸುತ್ತದೆ. ಎಂದಮೇಲೆ ನಾಟಕವೇ ಆಗಲಿ, ಪದ್ಯಕೃತಿಯೇ ಆಗಲಿ, ಕಾವ್ಯದ ಜೀವಾಳವೆಂದರೆ ಅದರ ಸೌಂದರ್ಯ ಅಥವಾ ಚಮತ್ಕಾರ. ಇದನ್ನೇ ರಸವೆನ್ನುವುದು ಭಾರತೀಯ ಕಾವ್ಯಮೀಮಾಂಸೆಯ ಪರಿಭಾಷೆ. ಆದ್ದರಿಂದ ಪಾರಿಭಾಷಿಕವಾಗಿ 'ರಸ'ದ ಲಕ್ಷಣವನ್ನು ಹೇಳುವಾಗ ಅದು ಸಾಹಿತ್ಯಕ್ಕೆಲ್ಲ ಅನ್ವಯಿಸುವ ಕಲಾನಿಯತ ರಹಸ್ಯವನ್ನು ಗರ್ಭೀಕರಿಸುವಂತೆ ಶಾಸ್ತ್ರಕಾರನು ಎಚ್ಚರಿಕೆ ವಹಿಸಬೇಕಾಗುತ್ತದೆ. ಈ ಎಚ್ಚರಿಕೆಯಿರುವುದರಿಂದಲೇ ಮಮ್ಮಟನು ಲೋಕದಲ್ಲಿರುವುದೆಲ್ಲದರ ಪ್ರತಿಬಿಂಬದಿಂದಲೇ ಸಾಹಿತ್ಯದಲ್ಲಿ ರಸವುಂಟಾಗುವುದೆನ್ನದೆ ಲೋಕದಲ್ಲಿ ದೃಶ್ಯವಾದ ಸ್ಥಾಯಿಭಾವಗಳ ಕಾರಣ, ಕಾರ್ಯ, ಸಹಕಾರಿಗಳು ಮಾತ್ರ ಲೋಕಾತೀತ ಹಾಗು ನಿಯತವಾದ ಕಾರ್ಯ-ಕಾರಣ-ಸಹಕಾರಿ ಸಂಬಂಧವನ್ನುಳಿಸಿಕೊಂಡು ಸಾಹಿತ್ಯದಲ್ಲಿ ಪ್ರತಿಬಿಂಬಿತವಾದಾಗ ಅವುಗಳ ಈ ನೂತನ ಸಂಯೋಜನೆಯ ಫಲವಾಗಿ ಸ್ಥಾಯಿಭಾವಕ್ಕೆ ರಸತ್ವವೂ, ಕಾರಣಗಳಿಗೆ ವಿಭಾವತ್ವವೂ, ಕಾರ್ಯಗಳಿಗೆ ಅನುಭಾವತ್ವವೂ, ಸಹಕಾರಿಗಳಿಗೆ ವ್ಯಭಿಚಾರಿಭಾವತ್ವವೂ ಸಿದ್ಧಿಸುವುದೆಂದಿರುವುದು. ವಿಶಿಷ್ಟರೀತಿಯಿಂದ, ಕಲಾಮಯವಾಗಿ ಪ್ರಕಾಶಿತವಾದ ಚಿತ್ತವೃತ್ತಿಗಳೇ ರಸಗಳೆಂದಂತಾಯಿತು. ರತಿಯೆಂಬ ಸ್ಥಾಯಿಭಾವ ಶೃಂಗಾರರಸವಾಗಬೇಕಾದರೆ ಅದಕ್ಕೆ ಆಲಂಬನರಾದ ಸ್ತ್ರೀಪುರುಷರೂ, ಉದ್ದೀಪಕವಾದ ಚಂದ್ರೋದಯ, ಮಂದಾನಿಲ, ಪುಷ್ಪೋದ್ಯಾನಾದಿ ಪ್ರಕೃತಿಪ್ರಪಂಚವೂ ವಿಭಾವಗಳು; ಸ್ತ್ರೀಪುರುಷರ ಪ್ರೇಮಾಲಾಪ, ಹಾವ, ಭಾವ, ಕೃತಿವಿನ್ಯಾಸಗಳೆಲ್ಲವೂ ಶೃಂಗಾರರಸದ ಕಾರ್ಯಗಳಾದ ಅನುಭಾವಗಳು; ರತಿಯ ಗಾಢತ್ವವನ್ನೇ ತೋರಿಸುವ ಕುತೂಹಲ, ಶಂಕೆ, ಮುಂತಾದ ಸಣ್ಣ ಪುಟ್ಟ ಚಿತ್ತವೃತ್ತಿಗಳೆಲ್ಲ ವ್ಯಭಿಚಾರಿ ಭಾವಗಳು. ಈ ವಿಭಾವಾನುಭಾವ ವ್ಯಭಿಚಾರಿಗಳ ಪರಿಪುಷ್ಟಿಯಿದ್ದಲ್ಲಿ ಮಾತ್ರ ಸ್ಥಾಯಿಭಾವವು ರಸಮಯವಾಗುತ್ತದೆ. ರಸವೆಂದರೆ ಸಾಮಾಜಿಕನ ಅನುಭವವೆಂದು ಮಮ್ಮಟನು ಇಲ್ಲಿ ಹೇಳದಿರುವುದು ಗಮನಾರ್ಹ. ಇದರ ಚರ್ಚೆ ಮುಂದೆ ಬರುತ್ತದೆ.

ಇದಕ್ಕೆ ಪೋಷಕವಾದ ಭರತನ[21] ಸೂತ್ರ ಹೀಗಿದೆ—"ವಿಭಾವ ಅನುಭಾವ, ವ್ಯಭಿಚಾರಿಗಳ ಸಂಯೋಗದಿಂದ ರಸನಿಷ್ಪತ್ತಿಯುಂಟಾಗುತ್ತದೆ."[22] ಇದನ್ನು ಟೀಕಾಕಾರರು ವಿಧವಿಧವಾಗಿ ವಿವರಿಸಿದ್ದಾರೆ[23]:—

ಭಟ್ಟಲೊಲ್ಲಟನೇ ಮುಂತಾದವರು ಹೀಗೆ ಹೇಳುತ್ತಾರೆ—'ರತಿಯೇ ಮುಂತಾದ ಭಾವ (=ಸ್ಥಾಯಿಭಾವ)ವು 'ವಿಭಾವ'ಗಳಿಂದ ಎಂದರೆ ಲಲನೆಯೇ ಮೊದಲಾದ ಆಲಂಬನಕಾರಣಗಳಿಂದಲೂ ಉದ್ಯಾನವೇ ಮೊದಲಾದ ಉದ್ದೀಪಕ ಸಾಮಗ್ರಿಗಳಿಂದಲೂ ಜನಿಸುತ್ತದೆ. ಆಮೇಲೆ 'ಅನುಭಾವ'ಗಳಿಂದ ಎಂದರೆ ಕಟಾಕ್ಷ, ಭುಜಾ

ಕಾವ್ಯಕ್ಕೂ ನಾಟ್ಯಕ್ಕೂ ಇರುವ ಭೇದ ಅಲ್ಪ. ಅನುಭಾವಾದಿಗಳ ವರ್ಣನೆ ಕಾವ್ಯವಾದರೆ ಅವುಗಳ ಪ್ರಯೋಗ ನಾಟ್ಯವೆನಿಸುತ್ತದೆ. ಹೋಲಿಸಿ—

'ಅನುಭಾವವಿಭಾವಾನಾಂ ವರ್ಣನಾ ಕಾವ್ಯಮುಚ್ಯತೇ |
ತೇಷಾಮೇವ ಪ್ರಯೋಗಸ್ತು ನಾಟ್ಯಂ ಗೀತಾದಿರಂಜಿತಃ ||'
(ಸಾಹಿತ್ಯಚೂಡಾಮಣಿಯಲ್ಲಿ ಉದಾಹೃತ)

ಲೋಕದ ಕಾರಣಾದಿಗಳಿಗೂ ಸಾಹಿತ್ಯದ ವಿಭಾವಾದಿಗಳಿಗೂ ಸ್ವರೂಪಭೇದವುಂಟಾಗಲು ಕವಿಪ್ರತಿಭೆಯೇ ಕಾರಣ. ಹೋಲಿಸಿ—

'ಕವಿಶಕ್ತ್ಯರ್ಪಿತಾ ಭಾವಾಸ್ತನ್ಮಯೀಭಾವಯುಕ್ತಿತಃ |
ಯಥಾ ಸ್ಫುರಂತ್ಯಮೀ ಭಾವಾ ನ ತಥಾಧ್ಯಕ್ಷತಃ ಕಿಲ ||'
(ಸಾಹಿತ್ಯಚೂಡಾಮಣಿಯಲ್ಲಿ ಉದಾಹೃತ)

[21] ರಸಪ್ರಕ್ರಿಯೆಗೆ ಸಂಬಂಧಿಸಿದ ಪ್ರಥಮಗ್ರಂಥ **ನಾಟ್ಯಶಾಸ್ತ್ರ.** ಇದರ ಕರ್ತೃ ಭರತ. ಆತನ ಪ್ರಾಚೀನತೆ ಮತ್ತು ಗ್ರಂಥಮಹತ್ವಗಳ ಪ್ರಯುಕ್ತ ಮುಂದಿನವರು 'ಮುನಿ'ಯೆಂದು ಆತನನ್ನು ಗೌರವಿಸಿದ್ದಾರೆ. ಆತನ ರಸಸೂತ್ರವೇ ಮುಂದಿನ ತತ್ವಚಿಂತಕರಿಗೆಲ್ಲ ತಳಹದಿ.

[22] ಈ ಸೂತ್ರದ ಮಾತುಗಳನ್ನೆಲ್ಲ ಮಮ್ಮಟನು ಮೂಲಕಾರಿಕೆಯಲ್ಲಿ ಬಳಸಿಕೊಂಡಿದ್ದಾನೆ—ವಿವಾದಕ್ಕೆಡೆಯಾಗಬಾರದೆಂದು.

[23] ಭರತನ ನಾಟ್ಯಶಾಸ್ತ್ರಕ್ಕೆ ಮೇಲಿಂದ ಮೇಲೆ ಅನೇಕರು ವ್ಯಾಖ್ಯಾನಗಳನ್ನು ಬರೆದರೂ ಇಂದು ನಮಗೆ ಉಪಲಬ್ಧವಿರುವುದು ಕಡೆಗೆ ಬರೆದ ಅಭಿನವಗುಪ್ತನದು ಮಾತ್ರ. ಅಭಿನವಗುಪ್ತನೇ ತನಗಿಂತ ಹಿಂದಿನವರ ಅಭಿಪ್ರಾಯಗಳನ್ನು ಉಲ್ಲೇಖಿಸಿರುವುದರಿಂದ ರಸತತ್ವದ ಚರ್ಚೆಗೆ ಎಷ್ಟೋ ಸಹಾಯವಾಗಿದೆ. ಈ ಪೂರ್ವ ಟೀಕಾಕಾರರಲ್ಲಿ ಮುಖ್ಯರಾದವರು ಲೊಲ್ಲಟ, ಶಂಕುಕ ಮತ್ತು ಭಟ್ಟನಾಯಕ. ಎಲ್ಲರೂ ಕಾಶ್ಮೀರದವರು. ಸುಮಾರು ಕ್ರಿ.ಶ. ೯ ಮತ್ತು ೧೦ ನೆಯ ಶತಮಾನಗಳಲ್ಲಿದ್ದವರು. ಮಮ್ಮಟನು ಅಭಿನವಗುಪ್ತನ ಅಭಿನವ ಭಾರತಿಯನ್ನೇ ಅನುಸರಿಸಿ ಇವರೆಲ್ಲರ ಮತಭೇದವನ್ನೂ ಸಂಗ್ರಹಿಸುತ್ತಿದ್ದಾನೆ. ಇದು ಸರಿ, ಇದು ತಪ್ಪು, ಎಂಬ ನಿರ್ಣಯವನ್ನು ಹೇಳಲು ಹೊರಟಂತಿಲ್ಲ. ಭರತನ ಸೂತ್ರದಷ್ಟೇ ಮಮ್ಮಟನ ಕಾರಿಕೆಗಳೂ ಅನೇಕ ವಿವರಣೆಗಳಿಗೆಲ್ಲ ಆಸ್ಪದವೀಯುವಂತಿವೆ.

ಕ್ಷೇಪ, ಮೊದಲಾದ ಕಾರ್ಯಗಳಿಂದ ಪ್ರತೀತಿಯೋಗ್ಯವಾಗಿ ಪರಿಣಮಿಸುತ್ತದೆ. ಹಾಗೆಯೇ 'ವ್ಯಭಿಚಾರಿ'ಗಳಿಂದ ಎಂದರೆ ನಿರ್ವೇದ ಮೊದಲಾದ ಸಹಕಾರಿ ಭಾವಗಳಿಂದ ಪುಷ್ಟಿಯನ್ನು ಪಡೆದು ರಸವೆನಿಸುತ್ತದೆ. ಹೀಗೆ ರಸವು ಮೂಲತಃ 'ಅನುಕಾರ್ಯ'ನಾದ ರಾಮಾದಿಗಳಲ್ಲಿಯೂ, ಆ ರೂಪವನ್ನು ತಳೆದು ಅಭಿನಯಿಸುವುದರಿಂದ ನಟರಲ್ಲಿಯೂ ಕಾಣಬರುತ್ತದೆ.[24]

---

[24] ವಿಭಾವಾನುಭಾವ ವ್ಯಭಿಚಾರಿಗಳ ಸಂಯೋಗದಿಂದ ಪರಿಪುಷ್ಟವಾದ ಸ್ಥಾಯಿಭಾವವೇ ರಸತ್ವವನ್ನು ಪಡೆಯುತ್ತದೆಂಬುದು ಲೊಲ್ಲಟನ ತಾತ್ಪರ್ಯ (ಮಾಣಿಕ್ಯಚಂದ್ರ). 'ಸ್ಥಾಯಿಭಾವಗಳು ವಿಭಾವಗಳಿಂದ ಮೊಟ್ಟಮೊದಲು ಉತ್ಪನ್ನವಾಗುತ್ತವೆ; ಆಮೇಲೆ ಅನುಭಾವಗಳಿಂದ ಪ್ರತೀತಿಯೋಗ್ಯವಾಗಿ ಕಡೆಗೆ ವ್ಯಭಿಚಾರಿಭಾವಗಳಿಂದ ಪರಿಪುಷ್ಟವಾಗಿ ರಸತ್ವವನ್ನು ಪಡೆಯುತ್ತವೆ' ಎಂಬ ಈ ವಾದದಲ್ಲಿ ಲೋಕದಲ್ಲಿ ವಾಸನಾತ್ಮಕವಾಗಿ ಸಿದ್ಧವಾದ ಸ್ಥಾಯಿಭಾವಗಳೇ ಬೇರೆ, ಕಾವ್ಯಲೋಕದಲ್ಲಿ ವಿಭಾವಾದಿಗಳಿಂದ ಹುಟ್ಟುವ ಸ್ಥಾಯಿಭಾವಗಳೇ ಬೇರೆ ಎಂಬ ಮುಖ್ಯ ತತ್ತ್ವವು ಅಡಕವಾಗಿದೆ. ಕವಿಸೃಷ್ಟಿಯಲ್ಲಿ ಮಾತ್ರ ರಸವು ಸಾಧ್ಯವೆಂಬುದನ್ನು ಇದು ಒತ್ತಿ ತೋರಿಸುತ್ತದೆ. ಆದ್ದರಿಂದಲೇ ಲೊಲ್ಲಟನ ವಾದಕ್ಕೆ **ಉತ್ಪತ್ತಿ**ವಾದವೆಂದೂ ಹೆಸರು. (ಹೋಲಿಸಿ—ಮಲ್ಲಿನಾಥನ ಏಕಾವಲೀ ವ್ಯಾಖ್ಯಾನ, ಪುಟ ೮೫) ಲೊಲ್ಲಟನ ಈ ಮತವೆ ಕಾಳಿದಾಸ, ಭವಭೂತಿ, ದಂಡಿ, ಮುಂತಾದ ಪ್ರಾಚೀನರಿಗೆಲ್ಲರಿಗೂ ಅಭಿಮತವಾದುದೆಂಬುದನ್ನು ಈ ಸಂದರ್ಭದಲ್ಲಿ ನೆನೆಯಬಹುದು. ಸಹೃದಯರ ಚಿತ್ತಭಿತ್ತಿಯಿಂದ ಹೊರಗೆ ಅನೇಕ ರಸಗಳ ಸ್ವತಂತ್ರ ಅಸ್ತಿತ್ವವನ್ನೂ, ಕವಿಕಲ್ಪಿತ ರಾಮಾದಿಗಳಲ್ಲಿ, ಇಲ್ಲವೆ ಅಭಿನೇತೃಗಳಲ್ಲಿ ಸ್ಥಾಯಿಭಾವವು ಪರಿಪುಷ್ಟವಾಗಿ ರಸತ್ವವನ್ನು ಪಡೆಯುವುದೆಂಬುದನ್ನು ಹೇಳುವವರೆಲ್ಲ ಲೊಲ್ಲಟನ ಪಕ್ಷದ ಸಮರ್ಥಕರೇ. (ಹೋಲಿಸಿ—'ತನ್ಮಯತ್ವಂ ರಸೇಷು'—ಕಾಳಿದಾಸ; 'ಪುಟಪಾಕಪ್ರತೀಕಾಶೋ ರಾಮಸ್ಯ ಕರುಣೋ ರಸಃ'—ಭವಭೂತಿ; 'ರತಿಃ ಶೃಂಗಾರತಾಂ ಯಾತಾ'—ದಂಡಿ; 'ಶೋಕಃ ಶ್ಲೋಕತ್ವಮಾಗತಃ' ಎಂಬ ವಾಕ್ಯವೂ ಶ್ಲೋಕವೆಂದರೆ ರಸವದ್ರಚನೆಯೆಂಬ ಅನುಗತಾರ್ಥವನ್ನಿಟ್ಟುಕೊಂಡರೆ ಈ ವಾದಕ್ಕೇ ಪುಷ್ಟಿಯೀಯುತ್ತದೆ. ಈ ವಾಕ್ಯವನ್ನು ಕಾಳಿದಾಸ ಮತ್ತು ಆನಂದವರ್ಧನರೂ ಉಚ್ಚರಿಸಿದ್ದಾರೆ.) ಲೊಲ್ಲಟನ ಈ ವಿವರಣೆ ತತ್ತ್ವದೃಷ್ಟಿಯಿಂದ ಹೇಗೇ ಇರಲಿ, ಭರತನ ಸೂತ್ರದ ತಾತ್ಪರ್ಯನಿರೂಪಣೆಯ ದೃಷ್ಟಿಯಿಂದ ಅತ್ಯಂತ ಸಮೀಚೀನವಾಗಿದೆ. ಏಕೆಂದರೆ ಭರತಸೂತ್ರದಲ್ಲಿಲ್ಲದ ಆದರೆ ಲೊಲ್ಲಟನು ಅಧ್ಯಾಹಾರಮಾಡುವ ಒಂದೇ ಪದವೆಂದರೆ—'ಸ್ಥಾಯಿಭಾವ'. ವಿಭಾವವೆಂದರೆ ಸ್ಥಾಯಿಭಾವದ ಆಲಂಬನ ಅಥವಾ ಉದ್ದೀಪನ ಕಾರಣಗಳೇ ಹೊರತು ಬೇರೆಯಲ್ಲ. ಅನುಭಾವವೆಂದರೂ ಸ್ಥಾಯಿಭಾವವನ್ನು ಅನುವರ್ತಿಸಿ ಬರುವ ಕಾರ್ಯಗಳೆಂದೇ ತಾತ್ಪರ್ಯ. ವ್ಯಭಿಚಾರಿಭಾವಗಳೂ ಸ್ಥಾಯಿಭಾವಗಳಿಗೆ ಪ್ರತಿಯಾಗಿ ಬಂದು ಹೋಗತಕ್ಕ ಭಾವಗಳೇ. ಈ ಮೂರು ಶಬ್ದಗಳಲ್ಲಿಯೂ **ಭಾವ** ಎಂಬ ಸಮಾನಸಂಜ್ಞೆಯಿದೆ; ಉಪಸರ್ಗಗಳು ಮಾತ್ರ ಬೇರೆಯಾಗಿವೆ—**ವಿ, ಅನು ಮತ್ತು ವ್ಯಭಿ.** ಈ ಸಮಾನಾಂಶವಾದ **ಭಾವ** ಎಂಬುದಕ್ಕೆ ಪ್ರಸಿದ್ಧವಾದ ಸ್ಥಾಯಿಭಾವವೆಂಬ ಒಂದೇ ಅರ್ಥ ಸಮೀಚೀನವಾದ್ದರಿಂದ ರಸಸೂತ್ರದಲ್ಲಿ ಸ್ಥಾಯಿಭಾವವು ಶಬ್ದತಃ ಉಕ್ತವಾಗದಿದ್ದರೂ ಅರ್ಥಾತ್ ಸಿದ್ಧವೆಂದು ಲೊಲ್ಲಟನು ಭಾವಿಸಿದ್ದರಲ್ಲಿ ಯಾವ ಕ್ಲಿಷ್ಟಕಲ್ಪನೆಯೂ

ಶಂಕುಕನ ವಿವರಣೆ ಹೀಗಿದೆ[25]—" 'ರಾಮನೇ ಇವನು', 'ಇವನೇ ರಾಮ', ಎಂಬ ಪ್ರತೀತಿಗಳು ಉತ್ತರ ಕ್ಷಣದಲ್ಲಿಯೇ ಬರುವ 'ಇವನು ರಾಮನಲ್ಲ' ಎಂಬ

ಪೂರ್ವಗ್ರಹವೂ ತೋರುವುದಿಲ್ಲ. ಉಳಿದ ವಿವರಣೆಗಳಲ್ಲಿಯೇ ಈ ಬಗೆಯ ದೋಷಗಳಿಗೆ ಹೆಚ್ಚಿನ ಆಸ್ಪದವಿದೆ.

ಮಮ್ಮಟನ ಮೂಲಕಾರಿಕೆಗಳನ್ನೂ ಲೊಲ್ಲಟನ ಮತಕ್ಕನುಸಾರವಾಗಿ ನಯನಮಾಡಿಕೊಳ್ಳು ವುದು ಸುಲಭ. ಆದರೆ ಅಲ್ಲಿ 'ವ್ಯಕ್ತ' ಎಂದಿರುವುದು ಭಟ್ಟಗೋಪಾಲನೇ ಮುಂತಾದವರ ಅಭಿಪ್ರಾಯದಲ್ಲಿ ಲೊಲ್ಲಟನ ಉತ್ಪತ್ತಿವಾದಕ್ಕೆ ವಿಸಂಗತ. ವಸ್ತುತಃ ಲೊಲ್ಲಟನೇ ಉಪಯೋಗಿ ಸಿರುವ 'ಪ್ರತೀಯಮಾನ' ಎಂಬ ಪದದಂತೆ 'ವ್ಯಕ್ತ' ಎಂಬುದಕ್ಕೂ ಸ್ಥೂಲವಾಗಿ 'ಅರಿವಿಗೆ ಬರುವ' ಎಂದರ್ಥ ಮಾಡಲವಕಾಶವಿದೆ. ಧ್ವನಿವಾದಿಗಳು ಹೇಳುವ ವಿಶಿಷ್ಟಾರ್ಥವೇ ಅಭಿಪ್ರೇತ ವೆಂದು ಪ್ರತಿಜ್ಞೆ ಮಾಡುವಂತಿಲ್ಲ.

ಅಲ್ಲದೆ ಧ್ವನಿಸಿದ್ಧಾಂತ ಧುರಂಧರನಾದ ಆನಂದವರ್ಧನನೇ ತನ್ನ ಗ್ರಂಥದುದ್ದಕ್ಕೂ ರಸ, ರಸಾದಿ, ರಸಭಾವಾದಿ ಎಂಬ ಶಬ್ದಗಳನ್ನು ಲೆಕ್ಕವಿಲ್ಲದಷ್ಟು ಕಡೆ ಪ್ರಯೋಗಮಾಡಿದ್ದರೂ ಎಲ್ಲಿಯೂ ಸಹ 'ಸಾಮಾಜಿಕನ ಸೌಂದರ್ಯಾನುಭವ' ಎಂಬರ್ಥದಲ್ಲಿ ಪ್ರಯೋಗಿಸಿದಂತಿಲ್ಲ. ಈ ಅರ್ಥವನ್ನು ಹೇಳುವುದು ಅಭಿನವಗುಪ್ತ ಮಾತ್ರ. ಈ ಅರ್ಥವು ಸರಿಯಾದರೆ ಸಹೃದಯನ ಕಾವ್ಯಚರ್ವಣಾ ಸಮಯದಲ್ಲಿ ಮಾತ್ರ ಇರತಕ್ಕ ರಸಾನುಭವಕ್ಕೆ ಮಾಧುರ್ಯಾದಿಗಳು ಗುಣವೆನಿಸುವುದೂ (ಅದೂ ಆತ್ಮಕ್ಕೆ ಶೌರ್ಯಾದಿಗಳಂತೆ!), ಉಪಮಾದಿಗಳು ಆ ಅನುಭವದ ಅಂಗದ್ವಾರಾ ಅಲಂಕಾರಗಳೆನಿಸು ವುದೂ (ಅಂಗಕ್ಕೆ ಹಾರಾದಿಗಳಂತೆ!) ಅನನ್ವಿತವಾಗಿ ತೋರುತ್ತದೆ. ಆದರೆ ಮಮ್ಮಟನೇ ಈ ಮಾತುಗಳನ್ನು ಎಂಟನೆಯ ಉಲ್ಲಾಸದಲ್ಲಿ ಹೇಳಿದ್ದಾನೆ. ಅಷ್ಟೇ ಅಲ್ಲ; ಏಳನೆಯ ಉಲ್ಲಾಸದ ಆದಿಯಲ್ಲಿ ರಸವನ್ನು ಕಾವ್ಯದ 'ಮುಖ್ಯಾರ್ಥ'ವೆಂದಿದ್ದಾನೆ; ಅದೇ ಉಲ್ಲಾಸದ ಕಡೆಯಲ್ಲಿ 'ರಸ'ವೆಂಬ ಶಬ್ದಕ್ಕೆ ಅದರ ಸ್ಥಾಯಿಭಾವವೆಂದು ತಾತ್ಪರ್ಯವನ್ನೂ ಹೇಳುತ್ತಾನೆ. ಈ ಎಲ್ಲ ಪ್ರಯೋಗಗಳ ಆಧಾರದ ಮೇಲಿಂದ ಮಮ್ಮಟನು ಮೇಲ್ನೋಟಕ್ಕೆ ಚರ್ಚಾಗ್ರಸ್ತವಾಗದಂತೆ ಬರೆದಿದ್ದರೂ, ಅವನ ಅಂತರಂಗವು ಲೊಲ್ಲಟನ ವಿವರಣೆಗೇ ಹೆಚ್ಚು ಓಲುತ್ತದೆಯೆನ್ನಬಹುದು. ಇದನ್ನರಿತ ಅಭಿನವಗುಪ್ತರು ರಸವೊಂದು ಬಾಹ್ಯವಸ್ತುವೆನ್ನುವಂತಹ ಪ್ರಯೋಗಗಳನ್ನೆಲ್ಲ 'ಅನ್ನ ವನ್ನು ಬೇಯಿಸುತ್ತಾನೆ' ಎಂಬ ಪ್ರಯೋಗದಂತೆ ಗೌಣಾರ್ಥದಲ್ಲಿ ತೆಗೆದುಕೊಳ್ಳಬೇಕೆಂದು ಹೇಳುತ್ತಾರೆ. ಆದರೆ ಆನಂದವರ್ಧನಾದಿಗಳಿಗೆ ಮುಖ್ಯಾರ್ಥವೇ ವಿವಕ್ಷಿತವೋ ಗೌಣಾರ್ಥವು ವಿವಕ್ಷಿತವೋ ವಿಮರ್ಶಕರು ನಿರ್ಧರಿಸಬೇಕು.

[25] ಲೊಲ್ಲಟನ ಮತವನ್ನು ಶಂಕುಕನು ತನ್ನ ನಾಟ್ಯಶಾಸ್ತ್ರವ್ಯಾಖ್ಯಾನದಲ್ಲಿ ಖಂಡಿಸಿ ಹೊಸ ಸಿದ್ಧಾಂತವನ್ನು ಪ್ರತಿಪಾದಿಸಿದನು. ಇವನು 'ಭುವನಾಭ್ಯುದಯ'ವೆಂಬ ಕಾವ್ಯವನ್ನೂ ರಚಿಸಿದ್ದಿರ ಬಹುದು.

ದಾರ್ಶನಿಕದೃಷ್ಟಿಯಿಂದ ರಸಪ್ರತೀತಿಯ ವಿಮರ್ಶೆಯನ್ನು ಪ್ರಾರಂಭಿಸಿದವರಲ್ಲಿ ಶಂಕುಕನು ಅಗ್ರಗಣ್ಯ. ನ್ಯಾಯದರ್ಶನದಲ್ಲಿ ಪ್ರಮಾಣ, ಪ್ರಮೇಯ, ಪ್ರಮಾತೃಗಳ ಸ್ವರೂಪವನ್ನು ಸಿದ್ಧಾಂತಿಸ ಲಾಗಿದ್ದಿತು. ಆ ಸಿದ್ಧಾಂತದ ದೃಷ್ಟಿಯಿಂದ ರಸಪ್ರತೀತಿಗೆ ಅನ್ವಯಿಸುವ ಪ್ರಮಾಣನಿರ್ಣಯ

ಪ್ರತೀತಿಯಿಂದ ಬಾಧಿತವಾದಮೇಲೆ, 'ಇವನು ರಾಮ', 'ಇವನು ರಾಮನೋ

ಮಾಡಿ ಪರಿಷ್ಕರಿಸಲು ಶಂಕುಕನು ಪ್ರಥಮತಃ ಪ್ರಯತ್ನಿಸಿದನು. ಶಂಕುಕನ ತರ್ಕನಿಶಿತದೃಷ್ಟಿಗೆ ಲೊಲ್ಲಟನ ವಿವರಣೆಯಲ್ಲಿ ಕಾಣಬರುವ ದೋಷಗಳಿವು :—

೧. ವಿಭಾವಾದಿಗಳ ಸ್ವರೂಪಪರಿಜ್ಞಾನದ ಅನಂತರ ಸ್ಥಾಯಿಭಾವದ ಪ್ರತೀತಿ ಬರುವುದು ಸಾಧ್ಯವೇ ಹೊರತು ಸ್ವಂತವಾಗಿ ಬರುವುದೇ ಅಸಂಭವ. ಏಕೆಂದರೆ ನಾಟ್ಯರಂಗದಲ್ಲಿ ವಿಭಾವಾದಿಗಳು ಪ್ರತ್ಯಕ್ಷಗೋಚರವೇ ಹೊರತು ಸ್ಥಾಯಿಭಾವವಲ್ಲ. ಅದೃಷ್ಟವಾದರೂ ಪರ್ವತದಲ್ಲಿರುವ ಬೆಂಕಿಯನ್ನು ದೃಷ್ಟವಾದ ಹೊಗೆಯ ಮೇಲಿಂದ ಊಹಿಸುವಂತೆ, ವಿಭಾವಾದಿಗಳ ಮೇಲಿಂದ ಸ್ಥಾಯಿಭಾವವನ್ನು ಊಹಿಸುವುದು ಮಾತ್ರ ಸಾಧ್ಯ. ಲೊಲ್ಲಟನ ವಿವರಣೆಯಲ್ಲಿ ಸ್ಥಾಯಿಭಾವವು ವಿಭಾವಗಳಿಂದ ನೇರವಾಗಿ ಉತ್ಪನ್ನವಾಗುವುದೆಂಬಂಶವು ತರ್ಕವಿರುದ್ಧ.

೨. ಸ್ಥಾಯಿಭಾವಗಳೇ ವಿಭಾವಾದಿಗಳ ಸಂಯೋಗದಿಂದ ರಸತ್ವವನ್ನು ಪಡೆಯುತ್ತವೆ ಎಂಬುದು ಭರತನ ಅಭಿಪ್ರಾಯವಾಗಿದ್ದಿದ್ದರೆ ಗ್ರಂಥದ ಪ್ರಾರಂಭದಲ್ಲಿ ಎಲ್ಲಕ್ಕೂ ಮುಂಚೆ ಸ್ಥಾಯಿಭಾವಗಳನ್ನು ಹೆಸರಿಸಿ ವಿವರಿಸುತ್ತಿದ್ದನು. ವಸ್ತುತಃ ಹಾಗೆ ಮಾಡಿಲ್ಲದಿರುವುದರಿಂದ ಅದು ಭರತನ ಅಭಿಪ್ರಾಯವಾಗಿದ್ದಿರಲಾರದು ; ಭರತನು ಮೊದಲು ಹೆಸರಿಸಿ ವಿವರಿಸಿರುವುದು ರಸಗಳನ್ನೇ ಹೊರತು, ಸ್ಥಾಯಿಭಾವಗಳನ್ನಲ್ಲ. ರಸಗಳ ವಿವೇಚನೆಯಾದ ಮೇಲೆ ರಸಗಳ ವಿಭಾವಾನುಭಾವಗಳನ್ನು ವಿಸ್ತಾರವಾಗಿ ಮೊದಲು ಹೇಳಿ ಆಮೇಲೆ ಸ್ಥಾಯಿಭಾವಗಳ ವಿವೇಚನೆಯನ್ನು ಮತ್ತೇಕೆ ಮಾಡುತ್ತಿದ್ದನು ? ವಸ್ತುಗಳ ಉತ್ಪತ್ತಿಗೆ ಕಾರಣ ಹೇಳಿಯಾದಮೇಲೆ ಅವು ಪರಿಪುಷ್ಟವಾಗುತ್ತಿರುವಾಗ ತಿರುಗಿ ಅವಕ್ಕೆ ಕಾರಣವನ್ನು ಹೇಳುವ ಕೆಲಸ ವ್ಯರ್ಥ. ಹೀಗೆ ಭರತನ ನಾಟ್ಯಶಾಸ್ತ್ರದಲ್ಲಿನ ವಿಷಯನಿರೂಪಣೆಯ ಕ್ರಮವನ್ನು ಪರ್ಯಾಲೋಚಿಸುವುದರಿಂದ ಸ್ಥಾಯಿಭಾವದ ಪರಿಪುಷ್ಟಿಯೇ ರಸವೆಂಬ ಮತ ಅಸಾಧುವೆಂಬುದು ಸಿದ್ಧವಾಗುತ್ತದೆ.

೩. ಅಪುಷ್ಟವಾದುದು 'ಸ್ಥಾಯಿಭಾವ'ವೆಂದೂ ಪರಿಪುಷ್ಟವಾದುದು 'ರಸ'ವೆಂದೂ ಹೇಳುವುದಾದರೆ ಅಪುಷ್ಟಿಯಲ್ಲಿ ಮಂದ, ಮಂದತರ, ಮಂದತಮ ಮುಂತಾದ ಅಪರಿಮಿತ ವಿಶೇಷಗಳು ಸಾಧ್ಯವಿರುವುದರಿಂದ ಒಂದೊಂದು ಸ್ಥಾಯಿಭಾವದಲ್ಲಿಯೂ ಗಣನಾತೀತವಾದ ಅವಾಂತರ ಭೇದಗಳನ್ನೊಪ್ಪಬೇಕಾಗುತ್ತದೆ; ಹಾಗೆಯೇ ಪರಿಪುಷ್ಟಿಯಲ್ಲಿಯೂ ತೀವ್ರ, ತೀವ್ರತರ, ತೀವ್ರತಮ ಮುಂತಾದ ಅಸಂಖ್ಯ ಭೇದಗಳಿರಬಹುದಾಗಿ ಒಂದೊಂದು ರಸದಲ್ಲೂ ಅಸಂಖ್ಯ ಪ್ರಭೇದಗಳುಂಟೆನ್ನಬೇಕಾಗುತ್ತದೆ.

೪. ಪರಿಪೋಷವನ್ನು ಪಡೆದುದು ಮಾತ್ರ ರಸವಾದರೆ ಹಾಸ್ಯರಸದಲ್ಲಿ ಸ್ಮಿತ, ಅವಹಸಿತ, ವಿಹಸಿತ, ಉಪಹಸಿತ, ಅಪಹಸಿತ, ಅತಿಹಸಿತ ಎಂಬ ಆರು ಭೇದಗಳಿಲ್ಲದೆ ಹೋಗಬೇಕಾಗುತ್ತದೆ.

೫. ಪೂರ್ವಾವಸ್ಥೆಯಲ್ಲಿ ಸ್ಥಾಯಿಭಾವವಾಗಿದ್ದುದು ಕ್ರಮೇಣ ಪರಿಪೋಷವನ್ನು ಪಡೆಯುತ್ತ ರಸತ್ವವನ್ನು ಪಡೆಯುತ್ತದೆಂದರೂ ವಿರುದ್ಧಪ್ರಸಂಗವು ತಪ್ಪುವುದಿಲ್ಲ. ಉದಾಹರಣೆಗೆ—ಇಷ್ಟವಿಯೋಗದಿಂದುಂಟಾಗುವ ಮಹಾಶೋಕವು ಬರಬರುತ್ತಾ ಕಡಿಮೆಯಾಗುವುದೇ ಹೊರತು ಹೆಚ್ಚುವುದಿಲ್ಲ. ಭಿನ್ನಕಾರಣಗಳಿಂದ ಹುಟ್ಟುವ ಕ್ರೋಧ, ಉತ್ಸಾಹ, ರತಿಗಳಾದರೂ ಕಾಲವು ಕಳೆದಂತೆಲ್ಲ ಕಡಿಮೆಯೇ ಆಗುತ್ತ ಅಮರ್ಷಶೂನ್ಯತ್ವ, ಸ್ಥೈರ್ಯಲೋಪ, ಸೇವಾಭಾವಗಳಾಗಿ ಪರಿಣಮಿಸಿ

ಅಲ್ಲವೋ', 'ಇವನು ರಾಮನಿಗೆ ಸದೃಶ', ಹೀಗೆ ನಿರ್ಣಯ, ಮಿಥ್ಯಾ, ಸಂಶಯ,

ಬಿಡುತ್ತವೆ. ಆದ್ದರಿಂದ ರಸವು ಭಾವಪೂರ್ವಕವಲ್ಲ; ಭಾವವೇ ರಸಪೂರ್ವಕ. ಇದಕ್ಕೆ ಆಧಾರವಾಗಿ ಭರತನ ವಾಕ್ಯವೇ ಉಂಟು—'ರಸಪೂರ್ವಕತ್ವಂ ಭಾವಾನಾಂ.

೬. ನಾಟಕದಲ್ಲಿ ಅಭಿನಯಿಸುತ್ತಿರುವ ಅನುಕರ್ತನಲ್ಲೂ ರಾಮಾದಿ ಅನುಕಾರ್ಯನಲ್ಲೂ ಭಾವವುಂಟೆಂಬ ಪ್ರತೀತಿ ನೋಡುವ ಸಾಮಾಜಿಕರಿಗೆ ಬರುವುದರಿಂದ, ಸಾಮಾಜಿಕನ ದೃಷ್ಟಿಯಿಂದ ರಸವು ಭಾವಪೂರ್ವಕವೆಂದು ತಿಳಿಯಲವಕಾಶವುಂಟೇ ಉಂಟೆಂದೂ, ಲೋಕದಲ್ಲಿ ಭಾವಪ್ರತೀತಿಯು ದೃಷ್ಟವಾದ್ದರಿಂದ ಸಾಹಿತ್ಯದಲ್ಲಿ ತತ್ಸರೂಪವಾದ ಪ್ರತೀತಿಯನ್ನು ರಸನಿಷ್ಪತ್ತಿಯೆನ್ನಬೇಕೆಂದೂ ಲೊಲ್ಲಟಾದಿಗಳು ವಾದಿಸಬಹುದು. ಆದರೆ ಈ ವಾದದಲ್ಲಿ ಹುರುಳಿಲ್ಲ. ಏಕೆಂದರೆ ಲೋಕದಲ್ಲಿ ಜೀವಿಸಿದ ರಾಮಾದಿಗಳು ಸಾಕ್ಷಾತ್ಕರಿಸಿದ ರಸಕ್ಕೂ ಸಾಹಿತ್ಯದಲ್ಲಿ ಸಾಮಾಜಿಕರು ಮಾತ್ರ ಆಸ್ವಾದಿಸುವ ಲೋಕೋತ್ತರರಸಕ್ಕೂ ಯಾವ ವ್ಯತ್ಯಾಸವೂ ಇಲ್ಲದೆಯೇ ಹೋಗುತ್ತದೆ ಆ ವಾದದಲ್ಲಿ.

೭. ನಟನಲ್ಲಿ ರಸವಿರುವುದಾದರೆ ಅವನು ತಾಳ, ಲಯಗಳನ್ನು ಅನುಸರಿಸುವ ಬುದ್ಧಿಯನ್ನು ಕಳೆದುಕೊಳ್ಳಬೇಕಾಗುತ್ತದೆ.

೮. ಕಲಾಕುಶಲನಾದ ನಟನು ತನ್ನ ವಿಭಾವಾದಿಗಳಿಂದ ಅನುಕಾರ್ಯನ ವಿಭಾವಾದಿಗಳನ್ನು ಅನುಕರಣಮಾಡುವನೇ ಹೊರತು, ಅನುಕಾರ್ಯನ ರಸವನ್ನು ಅನುಕರಣ ಮಾಡಲಾರ; ಏಕೆಂದರೆ ಪರಚಿತ್ತವೃತ್ತಿಗಳನ್ನು ತಿಳಿಯುವುದೇ ಸಾಧ್ಯವಿಲ್ಲ; ತಿಳಿಯದೆ ಅನುಕರಣಮಾಡುವುದು ಅಸಂಭವ (ಈ ದೋಷಗಳನ್ನು ಮಾಣಿಕ್ಯಚಂದ್ರನ ಮಾತುಗಳನ್ನಾಶ್ರಯಿಸಿ ಬರೆದಿದೆ).

ಆಪಾತತಃ ಈ ದೋಷಗಳೆಲ್ಲವೂ ಸಮುಚಿತವೆಂದು ಭಾಸವಾದರೂ ಲೊಲ್ಲಟನ ದೃಷ್ಟಿಗೂ ಶಂಕುಕನ ದೃಷ್ಟಿಗೂ ಇರುವ ಸ್ಪಷ್ಟಭೇದವನ್ನು ಗಮನಿಸಿದರೆ ಇಬ್ಬರೂ ಒಂದೊಂದು ರೀತಿಯಲ್ಲಿ ಯುಕ್ತವಾದಿಗಳೆಂದೇ ತೋರೀತು.

೧. ಕವಿಯ ದೃಷ್ಟಿಯಿಂದ ರಸವನ್ನು ಸಾಹಿತ್ಯದಲ್ಲಿ ಯೋಜಿಸುವುದೆಂತು ಎಂಬ ಪ್ರಶ್ನೆಗೆ ಲೊಲ್ಲಟನು ಉತ್ತರ ಹೇಳುತ್ತಿದ್ದರೆ, ಸಾಮಾಜಿಕನ ದೃಷ್ಟಿಯಿಂದ ರಸದ ಪ್ರತೀತಿ ಹೇಗೆ ಎಂಬ ಪ್ರಶ್ನೆಯನ್ನು ಶಂಕುಕನು ಎತ್ತುತ್ತಿದ್ದಾನೆ. ಭರತನು ಕಾವ್ಯಗತವಾದ ಆಸ್ವಾದಸಾಮಗ್ರಿಗೆ ರಸವೆಂದಂತೆ ರಸಿಕಗತವಾದ ಆಸ್ವಾದಾನುಭವಕ್ಕೂ ರಸವೆಂದೇ ಹೇಳಿದ್ದಾನೆ. ರಸಸೂತ್ರವನ್ನು ಕವಿಯ ದೃಷ್ಟಿಯಿಂದ ಹೇಳಿದ್ದಾನೆಂದರೆ ಲೊಲ್ಲಟನ ವಿವರಣೆಯೂ ಸಹೃದಯನ ಅನುಭವದ ದೃಷ್ಟಿಯಿಂದ ಹೇಳಿದ್ದಾನೆಂದರೆ ಶಂಕುಕಾದಿಗಳ ವಿವರಣೆಯೂ ಸಮರ್ಪಕವಾಗುತ್ತದೆ. ಭರತನ ನಾಟ್ಯಶಾಸ್ತ್ರವನ್ನು ಆಮೂಲಾಗ್ರವಾಗಿ ಓದಿದವರಿಗೆ ರಸಸೂತ್ರವು ಕವಿಶಿಕ್ಷೆಗಾಗಿಯೇ ರಚಿತವಾಗಿದೆಯೆಂದು ಭಾಸವಾಗಬಹುದು. ವಿಭಾವ, ಅನುಭಾವ, ವ್ಯಭಿಚಾರಿಭಾವಗಳು ಯಾರಿಗೆ ನೇರವಾಗಿ ಸಂಬಂಧಿಸಿರುವುವೋ ಸ್ಥಾಯಿಭಾವವು ಅವರಿಗೇ ನೇರವಾಗಿ ಸಂಬಂಧಿಸುವಂತೆ ವಿವರಿಸುವುದು ಸೂಕ್ತ. ಇವೆಲ್ಲವೂ ನೇರವಾಗಿ ಕವಿಕಲ್ಪಿತವಾದ ಪಾತ್ರಗಳಿಗೆ ಸಂಬಂಧಪಡುವುದು ನಿರ್ವಿವಾದ. ಎಂದಮೇಲೆ ಲೊಲ್ಲಟನು ಹೇಳುವಂತೆ ಸ್ಥಾಯಿಭಾವ ಮತ್ತು ರಸಗಳು ಕೂಡ ಮುಖ್ಯವಾಗಿ ಕವಿಕಲ್ಪಿತ ಪಾತ್ರಗಳಿಗೇ ಅನ್ವಯಿಸುವುದೆನ್ನುವುದು ಯುಕ್ತವಲ್ಲವೆ?

೨. ಇದಕ್ಕೂ ಹೆಚ್ಚಿನ ಮತ್ತೊಂದು ದೃಷ್ಟಿಭೇದವಿದೆ—ರಸವು ಲೋಕದಲ್ಲಿ ಉಂಟೆ ಅಥವಾ ಕಾವ್ಯದಲ್ಲಿ ಮಾತ್ರ ಉಂಟೆ? ಎಂಬ ಪ್ರಶ್ನೆಗೆ ಲೊಲ್ಲಟನ ಉತ್ತರವನ್ನು ಶಂಕುಕನು ಅಪಾರ್ಥ

ಸಾದೃಶ್ಯಗಳ ಪ್ರತೀತಿಗಳೊಂದೂ ಅನ್ವಯಿಸದ,[26] ಇವೆಲ್ಲಕ್ಕಿಂತಲೂ ವಿಲಕ್ಷಣವಾದ,

---

ಮಾಡಿದ್ದಾನೆ. ವಿಭಾವಗಳಿಂದ ಸ್ಥಾಯಿಭಾವವು ಅನುಕಾರ್ಯನಲ್ಲಿ ಹುಟ್ಟಿ, ಅನುಭಾವಗಳಿಂದ ಪ್ರತೀತಿಯೋಗ್ಯವಾಗಿ, ವ್ಯಭಿಚಾರಿಭಾವಗಳಿಂದ ಉಪಚಿತ ಅಥವಾ ಪರಿಪುಷ್ಟವಾದಾಗ ರಸವೆನಿಸುವುದೆಂದು ಲೊಲ್ಲಟನು ಹೇಳುವುದರ ತಾತ್ಪರ್ಯವೇನು? (೧) ಕವಿಪ್ರತಿಭೆಯ ಪ್ರಪಂಚದಲ್ಲಿ ಮಾತ್ರ ಕಾಣಬಲ್ಲ ರಾಮಾದಿಗಳಲ್ಲಿ ರಸವುಂಟೆಂದೋ ಅಥವಾ (೨) ಕವಿನಿರಪೇಕ್ಷವಾಗಿ ಲೋಕದಲ್ಲಿ ಜೀವಿಸಿದ ರಾಮಾದಿಗಳಲ್ಲಿ ರಸವುಂಟೆಂದೋ? ಶಂಕುಕನು ಈ ವಿವೇಕವನ್ನು ಮಾಡುವುದಿಲ್ಲ. ಸುಮ್ಮನೆ ಎರಡನೆಯ ಮತವನ್ನು ಲೊಲ್ಲಟನ ಮತವೆಂದು ಸ್ವೀಕರಿಸುತ್ತಾನೆ. ನಮಗೆ ಇದು ಅಸಾಧುವೆಂದು ತೋರುತ್ತದೆ. ಯಾವನೊಬ್ಬನ ನಿತ್ಯಜೀವನದಲ್ಲಿ ಸಂಭವಿಸುವ ಸಕಲ ಘಟನೆಗಳೂ ಯಾವುದೋ ಒಂದೇ ಸ್ಥಾಯಿಭಾವದ ವಿಭಾವ, ಅನುಭಾವ, ವ್ಯಭಿಚಾರಿಗಳ ಚೌಕಟ್ಟಿನಲ್ಲಿ ಮಾತ್ರ ಅಳವಟ್ಟು ರಸಾವಹವಾಗುವುದು ಅಸಂಭವ; ಚೌಕಟ್ಟಿನಿಂದ ಹೊರಗೆ ನಿಲ್ಲುವ ಅಂಶಗಳೇ ಅಪಾರವಾಗಿರುತ್ತವೆ. ಎಂದಮೇಲೆ ಕಾವ್ಯದ ಇತಿವೃತ್ತದಲ್ಲಿ ಮಾತ್ರ ಇಂತಹ ಬಾಹ್ಯಾಂಶಗಳನ್ನು ಬಿಡುವುದಕ್ಕೆ ಆಸ್ಪದವುಂಟೆಂದೊಪ್ಪಬೇಕು. ಅರ್ಥಾತ್ ಪಾತ್ರಗತವಾದ ರಸವು ಕವಿಕಲ್ಪಿತ ಪಾತ್ರಗತವೆಂದಾಗುವುದೇ ಹೊರತು ಕವಿಕಲ್ಪನಾ ನಿರಪೇಕ್ಷವಾದ ಪಾತ್ರದಲ್ಲಿಯೂ ಉಂಟೆಂದು ಸಿದ್ಧಿಸುವುದಿಲ್ಲ. ಹೀಗೆ ಸರಿಯಾಗಿ ಅಭಿಪ್ರಾಯಮಾಡಿಕೊಂಡರೆ, ರಾಮಾದಿಗಳಲ್ಲಿದ್ದ ಲೌಕಿಕ ರಸಕ್ಕೂ ಕಾವ್ಯದಲ್ಲಿರಬೇಕಾದ ಅಲೌಕಿಕರಸಕ್ಕೂ ವ್ಯತ್ಯಾಸವೇ ಹೋದೀತೆಂಬ ಶಂಕುಕನ ಆಕ್ಷೇಪಣೆಗೆ ಬುಡವೇ ಸಡಿಲಿದಂತಾಗುತ್ತದೆ. ಲೊಲ್ಲಟನಿಗೆ ಇದೇ ಅಭಿಪ್ರಾಯವಿದ್ದಿತೆನ್ನಲು ಪಂಡಿತರಾಜ ಜಗನ್ನಾಥನ ಆಧಾರವೂ ಸಿಕ್ಕುತ್ತದೆ. "ಮತೇಽಸ್ಮಿನ್ ಸಾಕ್ಷಾತ್ಕಾರೋ ದುಷ್ಯನ್ತೋಽಯಂ ಶಕುಂತಲಾದಿವಿಷಯಕರತಿಮಾನ್ ಇತ್ಯಾದಿಃ; ಪ್ರಾಗ್ವದ್ ಧರ್ಮ್ಯಂಶೇ ಲೌಕಿಕ ಆರೋಪ್ಯಾಂಶೇ ತ್ವಲೌಕಿಕಃ". **ನಾಟಕದಲ್ಲಿ ದುಷ್ಯಂತನನ್ನು ಪ್ರತ್ಯಕ್ಷವಾಗಿ ಸಾಕ್ಷಾತ್ಕಾರ ಮಾಡುವುದರಿಂದ, ಸಾಕ್ಷಾತ್ಕಾರಾಂಶದಲ್ಲಿ ಲೌಕಿಕವಾದರೂ, ಅವನಲ್ಲಿ ಆರೋಪಿಸುವ ಸತ್ಯಾದಿಗಳು ಮಾತ್ರ ಅಲೌಕಿಕ.**—ರಸಗಂಗಾಧರ, ಪುಟ ೩೪ (ನಿರ್ಣಯಸಾಗರ ಗ್ರಂಥಮಾಲೆ, ೧೯೪೭ ನೆಯ ಸಂಸ್ಕರಣ).

[26] ರಾಮನ ಕಥೆಯನ್ನು ಕುರಿತ ನಾಟಕವೊಂದನ್ನು ನೋಡುತ್ತಾ ಕುಳಿತಿರುವ ಸಾಮಾಜಿಕನಿಗೆ ಬರುವ ಅನುಭವ ಯಾವ ಜಾತಿಯದು? ಇದನ್ನು ಸೂಕ್ಷ್ಮವಾಗಿ ತರ್ಕದೃಷ್ಟಿಯಿಂದ ಶಂಕುಕನು ಪರೀಕ್ಷಿಸುತ್ತಿದ್ದಾನೆ. ರಾಮನ ವೇಷಭೂಷಣಗಳನ್ನು ಧರಿಸಿದ ನಟನು ರಂಗಸ್ಥಲದ ಮೇಲೆ ಬಂದೊಡನೆ ಸಾಮಾಜಿಕನಿಗೆ ಏನೆನ್ನಿಸುತ್ತದೆ? ಮೊಟ್ಟಮೊದಲು ರಾಮನೇ ಬಂದನು ಎನ್ನಿಸಬಹುದು, ಅಥವಾ ಬಂದವನೇ ರಾಮ ಎನ್ನಿಸಬಹುದು. ಬಾಹ್ಯವಸ್ತುವನ್ನು ಇಂದ್ರಿಯಗಳ ಮೂಲಕ ಯಥಾವತ್ತಾಗಿ ಗ್ರಹಿಸುವುದರಿಂದ ಬರುವ ಪ್ರತೀತಿಗೆ ನ್ಯಾಯಶಾಸ್ತ್ರದಲ್ಲಿ ಸಮ್ಯಕ್ ಜ್ಞಾನವೆನ್ನುತ್ತಾರೆ. ಮೇಲಿನ ಪ್ರತೀತಿಗಳನ್ನು ಸಮ್ಯಕ್‌ಪ್ರತೀತಿಗಳೆನ್ನಬೇಕಾದರೆ ಅವಕ್ಕೆ ವಿರುದ್ಧವಾದ ಪ್ರತೀತಿಯು ಬರಕೂಡದು. ಆದರೆ ವಸ್ತುತಃ ಮರುಕ್ಷಣದಲ್ಲಿಯೇ ಸಾಮಾಜಿಕನಿಗೆ ಅಂದಿನ ದಶರಥಪುತ್ರನಾದ ರಾಮನು ಇವನಾಗಲಾರನೆಂಬ ಪ್ರತೀತಿಯೂ ಉಂಟಾಗುವುದರಿಂದ ಮೊದಲಿನ ಪ್ರತೀತಿಗೆ ಬಾಧೆಯೊದಗುತ್ತದೆ. ಎಂದರೆ ಇದು ಹೀಗೆಯೇ ಎಂಬ ನಿಶ್ಚಯ ತಪ್ಪುತ್ತದೆ. ಸಮ್ಯ

'ಇವನು ರಾಮ' ಎಂಬ ಪ್ರತೀತಿಯು ಚಿತ್ರದ ಕುದುರೆಯ ಪ್ರತೀತಿಯಂತೆ ನಟನ ವಿಷಯದಲ್ಲಿ ಅಂಕುರಿಸಿದೊಡನೆ[27]—

ಸೇಯಂ ಮಮಾಂಗೇಷು ಸುಧಾರಸಚ್ಛಟಾ
ಸುಪೂರಕರ್ಪೂರಶಲಾಕಿಕಾ ದೃಶೋಃ।

ಕ್ಪ್ರತೀತಿಗೆ ವಿರುದ್ಧವಾದ ಪ್ರತೀತಿಗೆ ನ್ಯಾಯಶಾಸ್ತ್ರದಲ್ಲಿ ಮಿಥ್ಯಾಪ್ರತೀತಿಯೆನ್ನುತ್ತಾರೆ. ಎರಡೂ ವಿರುದ್ಧಪ್ರತೀತಿಗಳೂ ಏಕಕಾಲದಲ್ಲಿ ಬರುವಂತಿದ್ದರೆ ಎರಡೂ ಅನನ್ವಿತಗಳಾಗುತ್ತವೆ. ಸಾಮಾಜಿಕನ ಪ್ರತೀತಿ ಸಮ್ಯಕ್‌ಜ್ಞಾನವೂ ಅಲ್ಲ, ಮಿಥ್ಯಾಜ್ಞಾನವೂ ಅಲ್ಲವೆಂದಂತಾಯಿತು. ನ್ಯಾಯಶಾಸ್ತ್ರದ ಪ್ರಕಾರ ಇವೆರಡೂ ಅಲ್ಲದ ಪ್ರತೀತಿಗಳು 'ಸಂಶಯ' ಇಲ್ಲವೆ 'ಸಾದೃಶ್ಯ'ವೆನಿಸುತ್ತವೆ. ಇವನು ರಾಮನಾಗಿಯೂ ಇರಬಹುದು ; ರಾಮನಲ್ಲದೆಯೂ ಇರಬಹುದು ಎಂದು ಎರಡು ವಿಧವಾಗಿಯೂ ಅನಿಶ್ಚಯವೂ ತೂಗಾಡುತ್ತಿದ್ದರೆ ಸಂಶಯವುಂಟೆನ್ನಬಹುದು. ಆದರೆ ಸಾಮಾಜಿಕನಿಗೆ ಇಂತಹ ಅನಿಶ್ಚಯವೂ ಉಂಟಾಗುವುದಿಲ್ಲ. ಅವನ ಪ್ರತೀತಿ ಸಂಶಯವಲ್ಲ. ಕಡೆಗೆ ಉಳಿದ ಒಂದೇ ಪಕ್ಷವೆಂದರೆ 'ಸಾದೃಶ್ಯ'ಜ್ಞಾನ. ಒಂದನ್ನು ನೋಡಿದ್ದವನಿಗೆ ಅದನ್ನು ಹೋಲುವ ಮತ್ತೊಂದನ್ನು ಕಂಡಾಗ ಸಾದೃಶ್ಯಜ್ಞಾನವುಂಟಾಗುತ್ತದೆ. ಜೀವಂತ ರಾಮನನ್ನು ಎಂದೂ ಕಾಣದ ಸಾಮಾಜಿಕನಿಗೆ ನಟನು ರಾಮಸದೃಶನೆಂಬ ಪ್ರತೀತಿ ಬರುವುದೂ ಅಸಂಭವ. ಹೀಗೆ ನಾಟಕಶಾಲೆಯಲ್ಲಿ ಸಾಮಾಜಿಕನಿಗೆ ಬರುವ ಅನುಭವವು ಲೋಕಪ್ರಸಿದ್ಧವೂ ಶಾಸ್ತ್ರನಿರ್ಣೀತವೂ ಆದ ಯಾವ ಪ್ರಕಾರಗಳಲ್ಲಿಯೂ ಅಂತರ್ಗತವಾಗುವುದಿಲ್ಲ. ಅಂತೆಯೇ ಅದು ಲೋಕವಿಲಕ್ಷಣವಾದುದೆಂದು ಪರಿಗಣಿಸದೆ ಗತ್ಯಂತರವಿಲ್ಲ. ಈ ವಿಲಕ್ಷಣಪ್ರತೀತಿಯನ್ನು ವಿವರಿಸುವುದೇ ಭರತಸೂತ್ರದ ಗುರಿಯೆಂದು ಶಂಕುಕನ ಅಭಿಪ್ರಾಯ. ಇದನ್ನು ಕೆಳಗಿನ ಶ್ಲೋಕಗಳು ಸಂಗ್ರಹಿಸುತ್ತವೆ—

ಪ್ರತಿಭಾತಿ ನ ಸಂದೇಹೋ ನ ತತ್ತ್ವಂ ನ ವಿಪರ್ಯಯಃ।
ಧೀರಸಾವಯಮಿತ್ಯಸ್ತಿ ನಾಸಾವೇವಾಯಮಿತ್ಯಪಿ ||
ವಿರುದ್ಧಬುದ್ಧ್ಯಸಂಭೇದಾದವಿವೇಚಿತವಿಕ್ರಿಯಃ।
ಯುಕ್ತ್ಯಾ ಪರ್ಯನುಯುಜ್ಯೇತ ಸ್ಫುರನ್ನನುಭವಃ ಕಯಾ ||

27 ಲೋಕವಿಲಕ್ಷಣವಾದ ರಸಪ್ರತೀತಿಯನ್ನು ವಿವರಿಸುವುದಕ್ಕೆ ಶಂಕುಕನು ಚಿತ್ರಕಲೆಯ ಸಮಂಜಸ ನಿದರ್ಶನವನ್ನು ಕೊಡುತ್ತಿದ್ದಾನೆ. ಚಿತ್ರಕಲಾಪ್ರೇಮಿಗಳಿಗೆ ಕುದುರೆಯೇ ಮುಂತಾದ ಸುಂದರ ಚಿತ್ರಗಳ ದರ್ಶನದಿಂದ ಅಲೌಕಿಕ ಸೌಂದರ್ಯಾನುಭೂತಿ ಬರುವುದೇ ಹೊರತು ಲೋಕಗತವಾದ ಸಮ್ಯಕ್, ಮಿಥ್ಯಾ, ಸಂಶಯ, ಸಾದೃಶ್ಯಪ್ರತೀತಿಗಳುಂಟಾಗುವುದಿಲ್ಲ. ಯಾವ ಜ್ಞಾನ ಬರಬೇಕಾದರೂ ಅದಕ್ಕೆ ಸಾಧಕವಾದ ಪ್ರಮಾಣವೊಂದಿರಲೇಬೇಕೆಂಬುದು ನ್ಯಾಯಶಾಸ್ತ್ರದ ಸಿದ್ಧಾಂತ. ಪ್ರತ್ಯಕ್ಷಪ್ರಮಾಣದಿಂದ ಸೌಂದರ್ಯಾನುಭವವನ್ನು ವಿವರಿಸಲು ಸಾಧ್ಯವಿಲ್ಲವೆಂದಾದ ಮೇಲೆ, ಸೌಂದರ್ಯಪ್ರತೀತಿಯು ಅನುಭವಸಿದ್ಧವಾಗಿರುವುದರಿಂದ ಅದರ ವಿವರಣೆಗೆ ನ್ಯಾಯಶಾಸ್ತ್ರದಲ್ಲಿ ಎರಡನೆಯ ಪ್ರಮಾಣವಾದ "ಅನುಮಾನ" (=*Inference*) ವನ್ನು ಶಂಕುಕನು ಆಶ್ರಯಿಸುತ್ತಾನೆ.

ಮನೋರಥಶ್ರೀರ್ಮನಸಃ ಶರೀರಿಣೀ
ಪ್ರಾಣೇಶ್ವರೀ ಲೋಚನಗೋಚರಂ ಗತಾ ||

ಎನ್ನಂಗಗಳಿಗಮೃತರಸಧಾರೆಯೀಕೆ
ಕಣ್ಣಳಿಗೆ ಕರ್ಪೂರಶಕಲಸಮುಳೀಕೆ|
ಮಾನಸಕೆ ಕಾಮಿತದ ಮೂರ್ತಸಿರಿಯೀಕೆ
ಎನಿಪ ಪ್ರಾಣೇಶ್ವರಿಯು ಕಾಣಿಸಿದಳಿಂದು ||[28]

ದೈವಾದಹಮದ್ಯ ತಯಾ
ಚಪಲಾಯತನೇತ್ರಯಾ ವಿಯುಕ್ತಶ್ಚ
ಅವಿರಲವಿಲೋಲಜಲದಃ
ಕಾಲಃ ಸಮುಪಾಗತಶ್ಚಾಯಮ್ ||[29]

ದೈವದಿನಾನಿಂದಗಲ್ದೆಂ
ಭಾವಿಸೆ ಚಪಲಾಯತಾಕ್ಷಿಯಂ ಕಾಮಿನಿಯಂ |
ಪೀವರಜಲದವಿಲೋಲಮಿ-
ದೇವೇಳ್ವುದು ಬಂದುದಿಂದೆ ವರ್ಷಾಕಾಲಂ ||

ಇತ್ಯಾದಿ ಕಾವ್ಯಗಳ ಅನುಸಂಧಾನದ ಬಲದಿಂದಲೂ ಕಲಾನಿಪುಣನಾದ ನಟನ ಅಭಿನಯ ಕೌಶಲದಿಂದಲೂ ಪ್ರಕಾಶಕ್ಕೆ ಬರುವ ಕಾರಣ, ಕಾರ್ಯ, ಸಹಕಾರಿಗಳು ವಸ್ತುತಃ ಕೃತ್ರಿಮವಾದರೂ ಹಾಗೆನಿಸದೆ ಹೋಗುವುದರಿಂದ ವಿಭಾವ, ಅನುಭಾವ, ವ್ಯಭಿಚಾರಿಗಳೆಂಬ ಹೆಸರಿಗೆ ಯೋಗ್ಯವಾಗುತ್ತವೆ.[30] ಇವುಗಳ ಸಂಯೋಗದಿಂದ

---

[28] ಈ ಪದ್ಯವು ಸಂಭೋಗಶೃಂಗಾರಕ್ಕೂ ಮುಂದಿನದು ವಿಪ್ರಲಂಭಶೃಂಗಾರಕ್ಕೂ ಲಕ್ಷ್ಯಗಳೆಂದು ವಿದ್ಯಾಚಕ್ರವರ್ತಿಯೇ ಮೊದಲಾದವರು ಬರೆದಿದ್ದಾರೆ.

ಈ ಪದ್ಯದಲ್ಲಿ ಆಲಂಬನವಿಭಾವವೂ ಮುಂದಿನದರಲ್ಲಿ ಉದ್ದೀಪನವಿಭಾವವೂ ಪ್ರಕಟವಾಗುವುದೆಂದು ಮಾಣಿಕ್ಯಚಂದ್ರನ ಮತ.

[29] ಇದು ರುದ್ರಟನ ಕಾವ್ಯಾಲಂಕಾರದಲ್ಲಿ ಬಂದಿದೆ.

[30] ಲೋಕದಲ್ಲಿ ಸಹಜವಾಗಿ ಸಿದ್ಧವಾದ ರತ್ಯಾದಿಗಳ ಕಾರಣ, ಕಾರ್ಯ, ಸಹಕಾರಿಗಳು ನಾಟಕದಲ್ಲಿ ಕೃತ್ರಿಮವಾಗಿಯಾದರೂ ಕೃತ್ರಿಮವೆನಿಸದಂತೆ ಪ್ರದರ್ಶಿತವಾದಾಗ ಅವಕ್ಕೆ ವಿಭಾವ, ಅನುಭಾವ, ವ್ಯಭಿಚಾರಿಭಾವಗಳೆಂಬ ಹೊಸ ಸಂಜ್ಞೆ ಸಾರ್ಥಕವಾಗುತ್ತದೆ. ಪಾಶ್ಚಾತ್ಯರಲ್ಲಿ ಕಲೆಯ ವಿಷಯದಲ್ಲಿ ಪ್ರಸಿದ್ಧವಾಗಿರುವ ಅನುಕರಣ ತತ್ತ್ವದ ಪ್ರತಿಬಿಂಬವನ್ನಿಲ್ಲಿ ಕಾಣಬಹುದು. ಚಿತ್ರಕಾರನು ಲೋಕಸಿದ್ಧ ವಸ್ತುವಿನ ಪ್ರತಿರೂಪವನ್ನಷ್ಟೇ ಕೊಡುವುದಿಲ್ಲ ; ಅದನ್ನು ಸೌಂದರ್ಯ

ಎಂದರೆ ಗಮ್ಯಗಮಕಭಾವದ ಆಧಾರದಿಂದ ಅನುಮಿತವಾಗುವ ರತ್ಯಾದಿ ಭಾವವು ವಾಸನಾವಶದಿಂದ ಸಾಮಾಜಿಕರಿಗೆ ಆಸ್ವಾದ್ಯವಾಗಿ ರಸವೆನಿಸುತ್ತದೆ.[31] ವಸ್ತುತಃ

ಪೂರ್ಣವನ್ನಾಗಿಯೂ ಮಾಡುತ್ತಾನೆ. ಇದೇ ಕಲೆಯ ಮರ್ಮ. ಹೋಲಿಸಿ—*They (=painters), while reproducing the distinctive form of the original, make a likeness which is true to life and yet more beautiful* (ARISTOTLE). ಲೋಕದ ಕಾರ್ಯಕಾರಣ ಸಹಕಾರಿಗಳಿಗೆ ಕಾಲದೇಶಪ್ರಸ್ತಾವಗಳ ಸಂಬಂಧವಷ್ಟೇ ಸಾಧ್ಯ ; ಅಲೌಕಿಕವಾದ ವಿಭಾವಾದಿಗಳಿಗೆ ಮಾತ್ರ ಮನುಷ್ಯಸ್ವಭಾವದ ಅವಿನಶ್ವರ ಪ್ರಕಾರಗಳನ್ನು ನಿರ್ವಿಸುವುದು ಶಕ್ಯ. ಹೋಲಿಸಿ—*There is a difference between a story and a poem, in that a story is a catalogue of detached facts which have no other connection than time, space, circumstances, cause and effect; the other is a creation of actions according to the unchangeable forms of human nature* (SHELLEY—*A Defence of Poetry*).

ಇದನ್ನೆಲ್ಲ ಭರತನು—"ತ್ರೈಲೋಕ್ಯಸ್ಯಾಸ್ಯ ಸರ್ವಸ್ಯ ನಾಟ್ಯಂ ಭಾವಾನುಕೀರ್ತನಮ್" ಎಂಬ ಮಾತುಗಳಲ್ಲಿ ಘೋಷಿಸಿದ್ದಾನೆ. ಕವಿಯ ಮತ್ತು ನಟರ ಕೆಲಸ ಭಾವಾನುಕರಣವೇ ಹೊರತು ವಸ್ತುವಿನ ಅನುಕರಣವಲ್ಲ (*cf. Art is the idealisation or idealising imitation of nature.*—CROCE). ಅಭಿನವಗುಪ್ತನೂ ಕೂಡ ಈ ವ್ಯತ್ಯಾಸವನ್ನು ಬಿಡಿಸಿ ಬರೆದಿದ್ದಾನೆ—ನಟನೇನೂ ರಾಮನಲ್ಲಿದ್ದ ಶೋಕಕ್ಕೆ ಸದೃಶವಾದ ಶೋಕವನ್ನೇ ಮಾಡುವುದಿಲ್ಲ. ಏಕೆಂದರೆ ನಟನಲ್ಲಿ ವಾಸ್ತವವಾದ ಶೋಕವಿರುವುದೇ ಇಲ್ಲ. ಮತ್ತೊಬ್ಬನ ಭಾವವನ್ನು ಅಂತೆಯೇ ಅನುಕರಣ ಮಾಡುವುದೂ ಅಸಾಧ್ಯ. ಶೋಕವಲ್ಲದೆ ಶೋಕಕ್ಕೆ ಸದೃಶವಾದ ಮತ್ತೊಂದು ವಸ್ತುವೂ ಇಲ್ಲ. ಆದ್ದರಿಂದ ನಟನು ತೋರಿಸುವುದು ಶೋಕದ ಅನುಭಾವಗಳನ್ನು ಮಾತ್ರ ; ಅದೂ ಶೋಕಸಾದೃಶ್ಯದಿಂದಲ್ಲ, ಶೋಕಸಜಾತೀಯವಾಗಿ ಮಾತ್ರ' (ಅಭಿನವಭಾರತೀ, ಪುಟ ೩೭).

31 ಬೌದ್ಧಿಕವಾಗಿ ರಸಪ್ರತೀತಿಯ ವಿಶ್ಲೇಷಣೆಗೆ ಹೊರಟವರಾರೂ ಇಲ್ಲಿಯ ವರೆಗೆ ಶಂಕುಕನ ಮಾತುಗಳಲ್ಲಿ ತಪ್ಪು ತೋರಿಸುವಂತಿಲ್ಲ. ಆದರೆ ಲೋಕವಿಲಕ್ಷಣವೆಂದೊಪ್ಪಿಯಾದ ರಸಪ್ರತೀತಿಗೆ ಶಾಸ್ತ್ರಸಮ್ಮತವಾದ ಪ್ರಮಾಣಕಲ್ಪನೆ ಅಗತ್ಯವೆ? ಎನ್ನುವಂತಾಗುತ್ತದೆ. ಈ ಸಿದ್ಧಾಂತವನ್ನೋದುವಾಗ ಕಾವ್ಯನಾಟಕಾದಿಗಳಲ್ಲಿ ವಿಭಾವಾನುಭಾವ ವ್ಯಭಿಚಾರಿಗಳನ್ನು ಸಾಮಾಜಿಕರು ಕಾಣುತ್ತಾರೆ. ಅವುಗಳ ಮೇಲಿಂದ ರತ್ಯಾದಿಭಾವಗಳ ಇರುವಿಕೆಯನ್ನು ಊಹಿಸುತ್ತಾರೆ, ತರ್ಕದಲ್ಲಿ ಹೊಗೆಯಿಂದ ಬೆಂಕಿಯನ್ನೂಹಿಸುವಂತೆ. ಹೀಗೆ ಅನುಮಿತವಾದ ರತ್ಯಾದಿಯೇ ಆಸ್ವಾದ್ಯವಾಗಿ ರಸವೆನಿಸುತ್ತದೆ ಸಾಮಾಜಿಕರಿಗೆ. ತರ್ಕಶಾಸ್ತ್ರದ ನಿಯಮಾವಲಿಗಳನ್ನೆಲ್ಲ ಯಥಾವತ್ತಾಗಿ ಶಂಕುಕನು ರಸಾಸ್ವಾದಕ್ಕೆ ಅನ್ವಯಿಸುತ್ತಿರುವುದು ಸ್ಪಷ್ಟ. ತಾರ್ಕಿಕನಾದವನು ರಸಪ್ರತೀತಿಗೆ ಶಾಸ್ತ್ರಸಮ್ಮತವಾಗಿ ಉಪಪತ್ತಿ ಹೇಳಲು ಬೇರೆ ಗತ್ಯಂತರವಿಲ್ಲ. ತರ್ಕಶಾಸ್ತ್ರದ ನಿರ್ದುಷ್ಟಸ್ಥಿತಿಗೆ ಇದರಿಂದ ಉಪಯೋಗವಾಗಬಹುದೇ ಹೊರತು ಕಾವ್ಯಮೀಮಾಂಸೆಗೆ ಆಗುವ ಉಪಕಾರ ಕಡಿಮೆ. 'ನಿಮ್ಮ ತರ್ಕಶಾಸ್ತ್ರವು ರಸಪ್ರತೀತಿಯನ್ನು ಕೈಬಿಟ್ಟು ಪ್ರತೀತಿಗಳ ಸ್ವರೂಪವನ್ನು ವಿವರಿಸಿರುವುದರಿಂದ ಅಗ್ರಾಹ್ಯ'ವೆಂದು ಯಾರಾದರೂ ಆಕ್ಷೇಪಿಸಿದರೆ ಅವರ ಸಮಾಧಾನಕ್ಕೆ ಹೀಗೆ ಹೇಳಬಹುದು 'ನಮ್ಮ ಅನುಮಾನ

ಸ್ಥಾಯಿಯಾಗಿ ಅಲ್ಲಿ ಇರದಿದ್ದರೂ ಇದ್ದಂತೆ ಸಾಮಾಜಿಕರು ಅದನ್ನೂಹಿಸಿಕೊಳ್ಳು ತ್ತಾರೆ. ಅನುಮಿತಿಯೇ ಆದರೂ ವಸ್ತುವಿನಲ್ಲಿ ಸೌಂದರ್ಯಾಂಶವಿರುವುದರಿಂದ ಆಸ್ವಾದ್ಯವಾಗಿ ಪರಿಣಮಿಸುತ್ತದೆಯಾಗಿ ಇದು ಇತರ ಅನುಮಿತಿಗಳಿಗಿಂತ ವಿಲಕ್ಷಣ ವಾದುದು.[32]

ಭಟ್ಟನಾಯಕನ ವಿವರಣೆಯಿಂತಿದೆ[33]—ರತ್ಯಾದಿ ಸ್ಥಾಯಿಭಾವವು ಪರಗತವೆಂದಾಗಲಿ ಆತ್ಮಗತವೆಂದಾಗಲಿ ಪ್ರತೀತವಾಗುವುದಿಲ್ಲ; ಅದು ಉತ್ಪನ್ನವೂ ಅಲ್ಲ, ಅಭಿವ್ಯಕ್ತವೂ

ಪ್ರಮಾಣವೇ ರಸಪ್ರತೀತಿಗೂ ಧಾರಾಳವಾಗಿ ಅನ್ವಯಿಸುತ್ತದೆ' ಎಂದು. ಆದರೆ ಕಾವ್ಯದ ವೈಶಿಷ್ಟ್ಯವನ್ನು ವಿಭಜಿಸಿ ತೋರಿಸಬೇಕಾದ ವಿಮರ್ಶಕರು ಈ ಮಾತನ್ನು ಹೇಳಿದರೆ ಏನನ್ನೂ ಸಾಧಿಸಿದಂತಾಗುವುದಿಲ್ಲ. ಲೋಕದಲ್ಲಿಲ್ಲದ, ಕಾವ್ಯದಲ್ಲಿ ಮಾತ್ರ ಇರುವ, ಅನುಭವದ ವೈಲಕ್ಷಣ್ಯವನ್ನು ಹೇಳಬೇಕಾದುದು ಅವರ ಕರ್ತವ್ಯ. ಎರಡಕ್ಕೂ ಒಂದೇ ಉತ್ತರವನ್ನು ಅವರು ತಾರ್ಕಿಕ ರೀತಿಯಿಂದ ಹೇಳಿದರೆ (ಇಂಗ್ಲಿಷಿನಲ್ಲಿ *Begging the question* ಎನ್ನುವಂತೆ) ಪರ್ಯಾಯವಾಗಿ ಉತ್ತರದ ಆಕಾರದಲ್ಲಿ ಪ್ರಶ್ನೆಯನ್ನೇ ತಿರುಗಿ ಉಚ್ಚರಿಸಿದಂತಾಗುತ್ತದೆ. ಈ ಅಭಿಪ್ರಾಯವು ಸೂತ್ರಕಾರನಾದ ಭರತನಿಗಿದ್ದಿತೆಂದು ನಂಬುವುದು ಕಷ್ಟ.

[32] ಮೇಲೆ ಸೂಚಿಸಿದ ದೋಷವು ಇಲ್ಲಿ ಮತ್ತಷ್ಟು ಸ್ಫುಟವಾಗಿದೆ. ಕಾವ್ಯದಲ್ಲಿ ರಸಾಸ್ವಾದ ಹೇಗೆ? ಎಂಬ ಪ್ರಶ್ನೆಗೆ ಅನುಮಿತಿಯಾದ್ದರಿಂದ ಎಂದುತ್ತರ. ಅನುಮಿತಿಗಳಲ್ಲಿ ಆಸ್ವಾದ ಹೇಗೆ? ಎಂದರೆ ಕಾವ್ಯವಾದ್ದರಿಂದ ಎಂದುತ್ತರ. ಈ ಅನ್ಯೋನ್ಯಾಶ್ರಯದಲ್ಲಿ ಬುದ್ಧಿಯು ಮುಂದಕ್ಕೆ ಹೆಜ್ಜೆಯಿಟ್ಟಂತೇನೂ ಆಗುವುದಿಲ್ಲ. ರಸಪ್ರತೀತಿ ಎಂಬ ಶಬ್ದದ ಬದಲು ರಸಾನುಮಿತಿಯೆಂಬ ಶಬ್ದಾಂತರವು ಮಾತ್ರ ಸಿಕ್ಕಿದಂತಾಗುತ್ತದೆ. ಸಾಮಾಜಿಕನ ದೃಷ್ಟಿಯಿಂದ ರಸದ ಸ್ವರೂಪವನ್ನು ನಿರ್ಣಯಿಸಲು ಹೊರಟ ಶಂಕುಕನು ರಸಾನುಮಿತಿಯನ್ನು ಮತ್ತಷ್ಟು ವಿವರವಾಗಿ ವಿಶದಪಡಿಸಬೇಕಾಗಿತ್ತು.

ಈ ದೋಷವನ್ನು ಮನಗಂಡೇ ಆನಂದವರ್ಧನನು ಅದನ್ನು ನಿವಾರಿಸಲು ಹೊಸದಾದ ಧ್ವನಿತತ್ತ್ವವನ್ನು ಸಾರಿ ಧ್ವನ್ಯಾಲೋಕವೆಂಬ ಗ್ರಂಥವನ್ನು ರಚಿಸಿದನು. ಕಾವ್ಯನಾಟಕಗಳಲ್ಲಿ ರಸದ ಪ್ರತೀತಿಗೆ ವಿಭಾವಾದಿಗಳೇ ಗಮಕಗಳೆಂದಾದಮೇಲೆ ವಿಭಾವಾದಿಗಳಿಗೂ ರಸಕ್ಕೂ ಇರುವ ಸಂಬಂಧವನ್ನು ಮತ್ತಷ್ಟು ಆಳವಾಗಿ ಸಾಹಿತ್ಯದೃಷ್ಟಿಯಿಂದ ಆತನು ವಿಚಾರಮಾಡಿದನು. ಕಾವ್ಯದಲ್ಲಿ ಶಬ್ದ, ಅರ್ಥಗಳನ್ನು ಬಿಟ್ಟರೆ ಬೇರೆ ಉಪಾದಾನ ಸಾಮಗ್ರಿಯೇ ಇಲ್ಲದ ಕಾರಣ ಈ ಶಬ್ದ, ಅರ್ಥಗಳ ಅಲೌಕಿಕ ವ್ಯಾಪಾರವೇ ರಸಪ್ರಯೋಜಕವೆಂದು ಸ್ಥಾಪಿಸಿದನು. ಶಬ್ದಗಳಿಗೆ ಲೋಕ ಮತ್ತು ಶಾಸ್ತ್ರಪ್ರಸಿದ್ಧವಾದ ವ್ಯಾಪಾರಗಳೆಂದರೆ ಎರಡೇ—ಅಭಿಧೆ ಮತ್ತು ಲಕ್ಷಣೆ. ಕಾವ್ಯದಲ್ಲಿ ಶಬ್ದಗಳಿಗೂ ಮೂರನೆಯ ವ್ಯಂಜಕತ್ವ ವ್ಯಾಪಾರವಿರುವಂತೆ ಅರ್ಥಗಳಿಗೂ, ಅಭಿನಯಾದಿಗಳಿಗೂ ವ್ಯಂಜಕತ್ವ ವ್ಯಾಪಾರವಿರುವುದನ್ನು ವಿವರಿಸಿ ತೋರಿಸಿದನು. ಮಮ್ಮಟನೂ ಕೂಡ ತನ್ನ ಎರಡು ಮೂರನೆಯ ಉಲ್ಲಾಸಗಳನ್ನು ಈ ಪ್ರಕ್ರಿಯೆಯ ಪ್ರತಿಪಾದನೆಗೇ ವಿನಿಯೋಗಿಸಿದ್ದಾನೆ.

[33] ಆದರೆ ಈ ಹೊಸ ವಿಚಾರಧಾರೆಯಾಗಲಿ ಶಂಕುಕನ ವಾದಸರಣಿಯಾಗಲಿ ಒಂದೂ ಮನಸ್ಸಿಗೆ ಬರಲಿಲ್ಲ, ನಾಟ್ಯಶಾಸ್ತ್ರದ ಮೂರನೆಯ ವ್ಯಾಖ್ಯಾಕಾರನಾದ ಭಟ್ಟನಾಯಕನಿಗೆ. ಧ್ವನ್ಯಾಲೋಕದ ಖಂಡನೆಗಾಗಿ ಈತನು 'ಹೃದಯದರ್ಪಣ'ವೆಂಬ ಸ್ವತಂತ್ರ ಗ್ರಂಥವನ್ನೇ ಬರೆದನಲ್ಲದೆ ಶಂಕುಕನ

ಅಲ್ಲ. ಆದರೆ ಕಾವ್ಯನಾಟಕಗಳಲ್ಲಿ ಅಭಿಧೆಗಿಂತ ಬೇರೆಯಾದ ಮತ್ತು ವಿಭಾವಾದಿಗಳ ಸಾಧಾರಣೀಕರಣ ಪ್ರಯೋಜಕವಾದ ಭಾವಕತ್ವವೆಂಬ ವ್ಯಾಪಾರದಿಂದ ಭಾವ್ಯಮಾನ ವಾದ ಸ್ಥಾಯಿಯೇ ಸತ್ವಗುಣದ ಉದ್ರೇಕದಿಂದುಕ್ಕುವ ಆನಂದಮಯವಾದ ಅನುಭೂತಿಯಲ್ಲಿ ವಿಶ್ರಾಂತವಾಗುವ **ಭೋಗ**ವೆಂಬ ವ್ಯಾಪಾರದಿಂದ ಆಸ್ವಾದ್ಯ ವಾಗುತ್ತದೆ.'[34]

ಮತವನ್ನೂ ತನ್ನ ನಾಟ್ಯಶಾಸ್ತ್ರವ್ಯಾಖ್ಯೆಯಲ್ಲಿ ತುಂಡುತುಂಡಾಗಿ ಖಂಡಿಸಿದನು. ಶಂಕುಕನ ಮತ ತರ್ಕದೃಷ್ಟಿಯಿಂದ ಹೊರಟದ್ದು; ಆನಂದವರ್ಧನನ ಮತ ಶಬ್ದವ್ಯಾಪಾರಗಳ ವಿಮರ್ಶೆಯನ್ನು ಕುರಿತದ್ದು ಆಯಿತೇ ಹೊರತು ಸಾಮಾಜಿಕರ ಅನುಭವದ ರಹಸ್ಯವನ್ನು ಹೊರಗೆಡಹಲು ಎರಡೂ ಮುಂದಾಗಲಿಲ್ಲವೆಂದು ಅವನಿಗೆ ತೋರಿದ್ದು ಸಹಜವೇ ಆಗಿದೆ. ಶಂಕುಕನು ತಾರ್ಕಿಕನಿಯಮ ಗಳನ್ನು ಮೆಚ್ಚಿದಂತೆ ಆನಂದವರ್ಧನನು ವೈಯಾಕರಣಿಗಳ ತತ್ತ್ವಗಳಿಗೆ ಮಾರುಹೋದನು. ಯಾರೂ ಸಹೃದಯರ ರಸಾನುಭವವನ್ನು ತತ್ತ್ವದೃಷ್ಟಿಯಿಂದ ಆಳವಾಗಿ ವಿಚಾರಮಾಡಿರಲಿಲ್ಲ. ರಸವೆಂದರೆ ಸಾಮಾಜಿಕರ ಆನಂದವೇ ಎಂದೊಪ್ಪಿದೊಡನೆ ಆನಂದಮೀಮಾಂಸೆಯೇ ರಸತತ್ತ್ವವಿಮರ್ಶಕನ ಪ್ರಥಮ ಕರ್ತವ್ಯವಾಗುತ್ತದೆ. ಆನಂದದ ಮೀಮಾಂಸೆ ಬರುವ ವೇದಾಂತ, ಸಾಂಖ್ಯ, ಯೋಗಶಾಸ್ತ್ರಗಳ ಪ್ರಕ್ರಿಯೆ ಗಳ ಪೂರ್ಣಪರಿಚಯವೂ ಆತನಿಗೆ ಅಗತ್ಯವಾಗುತ್ತದೆ. ಮುಂದಿನ ಅಭಿನವಗುಪ್ತನು ಭಟ್ಟನಾಯಕನನ್ನು ಮೀಮಾಂಸಕನೆಂದು ಜರೆದರೂ (ಹೋಲಿಸಿ—ಜೈಮಿನಿಸೂತ್ರೇ ಹ್ಯೇವಂ ಯೋಜ್ಯತೇ ನ ಕಾವ್ಯೇऽಪಿ, ಲೋಚನ. ಪು. ೬೩; ಮತ್ತು ಭಟ್ಟನಾಯಕೇನ . . . ಇತಿ ಕೇವಲಂ ಜೈಮಿನಿರನುಸೃತಃ— ಅಭಿನವಭಾರತೀ), ಅವನ ರಸಿಕತೆಯನ್ನು ಅಲ್ಲಗಳೆದರೂ, ತಾತ್ವಿಕದೃಷ್ಟಿಯಿಂದ ಭಟ್ಟನಾಯಕನ ರಸನಿರೂಪಣೆಯು ಶ್ಲಾಘ್ಯವೂ, ಇಂದಿಗೂ ಅಭಿನಂದನೀಯವೂ ಆಗಿದೆ. ಆತನು ಪೂರ್ವಮೀಮಾಂಸಾ ಶಾಸ್ತ್ರದಲ್ಲಿ ಪಾರಂಗತನಾಗಿದ್ದಂತೆ ಸಾಂಖ್ಯವೇದಾಂತಾದಿ ದರ್ಶನಪ್ರವೀಣನೂ ಆಗಿದ್ದನು. ಮುಖ್ಯ ಸಮಸ್ಯೆಯನ್ನು ಸದಾ ಕಣ್ಣಮುಂದಿಟ್ಟುಕೊಂಡು ಆತನು ಹೊಸ ವಿಚಾರಗಳನ್ನು ಮುಂದಿಟ್ಟಿದ್ದಾನೆ. ಈತನ ವಿಚಾರಧಾರೆಯನ್ನು ಅಭಿನವಗುಪ್ತನು ಬಾಯಿಂದ ತಪ್ಪೆಂದರೂ ಕೈಯಿಂದ ತಾನೇ ಎಷ್ಟೋ ಮಟ್ಟಿಗೆ ಎತ್ತಿಕೊಂಡಿದ್ದಾನೆ; ಮುಂದೆ ಬಂದ ಮಹಿಮಭಟ್ಟನ ಮೇಲಲ್ಲದಿದ್ದರೆ ಧನಂಜಯನ ಮೇಲೆ ಮತ್ತು ವಕ್ರೋಕ್ತಿ ಜೀವಿತವನ್ನು ಬರೆದ ಕುಂತಕನ ಮೇಲೆ ಭಟ್ಟನಾಯಕನ ಪರಿಣಾಮವಾದುದನ್ನು ಅಲಂಕಾರಶಾಸ್ತ್ರದ ಇತಿಹಾಸವು ತೋರಿಸುತ್ತದೆ.

[34] ಭಟ್ಟನಾಯಕನ ಪ್ರಕ್ರಿಯೆಯನ್ನು ಸಂಗ್ರಹವಾಗಿ ಹೀಗೆ ಹೇಳಬಹುದು:—ಕಾವ್ಯದಲ್ಲಿ ಶಬ್ದಗಳು ಕೋಶದಲ್ಲಿನ ಶಬ್ದಗಳೇ ಆದರೂ ತಮ್ಮದೊಂದು ವೈಲಕ್ಷಣ್ಯವನ್ನು ಪಡೆದಿರುವವಲ್ಲವೆ? ಇದನ್ನೇನೆಂದು ಕರೆಯಬೇಕೆನ್ನುವುದು ಪ್ರಶ್ನೆ. ಈ ಪ್ರಶ್ನೆಗೆ 'ಧ್ವನಿ'ಯೆಂದು ಆನಂದವರ್ಧನ ಉತ್ತರ ಹೇಳಿದ್ದಾನೆ, ಇರಲಿ. ಅವನು ಯಾವ ಶಬ್ದ ಉಪಯೋಗಿಸಿದನೆಂದು ಚರ್ಚೆಯಿಲ್ಲ. ಗಮನಿಸಬೇಕಾದ ಅಂಶಗಳನ್ನೆಲ್ಲ ಗಮನಿಸಿದ ಮೇಲೆ ಉತ್ತರ ಹೇಳಿದ್ದಾನೆಯೋ ಇಲ್ಲವೋ ಎಂಬು ದನ್ನು ಮಾತ್ರ ನೋಡಬೇಕು. ಕಾವ್ಯವನ್ನು ಶಬ್ದಸಂಗ್ರಹ ಮಾಡುವ ದೃಷ್ಟಿಯಿಂದ ಕೋಶಕಾರನು ಓದಬಹುದು; ಶಬ್ದಪ್ರಯೋಗಗಳ ಸಾಧುತ್ವವನ್ನು ಪಟ್ಟಿಮಾಡಲು ವೈಯಾಕರಣಿಯೂ ಓದ ಬಹುದು, ರಸಾನುಭವಕ್ಕಾಗಿ ಸಹೃದಯನು ಓದಬಹುದು; ಪ್ರಮಾಣ-ಪ್ರಮೇಯ ವಿವೇಚನೆಗಾಗಿ

ತಾರ್ಕಿಕನೂ ಓದಬಹುದು, ನೀತಿ-ಅನೀತಿಗಳ ನಿರ್ಣಯಕ್ಕಾಗಿ ಧರ್ಮಶಾಸ್ತ್ರಕಾರನೂ ಪರೀಕ್ಷಿಸಬಹುದು. ಕಾವ್ಯದಲ್ಲಿರುವ ಶಬ್ದಗಳು ಒಂದೇ ಆದರೂ ಅವು ಭಿನ್ನ ಭಿನ್ನ ವಾಚಕರಿಗೆ ವಿಭಿನ್ನ ಪ್ರಯೋಜನವನ್ನು ಕೊಡಬಲ್ಲವೆಂದಂತಾಯಿತು. ಆದ್ದರಿಂದ ಕಾವ್ಯಶಬ್ದದ ವ್ಯಾಪಾರವು ಅನೇಕಾಂಶಗಳಿಂದ ಕೂಡಿದ್ದೆನ್ನಬೇಕು. ಅವರವರ ದೃಷ್ಟಿಗೆ ತಕ್ಕಂತೆ ಶಬ್ದದ ಬೇರೆ ಬೇರೆ ವ್ಯಾಪಾರಾಂಶವು ವ್ಯಕ್ತವಾಗುತ್ತದೆ. ವಾಚ್ಯಾರ್ಥದ ದೃಷ್ಟಿಯಿಂದೋದುವವರಿಗೆಲ್ಲ ಕಾವ್ಯವ್ಯಾಪಾರದ ಅಭಿಧಾಯಕತ್ವವೆಂಬಂಶವಷ್ಟೇ ಪ್ರಕಟವಾಗುತ್ತದೆ. ಆದರೆ ಅಲೌಕಿಕವಾದ ರಸದ ನಿಷ್ಪತ್ತಿಯ ದೃಷ್ಟಿಯಿಂದ ನೋಡುವಾಗ ಅದೇ ಶಬ್ದಗಳಿಗೆ (ಭರತನ ಮಾತುಗಳನ್ನೇ ಬಳಸಿಕೊಂಡು ಹೇಳಿದರೆ) 'ಭಾವಕತ್ವ'ವೆಂಬ ವ್ಯಾಪಾರವಿರುವುದು ಕಾಣುತ್ತದೆ. ಸಹೃದಯನ ಆನಂದದ ದೃಷ್ಟಿಯಿಂದ ಹೇಳುವುದಾದರೆ ಅದೇ ಶಬ್ದಗಳಿಗೆ 'ಭೋಜಕತ್ವ' ಅಥವಾ ಭೋಗಕೃತ್ತ್ವವೆಂಬ ವ್ಯಾಪಾರವಿರುತ್ತದೆ. ಹೀಗೆ ಕಾವ್ಯಶಬ್ದದ ವ್ಯಾಪಾರಕ್ಕೆ ಮೂರು ಅಂಶಗಳಿವೆ. (ಹೋಲಿಸಿ—"ಅನ್ಯಶಬ್ದವೈಲಕ್ಷಣ್ಯಂ ಕಾವ್ಯಾತ್ಮನಃ ಶಬ್ದಸ್ಯ, ತ್ರ್ಯಂಶತಾಪ್ರಸಾದಾತ್ ತತ್ರಾಭಿಧಾಯಕತ್ವಂ ವಾಚ್ಯವಿಷಯಮ್, ಭಾವಕತ್ವಂ ರಸಾದಿವಿಷಯಮ್, ಭೋಕ್ತೃತ್ವಂ ಸಹೃದಯ ವಿಷಯಮಿತಿ ತ್ರಯೋಽಪ್ಯಂಶಭೂತಾ ವ್ಯಾಪಾರಾಃ"—ಲೋಚನದಲ್ಲಿ ಉದಾಹೃತ, ಪು. ೬೮) ಭಾವಕತ್ವ ವ್ಯಾಪಾರದ ಕೆಲಸವೇನೆಂದರೆ ಕಾವ್ಯದಲ್ಲಿರುವ ವಿಭಾವಾದಿಗಳಲ್ಲಿ ಒಂದು ಬಗೆಯ ಸಾಧಾರಣ್ಯವನ್ನು ತಂದುಕೊಡುವುದು. ಈ ಸಾಧಾರಣೀಕರಣ (*Universalisation*)ವಿಲ್ಲದೆ ರಸಪ್ರತೀತಿಯುಂಟಾಗಲಾರದು. ಆದ್ದರಿಂದ ಶಬ್ದವ್ಯಾಪಾರದಲ್ಲಿ ಇದನ್ನು ಒಂದು ಮುಖ್ಯಾಂಶವೆಂದು ಪರಿಗಣಿಸಲೇಬೇಕು. (ಹೋಲಿಸಿ—"ತೇನ ರಸಭಾವನಾಖ್ಯೋ ದ್ವಿತೀಯೋ ವ್ಯಾಪಾರಃ| ಯದ್ವಶಾದ್ ಅಭಿಧಾ ವಿಲಕ್ಷಣೈವ. ತಚ್ಚೈತದ್ ಭಾವಕತ್ವಂ ನಾಮ, ಯತ್ ಕಾವ್ಯಸ್ಯ ತದ್ವಿಭಾವಾದೀನಾಂ ಸಾಧಾರಣತ್ವಾಪಾದನಂ ನಾಮ, ಭಾವಿತೇ ಚ ರಸೇ ತಸ್ಯ ಭೋಗಃ—ಲೋಚನ, ಪು. ೬೮). ರಸಾನುಭೂತಿಯಲ್ಲಿ ಎರಡು ಅಂಶಗಳಿವೆ. ಒಂದು ರಸದ ಭಾವನೆ; ಅನಂತರ ಅದರ ಭೋಗ. ಎರಡಕ್ಕೂ ಶಬ್ದವೇ ಕಾರಣವಾದ್ದರಿಂದ ಶಬ್ದಕ್ಕೇ ಆ ಎರಡು ವ್ಯಾಪಾರಗಳನ್ನೂ ಒಪ್ಪಬೇಕು. ಎಂದರೆ ಸಹೃದಯನು ಶಾಕುಂತಲ ನಾಟಕವನ್ನು ನೋಡುವಾಗ ದುಷ್ಯಂತನನ್ನು ಧೀರೋದಾತ್ತ ಪುರುಷರ ಪ್ರತಿನಿಧಿಯಾಗಿಯೂ ಶಕುಂತಲೆಯನ್ನು ಮುಗ್ಧಸ್ತ್ರೀಯೊಬ್ಬಳನ್ನಾಗಿಯೂ ಸಾಧಾರಣವಾಗಿ ಗ್ರಹಿಸುವನೇ ಹೊರತು ವಿಶಿಷ್ಟ ಐತಿಹಾಸಿಕ ವ್ಯಕ್ತಿಗಳೆಂದಲ್ಲ. ಇಲ್ಲದಿದ್ದರೆ ಎಂದೋ ಸತ್ತು ಸ್ವರ್ಗಕ್ಕೆ ಹೋದವರ ಸಮಾಚಾರವು ಇಂದು ಅಷ್ಟು ಆಸ್ವಾದ್ಯವಾಗುವುದು ಹೇಗೆ?

ಭಟ್ಟನಾಯಕನ ಅಭಿಪ್ರಾಯದಲ್ಲಿ ರಸದ ಆನಂದವು ಸಾಮಾಜಿಕನದು; ಆದರೆ ರತ್ಯಾದಿಯು ಸಾಮಾಜಿಕನದೆಂದಾಗಲಿ, ನಾಯಕಾದಿಗತವೆಂದಾಗಲಿ ಹೇಳಲಿಕ್ಕೆ ಬಾರದು. ಅದರ ವ್ಯಕ್ತಿವಿಶೇಷಣಾಂಶವೆಲ್ಲ ಗಲಿತವಾಗಿ ಕೇವಲ ಸಾಧಾರಣರೂಪದಲ್ಲಿ ಅದು ಭಾವಿತವಾಗುವುದೆಂದು ಅವನ ಸಿದ್ಧಾಂತ. ಇದಕ್ಕೆ ಕಾರಣ ಕಾವ್ಯಶಬ್ದಗಳ ಭಾವಕತ್ವವ್ಯಾಪಾರ. ರತ್ಯಾದಿಯು ಸಾಮಾಜಿಕನಲ್ಲಿಯೇ ಹುಟ್ಟುವುದೆನ್ನಲು ಅನೇಕ ತೊಂದರೆಗಳಿವೆ. (೧) ನಾಟಕದಲ್ಲಿ ಸೀತೆಯನ್ನು ನೋಡುತ್ತಿರುವ ಸಾಮಾಜಿಕನಿಗೆ ಅವಳ ವಿಷಯದಲ್ಲಿ ಪ್ರೇಮ ಅಸಂಭವ, ಏಕೆಂದರೆ ಸೀತೆಯು ಆತನ ಪತ್ನಿಯಲ್ಲ. ಸೀತೆಯು ರಾಮನ ರತಿಗೆ ವಿಭಾವವೇ ಹೊರತು ಸಾಮಾಜಿಕನ ರತಿಗಲ್ಲ. (೨) ಪತ್ನೀಸಾಮಾನ್ಯರೂಪದಲ್ಲಿ ರತಿವಾಸನೆಯು ಉಕ್ಕುವುದೆನ್ನುವುದೂ ಸರಿಯಲ್ಲ, ದೇವತಾವರ್ಣನೆಗಳಲ್ಲಿ ಆ

ಸಾಮಾನ್ಯಾಂಶಕ್ಕೂ ಆಸ್ಪದವಿರುವುದಿಲ್ಲವಾದ್ದರಿಂದ. ಅಲ್ಲದೆ ಸ್ವಪತ್ನೀಸ್ಮರಣೆ ಕೂಡ ನಾಟಕದಲ್ಲಿ ತಲೆದೋರುವುದಿಲ್ಲ. ರಾಮಾದಿಗಳ ಸೇತುಬಂಧಾದಿ ಲೋಕೋತ್ತರಕಾರ್ಯಗಳು ಸಾಮಾಜಿಕನಿಗೆ ಸಾಧಾರಣವೆನಿಸುವುದಾದರೂ ಹೇಗೆ? ರಾಮಾದಿಗಳ ಉತ್ಸಾಹಾದಿ ಮಾತ್ರದ ಪ್ರತೀತಿಯಿಂದಲೂ ಸಾಮಾಜಿಕನಿಗೆ ರಸಕ್ಕಿಂತ ಹೆಚ್ಚಾಗಿ ಅಸೂಯೆ ಮುಂತಾದ ಭಾವಗಳೇ ಹುಟ್ಟಬಹುದು. ಈ ಉತ್ಪತ್ತಿವಾದವನ್ನೊಪ್ಪಿದರೆ ಸೀತಾದಿಗಳಲ್ಲಿ ಕಾಮಿತ್ವವೂ ಕರುಣಾದಿಪ್ರಸಂಗಗಳಲ್ಲಿ ದುಃಖಿತ್ವವೂ ಸಹೃದಯನಿಗೆ ಇರಬೇಕಾಗುತ್ತದೆ. ವಿಭಾವಾದಿಕಾರಣಗಳು ನಷ್ಟವಾದ ಮೇಲೂ ಕಾರ್ಯವಾದ ರಸವು ಉಳಿಯಬೇಕಾಗುತ್ತದೆ. ಇವು ಅನುಭವವಿರುದ್ಧ. ಆದ್ದರಿಂದ ರಸ ಉತ್ಪನ್ನವಲ್ಲ. ಇಲ್ಲದ್ದು ಜನಿಸುವುದು ಉತ್ಪತ್ತಿಯಾದರೆ ಇದ್ದುದೇ ಪ್ರಕಾಶಕ್ಕೆ ಬರುವುದು ಅಭಿವ್ಯಕ್ತಿಯೆನಿಸುತ್ತದೆ. ರಸವು ಪೂರ್ವಸಿದ್ಧವಲ್ಲದ ಕಾರಣ ಅದು ಅಭಿವ್ಯಕ್ತವಾಗುವುದೆನ್ನುವಂತೆಯೂ ಇಲ್ಲ. ಶಕ್ತಿ (= ಸಂಸ್ಕಾರ = *Potentiality*) ರೂಪವಾಗಿ ಪೂರ್ವಸಿದ್ಧವೆಂದರೂ ಅದರ ಅಭಿವ್ಯಕ್ತಿಯಲ್ಲಿ ವಿಷಯಕೃತವಾದ ಮತ್ತು ಇಚ್ಛಾಕೃತವಾದ ತಾರತಮ್ಯಗಳು ಇರಬೇಕಾಗುತ್ತದೆ. ಇವೆಲ್ಲ ತೊಂದರೆಗಳನ್ನೂ ನಿವಾರಿಸಲು ಕಾವ್ಯ ಮಾತ್ರ ವಿದ್ಯಮಾನವಾದ ಭಾವಕತ್ವವ್ಯಾಪಾರವೊಂದೇ ಔಷಧ. ಈ ವ್ಯಾಪಾರವೇ ಶಾಸ್ತ್ರಗಳಿಂದ ಕಾವ್ಯಗಳನ್ನು ಪೃಥಕ್ಕರಿಸುವ ವೈಲಕ್ಷಣ್ಯ. ಇದು ಮನಸ್ಸಿನ ಘನನಿಬಿಡ ಸಂಮೋಹಸಂಕಟವನ್ನೆಲ್ಲ ಎಂದರೆ ವೈಯಕ್ತಿಕ ಸಂಬಂಧಗಳನ್ನೆಲ್ಲ ನಿವಾರಿಸಿ ವಿಭಾವಾದಿಗಳು ತನಗೂ ನಟನಿಗೂ ಸಾಧಾರಣವಾಗುವಂತೆ ಮಾಡುತ್ತದೆ. ಹೀಗೆ ರಸವು ಪ್ರತೀತವೂ ಅಲ್ಲ, ಉತ್ಪನ್ನವೂ ಅಲ್ಲ, ಅಭಿವ್ಯಕ್ತವೂ ಅಲ್ಲ, ಅದು ಕೇವಲ ಭಾವಿತ ಭಾವಿತವಾದ ಮೇಲೆ ಭೋಗ್ಯವಾಗುತ್ತದೆ. ಭೋಗವೆಂದರೆ ತಾನೂ ಉಂಡು ಇತರರಿಗೂ ಕೊಡುವಂತಹುದು; ಅನುಭವ, ಸ್ಮೃತಿಗಳಿಗಿಂತ ವಿಲಕ್ಷಣವಾದುದು. ಸತ್ತ್ವ, ರಜಸ್, ತಮಸ್ ಎಂಬ ತ್ರಿಗುಣಗಳಿಂದ ಕೂಡಿದ ಚಿತ್ತವು ಸತ್ತ್ವದ ಉದ್ರೇಕದಿಂದ ಸುಖವನ್ನೂ ರಜಸ್ಸಿನ ವಿಕಾಸದಿಂದ ದುಃಖವನ್ನೂ ತಮೋಗುಣದ ಪ್ರಸಾರದಿಂದ ಮೋಹವನ್ನೂ ತರುತ್ತದೆಂಬುದು ಪ್ರಸಿದ್ಧ. ಭೋಗಕಾಲದಲ್ಲಿ ರಜಸ್ಸು ಕರಗಿಹೋದೊಡನೆ ತಮೋಗುಣವು ಪ್ರಸರಿಸಿದರೂ ಶಕ್ತಿಹೀನವಾಗುತ್ತದೆ; ಸತ್ತ್ವವೊಂದೇ ಪ್ರಫುಲ್ಲವಾಗುತ್ತದೆ. ಅದರ ಫಲವೇ ಆನಂದ. ಆ ಆನಂದವು ಬ್ರಹ್ಮಾನಂದಕ್ಕೆ ಸಮಾನ.

ಈ ಮೇಲಿನ ಪ್ರಕ್ರಿಯೆಯನ್ನು ಈಚಿನ ಕಾವ್ಯಪ್ರಕಾಶ ಟೀಕೆಯಾದ 'ಪ್ರದೀಪ'ದ ಆಧಾರದ ಮೇಲೆ ಪ್ರೊ|| ಎಂ. ಹಿರಿಯಣ್ಣನವರು ಸಾಂಖ್ಯದರ್ಶನದ ರೀತ್ಯಾ ನಯನಮಾಡಲೆತ್ನಿಸಿದ್ದಾರೆ (*Art Experience*, ಪುಟ ೧೩). ಭೋಗವೆಂಬ ಶಬ್ದವು ಆ ದರ್ಶನದಲ್ಲಿ ಬರುತ್ತದೆ ನಿಜ, ಆದರೆ ಆನಂದವೆಂಬರ್ಥದಲ್ಲಲ್ಲ. ಸುಖದುಃಖ ಮೋಹಾತ್ಮಕವಾದ ಸಂಸಾರವೆಂಬರ್ಥದಲ್ಲಿ ಮಾತ್ರ ಅಲ್ಲಿ ಉಪಯುಕ್ತವಾಗಿದೆ. ಇಲ್ಲಿ ಪ್ರಸಕ್ತವಾದುದು ದುಃಖಮೋಹಗಳ ಲೇಪವಿಲ್ಲದ, ಸುಖರೂಪವಾದ ಭೋಗ ಮಾತ್ರ. ಸಾಂಖ್ಯಕ್ಕೆ ಸಮಾನತಂತ್ರವಾದ ಯೋಗದರ್ಶನದಲ್ಲಿಯೂ ಭೋಗವೆಂದರೆ ಅಪವರ್ಗಕ್ಕೆ ವಿರುದ್ಧವಾದ ಸಂಸಾರಭೋಗವೆಂದಷ್ಟೇ ಅರ್ಥವಾಗುತ್ತದೆ. ಆದ್ದರಿಂದ ಭಟ್ಟನಾಯಕನಿಗೆ ರಸಾನಂದದ ಕ್ಷಣಿಕತ್ವವನ್ನೂ ಲೌಕಿಕತ್ವವನ್ನೂ ಉಪಪಾದಿಸುವ ಉದ್ದೇಶ ಪ್ರಬಲವಾಗಿದ್ದಿತೆನ್ನುವುದಾದರೆ ಮಾತ್ರ ಸಾಂಖ್ಯಪ್ರಕ್ರಿಯೆಯ ನಯನ ಸರಿಯಾಗುತ್ತದೆ. ಅವನಿಗೆ ರಸಾನಂದಕ್ಕೂ ಬ್ರಹ್ಮಾನಂದಕ್ಕೂ ಇರುವ ಸಾಮ್ಯದ ಮತ್ತು ಅವುಗಳ ಲೋಕೋತ್ತರತ್ವದ ನಿರೂಪಣೆಯು ಹೆಚ್ಚು ವಿವಕ್ಷಿತವೆನ್ನುವುದಾದರೆ ಸಮಂಜಸವಾಗುವುದಿಲ್ಲ. ವೇದಾಂತದರ್ಶನದಲ್ಲಿ ಬ್ರಹ್ಮಾನಂದಕ್ಕೆ ಇರುವ

ಶ್ರೀಮದಭಿನವಗುಪ್ತಪಾದರ ವಿವರಣೆಯಿದು[35]:—ಜೀವನದಲ್ಲಿ ಸುಂದರಿಯರೇ ಮೊದಲಾದ ಕಾರಣಾದಿಗಳ ಪರಾಮರ್ಶದಿಂದ (ರತಿಯೇ ಮುಂತಾದ) ಸ್ಥಾಯಿ ಭಾವದ ಸದ್ಭಾವವನ್ನು ಊಹಿಸುವ ಸಾಮರ್ಥ್ಯವುಳ್ಳ ಸಾಮಾಜಿಕರು ಕಾವ್ಯ ಮತ್ತು ನಾಟಕಗಳಲ್ಲಿ ಅವೇ ಬಂದಾಗ ವಿಭಾವಕತ್ವವೇ ಮುಂತಾದ ಹೊಸ ವ್ಯಾಪಾರವನ್ನು

ತಡೆಯೆಂದರೆ ಅವಿದ್ಯೆ. ಅವಿದ್ಯೆಯೆಂಬುದು ಸತ್ವ, ರಜಸ್ಸು, ತಮಸ್ಸುಗಳಿಂದಾದುದು. ಇವುಗಳಲ್ಲಿ ರಜಸ್ಸು ತಮಸ್ಸುಗಳು ಪುರುಷನನ್ನು ಬದ್ಧನನ್ನಾಗಿ ಮಾಡಲು ಮುಖ್ಯ ಸಹಕಾರಿಗಳು; ಸತ್ವವು ಮೋಕ್ಷವನ್ನುಂಟುಮಾಡಿಕೊಡಲು ಸಹಕಾರಿ. ಕೇವಲ ಸತ್ತ್ವವೇ ಇದ್ದಾಗ ಅದರ ಪ್ರಕಾಶವು ಸುಜ್ಞಾನ ಮತ್ತು ಬ್ರಹ್ಮಾನಂದಗಳನ್ನು ತೋರಿಸಲು ಅನುಕೂಲಿಸುತ್ತದೆ. ಈ ಜಗತ್ತಿನ ಸೃಷ್ಟಿಗೆ ಕಾರಣವಾದ ಈಶ್ವರನ ಮಾಯೆ ಅಥವಾ ಅವಿದ್ಯೆಯಲ್ಲಿಯೂ ಸೃಷ್ಟಿಗೆ ಮುನ್ನ ರಜಸ್ಸಿರುವುದಿಲ್ಲ; ಸತ್ವವೊಂದೇ ಸಕ್ರಿಯವಾಗಿರುತ್ತದೆ; ಬೆಳಕಿನ ಮುಂದಿನ ಕತ್ತಲೆಯಂತೆ ತಮಸ್ಸು ನಿಷ್ಕ್ರಿಯವಾಗಿರುತ್ತದೆ ಮತ್ತು ಅದಕ್ಕೆ ಆಗ ಆನಂದಮಯಕೋಶವೆಂದು ಹೆಸರು. ಬ್ರಹ್ಮಾನಂದವನ್ನು ಸ್ವಚ್ಛವಾಗಿ ಪ್ರತಿಫಲಿಸುತ್ತಿದ್ದರೂ ಆಚ್ಛಾದಕತ್ವವುಳಿದಿರುವುದರಿಂದ ಅದಕ್ಕೆ 'ಕೋಶ'ವೆನ್ನುತ್ತಾರೆ, ಬ್ರಹ್ಮಾನಂದವನ್ನು ಸಾಕ್ಷಾತ್ಕರಿಸುವ ಸಾಧಕನಿಗೆ ಅದಕ್ಕೆ ಹಿಂದಿನ ಕಡೆಯ ಮೆಟ್ಟಿಲೇ ಆನಂದಮಯಕೋಶ. ಈ ಸತ್ವವನ್ನು ಅವನು ಉತ್ತೀರ್ಣನಾದರೆ ಅವಿದ್ಯೆ ಪೂರ್ಣವಾಗಿ ತೊಲಗಿ ಬ್ರಹ್ಮಾನುಭವ ಬರುತ್ತದೆ. ಈ ದೃಷ್ಟಿಯಿಂದ ಭಟ್ಟನಾಯಕನ ರಸತತ್ತ್ವವು ಅಕ್ಷರಶಃ ವೇದಾಂತತತ್ತ್ವದ ಪ್ರತಿರೂಪವೆಂದು ನಮಗೆ ತೋರುತ್ತದೆ. ರಜಸ್ತಮೋಗುಣಗಳ ಪ್ರಸರಣವನ್ನು ನಿಲ್ಲಿಸಿ ಸತ್ವಪ್ರಕಾಶಕ್ಕೆ ಮಾತ್ರ ಆಸ್ಪದವೀಯುತ್ತ ದುಃಖಮೋಹಗಳಿಂದ ಅಲಿಪ್ತವಾದ ಸುಖವನ್ನು ಮಾತ್ರ ಕಾವ್ಯವು ಕರುಣಿಸುತ್ತದೆ. ಈ ಸುಖವು ಬ್ರಹ್ಮಾನಂದದ ಛಾಯೆಯೇ ಹೊರತು ಅನ್ಯಥಾ ಅಲ್ಲ; ಅಂತೆಯೇ ಲೋಕೋತ್ತರ. ಭಟ್ಟನಾಯಕನು ನಾಟ್ಯಶಾಸ್ತ್ರದ ಆದಿಶ್ಲೋಕಗಳ ವ್ಯಾಖ್ಯಾನದಲ್ಲಿಯೇ ಹೀಗೆ ವೇದಾಂತಪರವಾಗಿ ವಿವರಿಸಿದ್ದುದಕ್ಕೆ ಅಭಿನವಗುಪ್ತನ ಪ್ರಮಾಣವೇ ಸಿಕ್ಕುತ್ತದೆ. ಹೋಲಿಸಿ: "ಅಸತ್ಯವಾದ ನಾಮರೂಪಪ್ರಪಂಚಾತ್ಮಕವಾದ ವಿಶ್ವವು ಹೇಗೆ ನಿಃಶ್ರೇಯಸಸಾಧನವೋ ಹಾಗೆಯೇ ಸ್ವಪ್ನಾದಿ ವಿಲಕ್ಷಣವೂ ಕಲ್ಪನಾಮಾತ್ರಸಾರವೂ ಆದ ನಾಟ್ಯಪ್ರಪಂಚವೂ ಕೂಡ ಪುರುಷಾರ್ಥಪ್ರಯೋಜಕವೇ"—(ಅಭಿನವಭಾರತೀ, I, 5). ಈ ಸಂದರ್ಭದಲ್ಲಿ ಹೆಚ್ಚು ಜಿಜ್ಞಾಸೆಯುಳ್ಳವರು ಡಾ|| ಕೆ. ಸಿ. ಪಾಂಡೆಯವರ *Indian Aesthetics* ಎಂಬ ಗ್ರಂಥವನ್ನೋದಬಹುದು. ಹೀಗೆ ವೇದಾಂತ ಪ್ರಕ್ರಿಯೆಯನ್ನಳವಡಿಸಿಕೊಳ್ಳುವುದರಿಂದ ರಸಾನುಭವವು ಬ್ರಹ್ಮಾನಂದಕ್ಕೆ 'ಕಿಂಚಿದೂನ'ವೆಂಬಂಶದಲ್ಲೂ ಅದು ಲೋಕೋತ್ತರವೆಂಬಂಶದಲ್ಲೂ ಹೆಚ್ಚಿನ ಪುಷ್ಟಿಯುಂಟಾಗುತ್ತದೆ.

[35] ಧ್ವನ್ಯಾಲೋಕ, ನಾಟ್ಯಶಾಸ್ತ್ರ ಮತ್ತು ಕಾಶ್ಮೀರಶೈವ ದರ್ಶನದ ಮೂಲಗ್ರಂಥಗಳಿಗೆ ಪ್ರೌಢವೂ, ಪಾಂಡಿತ್ಯಪೂರ್ಣವೂ ತಲಸ್ಪರ್ಶಿಯೂ ಆದ ವ್ಯಾಖ್ಯಾನಗಳನ್ನು ಬರೆದ ಅಭಿನವಗುಪ್ತಪಾದರು ಸಂಸ್ಕೃತ ಸಾಹಿತ್ಯದಲ್ಲಿ ಅಮರಸ್ಥಾನವನ್ನು ಗಳಿಸಿದ್ದಾರೆ. ಇವರ ಕಾಲ ಸುಮಾರು ಕ್ರಿ.ಶ. ೧೦೦೦. ಇವರು ಭಟ್ಟನಾಯಕನ ನಂತರ ಗ್ರಂಥರಚನೆ ಮಾಡಿದವರಲ್ಲಿ ಅತ್ಯಂತ ಪ್ರಮುಖರು. ಅವರ ಕೃತಿಗಳು ವ್ಯಾಖ್ಯಾರೂಪದಲ್ಲಿದ್ದರೂ ಸ್ವತಂತ್ರ ಗ್ರಂಥಗಳಲ್ಲಿರುವಂತೆ ನೂತನ ಸಿದ್ಧಾಂತಗಳ ಪ್ರತಿಪಾದನೆಯನ್ನು ಅಲ್ಲಿ ನೋಡಬಹುದು.

ತಳೆಯುವುದನ್ನು ಅನುಲಕ್ಷಿಸಿ ಅವನ್ನು 'ವಿಭಾವ' ಇತ್ಯಾದಿ ನೂತನ ಹೆಸರುಗಳಿಂದ ಕರೆಯುತ್ತಾರೆ.[36] ಜೀವನದಲ್ಲಿ ಕಾರಣಾದಿಗಳು 'ನನ್ನವೇ ಇವು', 'ಹಗೆಯದೇ ಇವು', 'ತಟಸ್ಥನದೇ ಇವು' 'ಇವು ನನ್ನದಲ್ಲ', 'ಇವು ಹಗೆಯದಲ್ಲ', 'ಇವು ತಟಸ್ಥನವಲ್ಲ' ಎಂದು ಮುಂತಾಗಿ ವೈಯಕ್ತಿಕ ಸಂಬಂಧ ವಿಶೇಷಗಳ ಸ್ವೀಕಾರ ಅಥವಾ ಪರಿಹಾರವನ್ನು ತಳೆದೇ ತಳೆಯುತ್ತವೆ; ಆದರೆ ಸಾಹಿತ್ಯದಲ್ಲಿ ವಿಭಾವಾದಿಗಳು ಈ ನಿಯಮಗಳಿಗೆ ನಿಶ್ಚಿತರೂಪದಿಂದ ಒಳಗಾಗುವುದೇ ಇಲ್ಲವಾದುದರಿಂದ ಸಾಧಾರಣ ಸ್ವರೂಪದಿಂದ ಮಾತ್ರ ಪ್ರತೀತವಾಗುತ್ತವೆ.[37] ಇಂತಹ ವಿಭಾವಾದಿಗಳಿಂದ ಅಭಿ

---

[36] ಸಾಮಾಜಿಕರೆಲ್ಲರಿಗೂ ರಸಾಸ್ವಾದವು ಬಂದೇತೀರುವುದೆಂಬ ನಿಯಮಗಳು ಸಹೃದಯ ರಾದವರಿಗೆ ಮಾತ್ರ ಅದು ಸಿದ್ಧಿಸುವುದೆಂಬುದನ್ನು ಮೊದಲು ಆನಂದವರ್ಧನನು ಹೇಳಿದನು. (ಹೋಲಿಸಿ—ಕನ್ನಡ ಧ್ವನ್ಯಾಲೋಕ, ಪು. ೯) ಅದನ್ನು ಭಟ್ಟನಾಯಕನೂ ವಿಸ್ತರಿಸಲಿಲ್ಲ. ಆದರೆ ಅಭಿನವಗುಪ್ತರು ತಮ್ಮ ರಸಪ್ರಕ್ರಿಯೆಯಲ್ಲಿ ಅದಕ್ಕೆ ಮೊದಲ ಸ್ಥಾನವನ್ನಿತ್ತಿದ್ದಾರೆ. 'ಸಹೃದಯ' ಎಂದರೆ ವರ್ಣನೀಯವಾದ ವಿಷಯದಲ್ಲಿ ಅರ್ಥಾತ್ ವಿಭಾವಾದಿಗಳಲ್ಲಿ ಹೃದಯ ಸಂವಾದವನ್ನು ಅರ್ಥಾತ್ ತನ್ಮಯೀಭಾವವನ್ನು ಪಡೆಯುವ ವಿಶೇಷ ಸಂಸ್ಕಾರವುಳ್ಳವನು. ಈ ಸಂಸ್ಕಾರ ಅಥವಾ ಯೋಗ್ಯತೆಯು ಮತ್ತೆ ಮತ್ತೆ ಲೋಕಜೀವನ ಮತ್ತು ಉತ್ತಮ ಕಾವ್ಯಾದಿ ಗಳನ್ನು ಅನುಶೀಲನಮಾಡಿದ್ದರ ಪರಿಣಾಮವಾಗಿ ಮನಸ್ಸು ಕನ್ನಡಿಯಂತೆ ಸ್ವಚ್ಛವಾದಾಗ ಮಾತ್ರ ಬರುತ್ತದೆ. ಲೋಕದಲ್ಲಿ ಕಾರಣಾದಿಗಳಿಂದ ರತ್ಯಾದಿಗಳನ್ನು 'ಅನುಮಾನ'ಮಾಡುವುದು ಅನುಭವ ಸಿದ್ಧವೇ ಹೊರತು ಕಾವ್ಯಲೋಕದಲ್ಲಿ ವಿಭಾವಾದಿಗಳ ಮೂಲಕ ರಸವನ್ನೇನೂ ಅನುಮಾನಮಾಡುವು ದಿಲ್ಲವೆಂದು ಶಂಕುಕನ ಮತವನ್ನು ಪರ್ಯಾಯವಾಗಿ ನಿರಾಕರಿಸುತ್ತಿದ್ದಾರೆ. ಅನುಮಿತಿಯಿದ್ದಲ್ಲಿ ರಸವಿಲ್ಲ; ರಸವಿದ್ದಲ್ಲಿ ಅನುಮಿತಿಯಿಲ್ಲವೆಂಬುದೇ ಅವರ ಸಿದ್ಧಾಂತ.

[37] ಪ್ರತಿಯೊಬ್ಬನ ಜೀವನದಲ್ಲಿಯೂ ಮನುಷ್ಯಪ್ರಪಂಚವು 'ನಾನು', 'ನನಗಾಗದವರು', 'ತಟಸ್ಥರು' ಎಂಬ ತ್ರಿವರ್ಗದ ಸಂಬಂಧದಿಂದಲೇ ಅನುಭವಕ್ಕೆ ಬರುತ್ತದೆ. ಯಾವ ಘಟನೆ ನಡೆದರೂ ಈ ಸಂಬಂಧಗಳ ಮೂಲಕವೇ ಅವುಗಳ ಅನುಭವವು ಮನಸ್ಸಿನಮೇಲಾಗುತ್ತದೆ. ಏಕೆಂದರೆ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ವ್ಯಕ್ತಿತ್ವವನ್ನೇ ಕೇಂದ್ರವಾಗಿಟ್ಟುಕೊಂಡು ವ್ಯವಹಾರದಲ್ಲಿ ಮಗ್ನನಾಗುತ್ತಿರುತ್ತಾನೆ. ಬಾಳಿನಲ್ಲಿ ಯುವತಿಯನ್ನು ನೋಡಿದರೆ 'ಇವಳು ನನ್ನವಳು ಅಥವಾ ಶತ್ರುವಿಗೇ ಸೇರಿದವಳು ಅಥವಾ ಮೂರನೆಯವರ ಹೆಂಡತಿ ಇತ್ಯಾದಿ ವೈಯಕ್ತಿಕ ಮನೋಭಾವಗಳು ತಲೆದೋರುತ್ತವೆ. ಈ ಮನೋಭಾವಗಳು ಹೀಗೆ ವಿಧಿರೂಪವಾಗಿರಬಹುದು; ಅಥವಾ ನನ್ನವಳೇನೂ ಅಲ್ಲ' ಇತ್ಯಾದಿ ನಿಷೇಧರೂಪವಾಗಿರಬಹುದು. ಆದರೆ ಸಾಹಿತ್ಯದಲ್ಲಿ ಮಾತ್ರ ಈ ವೈಯಕ್ತಿಕ ಸಂಬಂಧ ಗಳೆರಡೂ ಮಾಯವಾಗಿ ನನ್ನ, ಇನ್ನೊಬ್ಬನ, ಎಂಬ ಭಾವನೆಗಳೂ ಹೋಗಿ, ವಿಭಾವಾದಿಗಳ ಸಾಧಾರಣ ಸ್ವರೂಪ ಮಾತ್ರ ವೇದ್ಯವಾಗುತ್ತದೆ. ಇದನ್ನು ಭಟ್ಟನಾಯಕನ 'ಭಾವಕತ್ವ'ವ್ಯಾಪಾರ ಮತ್ತು ಸಾಧಾರಣೀಕರಣಗಳೊಂದಿಗೆ ಹೋಲಿಸಬಹುದು.

ಪ್ರೊ|| ತೀ. ನಂ. ಶ್ರೀಕಂಠಯ್ಯನವರು ತಮ್ಮ ಭಾರತೀಯ ಕಾವ್ಯಮೀಮಾಂಸೆ (ಮೈಸೂರು ವಿಶ್ವವಿದ್ಯಾನಿಲಯ, ೧೯೫೩) ಪುಟ ೩೪೨ರಲ್ಲಿ "ಸ್ಥಾಯಿಭಾವವು ಸಾಧಾರಣೀಕೃತವಾಗಿ

ಸಹೃದಯನಿಗೆ ಭೋಗವಿಷಯವಾಗುವುದಷ್ಟೆ! ಹೀಗೆ ಸಾಧಾರಣೀಕೃತವಾಗತಕ್ಕದ್ದು ಯಾರ ಸ್ಥಾಯಿಭಾವ ಎಂಬುದನ್ನು ಭಟ್ಟನಾಯಕನು ಸ್ಪಷ್ಟಪಡಿಸಿದ್ದಂತೆ ತೋರುವುದಿಲ್ಲ . . .'' ಎಂದು ಬರೆದಿದ್ದಾರೆ.

ಈ ವಿಷಯದಲ್ಲಿ ಸಂದೇಹಕ್ಕೆಡೆಯೇನೂ ನಮಗೆ ಕಾಣುವುದಿಲ್ಲ. ಲೋಕದಲ್ಲಿ ಕಾರ್ಯ, ಕಾರಣ, ಸಹಕಾರಿಗಳನ್ನು ನೋಡಿ ಒಬ್ಬನ ಸ್ಥಾಯಿಭಾವವನ್ನು ಇನ್ನೊಬ್ಬನು ಊಹಿಸುತ್ತಾನೆ (ಇದೇ ಮಾತನ್ನು ಮುಂದೆ ಅಭಿನವಗುಪ್ತರೂ ಹೇಳಿದ್ದಾರೆ). ಹಾಗೆಯೇ ಕಾವ್ಯಲೋಕದಲ್ಲಿ ವಿಭಾವ, ಅನುಭಾವ, ವ್ಯಭಿಚಾರಿಗಳನ್ನು ನೋಡಿ ನಟಾಭಿನ್ನ ರಾಮಾದಿಗಳ ಸ್ಥಾಯಿಭಾವವನ್ನು ಸಾಮಾಜಿಕನು ಊಹಿಸುತ್ತಾನೆಂಬುದು ಶಂಕುಕನ ಮತ. ಈ ಅನುಮಿತಿವಾದವನ್ನು ಖಂಡಿಸುತ್ತಿದ್ದಾನೆ ಭಟ್ಟನಾಯಕ. ಪರಗತವಾದ ರತ್ಯಾದಿಯ ಪ್ರತೀತಿಯಿಂದ ಸಾಮಾಜಿಕನಲ್ಲಿ ರಸವುಂಟಾಗುವುದು ಅಸಂಭವವೆಂಬ ಕಾರಣದಿಂದ. ಹಾಗಾದರೆ ಸ್ವಗತವಾದ ರತ್ಯಾದಿಯ ಪ್ರತೀತಿಯಿಂದ ರಸವುಕ್ಕುವುದೆನ್ನೋಣವೇ ಎಂದರೆ ಅದೂ ಅಸಂಭವವೆಂದಿದ್ದಾನೆ—ಸ್ವಗತವಾದ ರತ್ಯಾದಿಗೆ ಸೀತಾದಿಗಳು ವಿಭಾವಾದಿಗಳೆನಿಸುವುದೇ ಅಸಾಧ್ಯವಾದ್ದರಿಂದ. ಎಂದಮೇಲೆ, 'ಇದು ನಾಯಕಗತವಾದ ರತ್ಯಾದಿ ಸ್ಥಾಯಿಭಾವ', ಅಥವಾ 'ಇದು ಆತ್ಮಗತವಾದ ರತ್ಯಾದಿ ಸ್ಥಾಯಿಭಾವ' ಎಂಬ ಕಲ್ಪನೆಗಳೇ ಬಾರದೆ ಕೇವಲ ಸಾಧಾರಣರೂಪದಲ್ಲಿ ರತ್ಯಾದಿ ಸ್ಥಾಯಿಭಾವಗಳು ಕಾವ್ಯದ ಭಾವಕತ್ವವ್ಯಾಪಾರದಿಂದ ಭಾವಿತವಾದೊಡನೆ ರಸವೆನಿಸುತ್ತವೆ. ಸಾಮಾಜಿಕನಲ್ಲಿ ವಾಸನಾತ್ಮಕವಾಗಿ ರತ್ಯಾದಿಗಳಿರುವುದು ಸಕಲವಾದಿಗಳಿಗೂ ಸಮ್ಮತವೇ. ಅದೇ ರಸಾನುಭವವಾಗಿ ಪರಿಣಮಿಸುವ ಸಾಮಗ್ರಿಯೆನ್ನುವುದೂ ಹಾಗೆಯೇ. ವಾಸನಾಶೂನ್ಯರಿಗೆ ರಸಾನುಭವವನ್ನು ಲೊಲ್ಲಟಾದಿಗಳಾದರೂ ಒಪ್ಪುತ್ತಿದ್ದರೆನ್ನಲವಕಾಶವಿಲ್ಲ. ರಸತತ್ತ್ವನಿರೂಪಣೆಯಲ್ಲಿ ಸಾಮಾಜಿಕರ ರತ್ಯಾದಿನಿರ್ದೇಶದಿಂದ ಸೌಂದರ್ಯಶಾಸ್ತ್ರದ ರಹಸ್ಯಪ್ರತಿಪಾದನೆಯಾಯಿತೆಂದು ನಮಗೆ ತೋರುವುದಿಲ್ಲ. ಆ ರಹಸ್ಯಪ್ರತಿಪಾದನೆಯ ದೃಷ್ಟಿಯಿಂದ ಸಾಧಾರಣೀಕರಣವನ್ನು ಮೊದಲು ಹೇಳುವ ಭಟ್ಟನಾಯಕನು ನಿಜವಾಗಿಯೂ ಮುಂದಿನ ಹೆಜ್ಜೆಯನ್ನಿಟ್ಟನೆನ್ನಬಹುದು. ಲೋಕದಲ್ಲಿ ಸ್ವಗತ ಅಥವಾ ಪರಗತವೆಂದು ಅನುಭವ ಹಾಗು ಸ್ಮೃತಿವಿಷಯವಾದ ರತ್ಯಾದಿ ಸ್ಥಾಯಿಭಾವವು ಕಾವ್ಯದಲ್ಲಿ ಬಂದಾಗ ಆ ಅನುಭವಲೇಶವೂ ಉಂಟಾಗದಂತೆ ಬರುವುದೇ ಕಾವ್ಯದ ಮರ್ಮ. ಆ ಅನುಭವಲೇಶವಿರುವ ವರೆಗೂ ಕಾವ್ಯದಲ್ಲಿ ರಸವಿಲ್ಲ; ರತ್ಯಾದಿ ಸ್ಥಾಯಿಭಾವವು ಸ್ಥಾಯಿಭಾವವಾಗಿ ಕಾಣುವುದು ತಪ್ಪಿದೊಡನೆ ಅದಕ್ಕೆ ರಸವೆಂಬ ಹೆಸರು ಬರುತ್ತದೆ, ರಸವೊಂದೇ ಕಾಣುತ್ತದೆ. ಎಂದರೆ ಕಾವ್ಯದಲ್ಲಿ ರಸತ್ವವನ್ನು ಪಡೆದಾಗ ಸಾಧಾರಣೀಕೃತ ಸ್ಥಾಯಿಭಾವವುಂಟೇ ಹೊರತು, ಯಾರ ಸ್ಥಾಯಿಭಾವವೂ ಗೋಚರಕ್ಕೆ ಬರಲವಕಾಶವಿಲ್ಲ. ಸಾಧಾರಣೀಕರಣಕ್ಕೆ ಕಡೆಯಪಕ್ಷ ಎರಡು ವಸ್ತುಗಳಿರಬೇಕಾದ್ದರಿಂದ ನಾಯಕಗತ ಸ್ಥಾಯಿಭಾವ ಮತ್ತು ಸಾಮಾಜಿಕಗತ ಸ್ಥಾಯಿಭಾವ ಇವೆರಡರ ಸಾಧಾರಣೀಕೃತ ಸ್ಥಿತಿಯೇ ರಸವೆಂಬ ಸಿದ್ಧಾಂತದಲ್ಲಿ ಸಂದೇಹಕ್ಕೇನು ಎಡೆಯಿದೆ? ಈ ವಿಷಯದಲ್ಲಿ ಭಟ್ಟನಾಯಕನಿಗೂ ಅಭಿನವಗುಪ್ತನಿಗೂ ಅಭಿಪ್ರಾಯಭೇದವಿದ್ದಂತೇನೂ ಕಲ್ಪಿಸುವ ಕಾರಣವಿಲ್ಲ.

ಸಾಧಾರಣೀಕರಣವು ಮುಖ್ಯವಾಗಿ ಕಾವ್ಯವ್ಯಾಪಾರ; ಲೋಕವಿಲಕ್ಷಣವಾದ ವ್ಯಾಪಾರ. ವಿಭಾವಾದಿಗಳಂತೆ ಸ್ಥಾಯಿಭಾವಗಳಿಗೂ ಅದು ಅನ್ವಯಿಸತಕ್ಕುದು. ಅಂತೆಯೇ ಭಟ್ಟನಾಯಕನು ಆ ಸಾಧಾರಣೀಕರಣವನ್ನೇ 'ಭಾವಕತ್ವ'ವೆಂದು ಕರೆದಿದ್ದಾನೆ. ಇವುಗಳಲ್ಲಿ ಸಾಧಾರಣೀಕೃತ

ವ್ಯಕ್ತಿಯನ್ನು ಪಡೆದೊಡನೆ[38] ಸಾಮಾಜಿಕರಲ್ಲಿ ಯಾವಾಗಲೂ ವಾಸನಾರೂಪವಾಗಿರುವ ರತ್ಯಾದಿ ಸ್ಥಾಯಿಭಾವವು ವಸ್ತುತಃ ಪ್ರತ್ಯೇಕ ರಸಿಕನಲ್ಲಿ ಮಾತ್ರ

ವಿಭಾವಾದಿಗಳನ್ನು ಭಾವಕಗಳೆಂದೂ ಸಾಧಾರಣೀಕೃತ ಸ್ಥಾಯಿಭಾವವನ್ನು ಎಂದರೆ ರಸವನ್ನು ಭಾವ್ಯವೆಂದೂ ತಿಳಿಯಬಹುದು. ಕಾವ್ಯದ ವ್ಯಾಪಾರಗಳನ್ನು ಕವಿಯ ದೃಷ್ಟಿಯಿಂದ ನೋಡಬಹುದು; ಸಹೃದಯನ ದೃಷ್ಟಿಯಿಂದಲೂ ನೋಡಬಹುದು. ಕವಿಯ ದೃಷ್ಟಿಯಿಂದ ನೋಡಿದರೆ ಮೊದಲನೆಯದಾದ ಅಭಿಧಾವ್ಯಾಪಾರಕ್ಕೆ ಶಬ್ದಾರ್ಥಾಲಂಕಾರಗಳೇ ಲಕ್ಷ್ಯ. ಎರಡನೆಯದಾದ ಭಾವಕತ್ವವ್ಯಾಪಾರಕ್ಕೆ ಶೃಂಗಾರಾದಿ ರಸಗಳೆಲ್ಲ ಲಕ್ಷ್ಯ. ಮೂರನೆಯದಾದ ಭೋಗೀಕೃತಿಯು ಮಾತ್ರ ಕೇವಲ ಸಹೃದಯನಿಗೆ ಅನ್ವಯಿಸತಕ್ಕುದು; ಏಕೆಂದರೆ ಸಹೃದಯನ ದೃಷ್ಟಿಯಿಂದ ಮೊದಲನೆಯ ಅಭಿಧಾವ್ಯಾಪಾರವು ಬುದ್ಧಿಗಮ್ಯವಾದ (*Intellectual*) ಅಂಶ. ಎರಡನೆಯ ಭಾವಕತ್ವವು ಭಾವನಾಗಮ್ಯವಾದ (*Imaginative*) ಅಂಶ. ಮೂರನೆಯ ಭೋಗೀಕೃತಿಯು ಚರ್ವಣೈಕರೂಪವಾದ (*Aesthetic*) ಅಂಶ.

ಹೋಲಿಸಿ—ಅಭಿಧಾ ಭಾವನಾ ಚಾನ್ಯಾ ತದ್ಭೋಗೀಕೃತಿರೇವ ಚ |
ಅಭಿಧಾಧಾಮತಾಂ ಯಾತೇ ಶಬ್ದಾರ್ಥಾಲಂಕೃತೀ ತತಃ ||
ಭಾವನಾಭಾವ್ಯ ಏಷೋಽಪಿ ಶೃಂಗಾರಾದಿಗಣೋ ಮತಃ |
ತದ್ಭೋಗೀಕೃತಿರೂಪೇಣ ವ್ಯಾಪ್ಯತೇ ಸಿದ್ಧಿಮಾನ್ನರಃ ||
—ಭಟ್ಟನಾಯಕ (ಅಲಂಕಾರಸರ್ವಸ್ವ ಟೀಕೆಯಲ್ಲಿ ಉದಾಹೃತ).

ಈಗ ಅಭಿನವಗುಪ್ತರ ವಿವರಣೆಯನ್ನು ನೋಡಿದರೆ ಅವರೂ ಕಾವ್ಯದಲ್ಲಿ ವಿಭಾವಾದಿಗಳ ಸಾಧಾರಣೀಕರಣವನ್ನು ಸ್ಪಷ್ಟವಾಗಿ ಒಪ್ಪಿರುವುದನ್ನು ಕಾಣಬಹುದು. ಸೀತಾದಿಗಳೆಂಬ ಕಲ್ಪನೆ ತಪ್ಪಿ ಕಾಮಿನೀತ್ವಾದಿ ಸಾಧಾರಣ್ಯಗ್ರಹಣವಾದಲ್ಲದೆ ಅವುಗಳು 'ವಿಭಾವ'ಗಳೆಂದೇ ಎನಿಸುವುದಿಲ್ಲ. ಹಾಗೆಯೇ ವಾಸನಾಸಿದ್ಧವಾದ ರತ್ಯಾದಿಗಳಾದರೂ ಸ್ವ-ಪರವೆಂಬ ವಿಶೇಷಗಳನ್ನು ಬಿಟ್ಟು ಸಾಧಾರಣೀಕೃತವಾದಾಗ ಮಾತ್ರ ರಸತ್ವವನ್ನು ಪಡೆಯುವುವೆಂಬುದು ಅಭಿನವಗುಪ್ತರ ಸಿದ್ಧಾಂತ (ಹೋಲಿಸಿ—"ಸೀತಾದೀನಾಂ ಸಾಧಾರಣ್ಯಗ್ರಹಂ ವಿನಾ ನ ಕದಾಚಿದಪಿ ವಿಭಾವಾದಿತ್ವಮ್. ತಥಾ ರತ್ಯಾದಿಭಾವಸ್ಯಾಪಿ ಸಾಧಾರಣ್ಯಗ್ರಹಂ ವಿನಾ ರತ್ಯುದ್ಬೋಧಸ್ಯ ಸ್ವಪ್ನೇಽಪಿ ನ ರಸತ್ವಮಿತಿ ಚ ನ ವಿಸ್ಮರ್ತವ್ಯಮ್"—ಸುಧಾಸಾಗರ). ಹೀಗೆ ಸಾಧಾರಣೀಕರಣ ತತ್ತ್ವವು ಭಟ್ಟನಾಯಕನಷ್ಟೇ ಅಭಿನವಗುಪ್ತನಿಗೂ ಸಮ್ಮತ.

38 ಆದರೆ ಕಾವ್ಯದಲ್ಲಿ ಶಾಸ್ತ್ರವಿಲಕ್ಷಣವಾದ ಒಂದೇ ವ್ಯಾಪಾರವನ್ನೊಪ್ಪಬೇಕೇ? ಒಂದಕ್ಕಿಂತ ಹೆಚ್ಚು ವ್ಯಾಪಾರಗಳನ್ನು ಕಲ್ಪಿಸಬೇಕೆ? ಎಂಬಂಶದಲ್ಲಿ ಮಾತ್ರ ಮತಭೇದವಿದೆ. ಭಟ್ಟನಾಯಕನು ಸಾಧಾರಣೀಕರಣಕ್ಕಾಗಿ ಭಾವಕತ್ವ ವ್ಯಾಪಾರವನ್ನೂ ಆನಂದದ ವಿವರಣೆಗಾಗಿ ಭೋಜಕತ್ವವ್ಯಾಪಾರವನ್ನೂ ಅಗತ್ಯವೆಂದಿದ್ದನು. ಕಲ್ಪನಾಲಾಘವದ ದೃಷ್ಟಿಯಿಂದ ಅಭಿನವಗುಪ್ತನು ಒಂದೇ ವ್ಯಾಪಾರಕ್ಕೆ ಈ ಎರಡು ಗುಣಗಳನ್ನೂ ಆರೋಪಿಸಿ "ಅಭಿವ್ಯಕ್ತಿ" ಯೆಂಬ ಒಂದೇ ವ್ಯಾಪಾರವನ್ನೊಪ್ಪಿದರೆ ಸಾಕೆನ್ನುತ್ತಾನೆ. ಭಾವಕತ್ವ ಭೋಜಕತ್ವಗಳೆರಡನ್ನೂ ತನ್ನಲ್ಲಿ ಐಕ್ಯವಾಗಿಸಿಕೊಳ್ಳುವ ವ್ಯಾಪಾರವೇ ಅಭಿನವಗುಪ್ತನ 'ಅಭಿವ್ಯಕ್ತಿ'. ಭಟ್ಟನಾಯಕನು

ಇರತಕ್ಕದ್ದೇ ಆದರೂ (ವಿಭಾವಾದಿ) ಸಾಧನಗಳ ಸಾಧಾರಣ್ಯದ ಬಲದಿಂದ ತಾತ್ಕಾಲಿಕವಾಗಿ ರಸಿಕರ ಪರಿಮಿತ ಪ್ರತ್ಯೇಕತೆಯನ್ನೆಲ್ಲ ಕಳೆದುಬಿಡುವುದರಿಂದ, ಜ್ಞೇಯಾಂತರದ ಸ್ಪರ್ಶಲೇಶವೂ ಇಲ್ಲದ ಅಪರಿಮಿತ ಸ್ವರೂಪದಿಂದ ಮಾತ್ರ ಸಕಲರಲ್ಲಿಯೂ ಹೃದಯಸಂವಾದವನ್ನು ಪಡೆಯಬಲ್ಲ ರಸಿಕನಿಗೆ ಸಾಧಾರಣತಯಾ ವೇದ್ಯವಾಗುತ್ತದೆ.[39] ಅಭಿನ್ನವಾಗಿದ್ದರೂ ಹೀಗೆ ಇದರ ಪ್ರತೀತಿ ಬರುವುದಕ್ಕೆ ತನ್ನ ಆಕೃತಿಯನ್ನು

ಆಗಲೇ ಖಂಡಿಸಿರುವ ಅರ್ಥದ ಅಭಿವ್ಯಕ್ತಿಯಲ್ಲ. ಹೀಗೆ ಭಟ್ಟನಾಯಕನ ವಿವರಣೆಗೂ ಅಭಿನವಗುಪ್ತನ ವಿವರಣೆಗೂ ಶಬ್ದಭೇದವಿದೆಯೇ ಹೊರತು ಪ್ರಕ್ರಿಯಾಭೇದವಿಲ್ಲ. ಭರತನ ನಾಟ್ಯಶಾಸ್ತ್ರದಲ್ಲೇ ಬರುವ—

"ಕವೇರಂತರ್ಗತಂ ಭಾವಂ **ಭಾವಯನ್** ಭಾವ ಉಚ್ಯತೇ"—VII, ೨

"ಭಾವಯನ್ತಿ ರಸಾನ್ ಯಸ್ಮಾತ್ ತಸ್ಮಾದ್ಭಾವಾಃ ಪ್ರಕೀರ್ತಿತಾಃ"—VII, ೩

"ಯೋಽರ್ಥೋ ಹೃದಯಸಂವಾದೀ (=ಸಹೃದಯ?) ತಸ್ಯ ಭಾವೋ ರಸೋದ್ಭವಃ |
ಶರೀರಂ ವ್ಯಾಪ್ಯತೇ ತೇನ ಶುಷ್ಕಂ ಕಾಷ್ಠಮಿವಾಗ್ನಿನಾ ||"—VII, ೭

ಮುಂತಾದ ಪ್ರಯೋಗಗಳು 'ಭಾವಕತ್ವ'ವೆಂಬ ಶಬ್ದಕ್ಕೆ ಆಧಾರವನ್ನೊದಗಿಸುವಂತೆ ಅಲ್ಲಿಯೇ ಬರುವ "ರಸಾಭಿವ್ಯಕ್ತಿಹೇತವಃ . . . ಭಾವಾಃ" ಮುಂತಾದ ಇತರ ಪ್ರಯೋಗಗಳೂ ಆನಂದವರ್ಧನನ ಸಿದ್ಧಾಂತವೂ ಅಭಿನವಗುಪ್ತನ 'ಅಭಿವ್ಯಕ್ತಿ'ಯೆಂಬ ಸಂಜ್ಞೆಗೆ ಪುಷ್ಟಿಯನ್ನೊದಗಿಸುತ್ತವೆ

[39] ಇಲ್ಲಿ ಸಾಧಾರಣೀಕೃತವಾಗಿಯೇ ಸ್ಥಾಯಿಭಾವವು ಅಭಿವ್ಯಕ್ತವಾಗುವುದರಿಂದ ರಸವಾಗಿ ಪರಿಣಮಿಸುವುದೆಂದು ಹೇಳುತ್ತಿದ್ದಾನೆ. ಇಲ್ಲಿ ಅವಧಾರಣೆ (Emphasis) ಯಿರುವುದು ಸಾಧಾರಣೀಕರಣದ ಮೇಲೆಯೇ ಹೊರತು ಸಾಧಾರಣೀಕೃತವಾಗುವ ಸ್ಥಾಯಿಭಾವವು ಸಹೃದಯರದ್ದೇ ಎಂಬಂಶದ ಮೇಲಲ್ಲ. ಹೀಗೆ ಅವಧಾರಣೆಯನ್ನು ಪಲ್ಲಟಿಸಿದರೆ ಭಟ್ಟನಾಯಕನಿಗೂ ಅಭಿನವಗುಪ್ತನಿಗೂ ಇಲ್ಲದ ಮತಭೇದವನ್ನು ಉಪಪಾದಿಸಬಹುದು. ಸತ್ತ್ವೋದ್ರೇಕಪ್ರಕಾಶದ ಆನಂದಮಯ ಸಂವಿದ್ವಿಶ್ರಾಂತಿಯೇ ರಸವೆನ್ನುವ ಭಟ್ಟನಾಯಕನಿಗೆ, ಸಾಧಾರಣೀಕೃತ ವಿಭಾವಾದಿಗಳಿಂದ ಭಾವಿತವಾದ ಸಾಧಾರಣೀಕೃತ ರತ್ಯಾದಿಯೇ ಆ ರಸವೆಂದೂ ತಿಳಿದಿರುವ ಭಟ್ಟನಾಯಕನಿಗೆ, ಸಾಮಾಜಿಕರಿಂದ ಭುಜ್ಯಮಾನವಾದ ಅಂಶವು ವಾಸನಾಸಿದ್ಧವಾದ ಸ್ವಚೈತನ್ಯಾಂಶವೇ ಎಂಬುದು ತಿಳಿದಿರಲಿಲ್ಲವೆನ್ನುವುದು ಸಾಹಸವಾಗುತ್ತದೆ. ಅಭಿನವಗುಪ್ತನು ಭಟ್ಟನಾಯಕನ ತತ್ತ್ವವನ್ನೇ ಮತ್ತಷ್ಟು ವಿವರಿಸಿದನೆಂದು ಬೇಕಾದರೆ ಹೇಳಬಹುದು.

ಮಾಣಿಕ್ಯಚಂದ್ರನು ಅಭಿನವಗುಪ್ತರ ಮಾತುಗಳನ್ನು ಮಾರ್ಮಿಕವಾಗಿ ವಿವರಿಸಿದ್ದಾನೆ— 'ರತಿಯು ಸಾಮಾಜಿಕನಿಗೆ ಸ್ವಗತವೆಂದು ಪ್ರತೀತವಾದರೆ ಕಾಮಿತ್ವವೆಂಬ ದೋಷ ಬರುತ್ತದೆ (ಹಿಂದೆ ೩೪ ನೆಯ ಅಡಿಟಿಪ್ಪಣಿಯನ್ನು ನೋಡಿ). ಪರಗತವೆನಿಸಿದರೆ ದ್ವೇಷಾದಿಗಳು ಅಥವಾ ಔದಾಸೀನ್ಯ ಬರುವ ಪ್ರಸಂಗ. ಸರ್ವಸಾಧಾರಣವೆನಿಸಿದರೆ ಔದಾಸೀನ್ಯಕ್ಕೆಡೆಯೇ ಹೊರತು ಆನಂದಕ್ಕಲ್ಲ. ಆನಂದಕ್ಕೆಡೆಯುಂಟೆಂದರೂ ಒಬ್ಬನಲ್ಲಿ ಮಾತ್ರ ಇರುವುದೆನ್ನುವಾಗ ಕಾಮಿತ್ವ ಪ್ರಸಂಗ ತಪ್ಪುವುದಿಲ್ಲ. ಆದ್ದರಿಂದ ಯಾವೊಬ್ಬನಲ್ಲಿ ಮಾತ್ರವೂ ಇದೆಯೆನಿಸದೆ ಅನಿಯತನಿಷ್ಠವಾದ ರತ್ಯಾದಿ ಸ್ಥಾಯಿಭಾವಗಳು ಮಾತ್ರ ಸರ್ವರಸಿಕರಿಂದಲೂ ರಸ್ಯಮಾನವಾಗುತ್ತವೆ. ಪ್ರತಿಯೊಬ್ಬ

ರಸಿಕನಿಗೂ ನಾಟಕಶಾಲೆಯಲ್ಲಿ 'ನಾನು ಬೇರೆ'ಯೆಂಬ ಪ್ರತ್ಯೇಕಭಾವನೆಯೇ ಸಡಿಲಿಹೋಗುತ್ತದೆ. ನನಗೊಬ್ಬನಿಗಾಗಿ ಈ ನಾಟಕವೆಲ್ಲ ನಡೆಯುತ್ತಿದೆ ಎಂಬ ಕಲ್ಪನೆ ದೂರವಾಗುತ್ತದೆ. ಎಲ್ಲರಿಗಾಗಿಯೂ ಇದು ಸಮಾನವಾಗಿರತಕ್ಕದೆಂಬ ಭಾವನೆಯೊಂದೇ ಬರುತ್ತದೆ. ಆ ಸಾಧಾರಣ್ಯಭಾವನೆಗೇ ಸಕಲ ಹೃದಯಸಂವಾದವೆಂದು ಹೆಸರು. ಇದನ್ನೇ ಅಪರಿಮಿತತ್ವದ ಭಾವವೆಂದೂ ಕರೆಯಲಾಗಿದೆ. ನಾಟಕ ಶಾಲೆಯಲ್ಲಿಯೂ 'ನಾನು', 'ನನ್ನದು' ಎಂಬ ಪರಿಮಿತಭಾವನೆಯುಳ್ಳವರು ಸಹೃದಯರಲ್ಲ; ಅವರು ಹೃದಯಸಂವಾದಭಾಗಿಗಳಲ್ಲದ ಅಹೃದಯರು. ಅಂಥವರಿಗೂ ಹೃದಯಸಂವಾದವುಂಟಾಗ ಬೇಕೆಂದು ಕವಿನಟಾದಿಗಳು ವಿಶೇಷ ಪ್ರಯತ್ನಮಾಡುತ್ತಾರೆ. ವಾದ್ಯ, ಗಾನ, ಮಂಡಪಾಲಂಕಾರ ಮುಂತಾದ ಸಾಧನಗಳೆಲ್ಲ ಎಲ್ಲರಿಗೂ ಇವು ಸಮಾನವೆಂದು ತಿಳಿಸುವುದಕ್ಕೇ ಇರತಕ್ಕವು. ಸೀತಾದಿ ಗಳನ್ನು ತಮ್ಮ ವೈಯಕ್ತಿಕದೃಷ್ಟಿಯಿಂದ ಕಾಣುವ ಅಹೃದಯರಿಗಾದರೂ ಇವನ್ನು ಸಾಧಾರಣ ದೃಷ್ಟಿಯಿಂದ ನೋಡುವ ಸಹಿಷ್ಣುತೆ ಇರುತ್ತದೆ. ಒಮ್ಮೆ ಕೆಲವಂಶಗಳಲ್ಲಿ ಹೃದಯಸಂವಾದ ಬಂದ ಮೇಲೆ ಮಿಕ್ಕಂಶಗಳಲ್ಲೂ ಹೃದಯಸಂವಾದ ಬಂದೀತೆಂದು ನಿರೀಕ್ಷಿಸಬಹುದು.

ಈ ತತ್ತ್ವವನ್ನು ಪರ್ಯಾಲೋಚಿಸದಿದ್ದರೆ 'ಭಟ್ಟನಾಯಕನು ರತ್ಯಾದಿಗಳನ್ನು ಸಾಮಾಜಿಕರಿಗೆ ಸ್ವಗತವೆಂದೊಪ್ಪಲಿಲ್ಲ; ಅಭಿನವಗುಪ್ತನು ಇದನ್ನು ಸಾಧಿಸಿದ್ದಾನೆ' ಎಂಬ ಅಪಸಿದ್ಧಾಂತಕ್ಕೆ ಆಸ್ಪದವಾಗುತ್ತದೆ. ಇಬ್ಬರಿಗೂ ತಾತ್ವಿಕವಾಗಿ ರತ್ಯಾದಿಗಳು ಸ್ವಗತವೇ ಆದಂತೆ ರಸಾಸ್ವಾದ ಕಾಲದಲ್ಲಿ ಸಾಧಾರಣ್ಯವು ವೇದ್ಯವೇ ಹೊರತು ಸ್ವಗತತ್ವವಲ್ಲವೆಂಬಂಶವಾದರೂ ಇಬ್ಬರಿಗೂ ಸಮಾನ. ರಸಾಸ್ವಾದವು ಅಂತರ್ಮುಖವಾಗಿದ್ದರೂ ರಸಿಕನಿಗೆ ಅದರ ಅರಿವಿರುವುದಿಲ್ಲ. ಹೋಲಿಸಿ—

ಪಾಠ್ಯಾದಥ ಧ್ರುವಾಗಾನಾತ್ ತತಃ ಸಂಪೂರಿತೇ ರಸೇ|
ತದಾಸ್ವಾದಭರೈಕಾಗ್ರೋ ಹೃಷ್ಯತ್ಯಂತರ್ಮುಖಃ ಕ್ಷಣಮ್||
ತತೋ ನಿರ್ವಿಷಯಸ್ಯಾಸ್ಯ ಸ್ವರೂಪಾವಸ್ಥಿತಾ ನಿಜಃ|
ವ್ಯಜ್ಯತೇ ಹ್ಲಾದನಿಷ್ಯನ್ದೋ ಯೇನ ತೃಪ್ಯನ್ತಿ ಯೋಗಿನಃ||

ಬಾಹ್ಯ ಅಥವಾ ಆಂತರವಾದ ಜ್ಞಾನವಿಷಯಗಳೆಲ್ಲ ತಪ್ಪಿದೊಡನೆ ಒಳಗಿನಿಂದ ಆತ್ಮಾನಂದವು ಉಕ್ಕುತ್ತದೆ. ಇದೇ ರಸ. ಇದೇ ಯೋಗಿಗಳು ಆಸ್ವಾದಿಸುವ ಆನಂದವಾದರೂ. ಈ ನಿರ್ವಿಷಯೀ ಕರಣವು ರಸಾನಂದದಲ್ಲಿ ತಾತ್ಕಾಲಿಕ; ಯೋಗಾನಂದದಲ್ಲಿ ಶಾಶ್ವತ; ಒಂದು ಕಡೆ ರತ್ಯಾದಿವಾಸನೆ ಗಳು ಸಾಧಾರಣೀಕೃತವಾಗಿ ಅಪರಿಮಿತತ್ವವನ್ನು ಪಡೆದು ನಿಷ್ಕ್ರಿಯವಾಗುತ್ತವೆ; ಮತ್ತೊಂದು ಕಡೆ ಅವುಗಳು ಪ್ರಾಣಾಯಾಮಾದಿಗಳಿಂದ ಕ್ಷಯಿಸಿ ನಿಷ್ಕ್ರಿಯವಾಗುತ್ತವೆ. ಅವು ಸಕ್ರಿಯವಾಗಿರುವ ವರೆಗೆ ಲೋಕದಲ್ಲಿ ನಿಜವಾದ ಆನಂದ ಸಾಧ್ಯವಿಲ್ಲ.

ಅಭಿನವಗುಪ್ತರಿಗೆ ರಸತತ್ತ್ವದ ವಿಷಯದಲ್ಲಿ ಕಾಳಿದಾಸನ—

ರಮ್ಯಾಣಿ ವೀಕ್ಷ್ಯ ಮಧುರಾಂಶ್ಚ ನಿಶಮ್ಯ ಶಬ್ದಾನ್
ಪರ್ಯುತ್ಸುಕೀ ಭವತಿ ಯತ್ ಸುಖಿತೋಽಪಿ ಜಂತುಃ|
ತಚ್ಚೇತಸಾ ಸ್ಮರತಿ ನೂನಮಬೋಧಪೂರ್ವಂ
ಭಾವಸ್ಥಿರಾಣಿ ಜನನಾಂತರಸೌಹೃದಾನಿ||

ಎಂಬ ಶ್ಲೋಕದಿಂದ ಪ್ರಚೋದನೆ ಬಂದಂತೆ ತೋರುತ್ತದೆ. ರಮಣೀಯ ವಸ್ತುಗಳ ದರ್ಶನದಿಂದಲೂ ಮಧುರ ಶಬ್ದಗಳ ಶ್ರವಣದಿಂದಲೂ ಮನಸ್ಸಿನ ಮೇಲೆ ತಟ್ಟನೆ ಪರಿಣಾಮವಾಗುತ್ತದೆ; ಮನಸ್ಸಿನ

ತಾನೇ ತಿಳಿಯುವ ಅನುಭವವನ್ನು ನಿದರ್ಶನವಾಗಿ ಕೊಡಬಹುದು.[40] ಹೀಗೆ ಆಸ್ವಾದವೇ ಪ್ರಾಣರೂಪವಾಗಿರುವ,[41] ವಿಭಾವಾದಿಗಳು ಜೀವಂತವಾಗಿರುವ ವರೆಗೆ ಮಾತ್ರ ಜೀವಂತವಾಗಿರುವ,[42] ಪಾನಕದ ರುಚಿಯಂತೆ ಅಖಂಡಾಸ್ವಾದವನ್ನು

ಆಳದ ಪದರಗಳಲ್ಲಡಗಿದ್ದ ಸ್ಥಾಯಿಭಾವಗಳು ಮೇಲೆ ತೇಲಿಬರುತ್ತವೆ. ತೇಲಿದೊಡನೆ ಮನಸ್ಸಿಗೆ ಒಂದು ಬಗೆಯ ತಳಮಳವುಂಟಾದಂತಾಗುತ್ತದೆ, ಅದನ್ನು ವೈಯಕ್ತಿಕ ದೃಷ್ಟಿಯಿಂದ ನೋಡಿದಾಗ. ಆದರೆ ವೈಯಕ್ತಿಕ ಸಂಬಂಧವನ್ನೇ ಮರೆತುಬಿಡುವುದಾದರೆ ಅದೇ ಸ್ಥಾಯಿಭಾವಗಳು ಅಖಂಡಾನಂದವನ್ನು ತರುತ್ತವೆ. ಈ ಅನುಭವದ ಹೆಚ್ಚಿನ ವಿವರಣೆಗೆ ನಂ. ಶಿವರಾಮಶಾಸ್ತ್ರಿಗಳ *Aesthetic Experience*, (*The Philosophical Quarterly*, July, 1941) ಎಂಬ ಲೇಖನ ವನ್ನು ನೋಡಿ.

[40] ಒಬ್ಬನು ತನಗಿಂತ ಬೇರೆಯಾದ ವಿಷಯದ ಪ್ರತೀತಿಯನ್ನು ಪಡೆಯಬಹುದು ; ಆದರೆ ರತ್ಯಾದಿಯು ಆತ್ಮಾಭಿನ್ನವಾಗಿರುವಾಗ ಬಾಹ್ಯವಸ್ತುವಿನಂತೆ ಅದು ಪ್ರತೀತಿಗೆ ವಿಷಯವಾಗುವು ದೆಂತು ? ಎಂದು ಕೇಳಬಹುದು. ಅದಕ್ಕೊಂದು ದೃಷ್ಟಾಂತ (Analogy)ದ ಮೂಲಕ ಇಲ್ಲಿ ಉತ್ತರ ಕೊಡಲಾಗಿದೆ. 'ತಾನು' ಎಂದರೆ ತನ್ನ ಆಕಾರವೂ ಅದರಲ್ಲಿಯೇ ಸೇರಿರುತ್ತದಲ್ಲವೇ ? ಆದರೂ ತಾನು ತನ್ನ ಆಕಾರವನ್ನು ಅರಿಯುವನೆಂಬ ವ್ಯವಹಾರವು ರೂಢಿಯಲ್ಲಿರುವಂತೆ ರಸ ಪ್ರತೀತಿಗೂ ಉಪಪತ್ತಿ ಹೇಳಬಹುದು. ಅಥವಾ ಆತ್ಮಸ್ವರೂಪವನ್ನು ಆತ್ಮವೇ ಗ್ರಹಿಸುವಂತೆ ಎಂದು ವೇದಾಂತರೀತ್ಯಾ ಈ ವಾಕ್ಯಕ್ಕೆ ಅರ್ಥವಾಗಬಹುದು. (ಹೋಲಿಸಿ—"ಆತ್ಮಾನಮಾತ್ಮ ನ್ಯವಲೋಕಯಂತಮ್"—ಕಾಳಿದಾಸ). ಅಥವಾ ಬೌದ್ಧದರ್ಶನದ ಯೋಗಾಚಾರ ಪ್ರಕ್ರಿಯೆ ಯಂತೆ "ತಾನೇ" ಎಂದರೆ ಜ್ಞಾನವು 'ತನ್ನ ಆಕೃತಿಯನ್ನೇ' ಎಂದರೆ ವಿಷಯರೂಪದಲ್ಲಿ ಪರಿಣತವಾದ ತನ್ನ ಆಕಾರವನ್ನೇ ವಿಷಯೀಕರಿಸುವಂತೆ ಎಂದು ಅರ್ಥಮಾಡಬಹುದು. ಏಕೆಂದರೆ ಆ ಬೌದ್ಧದರ್ಶನದಲ್ಲಿ ಜ್ಞಾನಬಾಹ್ಯವಾದ ವಸ್ತುಗಳೊಂದೂ ಸತ್ಯವಲ್ಲ. ಜ್ಞಾನದ ರೂಪವಿಶೇಷ ಗಳನ್ನೇ ವಸ್ತುಗಳೆಂದು ಭ್ರಮಿಸುತ್ತೇವೆ. ಜ್ಞಾನವು ಸ್ವಪ್ರಕಾಶವೆನ್ನುವವರು ವಸ್ತುವಿನ ಜ್ಞಾನದಂತೆ, ಆ ಜ್ಞಾನದ ಪರಿಜ್ಞಾನವೂ ಕೂಡ ಅದೇ ಜ್ಞಾನದಿಂದಲೇ ಬರುತ್ತದೆನ್ನುತ್ತಾರೆ. ಆ ಪ್ರಕ್ರಿಯೆ ಯನ್ನು ಬೇಕಾದರೂ ಇಲ್ಲಿಗೆ ಅನ್ವಯಿಸಬಹುದು. ಯಾವುದೇ ಅರ್ಥದಲ್ಲಿ ದೃಷ್ಟಾಂತವನ್ನು ಅನ್ವಯಿಸಿಕೊಂಡರೂ ಆತ್ಮರೂಪವಾದ ರಸದ ಪ್ರತೀತಿಯೂ ಅದರಂತೆಯೇ ಉಪಪನ್ನವೆಂದು ಯೋಜಿಸಿಕೊಳ್ಳಬೇಕು.

[41] ಹೀಗೆ ರಸದ ಪ್ರತೀತಿ ಬೇರೆಯಲ್ಲ ; ಅದರ ಆಸ್ವಾದ ಬೇರೆಯಲ್ಲ. ರಸದ ಪ್ರತೀತಿಯೇ ಅದರ ಆಸ್ವಾದ ಅಥವಾ ಚರ್ವಣೆ ಮತ್ತು ರಸದ ಚರ್ವಣೆಯೇ ಅದರ ಪ್ರತೀತಿ. ರಸದ ಚರ್ವಣೆ ತಪ್ಪಿದೊಡನೆ ರಸಪ್ರತೀತಿಯೂ ತಪ್ಪುತ್ತದೆ. ಈ ಹೊಸ ನಿರೂಪಣೆಯಿಂದ ಭಟ್ಟನಾಯಕನ ಎರಡು ವ್ಯಾಪಾರಗಳ ಬದಲು ಒಂದೇ ವ್ಯಾಪಾರವನ್ನು ಅಭಿನವಗುಪ್ತನು ಆಶ್ರಯಿಸುವುದಕ್ಕೆ ಸಾರ್ಥಕ್ಯ ಉಂಟಾಗುತ್ತದೆ.

[42] ರಸಾಸ್ವಾದವು ತಾತ್ಕಾಲಿಕ ; ಬ್ರಹ್ಮಾನಂದದಂತೆ ನಿತ್ಯವಲ್ಲ. ಎಲ್ಲಿಯ ವರೆಗೆ ವಿಭಾವಾದಿ ಗಳು ಇರುವವೋ ಅಲ್ಲಿಯ ವರೆಗೆ ಮಾತ್ರ ರಸಾಸ್ವಾದ ಉಳಿಯುತ್ತದೆ.

ನೀಡುವ,[43] ಅಲೌಕಿಕ ಚಮತ್ಕಾರದ[44] ಕಾರಣವೇ ಶೃಂಗಾರಾದಿ ರಸ. ಎದುರುಗಡೆ ಮಿಂಚುವಂತೆಯೂ ಹೃದಯವನ್ನೇ ತುಂಬುವಂತೆಯೂ, ಅಂಗಾಂಗಗಳನ್ನೆಲ್ಲ ಆಲಿಂಗಿಸುವಂತೆಯೂ, ಮತ್ತೆಲ್ಲವನ್ನೂ ಮರೆಸುವಂತೆಯೂ, ಬ್ರಹ್ಮಾನಂದದ ಸವಿಯನ್ನೇ ಸೂಸುವಂತೆಯೂ ಇರುತ್ತದೆ ಈ ಅಲೌಕಿಕ ಚಮತ್ಕಾರ.[45]

ರಸವು ಇತರ 'ಕಾರ್ಯ'ಗಳಂತೆ ಕಾರ್ಯವಲ್ಲ; ಹಾಗಿದ್ದರೆ ಕಾರಣಗಳಾದ ವಿಭಾವಾದಿಗಳು ನಾಶವಾದಮೇಲೆಯೂ ರಸವು ಉಳಿಯಬೇಕಾಗಿತ್ತು.[46] ಅಥವಾ ಇತರ ಸಿದ್ಧವಸ್ತುಗಳಂತೆ ಅದು ಜ್ಞಾಪ್ಯವೂ ಅಲ್ಲ; ಏಕೆಂದರೆ ಅದು ಪ್ರತೀತಿಗೆ ಮೊದಲು ಸಿದ್ಧವೇ ಅಲ್ಲ.[47] (ಹಾಗಾದರೆ ಮತ್ತೇನೆನ್ನಬಹುದು) ಅದು ವಿಭಾವಾದಿ

---

[43] ವಿಭಾವಾದಿಗಳೇ ಬೇರೆಯಾಗಿಯೂ ರತ್ಯಾದಿಯೇ ಬೇರೆಯಾಗಿಯೂ ಪ್ರತೀತವಾಗುವುವೆಂದು ಅರ್ಥಮಾಡಿಕೊಳ್ಳಲಾಗದು. ಸಾಧಾರಣೀಕೃತವಾದ ವಿಭಾವಾದಿಗಳು ಮತ್ತು ರತ್ಯಾದಿಗಳು ಕೂಡಿಯೇ ಅಖಂಡವಾಗಿ ಪ್ರತೀತ ಅಥವಾ ಆಸ್ವಾದ್ಯವಾಗುತ್ತವೆ. ಇದಕ್ಕೆ ದೃಷ್ಟಾಂತವೇ ಪಾನಕದ ರುಚಿ. ಬೆಲ್ಲ, ಬೇಲದಹಣ್ಣು, ಮೆಣಸು ಮುಂತಾದ ಅನೇಕ ವಸ್ತುಗಳನ್ನು ಕೂಡಿಸಿ ಮಾಡುವ ಪಾನಕದಲ್ಲಿ ಸಿಹಿ, ಹುಳಿ, ಖಾರಗಳು ಬೇರೆಬೇರೆಯಾಗಿ ಕುಡಿಯುವವನಿಗೆ ಕಾಣುವುದಿಲ್ಲ; ಒಂದೇ ಅಖಂಡವಾದ ರುಚಿಯಿರುತ್ತದೆ, ಹಾಗೆಯೇ ರಸದ ಆಸ್ವಾದ್ಯತೆಯಾದರೂ.

[44] ವ್ಯವಹಾರಪ್ರಪಂಚದಲ್ಲಿಲ್ಲದ. ಕಾವ್ಯಪ್ರಪಂಚಮಾತ್ರನಿಯತವಾದ ಚಮತ್ಕಾರವೆಂದರ್ಥ. ವ್ಯವಹಾರಪ್ರಪಂಚದಲ್ಲಿ ಅನುಮಾನಗಮ್ಯವಾದ ಸ್ಥಾಯಿಭಾವವೇ ಬೇರೆ; ಕಾವ್ಯಪ್ರಪಂಚದಲ್ಲಿ ಚರ್ವಣಾಮಾತ್ರಗಮ್ಯವಾದ ಸ್ಥಾಯಿಭಾವವೇ ಬೇರೆ. ಆದ್ದರಿಂದಲೇ ಕಾವ್ಯದಲ್ಲಿ ಮಾತ್ರ ಚಮತ್ಕಾರವುಂಟು, ಲೋಕದಲ್ಲಿಲ್ಲ. ಲೋಕದಲ್ಲಿ ವಿಭಾವಾದಿಗಳಿಗೆ ಸಾಧಾರಣೀಕರಣವಿಲ್ಲ; ಗ್ರಾಹಕನಿಗೂ ಅವಕ್ಕೂ ವೈಯಕ್ತಿಕ ಸಂಬಂಧಗಳಿರುತ್ತವೆ; ಕಾವ್ಯದಲ್ಲಿಯಾದರೋ ಇಂತಹ ಸಂಬಂಧಗಳಿರುವುದಿಲ್ಲ; ಸಾಧಾರಣೀಕರಣವಿರುತ್ತದೆ.

[45] ಅಭಿನವಗುಪ್ತನ ಶೈಲಿಯೂ ಈ ಚಮತ್ಕಾರದ ವರ್ಣನೆ. ಮಾಡುವಾಗ ಅಲಂಕಾರಮಯವಾಗುತ್ತದೆ. ರಸದ ಚಮತ್ಕಾರದ ಅಲೌಕಿಕತ್ವವನ್ನು, ಆಸ್ವಾದದ ಪರಿಯನ್ನು, ಬಗೆಬಗೆಯ ಉತ್ಪ್ರೇಕ್ಷೆಗಳಿಂದ ಹೀಗೆ ಬಣ್ಣಿಸುತ್ತಾನೆ. ಬ್ರಹ್ಮಾನಂದದ ಸಾದೃಶ್ಯವನ್ನು ಕೊಡುವುದರಲ್ಲಿ ಭಟ್ಟನಾಯಕನ ಪ್ರಭಾವಮುದ್ರೆಯನ್ನು ನೋಡಬಹುದು.

[46] ಲೋಕದಲ್ಲಿ ಮಡಕೆಯೆಂಬ ಕಾರ್ಯ (=*Effect*)ಕ್ಕೆ ಕುಂಬಾರನ ಕೋಲು ನಿಮಿತ್ತ ಕಾರಣ. ಕುಂಬಾರನು ಸತ್ತು, ಅವನ ಕೋಲು ಮುರಿದರೂ ಅವನು ಮಾಡಿದ ಮಡಕೆ ಮಾತ್ರ ಉಳಿದೇ ಇರಬಹುದು. ಹಾಗೆಯೇ ರಸವನ್ನು ಕಾರ್ಯವೆನ್ನುವುದಾದರೆ ಅದರ ನಿಮಿತ್ತ ಕಾರಣವಾದ ವಿಭಾವಾದಿಗಳು ನಾಶವಾದಮೇಲೂ ರಸವುಳಿಯಬೇಕೆಂದು ಹೇಳಿದಂತಾಗುತ್ತದೆ, ವಸ್ತುಸ್ಥಿತಿ ಹಾಗಿಲ್ಲ.

[47] ಸಿದ್ಧವಾದ ಮಡಕೆ ಕತ್ತಲಲ್ಲಿದ್ದರೆ ಅದು ಕಾಣುವಂತೆ ಮಾಡಲು ದೀಪ ಬೇಕಾಗುತ್ತದೆ. ದೀಪಕ್ಕೆ 'ಜ್ಞಾಪಕ'ವೆಂದೂ ಮಡಕೆಗೆ 'ಜ್ಞಾಪ್ಯ'ವೆಂದೂ ತಾರ್ಕಿಕರು ಹೇಳುತ್ತಾರೆ. ಮಡಕೆ

ಗಳಿಂದ ಅಭಿವ್ಯಂಜಿತವೂ ಆಸ್ವಾದ್ಯಮಾನವೂ ಆದುದು ಮಾತ್ರ.[48] ಕಾರಕ, ಜ್ಞಾಪಕ, ಈ ಎರಡಕ್ಕಿಂತಲೂ ಬೇರೆಯಾದುದನ್ನು ಎಲ್ಲಾದರೂ ಕಂಡಿದ್ದುಂಟೆ ಎನ್ನಬಹುದು. ನಿಜ, ಎಲ್ಲೂ ಕಂಡಿದ್ದಿಲ್ಲ ಎಂಬುದು ರಸದ ಅಲೌಕಿಕತ್ವದ ಸಿದ್ಧಿಗೆ ಭೂಷಣವೇ ಹೊರತು ದೂಷಣವಲ್ಲ.[49] ರಸದ ಆಸ್ವಾದಕ್ಕೆ ಉತ್ಪತ್ತಿಯಿರುವುದನ್ನೇ ರಸಕ್ಕೂ ಆರೋಪಿಸಿದರೆ ಅದನ್ನು 'ಕಾರ್ಯ'ವೆಂದು ಬೇಕಾದರೂ ಹೇಳಿಕೊಳ್ಳಿರಿ.[50] ಹಾಗೆಯೇ ಲೌಕಿಕಪ್ರತ್ಯಕ್ಷ ಮುಂತಾದ ಪ್ರಮಾಣಗಳಿಗಿಂತಲೂ, ತಟಸ್ಥ ಸಂವೇದನವುಳ್ಳ ಪರಿಮಿತ ಯೋಗಿಗಳ ಜ್ಞಾನಕ್ಕಿಂತಲೂ, ಜ್ಞೇಯಾಂತರ ಸಂಸ್ಪರ್ಶಶೂನ್ಯತ್ವ, ಮತ್ತು ಸ್ವಾತ್ಮ ಮಾತ್ರ ವಿಶ್ರಾಂತಿಗಳುಳ್ಳ ಮಹಾಯೋಗಿಗಳ ಸಂವೇದನಕ್ಕಿಂತಲೂ, ವಿಲಕ್ಷಣ ವಾಗಿರುವುದಲ್ಲದೆ ಲೋಕೋತ್ತರತ್ವ ಮುಂತಾದ ಗುಣಗಳನ್ನೊಳಗೊಳ್ಳುವ ಸ್ವಾನು ಭವಕ್ಕೆ ವಿಷಯವಾಗಿರುವುದರಿಂದ ಅದನ್ನು 'ಜ್ಞೇಯ'ವೆಂದು ಬೇಕಾದರೂ ಹೇಳಿರಿ.[51] ಆದರೆ ಅದರ ಸಾಕ್ಷಾತ್ಕಾರಕ್ಕೆ ಬೇಕಾಗುವ ಪ್ರಮಾಣವು 'ನಿರ್ವಿ

ಹುಟ್ಟುವ ಮೊದಲು ಹೇಗೆ ಜ್ಞಾಪ್ಯವಲ್ಲವೋ ಹಾಗೆಯೇ ವಿಭಾವಾದಿಗಳಿರುವಾಗ ರಸವು ಹುಟ್ಟಿ ಮುಗಿಯದೆ ಇನ್ನೂ ಹುಟ್ಟುತ್ತಲೇ ಇರುವುದರಿಂದ ಅವುಗಳಿಗೆ ಜ್ಞಾಪ್ಯವೆನಿಸಲಾರದು.

48 ಹೀಗೆ ಲೋಕವಿಲಕ್ಷಣವಾಗಿರುವುದೇ ಕಾವ್ಯದ ಮಹತ್ವ ; ಲೋಕದ ತರ್ಕನಿಯಮಗಳಿಗೆ ಕಾವ್ಯರಹಸ್ಯವು ನಿಲುಕುವುದಿಲ್ಲ. ಆ ವೈಶಿಷ್ಟ್ಯವನ್ನು ತೋರಿಸುವುದಕ್ಕಾಗಿ ಕಾವ್ಯದಲ್ಲಿ ಮಾತ್ರ "ಅಭಿವ್ಯಕ್ತಿ" ಅಥವಾ ವ್ಯಂಜನಾವ್ಯಾಪಾರವನ್ನೊಪ್ಪಬೇಕು. ಇಲ್ಲಿ ಅಭಿವ್ಯಕ್ತಿಯೆಂದರೆ ಸುಮ್ಮನೆ ಪ್ರಕಟಗೊಳಿಸುವುದಲ್ಲ ; ಆನಂದವನ್ನು ತರಿಸುವುದು ಕೂಡ.

49 ಕಾವ್ಯಕಲೆಯ ತತ್ತ್ವವು ಲೋಕರೀತಿಗೆ ವಿರುದ್ಧವಾಗಿರುವುದೇ ಅದರ ಮೇಲ್ಮೆ ; ಲೋಕ ರೀತಿಗೆ ಅನುಗುಣವಾಗಿಯೇ ಇದ್ದಿದ್ದರೆ ಕಾವ್ಯದಲ್ಲಿಯೂ ಲೌಕಿಕ ಸುಖದುಃಖಗಳು ಬರುತ್ತಿದ್ದುವೇ ಹೊರತು ಅಲೌಕಿಕ ರಸವು ಇಲ್ಲವಾಗುತ್ತಿದ್ದಿತು.

50 ರಸವು ಉತ್ಪನ್ನವಾಗುವುದೆಂಬ ರೂಢಿಗೆ ಉಪಪತ್ತಿ ಹೇಗೆನ್ನಬಹುದು. ಚರ್ವಣಾವಿಶಿಷ್ಟ ವಾದುದೇ ರಸವಾದ್ದರಿಂದ ಚರ್ವಣೆಯ ಉತ್ಪತ್ತಿಯನ್ನು ರಸಕ್ಕೂ ಆರೋಪಿಸುವ ರೂಢಿಯಿದೆ ಯೆಂದುತ್ತರ.

51 ರಸವು ಜ್ಞೇಯವೆಂಬ ರೂಢಿಯನ್ನು ಸಮರ್ಥಿಸುವುದು ಹೇಗೆಂದಿಲ್ಲಿ ತೋರಿಸಿದೆ : ಜ್ಞಾನದಲ್ಲಿ ಪ್ರಸಿದ್ಧವಾದ ಪ್ರಕಾರಗಳೆಂದರೆ—(೧) ಲೌಕಿಕ ಪ್ರತ್ಯಕ್ಷ ಮತ್ತು (೨) ಪರಿಮಿತ ಯೋಗಿ ಪ್ರತ್ಯಕ್ಷ ಮತ್ತು (೩) ಅಪರಿಮಿತಯೋಗಿ ಪ್ರತ್ಯಕ್ಷ. ಮೊದಲನೆಯದು ಎಲ್ಲರ ಅನುಭವದ ವಿಷಯವಾದರೆ ಎರಡನೆಯದು ಅಪರಿಪಕ್ವ ಯೋಗಿಗಳ (ಅಥವಾ 'ಯುಂಜಾನ'ರ) ಅನುಭವದ ವಿಷಯ ಮತ್ತು ಮೂರನೆಯದು ಪರಿಪೂರ್ಣ ಯೋಗಿಗಳ ಅನುಭವ. ಈ ಮೂರಕ್ಕಿಂತಲೂ ರಸವು ಬೇರೆಯಾದ ಪ್ರತ್ಯಕ್ಷವಾದ್ದರಿಂದ ಇದನ್ನು "ಲೋಕೋತ್ತರ ಪ್ರತ್ಯಕ್ಷ"ವೆಂದರೂ ಎನ್ನಬಹುದು. ಹೀಗೆ ಪ್ರತ್ಯಕ್ಷಸಿದ್ಧವಾದುದನ್ನು ಜ್ಞೇಯವೆನ್ನಲಡ್ಡಿಯೇನು ?

ಕಲ್ಪಕ 'ವಲ್ಲ,[52] ವಿಭಾವಾದಿಗಳ ಪರಾಮರ್ಶವು ಮುಖ್ಯವಾಗಿ ಇದ್ದೇ ಇರುವುದರಿಂದ; ಸವಿಕಲ್ಪಕವೂ ಅಲ್ಲ,[53] ಆಸ್ವಾದಕಾಲದಲ್ಲಿ ಅದರ ಅಖಂಡ ಆನಂದಾತಿಶಯವು ಅನುಭವಸಿದ್ಧವಾದುದರಿಂದ. ಎರಡೂ ಅಲ್ಲದಿದ್ದರೂ ಎರಡರ ಲಕ್ಷಣವೂ ಅಷ್ಟಿಷ್ಟು ಕೂಡಿಕೊಳ್ಳುವುದು ಮೊದಲಿಸಂತೆ ಅದರ ಲೋಕೋತ್ತರತ್ವಕ್ಕೆ ಸಾಧಕವಾಗುವುದೇ ಹೊರತು ಬಾಧಕವಲ್ಲ."[54]

ಹುಲಿಯೇ ಮುಂತಾದ ವಿಭಾವಗಳು ಭಯಾನಕರಸದಂತೆ ವೀರ, ಅದ್ಭುತ, ರೌದ್ರಗಳಿಗೂ, ಕಣ್ಣೀರೇ ಮುಂತಾದ ಅನುಭಾವಗಳು ಶೃಂಗಾರರಸದಂತೆ ಕರುಣ, ಭಯಾನಕಗಳಿಗೂ, ಚಿಂತೆಯೇ ಮೊದಲಾದ ವ್ಯಭಿಚಾರಿಭಾವಗಳೂ ಕೂಡ ಶೃಂಗಾರ ರಸದಂತೆ ವೀರ, ಕರುಣ, ಭಯಾನಕಗಳಿಗೂ ಅನ್ವಯಿಸುವುದರಿಂದ ಪ್ರತ್ಯೇಕ ವಿಭಾವಾದಿಗಳಿಗೂ ವಿಶಿಷ್ಟ ರಸಗಳಿಗೂ ನಿಯತ ಸಂಬಂಧವಿಲ್ಲ. ಆದ್ದರಿಂದ ಸೂತ್ರ ದಲ್ಲಿ ಅವನ್ನು (ಬೇರೆ ಬೇರೆ ಹೇಳುವ ಬದಲು) ಒಟ್ಟಾಗಿ ಹೇಳಿದೆ.[55]

" ವಿಘುದಲಿಮಲಿನಾಂಬುಗರ್ಭಮೇಘಂ
ಮಧುಕರಕೋಕಿಲಕೂಜಿತೈರ್ದಿಶಾಂ ಶ್ರೀಃ ।
ಧರಣಿರಭಿನವಾಂಕುರಾಂಕಟಂಕಾ
ಪ್ರಣತಿಪರೇ ದಯಿತೇ ಪ್ರಸೀದ ಮುಗ್ಧೇ ॥ "

---

52 ನಾಮ, ರೂಪ, ಜಾತಿ ಮುಂತಾದ ವಿಶೇಷಗಳೊಂದೂ ಇಲ್ಲದ ಪ್ರತ್ಯಕ್ಷಜ್ಞಾನವೇ ನಿರ್ವಿಕಲ್ಪಕ (*Bare Sensation*).

53 ನಾಮರೂಪಾದಿ ವಿಶಿಷ್ಟಪ್ರತೀತಿ ಸವಿಕಲ್ಪಕ.

54 ಹೀಗೆ ಪ್ರಾಪಂಚಿಕ ಶಾಸ್ತ್ರಗಳ ಅಳತೆಗೋಲುಗಳಿಂದ ಎಷ್ಟೆಷ್ಟು ಅಳೆದರೂ ರಸಾಸ್ವಾದದ ನೆಲೆಯು ಸಿಕ್ಕುವುದಿಲ್ಲ; ಅಷ್ಟಿಷ್ಟು ಅನ್ವಯಿಸಿದರೆ ಎಷ್ಟೋ ಅನ್ವಯಿಸದೆ ನಿಲ್ಲುತ್ತದೆ. ರಸವು ಲೋಕೋತ್ತರ. ಮತ್ತು ಕಾವ್ಯಮಾತ್ರನಿಯತವೆನ್ನಲು ಕಡೆಗೆ ಸಹೃದಯರ ಹೃದಯಸಂವಾದವೊಂದೇ ಪ್ರಮಾಣವಾಗಿ ನಿಲ್ಲುತ್ತದೆ. ಶಾಸ್ತ್ರವಿಲಕ್ಷಣವಾದ ಅನುಭವವನ್ನು ಶಾಸ್ತ್ರಮರ್ಯಾದೆಯಿಂದ ಪರೀಕ್ಷಿಸುವುದೇ ತಪ್ಪೆಂದು ಅಭಿನವಗುಪ್ತನು ಸೂಚಿಸಿ ಮುಗಿಸುತ್ತಾನೆ. ಹೀಗೆ ಭಾರತದ ಕಲಾ ರಹಸ್ಯಶೋಧಕರಲ್ಲಿ ಅಭಿನವಗುಪ್ತನು ಅಗ್ರಸ್ಥಾನಕ್ಕೆ ಪಾತ್ರನೆಂದು ಭಾವಿಸಬಹುದು. ಕಾವ್ಯದ ಅನುಭವವನ್ನು ಸರಿಯಾಗಿ ವಿವೇಚಿಸಲು ಪ್ರಾಚೀನ ಅಲಂಕಾರಶಾಸ್ತ್ರಕ್ಕಿಂತ ಭಿನ್ನವಾದ ಸ್ವತಂತ್ರ ಶಾಸ್ತ್ರಾಂತರವೇ ಬೇಕೆಂದು ಮನಗಂಡವರಲ್ಲಿ ಅಭಿನವಗುಪ್ತನ ಹೆಸರನ್ನು ಆನಂದವರ್ಧನನ ಜತೆಯಲ್ಲಿ ಹೇಳಲೇಬೇಕು.

55 ಒಟ್ಟಾಗಿ ಎಂದರೆ ಭರತಸೂತ್ರದಲ್ಲಿ "ಸಂಯೋಗ"ವೆಂಬ ಶಬ್ದದಿಂದ, ಮತ್ತು ಇಲ್ಲಿಯ ಕಾರಿಕೆಯಲ್ಲಿ "ತೈಃ" ಎಂಬ ಪದದಿಂದ.

ದುಂಬಿಗಪ್ಪಿನ ನೀರು ತುಂಬಿದ ಮೋಡವೊಡ್ಡಿದೆ ಬಾನೊಳು
ಭೃಂಗ ಕೋಕಿಲಗಾನದಿಂದಿದೊ ದೆಸೆಯ ಸೊಬಗೇರಿರುವುದು |
ಧರಣಿಯಭಿನವ ಸಸ್ಯಸಂಪದದಿಂದೆ ಕಣ್ಮನವೆಳೆವಳು
ಇನಿಯನೆರಗಿರೆ ಕಾಲ್ಗೆ ಬೇಗದಿನೊಲಿದು ಮುಗುದೆಯೆ ನಲಿವುದು ||

ಇತ್ಯಾದಿ ಲಕ್ಷ್ಯಗಳಲ್ಲಿ[56] ಮತ್ತು—

"ಪರಿಮೃದಿತಮೃಣಾಲೀಮ್ಲಾನಮಂಗಂ ಪ್ರವೃತ್ತಿಃ
ಕಥಮಪಿ ಪರಿವಾರಪ್ರಾರ್ಥನಾಭಿಃ ಕ್ರಿಯಾಸು |
ಕಲಯತಿ ಚ ಹಿಮಾಂಶೋರ್ನಿಷ್ಕಲಂಕಸ್ಯ ಲಕ್ಷ್ಮೀಂ
ಅಭಿನವಕರಿದಂತಚ್ಛೇದಕಾಂತಃ ಕಪೋಲಃ ||"[57]

ಬಾಡಿಹುದಂಗಮಿಂತು ಭರದಿಂ ಪರಿಮರ್ದಿತ ಪದ್ಮತಂತುವೊಲ್
ಬೇಡುತುಮಿರ್ಪ ಮೇಳದವರಿಂ ಬಗೆ ವಂದುದದೆಂತೊ ಕಾರ್ಯದೊಳ್ |
ನೋಡೆ ಕಪೋಲಬಿಂಬಮದು ತಾಂ ನವದಂತಸುಖಂಡ ಸುಂದರಂ
ನಾಡೆ ಕಳಂಕಮೋಡೆ ಪೋಳೆವಾ ಹಿಮರೋಚಿಯ ಚೆಲ್ವನಾನುಗುಂ ||

ಮುಂತಾದೆಡೆಗಳಲ್ಲಿ ಮತ್ತು—

ದೂರಾದುತ್ಸುಕಮಾಗತೇ ವಿವಲಿತಂ ಸಂಭಾಷಿಣಿ ಸ್ಫಾರಿತಂ
ಸಂಶ್ಲಿಷ್ಯತ್ಯರುಣಂ ಗೃಹೀತವಸನೇ ಕಿಂಚಾಂಕಿತಭ್ರೂಲತಮ್ |
ಮಾನಿನ್ಯಾಶ್ಚರಣಾನತಿವ್ಯತಿಕರೇ ಬಾಷ್ಪಾಂಬುಪೂರ್ಣೇಕ್ಷಣಂ
ಚಕ್ಷುರ್ಜಾತಮಹೋ ಪ್ರಪಂಚಚತುರಂ ಜಾತಾಗಸಿ ಪ್ರೇಯಸಿ ||[58]

---

[56] ಮಾನವತಿಯಾದ ನಾಯಿಕೆಯನ್ನು ಕುರಿತು ಸಖಿಯು ಹೇಳುವ ಮಾತು. ಇಲ್ಲಿ ಮೋಡ, ದುಂಬಿ ಮುಂತಾದ ವಿಭಾವಗಳು ಮಾತ್ರ ಇವೆಯಾದರೂ ಅನುಭಾವವ್ಯಭಿಚಾರಿಗಳು ಸುಖವಾಗಿ ಕಲ್ಪನಾಗಮ್ಯವಾಗಿವೆ.

[57] ಮಾಲತೀಮಾಧವಪ್ರಕರಣ, ಪ್ರಥಮಾಂಕ. ಮಕರಂದನಿಗೆ ಮಾಧವನು ಮಾಲತಿಯ ಅವಸ್ಥೆಯನ್ನು ವರ್ಣಿಸುತ್ತಿದ್ದಾನೆ. ಇಲ್ಲಿ ನಾಯಿಕೆಯ ಅನುಭಾವಗಳು ಮಾತ್ರ ವರ್ಣಿತವಾಗಿದ್ದರೂ ವಿಭಾವ, ವ್ಯಭಿಚಾರಿಗಳನ್ನೂಹಿಸುವುದು ಸುಲಭ.

[58] ಅಮರುಶತಕ, ೪೪. ಈ ಶ್ಲೋಕದಲ್ಲಿ ಔತ್ಸುಕ್ಯವೇ ಮೊದಲಾದ ವ್ಯಭಿಚಾರಿಗಳು ಮಾತ್ರ ಉಕ್ತವಾಗಿದ್ದರೂ ವಿಭಾವಾನುಭಾವಗಳನ್ನು ಊಹಿಸಿಕೊಳ್ಳುತ್ತೇವೆ.

ದೂರವಿರೆ ಕಾತರಿಸಿ, ಕೆಲಕೆ ಬರೆ ಬಾಗುತ್ತ, ಸುಡಿದಲ್ಲಿ ಹೊಳೆಯುತ್ತಲು,
ಅಪ್ಪುವೆಡೆ ಕೆಂಪಾಗಿ ಸೀರೆಯನು ಪಿಡಿದೊಡನೆ ಭ್ರೂಲತೆಯನಿಳಿಸುತ್ತಲು।
ಮಾನಿನಿಯ ಕಾಲ್ಗೆರಗೆ ಬಾಷ್ಪಾಂಬುವಿಂ ತುಂಬಿ ಕುಡಿನೋಟವಿನಿದಾದುದು,
ತಪ್ಪುಗೈದಿರೆ ಪ್ರಿಯನು ಮತ್ತರಳಿತದೆ ಕಣ್ಣು ಪೇಳಲೇನಚ್ಚರಿಯನು ॥

ಮುಂತಾದುವುಗಳಲ್ಲಿ ಕೂಡ, ಕ್ರಮವಾಗಿ ಬರಿಯ ವಿಭಾವಗಳ, ಇಲ್ಲವೆ ಬರಿಯ ಅನುಭಾವಗಳ, ಇಲ್ಲವೆ ಬರಿಯ ಔತ್ಸುಕ್ಯ, ನಾಚಿಕೆ, ಹರ್ಷ, ಕೋಪ, ಅಸೂಯೆ, ಪ್ರಸಾದ—ಈ ವ್ಯಭಿಚಾರಿಭಾವಗಳ ಅಸ್ತಿತ್ವವನ್ನು ಮಾತ್ರ ನೋಡುತ್ತೇವೆ. ಆದರೂ ಇವುಗಳಲ್ಲಿ ಅಸಾಧಾರಣತ್ವವಿರುವುದರಿಂದ ಒಂದೊಂದೂ ಮಿಕ್ಕೆರಡನ್ನೂ ಧ್ವನಿಸುವ ಶಕ್ತಿಯನ್ನು ಪಡೆದಿರುತ್ತವೆಯಾಗಿ ವಿಭಾವಾದಿತ್ರಯಸಂಯೋಗಲಭ್ಯವಾದ ರಸಕ್ಕೆ ಯಾವ ಕೊರತೆಯೂ ಇಲ್ಲ.

ಈಗ ರಸದ ಪ್ರಕಾರಗಳನ್ನು ಹೇಳುತ್ತಾನೆ—

ಶೃಂಗಾರಹಾಸ್ಯಕರುಣರೌದ್ರವೀರಭಯಾನಕಾಃ ।
ಬೀಭತ್ಸಾದ್ಭುತಸಂಜ್ಞಾಶ್ಚೇತ್ಯಷ್ಟೌ ನಾಟ್ಯೇ ರಸಾಃ ಸ್ಮೃತಾಃ ॥ ೬ ॥

ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯಾನಕ, ಬೀಭತ್ಸ, ಅದ್ಭುತ, ಈ ಎಂಟನ್ನೂ ನಾಟ್ಯರಸಗಳೆಂದು ಹೇಳುತ್ತಾರೆ.[59]

ಇವುಗಳಲ್ಲಿ ಶೃಂಗಾರವು ಎರಡು ಬಗೆ—ಸಂಭೋಗ ಮತ್ತು ವಿಪ್ರಲಂಭಗಳೆಂದು. ಮೊದಲನೆಯದಾದ ಸಂಭೋಗಶೃಂಗಾರವು ಕೂಡ ಪರಸ್ಪರ ದರ್ಶನ, ಆಲಿಂಗನ, ಅಧರಪಾನ, ಪರಿಚುಂಬನ, ಮುಂತಾಗಿ ಅನಂತ ಪ್ರಭೇದಗಳನ್ನೊಳಗೊಳ್ಳುವುದಾದರೂ ಒಂದೊಂದನ್ನೂ ಲೆಕ್ಕಮಾಡುವುದು ಅಶಕ್ಯವಾದುದರಿಂದ ಒಂದೇ ಎಂದು ಸ್ಥೂಲವಾಗಿ ಪರಿಗಣಿಸಲಾಗುತ್ತದೆ. ಉದಾಹರಣೆ—

ಶೂನ್ಯಂ ವಾಸಗೃಹಂ ವಿಲೋಕ್ಯ ಶಯನಾದುತ್ಥಾಯ ಕಿಂಚಿಚ್ಛನೈಃ
ನಿದ್ರಾವ್ಯಾಜಮುಪಾಗತಸ್ಯ ಸುಚಿರಂ ನಿರ್ವರ್ಣ್ಯ ಪತ್ಯುರ್ಮುಖಮ್ ।
ವಿಶ್ರಬ್ಧಂ ಪರಿಚುಂಬ್ಯ ಜಾತಪುಲಕಾಮಾಲೋಕ್ಯ ಗಂಡಸ್ಥಲೀಂ
ಲಜ್ಜಾನಮ್ರಮುಖೀ ಪ್ರಿಯೇಣ ಹಸತಾ ಬಾಲಾ ಚಿರಂ ಚುಂಬಿತಾ ॥[60]

---

[59] ಇಲ್ಲಿಂದ ಮುಂದೆ ಬರುವ ವಿವರಣೆಯಲ್ಲಿ ಮಮ್ಮಟನು ಭರತನ ನಾಟ್ಯಶಾಸ್ತ್ರವನ್ನು ಹೆಚ್ಚಾಗಿ ಅನುಸರಿಸಿದ್ದಾನೆ. ಚರ್ಚಾಸ್ಪದವಾದ ಶಾಂತರಸದ ಸುದ್ದಿಯನ್ನಿಲ್ಲಿ ಎತ್ತುವುದಿಲ್ಲ.

[60] ಅಮರುಶತಕ, ೭೭. ಇದು ನಾಯಿಕಾರಬ್ಧ ಶೃಂಗಾರ.

ಸಖಿಯರ್ ಪೋದುದ ಕಂಡು ಪಾಸ ದೆಸೆಯಿಂ ಮೇಲೇಳುತೊಯ್ಯೊಯ್ಯನಾ
ಸುಖನಿದ್ರಾಗತನೆಂಬವೋಲ್ ಮಲಗಿರಲ್ ಪ್ರಾಣೇಶನಾ ವಕ್ತ್ರಮಂ।
ಸುಖದಿಂ ನೋಡುತೆ ಚುಂಬಿಸಲ್ ಕದಪಿನೊಳ್ ರೋಮಾಂಚಮಂ ಕಾಣುತುಂ
ಮುಖದೊಳ್ ನಾಣೊಗೆತಂದ ಬಾಲೆಯನವಂ ಕಾಂತಂ ಚಿರಂ ಚುಂಬಿಪಂ ॥

ಮತ್ತು—

ತ್ವಂ ಮುಗ್ಧಾಕ್ಷಿ ವಿನೈವ ಕಂಚುಲಿಕಯಾ ಧತ್ಸೇ ಮನೋಹಾರಿಣೀಂ
ಲಕ್ಷ್ಮೀಮಿತ್ಯಭಿಧಾಯಿನಿ ಪ್ರಿಯತಮೇ ತದ್ವೀಟಿಕಾಸಂಸ್ಪೃಶಿ।
ಶಯ್ಯೋಪಾಂತನಿವಿಷ್ಟಸಸ್ಮಿತಸಖೀನೇತ್ರೋತ್ಸವಾನಂದಿತೋ
ನಿರ್ಯಾತಶ್ಶನಕೈರಲೀಕವಚನೋಪನ್ಯಾಸಮಾಲೀಜನಃ ॥[61]

ಹೇ ಮುಗ್ಧಾಕ್ಷಿ ಸುಕಂಚುಕಂ ಕಳೆದಿರಲ್ ರೂಪಂ ಮನೋಹಾರಿಯೆಂ-
ದೋಪಂ ಪೇಳುತುಮೊಯ್ಯನಾಗಲೆಳೆಯಲ್ ತದ್ವೀಟಿಕಾಪಾಶಮಂ।
ಶಯ್ಯೋಪಾಂತದೊಳಿರ್ದ ಸಸ್ಮಿತಸಖೀನೇತ್ರೋತ್ಸವಾನಂದಿತಂ
ವ್ಯಾಜೋಕ್ತ್ಯಂಗಳಿನಂತೆ ಮೆಲ್ಲನಚಿರಂ ಪೋದತ್ತು ನಾರೀಜನಂ ॥

ಎರಡನೆಯದಾದ ವಿಪ್ರಲಂಭಶೃಂಗಾರವು ಅಭಿಲಾಷೆ, ವಿರಹ, ಈರ್ಷ್ಯೆ, ಪ್ರವಾಸ, ಶಾಪ, ಈ ಐದು ಬಗೆಯ ಕಾರಣಗಳಿಂದೊದಗಬಹುದಾದ್ದರಿಂದ ಐದು ಬಗೆ. ಕ್ರಮವಾಗಿ ಉದಾಹರಣೆಗಳನ್ನು ಕೊಡಲಾಗಿದೆ:—

(೧) ಪ್ರೇಮಾರ್ದ್ರಾಃ ಪ್ರಣಯಸ್ಪೃಶಃ ಪರಿಚಯಾದುದ್ಗಾಢರಾಗೋದಯಾಃ
ತಾಸ್ತಾ ಮುಗ್ಧದೃಶೋ ನಿಸರ್ಗಮಧುರಾಶ್ಚೇಷ್ಟಾ ಭವೇಯುರ್ಮಯಿ।
ಯಾಸ್ವಂತಃಕರಣಸ್ಯ ಬಾಹ್ಯಕರಣವ್ಯಾಪಾರರೋಧೀ ಕ್ಷಣಾತ್
ಆಶಂಸಾಪರಿಕಲ್ಪಿತಾಸ್ವಪಿ ಭವತ್ಯಾನಂದಸಾಂದ್ರೋ ಲಯಃ ॥[62]

ಪ್ರೇಮಾರ್ದ್ರಂ ಪ್ರಣಯೋಚಿತಂ ಪರಿಚಯಪ್ರಾರಂಭರಾಗೋದಯಂ
ಕಾಮಾಕ್ಷೀವಿಹಿತಂ ನಿಸರ್ಗಮಧುರಂ ಹಾವಂ ಮಮಾಪೇಕ್ಷೆಯಿಂ-।
ದೆಂದಾಲೋಚಿಸುವನ್ನಮೆನ್ನ ಕರಣವ್ಯಾಪಾರರೋಧಾವಹಂ
ಆಶಾರಾಜ್ಯದೊಳಂ ಲಯಂಬಡೆಗುಮಾ ಸಾನಂದಸಾಂದ್ರಂ ಮನಂ ॥

---

61 ಅಮರುಶತಕ, ೨೩. ಇದು ನಾಯಿಕಾರಬ್ಧ ಶೃಂಗಾರ.

62 ಮಾಲತೀಮಾಧವ, v. ಇದು ಅಭಿಲಾಷೆಗೆ ಲಕ್ಷ್ಯ.

(೨) ಅನ್ಯತ್ರ ವ್ರಜತೀತಿ ಕಾ ಖಲು ಕಥಾ ನಾಪ್ಯಸ್ಯ ತಾದೃಕ್ ಸುಹೃತ್
ಯೋ ಮಾಂ ನೇಚ್ಛತಿ ನಾಗತಶ್ಚ ಹಹಹಾ ಕೋಽಯಂ ವಿಧೇಃ
ಪ್ರಕ್ರಮಃ।
ಇತ್ಯಲ್ಪೇತರಕಲ್ಪನಾಕವಲಿತಸ್ವಾಂತಾ ನಿಶಾಂತಾಂತರೇ
ಬಾಲಾ ವೃತ್ತವಿವರ್ತನವ್ಯತಿಕರಾ ನಾಪ್ನೋತಿ ನಿದ್ರಾಂ ನಿಶಿ ॥

ಬೇರೆಡೆ ಪೋಪುದೆಲ್ಲಿ, ಕೆಳೆಯುಂ ಪೆರತೊರ್ವನದಾರುಮಿಲ್ಲ ನೋ-
ಟ್ಟಾಗದನಂ ಸಮಂತೆನಗೆ, ಬಾರನಿದೇನಿದು ಭಾಗ್ಯದಾಟಮೋ।
ಈ ಪರಿ ನೂರು ಕಲ್ಪನೆಗಳೊಳ್ ಬಗೆಯಳ್ದಿರೆ ಬಾಲೆ ಪಾಡದೊಳ್
ಜಾಸಿಸುತಾವಗಂ ನಡೆದುದಂ ತವೆ ನಿದ್ರಿಸಳಾಕೆ ರಾತ್ರಿಯೊಳ್ ॥[63]

ಇವಳು ವಿರಹೋತ್ಕಂಠಿತೆ.

(೩) ಸಾ ಪತ್ಯುಃ ಪ್ರಥಮಾಪರಾಧಸಮಯೇ ಸಖ್ಯೋಪದೇಶಂ ವಿನಾ
ನೋ ಜಾನಾತಿ ಸವಿಭ್ರಮಾಂಗವಲನಾವಕ್ರೋಕ್ತಿಸಂಸೂಚನಮ್।
ಸ್ವಚ್ಛೈರಚ್ಛಕಪೋಲ ಮೂಲಗಲಿತೈಃ ಪರ್ಯಸ್ತನೇತ್ರೋತ್ಪಲಾ
ಬಾಲಾ ಕೇವಲಮೇವ ರೋದಿತಿ ಲುಠಲ್ಲೋಲೋದಕೈರಶ್ರುಭಿಃ ॥[64]

ಕಾಂತನೆ ತಪ್ಪುಗೈಯೆ ಮೊದಲೊಳ್ ಸಖಿ ಪೇಳ್ವಿನಮಾರ್ತಳಿಲ್ಲ ತಾ-
ನಾರಯಲಂಗಚಾಲನಗಳಿಂ ಕಪಟೋಕ್ತಿಯ ಸೂಚನಂಗಳಂ।
ಕಣ್ಗಳಿನೆಂತುಮುಕ್ಕಿ ಜಲಮಾಕೆಯ ಶುಭ್ರಕಪೋಲಮೂಲದೊಳ್
ರೋದಿಪಳಲ್ತೆ ಬಾಲೆ ವಿಕಚೋತ್ಪಲನೇತ್ರೆಯಧೀರೆಯಾವಗಂ ॥

(೪) ಪ್ರಸ್ಥಾನಂ ವಲಯೈಃ ಕೃತಂ ಪ್ರಿಯಸಖೈರಸ್ರೈರಜಸ್ರಂ ಗತಂ
ಧೃತ್ಯಾ ನ ಕ್ಷಣಮಾಸಿತಂ ವ್ಯವಸಿತಂ ಚಿತ್ತೇನ ಗಂತುಂ ಪುರಃ।
ಯಾತುಂ ನಿಶ್ಚಿತಚೇತಸಿ ಪ್ರಿಯತಮೇ ಸರ್ವೇ ಸಮಂ ಪ್ರಸ್ಥಿತಾಃ!
ಗಂತವ್ಯೇ ಸತಿ ಜೀವಿತ ಪ್ರಿಯಸುಹೃತ್ಸಾರ್ಥಃ ಕಿಮು ತ್ಯಜ್ಯತೇ ॥[65]

---

[63] ಇದು ವಿರಹದ ಉತ್ಕಂಠೆಗೆ ಉದಾಹರಣೆ.

[64] ಅಮರುಶತಕ, ೨೬. ಇದು ಈರ್ಷ್ಯೆಗೆ ಉದಾಹರಣೆ.

[65] ಅಮರುಶತಕ, ೩೧. ಪ್ರವಾಸವಿಪ್ರಲಂಭದ ವರ್ಣನೆ.

ಬಳೆಗಳ್ ಪೋದುವು ನೆಚ್ಚಿನಾ ಸಖರೆನಲ್ ಕಣ್ಣೀರ್ಗಳೋಡಲ್ಕೆ ಮೇಣ್
ಚಣಮುಂ ನಿಲ್ಲದು ಧೈರ್ಯಮಂತೆ ಮನಮುಂ ಮುಂದಾದುದಿಂತಕ್ಕಟಾ |
ಪ್ರಿಯನೀಗಳ್ ಪೊರಮಟ್ಟಿರಲ್ ಜತೆಗೆ ತಾಮೆಲ್ಲರ್ ಪ್ರಯಾಣೋನ್ಮುಖರ್
ಪ್ರಿಯನೇ ಪ್ರಾಣನೆ ಪೋಗದಿರ್ಪೆ ಮಗುಳ್ದಿಂತಾಪ್ತೇಷ್ಟರಂ ಬಿಟ್ಟು ನೀಂ ‖

(೫) ತ್ವಾಮಾಲಿಖ್ಯ ಪ್ರಣಯಕುಪಿತಾಂ ಧಾತುರಾಗೈಶ್ಶಿಲಾಯಾಂ
ಆತ್ಮಾನಂ ತೇ ಚರಣಪತಿತಂ ಯಾವದಿಚ್ಛಾಮಿ ಕರ್ತುಮ್ |
ಅಸ್ರೈಸ್ತಾವನ್ಮುಹುರುಪಚಿತೈರ್ದೃಷ್ಟಿರಾಲುಪ್ಯತೇ ಮೇ
ಕ್ರೂರಸ್ತಸ್ಮಿನ್ನಪಿ ನ ಸಹತೇ ಸಂಗಮಂ ನೌ ಕೃತಾಂತಃ ‖[66]

ಅರೆಗಳಲ್ಲಿ ಕೆಂಗಾವಿಯಿಂದ ಹುಸಿಮುನಿಸಿನವಳ ಬರೆದು
ನಿನ್ನ ಮೆಲ್ಲಡಿಗೆ ಕೆಡಹಿಕೊಳಲು ಬರುತಿರಲು ಮುಂದುವರಿದು |
ಕಣ್ಣು ತುಂಬಿ ಕಂಗೆಡಿಸಿ ಕಂಬನಿಯ ಹಳ್ಳ ಹರಿದಿತಲ್ಲ
ಚಿತ್ರದಲ್ಲಿ ಕೂಡುವುದು ಕೂಡ ಆ ಬಿದಿಗೆ ಸೇರಲಿಲ್ಲ ‖[67]

ಹಾಸ್ಯವೇ ಮೊದಲಾದ ರಸಗಳಿಗೆ ಕ್ರಮವಾಗಿ ಉದಾಹರಣೆಗಳಿವು :—

(೧) ಆಕುಂಚ್ಯ ಪಾಣಿಮಶುಚಿಂ ಮಮ ಮೂರ್ಧ್ನಿ ವೇಶ್ಯಾ
ಮಂತ್ರಾಂಭಸಾಂ ಪ್ರತಿಪದಂ ಪೃಷತೈಃ ಪವಿತ್ರೇ |
ತಾರಸ್ವರಂ ಪ್ರಥಿತಥೂತ್ಕಮದಾತ್ಪ್ರಹಾರಂ
ಹಾಹಾ ಹತೋಽಹಮಿತಿ ರೋದಿತಿ ವಿಷ್ಣುಶರ್ಮಾ ‖

ಅಶುಚಿಯಾದೆಡಗೈಯನಾಡಿಸುತ ಸೂಳೆಯಿದೊ
ಮಂತ್ರಜಲಕಣಪೂತವಾದೆನ್ನ ಶಿರದೆ |
ನಿಡುಸರದೆ ಥೂತ್ಕರಿಸಿ ಹೊಡೆದಳಯ್ಯೋ ಶಿವನೆ
ಕೆಟ್ಟೆನಾನೆಂದಳುವನಿದೊ ವಿಷ್ಣುಶರ್ಮ ‖[68]

(೨) ಹಾ ಮಾತಸ್ತ್ವರಿತಾಸಿ ಕುತ್ರ ಕಿಮಿದಂ ಹಾ ದೇವತಾಃ ಕ್ವಾಶಿಷಃ
ಧಿಕ್ಪ್ರಾಣಾನ್ ಪತಿತೋಽಶನಿರ್ಹುತವಹಸ್ತೇಽಙ್ಗೇಷು ದಗ್ಧೇ ದೃಶೌ |

[66] ಮೇಘಸಂದೇಶ, ii, ೪೨. ಶಾಪವಿಪ್ರಲಂಭಕ್ಕೆ ಲಕ್ಷ್ಯ.

[67] ಅಂಬಿಕಾತನಯದತ್ತರ ಭಾಷಾಂತರ.

[68] ಇಲ್ಲಿ ಹಾಸ್ಯರಸ ಸ್ಪಷ್ಟ.

ಇತ್ಥಂ ಘುರ್ಘುರಮಧ್ಯರುದ್ಧಕರುಣಾಃ ಪೌರಾಂಗನಾನಾಂ ಗಿರಃ
ಚಿತ್ರಸ್ಥಾನಪಿ ರೋದಯನ್ತಿ ಶತಧಾ ಕುರ್ವನ್ತಿ ಭಿತ್ತೀರಪಿ ‖[69]

ಮಾತೆಯೆ ಪೋದೆಯೆತ್ತ ಭರದಿಂ, ಸುರರೇ ಪುಸಿಯಾದುವಾಶಿಷಂ
ಪ್ರಾಣವಿದೇಕೆ, ವಜ್ರಪತನಂ ಗಡ ಕಿಚ್ಚನೆ ಕೊಟ್ಟರಂಗದೊಳ್ |
ಕಂಗಳೆ ದಗ್ಧಮಕ್ಕೆಯೆನುತುಂ ಪುರನಾರಿಯರೆಲ್ಲ ಗೋಳಿಡಲ್
ಗೋಳಿಡಿಪರ್ ಸುಚಿತ್ರಗತರಂ, ತವೆ ಗೋಡೆಗಳನ್ನೆ ಸೀಳಿಪರ್ ‖[70]

(೩) ಕೃತಮನುಮತಂ ದೃಷ್ಟಂ ವಾ ಯ್ಯೆರಿದಂ ಗುರುಪಾತಕಂ
ಮನುಜಪಶುಭಿರ್ನಿರ್ಮರ್ಯಾದೈರ್ಭವದ್ಭಿರುಧಾಯುಧೈಃ |
ನರಕರಿಪುಣಾ ಸಾರ್ಧಂ ತೇಷಾಂ ಸಭೀಮಕಿರೀಟಿನಾಂ
ಅಯಮಹಮಸೃಙ್ಮೇದೋಮಾಂಸೈಃ ಕರೋಮಿ ದಿಶಾಂ ಬಲಿಮ್ ‖[71]

ಕರದೊಳ್ ಕೈದಾಂತವರ್ ಮಾನುಷಪಶುಗಳದಾರೀ ಮಹಾ ಪಾಪಮಂ ಗೆ
ಯ್ದಿರೊ ಮೇಣಾರ್ ಕಂಡಿರೋ ಮೇಣನುಮತಿಸಿದಿರೋ ಮೀರಿ
ಮರ್ಯಾದೆಯೊಳ್ಪಂ |
ಹರಿಯಿಂದಂ ಭೀಮನಿಂದಂ ಸುರಪತಿಸುತನಿಂದಂ ನೆರಂಗೊಂಡ ನಿಮ್ಮೆ
ಲ್ಲರ ಮೇದೋರಕ್ತಮಾಂಸಪ್ರಕರದೆ ಬಲಿಯಂ ದಿಕ್ಕುಗಳ್ಗಿಕ್ಕುವೆಂ ನಾಂ ‖[72]

(೪) ಕ್ಷುದ್ರಾಃ ! ಸಂತ್ರಾಸಮೇತೇ ವಿಜಹಿತ ಹರಯಃ ಕ್ಷುಣ್ಣಶಕ್ರೇಭಕುಂಭಾಃ
ಯುಷ್ಮದ್ದೇಹೇಷು ಲಜ್ಜಾಂ ದಧತಿ ಪರಮಮೀ ಸಾಯಕಾ ನಿಷ್ಪ
ತಂತಃ |
ಸೌಮಿತ್ರೇ ! ತಿಷ್ಠ ಪಾತ್ರಂ ತ್ವಮಸಿ ನ ಹಿ ರುಷಾಂ ನನ್ವಹಂ
ಮೇಘನಾದಃ
ಕಿಂಚಿದ್ಭ್ರೂಭಂಗಲೀಲಾನಿಯಮಿತಜಲಧಿಂ ರಾಮಮನ್ವೇಷಯಾಮಿ ‖[73]

---

[69] ಕಾಶ್ಮೀರರಾಜನ ತಾಯಿ ಮೃತಳಾದಾಗ ಭಟ್ಟನಾರಾಯಣಕವಿಯು ಬರೆದ ಚರಮಗೀತೆಯಿದೆಂದು ಮಾಣಿಕ್ಯಚಂದ್ರನು ಬರೆಯುತ್ತಾನೆ.

[70] ಇದು ಕರುಣರಸದ ದೃಷ್ಟಾಂತ.

[71] ವೇಣೀಸಂಹಾರನಾಟಕ, iii. ಇಲ್ಲಿ ರೌದ್ರರಸ.

[72] ಮೈಸೂರು ಸೀತಾರಾಮಶಾಸ್ತ್ರಿಗಳ 'ವೇಣೀಸಂಹಾರನಾಟಕ ಪ್ರತಿಕೃತಿ', ಪುಟ ೫೧.

[73] ಮಹಾನಾಟಕ, xi. ಇಲ್ಲಿ ರಸ ವೀರ.

ಸಂತ್ರಾಸಂಬಿಡಿರಲ್ಪವಾನರರಿರಾ ಶಕ್ರೇಭಕುಂಭಂಗಳಂ
ಚೂರ್ಣಂಗೈದಿರುವೆನ್ನ ಬಾಣವಿಳಿಯಲ್ ನಿಮ್ಮೊಳ್ ವಲಂ ಲಜ್ಜಿತಂ|
ಹೇ ಸೌಮಿತ್ರಿಯಪಾತ್ರ ನೀನು ಮುಳಿಸಿಂಗಾಂ ಮೇಘನಾದಂ ಗಡಾ
ಭ್ರೂಲೀಲಾವಿಜಿತಾಬ್ಧಿಯಂ ಹುಡುಕುವೆಂ ಶ್ರೀರಾಮನೆಂಬಾತನಂ‖

(೫) ಗ್ರೀವಾಭಂಗಾಭಿರಾಮಂ ಮುಹುರನುಪತತಿ ಸ್ಯಂದನೇ ದತ್ತದೃಷ್ಟಿಃ
ಪಶ್ಚಾರ್ಧೇನ ಪ್ರವಿಷ್ಟಶ್ಶರಪತನಭಯಾದ್ಭೂಯಸಾ ಪೂರ್ವ
ಕಾಯಮ್ ।
ದರ್ಭೈರರ್ಧಾವಲೀಢೈಶ್ಶ್ರಮವಿವೃತಮುಖಭ್ರಂಶಿಭಿಃ ಕೀರ್ಣವರ್ತ್ಮಾ
ಪಶ್ಯೋದಗ್ರಪ್ಲುತತ್ವಾದ್ವಿಯತಿ ಬಹುತರಂ ಸ್ತೋಕಮುರ್ವ್ಯಾಂ
ಪ್ರಯಾತಿ ‖[74]

ಕೊರಲಂ ತಾಂ ಕೊಂಕುಗೆಯ್ಯುತ್ತಡಿಗಡಿಗೊಡನೈತರ್ಪ ತೇರಲ್ಲಣಂ ನ
ಟ್ಟಿರೆ ನೋಟಂ ಬಾಣಪಾತಕ್ಕಗಿದಿರುಕಿಸುತುಂ ಪೃಷ್ಠಮಂ ಮಾರ್ಗದೊಳ್ ತೀ|
ವಿರೆ ನೀಡುಂ ಬಿಟ್ಟ ಬಾಯಿಂ ಶ್ರಮದುದಿರ್ವರೆಮೆಲ್ದಿರ್ದ ದರ್ಭಾಂಕುರಂಗಳ್
ಧರೆಯಲ್ಲೋರೊರ್ಮೆ ಕಾಲಿಟ್ಟಹಹ ನಿರುಕಿಸೈ ಬಾನೊಳೇ ಪಾರಿ ಪೋಕುಂ‖[75]

(೬) ಉತ್ಕೃತ್ಯೋತ್ಕೃತ್ಯ ಕೃತ್ತಿಂ ಪ್ರಥಮಮಥ ಪೃಥೂತ್ಸೇಧ
ಭೂಯಾಂಸಿ ಮಾಂಸಾ-
ನ್ಯಂಸಸ್ಫಿಕ್‌ಪೃಷ್ಠಪಿಂಡಾದ್ಯವಯವಸುಲಭಾನ್ಯುಗ್ರಪೂತೀನಿ
ಜಗ್ಧ್ವಾ ।
ಆರ್ತಃ ಪರ್ಯಸ್ತನೇತ್ರಃ ಪ್ರಕಟಿತದಶನಃ ಪ್ರೇತರಂಕಃ ಕರಂಕಾತ್
ಅಂಕಸ್ಥಾದಸ್ಥಿಸಂಸ್ಥಂ ಸ್ಥಪುಟಗತಮಪಿ ಕ್ರವ್ಯಮವ್ಯಗ್ರಮತ್ತಿ ‖[76]

ತೊಗಲಂ ಕುಕ್ಕುತ್ತೆ ಕುಕ್ಕುತ್ತೊಡನಡಗುಗಳಂ ಪೀನಪೀನಂಗಳಂ ಮೇಣ್
ಭರದಿಂದಂಸಾಂಡಕೋಶಾದ್ಯವಯುವದಿನಣಂ ಬರ್ಪ ದುರ್ಗಂಧಮಂ ಸೇ-|

---

74 ಅಭಿಜ್ಞಾನಶಾಕುಂತಲ, i. ಇಲ್ಲಿ ಭಯಾನಕರಸ ವ್ಯಕ್ತವಾಗಿದೆ.

75 ಬಸಪ್ಪಶಾಸ್ತ್ರಿಗಳ ಭಾಷಾಂತರ.

76 ಮಾಲತೀಮಾಧವ, v. ೧೬. ಇದು ಬೀಭತ್ಸರಸದ ಉದಾಹರಣೆ.

ವಿಸುತುಂ ಪರ್ಯಸ್ತನೇತ್ರಂ ಪ್ರಕಟಿತದಶನಂ ಪ್ರೇತಮಾರ್ತಂ ಸುಲುಬ್ಧಂ
ಪೆಣದೊಳ್ ಸಂದಸ್ಥಿ ಖಂಡಂಗಳಿಸಡುಗುಗಳಂ ಕಿಳ್ತು ತಿಂದತ್ತು ತೀವ್ರಂ ||

(೭) ಚಿತ್ರಂ ಮಹಾನೇಷ ಬತಾವತಾರಃ
ಕ್ವ ಕಾಂತಿರೇಷಾಽಭಿನವೈವ ಭಂಗಿಃ।
ಲೋಕೋತ್ತರಂ ಧೈರ್ಯಮಹೋ ಪ್ರಭಾವಃ
ಕಾಪ್ಯಾಕೃತಿರ್ನೂತನ ಏಷ ಸರ್ಗಃ ||

ಈತಂ ಗಡಾ ಚಿತ್ರ ಮಹಾವತಾರಂ
ತೇಜಂ ನವಂ ಭಂಗಿಯುಮಂತೆ ನೂತ್ನಂ।
ಲೋಕೋತ್ತರಂ ಧೈರ್ಯಮದೇಂ ಪ್ರಭಾವಂ
ರೂಪಂ ನವೀನಂ ಪೊಸದಾಯ್ತು ಸರ್ಗಂ ||[77]

ಈ ರಸಗಳ ಸ್ಥಾಯಿಭಾವಗಳನ್ನೀಗ ಹೇಳುತ್ತಾನೆ :—

ರತಿರ್ಹಾಸಶ್ಚ ಶೋಕಶ್ಚ ಕ್ರೋಧೋತ್ಸಾಹೌ ಭಯಂ ತಥಾ।
ಜುಗುಪ್ಸಾ ವಿಸ್ಮಯಶ್ಚೇತಿ ಸ್ಥಾಯಿಭಾವಾಃ ಪ್ರಕೀರ್ತಿತಾಃ || ೭ ||

ರತಿ, ಹಾಸ, ಶೋಕ, ಕ್ರೋಧ, ಉತ್ಸಾಹ, ಭಯ, ಜುಗುಪ್ಸೆ ಮತ್ತು ವಿಸ್ಮಯಗಳನ್ನು ಸ್ಥಾಯಿಭಾವಗಳೆಂದು ಹೇಳಿದ್ದಾರೆ.

ಇದರ ತಾತ್ಪರ್ಯ ಸ್ಪಷ್ಟವಾಗಿದೆ.

(ಸಶೇಷ)

ಡಾ|| ಕೆ. ಕೃಷ್ಣಮೂರ್ತಿ

---

77 ಇದು ಅದ್ಭುತರಸದ ಲಕ್ಷ್ಯ.

ಸಾಕು ನಿಲ್ಲಿಸು ಭೈರವ*

ಸಾಕು ನಿಲ್ಲಿಸು ಭೈರವ,
ನಾಟ್ಯಲೀಲಾಸ್ವೈರವ || ಪ ||

ನಿನ್ನ ಪ್ರಳಯೋದ್ಘೋಷಕೆ,
ನಿನ್ನ ನಾಟ್ಯಾವೇಶಕೆ,
ವಿಶ್ವಹೃದಯವೆ ಕಂಪಿಸಿ,
ನಿನ್ನ ಪಾದಾಘಾತಕೆ.
ಕಮಲಸ್ಮಿತದಾವೈಭವ
ಬಣ್ಣಗೆಟ್ಟಿದೆ ಭೈರವ ||

ಸೃಷ್ಟಿ—ಚೆಲುವಿನಸ್ಪಂದವು,
ಹುಟ್ಟಿಕ್ಕಿದೆ ಆನಂದವು,
ಹೂವುಸಾಕ್ಷಿ—ಹುಲ್ಲುಸಾಕ್ಷಿ
ತಟಕಿಕ್ಕಿದೆ ಮಕರಂದವು
ಇದುವೆ ತಾಯಿಯ ಗೌರವ
ಸ್ವೈರನಿಲ್ಲಿಸು ಭೈರವ ||

ದ್ವಂದ್ವ ನೃತ್ಯದ ಮೇಳಕೆ,
ವಿಶ್ವ ಹೃದಯವೆ ಭೂಮಿಕೆ,
ಭೀತಮನುಕುಲಕೋರಿದೆ.
ಪ್ರಳಯ ಲೀಲೆಯ ನಿಲ್ಲಿಸೆ,
ನೀಡು ಚೇತನ, ಅಭಯವ
ನಾಟ್ಯನಿಲ್ಲಿಸಿ, ಭೈರವ ||

ಗಾಳಿನೆಲಜಲ ಆರಲಿ,
ಹಕ್ಕಿ ಹಾಡುತ ಹಾರಲಿ,
ಚಿಕ್ಕೆ ಚಂದ್ರಮರೇರಿದ
ಬಾನುಮೇಗಡೆ ಕಾಯಲಿ,
ನಯನ ನೀಗಲಿ ಕ್ರೌರ್ಯವ |
ನಗೆಯು ನೀಡಲಿ ಧೈರ್ಯವ ||

ಸಾಕು ನಿಲ್ಲಿಸು ಭೈರವ
ನಾಟ್ಯ ಲೀಲಾ ಸ್ವೈರವ ||

—ಇರಾ.

* [ಕಲಾವಿದ ಶ್ರೀ ಶಂಕರರಾವ್ ಅಳಂದಕ ಅವರ 'ಗುರುದೇವ' ಎಂಬ ಚಿತ್ರಸಂಗ್ರಹದಲ್ಲಿಯ ಚಿತ್ರವೊಂದರಿಂದ ಮಾಡಿದ ಕವನ]

ಸಂಚಿಯ ಹೊನ್ನಮ್ಮ

ಅಂತಃಪುರದ ಸವತಿಯಲ್ಲ

ಶ್ರೀ ಮುಗಳಿಯವರು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ". . . . ಸಂಚಿಯ ಹೊನ್ನಮ್ಮ ಅಂತಃಪುರದ ಸವತಿಯಾಗಿ ಸೇರಿರಬಹುದೆಂದು . . ." ತಮ್ಮ ಅಭಿಪ್ರಾಯವನ್ನು ಮಂಡಿಸಿದ್ದಾರೆ.[1] ಈ ಸಂದರ್ಭದಲ್ಲಿ ಅವರ ಮಿಕ್ಕ ಅಭಿಪ್ರಾಯಗಳು ಸಮಂಜಸವಾಗಿರುವುವೆಂಬ ಕಾರಣದಿಂದ ಇದನ್ನೂ ಅಂಗೀಕರಿಸುವುದು ಸರಿಯಾಗಿ ತೋರುವುದಿಲ್ಲ. ಈ ವಿಷಯವನ್ನು ಅವಳ ಕಾವ್ಯಸರಣಿ ಸೂಚಿಸುತ್ತದೆಂದು ಅವರು ಬರೆದಿದ್ದರೂ ಮಾತುಗಳನ್ನು ಉದ್ಧರಿಸಿ ತಮ್ಮ ಮಂಡನೆಯನ್ನು ಸಮರ್ಥಿಸಿಲ್ಲ. ಆದ್ದರಿಂದ ವಿಮರ್ಶಿಸಿ ನೋಡಬೇಕಾಯಿತು. ಅದರ ಪರಿಣಾಮ ಈ ಲೇಖನ.

೧

ಸಂಚಿಯ ಹೊನ್ನಮ್ಮನ ವಿಷಯವಾಗಿ ತಿಳಿದುಬಂದಿರುವ ಖಚಿತವಾದ ಅಂಶ: ಅವಳ ಉದ್ಯೋಗ, ವಿದ್ಯಾಭ್ಯಾಸ ಮತ್ತು ಕಾವ್ಯಾರಂಭ. ಇನ್ನೇನು ಹೇಳುವುದಾದರೂ ಕಾವ್ಯದ ಅಂತಃಪ್ರಮಾಣಗಳಿಂದ ಊಹಿಸಿ ಹೇಳಬೇಕಾಗುವುದು. ದೊರೆಯುವ ಬೇರೆ ಪ್ರಮಾಣಗಳಿಲ್ಲ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಇವಳಿಗೆ ಮಿಗಿಲಾದ ಒಂದು ಸ್ಥಾನವಿದೆ. ಇವಳ ಕೀರ್ತಿಯಿಂದ ಗುರು ಅಳಸಿಂಗರಾಯ್ಯನ ಕೀರ್ತಿ ನಿಲ್ಲುತ್ತದೆ. ಊಳಿಗದವಳಾದ ಇವಳ ವಿದ್ಯಾವೈದುಷ್ಯವನ್ನು ಮೆಚ್ಚಿ ಕವಿಮಾನ್ಯತೆಯನ್ನಿತ್ತುದರಿಂದ ಚಿಕ್ಕದೇವ ರಾಜನ ಪ್ರತಿಷ್ಠೆ ಮತ್ತೂ ಹೆಚ್ಚಿದೆ. ಆಗಿನ ಕಾಲದಲ್ಲಿ ಪುರಾಣಗಳನ್ನೂ, ಮತಧರ್ಮದ ಕಥೆಗಳನ್ನೂ, ರಾಜರ ಹೊಗಳಿಕೆಯನ್ನೂ ಕಾವ್ಯವಸ್ತುವಾಗಿ ಆರಿಸುತ್ತಿದ್ದರು. ಹೊನ್ನಮ್ಮ ನೀರಸವೆಂದು ತೋರುವ ಸ್ತ್ರೀಧರ್ಮವನ್ನು ಕಾವ್ಯವಸ್ತುವಾಗಿ ಧೈರ್ಯದಿಂದ ಆರಿಸಿ ಅದನ್ನು ಕಾವ್ಯಮಯವಾಗಿ ರಚಿಸಿ ತನ್ನ ಏಕಾಂಗ ಸಾಹಸವನ್ನು ಮೆರೆದಿದ್ದಾಳೆ. ಸಾವಿರ ವರ್ಷಗಳಿಂದ ತಕ್ಕಷ್ಟು ವಿಪುಲವಾಗಿ ಬೆಳೆದುಬಂದ ಕನ್ನಡ ಸಾಹಿತ್ಯದಲ್ಲಿ ಈ ಬಗೆಯ ಕೃತಿ ಇದೊಂದೇ ಆಗಿರುವುದು ಅವಳ ವೈಶಿಷ್ಟ್ಯ. ಒಂದಾದರೂ ಬಂದಿರುವುದು ನಮ್ಮ ಭಾಗ್ಯ.

---

1 ಕ. ಸಾ. ಚ., ಪುಟ ೩೦೯.

ಸ್ತ್ರೀಪುರುಷ ಸಮಾನಸ್ವಾತಂತ್ರ್ಯದ ಅಡಿಗಲ್ಲಿನ ಮೇಲೆ ನಿರ್ಮಿತವಾಗ ಬೇಕಾಗಿರುವ ಸ್ವತಂತ್ರಭಾರತದ ಸಮಾಜರಚನೆಯಲ್ಲಿ ಸ್ತ್ರೀಯರ ಸ್ಥಾನಮಾನ ವನ್ನು ನಿರ್ಣಯಿಸಬೇಕಾದ ಕಾಲವಿದು. ಸ್ವಾತಂತ್ರ್ಯದ ಹೆಸರಿನಲ್ಲಿ ದಾಂಪತ್ಯದ ಅನ್ಯೋನ್ಯತೆಯನ್ನು ಟೀಕಿಸುವ ಮನೋವೃತ್ತಿಯೂ ಉಂಟಾಗಿದೆ. ಸ್ವಚ್ಛಂದವನ್ನೋ ವಿಚ್ಛಂದವನ್ನೋ ಸ್ವತಂತ್ರವೆಂದು ಮೋಹಿಸುವ ಭ್ರಾಂತಿಯೂ ಬಂದಿದೆ. ಇಂಥ ಕಾಲದಲ್ಲಿ ದಾಂಪತ್ಯದ ಸಾಮರಸ್ಯವನ್ನು ಸ್ಥಿರಗೊಳಿಸಿ ಹೊಗಳಿ ಹಾಡುವ ಕಾವ್ಯ ನಮಗೆ ಬೇಕು. ಇಂಥ ಒಂದು ಕಾರ್ಯವನ್ನು ಹೊನ್ನಮ್ಮ ಹಿಂದೆಯೇ ನಿರ್ವಹಿಸಿ ಯಶಸ್ವಿನಿಯಾಗಿದ್ದಾಳೆ.

'ಅದು ಹಳೆಯ ಹಾಡು' ಎಂದು ತೆಗಳುವವರು ಕಾವ್ಯವನ್ನು ಮತ್ತೊಮ್ಮೆ ಮನಸ್ಸಿಟ್ಟು ಓದಲಿ. ಸಂಪ್ರದಾಯದ ಕೆಲವಂಶಗಳು ಅಲ್ಲಿ ಸೇರಿವೆ, ನಿಜ. ಅಷ್ಟರಿಂದ ಅದು ತ್ಯಾಜ್ಯವಾಗಲಾರದು. ಈ ಕಾಲ ಆ ಕಾಲ, ಈ ದೇಶ ಆ ದೇಶ, ಈ ಕುಲ ಆ ಕುಲ ಎನ್ನದೆ ಎಲ್ಲ ದೇಶಕಾಲಕುಲಗಳಿಗೂ ಅನ್ವಯಿಸುವ ಹಲವಂಶಗಳಿಂದ ಅದು ಯಾವಾಗಲೂ ಉಳಿಯುತ್ತದೆ.

'ಶ್ರೀ'ಯವರು ಹೇಳಿದಂತೆ[1]—"ಮನೆ ಮಕ್ಕಳ, ಗಂಡಹೆಂಡಿರ, ಗೃಹಸ್ಥಾ ಶ್ರಮದ ಧರ್ಮಬಾಳಿನ ಚೆಲುವನ್ನು ಹೆಣ್ಣುಮಕ್ಕಳ ಹಾಡಿನಲ್ಲಿ ಹಾಡಿ ನಿತ್ಯ ಸಂಸಾರದ ನಿಷ್ಕಾಮಕರ್ಮವೇ ಭಗವಂತನ ಪಾದಾರವಿಂದವನ್ನು ಸೇರುವ ಹಾದಿ ಎಂದು ಸಾರಿದವಳು"—ಹೊನ್ನಮ್ಮ.

"ಸಂಸಾರದಲ್ಲಿ ಹೆಣ್ಣಿನ ಬಾಳು ಹೇಗೆ ಸುಮಂಗಳವಾದೀತು. ವಿವಾಹಮಂಗಳ ಗಳಲ್ಲಿ ಹೇಗೆ ಸಮರ್ಪಕತೆ ಬಂದೀತು—ಎಂಬ ಆಳವಾದ ವಿಚಾರವನ್ನು ಕವಿಚಿಂತನೆ ಮಾಡಿ ಕಾವ್ಯದಲ್ಲಿ ಉಚ್ಚರಿಸಿ ತೋರಿಸಿದ್ದಾಳೆ. . . . ಈಕೆಯ ಗ್ರಂಥ ಓದಲು ಸುಲಭ ವಾಗಿದ್ದರೂ ಮರೆಯಲು ಸುಲಭವಲ್ಲ" ಎಂದು ಶ್ರೀಮತಿ ಚಂಪಾಬಾಯಿ[2] ಹೇಳಿದ್ದಾರೆ.

". . . ಹೆಂಗೆಳೆಯರ ವಿಕಾಸಕ್ಕೆ ಅನುವುಮಾಡಿಕೊಟ್ಟರೆ ಏನು ಸಾಧ್ಯ ಎಂಬು ದಕ್ಕೆ (ಈ ಗ್ರಂಥ) ನಿದರ್ಶನವಾಗಿದೆ.[3] ಇವಳ ವಾಣಿ ಪ್ರಾಸಾದಿಕ, ಶೈಲಿ ಅಚ್ಚಗನ್ನಡ, ಸಾಂಗತ್ಯ ಹೃದ್ಯ, ಕೃತಿ ಸತ್ಕೃತಿ, 'ಸರಸಸಾಹಿತ್ಯ ವರದೇವತೆ' ಎಂಬ ಬಿರುದಿಗೆ ತಕ್ಕವಳು[4]" ಎಂದು ಶ್ರೀ ಮುಗಳಿಯವರು ಹೊಗಳಿದ್ದಾರೆ.

---

[1] ಹದಿಬದಿಯ ಧರ್ಮ ಮುನ್ನುಡಿ (i).

[2] ಅದೇ, ಪೀಠಿಕೆ ೪೦.

[3] ಕ. ಸಾ. ಚ., ೩೦೯. [4] ಕ. ಸಾ. ಚ., ೩೧೧.

ಸಂಸಾರ ಸಾರವತ್ತಾಗಲು ಸತಿಪತಿಯರು ಅನುಸರಿಸಬೇಕಾದ ವಿಧಿವಿಧಾನಗಳನ್ನು ರಸವತ್ತರವಾಗಿ ಬಣ್ಣಿಸಿದ್ದಾಳೆ . . . ಇದು ನವದಂಪತಿಗಳ ಕೈಗನ್ನಡಿಯಾಗಬೇಕು[1]" ಎಂದು ಸತೀಗೀತೆ ಸಾರಿದೆ.

ಈ ಬಗೆಯ ಮನ್ನಣೆಗೆ ಪಾತ್ರಳಾಗಿರುವ ಹೊನ್ನಮ್ಮನ ವಿಷಯವಾಗಿ ಹೆಚ್ಚು ತಿಳಿಯಬೇಕೆನ್ನಿಸುವುದು ಸಹಜ.

ಮೊದಲು ಇದನ್ನು ಸಂಪಾದಿಸಿ (೧೮೯೩) ಪ್ರಕಟಿಸಿದ ಎಸ್. ಜಿ. ನರಸಿಂಹಾಚಾರ್ ಮತ್ತು ರಾಮಾನುಜಯ್ಯಂಗಾರ್ ಅವರು ಪೀಠಿಕೆಯಲ್ಲಿ—"ತನ್ನ ಮಾತಾಪಿತೃಗಳ ಹೆಸರನ್ನೇ ಆಗಲಿ, ಸಹೋದರರೇ ಮೊದಲಾದ ಬಂಧುವರ್ಗದವರ ಹೆಸರನ್ನೇ ಆಗಲಿ, ಒಂದು ವೇಳೆ ಮದುವೆಯಾಗಿದ್ದರೆ ಪತಿಯ ಹೆಸರನ್ನೇ ಆಗಲಿ ಗ್ರಂಥದ ಯಾವ ಭಾಗದಲ್ಲಿಯೂ ಸೂಚಿಸದೆ ಇರುವುದು ಆಶ್ಚರ್ಯವಾಗಿದೆ" ಎಂದು ತಿಳಿಸಿದ್ದಾರೆ.

ಆರ್. ನರಸಿಂಹಾಚಾರ್ಯರು ಕವಿಚರಿತ್ರೆ[2]ಯಲ್ಲಿ (೧೯೧೯)—ಇವಳು ಚತುರ್ಥ ವರ್ಣದವಳೆಂದು ತೋರುತ್ತದೆ. ಮೈಸೂರು ದೊರೆಯಾದ ಚಿಕ್ಕ ದೇವರಾಜನ (೧೬೭೨-೧೭೦೪) ಸಂಚಿಯ ಊಳಿಗದಲ್ಲಿದ್ದಂತೆ ಹೇಳಿಕೊಂಡಿದ್ದಾಳೆ. ಈ ರಾಜನ ಪಟ್ಟಮಹಿಷಿಯಾದ ಎಳಂದೂರು ದೇವಾಜಮ್ಮಣ್ಣಿಯ ಪ್ರೀತಿಗೆ ಪಾತ್ರಳಾಗಿದ್ದಂತೆ ತಿಳಿವುದರಿಂದ ಇವಳ ಸ್ಥಳವು ಎಳಂದೂರಾಗಿದ್ದರೂ ಇರಬಹುದು. ತನ್ನ ವಿದ್ಯಾಗುರು ವೇದಮಾರ್ಗ ಪ್ರತಿಷ್ಠಾಪನಾಚಾರ್ಯ ಉಭಯ ವೇದಾಂತಾಚಾರ್ಯ ಅಳಸಿಂಗರಾಯ್ಯನೆಂದು ಹೇಳಿದ್ದಾಳೆ. ಚಿಕ್ಕದೇವರಾಜನು ದೇವಾಜಮ್ಮಣ್ಣಿಯೊಡನೆ ಇವಳಿಂದ ಸರಸವಾದ ಒಂದು ಗ್ರಂಥವನ್ನು ಮಾಡಿಸು ಎಂದು ಹೇಳಲು ರಾಣಿ ಅದೇ ಮೇರೆ ಅಪ್ಪಣೆ ಮಾಡಲು ಹೊನ್ನಮ್ಮ ಗ್ರಂಥವನ್ನು ಬರೆದಂತೆ ತಿಳಿಯುತ್ತದೆ" ಎಂದು ಮುಂತಾಗಿ ಬರೆದಿದ್ದಾರೆ.

ಈ ಅಂಶಗಳೆಲ್ಲವೂ ಅವಳ ಕಾವ್ಯದ ಪೀಠಿಕಾಸಂಧಿಯಿಂದ ಮತ್ತು ಒಂಬತ್ತನೆಯ ಅಧ್ಯಾಯದ ೫೧-೫೩ ನೆಯ ಪದ್ಯಗಳಿಂದ ಉದ್ಧೃತವಾಗಿವೆ. ಇದಕ್ಕಿಂತ ಯಾರೂ ಹೆಚ್ಚು ಹೇಳಿಲ್ಲ.

೨

ಒಂದು ವೇಳೆ 'ಮದುವೆಯಾಗಿದ್ದರೆ' ಎಂಬ ಮಾತಿನಿಂದ ಎಸ್. ಜಿ. ನರಸಿಂಹಾಚಾರ್ಯರು ಮೊದಲನೆಯ ಸಂದೇಹವನ್ನು ಎತ್ತಿಟ್ಟಿದ್ದಾರೆ.

---

1 ಈಚೆಗೆ ಈ ಲೇಖಕನಿಂದ ಪ್ರಕಟವಾದ ಪುಸ್ತಕ, ಉಷಾ ಪ್ರಕಟನಾಲಯ, ಮೈಸೂರು.

2 ದ್ವಿ. ಸಂ., ಪುಟ ೫೦೫.

ಆ ಕಾಲದಲ್ಲಿ ಮದುವೆಯಾಗದಿರುವುದು ಶಕ್ಯವಿರಲಿಲ್ಲ. ಅಂಥವರಿಗೆ ಮನ್ನಣೆ ದೊರೆಯುವ ಸಂಭವವೂ ಕಡಿಮೆ. ಬೌದ್ಧ ಭಿಕ್ಷುಣಿಯರಂತೆ, ಉತ್ತರದ ಬೈರಾಗಿಣಿಯರಂತೆ ವೈಷ್ಣವಿಯರಂತೆ ಇರುವ ಪದ್ಧತಿ ದಕ್ಷಿಣದಲ್ಲಿಲ್ಲ. ಹೊನ್ನಮ್ಮ ಅಂತಹ ರೀತಿ ಜೀವನವನ್ನು ಆರಂಭಿಸಿಯೂ ಇಲ್ಲ. ನಡಸಿಯೂ ಇಲ್ಲ. ಸಂಚಿಯವಳಾಗಿ ಅರಮನೆ ಸೇರಿದ್ದಾಳೆ. ಕವಿಮನ್ನಣೆ ಪಡೆದು ಭಾಗ್ಯವಂತಳಾಗಿ ಉದಾರವಾಗಿ ತನ್ನವರಿಗೆ ಸಹಾಯಮಾಡುತ್ತ ಹಾಯಾಗಿ ಇದ್ದ ರೀತಿ ತೋರುತ್ತದೆ.

'ಹದಿಬದೆಯ ಧರ್ಮವನ್ನು ಬರೆಯಲು ವ್ಯಾಸಂಗಬಲದಿಂದ ಅವಳು ಅರ್ಹತೆ ಪಡೆದಳೋ, ಅಂಥ ಜೀವನವನ್ನು ನಡೆಸಿದಳೋ'[1] ಎಂಬ ವಿಚಾರ ವಿಮರ್ಶಕರ ಮನಸ್ಸಿಗೆ ಬರುತ್ತದೆ. ವ್ಯಾಸಂಗಬಲದ ವಿಚಾರದಲ್ಲಿ ಸಂದೇಹವಿಲ್ಲ ಗುರುಮುಖದಿಂದ ಕ್ರಮವಾಗಿ ಅಭ್ಯಾಸಮಾಡಿ 'ಸರಸಸಾಹಿತ್ಯದ ವರದೇವತೆ'ಯೆಂಬ ಮೆಚ್ಚಿಗೆ ಪಡೆದು ರಾಜಸಭೆಯಲ್ಲಿ ಸನ್ಮಾನಿತಳಾಗಿದ್ದಾಳೆ. ಅವಳು ಅಂಥ ಜೀವನವನ್ನು ನಡೆಸಿದ್ದಳೆಂಬುದೂ ಕಾವ್ಯಾಭ್ಯಾಸಿಗಳಿಗೆ ನಿಸ್ಸಂಶಯವಾಗಿ ಹೊಳೆಯುತ್ತದೆ.

ಶ್ರೀಯವರು ತಮ್ಮ ಮುನ್ನುಡಿಯಲ್ಲಿ "**ಮನೆಯಲ್ಲಿಯೂ** ತನ್ನ ಒಡೆಯರ ಮನಸ್ಸನ್ನು ಉಲ್ಲಾಸಪಡಿಸುವ **ದುಡಿಮೆಯಲ್ಲಿಯೂ** ನಾಡಿನ ಕೆಲಸವನ್ನು ಮಾಡಿದವಳು" ಎಂದು ಬರೆದಿದ್ದಾರೆ. ಈ ಮಾತಿನಿಂದ ಹೊನ್ನಮ್ಮ ಗೃಹಜೀವನ ನಡಸಿರಬೇಕೆಂಬ ಭಾವ ಶ್ರೀಯವರಿಗೆ ಬಂದಂತಿದೆ. ಅಲ್ಲದೆ ಈ ಚಿಕ್ಕ ವಾಕ್ಯದಲ್ಲಿ ಅವಳ ಶೀಲವನ್ನು ಚೆನ್ನಾಗಿ ಚಿತ್ರಿಸಿದ್ದಾರೆ. ಮನೆ, ಒಡೆಯರ ದುಡಿಮೆ, ನಾಡು ಮೂರೂ ಹೊನ್ನಮ್ಮನ ಕಾರ್ಯಕ್ಷೇತ್ರ.

ಶ್ರೀಮತಿ ಚಂಪಾಬಾಯಿಯವರು ಹೇಳುವ ". . . ಸುಸಂಸ್ಕೃತಳಾದ ಹೊನ್ನಮ್ಮನಿಗೆ ಲೋಕಾನುಭವವುಂಟಾಗುತ್ತದೆ. ಹೆಣ್ಣಿನ ಬಾಳನ್ನು ಜೀವನ ಲಕ್ಷಣವನ್ನು ಆಕೆ ಅರಿಯುತ್ತಾಳೆ. ನೀತಿಯ ನೆಲಗಟ್ಟು ಯಾವುದೆಂಬುದನ್ನು ಗ್ರಹಿಸುತ್ತಾಳೆ. ಅರಸರ ಆಸ್ಥಾನದ ಉದಾತ್ತ ಆವರಣ ಹೊನ್ನಮ್ಮನ ಮೇಲೆ ತನ್ನ ಪ್ರಭಾವವನ್ನು ಬೀರಿದೆ . . . ಸತಿಯ ಪತಿವಿಷಯದ ಅನುರಾಗ ಶುದ್ಧಭಾವ, ಏಕೋಭಾವವಾಗಿ ಭಕ್ತಿಯ ಬಣ್ಣವನ್ನು ತಾಳುವ ವರೆಗೆ ಅದರ ಏರಿಕೆಯನ್ನು ಕವಿಪ್ರತಿಭೆಯಿಂದ ಸ್ಫುಟಪಡಿಸಿರುತ್ತಾಳೆ."—ಈ ಮಾತುಗಳಿಂದ ಅವಳ ಪ್ರತಿಭೆ ಲೋಕಪರಿಚಯ ಇಷ್ಟು ಮಾತ್ರ ತಿಳಿಸಿರುವರಾದರೂ, ಮುಂದೆ "ಹೆಣ್ಣಿನ ಗೌರವವನ್ನು ಕೀರ್ತಿಸುವಾಗ ಹೊನ್ನಮ್ಮನ ತಾಯ್ತನ ತಾನೇತಾನಾಗಿ ಉಕ್ಕುತ್ತದೆ. ಕುವರಿ,

---

[1] ಕ. ಸಾ. ಚ., ಪುಟ ೩೦೯.

ಕಂದ, ಅಣುಗಿ, ಮಗಳೆ, ಪೆಣ್ಮಗು—ಹೆಣ್ಣುಮಗುವನ್ನು ಸಂಬೋಧಿಸುವ ಈ ಮಾತುಗಳು ಸ್ನೇಹರಸದ ಹನಿಗಳಂತಿವೆ" ಎಂದು ಹೇಳುವುದರಿಂದ ಹೊನ್ನಮ್ಮನ ತಾಯ್ತನವು ಅವರ ಭಾವನೆಯಲ್ಲಿ ಸುಳಿದಾಡಿದಂತೆ ತೋರುತ್ತದೆ.

ಕಾವ್ಯ ಓದಿದವರಲ್ಲಿ ಈ ತುಮುಲ ನಡದೇ ಇದೆ.

"ಅತ್ಯಂತ ನಿಷ್ಠೆಯಿಂದ ಹದಿಬದೆಯ ಧರ್ಮವನ್ನು ಆಚರಿಸಬೇಕೆಂದು" ಮುಗಳಿಯವರೂ ಬರೆದಿದ್ದಾರೆ. ಆದರೆ ಅಂತಃಪುರದ ಸವತಿಯಾಗಿ ಸೇರಿರಬೇಕೆಂಬುದನ್ನು ಅದಕ್ಕೆ ಹೊಂದಿಸಿರುವುದು ಸರಿಯಲ್ಲ. ಹಿಂದೆ ಯಾರೂ ಹಾಗೆ ಮಾಡಿಲ್ಲ, ಅದಕ್ಕೆ ಕಾರಣವೂ ಇಲ್ಲ.

ಕಾವ್ಯ ಬರೆದಾಗ ಅವಳು ಮಧ್ಯವಯಸ್ಸಿನವಳೆಂದು ಊಹಿಸಬಹುದು. ಊಳಿಗದವಳಾದ ಇವಳ ಜ್ಞಾನಾಸಕ್ತಿ ರಾಣಿಗೆ ತಿಳಿದು ರಾಜನಿಗೆ ಮುಟ್ಟಿ ಗುರುವಿನ ಅನುಮತಿ ದೊರೆಯಬೇಕಾದರೆ ಬಹಳ ಕಾಲ ಕಳೆದಿರದೇಕು. ಮುಂದೆ 'ಕಾವ್ಯಾಲಂಕಾರ ನಾಟಕಗಳ ಪವಣಿಗೆಯಿರವ ಬಲ್ಲವಳಾ'ಗಬೇಕಾದರೆ ಅನೇಕ ವರ್ಷ ಸಂದಿದೆ. ಆಮೇಲೆ ರಾಜನ ಆಸಕ್ತಿ ರಾಣಿಯ ಒತ್ತಾಯ ಇವು ಕಾವ್ಯ ಬರೆಯಲು ಪ್ರೇರಿಸಿವೆ. ಆಗ ಅವಳು ಮೂವತ್ತು ವರ್ಷಕ್ಕೆ ಮೇಲ್ಪಟ್ಟವಳಾಗಿರಬೇಕು.

ಎಳಜವ್ವನದಿಂದ ಇಳಿಜವ್ವನದ ವರೆಗೆ ಪತಿಯ ಸಹಾನುಭೂತಿಯನ್ನು ಕೋರಿ ಅವಳು ಕೊಡುವ ಸಲಹೆಗಳೂ (ಅ. ೬) ಮುಂದೆ ಬರುವ ವಿರಹಿಣಿಯ ವೇದನಾತ್ಮಕವಾದ ರಮ್ಯ ಕಾವ್ಯಚಿತ್ರವೂ (ಅ. ೭) ವ್ಯಾಸಂಗಬಲದಿಂದ ಬರತಕ್ಕವಲ್ಲ, ಅನುಭವಾತ್ಮಕವಾಗಿ ತೋರುತ್ತವೆ.

"ಒಲಿದು ತನ್ನೊಡವುಟ್ಟು ಸೊಸೆ ಮಗಳೆಂದೆಂಬ ಪಲವು ಮುನ್ನಿನ ಬಾಂಧವರು . . . ತಂತಮ್ಮಿಷ್ಟ ಫಲ ಪಡೆವರೆನ್ನಿಂದ" ಎಂಬ ಪದ್ಯದಲ್ಲಿ ಒಡವುಟ್ಟು ಸೊಸೆ ಮಗಳು—ಈ ಮಾತು ಬಂದಿರುವುದರಿಂದ ಅವರಿಗೆ ಇವಳು ಧನಸಹಾಯಮಾಡುತ್ತಿದ್ದಳೆಂದು ಭಾವಿಸಬಹುದು. ತಂದೆತಾಯಿಗಳ ವಿಚಾರವಿಲ್ಲದ್ದರಿಂದ ಆಗವರು ಬದುಕಿಲ್ಲದಿರಬಹುದು. ಈ ಒಡವುಟ್ಟು ಸೊಸೆ ಮಗಳು ಏಕವಚನವೇಕೆ? ದ್ವಂದ್ವೈಕವಚನವೆಂದು ಬಹುವಚನಾರ್ಥವನ್ನು ಗ್ರಹಿಸಬಹುದು. ಆದರೂ ಸೊಸೆ ಮಗಳು ಅಣ್ಣ ತಂಗಿಯರ ಮಕ್ಕಳೋ ತನ್ನವರೋ ತಿಳಿಯಬರುವಂತಿಲ್ಲ. ತನ್ನವರಾದರೆ ಮಗ ಅಳಿಯ ಇವರ ವಿಚಾರ ಬೇಡವೇ ? ಅನ್ಯರ ಮಕ್ಕಳಾದರೆ ಅವರೆಲ್ಲರಿಗೂ ಕೇವಲ ಹೆಣ್ಣುಮಕ್ಕಳೇ ಇದ್ದರೇ ? ಹೆಣ್ಣು ಶರಣಳಾಗಿ ವರ್ತಿಸಬೇಕು, ಆದರೆ ಗಂಡು ಧೂರ್ತನಾಗಬಾರದು ಎಂಬ ಮಾತು ಕಾವ್ಯದ ಸಾರವಾಗಿ ತೋರುತ್ತದೆ. ಮದುವೆಯಾಗಿ ಒಂದು ವೇಳೆ

[1] ಪದ್ಯ ೧-೪೧.

ಪತಿಯ ಉದ್ದಾಮತನದಿಂದ ಇವಳು ನೊಂದ ಸಂದರ್ಭವೇನಾದರೂ ಇರಬಹುದೇ ಎಂಬ ಪ್ರಶ್ನೆಯೂ ತಲೆದೋರುತ್ತದೆ. ಪಿರಿಯರ ಮಗಳೆಂದು, ಬಿಜ್ಜಗಲಿತೆಸೆಂದು ವರ ರೂಪವತಿ ತಾಸೆಂದು ಪರಮಪಾವನೆಯೆಂದು ಬರಿದೆ ಬೆರೆಯದೆ ಅನುಸರಿಸುವುದಾತ್ಮ ವಲ್ಲಭನ[1] ಎಂಬ ಮಾತು ಇವಳಿಗೂ ಅನ್ವಯವಾಗುವಂತಿದೆ. ಪಿರಿಯರ ಮಗಳು ಎಂಬ ವಿಚಾರ ನಿರ್ಣಯವಾಗಿಲ್ಲವಾದರೂ ರಾಣಿಯ ಪ್ರೀತಿ ವಿಶ್ವಾಸವನ್ನು ಗಳಿಸಿದ ಮೇಲೆ ಇವಳಿಗೆ ಮದುವೆಯಾಗಿದ್ದರೆ ಹಾಗೆ ಭಾವಿಸುವುದಕ್ಕೆ ಕಾರಣವಿದೆ. ತಾನು ಎಷ್ಟು ಹಿತವಾಗಿ ಅನುಸರಿಸಿದರೂ ಒಡಂಬಡದ ಪತಿ ಅವಳಿಗೆ ದೊರೆತಿದ್ದನೇನೋ ಎನ್ನಿಸುತ್ತದೆ. "ಅನ್ಯೋನ್ಯವಾಗಿ ಒಡಂಬಡದ ಸತಿಪತಿಯರಸ್ನು ಹೇರುವುದರಿಂದ ಭೂಮಿ ಸರ್ವಂಸಹೆಯೆನಿಸಿದೆ[2]" ಎಂಬ ಮಾತಿನಲ್ಲಿ ಪ್ರತ್ಯಕ್ಷಾನುಭವದ ವೇದನೆ ತುಂಬಿದಂತಿದೆ. ಹೆಂಗಸಿನ ಸಂಕಷ್ಟಗಳನ್ನು ತಿಳಿಸುವ ಸಂದರ್ಭಗಳೆಲ್ಲಾ ಪರಿಣಾಮಕವಾಗಿ ಬಂದಿವೆ. ಅವುಗಳಲ್ಲಿ ಕಂಡದ್ದು ಹಲವಾದರೆ ಉಂಡದ್ದು ಕೆಲವಾದರೂ ಇವೆ.

ಕಾವ್ಯದಲ್ಲಿ 'ಮುನ್ನಿನ ಬಾಂಧವರು' ಎಂದು ಹೇಳಿರುವುದನ್ನು ನೋಡಿದರೆ ಅವಳೀಗ ಒಡವುಟ್ಟು ಸೊಸೆ ಮಗಳ ಸಂಪರ್ಕವನ್ನು ಇಟ್ಟುಕೊಂಡಂತೆ ತೋರುವುದಿಲ್ಲ, ತನ್ನ ಈಗಿನ ಸ್ಥಿತಿಗಾಗಿ ಅವಳು ಗರ್ವಪಡುವಂಥವಳಲ್ಲವಾದರೂ ಆ ಒಡನಾಟ ತನ್ನ ಧ್ಯೇಯಸಾಧನಗಳಿಗೆ ಸಹಾಯಕವಲ್ಲವೆಂದು ಗ್ರಹಿಸಿರಬೇಕು. ಹೀಗೆ ಅವಳ ಸಾಂಸಾರಿಕ ವಿಷಯವನ್ನು ಸಮಸ್ಯೆಯಾಗಿಯೇ ಉಳಿಸಿ ಮುಂದಿನ ವಿಷಯವನ್ನು ಪರಿಶೀಲಿಸೋಣ.

ಅವಳು ಶುಚಿ,[3] ಆಚಾರ,[4] ಶೀಲ[5] ಇವುಗಳನ್ನು ಅನರ್ಘವಾಗಿ ಗಣಿಸಬೇಕೆಂದು ಉಪದೇಶಿಸಿದ್ದಾಳೆ. ತಾನು ಆಚರಿಸದೆ ಉಪದೇಶಿಸಿದಳೆಂದು ಹೇಳಬಹುದೆ? ರಾಣಿಯ ಮಾತಿನಂತೆ ಕಾವ್ಯ ಬರೆಯುವೆನೆಂದು ಒಪ್ಪಿದಾಗ ಪಾದದೂಳಿಗದೊಳು ಬಳೆದ ಬಾಲಕಿ[6]ಯೆಂದು ದೊರೆಗಳಲ್ಲಿ ಬಿನ್ನೈಸುತ್ತಾಳೆ. ಶೀಲದ ಮಾತು ಬಂದಾಗ ಅವಳು ಎಷ್ಟು ಎಚ್ಚರದಿಂದ ಇದ್ದಾಳೆಂಬುದಕ್ಕೆ ಬಲವಾದ ನಿದರ್ಶನಗಳಿವೆ.

'ವರುಷ ಹನ್ನೆರಡಾದ ಮೇಲೆ ಪೆರದೆಗೆದಿಹುದು' ಎಂದು ಹೇಳುವಾಗ ಪೊರೆವರಸಾದೊಡಮೇನು ಎಂಬ ಮಾತನ್ನೂ ಸೇರಿಸಿದ್ದಾಳೆ. ಶೀಲದ ವಿಷಯಕ್ಕೆ ಬಂದಾಗ ರಾಜನನ್ನೂ ಲಕ್ಷಿಸಬಾರದೆಂಬುದು ಅವಳ ನೀತಿ. ಅಲ್ಲೇ ಗುರುವಿನ ಮಾತೂ ಬಂದಿದೆ. ಇದು ಅವಳ ನಡೆಯ ನಿರೂಪಣೆಯಲ್ಲದೆ ಮತ್ತೇನು?

ಮುಂದೆ ಇವಳಿಂದ ಕಾವ್ಯ ಹೇಳಿಸಿ ಕೇಳಬೇಕೆಂದು ರಾಜನ ಕಿವಿಗಳು ಕದುಬು

---

1 ಪದ್ಯ ೩, ೩೧. 2 ಪದ್ಯ ೬, ೧೦. 3 ಪದ್ಯ ೯, ೧೬. 4 ಪದ್ಯ ೮, ೧೯.
5 ಪದ್ಯ ೧, ೨೦. 6 ಪದ್ಯ ೧, ೪೫.

ಗೊಂಡಿವೆ. ಅಷ್ಟಮಹಿಷಿಯರೂ ಅವರವರ ಊಳಿಗದವರೂ ನೆರೆದಿರುವ ಒಳ ಓಲಗದಲ್ಲಿ ಒಂದು ದಿನ "ಎಡಬಲದ ಸುಶೀಲೆಯರೊಳು ಕಡೆಗಣ್ಣ ಸಾಲುವಿಡಿದು ಸುಳಿಸುಳಿಸಿ ಯನ್ನೊಳು . . . ಸತ್ಕೃಪಾವಲೋಕವನೆಸಗಿ . . . ಮನ್ನಿಸಲೆಳಸಿದನು" ಎಂದು ತಿಳಿಸುತ್ತಾಳೆ. ಈ ಸಂದರ್ಭದಲ್ಲಿ ಬರುವ ಸುಶೀಲೆಯರೆಂಬ ಮಾತನ್ನು ಹೊನ್ನಮ್ಮ ತನ್ನಂತೆಯೇ ಎಲ್ಲ ಊಳಿಗದವರಿಗೂ ಅನ್ವಯಿಸಿ ರಾಜನ ನಿರ್ಮಲಚಾರಿತ್ರವನ್ನು ಪ್ರಕಾಶಿಸಿದ್ದಾಳೆ. ಮುಂದೆ ಈ ಸಂದರ್ಭದಲ್ಲಿ ಆಡುವ ಮಾತುಗಳಿಗೆಲ್ಲಾ ಪ್ರಭು ಸೇವಿಕೆಯ ಸಂಬಂಧವಿರುವುದೆಂಬುದಕ್ಕೆ ಇದಕ್ಕಿಂತ ಬಲವಾದ ಪ್ರಮಾಣ ಬೇಕಿಲ್ಲ.

ಅವಳು ಅಂತಃಪುರದ ಸವತಿಯಾಗಿರುವ ಪಕ್ಷದಲ್ಲಿ ರಾಜನು ಪಟ್ಟದ ರಾಣಿಯ ಮೂಲಕ ಅವಳನ್ನು ನುಡಿಸಬೇಕಾಗಿರಲಿಲ್ಲ. ಅಷ್ಟಮಹಿಷಿಯರೂ ಇರುವಾಗ ರಾಜ ಸಮ್ಮುಖದಲ್ಲಿ ಪಟ್ಟದ ರಾಣಿಯು ಅವಳನ್ನು 'ಕಟ್ಟಾಣಿಪೆಣ್ಮಣಿ, ಹೊನ್ನಕ್ಕ' ಎಂದು ಸಂಬೋಧಿಸಲಾರಳು. ರಾಜಸನ್ಮಾನ ದೊರೆತು ಕಾವ್ಯ ಬರೆದಮೇಲೂ 'ಸಂಚಿಯ ಹೊನ್ನಿಯೆಂಬೇಳ್ಗೆವೆತ್ತಿಹೆಸು' ಎಂದು ಹೊನ್ನಮ್ಮ ತನ್ನ ವೃತ್ತಿಯನ್ನು ಹೊಗಳಿ ಕೊಳ್ಳುತ್ತಿರಲಿಲ್ಲ. ರಾಜರಾಣಿಯರ ಔದಾರ್ಯವೂ ಹೊನ್ನಮ್ಮನ ನಮ್ರತೆಯೂ ಅವಳ ಸ್ಥಾನವನ್ನು ಸವತಿಯ ಸ್ಥಾನಕ್ಕಿಂತ ಎಷ್ಟೋ ಎತ್ತರಕ್ಕೆ ಏರಿಸಿದೆ. ಇವಳ ಕಾವ್ಯಾರಂಭವೇ ಒಂದು ಕಾವ್ಯವಾಗಿದೆ.

'ಅರಸಿಯರನಿಬರುಂ ತನ್ನ ಸರಸಕಾವ್ಯವ ಸವಿವಂತೆ ಪತಿವ್ರತೆಯರ ನಡತೆಯನಿಲ್ಲಿ ಪೊಗಳುವೆನು'[1] ಎಂದು ಓಲಗದಲ್ಲಿ ಹೇಳುವ ಕೆಚ್ಚು ಒಬ್ಬ ಸವತಿಗೆ ಬರಲಾರದು. ಇವಳ ಸದ್ಧರ್ಮಾಚರಣೆಯನ್ನು ರಾಣಿಯರು ಶಂಕಿಸಿದ್ದರೆ ಅವರಿಂದ ಪುರಸ್ಕಾರ ದೊರೆಯುವ ಸಂಭವವಿರಲಿಲ್ಲ. 'ಸುತ್ತಣರಸಿಯರ ಬೈತಲೆಯ ಮುತ್ತಿನಸರ ಇವಳ ಪಾದುಕೆಗೆ ಲಂಬಣ'ವಾದಂತೆ ಹೇಳುತ್ತಾಳೆ. ಇವಳು ವಿದುಷಿಯೂ ಕವಿಯೂ ಆಗಿರುವಂತೆ ಸದ್ಧರ್ಮಚಾರಿಣಿಯೂ ಆಗಿದ್ದರೆ ಮಾತ್ರ ಇದು ಸಾಧ್ಯ. ಅಲ್ಲದಿದ್ದರೆ ಇಂತಹ ಸನ್ಮಾನ ಪಟ್ಟದರಸಿಗೆ ಮಾತ್ರ ಸಲ್ಲಬಹುದು—ಅದೂ ಸಂದೇಹ. ಇದು ಅವಳಿಗೆ ದೊರೆತ ಕವಿಮನ್ನಣೆ. ಧರ್ಮಾಚರಣೆಯ ಧರ್ಮೋಪದೇಶದ ಮನ್ನಣೆ. ಅದನ್ನು ಸಹಜವಾಗಿ ಕೊಂಡಾಡಿದ್ದಾಳೆ.

ಅವಳು ಸ್ವತಂತ್ರಳು. ಜನಜೀವನವನ್ನು ಸೂಕ್ಷ್ಮವಾಗಿ ವೀಕ್ಷಿಸಿದ್ದಾಳೆ, ವಿಮರ್ಶಿಸಿದ್ದಾಳೆ. ಅವಳ ಭಾವದಲ್ಲೆಲ್ಲಿಯೂ ಸುವರ್ಣ ಶೃಂಖಲೆಯ, ಸಂಕೋಚ ಕಾಣುವುದಿಲ್ಲ. ಮಾತಿನಲ್ಲಿ ಪಂಜರದ ಗಿಳಿತನವಿಲ್ಲ. ಆದರೂ 'ಶ್ರೀ' ಅವಡು ಹೇಳಿದಂತೆ ಅವಳು ಸೌಮ್ಯಮೂರ್ತಿ.

---

[1] ಪದ್ಯ ೧-೪೭

ಇಷ್ಟರಿಂದಲೇ ಇವಳು ಅಂತಃಪುರದ ಸವತಿಯಲ್ಲವೆಂದು ದೃಢಪಡುವುದಾದರೂ ಸಂದೇಹಕ್ಕೆ ಎಡೆಗುಡಬಹುದಾದ ಎರಡು ಮಾತುಗಳಿಗೆ ಸಮಾಧಾನ ಹೇಳಬಹುದು.

ಒಂದು : "ನಿನ್ನ ವಳೆನಿಸಿ ನಿನ್ನೆ ಡೆವಿಡದಿರ್ಪನೀಯುನ್ನತಿಗಿನ್ನೆಣೆಯುಂಟೆ[1]" ಈ ಮಾತಿನ ಹಿಂದೆ 'ನಿನ್ನೂಳಿಗವನೆಸಗಿ' ಎಂಬ ಮಾತಿದೆ. ರಾಜರಲ್ಲಿ ತಾಂಬೂಲ ಕರಂಕ ವಾಹಿನಿಯರು ಜೊತೆಯಲ್ಲಿರುತ್ತಾರೆ. ಚಂದ್ರಾಪೀಡನ ಜೊತೆಯಲ್ಲಿ ಪತ್ರಲೇಖೆಯಿದ್ದಾಳೆ. ಹೊನ್ನಮ್ಮ ರಾಣಿಯ ಊಳಿಗದವಳಾಗಿ ರಾಜಸೇವೆಯಲ್ಲಿದ್ದಾಳೆ. ಇದಕ್ಕೆ ಹೆಚ್ಚು ಅರ್ಥ ಹಚ್ಚಬಾರದು.

ಮತ್ತೊಂದು :

'ಒಡೆಯನಿರಿಸಿದಂತಿರ್ಪುದಲ್ಲದೆ ಸೇ
ಳೊಡವೆಗೆ ಬೇರಿರವುಂಟೆ[2]

ಎಂದು ತನ್ನ ಬಗ್ಗೆ ಪೀಠಿಕೆಯಲ್ಲಿ ಹೇಳಿಕೊಂಡಿದ್ದಾಳೆ.

'ಒಡೆಯನಿಟ್ಟಂತಿರ್ಪುದೊಡವೆಗುಚಿತವೆಂದು
ನಡೆವುದು ನಲ್ವೆಂಡಿರೊಲಿದು

ಎಂದು ಸತೀ ಸಾಮಾನ್ಯವಾಗಿ ಉಪದೇಶಿಸುವಾಗ ಹೇಳಿದ್ದಾಳೆ.

ಮೊದಲನೆಯದರಲ್ಲಿ ಇರ್ ಧಾತು ಪ್ರೇರಕಾರ್ಥದಲ್ಲಿಯೂ ಎರಡನೆಯದರಲ್ಲಿ ಸ್ವಾರ್ಥದಲ್ಲಿಯೂ ಉಪಯೋಗವಾಗಿದೆ. ಮೊದಲನೆಯದರಲ್ಲಿ ಇರ್ಪುದಲ್ಲದೆ ಬೇರಿರವುಂಟೆ ಎಂಬುದರಲ್ಲಿ ಆಶ್ರಯಭಾವನೆ ಬಂದರೆ ಎರಡನೆಯದರಲ್ಲಿ ಇರ್ಪುದು ನಡೆವುದು ಎಂಬ ವಿಧಿಯಿದೆ. ಒಂದರಲ್ಲಿ ಪ್ರಭುವಿನ ಅಧಿಕಾರವೂ ಮತ್ತೊಂದರಲ್ಲಿ ಪತಿಯ ಅಧಿಕಾರವೂ ಒಡೆದು ಕಾಣುತ್ತದೆ. ಅವಳು ಸವತಿಯಲ್ಲವೆಂದು ತೋರಿಸುವುದಕ್ಕೇ ಈ ಉದಾಹರಣೆ ಉಪಕಾರವಾಗಿದೆ.

ಇನ್ನೆಲ್ಲಿಯೂ ಈ ವಿಷಯವಾಗಿ ಸಂದೇಹಿಸುವುದಕ್ಕೆ ಎಡೆಯಿಲ್ಲ.

ಒಟ್ಟಿನಲ್ಲಿ ಹೇಳುವುದಾದರೆ ಅವಳಿಗೆ ಮದುವೆಯಾಗಿದೆ. ಒಬ್ಬ ಮಗ ಮಗಳು ಇರಬಹುದು. ಅವಳು ಭಾಗ್ಯಶಾಲಿನಿಯಾದಮೇಲೆ ಧನಾಶ್ರಯ ಪಡೆಯುವ ಚಿಕ್ಕ ಆತ್ಮೀಯವರ್ಗವೊಂದಿದೆ. ಆದರೆ ಆ ತೊಡಕಿಗೆ ಸಿಕ್ಕದೆ ಇವಳು ಪ್ರತ್ಯೇಕವಾಗಿ ರಾಜಸೇವೆಯ ಸಂಚಿಯ ಕಾರ್ಯವನ್ನು ಘನವಾಗಿ ಎಣಿಸಿ ಪುರಾಣ ಪುಣ್ಯಕಥಾ

---

[1] ಪದ್ಯ ೧-೩೮.

[2] ಪದ್ಯ ೧, ೪೪.

ಪಾರಾಯಣ ಪರಾಯಣೆಯಾಗಿ ಬಂದವರಿಗೆ ಉಪದೇಶವೀಯುತ್ತ ಮಹಿಳಾವೃಂದಕ್ಕೆ ಆದರ್ಶಳಾಗಿ ರಾಜರ ವಿದ್ವಾಂಸರ ಮನ್ನಣೆಯಲ್ಲಿ ಜೀವನಯಾತ್ರೆ ನಡಸಿದ್ದಾಳೆ.

ಇವಳನ್ನು ಅಂತಃಪುರದ ಸವತಿಯಾಗಿ ಊಹಿಸುವುದು ವಿದ್ವತ್ಕವಿಯೂ, ಕವಿಪೋಷಕನೂ, ಮಹಾಪ್ರಭುವೂ, ಆದ ಚಿಕ್ಕದೇವರಾಜನ ಕೀರ್ತಿಗೆ ಕಳಂಕ. ಕವಿ ಹೊನ್ನಮ್ಮನಿಗೆ ಅಪಚಾರ, ಅವಳ ಉಪದೇಶಕ್ಕೆ ಲಾಘವ, ಈ ಕಾರಣಗಳಿಂದ ಆ ವಿಚಾರವನ್ನು ಮನಸ್ಸಿನಿಂದ ತೊಡೆದುಹಾಕುವುದು ಒಳ್ಳೆಯದು.

ಕ. ನರಸಿಂಹಶಾಸ್ತ್ರಿ

ಮಣ್ಣಿ ಕಾಣ್ಕೆ !

೧

ಓ ಮಣ್ಣೆ, ಮೊದಲ ತುದಿವಾಡುಗಳ ಮೌನದಲಿ
ರೂಪಿಸುವ ಸಂಪನ್ನೆ ! ಯುಗ-ಯುಗ-ಧ್ಯಾನದಲಿ
ವ್ಯಕ್ತ-ಸೃಷ್ಟಿಯ ಚೆಲುವನವ್ಯಕ್ತದಿಂ ಹಡೆದ
ಮಿಸುಪೊಡಲ ಹೊನ್ನೆ ! ಆಂತರ್ಯದಲಿ ಕಡೆದ
ಬಗೆವಗೆಯ ಕಂಪನ್ನೆ ಸುಮಲಕೆ ಕರುಣಿಸುವ
ರಸ-ಗಂಧ-ಮಾನ್ಯೆ ! ಸ್ವರ್ಗರಸ-ಸಂಸ್ನಾತೆ.
ಹೊಲಸುಂಡು ಹುಲುಸ ಹಸಿರನೆ ತುಂಬ ಕಿರಣಿಸುವ
ಶತಕೋಟಿ-ದಾನ-ಕರೆ, ಉಪಕಾರ-ವಿಖ್ಯಾತೆ!
ಸಕಲ ಸಚರಾಚರಕೆ ಮಾತೃಮಮತಾಧಾರೆ,
ಪರ್ವತ ಮಹೋತ್ತುಂಗೆ, ನದನದೀ-ಸುತರುಗೆ !
ಜಲನಿಧಿ-ಮಹಾಗಾಧೆ! ಸನ್ಮ್ಯಾಸ-ಗಂಭೀರೆ !
ಬಹುದರೀಸುಗಭೀರೆ ! ರಂಗರಂಗಾಂಗಾಗೆ!
ರಚನವಚನಾಶೀಲೆ ! ಕಲಾವೈಭಶಾಲೆ
ಅಮಿತಲೀಲಾಲೋಲೆ ! ಸುಕ್ಷಮಾಗುಣಮಾಲೆ !

೨

ಅರರೆ, ನಿನ್ನೊಂದೊಂದೆ ಕಣ ಕಣದೊಳತಿಹಾಸ-
ವಾದಿಯಿಂದಿನ್ನೆಗಂ ಸ್ಫುರಿಸುತಿದೆ ಮೌನದಲಿ !
ಅನುಕೂಲಶಿಖರದಲಿ ಪ್ರತಿಕೂಲಗರ್ತದಲಿ
ಮನದ ಭಾವಾನುಭವಘೂರ್ಣಾವರ್ತದಲಿ
ನಲಿದುಲಿದು ತೊಳಲಳಲಿ ಸಿಕ್ಕೊರಲುತಾಯಾಸ—
ದಲಿ ಮುಚ್ಚಿ ಕಣ್ಗಳನು, ಪವಡಿಸುತೆ ಮಸಣದಲಿ
ನಿನ್ನೊಡನೆ ಬೆರೆದಸಂಖ್ಯಾತಜೀವಿಗಳುಸಿರು
ತೀಡುತಿಹುದಶ್ರುತದಿ ನಿರುತ ನಿನ್ನೊಳ ಬಸಿರ !
ಯುಗಯುಗದ ಯುದ್ಧಗಳ ಕೆನ್ನೀರ ಹೀರಿರುವೆ !
ಜಗದಖಿಲ ಜೀವಿಗಳ ಮೂಳೆಗಳನೇರಿರುವೆ !

ಇನಿತೆಲ್ಲ ಘನಘೋರ ವಿಷಮತೆಯು ಬಡಿದರೂ,
ಗರ್ಭದಲಿ ತಪ್ತಜ್ವಾಲಾಮುಖಿಯೆ ಸಿಡಿದರೂ,
ಸ್ಥಿತಪ್ರಜ್ಞೆ : ನಿರ್ಲಿಪ್ತೆ! ಪೂತೆ! ದ್ವಂದ್ವಾತೀತೆ!
ಎಂದಿಸಂತೆಯೆ ಮೆರೆವೆ, ಕರ್ಮಯೋಗಿ? ಮಾತೆ!

೩

ಬಹುಭಾರವಾಗಿಹುದೆ ನಿನಗಿಂದು ಜನಕೋಟಿ?
'ಕೊಳ್ ಕೊಳು ಕೊಳೆಂಬ' ಕೋಟಿ ಕೋಟಿಯ ಸೊಲ್ಲು
ಲಯಿಸುತಿದೆ ಗಗನದಲಿ ಹೃದಯ ತಂತಿಯ ಮೀಟಿ!
ಅನ್ನದೇವರ ಮುಂದೆ ಎಲ್ಲ ದೇವರು ಕಲ್ಲು!
ಅನ್ನ ವೀಯುವ ತಾಯೆ, ನೀನನ್ನಪೂರ್ಣಾಂಬೆ!
ನೀ ಮುನಿಯಲಾರಿನ್ನು ಸಂತೃಪ್ತಿ, ಸುಖಬಿಂಬೆ!
ಆಂತರ್ಯ ಸತ್ವದಿಂ ಕಣ್ಣು ತೆರೆ, ಕೋಟಿಕರೆ!
ನಲಿದು ನರ್ತಿಸಲೆಲ್ಲು ಹಸಿರಿನಿಂ ಹಿಗ್ಗಿ ತಿರೆ!
ವಿಜ್ಞಾನಕಾವ್ಯಶಾಸ್ತ್ರಗಳೆಲ್ಲ ತಾವಿಂದು
ತೇಂಕುತಿವೆ ನಿನ್ನ ಶೋಧನಕಾಗಿ ತಪ ನಿಂದು!
ಕೃಷಿಯು ನೇಗಿಲ ಯಂತ್ರಸಾಮಗ್ರಿಗಳ ಹಿಡಿದು
ನಡೆದಿಹುದು ಅನ್ನಶೋಧನೆಗಾಗಿ ವ್ರತವಿಡಿದು!
ಅದರಿಂದೆ ಮಣ್ಣೆ ಶಾಂತಿಯ ಕಣ್ಣೆ, ಲೀಲೆಯಲಿ
ಹಸಿದ ಮಕ್ಕಳನೂಡಿ ಮಲಗಿಸೌ ಲಾಲಿಯಲಿ!

೪

ಹಳತಿನಾ ರಾಶಿಯೊಲು ಪಸರಿಸಿಹ ಓ ಮಣ್ಣೆ
ನಿತ್ಯನೂತ್ನತೆಯ ವಾರಾಶಿಯೂ ನೀನಲ್ತೆ?
ಕಾಲಚಕ್ರದ ಸದಾ ಸಂಚಲಿಪ ಸೂತ್ರದಲಿ
ಹಳತುಹೊಸತುಗಳೆರಡು ನಿನ್ನುದರಪಾತ್ರದಲಿ
ವ್ಯಕ್ತರೂಪವ ಧರಿಸಿ ಲೀಲಾಸುಕ್ಷೇತ್ರದಲಿ
ಕುಣಿಕುಣಿದು ಮಣಿಮಣಿದು ಬಗೆಬೆಸೆದು ನೇತ್ರದಲಿ,
ಒಂದರೊಳಗೊಂದೊಂದು ನೆಗೆದೊಗೆದು ಆಹ! ಬಣ್ಣ-
ನೆಗೆ ಬೆಮೆಯನೊದವಿಪವು! ಅಚ್ಚರಚ್ಚರಿಯಲ್ತೆ?

ಯುಗದ ಹೋಳಿಯು ಆಗಿ ಬಿದ್ದಿರುವ ಬೂದಿಯಲಿ
ಜನಿಸಿ ನವಯುಗವು ನವಶಿಶುವಿನೋಪಾದಿಯಲಿ
ನಿತ್ಯನೂತ್ನತೆಯು ನಂದಾದೀಪವನೆ ಪಿಡಿದು
ಹಳತಿನಿಂದೊಗೆದು ಬಹ ಬೆಸನಬೇಸರ ಇಡಿದು
ಹರಿಯುವುದು ಸಂತತ ನವೋದಯದ ಪೂರ್ಣ್ಕೆಯಲಿ !
ಕಂಡುಂಡೆನಿದ ಮಣ್ಣೆ, ನಿನ್ನಮಲ ಕಾಣ್ಕೆಯಲಿ :

ಈಶ್ವರ ಸಣಕಲ್ಲ

ಕಾಶ್ಮೀರದ ಲಲ್ಲಯೋಗೀಶ್ವರಿಯ ಸೂಕ್ಷ್ಮಪರಿಚಯ

ಸೂಕ್ತಿಗಳು : ಪ್ರಾರಂಭದಶೆ (ಮೊದಲನೆಯ ಹಂತ)

೧ ಕಯಾ ದಿಶಾ ಕೇನ ಪಥಾಗತಾಹಂ
ಪಶ್ಚಾದ್‌ಗಮಿಷ್ಯಾಮಿ ಪಥಾಯ ಕೇನ |
ಇತ್ಥಂ ಗತಿಂ ವೇದ್ಮಿ ನಿಜಾಂ ನತಸ್ಮಾತ್
ಉಚ್ಛ್ವಾಸಮಾತ್ರೇಣ ಧೃತಿಂ ಭಜಾಮಿ || ೪೧ ||

ಯಾವ ದಿಕ್ಕಿನಿಂದ ಯಾವ ದಾರಿಯಿಂದ ನಾನು ಬಂದೆ, ಯಾವ ದಾರಿಯಿಂದ ಯಾವ ದಿಕ್ಕಿಗೆ ಹೋಗುತ್ತೇನೆ, ಹೀಗೆ ನನ್ನ ದಾರಿ ನನಗೆ ತಿಳಿಯದು. ಆದರೂ ತತ್ತ್ವವನ್ನು ತಿಳಿಯಬೇಕೆಂಬ ಆಸೆಯಿಂದ ಧೃತಿಗೆಡದೆ ಧೈರ್ಯ ತಂದುಕೊಳ್ಳುತ್ತಿದ್ದೇನೆ.

೨ ನಾಥ ನತ್ವಂ ನಚಾತ್ಮಾಪಿ ಜ್ಞಾತೋ ದೇಹಾಭಿಮಾನತಃ |
ಸ್ವಸ್ಯೈಕ್ಯಂ ಚತ್ವಯಾ ತೇನ ಕಾ ಆವಾಮಿತಿಸಂಶಯಃ || ೭ ||

ಪ್ರಭುವೆ, ನೀನೂ ನನಗೆ ತಿಳಿಯಲಿಲ್ಲ. ದೇಹಾಭಿಮಾನದಿಂದ ಜೀವಾತ್ಮ ಸ್ವರೂಪವೂ ನನಗೆ ತಿಳಿಯಲಿಲ್ಲ. ನೀನು ನಾನಾಗಿದ್ದೇನೆ. ನಾನು ನೀನಾಗಿದ್ದೀಯೆ, ನಾವಿಬ್ಬರೂ ಒಂದು ಎಂಬುದನ್ನೂ ತಿಳಿಯಲಿಲ್ಲ. ಆದುದರಿಂದ ನಾವಿಬ್ಬರೂ ಯಾರು ಎಂದು ಸಂಶಯವಾಗುತ್ತಲಿದೆ.

೩ ಶಿವೋವಾ ಕೇಶವೋವಾಪಿ ಜಿನೋವಾ ದೃಹಿಣೋಪಿವಾ |
ಸಂಸಾರರೋಗೇಣಾಕ್ರಾಂತಂ ಅಬಲಾಂ ಮಾಚಿಕಿತ್ಸತು || ೮ ||

ಶಿವನಾಗಲಿ ಕೇಶವನಾಗಲಿ, ಜಿನನಾಗಲಿ, ಬ್ರಹ್ಮನಾಗಲಿ ಸಂಸಾರರೋಗದಿಂದ ಆಕ್ರಮಿಸಲ್ಪಟ್ಟಿರುವ ಅಬಲಳಾದ ನನ್ನನ್ನು ರಕ್ಷಿಸಲಿ.

೪ ಗುರೋಮಮೈತಮುಪದೇಶಮೇಕಂ
ಕುರೂಷ್ವಬೋಧಾಪ್ತಿಕರಂ ದಯಾತಃ |
ಹಾಹೂ ಹೂಹೂ ಇಮೌಸ್ತಃ ಸಮಮಾಸ್ಯಜಾತಾ
ವುಷ್ಣೋಽಸ್ತಿ ಹಾಹೂ ಕಿಮಥ ಹೂಹೂ ಸುಶೀತಃ || ೫೬ ||

ಗುರುವೇ, ದಯೆಯಿಂದ ಜ್ಞಾನವಿಕಾಸವನ್ನುಂಟುಮಾಡುವ ಒಂದು ಉಪದೇಶವನ್ನು ನನಗೆ ಮಾಡು. ನನ್ನ ಬಾಯಿಯಲ್ಲಿಯೇ ಸಮವಾಗಿ ಹೊರಡುತ್ತಲಿರುವ ಪ್ರಾಣಾಪಾನಗಳಲ್ಲಿ ಒಂದು ಬಿಸಿಯಾಗಿದೆ ಒಂದು ತಣ್ಣಗಿದೆ—ಏನುಕಾರಣ ಹೇಳು—

೫ ಜರ್ರಾಗತಾ ಕ್ಷೀಣತರೋಽದ್ಯ ದೇಹೋ
ಜಾತೋಽವಸಯೋ ಗಮನಾಯಕಾರ್ಯಃ |
ಸಮಾಗತಾಃ ಸ್ಮೋಽಯತ ಏವ ತತ್ರ
ಗಂತವ್ಯಮೇವೇಹ ದೃಢಂ ನ ಕಿಂಚಿತ್ || ೧೯ ||

ಮುಪ್ಪು ಬಂತು. ಶರೀರ ಕೃಶವಾಗಿಹೋಯಿತು. ಹೊರಡಲಿಕ್ಕೆ ಸಿದ್ಧತೆ ಮಾಡಬೇಕು. ಎಲ್ಲಿಂದ ಬಂದಿದ್ದೆವೋ ಅಲ್ಲಿಗೇ ಹೋಗಲೇಬೇಕು. ಈ ಲೋಕದಲ್ಲಿ ಶಾಶ್ವತವಾದದ್ದು ಯಾವುದೂ ಇಲ್ಲ.

೬ ಲಲ್ಲಾಹಂ ನಿರ್ಗತಾ ದೂರಮನ್ವೇಷ್ಟುಂ ಶಂಕರಂ ವಿಭುಂ |
ಭ್ರಾಂತ್ವಾ ಲಬ್ಧೋಽಮಯಾ ಸ್ವಸ್ಮಿನ್ ದೇಹೇದೇವೋಗೃಹೇಸ್ಥಿತಃ || ೩ ||

ಲಲ್ಲಳಾದ ನಾನು ಒಡೆಯನಾದ ಶಂಕರನನ್ನು ಹುಡುಕಲಿಕ್ಕೆ ಬಹಳ ದೂರ ಹೊರಟುಬಂದೆನು. ಎಲ್ಲೆಲ್ಲೋ ತಿರುಗಿ ಕೊನೆಗೆ ತನ್ನ ಮನೆಯಾಗಿರುವ ಈ ಶರೀರದಲ್ಲಿಯೇ ಆ ದೇವನಿರುವುದನ್ನು ಕಂಡೆನು.

೭ ದ್ರಷ್ಟುಂ ವಿಭುಂ ತೀರ್ಥವರಾನ್ಗತಾಹಂ
ಶ್ರಾಂತಾ ಸ್ಥಿತಾ ತದ್ಗುಣ ಕೀರ್ತನೇಷು |
ಕತೋಽಪಿ ಖಿನ್ನಾಸ್ಮಿಚ ಮಾನಸೇನ
ಸ್ವಾಂತರ್ನಿವಿಷ್ಟಾಖಿಲು ತದ್ವಿಮರ್ಶೇ || ೪೮ ||

ವಿಭುವನ್ನು ನೋಡುವುದಕ್ಕೆ ತೀರ್ಥಕ್ಷೇತ್ರಗಳಿಗೆ ಹೋದೆನು. ಪರಮಾತ್ಮನ ಗುಣಗಳನ್ನು ಹೊಗಳುವುದರಲ್ಲಿ ಬಳಲಿದೆನು. ಆದರೂ ಪರಮಾತ್ಮನನ್ನು ಕಾಣಲಿಕ್ಕಾಗಲಿಲ್ಲವೆಂದು ಖಿನ್ನಳಾದೆನು. ಮನಸ್ಸಿನಲ್ಲಿ ಪರಮಾತ್ಮನ ಸ್ವರೂಪವಿಮರ್ಶೆ ಮಾಡುತ್ತಾ ನನ್ನಲ್ಲಿಯೇ ಇದ್ದಾನೆಂದು ಗುರುತಿಸಿದೆನು.

೮ ಸ್ನಾತಂ ಹಸಂತಂ ವಿವಿಧಂ ವಿಧೇಯಂ
ಕುರ್ವಂತಮೇತತ್ಪುರ ಏವ ಸಂತಮ್ |
ಪಶ್ಯಾತ್ಮದೇವಂ ನಿಜ ದೇಹ ಏವ
ಕೃತಂ ಪ್ರದೇಶಾಂತರ ಮಾರ್ಗಣೇನ || ೪೬ ||

ಸ್ನಾನಮಾಡುತ್ತಲಿದ್ದಾನೆ, ನಗುತ್ತಲಿದ್ದಾನೆ, ಮಾಡತಕ್ಕ ಬೇರೆ ಬೇರೆ ಕೆಲಸಗಳನ್ನು ಮಾಡುತ್ತಲಿದ್ದಾನೆ. ನಮ್ಮ ಎದುರಿನಲ್ಲೇ ಇದ್ದಾನೆ. ನಮ್ಮ ದೇಹದಲ್ಲಿಯೇ ಇರುವ ಪರಮಾತ್ಮನನ್ನು ಧ್ಯಾನಮಾಡು; ಕಾಣು. ಪರಮಾತ್ಮನು ಎಲ್ಲಿಯೋ ಇದ್ದಾನೆಂದು ಹುಡುಕಬೇಡ.

೯ ಉತ್ತಿಷ್ಠ ಶಾಕ್ತಿಕ ಸ್ತ್ರಿತ್ವಂ ಪೂಜಯೇಶಂ ಸುರಾದಿಭಿಃ
ಯದಿಜ್ಞಾತ ಮಕ್ಷರಂತತ್ವಯಾತೇನಾಪಿಕಾಕ್ಷತಿಃ ||೧೦||

ಶಕ್ತಿಯ ಆರಾಧಕನೇ ಏಳು, ಇತರ ದೇವತೆಗಳೊಡನೆ ಕೂಡಿದ ಪರಮಾತ್ಮ ನನ್ನು ತ್ರಿಕಾಲಗಳಲ್ಲಿ ಪೂಜಿಸು. ಒಂದು ವೇಳೆ ಆ ನಾಶರಹಿತವಾದ ಪರಮಾತ್ಮನ ಸ್ವರೂಪವು ತಿಳಿದರೆ ಅದರಿಂದ ಏನು ತೊಂದರೆ?

ಪೂಜೆ ಅಂತ ಅಂದರೆ ದೇವತೆಗೆ ಆಕಾರ ಪರಿವಾರ ಕೊಡಬೇಕು. ನಾಶರಹಿತ ವಾದ ಪ್ರಣವಸ್ವರೂಪಿಯಾದ ಪರಮಾತ್ಮನ ಸಾಕ್ಷಾತ್ಕಾರವಾಗಿದ್ದರೂ ಈ ಪೂಜಾ ವಿಧಾನಗಳಿಂದ ತೊಂದರೆಯಿಲ್ಲ—ನಿರಾಲಂಬನವಾಗಿ ಧ್ಯಾನದಿಂದ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಂಡಿದ್ದರೂ ಸಿದ್ಧಪುರುಷನಾದವನು ಸಾಲಂಬನವಾದ ಪೂಜೆಯನ್ನೂ ನಿತ್ಯ ನೈಮಿತ್ತಿಕ ಕರ್ಮಗಳನ್ನೂ ಲೋಕ ಮರ್ಯಾದಾ ಸಂರಕ್ಷಣಾರ್ಥವಾಗಿ ಆಚರಿಸ ಬೇಕೆನ್ನುವುದು ಸತ್ಸಂಪ್ರದಾಯ—

೧೦ ಯತ್ನೇನ ಮೋಕ್ಷೈಕಧಿಯಃ ಸದಾವಿಾ
ಸನ್ಯಾಸಿನಸ್ತೀರ್ಥವರಾನ್ಪ್ರಯಾಂತಿ |
ಚಿತ್ತೈಕ ಸಾಧ್ಯೋನಸಲಭ್ಯತೇ ತೈ
ದೂರ್ವಾಸ್ಥಲಂ ಭಾತ್ಯತಿ ನೀಲಮಾರಾತ್ ||೩೬||

ಮೋಕ್ಷವನ್ನು ಪಡೆಯಬೇಕೆಂಬ ಸನ್ಯಾಸಿಗಳು ಪ್ರಯತ್ನಪಟ್ಟು ತೀರ್ಥಕ್ಷೇತ್ರ ಗಳಿಗೆ ಹೋಗುತ್ತಾರೆ. ಆದರೂ ಮೋಕ್ಷವು ಮನಸ್ಸಿನಿಂದ ತನ್ನಲ್ಲಿಯೇ ಹೊಂದ ತಕ್ಕದ್ದಾಗಿದೆ. ದೂರದಿಂದ ನೋಡಿದರೆ ಗರಿಕೆ ಹುಲ್ಲು ನೀಲಬಣ್ಣದಿಂದಿರುವಹಾಗೆ ಕಾಣಿಸುತ್ತದೆ. ಆದರೆ ಅದು ಹಸುರಲ್ಲವೆ—

ಇಲ್ಲಿ ಗರಿಕೆ ಹುಲ್ಲನ್ನು ಪ್ರಾಪಂಚಿಕ ಸುಖಗಳು ಎಂಬರ್ಥದಲ್ಲಿ ಉಪಯೋಗಿಸಿದೆ. ಈ ಪ್ರಾಪಂಚಿಕ ಸುಖಗಳು ಆಕರ್ಷಣೀಯವಾಗಿ ಶಿವಜೀವೈಕ್ಯಜ್ಞಾನ ಮತ್ತು ಸಾಧನೆ ಇವುಗಳಿಂದ ದೂರವಾಗಿ ಮನಸ್ಸು ಹೋಗುವಂತೆ ಮಾಡುತ್ತವೆ. ಮೋಕ್ಷವು ಚಿತ್ತಿನಿಂದ ತನ್ನಲ್ಲಿಯೇ ಹೊಂದತಕ್ಕದ್ದಾಗಿರುತ್ತದೆ—

೧೧ ಅಭ್ಯಾಸೇನ ಲಯಂನೀತೆ ದೃಶ್ಯೇ ಶೂನ್ಯತ್ವಮಾಗತೇ |
ಸಾಕ್ಷಿರೂಪಂ ಶಿಷ್ಯತೇ ತಚ್ಚಾಂತೇ ಶೂನ್ಯೇಪ್ಯನಾಮಯಮ್ ||೧||

ನಮ್ಮ ಬುದ್ಧಿಗೆ ಗೋಚರಿಸುವ, ಕಣ್ಣಿಗೆ ಕಾಣಿಸುವ ಬೇರೆ ಬೇರೆಯಾಗಿರುವ ಈ ವಿಶ್ವದ ಎಲ್ಲಾ ಪದಾರ್ಥಗಳೂ ತತ್ತ್ವಾಭ್ಯಾಸದ ಅಥವಾ ಯೋಗಾಭ್ಯಾಸದ ಪರಿಪಾಕದಿಂದ ಪರಿವರ್ತಿಸಲ್ಪಟ್ಟು ಚಿದ್ರೂಪವನ್ನು ಅಥವಾ ಶೂನ್ಯತ್ವವನ್ನು ಪಡೆದರೂ

ಆಗ ಉಳಿಯುವುದು ಪರಮಾತ್ಮವೊಂದೇ—ಆ ಆತ್ಮವು ಆ ಪ್ರಶಾಂತವಾದ ನಿರ್ವಿಕಾರ ಸ್ಥಿತಿಯಲ್ಲಿಯೂ ಏನೂ ಉಬ್ಬರವಿಳಿತಗಳಿಲ್ಲದೆ ಈ ಭೇದ ಪ್ರಪಂಚದಲ್ಲಿ ಸಾಕ್ಷಿರೂಪವಾಗಿ ಆನಂದಮಯವಾಗಿರುತ್ತದೆ. ಇದೇ ನಿಜವಾದ ಉಪದೇಶವು—

ತನ್ನಷ್ಟಕ್ಕೆ ತಾನೇ ಪ್ರಕಾಶಿಸುವ ಪರಿಶುದ್ಧವಾದ ಮುಖ್ಯಶಕ್ತಿಯೇ ಸಾರವಾಗುಳ್ಳ ಸಂವಿತ್, ಚಿತ್, ಮೊದಲಾದ ಪದಗಳಿಂದ ಹೇಳಲ್ಪಡುವ ಆ ಚಿದ್ರೂಪವು ಪರಮಾರ್ಥವಾದದ್ದು—ಸತ್ಯವಾದದ್ದು. ಈ ಸಂವಿತ್ತು ತನಗಿಂತ ಬೇರೆಬೇರೆಯಾಗಿರುವ ಭಿನ್ನಭಿನ್ನವಾದ ಪದಾರ್ಥಗಳನ್ನು ಸಂಕೋಚಸ್ಥಿತಿಯಲ್ಲಿ ಪ್ರಮೇಯಭಾವದಿಂದ ಗ್ರಹಿಸುತ್ತಿರುತ್ತದೆ. ವಿಕಾಸಸ್ಥಿತಿಯಲ್ಲಿ ಈ ಪ್ರಮೇಯ ಭಾವವನ್ನು ಬಿಟ್ಟು ನಿರ್ಮಲವಾಗಿ ಮೇಘಗಳಿಲ್ಲದ ಆಕಾಶದ ಹಾಗೆ ಸ್ಫುರಿಸುತ್ತದೆ. ಇದನ್ನೇ ಚಿದ್ಗಗನ ಎಂದು ವ್ಯವಹರಿಸುವುದು. ಯೋಗಿಯು ಧ್ಯಾನಾವಸ್ಥೆಯಲ್ಲಿ ತನ್ನ ಸಂವಿದ್ರೂಪಕ್ಕಿಂತ ಬೇರೆ ಯಾವ ಪ್ರಮೇಯವೂ ಇಲ್ಲವೆಂದು ವಿಮರ್ಶಿಸುತ್ತಾನೆ. ಇದೇ ಸ್ವಸ್ವರೂಪವಿಮರ್ಶೆ. ಸಂವಿತ್ತಿನ ಶೂನ್ಯರೂಪ ಇಂತಹುದು. ಪ್ರಶಾಂತವಾಗಿಯೂ ಅಖಂಡವಾಗಿಯೂ ಇರುವ ಸಂವಿತ್ತಿನ ಈ ಸ್ಥಿತಿಗೆ ಶೂನ್ಯ ಶೂನ್ಯಾತಿಶೂನ್ಯ, ಮಹಾಶೂನ್ಯ ನಿರಾಕಾರ, ಚಿತ್ಸ್ವರೂಪ, ಪರಾದಶಾ ಎಂದು ಶಾಸ್ತ್ರವ್ಯವಹಾರವಿದೆ.

ಚಿತ್ತವೃತ್ತಿಗಳಿಂದ ಸಂಬಂಧಿಸದೆ ಭೇದಜ್ಞಾನಗಳಿಗೆ ಆಕರವಾಗದೆ ಕ್ಲೇಶರೂಪವಾದ ಸಂಸ್ಕಾರಗಳಿಲ್ಲದೆ ಇರುವ ಸ್ಥಿತಿಗೆ ಶೂನ್ಯ ಎಂದು ಹೆಸರು. ಇದು ಏನೂ ಇಲ್ಲದಿರುವ ಸ್ಥಿತಿಯಲ್ಲ.

ಲಯ—ಉಪ್ಪು ನೀರಿನಲ್ಲಿ ಕರಗಿಹೋಗುವ ಹಾಗೆ ಕರಗಿಹೋಗುವುದು—ಇಲ್ಲಿ ಚಿತ್ತಿನಲ್ಲಿ ಸೇರಿಹೋಗುವುದು.

> ೧೨ ವಾಙ್ಮಾನಸಂಚ ತನ್ಮಧ್ರೇ ಶಿವಶಕ್ತಿಕುಲಾಕುಲೀ
> ಯತ್ರಸರ್ವಮಿದಂ ಲೀನಮುಪದೇಶಂ ಪರಂತು ತತ್ || ೨ ||

ವಾಕ್ಕು ಮನಸ್ಸು ಇವುಗಳಿಂದ ತಿಳಿಯತಕ್ಕ ಗ್ರಾಹ್ಯಗ್ರಾಹಕ ಭಾವಾಪನ್ನವಾದ ಈ ವಿಶ್ವವೆಲ್ಲಾ ಯಾವುದರಲ್ಲಿ ಅಡಗಿದೆಯೋ ಅಂತಹ ಉಪದೇಶವೇ ಶ್ರೇಷ್ಠವಾದದ್ದು.

ವಾಕ್ಕು ಮನಸ್ಸುಗಳಿಂದ ತಿಳಿಯುವುದು ಭಿನ್ನಾಭಿನ್ನವಾಗಿರುವ ಈ ವಿಶ್ವ. ಇದು ಕುಲ. ಇದನ್ನು ದಾಟಿ ಆಚೆ ಇರುವುದು ಆಕುಲ. ಇದು ಅಭಿನ್ನವಾದದ್ದು. ಇವೆರಡೂ ಅಭೇದತ್ವವನ್ನು ಪಡೆದು ಏಕೀಭವಿಸುವಂತಹ ತತ್ತ್ವದ ಉಪದೇಶವೇ ಶ್ರೇಷ್ಠವಾದದ್ದು.

'ಶಿವ' ಅಭೇದತ್ವವನ್ನು ಸೂಚಿಸುತ್ತದೆ. 'ಶಕ್ತಿ' ಭೇದವನ್ನು ಸೂಚಿಸುತ್ತದೆ. ಈ ಶಿವಶಕ್ತಿಗಳ ಆಚೆ ಇರುವವನೇ ವಿಶ್ವಾತೀತನಾದ ಪರಮಶಿವ.

೧೩ ಚಿದಾನಂದೋ ಜ್ಞಾನರೂಪಃ ಪ್ರಕಾಶಾಖ್ಯೋ ನಿರಾಮಯಃ |
ಯೈರ್ಲಬ್ಧೋ ದೇಹವಂತೋಽಪಿ ಮುಕ್ತಾಸ್ತೇನ್ಯೇಽನ್ಯಥಾಸ್ಥಿತಾಃ || ೬ ||

ಚಿದಾನಂದನಾಗಿ ಜ್ಞಾನರೂಪಿಯಾಗಿ, ಸ್ವಯಂಪ್ರಕಾಶನಾಗಿ, ನಿರಾಮಯ ನಾಗಿರುವ ಪರಮಾತ್ಮನು ಯಾರಿಗೆ ಸಾಕ್ಷಾತ್ಕಾರವಾಗಿರುವನೋ ಅವನು ಶರೀರದಿಂದಿದ್ದರೂ ಮುಕ್ತನೆ. ಈ ಸಾಕ್ಷಾತ್ಕಾರವಿಲ್ಲದಿರುವವನು ಬೇರೆ ರೀತಿ ಯಾಗಿರುತ್ತಾನೆ. ಬದ್ಧನಾಗಿರುತ್ತಾನೆ.

೧೪ ದಾತುರ್ಮನಸ್ತೃಪ್ಯತಿ ನೈವರಾಜ್ಯಂ
ದತ್ವಾ ಗೃಹೀತುಶ್ಚ ತದ್ವೈವಲಬ್ಧ್ವಾ |
ಜೀವೋಽಪಿ ಲೋಭೇನ ನ ಮೃತ್ಯುಮೇತಿ
ಮೃತಸ್ಯನೈವಾಸ್ತಿ ನ ಜಾತು ಮೃತ್ಯುಃ || ೧೨ ||

ರಾಜ್ಯವನ್ನು ಕೊಟ್ಟರೂ ದಾನಮಾಡುವವನ ಮನಸ್ಸು ತೃಪ್ತಿಯನ್ನು ಪಡೆಯುವುದಿಲ್ಲ. ದಾನ ಪಡೆಯುವವನಿಗೂ ಕೂಡ—ಆ ರಾಜ್ಯವನ್ನು ಪಡೆದರೂ— ಮನಸ್ಸು ತೃಪ್ತಿಯಾಗುವುದಿಲ್ಲ. ಜೀವನೂ ಕೂಡ ಲೋಭದಿಂದ ಸಾಯುವುದಿಲ್ಲ; ಅಂದರೆ ಇವನು ಆಶೆಗಳಿಂದಿರುವ ವರೆಗೂ ಬಿಡುಗಡೆಯನ್ನು ಪಡೆಯುವುದಿಲ್ಲ. ಸತ್ತವ ನಿಗೆ ಪುನಃ ಮರಣವೆ? ಅಂದರೆ ಕಾಮಕ್ರೋಧಾದಿಗಳಿಂದ ಬಿಡುಗಡೆ ಪಡೆದವನಿಗೆ ಪುನಃ ಮರಣವಿಲ್ಲ.

ಇಲ್ಲಿ ಮೃತ್ಯುಶಬ್ದಕ್ಕೆ ಬಂಧನದಿಂದ ಬಿಡುಗಡೆಯೆಂದರ್ಥ—ಮರಣ ಅಂದರೆ ಬಿಡುಗಡೆ.

೧೫ ಶಿವೋಽಶ್ವಃ ಕೇಶವಸ್ತಸ್ಯಪರ್ಯಾಣಮಾತ್ಮಭೂಸ್ತಥಾ |
ಪಾದಯಂತ್ರಂ ತತ್ರಯೋಗ್ಯಃ ಸಾದೀಕ ಇತಿಮೇವದ || ೧೪ ||

ಶಿವನು ಕುದುರೆ, ಕೇಶವನು ಪರ್ಯಾಣ (ಜೀನು ಮೊದಲಾದ ಉಪಕರಣ ಸಾಧನ) ಬ್ರಹ್ಮನು ಲಾಳ (ಗಮನಕ್ಕೆ ಸಾಧನವಾಗಿರುವವನು) ಇಲ್ಲಿ ಯೋಗ್ಯನಾದ ಸಾರಥಿ ಯಾರು ಹೇಳು.

ಇದು ರೂಪಕ—ಶಿವನು ಪರತತ್ವ, ಕೇಶವನು ವಿಶ್ವರೂಪ, ಬ್ರಹ್ಮನು ಸೃಷ್ಟಿಕರ್ತ ಈ ವಿಶ್ವವನ್ನು ನಡೆಸತಕ್ಕವನು ಯಾರು?

೧೬ ಅನಾಹತಃ ಸ್ವಸ್ವರೂಪಃ ಶೂನ್ಯಸ್ಥೋ ವಿಗತಾಮಯಃ |
ಅನಾಮರೂಪವರ್ಣೋऽಜೋ ನಾದ ಬಿಂದ್ವಾತ್ಮಕೋऽಸ್ತಿ ಸಃ || ೧೫ ||

ಇದಕ್ಕೆ ಸವಾರ ಪರಮಶಿವನಲ್ಲದೆ ಬೇರೆ ಯಾರೂ ಅಲ್ಲ.

ಅನಾಹತಃ—ಯಾವುದರಿಂದಲೂ ಹೊಡೆಯಲ್ಪಡದೆ ಇರುವವನು.

ಸ್ವಸ್ವರೂಪಃ—ಸ್ವಯಂಪ್ರಕಾಶನು.

ಶೂನ್ಯಸ್ಥಃ—ಚಿದ್ರೂಪಿಯು.

ವಿಗತಾಮಯಃ—ನಿರ್ವಿಕಾರನು.

ಅನಾಮರೂಪವರ್ಣಃ—ನಾಮರೂಪಗಳಿಲ್ಲದವನು.

ಅಜಃ—ಜನ್ಮವಿಲ್ಲದವನು.

ನಾದಬಿಂದ್ವಾತ್ಮಕಃ—ನಾದ ಮತ್ತು ಬಿಂದು ಎಂಬ ಕಲೆಗಳಿಂದ ಕೂಡಿದವನು ಇವನೇ ಪರಮಶಿವನು.

ನಿರಾಕಾರವಾದ ಚಿತ್ತು ಸಾಕಾರವನ್ನು ಪಡೆಯುವಾಗ ಘೋಷ ಮತ್ತು ಆಕಾರವನ್ನು ಪಡೆಯುವಾಗ ನಾದ ಮತ್ತು ಬಿಂದು ಎಂಬ ಹೆಸರನ್ನು ಪಡೆಯುತ್ತದೆ.

೧೭ ಮಾಯಾಜಾಡ್ಯಂ ತಜ್ಜಡಂ ಬೋಧನೀರಂ
ಸಂಸೃತ್ಯಾಖ್ಯಂ ತದ್ಘನತ್ವಂ ಹಿಮಂ ಚ |
ಚಿತ್ಸೂರ್ಯೋऽಸ್ಮಿನ್ ಪ್ರೋದಿತೇ ತ್ರೀಣಿಸದ್ಯೋ
ಜಾಡ್ಯಾನ್ಮುಕ್ತಂ ನೀರಮಾದ್ಯಂ ಶಿವಾಖ್ಯಂ || ೧೬ ||

ಸ್ಥೂಲವಾದ ಈ ವಿಶ್ವವು ಜಡವಾದ ಮಾಯೆಯಿಂದ ರೂಪುಗೊಂಡಿದೆ. ಜ್ಞಾನವೆಂಬ ನೀರಿನಿಂದ ಕೂಡಿದೆ. ಆ ನೀರು ಹೆಪ್ಪುಕಟ್ಟಿಕೊಂಡು ಸಂಸಾರವೆಂಬ ಮಂಜುಗಡ್ಡೆಯಾಗಿದೆ. ಚಿತ್ತೆಂಬ ಸೂರ್ಯನು ಆ ಮಂಜುಗಡ್ಡೆಯ ಮೇಲೆ ಬೆಳಗಲಾಗಿ ಜಡವಾದ ವಿಶ್ವ, ಹೆಪ್ಪುಕಟ್ಟಿಕೊಂಡಿರುವ ಜ್ಞಾನ, ಸಂಸಾರದಿಂದ ಕೂಡಿರುವ ಜೀವಾತ್ಮ (ತ್ರೀಣಿ) ಇವು ಮೂರೂ ಅಜ್ಞಾನವೆಂಬ ಜಾಡ್ಯದಿಂದ ಬಿಡುಗಡೆಯನ್ನು ಪಡೆದು ಮೂಲರೂಪದಿಂದಿದ್ದ ಶಿವನೆಂಬ ನೀರಾಗುತ್ತವೆ.

ಮಾಯೆಯಿಂದ ಕೆಳಗಿರುವ ಮೂವತ್ತು ತತ್ತ್ವಗಳು ಜಡವಾದವುಗಳು. ಈ ಸ್ಥೂಲಪ್ರಪಂಚವೆಲ್ಲಾ ಜಡವಾದುದಾಗಿದೆ. ಈ ಜಡಪ್ರಪಂಚದ ಸಂಬಂಧದಿಂದ ತಿಳಿವಳಿಕೆಯೆಂಬ ನೀರೂ ಸ್ಥೂಲವಾಗಿ ಜಡತ್ವವನ್ನು ಪಡೆದಿದೆ. ಈ ಜಡಪ್ರಪಂಚವು ಸುಖದುಃಖಗಳಿಗೂ ಜನನಮರಣಗಳಿಗೂ ಆಶ್ರಯವಾಗಿರುವ ಸಂಸಾರವೆಂಬ ಮಂಜುಗಡ್ಡೆಯಾಗಿದೆ.

ನೀರು ಪಾಕವಿಶೇಷದಿಂದ ಗಟ್ಟಿಯಾಗಿ ಮಂಜುಗಡ್ಡೆಯಾಗಿದೆ. ಇದೇ ಮಂಜುಗಡ್ಡೆಯು ಸೂರ್ಯಕಿರಣಗಳ ಸಂಪರ್ಕದಿಂದ ಕರಗಿ, ಮರಳಿ ನೀರಾಗಿ, ಮೊದಲಿನ ರೂಪವನ್ನು ಪಡೆಯುವುದು ನಮ್ಮ ಅನುಭವದಲ್ಲಿದೆ. ಈ ದೃಷ್ಟಾಂತವನ್ನು ಈ ವಿಶ್ವದ ಪರಿವರ್ತನಗಳ ಏರಿಳಿತಗಳಿಗೆ ಅನ್ವಯಿಸಿದೆ.

ಹೆಪ್ಪುಕಟ್ಟಿಕೊಂಡಿರುವ ಜ್ಞಾನ—ವಿಮರ್ಶೆಯಿಲ್ಲದ ಜ್ಞಾನ.

೧೮ ಜ್ಞಾತ್ವಾ ಸರ್ವಂ ಮೂಢವತ್ತಿಷ್ಠ ಸ್ವಸ್ಥಂ
ಶ್ರುತ್ವಾ ಸರ್ವಂ ಶ್ರೋತ್ರಹೀನೇನ ಭಾವ್ಯಂ।
ದೃಷ್ಟ್ವಾ ಸರ್ವಂ ತೂರ್ಣಮಂಧತ್ವಮೇಹಿ
ತತ್ತ್ವಾಭ್ಯಾಸಃ ಕೀರ್ತಿತೋಽಯಂ ಬುಧೇಂದ್ರೈಃ ॥ ೨೦ ॥

ಎಲ್ಲವನ್ನೂ ತಿಳಿದುಕೊಂಡು ಶಾಂತನಾಗಿ ಮೂಢನಹಾಗಿರು. ಎಲ್ಲವನ್ನೂ ಕೇಳಿ ಕಿವುಡನಂತಿರು.

ಎಲ್ಲವನ್ನೂ ನೋಡಿ ಒಡನೆಯೇ ಕುರುಡನ ಹಾಗಿರು.

ತಿಳಿದವರು ಈ ರೀತಿಯಾದ ಸ್ಥಿತಿಯನ್ನು ತತ್ತ್ವಾಭ್ಯಾಸದಿಂದ ಪಡೆಯಬೇಕೆಂದು ಹೇಳಿರುತ್ತಾರೆ.

ಇದನ್ನೇ ಪ್ರತ್ಯಾಹಾರವೆಂದು ಹೇಳುವುದು—

೧೯ ಪ್ರಸೂದರಂ ಕ್ಲೇಶಯುತಂ ವಿನೀಯ
ಜಾತೋ ಮಲಾಕ್ತೋಽಪ್ಯನುಯಾತಿ ಸಂತತಮ್।
ಯತ್ಪ್ರೇರಿತಃ ಸೌಖ್ಯಧಿಯಾ ನರಃ ಸ್ತ್ರೀಂ
ಕಷ್ಟೇನಲಭ್ಯಂ ಶೃಣು ತಂ ಗುರೋಃ ಶಿವಮ್ ॥ ೫೧ ॥

ಜೀವನು ಅನೇಕ ಕಷ್ಟಗಳಿಂದ ಕೂಡಿರುವ ತಾಯಿಯ ಹೊಟ್ಟೆಯನ್ನು ಹೊಕ್ಕು ಅನೇಕ ಮಲಗಳಿಂದ ಕೂಡಿದ ಶರೀರದೊಡನೆ ಹುಟ್ಟಿದನು. ಅನಂತರ ಅದೇ ಮಲಿನವಾದ ಶರೀರದಿಂದಲೇ ಬೆಳೆಯುತ್ತಾನೆ. ಆ ಶಾರೀರಿಕವಾದ ಭಾವನೆಗಳಿಂದ ಪ್ರೇರಿತನಾಗಿ ಮರಳಿ ಸುಖವುಂಟಾಗುತ್ತದೆಂಬ ಬುದ್ಧಿಯಿಂದ ಹೆಂಗಸನ್ನು ಪಡೆಯುತ್ತಾನೆ. ಇಂತಹವನು ಆತ್ಮಸ್ವರೂಪವನ್ನು ತಿಳಿಯುವುದು ಕಷ್ಟ—ಜಿಜ್ಞಾಸುವೇ ಈ ವಿಷಯವನ್ನು ತಿಳಿ.

೨೦ ಸ್ಥಲೇ ಸ್ಥಲೇ ಸ್ವೈಃ ಕಿರಣೈರ್ಯಥಾ ರವಿಃ
ಪತತ್ಯಭೇದೇನ ಗೃಹೇಷುವಾಭ್ರಿಯಂ।
ಜಲಂ ಯಥಾ ಸರ್ವಜಗದ್ಗೃಹೇಷು
ಕಷ್ಟೇನಲಭ್ಯಂ ಶೃಣು ತಂ ಗುರೋಃ ಶಿವಂ ॥ ೫೨ ॥

ಯಾವ ರೀತಿಯಲ್ಲಿ ಸೂರ್ಯನು ಭೇದವಿಲ್ಲದೆ ಎಲ್ಲಾ ಸ್ಥಳಗಳಲ್ಲಿಯೂ ಎಲ್ಲಾ ಮನೆಗಳಲ್ಲಿಯೂ ಕಿರಣಗಳಿಂದ ಪ್ರವೇಶಿಸುವನೋ ಅಥವಾ ಮೇಘವು ಅದೇ ರೀತಿಯಾಗಿ ಈ ಪ್ರಪಂಚದಲ್ಲಿ ನೀರನ್ನು ಸುರಿಸುತ್ತದೆಯೋ ಹಾಗೆಯೇ ಪರತತ್ತ್ವವು ಸರ್ವತ್ರ ಪಕ್ಷಪಾತವಿಲ್ಲದೆ ಇದೆ—ಎಲ್ಲಕ್ಕೂ ಆಶ್ರಯವಾಗಿದೆ ಜಿಜ್ಞಾಸುವೇ ತಿಳಿ.

೨೧ ಮಾತೃಸ್ವರೂಪೇಣ ಪಯಃಪ್ರದಾನು
ಭಾರ್ಯಾಸ್ವರೂಪೇಣ ವಿಲಾಸಕಾರಿಣೀ]
ಯಚ್ಛಕ್ತಿರಂತೇ ಮೃತರೂಪಮೇತೀ ಚ
ಕಷ್ಟೇನಲಭ್ಯಂ ಶೃಣು ತಂ ಗುರೋಃ ಶಿವಮ್ || ೨೪ ||

ಆ ಪರಮಾತ್ಮನ ಶಕ್ತಿಯು ತಾಯಿಯ ರೂಪದಿಂದ ಹಾಲುಕೊಡುವುದರ ಮೂಲಕ ಪೋಷಣೆಮಾಡುತ್ತದೆ ; ಹೆಂಡತಿಯ ರೂಪದಿಂದ ವಿಲಾಸವನ್ನುಂಟುಮಾಡುತ್ತದೆ. ಅದು ಕೊನೆಗೆ ಮೃತ್ಯುರೂಪವನ್ನು ತಾಳುತ್ತದೆ. ಹೀಗೆ ಪೋಷಣೆ, ವಿಲಾಸ, ಮರಣ ಇವು ಮೂರಕ್ಕೂ ಕಾರಣವಾಗಿರುವ (ಪರಸ್ಪರ ವಿರುದ್ಧವಾಗಿ ತೋರುವ) ಅನಂತಶಕ್ತಿಗಳನ್ನೊಳಗೊಂಡಿರುವ ಪರಮಾತ್ಮನನ್ನು ತಿಳಿಯುವುದು ಕಷ್ಟ.

ಅಭ್ಯಾಸ (ಮೂರನೆಯ ಹಂತ)

೨೨ ಶೀಲಸ್ಯ ಮಾನಸ್ಯ ಚ ರಕ್ಷಣಂ ಭಟೈ
ಸ್ತೈರೇವ ಶಕ್ಯಂ ನಿಪುಣಂ ವಿಧಾತುಂ |
ವಾಯುಂ ಕರೇಣಾಥ ಗಜಂಚ ತಂತುನಾ
ಯೈಃ ಶಕ್ಯತೇ ಸ್ತಂಭಯಿತುಂ ಸುಧೀರೈಃ || ೨೪ ||

ಗಾಳಿಯನ್ನು ಕೈಯಿಂದಲೂ ಆನೆಯನ್ನು ದಾರದಿಂದಲೂ ನಿಲ್ಲಿಸುವುದಕ್ಕೆ ಯಾರಿಗೆ ಸಾಧ್ಯವೋ ಅಂತಹ ಭಟರು ಶೀಲವನ್ನೂ ಮಾನವನ್ನೂ ಚೆನ್ನಾಗಿ ರಕ್ಷಿಸಬಲ್ಲರು.

ಶೀಲಂ ಸ್ವಭಾವೇಸದ್ವೃತೌ—ಸದಾಚಾರದಲ್ಲಿಯೂ
ಸ್ವಭಾವದಲ್ಲಿಯೂ
ಶೀಲಶಬ್ದವನ್ನು ಉಪಯೋಗಿಸುವರು.

೨೩ ಕ್ರುದ್ಧಂ ಮನೋವಹ್ನಿ ಸಮಾನರೂಪಂ
ತಿರಸ್ಕೃತಂ ಭಾರನತಂ ವಿಭಾತಿ |
ವಿಚಾರ ತಃ ಸರ್ವವಿಕಾರ ಹೀನಂ
ವಿಶುದ್ಧ ಬೋಧೈಕ ಸ್ವರೂಪ ಮೇವ || ೨೩ ||

ಮಾನವನಿಗೆ ಮನಸ್ಸು ಎಲ್ಲಾ ವ್ಯವಹಾರಗಳಿಗೂ ಕಾರಣವಾಗಿರುವ ಸಾಧನ. ಕೋಪಗೊಂಡ ಮನಸ್ಸು ಬೆಂಕಿಯ ಹಾಗೆ ಉರಿದು ಮಾನವನ ಅಶಾಂತಿಗೂ ದುಃಖಕ್ಕೂ ಕಾರಣವಾಗುತ್ತದೆ. ಅವಮಾನಿಸಲ್ಪಟ್ಟರೆ ಭಾರದಿಂದ ಬಗ್ಗಿದಂತೆ ವ್ಯಸನವನ್ನನುಭವಿಸುತ್ತದೆ. ತತ್ತ್ವತಃ ವಿಚಾರಮಾಡಿದರೆ ಈ ಮನಸ್ಸು ಯಾವ ವಿಕಾರವೂ ಇಲ್ಲದ ಶುದ್ಧವಾದ ಜ್ಞಾನರೂಪವೇ ಆಗಿರುತ್ತದೆ.

೨೪ ಚಿತ್ತಾಭಿದಃ ಸರ್ವಗತಿಸ್ತುರಂಗಃ
ಕ್ಷಣಾಂತರೇ ಯೋಜನಲಕ್ಷಗಾಮಿ
ಧಾರ್ಯೋ ಬುಧೇಂದ್ರೇಣ ವಿವೇಕವಲ್ಗಾ
ನೋದೇನ ವಾಯುದ್ವಯಪಕ್ಷರೋಧಾತ್ || ೨೬ ||

ಮನಸ್ಸೆಂಬ ಎಲ್ಲಾ ಕಡೆಗೂ ಓಡುವ ಕುದುರೆಯು ಕ್ಷಣಮಾತ್ರದಲ್ಲಿಯೇ ಲಕ್ಷಾಂತರ ಯೋಜನ ದೂರ ಹೋಗುವುದಾಗಿದೆ. ವಿವೇಕವೆಂಬ ಕಡಿವಾಣದಿಂದ ಜ್ಞಾನಿಗಳಾದವರು ಪ್ರಾಣಾಪಾನವಾಯುಗಳನ್ನು ನಿಲ್ಲಿಸುವುದರ ಮೂಲಕ ಮನಸ್ಸನ್ನು ಹಿಡಿದು ನಿಲ್ಲಿಸಬೇಕು.

ವಲ್ಗಾ=ಕಡಿವಾಣ.

೨೫ ಖಾದನಾದ್ ಭೂಷಣಾದ್ವಾಪಿ ಮನೋಯಸ್ಯಗತಭ್ರಮಮ್ |
ಸಮುಕ್ತೋ ನೋತ್ತಮಾರ್ಣಾದ್ಯೋ ಗೃಹ್ಣಾತ್ಯರ್ಥಂಹಿಸೋಽನೃಣಃ || ೨೭ ||

ಏನು ತಿಂದರೂ ಏನು ಭೂಷಣಗಳನ್ನಿಟ್ಟುಕೊಂಡರೂ ಯಾರ ಮನಸ್ಸು ಹಿಗ್ಗುವುದಿಲ್ಲವೋ ಅವನು ಮುಕ್ತ; ಅಂದರೆ ಬಿಡುಗಡೆಯನ್ನು ಪಡೆದವನು. ಸಾಲಕೊಡುವವನಿಂದ ಸಾಲ ತಕ್ಕೊಳ್ಳದೆ ಇರುವವನು; ಸಾಲವಿಲ್ಲದವನು.

ಪ್ರಕೃತಿ ಸಾಲ ಕೊಡುತ್ತದೆ. ಆಸೆ ಅದನ್ನು ತೆಗೆದುಕೊಳ್ಳುತ್ತದೆ. ಈ ಪ್ರಪಂಚವೆಲ್ಲಾ ಪ್ರಕೃತಿವಿಲಾಸ. ಮಾನವನ ಸುಖದುಃಖಗಳು ಪ್ರಕೃತಿಯನ್ನಾಶ್ರಯಿಸಿವೆ. ಪ್ರಕೃತಿಯ ಸೃಷ್ಟಿಯೆಲ್ಲಾ ಇವನ ಉಪಯೋಗಕ್ಕಾಗಿಯೇ ಇರುವುದರಿಂದ ಇವನು ಇದನ್ನು ಕುರಿತು ಆಸೆಪಡಬೇಕಾದ್ದಿಲ್ಲ. ಇವನ ಸಂಸ್ಕಾರಗಳಿಂದಲೂ ಪರಿಸ್ಥಿತಿಗಳಿಂದಲೂ ಒದಗಿದಷ್ಟು ಅನುಭವಿಸಬೇಕು. ಅದೇ ಶಾಂತಿಗೆ ಮಾರ್ಗ.

ಪ್ರಕೃತಿಯನ್ನು ನಾವು ಅನುಭವಿಸುತ್ತಾ ಇದ್ದೇವೆ. ಅದರಿಂದ ಸಂತಾಪ ಸಂತೋಷಗಳನ್ನು ಪಡೆದರೆ ನಾವು ಬುದ್ಧಿಪೂರ್ವಕವಾಗಿ ಅದನ್ನು ಅಪೇಕ್ಷಿಸಿದಂತಾಗುತ್ತದೆ. ಹಿಗ್ಗದೆ ಕುಗ್ಗದೆ ಉದಾಸೀನವಾಗಿದ್ದರೆ ನಾವು ಬಿಡುಗಡೆಯನ್ನು ಪಡೆದವರಂತಿರುತ್ತೇವೆ—

೨೯ ಶೀತಾರ್ಥಂ ವಸನಂ ಗ್ರಾಹ್ಯಂ ಕ್ಷುಧಾರ್ಥಂ ಭೋಜನಂ ತಥಾ |
ಮನೋವಿವೇಕಿತಾಂ ನೇಯಮಲಂ ಭೋಗಾನುಚಿಂತನೈಃ || ೨೮ ||

ಚಳಿಯನ್ನು ಹೋಲಾಡಿಸುವುದಕ್ಕೆ ಎಷ್ಟು ಬೇಕೋ ಅಷ್ಟು ಬಟ್ಟೆಯನ್ನು ಹೊದೆಯಬೇಕು. ಹಸಿವನ್ನು ಹೋಗಲಾಡಿಸುವುದಕ್ಕೆ ಎಷ್ಟು ಬೇಕೋ ಅಷ್ಟು ಆಹಾರವನ್ನು ತೆಗೆದುಕೊಳ್ಳಬೇಕು. ಮನಸ್ಸನ್ನು ವಿವೇಕದೊಡನೆ ಜೀವಾತ್ಮ ಪರಮಾತ್ಮ ವಿಚಾರಗಳಲ್ಲಿ ನಿಯೋಜಿಸಬೇಕು. ನಿನ್ನ ಶರೀರವು ಭೋಗಾದಿ ಸುಖಗಳಿಗೋಸ್ಕರವೇ ಇದೆಯೆಂದು ವಿಭ್ರಮಗೊಳ್ಳಬೇಡ.

೨೭ ಲೋಭಂ ತ್ಯಕ್ತ್ವಾ ವೈಮನಸ್ಯಂ ಚ ತದ್ವತ್
ಕಾರ್ಯೋ ನಿತ್ಯಂ ಸ್ವಸ್ವಭಾವಾವಮರ್ಶಃ |
ಶೂನ್ಯಾಚ್ಛೂನ್ಯಂ ನೈವಭಿನ್ನಂ ಯಥೈವಂ
ತಸ್ಮಾತ್ತ್ವಂ ತದ್ಭೇದ ಬುದ್ಧಿರ್ವ್ಯಥೈವ || ೩೦ ||

ಲೋಭವನ್ನೂ ಶತ್ರುತ್ವವನ್ನೂ ಬಿಟ್ಟು ಹಾಗೆಯೇ ಸ್ವಸ್ವರೂಪಾನುಸಂಧಾನ ವನ್ನು ಯಾವಾಗಲೂ ಮಾಡು. ಮಹಾಶೂನ್ಯರೂಪವಾಗಿರುವ ಚಿತ್ತು ಯಾವ ರೀತಿ ಯಾಗಿ ಅಭಿನ್ನವಾಗಿದೆಯೋ ಅದರಂತೆ ನೀನು ಭೇದಬುದ್ಧಿಯನ್ನು ಬಿಟ್ಟು ಅಭಿನ್ನವಾದ ಚಿತ್ತಿನೊಡನೆ ಏಕೀಭವಿಸು—

ಈ ಸಂದರ್ಭದಲ್ಲಿ ೯, ೧೧, ೩೦, ೬೯ ಶ್ಲೋಕಗಳನ್ನು ಗಮನಿಸಬಹುದು—

ಲಲ್ಲಾದೇವಿಯು 'ಶೂನ್ಯ'ಪದವನ್ನು ಅನೇಕಾವರ್ತಿ ಅಲ್ಲಲ್ಲಿ ಉಪಯೋಗಿ ಸಿದ್ದಾಳೆ—ಶೂನ್ಯಪದದ ಅರ್ಥ ಹೀಗಿದೆ:

ನಮ್ಮ ಶರೀರದಲ್ಲಿ ಸೂರ್ಯನು ನಾಭಿಪ್ರದೇಶದಲ್ಲಿದ್ದು ಶಾಖದಿಂದ ಜೀರ್ಣಾದಿ ಕಾರ್ಯಗಳನ್ನೂ ಚಂದ್ರನು ಶಿರಃಪ್ರದೇಶದಲ್ಲಿದ್ದು ತಂಪಿನಿಂದ ಶರೀರಕ್ಕನುಕೂಲ ವಾದ ಅಮೃತವನ್ನು ಸುರಿಸುತ್ತಾನೆಂಬುದು ಯೋಗಸಂಪ್ರದಾಯದವರ ವಿವರಣೆ. ಜೀವಾತ್ಮನು ಯೋಗಾಭ್ಯಾಸದಿಂದ ಅಂದರೆ ಚಕ್ರಗಳಲ್ಲಿ ಮನಸ್ಸನ್ನು ನಿಲ್ಲಿಸಿ ಧ್ಯಾನ ಮಾಡುವುದರ ಮೂಲಕ ಚಿತ್ತವೊಂದೇ ಇರುವುದೆಂದು ತಿಳಿದು ಕೊನೆಗೆ ತೀವ್ರವಾದ ಯೋಗಾಭ್ಯಾಸದ ಫಲವಾಗಿ ಜೀವಾತ್ಮ ಪರಮಾತ್ಮರ ಐಕ್ಯದಲ್ಲಿದ್ದು ಚಿತ್ಪ್ರಕಾಶ ವನ್ನು ಹೊಂದುವನು. ಇಲ್ಲಿ ಪರಮಾವಸ್ಥೆಯ ಮುಂಚಿನ ಸ್ಥಿತಿಯನ್ನು ಶೂನ್ಯಾವಸ್ಥೆ ಯೆಂದು ಕರೆಯುತ್ತಾರೆ. ಇದು ಮನಸ್ಸು ನಷ್ಟವಾದ ಮೇಲೆ ಉಂಟಾಗುವ ಪರಿಸ್ಥಿತಿ. ಆಸೆಯನ್ನು ನಿರ್ಮೂಲಮಾಡಿ ಹತ್ತು ನಾಡಿಗಳಲ್ಲಿ ಪ್ರವಹಿಸುವ ಪ್ರಾಣವಾಯುವನ್ನು ನಿರೋಧಿಸಿ ಇಂದ್ರಿಯನಿಗ್ರಹದಿಂದ ಮನಸ್ಸನ್ನು ಗೆದ್ದು ಸಹಸ್ರಾರದಲ್ಲಿರುವ ಚಂದ್ರ

ನಿಂದ ಅಮೃತವನ್ನು ಸುರಿಸುವುದರ ಮೂಲಕ ಶೂನ್ಯಸ್ಥಿತಿಯನ್ನು ಪಡೆಯುವು ದೆಂಬುದನ್ನು ಈ ಲಲ್ಲಾದೇವಿಯ ವಾಕ್ಯಗಳಲ್ಲಿ ಕಂಡುಬರುವ ಶೂನ್ಯವೆಂದೆನ್ನಬಹುದು.

೨೮ ಯಃ ಪೂರಕೇಣ ಚಿತ್ತಂ ಸ್ವಂ ರೋಧಯೇತ್ ಕ್ಷುತ್ತೃಡಾದಿಕಮ್ |
ನ ಪೀಡಯತಿ ಸಂಸಾರೇ ಸಫಲಂ ಚಾಸ್ಯಜೀವಿತಮ್ || ೩೭ ||

ಯಾವನು ಪ್ರಾಣಾಯಾಮ ಕ್ರಮದಿಂದ ತನ್ನ ಮನಸ್ಸನ್ನು ನಿಲ್ಲಿಸುವನೋ ಈ ಯಾವ ಅಭ್ಯಾಸ ಪರಿಪಾಕದಿಂದ ಯಾವ ಸಾಧಕನಿಗೆ ಹಸಿವು ಮತ್ತು ಬಾಯಾರಿಕೆಗಳು ತೊಂದರೆಯನ್ನುಂಟುಮಾಡಲಾರವೋ ಅಂಥವನಿಗೆ ಸಂಸಾರದ ಉಬ್ಬರವಿಳಿತಗಳಿಂದ ತೊಂದರೆಯಾಗುವುದಿಲ್ಲ. ಅವನ ಜೀವಿತವು ಸಫಲವಾಗುತ್ತದೆ.

ಪ್ರಾಣಾಯಾಮದಿಂದ ಮನಸ್ಸಿನ ಉದ್ವೇಗಗಳು ನಿಲ್ಲುತ್ತವೆ.

೨೯ ಯೋದ್ವಾದಶಾಂತೇ ಸ್ವಯಮೇವ ಕಲ್ಪಿತೇ
ಸದೋದಿತೇ ದೇವಗೃಹೇ ಸ್ವಯಂ ಸ್ಥಿತಃ |
ಸಂಪ್ರೇರಯನ್ ಪ್ರಾಣರವಿಂ ಸಶಂಕರೋ
ಯಸ್ಮಾತ್ಮಭೂತಃ ಸಕಮರ್ಚಯೇದ್ ಬುಧಃ || ೩೫ ||

ಯಾರು ತಾನೇ ನಿರ್ಮಿಸಿರುವ ಯಾವಾಗಲೂ ಪ್ರಕಾಶಮಾನವಾಗಿರುವ ಬ್ರಹ್ಮ ರಂಧ್ರವೆಂಬ ದೇವಮಂದಿರದಲ್ಲಿ ಬೆಳಗುತ್ತಾ ಪ್ರಾಣಶಕ್ತಿಯನ್ನು ಪ್ರೇರೇಪಿಸುತ್ತಲಿದ್ದಾನೋ ಆ ಶಂಕರನು ಯಾರಿಗೆ ಅಂತರ್ಯಾಮಿ ಅಥವಾ ಆತ್ಮಭೂತನಾಗಿದ್ದಾನೋ ಆ ಜ್ಞಾನಿಯು ಯಾರನ್ನು ಪೂಜೆಮಾಡಿಯಾನು!

ಪರಮಾತ್ಮನು ಧ್ಯಾನಕ್ಕೂ ಅನುಸಂಧಾನಕ್ಕೂ ಅನುಕೂಲವಾಗಿರುವುದಕ್ಕಾಗಿ ತಲೆಯಲ್ಲಿದ್ದಾನೆಂದು ಯೋಗಿಗಳು ಹೇಳುತ್ತಾರೆ. ಹೃದಯದಲ್ಲಿದ್ದಾನೆಂದು ಉಪನಿಷತ್ತುಗಳು ಹೇಳುತ್ತವೆ. ಹೃದಯದಲ್ಲಿ ಆತ್ಮ, ತಲೆಯಲ್ಲಿ ಮನಸ್ಸು, ಇದೆಯೆಂದು ಆಯುರ್ವೇದದವರು ಅಭಿಪ್ರಾಯಪಡುತ್ತಾರೆ. ಪರಮಾತ್ಮನು ಸರ್ವಾಂತರ್ಯಾಮಿ ಎಂದು ಅಧ್ಯಾತ್ಮಶಾಸ್ತ್ರಜ್ಞರ ಸಾಮಾನ್ಯ ನಿರ್ಣಯ. ಹಾಲಿನಲ್ಲಿ ಬೆಣ್ಣೆ ಇರುವ ಹಾಗೆ ಎಂದೂ ಮನೆಯಲ್ಲಿ ದೀಪದ ಕಾಂತಿ ತುಂಬಿರುವಂತೆ ಪ್ರಕಾಶಮಯನೆಂದೂ ಎಳ್ಳಿನಲ್ಲಿ ಎಣ್ಣೆ ಇರುವಂತೆ ಶರೀರದಲ್ಲಿ ಆತ್ಮನಿದ್ದಾನೆಂದೂ ಪುರಾಣಗಳು ಹೇಳುತ್ತವೆ. ಶಾಸ್ತ್ರಗಳಲ್ಲಿ ಕೊಟ್ಟಿರುವ ಉಪಮಾನಗಳು ಮತ್ತು ದೃಷ್ಟಾಂತಗಳು ಇವುಗಳನ್ನೂ ಯೋಗದವರ ಮತ್ತು ತಾಂತ್ರಿಕರ ಅಭಿಪ್ರಾಯಗಳನ್ನೂ ಮನಸ್ಸಿನಲ್ಲಿಟ್ಟುಕೊಂಡರೆ ಶಂಕರನು ತಲೆಯಲ್ಲಿದ್ದು ಪ್ರಾಣಶಕ್ತಿಯನ್ನು ಪ್ರೇರೇಪಿಸುವುದರ ಮೂಲಕ ಎಲ್ಲಾ ವ್ಯವಹಾರಗಳನ್ನೂ ನಡೆಸುತ್ತಿದ್ದಾನೆಂದು ಹೇಳಬಹುದು. ಈ ವಿಷಯಗಳನ್ನು

ಸ್ಫುಟವಾಗಿ ತಿಳಿದು ವಿಶದವಾಗಿ ಸಾಕ್ಷಾತ್ಕರಿಸಿದರೆ ಅವನಿಗೆ ತಾನೇ ಶಿವನು ಎಂಬ ಭಾವನೆಯುಂಟಾಗುತ್ತದೆ. ಈ ಸ್ಥಿತಿಯನ್ನು ಮುಟ್ಟಿದ ಸಾಧಕನು ಪೂಜ್ಯ ಪೂಜಕ ಮಟ್ಟವನ್ನು ಮೀರಿರುವುದರಿಂದ ಯಾರನ್ನು ಪೂಜೆಮಾಡಿಯಾನು?

ಸದೋದಿತೆ—ಹೃದಯದಿಂದ ಹೊರಟ ಅನಾಹತ ಶಬ್ದವಾದ ಓಂ ಎಂಬ ಮಂತ್ರದ ಮೂಲಕ ಶಿವನ ಆವಾಸಸ್ಥಾನವಾದ ಬ್ರಹ್ಮರಂಧ್ರವನ್ನು ಸೇರಬಹುದು.

೩೦ ಕಃ ಪೌಷ್ಪಿಕಃ ಕಾಪಿ ಚ ತಸ್ಯ ಪತ್ನೀ
ಪುಷ್ಪೈಶ್ಚ ಕೈರ್ದೇವವರಸ್ಯಪೂಜಾ |
ಕಾರ್ಯಾತಥಾಕಿಂ ಗಡುಕಂ ವಿಧೇಯಂ
ಮಂತ್ರಶ್ಚ ಕಸ್ತತ್ರವದ ಪ್ರಯೋಜ್ಯಃ || ೩೯ ||

ಹೂವುಗಳನ್ನು ತರುವವನಾರು. ಅವನ ಹೆಂಡತಿ ಯಾರು. ಯಾವ ಹೂಗಳಿಂದ ಯಾವ ದೇವರ ಪೂಜೆಮಾಡಬೇಕು. ಏನು ನೈವೇದ್ಯಕ್ಕಿಡಬೇಕು. ಯಾವ ಮಂತ್ರವನ್ನು ಹೇಳಬೇಕು. ಇವೆಲ್ಲವೂ ಅಭೇದಭಾವನೆಯುಳ್ಳವರಿಗೆ ಆಶ್ಚರ್ಯವನ್ನುಂಟುಮಾಡುವುದಿಲ್ಲವೆ?

೩೧ ಇಚ್ಛಾ ಮನೋಭ್ಯಾಂ ನನು ಪೌಷ್ಪಿಕಾಭ್ಯಾ
ಮಾದಾಯಪುಷ್ಪಂ ದೃಢ ಭಾವನಾಖ್ಯಂ |
ಸ್ವಾನಂದ ಪೂರ್ಯೈರ್ಗಡು ಕಂಚದತ್ವಾ
ಮೌನಾಖ್ಯ ಮಂತ್ರೇಣ ಸಮರ್ಚಯೇಶಮ್ || ೪೦ ||

ಮನಸ್ಸೆಂಬ ಗಂಡಸು ಇಚ್ಛೆಯೆಂಬ ಹೆಂಗಸು ಹೂವಿನ ಗೊಂಚಲುಗಳನ್ನು ತೆಗೆದುಕೊಂಡು ದೃಢಭಾವನೆಯಿಂದ ಪೂಜಿಸುತ್ತಾರೆ. ಸ್ವರೂಪಾನಂದ ಅಥವಾ ಚಿದಾನಂದವೆಂಬ ನೈವೇದ್ಯವನ್ನು ಅರ್ಪಿಸುತ್ತಾರೆ. ಹಾಗೆಯೇ ಮೌನವೆಂಬ ಮಂತ್ರದಿಂದ ಧ್ಯಾನಿಸುತ್ತಾರೆ. ಈ ರೀತಿಯಾಗಿ ಶಿವನನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾರೆ.

ಮೌನಮಂತ್ರವನ್ನು ಅಜಪಮಂತ್ರವೆಂತಲೂ ಕರೆಯುತ್ತಾರೆ. ಉಚ್ಚರಿಸುವುದಕ್ಕೆ ಭಾಷೆಯಿಲ್ಲದ್ದು ಮೌನಮಂತ್ರ. ಮೌನಮಂತ್ರವನ್ನು ಉಚ್ಛ್ವಾಸ ನಿಶ್ವಾಸಗಳಿಂದಲೇ ಸಾಧಿಸುವುದು. ಇದನ್ನು ಹಂಸವೆಂದೂ ಹೇಳುತ್ತಾರೆ. 'ಸೋಹಂ' ಎನ್ನುವುದೇ ತಿರುಗ ಮುರುಗಾಗಿ 'ಹಂಸ'ವಾಗಿದೆ. ಜೀವಾತ್ಮನಿಂದ ಬೇರೆಯಲ್ಲದಿರುವ ಸಹಸ್ರಾರದಲ್ಲಿರುವ ಪರಮಶಿವನಿಗೆ 'ಹಂಸ' ಎಂದು ಸಂಬೋಧಿಸುತ್ತಾರೆ. ಈ ಪದವನ್ನು 'ಪರಮಹಂಸ' ಎನ್ನುವ ಅರ್ಥದಲ್ಲಿಯೂ ಪ್ರಯೋಗಿಸುತ್ತಾರೆ. ಅಜಪ ಎಂತಲೂ ಹೇಳುತ್ತಾರೆ. ಅಜಪ ಅಥವಾ ಹಂಸ ಎನ್ನುವುದು ಶ್ವಾಸ ಪ್ರಶ್ವಾಸಗಳು. ೬೦ ಶ್ವಾಸಗಳು=ಒಂದು ಪ್ರಾಣ. ೬೦ ಪ್ರಾಣಗಳು=ಒಂದು

ನಾಡಿ. ೬೦ ನಾಡಿಗಳು=ಒಂದು ಅಹೋರಾತ್ರ. ಹೀಗೆ ಲೆಕ್ಕಮಾಡಿದರೆ ಒಂದು ಹಗಲು ರಾತ್ರಿಯಲ್ಲಿ ೨೧೬೦೦ ಶ್ವಾಸಪ್ರಶ್ವಾಸಗಳು ಅಥವಾ ಹಂಸಜಪಗಳಿವೆ ಯೆಂದು ಗೊತ್ತಾಗುತ್ತದೆ.

> ೩೨ ಪುಷ್ಪಾದಿಕಂ ದ್ರವ್ಯಮಿದಂ ನತಸ್ಯ
> ಪೂಜಾಸು ಸರ್ವಮುಪಯೋಗಿ ಕಿಂಚಿತ್ |
> ಗುರೂಪದೇಶಾದ್ ದೃಢಯಾಚಭಕ್ತ್ಯಾ
> ಸ್ಮೃತ್ಯಾರ್ಚತೇಯೇನ ವಿಶುದ್ಧ ಆತ್ಮಾ || ೪೫ ||

ಆ ಪರಮಾತ್ಮನ ಪೂಜೆಗೆ ಹೂ ಮೊದಲಾದ ಪೂಜಾದ್ರವ್ಯಗಳ್ಯಾವುವೂ ಅತ್ಯಾವಶ್ಯಕವಾದುವುಗಳಲ್ಲ. ಗುರೂಪದೇಶದಿಂದಲೂ ದೃಢವಾದ ಭಕ್ತಿಯಿಂದಲೂ ಎಡೆಬಿಡದ ಅನುಸಂಧಾನದಿಂದಲೂ ವಿಶುದ್ಧಾತ್ಮನಾದ ಪರಮಾತ್ಮನನ್ನು ಧ್ಯಾನ ಪೂರ್ವಕವಾಗಿ ಪೂಜಿಸಲ್ಪಡುವುದೇ ಮುಖ್ಯವಾದದ್ದು.

(ಸಶೇಷ)

ಜಿ. ರುದ್ರಪ್ಪ

ಜಾದುಗಾರ

ಇಂದು ಮಂಗಳವಾರ, ಊರ ಸಂತೆಯ ದಿನವು.
ಗದ್ದಲವು ಬಹಳಿರುವ ಭಾಗ ಆಟದ ಸ್ಥಳವು.
ಜಾದುಗಾರನಿಗಿಹುದು ಸೃಷ್ಟಿಕರ್ತನ ರೀತಿ;
ವೇಷಭೂಷಣಗಳೊ? ಬಡ ತಿರುಕನಿಗು ಕೀಳು!
ವರ್ಣವೈವಿಧ್ಯಕ್ಕೆ ಕೊರತೆ ಬರುವಂತಿಲ್ಲ!
ಅವನ ಪರಿವಾರವೊ? ಬಲು ಕುತೂಹಲಕಾರಿ.
ಮಾನವನ ಮೈಎಲುವು ಅವನ ಆಟದ ವಸ್ತು:
ಅವನು ತೋರಿಸದೊಡವೆ ಈ ಭೂಮಿಯಲಿ ಇಲ್ಲ!

ಇರಲಿರಲಿ! ಅವನ ಮನೆಯಲಿ ಲಕ್ಷ್ಮಿ ಒಂದು ಸಲ
ಪಾದಾರ್ಪಣೆಯ ಮಾಡಿ ಅವನನುದ್ಧರಿಸಿಲ್ಲ;
ತನ್ನ ಐಸಿರಿಯೆಲ್ಲ ಸ್ವಪ್ನ ಸಾಮ್ರಾಜ್ಯವು
ಎಂದವಗೆ ತಿಳಿದರೂ ಏನು ಮಾಡಲು ಸಾಧ್ಯ?
ತಾನು ಸೃಜಿಸಿದ ಲೋಕ ಅಪರಿಮಿತವೆನಿಸಿದರು
ಆದರಿಂದ ಅವನೆಂದು ಬಾಳದಿರುವದು ಚೋದ್ಯ!

ಎನ್. ಎಸ್. ಗವಾಂಕರ.

ಪ್ರಾಕ್ತನಶಾಸ್ತ್ರದ ಬೆಳವಣಿಗೆಗೆ ವಿಜ್ಞಾನಿಗಳ ಕಾಣಿಕೆ

(೧) ಡಾ॥ ಡುಬ್ವಾ ಮತ್ತು ಕೊಯಿನಿಗ್ಸ್‌ವಾಲ್ಡ್: ಇವರು ಜಾವಾದಲ್ಲಿ ಮಾಡಿದ ಸಂಶೋಧನೆಗಳು.

(೨) ಡಾ॥ ಬ್ಲಾಕ್ ಮತ್ತು ವೀಡನ್‌ರೀಚ್: ಚೈನಾದಲ್ಲಿ ನಡೆದ ಸಂಶೋಧನೆಗಳು.

(೩) ಡಾರ್ಟ್ ಮತ್ತು ಬ್ರೂಂ: ದಕ್ಷಿಣ ಆಫ್ರಿಕಾದಲ್ಲಿ ಪೂರ್ವ ಮಾನವನ ಬಗ್ಗೆ ಸಂಶೋಧನೆಗಳು.

(೪) ಓಕ್ಲೆಯವರ ಸಂಶೋಧನೆಗಳು: ಫ್ಲೂರಿನ್ ಪರೀಕ್ಷೆಯಿಂದ ಕಾಲನಿರ್ಣಯ.

(೫) ಡಾ॥ ಲಿಬ್ಬಿ; ಇಂಗಾಲ ೧೪ ರಿಂದ ಪುರಾತನ ವಸ್ತುಗಳ ಕಾಲನಿರ್ಣಯ.

ಪ್ರಾಕ್ತನಶಾಸ್ತ್ರ (Archæology) ಮತ್ತು ಮಾನವಶಾಸ್ತ್ರಗಳ (Anthropology) ಬೆಳವಣಿಗೆಗೆ ವಿಜ್ಞಾನಿಗಳು ಅಪರಿಮಿತ ಸೇವೆಯನ್ನು ಸಲ್ಲಿಸಿದ್ದಾರೆ. ಅದರಲ್ಲಿಯೂ ಪ್ರಾಣಿಶಾಸ್ತ್ರ, ರಸಾಯನಶಾಸ್ತ್ರ ಮತ್ತು ಭೌತಶಾಸ್ತ್ರಗಳ ಇತ್ತೀಚಿನ ಶೋಧನೆಗಳು ಪ್ರಾಕ್ತನಶಾಸ್ತ್ರಕ್ಕೆ ತುಂಬಾ ಸಹಾಯಮಾಡಿವೆ.

ಮೊದಲು ವಿಜ್ಞಾನಿಗಳು ಪುರಾತನ ಮಾನವನ ಅಸ್ಥಿಯ ಅವಶೇಷಗಳು (Fossils) ಉಳಿದುಬಂದಿರಬೇಕೆಂಬುದನ್ನು ನಂಬಲಿಲ್ಲ. ಲಮಾರ್ಕನ ಸಮಕಾಲೀನನಾದ ಕುವೀರ್ (Cuvier) ಎಂಬುವನು ಇವರಲ್ಲಿ ಮುಖಂಡ. ಆದರೆ ೧೮೫೬ ರಲ್ಲಿ ಜರ್ಮನಿಯ ಡುಸೆಲ್‌ಡರ್ಫ್ ಬಳಿ ಸಿಕ್ಕಿದ ತಲೆಬುರುಡೆ ಈ ಅಭಿಪ್ರಾಯವನ್ನು ಸ್ವಲ್ಪ ಸಡಿಲಮಾಡಿತು. ಅದರ ಪದರ ದಪ್ಪವಾಗಿದ್ದು ಹುಬ್ಬಿನ ಮೂಳೆ (Superciliary Ridges) ಉಬ್ಬಿದಂತೆ ಕಾಣುತ್ತಿತ್ತು. ಅನೇಕರು ಅದು ಹುಚ್ಚು ಅಥವಾ ರಿಕೆಟ್ಸ್ ರೋಗ ಬಂದು ಸತ್ತ ಮಾನವನಿರಬಹುದೆಂದು ವಾದಿಸಿದರು. ಹಕ್ಸ್ಲಿ (Huxley) ಯವರು ತಮ್ಮ *Man's Place in Nature*, (೧೮೬೩) ಎಂಬ ಗ್ರಂಥದಲ್ಲಿ ಈ ತಲೆಬುರುಡೆಯ ವಿಚಾರವಾಗಿ ಬರೆಯುತ್ತಾ, ಯಾವ ವಿಧದಲ್ಲಿಯೂ ಇದು ಮಂಗ (Ape) ಮತ್ತು ಮಾನವನ ಮಧ್ಯೆ ಸಂಧಿಸಿದ ಪೂರ್ವ ಮಾನವಕುಲಕ್ಕೆ ಸೇರಿದ್ದಲ್ಲವೆಂದು ಹೇಳಿದರು. ಡಾರ್ವಿನ್‌ರವರು (Descent of Man) ಇದರ ಸೂಕ್ಷ್ಮ ವಿವರಣೆಯೊಂದನ್ನು ಇತ್ತರೇ ವಿನಃ ಸರಿಯಾದ ತೀರ್ಮಾನವನ್ನು ಹೇಳಲಿಲ್ಲ.

ಯೂರೋಪಿನಲ್ಲಿ ಈ ನಿಯಾಂಡರ್ಥಾಲ್ ತಲೆಬುರುಡೆಯ ವಿಚಾರದಲ್ಲಿ ವಾದ

ವಿವಾದಗಳು ನಡೆಯುತ್ತಿದ್ದ ವಾತಾವರಣದಲ್ಲಿ ಯುಜಿನಿ ದುಬ್ವಾ (Eugene Dubois) ಹುಟ್ಟಿದರು. ಅವರು ಅಮ್‌ಸ್ಟರ್‌ಡಾಂ ವಿಶ್ವವಿದ್ಯಾನಿಲಯದಲ್ಲಿ ವೈದ್ಯಶಾಸ್ತ್ರವನ್ನು ಅಭ್ಯಾಸಮಾಡಿ ೧೮೮೬ ರಲ್ಲಿ ಅದೇ ವಿಶ್ವವಿದ್ಯಾನಿಲಯದಲ್ಲಿ ಅಂಗರಚನಾಶಾಸ್ತ್ರದ (Anatomy) ಉಪಾಧ್ಯಾಯರಾದರು. ಅವರು ಮಾನವನ ಮೂಲವನ್ನು (Origin) ಕಂಡುಹಿಡಿಯಲು ತುಂಬಾ ಆಸಕ್ತಿಯುಳ್ಳವರಾದುದರಿಂದ ಗೊರಿಲ್ಲ ಮತ್ತು ಚಿಂಪಾನ್‌ಜಿಗಳಿರುವ ಆಫ್ರಿಕಾ ಅಥವಾ ಓರಾಂಗೂಟಾನ್ ಇರುವ ಮಲಯಕ್ಕೆ ಹೋಗಬೇಕೆಂದು ಯತ್ನಿಸುತ್ತಿದ್ದರು. ಕೊನೆಗೆ ಅವರಿಗೆ ರಾಯಲ್ ಡಚ್ ಸೈನ್ಯದಲ್ಲಿ ಶಸ್ತ್ರವೈದ್ಯರ ಕೆಲಸ ಸಿಕ್ಕಿ ೧೮೮೭ ರಲ್ಲಿ ಅವರು ಸುಮಾತ್ರಕ್ಕೆ ಹೊರಟರು. ಅಷ್ಟರಲ್ಲಿ ಜಾವಾದ ವಾಡ್‌ಜಾಕ್ (Wadjak) ಎಂಬಲ್ಲಿ ಪ್ರಾಚೀನ ಮಾನವನ ತಲೆಬುರುಡೆಯೊಂದು ಸಿಕ್ಕಿತೆಂಬ ವರದಿ ಅವರಿಗೆ ಮುಟ್ಟಿತು. ಡಾ|| ದುಬ್ವಾರವರು ಸರ್ಕಾರದ ಅನುಮತಿ ಪಡೆದು ಜಾವಕ್ಕೆ ಬಂದರು. ಸೊಲೊ (Solo) ನದಿ ದಡದಲ್ಲಿದ್ದ ಟ್ರಿನಿಲ್ ಎಂಬ ಹಳ್ಳಿಯೊಂದರಲ್ಲಿ ಪುರಾತನ ಮಾನವನ ಅವಶೇಷಗಳು ಇರುವುದಕ್ಕೆ ಬೇಕಾದ ಕೆಲವು ಚಿಹ್ನೆಗಳನ್ನು ಅವರು ಕಂಡರು. ಸ್ವಲ್ಪಕಾಲ ಅಲೆದಾಡಿ, ಹುಡುಕಿ, ಕಲ್ಲಿನಲ್ಲಿ ಹೂತುಹೋಗಿ ಪಳೆಯುಳಿಕೆಯ ರೂಪಕ್ಕೆ ತಿರುಗಿದ್ದ ತಲೆಬುರುಡೆಯೊಂದರ ಮೇಲ್ಭಾಗ ವನ್ನು ತೆಗೆದರು. ಅದು ಮಂಗನದೆ ಅಥವಾ ಮನುಷ್ಯನದೆ ಎನ್ನುವುದು ಅವರಿಗೆ ಖಚಿತವಾಗಲಿಲ್ಲ. ೧೮೯೨ ರಲ್ಲಿ ದುಬ್ವಾರವರು ಈ ತಲೆಬುರುಡೆಯ ಚಿಪ್ಪು ಸಿಕ್ಕಿದ ಸ್ಥಳದಿಂದ ಸುಮಾರು ೪೦ ಅಡಿ ದೂರದಲ್ಲಿ ಭೂಶೋಧನೆಗೆ ಪ್ರಾರಂಭಿಸಿದರು. ಅವರ ಅದೃಷ್ಟಕ್ಕೆ ಸರಿಯಾಗಿ ಪುರಾತನ ಮಾನವನ ತೊಡೆಯ ಮೂಳೆಯೊಂದು (Femur) ಅವರಿಗೆ ಸಿಕ್ಕಿತು. ನಿಸ್ಸಂದೇಹವಾಗಿ ಆ ಮೂಳೆಯು ನೆಟ್ಟಗೆ ನಡೆಯಬಲ್ಲ (Erect) ಪ್ರಾಣಿಕುಲಕ್ಕೆ ಸೇರಿತ್ತೆಂದು ಅವರಿಗೆ ಗೊತ್ತಾಯಿತು. ೧೮೯೪ ರ ವೇಳೆಗೆ ಡಾ|| ದುಬ್ವಾರವರು ಜಾವಾದಲ್ಲಿ ಸಿಕ್ಕಿದ ಅಸ್ಥಿ ಅವಶೇಷಗಳು ಮಾನವ ಮತ್ತು ಮಂಗ (Apes) ಇವುಗಳಿಗೆ ಮಧ್ಯಸ್ಥವಾಗಿದ್ದು ವಿಜ್ಞಾನಿಗಳು ಹುಡುಕುತ್ತಿದ್ದ 'Missing Link' ಇದೇ ಎಂದು ಪ್ರಕಟಿಸಿದರು. ತಲೆಬುರುಡೆಯ ಚಿಪ್ಪು ಮತ್ತು ತೊಡೆಯ ಮೂಳೆಗಳು ಒಂದೇ ದೇಹಕ್ಕೆ ಸೇರಿದೆ ಎಂದು ತೋರಿಸಿದರು. ಈ ಪುರಾತನ ಮಾನವನಿಗೆ ಅವರು Pithecanthropus Erectus* ಮಂಗ-ಮಾನವ ಎಂದು


---

* ಗ್ರೀಕ್‌ನಲ್ಲಿ "ಪಿಥೆಕೂ" ಅಂದರೆ ಮಂಗ "ಆನ್‌ಥ್ರೂಪಸ್" ಅಂದರೆ ಮನುಷ್ಯ ಎಂದರ್ಥ. ಜರ್ಮನ್ ವಿಜ್ಞಾನಿ ಹೆಕೆಲ್ (Haeckel) ಈ ಪದವನ್ನು ಮೊಟ್ಟಮೊದಲು ತಯಾರಿಸಿದವರು. ಡಾ|| ದುಬ್ವಾ ತಾವು ಜಾವಾದಲ್ಲಿ ಕಂಡುಹಿಡಿದ ನೆಟ್ಟಗೆ ನಡೆಯುವ ಮಂಗ-ಮನುಷ್ಯನಿಗೆ ಇದನ್ನು ಅನ್ವಯಿಸಿಕೊಂಡರು.

ನಾಮಕರಣ ಮಾಡಿದರು. ೧೮೯೫ರಲ್ಲಿ ದುಬ್ವಾರವರು ಯೂರೋಪಿಗೆ ತೆರಳಿ ಲಂಡನ್, ಪ್ಯಾರಿಸ್, ಡಬ್ಲಿನ್, ಎಡಿನ್‌ಬರೂ, ಬರ್ಲಿನ್, ಜೇನ ಮೊದಲಾದ ಪಟ್ಟಣಗಳಲ್ಲಿ ವಿಜ್ಞಾನಿಗಳ ಸಮ್ಮೇಳನದಲ್ಲಿ ಜಾವಾದಲ್ಲಿ ಸಿಕ್ಕಿದ ಪುರಾತನ ಎಲುಬುಗಳನ್ನು ಪ್ರದರ್ಶಿಸಿದರು. ೧೮೯೬ರಲ್ಲಿ ರಾಯಲ್ ಸೊಸೈಟಿಯ ಆಶ್ರಯದಲ್ಲಿ ಮಾಡಿದ ಭಾಷಣವೊಂದರಲ್ಲಿ ಅವರು ಜಾವಾದ ಮಂಗ-ಮನುಷ್ಯನು (Pithecanthropus Erectus) ಮತ್ತು ಅವನ ಜೊತೆಯಲ್ಲಿ ವಾಸಿಸುತ್ತಿದ್ದ ಇತರ ಪ್ರಾಣಿಗಳು ಜ್ವಾಲಾಮುಖಿಯ ಉಗಿತಕ್ಕೆ ಸಿಕ್ಕಿ ನಾಶಹೊಂದಿದವೆಂದು ತಿಳಿಸಿದರು. ಸತ್ತ ಹೆಣಗಳು ನದಿಯಲ್ಲಿ ತೇಲಿ, ಮೊಸಳೆಯ ಬಾಯಿಗೆ ಸಿಕ್ಕಿ ಟ್ರಿನಿಲ್ ದಡವನ್ನು ಸೇರಿದುವಂತೆ. ದುಬ್ವಾ ಮೊಸಳೆಯ ಹಲ್ಲಿನ ಗುರುತುಗಳನ್ನು ಟ್ರಿನಿಲ್‌ನಲ್ಲಿ ಸಿಕ್ಕಿದ ಮೂಳೆಯ ಅವಶೇಷಗಳಲ್ಲಿ ಕಂಡರು. ಈ ಕಾರಣದಿಂದಲೇ ತಲೆಚಿಪ್ಪು, ತೊಡೆ ಮೂಳೆ, ಹಲ್ಲುಗಳು ಒಂದಕ್ಕೊಂದು ಸ್ವಲ್ಪ ದೂರದಲ್ಲೆ ಸಿಕ್ಕಿದವು. ಆದರೆ ಡಾ|| ದುಬ್ವಾರವರಿಗೆ ಸನ್ಮಾನಕ್ಕಿಂತ ಹೆಚ್ಚಾಗಿ ವಿಜ್ಞಾನಿಗಳ ತಿರಸ್ಕಾರವೊಂದುಕಡೆ, ಪಾದ್ರಿಗಳ ಪ್ರತಿಭಟನೆ ಮತ್ತೊಂದುಕಡೆ. ಇವೆರಡೂ ಸೇರಿ ಬೇಸರವನ್ನುಂಟು ಮಾಡಿತು.

ವಿಜ್ಞಾನಿಗಳಿಗೆ ತಲೆಬುರುಡೆಯು ಮಂಗನದಂತೆ ವೈಲಕ್ಷಣ್ಯವುಳ್ಳದಾಗಿರುವುದೂ ತೊಡೆಯ ಮೂಳೆಯು ಮಾನವನದಂತೆ ಇರುವುದೂ ಸಂಶಯವನ್ನುಂಟುಮಾಡಿತು. ಪಾದ್ರಿಗಳಂತೂ ಮಾನವಕುಲ ಆಡಂ (Adam) ಕ್ರಿ.ಪೂ. ೪೦೦೪ ರಿಂದಲೇ ಪ್ರಾರಂಭವಾಯಿತೆಂದೂ ಜಾವಾದ ಈ ವಿಚಿತ್ರಪ್ರಾಣಿ ಮಾನವಕುಲದ ಮೂಲ ಪುರುಷನಲ್ಲವೆಂದೂ ವಾದಿಸಿದರು. ಹೀಗೆ ಕಳೆಗುಂದಿ ಉತ್ಸಾಹರಹಿತರಾದ ದುಬ್ವಾರವರು ತಮ್ಮ ಸ್ವಂತ ಊರಾದ ಹಾರ್‌ಲೆಮ್ (Haarlem) ನಲ್ಲಿದ್ದ ಟೆಲರ್ ಸಂಗ್ರಹಶಾಲೆಯಲ್ಲಿ ಜಾವಾದಲ್ಲಿ ಸಿಕ್ಕಿದ ಅಸ್ಥಿಗಳನ್ನು ಯಾರ ಕಣ್ಣಿಗೂ ಬೀಳದಂತೆ ತೆಗೆದಿಟ್ಟರು. ಅಲ್ಲಿ ಅವು ಸುಮಾರು ೩೦ ವರ್ಷಗಳಿದ್ದುವು. ೧೮೯೦ ರಲ್ಲಿ ಇವರು ವಾಡ್‌ಜಾಕ್‌ನಲ್ಲಿ ಅಗೆದು ತೆಗೆದ ಪುರಾತನ ತಲೆಬುರುಡೆಗೂ ಇದೇ ಗತಿಯಾಯಿತು. ಇದರಿಂದ ವಿಜ್ಞಾನಪ್ರಪಂಚಕ್ಕೆ ತುಂಬಾ ನಿರಾಶೆಯಾಯಿತು. ಅಮೇರಿಕದ ಪ್ರಾಣಿಶಾಸ್ತ್ರ ಸಂಗ್ರಾಹಕಶಾಲೆಯ ಅಧ್ಯಕ್ಷರಾದ ಹೆನ್ರಿ ಫೇರ್ ಫೀಲ್ಡ್ ಒಸ್‌ಬರ್ನ್ (Henry Fair Field Osborn) ಮತ್ತು ಸ್ಮಿತ್‌ಸೋನಿಯನ್ ಶಾಲೆಯ (Smithsonian Institution) ಡಾ|| ಹರ್ಡ್ಲಿಕ ಮೊದಲಾದವರ ಪ್ರಾರ್ಥನೆಯ ಮೇರೆ ದುಬ್ವಾ ಪುನಃ ಜಾವಾದ ಪುರಾತನ ಮಾನವನ ಅಸ್ಥಿಗಳನ್ನು ಪ್ರದರ್ಶಿಸಿದರು. (ಚಿತ್ರ ೧) ತಾವು ಮಿದುಳಿನ ಅಳತೆಗಾಗಿ ಮಾಡಿದ ಅಚ್ಚನ್ನು (Cast)ನ್ನು ಕೂಡಾ

ತೋರಿಸಿದರು. ಮಂಗಗಳ ೩೦೦-೬೫೦ ಕ್ಯೂಬಿಕ್ ಸೆಂಟಿಮೀಟರ್ ಅಥವಾ ಆಧುನಿಕ ಮಾನವನ ೧೨೨೦-೧೫೦೦ c.c. ಇವುಗಳ ಮಧ್ಯಪ್ರಮಾಣದ ೯೦೦ c.c. ಜಾವಾ ಪುರಾತನ ಮಾನವನಿಗೆ (Pithecanthropus) ಇತ್ತೆಂದು ಈ ಅಚ್ಚಿನಿಂದ (Cast) ಗೊತ್ತಾಯಿತು. ಮಿದುಳಿನ ಆಕಾರ, ಅದರಲ್ಲಿರುವ ಡೊಂಕು ಡೊಂಕು



ಚಿತ್ರ ೧. ಜಾವಾದಲ್ಲಿ ಸಿಕ್ಕಿದ ಪಳೆಯುಳಿಕೆಯ ಎಲುಬು ಮತ್ತು ತಲೆಬುರುಡೆ


ಗುರುತುಗಳು (Convolutions) ಇವುಗಳಿಂದ ಜಾವಾದ ಪುರಾತನ ಜೀವಿಗೆ ಸೆಟ್ಟಗೆ ನಡೆಯುವ ಸಾಮರ್ಥ್ಯವಲ್ಲದೆ ಮಾತನಾಡುವ ಶಕ್ತಿಯೂ ಇತ್ತೆಂದು ಗೊತ್ತಾಯಿತು.

ಈ ಕೆಲಸದಲ್ಲಿ ಆಸಕ್ತಿವಹಿಸಿದ ನೆದರ್‌ಲಾನ್ಡ್ಸ್ ಈಸ್ಟ್ ಇಂಡಿಯಾ ಸರಕಾರವು ಜರ್ಮನ್ ವಿಜ್ಞಾನಿ ಮತ್ತು ಪ್ರಾಣಿಶಾಸ್ತ್ರಪಂಡಿತ ಕೊನಿಗ್ಸ್‌ವಾಲ್ಡ್ ಎಂಬುವರನ್ನು ಪುರಾತನ ಜಾವಾ ಮಾನವನ ಬಗ್ಗೆ ಶೋಧನೆ ನಡೆಸಲು ೧೯೩೦ ರಲ್ಲಿ ನೇಮಕಮಾಡಿತು. ವಾನ್‌ಕೊನಿಗ್ಸ್‌ವಾಲ್ಡ್ ನವಂಬರ್ ೧೩ ರಲ್ಲಿ ಜನಿಸಿದರು. ಚಿಕ್ಕವರಾಗಿದ್ದಾಗಿನಿಂದಲೇ ಅವರಿಗೆ ಪ್ರಾಣಿಶಾಸ್ತ್ರದಲ್ಲಿ ಬಹಳ ಆಸಕ್ತಿ. ೧೪ ವರ್ಷ ತುಂಬುವಷ್ಟು ಹೊತ್ತಿಗೆ ಅಲ್ಲಿ ಇಲ್ಲಿ ಸಿಕ್ಕುವ ಪ್ರಾಣಿಗಳ ಪಳೆಯುಳಿಕೆ (Fossil) ಗಳನ್ನು ಸಂಗ್ರಹಿಸಲು ಮೊದಲುಮಾಡಿದರು. ೧೯೨೪ ರ ತನಕ ಇವರು ಮ್ಯೂನಿಕ್,


ಟ್ಯೂಬಿಂಜನ್, ಕೊಲೋನ್ ಮತ್ತು ಬರ್ಲಿನ್ ಮೊದಲಾದ ಕಡೆ Palaeontology (ನಷ್ಟವಂಶ ಜೀವಿಶಾಸ್ತ್ರ)ದ ವ್ಯಾಸಂಗ ಮುಗಿಸಿದರು. ದುಬ್ವಾ ಭೂಶೋಧನೆ ಮಾಡಿದ ಟ್ರಿನಿಲ್ ಪ್ರದೇಶದಲ್ಲಿ ಇವರು ೨೫,೦೦೦ ಮೂಳೆಗಳನ್ನು ತೆಗೆದರು. ಆದರೆ Pithecanthropus ಮೂಳೆಗಳು ಇವರಿಗೆ ಸಿಕ್ಕುವ ಮುನ್ನ ಮುಗ್ಗಟ್ಟಿನ ದಿನಗಳು ಬಂದುವು. (Depression Days) ಜಾವಾ ಸರಕಾರವು ಇವರ ಕೆಲಸವನ್ನು ಹಣವಿಲ್ಲವೆಂಬ ನೆಪದಿಂದ ತೆಗೆದುಹಾಕಿತು. ಆದರೂ ಕೊನಿಗ್ಸ್‌ವಾಲ್ಡರು ತಮ್ಮ ಪ್ರಯತ್ನಗಳನ್ನು ಬಿಡಲಿಲ್ಲ. ಇಷ್ಟೇ ಅಲ್ಲದೆ ಅವರಿಗೆ ಆಗ ತಾನೆ ಮದುವೆ ಬೇರೆ ಆಗಿತ್ತು. ಸ್ನೇಹಿತರು ಒದಗಿಸಿದ ಅಲ್ಪಸ್ವಲ್ಪ ಹಣದಿಂದ ಅವರು ಸಂಗಿರನ್ ಎಂಬ ಪ್ರದೇಶದಲ್ಲಿ ಶೋಧನೆಗೆ ಪ್ರಾರಂಭಿಸಿದರು. ೧೯೩೭ರಲ್ಲಿ ಫಿಲಿಡೆಲ್ಫಿಯಾದಲ್ಲಿ ಪುರಾತನ ಮಾನವನ ವಿಷಯದ ಮೇಲೆ ಜರುಗಿದ ಸಮ್ಮೇಳನಕ್ಕೆ ಇವರಿಗೆ ಆಹ್ವಾನ ಬಂದಿತು. ಅನಂತರ ಇವರಿಗೆ ಕಾರ್ನೇಜಿ (Carnegie) ದ್ರವ್ಯಸಹಾಯ (Grant) ಸಿಕ್ಕಿತು. ಇದರಿಂದ ಜಾವಾದಲ್ಲಿ ಬಹಳ ಬಿರುಸಾಗಿ ಕೆಲಸ ಸಾಗಿತು. ಮಾನವನ ತಲೆಬುರುಡೆಗೆ ಸೇರಿದ ಎಷ್ಟೇ ಸಣ್ಣ ಚೂರನ್ನಾಗಲೀ ತೆಗೆದುಕೊಟ್ಟ ಕೆಲಸಗಾರರಿಗೆ ೧೦ ಸೆಂಟ್ ಕೊಡುವುದಾಗಿ ವಾಗ್ದಾನಮಾಡಿದರು. ಇದರ ಫಲಿತಾಂಶವೇನೆಂದರೆ ತಮಗೆ ಸಿಕ್ಕಿದ ದೊಡ್ಡ ದೊಡ್ಡ ಚೂರುಗಳನ್ನು ಅನೇಕ ಸಣ್ಣ ಸಣ್ಣ ಚೂರುಗಳನ್ನಾಗಿ ಮಾಡಿ ಕೆಲಸಗಾರರು ಹಣ ಸಂಪಾದಿಸಲು ಪ್ರಾರಂಭಿಸಿದರು. ಹೀಗೆ ಅಂಗುಲ ಅಂಗುಲದ ಭೂಶೋಧನೆ ಮಾಡಿ ಸಿಕ್ಕಿದ ೪೦ ಚೂರುಗಳ ಪೈಕಿ ೩೦ ಒಂದೇ ತಲೆಬುರುಡೆಗೆ ಸೇರಿದ್ದುವು. ಅವುಗಳು ಬಹಳ ದಪ್ಪವಾಗಿದ್ದದ್ದರಿಂದ ಕೊನಿಗ್ಸ್‌ವಾಲ್ಡ್‌ರವರಿಗೆ ಅವುಗಳನ್ನು ಸೇರಿಸಲು ಕಷ್ಟವಾಗಲಿಲ್ಲ. ಅವುಗಳನ್ನೆಲ್ಲಾ ಜೋಡಿಸಿದ ಮೇಲೆ Pithecanthropus ತಲೆಚಿಪ್ಪೆಂದು ತಿಳಿಯಿತು.

ಕೊನಿಗ್ಸ್‌ವಾಲ್ಡ್ ಇನ್ನೂ ಕೆಲವು ಮುಖ್ಯವಾದ ವಿಷಯಗಳನ್ನು ಜಾವಾದಲ್ಲಿ ಕಂಡುಹಿಡಿದರು. ಮನುಷ್ಯನ ದವಡೆಯನ್ನೇ ಹೋಲುವ ಆದರೆ ಅದಕ್ಕಿಂತ ಹೆಚ್ಚು ಬಲಯುತವಾದ ದವಡೆ ಭಾಗವೊಂದು ಅವರಿಗೆ ಸಿಕ್ಕಿತು. ಇದರಿಂದ ರಾಕ್ಷಸರಂತೆ ಇದ್ದ ಮಾನವ ಕುಲವೊಂದು ಜಾವಾದಲ್ಲಿ ಇದ್ದ ವಿಷಯ ಗೊತ್ತಾಯಿತು. ದವಡೆಯ ಹಲ್ಲುಗಳು ಮನುಷ್ಯನ ಹಲ್ಲುಗಳಂತೆಯೇ ಇದ್ದರೂ ಮಾನವನದಕ್ಕಿಂತ ಪ್ರಮಾಣದಲ್ಲಿ ತುಂಬಾ ದೊಡ್ಡವಾಗಿದ್ದುವು. ಅವರು ಇದಕ್ಕೆ Meganthropus Palaeojavanicus : The Great Man of Old Java ಎಂದು ನಾಮಕರಣಮಾಡಿದರು. ಈ ಬಲಶಾಲಿಯಾದ, ರಾಕ್ಷಸನಂತಿದ್ದ ಜಾವಾ ಮಾನವನಿಂದ ಸಾಮಾನ್ಯ ಮಾನವನ ವಿಕಸನ (Evolution) ಹೇಗೆ ಆಯಿತೆಂದು ಡಾ॥ ವೈಡನ್‌ರೀಚ್ (Weidenreich) ರವರು

ತಿಳಿಸಿದರು. ಅವರು ನಾಯಿಯ ಉದಾಹರಣೆಯನ್ನು ತೆಗೆದುಕೊಂಡರು. ಸ. ಬರ್ನಾರ್ಡ್ (St. Bernard) ಮೊದಲಾದ ದೊಡ್ಡ ನಾಯಿಗಳಿಗೆ ಮೂತಿ ದೊಡ್ಡದಾಗಿದೆ. ಅದು ತಲೆಬುರುಡೆಯ ಮುಂದಿನ ಭಾಗವನ್ನೆಲ್ಲಾ ಆಕ್ರಮಿಸಿಕೊಳ್ಳುತ್ತದೆ. ಮಿದುಳಿರುವ ಭಾಗ ಮಾತ್ರ ಹಿಂದೆ ಇರುತ್ತದೆ. ಸಣ್ಣ ಜಾತಿಯ ನಾಯಿಗಳಾದ



ಚಿತ್ರ ೪. ಡಾ|| ವೈಡನ್‌ರೀಚ್ ನಾಯಿಗಳಲ್ಲಿ ಮೂತಿ ದೊಡ್ಡದಾದಷ್ಟೂ ಮಿದುಳಿನ ಕೋಶ ಸಣ್ಣದಾಗುವುದೆಂದು ತೋರಿಸುತ್ತಿರುವುದು



ಚಿತ್ರ ೪*a*. ತಲೆಬುರುಡೆಗಳು ಮತ್ತು ದವಡೆಗಳು

ಮಂಗ, ಪುರಾತನ ಮಾನವ ಮತ್ತು ಆಧುನಿಕ ಮಾನವ (ಎಡದಿಂದ ಬಲಕ್ಕೆ)
ಮುಖ ಕಡಿಮೆಯಾದಷ್ಟೂ ಮಿದುಳಿನ ವಿಸ್ತರಣೆ ಜಾಸ್ತಿಯಾಗುವುದನ್ನು ತೋರಿಸಿದೆ

ಪೆಕಿನೀಸ್, ಸ್ಪಾನಿಯಲ್ ಮೊದಲಾದುವುಗಳಿಗೆ ಮಿದುಳಿರುವ ಕೋಶ (Cranium) ದೊಡ್ಡದಾಗಿದ್ದು ಮುಖ ಬಹಳ ಸಣ್ಣದಾಗಿರುತ್ತದೆ. ಬುಲ್‌ಡಾಗ್ ಮೊದಲಾದುವಕ್ಕೆ ಮುಖ ಮತ್ತು ಮಿದುಳಿರುವ ಕೋಶ ಮಧ್ಯಮವರ್ಗಕ್ಕೆ ಸೇರಿವೆ (ಚಿತ್ರ ೪). ಕೆಲವು ವೇಳೆ ಪಿಚುಯರಿ ಗ್ರಂಥಿ (Pituitary Gland) ಯಲ್ಲಿ ಆಗುವ ಆತಂಕದಿಂದ ಸಾಧಾರಣ ಆಧುನಿಕ ಮಾನವವರ್ಗದಲ್ಲಿ ಹುಟ್ಟುವ ರಾಕ್ಷಸಾಕೃತಿಯ ದವಡೆಗೂ ಜಾವಾದಲ್ಲಿ ಸಿಕ್ಕಿದ ದವಡೆಗೂ ಇರುವ ವ್ಯತ್ಯಾಸವನ್ನು ಡಾ|| ವೈಡನ್‌ರೀಚ್ ವ್ಯಕ್ತಪಡಿಸಿದರು. ಇಷ್ಟೇ ಅಲ್ಲದೆ ಈ ಕಾರಣದಿಂದ ಮಾರ್ಪಾಡಾದ ಆಧುನಿಕ ರಾಕ್ಷಸಾಕೃತಿಯ ಮಾನವನ ಹಲ್ಲುಗಳು ರಾಕ್ಷಸಾಕೃತಿಯುಳ್ಳವಾಗಿರುವುದಿಲ್ಲ. ಅವು ಸಾಧಾರಣ ಮಾನವನಿಗಿರುವಂತೆಯೇ ಇರುವುವು ಎಂದು ಡಾ|| ವೈಡನ್

ರೀಚ್ ವಿವರಿಸಿದರು. ಆದರೆ ಜಾವಾದಲ್ಲಿ ಸಿಕ್ಕಿದ ರಾಕ್ಷಸಾಕೃತಿಯ ಪುರಾತನ ಮಾನವನ (*Meganthropus) ಹಲ್ಲುಗಳಾದರೋ ಆ ರಾಕ್ಷಸಾಕೃತಿಗೆ ತಕ್ಕಂತೆ ದೊಡ್ಡದಾಗಿಯೇ ಇದ್ದುವು.

ಇಷ್ಟು ಹೊಸ ವಿಷಯಗಳು ಪುರಾತನ ಮಾನವನ ಬಗ್ಗೆ ಬರಲು ಕಾರಣಕರ್ತರಾದ ಕೊನಿಗ್ಸ್‌ವಾಲ್ಡ್‌ರವರು ಜಪಾನರು ಜಾವಾವನ್ನು ಡಿಸೆಂಬರ್ ೧೯೪೧ ರಲ್ಲಿ ವಶಪಡಿಸಿಕೊಂಡಾಗ ಅವರಿಗೆ ಸೆರೆ ಸಿಕ್ಕಿದರು. ಅವರ ಪುಸ್ತಕಗಳು, ಹಣ, ಬಟ್ಟೆ ಎಲ್ಲವೂ ಹೋದುವು. ಆದರೆ ಅವರು ತಮ್ಮ ಪ್ರಾಣಕ್ಕಿಂತ ಹೆಚ್ಚು ಬೆಲೆಯುಳ್ಳದೆಂದು ತಿಳಿದಿದ್ದ ಪುರಾತನ ಮನುಷ್ಯನ ಹಲ್ಲುಗಳು, ದವಡೆ ಮತ್ತು ತಲೆಚಿಪ್ಪು ಮೊದಲಾದುವು ನಾಶವಾಗದೆ ಅಮೇರಿಕಾದಲ್ಲಿ ಸುರಕ್ಷಿತವಾಗಿದ್ದುವು. ಕೊನಿಗ್ಸ್‌ವಾಲ್ಡ್ ರಾಕ್‌ಫೆಲರ್ ನಿಧಿಯಿಂದ ಸಹಾಯಪಡೆದು ಅಮೆರಿಕಾಕ್ಕೆ ಹೋಗಿ ಜಾವಾದಲ್ಲಿ ತಾವು ಕಂಡುಹಿಡಿದ ಪುರಾತನ ಮಾನವನ ಅಸ್ಥಿ ಅವಶೇಷಗಳನ್ನು ಪ್ರದರ್ಶಿಸಿದರು. ೧೯೪೮ ರಲ್ಲಿ ಯುಟ್ರೆಕ್ಟ್ (Utrecht) ವಿಶ್ವವಿದ್ಯಾನಿಲಯದಲ್ಲಿ ಇವರು ನಷ್ಟವಂಶ ಜೀವಿಶಾಸ್ತ್ರ, ಚಾರಿತ್ರಿಕ ಭೂಗರ್ಭಶಾಸ್ತ್ರ (Historic Geology) ದ ಪ್ರಾಧ್ಯಾಪಕರಾದರು. ಜಾವಾದ ಪುರಾತನ ಮಾನವನು ಜಾವಾ ದ್ವೀಪವಾಗುವುದಕ್ಕಿಂತ ಮುಂಚೆ ಅಲ್ಲಿ ವಾಸಿಸುತ್ತಿದ್ದು ಏಷ್ಯಾ ಮತ್ತು ಜಾವಾ ಒಂದಾಗಿದ್ದಾಗ ಅಲ್ಲಲ್ಲೆ ನೆಲಸಿದ್ದನೆಂದು ಅವರು ವ್ಯಕ್ತಪಡಿಸಿದರು. ಪಿಥಿಕಾನ್‌ಥ್ರೋಪಸ್, ಜೊತೆಯಲ್ಲಿ ಸಿಕ್ಕಿದ ಕೆಲವು ಪ್ರಾಣಿಗಳ ಎಲುಬುಗಳು ಭಾರತದ ಸಸ್ತನಿ ಪ್ರಾಣಿವರ್ಗದ ಪಳೆಯುಳಿಕೆ ಎಲುಬುಗಳಿಗೆ ಹೋಲಿಕೆಯಾಗುವುದರಿಂದ ಇದು ನಿಜವಿರಬಹುದು. ಈ ಪುರಾತನ ಮಾನವನ ಶಾಖೆಯೊಂದು ಇಲ್ಲಿಂದ ಚೈನಾ ದೇಶಕ್ಕೆ ಹೋಗಿರಬೇಕೆಂದು ಅವರು ಹೇಳಿದರು.


ಉತ್ತರ ಚೈನಾದಲ್ಲಿರುವ ಚೌಕೂಟೀನ್ ಪ್ರದೇಶದ ಸನ್ನಿವೇಶ ಮತ್ತು ಅಲ್ಲಿನ ಭೂಪದರಗಳು ಚೈನಾದಲ್ಲಿ ಭೂಶಾಸ್ತ್ರಪಂಡಿತರಾಗಿದ್ದ ಆಂಡರ್‌ಸನ್‌ರವರ ಗಮನವನ್ನು ೧೯೧೪ ರಿಂದಲೇ ಸೆಳೆದಿತ್ತು. ಅವರು ಆ ಪ್ರದೇಶದಲ್ಲಿ ಸಿಕ್ಕಿದ ಬೆಣಚು ಕಲ್ಲುಗಳನ್ನು ಆರಿಸಿಕೊಂಡು ಅವುಗಳ ಸೂಕ್ಷ್ಮ ಪರಿಶೀಲನೆಯಿಂದ ಪುರಾತನ ಮಾನವನು ಅವುಗಳನ್ನು ಆಯುಧಗಳಿಗೆ ಉಪಯೋಗಿಸಲು ತಂದನೆಂದು ಅರಿತಿದ್ದರು. ೧೯೨೬ ರಲ್ಲಿ ಆ ಪ್ರದೇಶದಲ್ಲಿ ಪುರಾತನ ಮಾನವನ ಎರಡು ಹಲ್ಲುಗಳು ಸಿಕ್ಕಿದುವು. ಪೀಕಿಂಗ್ ವಿಶ್ವವಿದ್ಯಾನಿಲಯದಲ್ಲಿ ಮಾನವ ಅಂಗಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ಡಾ|| ಡೇವಿಡ್‌ಸನ್ ಬ್ಲಾಕ್ ಎಂಬುವರು ಇದರಿಂದ ಬಹಳ ಉತ್ಸಾಹ ಹೊಂದಿ ಆ ಪ್ರದೇಶವನ್ನು ಚೆನ್ನಾಗಿ ಶೋಧಿಸಲು ನಿಶ್ಚಯಿಸಿದರು.

---

* *Apes, Gaints and Man* (1948) Cambridge University Press.

ಡಾ|| ಬ್ಲಾಕ್ ಕೆನಡಾದ ಟೊರಂಟೊವಿನಲ್ಲಿ ೧೮೮೪ ರಲ್ಲಿ ಜನಿಸಿ ಟೊರೆಂಟೊ ವಿಶ್ವವಿದ್ಯಾನಿಲಯದಲ್ಲಿ ಮಾನವ ಅಂಗಶಾಸ್ತ್ರ (Human Anatomy) ದಲ್ಲಿ ಪದವೀಧರರಾಗಿ ಆಗ್ಗೆ ಸುಪ್ರಸಿದ್ಧ ಮಾನವಶಾಸ್ತ್ರಜ್ಞನಾಗಿದ್ದ ಎಲಿಯಟ್ ಸ್ಮಿತ್ ಎಂಬುವರ ಜೊತೆಯಲ್ಲಿ ಕೆಲಸಮಾಡಲು ೧೯೧೪ ರಲ್ಲಿ ಯೂರೋಪಿಗೆ ಹೋದರು. ಅಲ್ಲಿ ಆಗ್ಗೆ ಪಿಲ್ಟ್‌ಡೌನ್ ತಲೆಬುರುಡೆಯ ವಿಚಾರದಲ್ಲಿ ನಡೆಯುತ್ತಿದ್ದ ಚರ್ಚೆ ಇವರಿಗೆ ಪುರಾತನ ಮಾನವನ ಚರಿತ್ರೆಯಲ್ಲಿ ತುಂಬಾ ಆಸಕ್ತಿಯನ್ನು ತಂದಿತು. ರಾಕ್‌ಫೆಲರ್ ನಿಧಿಯ ಸಹಾಯದಿಂದ ಬ್ಲಾಕ್‌ರವರು ಚೌಕೂಟೀನ್ ಪ್ರದೇಶದಲ್ಲಿದ್ದ ಗುಹೆಯನ್ನು ಅಗೆದು ಶೋಧಿಸಲು ೧೯೨೭ ರಲ್ಲಿ ಪ್ರಾರಂಭಿಸಿದರು. ಬೆಟ್ಟದ ಬುಡದಲ್ಲಿದ್ದ ಆ ಗುಹೆಯು ೧೫೦ ಅಡಿ ಅಗಲ ೧೫೦ ಅಡಿ ಎತ್ತರ ಮತ್ತು ೫೦೫ ಅಡಿ ಆಳವಾಗಿತ್ತು. ಅಕ್ಟೋಬರ್ ೬ ನೇ ದಿನ ಅಲ್ಲಿ ಪುರಾತನ ಮಾನವನಿಗೆ ಸೇರಿದ ಹಲ್ಲೊಂದು ಸಿಕ್ಕಿತು. ಅದು ೧೯೨೩ ರಲ್ಲಿ ಎರಡು ಹಲ್ಲುಗಳು ಸಿಕ್ಕಿದ ಸ್ಥಳದ ಹತ್ತಿರದಲ್ಲೇ ಸಿಕ್ಕಿತ್ತು. ಡಾ|| ಬ್ಲಾಕ್‌ರವರು ಈ ಹಲ್ಲನ್ನು ಅಲ್ಲಿಯ ವರೆಗೆ ಸಿಕ್ಕಿದ ಪಿಥೆಕಾನ್ ಥ್ರೋಪಸ್, ಪಿಲ್ಟ್‌ಡೌನ್ ಮನುಷ್ಯ, ನಿಯಾಂಡರ್‌ಥಾಲ್ ಮಾನವ ಮೊದಲಾದ ಮಾನವಕುಲಗಳ ಹಲ್ಲುಗಳ ಜೊತೆಗೆ ಹೋಲಿಸಿ ನೋಡಿದರು. ಆದರೆ ಅದೇ ಬೇರೆಯಾದ ಮಾನವನ ಕುಲಕ್ಕೆ ಸೇರಿದ್ದರಿಂದ ಅವರು ಆ ಮಾನವನಿಗೆ "ಸೈನಾನ್ ಥ್ರೋಪಸ್ ಪಿಕೀನ್ ಎನ್‌ಸಿಸ್" ಎಂದು ನಾಮಕರಣ ಮಾಡಿದರು (ಚಿತ್ರ ೨). ೧೯೨೮ ರಲ್ಲಿ ಕೆಲಸ ಮುಂದುವರಿದು ಅನೇಕ ಪ್ರಾಣಿಗಳ ಮೂಳೆಗಳನ್ನು ಕಂಡು ಹಿಡಿಯಲಾಯಿತು. ೧೯೨೯ ರಲ್ಲಿ ಮತ್ತೆರಡು ಗುಹೆಗಳ ಶೋಧನೆ ಪ್ರಾರಂಭವಾಯಿತು. ಡಾ|| ಪೇ (W. G. Pei) ಸೊಂಟಕ್ಕೆ ಹಗ್ಗ ಕಟ್ಟಿಕೊಂಡು ಗುಹೆಯೊಳಗೆ ಇಳಿದರು. ಆಗಲೇ ಮಧ್ಯಾಹ್ನ ಮುಗಿಯುತ್ತಾ ಬಂದಿದ್ದುದರಿಂದ ಪೇ ಯವರು ಎರಡನೆಯ ಗುಹೆಯನ್ನು ಹುಡುಕಲು ಹೊರಟರು. ಅಲ್ಲಿದ್ದ ಕಲ್ಲು ಮತ್ತು ಮರಳುಗಳನ್ನು ಎತ್ತಿಹಾಕಿ ಶೋಧಿಸುತ್ತಿದ್ದಾಗ ಅವರಿಗೆ ಕಲ್ಲಿನಲ್ಲಿ ಹೂತು ಹಳೆಯುಳಿಕೆಯಾಗಿದ್ದ ಸಂಪೂರ್ಣ ತಲೆಬುರುಡೆ ಕಾಣಿಸಿತು. ಡಿಸೆಂಬರ್ ೨ ನೇ ದಿನವೆಲ್ಲಾ ಇದನ್ನು ತೆಗೆಯುವುದರಲ್ಲೆ ಕಳೆಯಿತು. ಡಾ|| ಪೇ ಯವರು ಪಕ್ಕದಲ್ಲೇ ಸಿಕ್ಕಿದ ಬಿದ್ದನ್ಮುಗದ ತಲೆಬುರುಡೆಯನ್ನು ತೆಗೆದರು. ಡಿಸೆಂಬರ್ ೬ ನೇ ದಿನ ಇವು ಪೀಕಿಂಗಿನಲ್ಲಿದ್ದ ಡಾ|| ಬ್ಲಾಕ್‌ರವರ ಪ್ರಯೋಗಶಾಲೆಗೆ ತಲುಪಿದ್ದುವು. ತಮಗೆ ಸಿಕ್ಕಿದ ಹಲ್ಲಿನ ಆಧಾರದ ಮೇಲೆ ತಾವು ಮನಸ್ಸಿನಲ್ಲಿ ಚಿತ್ರಿಸಿಕೊಂಡ ಪಿಕಿಂಗ್ ಮಾನವನ (Peking Man) ಸಂಪೂರ್ಣ ತಲೆಬುರುಡೆಯ ಹಳೆಯುಳಿಕೆ ತಮಗೆ ಸಿಕ್ಕಿದುದರಿಂದ ಡಾ|| ಬ್ಲಾಕ್‌ರವರಿಗೆ ತುಂಬಾ ಸಂತೋಷವಾಯಿತು. ಪೆಟ್ಟಿಗೆಗಳನ್ನು ಬಿಚ್ಚಿ ಕಲ್ಲುಗಳನ್ನೆಲ್ಲಾ

ತುಂಬಾ ಜಾಗರೂಕತೆಯಿಂದ ಒಡೆದು ನೋಡಿದಾಗ ಮತ್ತೊಂದು ತಲೆಬುರುಡೆಯ ಕೆಲವು ಚೂರುಗಳು ಸಿಕ್ಕಿದವು. ಅವುಗಳನ್ನೆಲ್ಲಾ ಜೋಡಿಸಿದಾಗ ಮೊದಲಿನಂತೆಯೇ ಅದೂ ಪೆಕಿಂಗ್ ಪುರಾತನ ಮಾನವನದಾಗಿತ್ತು.



ಚಿತ್ರ ೨. ಪೀಕಿಂಗ್ ಪೂರ್ವಮಾನವನ ತಲೆಬುರುಡೆ

ಚಾಕೂಟೀನ್ ಬೆಟ್ಟ ಹತ್ತುತ್ತಿದ್ದಾಗ ಬ್ಲಾಕ್‌ರವರಿಗೆ ಹೃದಯರೋಗ ಸಂಭವಿಸಿತು. (Heart Attack) ಆದರೆ ಅವರು ಕೆಲಸದ ಉತ್ಸಾಹದಲ್ಲಿ ಅದನ್ನು ಲಕ್ಷ್ಯಮಾಡಲಿಲ್ಲ. ೧೯೩೪ ರಲ್ಲಿ ಡಾ॥ ಬ್ಲಾಕ್‌ರವರು ತಮ್ಮ ಪ್ರಯೋಗಶಾಲೆಯಲ್ಲಿ ಕೆಲಸಮಾಡುತ್ತಿದ್ದಂತೆಯೇ ನಿಧನರಾದರು. ಬ್ಲಾಕ್‌ರವರ ಕೆಲಸವನ್ನು ಮುಂದು ವರಿಸಲು ರಾಕ್‌ಫೆಲರ್ ನಿಧಿಯ ಅಧಿಕಾರಿಗಳು ಡಾ॥ ವೈಡನ್‌ರೀಚ್‌ರವರನ್ನು ೧೯೩೫ ರಲ್ಲಿ ನೇಮಿಸಿದರು.

ಡಾ॥ ವೈಡನ್‌ರೀಚ್‌ರವರು ಜರ್ಮನಿಯ ಎಡನ್‌ಕೂಬೆನ್ (Edenkoben) ಎಂಬಲ್ಲಿ ೧೮೭೩ ರಲ್ಲಿ ಜನಿಸಿದರು. ಅವರು ಜರ್ಮನಿಯ ಅನೇಕ ವಿಶ್ವವಿದ್ಯಾನಿಲಯ

ಗಳಲ್ಲಿ ವೈದ್ಯಶಾಸ್ತ್ರ (Medicine) ಮತ್ತು ಅದಕ್ಕೆ ಸಂಬಂಧಪಟ್ಟ ಇತರ ವಿಷಯಗಳನ್ನು ವ್ಯಾಸಂಗಮಾಡಿದನು. ೧೮೯೯ ರಲ್ಲಿ ಸ್ಟ್ರಾಸ್‌ಬರ್ಗ್ ವಿಶ್ವವಿದ್ಯಾನಿಲಯದಲ್ಲಿ ಎಂ.ಡಿ. ಪದವಿಯನ್ನು ಪಡೆದು ಅದೇ ವಿಶ್ವವಿದ್ಯಾನಿಲಯದಲ್ಲಿ ೧೯೦೪ ರಲ್ಲಿ ಅಂಗಶಾಸ್ತ್ರದ ಪ್ರಾಧ್ಯಾಪಕನಾದನು. ತಲೆಬುರುಡೆ, ದವಡೆ ಮತ್ತು ಹಲ್ಲುಗಳು ಇವನ ಪ್ರೀತಿಪಾತ್ರ ವಿಷಯಗಳಾಗಿದ್ದುವು. ಇದರಿಂದ ಅವನಿಗೆ ವಿಕಾಸ (Evolution) ದಲ್ಲಿ ಆಸಕ್ತಿ ಹುಟ್ಟಿದ್ದು ಆಶ್ಚರ್ಯವಲ್ಲ. ಫ್ರಾನ್ಸು ಅಲ್ಸೇಸ್ ಮತ್ತು ಲೋರೇನ್ (Alsace, Lorraine) ಪ್ರಾಂತ್ಯಗಳನ್ನು ತೆಗೆದುಕೊಂಡು ಮಹಾಯುದ್ಧದ ಕೊನೆಯಲ್ಲಿ ಆಕ್ರಮಿಸಿಕೊಂಡಾಗ ಇವನನ್ನು ವಿಶ್ವವಿದ್ಯಾನಿಲಯದಿಂದ ತೆಗೆದುಹಾಕಿದರು. ೧೯೨೪ ರ ವರೆಗೂ ಇವನಿಗೆ ಹೈಡಲ್‌ಬರ್ಗ್ ವಿಶ್ವವಿದ್ಯಾನಿಲಯದಲ್ಲಿ ಅಂಗಶಾಸ್ತ್ರದ ಪ್ರಾಧ್ಯಾಪಕ ಕೆಲಸ ಸಿಕ್ಕಿತು. ನೆನಪಿನ ಮುಖ್ಯ ೧೯೧೪ ರಲ್ಲಿ ಪ್ರಾರಂಭವಾದ ಪತ್ರಿಕೆಯ ಮುನ್ನ ಬರೆದ ಒಂದು ಲೇಖನದಲ್ಲಿ ಮಂಗ ಮತ್ತು ಮಾನವನ ಸೊಂಟದ (Pelvis) ಮೂಳೆಯ ಬದಲಾವಣೆಗಳನ್ನು ವಿವರವಾಗಿಯೂ ತೋರಿಸಿದನು. ಇವನು ೧೯೩೪ ರಿಂದ ೧೯೪೦ ರ ವರೆಗೆ ಚಿಕಾಗೋ ವಿಶ್ವವಿದ್ಯಾನಿಲಯದಲ್ಲಿ ಮಾನವಶಾಸ್ತ್ರ (Anthropology)ದ ಪ್ರಾಧ್ಯಾಪಕನಾಗಿದ್ದನು. ನಾಜಿ ಪ್ರಭುತ್ವ ಇವನನ್ನು ಜರ್ಮನಿಯಿಂದ ಓಡಿಸಿತು.


೧೯೩೫ ರಲ್ಲಿ ಚೀನಾಕ್ಕೆ ಬಂದಮೇಲೆ ಇವನು ಚೀನಾದೇಶದ ಪುರಾತನ ಮಾನವನ (Sinanthropus) ದಂತಪಂಕ್ತಿಯ ರಚನೆ (Dentition) ಮತ್ತು ತಲೆಬುರುಡೆಯ ವಿಷಯವಾದ ವೈಜ್ಞಾನಿಕ ಪ್ರಬಂಧಗಳನ್ನು ಬರೆದನು. ಜಾವಾ ಪುರಾತನ ಮಾನವನಿಗೆ ಹೋಲಿಸಿದರೆ ಪುರಾತನ ಮಾನವನು ಮಂಗಗಳಿಗಿಂತ ಮಾನವನಿಗೇ ಹತ್ತಿರವಿದ್ದನು. ಅವನ ಮಿದುಳು ೧,೦೦೦ ಘ.ಸೆ. ಇತ್ತು. ಇದು ಮಂಗಗಳ ಮಿದುಳಿನ ಅಳತೆಯಾದ ೬೫೦ ಘ.ಸೆ. ಗಿಂತ ಜಾಸ್ತಿಯಾಗಿದ್ದು ಅವನ ಬುದ್ಧಿಶಕ್ತಿ ಹೆಚ್ಚುವಿಕೆಗೆ ಆಧಾರವಾಗಿತ್ತೆಂದು ತೋರುತ್ತದೆ. ಮಿದುಳಿನ ಗಾತ್ರ ಮತ್ತು ತೂಕದ ವಿಷಯದಲ್ಲಿ ಕೆಲವು ಹೋಲಿಕೆಗಳನ್ನು ಮಾಡಿ ವೈಡನ್‌ರೀಕನು ಮಿದುಳಿನ ಅಳತೆ ಹೆಚ್ಚಿದಷ್ಟೂ ಬುದ್ಧಿಶಕ್ತಿ ಹೆಚ್ಚುತ್ತದೆಯೆಂಬ ಸಿದ್ಧಾಂತವೇನೂ ಇಲ್ಲವೆಂಬುದನ್ನು ತೋರಿಸಿದ್ದನು. ಬುದ್ಧಿಶಕ್ತಿಗೆ ಮಿದುಳಿನ ತೂಕವೇ ಮುಖ್ಯವಾದರೆ ೫,೦೦೦ ಗ್ರಾಂ ತೂಕ ಮಿದುಳನ್ನುಳ್ಳ ಆನೆ ಅಥವಾ ೧೦,೦೦೦ ಗ್ರಾಂ ತೂಕ ಮಿದುಳನ್ನು ಹೊಂದಿರುವ ತಿಮಿಂಗಿಲವೇ ಪ್ರಪಂಚದಲ್ಲಿ ಅತ್ಯಂತ ಬುದ್ಧಿಶಕ್ತಿಯುಳ್ಳ ಪ್ರಾಣಿಗಳಾಗಬೇಕಿತ್ತು. ೮,೫೦೦ ಗ್ರಾಂ ದೇಹದ ತೂಕಕ್ಕೆ ಒಂದು ಗ್ರಾಂ ಮಿದುಳಿನ ತೂಕ ತಿಮಿಂಗಿಲಕ್ಕೆ ಇದೆ. ಆದರೆ ಮನುಷ್ಯನಿಗಾದರೆ ೪೪ ಗ್ರಾಂ ದೇಹದ ತೂಕಕ್ಕೆ ಒಂದು ಗ್ರಾಂ ಮಿದುಳಿನ

ನಷ್ಟವಾದ (Extinct) ಮಂಗಮಾನವನದೆಂದು ನಿರ್ಧರಿಸಿದರು. ಆದರೆ ಇಂಗ್ಲಿಷ್ ಮತ್ತು ಅಮೆರಿಕನ್ ಮಾನವಶಾಸ್ತ್ರಜ್ಞರು ಡಾರ್ಟ್‌ರವರ ವಾದವನ್ನು ಒಪ್ಪದೆ ಅವರು ಪರೀಕ್ಷೆಮಾಡಿದ ತಲೆಬುರುಡೆ ಚಿಂಪಾಂಜಿಯದೆಂದು ಹಾಸ್ಯಮಾಡಿ, ಅದಕ್ಕೆ "ಡಾರ್ಟ್‌ರವರ ಮಗು" ಎಂದು ಹೆಸರಿಟ್ಟರು. ಮತ್ತೆ ಕೆಲವರು ಅದನ್ನು ನೋಡಲು ಆಫ್ರಿಕಾಕ್ಕೆ ಹೋದರು. ಅವರ ಪೈಕಿ ಒಬ್ಬರಾದ ಡಾ॥ ಹರ್ಡ್ಲಿಕ (Hrdlica) ರವರಿಗೆ ಸಂಶಯ ನಿವಾರಣೆಯಾಗಲಿಲ್ಲ. ಆದರೆ ದಕ್ಷಿಣ ಆಫ್ರಿಕಾದ ಡಾ॥ ರಾಬರ್ಟ್ ಬ್ರೂಂರವರು ಬಂದ ನಿರ್ಧಾರವೇ ಬೇರೆ. ಬ್ರೂಂರವರು ೧೮೬೬ ರಲ್ಲಿ ಸ್ಕಾಟ್‌ಲೆಂಡಿನ ಪೆಯಿಸ್ಲಿ ಎಂಬಲ್ಲಿ ಜನಿಸಿದರು. ಅವರ ತಂದೆ ಜಾನ್‌ಬ್ರೂಂ ಜೀವಶಾಸ್ತ್ರದಲ್ಲಿ ತುಂಬಾ ಆಸಕ್ತಿಯುಳ್ಳವರಾಗಿದ್ದರು. ಬ್ರೂಂ ಗ್ಲಾಸ್ಗೋ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡಿ ೧೮೮೯ ರಲ್ಲಿ ವೈದ್ಯಶಾಸ್ತ್ರದಲ್ಲಿ (Medicine) ಡಿಗ್ರಿಯನ್ನು ಪಡೆದರು. ಅವರು ಕೆಲವು ಕಾಲ ಲಾರ್ಡ್ ಕೆಲ್‌ವಿನ್‌ರವರ ವಿದ್ಯಾರ್ಥಿಯಾಗಿದ್ದರು. ಬ್ರೂಂ ಆಸ್ಟ್ರೇಲಿಯಾಕ್ಕೆ ಹೋಗಿ ೧೮೯೫ರ ವೇಳೆಗೆ ಅನೇಕ ಲೇಖನಗಳನ್ನು ಪ್ರಕಟಿಸಿದರು. ಅಲ್ಲಿ ಅವರು ಅನೇಕ ಬಗೆಯ ಹಲ್ಲಿಗಳನ್ನು ಶೇಖರಿಸಿದರು. ಅವರು ೧೮೯೬ ರಲ್ಲಿ ಆಸ್ಟ್ರೇಲಿಯಾದಿಂದ ದಕ್ಷಿಣ ಆಫ್ರಿಕಾಗೆ ಶೋಧನೆಗಾಗಿ ಬಂದರು. ಸ್ವಲ್ಪಕಾಲದಲ್ಲೇ ಅವರು ವಿಕ್ಟೋರಿಯಾ ಕಾಲೇಜಿನಲ್ಲಿ ಪ್ರಾಣಿಶಾಸ್ತ್ರದ ಪ್ರಾಧ್ಯಾಪಕರಾದರು. ವೈದ್ಯವೃತ್ತಿಯಿಂದ ಇವರಿಗೆ ಸಾವಿರ ಪೌಂಡ್ ವರಮಾನವಿದ್ದರೂ ೪೫೦ ಪೌಂಡು ವರಮಾನದ ಉಪಾಧ್ಯಾಯವೃತ್ತಿಯನ್ನು ಕೈಗೊಂಡರು. ಈ ಬದಲಾವಣೆಯಿಂದ ಅವರಿಗೆ ಪಳೆಯುಳಿಕೆಯ ವ್ಯಾಸಂಗಕ್ಕೆ ಅನುಕೂಲವಾಯಿತು. ೧೯೦೬ ರಲ್ಲಿ ಬ್ರೂಂ ಅಮೆರಿಕದ ಸಂಗ್ರಹಶಾಲೆಯ ಮುಖ್ಯಸ್ಥರಾದ ಹೆನ್ರಿ ಪೇರ್ ಫೀಲ್ಡ್ ಒಸ್‌ಬರ್ನ್‌ರವರ ಆಹ್ವಾನದ ಮೇಲೆ ಅಮೆರಿಕಾಕ್ಕೆ ಹೋದರು. ತಾವು ಶೇಖರಿಸಿದ ಸಸ್ತನೀ ಪಳೆಯುಳಿಕೆಗಳನ್ನು (Mammalian Fossils) ಅದೇ ಸಂಗ್ರಹಶಾಲೆಗೆ ಕೊಟ್ಟರು. ಮೊದಲನೇ ಮಹಾಯುದ್ಧದಲ್ಲಿ ಇವರು ಲಂಡನ್ ಆಸ್ಪತ್ರೆಯೊಂದರಲ್ಲಿ ಕೆಲಸಮಾಡಬೇಕಾಯಿತು. ೧೯೧೬ ರಲ್ಲಿ ಪುನಃ ದಕ್ಷಿಣ ಆಫ್ರಿಕಾಗೆ ಬಂದರು. ಫೀಲ್ಡ್ ಮಾರ್ಷಲ್ ಸ್ಮಟ್ಸ್ ಬ್ರೂಂರವರ ವಿಚಾರವಾಗಿ ಬರೆದ ಪುಸ್ತಕವೊಂದರಲ್ಲಿ ಬ್ರೂಂ ನಷ್ಟಜೀವಿ ವಂಶಶಾಸ್ತ್ರಕ್ಕೆ ಅದರಲ್ಲೂ ಸಸ್ತನಿಗಳ ವಿಚಾರದಲ್ಲಿ ಮಾಡಿದ ಅಮೂಲ್ಯವಾದ ಸೇವೆಯನ್ನು ಪ್ರಶಂಸಿಸಿದರು. ಸಸ್ತನಿಗಳ ವಿಷಯದಿಂದ ಇವರು ಮಾನವನ ಮೂಲದ (Origin of Man) ಬಗ್ಗೆ ಶೋಧಿಸಲು ತಿರುಗಿದರು. ಆದುದರಿಂದಲೇ ಬ್ರೂಂ ಡಾರ್ಟ್‌ರವರ ಶೋಧನೆಯ ವಿಚಾರ ಕೇಳಿ ಜೋಹಾನ್ಸ್‌ಬರ್ಗ್‌ಗೆ ಬಂದರು. ಬ್ರೂಂ ಟಾಂಗ್ಸ್ ತಲೆಬುರುಡೆ ಮತ್ತು ದವಡೆಗಳನ್ನು ಚೆನ್ನಾಗಿ ಪರೀಕ್ಷಿಸಿ ಅದು



ದಕ್ಷಿಣ ಆಫ್ರಿಕದ ಪುರಾತನ ಮಾನವನು ವಾಸಿಸುತ್ತಿದ್ದ ಗುಹೆಗಳು

(ಮೇಲಿನವು : ಕ್ರೋಂಡ್ರೈ ಮತ್ತು ಸ್ಟರ್ಕ್ ಫಾನ್‌ಟೇನ್ ; ಕೆಳಗಿನದು : ಸ್ವಾರ್ಟ್‌ಕ್ರಾನ್ಸ್)
ಬಾಣದ ಗುರುತು ಗುಹೆಗಳನ್ನು ತೋರಿಸುತ್ತದೆ.



ಡಾ|| ಓಕ್ಲಿ

ಪಿಲ್ಟ್‌ಡೌನ್ (ಪುರಾತನ) ಮಾನವನ
ಕಾಲವನ್ನು ೫,೦೦,೦೦೦ ರಿಂದ
೫೦,೦೦೦ ವೆಂದು ಫ್ಲೋರಿನ್ ಪರೀಕ್ಷೆ
ಯಿಂದ ನಿರ್ಧರಿಸಿದವರು



ಡಾ|| ರಾಬರ್ಟ್ ಬ್ರೂಂ

(ದಕ್ಷಿಣ ಆಫ್ರಿಕದ ಪುರಾತನ ಮಾನವನನ್ನು ಕಂಡುಹಿಡಿದವರು)



ಡಾ|| ಡೇವಿಡ್‌ಸನ್ ಬ್ಲಾಕ್

(ಪುರಾತನ ಪೀಕಿಂಗ್ ಮಾನವನನ್ನು ಕಂಡುಹಿಡಿದವರು)



ಡಾ|| ವಾಷ್‌ಬರ್ನ್

(ವಿಕಸನದಲ್ಲಿ ಮಿದುಳಿಗಿಂತ ಮಾಂಸಖಂಡ ಮುಖ್ಯವೆಂದು ವಾದಿಸಿದವರು)



ಡಾ|| ಲಿಬ್ಬಿ

(ಇಂಗಾಲ ೧೪ ರ ವಿದ್ಯುತ್ ವಿಕರಣಶಕ್ತಿಯಿಂದ ಪ್ರಾಕ್ತನ ವಸ್ತುಗಳ ಕಾಲವನ್ನು ಕಂಡುಹಿಡಿದವರು)

ಮಾನವನಿಗೆ ಸಂಬಂಧಪಟ್ಟದು ಎಂದು ನಿರ್ಧರಿಸಿ ಲೇಖನವನ್ನು ಪ್ರಕಟಿಸಿದರು. ಹಲ್ಲುಗಳ ಪರೀಕ್ಷೆಯಿಂದ ಅದು ಸುಮಾರು ಆರು ವರ್ಷದ ವಯಸ್ಸಿನವನದೆಂದು ಅಭಿಪ್ರಾಯಪಟ್ಟರು.


ಜನರಲ್ ಸ್ಮಟ್ಸ್‌ರವರ ಕೃಪೆಯಿಂದ ಬ್ರೂಂರವರು ಆಫ್ರಿಕಾದಲ್ಲಿ ತಮ್ಮ ಕೆಲಸವನ್ನು ಮುಂದುವರೆಸಲು ಸಾಧ್ಯವಾಯಿತು. ಜೋಹಾನ್ಸ್‌ಬರ್ಗ್‌ಗೆ ೩೦ ಮೈಲಿ ದೂರದಲ್ಲಿದ್ದ ಸ್ಟರ್ಕ್‌ಫಾಂಟೆನ್ ಗುಹೆಯಲ್ಲಿ ಇವರು ತಮ್ಮ ಕೆಲಸವನ್ನು ೧೯೩೬ ರಲ್ಲಿ ಪ್ರಾರಂಭಿಸಿದರು. ಸ್ವಲ್ಪ ಕಾಲವಾದನಂತರ ಅವರಿಗೆ ಅಲ್ಲಿ ಕೆಳಗಿನ ದವಡೆ ಮಾತ್ರ ಇಲ್ಲದ ತಲೆಬುರುಡೆಯೊಂದು ಸಿಕ್ಕಿ ಡಾರ್ಟ್‌ರವರಿಗೆ ಟಾಂಗ್ಸ್‌ನಲ್ಲಿ ಸಿಕ್ಕಿದ 'ಮಿಸಿಂಗ್ ಲಿಂಕ್' ಊಹೆಯೆಲ್ಲ ನಿಜವೆಂದು ಸಮರ್ಥಿಸಿತು. ಕ್ರೊಮ್‌ಡ್ರೈ ಎಂಬಲ್ಲಿ ಅವರು ಮತ್ತೊಂದು ತಲೆಬುರುಡೆಯನ್ನು ಕಂಡುಹಿಡಿದರು. ೧೯೩೮ ಆಗಸ್ಟ್ ೧ ನೇ ತಾರೀಕು ಇವರು ಬಹಳ ಮುಖ್ಯವಾದ ಮತ್ತೊಂದು ಅಸ್ಥಿ ಅವಶೇಷವನ್ನು ಕಂಡುಹಿಡಿದರು. ಅದು ನಡುವಿಗೆ ಸಂಬಂಧಪಟ್ಟ ಮೂಳೆ. ಅದು ಗೊರಿಲ್ಲಾ ಅಥವಾ ಚಿಂಪಾಂಜಿಗಳ ನಡುಮೂಳೆಯಂತಿರದೆ ಮನುಷ್ಯನದಂತಿತ್ತು. ಆದರೆ ಪೂರ್ತಿ ಮಾನವನ ಮೂಳೆಯಂತೆಯೂ ಇರಲಿಲ್ಲ. ಇದರಿಂದ ಆಫ್ರಿಕಾದಲ್ಲಿ ಮಂಗ ಮತ್ತು ಮಾನವನ ಮಧ್ಯೆ ಇದ್ದ ಪುರಾತನ ಮಾನವಕುಲವೊಂದು ಜೀವಿಸಿತ್ತೆಂಬ ವಿಷಯ ಖಚಿತವಾಯಿತು. ಸ್ವಾರ್ಟ್‌ಕ್ರಾನ್ಸ್ (Swartkrans) ಸ್ಟರ್ಕ್‌ಫ್ರಾಂಟೀನ್‌ನಿಂದ ಸುಮಾರು ಒಂದು ಮೈಲಿ. ಅಲ್ಲಿ ಜಾವಾದಲ್ಲಿ ಕೊನಿಂಗ್ಸ್‌ವಾಲ್ಡ್ ರವರಿಗೆ ಸಿಕ್ಕಿದಂತೆ ರಾಕ್ಷಸಾಕೃತಿಯ ಪುರಾತನ ಮಾನವನ ಹಲ್ಲುಗಳು ಸಿಕ್ಕಿ ಆಫ್ರಿಕಾದಲ್ಲೂ ರಾಕ್ಷಸರಂತಹ ಪುರಾತನ ಮಾನವರಿದ್ದರೆಂದು ಗೊತ್ತಾಯಿತು.

ಡಾ|| ಬ್ರೂಂ ವಿಜ್ಞಾನಕ್ಕೆ ಮಾಡಿದ ಸೇವೆಗಾಗಿ ದಕ್ಷಿಣ ಆಫ್ರಿಕಾದ ರಾಯಲ್ ಸಂಸ್ಥೆಯು ಅವರ ನೆನಪಿಗಾಗಿ ೧೯೪೬ ರಲ್ಲಿ ಅವರ ೮೦ ನೇ ವಯಸ್ಸಿನಲ್ಲಿ ಒಂದು ಗ್ರಂಥವನ್ನು ಹೊರಡಿಸಿತು. ಆ ಗ್ರಂಥದಲ್ಲಿ ಡಾ|| ಬ್ರೂಂ ತಾವು ಬರೆದ ೪೦೦ ಲೇಖನಗಳ ಪಟ್ಟಿಯನ್ನು ತಾವೇ ಬರೆದರು. ಜನರಲ್ ಸ್ಮಟ್ಸ್ ಮುನ್ನುಡಿಯನ್ನು ಬರೆದರು. ಎರಡು ತರಹ ಮೂಷಿಕವರ್ಗದ (Rodents) ಪ್ರಾಣಿಗಳು ಮತ್ತು ಒಂದು ತರಹ ಜಾವಲಿ ಇವುಗಳಿಗೆ ಇವರ ಹೆಸರನ್ನೇ ಇಡಲಾಯಿತು.

೧೯೪೯ ನೇ ಇಸವಿಯ *Year Book of Physical Anthropology* ಯಲ್ಲಿ ಪ್ರೊಫೆಸರ್ ಡಬ್ಲ್ಯು. ಲಿ ಗ್ರಾಸ್ ಕ್ಲಾರ್ಕ್ (W. Le Gros Clark) ಬ್ರೂಂರವರು ಕಂಡುಹಿಡಿದ ಪಳೆಯುಳಿಕೆಯ ಎಲುಬುಗಳ ವಿಚಾರವಾಗಿ ವಿಮರ್ಶಾತ್ಮಕ ಲೇಖನ ಬರೆದರು. ಅವರು ಅನೇಕ ಗೋರಿಲ್ಲ ಮತ್ತು ಇತರ ಮಂಗಗಳ ತಲೆ

ಬುರುಡೆಗಳನ್ನು ಕೂಲಂಕಶವಾಗಿ ಪರೀಕ್ಷಿಸಿ ಡಾ|| ಬ್ರೂಂ ರವರು ಆಫ್ರಿಕಾದಲ್ಲಿ ಕಂಡುಹಿಡಿದ ಸುಮಾರು ೩೦ ತಲೆಬುರುಡೆಗಳ ಪಳೆಯುಳಿಕೆಗಳನ್ನು ಅವುಗಳೊಂದಿಗೆ ಹೋಲಿಸಿ ನೋಡಿದರು. ಹುಬ್ಬುಗಳ ಪ್ರದೇಶ (Supra-orbital), ಮುಖ ಮತ್ತು ಹಣೆ ಪ್ರದೇಶಗಳು ಬೇರೆ ಬೇರೆ ಅಳತೆಯನ್ನು ತೋರಿದುವು. ಮಿದುಳಿನ ಕೋಶ ಮತ್ತು ಮೇಲ್ಮುಖದ ಅಳತೆಯನ್ನು ಕಂಡುಹಿಡಿಯಲು ಕ್ಲಾರ್ಕ್‌ರವರು ೨೫ ಗೊರಿಲ್ಲ, ೧೫ ಹೆಣ್ಣು ಗೊರಿಲ್ಲ ೩೮ ಚಿಂಪಾಂಜಿ ಮತ್ತು ೨೫ ಒರಾಂಗುಟಾನ್ ತಲೆಬುರುಡೆಗಳ Supra-orbital Height Index ನ್ನು ಗುಣಿಸಿದರು. ಅದು ಈ ರೀತಿ ಇತ್ತು :—

೨೫ ಗೋರಿಲ್ಲ ತಲೆಬುರುಡೆಗಳು		೫೦
೧೫ ಹೆಣ್ಣು ಗೋರಿಲ್ಲ ತಲೆಬುರುಡೆಗಳು		೫೦
೩೮ ಚಿಂಪಾಂಜಿ	,,	೪೭.೧
೨೫ ಒರಾಂಗ್‌ಟಾನ್	,,	೪೯.೨
ಡಾ|| ಬ್ರೂಂರವರ ದಕ್ಷಿಣ ಆಫ್ರಿಕದಲ್ಲಿ ಸಿಕ್ಕಿದ ಪಳೆಯುಳಿಕೆ ತಲೆಬುರುಡೆ		
No. 5 (Australopithecus)		೬೮



ಚಿತ್ರ ೩. ದಕ್ಷಿಣ ಆಫ್ರಿಕದ ಪೂರ್ವಮಾನವನ ತಲೆಬುರುಡೆ (ಕಪ್ಪುಗೆರೆ) ಡಾ|| ಕ್ಲಾರ್ಕ್‌ರವರು ಚಿಂಪಾಂಜಿ (ಎಡಗಡೆ) ಮತ್ತು ಒರಾಂಗುಟಾನ್ (ಬಲಗಡೆ) ತಲೆಬುರುಡೆಗಳನ್ನು ಅದರೊಡನೆ ಹೋಲಿಸುತ್ತಿರುವುದು

ಹಲ್ಲುಗಳ ಪರೀಕ್ಷೆಯನ್ನೂ ಡಾ|| ಕ್ಲಾರ್ಕ್‌ರವರು ಬಹಳ ಜಾಗರೂಕತೆಯಿಂದ ಮಾಡಿದರು. ಡಾ|| ಬ್ರೂಂ ದಕ್ಷಿಣ ಆಫ್ರಿಕಾದಲ್ಲಿ ಕಂಡುಹಿಡಿದ ಪಳೆಯುಳಿಕೆಯ ಹಲ್ಲುಗಳು ಮಂಗಗಳ ಹಲ್ಲಿನಂತಿರದೆ (Apes) ಮಾನವನ ಹಲ್ಲಿಗೆ ಹೆಚ್ಚು ಹೋಲಿಕೆ ತೋರಿಬಂದವು. ಅವು ಜಾವಾ, ಚೈನಾಗಳ ಪುರಾತನ ಮಾನವನ ಹಲ್ಲುಗಳಂತೆ

ಇದ್ದವು. ಅನಂತರ ಅವರು ಡಾ|| ಬ್ರೂಂ ಕಳುಹಿಸಿದ ಸಡುಮೂಳೆಯನ್ನೂ (Pelvic) ಚೆನ್ನಾಗಿ ಪರೀಕ್ಷಿಸಿದರು. ಅದು ನಾಲ್ಕು ಕಾಲುಗಳ ಪ್ರಾಣಿಗಳಿಗೆ ಸೇರದೆ ಸೆಟ್ಟಗೆ ಎರಡು ಕಾಲಿನ ಮೇಲೆ ನಡೆಯುವ ಪ್ರಾಣಿಗೆ ಸೇರಿತ್ತೆಂದು ಖಚಿತಪಡಿಸಿದರು.

೧೯೫೨ರಲ್ಲಿ ನ್ಯೂಯಾರ್ಕಿನಲ್ಲಿ ಮಾನವಶಾಸ್ತ್ರದ ಮೇಲೆ ನಡೆದ ಅಂತರ ರಾಷ್ಟ್ರೀಯ ವೆನ್ನರ್-ಗ್ರೆನ್ (Wenner-gren) ಚರ್ಚೆಯಲ್ಲಿ ಪಿಯರ್ ಟೇಲ್‌ಹಾರ್ಡ್ ಡಿ ಚಾರ್ದಿನ್ (Pierre Teilhard de Chardin) ಎಂಬ ಪಂಡಿತರು ಆಫ್ರಿಕಾ ಖಂಡವು ಪುರಾತನ ಮಾನವನ ನೆಲೆಯಾಗಿತ್ತೆಂಬ ವಾದವನ್ನು ನಿಸ್ಸಂದೇಹವಾಗಿ ಡಾ|| ಬ್ರೂಂರವರ ಸಂಶೋಧನೆಗಳ ಆಧಾರದ ಮೇಲೆ ಒಪ್ಪಿಕೊಳ್ಳಬಹುದೆಂದು ಮಂಡಿಸಿದರು.

ಆದರೆ ಪಳೆಯುಳಿಕೆಗಳನ್ನು ಕಂಡುಹಿಡಿಯಬಹುದು. ಪಳೆಯುಳಿಕೆಯ ಎಲುಬುಗಳ ಕಾಲವನ್ನು ಹೇಗೆ ಕಂಡುಹಿಡಿಯುವುದು ? ಅನೇಕ ವಿಜ್ಞಾನಿಗಳು ಈ ವಿಚಾರದಲ್ಲಿ ಶೋಧನೆಗಳನ್ನು ಮಾಡಲು ಪ್ರಾರಂಭಿಸಿದರು. ೧೮೦೨ರಲ್ಲಿ ಇಟಲಿಯ ರಸಾಯನಶಾಸ್ತ್ರಜ್ಞರಾದ ಮೊರಿಚಿನಿ ಎಂಬುವರು ರೋಂ ನಗರದ ಹತ್ತಿರ ಸಿಕ್ಕಿದ ಆನೆಯ ಪಳೆಯುಳಿಕೆಯ ಎಲುಬುಗಳನ್ನು ಪರೀಕ್ಷೆಮಾಡಿ ಅದರಲ್ಲಿ ಫ್ಲೋರಿನ್ (Flourine) ಇದೆ ಎಂಬ ಅಂಶವನ್ನು ಹೊರಗೆಡವಿದರು. ಫ್ರೆಂಚ್ ವಿಜ್ಞಾನಿ ಗೆ-ಲುಸಾಕ್ (Gay-Lussac) ಫ್ಲೋರಿಕ್ ಆಸಿಡ್ ಆ ಪ್ರಾಣಿಯು ಜೀವಿಸಿದ ಕಾಲದಲ್ಲೆ ಅದಕ್ಕೆ ಸೇರಿತ್ತೆಂದು ಅಭಿಪ್ರಾಯಪಟ್ಟರು. ಮತ್ತಿಬ್ಬರು ನೆಲದಲ್ಲಿ ಹೂತುಹೋಗದ ದಂತ ಮತ್ತು ಹಲ್ಲುಗಳನ್ನು ಪ್ರಯೋಗಶಾಲೆಯಲ್ಲಿ ಪರೀಕ್ಷಿಸಿ ಅವುಗಳಲ್ಲಿ ಫ್ಲೋರಿನ್ ಇಲ್ಲದಿದ್ದ ಸಂಗತಿಯನ್ನು ತಿಳಿಸಿದರು. ಅವರು ಭೂಮಿಯೊಳಗಿರುವ ಫ್ಲೋರಿನ್ ದಂತವಾಗಲಿ, ಹಲ್ಲಾಗಲಿ ಅಥವಾ ಎಲುಬಾಗಲಿ ಬಹಳ ಕಾಲ ನೆಲದಲ್ಲಿ ಹೂತು ಹೋಗಿದ್ದರೆ ನೆಲದೊಳಗಿರುವ ಫ್ಲೋರಿಕ್ ಆಮ್ಲವನ್ನು ಹೀರಿಕೊಳ್ಳುವುದೆಂದು ತೋರಿಸಿದರು. ಜೇಮ್ಸ್ ಮಿಡಲ್‌ಟನ್ ಎಂಬ ಇಂಗ್ಲಿಷ್ ರಸಾಯನಶಾಸ್ತ್ರಜ್ಞನು ಈ ಸಿದ್ಧಾಂತದ ಪ್ರಕಾರ ತನ್ನಲ್ಲಿದ್ದ ಕೆಲವು ಪಳೆಯುಳಿಕೆಗಳ ಕಾಲವನ್ನು ನಿರ್ಣಯಿಸಿದನು. ಅವನ ಹತ್ತಿರ ೨,೦೦೦ ವರ್ಷಕ್ಕಿಂತ ಹಳೆಯದಾದ ಗ್ರೀಕ್ ಅಸ್ಥಿಪಂಜರವಿತ್ತು. ಅವನು ಅದರಲ್ಲಿದ್ದ Flourine ಭಾಗವನ್ನು ಕಂಡುಕೊಂಡು ಇತರ ಪಳೆಯುಳಿಕೆ ಕಾಲವನ್ನು ೭,೭೦೦ ವರ್ಷಗಳು. ೨೪,೦೦೦ ವರ್ಷಗಳೆಂದು ನಿರ್ಧರಿಸಿದನು. ತದನಂತರ ವಿಜ್ಞಾನಪ್ರಪಂಚವು ಈ ವಿಷಯಕ್ಕೆ ಗಮನಕೊಡಲಿಲ್ಲ.

೫೦ ವರ್ಷಗಳಿಂದೀಚೆಗೆ ಫ್ರೆಂಚ್ ವಿಜ್ಞಾನಿ ಎ. ಕಾರ್‌ನಾಟ್ ಎಂಬುವರು

ಈ ವಿಚಾರದಲ್ಲಿ ಅನೇಕ ಪ್ರಯೋಗಗಳನ್ನು ನಡೆಸಿ ಭೂಶಾಸ್ತ್ರದ ಕೆಲವು ಮುಖ್ಯ ವಿಭಾಗಗಳಿಗೆ ಸಂಬಂಧಪಟ್ಟ ಪಳೆಯುಳಿಕೆಗಳಲ್ಲಿ ಇರಬಹುದಾದ ಫ್ಲೋರಿನ್ ಪಟ್ಟಿಯನ್ನು ತಯಾರಿಸಿದರು.

ಈಗಿನ ವಿಭಾಗ (Recent)	....	೦.೩%
ಪ್ಲಿಯಿಸ್ಟೊಸೀನ್ (Pleistocene)	....	೧.೫%
ಟರ್ಷಿಯರಿ (Tertiary)	....	೨.೩%
ಮೆಸೊಜೊಯಿಕ್ (Mesozoic)	....	೩.೯%
ಪೆಲಿಯೊಜೊಯಿಕ್ (Palaeozoic)	....	೩.೭%

ಆದರೆ ಕೆಲವು ಕಡೆ ಸಿಕ್ಕಿದ ಮೂಳೆ, ಹಲ್ಲು ಮೊದಲಾದುವು ಬೇರೆ ಕಡೆ ಸಿಕ್ಕಿದ ಅಸ್ಥಿ ಅವಶೇಷಗಳಿಗಿಂತ ಜಾಸ್ತಿ, ಮತ್ತೆ ಕೆಲವಲ್ಲಿ ಕಮ್ಮಿ ಕಂಡುಬರುವುವು. ಬೇರೆ ಬೇರೆ ನೆಲದಲ್ಲಿ ಬೇರೆ ಬೇರೆ ಪ್ರಮಾಣದಲ್ಲಿ ಫ್ಲೋರಿನ್ ಇರುವುದೇ ಇದಕ್ಕೆ ಕಾರಣ. ಆ ನೆಲದಲ್ಲಿ ಎಷ್ಟರಮಟ್ಟಿಗೆ ನೀರು ಜಿನುಗಿ ಇಳಿಯಲು ಅವಕಾಶವಿತ್ತೊ, ಅದೂ ಕೂಡ ಫ್ಲೋರಿನ್ ಪ್ರಮಾಣವನ್ನು ನಿರ್ಧರಿಸಲು ಸಹಾಯಕಾರಿಯಾದುದರಿಂದ ವಿಜ್ಞಾನಿಗಳು ಕಾರ್ನಾಟ್‌ರ ಪಟ್ಟಿಯನ್ನು ಅಷ್ಟು ಲಕ್ಷ್ಯಕ್ಕೆ ತೆಗೆದುಕೊಳ್ಳಲಿಲ್ಲ.

ಎರಡನೆ ಮಹಾಯುದ್ಧ ನಡೆಯುತ್ತಿದ್ದಾಗ ಇಂಗ್ಲೆಂಡಿನಲ್ಲಿ ಎಷ್ಟು Phosphate ಸಿಕ್ಕುವುದೆಂಬ ವಿಷಯವನ್ನು ನಿರ್ಧರಿಸಲು ಮತ್ತು ಮಕ್ಕಳ ಹಲ್ಲಿನ ರೋಗವನ್ನು ವಾಸಿಮಾಡುವುದರಲ್ಲಿ ಫ್ಲೋರಿನ್ ಎಷ್ಟರಮಟ್ಟಿಗೆ ಸಹಾಯಕವೆಂಬುದನ್ನು ನಿರ್ಧರಿಸಲು ಡಾ|| ಕೆನೆತ್ ಪೇಜ್ ಓಕ್ಲೆ ಎಂಬುವರು ನಿಯಮಿಸಲ್ಪಟ್ಟರು. ಇವರು ೧೯೧೧ರಲ್ಲಿ ಅಮರ್‌ಶಾಮ್ ಎಂಬಲ್ಲಿ ಜನಿಸಿದರು. ಇವರಿಗೆ ಮೊದಲಿನಿಂದಲೂ ಪುರಾತನ ಮಾನವನ ಅಸ್ಥಿ ಅವಶೇಷಗಳನ್ನು ಕಂಡರೆ ಆಸೆ. ಅವರು ಲಂಡನ್ ವಿಶ್ವವಿದ್ಯಾನಿಲಯದ ಕಾಲೇಜಿನಲ್ಲಿ ಮಾನವಶಾಸ್ತ್ರ ಮತ್ತು ಭೂಶಾಸ್ತ್ರ (Geology)ಗಳ ವ್ಯಾಸಂಗವನ್ನು ಮುಗಿಸಿ ಬ್ರಿಟಿಷ್ ಮ್ಯೂಸಿಯಂ (ಪ್ರಕೃತಿಶಾಸ್ತ್ರದ ಶಾಖೆ)ನಲ್ಲಿ ಕೆಲಸಕ್ಕೆ ಸೇರಿದರು. ಒಂದೇ ನೆಲದಲ್ಲಿ ಪ್ರಾಣಿಯ ಅಥವಾ ಮನುಷ್ಯನ ಮೂಳೆಗಳು ಬೇರೆ ಬೇರೆ ಕಾಲದಲ್ಲಿ ಹೂಳಲ್ಪಟ್ಟಿದ್ದರೆ ಆ ಕಾಲಗಳನ್ನು ಕಂಡುಹಿಡಿಯಲು ಫ್ಲೋರಿನ್ ಒರೆ (Flourine Test) ಸಹಾಯಕವಾಗುವುದೆಂದು ಅವರು ತೋರಿಸಿದರು. ೧೮೮೮ರಲ್ಲಿ ಗ್ಯಾಲಿಹಿಲ್ (ಕೆಂಟ್) ಎಂಬ ಕಡೆ ಸಿಕ್ಕಿದ ತಲೆಬುರುಡೆಯು ಬ್ರಿಟಿಷ್ ಮ್ಯೂಸಿಯಂನಲ್ಲಿ ಇಡಲ್ಪಟ್ಟಿತ್ತು. ಅದು ಬಹಳ ಪುರಾತನವೆಂದು ಒಂದು ಗುಂಪು, ಇತ್ತೀಚಿನದೆಂದು ಇನ್ನೊಂದು ಗುಂಪು—ವಾದ ವಿವಾದದಲ್ಲಿ ತೊಡಗಿದ್ದುವು. ಓಕ್ಲೆಯವರು ಈ ವಾದ

ವಿವಾದಗಳನ್ನು ಕೊನೆಗಾಣಿಸಲು ಅದಕ್ಕೆ ಫ್ಲೋರಿನ್ ಒರೆ ಹಾಕಲು ನಿರ್ಧರಿಸಿದರು. ಗ್ಯಾಲಿಹಿಲ್ ಮೂಳೆಗಳ ಪರೀಕ್ಷೆಯಿಂದ ೦.೪% ಫ್ಲೋರಿನ್ ಇರುವುದು* ಗೊತ್ತಾಯಿತು. ಇತರ ಪ್ರಾಣಿಗಳ ಮೂಳೆಗಳು—ಕೆಲವು ಮಧ್ಯ ಪ್ಲಿಸ್ಟೊಸೀನ್ (ಭೂಯುಗ) ಮತ್ತೆ ಕೆಲವು ಮೇಲಿನ ಪ್ಲಿಸ್ಟೊಸೀನ್ (Upper and Middle Pleistocene)ನವು—೧.೭ ರಿಂದ ೨.೮% ಮತ್ತು ೦.೯ ರಿಂದ ೧.೪% ಫ್ಲೋರಿನ್ ತೋರಿಸಿದುವು. ಇದರಿಂದ ಗ್ಯಾಲಿಹಿಲ್ ತಲೆಬುರುಡೆ ಅಂತಹ ಪುರಾತನ ಕಾಲಕ್ಕೇನೂ ಸೇರಿರಲಿಲ್ಲವೆಂಬ ಅಂಶ ತಿಳಿಯಿತು. ೧೯೪೮ ರಲ್ಲಿ ಅಮೆರಿಕದ ಮಾನವಶಾಸ್ತ್ರಜ್ಞರಾದ ಆಷ್ಲೆ ಮಾಂಟೆಗು ಎಂಬುವರು ಗ್ಯಾಲಿಹಿಲ್ ಪ್ರದೇಶವನ್ನು ಪರೀಕ್ಷಿಸಲು ಇಂಗ್ಲೆಂಡಿಗೆ ಬಂದರು. ಅವರು ಗ್ಯಾಲಿಹಿಲ್ ತಲೆಬುರುಡೆ ಸಿಕ್ಕಿದ ದಪ್ಪ ಮರಳನ್ನು (Gravel) ಪರೀಕ್ಷಿಸಿದರು. ಅದರಲ್ಲಿದ್ದ ಸುಣ್ಣದ ಮೂಲವಸ್ತು (Calcium) ಪೂರ್ತಿ ಕಳೆದು ಹೋಗಿತ್ತು (Decalcified). ಆಗ ಮೂಳೆಗಳೇನಾದರೂ ಅಲ್ಲಿ ಇದ್ದಿದ್ದರೆ ಅವು ಕೂಡಾ ನಾಶವಾಗುತ್ತಿದ್ದುವು. ಅವು ಉಳಿದುಬಂದುದ್ದರಿಂದ ಆ ದಪ್ಪ ಮರಳಿನ ಸುಣ್ಣದ ಮೂಲವಸ್ತು ಕಳೆದುಹೋದಮೇಲೆ ಮೂಳೆಗಳು ಅಲ್ಲಿ ಬಂದಿರಬೇಕೆಂದು ಅವರು ಗೊತ್ತುಮಾಡಿದರು. ಓಕ್ಲೆಯವರ ತೀರ್ಮಾನ, ಮಾಂಟೆಗುರವರ (Montagu) ಸಿದ್ಧಾಂತ ಒಂದಕ್ಕೊಂದು ಖಚಿತಪಡಿಸಿತು. ಇದಾದ ನಂತರ ಸ್ವಾನ್ಸ್‌ಕೂಂಬ್ (Swanscombe) ತಲೆಬುರುಡೆ ಮತ್ತು ಅದರ ಜೊತೆಯಲ್ಲಿ ಸಿಕ್ಕಿದ ಕೆಲವು ಪುರಾತನ ಪ್ರಾಣಿಗಳ ಮೂಳೆಗಳಲ್ಲಿ ಫ್ಲೋರಿನ್ ಎಷ್ಟಿದೆ ಎಂದು ತಿಳಿಯಲು ಓಕ್ಲೆಯವರು ತಮ್ಮ ಪ್ರಯೋಗಗಳನ್ನು ನಡೆಸಿದರು. ಭೂಶಾಸ್ತ್ರದ ಆಧಾರದ ಪ್ರಕಾರ ಅವುಗಳು ಬಹಳ ಪುರಾತನ ಕಾಲಕ್ಕೆ ಸೇರಿದ್ದೆಂದು ಊಹಿಸಲಾಗಿತ್ತು. ಮೊದಲನೆ ಪ್ರಯೋಗ ೧.೯%, ಎರಡನೆ ಪ್ರಯೋಗ ೨% ಫ್ಲೋರಿನ್ ತೋರಿಸಿತು. ಇದರಿಂದ ಅದು ತುಂಬಾ ಪುರಾತನಕಾಲಕ್ಕೆ ಸೇರಿದ್ದೆಂಬ ವಿಷಯ ಗೊತ್ತಾಯಿತು. ಓಕ್ಲೆಯವರು ಅದರ ಕಾಲ ೧೦೦,೦೦೦ ವರ್ಷಗಳಿಗಿಂತ ಹಿಂದಿನದೆಂದು ಅಭಿಪ್ರಾಯಪಟ್ಟರು. ಸ್ವಾನ್ಸ್‌ಕೂಂಬ್ ಪುರಾತನ ಮಾನವನು ತಾನು ಜೀವಿಸಿದ್ದ ಕಾಲದಲ್ಲಿ ಉಪಯೋಗಿಸಿದ ಚಕಮುಕಿಕಲ್ಲಿನ (Flint) ಆಯುಧಗಳೂ ಈ ಮೂಳೆಗಳ ಜೊತೆಯಲ್ಲಿ ಸಿಕ್ಕಿದವು. (ಚಿತ್ರ ೫೫).

ಇಷ್ಟೇ ಅಲ್ಲದೆ ಇಂಗ್ಲೆಂಡಿನಲ್ಲಿ ಪಿಲ್ಟ್‌ಡೌನ್ ತಲೆಬುರುಡೆ ಮತ್ತು ದವಡೆಯ

---

* ನೆಲದ ಒಳಗಿರುವ ನೀರಿನಲ್ಲಿ ಫ್ಲೋರಿನ್ ಇರುವ ವಿಷಯವನ್ನು ಹಿಂದೆಯೇ ತಿಳಿಸಿದೆ. ಹಲ್ಲು ಮತ್ತು ಮೂಳೆ ಫ್ಲೋರಿನ್ ಸಂಗಡ ಸೇರಿದರೆ ಅವುಗಳಲ್ಲಿರುವ ಹೈಡ್ರಾಕ್ಸಿ ಅಪಟೈಟ್ ಫ್ಲೋರೊ ಅಪಟೈಟಾಗಿ ಪರಿವರ್ತನೆಯಾಗುವುದು.

ಕಾಲನಿರ್ಣಯದ ಬಗ್ಗೆ ಬಹಳ ಹುರುಪಿನಿಂದ ವಿಜ್ಞಾನಿಗಳಲ್ಲಿ ಚರ್ಚೆ ನಡೆಯುತ್ತಿತ್ತು. ಕೆಲವರಂತೂ ಅದು ೫೦೦,೦೦೦ ವರ್ಷಗಳಿಗಿಂತ ಕಡಿಮೆ ಇಲ್ಲವೆಂದು ನಿರ್ಧರಿಸಿದ್ದರು. ಮತ್ತೆ ಕೆಲವರು ಅದರ ಕಾಲ ಇತ್ತೀಚಿನ ಭೂಯುಗ (Holocene) ವೆಂದು ವಾದಿಸುತ್ತಿದ್ದರು. ೧೯೦೮ ರಲ್ಲಿ ಪಿಲ್ಟ್‌ಡೌನ್ ತಲೆಬುರುಡೆಯ ಭಾಗವನ್ನು ಡಾಸನ್ ಎಂಬುವರು ಕಂಡುಹಿಡಿದರು. ಇದು ದಪ್ಪ ಮರಳಿನ ಗುಳಿಯೊಂದರಲ್ಲಿ ಸಿಕ್ಕಿತು.



ಚಿತ್ರ ೫. ಸ್ವಾನ್ಸ್‌ಕೂಂಬ್ (ಇಂಗ್ಲೆಂಡ್). ಪೂರ್ವಮಾನವನ ತಲೆಬುರುಡೆ ಅವನು ಉಪಯೋಗಿಸುತ್ತಿದ್ದ ಕಲ್ಲಿನ ಆಯುಧಗಳು

೧೯೧೧ ಮತ್ತು ೧೯೧೨ ರಲ್ಲಿ ಡಾಸನ್ ಮತ್ತು ಸರ್ ಆರ್ಥರ್ ವುಡ್‌ವರ್ಡ್ ಎಂಬ ಬ್ರಿಟಿಷ್ ಮ್ಯೂಸಿಯಂ ಮಾನವಶಾಸ್ತ್ರಜ್ಞನು ಆ ತಲೆಬುರುಡೆಗೆ ಸೇರಿದ ಮತ್ತೆ ಕೆಲವು ಭಾಗಗಳನ್ನು ಅಲ್ಲೇ ಪತ್ತೆಮಾಡಿದರು. ದಪ್ಪ ಮರಳಿನ ಇತರ ಪದರಗಳಲ್ಲಿ ಘೇಂಡಾಮೃಗ, ನೀರುಕುದುರೆ, ಮಸ್ಟೊಡನ್ ಎಂಬ ಆನೆಯಂತಹ ಪ್ರಾಣಿ ಮತ್ತು ಇಲಿ ಅಥವಾ ಅಳಿಲಿನಂತಿರುವ ಬೀವರ್ ಎಂಬ ಪ್ರಾಣಿ—ಇವುಗಳ ಪಳೆಯುಳಿಕೆಯ ಎಲುಬುಗಳು ಕೂಡಾ ಸಿಕ್ಕಿದವು. ಇದರ ಆಧಾರದ ಮೇಲೆ ಒಂದು ಗುಂಪು ಪಿಲ್ಟ್‌ಡೌನ್ ಮಾನವ ಮಸ್ಟೊಡನ್ ಎಂಬ ಆನೆ ತರಹದ ಪ್ರಾಣಿಯ ಸಮಕಾಲೀನರೆಂದರು. ಆದುದರಿಂದ ಅವರು ಅವನನ್ನು ಕೆಳಗಿನ ಪ್ಲಿಯಿಸ್ಟೊಸೀನ್ (Lower Pleistocene) ಎಂಬ ಭೂಯುಗಕ್ಕೆ ಸೇರಿಸಿದರು. ಕೆಲವರು ಇದು ಸರಿಯಲ್ಲವೆಂದು ವಾದಿಸುತ್ತಿದ್ದರು. ಈ ಬಿಸಿಬಿಸಿ ವಾತಾವರಣದಲ್ಲಿ ಓಕ್ಲಿಯವರು ಅದನ್ನು ಫ್ಲೋರಿನ್ ಒರೆಯಿಂದ ಪರೀಕ್ಷಿಸಿ ಪಿಲ್ಟ್‌ಡೌನ್ ತಲೆಬುರುಡೆಯ ಕಾಲದ ಸಮಸ್ಯೆಯನ್ನು ಬಿಡಿ

ಸಿದರು. ಸೋಜಿಗವೇನೆಂದರೆ ಪಿಲ್ಟ್‌ಡೌನ್ ತಲೆಬುರುಡೆ ಪುರಾತನ ಮಾನವನ ತಲೆಯ ಮಾಟದಂತೆಯೆ ಇತ್ತು. ಅದರಲ್ಲಿ ಯಾರಿಗೂ ಸಂದೇಹವಿರಲಿಲ್ಲ. ಆದರೆ ದವಡೆ (Jaw) ಮಾತ್ರ ಮಾನವನದಂತಿರಲಿಲ್ಲ. ಹೆಚ್ಚಾಗಿ ಚಿಂಪಾಂಜಿಯದಂತೆ ತೋರುತ್ತಿತ್ತು. ವಿಜ್ಞಾನಿಗಳಿಗೆ ಈ ತೊಡಕನ್ನು ಬಿಡಿಸಲು ಸಾಧ್ಯವಾಗದೆ ತೊಳಲುತ್ತಿದ್ದರು. ಇಷ್ಟೇ ಅಲ್ಲದೆ ಆ ದಪ್ಪ ಮರಳಿನಲ್ಲೆ ತಲೆಬುರುಡೆ ಸಿಕ್ಕಿದನಂತರ ಒಂದು ಕೋರೆಹಲ್ಲೂ ಸಿಕ್ಕಿತು.

ಸ್ಮಿತ್ ವುಡ್‌ವರ್ಡ್‌ರವರು ತಲೆಬುರುಡೆ ಮತ್ತು ದವಡೆಗಳ ಆಧಾರದ ಮೇಲೆ ರಚಿಸಿದ ತಲೆಯ ಆಕಾರ ಸುಮಾರು ೧೦೭೦ c.c. (ಕ್ಯೂಬಿಕ್ ಸೆಂಟಿಮೀಟರ್) ಮಿದುಳನ್ನು ತೋರಿಸಿತು. ಪ್ರಖ್ಯಾತ ಅಂಗಶಾಸ್ತ್ರಜ್ಞ ಸರ್ ಆರ್ಥರ್ ಕೀತ್‌ರವರು ರಚಿಸಿದ ತಲೆಯ ಆಕಾರ ೧೫೦೦ c.c. ಯ ಮಿದುಳನ್ನು ತೋರಿಸಿತು. ಚರ್ಚೆ ಮತ್ತು ಪ್ರಯೋಗಗಳ ಫಲಿತಾಂಶವಾಗಿ ಕೊನೆಗೆ ಪಿಲ್ಟ್‌ಡೌನ್ ಮಾನವನಿಗೆ ೧೪೦೦ c.c. ಮೆದುಳಿತ್ತೆಂದು ವಿದ್ವಾಂಸರು ಒಪ್ಪಿಕೊಂಡರು. ಅಂದರೆ ಪಿಲ್ಟ್‌ಡೌನ್ ಮಾನವನು ಆಧುನಿಕ ಮಾನವನಿಗಿದ್ದಂತೆಯೇ ಇದ್ದ ಮಿದುಳನ್ನು ಹೊಂದಿದ್ದನೆಂದು ಗೊತ್ತಾಯಿತು.

೧೯೪೮ ರಲ್ಲಿ ಓಕ್ಲಿಯವರು ಪಿಲ್ಟ್‌ಡೌನ್ ತಲೆಬುರುಡೆ ಮತ್ತು ಹಲ್ಲುಗಳಿಂದ ದಂತವೈದ್ಯರು ಉಪಯೋಗಿಸುವ ಬೈರಿಗೆಯಿಂದ (Drill) ೧೭ ಸ್ಯಾಂಪಲ್ (ನಮೂನೆ) ಗಳನ್ನು ತೆಗೆದು ಪ್ರಯೋಗಶಾಲೆಯಲ್ಲಿ ಫ್ಲೋರಿನ್ ಪರೀಕ್ಷೆ ನಡೆಸಿದರು. ಅವುಗಳಲ್ಲಿದ್ದ ಫ್ಲೋರಿನ್ ತುಂಬಾ ಕಡಿಮೆ ಪ್ರಮಾಣದಲ್ಲಿತ್ತು. ಸುಮಾರು ೦.೨% ಇದ್ದುದ್ದರಿಂದ ಅವು ತುಂಬಾ ಕಾಲ ಆ ದಪ್ಪ ಮರಳಿನಿಂದ ಕೂಡಿದ ನೆಲದಲ್ಲಿ ಇರಲಿಲ್ಲವೆಂದು ಖಚಿತ ವಾಯಿತು. ಇದಕ್ಕೆ ವ್ಯತಿರಿಕ್ತವಾಗಿ ಮಸ್ಟೊಡೋನ್ (ಆನೆಯಂತಹ ಪ್ರಾಣಿ) ಎಲುಬು ೩.೧% ವರೆಗೂ ಹೋಯಿತು. ನೀರುಕುದುರೆಯ (Hippopotamus) ಎಲುಬಿ ನಲ್ಲಿ ೧.೫% ವರೆಗೂ ಇತ್ತು. ಆದರೆ ಅಳಿಲಿನಂತಿದ್ದ ಬೀವರ್ ಎಂಬ ಪ್ರಾಣಿಯ ಎಲುಬು ಮಾತ್ರ ಪಿಲ್ಟ್‌ಡೌನ್ ತಲೆಬುರುಡೆ ತೋರಿಸಿದಂತೆ ೦.೨% ತೋರಿಸಿತು. ಇದರಿಂದ ಬೀವರ್, ಪಿಲ್ಟ್‌ಡೌನ್ ಮಾನವನ ಸಹಜೀವಿಯಾಗಿತ್ತೆಂದು ವ್ಯಕ್ತ ವಾಯಿತು. ಭೂಶಾಸ್ತ್ರದ ಆಧಾರವೂ (Geologic Evidence) ಕೂಡಾ ಇದೇ ಅಭಿಪ್ರಾಯವನ್ನು ಬಲಪಡಿಸಿತು. ಡಾ|| ಓಕ್ಲಿಯವರು ಪಿಲ್ಟ್‌ಡೌನ್ ಪ್ರದೇಶದಲ್ಲಿ ಹರಿಯುತ್ತಿದ್ದ ಔಸ್ (Ouse) ನದಿ ಆ ದಪ್ಪ ಮರಳನ್ನು ತನ್ನ ಹರಿಯುವಿಕೆಯ ಫಲ ವಾಗಿ ಅನೇಕ ಸಾರಿ ತಿರಿಪಿಹಾಕಿತ್ತೆಂದು ತೋರಿಸಿದರು. ಈ ಹರಿಯುವಿಕೆಯ ಬದಲಾ ವಣೆಗಳ ಕಾಲವನ್ನು ಅವರು ಭೂಶಾಸ್ತ್ರದ ಆಧಾರದಿಂದ ೫೦,೦೦೦ ವರ್ಷಗಳೆಂದು

ಗುಣಿಸಿದರು. ಪಿಲ್ಟ್‌ಡೌನ್ ಪುರಾತನ ಮಾನವನ ಕಾಲ ಹೀಗೆ ೫೦೦,೦೦೦ ವರ್ಷದಿಂದ ೫೦,೦೦೦ ವರ್ಷಗಳಿಗೆ ಇಳಿಯಿತು.


೧೯೫೩ ರಲ್ಲಿ ತಿರಿಗಿ ಪಿಲ್ಟ್‌ಡೌನ್ ಪುರಾತನ ಮಾನವನ ವಿಚಾರದಲ್ಲಿ ಸುಂಟರಗಾಳಿಯಂತೆ ಚರ್ಚೆ ಪ್ರಾರಂಭವಾಯಿತು. ೫೦,೦೦೦ ವರ್ಷಗಳಿಂದೀಚಿನ ಮಾನವನ ದವಡೆಯು ಮಂಗನದಂತೆ ಇರಲು ಸಾಧ್ಯವಿಲ್ಲವೆಂದು ಅನೇಕರು ವಾದಿಸಲು ಪ್ರಾರಂಭಿಸಿದರು. ಆಧುನಿಕ ಮಾನವನಂತೆ ತಲೆಬುರುಡೆ (ಅಂದರೆ ೧೪೦೦-೧೫೦೦ c.c. ಮಿದುಳು) ಮಂಗನಂತೆ ದವಡೆ—ವಿಜ್ಞಾನಿಗಳಿಗೆ ಇದು ಅರ್ಥವಾಗಲಿಲ್ಲ. ಪಿಲ್ಟ್‌ಡೌನ್ ಮಾನವನ ವಿಚಾರದಲ್ಲಿ ತಿರಿಗಿ ಶೋಧನೆ ಪ್ರಾರಂಭವಾಯಿತು. ಡಾ॥ ಓಕ್ಲಿ, ಡಾ॥ ಲಿಗ್ರಾಸ್ ಕ್ಲಾರ್ಕ್ ಮತ್ತು ಡಾ॥ ವೀನರ್ (Weiner) ಮೊದಲಾದ ಮೂರು ವಿಜ್ಞಾನಿಗಳ ಸಮಿತಿಯೊಂದು ಇದಕ್ಕಾಗಿ ನಿಯಮಿತವಾಯಿತು ಹೆಚ್ಚು ಪ್ರಮಾಣದಲ್ಲಿ ಮೂಳೆಗಳ ಸ್ಯಾಂಪಲ್ (Sample)ಗಳನ್ನು ತೆಗೆದುಕೊಳ್ಳಲಾಯಿತು. ಅವುಗಳಲ್ಲಿದ್ದ ಸಾರಜನಕ (ನೈಟ್ರೋಜನ್) ಪ್ರಮಾಣವನ್ನು ಗಮನಕ್ಕೆ ತೆಗೆದುಕೊಳ್ಳಲಾಯಿತು. ಹಲ್ಲುಗಳ ಪರೀಕ್ಷೆಯನ್ನು ಬಹಳ ತೀಕ್ಷ್ಣವಾಗಿ ಮಾಡಲಾಯಿತು. ಇದರಿಂದ ದವಡೆ ಮತ್ತು ಹಲ್ಲುಗಳು ನಕಲಿ (Fake) ಎಂದು ಗೊತ್ತಾಯಿತು. ಸುಮಾರು ಹತ್ತು ವರ್ಷ ವಯಸ್ಸಿನಲ್ಲಿ ಸತ್ತುಹೋದ ಮಂಗನ ದವಡೆಯನ್ನು ಆ ತಲೆಬುರುಡೆಗೆ ಜಂಟಿಸಲಾಗಿತ್ತು. ದವಡೆ ಮತ್ತು ಹಲ್ಲು ಆಧುನಿಕ ಕಾಲದ ಮಂಗನದ್ದಾದುದರಿಂದಲೇ ಬಹಳ ಕಡಿಮೆ ಪ್ರಮಾಣದಲ್ಲಿ ಪ್ಲೋರಿನ್ ಮತ್ತು ಬಹಳ ಹೆಚ್ಚು ಪ್ರಮಾಣದಲ್ಲಿ ನೈಟ್ರೋಜನ್ ಇದ್ದುದಕ್ಕೆ ಕಾರಣವೆಂದು ತಿಳಿಯಿತು. ದವಡೆಯ ಬಣ್ಣವನ್ನು ಬಹಳ ಕಾಲ ನೆಲದಲ್ಲಿ ಹೂತು ರೂಪಾಂತರಹೊಂದಿ ಬಣ್ಣ ಬದಲಾಯಿಸಿದ್ದ ತಲೆಬುರುಡೆಗೆ ತಕ್ಕಂತೆ ರಸಾಯನಿಕ ಪ್ರಯೋಗದಿಂದ ಬದಲಾಯಿಸಲಾಗಿತ್ತು. ಹಲ್ಲುಗಳನ್ನು ಉಜ್ಜಿ ಸೇರಿಸಿದ್ದರಾದ್ದರಿಂದ ವಿಶೇಷರೀತಿಯ ಸೂಕ್ಷ್ಮ ದರ್ಶಕಯಂತ್ರ (Microscope) ದಲ್ಲಿ ನೋಡಿದಾಗ ಅಲ್ಲಲ್ಲೆ ಉಜ್ಜುವಾಗ ಸಂಭವಿಸಿದ ಗೀಚುಗಳು (Scratches) ಕಂಡುಬಂದುವು. ಮೂರು ವಿಜ್ಞಾನಿಗಳು ಈ ಪರೀಕ್ಷೆಗಳ ಫಲಿತಾಂಶಗಳನ್ನು ತಮ್ಮ ವರದಿಯಲ್ಲಿ ನಿವೇದಿಸಿದರು.

ವಿಕಸನದ (Evolution) ಬಗ್ಗೆ ಇತ್ತೀಚಿನ ಮಾನವಶಾಸ್ತ್ರಜ್ಞರು (Anthropologists) ಪ್ರಯೋಗಶಾಲೆಯಲ್ಲಿ ಮಾಡಿದ ಪ್ರಯೋಗಗಳ ಆಧಾರದ ಮೇಲೆ ಕೆಲವು ಮುಖ್ಯ ಸಿದ್ಧಾಂತಗಳನ್ನು ಮಾಡಿದ್ದಾರೆ. ಇವರಲ್ಲಿ ಚಿಕಾಗೋ ವಿಶ್ವವಿದ್ಯಾನಿಲಯದ ಪ್ರೊಫೆಸರ್ ವಾಷ್‌ಬರ್ನ್‌ರವರು ತುಂಬಾ ಪ್ರಖ್ಯಾತರು. ಅವರು ಪೂರ್ವಮಾನವ, ಆಧುನಿಕಮಾನವ ಮತ್ತು ಮಂಗಗಳಲ್ಲಿ ಆದ ಮುಖ್ಯಬದಲಾವಣೆ ಮಿದುಳಿನ ವಿಚಾರ

ದಲ್ಲಿ ಅಲ್ಲ, ಆದರೆ ಮಾಂಸಖಂಡದಲ್ಲಿ ಆದ ಬದಲಾವಣೆ ಎಂದು ವಾದಿಸಿದ್ದಾರೆ. ವಿಕಸನದಲ್ಲಿ (Evolution) ದವಡೆಯ ಮಾಂಸಖಂಡ ತುಂಬಾ ಯಶಸ್ವಿಯಾದ ಪಾತ್ರ ವಹಿಸಿತ್ತೆಂದು ಅವರ ಅಭಿಪ್ರಾಯ. ಇದನ್ನು ತೋರಿಸಲು ಅವರು ೨೨ ಇಲಿಗಳನ್ನು ಹುಟ್ಟಿದಾಗಲೇ ದವಡೆಯ ಮಾಂಸಖಂಡವನ್ನು ಒಂದು ದವಡೆಯ ಕಡೆ ಮಾತ್ರ ತೆಗೆದರು. ಮತ್ತೆ ಹತ್ತರಲ್ಲಿ ತಲೆಬುರುಡೆಯಲ್ಲಿ ಅಡ್ಡಡ್ಡವಾಗಿರುವ ಉದ್ದವಾದ ಮತ್ತು ಹಿಂಭಾಗದಲ್ಲಿರುವ ಮಾಂಸಖಂಡವನ್ನು 'Nuchal Crest'ನಿಂದ ತೆಗೆದರು. ಕೆಲವು ಕಾಲದ ಮೇಲೆ ಈ ಇಲಿಗಳು ತಾಯಿಯ ಬಳಿ ಎಂದಿನಂತೆ ಓಡಾಡುತ್ತಿದ್ದುವು. ಅವು ನಾಲ್ಕು ತಿಂಗಳಲ್ಲಿ ಬೆಳೆದು ದೊಡ್ಡವಾದಾಗ ಅವುಗಳ ಮೂಳೆಗಳನ್ನು ವಾಷ್‌ಬರ್ನ್ ಪರೀಕ್ಷಿಸಿದರು. ತಲೆಯಲ್ಲಿ ದೊಡ್ಡ ಮಾರ್ಪಾಟಾಗಿತ್ತು. ಶಸ್ತ್ರ ಪ್ರಯೋಗವಾಗದ ಕಡೆ ದಪ್ಪ ಹುಬ್ಬಿನಿಂದ (Heavy Brow Ridges) ಕೂಡಿದ್ದುವು. ಶಸ್ತ್ರಪ್ರಯೋಗವಾದ ಕಡೆ ತಲೆಬುರುಡೆ ಸಯವಾಗಿ ಹಳ್ಳತಿಟ್ಟುಗಳಿಲ್ಲದಂತೆ ಕಾಣಿಸಿತು. ಅಂದರೆ ಒಂದು ಕಡೆ ಇಲಿಯ ತಲೆಬುರುಡೆ 'ನಿಯಾಂಡರ್‌ಥಾಲ್' ಮಾನವನದರಂತೆಯೂ, ಮತ್ತೊಂದು ಕಡೆ ಆಧುನಿಕ ಮಾನವನದರಂತೆಯೂ ಈ ಪ್ರಯೋಗದಿಂದ ಮಾರ್ಪಾಡಾಗಿತ್ತು. ಹೀಗೆ ಮಾಂಸಖಂಡಕ್ಕೆ ತಲೆಬುರುಡೆಯ ಆಕಾರವನ್ನು ನಿರ್ಧರಿಸುವ ಶಕ್ತಿ ಇದೆ ಎಂದು ಅವರು ತೋರಿಸಿದರು. ಅವರು ಮಾಂಸಖಂಡದ ಬದಲು ತಲೆಮೂಳೆಗಳನ್ನು ಬದಲಾಯಿಸುವ ಕೆಲವು ಪ್ರಯೋಗಗಳನ್ನು ಮಾಡಿದರು. ತೆಗೆದುಹಾಕಿದ ಮೂಳೆಗಳು ಸ್ವಲ್ಪ ಕಾಲವಾದ ಮೇಲೆ ಬೆಳೆದವೇ ವಿನಃ ಬೇರೆ ಯಾವ ಬದಲಾವಣೆಯೂ ಆಗಲಿಲ್ಲ.

ಪೂರ್ವ ಮಾನವನ ಮತ್ತು ಮಂಗಗಳ ನಡುಮೂಳೆಯಲ್ಲಿ ಆದ ಬದಲಾವಣೆಯೇ ವಿಕಸನದಲ್ಲಿ ಅತಿ ಮುಖ್ಯ (ಚಿತ್ರ ೬). ಮಂಗಗಳಲ್ಲಿ ನಡುಮೂಳೆ ಸ್ವಲ್ಪ ಓರೆಯಾಗಿ ದೊಡ್ಡದಾಗಿ ಇರುತ್ತದೆ. ಇದರಿಂದ ಅವು ಕೆಲವು ಹೆಜ್ಜೆಗಳನ್ನು ನೆಟ್ಟನೆ (Erect) ನಡಗೆಯಲ್ಲಿ ಹೋಗಬಲ್ಲವು. ಅನಂತರ ಅವು ಕೈಗಳನ್ನು ಸಂಚಾರದಲ್ಲಿ ಉಪಯೋಗಿಸಬೇಕಾಗುವುದು. ಮನುಷ್ಯನ ನಡುಮೂಳೆ ಮೋಟಾಗಿದ್ದು ನೆಟ್ಟಗಿದ್ದುದರಿಂದ ಅವನಿಗೆ ನೆಟ್ಟಗೆ ನಡೆಯಲು ಅವಕಾಶವಾಯಿತು. ಇದರಿಂದ ಅವನ ಕೈಗಳು ಸಂಚಾರಕ್ಕೆ ಉಪಯೋಗವಾಗುವುದಕ್ಕೆ ಬದಲಾಗಿ ಬೇರೆ ಇತರ ಕೆಲಸಗಳಿಗೆ ಉಪಯುಕ್ತವಾಗುವಂತೆ ಆದವು. ಕೈಗಳು ಆಯುಧಗಳನ್ನು ಮಾಡಲು ಶಕ್ತವಾದುವು. ನಡುಮೂಳೆಯ ಈ ಬದಲಾವಣೆಯಿಂದ ತೊಡೆಗೆ ಸೇರಿದ ಮಾಂಸಖಂಡ (Gluteus Maximus) ಮಾನವನ ನಡಗೆಯಲ್ಲಿ ಒಂದು ಬಗೆಯ ಜೋರನ್ನು (Drive) ಉಂಟುಮಾಡಿತು. ಮಂಗನಿಗೆ ತನ್ನ ಹೆಜ್ಜೆಯನ್ನು ಮುಗಿಸುವಾಗ ಈ

ಜೋರು ಇರುವುದಿಲ್ಲ. ಹೀಗೆ ಕೈಕಾಲುಗಳಲ್ಲಿ ಬದಲಾವಣೆಗಳಾದ ಬಳಿಕ ಮಿದುಳಿನಲ್ಲಿ ಬದಲಾವಣೆಯಾಯಿತೆಂದು ಮೇಲೆ ಹೇಳಿದ ಮಾನವಶಾಸ್ತ್ರಜ್ಞರ ಮತ. ಈ ಮತವೇ ಈಗ ವಿಜ್ಞಾನಿಗಳಲ್ಲಿ ಹೆಚ್ಚು ಮನ್ನಣೆಯನ್ನು ಪಡೆದಿದೆಯೆಂದು ಹೇಳಬಹುದು.



ಚಿತ್ರ ೬. ಮಂಗನ ಮತ್ತು ಮಾನವನ ನಡುಮೂಳೆಗಳಿಗಿರುವ ವ್ಯತ್ಯಾಸ

೧೯೪೦ ರ ತನಕ ವಿಜ್ಞಾನಿಗಳು ಮಿದುಳಿನ ವಿಕಾಸವೇ ಎಲ್ಲದಕ್ಕಿಂತ ಮೊದಲು ಆಯಿತೆಂದು ತಿಳಿದಿದ್ದರು. ಅವರು ಈ ಕೆಳಗೆ ಕೊಟ್ಟಿರುವ ಮಿದುಳಿನ ವಿಸ್ತರಣೆಯ ಪಟ್ಟಿಗೆ ಬಹಳ ಪ್ರಾಮುಖ್ಯತೆ ಕೊಟ್ಟಿದ್ದರು.

೧.	ಚಿಂಪಾಂಜಿ ಮತ್ತು ಗೊರಿಲ್ಲ (ಮಂಗಗಳು)	೩೨೫-೬೫೦ c.c.
೨.	ದಕ್ಷಿಣ ಆಫ್ರಿಕದ ಪೂರ್ವಮನುಷ್ಯ	೪೫೦-೬೫೦ c.c.
೩.	ಜಾವಾ ಪೂರ್ವಮಾನವ	೭೯೦-೯೦೦ c.c.
೪.	ಪೀಕಿಂಗ್ ಮಾನವ	೯೦೦-೧೨೦೦ c.c.

೫. ಪಿಲ್ಟ್‌ಡೌನ್ ಮಾನವ ೧೩೦೦-೧೪೦೦ c.c.

೬. ನಿಯಾಂದರ್‌ಥಾಲ್ ಮಾನವ ೧೧೦೦-೧೫೦೦ c.c.

೭. ಆಧುನಿಕ ಮಾನವ ೧೨೦೦-೧೫೦೦ c.c.

೧೯೪೮ ರಲ್ಲಿ ಎಡಿಂಗರ್ ಎಂಬುವರು ಕುದುರೆಯ ವಿಚಾರವಾಗಿ ಸಂಶೋಧನೆ ನಡೆಸಿ ಅದರ ಕಾಲು ಮತ್ತು ಹಲ್ಲುಗಳು, ಅದರ ಮಿದುಳು ವಿಕಾಸಗೊಳ್ಳುವುದಕ್ಕಿಂತ ಮುಂಚೆಯೇ ತಮ್ಮ ಪೂರ್ಣ ರೂಪವನ್ನು ಹೊಂದಿದ್ದವೆಂದು ತೋರಿಸಿದರು. ಪೂರ್ವ ಮಾನವನ ಮತ್ತು ಇತರ ಸಸ್ತನಿಗಳಲ್ಲೂ ಇದೇ ತರಹ ಮಾರ್ಪಾಡಾಯಿತೆಂದು ಮಾನವಶಾಸ್ತ್ರಜ್ಞರ ಇತ್ತೀಚಿನ ಅಭಿಪ್ರಾಯ.

ಪ್ರಾಕ್ತನ ಶೋಧನಶಾಸ್ತ್ರಕ್ಕೆ ವಿದ್ಯುತ್‌ವಿಕಿರಣ ಕ್ರಿಯಾಶಕ್ತ ಇಂಗಾಲ (Radio-active Carbon or Carbon 14) ದಿಂದ ತುಂಬಾ ಉಪಕಾರವಾಗಿದೆ. ಇದರಿಂದ ಪುರಾತನ ವಸ್ತುಗಳ ಕಾಲವನ್ನು ಕಂಡುಹಿಡಿಯಬಹುದು. ಆದರೆ ೨೫,೦೦೦ ಅಥವಾ ೩೦,೦೦೦ ವರ್ಷಗಳಿಗಿಂತ ಹಿಂದಿನ ಕಾಲಕ್ಕೆ ಇದು ಅನ್ವಯವಾಗುವುದಿಲ್ಲ. ಮಧ್ಯಮ ಶಿಲಾಸಂಸ್ಕೃತಿ (Mesolithic), ನವಶಿಲಾಸಂಸ್ಕೃತಿ (Neolithic) ಮತ್ತು ಕಂಚಿನ ಸಂಸ್ಕೃತಿ (Bronze Age)ಗಳಿಗೆ ಸಂಬಂಧಪಟ್ಟ ಕಾಲವನ್ನು ಮಾತ್ರ ಕಂಡುಹಿಡಿಯಬಹುದು. ಪ್ರಾಕ್ತನಶಾಸ್ತ್ರಕ್ಕೆ ಈ ಮಾರ್ಗವನ್ನು ತೋರಿಸಿಕೊಟ್ಟವರು ಡಾ|| ವಿಲಾರ್ಡ್ ಲಿಬ್ಬಿ ಎಂಬುವರು (Dr. Willard Libby). ಲಿಬ್ಬಿಯವರು ೧೯೦೮ ರಲ್ಲಿ ಕೊಲರೆಡೊವಿನಲ್ಲಿ ಹುಟ್ಟಿದರು. ಅವರ ವ್ಯಾಸಂಗವು ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದಲ್ಲಿ ಸಾಗಿತು. ಅನಂತರ ಇವರು ರಸಾಯನಶಾಸ್ತ್ರದ ಇಲಾಖೆಯಲ್ಲಿ ಅಧ್ಯಾಪಕರಾದರು. ವಿದ್ಯುತ್‌ವಿಕಿರಣ ಕ್ರಿಯಾಶಕ್ತಿಯಲ್ಲಿ ಇವರು ಅನೇಕ ಪ್ರಯೋಗಗಳನ್ನು (Radio-activity) ೧೯೩೩-೧೯೪೧ ರ ತನಕ ಮಾಡಿ ಚಿಕಾಗೋ ವಿಶ್ವವಿದ್ಯಾನಿಲಯದಲ್ಲಿ ೧೯೪೫ ರಲ್ಲಿ ರಸಾಯನಶಾಸ್ತ್ರದ ಪ್ರಾಧ್ಯಾಪಕರಾದರು. ೧೯೪೧ ರಿಂದ ೧೯೪೫ ರ ವರೆಗೆ ಆಟಂಬಾಂಬಿನ ತಯಾರಿಕೆಗೆ ಸಹಾಯಕರಾಗಿದ್ದರು. ಭೂಮಿಯ ಮೇಲೆ ಐದು ಮೈಲಿಯ ಎತ್ತರದಲ್ಲಿರುವ ಗಾಳಿಯಲ್ಲಿರುವ ಸಾರಜನಕ (ನೈಟ್ರೋಜನ್) ವಿಶ್ವವಿಕಿರಣಕ್ರಿಯೆಯಿಂದ (Action of Cosmic Rays) ಒಡೆಯಲ್ಪಟ್ಟು ಒಂದು ಸಾರಜನಕ (ನೈಟ್ರೋಜನ್) ಅಣು (Atom) ಒಂದು ಇಂಗಾಲ ೧೪ ರ ಪರಮಾಣು (Particle) (Carbon ೧೪) ಮತ್ತು ಒಂದು ಜಲಜನಕದ ಪರಮಾಣುಗಳಾಗಿ ಪರಿವರ್ತಿಸಲ್ಪಡುವುದು. ಗಾಳಿಯ ಸಂಚಾರದಿಂದ ಇಂಗಾಲ ೧೪ ಗಾಳಿಯಲ್ಲಿರುವ ಇಂಗಾಲಾಮ್ಲವನ್ನೆಲ್ಲಾ ವಿದ್ಯುತ್ ವಿಕಿರಣಶಕ್ತಿಯಿಂದ ಆವರಿಸಲ್ಪಡುವಂತೆ ಮಾಡುತ್ತದೆ. ಹೀಗೆ ಆವರಿಸಲ್ಪಟ್ಟ ಇಂಗಾಲಾಮ್ಲ

ಸಸ್ಯಗಳಿಂದ ಉಪಯೋಗಿಸಲ್ಪಡುವುದರಿಂದ ಸಸ್ಯಗಳು, ಸಸ್ಯಗಳಿಂದ ಪ್ರಾಣಿಗಳು ವಿದ್ಯುತ್ ವಿಕಿರಣಶಕ್ತಿಯುಳ್ಳವಾಗುತ್ತವೆ.

ಜೀವವಿರುವ ವರೆಗೆ ಇಂಗಾಲ ೧೪ ಒಂದೇ ಪ್ರಮಾಣದಲ್ಲಿ ಪ್ರಾಣಿಗಳಲ್ಲಿ ಸೇರುವುದು ಮತ್ತು ಅದೇ ಪ್ರಮಾಣದಲ್ಲಿ ಶಿಥಿಲವಾಗುವುದು. ಜೀವವು ಅಳಿದ ಬಳಿಕ ಇಂಗಾಲ ೧೪ ರ ಸರಬರಾಯಿ ನಿಂತುಹೋಗುವುದು. ಅಲ್ಲಿಂದಾಚೆಗೆ ಒಂದು ಗೊತ್ತಾದ ಪ್ರಮಾಣದಲ್ಲಿ ಶಿಥಿಲವಾಗುವಿಕೆಯು (Disintegration) ಪ್ರಾರಂಭವಾಗುವುದು. ಸುಮಾರು ೫,೭೦೦ ವರ್ಷಗಳಲ್ಲಿ ಜೀವವಿದ್ದ ಸಸ್ಯ ಅಥವಾ ಪ್ರಾಣಿಯಲ್ಲಿದ್ದ (Organic Matter) ಇಂಗಾಲ ೧೪ ಅರ್ಧಪ್ರಮಾಣಕ್ಕೆ ಇಳಿಯುವುದು. ಇನ್ನೊಂದು ೫,೭೦೦ ವರ್ಷಗಳಲ್ಲಿ (೧೧,೪೦೦) ಈ ಅರ್ಧಪ್ರಮಾಣದ ಅರ್ಧವಾಗುವುದು. ($\frac{1}{4}$) ಹೀಗೆ ಸುಮಾರು ೨೫,೦೦೦ ವರ್ಷಗಳಲ್ಲಿ ಇಂಗಾಲ ೧೪ ತುಂಬಾ ಇಲ್ಲದಂತಾಗುವುದು. ಇಂಗಾಲ ೧೪ ರ ಈ ಶಿಥಿಲವಾಗುವ ಪ್ರಮಾಣಗಳನ್ನು ಜೀವವಿಲ್ಲದ ಪ್ರಾಣಿ ಅಥವ ಸಸ್ಯಗಳಲ್ಲಿ (Dead Organic Matter) ಕಂಡುಹಿಡಿಯುವುದರ ಮೂಲಕ ಅವುಗಳ ಕಾಲವನ್ನು ಗೊತ್ತುಮಾಡಬಹುದು. ಹೀಗೆ ಪುರಾತನ ವಸ್ತುಗಳ (ಪ್ರಾಣಿಗಳು, ಸಸ್ಯಗಳು ಮೊದಲಾದುವು ಅಥವಾ ಅವಕ್ಕೆ ಸಂಬಂಧಪಟ್ಟವು) ಕಾಲವನ್ನು ಇಂಗಾಲ ೧೪ ರ ಪ್ರಮಾಣದಿಂದ ಕಂಡುಹಿಡಿಯಬಹುದು.

ಈ ಮೇಲೆ ಹೇಳಿದ ಸಿದ್ಧಾಂತಗಳನ್ನು ಮಾಡಲು ಡಾ॥ ಲಿಬ್ಬಿಯವರು ಅನೇಕ ಪ್ರಯೋಗಗಳನ್ನು ಮಾಡಿದರು. ಅವರು ಬಾಲ್ಟಿಮೋರ್ (Baltimore) ನಗರದ ಚರಂಡಿಯಲ್ಲಿ ಬೆಳೆಯುತ್ತಿದ್ದ ಸಸ್ಯವು ಕೊಳೆಲ್ಪಟ್ಟ ಸ್ವಲ್ಪಕಾಲದಲ್ಲಿಯೇ ಅದರಲ್ಲಿದ್ದ ಮಿಥೇನ್ (Methane) ಎಂಬ ಅನಿಲ (Gas) ವನ್ನು ಪರೀಕ್ಷೆಮಾಡಿದರು. ಅದು ವಿದ್ಯುತ್ ವಿಕಿರಣಶಕ್ತಿಯಿಂದ ಕೂಡಿತ್ತು. ತುಂಬಾ ಹಿಂದಿನ ಭೂಯುಗಕ್ಕೆ (Geologic Age) ಸೇರಿದ ಪೆಟ್ರೋಲಿಯಂನಲ್ಲಿದ್ದ ಮಿಥೇನ್ ಅನಿಲವನ್ನು ಪರೀಕ್ಷಿಸಿದಾಗ ಅದರಲ್ಲಿ ವಿದ್ಯುತ್ ವಿಕಿರಣಶಕ್ತಿ ಇರಲಿಲ್ಲ. ಎಲ್ಲವೂ ಶಿಥಿಲವಾಗಿ ಕಳೆದುಹೋಗಿತ್ತು.

ಕಾರ್ಯವಿಧಾನ (Process): ಪುರಾತನ ವಸ್ತುವಿನ ಒಂದು (Ounce) ಭಾಗವನ್ನು ಸುಟ್ಟು ಇಂಗಾಲಾಮ್ಲವನ್ನಾಗಿ (Co_2) ಮಾಡುವುದು. ಈ ಅನಿಲವನ್ನು ಸುಣ್ಣದ ನೀರಿನಲ್ಲಿ ಬೆರಸಿ ಬಂದ ಕ್ಯಾಲ್ಸಿಯಂ ಕಾರ್ಬೊನೇಟ್ ಪ್ರಕ್ಷೇಪವನ್ನು (Precipitate) ಆಮ್ಲದಲ್ಲಿ ಕರಗಿಸಿ ಪುನಃ ಇಂಗಾಲಾಮ್ಲವನ್ನು ಪಡೆಯುವುದು. ಹೀಗೆ ಮಾಡುವುದರಿಂದ ವಿದ್ಯುತ್ ವಿಕಿರಣ ಜಲಜನಕ (Radio-active Hydrogen) ಬೆರೆಯದಂತೆ ಆಗುವುದು. ಈ ಶುದ್ಧಿಯಾದ ಅನಿಲದಲ್ಲಿ ಮ್ಯಾಗ್ನಿಸಿಯಂ ಸುಡುವುದ

ಬಂದ ಬಂದ ಶಬ್ದ ಇಂಗಾಲವನ್ನು ಗೈಗರ್ ಕೌಂಟರ್‌ನಲ್ಲಿ (Geiger Counter) ಇರಿಸಿದರೆ, ಇಂಗಾಲ ೧೪ ರ ಬಿಡಿಕಣವನ್ನು ಲೆಕ್ಕಮಾಡಬಹುದು. ಗೈಗರ್ ಕೌಂಟರ್ ಎಂಬುದು ಸುಮಾರು ೪೦೦ ಇದುರ ಸೆಂಟಿಮೀಟರ್ ಇರುವ ಗಾಜಿನ ಕೊಳವೆ (Tube). ಕೊಳವೆಯ ಮಧ್ಯೆ ಇರುವ ತಂತಿಯು (Wire) ಧನವಿದ್ಯುತ್ತಿನಿಂದ (Positive Charge) ಕೂಡಿದೆ. ಕೊಳವೆಯು ಇತರ ಪ್ರದೇಶ ಅನಿಲದಿಂದ ಕೂಡಿದೆ. ಇಂಗಾಲ ೧೪ ರಿಂದ ಬಂದ ಪ್ರತಿಯೊಂದು ವಿದ್ಯುತ್ಕಣ (Electron) ಅನಿಲದ ಸೂಕ್ಷ್ಮ ಕಣಗಳನ್ನು (Molecule) ವಿದ್ಯುದ್ವಾಹಕಗಳನ್ನಾಗಿ ಮಾಡುತ್ತದೆ. ಹೀಗೆ ಬದಲಾಯಿಸಿದ ಅನಿಲ ವಿದ್ಯುದ್ವಾಹಕಗಳು ಧನವಿದ್ಯುತ್ತಿನಿಂದ ಕೂಡಿದ ತಂತಿಯ ಸ್ಪರ್ಶದಿಂದ ಬಂದು ಸೂಕ್ಷ್ಮ ವಿದ್ಯುಚ್ಛಕ್ತಿಯ ಪ್ರವಾಹವನ್ನು ಉಂಟುಮಾಡುತ್ತದೆ. ಇದರ ಪರಿಣಾಮವಾಗಿ ಬಂದ ಬಿಡಿಕಣಗಳನ್ನು ತನ್ನಷ್ಟಕ್ಕೆ ತಾನೇ ಗುರುತಿಸಲಾಗು ಲಾಗುವುದು.

ಪ್ರಾಕ್ತನ ಆಧಾರದ ಮೇಲೆ ಈ ಹೊಸ ಪ್ರಯೋಗದ ಸತ್ಯವನ್ನು ತಿಳಿಯಲು ಮೊದಲೆ ಕಾಲನಿರ್ಣಯವಾದ ಕೆಲವು ಪ್ರಾಕ್ತನವಸ್ತುಗಳನ್ನು ಪರೀಕ್ಷಿಸಲಾಯಿತು. ಫಲಿತಾಂಶವು ಈ ರೀತಿ ಬಂದವು:

	ಪ್ರಾಕ್ತನ ಆಧಾರದಿಂದ ಗೊತ್ತಾದ ಕಾಲ	ಇಂಗಾಲ ೧೪ ರಿಂದ ಕಂಡುಹಿಡಿದ ಕಾಲ
೧. ಅರಿಜೋನದ (Arigone) ಡಗ್ಲಾಸ್ ಫರ್ ಗಿಡದ ಮರದ ಚೂರು.	(ಮರದಲ್ಲಿ ಕಾಣುವ ಸುತ್ತಿನ ಗುರುತುಗಳಿಂದ ಕಂಡುಹಿಡಿದ ಕಾಲ) Tree-ring dating ೧೩೭೨ ∓ ೫೦	೧೧೦೦ ∓ ೧೫೦
೨. ಹಿಂದಿನ ಕಾಲದ ಈಜಿಪ್ಟ್ ದೇಶದ ರಾಜನ ಶವಪೆಟ್ಟಿಗೆಯ (Coffin) ಮರದ ಚೂರು.	೨೧೪೯ ∓ ೧೫೦	೨೨೦೦ ∓ ೪೫೦
೩. ಸಿರಿಯಾದ ವಾಯುವ್ಯದಲ್ಲಿನ (N.W. Syria) ಟಾಯಿನಟ್ ಎಂಬಲ್ಲಿದ್ದ ಹಿಟ್ಟೈಟ್ ಅರಮನೆಗೆ ಸೇರಿದ ಮರದ ಚೂರು.	೨೬೨೫ ∓ ೫೦	೨೬೦೦ ∓ ೧೫೦
೪. ಸಿಕ್ವಾ (Sequoia) ಎಂಬ ಮರಕ್ಕೆ ಸೇರಿದ ಚೂರು. ಈ ಮರವನ್ನು ಕ್ರಿ.ಶ. ೧೮೭೪ ರಲ್ಲಿ ಕಡಿದರು. ಈ ಚೂರು ಕ್ರಿ.ಪೂ.		


	ಪ್ರಾಕ್ತನ ಆಧಾರದಿಂದ ಗೊತ್ತಾದ ಕಾಲ	ಇಂಗಾಲ ೧೪ ರಿಂದ ಕಂಡುಹಿಡಿದ ಕಾಲ
೧೦೩೧ ವರ್ಷಗಳಿಗೆ ಸೇರಿದ ಮರದ ಉಂಗುರ ಅಥವಾ ವಲಯಗಳಿಗೆ ಸೇರಿತ್ತೆಂದು ಡಾ|| ಡೊಗ್ಲಾಸ್‌ರವರು ಗೊತ್ತುಮಾಡಿದ್ದರು.	೨೯೨೮ ∓ ೫೨	೩೦೦೫ ∓ ೧೬೫
೫. ಮೂರನೇ ಸೆಸೂಸ್ಟ್ರಿಸ್ (Sesostris, III) ಪ್ರೇತಸಂಸ್ಕಾರದ (Funerary Boat) ದೋಣಿಗೆ ಸೇರಿದ ಮರದ ಚೂರು.	೩೭೯೨ ∓ ೫೦	೩೭೦೦ ∓ ೪೦೦

ಹೀಗೆ ಇಂಗಾಲ ೧೪ ರಿಂದ ಗೊತ್ತಾದ ಕಾಲವು ಆಶಾದಾಯಕವಾಗಿದ್ದುದರಿಂದ ಅಮೇರಿಕದ ಮಾನವಶಾಸ್ತ್ರಜ್ಞರ ಸಂಘ (American Anthropological Association) ಮತ್ತು ಭೂಶಾಸ್ತ್ರಜ್ಞರ (Geological Society of America) ಸಂಘಗಳು ಸೇರಿ ಇಂಗಾಲ ೧೪ ರಿಂದ ಕಾಲವನ್ನು ಗೊತ್ತುಮಾಡುವುದಕ್ಕಾಗಿ ಬರುವ ಪ್ರಾಚೀನ ವಸ್ತುಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ಸಮಿತಿಯೊಂದನ್ನು ರಚಿಸಿತು. ಈ ಕೆಳಗೆ ಕಂಡ ಸದಸ್ಯರು ಈ ಕೆಳಗೆ ಕಂಡ ವಿಷಯಕ್ಕಾಗಿ ಆರಿಸಲ್ಪಟ್ಟರು.

ಪುರಾತನ ಮಾನವ (Early Man) : ಫ್ರಾಂಕ್ ಎಚ್. ಎಚ್. ರಾಬರ್ಟ್ಸ್
ಕ್ಯಾಲಿಫೋರ್ನಿಯ ಮತ್ತು ಬರೆಗಾನ್ : ರಾಬರ್ಟ್ ಹೆಜೀರ್ (Robert Heizer)
ಮನ್‌ಕಾಟೂ (Mankoto) : ರಿಚರ್ಡ್ ಫಾಸ್ಟರ್ ಫ್ಲಿಂಟ್ (Richard Foster Flint)
ಮೆಸಪೊಟೇಮಿಯಾ ಮತ್ತು ಪಶ್ಚಿಮ ಏಷ್ಯ : ರಾಬರ್ಟ್ ಬ್ರೈಡ್ ವುಡ್ (Robert Braid Wood)
ಪೆರು : ಜೂನಿಯಸ್ ಬರ್ಡ್ (Junius Bird)
ಪಶ್ಚಿಮ ಯೂರೋಪ್ ಮತ್ತು ಸ್ಕಾಂಡಿನೇವಿಯ : ಹಲಾಂ ಮೊವಿಯಸ್ (Hallam Movius)
ಯುಕಾನ್ (Yukon) : ಫ್ರೆಡರಿಕ್ ಜಾನ್ಸನ್
ಮೆಕ್ಸಿಕೊ : ಹೆಲ್‌ಮುಟ್ ಡಿ ಟೆರ (Helmet de Terra)
ಪುಷ್ಪಗಳ ಧೂಳಿನಿಂದ ಕಾಲವನ್ನು ಗೊತ್ತುಮಾಡುವಿಕೆ (Pollen Chronology) : ಎಡ್ವರ್ಡ್ ಡೀವಿ (Edward Deevey)

ಇಂಗಾಲ ೧೪ ರಿಂದ ವಾದವಿವಾದಗಳಲ್ಲಿದ್ದ ಅನೇಕ ವಸ್ತುಗಳ ಕಾಲವನ್ನು ಗೊತ್ತುಮಾಡಲಾಯಿತು. ಪುರಾತನ ಈಜಿಪ್ಟಿನಲ್ಲಿ ಆಳಿದ ಮೊದಲನೇ ವಂಶದ (First Dynasty) ಪ್ರಾರಂಭಕಾಲವನ್ನು ೪೭೦೦-೫೧೦೦ ವರ್ಷಗಳೆಂದು ಗುರುತು

ಹಾಕಿದ್ದರು. ಇದು ಸರಿಯೆ ಎಂದು ತಿಳಿಯಲು ವುದೀಮು (Udimu) ಎಂಬ ರಾಜನ ಕಾಲದ ಮಂತ್ರಿಯಾದ ಹೆಮಕನ (Hemaka) ಗೋರಿಗೆ ಸೇರಿದ ತೊಲೆಯ ಚೂರನ್ನು ಇಂಗಾಲ ೧೪ ರ ಪರೀಕ್ಷೆ ಮಾಡಲು ೪,೮೮೩ ವರ್ಷಗಳೆಂದು ಗೊತ್ತಾಯಿತು. ಲಾಸ್ಕೋ (Lascaux, France) ಎಂಬ ಗುಹೆಯಲ್ಲಿ ಶಿಲಾಯುಗ ಮಾನವನ ಅನೇಕ ಬಣ್ಣಗಳಿಂದ ಕೂಡಿದ ಚಿತ್ರಗಳಿದ್ದುವು. ಈ ಚಿತ್ರಗಳ ಕಾಲದ ವಿಷಯವಾಗಿ ಚರಿತ್ರಕಾರರಲ್ಲಿ ಭಿನ್ನಾಭಿಪ್ರಾಯಗಳಿದ್ದುವು. ಆ ಗುಹೆಯಲ್ಲಿ ಸಿಕ್ಕಿದ ಒಲೆಯಲ್ಲಿದ್ದ (Hearth) ಇಜ್ಜಲು (Charcoal) ಇಂಗಾಲ ೧೪ ರ ಪರೀಕ್ಷೆಯಿಂದ ಡಾ|| ಲಿಬ್ಬಿಯವರು ೧೫,೫೧೬ ವರ್ಷಗಳೆಂದು ಹೇಳಿದರು. ನಿವಾಡದ ಲಾಸ್‌ವೆಗಾಸ್ ಎಂಬಲ್ಲಿದ್ದ ಜಿಪ್ಸಂ ಗುಹೆಯಲ್ಲ ಭೂಶೋಧನೆಯಲ್ಲಿ ಸಿಕ್ಕಿದ ಕರಡಿ (Sloth) ಯ ಲದ್ದಿಯ ಪರೀಕ್ಷೆಯಿಂದ ಅದರ ಕಾಲ ೧೦,೪೫೫ ವರ್ಷಗಳೆಂದು ಡಾ|| ಲಿಬ್ಬಿಯವರು ಗೊತ್ತುಮಾಡಿದರು. ೧೯೨೭ ರಲ್ಲಿ ನ್ಯೂ ಮೆಕ್ಸಿಕೂ (New Mexico) ಪ್ರದೇಶದಲ್ಲಿ ಪ್ರಾಕ್ತನಶಾಸ್ತ್ರಜ್ಞರು ಬಾಣಕ್ಕೆ ಸಿಗಿಸಿ ಪ್ರಾಣಿಗಳನ್ನು ಕೊಲ್ಲಲು ಉಪಯೋಗಿಸುತ್ತಿದ್ದ ಕಲ್ಲಿನ ಆಯುಧವನ್ನು (Arrow Head) ಫೋಲ್‌ಸಂ (Folsom) ಎಂಬಲ್ಲಿ ಕಂಡುಹಿಡಿದರು. ಅದರ ಜೊತೆಯಲ್ಲಿ ಒಂದು ತರಹ ಕಾಡೆಮ್ಮೆಯ (Bison) ಅವಶೇಷಗಳು ಸಿಕ್ಕಿದವು. (ಚಿತ್ರ ೭) ಈ ತರಹ ಕಲ್ಲಿನ ಆಯುಧಗಳು ಬೇರೆ ಬೇರೆ ಕಡೆ ಸಿಕ್ಕಿದುದರಿಂದ ಇವುಗಳನ್ನು ತಯಾರಿಸಿದ ಮಾನವನು ಬೇರೆ ಬೇರೆ ಕಡೆ ಹರಡಿದ್ದನೆಂದು ಗೊತ್ತಾಯಿತು. ಆದರೆ ಅವನ ಕಾಲದ ವಿಚಾರದಲ್ಲಿ ವಿಪುಲವಾದ



ಚಿತ್ರ ೭. ಅಮೇರಿಕದ ಪುರಾತನ ಮಾನವ (ಫೋಲ್‌ಸಮ್) ಉಪಯೋಗಿಸುತ್ತಿದ್ದ ಕಲ್ಲಿನ ಆಯುಧ. ಅದರ ಜೊತೆಯಲ್ಲಿ ಸಿಕ್ಕಿದ ಕಾಡೆಮ್ಮೆಯ ತಲೆಬುರುಡೆ

ಚರ್ಚೆ ನಡೆದು ಪ್ರಾಕ್ತನಶಾಸ್ತ್ರಜ್ಞರು ಸರಿಯಾದ ನಿರ್ಧಾರಕ್ಕೆ ಬಂದಿರಲಿಲ್ಲ. ಟೆಕ್ಸಾಸ್ (Texas) ನಲ್ಲಿ ಈ ಕಲ್ಲಿನ ಆಯುಧಗಳ ಜೊತೆಯಲ್ಲಿ ಸಿಕ್ಕಿದ ಸುಟ್ಟ ಮೂಳೆಗಳಿಂದ ಡಾ|| ಲಿಬ್ಬಿಯವರು ೯,೮೮೩ ವರ್ಷಗಳೆಂದು ನಿರ್ಧರಿಸಿದರು. ಓರೆಗಾನ್ ಪ್ರದೇಶದ ಗುಹೆಯಲ್ಲಿ ಕ್ರೆಸ್‌ಮನ್ (Cressman) ಎಂಬುವರಿಗೆ ಸಿಕ್ಕಿದ ಬಹಳ ಚೆನ್ನಾಗಿ ಹೆಣೆದ ಚಪ್ಪಲಿಗಳು ಈ ಮಾನವರದೇ ಇರಬಹುದೆಂದು ಊಹಿಸಲಾಗಿತ್ತು. ಇಂಗಾಲ ೧೪ ರ ಪರೀಕ್ಷೆಯಿಂದ ಅವುಗಳ ಕಾಲ ೯,೦೫೩ ವರ್ಷಗಳೆಂದು ತಿಳಿಯಿತು. ಚಿಕಾಗೋ ವಿಶ್ವವಿದ್ಯಾನಿಲಯವು ಇರಾಕಿನ ಜರ್ಮೊ ಎಂಬ ಸ್ಥಳದಲ್ಲಿ ನಡೆಸಿದ ಭೂಶೋಧನೆಯಿಂದ ಅಲ್ಲಿದ್ದ ಜನ ಮಡಕೆಕುಡಿಕೆಗಳ ಉಪಯೋಗ ಗೊತ್ತಿಲ್ಲದ ಸಂಸ್ಕೃತಿಗೆ (Culture) ಸೇರಿದ್ದರೆಂದೂ ಮತ್ತು ಅವರು ಮೊಟ್ಟಮೊದಲಿನ ವ್ಯವಸಾಯಗಾರರೆಂದೂ ಗೊತ್ತಾಗಿತ್ತು. ಲಿಬ್ಬಿಯು ಅವರ ಕಾಲ ೬,೭೦೭ ವರ್ಷಗಳೆಂದು ಇಂಗಾಲ ೧೪ ರ ಪರೀಕ್ಷೆಯಿಂದ ತಿಳಿಸಿದರು. ಆದರೆ ಪ್ರಾಕ್ತನ ಆಧಾರಗಳು ಅದನ್ನು ಇನ್ನೂ ಹಿಂದಕ್ಕೆ ಒಯ್ದಿವೆ.

ಇಂಗಾಲ ೧೪ ರ ಪರೀಕ್ಷೆ ಪ್ರಾಕ್ತನಶಾಸ್ತ್ರಜ್ಞರು ಮತ್ತು ಭೂಶಾಸ್ತ್ರಜ್ಞರು ಸಂಬಲರ್ಹವಾದ ಆಧಾರಗಳ ಮೇಲೆ ಕಟ್ಟಿದ ಕಾಲವನ್ನು ಕೆಲವು ವೇಳೆ ಖಚಿತಪಡಿಸಿದರೂ ಅನೇಕ ವೇಳೆ ಆ ಕಾಲಗಳನ್ನು ತಳಕೆಳಕುಮಾಡಿದೆ. ಪ್ರೊಫೆಸರ್ ಗಾರ್ಡನ್ ಚೈಲ್ಡ್‌ರವರು ಡಿಸೆಂಬರ್ ೨೩, ೧೯೫೦ ರಲ್ಲಿ *Nature* ಎಂಬ ಪತ್ರಿಕೆಯಲ್ಲಿ ಬರೆದ ಲೇಖನದಲ್ಲಿ ಇಂಗಾಲ ೧೪ ರ ಪರೀಕ್ಷೆಯಿಂದ ಬಂದ ಕಾಲನಿರ್ಣಯ ಅಷ್ಟು ನಂಬಿಕೆಗೆ ಅರ್ಹವಲ್ಲವೆಂದು ಹೇಳಿದುದರಲ್ಲಿ ಆಶ್ಚರ್ಯವೇನೂ ಇಲ್ಲ. ಏಕೆಂದರೆ ಇಂಗಾಲ ೧೪ ರ ಪರೀಕ್ಷೆ ಮಾಡುವಾಗ ಅನೇಕ ತೊಂದರೆಗಳು ಒದಗುತ್ತವೆ. ಅದರ ಕ್ರಮವನ್ನು (Method) ಈ ತೊಂದರೆಗಳಿಂದ ತಪ್ಪಿಸಿ ಅದನ್ನು ಸರಿಯಾಗಿ ಮಾಡಲು ವಿಜ್ಞಾನಿಗಳು ಇನ್ನೂ ದುಡಿಯುತ್ತಿದ್ದಾರೆ.

ಮೊದಲನೆಯದಾಗಿ ಈ ಇಂಗಾಲ ೧೪ ರ ಪ್ರಯೋಗವನ್ನು ಮಾಡುವ ಯಂತ್ರ (Apparatus) ಗಳ ಸುತ್ತಲೂ ವಿಶ್ವದ ವಿಕಿರಣಕ್ರಿಯೆ (Cosmic Radiation) ನಡೆಯುತ್ತಲೇ ಇರುತ್ತದೆ. ಇದರ ಬಡಿತ (Count) ಸುಮಾರು ಒಂದು ನಿಮಿಷಕ್ಕೆ ೩೫೦ ಎಂದು ಗೊತ್ತಾಗಿದೆ. ಇವು ಇಂಗಾಲ ೧೪ ರ ಬಡಿತಗಳಿಗೆ ಆತಂಕವನ್ನುಂಟುಮಾಡುವುವು. ಇದಕ್ಕಾಗಿ ಡಾ|| ಲಿಬ್ಬಿಯವರು ತಮ್ಮ ಯಂತ್ರವನ್ನು ೮" ಉಕ್ಕಿನ ಕವಚದಿಂದ ಮುಚ್ಚಿ ಅದರ ಒಳಗಡೆ ಮತ್ತೂ ಹನ್ನೊಂದು ಕೊಳವೆಗಳು ಇಂಗಾಲವಿರುವ ಗಾಜಿನ ಕೊಳವೆಯನ್ನು ಒಂದು ವೃತ್ತದಂತೆ ಮುಚ್ಚುವಂತೆ ಏರ್ಪಡಿಸಿದ್ದಾರೆ. ಈ ಕೊಳವೆಗಳೆಲ್ಲಾ ವಿಶ್ವದ ವಿಕಿರಣಕ್ರಿಯೆಯ ಬಡಿತವನ್ನು ತೋರುತ್ತವೆ. ಈತ್ತೀಚೆಗೆ

ವಿಶ್ವದ ವಿಕಿರಣಕ್ರಿಯೆಯನ್ನು ತೊಡೆದುಹಾಕುವಂತೆ ಅವರು ಬೇರೆ ವ್ಯವಸ್ಥೆಯನ್ನು ಮಾಡಿದ್ದಾರೆಂದು ಗೊತ್ತಾಗಿದೆ.

ಎರಡನೆಯದಾಗಿ ಇಂಗಾಲ ೧೪ ಎಲ್ಲಾ ಪದಾರ್ಥಗಳಲ್ಲಿ ಒಂದೇ ಪ್ರಮಾಣ ದಲ್ಲಿರುವುದೇ ಎಂಬ ಪ್ರಶ್ನೆ ವಿಜ್ಞಾನಿಗಳಲ್ಲಿ ಪುನಃ ಏಳುತ್ತಿದೆ. ಲಿಬ್ಬಿಯವರು ಈ ವಿಷಯವಾಗಿ ಅನೇಕ ಪ್ರಯೋಗಗಳನ್ನು ಪ್ರಪಂಚದ ನಾನಾ ಮೂಲೆಯಿಂದ ಬಂದ ಪದಾರ್ಥಗಳ ಮೇಲೆ ಮಾಡಿ ಎಲ್ಲವೂ ನಿಮಿಷಕ್ಕೆ ೧೫.೩ ಶಿಥಿಲವಾಗುವುದೆಂದು (Disintegration) ಖಚಿತಮಾಡಿಕೊಂಡಿದ್ದರು. ಬಾಲ್ಟಿಮೊರ್ ಚರಂಡಿಯ ಗಿಡವು ಅಷ್ಟೇ ತೋರಿಸಿತ್ತು. ಆದರೆ ಮಿನ್ನಸೋಟಾ ವಿಶ್ವವಿದ್ಯಾನಿಲಯದ ಎ. ಓ. ನೈಯರ್ (A. O. Nier) ಎಂಬುವರು ಇಂಗಾಲಾಮ್ಲಲವಣ ಕಾರ್‌ಬೂನೇಟ್ ತಯಾರಿಕೆಯಲ್ಲಿ ಇಂಗಾಲ ೧೩, ಇಂಗಾಲ ೧೨ಕ್ಕಿಂತ ಸ್ವಲ್ಪ ಜಾಸ್ತಿ ಇದೆ ಎಂದು ಪ್ರಯೋಗದಲ್ಲಿ ತೋರಿಸಿದ್ದಾರೆ. ಗಿಡಗಳಲ್ಲಿ ಇಂಗಾಲ ೧೨ ಇಂಗಾಲ ೧೩ಕ್ಕಿಂತ ಜಾಸ್ತಿ ಇದೆ ಎಂದು ಅವರ ಅಭಿಪ್ರಾಯ. ಇದೇ ತರಹ ಸಂಬಂಧವು ಇಂಗಾಲ ೧೨ ಮತ್ತು ಇಂಗಾಲ ೧೪ಕ್ಕೆ ಇರಬೇಕೆಂದು ಊಹಿಸಲಾಗಿದೆ. ಪ್ರಾಕ್ತನ ಶೋಧನೆಯಿಂದ ಖಚಿತವಾಗಿ ಗೊತ್ತಾದ ಕಾಲಕ್ಕೆ ಸೇರಿದ ಪುರಾತನ ವಸ್ತುಗಳ ಕಾಲವು ಇಂಗಾಲ ೧೪ರ ಪರೀಕ್ಷೆಯಲ್ಲಿ ಕೆಲವು ವೇಳೆ ವ್ಯತ್ಯಾಸವಾಗಲು ಕಾರಣವು ಇದೇ ಇರಬಹು ದೆಂದು ಅನೇಕ ವಿದ್ವಾಂಸರ ಅಭಿಪ್ರಾಯ. ಇಂಗಾಲ ೧೪ ಕಪ್ಪೆಚಿಪ್ಪು ಅಥವಾ ಶಂಖ (Shell) ಗಳಲ್ಲಿ ಮರಕ್ಕಿಂತ (Wood) ಹೆಚ್ಚು ಇದೆ ಎಂದು ಹೇಳಲಾಗಿದೆ.

ಮೂರನೆಯದಾಗಿ ಪುರಾತನ ಇಜ್ಜಲೇ (Charcoal) ಮೊದಲಾದ ಪದಾರ್ಥ ಗಳು ನೆಲದೊಳಗೆ ಶುದ್ಧವಾದ ಸ್ಥಿತಿಯಲ್ಲಿರುವುದು ಬಹಳ ಅಪರೂಪ. ನೆಲದೊಳಗೆ ತುಂಬಾ ಆಳದಲ್ಲಿದ್ದರೂ ಹ್ಯೂಮಿಕ್ ಆಮ್ಲ ಮೇಲಿನಿಂದ ಇಳಿದು ಇವುಗಳಿಗೆ ಸೇರುವುದುಂಟು. ಅಂಥಹ ಸಂದರ್ಭದಲ್ಲಿ ಇವು ಕಲ್ಮಷದೊಂದಿಗೆ ಸೇರಿ (Contamination) ಇರುವುದರಿಂದ ಸರಿಯಾದ ಕಾಲನಿರ್ಣಯವು ಆಗುವುದಿಲ್ಲ. ಈ ಕಲ್ಮಷವು ಇಂಗಾಲ ೧೪ರ ಪರೀಕ್ಷೆಯಲ್ಲಿ ಇವುಗಳಿಗೆ ಕಡಿಮೆ ವರ್ಷಗಳನ್ನು ತೋರಿಸಿ ಇವುಗಳ ಪ್ರಾಚೀನತೆಯನ್ನು ನಾಶಪಡಿಸುವುದು. ಪ್ರಯೋಗಶಾಲೆಗೆ ಈ ಪುರಾತನ ವಸ್ತು ಗಳನ್ನು ಸರಿಯಾದ ರೀತಿಯಲ್ಲಿ ಕಳುಹಿಸದೇಹೋದರೆ ಇಂಗಾಲ ೧೪ ರಿಂದ ಕಾಲವನ್ನು ಕಂಡುಹಿಡಿಯುವ ಕೆಲಸ ಯಶಸ್ವಿಯಾಗಲಾರದು. ಅವುಗಳಿಗೆ ಕಲ್ಮಷಗಳು ಸೇರದಂತೆ ನೋಡಿಕೊಳ್ಳಬೇಕು. ಬೆಂಕಿಪೆಟ್ಟಿಗೆ, ಡಬ್ಬಿ ಇವುಗಳಲ್ಲಿ ಹಾಕಿ ಕಳುಹಿಸಬಾರದು.

ಮೇಲೆ ಹೇಳಿದ ತೊಂದರೆಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಅಣುವಿಜ್ಞಾನಿ ಗಳು ಇಂಗಾಲ ೧೪ರ ಪ್ರಯೋಗವು ಸರಿಯಾದ ಕಾಲವನ್ನು ತೋರಿಸುವಂತೆ

ಸಂಶೋಧನೆಗಳನ್ನು ಇನ್ನೂ ಮಾಡುತ್ತಿದ್ದಾರೆ. ಘನ (Solid) ಇಂಗಾಲವನ್ನು ಗಾಜಿನ ಕೊಳವೆಯಲ್ಲಿ ಹರಡುವುದಕ್ಕಿಂತ ಇಂಗಾಲಾಮ್ಲದಿಂದಲೇ ವಿದ್ಯುತ್‌ವಿಕಿರಣ ಕ್ರಿಯಾಶಕ್ತಿಯನ್ನು (Radio Activity) ಕಂಡುಹಿಡಿಯಬಹುದೆಂದು ಜೆ. ವಿ. ಪಿ. ಲಾಂಗ್ ಎಂಬುವರು ಬರ್ಮಿಂಗ್‌ಹ್ಯಾಂನಲ್ಲಿ ನಡೆದ ವಿಜ್ಞಾನಿಗಳ ಸಭೆಯಲ್ಲಿ ತಾವು ಮಾಡಿದ ಪ್ರಯೋಗಗಳ ವಿಚಾರವಾಗಿ ಮಾತನಾಡುತ್ತಾ ತಿಳಿಸಿದರು. ಇದರಿಂದ ಇಂಗಾಲ ೧೪ ರ ವಿದ್ಯುತ್‌ವಿಕಿರಣ (Radio Active) ಬಡಿತಗಳ ನಿಷ್ಕೃಷ್ಟತೆ (Accuracy) ಉತ್ತಮಗೊಳ್ಳುವುದು. ಮುಂದೆ ಹೆಚ್ಚು ಹೆಚ್ಚು ಸಂಶೋಧನೆಗಳು ನಡೆದು ಇಂಗಾಲ ೧೪ ರ ವಿಧಾನಕ್ರಮ ಉತ್ತಮಗೊಂಡು ಪ್ರಾಕ್ತನಶಾಸ್ತ್ರಕ್ಕೆ ಅಮೂಲ್ಯಸೇವೆಯನ್ನು ಸಲ್ಲಿಸುವುದರಲ್ಲಿ ಯಾವ ಸಂದೇಹವೂ ಇಲ್ಲ. ಆಗ ಇಂಗಾಲ ೧೪ ಕಾಲ ಕಂಡುಹಿಡಿಯುವ ಒಳ್ಳೆಯ ಒಂದು ಮಾನವಾಗುವುದು.

ಆಧಾರಗ್ರಂಥಗಳು

HUXLEY, T. (1863) *Man's Place in Nature.*

ANDREWS, R. C. (1945) *Meet Your Ancestors.*

VON KOENIGSWALD, G. H. R. (1947) *Search for Early Man*, Natural History Magazine, published by the American Museum of Natural History, January.

WEIDENREICH, FRANZ (1946) *Apes, Gaints and Man, Cambridge.*

BROOM ROBERT (1950) *Finding the Missing Link*, London.

OAKLEY, KENNETH PAGE (1949) *The Flourine Dating Method*, American year book of Physical Anthropology, New York. Pp. 44-49.

OAKLEY, KENNETH PAGE (1953): *Dating Human Fossil Remains*, Anthropology today, pp. 143-157.

LIBBY, W. F. (1952) *Radio Carbon Dating* (Chicago University Press.)

ANDERSON, E. C. LIBBY, W. F. WEIN HOUSE, S.

REID, A. F., KIRSHENBAUM, A. D., GROSSE, A. V. (1947) *Radio Carbon from Cosmic Radiation*, Science, 105 (2735), 1.

ARNOLD, J. R. and LIBBY, W. F. (1949) *Age Determinations by Radio Carbon Content*: Checks with samples of known Age, Science, 110 (2869) pp. 678-80.

BRAIDWOOD, R and L (1950) *Jarmo*, *Antiquity*, 24 (96), pp. 189-95, London.

MOVIUS, H. L. (1950) *Age Determination by Radio Carbon Content, Antiquity*, 24, pp. 99-101, London.

CHILDE, V. G. (1950) *Comparison of Archaeological and Radio Carbon Datings*. Nature, Dec. 23. pp. 1068-1069.

ZEUNER, F. E. (1950) *Dating the Past by Radio Active Carbon*, Nature, 166, pp. 756-7, London.

ZEUNER, F. E. (1951) *Archaeological Dating by Radio Active Carbon*, Science Progress, 154, April, pp. 225-238.

WASHBURN, S. L. (1951) *The New Physical Anthropology*, Transactions of the New York Academy of Sciences, Series 2, Vol. XIII, No. 7, pp. 298-304. (May).

ಡಾ|| ಎಂ. ಶೇಷಾದ್ರಿ.

ಕಾವ್ಯಾವಲೋಕನ

ವಿಷಬಿಂದು (ಕಥನ ಕವನಗಳು)—ಲೇಖಕರು: "ಮರುಳುಸಿದ್ಧ"; ಪ್ರಕಾಶಕರು: ಸುತ್ತೂರು ವಿದ್ಯಾರ್ಥಿ ಸಾಹಿತ್ಯಮಂಡಲಿ, ಮೈಸೂರು ; ೭೦ ಪುಟದ ಹೊತ್ತಿಗೆ ; ಬೆಲೆ, ಒಂದು ರೂಪಾಯಿ.

ಇದು "ಮರುಳುಸಿದ್ಧ"ರ ಮೂರು ಕಥನ ಕವನಗಳನ್ನೊಳಗೊಂಡ ಸಂಕಲನ. ಬಿಡಿಬಿಡಿ ಕವನಗಳನ್ನು ಕಂಡ ಸಹೃದಯರ ಮನಸ್ಸು, ಇಂತಹ ನೀಳ್ಗವನಗಳ ಸಂಕಲನವನ್ನು, ಕಾತರ ಕುತೂಹಲಗಳಿಂದ ಸ್ವಾಗತಿಸುತ್ತದೆ.

ಈ ನೀಳ್ಗವನಗಳಲ್ಲಿ ಒಂದು ರೀತಿಯ ಕಥನ ಕ್ರಮವಿದ್ದರೂ, ಇಲ್ಲಿ ಹಿಂದಿನಂತೆ ಬರಿಯ ಕಥೆ ಹೇಳುವ ಉದ್ದೇಶವಿಲ್ಲ ಎಂಬುದು ಗಮನಾರ್ಹವಾದ ಸಂಗತಿ. ಇಲ್ಲಿನ ಕಥನದ ಉದ್ದಕ್ಕೂ ನಾವು ಕಾಣುವುದು, ಸುತ್ತಣ ಬದುಕಿನ ಅಲ್ಲೋಲ ಕಲ್ಲೋಲ. ಅದನ್ನು ಕಂಡು ಕವಿಯ ಮನಸ್ಸು ಅಲ್ಲೋಲ ಕಲ್ಲೋಲವಾಗಿ ಕುದಿದು, ಸುಧಾರಕನ ಕೆಚ್ಚಿನಿಂದ ಮೊರೆಯುತ್ತದೆ, ಬಾಳಿನ ಅನ್ಯಾಯ ಅನಾಚಾರಗಳನ್ನು ಕಂಡಾಗ, ಅದರ ಹೊರಗಿನ ಕುದಿಯಲ್ಲೇ ನಿಲ್ಲದೆ, ಅದರ ಅಂತರಾಳವನ್ನು ಹೊಕ್ಕು ಅದರ ಮೂಲವನ್ನು ನಿರುಕಿಸುವ ಸಂಯಮಪೂರ್ಣವಾದ ಅವಧಾನವನ್ನು ನಾವು ಇಲ್ಲಿ ಕಾಣುವುದಿಲ್ಲ; ಅನ್ಯಾಯಾದಿಗಳ ಬಗ್ಗೆ ಕುದಿಗೊಳ್ಳುವ, ಆಕ್ರೋಶಗೊಳ್ಳುವ, ಅತಿರೇಕದ ಸಾಮಾನ್ಯ ಸೂತ್ರಗಳನ್ನು ಸಾರುವ, ರಭಸಮತಿಯನ್ನು ನಾವು ಇಲ್ಲಿ ಕಾಣುತ್ತೇವೆ. ಇದರಿಂದಲೇ, ಈ ಕವಿತೆಗಳ ಉದ್ದಕ್ಕೂ

> "ಪಾಪ ಕೋಪದ ತವರು ಈ ಜಗದ ಬಾಳುವೆಯು" (ಪು. ೬೧)
>
> "ಸಿರಿವಂತರಾದವರು ಮುಸಣಿಕೈತಂದರೂ
> ಚಂದ್ರ ಶಿಲೆ ಸುಂದರದ ಗೋರಿ ಇಹವು" (ಪು. ೫೨)
>
> "ಎಲ್ಲಿ ಬಿದುವು ಅಲ್ಲಿ ಕೆದರು
> ಒಡಲದೆಮ್ಮ ತುಂಬಿಕೊಳುವ
> ಎಂಬ ಸ್ವಾರ್ಥಿ ಜನರ ತಂಡ ಮೆರೆವುದಿಳೆಯಲಿ" (ಪು. ೨೯)

ಎಂಬ ಕಟುವಾದ ಸಾಲುಗಳು ಹರಿಯುತ್ತವೆ.

ಈ ಸಂಕಲನದಲ್ಲಿರುವ ಮೂರು ಕವನಗಳ ವಸ್ತು ಒಂದೇ ಅದು ಪ್ರಣಯ; ಅದರಲ್ಲೂ ಪ್ರಣಯದ ರುದ್ರಮುಖ. ಈ ಕವನಗಳಲ್ಲಿರುವ ಕಥಾವಸ್ತುವಿನ ಉಗಮವೂ, ಮುಗಿವೂ ರುದ್ರಭೂಮಿಯಲ್ಲಿ, ಇದೇ ಇದರ ಸಂವಿಧಾನದ ಸ್ವಾರಸ್ಯ.

ಲೇಖಕರು ಆರಿಸಿಕೊಂಡಿರುವುದು ನಗರ ನಾಗರಿಕತೆಯಿಂದ ದೂರವಾದ ಹಳ್ಳಿಯ ಆವರಣವನ್ನು. ಹಳ್ಳಿಯಾದರೇನು, ದಿಳ್ಳಿಯಾದರೇನು, ಮಾನವನ ತಾಮಸ ಪ್ರವೃತ್ತಿಗಳ ಹಾವಳಿ ಎಲ್ಲಕಡೆಯೂ ಒಂದೇ! "ವಿಷಬಿಂದು" ಎಂಬ ಕವಿತೆಯಲ್ಲಿ ಗಂಡಿನ ಕಾಮದ ತುಳಿತಕ್ಕೆ ಸಿಕ್ಕ ಹೆಣ್ಣಿನ ಆಕ್ರೋಶ ಕವಿಯ ಕನಸನ್ನು ಕದಡುತ್ತದೆ. "ಸಿದ್ಧನ ಗುದ್ದು"—ಎಂಬ ಕವನದಲ್ಲಿ ಹೆಣ್ಣಿನ ದ್ರೋಹಕ್ಕೆ ಒಳಗಾದ ಗಂಡಿನ ದೀನ ವಾಣಿ ಕೇಳಿಬಂದರೂ, ಹೆಣ್ಣು ಗಂಡಿಗೆ ದ್ರೋಹಮಾಡಲು ಬೇರೆ ಒಬ್ಬ ಗಂಡೇ ಕಾರಣ ಎಂಬ ಮಾತು ಮೊಳಗುತ್ತದೆ. ಮೂರನೆಯದಾದ 'ಆಹುತಿ'—ಶ್ರೀಯವರ ಸ್ವರ್ಣಪದಕವನ್ನು ಪಡೆದ ಕವಿತೆ—ಯಲ್ಲಿ ಸಹ ಬಡವನನ್ನು ಒಲಿದ ಹೆಣ್ಣೊಬ್ಬಳ ಬದುಕು, ಹಣವಂತನ ಭೋಗದ ಸೆರೆಗೆ ಸಿಲುಕಿ ದುರಂತವಾದ ಪರಿಯನ್ನು ಚಿತ್ರಿಸುತ್ತದೆ. ಹೀಗೆ ಈ ಕವನಗಳಲ್ಲಿ ಕಾಮದ ವಿಷಬಿಂದು, ಬಾಳಿನ ಹಾಲ್ಗಡಲಿಗೆ ಬಿದ್ದು ಹೇಗೆ ಹಾಳುಮಾಡಿದೆ ಎಂಬ ಜಿಜ್ಞಾಸೆ ಇದೆ.

ಈ ಕಾಮಸಮಸ್ಯೆಗೆ ಮೂಲವಾದುದು ಅರ್ಥಬಲ; ಹಣವಂತರಾದವರು ಹೇಗೆ ಹೆಣ್ಣನ್ನು ತಮ್ಮ ಕಾಮದ ಕೈಗೊಂಬೆಯನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸಿ, ತನ್ಮೂಲಕ ಬಡವರನ್ನೂ ತುಳಿಯುವರಲ್ಲದೆ, ಪ್ರೀತಿಯ ಬೆಲೆಯನ್ನೇ ಹಾಳುಗೆಡಿಸಿದ್ದಾರೆ—ಎನ್ನುವ ಅಂಶವನ್ನು ಲೇಖಕರು ಬಹು ರಭಸದಿಂದ ಈ ಕವನಗಳಲ್ಲಿ ಚಿತ್ರಿಸಿದ್ದಾರೆ.

ಈ ಕಾಮಸಮಸ್ಯೆಯಲ್ಲಿ, ಹೆಣ್ಣಿನ ಪಾಲೆಷ್ಟು? ಗಂಡಿನ ಪಾಲೆಷ್ಟು? ಸಿರಿವಂತಿಕೆಯ ಪ್ರಭಾವವೆಷ್ಟು?—ಎನ್ನುವುದು ಒಂದು ಸಮಾಜಶಾಸ್ತ್ರದ ಗ್ರಂಥದಲ್ಲಿ ಚರ್ಚಿಸಲು ಸಾಧ್ಯವಾಗಬಹುದಾದ ವಿಷಯ. ಇಂಥ ವಿಷಯವನ್ನು ಕವನದಲ್ಲಿ ಹಿಡಿದಿಡಲು ಯತ್ನಿಸುವುದೂ ಒಂದು ಸಾಹಸವೇ ಸರಿ. ಈ ಸಾಹಸದಲ್ಲಿ ಆವೇಶಕ್ಕೆ ಸಿಕ್ಕರಂತೂ ದೃಷ್ಟಿಯಲ್ಲಿ ಒಂದು ಬಗೆಯ ಸಮತೋಲನವಿಲ್ಲದೆ, ಸಿದ್ಧಾಂತಗಳು ಸೂತ್ರಗಳು ಏಕಪಕ್ಷೀಯವಾಗುವುದೂ ಉಂಟು—ಎನ್ನುವುದಕ್ಕೆ, ಈ ಕವಿ ಹೆಣ್ಣಿನ ಕಣ್ಣಿನ ಮೂಲಕ ಕೊಡುವ ಗಂಡಿನ ವಿವರಣೆಯೇ ಸಾಕ್ಷಿ. ಗಂಡನ್ನು ಕುರಿತು ಇಲ್ಲಿ ಬರುವ ಕೆಲವು ಹೇಳಿಕೆಗಳನ್ನು ನೋಡಿ:

> ಗಂಡಸಿನ ನೀತಿ, ಆರಡಿಯ ರೀತಿ
> ಅವಗಿಲ್ಲ ನೀತಿ ನಿಯಮ
> ಚೆಲುವಿರುವ ದೇಹ ಅವನಿಂಗೆ ಮೋಹ
> ಮಾಡುವನು ಸುಟ್ಟು ಹೋಮ [ಪು. ೯೭].

> "ಹೆಣ್ಣಿಂದರಾಯ್ತು ಜೊಲ್ಲಿಳಿಸಿ ಬಂತು
> ಗಂಡೆಂಬ ನಾಯರಸನೆ!" [ಪು. ೧೩]

'ಕಾಮದಾಸೆಗೆ ಸುಳಿವ ನಾಯಿಗಳ ಗಡಣ : [ಪು. ೪೯]

ಈ ಕವನಗಳ ಉದ್ದಕ್ಕೂ ಅಲ್ಲಲ್ಲಿ ಸುಂದರವಾದ ವಿಶಿಷ್ಟವಾದ ಚಿತ್ರಗಳನ್ನು ನಾವು ಕಾಣಬಹುದು. ಗಂಡಿನ ಹರೆಯುವನ್ನು ಬಣ್ಣಿಸುವಾಗ

"ಆಗ ಹರೆಯ, ಬಲಿತ ತೋಳು ;
ಧೀರ ಹೆಜ್ಜೆ, ಕಪ್ಪು ಮೀಸೆ
ಗರುವವುಗುವ ಕೆಚ್ಚುಗಣ್ಣು ಕೋಣನಂತೆಯೆ ! (ಪು. ೨೪)

ಎಂಬ ಮಾತಿನಲ್ಲಿ ಮೂಡುವ ಚಿತ್ರ ಮತ್ತು ವ್ಯಂಗ್ಯ ; ಮಗುವಿನ ಚಿತ್ರಣದಲ್ಲಿ

"ಕಣ್ಣು ಚಂಚಲ, ಕೆನ್ನೆ ಹಾಲುಗೆನೆಯಾಗಿರುವ
ಎಳೆಕೂಸು ನಲಿಯುತಿದೆ ತೋಷದಿಂದ [ಪು. ४೮]

ಎಂದು ಮೂಡಿಸುವ ಮೋಹಕತೆಯಲ್ಲಿ ; ಗಂಡು ಹೆಣ್ಣನ್ನು ಸೆಳೆಯುವಾಗ

"ಮಾತಿರದ ಮೌನದಲಿ ಬಿಡುಗಣ್ಣು ಬಲೆಯಲ್ಲಿ
ಸೆರೆಹಿಡಿದನವಳನ್ನು ಕದಲದಂತೆ !" [ಪು. ೫೦]

ಎಂಬಲ್ಲಿ ; ಮತ್ತು

"ಕಳ್ಳನೋಟವ ಬೀರಿ ಅರಸುವಳು ಮಾರನನು
ಚಂದಿರನ ಬರಿ ಬಾನು ಬಯಸುವಂತ [ಪು. ೫೦]

"ಹಿಡಿಯಲಾರದ ಕೊಡವು ತುಂಬಿ ಹೊರಸೂಸುವೊಲು
ತುಂಬಿದ್ದ ಸಂಕಟವು ಉಕ್ಕಿತಂದೆ" [ಪು. ೫೦]

ಎಂಬ ವರ್ಣನೆಗಳಲ್ಲಿ ಲೇಖಕರ ಪ್ರತಿಭೆ ಮಿಂಚುತ್ತದೆ.

ಇಲ್ಲಿನ ಶೈಲಿಯಲ್ಲಿ ಹದಗೊಳ್ಳದ ಕುದಿ ಇದೆ. ಈ ಕುದಿಯ ಪರಿಣಾಮವಾಗಿ, ಭಾವಕ್ಕೆ ತಕ್ಕ ರೀತಿ ಮೂಡದೆ ಅನೇಕ ಸಲ ಕವಿತೆಯು ಜಳ್ಳಾಗಿದೆ. ಉದಾಹರಣೆಗಾಗಿ :

ಗರತಿಯರ ಬಾಳೆ ಬೆಲೆವೆಣ್ಣೆ ಹಾಳು-
ಗೆಡೆಯುವಳು ಹುರಿಯುವಂದ [ಪು. ೧೧.]

ಎಂಬಲ್ಲಿ ಮೊದಲ ಸಾಲು ಎರಡನೆಯ ಸಾಲಿಗೆ ತಿರುಗುವಾಗ ಎಡವುತ್ತದೆ. ಅಂತೆಯೇ

"ದರ್ಪದಲಿ ನಿಂದು ತಾಯ್ವಿತ್ತಕೊಂಡು [ಪು. ೧೨.]

ಎಂಬಲ್ಲಿ "ತಾಯ್ವಿತ್ತಕೊಂಡು" ಎಂಬುದು ಯಾವ ಭಾಷಾರೂಪ ? ಹಾಗೆಯೇ

"ವರುಷ ಕೆಲವು ಹಿಂದೆ ಇಂತೆ" [ಪು. ೨೧.]
"ಭರನುನೆದೆಯ ರಾಣಿಯೆನ್ನ ರಾಣಿಬೈದರು [ ]

ಎಂಬ ಪೊಳ್ಳು ಡಿಗಳಲ್ಲಿ ಅರ್ಥವಾಗಲೀ, ಭಾವವಾಗಲೀ ಇಲ್ಲದ ಕುಂಟುನಡಿಗೆಯನ್ನು ಕಾಣಬಹುದು. ಹೀಗಾಗಿ ಲೇಖಕರು ಇಂಥ ಕಡೆ ಇನ್ನೂ ಭಾವ-ಭಾಷೆಗಳ ಬೆಸುಗೆ ಗಾಗಿ ಹೋರಾಡುತ್ತಿರುವುದು ಕಂಡುಬರುತ್ತದೆ. ಭಾವ-ಭಾಷೆಗಳ ಮಿಲನ ಬಹು ಮಟ್ಟಿಗೆ ಸಾಧ್ಯವಾಗಿರುವುದು "ಆಹುತಿ" ಎಂಬ ಕವನದಲ್ಲಿ.

ಇದು ಲೇಖಕರ ಮೊದಲ ಕೃತಿಯಾದುದರಿಂದ ಇದು ಆವೇಶ ರಭಸಗಳಿಂದ ತುಂಬಿದೆ. ಮುನ್ನುಡಿಕಾರರಾದ ಶ್ರೀ ಅಡಿಗರು ಹೇಳುವಂತೆ ಇಲ್ಲಿ "ಸವಿಹಣ್ಣಿಗಿಂತ ಕಸುಗಾಯಿಯೇ ಹೆಚ್ಚು" ಎಂಬುದು ನಿಜ. ಮುಂದೆ ಈ ಆವೇಶ ಸಂಯಮವಾಗಿ, ಈ ಕಸುಗಾಯಿ ಹಣ್ಣಾಗಿ, ಶ್ರೀ ಮರುಳುಸಿದ್ಧರ ಶಕ್ತಿ ಇನ್ನೂ ಉತ್ತಮಕೃತಿಗಳನ್ನು ನೀಡುತ್ತದೆಂಬ ಭರವಸೆಯನ್ನು ಈ ಕೃತಿ ಸಹೃದಯರಲ್ಲಿ ಉಂಟುಮಾಡುತ್ತದೆ. ಈ ಸತ್ಕೃತಿಯ ಪ್ರಕಟನೆಗಾಗಿ ಲೇಖಕರೂ ಪ್ರಕಾಶಕರೂ ಅಭಿನಂದನೀಯರು.

ಜಿ. ಎಸ್. ಶಿವರುದ್ರಪ್ಪ

*
* *

ಸೂತಪುತ್ರ ಕರ್ಣ—ಲೇಖಕಿ: ಯನ್. ವೀರಮಂಗಳಮ್ಮ, ಜೂನಿಯರ್ ಬಿ.ಎ., ವೀರಶೈವ ಕಾಲೇಜು ಶಾಲೆ, ಬಳ್ಳಾರಿ; ಬೆಲೆ, (?).

ಜನರ ಮನಸ್ಸಿನಲ್ಲಿ ವಿಮರ್ಶಕ ವಿಚಕ್ಷಣತೆ ಬೆಳೆದಂತೆಲ್ಲಾ, ಕಾವ್ಯಗಳನ್ನು ವೀಕ್ಷಿಸುವ ದೃಷ್ಟಿಯೂ ಬದಲಾಗುತ್ತಾ ಹೋಗುತ್ತದೆ. ಈ ಹಿಂದೆ ಪ್ರಸಿದ್ಧವಾದ ಕಾವ್ಯ, ವ್ಯಕ್ತಿ, ಘಟನೆಗಳಿಗೆ ಹೊಸ ಮೆರಗು ಕೊಡಲು, ಹಾಗೂ ಅಂದಂದಿನ ಸಮಸ್ಯೆಗಳನ್ನು ಅಲ್ಲಿ ಕಾಣಲೂ ಯತ್ನಿಸುತ್ತಾರೆ. ಅಂತೆಯೇ, ಇಲ್ಲಿ ಶ್ರೀಮತಿ ಎನ್. ವೀರಮಂಗಳಮ್ಮನವರು, ಜನಜನಿತವಾಗಿರುವ ಕರ್ಣನ ಸೂತಪುತ್ರತ್ವದಲ್ಲಿ, ಇಂದಿನ ಅಸ್ಪೃಶ್ಯ ಸಮಸ್ಯೆಯನ್ನು ಮೇಳವಿಸಿದ್ದಾರೆ. ಸಮಸ್ಯೆಯ ಪರಿಹಾರವನ್ನು ಕೊಡುವುದರಲ್ಲಿ, ಅವರ ಯೋಚನೆ ಇನ್ನಷ್ಟು ಆಳಕ್ಕಿಳಿಯಬೇಕಿದ್ದಿತು. ಇಂದಿನ ಸಮಸ್ಯೆಯೊಡನೆ ಮೇಳವಿಸಿರುವುದು ಕಲಾತ್ಮಕವಾಗಿ ಮೂಡಿದಂತಿಲ್ಲ.

'ಸೂತಪುತ್ರ ಕರ್ಣ' ಎಂಬುದೊಂದು ಪುರಾಣ ವ್ಯಕ್ತಿ ಜೀವನ ಚಿತ್ರಣ. ಕರ್ಣನ ಬಾಳು, ಪರಿಸ್ಥಿತಿಯ ಸೆಳವಿಗೆ ಸಿಕ್ಕು ರಾಧೇಯನಾಗಿ ಬೆಳೆದು, ಹೆಜ್ಜೆ ಹೆಜ್ಜೆಗೂ ತನ್ನ ಕುಲಹೀನತೆಯ ತಿವಿತದಿಂದ ಜರ್ಝರಿತನಾಗುವುದನ್ನು, ಭಾರ್ಗವನಲ್ಲಿ ಮರೆವೇಷದಲ್ಲಿ ಕಲಿತ ಬಿಲ್ಲುವಿದ್ಯೆ, ಮತ್ಸ್ಯಯಂತ್ರ ಭೇದನಾವ್ಯೂಹದಲ್ಲಿ ವಿಫಲ ನಾದುದು, ಪಾಂಡವರ ಪರಿಭವಕ್ಕೆ ತುತ್ತಾಗಿ, ಕೌರವರ ಪರಿಗ್ರಹಣದ ಸೊತ್ತಾಗಿ, ಯುದ್ಧರಂಗದಲ್ಲಿ ವೀರನಂತೆ ಕಾದಿ ಮಡಿದ ವೃತ್ತಾಂತವನ್ನೆಲ್ಲಾ, ವಿಸ್ತಾರವಾಗಿ, ಭಾವಪರವಶರಾಗಿ ಚಿತ್ರಿಸಿದ್ದಾರೆ. ಲೇಖಕಿಯರು ಸೂತಪುತ್ರನ ಪಕ್ಷಪಾತಿ ಎಂಬುದು

ಹೆಜ್ಜೆಹೆಜ್ಜೆಗೂ ಕಾಣುತ್ತದೆ. ಪಂಪ ಮತ್ತು ರನ್ನರ ಕಾವ್ಯದಿಂದ ಕೆಲವು ಅಂಶಗಳನ್ನು ಎತ್ತಿಕೊಂಡಿದ್ದಾರೆ. ಕರ್ಣನ ಹಿರಿಮೆಯ ಬಗ್ಗೆ ನಮ್ಮ ಕವಿಗಳೇ ಈಗಾಗಲೇ ಅಸದೃಶವಾಗಿ ಚಿತ್ರಿಸಿ, 'ವ್ಯಕ್ತಿ ಹೇಗೆ ಹುಟ್ಟಿದನೆಂಬುದಕ್ಕಿಂತ ಹೇಗೆ ಬದುಕಿದ ನೆಂಬುದೇ ಜೀವನದ ಸಾರ್ಥಕತೆಯನ್ನಳೆಯುವ ಮಾನ'ವೆಂದು ಸ್ಥಾಪಿಸಿದ್ದಾರೆ. ಪಂಪ, ರನ್ನರ ಅಭಿಪ್ರಾಯಗಳನ್ನೇ ಇನ್ನಷ್ಟು ಕೂಲಂಕಷವಾಗಿ, ಕ್ರೋಢೀಕರಿ ಸಿದ್ದರೆ ಪ್ರಬಂಧಕ್ಕೆ ಕಳೆಕಟ್ಟುತ್ತಿದ್ದಿತು. ಅಂತೂ, ಕರ್ಣನ ವೀರಜೀವನವನ್ನು ಲೇಖಕಿಯರು ಮನಂಬುಗುವಂತೆ ಚಿತ್ರಿಸಿದ್ದಾರೆ.

ಇದೊಂದು ದೀರ್ಘ ಪ್ರಬಂಧ. ಕಾರಣ, ತಂತ್ರನಾವೀನ್ಯತೆ ಇಲ್ಲದೆ—ಕರ್ಣ ವೃತ್ತಾಂತ ಸುಪರಿಚಿತವಾದ್ದರಿಂದಲೂ—ಓದುವಾಗ ಸ್ವಲ್ಪ ಎಳೆದುಕೊಂಡು ಹೋಗು ತ್ತಿರುವಂತೆ ಕಾಣುತ್ತದೆ. ಇದನ್ನೇ ಲೇಖಕಿಯರು ಮನಸ್ಸುಮಾಡಿ, ಹಲವು ಸನ್ನಿವೇಶಗಳನ್ನು ಎತ್ತಿಕೊಂಡು, ಸಂಭಾಷಣೆಯ ತಂತ್ರವನ್ನು ಬಳಸಿ, ಆ ದೃಶ್ಯಗಳ ಕೊನೆಗೆ, ಅವನ ಕುಲಹೀನತೆಯನ್ನು ಎತ್ತಿ ತೋರಿಸಿದ್ದರೆ, ಇದು ಇನ್ನಷ್ಟು ಬಂಧುರ ವಾಗುತ್ತಿದ್ದಿತು. ಆದರೂ, ಒಟ್ಟಿನ ಮೇಲೆ, ವಿದ್ಯಾರ್ಥಿನಿಯ ಸಾಹಸ ಪ್ರಶಂಸನೀಯ. ವಿದ್ಯಾಗುರುಗಳಾದ ಶ್ರೀ ವೈ. ನಾಗೇಶ ಶಾಸ್ತ್ರಿಗಳು 'ಹರಕೆಯ ನಲ್ನುಡಿ'ಯಲ್ಲಿ ಹರಸಿದಂತೆ 'ಈ ಲೇಖನ ಕಿರಿದಾದರೂ, ಇದರಲ್ಲಿ ಜಾತ್ಯತೀತ ರಾಷ್ಟ್ರವನ್ನು ಕಟ್ಟಲು ಮುಂದುವರಿಯುವ ಜನತಾ ಪ್ರಭುತ್ವಕ್ಕೂ, ಜನತೆಗೂ ಕೊಟ್ಟ ಮುಂಜಾಗ್ರತೆ ಗಮನಾರ್ಹವಾದುದು.' ವಿದ್ಯಾರ್ಥಿನಿಯಾಗಿರುವಾಗಲೇ ಇಂಥ ಚಿಂತನ, ಪ್ರಗತಿ ದೃಷ್ಟಿ, ಮೋಹಕಶೈಲಿಯನ್ನು ಪಡೆದ ವೀರಮಂಗಳಮ್ಮನವರು ಉತ್ತಮ ಲೇಖಕಿ ಯಾಗಲೆಂದು ಹಾರೈಸೋಣ.

ಪುಸ್ತಕದ ಅಚ್ಚು, ಸೈಜು, ಅಸಮರ್ಪಕ. ಆರು ವರ್ಷದ ಹೆಣ್ಣುಮಗುವಿಗೆ ಹದಿನಾರು ಮೊಳದ ಪೀತಾಂಬರ ಉಡಿಸಿದಂತಾಗಿದೆ.

ಎಸ್. ಎಂ. ವೃಷಭೇಂದ್ರಸ್ವಾಮಿ

*
* *

ಸಂಜೆದಾರಿ (ಕವಿತಾಸಂಕಲನ)—ಕವಿ : ಜಿ. ಎಸ್. ಶಿವರುದ್ರಪ್ಪ ; ಪ್ರಕಾಶಕರು : ಕೆ. ಕೆ. ಪೂಜಾರಿ, ನೇತ್ರಾವತಿ ಪ್ರಕಾಶನ, ಬೆಂಗಳೂರು ೨ ; ಪುಟಗಳು ೩೦ ; ಬೆಲೆ, ರೂ. ೦-೧೨-೦.

"ವ್ಯಗ್ರವಾದ ಮನಸ್ಸನ್ನು ಪ್ರಕಾಶನಗೊಳಿಸತಕ್ಕ" ಸುಮಧುರ 'ಸಾಮಗಾನ' ವನ್ನು ಹಾಡಿದ ; ಬಾಳಿನ "ಚೆಲುವು-ಒಲವು"ಗಳ ಸವಿನೋಟವನ್ನಿತ್ತ ರಸಚೇತನವೆ ಈ ಎರಡು ಕೃತಿಗಳಿಂದ ಕನ್ನಡದ ಸಹೃದಯರಲ್ಲಿ ಹುಟ್ಟಿಸಿದ ಭರವಸೆಯನ್ನು ಸಾರ್ಥಕ ಗೊಳಿಸುವಂತೆ 'ಸಂಜೆದಾರಿ' ಎಂಬ ಈ ಕೃತಿಯನ್ನು ನೀಡಿದೆ.

ಈಗ ಎಲ್ಲೆಲ್ಲಿಯೂ ನವ್ಯಕಾವ್ಯದ ಗಾಳಿ ಬೀಸುತ್ತಿದೆ. ನೂತನಸೃಷ್ಟಿಯ ಆರಂಭದ ಆವೇಶದಲ್ಲಿ ಹೊಸವಿಚಾರದ ಹಾಗೂ ರೀತಿಯ ಬಗ್ಗೆ ಅತಿರೇಕವೂ, ಅರ್ಧಸತ್ಯವೂ ಆದ ವಾದಗಳು ಹುಟ್ಟಿ ಸಾಹಿತ್ಯಲೋಕದಲ್ಲಿ ದೊಡ್ಡ ಗೊಂದಲವೇ ಉಂಟಾಗಿರುವ ಈ ಪರಿಸ್ಥಿತಿಯಲ್ಲಿ ಸಮನ್ವಯದೃಷ್ಟಿಯನ್ನು ಘೋಷಿಸುವ, ಪೋಷಿಸುವ ಕಾವ್ಯಕೃತಿಗಳು ತುಂಬ ಅಗತ್ಯ. ಜೀವನದ ವಾಸ್ತವತೆ ಮತ್ತು ಆದರ್ಶಗಳೆರಡರ ಸಮನ್ವಯವನ್ನೂ ಸಾಧಿಸುವ ಇಂತಹ ಕೃತಿಯನ್ನು ಮೊದಲು ಸ್ವಾಗತಿಸಬೇಕು. ಕಾವ್ಯ ಕಾಲಕಾಲಕ್ಕೆ ಆಯಾ ಯುಗದ ಮನೋಬುದ್ಧಿಗಳ ಬೆಳವಣಿಗೆಗೆ ಅನುಗುಣವಾಗಿ ಜೀವನದೃಷ್ಟಿಯನ್ನು ಶುದ್ಧಗೊಳಿಸುವುದಲ್ಲದೆ, ಹೊಸ ಹೊಸ ಸತ್ವಯುತ ಅಭಿವ್ಯಕ್ತಿಯನ್ನು ರೂಪಿಸಿಕೊಳ್ಳುತ್ತ ಹೋಗುವುದು. ಅದು ನಿತ್ಯ ನೂತನವೂ ಹೌದು, ನಿತ್ಯ ಪುರಾತನವೂ ಹೌದು. ಈ ದೃಷ್ಟಿಯಿಂದ ರೀತಿಯಲ್ಲಿ, ವಸ್ತುವಿನಲ್ಲಿ ಮತ್ತು ನೂತನ ಉಪಮೆ, ರೂಪಕ, ಸಂಕೇತ ಮುಂತಾದ ಅಭಿವ್ಯಕ್ತಿ ವಿಶೇಷಗಳಲ್ಲಿ ನವ್ಯತೆಯನ್ನು ತೋರಿಸುವ ಈ ಕೃತಿಯನ್ನು ನವ್ಯಕಾವ್ಯ ಎಂದು ಕರೆಯಬಹುದು. ಅಲ್ಲದೆ ಸುತ್ತಮುತ್ತಲಿನ ವಾಸ್ತವ ಸಾಮಾಜಿಕ ಪ್ರಜ್ಞೆ ಕಾವ್ಯದಲ್ಲಿ ವ್ಯಕ್ತವಾಗುವುದು ನವ್ಯಕಾವ್ಯದ ಜೀವಲಕ್ಷಣ ಎಂದು ತಿಳಿಯುವುದಾದರೆ ಈ ಸಂಕಲನದ ಕವಿತೆಗಳನ್ನು ನವ್ಯ ಎಂದು ಧಾರಾಳವಾಗಿ ನಿರ್ಣಯಿಸಬಹುದು.

ಈ ಸಂಕಲನದಲ್ಲಿ ಒಟ್ಟು ಇಪ್ಪತ್ತು ಕವನಗಳಿವೆ. ಈ ಕವನಗಳಲ್ಲಿ ಕೆಲವು ಪ್ರಕೃತಿಯನ್ನು ಕುರಿತವು; ಉಳಿದುವು ಸಮಾಜ ಮತ್ತು ಸ್ವಭಾವಚಿತ್ರಗಳು. ಕವಿಯ ಮನೋಧರ್ಮವನ್ನೂ, ವಿಚಾರಸರಣಿಯನ್ನೂ ವ್ಯಕ್ತಗೊಳಿಸುವ 'ಜನರು' ಎಂಬ ಕವಿತೆಯನ್ನು ಮೊದಲು ಗಮನಿಸುವುದು ಉಳಿದ ಕವಿತೆಗಳ ವಿಮರ್ಶೆಗೆ ಸಹಾಯಕವಾಗುವುದು.

ಜೀವನದಲ್ಲಿ ಕಷ್ಟವೂ ಇದೆ, ಸುಖವೂ ಇದೆ; ಚೆಲುವೂ ಇದೆ, ಕೊಚ್ಚೆಯೂ ಇದೆ. ಒಂದನ್ನು ಸಂಪೂರ್ಣ ಅಲಕ್ಷಿಸಿ ಮತ್ತೊಂದನ್ನೇ ಗುಡ್ಡಮಾಡಿ ತೋರಿಸುವ ಸಾಹಿತಿ ಜೀವನದ ಸಮಗ್ರತೆಗೆ ವಂಚನೆ ಮಾಡುತ್ತಾನೆ. ಸ್ವತಃ ಬಾಳಿನ ಬಿರುಬಿಸಿಲಿನ ನಾನಾಪರಿಯನ್ನು ಅನುಭವಿಸಿದರೂ

ಬಿಸಿಲನುಂಡು ಬೆಳುದಿಂಗಳ
ಕೊಡುವ ಚಂದ್ರನಂದದಿ

ಜನತೆಯ ಮನಸ್ಸಿಗೆ ಆಹ್ಲಾದಕರವಾದ ಕಾವ್ಯವನ್ನು ನೀಡಬೇಕು. ಬರೀ ಚಿತ್ತಕ್ಷೋಭೆಯನ್ನುಂಟುಮಾಡುವ ಕಾವ್ಯ ಬಾಳಿನ ಸಮಸ್ಯೆಗಳನ್ನು ಬಗೆಹರಿಸಲಾರದು, ಹೊಸ ಬದುಕನ್ನು ರೂಪಿಸಲಾರದು. ಚಿತ್ತಶಾಂತಿಯನ್ನೂ ಧೈರ್ಯ

ಉತ್ಸಾಹಗಳನ್ನೂ ಉಂಟುಮಾಡುವ ಶಕ್ತಿಯುತ, ವಿಧಾಯಕ ಕಾವ್ಯ ಬರಬೇಕು. ಅದಕ್ಕೆ ಬರೀ ವಾಸ್ತವತೆಯ ಪ್ರಜ್ಞೆ ಸಾಲದು. ಶಿವ, ಸುಂದರ, ಭವ್ಯವಾದುದನ್ನು ಕಾಣುವ ರಸದೃಷ್ಟಿಯೂ, ಪ್ರತಿಭೆಯೂ ಬೇಕು

"ಅದೂ ಸತ್ಯ ಇದೂ ಸತ್ಯ
ಎಂಬ ದೃಷ್ಟಿಯಿಲ್ಲದೆ
ಬಾಳು ಬೆಳೆಯಬಲ್ಲುದೆ"

ಎಂಬ ವಿವೇಕ ಇರಬೇಕು. "ವಿಫಲತೆಯೊಳು ಸಫಲತೆ ಚಿಗುರಿಡುವುದನು" "ಅಳಿವಿನಲ್ಲು ಉಳಿವು ಮೊಳೆವ ಚೋದ್ಯವನ್ನು" ನೂರು ಚೈತ್ರಗಳಲ್ಲಿ ಕಂಡರೂ ಉಳಿದಿರುವ ಈ ಉದ್ವೇಗ, ತಳಮಳಗಳು ಹೋಗಬೇಕಾದರೆ ಬೇರೊಂದು ನವದೃಷ್ಟಿ;

"ಅಡಿನೆಲದಲಿ, ಕಣ್ ಮುಗಿಲಲಿ
ರೆಕ್ಕೆಯೊಳಗೆ ವಿಶ್ವವ
ತಬ್ಬುವಂಥ ಗರುಡಶಕ್ತಿ"

ಬರಬೇಕು. ದೊಡ್ಡ ಆಕಾಂಕ್ಷೆ; ದೊಡ್ಡ ಆದರ್ಶ. ಕೊನೆಯ ಈ ಸಾಲುಗಳಲ್ಲಿ ಎಂತಹ ಶಕ್ತಿ ಅಡಕವಾಗಿದೆ! ಈ ಸಮನ್ವಯದೃಷ್ಟಿ ಕಾವ್ಯದಲ್ಲೂ ಇರಬೇಕು, ಜೀವನದಲ್ಲೂ ಇರಬೇಕು.

ಪ್ರಕೃತಿಯನ್ನು ಕುರಿತ ಕವಿತೆಗಳು ಬರೀ ವರ್ಣನೆಯ ಸೊಬಗಿಗಾಗಿ ಬರೆದವಲ್ಲ. ಪ್ರಕೃತಿಯ ವಿವಿಧ ಭಾವಗಳಲ್ಲಿ ಕವಿ ಮಾನವಜೀವನದ ಪ್ರತಿಫಲವನ್ನೇ ಕಾಣುತ್ತಾನೆ. 'ಮಾಗಿ'ಯ ವರ್ಣನೆ ತುಂಬ ಹೃದಯಂಗಮವಾಗಿದೆ. ಒಂದು ಕಾಲದಲ್ಲಿ ಹಸಿರು, ಹಣ್ಣು, ಹೂಗಳನ್ನು ತೂಗಿಸುತ್ತ ನಳನಳಿಸುತ್ತಿದ್ದ ಮರಗಿಡಗಳು ಮಾಗಿಯಲ್ಲಿ ಬೋಳಾಗಿ ನಿಂತಿವೆ. "ನಿಸ್ತೇಜ ರವಿ" "ಬೆಪ್ಪುಗಣ್ ಬಿಡುವ ಇರುಳ ನಭ", ಹಗಲೇನು ಇರುಳೇನು ಸದಾ ಬೀಸುವ ಛಳಿಯ ಸೂಜಿಗಾಳಿ, ಜೊತೆಗೆ "ಮಂಜು ಬಿಳಿಯ ನಂಜಾಗಿ ಬೀಸಿತು ಮೇಲೆ" (ಇಲ್ಲಿ ಸೂಜಿಗಾಳಿ, ಬೆಪ್ಪುಗಣ್‌ಬಿಡುವ ಇರುಳ ನಭ, ಮಂಜು ಬಿಳಿಯ ಸಂಜು—ಈ ಮಾತುಗಳು ಅರ್ಥವನ್ನು ಮಾತ್ರವಲ್ಲ ಅನುಭವವನ್ನೂ ಕೊಡುತ್ತವೆ). ಇಂತಹ ಸೋತು ಸಾಯದ ಬದುಕಿನಲ್ಲೂ, ವಿಲಯ ದಾಘಾತದಲ್ಲೂ ಆಸೆ ಮಿನುಗುತ್ತದೆ.

"ಬೋಳಾದ ಎದೆಯಲ್ಲಿ ಚಿಗುರು ಹೂವನು ತೂಗಿ
ನಿಲುವ ಒಂದೇ ಕನಸು ಈ ಬಾಳಿಗಾಧಾರ."

ಮಾಗಿ ಮುಗಿದು ವಸಂತಾಗಮನದ ಸಂಧಿಕಾಲದ ಚಿತ್ರ "ನವಸೃಷ್ಟಿ" ಚೈತ್ರೋ

ದಯದ ಹರಿಕಾರನಾಗುತ್ತದೆ ಮುತ್ತುಗದ ಮರ. ವಿಲಯ ವೈಭವದಿಂದಲೇ ನವಸೃಷ್ಟಿ ಮೂಡುವ ಚೋದ್ಯವನ್ನು ನೋಡಿ ಕವಿಯ ದೃಷ್ಟಿಯೂ ಹೊಸದಾಗುತ್ತದೆ.

"ಭಯನಿರಾಸೆಗಳಿಂದ ಚಣಚಣವೂ ಈ ಬಾಳನೆತ್ತುತಿದೆ ನವಸೃಷ್ಟಿ"

ಎಂಬ ಸಾಲಿನಲ್ಲಿ ಧ್ವನಿಸುವ ಭರವಸೆ ಷೆಲ್ಲಿಯ

"If winter comes can spring be far behind"

ಎಂಬ ಸಾಲನ್ನು ನೆನಪಿಗೆ ತರುತ್ತದೆ.

"ಪಾರ್ಕಿನಲ್ಲಿ ಒಂದು ಸಂಜೆ", "ಒಂದು ಚಿತ್ರ" ಕವನಗಳಲ್ಲಿ ಕೆಲವು ಸವ್ಯ ಉಪಮೆಗಳೂ ಮನೋಜ್ಞವೂ ಸುಂದರವೂ ಆದ ರೂಪಕಗಳೂ ರಸಾನುಭವಕಾರಿಯಾಗಿವೆ.

"ಸಂಜೆಬೆಳಕಿನಲಿ ಸಾಲುಗುಡ್ಡಗಳು
ಅನಂತತೆಯ ತೊದಲು"

ಹಾಗೇ ಸಂಜೆಯ ನಸುಗತ್ತಲಿನಲ್ಲಿ.

"ಈ ಪಾರ್ಕಿನ ಮರಮರವೂ
ನೂರು ಹಕ್ಕಿಯಿಂಚರದಲಿ
ಗಿಲಿಗಿಚ್ಚಿಗಳಾಗಿವೆ."

"ಅನಂತತೆಯ ತೊದಲು" "ಗಿಲಿಗಿಚ್ಚಿಗಳಾಗಿವೆ" ಎಂಬ ಮಾತುಗಳಲ್ಲಿನ ಅರ್ಥ, ಸವಿ ಹೇಳಿ ಮುಗಿಸಲಾಗುವುದಿಲ್ಲ.

ಸಮಾಜ ಮತ್ತು ಸ್ವಭಾವಚಿತ್ರಗಳನ್ನು ಮೂಡಿಸುವ ಕವಿತೆಗಳಲ್ಲಿ ಸಂಜೆದಾರಿ, ಶೋಧನೆ, ಇವನು, ಆಸ್ಪತ್ರೆ, ಮುಗಿದಕತೆ, ಬಾಡಿಗೆ ಮನೆ ಇವು ತುಂಬ ಉತ್ತಮ ಭಾವಗೀತೆಗಳು.

ಒಮ್ಮೆ ದರ್ಪದಿಂದ ಸ್ಥಾನಮದದಿಂದ ಅದೇ ಶಾಶ್ವತವೆಂಬ ಭ್ರಾಂತಿಯಲ್ಲಿ ತಿಳಿವಿನ ಬೆಳಕು ಮನಸ್ಸನ್ನು ಪ್ರವೇಶಿಸಲೂ ಅವಕಾಶಕೊಡದೆ ಮೆರೆದ ಅಧಿಕಾರಿ ನಿವೃತ್ತನಾದ ಮೇಲೆ ಬಾಳಶೂನ್ಯತೆಯನ್ನನುಭವಿಸುವ ಚಿತ್ರ "ಸಂಜೆದಾರಿ"ಯ ವಸ್ತು. ಸಂಜೆ,

"ಕೈಹಿಡಿದ ಸರಪಳಿಯ ಜಗ್ಗುತಿದೆ ಕರಿನಾಯಿ ಮುಂದೆಮುಂದೆ
ಹಿಡಿದ ಕೈಸಾಗುತಿದೆ ಹಿಂದೆಹಿಂದೆ"

ಉತ್ಸಾಹವಿಲ್ಲದ ಬಾಳು, ಯಾಂತ್ರಿಕವಾದ ದಿನಚರಿ! ಅವನು ಅನ್ಯಮನಸ್ಕನಾಗಿ ತುಳಿಯುತ್ತಿರುವ ಹಾದಿ ಅವನ ಚಿಂತನೆಯ ವಿಷಯದ ಸಂಕೇತವೇ ಆಗಿದೆ.

ಮುಗಿವಿರದ ಪ್ರಶ್ನೆಯೊಲು
ಹಾಸಿರಲು ಟಾರ್‌ಬೀದಿ.

ನಡೆಯುತ್ತ ನಡೆಯುತ್ತ ಹಿಂದೆ ತಾನು ಅಧಿಕಾರ ಚಲಾಯಿಸಿದ ಆಫೀಸು ಬಳಿಯೇ ಬಂದಾಗ ಅದರ ನೋಟ ಕಳೆದ ವೈಭವದ ಅನೇಕ ನೆನಪುಗಳನ್ನು ತರುತ್ತದೆ.

"ಯಾವ ಪುರುಷಾರ್ಥವನು ಪಡೆದುದಾಯಿತು ಜೀವ?" ಅದೇ, ಅದೇ ಪ್ರಶ್ನೆ; ಮುಗಿವಿರದ ಪ್ರಶ್ನೆ ಚುಚ್ಚುತ್ತದೆ. ವ್ಯರ್ಥವಾದುದೆ ಬಾಳು ಎಂಬ ಖಿನ್ನತೆ ಮನಸ್ಸನ್ನಾವರಿಸಿದೆ, ಭವಿಷ್ಯತ್ತು

"ಮಸಿ ನಿರಾಸೆಯ ನಭದ ಮೇಲೆ ಕರಿಗೆರೆಗಳನು
ಬರೆದ ತಂತಿಯ ಕಂಬ ಸಾಲು ಸಾಲು
ತಲೆಗೆದರಿನಿಂತಿರುವ ಈಚಲಿನ ರೂಕ್ಷತೆಗೆ
ಹಿನ್ನೆಲೆಯ ರಚಿಸಿರಲು ಬೋಳು ಬಯಲು"

ಕಾಣುವಂತೇ ಭೀಕರ ಶೂನ್ಯವಾಗಿ ತೋರುತ್ತದೆ.

"ಮುಗಿದ ಕಥೆ"ಯಲ್ಲಿ ಒಂದೇ ಬಾಳಿನ ಎರಡು ಪರಸ್ಪರ ವಿರೋಧ ಚಿತ್ರಗಳನ್ನು ಮುಂದಿಡುತ್ತಾರೆ, ಬಾಲ್ಯದ ಮುಗ್ಧತೆಯ, ಪ್ರೀತಿಯ ಆವರಣದಲ್ಲಿ "ಮಂದಸುಂದರ ಶಾಂತಪ್ರಭೆಯೊಳುರಿದಿರೆ ಹಣತೆ" ಅಣ್ಣ ಹೇಳಿದ ಅಪ್ಸರೆಯ ಕಥೆ ಕೇಳುತ್ತ ಗಂಧರ್ವಲೋಕಕ್ಕೆ ತೇಲಿಹೋಗುತ್ತಿದ್ದರು. ದೊಡ್ಡವರಾಗಿ ದುಡಿಮೆಯಲ್ಲಿ ಮಗ್ನರಾದಾಗ ಸೋತು ಸೊರಗಿದ ಸಂಜೆ "ಕಣ್ಣುಕುಕ್ಕುವ ತೆರದಿ ಜ್ವಲಿಸೆ ವಿದ್ಯುದ್ದೀಪ" ದುಡಿದು, ದಣಿದು ಮನೆಗೆ ಬರುವ ಆ ಅವರೇ ಈಗ ಹತ್ತಿರಿದ್ದೂ ದೂರ. ಯಾವ ಕಥೆಯನ್ನು ಕೇಳುವ ಆಸಕ್ತಿಯೂ ಇಲ್ಲ ಅವರಿಗೆ. ಆ ಪ್ರೀತಿಯ ಕೊಂಡಿ ಮುರಿದುಹೋಗಿದೆ. ಅಂದು ಹಣತೆಯ ಮಂದಪ್ರಕಾಶದಲ್ಲಿ ಕುಳಿತ ಪ್ರೀತಿಯ ಅಣ್ಣತಮ್ಮ ಅಕ್ಕತಂಗಿಯರ ರಮ್ಯಚಿತ್ರ. ಇಂದು ವಿದ್ಯುದ್ದೀಪ ಕಣ್ಣು ಕುಕ್ಕುತ್ತದೆ. ವಾಸ್ತವತೆ ಭಂಗಮಾಡಿರುವ ಆ ರಮ್ಯ ರಸಜೀವನ ಈಗ ಮುಗಿದ ಕಥೆ. ಇಲ್ಲಿ ಬಳಸಿರುವ ಹಣತೆ, ವಿದ್ಯುದ್ದೀಪಗಳ ಸಂಕೇತ ಭಾವಪೂರ್ಣವಾಗಿವೆ.

'ಶೋಧನೆ' ಬಾಳಿನುದ್ದಕ್ಕೂ ನೋವು ನಿರಾಸೆ ವಿಫಲತೆಗಳನ್ನೇ ಅನುಭವಿಸಿದ ವ್ಯಕ್ತಿಯ ಮನಸ್ಸಿನ ಸುಪ್ತಾಂತರಾಳದ ಚಿತ್ರ. ನೋವಿನಕ್ಷಯ ಪಾತ್ರೆಯೇ ಎನ್ನಬಹುದಾದ ಎದೆಯ ಬಾವಿಯ ಆಳಕ್ಕೆ ನೆನಪಿನ ಪಾತಾಳಗರುಡವನ್ನು ಬಿಟ್ಟು ಮನೋವಿಶ್ಲೇಷಣೆ ಮಾಡಿರುವ ಬಗೆ ನೂತನವಾಗಿದೆ. ಇದು ಸ್ವಪ್ನದಂತೆ ಸಾಂಕೇತಿಕವಾಗಿದೆ.

ಬಹಳ ದಿನ ಖಾಲಿ ಬಿದ್ದಿರುವ "ಬಾಡಿಗೆ ಮನೆ"ಯ ಕರುಣಾರ್ದ್ರ ಸ್ಥಿತಿಯನ್ನು

ನೋಡಿದ ಕವಿಯ ಹೃದಯ ಭಾವತರಂಗಿತವಾಗುತ್ತದೆ. ಗೃಹಿಣಿಯ ಕೈಬಳೆಗಳ ಮಂಜುಳ ದನಿಯಾಗಲೀ ಇನಿದನಿಯ ಹಾಡಾಗಲೀ ಮಕ್ಕಳ ಮಧುರಗದ್ದಲವಾಗಲೀ ಇಲ್ಲದ ಆ ಮನೆ ಶೂನ್ಯವಾಗಿದೆ. ಆ ಶೂನ್ಯತೆ ಅಸಹನೀಯವಾಗಿರುವುದು ಮಾನವ ಹೃದಯಕ್ಕೆ ಮಾತ್ರವಲ್ಲ;

"ಇಲಿ ಹಲ್ಲಿಗು ಜಿರಲೆಗಳಿಗು
ಬರಿಯ ಶೂನ್ಯದಿರವಿನಲ್ಲಿ
ಕಾಲ ಕಳೆದು ಬೇಸರ"

ಈಗ ಬರಿದಾದ ಮನೆಯನ್ನು ನೊಡಿ ಎಂತಹವರಿಗೂ ಎನಿಸೀತು

"ನಿಸ್ತರಂಗವೆಂಥ ಬದುಕೊ
ಸತರಂಗವೇ ಜೀವನ"

ಎಂದು. ಕವಿಗೆ ಇನ್ನೂ ಗಹನವಾದ, ಬಾಳಿನ ಅರ್ಥ ಸ್ಫುರಿಸುತ್ತದೆ.

"ಜೀವನದ ಸಂಪರ್ಕವಿರದ
ಇರವಿಗೇನು ಬೆಲೆಯಿದೆ?"

ಅಲ್ಲದೆ

"ಹತ್ತು ಜನರ ನೋವು ನಲಿವು
ತನ್ನೊಳಗನು ತುಂಬದಿದ್ದರೇನಿದ್ದೂ ಏನಿದೆ?"

"ಹೊಸಲು ದಾಟಿತು ಹಸುಳೆ" ಎಂಬ ಕವನದಲ್ಲಿನ ಭಾವ ಅಭಿವ್ಯಕ್ತವಾಗಿರುವ ನೂತನ ರೀತಿ ವಿಸ್ಮಯ ಸುಂದರವಾಗಿದೆ.

ಹೊರಜಗಕು ಒಳಜಗಕು
ಕೋಟೆಗಟ್ಟಿದ ಹೊಸಿಲ ಪರ್ವತಶ್ರೇಣಿಯನು
ದಾಟಿಬಿಟ್ಟಿತು ಹಸುಳೆ!

ತೇನ್ಸಿಂಗನ ಎವರೆಸ್ಟ್ ವಿಜಯಕ್ಕೆ ಮಹತ್ವದಲ್ಲಿ ಯಾವ ರೀತಿಯೂ ಕಡಿಮೆಯಲ್ಲ—ಹಸುಳೆಯ ಈ ಪ್ರಥಮ ಸಾಹಸ. ಆದ್ದರಿಂದಲೇ ಮನೆಯಲ್ಲಿ ಇದು ಇನ್ನೂ ಹೆಚ್ಚಿನ ಸಂತೋಷಕ್ಕೆ, ಹಬ್ಬಕ್ಕೆ ಕಾರಣವಾಗುತ್ತದೆ. ನಿಕಟಪರಿಚಯದಿಂದ ಸಾಧಾರಣತೆಯ ಹೊದಿಕೆ ಹೊದ್ದು ಅವಜ್ಞತೆಗೆ ಗುರಿಯಾಗಿರುವ ಬಾಳಿನ ಈ ಮಹತ್ವದ ಪುಟವನ್ನು ಕವಿ ಬೆಳಕಿಗೆ ಹಿಡಿಯುತ್ತಾನೆ.

"ಜನ್ಮಜನ್ಮಾಂತರದ ಕರ್ಮವಂಟಿದ ಹಾಗೆ
ವಿಶ್ವಭೂಪಟದಂಥ ಹಳೆಯ ಕೋಟು"

ಹಾಕಿರುವ "ಮೇಷ್ಟ್ರು" ಕರುಣಾಜನಕಸ್ಥಿತಿಯ ಚಿತ್ರವನ್ನು ಹೃದಯದಲ್ಲಿ ಕೊರೆಯುತ್ತದೆ ಇನ್ನೊಂದು ಕವಿತೆ.

"ಇವನು" ಎಂಬ ಮತ್ತೊಂದು ಕವನದಲ್ಲಿ ಮೂಡುವ ವ್ಯಕ್ತಿ ಆಧುನಿಕ ನಾಗರಿಕ ಜಗತ್ತಿನಲ್ಲಿ ಒಬ್ಬ ಸಾಮಾನ್ಯನಾದರೂ ತನ್ನ ನಿರ್ಲಿಪ್ತ, ನಿರ್ವಿಕಾರ ಮನೋಭಾವದಿಂದ ಭವ್ಯನಾಗಿ ನಿಲ್ಲುತ್ತಾನೆ. ಈತ ಹೃದಯಹೀನ, ಬುದ್ಧಿಹೀನ ಜಡಮೂರ್ತಿಯಲ್ಲ. ಇವನಲ್ಲಿರುವುದು ಭಾವಶೂನ್ಯತೆಯಲ್ಲ, ಭಾವಸಂಯಮ.

"ತಲೆಯ ತಪ್ಪಲೆಯಲ್ಲಿ
ವಿಚಾರಗಳ ಕುದಿತ
. . . . .
ಮನದ ಕಂಬಿಯ ಮೇಲೆ
ನೂರು ರೈಲಿನ ಉರುಳು"

ಹೀಗೆ ಹಗಲು-ಇರುಳುಗಳು ಇವನ ಬಾಳನ್ನು ಅರೆಯುತ್ತಿವೆ. ನಾಗರಿಕತೆ ಒದಗಿಸಿರುವ ನೂರಾರು ಮನರಂಜನೆಗಳಿಗೆ ಶರಣು ಹೋಗಿ ಬಾಳಿನಿಂದ ವಿಮುಖವಾಗುವ ದೌರ್ಬಲ್ಯಕ್ಕೂ ಈತ ಎಡೆಗೊಡುವುದಿಲ್ಲ.

"ಮುರುಕು ಜೋಪಡಿಯೊಳಗೆ
ಮಳೆಯ ನೀರಿಳಿವಂತೆ
ಇಳಿಯುತಿವೆ ತಲೆಯೊಳಗೆ ನೂರುಚಿಂತೆ"

ಈ ಸಾಮಾನ್ಯತೆಯ ತಳಪಾಯದ ಮೇಲೆ ನಿಂತಿದೆ ಇವನ ಭವ್ಯವ್ಯಕ್ತಿತ್ವ. ವಾಸ್ತವಜಗದ ಜಂಜಡತೆಯ ನೆಲದ ಮೇಲೆ ನಿಂತೂ ಅಲಿಪ್ತವಾದ ಇವನ ತಲೆ ಮುಗಿಲಿನೆತ್ತರದಲ್ಲಿ ನೋವು ನಲಿವುಗಳಿಗತೀತವಾಗಿ ನಿಂತಿದೆ. ಬಾಳುವದಷ್ಟೇ ತನ್ನ ಕರ್ತವ್ಯ; ಕಾಯುವುದೂ ಕರ್ಮವೆನಿಸುವುದು ಎಂದು ಅರಿತು ಅಚಂಚಲ ಮನಸ್ಕನಾಗಿ ನಿಂತಿರುವ ಈತ ನಿರಾಸೆಯಲ್ಲಿ ಮುಳುಗಿಯೂ ನೋಯದೆ, ಕೋಪದಲಿ ದೈವವನು ಶಪಿಸದೆ,

"ಬೆಳಕ ಮುಡಿಯಲಿ ಹೊತ್ತು ನಿಂತಲಾಂದ್ರದ ಹಾಗೆ
ನಿಂತಿರುವನು.
ಸುತ್ತ ಅನ್ಯಾಯಗಳ ಸಂತೆ ಸಾಗಿರಲಾಗಿ
ವಿಲಯ ಮೌನದೊಳಿವನು ದಿಟ್ಟಿಸುವನು."

ಇದೊಂದು ಅಪೂರ್ವ ಪಾತ್ರ ಸೃಷ್ಟಿ.

ಬಾಳಿನಲ್ಲಿ ಬರಿಯ ನೋವು, ದುಃಖ ನಿರಾಸೆಗಳನ್ನೇ ಕಂಡು ಖಿನ್ನವಾಗಿ

ಉತ್ಸಾಹಹೀನವಾಗಿರುವ ಮನಸ್ಸನ್ನು ಸಮಾಧಾನಗೊಳಿಸಿ ಧೃತಿಯನ್ನೂ ಧೈರ್ಯ ಭರವಸೆಗಳನ್ನೂ ತುಂಬುವ ಸಂಜೀವನಶಕ್ತಿ ಈ ಕವಿತೆಗಳಲ್ಲಿದೆ. ಛಂದೋರೂಪ ಕೆಲವು ಕಡೆ ಇನ್ನೂ ಪ್ರಯೋಗಾವಸ್ಥೆಯಲ್ಲಿದೆ ಎಂದೆನಿಸುತ್ತದೆ. ಉಳಿದ ಕಡೆ ಛಂದಸ್ಸಿನಲ್ಲಿ ಸಹಜ ಲಾಲಿತ್ಯ, ಶೈಲಿಯಲ್ಲಿ ಸುಭಗತೆ ನವ್ಯತೆ ಇವೆ. ಅಲ್ಲದೆ ಅನೇಕ ಕಡೆ ನೂತನ ಅಭಿವ್ಯಕ್ತಿಗಳನ್ನೂ, ಔಚಿತ್ಯಪೂರ್ಣ ಪದಪ್ರಯೋಗಗಳನ್ನೂ ಕಂಡು ಮೆಚ್ಚಬಹುದು.

ಶ್ರೀಯುತ ಶಿವರುದ್ರಪ್ಪನವರ ಈ ಕೃತಿ ಅವರ ಕಾವ್ಯಜೀವನದ ಪ್ರಗತಿಯಲ್ಲಿ ಮತ್ತೊಂದು ಮೆಟ್ಟಿಲು ಎನ್ನಬಹುದು. ಗಾತ್ರದಲ್ಲಿ ಕಿರಿದಾದರೂ ಕಾವ್ಯಗುಣದಲ್ಲಿ ಉತ್ತಮವಾದುದು. ನೂತನ ರೀತಿಯ ಕಾವ್ಯದ ಹಾದಿಯಲ್ಲಿ ಬಿಟ್ಟ ಒಂದು ಒಳ್ಳೆ ಹೂ. ಕನ್ನಡದ ಸಹೃದಯ ಸಹಪಥಿಕರೆಲ್ಲರಿಗೂ ಪ್ರಿಯವೆನಿಸುವ ನರುಗಂಪು ಇದರದು. ಈ ಕಾಲದ ಆಶಾದಾಯಕ ಕವಿಗಳಲ್ಲಿ ಒಬ್ಬರಾದ ಇವರಿಂದ ಇನ್ನೂ ವಿಶೇಷ ಕೃತಿಗಳು ಮೂಡುವುವೆಂದು ಕನ್ನಡಜನತೆ ನಿರೀಕ್ಷಿಸಬಹುದು.

ಪ್ರಭುಪ್ರಸಾದ

*
* *

ಶ್ರೀಮದಾಂಧ್ರ ಭಾಗವತಮು (ತೆಲುಗು)—ಸಂಪಾದಕರು ಮತ್ತು ಪ್ರಕಾಶಕರು : ಶ್ರೀ ರೆಂಟಾಲಂ ಶಿವರಾಮಯ್ಯ, ಚಿಗುರುಪಾಡು, ಅಚ್ಚಂಪೇಟೆ ಪೋಸ್ಟು, ಸತ್ತೆನಪಲ್ಲಿ ತಾಲ್ಲೂಕು, ಗುಂಟೂರು ಜಿಲ್ಲೆ ; ಪುಟಗಳು ೧೧೦ ; ಬೆಲೆ, ರೂ. ೨-೮-೦.

ಆಂಧ್ರಸಾಹಿತ್ಯದಲ್ಲಿ ಪೋತನಕವಿ ರಚಿಸಿದ ಭಾಗವತಕ್ಕೆ ಒಳ್ಳೆಯ ಖ್ಯಾತಿ ಇದೆ, ಆಂಧ್ರದಲ್ಲಿ ರಾಮಾಯಣ ಭಾರತಗಳಿಗಿಂತಲೂ ಭಾಗವತವೇ ಹೆಚ್ಚು ವ್ಯಾಪ್ತಿಯನ್ನು ಹೊಂದಿದೆ. ಕಾರಣವೆಂದರೆ, ಇದರಲ್ಲಿರುವ ಮೂರು ಮುಖ್ಯ ಲಕ್ಷಣಗಳು : (೧) ಭಕ್ತಿಸಂಪತ್ತು, (೨) ವೇದಾಂತ ವಿವರಣೆ, (೩) ರಸವತ್ಕವಿತೆ. ಈ ಮೂರು ಲಕ್ಷಣಗಳಲ್ಲಿ ಭಕ್ತಿಲಕ್ಷಣವೇ ಪೋತನನ ಕವಿತ್ವಕ್ಕೆ ಜೀವಾಧಾರ. ಭಾಗವತದಲ್ಲಿರುವ ಪ್ರಹ್ಲಾದಚರಿತ್ರೆ, ಗಜೇಂದ್ರಮೋಕ್ಷ, ವಾಮನಚರಿತ್ರೆ ಮುಂತಾದ ಕಥೆಗಳಲ್ಲಿ ಈ ಅಂಶಕ್ಕೆ ಪೋತನನು ಹೆಚ್ಚು ಗಮನ ಕೊಟ್ಟಿದ್ದಾನೆ. ಸಂಸ್ಕೃತ ಭಾಗವತದಲ್ಲಿ ಇಲ್ಲದೇ ಇರುವ ಸನ್ನಿವೇಶಗಳನ್ನೂ ವರ್ಣನೆಗಳನ್ನೂ ತೆಲುಗು ಭಾಗವತದಲ್ಲಿ ಸೇರಿಸಿ ಮೂಲ ಗ್ರಂಥಕ್ಕಿಂತಲೂ ಹೆಚ್ಚುಮಾಡಿದ್ದಾನೆ. ತತ್ವವಿಷಯಗಳನ್ನೂ, ವೇದಾಂತ ಚರ್ಚೆಗಳನ್ನೂ ಸಾಮಾನ್ಯರಿಗೆ ಅರ್ಥವಾಗುವಂತಹ ರೀತಿಯಲ್ಲಿ ಚಿತ್ರಿಸಿದ್ದಾನೆ. ಇವನದು ಅದ್ವೈತಮತ.

ಪೋತನಕವಿಯನ್ನು ಕುರಿತು ಕನ್ನಡಿಗರಿಗೆ ಚಲನಚಿತ್ರದ ಮೂಲಕ ಪರಿಚಯ

ವಾಗಿದೆ. ಇವನು ನಿಯೋಗಿ ಬ್ರಾಹ್ಮಣ. ೧೫ ನೇ ಶತಮಾನದಲ್ಲಿದ್ದವನು. ಆಂಧ್ರ ಸಾಹಿತ್ಯದಲ್ಲಿ ಈ ಶತಕವನ್ನು 'ಪೋತನ ಶ್ರೀನಾಥ ಯುಗ "ವೆಂದು ಕರೆಯುತ್ತಾರೆ. ಪೋತನನು ಗುರುವಿನಲ್ಲಿ ವ್ಯಾಸಂಗಮಾಡಿಲ್ಲ. ಇವನದು ಸಹಜಪಾಂಡಿತ್ಯ. ಶ್ರೀರಾಮನಿಂದ ಇವನಿಗೆ ಪ್ರೇರಣೆಯಾಗಿ ಸಂಸ್ಕೃತ ಭಾಗವತವನ್ನು ಅನುವಾದ ಮಾಡಿದ್ದಾನೆ. ಅದಕ್ಕೆ ಇವನು ಗ್ರಂಥಾದಿಯಲ್ಲಿ:

"ಪಲಿಕೆಡಿದಿ ಭಾಗವತ ಮಟ
ಪಲಿಕಿಂಚೆಡಿವಾಡು ರಾಮಭದ್ರುಂಡಟ, ನೇ
ಪಲಿಕಿನ ಭವಹರ ಮಗುನಟ,
ಪಲಿಕೆದ ವೇರೊಂಡು ಗಾಥ ಬಲುಕಗ ನೇಲಾ ;"

ಎಂದು ಬರೆದಿದ್ದಾನೆ. ಹೀಗೆ ತನಗೆ ಪ್ರೋತ್ಸಾಹವನ್ನು ಕೊಟ್ಟ ರಾಮನಿಗೆ ಈ ಗ್ರಂಥವನ್ನು ಅರ್ಪಣೆ ಮಾಡಿದ್ದಾನೆ.

ಭಾಗವತಕ್ಕೆ ಇರುವ ವ್ಯಾಪ್ತಿಯನ್ನೂ ಖ್ಯಾತಿಯನ್ನೂ ಕಂಡು ಆಗ ಆಂಧ್ರದಲ್ಲಿ ಅರಸನಾಗಿದ್ದ ಸರ್ವಜ್ಞಸಿಂಗ ಮಹೀಪಾಲನು ತನಗೆ ಈ ಗ್ರಂಥವನ್ನು ಅರ್ಪಣೆ ಮಾಡಬೇಕೆಂದು ಒತ್ತಾಯಮಾಡಿದನು. ಪೋತನನು ಅದಕ್ಕೆ ಒಪ್ಪಲಿಲ್ಲ. ಗ್ರಂಥಗಳನ್ನು ಅರಸರಿಗೆ ಅರ್ಪಣೆ ಮಾಡುವುದು ಕನ್ಯಾವಿಕ್ರಯ ಸಮಾನವೆಂದು ಇವನ ಭಾವನೆ. ಅರಸನು ದೌರ್ಜನ್ಯದಿಂದ ಗ್ರಂಥವನ್ನು ತಂದು ಹೂತಿಟ್ಟನೆಂದೂ ಆಗ ಕೆಲವು ಭಾಗಗಳು ಹೋಯಿತೆಂದೂ ಒಂದು ಕಥೆ ಇದೆ. ಇನ್ನೊಂದು ಕಥೆಯೂ ಇದೆ. ಅದೇನಂದರೆ, ಪೋತನನು ಗ್ರಂಥವನ್ನು ಪೂರ್ತಿಮಾಡಿ ಒಂದು ಪೆಟ್ಟಿಗೆಯಲ್ಲಿಟ್ಟು ಪ್ರತಿದಿನ ಪೂಜೆ ಮಾಡುತ್ತಿದ್ದನೆಂದೂ ಇವನು ಸತ್ತಮೇಲೆ ಇವನ ಮಗ ಅಷ್ಟು ಬುದ್ಧಿವಂತನಲ್ಲದುದರಿಂದ ಪೆಟ್ಟಿಗೆ ತೆಗೆದು ನೋಡಲೇ ಇಲ್ಲವೆಂದೂ ಕೆಲವು ದಿನಗಳ ನಂತರ ಪೋತನನ ಶಿಷ್ಯರು ಬಂದು ತೆಗೆದು ನೋಡಿದಾಗ ಕೆಲವು ಭಾಗಗಳು ಗೆದ್ದಲು ಹಿಡಿದುಹೋಗಿತ್ತೆಂದೂ, ಆಮೇಲೆ ಪೋತನನ ಶಿಷ್ಯರಾದ ಏರ್ಚೂರಿಸಿಂಗನ, ವೆಲಿಗಿಂದಲ ನಾರಯ, ಗಂಗಯ—ಇವರು ಆ ಭಾಗಗಳನ್ನು ಪೂರೈಸಿದರೆಂದೂ ವಾಡಿಕೆಯಾಗಿ ಹೇಳಿಬಂದಿರುವ ಕಥೆ ಇದೆ.

ಇದು ಹೀಗಿರುವಾಗ ಹೋದ ಈ ಭಾಗಗಳಲ್ಲಿ ಒಂದಾದ ಷಷ್ಠಸ್ಕಂಧವು ತನಗೆ ಓಲೆಯಗರಿಯ ಸ್ಥಿತಿಯಲ್ಲಿ ಸಿಕ್ಕಿದೆಯೆಂದೂ ಅದನ್ನು ತಾನು ಪಂಡಿತರಿಂದ ಪರಿಷ್ಕರಿಸಿ ಅಚ್ಚುಹಾಕಿದ್ದಾನೆಂದೂ ತಿಳಿಸಿ ಈ ಗ್ರಂಥವನ್ನು ಶ್ರೀ ಶಿವರಾಮಯ್ಯನವರು ಪ್ರಕಟಿಸಿದ್ದಾರೆ. ಪೋತನನು ಪೂರ್ತಿಯಾಗಿಯೇ ಭಾಗವತವನ್ನು ರಚಿಸಿದ್ದಾ

ನೆಂದೂ ಆಂಧ್ರದೇಶವು ಆಗ ಬಹಳ ಅರಾಜಕದಲ್ಲಿದ್ದುದರಿಂದ ಕೆಲವು ಭಾಗಗಳು ಸಿಕ್ಕದೇಹೋದುದರಿಂದ ಗಂಗಯಾದಿ ಶಿಷ್ಯರು ಪೂರೈಸಿದರೆಂದೂ ತಿಳಿಸಿದ್ದಾರೆ.

ಶ್ರೀ ಶಿವರಾಮಯ್ಯನವರು ಪಂಡಿತರಲ್ಲ. ಒಬ್ಬ ಬಡರೈತ; ಕವಿಯೂ ಅಲ್ಲ; ಧನಾಢ್ಯನೂ ಅಲ್ಲ. ಆದರೆ ಆಂಧ್ರಕವಿತ್ವದ ಮೇಲೆ, ಅದರಲ್ಲೂ ಪೋತನನ ಭಾಗವತವೆಂದರೆ ತುಂಬ ಆಸೆಯೂ, ಭಕ್ತಿ, ಮರ್ಯ್ಯಾದೆಗಳೂ ಇವೆ. ಒಂದು ಸಲ ತನ್ನ ನಂಟರ ಮನೆಗೆ ಹೋಗಿದ್ದಾಗ ಅಲ್ಲಿ ಈ ಷಷ್ಠಸ್ಕಂಧದ ಓಲೆಯಗರಿಯ ಪ್ರತಿಯಿತ್ತೆಂದೂ ಅದನ್ನು ನೋಡುತ್ತ ಹೋದಾಗ ಅದು ಪೋತನನು ಬರೆದಿಟ್ಟಿದ್ದ, ಕಳೆದುಹೋಯಿತೆಂದು ಹೇಳಿರುವ ಷಷ್ಠಸ್ಕಂಧವೆಂದು ಗೊತ್ತಾಗಿ ಅದನ್ನು ತಂದು ಪಂಡಿತರಿಗೆ ತೋರಿಸಿ ತನ್ನ ಸ್ವಂತ ವೆಚ್ಚದಿಂದ ಅಚ್ಚುಹಾಕಿಸಿದ್ದಾರೆ.

ಈ ಸ್ಕಂಧದಲ್ಲಿ ಪೋತನ ಕವಿತ್ವದ ರೀತಿಗಳಿವೆ. ಪೋತನ ಶಿಷ್ಯಂದಿರು ಕೂಡ ಪೋತನ ಕವಿತ್ವಸರಣಿಯಲ್ಲಿಯೇ ಗ್ರಂಥವನ್ನು ಪೂರೈಸಿದ್ದಾರೆ. ಆದ್ದರಿಂದ ಈಗ ಶಿವರಾಮಯ್ಯನವರು ಸಂಪಾದಿಸಿರುವ ಗ್ರಂಥವು ಕೂಡ ಪೋತನನು ರಚಿಸಿರಬಹುದೆಂದು ತೋರುತ್ತದೆ. ಇದರಲ್ಲಿ ಅಜಾಮೀಳೋಪಾಖ್ಯಾನ, ವೃತ್ರಾಸುರ ವಧೆ, ನಹುಷನ ಕಥೆ, ಚಿತ್ರಕೇತೋಪಾಖ್ಯಾನ, ಪುಂಸವನ ವ್ರತಾಚರಣೆ ಮುಂತಾದ ಘಟ್ಟಗಳು ಬಹು ರಮ್ಯವಾಗಿ ವರ್ಣಿತವಾಗಿವೆ.

ಭಾಷಾಭಿಮಾನದಿಂದ ಇಷ್ಟು ಶ್ರಮಪಟ್ಟು ಓಲೆಯ ಪ್ರತಿಯನ್ನು ತಂದು ಸ್ವಂತ ವೆಚ್ಚದಿಂದ ಪ್ರಕಟಿಸಿರುವ ಒಬ್ಬ ಬಡರೈತನ ಭಾಷಾಭಿಮಾನವು ಪ್ರಶಂಸನೀಯವಾದದ್ದು. ವಿಶ್ವವಿದ್ಯಾನಿಲಯದವರು ಪಠ್ಯಗ್ರಂಥವಾಗಿ ಇಡಬಹುದಂತಹ ಗ್ರಂಥ ಇದು. ಹಾಗೆ ಪ್ರೋತ್ಸಾಹ ಕೊಟ್ಟರೆ ಶ್ರೀ ಶಿವರಾಮಯ್ಯನವರು ಪಟ್ಟ ಶ್ರಮಕ್ಕೆ ತಕ್ಕ ಮನ್ನಣೆ ಲಭಿಸುವುದು.

ವಿದ್ವಾನ್ ಕೆ. ಸುಬ್ಬರಾಮಪ್ಪ

* * *

ಜೀವದ ಜೀವಾಳ—ಲೇಖಕರು: ಯ. ಮಲ್ಲಪ್ಪ ; **ಪ್ರಕಾಶಕರು:** ಜ್ಞಾನಕಿರಣ ಕಾವ್ಯಾಲಯ ದಳವಾಯಿ ಕೋಡಿಹಳ್ಳಿ ; ಕ್ರೌ. ಅಷ್ಟದಳ ೪೬ ಪುಟಗಳು ; ಬೆಲೆ, ರೂ. ೦-೧೨-೦.

ಈ ಕಿರುಹೊತ್ತಿಗೆಯಲ್ಲಿ ವಚನಗಳಿಂದ ಉದ್ಧರಿಸಿದ 'ಶಿವಯೋಗ,' ವಿದ್ಯಾಭ್ಯಾಸದ ಮೇಲ್ಮೆಯನ್ನು ಸಾರುವ ಲಾವಣಿ ಜೊತೆಗೆ ಷಡಕ್ಷರ, ಹರಿಹರ ಕವಿಗಳ ಪರಿಚಯಾತ್ಮಕ ಎರಡು ಲೇಖನಗಳಿವೆ. ಕವಿವರರ ಜಯಂತ್ಯುತ್ಸವದ ಅವಶ್ಯಕತೆಯನ್ನು ಒತ್ತಿ ಹೇಳಿದ್ದಾರೆ. ಕವಿಗಳು ನಾಡಿನ ನಿಧಿಗಳೂ, ಕೀರ್ತಿಕಲಶಸ್ಥಾಪಕರೂ ಹೌದು. ಕವಿವರರ ಜಯಂತ್ಯುತ್ಸವವನ್ನು ನಾಡಿನ ಜನತೆಯು ತಮ್ಮ ಕರ್ತವ್ಯವೆಂದು ತಿಳಿದು

ಆಚರಿಸಬೇಕು. ಅವರ ಪ್ರತಿಭಾಜ್ಯೋತಿ ಚಿರಕಾಲಕ್ಕೂ ಉಜ್ವಲ ಬೆಳಕನ್ನು ನೀಡುತ್ತದೆ. ಕವಿಕೃತಿಗಳ ಅಧ್ಯಯನ, ಪ್ರಶಸ್ತಿ ಗ್ರಂಥಗಳ ಪ್ರಕಾಶನ, ಜಯಂತ್ಯುತ್ಸವಗಳ ಸಮ್ಮೇಳನ ಮುಂತಾದುವು ನಾಡಿನ ಮೂಲೆಮೂಲೆಯಲ್ಲಿ ಮನೆದೇವರ ಹಬ್ಬದಂತೆ ಆಚರಿಸಲ್ಪಡಬೇಕು. ಶ್ರೀಯುತರು ಹರಿಹರನ ಹೃದಯವೀಣೆಯ ತರಂಗ ತರಂಗಗಳನ್ನು ತಿಳಿಯದ ಮಾತಿನಲ್ಲಿ ಹೇಳಬಲ್ಲರು. ಹರಿಹರನನ್ನು 'ರಗಳೆ'ಯ ನಿರ್ಮಾಪಕನೆಂದೂ ಗದ್ಯಕಾವ್ಯದ ಆದ್ಯಪ್ರವರ್ತಕನೆಂದೂ ಹೇಳಿರುವುದರಲ್ಲಿ ಔಚಿತ್ಯವಿಲ್ಲ. ಜೀವದ ಆಳ ಅನಂತವಾದುದು; ಸಾಗರೋಪಮವಾದುದು. ಜೀವದ ಜೀವಾಳವನ್ನು ಮುಷ್ಟಿಯಲ್ಲಿ ಹಿಡಿದು ಹತೋಟಿಗೆ ತರುವುದು ಬಹಳ ದುರ್ಲಭ. ಯೋಗಿವರ್ಯರಿಗೆ ಮಾತ್ರ ಸಾಧ್ಯವಾಗಬಹುದು. ಈ ಕಿರುಹೊತ್ತಗೆಯ ಶಿರೋನಾಮೆಯ ದೃಷ್ಟಿಯಿಂದ, ಹಾಕಿರುವ ಮಗ್ಗ ಹಿರಿದು, ಹಾಸು ಅತ್ಯಲ್ಪ ಎನ್ನುವಂತಿದೆ.

*
* *

ಕಚಗುಳಿ—ಜಿ. ಪಿ. ಸುಬ್ಬರಾಯ, ಬಿ.ಎ., ದಿ ಸ್ಟೇಟ್ಸ್ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು; ಪುಟಗಳು ೮೧; ಬೆಲೆ, ರೂ. ೧-೦-೦.

ಹರಟೆ, ಹಾಸ್ಯಪ್ರಬಂಧಗಳನ್ನು ರಚಿಸಿ ಕನ್ನಡಿಗರಿಗೆ ಪರಿಚಿತರಾಗಿರುವ ಸುಬ್ಬರಾಯರು ಕನ್ನಡಜನಕ್ಕೆ ಕಾದಂಬರಿ ಬದಲಿಗೆ ಈ 'ಕಚಗುಳಿ' ಇಂಜೆಕ್ಷನ್ ಮಾಡುತ್ತಿದ್ದಾರೆ. ಹಾಸ್ಯಪ್ರಿಯನು ನಗೆಗಾರನೂ ಹೌದು, ರಸಿಕನೂ ಹೌದು. ಮದುವೆಗೆಂದು ತೆಗೆದುಕೊಂಡೊಯ್ಯುತ್ತಿರುವ ಕೂಷ್ಮಾಂಡದ ಪರಿಣಾಮವನ್ನು ಭವಿಷ್ಯ ಮತ್ತು ತೂಕಹೇಳುವ ತ್ರಾಸಿನಲ್ಲಿ ತೂಗಿನೋಡಿ, ಕೊನೆಗೆ ಥೊಪ್ಪನೆ ಸಿಡಿದುಹೋದಾಗ ಅದರ 'ಕೂಷ್ಮಾಂಡ ಪುರಾಣ'ವನ್ನು ಹೇಳುವ ಸುಬ್ಬರಾಯರ ತಿಳಿಹಾಸ್ಯವೇ ಹಾಸ್ಯ. 'ಮನೆಯಾಕೆ ಸಲಹೆ'ಯಲ್ಲಿ ಮಡದಿಯು ಸಲಹೆ ನೀಡುವುದರಲ್ಲಿ ಮಂತ್ರಿಯಂತಿರಬೇಕೆಂದು ಸೂಚಿಸುವರು. ನಕ್ಕು ನಗಿಸುವ ಇವರಿಗೆ 'ನೀಲಿ ಕವರು', 'ಅಕ್ಕನ ಮನೆ,' 'ಕೈನೆನಪು,' 'ಸಿಗರೇಟು ಸಾಹಿತ್ಯ' ಮುಂತಾದ ಯಾವ ವಿಷಯವೇ ಆಗಲಿ ಹೊಗೆಸಾಹಿತ್ಯವಾಗದೆ ನಗೆಸಾಹಿತ್ಯವಾಗಿದೆ. ಆದರೆ ವಸ್ತು ವೈವಿಧ್ಯಕ್ಕೆ ಅನುಗುಣವಾದ ರಸಪಾಕವಿಲ್ಲ. ಹಾಸ್ಯದಲ್ಲಿ ಸಹಜತೆಯಿದೆ; ಆದರೆ ಆಸಕ್ತಿ, ಕುತೂಹಲ ಕೆರಳಿಸುವ ಪ್ರಚೋದನೆಯಿಲ್ಲ. ಶ್ರೀಯುತರು ತಮ್ಮ ಹಾಸ್ಯ ಕಚಗುಳಿಗೆ ವಿಡಂಬನಮಾರ್ಗವನ್ನು ಕಲ್ಪಿಸಿಕೊಂಡು ಉತ್ತಮ ಪ್ರಬಂಧಗಳನ್ನು ಕನ್ನಡಿಗರಿಗೆ ನೀಡಲೆಂದು ಆಶಿಸೋಣ.

ಡಿ. ಟಿ. ರಂಗಸ್ವಾಮಿ.

*
* *

Elements and Atoms in Greek and Indian Thought—ಲೇಖಕರು : ಶ್ರೀ ಎನ್. ಎಸ್. ಸುಬ್ರಹ್ಮಣ್ಯಶಾಸ್ತ್ರಿ ; ಪುಟಗಳು ೭೪ ; ಬೆಲೆ, ರೂ. ೩-೮-೦.

ಶ್ರೀ ಎನ್. ಎಸ್. ಸುಬ್ರಹ್ಮಣ್ಯಶಾಸ್ತ್ರಿಯವರು ಆಂಗ್ಲಭಾಷೆಯಲ್ಲಿ ಬರೆದಿರುವ "ಗ್ರೀಕ್ ಮತ್ತು ಹಿಂದೂಗಳ ದೃಷ್ಟಿಯಲ್ಲಿ ಮೂಲವಸ್ತುಗಳು ಮತ್ತು ಪರಮಾಣುಗಳು" ಎಂಬ ಪುಟ್ಟ ಪುಸ್ತಕದಲ್ಲಿನ ವಸ್ತುನಿರೂಪಣೆ ಹೀಗಿದೆ.

ವಸ್ತು (Matter) ವಿನ ಅನುಸಂಧಾನದಲ್ಲಿ ವಿಜ್ಞಾನವೆತ್ತಸಾಗಿದೆ ಎಂಬುದನ್ನು ಮತ್ತು ವಸ್ತುವಿನ ಸ್ವರೂಪದ ವಿಷಯದಲ್ಲಿ ಗ್ರೀಕರು, ಹಿಂದೂಗಳು ಮತ್ತು ಆಧುನಿಕ ವಿಜ್ಞಾನದ ಮೂಲಪುರುಷರು ಯಾವ ಯಾವ ಭಾವನೆಯನ್ನು ಹೊಂದಿದ್ದರು ; ಆ ಭಾವನೆ ಹೇಗೆ ಕ್ರಮೇಣ ಬದಲಾವಣೆ ಹೊಂದುತ್ತಿದೆ ಎಂಬುದನ್ನು ಚೆನ್ನಾಗಿ ತಮ್ಮದೇ ಆದ ಒಂದು ಸರಳಶೈಲಿಯಲ್ಲಿ ವಿವರಿಸಿದ್ದಾರೆ.

ವಿಜ್ಞಾನಸಾಹಿತ್ಯವನ್ನು ಪ್ರಾಚೀನ ಮತ್ತು ಆಧುನಿಕ ವಿಜ್ಞಾನ ಎಂದು ಎರಡು ಭಾಗ ಮಾಡಬಹುದು. ಇದನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಯಾರಾದರೂ ಈ ಎರಡು ಗೋಳಾರ್ಧಗಳನ್ನು ಆಳವಾಗಿ ವ್ಯಾಸಂಗಮಾಡುವುದು ಅವಶ್ಯಕ.

ಗ್ರೀಕ್ ತತ್ತ್ವಶಾಸ್ತ್ರದ ಮೂಲಪುರುಷರಾದ ಡೆಮಾಕ್ರಟ್ಟೀಸ್ (Democratus) ಮತ್ತು ಅರಿಸ್ಟಾಟಲ್ (Aristotle) ಇವರುಗಳಿಗೆ ಮೂಲವಸ್ತುಗಳ (Elements) ಮತ್ತು ಪರಮಾಣುಗಳ (Atoms) ಪರಿಚಯವಿತ್ತೆಂದು ಆಧುನಿಕ ವಿಜ್ಞಾನಿಗಳ ಭಾವನೆ. ಇವರಿಬ್ಬರೂ ಕೂಡ ವಸ್ತುವಿನ ಸ್ವರೂಪದಲ್ಲಿ ವಿವಿಧ ಭಾವನೆಯನ್ನು ಹೊಂದಿದ್ದರು. ಆದರೆ ಈ ಈರ್ವರೂ ಪ್ರಕೃತಿಯಲ್ಲಿರುವ ಎಲ್ಲಾ ವಸ್ತುಗಳೂ ಭೂಮಿ, ನೀರು, ಬೆಂಕಿ ಮತ್ತು ಗಾಳಿ ಎಂಬ ನಾಲ್ಕೇ ಮೂಲವಸ್ತುಗಳಿಂದ ಮಾಡಲ್ಪಟ್ಟಿವೆ ಎಂದು ಸಾರಿದ್ದರು. ಈ ನಾಲ್ಕು ಮೂಲವಸ್ತುಗಳ ಜೊತೆಗೆ ಚೈತನ್ಯ (Spirit) ಎಂಬ ಮತ್ತೊಂದು ಮೂಲವಸ್ತುವು ಸೇರಿದೆ ಎಂದೂ ಮತ್ತು ಈ ಮೂಲವಸ್ತುವಿಲ್ಲದಿದ್ದರೆ ಪ್ರಕೃತಿಯಲ್ಲಿರುವ ಯಾವ ವಸ್ತುವಿನ ಸೃಷ್ಟಿಯೂ ಆಗುತ್ತಿರಲಿಲ್ಲವೆಂದೂ ಅವರು ನಂಬಿದ್ದರು.

ಹಿಂದೂಗಳ ದೃಷ್ಟಿಯಲ್ಲಿ ಕೂಡ ಪೃಥ್ವಿ, ಅಪ್, ಅಗ್ನಿ ಮತ್ತು ವಾಯು ಎಂಬ ಶುದ್ಧವಾದ ಮಿಶ್ರಣವಲ್ಲದ ನಾಲ್ಕು ಮೂಲವಸ್ತುಗಳಿಂದ ಎಲ್ಲಾ ವಸ್ತುಗಳು ಮಾಡಲ್ಪಟ್ಟಿವೆ. ಇದರಿಂದ ಗ್ರೀಕ್ ಮತ್ತು ಹಿಂದೂಗಳು ಮೂಲವಸ್ತುಗಳ ವಿಷಯದಲ್ಲಿ ಒಂದೇ ಅಭಿಪ್ರಾಯವುಳ್ಳವರಾಗಿದ್ದರೆಂದು ತಿಳಿಯುತ್ತದೆ. ಗ್ರೀಕರ 'ಚೈತನ್ಯ'ಕ್ಕೆ ಬದಲು ಹಿಂದೂಗಳು ಆಕಾಶ್ (Ether) ಎಂಬ ಮೂಲವಸ್ತುವು ಪ್ರಕೃತಿಯಲ್ಲಿರುವ

ಎಲ್ಲಾ ವಸ್ತುಗಳ ಮೂಲವಸ್ತುಗಳಲ್ಲಿಯೂ ಸೇರಿಕೊಂಡಿದೆ ಎಂದು ಭಾವಿಸಿದ್ದರು. ಹಿಂದೂಗಳು ಗ್ರೀಕರಿಗಿಂತ ಒಂದು ಹೆಜ್ಜೆ ಮುಂದೆ ಹೋಗಿ, ಪ್ರಪಂಚ ಸೃಷ್ಟಿಯಾದಾಗ ಈ ಮೂಲವಸ್ತುಗಳು ಹೇಗೆ ಕ್ರಮವಾಗಿ ಸೃಷ್ಟಿಸಲ್ಪಟ್ಟವು ; ಇವುಗಳ ರಚನೆ ವರ್ಣನೆ ಮತ್ತು ಈ ಪಂಚಮೂಲವಸ್ತುಗಳ ಪರಮಾಣುಗಳು ಶಬ್ದ, ದೃಷ್ಟಿ, ರುಚಿ, ವಾಸನೆ ಮತ್ತು ಸ್ಪರ್ಶ ಮೊದಲಾದ ಪಂಚೇಂದ್ರಿಯ ಜ್ಞಾನಗಳಿಗೆ ಹೇಗೆ ಕಾರಣವಾಗಿವೆ ಎಂಬುದನ್ನು ಚೆನ್ನಾಗಿ ಅರಿತಿದ್ದರು. ಇವೆಲ್ಲವನ್ನು ನೋಡಿದರೆ ಹಿಂದೂಗಳು ವಸ್ತುವಿನ ಅನುಸಂಧಾನದಲ್ಲಿ ಗ್ರೀಕರಿಗೆ ಒಂದು ಅನುಭವದ ಮೂಲ ಸ್ಥಾನವಾಗಿದ್ದರು ಎನ್ನುವುದನ್ನು ಸ್ಪಷ್ಟೀಕರಿಸಿದ್ದಾರೆ.

ಆಧುನಿಕ ವಿಜ್ಞಾನಿಗಳ ಮೂಲಪುರುಷರು ತಮ್ಮ ಮೂಲವಸ್ತುಗಳು, ಪರಮಾಣುಗಳು ಮತ್ತು ಅಣುಗಳಿಗೆ ಗ್ರೀಕ್ ಮತ್ತು ಹಿಂದೂಗಳ ಸೂತ್ರಗಳನ್ನೇ ಕೊಟ್ಟಿದ್ದಾರೆ. ಆದರೆ ಇವರು ತಮ್ಮ ಮೂಲವಸ್ತುಗಳನ್ನು ರಾಸಾಯಿನಕ ಮೂಲ ವಸ್ತುಗಳು" (Chemical Elements) ಎಂದು ಕರೆದರು. ಇವುಗಳ ಸಂಖ್ಯೆ ಮೊದಲು ೯೨ ಇದ್ದು, ಕ್ರಮೇಣ ಬೆಳೆಯುತ್ತಿದೆ. ಆದುದರಿಂದ ಇವರ ಅಣು ಮತ್ತು ಪರಮಾಣುಗಳಿಗೂ, ಗ್ರೀಕ್ ಮತ್ತು ಹಿಂದೂಗಳ ಅಣು, ಪರಮಾಣುಗಳಿಗೂ ವ್ಯತ್ಯಾಸವಿವೆ. ಇವರ ದೃಷ್ಟಿಯಲ್ಲಿ ಮೂಲವಸ್ತುಗಳ ವಿವಿಧ ಪರಮಾಣುಗಳು ವಿವಿಧ ಪ್ರಮಾಣದಲ್ಲಿ ಸಂಯೋಗ ಹೊಂದಿ ಮೂಲವಸ್ತುವಿನ ಮತ್ತು ಸಂಯುಕ್ತ ವಸ್ತುವಿನ ಅಣುಗಳಾಗುತ್ತವೆ ಎಂದು ತಿಳಿಸಿದ್ದಾರೆ.

ಹತ್ತೊಂಬತ್ತನೆಯ ಶತಮಾನದ ಅಂತ್ಯದ ಮತ್ತು ಇಪ್ಪತ್ತನೆಯ ಶತಮಾನದಲ್ಲಿ ಕಳೆದ ಐವತ್ತು ವರ್ಷಗಳ ವೈಜ್ಞಾನಿಕ ಸಂಶೋಧನೆಯ ಪ್ರಕಾರ ಇದುವರೆವಿಗೂ ನಮಗೆ, ಮೂಲವಸ್ತುಗಳು ಮತ್ತು ಪರಮಾಣುಗಳ ವಿಷಯವಾಗಿ ಇದ್ದ ಭಾವನೆಯು ಮಾರ್ಪಾಡಾಗಬೇಕು. ಯಾವ ಪರಮಾಣುವನ್ನು ನಾಶಮಾಡಲು, ಇನ್ನೂ ಅತಿ ಚಿಕ್ಕ ಕಣವನ್ನಾಗಿ ವಿಭಜಿಸಲು ಸಾಧ್ಯವಿಲ್ಲವೆಂದು ಭಾವಿಸಲ್ಪಟ್ಟಿತ್ತೋ ಅಂತಹ ಪರಮಾಣುವು, ದೀರ್ಘ ಸಂಶೋಧನೆಯ ಫಲವಾಗಿ, ಎಂಟು-ಹತ್ತು ಬಗೆಯ ಪ್ರಧಾನ ಕಣಗಳಿಂದ (Primary Particles) ಮಾಡಲ್ಪಟ್ಟಿದೆ ಎಂದು ಗೊತ್ತಾಗಿದೆ. ಈ ಪ್ರಧಾನಕಣಗಳನ್ನು ಸಹ ವಿಭಜಿಸಲು ಸಾಧ್ಯವೆಂದೂ ಖಚಿತವಾಗಿದೆ. ಈ ವಿಷಯವನ್ನು ಸ್ಪಷ್ಟೀಕರಿಸುವಾಗ ಸಂಶೋಧನಾ ಚಕ್ರ ಹೇಗೆ ಪ್ರಾಚೀನ ವಿಜ್ಞಾನಿಗಳ, ದಾರ್ಶನಿಕರ ಅಭಿಪ್ರಾಯದ ಹತ್ತಿರ ಸಾರುತ್ತಿದೆ ಎಂಬುದನ್ನು ತರ್ಕಿಸಿದ್ದಾರೆ.

ಈ ಪುಸ್ತಕದ ಕೊನೆಯ ಎರಡು ಪ್ರಕರಣಗಳಲ್ಲಿ ವಸ್ತು (Matter) ಮತ್ತು ಶಕ್ತಿ (Energy) ಇವುಗಳ ವಿಷಯದಲ್ಲಿ ಪ್ರಾಚೀನ ಮತ್ತು ಆಧುನಿಕ ವೈಜ್ಞಾನಿಕರು ಯಾವ

ಯಾವ ಅಭಿಪ್ರಾಯ ಹೊಂದಿದ್ದರು ಎಂಬುದನ್ನು ಸಂಕ್ಷೇಪವಾಗಿ ಹೇಳಿದ್ದಾರೆ. ಇತ್ತೀಚಿನ ಅನುಸಂಧಾನದ ಪ್ರಕಾರ ಹೇಗೆ ವಸ್ತು ಮತ್ತು ಶಕ್ತಿಗಳನ್ನು ಒಂದನ್ನು ಮತ್ತೊಂದನ್ನಾಗಿ ಪರಿವರ್ತಿಸಬಹುದು ಎಂಬುದನ್ನು ಪ್ರಸ್ತಾಪಿಸಿದ್ದಾರೆ.

ಕೆಲವು ಭಾರವಾದ ಪರಮಾಣುಗಳು ಸಹಜ ಶಿಥಿಲತೆಗೆ (Natural Disintegration) ಗುರಿಯಾದಾಗ ಬೇರೆ ಮೂಲವಸ್ತುವಿನ ಪರಮಾಣುಗಳಾಗಿ ಪರಿವರ್ತನೆ ಹೊಂದಿ, ಜೊತೆಯಲ್ಲಿಯೇ ಮೂಲಕಣಗಳಿಂದ ಒಡಗೂಡಿದ ಒಂದು ರಶ್ಮಿಯು ಹೇಗೆ ಹೊರಚಲ್ಲಲ್ಪಡುತ್ತದೆ ಎನ್ನುವುದನ್ನು ಮತ್ತು ಕೃತಕ ವಿಭಜನೆಯಿಂದ (Artificial Disintegration) ಸಹ ಮೇಲ್ಕಂಡ ಕ್ರಿಯೆಯನ್ನು ಉಂಟುಮಾಡಲು ಸಾಧ್ಯವೆನ್ನುವುದನ್ನು ಹೇಳಿದ್ದಾರೆ. ಒಟ್ಟಿನಲ್ಲಿ, ಹೇಗೆ ಇಪ್ಪತ್ತನೆಯ ಶತಮಾನದ ಆಧುನಿಕ ವಿಜ್ಞಾನವು, ರಸವಾದಿಗಳ (Alchemistry) ಮತ್ತು ತತ್ತ್ವಶಾಸ್ತ್ರಜ್ಞರ ಭಾವನೆಯು ಹತ್ತಿರ ಹೋಗುತ್ತಿದೆ ಎಂದು ಪ್ರಸ್ತಾಪಿಸಿದ್ದಾರೆ.

ಕೊನೆಯ ಪ್ರಕರಣದಲ್ಲಿ ವಸ್ತುವಿನ ಅನುಸಂಧಾನದಲ್ಲಿ ಭೌತಶಾಸ್ತ್ರದ ಪರಿಮಿತಿಯೇನು ಎನ್ನುವುದನ್ನು ಚರ್ಚಿಸಿದ್ದಾರೆ.

ಶ್ರೀ ಶಾಸ್ತ್ರಿಗಳವರ ಈ ಸಣ್ಣ ಪುಸ್ತಕವು ಓದುಗನಲ್ಲಿ ವಿಚಾರಶಕ್ತಿಯನ್ನು ಕೆರಳಿಸಿ ಮನಸ್ಸಿನ ಮೇಲೆ ಒಂದು ವಿಧವಾದ ಆಂದೋಳನವನ್ನುಂಟುಮಾಡುತ್ತದೆ. ಹೆಸರಾಂತ ಲೇಖಕರ ಮತ್ತು ವೀರವಿಜ್ಞಾನಿಗಳ ಕೃತಿಗಳಲ್ಲಿರುವ ಕೆಲವು ವಾದಗಳನ್ನೂ ಮತ್ತು ವಿಚಾರಸರಣಿಯನ್ನೂ ಹಾಗೆಯೇ ಉಲ್ಲೇಖಿಸಿ ತಮ್ಮದೇ ಆದ ಒಂದು ರೀತಿಯಲ್ಲಿ ಈ ಪುಸ್ತಕವನ್ನು ಬರೆದಿದ್ದಾರೆ. ಕೆಲವು ಅಭಿಪ್ರಾಯಗಳು ಪುನಃ ಪುನಃ ಬಂದು ಓದುಗರಲ್ಲಿ ಬೇಸರವನ್ನುಂಟುಮಾಡುತ್ತವೆ. ಅಲ್ಲದೆ ಲೇಖಕರಿಗೇ ಸಂಶಯಾತ್ಮಕ ಭಾವನೆಗಳು ಬಂದಿರುವ ಹಾಗೆ ಕಾಣುತ್ತದೆ. ಪುಸ್ತಕದಲ್ಲಿ ಅಲ್ಲಲ್ಲಿ ಅವಕಾಶ ಕಲ್ಪಿಸಿಕೊಂಡು ಕೆಲವು ಸಮಂಜಸವಾದ ಚಿತ್ರಗಳನ್ನು ಅಚ್ಚು ಹಾಕಿಸಿದ್ದರೆ ಪುಸ್ತಕಕ್ಕೆ ಮತ್ತಷ್ಟು ಕಳೆ ಬರುತ್ತಿತ್ತು. ವಿಜ್ಞಾನದ ವಿಷಯವಾಗಿ ಆಂಗ್ಲ ಭಾಷೆಯಲ್ಲಿ ವಿಪುಲವಾದ ಸಾಹಿತ್ಯವಿದೆ. ಆದುದರಿಂದ ಕರ್ತೃಗಳು ಈ ಪುಸ್ತಕವನ್ನು ಪ್ರಾಂತಭಾಷೆಯಾದ ಕನ್ನಡದಲ್ಲಿ ಬರೆದಿದ್ದರೆ ಕನ್ನಡಿಗನ ಪುಸ್ತಕಭಂಡಾರಕ್ಕೆ ಅಮೂಲ್ಯವಸ್ತುವಾಗುತ್ತಿತ್ತು. ಇವರ ಈ ಪುಸ್ತಕವನ್ನು ಪ್ರತಿಯೊಬ್ಬರೂ ಹೆಮ್ಮೆಯಿಂದ ಸ್ವಾಗತಿಸಬೇಕು. ಈಗ ಉಂಟಾಗಿರುವ ಮುದ್ರಣಾದಿ ದೋಷಗಳು ಹೋಗಿ ಮುಂದಿನ ಮುದ್ರಣ ಬರುವಂತಾಗಲಿ.

ಟಿ. ತಿಪ್ಪೇಸ್ವಾಮಿ.

*
* *

ಪದ್ಮಿನಿ—ಲೇಖಕರು : ಶ್ರೀ ಹೊಯಿಸಳ; ಪ್ರಕಾಶಕರು : ಜೀವನ ಕಾರ್ಯಾಲಯ, ಬಸವನಗುಡಿ, ಬೆಂಗಳೂರು ೪ ; ಪುಟಗಳು ೪೩ ; ಬೆಲೆ, ೮ ಆಣೆ.

ವಿಸ್ತಾರವಾದ ಐತಿಹಾಸಿಕ ವಿರಾಟ್ ಕ್ಷೇತ್ರದಲ್ಲಿ ಎಷ್ಟೆಷ್ಟೋ ಆಶ್ಚರ್ಯಕರ ಘಟನೆಗಳು ನಡೆದುಹೋಗಿವೆ. ಭೋಗಪ್ರಿಯ ರಾಜಮಹಾರಾಜರುಗಳು ತಾವು ಬಯಸಿದುದನ್ನು 'ಅದು ಸಲ್ಲದು' ಎಂದು ತಿಳಿದಿದ್ದರೂ ಅತಿ ಸಾಹಸದಿಂದ ಪಡೆಯಲು ಯತ್ನಿಸಿದ್ದಾರೆ. ಅವರಲ್ಲಿ, ದೆಹಲಿಯ ಸಾಮ್ರಾಟ್ ಅಲ್ಲಾವುದ್ದೀನ್ ಖಿಲ್ಜಿಯೂ ಒಬ್ಬ. ಪ್ರಕೃತ, ಮೇವಾಡದ ರಾಣಾ ಲಕ್ಷ್ಮಣಸಿಂಹನ ಕಕ್ಕ ಭೀಮಸಿಂಹನ ಪತ್ನಿಯಾದ ಪದ್ಮಿನಿಯ ಸಾಹಸಕೃತ್ಯವನ್ನು, ಈ ಸಣ್ಣ ಹೊತ್ತಗೆ 'ಪದ್ಮಿನಿ'ಯಲ್ಲಿ ನೋಡಬಹುದಾಗಿದೆ.

ಮಕ್ಕಳಿಗೆ ಮುದ್ದಾದ ಸಾಹಿತ್ಯವನ್ನು ಒದಗಿಸಿಕೊಡುತ್ತಿರುವ ಹೊಯಿಸಳರು ಈಗಾಗಲೇ 'ಹೂವಿನ ಹಾಸಿಗೆ' 'ಕಂಕಣ' 'ಪುಟ್ಟರಸು' 'ಕನಕ' ಮುಂತಾದ ಕೃತಿಗಳನ್ನು ನೀಡಿ ಅಭಿನಂದನಾರ್ಹರಾಗಿದ್ದಾರೆ. ಲೇಖಕರೇ ಬಿನ್ನಹದಲ್ಲಿ ಹೇಳಿ ಕೊಂಡಂತೆ 'ಇದು ರಾಜಾಸ್ಥಾನದ ಕಾಹಿನಿಗಳಲ್ಲಿ ಒಂದು. ಮೊದಲು ಬಂಗಾಳಿಯಲ್ಲಿ ಕೈಲಾಸವಾಸಿ ಶ್ರೀ ಅವನೀಂದ್ರನಾಥ ಠಾಕೂರರು ಬರೆದದ್ದು. ಅವರ ಬಂಗಾಲಿಯ ಅನುಸರಣೆ ಈ ನನ್ನ ಬರಹ' ಎಂದಿದೆ.

ಭಾರತದ ಚರಿತ್ರೆಯಲ್ಲಿ ರಾಜಪುತ್ರರು, ಎಂಥ ಘೋರ ಕಷ್ಟಗಳೊದಗಿದರೂ ಕೊನೆಗೆ ಸಾವು ಸಮೀಪಿಸಿದರೂ ಧೈರ್ಯದಿಂದ ಸಹಿಸಿ, ತಮ್ಮ ಧರ್ಮವನ್ನುಳಿಸಿ ಕೊಳ್ಳಲು ಹೋರಾಡಿ ದೇಶದ ಕೀರ್ತಿಕಲಶಗಳಾಗಿದ್ದಾರೆ. ಪುರುಷರಂತೆಯೇ ಸ್ತ್ರೀಯರನೇಕರೂ ಪ್ರಾಣಾರ್ಪಣೆ ಮಾಡಿದ್ದಾರೆ. ಅಂಥವರಲ್ಲಿ ಅಸಾಮಾನ್ಯ ಸುಂದರಿ ಪದ್ಮಿನಿಯೂ ಒಬ್ಬಳು. 'ವಾಸಂತೀರಾಗಿನ ಉಬ್ಬರವಾಹದಲ್ಲಿ' ಸಂತೋಷದ ಸಾಗರದಲ್ಲಿ ಮುಳುಗಿದ್ದ ಚಿತ್ತೂರು—'ಆಕಾಶಚಂದ್ರನನ್ನು ಬಂಗಾರದ ಪಂಜರದಲ್ಲಿ ತುಂಬಿಡಲು' ಅಲ್ಲಾವುದ್ದೀನನು ದೆಹಲಿಯಿಂದ ಚಿತ್ತೂರಿಗೆ ಆಗಮಿಸುವುದು—ಏಳು ಸುತ್ತಿನ ಕೋಟೆ, ಏಳು ಹೆಡೆಯ ನಾಗರನಂತೆ ಪದ್ಮಿನಿಯ ಕಾವಲಾಗಿರುವುದು—ಕನ್ನಡಿಯಲ್ಲಿಯೇ ಪದ್ಮಿನಿಯನ್ನು ನೋಡಿ ಹೋಗುವುದೆಂದು ಸೋಗುಹಾಕಿ ಅಲ್ಲಾವುದ್ದೀನನು ಭೀಮಸಿಂಹನನ್ನು ಸೆರೆಹಿಡಿಯುವುದು—ಉಪಾಯದಿಂದ ರಾಜ ಪುತ್ರರು 'ಸಿಂಹ'ನನ್ನು ಮತ್ತೆ ಬಿಡಿಸಿಕೊಂಡು ಹೋಗುವುದು—ಚಿತ್ತೂರಿನ ನೆಲಸಮ ಕ್ಕೆಂದೇ ಪಠಾಣಾ ಅಲ್ಲಾವುದ್ದೀನನ ಕೋಟೆಯ ಮುತ್ತಿಗೆ—ರಾಜಪುತ್ರರ ಸಾಹಸ—ಕೊನೆಗೆ ಕೋಟೆಯ ನಾಶ, ೧೨ ಸಾವಿರ ಸತಿ ಲಕ್ಷ್ಮಿಯರ ಸಹಗಮನ, ಚಿತೆಯ ಅಗ್ನಿಯಲ್ಲಿ ಆ ಸುಂದರ ಪುಷ್ಪವೂ ಬೂದಿಯಾಗುವುದು. ಇಷ್ಟು ಈ ಪುಸ್ತಕದಲ್ಲಿರುವ ಕಥೆ ಎಂದು ಸೂಕ್ಷ್ಮವಾಗಿ ಹೇಳಬಹುದು.

'ಬಾಪ್ಪಾದಿತ್ಯನ ಕಾಲದಲ್ಲಿ . . .' ಎಂದು ಕಥೆ ಪ್ರಾರಂಭವಾಗುತ್ತದೆ. ಆದರೆ ಕಾಲ ಯಾವುದು ಎಂದು ತಿಳಿಸಿದ್ದರೆ ಚೆನ್ನಾಗಿರುತ್ತಿತ್ತೆಂದನ್ನಿಸುತ್ತದೆ. ಇತಿಹಾಸಕ್ಕೆ ಸಂಬಂಧಪಟ್ಟ ಕಥೆಯಾದುದರಿಂದ ಕಾಲವೂ ಮುಖ್ಯವೆಂದು ಹೇಳಬಹುದು.

ಹೊಯಿಸಳರು ಇಲ್ಲಿ ಉಪಯೋಗಿಸಿರುವ ಶೈಲಿ ಮುಖ್ಯವಾಗಿ ಸರಳವಿಲ್ಲವೆಂದೇ ಹೇಳಬಹುದು. ಸ್ವತಂತ್ರ ಕೃತಿಯ ಓಟದಂತೆ ಭಾಷೆ ಕಾಣಬರುವುದಿಲ್ಲ, ತುಂಬಾ ಅವಸರದಿಂದ ಲೇಖಕರಲ್ಲಿ ಮುಂದೆ ಹೇಳುವುದನ್ನೆಲ್ಲಾ ಈಗಲೇ ಹೇಳಿಬಿಡಬೇಕೆಂಬ ಆತುರ ಕಂಡುಬರುತ್ತದೆ. ಪುಸ್ತಕವನ್ನು ಕೈಗೆ ತೆಗೆದುಕೊಂಡಾಗ ಇದು ಎಳೆಯರಿಗಾಗಿ ಬರೆದದ್ದಾಗಿದೆ ಎಂದು ಓದುತ್ತಾ ಹೋದರೆ ಭಾಷೆಯ ಕಠಿನತೆಯನ್ನು ನೋಡಿ, ಹೀಗೇಕೆ ಬರೆದಿದ್ದಾರೆ, ಸಣ್ಣ ಸಣ್ಣ ವಾಕ್ಯಗಳಲ್ಲಿ ಬರೆದಿದ್ದರೆ ಚೆನ್ನಾಗಿರುತ್ತಿತ್ತಲ್ಲ! ಎಂದೆನ್ನಿಸದಿರದು.

ನಾವು ಚರಿತ್ರೆಯಲ್ಲಿ ಪದ್ಮಿನಿಯ ಬಗ್ಗೆ ಓದಿರುವ ಕಥೆಯ ಸುತ್ತಮುತ್ತ ಕೆಲವು ಕಾಲ್ಪನಿಕ ವಸ್ತುಗಳು ಇಲ್ಲಿ ಇರುವುದರಿಂದ ಪುಸ್ತಕದ ಕಳೆ ಹೆಚ್ಚಿದೆಯೆಂದೇ ಹೇಳಬೇಕಾಗುವುದು. ಭೀಮಸಿಂಹನನ್ನು ಸೆರೆಹಿಡಿದರೆ ಪದ್ಮಿನಿ ಸುಲಭವಾಗಿ ಸಿಗುವಳೆಂಬ ಅಲ್ಲಾವುದ್ದೀನನ ಮನಸ್ಸಿಗೆ ಕಾರಣಭೂತವಾದ ಗಿಳಿದಂಪತಿಗಳ ಪ್ರಸಂಗ, ಕನ್ನಡಿಯಲ್ಲಿನ ಛಾಯಾ ಪದ್ಮಿನಿಯನ್ನು ಹಿಡಿಯಲು ಹೊರಟ ಪಠಾಣ, ಹಾಗೆಯೇ ಭೀಮಸಿಂಹ ಸಿಟ್ಟಿನಲ್ಲಿ ಕನ್ನಡಿ ಚೂರುಚೂರಾಗುವಂತೆ ಬಟ್ಟಲಿನಿಂದ ಹೊಡೆಯುವುದು ಮತ್ತು ಯುದ್ಧದಲ್ಲಿ ರಾಜಪುತ್ರರ ಪ್ರಯತ್ನ ಸಾಗದಿದ್ದಾಗ ದೇವಿಯು, ಅವರೆಲ್ಲರ ಬೆಂಡಾರಿದ್ದ ಜೀವ-ದೇಹಗಳಲ್ಲಿ ವೀರತ್ವದ ಆವೇಶವನ್ನು ತುಂಬುವುದು, ಮುಂತಾದ ಚಿತ್ರಗಳ ಕಲ್ಪನೆಗಳು ಉಚಿತವಾಗಿವೆ ಮತ್ತು ಚೆನ್ನಾಗಿ ಚಿತ್ರಿತವಾಗಿವೆ.

ಪಾತ್ರಗಳು ಕೆಲವೇ ಇದ್ದರೂ, ಎಲ್ಲ ಪಾತ್ರಗಳೂ ಜೀವದಿಂದ ತುಂಬಿಕೊಂಡಿವೆ. ಪುಸ್ತಕದ ನಡುವೆ ಬಂದು ಹೋಗುವ 'ಗೋರಾ' ತುಂಬಾ ಪರಿಚಿತ ಪಾತ್ರದಂತೆ ಆಗುತ್ತಾನೆ. ಓದಿ ಮುಗಿಸಿದಾಗ, ಬೇಲೂರು ದಿವ್ಯ ಶಿಲ್ಪವನ್ನು ನೋಡುತ್ತಾ ಮತ್ತೆ ಮುಂದೆಲ್ಲಿಯೋ ಹಾಳು ದೇಗುಲಕ್ಕೆ ಕರೆತಂದು ಬಿಟ್ಟಂತಾಗುತ್ತದೆ. ಅದಕ್ಕೆ ಚಿತ್ತೂರಿನ ಕೋಟೆಯ ನಾಶ ಮತ್ತು ಸತಿ ಲಕ್ಷ್ಮಿಯರ ಸಹಗಮನ, ಮೇವಾಡದ ಪತನ ಕಾರಣವಾಗುತ್ತದೆ. ಹುತಾತ್ಮರ ಸಾಹಸಕ್ಕೆ ಮೆಚ್ಚಿ ಅವರ ಪ್ರಾಣಗಳಿಗೆ ಮರುಗುತ್ತೇವೆ. ಈ ಎಲ್ಲ ಸರ್ವನಾಶಕ್ಕೆ ಕಾರಣ ಪದ್ಮಿನಿ, ಆಕೆಯ ಅಲೌಕಿಕ ಸೌಂದರ್ಯ ಅಲ್ಲ, ಆದರೆ ಪಠಾಣನ ದುರ್ವರ್ತನೆ.

ಸರ್ವನಾಶವನ್ನುಂಟುಮಾಡಿ, ಬಯಸಿದ್ದ ವಸ್ತು ಸಿಗದಿದ್ದಾಗ ಅಲ್ಲಾವುದ್ದೀನನ ಮನಸ್ಸಿನ ಮೇಲೆ ಪರಿಣಾಮವೇನಾಯಿತು ಎಂದು ಸ್ವಲ್ಪ ಹೇಳಿದ್ದರೆ ಚೆನ್ನಾಗಿರು

ತ್ತಿತ್ತೇನೋ? ಅಂತೂ, ಹೆಚ್ಚಿನ ಸಾಮಾಜಿಕ ಕಾದಂಬರಿಗಳ ಯುಗದಲ್ಲಿ ಇಂಥ ಐತಿಹಾಸಿಕ ಹೊತ್ತಗೆಗಳು ಬರುವುದು ಸ್ವಾಗತಾರ್ಹ. ಗತಕಾಲದ ಕಥೆಗಳನ್ನು ಚಿಣ್ಣರು ಓದುವುದರಿಂದ, ನಮ್ಮ ಹಿರಿಯರಲ್ಲಿದ್ದ ದೇಶಾಭಿಮಾನ, ಕಾರ್ಯೋತ್ಸಾಹ, ನಿಸ್ವಾರ್ಥತೆ, ತ್ಯಾಗದ ಅರಿವುಂಟಾಗಿ ತಪ್ಪುನಡತೆಗಳಿಗೆ, ಕೊಡಲಿಪೆಟ್ಟಾಗಬಹುದು. ಈ ದೃಷ್ಟಿಯಲ್ಲಿ ಹೊಯಿಸಳರು ಅಭಿನಂದನೆಗೆ ಪಾತ್ರರು. 'ಈ ಮಾಲೆಯಲ್ಲಿ ಒಂಭತ್ತು ಕಾಹಿನಿಗಳಿವೆ' ಎಂದು ಹೇಳಿರುವುದು ಓದುಗರ ಮನಸ್ಸನ್ನು ಕೆರಳಿಸುತ್ತದೆ.

ಜಯದೇವ

*
* *

ಪುನರ್ಜನ್ಮ—ಮೂಲಲೇಖಕರು: ಸ್ವಾಮಿ ಅಭೇದಾನಂದ; ಪ್ರಕಾಶಕರು: ಶ್ರೀ ರಾಮಕೃಷ್ಣಾಶ್ರಮ, ಮೈಸೂರು; ಪುಟಗಳು ೪೫; ಬೆಲೆ, ರೂ. ೦-೮-೦.

ಶ್ರೀ ರಾಮಕೃಷ್ಣ ಪರಮಹಂಸರ ಅಂತರಂಗ ಶಿಷ್ಯರಲ್ಲಿ ಸ್ವಾಮಿ ಅಭೇದಾನಂದರೂ ಒಬ್ಬರು. ಅವರು ಯೋಗಿಗಳೂ ಆಗಿದ್ದರು. ಅವರ ಕೃತಿಗಳಲ್ಲಿ ಯೋಗಿಯ ಪೂರ್ಣದೃಷ್ಟಿಯನ್ನೂ ದಾರ್ಶನಿಕನ ಜಿಜ್ಞಾಸೆಯನ್ನೂ ಕಾಣಬಹುದು. ಪುನರ್ಜನ್ಮದಂತಹ ಜಟಿಲ ವಿಷಯವನ್ನು ವೈಜ್ಞಾನಿಕ, ದಾರ್ಶನಿಕ ಹಾಗೂ ಕಲ್ಪನಾದೃಷ್ಟಿಯಿಂದ ಸಮನ್ವಯಮಾಡಿ ವಿವರಿಸಿದ್ದಾರೆ ಈ ಚಿಕ್ಕ ಹೊತ್ತಗೆಯಲ್ಲಿ.

ಆನುವಂಶಿಕತೆಯ ತತ್ತ್ವದಿಂದಲೆ ಜೀವನವನ್ನು ವಿವರಿಸಲಾಗುವುದಿಲ್ಲ. ವೈವಿಧ್ಯಪೂರ್ಣವಾದ ಜೀವನವನ್ನು ವಿವರಿಸಲು ಪುನರ್ಜನ್ಮವೆ ಏಕಮಾತ್ರ ಸಾಧನ. ಜಗತ್ತಿನಲ್ಲಿ ಯಾವುದೂ ಆಕಸ್ಮಿಕವೆಂಬುದಿಲ್ಲ. ಎಲ್ಲ ಘಟನೆಗಳೂ ಕಾರ್ಯಕಾರಣ ನಿಯಮದ ವಜ್ರಮುಷ್ಟಿಯಲ್ಲಿ ನಡೆವುದೆಂದು ಕಂಡುಬರುತ್ತದೆ. ಕ್ರೈಸ್ತರ ಏಕ ಜನ್ಮಸಿದ್ಧಾಂತವು ಜೀವನದ ರಹಸ್ಯವನ್ನು ವಿವರಿಸಲಾರದು. ಒಬ್ಬ ಪಾಪಿ ಒಂದು ಜನ್ಮದಲ್ಲಿ ಪಾಪಿಯಾಗಿದ್ದರೆ ಅವನ ಜೀವನ ಅಲ್ಲಿಗೆ ಮುಗಿಯಿತು ಎಂದು ಹೇಳುವುದಾದರೆ, ದೇವರು ಪಕ್ಷಪಾತ ಮನೋಭಾವವುಳ್ಳವನೆಂದು ಹೇಳಿದಂತಾಗುತ್ತದೆ! ಆದರೆ ಸಂಸ್ಕಾರರೂಪವಾದ ಪೊರೆಯನ್ನು ಕಳಚಿ ಜೀವ ತನ್ನ ಮುಕ್ತಿಯನ್ನು ಎಂದಾದರೊಂದು ದಿನ ಪಡೆಯುತ್ತದೆ ಎಂಬ ಪೂರ್ಣದೃಷ್ಟಿಯನ್ನು ನೀಡುತ್ತದೆ ಪುನರ್ಜನ್ಮಸಿದ್ಧಾಂತ!

ಪರಿಣಾಮವಾದಕ್ಕಿಂತಲು ಹೆಚ್ಚು ಸಮರ್ಪಕವಾಗಿದೆ ಪುನರ್ಜನ್ಮಸಿದ್ಧಾಂತ. ಮೀನಾಗಿ ಹಕ್ಕಿಯಾಗಿ ಮೃಗವಾಗಿ ಕಪಿಯಾಗಿ ಮಾನವನಾದುದನ್ನು ಪರಿಣಾಮವಾದ ವಿವರಿಸುತ್ತದೆ. ನೈತಿಕ ಮತ್ತು ಆಧ್ಯಾತ್ಮಿಕ ಸಂಸ್ಕಾರಗಳು ಜಾಗ್ರತವಾದಂತೆ ಜೀವ

ಮುಂಬರಿದು ಜನ್ಮಚಕ್ರದಿಂದ ಹೇಗೆ ಪಾರಾಗಿ ಮುಕ್ತಿಯನ್ನು ಪಡೆಯುವುದೆಂಬುದನ್ನು ಪುನರ್ಜನ್ಮಸಿದ್ಧಾಂತ ತೋರುತ್ತದೆ.

ಈ ಚಿಕ್ಕ ಪುಸ್ತಕ, ನಮ್ಮ ಕಲ್ಪನೆಯನ್ನು ಕೆರಳಿಸುತ್ತದೆ. ನಮ್ಮ ಚೇತನವನ್ನು ಬೇರೊಂದು ಭೂಮಿಕೆಯಲ್ಲಿ ವಿಹರಿಸುವಂತೆ ಮಾಡಿ, ಜೀವನದ ಹಿಂದುಮುಂದಿನ ಕತ್ತಲಿನಲ್ಲಿ ಏನಿದೆ ಎಂಬುದನ್ನು ಯೋಚಿಸಲು ನಮ್ಮ ಕೈಗೆ ಒಂದು ವಿದ್ಯುದ್ದೀಪ (Torch) ವನ್ನು ಕೊಟ್ಟಂತಿದೆ! ಭಾಷಾಂತರಕಾರರು ಕೆಲವು ಕಡೆ ಇಂಗ್ಲಿಷ್ ಕವಿಗಳು ಹಾಗೂ ದಾರ್ಶನಿಕರ ಹೆಸರನ್ನು ಇಂಗ್ಲಿಷಿನಲ್ಲಿ ಮಾತ್ರ ಅಚ್ಚು ಹಾಕಿಸಿದ್ದಾರೆ. ಕನ್ನಡದಲ್ಲಿಯೂ ಕೊಟ್ಟಿದ್ದರೆ ಕನ್ನಡ ಮಾತ್ರ ಬರುವ ವಾಚಕವೃಂದಕ್ಕೆ ಅನುಕೂಲವಾಗುತ್ತಿತ್ತು. ಭಾಷಾಂತರ ಸರಳವಾಗಿ, ಉದಾತ್ತ ಭಾವಗಳು ಸುಲಭವಾಗಿ ಅರ್ಥವಾಗುವಂತಿದೆ. ಇಂತಹ ಉತ್ತಮ ಭಾಷಾಂತರ ಕೃತಿಗಳಿಂದ ಕನ್ನಡ ಕಣಜ ತುಂಬಲೆಂದು ಹಾರೈಸೋಣ.

ವೇಣು.

*
* *

ಶ್ರೀ ಪುರಂದರದಾಸರು—ಯಂ. ರಾಮರಾವ್, ಸುಬೋಧ ಪ್ರಕಟನಾಲಯ, ಚಾಮರಾಜಪೇಟೆ, ಬೆಂಗಳೂರು ; ದ್ವಿತೀಯ ಮುದ್ರಣ, ೧೯೫೩ ; ಪುಟಗಳು iv + ೫೪ ; ಬೆಲೆ, ಆರಾಣೆ.

ಶ್ರೀ ಮಧ್ವಾಚಾರ್ಯರು—ಯಂ. ರಾಮರಾವ್, ಸುಬೋಧಪ್ರಕಟನಾಲಯ, ಚಾಮರಾಜಪೇಟೆ, ಬೆಂಗಳೂರು ; ಪುನರ್ಮುದ್ರಣ, ೧೯೫೨ ; ಪುಟಗಳು iv + ೫೪ ; ಬೆಲೆ, ಆರಾಣೆ.

ಸಾವಿತ್ರಿ—ಯಂ. ರಾಮರಾವ್, ಸುಬೋಧ ಪ್ರಕಟನಾಲಯ, ಚಾಮರಾಜಪೇಟೆ, ಬೆಂಗಳೂರು ; ಪುನರ್ಮುದ್ರಣ, ೧೯೫೪ ; ಪುಟಗಳು ii + ೩೮ ; ಬೆಲೆ, ಆರಾಣೆ.

ಈಗ್ಗೆ ಮೂರು ನಾಲ್ಕು ದಶಕಗಳಿಗೆ ಹಿಂದೆಯೆ ಶ್ರೀ ಯಂ. ರಾಮರಾಯರು ಸುಬೋಧ ಕುಸುಮಾಂಜಲಿ ಗ್ರಂಥಮಾಲೆಯನ್ನು ಆರಂಭಿಸಿ ಇದುವರೆಗೂ ನಡೆಸಿಕೊಂಡು ಬಂದಿದ್ದಾರೆ. ಅವರು ಸುಬೋಧ ರಾಮರಾಯರೆಂದು ಅವರ ಗ್ರಂಥಮಾಲೆಯ ಮೂಲಕ ಕರ್ಣಾಟಕದ ಮೂಲೆಮೂಲೆಯಲ್ಲೂ ವಿಖ್ಯಾತನಾಮರಾಗಿದ್ದಾರೆ. ಅವರ ಗ್ರಂಥಮಾಲೆಯ ಜನಪ್ರಿಯತೆಯನ್ನು ಇದು ಸಾರಿ ಹೇಳುತ್ತದೆಂದು ಬೇರೆ ಹೇಳಬೇಕಾಗಿಲ್ಲ. ಒಂದು ನಿರ್ದಿಷ್ಟ ಮಿತಿಯಲ್ಲಿ ಬಾಲಕ ಬಾಲಕಿಯರಿಗೂ ತರುಣ ತರುಣಿಯರಿಗೂ ಉಪಯುಕ್ತವಾದ ರೀತಿಯಲ್ಲಿ ನಮ್ಮ ದೇಶದ ಮಹಾಪುರುಷರ ಮತ್ತು ಐತಿಹಾಸಿಕ ವ್ಯಕ್ತಿಗಳ ಚರಿತ್ರೆಯನ್ನು ಬಹಳ ಕಡಿಮೆಯ ಬೆಲೆಗೆ ಒದಗಿಸಿಕೊಟ್ಟು ಮಹದುಪಕಾರ ಮಾಡಿದವರು ಸುಬೋಧ ರಾಮರಾಯರು. ಕನ್ನಡ ಪುಸ್ತಕ ಪ್ರಕಾಶನವು ಅಧಿಕವಾಗಿಲ್ಲದಿದ್ದ ಮತ್ತು ಕನ್ನಡ ಪುಸ್ತಕಗಳು ಬಹು ಕಡಿಮೆಯಾಗಿದ್ದ

ಆ ಆರಂಭಕಾಲದಲ್ಲಿ ಸುಬೋಧ ರಾಮರಾಯರು ಮಾಡಿದ ಕೆಲಸ ಚಿರವಾದುದು. ಸುಮಾರು ಇಂಥ ೧೪೦ ಪುಸ್ತಕಗಳನ್ನು ಅವರು ಬರೆದು ಪ್ರಕಟಿಸಿದ್ದಾರೆಂದರೆ ಅದರ ಬೆಲೆ ಎಷ್ಟೆಂದು ನಾವು ಅರಿಯಬಹುದು. ಉತ್ತಮ ನೀತಿಬೋಧಕವಾದ ಈ ಪುಸ್ತಕಗಳು ನಮ್ಮ ತರುಣ ಕನ್ನಡಿಗರ ಮನೋವಿಕಾಸಕ್ಕೂ ಉತ್ತಮ ಚಾರಿತ್ರ್ಯ ಸೌಶೀಲ್ಯಾದಿಗಳ ಅರಳುವಿಕೆಗೂ ಮಹತ್ತರವಾದ ನೆರವನ್ನು ನೀಡಿವೆ. ಸುಬೋಧ ರಾಮರಾಯರು ಧಾರ್ಮಿಕದೃಷ್ಟಿಯುಳ್ಳವರು. ನಮ್ಮ ದೇಶದ ಮಹಾಪುರುಷರ ಚರಿತ್ರೆಯ ಪಠನದ ಮೂಲಕ ನಮ್ಮ ಜನರ ಒಳಗು ಬೆಳಗಬೇಕು ಬೆಳೆಯಬೇಕು ಎಂಬುದು ಅವರ ಉದ್ದೇಶವೆಂಬುದಾಗಿ ಅವರ ಬರೆವಣಿಗೆಗಳಿಂದ ತಿಳಿಯಬಹುದಾಗಿದೆ. ಆದರೂ ಲೇಖಕರು ಧಾರ್ಮಿಕ ಅಂಧಶ್ರದ್ಧೆಯನ್ನು ಇಟ್ಟುಕೊಂಡವರಲ್ಲ. ಮಹಾಪುರುಷರ ಚರಿತ್ರೆಯಲ್ಲಿ ಬರುವ ಹಲವು ವಿಷಯಗಳಿಗೆ ಆಧುನಿಕರು ಒಪ್ಪಬಹುದಾದಂಥ ಕಾರಣಗಳನ್ನು ಕೊಟ್ಟು ಅವುಗಳನ್ನು ಮನವರಿಕೆ ಮಾಡಿಕೊಟ್ಟಿರುವುದು ಇವರ ವೈಶಿಷ್ಟ್ಯ.

ಈ ಮೇಲೆ ಕಾಣಿಸಿದ ಮೂರು ಪುಸ್ತಕಗಳು ಸುಬೋಧ ರಾಮರಾಯರ ಜನಪ್ರಿಯ ಕೃತಿಗಳ ಪುನರ್ಮುದ್ರಣಗಳು. ಹಿಂದಿನ ಆವೃತ್ತಿಗಳನ್ನು ಆವಶ್ಯಕತೆ ತೋರಿದೆಡೆ ತಿದ್ದಿ ಆವಶ್ಯಕತೆ ತೋರಿದೆಡೆ ಹೆಚ್ಚು ವಿಷಯಗಳನ್ನು ಸೇರಿಸಿ ಈ ಹೊಸ ಆವೃತ್ತಿಗಳನ್ನು ಬೆಳಕಿಗೆ ತರಲಾಗಿದೆ ಎಂದು ಲೇಖಕರು ತಿಳಿಸಿದ್ದಾರೆ. ಈ ಪುಸ್ತಕಗಳ ವಸ್ತುವು ಸರ್ವವಿದಿತವಿರುವ ಕಾರಣ ಆ ಬಗ್ಗೆ ಇಲ್ಲಿ ಉಲ್ಲೇಖಿಸಬೇಕಾದ ಅಗತ್ಯವಿಲ್ಲ. ಈ ಹೊಸ ಆವೃತ್ತಿಯ ಪುಸ್ತಕಗಳ ಮೇಲುಹೊದಿಕೆಯಲ್ಲಿ ಬಣ್ಣದ ಆಕರ್ಷಕ ಚಿತ್ರಗಳನ್ನು ಕೊಡಲಾಗಿದೆ. ಕೊಂಚ ಒಳ್ಳೆಯ ಕಾಗದವನ್ನು ಬಳಸಿ ಅಚ್ಚಿನ ತಪ್ಪುಗಳನ್ನು ಕೊಂಚ ಕಡಿಮೆ ಮಾಡಿದ್ದರೆ ಇವು ಇನ್ನೂ ಹೆಚ್ಚು ಆಕರ್ಷಕವಾಗುತ್ತಿದ್ದುವೆಂದು ಹೇಳಬಹುದಾಗಿದೆ. ಇಂಥ ಜನಪ್ರಿಯ ಕೃತಿಗಳ ಹಲವಾರು ಆವೃತ್ತಿಗಳು ಬರಬೇಕು ಮತ್ತು ಎಲ್ಲ ಕನ್ನಡಿಗರೂ ಇವುಗಳನ್ನು ಓದಬೇಕು. ಅಂದಿಗೆ ಲೇಖಕರ ಶ್ರಮ ಸಫಲವಾಗುತ್ತದೆ.

* * *

ಡಾ|| ಹೆಲೆನ್ ಕೆಲ್ಲರ್ ಬರೆದ **"ನನ್ನ ಜೀವನದ ಕಥೆ"**—ಸುಬೋಧ ಯಂ. ರಾಮರಾವ್, ಸುಬೋಧ ಪ್ರಕಟನಾಲಯ, ಬೆಂಗಳೂರು; ಪುಟಗಳು vii+೧೭೮; ಬೆಲೆ, ರೂ. ೧-೮-೦.

೧೯೫೫ ನೆಯ ಫೆಬ್ರುವರಿ ತಿಂಗಳಿನಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನದಿಂದ ಒಬ್ಬ ವೃದ್ಧ ಮಹಿಳೆಯು ಭಾರತ ಸರ್ಕಾರದ ಆಹ್ವಾನದ ಮೇರೆಗೆ ಇಲ್ಲಿಗೆ ಬಂದು

ನಮ್ಮ ದೇಶವನ್ನು ಸಂಚರಿಸಿದುದು ಎಲ್ಲರ ನೆನಪಿನಲ್ಲೂ ಉಳಿದಿರುವ ವಿಷಯ. ಆ ಮಹಿಳೆಗೆ ೭೫ ವರ್ಷ ವಯಸ್ಸು ; ಆಕೆ ಕುರುಡಿ ಮತ್ತು ಮೂಗಿ. ಆಕೆ ಮುಖ್ಯಮಂತ್ರಿ ಪಂ|| ಜವಾಹರಲಾಲ ನೆಹರು ಮತ್ತು ಅಧ್ಯಕ್ಷ ರಾಜೇಂದ್ರಪ್ರಸಾದ್ ಇವರುಗಳನ್ನು ತನ್ನ ಹಸ್ತದಿಂದ ಮುಟ್ಟಿನೋಡಿ ಅವರ ವ್ಯಕ್ತಿತ್ವವನ್ನು ಮಾತುಗಳ ಮೂಲಕ ಹೊರಗೆಡಹಿದಾಗ ಜನರಿಗಾದ ಆಶ್ಚರ್ಯ ಅಷ್ಟಿಷ್ಟಲ್ಲ. ಕುರುಡಿಯೂ ಮೂಗಿಯೂ ಆದವಳು ಎಲ್ಲೋ ಒಂದೆಡೆ ಕುಳಿತು ಹಂಗಿನ ಕೂಳಿಗೆ ಒಳಗಾಗಿ ಅತ್ಯಂತ ದುಃಖ ಮಯವಾದ ಬಾಳನ್ನು ಸವೆಸುತ್ತ ಎಂದೋ ಒಂದು ದಿನ ಬಿದ್ದುಹೋಗುವುದನ್ನು ಸಾಮಾನ್ಯವಾಗಿ ನಾವು ಕಂಡಿರುತ್ತೇವೆ. ಆದರೆ ಇಂಥ ಒಬ್ಬ ಹೆಂಗಸು ಕುರುಡರ ಮೂಕರ ಉದ್ಧಾರಕ್ಕಾಗಿ ತನ್ನ ಜೀವನವನ್ನು ಮೀಸಲಾಗಿರಿಸಿ ಅದಕ್ಕಾಗಿ ಪ್ರಪಂಚ ಪರ್ಯಟನೆ ಕೈಗೊಳ್ಳುವುದೆಂದರೆ ಏನು ಎಂಬುದನ್ನು ನಾವು ಊಹಿಸುವುದೂ ಕಷ್ಟ. ಇಂಥ ಒಂದು ವ್ಯಕ್ತಿ ತನ್ನ ಜೀವನದ ಕಥೆಯನ್ನು ಬರೆದಿದ್ದಾಳೆಂದರೆ ಅದು ಅದ್ಭುತವೇ ಸರಿ. ಈ ಅದ್ಭುತವನ್ನು ತಿಳಿಯಬೇಕಾದರೆ ಡಾ|| ಹೆಲೆನ್ ಕೆಲ್ಲರಳ "ನನ್ನ ಜೀವನದ ಕಥೆ"ಯನ್ನು ಓದಲೇಬೇಕು.

೧೮೮೦ ನೆಯ ಇಸವಿಯಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನದ ಉತ್ತರ ಅಲಬಾಮಾದಲ್ಲಿ ಟಸ್ಕಂಬಿಯ ಎಂಬ ಊರಿನಲ್ಲಿ ಎಲ್ಲ ಶಿಶುಗಳಂತೆಯೇ ಹೆಲೆನ್ ಕೆಲ್ಲರ್ ಜನ್ಮವೆತ್ತಿದಳು. ತನ್ನ ಹತ್ತೊಂಬತ್ತನೆಯ ತಿಂಗಳಿನಲ್ಲಿ ಯಾವುದೋ ಒಂದು ಕಾಯಿಲೆಗೆ ತುತ್ತಾಗಿ ದೃಷ್ಟಿಪಾಟವವನ್ನೂ ಶ್ರವಣಶಕ್ತಿಯನ್ನೂ ಕಳೆದುಕೊಂಡಳು. ಎಲ್ಲಿಯೋ ಮಸುಕುಮಸುಕಾಗಿ ಪ್ರಪಂಚವನ್ನು ಶಿಶುತನದಲ್ಲಿ ನೋಡಿದ್ದ ಹೆಲೆನಳ ಪಾಲಿಗೆ ಪ್ರಪಂಚದ ಬೆಳಕೂ ಶಬ್ದವೂ ಇಲ್ಲದಂತಾದುವು. ಕೇವಲ ಸ್ಪರ್ಶ ಮತ್ತು ವಾಸನೆ ಹಿಡಿಯುವುದರ ಮೂಲಕವೇ ಪ್ರಪಂಚದ ಅರಿವನ್ನು ಹೊಂದಿ ತೃಪ್ತಳಾಗ ಬೇಕಿತ್ತು. ಹೆಲೆನ್‌ಳ ಅದೃಷ್ಟ ಅವರ ತಂದೆತಾಯಿಗಳನ್ನು ಕರುಣಾಹೃದಯಿ ಗಳನ್ನಾಗಿ ಮಾಡಿತ್ತು. ಅವರು ಪ್ರಯತ್ನಪಟ್ಟು ಹೆಲೆನ್‌ಳಿಗೆ ವಿದ್ಯಾಭ್ಯಾಸ ಕೊಡಿಸಲು ಪ್ರಯತ್ನಿಸಿದರು. ಹೆಲೆನ್‌ಳ ಭಾಗ್ಯ ತೆರೆಯಿತು. ತಾಳ್ಮೆಯ ಮೂರ್ತಿಯಾದ ಮಿಸ್ ಅನ್ನೆ ಮ್ಯಾನ್ಸ್‌ಫೀಲ್ಡ್ ಸಲ್ಲಿವನ್ ಎಂಬಾಕೆ ಹೆಲೆನ್‌ಳ ಶಿಕ್ಷಕಳಾಗಿ ಬಂದಳು. ಹಸ್ತದ ಮೇಲೆ ಬರೆಯುವುದರ ಮೂಲಕ ಪದಗಳ ಪರಿಚಯ ಮಾಡಿಕೊಡುತ್ತ ಸಲ್ಲಿವನ್ ಹೆಲೆನ್‌ಳಿಗೆ ಎಲ್ಲ ವಿದ್ಯಾಭ್ಯಾಸವನ್ನೂ ಕೊಟ್ಟಳು. ಮುಂದೆ ಹೆಲೆನ್ ಕಾಲೇಜಿಗೂ ಸೇರಿ ಸಕಲೇಂದ್ರಿಯ ಸಂಪತ್ತನ್ನು ಪಡೆದಿರುವವರು ಅಭ್ಯಾಸಮಾಡುವ ಎಲ್ಲ ವಿಷಯ ಗಳನ್ನೂ ಅಭ್ಯಸಿಸಿ ಎಲ್ಲರಂತೆಯೇ ಪರೀಕ್ಷೆಗೆ ಕುಳಿತು ಪ್ರಶ್ನೆ ಪತ್ರಿಕೆಗಳಿಗೆ ಉತ್ತರ ವನ್ನು ಬರೆದಳು. ಇದು ನಿಶ್ಚಯವಾಗಿಯೂ ಸಾಹಸವೇ ಸರಿ. ಕುರುಡ, ಕಿವುಡ,

ಮೂಗರಿಗೂ ಕೂಡ ಉಪಯುಕ್ತವಾದ ವಿದ್ಯಾಭ್ಯಾಸವನ್ನು ಹೇಗೆ ಕೊಡಬಹುದು ಮತ್ತು ಅವರ ಜೀವನವು ವಿಕಸಿಸುವಂತೆ ಹೇಗೆ ಮಾಡಬಹುದು ಎಂಬುದನ್ನು ಈ ಗ್ರಂಥದಿಂದ ತಿಳಿಯಬಹುದಾಗಿದೆ. ಹೆಲೆನ್ ಕೆಲ್ಲರ್ ಓದಿ ಬರೆಯುವುದಲ್ಲದೆ ಮಿಸ್ ಫುಲ್ಲರ್ ಎಂಬ ಮಹಿಳೆಯ ಸಹಾಯದಿಂದ ಉಚ್ಚಾರಣಾ ಸಾಮರ್ಥ್ಯವನ್ನು ಪಡೆದ ಳೆಂಬುದು ಪವಾಡದಂತೆ ಕಾಣಿಸಿದರೂ ಅದು ಸರ್ವಥಾ ಸತ್ಯವಾದುದು.

ತನ್ನ ಜೀವನಕಥೆಯಲ್ಲಿ ಹೆಲನ್ ಕೆಲ್ಲರ್ ಬಹು ಅಮೂಲ್ಯವಾದ ಅಭಿಪ್ರಾಯ ಗಳನ್ನು ಹೊರಗೆಡಹಿದ್ದಾಳೆ. "ಜ್ಞಾನವೇ ಪ್ರೀತಿ, ಅದೇ ಜ್ಯೋತಿ ಮತ್ತು ಅದೇ ದಿವ್ಯದರ್ಶನ" ಎಂದು ಆಕೆ ಹೇಳಿರುವುದನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಕಂಡುಕೊಳ್ಳಬೇಕು.

ಇಂಥ ಅಮೂಲ್ಯ ಗ್ರಂಥವನ್ನು ಕನ್ನಡಿಸಿಕೊಟ್ಟು ಶ್ರೀ ಸುಬೋಧ ರಾಮ ರಾಯರು ಕನ್ನಡಿಗರಿಗೆ ಉಪಕಾರ ಮಾಡಿದ್ದಾರೆ. ಪ್ರತಿಯೊಬ್ಬ ಕನ್ನಡಿಗನೂ ಇದನ್ನು ಓದಿ ಅಂಗವಿಕಲರಲ್ಲಿ ಸಹಾನುಭೂತಿ ತೋರುವುದರ ಮೂಲಕ ಅವರ ಜೀವನದ ಉದ್ಧಾರಕ್ಕೂ ಆತ್ಮವಿಕಾಸಕ್ಕೂ ನೆರವಾಗುವಂಥ ಮನೋಧರ್ಮವನ್ನು ಬೆಳಸಿಕೊಳ್ಳಬೇಕು. ಅದೇ ಈ ಗ್ರಂಥ ಕೋರುವ ಕಾಣಿಕೆ.

* * *

ಉತ್ಸರ್ಗ—ಬಿ. ಅಶ್ವತ್ಥನಾರಾಯಣರಾವ್, ಪ್ರತಿಭಾ ಪ್ರಕಾಶನ, ಬೆಂಗಳೂರು ೨: ಪುಟಗಳು ಫುಲ್‌ಸ್ಕೇಪ್ ೧/೮ ಆಕಾರದ ೧೫೧ + vi ; ಬೆಲೆ, ಒಂದೂಕಾಲು ರೂಪಾಯಿ.

'ಉತ್ಸರ್ಗ', 'ಧರ್ಮಚಕ್ರ', 'ಶಿವನಸೋಲು', 'ತೊಡಕು', 'ಯಥಾ ಪೂರ್ವ' ಎಂಬ ಐದು ಏಕಾಂಕ ನಾಟಕಗಳ ಸಂಗ್ರಹ "ಉತ್ಸರ್ಗ." ಮೊದಲನೆಯ ಏಕಾಂಕ ನಾಟಕದ ಹೆಸರನ್ನು ಗ್ರಂಥಕ್ಕೆ ಇಡಲಾಗಿದೆ. ಈ ನಾಟಕಗಳು ಒಂದೇ ಕಾಲದಲ್ಲಿ ಬರೆದವಲ್ಲ, ಬೇರೆಬೇರೆ ಕಾಲದಲ್ಲಿ ಬರೆದವುಗಳು. ಈ ಗ್ರಂಥಕ್ಕೆ ಬಿಹಾರ್ ಪ್ರಾಂತದ ಗೌರ್ನರರಾದ ಮಾನ್ಯಶ್ರೀ ದಿವಾಕರರು ಉಪಯುಕ್ತವಾದ ಹಾಗೂ ಬೆಲೆಯಾದ ಮುನ್ನುಡಿಯನ್ನು ಬರೆದಿದ್ದಾರೆ. ಈ ಸಂಗ್ರಹದಲ್ಲಿನ ನಾಟಕಗಳನ್ನು ಅರ್ಥಮಾಡಿಕೊಳ್ಳಲು ಈ ಮುನ್ನುಡಿ ಬಹು ಮಾರ್ಗದರ್ಶಕವಾಗಿದೆ.

ಭಾರತದಲ್ಲಿ ಬೌದ್ಧಧರ್ಮವು ಅತ್ಯುಚ್ಚಾಯಸ್ಥಿತಿಯಲ್ಲಿದ್ದ ಮತ್ತು ಅವನತಿ ಗೊಳ್ಳುತ್ತಿದ್ದ ಕಾಲದ ಹಿನ್ನೆಲೆಯಲ್ಲೂ, ಮುಸಲ್ಮಾನರು ರಾಜ್ಯವಾಳುತ್ತಿದ್ದ ಕಾಲದ ಒಂದು ರಾಜ್ಯದ ಇತಿಹಾಸಿಕ ಹಿನ್ನೆಲೆಯಲ್ಲೂ, ಆಧುನಿಕ ಕಾಲದ ಹಿನ್ನೆಲೆಯಲ್ಲೂ ನಾಟಕಕಾರರು ನಾಟಕದ ವಸ್ತುವನ್ನು ರೂಪಿಸಿದ್ದಾರೆ. ಈ ನಾಟಕಗಳ ಹಿನ್ನೆಲೆ ಬೇರೆ

ಬೇರೆ ಆದರೂ ಮಾನವಜೀವನದ ಮೂಲಭೂತ ಸಮಸ್ಯೆಗಳನ್ನು ಬಿಡಿಸುವ ಪ್ರಯತ್ನ ನಡೆದಿರುವುದನ್ನು ಇಲ್ಲಿ ಕಾಣಬಹುದಾಗಿದೆ. ಕೇವಲ ನಕ್ಕುನಗಿಸುವ ಸಾಧಾರಣ ವಿಷಯವನ್ನುಳ್ಳ ವಿನೋದಪೂರ್ಣ ಹಾಸ್ಯಮಯ ನಾಟಕಗಳ ರಚನೆಯೇ ವಿಶೇಷ ವಾಗಿರುವ ಇಂದು ನಾಟಕಕಲೆಯನ್ನೂ ಮತ್ತು ಅದಕ್ಕಿರುವ ಶಕ್ತಿಯನ್ನೂ ಬಹು ಮಟ್ಟಿಗೆ ಮರೆತಿರುವಂತೆ ಕಾಣುತ್ತದೆ. ಜೀವನದ ಗಂಭೀರ ಸಮಸ್ಯೆಗಳನ್ನು ನಾಟಕ ರಚನೆಗಾಗಿ ಆರಿಸಿಕೊಂಡಿರುವುದೂ ವಿರಳ. ಇಂಥ ವಸ್ತುಸ್ಥಿತಿ ಇರುವಲ್ಲಿ ಶ್ರೀ ಅಶ್ವತ್ಥನಾರಾಯಣರಾಯರು ಜೀವನದ ಆಳವಾದ ವಿಷಯಗಳನ್ನು ತಮ್ಮ ನಾಟಕ ಗಳಿಗೆ ವಸ್ತುವನ್ನಾಗಿ ಆರಿಸಿಕೊಂಡು ಅದಕ್ಕೆ ತಕ್ಕ ತಂತ್ರವನ್ನು ಬಳಸಿಕೊಂಡಿರುವುದು ಅಭಿನಂದನೀಯ.

ಅನೇಕ ದಿಗ್ವಿಜಯಗಳನ್ನು ಮಾಡಿ ಕಳಿಂಗರಾಜ್ಯವನ್ನು ಗೆದ್ದು ಮಹಾ ವಿಜಯೋತ್ಸಾಹ ಸಂಭ್ರಮಗಳಿಂದ ಇರಬೇಕಾಗಿದ್ದ ಕಾಲದಲ್ಲಿ ಅಶೋಕ ಯುದ್ಧ ದಿಂದುಂಟಾಗುವ ಮಹಾ ಅನರ್ಥಗಳನ್ನು ಕಂಡುಕೊಂಡು ಉದ್ವಿಗ್ನನಾಗುತ್ತಾನೆ. ಬೌದ್ಧಭಿಕ್ಷು ಉಪಗುಪ್ತನಿಂದ ಭಗವಾನ್ ಬುದ್ಧನ ಸಂದೇಶವನ್ನು ಹೊಂದಿ ಶಾಂತಿ ಯನ್ನು ಕಾಣುತ್ತಾನೆ. ಬೌದ್ಧಮತವನ್ನು ಹರಡುವುದರ ಮೂಲಕ ಜನರಿಗೂ ಶಾಂತಿ ಯನ್ನು ತಂದುಕೊಟ್ಟು 'ದೇವಾನಾಂ ಪ್ರಿಯ'ನಾಗಿ 'ಅಜಾತಶತ್ರು'ವಾಗುವನು ಅಶೋಕ. ಇದೇ 'ಧರ್ಮಚಕ್ರ'ದ ವಸ್ತು.

ಬೌದ್ಧಧರ್ಮವು ಅಧೋಗತಿಗಿಳಿಯುತ್ತಿದ್ದ ಕಾಲವನ್ನು ತೆಗೆದುಕೊಂಡು ದಕ್ಷಿಣ ದಲ್ಲಿದ್ದ ಪಲ್ಲವರಾಜನಾದ ಮಹೇಂದ್ರವರ್ಮನ ರಾಜಧಾನಿ ಕಾಂಚೀಪುರದಲ್ಲ 'ಉತ್ಸರ್ಗ' ನಾಟಕದ ಕ್ರಿಯೆ ನಡೆಯುತ್ತದೆ. ಬೌದ್ಧಭಿಕ್ಷುಗಳು ಅನಾಚಾರಿಗಳಾಗಿ ಬೌದ್ಧಮತಕ್ಕೆ ಕೆಟ್ಟ ಹೆಸರನ್ನು ತಂದಾಗ ಪಲ್ಲವರಾಜನು ಬೌದ್ಧರಿಗೆ ಅದುವರೆಗೆ ಕೊಟ್ಟಿದ್ದ ರಾಜಾಶ್ರಯವನ್ನು ತಪ್ಪಿಸಿ ಚೈತ್ಯಾಲಯ ವಿಹಾರಗಳಲ್ಲಿ ಪೂಜೆ ನಡೆಯ ಕೂಡದೆಂದು ನಿಷೇಧಾಜ್ಞೆಯನ್ನು ಹೊರಡಿಸುತ್ತಾನೆ. ಇಂಥ ಒಂದು ಸಂದರ್ಭದಲ್ಲಿ ಪ್ರಸಿದ್ಧ ವೇಶ್ಯೆಯ ಮಗಳಾದ ಶಿರಿಮೆ ಬುದ್ಧನನ್ನು ಪೂಜಿಸಿ ನಿಷೇಧಾಜ್ಞೆಯನ್ನು ಉಲ್ಲಂಘಿಸಿ ತನ್ನ ಶುದ್ಧ ಧರ್ಮಹೃದಯವನ್ನು ಪ್ರಕಟಪಡಿಸುತ್ತ ಬುದ್ಧನ ಪಾದಾರ ವಿಂದಗಳಲ್ಲಿ ತನ್ನನ್ನು ಸಮರ್ಪಿಸಿಕೊಳ್ಳುವಳು. ಸತ್ಯಧರ್ಮಗಳ ನಿಜತ್ವವನ್ನು 'ಉತ್ಸರ್ಗ' ನಾಟಕದ ಮೂಲಕ ನಿರೂಪಿಸುವ ಪ್ರಯತ್ನ ನಡೆದಿದೆ.

ಜೀರಾರಿನ ರಾಣಿ ಮುಮ್ತಾಜಳ ಪ್ರಣಯಿ ಅರುಣಸಿಂಹ ಸುಲ್ತಾನನಿಗೆ ವಿಷ ಪೂರಿತವಾದ ಉಂಗುರವನ್ನು ತೊಡಿಸಿ ಅವನನ್ನು ಕೊಂದು ತಪ್ಪಿಸಿಕೊಂಡು ಹೋಗು ವಾಗ ಸೇನಾಪತಿಗೆ ಸಿಕ್ಕಿಬೀಳುತ್ತಾನೆ. ಸೇನಾಪತಿ ಹತ್ಯಾಕಾರಿಯನ್ನು ಹಿಡಿದುತಂದು

ನ್ಯಾಯತೀರ್ಪಿಗಾಗಿ ರಾಣಿಗೆ ಒಪ್ಪಿಸುತ್ತಾನೆ. ರಾಣಿ ಅದೇ ಉಂಗುರದಿಂದ ತನ್ನ ಪ್ರಣಯಿಯನ್ನೂ ಕೊಂದು ತಾನು ತನ್ನ ಇಹಜೀವಿತವನ್ನು ಕೊನೆಗಾಣಿಸುತ್ತಾಳೆ. ಹೀಗೆ ಮಾನವಸಮಾಜದಲ್ಲಿರುವ ಪ್ರೇಮದ ಪ್ರಗಾಢ ಪ್ರಶ್ನೆಯನ್ನು 'ತೊಡಕು' ಎಂಬ ನಾಟಕದಲ್ಲಿ ಚಿತ್ರಿಸಲಾಗಿದೆ.

ಶಿವನನ್ನು ಆತ್ಮಸಾಕ್ಷಾತ್ಕಾರ ಮಾಡಿಕೊಂಡ ಭಕ್ತಾಗ್ರಣಿ ಅಪ್ಪನಿಗೂ ಸಾಕ್ಷಾತ್ ಶಿವನಿಗೂ ನಡೆಯುವ ಸಂವಾದ 'ಶಿವನ ಸೋಲು' ನಾಟಕದಲ್ಲಿದೆ. ಭಕ್ತನನ್ನು ತಾನು ಉದ್ಧಾರಮಾಡುತ್ತೇನೆಂಬ ಅಹಂಕಾರದಿಂದಲೂ ತನಗೆ ವಿರೋಧ ವಾಗಿ ಬಂದವರ ಮೇಲೆ ಕೋಪದಿಂದಲೂ ಇರುವ ಶಿವನೆಲ್ಲಿ! ಮುಕ್ತಾತ್ಮ ಅಪ್ಪನೆಲ್ಲಿ! ತನ್ನನ್ನು ತಾನು ಅರಿತ ಮುಕ್ತಾತ್ಮ ಅಪ್ಪನಿಗೆ ಶಿವನೂ ಕೂಡ ಸೋಲಬೇಕು ಎಂಬ ಸತ್ಯವನ್ನು ಇಲ್ಲಿ ಪ್ರಕಟಪಡಿಸಲಾಗಿದೆ.

ಒಬ್ಬ ಮನುಷ್ಯ ತನ್ನ ಕೊನೆಗಾಲದಲ್ಲಿ ತಾನು ಅದುವರೆಗೆ ಮಾಡಿದ ಕಾರ್ಯ ಗಳನ್ನು ನೆನೆಸಿಕೊಂಡು ತನ್ನ ಆ ನಡೆವಳಿಕೆಯಿಂದ ಬಿಟ್ಟ ಫಲವೇನು ಎಂಬುದನ್ನು ರಾಯರ ಕೊನೆಗಾಲದ ಚಿತ್ರದ ಮೂಲಕ 'ಯಥಾಪೂರ್ವ' ನಾಟಕದಲ್ಲಿ ಮಾರ್ಮಿಕ ವಾಗಿ ಚಿತ್ರಿಸಲಾಗಿದೆ.

ಈ ಮೇಲಿನ ಐದು ಏಕಾಂಕ ನಾಟಕಗಳನ್ನು ವಸ್ತುವಿನ ಔನ್ನತ್ಯ, ಪಾತ್ರ ಚಿತ್ರಣ, ಸಂವಾದರಚನಾಕೌಶಲ್ಯ, ತಂತ್ರಗಳ ಬಳಕೆ ಈ ದೃಷ್ಟಿಗಳಿಂದ ವೀಕ್ಷಿಸಿದಲ್ಲಿ ಇಲ್ಲಿಯ ಎರಡು ನಾಟಕಗಳು ಶ್ರೇಷ್ಠವಾಗಿವೆಯೆಂದು ಹೇಳಬಹುದಾಗಿದೆ. 'ಶಿವನ ಸೋಲು' ಮತ್ತು 'ಯಥಾಪೂರ್ವ' ಇವೇ ಆ ಎರಡು ನಾಟಕಗಳು. ಶಿವನಿಗೂ ಅಪ್ಪನಿಗೂ ನಡೆಯುವ ಸಂವಾದ ಬಿಕ್ಕಟ್ಟಾಗಿಯೂ, ಸುಂದರವಾಗಿಯೂ, ಕುತೂಹಲ ಕಾರಿಯಾಗಿಯೂ ಇದೆ. ಆತ್ಮಸಾಕ್ಷಾತ್ಕಾರದ ತುತ್ತತುದಿಯನ್ನು 'ಶಿವನಸೋಲು' ನಾಟಕದಲ್ಲಿ ಕಾಣುತ್ತೇವೆ. ಈ ನಾಟಕದಲ್ಲಿ ಒಂದು ಮುಖ್ಯ ಘರ್ಷಣೆಯಿದೆ. ಸಮಾಜ ನಿಯಮಿಸುವ ಸಂಪ್ರದಾಯಬದ್ಧ ನಿಯಮಗಳನ್ನು ಮೀರಕೂಡದೆಂಬುದನ್ನು ಪ್ರಪಂಚ ಒಪ್ಪುತ್ತದೆ. ಆದರೆ ಜ್ಞಾನಿಗಳ ನೆಲೆಯೇ ಬೇರೆ. ಪ್ರಪಂಚದ ಕಟ್ಟುಕಟ್ಟಳೆಗಳಿಗೆ ಜ್ಞಾನಿಗಳು ಒಳಪಡಲಾರರು. ಇದನ್ನು ಪರಮಜ್ಞಾನಿ ಅಪ್ಪ ಸರ್ವನಿಯಾಮಕ ಶಿವನ ಮೂಲಕ ಸ್ಪಷ್ಟಪಡಿಸಲಾಗಿದೆ. ರಾಯರ ಜೀವನದ ಕೊನೆಯ ಕಾಲದ ಚಿತ್ರದ ಮೂಲಕ ಅವರ ಅಂತರಂಗವ್ಯಾಪಾರಗಳನ್ನು 'ಯಥಾಪೂರ್ವ' ನಾಟಕದಲ್ಲಿ ರಂಗದ ಮೇಲೆ ಪ್ರದರ್ಶಿಸುವ ಯಶಸ್ವೀಪ್ರಯೋಗವಿದೆ. ಪ್ರತಿಯೊಬ್ಬನ ಜೀವನದಲ್ಲೂ ಬರುವ ಒಂದು ಪರೀಕ್ಷಾಕಾಲ ಈ ನಾಟಕದಲ್ಲಿ ಚಿತ್ರಿತವಾಗಿದೆ. ಆದುದರಿಂದ ಇದು ಪ್ರತಿಯೊಬ್ಬ ಮಾನವನಿಗೂ ತೀರ ಹತ್ತಿರವಾಗುತ್ತದೆ.

ಈ ಎರಡು ನಾಟಕಗಳಲ್ಲಿ ಬಳಸಿರುವ ತಂತ್ರವು ವಸ್ತುವಿಗೆ ಅನುಗುಣವಾಗಿ ಪರಿಣಾಮಕಾರಿಯಾಗಿದೆ. ಶಿವನ ಕೋಪವು ಹೆಚ್ಚಾದಂತೆ ಅವನ ಮುಖದ ಭಾವಗಳು ವ್ಯತ್ಯಾಸವಾದಂತೆ ರಂಗದ ಮೇಲಿನ ಬಣ್ಣದ ಬೆಳಕಿನ ಬದಲಾವಣೆ ಮತ್ತು ಏರಿಳಿತಗಳು ಪ್ರೇಕ್ಷಕರ ಮನಸ್ಸಿನ ಮೇಲೆ ಯೋಗ್ಯಪ್ರಭಾವವನ್ನು ಬೀರುತ್ತವೆ. ಉಡಿಗೆತೊಡಿಗೆಗಳಲ್ಲಿಯೂ ಸನ್ನಿವೇಶಕ್ಕೆ ತಕ್ಕಂತೆ ವ್ಯತ್ಯಾಸಮಾಡಿಕೊಳ್ಳಬೇಕಾದ ಅಗತ್ಯತೆಯನ್ನೂ ಇಲ್ಲಿ ತೋರಿಸಿಕೊಡಲಾಗಿದೆ. ಅಂತರಂಗದ ಸ್ಥಿತಿಗತಿಗಳು ವ್ಯತ್ಯಾಸವಾದಂತೆ ಬಾಹ್ಯ ರಂಗದಲ್ಲೂ ವ್ಯತ್ಯಾಸಗಳಾಗುತ್ತವೆ. 'ಯಥಾಪೂರ್ವ'ದಲ್ಲಿಯೂ ಸಂದರ್ಭಕ್ಕೆ ತಕ್ಕ ಪರಿಣಾಮಕ್ಕನುಕೂಲವಾದ ಬೆಳಕಿನ ವಿನ್ಯಾಸವನ್ನು ಉಪಯೋಗಿಸಿಕೊಳ್ಳಲಾಗಿದೆ. ನೆರಳುಬೆಳಕುಗಳ ಔಚಿತ್ಯಜ್ಞಾನ ಇಲ್ಲಿ ಪ್ರಕಟವಾಗಿದೆ. ಇದರಿಂದ ಗಂಭೀರ, ಕ್ಲಿಷ್ಟ, ಉಗ್ರವಿಷಯಗಳನ್ನು ರಂಗದ ಮೇಲೆ ಪ್ರದರ್ಶಿಸಲು ಅನುಕೂಲವಾಗುತ್ತದೆ. ರಾಯರ ಮಾನಸಿಕ ಆಲೋಚನೆಗಳನ್ನೂ, ಉತ್ತರ ಪ್ರತ್ಯುತ್ತರಗಳನ್ನೂ ಅಶರೀರವಾಣಿಯ ಮೂಲಕ ತಿಳಿಸುವುದು ಇಲ್ಲಿನ ಇನ್ನೊಂದು ಮುಖ್ಯತಂತ್ರ. ಆತ್ಮಗತ ಮತ್ತು ಸ್ವಗತ ಭಾಷಣಗಳಿಗಿಂತ ಇದು ಉತ್ತಮ ಸಾಧನ. ರಾಯರು ಆಲೋಚಿಸುತ್ತಿದ್ದಂತೆ ಅವರ ಮನಃಪಟಲದ ಮೇಲೆ ಮಗ, ಹೆಂಡತಿ, ಮಗಳು ಮೊದಲಾದವರು ಸುಳಿದುಹೋಗುವರು. ಕಪ್ಪು ಪರದೆಯ ಮೂಲಕ ಆಯಾ ವ್ಯಕ್ತಿಗಳು ಹೊರಬರುವುದೂ ರಾಯರೊಡನೆ ಮಾತನಾಡಿ ಪುನಃ ಹಾಗೆಯೇ ಮಾಯವಾಗುವುದೂ ಇಲ್ಲಿ ಬಳಸಿಕೊಂಡಿರುವ ಇನ್ನೊಂದು ತಂತ್ರ. ಮನೋವಿಶ್ಲೇಷಣಾತ್ಮಕವಾದ ಪಾತ್ರ ಚಿತ್ರಣಕ್ಕಾಗಿ ಉಪಯೋಗಿಸಿಕೊಂಡಿರುವ ಈ ತಂತ್ರಗಳು ಶ್ರೇಷ್ಠವಾದವುಗಳಾಗಿವೆ.

ಇಂಥ ನಾಟಕಗಳ ಪೂರ್ಣ ಪ್ರಯೋಜನವಾಗಬೇಕಾದರೆ ಇವುಗಳು ರಂಗದ ಮೇಲೆ ಆಗಿಂದಾಗ್ಗೆ ಪ್ರದರ್ಶಿತವಾಗಬೇಕು. ಅಂದೇ ಲೇಖಕನ ಶ್ರಮಕ್ಕೆ ತಕ್ಕ ಫಲ ದೊರೆಯುವುದೆಂದು ಬೇರೆ ಹೇಳಬೇಕಾಗಿಲ್ಲ. ಗಂಭೀರ ವಸ್ತುವುಳ್ಳ ನಾಟಕಗಳ ರಚನೆಯನ್ನೂ ಪ್ರದರ್ಶನವನ್ನೂ ಅಧಿಕಗೊಳಿಸತಕ್ಕ ಕಾರ್ಯದಲ್ಲಿ ಕನ್ನಡಿಗರು ಹೆಚ್ಚುಹೆಚ್ಚಾಗಿ ಪ್ರಯತ್ನಶೀಲರಾಗಬೇಕಾದ ಆವಶ್ಯಕತೆ ಇದೆ.

ಪ್ರಕೃತ ಪುಸ್ತಕದ ಅಚ್ಚಿನ ವಿಷಯದಲ್ಲಿ ಎರಡು ಮಾತನಾಡಬೇಕಾದ್ದಿದೆ. ಅಚ್ಚಿನ ತಪ್ಪುಗಳು ಕ್ಷಮಾತೀತವಾದಷ್ಟು ಉಳಿದುಹೋಗಿವೆ. ಇವುಗಳ ಕಡೆಗೆ ಪ್ರಕಟನಕಾರರು ಗಮನಕೊಡಬೇಕು. ಪಾತ್ರಗಳು ಆಡುವ ಮಾತುಗಳಿಗೂ ನಾಟಕಕಾರನು ಕೊಡುವ ಪೀಠಿಕಾರೂಪವಾದ ಮತ್ತು ರಂಗಸಿದ್ಧತೆಯ ಸೂಚನೆಯ ವಾಕ್ಯಗಳಿಗೂ ಬೇರೆ ಬೇರೆ ಆಕಾರದ ಅಚ್ಚಿನ ಮೊಳೆಗಳನ್ನು ಉಪಯೋಗಿಸಬೇಕು. ಪ್ರಕೃತ ಪುಸ್ತಕದಲ್ಲಿ ಹಲವು ಕಡೆ ಸಂವಾದ ಮತ್ತು ನಾಟಕಕಾರನ ಮಾತುಗಳನ್ನು

ಬೇರ್ಪಡಿಸುವ ಯಾವ ಕ್ರಮವನ್ನೂ ಕೈಗೊಂಡಿರುವುದಿಲ್ಲ. ಯಾವ ಒಂದು ಕ್ರಮಕ್ಕೂ ಬದ್ಧವಾಗದೆ ಕೆಲವು ಕಡೆ ಕಂಸಗಳನ್ನು ಮೊದಲಿನಲ್ಲಿ ಆರಂಭಿಸಿಯೂ ಕೊನೆಯಲ್ಲಿ ಕೈಬಿಟ್ಟೂ, ಕೆಲವು ಕಡೆ ಸಣ್ಣ ಅಕ್ಷರಗಳನ್ನು ಉಪಯೋಗಿಸಿಯೂ, ಕೆಲವು ಕಡೆ ಉಪಯೋಗಿಸದೆಯೂ ಇರುವುದು ಇಲ್ಲಿ ಸರ್ವಸಾಮಾನ್ಯವಾಗಿದೆ. ಈ ದೋಷವನ್ನು ಮುಂದಿನ ಮುದ್ರಣದಲ್ಲಿ ಸರಿಪಡಿಸಿಕೊಳ್ಳುವುದಗತ್ಯ. ನಾಟಕದ ತಂತ್ರದ ಬಳಕೆಯ ವಿಷಯವನ್ನು ವಿವರವಾಗಿ ಸೂಚಿಸಿರುವಂತೆ ಪಾತ್ರಗಳ ಉಡಿಗೆ ತೊಡಿಗೆಗಳ ಬಗೆಗೂ ವಿವರವಾದ ಸೂಚನೆಯನ್ನು ಕೊಡುವುದಪೇಕ್ಷಣೀಯ. ಕೆಲವು ಕಡೆ ಸಂವಾದಗಳು ದೀರ್ಘವಾಗಿ ಭಾಷಣದಂತೆ ಆಗಿರುತ್ತವೆ. ಇದರಿಂದ ಪ್ರೇಕ್ಷಕನಿಗೆ ಬೇಸರವಾಗಿ ರಸಾಸ್ವಾದನೆಗೆ ಅಡ್ಡಿಯಾಗಬಹುದು. 'ಉತ್ಸರ್ಗ' ಎಂಬ ನಾಟಕದಲ್ಲಿ ಒಂದೆರಡು ಕಡೆ ಬರುವ ಪ್ರಾಕೃತ ಗೀತೆಗಳಿಗೆ ಬದಲಾಗಿ ಕನ್ನಡ ಗೀತೆಗಳಿದ್ದಿದ್ದರೆ ಪ್ರದರ್ಶನದ ದೃಷ್ಟಿಯಿಂದ ಹೆಚ್ಚು ಅನುಕೂಲವಾಗುತ್ತಿದ್ದಿತೆಂದು ತೋರುತ್ತದೆ.

ಶ್ರೀ ಅಶ್ವತ್ಥನಾರಾಯಣರಾಯರ ನಾಟಕ ರಚನೆ ಉದಾತ್ತವಾದ ಹಾದಿಯನ್ನು ತುಳಿದಿದೆ. ಇದೇ ರೀತಿ ಅವರು ಮಾನವ ಸಮಸ್ಯೆಗಳ ಗಂಭೀರವಾದ ವಿಶ್ಲೇಷಣಾತ್ಮಕ ನಿರೂಪಣೆಯಿಂದ ಕೂಡಿದ ಉತ್ಕೃಷ್ಟ ನಾಟಕಗಳನ್ನು ಇನ್ನೂ ಹೆಚ್ಚುಹೆಚ್ಚಾಗಿ ರಚಿಸಲಿ ಎಂದು ಕೋರುವುದು ಸಹಜವಾಗಿದೆ.

*
* *

ಪ್ರೇಮಪ್ರಕರಣ—ಕ. ಶಂಕರ, ಕಾವ್ಯಾಲಯ, ಮೈಸೂರು ; ಪುಟಗಳು iv + ೩೦೧ ; ಬೆಲೆ, ಒಂದೂವರೆ ರೂಪಾಯಿ.

ಈ ಪುಸ್ತಕದಲ್ಲಿ ಎರಡು ಕೃತಿಗಳಿವೆ. 'ಸೆರೆಯ ಮನೆಯಲ್ಲಿ' ಎಂಬ ೭೯ ಪುಟಗಳ ಕಥೆಯು ಪುಸ್ತಕದ ಮೊದಲಿನಲ್ಲಿದೆ. ಮುಂದಿನ ೨೧೩ ಪುಟಗಳನ್ನು 'ಪ್ರೇಮಪ್ರಕರಣ' ಎಂಬ ಕಾದಂಬರಿಯು ಆವರಿಸಿದೆ.

ಮೈಸೂರು ಕಾಂಗ್ರೆಸ್ಸಿನವರು ನಡೆಸಿದ ಸತ್ಯಾಗ್ರಹ ಸಮರದ ಕೊನೆಯ ದಿನಗಳಲ್ಲಿ ಬಹುಮಟ್ಟಿಗೆ ಸೆಂಟ್ರಲ್ ಜೈಲಿನಲ್ಲಿಯೂ ಸ್ವಲ್ಪಮಟ್ಟಿಗೆ ಮೈಸೂರಿನಲ್ಲಿಯೂ ನಡೆದಂತೆ 'ಸೆರೆಯ ಮನೆಯಲ್ಲಿ' ಎಂಬ ಕಥೆ ನಿರೂಪಿತವಾಗಿದೆ. ಸತ್ಯಾಗ್ರಹದ ವಿಷಯ ಈ ಕಥೆಗೆ ಬೇಕಾದುದಲ್ಲ. ಜೈಲಿನ ಒಳಗಿನ ಜೀವನವೂ ಅಷ್ಟೇನೂ ಮುಖ್ಯವಾದುದಲ್ಲ. ಆದರೂ ಆವರಣಕಲ್ಪನಾದೃಷ್ಟಿಯಿಂದ ಜೈಲಿನ ಒಳಗಿನ ಕಠೋರ ಜೀವನದ ಪರಿಚಯವನ್ನು ವಾಸ್ತವಿಕವಾಗಿ ಮಾಡಿಕೊಡಲಾಗಿದೆ. ಜೈಲಿನ ಜೀವನದ

ಹಿನ್ನೆಲೆಯಲ್ಲಿ ಸತೀಶನಿಗೆ ಅನುಭವವಾಗುವ ನಾರಾಯಣನ ಕರ್ಮಕಥೆಯೇ ಇಲ್ಲಿ ಮುಖ್ಯವಾದುದು. ಗದ್ದೆಗೆ ನೀರನ್ನು ಬಿಡುವ ಸಂದರ್ಭದಲ್ಲುದಿಸಿದ ಜಗಳದ ಪರಿಣಾಮವಾಗಿ ನಾರಾಯಣನಿಂದ ಆದ ಕೊಲೆಯ ಕಾರಣಕ್ಕಾಗಿ ನಾರಾಯಣ ಹದಿನಾಲ್ಕು ವರ್ಷಗಳ ಕಾಲ ಸಶ್ರಮ ಶಿಕ್ಷೆಯನ್ನು ಪಡೆದು ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿರುತ್ತಾನೆ. ಸತೀಶ ರಾಜುವಿನ ಜೊತೆಯಲ್ಲಿ ರಾಜಕೀಯ ಕೈದಿಯಾಗಿ ಅಲ್ಲಿಗೆ ಬಂದಾಗ ನಾರಾಯಣನನ್ನು ಕಾಣುತ್ತಾನೆ. ಅವನ ಸ್ಥಿತಿಗಾಗಿ ಮರುಗುತ್ತಾನೆ. ಪ್ರೇಮಾ ಕೊಲೆಮಾಡಲೆತ್ನಿಸಿದ ಅಪಾದನೆಯಿಂದ ಆರು ತಿಂಗಳ ಸಜೆಯನ್ನು ಅನು ಭವಿಸಲು ಸತೀಶ ಬಂದ ಪೋಲಿಸ್ ಬಸ್ಸಿನಲ್ಲೇ ಸೆಂಟ್ರಲ್ ಜೈಲಿಗೆ ಬರುತ್ತಾಳೆ. ಜೈಲಿನಿಂದ ಬಿಡುಗಡೆ ಆದಮೇಲೆ ಮೈಸೂರಿನಲ್ಲಿ ಪ್ರೇಮಾ ಚಲನಚಿತ್ರ ತಾರೆಯಾಗಿ ಮೆರೆಯುತ್ತಿರುತ್ತಾಳೆ. ಚಲನಚಿತ್ರ ತಾರೆಯಾಗಿಯೂ ಪ್ರೇಮಾ ನಡೆಸುವ ವಿರಕ್ತ ಜೀವನ ಅನ್ಯಾದೃಶವಾದುದು. ಸತೀಶನಿಗೆ ಪ್ರೇಮಾ ಈ ಸಂದರ್ಭದಲ್ಲಿ ಮೈಸೂರಿನಲ್ಲಿ ಕಾಣಸಿಗುತ್ತಾಳೆ. ಅಲ್ಲಿ ಅವಳ ಕಥೆ ತಿಳಿಯುವುದು. ಪ್ರೇಮಾ ಬೇರೆಯಾರೂ ಅಲ್ಲ. ನಾರಾಯಣನ ಹೆಂಡತಿಯೇ. ನಾರಾಯಣನಿಗೆ ಜೈಲಾದ ಮೇಲೆ ಸ್ವಾರ್ಥಿಯೊಬ್ಬನ ಆಕರ್ಷಣೆಗೆ ಸಿಕ್ಕಿಬಿದ್ದು ಗರ್ಭಿಣಿಯಾದಾಗ ಮೋಸಗೊಳಿಸಲೆತ್ನಿಸಿದ ಆತನೊಡನೆ ಸಿಟ್ಟುಗೊಂಡು ಆವೇಶಭರದಲ್ಲಿ ಕೊಲ್ಲುವೆನೆಂದು ಹೆದರಿಸಿದ್ದೇ ಕಾರಣವಾಗಿ ಜೈಲಿಗೆ ಆರು ತಿಂಗಳ ವಾಸಕ್ಕಾಗಿ ಹೋಗುವಳು. ಹೆಣ್ಣು ತಪ್ಪುಮಾಡಲು ಗಂಡಸೇ ಕಾರಣ, ಗಂಡಸು ಹೆಣ್ಣನ್ನು ಭೋಗವಸ್ತುವನ್ನಾಗಿ ಭಾವಿಸಿ ಇಲ್ಲಸಲ್ಲದ ಆಸೆ ತೋರಿಸಿ ತಪ್ಪುದಾರಿಗೆ ಎಳೆಯುತ್ತಾನೆ ಎಂಬುದು ಪ್ರೇಮಳ ಜೀವನದಿಂದ ಸತೀಶನಿಗೆ ಸ್ಪಷ್ಟ ವಾಗುತ್ತದೆ. ಆಗ ತಾನೆ ಬಿಡುಗಡೆ ಹೊಂದಿರಬಹುದಾದ ನಾರಾಯಣನನ್ನು ಹುಡು ಕುತ್ತ ಸತೀಶ ಕಾಹಿಲೆಯಿದ್ದ ತನ್ನ ಆಪ್ತಗೆಳೆಯ ರಾಜುವನ್ನೂ ಅಲಕ್ಷಿಸಿ ಹೊರಟು ಹೋಗುವನು.

ಜೈಲಿನ ಕಠೋರ ಜೀವನದ ಹಿನ್ನೆಲೆಯಲ್ಲಿ ನಾರಾಯಣ ಮತ್ತು ಪ್ರೇಮರ ಕರುಣಾಪೂರ್ಣವಾದ ಪ್ರೇಮಕಥೆಯನ್ನು 'ಸೆರೆಯ ಮರೆಯಲ್ಲಿ' ಎಂಬ ಈ ಕಥೆಯಲ್ಲಿ ಚಿತ್ರಿಸಲಾಗಿದೆ. ಕಥೆಯನ್ನು ಕಥೆಗಾರ ತನ್ನ ವಾಕ್ಯಗಳಿಂದ ನಿರೂಪಿಸುವ ವಿಧಾನ ವನ್ನೂ, ಇಲ್ಲಿ ಅವಲಂಬಿಸಿಲ್ಲ, ಮುಖ್ಯಪಾತ್ರದ ಮೂಲಕವೂ ಕಥೆಯನ್ನು ಹೇಳಿಸಿಲ್ಲ. ಬೇರೊಂದು ಸಹೃದಯಿ ಪಾತ್ರವಾದ ಸತೀಶನ ಮೂಲಕ ಕಥೆಯ ಪರಿಚಯ ಮಾಡಿಕೊಟ್ಟಿರುವುದೇ ಇಲ್ಲಿಯ ವೈಶಿಷ್ಟ್ಯ. ಇದರಿಂದ ಕಥೆ ಆಕರ್ಷಕವಾಗಿಯೂ, ಕುತೂಹಲಕರವಾಗಿಯೂ ಪರಿಣಮಿಸಿದೆ ಎಂಬುದು ಖಂಡಿತ. ಸರಳವಾದ ಸಂಭಾಷಣೆ. ಹಿತಮಿತವಾದ ನಿರೂಪಣೆ ಈ ಕಥೆಯ ಸೊಗಸನ್ನು ಹೆಚ್ಚಿಸಿವೆ.

ಕಲೆಯೇ ಸರ್ವಸ್ವವೆಂದು ನಂಬಿದ್ದ ಶೇಖರ ಮತ್ತು ಜೀವನಕ್ಕಾಗಿ ನಾಟಕ ಕಲಾವಿದೆಯಾಗಿದ್ದ ಸುಮಿತ್ರ ಇವರಿಬ್ಬರ ಜೀವನವೇನಾಯಿತೆಂಬುದನ್ನು 'ಪ್ರೇಮ ಪ್ರಕರಣ'ವೆಂಬ ಕಾದಂಬರಿಯಲ್ಲಿ ಚಿತ್ರಿಸಲಾಗಿದೆ. ಒಳ್ಳೆಯ ಸ್ಥಿತಿವಂತನಾಗಿದ್ದ ಮಲೆನಾಡಿನ ಹಳ್ಳಿಯ ಶೇಖರ ಕಲೆಯ ಮೇಲಿನ ಮೋಹದಿಂದ ಗುಂಡೂರಾಯರ ನಾಟಕ ಕಂಪೆನಿಗೆ ಬಂದು ಸೇರುತ್ತಾನೆ. ರಾಮಕೃಷ್ಣಯ್ಯಂಗಾರ್ಯರ ನಾಟಕದ ಹುಚ್ಚಿಗೆ ಬಲಿಯಾಗಿ ಕೊನೆಗೆ ನಾಟಕ ಕಂಪೆನಿಯನ್ನೇ ಸೇರಿದ ಕಮಲಳ ತಂಗಿ ಸುಮಿತ್ರಳ ಪರಿಚಯ ಶೇಖರನಿಗಾಗಿ ಎಲ್ಲರೂ ಒಡನೆ ನಾಟಕದಲ್ಲಿ ಪಾತ್ರವಹಿಸಿ ಒಡನಾಡಿ ಪ್ರೇಮಕ್ಕೆ ಒಳಗಾಗುತ್ತಾರೆ. ಎಷ್ಟೇ ಅಡ್ಡಿಬಂದರೂ ತಾವು ಸುಖವಾಗಿ ರುವುದಾಗಿಯೂ ಪುನಃ ನಾಟಕದ ಮೋಹಕ್ಕೆ ಒಳಗಾಗುವುದಿಲ್ಲವೆಂದೂ ಶೇಖರ ಸುಮಿತ್ರರು ನಿಶ್ಚಯಿಸಿಕೊಂಡು ಮದುವೆಯಾಗುತ್ತಾರೆ. ಮದುವೆಯಾದ ಕೆಲವು ಕಾಲ ಸಂಸಾರ ಸುಖವಾಗಿ ಕಳೆದರೂ ಒಬ್ಬರೊಬ್ಬರಿಗಿದ್ದ ಸ್ವಭಾವದ ಅಲ್ಪ ವ್ಯತ್ಯಾಸ ದಿಂದಲೂ ಕಮಲಳ ಗಂಡ ನಾರಾಯಣರಾಯನು ತನ್ನ ಸ್ವಾರ್ಥಪೂರಣಕ್ಕಾಗಿ ಹೂಡಿದ ಹಂಚಿಕೆಯ ಕಾರಣದಿಂದಲೂ ಶೇಖರ ಸುಮಿತ್ರರು ದೂರವಾಗುತ್ತಾರೆ. ಶೇಖರ ಹಳ್ಳಿಯಲ್ಲಿದ್ದು ಸ್ವತಃ ಬೇಸಾಯಮಾಡಲಾರಂಭಿಸಿದುದರಿಂದ ಸ್ವಲ್ಪ ಒರಟು ಪ್ರವೃತ್ತಿ ಅವನಲ್ಲಿ ಬೆಳೆಯುತ್ತದೆ. ಆದರೆ ಇದನ್ನು ಅರಿಯದ ಸುಮಿತ್ರ ಮನಸ್ಸು ಕೆಡಿಸಿಕೊಂಡು ಮುಂದೆ ಹೆಜ್ಜೆಯಿಟ್ಟ ಮೇಲೆ ಹಿಂದೆ ನೋಡದ ಸ್ವಭಾವವುಳ್ಳವಳಾದುದ ರಿಂದ ಶೇಖರನಿಗೂ ತನಗೂ ಉಂಟಾದ ವೈಮನಸ್ಯವನ್ನು ಬಗೆಹರಿಸಿಕೊಳ್ಳಲಾರದೆ ಹೋಗುತ್ತಾಳೆ. ಗರ್ಭಿಣಿಯಾಗಿ ಬಾಣಂತಿತನಕ್ಕೆಂದು ತವರುಮನೆಗೆ ಬಂದವಳು ನಾರಾಯಣರಾಯನ ಬಲೆಗೆ ಬಿದ್ದ ಜಿಂಕೆಯಾಗಿ ಮದ್ರಾಸಿಗೆ ಹೋಗಿ ಅಲ್ಲಿ ಚಲನ ಚಿತ್ರ ನಟಿಯಾಗಿ ಸೇರಬೇಕಾಗುತ್ತದೆ. ಶೇಖರ ತನ್ನ ಮಗನನ್ನು ಕೂಡ ಪಡೆಯ ಲಾರದೆ ಹೆಂಡತಿಯೂ ಇಲ್ಲದೆ ಮುಖ ತಗ್ಗಿಸಿಕೊಂಡು ಹಿಂದಿರುಗಿ ಬರಬೇಕಾಗುತ್ತದೆ.

ಈ ಕಥೆಯ ಮೂಲಕ ಪ್ರೇಮದ ಒಂದು ಸ್ವರೂಪವನ್ನು ಕಾದಂಬರಿಕಾರರು ಸ್ಪಷ್ಟಪಡಿಸಲು ಪ್ರಯತ್ನಿಸಿದ್ದಾರೆ. "ಪ್ರೇಮ ಹಿಮವತ್ಪರ್ವತದಂತೆ ಹೇಗೆ ಉನ್ನತ ವಾದದ್ದೋ ಹಾಗೆಯೇ ಪ್ರಪಾತದಂತೆ ಪಾತಾಳಸಮವಾದುದೂ ಆಗುತ್ತದೆ. ಪ್ರೇಮ ಗೌರಿಶಂಕರದ ಕೊನೆಯ ಮೆಟ್ಟಲಿನಲ್ಲಿ ಜಾರಿದರೂ ಬೀಳುವುದು ಪಾತಾಳಕ್ಕೆ" ಎಂದು "ಕಡೆಯಮಾತು" ಎಂಬಲ್ಲಿ ಕಾದಂಬರಿಕಾರರು ಹೇಳಿರುವುದನ್ನು ಇಲ್ಲಿ ಸ್ಮರಿಸಿ ಕೊಳ್ಳಬೇಕಾಗಿದೆ. ಈ ವಾಕ್ಯಗಳಲ್ಲಡಗಿರುವ ಸತ್ಯಾಂಶವನ್ನೇ ಈ ಕಾದಂಬರಿಯ ಮೂಲಕ ಹೊರಗೆಡಹಿದ್ದಾರೆ. ಬೆಳಕಿನ ಬೆನ್ನಲ್ಲಿ ಕತ್ತಲೆ ಬರುವಂತೆ ಪ್ರೇಮದ ಜತೆ ಯಲ್ಲೇ ಪ್ರಾರಬ್ಧವೂ ಬೆನ್ನಟ್ಟುತ್ತದೆ. ಇದನ್ನು ಅರಿತುಕೊಂಡು ಹೊಂದಿಕೊಂಡು

ಗಂಡಹೆಂಡಿರು ಅಥವಾ ಪ್ರೇಮಿಗಳು ನಡೆದುಕೊಂಡರೆ ಆ ಪ್ರೇಮ ಶಾಶ್ವತವಾಗಿ ಉಳಿಯಬಹುದು ಎಂಬುದನ್ನು ಶೇಖರ ಸುಮಿತ್ರರ ಪ್ರೇಮಕಥೆಯ ಮೂಲಕ ಸ್ಪಷ್ಟ ಪಡಿಸಿದ್ದಾರೆ. ಶೇಖರ ಸುಮಿತ್ರರ ಪ್ರೇಮ ಉನ್ನತವಾದುದೂ ಪವಿತ್ರವಾದುದೂ ಆಗಿತ್ತು. ಆದರೆ ಅವರು ಮುಂದೆ ತಮ್ಮ ಪ್ರೇಮವನ್ನು ಬೆಳೆಸಿಕೊಳ್ಳುವುದನ್ನು ಮರೆತು ಉದ್ವೇಗಕ್ಕೆ ಎಡೆಕೊಟ್ಟು ವಿರಸಕ್ಕೆ ಅವಕಾಶಮಾಡಿಕೊಳ್ಳುತ್ತಾರೆ. ಇದೇ ಮುಂದೆ ಅವರ ಸುಖವನ್ನು ನಾಶಮಾಡಿ ಬಾಳನ್ನು ಮುರಿಯುತ್ತದೆ. ಶೇಖರ ಸುಮಿತ್ರರ ಪಾತ್ರಗಳಲ್ಲದೆ ಸ್ವಾರ್ಥಸಾಧಕ ನಾರಾಯಣರಾಯ, ಒಡವೆ ಸಂಪತ್ತು ಭೋಗಭಾಗ್ಯಗಳಿಗೆ ಬಲಿಯಾದ ತಾಯಿ ಸೀತಮ್ಮ, ಜೀವನದ ಏರುಪೇರುಗಳಿಗೆ ತಲೆಯೊಡ್ಡಿ ಕೊನೆಗೆ ಮೂಕನಾದ ತಂದೆ ರಾಮಕೃಷ್ಣ ಅಯ್ಯಂಗಾರ್ ಈ ಪಾತ್ರ ಗಳೂ ಕೂಡ ಈ ಕಾದಂಬರಿಯಲ್ಲಿ ಆರಳಿ ಓದುಗರನ್ನು ಆಕರ್ಷಿಸುತ್ತವೆ.

ಹೆಚ್ಚಿನ ದೀರ್ಘವರ್ಣನೆಗಳಿಗೆ ಹೋಗದೆ ಸರಳವಾದ ಸಂವಾದವನ್ನು ಬೆರೆಸಿ ಆಕರ್ಷಕವಾದ ಪ್ರೇಮಕಥೆಯನ್ನು ತಮ್ಮ ಮೊದಲನೆಯ ಕೃತಿಯಲ್ಲಿಯೇ ನಿರೂಪಿಸಿ ರುವ ಕಾದಂಬರಿಕಾರರು ಇನ್ನೂ ಉತ್ತಮ ಕೃತಿಗಳನ್ನು ನೀಡಬಲ್ಲ ಸಾಮರ್ಥ್ಯವುಳ್ಳವ ರೆಂದು ಹೇಳಬಹುದು.

ಕೆ. ಎಸ್. ಕೃಷ್ಣಮೂರ್ತಿ

*
* *

ಕೆನಿಲ್ ವರ್ತ್—ಅನುವಾದಕರು : ಎಚ್. ಎಲ್. ನಾಗೇಗೌಡ ; ಪ್ರಕಾಶಕರು : ಶಾರದಾ ಮಂದಿರ, ೫೨೮ ಕೃಷ್ಣರಾಜವನಂ, ಮೈಸೂರು ; ಪುಟಗಳು ೨೫೬ ; ಬೆಲೆ, ರೂ. ೩-೦-೦.

ಸುಪ್ರಸಿದ್ಧ ಸರ್ ವಾಲ್ಟರ್ ಸ್ಕಾಟ್‌ನ ಉತ್ತಮೋತ್ತಮ ಕೃತಿ 'ಕೆನಿಲ್‌ವರ್ತ್'ನ ಈ ಕನ್ನಡ ಸಂಗ್ರಹಾನುವಾದವು ಅಭಿನಂದನಾರ್ಹವಾಗಿದೆ. ಮಹತ್ವಾಕಾಂಕ್ಷೆಯ ಸುಳಿಯಲ್ಲಿ ಸಿಲುಕಿ ಅದರಿಂದ ತಪ್ಪಿಸಿಕೊಳ್ಳಲಾರದೆ ಸ್ಥೈರ್ಯಹೀನನಾಗಿ ತನ್ನ ಜೀವನ ವನ್ನು ದುಃಖಮಯವನ್ನಾಗಿಯೂ, ತನ್ನ ಪ್ರೇಮದ ಪುತ್ಥಳಿ ಅಮಿಯ ಜೀವನವನ್ನು ದುರಂತವನ್ನಾಗಿಯೂ ಮಾಡಿದ ಸಾಮಂತ ಮತ್ತು ರಾಜಾಸ್ಥಾನ ಕಲೀಸೇಸ್ಟರ್‌ನ ಕಥೆ ಇಲ್ಲಿ ಚಿತ್ರಿತವಾಗಿದೆ. ಮೂಲದ ಭಾವನೆಗಳಿಗೂ, ಕಥೆಗೂ, ಚಾರಿತ್ರ ಚಿತ್ರಣಕ್ಕೂ ಕುಂದಿಲ್ಲದ ಶೈಲಿಯಿದೆ. ಎಲಿಜಬೆತ್ ಕಾಲದ ಸ್ಥಿತಿಗತಿಗಳನ್ನು ಲೋಪವಿಲ್ಲದ ರೂಪದಲ್ಲಿ ನಿರೂಪಿಸಲು ಯೋಗ್ಯವಾದ ಅನುವಾದ ತಂತ್ರವಿದೆ. ಮೂಲದ ವಿವರಣೆಗಳನ್ನು ತಗ್ಗಿಸಿ ಅಲ್ಲಿಯ ಹೆಸರುಗಳನ್ನೇ ಇಟ್ಟುಕೊಂಡು ಸಂಗ್ರಹಿಸಿ ಅನುವಾದಿಸಿರುವುದರಿಂದ ಮೂಲವನ್ನು ಓದದೆಯೂ ಸ್ಕಾಟ್‌ನ ಕಥನಕೌಶಲವನ್ನು ಸವಿಯಲು ಸಾಧ್ಯವಾಗು ವುದರಿಂದ ಆ ದೃಷ್ಟಿಯಿಂದಲೂ ಈ ಕಾದಂಬರಿಯು ಪ್ರಶಂಸಾರ್ಹವಾಗಿದೆ.

ಇನ್ನೊಂದು ವಿಷಯ. ಕಾದಂಬರಿಯನ್ನು ಓದುತ್ತಾ ಹೋದಂತೆಲ್ಲಾ ತಾನು ಮಾಡದ ತಪ್ಪಿಗೂ, ಪಾಪಮಾಡದಿದ್ದರೂ, ಫಲ ಕೆಟ್ಟದಾಗಿ ಜೀವಕ್ಕೇ ಸಂಚಕಾರ ವಾಗುವುದು ಸಾಧ್ಯವೆಂಬ ಭಾವನೆ ಬರುತ್ತದೆ. ಆದರೂ ಇದಕ್ಕೆ ಕಾರಣವಿಲ್ಲದಿಲ್ಲ. ಅದೂರದೃಷ್ಟಿಯೋ, ಅತಿ ಪ್ರೇಮದ ಚಂಚಲತೆಯೋ ಅಮಿಯ ಪತನಕ್ಕೆ ಕಾರಣ ವಾದರೂ ಸಹವಾಸದೋಷದ ಪರಿಣಾಮವೂ ಅದಕ್ಕೆ ತೀವ್ರ ಸಹಕಾರಿಯೆಂದೇ ಹೇಳಬೇಕು. ಈ ಎಲ್ಲ ವಿಷಯುಗಳನ್ನೂ ಎಚ್. ಎಂ. ಶಂಕರನಾರಾಯಣರಾವ್, ಅವರು ತಮ್ಮ '**ಪರಿಚಯ**'ದಲ್ಲೇ ನುಡಿದಿದ್ದಾರೆ. ಅಂತೆಯೇ ಹೆಚ್ಚಾಗಿ ಹೇಳುವುದು ಅನವಶ್ಯಕ.

ಮುದ್ರಣ ಸ್ಖಾಲಿತ್ಯವೋ ಎಂಬಂತೆ ಅಲ್ಲಲ್ಲಿ ಶಬ್ದರೂಪಗಳ ಅನಿಶ್ಚಿತತೆಯೂ, ಸಂಜ್ಞಾವಾಚಕ ಶಬ್ದರೂಪಗಳ ಅಸ್ಥಿರತೆಯೂ, ವ್ಯಾಕರಣಕ್ಕೆ ಸಲ್ಲದ ಕೆಲವು ಪದಪ್ರಯೋಗಗಳೂ ಕಂಡುಬರುತ್ತವೆ. ಇವೆಲ್ಲಾ ಮುಂದಿನ ಮುದ್ರಣದಲ್ಲಿ ಸರಿ ಹೋಗುವುವೆಂದು ಎಣಿಸಬಹುದು.

ಒಟ್ಟಿನಲ್ಲಿ ಇಂತಹ ಆದಾನಪ್ರದಾನಗಳು ವಿಪುಲವಾಗಿ ನಡೆಯಬೇಕಾಗಿರುವು ದರಿಂದ, ಶ್ರೀ ನಾಗೇಗೌಡರು ಇನ್ನು ಮುಂದೆಯೂ ನಮ್ಮ ನಾಡಿಗೆ, ಜನಕ್ಕೆ, ನುಡಿಗೆ ತಮ್ಮ ಇಂಥದೇ ಶ್ರೇಷ್ಠ ಸೇವೆಯಿಂದ ಸಂತಸವನ್ನುಂಟುಮಾಡಲಿ ಎಂದು ಹಾರೈಸುತ್ತೇನೆ.

***

ಸೀತಾರತ್ನ—ಲೇಖಕರು : ಎಂ ರಮಾನಂದ ಘಾಟೆ ; ಪ್ರಕಾಶಕರು : ಶಾರದಾ ಪ್ರಕಟ ನಾಲಯ, ಅರಳೇಪೇಟೆ, ಬೆಂಗಳೂರು ೨ ; ಪುಟಗಳು ೧೨೫ ; ಬೆಲೆ, ರೂ. ೦-೧೨-೦.

ಇದು ಶ್ರೀ ರಮಾನಂದ ಘಾಟೆಯವರ ಹನ್ನೊಂದು ಕಥೆಗಳ ಸಂಕಲನ. ಸ್ವಾನು ಭವ ಸಂಮ್ಮಿಶ್ರಿತ ಈ ಕಥೆಗಳಲ್ಲಿ ಪೂರ್ವಾಪರ ಸಂಬಂಧವೂ ಇದೆ : ಸ್ವತಂತ್ರವಾಗಿಯೂ ಓದಿಕೊಳ್ಳಬಹುದು ಮತ್ತು 'ಕಾನ್ವೆಂಟ್ ಗರ್ಲ್' ಎಂಬ ಕಥಾಸಂಕಲನದ ಮುಂದಿನ ಭಾಗವಿದು. ಇಲ್ಲಿಯೂ ಆತ್ಮಕಥನ ಶೈಲಿಯಲ್ಲಿ ನಿರೂಪಿತವಾದ ಈ ಹನ್ನೊಂದು ರಸವತ್ತಾದ ಕಥೆಗಳಲ್ಲಿ ಹಾಸ್ಯರಸವು ಹಾಸುಹೊಕ್ಕಾಗಿ ಬೆರೆತಿರುವುದು ಕಾಣುತ್ತದೆ. ಜೀವನದ ಹಲವಾರು ಮುಖಗಳ ನಿರೂಪಣೆಯೂ ಜೊತೆಗೆ ಪುರುಷನ ಮಧುರ ಅನುಭವವೂ ಹಾಸ್ಯಭಾವ ಸಂಮ್ಮಿಶ್ರಿತವಾಗಿ ಒಂದು ದಿವ್ಯ ರಸಾಯನವನ್ನೇ ತಯಾರಿಸಿದೆ. ಇಂತಹ ರಸಾಯನವು 'ಸಾಹಿತ್ಯಕ್ಷೇತ್ರದಲ್ಲೂ ಕಾಂಪೌಂಡಿಂಗ್' ನಡೆಸುವುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ.

ಮೊದಲ ಕಥೆ, 'ಸೀತಾರತ್ನ'ದಲ್ಲಿ ನಾಯಕನು ರಾಧಾಬಾಯಿ ಎಂಬುವಳ ಮೋಸವರ್ತನೆಗೆ ಸಿಲುಕಿ ಅವಳ ಕಪಟವನ್ನರಿಯದೆ ಅವಳೇ ಹೇಳಿದಂತೆ ಅವಳ ಮಗಳಿಗೆ ಪ್ರೇಮಪತ್ರ ಬರೆದು, ರಾಧಾಬಾಯಿಯಿಂದ ಪತ್ರವೊಂದಕ್ಕೆ ೧೦ ರೂಪಾಯಿ ಯಂತೆ ಪಡೆಯುತ್ತಿರುತ್ತಾನೆ. ಆದರೆ ಪ್ರೇಮಪತ್ರಗಳನ್ನು ಬರೆಯಬೇಕಾಗಿ ಬಂದ ಉದ್ದೇಶ ರಾಧಾಬಾಯಿಯ ಮಗಳನ್ನು ಅಡಿಗೆಭಟ್ಟನ ಆಕರ್ಷಣೆಯಿಂದ ತಪ್ಪಿಸು ವುದು—ತಲೆಕೆಳಗಾಗಿ ನಾಯಕನೇ ಆಕೆಯನ್ನು ಮದುವೆಯಾಗಬೇಕಾಗುವ ಸ್ಥಿತಿಗೆ ಬರುತ್ತದೆ. ಇಲ್ಲದಿದ್ದರೆ ಕೋರ್ಟಿಗೆ ಹೋಗಬೇಕಾಗುತ್ತದೆ. ಇಂತಹ ಸ್ಥಿತಿಯಲ್ಲಿ ಸೀತಾ ತನ್ನ ಕುಶಾಗ್ರಮತಿಯಿಂದ ದುಷ್ಪರಿಣಾಮದ ಗಂಡಾಂತರದಿಂದ ಗಂಡನನ್ನು ಪಾರುಮಾಡಿ ಅಚ್ಚರಿಗೊಳಿಸುವಳು.

ಎರಡನೇ ಕಥೆ 'ಗ್ಲೂಕೋಸ್'ನಲ್ಲಿ ಪತಿಯು ಘೋರ ಜ್ವರದಿಂದ ಪೀಡಿತ ನಾದಾಗ 'ಗ್ಲೂಕೋಸ್' ಸಿಕ್ಕದ ಕಾಲದಲ್ಲಿ ಅದನ್ನೇ ಕೊಟ್ಟ ಹೊರತು ಖಾಯಿಲೆ ಗುಣವಾಗುವುದಿಲ್ಲವೆಂಬ ಮಾನಸಿಕ ರೋಗವನ್ನು ಅಂಟಿಸಿದ ಡಾಕ್ಟರ್ ಕಾರಣ. ಅದಕ್ಕೆ ತುತ್ತಾಗಿ ನರಳುತ್ತಿದ್ದ ರೋಗಿಗೆ 'ಗ್ಲೂಕೋಸ್' ಡಬ್ಬದಲ್ಲಿ ಕಲ್ಲುಸಕ್ಕರೆ ಯನ್ನು ಪುಡಿಮಾಡಿ ತುಂಬಿ 'ಗ್ಲೂಕೋಸ್' ಎಂದೇ ಅದನ್ನು ರೋಗಿಗೆ ಕುಡಿಸಿ ಖಾಯಿಲೆ ಗುಣಪಡಿಸಿದ ಸತಿಯ ಧರ್ಮ ಸಾವಿತ್ರಿಯದಕ್ಕಿಂತ ಕಡಿಮೆಯೇನಲ್ಲ.

ಮೂರನೆಯ ಕಥೆಯಲ್ಲಿ ಹೆಂಗಸರಿಗೆ ಸ್ವಾಭಾವಿಕವಾಗಿರುವ 'ರಾಶಿಭವಿಷ್ಯ'ದ ವಿಷಯದಲ್ಲಿ ನಂಬಿಕೆ ಇಟ್ಟು ಹಣ ಕಳೆದುಕೊಂಡು ಸಾಲದವರಿಗೆ ಸಾಲ ಕೊಡಲಾರದೆ ಅದೇ ಹಣದಿಂದ ಹೆಚ್ಚು ಗಂಟು ಪಡೆಯುತ್ತೇನೆಂದು ಚಕ್ರಬಂಧಸ್ಪರ್ಧೆಯೊಂದಕ್ಕೆ ಹಣತೆತ್ತು ನಷ್ಟಹೊಂದಿ ಪೇಚಾಡುವ ಸೀತೆಯನ್ನು ನೋಡಿ ನಗಲಾರದೇ ಇರುವುದು ಸಾಧ್ಯವಿಲ್ಲ.

'ನಾಮಕರಣ' ಹೆಚ್ಚಾಗಿ ರಾಮು ಸೀತೆಯರ ಗೆಳೆಯರು ಶೇಖರ್ ಸೋನಿಯಾರಿಗೆ ಸಂಬಂಧಿಸಿದ ಕಥೆ. ಸೀಮಂತ ನಡೆದು ಹೆರಿಗೆಗೆಂದು ತವರುಮನೆ ತಲುಪಿದಂದಿನಿಂದ ಹೆರಿಗೆ ವಿಷಯ ಟೆಲಿಗ್ರಾಮ್ ಬರುವ ವರೆಗೆ ಅದೆಷ್ಟು ಸಡಗರ ಈ ಸೀತಾರಾಮರಲ್ಲಿ. ಹೆಸರುಗಳ ಯಾದಿ ತಯಾರಿಸಿದ್ದೂ ತಯಾರಿಸಿದ್ದೇ. ಸೀತೆ ಹೆಣ್ಣು ಮಗುವೆಂದೂ ರಾಮು ಗಂಡೇ ಹೆರುತ್ತಾಳೆಂದೂ ಹೇಳಿದ್ದೇ ಹೇಳಿದ್ದು. ಮಿಠಾಯಿಯ ಆಶೆ ಬಾಯಿಯಲ್ಲಿ ನಿರೂರಿಸದೆಯೂ ಇರಲಿಲ್ಲ. ಹಾಗೆಯೇ ಶೇಖರ್ ಸೋನಿಯಾಗೂ ಆಶೆಗಳ ಗೋಪುರ ಕಳಚಿಬೀಳುವುದೆಂದು ತಿಳಿದಿರಲಿಲ್ಲ, ಆದರೆ ಪಾಪ! ಟೆಲಿಗ್ರಾಮ್ ಬಂದು ವಿಧಿಯ ಬಗೆಯೇ ಬೇರೆಯೆಂದು ಸೂಚಿಸಿತು. ತಾಯಿ ಚೆನ್ನಾಗಿದ್ದಾರೆ; ಮಗು ಸತ್ತು ಹುಟ್ಟಿತೆಂದು ತಿಳಿದ ಎಲ್ಲರೂ ಅಪಾರ

ದುಃಖಕ್ಕೀಡಾಗುತ್ತಾರೆ. ಓದುಗರ ಸಹಾನುಭೂತಿಯನ್ನು ಎಚ್ಚರಗೊಳಿಸದಿರದು ಈ ಕರುಣ ಕಥೆ.

ಐದನೆಯದಾದ 'ತವರುಮನೆ ಬೇಕೆ?' ಕಥೆಯಾದರೂ ಸ್ತ್ರೀಸಹಜ. ಸವತಿ ಮಾತ್ಸರ್ಯವನ್ನು ಕೆರಳಿಸಿ ತಾಯಿಯ ಮನೆಯಲ್ಲೇ ಇನ್ನಷ್ಟುದಿನವಿದ್ದುಕೊಂಡು ತಳವಿಳಿಸುವ ಪತಿಯನ್ನು ಇನ್ನೂ ಬೇಗುದಿಗೀಡುಮಾಡಬೇಕೆಂದಿದ್ದ ಸೀತೆಯು ತಾನೇ ತಾನಾಗಿ ಓಡೋಡಿಬಂದು ಪತಿಯ ರಕ್ಷಣೆಯ ಭಾರವನ್ನು ಹೊರುವಂತೆ ನಟಿಸಿ ತನ್ನನ್ನು ತಾನೇ ರಕ್ಷಿಸಿಕೊಂಡ ಹಾಸ್ಯಭರಿತಚಿತ್ರ.

'ಕಾಣೆಯಾದ ಬಳೆಗಳು' ಸೋನಿಯಾಳವು. ಆಕೆ ತನ್ನ ಅಜಾಗರೂಕತೆಯಿಂದ ಸೀರೆಯನ್ನು ಮಡಿಸಿಡುವಾಗ ಬಳೆಗಳನ್ನೂ (ಚಿನ್ನದವು) ಅದರಲ್ಲಿ ತನಗೇ ಗೊತ್ತಿಲ್ಲ ದಂತೆ ಹಾಕಿ ಮಡಿಸಿಟ್ಟು ಆಮೇಲೆ ಅವು ಸಿಕ್ಕದಿರಲು ಅಲ್ಲಿಯೇ 'ರವಾಲಾಡು' ತಿನ್ನುತ್ತಾ ಕುಳಿತಿದ್ದ ರಾಮುವಿನ ಮೇಲೆ ಕಳುವಿನ ಅಪವಾದ ಹೊರಿಸುತ್ತಾಳೆ. ಆಗ ಕೆರಳಿದ ರಾಮುವನ್ನು ಶಾಂತಗೊಳಿಸಿ ತನ್ನ ಚಾಕಚಕ್ಯತೆಯಿಂದ ಸೀರೆಯ ಮಡಿಕೆಯಲ್ಲಿ ಸೇರಿದ್ದ ಬಳೆಗಳನ್ನು ತೋರಿಸಿ ತೆಗೆದುಕೊಟ್ಟು ಸೋನಿಯಾಳ ಕ್ಷಮಾ ಯಾಚನೆಗೂ, ತನ್ನ ಪತಿಯ ಆದರಪ್ರೇಮಕ್ಕೂ ಪಾತ್ರಳಾಗುತ್ತಾಳೆ. ಸಮಾಧಾನ ಸಾವಧಾನಗಳಿಂದ ಕೂಡಿದ ಮನವೊಂದಿದ್ದರೆ ಒದಗಬಹುದಾದ ವಿರಸವನ್ನು ಸರಸ ವನ್ನಾಗಿ ಮಾಡಿಕೊಳ್ಳಬಹುದೆಂಬುದಕ್ಕೆ ಇದೊಂದು ಒಳ್ಳೆಯ ಉದಾಹರಣೆ.

'ಪ್ರಥಮ ಬಹುಮಾನ' ಇಲ್ಲಿನ ಏಳನೇ ಕಥೆ. 'ಸ್ತ್ರೀ ಬುದ್ಧಿಃ ಪ್ರಳಯಾಂತಕಃ' ಎಂಬುದಕ್ಕೆ ಇದು ಒಂದು ನಮೂನೆ. ಗಂಡ ಬರೆದ ಕಥೆಯನ್ನು ತನ್ನ ಹೆಸರಿನಲ್ಲಿ ಕಳಿಸಿ ಪ್ರಥಮ ಬಹುಮಾನ ಬಂದಾಗ ಹೆಮ್ಮೆಯಿಂದ ನಾಲ್ಕು ಜನರೆದುರಿಗೆ ಜೀಗಿದಾಗ ಆ ಕಥೆ ಬರೆದ ಗಂಡ, ನಿಜದ ಹಕ್ಕುದಾರನ ಸ್ಥಿತಿ ಏನಾಗಬಹುದೆಂಬು ದನ್ನು ಕೇವಲ ಊಹಿಸಿಕೊಳ್ಳಬೇಕು!

ಎಂಟನೇ ಕಥೆ 'ಸೈಕಲ್ ಸವಾರಿ'—ಇಲ್ಲಿ ಹಾಸ್ಯರಸದ ಉತ್ಕರ್ಷವನ್ನೇ ಕಾಣುತ್ತೇವೆ. ಆಫೀಸಿನಿಂದ ಮನೆಗೆ ಹೊರಟ ನಾಯಕ ರಾಜಮಾರ್ಗಕ್ಕೆ ಸೇರು ವಷ್ಟರಲ್ಲೇ 'ತಾಟಕಿ' ಯೊಂದು ಎರಡು ಜಡೆಹಾಕಿ ಬೆಲ್ಲೂ ಬಾರಿಸದೆ ಅಡ್ಡಹಾದು ದುರ್ಘಟನೆ ನಡೆಯಬೇಕಾದಾಗ ಆ ಕತ್ತಲಲ್ಲಿ ನಾಯಕನ ಸಮತೆ ತಪ್ಪದೇನು ಮಾಡೀತು? ಸ್ತ್ರೀಜಾತಿಗೇ ಮನಸಿಗೆ ಬಂದಂತೆ ಆಶೀರ್ವದಿಸುತ್ತಾ ಮುಂದೆ ಆ ಹಳ್ಳಕೊಳ್ಳದ ರಸ್ತೆ (?) ಯಲ್ಲಿ ನಡೆದಿರಲು ಮತ್ತೊಂದು ಜಡೆಯ 'ತಾಟಕಿ' ಅತಿ ವೇಗದಿಂದ ಅಡ್ಡಹಾಯುತ್ತದೆ. ಈ ಸಾರಿ ಮನಸ್ಸು ಗಟ್ಟಿಮಾಡಿ ಆಕೆಯನ್ನು ಹಿಂಬಾಲಿಸಿ ಮತ್ತೊಂದು ತಿರುಗಣೆಯ ಹೊತ್ತಿಗೆ ಢಿಕ್ಕಿ ಹೊಡೆದು ಚರಂಡಿಗೆ ನೂಕಿ

ತಾನೂ ಬಿದ್ದು ಎಚ್ಚರವಾದಾಗ ಆಸ್ಪತ್ರೆಯಲ್ಲಿ ಬ್ಯಾಂಡೇಜು ಬಿಗಿದು ಬಿದ್ದಿರುತ್ತಾನೆ. ಆಗ ಪಕ್ಕದ 'ಸ್ಕ್ರೀನ್' ಹಿಂದಿನಿಂದ 'ಆ ಕಿಲಾಡಿಗೆ ಎಚ್ಚರವಾಯಿತೇ?' ಎಂದು ಕೇಳಿ ಸಿಟ್ಟಿಗೆದ್ದು 'ಕಿಲಾಡಿ ನಿಮ್ಮ ಅಜ್ಜ' ಎಂದು ಆಕೆಯನ್ನು ನೋಡಿದರೆ ಮೂರ್ಛೆ ಬಂದಂತಾಗಿ ಬೀಳುತ್ತಾನೆ. ಅವಳು 'ಸೀತಾ'ರತ್ನ!! ಕಥೆ ಓದಿದಾಗ ಅಯ್ಯೋ ಪಾಪ ಎನಿಸುತ್ತದೆ.

'ಸೀತೆಯ ಹೊಟ್ಟೆನೋವು' ಇದ್ದಕ್ಕಿದ್ದಂತೆ ಪ್ರಾರಂಭವಾಗಿ ಗಂಡನ ಕಾಂಪೌಂಡಿಂಗೆ ಕೂಡ ಜಗ್ಗದೆ, ಡಾಕ್ಟರರ ಚುಚ್ಚು ಮದ್ದುಗಳಿಗೂ ಬೆದರದೆ ತನ್ನನ್ನು ಕರೆದು ಹೋಗಲು ಬಂದಿದ್ದ ಚಿಕ್ಕಮ್ಮ ಊರಿಗೆ ಹೋದಕೂಡಲೆ ಪರಾರಿ ಯಾಯಿತು. ಸ್ತ್ರೀಯ ಕುಶಾಗ್ರಮತಿ ಇದರ ಹಿನ್ನೆಲೆ ನಾಟಕ ಸ್ವಾರಸ್ಯವಾಗಿ ನಡೆಯಿತು. ಚಿಕ್ಕಮ್ಮನಿಂದ ಬಂದ ಟೆಲಿಗ್ರಾಮನ್ನು ಮರೆಸಿ ತಾನೇ ಆಟ ಹೂಡಿ ದ್ದೆಂದು ತಿಳಿಸಿದಾಗ ಆ ಪತಿಯು ಪಾಡೇನಾಗಿರಬೇಕು? ಬಹುಶಃ 'ತವರು ಮನೆ ಬೇಕೇ?' ಕಥೆಯ ನೆನಪಿನ ಹಿನ್ನಲೆ ಸೀತೆಯ ಮನದಲ್ಲಿ ಮೂಡಿತೇನೋ?

ಹತ್ತನೇ ಕಥೆ 'ಗೌರೀಪೂಜೆ' ಸ್ತ್ರೀಯರ ಒಣ ಆಡಂಬರಕ್ಕೆ ಸೊಗಸಾದ ಸಾಕ್ಷಿ. ಗಂಡನನ್ನು ದಂಡಿಸಿ ಗೌರೀಪೂಜೆಗಾಗಿ ವಿಜೃಂಭಣೆಯ ಸಕಲ ಸನ್ನಾಹವನ್ನೇ ನಡೆಸಿದ್ದ ಸೀತೆಯನ್ನು ಪೂಜೆಯ ಹೊತ್ತಿಗೆ ಭಾಗಿಯಾಗಲು ಪುರೋಹಿತ ಕರೆಸಿದಾಗ, "ಪುರೋಹಿತರೇ ಪೂಜೆ ಮುಗಿಸಲಿ . . . ನನಗೆ ಮನೆಯೊಳಗೆ ಪ್ರವೇಶಮಾಡಲಾಗು ವುದಿಲ್ಲ! ಸ್ತ್ರೀಜನ್ಮಕ್ಕೆ ಬಂದ ಶಾಪ! ಇದು ಇನ್ನೊಂದು ದಿನ ತಡೆದುಬಂದಿದ್ದರೆ ಏನಾಗುತ್ತಿತ್ತು" ಎಂದು ಗೋಳಾಡಿಕೊಂಡು ನಾಯಕನ "ಸ್ವರ್ಣಗೌರಿ (ಸೀತೆ) ನೆರೆಮನೆಯ ಜಗುಲಿಯ ಒಂದು ಮೂಲೆಯಲ್ಲಿ ಕುಳಿತಿದ್ದಾಳೆ. ಏನು ವಿಧಿವಿಲಾಸ?"

ಕಡೆಯ ಕಥೆ 'ಮನೆಯೊಳಗಿನ ಮಹಾಯುದ್ಧ.' ಸಿನಿಮಾಕ್ಕೆ ಹೊರಟ ಸೀತೆಯನ್ನು ಹಿಡಿದು ಕೊಟಡಿಗೆ ತಳ್ಳಿ ಬಾಗಿಲೆಳೆದುಕೊಂಡ ರಾಮು ಮೂರನೇ ಮಹಾ ಯುದ್ಧಕ್ಕಿಳಿದ ಶತ್ರುರಾಷ್ಟ್ರಗಳ ಸ್ಥಿತಿಯಲ್ಲಿ ಬೀಳುತ್ತಾನೆ. ಮನುಧರ್ಮ ಶಾಸ್ತ್ರಾದಿಗಳ ನೆರವಿನಿಂದ ಕೂಡ ಪರಿಸ್ಥಿತಿ ಹದಕ್ಕೆ ಬರಲಿಲ್ಲ. ಮೀಸೆ ಹೊತ್ತ ಗಂಡ ಮಣಿಯಲಾರ. ಅಭಿಮಾನದ ಹೆಣ್ಣು ಕೂಡ ಜಗ್ಗಲಿಲ್ಲ. ಕಡೆಗೆ ಗುರುವಿಗೇ ಉಪದೇಶ ಹಿಂತಿರುಗಿದ ಪರಿಸ್ಥಿತಿಯನ್ನು ಸಮಾಧಾನಗೊಳಿಸಲೆಳಸಿದ ಶೇಖರನೇ ಬೇಸ್ತುಬೀಳುವಂತಾಗುತ್ತದೆ ತನ್ನ ಧ್ಯೇಯದಲ್ಲಿ ಅವನಿಗೆ ಸಫಲತೆ ದೊರೆತೂ ಕೂಡ. ಸೀತೆ ಶೇಖರನ ಮನೆಗೆ ಹೋಗುತ್ತಾಳೆ ಗಂಡನನ್ನು ಹುಡುಕಿಕೊಂಡು. ಹೊತ್ತಾದರೂ ಮನೆಗೆ ಬಾರದ ಗಂಡನ ಮೇಲಿನ ಮುನಿಸಿಳಿದು ಪ್ರೇಮಜಾಗ್ರತರಾಗಿ ಗಂಡನನ್ನು ನೋಡಲು ಹೊರಟ ಸೀತೆಗೆ ಸೋನಿಯಾಳ ಭಯಂಕರ ಉಪದೇಶವಾಗುತ್ತಿದ್ದುದು

ತಿಳಿದು ತನ್ನನ್ನು ತಾನೇ ಶೇಖರನ ಕೊಟಡಿಯಿಂದ ಎಲ್ಲವನ್ನೂ ಕೇಳಿ, ಕುರ್ಚಿಗೆ ಜಿಗಿದುಕೊಂಡು ಬಾಯಿಗೆ ಬಟ್ಟೆ ತುರುಕಿಕೊಂಡು ನರಳುತ್ತಾ ಸೀತೆಯ ಗಮನ ಸೆಳೆದು ಶೇಖರ ತನ್ನನ್ನು ಕಾಳಿಗೆ ಬಲಿಕೊಡಲು ಕಟ್ಟಿ ಬಾಳೆಹಣ್ಣು ತರಲು ಹೋದ ನೆಂದು ಹೇಳಿ ಸ್ತ್ರೀ ಸಹಜ ಚುರುಕುಬುದ್ಧಿಯೂ ಮುಗ್ಗರಿಸಿಬೀಳುವಂತೆ ಮಾಡಿ ಪರಿಸ್ಥಿತಿಯ ಭಯಾನಕತೆಯಿಂದ ತಾನು ಪಾರಾಗಿ ಕೌಲುಮಾಡಿಕೊಂಡು ಗೆಳೆಯರನ್ನು ಮಂಕರನ್ನಾಗಿ ಮಾಡಿ ತನ್ನ ಸೀತಾರತ್ನದೊಂದಿಗೆ ಮನೆಗೆ ಸಾಗುವ ನಾಯಕನ ಕುಶಾಗ್ರಮತಿಯನ್ನು ಸ್ಮರಣೆಗೆ ತಂದರೆ ನಕ್ಕುನಕ್ಕು ಹೊಟ್ಟೆ ಹುಣ್ಣಾಗುತ್ತದೆ.

ಹೀಗೆ ಹಾಸ್ಯಗಣಿಗಳಂತಿರುವ ಈ ಕಥೆಗಳನ್ನು ಓದಿದಂತೆಲ್ಲಾ ಓದುಗನಿಗೂ ತಾನೂ ನಾಯಕನಾಗಬಾರದೇ? ಎನ್ನಿಸುತ್ತದೆ. ಆದರೆ ಪ್ರತಿ ಓದುಗನ ನಾಯಕಿಯೂ ಸೀತೆಯಂತೆಯೇ 'ರತ್ನ'ವಾಗಿರಬೇಕಲ್ಲ!

ಹಾಸ್ಯಾತ್ಮಕ ದೃಷ್ಟಿ ಎಲ್ಲಿ ಬೆಳೆದುಬರುತ್ತದೆಯೋ ಅಲ್ಲಿ ಜೀವನದ ಸಮಗ್ರ ದರ್ಶನವೂ ಸುಗಮವಾಗಬಲ್ಲುದು. ತಿಳಿಯಾದ ವ್ಯಂಗ್ಯವೂ ಅದಕ್ಕೆ ಪ್ರೇಷಕ.

ಇಂಥವೇ ಇನ್ನೂ ಅನೇಕ ಸಂಕಲನಗಳು ಘಾಟೆಯವರ 'ಘಾಟಿ' ಲೇಖನಿ ಯಿಂದ ದೇವಗಂಗೆಯ ಪ್ರವಾಹದಂತೆ ಅನವರತ ಪ್ರವಹಿಸಲಿ. ಅವುಗಳಿಂದ 'ಆನಂದ'ರು ಹೇಳುವಂತೆ ಸಾಹಿತ್ಯಕ್ಷೇತ್ರದಲ್ಲೂ ಕಾಂಪೌಂಡಿಂಗ್ ನಡೆದು ಜೀವನದ ವಕ್ರಪಥಗಾಮಿಯಾದ ಓದುಗರೆಲ್ಲರಿಗೂ ಒಂದು ದಿವ್ಯಾನಂದ (ಕಾವ್ಯಾನಂದ ಬ್ರಹ್ಮಾನಂದಸಹೋದರನಂತೆ) ಸಿಗಲಿ. ಅದರಿಂದ ವಾಸ್ತವಿಕತೆಯ ಕಟುತೆ ನೀಗಿ ರಸದೂಟ ಲಭಿಸುತ್ತಿರಲು ಓದುಗರೆಲ್ಲಾ 'ರಾಮು-ಸೀತಾರತ್ನ'ರಿಗೆ ಚಿರಋಣಿಗಳಾಗ ಬಹುದಲ್ಲವೇ?

ಮಾ. ದೇವೇಗೌಡ.

*
* *

ತೋಳಬಂದಿ—ಲೇಖಕರು: 'ಸಿಸು'; ಪ್ರಕಾಶಕರು: ಭಾರತೀಯ ಸಾಹಿತ್ಯ ಭಾಂಡಾರ, ಯರನಾಳ; ಪುಟಗಳು ೫೫; ಬೆಲೆ, ೧೨ ಆಣೆ.

ಇದು 'ಸಿಸು' ಅವರ ಪ್ರೇಮಗೀತೆಗಳ ಸಂಗ್ರಹ; ಇವರ ಮೊಟ್ಟಮೊದ ಲನೆಯ ಕೃತಿ. ಇದರಲ್ಲಿ ೩೬ ಗೀತೆಗಳಿವೆ. ಯುವಕ ಕವಿಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಪ್ರಣಯದ ಸೆಳೆತ ಇವರ ಕವಿತೆಗಳಲ್ಲಿ ವಿಶೇಷವಾಗಿ ಕಂಡುಬರುತ್ತದೆ. ಭಾವುಕ ಕವಿಯು ಯೌವನದ ಕಾವಿನಲ್ಲಿ ಮನತಣಿಯೆ ಹಾಡಿಕೊಂಡ ಪ್ರಣಯಗೀತೆ ಗಳಿವು. ಸಹಜಸೌಂದರ್ಯದಿಂದ ಪ್ರೇಮಮಾಧುರ್ಯದಿಂದ ಕೂಡಿ ಈ ಕವಿತೆಗಳು ಓದುಗರ, ವಿಶೇಷವಾಗಿ ಯುವಕರ ಮನವನ್ನು ಸೆಳೆಯುವಂತಹವು.

ಕವಿಯು 'ಸರಸತಿಯು ವರಕುಸುಮಗಳನ್ನು' ಸುರಿಸುತಿರೆ ಅವನ್ನೆಲ್ಲಾ 'ಕುಡಿ ನೋಟದ ಮಿಂಚಿನೆಳೆ ದಾರದಲ್ಲಿ ಹೆಣೆದು' ಸರಸತಿಯ ಕೊರಳಲ್ಲಿ ಹಾಕಿದ್ದಾರೆ. ಪ್ರೇಮವೇ ಪ್ರೇರಣೆಯಾಗಿ ಕವಿಯನ್ನು ಪ್ರೇಮಾನಂದಕ್ಕೆ ಎಳೆದೊಯ್ದಾಗ ಈ ಕವಿತೆಗಳು ಹೊರಹೊಮ್ಮಿವೆ. 'ತಡೆಯದ ತಾರುಣ್ಯ ಬರಲು' ಪ್ರೇಮ 'ಒಡೆಯದ ಒಗಟಾಗುತ್ತದೆ,' ಇಲ್ಲಿಯ ಕವಿತೆಗಳು ಶೃಂಗಾರರಸದಿಂದ ಕೂಡಿದ್ದರೂ

ಎಚ್ಚರಿಕೆ ಎಲೆ ಬಾಲೆ,
ಮಣ್ಣಿನ ಬಿಂದಿಗೆಯಿದೇನು ಮೆಚ್ಚಿಕೆ ಹೇಳು,
ಕೈಜಾರಿ ಬಿದ್ದರೆ ತೀರಿತು ಎಂದು ಹೇಳಿ

'ಬಿಂದಿಗೆ ಬಾಲೆಗೆ' ತಾತ್ವಿಕವಾಗಿ ಹೇಳಿದ ಮಾತೂ ಇದೆ.

ಮೊತ್ತಮೊದಲನೆಯ ಪ್ರಯತ್ನದಲ್ಲಿಯೆ ಕವಿ ತನ್ನ ಪ್ರತಿಭೆಯನ್ನು ತೋರಿರುವ ಇವರಿಂದ ಉತ್ತಮ ಕಾವ್ಯಕೃತಿಗಳನ್ನು ಪಡೆಯುಬಹುದೆಂಬ ಆಸೆಯನ್ನಿಟ್ಟುಕೊಳ್ಳಬಹುದು.

*
* *

ಸುಗಣ—ಬರೆದವರು : ಡಿ. ಆರ್. ವೆಂಕೋಬರಾವ್ ; ಅಧಿಕೃತ ಮಾರಾಟಗಾರರು : ಉಷಾ ಸಾಹಿತ್ಯಮಾಲೆ, ಮೈಸೂರು ; ಪುಟಗಳು ೧೫೫ ; ಬೆಲೆ, ಒಂದು ರೂಪಾಯಿ.

ಸಾಹಿತ್ಯಕ್ಷೇತ್ರದಲ್ಲಿ ಇದೇ ಕಾಲಿಕ್ಕಿರುವ ಡಿ. ಆರ್. ವೆಂಕೋಬರಾವ್ ಅವರ ಮೊದಲ ಕಾದಂಬರಿ. ಇವರು ಸಾಹಸಮಾಡಿ ಈ ಕಾದಂಬರಿಯನ್ನು ಹೊರಗೆಡಹಿದ್ದಾರೆ. ಈ ಕಾದಂಬರಿಯಲ್ಲಿ ಭಾರತೀಯ ಸಂಸ್ಕೃತಿಯ ಮತ್ತು ಭಾರತೀಯ ಸಾಮಾಜಿಕ ನಿಯಮಗಳ ಮಹತ್ವನ್ನು ತೋರಿಸುವ ಪ್ರಯತ್ನ ಮಾಡಲಾಗಿದೆ. ವಿದ್ಯಾವಂತ ಜನರಲ್ಲಿ ನಮ್ಮಲ್ಲಿ ನಡೆದುಬಂದಿರುವ ಆಚಾರವಿಚಾರಗಳ ಬಗ್ಗೆ ಒಂದು ತರಹ ಧೋರಣೆ ಬೆಳೆದು ಪಾಶ್ಚಾತ್ಯ ನಾಗರಿಕತೆಗೆ ವಾಲುತ್ತಿರುವಾಗ, ನಮ್ಮ ಸಂಸ್ಕೃತಿಯ ಮಹತ್ವವನ್ನು ತೋರಿಸಲು ಈ ಕಾದಂಬರಿ ಬರೆದಿದ್ದಾರೆ.

ಆಧುನಿಕ ವಿಲಾಸಮಯ ಜೀವನದಲ್ಲಿ ಸುಗುಣ ತಂದೆ ಗಿರಿರಾಯರಂತೆ ಮುನ್ನಡೆಯುತ್ತಿರುವಾಗ ತಾಯಿ ರಾಜೀಬಾಯಿಯು ಮಗಳನ್ನು ತಿದ್ದಲು ಯತ್ನಿಸುತ್ತಾಳೆ. ಅವಳಿಗೆ ತಾಯಿಯ ಒತ್ತಾಯದಂತೆ ಬೇಗ ಮದುವೆಯೂ ಆಗುತ್ತದೆ. ಆದರೆ ದುರದೃಷ್ಟದಿಂದ ಕೆಲವೇ ದಿನಗಳಲ್ಲಿ ಸುಗುಣ ತಾಯಿಯಾದವಳು ವಿಧವೆಯಾಗುತ್ತಾಳೆ. ಅತ್ತ ಗಿರಿರಾಯರೂ ದಿವಾಳಿಯಾಗುತ್ತಾರೆ.

ಅತ್ತ ಅವಳ ಗೆಳತಿ ರಂಜನನ ಮದುವೆಯಾಗಿ ಗಂಡನ ದುಶ್ಚರಿತ್ರೆಯನ್ನರಿತು ಗಂಡನನ್ನು ಬಿಟ್ಟು ಬರುತ್ತಾಳೆ. ಈರ್ವರೂ ಓದಿದ ತರುಣಿಯರು. ಭಾರತೀಯ

ಸಾಮಾಜಿಕ ನೀತಿನಿಯಮಗಳ ಬಗ್ಗೆ ಆಸ್ಥೆ ತಪ್ಪಿ ತಮ್ಮ ಜೀವನವನ್ನು ಮುಂದೆ ಸುಖಮಯವಾಗಿ ಏತಕ್ಕೆ ಮಾಡಿಕೊಳ್ಳಬಾರದು ಎಂದು ಯೋಚಿಸತೊಡಗುತ್ತಾರೆ. ಆ ವೇಳೆಯಲ್ಲಿ ರಾಯಾಚಾರ್ರು ಅವರ ಭಾರತೀಯ ಸಂಸ್ಕೃತಿಯ ಮತ್ತು ವಿವಾಹ ವಿಧಿಗಳ ಮಹತ್ವವನ್ನು ತಿಳಿಯಹೇಳಿ ಅವರ ಸಂದೇಹವನ್ನು ದೂರಮಾಡುತ್ತಾರೆ.

ಸುಗುಣ ತ್ಯಾಗಶೀಲದಿಂದ, ಪರೋಪಕಾರಿಯಾಗಿ ತನ್ನ ವಿಧವಾ ಜೀವನವನ್ನೇ ಸುಖಮಯವನ್ನಾಗಿ ಮಾಡಿಕೊಳ್ಳುತ್ತಾಳೆ. ಅನಂತರ ರಂಜನಳ ಒಡೆದುಹೋದ ಸಂಸಾರವನ್ನು ಒಂದುಗೂಡಿಸಿ ಅವಳನ್ನು ಸುಖಿಯನ್ನಾಗಿ ಮಾಡುತ್ತಾಳೆ.

ಈ ಕಾದಂಬರಿಯಲ್ಲಿ ಭಾರತೀಯ ಆದರ್ಶವಾದವನ್ನು ಎತ್ತಿ ಹಿಡಿಯುವ ಪ್ರಯತ್ನ ಮಾಡಿದ್ದಾರೆ. ಆದರೆ ಕಾದಂಬರಿಯಲ್ಲಿ ಅದು ಚೆನ್ನಾಗಿ ಮೂಡಿಬಂದಿಲ್ಲ. ಕಾದಂಬರಿಯಲ್ಲಿ ಅಪರಿಪಕ್ವತೆಯಿಂದಾಗಿ ದೋಷಗಳು ಮೂಡಿವೆ. ಈ ಕಾದಂಬರಿಯನ್ನು ಚೆನ್ನಾಗಿದೆ ಎಂದು ಹೇಳಲಾಗುವುದಿಲ್ಲ. ಆದರೆ ಇದು ಮೊದಲ ಪ್ರಯತ್ನವಾದುದರಿಂದ ಲೇಖಕರು ಅಭ್ಯಾಸಮಾಡಿದರೆ ಒಳ್ಳೆಯ ಕೃತಿಗಳನ್ನು ನೀಡಿಯಾರೆಂಬ ಭರವಸೆ ಇಟ್ಟುಕೊಳ್ಳಬಹುದು.

ಯ. ಹನುಮಯ್ಯ

ಸಂಪಾದಕೀಯ

ಕಂಬನಿ

ಇದೇ ಮನ್ಮಥಸಂವತ್ಸರದ ಆಷಾಢ ಶುದ್ಧ ಪೂರ್ಣಿಮೆಯಿಂದ ಈಚೆಗೆ ಮೂವರು ಹಿರಿಯ ಕನ್ನಡ ಬಂಧುಗಳನ್ನು ಕಳೆದುಕೊಂಡು ನಮ್ಮ ನಾಡು ಅಪಾರವಾದ ದುಃಖವನ್ನು ಅನುಭವಿಸಿದೆ. ಧರ್ಮಸ್ಥಳದ ಶ್ರೀ ಮಂಜಯ್ಯ ಹೆಗ್ಗಡೆಯವರು, ಬೆಂಗಳೂರಿನ ಡಾ॥ ಎನ್. ಎಸ್. ನಾರಾಯಣಶಾಸ್ತ್ರಿಗಳವರು ಮತ್ತು ಶ್ರೀ ಎಸ್. ಗರಳಪುರಿ ಶಾಸ್ತ್ರಿಗಳವರು ಈ ಮಹನೀಯರ ನಿಧನದಿಂದಾದ ದುಃಖದಲ್ಲಿ ಪ್ರಬುದ್ಧ ಕರ್ಣಾಟಕವೂ ಭಾಗಿಯಾಗಿದೆ.

ಧರ್ಮಸ್ಥಳದ ಮಂಜಯ್ಯ ಹೆಗ್ಗಡೆಯವರು ದೊಡ್ಡ ಮಹಾನುಭಾವರು, ಭಗವದ್ಭಕ್ತರು, ಧರ್ಮನಿಷ್ಠರು, ಸಜ್ಜನವರೇಣ್ಯರು, ಸ್ವಯಂಕಲಾವಿದರು ಮತ್ತು ಕಲಾಪಕ್ಷಪಾತಿಗಳು. ತಮ್ಮ ನಡೆಯಿಂದ ನುಡಿಯಿಂದ ಧರ್ಮಸ್ಥಳದ ಮಂಜುನಾಥ ಸ್ವಾಮಿಯ ಕೃಪೆಗೆ ಪಾತ್ರರಾಗಿ ಆ ದೈವದ ಅಪ್ಪಣೆ ಹರಿದುಬರುವ ಪ್ರಣಾಳಿಕೆ ಯಾಗಿ ಲಕ್ಷೋಪಲಕ್ಷ ಜನ ಯಾತ್ರಿಕರ ಮನೋಭೀಷ್ಟಗಳನ್ನು ನೆರವೇರಿಸಿ ಕೊಡುವವರಾಗಿದ್ದರು. ವ್ಯವಹಾರಗಳನ್ನು ಬಗೆಹರಿಸುವ ನ್ಯಾಯಮೂರ್ತಿಗಳಾ ಗಿದ್ದರು. ಜೊತೆಗೆ ವರ್ಷವರ್ಷವೂ ಧರ್ಮ ಮತ್ತು ಸಾಹಿತ್ಯಕ್ಕೆ ಸಂಬಂಧಪಟ್ಟ ಉಪನ್ಯಾಸಮಾಲೆಗಳನ್ನು ಏರ್ಪಡಿಸಿ ಊರೂರಿನ ವಿದ್ವಾಂಸರನ್ನು ಕರೆಯಿಸಿ ಅವರನ್ನು ಗೌರವಿಸುವ ಪದ್ಧತಿಯನ್ನು ಏರ್ಪಡಿಸಿದ್ದರು. ಸರ್ವಧರ್ಮ ಸಮನ್ವಯದ ಆಚಾರ್ಯ ರಂತೆ ಇದ್ದು ಎಲ್ಲ ಧರ್ಮಗಳ ಉಪದೇಶಸಾರವೂ ಜನತೆಗೆ ದೊರೆಯುವಂತಹ ಜ್ಞಾನಸಮಾರಾಧನೆ ತಮ್ಮ ನೇತೃತ್ವದಲ್ಲಿ ನಡೆಯುವಂತೆ ಸರ್ವಧರ್ಮಗಳ ಸಮ್ಮೇಳನ ಗಳನ್ನು ಶ್ರೀ ಹೆಗ್ಗಡೆಯವರು ನಡಸುತ್ತಿದ್ದರು. ಇದರ ಜೊತೆಗೆ ತಾವು ಸ್ಥಳದ ಪೀಠಾಧಿಕಾರಿಗಳಾದಂದಿನಿಂದ ಆ ಸ್ಥಳದ ಕಗ್ಗಾಡನ್ನು ಕಡಿಯಿಸಿ ಯಾತ್ರಿಕರ ಸೌಕರ್ಯಕ್ಕಾಗಿ, ಬಿಡಾರಮಂದಿರ, ನೀರು, ದೀಪ, ಉಪವನ ಮುಂತಾದವುಗಳನ್ನು ಏರ್ಪಡಿಸಿ ಕ್ಷೇತ್ರವನ್ನು ಆಕರ್ಷಣೀಯವಾದ ರೀತಿಯಲ್ಲಿ ಚಂದಗೊಳಿಸಿದ್ದರು. ಶ್ರೀ ಹೆಗ್ಗಡೆಯವರು ಒಳ್ಳೆಯ ಚಿತ್ರಕಲಾವಿದರಾಗಿ ಖ್ಯಾತಿಪಡೆದಿದ್ದಾರೆ. ಅವರು ರಚಿಸಿದ ಸುಂದರವೂ ಪ್ರತಿಭಾಪೂರ್ಣವೂ ಆದ ದೊಡ್ಡ ದೊಡ್ಡ ಚಿತ್ರಗಳು ಧರ್ಮ ಸ್ಥಳದ ಹೆಗ್ಗಡೆಯವರ ಮಂದಿರದಲ್ಲಿ ಯಾತ್ರಿಕರ ಕಣ್ಮನಗಳನ್ನು ಇಂದಿಗೂ ಸೂರೆ ಗೊಳ್ಳುತ್ತಿವೆ. ಇಂತಹ ಧರ್ಮಾತ್ಮರೂ ಭಗವದ್ಭಕ್ತರೂ ಉದಾರಚರಿತರೂ ಆದ

ಮಹನೀಯರು ತಮ್ಮ ವಿಪುಳಪುಣ್ಯಕರ್ಮದಿಂದ ಅರ್ಹತ ಸಾನ್ನಿಧ್ಯವನ್ನು ಸಾರಿದರು. ಈ ಮಹನೀಯರ ಜೀವನ ನಮ್ಮ ಜನಕ್ಕೆ ಆದರ್ಶವಾಗಿ ಎಲ್ಲ ಕಾಲಕ್ಕೂ ಉಳಿದು ಬರಲಿ. ಈ ಮಹನೀಯರ ಶಾಂತವೂ ಸಾತ್ವಿಕವೂ ಧರ್ಮನಿಷ್ಠವೂ ಆದ ಬಾಳುವೆಯ ನೆನವಿನಿಂದ ನಮ್ಮ ಜನ ಎಲ್ಲಕಾಲಕ್ಕೂ ನೆಮ್ಮದಿ ಪಡೆಯಲಿ ಎಂದು ಆಶಿಸುತ್ತೇವೆ.

ಶ್ರೀ ಎನ್. ಎಸ್. ನಾರಾಯಣಶಾಸ್ತ್ರಿಗಳವರು ಮನಃಶಾಸ್ತ್ರದಲ್ಲಿ ಬಹು ದೊಡ್ಡ ವಿದ್ವಾಂಸರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಬಹುಕಾಲ ಮನಃಶಾಸ್ತ್ರದ ಅಧ್ಯಾಪಕರಾಗಿ ಉತ್ತಮ ರೀತಿಯಲ್ಲಿ ಕೆಲಸಮಾಡಿದ ಮಹನೀಯರು. ಇವರ ಪ್ರತಿಭೆ ಪಾಂಡಿತ್ಯಗಳನ್ನು ಕಂಡು ಕೇಂದ್ರ ಸರಕಾರ ಇವರನ್ನು ತನ್ನ ಸಂಶೋಧನಶಾಲೆಯಲ್ಲಿ ಮೇಲ್ಮಟ್ಟದ ಸಂಶೋಧಕರನ್ನಾಗಿ ನೇಮಿಸಿಕೊಂಡಿತು. ಶ್ರೀಯುತರು ಮನಃಶಾಸ್ತ್ರ ದಲ್ಲಿ ಹೇಗೋ ಹಾಗೆ ಕನ್ನಡ ನಾಟಕ ರಂಗಭೂಮಿ ಮತ್ತು ಚಲನಚಿತ್ರ ಪ್ರಪಂಚ ಗಳನ್ನೂ ಕೂಡ ಬೆಳಗಿ ಖ್ಯಾತನಾಮರಾಗಿದ್ದಾರೆ. ಸ್ವತಃ ಕನ್ನಡದಲ್ಲಿ ಅನೇಕ ನಾಟಕ ಗಳನ್ನೂ ಗ್ರಂಥಗಳನ್ನೂ ಬರೆದಿದ್ದಾರೆ. ಅಶ್ವತ್ಥಾಮನ್ ಪಾರಸಿಕರು ಗದಾಯುದ್ಧ ಆಷಾಢಭೂತಿ ಸಾವಿನ ಸಮಸ್ಯೆ ಪಂಚರಾತ್ರ ಮುಂತಾದ ನಾಟಕಗಳನ್ನು ರಂಗದ ಮೇಲೆ ಪ್ರದರ್ಶಿಸಿದಾಗ ಶ್ರೀಯುತರು ಪ್ರಧಾನ ಭೂಮಿಕೆಗಳನ್ನು ಧರಿಸಿ ಭಾವಪೂರ್ಣ ವಾಗಿ ಅಭಿನಯಿಸಿ ತಮ್ಮ ಕಲಾಕೌಶಲವನ್ನು ಮೆರೆದಿದ್ದಾರೆ. ವಸಂತಸೇನೆ ಎಂಬ ಕನ್ನಡಚಿತ್ರದಲ್ಲಿ ಶ್ರೀ ಶಾಸ್ತ್ರಿಗಳವರು ಪ್ರದರ್ಶಿಸಿದ ಅಭಿನಯವನ್ನು ಇಂದಿಗೂ ಜನ ನೆನೆಯುತ್ತಿದ್ದಾರೆ. ಇಂತಹ ಮನಃಶಾಸ್ತ್ರಜ್ಞರ, ನಾಟಕ ಕರ್ತರ, ನಟರ ನಿಧನದಿಂದ ನಾಡಿಗೂ ನುಡಿಗೂ ತುಂಬಲಾರದ ನಷ್ಟ ಆಗಿದೆ.

ಶ್ರೀ ಎಸ್. ಗರಳಪುರಿ ಶಾಸ್ತ್ರಿಗಳವರು ಇನ್ನೊಬ್ಬ ದೊಡ್ಡ ವಿದ್ವಾಂಸರು. ರಸಾಯನಶಾಸ್ತ್ರವನ್ನು ತೆಗೆದುಕೊಂಡು ಓದಿ ಪದವೀಧರರಾಗಿ ವಿದೇಶಗಳ ಪ್ರವಾಸ ದಿಂದ ಜ್ಞಾನಾರ್ಜನೆಯನ್ನು ಹೆಚ್ಚಿಸಿಕೊಂಡು ಬಂದು ಈ ಮಹನೀಯರು ನಮ್ಮ ಸರಕಾರದ ಕೈಗಾರಿಕೆ ಇಲಾಖೆಯಲ್ಲಿ ಅಧಿಕಾರಿಗಳಾಗಿ ಸರಕಾರಕ್ಕೆ ಒಳ್ಳೆಯ ಹೆಸರು ಗಳಿಸಿಕೊಟ್ಟರು. ತಮ್ಮ ಉದ್ಯೋಗದ ಕ್ಷೇತ್ರದಲ್ಲಿ ಬುದ್ಧಿಕೌಶಲ ದಕ್ಷತೆಗಳನ್ನು ಮೆರೆದರು. ಇದರ ಜೊತೆಗೆ ವಂಶಪರಂಪರೆಯಿಂದ ಬಂದ ಕಲಾಭಿರುಚಿ ಶ್ರೀಯುತರಲ್ಲಿ ಸಣ್ಣ ಕಥೆ ನಾಟಕರಚನೆಗಳ ಮೂಲಕ ಪ್ರಕಟವಾಯಿತು. ಪ್ರಬುದ್ಧ ಕರ್ಣಾಟಕದ ಆರಂಭದ ದೆಸೆಯಲ್ಲಿ ಇವರ ಕಥೆಗಳು ಈ ಪತ್ರಿಕೆಯಲ್ಲಿ ಅಚ್ಚಾಗಿವೆ. 'ಆರ್ಯಕ' 'ಸೂತ್ರದ ಬೊಂಬೆ' 'ಲಿಯೋನಾರ್' ಮುಂತಾದ ಪರಿವರ್ತಿತ ನಾಟಕಗಳಿಂದ ನಮ್ಮ ಸಾರಸ್ವತ ಸಂಪತ್ತನ್ನು ಶ್ರೀಯುತರು ಹೆಚ್ಚಿಸಿಕೊಟ್ಟಿದ್ದಾರೆ. ಇದರ ಜೊತೆಗೆ ಶ್ರೀ ಶಾಸ್ತ್ರಿಗಳವರು ಅನೇಕ ಯೋಗ್ಯಸಾಹಿತಿಗಳಿಗೆ ನಾನಾರೀತಿಯಲ್ಲಿ ನೆರವು ನೀಡಿದ್ದಾರೆ.

ಈ ಸಂದರ್ಭದಲ್ಲಿ ವ್ಯಕ್ತವಾದ ಇವರ ವಿದ್ವಜ್ಜನ ಪಕ್ಷಪಾತ, ಕಲಾಪ್ರೇಮ, ಸ್ನೇಹ, ಔದಾರ್ಯ ಇವು ಆದರ್ಶಪ್ರಾಯವಾಗಿವೆ.

ಈ ಮೂವರು ಮಹನೀಯರ ಬದುಕೂ ನಮಗೆ ಆದರ್ಶವಾಗಲಿ, ಇವರ ಅಗಲಿಕೆಯ ನೋವನ್ನನುಭವಿಸುವ ಶಕ್ತಿಯನ್ನು ಭಗವಂತ ಇವರ ಬಂಧುಮಿತ್ರರಿಗೆ ಅನುಗ್ರಹಿಸಲಿ. ಈ ಪುಣ್ಯಾತ್ಮರ ಜೀವಕ್ಕೆ ಸದ್ಗತಿ ದೊರೆಯಲಿ.

ಕನ್ನಡವು ಸಿಂಹಾಸನವೇರುತ್ತಿದೆ

ಮುಂದಿನ ವರ್ಷದಿಂದ ವಿಶ್ವವಿದ್ಯಾನಿಲಯದ ಮೊದಲನೆಯ ತರಗತಿಯಲ್ಲಿ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ದೊರಕಬೇಕೆಂದು ವಿಶ್ವವಿದ್ಯಾನಿಲಯದ ಕೌನ್ಸಿಲ್ ನಿರ್ಧರಿಸಿರುವುದು ಶ್ಲಾಘನೀಯವಾದ ವಿಷಯ. ಕನ್ನಡ ನುಡಿ ತನ್ನ ನಾಡಿನಲ್ಲಿ ಸಿಂಹಾಸನವೇರುವ ಶುಭಮುಹೂರ್ತ ಬಹುಬೇಗ ಬರಲಿರುವುದನ್ನು ಕಾಣುವ ಕನ್ನಡಿಗರ ಹೃದಯ ಸಂತಸದಿಂದ ತುಂಬುವಂತಾಗಿದೆ. ಇಂತಹ ಶುಭೋದಯ ಕಾಲದಲ್ಲಿ ಕನ್ನಡವು ಪ್ರಥಮಭಾಷೆಯಾಗಲೆಂದು ಕನ್ನಡಿಗರು ಹಾರೈಸುತ್ತಾರೆ. ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟನಶಾಖೆ ವೈಜ್ಞಾನಿಕ ಹಾಗೂ ಇತರ ವಿಷಯಗಳ ಮೇಲೆ ಪಠ್ಯಪುಸ್ತಕಗಳನ್ನು ಬರೆಯಿಸಿ ಪ್ರಕಟಿಸುವ ಸ್ತುತ್ಯಾರ್ಹವಾದ ಕಾರ್ಯದಲ್ಲಿ ತ್ವರಿತಗಮನದಿಂದ ಮುನ್ನಡೆಯುತ್ತಿದೆ. ಪರಭಾಷೆಯಿಂದ ವಿದ್ಯಾರ್ಜನೆ ಮಾಡುವ ಕೃತಕ ವಿಧಾನ ಬೇಗನೆ ತೊಲಗಿ ದೇಶಭಾಷೆಯಲ್ಲಿಯೆ ವಿದ್ಯಾಭ್ಯಾಸ ಮಾಡುವ ಸಹಜವೂ ಪುಷ್ಟಿಕರವೂ ಆದ ಮಾರ್ಗದಿಂದ ಜನತೆ ಸರ್ವತೋಮುಖವಾದ ಪ್ರಗತಿಯನ್ನು ಪಡೆಯುವಂತಾಗುವುದು ನಾಡಿನ ಅಭ್ಯುದಯದ ಸೂಚನೆಯಾಗಿದೆ.

ಪ್ರಾಂತಗಳ ಪುನರ್ವಿಂಗಡಣೆ

ಪ್ರಾಂತಗಳ ಪುನರ್ವಿಂಗಡಣ ಸಮಿತಿಯ ಸಲಹೆಗಳಿಂದ ದೇಶದ ಕೆಲವೆಡೆಗಳಲ್ಲಿ ಅಸಮಾಧಾನವಿದ್ದರೂ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಹಾಗೂ ಆಯಾ ಪ್ರಾಂತಗಳ ಮುಖ್ಯಮಂತ್ರಿಗಳೂ ಜನನಾಯಕರೂ ಬಹುಬೇಗನೆ ಒಮ್ಮುಖವಾದ ಅಭಿಪ್ರಾಯಕ್ಕೆ ಬರುವರೆಂಬ ಭರವಸೆ ಈಚೆಗೆ ಕಾಣುತ್ತಿದೆ. ಈ ಸಂದರ್ಭದಲ್ಲಿ "ಜನರು ಒಬ್ಬರನ್ನೊಬ್ಬರು ಅರಿತುಕೊಂಡು ಸಹಕರಿಸುವುದರಿಂದ ಮಾತ್ರ ನಮ್ಮ ಸಮಸ್ಯೆಗಳು ಪರಿಹಾರವಾಗಿ ನಮ್ಮ ಆಶೋತ್ತರಗಳು ಈಡೇರುವುವು" ಎಂಬ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಕೆ. ಹನುಮಂತಯ್ಯನವರ ಹೇಳಿಕೆಯನ್ನು ಇಲ್ಲಿ ಜ್ಞಾಪಿಸಬಹುದು. ನಾಡಿನ ಹಿತವನ್ನೂ ಜನರ ಸುಖವನ್ನೂ ಸಂರಕ್ಷಿಸುವ ಸಂಘಟಿತ ಅಭಿಪ್ರಾಯವು ಮೂಡಿ ಶಾಂತರೀತಿಯಲ್ಲಿ ಪ್ರಾಂತಗಳ ನಿರ್ಮಾಣವಾಗಲೆಂದು ಹಾರೈಸೋಣ.

ಸಿಂಗನ್ನಡಂ ಗೆಲ್ಗೆ

ಸಾದರ ಸ್ವೀಕಾರ

ಸುಧೆ (ಕವನಸಂಗ್ರಹ)—ಕವಿ : ಶ್ರೀ ವಾಗೀಶ ; ಪ್ರಕಾಶಕರು : ಸುದರ್ಶನ ಅಂಡ್ ಕೋ., ಅವೆನ್ಯೂ ರೋಡ್, ಬೆಂಗಳೂರು ; ಪುಟಗಳು viii + ೬೯ ; ಬೆಲೆ, ರೂ. ೧-೪-೦.

ಮಿತವ್ಯಯ—ಲೇಖಕರು : ಶ್ರೀ ರಾ. ನ. ಮಳಗಿ ; ಪ್ರಕಾಶಕರು : ಪ್ರತಿಭಾ ಗ್ರಂಥಮಾಲೆ, ಧಾರವಾಡ ; ಪುಟಗಳು ೩೫ ; ಬೆಲೆ, ೬ ಆಣೆ.

ಗಾದೆಗಳು—ಲೇಖಕರು : ಶ್ರೀ ಎ. ಕೆ. ರಾಮಾನುಜನ್ ; ಪ್ರಕಾಶಕರು ; ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ; ಪುಟಗಳು xii + ೯೦ ; ಬೆಲೆ, ೪ ಆಣೆ.

ಭಾರತದಲ್ಲಿ ಜಾತಿಪದ್ಧತಿ—ಲೇಖಕರು : ವಿಕ್ಟರ ಎಸ್. ಡಿ'ಸೋಜಾ ; ಪ್ರಕಾಶಕರು : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ; ಪುಟಗಳು vi + ೫೫ ; ಬೆಲೆ, ೪ ಆಣೆ.

ಮಾಚಿದೇವ ಚರಿತಾಮೃತ—ಲೇಖಕರು : ಶ್ರೀ ಮಾ.ನಂ. ನಂಜಪ್ಪನವರು ; ಪ್ರಕಾಶಕರು : ವೀರಶೈವ ಸಾಹಿತ್ಯ ಭಾಂಡಾರ, ಬೆಂಗಳೂರು ; ಪುಟಗಳು ii + ೩೬ ; ಬೆಲೆ, ೮ ಆಣೆ.

ರಾಗಿಣಿ—ಲೇಖಕರು : ಭಾರತೀಪ್ರಿಯ ; ಪ್ರಕಾಶಕರು : ಶಾರದಾ ಪ್ರಕಟನಾಲಯ, ಬೆಂಗಳೂರು ; ಪುಟಗಳು vi + ೨೬೯ ; ಬೆಲೆ, ರೂ. ೧-೮-೦.

ನಿಶೆಯಿಂದ ಉಷೆಗೆ—ಲೇಖಕರು : ಶ್ರೀ ಎ. ಪಿ. ನರಸಪ್ಪ ; ಪ್ರಕಾಶಕರು : ತಾಂಡವ ಮೂರ್ತಿಪ್ರಕಾಶನ, ಮೈಸೂರು ; ಪುಟಗಳು vi + ೨೮೩ ; ಬೆಲೆ, ರೂ. ೧-೮-೦.

ಮಂತ್ರಶಕ್ತಿ—ಲೇಖಕರು : ಇಂದಿರಾತನಯ ; ಪ್ರಕಾಶಕರು : ಮೋಹನ ಪ್ರಕಾಶನ, ಮೈಸೂರು ; ಪುಟಗಳು ೩೨೫ ; ಬೆಲೆ, ರೂ. ೧-೮-೦.

Theory of God—ಲೇಖಕರು : ಶ್ರೀ ಎ. ಪಿ. ನರಸಪ್ಪ ; ಪ್ರಕಾಶಕರು : ತಾಂಡವ ಮೂರ್ತಿ ಪ್ರಕಾಶನಾಲಯ, ಮೈಸೂರು ; ಪುಟಗಳು ೫೨ ; ಬೆಲೆ, ೮ ಆಣೆ.

ದುರಾಸೆಯ ದಂಡ ಮೊದಲಾದ ಐದು ಏಕಾಂಕ ನಾಟಕಗಳು—ಬರೆದವರು : ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ; ಪ್ರಕಾಶಕರು : ಕರ್ಣಾಟಕ ಸಂಘ, ಸೆಂಟ್ರಲ್ ಕಾಲೇಜ್, ಬೆಂಗಳೂರು ; ಪುಟಗಳು ೧೧೪ ; ಬೆಲೆ, ರೂ. ೧-೪-೦.

ನಾಯಿಯ ಕಥೆ—ಮೂಲಲೇಖಕರು : ಶ್ರೀ ಪ್ರೇಮಚಂದ ; ಅನುವಾದಕರು : ಶ್ರೀ ಬಾಳಾಚಾರ್ಯ ಅವಧಾನಿ ; ಪ್ರಕಾಶಕರು : ಮಿಂಚಿನಬಳ್ಳಿ, ಧಾರವಾಡ ; ಪುಟಗಳು ೫೪ ; ಬೆಲೆ, ೫ ಆಣೆ.

ಜೀವ ಈಶ್ವರಧರ್ಮ—ಮೂಲಕರ್ತೃಗಳು : ಸ್ವಾಮಿ ವಿವೇಕಾನಂದ ; ಪ್ರಕಾಶಕರು : ಶ್ರೀ ರಾಮಕೃಷ್ಣಾಶ್ರಮ, ಮೈಸೂರು ; ಪುಟಗಳು ೩೧೮ ; ಬೆಲೆ, ರೂ. ೩-೦-೦.

ಗೋಗ್ರಾಸ—ಲೇಖಕರು : ನಾರಾಯಣ ಸಂಗಮ ; ಪ್ರಕಾಶಕರು : ಮಿಂಚಿನಬಳ್ಳಿ ಕಾರ್ಯಾಲಯ, ಧಾರವಾಡ ; ಪುಟಗಳು ೧೧೬ ; ಬೆಲೆ, ರೂ. ೧-೦-೦.

ಸಂಪತ್ತು ಮತ್ತು ಅದರ ಸದುಪಯೋಗ—ಮೂಲಲೇಖಕರು: ಶ್ರೀ ಅರವಿಂದರು; ಪ್ರಕಾಶಕರು: ಶ್ರೀ ಅರವಿಂದ—ಶ್ರೀ ಮಾತಾಕೇಂದ್ರ, ಹುಬ್ಬಳ್ಳಿ; ಪುಟಗಳು ೨೭; ಬೆಲೆ, ೪ ಆಣೆ.

The Philosophy of Truth or Tatwajnana—ಲೇಖಕರು: ಶ್ರೀ ವಿ. ಸುಬ್ರಹ್ಮಣ್ಯ ಅಯ್ಯರ್; ಪ್ರಕಾಶಕರು: ಶ್ರೀಮತಿ ರುಕ್ಮಿಣಿ ಕುಪ್ಪಣ್ಣ, ಸೇಲಂ; ಪುಟಗಳು ೪೫೯; ಬೆಲೆ, ರೂ. ೯-೦-೦.

ಪುನರ್ಜನ್ಮ—ಮೂಲಲೇಖಕರು: ಸ್ವಾಮಿ ಅಭೇದಾನಂದ; ಪ್ರಕಾಶಕರು: ಶ್ರೀ ರಾಮಕೃಷ್ಣಾಶ್ರಮ, ಮೈಸೂರು: ಪುಟಗಳು ೪೫; ಬೆಲೆ, ೮ ಆಣೆ.

ತತ್ತ್ವಶಿಖಾಮಣಿ ಮಹಾದೇವಿಯಕ್ಕ—ಗ್ರಂಥಕರ್ತರು: ಶ್ರೀ ಮಾ. ನಂ. ನಂಜಪ್ಪನವರು; ಪ್ರಕಾಶಕರು: ವೀರಶೈವ ಸಾಹಿತ್ಯ ಭಾಂಡಾರ, ಬೆಂಗಳೂರು; ಪುಟಗಳು xxi+೧೨೦; ಬೆಲೆ, ರೂ. ೧-೮-೦.

ಪ್ರವಚನಾದಿ—ಮೂಲಲೇಖಕರು: ಸ್ವಾಮಿ ವಿವೇಕಾನಂದ; ಪ್ರಕಾಶಕರು: ಶ್ರೀ ರಾಮಕೃಷ್ಣಾಶ್ರಮ, ಮೈಸೂರು; ಪುಟಗಳು ೩೬೯; ಬೆಲೆ, ರೂ. ೩-೮-೦.

ಕವನ ಕುಸುಮ (ಕವನಸಂಕಲನ)—ಸಂಪಾದಕರು: ಎಂ. ಆರ್. ಬುದ್ಧಿವಂತಶೆಟ್ಟಿ; ಪ್ರಕಾಶಕರು: ಕನ್ನಡ ಸಾಹಿತ್ಯ ಸಂಘ, ರಂಗಂಪೇಟೆ (ಸುರಪುರ); ಪುಟಗಳು ix+೫೧; ಬೆಲೆ, ೮ ಆಣೆ.

ಸಾಧನೆಯ ಪ್ರಭಾಕರ—ಬರೆದವರು: ಪಂಡಿತ ಶ್ರೀ ಎಚ್. ಶಿವಲಿಂಗಶಾಸ್ತ್ರಿಗಳು; ಪ್ರಕಾಶಕರು: ನೀಲಗಿರಿ ಶ್ರೀ ಬಸಪ್ಪ ಶಾಸ್ತ್ರಿಗಳು, ಶಿಲಾಮಠ, ಸೋಮಹಳ್ಳಿ; ಪುಟಗಳು iii+೫೫; ಬೆಲೆ, ೮ ಆಣೆ.

ಮಾನವಪುತ್ರ-ಜೀಸಸ್—ಲೇಖಕರು: "ದೇವದತ್ತ"; ಪ್ರಕಾಶಕರು: ಬುರ್ಲಿಬಿಂದು ಮಾಧವ, ಮಿಂಚಿನಬಳ್ಳಿ, ಧಾರವಾಡ; ಪುಟಗಳು viii+೧೯೭; ಬೆಲೆ, ರೂ. ೨-೦-೦.

ಸ್ತವಕುಸುಮಾಂಜಲಿ—ಪ್ರಕಾಶಕರು: ಶ್ರೀ ರಾಮಕೃಷ್ಣಾಶ್ರಮ, ಮೈಸೂರು; ಪುಟಗಳು vii+೩೨೫; ಬೆಲೆ, ೩-೪-೦.

ವಿನೋದಿನಿ—ರವೀಂದ್ರನಾಥ ಠಾಕೂರ; ಅನುವಾದಕರು: ಅಹೋಬಲ ಶಂಕರ; ಕಾವ್ಯಾಲಯ, ಪ್ರಕಾಶಕರು, ಮೈಸೂರು, ೧೯೫೫; ಪುಟಗಳು iv+೩೩೧; ಬೆಲೆ, ಸಾದಾಪ್ರತಿ ರೂ. ೧-೮-೦; ಬಿಳಿಕಾಗದದ ಪ್ರತಿ ರೂ. ೩-೦-೦.

ಕಮಲೇಶ ಕೀರ್ತನಮಂಜರಿ—ಕವಿ: ರಾಜಾ ಎಸ್. ಗುರುರಾಜಾಚಾರ್ಯ, ಸ್ವರ ನಿರ್ದೇಶಕರು: ವಿದ್ವಾನ್ ಎಸ್. ಎನ್. ಮರಿಯಪ್ಪನವರು; ಪ್ರಕಾಶಕರು: ಶ್ರೀ ಪರಿಮಳಾ ಪಬ್ಲಿಷಿಂಗ್ ಹೌಸ್, ಮೈಸೂರು; ಪುಟಗಳು ಡೆಮಿ ೨೨೩+xviii; ಬೆಲೆ, ರೂ. ೨-೦-೦.

ಸತೀಗೀತೆ(ಹೊನ್ನಮ್ಮನ ಹದಿಬದೆಯ ಧರ್ಮ)—ಸಂಪಾದಕರು: ಶ್ರೀ ಕೆ. ನರಸಿಂಹಶಾಸ್ತ್ರಿ; ಪ್ರಕಾಶಕರು: ಉಷಾ ಸಾಹಿತ್ಯಮಾಲೆ, ಮೈಸೂರು; ಪುಟಗಳು ಕ್ರೌನ್ ಅ. ಪ. ೧೨೨; ಬೆಲೆ, ರೂ. ೧-೦-೦.

ಕನ್ನಡ ರಘುವಂಶ—ಅನುವಾದಕರು: ಶ್ರೀ ಎಸ್. ವಿ. ಪರಮೇಶ್ವರಭಟ್ಟ; ಪ್ರಕಾಶಕರು: ಶಾರದಾಮಂದಿರ, ಕೃಷ್ಣರಾಜವನಂ, ಮೈಸೂರು; ಪುಟಗಳು ಕ್ರೌನ್ ಅ. ಪ. ೨೬೮; ಬೆಲೆ, ಸಾಧಾರಣ ಪ್ರತಿ ರೂ. ೪-೦-೦; ಕ್ಯಾಲಿಕೊ ಪ್ರತಿ ರೂ. ೬-೦-೦.

ಕನ್ನಡ ವಿಕ್ರಮೋರ್ವಶೀಯ—ಅನುವಾದಕರು: ಶ್ರೀ ಎಸ್. ವಿ. ಪರಮೇಶ್ವರಭಟ್ಟ; ಪ್ರಕಾಶಕರು: ಉಷಾ ಸಾಹಿತ್ಯಮಾಲೆ, ಮೈಸೂರು; ಪುಟಗಳು ಕ್ರೌ. ಅ. ಪ. ೭೭; ಬೆಲೆ ರೂ. ೧-೦-೦.

ಶಿಶು—ಅನುವಾದಕರು: ಶ್ರೀ ನರೇಗಲ್ಲ ಪ್ರಹ್ಲಾದರಾಯರು; ಪ್ರಕಾಶಕರು: ವಿಂಜಿನ ಬಳ್ಳಿ ಚಾವಡಿ, ಧಾರವಾಡ; ಕ್ರೌ. ಅ. ಪ. ೬೮; ಬೆಲೆ, ರೂ. ೧-೦-೦.

ರೇಖಾ—ಕಾದಂಬರಿಕಾರರು: ಶ್ರೀಮತಿ ಲಲಿತಾಂಬ ಚಂದ್ರಶೇಖರ್; ಪ್ರಕಾಶಕರು: ಉಷಾ ಸಾಹಿತ್ಯಮಾಲೆ, ಮೈಸೂರು; ಪುಟಗಳು ಕ್ರೌ. ಅ. ಪ. ೪೦೦; ಬೆಲೆ, ರೂ. ೨-೮-೦.

ಕುಂಕುಮ ಭಾಗ್ಯ—ಕಾದಂಬರಿಕಾರರು: ಶ್ರೀ ಎಂ. ವಿ. ಸೀತಾರಾಮಯ್ಯ; ಪ್ರಕಾಶಕರು: ಉಷಾಸಾಹಿತ್ಯಮಾಲೆ, ಮೈಸೂರು; ಪುಟಗಳು ಕ್ರೌ. ಅ. ಪ. ೩೪೨; ಬೆಲೆ, ರೂ. ೨-೮-೦.

ಪ್ರವಾಸಿಯ ಪತ್ರಗಳು—ಲೇಖಕರು: ಶ್ರೀ ಕೆ. ಆರ್. ಕಾರಂತ್; ಪ್ರಕಾಶಕರು: ಉಷಾ ಸಾಹಿತ್ಯಮಾಲೆ, ಮೈಸೂರು; ಪುಟಗಳು ಕ್ರೌ. ಅ. ಪ. ೨೧೮; ಬೆಲೆ, ರೂ. ೧-೮-೦.

ಸಿರಿದ್ವೀಪ—ಅನುವಾದಕರು: 'ಆನಂದ'; ಪ್ರಕಾಶಕರು: ಉಷಾ ಸಾಹಿತ್ಯಮಾಲೆ, ಮೈಸೂರು; ಪುಟಗಳು ಕ್ರೌ. ಅ. ಪ. ೨೦೪; ಬೆಲೆ, ರೂ. ೧-೮-೦.

ಸ್ವರ್ಗದ ಬಾಗಿಲು (ದ್ವಿತೀಯ ಮುದ್ರಣ)—ಕಾದಂಬರಿಕಾರರು: ಶ್ರೀ ವಿ. ಎಂ. ಇನಾಂದಾರ್; ಪ್ರಕಾಶಕರು: ಉಷಾ ಸಾಹಿತ್ಯಮಾಲೆ, ಮೈಸೂರು; ಪುಟಗಳು ಕ್ರೌ. ಅ. ಪ. ೨೨೮; ಬೆಲೆ, ರೂ. ೧-೮-೦.

ಕರುಣಾಲಹರಿ—ಕತೆಗಾರರು: ಶ್ರೀ ಎಂ. ವಿ. ಸೀತಾರಾಮಯ್ಯ; ಪ್ರಕಾಶಕರು: ಶಾರದಾಮಂದಿರ, ಕೃಷ್ಣರಾಜವನಂ, ಮೈಸೂರು; ಪುಟಗಳು; ಕ್ರೌ. ಅ. ಪ. ೧೪೨; ಬೆಲೆ, ಸಾಧಾರಣ ರೂ. ೧-೮-೦; ಕ್ಯಾಲಿಕೊ ರೂ. ೨-೮-೦.

ಶಾಂತಿವಾದಿ—ಕಾದಂಬರಿಕಾರರು: ಶ್ರೀ ಕೊರಟಿ ಶ್ರೀನಿವಾಸರಾವ್; ಪ್ರಕಾಶಕರು: ಶಾರದಾಮಂದಿರ, ಕೃಷ್ಣರಾಜವನಂ, ಮೈಸೂರು; ಪುಟಗಳು ಕ್ರೌ. ಅ. ಪ. ೧೫೩; ಬೆಲೆ, ಸಾಧಾರಣ ರೂ. ೧-೮-೦; ಕ್ಯಾಲಿಕೊ ರೂ. ೨-೮-೦.

ಕನ್ನಡ ಕಿರಾತಾರ್ಜುನೀಯ—ಅನುವಾದಕರು: ಡಾ|| ಕೆ. ಕೃಷ್ಣಮೂರ್ತಿ; ಪ್ರಕಾಶಕರು: ಶಾರದಾಮಂದಿರ, ಕೃಷ್ಣರಾಜವನಂ, ಮೈಸೂರು; ಪುಟಗಳು ೧೦೭; ಬೆಲೆ, ಸಾಧಾರಣ ರೂ. ೨-೪-೦; ಕ್ಯಾಲಿಕೊ ರೂ. ೩-೮-೦.

ಕೀಲುಗೊಂಬೆ (ಕೈಹೊತ್ತಗೆಯ ಕಾದಂಬರಿ)—ಲೇಖಕಿಯರು: ಶ್ರೀಮತಿ ತ್ರಿವೇಣಿ; ಪ್ರಕಾಶಕರು: ಭಾರತೀ ಪ್ರಕಾಶನ, ಕೃಷ್ಣರಾಜವನಂ, ಮೈಸೂರು.

ಪ್ರಬುದ್ಧ ಕರ್ಣಾಟಕ

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪತ್ರಿಕೆ

'ಪ್ರಬುದ್ಧ ಕರ್ಣಾಟಕ'ವು ಚೈತ್ರ, ಆಷಾಢ, ಆಶ್ವಯುಜ, ಪುಷ್ಯಮಾಸಗಳಲ್ಲಿ ಆಯಾ ತಿಂಗಳ ಹುಣ್ಣಿಮೆಯ ಹೊತ್ತಿಗೆ ವರ್ಷಕ್ಕೆ ನಾಲ್ಕು ಸಲ ಹೊರಡುತ್ತದೆ.

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ):

ಸಾಮಾನ್ಯ ಚಂದಾದಾರರಿಗೆ	ರೂ.	೩	೮	೦
ವಾಚನಾಲಯ ಮುಂತಾದ ಸಂಸ್ಥೆಗಳಿಗೆ	ರೂ.	೪	೮	೦
ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಮಾತ್ರ	ರೂ.	೨	೮	೦

ಸಂಚಿಕೆಗಳನ್ನು ರಿಜಿಸ್ಟರ್ ಮೂಲಕ ತರಿಸಿಕೊಳ್ಳಬೇಕೆನ್ನುವವರು ಚಂದಾ ಹಣದ ಜೊತೆಗೆ ರೂ. ೧-೨-೦ ಕಳುಹಿಸಬೇಕು.

ಚಂದಾಹಣವನ್ನೂ ಅದರ ವಿಚಾರವಾಗಿ ಪತ್ರಗಳನ್ನೂ ಕಾರ್ಯದರ್ಶಿ, ಪ್ರಚಾರ ಮತ್ತು ಪ್ರಕಾಶನ ಕಾರ್ಯ, ಯೂನಿವರ್ಸಿಟಿ ಆಫೀಸು, ಮೈಸೂರು, ಎಂಬ ವಿಳಾಸಕ್ಕೆ ಕಳುಹಿಸಬೇಕು. ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರವರಿಗಾಗಲಿ, ಪ್ರಬುದ್ಧ ಕರ್ಣಾಟಕದ ಸಂಪಾದಕರಿಗಾಗಲಿ ಕಳುಹಿಸಬಾರದು. ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಚಂದಾಹಣವನ್ನು ತಮ್ಮ ತಮ್ಮ ಕಾಲೇಜಿನ ಅಕೌಂಟ್ಸ್ ಅಧಿಕಾರಿಗಳಿಗೆ ಮುಂಗಡವಾಗಿ ಸಲ್ಲಿಸಿ, ಪಡೆದ ರಸೀತಿಯನ್ನು ತಮ್ಮ ವಿಳಾಸದೊಂದಿಗೆ ಕಳುಹಿಸಿಕೊಡಬೇಕು. ಕಾಲೇಜುಗಳ ಅಧ್ಯಾಪಕ ವರ್ಗದವರೂ ಇದೇ ರೀತಿ ಮಾಡಬಹುದು. ವಿದ್ಯಾರ್ಥಿಗಳು ತಾವು ವಿದ್ಯಾರ್ಥಿಗಳೆಂಬ ಬಗ್ಗೆ ತಮ್ಮ ಪಾಠಶಾಲೆಯ ಮುಖ್ಯೋಪಾಧ್ಯಾಯರಿಂದ ಒಂದು ಪ್ರಮಾಣಪತ್ರವನ್ನು ಪಡೆದು ಅದನ್ನು ಚಂದಾ ಹಣದೊಡನೆ ಕಳುಹಿಸಬೇಕು. ಚಂದಾದಾರರು ತಮ್ಮ ಚಂದಾ ಹಣವನ್ನು (ಸರ್ಕಾರಿ ಖಜಾನೆಯಲ್ಲಿ 'ಯೂನಿವರ್ಸಿಟಿ ಫಂಡ್'ಗೆ ಕಟ್ಟಿ ಖಜಾನೆ ರಸೀತಿಯನ್ನು ತಮ್ಮ ವಿಳಾಸದೊಡನೆ ಪ್ರಬುದ್ಧ ಕರ್ಣಾಟಕದ ಆಫೀಸಿಗೆ ಕಳುಹಿಸಬಹುದು.)

ಪ್ರಬುದ್ಧ ಕರ್ಣಾಟಕದ ೩೧, ೩೨, ೩೩, ೩೪, ೩೫, ೩೬ನೆಯ ಸಂಪುಟಗಳು ನಮ್ಮಲ್ಲಿ ಸಿಕ್ಕುತ್ತವೆ. ಇವುಗಳ ಪೈಕಿ ೩೧, ೩೨ನೆಯ ಸಂಪುಟಗಳನ್ನು ಸಂಪುಟ ಒಂದಕ್ಕೆ ಒಂದು ರೂಪಾಯಿಯಂತೆ ರಿಯಾಯಿತಿ ದರದಲ್ಲಿ ಪಡೆಯಬಹುದು. ೩೩, ೩೪, ೩೫, ೩೬ನೆಯ ಸಂಪುಟಗಳನ್ನು ತುಂಬು ಬೆಲೆಗೆ ಮಾರಲಾಗುವುದು. ಅಂಚೆಯ ಮೂಲಕ ತರಿಸಿಕೊಳ್ಳುವವರು ಸಂಪುಟ ಒಂದಕ್ಕೆ ಹದಿಮೂರು ಆಣೆ, ಸಾಮಾನ್ಯ ಸಂಚಿಕೆ ಒಂದಕ್ಕೆ ಏಳು ಆಣೆ, ಎರಡು ಸಂಚಿಕೆಗಳನ್ನು ಒಳಗೊಂಡ ಸಂಚಿಕೆಗೆ ಒಂಬತ್ತು ಆಣೆಯಂತೆ ಅಂಚೆ ವೆಚ್ಚವನ್ನು ಕಳುಹಿಸಬೇಕು.

'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟನೆಗೆ ಲೇಖನಗಳನ್ನೂ ವಿಮರ್ಶೆಗೆ ಗ್ರಂಥಗಳನ್ನೂ ವಿನಿಮಯಕ್ಕೆ ಪತ್ರಿಕೆಗಳನ್ನೂ ಪ್ರಬುದ್ಧ ಕರ್ಣಾಟಕದ ಸಂಪಾದಕ (ಮಹಾರಾಜರವರ ಕಾಲೇಜು, ಮೈಸೂರು) ರಿಗೆ ಕಳುಹಿಸಬೇಕು.

ಕಾರ್ಯದರ್ಶಿ,

ವಿಶ್ವವಿದ್ಯಾನಿಲಯದ ಪ್ರಕಟನ ಮತ್ತು ಪ್ರಚಾರೋಪನ್ಯಾಸ ಶಾಖೆ, ಮೈಸೂರು

ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕಮಾಲೆ

೧. ಖಗೋಳಶಾಸ್ತ್ರಪ್ರವೇಶ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.

೨. ಸಮಾಜದ ರೋಗರುಜಿನಗಳು—ಜಿ. ಹನುಮಂತರಾವ್, ಎಂ.ಎ.

೩. ತೆರಿಗೆ—ಬಿ. ಆರ್. ಸುಬ್ಬರಾವ್, ಎಂ.ಎ.

೪. *ನವರತ್ನಗಳು—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.

೫. ನಮ್ಮ ಹಳ್ಳಿಗಳು—ಜಿ. ಎನ್. ಕೃಷ್ಣಮೂರ್ತಿ, ಎಂ.ಎ.

೬. ಕುಮಾರವ್ಯಾಸ—ಎಸ್. ವಿ. ರಂಗಣ್ಣ, ಎಂ.ಎ.

೭. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್, ಎಂ.ಎ.

೮. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ, ಎಂ.ಎ.

೯. ವಿದ್ಯುಚ್ಛಕ್ತಿಯ ವೈಭವ—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.

೧೦. ಪಂಪ—ಟಿ. ಎಸ್. ಶ್ರೀಕಂಠಯ್ಯ, ಎಂ.ಎ.

೧೧. ಪ್ರಾಣಿಜೀವನ—ಎ. ನಾರಾಯಣರಾವ್, ಎಂ.ಎಸ್‌ಸಿ.

೧೨. ಕನಸುಗಳು—ಡಾ|| ಎನ್. ಎಸ್. ನಾರಾಯಣಶಾಸ್ತ್ರೀ, ಎಂ.ಎ., ಡಿ.ಲಿಟ್.

೧೩. ಮದುವೆ—ಎನ್. ಕಸ್ತೂರಿ, ಎಂ.ಎ., ಬಿ.ಎಲ್.

೧೪. ನಮ್ಮ ಆರ್ಥಿಕದೃಷ್ಟಿ—ಎಸ್. ಗೋಪಾಲಸ್ವಾಮಿ, ಎಂ.ಎ.

೧೫. ವಾಯುಗುಣ—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.

೧೬. ಬೆಳಕು—ಟಿ. ಎಸ್. ಸುಬ್ಬರಾಯ, ಎಂ.ಎಸ್‌ಸಿ.

೧೭. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ, ಎಂ.ಎ.

೧೮. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್, ಎಂ.ಎ.

೧೯. ಇಂಗ್ಲೆಂಡಿನ ರಾಜಕೀಯ ಬೆಳವಣಿಗೆ—ಪಿ. ಜಿ. ಸತ್ಯಗಿರಿನಾಥನ್, ಎಂ.ಎ.

೨೦. ಕಣ್ಣು ಮತ್ತು ಅದರ ರಕ್ಷಣೆ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.

೨೧. *ಸಾರ್ವಜನಿಕ ವೆಚ್ಚ—ಡಾ|| ಎಂ. ಎಚ್. ಗೋಪಾಲ್, ಎಂ.ಎ., ಪಿಎಚ್.ಡಿ.

೨೨. ಶಿಶುವಿಹಾರಗಳು—ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್.

೨೩. ಸಂಖ್ಯೋದ್ಯಾನ—ಬಿ. ಸೀತಾರಾಮಶಾಸ್ತ್ರೀ, ಎಂ.ಎ.

೨೪. ವಿಡಂಬನ—ಎಸ್. ವಿ. ರಂಗಣ್ಣ, ಎಂ.ಎ.

೨೫. *ಎಲ್ಲೋರ ಮತ್ತು ಅಜಂತಾ—ಡಾ|| ಎಂ. ಎಚ್. ಕೃಷ್ಣ, ಎಂ.ಎ., ಡಿ.ಲಿಟ್.

೨೬. ಸಾರಜನಕದ ಮಹತ್ವ—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.

೨೭. ಭಾಸ—ಡಾ|| ಎಚ್. ಎಲ್. ಹರಿಯಪ್ಪ, ಎಂ.ಎ., ಪಿಎಚ್.ಡಿ.

೨೮. ಪಾಶ್ಚಾತ್ಯ ರಾಜಕೀಯ ತತ್ವಗಳು—ಎಂ. ಯಾಮುನಾಚಾರ್ಯ, ಎಂ.ಎ.

೨೯. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೩೦. ರಕ್ತ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೩೧. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜುನಾಥ್, ಎಂ.ಎ.
೩೨. *ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ, ಎಂ.ಎ.
೩೩. ಗಣಿತಶಾಸ್ತ್ರದ ಸ್ವರೂಪ—ಡಾ|| ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.
೩೪. ಋಗ್ವೇದ—ಎಂ. ಎ. ಕೃಷ್ಣಸ್ವಾಮಿ, ಎಂ.ಎ.
೩೫. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ, ಎಂ.ಎ.
೩೬. ಆಳ್ವಾರುಗಳು—ಎಂ. ಯಾಮುನಾಚಾರ್ಯ, ಎಂ.ಎ.
೩೭. ಹಿಂದು ಮುಸ್ಲಿಂ ಮೈತ್ರಿಯನ್ನು ಬೆಳಸಿದ ರಾಜರು—ವಿ. ರಾಘವೇಂದ್ರರಾವ್, ಎಂ.ಎ., ಬಿ.ಟಿ.
೩೮. ಸುಭಾಷಿತ ಸಂಗ್ರಹಗಳು—ಎಂ. ಪಿ. ಲಕ್ಷ್ಮೀನರಸಿಂಹಶಾಸ್ತ್ರೀ, ಎಂ.ಎ.
೩೯. ಮಕ್ಕಳ ಭಾವಜೀವನ—ಡಾ|| ಬಿ. ಕುಪ್ಪುಸ್ವಾಮಿ ನಾಯಿಡು, ಎಂ.ಎ., ಡಿ.ಲಿಟ್.
೪೦. ಸಹಕಾರ—ಎಸ್. ಗೋಪಾಲಸ್ವಾಮಿ, ಎಂ.ಎ.
೪೧. ನಯಸೇನ—ಜಿ. ವೆಂಕಟಸುಬ್ಬಯ್ಯ, ಎಂ.ಎ., ಬಿ.ಟಿ.
೪೨. ಕೌಟಿಲ್ಯ—ಡಾ|| ಎಂ. ವಿ. ಕೃಷ್ಣರಾವ್, ಎಂ.ಎ., ಬಿ.ಟಿ., ಡಿ.ಲಿಟ್.
೪೩. ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ, ಎಂ.ಎ.
೪೪. ಮುನಿಸಿಪಾಲಿಟಿಗಳು—ಎಚ್. ಕೃಷ್ಣರಾವ್, ಎಂ.ಎ.
೪೫. ಲಕ್ಷ್ಮೀಶ—ಎನ್. ಅನಂತರಂಗಾಚಾರ್, ಎಂ.ಎ., ಬಿ.ಟಿ.
೪೬. ರುಚಿ—ಎಸ್. ವಿ. ರಂಗಣ್ಣ, ಎಂ.ಎ.
೪೭. ಕೀಟಗಳು—ಡಿ. ಎಸ್. ವೀರಯ್ಯ, ಎಂ.ಎಸ್‌ಸಿ.
೪೮. ಅಲೆಗಳು—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೪೯. ಮುದ್ದಣ—ಟಿ. ಎಸ್. ಶಾಮರಾವ್, ಎಂ.ಎ.
೫೦. ಐವರು ಭೌತವೈಜ್ಞಾನಿಕರು—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.
೫೧. ಕೃತಕ ರೇಷ್ಮೆ—ಎಂ. ಷಡಕ್ಷರಸ್ವಾಮಿ, ಎಂ.ಎಸ್‌ಸಿ.
೫೨. ಚೀನರ ಇತಿಹಾಸ ಮತ್ತು ನಾಗರಿಕತೆ—ಎಸ್. ವೆಂಕಟದೇಶಿಕಾಚಾರ್, ಎಂ.ಎ.
೫೩. *ಯುದ್ಧಕಾಲದ ಆರ್ಥಿಕ ಸಮಸ್ಯೆಗಳು—ಎಸ್. ಲಕ್ಷ್ಮೀನರಸಿಂಹನ್, ಎಂ.ಎ.
೫೪. *ಆಹಾರ—ಜಿ. ಆರ್. ಲಕ್ಷ್ಮಣರಾವ್, ಎಂ.ಎಸ್‌ಸಿ.
೫೫. ಇಬ್ಸನ್ನಿನ ಕೆಲವು ನಾಟಕಗಳು—ಎಸ್. ಮಂಜುನಾಥ್, ಎಂ.ಎ.
೫೬. ಶಬ್ದಪ್ರಪಂಚ—ಆರ್. ಎಲ್. ನರಸಿಂಹಯ್ಯ, ಎಂ.ಎಸ್‌ಸಿ.

೫೭. ಪ್ರಜಾಭಿಪ್ರಾಯ—ಟಿ. ಎಸ್. ರಾಜಗೋಪಾಲ ಅಯ್ಯಂಗಾರ್, ಎಂ.ಎ., ಎಲ್‌ಎಲ್.ಬಿ.

೫೮. ಕಲ್ಲಿದ್ದಲು—ಕೆ. ಎಸ್. ಲಕ್ಷ್ಮಣರಾವ್, ಎಂ.ಎಸ್‌ಸಿ.

೫೯. ಜನಪದಮುಕ್ತಕಗಳು—ಎಚ್. ಎಂ. ಶಂಕರನಾರಾಯಣರಾವ್, ಎಂ.ಎ.

ಬರಲಿವೆ

೬೦. ಬಟ್ಟೆಗಳ ವೈಜ್ಞಾನಿಕ ಪರೀಕ್ಷೆ—ಶ್ರೀ ನಾಗಭೂಷಣ್, ಬಿ.ಎಸ್‌ಸಿ., ಎಫ್.ಟಿ.ಐ.

೬೧. ಆಧುನಿಕ ಭಾರತದಲ್ಲಿ ನೃತ್ಯಕಲೆ—ಶ್ರೀ ಯು. ಎಸ್. ಕೃಷ್ಣರಾವ್, ಎಂ.ಎಸ್‌ಸಿ.; ಮತ್ತು ಶ್ರೀಮತಿ ಚಂದ್ರಭಾಗಾದೇವಿ

ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸದ ಪುಸ್ತಕಗಳನ್ನು ಕೊಳ್ಳುವವರಿಗೆ ಈ ಕೆಳಗೆ ಕಂಡಂತೆ ಕಮೀಷನ್ ಕೊಡಲಾಗುವುದು. ಅಂಚೆ ಮತ್ತು ಪುಸ್ತಕವನ್ನು ಕಳುಹಿಸುವ ಖರ್ಚು ಪ್ರತ್ಯೇಕ.

ಶೇಕಡ ೧೬ ೨/೩ ರಂತೆ ೨೦ ಪುಸ್ತಕಗಳನ್ನು ಕೊಳ್ಳುವವರಿಗೆ
ಶೇಕಡ ೨೦ ರಂತೆ ೨೦೦ ಪುಸ್ತಕಗಳನ್ನು ಕೊಳ್ಳುವವರಿಗೆ
ಶೇಕಡ ೨೫ ರಂತೆ ೫೦೦ ಪುಸ್ತಕಗಳನ್ನು ಕೊಳ್ಳುವವರಿಗೆ
ಶೇಕಡ ೩೩ ೧/೩ ರಂತೆ ೨೦೦೦ ಪುಸ್ತಕಗಳನ್ನು ಒಂದು ವರ್ಷದಲ್ಲಿ ಕೊಳ್ಳುವವರಿಗೆ

ಸಾಧಾರಣ ಪ್ರತಿ ೩ ಆಣೆ. ಉತ್ತಮ ಪ್ರತಿ ೪ ಆಣೆ.

ಕಾರ್ಯದರ್ಶಿ, ಪ್ರಚಾರ ಮತ್ತು ಪ್ರಕಾಶನಕಾರ್ಯ,
ಯೂನಿವರ್ಸಿಟಿ ಆಫೀಸ್ ಕಟ್ಟಡ, ಮೈಸೂರು.

---

* ಈ ಪುಸ್ತಕಗಳು ಮುಗಿದುಹೋಗಿವೆ.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆ

ಪ್ರಧಾನಸಂಪಾದಕರು : { ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್., ೧೯೪೩ ರ ವರೆಗೆ
ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ., ೧೯೪೩ ರಿಂದ ೧೯೪೭ ರ ವರೆಗೆ
ಕೆ. ವಿ. ಪುಟ್ಟಪ್ಪ, ಎಂ.ಎ., ೧೯೪೭ ರಿಂದ

೧. ***ಹರಿಶ್ಚಂದ್ರಕಾವ್ಯ ಸಂಗ್ರಹ** (ಐದನೆಯ ಮುದ್ರಣ)—ಸಂಪಾದಕರು : ಟಿ. ಎಸ್. ವೆಂಕಣ್ಣಯ್ಯ, ಎಂ.ಎ. ಮತ್ತು ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೨. **ಕರ್ಣಾಟಕ ಕಾದಂಬರೀ ಸಂಗ್ರಹ**—(ಮೂರನೆಯ ಮುದ್ರಣ) ಸಂಪಾದಕರು : ಟಿ. ಎಸ್. ವೆಂಕಣ್ಣಯ್ಯ, ಎಂ.ಎ.

೩. ***ಪ್ರಭುಲಿಂಗಲೀಲೆಯ ಸಂಗ್ರಹ** (ಸಚಿತ್ರ)—ಸಂಪಾದಕರು : ಎಂ. ಎಸ್. ಬಸವಲಿಂಗಯ್ಯ, ಎಂ.ಎ., ಬಿ.ಎಲ್. ಮತ್ತು ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ.

೪. ***ಸಾಕ್ರೆಟೀಸನ ಕೊನೆಯ ದಿನಗಳು** (ಸಚಿತ್ರ)—ಅನುವಾದಕರು : ಎ. ಎನ್. ಮೂರ್ತಿರಾವ್, ಎಂ.ಎ.

೫. ***ಶ್ರೀರಾಮಕೃಷ್ಣ ಪರಮಹಂಸ**—ಲೇಖಕರು : ಕೆ. ವಿ. ಪುಟ್ಟಪ್ಪ, ಎಂ.ಎ.

೬. ***ರವೀಂದ್ರನಾಥ ಠಾಕೂರರು** (ಸಚಿತ್ರ)—ಲೇಖಕರು : ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಂ.ಎ.

೭. ***ಆರೋಗ್ಯ, ಅದರ ಜ್ಞಾನ ಮತ್ತು ಸಾಧನ** (ಸಚಿತ್ರ)—ಲೇಖಕರು : ಜಿ. ಎ. ಈಶ್ವರ ಮೂರ್ತಿ, ಬಿ.ಎ., ಎಲ್.ಎಂ.ಎಸ್., ಬಿ.ಎಸ್‌ಸಿ.

೮. **ಪಂಪರಾಮಾಯಣ ಸಂಗ್ರಹ**—ಸಂಪಾದಕರು : ಆಸ್ಥಾನ ಮಹಾವಿದ್ವಾನ್ ತಿರುವಳ್ಳೂರ್ ಶ್ರೀನಿವಾಸರಾಘವಾಚಾರ್ ಮತ್ತು ಡಿ. ಎಲ್. ನರಸಿಂಹಾಚಾರ್, ಎಂ.ಎ.

೯. ***ಹಣಪ್ರಪಂಚ**—ಲೇಖಕರು : ವಿ. ಸೀತಾರಾಮಯ್ಯ, ಎಂ.ಎ.

೧೦. **ಸಂಸ್ಕೃತ ನಾಟಕ**—ಲೇಖಕರು : ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೧೧. ***ಜೀವವಿಜ್ಞಾನ**—ಲೇಖಕರು : ಬಿ. ವೆಂಕಟನಾರಾಯಣಪ್ಪ, ಎಂ.ಎ.

೧೨. ***ಹಿಂದೂದರ್ಶನಸಾರ**—ಲೇಖಕರು : ಮಹಾಮಹೋಪಾಧ್ಯಾಯ ಪಂಡಿತರತ್ನಂ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯ.

೧೩. **ರಾಜನೀತಿ**—ಲೇಖಕರು : ಎಚ್. ಕೃಷ್ಣರಾವ್, ಎಂ.ಎ.

೧೪. ***ಹದಿಬದೆಯ ಧರ್ಮ**—ಸಂಪಾದಕಿಯರು : ಡಿ. ಚಂಪಾಬಾಯಿ, ಎಂ.ಎ.

೧೫. ***ಪುರಾಣನಾಮಚೂಡಾಮಣಿ**—ಲೇಖಕರು : ಬೆನಗಲ್ ರಾಮರಾವ್, ಎಂ.ಎ., ಎಲ್‌ಎಲ್.ಬಿ. ಮತ್ತು ಪಾಸ್ಯಂ ಸುಂದರಶಾಸ್ತ್ರಿ.

೧೬. *ಯಶೋಧರ ಚರಿತೆಯ ಸಂಗ್ರಹ—ಸಂಪಾದಕರು: ಕೆ. ವಿ. ರಾಘವಾಚಾರ್, ಎಂ.ಎ., ಬಿ.ಟಿ.

೧೭. *ಗ್ರೀಕರ ತತ್ವಶಾಸ್ತ್ರಸಾರಸಂಗ್ರಹ—ಲೇಖಕರು: ಕೆ. ಆರ್. ಶ್ರೀನಿವಾಸ ಅಯ್ಯಂಗಾರ್, ಎಂ.ಎ.

೧೮. ಹಿಂದೂ ದೇಶದ ಭೂಚರಿತ್ರೆ—ಲೇಖಕರು: ವೈ. ನಾಗಪ್ಪ, ಎಂ.ಎಸ್‌ಸಿ.

೧೯. *ವಚನಧರ್ಮಸಾರ—ಲೇಖಕರು: ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ.

೨೦. ಪ್ರಾಣಿಶಾಸ್ತ್ರ—ಡಾ|| ಎ. ಸುಬ್ಬರಾವ್, ಬಿ.ಎ., ಡಿ.ಎಸ್‌ಸಿ., ಮತ್ತು ಎ. ನಾರಾಯಣರಾವ್, ಎಂ.ಎಸ್‌ಸಿ.; ಬೆಲೆ, ಸಾದಾ ರೂ. ೧-೪-೦; ಕ್ಯಾಲಿಕೊ ರೂ. ೧-೮-೦.

೨೧. *ಆಧುನಿಕ ತತ್ವಶಾಸ್ತ್ರಸಮಸ್ಯೆಗಳು—ಜಿ. ಹನುಮಂತರಾವ್, ಎಂ.ಎ.; ಬೆಲೆ, ರೂ. ೧-೦-೦.

೨೨. ಕನ್ನಡ ಕೈಪಿಡಿ (ಭಾಗ ೫, ಸಾಹಿತ್ಯಚರಿತ್ರೆ)—ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.; ಬೆಲೆ, ಸಾದಾ ರೂ. ೧-೪-೦; ಕ್ಯಾಲಿಕೊ ರೂ. ೨-೪-೦.

೨೩. ಇಸ್ಲಾಂ ಸಂಸ್ಕೃತಿ—ಮೂಲಲೇಖಕರು: ಪ್ರೊ|| ಮಹಮದ್ ಅಬ್ಬಾಸ್ ಷೂಸ್ತ್ರಿ; ಅನುವಾದಕರು: ರಾಜಸೇವಾಸಕ್ತ ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.; ಬೆಲೆ, ರೂ. ೨-೦-೦.

೨೪. ತಮಿಳು ಪಾಠಗಳು—ಲೇಖಕರು: ಎಸ್. ರುದ್ರಪತಿ, ಎಂ.ಎ.; ಬೆಲೆ, ರೂ. ೩-೪-೦.

೨೫. ಅಶೋಕ—ಲೇಖಕರು: ಎನ್. ಕಸ್ತೂರಿ, ಎಂ.ಎ., ಬಿ.ಎಲ್.; ಬೆಲೆ, ರೂ. ೧-೨-೦.

೨೬. ಭಾರತೀಯ ಕಾವ್ಯಮೀಮಾಂಸೆ—ಲೇಖಕರು: ಪ್ರೊ|| ತೀ. ನಂ. ಶ್ರೀಕಂಠಯ್ಯ, ಎಂ.ಎ.; ಬೆಲೆ, ಸಾದಾ ರೂ. ೩-೮-೦; ಉತ್ತಮ ರೂ. ೪-೦-೦.

೨೭. ಭಾರತೀಯ ಸಂಸ್ಕೃತಿ—ಲೇಖಕರು: ಡಾ|| ಎಸ್. ಶ್ರೀಕಂಠಶಾಸ್ತ್ರೀ, ಎಂ.ಎ., ಡಿ.ಲಿಟ್.; ಬೆಲೆ, ಸಾದಾ ರೂ. ೩-೦-೦; ಉತ್ತಮ ರೂ. ೪-೦-೦.

೨೮. ಸಾರ್ವಜನಿಕ ಹಣಕಾಸು—ಲೇಖಕರು: ಶ್ರೀ ವಿ. ಎಲ್. ಡಿ'ಸೋಜ, ಬಿ.ಎ., ಬಿ.ಕಾಂ. (ಲಂಡನ್) ಮತ್ತು ಶ್ರೀ ಬಿ. ಆರ್. ಸುಬ್ಬರಾವ್, ಎಂ.ಎ., ಡಿಪ್-ಇನ್-ಕಾಂ; ಬೆಲೆ, ಸಾದಾ ರೂ. ೨-೮-೦; ಉತ್ತಮ ರೂ. ೩-೮-೦.

೨೯. ಆದಿಪುರಾಣ ಸಂಗ್ರಹ—ಸಂಪಾದಕರು: ಶ್ರೀ ಎಲ್. ಗುಂಡಪ್ಪ, ಎಂ.ಎ.; ಬೆಲೆ, ಸಾದಾ ರೂ. ೨-೪-೦; ಕ್ಯಾಲಿಕೋ ರೂ. ೨-೧೨-೦.

೩೦. **ಪಂಪ ಭಾರತ**—(೯-೧೪ ಆಶ್ವಾಸಗಳು) ಬೆಲೆ, ಸಾದಾ ೧-೧೨-೦ ; ಉತ್ತಮ ೨-೪-೦.

೩೧. **ಕಾಳಿದಾಸ**—ಲೇಖಕರು : ಶ್ರೀ ಎಂ. ಲಕ್ಷ್ಮೀನರಸಿಂಹಯ್ಯ, ಎಂ.ಎ. ; ಬೆಲೆ, ಸಾದಾ ರೂ. ೨-೦-೦ ; ಉತ್ತಮ ರೂ. ೨-೮-೦.

೩೨. **ಭರತೇಶ ವೈಭವ ಸಂಗ್ರಹ**—ಸಂಪಾದಕರು: ಶ್ರೀ ತ. ಸು. ಶಾಮರಾವ್, ಎಂ.ಎ.

೩೩. **ಶ್ರೀ ಕೃಷ್ಣ ಚರಿತೆ**—ಸಂಪಾದಕರು : ಶ್ರೀ ಕೆ. ವೆಂಕಟರಾಮಪ್ಪ, ಎಂ.ಎ.

೩೪. **ಕನ್ನಡ ಕೈಪಿಡಿ**—(ಭಾಗ ೧, ೨, ೩, ೪.) ಬೆಲೆ, ಸಾದಾ ರೂ. ೨-೮-೦ ; ಉತ್ತಮ ರೂ. ೩-೦-೦

ಅಚ್ಚಿನಲ್ಲಿವೆ

೩೫. **ಪ್ರಜಾಪ್ರಭುತ್ವ**—ಎಂ. ವಿ. ಕೃಷ್ಣರಾವ್, ಎಂ.ಎ., ಬಿ.ಟಿ., ಡಿ.ಲಿಟ್.

೩೬. **ಭೌತಶಾಸ್ತ್ರ**—ಟಿ. ಸುಬ್ಬರಾಯ, ಎಂ.ಎಸ್‌ಸಿ.

೩೭. **ಗಣಿತಶಾಸ್ತ್ರದ ಚರಿತ್ರೆ**—ಸಿ. ಎನ್. ಶ್ರೀನಿವಾಸ ಐಯಂಗಾರ್, ಡಿ.ಎಸ್‌ಸಿ.

Other Publications

1. **Minimum Wages in India** : by V. R. PILLAI, M.A., M.SC. ಬೆಲೆ, ರೂ. ೧-೧೪-೦.

2. **Aspects of Bhakti** : by K. C. VARADACHARI.
Navinam Ramanujacharya Sanskrit Prize Essay

3. **ಅಲಂಕಾರಶಾಸ್ತ್ರೇ ಕಾವ್ಯ ವೈವಿಧ್ಯವಾದ ವಿಮರ್ಶಃ**—ಡಾ|| ಕೆ. ಕೃಷ್ಣಮೂರ್ತಿ, ಎಂ.ಎ., ಬಿ.ಟಿ., ಪಿಎಚ್.ಡಿ. ; ಬೆಲೆ, ರೂ. ೦-೮-೦.

ಈ ಗ್ರಂಥಮಾಲೆಯ ಪುಸ್ತಕಗಳನ್ನು ತರಿಸಿಕೊಳ್ಳಲಿಚ್ಛಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆಯಬೇಕು.

ಕಾರ್ಯದರ್ಶಿ,
ವಿಶ್ವವಿದ್ಯಾನಿಲಯದ ಪ್ರಕಟನ ಮತ್ತು
ಪ್ರಚಾರೋಪನ್ಯಾಸ ಶಾಖೆ, ಮೈಸೂರು
ಅಥವಾ
ಸೂಪರಿಂಟೆಂಡೆಂಟ್,
ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್,
ಮೈಸೂರು

ಸರ್ ಕೆ. ಪಿ. ಪುಟ್ಟಣ್ಣಚೆಟ್ಟರ ಪುದುವಟ್ಟಿನ ಪ್ರಕಟನಮಾಲೆ

೧. *ಟಪಾಲ್ ಸಂಸ್ಥೆಯ ವಿವರ—ಕೆ. ಲಕ್ಷ್ಮೀನರಸಿಂಹಯ್ಯ, ಬಿ.ಎ., ಎಲ್.ಎಲ್.ಬಿ.

೨. *ವಿಶ್ವವಿಸರಣ—ಜಿ. ಎಸ್. ಪರಮಶಿವಯ್ಯ, ಎಂ.ಎಸ್‌ಸಿ.

೩. *ಸರ್ಕಾರದ ಪದ್ಧತಿ ಮತ್ತು ರಚನಾಕ್ರಮ—ಎಚ್. ಕೃಷ್ಣರಾವ್, ಎಂ.ಎ.

೪. *ವ್ಯವಸಾಯದ ಮಣ್ಣುಗಳು—ಕೂರಪಾಡು ಗುಂಡಪ್ಪ, ಬಿ.ಎ.

೫. *ಆಕಾಶಯಾನ—ಬಿ. ಕೆ. ಎ£. ರಾವ್.

೬. *ವಿಶ್ವವಿದ್ಯಾನಿಲಯಗಳು—ಡಾ|| ಎಂ. ಸಿದ್ಧಲಿಂಗಯ್ಯ, ಎಂ.ಎ., ಬಿ.ಟಿ., ಪಿಎಚ್.ಡಿ., ಡಿಪ್.ಎಡ್. ಮತ್ತು ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್.

೭. *ಹೆರಿಗೆ ಮತ್ತು ಶಿಶುಪೋಷಣೆ—ಡಾ|| ರತ್ನಮ್ಮ ಐಸಾಕ್, ಎಲ್.ಎಂ.ಎಸ್., ಎಂ.ಆರ್.ಸಿ.ಎಸ್., ಎಲ್.ಆರ್.ಸಿ.ಪಿ.

೮. *ಮಲೇರಿಯಾ ನಿರೋಧ—ಬಿ. ಅನಂತಸ್ವಾಮಿರಾವ್, ಬಿ.ಎಸ್‌ಸಿ., ಎಂ.ಬಿ., ಬಿ.ಎಸ್., ಎಂ.ಪಿ.ಎಚ್.

೯. *ಗ್ರಾಮ ನೈರ್ಮಲ್ಯ—ಎಸ್. ಡಿ. ನಾರಾಯಣಗೌಡ, ಎಂ.ಬಿ., ಬಿ.ಎಸ್., ಡಿ.ಪಿಎಚ್.

೧೦. ಪಶುಪಾಲನೆ—ಎಂ. ಕೃಷ್ಣಶಾಸ್ತ್ರೀ ಬಿ.ಎ., ಐ.ಡಿ.ಡಿ., ಅಸೋಸಿಯೇಟ್ ಐ.ಡಿ.ಆರ್.ಐ.

೧೧. ಯೋಗಾಸನಗಳು—ವಿದ್ವಾನ್ ಟಿ. ಕೃಷ್ಣಮಾಚಾರ್ಯ.

೧೨. ಮೈಸೂರು ದೇಶದ ರಸಾಯನಿಕ ಕೈಗಾರಿಕೆಗಳು—ಕೆ. ಅಶ್ವತ್ಥನಾರಾಯಣ ರಾವ್, ಡಿ.ಎಸ್‌ಸಿ.

೧೩. ವಿದ್ಯುಚ್ಛಕ್ತಿಯ ಉಪಯೋಗ—ಎಂ. ಬಿ. ತಿರುನಾರಾಯಣ, ಬಿ.ಎ., ಬಿ.ಎಸ್‌ಸಿ. (ಆನರ್ಸ್, ಇ.ಇ.) ಸಿ.ಪಿ., ಇ.ಟಿ. (ಐ.ಐ.ಎಸ್.)

೧೪. ಮಕ್ಕಳ ಬೆಳವಣಿಗೆ—ಡಾ|| ಬಿ. ಕುಪ್ಪುಸ್ವಾಮಿನಾಯಿಡು, ಎಂ.ಎ., ಡಿ.ಲಿಟ್.

೧೫. ರೇಡಾರ್—ಆರ್. ಎಲ್. ನರಸಿಂಹಯ್ಯ, ಎಂ.ಎಸ್‌ಸಿ.; ಸಾಧಾರಣ ಪ್ರತಿ ೬ ಆಣೆ; ಉತ್ತಮ ಪ್ರತಿ ೮ ಆಣೆ.

೧೬. ಗಣಿಕೆಲಸದ ಕೈಪಿಡಿ—ಜೆ. ಪಿ. ಡೇವಿಡ್, ಬಿ.ಎಸ್‌ಸಿ.; ಸಾಧಾರಣ ಪ್ರತಿ ೬ ಆಣೆ; ಉತ್ತಮ ಪ್ರತಿ ೮ ಆಣೆ.

ಅಚ್ಚಿನಲ್ಲಿವೆ

೧. ಪರಮಾಣುಶಕ್ತಿ—ಡಾ|| ಎಲ್. ಸೀಬಯ್ಯ, ಡಿ.ಎಸ್‌ಸಿ.

೨. ಲೋಹವಿದ್ಯೆ—ಶ್ರೀ ಬಿ. ಪಿ. ರಾಧಾಕೃಷ್ಣ

ಸಾಧಾರಣ ಪ್ರತಿ ೨ ಆಣೆ; ಉತ್ತಮ ಪ್ರತಿ ೩ ಆಣೆ.

ಕಾರ್ಯದರ್ಶಿ,

ಪ್ರಕಟನಶಾಖೆ ಮತ್ತು ವಿಶೇಷೋಪನ್ಯಾಸಗಳು, ಯೂನಿವರ್ಸಿಟಿ ಆಫೀಸ್, ಮೈಸೂರು

ಪ್ರಬುದ್ಧ ಕರ್ಣಾಟಕಕ್ಕೆ ವಿನಿಮಯವಾಗಿ ಬರುವ ಪತ್ರಿಕೆಗಳು

ಇಂಗ್ಲಿಷ್ ಪತ್ರಿಕೆಗಳು

Annals of the Oriental Research Institute, University, Madras; *Bramhavidya*, Adyar, Madras; *Bulletin of the School of Oriental Studies*, London; *Journal of the Andhra Historical Research Society*, Rajahmundry; *Journal of the Karnataka Historical Research Society*, Dharwar; *Quarterly Journal of the Mythic Society*, Bangalore; *The Indian* P.E.N., Bombay; *Annals of the Venkateswara Oriental Institute*, Tirupati; *The Jaina Siddhanta Bhaskara* and *The Jaina Gazette*, Arrah; *Bulletin of the Deccan College Research Institute*, Poona; *Publication of the Kannada Research Office*, Dharwar; *The Journal of the Literary Committee of the L.E. Association*, Dharwar; *Annals of Bhandarkar Oriental Research Institute*, Poona.

ವಾರಪತ್ರಿಕೆಗಳು

'ಒಕ್ಕಲಿಗರ ಪತ್ರಿಕೆ', ಬೆಂಗಳೂರು; 'ಕಂಠೀರವ', ಮಂಗಳೂರು; 'ಚೇತನಾ', ಬೆಂಗಳೂರು; 'ಕರ್ಣಾಟಕ ವೈಭವ', ಬಿಜಾಪುರ; 'ಪ್ರಭಾತ', ಮಂಗಳೂರು.

ಮಾಸಪತ್ರಿಕೆಗಳು

ಆಂಧ್ರ ಸಾಹಿತ್ಯ ಪರಿಷತ್ಪತ್ರಿಕೆ' (ತೆಲುಗು), ಕಾಕಿನಾಡ; 'ಕತೆಗಾರ', ಬೆಂಗಳೂರು; 'ಕನ್ನಡ ಸಹಕಾರಿ', ಮಂಗಳೂರು; 'ಜಯಕರ್ನಾಟಕ,' ಧಾರವಾಡ; 'ಜಯಂತಿ', ಧಾರವಾಡ; 'ಮೈಸೂರು ವ್ಯವಸಾಯ ಶೋಧಕ ಸಂಘದ ಪತ್ರಿಕೆ', ಬೆಂಗಳೂರು; 'ಮಕ್ಕಳ ಪುಸ್ತಕ', ಬೆಂಗಳೂರು; 'ಮೈಸೂರು ಸಹಕಾರ ಪತ್ರಿಕೆ', ಬೆಂಗಳೂರು; 'ವಿದ್ಯಾದಾಯಿನಿ', ಮೈಸೂರು; 'ವಿವೇಕಾಭ್ಯುದಯ', ಮೈಸೂರು; 'ಶರಣಸಾಹಿತ್ಯ', ಬೆಂಗಳೂರು; 'ಶಿವಾನುಭವ', ಬಿಜಾಪುರ; 'ಸದ್ಬೋಧಚಂದ್ರಿಕೆ', ಅಗಡಿ; 'ಸರಸ್ವತಿ', ಬೆಂಗಳೂರು; 'ಸುಬೋಧ', ಬೆಂಗಳೂರು; 'ಜೀವನ', ಬೆಂಗಳೂರು: 'ಕಥಾವಳಿ', ಬೆಂಗಳೂರು; 'ಪುಸ್ತಕ ಪ್ರಪಂಚ', ಮೈಸೂರು; 'ಕನ್ನಡ ನುಡಿ', ಬೆಂಗಳೂರು;

ತ್ರೈಮಾಸಿಕಪತ್ರಿಕೆಗಳು

'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ', ಬೆಂಗಳೂರು; 'ಭಾರತ ಇತಿಹಾಸ ಸಂಶೋಧನ ಮಂಡಲದ ಪತ್ರಿಕೆ' (ಮರಾಠಿ), ಪೂನಾ.

ಗ್ರಂಥಮಾಲೆ

'ಮನೋಹರ ಗ್ರಂಥಮಾಲೆ,' ಧಾರವಾಡ; 'ಮಿಂಚಿನಬಳ್ಳಿ', ಧಾರವಾಡ.

ಮೈಸೂರು ಮಹಾರಾಜರವರ ಕಾಲೇಜಿನ

ಕರ್ಣಾಟಕ ಸಂಘದ ಪ್ರಕಟನೆಗಳು

೧. ನಾಗಾನಂದನಾಟಕ—ಶ್ರೀ ಅನಂತನಾರಾಯಣ ಶಾಸ್ತ್ರಿ; ಬೆಲೆ, ೧ ರೂ.
೨. ಕರ್ಣಾಟಕ ಮೃಚ್ಛಕಟಿಕಪ್ರಕರಣಂ—ಆಸ್ಥಾನ ಕವಿ ನಂಜನಗೂಡು ಸುಬ್ಬಾಶಾಸ್ತ್ರಿಗಳವರಿಂದ; ರೂ. ೧-೧೨-೦.

ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಪ್ರಕಟಣೆಗಳು

೧. ಶ್ರೀ ಕೈಲಾಸಂ ಅವರ ಸ್ಮರಣೆ—ಶ್ರೀ ಕೆ. ವಿ. ಅಯ್ಯರ್; ರೂ. ೨-೪-೦.
೨. ಕರ್ಣಾಟಕ ಮಾಲವಿಕಾಗ್ನಿಮಿತ್ರ ನಾಟಕಂ—ಶ್ರೀ ಮೋಟಗಾನಹಳ್ಳಿ ಶಂ. ಸುಬ್ರಹ್ಮಣ್ಯಶಾಸ್ತ್ರೀ; ರೂ. ೧-೧೨-೦.
೩. ಮೊನ್ನ ವನ್ನ (ಮಾರಿಸ್ ಮ್ಯಾಟರ್‌ಲಿಂಕನ ಮೂರಂಕದ ನಾಟಕ)—ಶ್ರೀ ಎಸ್. ಜಿ. ಶಾಸ್ತ್ರಿ; ರೂ. ೨-೦-೦.
೪. ನಾಗನ ಪದಗಳು—ಶ್ರೀ ಜಿ. ಪಿ. ರಾಜರತ್ನಂ; ರೂ. ೧-೪-೦.
೫. ಶಕ್ತಿ (ಸಚಿತ್ರ)—ಶ್ರೀ ಆರ್. ಎಲ್. ನರಸಿಂಹಯ್ಯ; ರೂ. ೩-೦-೦.
೬. ಸುಪ್ರಭಾತವು—(ದೈವಭಕ್ತಿಯನ್ನು ಕುರಿತ ಪ್ರಬಂಧಗಳು) ರೂ. ೩-೦-೦.
೭. ಸೋಕ್ರಟೀಸನ ಮರಣ—ಶ್ರೀ ಎಸ್. ಜಿ. ಶಾಸ್ತ್ರಿ ರೂ. ೧-೪-೦.
೮. ಬಾಹುಬಲಿ ವಿಜಯಂ—(ಎರಡು ನಾಟಕಗಳು) ರೂ. ೧-೮-೦.
೯. ಕಾರ್ಕಳದ ಗೊಮ್ಮಟಸ್ವಾಮಿ—(ಲೇಖನ, ಕವನ) ರೂ. ೧-೦-೦.
೧೦. ನಮ್ಮ ನಮ್ಮವರು—(೬೭ ಬೇರೆ ಬೇರೆ ಕೃತಿಗಳು) ರೂ. ೨-೮-೦.
೧೧. ಬಾಲಸರಸ್ವತಿ—(೩೬ ಬೇರೆ ಬೇರೆ ಕೃತಿಗಳು) ರೂ. ೨-೮-೦.
೧೨ ಚಿನ್ನದ ದೋಸೆ ಮತ್ತು ಇತರ ಕಥೆಗಳು—ರೂ. ೦-೧೨-೦.
೧೩. ಮಕ್ಕಳ ಮಾತು—(ಎಸ್ಸೆಗಳು); ರೂ. ೧-೦-೦.
೧೪. ಪಚ್ಚೆಯ ತೆನೆ—(ಎಸ್ಸೆಗಳು); ರೂ. ೧-೦-೦.
೧೫. ಗಂಧದ ಹುಡಿ—(ಎಸ್ಸೆಗಳು); ರೂ. ೧-೦-೦.
೧೬. ದುರಾಸೆಯ ದಂಡ—(ಐದು ಏಕಾಂಕ ನಾಟಕಗಳು); ರೂ. ೧-೪-೦.
೧೭. ಜನಪ್ರಿಯ ವಿಜ್ಞಾನ—(ವಿಜ್ಞಾನ ಪ್ರಬಂಧಗಳು) ರೂ. ೧-೦-೦.

Edited by Sri S. V. Parameswara Bhatta, M.A. and Sri U. K. Subbarayachar, M.A.
Published by The University of Mysore, Mysore.
Printed by K. A. Korula at the Wesley Press and Publishing House, Mysore City

ಪ್ರಬುದ್ಧ ಕರ್ಣಾಟಕ

ಸಂಪುಟ ೩೭—ಸಂಚಿಕೆ ೪

೧೪೬

ಮನ್ಮಥ ಸಂವತ್ಸರ

ಪುಷ್ಯ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೫೬

ವಿಷಯ ಸೂಚಿಕೆ

ಪ್ರಬುದ್ಧ ಕರ್ಣಾಟಕ

ಮನ್ಮಥ ಸಂವತ್ಸರ	೧೪೬	ಪುಷ್ಯ ಸಂಚಿಕೆ

ತುದಿಯಲ್ಲೆ ಫಲವು ಬಹುದು[1]

ಅಗೋ ಭೂಮಿಹೃದಯ ಗಿರಿಶಿಖರಗಳಲಿ ಕೈಮೊಗ್ಗೆ ಮೇಲೆ ಮುಗಿಸಿ
ಅರ್ಪಿಸುತ್ತಲಿವೆ ಭಕ್ತಿಯನ್ನು ಬಾನಲ್ಲಿ ಸತ್ತ್ವ ಚಿಗಿಸಿ.
ಕೊಳಕು ಕೊಳ್ಳದಲಿ ಹುಚ್ಚು ಹಳ್ಳದಲಿ ಎಷ್ಟು ದಿವಸ ನಡೆವೆ?
ಎತ್ತರಕ್ಕೆ ಬಾರಣ್ಣ ಅಲ್ಲಿ ನೀ ಪಡೆವುದನ್ನು ಪಡೆವೆ.

ತಿರುಮಲೆಯ ಕಡೆಗೆ, ಶ್ರೀ ಶೈಲದೆಡೆಗೆ, ಶೃಂಗೇರಿ ಮಾರ್ಗವಾಗಿ
ಬೆಳಗುಳದ ಬೆಟ್ಟ, ಆ ಪೂರ್ವಘಟ್ಟ ಜೀವಕ್ಕೆ ಸ್ವರ್ಗವಾಗಿ
ಎಂದಿನಿಂದಲೋ ಸೆಳೆಯುತಿಹವು ಯಾತ್ರಿಕರ ಮೋದದಿಂದ
ಬದುಕು ಮಾಡಿಕೊಂಡಿಹುದು ಮನುಜಕುಲ ಆ ಪ್ರಸಾದದಿಂದ.

ಹೊಳೆಗೆ ತಾಯಿಮೊಲೆಯಾಗಿ ಬಾಳುತಿವೆ ಸರ್ವಪರ್ವತಾಗ್ರ.
ವನಕೆ ತವರು ಮನೆಯಾಗಿ ನೆಲಸಿಹವು ತಾನೆ ತಾ ಉದಗ್ರ
ಹೊಲಕೆ ಮಣ್ಣು ಆ ಮನೆಗೆ ಕಲ್ಲು ಹೆರುತಿಹವು ಏನು ಒಲವು
ಬಿಸಿಲುಗಾಲದಲಿ ನೆರೆಯ ತರುವವೋ ಗಂಗೆಗಳಿಗೆ ಕೆಲವು.

[1] Our right and natural road is towards the summits—Sri Aurobindo.

ಗುಡ್ಡದಲ್ಲೆ ಗುಡಿ ಕೊರೆದರಲ್ಲ ಕಣ್ಗಂಡ ಓಜರೆಲ್ಲ
ಶಿಲ್ಪವಲ್ಲ ನವಕಲ್ಪ ಸೃಷ್ಟಿ ಆ ಕಲೆಗೆ ಮರಣವಿಲ್ಲ.
ಧ್ಯಾನಲೀನ ಮನ ಏಳಿ ತೊಳೆದು ಅಜ್ಞಾನದಾಕಲಂಕ
ಜ್ಯೋತಿ ಜೀವನವೆ ಮೂರ್ತವಾದಂತೆ—ಜೀವ ದೇವತಾಂಕ.

ಕಲ್ಲಿನಲ್ಲೆ ದೇವತ್ವಮೂಡಿ ಆದರ್ಶವಾಗುತಿರಲು
ಮನುಜನಲ್ಲಿ ಯಾರೋಗ ಮೂಡಿ ಜೀವನವೆ ಬೊಕ್ಕು ಬೊರಲು
ಆಗುತಿಹುದೊ ಆ ಬೀಜ ಹುರಿದು ನಿರ್ನಾಮಗೊಳಿಸಲಹುದು
ಅಲ್ಲಿ ಇಲ್ಲಿ ಒರಗುವದದೇಕೆ, ತುದಿಯಲ್ಲೆ ಫಲವು ಬಹುದು.

—ಅಂಬಿಕಾತನಯದತ್ತ

ನಮಗೆ ಬೇಕಾಗಿರುವ ಇಂಗ್ಲಿಷ್

ಇಂದು ನಮ್ಮ ದೇಶದ ಮನಸ್ಸನ್ನು ಕುದಿಸುತ್ತಿರುವ ಸಮಸ್ಯೆಗಳಲ್ಲಿ ಭಾಷಾ ಸಮಸ್ಯೆಯೂ ಒಂದು ಪ್ರಮುಖಸ್ಥಾನ ಪಡೆದಿದೆ. ಪ್ರಾದೇಶಿಕ ದೃಷ್ಟಿಯಿಂದ, ಅಖಿಲ ಭಾರತೀಯ ದೃಷ್ಟಿಯಿಂದ, ಅಂತರರಾಷ್ಟ್ರೀಯ ದೃಷ್ಟಿಯಿಂದ, ಜ್ಞಾನಾರ್ಜನೆಯ ದೃಷ್ಟಿಯಿಂದ, ವಿದ್ಯಾಪ್ರಸಾರದ ದೃಷ್ಟಿಯಿಂದ, ಸಂಸ್ಕೃತಿಯ ದೃಷ್ಟಿಯಿಂದ, ನಾನಾ ದೃಷ್ಟಿಗಳಿಂದ ವಿವಿಧಾಭಿಪ್ರಾಯಗಳು ರಣರಂಗದಲ್ಲಿ ತುಮಲಯುದ್ಧ ಹೂಡಿದಂತಿದೆ. ಆಯಾ ಪ್ರದೇಶದ ದೇಶಭಾಷೆಗೆ ಅಲ್ಲಲ್ಲಿ ಪ್ರಾಧಾನ್ಯವಿರಬೇಕೆನ್ನುವವರು ಕೆಲರು ; ಅಖಿಲ ಭಾರತೀಯವೆಂದು ಒಪ್ಪಿಕೊಂಡಿರುವ ಸಂಯುಕ್ತಭಾಷೆಗೆ ಪ್ರಥಮ ಸ್ಥಾನವಿರಬೇಕು ಎನ್ನುವವರು ಕೆಲರು. ಸರ್ವ ವಿದ್ಯಾಶಾಸ್ತ್ರಗಳಿಗೂ ಆಗರವಾಗಿ, ವ್ಯಾವಹಾರಿಕ ದೃಷ್ಟಿಯಿಂದಲೂ ಅಂತರರಾಷ್ಟ್ರೀಯವಾಗಿರುವ ಇಂಗ್ಲಿಷ್ ಭಾಷೆಗೆ ಪ್ರಥಮಸ್ಥಾನವಿರಬೇಕೆಂದು ಕೆಲವರು.

ಈ ವಿಚಾರ ಮಂಥನ ನಿನ್ನೆ ಮೊನ್ನೆಯದಲ್ಲ. ಸ್ವಯಂ ಗಾಂಧಿಜಿಯೆ ಇವುಗಳನ್ನು ಕೂಲಂಕಷವಾಗಿ ಚರ್ಚಿಸಿ ತಮ್ಮ ನಿರ್ಧಾರಗಳನ್ನು ಸಕಾರಣವಾಗಿ ವಾದಿಸಿ ನಾಡಿನ ಮುಂದೆ ಇಟ್ಟು ಹೋಗಿದ್ದಾರೆ. ಅಲ್ಲದೆ ದೇಶ ವಿದೇಶಗಳ ತಜ್ಞರೂ ಮನಃಶಾಸ್ತ್ರೀಯವಾಗಿ ಪರಿಶೀಲಿಸಿ ತಮ್ಮ ಸಿದ್ಧಾಂತಗಳನ್ನು ಮುಂದಿಟ್ಟಿದ್ದಾರೆ. ನಾಡಿನ ಅಗ್ರಗಣ್ಯ ದೇಶಭಕ್ತರೂ ತಮ್ಮ ನಿಷ್ಪಕ್ಷಪಾತವಾದ ನಿರ್ಣಯಗಳನ್ನು ಆಗಿಂದಾಗ್ಗೆ ಘೋಷಿಸುತ್ತಾ ಬಂದಿದ್ದಾರೆ. ಈ ವಿಚಾರವಾಗಿ ಇನ್ನು ಸಾಕು ಎಂಬಷ್ಟು ಚರ್ಚೆ ನಡೆದಿದೆ. ಈ ಸಮಸ್ಯೆ ವಾದಪ್ರತಿವಾದದ ಎಲ್ಲೆಯನ್ನು ದಾಟಿ ಇತ್ಯರ್ಥದ ಸೀಮೆಯನ್ನು ಮುಟ್ಟಿದೆ ಎಂದು ಹೇಳಬಹುದು.

ಒಟ್ಟಿನಲ್ಲಿ ಆ ಇತ್ಯರ್ಥವನ್ನು ಹೀಗೆ ವಿವರಿಸಬಹುದು. ಆಯಾ ಪ್ರಾಂತಗಳಲ್ಲಿ ಆಯಾ ಪ್ರಾದೇಶಿಕ ಭಾಷೆಗಳಿಗೆ ಪ್ರಥಮಸ್ಥಾನ ಸಲ್ಲಬೇಕು. ಅಂತರ ಪ್ರಾಂತೀಯ ವ್ಯವಹಾರದೃಷ್ಟಿಯಿಂದ ಮತ್ತು ಕೇಂದ್ರದ ಆಡಳಿತದೃಷ್ಟಿಯಿಂದ ಅಖಿಲ ಭಾರತೀಯವಾದ ಸಂಯುಕ್ತ ಭಾಷೆಗೆ ಎರಡನೆ ಸ್ಥಾನ ಕೊಡಬೇಕು. ಅಂತರರಾಷ್ಟ್ರೀಯವಾದ ಭಾಷೆಗೆ ಅಥವಾ ಭಾಷೆಗಳಿಗೆ ಐಚ್ಛಿಕಸ್ಥಾನ ಕೊಡಬೇಕು. ಆಯಾ ಪ್ರಾಂತಗಳಲ್ಲಿ ಆಯಾ ದೇಶಭಾಷೆಗಳೇ ಆಡಳಿತ ಭಾಷೆಗಳಾಗಿರಬೇಕು. ಅಲ್ಲಿಯ ಶಿಕ್ಷಣವೆಲ್ಲ ಎಲ್ಲ ಮಟ್ಟಗಳಲ್ಲಿಯೂ ದೇಶಭಾಷಾ ಮಾಧ್ಯಮದಲ್ಲಿಯೇ ಸಾಗಬೇಕು.

ಈ ಸ್ಥೂಲವಿವರಣೆ ಬಹುಜನ ಸಮ್ಮತವಾಗಿರುವುದರಲ್ಲಿ ಸಂದೇಹವಿಲ್ಲ.

ಆದರೆ ಭಾಷೆಗಳ ಸ್ಥಾನವನ್ನು ಹೀಗೆ ನಿರ್ಣಯಿಸುವಾಗ ಅನೇಕರು ತಪ್ಪು ಅಭಿಪ್ರಾಯಗಳ ದೆಸೆಯಿಂದ ಆತಂಕಗೊಳ್ಳುತ್ತಾರೆ. ಅದರಲ್ಲಿಯೂ ಇಂಗ್ಲಿಷನ್ನು ಚೆನ್ನಾಗಿ ಅಭ್ಯಾಸಮಾಡಿ ಅದರ ಸಾಹಿತ್ಯವನ್ನು ತಣಿಯುಂಡು ಸವಿದು, ಅದರ ವೈಭವಕ್ಕೂ ವೈಶಾಲ್ಯಕ್ಕೂ ಮಾರುಹೋದವರಿಗೆ ಸಹಿಸಲಸಾಧ್ಯವಾದ ಸಂಕಟ ವಾಗುತ್ತದೆ. ಇಂಗ್ಲಿಷ್ ಭಾಷೆಯ ಮೂಲಕವೇ ತಮ್ಮ ಲೌಕಿಕ ಅಭ್ಯುದಯವನ್ನು ಸಾಧಿಸಿಕೊಂಡವರಿಗಂತೂ ಆ ಭಾಷೆಯಿಂದಲ್ಲದೆ ಬೇರೆ ಯಾವ ಭಾಷೆಯಿಂದಲೂ ಅಭ್ಯುದಯ ಸಾಧ್ಯವೇ ಇಲ್ಲ ಎಂಬಂತೆ ಭಾಸವಾಗುತ್ತದೆ. ನಮ್ಮ ಪ್ರಾಚೀನವಾದ ದೇಶಭಾಷೆಗಳ ಸಾಹಿತ್ಯದ ಅಥವಾ ಪ್ರಪ್ರಾಚೀನವಾದ ಸಂಸ್ಕೃತ ಸಾಹಿತ್ಯದ ವೈಭವ ವೈಶಾಲ್ಯಗಳ ಪರಿಚಯವಿಲ್ಲದೆ ಇರುವ ಇಂಗ್ಲಿಷ್ ವಿದ್ವಾಂಸರಿಗಂತೂ ಇಂಗ್ಲಿಷ್ ಭಾಷೆಯನ್ನು ಈ ಗಣ್ಯಸ್ಥಾನದಿಂದ ಅಲುಗಿಸಿದರೆ ಭರತಖಂಡವೆಲ್ಲ ಕಗ್ಗತ್ತಲೆಯಲ್ಲಿ ಅದ್ದಿಹೋಗುತ್ತದೆ ಎಂದೇ ನಂಬಿಕೆ. ಅಂಥವರ ಭಯಾಶಂಕೆಗಳ ಸಾಧಾರ ನಿರಾಧಾರ ಸತ್ಯಾಸತ್ಯತೆಗಳೇನೇ ಇರಲಿ ಅದರ ವಿಶ್ಲೇಷಣಕ್ಕೆ ಹೋಗದೆ, ಇನ್ನು ಮುಂದೆ ಇಂಗ್ಲಿಷಿಗೆ ಭಾಷಾದೃಷ್ಟಿಯಿಂದ, ಸಾಹಿತ್ಯದೃಷ್ಟಿಯಿಂದ ನಮ್ಮ ದೇಶದಲ್ಲಿ ಇರಬೇಕಾದ ಸ್ಥಾನವೇನು? ಅದು ಯಾವ ರೂಪದಲ್ಲಿ, ಯಾವ ಪ್ರಮಾಣ ದಲ್ಲಿ, ಎಷ್ಟರಮಟ್ಟಿಗೆ, ಎಷ್ಟು ಜನಕ್ಕೆ ಬೇಕಾಗುತ್ತದೆ, ಎಂಬೆಲ್ಲ ವಿಷಯಗಳನ್ನು ಕುರಿತು ಆಲೋಚಿಸುತ್ತೇವೆ.

ದೇಶಭಾಷೆಗೆ ಪ್ರಥಮಸ್ಥಾನ ಸಲ್ಲಬೇಕು. ದೇಶಭಾಷೆ ಶಿಕ್ಷಣಮಾಧ್ಯಮ ವಾಗಬೇಕು. ಎಂದೊಡನೆ ಕೆಲವರು ಇಂಗ್ಲಿಷ್ ಭಾಷಾಸಾಹಿತ್ಯಗಳಿಗೆ ಸಂಪೂರ್ಣ ಅರ್ಧಚಂದ್ರ ಪ್ರಯೋಗವಾಗಿಬಿಡುತ್ತದೆ ಎಂದು ವ್ಯಾಖ್ಯಾನಮಾಡಿ ದೇಶಭಾಷಾ ವಾದಿಗಳನ್ನು ಸ್ವಭಾಷಾಭ್ರಾಂತರೆಂದೂ ವಿದ್ಯಾಸಂಸ್ಕೃತಿ ವಿದ್ವೇಷಿಗಳೆಂದೂ ಸಂಕುಚಿತ ಮನೋಭಾವದವರೆಂದೂ ಟೀಕಿಸಿ ಖಂಡಿಸುತ್ತಾರೆ. ಇಂಗ್ಲಿಷ್ ಮೋಹಿ ಗಳ ಈ ಪ್ರಥಮಭ್ರಾಂತಿ ಮೊದಲು ನಿರಸನಗೊಳ್ಳಬೇಕು. ಇಂಗ್ಲಿಷ್ ಭಾಷೆಯ ಯೋಗ್ಯತೆ, ಅದರ ವ್ಯಾಪ್ತಿ, ಅದರಿಂದೊದಗುವ ಪ್ರಜ್ಞಾವೈಶಾಲ್ಯ, ಅದು ನಮ್ಮಲ್ಲಿ ಪ್ರಚೋದಿಸಿರುವ ವಿಚಾರಬುದ್ಧಿ, ಅದರಿಂದ ಮುಂದೆ ಎಂದೆಂದಿಗೂ ನಮಗೆ ಲಭಿಸಲಿರುವ ಸಂಪರ್ಕ ಸಹಾಯ ಮೊದಲಾದವುಗಳನ್ನೆಲ್ಲಾ ಅರಿತವರಾರೂ ಬ್ರಿಟಿಷ ರನ್ನು ಓಡಿಸಿದಂತೆ ಇಂಗ್ಲಿಷ್ ಭಾಷೆಯನ್ನೂ ಓಡಿಸಬೇಕೆಂದು ಹೇಳುವ ಅವಿವೇಕಕ್ಕೆ ಹೋಗಲಾರರು. ಹಾಗೆ ಹೇಳುವವರನ್ನು ಪ್ರಚ್ಛನ್ನ ದೇಶದ್ರೋಹಿಗಳೆಂದು ಕರೆಯ ಬೇಕಾಗುತ್ತದೆ. ಆದ್ದರಿಂದ ಇಂಗ್ಲಿಷ್ ನಮ್ಮೊಡನೆ ಉಳಿಯಬೇಕೆಂಬುದರಲ್ಲಿ ಭಿನ್ನಾಭಿ ಪ್ರಾಯವಿರುವುದಕ್ಕೆ ಅವಕಾಶವೇ ಇಲ್ಲ.

ಇಂಗ್ಲಿಷ್ ಉಳಿಯಬೇಕೆಂದು ನಿಶ್ಚಯಿಸಿದಮೇಲೆ ನಮ್ಮ ಮುಂದೆ ಏಳುವ ಪ್ರಶ್ನೆ ಅದು ಯಾವ ರೂಪದಲ್ಲುಳಿಯಬೇಕು? ಯಾವ ಪ್ರಮಾಣದಲ್ಲಿ? ಯಾರಿಗೆ? ಏತಕ್ಕೆ? ಯಾವ ಯಾವ ಉದ್ದೇಶಗಳಿಗಾಗಿ?

ಇಂಡಿಯಾಕ್ಕೆ ಇಂಗ್ಲಿಷ್ ಬಂದದ್ದು ಮುಖ್ಯವಾಗಿ ರಾಜಕೀಯ ಕಾರಣಗಳಿಂದಾಗಿ. ಅದನ್ನು ಅಧಿಕಾರಿಭಾಷೆಯೆಂದು ಘೋಷಿಸಿ ಕಡ್ಡಾಯವಾಗಿ ಅದನ್ನೆಲ್ಲರೂ ಕಲಿಯಬೇಕೆಂದು ವಿಧಿಸಿದುದೂ ಅದೇ ಕಾರಣಕ್ಕಾಗಿ. ಬಹುಜನರು ನಮ್ಮ ದೇಶದಲ್ಲಿ ಇಂಗ್ಲಿಷನ್ನು ಕಲಿತುದಕ್ಕೆ ಕಾರಣವೂ ರಾಜಕೀಯವೆ. ಅಥವಾ ಅದರಿಂದ ಉದ್ಭವಿಸುವ ಆರ್ಥಿಕಾದಿ ಪ್ರಯೋಜನಕ್ಕಾಗಿ. ಅದನ್ನೀಗಲೂ ಬಯಸುವ ಬಳಸುವ ಜನರಲ್ಲಿ ಬಹುಪಾಲು ಲೋಕೋಪಯೋಗ ದೃಷ್ಟಿಯನ್ನೇ ಹೊಂದಿರುತ್ತಾರೆ. ಆದರೆ ಈಗ ನಮ್ಮ ರಾಜಕೀಯ ಪರಿಸ್ಥಿತಿ ಬದಲಾಗಿದೆ. ಸ್ವತಂತ್ರಭಾರತ ಬೇರೊಂದು ಭಾಷೆಯನ್ನು ತನ್ನ ಅಧಿಕಾರಿ ಭಾಷೆಯನ್ನಾಗಿ ಆರಿಸಿದೆ. ಈ ಹೊಸ ಪರಿಸ್ಥಿತಿಯಲ್ಲಿ ಇಂಗ್ಲಿಷಿಗೆ ಸಲ್ಲಬೇಕಾದ ಸ್ಥಾನ ಯಾವುದು? ಇಂಗ್ಲಿಷನ್ನು ಬಿಡುವಂತಿಲ್ಲ; ಆದರೆ ಅದಕ್ಕೆ ಹಿಂದಿದ್ದ ಸ್ಥಾನವನ್ನು ಕೊಡುವಂತೆಯೂ ಇಲ್ಲ.

ಇನ್ನು ಮುಂದೆ ಇಂಗ್ಲಿಷ್ ಹಲವರು ಕಲಿಯುವ ಭಾಷೆಯಲ್ಲ; ಕೆಲವರು ಕಲಿಯಬೇಕಾದ ಭಾಷೆ.

ಇನ್ನು ಮುಂದೆ ಅನೇಕರಿಗೆ ಬೇಕಾದ ಇಂಗ್ಲಿಷಿನ ಮಟ್ಟವೆಂದರೆ ಅದನ್ನೋದಿ ಅರ್ಥಮಾಡಿಕೊಳ್ಳುವಷ್ಟೆ ಹೊರತು ಅದರಲ್ಲಿ ಸಂಭಾಷಿಸುವುದಾಗಲಿ, ಭಾಷಣ ಮಾಡುವುದಾಗಲಿ, ಬರೆಯುವುದಾಗಲಿ ಅಲ್ಲ.

ಈ ದೃಷ್ಟಿಯಿಂದ ನಮ್ಮ ಅಧ್ಯಯನ ಕ್ರಮದಲ್ಲಿ ಅದಕ್ಕೆ ಗಾಂಧಿಜಿ ಕೊಟ್ಟಿರುವ ಐಚ್ಛಿಕ ಭಾಷಾಸ್ಥಾನವೇ' ಯೋಗ್ಯವಾದದ್ದು. ಅದಕ್ಕೆ ಈಗ ಕೊಟ್ಟಿರುವ ಪ್ರಥಮ ಭಾಷಾಸ್ಥಾನ ದೇಶಕ್ಕೆ ಹಾನಿಕರ. ನಮ್ಮ ಬಾಲಕರ ಹಾಗೂ ತರುಣರ ಮನಶ್ಶಕ್ತಿಯನ್ನೆಲ್ಲ ಅಪವ್ಯಯಗೊಳಿಸಿ, ಅವರನ್ನು ಪರೀಕ್ಷೆಗಳಲ್ಲಿ ಅನ್ಯಾಯವಾಗಿ ಅನುತ್ತೀರ್ಣರನ್ನಾಗಿ ಮಾಡುವುದರಿಂದ ಅವರ ಹೃದಯದ ಆಶಾಭಾವನೆಯನ್ನೆ ಮೊಳಕೆಯಲ್ಲಿಯೆ ಚಿವುಟಿಹಾಕಿ ನಿರಾಶೆಯನ್ನೂ ಅಧೈರ್ಯವನ್ನೂ ತಂದೊಡ್ಡಿ, ಅವರ ಬದುಕನ್ನೇ ಬಯಲುಗೊಳಿಸುವ ಸಾಧನೆಯಾಗಿದೆ ಈ ಪರಭಾಷೆ! ನಮ್ಮ ಮಕ್ಕಳು ತಮಗೆ 'ಸಹಜ'ವಾದ ಸೆಲದ ನುಡಿಯನ್ನು ಕಲಿತು ಇನ್ನೇನು ಭಾಷೆಯಿಂದ ಭಾವಕ್ಕೂ ಜ್ಞಾನಕ್ಕೂ ರೆಕ್ಕೆಗೆದರಿ ಹಾರಬೇಕು ಎನ್ನುವಷ್ಟರಲ್ಲಿ ಈ ಹೊರಭಾಷೆಯ ಕಲ್ಲುಚಪ್ಪಡಿಯನ್ನು ಅವರ ತಲೆಗಳ ಮೇಲೆ ಹೇರುತ್ತೇವೆ! ಸರಿ, ಕನ್ನಡದಲ್ಲಿ ಕಲಿತುಬಿಟ್ಟಿದ್ದ ಬೆಕ್ಕು ಇಲಿ ಚಾಪೆ ಟೋಪಿಗಳನ್ನೇ ಮತ್ತೆ ಕ್ಯಾಟ್ ರ್ಯಾಟ್ ಮ್ಯಾಟ್

ಹ್ಯಾಟ್ ಎಂದು ತಮಗೆ ಅರ್ಥವಾಗದ ಸ್ಪೆಲ್ಲಿಂಗ್ ಸಹಿತವಾಗಿ ಬಾಯಿಪಾಠ ಮಾಡಬೇಕು! ಕನ್ನಡದಲ್ಲಿ ದೊಡ್ಡ ದೊಡ್ಡ ಹೊತ್ತಿಗೆಗಳನ್ನು ಉಲ್ಲಾಸದಿಂದ ಓದಿ, ಭಾವಕ್ಕೂ ಚಿಂತನಕ್ಕೂ ಕಣ್ಣರಳಿ ಎದೆಯರಳಿ, ಸಾಹಸಿಯಾಗಿ ಮುನ್ನುಗ್ಗಲೆಳಸುವ ಮಾಧ್ಯಮಿಕಶಾಲೆಯ ಬಾಲಕನ ಹಸುರುಚೇತನ ಇಂಗ್ಲಿಷ್ ಭಾಷಾಬಂಡೆಗೆ ಮುಗ್ಗರಿಸಿ ಹಸುರುಗಟ್ಟಿ ಉಸಿರುಕಟ್ಟಿ ಸೋತು ನಿಲ್ಲುವುದನ್ನು ಮಕ್ಕಳಿದ್ದು ಅವರ ಓದಿನ ಕಡೆಗೆ ಒಂದಿನಿತಾದರೂ ಗಮನ ಕೊಟ್ಟವರೆಲ್ಲರೂ ನೋಡಿಯೆ ಇರುತ್ತಾರೆ. ಅಲ್ಲದೆ ಹಳ್ಳಿಹಳ್ಳಿಗೂ ಹೈಸ್ಕೂಲುಗಳೇಳುತ್ತಿರುವ ಈ ಸಮಯದಲ್ಲಿ ಅಲ್ಲಿ ಇಂಗ್ಲಿಷ್ ಪಾಠ ಹೇಳುವ ಬೋಧಕರ ಮಟ್ಟವೂ ತುಂಬ ಇಳಿದು ಹೋಗಿರುವುದರಿಂದಲೂ ಬಾಲಕರ ಸಂಖ್ಯೆ ಮತ್ತು ಸಂಸ್ಕಾರ ವೈವಿಧ್ಯಗಳಲ್ಲಿ ಹಿಂದಣಕ್ಕಿಂತ ವಿಪುಲ ವ್ಯತ್ಯಾಸಗಳಾಗಿರುವುದರಿಂದಲೂ ಮೊದಲಿನಂತೆ ಬೆಂಚಿನ ಮೇಲೆ ನಿಲ್ಲಿಸಿ, ಕಿವಿ ಹಿಂಡಿ, ಚಡಿ ಏಟುಕೊಟ್ಟು, ಫರಂಗಿಮಣೆ ಕೂರಿಸಿ, ಕಪಾಳಕ್ಕೆ ಬಿಗಿದು, ಬಾಯಿ ಪಾಠ ಮಾಡಿಸಿ, ವ್ಯಕ್ತಿ ವ್ಯಕ್ತಿಗೆ ಗಮನಕೊಡುವ ಇಂಡಿವಿಜುಯಲ್ ಅಟೆನ್‌ಷನ್ನಿನ ಕಸರತ್ತಿಗಾಗಲಿ ಕವಾಯಿತಿಗಾಗಲಿ ಈಗ ಅವಕಾಶವೇ ಇಲ್ಲ! ಹೀಗೆ ಪರೀಕ್ಷೆ ಪರೀಕ್ಷೆಯಲ್ಲಿಯೂ ಒಂದೊಂದು ಮೆಟ್ಟಲಲ್ಲಿಯೂ 'ಕೃಪೆ'ಯೆ ರೆಟ್ಟೆ ಹಿಡಿದು ಎತ್ತಿ ಮೇಲಿನ ಮೆಟ್ಟಲಿಗೆ ಹಾಕಿದ ಹುಡುಗನ ಇಂಗ್ಲಿಷ್ ಜ್ಞಾನದ ದೋಣಿ ಹೇಗೂ ಕಾಲೇಜಿನ ಜಲಪಾತ ಪ್ರಪಾತದ ವರೆಗೂ ಸಾಗುತ್ತದೆ. ಅದುವರೆಗೂ ಏನೋಎಂತೋ ಅಂಕುಡೊಂಕು ಹರಿವ ಹೊಳೆ ಮಾತ್ರವಾಗಿದ್ದ ಇಂಗ್ಲಿಷು ಬಾಲಕನ ಕಣ್ಣಿಗೆ ಇದ್ದಕ್ಕಿದ್ದಂತೆ ಪ್ರಪಾತಕ್ಕೆ ಧುಮುಕುವ ಜಲಪಾತವಾಗಿ ಪರಿಣಮಿಸುತ್ತದೆ. ಇನ್ನೇನು ಮಾಡುತ್ತಾನೆ? ಪಾಪ! ಅದುವರೆಗೂ ತಾನು ಮಾಡುತ್ತಿದ್ದ ಅಲ್ಪ ಸ್ವಲ್ಪ ಪ್ರಯತ್ನದ ಹುಟ್ಟನ್ನೂ ಹೊಳೆಗೇ ಎಸೆದು, ಸುಮ್ಮನಾಗಿ, ದೋಣಿ ಮುಂಬರಿದು ತನಗೊದಗುವ 'ಗತಿಯ' ರುದ್ರರಮಣೀಯತೆಯ ರಸಾಸ್ವಾದನೆಯಲ್ಲಿ ತೊಡಗಬೇಕಾಗುತ್ತದೆ! ಅವನಿಗಿರುವ ಧೈರ್ಯ ಒಂದೇ ಒಂದು: ಈ ಅನಾಹುತದಲ್ಲಿ ತನ್ನೊಡನೆ ಸಮಪಾಲುಗೊಳ್ಳಲು ಒಡನಾಡಿಗಳು ಅಸಂಖ್ಯೇಯವಾಗಿದ್ದಾರೆ!

ದಡದಲ್ಲಿ ನಿಂತು ನೋಡುವ ಹಿರಿಯರ ಇತ್ಯರ್ಥವೇನು? ಹುಡುಗರೆಲ್ಲ ಈಚೀಚೆಗೆ ದಡ್ಡರಾಗುತ್ತಿದ್ದಾರೆ! ಸ್ಟ್ಯಾಂಡರ್ಡ್ ತುಂಬ ಇಳಿದುಹೋಗಿದೆ! ಹಾಗಾದರೆ ಏನು ಮಾಡಬೇಕು? ಇನ್ನಷ್ಟು ಇಂಗ್ಲಿಷ್ ಪಠ್ಯಪುಸ್ತಕ ಹೆಚ್ಚಿಸಿ! ಗ್ರಾಮರ್ ಲೇಹ್ಯ ಇನ್ನೂ ಸ್ವಲ್ಪ ಹೆಚ್ಚಾಗಿ ತಿನ್ನಿಸಿ! ಪರಿಣಾಮ: ಪರೀಕ್ಷೆಯ ಫಲಿತಾಂಶ ಪ್ರಕಟನ ಸಮಯದಲ್ಲಿ ಮತ್ತೆ 'ಕೃಪೆ'ಯೆ ಕೈಹಿಡಿದು ಎತ್ತಬೇಕು, ಮುಂದಿನ ಮೆಟ್ಟಲಿಗೆ.

ಈ ನಾಟಕ—ದುರಂತ ನಾಟಕ—ಇನ್ನು ಸಾಕು. ಇನ್ನು ಮುಂದೆ ಇಂಗ್ಲಿಷಿನ ಈ

ನೀರುನೀರು ಸಮಾರಾಧನೆ ನಿಲ್ಲಬೇಕು. ಅದಕ್ಕೆ ಬದಲಾಗಿ ಆಯ್ದ ಕೆಲವರಿಗೆ ಮಾತ್ರ ಗಟ್ಟಿ ಇಂಗ್ಲಿಷಿನ ಪುಷ್ಟಿಯೊದಗುವಂತೆ ನಮ್ಮ ವಿದ್ಯಾಭ್ಯಾಸ ಕ್ರಮದಲ್ಲಿ ಭಾಷೆಗಳ ಸ್ಥಾನ ನಿರ್ಣಯವಾಗಬೇಕು. ಇನ್ನು ಮುಂದೆ ಇಂಗ್ಲಿಷ್ ಎಲ್ಲರಿಗೂ ಬೇಡ; ಕೆಲವರಿಗೆ ಕೊಂಚಮಟ್ಟಿಗೆ ಬೇಕು; ಕೆಲವರಿಗೆ ಮಾತ್ರ ಚೆನ್ನಾಗಿಯೆ ಬೇಕು.

ಇಂಗ್ಲಿಷ್ ಕಲಿಯುವವರನ್ನು ಎರಡು ವಿಭಾಗವಾಗಿ ವಿಂಗಡಿಸಬಹುದು. ಭಾಷಾದೃಷ್ಟಿಯಿಂದ ಕಲಿಯುವವರು; ಸಾಹಿತ್ಯದೃಷ್ಟಿಯಿಂದ ಕಲಿಯುವವರು. ಭಾಷಾ ದೃಷ್ಟಿಯಿಂದ ಕಲಿಯುವವರಿಗೆ ಇಂಗ್ಲಿಷಿನ ಪರಿಚಯ ಚೆನ್ನಾಗಿ ಆಗಬೇಕು. ಅವರು ಆ ಭಾಷೆಯಲ್ಲಿ ಚೆನ್ನಾಗಿ ಓದಲೂ ಬರೆಯಲೂ ಮಾತನಾಡಲೂ ಭಾಷಣ ಮಾಡಲೂ ಬಲ್ಲವರಾಗಬೇಕು. ಅವರು ನಮಗೂ ಅಂತರರಾಷ್ಟ್ರೀಯ ಪ್ರಪಂಚಕ್ಕೂ ಸಾಹಿತ್ಯದಲ್ಲಿ, ಶಾಸ್ತ್ರದಲ್ಲಿ, ರಾಜಕೀಯದಲ್ಲಿ ಸಂಪರ್ಕ ಕಲ್ಪಿಸುವ ಸಾಧನಗಳಾಗಬೇಕು. ಇಂಥವರಿಗೆ ವಿದ್ಯಾಭ್ಯಾಸದ ಮೇಲಿನ ಮಟ್ಟದಲ್ಲಿ, ವಿಶೇಷವಾಗಿ ಸಾಹಿತ್ಯ ವಿಷಯಗಳಲ್ಲಿ, ಇಂಗ್ಲಿಷ್ ಶಿಕ್ಷಣಮಾಧ್ಯಮವಾಗಿದ್ದರೆ ಲೇಸು. ಏಕೆಂದರೆ ಅವರ ಉದ್ದೇಶವೇ ಆ ಭಾಷೆಯಲ್ಲಿ ಉದ್ದಾಮ ಪಾಂಡಿತ್ಯ ಸಂಪಾದನೆ.

ಆದರೆ ಇಂಗ್ಲಿಷನ್ನು ಆ ಭಾಷೆಯಲ್ಲಿರುವ ವಿಪುಲವಾದ ವಿವಿಧವಾದ ಶ್ರೀಮಂತವಾದ ಸಾಹಿತ್ಯಕ್ಕಾಗಿ ಅಭ್ಯಾಸ ಮಾಡುವವರ ವಿಷಯವೆ ಬೇರೆ. ಅವರಿಗೆ ಬೇಕಾದುದು ಭಾಷೆಯಲ್ಲ; ಕಾವ್ಯ, ಸಾಹಿತ್ಯ. ಅಲ್ಲಿಯ ಕವಿಗಳು, ಅಲ್ಲಿಯ ನಾಟಕ ಕಾರರು, ಅಲ್ಲಿಯ ತತ್ತ್ವಜ್ಞಾನಿಗಳು, ಅಲ್ಲಿಯ ರಾಜಕಾರಣಿಗಳು, ಸಹೃದಯರಿಗೆ ಜಿಜ್ಞಾಸುಗಳಿಗೆ ನೀಡುವ ರಸಾಂಶ, ಚಿಂತನಾಂಶ, ಸತ್ತ್ವ. ಇಂಗ್ಲಿಷನ್ನು ಅದರ ಸಾಹಿತ್ಯಕ್ಕಾಗಿ ಅಭ್ಯಾಸ ಮಾಡುವವರು ಆ ಭಾಷೆಯಲ್ಲಿ ಮಾತನಾಡುವುದನ್ನು ಅಭ್ಯಾಸ ಮಾಡಬೇಕಾಗಿಲ್ಲ; ಅದರಲ್ಲಿ ಬರೆಯುವುದಕ್ಕೂ ಶ್ರಮಿಸಬೇಕಾಗಿಲ್ಲ; ಅದನ್ನು ಓದಿ ಅರಿಯಬೇಕಾದುದೆಷ್ಟೊ ಅಷ್ಟೆ. ಆದ್ದರಿಂದ ಅವರು ಇಂಗ್ಲಿಷ್ ಸಾಹಿತ್ಯ ವನ್ನು ದೇಶಭಾಷಾ ಮಾಧ್ಯಮದ ಮೂಲಕವೆ ಅಭ್ಯಾಸಮಾಡಿದರೆ ಅದರ ರಸಸತ್ತ್ವ ಸುಲಭವಾಗಿ ಶೀಘ್ರವಾಗಿ ಜೀರ್ಣವಾಗಿ ರಕ್ತಗತವಾಗುತ್ತದೆ. ಎಲ್ಲ ದೇಶಗಳಲ್ಲಿಯೂ ಪರಭಾಷೆಯ ಸಾಹಿತ್ಯವನ್ನು ಸ್ವಭಾಷೆಯ ಮೂಲಕ ಕಲಿಯುವುದೇ ರೂಢಿ, ಸಹಜ ರೀತಿ. ಏಕೆಂದರೆ ಅವರ ಉದ್ದೇಶ ಆ ಪರಭಾಷೆಯಲ್ಲಿ ಬರೆಯುವ ಮಾತನಾಡುವ ಪಾಂಡಿತ್ಯ ಸಂಪಾದನೆಯಲ್ಲ, ಅದರ ಸಾಹಿತ್ಯದ ಸತ್ತ್ವದ ಆಸ್ವಾದನೆ ಮಾತ್ರ. ನಮ್ಮ ದೇಶದಲ್ಲಿ ಪರಕೀಯರ ಸೌಕರ್ಯಾರ್ಥವಾಗಿ ಆ ಭಾಷೆಯಲ್ಲಿ ಬರೆದು ಮಾತಾಡುವುದಕ್ಕಾಗಿಯೆ ನಮ್ಮ ವಿದ್ಯಾಭ್ಯಾಸ ಏರ್ಪಟ್ಟುದುದರಿಂದ ನಾವು ಪರಭಾಷಾ ಸಾಹಿತ್ಯವನ್ನು ಆ ಭಾಷಾ ಮಾಧ್ಯಮದಿಂದಲೇ ಕಲಿಯಬೇಕಾಯಿತು.

ಮೊದಲಿನಿಂದಲೂ ಆ ಸಾಹಿತ್ಯವನ್ನು ನಮ್ಮ ಭಾಷೆಯ ಮಾಧ್ಯಮದಿಂದಲೆ ಕಲಿಸಿದ್ದರೆ ನಮ್ಮವರಿಗೆ ಈಗ ಒದಗಿರುವ ರಸಪುಷ್ಟಿಗಿಂತಲೂ ಸಾವಿರ ಪಾಲು ಹೆಚ್ಚಿನ ರಸಪುಷ್ಟಿ ಒದಗುತ್ತಿತ್ತು. ಪರಭಾಷೆಯನ್ನು ಪರಭಾಷಾ ಮಾಧ್ಯಮದಿಂದಲೆ ಕಲಿಯುವ ವಿಕಾರ ಪರಿಸ್ಥಿತಿ ಎಷ್ಟರಮಟ್ಟಿಗೆ ಮುಂದುವರಿದಿದೆಯೆಂದರೆ—ಷೇಕ್ಸ್‌ಪಿಯರ್, ಮಿಲ್ಟನ್, ವರ್ಡ್ಸ್‌ವರ್ತ್ ಮೊದಲಾದ ಕವಿಗಳ ಕೃತಿಗಳನ್ನು ಕನ್ನಡದ ಮೂಲಕ ಪಾಠ ಹೇಳ ಬಹುದೆಂಬ ಸಂಗತಿ ಇಂದಿಗೂ ಅನೇಕರಿಗೆ ದಿಗ್‌ಭ್ರಾಂತಿಕರ ವಿಸ್ಮಯವಾಗಿದೆ. ಆದರೆ ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾರ್ಜನೆಮಾಡಿ, ಅಲ್ಲಿಯೆ ಅಧ್ಯಾಪಕರಾಗಿ ಸೇರಿ, ತಾವೇ ವಿದ್ಯಾರ್ಥಿಗಳಾಗಿಯೂ, ಅಧ್ಯಾಪಕರಾಗಿಯೂ, ವಿದ್ಯಾರ್ಥಿಗಳ ಇಂಗ್ಲಿಷ್ ಭಾಷಾ ಸಾಮರ್ಥ್ಯವನ್ನೂ, ಸಾಹಿತ್ಯ ರಸಾಸ್ವಾದನಾ ಶಕ್ತಿಯನ್ನೂ ಗಮನಿಸುತ್ತ ಬಂದವರಿಗೆ ನಿಜಸ್ಥಿತಿ ಚೆನ್ನಾಗಿ ಗೊತ್ತು. ಇಂಗ್ಲಿಷ್ ಭಾಷೆಯಲ್ಲಿ, ತನ್ನ ಅಭಿಪ್ರಾಯಗಳನ್ನು ವ್ಯಕ್ತಗೊಳಿಸುವ ಶಕ್ತಿ ಏನೇನೂ ಇಲ್ಲದ ವಿದ್ಯಾರ್ಥಿಗೆ ಪರೀಕ್ಷೆಯಲ್ಲಿ ಮ್ಯಾಕ್‌ಬೆತ್ ಪಾತ್ರದ ವಿಚಾರವಾಗಿ ಪ್ರಬಂಧ ಬರೆಯುವ ಸಂಕಟ ಒದಗಿದರೆ ಏನು ಮಾಡುತ್ತಾನೆ? ಪೂರ್ವಸಿದ್ಧತೆ ಮಾಡಿದ ಪ್ರಬಂಧವನ್ನು ಗಟ್ಟಿ ಮಾಡಿದ್ದರೆ ಅದನ್ನು ಉತ್ತರ ಪತ್ರಿಕೆಗೆ ಇಳಿಸಿ ತೇರ್ಗಡೆಹೊಂದುತ್ತಾನೆ. ಅಂತಹ ನಿಗೆ ನಿಜವಾಗಿಯೂ ಷೇಕ್ಸ್‌ಪಿಯರ್ ನಾಟಕ ರಸಾಸ್ವಾದನೆಯಿಂದ ಅರಿವಾಗಿರುತ್ತದೆ ಎಂದು ಹೇಳಲಾಗುವುದಿಲ್ಲ. ಅದೇ ಇನ್ನೊಬ್ಬ ವಿದ್ಯಾರ್ಥಿಗೆ ಅದರ ಅರಿವು ಸ್ವಲ್ಪ ಮಟ್ಟಿಗೆ ಆಗಿದ್ದರೂ ಅದನ್ನು ಬರೆಯುವ ಭಾಷಾ ಸಾಮರ್ಥ್ಯವಿಲ್ಲದೆ ತಪ್ಪುತಪ್ಪಾಗಿ ಏನನ್ನೊ ಬರೆದು ಫೆಯಿಲ್ ಆಗುತ್ತಾನೆ. ತನ್ನ ಭಾಷೆಯಲ್ಲಿಯೇ ಉತ್ತರ ಬರೆಯುವ ಸ್ವಾತಂತ್ರ್ಯ ಅವನಿಗಿದ್ದಿದ್ದರೆ ಮ್ಯಾಕ್‌ಬೆತ್ ಪಾತ್ರವನ್ನು ಕುರಿತು ಚೆನ್ನಾಗಿಯೆ ಬರೆಯುತ್ತಿದ್ದನೆಂಬುದರಲ್ಲಿ ಸಂದೇಹವಿಲ್ಲ. ಈಚೀಚೆಗೆ ನಮ್ಮ ವಿಶ್ವವಿದ್ಯಾನಿಲಯ ಗಳಲ್ಲಿ ಭಾಷೇತರ ವಿಷಯಗಳಲ್ಲಿ ಮೊದಲಿಗಿಂತಲೂ ಸಮಧಿಕ ಪ್ರಮಾಣದಲ್ಲಿ ಅನುತ್ತೀರ್ಣರಾಗುತ್ತಿರುವುದಕ್ಕೆ ಮುಖ್ಯಕಾರಣ ಇಂಗ್ಲಿಷ್ ಭಾಷಾ ಮಾಧ್ಯಮವೇ ಹೊರತು ವಿಷಯಗಹನತೆಯೂ ಇಲ್ಲ, ವಿದ್ಯಾರ್ಥಿವರ್ಗದ ಬುದ್ಧಿಶಕ್ತಿಯ ಸರ್ವ ತ್ರಾವನತಿಯೂ ಅಲ್ಲ. ಆದ್ದರಿಂದ ಇಂಗ್ಲಿಷನ್ನು ಅದರ ಸಾಹಿತ್ಯಕ್ಕಾಗಿ ಅಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಕನ್ನಡ ಮಾಧ್ಯಮದಲ್ಲಿಯೆ ಪಾಠ ಹೇಳಬೇಕು, ಪರೀಕ್ಷೆ ನಡೆಸಬೇಕು.

ಇಂಗ್ಲಿಷನ್ನು ಅದರ ಪ್ರಥಮ ಭಾಷಾಸ್ಥಾನದಿಂದ ಸದ್ಯಕ್ಕೆ ದ್ವಿತೀಯ ಸ್ಥಾನಕ್ಕೆ ಇಳಿಸಿ ಕನ್ನಡವನ್ನು ಪ್ರಥಮ ಭಾಷಾಸ್ಥಾನಕ್ಕೆ ಏರಿಸಿ ಪ್ರಥಮ ಭಾಷೆಯ ಮೂರು ಪ್ರಶ್ನೆ ಪತ್ರಿಕೆಗಳಲ್ಲಿ ಒಂದನ್ನು ಇಂಗ್ಲಿಷ್ ಸಾಹಿತ್ಯ ಎಂಬ ಹೆಸರಿನಲ್ಲಿ

ಇಂಗ್ಲಿಷ್ ಸಾಹಿತ್ಯಕ್ಕೆ ಮೀಸಲಾಗಿರಿಸಿ, ಕನ್ನಡದಲ್ಲಿ ಪಾಠ ಹೇಳಿ, ಕನ್ನಡದಲ್ಲಿಯೆ ಉತ್ತರ ಬರೆಯುವಂತೆ ಮಾಡಿದರೆ, ನಮ್ಮ ಮಕ್ಕಳಿಗೆ ಇಂಗ್ಲಿಷ್ 'ಭಾಷೆಯ ಹೊರೆಯನ್ನು ತಪ್ಪಿಸುವುದರ ಜೊತೆಗೆ, ಇಂಗ್ಲಿಷ್ ಸಾಹಿತ್ಯದ ರಸಾಮೃತವನ್ನು ಪಾನ ಮಾಡಿಸಿದಂತಾಗಿ ಅವರ ಪುಷ್ಟಿ ಈಗಿರುವುದಕ್ಕಿಂತಲೂ ನೂರ್ಮಡಿ ಹೆಚ್ಚುವುದರಲ್ಲಿ ಸಂದೇಹವಿಲ್ಲ.

ಇಂಗ್ಲಿಷ್ ಹೋದರೆ ಎಲ್ಲ ಕೊಚ್ಚಿಹೋಗುತ್ತದೆ ಎಂದು ಕೂಗಿಕೊಳ್ಳುವವರಿಗೆ ಇನ್ನೂ ಒಂದು ಸಮಾಧಾನ ಹೇಳಬೇಕಾಗುತ್ತದೆ ಮೇಲೆ ವಿವರಿಸಿದಂತೆ. ಇಂಗ್ಲಿಷ್ ಸಂಪೂರ್ಣವಾಗಿ ಹೋಗುವುದಿಲ್ಲ. ಹಲವರಲ್ಲಿ ಸಾಹಿತ್ಯವಾಗಿ ಉಳಿದಿರುತ್ತದೆ. ಕೆಲವರಲ್ಲಿ ಭಾಷೆಯಾಗಿಯೂ ಉಳಿಯುತ್ತದೆ. ಅಲ್ಲದೆ ಇಂಗ್ಲಿಷ್ ಕಲಿಯುವ ಇತರ ಬಹುಜನರಿಗೂ ಇಂಗ್ಲಿಷ್ ಮೋಹಿಗಳು ಊಹಿಸುವಂತೆ ಯಾವ ತೆರನಾದ ಭಾವನಷ್ಟವಾಗಲಿ ಬುದ್ಧಿದಾರಿದ್ರ್ಯವಾಗಲಿ ಸಂಭವಿಸುವುದಿಲ್ಲ. ಏಕೆಂದರೆ ಕನ್ನಡದ ಈಗಿನ ಸ್ಥಿತಿ ಇಪ್ಪತ್ತೈಯ್ದು ಮೂವತ್ತು ವರ್ಷಗಳ ಹಿಂದೆ ಇದ್ದ ಸ್ಥಿತಿಯಲ್ಲ. ಈಗ ಇಂಗ್ಲಿಷ್ ಒಂದಕ್ಷರ ಬರದಿದ್ದವನೂ ಕೂಡ ಆಗ ಇಂಗ್ಲಿಷಿನ ಮೂಲಕವೇ ಪಡೆಯಬೇಕಾಗಿದ್ದ ಭಾವದ ಮತ್ತು ಬುದ್ಧಿಯ ಪುಷ್ಟಿಗಳನ್ನು ಕನ್ನಡದ ಮೂಲಕವೇ ಯಥೇಚ್ಛವಾಗಿ ಪಡೆಯುವಷ್ಟರ ಮಟ್ಟಿಗೆ ಕನ್ನಡ ವಾಙ್ಮಯ ಸಾಹಿತ್ಯ ಶಾಸ್ತ್ರದ ವಿವಿಧ ಶಾಖೆಗಳಲ್ಲಿ ಮುಂಬರಿದಿದೆ; ದಿನದಿನಕ್ಕೂ ಬೆಳೆದು ಪ್ರಗತಿ ಹೊಂದುತ್ತಿದೆ. ಅಷ್ಟೇ ಅಲ್ಲ, ಇಂಗ್ಲಿಷ್ ಸಾಹಿತ್ಯವನ್ನೂ ಆಮೂಲಾಗ್ರವಾಗಿ ಓದಿದವರೂ ಬೆಕ್ಕಸ ಬಡುವಂತಹ ಸಾಹಿತ್ಯ ಶೃಂಗಗಳೂ ಕನ್ನಡದಲ್ಲಿ ಕೆಲವಾದರೂ ಮೂಡಿವೆ. ಹಿಂದಿನ ಮತ್ತು ಇಂದಿನ ಕನ್ನಡ ಸಾಹಿತ್ಯದ ರಸಸಾಗರದಲ್ಲಿ ಮುಳುಗಿದವನು ತಾನು ಇಲ್ಲಿ ಅನುಭವಿಸದಿದ್ದ ಅಥವಾ ಅನುಭವಿಸಲಾರದಿದ್ದ ಯಾವ ನೂತನತೆಯನ್ನಾಗಲಿ ರಸೋನ್ಮೇಷವನ್ನಾಗಲಿ ಅಲ್ಲಿ ಕಂಡು ಕರುಬುವ ಪರಿಸ್ಥಿತಿಯಿಂದ ನಾವು ಬಹುದೂರ ಮುಂದುವರಿದಿದ್ದೇವೆ. ತಾವು ವಿದ್ಯಾರ್ಥಿಗಳಾಗಿದ್ದಾಗ ಓದಿದ್ದ ಅಥವಾ ಶಾಲಾ ಕಾಲೇಜುಗಳಲ್ಲಿ ಕಡಮೆ ಸಂಬಳದ ಬಡ ಉಪಾಧ್ಯಾಯರಿಂದ ಪಾಠ ಕೇಳಿದ್ದ ಅಂತಸ್ತಿನಲ್ಲಿಯೆ ಕನ್ನಡ ಈಗಲೂ ಇದೆ ಎಂದು ಭ್ರಮಿಸಿರುವ ರಾಜ್ಯಲಲಾಟ ಲೇಖನ ನೌಕೆಯ ಕರ್ಣಧಾರರಾಗಿರುವ ವಯಸ್ಕ ಮಹನೀಯರು ಮಾತ್ರ ಕನ್ನಡದ ಶಕ್ತಿಯ ವಿಚಾರವಾಗಿ ಶಂಕಿಸಬಹುದೆ ವಿನಾ ಉಳಿದ ತಿಳಿದವರಾರೂ ಶಂಕಿಸರು.

—ಕುವೆಂಪು

ಗಾಥಾಸಪ್ತಶತಿಯಿಂದ

೧

ನಿನಗಿಂತ ಹೆಚ್ಚಾಗಿ ತರುಣನೆ ಕೇಳಿಂದು
ಪ್ರಿಯವೆಸಗೆನ್ನ ಜೀವನವೆ ;
ಆದರು ಮುನಿದಿಹ ನಿನ್ನ ಸಂತೈಸುವೆ
ನೀನಿಲ್ಲದೀಜೀವವುಳಿಯದೆಂದು.

೨

ಎನಿತೊಲವನು ನೀಡಬಲ್ಲೆಯೊ ಕಡೆವರೆ-
ಗನಿತೊಲವನೆ ನೀಡು ನಲ್ಲ ;
ಬಂದ ಹಸಾದವು ತಿರುಗಿದರೆಲ್ಲರಿ-
ಗಳಲನು ತಾಳುವ ಶಕ್ತಿಯಿಲ್ಲ.

೩

ಒಡೆತನವನು ಮಾಜಿ ಕಿಂಕರರಂತಾರು
ಮುನಿದಿರುವಿನಿಯರ ಸಂತಪಿಸುವರು
ನಾರಿಯರೊಲುಮೆಯನವರೆಯೆ ಪಡೆವರು
ಉಳಿದವರೆಲ್ಲರು ಬರಿದೆ ವಲ್ಲಭರು.

೪

ತಾವರೆ ಎಲೆಯ ಮೇಲಿಹುದದೊ ಬೆಳ್ಳಕ್ಕಿ
ಅಲುಗದೆ ಅಳ್ಳಾಡದುಂತೆ
ತೊಳೆದೊಂದು ಪಚ್ಚೆಯ ತಟ್ಟೆಯ ಮೇಲಿಟ್ಟ
ಶಂಖದ ಚಿಪ್ಪೆನುವಂತೆ.

—ಎಸ್. ವಿ. ಪರಮೇಶ್ವರಭಟ್ಟ.

ಸಾಹಿತ್ಯ: ಜೀವನದ ಗತಿಬಿಂಬ

ಸಾಹಿತ್ಯವೆಂದರೆ ಏನು ಎಂಬ ಪ್ರಶ್ನೆಗೆ, ಹಲವರು ಹಲವು ರೀತಿಯಾದ ಸೂತ್ರಗಳನ್ನು ಹೇಳಿದ್ದಾರೆ. ಅವುಗಳಲ್ಲಿ, "ಸಾಹಿತ್ಯ ಜನಜೀವನದ ಪ್ರತಿಬಿಂಬ" "ಸಾಹಿತ್ಯ ಜನಜೀವನದ ಕೈಗನ್ನಡಿ", "ಸಾಹಿತ್ಯ ಜನಜೀವನದ ವಿಮರ್ಶೆ"—ಇತ್ಯಾದಿ ಸೂತ್ರಗಳು ಎಲ್ಲರಿಗೂ ಪರಿಚಿತವಾಗಿವೆ. ಈ ಸೂತ್ರಗಳಲ್ಲಿ "ಸಾಹಿತ್ಯ ಜನಜೀವನದ ಪ್ರತಿಬಿಂಬ" ಎನ್ನುವ ಮಾತನ್ನು ಇಲ್ಲಿ ಚಿಕಿತ್ಸೆಗೆ ಒಳಪಡಿಸಲಾಗಿದೆ.

ಸಾಹಿತ್ಯವೆಂದರೆ ಏನು ಎಂಬ ಪ್ರಶ್ನೆಗೆ, ಬಹುಮಂದಿ ತೀರ ಸಹಜವಾಗಿ ಕೊಡುವ ಉತ್ತರವೆಂದರೆ, "ಸಾಹಿತ್ಯ ಜನಜೀವನದ ಪ್ರತಿಬಿಂಬ" ಎನ್ನುವುದು. ಅದು ಅಷ್ಟರ ಮಟ್ಟಿಗೆ—ಕಂಠಪಾಠವಾದಷ್ಟು ಮಟ್ಟಿಗೆ—ಬಳಕೆಯಾಗಿದೆ. ಆದರೆ ಈ ಸೂತ್ರ ಬಳಸಿ ಬಳಸಿ ಹಳೆಯದಾಗಿರುವುದು ಮಾತ್ರವಲ್ಲ ಹಳಸಲೂ ಆಗಿದೆ! ಸಾಹಿತ್ಯ ಜನಜೀವನದ "ಪ್ರತಿಬಿಂಬ" ಅಲ್ಲ; ಅದು ಪ್ರತಿಬಿಂಬವಾಗಲು ಬಹುಶಃ ಸಾಧ್ಯವೂ ಇಲ್ಲ. ಏಕೆಂದರೆ ಜನಜೀವನ ಹೇಗಿದೆಯೋ ಹಾಗೆ, ತದ್ವತ್ತಾಗಿ ಅದನ್ನು ಪ್ರತಿಬಿಂಬಿಸಲು ಸಾಹಿತಿಯ ಮನಸ್ಸು ನಿರ್ಜೀವವಾದ ಕನ್ನಡಿಯಲ್ಲ. ಕನ್ನಡಿಯಲ್ಲಿ, ಅದರ ಎದುರಿಗೆ ಇರುವ ವಸ್ತು ಯಥಾವತ್ತಾಗಿ ಪ್ರತಿಫಲಿಸುವಂತೆ [ಕನ್ನಡಿಯಲ್ಲೂ ಸಹ ಎಡಗಡೆಯದು ಬಲಗಡೆಗೆ, ಬಲಗಡೆಯದು ಎಡಗಡೆಗೆ ಕಾಣಿಸುತ್ತದೆ] ಸಾಹಿತ್ಯದಲ್ಲಿ ಜನಜೀವನ ಕಾಣುವುದಿಲ್ಲ; ಅಥವಾ ಹಾಗೆ ಕಾಣಿಸಬೇಕಾಗಿಯೂ ಇಲ್ಲ. ಜನಜೀವನದ 'ಪ್ರತಿ'ಯನ್ನೇ ನಾವು ಸಾಹಿತ್ಯದಲ್ಲಿ ಕಾಣುವುದಾದರೆ, ನಾವು ಸಾಹಿತ್ಯಕ್ಕೇಕೆ ಹೋಗಬೇಕು? ನಮಗೆ ಜನಜೀವನವೇ ಸಾಕು. ಈ ಅರಿವಿನಿಂದಲೋ ಏನೊ, "ಸಾಹಿತ್ಯ ಜೀವನವನ್ನು ಬಿಂಬಿಸುವ ಮಂತ್ರದ ಕನ್ನಡಿ" ಎಂಬ ಹೊಸ ಸೂತ್ರವೊಂದು ನಿರ್ಮಾಣವಾಗಿ "ಸಾಹಿತ್ಯ ಜನಜೀವನದ ಪ್ರತಿಬಿಂಬ" ಎನ್ನುವ ಮಾತಿನ ದೋಷವನ್ನು ತಕ್ಕಮಟ್ಟಿಗೆ ತಿದ್ದಿತು.

ಇದಕ್ಕಿಂತಲೂ ಹೆಚ್ಚು ಅರ್ಥಪೂರ್ಣವಾದ ಸೂತ್ರವೊಂದನ್ನು ಮಾಡುವುದಾದರೆ "ಸಾಹಿತ್ಯ ಜನಜೀವನದ ಗತಿಬಿಂಬ" ಎನ್ನಬಹುದು. ಇಲ್ಲಿ ಬಳಸಿರುವ "ಗತಿ" ಮತ್ತು "ಬಿಂಬ" ಈ ಎರಡು ಮಾತುಗಳ ಅರ್ಥವನ್ನು ವಿವರಿಸಿದರೆ ಈ ಸೂತ್ರದ ಅರ್ಥ ಸ್ಪಷ್ಟವಾದೀತು.

ಮೊದಲನೆಯದಾಗಿ "ಗತಿ" ಎಂಬ ಮಾತಿಗೆ, ಈ ಹೊಸ ಸೂತ್ರದ ವಿವರಣೆಯ ದೃಷ್ಟಿಯಿಂದ ಮೂರು ಬಗೆಯ ಅರ್ಥವನ್ನು ಇಟ್ಟುಕೊಳ್ಳಬಹುದು. ಅರ್ಥಸ್ಪಷ್ಟತೆಗಾಗಿ ಸಮಾನವಾದ ಆಂಗ್ಲ ಪದಗಳನ್ನೂ ಸೂಚಿಸಲಾಗಿದೆ.

(೧) 'ಗತಿ' ಎಂದರೆ, ಚಲನೆ, ನಡಿಗೆ. (Movement)

(೨) 'ಗತಿ' ಎಂದರೆ, ದಿಕ್ಕು, ಗುರಿ, ಉದ್ದೇಶ (Direction ; Purpose)

(೩) 'ಗತಿ' ಎಂದರೆ, ಸದ್ಯದಸ್ಥಿತಿ, ಅವಸ್ಥೆ (The state of life ; condition) ಎಂದರೆ, ಸಾಹಿತ್ಯ, ಅಂದಂದಿನ ಜನಜೀವನ ಯಾವರೀತಿಯಲ್ಲಿ ಸಾಗುತ್ತಿದೆ, ಅದರ ಚಲನೆ ಹೇಗಿದೆ, ಪ್ರಗತಿಪರವೋ, ಸಾಂಪ್ರದಾಯಿಕವೋ ಎಂಬ ಅದರ ಮನೋವ್ಯಾಪಾರ (Activity)ಗಳ ವಿವರವನ್ನು ; ಅದರ ಗುರಿಯೇನು, ಉದ್ದೇಶವೇನು, ಅದು ಬರಿಯ ಲೌಕಿಕವೋ, ಯೌಗಿಕವೋ ಎಂಬ ಸಾಂಸ್ಕೃತಿಕ ಅಂಶವನ್ನು ; ಅದಕ್ಕೆ ಒದಗಿರುವ ಗತಿ, ಅವಸ್ಥೆ ಏನು ಎಂಬ ನಾಗರಿಕ, ಸಾಮಾಜಿಕ ಇತ್ಯಾದಿ ವಿಷಯುಗಳನ್ನು—ಬಿಂಬಿಸುತ್ತದೆ. ಪಂಪನ ಕಾಲದ ಸುವರ್ಣಯುಗದ ಜನಜೀವನ ಕ್ಷಾತ್ರದ, ತ್ಯಾಗದ-ಭೋಗದ ಗತಿಯಲ್ಲಿ ಸಾಗಿದರೆ, ಹನ್ನೊಂದನೆಯ ಶತಮಾನದಲ್ಲಾಗಲೀ, ಹದಿಮೂರು ಹದಿನಾಲ್ಕನೆಯ ಶತಮಾನದಲ್ಲಾಗಲೀ ಅದರ 'ಗತಿ'ಯೇ ಬದಲಾಯಿಸಿರುವುದರ 'ಬಿಂಬ'ವನ್ನು ಆಯಾ ಕಾಲದ ಸಾಹಿತ್ಯ ಕೃತಿಗಳೇ ಸ್ಪಷ್ಟಪಡಿಸುತ್ತವೆ. ಪಂಪನಿಂದ ಇಂದಿನ ವರೆಗೂ ಬೆಳೆದಿರುವ ಸಾಹಿತ್ಯವನ್ನು ಅವಲೋಕಿಸಿದರೆ ನಾವು ಸಾಹಿತ್ಯದಲ್ಲಿ ಜನಜೀವನದ 'ಗತಿ'ಯನ್ನೂ, ಮತ್ತು ಅದನ್ನು ಬಿಂಬಿಸಿರುವ ಕವಿಮನೋಗತಿಯನ್ನೂ ಕಾಣಬಹುದು. ಅಷ್ಟೇ ಅಲ್ಲದೆ ಕವಿಯ ಕೃತಿಗಳಲ್ಲಿ ನಾವು ಕಾಣುವ ಭಾವಗತಿಯಲ್ಲಿ, ಛಂದೋಗತಿಯಲ್ಲಿ ಕೂಡಾ ಅಂದಂದಿನ ಯುಗಧರ್ಮವನ್ನು ಗುರುತಿಸಬಹುದು. ಬೆಳ್ಗೊಳದ ಗೊಮ್ಮಟನ ಭವ್ಯವಿಗ್ರಹವನ್ನು ಕೆತ್ತಿದ ಕಾಲದ ಜನಜೀವನದ 'ಗತಿ'ಗೂ, ಬೇಲೂರು ಹಳೆಯಬೀಡುಗಳ ಕುಸುರಿ ಕೆಲಸಗಳನ್ನು ಕೆತ್ತಿದ ಕಾಲದ ಜನಜೀವನದ 'ಗತಿ'ಗೂ ಇರುವ ಅಂತರವನ್ನು ಆಯಾ ಶಿಲ್ಪಕೃತಿಗಳೇ ಬಿಂಬಿಸುತ್ತವೆ. ಹೀಗೆ ಜನಜೀವನಕ್ಕೆ ಒಂದು 'ಗತಿ' ಅಥವಾ ಏರಿಳಿತ ಉಂಟು ಎನ್ನುವುದೂ, ಸಾಹಿತ್ಯ ಆ 'ಗತಿ'ಯನ್ನು ಬಿಂಬಿಸುತ್ತದೆ ಎನ್ನುವುದೂ, ಸಾಹಿತ್ಯ ಚರಿತ್ರೆಯ ಅವಲೋಕನದಿಂದ ತಿಳಿಯುತ್ತದೆ.

ಇನ್ನು "ಬಿಂಬ" ಎನ್ನುವ ಮಾತನ್ನು ಪರಿಶೀಲಿಸಬಹುದು. ಸಾಹಿತ್ಯ ಬಿಂಬವೇನೋ ಹೌದು ; ಆದರೆ 'ಪ್ರತಿ—ಬಿಂಬ' ಅಲ್ಲ. ಸಾಹಿತ್ಯದಲ್ಲಿ ನಡೆಯುವ ಈ ಬಿಂಬನ ಕ್ರಿಯೆ ಎಂಥದು ಎಂಬುದನ್ನು ತಿಳಿದರೆ ಈ 'ಬಿಂಬ'ದ ಅರ್ಥ ಸ್ಪಷ್ಟವಾಗಬಹುದು. 'ಬಿಂಬನ' ಎಂದರೆ, ಇದ್ದುದನ್ನು ಇದ್ದಹಾಗೆ ಪಡಿಮೂಡಿಸುವ ಶಕ್ತಿ ಎಂದು ಅರ್ಥವಲ್ಲ. ಇರುವುದನ್ನು ತನ್ನತನದ ಮಾಧ್ಯಮದ ಮೂಲಕ ಅದು ಬೇರೊಂದೆಂಬಂತೆ ಅಭಿವ್ಯಕ್ತಗೊಳಿಸುವುದು. ಚಂದ್ರಬಿಂಬ ಎನ್ನುವಾಗ ಚಂದ್ರನಲ್ಲಿ ಬಿಂಬಿತವಾಗಿರುವುದು ಸೂರ್ಯನ ಬೆಳಕೇ ಆದರೂ, ಅದು ಚಂದ್ರಮಂಡಲದ

ವ್ಯಕ್ತಿತ್ವದ ಮೂಲಕ ಒಂದು ಬಗೆಯಲ್ಲಿ ಪರಿವರ್ತಿತವಾಗಿ, ಚಂದ್ರಕಾಂತಿಯಾಗಿ, ಬೆಳುದಿಂಗಳಾಗಿ ಬರುತ್ತದೆ. ಅಂತೆಯೇ ಒಂದು ಸಾಮಾನ್ಯವಾದ ಮಂಜಿನ ಹನಿಯೂ ಸಹ ಸೂರ್ಯರಶ್ಮಿಯನ್ನು ಕಾಮನಬಿಲ್ಲನ್ನಾಗಿ ಬಿಂಬಿಸುತ್ತದೆ. ಪ್ರತಿಯೊಂದು ವ್ಯಕ್ತಿತ್ವಕ್ಕೂ ತನ್ನ ಶಕ್ತ್ಯಾನುಸಾರವಾದ, ಸಂಸ್ಕಾರಾನುಸಾರವಾದ ಬಿಂಬನ ಶಕ್ತಿ ಇದ್ದೇ ಇದೆ. ಪ್ರತಿಯೊಂದು ವ್ಯಕ್ತಿತ್ವವೂ ಇಂದ್ರಿಯಗೋಚರವಾದ ಅಥವಾ ಇಂದ್ರಿಯಾತೀತವಾದ ಸತ್ಯವೊಂದನ್ನು ಬಿಂಬಿಸುವ ಶಕ್ತಿಯನ್ನು ಪಡೆದೇ ವಿಶಿಷ್ಟವಾಗುತ್ತದೆ. ರೋಮೈನ್ ರೋಲಾ ಅವರು ಬರೆದಿರುವ ಶ್ರೀ ರಾಮಕೃಷ್ಣ ಪರಮಹಂಸರ ಜೀವನ ಚರಿತ್ರೆಯಲ್ಲಿ ಒಂದುಕಡೆ ಮಹಾವ್ಯಕ್ತಿಗಳನ್ನು ಕುರಿತು " The very greatest of men is only a clearer reflection of the Sun which gleams in each drop of dew " ಎಂದು ಹೇಳಿರುವ ಮಾತು ಕವಿ–ಕಾವ್ಯಕ್ಕೂ ಅನ್ವಯಿಸುತ್ತದೆ.

'ಗತಿ' ಮತ್ತು 'ಬಿಂಬ'—ಈ ಎರಡು ಪದಗಳ ವಿವರಣೆಯಿಂದ "ಸಾಹಿತ್ಯ ಜೀವನದ ಗತಿ ಬಿಂಬ" ಎನ್ನುವ ಸೂತ್ರ ಕೊಂಚ ಸ್ಪಷ್ಟವಾಗುತ್ತದೆ. ಇದರ ಜೊತೆಗೆ ಈ 'ಬಿಂಬನಕ್ರಿಯೆ'ಯ ಸ್ವರೂಪವನ್ನೂ ಗಮನಿಸಬಹುದು.

ಬಿಂಬನಕ್ರಿಯೆ ಎನ್ನುವುದು ಯಾಂತ್ರಿಕವಾದುದಲ್ಲ, ಮಾಂತ್ರಿಕವಾದುದು. ಒಂದು ಅನುಭವಗೋಚರವಾದ ಸತ್ಯ, ವ್ಯಕ್ತಿತ್ವವೊಂದರ ಮೂಲಕ ಬಿಂಬಿತವಾಗಬೇಕಾದರೆ ಪ್ರಧಾನವಾಗಿ ಎರಡು ಕ್ರಿಯೆಗಳು ನಡೆಯುವಂತೆ ತೋರುತ್ತದೆ. ಮೊದಲನೆಯದು ಘರ್ಷಣೆ, ಎರಡನೆಯದು ಸಂಯಮ.

ಹಲವಾರು ಬಂಡೆಗಳ ನಡುವೆ ನುಸುಳಿ, ನಗೆಯ ನೊರೆಯನ್ನುಕ್ಕಿಸಿ ಕಲಕಲರವದಿಂದ ಹರಿದು ಹೋಗುವ ಹೊಳೆಯನ್ನು ಗಮನಿಸಿದರೆ ಕಾವ್ಯ-ಜೀವನದ ಸಂಬಂಧವೇನು ಎನ್ನುವುದು ಹೊಳೆಯುತ್ತದೆ. ತನ್ನ ಪಾಡಿಗೆ ತಾನು ಹರಿದೋಡುವ ಹೊಳೆಯನ್ನು, ಆ ಹೊನಲಿಗೆ ಅಡ್ಡವಾಗಿ ಹರಡಿರುವ ಹಲವಾರು ಬಂಡೆಗಳು ನಿಂತು, ಎದೆಯೊಡ್ಡಿ ಆ ಹರಿವನ್ನು ತಡೆಯದಿದ್ದರೆ, ಹರಿವ ಹೊನಲಿಗೂ, ನಿಂತ ಬಂಡೆಗಳಿಗೂ ಒಂದು ಬಗೆಯ ಘರ್ಷಣೆ ಆಗದಿದ್ದರೆ, ಹರಿದೋಡುವ ಪ್ರವಾಹಕ್ಕೆ ಬಂಡೆಗಳು ಒಂದು ಬಗೆಯ ಸಂಯಮದ ಕಟ್ಟು ಹಾಕದಿದ್ದರೆ, ಇಂಥ ಮಂಜುಳ ರಾಗಾಲಾಪನೆ ಅಲ್ಲಿ ಸೃಷ್ಟಿಯಾಗುತ್ತಿತ್ತೆ ಎನ್ನಿಸುತ್ತದೆ. ಅಂತೆಯೇ ಯಾವ ವ್ಯಕ್ತಿತ್ವ ಜೀವನದ ಪ್ರವಾಹದಲ್ಲಿ ಬೆಂಡಾಗಿ ತೇಲದೆ, ಸೋತು ತಲೆಬಾಗಿಸದೆ, ಅದನ್ನು ಎದೆಯೊಡ್ಡಿ ನಿಲ್ಲುತ್ತದೆಯೋ ಅದು ತನ್ನ ಸುತ್ತಣ ಜೀವನವನ್ನು ಒಂದು ಕ್ರಮಬದ್ಧವಾದ ರೀತಿಯಲ್ಲಿ ವ್ಯವಸ್ಥೆಗೊಳಿಸುವುದು ಮಾತ್ರವಲ್ಲ, ಅದನ್ನು ಮಧುರವಾದ ಸಂಗೀತವನ್ನಾಗಿ ಹೊಮ್ಮಿಸುತ್ತದೆ. ಬಾಳಿನ ಬವಣೆಗಳನ್ನೆಲ್ಲ, ಬಂಡೆ ಹೊಳೆಯನ್ನೆಂತೋ ಅಂತೆ, ಎದೆ

ಯೊಡ್ಡಿ ತಡೆದು ನಿಂತಾಗಲೇ ಕವಿಯ ಅಂತರಂಗ ಆ ಎಲ್ಲ ಘರ್ಷಣೆಗಳನ್ನೂ ತನ್ನ ವ್ಯಕ್ತಿತ್ವದಲ್ಲಿ ಸಂಯಮಿಸಿ ಅದನ್ನು ಗೀತವನ್ನಾಗಿ ಹರಡುತ್ತದೆ. ಈ ಅರ್ಥದಲ್ಲೇ ಬಹುಶಃ ಷೆಲ್ಲಿಕವಿ,

"Our Sweetest Songs are those
that tell of Saddest thought."

ಎಂದುದು. ಕವಿಯ ವ್ಯಕ್ತಿತ್ವಕ್ಕೂ ಸುತ್ತಣ ಜೀವನಕ್ಕೂ ನಡೆಯುವ ನಿರಂತರ ಘರ್ಷಣೆಯೇ ಕಾವ್ಯದ ಮೂಲ. ವಿಶ್ವಶಕ್ತಿಯನ್ನು ವ್ಯಕ್ತಿಶಕ್ತಿ ತಡೆದು, ಕಡೆದಾಗಲೇ ಕಲೆಯ ಉಗಮ ಎನ್ನುವ ಒಂದು ಭಾವದ ಬೀಗದ ಕೈಯಿಂದ ಇನ್ನೂ ಎಷ್ಟೋ ಭಾವನೆಗಳ ಭಾಂಡಾರವನ್ನು ನಾವು ತೆರೆಯಬಹುದು. ಮೇಲೆ ಮಾಲೆಮಾಲೆಯಾಗಿ ಗುಡುಗು ಮಿಂಚನ್ನು ಉಟ್ಟು ಬರುವ ಮೋಡಗಳನ್ನು ದಿಟ್ಟತನದ ಬೆಟ್ಟಗಳು ಎದೆಯೊಡ್ಡಿ ತಡೆದು ಮಳೆಯನ್ನು ಸುರಿಸುವಂತೆ; ಬೀಸುವ ಗಾಳಿಯನ್ನು ಉನ್ನತ ವೃಕ್ಷಗಳ ಹರೆಯಾಗಲೀ, ಕಂದರಗಳಾಗಲೀ ತಡೆದು ಹಲವು ಬಗೆಯ ದನಿಗಳನ್ನು ಸೃಜಿಸುವಂತೆ; ಋತು ವಸಂತನ ಶಕ್ತಿಯನ್ನು ಮರಮರಗಳು ತಾಳಿಕೊಂಡು ಚಿಗುರು ಹೂವುಗಳ ಚೆಲುವನ್ನು ಹೊಮ್ಮಿಸುವಂತೆ; ಯೋಗಿಯಾದವನು ತನ್ನ ಚಿತ್ತವೃತ್ತಿಗಳನ್ನೆಲ್ಲಾ ನಿರೋಧಿಸಿ ತಪಶ್ಶಕ್ತಿಯನ್ನು ಪಡೆಯುವಂತೆ; ಕಲಾವಿದ ತನ್ನ ಸಂಯಮದಿಂದ ಬಾಳಿನ ಅನುಭವವನ್ನು ಕೃತಿಯಲ್ಲಿ ಬಿಂಬಿಸುತ್ತಾನೆ. ಹೀಗೆ ಸಂಯಮವೇ ಬೇರೊಂದು ಸೃಷ್ಟಿಗೆ ಅಥವಾ ಸೃಷ್ಟಿಶೀಲವಾದ ಶಕ್ತಿಗೆ ಕಾರಣವಾಗುತ್ತದೆ. ಈ ತಡೆಯುವಿಕೆ ಮತ್ತು ಕಡೆಯುವಿಕೆ ಅಥವಾ ಧಾರಣ ಮತ್ತು ನಿರೂಪಣ ವಿಧಾನವನ್ನೇ ಬಿಂಬನ ಕ್ರಿಯೆಯ ಲಕ್ಷಣ ಎನ್ನಬಹುದು. ಹೇಗೆ ಹೊಳೆಯ 'ಗತಿ'ಯನ್ನು ಬಂಡೆಗಳು ತಡೆದು, ಗೀತಕೃತಿಯನ್ನಾಗಿಮಾಡುವುವೋ ಹಾಗೆ, ಕವಿಯ ವ್ಯಕ್ತಿತ್ವ ಜೀವನದ 'ಗತಿ'ಯನ್ನು ತನ್ನ 'ಮತಿ'ಯಿಂದ ತಡೆದು 'ಕೃತಿ'ಯಲ್ಲಿ ಬಿಂಬಿಸುತ್ತದೆ.

ಈ ಬಿಂಬಸತ್ಯವನ್ನು ಲೋಕಸತ್ಯದಿಂದ ಅಳೆದು ಅದನ್ನು ಭ್ರಾಂತಿ ಎಂದಾಗಲೀ, ಸುಳ್ಳು ಎಂದಾಗಲೀ ತಿರಸ್ಕರಿಸುವ ಪ್ರಯತ್ನ ಬೆಳುದಿಂಗಳಿನಲ್ಲಿ ಸೂರ್ಯಪ್ರಕಾಶವನ್ನು ಅಳೆಯಲು ಹೊರಟಂತೆ, ಹೂವಿನಲ್ಲಿ ಗೊಬ್ಬರದ ವಾಸನೆ ಎಷ್ಟಿದೆ ಎಂದು ನೋಡುವಂತೆ ಆಗುತ್ತದೆ! ಈ ಬಿಂಬ ಸಹೃದಯರಲ್ಲಿ ಎಷ್ಟರಮಟ್ಟಿಗೆ ರಸಾನುಭವವನ್ನುಂಟುಮಾಡುವುದೋ, ಅಷ್ಟರಮಟ್ಟಿಗೆ ಅದು ಸುಂದರ, ಅಷ್ಟರಮಟ್ಟಿಗೆ ಅದು ಸತ್ಯ.

"ಸಾಹಿತ್ಯ ಜೀವನದ ಗತಿ ಬಿಂಬ" ಎನ್ನುವ ಈ ಸೂತ್ರ ಮೊದಲಿನ ಸೂತ್ರಗಳಿಗಿಂತಲೂ ಹೆಚ್ಚು ಸಮರ್ಪಕವಾಗಬಲ್ಲುದು ಎನ್ನುವುದಕ್ಕಿಂತ, ಹೆಚ್ಚು ಅರ್ಥಪೂರ್ಣವಾಗಬಹುದು ಎಂದು ನಮ್ಮ ಭಾವನೆ.

—ಜಿ. ಎಸ್. ಶಿವರುದ್ರಪ್ಪ

ಮಗಳ ನೆನಹು !

ಹೂಬಟ್ಟಲಲಿ ದಿವ್ಯಪ್ರಕೃತಿಮಾತೆಯ ಮುತ್ತು
ಜೇನ ಹನಿ ಜಿನುಜಿನುಗಿ ಇಳಿಯುವಂತೆ,
ಎಲರೆಲೆಯ ತೊಟ್ಟಿಲಲಿ ಆತ್ಮಬಿಂಬದ ಬಿಂದು
ಥಳಥಳಿಸಿ ಮಗುಳೆ ಮಾರ್ಪೊಳೆಯುವಂತೆ ‖ ೧ ‖

ಗಿಡದುದಿಯ ಹೂವು ನರುಗಂಪ ಸುತ್ತಲು ಸೂಸಿ
ತಾಯ ಬೇರಿಗೆಯದನು ಕಳಿಸುವಂತೆ
ವೈಣಿಕನ ಮಿಡಿತದೊಳಗೊಗೆದ ವೀಣಾನಾದ
ವೈಣಿಕನನೇ ದಂಗುಗೊಳಿಸುವಂತೆ ‖ ೨ ‖

ಮಗಳೆ, ಎನ್ನೆದೆ ಮುಗುಳೆ, ದೂರದಿಂ ನಿನ್ನ ಸ್ಮೃತಿ
ಬಂದೆನ್ನ ಹೃದಯವನು ತುಂಬಿಸಿಹುದು !
ದಳವೇರ್ದ ಜೊನ್ನದೊಲು ಯಾವುದೋ ಭಾವವದು
ನಿನ್ನ ಕಂಪಿಪ ಕಣಸ ಚುಂಬಿಸಿಹುದು ! ‖ ೩ ‖

ಕೈಮುಟ್ಟಿ, ತುಟಿಮುಟ್ಟಿ, ಹೆತ್ತವನ ಎದೆತಟ್ಟಿ
ನಿಸ್ಸೀಮ-ಸೀಮೆಯೊಳಗೋಡುತಿರುವೆ !
ಒಲವ ತೊದಲಿನ ನುಡಿಯೆ, ಚಲುವ ಪದುಳದ ಗುಡಿಯ
ಕಟ್ಟುತಾಕಾಶದೊಳಗಾಡುತಿರುವೆ ! ‖ ೪ ‖

ಮೃತಸತಿಯ ಪಡಿನೆರಳು ಪ್ರಕೃತಿನಿಯಮವ ಮೀರಿ
ಅಸುದುಂಬಿ ಸುಳಿಯುವೊಲು ಸುಳಿಯುತಿರುವೆ !
ಗತವೈಭವದ ಪ್ರತಿಧ್ವನಿಯು ಕೇಳುವ ತೆರದಿ
ಶೂನ್ಯಾಂತರಾಳದಲಿ ಬೆಳೆಯುತಿರುವೆ ‖ ೫ ‖

ಪೊಡವಿ-ತೊಡೆಯಲಿ ಕುಳಿತು, ಗಾಳಿಯುಡಿಯಲಿ ತಳಿತ
ಮುಗಿಲ ಮಡಿಲಲಿ ಬಗೆಯ ಬಣ್ಣ ಬರೆವೆ !
ಒಂದೆ ಕೈಯನು ಬೀಸಿ, ಶಶಿ-ಸೂರ್ಯ-ನಕ್ಷತ್ರ-
ಗಳ ತೂರಿ ಚಿಣ್ಣಾಟವಾಡುತಿರುವೆ ! ‖ ೬ ‖

ಸ್ಮೃತಿಯೊಂದೆ ತೆರೆಸಾಕು ; ತಾಯ್ತಂದೆಗಳ-ಕೋಟಿ
ಕೋಟಿ ರೂಹುಗಳ ನೀ ನಿಲಿಸಬಲ್ಲೆ !

ಎದೆಯೊಂದೆ ದಳ ಸಾಕು: ವಿಶ್ವಪ್ರೇಮಾಮೃತದ
ಸಾರಸರ್ವಸ್ವವನೆ ಸುರಿಸಬಲ್ಲೆ! ॥ ೭ ॥

ನಿನ್ನೆದೆಯ ತೊಟ್ಟಿಲಲಿ ಬ್ರಹ್ಮಾಂಡಗಳ ಕಟ್ಟಿ
ಜೋಗುಳವನಾಡಾಡಿ ತೂಗುತಿರುವೆ!
ದಣಿದು ಸೋತಿಹ ಜಗಕೆ ಶಾಂತಿಯನ್ನಿತ್ತು, ನೀ-
ಕೊರಗಿಸಲು ಮೈದಡವಿ ತೂಗುತಿರುವೆ! ॥ ೮ ॥

ಓ ಆದಿಮಾತೆಯೇ, ವಿಶ್ವಸಂಪೂತೆಯೇ,
ತಲೆತಲೆಗು ಮಗುವಾಗಿ ಜನಿಸುತಿರುವೆ!
ಅಮರತೆಯ ಲೀಲೆಯಲನಂತತೆಯ ಶಾಲೆಯಲಿ
ಪ್ರೇಮಪಾಠವನೊರೆದು ಘನಿಸುತಿರುವೆ! ॥ ೯ ॥

ಓ ತಾಯೆ, ಓ ಮಗಳೆ, ಎನ್ನ ಪ್ರೇಮದ ಮುಗುಳೆ,
ನಿನ್ನ ಬಯಕೆಯದೇನು? ಹೇಳು! ಹೇಳು!
ನೀ ಕರೆದ ಪ್ರೇಮವನೆ ನಿನಗೆ ಸಲ್ಲಿಸಿ ಧನ್ಯ-
ನಾಗುವೆನು! ಹೇಳಮ್ಮ! ಹೇಳು! ಹೇಳು! ॥ ೧೦ ॥

ನೀನಳಲು, ಗೆಂಟುಗೆಂಟುಗಳಲ್ಲಿ ರೋದನದ
ಪಡಿನುಡಿಯು ಕೇಳುವದು! ಬೇಡ! ಬೇಡ!
ನೀನು ನಿಡುಸುಯ್ಯಲಾಕಾಶವೇ ಕಮರುವದು!
ಬೇಡಮ್ಮ, ತಾಯೆ, ದುಮ್ಮಾನ ಬೇಡ! ॥ ೧೧ ॥

ನೀನು ಕಂಬನಿಯಿಡಲು, ಅಹಹ! ಜ್ವಾಲಾಮುಖಿಗ-
ಳುಕ್ಕೇರಿ ಕಳ್ಕಳನೆ ಚಿಮ್ಮುತಿಹವು!
ನೀ ಕಾಲ ಹೊಸೆದಾಡೆ, ಪ್ರಳಯ-ಭೈರವಲೀಲೆ
ಕಿಡಿಗಾರಿ ಸಿಡಿಲಂತೆ ಹೊಮ್ಮುತಿಹವು! ॥ ೧೨ ॥

ಅದರಿಂದೆ ಬೇಡಮ್ಮ, ಓ ತಾಯೆ, ಓ ಮಾಯೆ,
ನಿನ್ನ ದುಗುಡವನಾಚೆ ನೂಕು! ನೂಕು!
ನಿನ್ನ ಸಂತೃಪ್ತಿ- ಸಂತೋಷಗಳೆ ಜಗದಿ ನಂ-
ದನ-ವನವ ಸೃಜಿಸಲವು ಬೇಕೆಬೇಕು! ॥ ೧೩ ॥

—ಈಶ್ವರ ಸಣಕಲ್ಲ

ಭಾರತದ ಶಿಲ್ಪ ಮತ್ತು ಚಿತ್ರಕಲೆ

ಈಗ ಕೆಲವು ದಿನಗಳ ಕೆಳಗೆ ಅಜಂತದ ಗುಹಾಂತರ್ದೇವಾಲಯಗಳನ್ನು ನೋಡುವ ಸುಯೋಗ ನನಗೆ ದೊರಕಿತ್ತು. ಭಾರತದ ಆ ಪ್ರಾಚೀನ ವೈಭವವನ್ನು ನೋಡಿ ಹೆಮ್ಮೆಯೂ, ಇಂದಿನ ನಮ್ಮ ಕಲಾರಹಿತ ಅನುಕರಣಪಟು ಬರಡುಜೀವನದ ಧ್ಯಾನದಿಂದ ಖೇದವೂ, ಉಂಟಾಯಿತು. ಆದರೆ ಆ ಖೇದ ಬಹಳ ಕಾಲ ಉಳಿಯಲಿಲ್ಲ. ಸ್ವತಂತ್ರಭಾರತ, ತಾನು ಹಿಂದೆ ಸಾಧಿಸಿದುದಕ್ಕಿಂತ ಇನ್ನೂ ಹೆಚ್ಚು ವೈಭವವನ್ನೂ ಕಲಾಸಿದ್ಧಿಯನ್ನೂ ಸಾಧಿಸುವ ಮಂಗಳಶುಭಸೂಚನೆಯಲ್ಲಿರುವುದರಿಂದ, ಭವಿಷ್ಯದ ಕನಸನ್ನು ಕಂಡು ಆನಂದಗೊಂಡೆ. ಆ ದಿವ್ಯ ದೀರ್ಘದರ್ಶಿತ್ವದಲ್ಲಿ ಭಾರತದ ಚಿತ್ರ ಮತ್ತು ಶಿಲ್ಪಕಲೆಯ ಪರಂಪರೆಯ ಸಿಂಹಾವಲೋಕನ, ನನ್ನ ಮನೋನೇತ್ರದ ಮುಂದೆ ಹಾದುಹೋಯಿತು. ಭಾರತದ ಕಲೆಯ ಆ ದಿವ್ಯ ನೆಲೆಗಳಿಗೆ ನಿಮ್ಮನ್ನು ನನ್ನೊಂದಿಗೆ ಕರೆದುಕೊಂಡು ಹೋಗುವುದೇ ಇಂದು ನನ್ನ ಉದ್ದೇಶ.

ಭಾರತದಲ್ಲಿ ಶಿಲ್ಪ ಮತ್ತು ಚಿತ್ರಕಲೆಗಳ ಪ್ರಾರಂಭದ ಉಗಮವನ್ನು, ನಾವು, ಸುಮಾರು ಎರಡು ಸಾವಿರ ವರುಷಗಳ ಹಿಂದಿನಿಂದಲೂ ಕಾಣಬಹುದು. ವೇದಗಳನ್ನು ಸೃಷ್ಟಿಸಿದ ಋಷಿಗಳ ಮನೋನೇತ್ರದ ಎದುರಿಗೆ, ಅನೇಕ ಸಹಸ್ರ ನೇತ್ರಗಳ ನಾನಾ ವರ್ಣಗಳ ಅಂತರಿಕ್ಷವೂ, ಪರ್ವತ ವೃಕ್ಷ ನದಿಗಳ ರಮಣೀಯ ಸೌಂದರ್ಯವೂ, ಬೆಳಗು ಬೈಗುಗಳ ನಿತ್ಯ ನೂತನ ಬದಲಾವಣೆಗಳೂ, ಇಂದ್ರನೇ ಮೊದಲಾದ ದೇವತೆಗಳ ದೇದೀಪ್ಯಮಾನ ಸ್ಫುರದ್ರೂಪವೂ, ದೇವಕನ್ನಿಕೆಯರ ಚಪಲ ಮಣಿಮಂಜೀರ ನೂಪುರ ಧ್ವನಿಮಿಶ್ರ ಅಪಾಂಗ ಭಂಗಿಯೂ ಹೊಳೆದಿದ್ದವು. ಆದರೆ ಆ ರೂಪಗಳನ್ನು ಶಿಲ್ಪಗಳಲ್ಲಿಯಾಗಲೀ ಚಿತ್ರಗಳಲ್ಲಿಯಾಗಲೀ ಅವರು ಹಿಡಿದು ಇಡಲಿಲ್ಲ.

ಅಜಂತ ಗುಹಾಂತರ ದೇವಾಲಯ ಭಿತ್ತಿ ಚಿತ್ರಗಳು, ಭಾರತದ ಚಿತ್ರಕಲೆಯ, ಪ್ರಥಮ ಸಾಧನೆ ಎನ್ನಬಹುದು. ಅವು ಎರಡು ಸಾವಿರ ವರುಷಗಳ ಹಿಂದಲ ಸಿದ್ಧಿ ; ಅಜಂತ ಭಿತ್ತಿಚಿತ್ರಗಳು ಭಾರತದ ಚಿತ್ರಕಲೆಯ ಸ್ವರ್ಣಕೃತಿಗಳು. ಭಾರತ, ತಾನು ಭಾರತವೇ ಆಗಿದ್ದಾಗ ಚಿತ್ರಿಸಿದ, ಭಾರತದ ಆತ್ಮವನ್ನೊಳಗೊಂಡ ಕಲಾಕೃತಿಗಳು ಅವು. ಭಾರತದ ಎಲ್ಲ ಕಲೆಗಳಿಗೂ ಅಜಂತ ಅಮರಸ್ಫೂರ್ತಿ. ಒಮ್ಮೆಯಾದರೂ ಅಜಂತವನ್ನು ನೋಡದಿದ್ದರೆ, ಭಾರತದ ಕಲೆಯ ಸತ್ಯವಾದ ಆತ್ಮ ನಮಗೆ ಅರಿವಾಗುವುದಿಲ್ಲ. ಅಜಂತದ ಮೊದಲ ನೋಟವೇ ನಮ್ಮನ್ನು ಮೈಮರೆಯುವಂತೆ

ಮಾಡುತ್ತದೆ. ಬಾಗಿದ ಹಸಿರು ಬೂದುಬಣ್ಣದ ಬೆಣಚುಕಲ್ಲಿನ ಕಡಿದಾದ ಪ್ರಪಾತ, ಕೆಳಗಡೆ ತಿಳಿಯಾದ ಸರಸ್ಸು, ಮೇಲೆ ನೀಲಾಕಾಶ, ಹೊನ್ನ ಸೂರ್ಯ; ಅಜಂತ ಗುಹಾಂತರ್ದೇವಾಲಯದ ವಾತಾವರಣವೇ ಅನಿರ್ವಚನೀಯ ಶಾಂತಿಮಯ. ಪರ್ವತದ ತುದಿ ಸೇರಲು ಎರಡು ಮಾರ್ಗಗಳಿವೆ. ಮೆಟ್ಟಲುಗಳ ಆಧುನಿಕ ಮಾರ್ಗ ಒಂದು. ಮತ್ತೊಂದು ಎರಡು ಸಾವಿರ ವರುಷಗಳ, ಝರಿಯ ಮೂಲಕ ಹೋಗುವ ಹಿಂದಲ ಮಾರ್ಗ. ಈ ಮಾರ್ಗದಲ್ಲಿ ಹಸಿರು, ಬೂದು, ಬಿಳುಪು, ಹಳದಿ ಕಲ್ಲುಗಳ ರಾಸಿಗಳನ್ನು ತುಳಿದುಕೊಂಡು ಅರ್ಧ ದಾರಿ ಹೋಗಿ ಅಲ್ಲಿಂದ ಎಡಕ್ಕೆ ಅಥವಾ ಬಲಕ್ಕೆ—ಹೇಗೆ ಹೋದರೂ—ಗುಹಾಂತರ್ದೇವಾಲಯಗಳಿಗೇ ಹೋಗುವುದು. ದೂರ ದಿಂದಲೇ ದೊಡ್ಡ ದೊಡ್ಡ ಕಲ್ಲುಕಂಬಗಳ ಪ್ರವೇಶದ್ವಾರಗಳು ಕಣ್ಣಿಗೆ ಬೀಳುವುವು. ಆ ದ್ವಾರದಲ್ಲಿ ಒಳಗೆ ಪ್ರವೇಶಿಸಿದರೆ ತೀರಿತು! ಮಾಯಾಮಚ್ಛೇಂದ್ರ! ಯಾವೆಡೆ ನೋಡಿದರೂ ಕಲೆಯ ಸಾಕ್ಷಾತ್ಕಾರ. ಇದ್ದಕ್ಕಿದ್ದಂತೆ ಸ್ವಪ್ನರಾಜ್ಯವನ್ನು ಪ್ರವೇಶಿಸಿ ದಂತೆ ತೋರುವುದು.

ಅಜಂತ ಗುಹಾಂತರ ದೇವಾಲಯದ ಚಿತ್ರಗಳೆಲ್ಲ ಬುದ್ಧನ ಜಾತಕ ಕತೆಗಳಿಗೆ ಸಂಬಂಧಿಸಿದುವು. ಭಗವಾನ್ ಬುದ್ಧನ ಭಕ್ತರಾದ ಧನಿಕರೂ ರಾಜರೂ ಧರ್ಮಶ್ರದ್ಧೆ ಯಿಂದಲೂ ಸಾತ್ವಿಕ ತ್ಯಾಗದಿಂದಲೂ, ಜನರಲ್ಲಿ ಸನ್ಮಾರ್ಗಪ್ರೇರಣೆ ಚೇತನಗೊಳ್ಳ ಲೆಂದು ಬರೆಸಿದ ಚಿತ್ರಗಳು ಅವು. ಆ ಚಿತ್ರಗಳ ಕಲಾಕೌಶಲ ಅದ್ವಿತೀಯವೂ ಅದ್ಭುತವೂ ಆಗಿದೆ. ಆ ಕಲೆಗಾರರು ಅಂದಿನ ಕಾಲದ ಹಕ್ಕಿಗಳು ಪುಷ್ಪಗಳು ನದಿಗಳು ಪರ್ವತಗಳು ಇವುಗಳನ್ನು ಕಣ್ಣಿಗೆ ಕಟ್ಟುವಂತೆ ತಮ್ಮ ಕುಂಚದ ತುದಿಗಳಲ್ಲಿ ಹಿಡಿದು ನಿಲ್ಲಿಸಿದ್ದಾರೆ. ಅಜಂತದ ಕಲಾಕೃತಿಗಳು ತಮ್ಮ ಸಾರ್ವಭೌಮತ್ವವನ್ನು ಇಂದಿನ ವರೆಗೆ ಒಂದೇ ಸಮನಾಗಿ ಉಳಿಸಿಕೊಂಡಿರಲು ಕಾರಣ, ಆ ಕಲಾವಿದರ ನಿರ್ದುಷ್ಟವಾದ ಲೋಕ ವ್ಯವಹಾರಜ್ಞಾನವೇ. ಅವರು ಒಂದು ಪೂರ್ಣಚಿತ್ರವನ್ನು ರಚಿಸಲಿ, ಒಂದೇ ಗೆರೆ ಯನ್ನು ರೂಪಿಸಲಿ, ಅದು ಸಿದ್ಧಹಸ್ತರ ಕಾರ್ಯ. ಅಜಂತದಲ್ಲಿರುವ ಕಲಾಕೃತಿ ಗಳೆಲ್ಲಾ ಏಕಕಾಲದಲ್ಲಿ ಬರೆದುವಲ್ಲ. ಬುದ್ಧನ ನಿರ್ಯಾಣದ ಪ್ರಾರಂಭದ ಶತಮಾನದ ಭಿತ್ತಿಚಿತ್ರಗಳಲ್ಲಿ (ಗುಹೆ ೯-೧೦) ಹಜಾರದ ಕಂಬಗಳಲ್ಲಿಯೂ ಗೋಡೆಗಳಲ್ಲಿಯೂ ಇರುವ ಬುದ್ಧ, ಭಿಕ್ಕುವಿನ ಸರಳವಾದ ಉಡುಗೆ ತೊಟ್ಟಿದ್ದಾನೆ. ಮತ್ತೊಂದೆಡೆ ಹಸಿರು ಹೊಳೆಯುವ ಹಿನ್ನೆಲೆಯ ಕಮಲದ ಮೇಲೆ ಪಾದವನ್ನು ಬಿಟ್ಟುಕೊಂಡು ಬುದ್ಧ ಕುಳಿತಿದ್ದಾನೆ. ಜೇಡೊಂದೆಡೆ ಬುದ್ಧ ಬರಿಯ ಕಪ್ಪು ಬಿಳುಪು ಗೆರೆ ಮಾತ್ರ.

ಹೀಗೆ ಸರಳತೆಯಿಂದ ಹಿಡಿದು ಕಲೆ, ಮುಂದೆ ಅದ್ಭುತವೂ ರಮ್ಯವೂ ಆಗಿ ಸಾಗುತ್ತದೆ. ಅತ್ಯಂತ ಸೂಕ್ಷ್ಮವಾಗಿ ಬಿಡಿಸಿರುವ ಬುದ್ಧನ ಚಿತ್ರ, ಜತೆಯ ಇತರ

ಚಿತ್ರಗಳು; ಕಲೆಗಾರರು ಪ್ರಾಚೀನಭಾರತದ ಬಾಳನ್ನೂ ನಾಗರಿಕತೆಯನ್ನೂ ಇಲ್ಲಿ ಚೆನ್ನಾಗಿ ಚಿತ್ರಿಸಿದ್ದಾರೆ. ಆ ಆಕೃತಿಗಳಲ್ಲಿ ಹೊರತೋರುವ ಬಾಳಿನ ಉತ್ಸಾಹ, ಜೀವನವು ಮಹೋತ್ಸವವೆಂಬ ಭಾವ, ಬಾಳಿನ ವೈಭವ, ನೋಟಕರನ್ನು ಬೆರಗು ಮಾಡುತ್ತದೆ. ಆ ಕಲಾವಿದರು ಜಗತ್ತಿನ ವೈಭವವನ್ನೂ, ಬಾಳಿನ ಸೊಗಸನ್ನೂ ಇರುವಿಕೆಯ ಆನಂದವನ್ನೂ ಪೂರ್ಣವಾಗಿ ಚಿತ್ರಿಸಲು ಹೊರಟವರು. ಸುಖ ತಪ್ಪು ಎಂದು ಅವರು ಭಾವಿಸಿದವರಲ್ಲ. ಅವರು ಚಿತ್ರಿಸಿರುವ ಕೈಗಳು (ರೇಖೆಗಳು) ಕೊಂಕುಗೆರೆಗಳು, ಅವಯವಗಳ ಚಿತ್ತಾಕರ್ಷಕವಿಲಾಸ, ಅಂತರಂಗದ ಪ್ರಸನ್ನತೆಯ ಪ್ರಕಾಶನ, ಎಲ್ಲಕ್ಕಿಂತ ಹೆಚ್ಚಾಗಿ ಆ ಆಕೃತಿಗಳ ನಗೆನೋಟ ಕಣ್ಣಬೆಡಗು—ಕೆಲವೆಡೆ ಬರಿಯ ಕಣ್ಣುಗಳನ್ನೇ ರೂಪಿಸಿಬಿಟ್ಟಿದ್ದಾರೆ. ಆದರೂ ಆ ಕಣ್ಣುಗಳನ್ನು ನೋಡಿದ ಕೂಡಲೇ ಮೋಹನಾಂಗಿ, ನಯನ್ವನದಿಂದ ಜ್ವಲಿಸುತ್ತಾ ನಮ್ಮ ಮುಂದೆ ಹಾಯ್ದಂತೆ ಗೋಚರವಾಗುತ್ತದೆ. ಅಜಂತದ ಚಿತ್ರಗಳು ಹೀಗೆ ಅಂದಿನ ಬಾಳಿನ ಅನುಕರಣ, ಪ್ರತಿದಿನದ ಬಾಳನ್ನೂ ಪೂರ್ಣವಾಗಿ ಬಾಳಬೇಕೆಂಬ ಧ್ಯೇಯದ ಪ್ರತೀಕ. ಆ ಮೃಗನೇತ್ರೆಯರ ಕೇಶಾಲಂಕಾರಗಳನ್ನೂ ಮುಖಭಾವಗಳನ್ನೂ ನೋಡಿ, ಇಂದಿನ ಪ್ಯಾರಿಸ್ ಮತ್ತು ಹಾಲಿವುಡ್ ಸುವಾಸಿನಿಯರಿಗೆ ಸಹ, ಹೊಟ್ಟೆಕಿಚ್ಚು ಉಂಟಾಗುತ್ತದೆ. ಆದರೆ ಆ ಕಲೆ ಬರಿಯ ಚಿತ್ರಗಾರನ ಊಹನಾಶಕ್ತಿ ಮಾತ್ರವಲ್ಲ. ಅಜಂತದ ದೇವಾಲಯಗಳಲ್ಲಿ ರೂಪಿತವಾಗಿರುವ ಸ್ತ್ರೀಯರು, ಅಂದು ಭಾರತದಲ್ಲಿ ಬಾಳಿದ ಸ್ತ್ರೀಯರು. ಸ್ನೇಹ ಮೃದುತ್ವ ಸೌಂದರ್ಯ ತೇಜಸ್ಸು, ಜತೆಗೆ ಅಲೌಕಿಕವಾದ ಭಾರತೀಯವಾದ ಮತ್ತಾವುದೋ ಆಧ್ಯಾತ್ಮಿಕತೆ ಸಹ, ಆ ಚಿತ್ರಕಲೆಯ ಅಂತರ್ಗತ ಜೀವಾಳವಾಗಿದೆ.

ಆ ಮಾಯಾಲೋಕವನ್ನು ಒಮ್ಮೆ ಪ್ರವೇಶಿಸಿದ ಮೇಲೆ ಯಾವ ಚಿತ್ರ! ಯಾವ ರೂಪರೇಖಾಭಂಗಿ! ಅವರವರ ಮನೋಭಾವಕ್ಕೆ ಅನುಸಾರವಾಗಿ ಕೃತಿಗಳು ಅವರನ್ನು ಆಕರ್ಷಿಸುತ್ತವೆ. ಅನೇಕರು "ಪೂಜಾ" ಚಿತ್ರದಿಂದ ಆಕರ್ಷಿತರಾಗುತ್ತಾರೆ. ಮತ್ತೊಂದೆಡೆ ಬುದ್ಧನ ಮುಂದೆ ಆತನಲ್ಲಿ ನೆಟ್ಟ ದೃಷ್ಟಿಯುಳ್ಳವಳಾಗಿ ಕಣ್ಣುಗಳಿಂದ ಅವನನ್ನೇ ಪಾನಮಾಡುತ್ತಿರುವಂತೆ ತಾಯಿ, ಮತ್ತು ಮಗು. ಆ ತಾಯಿಯ ಮುಖದಲ್ಲಿ ತೋರುವುದು ಬರಿಯ ದೈನ್ಯಭಕ್ತಿಯಲ್ಲ, ನಿಜವಾದ ವಿರಕ್ತಿ. ನಾಗರಾಜನು ಸರ್ವಸಂಗಪರಿತ್ಯಾಗಿಯಾಗಿ ಬುದ್ಧಭಿಕ್ಷುವಾಗಲು ನಿರ್ಣಯಿಸಿದ ಚಿತ್ರದಲ್ಲಿ ತೋರುವುದು, ಅನಿರೀಕ್ಷಿತವಾದುದು ನಡೆದೇ ಹೋಯಿತೆಂಬ ಆಶ್ಚರ್ಯವೇ ಹೊರತು ಗಾಬರಿಯಲ್ಲ. ಅರಮನೆಯ ರಾಣೀವಾಸದ ಸುಂದರಿಯರು ಅವನ ಸುತ್ತಾ ಸರಸತೆಯಿಂದಲೇ ನೇರಿ ಅವನನ್ನು ಬೀಳ್ಕೊಡುವುದು ಆ ಸ್ತ್ರೀಯರ ಒಂದು ವಿಧವಾದ ವೈರಾಗ್ಯಜನಿತ ಅನಾಸಕ್ತಿಯನ್ನೇ ತೋರಿಸುತ್ತದೆ. ಮರಣೋನ್ಮುಖಳಾಗಿರುವ

ಒಬ್ಬಳು ರಾಜಕುಮಾರಿ, ನಿದ್ರಿಸುತ್ತಿರುವ ಗಂಧರ್ವಕನ್ನಿಕೆಯಾಗಿ ತೋರುತ್ತಾಳೆ. ಬುದ್ಧದೇವನಲ್ಲಿ ಏಕಾಗ್ರವಾದ ಭಕ್ತಿಯಿಂದ, ಆಸೆಯಿಂದ, ಸುಖದಿಂದ ಅವನನ್ನೇ ಕುರಿತು ದೃಷ್ಟಿಸುತ್ತಿರುವ ಒಲಪುಗಾರ್ತಿಯರ ನೋಟದಲ್ಲಿ, ಬುದ್ಧದೇವನ ವ್ಯಕ್ತಿತ್ವದಿಂದ ಆಕರ್ಷಿತರಾದ ದಿಟ್ಟ ಹುಡುಗಿಯರ ಆಶಾಭಾವನೆ, ಪ್ರವೃತ್ತಿಮಾರ್ಗ ಸಹ ವ್ಯಕ್ತವಾಗುತ್ತಿದೆ. [ಬುದ್ಧನನ್ನು ಸ್ತ್ರೀಯರು ಪೂಜಿಸುತ್ತಿರುವ ಚಿತ್ರ] ರಾಜದಂಡಕ್ಕೆ ಒಳಗಾಗಿ ಕತ್ತಿಗೆ ಕತ್ತನ್ನು ನೀಡಿ ಮೊಣಕಾಲೂರಿ ಮರಣವನ್ನು ಎದುರು ನೋಡುತ್ತಾ ಕುಳಿತಿರುವ ಹೆಣ್ಣು, ಜಗತ್ತನ್ನು ತೃಣವಾಗಿ ಎಣಿಸುವ ಆತ್ಮಪ್ರತ್ಯಯವುಳ್ಳವಳಾಗಿದ್ದಾಳೆ. ಬುದ್ಧನನ್ನು ಈ ಜಗತ್ತಿನ ಮಾಯಾಜಾಲ "ಮತ್ತಾಂಗನಾಪಾಂಗ ಭಂಗಿಲೋಲ" ರಮ್ಯತೆಗೆ ಆಕರ್ಷಿಸುತ್ತಿರುವ ವಿಲಾಸವತಿಯರ ಹಾವಭಾವ ಭಂಗಿ ನಿಲುವು ಬೆಡಗು ಎಷ್ಟು ವಾಸ್ತವಿಕವಾಗಿದೆ ಎಂದರೆ—ಅಲ್ಲಿ ಬುದ್ಧನ ವಿರಕ್ತಿಯ ಮಹಿಮೆ ಅದ್ಭುತವಾಗಿ ಎದ್ದು ಕಾಣುತ್ತದೆ. ಬುದ್ಧದೇವ, ತಮ್ಮ ಆಕರ್ಷಣೆಗೆ ಒಳಗಾಗಲಿಲ್ಲ ಎಂಬುದರಿಂದ ಅವರಿಗೆ ದುಃಖವಾಗಲಿಲ್ಲ. ಒಂದೆಡೆ ಭಾರತ ಸಿಲೋನನ್ನು ಜಯಿಸಿದ ಚಿತ್ರ; ಮತ್ತೊಂದೆಡೆ ಹಡಗಿನಲ್ಲಿ ಆನೆಗಳನ್ನು ಸಾಗಿಸುತ್ತಿರುವ ಚಿತ್ರ—ಹೀಗೆ ಒಂದಾದ ಮೇಲೆ ಒಂದರಂತೆ ಆ ಕಲಾವೈಭವ ಪ್ರೇಕ್ಷಕನ ಕಣ್ಣ ಮುಂದೆ ಸುಳಿದು ಮನಸ್ಸನ್ನು ರಸಾನುಭವದಿಂದ ಪೂರ್ಣಮಾಡಿ ದೇಹವನ್ನು ಆನಂದಾಮೃತರಸಾಬ್ಧಿಯಲ್ಲಿ ಮುಳುಗಿಸುತ್ತದೆ.

ಅಜಂತದ ಭಿತ್ತಿಚಿತ್ರಗಳೆಲ್ಲ ಏಕಕಾಲದಲ್ಲಿ ಆದುವಲ್ಲ. ಕೆಲವು ಕಲಾವಿದರು ಚಿತ್ರಗಳಲ್ಲಿ ಒಂದೆರಡು ಗೆರೆಗಳನ್ನು ಮಾತ್ರ ಬರೆದು ತೃಪ್ತರಾಗಿದ್ದುದನ್ನು ಈಚಿನ ಕಲಾವಿದರು ಪೂರ್ಣಗೊಳಿಸಿದ್ದಾರೆ. ಪ್ರತಿಯೊಬ್ಬ ಚಿತ್ರಗಾರನೂ ಬಾಳನ್ನು ಚೆನ್ನಾಗಿ ಅರಿತಿದ್ದವನೇ. ಅಲ್ಲಿ ಒಂದು ಉತ್ತಮ ಒಂದು ಅಧಮ ಎಂಬುದಿಲ್ಲ. ಯಾವ ಒಂದು ಚಿತ್ರವೂ ತನ್ನ ಕೋರೈಸುವ ಅದ್ಭುತವರ್ಣದಿಂದ ನಿಮ್ಮನ್ನು ಆಕರ್ಷಿಸುವುದಿಲ್ಲ. ಆದರೆ, ಭಿಕ್ಷುಗಳು ಅನೇಕ ಶತಮಾನಗಳ ಅಡಿಗೆಯ ಹೊಗೆಯಿಂದ ಕಪ್ಪುಕವಿಸಿರುವ ಆ ಕೊಳೆಯನ್ನು ತೊಳೆದು ಹೋಗಲಾಡಿಸಿ; ಅನಂತರ ಕಾಣುವುದು ಕಣ್ಣಿಗೆ ಹಬ್ಬ! ಅದ್ಭುತ ಕಲಾವಿದರ ಕೈಚಳಕ! ಚಿತ್ರಗಳಲ್ಲಿರುವ ರೇಖೆಗಳು, ಹರಿಯುತ್ತಿರುವ ರಕ್ತನಾಳಗಳೋ ಮುಂದಲ ಗಳಿಗೆಯಲ್ಲಿ ಎದ್ದು ಜೀವಗೊಂಡು ಓಡಾಡುವುವೋ ಎಂಬಂತೆ ತೋರುವುವು. ಅಜಂತದ ಕಲೆ ತಾನೇ ಸಾರ್ವಭೌಮನಾದ ಅದ್ವಿತೀಯ ಕಲೆ. ಯೂರೋಪು ಚೀಣ ಜಪಾನ್ ಕಲೆಗಳಲ್ಲಿ ಅಜಂತ ಇದೆಯೇ, ಅಜಂತದ ಕಲೆಗಳಲ್ಲಿ ಯೂರೋಪು ಚೈನಾ ಜಪಾನ್ ಇದೆಯೇ ಎಂಬುದು ಮುಖ್ಯವಲ್ಲ. ಈ ಹೋಲಿಕೆಯಿಂದ ಅಜಂತದ ಬೆಲೆ ಹೆಚ್ಚುವುದೂ ಇಲ್ಲ; ತಗ್ಗುವುದೂ ಇಲ್ಲ.

ಅಜಂತದ ಕಲೆ ಅಂದಿನಿಂದ ಇಂದಿನ ವರೆಗೆ ಒಂದೇ ಸಮನಾಗಿ ಭಾರತೀಯರ ಮೇಲೆ ತನ್ನ ಪ್ರಭುತ್ವವನ್ನು ಸ್ಥಾಪಿಸುವುದಕ್ಕೆ ಕಾರಣ, ಆ ಕಲಾವಿದರು ಜಗತ್ತಿನ ವಾಸ್ತವಿಕತೆಯನ್ನು ಅರಿತು ಅದನ್ನು ಚಿತ್ರಿಸಿದುದೇ. ಬುದ್ಧದೇವನು "ಸ್ತ್ರೀಯರಿಂದ ದೂರವಾಗಿರಿ, ಅವರನ್ನು ನೋಡಲೂ ಬೇಡಿ. ಅವರು ಪಿಶಾಚಿಗಳ ಪ್ರತಿನಿಧಿಗಳು" ಎಂದಿದ್ದನು. ಆತನ ಶಿಷ್ಯರಾದ ಭಿಕ್ಷು ಕಲೆಗಾರರು ಚಿತ್ರಗಳಲ್ಲಿ ಅಸಂಖ್ಯಾತ ಸ್ತ್ರೀಯರನ್ನು—ನರ್ತಕಿಯರನ್ನು ಗಾಯಕಿಯರನ್ನು ರಥತೂರ್ಯ ವಾದ್ಯಗಳೊಂದಿಗೆ ಮೆರವಣಿಗೆ ಹೋಗುವವರನ್ನು, ಅಲಂಕರಿಸಿಕೊಳ್ಳುತ್ತಿರುವವರನ್ನು ದೃಢಾಂಗರಾದ ಪುಷ್ಟರಾದ ಸುಂದರ ಸುಕುಮಾರಿಯರನ್ನು—ಚಿತ್ರಿಸಿದ್ದಾರೆ. ಆ ಭಿಕ್ಷುಗಳಿಗೆ ಸ್ತ್ರೀಯರು ಎಷ್ಟು ಚೆನ್ನಾಗಿ ತಿಳಿದಿದ್ದಿರಬೇಕು! ಈ ಜಗತ್ತಿನ ಚಲಿಸುತ್ತಿರುವ ಬಹುಮುಖದ ವಿರಾಟ್ ಸ್ವರೂಪವನ್ನು, ಜಂಗಮ ದೀಪಮಾಲೆಗಳನ್ನು, ಅವರು ಎಷ್ಟು ಸೂಕ್ಷ್ಮವಾಗಿ ನೋಡಿ, ಅರಿತು, ಎಷ್ಟು ಪ್ರೀತಿಯಿಂದ ಸೃಷ್ಟಿಸಿರಬೇಕು! ಬುದ್ಧದೇವನನ್ನು ಹೇಗೆ ಶಾಂತನನ್ನಾಗಿ ವಿರಕ್ತನನ್ನಾಗಿ ಅನಾಸಕ್ತನನ್ನಾಗಿ ಚಿತ್ರಿಸಿದ್ದಾರೆಯೋ ಅಷ್ಟೇ ಶ್ರದ್ಧೆ ಸತ್ಯದಿಂದ ಅವರು ಜಗತ್ತನ್ನೂ ಚಿತ್ರಿಸಿದ್ದಾರೆ.

ಚಿತ್ರಕಲೆಯು ಅಲ್ಲಿಂದ ಮುಂದೆ ಭಾರತದಲ್ಲಿ ಬೆಳೆಯಲಿಲ್ಲ. ಅಥವಾ ಅಜಂತವೇ ಆ ಮಾರ್ಗದಲ್ಲಿ ನಮ್ಮ ಸಂಪತ್ತು. ಅನೇಕ ಚಿತ್ರಗಳೂ ನಾಶವಾಗಿರಲೂ ಬಹುದು. ಭಾರತದ ಚಿತ್ರಕಲೆಯ ಪ್ರಥಮ ಸ್ವರ್ಣಯುಗ ಕ್ರಿ.ಶ. ಒಂದನೆಯ ಶತಮಾನದಿಂದ ಏಳನೆಯ ಶತಮಾನದ ವರೆಗೆ, ಮುಖ್ಯವಾಗಿ ಗುಪ್ತರ ಕಾಲದಲ್ಲಿ ಆಗಿಹೋಯಿತು. ಅನಂತರ ಶಿಲ್ಪಕಲೆಗೆ ಪ್ರಾದುರ್ಭಾವವುಂಟಾಯಿತು. ಕ್ರಿ.ಶ. ಏಳನೆಯ ಶತಮಾನದ ಎಲ್ಲೋರ ಗುಹಾಂತರ್ದೇವಾಲಯದ ಶಿಲ್ಪಕೃತಿಗಳು ಇಂದೂ ಭಾರತದ ಭೂಷಣ. ಎಲ್ಲೋರದ ಮಧ್ಯದ ಗುಹಾಂತರ ಕೈಲಾಸ ದೇವಾಲಯ, ಪಾರ್ವತೀ ಪರಮೇಶ್ವರರು, ರಾಮ ಸೀತೆ, ರಾಧಾಕೃಷ್ಣ—ಹೀಗೆ ಶಿಲ್ಪಕಲೆಗೆ ಪುರಾಣ ಮತ್ತು ಧಾರ್ಮಿಕ ವಸ್ತುಗಳೇ ಆಧಾರಗಳಾಗಿ ಆ ಧಾರ್ಮಿಕ ಸ್ಫೂರ್ತಿಯಿಂದಲೇ ಶಿಲ್ಪ ಬೆಳೆಯಿತು. ಎಲ್ಲೆಲ್ಲಿಯೂ ಬೋಧಿಸತ್ವರ ಮೂರ್ತಿಗಳು. ಮಥುರೆಯ ಕಲಾಶಾಲೆಯಲ್ಲಿ ತುಂಬ ಶ್ರೇಷ್ಠವಾದ ಬೋಧಿಸತ್ವನ ವಿಗ್ರಹ ಒಂದು ಇದೆ. ಇದು ಕುಶಾನರ ಕಾಲಕ್ಕೆ ಸೇರಿದುದು. ಏಳನೆಯ ಶತಮಾನದ ನಂತರ ಎಲ್ಲೆಲ್ಲಿಯೂ ವಿಗ್ರಹಗಳೂ ದೇವಸ್ಥಾನಗಳೂ ರಚಿತವಾದುವು. ಆ "ವಿಗ್ರಹಗಳಲ್ಲಿ ಪಾರ್ಥಿವತೆ ತೀರ ಕಡಿಮೆ. ನರಸಿಂಹ, ದಶಗ್ರೀವ, ಚತುರ್ಮುಖಬ್ರಹ್ಮ, ಚತುರ್ಭುಜ ವಿಷ್ಣು. ಶ್ರೀರಾಮನಲ್ಲಿ ನವದೂರ್ವಾದಲ ಶ್ಯಾಮಲತೆ. ಶ್ರೀ ಕೃಷ್ಣನಲ್ಲಿ ನವೀನ ನೀರದ ಕಾಂತಿ. ಎಲ್ಲಕ್ಕೂ ಮೇಲಾಗಿ ಆ ಸುಡುಗಾಡಿನ ಭೋಲಾನಾಥ. ಇವುಗಳಲ್ಲಿ ಜಗತ್ತಿನ ಯಾವ ಕಾಲದ ಯಾವ

ಶಿಲ್ಪದಲ್ಲಿಯೂ ಸಿಗದ ಮಹಾಮುಕ್ತಿಯ ಆನಂದೋಚ್ಛ್ವಾಸಗಳಿವೆ.” ಭಾರತದ ಶಿಲ್ಪಕಲೆ ಎಂದಿನಿಂದಲೂ ಜಗತ್ತಿನ ಮನ್ನಣೆಯನ್ನು ಪಡೆದಿದೆ. ಎಲ್ಲೋರದಲ್ಲಿ ಒಂದು ನಟರಾಜನ ಭಿನ್ನಮೂರ್ತಿ ಇದೆ. ಭಿನ್ನವಾಗಿದ್ದರೂ ಸಹ ಅದು ಅದ್ಭುತವಾಗಿ ಸೃಷ್ಟಿಯ ಸಮಸ್ತ ಶಕ್ತಿಯನ್ನೂ ತನ್ನಲ್ಲಿ ಅಡಗಿಸಿಕೊಂಡಷ್ಟು ಭವ್ಯವಾಗಿದೆ. “ತಾಂಡವ ನೃತ್ಯದ ಲಾಸ್ಯದಿಂದ ಶಿಲೆಯೇ ಚಲಿಸುವಂತೆ ತೋರುತ್ತಿದ್ದರೂ ಆ ನಟರಾಜನ ಮುಖ ಬುದ್ಧನ ಮುಖದಂತೆಯೇ ಶಾಂತವಾಗಿ ಗಂಭೀರವಾಗಿ ಮಂಗಳಕರವಾಗಿ ತೋರುತ್ತಿದೆ” ಭಾರತದ ಶಿಲ್ಪಕಲೆಯ ಆಕರ್ಷಣೆ ಹೇಗಿದೆಯೆಂದರೆ, ಒಂದು ತಾಂಡವ ವಿಗ್ರಹವನ್ನು ಬ್ರಿಟಿಷ್ ಪ್ರದರ್ಶನಶಾಲೆಯಲ್ಲಿ ಕೊಂಡುಹೋಗಿ ಇಟ್ಟುಕೊಂಡಿದ್ದಾರೆ. ಆ ವಿಗ್ರಹ “ಶಿವನು ಬ್ರಹ್ಮಾಂಡಗಳನ್ನು ಸೃಷ್ಟಿಸುತ್ತಾ ಲಯಗೊಳಿಸುತ್ತಾ ನರ್ತನಮಾಡುತ್ತಿದ್ದಾನೆ. ಶಿವನ ತಾಳಲಯಬದ್ಧ ಗತಿ ವಿಶಾಲವಾದ ಕಾಲಮಾನಗಳನ್ನೂ ಮನ್ವಂತರಗಳನ್ನೂ ಪ್ರದರ್ಶಿಸುತ್ತದೆ. ಅವನ ಗತಿಗಳು ಮಂತ್ರಗಳಂತೆ ನಿರ್ದುಷ್ಟವಾಗಿ ಐಂದ್ರಜಾಲಿಕವಾಗಿವೆ” ಎಂಬಂತೆ ತೋರುತ್ತಿದೆ.

ಭಾರತ, ನರ್ತನದಲ್ಲಿ ಬಾಲಿ ಜಾವಾಗಳಿಗೆ ಮೇಲುಪಂಗ್ತಿಯಾದಂತೆ, ಶಿಲ್ಪ ಮತ್ತು ವಾಸ್ತುಶಿಲ್ಪಗಳಲ್ಲಿ ಸುಮಾತ್ರ, ಇಂಡೋಚೀನ, ಇಂಡೋನೇಷಿಯಾ, ಸಯಾಂ, ಜಾವಾ ಇಲ್ಲೆಲ್ಲ ತನ್ನ ಪ್ರಭಾವವನ್ನು ಬೀರಿತು. ಜಾವದ ಬೋರ್‌ಬುಡನ್‌ನಲ್ಲಿ ಬುದ್ಧನ ಪೂರ್ಣ ಜೀವನಚರಿತ್ರೆಯನ್ನೇ ಕಲ್ಲಿನಲ್ಲಿ ಕೊರೆದಿದ್ದಾರೆ. ಅಲ್ಲಿದ್ದ ಬೋಧಿಸತ್ವನ ವಿಗ್ರಹವೊಂದನ್ನು ಕೋಪನ್‌ಹೇಗನ್‌ಗೆ ತೆಗೆದುಕೊಂಡು ಹೋಗಿದ್ದಾರೆ. ಅದು ಅತ್ಯಂತ ಸುಂದರವಾದ ವಿಗ್ರಹ, ಅದನ್ನು ನೋಡಿದರೆ, ಕನ್ನಡಿಯಲ್ಲಿ ತೋರುವಂತೆ ಬೋಧಿಸತ್ವನ ಆತ್ಮಜ್ಯೋತಿ ವ್ಯಕ್ತವಾಗುವುದೆಂದು ಹ್ಯಾವಲ್ ಹೇಳುತ್ತಾರೆ. ಭಾರತದ ಶಿಲ್ಪ ಹೀಗೆ ದಕ್ಷಿಣ ದೇಶದ ದೇವಾಲಯಗಳಲ್ಲಿಯೂ ಮಹಾಬಲಿಪುರ ಮಧುರೆ ಸೋಮನಾಥಪುರ ಹಳೇಬೀಡು ಬೇಲೂರು ಎಲ್ಲೆಲ್ಲಿಯೂ ತನ್ನ ಸಾರ್ವಭೌಮತ್ವವನ್ನು ಸ್ಥಾಪಿಸಿದೆ. ದಕ್ಷಿಣ ದೇಶದ ದೇವಾಲಯಗಳೇ ಇದಕ್ಕೆ ಉದಾಹರಣೆ. ಆ ಶಿಲ್ಪ ಹೇಗೆ ಅದ್ಭುತವೋ ಹಾಗೆ ರಮ್ಯವೂ ಹೌದು. ಸಂಸಾರ, ಜೀವನ, ಹೆಣ್ಣು, ಹೆಣ್ಣಿನ ಸೌಂದರ್ಯ, ಬೆಡಗು, ದೇವತೆಗಳ ಚಿತ್ರಗಳು, ದೇವಸ್ಥಾನಗಳ ಅದ್ಭುತಗಳಾದ ಮಹತ್ತಾದ ಶಿಲ್ಪಗಳು, ಸಾವಿರ ಕಂಬದ ಸಭಾಂಗಣಗಳು ಆನೆ, ಕುದುರೆ, ರಾವುತ, ರಾಮಾಯಣ ಭಾರತ ವಿಶ್ವರೂಪದರ್ಶನ; ಯಾವ ದೇವಾಲಯವೂ ಕಲ್ಲಿನ ಅರಮನೆ. ಅದರ ಅದ್ಭುತ, ಗಾಬರಿ ಹುಟ್ಟಿಸುವಂತಹುದು; ಅದ್ಭುತ, ರಾಕ್ಷಸ. ಆದರೆ ಪರಿಣಾಮ ಉಜ್ವಲ.

ಅಜಂತದ ಅನಂತರ ಭಾರತದ ಚಿತ್ರಕಲೆ ಮತ್ತೆ ಹಿಂದಿನ ವೈಭವವನ್ನು

ಮುಟ್ಟಲಿಲ್ಲ. ಹಾಗೂ ಹೀಗೂ ಹದಿನೈದನೆಯ ಶತಮಾನದ ವರೆಗೆ ಅಲ್ಲಲ್ಲಿ ರಾಜರ, ಧನಿಕರ ಆಶ್ರಯದಲ್ಲಿ ಚಿತ್ರಕಲೆ ಬೆಳೆಯಿತು. ಮೊಗಲರ ರಾಜ್ಯದಲ್ಲಿ ಚಿತ್ರಕಲೆಗಳಿಗೆ ಒಂದು ಹೊಸ ಸ್ಫೂರ್ತಿ ಬಂತು. ಆಗ ಅದಕ್ಕೆ ರಾಜಾಶ್ರಯ ದೊರಕಿತು. ಆ ಕಲಾಕೃತಿಗಳು ಭವ್ಯವಾದುವೆಂದು ಹೇಳಲು ಸಾಧ್ಯವಿಲ್ಲವಾದರೂ ಆಕರ್ಷಣೀಯ ವೆಂದು ಹೇಳಬಹುದು. ಆ ಚಿತ್ರಗಳೆಲ್ಲ ಸಾಧಾರಣವಾಗಿ, ಅರಮನೆಯ ಮತ್ತು ದರ್ಬಾರಿನ ಪ್ರಮುಖರಿಗೆ ಬೋಧನೆ ಮಾಡುವುದಕ್ಕಾಗಿ ಬರೆದುವು. ರಾಜ ರಾಣಿ, ರಾಜಕುಮಾರರ ಭಾವಚಿತ್ರಗಳು, ದರ್ಬಾರಿನ ದೃಶ್ಯಗಳು ಬೇಟೆ ದೃಶ್ಯಗಳು ; ಇವು ಗಳಲ್ಲಿ ಉತ್ತಮವಾದ ವರ್ಣವಿನ್ಯಾಸಗಳಿವೆ. ಆದರೆ ಅರಮನೆಗಾಗಿ ಬರೆದ ಆ ಚಿತ್ರಗಳಿಂದ ಸಾಮಾನ್ಯರ ಮೇಲೆ ಯಾವ ಪರಿಣಾಮವೂ ಉಂಟಾಗಲಿಲ್ಲ. ಮೊಗಲರ ಕಲೆಯಿಂದ ರಾಜಪುತ್ರರ ಮತ್ತು ಗುಡ್ಡಗಾಡಿನವರ ಚಿತ್ರಕಲೆ ಹುಟ್ಟಿಕೊಂಡಿತು. ಅದು ಸಾಮಾನ್ಯ ಜನತೆಗೆ ಅನ್ವಯಿಸುವ ಕಲೆಯಲ್ಲವಾದರೂ ಆ ಚಿತ್ರಗಾರರು ಭಾರತದ ಪುರಾಣ ಇತಿಹಾಸಗಳ ಸಂಗತಿಗಳನ್ನೇ ಚಿತ್ರಿಸಿದ್ದಾರೆ. ರಾಧಾಕೃಷ್ಣ ಗೋಪೀಕೃಷ್ಣ ಹೆಚ್ಚಾಗಿ ಭಾಗವತದ ಕತೆಯೇ ಈ ಕಲೆಯ ನಿರೂಪಣೆ.

ಭಾರತದಲ್ಲಿ ಆಂಗ್ಲೇಯರ ರಾಜ್ಯಸ್ಥಾಪನೆಯಾದಮೇಲೆ, ಭಾರತೀಯವಾದು ದೆಲ್ಲ ನಾಶವಾದಂತೆ ಭಾರತದ ಚಿತ್ರಕಲೆಯೂ ನಾಶವಾಯಿತು. ಇಂಗ್ಲಿಷರು ಗ್ರೀಕ್ ಕಲೆಯನ್ನು, ತಾವು ಅರ್ಥಮಾಡಿಕೊಂಡಿದ್ದ ರೀತಿಯಲ್ಲಿ ಭಾರತಕ್ಕೆ ಅನ್ವಯಿಸ ತೊಡಗಿದರು. ಅದರಿಂದ ಭಾರತಕ್ಕೆ ಒಳ್ಳೆಯದಾಗಲಿಲ್ಲ. ರವಿವರ್ಮರಂತಹ ಬರಿಯ ವರ್ಣನಾವೈಖರಿಗಾರರು ಮಾತ್ರ ಪ್ರಕಾಶಕ್ಕೆ ಬಂದರು. ಭಾರತದ ಚಿತ್ರಕಲಾ ಸಾಮಾರ್ಥ್ಯ ಮರೆಯಾದಂತೆಯೇ ತೋರಿತು. ಆಗ ಹ್ಯಾವೆಲ್‌ರು ಭಾರತೀಯರನ್ನು ಅವರ ಹಿಂದಿನ ವೈಭವಸ್ಮೃತಿಗೆ ಎಚ್ಚರಿಸಿದರು. ಅದರ ಫಲವಾಗಿ ಹುಟ್ಟಿದುದು ವಂಗ ಚಿತ್ರ ಪಂಥ [Bengal School of Art] ಈ ಸಂಪ್ರದಾಯದವರಲ್ಲಿ ನಂದಾ ಲಾಲ್ ಬೋಸ್, ಅವನೀಂದ್ರನಾಥ ಟಾಗೂರ್, ಗಂಗೇಂದ್ರನಾಥ ಟಾಗೂರ್, ಮೈಸೂರು ವೆಂಕಟಪ್ಪ ಇವರು ಮುಖ್ಯರಾದವರು. ಇವರು ಅಜಂತದಿಂದ ಸ್ಫೂರ್ತಿ ಯನ್ನು ಹೊಂದಿದವರಾದರೂ ಅಜಂತದ ಕಲೆಗಾರರ ಜೀವಕಲೆ ಇವರಿಗೆ ಸಿದ್ಧಿಸಲಿಲ್ಲ. ಇವರ ಕಲೆ ಕೆಲವು ಕಾಲ ಫ್ಯಾಶನ್ ಆಗಿದ್ದು ಅದರಲ್ಲಿ ಅಭಿರುಚಿಯುಳ್ಳವರನ್ನು ಮಾತ್ರ ಆಕರ್ಷಿಸಿ ಗುಪ್ತವಾಗಿದೆ.

ವಂಗಪಂಥದ ಚಿತ್ರಗಾರರನ್ನು ಅನುಸರಿಸಿದರೂ, ಮೈಸೂರಿನ ವೆಂಕಟಪ್ಪ ನವರದು ಅದರಲ್ಲಿಯೂ ಒಂದು ವಿಶೇಷ ನವೀನಕ್ರಮ. ಚಿತ್ರ ಸಂಗೀತ ಶಿಲ್ಪ ಈ ಮೂರು ಕಲೆಗಳಲ್ಲಿಯೂ ಅದ್ವಿತೀಯ ಪಾಂಡಿತ್ಯವನ್ನು ಹೊಂದಿ ಅವುಗಳ ಪರಸ್ಪರ

ಸಾಮರಸ್ಯದಿಂದ ಸುಸಂಸ್ಕಾರವನ್ನು ಪಡೆದ ಜೀವ ಶ್ರೀ ವೆಂಕಟಪ್ಪನವರದು. ಅವರ ಅರ್ಧನಾರೀಶ್ವರ ಚಿತ್ರ, ಚಿತ್ರಪ್ರಪಂಚದಲ್ಲಿ ತನ್ನದೇ ಆದ ಶೋಭೆಯಿಂದ ಬೆಳಗುತ್ತಿದೆ. ಭಾರತೀಯ ಚಿತ್ರಕಲೆಯ ನಿಜಸ್ವರೂಪವನ್ನು ಅರಿತವರಲ್ಲಿ ಶ್ರೀಮತಿ ಅಮೃತ ಷೇರ್‌ಗಿಲ್ ಎಂಬ ಸಿಖ್ ಮಹಿಳೆ ಒಬ್ಬಳು. ಈಕೆ ಫ್ರಾನ್ಸಿನಲ್ಲಿ ಚಿತ್ರಕಲೆಯನ್ನು ಕಲಿತು, ಅದರಿಂದ ತೃಪ್ತಳಾಗದೆ ಭಾರತದ ಚಿತ್ರಕಲೆ ಜಗತ್ತಿಗೆ ಸಾರುವ ಸಂದೇಶವಿದೆಯೆಂಬ ದೃಢನಂಬಿಕೆಯಿಂದ ಭಾರತದಲ್ಲಿ ಬಂದು ಕಾರ್ಯಮಾಡಲಾರಂಭಿಸಿದಳು. ಆದರೆ ಭಾರತದ ಚಿತ್ರಕಲೆಯ ದುರದೃಷ್ಟದಿಂದ ಆಕೆ ತನ್ನ ೨೯ ನೆ ವಯಸ್ಸಿನಲ್ಲಿ ಮೃತಳಾದುದರಿಂದ ಆಕೆಯ ಸ್ಫೂರ್ತಿಯ ಫಲ ನಮಗೆ ದೊರಕಲಿಲ್ಲ.

ಈಚೆಗೆ ಭಾರತದಲ್ಲಿ ಶಿಲ್ಪವೂ ಚಿತ್ರಕಲೆಯೂ ಹೀನದೆಸೆಯಲ್ಲಿವೆ. ಈ ನಾಡಿನ ಚಿತ್ರಗಳು ನೋಡಿದ ಕೂಡಲೇ ಮನಸ್ಸನ್ನು ಆಕರ್ಷಿಸುವುವಾಗಿಲ್ಲ. ಅವುಗಳ ಯೋಗ್ಯತೆಯರಿಯಲು ಅವುಗಳ ಆತ್ಮವನ್ನು ಅರಿಯಬೇಕು. ಭಾರತದ ಕಲೆ, ಸೃಷ್ಟಿಯ ಬರಿಯ ನಕಲು ಆಗಿಲ್ಲ. ಧ್ಯಾನರತಿಯಿಂದ ಮನಸ್ಸನ್ನು ಕೊಟ್ಟು ಮನಸ್ಸನ್ನು ಪಡೆಯುವ ಮಾರ್ಗ ಅದು. ಭಾರತದ ಚಿತ್ರ ಮತ್ತು ಚಿತ್ರಗಳು ಕೆಲವು ಕಟ್ಟುಪಾಡುಗಳಿಗೆ ಒಳಗಾಗಿಯೇ ರೂಪಿತವಾಗಿರುತ್ತವೆ. ವಾತ್ಸಾಯನನ ಕಾಮಸೂತ್ರ ಹೀಗೆ ಹೇಳುತ್ತದೆ:

ರೂಪಭೇದಾಃ ಪ್ರಮಾಣಾನಿ ಭಾವಲಾವಣ್ಯ ಯೋಜನಮ್
ಸಾದೃಶ್ಯಂ ವರ್ಣಿಕಾ ಭಂಗ ಇತಿ ಚಿತ್ರಂ ಷಡಂಗಕಂ

ರೂಪಭೇದ, ಪ್ರಮಾಣ, ಭಾವ, ಲಾವಣ್ಯ, ಸಾದೃಶ್ಯ, ವರ್ಣನೈಪುಣ್ಯ ಇವು ಆರು ಚಿತ್ರಕಲೆಯ ಷಡಂಗಗಳು. ವರ್ಣನೈಪುಣ್ಯವನ್ನು ಬಿಟ್ಟರೆ ಉಳಿದ ಐದು ಅಂಶಗಳು ಶಿಲ್ಪಕಲೆ ಮತ್ತು ಚಿತ್ರ ಎರಡಕ್ಕೂ ಅನ್ವಯಿಸುವುವು.

ರೂಪ ಎಂಬುದು ಎಲ್ಲರಿಗೂ ತಿಳಿದ ವಿಷಯವೇ. ಆದರೆ ರೂಪಭೇದವೆಂದರೇನು? ಸುರೂಪ ಮತ್ತು ಕುರೂಪಗಳನ್ನು ಸ್ಪಷ್ಟಪಡಿಸುವುದೇ ರೂಪಭೇದ. ಉದಾಹರಣೆಗೆ ಸ್ತ್ರೀಯನ್ನು ವಿಲಾಸಿನಿ, ವಿರಹಿಣಿ, ಗೃಹಿಣಿ ಈ ಮೂರು ಬಗೆಯಲ್ಲಿಯೂ ಚಿತ್ರಿಸಬಹುದು. ವಿಲಾಸಿನಿಯ ಚಿತ್ರದಲ್ಲಿ ಅದಕ್ಕನುಗುಣವಾದ ಅಂದಚಂದ ಹಾವಭಾವಗಳನ್ನು ತೋರಿಸಬಹುದು. ಕುರುಳನ್ನು ಬಾಚಿ ಜಡೆ ಹೆಣೆದು ಸಿಂಗರಿಸುವ ವಿಧದಲ್ಲಿಯೂ ಕಿವಿಯ ಆಭರಣ ಓಲಾಡುವುದರಲ್ಲಿಯೂ ಒಯ್ಯಾರದಲ್ಲಿಯೂ ಅವಳನ್ನು ಚಿತ್ರಿಸಬಹುದು. ವಿರಹಿಣಿ, ಗೃಹಿಣಿಯರನ್ನೂ ಅವರವರ ಸ್ವಭಾವಗಳಿಗನುಗುಣವಾದ ವಸ್ತ್ರಾಭರಣಗಳಿಂದ ರೂಪಿಸಬಹುದು. ಆದರೆ ಬರಿಯ ಬಾಹ್ಯವೇಷಗಳಿಂದ ಅವರನ್ನು ನಿರ್ಣಯಿಸಲು ಸಾಧ್ಯವೆ? ಬಾಹ್ಯವೇಷಗಳನ್ನು ಮೀರಿ ಅವರ ಸ್ವಭಾವವನ್ನು

ಯಾವುದರಿಂದ ನಿರ್ಣಯಿಸುತ್ತೇವೆಯೋ ಅದೇ ರೂಪಭೇದ. ಬರಿಯ ಬಾಹ್ಯವೇಷವನ್ನು ಮಾತ್ರ ನೋಡಿದರೆ ಹೇಗೆ ಎಲ್ಲ ಸ್ತ್ರೀಯರೂ ಒಂದೇ ಆಗಿ ತೋರುತ್ತಾರೆಯೋ ಹಾಗೆಯೇ ಚಿತ್ರಗಳಲ್ಲಿ ಬಾಹ್ಯದ ಜತೆಗೆ ಮತ್ತೇನೂ ಇಲ್ಲದ ಕೃತಿ ನಮಗೆ ತನ್ನ ಒಳ ಅರ್ಥವನ್ನು ತೋರಿಸುವುದಿಲ್ಲ. ಇದನ್ನರಿತೇ ಚಿತ್ರಗಾರರೂ ಶಿಲ್ಪಿಗಳೂ ಮೊದಲು ತಮ್ಮ ಮನೋನೇತ್ರಗಳ ಎದುರಿಗೆ ಕೃತಿಗಳನ್ನು ನಿರ್ಮಾಣಮಾಡಿಕೊಳ್ಳುತ್ತಾರೆ. ಮೇಲಿನ ನೋಟಕ್ಕೆ ಚಿತ್ರಗಳೆಲ್ಲ ಒಂದೇ ಸಮನಾಗಿ ತೋರಿದರೂ ಅಂತರಂಗದ ಭಾವಗಳನ್ನು ತೋರಿಸುವ ವಿಧದಿಂದ, ಆ ಕೃತಿಗಳು ಒಂದರಿಂದ ಒಂದು ಸ್ಪಷ್ಟವಾಗಿ ಬೇರೆಯಾಗಿರುತ್ತವೆ. ಇದನ್ನು ಸಾಧಿಸಲು ಚಿತ್ರಗಾರನಿಗೆ ಧ್ಯಾನವೂ ಏಕಾಗ್ರತೆಯೂ ಇರಬೇಕು. ಏಕಾಗ್ರವಾಗಿ ಧ್ಯಾನಮಾಡುವುದರಿಂದ ಪ್ರತ್ಯಕ್ಷವಾಗಿ ನೋಡುವುದಕ್ಕಿಂತ ಹೆಚ್ಚಾಗಿ ಮುಖಭಾವ ಕಲಾಕರ್ತೃವಿಗೆ ಸ್ಪಷ್ಟವಾಗುವುದು. "ಯಥಾನಾನ್ಯೇನ ಮಾರ್ಗೇಣ ಪ್ರತ್ಯಕ್ಷೇಣಾಪಿ ವಾ ಖಲು" ಬೇರೆ ಯಾವ ಮಾರ್ಗದಿಂದಲೂ ಅಲ್ಲ. ಪ್ರತ್ಯಕ್ಷವಾಗಿ ಕಣ್ಣುಬಿಟ್ಟು ನೋಡುವುದರಿಂದಲೂ ಅಲ್ಲ.

ಆಕೃತಿ ಸ್ಪಷ್ಟವಾಗಬೇಕಾದರೆ ಪ್ರಮಾಣ ಮುಖ್ಯ. ಅಖಂಡವಾದ ಕಡಲನ್ನೂ ಗಗನಚುಂಬಿ ವೃಕ್ಷಗಳನ್ನೂ ವಿಸ್ತಾರವಾದ ಪರ್ವತಗಳನ್ನೂ, ಅಲೆಗಳ ಓಟವನ್ನೂ ಮೇಘಗಳ ಚಲನೆಯನ್ನೂ ಕೆಲವು ಅಂಗುಲ ಪ್ರದೇಶದಲ್ಲಿ ತೋರಿಸುವುದೇ ಪ್ರಮಾಣ ವಿವೇಕ. ಮೂರನೆಯದು ಭಾವ. ಕಲಾಕೃತಿ ಮನಸ್ಸನ್ನು ಆಕರ್ಷಿಸುವುದು ಭಾವದಿಂದಲೇ. ಭಾವವಿಲ್ಲದ ಮನಸ್ಸು, ಗಾಳಿ ಚಲಿಸದ ನೀರಿನ ರಾಸಿಯಂತೆ. ಮನಸ್ಸಿನಲ್ಲಿರುವುದನ್ನು ಹೊರಕ್ಕೆ ಪ್ರಕಾಶಗೊಳಿಸುವುದು ಭಾವವೊಂದೇ. ವಸಂತಾಗಮನವನ್ನು ಎಳೆಯ ಚಿಗುರೂ, ಮಳೆಗಾಲವನ್ನು ಮೋಡಗಳೂ ಸೂಚಿಸುವಂತೆ, ಅಂತರಂಗದ ಭಾವನೆಗಳನ್ನು ಹೊರಗೆ ಸೂಚಿಸುವುದು ಭಾವನಿರೂಪಣೆ. ಮೇಘಗಳ ಆರ್ದ್ರವರ್ಣದಲ್ಲಿಯೂ ಗಾಳಿಯಿಂದ ಅಲುಗುತ್ತಿರುವ ಮರಗಳ ಆಟದಲ್ಲಿಯೂ ಸಮುದ್ರದ ಅಲೆಗಳ ಆರ್ಭಟದಲ್ಲಿಯೂ ನೀರಿನ ಪ್ರವಾಹದ ಗರ್ಜನೆಯಲ್ಲಿಯೂ, ಅಂಗಗಳ ಇರುವಿಕೆಯಲ್ಲಿಯೂ ಹಕ್ಕಿಗಳ ವಿಲಾಸದಲ್ಲಿಯೂ ತುಟಿಗಳ ಪಿಸುಮಾತಿನಲ್ಲಿಯೂ, ಮುತ್ತಿನಂತೆ ಬೀಳುವ ಕಣ್ಣೀರಿನಲ್ಲಿಯೂ ಮುಖವನ್ನು ಸರ್ರನೆ ಮರೆಸುವ ಅವಕುಂಠನದಲ್ಲಿಯೂ ಭಾವಗಳ ಪ್ರಕಾಶನ ವ್ಯಕ್ತವಾಗುವುದು. ಭಾವವಿಶೇಷ ವ್ಯಂಜನ ವ್ಯಾಪಾರ. ಇದರ ವ್ಯಂಗ್ಯವೇ ಕಲೆಯ ಜೇನು. ಒಂದೇ ಚಿತ್ರವನ್ನು ಎರಡು ಮನಸ್ಸುಗಳು ಬೇರೆಬೇರೆಯಾಗಿ ಅನುಭವಿಸುತ್ತವೆ. ದುಃಖದಿಂದಿರುವ ಮನಸ್ಸು, ಮಳೆ ಹನಿ, ದೇವತೆಗಳ ಕಣ್ಣೀರೆಂದು ಭಾವಿಸಬಹುದು. ಸುಖದಿಂದಿರುವ ಮನಸ್ಸು, ಮಳೆ ಹನಿ ದೇವಸ್ತ್ರೀಯರ ಸರಸದಲ್ಲಿ ಕೊರಳಿನಿಂದ ಉದುರಿದ ಮಾಲೆಯ ಮುತ್ತು,

ಎಂದು ಭಾವಿಸಬಹುದು. ಉತ್ಕೃಷ್ಟ ಕಲೆಗಾರ ಚಿತ್ರದಲ್ಲಿ ವ್ಯಂಗ್ಯವನ್ನೇ ಕಾಣಿಸಿಯಾನು.

ವ್ಯಂಗ್ಯದಿಂದ ಭಾವಕ್ಕೆ ಹೆಚ್ಚು ಸ್ವಾರಸ್ಯ ಬರುವುದು. ಒಬ್ಬ ಭಿಕ್ಷುಕನನ್ನು ಚಿತ್ರಿಸಬೇಕಾದರೆ ಭಿಕ್ಷಾಪಾತ್ರೆ, ಭಿಕ್ಷುಕ, ಪುಡಿಕಾಸು ಇವನ್ನು ಚಿತ್ರಿಸುವುದು ಸಾಧಾರಣ ಕಲೆ. ಆದರೆ ಭಿಕ್ಷುಕನ ಕಣ್ಣಮುಂದೆ ದೊಡ್ಡ ಅಮೃತಶಿಲೆಯ ಮಹಡಿ ಮನೆಯನ್ನು ಕಟ್ಟುವುದರಿಂದ ದಾರಿದ್ರ್ಯದ ಕರುಣಾಜನಕಸ್ಥಿತಿ ಹೃದಯಂಗಮ ವಾಗುವುದು. ಚಿತ್ರಗಳಲ್ಲಿರಬೇಕಾದ ನಾಲ್ಕನೆಯ ಗುಣ ಲಾವಣ್ಯ; ಐದನೆಯದು ಸಾದೃಶ್ಯ; ಆರನೆಯದು ವರ್ಣರಚನೆ ಅಂದರೆ ವರ್ಣಗಳ ಸಾಮಂಜಸ್ಯ. ಭಾರತದ ಚಿತ್ರಕಲೆ ಅನುಸರಿಸಿದ ಸೂತ್ರ ಇದು. ಅದರಿಂದಲೇ ಆ ಕಲೆ ಲೋಕಪ್ರಿಯ ವಾಯಿತು.

ಈಚಿನ ಕಲೆಗಾರರು ಈ ಯಾವ ನಿಯಮಗಳನ್ನೂ ಹೆಚ್ಚಾಗಿ ಪಾಲಿಸುತ್ತಿಲ್ಲ. ಇಂದು ಕಲ್ಕತ್ತದಲ್ಲಿ ತುಂಬ ಪ್ರಸಿದ್ಧ ಚಿತ್ರಗಾರರೆಂದರೆ ಜೆಮನಿರಾಯ್. ಇವರು ಹೆಚ್ಚಾಗಿ ಜಾನಪದ ಚಿತ್ರಗಾರರು. ಇವರಿಗೆ ಪಾಶ್ಚಾತ್ಯ ಮತ್ತು ಭಾರತೀಯ ಚಿತ್ರಕಲೆಗಳಲ್ಲಿ ತುಂಬ ಪರಿಶ್ರಮವಿದ್ದರೂ, ಇವರು ಜಾನಪದ ಚಿತ್ರಗಳನ್ನು ರೂಪಿಸಲು ಪ್ರಾರಂಭಿಸುವ ವರೆಗೆ ತಮ್ಮನ್ನು ತಾವು ಕಂಡುಕೊಳ್ಳಲಿಲ್ಲ. ಇವರ ಚಿತ್ರಗಳಲ್ಲಿ ತಾಯಿ ಮತ್ತು ಮಗು ಎಂಬ ಚಿತ್ರಕ್ಕೆ ಅನೇಕ ಸನ್ಮಾನಗಳು ದೊರತಿವೆ. ಮೃಗರಾಜ್ಯ ಎಂಬ ಇವರ ಚಿತ್ರ, ಭಾರತದ ಉತ್ತಮ ಚಿತ್ರದ ಮಾದರಿ ಎಂದು ಅಮೆರಿಕದ ಪತ್ರಿಕೆಗಳಲ್ಲಿ ಅಚ್ಚಾಗಿದ್ದಿತು. ಜೆಮನಿರಾಯ್‌ರನ್ನು ಬಿಟ್ಟರೆ ತ್ರಿಲೋಕ ಕೌಲ್ (ಚಿತ್ರ, ಕಾಶ್ಮೀರ್) ಅನಿಲ್‌ರಾಯ್ ಚೌಧುರಿ (ಚಿತ್ರ, ನಾಲ್ವರು ಕನ್ಯೆಯರು) ಬೊಂಬಾಯಿನ ರಸಿಕರವಾಲ್ (ಚಿತ್ರ, ಬಾವಿಯ ಬಳಿ ಮಹಿಳೆಯರು) ಬೊಂಬಾಯಿನ ಹೆಬ್ಬಾರ್ (ಚಿತ್ರ, ಹಸಿವು) ಇವರೆಲ್ಲ ಪ್ರಸಿದ್ಧರಾಗಿರುವವರು. ಇವರ ಚಿತ್ರಗಳಲ್ಲಿ ಪೂರ್ವ ಮತ್ತು ಪಶ್ಚಿಮ ಸಂಪ್ರದಾಯಗಳ ಮಿಲನವಿದೆ. ಬೊಂಬಾಯಿನ ಹುಸೇನ್‌ರೂ ಬೇಂದ್ರೆಯವರೂ ಬ್ರಷ್ ಕಾರ್ಯದಲ್ಲಿ ಪ್ರಸಿದ್ಧರಾಗಿದ್ದಾರೆ. ಬಂಗಾಳದ ಮುಖರ್ಜಿಯವರೂ ಒಳ್ಳೆಯ ಚಿತ್ರಗಾರರೆಂದು ಹೆಸರಾಗಿದ್ದಾರೆ. ಶಿಲ್ಪಕಲೆಯಲ್ಲಿ ಸುಧಿರಂಜನ್ ಕ್ಷಿತಿಗಿರ್, ಮೈಸೂರು ಸಿದ್ಧಲಿಂಗಸ್ವಾಮಿ ಇವರ ಕೃತಿಗಳು ಹೆಚ್ಚು ಪ್ರಸಿದ್ಧವಾಗಿವೆ.

ಸಧ್ಯದಲ್ಲಿ ಭಾರತದಲ್ಲಿ ಚಿತ್ರಕಲೆಯಲ್ಲಿಯಾಗಲೀ ಶಿಲ್ಪದಲ್ಲಿಯಾಗಲೀ ಪ್ರಾಚೀನ ವೈಭವವನ್ನು ಮುಟ್ಟುವವರು ಇನ್ನೂ ಬೆಳಕಿಗೆ ಬಂದಿಲ್ಲ. ಹಿಂದಿನ ಧಾರ್ಮಿಕ ಸ್ಫೂರ್ತಿ ಸತ್ಪ್ರೇರಣೆಯ ಜಾಗ್ರತಿಯುಂಟಾಗುವ ಕಾಲವನ್ನು ನಾವು ಕಾಯ

ಬೇಕಾಗಿದೆ. ಸ್ವತಂತ್ರಭಾರತದಲ್ಲಿ ಕಲೆಗಳ ಉಚ್ಛ್ರಾಯವನ್ನು ನಾವು ನಿರೀಕ್ಷಿಸ ಬಹುದು. "ಯಾವ ಧರ್ಮಶ್ರದ್ಧೆಯಿಂದ ಭಾರತವರ್ಷದ ಶಿಲ್ಪಿಗಳು ತಮ್ಮ ಶ್ರಮ ವನ್ನು ಶ್ರಮವೆಂದೇ ಬಗೆಯದೆ ಪರ್ವತಗಳನ್ನೇ ಒಡೆದು ತಮ್ಮ ಇಚ್ಛೆಯಂತೆ ಮಠ ಮಂದಿರಗಳನ್ನು ನಿರ್ಮಿಸಿದರೋ, ಪರ್ವತದ ಕೋಡುಗಲ್ಲುಗಳನ್ನೇ ಸೀಳಿ ಮೂರ್ತಿ ಗಳನ್ನು ನಿರ್ಮಿಸಿದರೋ, ಪರ್ವತ ಗುಹೆಗಳಲ್ಲಿ ಅಕ್ಷಯಪ್ರದೀಪಗಳಂತೆ ಮಹೋಜ್ವಲ ಚಿತ್ರಶ್ರೇಣಿಗಳನ್ನು ಬೆಳಗಿಸಿದರೋ ಆ ಸ್ಫೂರ್ತಿ ಸ್ವಾತಂತ್ರ್ಯದೊಂದಿಗೆ ಮತ್ತೆ ಬಂದೇ ಬರುವುದು. ಸಾಂಚಿ ಸ್ತೂಪಗಳನ್ನೂ ಅಜಂತ ಚಿತ್ರಗಳನ್ನೂ ನಿರ್ಮಿಸಿದ ಆ ಧರ್ಮಶ್ರದ್ಧೆ ಸ್ವರ್ಗದಿಂದ ಧರೆಗಿಳಿದುದೂ ಅಲ್ಲ. ಪಾತಾಳದಿಂದ ಮೇಲಕ್ಕೆದ್ದು ಬಂದುದೂ ಅಲ್ಲ. ಅದು ನಮ್ಮ ರಕ್ತದಲ್ಲಿ ರಕ್ತವಾಗಿ ಸೇರಿಹೋಗಿದೆ. ಮಾತ್ರ ಪಾರತಂತ್ರ್ಯ ಕಾಲದ ಯೂರೋಪಿನ ಭ್ರಷ್ಟ ಶಿಲ್ಪವು, ಮೋಹಕುಹಕದಿಂದ ನಮ್ಮನ್ನು ಭ್ರಮೆಗೊಳಿಸಿ ದಾರಿ ತಪ್ಪಿಸಿದೆ. ಸ್ವರ್ಗಕಾಮನೆಯ ಲಕ್ಷ್ಯವಿದ್ದ ಕಲೆ ಸ್ವರ್ಣಕಾಮನೆಗೆ ಮುಗ್ಧವಾಗಿದೆ" ಆದರೆ ಸ್ವಾತಂತ್ರ್ಯದೊಂದಿಗೆ ನಮ್ಮ ಲಕ್ಷ್ಯವೂ ಹಿಂದಿರುಗುತ್ತಿದೆ.

ಸ್ವಾತಂತ್ರ್ಯದೊಂದಿಗೆ ಪ್ರತಿಜೀವಿಯಲ್ಲಿರುವ ಕಲಾಶಕ್ತಿಯೂ ಸ್ಫೂರ್ತಿಗೊಳ್ಳು ವುದು. ಮುಂದಿನ ವಿದ್ಯಾಭ್ಯಾಸಕ್ರಮದಲ್ಲಿ ಕಲೆ ಶಿಕ್ಷಣದ ಸಾಮಾನ್ಯ ಅಂಗವಾಗ ಬೇಕು. ಪರಮಾತ್ಮನ ಸಾಕ್ಷಾತ್ಕಾರಕ್ಕೆ ಕಲೆಯೂ ಒಂದು ಸಾಧನವೆಂದು ಅಕ್ಬರ್ ಹೇಳಿದ್ದಾನೆ. ಕಲೆ ಬರಿಯ ಸುಖದ ಸಾಧನವಾಗಬಾರದು. ಧಾರ್ಮಿಕ ಪ್ರವೃತ್ತಿ ಯನ್ನೂ ಹುಟ್ಟಿಸುವುದಾಗಿರಬೇಕು. ಮೊಗಲರ ಕಲೆ, ಬರಿಯ ಸುಖದ ಸಾಧನ ವಾದುದರಿಂದಲೇ ಬೇಗ ಕೊನೆಗೊಂಡಿತೆಂದು ಪ್ರಾಜ್ಞರು ಹೇಳುತ್ತಾರೆ. ನಮ್ಮ ನಿತ್ಯಜೀವನದಲ್ಲಿಯೂ ಕಲೆಯ ಸ್ಥಾನ ಕಲೆಗೆ ದೊರಕಬೇಕು. ಪ್ರಾಚೀನ ಭಾರತದಲ್ಲಿ ಕಲೆಗೆ ಆ ಸ್ಥಾನವನ್ನು ಕೊಟ್ಟಿದ್ದರು. ಶಿಕ್ಷಕರು ಶಿಷ್ಯರನ್ನು ಕಲೆಯ ವಾತಾವರಣ ದಲ್ಲಿ ಬೆಳೆಸುತ್ತಿದ್ದರು. ಪಾಠಶಾಲೆಗಳು, ನದಿ, ತೋಪು ಉಪವನಗಳ ಮಧ್ಯೆ ರಮ್ಯ ವಾದ ಪ್ರದೇಶದಲ್ಲಿರುತ್ತಿದ್ದವು. ಹುಯೆನ್‌ತ್ಸಾಂಗ್ ನಳಂದ ವಿಶ್ವವಿದ್ಯಾಲಯದ ವಾತಾವರಣವನ್ನು ಕುರಿತು ಹೀಗೆ ಹೇಳುತ್ತಾನೆ.

"ಸುತ್ತಲೂ ನೀಲಿ ತಾವರೆಯ ಅರಳಿದ ದಳಗಳುಳ್ಳ ತಿಳಿನೀರಿನ ಕೊಳಗಳು, ಪ್ರಕಾಶಿಸುತ್ತಿದ್ದವು. ಅಲ್ಲಲ್ಲಿ ಸುಂದರವಾದ ಕನಕವೃಕ್ಷಗಳು ರಕ್ತವರ್ಣದ ಮನೋ ಹರವಾದ ಗುಚ್ಛರಾಶಿಗಳನ್ನು ಜೋಲುಬಿಟ್ಟಿದ್ದವು. ಘನನಿಬಿಡವಾದ ಚೂತವೃಕ್ಷ ವನವು, ಅವುಗಳ ನಡುವೆ ತನ್ನ ನೆಳಲನ್ನು ಪಸರಿಸಿತ್ತು. ಬೇರೆ ಬೇರೆ ಶಾಲಾಂಗಣ ಗಳಲ್ಲಿ ಭಿಕ್ಷುಗಳ ಮನೆಗಳು ನಾಲ್ಕು ಅಂತಸ್ತುಗಳುಳ್ಳವಾಗಿದ್ದವು. ಕ್ರೀಡಾಮಂಟಪ

ಗಳ ಕಂಬಗಳನ್ನು ನಾನಾವಿಧಗಳಾದ ಪ್ರಾಣಿಗಳ ಚಿತ್ರರೇಖೆಗಳಿಂದ ಅಲಂಕರಿಸಿದ್ದರು. ಮಂಟಪಗಳ ತೊಲೆಗಳು ಕಾಮನ ಬಿಲ್ಲಿನ ಎಲ್ಲ ಬಣ್ಣಗಳಿಂದಲೂ ಕಣ್ಣು ಕೋರೈಸುತ್ತಿದ್ದವು. ಛಾವಣಿಯ ತೊಲೆಗಳಲ್ಲಿ ಆಕರ್ಷಕವಾಗಿ ಚಿತ್ರಗಳನ್ನು ರೂಪಿಸಿದ್ದರು. ಸ್ತಂಭಗಳನ್ನು ಅತ್ಯಂತ ಸೂಕ್ಷ್ಮವಾದ ವೈಭವಯುಕ್ತವಾದ ಕೆತ್ತನೆ ಕೆಲಸದ ವರ್ಣಶಿಲೆ ಮತ್ತು ಮುತ್ತುಗಳಿಂದ ಅಲಂಕರಿಸಿದ್ದರು. ಮಹಡಿಯ ತಾಳ್ವಾರ ಮತ್ತು ಮೆಟ್ಟಲುಗಳನ್ನು ಸುಂದರವಾಗಿ ಬಿಡಿಸಿದ್ದರು. . . ."

ಸನ್ಮಾರ್ಗ ಜೀವನವೇ ಉತ್ತಮ ಕಲೆ. ಚಿತ್ರದಲ್ಲಿಯೂ ಶಿಲ್ಪದಲ್ಲಿಯೂ ಅನೇಕ ಜೀವರಾಶಿಗಳನ್ನು ಒಂದೇ ಕಡೆ ತೋರಿಸುವುದು ಭಾರತದ ಕಲೆಯ ಲಕ್ಷಣ. ಮನುಷ್ಯ, ದೇವರು ಜಂತು ಪಶುಪಕ್ಷಿ ಪ್ರಕೃತಿಯೊಂದಿಗೆ ಒಂದಾಗಿ ಬಾಳುವುದೇ ಈ ಆದರ್ಶದ ಗುರಿ. ಅದೇ ಜಗತ್ತಿನ ಅಸ್ತಿತ್ವದ ಸತ್ಯದ ಅದ್ಭುತ ಕಲೆ.

ಸತ್ಯಾನ್ವೇಷಕ ಕಾವ್ಯದಲ್ಲಿಯೂ ಬಾಳಿನಲ್ಲಿಯೂ ಕಲೆಯಲ್ಲಿಯೂ ಅಮೃತತ್ವವನ್ನೇ ಹುಡುಕುತ್ತಾನೆ. ಇಂದ್ರಿಯ ಗೋಚರವಾದುದು ಮಾತ್ರವೇ ಸತ್ಯವಲ್ಲ, ಇಂದ್ರಿಯ ಗೋಚರವಾಗದಿದ್ದರೂ ಹೃದಯದಲ್ಲಿದ್ದುಕೊಂಡು "ನಾನು ಇಲ್ಲಿದ್ದೇನೆ" ಎಂದು ಜ್ಞಾಪಕ ಕೊಡುವ ಅಂತರ್‌ದೃಷ್ಟಿ ಒಂದಿದೆ. ಆ ಜ್ಞಾನಜ್ಯೋತಿಯೇ ಕಲಾಕೃತಿಯನ್ನು, ಬರಿಯ ಕಾಗದ ಅಥವಾ ಕಲ್ಲಿನ ಬೊಂಬೆಯಾಗಿ ಮಾಡದೆ ನಮ್ಮ ಹೃದಯದಲ್ಲಿ ಎಂದೆಂದೂ ನಿಲ್ಲುವ ಶಾಶ್ವತ ಪರಮಸತ್ವ ಕಲಾಕೃತಿಯಾಗಿ ಮಾಡುವುದು. ಕಲೆಯ ಮೂಲಕ ಪರಮಾತ್ಮನ ದರ್ಶನ ಸಹ ಭಾರತೀಯ ಕಲೆಯ ಲಕ್ಷಣ*.

ಗೊರೂರು ರಾಮಸ್ವಾಮಿ ಐಯಂಗಾರ್

---

* ಮೈಸೂರು ಎ. ಐ. ಆರ್. ಕೃಪೆಯಿಂದ.

ಕರೀ ಹುಡುಗಿ

ನಮ್ಮ ಹೂದೋಟದಲ್ಲಿ, ಪದ್ಮಳ "ಮಲ್ಲಿಕಾಕುಟೀರ"ದ ಬಾಗಿಲಲ್ಲಿ ಆರಾಮ ಕುರ್ಚಿ ಹಾಕಿಕೊಂಡು ಕುಳಿತಿದ್ದೆ. ಆಗ ಸಂಜೆ ನಾಲ್ಕು ಗಂಟೆ ಸಮಯ. ಆ ಸಮಯ ದಲ್ಲಿ ನಾನು ನನ್ನ "ಸಿಗರೇಟು ಸುಮಿತ್ರೆ"ಯೊಡನೆ, ಸ್ವಲ್ಪ ಏಕಾಂತದ ಸಮಾ ಲೋಚನೆ ನಡೆಸುತ್ತಿದ್ದೆ.

ನೆನ್ನೆ ಬೆಳಿಗ್ಗೆ ನನ್ನ ಸ್ಟೂಡಿಯೋನಲ್ಲಿ ಒಂದು ವಿಷಯ ನಡೆಯಿತು. ಒಂದು ವಿಷಯ ಅಂದೆನೇ?—ಅಲ್ಲ—ಅಲ್ಲ, ಅನೇಕ ವಿಷಯಗಳು ನಡೆದವು. ಅವುಗಳಲ್ಲಿ ಈಗಿನ ಏಕಾಂತ ಮಂತ್ರಾಲೋಚನೆಗೆ ಮುಖ್ಯವಾದದ್ದು ಏನೆಂದರೆ, ನಾನು, ಅಕಸ್ಮಾತ್—ಅಭ್ಯಾಸಬಲದಿಂದ!—ಪದ್ಮಳ ಸೀರೆ ಸೆರಗನ್ನು—(ಅದೂ, ನಾನೇ ತಂದು ಕೊಟ್ಟ ಸೀರೆ ಸೆರಗನ್ನು!)—ಹಿಡಿದು ಎಳೆಯಬೇಕಾಗಿಬಂದದ್ದು. ಅವಳು, ಆ ಸಮಯ ದಲ್ಲಿ—ಪಾತ್ರಧಾರಿಗಳ ಸಂಬಂಧ ದೃಷ್ಟಿಯಿಂದ—ಶುದ್ಧ ಅನುಚಿತವಾದ ಒಂದು ಅಪೋಪಮಾನವನ್ನು ಉಪಯೋಗಿಸಿದ್ದಳು. ಅವಳು ನನ್ನನ್ನು ಧರ್ಮರಾಯ, ಭೀಮ, ಅರ್ಜುನ, ನಕುಲ-ಸಹದೇವ—ಇವರ ಪೈಕಿ ಯಾರೊಬ್ಬರಿಗಾದರೂ, ಅಥವಾ ಒಟ್ಟಾಗಿ ಪಂಚಪಾಂಡವರಿಗಾದರೂ, ಹೋಲಿಸಿದ್ದರೆ ನನ್ನ ರಾಜಿ ಇರುತ್ತಿತ್ತು. ಆದರೆ ಅವಳು, ನಾನು ಸೀರೆ ಸೆರಗನ್ನ ಮಾತ್ರ—ಅದೂ ಎಲ್ಲೋ ಸ್ವಲ್ಪ ಅನ್ನಿ!—ಸೆರಗನ್ನ ಎಳೆದ ಕ್ರಿಯೆ ಅಷ್ಟನ್ನೇ ಪ್ರತ್ಯೇಕಿಸಿ, ಮುಂದುಮಾಡಿ, ಅಗ್ನಿಯ ರೂಬುರೂಬು—ಖುದ್ದು ರಾಜಿಯಿಂದ, ವೇದೋಕ್ತವಾಗಿ—ಮಹಾಸಂಕಲ್ಪ, ಸೀತಾರಾಘವ ಮಂಗಳಾಷ್ಟಕ— ಸಪ್ತಪದಿ ಇತ್ಯಾದಿಗಳ ಪೂರ್ವಕವಾಗಿ, ಸ್ವಸ್ಥಚಿತ್ತದಿಂದ ಲೆಕ್ಕಾಚಾರ ಹಾಕಿ, ಏನೂ ಅರಿಯದೆ ತಲೆ ಬಗ್ಗಿಸಿಕೊಂಡು—ಅಂದರೆ, ನನಗಿಂತ ಅವಳು ಸ್ವಲ್ಪ ಕುಳ್ಳಿ ಅನ್ನಿ ಅದಕ್ಕೋಸ್ಕರ ತಲೆ ಬಗ್ಗಿಸಿಕೊಂಡು—ನಿಂತಿದ್ದ ನನ್ನ ಕಣ್ಣುಗಳೆರಡಕ್ಕೂ ಹಟಾ ತ್ತನೆ ಜೀರಿಗೆ ಬೆಲ್ಲ ತೀಡಿ, ನನ್ನನ್ನು ಬಲೆಗೆ ಹಾಕಿಕೊಂಡ ಪ್ರಸಂಗವನ್ನು ಮರೆತೇ ಬಿಟ್ಟು, ನನ್ನನ್ನು ಆ ಪರಮ ನೀಚ!—ಕುಲಗೇಡಿ—ಚಂಡಾಲ!—ದುರುಳ ದುಶ್ಶಾಸನ ನಿಗೆ ಹೋಲಿಸಿದ್ದಳು. "ಉಪಮಾಕಾಳಿದಾಸಸ್ಯ"—ಹೌದೋ ಅಲ್ಲವೋ ನಾನು ಕಾಣೆ; ಆದರೆ "ಅಪಮಾ" ಎಂದರೆ "ಪದ್ಮಸ್ಯ" ಖಂಡಿತ!

ಪದ್ಮ ಆ ಸಮಯದಲ್ಲಿ ಪ್ರಯೋಗಿಸಿದ ಉಪಮಾನದಲ್ಲಿ ನಾನು ವಾಚ್ಯ ವಾಗಿದ್ದೆ—ಅವಳು ಸೂಚ್ಯವಾಗಿದ್ದಳು. ನಾನು ಈ ಹೊತ್ತಿನಲ್ಲಿ ಅವಳ ಸೂಚ್ಯಾರ್ಥ ವನ್ನು ಹಿಡಿದು ಹಿಂಜುತ್ತಿದ್ದೆ. ಆಗ ಪದ್ಮ ಮನೆ ಒಳಗಿನಿಂದ ಚಹ ತಟ್ಟೆಯನ್ನು ಹಿಡಿದುಕೊಂಡು ಬಂದಳು.

ಪದ್ಮ, ನನ್ನ ಸ್ಟೂಡಿಯೋಗೆ ಯಾವಾಗ ಅಂದರೆ ಆವಾಗ—ಹೇಳದೇ ಕೇಳದೇ ನುಗ್ಗುವ ಮತ್ತು ಧಾಂದಲೆ ಮಾಡುವ ಹಕ್ಕನ್ನು ಶುದ್ಧ ದುಂಡಾವರ್ತಿಯಿಂದ ಪಡೆದಿದ್ದರೂ, ತನ್ನ "ಸ್ಟೂಡಿಯೋ"ಕ್ಕೆ ಮಾತ್ರ ನನ್ನನ್ನು ಕಾಲಿಡಗೂಡುತ್ತಿರಲಿಲ್ಲ! ಅವಳು ತಯಾರಿಸುತ್ತಿದ್ದ ತಿಂಡಿತೀರ್ಥಗಳ ರಹಸ್ಯ ಅವಳದೇ ಆಗಿರುತ್ತಿತ್ತು. ಪತ್ರಿಕೆಗಳ ಮಹಿಳಾಪುಟದಲ್ಲಿ ಅಚ್ಚಾಗುತ್ತಿದ್ದ ಹೊಸ ಹೊಸ ತಿಂಡಿತೀರ್ಥಗಳ ತಯಾರಿಕೆ ವಿಧಾನಗಳನ್ನು ಮಹಿಳಾಸಮಾಜದ ರೀಡಿಂಗ್ ರೂಮಿನಲ್ಲಿ ತಪ್ಪದೆ ಓದುತ್ತಿದ್ದಳು. ಓದಿಕೊಂಡು ಬಂದು ತನ್ನ "ಸ್ಟೂಡಿಯೋ"ಸಲ್ಲಿ ಪ್ರಯೋಗ ನಡೆಸುತ್ತಿದ್ದಳು. ಈ ದಿನ, ಅಂತಹ ಪ್ರಯೋಗದ ಒಂದರ ಫಲಿತಾಂಶ ಅವಳು ತಂದ ತಟ್ಟೆಯಲ್ಲಿತ್ತು. ನೋಡಿದ್ದರಲ್ಲಿ ಗೃಹಕೈಗಾರಿಕೆಯ ಬಿಸ್ಕತ್ತುಗಳಂತೆ ಕಂಡವು. ಅವು ಆಕಾರದಲ್ಲಿ ಇಸ್ಪೀಟು, ಆಠೀನು, ಡೈಮಂಡು—ಕಳಾವರಗಳನ್ನು ಹೋಲುತ್ತಿದ್ದರೂ, ಬಣ್ಣದಲ್ಲಿ ಎಲ್ಲ ಇಸ್ಪೀಟು ಕಳಾವರಗಳನ್ನೇ ಹೋಲುತ್ತಿದ್ದವು! ನಾನು ಒಂದನ್ನು ಎತ್ತಿಕೊಂಡು, ಇವು ಯಾವ ಕಚ್ಚಾ ಮಾಲಿನಿಂದ ತಯಾರಿಸಿದವು—ಎಂದು ಪತ್ತೆ ಮಾಡಲು, ಮೂಸಿನೋಡಿದೆ. ಪದ್ಮಳಿಗೆ ಅವಮಾನವಾದಹಾಗಾಯಿತು. ಅವಳು,

"ಚೀ! ಇದೆಂಥಾ ವಿದ್ಯೆ!—ತಿಂಡಿ ಕೊಟ್ರೆ ಮೂಸಿನೋಡೋದು!—ಸುಮ್ನೆ ಬಾಯಿಗೆ ಹಾಕ್ಕೋಬಾರ್ದೇ!"—ಎಂದಳು.

ನಾನು ಬಾಯಿಗೆ ಹಾಕಿಕೊಂಡೆ. ಬಹು ರುಚಿಯಾಗಿತ್ತು. ತಿನ್ನುತ್ತ ಅವಳ ಕಡೆ ನೋಡಿ, ಹುಬ್ಬೆತ್ತಿ "ಹುಂ!" ಎಂದು ತಲೆದೂಗಿದೆ. ಅವಳೂ ಒಂದನ್ನು ತಿನ್ನುತ್ತ,

"ಇದು ಯಾತರದ್ದು ಹೇಳಿ"—ಎಂದು ಕೇಳಿದಳು.

"ನಂಗೊತ್ತಾಗೊಲ್ಲ—ಆದರೆ ಭೋ ಚೆನ್ನಾಗಿದೆ! ಹೇಳು ಯಾತರದ್ದು?"—ಎಂದು ಕೇಳಿದೆ.

"ರಾಗೀದು!"

"ರಾಗೀದೇ!"

"ಹೂ——ಂ!"

"ಆಹಾ! ಪದ್ಮಾ, ರಾಗೀ ಬಣ್ಣಾನೋಡಿ ಅದನ್ನ ಹಳೀತಾರೆ, ಬುದ್ಧಿ ಇಲ್ದೋರು! ಆದರಲ್ಲಿ ಎಷ್ಟು ರುಚಿ ಇದೆಯೇ!"

—ಎಂದೆ. ಬಹುಶಃ ಈ ರುಚಿಯ ಪ್ರಭಾವದಿಂದಲೋ ಏನೋ ಬಿಸ್ಕತ್ತುಗಳ ವರ್ಣವೂ ಈಗ ಕಣ್ಣಿಗೆ ಹಿತವಾಯಿತು. ಪದ್ಮ ನನ್ನ ಕುರ್ಚಿ ಪಕ್ಕದಲ್ಲಿ ಹಸಿರು ಹುಲ್ಲಿನ ಮೇಲೆ ಕುಳಿತಿದ್ದಳು. ಇಬ್ಬರೂ ಬಿಸ್ಕತ್ತುಗಳನ್ನು ತಿಂದು, ಟೀ ಕುಡಿಯುತ್ತ ಕುಳಿತೆವು. ಪದ್ಮ,

"ಏನ್ಮಾಡ್ತಿದ್ರಿ ಇಷ್ಹೊತ್ತೂ ಇಲ್ಲಿ ಒಬ್ರೇ ಕೂತ್ಕೊಂಡು ?—ಪೇಪರು ಪುಸ್ತಕ ಒಂದೂ ಇಲ್ಲ"

—ಎಂದಳು. ನಾನು,

"ದು—ದು—ದುಃಖಪಡ್ತಿದ್ದೆ ಪದ್ಮಾ!—ದುಃಖದಿಂದ ಗೊ—ಗೊ—ಗೋಳಾಡ್ತಿದ್ದೆ!"—ಎಂದೆ.

"ದುಃಖವೇ ? ದುಃಖ!—ನಿಮಗೇನೂಂದ್ರೇ ದುಃಖಕ್ಕೆ! ಯಾಕೆ—ೀ, ಹೊತ್ಹೊತ್ಗೆ ಊಟ—ಉಪಚಾರ, ತಿಂಡಿತೀರ್ಥ ಎಲ್ಲ ಆಗ್ತಾ ಇದೆಯಲ್ಲ—ಪಾಪ! ಅದಕ್ಕೇಂತ ಕಾಣುತ್ತೆ ದುಃಖ!—ದುಃಖ್ವಂತೆ—ದುಃಖ!!"

"ಅದೆಲ್ಲ ಸರಿ ಪದ್ಮಾ, ಅದಕ್ಕೆಲ್ಲ ಥ್ಯಾಂಕ್ಸ್. ಆದರೆ—ೀ—"

"ಇನ್ನೇನು ? ಆದ್ರೆ—ಂತೀರಿ!"

"—ನೆನ್ನೆ ನೀನು ನನಗೆ, ಅಂದರೆ, ಒಂದಿನ ನೀನು ಎನ್ನರಸ—ಚನ್ನರಸ ಮುದ್ದುಮೋಹನ—ಇತ್ಯಾದೀಂತ ಕರೆದ ನನಗೆ, ಅಂಥಾ ಮಾತಾಡಬಹುದೇ, ಹೇಳು ? ನಮ್ಮ ಅತ್ತೆಮಾವಂದಿರಿಗೆ ತಿಳಿದರೆ ಏನಂದ್ಕೊಂಡಾರು ಅವರು ?"

"ಒಹೊಹೊಹೋ! ನಿಮ್ಮ ಅತ್ತೆ-ಮಾವ ಆಗ್ಬಿಟ್ರೋ ಅವರು ?"

"ಅಲ್ವೇ, ನೀನು ಹೆಣ್ಣು ಹೌದೋ ಅಲ್ವೋ ?"

"ಇದೇನೂಂದ್ರೆ ಹೀಗೆ ಕೇಳ್ತೀರಿ! ನಿಮಗೆ ಹ್ಯಾಗೆ ಕಾಣ್ತೇನಿ ?"

"ನನಗೆ ನೀನು ಹ್ಯಾಗೆ ಕಾಣ್ತೆಯೋ ಅದು ಬೇರೆ ಕಾಂಡ, ಸುಂದರ ಕಾಂಡ ಅಂದಹಾಗೆ! ನೀನು ಹೆಣ್ಣು ಹೌದೋ ಅಲ್ವೋ ಹೇಳು ?"

"ಆಗಿದ್ರೇನು ?"

"ಹೆಣ್ಣು ಕೊಟ್ಟೋರು ಅತ್ತೆ ಮಾವ ಅಲ್ವೇನು ?"

"ಅದು ಸರಿ—ನಿಮ್ಮ ಅತ್ತೆ ಮಾವ ಆಗೋಕೆ ಎಷ್ಟೋಮುಂಚೆ, ಅವರು ನಮ್ಮ ಅಪ್ಪ-ಅಮ್ಮ, ತಿಳಿಕೊಳ್ಳಿ!"

"ಆಗಲಿ, ನಿಮ್ಮ ಅಪ್ಪ-ಅಮ್ನೇ ಆಗ್ಲಿ—ಅವರೇನು ತಿಳಿಕೊಂಡಾರು ?"

"ಏನೂಂದ್ರೆ—ಅಂಥಾದು ಅನ್ಬಾರದ್ದಂದಿದ್ದು—ನಾನು ?"

"ನೆನ್ನೆ ಬೆಳಿಗ್ಗೆ ಖಾಲಿ ಸ್ಟುಡಿಯೋಲಿ ನಿನ್ನ ಸೆರಗ್ನ ಹಿಡಿದು ಎಲ್ಲೋ ಸ್ವಲ್ಪ ಎಳೆದದ್ದಕ್ಕೆ ನೀನು ನನ್ನ ದುಶ್ಶ್ಯಾಸನನಿಗೆ ಹೋಲಿಸ್ಬಿಟ್ಟೆಯಲ್ಲ! ನ್ಯಾಯವೇ ಹೇಳು ಪದ್ಮಾ ?"

"ವೊ—ೀ! ಈ—ಕಳ್ಳದುಃಖಾನೆ—ೀ! ನಾನಂಬೊಲ್ಲ—ಅದೆಲ್ಲ—ನಂಗೊತ್ತು"

"ಮತ್ತೆನೇನೂಂತ ನಿನ್ನೂಹೆ ?"

"ನೋಡಿ ನನ್ನಹತ್ರ ಈ ಕಳ್ಳಾಟಗಳ್ನೆಲ್ಲ ತೆಗೀಬೇಡಿ. ನಾನು ಮನೆ ಒಳ
ಗಿಂದಾನೇ ನೋಡ್ದೆ"

"ಏ—ನ್ನೇ?"

"ನೀವು ಪಿಳ್ಪಿಳಾಂತ ಕಣ್ಣುಬಿಡ್ತಾ—ಗಾಳೀಲಿ ಬೆರಳಾಡಿಸ್ತಾ—ಏನೋ
ಲೆಕ್ಕಾಸೋ ಪಕ್ಕಾಸೋ ಮಾಡ್ತಾ ಇದ್ರಿ"

"ಏ—ಲೆಕ್ಕಪಕ್ಕ ಎಲ್ಲ ನೆನ್ನೆ ರಾತ್ರೇನೇ, ಒಂದ್ಕಾಸಿಟ್ಟುಕೊಳ್ದ ಹಾಗೆ ನಿನ್ನ
ಮಡ್ಲಿಗೇ ಎಲ್ಲಾ ತುಂಬಿಬಿಟ್ಟೆನಲ್ಲಾ ಪದ್ಮಾ! ಆಮೇಲೆ ಸಿಗರೇಟಿಗೆ ನಿನ್ನೇ ಸಾಲ
ಕೇಳ್ಲಿಲ್ವೇ? ಸದ್ಯಕ್ಕೆ ಇನ್ನ್ಯಾವ ಲೆಕ್ಕಾನೂ ಇಲ್ಲ—ಗಿಕ್ಕಾನೂ ಇಲ್ಲ"

"ಹಾಗಾದ್ರೆ ಇನ್ನೇನೋ ಅಂದಾಜು ಹಾಕ್ತಾ ಇದ್ರಿ—ಭಾರಿ ಅಂದಾಜು
ಹಾಕ್ತಾ ಇದ್ಹಾಗೆ ಕಾಣಿಸ್ತು. ಏನದು?"

"ಓ—ಅದೇ—ಸ್ವಲ್ಪ ತಾಳು—ಒಂದು ಸಿಗರೇಟು ಹಚ್ಕೋತೀನಿ" ಎಂದು,
ಒಂದು ಸಿಗರೇಟು ಹಚ್ಚಿಕೊಂಡು—"ಯೋಚ್ನೆ ಮಾಡ್ತಾ ಇದ್ದೆ ಪದ್ಮಾ."

"ಏನು ಯೋಚ್ನೆಯೋ—ಹೇಳಿ ನಾವೂ ಸ್ವಲ್ಪ ಕೇಳೋಣ"—ಎಂದಳು.

"ಹಮಾರ ಛೊಕ್ರಿ ಯಾಕೆ ಇನ್ನೂ ಚಹಾನ ಇದರ್ ಲಕಾವ್ ಮಾಡ್ಲಿ
ಲ್ಲಾಂತ"

"ಊಹೂಂ! ಛೊಕ್ರಿ! ಛೊಕ್ರಿ!! ಯಾಕೇ—ಸಾಹೇಬ್ರು ಕೂತಲ್ಲೀಗೇ—
ಬಟ್ಲರ್ಹಾಗೆ ತಟ್ಟೇಲಿ ಎಲ್ಲಾ ತಂದೆನಲ್ಲಾ ಅದಕ್ಕೇನೋ! ಛೊಕ್ರಿ! ಸಂಬ್ಳಕೊಟ್ಟು
ಇಟ್ಕೊಂಡಿರೋರಹಾಗೆ!"

"ಸಂಬ್ಳಾಕೊಡದ ಮಾತ್ರಕ್ಕೆ ಇಟ್ಕೊಂಡಿರೋದು—ಅಲ್ಲ ಏನೂಂದ್ರೆ—ನೀನು
ನಂಜೊತೇಲಿ ಇರೋದು ಸುಳ್ಳೇ—ಪದ್ಮಾ?"

"ಹೋಗಿ! ನೀವು ಯಾವಾಗ್ಲೂ ಹೀಗೇ!"

"ಹ್ಯಾಗೆ ಪದುಂ?"

"ಏನೋ ವಕ್ರ ವಕ್ರ! ನೀವು ಪದುಂ—ಗಿದುಂ ಅನ್ಬೇಡಿ! ಮೈಯೆಲ್ಲ
ಉರಿಯುತ್ತೆ!"

"ಏನು ವಕ್ರಾನೇ?"

"ಹೌದು, ಏನಾದ್ರೂ ಕೇಳಿದ್ರೆ ನ್ಯಾರವಾಗಿ ಉತ್ರಾ ಕೊಟ್ಟದ್ದೇ ಕಾಣೆ!—
ಹೇಳಿ, ನಿಜವಾಗ್ಲೂ ಅದೇನು ಯೋಚಿಸ್ತಾ ಇದ್ರಿ?"

ನಾನು ಯಾವಾಗಲಾದರೂ ಮನಸ್ಸಿನಲ್ಲೇ ಯೋಚಿಸುತ್ತ, ಸ್ವಲ್ಪ ತಲೇನ
ತೂಗೋದೋ—ಅಲ್ಲಾಡಿಸೋದೋ—ನಗೋದೋ—ಹುಬ್ಬುಗಂಟಿಕ್ಕೋದೋ—

ಲೊಚಗುಟ್ಟೋದೋ ಮಾಡಿದ್ದನ್ನ ಕಂಡರೆ ಸಾಕು, ತಟ್ಟನೆ "ಅದೇನು"? ಎಂದು ಕೇಳಿ, ಹೇಳುವ ತನಕ ಬಿಡದೆ ಕಾಡುವುದು ಪದ್ಮಳ ಎರಡನೇ ಸ್ವಭಾವವಾಗಿ ಬಿಟ್ಟಿತ್ತು. ವಿರಾಮವಾಗಿದ್ದರೆ, ಅಂಥಾ ಸಂದರ್ಭಗಳಲ್ಲಿ ಸ್ವಲ್ಪ "ಮಾತುಮುಚ್ಚಾಲೆ" ಯಾಡುವುದು ನನಗೂ ಸ್ವಭಾವವಾಗಿಬಿಟ್ಟಿತ್ತು—ಅನ್ನಿ. ನಾನು ಅವಳ ಪ್ರಶ್ನೆಗೆ ಈಗ ಗುಂಭವಾಗಿ,

"ನಾನೂ—ಮತ್ತೇ—ಈಗಾ—ಏನು ಯೋಚಿಸ್ತಾ ಇದ್ದೇ—ಅಂದರೆ—ಪದ್ಮಾ, ಈಗ ನಾನು ಒಬ್ಬ ಲಡಕೀ ವಿಷಯ ಯೋಚಿಸ್ತಾ ಇದ್ದೆ."

"ಲಕಡೀ ವಿಷಯ—ಏನು ಹಾಗಾಂದ್ರೆ?"

"ಲಡಕಿ—ಲಡಕಿ—ಲಕಡಿ ಅಲ್ಲ; ಲಡಕಿ—ಅಂದ್ರೆ ಋಷಿಗಳ ಭಾಷೇಲಿ ಛೋಕ್ರಿ—ಅಲ್ಲಾ ಹುಡುಗಿ—ಅಂತ ಪದ್ಮಾ"—ಎಂದು, ಅವಳ ಕಡೆಯೇ ಓರೆಗಣ್ಣಿನಿಂದ ನೋಡಿದೆ. ಅವಳು ತನ್ನನ್ನೇ ಆಡಿದ ಮಾತು—ಎಂದು ಭಾವಿಸಿ,

"ವೊ—! ಅದ್ಬಿಡಿ! 'ಸದಾನಂದನಿಗೆ ಅದೇ ಧ್ಯಾನ'—ಅಂಥಾಗೆ"—ಎಂದು, ನಕ್ಕಳು.

"ಏ—ನೀನಲ್ಲ ಕಣೇ!"—ಎಂದೆ.

"ಮತ್ತೆ?"—ಎಂದು ಸ್ವಲ್ಪ ಆಶ್ಚರ್ಯದಿಂದ ಕೇಳಿದಳು, ಪದ್ಮ.

"ಆ ಹುಡುಗಿ ಇದಾಳಲ್ಲಾ ಅವಳೂ—ಬೇರೆ—ದುಸರ—ಅಲಾಯಿದ"

"ಊ ಹೂ—ಂ! ಬೇರೆ—ದುಸ್ರ—ಅಲಾಯ್ದ! ಯಾರೊ ಅವಳು, ದುಸ್ರಾ ಪಸ್ರಾ ಆಗಿರೋಳು!"

"ಅವಳೂ ನಿನ್ನ ಹಾಗೇ ಒಬ್ಳು ಅನ್ನು"

"ಹುಡಗಿ ವಯಸ್ಸು?"

"ಇಪ್ಪತ್ತಿಪ್ಪತ್ತೆರಡಿರಬಹುದು"

"ಇಪ್ಪತ್ತಿಪ್ಪತ್ತೆರಡು ವರ್ಷ!—ಹುಡುಗಿ!—ಚೆನ್ನಾಗಿದೆ!"

"ಬಹಳ ಚೆನ್ನಾಗಿದೆ ಪದ್ಮಾ!"

"ಇನ್ನೂ ಲಂಗ ಪಂಗಾ ಹಾಕ್ಕೊಳ್ಳುತ್ತೋ ಹಾಗಾದ್ರೇ?"

"ಛೆ! ಛೆ! ಲಂಗ—ಡಬ್ಬಲ್ ಜೆಡೆ—ಪೌಡ್ರು ಗಿವ್ಡ್ರು—ಒಂದ್ನೂ ಕಾಣ್ಳು—ಅವಳು"

"ನಮ್ಮ ಜನಾನೋ?"

"ನಿಮ್ಮ ಜನಾನೂ ಅಲ್ಲ—ನಮ್ಮ ಜನಾನಾನೂ ಅಲ್ಲ!"

"ಹುಂ! ನಿಮಗೆ ಜನಾನಾ ಒಂದು ಕಡಿಮೆ!—ಇರಿ, ನಿಮ್ಮ ಹುಡುಗಿ ನೋಡೋಕೆ ಹ್ಯಾಗಿದ್ದಾಳೆ—ಹೇಳಿ?"

"ಹುಡುಗಿ ಕರೀದು ಪದ್ಮಾ; ಆದ್ರೂ—ಅಹ್!—ಬಲ್ರೊಗ್ಸು—ಬಲ್ರೊಗ್ಸು!!"

"ಓ!—ನಂಗೊತ್ತಾಯ್ತು!"

"ಯಾರು ಹೇಳು ನೋಡೋಣ?"

"ನಮ್ಮ ಕಾಳಿ!"

—ಎಂದು, ಕಿಲ ಕಿಲ ನಕ್ಕಳು, ಪದ್ಮ.

ಕಾಳಿ—ಅಂದರೆ, ನಮ್ಮ ಅರುಣಮರೀ—ಭಯಂಕರೀ! ತಿಂಗಳ ಹಿಂದೆ ಹೆರಿಗೆಗೆ ಹೋಗಿದ್ದ ಕೆಂಪಿ ಬದಲು ನಮ್ಮ ಮನೆಯಲ್ಲಿ ಕೆಲಸಕ್ಕಿದ್ದ ನಾರೀಮಣಿ! ತಲೆಕೂದಲು—ಮುಖದ ಚರ್ಮ—ಕತ್ತಿನ ಕರೀಮಣಿಸರ, ಏಕವಾದ ಕಲ್ಲಿದ್ದಲ ಮೂರ್ತಿ!! ಕಾಳಿಯ ಸದಾ ತಂಬುಲ ರಂಜಿತ ಹೆದ್ದುಟಿಗಳ ಸೀಮೋಲ್ಲಂಘನ ಮಾಡಿ ಮರೆಯುತ್ತಿದ್ದ, ಅವಳಿಜವಳಿ ಬಾಚಿಯಂಥ ಕೆಂಪು ಹಲ್ಲುಗಳೂ, ಅವಳ ದಕ್ಷಿಣೋತ್ತರ ಧ್ರುವ ದೃಷ್ಟಿಯೂ, ಒಡೆದ ಕೊಳಲಿನ ಕಂಠಕಾರ್ಕಶ್ಯವೂ—ಕೆಂಪು ಸೀರೆಯೂ, ಅಷ್ಟು ಭವ್ಯ ಭಯಾನಕವಾಗಿದ್ದವು. ಅರುಣ ಮರಿಯ ಹಾವಳಿ ಜಾಸ್ತಿ ಯಾದಾಗ ಪದ್ಮ ಕಾಳೀನಾಮ ಮಂತ್ರವನ್ನು ಒಂದು ಸಲ ಜಪಿಸಿದರೆ ಸಾಕು—ಅವನು ಓಡಿಹೋಗಿ ಮೂಲೆ ಕಡೆ ಮುಖಮಾಡಿಕೊಂಡು ನಿಂತುಬಿಡುತ್ತಿದ್ದ. ಆದರೆ, ಕೈ ಶುದ್ಧಿಯಿಂದಲೂ, ಕೆಲಸದಲ್ಲಿ ಚುರುಕಿನಿಂದಲೂ, ಅವಳು ಪದ್ಮಳ ಅಚ್ಚುಮೆಚ್ಚಿನ ಚೇಟಿಯಾಗಿದ್ದಳು. ಈಗ ಪದ್ಮ ಕಾಳಿ ಅಂದದ್ದಕ್ಕೆ ನಾನು,

"ಛೆ! ಛೆ! ಈ ತಂಪುಹೊತ್ನಲ್ಲಿ ನಾನು ಯೋಚಿಸ್ತಾ ಇದ್ದದ್ದು ನಮ್ಮ ರುದ್ರ ಕಾಳೀಮಾತೆಯನ್ನಲ್ಲ—ಪದ್ಮಾ!"

—ಎಂದೆ.

"ಹಾಗಾದರೆ?"

"ಸುಂದರಿ ಸುಮನೋಹರಿ—ಬಂಧುರೆ—ಭದ್ರಕಾಳೀ ಅವತಾರವನ್ನ"

"ಭದ್ರಕಾಳೀ ಅವತಾರ್ವೇ?"

"ಹೌದು, ಚಿನ್ನಾ, ಶ್ಯಾಮಸುಂದರಿ—ಆ ಕರೀಹುಡುಗಿ"

"ಶ್ಯಾಮಸುಂದರೀ!"

"ಹೌದು, ಅಂಥಾ ರೂಪವಂತೆ ಅವಳು"

"ಶ್ಯಾಮಸುಂದರಿ!—ರೂಪವಂತೆ! ಆಹಾ! ಅದೆಂಥಾ ಸೀಕಲು ರಾಗಿ ರೊಟ್ಟಿ ರೂಪವೋ!"

"ಛೆ! ಛೆ! ನೋಡ್ದೇ ಮಾಡ್ದೆ ಕಂಡೋರ ಮಕ್ಕಳ್ನ—ಅದರಲ್ಲೂ ನಿನ್ನ ಹಾಗೇ ಹೆಣ್ಣುಮಕ್ಕಳ್ನ—ಹಾಗೆಲ್ಲ ಅಂತಾರ್‍ಯೇ ಪದ್ಮಾ!"

"ನನ್ನ್ಹಾಗೇ!—ನಾನೇನು ಕಾಳಿಯೇನು?"

"ಅಲ್ಲ—ಅಲ್ಲ—ನೀನು ಕೆಂಪಿ"—

"ಏನಂದ್ರೀ!"

"ಕೆಂಪಿ ಅಲ್ಲ—ಊಫಿ!—ಜಿಡ್ಡು!!—ಕೆಂಪ್ಗಿರೋ ಪದ್ಮ ನೀನು!"

"ಹಾಗ್ಬನ್ನಿ!"

"ಅವಳೂ ನಿನ್ನ್ಹಾಗೇಕಣೆ ಪದ್ಮಾ!"

"ಏನು ನನ್ನ್ಹಾಗೆ?"

"ಬಲು ಜೋರು! ಸಿಟ್ಟುಬಂತೂಂದ್ರೆ ಸುರುಸುರುಬತ್ತಿ!!"

"ಪರವಾಗಿಲ್ಲ—ನಮ್ಮ್ಹಾಗೇ ಇನ್ನೊಬ್ಳಿದ್ದಾಳಲ್ಲ!"

"ಇದ್ದಾಳೆ—ಇದ್ದಾಳೆ"

"ಏನು ಆ ಕರೀಹುಡುಗಿ ಜೋರು?"

"ಹುಂ! ಪಾಣಿಗ್ರಹಣಮಾಡ್ಕೊಳ್ತೀವೀಂತ ಬಾಯ್ಬಾಯಿ ಬಿಟ್ಕೊಂಡು ಬಂದ ಎಷ್ಟೋ ಜನ ರುಸ್ತುಂ ಗಂಡುಗಳ್ನ—ಉಹುಂ—ನೋಗುಡ್—ಒಲ್ಲೆ—ಅಂತ ಅಂದು, ಅವರ ಮುಖಗಳಿಗೆ ಗ್ರಹಣ ಹಿಡಿಸಿ ಕಳಿಸಿದ ಕ್ಷತ್ರಿಯರ ಜಾತಿ ಹೆಣ್ಣು ಕಣೇ—ಅವಳೂ! ಸಾಮಾನ್ಯಾಂತ ಅಂದ್ಕೊಬೇಡ"

"ಓ! ಹಾಗಾದರೆ ಈ—ಗ್ಗೊತ್ತಾಯ್ತು!"

"ಯಾರ್ದೆೀಳು!"

"ಕೇಡೀ ಕುಮುದಾ!"

"ಯಾವ ಕುಮುದಾನೇ?"

"ಹಿಂದಿನ ಬೀದೀ ಮೂಲೆ ಬಂಗ್ಲೇಲಿ ಅಸಿಸ್ಟೆಂಟ್ ಕಮೀಶನರ್ ಇಲ್ವೇ ಅವರ ಮಗಳು."

"ಯಾರು ಮೊನ್ನೆ ವರ್ಗವಾಗಿ ಬಂದ್ರೂಂತಾರಲ್ಲ—ಅವರ ಮಗಳೇ?"

"ಹೌದು"

"ಅವರ ಮಗಳು ಅಷ್ಟು ಕೇಡೀನೇ?"

"ಅಯ್ಯೋ! ಚೆನ್ನಾಯ್ತು! ಅವಳ ತಂದೆ ಹೆಸ್ರು ಕೆ. ದಯಾಳ್ಸಿಂಗೂಂತ!"

"ಓ! ಕೆ—ಫುಲ್‌ಸ್ಟಾಪ್ ಡಿ—ಫುಲ್‌ಸ್ಟಾಪ್—ಕುಮುದಾನ್ನ!"

"ಮತ್ತಿನ್ನೇನು! ಕೇಡಿ ಅಂತೆ!! ಇನ್ನಂಥಾ ಕೇಡಿಗಬುದ್ಧಿ ನಿಮ್ದು!"

ನಮ್ಮ ಮೊಹಲ್ಲಾದ ಮಹಿಳಾ ಗೊಂದಲಗೋಷ್ಠಿಗಳ ಸಲಗಳಾಗಿದ್ದ ಪದ್ಮ ಆಗಲೇ ಅವರ ಮನೆಯವರ ಪರಿಚಯ ಮಾಡಿಕೊಂಡುಬಿಟ್ಟಿದ್ದಳು! ಅವಳು ಕುಮುದಳ ಹೆಸರು ಹೇಳಿದ್ದಕ್ಕೆ ನಾನು,

"ಅವರಿಗೆ ಎಷ್ಟು ಜನ ಮಕ್ಕೆ ಪದ್ಮಾ ?"—ಎಂದು ಕೇಳಿದೆ.

"ಎಷ್ಟು ಜನವೂ ಇಲ್ಲ—ಅವಳೊಬ್ಳೇ"

"ಓ ಹಾಗೋ, ಒಳ್ಳೇದು, ಕೆ ಮತ್ತು ಡಿ ಕುಮುದಾಗೆ ಮದುವೆ ಆಗಿಲ್ವೇ ?"

"ಉಹುಂ, ಇಲ್ಲ; ಪಾಪ ಅವರೂ ಬಹಳ ಹುಡುಕ್ತಾ ಇದ್ದಾರಂತೆ. ಹುಡುಗೀಗೆ ಆಗ್ಲೇ ಇಪ್ಪತ್ತು ವರ್ಷ ತುಂಬಿತಂತೆ. ಹ್ಯಾಗೆ ಬೆಳೆದಿದ್ದಾಳೆ ಅಂತೀರಿ!"

"ಕೇಳ್ಬೇಕೇ ಸಾಕಿದ ತೋಳ!"

"ಏನಡ್ಡಿ! ಇಂಟರ್‌ಮೀಡಿಯೇಟ್‌ನಲ್ಲಿ ಓದ್ತಿದ್ದಾಳಂತೆ. ಅವರ ಜನದಲ್ಲಿ ಸರಿಯಾದ ಗಂಡುಗಳು ಸಿಕ್ಕೋದೇ ಕಷ್ಟವಂತೆ. ಅಂಥಾದ್ರಲ್ಲಿ ಬಂದ ಬಂದ ಗಂಡು ಗಳ್ನೆಲ್ಲ ಅವಳೇ ಒಪ್ಪದೆ ಬೇಡಾಂದ್ಲಂತೆ."

"ಅವಳು ಕರೀ ಹುಡುಗೀನೇ ?"

"ಸ್ವಲ್ಪ ಕಪ್ಪೇ ಅನ್ನಿ"

"ಅಂದ್ರೆ ಮಂಡೂಕದ ತರಹಾನೇ ?"

"ಛಿ! ನೀವೂ ಸರಿಯೆ! ಒಂದೊಂದ್ಸಲ ತೀರ ಮಂಕರ್‍ಹಾಗೆ ಆಡ್ತೀರಿ!"

"ಯಾಕೆ ?"

"ಕಪ್ಪು—ಪ್ಪೆ ಅಲ್ಲ!"

"ಓ—ಸರಿ—ಗೊತ್ತಾಯ್ತು; ಆದರೆ ನಾನು ಯೋಚಿಸ್ತಾ ಇದ್ದದ್ದು ಅವಳನ್ನಲ್ಲ. ನನ್ನ ಹುಡುಗೀಗೆ ಮದುವೆಗಿದುವೆ ಎಲ್ಲ ಆಗಿದೆ"

"ಏನಂದ್ರೀ ?—ನಿಮ್ಮ ಹುಡುಗಿ! ಮದುವೆ-ಗಿದುವೆ ಎಲ್ಲ ಆಗಿರೋಳು—ಬೇರೆ—ದುಸರ—ಯಾರೋ ಅಲಾಯ್ದ—ಕರೀಮುಸುಡಿ ಕಾಳಿ, ನಿಮ್ಮ ಹುಡುಗೀನೋ ? ಆಹಾ! ಯಾರೋ ನೀವು ಮನಸ್ನಲ್ಲೇ ಮುದ್ದಿಸ್ತಿರೋ ಆ ಕೋಡಗ!"

"ಛೆ! ಛೆ! ನನ್ನ ಹುಡುಗಿ ಅಂದ್ರೆ—ನಾನು ಯೋಚಿಸ್ತಿದ್ದ ಹುಡುಗೀ—ಅಂತ—ಅಷ್ಟೇ ಪದ್ಮಾ"

"ಮತ್ತಿನ್ಯಾರೂಂದ್ರೇ ಸೀಮೇಲಿಲ್ದ ಕರೀ ಹುಡುಗೀ!"

"ಅಯ್ಯೋ! ಏನಂತೀ—ಪ್ರಳಯಾಂತಕೀ!"

"ಯಾರ್‍ನಾಂದ್ರೇ ಪ್ರಳಯಾಂತ್ಕಿ ಗಿಳಯಾಂತ್ಕಿ ಅಂತೀರಿ—ಮಾತ್ಮಾತಾಪಾ! ಚೆನ್ನಾಯ್ತು!"

"ಅಯ್ಯೋ ನಿಸ್ನಲ್ಲಾ ಚಿನ್ನಾ! ನೀನು ಪ್ರೇಮಸಾರ್ಥಕಿ! ನಾನಂದದ್ದು ಆ ಕರೀ ಹುಡುಗೀನಾ"

"ಸರಿ ಹಾಗಾದರೆ, ಯಾರು ಹೇಳಿ—ನಾವೂ ಸ್ವಲ್ಪ ಕೇಳೋಣ ನಿಮ್ಮ ಪ್ರಳಯಾಂತಕೀ ಕಥೇನ"

ಪದ್ಮ "ನಾವು" "ನಮ್ಮ" "ನಮಗೆ" ಅಂತ ಅಂದುಕೊಳ್ಳೋದೇ ಒಂದು ವರಿಸೆ. ಅವುಗಳ ಉಚ್ಚಾರಣೆಯಲ್ಲಿ, ಅವಳ ಬೆನ್ನಹಿಂದೆ ಪ್ರಮದ ಪ್ರಮೀಳೆಯರ ಒಂದು ಭಾರೀ ಪಡೆಯೇ ಇದೆಯೋ!—ಎನ್ನುವಂತಹ ಆತ್ಮವಿಶ್ವಾಸ ಕಾಣುತ್ತಿತ್ತು! ನಾನು ಅವಳ ಪ್ರಶ್ನೆಗೆ ಉತ್ತರವಾಗಿ,

"ನನ್ನ ಹುಡುಗೀ ಹೆಸರು ಪಿ. ಡಿ. ದ್ರೌಪದೀಂತ"—ಎಂದೆ.

"ಯಾರು? ಪಿಳ್ಳೂರು ದಾಮೋದರಾಚಾರ್‍ರ ಮಗಳೇ?"

"ಅಲ್ಲ—ಅಲ್ಲ ಪಂಚವಳ್ಳಿ ದುರ್ಪಾದಪ್ನೋರ ಸಾಕುಮಗಳು."

"ಸಾಕುಮಗಳೇ? ಹಾಗಾದರೆ ಹೆತ್ತವ್ವೆ—ಅಪ್ಪ?"

"ಅವ್ವೆ ಮಾತು ಗೊತ್ತಿಲ್ಲ—ಅಪ್ಪ ಬೆಂಕೀನವಾಬ ಅಂತಾರೆ"

"ಬೆಂಕೀನವಾಬ! ಹಾಗಾದ್ರೆ ಸಾಬ್ರ ಹುಡ್ಗೀನೇ?"

"ಛೆ! ಛೆ! ಎಲ್ಲಾದ್ರೂ ಉಂಟೇ! ಬೆಂಕೀನವಾಬ ಅಂದ್ರೆ ಬೆಂಕಿ ಅಂಥಾ ಮನುಷ್ಯಾಂತ—ಅಷ್ಟೆ!"

"ಸರಿ, ದುರ್ಪಾದಪ್ಪ ಅಂದ್ರಲ್ಲ ಅವರ್‍ಯಾರು?"

"ಅವರು ಹಿಸ್ ಹೈನೆಸ್ ದಿ ಪುಟ್ರಾಜಾ ದ್ರುಪದ ಆಫ್ ಪುಟ್ಟಾಣಿ ಸ್ಟೇಟ್ ಪಾಂಚಾಲ!"

"ವೊ—! ಆ ಮಾರಾಯ್ರಿಗ್ತ್ತೀನೇ! ಪೀಡೀ ದ್ರೌಪದೀ ಅಂದ್ರೇ! ಇಷ್ಟು ಹೇಳೋಕೆ ಅದೆಷ್ಟು ಸತಾಯಿಸಿದ್ರೀ ಅಂದ್ರೆ!! ನನಗೆ ಮೊದ್ಲಿಂದಾನೂ ಅನ್ಮಾನ ಇದ್ದೇ ಇತ್ತು—ಏನೋ ಪಕ್ರಾಟಾ ಆಡ್ತಿದಾರೇಂತ! ನಂಗೊತ್ತಿಲ್ವೇ ನಮ್ದೇವರ ಸತ್ಯ!—ಸರಿ, ಯಾವ್ದೋ ಚಿತ್ರಕ್ಕೇ ಅನ್ನಿ"

"ಮತ್ತೇನು, ಸ್ವಂತಕ್ಕೇಂತ ತಿಳಿಕೊಂಡಿದ್ದ್ಯಾ?"

"ನಿಮಗಂಥಾವ್ಳೇ ಆಗ್ಬೇಕಾಗಿತ್ತು!"

"ಪದ್ಮಾ, ನಿಸ್ಕೈಲಿ, ಒಂದು—ಅಲ್ಯುಮಿನಿಂದಾದ್ರೂ ಪರವಾಗಿಲ್ಲ—ಅಕ್ಷಯ ಪಾತ್ರೆ ಮಾತ್ರ ಇದ್ಬಿಟ್ಟಿದ್ರೆ—"

"ನುಚ್ಚಿನುಂಡೆ—ಬಟಾಣಿ ಉಸ್ಲಿ—"

"ಹೂಂ ಹೂಂ! ದೂದ್‌ಫೇಡಾ—ಜಾಮೂನು—"

"ಹೂಂ! ಹೂಂ! ಬೀಡಿ-ಸಿಗ್ರೇಟು-ಚುಟ್ಟಾ-ವಗೈರೆ—!"

"ಒಟ್ನಲ್ಲಿ, ದ್ರೌಪದಿ ಪ್ಲಸ್ ಅಕ್ಷಯಪಾತ್ರೆ ಇದ್ಬಿಟ್ರೆ—ಮನೇ ಯಾಕೆ ಮಠಾ ಯಾಕೆ—ದಿನಾ ಕಾಡ್ನಲ್ಲಿ ಪಿಕ್ನಿಕ್ಕು!"

"ಸರಿ, ಅದ್ಮಾತು ತೆಗೆಯೋದ್ರಲ್ಲಿ ನಿಸ್ಸೀಮರು—ಅದಿರ್ಲಿ—ದ್ರೌಪದಿ ಕರೀ ಹುಡುಗೀನೇ?"

"ಹೌದು ಪದ್ಮಾ, ದ್ರೌಪದೀಗೆ ಕೃಷ್ಣೆ ಅಂತಾನೂ ಒಂದು ಹೆಸರಿದೆ. ದ್ರುಪದರಾಜ ಸಾಕಿದ್ದರಿಂದ—ದ್ರೌಪದಿ—ದ್ರುಪದೆ—ದ್ರುಪದ ನಂದಿನಿ ಇತ್ಯಾದಿ; ಅವಳು ಅಗ್ನಿಕುಂಡದಿಂದ ಎದ್ದುಬಂದದ್ದರಿಂದ—ಅಗ್ನಿಜೆ; ಸಾಕುತಂದೆ ಪಾಂಚಾಲ ದೇಶದ ಧೊರೆಯಾದ್ದರಿಂದ—ಪಾಂಚಾಲೆ—ಅಂದಹಾಗೆ, ಅವಳ ಮೈವರ್ಣದಿಂದ ಅವಳು ಕೃಷ್ಣೆ. ಕೃಷ್ಣವರ್ಣ ಅಂದ್ರೆ ತಲೇಕೂದಲ ಹಾಗೆ ಅಥವಾ ಕಾಗೆ—ಕಲ್ಲಿದ್ದಲುಗಳ ಹಾಗೆ ಕಪ್ಪು—ಅಂತ ಒಂದೇ ಅರ್ಥವಲ್ಲ. ಹದಿನಾರು ಸಾವಿರ ಗೋಪಿಯರ ಹೃದಯಗಳ್ನ ಕೊಳ್ಳೇಹೊಡೆದ ಶ್ರೀ ಕೃಷ್ಣ ಹೇಗೆ ಅಪೂರ್ವ ನೀಲ ಮೇಘಶ್ಯಾಮಸುಂದರನೋ ಹಾಗೇ, ದ್ರೌಪದಿಯೂ ಅನುಪಮ ಶ್ಯಾಮಸುಂದರಿ—ಪದ್ಮಾ. ನಿನ್ನ ದಯದಿಂದ ಅವಳನ್ನು ಚಿತ್ರಿಸಬೇಕೂಂತಿದ್ದೀನಿ ಚಿನ್ನಾ"

"ನಾನೇನು ಶ್ಯಾಮಾಂಗೀನೇ?"

"ಚಿತ್ರಕ್ಕೆ ಆಕೃತಿ—ಮುಖಭಾವ ಮುಖ್ಯ ಪದ್ಮಾ. ಬಣ್ಣಕ್ಕೇನು—ಬೇಕಾದ ಬಣ್ಣ ಹಾಕಬಹುದು"

"ದ್ರೌಪದೀ ಸ್ವಯಂವರ ಚೆನ್ನಾಗಿರುತ್ತೆ—ಅಲ್ವೇ—ಅಂದ್ರೇ?"

"ಊಹುಂ! ಅದರಲ್ಲೇನಿರುತ್ತೇ? ಬರೀ ದೊಂಬಿ!"

"ಮತ್ತಿನ್ಯಾವ್ದು ಚೆನ್ನಾಗಿರುತ್ತೆ?"

"ನೋಡು, ಇಡೀ ಮಹಾಭಾರತದಲ್ಲಿ ಬಹು ಮುಖ್ಯವಾದ ಘಟನೆ ಅಂದರೆ '**ದ್ರೌಪದೀ ವಸ್ತ್ರಾಪಹರಣ**'"

"ವಸ್ತ್ರಾಪಹರಣ"—ಅನ್ನುವ ಮಾತು ಕಿವಿಗೆ ಬಿದ್ದ ಕೂಡಲೆ ಪದ್ಮ ಹುವಾ ರಾದಳು! ಕೂತ ಹಾಗೇ ಸ್ವಲ್ಪ ಹಿಂದಕ್ಕೆ ಸರಿದು, ಸೆರಗನ್ನು ಭದ್ರವಾಗಿ ಎಳೆದು ಹಿಡಿದುಕೊಂಡು, ನನ್ನ ಕಡೆ ನೋಡುತ್ತ—ಆಹಾ! ಅವಳು ನೋಡಿದ್ದೇ ಒಂದು ಸೊಗಸು ಅನ್ನಿ!—ನೋಡುತ್ತ,

"ನೋಡೀ, ಈಗ್ಲೇ ಹೇಳ್ಬಿಡ್ತೀನಿ! ಅಂಥಾ ಅಸಯ್ಯವಾದ ಚಿತ್ರಕ್ಕೆ ನನ್ನ ನಿಂತ್ಕೋ—ಗಿಂತ್ಕೋ—ಂತ ಕರೆಗಿರೆದೀರಿ!—ಜೋಕೆ! ಕರೆದರೆ ನಾನು ಖಂಡಿತ ಬರೋಳಲ್ಲ!"

—ಎಂದು, ನನ್ನನ್ನೇ ದುರುಗುಟ್ಟಿ ನೋಡತೊಡಗಿದಳು. ನಾನು ನಿಧಾನವಾಗಿ,

"ನಿಂತ್ಕೊಂಥಾಗಲ್ಲ ಪದ್ಮಾ, ನೆಲದಮೇಲೆ ಕೂತ್ಕೊಂಥಾಗೆ! ನೀನು ನೆನ್ನೆ ಕೂತ್ಕೊಂಡ್ಯಲ್ಲ—ಸ್ವಲ್ಪ ಹೆಚ್ಚುಕಡಿಮೆ, ಹಾಗೆ"—ಎಂದೆ.

"ಉಹುಂ! ಕೂತ್ಕೊಂಥಾಗೂ ಇಲ್ಲ—ಮಲಕ್ಕೊಂಥಾಗೂ ಇಲ್ಲ! ಹ್ಯಾಗಿದ್ರೂ—ಥೂ! ಅಸಯ್ಯ!—ಅಸಯ್ಯ—ಹೊಲಸು!! ಸೀರೆಗೀರೆ ಎಳಿಸ್ಕೊಳ್ತಿರೋ ಹಾಗ ಕಾಣೋದೂಂದ್ರೇನು!—ನಾಚಿಗ್ಗೇಡು!"

"ಅಲ್ಲಾ ಪದ್ಮಾ, ಅಷ್ಟ್ರಲ್ಲೇ ಈ ಕರೀ ಹುಡುಗಿ ಸೀರೇನ ಆ ಕರೀ ಹುಡುಗ ಚಕ್—ಅಂತ ಒಂದೇ ಸೆಕೆಂಡ್ನಲ್ಲಿ ಅಕ್ಷಯಮಾಡಿಬಿಟ್ನಲ್ಲೇ!"

"ಆ ಕರೀ ಹುಡುಗಿ—ಸೀರೆ ಅಕ್ಷಯವಾಗಿರಬಹುದು! ಈ ಬಿಳೀ ಹುಡುಗಿ—ಹುಂ! ಯಾಕಲ್ಲ!—ಈ ಬಿಳೀ ಹುಡುಗಿ ಸೀರೆ ಅಕ್ಷಯವಾಗೋಲ್ಲಾಂತ ನಂಗೆ ಚೆನ್ನಾಗಿ ಗೊತ್ತು! ಅದು ದ್ವಾಪರಯುಗ! ಇದು ಕಲಿಯುಗ!"

"ಇಲ್ಕೇಳು ಪದುಂ, ನಾನು ಚಿತ್ರಿಸಬೇಕೂಂತಿರೋದ—ಸೀರೇನ ಅದೇ ತಾನೆ ಎಳೆಯೋಕೆ ಪ್ರಾರಂಭಿಸಿರೋ ಹಾಗೆ—ತುಂಬ ಎಳೆದಿರೋ ಹಾಗಲ್ಲ. ಎಷ್ಟೂಂತಿಯ ಪದುಂ, ಇಲ್ಲಿ ಬಾ ಇಲ್ಲಿ—ತೋರಿಸ್ತೀನಿ"

—ಎಂದೆ. ಪದ್ಮ ಇನ್ನೂ ಹಿಂದಕ್ಕೆ ಸರಿದು, ಸೆರಗನ್ನ ಎಳೆದು ಸೊಂಟಕ್ಕೆ ಸಿಕ್ಕಿಸಿಕೊಂಡು,

"ನಿಮ್ಗೇನು ಪಿತ್ತಗಿತ್ತೊ? ಕೂತ್ಕೊಳ್ಳಿ ಸಾಕು! ನಾವೆಲ್ಲಿದ್ದೀವಿ—ಕಾಣೋಲ್ವೇ?"

—ಎಂದು, ನಾನು ಅಸ್ಪೃಶ್ಯನೋ—ಎಂಬಂತೆ ನನ್ನಕಡೆ ನೋಡತೊಡಗಿದಳು. ನಾನು,

"ನನ್ಮಾತ್ನ ಚೆನ್ನಾಗಿ ಅರ್ಥಮಾಡ್ಕೋ ಪದುಂ"

—ಎಂದೆ.

"ನೋಡಿ, ನೀವು ಪದುಂ—ಗಿದುಂ—ಅಂತ ಪೂಸಿಮಾಡ್ಬೇಡಿ. ನನಗೆ ಅದೆಲ್ಲ ಕೂಡ್ದು!—ಕೂಡ್ದೇಕೂಡ್ದು!—ನಾನೊಪ್ಪೊಲ್ಲ. ಪೂರ್ತಿ ಅಲ್ಲ—ಒಂದ್ಮೊಳ—ಅರ್ಧ ಮೊಳ—ಒಂದ್ಗೇಣೂ ಎಳಿಸ್ಕೊಳ್ಳೋಕೆ ನಾನೊಪ್ಪೊಲ್ಲ—ತಿಳೀತೋ! ಅವಳಿಗೇನು ಶನಿಕಾಟವಿತ್ತೋ, ತುಂಬಿದ ಸಭೇಲಿ—ಆ ಚಾಂಡಾಲ ಅವಳ ಸೀರೇ ಸೆಳೆದಾಂದ್ರೆ ನನಗೇನು ಗ್ರಹಚಾರ! ಮಾಡೋಕೆ ಬೇರೇ ಏನೂ ಕೆಲಸವಿಲ್ದೇ ಇದ್ರೆ ಇಂಥಾದ್ನೇ ಅಂತ ಕಾಣುತ್ತೆ—ನೀವು ಯೋಚಿಸೋದು!"

ಎಂದು, ಕಪ್ಪು—ತಟ್ಟೆಗಳನ್ನ ಜೋಡಿಸುತ್ತ, ಎದ್ದು ಹೋಗುವ ಸೂಚನೆ ತೋರಿದಳು. ನಾನು,

"ಏನವಸರ, ಕೂತ್ಕೋ ಪದ್ಮಾ, ನನ್ಮಾತು ಸ್ವಲ್ಪ ಕೇಳು—ಆಮೇಲೆ ನಿನಗೆ ತೋರಿದಹಾಗೆ ಮಾಡು"

—ಎಂದೆ. ಅವಳು,

"ನೋಡಿ, ಅದೊಂದ್ಮಾತು ಬಿಟ್ಟು ಬೇರೆ ಏನಾದ್ರೂ ಮಾತಾಡೋಣ—ಬೇಕಾದ್ರೆ"

—ಎಂದಳು.

"ಅಲ್ಲಾ ಪದ್ಮಾ, ನಾನು ಚಿತ್ರ ಬರೆಯೋವಾಗ ಸಭೆಗಿಭೆ ಒಂದೂ ಇರೊಲ್ಲ—ಅದ್ನೆಲ್ಲ ಆಮೇಲೆ ಹ್ಯಾಗೆಬೇಕೋ ಹಾಗೆ ಸೇರಿಸ್ಕೊಳ್ಳೋದು. ಮುಖ್ಯವಾದ್ದು ದ್ರೌಪದೀ ಚಿತ್ರ—ಅಂದ್ರೆ ಅವಳ ಆಕೃತಿ—ಮುಖಭಾವ. ಅಂಥಾಗೇ ಪದ್ಮಾ, ನನ್ನೆ ನಿನ್ಮುಖದಲ್ಲಿ ಈ ಚಿತ್ರಕ್ಕೆ ಬಲುಸೊಗಸಾಗಿತ್ತು—ಆ ಕೋಪ—ರೋಷ—ಅದೇ ಮುಖಭಾವಾನ ಚಿತ್ರಿಸಬೇಕೂಂತಿದ್ದೀನಿ. ಆದ್ದರಿಂದ—ಮೊದಲು, ಸ್ಟೂಡಿಯೋ ಬಾಗಿಲು ಮುಚ್ಚಿ—ಬೋಲ್ಟು ಹಾಕಿ—ನಾನು ಸ್ವಲ್ಪ—ಕಿಂಚಿತ್—ಸೆರಗ್ನ ಎಳಿತೀರೋ ಹಾಗೆ ಒಂದು ಸ್ಕೆಚ್ ಮಾಡ್ಕೊಂಡುಬಿಡ್ತೀನಿ—ಅಷ್ಟೆ"

ಅದ್ಸರೀ—ಸೆರಗ್ನ ಎಳೀತಾ ಇರೋಹಾಗೆ—ಅಂದ್ರಲ್ಲಾ—ಅದನ್ನ ಹ್ಯಾಗೆ ಮಾಡ್ತೀರೀ?"

"ಅದೇನ್ಮಹಾ, ಪದ್ಮಾ? ದಾರದ ಒಂದು ತುದೀಗೆ ನಿನ್ನ ಸೆರಗಿನ ತುದೀನ ಕಟ್ಟಿ, ಇನ್ನೊಂದು ತುದೀನ ಎಳೆದು ಎಲ್ಲಿಗಾದ್ರೂ ಕಟ್ಟಿದರಾಯ್ತು. ನೀನು, ಆ ದಾರಾನೇ ದುಶ್ಯಾಸನಾಂತ ಮನಸ್ನಲ್ಲೇ ಮಾಡ್ಕೊಂಡು—ನೀನು ದ್ರೌಪದೀಂತ ಭಾವಿಸ್ಕೊಂಡು—ಸುತ್ತ ಸಭೇಲಿ ಜನ ಗೇರಾಯ್ಸಿರೋಹಾಗೆ ಊಹಿಸ್ಕೊಂಡ್ರೆ—ಕಾಲು ಗಂಟೇಲಿ ನನ್ನ ಕೆಲಸ ಮುಗಿಸ್ಕೊಂಡ್ಬಿಡ್ತೀನಿ—ಏನಂತಿ?"

"ದುಶ್ಯಾಸನನ ಚಿತ್ರಕ್ಕೇನುಮಾಡ್ತೀರಿ? ಅದಕ್ಕೆ ನಿಮ್ಮನ್ನೇ ಬರ್ಕೊಂಡ್ಬಿಡಿ—ಚೆನ್ನಾಗಿರುತ್ತೆ!"

—ಎಂದು—ನಕ್ಕಳು.

"ಅದೇನು ಕಷ್ಟವಿಲ್ಲ ಪದ್ಮಾ. ನನ್ನ ಚಿತ್ರದ್ರಲ್ಲಿ ದುಶ್ಯಾಸನ ಮುಖ್ಯವಲ್ಲ. ಅವನ ಆಕೃತೀನ ಬರೀ ಊಹೆಯಿಂದ ಸ್ಕೆಚ್ಮಾಡಿದ್ರೂ ಆಗುತ್ತೆ. ಹಾಗೂ ಬೇಕೂಂದ್ರೆ ರಘುಪತಿ ಇದಾನಲ್ಲ—ಹೇಳಿ ಮಾಡಿಸಿದ ಹಾಗೆ!"

"ಆಹಾ! ಬಲು ಚೆನ್ನಾಗಿರುತ್ತೆ! ಗಂಡನ ಸ್ನೇಹಿತನ ಕೈಲಿ ಸೀರೆ ಸೆಳೆಸಿ

ಕೊಳ್ತಿರೋಹಾಗೆ! ಅವನೊಪ್ಪಿದರೂ ಒಪ್ಪಿಯಾನು!—ನಾನೊಪ್ಪಬೇಕಲ್ಲ! ನರಸೂಗೆ ಗೊತ್ತಾದ್ರೆ ರಾದ್ಧಾಂತಮಾಡ್ತಾಳೆ—ನಿಮ್ಮಿಬ್ರ ದೈಯ್ಯಾನೂ ಬಿಡಿಸ್ತಾಳೆ! ನಂಗೊತ್ತು."

"ಮಾಡ್ಲಿ ಮಾಡ್ಲಿ!—ಕೆಲಸ ಮುಗಿದ್ಮೇಲೆ ಅವನ ದೈಯ್ಯಾ ಬಿಡಿಸ್ಲಿ! ನೋಡು, ನನ್ನ ಹೆಸ್ರ್ನ ತನ್ನ ಕಳ್ಳಹೆಸರ್ನಾಗಿಟ್ಕೊಂಡು—ಮೊಸರನ್ನ ತಿಂದ ಕೋತಿ ಕೆಲಸ ಮಾಡ್ತಿದ್ದಾನೆ. ಸಿಕ್ಕೋರೆಲ್ಲ—'ಓಹೋಹೋ! ಕಥೆಗಾರ್ನಾಗ್ಬಿಟ್ಟ್ನೋ—ಭಾರಿ ಕಥೆಗಾರ!' ಅಂತ, ನನ್ನ ಲೇವಡಿಮಾಡೋಕೆ ಶುರುಮಾಡ್ಬಿಟ್ಟಿದ್ದಾರೆ ಪದ್ಮಾ."

ಪದ್ಮ ಸ್ವಲ್ಪ ಹೊತ್ತು ಯೋಚಿಸಿ,

"ದ್ರೌಪದಿ ರವಿಕೆ ತೊಟ್ಕೊಂಡಿರ್ತಾಳೆ ತಾನೇ?"

—ಎಂದು ಕೇಳಿದಳು.

"ಹ್ಞೂ, ಆದ್ರೆ ದುಶ್ಶಾಸನನ ಒರಟಾಟಕ್ಕೆ ಬಲಗಡೆ ತೋಳುಗೀಳು ಎಲ್ಲ ಹರಿದುಹೋಗಿರುತ್ತೆ."

ಪದ್ಮ ಪುನಃ ಎರಡು ಕ್ಷಣ ಯೋಚಿಸಿ—ತಲೆ ಅಲ್ಲಾಡಿಸುತ್ತ,

"ಉಹ್ಞೂಂದ್ರೇ, ನೀವೇನಾದ್ರೂ ಅಂದ್ಕೊಳ್ಳಿ, ನನಗೆ ಅದರ ತಂಟ್ಯೇ ಬೇಡ"

—ಎಂದಳು.

"ಯಾಕೆ ಪದ್ಮಾ?"

"ಚಿತ್ರ ಆದ್ಮೇಲೆ ನೋಡೋರ ಕಣ್ಣೆಲ್ಲ ನಭೇನೇ!—ಥೂ!—ಉಹುಂ! ನಾ ಒಲ್ಲೆ! ರವಿಕೇ ಬೇರೆ ಹರಿದಿರುತ್ತೆ—ಅಂತೀರಿ! ಇಷ್ಟಕ್ಕೂ ನನ್ಹತ್ರ ಹರಕು ರವಿಕೆ ಯಾವ್ದೂ ಇಲ್ವೇ ಇಲ್ಲ"—ಎಂದಳು.

"ಅದೇನ್ಕಪ್ಪಾ ಪದ್ಮಾ?—ಒಂದನ್ನ ಹರಿದರಾಯ್ತು"—ಎಂದೆ.

"ಊ! ಬಿಟ್ಟಿಬಿದ್ದಿದೆ!"

"ನಾನು ಇನ್ನೊಂದ್ನ ತೆಕ್ಕೊಟ್ರೆ?"

"ನೋಡೀ ನೀವೇನೇ ಹೇಳಿ, ನನ್ನ ಮನಸ್ಸು ಇಂಥಾದ್ದಕ್ಕೆಲ್ಲ ಒಪ್ಪೊಲ್ಲ. ಇವತ್ತು ದ್ರೌಪದೀ ವಸ್ತ್ರಾಪಹರಣ ಮಾಡೋದು ನಾಳೆ ಗೋಪೀವಸ್ತ್ರಾಪಹರಣ ಮಾಡೋಕೆ ಹೇಸೋರಲ್ಲ! ನೋಡ್ದೋರು ನಕ್ಕಾರು!"

"ಇಲ್ಲಾ ಪದ್ಮಾ, ನಾನು ಪೇಂಟ್‌ಮಾಡ್ಬೇಕೂಂತಿರೋ ಚಿತ್ರಾನ ನಿನ್ನ ಕುಮ್ಮಕ್ಕಿಂದ ಮಾಡಿ ಮುಗಿಸಿದರೆ—"

"ನನ್ನ ದಯ—ಸಹಾಯ—ಕುಮ್ಮಕ್ಕುಗಿಮ್ಮಕ್ಕು ಎಲ್ಲಾನೂ ಮರೆತ್ಬಿಡಿ ಇದಕ್ಕೆ! ನಾನಿಲ್ಲದ್ರೆ ತಾನೇ ನಿಮ್ಮ ಕಾಟ! ನಾಳೇನೇ ಊರಿಗೆ ಹೊರಟ್ಬಿಡ್ತೀನಿ ಅಷ್ಟೆ!"

"ಇಲ್ಕೇಳೇ, ನಾನು ಆ ಚಿತ್ರಾನ ಮುಗಿಸಿದ್ರೆ ನೋಡ್ದೋರು ನಗೊಲ್ಲ ಪದ್ಮಾ, ಕೈಗೆ ಸಿಕ್ಕ ಕಲ್ನೋ ಕಟ್ಗೇನೋ ತಗೊಂಡು ಹೊರಟ್ಬಿಡ್ತಾರೆ!"

"ಆಹಾ! ಬಿಡ್ತಾರೇನು?—ಅಂಥಾ ಅಸಯ್ಯ್ಣವಾದ ಚಿತ್ರ ಬರೆದರೆ! ಹಾಗಾದ್ರೆ ನಿಮ್ಗೂ ಅಪಾಯ್ವೇ! ಹುಷಾರಾಗಿರ್ರಿ!"

"ಏ ನನ್ಮೇಲಲ್ವೇ—ದುಶ್ಯಾಸನನ ಮೇಲೆ!"—ಎಂದು ನಕ್ಕೆ.

"ಅಲ್ಲಾಂದ್ರೇ, ಎಲ್ಲಾ ಬಿಟ್ಟು ಪಾಪ ಆ ಬಡಪಾಯಿ ದ್ರೌಪದೀ ಮೇಲೇ ಕೇಂದ್ರೆ ನಿಮಗೆ ಕಣ್ಣು?"—ಎಂದು ಕೇಳಿದಳು—ಪದ್ಮ.

"ಲೇ ಪದ್ಮಾ, ಹಾಗಂತ ಗಟ್ಟ್ಯಾಗಿ ಹೇಳ್ಬೇಡ?"—ಎಂದೆ, ನಗುತ್ತ.

"ಏನಾಗುತ್ತೋ?"

"ಆ ಹೊಟ್ಟೆಬಾಕನಿಗೆ ಕೇಳಿಸಿದರೆ, ನನ್ನ ಸಿಗಿದು ಶಿರೋಭಂಗಮಾಡಿ ತಿಂದು ತೇಗಿಬಿಟ್ಟಾನು ಕಣೇ!"

ಪದ್ಮಳೂ ನಗುತ್ತ, "ಮತ್ತೆ, ಬಿಡ್ತಾನೇನು? ಅಂಥಾಕೆಲ್ಸಾ ಮಾಡಿದ್ರೆ! ಮೊದಲ ಸಲ ಅಣ್ಣನ್ಮಾತಿಗೆ ಸುಮ್ನಾದ! ಎರಡನೇ ಸಲ ಅಣ್ಣಗಿಣ್ಣ ಎಲ್ಲಾ ಮರೆತು, ಕೀಚ್ಕನ್ನ ಚಟ್ನಿಮಾಡಾಕ್ಬಿಟ್ಟ!—"

"ಭೀಮಾಚಾರ್ರು ಹಸೀಚಟ್ನಿಮಾಡೋದ್ರಲ್ಲಿ ಹೆಸರುವಾಸಿ ಅಲ್ವೇ!—ನೀ ಏನೇ ಹೇಳು ಪದ್ಮಾ, ಒಂದ್ವಿಷಯಕ್ಕೆ ದ್ರೌಪದಿ ಪುಣ್ಯಾವೇ ಪುಣ್ಯಾ!"

"ಅದೆಂಥಾ ಪುಣ್ಯವೋ! ಐದು ಗಂಡಂದ್ರನ್ನ ಕಟ್ಕೊಂಡು—"

"ಹ್ಞಾ! ಅದೇ ಪುಣ್ಯ ಪದ್ಮಾ!"

"ಸಾಕು! ನನಗೆ ನಿಮ್ಮೊಬ್ರ ಕೈಲಿ ಏಗೋದೇ ಸಾಕಾಗಿದೆ! ಇನ್ನು ಆ ಪುಣ್ಯಾತ್ಗಿತ್ತಿ ಇನ್ನೆಷ್ಟು ಪಾಡುಬಿದ್ದಿದ್ದಾಳು!—ಹೇಳಿ!"

"ಪಾಡೇನ್ಬಂತೇ! ದೇವರ ಪೂಜೇಗೆ ಧರ್ಮಪ್ಪ; ಮನೆ ಕಾವಲಿಗೆ ಭೀಮು; ಲಲ್ಲೆ ಹೊಡೆಯೋಕೆ, ಜಡೆಗಿಡೆ ಹೆಣೆಯೋಕೆ, ಸಂಗೀತ—ತಾಫೆ ಕೋಚ್‌ಮಾಡೋಕೆ—ಅರ್ಜುನ; ವಾಕಿಂಗ್‌ಗೀಕಿಂಗ್ ಹೋಗೋವಾಗ ಎಡಬಲಕ್ಕೆ ಎ. ಡಿ. ಸಿ. ಆಗಿ, ಮೇಜರ್ ನಕುಲಪ್ಪ—ಕರ್ನಲ್ ಸಾದೇವು! ಮಜವೋ ಮಜ!!"

"ಆಹಾ! ಬಹು ಚೆನ್ನಾಗಿದೆ!—ಅಲ್ಲಾ, ದ್ರೌಪದೀ ಅಂದ್ರೆ ಎಷ್ಟು ಸದರ ಆಗ್ಹೋಯ್ತು ನಿಮ್ಗೆ! ನಾನೊಂದ್ಮಾತು ಹೇಳ್ಲಾ?"

"ಭೇಷಕ್!"

"ಅವಳಿಗೆ ಐದು ಜನ ಗಂಡಂದ್ರಿದ್ದಾಗೆ, ನಿಮಗೆ ಐದು ಜನರ ಜನಾನಾ ಇರಬೇಕಾಗಿತ್ತು!"—ಎಂದು, ಕಿಲಿ—ಲಿ—ಲಿ—ಲಿ—ಲೀ—ಂತ ನಗತೊಡಗಿದಳು. ನಾನು,

"ಐದೇ ಜನ ?"—ಎಂದೆ.

"ಯಾಕೆ ಸಾಲ್ದೇನು ? ಅಡಿಗೆ—ತಿಂಡಿ ತೀರ್ಥಕ್ಕೆ ಉಡುಪಿಕಡೆಯಿಂದ ಒಂದು ಹೆಣ್ಣು ; ಮನೇ ಕೆಲಸಕ್ಕೆ ಒಂದು ತಮಿಳುನಾಡಿನ ಕುಟ್ಟಿ ; ಸಿನೀಮಾ—ವಾಕಿಂಗ್—ಗೀಕಿಂಗ್ ಜೋಕಿಗೆ ಮಲೆಯಾಳೀ ಮೋಹಿನಿಯೊಬ್ಳು ; ಪೇಟೇಗೆ ಹೋಗಿ ಸಾಮಾನುಗೀಮಾನು ತರೋಕೆ ಕೋಮಟಿಗರ ಹುಡುಗಿ ; ಮನೇ ಹರಿಗೇ ಆಸ್ಪತ್ರೆ ನೋಡ್ಕೊಳ್ಳೋಕೆ ಯಾರಾದ್ರೂ ಡಾಕ್ಟರ್ ಸಂತಾನಲಕ್ಷ್ಮಿ !"—ಎಂದು ಪದ್ಮ ಮತ್ತೆ ನಗತೊಡಗಿದಳು.

"ಕನಿಷ್ಠ ಪಕ್ಷ ಇನ್ನಿಬ್ರಾದ್ರೂ ಬೇಕು ಪದ್ಮಾ"—ಎಂದೆ ನಾನು, ನಗುತ್ತ.

"ಇನ್ಯಾತಕ್ಕೇ ?"

"'ಆಯಾ' ಕೆಲಸ ಕಲಿತಿರೋಳು ಒಬ್ಳು ; ಲಾ ಪಾಸ್‌ಮಾಡಿ ಮ್ಯಾಜಿಸ್ಟ್ರೇಟ್ ಪದವೀಗೆ ಲಾಯಖ್ಖಾಗಿರೋಳು ಒಬ್ಳು !"

"ಹಾ ! ನೋಡಿದ್ರಾ ! ಮರೆತಿದ್ದೆ !—ಆಮೇಲೆ ಇನ್ನೊಬ್ಳು !"

"ಇನ್ಯಾಕೇ ?"

"ನಾಚ್ಕೆ—ಗೀಚ್ಕೆ ಇಲ್ದ ಗಂಡ್ಬೀರಿ ! ನಿಮ್ಮುಂದೆ ಹ್ಯಾಗೇಂದ್ರೆ ಹಾಗೆ ನಿಂತ್ಕೊಂಡೋ, ಕೂತ್ಕೊಂಡೋ, ಕುಣೀತಾನೋ, ಮಲಕ್ಕೊಂಡೋ, ಚಿತ್ರ ಬರೆಸಿಕೋಳ್ಳೋಕೆ—ಒಬ್ಳು ಫೈಲ್ಕ್ಲಾಸ್ ದಿಮ್ಮಿರಂಗಿ !—ಅಲ್ಲೀಗೆ ಸರಿಯಾಗಿರುತ್ತೆ—ಲೆಕ್ಕ !"

"ಏನು ಲೆಕ್ಕ—ಪದ್ಮಾ ?"

"ಅಷ್ಟಮಹಿಷಿಯರು !—ನೀವು ಗಣಪತೀ ಹಾಗೆ ಡೊಳ್ಳು ಬೆಳೆಸಿಕೊಂಡು—"

"ಪದ್ಮಾ, ನೀನೇನೋ ಲೇವ್ಡಿ ಮಾಡೋಕೆ ಹೇಳಿದ್ರೂ—ಒಟ್ನಲ್ಲಿ—ನಿನ್ನ ಐಡಿಯ ಇದೆಯಲ್ಲ—ಅದು—ಸುಮ್ನೆ ಕೂತ್ಕೊಂಡು ಯೋಚ್ನೇ ಮಾಡೋಕಾದ್ರೂ ಬಲು ರಮ್ಯವಾಗಿದೆ !"

"ಆಹಾ ! ಇಲ್ದೇ ಉಂಟೇ ! ವಸ್ತ್ರಾಪಹರಣವಂತೆ—ವಸ್ತ್ರಾಪಹರಣ ! ಏನಾದ್ರೂ ಆಗ್ಲಿ, ಬಲು ಒಳ್ಳೇ ವಿಷಯಾನೇ ಆರಿಸಿಕೊಂಡಿದ್ದೀರಿ—ಚಿತ್ರಕ್ಕೆ ! ನಿಮಗೇನು !—ವಸ್ತ್ರಾಪಹರಣಾಂದ್ರೆ ನೀರುಕುಡಿದಹಾಗೆ 'ಅಂತ ಕಾಣುತ್ತೆ !'—ಅಲ್ವೇ ?"

"ಏ ಇದು ಬರೀ ಚಿತ್ರ ಅಲ್ವೇನೇ !"

"ಸರಿ, ಸರಿ, ಚಿತ್ರ ಆದಾಕ್ಷಣ ಮನಸ್ಸಿಗೆ ಬಂಧಾಗೆ ಬರೀಬಹುದೂಂತಿದೆಯೇನು ? ಹೇಳಿ ಮನಸ್ನಲ್ಲಿಮಾಡ್ಕೊಂಡ್ಮೇಲೆ ತಾನೆ ಚಿತ್ರ ?"

"ಹೌದು"

“ಮನಸ್ನಲ್ಲಿ ತಾನೆ, ಗೃಹಸ್ಥರು ಅಂಥಾ ಯೋಚ್ನೆ ಮಾಡ್ಬಹುದೇ ! ಚಿತ್ರದಲ್ಲೇ ಆಗಲಿ, ದ್ರೌಪದೀ ಒಬ್ಳಿಗೇ ಅಲ್ಲ—ಬೀದೀಲಿ ಭಿಕ್ಷಾಮಾಡೋಳಿಗೂ ಅಂಥಾ ಅವಮಾನ ಮಾಡೋಣಾಂದ್ರೇನು !—ನನಗೇನೋ ಸ್ವಯಂವರವೇ ಚೆನ್ನಾಗಿರುತ್ತೆ—ನೀವೇನೇ ಹೇಳಿ”

“ಸ್ವಯಂವರದಲ್ಲೇನಿರುತ್ತ್ಯೇ ಹೆಚ್ಚಾಗ್ರಿಕ್ಕೆ—ಪದ್ಮಾ ? ಗಂಡು, ಟಗರಿನ ಹಾಗೆ ತಲೆ ಬಗ್ಗಿಸಿಕೊಂಡು ನಿಂತಿರ್ತಾನೆ; ಹೆಣ್ಣು ಅವನ ಕೊರಳಿಗೆ ಒಂದು ಹೂವಿನ ಕಣ್ಣಿ ಬೀರ್ತಾಳೆ !—ಅಷ್ಟೇ ತಾನೆ ?”

“ವಸ್ತ್ರಾಪಹರಣದಲ್ಲೇನು ಮಹಾ ಹೆಚ್ಚಾಗ್ರಿಕೆಯೋ ನಾಕಾಣೆ !”

“ಏನು—ಅಂದ್ರ್ಯಾ ಹೆಚ್ಚಾಗ್ರಿಕೆ? ಪದ್ಮಾ, ಕೇಳು, ದ್ರೌಪದೀ ಮಾನಭಂಗ ತೀರ ಹೀನವಾದದ್ದು—ಅತಿ ಹೇಯವಾದದ್ದು—ನಿಜ. ಆದರಷ್ಟು ತುಚ್ಛವಾದ ಪ್ರಸಂಗ, ಇಡೀ ಮಹಾಭಾರತದಲ್ಲಿ—ಅಷ್ಟೇಕೆ?—ಪ್ರಪಂಚದ ಯಾವ ಕಾವ್ಯ—ಪುರಾಣ—ಇತಿಹಾಸದಲ್ಲೂ—ಇನ್ನೊಂದು ಕಡೆ ನಡೆದಿಲ್ಲ. ಆದರೆ, ಪದ್ಮಾ, ಆ ಪ್ರಸಂಗ, ಕುರುಕುಲ ಕಾನನಕ್ಕೆ ಕಿಚ್ಚಿಟ್ಟ ಕಿಡಿ ! ಅಂದು ದ್ರೌಪದಿ ಬಿಟ್ಟ ನಿಡುಸುಯಿಲು, ಆ ಕಾಳ್ಗಿಚ್ಚನ್ನ ಊದಿ ಎಬ್ಬಿಸಿದ ಗಾಳಿ ! ಅವಳು ಹಾಕಿದ ಶಾಪ—ಕುರುಕ್ಷೇತ್ರದ ಮಹಾ ನರಮೇಧ ಯಾಗದ ರುದ್ರನಾಂದಿ !”

“ಅಲ್ಲಾ, ಪರಸ್ತ್ರೀನ ಕಣ್ಣೆತ್ತಿ ನೋಡೋದೂ ಪಾಪಾಂತಾರೆ. ಅಂಥಾದ್ರಲ್ಲಿ ವಂಶದ ಸೊಸೆ—ಋತುಮತಿ—ಅಂಥಾವಳನ್ನ ಮುಟ್ಟಿ—ಎಳೆತಂದು ಅಷ್ಟು ಜನ ರೆದುರಿಗೆ ಆ ನಿರ್ಭಾಗ್ಯೆ ಮೇಲೆ ಕೈಮಾಡ್ತಾನಲ್ಲಾ—ಆ ಚಂಡಾಲ ದುಶ್ಶಾಸನ !—ಅವನಿನ್ನೆಂಥಾ ಪಾಪಿ ! ಹೋಗ್ಲಿ, ಅವನೇನೋ ಎಂದೋ ಮಾಡ್ದ !—ಅಂದ್ರೆ ನೀವು ಇವತ್ತು, ಎಲ್ಲಾ ಬಿಟ್ಟು ಅಂಥ ಹೊಲಸು ಕೆಲಸಾನೇ ಚಿತ್ರಿಸಬೇಕೂಂತಿದ್ದೀರಲ್ಲ !—ಇದಕ್ಕೇನು ತಲೆ ಚಚ್ಚಿಕೊಳ್ಳೋಣ !”

“ಹ್ಞಾ ! ಪದ್ಮಾ, ಪಾಪವನ್ನು ಪುಣ್ಯವೆಂದು ಹೊಗಳಿದರೆ, ವಿಷಕ್ಕೆ ಅಮೃತ—ಎಂದು ಚೀಟಿ ಅಂಟಿಸಿದರೆ, ನೀಚವಾದ್ದನ್ನ—ಉಚ್ಚ ಎಂಬಂತೆ ಚಪ್ಪರಿಸುತ್ತ ಸಾಧಿಸಿದರೆ, ಎಕ್ಕಡವನ್ನ ಕಿರೀಟ ಎಂದು ಎತ್ತಿಹಿಡಿದರೆ—ಅದು ಮಾಡಬಾರದ ಕೆಲಸ. ಚಿತ್ರಕ್ಕೇ ಆಗಲಿ, ಸಾಹಿತ್ಯಕ್ಕೇ ಆಗಲಿ ಉಚ್ಚ—ನೀಚ—ಎಂಬ ಪಕ್ಷಪಾತವಿಲ್ಲ. ಆದರೆ, ಚಿತ್ರಗಾರನಾಗಲಿ—ಸಾಹಿತಿಯಾಗಲಿ, ನೀಚದ ಪಕ್ಷಪಾತಿಯಾಗಬಾರದು ಅಷ್ಟೆ—ಪದ್ಮಾ. ದ್ರೌಪದಿ ಪಂಚಮಹಾಪತಿವ್ರತೆಯರಲ್ಲಿ ಒಬ್ಬಳಷ್ಟೆ? ಅದೇನೋ ಒಂದು ಶ್ಲೋಕ ಬೇರೆ ಇದೆಯಲ್ಲ”

“ಹೌದು, ‘ಅಹಲ್ಯಾ ದ್ರೌಪದೀ ತಾರಾ—ತಾರಾ ಮಂಡೋದರೀ ತಥಾ—ಪಂಚಕನ್ಯಾ ಸ್ಮರೇನ್ನಿತ್ಯಂ ಸರ್ವಪಾಪವಿನಾಶನಂ’—ಅಂತ”

"ಪಂಚಕನ್ಯಾ? ಅವರು ಕನ್ಯೆಯರು ಹ್ಯಾಗೆ ಪದ್ಮಾ? ಪತ್ನೀ—ಅಥವಾ ಸತೀ—ಅಂತ ಇರಬೇಕಲ್ವೇ?"

"ಅದೇನೋ ನಂಗೊತ್ತಿಲ್ಲ. ಶ್ಲೋಕ ಇರೋದು ಹಾಗೆ."

"ಸರಿ, ಅವರ ಪೈಕಿ ಅಹಲ್ಯೆ ಮಾತು ಬಿಡು, ಇಂದ್ರನಿಗೆ ಸಾಮೀಲಾಗಿ ಕೆಟ್ಟೋಳ್ಗೆ ಈ ಶ್ಲೋಕದಲ್ಲಿ—ಅದರಲ್ಲೂ ಮೊದಲನೇ ಸ್ಥಾನ ಹೇಗೆ ಸಿಕ್ಕಿತೋ ನಾಕಾಣೆ!"

"ಹ್ಯಾಗೇಂದ್ರೆ? ಶಾಪದಿಂದ ಕಲ್ಲಾಗಿದ್ದೋಳು, ಶ್ರೀರಾಮದೇವರ ಪಾದ ಸೋಕಿದ ಕೂಡ್ಲೆ ಶುದ್ಧವಾಗಿ ಮತ್ತೆ ಗಂಡನ್ನ ಕೂಡಿಕೊಂಡೋಳೂಂತ, ಸೋಪು ಹಾಕಿ ಒಗೆದ ಮೇಲೆ ಮೈಲಿಗೆ ಬಟ್ಟೆ ಮಡಿಯಾಗೊಲ್ವೋ ಹಾಗೆ"

"ಭೇಷ್! ಪದ್ಮಾ, 'ರಾಮಪಾದ' ಗುರುತಿನ ಸೋಪು ಅಂದ್ರೆ ಬಲು ಸೊಗಸಾಗಿರುತ್ತೆ! ಇನ್ನಾ ತಾರಾ—ಗಳು ಇಬ್ರು, ಒಬ್ಳು ವಾಲೀಹೆಂಡ್ತಿ, ಇನ್ನೊಬ್ಳು ಪ್ರೊಫೆಸರ್ ಬೃಹಸ್ಪತ್ಯಾಚಾರ್ಯ ಕುಟುಂಬ. ಇವರಿಬ್ರೂ ಅಂಥಾ ಕಷ್ಟ ಕ್ಕೇನೂ ಒಳಗಾಗಲಿಲ್ಲ. ಇನ್ನು ಮಿಸೆಸ್ ದಶಕಂಠನ್. ಈಕೆ ವಿಚಾರ ಯಾವ ಪುಕಾರೂ ಇಲ್ಲ. ಆದರೆ ಇವರೆಲ್ಲರಿಗಿಂತ ಹೆಚ್ಚಾಗಿ ಪಾಡುಪಿದ್ದೋಳು ಅವಮಾನ ಪಟ್ಟೋಳು—ದುಃಖದಲ್ಲಿ ಬೆಂದೋಳು ಅಂದ್ರೇ ನಮ್ಮ ದ್ರೌಪದಿ—ಅಲ್ವೇ ಪದ್ಮಾ?"

"ಆಹಾ! ಯಾರಲ್ಲಾಂತಾರೆ! ಎಲ್—ಲ್ಲ ಆ ಧರ್ಮರಾಯನಿಂದ!"

"ಪಾಪ, ಅವನೇನುಮಾಡಿದನೇ?"

"ಏನುಮಾಡಿದನೇ—ಂತ ಕೇಳ್ತೀರಲ್ಲಾಂದ್ರೇ! ಜೂಜಾಡೋದೇ ತಪ್ಪು! ಅದರಲ್ಲೂ ಮೋಸದ ಜೂಜೂಂತ ತಿಳಿದೂ ತಿಳಿದೂ ಮತ್ತೆ ಮತ್ತೆ ಆಡಿದ್ದು ಮುಟ್ಠಾಳತನ ಅಲ್ವೇಂದ್ರೆ? ಜೂಜಿನಲ್ಲಿ ಎಲ್ಲ ಕಳಕೊಂಡ; ಆಮೇಲೆ ತಮ್ಮಂದ್ರನ್ನ ಸೋತ. ಹೋಗ್ಲಿ ಅವರೇನೋ ಗಂಡಸ್ರೂಂದ್ರೆ—ಕೈಹಿಡಿದ ಹೆಂಡ್ತೀನ ಕೂಡ ಸೋತ್ನಲ್ಲ—ಅವನಿನ್ನೆಂಥಾ ಗಂಡ್ಸೋ—ಕಾಣೆ! ನೆನೆಸಿಕೊಂಡ್ರೆ ಈಗ್ಲೂ ನನಗೆ ಮೈಯೆಲ್ಲಾ ಉರಿಯುತ್ತೆ!"

"ಹೋಗ್ಲಿಬಿಡು, ಏನೋ ಆದದ್ದಾಗಿಹೋಯ್ತು. ದ್ರೌಪದೀ ಮಾತು ತಗೋ, ಹಾಗೇ ಯೋಚಿಸಿದರೆ ಪದ್ಮಾ, ಹುಂ! ಅವಳ ಜನ್ಮ ಎಂಥಾದ್ದು!"

"ಕಂಡಹಾಗೇ ಇದೆ, ಪಾಪಿಜನ್ಮ!"

"ಉಹುಂ, ಅದ್ಸರಿ—ಆದರೆ ಅವಳ ಜನ್ಮ ನನ್ನ ನಿನ್ನ ಜನ್ಮದ ಹಾಗಲ್ಲಾ ಪದ್ಮಾ"

"ಅದ್ಹ್ಯಾಗಾಗುತ್ತೇ—ಂದ್ರೇ? ನೀವೇನು ಧರ್ಮರಾಯ್ನೆ—ಭೀಮ್ನೇ—"

"ಹಾಗಲ್ಲ ಪದ್ಮಾ—ನನ್ನರ್ಥಾ"

" ಮತ್ತಿನ್ಯಾಕ್ಯಾಗೆ ? "

" ಅವಳು—ನನ್ನ—ನಿನ್ನ ಹಾಗೆ ತಾಯಿ ಹೊಟ್ಟೇಲಿ ಹುಟ್ಟಿ ಬಂದೋಳಲ್ಲಾಂತ. ದಿಕ್ಪಾಲಕರಲ್ಲಿ ಒಬ್ಬನಾದ ಅಗ್ನಿಯ ತೇಜೋದ್ಭವೆ—ಅವಳು ಬೆಳೆದದ್ದು, ಮೂರು ಅಕ್ಷೋಹಿಣಿ ಸೈನ್ಯದ ಒಡೆಯನಾದ ದ್ರುಪದರಾಜನ ಅರಮನೆಯ ಅಂತಃಪುರದಲ್ಲಿ. ಸ್ವಯಂವರ ಸಮಯದಲ್ಲಿ—ಅವಳನ್ನು ಲಗ್ನವಾಗಬೇಕೂಂತ ಬಲು ಆಸೆಯಿಂದ ಬಂದಿದ್ದ ಛಪ್ಪನ್ನೈವತ್ತಾರೂ ಚಿಲ್ರೆ ದೇಶಗಳ ರಾಜರುಗಳ್ನ ಕಡೆಗಣ್ಣಿಂದ ಕೂಡ ನೋಡದೆ, ತಂಡತಂಡವಾಗಿ ಅವರನ್ನೆಲ್ಲ ನಿರಾಕರಿಸಿ ಅವರ ಆಶಾಭಗ್ನ ಮಾಡಿದ ಮಾನಿನೀ ರತ್ನ ! ಆ ಮೇಲೆ, ಒಂದಲ್ಲ—ಎರಡಲ್ಲಾಂತ—ಐದು ಮಂದಿ ವೀರಾಗ್ರಣಿಗಳ ಕೈಹಿಡಿದಳು—ಅವರೋ, ಒಬ್ಬೊಬ್ಬರೂ ಅವಳಂತೆಯೇ ದೇವಾಂಶ ಸಂಭೂತರು. ಆಮೇಲೆ, ವಿರಾಟ್ರಾಯನ ಪ್ಯಾಲೇಸ್‌ನಲ್ಲಿ ಈ ದ್ರೌಪದಿ ಮೇಡ್‌ಸರ್ವೆಂಟಿನ ವೇಷದ ಮರೆಯಲ್ಲಿದ್ರೂ, ಇವಳನ್ನ ಕಂಡಕೂಡ್ಲೆ—ಕೀಚಕ—ಅಂದ್ರೆ ಯಾರು ?—ಅವನೂ ಒಬ್ಬ ದೊರೆ !—ವಿರಾಟ್ರಾಯನ ಖಾಸಾ ಭಾವಮೈದ !—ಅಂಥಾವನು ಇವಳನ್ನ ಕಂಡು ಬಾಯಿ ಬಾಯಿ ಬಿಟ್ಟು—ಕೊನೆಗೆ ಬಿಟ್ಟ ಬಾಯ್ನಲ್ಲಿ ಪ್ರಾಣಾನೂ ಬಿಟ್ಟ ! "

" ಸರಿಯಾಗಿ ಮಾಡ್ದ—ಭೀಮ ಆ ಪೋಕರೀಗೆ ! ಆ ನೀಚನಿಗೆ ದೊರೆತನ ಒಂದು ಕೇಡು ! "

" ಅಂದಮೇಲೆ ಪದ್ಮಾ, ಈ ಶ್ಯಾಮಾಂಗಿನಿಯ ತೇಜಸ್ಸು—ರೂಪು—ಆಕೃತಿ—ವ್ಯಕ್ತಿತ್ವ ಎಲ್ಲ ಎಷ್ಟು ಸುಂದರವಾಗಿ, ಬಂಧುರವಾಗಿ, ಧೀರ ಗಂಭೀರವಾಗಿ, ಉದಾತ್ತವಾದದ್ದಾಗಿರಬೇಕು !—ನೀನೇ ಹೇಳು ? "

" ಹೆಣ್ಣಿನ ರೂಪ ನೀವು ಹೇಳ್ಬೇಕು—ಗಂಡಸ್ರು ;—ನಾನ್ಯಾಕ್ಯಾಗೆ ಹೇಳ್ಲಿ—ಹೆಣ್ಣುಹೆಂಗ್ಸು ! "

—ಎಂದು, ನನ್ನ ಕಡೆ ಒಂದು ತರಹಾ ನೋಡಿದಳು—ತುಂಟಿ ಪದ್ಮ.

ನಾನು

" ಹೇಳ್ತೀನಿ ಕೇಳು "

—ಎಂದೆ.

" ಹೇಳಿ "

—ಎಂದಳು.

" ಪದ್ಮಾ, ಕಣ್ಣಿಗೆ ಶರತ್ಕಾಲದ ಹುಣ್ಣಿಮೆಯ ಬೆಳಕಿನ ಹಾಲತಂಪು ಹೇಗೋ ಹಾಗೆ— "

"ವಾ!"

"—ಅಂಗೈಯ ತುಂಬ ನವನೀತದ ಬೆಂಡು ಹೇಗೋ ಹಾಗೆ—"

"ಅಬ್ಬ!"

"ನಾಲಗೇಗೆ, ಹಣ್ಣು ಹಾಲ್ಜೇನು ತುಪ್ಪ ಸಕ್ಕರೆಗಳ ರಸಾಯನ ಹೇಗೋ ಹಾಗೆ—"

"ಅಬ್ಬಬ್ಬಾ!"

"—ಮೂಗಿಗೆ ಮೃಗಮದದ ಸುವಾಸನೆ ಹೇಗೋ ಹಾಗೆ—"

"ಅಲಲಲಲಾ"

"ಕಿವಿಗೆ—ಮಾರಪಿತನ ಮಾಯಾಮುರಳಿಯ ನಾದತರಂಗ ಹೇಗೋ ಹಾಗೆ ಇದ್ದಾಳೆ—ನನ್ನ ಕಲ್ಪನೆಯ ಕರೀ ಹುಡುಗಿ ದ್ರೌಪದಿ, ಪದ್ಮಾ!"

"ಹುಂ! ಪರವಾಗಿಲ್ಲ! ಮನಸ್ನಲ್ಲಿ ಮಂಡ್ಗೇನ ಬಲು ಅಚ್ಚಗಟ್ಟಾಗಿ ಮಾಡ್ಕೋತೀರಿ!—ಏನಾದ್ರೂ ಆಗ್ಲಿ! ಇಂಥಾ ಸೊಗಸಾದ ಹುಡುಗಿಯ ಮರ್ಯಾದೆ ಕಳೆಯೋಕೆ ನಿಮಗೆ ಮನಸ್ಸಾದ್ರೂ ಹ್ಯಾಗೆ ಬರುತ್ತೋ!"—ಎಂದು, ನಕ್ಕಳು—ಪದ್ಮ.

"ಪದ್ಮಾ, ನಾನು ನಿಜವಾಗಲೂ ಚಿತ್ರಿಸಬೇಕೂಂತಿರೋದು 'ದ್ರೌಪದೀ ವಸ್ತ್ರಾಪಹರಣದ ಘಟನೆಯನ್ನಲ್ಲ. ಅದನ್ನಾಗಲೇ ರವಿವರ್ಮ, ದುರಂಧರ್—ಎಲ್ಲ ಚಿತ್ರಿಸಿಬಿಟ್ಟಿದ್ದಾರೆ."

"ಮತ್ತೆ? ಇಷ್ಟೊತ್ತೂ ಅದನ್ನೇ ಚಿತ್ರಿಸಬೇಕೂಂತಿರೋರ ಹಾಗೆ ಮಾತಾಡ್ತಿದ್ರೀ!"

"ಸುಮ್ನೇ ಪದ್ಮಾ, ನೀನೇನಂತಿಯಾ ನೋಡೋಣಾಂತ—ಅಷ್ಟೆ. ನಾನು ಚಿತ್ರಿಸಬೇಕೂಂತಿರೋದು, ಬಹಿರಂಗ ಮಾನಭಂಗಕ್ಕೆ ತುತ್ತಾದ ದ್ರೌಪದಿ ತನ್ನ ಅಂತಃಪುರಕ್ಕೆ ಹಿಂದಿರುಗಿದ ಮೇಲಿನ ದೃಶ್ಯವನ್ನ"

"ಅದರಲ್ಲೇನು ವಿಶೇಷಾಂದ್ರೇ? ತನ್ನ ರೂಂಗೆ ಹೋಗ್ತಾಳೆ—ಅಲ್ಲಿ ತನ್ನ ಹಾಸಿಗೆಯ ಮೇಲೆ ಬೋರಲಾಗಿ ಬಿದ್ದು—ಗೋಳೋಂತ ಅಳ್ತಿರ್ತಾಳೆ—ಅಷ್ಟೇ ತಾನೇ?"

"ಊಹುಂ! ಅಲ್ಲಾ ಪದ್ಮಾ ಸಭೆಯಿಂದ ಅಂತಃಪುರಕ್ಕೆ ಹೋದ ದ್ರೌಪದಿ ಅಳುಬುರುಕಿಯಲ್ಲ. ಶ್ರೀ ಕೃಷ್ಣ ತನ್ನ ಅಕ್ಷಯವಸ್ತ್ರ ವರಪ್ರದಾನದಿಂದ ತುಂಬಿದ ಸಭೆಯಲ್ಲಿ ಕೋಮಲತಮೆಯೂ ಮಾನಸಧನೆಯೂ ಆದ ಆ ಕ್ಷತ್ರಿಯ ರಾಣಿಯ ನಗ್ನತೆಯನ್ನೇನೋ ಕಾಪಾಡಿದ್ದ—ನಿಜ ಆದರೆ, ಪಾಂಡವ ಪಟ್ಟಮಹಿಷಿಯಾದ ಆ ರಾಜನಂದಿನಿ ಕೈಹಿಡಿದ ಪಂಚ ವೀರಾಧಿ ವೀರಪತಿಗಳೆದುರಿಗೆ—ದಾಯಾದಿ

ಗಳೆದುರಿಗೆ—ಗುರುಹಿರಿಯರೆದುರಿಗೆ—ದಾಸದಾಸಿಯರೆದುರಿಗೆ, ಮುಂಗುರುಳು ಹಿಡಿದು ಎಳೆತರಲ್ಪಟ್ಟು—ಪರಪುರುಷನ ವಿಷಸ್ಪರ್ಶದ ಕಾಲಕೂಟವನ್ನುಂಡವಳು !

“ಮತ್ತೇನು ಮಾಡಿದ್ದಾಳು ಹೇಳಿ ?”

“ಹ್ಞಾ ಪದ್ಮಾ, ಕೆಣಕಿದ ಸಿಂಹಿ ದ್ರೌಪದಿ ಸಭೆಯಿಂದ ಅಂತಃಪುರಾಭಿಮುಖವಾಗಿದ್ದಾಳೆ—ನೋಡು. ದುರ್ಭರವಾದ ಮಾನಭಂಗವನ್ನು ಹೊರಲಾರೆನೋ ಎಂಬಂತೆ, ನಿರ್ಜನವಾದ ತನ್ನ ಅಂತಃಪುರದ ನೆಲದಮೇಲೆ ಕುಸಿದು ಕುಳಿತ ಆ ಕರುಣಾಜನಕ ಮಾನಿನಿಯನ್ನು ನೋಡು. . . . ಬಲಗೈಯನ್ನು ನೆಲಕ್ಕೂರಿ, ತೊಡೆ—ಕಾಲುಗಳನ್ನು ಎಡಪಕ್ಕಕ್ಕೆ ಒತ್ತರಿಸಿ ಕುಳಿತು ಛಿದ್ರವಾದ ಅಸ್ತವ್ಯಸ್ತವಾದ ಉಡಿಗೆ ತೊಡಿಗೆಗಳ ಆ ನಿರ್ಭಾಗ್ಯೆಯನ್ನು ನೋಡು ಪದ್ಮಾ—”

“ಅಯ್ಯೋ !”

“ಆದರೇ ! ಪರಪುರುಷನೂ—ಪರಮನೀಚನೂ ಆದ ಆ ದುಶ್ಯಾಸನನ ಕರ್ಕಶ—ಕಠೋರ—ವಿಷಸ್ಪರ್ಶದಿಂದ ಧಗಧಗಿಸುತ್ತಿರುವುದೋ ಎಂಬಂತಿರುವ ಅಗ್ನಿಜೆಯ ಆ ಕುಸುಮಕೋಮಲಕಾಯವನ್ನು ನೋಡು, ಪದ್ಮಾ ! ಆಹಾ ! ಘನಿಸಿ ನಿಂತಿದೆ ನೋಡು !—ಗಂಟಿಕ್ಕಿದ ಅವಳ ಹುಬ್ಬುಗಳ ನಡುವೆ ಸಿಡಿಲುಗರ್ಭದ ಕಾಳ ಕಾರ್ಮೋಡ! ನೋಡು ನೋಡವಳ ಮನೋಹರವಾದ ಲೀಲಾಲಕ ಭೃಂಗಾಳಿಯ ಭಯಾನಕ ಭಂಗವನ್ನು ! ಅದೋ ಪದ್ಮಾ, ಅವಳ ವಾಮಭುಜದ ಮೇಲೆ ಹೊರಳಿ ಹಾಯ್ದು—ಮುಂದಕ್ಕೆ—ಪೂರ್ಣಪ್ರವಾಹದ ಕಾಳಜಲಪಾತದಂತೆ ಧುಮುಕಿ—ಉರುಳುರುಳಿ ಹರಡಿರುವ ಅವಳ ಆ ವಿಪುಳ ಕೇಶರಾಶಿಯನ್ನು ನೋಡು. . . . ಊರ್ಧ್ವದೃಷ್ಟಿಯ ಅವಳ ಆ ರಕ್ತನಯನೋತ್ಪಲಗಳನ್ನು ನೋಡು. ಅವುಗಳಲ್ಲಿ ಪ್ರಜ್ವಲಿಸುತ್ತಿರುವ ಕೌರವಕುಲ ಕಾನನಾಗ್ನಿಯನ್ನು ನೋಡು ಪದ್ಮಾ ! ಕೋಪಾನಲದಲ್ಲಿ ಕುದಿದುಕ್ಕಿದ ಅಶ್ರುಜಲಧಾರೆಗೆ ಬೆಂದು ಬಾಡಿರುವ ಆ ಪದ್ಮಾನನೆಯ ಸುಣ್ಣದವುಗಳನ್ನು ನೋಡು !”

“ಆಹಾ !”

“ನೋಡು ನೋಡು—ಪದ್ಮಾ, ಎಡಹಸ್ತದಲ್ಲಿ ಒಂದು ಹಿಡಿ ತಲೆಕೂದಲನ್ನು ಎತ್ತಿ ಹಿಡಿದು, ಸಿಡಿರೋಷದಿಂದ ಆಣೆಯಿಡುತ್ತ, ಭೀಷಣ ಪ್ರತೀಕಾರದ ಮಧುರತಮ ದಿವಾಸ್ವಪ್ನವನ್ನು ಕಾಣುತ್ತಿರುವ ಅದೋ ಆ ಕುರುಕುಲ ಪ್ರಳಯಾಂತಕಿಯನ್ನು ನೋಡು ! . . . ಈಗ ಹೇಳು ದ್ರೌಪದೀ—ಅಲ್ಲ—ಪದ್ಮಾ, ನಮ್ಮ ಕರೀಹುಡುಗಿಯ ಈ ಚಿತ್ರ ಹೇಗಿದೆ ?”

"ಇದು ಪರವಾಗಿಲ್ಲ; ಆದರೆ ಸೀರೆ ರವಿಕೆ ತೀರ ಹರಿದು ಅಸ್ತವ್ಯಸ್ತವಾಗಿರೋದು ಬೇಡ ಅಷ್ಟೆ—ಒಳ್ಳೇದು, ಈ ಚಿತ್ರಕ್ಕೆ ಏನು ಹೆಸರು ಕೊಡ್ತೀರಿ?"

"ಇನ್ನೂ ಯೋಚಿಸಿಲ್ಲ. ನೀನು ಹೇಳು ನೋಡೋಣ ಏನು ಹೆಸರು ಕೊಡಬಹುದು."

'ಇದಕ್ಕೆ ಚೆನ್ನಾಗಿ ಒಪ್ಪೋ ಹೆಸರೂಂದ್ರೆ ಅಗ್ನಿ ಜಾಸ್ವಪ್ನ—ಅಂತ"

"ಹ್ಞಾ! ಪದ್ಮಾ ಬಲು ಸೊಗಸಾದ ಹೆಸರು!—ಅಗ್ನಿ ಜಾಸ್ವಪ್ನ! ಆ ಪ್ರತಿಜ್ಞೆಯ ಸಮಯದಲ್ಲಿ ಅವಳು ದ್ರೌಪದಿಯಲ್ಲ—ಪಾಂಚಾಲೆಯಲ್ಲ—ಕೃಷ್ಣೆಯಲ್ಲ—ಅಗ್ನಿ ಜೆ!—ಕುರುಕುಲ ಕಾನನಕ್ಕೆ ಅಗ್ನಿಯಾಗಿ, ದ್ವಾಪರಯುಗಕ್ಕೆ ದೀಪಾರತಿಗೈದ ಧೀರೆ!!"

"ಒಪ್ಕೊಂಡ್ರೋ ಹಾಗಾದರೆ, ಈ ಹೆಸರು ಚೆನ್ನಾಗಿದೇಂತ?"

"ಭೇಷಕ್!—ಗುಣಕ್ಕೆ ಮತ್ಸರವೇ ಚಿನ್ನಾ?"

"ಹಾಗಾದರೆ, ಹೆಸರು ಕೊಟ್ಟಿದ್ದಕ್ಕೆ ಛಾರ್ಜು ಮಾಡ್ತೀನಿ!"

"ಓ ಮಾಡು ಪರವಾಗಿಲ್ಲ. ಚಿತ್ರಕ್ಕೆ ಹಾಕೋ ಬೆಲೇಲೆ ಅದೆಲ್ಲ ಸೇರಿಕೊಂಡು ಬಿಡುತ್ತಲ್ಲ"

"ಚಿತ್ರಕ್ಕೆ ಏನು ಬೆಲೆ ಹಾಕ್ತೀರಿ?"

"ಐನೂರು ರೂಪಾಯಿ ಹಾಕೋಣಾಂತಿದ್ದೀನಿ"

"ಒಳ್ಳೇದು, ನನ್ಮಾತ ಸರಿಯಾಗಿ ಕೇಳಿ ಈಗ್ಲೇ. ನಾನು ಹೆಸರು ಕೊಟ್ಟಿದ್ದಕ್ಕೆ ಚಿತ್ರಕ್ಕೆ ಕೂತ್ಕೊಂಡಿದ್ದಕ್ಕೇಂತ ಬೇರೆ ಬೇರೆ ಬಿಲ್ ಮಾಡೊಲ್ಲ. ಒಟ್ನಲ್ಲಿ ಬಂದದ್ರಲ್ಲಿ ಹನ್ನೆರಡಾಣೆ ಭಾಗ ಸಂದು—ಕೇಳಿ ಸರಿಯಾಗಿ! ಹನ್ನೆರಡಾಣೆ ಭಾಗ ಸಂದು—ನಾಲ್ಕಾಣೆ ಭಾಗ ನಿಮ್ಮದು!"

—ಎಂದು ಪದ್ಮ ಜೋಡಿಸಿಟ್ಟಿದ್ದ ಟೀ ತಟ್ಟೆಯನ್ನು ತೆಗೆದುಕೊಂಡು ಮನೆಯೊಳಕ್ಕೆ ಹೊರಟುಹೋದಳು.

ಹೇಗಿದೆ—ಆಹಾ! ನೋಡಿದಿರಾ ಡಕಾಯಿತಿ ಪದ್ಮಳ "ಸಂದು ನಿಮ್ಮದು" ಹಿಸ್ಸೆ!

—ಆನಂದ

[ಈ ಕಥೆ, ತಾ. ೨೦-೧೦-೧೯೫೫ರಲ್ಲಿ ಮೈಸೂರು ಎ.ಐ.ಆರ್. ಕೇಂದ್ರದಿಂದ ಕಥಾ ಸಪ್ತಾಹ ಕಾರ್ಯಕ್ರಮದಲ್ಲಿ ಪ್ರಸಾರವಾದುದು. ಕಾಲದ ಇಕ್ಕಟ್ಟನಲ್ಲಿ ಅನಿವಾರ್ಯವಾಗಿ ಸಂಕುಚಿತವಾಗಿದ್ದ ಕಥೆ ಇಲ್ಲಿ ವಿಸ್ತೃತವಾಗಿ ರೂಪುಗೊಂಡಿದೆ. ಇದನ್ನು ಪ್ರಕಟಿಸಲು ಕೃಪೆಯಿಟ್ಟು ಅನುಮತಿ ಕೊಟ್ಟದ್ದಕ್ಕಾಗಿ ಮೈಸೂರು ಎ.ಐ.ಆರ್. ಕೇಂದ್ರದ ಅಧಿಕಾರಿಗಳಿಗೆ ಕೃತಜ್ಞನಾಗಿದ್ದೇನೆ.—ಆನಂದ]

ಮೃತ್ಯು ಸುಂದರಿಗೆ

ನಿನ್ನಾಲಿಂಗನದೊಂದೆ ಬಯಕೆಯದು
ಎನ್ನ ಹೃದಯಕಿಂದು
ಇಂಥ ಬಯಕೆ ಸುಳಿ ಸುಳಿಯದಿನ್ನು
ಅದರಲ್ಲಿ ಮುಂದೆ ಎಂದೂ!

ತಲೆಯ ಹುತ್ತದಿಂದಿಳಿದು ಜೋಲುತಿಹ
ವೇಣಿ ಫಣಿಯ ಸ್ಪರ್ಶ
ಏಕೊ ಏನೊ ಇಂದೆನಗೆ ನೀಡಲಿದೆ
ಅತ್ಯಪೂರ್ವ ಹರ್ಷ!

ಉತ್ತರ ದಕ್ಷಿಣ ಧ್ರುವಗಳ ನಿನ್ನಾ
ಹಿಮ ಶೀತಲದಧರ,
ಬಯಸಿ ಚುಂಬನವನೆನ್ನ ನೆಳಸುತಿದೆ
ಅದುವೆ ಪ್ರಳಯ ಮಧುರ!

ಬೆಂಕಿ ಬಾವಿಗಳ ನಿನ್ನ ಕಣ್ಣುಗಳ
ಮೋಹ ಸರಸಿಯಾಳ,
ಮಮತೆ ತುಂಬಿದೆದೆಯಿಂದೆ ಸೆಳೆಯುತಿದೆ
ದಹಿಸಲೆಳಸಿ ಬಾಳ!

ಪ್ರಭುಶಂಕರ.

ಎಲ್ಲಿಂದೆಲ್ಲಿಗೆ

೧

ಬಳ್ಳಿಯ ಬೇರ್ ಬಿಸಿಲಿಲ್ಲದ ಬೆಳಕಿಲ್ಲದ ನೆಲದಾಳದಲಿ;
ಕವಲುಕವಲು ಕುಡಿಯೆಲ್ಲೆಡೆ ಮೇಲ್ಗಡೆ,
    ಕುಡಿಯೆ ಗಾಳಿ, ಮೀಹಕೆ ಬಿಸಿಲು;
ಎಲೆಯೆಲೆಗೂ ತೊಂಗಲು—ಹೂಗಳು—ಮುಗುಳು.
ನೆಲಗರ್ಭದ ಮೌನತಪಸ್ಸಿನ ತ್ಯಾಗದ ತಾಯ್‌ಬೇರು
    ಅಡಗಿಹುದೊಳಗಡೆ:
    ಹೂವಿನ ತವರು.
ಜೀವದ ನೆಲೆ ಆ ತುದಿಯಲ್ಲಿ;
ಜೀವದ ಕಲೆ ಈ ತುದಿಯಲ್ಲಿ.
ಅದನಿದಕೊಯ್ಯುವ ಬಲುದೂರದ ವಿಸ್ತಾರದ ಬಳ್ಳಿ!
    ಎಲ್ಲಿಂದೆಲ್ಲಿಗೆ!

೨

    ಇಲ್ಲಿದೊ ಹೂಹಸುಳೆ
    ತಾಯ ತೊಡೆಯ ಮೇಲೆ:
ಬಳವಿಯ ನಂಟಿನ ಹೊಕ್ಕುಳ ಬಳ್ಳಿ ಬೇರ್ಪಟ್ಟಿರಲು
ಒಲವಿನ ಕಾಣದ ಬಳ್ಳಿಯೊಳರಳುತ್ತಿದೆ ಮುಗುಮುಗುಳು.
    ಒಲವುಕ್ಕುತ್ತಿದೆ ಪಾಲಾಗಿ,
    ತಾಯ್ತನ ತಾನೇ ಪಾಲಾಗಿ.
ಬೇರೊಣಗುತ್ತಿದೆ ಹೂವರಳಲಿಯೆಂದು
ಬಳ್ಳಿ ಬಾಡುತಿದೆ ಹೂಕಾತು, ಹಣ್ಣಾಗಲಿಯೆಂದು:
ಒಣಗಿ, ಬಾಡಿ, ಸಾಯುದು ತಾಯ್‌ಬಳ್ಳಿ;
ಬದುಕಿರುವುದು, ಹೂತು ಕಾತು ಹಣ್ಣಾಗಿಹ ಸಂತಾನದಲಿ.
    ಈ ತಾಯ್‌ಬಳ್ಳಿಯ ಬೇರೆಲ್ಲಿ?
    ಬತ್ತಿ ಸತ್ತಿರದ ಆ ಬೇರೆಲ್ಲಿ?
    ಎಲ್ಲಿಂದೆಲ್ಲಿಗೆ?

೩

ಇಲ್ಲಿದೊ ಈ ಇಳೆ:
ಜೀವದ ತೊಟ್ಟಿಲೆ
ತಾನಾಗಿ,
ತೋರಲು ಜೀವ-ಜಡದ ಏಕೈಕದ ಲೀಲೆ
ಸೂರ್‍ಯ-ಚಂದ್ರ-ನಕ್ಷತ್ರ ಮಂಡಲದ ನಿತ್ಯರಾಸದಲೆ,
ಎಲ್ಲವನೂ ಲಯಬಂಧದೆ ಬಿಗಿಹಿಡಿದಿರೆ ಕಾಣದ ಒಂದೇ ಸೆಳೆ—
ಆವರ್ತನ ಬಲೆ, ದೇಶಕಾಲಸ್ಥಿತ್ಯಾತ್ಮಕದೊಳ ಎಳೆ—
ಹುಟ್ಟಿತೊ ಈ ಇಳೆ ಆ ಎಳೆಹಿಡಿದು, ವಿಶ್ವದ ಬಸಿರಿನಲಿ—
ಬಳ್ಳಿಯ ಹೂವಿನೊಲೆ,
ತಾಯಿಯ ಮಗುವಿನೊಲೆ,
ನನ್ನ ನಿನ್ನ ಈ ಚೆಲು ಇಳೆಯಿಲ್ಲಿ,
ವಿಶ್ವದ ತೊಟ್ಟಿಲಲಿ.
ಎಲ್ಲೋ ಕಾಣದ ತಾಯ್‌ಬೇರು !—
ತಾಯಿ-ತಂದೆ-ಗುರು.
ಎಲ್ಲಿಂದೆಲ್ಲಿಗೆ !

ರಾಘವ.

ರತಿ ವಿಲಾಪ

ದೃಶ್ಯ ೧

[ಸಂತಾಪತಪ್ತಳಾದ ರತಿದೇವಿಯು ಮಲ್ಲಿಕಾ ಮಂಟಪದ ಮೇಲೆ ಚೆಲ್ಲಿಕೊಂಡು ಮಲಗಿದ್ದಾಳೆ. ಇಲ್ಲದ ಭಯವನ್ನು ಅನುಭವಿಸುವಂತೆ ಅವಳ ಮುಖವು ತೋರುತ್ತಿದೆ. ಸಖ್ಯದ ಕಾಳಜಿ ಗೆಳತಿಯನ್ನು ಸಮಾಧಾನಿಸಿ ನೋಡುತ್ತ ಮುಂದಾಗಿ ಮಾತನಾಡುತ್ತಾಳೆ.]

ರತಿದೇವಿ—ಮುಗಿದು ದಿನಗಳ ಸಹಸ್ರ ಮುನ್ನಡೆದು ಹೋದವು
ಮದನನಿರೀಕ್ಷಣಾವಿಧಿಯ ದೆಸೆ ಬಾಳಿದೆನು
ದಿಕ್ಕು ಬಿಡು ಮಲ್ಲಿಕಾ! ಪತಿಯು ಬಾರದಿರಲಿನ್ನು
ಜೀವನವೆ ಕುದಿಯುತಿದೆ. ಗಳಿಗೆ ಯುಗವಾಗುತಿದೆ.
ಜೀವನದೊಳೊಂದಾಗಿ ನಿನ್ನ ಸ್ಮೃತಿಯು ತೋರುವುದು
ಜೀವೇಶನೆಂತೆನ್ನ ಮರೆತಿಹನೋ ತಿಳಿಯದಿದೆ.
ಮಲ್ಲಿಕಾ (ಸಂತೈಸುವ ದನಿಯಲ್ಲಿ)—ನಿನ್ನ ಸ್ಮೃತಿಯು ಸಹಿತಿಲ್ಲ
ಸುಮ್ಮನಿರು ರತಿದೇವಿ! ನಿನ್ನ ಪ್ರೀತಿಯು ಅಷ್ಟು
ನಿರುಪಮ! ನಿನ್ನನ್ನು ಮರೆವನೇ ದೇವನು?
ಘನವಾದ ಕಾರ್ಯದಲಿ ದೊರೆಯು ತೊಡಗಿರಬಹುದು;
ಬರಿದೆ ನೀ ಬಳಲದಿರು.
ರತಿದೇವಿ (ಬೇಸರದಿಂದ)— ಗಳಿಗೆ ತಡೆಯದ ಮುನ್ನ
ಬರದೆ ಇದ್ದವನೆಂದು ಹೇಳಿ ಹೋಗಿದ ದೊರೆಗೆ
ಕಾರ್ಯವಾವುದು ಮತ್ತೆ! ತೆರೆಮರೆಯೊಳೊಂದಾಗಿ
ನುಡಿದು ನಿಂತವನಲ್ಲ; ಅದು ತಪ್ಪಿದುದಲ್ಲ.
ನನಗೇತಕೋ ಭಯವಮ್ಮ!
ಮಲ್ಲಿಕಾ— ಅಮರಾಧೀಶನಲಿ
ಜೈತ್ರಯಾತ್ರೆಗೆ ಹೋದ ಕಾಮದೇವನಿಗೆಲ್ಲಿ
ಬಿಡುವಿಹುದು ದೇವಮ್ಮ! ಸ್ವಪ್ನ ಸಾಮ್ರಾಜ್ಯದಲಿ
ಮುಳುಗಿಹೋಗಿಹನವನು.
ರತಿದೇವಿ (ಆಶ್ಚರ್ಯದಿಂದ)— ಬಾಧಿಸುವುದೇ ಈ ಯುದ್ಧ

ಹೇಳುವಿಯ ಮಲ್ಲಿಕಾ ? ಅಂಗಜನ ಕೆಣಕಿದವ
ನೆಂದಾರೆ ಬದುಕುವನೆ ? ಗಂಡುಡೆಯ ತೊಟ್ಟವನು
ಮಣ್ಣು ಮುಕ್ಕುವುದಿರಲಿ ಘನಘೋರತಪಸಿಗಳು
ಮೂಗು ತಿಕ್ಕುತ ಬಂದು ಶರಣಾಗಿ ನಿಂತಿಹರು.
ಸೋಲರಿಯದಿಹ ಗೆಲುವು ಕಾಮದೇವನದಮ್ಮ !
ಮೂರು ಲೋಕದೊಳಾರು ವೀರನಿಂತಿಹರವನ
ಹೇಳಬಲ್ಲೆಯ ಗೆಳತಿ ? ಕೇಳುವಾತುರವೆನಗೆ.

ಮಲ್ಲಿಕಾ (ತಿಳಿಹೇಳುವಂತೆ)—ಹೇಮಕೂಟಾಚಲದಿ
ತನ್ನ ನಿಜವನೆ ತಾನು ಧ್ಯಾನಿಸುತ ಪರಶಿವನು
ತಪದೊಳಿರುತಿಹನಂತೆ ! ಗಿರಿಜೆಯಲ್ಲಿಯೆ ಶಿವನ
ಸೇವೆಗೆಯ್ಯುವಳಂತೆ ! ಶಿವನ ತಪವನು ಕೆಡಿಸಿ
ಗಿರಿಜೆಯೊಡನಾ ದೇವ ಕಾಮದುಂಬುವ ತೆರದಿ
ದಾಳಿಯನ್ನೆಸಗುವದೆ ಯುದ್ಧಮೂಲವು ದೇವಿ !

ರತಿದೇವಿ (ಭಯವಿಹ್ವಲಳಾಗಿ)—ಶಿವನೊಡನೆ ಕಾಳಗವೆ ?
ಕಾಮದೂರನ ಕೆಣಕಿ ಕಾಮದೇವನಿಗಾವ
ಜಯವು ದೊರಕೀತಮ್ಮ ! ಘೋರವಾಗಿದೆ ಮಾತು !

ಮಲ್ಲಿಕಾ (ವಿಶ್ವಾಸದಿಂದ)—ದೇವಕೃಪೆಯೊಳು ಮಿಂದ
ಕಾಮದೇವನಿಗಾವ ಭಯವಿಹುದು ರತಿದೇವಿ !
ನಿನ್ನವನ ಸಿದ್ಧಿಯಲಿ ದೇವದೇವತೆಗಳಿಗೆ
ಬಿಡುಗಡೆಯ ದಾರಿಯಿದೆ. ಶಿವನ ವೀರ್ಯದ ಕೂಸು
ರಕ್ಕಸನ ಪ್ರಾಣಕಿದೆ. ಖೂಳ ರಕ್ಕಸನಿವನ
ನಿರ್ದಯೆಗೆ ಬೆಂಡಾದ ದೇವತೆಗಳೆಲ್ಲರೂ
ಹೌಹಾರಿ ನಿಂತಿಹರು. ಹೆಂಡಿರನು ಮಕ್ಕಳನು
ಮೇರುಗಿರಿ ಗುಹೆಗಳಲಿ ಬೈತಿಟ್ಟ ನಿರ್ಜರರು
ಬೊಮ್ಮನಿಗೆ ಶರಣಾಗಿ ಭಯಭೀತರಾಗಿಹರು
ರಕ್ಕಸನ ದಿನತುಂಬಿ ನಿಲ್ಲುವಂತೆಸಗೆಂದು
ಮೊರೆ ಹೊಕ್ಕು ನಿಂತಾಗ ಕಾಮಪಿತನಾದೇಶ
ಕಾಮದೇವನಿಗಾಯ್ತು. ಸಿದ್ಧಹಸ್ತನು ಕಾಮ !
ಸುರಗಣದ ಕೈವಾರಿ.

ರತಿದೇವಿ (ಗಾಬರಿಯಿಂದ)—ಸುರಗಣಕೆ ಮೀರಿರುವ
ದುಷ್ಟ ರಾಕ್ಷಸನಾರು ಹೇಳುವಿಯು ಮಲ್ಲಿಕಾ?
ಅಚ್ಚರಿಯ ಮಾತಿದುವು.
ಮಲ್ಲಿಕಾ (ಅಕ್ಕಸದಿಂದ)— ತಾರಕಾಸುರನೆಂಬ
ಹೆಸರು ದೇವತೆಗಳಿಗೆ ಭೂತವಾಗಿದೆ ತಾಯಿ!
ಇಂದ್ರನಮರಾವತಿಯು ರಕ್ಕಸನ ತುಳಿತಕ್ಕೆ
ತತ್ತರಿಸಿ ನಿಂತಿಹುದು. ದೇವಸಂಕುಲವೆಲ್ಲ
ಗಡಗಡನೆ ನಡುಗುವುದು. ಸುಕ್ಷೇಮವಾಗಿಲ್ಲ
ದೇವಲೋಕವು ತಾಯಿ! ತಾರಕನ ಕೊನೆಯುಸಿರು
ಕಟ್ಟನಿಲ್ಲುವವರೆಗೆ ಸುಖವಿಲ್ಲ ಮಾತಾಯಿ!
ಅದಕಾಗಿ ಕಾಮದೇವನ ಕರೆದು. . .
ರತಿದೇವಿ (ಹಠಾತ್ತನೆ)— ಹೇಳದಿರು ಮಲ್ಲಿಕಾ!
ಈ ಮಾತನಾಡದಿರು. ದೇವತೆಗಳೆಲ್ಲರೂ
ಬಳೆಯ ತೊಟ್ಟಿಹರೇನು? ರಂಭೆಯರ ಮೇಳದಲಿ
ಸರಸ ಕೇಳಿಯನಾಡಿ ವಜ್ರದಂಡವನೆತ್ತ
ಬಿಸುಟಿಹನು ದೇವೇಂದ್ರ? ಶಕ್ತಿಗುಂದಿತೆ ಅವನ
ಆ ವಜ್ರಬಲಮುಷ್ಟಿ! ಅಸುರಾರಿ ತಾನೆಂಬ
ಬಿಂಕದಲಿ ಮೈಮರೆತು ಹಾವ ಹಾಸುಗೆಯಲ್ಲಿ
ಪವಡಿಸಿಹನೇ ಹೇಳು ದಿವ್ಯ ಚಕ್ರಾಂಕಿತನು?
ವಿಷ್ಣು ಚಕ್ರದ ಹಲ್ಲು ಮೊಂಡಾಗಿ ಮುರಿದನೇ?
ಸೃಷ್ಟಿ-ಕರ್ತನ ಬುದ್ಧಿ ಮಂಕಾಗಿಬಿಟ್ಟಿತೇ?
ಅಮರರಾದವರೆಲ್ಲ ಕೊಳೆತ ಹೆಣವಾಗಿಹರೆ?
ಕ್ಷುದ್ರರಾಕ್ಷಸನೊಬ್ಬ ಸುರಗಣಕೆ ಮೀರಿಹನೆ?
ಏನು ಹೇಳುವೆಯಮ್ಮ!
ಮಲ್ಲಿಕಾ— ಸೃಷ್ಟಿಕರ್ತನ ವರವೆ
ಶಾಪವಾಗಿಹುದಿಂದು ಕೇಳಮ್ಮ ರತಿದೇವಿ!
ತಾರಕಾಸುರನೊಮ್ಮೆ ಘೋರತಪವನ್ನೆಸಗಿ
ಶಿವನ ವೀರ್ಯದ ಕೂಸು ತನ್ನ ಕೊಲ್ಲುವವರೆಗೆ
ಮರಣ ಬಾರದ ವರವ ಪಡೆದು ಕೊಂಡಿಹನಂತೆ!

ಅದಕಾಗಿ . . . ಅದಕಾಗಿ . . .

ರತಿದೇವಿ— ಅರ್ಥವಾಯಿತು ಗೆಳತಿ!
ಕಾಮದೇವನ ಯುದ್ಧದರ್ಥವಾಯಿತು ನನಗೆ.
ದೇವತೆಗಳೆಲ್ಲರೂ ವಂಚಕರು ಸ್ವಾರ್ಥಿಗಳು.
ಜಿತಕಾಮನೆಂದಾರೆ ಸೋಲುವನೆ ಕಾಮಂಗೆ?
ಶಿವನ ಕೋಪಾನಲಕೆ ಸಿಡಿದುಬಿದ್ದರೆ ದೊರೆಯು
ನನ್ನ ರಕ್ಷಣೆಗಾರು? ಶಿವನ ಭಂಗಿಪುದೇನು
ಸಹಜವಾಯಿತೆ ದೊರೆಗೆ? ಬೇಗೇಳು! ಮಲ್ಲಿಕಾ!
ಹೆಜ್ಜೆ ತಪ್ಪಿದ ದೊರೆಯನೆಚ್ಚರಿಸಿ ತಡೆಯುವದು
ಧರ್ಮವಾಗಿಹುದೆನಗೆ. ಬೇಗೇಳು! ಬೇಗೇಳು!
ಹೊರಡೇಳು ಮಲ್ಲಿಕಾ!

ಮಲ್ಲಿಕಾ— ದುಡುಕದಿರು ರತಿದೇವಿ!
ಕೆಡಕಾಡಿ ತಡೆಯದಿರು. ಶಿವಸಮಾಧಿಯ ಭಂಗ
ದೇವಕಾರ್ಯವು ದೇವಿ! ದೈವ ಸಂಕೇತವದು.
ವಿಧಿಯಿತ್ತ ನಿಯಮವದು.

ರತಿದೇವಿ— ಬುದ್ಧಿ ಮೂಢಳ ತೆರದಿ
ಗಳಪದಿರು ಮಲ್ಲಿಕಾ! ದುರ್ದೈವದಪದೆಶೆಯು
ಮೇಲೇರಿ ಬರುವಾಗ ಕಡೆಗಣಿಸಿ ನಿಲ್ಲುವುದು
ಸತಿಯ ಲಕ್ಷಣವಲ್ಲ. ಎನ್ನಂತರಂಗದೊಳ
ಗಾವುದೋ ಸುಟ್ಟದನಿ ಹೊಗೆಯನೆಬ್ಬಿಸುತೆನ್ನ
ಹೃದಯವನೆ ಕಲಕುತಿದೆ. ಬಲ್ಲೆಯಾ ಮಲ್ಲಿಕಾ!
ಜೀವವನೆ ಹಿಂಡುತಿದೆ.

ಮಲ್ಲಿಕಾ— ಕಾಮದೇವನಿಗಾವ
ಭಯವಿಹುದು ಹೇಳಮ್ಮ! ಕಾಮವಿರಹಿತಜಗವು
ಸಾಧ್ಯವೇ ತಾಯಮ್ಮ!

ರತಿದೇವಿ— ಯಾವುದೇನೇ ಇರಲಿ
ಶಿವನ ಕೆಣಕುವ ಮಾತು ನನಗೆ ಸಮ್ಮತವಿಲ್ಲ.

ಮಲ್ಲಿಕಾ—ವಿಧಿಯಿತ್ತ ಭಾಗ್ಯವಿದು. ದೇವದೇವತೆಗಳಿಗೆ
ಬೇಕಾದ ಹದನವಿದು. ದೇವತೆಯು ನೀನಾಗಿ

ಸಹನೆಯನು ತೋರುವುದು.

ರತಿದೇವಿ— ಸಹನೆ ಮೀರುವ ಮಾತ
ನಾಡದಿರು ಮಲ್ಲಿಕಾ! ವಂಚನೆಯ ಆಟವಿದು!
ಸುರಗಣದ ಮೋಸವಿದು.

ಮಲ್ಲಿಕಾ— ದೇವಕೃಪೆಯಿದೆ ತಾಯಿ!
ಕಾಮದೇವನಿಗವರ ಅಭಯವಿದೆ. ರಕ್ಷಣೆಯ
ಕವಚವಿದೆ. ತಾರಕಾಸುರವಧೆಗೆ ದಾರಿಯೊಂದೇ
ತಾಯಿ! ದೇವ ಕಲ್ಯಾಣಕ್ಕೆ ಮನಸಿಜನೆ ಕೈವಾರಿ.
ದಯದೋರಬೇಕಮ್ಮ.

ರತಿದೇವಿ— ದೇವಕಲ್ಯಾಣಕ್ಕೆ
ನನ್ನವನೆ ಆಹುತಿಯೆ?

ಮಲ್ಲಿಕಾ— ಆಹುತಿಯ ಮಾತೆಲ್ಲಿ ರತಿದೇವಿ?

ರತಿದೇವಿ—ಶಿವಸಮಾಧಿಯ ಭಂಗ ಸಾಮಾನ್ಯವೆಂಬೆಯಾ?

ಮಲ್ಲಿಕಾ—ಶಿವನಾದೊಡೇನಮ್ಮ! ರತಿದೇವಿ! ಏನವನು
ಕಾಮಶಕ್ತಿಯ ಮುಂದೆ ತಲೆವಾಗಲಾರನೆ?
ದೇವಶಕ್ತಿಗೆ ಶಿವನು ದಯೆಗೆಯ್ಯಲಾರನೆ?

[ತೆರೆಯಲ್ಲಿ ತುತ್ತೂರಿಯ ಸಪ್ಪಳ.
ಆ ಸಪ್ಪಳವನ್ನು ಕೇಳಿ . . .]

ಕೇಳಲ್ಲಿ ತುತ್ತೂರಿ! ಜೈತ್ರಯಾತ್ರೆಗೆ ಹೊರಟ
ದೊರೆಗೆ ಮಂಗಳ ಕೋರಿ ಮಾಂಗಲ್ಯದಾರತಿಯ
ಬೆಳಗು ನೀ ತಾಯಮ್ಮ! ದೇವತೆಯು ನೀನಮ್ಮ!
ಸುರಗಣವ ಕಾಯಮ್ಮ!

ರತಿದೇವಿ (ದಿಙ್ಮೂಢಳಾಗಿ)—ಸುರಗಣದ ಸಂಚಿದುವು!
ವಂಚನೆಯ ಪರಿಯಿದುವು. ನಾನಿದನು ಸಹಿಸಲಾ!
ಶಿವನ ಕಡೆಗಣ್ಣುರಿಗೆ ಬೆಂದುಹೋಗುವ ಮೊದಲು
ದೊರೆಯ ರಕ್ಷಣೆಗಾನು ಮುಂದುವರೆಯಲುಬೇಕು!
ಶಿವನೊಡನೆ ಯುದ್ಧವೇ? ಶಿವಶಿವಾ! ಘೋರವಿದು!
ಮಾತು ಮಿಂಚುವ ಮೊದಲು ಕಾರ್ಯಸಾಧಿಸಬೇಕು.
ಸೌಭಾಗ್ಯ ರಕ್ಷಣೆಗೆ ಸನ್ನದ್ಧಳಾಗುವುದು

ಸೌಭಾಗ್ಯವತಿಯಾದ ನನ್ನದಿದು ಹಿರಿಧರ್ಮ!
ಬೇಗ ನಡೆ ಮಲ್ಲಿಕಾ! ನನ್ನವನ ತಡೆಯುವೆನು!
ಶಿವನ ಕೆಣಕದಿರೆಂದು ಸಾರಿ ನಾ ಪೇಳುವೆನು.
ಹಟವ ಸಾಧಿಸಿಬಿಡುವೆ. ನಡೆಬೇಗ! ನಡೆಬೇಗ!

ಮಲ್ಲಿಕಾ (ಅಲ್ಪರಿಯುತ್ತ)—ದೇವದೇವತೆಯಾಗಿ
ರತಿದೇವಿ ನೀನಾಗಿ ದೇವಕಾರ್ಯವನೇಕೆ
ತಡೆಯುತಿಹೆ ತಾಯಮ್ಮ! ಕಾಮದೇವನ ತಡೆದು
ಕೆಡಕಾಡಿ ಕೆಡಬೇಡ. ಧರ್ಮವಂತಳು ನೀನು . . .

ರತಿದೇವಿ—ಆ ಧರ್ಮಕಾಗಿಯೇ ನಾನಿಂದು ಸಾಗುವೆನು
ನನ್ನ ಧರ್ಮವನರಿತು ಮುನ್ನುಗ್ಗಿ ಬಾಳುವೆನು.
ನನ್ನದಿದೆ ಹಿರಿಧರ್ಮ! ಪತಿಯ ಕಾಯುವ ಮರ್ಮ!
ನಡೆ ಮುಂದೆ! ಮುಂದೆ ನಡೆ ಮಲ್ಲಿಕಾ!

ಮಲ್ಲಿಕಾ— ದೇವಧರ್ಮವನಂಬಿ
ಮುನ್ನುಗ್ಗು ಮಾತಾಯಿ! ವಿಶ್ವ ಸಂಕೇತದಲಿ
ಮನಸಿರಲಿ ನನ್ನಮ್ಮ!

ರತಿದೇವಿ (ದೃಢತೆಯಿಂದ)— ವಿಶ್ವಧರ್ಮದೊಳೆನ್ನ
ಕರ್ಮವೇ ಕತೆಯಾಗಿ ಬೆಳಗೀತು ನಡೆ ಗೆಳತಿ!
ದೇವ ಕಣ್ಣಾದೀತು!

ಮಲ್ಲಿಕಾ— ಕಾಮನನು ತಡೆಯದಿರು!

ರತಿದೇವಿ—ಮತ್ತದನೆ ಹೇಳದಿರು (ಮುನ್ನಡೆಯುವಳು)

ಮಲ್ಲಿಕಾ— ರತಿದೇವಿ! ರತಿದೇವಿ!

[ಎನ್ನುತ್ತ ಹಿಂಬಾಲಿಸುವಳು]

ದೃಶ್ಯ ೨

[ಶಿವನ ತಪೋಭಂಗಕ್ಕಾಗಿ ಸೈನ್ಯಸಿದ್ಧತೆಯನ್ನು ಮಾಡಿದ ಕಾಮದೇವನು ಪಂಚಬಾಣಗಳನ್ನು ಧರಿಸಿ ನಿಂತಿದ್ದಾನೆ. ಮಂತ್ರಿಯಾದ ಚಂದ್ರದೇವನೂ ದಳವಾಯಿಯಾದ ವಾಸಂತನೂ ಎದುರಿಗೆ ಕೈಕಟ್ಟಿಕೊಂಡು ನಿಂತಿದ್ದಾರೆ. ಚೈತ್ರರಥನೂ, ಮಂದಮಾರುತನೂ ಆಜ್ಞೆಗಳಿಗಾಗಿ ಕಾದುನಿಂತಂತೆ ಅಲ್ಲಿಯೇ ಬಾಗಿ ನಿಂತಿದ್ದಾರೆ. ಗಿಳಿಗಳ ಕುದುರೆಗಳಿಂದ ಹೂಡಿ ನಿಂತ ಹೂದೇರು ಅಲ್ಲಿಯೇ ಸಿದ್ಧವಾಗಿದೆ. ಕಾಮದೇವನೊಮ್ಮೆ ಎಲ್ಲರನ್ನೂ ಈಕ್ಷಿಸುತ್ತ!]

ಕಾಮದೇವ—ಚತುರಂಗ ಬಲವೆಲ್ಲ ಸಿದ್ಧವಾಯಿತೆ ಚಂದ್ರ?
ಮಂದಮಾರುತನೆಲ್ಲಿ? ಚೈತ್ರರಥ ಬಂದಿಹನೆ?
ಕಂಡವರ ಹೃದಯದಲಿ ಕಾಮಕೆಂಡವ ತುಂಬಿ
ಮೋಹ ಮುಗ್ಧರ ಮಾಳ್ಪ ರೂಪರಾಣಿಯರೆಲ್ಲ
ಸಿದ್ಧವಾಗಿಹರೇನು? ನೃತ್ಯವಾಸಂತಿಯರ,
ಸಂಗೀತ ಸುದತಿಯರ ಕರೆದು ತಂದಿಹನೇನು,
ದಳವಾಯಿ ವಾಸಂತ?

ಚಂದ್ರದೇವ (ವಿನಯದಿಂದ)—ದಯದೋರಬೇಕೊಡೆಯ!
ಬಳಗವೆಲ್ಲವು ಬಂದು ಕಾದು ನಿಂತಿದೆ ದೊರೆಯೆ!
ಜೋಗಿ ಮನಗಳ ಕೆಣಕಿ ತಾಪಸರ ಕಾಮವನು
ಕೆರಳಿ ನಿಲ್ಲಿಸುವಂತೆ ಸನ್ನಾಹವೆಲ್ಲವೂ
ಸಿದ್ಧವಿಹುದೆನ್ನೊಡೆಯ! ಕಾಮ ಸೈನ್ಯದ ಮುಂದೆ
ತಪದ ಬಿಂಕವ ತೋರಿ ಬಡಜೋಗಿಯಾವನೂ
ಜಗದಿ ಬದುಕಿಹನಿಲ್ಲ.

ಕಾಮದೇವ— ಸಿದ್ಧತೆಯ ಕಂಡೆನಗೆ
ತೃಪ್ತಿಯಾಯಿತು ಮಂತ್ರಿ. ಆದರಿಂದಿನ ಜೋಗಿ
ಬಡಜೋಗಿಯಾಗಿಲ್ಲ. ಯೋಗಿಗಳ ಸಾಮ್ರಾಟ
ಚಕ್ರವರ್ತಿಯನಿಂದು ಕೆಣಕಬೇಕಾಗಿಹುದ
ಬಲ್ಲೆಯಾ ಮಂತ್ರಿವರ?

ಚಂದ್ರದೇವ— ಶಿವನಾದರೇನಂತೆ?
ಪಾಸಟಿಯೆ ಕಾಮನಿಗೆ? ಕಾಮದುಂಬಿದ ಮೇಲೆ
ಕಾಮವಶನೇ ಅವನು. ಕಾಮಬಾಣಕ್ಕೆದುರು
ಶಿವನಾಗಬಲ್ಲನೆ? ಪಂಚ ಬಾಣಕೆ ಸೋತು
ತಲೆಬಾಗಲಾರನೆ? ದೇವಿ ಪಾರ್ವತಿಯೊಡನೆ
ರತಿದುಂಬಲಾರನೆ? ನೀನಾಜ್ಞೆಯಿತ್ತೊಮ್ಮೆ
ಸಾಹಸವ ನೋಡುವುದು. ಶಿವನ ಭವಣೆಯ ಕತೆಯ
ಪ್ರತ್ಯಕ್ಷ ಕಾಣುವುದು.

ಕಾಮದೇವ (ಸಂತೋಷದಿಂದ)—ಮೆಚ್ಚಿದೆನು ಮಂತ್ರಿವರ!
ನಿನ್ನ ಸಾಹಸ ನುಡಿಗೆ ಮನಮೆಚ್ಚಿ ನಿಂತಿಹೆನು.

ಜಗದೊಳದ್ಭುತವಿಂದು. ಶಿವ-ಕಾಮಶಕ್ತಿಗಳ
ಹೋರಾಟ ಘನವಿಂದು. ನಿನಗೆನ್ನ ಆಜ್ಞೆಯಿದೆ.
ಸರ್ವಸೈನ್ಯಕೆ ನನ್ನ ಅಪ್ಪಣೆಯನೀಯುವುದು.
ಶಿವ ಸಮಾಧಿಗೆ ಕಿಚ್ಚು ಹಚ್ಚೆಂದು ಹೇಳುವುದು.
ನೋಡುವಾತುರವೆನಗೆ.

ಚಂದ್ರದೇವ—ಕಾಮನಿಗೆ ಜಯವಿರಲಿ!

ಕಾಮದೇವ (ಹುರುಪಿನಿಂದ)—ಹೇಮಕೂಟಾಚಲದಿ
ಚೈತ್ರಮಾಸವು ತೋರಿ, ಭೃಂಗಗಳು ಝೇಂಕರಿಸಿ
ನಾದದುಂಬಲಿ ಚಂದ್ರ! ಅರಳದಿಹ ಹೂ-ಬಳ್ಳಿ
ಅರಳಿ ನಿಲ್ಲಲಿ ಇಂದು. ಹೇಮಗಿರಿಯಾಶ್ರಮದ
ಕಲ್ಲುಬಂಡೆಯು ಕೂಡ ಮೋಹದುಂಬುವ ಹಾಗೆ
ಕೋಗಿಲೆಯ ಕೂಜನವು ಚೂತವನ ಚೈತ್ರದಲಿ
ತುಂಬಿ ನಿಲ್ಲಲಿ ಗೆಳೆಯ! ಬಂಡೆ ಬಂಡೆಯನಪ್ಪಿ
ಮರವು ಮರವನ್ನಪ್ಪಿ ಕಾಮಚೇತನದಿಂದ
ಕುಣಿದಾಡಲೀದಿನವು. ಶಿವನ ಸಮ್ಮೋಹನಕೆ
ಜಡಸೃಷ್ಟಿಯೆಲ್ಲವೂ ತಾಳಹಾಕಲಿ ನಲಿದು.
ಋತುನಿಯಮ ಬದಲಾಗಿ ಕಾಮದೇವನ ಕೀರ್ತಿ
ಮೂಡಿ ನಿಲ್ಲಲಿ ಅಲ್ಲಿ; ಆ ಹೇಮಕೂಟದಲಿ.
ಹೊರಡೇಳು ನಡೆ ಚಂದ್ರ!

ಚಂದ್ರದೇವ— ಆಜ್ಞೆಯಂತೆಸಗುವೆನು.

[(ತೆರೆಯಲ್ಲಿ) "ಕಾಮನಿಗೆ ಜಯವಿರಲಿ!" ಎಂಬ ಸಾಮೂಹಿಕ ಘೋಷಣೆ ಕೇಳಬರುವುದು. ಈ ಘೋಷಣೆಯ ದನಿ ಮಂದವಾಗುತ್ತಿರುವಾಗ "ಮದನಮೋಹನರಾಜ! ಮದನಮೋಹನರಾಜ!" ಎಂದು ಕೂಗುತ್ತ ರತಿದೇವಿ ಪ್ರವೇಶಿಸುವಳು.]

ರತಿದೇವಿ (ಅವಸರವಾಗಿ)—ಏನಿದುವು ಮನದನ್ನ!
ಘೋಷಣೆಯ ಕತೆಯೇನು? ಚತುರಂಗಬಲವೇನು?
ಸನ್ನಾಹವೆಲ್ಲಿಗಿದು? ಸೈನ್ಯಪಡೆಯಾವೆಡೆಗೆ?
ಸಿದ್ಧವಾಗಿಹ ತೇರು ಪಯಣವನೆ ಸೂಚಿಪುದು.
ಪಯಣವೆಲ್ಲಿಗೆ ದೊರೆಯೆ?

ಕಾಮದೇವ (ಕಾತರನಾಗಿ)—ಬೆದರಿಬೆಂಡಾದಂತೆ
ಭಯುವಾಂತು ನಿಂತಂತೆ, ದನಿಯೊಳಾತುರ ತುಂಬಿ
ಕೇಳುತಿಹ ರತಿದೇವಿಗಾವ ಭಯುವೋ ಕಾಣೆ.
ದನಿಯು ನಡುಗುವುದಿರಲಿ; ದೇಹವಲ್ಲರಿ ಕೂಡ
ಗಡಗಡನೆ ನಡುಗುತಿದೆ ಆವ ಭಯವಿದೆ ನಲ್ಲೆ ?
ರತಿದೇವಿ— ಭಯದ ಮಾತಂತಿರಲಿ
ಆವೆಡೆಗೆ ಪಯಣವಿದು ಹೇಳು ದೊರೆ ?
ಕಾಮದೇವ— ಹೇಮಕೂಟಾಚಲಕೆ.
ರತಿದೇವಿ— ಆವ ಯೋಗಿಗೆ ಬವಣೆ
ಹೇಳುವಿಯ ಎನ್ನ ದೊರೆ ?
ಕಾಮದೇವ— ಯೋಗಿಯೋಗೀಶ್ವರನು
ಪರಮ ಪರಶಿವನಲ್ಲಿ ಯೋಗತನ್ಮಯನಾಗಿ
ಧ್ಯಾನಸ್ಥನಾಗಿಹನು.
ರತಿದೇವಿ— ಶಿವನ ಆ ಧ್ಯಾನವನು,
ಭಂಗಿಸುವ ಸಾಹಸವೆ ನಿನ್ನ ಪಯಣದ ಗುರಿಯು ?
ಕಾಮದೇವ— ನಿಜವ ನುಡಿದಿಹೆ ದೇವಿ !
ದೇವಕಲ್ಯಾಣಕ್ಕೆ ಶಿವತಪಸ್ಸಿನ ಭಂಗ
ದಾರಿಯಾಗಿದೆ ನೋಡು. ಸಾಧಿಸುವುದೆನ್ನ ಗುರಿ.
ರತಿದೇವಿ—ದೇವತೆಗಳೆಲ್ಲರೂ
ಕೈಮುಚ್ಚಿ ಕುಳಿತೇಕೆ ನಿನ್ನನೇ ಕಳುಹಿದರು
ತಿಳಿಯಬಲ್ಲೆಯ ದೊರೆಯೆ ?
ಕಾಮದೇವ— ಕಾಮಶಕ್ತಿಯು ಕೂಡ
ದೇವಶಕ್ತಿಯೆ ದೇವಿ ! ಸೋದರರ ಬವಣೆಯಿದು
ನನ್ನದೇ ಆಗಿರಲು, ನನ್ನ ಶಕ್ತಿಯೊಳವರ
ಭರವಸೆಯು ತುಂಬಿರಲು, ದೇವಕಾರ್ಯವನೆಂತು
ಕಡೆಗಣಿಸಿ ನಿಂತೇನು ? ನಿನ್ನ ಮನದಳುಕೇನು
ತಿಳಿಯದಾಗಿದೆ ನಲ್ಲೆ ?
ರತಿದೇವಿ— ಶಿವತಪಸ್ಸಿನ ಭಂಗ
ಹುಡುಗಾಟವೇನೊಡೆಯ ?

ಕಾಮದೇವ— ಅಲ್ಲವೆಂದೇ ನನ್ನ
ನಿಯಮಿಸಿರುವರು ದೇವಿ! ಶಕ್ತಿಸಾಹಸದಲ್ಲಿ
ಮೀರಿ ನಿಂತವನೆಂದು, ಶಿವನ ಜಯಿಸುವ ಶಕ್ತಿ
ನನ್ನದೇ ಇಹುದೆಂದು, ನನಗೆ ಗೌರವವಿತ್ತು
ಪೂಮಾಲೆ ತೊಡಿಸಿಹರು. ಅಮರರಾದೇಶದಲಿ
ಹೆಮ್ಮೆಯೇ ನನಗಿಹುದು. ಕಾಮಸತಿಯಾದವಳು
ಹೇಡಿ ಹೆಂಗುಸೆ ದೇವಿ? ಭಯವ ತೊರೆಯುತಲೆನಗೆ
ಆರತಿಯ ಬೆಳಗೇಳು. ಜೈತ್ರಯಾತ್ರೆಗೆ ನಿನ್ನ
ಬೆಂಬಲವ ನೀಡೇಳು. ರತಿಯ ಕೈಹಿಡಿದೆನಗೆ
ಭಯವಾವುದಿದೆ ಹೇಳು?

ರತಿದೇವಿ— ಮೂಢತನವಿದು ದೊರೆಯೆ!
ಅಮರರಾದೇಶದಲಿ ಸ್ವಾರ್ಥವೇ ತುಂಬಿಹುದು.
ಹಿರಿಯರಾದವರೆಲ್ಲ ಶಿವತಪಸ್ಸಿಗೆ ಹೆದರಿ
ನಿನ್ನನೇ ಒಡ್ಡಿಹರು. ಶಿವನ ಕಿಡಿಗಣ್ಣುರಿಯೊ
ಳೀಡು ಮಾಡುತಲೆನ್ನ ಸೌಭಾಗ್ಯದರಸನನೆ
ಬಲಿತೆತ್ತು ನಿಂತಿಹರು. ನಿನಗೆನ್ನ ಕೊರಳಾಣೆ!
ಹೋಗದಿರು. ನೀನೊಡೆಯ ಶಿವನ ಕೆಣಕುವ ಮಾತ
ಕನಸಿನಲ್ಲಿಯು ಕೂಡ ನೆನೆಯದಿರು ನೀ ದೇವ!
ಶಿವತಪಸ್ಸಿನ ಭಂಗ ಹುಡುಗಾಟವೇನಲ್ಲ.
ಸೆರಗೊಡ್ಡಿ ಬೇಡುವೆನು. ಪಂಚಬಾಣಗಳಿಳುಹಿ
ಮಲ್ಲಿಕಾಮಂಟಪಕೆ ತಿರುಗುವುದು ನನ್ನೊಡೆಯ!
ನಿನ್ನವಳ ಆಶೆಯಿದು.

ಕಾಮದೇವ— ನಿನ್ನಾಶೆಗೇನೆಂಬೆ
ರತಿಬಾಲೆ! ಸುಮ್ಮನೆಯೆ ಹೆದರುತಿಹೆ. ಹಿರಿಯ ಸೋ
ದರರೆಲ್ಲ ಹೌಹಾರಿ ನಿಂತಿರಲು ಮಲ್ಲಿಕಾ
ಮಂಟಪಕೆ ಬರುವ ಸಮಯವೆ ಹೇಳು? ವೀರಕಾ
ಮನ ಮಡದಿ ವೀರಬಾಲೆಯು ನೀನು, ಈ ತೆರನ
ಮಾತುಗಳನಾಡುವರೆ ರತಿದೇವಿ?

ರತಿದೇವಿ— (ಕಳವಳದಿಂದ) ಹದಿನಾಲ್ಕು ಲೋಕದೊಳ

ಗಾವ ಶಕ್ತಿಯು ಶಿವನ ಜಯಿಸಬಲ್ಲುದು ದೊರೆಯೆ?
ಅಚಲಶಕ್ತಿಯ ಮುಂದೆ ಚಲವ ತೋರುವುದಾವ
ಪುರುಷಾರ್ಥವೆನ್ನೊಡೆಯ? ಜಿತಕಾಮನೆಂದಾರಿ
ಸೋಲಬಹುದೇ ರಾಜ?

ಕಾಮದೇವ—(ದೃಢವಾಗಿ) ಜಗದಿ ಕಾಮನ ಶಕ್ತಿ
ಅಮರವಾಗಿದೆ ದೇವಿ! ಕಾಮದೇವನ ಕೆಣಕಿ
ಬದುಕಿ ನಿಂತವರಿಲ್ಲ. ಶಿವನ ಸೃಷ್ಟಿಯು ಕೂಡ
ಕಾಮದೃಷ್ಟಿಯ ಬೆಳಸು. ದೇವಸಂಕೇತವಿದು
ಧರ್ಮಕಾರ್ಯವು ನೋಡು.

ರತಿದೇವಿ— ಧರ್ಮಸಂಕಟವೆನಗೆ!
ಶಿವನ ಕೋಪಾನಲಕೆ ಪತಿಯುರಿದು ಬೀಳುವುದ
ಕಣ್ಮುಚ್ಚಿ ಕುಳಿತಾನು ನೋಡಬಲ್ಲೆನೆ ದೊರೆಯೆ?
ಶಿವನ ಶಕ್ತಿಯನರಿತು ನಿಂತವಳು ನಾನಲ್ತೆ!

ಕಾಮದೇವ—(ಅಟ್ಟಹಾಸದಿಂದ) ಶಿವನ ಕಿಡಿಗಣ್ಣುರಿಗೆ
ಬೆಂದುಹೋಗುವೆನೆಂಬ ಹೆದರಿಕೆಯ ಭ್ರಾಂತಿಯನು
ಬಿಟ್ಟುಬಿಡು ರತಿದೇವಿ! ಕಾಮಶಕ್ತಿಯ ಕತೆಯ
ನರಿತವಳು ನೀನಲ್ತೆ?

ರತಿದೇವಿ— ಶಿವನ ಜಯಿಸುವ ಮಾತು
ಕಟ್ಟುಕತೆಯೇ ಸ್ವಾಮಿ! ಸತಿವಿಲಾಪವ ನೀನು
ಕಿವಿಮುಚ್ಚಿ ಕೇಳದಿರು.

ಕಾಮದೇವ— ಅರ್ಥವಿಲ್ಲದ ದುಃಖ
ವೇತಕ್ಕೆ ರತಿಬಾಲೆ?

ರತಿದೇವಿ— ಇರುಳರಿತ ಕೂಪವನು
ಹಗಲಲ್ಲಿ ಬೀಳದಿರು. ನೀನೆನ್ನ ಪ್ರೇಮವನು
ಕಡೆಗಣಿಸಿ ನಿಲ್ಲದಿರು.

ಕಾಮದೇವ— ದೇವಪ್ರೇಮವನೆಂತು
ಕಡೆಗಣಿಸಿ ನಿಂತೇನು ಸುಮ್ಮನಿರು ರತಿದೇವಿ!
ಜೈತ್ರಯಾತ್ರೆಗೆ ಹೊರಟ ಹೆಜ್ಜೆಯನು ಹಿಂದೆಂತು

ಸರಿಸಿ ನಾ ಕೆಟ್ಟೇನು? ಹೇಡಿ ಕಾಮನ ಕೈಯ
ಹಿಡಿದವಳು ರತಿಯೆಂಬ ಮಾತು ಗೌರವವೇನು?
ಶಿವನ ತಪವನು ಮುರಿದು ನಾನುರಿದು ಹೋದರೂ,
ದೇವಸಂತತಿಗೆನ್ನ ಬಲಿದಾನವಾದರೂ,
ಕಾಮದೇವನ ಕೀರ್ತಿಗಾವ ಕೇಡೂ ಇಲ್ಲ.
ಮುಂದಿಟ್ಟ ಹೆಜ್ಜೆಯಿದು ಮುಂದೆಯೇ ಸಾಗುವುದು.
ತತ್ತರಿಸಿ ಕೆಡಬೇಡ. ನೀನಡ್ಡ ಬರಬೇಡ.
ನೀನೆನ್ನ ಮುದ್ದುಸತಿ. ವೀರಕಾಮನ ಮಡದಿ
ನಿನಗಾವ ಭಯವಿಲ್ಲ.

ರತಿದೇವಿ—(ಉಪಾಯಹೀನವಾಗಿ) ಮಾತು ನಿರ್ಧರವೇನು?

ಕಾಮದೇವ— ಧೃಢಪ್ರತಿಜ್ಞನು ಕಾಮ!
ಪೂರ್ಣ ಪೂಣಿಕೆಯಲ್ಲಿ ಕಾಮನಚಲನು ದೇವಿ
ಕಾಮನಿಗೆ ಸೋಲಿಲ್ಲ.

ರತಿದೇವಿ— ಕಾಮನಿಗೆ ಜಯವಿರಲಿ!
ಆದರೊಂದೇ ಭಿಕ್ಷೆ. ನೀನೆನ್ನ ಸಂಗಾತ
ಹೇಮಕೂಟಾಚಲಕೆ ಕೊಂಡೊಯ್ಯಲಾರೆಯಾ?

ಕಾಮದೇವ—ನನಗಾವ ಭಯವೆಂದು ಬೆದರುತಿಹೆ ನೀ ಬಾಲೆ?

ರತಿದೇವಿ— ಭಯದ ಮಾತೇನಲ್ಲ;
ಪತಿಯ ಹಿಂಬಾಲಿಪುದು ಸತಿಶಿರೋಮಣಿಗೇನು
ಲೋಕಬಾಹಿರವಲ್ಲ ನೀನೊಪ್ಪಬೇಕೊಡೆಯ!

ಕಾಮದೇವ—ನನ್ನ ಬೆಂಗಾವಲಿಗೆ ಬರುವುದಾದರೆ ಬೇಡ.

ರತಿದೇವಿ— ಹೇಮಕೂಟಾಚಲದ
ಸೊಬಗನೀಕ್ಷಿಸಲಾನು ಬರುವೆನೆಂದರು ಕೂಡ
ಬೇಡವೆನ್ನುವೆಯೇನು? ಶಿವನ ಮಡದಿಯ ಕಂಡು
ಧನ್ಯತಮಳಾಗುವೆನು. ದಯದೋರು ನನ್ನೊಡೆಯ!
ರತಿಯ ತ್ಯಾಗವನವಳು ನೋಡಬೇಡವೆ ದೊರೆಯೆ?

ಕಾಮದೇವ—ನೀನೊಪ್ಪಿಬರುತಿರಲು
ಬೇಡವೆನ್ನೆನು ದೇವಿ! ಕಾಮಸಿರಿ ತುಂಬುತಿಹ

ಹೇಮಕೂಟಾಚಲವು ಕಾಮಕೇಳೀವನವು.
ನೀನದನೆ ನೋಡುತಿರು.
ಯಾರಲ್ಲಿ ? ಮಂದಮಾರುತನೆಲ್ಲಿ ?
ಝೇಂಕಾರದುಂಬಿರುವ ಮತ್ತಭ್ರಮರಗಳೆಲ್ಲಿ ?
ಈಗಲೇ ಹೊರಡುವುದು. ಹೂದೇರು ಸಿದ್ಧವಿದೆ
ಮೇಲೇರು ಬಾ ಗೆಳತಿ ! ಯೋಗಿ ಮನಗಳನೆಲ್ಲ
ಭೇದಿಸುವ ರೀತಿಯಲಿ ಕಾಮಕೇತನ ಬಾನ
ಮೀಟುತಿದೆ ನೋಡಲ್ಲಿ !

[ತೆರೆಯಲ್ಲಿ : ಕಿಂಕಿಣಿಯನಾದ, ತುತ್ತೂರಿಯ ಸಪ್ಪಳ. ಅದರೊಡನೆ '' ಜಯವು ಕಾಮನಿಗಿರಲಿ!'' '' ಕಾಮದೇವನ ಮಡದಿ ರತಿಯು ಜಯವಾಗಿರಲಿ ! '' '' ಜಯವು ಜಯವೋ ! ಜಯವು ಜಯವೋ ! ಜೈ ಜೈ ಜೈ '' . . . ಎಂಬ ಘೋಷಣೆ ಬಾಂದಳವನ್ನು ತುಂಬುವುದು.]

ದೃಶ್ಯ ೩

[ಹೇಮಕೂಟಾಚಲದ ನಿತಾಂತ ನಿಬಿಡವಾದ ಶಿವತಪೋಭೂಮಿ ಕಂಗೊಳಿಸುತ್ತಿದೆ. ಆ ತಪೋಭೂಮಿಯ ಮೌನಗಂಭೀರ ವಾತಾವರಣವನ್ನು ''ಓಂ''ಕಾರ ಧ್ವನಿಯು ಪವಿತ್ರಗೊಳಿಸ ತೊಡಗಿದೆ. '' ಓಂ ! ಓಂ '' ಎಂಬ ಪ್ರತಿಧ್ವನಿ ಕಾಮದೇವನನ್ನು ಕಂಗೆಡಿಸಹತ್ತಿದೆ. ಅವನು ವಿಹ್ವಲನಾಗಿ—]

ಕಾಮದೇವ—'' ಓಂ ''ಕಾರ ದನಿಗೆನ್ನ '' ಟಂ ''ಕಾರ ದನಿಯುಡಗಿ
ಸಮ್ಮೋಹನಾಸ್ತ್ರಗಳ ಬಲ ಕುಸಿದು ಬೀಳುತಿಹು
ದಚ್ಚರಿಯೊಳಚ್ಚರಿಯು ? ಹೇಮಕೂಟಾಚಲದೊ
ಳೆತ್ತ ನೋಡಿದರತ್ತ ಶಿವತಪಸ್ಸಿನ ಮಹಿಮೆ
ಘನವಾಗಿ ನಿಂತೆನ್ನ ಕಣ್ಣನ್ನೆ ಸೀಳುತಿದೆ.
ಮಾಯೆಯಾವುದೊ ಕಾಣೆ. ಶಿವನ ಸಾನ್ನಿಧ್ಯದೊಳು
ಶಿವನೆ ಕಣ್ಮರೆಯೆನಗೆ! ಶಿವನೆಲ್ಲಿ ? ಶಿವನೆಲ್ಲಿ ?
ಶಿವನ ಕಾಂಬುವುದೆಲ್ಲಿ ? ಏನಿದಚ್ಚರಿಯಕಟ !
ಪರ್ವತಪ್ರಾಂತದೊಳು ಬಂದ ಕಾಲ್ಬಲವೆಲ್ಲ
ಮುಂದೇಕೆ ಬಾರದಿದೆ ?

ವಸಂತ (ನುಗ್ಗಿಬಂದು)— ಮನ್ನಿಸುವುದೆನ್ನೊಡೆಯ !

ಕಾಮಸೇನೆಯೊಳಿಂದು ಗೊಂದಲವೆ ಗೊಂದಲವು.
ನರಿಗಳೂಳಿಡುತಿಹುದ ಕೇಳಲಾರದ ದಂಡು
ಮುಗ್ಗರಿಸಿ ಬೀಳುತಿದೆ. ಆನೆ ಹೇಕರಿಸುತಿದೆ.
ಕುದುರೆ ಘೀಳಿಡುತಿಹವು. ರಂಭೆಯರ ಮೇಳದಲಿ
ಮೇಳಸ್ವರವೇ ಅಡಗಿ ತಾಳತಪ್ಪಿದ ಹೆಜ್ಜೆ
ಭೀಕರದಿ ಬೀಳುತಿವೆ. ಗಾನ ರಾಣಿಯರೆಲ್ಲ
ಮತ್ತರಾದವರಂತೆ ಶಿವನ ಗುಣಗಾನವನೆ
ಹಾಡಿ ಕೆಡುತಿಹರಿಂದು.

ಕಾಮದೇವ (ಕರ್ಕಶವಾಗಿ)—ಹೇಳದಿರು ದಳವಾಯಿ !
ನುಡಿದೆನ್ನ ನೆಮ್ಮದಿಯ ಕೆಣಕದಿರು ರಣಹೇಡಿ !
ಕಾಮಗಪಜಯವಿಲ್ಲ.

ಚಂದ್ರ (ಭಯದಿಂದ)— ಅಪಶಕುನದುರಿಗೆನ್ನ
ಜೀವ ತಳಮಳಿಸುತಿದೆ. ಭಯವಾಂತು ಕಾಡುತಿದೆ.
ಸೋಲನಪ್ಪುವ ಮೊದಲು ಮರಳುವುದು ಮೇಲರಸ !
ಅನುಭವದ ಮಾತಿದುವು ದುಡುಕುವದು ಸರಿಯಲ್ಲ ;
ತಾಳ್ಮೆಯಲಿ ಗೆಲುವಿಹುದು.

ಕಾಮದೇವ (ಅಬ್ಬರದಿಂದ)— ಮಂಕುಹಿಡಿಯಿತೆ ನಿಮಗೆ
ಚಂದ್ರವಾಸಂತರಿರ ! ವೀರವರರೆಂದಾರೆ
ಶಕುನದುರಿಗಳಕುವರೆ? ಹೆಣ್ಣೆದೆಯ ತೋರುವರೆ ?
ಹೊತ್ತುಗಳೆಯುತಲೆನ್ನ ತಾಳ್ಮೆಯನು ಕೆಣಕದಿರಿ !
ಧೈರ್ಯ ಸಾಹಸದಿಂದ ಮುನ್ನುಗ್ಗಿರೀಗಲೇ !
ನಿಮಗೆನ್ನ ರಕ್ಷಣೆಯು.

ಚಂದ್ರ (ಅಂಜಂಜುತ್ತ)— ಕಾಪಾಡಬೇಕೊಡೆಯ !
"ಓಂ"ಕಾರ ದನಿಗೆಮ್ಮ ಸಾಹಸವೆ ಕುಸಿಯುತಿದೆ.
ಮುನ್ನಡೆವ ಧೈರ್ಯವೇ ಹಿಂಬದಿಗೆ ಸರಿಯುತಿದೆ.
ಶಿವಮಂತ್ರ ಜಪಕೆಮ್ಮ ಸೈನ್ಯಸಾಗರವೆಲ್ಲ
ಮಂತ್ರಮುಗ್ಧವು ದೊರೆಯೆ ?

ಕಾಮದೇವ (ಕಾಲಪ್ಪಳಿಸುತ್ತ)— ದಗ್ಧವಾಯಿತೆ ನಿಮ್ಮ
ಶೌರ್ಯಸಾಹಸವೆಲ್ಲ. ಮಂತ್ರಕ್ಕೆ ತಿರುಮಂತ್ರ

ಕಾಮದೇವನ ತಂತ್ರ ನಿಮಗಿಲ್ಲವೆಂಬಿರಾ ?
ಓಂಕಾರ ದನಿಯಡಗಿ "ಝೇ"ಂಕಾರ ರವ ತುಂಬಿ
ದುಮುದುಮಿಸುವಂತೀಗ ಕೂಡಲೇ ಸಾಗಿರೆಲೆ !
ನಿಮಗಿಹುದು ನನ್ನಾಜ್ಞೆ. ಸಕಲಸೇನಾಬಲಕೆ
ಕೂಡಲೇ ನಡೆವಾಜ್ಞೆ.

ಚಂದ್ರವಾಸಂತ— ಎನ್ನೊಡೆಯ ! ಎನ್ನೊಡೆಯ !

ಕಾಮದೇವ—ನುಡಿದು ನಿಂತರೆ ನಿಮ್ಮ ನಾಲಿಗೆಯ ಸಿಗಿದೇನು !
ಚಾವಟಿಯ ಸೆಳತದಿಂ ನೆತ್ತರನು ಹರಿಸೇನು.
ಸುಮ್ಮನೇ ಸಾಗಿರೆಲೆ !

ಇಬ್ಬರೂ— ಕಾಮನಿಗೆ ಜಯವಿರಲಿ !

[ಎನ್ನುತ್ತ ಹೋಗುವನಿತರಲ್ಲಿ ಎಲ್ಲ ಕಡೆಗೂ ಮತ್ತೆ "ಓಂ"ಕಾರಧ್ವನಿ. ಆ ದನಿಯನ್ನು ಅಡಗಿಸುವಂತೆ ಭ್ರಮರಗಳ "ಝೇಂ"ಕಾರ, ಕೋಕಿಲೆಯ ಕುಕಿಲರವ, ನರ್ತನದ ಕಿಂಕಿಣಿನಾದ ಕೇಳಿಬರುವುದು. ಈ ಸಾಮೂಹಿಕ ದನಿಯು ಸಾವಕಾಶವಾಗಿ ಮಂದವಾಗತ್ತಲೇ ಕಾಮದೇವನು ತನ್ನ ಪಂಚಬಾಣಗಳಿಗೆ ಕೈಹಾಕುತ್ತ, ಉದ್ವಿಗ್ನನಾದವನಂತೆ]

ಕಾಮದೇವ— ವಿಕಟಾಟ್ಟಹಾಸದೊಳು
ಶಿವಮಂತ್ರಜಪವೆನ್ನ ಸಾಹಸವ ಕೆಣಕುತಿದೆ.
ಶಿವನ ಕಾಣದಲಾನು ಕಂಗೆಟ್ಟುನಿಂತಿಹೆನು.!
ಮುಂದಾವಗತಿಯೆನಗೆ ! ಶಿವನೆಲ್ಲಿ ? ಶಿವನೆಲ್ಲಿ ?
ಹೇಮಕೂಟಾಚಲದೊಳೆಲ್ಲಿಯಡಗಿಹನವನು ?
ಆರು ತೋರುವರೆನಗೆ ? ಶಿವನ ಬಲ್ಲವರೆಲ್ಲಿ ?
ಸುರಗಣದ ನಂಬುಗೆಯನಾನೆಂತು ಪಡೆದೇನು ?
ಸಾಹಸದಿ ನಿಂತೇನು ? ಹಿಂದೆಂದು ಕಾಣದಿಹ
ದಿಗಿಲಿಂದು ತೋರುತಿದೆ. ಮನದೊಳೆದ್ದಿಹ ಭೀತಿ
ಮನವನೇ ಕೊರೆಯುತಿದೆ. ನಾನಿದನು ಕಿತ್ತೆಸೆದು
ಮುನ್ನುಗ್ಗಿ ನಡೆಯುವೆನು. ಕಾಮಗೆಲ್ಲಿದೆ ಸೋಲು ?

[ತೆರೆಯಲ್ಲಿ—ಓಂ ನಮಶ್ಶಿವಾಯ ! ಓಂ ನಮಶ್ಶಿವಾಯ ! ಈ ದನಿಯನ್ನು ಕೇಳಿ ಕಕ್ಕಾಬಿಕ್ಕಿಯಾದವನಂತೆ]

ಶಿವಭಜನೆ ಯಾರದಿದು ?
ನನ್ನೆದೆಯೊಳಿರಿತವಿದು. ಯಾರು ಬರುತಿಹರಿಲ್ಲಿ ?

ಸಾರಿಬರುತಿಹರಾರು ? ಕೈಯೊಳಿದೆ ಹೂಬುಟ್ಟಿ,
ರುದ್ರಾಕ್ಷಿ ಕೊರಳೊಳಗೆ ಭಸ್ಮಲೇಪಿತದೇಹ.
ಕುಂಕುಮಾಂಕಿತ ಮುಖದ ಸೌಂದರ್ಯದಧಿದೇವಿ !
ಶಿವಭಕ್ತೆಯಾಗಿಹಳು. ಅಹುದಹುದು, ಅಹುದಹುದು !
ಶಿವನ ಪೂಜೆಗೆ ಹೊರಟ ತಾಯಿ ಗಿರಿಜೆಯೆ ಇವಳು.
ಸಂದೇಹವಿನಿತಿಲ್ಲ.

(ಉಚ್ಚಸ್ವರದಿಂದ) ತಡೆಯುವಿಯ ಮಾತಾಯಿ !

ಗಿರಿಜೆ— ನೀನಾರು ವೀರ ಮಣಿ ?
ಉಗ್ರತಪದೊಳಗಿರುವ ಶಿವನ ಭೂಮಿಯೊಳಿಲ್ಲಿ
ನಿನಗಾವ ಕೆಲಸವಿದೆ.

ಕಾಮದೇವ— ತಾಯಿ ಗಿರಿಜೆಯೆ ನೀನು ?

ಗಿರಿಜೆ—ನಿನಗೆನ್ನ ಪರಿಚಯವೆ ?

ಕಾಮದೇವ (ಸಂತೋಷದಿಂದ)— ಧನ್ಯನಾದೆನು ದೇವಿ !
ಶಿವನ ರಾಣಿಯ ಕಂಡು ಹರುಷಪುಲುಕಿತನಾದೆ.
ಪೂಜ್ಯಪಾದಕ್ಕೆರಗಿ ಧನ್ಯತಮನಾಗುವೆನು.
(ಪೊಡಮಡುವನು).

ಗಿರಿಜೆ— ಶಿವನ ಹರಕೆಯು ನಿನಗೆ.
ಮೇಲೇಳು ವೀರವರ ! ನೀನಾರೊ ನಾನರಿಯೆ.
ಈಗ ಬಂದಿಹುದೇನು ? ಯಾವ ಕೆಲಸವು ನಿನಗೆ ?
ಬೇಗನೇ ನುಡಿಯೊಮ್ಮೆ. ಪರಮಪರಶಿವನಿಲ್ಲಿ
ಯೋಗನಿದ್ರೆಯ ತಾಳಿ ಧ್ಯಾನಸ್ಥನಾಗಿಹನು.
ಗದ್ದಲವ ಮಾಡದಿರು.

ಕಾಮದೇವ— ಬಾಗುವೆನು ತಾಯಮ್ಮ !
ನಾನು ಕೂಡಾ ಶಿವನ ಕಾಣಬಂದಿಹೆ ತಾಯಿ !
ಹೇಮಕೂಟಾಚಲದೊಳೆಲ್ಲಿಯರಸಿದರಲ್ಲಿ
ಶಿವನು ಗೋಚರನಿಲ್ಲ. ಹುಡುಕಾಡಿ ಕಂಗೆಟ್ಟು
ಬೇಸತ್ತು ನಿಂತಿಹೆನು. ನೀನಾರೆ ದಯೆತೋರು.
ದೇವದೇವರ ತಾಯಿ ! ಶಿವನೆಲ್ಲಿ ಹೇಳಮ್ಮ !

ಗಿರಿಜೆ—ಕಾಣಲಿಲ್ಲವೆ ಶಿವನ ?

ಕಾಮದೇವ— ಅವನ ಸುಳಿವೂ ಕೂಡ
ಕಾಣದಾಗಿದೆ ತಾಯಿ!

ಗಿರಿಜೆ (ನೆಟ್ಟ ನೋಟದಲ್ಲಿ)— ಹೇಮಾದ್ರಿಕೂಟವೇ
ಶಿವನ ಮಯವಾಗಿರಲು ಶಿವನ ಕಾಣೆಯ ನೀನು?
ನೆಲದಲ್ಲಿ ಜಲದಲ್ಲಿ ಪಕ್ಷಿಕೂಜನದಲ್ಲಿ
ಗಿಡಬಳ್ಳಿ ಮರಕಾಯಿ ನೆಲಸಿ ನಿಂತಿರುವಲ್ಲಿ
ಬಾಸುದ್ದ ಬೆಳೆದಿರುವ ಪರ್ವತ ಶ್ರೇಣಿಯಲಿ
ಕಣ್ಣಿಗೂ ಕಾಣದಿಹ ಅಣುರೇಣು ತೃಣದಲ್ಲಿ
ತುಂಬಿನಿಂತಿಹ ಶಿವನ ಕಾಣದಾದೆಯ ನೀನು?
ನನ್ನಲ್ಲಿ ನಿನ್ನಲ್ಲಿ ವಿಶ್ವದೆಡೆಯೊಳಗೆಲ್ಲ
ಶಿವನೆ ಶಿವನಾಗಿಹನು. ಕಾಣಲಾರೆಯ ನೀನು?

ಕಾಮದೇವ (ದಿಗ್ಭ್ರಾಂತನಾದವನಂತೆ)—ಕಾಣೆನೆಂದೇ ನಿನ್ನ
ಕೇಳುತಿರುವೆನು ತಾಯೆ!

ಗಿರಿಜೆ— ಈ ಭವ್ಯ ಪರ್ವತದ
ಮೂಲೆ ಮೂಲೆಗಳಲ್ಲಿ ದುಮುದುಮುಸಿ ಹೊಮ್ಮುತಿಹ
ಓಂಕಾರ ದನಿಯನ್ನು ಕೇಳದಿರುವಿಯ ನೀನು?

ಕಾಮದೇವ—ಕೇಳುತಿಹೆ ಮಾದೇವಿ! ಅದೆ ನನ್ನ ಆಪತ್ತು.

ಗಿರಿಜೆ—ಶಿವನು ತುಂಬಿಹನಲ್ಲಿ ಆ ದಿವ್ಯ ದನಿಯಲ್ಲಿ.

ಕಾಮದೇವ— ಓಂಕಾರ ದನಿಗೆನ್ನ
ತಲೆ ಸೀದು ಬೀಳುತಿದೆ. ದನಿಯ ಮಾತೇ ಬೇಡ!
ಪ್ರತ್ಯಕ್ಷ ಶಿವನಲ್ಲಿ ತೋರೆನಗೆ ನನ್ನಮ್ಮ!
ನಿನ್ನ ಸಂದರ್ಶನವು ಸಂಕೇತಪೂರ್ಣವಿದೆ.
ಶಿವಸಮಾಧಿಯೊಳಿದ್ದ ತಾಣವಾವುದು ಹೇಳು.
ಹೇಳು ನೀ ಜಗದಂಬೆ!

ಗಿರಿಜೆ (ಅಸಹ್ಯದಿಂದ)— ಓಂಕಾರ ದನಿಗಿನಿತು
ಚೀತ್ಕಾರಮಾಡುತಿಹ ಪಾಪಿಷ್ಠ! ನೀನಾರು?
ನೀನಾರು ಹೇಳೊಮ್ಮೆ?

ಕಾಮದೇವ— ಕಾಮನೆಂಬುವರೆನ್ನ.

ಗಿರಿಜೆ (ಅಚ್ಚರಿಯಿಂದ)— ಕಾಮದೇವನೆ ನೀನು ?
ಯೋಗಭೂಮಿಯೊಳಿಲ್ಲಿ ಕಾಮದೇವನಿಗಾವ
ಕಾರ್ಯದೊರೆಕೊಂಡಿಹುದು. ಶಿವನ ಕಿಡಿಗಣ್ಣಿರಿಗೆ
ಸಾಯಬಂದೆಯ ಕಾಮ ?

ಕಾಮದೇವ— ದೇವದೇವತೆಗಳನು
ಉಳಿಸಬಂದಿಹೆ ತಾಯಿ !

ಗಿರಿಜೆ— ರತಿಯ ಮಾಂಗಲ್ಯವದು . . .

ಕಾಮದೇವ (ವಿಶ್ವಾಸದಿಂದ)—ಭದ್ರವಾಗಿದೆ ತಾಯಿ !
ಕಾಮನಿಗೆ ಸೋಲಿಲ್ಲ; ಕಾಮನಿಗೆ ಸಾವಿಲ್ಲ.
ಜಗದಿ ಕಾಮನ ಕೊಂದು ಸೃಷ್ಟಿ ನಿಲ್ಲುವದಿಲ್ಲ.
ಶಿವತಪಸ್ಸಿನ ಭಂಗವಾಟವಾಗಿಹುದೆನಗೆ.
ಹೇಳಿಲ್ಲಿ ಪರಶಿವನು ?

ಗಿರಿಜೆ— ಬಿಂಕತನವಿದು ಕಾಮ !
ಕೌಪೀನಧಾರಿಗಳ ಶುಷ್ಕಮನಗಳನೊಮ್ಮೆ
ಸೂರೆಗೊಂಡಿರಬಹುದು. ಶಿವನ ಪರಿಯೇ ಬೇರೆ,
ಯೋಗಿಯೋಗೀಶ್ವರನು ಧ್ಯಾನರುದ್ರನು ಶಿವನು
ಶಿವ ತಪಸ್ಸಿನ ಭಂಗ ನಿನ್ನಾಯು ಕುಡಿದೀತು.
ಎಚ್ಚರವು ನಿನಗಿರಲಿ. ಸುಮ್ಮನೆಯೆ ಬಂದಂತೆ
ಮರಳಿ ನೀ ಹೋಗಯ್ಯ !

ಕಾಮದೇವ (ದೃಢವಾಗಿ)— ಹಿರಿಯ ಗೌರವನ, ಕಾಮ
ಕೆರಳಿ ನಿಲ್ಲುವ ಮೊದಲು ಹೊರಳಿ ಹೋಗುವ ಹೇಡಿ
ರತಿಯ ಕೈಹಿಡಿದಿಲ್ಲ. ಕಾಮಶಕ್ತಿಯನರಿತ
ದೇವನಂಬುಗೆಯಿಂದು ಬರಡಾಗಿ ನಿಂತಿಲ್ಲ.
ಅಮರರಾದೇಶದಲಿ ಅಮರನಾಗಿಹೆ ತಾಯಿ !
ದೇವಸಂಕೇತವಿದು ಶಿವ ತಪಸ್ಸಿನ ಭಂಗ !

ಗಿರಿಜೆ (ಕುತೂಹಲಳಾಗಿ)—ನಿನಗಾಜ್ಞೆಯಿತ್ತವರು . . . ?

ಕಾಮದೇವ— ದೇವ ಬಂಧುಗಳಮ್ಮ !

ಗಿರಿಜೆ—ನಂಬಲರ್ಹವೆ ಮಾತು ?

ಕಾಮದೇವ (ತಿಳಿಹೇಳುವಂತೆ)— ಜಗದಾದಿ ಶಕ್ತಿಯೇ
ನೀನಾಗಿ ತಾಯಮ್ಮ ಈ ಪರಿಯ ನುಡಿಯುವರೆ ?
ಸುರಸಹೋದರರ ಭೀತಿಗಾಸರವಾದ ತಾ
ರಕಾಸುರವಧೆಗೆ ಬೀಜಮಂತ್ರದ ಶಕ್ತಿಶಿವ
ಕಾಮಲೀಲೆಯಲಿ ಅವಿತುಕೊಂಡಿಹುದೆಂಬ
ಹದನವರಿಯೆಯ ದೇವಿ ? ಗಳಿಗೆತುಂಬುವ ಮುನ್ನ
ಶಿವನ ಕಾಣಲುಬೇಕು. ದೇವಮುಕ್ತಿಗೆ ನೀನು
ಹಾದಿತೋರಲುಬೇಕು. ಶಿವನೆಲ್ಲಿ ಹೇಳಮ್ಮ !
ಹೇಳಿ ದಯೆ ತೋರಮ್ಮ !

ಗಿರಿಜೆ— ದಯೆಯ ಮಾತಂತಿರಲಿ ;
ನಿನ್ನ ಮಾತನು ಕೇಳಿ ಮರುಕಮೂಡುತಲಿಹುದು.
ಘೋರವಾಗಿದೆ ನೋಡು ಕಾಮಕೇಳಿಯ ಪಾಡು.
ಶಿವಕಾಮಲೀಲೆಯಲಿ ಸ್ಪಷ್ಟವಾಗಿದೆ ಚಿತ್ರ ;
ಕಾಮದಹನದ ಚಿತ್ರ.

ಕಾಮದೇವ— ಪಂಚಬಾಣನು ಜಗದಿ
ಪಂಚತ್ವ ಹೊಂದುವದು ಕಲ್ಪನೆಯ ಹೊರತಮ್ಮ !
ನನಗಾಗಿ ಮರುಗದಿರು ರತಿಯ ಕಟ್ಟಿದ ತಾಳಿ
ಭದ್ರವಾಗಿದೆ ತಾಯೆ. ಸತಿಯ ಸೌಭಾಗ್ಯದಲಿ
ಪತಿತುಂಬಿಕೊಂಡಿಹನು.

ಗಿರಿಜೆ (ದುಗುಡದಿಂದ)— ನಿನ್ನ ತ್ಯಾಗದ ಬಲಿಗೆ
ರತಿವಿಳಾಪವು ಕಾಮ !

ಕಾಮದೇವ— ನನ್ನ ತ್ಯಾಗದ ಸಿರಿಗೆ
ದೇವ ಮೋಕ್ಷವು ತಾಯೆ !

ಗಿರಿಜೆ— ಸಂಚು ಹೂಡಿದ ವಿಧಿಗೆ
ಪಕ್ಕಾಗಿ ಬಾಳದಿರು.

ಕಾಮದೇವ— ಕಾಮಶಕ್ತಿಯ ಮುಂದೆ
ವಿಧಿಯು ದುರ್ಬಲನಮ್ಮ !

ಗಿರಿಜೆ— ಶಿವನ ಶಕ್ತಿಯ ಮುಂದೆ
ಕಾಮಶಕ್ತಿಯು ತರವೆ ? ಜ್ಯೋತಿಯನು ನಂದಿಸಲು

ಪಣತೊಟ್ಟು ಬೇಯುತಿಹ ಕ್ಷುದ್ರಕೀಟಕದಂತೆ
ನಿನ್ನ ಪರಿಯಾದೀತು. ಛಲದೊಳೇತರ ಸೊಗವು ?
ಸುಮ್ಮನೆಯೆ ಸಾಯದಿರು ! ಜಗದ ನೆಮ್ಮದಿಯನ್ನು
ಸುಮ್ಮನೇ ಕಲಕದಿರು.

ಕಾಮದೇವ— ಸೆರಗೊಡ್ಡಿ ಬೇಡುವೆನು
ಆಡದಿರು ಮಾದೇವಿ ! ಹೊತ್ತುಗಳೆಯುತಲೀಗ
ನೀನೆನ್ನ ಕಾಡದಿರು. ನನ್ನಿರವು ನನಗಿರಲಿ.
ಶಿವನ ತಾಣವನರುಹಿ ಕೃಪೆಯ ತೋರೇ ತಾಯಿ !
ಮಣಿಯುವೆನು ತಲೆವಾಗಿ.

ಗಿರಿಜೆ— ಜಗದೊಳದ್ಭುತವಿಂದು.
ಘೋರಶಕ್ತಿಗಳೆರಡು ಹೋರಾಟವೆಸಗುವದು
ವಿಧಿವಿಲಾಸದ ಕೇಡು. ಶಿವನ ಶಕ್ತಿಯ ಜಗಕೆ
ತೋರಲೇ ಬೇಕೆಂದು ! ಎದ್ದೇಳು ಹೂ ಸರಳ !

ಕಾಮದೇವ—ನೀನೆನ್ನ ಮಾತಾಯಿ !

ಗಿರಿಜೆ— ನೀನೆನ್ನ ಪುಷ್ಪಕದ
ಮರೆಯಾಗಿ ಬಾರಯ್ಯ ! ಶಿವನೆಡೆಯ ತೋರುವೆನು.

ಕಾಮದೇವ—ಧನ್ಯನಾದೆನು ದೇವಿ !

[ಎನ್ನುವ ಹೊತ್ತಿಗೆ ಆಕಾಶದಲ್ಲಿ ಗುಡುಗಿನ ಅಬ್ಬರವು ತೋರಿಬಂದು "ಖಟ್ . . . ಖಡಲ್ . . ." ಎಂದು ಮಿಂಚುವುದು. ಓಂಕಾರ ಧ್ವನಿಯು ಸಾಮೂಹಿಕವಾಗಿ ಭಯಂಕರವಾಗಿ ಕೇಳಿಬರುವುದು. ಹೇಮಕೂಟಾಚಲದ ಚರಾಚರವಸ್ತುಗಳೆಲ್ಲ "ಶಿವೋಹಂ ! ಶಿವೋಹಂ ! ಓಂ . . . ಓಂ . . . ಓಂ . . ." ಎಂದು ಬಾನೆತ್ತರ ದನಿಯನ್ನು ಎಬ್ಬಿಸುತ್ತಿರುವಾಗ ಕಾಮದೇವನು ಗಿರಿಜಾಮಾತೆಯನ್ನು ಹಿಂಬಾಲಿಸುವನು.]

ದೃಶ್ಯ ೪

[ಕಾಮದೇವನು ಇಡುವ ಒಂದೊಂದು ಹೆಜ್ಜೆಗೆ ಸೃಷ್ಟಿಯು ವಿಕಾರಸ್ವರದಿಂದ ಕೂಗತೊಡಗಿದಂತೆ ಹಿಮಗಿರಿಯ ಪಕ್ಷಿಪ್ರಾಣಿಗಳೆಲ್ಲ ಅರಚತೊಡಗುವುವು. ಆಕಾಶದಲ್ಲಿ ಒಂದೇಸವನೆ ಗುಡುಗಿನ ಅಬ್ಬರವು ಅಪ್ಪಳಿಸುತ್ತಿರುವದು. ಈ ದನಿಯನ್ನು ಅಡಗಿಸುವಂತೆ ಓಂಕಾರಸ್ವರವು ಎತ್ತರವಾಗಿ ಕೇಳಬರುವದು. ಈ ಮಹಾಧ್ವನಿಗೆ ಹೆದರಿ ಓಡಿಹೋದಂತೆ ಉಳಿದ ದನಿಗಳೆಲ್ಲ ಮಾಯವಾಗುವುವು. ಓಂಕಾರದ ದನಿಯೊಂದೇ ದುಮುದುಮಿಸಿ ಕೆಲಹೊತ್ತಿನಮೇಲೆ ಮಂದವಾಗಿ ಸ್ತಬ್ಧವಾಗುವದು.]

[ಶಿವನ ಸನ್ನಿಧಾನಕ್ಕೆ ಬಂದು ಗಿರಿಜೆಯು ತನ್ನ ಪುಷ್ಪಕದ ಮರೆಯಲ್ಲಿರುವ ಕಾಮದೇವನಿಗೆ]

ಗಿರಿಜೆ—(ಭಕ್ತಿಪುಳಕಿತಳಾಗಿ) ವಿಶ್ವಕರ್ಮನು ಕಡೆದ
ಶಿಲೆಯ ವಿಗ್ರಹದಂತೆ, ಯೋಗವೇ ಯೋಗಕ್ಕೆ
ತಲೆವಾಗಿ ನಿಂತಂತೆ, ಧ್ಯಾನಸ್ಥ ಪರಶಿವನ
ಯೋಗಮೂರ್ತಿಯ ಕಂಡು ಧನ್ಯನಾದೆಯ ಕಾಮ !
ಏಕಿಂತು ಬೆದರುತಿಹೆ ? ದಿವ್ಯಪ್ರತಿಭೆಗೆ ಬೆಚ್ಚಿ
ಹೆದರಿ ನಡುಗುವಿಯೇನು ? ಬಾಣಗಳ ತೊಡುತೇಳು !
ಶಿವನ ಕೆಣಕುತಲೇಳು ? ಕಾಮ ಸಂಪನ್ನತೆಗೆ
ಶಿವನೆದೆಯ ಗುರಿಮಾಡಿ ಹೂಡಿನ್ನು ಸರಳುಗಳ !
ಅರವಿಂದ ಮೊದಲಾದ ಉನ್ಮದನದಸ್ತ್ರಗಳ !
ಮತ್ತೆ ಬೆಚ್ಚುವಿಯೇಕೆ ?
ಬೆದರಿ ನಿಲ್ಲುವಿಯೇಕೆ ? ಶಿವನಾದರೇನಂತೆ
ಕಾಮಬಾಣಕೆ ಸೋಲೆ ?

ಕಾಮದೇವ—(ತತ್ತರಿಸುತ್ತ) ಕಾಮಬಾಣಕೆ ಸೋಲು !
ಸೋಲೆಲ್ಲಿ ಮಾತಾಯಿ ? ಕ್ಷಣವು ತುಂಬುವ ಮೊದಲು
ಶಿವತಪಸ್ಸಿನ ಭಂಗವಾದಂತೆ ಮಾದೇವಿ !
ನೋಡುತಿರು ! ನೋಡುತಿರು ! ಕಾಮಸಿರಿ ತುಂಬುತಿಹ
ಶಿವನ ಯೋಗದ ಕೇಡನೀಗಲೇ ಕಾಣುತಿರು !
ಜಡೆಯ ಗಂಗೆಯನಲುಗಿ ತಾಯಿ ಗಿರಿಜೆಯನರಸಿ
ಹುಚ್ಚೆದ್ದು ಹರಿಯುತಿಹ ಶಿವನ ಪಾಡನು ನೋಡು.

[ಕಾಮದೇವನು ಬಾಣಗಳಿಗೆ ಕೈ ಇಡುತ್ತಲೇ ಮತ್ತೆ "ಓಂ"ಕಾರದ ದನಿ ಏಳುವದು. ಆ ದನಿಯನ್ನು ತಾಳಲಾರದೆ ಅವನು ಸುಯ್ಯೆಂದು ಬಾಣವನ್ನು ಬಿಡುವನು. ಆ ಟಂಕಾರ ಧ್ವನಿಗೆ ಪಕ್ಷಿಗಳೆಲ್ಲ ಕಿರಿಚತೊಡಗುವುವು. ಭಯಮಿಶ್ರಿತ ಧ್ವನಿಯಲ್ಲಿ ಹಿಂಸಾಪ್ರಾಣಿಗಳು ಗುಡುಗತೊಡಗುವುವು. ಈ ದನಿ ಮಂದವಾಗಲು ಮತ್ತೆ ಸೊಂಯ್ ಎಂಬ ದನಿಯಾಗುವದು.]

ಕಾಮದೇವ—ಅಚ್ಚರಿಯೊಳಚ್ಚರಿಯು !
ಬಿಟ್ಟ ಬಾಣವು ಶಿವನ ಮುಟ್ಟಲಾರದೆ ಬಂದು
ತಟ್ಟುತಿಹುದೆನ್ನೆದೆಯ ! ಇನ್ನೊಂದು ಹೂಡುವೆನು.

(ಸೊಯ್ . . . . ಸೊಂಯ್ . . . . ಎಂಬ ಸಪ್ಪಳ)

ಚಿತ್ರವಿದು ! ಮರಳಿ ಬಂದಿತು ಬಾಣ !

ಮೂರನೆಯ ಬಾಣವಿದು. ಅಕಟಕಟ! ಗುರಿಯ ತ
ಪ್ಪದ ಖ್ಯಾತಿ ಬರಡಾಗಿ ಹೋಯಿತೇ? ನಾಲ್ಕನೆಯ
ಬಾಣವಿದು ಶಿವನೆದೆಯ ಕಲಕುವದು. ಏನಿದೇನ್?
ತೆರಳಲೊಲ್ಲದು ಸರಳು. ಗರಿಮುದರಿ ಬೀಳುತಿದೆ.
ಐದನೆಯ ಬಾಣವೂ . . . . ಅಕಟಕಟ! ಮುಟ್ಟಲೊ
ಲ್ಲದೆ ಶಿವನ ಮೆಟ್ಟಿ ಬೀಳುತಲಿಹುದು. ಗತಿಯಾವು
ದಿನ್ನಕಟ! ಪಂಚಬಾಣಗಳೆಲ್ಲ ಪಂಚತ್ವ
ಹೊಂದಿದುವೆ? ಜಗದಿ ಕಾಮನಿಗಿಂದು ಸೋಲಾಯಿತೆ?
ಶಿವನ ಯೋಗವು ಗೆದ್ದು ಮಿಗಿಲಾಯಿತೆ?

(ರೊಚ್ಚಿನಿಂದ) ಆಗದಿದು! ಆಗದಿದು!
ಸೋಲು ಕಾಮನಿಗಿಲ್ಲ. ಪಂಚಶರಗಳನೆಲ್ಲ
ಒಮ್ಮೆಲೇ ಹೂಡುವೆನು. ಶಿವನೆದೆಯ ಸೀಳುವೆನು
ದೇವರಕ್ಷಣೆ ಸನಗೆ; ಸುರಗಣದ ಸಂದೇಶ.

[ಒಮ್ಮೆಲೇ ಐದು ಬಾಣಗಳನ್ನು ಕಾಮನು ಹೂಡತೊಡಗಿದಂತೆ ಸೃಷ್ಟಿಯಲ್ಲಿ ಭಯಂಕರ ವಿಕಾರಧ್ವನಿಯೇಳುವುದು. ರೋದನ ಸ್ವರದಂತೆ ಚರಾಚರ ವಸ್ತುಗಳೆಲ್ಲ ಕೂಗತೊಡಗುವುವು. ಗುಡುಗು ಅಬ್ಬರಿಸುವುದು. ಮಿಂಚು ಹೊಳೆಯುವದು. "ಓಂ"ಕಾರ ಧ್ವನಿಯು ಸಮುದ್ರದ ತೆರೆಗಳ ಮಹಾಧ್ವನಿಯಂತೆ ಪ್ರಚಂಡವಾಗಿ ಬಾನು ತುಂಬುವುದು. ಕಾಮನು ಬಿಟ್ಟ ಪಂಚಬಾಣಗಳ "ಸೊಂಯ್" ಎಂಬ ಮಹಾಧ್ವನಿಯೊಂದಿಗೆ "ಧಡ—ಧಡ—ಸುರ್—ಸುರ್‌ರ್—" ಎಂಬ ಸಪ್ಪಳವಾಗುವದು. ಅದೇ ಕ್ಷಣದಲ್ಲಿ ಕಾಮನು ಆಕ್ರಂದದ ಸ್ವರದಲ್ಲಿ . . ರತಿಬಾಲೆ! ರತಿದೇವಿ! ರ . . . ತಿ . . . ದೇ . . . ವಿ!!" ಎಂದು ಕೂಗುವನು. ಕೂಗು ಸ್ತಬ್ಧವಾಗುವದು. ಗಿರಿಜಾ ಮಾತೆಯು ಚೀತ್ಕಾರದ ಸ್ವರದಲ್ಲಿ . . .]

ಗಿರಿಜೆ—ಬೆಂದುಹೋದನು ಕಾಮ!
ಶಿವನ ಹಣೆಗಣ್ಣುರಿಗೆ ಭಸ್ಮವಾದನು ಕಾಮ!
ಬಹು ಘೋರದೃಶ್ಯವಿದು. ಕಾಮದಹನದ ಚಿತ್ರ.
ಓಂ ಶಿವ! ಓಂ ಶಿವ! ಓಂ ಶಿವ!
ಸಾಂಬಸದಾಶಿವ! ಸಾಂಬಸದಾಶಿವ!

(ಎನ್ನುತ್ತ ಭಯವಿಹ್ವಲಳಾಗಿ ಗಿರಿಜಾಮಾತೆಯು ಉದ್ವೇಗದಿಂದ.)
ಬೂದಿಯಾದೆಯಾ ಕಾಮ!

ಹೋಮವಾದೆಯಾ ನೀನು!
ರತಿಗೆ ಗತಿಯಿನ್ನಾರು?

(ಎಂದು ಚೀತ್ಕಾರಮಾಡುವಳು. ಅದೇ ಹೊತ್ತಿಗೆ ಓಂಕಾರ ಧ್ವನಿಯು ಮತ್ತೆ ದುಮು ದುಮಿಸಹತ್ತುವದು. ಹೇಮಕೂಟಾಚಲದ ಮೂಲೆ ಮೂಲೆಗಳಿಂದ—

ಶಿವಹರ ಶಂಕರ ಗೌರೀಶಂ
ವಂದೇ ಗಂಗಾಧರನೀಶಂ
ಓಂ ಶಿವ! ಓಂ ಶಿವ! ಸಾಂಬಸದಾಶಿವ!
ಸಾಂಬಸದಾಶಿವ! ಸಾಂಬಸದಾಶಿವ!!

ಎಂಬ ಮೇಳಸ್ವರವು ಪ್ರತಿಧ್ವನಿತವಾಗುವದು.)

ದೃಶ್ಯ ೫

[ಸೃಷ್ಟಿಯ ನಾದತರಂಗಳನ್ನು ಕೇಳಿ ಗಾಬರಿಯಾದ ರತಿದೇವಿಯು ಮಹಾ ಶೋಕಾಕುಲಳಾಗಿ ನುಗ್ಗಿಬರುವಳು. ಎಲ್ಲೆಲ್ಲಿಯೂ ಕಾಮದೇವನ ಸುಳಿವೇ ತೋರದಾಗಿ ರೋದಿಸತೊಡಗುವಳು.]

ರತಿದೇವಿ (ಗದ್ಗದ ಸ್ವರದಲ್ಲಿ)—ಎಲ್ಲಿ ನನ್ನವನೆಲ್ಲಿ?
ನನ್ನೊಡೆಯನಿಹನೆಲ್ಲಿ? ಪಕ್ಷಿಸಂಕುಲಗಳಿರ!
ಹೇಳಬಲ್ಲಿರ ನೀವು? ಮೌನಮುದ್ರೆಯನಾಂತು
ಕಣ್ಣೀರು ಸುರಿಸುತಿಹ ವನದೇವಿ! ಏಕಿಂತು
ಖಿನ್ನಳಾಗಿಹೆ ಹೇಳು! ಕ್ಷೇಮನೇ ನನ್ನವನು?
ಕಣ್ಣೀರ ಹೊಳೆಯಾಗಿ ಹರಿಯುತಿಹ ಜಲದೇವಿ!
ನಿನಗಾವ ಶೋಕವಿದೆ. ಹೇಳು ಹೇಳೇ ತಾಯಿ!
ನನ್ನೊಡೆಯನಿಹನೆಲ್ಲಿ? (ಬಿಕ್ಕಳಿಸುತ್ತ)
ನೀನೆಲ್ಲಿ ರಾಜಾ?
ಹೇಮಕೂಟಾಚಲದ ಗುಪ್ತಗುಹೆಯೊಳಗೆಲ್ಲಿ
ನೀನವಿತುಕೊಂಡಿರುವೆ? ನಿನಗೆನ್ನ ಗೋಳದನಿ
ಕೇಳಿಸದೆ ಮನದನ್ನ? ನಿನ್ನ ಕಾಣದೆ ನಾನು
ಬದುಕಬಲ್ಲೆನೆ ಚೆನ್ನ! (ಬಿಕ್ಕಿ ಬಿಕ್ಕಿ ಅಳುತ್ತ)
ಮಾರನಂ, ಹರಿಯ ಸುಕು
ಮಾರನಂ, ರಮ್ಯಾವತಾರನಂ, ಕೀರ್ತಿವಿ
ಸ್ತಾರನಂ, ಸೌಂದರ್ಯಸಾರನಂ, ಮುನಿಮದವಿ

ದೂರನಂ, ಶೃಂಗಾರಹಾರನಂ, ಲೋಕೋಪ
ಕಾರನಂ, ಮೋಹನಾಕಾರನಂ, ಸುರತ ಮಂ
ದಾರನಂ, ಕಾಣಲಾರದೆ ಕಣ್ಣು ಕುರುಡಾಗಿ
ಬೀಳದೇ ? ಕಣ್ಣುತುಂಬಿದ ರಮಣ ! ನೀನೆಲ್ಲಿ ?

(ದುಃಖದಿಂದ) ತರುಗಳಿರ ! ಲತೆಗಳಿರ !
ಮೃಗಪಕ್ಷಿಗಳಿರ ! ಭಾಸುರ ಸುರಾಂಗನೆಯರಿರ !
ದಿಗ್ದೇವಿಯರಿರ ! ವರಗಿರಿಗಳಿರ ! ಭೂದೇವಿ
ವನಲಕ್ಷ್ಮಿಯರಿರ ! ನನ್ನ ನಲ್ಲನದೆಲ್ಲಿ ?
ತೋರಲಾರಿರ ನೀವು ! ಕಿವಿಮುಚ್ಚಿ ಕಣ್ಮುಚ್ಚಿ
ಮೋಜುನೋಡುವಿರೇನು ? ಸುರಗಣದ ವಂಚನೆಗೆ
ಬಲಿಯಾಗಿ ಹೋದನೇ ? ಗತಿಯಾವುದಿನ್ನೆನಗೆ ?
ಪತಿಯ ಕಾಣದ ಬಾಳು ಬದುಕಿದರು ಸತ್ತಂತೆ !
ಬಾಳ ಬಂಡಿಯೆ ಮುರಿದು ಕುಪ್ಪಳಿಸಿ ಬಿದ್ದಂತೆ !
ಸೃಷ್ಟಿಯೇ ದಯೆದೋರಿ ಹೇಳು ನನ್ನವನೆಲ್ಲಿ ?

ಗಿರಿಜೆ— ಶೋಕಾರ್ತೆಯಾಗದಿರು ರತಿಬಾಲೆ !

ರತಿದೇವಿ (ಬಡಿದೆಬ್ಬಿಸಿದವಳಂತೆ)— ಯಾರ ದನಿ ?
ಮರಳುಗಾಡಿನೊಳೊಮ್ಮೆ ಸೆಲೆಯುದಿಸಿ ಬಂದಂತೆ
ಬಂದ ದನಿ ಯಾರದಿದು ? ದಿವ್ಯದನಿಯಾರದಿದು ?
ಯಾರೆನ್ನ ಸಂತೈಸಿ ಕರೆಯುತಿಹರೀಗಿಲ್ಲಿ ?
ಹೇಮಗಿರಿಯೊಡಲಲ್ಲಿ ?

ಗಿರಿಜೆ— ಸಂತಪ್ತ ಹೃದಯವ
ನ್ನೋಸರಿಸಿ ಮೊಗವೆತ್ತಿ ನೋಡಲಾರೆಯ ತಂಗಿ !
ಪರಿಚಯವು ಸಿಕ್ಕೀತು.

ರತಿದೇವಿ— ತಾಯಿ ಗಿರಿಜಾಮಾತೆ !
ಧನ್ಯಳಾದೆನು ದೇವಿ ! ಪೊರಮಡುವೆ ನಿನಗಕ್ಕ !
ನೀನಾರೆ ಹೇಳಮ್ಮ ! ಹೇಳು ನನ್ನವನೆಲ್ಲಿ ?
ಮದನ ಮೋಹನರಾಜನಡಗಿ ಕುಳಿತಿಹನೆಲ್ಲಿ ?
ನನ್ನರಸನಿಹನೆಲ್ಲಿ ?

ಗಿರಿಜೆ (ಸಂಕಟತೋರುತ್ತ)—ಏನು ಹೇಳಲಿ ತಂಗಿ !

ರತಿದೇವಿ (ಆತುರದಿಂದ)—ಜನದಂತರಂಗವನು
ಹೊಕ್ಕರಿವ ಶಕ್ತಿಯನು ಪಡೆದವಳು ನೀನಮ್ಮ!
ನೀನಿಂತು ನುಡಿಯುವರೆ? ಕಾರುಣ್ಯಮಯಳಾಗಿ
ಪತಿಯಿರವ ತೋರಮ್ಮ! ಜಗದರಿವು ನಿನಗಮ್ಮ!

ಗಿರಿಜೆ— ತಂಗಿ!

ರತಿದೇವಿ— ದಯದೋರು ಜಗದಂಬೆ!
ಪತಿಯ ಕಾಣದ ಗಳಿಗೆ ಯುಗವಾಗಿ ಬಾಳುತಿದೆ
ಸೌಂದರ್ಯದರಸನನು ಕಾಂಬ ತವಕದೊಳೆನ್ನ
ಮನವೆದ್ದು ಉರಿಯುತಿದೆ.

ಗಿರಿಜೆ (ವಿಹ್ವಲಳಾಗಿ)— ಕಾಮದೇವನನೇಕೆ
ಶಿವನೆಡೆಗೆ ಕಳುಹಿಸಿದೆ? ಶಿವ ತಪಸ್ಸಿನ ಭಂಗ
ವಾಟವಾಯಿತೆ ನಿನಗೆ?

ರತಿದೇವಿ (ಸಂದೇಹದಿಂದ)— ಕಳುಹಿದವಳಾನಲ್ಲ.
ಬೇಡವೆಂದವಳಾನು. ಏನು ಹೇಳಲಿ ಅಕ್ಕ!
ಸುರಗಣದ ಸಂದೇಶವಾಂತು ಬಂದವನವನು!
ಸಂದ ಮಾತೇನಮ್ಮ! ಬೇಗನೇ ನುಡಿ ತಾಯಿ!
ನಿನ್ನ ನುಡಿಯಿಂದೆನಗೆ ಭೀತಿಯೇ ಮೂಡುತಿದೆ;
ಕಳವಳವು ತೋರುತಿದೆ.

ಗಿರಿಜೆ (ತುಟಿಬಿಗಿದು)— ಸಂತಸದ ನುಡಿಯಲ್ಲ;
ಘೋರವಾರ್ತೆಯು ತಂಗಿ!

ರತಿದೇವಿ (ಕಣ್ಣೀರತುಂಬಿ)— ಯಾವ ಕೇಡಿನ ಸುದ್ದಿ
ನನಗಿಹುದು ಹೇಳಮ್ಮ! ಹೇಳಿಬಿಡು ತಾಯಮ್ಮ!

ಗಿರಿಜೆ (ತಡತಡೆದು)—ಶಿವನ-ಹ-ಣೆ-ಗಣ್ಣು-ರಿ-ಗೆ- - -

ರತಿದೇವಿ (ಗಾಬರಿಯಿಂದ)—ಹಾ! ಹೋಮವಾದನೆ ನಲ್ಲ?

ಗಿರಿಜೆ (ದುಃಖದಿಂದ)—ಬೂದಿಯಾದನು ಕಾಮ!
ಬೆಂದುಹೋದನು ಕಾಮ!

ರತಿದೇವಿ [ಭಯಂಕರ ರೋದನಸ್ವರದಲ್ಲಿ ಬಿಕ್ಕುತ್ತ]—
ಹಾಯೆನ್ನ ಪ್ರಾಣೇಶ! ಹಾಯೆನ್ನ ಸುವಿಲಾಸ!
ಹಾಯೆನ್ನ ಮನದನ್ನ! ಹಾಯೆನ್ನ ಪೊಸ ರನ್ನ!

ಹಾಯೆನ್ನ ಭಾಗ್ಯನಿಧಿ! ಹಾಯೆನ್ನ ಗುಣಶರಧಿ!
ಹಾಯೆನ್ನ ಸಕಲ ಸುಖಸಂಪತ್ತಿಗೀಗತಿಯೆ?
ದೇವರಕ್ಷಣೆ ನಿನಗೆ ದತ್ತವಾಗಿಹುದೆಂದು
ಭಾಲಾಕ್ಷನನು ಕೆಣಕಿ ಮೋಕ್ಷಹೊಂದಿದೆಯೇನು?
ದೇವ ಸೋದರರೆಲ್ಲ ವಂಚಕರು, ಸ್ವಾರ್ಥಿಗಳು,
ಕಳುಹಿ ನಿನ್ನನು ಕೊಂದು ಬಾಳಿದರು. ಜೀವಿತೇ
ಶನ ನುಂಗಿ ನೀರು ಕುಡಿದಿಹರಿವರು. ಶಿವಶಿವಾ!

(ಉದ್ವೇಗದಿಂದ) ಪೊಡೆದರೇ ಕಾಮಧೇನುವ? ಕಲ್ಪವೃಕ್ಷಮಂ
ಕಡಿದರೇ? ಸೌಂದರ್ಯ ರಸದ ಕೆರೆಯಂ ಮಾಣ
ದೊಡೆದರೇ? ವಿಮಲ ಮುಕ್ತಾಮಣಿಯ ಕೆಂಡದೊಳ್
ಸುಟ್ಟರೇ? ಶೃಂಗಾರಸವಲತೆಯ ಕುಡಿಯ ಜಿವು
ಟಿದರಕಟ! ಕಾಮದಹನವ ಮಾಡಿ ನನ್ನೆದೆಯ
ನುರಿಸಿದರು. ಇನ್ನೇವೆಂ? ದೇವದೇವತೆಗಳಿರ!
ನೀವೆಲ್ಲಿ? ಕಣ್ಣುಮುಚ್ಚುತ ಕುಳಿತು ನೀವೆಲ್ಲಿ
ಮಲಗಿಹಿರಿ? ಶಿವಶಿವಾ, (ಬಿಕ್ಕಿ ಬಿಕ್ಕಿ ಅಳುವಳು).

ಗಿರಿಜೆ (ಕಣ್ಣೀರು ಕೊಡವಿ)—ನಿನಗಾಗಿ ಮರುಗುವೆನು
ಕಾಮನರ್ಧಾಂಗಿ! ನಿನ್ನ ದುಃಖದ ಪರಿಗೆ
ಕರಗಿ ನೀರಾಗಿಹೆನು. ಕಣ್ಣೀರ ಕೋಡಿಯನು
ನೀನೆಷ್ಟು ಹರಿಸಿದರು ಕಾಮದೇವನು ಮರಳಿ
ಜೀವತುಂಬಲುಬಹುದೆ? ತಾಳಮ್ಮ ರತಿದೇವಿ!
ಮರಣ ಬಾಳಿನ ಕೊನೆಯು ತಿಳಿಯಮ್ಮ!

ರತಿದೇವಿ (ಕವಕ್ಕನೆ ತಡೆಯುತ್ತ)— ಹೇಳದಿರು!
ಜಗವ ಕಾಯುವ ತಂದೆ ಮಾವನಾಗಿರುವಾಗ
ಮಗನ ಕಾಯನೆ ಹೇಳು? ಲೋಕವನು ಸೃಷ್ಟಿಸುವ
ಸೃಷ್ಟಿಕರ್ತನು ಮತ್ತೆ ಕಾಮನನು ಸೃಷ್ಟಿಸನೆ?
ಕಾಮವಿರಹಿತ ಜಗವು ಬಾಳಬಲ್ಲುದೆ ತಾಯಿ!
ಜಗವ ಕಾಯುವ ದೇವಿ ಕರುಣೆ ಇಲ್ಲವೆ ನಿನಗೆ?
ಹೇಡಿಗಳ ತವರೂರೆ ಅಮರಲೋಕವು ದೇವಿ!

ಗಿರಿಜೆ— ಅಮರರಾದರು ಕೂಡ
ನಿಯಮಬದ್ಧರು ತಂಗಿ !
ರತಿದೇವಿ (ನಿರಾಶೆಯಿಂದ)— ಮರಳಿ ತೋರನೆ ದೊರೆಯು ?
ಗಿರಿಜೆ—ದೈವ ವಿಮುಖಳು ನೀನು !
ರತಿದೇವಿ—ಯೋಗಭೂಮಿಯೊಳಿಲ್ಲಿ ಶಿವಸನ್ನಿಧಾನದೊಳು
ಹೆಣ್ಣ ಗೋಳನು ಕಂಡು ಮರುಗಲಾರದ ತಾಯಿ !
ಜಗವ ಕರುಣದೊಳೆಂತು ಕಾಪಿಡುವೆ ಹೇಳಮ್ಮ !
ನನ್ನವನು ತೋರನೆ ? ಬಾರನೇ ನನ್ನ ದೊರೆ ?
[ಕರುಣಾಕ್ರಂದಸ್ವರದಲ್ಲಿ ಹುಚ್ಚಳಂತೆ ನೆಲವನ್ನು ಅಪ್ಪಿ ಕೊಳ್ಳುತ್ತ]
ಏಳೆನ್ನ ಮನದನ್ನ !
ನನ್ನೆದೆಯ ಸಂಪನ್ನ ! ಪಂಚಬಾಣದ ರನ್ನ !
ಕುಸುಮ ಬಾಣವನೆತ್ತ ಬಿಸುಟೆ ? ಗಿಳಿಗುದುರೆಗಳ
ಹಸರಮದನೆಲ್ಲಿ ಕಳುಹಿಸಿದೆ? ಚಂದ್ರಮನನಾವ
ದೆಶೆಗೆ ಬೀಳ್ಕೊಟ್ಟೆ ? ತಂಗಾಳಿಗೇನೂಳಿಗವನಿತ್ತೆ ?
ಪೂವಿಲ್ಲು ಸಿಡಿದಿತೇ ? ಏಳೆನ್ನ ಮನದನ್ನ !
ಬಾ ರನ್ನ ಎಂದೆನ್ನ ಕರವಿಡಿಯುತೆದ್ದೇಳು.
ಏಳದಿರೆ ನಾನಿಲ್ಲಿ ಯೋಗಭೂಮಿಯೊಳಿಲ್ಲಿ
ನೆತ್ತರವ ಹೊರಚೆಲ್ಲಿ ಹರಣ ಹಾರಿಸಿಬಿಡುವೆ.
ಪ್ರಾಣವನ್ನೀಡಾಡಿ ಅಸುವ ನಿಲ್ಲಿಸಿಬಿಡುವೆ.
ನೀನಿಲ್ಲದಿಹ ಬಾಳು ಗೋಳು ಗೋಳೋ ನಲ್ಲ !
ತಾಯಿ ಗಿರಿಜಾಮಾತೆ ! ಹಿಡಿದು ಪೊಡೆ ಸರಳಿಂದ
ಲೀತನುವ ! ಬದುಕಲಾರದ ಜೀವ ಬಾಳಬಾ
ರದು ತಾಯಿ ! ದಯೆದೋರು ! (ಗಿರಿಜೆಯ ಪಾದಗಳ
ಮೇಲೆ ಬೀಳುವಳು)
ಗಿರಿಜೆ (ತನ್ನಲ್ಲಿ)— ರತಿಯ ದುಃಖದೊಳೆನ್ನ
ಕರುಳೀಗ ಕಿವಿಚುತಿದೆ. ಶಿವಕಟಾಕ್ಷಕೆ ಸೋತ
ಮನವೆನ್ನ ಬಾಗುತಿದೆ. ನನಗಾಗಿಯಾದರೂ
ಮದನ ಬದುಕಲೆಬೇಕು. (ಹೊರಗೆ)
ಬೇಯದಿರು ರತಿದೇವಿ !

ನಿನಗೆನ್ನ ಹರಕೆಯಿದೆ.

ರತಿದೇವಿ— ಕಾರುಣ್ಯಮಯೆಯಮ್ಮ!
ಕರುಣವನು ತೋರಮ್ಮ! ಪತಿಯ ಭಿಕ್ಷೆಯನೆನಗೆ
ದಯಪಾಲಿಸೇಳಮ್ಮ!

ಗಿರಿಜೆ— ದಯದ ಮಾತಂತಿರಲಿ.
ಉಗ್ರನಾದರು ಶಿವನು ಕಾರುಣ್ಯಮಯನಮ್ಮ!
ಘೋರ ತಪವನ್ನೆಸಗಿ ಶಿವನ ಮೆಚ್ಚಿಸುತಾನು
ಕಾಮದೇವನ ಮರಳಿ ನಿನಗೀವೆ ರತಿದೇವಿ!
ಪಂಥವಿದು! ಸತ್ಯವಿದು.

ರತಿದೇವಿ (ಸಂತೋಷದಿಂದ)— ಮಣಿಯುವೆನು ನಿನಗಮ್ಮ!
ಶತಕೋಟಿ ಸಲ ಮಣಿದು ಪಾದಧೂಳಿಯ ಶಿರದಿ
ತುಂಬುವೆನು ಜಗದಂಬೆ!

ಗಿರಿಜೆ (ಅವಳನ್ನು ಎಬ್ಬಿಸುತ್ತ)— ಶಿವನ ಕರುಣೆಗೆ ಮಣಿದು
ಧನ್ಯರೇ ಆಗೋಣ! ಶಿವನ ಭಜನೆಯ ಮಾಡಿ
ಸಾನ್ನಿಧ್ಯ ಪಡೆಯೋಣ! ಶಿವನ ಸ್ತೋತ್ರವಗೆಯ್ದು
ಶಿವಭಕ್ತರಾಗೋಣ! ಜನುಮದುದ್ಧಾರಕ್ಕೆ
ಪ್ರಾರ್ಥನೆಯೆ ಹಿರಿಹಾದಿ.

ರತಿದೇವಿ (ಭಕ್ತಿಯಿಂದ)— ಶಿನೊಲವೆ ಜಗದಾದಿ.
ಶಿವನಾಮ ಸ್ಮರಣೆಯೇ ಶಿವನನೊಲಿಸುವ ರೀತಿ.
ಶಿವಗೀತೆಗಾಗೆನ್ನ ಮನವುಕ್ಕಿ ಹರಿಯುತಿದೆ
ದೀಕ್ಷೆಯನು ನನಗಿತ್ತು ಸಲಹುವೆಯ ತಾಯಿ!

ಗಿರಿಜೆ—ಮೆಚ್ಚಿದೆನು ರತಿದೇವಿ!
"ಓಂ"ಕಾರ ದನಿಯಿದುವು ಶಿವನಂತರಂಗವಿದು.
ಸಂಪನ್ನ ದೀಕ್ಷೆಯಲಿ ಸೌಭಾಗ್ಯ ಪಡೆಯಮ್ಮ!
ಸಂಪನ್ನಳಾಗಮ್ಮ!

ರತಿದೇವಿ— ಶಿವನ ದಯೆಯೇ ಮೋಕ್ಷ!

ಗಿರಿಜೆ—ಶಿವನ ಕೀರ್ತನೆಗಾಗಿ ಮನತುಂಬಿ ನಿಂತಿರಲು
ಹೊತ್ತುಗಳೆವುದು ಬೇಡ!

ರತಿದೇವಿ— ದಯೆದೋರು ಜಗದಂಬೆ!

(ಗಿರಿಜಾಮಾತೆಯು ರತಿದೇವಿಯ ಮಸ್ತಕದ ಮೇಲೆ ಕರವಿಟ್ಟು ಒಂದೊಂದೇ ನುಡಿ ಹೇಳುವಳು)

ಗಿರಿಜೆ—ಶಿವಹರ ಶಂಕರ ಗೌರೀಶಂ
ವಂದೇ ಗಂಗಾಧರಮೀಶಂ.

ರತಿದೇವಿ (ಪುನರುಚ್ಚರಿಸುವಳು)—

ಗಿರಿಜೆ—ಸಾಂಬಸದಾಶಿವ! ಸಾಂಬಸದಾಶಿವ!
ಸಾಂಬಸದಾಶಿವ! ಸಾಂಬಶಿವಾ!

ರತಿದೇವಿ (ಪುನರುಚ್ಚರಿಸುವಳು)—

(ಈ ಶಿವನಾಮ ಸ್ಮರಣೆಯು ಹೇಮಕೂಟಾಚಲವನ್ನು ತುಂಬಿ ಹೊರಸೂಸುವಂತೆ ಎಲ್ಲ ಕಡೆಗೂ ಪ್ರತಿಧ್ವನಿತವಾಗುವುದು. ಆ ಕೂಡಲೇ ಶಿವನ ಡಮರುಗ ವಾದ್ಯವು ಮೊಳಗತೊಡಗುವುದು. ಮತ್ತೆ ಮತ್ತೆ "ಶಿವಹರ ಶಂಕರ ಗೌರೀಶಂ! ವಂದೇ ಗಂಗಾಧರಮೀಶಂ!" ಎಂಬ ಶಿವಸಂಗೀತವು ಮೇರೆದಪ್ಪಿ ಹರಿಯತೊಡಗುವದು).

ಕೃಷ್ಣಮೂರ್ತಿ ಪುರಾಣಿಕ

ಮಧುರ ಮಿಲನ

ಎದೆಯು ಎದೆಯ ನುಡಿಸುತಿತ್ತು
ಮನವು ಮನವ ಮಿಡಿಸುತಿತ್ತು
  ಜಗವು ಮಹಾನಿದ್ರೆಯಲ್ಲಿ ಮುಳುಗಿ ಹೋಗಿರೆ !
ಆಲಿಂಗನ ಬಂಧದಲ್ಲಿ
ಐಕ್ಯತೆಯಾ ಛಂದದಲ್ಲಿ
  ಒಂದೆ ಪ್ರಾಣ ಒಡಲೆರಡರ ಕವನವಾಗಿರೆ !

ಎದೆಯು ಎದೆಯ ಚುಂಬಿಸಿತ್ತು
ಮನವು ಮನವ ಬಿಂಬಿಸಿತ್ತು
  ಆತ್ಮವೆರಡು ನುಡಿಯುತಿತ್ತು ಮೌನಭಾಷೆಯ !
ಜನ್ಮಾಂತರದನುಭವಗಳ
ಕೋಟ್ಯಂತರ ಸ್ಮೃತಿಮಂಗಳ
  ಕಥನವೆಲ್ಲ ಚಣದಿ ಮುಗಿಯೆ ಬರಿಯ ವಿಸ್ಮಯ !

ಮಧುರ ರತಿ ಆಗೆ ವಿರತಿ
ಮುಗಿದಿರಲಾ ಸ್ವಪ್ನ ಸುಪ್ತಿ
  ಅಂತರಂಗದೆರಡು ಕಣ್ಣು ಒಮ್ಮೆ ತೆರೆಯಿತು.
ಒಡಲಿಗೊಡಲು ತನವನಿತ್ತು
ಉಸಿರುಸಿರಿಗೆ ಕಂಪನಿತ್ತು
  ಮೋಹಶಕ್ತಿ ಕ್ಷಣಮಾತ್ರದಿ ದೂರ ಸರಿಯಿತು !

ದೇವ ಚರಣ ಪ್ರಣತಿ ಕಿರಣ
ಬಂದು ಮುಟ್ಟಲೆಮ್ಮ ಹರಣ
  ಜ್ವಲಿಸಿ ದಹಿಸಿತಲ್ಲೆ ಕಂಡ ದೇಹಕಪ್ಪುರ !
ದೇಶಕಾಲವನ್ನು ದಾಟಿ
ಅನ್ನಪ್ರಾಣಮನವ ಮೀಟಿ
  ಅದ್ವೈತದಿ ನಡೆದುವಾತ್ಮ ಬ್ರಹ್ಮದೂರವ !

ಪ್ರಭುಶಂಕರ

ಭಿಕ್ಷುಕರು

ಪುಣ್ಯಭೂಮಿಯಾದ ನಮ್ಮ ನಾಡಿನಲ್ಲಿ ಭಿಕ್ಷುಕರಿಗೆ ಬರವಿಲ್ಲ. ಕಾಶ್ಮೀರದಿಂದ ಕನ್ಯಾಕುಮಾರಿಯ ವರೆಗೂ ಬೆಲೂಚೀಸ್ತಾನದಿಂದ ಬರ್ಮಾದ ವರೆಗೂ ಎಲ್ಲಿ ನೋಡಿದರೂ ಅವರೆ! ಹೆಣ್ಣಿಲ್ಲದ ಮನೆ ಮನೆಯಲ್ಲವೆಂಬಂತೆ ಭಿಕ್ಷುಕರಿಲ್ಲದ ಊರು ಊರೇ ಅಲ್ಲ. ಹೆಸರಿಗೆ ಒಬ್ಬನಾದರೂ ಭಿಕ್ಷುಕನಿಲ್ಲದಿದ್ದರೆ ಆ ಊರಿನವರ ಔದಾರ್ಯ ಶೂನ್ಯತೆಗೂ ಪಾಷಾಣಹೃದಯಕ್ಕೂ ಅದಕ್ಕಿಂತಲೂ ಹೆಚ್ಚಿನ ಸಾಕ್ಷಿ ಬೇಕೆ? ಭಿಕ್ಷುಕರ ಸಂಖ್ಯೆ ಬೆಳೆದಂತೆಲ್ಲಾ ಜನರ ಪರೋಪಕಾರ ಬುದ್ಧಿಗೆ ಪ್ರಚೋದನೆ ದೊರೆತು ಅವರ ಮನಸ್ಸು ಮೃದುವಾಗಿ ಧರ್ಮಕಾರ್ಯನಿರ್ವಹಣೆಯಲ್ಲಿ ಅವರಿಗಿರುವ ಉತ್ಸಾಹ ದ್ವಿಗುಣಿತವಾಗಿ ಕಳೆಗೂಡುತ್ತದೆ. ಕಾಶಿ, ರಾಮೇಶ್ವರ, ಪ್ರಯಾಗ, ಹರಿದ್ವಾರಗಳು ಅಷ್ಟೊಂದು ಪ್ರಸಿದ್ಧವಾಗಿರುವುದೇಕೆ? ಅಲ್ಲಿರುವ ನದಿಗಳಿಂದಲ್ಲ, ಗುಡಿಗೋಪುರಗಳಿಂದಲ್ಲ, ಪ್ರತಿಮೆಪಠಗಳಿಂದಲ್ಲ, ಪೂಜಾರಿಗಳಿಂದಂತೂ ಅಲ್ಲವೇ ಅಲ್ಲ; ಅಲ್ಲಿಯ ಬೀದಿ ಬೀದಿಗಳಲ್ಲೂ ಯಾತ್ರಿಕರು ಸುಗಮವಾಗಿ ಓಡಾಡಲು ಕೂಡ ಆಸ್ಪದ ಕೊಡದೆ ಕೈಕಾಲುಗಳಿಗೆ ತೊಡರಿಬೀಳುವ ತಿರುಕರ ತಂಡಗಳಿಂದ!

ಭರತಖಂಡ ಬಡತನದ ನೆಲೆವೀಡು. ಬಡತನದ ಅತ್ಯುಗ್ರಸ್ವರೂಪ ಭಿಕ್ಷಾಟಣೆ. ಆದುದರಿಂದ ಭಿಕ್ಷುಕರು ನಮ್ಮ ನಾಡಿನ ಹಿರಿಮೆಗೊಂದು ಕುರುಹು. ಭಿಕ್ಷುಕನೊಬ್ಬನನ್ನು ನೆನೆಸಿಕೊಂಡರೆ ನಮ್ಮ ಮನಸ್ಸಿನಲ್ಲಿ ಮೂಡುವ ವ್ಯಕ್ತಿ ಎಂತಹುದು? ಮೂಳೆಗಳು ಹೊರಗೆದ್ದು ಮೆರೆಯುವ ಅರೆಬೆತ್ತಲೆಯಾದ ಬತ್ತಿದ ಮೈ, ಮಜ್ಜನದ ಹೆಸರನ್ನೇ ಅರಿಯದ ಧೂಳಡರಿದ ಕೈಕಾಲುಗಳು, ಎಣ್ಣೆಯ ಮುಖವನ್ನೇ ಕಾಣದೆ ಹೊದರನ್ನು ಹೋಲುವ ತುರುಚುಕೂದಲಿನ ತಲೆ! ಸಾಧಾರಣ ಭಾರತೀಯನ ಪ್ರತಿಬಿಂಬವೆನ್ನಿಸಿಕೊಂಡು ಪುಸ್ತಕಗಳಲ್ಲಿ ಪತ್ರಿಕೆಗಳಲ್ಲಿ ಅಚ್ಚಾಗುವ ಚಿತ್ರವಿನ್ನೇನು? ಇದೇ ತದ್ವತ್ತು! ನಿಜ—ಭಿಕ್ಷುಕರೇ ನಮ್ಮ ದೇಶದ ಮೇಲುಕೀಳುಗಳನ್ನೂ ಗುಣಾವಗುಣಗಳನ್ನೂ ಸೂಚಿಸುವ ಅರ್ಥಪೂರ್ಣವಾದ ಸಂಕೇತ! ನ್ಯಾಯಕ್ಕೆ ಮನ್ನಣೆ ದೊರೆಯುವುದಾದರೆ ನಮ್ಮ ರಾಷ್ಟ್ರದ ಧ್ವಜದಲ್ಲಿ ಭಿಕ್ಷುಕರ ಚಿಹ್ನೆಗೊಂದು ಪ್ರಮುಖಸ್ಥಾನವಿರಬೇಕು.

ಭಿಕ್ಷುಕರ ಬಾಳು ಭಾರತೀಯರ ಜೀವನದ ಬೃಹದ್ರೂಪದ ಸಾರಾಂಶ, ಅದರ ವೈವಿಧ್ಯ, ವೈಶಾಲ್ಯ, ಆರ್ಷೇಯತೆಗೊಂದು ದಿಕ್ಸೂಚಿ. ಭಿಕ್ಷುಕರೇ ಒಂದು ಜನಾಂಗ;

ಅವರದೇ ಒಂದು ವಿಶಿಷ್ಟ ರಾಜ್ಯ. ನಮ್ಮ ದೇಶದಲ್ಲಿ ಎಷ್ಟು ಕೋಮುಗಳಿವೆ, ಜಾತಿಮತಗಳಿವೆ, ಪಂಗಡ ಒಳಪಂಗಡಗಳಿವೆ, ವರ್ಣಭೇದ, ಲಿಂಗಭೇದ, ಭಾಷಾ ಭೇದಗಳಿವೆ; ವಿದ್ಯಾಬುದ್ಧಿಗಳಲ್ಲಿ ತಾರತಮ್ಯಗಳಿವೆ—ಅಷ್ಟೂ ಭಿಕ್ಷುಕರಲ್ಲೂ ಇವೆ. ಅವರ ಸಮಾಜ ಸಮಗ್ರರಾಷ್ಟ್ರದಷ್ಟೇ ವಿಪುಲವಾದುದು, ಬಹುಮುಖಿಯಾದುದು. ಅದಕ್ಕೆ ತನ್ನದೇ ಆದ ಸಂಪ್ರದಾಯಗಳುಂಟು, ಕಟ್ಟುಕಟ್ಟಳೆಗಳುಂಟು. ದೇಶದ ಶಾಸನ ಭಿಕ್ಷುಕರ ಪ್ರಪಂಚಕ್ಕೆ ಅನ್ವಯಿಸುವುದಿಲ್ಲ. ತಮ್ಮ ಪ್ರತಿನಿಧಿಗಳೂ ಹಿತ ಚಿಂತಕರೂ ಇಲ್ಲದ ಸರ್ಕಾರ ರಚಿಸುವ ಕಾನೂನುಗಳಿಗೆ ತಲೆಬಾಗುವಂತಹ ಹೇಡಿಗಳೂ ಆತ್ಮಗೌರವಹೀನರೂ ಅವರಲ್ಲ. ಅವರಲ್ಲಿರುವಷ್ಟು ವ್ಯಕ್ತಿಸ್ವಾತಂತ್ರ್ಯ ಮತ್ತೆಲ್ಲಿಯೂ ಇರಲಾರದು. ಈ ವಿಚಾರದಲ್ಲಿ ಅವರ ಸಮಾಜ ಪ್ರಶಂಸಾರ್ಹ ಮಾತ್ರವೇ ಅಲ್ಲದೆ ಅನುಕರುಣಯೋಗ್ಯವೂ ಆದುದು.

ಭಿಕ್ಷುಕರು ಸೌಂದರ್ಯಪ್ರೇಮಿಗಳು, ಕಲೋಪಾಸಕರು. ಅವರ ಲೋಕವೇ ಚಿತ್ರಮಯವಾದುದು. ವರ್ಣವೈವಿಧ್ಯ, ವಸ್ತ್ರವೈವಿಧ್ಯ, ವಚನವೈವಿಧ್ಯಗಳು ಭಿಕ್ಷಾಟಣೆಯ ಜೀವಜೀವಾಳ. ವಿಲಕ್ಷಣವಾದ ಉಡಿಗೆತೊಡಿಗೆಗಳಿಲ್ಲದ ಭಿಕ್ಷುಕ ಆ ವೃತ್ತಿಗೇ ಕಳಂಕಪ್ರಾಯ. "ನಮಸ್ಕಾರ, ಸ್ವಾಮಿ . . . ಒಂದು ಚಿಟಿಕೆ ನಸ್ಯ . . ." ಎನ್ನುವುದೂ, ರೈಲಿನಲ್ಲಿ ವರ್ತಮಾನಪತ್ರಿಕೆ ಹಿಡಿದು ಪಕ್ಕದಲ್ಲಿ ಕುಳಿತಿರುವವನನ್ನು ಕುರಿತು "ಎಲ್ಲಿ ಸಾರ್, ಒಂದು ನಿಮಿಷ" ಎನ್ನುವುದೂ ಭಿಕ್ಷಾಟಣೆಯೆ. ಆದರೆ ಇದಕ್ಕೆ ಕ್ರಮಬದ್ಧವಾದ ವೃತ್ತಿಗೆ ಸಲ್ಲಬೇಕಾದ ಗೌರವ ಸಲ್ಲಲಾರದು. ಬೇಡುವವರ ದೃಷ್ಟಿಯಿಂದ ಮಾತ್ರವಲ್ಲದೆ ನೀಡುವವರ ದೃಷ್ಟಿಯಿಂದಲೂ ಈ ಮಾತು ನಿಜ. ನಾವು ಸ್ವಲ್ಪವೂ ಗೊಣಗದೆ ಹಿಂದೆಗೆಯದೆ ಭಿಕ್ಷೆ ನೀಡುವುದು ಯಾರಿಗೆ? ಸಾಧಾರಣವಾದ ಬಟ್ಟೆಗಳನ್ನುಟ್ಟು ಬಂದು ದೈನ್ಯದಿಂದ ಹಲ್ಲುಕಿರಿಯುವವನಿಗೇನು? ಸರ್ವಥಾ ಅಲ್ಲ. ಅವನು ವಾಸ್ತವವಾಗಿ ನಿರ್ಗತಿಕನಾಗಿರಬಹುದು. ನಮ್ಮ ಸಹಾಯ ಅವನಿಗೆ ಅತ್ಯಗತ್ಯವಾಗಿರಬಹುದು. ಆದರೆ ಅವನ ಸರಳಸ್ವಭಾವವೇ ಅವನಿಗೆ ಶತ್ರು. ನಮ್ಮ ಕಣ್ಣುಗಳನ್ನು ಸೆಳೆದು, ನಮ್ಮ ಹೃದಯವನ್ನು ಹೊಕ್ಕು ಅದನ್ನಾಕ್ರಮಿಸುವ ಚಮತ್ಕಾರ ಅವನಿಗಿಲ್ಲ. ವೇಷಧಾರಿಯಾದವನು ನಮ್ಮ ಬಾಗಿಲಿಗೆ ಬಂದರೆ ಸಾಕು, ನಾವು ಅವನಿಗೆ ಕೊಡಲು ಭಿಕ್ಷೆ ಹಿಡಿದು ನಿಂತಿರುತ್ತೇವೆ. ಒಂದು ವೇಳೆ ನಾವು ಕೊಡದಿದ್ದರೂ ನಮ್ಮ ಮನೆಯ ಮಕ್ಕಳು ಸುಮ್ಮನಿದ್ದಾರೆಯೆ? ಅವನ ವಸ್ತ್ರವೈಖರಿಯನ್ನು ಕಂಡು ನಲಿದು ಕುಣಿದಾಡುವವರವರು. ಅವನಿಂದ ತಮ್ಮ ಕಣ್ಣಿಗೂ ಕಲ್ಪನೆಗೂ ಲಭಿಸಿರುವ ಸಂತೋಷಕ್ಕೆ ಪ್ರತಿಫಲವಾಗಿ ಅವನಿಗೆ ಏನಾದರೂ ಕೊಟ್ಟು ಕಳುಹಿಸದಿದ್ದರೆ ಅವರಿಗೆ ಸಮಾಧಾನವಿಲ್ಲ. ಇನ್ನಾವುದಾದರೂ ಕೆಲಸ ಹೇಳಿದರೆ

ತಲೆ ತಪ್ಪಿಸಿಕೊಳ್ಳುವ ಮಕ್ಕಳೆಲ್ಲಾ ಭಿಕ್ಷುಕನಿಗೆ ದವಸ ಹಾಕಲು ನಾಮುಂದು ತಾಮುಂದು ಎಂದು ನುಗ್ಗುತ್ತಾರೆ. ತಮ್ಮ ಪುಟ್ಟ ಕೈಗಳ ತುಂಬಾ ಅಕ್ಕಿಯ ಕಾಳನ್ನೋ ರಾಗಿಯ ಕಾಳನ್ನೋ ಹಿಡಿದುಕೊಂಡು ಅದು ಚೆಲ್ಲದಂತೆ ಹೆಜ್ಜೆಯ ಮೇಲೆ ಹೆಜ್ಜೆಯಿಡುತ್ತಾ ಹಿರಿಯರ ಬೆಂಗಾವಲಿನೊಡನೆ ನಡೆದು, ಕಡೆಗೆ ಅದನ್ನು ಭಿಕ್ಷುಕನ ಜೋಳಿಗೆಗೆ ಸುರಿಯುವುದೆಂದರೆ ಅವರಿಗೆ ಒಂದು ಮಹತ್ಕಾರ್ಯ ಸಾಧಿಸಿದಷ್ಟು ಹೆಮ್ಮೆಯಾಗುತ್ತದೆ; ಅವರ ಮುಖ ಹುಮ್ಮಸ್ಸಿನಿಂದ ಅರಳುತ್ತದೆ. ಇಷ್ಟಕ್ಕೆಲ್ಲಾ ಏನು ಕಾರಣ? ಅವನ ವೇಷಭೂಷಣಗಳು! ಇತರ ವೃತ್ತಿಗಳಲ್ಲಿರುವಂತೆಯೇ ಭಿಕ್ಷಾಟಣೆಯಲ್ಲೂ ವಸ್ತ್ರಾಲಂಕಾರಗಳೇ ಅಧಿಕಾರಲಾಂಛನಗಳು, ವಿಜಯಸಾಧಕಗಳು. ಭಿಕ್ಷುಕರು ಇದನ್ನು ಬಲ್ಲರು. ತಮ್ಮ ರೂಪಲಕ್ಷಣಗಳು ನಯನಾಕರ್ಷಕವಾದಷ್ಟೂ ತಮ್ಮ ಜೋಳಿಗೆಗೆ ಹರಿದು ಬರುವ ಸಾಮಗ್ರಿಗಳ ಸಂಖ್ಯೆ ಹೆಚ್ಚುವುದು ಅವರಿಗೆ ಅನುಭವವೇದ್ಯ. ಅನೇಕ ಭಿಕ್ಷುಕರು ಚಲಿಸುವ ವಸ್ತು ಪ್ರದರ್ಶನಾಗರಗಳಂತೆ ಕಾಣಲು ಇದೇ ಕಾರಣ. ಅವರ ವಸ್ತ್ರಭಂಡಾರ ಮಳೆಬಿಲ್ಲಿನ ಎಲ್ಲ ರಂಗುಗಳನ್ನೂ ಪ್ರತಿನಿಧಿಸುತ್ತದೆ. ಅವರುಟ್ಟಿರುವ ಬಟ್ಟೆಗಳ ಸಂಖ್ಯೆ ಇಷ್ಟೆಂದು ನಿರ್ಧರಿಸುವುದು ದ್ರೌಪದೀ ವಸ್ತ್ರಾಪಹರಣದಷ್ಟೇ ಆಯಾಸಕರ. "ಉದರನಿಮಿತ್ತಂ ಬಹುಕೃತವೇಷಃ" ಎಂಬ ಪ್ರಾಚೀನೋಕ್ತಿ ಈ ವೃತ್ತಿಗೆ ಅಕ್ಷರಶಃ ಅನ್ವಯಿಸುತ್ತದೆ.

ಭಿಕ್ಷಾಟಣೆಯಲ್ಲಿ ಬಟ್ಟೆಬರೆಗಳಿಗಿರುವಷ್ಟೇ ಪ್ರಾಧಾನ್ಯ ಮಾತಿಗೂ ಅಂಗಭಂಗಿಗೂ ಉಂಟು. ತಮ್ಮೆದುರು ಸುಮ್ಮನೆ ನಿಂತು ಕೈಚಾಚುವವನನ್ನು ಎಲ್ಲರೂ ಮುಂದೆ ಹೋಗು ಎನ್ನುವವರೆ. ಕರ್ಣಾನಂದಕರವೂ ಮನಮೋಹಕವೂ ಆದ ವಚನವೃಷ್ಟಿಯನ್ನು ಸುರಿಸುವವನ ಪಾತ್ರೆಯಲ್ಲಿ ಭಿಕ್ಷೆ ಧಾರಾಪೂರ್ವಕವಾಗಿ ಬಂದು ಬೀಳುತ್ತದೆ. "ಬಾಯಿಬಿಟ್ಟರೆ ಬಣ್ಣಗೇಡು" ಎಂಬ ವಾಕ್ಯಕ್ಕೆ ಈ ಪ್ರಪಂಚದಲ್ಲಿ ಪುರಸ್ಕಾರವಿಲ್ಲ. ಇಲ್ಲಿ ಬಾಯಿಬಿಟ್ಟಷ್ಟೂ ಪ್ರಯೋಜನವಿದೆ. ವಾಕ್ಚಾತುರ್ಯವೂ ಅಭಿನಯಚಾತುರ್ಯವೂ ಇದ್ದರೆ ಏನು ಬೇಕಾದರೂ ಎಷ್ಟು ಬೇಕಾದರೂ ಗಳಿಸಿಬಿಡಬಹುದು. ಆದರೆ ನಾವು ಸಾಮಾನ್ಯ ವ್ಯವಹಾರದಲ್ಲಿ ಬಳಸುವ ಭಾಷೆ ಇಲ್ಲಿ ಅನುಪಯುಕ್ತ. ಇದಕ್ಕೇ ಒಂದು ವಿಶಿಷ್ಟವಾದ ಶಬ್ದಸಂಪತ್ತು, ಶ್ರೋತೃಗಳನ್ನು ತಲೆದೂಗಿಸುವ ಪದಜೋಡಣೆ, ರಾಗಾಲಾಪನೆ, ಎಲ್ಲಕ್ಕಿಂತಲೂ ಮಿಗಿಲಾಗಿ ಎಲ್ಲೆಂದರೆ ಅಲ್ಲಿ ಯಾರ ಎದುರಿಗೆ ಎಂದರೆ ಅವರೆದುರಿಗೆ ಮಾತಾಡುವ ಹಾಡುವ ದಿಟ್ಟತನ ಆವಶ್ಯಕ. ಭಿಕ್ಷಾಟಣೆ ಮುಖೇಡಿಗಳಿಗೆ ಸಂಕೋಚಸ್ವಭಾವದವರಿಗೆ ಆಗಿಬರುವ ಉದ್ಯೋಗವಲ್ಲ. "ನನಗೇನು? ಎಲ್ಲಾದರೂ ಮೂರು ಮನೆಗಳಲ್ಲಿ ಪಾವು ಅಕ್ಕಿ ತಿರುಪೆಯೆತ್ತಿ ಜೀವಿಸುತ್ತೇನೆ" ಎನ್ನುವುದು ಸುಲಭ. ಆದರೆ ಹಾಗೆ ಜಯಪ್ರದ

ವಾಗಿ ತಿರುಪೆಯೆತ್ತಲು ಅಗತ್ಯವಾದ ಅರ್ಹತೆ ನಿಮಗಿಲ್ಲದಿದ್ದಲ್ಲಿ ಮೂರು ಮನೆಯಲ್ಲ ಮೂವತ್ತಾರು ಮನೆಗಳಿಗೆ ಹೋಗಿಬಂದರೂ ಮೂಸಿನೋಡಲು ಸಾಕಾಗುವಷ್ಟೂ ದೊರೆಯದಿರಬಹುದು. ಎಲ್ಲರೂ ಎಲ್ಲ ಉದ್ಯೋಗಗಳಿಗೂ ಯೋಗ್ಯರಲ್ಲ; ಅವರವರ ದೇಹಶಕ್ತಿ ಬುದ್ಧಿಶಕ್ತಿ ಸ್ವಭಾವಗಳಿಗನುಸಾರವಾಗಿ ಉದ್ಯೋಗಗಳನ್ನು ಆಯ್ದು ಕೊಳ್ಳಬೇಕು ಎಂಬ ಮನಶ್ಶಾಸ್ತ್ರದ ಸಿದ್ಧಾಂತಕ್ಕೆ ಭಿಕ್ಷಾಟಣೆಯಲ್ಲೂ ನಿದರ್ಶನಗಳನ್ನು ಕಾಣಬಹುದು. ಇತರ ಉದ್ಯೋಗಗಳಲ್ಲಿ ದಕ್ಷತೆಯನ್ನು ಪಡೆಯಲು ಪೂರ್ವಸಿದ್ಧತೆ ಶಿಕ್ಷಣಗಳ ಅಗತ್ಯವಿರುವಂತೆ ಇದರಲ್ಲೂ ಉಂಟು. ಇತರ ಉದ್ಯೋಗಗಳಂತೆ ಇದೂ ವಂಶಪಾರಂಪರ್ಯವಾದುದು. ಹಿರಿಯರೂ ಅನುಭವಸ್ಥರೂ ಆದ ಭಿಕ್ಷುಕರು ತಮ್ಮ ಕಸಬಿನ ರಹಸ್ಯಗಳನ್ನು ತಮ್ಮ ಮಕ್ಕಳುಮರಿಗಳಿಗೆ ಬೋಧಿಸಿ, ಅವರನ್ನು ತರಬೇತು ಮಾಡಿ, ಜೀವನರಂಗಕ್ಕೆ ಕಳುಹಿಸಿಕೊಡುತ್ತಾರೆ. ಇಲ್ಲೂ ಸ್ಪರ್ಧೆ ಪ್ರತಿಸ್ಪರ್ಧೆ ಗಳುಂಟು, ಸೋಲುಗೆಲವುಗಳುಂಟು, ತತ್ಫಲವಾದ ಸುಖದುಃಖಗಳುಂಟು. ಆದ ಕಾರಣ ಈ ಉದ್ಯೋಗದಲ್ಲಿ ಜಯಶಾಲಿಗಳಾಗಲೆಳಸುವವರು ಅದಕ್ಕೆ ಅನುಗುಣ ವಾದ ಸಲಕರಣೆಗಳನ್ನು ಒದಗಿಸಿಕೊಂಡು ಅವನ್ನು ಸಮಯೋಚಿತವಾಗಿ ಪ್ರಯೋ ಗಿಸುವ ಕೌಶಲವನ್ನು ಬೆಳೆಸಿಕೊಳ್ಳಬೇಕು. ಇನ್ನೇನೂ ತೋರದಿದ್ದರೆ ಭಿಕ್ಷೆ ಬೇಡುವು ದಿದ್ದೇ ಇದೆ ಎಂದು ನುಗ್ಗುವುದು ವಿವೇಕವಲ್ಲ. ನಮ್ಮ ದೇಶದ ಭಿಕ್ಷುಕರನ್ನು ಸ್ಥೂಲವಾಗಿ ಪರಿಶೀಲಿಸಿ ನೋಡಿ. ಅವರಲ್ಲಿ ಅಂಗವಿಕಲರೂ ಶಕ್ತಿಹೀನರೂ ವೃದ್ಧರೂ ರೋಗಿಗಳೂ ಮೊದಲಾದ ಅನಿವಾರ್ಯವಾಗಿ ಭಿಕ್ಷೆ ಬೇಡುವವರು ಕೆಲವರು ಮಾತ್ರ. ಭಿಕ್ಷುಕರ ಸಮಾಜದಲ್ಲಿ ಬಹುಸಂಖ್ಯಾತರು ಯುವಕರು (ಅಥವಾ ಮಧ್ಯವಯಸ್ಕರು), ದೃಢಕಾಯರು, ಶಕ್ತಿಪೂರ್ಣರು, ಬುದ್ಧಿವಂತರು, ವಾಕ್ಚತುರರು, ಕಲೆಗಾರರು, ಕುತಂತ್ರಿಗಳು, ಕುಚೇಷ್ಟೆ ಕಪಿಚೇಷ್ಟೆಗಳಲ್ಲಿ ಪ್ರವೀಣರು. ಇದರ ಅರ್ಥವೇನು? ಭಿಕ್ಷಾಟಣೆ ಬೇರಾವ ಉದ್ಯೋಗವೂ ದೊರೆಯದಿದ್ದವರು ಕೈಗೊಳ್ಳ ಬೇಕಾದ ನೀಚಕಾರ್ಯವಲ್ಲ. ಇತರ ಉದ್ಯೋಗಗಳಂತೆಯೇ ಅದಕ್ಕೂ ಒಂದು ಗೌರವಾರ್ಹವಾದ ಸ್ವತಂತ್ರಸ್ಥಾನವಿದೆ. ಅಸಾಧಾರಣವಾದ ಗುಣಗಳುಳ್ಳವರ ಅವ ಗಾಹನೆಗೂ ಆದರಕ್ಕೂ ಅನುಸರಣೆಗೂ ಪಾತ್ರವಾಗಬಹುದಾದ ವೃತ್ತಿಗಳಲ್ಲಿ ಇದೂ ಒಂದು. ಉತ್ತಮ ಭಿಕ್ಷುಕರಾಗುವ ಯೋಗ್ಯತಾವಿಶೇಷ ನಿಮ್ಮಲ್ಲಿದ್ದರೆ ಇತರ ಉದ್ಯೋಗಗಳ ಗೊಡವೆಗೆ ಹೋಗದೆ ನೀವು ಈ ಒಂದು ಉದ್ಯೋಗವನ್ನೇ ಆರಿಸಿ ಕೊಂಡು (ನಂಬಿಕೊಂಡು) ಸುಖವಾಗಿ ಬಾಳಿ, ಪುಷ್ಕಳವಾಗಿ ತಿಂದು, ನಿಶ್ಚಿಂತೆಯಾಗಿ ನಿದ್ದೆಮಾಡುತ್ತಿರಬಹುದು. ಯಾವ ಉದ್ಯೋಗವನ್ನಾದರೂ ನಾವು ಅವಲಂಬಿಸುವ ಉದ್ದೇಶ ಇಷ್ಟೇ ತಾನೆ?

ಭಿಕ್ಷುಕರ ಸಮಾಜದ ವ್ಯವಸ್ಥೆ ಸುಧಾರಕರಿಗೆ ಮಾದರಿ. ಅಲ್ಲಿ ಕೈಕಾಲುಗಳು ಗಟ್ಟಿಯಾಗಿದ್ದರೂ ಬಿಟ್ಟಿಯ ಕವಳವನ್ನು ಕತ್ತರಿಸುವವರ ವರ್ಗವೊಂದಿಲ್ಲ. ತೀರಾ ಶಕ್ತಿಗುಂದಿದ ವೃದ್ಧರನ್ನೂ ಎದ್ದು ಓಡಾಡಲು ತ್ರಾಣವಿಲ್ಲದ ರೋಗಿಗಳನ್ನೂ ಬಿಟ್ಟರೆ ಮಿಕ್ಕವರೆಲ್ಲಾ ಮೈಬಗ್ಗಿಸಿ ದುಡಿಯಲೇಬೇಕು. ನಿನ್ನೆಮೊನ್ನೆ ಹುಟ್ಟಿದ ಮಕ್ಕಳೂ ಇಲ್ಲಿ ಪರಾವಲಂಬಿಗಳಾಗುವ ಅಗತ್ಯವಿಲ್ಲ. ಅವೂ ತಮ್ಮ ಜನನೀಜನಕರ ಬೆನ್ನು ಹತ್ತಿ ಒರಲಿ ಕಿರಲಿ ತಮ್ಮ ಭಾಗದ ಅನ್ನಬಟ್ಟೆಗಳನ್ನು ಸಂಪಾದಿಸಿಕೊಳ್ಳುತ್ತವೆ. ಈ ಸಮಾಜದಲ್ಲಿ ಕಷ್ಟಪಡುವವರಿಗೆ ಸುಖವುಂಟು; ಕೂತು ಕಾಲಹಾಕುವವರನ್ನು ಕೇಳು ವವರಿಲ್ಲ. ಸಮಾಜದ ಸಕಲ ಸದಸ್ಯರೂ ತಮ್ಮ ಶಕ್ತಿಸಾಮರ್ಥ್ಯಗಳನ್ನು ಸದುಪ ಯೋಗಪಡಿಸಿ ದುಡಿಮೆಮಾಡುವುದು ಭಿಕ್ಷುಕರಾಜ್ಯದಲ್ಲಿ ಮಾತ್ರ. ಸಮತಾವಾದಿ ಗಳ ಕನಸುಗಳಲ್ಲಿ ಕೂಡ ಇಷ್ಟು ಸಮರ್ಪಕವಾದ ಪರಿಸ್ಥಿತಿ ಇನ್ನೂ ತಲೆದೋರಿಲ್ಲ.

ಭಿಕ್ಷುಕ ಸಮಾಜದಲ್ಲಿ ಸ್ತ್ರೀಪುರುಷರಿಗೆ ಸರಿಸಮಾನವಾದ ಹಕ್ಕುಗಳುಂಟು, ಅವಕಾಶವುಂಟು. ಇತರ ಉದ್ಯೋಗಗಳಲ್ಲಿ ಅನೇಕವನ್ನು ಹೆಂಗಸು ಅವಲಂಬಿಸಲಾರಳು. ತನ್ನ ಬಲಹೀನತೆಯಿಂದಲೂ ತಾನು ಅನಿವಾರ್ಯವಾಗಿ ಹೊರಬೇಕಾದ ಮಾತೃ ಕರ್ತವ್ಯದ ಗುರುತರ ಭಾರದಿಂದಲೂ ಅವಳು ಕೆಲವು ತೆರದ ಕೆಲಸಕಾರ್ಯಗಳನ್ನು ನೆರವೇರಿಸಲು ಅಸಮರ್ಥಳಾಗುತ್ತಾಳೆ. ಆದರೆ ಭಿಕ್ಷಾಟಣೆಯಲ್ಲಿ ಈ ಬಲಹೀನತೆ ಈ ಮಾತೃಕರ್ತವ್ಯಗಳೇ ಅವಳಿಗೊಂದು ವಿಚಿತ್ರವಾದ ಅರ್ಹತೆಯನ್ನು ಕೊಡುತ್ತವೆ. ನಾಲ್ಕಾರು ಮಕ್ಕಳಿಂದ ಪರಿವೃತಳಾಗಿ, ಕಂಕುಳಲ್ಲೊಂದು ಕಿರುಗೂಸನ್ನೆತ್ತಿಕೊಂಡು, ಬೆನ್ನಲ್ಲೊಂದು ಮರಿಗೂಸನ್ನು ಕಟ್ಟಿಕೊಂಡು, ಗರ್ಭದಲ್ಲಿನ್ನೊಂದಿದೆಯೆಂಬ ಸಂಗತಿ ಯನ್ನು ವ್ಯಕ್ತವಾಗಿಯೋ ಅವ್ಯಕ್ತವಾಗಿಯೋ ತನ್ನ ಗಮನಕ್ಕೆ ತಂದು, ಬಗೆಬಗೆಯ ಅಂಗಚೇಷ್ಟೆಗಳಿಂದ ತನ್ನ ಕಣ್ಣುಗಳನ್ನು ಸೆಳೆದು, ಹೃದಯವನ್ನು ಕಲಕುವ ಅರ್ಧ ನಗ್ನಾಂಗನೆಯೊಬ್ಬಳು ಎದುರಿಗೆ ಬಂದು ನಿಂತು ಮಧುರಗಾನವ ಮಾಡಿ ಕೈಚಾಚಿದರೆ ನಿರ್ದಾಕ್ಷಿಣ್ಯವಾಗಿ "ಇಲ್ಲ ಹೋಗು" ಎನ್ನುವ ಗಂಡು ಯಾರಿದ್ದಾನೆ? ಭಿಕ್ಷುಕಿ ಚೆಲು ವೆಯೂ ಆಗಿದ್ದರೆ ಅವಳ ಕೆಲಸ ಮತ್ತಷ್ಟು ಗಟ್ಟಿ; ಹೋದ ಕಡೆಯಲ್ಲೆಲ್ಲಾ ಅವಳಿಗೆ ಬಿಡುಗೈಕೊಡುಗೆ ಕಾದಿರುವುದು ಖಂಡಿತ. ಗಂಡಸು ತಂದುಹಾಕುವ ಹಿಡಿಕೂಳಿಗಾಗಿ ಆಜೀವಪರ್ಯಂತರವೂ ಅವನ ದಾಸಾನುದಾಸಿಯಾಗಿ ದುಡಿದು "ಸತ್ತು ಸುಣ್ಣ ವಾಗುವ" ಕೀಳ್ಗತಿ ಭಿಕ್ಷುಕಿಯರಿಗಿಲ್ಲ. ಬಹುಶಃ ಅವರು ಗಂಡಸರಿಗಿಂತಲೂ ಹೆಚ್ಚಾಗಿಯೇ ಗಳಿಸಬಲ್ಲರು. ನಿಪುಣೆಯಾದ ಭಿಕ್ಷುಕಿ ಹತ್ತು ಜನಕ್ಕಾಗುವಷ್ಟು ಆಹಾರವನ್ನು ನಿಂತಕಡೆಯೇ ನಿರಾಯಾಸವಾಗಿ ಸಂಪಾದಿಸಬಲ್ಲಳು. ಇನ್ನಾವ ಸಮಾಜದಲ್ಲಿ ಹೆಂಗಸಿಗೆ ಇಷ್ಟು ಮೇಲ್ಮಟ್ಟದ ಸ್ಥಾನಮಾನಗಳಿವೆ?

ಭಿಕ್ಷುಕರು ರಸಿಕರು. ರಸಿಕತೆಗೆ ಭಿಕ್ಷುಕನಾದರೇನು ಲಕ್ಷಾಧೀಶ್ವರನಾದರೇನು ? ಮಾನವಸಹಜವಾದ ಕಾಮಕ್ರೋಧಾದಿಗಳು ತಮ್ಮಲ್ಲಿರುವ ವರೆಗೂ ಅವರೂ ಪ್ರಣಯಾಸಕ್ತರಾಗಲೇಬೇಕು. ಅವರವೂ ಉಪ್ಪು-ಖಾರ ತಿನ್ನುವ ದೇಹಗಳಲ್ಲವೆ ? ನಾವು ನೀವು ಒಂದು ಮನೆಯ ಉಪ್ಪುಖಾರಗಳನ್ನು ತಿಂದರೆ ಅವರು ಎಲ್ಲರ ಮನೆಯ ರುಚಿಯನ್ನೂ ಕಂಡವರು. ಇಂಥವರು ನಮ್ಮನ್ನೂ ನಿಮ್ಮನ್ನೂ ಆಳಿ ಆಡಿಸುವ ತೀವ್ರಭಾವವೊಂದಕ್ಕೆ ಹೇಗೆ ತಾನೆ ಅತೀತರಾದಾರು? ಅವರಲ್ಲೂ ಎಷ್ಟೋ ಜನ ವಿವಾಹಿತರಾಗಿ ಮಾನವಕುಲವನ್ನು ಮುಂದುವರಿಸುವ ಹೊಣೆಗಾರಿಕೆಯನ್ನು ಶಾಸ್ತ್ರೋಕ್ತವಾಗಿ ಹೊತ್ತವರಿದ್ದಾರೆ. ಇವರು ಮಡದಿಮಕ್ಕಳನ್ನು ಯಾವುದಾದರೂ ಕೇಂದ್ರದಲ್ಲಿ ಬಿಟ್ಟಿದ್ದು ತಾವು ಉದ್ಯೋಗದ ನಿಮಿತ್ತ ನಿತ್ಯಯಾತ್ರಿಕರಾಗಿ ಧನಧಾನ್ಯಗಳನ್ನೂ ಒಡವೆವಸ್ತ್ರಗಳನ್ನೂ ಸಂಗ್ರಹಿಸಿ ಅವರಿಗೆ ಸರಬರಾಜು ಮಾಡುತ್ತಾರೆ. ಇದ್ದ ಊರಿನಲ್ಲೇ ನೆರೆಹೊರೆಯಲ್ಲೇ ನಿರ್ಭಯವಾಗಿ ನಿಸ್ಸಂಕೋಚವಾಗಿ ಭಿಕ್ಷಾಪಾತ್ರೆ ಹಿಡಿದು ಹೊರಡುವವರೂ ಇರುವರು. "ಸಕುಟುಂಬ ಸಪರಿವಾರ ಸಮೇತರಾಗಿ"ಯೇ ತಮ್ಮ ಸಮಸ್ತ ಆಸ್ತಿಪಾಸ್ತಿಗಳೊಡನೆ ಊರಿಂದೂರಿಗೆ ಪ್ರಯಾಣಮಾಡಿ, ಮಳೆಗೆ ಮರೆಯಿದ್ದ ಕಡೆ, ಬಿಸಿಲಿಗೆ ನೆರಳಿದ್ದ ಕಡೆ ಬೀಡುಬಿಟ್ಟು ಒಂದು ರೀತಿಯ ಚರಸಂಸಾರವನ್ನು ನಡೆಸುವ ಸಾಹಸಿಗಳಿಗೂ ಅಭಾವವಿಲ್ಲ. ಆದರೆ ಭಿಕ್ಷುಕರಲ್ಲಿ ಹೆಚ್ಚುಮಂದಿ ವಿವಾಹದ ಬಂಧನಕ್ಕೆ ಸಿಕ್ಕಿಬೀಳದ ಸ್ವಚ್ಛಂದ ಪ್ರಣಯಿಗಳೆಂದು ತೋರುತ್ತದೆ. ಪ್ರಣಯಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಇವರು ಸುವಿಖ್ಯಾತರಾದ ಅಮೆರಿಕಾ ದೇಶದ ನವನಾಗರಿಕ ತರುಣ ತರುಣಿಯರಿಗಿಂತಲೂ ಒಂದು ಹೆಜ್ಜೆ ಮುಂದೆ ಹೋಗಿದ್ದಾರೆನ್ನಬಹುದು. ಮದುವೆಯಾದವರಲ್ಲಿ ಅನುರಾಗ ಅಳಿದರೆ ನಾನಾ ಕ್ಲೇಶಗಳನ್ನು ಅನುಭವಿಸಿ ಕಡೆಗೆ ಕೋರ್ಟು ಕಛೇರಿಗಳ ದಾರಿ ಹಿಡಿದು ದಾಂಪತ್ಯವಿಚ್ಛೇದನಕ್ಕೆ ಅನುಮತಿ ಪಡೆಯುವುದು ಹೇಗಿದೆ, ಜೀವನಪಥದಲ್ಲಿ ಆಕಸ್ಮಿಕವಾಗಿ ನೀವು ಸಂಧಿಸುವವರನ್ನು ತಾತ್ಕಾಲಿಕವಾಗಿ ವರಿಸಿ, ಬೇಡವಾದಾಗ ಅಥವಾ ಬೇಸರವಾದಾಗ ಅವರನ್ನು ಬಿಟ್ಟು ದೂರ ಸಾಗುವುದು ಹೇಗಿದೆ? ಈ ಸ್ವಾತಂತ್ರ್ಯ ಗಂಡಿಗೆಷ್ಟಿದೆಯೋ ಹೆಣ್ಣಿಗೂ ಅಷ್ಟೇ ಇದೆ. ತಾನು ಕೂಡಿದವನು ಕೆಟ್ಟವನೆಂದಾಗಲಿ ನಿಷ್ಪ್ರಯೋಜಕನೆಂದಾಗಲಿ ಕಂಡುಬಂದ ನಂತರ ಒಂದು ದಿನವೂ ಅವನೊಡನೆ ಇದ್ದು ಅವಮಾನಿತಳಾಗಬೇಕೆಂಬ ನಿರ್ಬಂಧ ಯಾವ ಭಿಕ್ಷುಕಿಗೂ ಇಲ್ಲ. ಅವಳಿಗಿರುವ ಒಂದೇ ಒಂದು ಹೆಚ್ಚಿನ ತೊಂದರೆಯೆಂದರೆ ಮಕ್ಕಳನ್ನು ಕಟ್ಟಿಕೊಂಡು ಕಷ್ಟಪಡಬೇಕಾದುದು. ಭಿಕ್ಷುಕಿಯಾದ ತಾಯಿ ಕೂಡ ತನ್ನ ಕರುಳಿನ ಕುಡಿಗಳನ್ನು ಕಡೆಗಂಡು ಹೋಗಲಾರಳು.

ಆ ಮಕ್ಕಳೊ? ಅವನ್ನು ಭಿಕ್ಷುಕರ ಮಕ್ಕಳೆನ್ನುವುದಕ್ಕಿಂತಲೂ ಪ್ರಕೃತಿಯ

ಮಕ್ಕಳೆನ್ನುವುದು ಉಚಿತವೆಂದು ತೋರುತ್ತದೆ. ಮಣ್ಣಿನಲ್ಲಿ ತೆವಳಿ, ಧೂಳಿನಲ್ಲಿ ಉರುಳಿ, ಪಂಚಭೂತಗಳ ಭೀತಿಯನ್ನೇ ಅರಿಯದೆ ಸದಾ ಭೂದೇವಿಯ ತೊಡೆಯ ಮೇಲೆ ಕ್ರೀಡಿಸುವ ಆ ಕೌಪೀನಧಾರಿಗಳು ಮನುಷ್ಯರ ಮಕ್ಕಳು ಹೇಗಾದಾರು? ಪ್ರಕೃತಿ ಅವರ ವಿಚಾರದಲ್ಲಿ ವಿಶೇಷ ಅನುಗ್ರಹ ತೋರಿರುವುದರಿಂದಲೇ ಅವರು ಬೆಳೆದು ದೊಡ್ಡವರಾಗುವುದು. ಇಲ್ಲದಿದ್ದರೆ ಕೇವಲ ಮಾನುಷಪ್ರಯತ್ನದಿಂದ ಆ ಪರದೇಶಿಗಳು ಪ್ರಾಣಸಹಿತ ಉಳಿದುಕೊಳ್ಳುವುದಾದರೂ ಸಾಧ್ಯವಿರುತ್ತಿತ್ತೆ? ಅವರಲ್ಲಿ ಎಷ್ಟೋಮಂದಿ ಭಿಕ್ಷುಕರ ಹೊಟ್ಟೆಯಲ್ಲಿ ಹುಟ್ಟಿ ಭಿಕ್ಷುಕರಾಗಿ ಬಾಳಿ ಭಿಕ್ಷುಕ ರಾಗಿಯೇ ಸಾಯುತ್ತಾರೆ. ಇವರು ಭಿಕ್ಷುಕ ಪ್ರಪಂಚದ ಪ್ರಥಮ ಪ್ರಜೆಗಳು. ಹುಟ್ಟಿದಾರಭ್ಯ ಸ್ವಂತ ಮನೆಮಠಗಳನ್ನು ಕಾಣದೆ ಜಗತ್ತನೇ ತಮ್ಮ ಮನೆಯಾಗಿ ಪರಿಗಣಿಸಿ ಒಂದು ಕಡೆ ಅಂಟಿಕೊಳ್ಳದೆ ಒಂದು ಸ್ಥಳ ತಮ್ಮದೆನ್ನುವ ಮಮಕಾರಕ್ಕೆ ಎಡೆಗೊಡದೆ ಐಹಿಕ ಮಾಯಾಜಾಲಕ್ಕೆ ಒಳಗಾಗದೆ ಕೊನೆಯ ವರೆಗೂ ನಿರ್ಲಿಪ್ತ ರಾಗಿದ್ದು ನಿರ್ವಾಣಪದಕ್ಕೇರುವ ಇವರು ನಿಜವಾಗಿಯೂ ಯೋಗೀಶ್ವರರು, ಬ್ರಹ್ಮ ಜ್ಞಾನಿಗಳು, ಜೀವನ್ಮುಕ್ತರು.

ಭಿಕ್ಷುಕರ ಪ್ರಪಂಚಜ್ಞಾನವಂತೂ ವಿಶಾಲವಾದುದು, ಆಳವಾದುದು, ಅಮೂಲ್ಯವಾದುದು. ಎಷ್ಟು ಊರಿನ ನೀರು ಕುಡಿದು ಎಷ್ಟು ಮನೆಯ ಹಿಟ್ಟು ತಿಂದು ಹೊಟ್ಟೆಹೊರೆಯುವವರವರು! ಎಷ್ಟೆಷ್ಟು ಬಗೆಯ ನೋಟಗಳನ್ನು ಕಂಡು ತಣಿಯುವವರವರು! ಯಾವಯಾವ ಮಟ್ಟದ ಎಷ್ಟೆಷ್ಟು ಜಾತಿಯ ಜನಗಳನ್ನು ನೋಡುವವರವರು! ತೀಕ್ಷ್ಣದೃಷ್ಟಿಯೂ ಮಾನವಸ್ವಭಾವದ ವೈವಿಧ್ಯವನ್ನು ಪರಿಶೀಲಿಸ ಬೇಕೆಂಬ ಕುತೂಹಲವೂ ಎಲ್ಲ ತೆರದ ಅನುಭವಗಳಿಂದಲೂ ಆನಂದವನ್ನು ಪಡೆಯುವ ಕವಿಮನೋಧರ್ಮವೂ ಇದ್ದರೆ ಭಿಕ್ಷುಕನೊಬ್ಬನು ಸುಲಭವಾಗಿ ಸಮಾಜಶಾಸ್ತ್ರ ನಿಷ್ಣಾತನಾಗಬಹುದು.

ಭಿಕ್ಷುಕರು ಲೋಕೋಪಕಾರಿಗಳು. ಅವರಿದ್ದಕಡೆ ಸುತ್ತಣ ವಾತಾವರಣವೇ ಬಿಸಿಯೇರುತ್ತದೆ, ಜಡದೇಹಿಗಳಲ್ಲೂ ಉತ್ಸುಕತೆ ಉಲ್ಲಾಸಗಳು ಮೊಳೆಯುತ್ತವೆ. ಜೀವನದ ಹೋರಾಟದಲ್ಲಿ ಬಳಲಿ ಬೇಸತ್ತ ಜನಸಾಮಾನ್ಯರಿಗೆ—ಅದರಲ್ಲೂ ಬೇರಾವ ವಿನೋದಗಳೂ ಇಲ್ಲದ ಹಳ್ಳಿಗಾಡಿನವರಿಗೆ—ಆಗಾಗ ಕಣ್ಣುಗಳಿಗೆ ಒಂದಿನಿತು ಸಂತಸ ವನ್ನಿತ್ತು ಅವರ ಬಾಳು ಹಗುರವಾಗುವಂತೆ ಮಾಡುವ ದೀನಬಂಧುಗಳವರು. ಅವರಿಲ್ಲದ ಊರು ಉಪ್ಪಿಲ್ಲದ ಊಟದಂತೆ, ಚಿತ್ರಗಳಿಲ್ಲದ ಗೋಡೆಯಂತೆ, ಆಭರಣ ಗಳಿಲ್ಲದ ಅಬಲೆಯಂತೆ ನಿಸ್ಸಾರವಾದುದು. ಅವರಿಂದ ನಮಗೆ ದೊರೆಯುವ ಪ್ರಯೋಜನ ನೇತ್ರಾನಂದ ಮಾತ್ರವಲ್ಲ; ಮನಸ್ಸಿಗೂ ಹೃದಯಕ್ಕೂ ನೆಮ್ಮದಿ

ಯನ್ನು ನೀಡಿ ನಮಗವರು ನೆರವಾಗುತ್ತಾರೆ. ಅವರ ಆಟಪಾಟಗಳು ನೃತ್ಯಗೀತೆಗಳು ಮಾತುಕತೆಗಳು ನಗದವರನ್ನು ನಗಿಸಬಲ್ಲವು, ನಮ್ಮಲ್ಲಿ ಸುಪ್ತವಾಗಿರುವ ಬಗೆಬಗೆಯ ಭಾವಗಳನ್ನು ಎಚ್ಚರಿಸಿ ಎಬ್ಬಿಸಬಲ್ಲವು. ಭಿಕ್ಷುಕರಿಲ್ಲದಿದ್ದರೆ ನಮ್ಮಲ್ಲಿರುವ ಜನ್ಮಸಿದ್ಧವಾದ ದಯೆಯನ್ನೂ ದಾಕ್ಷಿಣ್ಯಪರತೆಯನ್ನೂ ಔದಾರ್ಯವನ್ನೂ ನಿರಾತಂಕವಾಗಿ ಹರಿಯಬಿಟ್ಟು ಕೃತಾರ್ಥರಾಗುವ ಅವಕಾಶ ನಮಗೆಲ್ಲಿರುತ್ತಿತ್ತು? ನಮ್ಮ ಎದೆಗಳಲ್ಲಿ ಕರುಣೆಯ ದೀಪ ಆರಿಹೋಗದಂತೆ ಅದನ್ನು ಮತ್ತೆ ಮತ್ತೆ ಪ್ರಚೋದಿಸಿ ಉರಿಮಾಡಿ ನಮ್ಮ ಮಾನವೀಯತೆಯನ್ನು ಉಳಿಸಿಕೊಟ್ಟಿರುವ ದೇವದೂತರವರು. ಸರಳಜೀವನ, ಅಲ್ಪತೃಪ್ತಿ, ತ್ಯಾಗ, ವೈರಾಗ್ಯಗಳನ್ನು ಅನುಷ್ಠಾನಕ್ಕೆ ತರುವುದರಲ್ಲಿ ನಮಗವರು ಮಾರ್ಗದರ್ಶಕರು. "ಎತ್ತಣಿಂದಲೋ ಬಂದು ಎತ್ತಲೋ ಪೋಪ" ಕ್ಷಣಭಂಗುರರಲ್ಲವೆ ನರರೆಲ್ಲರೂ? ಭಿಕ್ಷುಕರು ಈ ವೇದಾಂತ ತತ್ವದ ಮೂರ್ತಸ್ವರೂಪರು. ಇಡೀ ಮನುಷ್ಯಜೀವನದ ಸಾರಾಂಶದಂತಿರುವುದು ಭಿಕ್ಷುಕರ ಜೀವನ.

ಭಿಕ್ಷಾಟಣೆ ಪೂರ್ಣಾನಂದಕರವಾಗಬೇಕಾದರೆ ಅದಕ್ಕೆ ಅನುಗುಣವಾದ ಮನೋಭಾವ ನಿಮ್ಮಲ್ಲಿರಬೇಕು. ಒಂದೇ ಊರಿನಲ್ಲಿ ಬೇರುಬಿಟ್ಟು ಆಸ್ತಿಪಾಸ್ತಿಗಳನ್ನೂ ಆಳುಕಾಳುಗಳನ್ನೂ ಕಟ್ಟಿಕೊಂಡು ಅಲ್ಲಿಂದ ಕದಲಲೊಲ್ಲದ ಸೋಂಬೇರಿಗಳು ಈ ಕೆಲಸದಲ್ಲಿ ಏಳ್ಗೆ ಹೊಂದಲಾರರು. ಕಾಯಕಷ್ಟ ಎಷ್ಟಾದರೂ ಸಹಿಸಿಕೊಳ್ಳುವ ಸಾಮರ್ಥ್ಯದ ಜೊತೆಗೆ ವಿವಿಧ ಪ್ರದೇಶಗಳಲ್ಲಿ ವಿವಿಧ ಸ್ವಭಾವದ ಮಾನವಕೋಟಿಯನ್ನು ಮೆಚ್ಚಿಸುವ ಚಾಕಚಕ್ಯವಿರಬೇಕು. ಜನಜಂಗುಳಿಗೆ ಅಂಜಿ ಹಿಂಜರಿಯುವವರೂ ಇತರರೆದುರಿಗೆ ಲೀಲಾಜಾಲವಾಗಿ ನಾಲ್ಕು ಮಾತುಗಳನ್ನಾಡಲಾರದ "ಮೂಸಂಗಿ"ಗಳೂ ಮಿತಭಾಷಿಗಳೂ ಮೌನವ್ರತಾಚಾರಿಗಳೂ ಮುಂಗೋಪಿಗಳೂ ಪ್ರತಿಷ್ಠಾವಂತರೂ ಅತಿಸೂಕ್ಷ್ಮಿಗಳೂ ಭಿಕ್ಷುಕಲೋಕಕ್ಕೆ ಕಾಲಿಡದಿರುವುದೇ ಮೇಲು. ಭಿಕ್ಷಾಟಣೆ ತಾಳ್ಮೆಯನ್ನೂ ನಿಷ್ಕಾಮಕರ್ಮವನ್ನೂ ಅಭ್ಯಸಿಸಲು ಅತ್ಯುತ್ತಮವಾದ ಪ್ರಯೋಗಕ್ಷೇತ್ರ, ಶಿಕ್ಷಣರಂಗ. ದರಹಸಿತವದನರನ್ನೂ ಕೋಪಾಗ್ನಿಯನ್ನುಗುಳುವ ಕೆಂಗಣ್ಣರನ್ನೂ ಸರಸಿಗಳನ್ನೂ ಮಾತಾಡಿಸಿದರೆ ಮುನಿದು ಮೇಲೆ ಬೀಳುವ ಸರ್ಪಸದೃಶರನ್ನೂ ಏಕಪ್ರಕಾರವಾಗಿ ಎದುರಿಸಿ, ಅವರ ಪ್ರತಿಕ್ರಿಯೆಗಳನ್ನೆಲ್ಲಾ ಏಕರೀತಿಯಲ್ಲಿ ಪರಿಗ್ರಹಿಸಿ, ಹೊನ್ನು ಸಿಕ್ಕಲಿ ಮಣ್ಣು ಸಿಕ್ಕಲಿ ಸಂತೋಷದಿಂದ ಸ್ವೀಕರಿಸಿ, ಹಾಡಿಕೊಂಡು ಆಡಿಕೊಂಡಿರುವ ಚಿತ್ತವೃತ್ತಿ ಭಿಕ್ಷುಕರ ಭಾಗ್ಯನಿಧಿ. ಈ ತೆರದ ವೈರಾಗ್ಯ ಎಲ್ಲರಲ್ಲೂ ಬಂದೀತೆ? ಅದಿರುವವರನ್ನು ತಿರುಕರು, ಪರಾಶ್ರಯಿಗಳು, ಸಮಾಜವನ್ನು ಶೋಷಿಸುವ ಉಪಜೀವಿಗಳು, ಪೀಡಕರು ಎಂದು ಪರಿಪರಿಯಾಗಿ ನಿಂದಿಸುವುದು ನ್ಯಾಯವೆ?

ಭಿಕ್ಷುಕರನ್ನು ಮೂಲೋತ್ಪಾಟನ ಮಾಡಲು ಆಧುನಿಕ ಪ್ರಭುತ್ವಗಳೂ ಸಾಮಾಜಿಕ ಸಂಸ್ಥೆಗಳೂ ಪ್ರಯತ್ನಿಸುತ್ತಿವೆ. ಕಾನೂನಿನ ಸಹಾಯದಿಂದ ಅವರಿಗೆ ಕೊಡಬಾರದ ಕಷ್ಟಗಳನ್ನು ಕೊಟ್ಟು ಅವರ ಉತ್ಸಾಹಕ್ಕೆ ಭಂಗತರುವ ಪಾಪ ಕಾರ್ಯ ಈಗ ಎಲ್ಲೆಲ್ಲೂ ನಡೆಯುತ್ತಿದೆ. ಇದರಿಂದ ನಮ್ಮ ನಾಡಿನ ನಿಷ್ಕಳಂಕ ಕೀರ್ತಿಗೂ ನಮ್ಮ ಸಮಾಜದ ಸೊಬಗಿಗೂ ಹಿಂದಿನಿಂದಲೂ ರಕ್ತಗತವಾಗಿ ಬಂದು ನಮ್ಮಲ್ಲಿ ಮನೆಮಾಡಿಕೊಂಡಿರುವ ನಮ್ಮ ಧರ್ಮಶ್ರದ್ಧೆಗೂ ಕೊಡಲಿಯೇಟು ಬೀಳುತ್ತಿದೆ. ನವಯುಗದ ಸುಧಾರಕ ಪರಶುರಾಮರು ನಮ್ಮ ಈ ಆರ್ಯಭೂಮಿಯಲ್ಲಿ ಇಷ್ಟೊಂದು ಮಂದಿ ಭಿಕ್ಷುಕರಿರುವರಲ್ಲಾ ಎಂದು ಹೆಮ್ಮೆಪಡುವುದು ಬಿಟ್ಟು ಅವರನ್ನು ಕೊನೆಗಾಣಿಸುವ ಕೊಲೆಗಡುಕತನಕ್ಕೆ ಕೈಹಾಕಿದ್ದಾರೆ. ಇದನ್ನು ನಾವು ತಡೆಗಟ್ಟದಿದ್ದರೆ ನಮ್ಮ ಪುರಾತನ ಸಂಸ್ಕೃತಿಗೆ, ನಮ್ಮ ಸನಾತನ ಧರ್ಮದ ಯಶೋವೈಭವಕ್ಕೆ ಚ್ಯುತಿ ಬಂದೀತು. ಸಾಕ್ಷಾತ್ ಪರಮೇಶ್ವರನ ಕೈಯಲ್ಲೇ ಭಿಕ್ಷಾಪಾತ್ರೆಯನ್ನಿಟ್ಟ ನಮ್ಮ ಪೂರ್ವಿಕರ ಭವ್ಯಕಲ್ಪನೆಗೂ ಭಿಕ್ಷುಕರ ಪೀಳಿಗೆಯನ್ನೇ ನಾಶಗೊಳಿಸಲು ಕಂಕಣ ತೊಟ್ಟಿರುವ ಇಂದಿನ "ರಾಷ್ಟ್ರೋದ್ಧಾರಕ"ರ ಸಂಕುಚಿತ ಮನೋಭಾವಕ್ಕೂ ಎಲ್ಲಿಂದೆಲ್ಲಿಗೆ? ನಮ್ಮ ದೇಶ ಅಧೋಗತಿಯ ಹಾದಿಯನ್ನು ಹಿಡಿದಿದೆಯೆನ್ನುವುದಕ್ಕೆ ಇದಕ್ಕಿಂತಲೂ ಹೆಚ್ಚಿನ ಸಾಕ್ಷಿ ಬೇಕೆ? ನಮ್ಮವರು ಇನ್ನಾದರೂ ವಿಚಾರಪರರಾಗಿ ಈ ಭಿಕ್ಷುಕವಧೆಯನ್ನು ನಿಲ್ಲಿಸಲಿ. ಜೈ ಹಿಂದ್!

ಎಂ. ರಾಮರಾವ್.

ಜೋಗದಲ್ಲಿ ಒಂದು ನಡುಹಗಲು

ಮುದ್ದೆ ಮುದ್ದೆಯಾದ ಕಾಡು
ಮುದುರಿಕೊಂಡು ಬಿದ್ದಿದೆ
ಬಾನ ಬೆರಳು ಬಿರುಬಿಸಿಲಿನ
ಹಚ್ಚಡವನು ಹೊಚ್ಚಿದೆ
ಧೂಳುದಾರಿ ಕನವರಿಕೆಯ
ತೆರದಿ ಸುತ್ತಿ ತೆವಳಿದೆ
ಜೋಗದ ಜಲಪಾತ ಮಾತ್ರ
ಚೈತನ್ಯದಿ ಮೊರೆದಿದೆ!

ಬೆಟ್ಟಗಾಡ ಕಂದರಗಳು
ಆಕಳಿಸುತ ಒರಗಿವೆ
ಮರಮರದಲಿ ಪಕ್ಷಿಗಾನ
ದನಿರೆಕ್ಕೆಯ ಮುಚ್ಚಿವೆ
ತುಂಡುಮೋಡ ತೂಗಡಿಸುತ
ಬಾನ ಬಯಲನೆಡವಿದೆ
ಜೋಗದ ಜಲಪಾತ ಮಾತ್ರ
ಭೋರ್ಗರೆಯುತ ಧುಮುಕಿದೆ!

ತಳದೊಳಗಿನ ನೂರುಬಂಡೆ
ಮರುಳುಗೊಂಡು ಕುಳಿತಿವೆ
ತುಂತುರು ಹನಿ ಹೊಗೆ ಮೀಹದಿ
ಬಿರುಬಿಸಿಲನು ಮರೆದಿವೆ
ಚೈತನ್ಯದ ನಾಟಕದಲಿ
ಜಡಪ್ರೇಕ್ಷಕರಾಗಿವೆ
ಜೋಗದ ಜಲಪಾತ ಮಾತ್ರ
ಚೈತನ್ಯವ ಸಾರಿದೆ!

ಜಿ. ಎಸ್. ಶಿವರುದ್ರಪ್ಪ.

ಕಾಶ್ಮೀರದೇಶದ ಲಲ್ಲಯೋಗೀಶ್ವರಿಯ ಸೂಕ್ತಪರಿಚಯ

೩೩ ಸರೋವರೇ ಯತ್ರ ನ ಸರ್ಷಪಸ್ಯ
ಕಣೋಽಪಿ ಮಾತ್ಯೇವ ವಿಚಿತ್ರಮೇತತ್ |
ನಿವರ್ಧತೇ ತತ್ಪಯಸಾ ಸಮಸ್ತಂ
ಯಾವತ್ಪ್ರಮಾಣಂ ಖಲು ದೇಹಿ ಜಾತಮ್ || ೪೯ ||

ಸಾಸುವೆಕಾಳು ಹಿಡಿಸುವಷ್ಟು ಸ್ಥಳವಿಲ್ಲದ ಅತಿ ಚಿಕ್ಕ ಸರೋವರದಿಂದಲೇ ಈ ಪ್ರಪಂಚದ ಸಮಸ್ತವೂ ಪೋಷಿತವಾಗಿ ಬೆಳೆದಿದೆ—ಜೀವಾತ್ಮನು ಹಿಂದೆಯೂ ಈಗಲೂ ಮುಂದೆಯೂ ಹೀಗೆಯೇ ಜನ್ಮಗಳನ್ನು ಪಡೆಯುತ್ತಾ ಹೋಗುತ್ತಿದ್ದಾನೆ. ಇದು ವಿಚಿತ್ರವಾದದ್ದು.

೩೪ ವಾರತ್ರಯಂ ನೀರಮಯಂ ಸ್ಮರಾಮಿ
ತಥೈಕದಾಹಮವಕಾಶಹೀನಮ್ |
ಆಕಾಶ ಮನ್ಯಾನ್ಯಪಿ ಚಾದ್ಭುತಾನಿ
ಸ್ಮರಾಮಿ ಶೂನ್ಯಂ ಖಲು ಸಪ್ತವಾರಮ್ || ೫೦ ||

ಅಂತರಂಗವನ್ನು ಪರಿಶುದ್ಧಗೊಳಿಸುವ ಪವಿತ್ರವನ್ನಾಗಿಮಾಡುವ ಮೂರು ಸರೋವರಗಳನ್ನು ಕರಣಗಳನ್ನು ಯಾವಾಗಲೂ ನೆನೆಯುತ್ತೇನೆ. ವಿಮರ್ಶಿಸುತ್ತೇನೆ. ಹಾಗೆಯೇ ಅನಂತವಾದ ಚಿದಾಕಾರವನ್ನು ಒಂದು ಸಾರಿ ಸ್ಮರಿಸುತ್ತೇನೆ. ಅದೇ ರೀತಿ ಈ ವಿಶ್ವದ ಅದ್ಭುತಗಳನ್ನು ಪರಿಶೀಲಿಸುತ್ತೇನೆ. ಇವೆಲ್ಲಕ್ಕಿಂತಲೂ ಮುಖ್ಯವಾಗಿ ಶುದ್ಧಚಿನ್ಮಾತ್ರಸ್ಥಿತಿಯುಳ್ಳ ಸಪ್ತಭೂಮಿಕೆಗಳನ್ನು ಅನುಸಂಧಾನಮಾಡುತ್ತೇನೆ—

ಮೂರು ಕರಣಗಳು—ಮನಸ್ಸು, ವಾಕ್ಕು, ಕರ್ಮ.

ಸಪ್ತ ಭೂಮಿಕೆಗಳು—ಸಪ್ತ ಪ್ರಮಾತೃಗಳು.

ಏಕದಾ—ಆಕಾಶ ಶೂನ್ಯ—ನಿರಾಕಾರವಾದ ಚಿತ್ತು.

ಇಡಾ ಪಿಂಗಳಾ ಸುಷುಮ್ನಾ ಇವುಗಳಿಗೆ ಗಂಗಾ ಯಮುನಾ ಸರಸ್ವತಿ ನದಿಗಳೆಂದು ಸಾಂಪ್ರದಾಯಿಕವಾಗಿ ಹೇಳುತ್ತೇವೆ. ಶಿವನು ಕಾಶಿಯಲ್ಲಿದ್ದಾನೆಂದು ಹೇಳುತ್ತೇವೆ—ಇಲ್ಲಿ ಕಾಶಿಯೇ ಬ್ರಹ್ಮರಂಧ್ರ. ಪ್ರಯಾಗದಲ್ಲಿ ಗಂಗಾ ಯಮುನಾನದಿ

ಗಳ ಸಂಗಮ. ಸರಸ್ವತಿ ಗುಪ್ತಗಾಮಿನಿ. ಗಂಗಾ ಯಮುನೆಗಳೇ ಇಡಾಪಿಂಗಳಗಳು. ಸರಸ್ವತಿಯೇ ಸುಷುಮ್ನಾ—ಇವು ಮೂರೂ ಸೇರಿದರೇನೇ ಸುಷುಮ್ನಾ ವಿಕಾಸವೆಂದು ಯೋಗದ ವಿವರಣೆ—ಸುಷುಮ್ನಾ ವಿಕಾಸ ಬ್ರಹ್ಮರಂಧ್ರದಲ್ಲಿ—

ಇದೊಂದು ರೂಪಕ. ಈ ರೂಪಕದೃಷ್ಟಿಯಿಂದ ಈ ವಚನದಲ್ಲಿ ಕಾಶ್ಮೀರ ಪ್ರಾಂತದ ವರ್ಣನೆಯಿದೆ. ಈ ಸಂಬಂಧವಾಗಿ ಒಂದು ಜಾನಪದದ ಕಥೆಯೂ ಇದೆಯಂತೆ. ಈ ರೂಪಕದಲ್ಲಿ ಮೇಲೆ ಹೇಳಿದ್ದನ್ನು ಕಾಶ್ಮೀರದೇಶದ ವರ್ಣನೆಗಳೊಡನೆ ಊಹಿಸಿಕೊಳ್ಳಬಹುದು—

೩೫ ಯಥಾ ಶಿಲ್ಪೈಕೈವ ಸ್ವಜಾತಿ ಭೇದಾತ್
ಪೀಠಾದಿ ನಾನಾವಿಧ ರೂಪ ಭಾವಿನೀ |
ತಥೈವ ಯೋಽನಂತತಯಾ ವಿಭಾತಿ
ಕಷ್ಟೇನ ಲಭ್ಯ ಶೃಣುಂ ತಂ ಗುರೋಃ ಶಿವಮ್ || ೫೨ ||

ಯಾವ ರೀತಿ ಕಲ್ಲುಕಟ್ಟಡವು ತನ್ನ ಜಾತಿಭೇದದಿಂದ—ಕಲ್ಲು, ಚಪ್ಪಡಿ, ತೊಲೆ, ವಿಗ್ರಹ, ರತ್ನ, ವಜ್ರ ಮೊದಲಾದ ಭೇದಗಳಿಂದ—ಬೇರೆ ಬೇರೆ ಕೆಲಸಗಳಿಗೆ ಆಸ್ಪದವಾಗುತ್ತದೆಯೋ ಹಾಗೆಯೇ ಒಂದೇ ಒಂದಾದ ಪರವಸ್ತುವು ಅನಂತವಾದ ಭೇದರೂಪಗಳುಳ್ಳ ಈ ವಿಶ್ವರೂಪದಿಂದ ಪ್ರಕಾಶಿಸುತ್ತಲಿದೆ. ಇಂತಹ ಪರವಸ್ತುವನ್ನು ಕೇವಲ ಉಪದೇಶಗಳಿಂದಲೇ ತಿಳಿಯುವುದು ಕಷ್ಟ—ಜಿಜ್ಞಾಸುವೆ ತಿಳಿ.

೩೬ ಗೃಹೇ ನಿವಾಸೋ ನ ವಿಮೋಕ್ಷ ಹೇತುಃ
ವನೇಽಥವಾ ಯೋಗಿವರ್ಯೈಃ ಪ್ರತಿಷ್ಠ |
ದಿವಾ ನಿಶಂ ಸ್ವಾತ್ಮವಿಮರ್ಶನಾಥ್ಯೋ
ಯಥಾ ಸ್ಥಿತಸ್ತ್ವಂ ಪರಮೋಽತ್ಸ್ಯುಪಾಯಃ || ೫೫ ||

ಮನೆಯಲ್ಲಿ ವಾಸಮಾಡುವುದೂ ಮೋಕ್ಷಕ್ಕೆ ಕಾರಣವಲ್ಲ. ಕೆಲವು ಶ್ರೇಷ್ಠರಾದ ಯೋಗಿಗಳು ಹೇಳುವಂತೆ ಕಾಡಿನಲ್ಲಿ ವಾಸಮಾಡುವುದೂ ಮೋಕ್ಷಕ್ಕೆ ಕಾರಣವಲ್ಲ. ರಾತ್ರಿ ಹಗಲೂ ಸ್ವಸ್ವರೂಪ ವಿಮರ್ಶನೆಯೇ ಮುಖ್ಯವಾದ ಕಾರಣ. ಅದೇ ತಾತ್ವಿಕವಾದದ್ದು. ನೀನೇ ಪರಮೇಶ್ವರನ ಸಾಕ್ಷಾತ್ಕಾರಕ್ಕೆ ಉಪಾಯವು.

೩೭ ನಾಭ್ಯುತ್ಥಿತೋ ಹಾಹೂ ಜಠರಾಗ್ನಿತಪ್ತೋ
ಹೂಹ್ ದ್ವಾದಶಾಂತಾಚ್ಛಿರಾತ್ಸಮುತ್ಥಃ |
ಹಾಹೂ ಪ್ರಾಣಭೂತೋಽಸ್ತ್ಯಥ ಹೂಹ್ ಅಪಾನಃ
ಸಿದ್ಧಾಂತ ಏವಂ ಮುನಿಭಿಃ ಪ್ರದಿಷ್ಟಃ || ೫೭ ||

ನಾಭಿಯಿಂದ ಹೊರಟಿರುವುದೂ ಜಠರಾಗ್ನಿಯಿಂದ ಬಿಸಿಯಾಗಿರುವುದೂ ಅಪಾನವಾಯು. ಬ್ರಹ್ಮರಂಧ್ರದಿಂದ ತಣ್ಣಗಿರುವ ಚಂದ್ರಸ್ಥಾನದಿಂದ ಹೊರಡುವುದು ಪ್ರಾಣವಾಯು. ಹೀಗೆ ಪ್ರಾಣಾಪಾನ ವಿವೇಚನೆಯನ್ನು ತಿಳಿದಿರುವವರು ಹೇಳಿದ್ದಾರೆ.

ಚಂದ್ರನು ಮೇಲೆ ತಲೆಯಲ್ಲಿಯೂ ಸೂರ್ಯನು ಕೆಳಗೆ ನಾಭಿ ಪ್ರದೇಶದಲ್ಲಿಯೂ ಇದ್ದಾನೆಂಬುದು ಯೋಗ ಸಂಪ್ರದಾಯದ ವರ ವಿವರಣೆ. ಇದನ್ನೇ ಪ್ರಾಣಾಪಾನ (ಚಂದ್ರ ಸೂರ್ಯ) ಎಂದು ಹೇಳುವುದು. ಪ್ರಾಣಾಪಾನಗಳನ್ನು ನಿಲ್ಲಿಸಿದರೆ ಸುಷಮ್ನಾ ನಾಡಿಯು ವಿಕಸಿಸುತ್ತದೆ ಎಂಬುದು ಯೋಗದವರ ನಿಶ್ಚಯ—ಕುಂಡಲಿನೀ ಚಾಲನ ಅಂದರೂ ಇದೇ.

೩೮ ಕರೋಮಿ ಯತ್ಕರ್ಮ ತದೇವ ಪೂಜಾ
ವದಾಮಿ ಯಚ್ಚಾಪಿ ತದೇವ ಮಂತ್ರಃ।
ಯದೇವ ಚಾಯಾತಿ ತಥೈವ ಯೋಗಾದ್
ದ್ರವ್ಯಂ ತದೇವಾಸ್ತಿ ಮಮಾತ್ರತಂತ್ರಮ್ ।। ೫೮ ।।

ನಾನು ಯಾವ ಕೆಲಸಗಳನ್ನು ಮಾಡುತ್ತೇನೆಯೋ ಆ ಕೆಲಸಗಳೆಲ್ಲವೂ ಪೂಜೆಯೇ. ಉಚ್ಚರಿಸುವುದೆಲ್ಲವೂ ಮಂತ್ರವೇ. ಯಾವ್ಯಾವುವು ಕಾಲ ಕರ್ಮಸಂಯೋಗದಿಂದ ಲಭಿಸುತ್ತವೆಯೋ ಅವೆಲ್ಲವೂ ಪೂಜಾದ್ರವ್ಯಗಳೇ. ಯಾವ ರೀತಿ ಪ್ರಪಂಚವ್ಯವಹಾರವನ್ನು ನಡೆಸುತ್ತೇನೆಯೋ ಅದೆಲ್ಲವೂ ತಂತ್ರವೇ.

ಜ್ಞಾನಿಯ ಎಲ್ಲಾ ವ್ಯಾಪಾರಗಳೂ ಯಜ್ಞರೂಪವಾಗಿರುವುವೆಂದು ಉಪನಿಷತ್ತುಗಳಲ್ಲಿ ವರ್ಣನೆಗಳಿವೆ—ಮೇಲೆ ವಿವರಿಸಿರುವವುಗಳೆಲ್ಲವೂ ಪ್ರಾಣಾಪಾನ ವಿವೇಚನೆಯ ತಿಳಿವಳಿಕೆ ಮತ್ತು ಅನುಭವಗಳಿಂದ ಸಿದ್ಧಿಯನ್ನು ಪಡೆದಿರುವವರು ಹೇಳುವ ಮಾತುಗಳು.

೩೯ ಯದೇವಷಟ್ಕಂ, ತೇದೇವ, ತದೇವ ಚ, ಮಮ ಪ್ರಭೋ।
ನಿಯೋಕ್ತಾತ್ವಂ ನಿಯೋಜ್ಯಾಹಂ ತಸ್ಯಾಸ್ತೀತ್ಯಾವಯೋರ್ಭಿದಾ ।। ೧೩ ।।

ಪ್ರಭುವೇ, ನೀನೂ ನಾನೂ ಒಂದೇ. ನಿನಗೆ ಯಾವ ಆರು ಶಕ್ತಿಗಳಿವೆಯೋ ನನಗೂ ಅದೇ ಆರು ಶಕ್ತಿಗಳಿವೆ. ನೀನು ನಡೆಯಿಸುವವನು. ನಾನು ನಡೆಯುವವಳು. ಈ ವಿಧವಾದ ವ್ಯತ್ಯಾಸವೇ ನಮ್ಮಿಬ್ಬರಿಗೂ ಇರುವ ಭೇದ.

ಷಟ್ಕ	ಸರ್ವಜ್ಞತ್ವ,	ಸರ್ವಕರ್ತೃತ್ವ,	ಪೂರ್ಣತ್ವ,	ನಿತ್ಯತ್ವ,	ವ್ಯಾಪಕತ್ವ,	ಸತ್ವ	ಸತ್ ಎರಡರಲ್ಲಿಯೂ ಒಂದೇ
	ವಿದ್ಯಾ	ಕಲಾ	ರಾಗ	ಕಾಲ	ನಿಯತಿ	,,	

ಈ ಆರು ಶಕ್ತಿಗಳು ಜೀವಾತ್ಮನಲ್ಲಿ ಸಂಕುಚಿತವಾಗಿವೆ.

೪೦ ಚೈತ್ಯಂ ದೇವೋ ನಿರ್ಮಿತೌ ದ್ವೌ ತ್ವಯಾಯೌ
ಪೂಜಾಹೇತೋಸ್ತೌ ಶಿಲಾತೋ ನ ಭಿನ್ನೌ|
ದೇವೋಽಮೇ ಯಶ್ಚಿತ್ಸ್ವರೂಪೋ ವಿಧೇಯಂ
ತದ್ವ್ಯಾಪ್ತ್ಯರ್ಥಂ ಪ್ರಾಣ ಚಿತ್ತೈಕ್ಯಮೇವ ||೧೭||

ಮನಸ್ಸಿನಿಂದ ತಿಳಿಯಲ್ಪಡತಕ್ಕ ವಸ್ತುಗಳೂ (ಚೈತ್ಯಂ) ಲೀಲೆಯಿಂದ ಅನೇಕ ರೂಪಗಳನ್ನು ಪಡೆದಿರುವ ಚಿತ್ತೂ (ದೇವಃ)—ಅಂದರೆ ಗ್ರಾಹ್ಯ ಗ್ರಾಹಕಗಳೆರಡೂ—ಪೂಜೆಮಾಡತಕ್ಕ ವಸ್ತುವೂ ಪೂಜೆಮಾಡುವವನೂ ಇವೆರಡೂ—ಪೂಜೆಗೋಸ್ಕರ ಶಿಲೆಯಿಂದ ಬೇರೆಯಾಗದಿರುವ ಹಾಗೆ ನಿನ್ನಿಂದ ನಿರ್ಮಿಸಲ್ಪಟ್ಟಿವೆ. ಪ್ರಾಣಶಕ್ತಿಯ ವ್ಯಾಪಾರವನ್ನು ತಡೆದು ಚಿತ್ತದಲ್ಲಿ ಲಯಮಾಡಿದರೆ ಇವುಗಳ ಐಕ್ಯವು ಸಾಕ್ಷಾತ್ಕೃತ ವಾಗುತ್ತದೆ.

(ಇಲ್ಲಿ ಪೂಜ್ಯ ಪೂಜಕಭಾವವೇರ್ಪಟ್ಟಿದೆ.) ದೇವನು ಪೂರ್ತಿಯಾಗಿ ತಿಳಿಯ ಲಿಕ್ಕಾಗದೆ ಇರುವವನು (ಅಮೇಯನು) ಚಿತ್ಸ್ವರೂಪನು; ಆದರೂ ತಿಳಿಯಬೇಕಾ ಗಿರುವವನು (ವಿಧೇಯ) ಇಲ್ಲಿ ಶಿಲಾ ಎಂದರೆ ಜಡಪ್ರಪಂಚ. ಪೂಜೆ ಮಾಡತಕ್ಕ ವಸ್ತುವು ಮತ್ತು ಪೂಜೆ ಮಾಡುವವನು ಎರಡೂ ಒಂದೇ. ಪ್ರಾಣಶಕ್ತಿಯ ವ್ಯಾಪಾರವನ್ನು ತಡೆದು ಚಿತ್ತದಲ್ಲಿ ಲಯಮಾಡಿದರೆ ಆಗ ಇವೆರಡರ ಐಕ್ಯವು ಸಾಕ್ಷಾತ್ಕೃತವಾಗುತ್ತದೆ. ಆ ಪರಮಾತ್ಮವ್ಯಾಪ್ತಿಯನ್ನು ಪಡೆಯಲಿಕ್ಕೆ ಪ್ರಾಣ ಶಕ್ತಿ ಮತ್ತು ಚಿತ್ತಗಳ ಐಕ್ಯವೇರ್ಪಡಬೇಕು.

ಫಲೌನ್ಮುಖ್ಯ (ನಾಲ್ಕನೆಯ ಹಂತ)

೪೧ ಆತ್ಮಾಪರೋದಿನಂ ರಾತ್ರಿರ್ಯಸ್ಯಸರ್ವಮಿದಂ ಸಮಂ|
ಭಾತಮದ್ವೈತ ಮನಸಸ್ತೇನ ದೃಷ್ಟೋಽಮರೇಶ್ವರಃ ||೫||

ತಾನೂ ಮತ್ತು ಇತರರೂ ಸುಖ ಮತ್ತು ದುಃಖಗಳೂ ಒಂದೇ ಎಂದು ಯಾರಿಗೆ ಸಮಾನವಾಗಿ ಅಭಿನ್ನವಾಗಿ ಅನುಭವಕ್ಕೆ ಬರುತ್ತದೆಯೋ ಅಂತಹ ಸಾಧಕ ನಿಗೆ—ಅದ್ವೈತಭಾವನೆ ಮನಸ್ಸುಳ್ಳ ಜೀವನಿಗೆ ಅಮರೇಶ್ವರನು ಸಾಕ್ಷಾತ್ಕೃತ ವಾಗುವನು.

೪೨ ಭಾನೌನಷ್ಟೇ ಕಾಶತೇ ಚಂದ್ರಬಿಂಬಂ
ತಸ್ಮಿನ್ನಷ್ಟೇ ಕಾಶತೇ ಚಿತ್ತಮೇವ|
ಚಿತ್ತೇನಷ್ಟೇ ದೃಶ್ಯಜಾತಂ ಕ್ಷಣೇನ
ಪೃಥ್ವ್ಯಾದೀದಂ ಗಚ್ಛತಿಕ್ವಾಪಿ ಸರ್ವಮ್ ||೬||

ಸೂರ್ಯಾಸ್ತಮಯವಾದ ನಂತರ ಚಂದ್ರಬಿಂಬವು ಬೆಳಗುತ್ತದೆ. ಆ ಚಂದ್ರನು ಅಸ್ತಂಗತನಾದರೆ ಮನಸ್ಸೊಂದೇ ಕಂಗೊಳಿಸುತ್ತದೆ. ಮನಸ್ಸು ನಾಶವಾದರೆ ಈ ಭೂಮಿಯೇ ಮೊದಲಾದ ಕಣ್ಣಿಗೆ ಕಾಣಿಸುವ ಎಲ್ಲಾ ಪದಾರ್ಥಗಳೂ ಒಂದು ಕ್ಷಣದಲ್ಲಿ ಎಲ್ಲಿಯೋ ಕಾಣಿಸದೆ ಹೋಗಿಬಿಡುತ್ತವೆ. ಅಂದರೆ ಪ್ರಪಂಚದ ವಸ್ತುಗಳಿಂದ ಇವನಿಗೆ ಯಾವ ವಿಧವಾದ ತೊಂದರೆಯೂ ಇರುವುದಿಲ್ಲ.

ಪಾರಿಭಾಷಿಕವಾಗಿ ಹೇಳುವುದಾದರೆ ಬಾಹ್ಯೇಂದ್ರಿಯಗಳಿಂದ ಉಂಟಾಗುವ ಜ್ಞಾನದಿಂದ ಜಾಗ್ರದವಸ್ಥೆಯಲ್ಲಿ ಎಲ್ಲವನ್ನೂ ನಾವು ಅನುಭವಿಸುತ್ತೇವೆ. ಇದನ್ನು ಮೀರಿರುವುದು ಕೇವಲ ಮಾನಸಿಕ ಅನುಭವ. ಮಾನಸಿಕ ಅನುಭವದ ವರೆಗೂ ಭೇದಜ್ಞಾನದ ಪ್ರಪಂಚವಿರುತ್ತದೆ. ಮನಸ್ಸನ್ನು ದಾಟಿದರೆ ಚಿದನುಭವವುಂಟಾಗುತ್ತದೆ. ಅದು ಅಭಿನ್ನವಾದದ್ದು. ಅಲ್ಲಿ ವೃತ್ತಿಭೇದಗಳಿಗೆ ಅವಕಾಶವಿಲ್ಲ—ಇಲ್ಲಿ ಚಂದ್ರ ಸೂರ್ಯರು ನಮ್ಮ ಶರೀರದಲ್ಲಿರುವ ಮೇಲಿನ ಮತ್ತು ಕೆಳಗಿನ ಚಕ್ರಗಳನ್ನು ಸೂಚಿಸುತ್ತವೆ. ತೀವ್ರವಾದ ಯೋಗಾಭ್ಯಾಸದಿಂದ ಇವೆರಡೂ ನಾಶವಾಗಿ ಹೋದರೆ ಬಾಹ್ಯೇಂದ್ರಿಯಜ್ಞಾನವು ಹೋಗಿ ಅಂತರಿಂದ್ರಿಯಜ್ಞಾನವೊಂದೇ ಉಳಿಯುತ್ತದೆ—ಈ ಅಂತರಿಂದ್ರಿಯಜ್ಞಾನವೂ ಸಂವಿತ್ತಿನಲ್ಲಿ ಸೇರಿಹೋದರೆ ಚಿತ್ತವೂ ನಷ್ಟವಾಗಿ ಎಲ್ಲವನ್ನೂ ತನ್ನಲ್ಲಿ ಲಯಮಾಡಿಕೊಳ್ಳುವ ಪರಾಸಂವಿತ್ತೊಂದೇ ಉಳಿಯುತ್ತದೆ.

೪೩ ಅವಾಚ್ಯಾನಿ ಸಹಸ್ರಾಣಿ ಕಥಯಂತು ನ ಮನ್ಮನಃ
ಮಾಲಿನ್ಯಮೇತ್ಯುದಾಸೀನಂ ರಜೋಭಿರ್ಮುಕುರೋ ಯಥಾ ॥ ೧೮ ॥

ಜನಗಳು ಸಾವಿರಾರು ಬಗೆ ಬಯ್ಯಲಿ. ಉದಾಸೀನದಿಂದಿರುವ ನನ್ನ ಮನಸ್ಸು ಮಲಿನವಾಗುವುದಿಲ್ಲ. ಕನ್ನಡಿಯು ಯಾವ ರೀತಿ ಧೂಳಿನಿಂದ ಮಲಿನವಾಗುವುದಿಲ್ಲವೋ ಹಾಗೆ ಈ ಜನಾಪವಾದದಿಂದ ನನ್ನ ಮನಸ್ಸು ಉದ್ವೇಗಪಡುವುದಿಲ್ಲ. ಮಲಿನವಾಗುವುದಿಲ್ಲ.

ಇಲ್ಲಿ ಉದಾಸೀನ ಅಂದರೆ ಪರಶಿವಾನುಸಂಧಾನದಲ್ಲಿಯೇ ಇದ್ದು ಭೂಷಣೆ ದೂಷಣೆಗಳಲ್ಲಿ ಉದಾಸೀನವಾಗಿರುವುದೆಂದರ್ಥ.

೪೪ ನಿಂದಂತು ವಾ ಮಾಮಥವಾ ಸ್ತುವಂತು
ಕುರ್ವಂತು ವಾರ್ಚಾಂ ವಿವಿಧೈಃ ಸುಪುಷ್ಪೈಃ ।
ನ ಹರ್ಷಮಾಯಾಮ್ಯಥವಾ ವಿಷಾದಂ
ವಿಶುದ್ಧ ಬೋಧಾಮೃತಪಾನಸ್ವಸ್ಥಾ ॥ ೨೧ ॥

ನನ್ನನ್ನು ತೆಗಳಲಿ, ಹೊಗಳಲಿ, ಒಳ್ಳೆ ಹೂಗಳಿಂದ ನನ್ನನ್ನು ಪೂಜೆಮಾಡಲಿ ಬಿಡಲಿ, ಏನುಮಾಡಿದರೂ ನಿರ್ಮಲವಾದ ಜ್ಞಾನಾಮೃತಪಾನಮಾಡಿ ಶಾಂತನಾಗಿರುವ ನಾನು ಸಂತೋಷಪಡುವುದೂ ಇಲ್ಲ, ದುಃಖಪಡುವುದೂ ಇಲ್ಲ.

೪೫ ನಾಶಂ ಗತೇಽರ್ಕೇ ಖಲು ಮಾನಸಂಜ್ಞೇ
ಮೇಯಕ್ಷಯಾಖ್ಯಾ ರಜನೀ ವಿಭಾತಿ |
ಜೀವಾಖ್ಯಚಂದ್ರಃ ಶಿವಧಾಮ್ನಿ ಲೀನಃ
ಸ್ವಾಹಂತ್ವರಾಹುಂ ಗ್ರಸತೇಚ ಸದ್ಯಃ || ೨೨ ||

ಅಭಿಮಾನವೆಂಬ ಸೂರ್ಯನು ಮುಳುಗಿ ಪ್ರಮಾಣಗಳಿಂದ ತಿಳಿಯುವ ಭೇದ ಪ್ರಪಂಚವು ನಿವೃತ್ತಿಯಾಗಲಾಗಿ ಆ ಮಹಾಕತ್ತಲೆಯು ಬೆಳಗುತ್ತದೆ. ಈ ಕತ್ತಲೆಯಲ್ಲಿ ಜೀವನೆಂಬ ಚಂದ್ರನು ಶಿವಸ್ವರೂಪದಲ್ಲಿ ಲೀನನಾಗಿ ಸ್ವಾತ್ಮಾಹಂಕಾರವೆಂಬ ರಾಹುವನ್ನು ನುಂಗುತ್ತಾನೆ—

ಇಲ್ಲಿ ವಿರೋಧಾಲಂಕಾರದಿಂದ ಅಲ್ಪಾಹಂತಾಲಯ ವರ್ಣನೆಯಿದೆ. ಪ್ರಮಾಣಗಳಿಂದ ಉಂಟಾಗುವ ತಿಳಿವಳಿಕೆಯು ಭೇದರೂಪವಾಗಿದೆ. ಇದನ್ನು ಮೀರುವಿಕೆಯೇ ಮಾನಸೂರ್ಯಾಸ್ತಮಯ. ಅಭೇದ ವ್ಯಾಪ್ತಿಯೇ ಮೇಯಕ್ಷಯವೆಂಬ ಕತ್ತಲೆ. ಜೀವನು ತಾನು ಶಿವನೆಂದು ತಿಳಿಯುವಿಕೆಯೇ ಜೀವನೆಂಬ ಚಂದ್ರನು ಶಿವರೂಪದಲ್ಲಿ ಲೀನನಾಗುವಿಕೆ. ಅಖಂಡೈಕ ರಸಾನುಭವವೇ ಜೀವನೆಂಬ ಚಂದ್ರನು ಸ್ವಾತ್ಮಾಹಂಕಾರ ರಾಹುವನ್ನು ನುಂಗುವಿಕೆ.

ಮೇಯ—ಪ್ರಮಾಣಗಳಿಂದ ತಿಳಿಯಲ್ಪಡುವ ಪದಾರ್ಥಗಳು ಮತ್ತು ಅವುಗಳ ಜ್ಞಾನಗಳು—

೪೬ ಚಿತ್ತಾದರ್ಶೇ ನಿರ್ಮಲತ್ವಂ ಪ್ರಯಾತೇ
ಪ್ರೋದ್ಭೂತಾ ಮೇ ಸ್ವಜನೇ ಪ್ರತ್ಯಭಿಜ್ಞಾ |
ದೃಷ್ಟೋದೇವಃ ಸ್ವಸ್ವರೂಪೋ ಮಯಾಸೌ
ನಾಹಂ ನತ್ವಂ ನೈವಚಾಯಂ ಪ್ರಪಂಚಃ || ೩೧ ||

ಮನಸ್ಸೆಂಬ ಕನ್ನಡಿಯು ಸ್ವಚ್ಛವಾಗಲಾಗಿ ನನಗೆ ಆತ್ಮೀಯರಲ್ಲಿ ಮೂಲಭೂತವಾದ ಹಿಂದಿನ ಜ್ಞಾನವುಂಟಾಯಿತು. ಸ್ವಜನ ಪರಜನ ಇವುಗಳೆಲ್ಲಾ ಒಂದೇ ಎಂಬ ಭಾವನೆಯುಂಟಾಯಿತು. ಇದರಿಂದ ಆ ಪರಮಾತ್ಮನು ನನ್ನಿಂದ ಬೇರೆಯಲ್ಲವೆಂದು ತಿಳಿದೆನು. ಇಂತಹ ಅಭೇದ ಭಾವನೆಯಿಂದ ನಾನೂ ನೀನೂ ಎಂಬ ಭೇದಬುದ್ಧಿಯು ಮಾಯವಾದದ್ದಲ್ಲದೆ ಈ ಹೊರಗಿನ ಪ್ರಪಂಚವು ಪರಮಾತ್ಮನಿಂದ ಭಿನ್ನವಲ್ಲವೆಂದು ತಿಳಿದೆನು.

೪೭ ಕಶ್ಚಿತ್ ಪ್ರಸುಪ್ತೋಽಪಿ ವಿಬುದ್ಧ ಏವ
ಕಶ್ಚಿತ್ ಪ್ರಬುದ್ಧೋಽಪಿ ಸುಪ್ತತುಲ್ಯಃ।
ಸ್ನಾತೋಽಪಿ ಕಶ್ಚಿದಶುಚಿರ್ಮತೋ ಮೇ
ಭುಕ್ತ್ವಾಽಪಿ ಸ್ತ್ರಿಯಂ ಚಾಪ್ಯಪರಃ ಸುಪೂತಃ ॥ ೨೨ ॥

ಈ ಬಗೆಯಾದ ಅಭೇದ ಭಾವನೆಯಿಂದಿರುವವನು ನಿದ್ದೆ ಮಾಡುತ್ತಿದ್ದರೂ ಎಚ್ಚರವಾಗಿರುವವನೇ ಆಗಿರುತ್ತಾನೆ. ಎಚ್ಚರವಾಗಿದ್ದರೂ ನಿದ್ದೆಮಾಡುತ್ತಿರುವವನಿಗೆ ಸಮಾನನಾಗಿರುವವನೇ ಆಗಿರುತ್ತಾನೆ. ಕೆಲವರು ಗಂಗಾ ಮೊದಲಾದ ನದಿಗಳಲ್ಲಿ ಸ್ನಾನಮಾಡಿದರೂ ಮೈಲಿಗೆಯಾಗಿರುವವರೇ ಆಗಿರುತ್ತಾರೆ. ಇತರರು ಪ್ರಾಪಂಚಿಕವಾದ ಸ್ತ್ರೀಸಂಬಂಧವೇ ಮೊದಲಾದ ನಡೆವಳಿಕೆಗಳಿದ್ದರೂ ಪವಿತ್ರವಾದವರೆಂದೇ ನನ್ನ ಅಭಿಪ್ರಾಯ—

ಇಲ್ಲಿ ನಿದ್ದೆ ಎಂದರೆ ಮಾಯೆಯೆಂಬ ನಿದ್ದೆ—
ಅಶುಚಿ=ಆತ್ಮಕ್ಕೆ ಅಂಟಿಕೊಂಡಿರುವ ಮಲ ಅಥವಾ ದೋಷ.

೪೮ ಆಬ್ರಹ್ಮಾಂಡಂ ನಾಭಿತೋ ಯೇನ ನಿತ್ಯ
ಮೋಂಕಾರಾಖ್ಯೋ ಮಂತ್ರ ಏಕೋಽಧ್ಯತೋಽಯಂ।
ಕೃತ್ವಾ ಚಿತ್ತಂ ತದ್ವಿಮರ್ಶೈಕಸಾರಂ
ಕಿಂ ತಸ್ಯಾನ್ಯೈರ್ಮಂತ್ರವೃಂದೈ ರ್ವಿಧೇಯಂ ॥ ೨೩ ॥

ನಾಭಿಯಿಂದ ಮೊದಲುಮಾಡಿಕೊಂಡು ಬ್ರಹ್ಮಾಂಡವನ್ನೆಲ್ಲಾ ಆಕ್ರಮಿಸಿರುವ ಓಂಕಾರವೆಂಬ ಮಂತ್ರವು ಯಾವಾಗ ಅನುಸಂಧಾನಮಾಡಲ್ಪಡುತ್ತದೆಯೋ ಯಾವನ ಮನಸ್ಸು ಈ ಪ್ರಣವದ ವಿಮರ್ಶೆಯೇ ಪ್ರಧಾನವಾದ ಗುರಿಯುಳ್ಳದ್ದಾಗಿರುತ್ತದೆಯೋ ಅವನಿಗೆ ಬೇರೆ ಮಂತ್ರಗಳಿಂದೇನಾಗಬೇಕು.

ಇಲ್ಲಿ ನಾಭಿ ಎಂಬುದನ್ನು ದೇಹದಲ್ಲಿ ನಾಭಿಪ್ರದೇಶದ ಕೆಳಗೆ ಆಸನಪ್ರದೇಶದ ಮೇಲ್ಭಾಗದಲ್ಲಿರುವ 'ಕಂದ'ವೆಂಬ ಸೂಕ್ಷ್ಮಗ್ರಂಥಿಯೆಂಬರ್ಥದಲ್ಲಿ ಉಪಯೋಗಿಸಿದೆ. ಇಲ್ಲಿಂದಲೇ ನಮ್ಮ ಮನಸ್ಸಿನ ವೃತ್ತಿಗಳೂ ವಾಸನೆಗಳೂ ಉದ್ಭವವಾಗಿ ಹೊರಡುವುದು. ಪ್ರಾಣಶಕ್ತಿಯು ಇಲ್ಲಿಂದ ಹೊರಟು ಚಕ್ರಗಳ ಮೂಲಕ ಹರಿದು ಹೃದಯದ ಮೂಲಕ ಮೇಲಕ್ಕೆ ಹೋಗುತ್ತದೆ. ಸಾಧಕನು ಧ್ಯಾನಮಾಡುವಾಗ್ಗೆ ಉಚ್ಛ್ವಾಸದ ವಾಯುವನ್ನು ಪೂರಕವಾಗಿ ಬಂಧಿಸಿ ಶಿವನಲ್ಲಿ ತನ್ನ ಮನಸ್ಸು ಐಕ್ಯವಾಗುವಂತೆ ಮಾಡಿ ತಲೆಯಲ್ಲಿರುವ ಸಾಂಕೇತಿಕ ಚಂದ್ರನಿಂದ ಅಮೃತವನ್ನು ಸುರಿಸುವ ಹಾಗೆ ಮಾಡುವುದೆಂದು ಯೋಗಸಂಪ್ರದಾಯದವರು ಹೇಳುವುದನ್ನೇ ಪ್ರಣವ ವಿಮರ್ಶೆಯೆಂದೆನ್ನುವುದು—

೪೯ ಆಸಾದ್ಯ ಸಂಸಾರಮಹಂ ವರಾಕೀ
ಪ್ರಾಪ್ತಾವಿಶುದ್ಧಂ ಸಹಜಂ ಪ್ರಬೋಧಂ|
ಮ್ರಿಯೇನಕಸ್ಯಾಪಿ ನಕೋಽಪಿ ಮೇವಾ
ಮೃತಾ ಮೃತೇ ಮಾಂ ಪ್ರತಿತುಲ್ಯರೂಪೇ || ೩೪ ||

ಬಡಪಾಯಿಯಾದ ನಾನು ಈ ಸಂಸಾರವನ್ನು ಹೊಂದಿದ್ದರೂ ಸಹಜವಾದ ಜ್ಞಾನವಿಕಾಸವನ್ನು ಹೊಂದಿದ್ದೇನೆ. ಈ ವಿಕಾಸದಿಂದ ನಾನು ಯಾರ ಅನುಬಂಧದ ದೃಷ್ಟಿಯಿಂದಲೂ ಸಾಯುವವಳಲ್ಲ. ನನ್ನ ಅನುಬಂಧದ ದೃಷ್ಟಿಯಿಂದ ಯಾರೂ ಸಾಯಬೇಕಾಗಿಲ್ಲ. ಮರಣ, ಮರಣವಿಲ್ಲದಿರುವಿಕೆ ಇವೆರಡೂ ನನಗೆ ಸಮಾನ.

ಅಖಂಡವಾದ ಚಿತ್ತಿನ ವ್ಯವಹಾರದಲ್ಲಿ ಕೆಲವು ಉಬ್ಬರವಿಳಿತಗಳಾಗುತ್ತವೆ. ಅವುಗಳಲ್ಲಿ ಜನನ ಮರಣಗಳೂ ಸೇರಿವೆ. ಅವುಗಳನ್ನು ಸಾಮಾನ್ಯಜನರು ವಿಪರೀತ ವಾಗಿ ಭಾವಿಸುತ್ತಾರೆ. ಜನನ ಮರಣಗಳು ಕೇವಲ ಕ್ರಿಯಾಶಕ್ತಿಯ ವಿಲಾಸ ಮಾತ್ರ. ಈ ತಾತ್ವಿಕದೃಷ್ಟಿಯಿಂದ ನೋಡಿದರೆ ಲಲ್ಲಯೋಗೀಶ್ವರಿಗೆ ಬದುಕಿರುವುದೂ ಸಾಯುವುದೂ ಎರಡೂ ಸಮಾನವೆಂದು ಗೊತ್ತಾಗುತ್ತದೆ.

ಈ ಸಂದರ್ಭದಲ್ಲಿ ಉತ್ಪಲದೇವನ ಶಿವಸ್ತೋತ್ರಾವಳಿಯ xiii. ೩ ನೆ ಶ್ಲೋಕ ವನ್ನು ಉದಾಹರಿಸಬಹುದು.

ತಾವಕೇ ವಪುಷಿ ವಿಶ್ವನಿರ್ಭರೇ
ಚಿತ್ಸುಧಾರಸಮಯೇ ನಿರತ್ಯಯೇ |
ತಿಷ್ಠತಃ ಸತತಂ ಅರ್ಚತಃ ಪ್ರಭುಂ
ಜೀವಿತಂ ಮೃತಂ ಅಥಾನ್ಯದ್ ಅಸ್ತು ಮೇ ||

ಅನಂತವಾದ ಚಿದೈಕರಸವಾದ ನಿನ್ನ ಶರೀರದಲ್ಲಿದ್ದು ನಿನ್ನನ್ನು ಪೂಜಿಮಾಡು ತ್ತಿರುವ ನನಗೆ ಮರಣವಾಗಲಿ ಜನನವಾಗಲಿ ಅಥವಾ ಬೇರೆ ಅವಸ್ಥೆಗಳಾಗಲಿ ಇರಲಿ, ಏನೂ ವ್ಯತ್ಯಾಸವಿಲ್ಲ, ಏನೂ ವಿಶೇಷವಿಲ್ಲ.

೫೦ ಆಕಾಶೋಭೂರ್ವಾಯುರಾಪೋಽನಿಲಶ್ಚ
ರಾತ್ರಿ ಅಹಶ್ಚೇತಿ ಸರ್ವಂ ತ್ವಮೇವ |
ತತ್ಕಾರ್ಯತ್ವಾತ್ಪುಷ್ಪಮರ್ಘಾದಿ ಚ ತ್ವಂ
ತ್ವತ್ಪೂಜಾರ್ಥಂ ನೈವ ಕಿಂಚಿಲ್ಲಭೇಽಹಮ್ || ೪೨ ||

ಆಕಾಶ ಭೂಮಿ ಗಾಳಿ ನೀರು ಬೆಂಕಿ ರಾತ್ರಿ ಹಗಲು ಎಲ್ಲವೂ ನೀನೆ ಆಗಿದ್ದೀಯೆ. ಹೂ ನೀರೂ ಮೊದಲಾದ ಪೂಜಾದ್ರವ್ಯಗಳೂ ಈ ಭೂತಗಳ ಪರಿಣಾಮರೂಪ

ಗಳಾಗಿವೆ. ಆದುದರಿಂದ ನಿನ್ನನ್ನು ಪೂಜಿಸಲಿಕ್ಕೆ ನನಗೆ ಬೇರೆ ಯಾವ ಪದಾರ್ಥವೂ ದೊರಕುವುದಿಲ್ಲ—ಯಾವುದರಿಂದ ನಿನ್ನನ್ನು ಪೂಜಿಸಲಿ. ಪೂಜ್ಯ ಪೂಜಕ ಪೂಜೋಪಕರಣ ಇವು ಮೂರು ಒಂದಾಗಬೇಕೆನ್ನುವುದು ಕಾಶ್ಮೀರಶೈವದ ಸಿದ್ಧಾಂತ. ಎಲ್ಲವೂ ಶಿವಮಯವೆಂಬ ಅಭೇದ ಭಾವನೆಯಿಂದ ಇದರ ಅನುಭವವೇರ್ಪಡುತ್ತದೆ.

೫೧ ತತ್ಸೋತ್ರದೃಷ್ಟ್ವಾವರಣಾನಿಭೂಯೋ
ಜ್ಞಾತಂ ಮಯಾತ್ರೈವ ಭವಿಷ್ಯತೀತಿ |
ಭಂಕ್ತ್ವಾಯದಾತಾನಿಚ ಸಂಪ್ರವಿಷ್ಟಾ
ಲಲ್ಲೇತಿ ಲೋಕೇ ಪ್ರತಿಥಾತದಾಹಂ || ೪೯ ||

ಆಮೇಲೆ—ಸ್ವರೂಪಾನುಸಂಧಾನದಿಂದ ಆತ್ಮಸಾಕ್ಷಾತ್ಕಾರವನ್ನು ಪಡೆದ ಮೇಲೆ—ಈ ಶರೀರದಲ್ಲಿ ಮರಳಿ ಅನ್ನಮಯಾದಿ ಆವರಣಗಳನ್ನು ದಾಟಿ ಈ ಜೀವಾತ್ಮನು ಈ ಶರೀರದಲ್ಲಿಯೇ ಇರುವನೆಂದು ತಿಳಿದು ಆತ್ಮಸ್ವರೂಪವನ್ನು ಸಾಕ್ಷಾತ್ಕರಿಸಿದ ಮೇಲೆ ಈ ಪ್ರಪಂಚದಲ್ಲಿ 'ಲಲ್ಲಾ' ಎಂಬ ಹೆಸರಿನಿಂದ ಪ್ರಸಿದ್ಧಳಾದೆನು.

ಭಕ್ತ್ವಾ=ದಾಟಿ.

೫೩ ನಾಹಂ ನ ಚ ತ್ವಂ ನ ಚ ಕಾಪಿ ಚರ್ಚಾ
ಧ್ಯಾನಸ್ಯ ಯೋಗ್ಯಾತ್ರಪದೇಽತಿಶಾಂತೇ |
ಕೋಽಪ್ಯನ್ವಯಶ್ಚಾತ್ರ ನ ಭಾತಿ ತಸ್ಮಾತ್
ವಿಸ್ಮಾರ್ಯಲೀನಂ ಸ್ವಮಿವಾತ್ರಸದ್ಭಿಃ || ೫೯ ||

ಪ್ರಶಾಂತವಾದ ಧ್ಯಾನದ ಅವಸ್ಥೆಯಲ್ಲಿ ನಾನು ನೀನು ಎಂಬ ಭೇದವಿಲ್ಲ. ಯಾವ ಬಗೆಯಾದ ಚರ್ಚೆಯೂ ಇಲ್ಲಿ ಉಪಯೋಗವಿಲ್ಲ. ಯಾವ ವಂಶದ ಹಿರಿಮೆಯೂ ಇಲ್ಲಿ ತೋರುವುದಿಲ್ಲ. ಆದುದರಿಂದ ಸ್ವಸ್ವರೂಪವು ಅಖಂಡವಾದ ಬ್ರಹ್ಮನಲ್ಲಿ ಲೀನವಾದಹಾಗೆ—ತನ್ನನ್ನು ತಾನು ಮರೆತಹಾಗೆ—ಇರುತ್ತದೆ.

ಪ್ರಶಾಂತವಾದ ಧ್ಯಾನದಲ್ಲಿ ನಾನು ನೀನು ಎಂಬುವುದಿರುವುದಿಲ್ಲ. ಧ್ಯಾನ ಮಾಡತಕ್ಕ ಧ್ಯೇಯವಸ್ತುವೂ ಇರುವುದಿಲ್ಲ. ತನ್ನನ್ನು ತಾನು ಮರೆತಂತಿರುವುದು. ಎಲ್ಲವೂ ಶಿವಸ್ವರೂಪವೆನ್ನುವುದೊಂದೇ ಇರುವುದು.

ಸತ್ಪುರುಷರು ಒಂದು ಸಾರಿ ಚಿತ್ಸ್ವರೂಪವನ್ನು ಕಂಡರೆ ಅಲ್ಲಿಯೇ ಲೀನವಾಗಿರುತ್ತಾರೆ.

ಸಿದ್ಧಾವಸ್ಥೆ (ಐದನೆಯ ಹಂತ)

೫೩ ತತಃ ಪ್ರಾಣಾದಿ ರೋಧೇನ ಪ್ರಜ್ವಾಲ್ಯ ಜ್ಞಾನದೀಪಿಕಾಮ್ |
ಸ್ಫುಟಂ ದೃಷ್ಟೋ ಮಯಾ ತತ್ರ ಚಿತ್ಸ್ವರೂಪೋ ನಿರಾಮಯಃ || ೪ ||

ಪ್ರಾಣವಾಯುಗಳ ಗತಿಯನ್ನು ತಡೆಯುವುದರ ಮೂಲಕ ಜ್ಞಾನದೀಪವನ್ನು ಬೆಳಗಿಸಿ ನನ್ನ ದೇಹದಲ್ಲಿಯೇ ಚಿದ್ರೂಪಿಯಾದ ವಿಕಾರವಿಲ್ಲದ ಆ ಶಿವನನ್ನು ಸ್ವಚ್ಛವಾಗಿ ನೋಡಿದೆನು—

ಜೀವನಕ್ಕೆ ಮುಖ್ಯಾಧಾರವಾದದ್ದು ಪ್ರಾಣಶಕ್ತಿ. ಇದು ಹಸಿವು ಬಾಯಾರಿಕೆ ಮೊದಲಾದ ಶಾರೀರಕ ಆಕಾಂಕ್ಷೆಗಳನ್ನೂ ಸಂತೋಷ ಉದ್ವೇಗ ಮೊದಲಾದ ಮಾನಸಿಕ ವಿಕಾರಗಳನ್ನೂ ಉಂಟುಮಾಡುವುದಕ್ಕೆ ಕಾರಣವಾಗಿದೆ. ನಿರ್ದಿಷ್ಟವಾದ ಕ್ರಮದಲ್ಲಿ ಪ್ರಾಣವಾಯುವಿನ ಗತಿಯನ್ನು ತಡೆದರೆ ಮನಸ್ಸಿನ ಚಂಚಲತೆಯು ನಿಲ್ಲುತ್ತದೆ. "ಚಲೇವಾತೇ ಚಲಂ ಚಿತ್ತಂ ನಿಶ್ಚಲೇ ನಿಶ್ಚಲಂ ಭವೇತ್" ಎನ್ನುವ ಹಾಗೆ ಪ್ರಾಣಾದಿರೋಧದಿಂದ ಮಧ್ಯನಾಡಿ ವಿಕಾಸವೇರ್ಪಟ್ಟು ಸ್ವಸ್ವರೂಪಾವಿರ್ಭಾವವಾಗಿ ಜ್ಞಾನದೀಪವು ಬೆಳಗುತ್ತದೆ—

ಜ್ಞಾನದೀಪದ ಪ್ರಕಾಶ, ಸ್ವರೂಪಸಾಕ್ಷಾತ್ಕಾರ, ಆತ್ಮಸಾಕ್ಷಾತ್ಕಾರ ಇವುಗಳಿಗೆ ಒಂದೇ ಅರ್ಥ.

೫೪ ತಂತ್ರಂಸರ್ವಂ ಲೀಯತೇ ಮಂತ್ರ ಏವ
ಮಂತ್ರಶ್ಚಿತ್ತೇ ಲೀಯತೇ ನಾದಮೂಲಃ |
ಚಿತ್ತೇಲೀನೇ ಲೀಯತೇ ಸರ್ವಮೇವ
ದೃಶ್ಯಂ ದೃಷ್ಟಾ ಶಿಷ್ಯತೇ ಚಿತ್ಸ್ವರೂಪಃ || ೧೧ ||

ಪೂಜೆಯಲ್ಲಿ ಮಾಡುವ ಕೈಕರಣಗಳೆಲ್ಲಾ ಮಂತ್ರದಲ್ಲಿ ಲಯಗೊಳ್ಳುತ್ತವೆ. ನಾದ (ಶಬ್ದ) ಮೂಲವಾದ ಮಂತ್ರವು ಮನಸ್ಸಿನಲ್ಲಿ ಲಯಗೊಳ್ಳುತ್ತದೆ. ಮನಸ್ಸು ಲಯವಾದರೆ ಎಲ್ಲವೂ ಕರಗಿಹೋಗುತ್ತದೆ. ಗ್ರಾಹ್ಯವಾಗಿರುವ ದೃಶ್ಯಪ್ರಪಂಚವೂ ಗ್ರಾಹಕನಾಗಿರುವ ಆತ್ಮನೂ ಚಿತ್ಸ್ವರೂಪವಾಗಿ ಉಳಿಯುತ್ತಾರೆ.

೫೫ ಕಾಮಾದೀಂ ಕಾನನಷಟ್ಕಮೇತ
ಚ್ಛಿತ್ವಾಮೃತಂ ಬೋಧಮಯಂ ಮಯಾಪ್ತಮ್ |
ಪ್ರಾಣಾದಿರೋಧಾತ್ ಪ್ರಕೃತಿಂಚ ಭಕ್ತ್ಯಾ
ಮನಶ್ಚ ದಗ್ಧ್ವಾ ಶಿವಧಾಮಲಬ್ಧಮ್ || ೧೫ ||

ಕಾಮವೇ ಮೊದಲಾದ ಆರು ಕಾಡುಗಳನ್ನು (ಅರಿಷಡ್ವರ್ಗಗಳನ್ನು) ಕತ್ತರಿಸಿ ಜ್ಞಾನಮಯವಾದ ಅಮೃತವನ್ನು ಹೊಂದಿದ್ದೇನೆ. ಪ್ರಾಣವಾಯುವಿನ ಸಂಚಾರ ವನ್ನು ನಿಲ್ಲಿಸುವುದರಿಂದ ಸ್ವಭಾವವನ್ನು ಗೆದ್ದು ಭಕ್ತಿಯ ಬಲದಿಂದ ಮನಸ್ಸನ್ನು ಸುಟ್ಟು ಶಿವನ ಸಾಕ್ಷಾತ್ಕಾರವನ್ನು ಪಡೆದಿದ್ದೇನೆ.

ಕಾಮ ಕ್ರೋಧ ಲೋಭ ಮೋಹ ಮದ ಮಾತ್ಸರ್ಯಗಳೆಂಬ ಆರು ತೊಂದರೆ ಗಳನ್ನು ಆಚಾರ ಮತ್ತು ತತ್ವಾಭ್ಯಾಸದಿಂದ ಜಯಿಸಿದರೆ ಯೋಗದ ಎಂಟು ಅಂಗಗಳಲ್ಲಿ ಯಮ, ನಿಯಮ, ಆಸನಗಳೆಂಬ ಮೂರು ಸಾಧನಗಳ ಸಿದ್ಧಿಯಾಯಿತು. ಪ್ರಾಣಾ ಯಾಮ ಮತ್ತು ಪ್ರತ್ಯಾಹಾರ ಇವೆರಡು ಅಂಗಗಳ ಮೂಲಕ ಪ್ರಾಣವಾಯುವಿನ ಗತಿಯನ್ನು ತಡೆಯಲು ಸಮರ್ಥನಾಗುತ್ತಾನೆ. ಅನಂತರ ಧಾರಣ ಮತ್ತು ಧ್ಯಾನ ಇವೆರಡು ಅಂಗಗಳ ಸಿದ್ಧಿಯೂ ಭಕ್ತಿಯ ರೂಪದಿಂದ ಸಿದ್ಧಿಸಿದರೆ ಮನೋವೃತ್ತಿಗಳು ದೂರವಾಗುವುವು. ಇಷ್ಟು ಸಿದ್ಧತೆ ಸಕ್ರಮವಾಗಿ ವಿಶದವಾಗಿ ಏರ್ಪಟ್ಟಲ್ಲಿ ಇವುಗಳ ಎಲ್ಲಾ ಸಿದ್ಧಿಗಳ ಫಲವಾದ ಸಮಾಧಿ ಲಾಭವೇರ್ಪಡುವುದು. ಇದೇ ಬೋಧಮಯ ನಾದ ಚಿದ್ರೂಪಿಯಾದ ಶಿವನ ಸಾಕ್ಷಾತ್ಕಾರ.

೫೬ ಕಾಮೋ ಲೋಭೋಽಹಂಕೃತಿಶ್ಚೈವ ಯೇನ
ಯತ್ನಾತ್ಸರ್ವಂ ಮಾರಿತಾ ಮಾರ್ಗಚೋರಾಃ |
ತೇನೈವೈಕೇನೈಶ್ವರಂ ಧಾಮಲಬ್ಧ್ವಾ
ಸರ್ವಂ ತ್ಯಕ್ತ್ವಾ ಭಸ್ಮವದ್ಭಾವಜಾತಂ || ೪೩ ||

ಕಾಮ ಲೋಭ ಅಹಂಕಾರ ಮೊದಲಾದ ದಾರಿಗಳ್ಳರನ್ನು ಹಿಂದೆಯೇ ಬಹಳ ಪ್ರಯತ್ನಪಟ್ಟು ಕೊಂದುಹಾಕಿದ್ದಾಯಿತು. ಅದೇ ಪ್ರಯತ್ನದಿಂದಲೇ ಎಲ್ಲಾ ಪದಾರ್ಥಗಳ ಸ್ವರೂಪವನ್ನೂ ಬೂದಿಯಂತೆಣಿಸಿ ಅಭಿಮಾನವನ್ನು ಬಿಟ್ಟದ್ದಾಯಿತು. ಇದರ ಪ್ರಭಾವದಿಂದಲೇ ಈಶ್ವರನ ಸ್ವರೂಪವನ್ನು ಸಾಕ್ಷಾತ್ಕರಿಸಿದ್ದಾಯಿತು.

೫೭ ದೇಹಾದಿಷಟ್ಕೋಶಪಿಧಾನ ತಸ್ತ್ವಂ
ಅಪ್ರಾಪ್ಯ ಖಿನ್ನಾಸ್ಮಿ ಚಿರಂ ಮಹೇಶ |
ಉಪಾಧಿ ನಿರ್ಮುಕ್ತ ವಿಬೋಧರೂಪಂ
ಜ್ಞಾತ್ವಾದ್ಯ ವಿಶ್ರಾಂತಿ ಮುಪಾಗತಾ ತ್ವಾಂ || ೪೪ ||

ಶರೀರವೇ ಮೊದಲಾದ ಆರು ಕೋಶಗಳ ಆವರಣದಿಂದ ನಿನ್ನನ್ನು ಹೊಂದದೆ ದುಃಖಪಡುತ್ತಲಿದ್ದೇನೆ—ಎಲೈ ಮಹೇಶ್ವರನೇ, ನಿನ್ನನ್ನು ಕಾಣಲು ಇದ್ದ ಎಲ್ಲಾ ತೊಂದರೆಗಳನ್ನೂ ಕಳೆದು ಚಿದ್ರೂಪಿಯಾದ ನಿನ್ನನ್ನು ಸಾಕ್ಷಾತ್ಕರಿಸಿ ಶಾಂತಿಯನ್ನು ಪಡೆದೆನು.

ಷಟ್ಕೋಶಗಳು—ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ; ಆನಂದಮಯ ಕೋಶದಲ್ಲಿ ಜೀವಾತ್ಮ ಪರಮಾತ್ಮ ಎಂಬ ಎರಡು ದೃಷ್ಟಿಗಳಿಂದ ನೋಡಿದರೆ ಆರು ಕೋಶಗಳಾಗುತ್ತವೆ. ಹೀಗೆ ಆರು ಕೋಶಗಳಿಂದಲೇ ಎಲ್ಲಾ ತೊಂದರೆಗಳು—ಕಾಶ್ಮೀರ ಶಿವಾದ್ವೈತ ಸಿದ್ಧಾಂತದ ಪ್ರಕಾರವಾಗಿ ಜೀವಾತ್ಮನ ಸಂಕೋಚಸ್ಥಿತಿಯು ಪಂಚಕಂಚುಕಗಳಿಂದ ಕೂಡಿದೆಯೆಂದೂ ಕೆಲವೆಡೆಗಳಲ್ಲಿ ಷಟ್ಕಂಚುಕಗಳಿಂದ ಕೂಡಿದೆಯೆಂದೂ ವಿವರಣೆಯಿರುತ್ತದೆ—ಸೂಕ್ಷ್ಮ ವಿವೇಚನೆಯಿಂದ ಸಂಜ್ಞೆ ವ್ಯತ್ಯಾಸವಾದರೂ ತಾತ್ಪರ್ಯದಲ್ಲಿ ಭಿನ್ನಾಭಿಪ್ರಾಯಗಳಿಲ್ಲ.

೫೮ ಸ್ವಾತ್ಮಾನ್ವೇಷಣ ಯತ್ನಮಾತ್ರ ನಿರತಾ ಶ್ರಾಂತಾ ತತೋಹಂಸ್ಥಿತಾ
ತಜ್ಞಾನೈಕ ಮಹಾಪದೇsತಿ ವಿಜನೇ ಪ್ರಾಣಾದಿ ರೋಧಾತ್ತತಃ।
ಲಬ್ಧ್ವಾನಂದ ಸುರಾಗೃಹಂ ಚ ತದನು ದೃಷ್ಟ್ವಾತ್ರ ಭಾಂಡಾನ್ಯಲಂ
ಪೂರ್ಣಾನ್ಯೇವ ಕಥಾಪಿ ತತ್ರ ವಿಮುಖಃ ಪಾಪೋ ಜನಃ ಶೋಚಿತಃ ॥೬೦॥

ಸ್ವಸ್ವರೂಪವನ್ನು ಸಾಕ್ಷಾತ್ಕರಿಸುವುದರಲ್ಲಿಯೇ ತೊಡಗಿದೆನು. ಅದರಿಂದ ಬಳಲಿದವಳಾಗಿದ್ದೇನೆ. ಆದುದರಿಂದ ಪರಮಾತ್ಮ ಜ್ಞಾನವೆಂಬ ಏಕಾಂತವಾದ ಸ್ಥಿತಿಯಲ್ಲಿ ಪ್ರಾಣಾಪಾನಗಳನ್ನು ನಿಲ್ಲಿಸುವುದರ ಪ್ರಯತ್ನದಲ್ಲಿ ಮತ್ತೂ ಬಳಲಿದ್ದೇನೆ—ಈ ಆಯಾಸವನ್ನು ಪರಿಹಾರ ಮಾಡಿಕೊಳ್ಳುವುದಕ್ಕೋಸ್ಕರ ಸಹಜಾನಂದವೆಂಬ ಹೆಂಡದ ಮನೆಯೊಳಕ್ಕೆ ಹೊಕ್ಕು ಅಲ್ಲಿ ಎಲ್ಲಾ ಮಡಿಕೆಗಳೂ ತುಂಬಿರುವುದನ್ನು ಕಂಡೆನು. ಆದರೂ ಅದನ್ನು ಕುಡಿಯಲಿಲ್ಲ. ಇಂತಹ ಜೀವಾತ್ಮನ ವಿಷಯ ಕುರಿತು ವಿಷಾದಪಡಬೇಕಾಗಿದೆ*.

ಜೆ. ರುದ್ರಪ್ಪ.

* ಹಸ್ತಪ್ರತಿಯಲ್ಲಿ ಹತ್ತನೇ ಶ್ಲೋಕಕ್ಕೆ ಸರಿಯಾಗಿ ಎರಡನೆ ಹಂತವಾದ "ಶಾಸ್ತ್ರವಿಶ್ವಾಸ" ಎಂಬ ಶೀರ್ಷಿಕೆ ಇರಬೇಕಾಗಿತ್ತು. ಪ್ರಮಾದದಿಂದ ಅದು ತಪ್ಪಿಹೋಗಿದೆ. ವಾಚಕರು ೧೧ ನೆ ಶ್ಲೋಕದಿಂದ ೨೨ ನೆ ಶ್ಲೋಕದ ವರೆಗೆ "ಶಾಸ್ತ್ರವಿಶ್ವಾಸ" (ಎರಡನೆಯ ಹಂತ)ವೆಂದು ತಿಳಿಯಬೇಕಾಗಿ ಕೋರುತ್ತೇನೆ.

" ರಕ್ತವರ್ಗೀಕರಣ "

ಪೀಠಿಕೆ

'ರಕ್ತಸಂಬಂಧ' ಅಥವಾ 'ಕರುಳುಸಂಬಂಧ' ಎನ್ನುವುದು ಸಾಮಾನ್ಯ ಜನರಲ್ಲಿಯೇ ಅಲ್ಲದೆ, ಅನೇಕ ವಿಜ್ಞಾನಿಗಳಲ್ಲಿಯೂ ಅಚ್ಚಳಿಯದೇ ಇರುವ ವಿಷಯ. ಆದರೆ ಇದನ್ನು ಸೂಕ್ಷ್ಮವಾಗಿ ಪರಿಶೀಲನೆ ಮಾಡಿದರೆ, ರಕ್ತಕ್ಕೂ ಮತ್ತು ಸಂಬಂಧಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಪ್ರಾಣಿಶಾಸ್ತ್ರದ (ಜೀವವಿಜ್ಞಾನದ) ಒಂದು ಅಂಗವಾದ ತಳಿಶಾಸ್ತ್ರ (Genetics) ದಲ್ಲಿ, 'ರಕ್ತ' ಮತ್ತು 'ಸಂಬಂಧ' ಇವುಗಳನ್ನು ಕುರಿತು ವಿಚಾರಮಾಡಲು ಸಾಕಷ್ಟು ಅವಕಾಶವಿದೆ. 'ರಕ್ತ' (Blood) ಸಂಬಂಧ (Inheritance) ಮತ್ತು ವರ್ಗೀಕರಣ (Classification) ಇವುಗಳನ್ನು ಕುರಿತು ವಿಚಾರಮಾಡುವುದಕ್ಕಿಂತ ಮುಂಚೆ, ಆರೋಗ್ಯಶಾಸ್ತ್ರದ ಪ್ರಕಾರ ರಕ್ತದ ಕೆಲವು ಗುಣಗಳನ್ನು ತಿಳಿಯುವುದು ಅತ್ಯಾವಶ್ಯಕ. ಆದರೆ ರಕ್ತದ ಸ್ವರೂಪವನ್ನು ಮಾನವನ (ಸಸ್ತನಿಗಳ ಗುಂಪು=Mammals) ಮತ್ತು ಅವನ ಜಾತಿಗೆ ಸೇರಿದ ಪ್ರಾಣಿಗಳಲ್ಲಿ ಪರಿಶೀಲಿಸುವುದಕ್ಕಿಂತ ಮುಂಚೆ ರಕ್ತದ ಇತಿಹಾಸವನ್ನು ತಿಳಿದುಕೊಳ್ಳುವುದರಿಂದ ನಷ್ಟವೇನೂ ಆಗಲಾರದು. ಒಂದು ರೀತಿಯಲ್ಲಿ ನೋಡಿದರೆ ರಕ್ತದ ಇತಿಹಾಸವೂ ಒಂದು ಬಗೆಯ ವರ್ಗೀಕರಣವಾಗಿತ್ತು.

ರಕ್ತೇತಿಹಾಸ

ಆರೋಗ್ಯಶಾಸ್ತ್ರದ ಪ್ರಕಾರ ರಕ್ತವೆನ್ನುವುದು ಒಂದು ವಿಶೇಷ ತರಹದ ದ್ರವ ವಸ್ತು. ಅರಿಸ್ಟೋಟಲ್ ಎಂಬ ಗ್ರೀಕ್ ಮಹಾಪಂಡಿತನು ರಕ್ತವನ್ನು ಆಧಾರವಾಗಿಟ್ಟುಕೊಂಡು, ಪ್ರಕೃತಿಯಲ್ಲಿ (ಭೂಮಿಯ ಮೇಲೆ) ಆಗಿನ ಕಾಲದಲ್ಲಿ ಕಂಡುಬರುತ್ತಿದ್ದ ಪ್ರಾಣಿಗಳನ್ನು, **ರಕ್ತವುಳ್ಳವು** ಮತ್ತು **ರಕ್ತವಿಲ್ಲದವು** ಎಂದು ಎರಡು ಮುಖ್ಯ ಭಾಗಗಳಾಗಿ ವಿಂಗಡಿಸಿದನು. ರಕ್ತವರ್ಗೀಕರಣದಲ್ಲಿ ಅರಿಸ್ಟೋಟಲ್‌ನ ರಕ್ತವರ್ಗೀಕರಣವು ಮೊಟ್ಟಮೊದಲನೆಯದು. ಆದರೆ ಆತನ ಕಾಲದಲ್ಲಿ ರಕ್ತವೆಂದರೆ, ಕಶೇರುಕಗಳಲ್ಲಿ (Vertebrates) ಕಂಡುಬರುತ್ತಿದ್ದ ಕೆಂಪುಛಾಯೆಯ ದ್ರವವಸ್ತು ಮಾತ್ರ ಅವರಿಗೆ ತಿಳಿದಿತ್ತು. ಕಾಲಕ್ರಮೇಣ ಜೀವವಿಜ್ಞಾನ ಮುಂದುವರಿಯುತ್ತಾ, ರಕ್ತವು ಸದಾಕಾಲದಲ್ಲೂ, ಸಮಸ್ತ ಪ್ರಾಣಿಗಳಲ್ಲೂ ಕೆಂಪುಬಣ್ಣವಾಗಿಯೇ ಇರುವುದಿಲ್ಲವೆಂಬುದನ್ನು ಪ್ರಾಣಿಶಾಸ್ತ್ರಜ್ಞರು ಅರಿತರು. ಕೆಲವು ಪ್ರಾಣಿಗಳಲ್ಲಿ ರಕ್ತವು

ಬಣ್ಣದ ಸಂಯೋಗವಿಲ್ಲದ ನೀರಿನ ರೂಪವಾಗಿಯೂ, ಕೆಲವು ಪ್ರಾಣಿಗಳಲ್ಲಿ ನೀಲಿ ಬಣ್ಣವಾಗಿಯೂ, ಮತ್ತಿತರ ಅಕಶೇರುಕ ಕಶೇರುಕಗಳಲ್ಲಿ ಕೆಂಪುಬಣ್ಣದ ರಕ್ತವು ಇರುವುದೆಂಬುದನ್ನು ಜೀವವಿಜ್ಞಾನಿಗಳು ಕಂಡುಕೊಂಡರು. ಇಷ್ಟೇ ಅಲ್ಲದೆ ದ್ರವೀ ರೂಪದ ರಕ್ತಕ್ಕೆ ಛಾಯೆ (ಬಣ್ಣವನ್ನು) ಕೊಡುವ ಮೂಲವಸ್ತುವನ್ನು ಗಮನಿಸಿದರು.

ಅಕಶೇರುಕ ಮತ್ತು ಕಶೇರುಕಗಳು

ಇಡೀ ಅಕಶೇರುಕಗಳಲ್ಲಿ ರಕ್ತವು ನೀರಿನಂತಹ ಬಣ್ಣವಿಲ್ಲದ ವಸ್ತು. ಆದರೆ ಕೆಲವು ಮೃದ್ವಂಗಿಗಳಲ್ಲಿ (Mollusca) ಕಂಡುಬರುವ ರಕ್ತದಲ್ಲಿ ನೀಲಿ ಬಣ್ಣವನ್ನು ಕೊಡುವ ಒಂದು ತಾಮ್ರದ ವಸ್ತುವಿಶೇಷ (Haemocyanin) ವಿರುತ್ತದೆ. ಕಶೇರುಕಗಳಲ್ಲಿ ಮಾತ್ರ ರಕ್ತವು ಯಾವಾಗಲೂ ಕೆಂಪುಬಣ್ಣವಾಗಿರುತ್ತದೆ. ಆದರೆ ಎರೆಹುಳು ಮತ್ತು ಜಿಗಣೆ ಅಕಶೇರುಗಳ ಗುಂಪಿಗೆ ಸೇರಿದ್ದರೂ ಅವುಗಳಲ್ಲಿ ರಕ್ತವು ಕೆಂಪುಬಣ್ಣವಾಗಿರುತ್ತದೆ. ಆದರೂ ಅಕಶೇರುಕಗಳಲ್ಲಿ ಕಂಡುಬರುವ ರಕ್ತಕ್ಕೂ ಕಶೇರುಕಗಳ ರಕ್ತಕ್ಕೂ ಮುಖ್ಯವಾದ ವ್ಯತ್ಯಾಸಗಳಿವೆ. ಈ ವ್ಯತ್ಯಾಸಗಳನ್ನು ತಾತ್ಕಾಲಿಕವಾಗಿ ಪರೀಕ್ಷಿಸುವುದು ಅಗತ್ಯ. ರಕ್ತದಲ್ಲಿ ದ್ರವೀರೂಪದ ವಸ್ತುವೂ (Plasma) ಮತ್ತು ರಕ್ತಕಣಗಳೂ (Blood Corpuscles) ಇರುತ್ತವೆ. ರಕ್ತಕ್ಕೆ ಬಣ್ಣವನ್ನು ಕೊಡುವ ಬಣ್ಣವಿಶೇಷವು ರಕ್ತಕಣಗಳೊಡನೆ ಇರುತ್ತದೆ. ಅಂದರೆ ಕಶೇರುಕಗಳಲ್ಲಿ ಕಂಡುಬರುವ ರಕ್ತದ ಕೆಂಪುಬಣ್ಣವು, ರಕ್ತಕಣಗಳೊಡನೆ ಸೇರಿರುವ ಕೆಂಪುಬಣ್ಣದಿಂದ (Haemoglobin) ಉಂಟಾದದ್ದು. ಆದ್ದರಿಂದಲೇ ಕಶೇರುಕಗಳಲ್ಲಿ, ಅದರಲ್ಲಿಯೂ ಸಸ್ತನಿಗಳಲ್ಲಿ ರಕ್ತಕಣಗಳನ್ನು ಕೆಂಪು ಮತ್ತು ಬಿಳೀ ರಕ್ತಕಣಗಳೆಂದು ವಿಂಗಡಿಸಬಹುದು. ಅಕಶೇರುಕಗಳಲ್ಲಿ ಕಂಡುಬರುವ ರಕ್ತದ ಕೆಂಪುಬಣ್ಣವು ರಕ್ತದಲ್ಲಿರುವ ದ್ರವವಸ್ತುವಿನೊಡನೆ ಕಲೆತಿರುವುದು. ಇದೇ ಕಶೇರುಕ ಮತ್ತು ಅಕಶೇರುಕಗಳ ರಕ್ತಕ್ಕೆ ಇರುವ ಅನೇಕ ವ್ಯತ್ಯಾಸಗಳಲ್ಲಿ ಬಲು ಮುಖ್ಯವಾದ ವ್ಯತ್ಯಾಸ. ರಕ್ತದಲ್ಲಿ ಕಂಡುಬರುವ ವಿಶೇಷವಸ್ತುವು ದ್ರವದೊಡನೆ ಇರಲಿ ಅಥವಾ ರಕ್ತಕಣಗಳೊಡನೆ ಇರಲಿ, ಅದರ ಕಾರ್ಯವು ಸರ್ವಕಾಲದಲ್ಲೂ ಒಂದೇ. ಈ ವಿಶೇಷವಸ್ತುವಿಗೆ ಗಾಳಿಯಲ್ಲಿರುವ ಆಮ್ಲಜನಕದೊಡನೆ ತಕ್ಷಣದಲ್ಲಿ ಕೂಡಿಕೊಳ್ಳುವ ಮತ್ತು ಬೇರ್ಪಡುವ ಶಕ್ತಿಯುಂಟು. ಆದ್ದರಿಂದಲೇ ರಕ್ತದಲ್ಲಿ ಕಂಡುಬರುವ ಬಣ್ಣವಿಶೇಷವು ಅಂದರೆ, ರಕ್ತವು, ಶ್ವಾಸೋಚ್ಛ್ವಾಸಕ್ರಿಯೆಯಲ್ಲಿ ಪ್ರಮುಖಪಾತ್ರವನ್ನು ವಹಿಸುವುದು ಸಾಧ್ಯವಾಗಿರುವುದು. ಜೀವಿಗಳ ಅನೇಕ ಕ್ರಿಯೆಗಳಲ್ಲಿ ಶ್ವಾಸೋಚ್ಛ್ವಾಸಕ್ರಿಯೆಯು ಒಂದು ಮುಖ್ಯವಾದ ಕಾರ್ಯ.

ರಕ್ತ ಮತ್ತು ರೋಗನಿರ್ಬಂಧಕ ಶಕ್ತಿ

ಮಾನವನು ಸ್ವಾರ್ಥತೆಯನ್ನುಳ್ಳವನು ಎನ್ನುವುದು ನಿರ್ವಿವಾದದ ವಿಷಯ. ಆದ್ದರಿಂದಲೇ ತನಗೆ ಉಪಯೋಗವಾಗತಕ್ಕ ಮತ್ತು ಸೌಕರ್ಯವಾಗುವ ವಿಷಯಗಳನ್ನು ಮಾತ್ರ ಪರಿಶೀಲಿಸಿದ್ದಾನೆ. ಈ ಸೂಕ್ಷ್ಮ ಪರಿಶೀಲನೆಯ ಪ್ರಕಾರ ಮಾನವನ ದೇಹದಲ್ಲಿ ಕಂಡುಬರುವ ರಕ್ತಕಣಗಳೆರಡುವಿಧ : ಕೆಂಪು ಮತ್ತು ಬಿಳಿ ರಕ್ತಕಣಗಳು. ರಕ್ತದಲ್ಲಿ ಕೆಂಪು ರಕ್ತಕಣಗಳು ಹೆಚ್ಚಾಗಿ ಇರುವುದರಿಂದ ರಕ್ತವು ಕೆಂಪುಛಾಯೆಯನ್ನು ಹೊಂದಿದೆ. ಕೆಂಪುರಕ್ತಕಣಗಳು ಶ್ವಾಸೋಚ್ಛ್ವಾಸಕ್ರಿಯೆಯಲ್ಲಿ ಸಹಾಯ ಮಾಡಿದರೆ, ಬಿಳೀ ರಕ್ತಕಣಗಳು ದೇಹಕ್ಕೆ ಬೇಡವಾದ ರೋಗಾಣುಗಳನ್ನು (Germs and Viruses) ಅವುಗಳ ಶಕ್ತಿಯನ್ನೂ ತಡೆಗಟ್ಟುವುದರಲ್ಲಿ ಮತ್ತು ಹಾಳುಮಾಡುವುದರಲ್ಲಿ ಕರ್ತತ್ವವನ್ನು ವಹಿಸುತ್ತವೆ. ಆದ್ದರಿಂದಲೇ ಒಂದು ಸಲ ಸಿಡಿಬು, ಮಲೇರಿಯಾ ಇತ್ಯಾದಿ ರೋಗದಿಂದ ನರಳಿದವರು ಪುನಃ ಈ ರೋಗಗಳಿಗೆ ಈಡಾಗುವುದಿಲ್ಲ. ಇದು ಮೊಟ್ಟಮೊದಲು ಆಶ್ಚರ್ಯವಾಗಿ ಕಂಡುಬಂದರೂ ಅಚ್ಚರಿ ಪಡಬೇಕಾದ ಪ್ರಮೇಯವಿಲ್ಲ. ಏತಕ್ಕೆಂದರೆ ರೋಗನಿರೋಧಕ ಶಕ್ತಿಯನ್ನುತ್ಪತ್ತಿಮಾಡುವುದು ರಕ್ತದ ಒಂದು ಮುಖ್ಯಗುಣ. ಈ ರೋಗನಿರೋಧಕ ಶಕ್ತಿ ಹೇಗೆ ಉತ್ಪತ್ತಿಯಾಗುವುದು ಎನ್ನುವುದು ಬಲು ಕುತೂಹಲದ ವಿಷಯ. ರಕ್ತಕ್ಕೆ ಮಲೇರಿಯಾ ವಿಷಕ್ರಿಮಿಗಳು ಬಂದು ಸೇರಿದುವೆಂದು ಇಟ್ಟುಕೊಳ್ಳೋಣ. ವಿಷಕ್ರಿಮಿಗಳು ರೋಗೋತ್ಪತ್ತಿಮಾಡುವ ಪದಾರ್ಥವನ್ನು ತಯಾರಿಸಲು ಮೊದಲುಮಾಡುತ್ತವೆ. ರಕ್ತದಲ್ಲಿರುವ ಬಿಳೀರಕ್ತ ಕಣಗಳು ರೋಗನಿರೋಧಕ ಪದಾರ್ಥವನ್ನು (ಪ್ರತಿ ಪದಾರ್ಥವನ್ನು) ತಯಾರಿಸುತ್ತವೆ. ಒಂದು ರೀತಿಯಲ್ಲಿ ನೋಡಿದರೆ ರೋಗೋತ್ಪತ್ತಿ ಮತ್ತು ರೋಗನಿರೋಧಕ ಪದಾರ್ಥಗಳೆರಡಕ್ಕೂ, ರಕ್ತದಲ್ಲಿ ಒಂದು ಭಾರಿ ಯುದ್ಧವೇ ನಡೆಯುತ್ತದೆ. ಈ ತಿಕ್ಕಾಟದಲ್ಲಿ ರೋಗೋತ್ಪತ್ತಿಮಾಡುವ ಪದಾರ್ಥವು (Toxins and Antigens) ಗೆದ್ದರೆ, ವ್ಯಕ್ತಿಯು ರೋಗಕ್ಕೆ ಈಡಾಗುವನು; ಹಾಗೆ ಒಂದು ವೇಳೆ ಸೋತರೆ (ಅಂದರೆ, ರೋಗನಿರೋಧಕ ಪದಾರ್ಥದ ಶಕ್ತಿಯು ಬಲವಾದರೆ=Anti toxins and Antibodies) ವ್ಯಕ್ತಿಯು ಯಥಾಪ್ರಕಾರವಿರುವನು. ಒಂದು ರೋಗಕ್ಕೆ ಒಬ್ಬನು ನಿರೋಧಕ ಶಕ್ತಿಯನ್ನು ಸಂಪಾದಿಸಿದ್ದಾನೆ ಎಂದರೆ ಆತನ ದೇಹದಲ್ಲಿ ' ಆ ರೋಗವನ್ನು ' ಎದುರಿಸುವ ರೋಗನಿರೋಧಕ ಪದಾರ್ಥವಿದೆ ಎಂದು ಹೇಳಬಹುದು.

ಕೃತಕರೋಗ ನಿರ್ಬಂಧನ

ಸಹಜವಾಗಿ ರೋಗನಿರೋಧಕ ಶಕ್ತಿಯು (Natural Immunity) ಉಂಟಾಗುವುದು ಸ್ವಲ್ಪ ನಿಧಾನ, ಆದ್ದರಿಂದ ಕೃತಕವಾಗಿ ರೋಗನಿರೋಧಕ ಶಕ್ತಿಯನ್ನು

ಉತ್ಪತ್ತಿಮಾಡುವ (Artificial Immunity) ಉಪಾಯಗಳನ್ನು ಕಂಡುಹಿಡಿದಿದ್ದಾರೆ. ಸಾಮಾನ್ಯವಾಗಿ ಅನೇಕರಿಗೆ ತಿಳಿದಿರುವ, ಇಂಜೆಕ್ಷನ್ ಮತ್ತು ಇನಾಕ್ಯುಲೇಷನ್ ಇವುಗಳನ್ನು ರೋಗಕ್ಕೆ ತುತ್ತಾದವರಿಗೆ ಕೊಡುವುದು ಇದೇ ಉದ್ದೇಶದಿಂದಲೇ ಎನ್ನುವುದು ಗಮನಾರ್ಹವಾದ ವಿಷಯ. 'ಕಾಲರಾ' ಇನಾಕ್ಯುಲೇಷನ್ ಕೊಡು ವುದು ಎಂದರೆ ನಿಜವಾಗಿಯೂ ಸತ್ತ ಕಾಲರಾ ರೋಗದ ಕ್ರಿಮಿಗಳನ್ನು ರಕ್ತಕ್ಕೆ ಸೇರಿಸುವುದು. ರಕ್ತಕ್ಕೆ ಸತ್ತಿರುವ ಅಥವಾ ಬದುಕಿರುವ ಪದಾರ್ಥಗಳನ್ನು (ಇಲ್ಲಿ ಪದಾರ್ಥವೆಂದರೆ, ವಿಷಕ್ರಿಮಿ ಎಂದು ನಮ್ಮ ಭಾವನೆ) ಅರಿಯುವ ಗುಣವಿಲ್ಲದಿರುವುದು, ನಿಜವಾಗಿಯೂ ವಿಜ್ಞಾನಿಗೆ ಪ್ರಕೃತಿಯು ತೋರಿರುವ ಉದಾತ್ತವಾದ ಔದಾರ್ಯ. ಒಟ್ಟಿನಲ್ಲಿ ದೇಹಕ್ಕೆ ತೊಂದರೆಯನ್ನುಂಟುಮಾಡುವ 'ಯಾವ' (ಸಜೀವ ಅಥವಾ ನಿರ್ಜೀವ) ಪದಾರ್ಥವು ರಕ್ತಕ್ಕೆ ಬಂದರೂ, ತತ್‌ಕ್ಷಣ ಅದನ್ನು ಎದುರಿಸುವ ಪ್ರತಿ ಪದಾರ್ಥವನ್ನು ಬಿಳೀ ರಕ್ತಕಣಗಳು ತಯಾರಿಸುತ್ತವೆ. ರೋಗನಿರೋಧಕ ಶಾಸ್ತ್ರದಲ್ಲಿ (Science of Immunology) ರಕ್ತಕ್ಕೆ ಬಂದು ಸೇರುವ ಬಾಹ್ಯಪದಾರ್ಥಕ್ಕೆ 'ಆಂಟಿಜೆನ್' (Antigen) ಅಥವಾ **'ರೋಗಕಾರಕ'** ಎಂದೂ, ರಕ್ತದಲ್ಲಿ ತಯಾ ರಾದ ಪ್ರತಿಪದಾರ್ಥಕ್ಕೆ 'ಆಂಟಿಬಾಡಿ' (Antibody) 'ರೋಗನಿರೋಧಕ' ಎಂದೂ ಕರೆಯುವರು. ಈ 'ಆಂಟಿಜೆನ್ ಆಂಟಿಬಾಡಿ' ಪ್ರಕ್ರಿಯೆಯು ಬಲು ನಿಶ್ಚಿತವಾ ದುದು. ಸಾಧಾರಣವಾಗಿ ಆಂಟಿಜೆನ್ ರಕ್ತಕ್ಕೆ ಬಂದು ಸೇರುವುದೆಂದು ಹೇಳುವುದು, ಸರ್ವಕಾಲದಲ್ಲಿಯೂ ಕಠಿಣವಾಗಿ ಹೇಳಲಸಾಧ್ಯ. ಏತಕ್ಕೆಂದರೆ, ರಕ್ತದಲ್ಲೂ (ಪ್ರತಿಯೊಬ್ಬನ ರಕ್ತದಲ್ಲೂ) ಸಹಜವಾಗಿಯೇ 'ಆಂಟಿಜೆನ್ ಅಥವಾ ಆಂಟಿಬಾಡಿ ಗಳು' ಇರುತ್ತವೆ ಎನ್ನುವುದನ್ನು ಡಾ|| ಲ್ಯಾಂಡ್ ಸ್ಟೇನರ್ (Dr. Land Steiner) ಎಂಬಾತನು ಮೊಟ್ಟಮೊದಲು ತೋರಿಸಿಕೊಟ್ಟನು. 'ಆಂಟಿಜೆನ್ ಮತ್ತು ಆಂಟಿ ಬಾಡಿಗಳು' ಎರಡು ವಿಧವಾಗಿರುತ್ತವೆಯೆಂದೂ, ಒಂದೇ ಜಾತಿಗೆ ಸೇರಿದ 'ಆಂಟಿ ಜೆನ್ ಮತ್ತು ಆಂಟಿಬಾಡಿ' ಒಬ್ಬನ ರಕ್ತದಲ್ಲಿರುವುದಿಲ್ಲವೆಂದೂ, ಆತನು ಅಭಿಪ್ರಾಯ ಪಟ್ಟನು. ಇಷ್ಟೇ ಅಲ್ಲದೆ ಆಂಟಿಜೆನ್—ಆಂಟಿಬಾಡಿಗಳ ಇರುವಿಕೆ ಅಥವಾ ಇಲ್ಲದಿರು ವಿಕೆಯನ್ನು ಗಮನಿಸಿ, ಇಡೀ ಪ್ರಪಂಚದಲ್ಲಿರುವ ಮನುಷ್ಯರ ರಕ್ತವನ್ನು ನಾಲ್ಕು ಮುಖ್ಯಭಾಗಗಳಾಗಿ ವಿಂಗಡಿಸಿದನು. ಆತನು ವಿಂಗಡಿಸಿದ ರಕ್ತದ ವಿಭಾಗವನ್ನು (Blood Grouping) ರಕ್ತವರ್ಗೀಕರಣವೆಂದು ಹೇಳಬಹುದು. ಈ ರಕ್ತವರ್ಗೀ ಕರಣದ ಪ್ರಾಮುಖ್ಯತೆಯನ್ನು ವಿಚಾರಮಾಡುವುದರಿಂದ ಸಾಮಾನ್ಯರಿಗೆ, ರಕ್ತ, ಅದರ ಪ್ರಾಮುಖ್ಯತೆ ಇವುಗಳ ವಿಚಾರ ಸ್ವಲ್ಪವಾದರೂ ಗಮನಕ್ಕೆ ಬಂದೀತೆಂದು ಉದ್ದೇಶಪಟ್ಟು ಕೈಗೊಂಡಿರುವ ಸಾಮಾನ್ಯ ಕಾರ್ಯವಿದು. ಈ ಇಚ್ಛೆಯು ಸ್ವಲ್ಪ

ಕೈಗೂಡಿದರೂ, ಕೃತಿಯ ಅಂತಿಮದ ಗುರಿ ನೇರವಾಗಿ ಸಾಧಿಸಲ್ಪಟ್ಟಂತೆ, ಎಂದು ನಮ್ಮ ಭಾವನೆ.

ರಕ್ತವರ್ಗೀಕರಣ

ಡಾ|| ಕಾರ್ಲ್ ಲ್ಯಾಂಡ್ ಸ್ಟೇನರ್ ಮತ್ತು ಆತನ ಅನುಯಾಯಿಗಳು ಯುದ್ಧದ ಸಮಯದಲ್ಲಿ ರಕ್ತವನ್ನು ಕಳೆದುಕೊಂಡ ಸಿಪಾಯಿಗಳಿಗೆ, ಪರರ ರಕ್ತವನ್ನು ಕೊಡಲು, ಅನೇಕರಲ್ಲಿ ಕೆಂಪು ರಕ್ತಕಣಗಳು ಒಂದಕ್ಕೊಂದು ಅಂಟಿಕೊಂಡು, ರಕ್ತಪರಿಚಲನೆಗೆ ಅಡ್ಡಿಬಂದು ಸಾಯುವುದನ್ನು ಕಂಡರು. ಕೆಂಪು ರಕ್ತಕಣಗಳು ಅಂಟಿಕೊಳ್ಳುವಂತೆ ಮಾಡುವ ಶಕ್ತಿಯು ಇತರರ ರಕ್ತದಲ್ಲಿದೆಯೆಂಬುದನ್ನು ಭಾವಿಸಿ ಆ ಪದಾರ್ಥವನ್ನು 'ಅಗ್ಲೂಟಿನೋಜೆನ್' (Agglutinogen) ಎಂದು ಕರೆದರು. ಈ 'ಅಗ್ಲೂಟಿನೋಜೆನ್' ಪದಾರ್ಥದೊಡನೆ ಪ್ರತಿಸ್ಪರ್ಧಿಸುವ ಪದಾರ್ಥಕ್ಕೆ 'ಅಗ್ಲೂಟಿನಿನ್' (Agglutinin) ಎಂದು ಕರೆದರು. ಈ 'ಅಗ್ಲೂಟಿನೋಜೆನ್' ಎನ್ನುವ ಪದಾರ್ಥವು 'ಆಂಟಿಜೆನ್' ಪದಾರ್ಥವನ್ನೂ, 'ಅಗ್ಲೂಟಿನಿನ್' 'ಆಂಟಿಬಾಡಿ' ಎಂಬ ಪದಾರ್ಥವನ್ನೂ ಹೆಚ್ಚು ಕಡಿಮೆ ಹೋಲುವುದೆನ್ನುವುದು ಬಲು ಕುತೂಹಲದ ವಿಷಯು. ಡಾ|| ಲ್ಯಾಂಡ್ ಸ್ಟೇನರ್ ಪ್ರಕಾರ ಅಗ್ಲೂಟಿನೋಜೆನ್ ಮತ್ತು ಅಗ್ಲೂಟಿನಿನ್ ಎರಡು ವಿಧವಾಗಿರುತ್ತವೆ: ಎ ಮತ್ತು ಬಿ ಒಂದೇ ಜಾತಿಗೆ ಸೇರಿದ (ಎ ಅಥವಾ ಬಿ ಜಾತಿಗೆ ಸೇರಿದ) ಅಗ್ಲೂಟಿನೋಜೆನ್ ಮತ್ತು ಅಗ್ಲೂಟಿನಿನ್ ಒಂದೇ ರಕ್ತದಲ್ಲಿರುವುದಿಲ್ಲ; ಅಂದರೆ ಒಬ್ಬ ಮನುಷ್ಯನ ರಕ್ತದಲ್ಲಿರುವುದಿಲ್ಲ. ರಕ್ತದಲ್ಲಿ ಈ ಪದಾರ್ಥಗಳ ಇರುವಿಕೆ ಮತ್ತು

ಕೋಷ್ಟಕ (TABLE).

ಸಂಖ್ಯೆ	ಅಗ್ಲೂಟಿನೊಜನ್.	ಅಗ್ಲೂಟಿನಿನ್.	ರಕ್ತದ ಜಾತಿ.
೧.	"ಎ".	"ಬಿ".	"ಎ" ರಕ್ತವರ್ಗ.
೨.	"ಬಿ".	"ಎ".	"ಬಿ" ರಕ್ತವರ್ಗ.
೩.	"ಎ" ಮತ್ತು "ಬಿ".	——	"ಎಬಿ" ರಕ್ತವರ್ಗ.
೪.	——	"ಎ" ಮತ್ತು "ಬಿ"	"ಓ" ರಕ್ತವರ್ಗ.

ಇಲ್ಲದಿರುವಿಕೆಯನ್ನು ಗಮನದಲ್ಲಿಟ್ಟುಕೊಂಡು, ಮೇಲೆ ಹೇಳಿದಂತೆ ರಕ್ತವನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಬಹುದು.


ಈ ಮೇಲಿನ ಕೋಷ್ಟಕದಿಂದ ಕೆಲವು ಕೀರುಪಾಟುಗಳನ್ನು ಮಾಡಬಹುದು. ಮೊದಲನೆಯದಾಗಿ, ಇಡೀ ಮನುಷ್ಯವರ್ಗದಲ್ಲಿ ಕಂಡುಬರುವ ರಕ್ತವನ್ನು, 'ಎ' ರಕ್ತವರ್ಗ, 'ಬಿ' ರಕ್ತವರ್ಗ, 'ಎ ಬಿ' ರಕ್ತವರ್ಗ, ಮತ್ತು 'ಒ' ರಕ್ತವರ್ಗವೆಂದು ನಾಲ್ಕು ಭಾಗಗಳಾಗಿ ವಿಂಗಡಿಸಬಹುದು. ಎರಡನೆಯದಾಗಿ, ಒಂದೇ ಜಾತಿಗೆ ಸೇರಿದ 'ಅಗ್ಲೂಟಿನೊಜೆನ್ ಮತ್ತು ಅಗ್ಲೂಟಿನಿನ್‌ಗೆ' (ಉದಾ: 'ಎ' ಅಗ್ಲೂಟಿನೊಜೆನ್ ಮತ್ತು 'ಎ' ಅಗ್ಲೂಟಿನಿನ್‌ಗೆ) ಒಂದು ವಿಶೇಷ ರೀತಿಯ ವೈರತ್ವ ಇರುವುದು. ಆದ್ದರಿಂದಲೇ ಒಂದು ರಕ್ತದಲ್ಲಿ (ಒಬ್ಬನ ರಕ್ತದಲ್ಲಿ) ಒಂದೇ ಜಾತಿಗೆ ಸೇರಿದ ಅಗ್ಲೂಟಿನಿನ್ ಮತ್ತು ಅಗ್ಲೂಟಿನೊಜೆನ್ ಎರಡೂ ಒಟ್ಟಿಗೆ ಕಂಡುಬರುವುದಿಲ್ಲ. ಮೂರನೆಯದಾಗಿ, ಒಂದು ಜಾತಿಯ ಅಗ್ಲೂಟಿನೊಜೆನ್‌ಗೂ ಮತ್ತೊಂದು ಜಾತಿಯ ಅಗ್ಲೂಟಿನಿನ್‌ಗೂ (ಎ ಅಗ್ಲೂಟಿನೊಜೆನ್ ಮತ್ತು ಬಿ ಅಗ್ಲೂಟಿನಿನ್‌ಗೆ) ಒಂದು ಅನಿರ್ವಚನೀಯವಾದ ಸಂಬಂಧ ಮತ್ತು ಅನ್ಯೋನ್ಯತೆ ಇರುವುದು. ಆದ್ದರಿಂದಲೇ ಇವು ಒಟ್ಟಿಗೆ ಒಂದೇ ರಕ್ತದಲ್ಲಿ ಐಕಮತ್ಯತೆಯಿಂದ ಇರುತ್ತವೆ. ನಾಲ್ಕನೆಯದಾಗಿ, 'ಎ ಮತ್ತು ಬಿ' ಅಗ್ಲೂಟಿನೊಜೆನ್ ಆಗಲೀ, ಅಥವಾ 'ಎ ಮತ್ತು ಬಿ' ಅಗ್ಲೂಟಿನಿನ್ ಆಗಲೀ, ಬೇರೆಬೇರೆಯಾಗಿ ಅಥವಾ ಒಟ್ಟಿಗೆ ಒಂದೇ ರಕ್ತದಲ್ಲಿರುತ್ತವೆ. ಕೊನೆಯದಾಗಿ, ಈ ಅಗ್ಲೂಟಿನೊಜೆನ್ ಮತ್ತು ಅಗ್ಲೂಟಿನಿನ್ ಪ್ರತಿಕ್ರಿಯೆಯು, ಹಿಂದೆ ಹೇಳಿದ ಆಂಟಿಜೆನ್ ಮತ್ತು ಆಂಟಿಬಾಡಿಯ ಪ್ರತಿಕ್ರಿಯೆಯಂತೆ ಬಲು ನಿಶ್ಚಿತವಾದುದು.

ರಕ್ತವರ್ಗೀಕರಣದ ಪರೀಕ್ಷೆ


ಈ ರಕ್ತವರ್ಗೀಕರಣದ ಕಟುಸತ್ಯವನ್ನು ಪರೀಕ್ಷೆಮಾಡಲು ಸಾಧ್ಯ. ವಿಜ್ಞಾನಿಗಳು ಅನೇಕ ವಿಷಯಗಳನ್ನು ಮೊದಲು ನಿರೂಪಿಸಿದರೂ, ಅನಂತರ ಪ್ರಯೋಗಗಳಿಂದ ಪರೀಕ್ಷಿಸುತ್ತಾರೆ. ಹಾಗೆ ಪರೀಕ್ಷಿಸಿದನಂತರ, ಸರಿಯೆಂದು ಒಪ್ಪಿಕೊಳ್ಳುವುದು ವಿಜ್ಞಾನಿಯ, ಅಲ್ಲದೇ, ಇಡೀ ವಿಜ್ಞಾನದ ಒಂದು ಮುಖ್ಯ ಲಕ್ಷಣ. ಅದರಂತೆ ಈ ಸಾರ್ವತ್ರಿಕ ರಕ್ತವರ್ಗೀಕರಣವನ್ನೂ ಸಹ, ಪ್ರಯೋಗಗಳನ್ನು ನಡೆಸಿ, ಜೀವವಿಜ್ಞಾನಿಗಳು, ಅದರಲ್ಲಿಯೂ ತಳಿಶಾಸ್ತ್ರಜ್ಞರು ಒಪ್ಪಿಕೊಂಡಿದ್ದಾರೆ. (ಇಲ್ಲಿ ಜೀವವಿಜ್ಞಾನಿಗಳೆಂದರೆ, ತಳಿಶಾಸ್ತ್ರಜ್ಞರು (Geneticists), ಮತ್ತು ರೋಗನಿರೋಧಕ ಶಾಸ್ತ್ರಜ್ಞರು (Immunologists) ಎಂದು ನಮ್ಮ ಭಾವನೆ. ಈ ರಕ್ತವರ್ಗೀಕರಣದ ಪರೀಕ್ಷೆಯನ್ನು ನಡೆಸುವುದಕ್ಕೆ ಮುಂಚೆ ಎರಡು ವ್ಯಕ್ತಿಗಳ ರಕ್ತವನ್ನು ತೆಗೆದು



ಚಿತ್ರ ೧. ಒಂದು ತೊಟ್ಟು ರಕ್ತವನ್ನು ಸಾಮಾನ್ಯವಾಗಿ ಸೂಕ್ಷ್ಮದರ್ಶಿನಿಯಲ್ಲಿ ನೋಡಿದರೆ ಕಾಣುವ ಬಗೆ. ಇದು ರಕ್ತದ ಸಾಮಾನ್ಯರೂಪ (Normal Blood Picture). ರಕ್ತಕಣಗಳು ಸಾಮಾನ್ಯವಾದ ಹರಡಿಕೆಯನ್ನು ವ್ಯಕ್ತಪಡಿಸುತ್ತವೆ.



ಚಿತ್ರ ೨. ಸಂಬಂಧವಿಲ್ಲದ ಇಬ್ಬರ ರಕ್ತವನ್ನು ಕಲೆಸಿದಾಗ, ರಕ್ತದಲ್ಲಿ ಒಂದು ವಿಶೇಷ ಪ್ರತಿಕ್ರಿಯೆ ನಡೆಯುತ್ತದೆ. ಇದರ ಫಲವೇ ರಕ್ತಕಣಗಳ ಅಸಾಮಾನ್ಯ ಹರಡಿಕೆ ಮತ್ತು ಗುಂಪಾಗುವಿಕೆ. ರಕ್ತಕಣಗಳು ಅಸ್ತವ್ಯಸ್ತವಾಗಿ, ಗುಂಪುಗುಂಪಾಗಿ ಅಂಟಿಕೊಂಡಿರುತ್ತವೆ.


ರಕ್ತವರ್ಗ.
ಅಗ್ಲೂಟಿನಿನ್.
ಅಗ್ಲೂಟಿನಿನ್.
'ಎ' ಅಗ್ಲೂಟಿನೊಜೆನ್.
'ಬಿ' ಅಗ್ಲೂಟಿನೊಜೆನ್.
ರಕ್ತವರ್ಗ.
'ಓ' ರಕ್ತವರ್ಗ.
'ಓ' ರಕ್ತವರ್ಗ.
'ಎ' ರಕ್ತವರ್ಗ.
ಬಿ
'ಎ' ರಕ್ತವರ್ಗ.
'ಬಿ' ರಕ್ತವರ್ಗ
ಎ
'ಬಿ' ರಕ್ತವರ್ಗ.
'ಎಬಿ' ರಕ್ತವರ್ಗ.
ಎ
ಬಿ
'ಎಬಿ' ರಕ್ತವರ್ಗ

ಕೊಳ್ಳುವರು. ನಂತರ ಎರಡು ರಕ್ತವನ್ನೂ ಬೆರಸಿ ಪರೀಕ್ಷೆಮಾಡುವರು. ಹೀಗೆ ಪ್ರಯೋಗನಡೆಸಿದಾಗ, ರಕ್ತಕಣಗಳೆಲ್ಲಾ ಗುಂಪಾಗಿಯೂ, ಕೆಲವರಲ್ಲಿ ಸ್ವಲ್ಪ ರಕ್ತಕಣಗಳು ಗುಂಪಾಗಿಯೂ, ಮತ್ತೆ ಕೆಲವರಲ್ಲಿ ರಕ್ತಕಣಗಳು ಯಥಾಪ್ರಕಾರ (ಅಂಟಿಕೊಳ್ಳದೆ) ಇರುವುದನ್ನೂ ಕಂಡರು ; ಇದನ್ನು ಈ ಕೆಳಗಿನ ನಕ್ಷೆಯ ಕೋಷ್ಟಕ ದಿಂದ ತಿಳಿದುಕೊಳ್ಳಬಹುದು :

'ಒ' ವರ್ಗ: ಇಲ್ಲಿ 'ಎ' ಮತ್ತು 'ಬಿ' ಅಗ್ಲೂಟಿನೊಜಿನ್ ರಕ್ತದಲ್ಲಿರುವುದಿಲ್ಲ. ಆದ್ದರಿಂದ, 'ಒ' ರಕ್ತವರ್ಗದವರ ರಕ್ತಕ್ಕೆ 'ಎ' ಅಥವಾ 'ಬಿ' ಅಥವಾ 'ಎಬಿ' ರಕ್ತವರ್ಗದವರ ರಕ್ತವನ್ನು ಬೆರಸಿದರೆ, ಯಾವ ವಿಧವಾದ ಪ್ರತಿಕ್ರಿಯೆಯು ನಡೆಯುವುದಿಲ್ಲ. ಇದಕ್ಕೆ 'ಒ' ರಕ್ತ ವರ್ಗದ ರಕ್ತದಲ್ಲಿ 'ಎ', 'ಬಿ' ಅಥವಾ 'ಎಬಿ' ರಕ್ತದ ಪ್ರತಿಪದಾರ್ಥವಿಲ್ಲದಿರುವುದೇ ಕಾರಣ.

'ಎ' ರಕ್ತವರ್ಗ: 'ಎ' ವರ್ಗದ ರಕ್ತದಲ್ಲಿ 'ಬಿ' ಅಗ್ಲೂಟಿನೊಜಿನ್ ಮಾತ್ರ ಇರುತ್ತದೆ. ಆದ್ದರಿಂದ 'ಎ' ವರ್ಗದ ರಕ್ತಕ್ಕೆ 'ಬಿ' ಅಥವಾ 'ಎಬಿ' ವರ್ಗದ ರಕ್ತವನ್ನು ಬೆರಸಿದಾಗ, 'ಎ' ರಕ್ತದಲ್ಲಿರುವ 'ಬಿ' ಅಗ್ಲೂಟಿನೊಜಿನ್‌ಗೂ ಮತ್ತು 'ಬಿ' ಅಥವಾ 'ಎಬಿ' ರಕ್ತದಲ್ಲಿರುವ 'ಬಿ' ಅಗ್ಲೂಟಿನಿನ್‌ಗೂ ಪ್ರತಿಕ್ರಿಯೆ ನಡೆದು ರಕ್ತಕಣಗಳು ಗುಂಪಾಗುತ್ತವೆ. ಅಂದರೆ ಇಲ್ಲಿ ರಕ್ತಕಣಗಳು ಅಪೂರ್ಣ ಗುಂಪಾಗಿರುತ್ತವೆ.

'ಬಿ' ರಕ್ತವರ್ಗ: ಈ ವರ್ಗದಲ್ಲಿ 'ಎ' ಅಗ್ಲೂಟಿನೊಜಿನ್ ಇರುತ್ತದೆ. ಈ ರಕ್ತಕ್ಕೆ 'ಬಿ' ಅಥವಾ 'ಎಬಿ' ವರ್ಗದ ರಕ್ತವನ್ನು ಕಲೆಸಿದಾಗ, 'ಬಿ' ರಕ್ತವರ್ಗದಲ್ಲಿರುವ 'ಎ' ಅಗ್ಲೂಟಿನೊಜಿನ್‌ಗೂ ಮತ್ತು 'ಬಿ' ಅಥವಾ 'ಎಬಿ' ವರ್ಗದ 'ಎ' ಅಗ್ಲೂಟಿನಿನ್‌ಗೂ ಪ್ರತಿ ಕ್ರಿಯೆ ನಡೆಯುತ್ತದೆ. ಇಲ್ಲಿಯೂ ಕೆಲವು ರಕ್ತಕಣಗಳು ಗುಂಪಾಗುತ್ತವೆ.

'ಎಬಿ' ರಕ್ತವರ್ಗ: ಇಲ್ಲಿ 'ಎ' ಮತ್ತು 'ಬಿ' ಅಗ್ಲೂಟಿನೊಜಿನ್‌ಗಳೆರಡೂ ರಕ್ತದಲ್ಲಿರು ವುದರಿಂದ, 'ಎಬಿ' ವರ್ಗದ ರಕ್ತಕ್ಕೆ 'ಎ', 'ಬಿ' ಅಥವಾ 'ಎಬಿ' ರಕ್ತವನ್ನು ಸೇರಿಸಿದಾಗ, ಪ್ರತಿಯೊಂದು ವೇಳೆಯೂ ರಕ್ತಕಣಗಳು ಗುಂಪಾಗುತ್ತವೆ. ಆದರೆ 'ಎಬಿ' ರಕ್ತಕ್ಕೆ 'ಎ' ಅಥವಾ 'ಬಿ' ರಕ್ತವನ್ನು ಬೆರಸಿದರೆ, ರಕ್ತಕಣಗಳ ಗುಂಪಾಗುವಿಕೆಯು ಅಪೂರ್ಣವಾಗಿ ನಡೆಯುತ್ತದೆ. 'ಎಬಿ' ರಕ್ತಕ್ಕೆ 'ಒ' ರಕ್ತವನ್ನು ಬೆರಸಿದಾಗ, 'ಬಿ' ರಕ್ತದ 'ಎ' ಮತ್ತು 'ಬಿ' ಅಗ್ಲೂಟಿ ನಿನ್‌ಗೂ, 'ಎಬಿ' ವರ್ಗದ 'ಎ' ಮತ್ತು 'ಬಿ' ಅಗ್ಲೂಟಿನೊಜಿನ್‌ಗೂ ಪ್ರತಿಕ್ರಿಯೆ ನಡೆದು ರಕ್ತಕಣಗಳೆಲ್ಲ ಗುಂಪಾಗುತ್ತವೆ. ಇಲ್ಲಿ ಸಂಪೂರ್ಣವಾಗಿ ರಕ್ತಕಣಗಳು ಗುಂಪಾಗುತ್ತವೆ. ಇಂತಹ ಸಂದರ್ಭದಲ್ಲಿ ಹಾನಿ ಹೆಚ್ಚು. (ಸಾಮಾನ್ಯವಾಗಿ ಸಾವು ಉಂಟಾಗುವುದು).

ಈ ಮೇಲೆ ಹೇಳಿದ ನಾಲ್ಕು ಸಾರ್ವತ್ರಿಕ ರಕ್ತವರ್ಗಗಳಲ್ಲದೇ (Universal Blood-groupings), ಇತರ ರಕ್ತವರ್ಗಗಳು ಕೆಲವು ಇವೆ. ಇವುಗಳನ್ನು ೧೯೨೭ ನೆಯ ಇಸವಿಯಲ್ಲಿ ಕಂಡುಹಿಡಿದರು. ಇವುಗಳಲ್ಲಿ ಮುಖ್ಯವಾದ 'ಎಮ್', 'ಎನ್'

ಮತ್ತು 'ಎಮ್‌ಎನ್' (M-group, N-group and MN-group) ಎಂಬ ಮೂರು ರಕ್ತವರ್ಗಗಳು ರಕ್ತಸಂಯೋಜನೆ ಕಾರ್ಯದಲ್ಲಿ (ಒಬ್ಬನ ದೇಹಕ್ಕೆ ಮತ್ತೊಬ್ಬನ ರಕ್ತವನ್ನು ಸೇರಿಸುವ ಕಾರ್ಯ (Blood Transfusion) ಅಮುಖ್ಯ ವಾದುವುಗಳು. ಈ ರಕ್ತವರ್ಗಗಳಲ್ಲಿ, ಅಗ್ಲೂಟಿನೊಜೆನ್ ಮಾತ್ರ ಇರುತ್ತದೆಯೇ ಹೊರತು, ಇದಕ್ಕೆ ಪ್ರತಿಸ್ಪರ್ಧಿಯಾದ ಅಗ್ಲೂಟಿನಿನ್ ಇರುವುದಿಲ್ಲ. ಆದ್ದರಿಂದಲೇ 'ಎಮ್' 'ಎನ್' ಮತ್ತು 'ಎಮ್‌ಎನ್' ರಕ್ತವರ್ಗದವರಲ್ಲಿ, ಒಬ್ಬರ ರಕ್ತವನ್ನು ಮತ್ತೊಬ್ಬರಿಗೆ ಎಳ್ಳಷ್ಟೂ ಅಪಾಯವಿಲ್ಲದೆ ಕೊಡಬಹುದು. ಸಾರ್ವತ್ರಿಕ ರಕ್ತವರ್ಗಕ್ಕೆ ಸೇರಿದ ಒಂದು ಜಾತಿಯ ರಕ್ತವರ್ಗದವನು, ಮೇಲೆ ಹೇಳಿದ ಮೂರು ರಕ್ತವರ್ಗ ಗಳಲ್ಲಿ ಯಾವುದಾದರೂ ಒಂದಕ್ಕೆ ಸೇರಿರುತ್ತಾನೆ. ಈ ರಕ್ತವರ್ಗಗಳು (ಸಾರ್ವ ತ್ರಿಕ—'ಎ', 'ಬಿ', 'ಎಬಿ' ಮತ್ತು 'ಒ' ವರ್ಗ, 'ಅಮುಖ್ಯವಾದ'—'ಎಮ್', 'ಎನ್' ಮತ್ತು 'ಎಮ್‌ಎನ್' ರಕ್ತವರ್ಗಗಳು) ಇತರ ಗುಣಗಳಂತೆ ವಂಶಪರಂಪರೆ ಯಿಂದ ಗುಣಗಳ ಅಥವಾ ಶಕ್ಯತಾದರ್ಶಗಳ (ಇವನ್ನು ತಳಿಶಾಸ್ತ್ರದಲ್ಲಿ 'ಜೀನ್ಸ್'= Genes ಎಂದು ಕರೆಯುವರು) ಮೂಲಕ ಹೊರಗೆಡಹಲ್ಪಡುವುವು ಎನ್ನುವುದು ಅನೇಕ ತಳಿಶಾಸ್ತ್ರಜ್ಞರ ಅಭಿಪ್ರಾಯ.

'ಆರ್‌ಹೆಚ್ ಫ್ಯಾಕ್ಟರ್' (Rh-factor)

ಡಾ|| ಲ್ಯಾಂಡ್ ಸ್ಟೇನರ್ ಮತ್ತು ವೈನರ್ (Dr. Land Stainer and Weiner) ಇಬ್ಬರು ಒಟ್ಟುಗೂಡಿ ೧೯೪೦ ರಲ್ಲಿ ಒಂದು ಹೊಸ ಅಗ್ಲೂಟಿನೊಜೆನ್ (ಆಂಟಿಜೆನ್) ಪದಾರ್ಥವನ್ನು ಕಂಡುಹಿಡಿದರು. ಇದನ್ನು 'ಆರ್‌ಹೆಚ್' (Rh-factor) ಗುಣವೆಂದು ಕರೆದರು. ಈ 'ಆರ್‌ಹೆಚ್' ಎಂಬ ಹೆಸರು 'ರೆಸಸ್' (Rhesus) ಎಂಬ ಕೋತಿ ಯಿಂದ ಉಂಟಾಗಿದೆ. 'ರೆಸಸ್' ಕೋತಿಯ ರಕ್ತವನ್ನು ಇಂಜೆಕ್ಷನ್ನಿನ ಮೂಲಕ ಮೊಲದ ದೇಹಕ್ಕೆ ಸೇರಿಸಿದಾಗ ಮೊಲದ ರಕ್ತದಲ್ಲಿ ಒಂದು ನಿಶ್ಚಿತವಾದ ಪ್ರತಿ ನಿರೋಧಕ ಉತ್ಪತ್ತಿಯಾಗುತ್ತದೆ. ಈ ಪ್ರತಿನಿರೋಧಕವನ್ನು (Antiserum) ಇತರ ಮನುಷ್ಯರ ರಕ್ತಕ್ಕೆ ಸೇರಿಸಿದರೆ ಕೆಲವರಲ್ಲಿ ಪ್ರತಿಕ್ರಿಯೆಯು ನಡೆದು ರಕ್ತಕಣಗಳು ಒಟ್ಟಾಗುತ್ತವೆ, ಮತ್ತಿತರರಲ್ಲಿ ರಕ್ತಕಣಗಳು ಇದ್ದಹಾಗೆ ಇರುತ್ತವೆ. ಈ ವಿಚಾರ ವನ್ನು ಆಧಾರವಾಗಿಟ್ಟುಕೊಂಡು, ಎಲ್ಲರ ರಕ್ತವನ್ನು 'ಆರ್‌ಹೆಚ್ ಪಾಸಿಟಿವ್', 'ಆರ್‌ಹೆಚ್ ನೆಗಟಿವ್' (Rh+ve and Rh−ve) ಎಂದು ಎರಡು ವರ್ಗಗಳನ್ನಾಗಿ ಬೇರ್ಪಡಿಸಬಹುದು. ಅಂದರೆ ಒಬ್ಬ ಮನುಷ್ಯನು 'ಆರ್‌ಹೆಚ್ ಪಾಸಿಟಿವ್' ಅಥವಾ 'ಆರ್‌ಹೆಚ್ ನೆಗೆಟಿವ್' ರಕ್ತವರ್ಗಕ್ಕೆ ಸೇರಿರಬಹುದು ಎಂದರ್ಥ. ಮೊಲದ

ಪ್ರತಿನಿರೋಧಕವನ್ನು ಒಬ್ಬನ ರಕ್ತಕ್ಕೆ ಸೇರಿಸಿದಾಗ, ಪ್ರತಿಕ್ರಿಯೆ ನಡೆದು ರಕ್ತ ಕಣಗಳು ಗುಂಪಾದರೆ, ಅವರ ರಕ್ತವನ್ನು 'ಆರ್‌ಹೆಚ್ ಪಾಸಿಟಿವ್' ಎಂದೂ, ಆ ರೀತಿ ಪ್ರತಿಕ್ರಿಯೆ ನಡೆಯದೆ ರಕ್ತಕಣಗಳು ಯಥಾಪ್ರಕಾರವಿದ್ದಲ್ಲಿ ಆ ಮನುಷ್ಯನ ರಕ್ತವನ್ನು 'ಆರ್‌ಹೆಚ್ ನೆಗೆಟಿವ್' ಎಂದೂ ಕರೆಯುವರು. ಒಬ್ಬ ವ್ಯಕ್ತಿಯು ಯಾವುದೇ ಸಾರ್ವತ್ರಿಕ ರಕ್ತವರ್ಗಕ್ಕೆ ಸೇರಿರಲಿ ಅವನು 'ಆರ್‌ಹೆಚ್ ಪಾಸಿಟಿವ್' ಅಥವಾ 'ಆರ್‌ಹೆಚ್ ನೆಗೆಟಿವ್' ರಕ್ತವರ್ಗಕ್ಕೆ ಸೇರಿರುತ್ತಾನೆ. ಅದೂ ಅಲ್ಲದೇ ಆರ್‌ಹೆಚ್ ಪಾಸಿಟಿವ್ ರಕ್ತದಲ್ಲಿರುವ 'ಪದಾರ್ಥಕ್ಕೂ' ಮತ್ತು ಆರ್‌ಹೆಚ್ ನೆಗೆಟಿವ್ ರಕ್ತದಲ್ಲಿರುವ 'ಪದಾರ್ಥಕ್ಕೂ' ಒಂದು ಅವರ್ಣನೀಯವಾದ (ಹಿಂದೆ ಆಂಟಿಜೆನ್-ಆಂಟಿಬಾಡಿ ಅಥವಾ ಅಗ್ಲೂಟಿನೋಜೆನ್-ಅಗ್ಲೂಟಿನಿನ್‌ಗಳಲ್ಲಿ ಕಂಡು ಬಂದಂತ ವೈರತ್ವವು ಇಲ್ಲೂ ಕಂಡುಬರುತ್ತದೆ) ವೈರತ್ವವಿದೆ. ಆದ್ದರಿಂದ 'ಆರ್‌ಹೆಚ್ ಪಾಸಿಟಿವ್' ರಕ್ತವರ್ಗದ ಗಂಡಸು 'ಆರ್‌ಹೆಚ್ ನೆಗೆಟಿವ್' ರಕ್ತವರ್ಗದ ಹೆಂಗಸನ್ನಾಗಲೀ; ಅಥವಾ 'ಆರ್‌ಹೆಚ್ ನೆಗೆಟಿವ್' ರಕ್ತವರ್ಗದ ಗಂಡಸು 'ಆರ್‌ಹೆಚ್ ಪಾಸಿಟಿವ್' ವರ್ಗದ ಹೆಂಗಸನ್ನಾಗಲೀ ಮದುವೆಯಾಗಕೂಡದು. ಆ ರೀತಿ ಒಂದು ವೇಳೆ ಮದುವೆಯಾದದ್ದೇ ಆದರೆ ಹುಟ್ಟುವ ಮಗುವು ರಕ್ತಸಂಬಂಧವಾದ ಒಂದು ರೋಗದಿಂದ (Erythroblastosis Fetalis) ಗರ್ಭದಲ್ಲಿಯೇ ಆಗಲಿ ಅಥವಾ ಹುಟ್ಟಿದ ನಂತರವಾಗಲೀ ಸಾಯುವುದು. ಆದ್ದರಿಂದ ಒಂದೇ ರಕ್ತವರ್ಗಕ್ಕೆ ಸೇರಿದವರು (Rh+ve ಗಂಡಸು ಮತ್ತು Rh+ve ಹೆಂಗಸು ಅಥವಾ Rh−ve ಗಂಡಸು ಮತ್ತು Rh−ve ಹೆಂಗಸು) ಮದುವೆಯಾಗುವುದು, ಅತ್ಯಾವಶ್ಯಕ.

ರಕ್ತವರ್ಗೀಕರಣ ಮತ್ತು ವಂಶಪರಂಪರೆ

ತಳಿಶಾಸ್ತ್ರದ ಪ್ರಕಾರ ಸಮಸ್ತ ಜೀವಿಗಳ (ವಿಕಸನದಲ್ಲಿ ಉನ್ನತ ದರ್ಜೆಯಲ್ಲಿ ಕಂಡುಬರುವ ಮಾನವನೂ ಸಹ ಒಂದು ಪ್ರಾಣಿಯೆನ್ನುವುದನ್ನು ಗಮನಿಸಬೇಕು) ಗುಣಗಳು ವಂಶಪಾರಂಪರ್ಯವಾಗಿ ಬಂದ 'ಗುಣ್ಯಗಳ ಮತ್ತು ವಾತಾವರಣದ ಪರಸ್ಪರ ವರ್ತನೆಯ ಪ್ರತಿಫಲ (All the characters of any living being is the resultant of the perpetual interaction between the genes and the environment)—ಇದೇ ರೀತಿ ರಕ್ತವರ್ಗವೂ ವಂಶಪಾರಂಪರ್ಯವಾಗಿ (Hereditary) ಬಂದ ಗುಣ. ಮಾನವವಿಜ್ಞಾನವು, ಜೀವವಿಜ್ಞಾನದ ಒಂದು ಮುಖ್ಯಭಾಗ. ಮಾನವವಿಜ್ಞಾನದಲ್ಲಿ (Anthropology) ಮನುಷ್ಯರನ್ನು ಮೂಗಿನ ಆಕಾರ, ತಲೆ, ಮೈಬಣ್ಣ, ಎತ್ತರ ಮುಂತಾದ ಪ್ರಾಕೃತಿಕ ಗುಣಗಳನ್ನು

ಆಧಾರವಾಗಿಟ್ಟುಕೊಂಡು ವಿವಿಧ ಪಂಗಡಗಳನ್ನಾಗಿ ವಿಂಗಡಿಸುವರು. ಈ ರೀತಿಯ ಮಾನವವರ್ಗೀಕರಣವು (Human Classification) ಒಂದು ಜಾತಿಯ ಅಥವಾ ಪಂಗಡದ ಮನುಷ್ಯನಿಗೆ ಒಂದು ಶ್ರೇಷ್ಠತೆ ಹಾಗೂ ಗೌರವವನ್ನು ಕಲ್ಪಿಸಿ ಕೊಟ್ಟು ಮಾನವಜನಾಂಗದಲ್ಲಿ ಅಸಮಾಧಾನವನ್ನುಂಟುಮಾಡಿದ್ದ, ಮತ್ತು ಉಂಟು ಮಾಡಿರುವ ಸಂಗತಿ ಅನೇಕರಿಗೆ ತಿಳಿದ ವಿಷಯ. ಬಿಳಿಜನರು ಕಪ್ಪುಜನರನ್ನು ತಿರಸ್ಕರಿಸುವುದು ಒಂದು ದೊಡ್ಡ ಗಲಾಟೆಯನ್ನು ಮಾನವಜನಾಂಗದಲ್ಲಿ ಉಂಟು ಮಾಡಿರುವುದು ಯಾರಿಗೂ ತಿಳಿಯದೇ ಇರುವ ವಿಷಯವಲ್ಲ. ವಿವಿಧ ರೀತಿಯ ಮಾನವವರ್ಗೀಕರಣದಲ್ಲಿ, ರಕ್ತವರ್ಗೀಕರಣವು ಮುಖ್ಯವಾದದ್ದು ಮತ್ತು ನಿಶ್ಚಲ ವಾದದ್ದು, ಹಾಗೂ ನಂಬಲಾರ್ಹವಾದದ್ದು. ಈ ರಕ್ತವರ್ಗೀಕರಣದ ಬಹುಗುಣ ಗಳಲ್ಲಿ ಪ್ರಾಮುಖ್ಯವಾದ ಒಂದು ಗುಣವೆಂದರೆ, ಇತರ ವರ್ಗೀಕರಣ ಸಾಧನಗಳಂತೆ ಒಂದು ವರ್ಗದ ಅಥವಾ ಪಂಗಡದ ಶ್ರೇಷ್ಠತೆಯನ್ನಾಗಲೀ ಅಥವಾ ತುಚ್ಛತೆ ಯನ್ನಾಗಲೀ ಉತ್ಪತ್ತಿಮಾಡುವುದರ ಬದಲು, ಸಮತಾಭಾವನೆಯನ್ನುಂಟು ಮಾಡುವುದು. ಆದುದರಿಂದ ಇತರ ವರ್ಗೀಕರಣಗಳಿಗಿಂತ, ರಕ್ತವರ್ಗೀಕರಣದ ಮೂಲಕ ಹೊರಬಿದ್ದ ಮಾನವವರ್ಗೀಕರಣಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡಬೇಕೆನ್ನುವುದು ತಿಳಿದವರು ಮತ್ತು ವಿವೇಕಿಗಳು ಒಪ್ಪುವಂತಹ ಮಾತು.

ರಕ್ತವರ್ಗೀಕರಣದ ಉಪಯೋಗ

ರಕ್ತವರ್ಗೀಕರಣದ ಅಧ್ಯಯನದಿಂದ ಇಡೀ ಜೀವವಿಜ್ಞಾನಕ್ಕೆ ಅಲ್ಲದೆ ಮಾನವ ಜನಾಂಗಕ್ಕೆ ಹೆಚ್ಚು ಉಪಯೋಗಗಳುಂಟಾಗಿವೆ. ಒಬ್ಬರ ರಕ್ತವನ್ನು ಮತ್ತೊಬ್ಬರಿಗೆ ಕೊಡಬೇಕಾದರೆ, ಮೊದಲು ರಕ್ತವನ್ನು ಕೊಡುವವನ ಮತ್ತು ತೆಗೆದುಕೊಳ್ಳುವವನ ರಕ್ತವರ್ಗವನ್ನು ನಿರ್ದಿಷ್ಟವಾಗಿ ತಿಳಿದುಕೊಳ್ಳದೆ, ರಕ್ತಸಂಯೋಜನೆ ನಡೆಸಿದರೆ ಹಾನಿಯಾಗುವುದು ಖಂಡಿತವೆನ್ನುವುದನ್ನು ತಿಳಿಯಪಡಿಸಿದೆ. 'ಒ' ರಕ್ತವರ್ಗದವನಿಗೆ ಇತರ ರಕ್ತವರ್ಗದವರ ರಕ್ತದಿಂದ ಸ್ವಲ್ಪವೂ ತೊಂದರೆಯುಂಟಾಗುವುದಿಲ್ಲ. ಆದ್ದರಿಂದ 'ಒ' ರಕ್ತವರ್ಗದವನನ್ನು 'ಸಾರ್ವತ್ರಿಕದಾನಿ' (Universal Donor) ಎನ್ನುವರು. ಹಿಂದಿನ ಕಾಲದಲ್ಲಿದ್ದ ವಿವಿಧ ಮಾನವಪಂಗಡದ ಶ್ರೇಷ್ಠತೆಯು ಬಹುಮಟ್ಟಿಗೆ ಕಡಿಮೆಯಾಗುವುದಕ್ಕೆ ರಕ್ತವರ್ಗೀಕರಣವು ಕಾರಣವಾಗಿದೆ. ಕೆಲವು ಸಂದರ್ಭಗಳಲ್ಲಿ ಹುಟ್ಟಿದ ಮಗುವಿನ ವಂಶ ಅಥವಾ ಮನೆತನವನ್ನು ಕುರಿತು ಕೆಲವು ಸಂಸಾರಗಳಲ್ಲಿ ಪರಿಸ್ಥಿತಿ ಬಿಕ್ಕಟ್ಟಾಗಿ, ಗಂಡ ಹೆಂಡಿರಲ್ಲಿ ಮನಸ್ತಾಪ ಬರಬಹುದು. ಅಂಥಹ ಸಮಯದಲ್ಲಿ, ತಂದೆ, ತಾಯಿ ಮತ್ತು ಮಗುವಿನ ರಕ್ತವರ್ಗವನ್ನು ಪರೀ

ಕ್ಷಿಸಿ, ಪರಿಸ್ಥಿತಿಯನ್ನು ಸುಧಾರಿಸುವುದು ತಳಿಶಾಸ್ತ್ರಜ್ಞರಿಗೆ ಮಾತ್ರ ಸಾಧ್ಯ. ಮಗುವು ಗರ್ಭದಲ್ಲೇ ಆಗಲೀ, ಹುಟ್ಟಿದನಂತರವೇ ಆಗಲೀ ರಕ್ತಕಾರಣವಾದ ರೋಗದಿಂದ (Erythroblastosis Fetalis) ಸಾಯುವುದು ಅಪರೂಪವೇನೂ ಅಲ್ಲ. ಈ ಅನರ್ಥವನ್ನು ತಡೆಗಟ್ಟುವುದಕ್ಕೆ ರಕ್ತವರ್ಗೀಕರಣದ ಅಧ್ಯಯನವು ಅತ್ಯಗತ್ಯವಾದುದು. ರಕ್ತವರ್ಗೀಕರಣದ ಅಧ್ಯಯನವು ಇಡೀ ಮಾನವವರ್ಗಕ್ಕೆ ವರ್ಣಿಸಲಶಕ್ಯವಾದಷ್ಟು ಉಪಕಾರಮಾಡಿಕೊಟ್ಟಿರುವುದಲ್ಲದೆ, ವಿವಿಧ ವಿಜ್ಞಾನಿಗಳನ್ನು—ತಳಿಶಾಸ್ತ್ರಜ್ಞ, ರೋಗನಿರೋಧಿಕ ಶಾಸ್ತ್ರಜ್ಞ, ಮಾನವಶಾಸ್ತ್ರಜ್ಞ, ಪ್ರಾಣಿಶಾಸ್ತ್ರಜ್ಞ, ರಸಾಯನ ಶಾಸ್ತ್ರಜ್ಞ ಇತ್ಯಾದಿ, ಶಾಸ್ತ್ರಜ್ಞರನ್ನು ಒಟ್ಟುಗೂಡಿಸುವ ಪ್ರಯತ್ನದಲ್ಲಿ ಸಫಲವಾಗಿದೆ. ಮಾನವನಿಗೆ ಸಂಬಂಧಪಟ್ಟ ಅನೇಕ ಶಾಸ್ತ್ರಗಳಿಗೆ ರಕ್ತವರ್ಗೀಕರಣದಿಂದ ಅಪಾರ ಅನುಕೂಲವಾಗಿದೆ ಎನ್ನುವುದು ಪ್ರತ್ಯಕ್ಷದಲ್ಲೂ ಪರೋಕ್ಷದಲ್ಲೂ ನಿಜವಾದ ವಿಷಯವೇ ಹೊರತು, ಉತ್ಪ್ರೇಕ್ಷೆಯಲ್ಲ!

ಚ. ರಾ. ಪುಟಣ.

ನಿನ್ನಲ್ಲಿಯೆ ಧನ್ಯತೆಯಿದೆ

ನಿರಹಂಕೃತಿ
ಇಂದ್ರಿಯ ಶುಚಿ
ಅನುಭವ ರಸಸಂಸ್ಕೃತಿ
ಅಹಿಂಸೆಯ ನಿಧಿ
ಮಧುರ ಪ್ರಕೃತಿ
ಪ್ರತಿಬಿಂಬಿತ ರಸಮತಿ.

ಇದೆ ಬಾಳಿನೊಳುತ್ತಮಸ್ಥಿತಿ
ದಿವ್ಯಾತ್ಮನ ದೇವರತಿ
ಬ್ರಹ್ಮತ್ವದ ಸನ್ಮತಿ.

ತಿಂಗಳು ಮೇಣ್
ನೇಸರು ಮೇಣ್
ತಾರೆಗಳಾ ವಿಶ್ವಕೃತಿ,
ಹಸುರು ವನ
ಗಿರಿಯ ಮೌನ
ನದನದಿಗಳ ನಿಸ್ವನ ;
ಎಲ್ಲದರೊಳು
ಇಲ್ಲದರೊಳು
ಪರಿಶೋಭಿಪ ಸತ್ವನಿಧಿ ;
ಅಧ್ಯಾತ್ಮಿಕ
ಆನಂದದ
ನಿರ್ವಿಕಲ್ಪ ರಸನಿಧಿ.

ಇಹದ ಪರದ ರಾಸಕೃತಿ
ಪರಮಾತ್ಮನ ಪ್ರೇಮರತಿ
ಸಂಸಾರದ ಸೌಂದರ್ಯದ
ರಸಜ್ಞತೆಯೆ ಕವಿಶ್ರುತಿ.
ಸರ್ವಾಂತರ್ಯಾಮಿತ್ವದ
ಯೋಗಮಗ್ನ ಪರಂಪ್ರಜ್ಞೆ
ಬ್ರಹ್ಮತ್ವದ ಸಂಸ್ಕೃತಿ.

ಇಹದಲಿ ಪರವಡಗಿದೆ
ಪರದಲಿ ಇಹವುಡುಗಿದೆ
ನಿನ್ನಲ್ಲಿಯೆ ಧನ್ಯತೆಯಿದೆ
ಕಲಿ ಶ್ರದ್ಧೆಯ, ಹೇ ಭನ್ತೆ !

ಕುಮುದ.

ಭಾರತ ಇತಿಹಾಸವನ್ನು ಮತ್ತು ನಾಗರೀಕತೆಯನ್ನು ನಿರೂಪಿಸಿದ–ಕಲ್ಹಣ*

ಭಾರತದ ಇತಿಹಾಸವನ್ನು ಶಾಸ್ತ್ರೀಯವಾಗಿ ರಚಿಸತೊಡಗಿ ಯಶಸ್ವಿಯಾಗಿರುವ ಪ್ರಪ್ರಥಮ ಚರಿತ್ರಕಾರನೆಂದರೆ ಕಾಶ್ಮೀರದ ಕಲ್ಹಣನೇ. ಸಮಗ್ರ ಏಷ್ಯಾಖಂಡಕ್ಕೆ ರತ್ನಪ್ರಾಯವಾಗಿರುವ ಕಾಶ್ಮೀರ, ಭೌಗೋಲಿಕವಾಗಿ ತನ್ನದೇ ಆದ ವೈಶಿಷ್ಟ್ಯವನ್ನು ಪಡೆದಿದೆ. ಸುಂದರ ದೇವಮಂದಿರಗಳಿಂದಲೂ, ಮನೋಹರ ಸರೋವರಗಳಿಂದಲೂ, ಹಿಮಾವೃತ ಪರ್ವತಶೃಂಗಗಳಿಂದಲೂ, ಕಲಕಲನಿನಾದದ ನಿರ್ಮಲ ನದಿಗಳಿಂದಲೂ ಕೂಡಿ, ಕುಂಕುಮ, ಕೇಸರಿ, ದ್ರಾಕ್ಷಾಫಲ ಇವುಗಳಿಗೆ ಉತ್ಪತ್ತಿಸ್ಥಾನವಾಗಿರುವ ಕಾಶ್ಮೀರದ ಕಣಿವೆಯ ಇತಿಹಾಸವನ್ನು ತಿಳಿಯಲು ಯಾರಿಗೆ ತಾನೆ ಕುತೂಹಲ ಕೆರಳದಿದ್ದೀತು?

ಕಾಶ್ಮೀರದ ಸಾವಿರಾರು ವರ್ಷಗಳ ಇತಿಹಾಸವನ್ನು ಶಾಸ್ತ್ರೀಯವಾಗಿ ರಚಿಸಬೇಕೆಂಬುದು ಕಲ್ಹಣನ ಹೆಬ್ಬಯಕೆ. ತನ್ನ ತಂದೆ "ಚಂಪಕ", ಹರ್ಷನ ಮಂತ್ರಿಯಾಗಿದ್ದುದರಿಂದಲೂ ತಾನು ಸ್ವತಃ ಜಯಸಿಂಹನ ಆಸ್ಥಾನವನ್ನಲಂಕರಿಸಿದ್ದುದರಿಂದಲೂ ಅರಮನೆಯ ನಡವಳಿಕೆಯನ್ನೂ, ರಾಜ್ಯಭಾರ ರೀತಿಯನ್ನೂ ಹತ್ತಿರದಿಂದ ಅವಲೋಕಿಸುವ ಸದವಕಾಶ ಕಲ್ಹಣನಿಗಿತ್ತು. ಇದರೊಂದಿಗೆ ರಚನಾಸಾಮರ್ಥ್ಯವೂ, ಇತಿಹಾಸದ ಮೂಲಗಳನ್ನು ಪರೀಕ್ಷಿಸಿ ನಿರ್ಧಾರಕ್ಕೆ ಬರುವ ಜಾಣ್ಮೆಯೂ ಇದ್ದುದರಿಂದ ಕಲ್ಹಣನಿಗೆ ಇತಿಹಾಸಕಾರನಿಗಿರಬೇಕಾದ ಸಮಸ್ತ ಪೂರ್ವಸಿದ್ಧತೆಗಳೂ ಇದ್ದುವು. ತನಗಿಂತ ಹಿಂದಿನವರಾದ ಸುವ್ರತ, ಕ್ಷೇಮೇಂದ್ರ, ಹೇಲರಾಜ, ನೀಲಮುನಿ ಇವರ ಗ್ರಂಥಗಳನ್ನು ವಿಮರ್ಶಿಸಿ, ಶಾಸನಗಳನ್ನೂ, ಪ್ರಶಸ್ತಿಪಟ್ಟಗಳನ್ನೂ, ಹಸ್ತಪ್ರತಿಗಳನ್ನೂ ವಿವೇಕದಿಂದ ಅವಲೋಕಿಸಿ "ರಾಜತರಂಗಿಣೀ" ಎಂಬ ಚಾರಿತ್ರಿಕ ಕಾವ್ಯವನ್ನು ಸಂಸ್ಕೃತದಲ್ಲಿ ರಚಿಸಿದನು. ಕಲ್ಹಣನಿಗೆ ತನ್ನ ಕಾಶ್ಮೀರ ಒಂದೇ ಗುರಿಯೇ ಹೊರತು ಸಮಗ್ರ ಭಾರತವಲ್ಲ. ಗ್ರಂಥದ ರಚನೆಯನ್ನು ಕ್ರಿ.ಶ. ೧೧೪೮ರಲ್ಲಿ ಪ್ರಾರಂಭಿಸಿ, ಕೇವಲ ಎರಡೇ ವರ್ಷಗಳಲ್ಲಿ ತನ್ನ ಕಾರ್ಯವನ್ನು ಪೂರ್ಣಗೊಳಿಸಿದನು. "ರಾಜತರಂಗಿಣಿ"ಯಲ್ಲಿ ಎಂಟು ತರಂಗಗಳೆಂಬ ಭಾಗಗಳಿವೆ.

---

* ಮೈಸೂರು ಆಕಾಶವಾಣಿಯಲ್ಲಿ ಪ್ರಸಾರವಾದ ಭಾಷಣ.

ಒಟ್ಟು ೭,೮೨೭ ಶ್ಲೋಕಗಳಿವೆ. ರಾಜತರಂಗಿಣಿಯು ಎಲ್ಲ ಅರ್ಥಗಳಲ್ಲೂ ಒಂದು ಮಹಾಕಾವ್ಯವೇ ಸರಿ. ಕಲ್ಹಣನು ಇತಿಹಾಸಕಾರನೂ ಹೌದು ಕವಿಯೂ ಹೌದು ಎನ್ನುವುದು ಗ್ರಂಥಾವಲೋಕನದಿಂದ ಪ್ರಕಾಶವಾಗುತ್ತದೆ. ಇತಿಹಾಸದ ಜೊತೆಗೆ ಮಾನವನ ಐಶ್ವರ್ಯದ ನಶ್ವರತೆಯೂ, ರಾಜರುಗಳ ವೈಭವವೂ, ಆಡಂಬರವೂ ಚಿತ್ರಿಸಲ್ಪಟ್ಟಿವೆ. ಇಷ್ಟದೇವತೆಯಾದ ಶಿವನಲ್ಲಿ ಅಪಾರ ಭಕ್ತಿಯೂ ವಿಧಿವಿಲಾಸದಲ್ಲಿ ನಂಬಿಕೆಯೂ ಕಲ್ಹಣನಿಂದ ವ್ಯಕ್ತಗೊಳಿಸಲ್ಪಟ್ಟಿವೆ. ತನ್ನ ಕರ್ತವ್ಯದ ವಿಷಯದಲ್ಲಿ ಎಳ್ಳಷ್ಟೂ ಸಂದೇಹವಿಲ್ಲ ಕಲ್ಹಣನಿಗೆ. ಐತಿಹಾಸಿಕರಲ್ಲಿರಬೇಕಾದ ಮಹದಾದರ್ಶವನ್ನು ಈ ರೀತಿ ನುಡಿದಿದ್ದಾನೆ.

"ಶ್ಲಾಘ್ಯಸ್ಸ ಏವ ಗುಣವಾನ್ ರಾಗದ್ವೇಷ ಬಹಿಷ್ಕೃತಾ |
ಭೂತಾರ್ಥ ಕಥನೇ ಯಸ್ಯ ಸ್ಥೇಯಸ್ಯೇವ ಸರಸ್ವತೀ ||"

"ನಡೆದುಹೋದುದನ್ನು ತಿಳಿಸುವುದರಲ್ಲಿ ರಾಗದ್ವೇಷಗಳಿಲ್ಲದೆ ಭಾಷೆಯನ್ನು ನ್ಯಾಯಾಧೀಶನಂತೆ ಯಾರು ಉಪಯೋಗಿಸುತ್ತಾರೋ, ಅವರೇ ಶ್ಲಾಘ್ಯರು".

ತನ್ನ ತಾಯ್ನಾಡಿನ ಐತಿಹಾಸಿಕ ಸ್ಥಳಗಳನ್ನೂ ತೀರ್ಥಕ್ಷೇತ್ರಗಳನ್ನೂ ಸ್ವತಃ ಸಂದರ್ಶಿಸಿದ್ದುದರಿಂದ ಕಲ್ಹಣನ ವರ್ಣನೆಗಳಲ್ಲಿ ಸ್ವಾಭಾವಿಕತೆ ಇದೆ.

ಸಾಮಾನ್ಯವಾಗಿ ಚರಿತ್ರೆ ಮತ್ತು ಕಾವ್ಯ ಒಂದುಗೂಡುವುದು ಕಷ್ಟ. ಭಾಷಾ ಮಾಧುರ್ಯದ ಸವಿಯನ್ನೂ ಐತಿಹಾಸಿಕ ಘಟನೆಗಳ ನಿಷ್ಕೃಷ್ಟ ನಿರೂಪಣೆಯನ್ನೂ ಹಾಸುಹೊಕ್ಕಾಗಿ ನೇಯುವುದರಲ್ಲಿ ನಿಸ್ಸೀಮ ಕಲ್ಹಣ. ಈಗ್ಗೆ ೮೦೫ ವರ್ಷಗಳ ಹಿಂದೆ ರಚಿತವಾದ "ರಾಜತರಂಗಿಣಿ"ಯಲ್ಲಿ ಸಾವಿರಾರು ವರ್ಷಗಳ ಕಥೆಯನ್ನು ನಾವು ಕಾಣುತ್ತೇವೆ. ಪ್ರಾರಂಭದಲ್ಲಿ ಇತಿಹಾಸ ಚಿಕ್ಕದು, ಉತ್ಪ್ರೇಕ್ಷಾಯುತವೂ, ನಿಷ್ಕೃಷ್ಟವಲ್ಲದೆಯೂ ಇರುವುದೂ ಸ್ವಾಭಾವಿಕ. ಬರಬರುತ್ತಾ ತನ್ನ ಸಮಕಾಲೀನರ ಚರಿತ್ರೆಗೆ ಬಂದಾಗ ಹತ್ತಿರದಿಂದಲೂ ವೈಶಾಲ್ಯದಿಂದಲೂ ಕಲ್ಹಣನು ಇತಿಹಾಸವನ್ನು ನಿರೂಪಿಸುತ್ತಾನೆ.

ಈ ಇತಿಹಾಸದಲ್ಲಿ ಮುಖ್ಯವಾಗಿ ಮಧ್ಯಯುಗದ ಕಥೆ ಹೆಚ್ಚಾಗಿದೆ. ಅನೇಕ ವೇಳೆ ಸಂತೋಷತರುವ ಕಥೆ ಅಲ್ಲ ಅದು. ಇತರ ಕಡೆಗಳಂತೆಯೇ ನಿರಂಕುಶತೆಯ, 'ಮಿಲಿಟರಿ' ಆಡಳಿತದ ಕಥೆ ಅದು. ಅರಮನೆಯ ಒಳಸಂಚುಗಳು, ಕೊಲೆಗಳು, ರಾಜದ್ರೋಹ, ಅಂತರ್ಯುದ್ಧ, ದಬ್ಬಾಳಿಕೆ ಇವುಗಳೊಂದಿಗೆ ಸಾಹಸ, ಸಚ್ಚಾರಿತ್ರ, ಸತ್ಕಾರ್ಯ, ಜನೋಪಯೋಗಿ ಸಾಧನಗಳ ನಿರ್ಮಾಣ ಇವುಗಳ ವಿವರಣೆಯನ್ನೂ ನಾವು ಕಾಣಬಹುದು. ಮುಖ್ಯವಾಗಿ ರಾಜರುಗಳ, ರಾಜವಂಶೀಯರ, ಉನ್ನತ ಅಂತಸ್ತಿನವರ ಚರಿತ್ರೆ ವರ್ಣಿತವಾಗಿದೆಯೇ ಹೊರತು ಸಾಮಾನ್ಯ ಮನುಷ್ಯನ

ಕಥೆಯಲ್ಲ. ಹೆಸರೇ "ರಾಜತರಂಗಿಣಿ" ಆದರೆ ರಾಜಕೀಯ, ಸಾಮಾಜಿಕ, ಆರ್ಥಿಕ ವಿಷಯಗಳನ್ನು ಕುರಿತ ನಿರೂಪಣೆಯನ್ನೂ ನಾವು ಕಾಣಬಹುದು.

ಕಲ್ಹಣನ ರಚನಾಕೌಶಲದಿಂದ ನಡೆದುಹೋದ ಸಂಗತಿಗಳು ನಮ್ಮ ಕಣ್ಣ ಮುಂದೆ ಚಿತ್ರದಂತೆ ನಿಲ್ಲುತ್ತವೆ. ಅವನ ಸಮಕಾಲೀನರು ಎಂತಹವರು? ಅವರ ಆಹಾರ ನಡೆನುಡಿ ಏನು? ಉಡುಪು ಯಾವ ರೀತಿಯದು? ಅವರ ನಂಬಿಕೆಗಳೇನು? ಸ್ತ್ರೀಪುರುಷರ ಸಮಸ್ಯೆಗೆ ತನ್ನ ಉತ್ತರವೇನು? ಇವುಗಳನ್ನೆಲ್ಲಾ ನಿಸ್ಸಂಕೋಚವಾಗಿ ಕಲ್ಹಣ ನಿರೂಪಿಸುತ್ತಾನೆ. ಸ್ವಭಾವದಿಂದಲೇ ಕಲ್ಹಣ ರಾಜನೀತಿಜ್ಞನಾಗಿ ವಿರಾಜಿಸುತ್ತಾನೆ. ಪ್ರತಿಯೊಂದು ರಾಜಕೀಯ ಬಿಕ್ಕಟ್ಟಿನಲ್ಲೂ ಒಳಿತು ಕೆಡಕುಗಳ ಹೋರಾಟವನ್ನು ಕಾಣುತ್ತಾನೆ. ಮಧ್ಯೆ ಮಧ್ಯೆ ರಾಜಕೀಯ ಘಟನೆಗಳನ್ನು ಕುರಿತು ತನ್ನದೇ ಆದ ವಿಮರ್ಶಾತ್ಮಕ ಟೀಕೆ ಕೊಡುತ್ತಾನೆ.

ಕಾಶ್ಮೀರದ ಇತಿಹಾಸದ ಅತಿ ಪ್ರಾಚೀನ ಭಾಗ ಕೇವಲ ಪುರಾಣದಂತಿದೆ. ಪರಂಪರೆಯಿಂದ ಬಂದ ಆತಿಥ್ಯ ಅದು. ಸಾಂಪ್ರದಾಯಿಕ ಚರಿತ್ರೆ, ಪಾಂಡವರಿಗೆ ಅಧೀನನಾಗಿದ್ದ ಮೊದಲನೆಯ ಗೋನಂದನನ ಆಳ್ವಿಕೆಯಿಂದ ಪ್ರಾರಂಭವಾಗುತ್ತದೆ. ಇವನಿಂದ ಮೂರನೆಯ ಗೋನಂದನನ ವರೆಗೆ ೫೨ ರಾಜರುಗಳು ಆಳಿಹೋದರು.

ಅಶೋಕ, ಹುಷ್ಕ, ಜುಷ್ಕ, ಕನಿಷ್ಕ, ಮಿಹಿರಕುಲ ಮುಂತಾದುವೆಲ್ಲ ಹೆಸರುಗಳು ಮಾತ್ರ. ಈ ಚರಿತ್ರಪೂರ್ವ ಐತಿಹ್ಯಕ್ಕೆ ನೀಲಮತಪುರಾಣವೇ ಆಧಾರ. ಈ ಅತಿ ಪ್ರಾಚೀನ ಇತಿಹಾಸಕ್ಕೆ ಸಾಕಾದಷ್ಟು ಶಾಸ್ತ್ರೀಯವಾದ ಆಧಾರವಿಲ್ಲವೆಂದು ನಿರ್ಣಯಿಸಿ ಸರಿಯಾದ ಇತಿಹಾಸ ಕ್ರಿ.ಶ. ಏಳನೆಯ ಶತಮಾನದಲ್ಲಿ "ದುರ್ಲಭಕ" (೬೩೨ A.D.) ನಿಂದ ಪ್ರಾರಂಭವಾಗುತ್ತದೆ ಎಂದು ತಿಳಿಸುತ್ತಾನೆ. ಅಲ್ಲಿಂದ ಕ್ರಿ.ಶ. ೧೧೫೦ ರಲ್ಲಿ ಆಳುತ್ತಿದ್ದ ಜಯಸಿಂಹನ ವರೆಗೆ, ಗೋನಂದವಂಶ, ಕಾರ್ಕೋಟಕ ವಂಶ, ಉತ್ಪಲವಂಶ ಮತ್ತು ಲೋಹರವಂಶದ ಅನೇಕ ರಾಜರುಗಳು ಆಳಿದರು. ಕಲ್ಹಣನ ಕೊನೆಯ ಶ್ಲೋಕ ಈ ರೀತಿ ಇದೆ:

"ಗೋದಾವರೀ ಸರಿದಿವೋತ್ತುಮುಲೈಸ್ತರಂಗೈಃ
ವಕ್ರೈಃ ಸ್ಫುಟಂ ಸಪದಿ ಸಪ್ತಭಿರಾಪತಂತೀ
ಶ್ರೀಕಾಂತ ರಾಜ ವಿಪುಲಾಭಿಜನಾಬ್ಧಿ ಮಧ್ಯಂ
ವಿಶ್ರಾಂತಯೇ ವಿಶತಿ ರಾಜತರಂಗಿಣೀಯಮ್"

"ಗೋದಾವರಿಯ ಏಳು ಶಾಖೆಗಳು ಸಮುದ್ರವನ್ನು ಸೇರುವಂತೆ ಕಾಶ್ಮೀರದ ಇತಿಹಾಸದ ಏಳು ತರಂಗಗಳು ಶ್ರೀ ಕಾಂತಿಕಾನವಂಶಾಬ್ಧಿಯಲ್ಲಿ ವಿಶ್ರಮಿಸುತ್ತವೆ."

ಇತರ ರಾಜಾಶ್ರಯ ಪಡೆದ ಕವಿಗಳಂತೆ ಕಲ್ಹಣ ತನ್ನ ಸ್ವಾಮಿಯನ್ನಾಗಲೀ

ಇತರ ಗುಂಪುಗಳನ್ನಾಗಲೀ ಹೊಗಳಲು ಅಥವಾ ನಿಷ್ಕಾರಣವಾಗಿ ತೆಗಳಲು ಹೊರಡುವುದಿಲ್ಲ. ಅವನ ಕಾಲದ ಕಾಶ್ಮೀರವನ್ನು ನೋಡಲು ಸಾಧನವಾದ ಅನೇಕ ಕಿಟಕಿಗಳಂತಿವೆ ಅವನ ನೂರಾರು ಶ್ಲೋಕಗಳು.

ಈಗ ಕಾಶ್ಮೀರದ ಇತಿಹಾಸದ ಕೆಲವು ಅಸಾಮಾನ್ಯ ವಿದ್ಯಮಾನಗಳನ್ನು ಪರಿಶೀಲಿಸೋಣ. ಕ್ರಿ.ಪೂ. ೨೪ ರಿಂದ ೩೪ ವರ್ಷಗಳ ಕಾಲ ಮೇಘವಾಹನನೆಂಬ ಲೋಕರಂಜಕದ ರಾಜ, ರಾಜ್ಯಭಾರ ನಡೆಸಿದನು. ಇವನು ಪ್ರಾಣಿವಧೆಯನ್ನು ಪೂರ್ಣವಾಗಿ ತನ್ನ ರಾಜ್ಯದಲ್ಲಿ ನಿರೋಧಿಸಿ ಕಟುಕರಿಗೆಲ್ಲಾ ಬೇರೆ ಬೇರೆ ಉದ್ಯೋಗಗಳನ್ನು ಕಲ್ಪಿಸಿಕೊಟ್ಟನು.

ಯಜ್ಞಯಾಗಾದಿಗಳಲ್ಲೂ ಪಶುವಧೆ ನಿರೋಧಿಸಲ್ಪಟ್ಟಿತು. ಹಿಟ್ಟಿನಿಂದ ಮಾಡಿದ ಪಶು ಅಥವಾ ಘೃತಪಶುವಿನ ಆಹುತಿಯಿಂದಲೇ ಯಜ್ಞಗಳು ನಡೆಯುತ್ತಿದ್ದುವು. ಅಹಿಂಸಾವ್ರತ ಸ್ಥಾಪನೆಗಾಗಿ ಈ ರಾಜ ದಿಗ್ವಿಜಯಕ್ಕೆ ಹೊರಡುವುದು ಒಂದು ಸೋಜಿಗ. ಕ್ರಿ.ಶ. ೮೫೭ ರಿಂದ ೨೭ ವರ್ಷಗಳು ರಾಜ್ಯಭಾರ ನಡೆಸಿದ ಅವಂತಿವರ್ಮನ ಕಾಲದಲ್ಲಿ "ಸುಯ್ಯ" ಎಂಬ ವಾಸ್ತುಶಿಲ್ಪಿ ಪ್ರವಾಹನಿರೋಧಕ್ಕೆ ತಕ್ಕ ಏರ್ಪಾಟುಗಳನ್ನು ಮಾಡಿದ್ದನು. ಅನೇಕ ಕಾಲುವೆಗಳು, ಕೆರೆಕಟ್ಟೆಗಳು, ಸೇತುವೆಗಳು, ಇವುಗಳ ನಿರ್ಮಾಣದಿಂದ ಬೇಸಾಯ ಉತ್ತಮಗೊಂಡ ಬಗೆ ನಮಗೆ ಅಚ್ಚರಿಯನ್ನುಂಟುಮಾಡದಿರದು.

ಅಶಕ್ತರಾದವರು ಬಲಿಷ್ಠರೆದುರಿಗೆ ಪ್ರಾಯೋಪವೇಶದ ಅಸ್ತ್ರವನ್ನು ಉಪಯೋಗಿಸುತ್ತಿದ್ದ ರೀತಿ ಅನೇಕ ಸಲ ಕಲ್ಹಣನಿಂದ ವಿವರಿಸಲ್ಪಟ್ಟಿದೆ. ಪ್ರಾಯೋಪವೇಶ ಮಾಡುವವರನ್ನು ಕಂಡುಹಿಡಿಯುವುದಕ್ಕೆ ಬೇರೆ ಅಧಿಕಾರಿಗಳಿರುತ್ತಿದ್ದರು. ಚಂದ್ರಾಪೀಡನೆಂಬ ರಾಜ ಬ್ರಹ್ಮಹತ್ಯ ಮಾಡಿದ ಪಾಪಕರ್ಮಿಯನ್ನು ಕಂಡುಹಿಡಿಯಲಾರದೆ ತಾನು ನ್ಯಾಯ ದೊರಕಿಸಿಕೊಡಲಾಗದುದಕ್ಕೆ ಪರಿತಪಿಸಿ ದೇವಸ್ಥಾನದಲ್ಲಿ ನಿರಶನ ವ್ರತ ಹಿಡಿಯುತ್ತಾನೆ. ದೈವಕೃಪೆಯಿಂದ ಹತ್ಯಾಕಾರಿ ಪತ್ತೆಹಚ್ಚಲ್ಪಟ್ಟು ಶಿಕ್ಷಿಸಲ್ಪಡುತ್ತಾನೆ. ಕ್ರಿ.ಶ. ೯೮೦ ರಿಂದ ೨೩ ವರ್ಷಗಳು ಆಳ್ವಿಕೆ ನಡೆಸಿದ "ದಿದ್ದಾ" ಎಂಬ ರಾಣಿಯು ರಾಜ್ಯಲೋಭದಿಂದ ತನ್ನ ಮೊಮ್ಮಗನನ್ನೇ ಕೊಲ್ಲಿಸುತ್ತಾಳೆ. ಲಲಿತಾದಿತ್ಯನೆಂಬ ದೊರೆ ಕ್ರಿ.ಶ. ೬೯೫ ರಿಂದ ೩೬ ವರ್ಷಗಳ ಕಾಲ ರಾಜ್ಯಭಾರ ಮಾಡಿ ಪ್ರಜೋಪಯೋಗಿಯಾದ ದಾನಧರ್ಮಗಳಲ್ಲೂ, ವಿದ್ಯಾಭಿಮಾನದಲ್ಲೂ, ದಿಗ್ವಿಜಯದಲ್ಲೂ ಇತರರಿಗೆ ಆದರ್ಶದಂತಿದ್ದನು.

ಹೀಗೆ ಕಲ್ಹಣನ ರಾಜತರಂಗಿಣಿಯು ಕಾಶ್ಮೀರದ ಇತಿಹಾಸಕ್ಕೆ ಮುಖ್ಯವಾದ ಚಾರಿತ್ರಿಕ ಮೂಲಗ್ರಂಥವೆಂದು ಪರಿಗಣಿಸಬಹುದು.

ಕಲ್ಹಣ ಕಾಶ್ಮೀರದ ವಿಷಯದಲ್ಲಿ ಒಂದು ಮಾತು ಹೇಳಿದ್ದಾನೆ:

"ವಿಜಯತೇ ಪುಣ್ಯಬಲೈರ್ಬಲೈರ್ಯತ್ತು ನ ಶಸ್ತ್ರಿಣಾಮ್ |
ಪರಲೋಕಾತ್ತತೋ ಭೀತಿರ್ಯಸ್ಮಿನ್ನಿವಸತಾಂ ಪರಮ್"||

"ಯಾವ ದೇಶದ ಜನರು ಪರಲೋಕದ ಭಯವನ್ನು ಹೊಂದಿದ್ದಾರೋ ಅಂತಹ ಕಾಶ್ಮೀರದೇಶ ಕೇವಲ ಪುಣ್ಯಬಲದಿಂದ ಗೆಲ್ಲಲ್ಪಡಬಹುದೇ ಹೊರತು ಆಯುಧ ಹಿಡಿದ ಸೈನಿಕರಿಂದಲ್ಲ."

ನೂರಾರು ವರ್ಷಗಳ ಹಿಂದೆ ಕಲ್ಹಣ ನುಡಿದ ಮಾತಿನ ಸತ್ಯತೆ ನಮಗೆ ಇಂದು ಕಾಕತಾಲೀಯವಾಗಿ ಅಚ್ಚರಿಗೊಳಿಸುವಂತಿದೆ!

ಜಿ. ಸೀತಾರಾಮಯ್ಯ

ನೃತ್ಯ ಸರಸ್ವತಿ

ತವ ವಿದ್ಯುತ್ ಚರಣಾಘಾತಕೆ ಸನ್ನ ಶಿಲಾಮನ
ಕಿಡಿಗಾರುತ ಮಾಡುತೆ ಜಡ-ವಮನ
ಸ್ಪಂದನಗೈದಿರೆ ಜ್ಯೋತಿರ್ಗಂಗಾ ಜೀವನ
ಆಗುತ್ತಿದೆ ಇದೊ ಮಜ್ಜೀವನ ಪಾವನ!

ನರ್ತಿಸು ನರ್ತಿಸು ಹೇ! ಪರಿಣಾಮಾಶ್ವ ಸುರೂಪೇ!
ನರ್ತಿಸುತಿರೆ ನೀನೆಡಬಿಡದೊಲು ಜಗದ ಅಚಿದ್-ಹೃದಯವನು,
ತವ ವಿದ್ಯುತ್ ಖುರಪುಟದಾಘಾತಕೆ
ಬಿರಿಯುವುದೌ ಜಿರುಮಲರಂದದಿ ಹೊರಸೂಸುತಲದು ಬೆಳಕಿನನರುಗಂಪಸು!
ನರ್ತಿಸು ನರ್ತಿಸು ದೇವೀ ಚಿನ್ಮಯೂರ ವಾಹನೆ!
ನಿಲ್ಲಲು ನಿನ್ನ ವಿರಾಡ್ ಅವಿರತ ನರ್ತನ
ನಿಲ್ಲುವುದೌ ಸೃಷ್ಟಿಸ್ಥಿತಿಲಯ ಹೃದಯಸ್ಪಂದನ!

ಶೂನ್ಯನಿದ್ರೆಯೊಳಿರ್ದ ಬ್ರಹ್ಮನ ಮನದಿಂದುದ್ಭವಿಸಿದ
        ಹೇ! ಸೃಷ್ಟಿಸ್ವಪ್ನಹೇತು;
ಜಡಸೃಷ್ಟಿಯ ಪರಿಪೂರ್ಣತೆಗೊಯ್ಯುತ್ತಿಹ
        ಹೇ! ಭವತಾರಕ ಇಂದ್ರಧನುಸ್ಸೇತು!
ನರ್ತಿಸು ನರ್ತಿಸು ತಾಯೇ ಇಚ್ಛಾರೂಪಿ ಸರಸ್ವತಿ!
ನರ್ತಿಸು ನರ್ತಿಸು ಸರ್ವಾತ್ಮವ್ಯೋಮಾಂಗಣವೇದಿಯಲಿ
ಅಹರ್ನಿಶಾವಿದ್ಯುತ್ ಚರಣಸ್ಪಂದನ ಛಂದದಲಿ!

ಸುಜನಾ.

ಮಾನವನ ವಾಕ್ಶಕ್ತಿಯ ಸಿದ್ಧಿಯಲ್ಲಿ ಕತ್ತಲೆಯ ಪ್ರಭಾವ

(The Influence of Darkness on the Evolution of Vocal Power in Man)

ಮಾನವನಲ್ಲಿ ಮಾತ್ರ ಕಂಡುಬರುವ ಸಿದ್ಧಿ:—ಮಾನವೇತರ ಪ್ರಾಣಿಗಳಲ್ಲಿ ಧ್ವನಿ ಪಟಲದ ಪೆಟ್ಟಿಗೆ ರೂಪುಗೊಂಡಿದ್ದರೂ ಅವುಗಳು ಮಾಡಬಹುದಾದ ಧ್ವನಿ ಕೇವಲ ಶಬ್ದ ಮಾತ್ರ. ಹುಲಿ, ಸಿಂಹ, ಆನೆ ಮುಂತಾದ ಚತುಷ್ಪಾದಿಗಳು ದೀರ್ಘವಾದ ಏಕನಾದದ ಶಬ್ದ ಮಾಡುತ್ತವೆ. ಚಿಂಪಾಂಜಿ, ಗೋರಿಲ್ಲ, ಒರಂಗುಟಾಂಗ್, ಗಿಬ್ಬನ್ ಮುಂತಾದ ಮೇಲ್ವರ್ಗದ ಮಂಗಗಳು ಮನೋಭಾವಗಳಿಗೆ ಹೊಂದಿಸಿಕೊಳ್ಳುವಂತೆ ಶಬ್ದವನ್ನು ಹ್ರಸ್ವವಾಗಿಯೋ ದೀರ್ಘವಾಗಿಯೋ ಮಾಡಬಲ್ಲುವು. ಆದರೆ ಯಾವ ಪ್ರಾಣಿಯಲ್ಲೇ ಆಗಲಿ ಭಿನ್ನ ರೀತಿಯ ನಾದ ಮೂಡುವಂತೆ, ಭಿನ್ನ ಅಳತೆಗೆ ಅಳವಡಿಸುವಂತೆ ಶಬ್ದ ಮಾಡುವ ಶಕ್ತಿ ಮೂಡಿಲ್ಲ; ಜತೆಗೆ ಅಂಥ ಶಬ್ದದ ಒಂದೊಂದು ಮುರುಕಿಗೆ ಒಂದೊಂದು ನಿರ್ದಿಷ್ಟ ಅರ್ಥಸಂಕೇತವೇರ್ಪಟ್ಟಿರುವದೂ ತೋರಿಬರುವುದಿಲ್ಲ. ಆ ಎರಡು ಶಕ್ತಿಗಳೂ ಒಟ್ಟಿಗೆ ಸೇರಿದಾಗ ಮಾತ್ರ ಪ್ರಾಣಿಗಳ ಧ್ವನಿ, ವಾಕ್ ಅಥವಾ ಮಾತು ಎನಿಸುತ್ತದೆ. ಅಂಥ ಶಕ್ತಿ ಇಂದಿನ ಪ್ರಾಣಿವರ್ಗದಲ್ಲಿ ಮಾನವನಲ್ಲಿ ಮಾತ್ರ ಕಂಡುಬರುತ್ತದೆ. ಈ ವಾಕ್‌ಸಿದ್ಧಿ ಭಾಷೆಯ ಬೆಳವಣಿಗೆಗೆ ಅವಕಾಶ ಕಲ್ಪಿಸಿತು; ಮಾನವನ ಮಾನಸಿಕ ಶಕ್ತಿಗಳ ಬೆಳವಣಿಗೆಗೆ ನೆರವಾದುದಲ್ಲದೆ ಸಾಮಾಜಿಕ ವ್ಯವಹಾರಕ್ಕೂ ಅನುಕೂಲವೆನಿಸಿತು; ಕ್ರಮಕ್ರಮವಾಗಿ ಅವನು ಕಟ್ಟಿರುವ ಕಲೆ, ಸಂಸ್ಕೃತಿ, ಸಾಹಿತ್ಯ, ನಾಗರಿಕತೆ—ಇವೆಲ್ಲಕ್ಕೂ ಆಧಾರವಾಯಿತು. ಒಟ್ಟಿನಲ್ಲಿ ಸೃಷ್ಟಿಯ ಎಡರುತೊಡರುಗಳನ್ನು ನೀಗಿ, ನಿಸರ್ಗವನ್ನು ತನ್ನ ಅಭೀಷ್ಟಕ್ಕೆ ಸರಿಹೋಗುವಂತೆ ನಿಯಂತ್ರಣಗೊಳಿಸಿಕೊಂಡು, ಸೃಷ್ಟಿಯ ಸಂಪತ್ತಿನ ಉಪಾಸಕನಾಗಿ, ಜೀವವರ್ಗದ ಮಹೋನ್ನತ ಪ್ರಾಣಿಯೆನಿಸಿ ಬಾಳಲು ಸಹಕಾರಿಯಾಯಿತು. ಮಾನವನು ಇಂದು ಜೀವಲೋಕದ ಕಳಸದಂತೆ ರಾಜಿಸುತ್ತಿದ್ದರೂ ಆ ಸ್ಥಾನವನ್ನಲಂಕರಿಸಲು ನೆರವಾದ ಅವನ ಸರ್ವಶಕ್ತಿಗಳೂ ಕೆಳವರ್ಗದ ಪ್ರಾಣಿಗಳಿಂದಲೇ ಬೆಳೆದುಬಂದವು. ಹಾಗೆಯೇ ವಾಕ್ಶಕ್ತಿಯೂ ಕೂಡ. ಹಾಗಾದರೆ ಅರ್ಥರಹಿತ, ವೈವಿಧ್ಯರಹಿತ ಏಕನಾದದ ಮಾನವೇತರ ಪ್ರಾಣಿಗಳ ಕೂಗು ಅರ್ಥಪೂರ್ಣ, ವೈವಿಧ್ಯವುಳ್ಳ, ಭಿನ್ನ ಸ್ವರೂಪದ ಮಾತುಗಳಾಗಿ ರೂಪುಗೊಂಡ ಬಗೆ ಹೇಗೆ?

ಮಾನವನ ಮಾತು ಹೇಗಾದರೂ ರೂಪುಗೊಂಡಿರಲಿ, ಅದರ ಮೂಲವನ್ನು ಬಿದಕಿ ನೋಡುವುದರಿಂದ ಆಗುವ ಲಾಭವಾದರೂ ಏನು? ಎಂದು ಕೆಲವರಾದರೂ ಪ್ರಶ್ನಿಸಬಹುದು. ಕೆಳವರ್ಗದ ಪ್ರಾಣಿಗಳ ಕೂಗು ಮಾನವನ ಮಾತುಗಳಾಗಿ ಪರಿಣಮಿಸಿದ ಕ್ರಮವನ್ನು ಅರಿಯುವುದಾದರೆ ನಾವು ನಿಸರ್ಗ ಗತಶತಮಾನಗಳಿಂದ ನಿಯೋಜಿಸಿ ನಡಸಿಕೊಂಡು ಬರುತ್ತಿರುವ ಮಹಾ ಪ್ರಯೋಗದ ಕಾರ್ಯಕ್ಷೇತ್ರವೊಂದನ್ನು ಪರಿಚಯಮಾಡಿಕೊಂಡಂತಾಗುತ್ತದೆ; ಮುಂದೆ ಮಾನವನ ಆ ಮುಖ್ಯವಾದ ಪ್ರಗತಿ ಗಮಿಸುತ್ತಿರುವ ಮಾರ್ಗವನ್ನೂ ಅರಿಯಲು ಅವಕಾಶವಾಗುತ್ತದೆ. ಜತೆಗೆ, ಮಾತು ಮಾನವನ ಭಾಷೆಗೆ ನಿಕಟವಾಗಿ ಸಂಬಂಧಿಸಿದೆ; ಭಾವನೆ, ಮಾತು (ಪದ), ವಸ್ತು—ಇವು ಮೂರು ಸೇರಿ ಭಾಷೆಯಾಗಿ ರೂಪುಗೊಂಡಿದೆ. ಅವುಗಳಲ್ಲಿ ಭಾವನೆ ಒಂದಲ್ಲ ಒಂದು ರೂಪದಲ್ಲಿ ಮಾನವೇತರ ಪ್ರಾಣಿಗಳಲ್ಲೂ ಇರುವಂತೆ ತೋರುತ್ತದೆ. ಅವುಗಳೂ ವಸ್ತುಗಳ ಸಂಪರ್ಕವನ್ನು ಸ್ಪರ್ಶಿಸಿ, ದರ್ಶಿಸಿ, ಗ್ರಹಿಸಿ, ರುಚಿಸಿ ಅಥವಾ ಆಘ್ರಾಣಿಸಿ ಅನುಭವ ಪಡೆಯಬಲ್ಲುವು. ಆ ಅನುಭವವನ್ನು ಮಾನಸಿಕ ವ್ಯಾಪಾರಗಳಲ್ಲಿ ನೇರವಾಗಿ ಬಳಸಿಕೊಳ್ಳಲು ಅವು ಅವುಗಳ ನೇರ ಅನುಭವವನ್ನು ಮರಳಿ ಪಡೆಯಬೇಕಾಗುತ್ತದೆ. ಮಾನವನಲ್ಲಾದರೆ ಒಮ್ಮೆ ಪಡೆದ ಅನುಭವಗಳು ಭಾವನೆಯ ರೂಪದಲ್ಲಿ ಸಂಗ್ರಹವಾಗುವುದರ ಜತೆಗೆ ಆ ಭಾವನೆಗಳು ಮಾತುಗಳೊಡನೆ ಸಮನ್ವಯಗೊಂಡು ಕೇವಲ ಆ ಮಾತುಗಳ ಸ್ಮರಣೆಯಿಂದಲೇ ಭಾವನೆಗಳನ್ನು ಸ್ಫುಟಗೊಳಿಸಿಕೊಂಡು ಮನೋವ್ಯಾಪಾರಗಳಿಗೆ ಬಳಸಿಕೊಳ್ಳಬಹುದು. ಈ ಅದ್ಭುತ ಸೌಲಭ್ಯದಿಂದಲೇ ಮಾನವನು ಆಲೋಚನೆ, ವಿವೇಚನೆ, ಸ್ಮರಣೆ, ಕಲ್ಪನೆ, ಯೋಜನೆ ಮುಂತಾದ ಉನ್ನತ ಮನೋವ್ಯಾಪಾರಗಳನ್ನು ನಡೆಸಲು ಶಕ್ತನಾಗಿರುವನು. ಒಮ್ಮೆ ಪಡೆದ ಅನುಭವ ಜೀವನದಲ್ಲಿ ಮರಳಿ ದೊರಕಲಿ, ಇಲ್ಲದಿರಲಿ, ಅದು ಮಾತ್ರ ಆಜೀವವೂ ಅವನ ಮಾನಸಿಕ, ಭೌತಿಕ ಮತ್ತು ಸಾಮಾಜಿಕ ಜೀವನದ ಮೇಲೆ ತನ್ನ ಪ್ರಭಾವವನ್ನು ಬೀರುತ್ತಿರುತ್ತದೆ. ಅಷ್ಟೇ ಅಲ್ಲ. ಆ ಅನುಭವ ಪದ ಹಾಗೂ ಭಾಷೆಯ ಸಹಾಯದಿಂದ ಅವನ ಮುಂದಿನ ಪೀಳಿಗೆಯಲ್ಲಿ ಅಮರಗಂಗಾಪ್ರವಾಹವಾಗಿ ಸಾಗಿಬರುತ್ತದೆ. 'ಒಮ್ಮೆ ಸವಿದಾ ಸೊಬಗು ಚಿರಚಿರಂತನ ಸೊಗಸು' ಎನಿಸುವುದು ಆ ರೀತಿಯಲ್ಲೆ! ಹೀಗೆ ಮಾನವನು ಅಮರನಲ್ಲದಿದ್ದರೂ ಅವನ ಅನುಭವವನ್ನು ಅಮರಗಂಗೆಯಾಗಿ ಪರಿವರ್ತಿಸಿದ ವರಪ್ರಸಾದ ಅವನಿಗೆ ಸಿದ್ಧಿಸಿರುವ ವಾಕ್‌ಶಕ್ತಿ! ಮೊದಲು ಮಾನವನಲ್ಲಿ ಅದು ಸಿದ್ಧಿಸಿದ ಬಗೆಯನ್ನು ಅರಿಯಲು ಯಾರಿಗೆ ತಾನೆ ಕುತೂಹಲ ಮೂಡುವುದಿಲ್ಲ.

ನಾಲ್ಕು ಅಪೂರ್ಣ ವಾದಗಳು

ಮಾನವೇತರ ಪ್ರಾಣಿಗಳ ಕೂಗು ಮಾನವನ ಮಾತಿನ ಸ್ವರೂಪವನ್ನು ತಾಳಿದ ಕ್ರಮವನ್ನು ವಿವರಿಸಲು ನಾಲ್ಕು ಮುಖ್ಯ ವಾದಗಳು ಪ್ರಚಾರದಲ್ಲಿವೆ. ಅವುಗಳನ್ನು ಸ್ಥೂಲವಾಗಿ ಕೆಳಗೆ ಉಲ್ಲೇಖಿಸಿದೆ.

೧. **ದೃಶ್ಯಮೂಲವಾದ**—ಭಾಷೆಯ ಉಗಮಕ್ಕೆ ಮುಂಚೆ ಮಾತು ಆರಂಭವಾಗಿರಬೇಕು; ಮಾತು ಆರಂಭವಾದ್ದು ಅದು ಸಂಕೇತಿಸುವ ವಸ್ತುವಿನಿಂದ. ಆ ನಿರ್ದಿಷ್ಟ ಶಬ್ದಸ್ವರೂಪದ ಮಾತು ಆರಂಭವಾಗಲು ಆ ರೀತಿಯಲ್ಲಿ ಪ್ರಚೋದಿಸಿದ್ದು ಆ ವಸ್ತುವಿನ ನೋಟ. ಆಕಾಶ ಎಂಬುದು ಎತ್ತನೋಡಿದರೂ ವಿಸ್ತರಿಸಿಕೊಂಡು ಅನಂತವಾದುದು. ಅದರ ನೋಟ 'ಆ-ಕಾ-ಶ' ಎಂಬ ಶಬ್ದಸ್ವರೂಪವನ್ನು ಮೂಡಿಸಲು ಕಾರಣವಾಗಿರಬೇಕು.

ಈ ವಾದ ಎಲ್ಲೋ ಕೆಲವು ಪದಗಳನ್ನೇ ಆಧಾರವಾಗಿಟ್ಟುಕೊಂಡು ಮಾತಿನ ಹುಟ್ಟನ್ನು ವಿವರಿಸಲು ಹೊರಟಂತಿದೆ. ಭಾವನೆಗಳು ದೃಶ್ಯಕ್ಕೆ ಗೋಚರಿಸಲಾರವಷ್ಟೆ. ಆದರೂ ಕರುಣ, ಕ್ರೋಧ ಮುಂತಾದ ಮನೋರಸಗಳಿಗೂ ಮಾತುಗಳು ಹುಟ್ಟಿವೆ. ಅಂಥ ಮಾತುಗಳ ವ್ಯುತ್ಪತ್ತಿಗೆ ಈ ವಾದ ಕಾರಣ ದೊರಕಿಸಲಾರದು; ಜತೆಗೆ ಎಲ್ಲ ಭಾಷೆಗಳಿಗೂ ಈ ವಾದ ಒಪ್ಪುವುದೆಂದು ಹೇಳುವಂತಿಲ್ಲ. ಆದ್ದರಿಂದ ಈ ವಾದದ ವ್ಯಾಪ್ತಿ ತೀರ ಸಂಕುಚಿತವಾದ್ದು.

2. **ಶ್ರವ್ಯಮೂಲವಾದ**—ಮೇಲಿನ ವಾದ ನೋಟದ ಮೂಲಕ ಶಬ್ದ ಹುಟ್ಟಿದ ಕ್ರಮವನ್ನು ವಿವರಿಸಲು ಯತ್ನಿಸಿದ್ದರೆ ಎರಡನೆಯ ವಾದ ಆ ವಸ್ತು ಮಾಡುವ ಶಬ್ದದ ಸ್ವರೂಪದಿಂದ ಮಾತು ಆವಿರ್ಭವಿಸಿತೆಂದು ವಿವರಿಸಲು ಹೊರಟಿದೆ. ತರಗೆಲೆ ಎಂಬ ವಸ್ತು ಚಲಿಸುವಾಗ ತರತರ ಶಬ್ದವನ್ನು ಮಾಡುವುದರಿಂದ ಆ ವಸ್ತುವನ್ನು ಸಂಕೇತಿಸುವ ಮಾತು ಆ ಶಬ್ದವನ್ನು ಅನುಕರಿಸಿಕೊಂಡು ಮೂಡಿದೆ ಎಂಬುದು ಈ ವಾದದ ತಿರುಳು. ತರಗೆಲೆಗೇನೋ ಇದು ಒಪ್ಪಬಹುದು; ಜಲ ಎಂಬ ಪದಕ್ಕೂ ಈ ವಾದ ಅನ್ವಯಿಸಬಹುದು; ಆದರೆ ಶಬ್ದಮಾಡದ, ವಸ್ತುಗಳನ್ನು ಸಂಕೇತಿಸುವ ಸಹಸ್ರಾರು ಪದಗಳ ಹುಟ್ಟನ್ನು ಈ ವಾದ ವಿವರಿಸಲಾರದು. ನೀರು, ಜಲ, ತಣ್ಣಿ, ವಾಟರ್—ಇವೆಲ್ಲ ಒಂದೇ ವಸ್ತುವಿನಿಂದ ಮಾಡಿದ ಅನುಕರಣೀಯ ಶಬ್ದಸ್ವರೂಪವಾಗಲಾರವಷ್ಟೆ! ಎಂದರೆ ಯಾವುದೋ ಒಂದು ಭಾಷೆಯ ಹಲವಾರು ಪದಗಳ ಹುಟ್ಟನ್ನು ಇದು ವಿವರಿಸಬಹುದಾದರೂ ಎಲ್ಲ ಭಾಷೆಗಳ ಎಲ್ಲ ಮುಖ್ಯಪದಗಳ ಹುಟ್ಟಿಗೆ ಸಕಾರಣವೆನಿಸುವ ಆಧಾರವನ್ನು ನೀಡಲಾರದು.

೩. **ಅಂತಃಸ್ವರೂಪ ಮೂಲವಾದ**—ಮೂರನೆಯ ವಾದ ಕೇವಲ ವಸ್ತುವಿನ ನೋಟವಾಗಲಿ ಶಬ್ದವಾಗಲಿ ಕಾರಣವೆಂದು ವಾದಿಸುವುದರಿಂದ ಹುಟ್ಟಿಕೊಳ್ಳುವ ಸಂಕುಚಿತಕ್ಷೇತ್ರದ ವ್ಯಾಪ್ತಿಯನ್ನರಿತು ಆ ಪದಾರ್ಥದಲ್ಲಿ ಅಡಗಿರುವ ಒಂದು ಅಂತಃಸ್ವರೂಪ ಆ ರೀತಿ ಮಾತನ್ನು ರೂಪಿಸಲು ಪ್ರಚೋದಿಸಿರಬೇಕೆಂದು ವಿವರಿಸಲು ಯತ್ನಿಸುತ್ತದೆ. ಆ ಅಂತಃಸ್ವರೂಪ ಆ ವಸ್ತುವಿನ ಸ್ವಯಂಸಿದ್ಧಿಯಿಂದ ಆವಿರ್ಭವಿಸಿದ್ದೆಂದು ವಿವರಿಸುತ್ತ ಅದಕ್ಕೆ ಕಾರಣಗಳನ್ನು ಹುಡುಕುವುದು ಸಾಧ್ಯವೆಂದು ಎತ್ತಿ ಹಿಡಿಯುತ್ತದೆ. ಸುಮ ಎಂಬ ಪದವನ್ನು ತೆಗೆದುಕೊಂಡು ಆ ರೀತಿಯ ಶಬ್ದಸಂಕೇತವನ್ನು ಬಳಸಲು ಆ ವಸ್ತುವಿನಲ್ಲಿ ಅಡಗಿರುವ ಒಂದು ಅಂತಃಸ್ವರೂಪವೇ ಕಾರಣವಾಗಿರಬೇಕೆಂದು ವಿವರಿಸುವುದಾದರೂ ಆ ಅಂತಃಸ್ವರೂಪಕ್ಕೂ ಅದರ ಸಂಕೇತವಾಗಿ ರೂಪುಗೊಂಡ ಮಾತಿನ ಶಬ್ದದ ಸ್ವರೂಪಕ್ಕೂ ಸಂಬಂಧ ಕಲ್ಪಿಸುವುದು ಕಲ್ಪನೆಯ ಕಾರ್ಯವೆನಿಸುತ್ತದೆ. ಆದರೆ ಈ ವಾದ ಮಾನವನ ಎಲ್ಲ ಭಾಷೆಗಳ ಎಲ್ಲ ಪದಗಳಿಗೂ ಹುಟ್ಟಿನ ಕ್ರಮವನ್ನು ವಿವರಿಸುವ ಸೌಲಭ್ಯ ಪಡೆದಿದೆ. ಇಷ್ಟು ವ್ಯಾಪ್ತಿಯುಳ್ಳ ವಾದವಾದರೂ ಇದರಲ್ಲಿ ಕಲ್ಪನೆಯ ಪ್ರಭಾವವೇ ಹೆಚ್ಚು, ವಾಸ್ತವಿಕ ಸಾಕ್ಷ್ಯಗಳನ್ನೂ ದೊರಕಿಸುವ ಸೌಲಭ್ಯ ಕಡಿಮೆ.

ಮೇಲಿನ ಮೂರು ವಾದಗಳನ್ನು ಜರ್ಮನಿಯ ಭಾಷಾಶಾಸ್ತ್ರಪಂಡಿತ ಮ್ಯಾಕ್ಸ್ ಮುಲ್ಲರ್‌ರವರು ತೀರ ಅಸಮರ್ಪಕವೂ ಸಾರ್ವತ್ರಿಕವಲ್ಲದವೂ ಎಂದು ತಳ್ಳಿ ಹಾಕಿರುವರು. ಈಚೆಗೆ ಅವುಗಳಿಗಿಂತಲೂ ಹೆಚ್ಚು ಸಮರ್ಪಕವೆನ್ನಬಹುದಾದ ಮತ್ತೊಂದು ವಾದ ಪ್ರಚಾರಕ್ಕೆ ಬಂದಿದೆ. ಅದನ್ನೂ ಮಂಡಿಸಿದವರು ರಿಚರ್ಡ್ ಪೇಜೆಟ್ ಎಂಬುವರು.

೪. **ಪೇಜೆಟ್ಟರ ಅಂಗಭಂಗಿಯ ವಾದ**—ಮಾನವನು ಕೆಳವರ್ಗದ ಪ್ರಾಣಿಗಳಿಂದ ಕಾಲಕ್ರಮದಲ್ಲಿ ಪರಿಣಾಮವಾದವೆಂಬ ಡಾರ್ವಿನ್ನನ ವಿಕಾಸವಾದ ಪ್ರಚಾರಕ್ಕೆ ಬಂದನಂತರ ಜ್ಞಾನರಾಜ್ಯದ ವಿವಿಧ ಅಂಗಗಳ ಬೆಳವಣಿಗೆಗೆ ಪ್ರಚೋದನೆ ದೊರಕಿತಷ್ಟೆ. ಪೇಜೆಟ್‌ರವರು ಆ ವಾದವನ್ನೇ ಅವಲಂಬಿಸಿ, ಮಾನವನಲ್ಲಿ ವಾಕ್‌ಶಕ್ತಿ ಸಿದ್ಧಿಸಿದ ಕ್ರಮವನ್ನು ವಿವರಿಸಲು ಯತ್ನಿಸಿರುವರು. ಮಂಗ ಪೂರ್ವಜನಿಂದ ಪರಿಣಾಮಗೊಳ್ಳುವಾಗ ಆದ ಪ್ರಥಮ ಪ್ರಧಾನ ಮಾರ್ಪಾಟೆಂದರೆ, ಎರಡು ಕಾಲಿನ ಮೇಲೆ ನಡೆಯುವಂತಾಗಿ ಮುಂಗಾಲುಗಳು ಬಿಡುವಾದುದು. ನಡಿಗೆಯ ಕೆಲಸದಿಂದ ನಿವೃತ್ತವಾದ ಮುಂಗಾಲುಗಳು ಅಥವಾ ಕೈಗಳು ಬೇರೆ ಕಾರ್ಯಗಳನ್ನು ಮಾಡಲು ಅನುವಾದುವು. ಹೀಗೆ ಬಿಡುವಾದ ಕೈಗಳು ವಾತಾವರಣವನ್ನು ಜಯಿಸಿ, ಶತ್ರುಗಳಿಂದ ರಕ್ಷಣೆಯನ್ನು ಪಡೆಯಲು ಮಾನವನಿಗೆ ಸಹಾಯವಾದುದಲ್ಲದೆ ಅವನು

ಸೃಷ್ಟಿಯ ಅಜೇಯ ಪ್ರಾಣಿಯೆನಿಸಲು ಕಾರಣವಾದುವು. ಹಾಗೆಯೇ ಭಾಷೆಯನ್ನು ಆರಂಭಿಸುವ ಮುನ್ನ ತನ್ನ ಮನದಿಚ್ಛೆಯನ್ನು ಪ್ರಕಟಿಸುವ ಕಾರ್ಯವನ್ನು ನಿರ್ವಹಿಸಲು ಸಹಾಯವಾದುವು. ಕುಟುಂಬಿಯಾಗಿ ಬಾಳಲು ಆರಂಭಿಸಿದೊಡನೆ ಕುಟುಂಬದ ಇತರರೊಡನೆ ವ್ಯವಹರಿಸುವ ಅಗತ್ಯ ಆದಿಮಾನವನಿಗೆ ಅನಿವಾರ್ಯವಾಗುತ್ತ ಬಂತು. ಮಾತು ಇನ್ನೂ ಮೂಡದಿರುವಾಗ ಮೊದಲು ಆ ಕಾರ್ಯವನ್ನು ಕೈಗಳ ಸನ್ನೆಯಿಂದ ಸೂಚಿಸುವುದು ಆರಂಭವಾಗಿರಬೇಕು. ಇಂದಿಗೂ ನಮ್ಮಲ್ಲಿ ಬಳಕೆಯಲ್ಲಿರುವ ಕೆಲವು ಸನ್ನೆಗಳ ಪರಿಶೀಲನೆಯಿಂದ ಇದು ಸಾಧುವೆಂದು ತೋರುತ್ತದೆ. 'ಬಾ' ಎನ್ನುವುದಕ್ಕೆ ಕೈಗಳನ್ನು ಆಡಿಸಿ ಹಸ್ತವನ್ನು ಹಿಂದಕ್ಕೆ ಬೀಸಿ ಸೂಚಿಸುವುದು ವಾಡಿಕೆಯಲ್ಲಿದೆ; ಹಾಗೆಯೇ ಹೋಗು ಎನ್ನುವುದಕ್ಕೆ ಹಸ್ತವನ್ನು ಮುಂದಕ್ಕೆ ಬೀಸಿ ಆ ಮನೋಭಾವವನ್ನು ವ್ಯಕ್ತಪಡಿಸುತ್ತೇವೆ. ವ್ಯಸನವನ್ನು ಸೂಚಿಸುವಾಗ ಎರಡು ಹಸ್ತಗಳನ್ನು ಮೇಲಕ್ಕೆತ್ತುತ್ತೇವೆ. ಆದಿಮಾನವನಲ್ಲಿ ಕೈಗಳು ಇಂಥ ನೂರಾರು ಮನೋಭಾವವನ್ನು ವ್ಯಕ್ತಪಡಿಸಲು ನೆರವಾಗುತ್ತಿದ್ದಿರಬೇಕು. ಮೊದಮೊದಲು ಮಾನವನ ಭಾವನೆಗಳೂ ಕೆಲವು ಮಾತ್ರವಿದ್ದು ಸಾಧಾರಣ ರೀತಿಯವಾಗಿದ್ದುವು. ಕಾಲಕ್ರಮದಲ್ಲಿ ಅವನ ಮಾನಸಿಕ ಶಕ್ತಿ ವೃದ್ಧಿಯಾದಂತೆ, ವ್ಯವಹಾರವೂ ವಿಸ್ತರಿಸುತ್ತ ಹೋಯಿತು; ಕೇವಲ ಅಗತ್ಯದ ವ್ಯವಹಾರಗಳನ್ನಲ್ಲದೆ ಆನಂದ, ಕುತೂಹಲ, ಆವೇಶ ಮುಂತಾದ ಭಾವಗಳನ್ನೂ ಪ್ರಕಟಿಸುವುದು ಆರಂಭವಾಯಿತು. ಅಂಥ ಸೂಕ್ಷ್ಮಭಾವಗಳನ್ನು ಸಂಕೇತಿಸುವುದು ಹಸ್ತಕ್ಕೆ ಅತಿಯಾಗಿರಬೇಕು. ಆಗ ಹಸ್ತದ ಜತೆಗೆ ಸಹಕರಿಸಿ ಕೆಲಸಮಾಡಲು ಮುಖ ಆರಂಭಿಸಿರಬೇಕು; ಕ್ರಮಕ್ರಮವಾಗಿ ಹಸ್ತಗಳನ್ನು ಬೀಸಿ ಕರೆಯುವುದರ ಬದಲು ಮುಖವನ್ನೇ ಬಳಸುವದು ಮೊದಲಾಗಿರಬೇಕು. ಬಾ ಎನ್ನುವುದಕ್ಕೆ ಹಸ್ತವನ್ನು ಬಳಸುವಂತೆ ಕತ್ತನ್ನು ಕೆಳಮುಖಕ್ಕೆ ತಗ್ಗಿಸುವುದೂ, ಹೋಗು ಎನ್ನುವುದಕ್ಕೆ ಹೊರಮುಖಕ್ಕೆ ಆಡಿಸುವುದೂ ಇಂದಿಗೂ ನಮ್ಮಲ್ಲಿ ಬಳಕೆಯಲ್ಲಿದೆ. ನಮ್ಮ ಇಂದಿನ ಭಾಷೆಗೂ ಅಸಾಧ್ಯವೆನ್ನಿಸದ ಹಲವು ಮನೋಭಾವಗಳನ್ನು ಇಂದೂ ಮುಖಭಂಗಿಯಿಂದ ಮಾತ್ರ ಪ್ರಕಟಿಸಬಹುದೆಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಹೀಗೆ ಮನೋಭಾವಗಳನ್ನು ಪ್ರದರ್ಶಿಸುವ ಕಾರ್ಯದಲ್ಲಿ ಮುಖ ಇಂದಿನಂತೆ ಹಿಂದೆಯೂ ಪ್ರಧಾನ ಪಾತ್ರ ವಹಿಸಿಯೇ ಇರಬೇಕು. ಹೀಗೆ ಭಾವಗಳನ್ನು ಸನ್ನೆಯ ಮೂಲಕ ಪ್ರಕಟಿಸುವ ಕಾರ್ಯವನ್ನು ಕೈಗಳಿಂದ ಮುಖ ದಹಿಸಿಕೊಳ್ಳುವಾಗ ಅಭ್ಯಾಸಬಲದ ಪರಿಣಾಮವಾಗಿ ಮೊದಮೊದಲು ಕೈಗಳೂ ಮುಖದೊಡನೆ ಒಟ್ಟಿಗೆ ಆ ಕಾರ್ಯವನ್ನು ನಡಸುತ್ತಿದ್ದಿರಬೇಕು. ಇಂದಿಗೂ ನಾವು 'ಬಾ' ಎಂದು ಕೈಸನ್ನೆ ಮಾಡುವಾಗ ತಲೆಯನ್ನೂ ಆಡಿಸುತ್ತೇವೆ. ಇದರಿಂದ ಕೈಗಳು ಆ ಭಾವವನ್ನು ಮೊದಲು ಸೂಚಿಸಲು ಹೇಗೆ

ಆಡುತ್ತಿದ್ದವೋ ಅದೇ ರೀತಿಯಲ್ಲಿ ಮುಖವೂ ಆಡುವುದನ್ನು ಅಭ್ಯಾಸಮಾಡಿ ಕೊಂಡಿರಬೇಕು.

ಕಾಲಕ್ರಮದಲ್ಲಿ ಮುಖಭಂಗಿಯಿಂದ ಸನ್ನೆಮಾಡುವುದು ಅಷ್ಟು ಅನುಕೂಲ ವೆನಿಸಿರಲಾರದು. ಅದಕ್ಕೆ ಬದಲು ಶಬ್ದವನ್ನು ಬಳಸುವುದು ಆರಂಭವಾಗಿರಬೇಕೆಂಬು ವುದು ಪೇಜೆಟ್ಟರ ವಾದ. ಮುಖಭಂಗಿಯ ಆಧಾರದ ಮೇಲೆ ಆ ಭಾವವನ್ನು ಸೂಚಿಸುವಂತೆ ಶಬ್ದಮಾಡುವುದು ಆರಂಭವಾಗಿರಬೇಕು. ಅವನ ವಿವಿಧ ಮನೋಭಾವ ಗಳನ್ನು ಸೂಚಿಸಲು ಏಕರೀತಿಯ ಶಬ್ದವಾದರೆ ಪ್ರಯೋಜನವಿಲ್ಲ. ಶಬ್ದದ ಉದ್ದ, ತೀವ್ರತೆ, ನಾದ, ಸ್ವರ—ಇವೇ ಮುಂತಾದ ವೈವಿಧ್ಯಗಳನ್ನು ಕೊಟ್ಟು ಶಬ್ದದಿಂದಲೇ ತನ್ನ ವಿವಿಧ ಭಾವಗಳನ್ನು ವ್ಯಕ್ತಪಡಿಸಲು ಆರಂಭವಾಗಿರಬೇಕು. ಹಾಗೆ ಮಾನವನಿಗೆ ಕೆಳವರ್ಗದ ಪ್ರಾಣಿಯಿಂದಲೇ ಬಂದಿದ್ದ ಕೂಗುವ ದೀರ್ಘನಾದ ಭಿನ್ನಭಿನ್ನವಾಗಿ ಒಡೆದು, ವೈವಿಧ್ಯವನ್ನು ಪಡೆದು ತುಂಡುತುಂಡಾಯಿತು. ಒಂದೊಂದು ತುಂಡೂ ಒಂದೊಂದು ನಿರ್ದಿಷ್ಟ ಭಾವದ ಸಂಕೇತವಾಗಿ ಬಳಸಿದಂತೆ ಒಂದೊಂದಕ್ಕೂ ಒಂದೊಂದು ನಿರ್ದಿಷ್ಟ ಅರ್ಥ ತುಂಬಿಕೊಂಡಿತು. ಹಾಗೆ ಅರ್ಥ ತುಂಬಿಕೊಂಡು ಬಳಕೆ ಬಂದ ಒಂದೊಂದು ಶಬ್ದದ ತುಣುಕೂ ಒಂದೊಂದು ಮಾತಾಯಿತು. ಪೇಜೆಟ್‌ರವರು ತಮ್ಮ ವಾದವನ್ನು ಸಮರ್ಥಿಸುತ್ತ ಅಂಗಭಂಗಿಗಳ ಸ್ವರೂಪ ಆ ಮನೋಭಾವವನ್ನು ಪ್ರತಿಬಿಂಬಿಸುವ ಶಬ್ದಸ್ವರೂಪದ ಮಾತನ್ನು ರೂಪಿಸಲು ನಿರ್ದಿಷ್ಟಪ್ರಭಾವ ಬೀರಿತೆಂದು ಹೇಳುವರು. Come ಎಂಬ ಪದವನ್ನು ಉಚ್ಚರಿಸುವಾಗ ನಾಲಗೆಯ ತುದಿಯನ್ನು ಮುಂದಕ್ಕೆ ಚಾಚಿ ಹಿಂದಕ್ಕೆ ಎಳೆದುಕೊಂಡು ತುಟಿಯ ಅಂತರವನ್ನು ಕಡಮೆ ಮಾಡುತ್ತೇವೆ. ಮುಖಭಂಗಿಯಿಂದ ಸನ್ನೆಮಾಡುತ್ತಿದ್ದ ಆದಿಮಾನವನಲ್ಲಿ ಮುಖ ವನ್ನು ಮುಂದಕ್ಕೆ ನೀಡಿ ಕೆಳಕ್ಕೆ ಬಾಗಿಸುವ ವಾಡಿಕೆಯಿತ್ತು. ಹಾಗೆಯೇ ಕೈಗಳೂ ಆ ಭಾವಪ್ರದರ್ಶನಮಾಡುವಾಗ ಆ ರೀತಿಯಲ್ಲೇ ಚಲಿಸುತ್ತಿದ್ದುವು. ಹೀಗೆ ಮುಖ ಅಲುಗುತ್ತಿದ್ದ ರೀತಿಯಲ್ಲೇ ನಾಲಗೆಯು ಅಲುಗಲು ಯತ್ನಿಸಿತು. ಅದೇ ಸಮಯದಲ್ಲಿ ಮಾನವನು ಕೂಗಲಾರಂಭಿಸುತ್ತಿದ್ದನು. ನಾಲಗೆಯ ಅಲುಗಾಟದ ಫಲವಾಗಿ ಉದ್ದ ವಾದ ಕೂಗು ಅಲ್ಲಿಗಲ್ಲಿಗೆ ಮೊಟಕಾಗಿ ಕತ್ತರಿಸಿದಂತಾಗುತ್ತಿತ್ತು. ಅದರ ಫಲವಾಗಿ ಒಂದು ನಿರ್ದಿಷ್ಟರೀತಿಯ ಶಬ್ದ ಮೂಡುತ್ತಿತ್ತು. ಆ ಶಬ್ದಕ್ಕೆ ಕೈ ಅಥವಾ ಮುಖ ಭಂಗಿ ತಳೆದಿದ್ದ ಭಾವವೇ ಅರ್ಥವಾಗಿ ನಿಂತಿತು. ಆದ್ದರಿಂದ ಮಾತಿಗೆ ನಿರ್ದಿಷ್ಟ ಶಬ್ದ ಸ್ವರೂಪ ಕೈಸನ್ನೆ ಮುಖಸನ್ನೆಗಳಿಂದ ಸಾಗಿಬಂದಿದೆ. ಹೀಗೆಯೇ ವಿವಿಧ ಮನೋ ಭಾವಗಳನ್ನು ಸೂಚಿಸಲು ಬಳಸುತ್ತಿದ್ದ ವಿವಿಧರೀತಿಯ ಅಂಗಚಲನೆಯೂ ಮುಖ ಭಂಗಿಯೂ ತದನುಗುಣವಾದ ನಾಲಗೆಯ ಚಲನೆಯನ್ನು ಮೂಡಿಸಿ ನಿರ್ದಿಷ್ಟ

ರೀತಿಯಲ್ಲಿ ಶಬ್ದ, ಒಡಕು ಮಾತುಗಳಾಗುವಂತೆ ಪ್ರಚೋದಿಸಿರಬೇಕು. ಒಟ್ಟಿನಲ್ಲಿ (ಕೋಲಿಗೆ ಹೋಲಿಸಬಹುದಾದ) ಪ್ರಾಣಿಗಳ ಕೂಗು ಒಡೆದು (ಸರಪಣಿಗೆ ಹೋಲಿಸ ಬಹುದಾದ) ಮಾತಿನ ಶಬ್ದಸ್ವರೂಪವನ್ನು ನಿಷ್ಕರ್ಷಿಸಿ ರೂಪಿಸಿದ್ದು ಮಾನವನ ಪೂರ್ವಜರಲ್ಲಿ ಬಳಕೆಯಲ್ಲಿದ್ದ ಅಂಗಭಂಗಿಗಳೇ.

ಮೇಲಿನ ವಾದ ಭಾಷೆಯ ಅನೇಕ ಪದಗಳಿಗೆ ಅನ್ವಯಿಸುತ್ತದೆ. ಅನೇಕ ಭಾಷೆ ಗಳಿಗೂ ಸ್ವಲ್ಪಮಟ್ಟಿಗೆ ಒಪ್ಪುತ್ತದೆ. ಆದರೆ ಅಂಗಭಂಗಿಯಿಂದ ಶಬ್ದಭಂಗಿಗೆ ರೂಪಿಸಿ ಕೊಳ್ಳಲು ಮಾನವನಿಗೆ ಅಂದು ನೆರವಾದ ಸನ್ನಿವೇಶಗಳಾವುವು ಎಂಬುದನ್ನು ಅದು ಖಚಿತಪಡಿಸುವುದಿಲ್ಲ. ಜತೆಗೆ ಸಂಜ್ಞಾಮೂಲದಿಂದ ಶಬ್ದಗಳು ಹುಟ್ಟಿದುವೆಂದು ಹೇಳು ವಾಗ ಆ ಬಗ್ಗೆ ಇಂದಿನವರಾದ ನಾವು ಕೇವಲ ಊಹೆಯ ಮೂಲಕ ಕಲ್ಪಿಸ ಬೇಕಾಗುತ್ತದೆ. ಮಾನವನ ವಿಕಾಸದ ಇತಿಹಾಸದಲ್ಲಿ ಇಂಥ ಅನೇಕ ಅಂಶಗಳನ್ನು ಕಲ್ಪನೆಯ ಮೂಲಕ ಅರಿತುಕೊಳ್ಳಬೇಕಾಗುತ್ತದೆ. ಆದರೂ ಆ ಕಲ್ಪನೆಗೆ ವಾಸ್ತವಿಕ ಆಧಾರ ದೊರೆತರೇಯೆ ಅದು ವಾದದ ಸ್ವರೂಪವನ್ನು ತಾಳುವುದು.

೧. ಬೇರೆಬೇರೆ ಶಬ್ದವನ್ನು ಬಳಸುವ ಸಂಪ್ರದಾಯ ಒಂದು ಭಾಷೆಯಲ್ಲಿ ಹೇಗೆ ಬೆಳೆಯಿತು ?

೨. ಒಂದೇ ವಸ್ತುವಿಗೆ ಭಿನ್ನಭಿನ್ನ ಪದಗಳನ್ನು ಉಪಯೋಗಿಸುವ ಬೇರೆಬೇರೆ ಭಾಷೆಗಳು ಹೇಗೆ ಹುಟ್ಟಿದುವು ?

೩. ಸಂಜ್ಞೆಯಿಂದ ಸೂಚಿಸಲಾಗದ ಅನೇಕ ಮಾತುಗಳು ಮೂಡಿದ ಬಗೆ ಹೇಗೆ ? ಇವೇ ಮುಂತಾದ ಇನ್ನೂ ಹಲವು ಸಮಸ್ಯೆಗಳನ್ನು ಬಿಡಿಸಲು ಅಷ್ಟೆ ಸಮಂಜಸ ವಾಗಿ ಯತ್ನಿಸಿಲ್ಲ.

ಅಂಗಭಂಗಿಯ ಸಂಜ್ಞೆಯಿಂದ ಶಬ್ದಸಂಜ್ಞೆಯನ್ನು ಬಳಸಲು ಪ್ರಚೋದಿಸಿದ ಅಂಶಗಳು

ಮಂಗಪೂರ್ವಜನಿಂದ ಮಾನವನು ಒಂದು ಪ್ರದೇಶದಲ್ಲಿ ಮಾರ್ಪಟ್ಟನೇ ? ಹಲವಾರು ಪ್ರದೇಶಗಳಲ್ಲಿ ಮಾರ್ಪಟ್ಟನೇ ? ಈ ಸಮಸ್ಯೆ ಹಿಂದಿನಿಂದಲೂ ವಿವಾದದಲ್ಲೇ ಇದೆ. ಈಚೆಗೆ ಹಿಮಾಲಯದ ಸಿವಾಲಿಕ್ ಗುಡ್ಡಗಳಲ್ಲಿ ಸುಮಾರಿನಲ್ಲಿ ದೊರೆತ ಸಿವೋಪಿಥಸ್ ಎಂಬ ಮಂಗ ಪೂರ್ವಜರ ಪಳೆಯುಳಿಕೆಯ ಆಧಾರದ ಮೇಲೆ ಮಾನವನು ಹಿಮಾಲಯದ ಉತ್ತರ ಪ್ರದೇಶದಲ್ಲಿ ಮಧ್ಯ ಏಷ್ಯದ ಹತ್ತಿರದ ಪ್ರದೇಶ ಒಂದರಲ್ಲಿ ಉಗಮವಾಗಿರಬೇಕೆಂಬ ವಾದಕ್ಕೆ ಹೆಚ್ಚು ಬೆಂಬಲ ದೊರಕುತ್ತಿದೆ. ಆದಿ ಮಾನವನ ತಲೆಬುರುಡೆಯ ಪಳೆಯುಳಿಕೆ ರೊಢೇಸಿಯ, ಜಿಬ್ರಾಲ್ಟರ್ ಪಿಲ್ಟ್‌ಡಾ,

ಪೀಕಿಂಗ್, ಜಾವಾ—ಮುಂತಾದೆಡೆಗಳಲ್ಲೂ ದೊರಕಿವೆ. ಹಾಗೆ ಮಧ್ಯ ಏಷ್ಯದಲ್ಲಿ ಉದಯವಾದ ಆದಿಮಾನವನೇ ಎಲ್ಲ ದಿಕ್ಕುಗಳಿಗೂ ವಲಸೆಹೋಗಿ ನೆಲಸಿರಬೇಕು. ಇದಕ್ಕೆ ಸಾಕ್ಷಿಯಂತಿರುವ ಆ ಕಾಲದ ಸುಮಾರಿನಲ್ಲಿ ಭೂಲಕ್ಷಣದಲ್ಲಿ ಆದ ಉಗ್ರ ಬದಲಾವಣೆಗಳು ಕಾರಣವೆನಿಸಿರಬೇಕು. ಆಗ ಹಿಮಾಲಯ ಪರ್ವತ ಇನ್ನೂ ಉದಯವಾಗಿರಲಿಲ್ಲ. ಉಷ್ಣವಲಯ ಸ್ವಲ್ಪ ದಕ್ಷಿಣಕ್ಕೆ ಸರಿದು ಅಲ್ಲೆಲ್ಲ ಶೀತ ಹೆಚ್ಚಿರಬೇಕು; ಹೊಸ ಹೊಸ ಪ್ರಾಣಿಗಳ ಉದಯಕ್ಕೆ ಉಷ್ಣವಲಯ ತೂಗು ತೊಟ್ಟಿಲು. ಆಗ ತಾನೆ ಉದಯವಾಗುವದರಲ್ಲಿದ್ದ ಆದಿಮಾನವ ಅಲ್ಲಿಂದ ಎಲ್ಲ ಕಡೆಗೂ ವಲಸೆ ಹೊರಟಿರಬೇಕು. ಅಷ್ಟುಹೊತ್ತಿಗೆ ಅವನು ಬೆಂಕಿ ನಿರ್ಮಿಸಿಕೊಳ್ಳುವ ಶಕ್ತಿಯನ್ನು ಕಂಡುಕೊಂಡಿದ್ದಂತೆ ತೋರುತ್ತದೆ. ದಕ್ಷಿಣಕ್ಕೆ ಸರಿದಂತೆ ಭಾರಿ ಅರಣ್ಯಗಳು ಸಿಕ್ಕಿರಬೇಕು. ಆಗಾಗ ಮಂಜು ಕವಿಯುತ್ತಿದ್ದಿರಬೇಕು. ಜತೆಗೆ ತನ್ನ ಕುಟುಂಬದೊಡನೆ, ಹಲವಾರು ಕುಟುಂಬಗಳೊಡನೆ ಹಗಲಿನಂತೆ ರಾತ್ರಿವೇಳೆಯೂ ವ್ಯವಹರಿಸುವ ಅಗತ್ಯ ಒದಗಿರಬೇಕು. ಕತ್ತಲು ರಾತ್ರಿಯ ಕಾಲ ಆವರಿಸುತ್ತಿದ್ದಂತೆ, ದಿನದ ಬಹುಭಾಗದಲ್ಲೂ ಮಂಜು ಕವಿದು ಮರಗಿಡಗಳು ಅಡ್ಡಬಂದು ಅಂಗಭಂಗಿಯ ಮೂಲಕ ಭಾವವನ್ನು ಪ್ರದರ್ಶಿಸಲು ಅಸಾಧ್ಯವೆನಿಸಿದ್ದಿರಬಹುದು. ಬಂದರೆ ಬೆಳಕಿಲ್ಲದಿದ್ದರೆ; ಬೆಳಕು ಸಾಕಷ್ಟು ಇಲ್ಲದಿದ್ದರೆ ಮಧ್ಯೆ ಏನಾದರೂ ಅಡ್ಡಬರುವುದಾದರೆ ಭಾವಪ್ರದರ್ಶನಕ್ಕೆ ಅಂಗಭಂಗಿ ಅಪ್ರಯೋಜಕವೆಂಬುದು ಅರಿವಾಗಿರಬೇಕು. ಏಕೆಂದರೆ ತನ್ನ ಮನೋಭಾವವನ್ನು ಪ್ರಕಟಿಸಲು ಒಬ್ಬ ವ್ಯಕ್ತಿ ನಡಸುವ ಅಂಗಭಂಗಿಯನ್ನು ಇನ್ನೊಬ್ಬನು ನೋಡದಿದ್ದರೆ, ಅವನಿಗೆ ಕಾಣದಿದ್ದರೆ ಅಥವಾ ಏನಾದರೂ ಅಡ್ಡಬಂದರೆ ಅದನ್ನವನು ಅರ್ಥಮಾಡಿಕೊಳ್ಳುವುದು ಹೇಗೆ? ಈ ನೈಸರ್ಗಿಕ ತೊಂದರೆಯನ್ನು ಎದುರಿಸಲು ಆದಿಮಾನವನು ಬೆಳಕಿನ ಸಹಾಯ ಅಗತ್ಯವೆನಿಸಿದ್ದ ಅಂಗಭಂಗಿಯ ಮೂಲಕ ಭಾವವನ್ನು ಪ್ರದರ್ಶಿಸುವುದರ ಬದಲು ಕತ್ತಲೆಯಲ್ಲೂ ಭಾವಪ್ರದರ್ಶನವನ್ನು ಅರಿಯಲು ಅನುಕೂಲಿಸುವ ಶ್ರವಣಸೌಲಭ್ಯವುಳ್ಳ ಕ್ರಮವನ್ನು ಅನುಸರಿಸಲು ಯತ್ನಿಸಿರಬೇಕು. ಎಂದ ಮೇಲೆ, ಮಾನವನು ಕಾವಳದ ಅಹಿತಪ್ರಭಾವದಿಂದ ಮುಕ್ತನಾಗಲು ಹೊಸದೊಂದು ಭಾವಪ್ರಕಟನೆಯ ಮೂಲವನ್ನು ಹುಡುಕಬೇಕಾಯಿತು. ಕೆಳವರ್ಗದಿಂದ ವಂಶಗತವಾಗಿ ಬಂದ ಕಂಠಧ್ವನಿಯನ್ನೇ ಬಳಸಿಕೊಂಡು ಭಿನ್ನರೀತಿಯ ಭಾವಗಳನ್ನು ಪ್ರದರ್ಶಿಸಲು ಯತ್ನ ನಡೆದಿರಬೇಕು. ಅದರ ಫಲವಾಗಿ ಒಂದೇ ರೀತಿಯ ಕೂಗಿನ ಕಂಠಧ್ವನಿ ಒಂದೊಂದು ಭಾವಕ್ಕೂ ಒಂದೊಂದು ಸ್ವರೂಪದ ಹ್ರಸ್ವ ಧ್ವನಿಮೂಲಗಳಾಗಿ, ಅದು ಎಲ್ಲರಲ್ಲೂ ಬಳಕೆಬಂದಂತೆ ಆ ಅರ್ಥವನ್ನು ಅಳವಡಿಸಿಕೊಂಡು ನಿರ್ದಿಷ್ಟ ಶಬ್ದವಾಗುತ್ತ ಬಂತು. ಹೀಗೆ ಆರಂಭ

ವಾದ ಮಾತಿಗೆ ಮೂಲಪ್ರಚೋದನೆಯೊದಗಿಸಿದ್ದು ಕತ್ತಲೆಯಿಂದ ಕೂಡಿದ್ದ ನೂತನ ಸನ್ನಿವೇಶಗಳು.

ಒಂದೇ ಭಾಷೆಯಲ್ಲಿ ಒಂದೇ ವಸ್ತುವಿಗೆ ಬೇರೆಬೇರೆ ಪದಗಳು ಹೇಗೆ ಪ್ರಚಾರಕ್ಕೆ ಬಂದುವು?

ಈ ಸಮಸ್ಯೆಯನ್ನು ಪರಿಶೀಲಿಸುವಾಗ ಎರಡು ಮುಖವಾದ ಆಧಾರಗಳನ್ನು ಹುಡುಕಬೇಕಾಗುತ್ತದೆ. ಮೊದಲನೆಯದಾಗಿ, ಮಾತಿನ ಉತ್ಪತ್ತಿಗೆ ಆಧಾರವೆನಿಸಿರುವ ಅಂಗಭಂಗಿಗಳ ಸಂಜ್ಞೆಯ ಮೂಲದಲ್ಲಿ ಅಂಥ ವೈವಿಧ್ಯವಿದ್ದು ಆ ವೈವಿಧ್ಯದ ಫಲವಾಗಿ ಒಂದೇ ಭಾವಸೂಚನೆಗೆ ಬೇರೆ ಬೇರೆ ಪದಗಳು ಬಳಕೆಗೆ ಬಂದುವೇ ಎಂಬುದನ್ನು ಗಮನಿಸಬೇಕು. ಎರಡನೆಯದಾಗಿ ಸಂಪರ್ಕಸಾಧನ ಅಷ್ಟಾಗಿಲ್ಲದ ಆ ಕಾಲದಲ್ಲಿ ಪ್ರಾದೇಶಿಕ ಜೀವನದ ಪ್ರಭಾವದಿಂದ ಭಿನ್ನರೀತಿಯ ಶಬ್ದಗಳು ಹುಟ್ಟಲು ಕಾರಣವಾಗಿರಬಹುದೇ ಎಂಬುದನ್ನು ಪರಿಶೀಲಿಸಬೇಕು.

ಅಂಗಭಂಗಿಗಳಿಂದ ಮನೋಭಾವವನ್ನು ಪ್ರದರ್ಶಿಸುವಾಗ ಒಬ್ಬನೇ ವ್ಯಕ್ತಿ ಒಂದೇ ಭಾವನೆಯನ್ನು ಭಿನ್ನರೀತಿಯಲ್ಲಿ ಪ್ರದರ್ಶಿಸುವ ವಾಡಿಕೆ ಇದ್ದಿರಬೇಕೆಂದು ತೋರುತ್ತದೆ. ಇಂದಿಗೂ ಈ ವಾದಕ್ಕೆ ಸಾಕ್ಷ್ಯವು ನಮ್ಮಲ್ಲಿ ಕಾಣಬಹುದು. ದುಃಖ ಸೂಚಿಸುವಾಗ ಕೆಲವು ವೇಳೆ ಕೈಗಳನ್ನು ಮೇಲಕ್ಕೆತ್ತಿ ಕತ್ತನ್ನು ಹಾಗೆಯೇ ಎತ್ತರಿಸಿ ಆ ಮನೋಭಾವವನ್ನು ಪ್ರದರ್ಶಿಸುತ್ತೇವೆ; ಅದೇ ಮನೋಭಾವವನ್ನು ಕತ್ತನ್ನು ತಗ್ಗಿಸಿ ಕೈಗಳನ್ನು ಕೆಳಕ್ಕೆ ಜೋಲುಬಿಟ್ಟು ಇನ್ನೊಂದು ವಿಧದಲ್ಲೂ ಸೂಚಿಸುತ್ತೇವೆ. ಹೀಗೆ ಇನ್ನೂ ಅನೇಕ ರೀತಿಯ ವಿವಿಧ ಭಂಗಿಯಿಂದ ಒಂದೇ ಭಾವವನ್ನು ಪ್ರದರ್ಶಿಸುವ ಅಭ್ಯಾಸ ನಮ್ಮಲ್ಲಿ ಇನ್ನೂ ಉಳಿದುಕೊಂಡು ಬಂದಿದೆ. ಆದಿಮಾನವನಲ್ಲಿ ಅಂಗಭಂಗಿಯೇ ಪ್ರಧಾನರೀತಿಯ ಭಾವಪ್ರಕಟನೆಯ ಮಾಧ್ಯಮವಾಗಿದ್ದಾಗ ಅಂಥ ಸಾಕ್ಷಿಗಳು ಇನ್ನೂ ಹೆಚ್ಚಾಗಿದ್ದಿರಬೇಕು. ಈ ಊಹೆ ಸಾಧುವೆನಿಸುವುದಾದರೆ ಅಂಥ ವಿವಿಧ ಭಂಗಿಗಳಿಂದ ಪರಿಣಾಮಗೊಂಡು ರೂಪುಗೊಂಡ ವಿವಿಧ ಮಾತು (ಶಬ್ದ)ಗಳು ಒಂದೇ ಅರ್ಥವನ್ನು ಪಡೆದಿರುವುದು ಸಾಧ್ಯವೆನಿಸಬಲ್ಲುದು.

ಆದಿಮಾನವನು, ಸಮಾಜ, ಹಳ್ಳಕೊಳ್ಳ, ಅರಣ್ಯಪರ್ವತಗಳಿಂದ ಬೇರ್ಪಟ್ಟು ಬೇರೆಬೇರೆ ಪ್ರದೇಶಗಳಲ್ಲಿ ವಾಸಿಸುತ್ತಿದ್ದಿರಬೇಕು. ಅನೇಕ ವೇಳೆ ಒಂದು ಪ್ರದೇಶದಲ್ಲಿ ಬಾಳುತ್ತಿದ್ದ ಕುಟುಂಬಗಳು ನೆಲೆಯಾಗಿ ನಿಲ್ಲದೆ ಸಂಚಾರಕುಟುಂಬಗಳಾಗಿದ್ದಿರಬೇಕು. ಆದರೆ ದೂರಪ್ರದೇಶದಲ್ಲಿ ವಾಸಿಸುತ್ತಿದ್ದ ಪಂಗಡಗಳೊಡನೆ ಅಷ್ಟಾಗಿ ಸಂಪರ್ಕವಿದ್ದಿರಲಾರದು. ಮಾನವನ ಕತ್ತು ನೆಟ್ಟಗಾಗಿ, ಕಾಲು ನೆಟ್ಟಗೆ ದೃಢಗೊಂಡ

ಮೇಲೆ ಅವನಿಗೆ ಅಂಥ ತೀವ್ರಗಮನ ಸಿದ್ಧಿಸಿರಬಹುದು. ಅಂಥ ಕಾಲದಲ್ಲಿ ಒಂದೊಂದು ಪ್ರದೇಶದಲ್ಲೂ ವಾಸಿಸುತ್ತಿದ್ದ ವ್ಯಕ್ತಿಗಳು ಅವರು ಬಳಸುತ್ತಿದ್ದ ಅಂಗ ಭಂಗಿಯ ಸ್ವರೂಪವನ್ನು ಅನುಸರಿಸಿ ಮಾತನ್ನು ರೂಢಿಸಿಕೊಂಡಿರಬಹುದು. ಆ ಮಾತು ದೂರಪ್ರದೇಶದ ಪಂಗಡಗಳು ರೂಢಿಸಿಕೊಂಡ ಮಾತಿನಂತಿರಬಹುದು. ಕಾಲಕ್ರಮದಲ್ಲಿ ಅವೆರಡು ಗುಂಪಿನವರೂ ಬೆಟ್ಟು ಬಾಳಬೇಕಾಗಿಬಂದಾಗ ಒಂದೇ ಅರ್ಥಕ್ಕೆ ಅವೆರಡು ಪದಗಳೂ ಬಳಕೆಗೆ ಬಂದಿರಬಹುದು. ಹೀಗೆ ಒಂದೇ ಭಾಷೆಯಲ್ಲಿ ಒಂದೇ ಅರ್ಥವನ್ನು ತಳೆದಿರುವ ಅನೇಕ ಪದಗಳು ಹುಟ್ಟಲು ಕಾರಣವೆನಿಸಿರಬೇಕು. (ಆಧುನಿಕ ಕಾಲದ ಒಂದು ಭಾಷೆಯಲ್ಲಿ ಇತರ ಭಾಷೆಯಿಂದ ಬಂದು ಸೇರಿರುವ ಪದ ಗಳಿಂದ ಇಂದೂ ಒದಗುತ್ತಿರುವ ಇಂಥ ಪರಿಸ್ಥಿತಿಯನ್ನು ಇದಕ್ಕೆ ಹೋಲಿಸಬಹುದು.)

ಬೇರೆಬೇರೆ ಭಾಷೆಗಳ ಉದಯಕ್ಕೆ ಹೇಗೆ ಅವಕಾಶವಾಯಿತು

ಮಾನವನು ಮಧ್ಯ ಏಷ್ಯದಲ್ಲಿ ಅವತರಿಸಿ ವಿವಿಧ ದೇಶಗಳಿಗೆ ವಲಸೆ ಹೊರಟಿರ ಬೇಕೆಂದು ಹಿಂದೆ ಹೇಳಿದೆಯಷ್ಟೆ. ಹಾಗೆ ಹೊರಟದ್ದು ಅವನಿಗಿನ್ನೂ ಮಾತು ಸಿದ್ಧಿಸದಿರುವಾಗ; ಮತ್ತು ಇನ್ನೂ ಅಂಗಭಂಗಿಗಳ ಮೂಲಕವೇ ಭಾವಪ್ರಕಟನೆ ಯನ್ನು ಮಾಡುತ್ತಿದ್ದಾಗ. ಹೀಗೆ ವಲಸೆಯ ಫಲವಾಗಿ ಒಂದು ಕಡೆ ಯೂರೋಪಿಗೂ ಅಲ್ಲಿಂದ ಅಮೆರಿಕಕ್ಕೂ (ಆಗ ಅವೆರಡೂ ಕೂಡಿದ್ದುವು) ಇನ್ನೊಂದು ಕಡೆ ಏಷ್ಯದ ಮೂಲಕ ಆಫ್ರಿಕಕ್ಕೂ (ಆಗ ಅವೆರಡೂ ಕೂಡಿದ್ದವು) ಮತ್ತೊಂದು ಕಡೆ ಆಗ್ನೇಯ ಏಷ್ಯ ಮತ್ತು ಆಸ್ಟ್ರೇಲಿಯಕ್ಕೂ (ಆಗ ಅವೆರಡೂ ಕೂಡಿದ್ದುವು) ಮಗದೊಂದು ಕಡೆ ಚೀಣಾ ಮತ್ತು ಉತ್ತರ ಅಮೆರಿಕದ ಕಡೆಗೂ ವಲಸೆ ಹೋಗಿರಬೇಕು. ಆಯಾ ಪ್ರದೇಶದಲ್ಲಿ ನೆಲಸಿ ಅಲ್ಲಿನ ಸನ್ನಿವೇಶಗಳಿಂದ ಹೊಂದಿಕೊಂಡಂತೆ ಅಂಗಭಂಗಿಯ ಮೂಲಕ ಭಾವಪ್ರಕಟನೆಯು ಕ್ರಮದಲ್ಲಿ ಅಷ್ಟಿಷ್ಟು ವ್ಯತ್ಯಾಸವಾಗಿರುವುದು ಸಾಧ್ಯ. ಅದರ ಫಲವಾಗಿ ಅಂಗಭಂಗಿಗಳ ಪ್ರಭಾವ ನಾಲಗೆಯ ಮತ್ತು ತುಟಿಗಳ ಚಲನೆಯ ಮೇಲೆ ಭಿನ್ನ ರೀತಿಯಲ್ಲಿ ಬಿದ್ದು ಒಂದೇ ಅರ್ಥದ ಸಂಕೇತವಾಗಿ ಭಿನ್ನ ರೀತಿಯ ಶಬ್ದದ ಮಾತುಗಳು ಸಿದ್ಧಿಸಿರಬೇಕು.

ಮಾತು ಸಿದ್ಧಿಸಿದ ಬಹು ಕಾಲದ ನಂತರ ಭಾಷೆ ರೂಪುಗೊಂಡದ್ದು. ಆದರೆ ಮೊದಲು ರೂಪುಗೊಂಡ ಮಾತುಗಳೇ ಭಾಷೆಗೆ ಅಸ್ತಿಭಾರ. ಅವುಗಳಲ್ಲಿ ಕಂಡು ಬಂದ ವ್ಯತ್ಯಾಸ ಭಾಷೆಯಲ್ಲೂ ತೋರಿಕೊಂಡ ವ್ಯತ್ಯಾಸಗಳಿಗೆ ಆಧಾರವೆನಿಸಿರಬೇಕು. ಹೀಗೆ ಭಿನ್ನ ರೀತಿಯ ಭಾಷೆಗಳು ರೂಪುಗೊಂಡರೂ ಜಗತ್ತಿನ ಅನೇಕ ಭಾಷೆಗಳಲ್ಲಿ ವಿಧವಿಧವಾದ ಹೋಲಿಕೆಗಳು ಕಂಡುಬರುತ್ತದೆ. ಅದಕ್ಕೆ ಒಂದೇ ಸ್ಥಳದಿಂದ ಹೊರಟು

ಒಂದೇ ರೀತಿಯ ಅಂಗಭಂಗಿಗಳು ಮಾತನ್ನು ಮೂಡಿಸಲು ನೆರವಾಗಿದ್ದುದು ಕಾರಣವೆನಿಸುತ್ತದೆ. ಸಹಸ್ರಾರು ಮೈಲಿಗಳಾಚೆಯಿರುವ ಗ್ರೀಕ್ ಮತ್ತು ರೋಮನ್ ದೇಶಗಳಲ್ಲಿ ಪ್ರಚಾರದಲ್ಲಿದ್ದ ಲ್ಯಾಟಿನ್ ಮತ್ತು ಗ್ರೀಕ್ ಭಾಷೆಗಳಿಗೂ ಭಾರತದಲ್ಲಿ ಪ್ರಚಾರದಲ್ಲಿದ್ದ ಸಂಸ್ಕೃತಕ್ಕೂ ಬೇಕಾದ ಹಾಗೆ ಪದಸಾಮ್ಯವಿರುವುದು ವಿದಿತ ವಿಷಯ. ಬೆಂಕಿಗೆ ಸಂಸ್ಕೃತದಲ್ಲಿ ಅಗ್ನಿಯೆಂದರೆ ಲ್ಯಾಟಿನ್‌ನಲ್ಲಿ ಇಗ್ನಿಷಸ್—ಎಂಬ ಪದವುಂಟು. ಹಾಗೆಯೇ ಅನೇಕ ಪದಗಳುಂಟು. ಜತೆಗೆ ಭಾಷಾ ಸಂಪ್ರದಾಯಗಳಲ್ಲೂ ಹೋಲಿಕೆಗಳುಂಟು. ಇದಕ್ಕೆ ಕಾರಣ ಅವೆರಡು ಸ್ಥಳಗಳಿಗೂ ಒಂದೇ ಕಡೆಯಿಂದ ವಲಸೆ ಬಂದುದೇ ಕಾರಣವಿರಬಾರದೇಕೆ?

ಕೇವಲ ಅಂಗಭಂಗಿಯೇ ಮಾನವನು ಇಂದು ಬಳಸುವ ಎಲ್ಲ ಮಾತುಗಳಿಗೂ ಆಧಾರವೇ?

ಆದಿಮಾನವನಲ್ಲಿ ಅಂಗಭಂಗಿಗಳಿಂದ ಪ್ರಚೋದಿತವಾಗಿ ಭಿನ್ನಭಿನ್ನ ರೀತಿಯಲ್ಲಿ ಶಬ್ದದ ತುಣುಕುಗಳಾಗಿ ಮಾರ್ಪಟ್ಟು, ಮಾತು ಏರ್ಪಟ್ಟಾಗ ಬಹುಮಟ್ಟಿಗೆ ಅವನಿಗೆ ದಿನಬಳಕೆಗೆ ಅಗತ್ಯವಾದುದಕ್ಕಿಂತ ಅತಿ ಹೆಚ್ಚಿನ ಮಾತುಗಳು ಸಿದ್ಧಿಸಿರಲಾರವು. ಜತೆಗೆ ಅಂದು ಅವನಿಗೆ ಮಾನಸಿಕ ಬೆಳವಣಿಗೆಯೂ ಶೈಶವಸ್ಥಿತಿಯಲ್ಲಿತ್ತು. ನಮ್ಮ ಮನಶ್ಶಕ್ತಿ ಬೆಳೆದಂತೆ ಭಾವನೆಗಳು ಹೆಚ್ಚುತ್ತವೆ. ಹೆಚ್ಚಿದ ಭಾವನೆಗಳಿಗೆ ಸಂಕೇತ ರೂಪದಲ್ಲಿ ಮಾತು ಅಥವಾ ಪದಗಳೂ ರೂಪುಗೊಳ್ಳುತ್ತವೆ ಎಂದ ಮೇಲೆ ಆದಿಯಲ್ಲಿ ಇಂದಿನ ಭಾಷೆಯಲ್ಲಿ ಕಂಡುಬರುವ ಎಲ್ಲ ಮಾತುಗಳೂ ಸಿದ್ಧಿಸಿರಲಾರವೆಂಬುದು ಶತಃಸಿದ್ಧ. ಈ ದಿನ ಬಳಕೆಯಲ್ಲಿರುವ ಐಸೊಟೋಪ್, ನ್ಯೂಟ್ರಾನ್ ಪ್ರೋಟಾನ್ ಮುಂತಾದ ಪದಗಳು ನಮ್ಮ ಹಿಂದಿನ ಒಂದೆರಡು ಪೀಳಿಗೆಯವರಿಗೆ ತಿಳಿದೇ ಇರಲಿಲ್ಲ. ಅವರಿಗೆ ಅವುಗಳ ಭಾವನೆಯೂ ಇರಲಿಲ್ಲ. ಹಾಗೆಯೇ ಆದಿಮಾನವನಲ್ಲಿ ಮೊದಲು ರೂಪುಗೊಂಡ ಮಾತುಗಳು ದಿನಬಳಕೆಗೆ ತಕ್ಕಷ್ಟು ಮಾತ್ರ. ಅನಂತರ ಅವನ ವಿವಿಧ ಜೀವನಕ್ಷೇತ್ರ ವಿಸ್ತರಿಸಿ, ಅನುಭವ ಹೆಚ್ಚಿದಂತೆ ಭಾವನೆಗಳ ಸಂಖ್ಯೆಯೂ ಹೆಚ್ಚುತ್ತ ಬಂತು. ಅದಕ್ಕೆ ಅನುಗುಣವಾಗಿ ಸಾಂಕೇತಿಕ ಸ್ವರೂಪದ ಶಬ್ದಗಳೂ ನೂತನ ಪದಗಳಾಗಿ ರೂಪುಗೊಳ್ಳತೊಡಗಿದುವು.

ಹೀಗೆ ಮಾನವನಿಗೆ ಕೆಳವರ್ಗದ ಪ್ರಾಣಿಗಳಿಂದಲೇ ವಂಶಗತವಾಗಿ ಬಂದ ದೀರ್ಘವಾಗಿ ಒಂದೇ ರೀತಿ ಕೂಗುವ ಶಕ್ತಿ ಕಾಲಕ್ರಮದಲ್ಲಿ ಅಂಗಭಂಗಿಗಳ ಚಲನೆಯ ಸ್ವರೂಪವನ್ನು ಅನುಸರಿಸಿ, ಮಾರ್ಪಟ್ಟ ಭಿನ್ನಸ್ವರೂಪದ ಶಬ್ದದ ತುಣುಕುಗಳಾಗಿ ಒಡೆದು ಅರ್ಥದ ಸಂಕೇತಗಳಾಗಿ ಮಾತು ಅಥವಾ ಪದಗಳು

ರೂಪುಗೊಂಡ ಕಾರ್ಯದಲ್ಲಿ ಬೆಳಕಿನ ಅಭಾವ ಅಥವಾ ಕತ್ತಲೆ ನಿರ್ದಿಷ್ಟರೀತಿಯ ಪ್ರಭಾವವನ್ನು ಬೀರಿದೆ. ಮಾತು ರೂಪುಗೊಂಡ ಬಹುಕಾಲದ ಮೇಲೆ ಭಾಷೆ ಆವಿರ್ಭವಿಸಿತು. ಒಂದೊಂದು ಭಾಷೆಯೂ ಒಂದೊಂದು ರೀತಿಯಲ್ಲಿ ಶಬ್ದಸ್ವರೂಪವನ್ನು ರೂಢಿಸಿಕೊಂಡಿರುವುದಕ್ಕೂ ಒಂದೇ ಭಾಷೆಯಲ್ಲಿ ಒಂದೇ ಅರ್ಥದ ಸಂಕೇತವಾಗಿ ಹಲವಾರು ಪದಗಳು ಮೂಡಿರುವುದಕ್ಕೆ ನಮ್ಮ ಈ ವಾದ ಸಮಂಜಸವಾದ ವಿವರಣೆಯನ್ನು ನೀಡುವಂತಿದೆ.

ಎನ್. ಎಸ್. ವೀರಪ್ಪ.

ಆನಂದಲಹರೀ

ಚತುಃ ಷಷ್ಟ್ಯಾ ತಂತ್ರೈಃ ಸಕಲಮಭಿಸಂಡಾಯ ಭುವನಂ
ಸ್ಥಿತಸ್ತತ್ತತ್ ಸಿದ್ಧಿಪ್ರಸವಪರತಂತ್ರೈಃ ಪಶುಪತಿಃ |
ಪುನಸ್ತ್ವನ್ನಿರ್ಬಂಧಾದಖಿಲ ಪುರುಷಾರ್ಥೈಕ ಘಟನಾ—
ಸ್ವತಂತ್ರಂತೇ ತಂತ್ರಂ ಕ್ಷಿತಿತಲಮವಾತೀತರದಿದಮ್ || ೩೧ ||

ಪಶುಪತಿಯು ಚತುಃಷಷ್ಟಿ ತಂತ್ರಗಳ ಸಹಾಯದಿಂದ ವಿಶ್ವದ ಸಕಲ ವಸ್ತುಗಳನ್ನೂ ಸಂಪೂರ್ಣವಾಗಿ ಅರಿತವನಾಗಿ, ಈ ಪ್ರತಿಯೊಂದು ತಂತ್ರದಲ್ಲಿಯೂ ವರ್ಣಿತವಾಗಿರುವ ಸಿದ್ಧಿಗಳಲ್ಲಿ ನಿಷ್ಣಾತನಾಗಿದ್ದನು. ಆದರೆ ನಿನ್ನ ನಿರ್ಬಂಧದಿಂದ ನಿನ್ನ ಈ ತಂತ್ರವಾದ ಸ್ವತಂತ್ರ ತಂತ್ರವನ್ನು ಭೂಮಿಗೆ ತೆಗೆದುಕೊಂಡು ಹೋದನು. ಈ ತಂತ್ರದಲ್ಲಿ ಚತುರ್ವಿಧ ಪುರುಷಾರ್ಥ ಸಾಧನೆಯು ವಿವರಿಸಲ್ಪಟ್ಟಿರುವುದು.

ಟೀಕೆ: ಅಚ್ಯುತಾನಂದರ ವ್ಯಾಖ್ಯಾನದಲ್ಲಿ ಉಕ್ತವಾಗಿರುವಂತೆ, ಕೈಲಾಸದಲ್ಲಿ ಶಿವನು ದೇವಿಗೆ 'ತಂತ್ರ'ಗಳನ್ನು ಕುರಿತು ಹೇಳುವನು. ಗಣೇಶನು ಅದನ್ನು ಬರೆಯುವನು; ಅದು ಪೂರ್ಣವಾದ ಮೇಲೆ ಭೂಲೋಕದ ಒಬ್ಬ ಸಿದ್ಧಪುರುಷನಿಗೆ ಅದನ್ನು ಉಪದೇಶಿಸುವನು. ಕೆಲವು ತಂತ್ರಗಳು ಆಧುನಿಕವಾದುದರಿಂದ ಐತಿಹಾಸಿಕ ದೃಷ್ಟಿಯಿಂದ ಅವು ನಂಬಲು ಅನರ್ಹವಾದುವೆಂಬ ವಾದವು ವೈದಿಕ ದೃಷ್ಟಿಗೆ ಸಲ್ಲದು. ತಂತ್ರವು ನಿತ್ಯವಾದದ್ದು. ಅಚ್ಯುತಾನಂದರು 'ಪೂರ್ಣಾಗಮ ಸಿದ್ಧಾಂತಂ ನಿತ್ಯಮಾಹುರ್ಮನೀಷಿಣಃ' ಎಂದು ಹೇಳಿದ್ದಾರೆ. ತಂತ್ರಗಳು ಪ್ರಕಾಶಿತವಾದರೆ ಗೋಚರಿಸುತ್ತವೆ; ಅಪ್ರಕಾಶಿತವಾದರೆ ಅಗೋಚರವಾಗುತ್ತವೆ. ಯಾವುದೋ ನಿರ್ದಿಷ್ಟವಾದ ಕಾಲದಲ್ಲಿ ಅವು ಮಾನವರಿಗೆ ಉಪದೇಶಿಸಲ್ಪಟ್ಟ ಕಾರಣ, ತಂತ್ರಗಳು ತಮ್ಮ ಅರ್ಹತೆಯನ್ನು ಪಡೆದಿಲ್ಲ. ಆದರೆ ಅವು ಯಾವ ಸಿದ್ಧಿಗಳನ್ನು ಪಡೆಯಲು ಸಹಾಯಮಾಡುತ್ತವೆಯೋ ಅವುಗಳ ಮೇಲೆ ಅರ್ಹತೆಯು ನಿಂತಿದೆ. ನಿತ್ಯವೂ, 'ಕ್ರಾಂತ'ತ್ರಯುಗಳಿಗಾಗಿ ಉಪದೇಶಿಸಲ್ಪಟ್ಟುವೂ ಆದ ಚತುಃಷಷ್ಟಿ ತಂತ್ರಗಳ ಜ್ಞಾನವಿಶೇಷದಿಂದ ಪಶುಪತಿಯು ಸರ್ವಜ್ಞನಾದನು. ಅವನು ಈ ಅರವತ್ತು ನಾಲ್ಕು ತಂತ್ರಗಳ ಜ್ಞಾನಪ್ರಭಾವದಲ್ಲಿಯೇ ವಿಲೀನನಾಗಿದ್ದನು. ಆದರೆ ಶಕ್ತಿಯ ನಿರ್ಬಂಧದಿಂದ ಅವಳ ತಂತ್ರವಾದ ಸ್ವತಂತ್ರ ತಂತ್ರವನ್ನು ಭೂಮಿಗೆ ತಂದನು. ಭಾಸ್ಕರ ರಾಜರ 'ನಿತ್ಯಾಷೋಡಶಿಕಾರ್ಣವ'ದ ವ್ಯಾಖ್ಯಾನದ ಟೀಕೆಯಲ್ಲಿ ಉಕ್ತವಾಗಿರುವ ಪ್ರಕಾರ ಇದು 'ವಾಮಕೇಶ್ವರ ತಂತ್ರ;' ಇತರರು ಇದನ್ನು ಜ್ಞಾನಾರ್ಣವವೆಂದೂ, ಅನ್ಯರು ತಂತ್ರರಾಜವೆಂದೂ ಹೇಳಿದ್ದಾರೆ. ಕೌಲಮತದ ಪರಮ ವಿರೋಧಿಯಾದ ಲಕ್ಷ್ಮೀಧರನು ಈ ಅರವತ್ತು ನಾಲ್ಕು ತಂತ್ರಗಳೂ, ಮಿಶ್ರದ ಒಂದು ಭಾಗವೂ ವಾಮಾಚಾರವೆಂದೂ, ಕಾಮ ಮತ್ತು ಅರ್ಥಗಳ ಮೂಲಕ ಇಷ್ಟಾರ್ಥಸಿದ್ಧಿಯನ್ನು ಪಡೆಯಲು ಆಶಿಸುವವರಿಗೆ ಮಾತ್ರವೆಂದೂ, ಶೂದ್ರರು, ಅನುಲೋಮ ಮತ್ತು ಪ್ರತಿಲೋಮಗಳಿಂದ ಮಾತ್ರ ಆಚರಿಸಲ್ಪಡಲು ಯೋಗ್ಯವೆಂದೂ ಹೇಳಿದ್ದಾನೆ. ಇವುಗಳನ್ನು

ಅನುಸರಿಸುವ ದ್ವಿಜರು ಬಹಿಷ್ಕಾರಯೋಗ್ಯರು. ಏಕೆಂದರೆ ವೈದಿಕ ಮಾರ್ಗಾನುಯಾಯಿಗಳಾದ ಶೂದ್ರರೂ ಸಹಾ ಮೋಕ್ಷಶಾಸ್ತ್ರಗಳಾದ ಅಷ್ಟ ಆಗಮಗಳನ್ನು ಅನುಸರಿಸಬೇಕು. ಸನತ್ಕುಮಾರ ಸಂಹಿತೆಯಲ್ಲಿ ಕೌಲರು, ಕ್ಷಪಣಿಕರು, ಕಾಪಾಲಿಕರು, ದಿಗಂಬರರು, ಐತಿಹಾಸಿಕರು, ಭೈರವ ಯಾಮಳ ತಂತ್ರವಾದಿಗಳು ಮಾತ್ರ ಬಾಹ್ಯಪೂಜಾವಲಂಬಿಗಳೆಂದು ಉಕ್ತವಾಗಿದೆ. ಇವರನ್ನು ಕುರಿತು ಯೋಚಿಸುವುದು ಸಹಾ ಮಹಾಪಾಪವೆಂದು ಲಕ್ಷ್ಮೀಧರನು ಹೇಳಿದ್ದಾನೆ. ಅಂತರ ಪೂಜಾರತರು ಮಾತ್ರ ಶುಭಾಗಮಪಂಚಕದ ಅವಲಂಬಿಗಳಾದ ಬ್ರಹ್ಮವಾದಿಗಳು ಮತ್ತು ಜೀವನ್ಮುಕ್ತರು. ಈ ಅಭಿಪ್ರಾಯದ ಪ್ರಕಾರ ಪೂರ್ವೋಕ್ತ ಕಾಮ ಮತ್ತು ಅರ್ಥಸಾಧನೆಗಳನ್ನು ಮಾತ್ರ ವಿವರಿಸುವ ತಂತ್ರಗಳ ಜತೆಗೆ ಸಮಯಮಾರ್ಗಿಗಳು ಮೋಕ್ಷಶಾಸ್ತ್ರಗಳನ್ನು ಸೇರಿಸಿದರು. ಈ ಮೋಕ್ಷಶಾಸ್ತ್ರಗಳಲ್ಲಿ ಮುಕ್ತಿಸಾಧನೆಗೆ ಕುಂಡಲಿನಿಯು ಮೂಲಾಧಾರದಿಂದ ಸಹಸ್ರಾರಕ್ಕೇರ ಬೇಕೆಂದು ಹೇಳಲ್ಪಟ್ಟಿದೆ. ಅಲ್ಲದೆ ಇವುಗಳಲ್ಲಿ ಚತುರ್ವಿಧ ಪುರುಷಾರ್ಥಗಳು ವರ್ಣಿತವಾಗಿವೆ.

ಕೌಲವು ಮೋಕ್ಷಶಾಸ್ತ್ರವಲ್ಲವೆಂಬುದಕ್ಕೂ, ಕೌಲಪೂಜೆಯು ಮೂಲಾಧಾರದಲ್ಲಿ ಮಾತ್ರವೆಂಬುದಕ್ಕೂ ಯಾವ ಗ್ರಂಥವು ಆಧಾರವೋ ನಮಗೆ ತಿಳಿಯದು. ಅಲ್ಲದೆ ತಂತ್ರಗಳು ‘ಅವೈದಿಕ’ವೆಂಬುದಕ್ಕಾಗಲೀ ಅಥವಾ ತಾಂತ್ರಿಕಾಚಾರವು ವೇದವಿರುದ್ಧ ವೆಂಬುದಕ್ಕಾಗಲೀ ನಿರ್ದಿಷ್ಟವಾದ ಆಧಾರಗಳಿಲ್ಲ ಕುಲಾರ್ಣವ, ತಂತ್ರರಾಜ, ಸೌಭಾಗ್ಯಕಲ್ಪಲತಿಕಾ, ಕುಲಾದರ್ಶ ಮುಂತಾದ ತಾಂತ್ರಿಕ ಗ್ರಂಥಗಳಲ್ಲಿ ತಂತ್ರಗಳು ವೈದಿಕವೆಂದೂ, ತಾಂತ್ರಿಕಾಚಾರವು ವೇದಸಮ್ಮತವಾದುದೆಂದೂ ಸಪ್ರಮಾಣವಾಗಿ ತೋರಿಸಲ್ಪಟ್ಟಿದೆ. ಲಕ್ಷ್ಮೀಧರನು ಪೂರ್ವೋಕ್ತ ತಂತ್ರಗಳನ್ನು ತನ್ನ ಚತುಃಷಷ್ಟಿ ತಂತ್ರಗಳ ಪಟ್ಟಿಯಲ್ಲಿ ಸೇರಿಸಿಲ್ಲ.*

ಶಿವಃ ಶಕ್ತಿಃ ಕಾಮಃ ಕ್ಷಿತಿರಥ ರವಿಃ ಶೀತಕಿರಣಃ
ಸ್ಮರೋಹಂಸಃ ಶಕ್ರಸ್ತದನು ಚ ಪರಾಮಾರಹರಯಃ।
ಅಮೀ ಹೃಲ್ಲೇಖಾಭಿಸ್ತಿಸೃಭಿರವಸಾನೇಷು ಘಟಿತಾ
ಭಜಂತೇ ತೇ ವರ್ಣಾಸ್ತವ ಜನನಿ ನಾಮಾವಯವತಾಮ್ ॥ ೩೨ ॥

ಎಲೈ ಜನನಿಯೆ, ಮುಂದಿನ ಅಕ್ಷರಗಳು ಪ್ರತಿಯೊಂದು ಮಂತ್ರದ ಅಂತ್ಯದಲ್ಲೂ ಶ್ರೀ ಎಂಬುದರ ಸಮೇತ ನಿನ್ನ ನಾಮದ ಭಾಗಗಳಾಗಿವೆ. ಶಿವ, ಶಕ್ತಿ, ಕಾಮ ಮತ್ತು ಕ್ಷಿತಿ, ರವಿ. ಶೀತಕಿರಣ (ಚಂದ್ರ), ಸ್ಮರ, ಹಂಸ ಮತ್ತು ಶಕ್ರ; ಪರಾ, ಮಾರ ಮತ್ತು ಹರಿ.

ಟೀಕೆ—ಪೂರ್ವೋಕ್ತ ಅಕ್ಷರಗಳು ಪ್ರತಿಯೊಂದು ಕೂಟದಲ್ಲೂ ಶಕ್ತಿಯ ನಾಮದ ಭಾಗ ಗಳಾಗಿವೆ: ಶಿವ=ಹ, ಶಕ್ತಿ=ಸ, ಕಾಮ=ಕ, ಕ್ಷಿತಿ=ಲ.

---

* Avalon—*Shakti and Shakta*; S. Srikanta Sastry—Proto-Indic and Tantrik Hiroglyphs.

ಮಂತ್ರಗಳು = ಹ ಸ ಕ ಲ ಹ್ರೀಂ = ವಾಗ್ಭವ ಕೂಟ
ಹ ಸ ಕ ಹ ಲ ಹ್ರೀಂ = ಕಾಮರಾಜ ಕೂಟ
ಸ ಕ ಲ ಹ್ರೀಂ = ಶಕ್ತಿಕೂಟ
} ತ್ರಿಕೂಟ ಮಂತ್ರ ಅಥವಾ ಲೋಪಾಮುದ್ರ ವಿದ್ಯಾ

ಲೋಪಾಮುದ್ರವು ಸಕಲ ಮಂತ್ರಗಳ ಬೀಜಸ್ವರೂಪವಾದದ್ದು, ಸಮಯ ಪೂಜೆಯ ಆಧಾರಸ್ವರೂಪವಾದ ಷೋಡಶೀ ಮಂತ್ರವು ಇಲ್ಲಿ ಸೂಚಿತವಾಗಿದೆ. ೧೬ ನೆಯ ವರ್ಣವನ್ನು ಪ್ರಕಾಶಪಡಿಸುವುದಿಲ್ಲ; ಅದನ್ನು ಗುರುಮುಖದಿಂದ ಅರಿಯಬೇಕು.

ಮೊದಲನೆಯ ಪಾದವು ಅಗ್ನಿ, ಚಂದ್ರ, ಸೂರ್ಯರನ್ನು ನಿರ್ದೇಶಿಸುತ್ತದೆ; ಎರಡನೆಯದು ಕ್ರಿಯಾ, ಇಚ್ಛಾ, ಜ್ಞಾನಶಕ್ತಿಗಳನ್ನು ಅಥವಾ ವಿಷ್ಣು, ಬ್ರಹ್ಮ, ರುದ್ರರನ್ನೂ, ಮೂರನೆಯದು ಜಾಗ್ರತ, ಸ್ವಪ್ನ ಮತ್ತು ಸುಷುಪ್ತ್ಯವಸ್ಥೆಗಳನ್ನು ಅಲ್ಲದೆ ವಿಶ್ವ, ತೈಜಸ, ಪ್ರಾಜ್ಞ ಎಂಬ ಜ್ಞಾನತ್ರಯಗಳನ್ನೂ, ಸತ್ವ, ರಜಸ್ಸು, ತಮಸ್ಸು ಎಂಬ ಗುಣತ್ರಯಗಳನ್ನೂ ನಿರ್ದೇಶಿಸುತ್ತದೆ; ನಾಲ್ಕನೆಯದಾಗಿ "ಪರಾಶಕ್ತಿ" ಅಥವಾ ಚೈತನ್ಯ ಬಾಹ್ಯಪೂಜೆಯಲ್ಲಿ ಮಾತ್ರ ಋಷಿ, ದೇವತೆಗಳು, ಛಂದಸ್ಸು, ನ್ಯಾಸ ಮುಂತಾದುವು ವಿವರಿಸಲ್ಪಡುತ್ತವೆ. ಅಂತರಪೂಜೆಯಲ್ಲಿ ಧ್ಯಾನದ ಲಕ್ಷ್ಯವು ಮಾತ್ರ ಹೇಳಲ್ಪಡುತ್ತದೆ.

ಲಲಿತಾ ಸಹಸ್ರನಾಮ ಭಾಷ್ಯದಲ್ಲಿ ಹೀಗೆ ಉಕ್ತವಾಗಿದೆ: ವಾಗೀಶ್ವರಿಯು ವಾಗ್ಭವಕೂಟದ ಅಧಿದೇವತೆ; . ಇವಳು ಮೋಕ್ಷದಾಯಿನಿ. ಕಾಮರಾಜವು ಕ್ರಿಯಾಶಕ್ತಿ ಮತ್ತು ಕಾಮದಾಯಿನಿ. ಶಕ್ತಿಕೂಟವು ಇಚ್ಛಾಶಕ್ತಿ ಮತ್ತು "ಶಿವಸ್ವರೂಪಿ."

"ಕೂಟ" ಎಂದರೆ "ಅನೃತ." ದೇವಿಯು ತನ್ನ ನಿಜಸ್ವರೂಪವಾದ "ಆನಂದ" ವನ್ನು ಅಡಗಿಸಿ, ಮಾನವರನ್ನು ಮಾಯಾಪಾಶಕ್ಕೆ ಸಿಕ್ಕಿಸಿ, ಸಂಸಾರ ಸಾಗರದಲ್ಲಿ ಕೆಡವುತ್ತಾಳೆ. ತತ್ಕಾರಣವಾಗಿ 'ಕೂಟ' ಎಂದರೆ 'ಅಜ್ಞಾನ.' 'ಸ್ಥ' ಎಂದರೆ ಅಧಿಕಾರಿಣಿ. ಅಥವಾ 'ಕೂಟ' ಎಂದರೆ 'ಪುರದ್ವಾರ.' 'ಕೂಟ' ಎಂದರೆ 'ಶ್ರೀ ಚಕ್ರಾಂತರ್ಗತ ತ್ರಿಕೋಣ.' ಅದರಲ್ಲಿ 'ಸ್ಥ' ಎಂದರೆ ನೆಲೆಸಿರುವವಳು.

ಸ್ಮರಂ ಯೋನಿಂ ಲಕ್ಷ್ಮೀಂ ತ್ರಿತಯಮಿದಮಾದ್ಯೇ ತವ ಮನೋ
ರ್ನಿಧಾಯೈಕೇ ನಿತ್ಯೇ ನಿರವಧಿ ಮಹಾಭೋಗರಸಿಕಾಃ |
ಜಪಂತಿ ತ್ವಾಂ ಚಿಂತಾಮಣಿಗುಣನಿಬದ್ಧಾಕ್ಷರಲಯಾಃ
ಶಿವಾಗ್ನೌ ಜುಹ್ವಂತಃ ಸುರಭಿಘೃತಧಾರ್ಯಾಹುತಿಶತೈಃ || ೩೩ ||

ಎಲೈ ನಿತ್ಯೇ, ನಿರವಧಿಯಾದ ಮಹಾಭೋಗಾಭಿಲಾಷಿಗಳು, ನಿನ್ನ ಮಂತ್ರದ ಆದಿಯಲ್ಲಿ ಸ್ಮರ, ಯೋನಿ, ಲಕ್ಷ್ಮಿ ಎಂಬ ಪದಗಳನ್ನು ಉಚ್ಚರಿಸುವರು. ತರುವಾಯ ಕುಲಕುಂಡಲಿನಿಯ ಮುಖಕ್ಕೆ ಹೋಮಮಾಡಿ, ನೂರಾರು ಸುಗಂಧಯುಕ್ತವಾದ ಆಜ್ಯಧಾರೆಗಳ ಸಮೇತ ನಿನ್ನ ಮಂತ್ರದ ಪುನಶ್ಚರಣೆಯನ್ನು ಮಾಡಿ, ಚಿತ್ಸ್ವರೂಪಿಯಾಗಿ, ಗುಣತ್ರಯ ವಿರಾಜಿತನಾಗಿ, ಅಕ್ಷರ ರೂಪಿಯಾದ ಪರಬ್ರಹ್ಮನಲ್ಲಿ ಐಕ್ಯರಾಗುವರು.

ಟೀಕೆ: ಸ್ಮರ, ಯೋನಿ ಮತ್ತು ಲಕ್ಷ್ಮೀ ಎಂಬುವು ಕ್ರಮವಾಗಿ ಕ್ಲೀಂ, ಹ್ರೀಂ, ಶ್ರೀಂ ಎಂಬ ಬೀಜಮಂತ್ರಗಳನ್ನು ನಿರ್ದೇಶಿಸುತ್ತವೆ. ಕೆಲವರ ಅಭಿಪ್ರಾಯದಂತೆ ಐ, ಇ, ಅ ಎಂಬ 'ವರ್ಣ'ಗಳನ್ನು ಸೂಚಿಸುತ್ತವೆ. ಇಲ್ಲಿ ಹೇಳಿರುವ ಸುರಭಿಘೃತವು ಗೋಲೋಕದಲ್ಲಿ ಪ್ರವಹಿಸುತ್ತಿರುವ ಅಮೃತವಾಹಿನಿ ಗೋಲೋಕವು ಮಹಾವಿಷ್ಣುಲೋಕವೆಂದು 'ಗೌತಮೀಯ ತಂತ್ರ'ವು ತಿಳಿಸುತ್ತದೆ. ಶ್ಲೋಕ ೩೨ ರಲ್ಲಿ ಉಕ್ತವಾಗಿರುವ ಮಂತ್ರವು 'ಕಾದಿ' ವಿದ್ಯೆಯನ್ನು ನಿರ್ದೇಶಿಸುತ್ತದೆಂದು ಕೆಲವರೂ, 'ಹಾದಿ' ವಿದ್ಯೆಯನ್ನು ಸೂಚಿಸುತ್ತದೆಂದು ಇತರರೂ ಹೇಳಿದ್ದಾರೆ. ಡಿಂಡಿಮನು 'ಕಾದಿ'ಯು ಹಾದಿಗಿಂದ ಕನಿಷ್ಠವಾದುದೆಂದೂ, ಇಲ್ಲಿ 'ಕಾದಿ'ಯು ವರ್ಣಿತವಾಗಿದೆಯೆಂದೂ ಹೇಳಿದ್ದಾನೆ.

ಶರೀರಂ ತ್ವಂ ಶಂಭೋಃ ಶಶಿಮಿಹಿರವಕ್ಷೋರುಹಯುಗಂ
ತವಾತ್ಮಾನಾಂ ಮನ್ಯೇ ಭಗವತಿ ಭವಾತ್ಮಾನಮನಘಮ್ |
ಅತಃ ಶೇಷ ಶೇಷೀತ್ಯಯಮುಭಯ ಸಾಧಾರಣತಯಾ
ಸ್ಥಿತಃ ಸಂಬಂಧೋ ವಾಂ ಸಮರಸ ಪರಾನಂದ ಪದಯೋಃ || ೩೪ ||

ಸೂರ್ಯಚಂದ್ರರನ್ನೇ ಸ್ತನಯುಗ್ಮವಾಗುಳ್ಳ ನೀನೇ ಶಂಭುವಿನ ಶರೀರ. ಎಲೆ ಭಗವತಿ, ನೀನೇ ಪಾಪರಹಿತಳಾದ ಸರ್ವವ್ಯಾಪಿ; ತತ್ಕಾರಣವಾಗಿ ಪೃಥಕ್ ಪೃಥಕ್ಕಾದ ನಿನ್ನ ಭಾಗಗಳಿಗೂ, ಅಖಂಡವಾದ ನಿನ್ನ ಮೂರ್ತಿಗೂ ಇರುವ ಸಂಬಂಧವು ಉಭಯ ಸಾಧಾರಣವಾದುದು. ಎಂದರೆ ಅದೇ ಪರತ್ವ ಮತ್ತು ಪರಾನಂದಪದ.

ಟೀಕೆ: ದೇವಿಯು ಸೃಷ್ಟಿರೂಪೀ ಶಂಭುವಿನ ದೇಹ. ಆಕೆಯು ಸರ್ವೈಶ್ವರ್ಯ ವಿಭೂತಿಯಾದುದರಿಂದ ಭಗವತಿ; ಬ್ರಹ್ಮರೂಪದಿಂದ ಭವಾತ್ಮ. ಆದುದರಿಂದ ಸರ್ವವ್ಯಾಪಿ. ಅವರು ಅಂಶ ಮತ್ತು ಅಖಂಡ ಅಂಶವಾದರೆ, ಅವನು ಪುರುಷ, ಅವಳು ಮೂಲಪ್ರಕೃತಿ, ಅಖಂಡವಾದರೆ ಪ್ರಕೃತಿ-ಪುರುಷ. ಅವರ ಅವಿನಾಭಾವವು ಸಮಾನೈಶ್ವರ್ಯದಲ್ಲಿದೆ, ಇದೇ ಸಾಮರಸ್ಯ; ಇದೇ ಪರಾನಂದಪದವಿ. ಸೃಷ್ಟಿ, ಸ್ಥಿತಿ, ಲಯಾದಿಗಳು ಅವರ ಈಶ್ವರಸ್ವರೂಪ. ಪರಾನಂದವು ಅವರ ಪರಬ್ರಹ್ಮಸ್ವರೂಪ.

ಭಗ=ಷಡ್ಗುಣಗಳು, ಇವುಗಳಿಂದ ಯುಕ್ತಳಾದವಳು ಭಗವತಿ. ಐಶ್ವರ್ಯ, ಸಮಗ್ರತ್ವ, ಧರ್ಮ, ಯಶಸ್ಸು, ಜ್ಞಾನ, ವಿಜ್ಞಾನ ಇವು ಆರು ಭಗ ಎಂದು ಕರೆಯ

ಲ್ಪಡುತ್ತವೆ. ದೇವೀಭಾಗವತದಲ್ಲಿ ಹೀಗೆ ಹೇಳಲ್ಪಟ್ಟಿದೆ. ಪ್ರಾಣಿಗಳ ಉತ್ಪತ್ತಿ ಮತ್ತು ವಿನಾಶ, ಆಗತ ಮತ್ತು ನಿರ್ಗತ, ವಿದ್ಯಾ ಮತ್ತು ಅವಿದ್ಯಾ ಇವುಗಳನ್ನು ತಿಳಿಯುವವಳಾದ ಕಾರಣ ಭಗವತಿಯೆಂದು ಹೇಳಲ್ಪಡುತ್ತಾಳೆ. ಶಕ್ತಿರಹಸ್ಯವು ತಿಳಿಸುತ್ತದೆ. ಭಜ್ ಎಂಬ ಧಾತು ಭಜತಿ ಎಂಬ ಪದದಿಂದ ಜನ್ಯವಾದದ್ದು. ಸಮಸ್ತ ದೇವತೆಗಳೂ ಅವಳನ್ನು ಭಜಿಸುತ್ತಾರೆ. ಅವಳು ಅವರಿಗೆ ಭಗ ಎಂದರೆ ಐಶ್ವರ್ಯವನ್ನು ಕೊಡುತ್ತಾಳೆ. ತತ್ಕಾರಣದಿಂದ ಭಗವತಿಯೆಂದು ಹೇಳಲ್ಪಡುತ್ತಾಳೆ.

ಮನಸ್ತ್ವಂ ವ್ಯೋಮ ತ್ವಂ ಮರುದಸಿ ಮರುತ್ ಸಾರಥಿರಸಿ
ತ್ವಮಾಪಸ್ತ್ವಂ ಭೂಮಿಸ್ತ್ವಯಿ ಪರಿಣತಾಯಾಂ ನಹಿ ಪರಮ್ |
ತ್ವಮೇವ ಸ್ವಾತ್ಮಾನಾಂ ಪರಿಣಮಯಿತುಂ ವಿಶ್ವವಪುಷಾ
ಚಿದಾನಂದಾಕಾರಂ ಶಿವಯುವತಿ ಭಾವೇನ ಬಿಭೃಷೇ || ೩೫ ||

ಎಲೈ ಶಿವಯುವತಿ, ನೀನೇ ಮನಸ್ಸು, ಆಕಾಶ, ವಾಯು, ಅಗ್ನಿ, ಜಲ, ಭೂಮಿ. ಈ ಕಾರಣದಿಂದ ನೀನು ವಿಶ್ವರೂಪದಲ್ಲಿ ಪರಿಣಾಮ ಹೊಂದುವೆ. ಆದರೂ ನಿನಗೆ ಅತೀತವಾದುದು ಯಾವುದೂ ಇಲ್ಲ. ನಿನ್ನ ಲೀಲೆಯಿಂದ ವಿಶ್ವಶರೀರದಲ್ಲಿ ಚಿದಾನಂದ ವನ್ನು ವ್ಯಕ್ತಗೊಳಿಸುವೆ.

ಟೀಕೆ: ಅಚ್ಯುತಾನಂದರು ಹೀಗೆ ಹೇಳಿದ್ದಾರೆ: ಮನಸ್ಸು ಪರಮಶಿವನ ನಿವಾಸ ಇದೇ ಮಹರ್ಲೋಕ. ಪರಮಶಿವನೆಂದರೆ, ಸೃಷ್ಟಿರೂಪೀ ಶಿವ. ಪರಮಶಿವನು ಸತ್ಯಲೋಕದ ನಿವಾಸಿ. ಮನಸ್ಸು ಆಜ್ಞಾಚಕ್ರವನ್ನು ನಿರ್ದೇಶಿಸುತ್ತದೆ. ಆಕಾಶವು ತಪೋಲೋಕ. ಇದು ಸದಾಶಿವಸ್ಥಾನ. ಶೈವಸಾದಾಖ್ಯತತ್ವವು ಶುದ್ಧಚೈತನ್ಯ. ಈ ಶುದ್ಧಚೈತನ್ಯವು ನಾದಬ್ರಹ್ಮಮಯ. ಸ್ಥೂಲರೂಪೀ ನಾದವು ಆಕಾಶದ ಗುಣವಿಶೇಷ. ವಾಯು ಜನಲೋಕ, ಈಶಸ್ಥಾನ. ಅಗ್ನಿಯು ಸ್ವರಲೋಕ, ವಿಷ್ಣುಸ್ಥಾನ. ಅಪ್ಪು ಭುವರ್ಲೋಕ, ರುದ್ರಸ್ಥಾನ. ಭೂಮಿ, ಭೂಲೋಕ, ಬ್ರಹ್ಮಸ್ಥಾನ. ಷಟ್ಚಕ್ರಗಳು ಸ್ಥೂಲಸೂಕ್ಷ್ಮರೂಪಗಳನ್ನು ಹೊಂದಿವೆ. ಶಕ್ತಿಯು ಈ ರೂಪಗಳಲ್ಲಿ ವ್ಯಕ್ತಗೊಳ್ಳುವಳು: (೧) ಶಂಭು ಮುಂತಾದ ಆರು ದೇವರುಗಳು. (೨) ಅವರ ಸ್ಥಾನಗಳು, ಮಹರ್ಲೋಕ ಮುಂತಾದುವು. (೩) ಇವು ಸ್ಥೂಲರೂಪದಲ್ಲಿ ಎಂದರೆ, ಆಕಾಶ, ವಾಯು ಮುಂತಾದ ರೂಪದಲ್ಲಿ ವ್ಯಕ್ತವಾಗುತ್ತವೆ. (೪) ಅವು ಮಾನವದೇಹದಲ್ಲಿ ಷಟ್ಚಕ್ರಗತವಾಗಿವೆ. (೫) ಈ ಚಕ್ರಗತವಾದ ಆಕಾಶ ಮುಂತಾದ ತತ್ವಗಳ ಸಂಯೋಗದಿಂದ ಬ್ರಹ್ಮಾಂಡವು ಉದಯಿಸಿತು. ಕುಂಡಲಿನಿಯು ಷಟ್ಚಕ್ರಸ್ವರೂಪಿಯಾಗಿ ವ್ಯಕ್ತಗೊಳ್ಳುತ್ತಾಳೆ. ಅವಳು ಈ ಸ್ಥೂಲಸೂಕ್ಷ್ಮಧಾರಿಯಾಗಿದ್ದರೂ, ನಿತ್ಯ ಚಿದಾನಂದಸ್ವರೂಪಿಣಿಯಾಗಿದ್ದಾಳೆ. ಏಕೆಂದರೆ ಆತ್ಮದ ಸ್ವರೂಪ ಮತ್ತು ಶಕ್ತಿ ಮತ್ತು ಇವುಗಳ ವಿವಿಧರೂಪಗಳು ಎಲ್ಲಾ ಕಾಲಗಳಲ್ಲಿಯೂ ಎಲ್ಲಾ ಸ್ಥಾನಗಳಲ್ಲಿಯೂ ಒಂದೇ ಆಗಿವೆ. ದೇವಿಯು 'ಅಷ್ಟಮೂರ್ತಿಸ್ವರೂಪಿಣಿ.'

ಉತ್ತರ ಕೌಲರ ಸಿದ್ಧಾಂತ ರೀತ್ಯಾ 'ಪ್ರಧಾನ್ಯೆ'ಯಾದ ಪರಾಶಕ್ತಿಯು ಜಗತ್ಸೃಷ್ಟಿಕಾರಿಣಿ. ದೇವಿಯೇ ಪ್ರಧಾನಳಾದ ಕಾರಣ ಅವಳು ಯಾವ ತತ್ವಕ್ಕೂ ಅಧೀನಳಾಗಿಲ್ಲ.

ತವಾಜ್ಞಾಚಕ್ರಸ್ಥಂ ತಪನಶಶಿಕೋಟಿದ್ಯುತಿಧರಂ
ಪರಂ ಶಂಭುಂ ವಂದೇ ಪರಿಮಿಲಿತ ಪಾರ್ಶ್ವಂ ವಿರಚಿತಾ |
ಯಮಾರಾಧ್ಯಂ ಭಕ್ತ್ಯಾ ರವಿಶಶಿಶುಚೀನಾಮವಿಷಯೇ
ನಿರಾಲೋಕೇ ಲೋಕೇ ನಿವಸತಿಹಿ ಭಾಲೋಕ ಭವನೇ || ೩೬ ||

ನಿನ್ನ ಆಜ್ಞಾಚಕ್ರದಲ್ಲಿ ನೆಲೆಸಿರುವ, ಕೋಟಿ ಸೂರ್ಯಚಂದ್ರ ಸದೃಶಕಾಂತಿ ಯುಕ್ತನಾದ, ಪರಚಿಚ್ಛಕ್ತಿ ಸಮೇತನಾದ ಪರಶಂಭುವಿಗೆ ನಮಿಸುವೆನು. ಮಾನವರು ಅವನನ್ನು ಅನನ್ಯ ಭಕ್ತಿಯಿಂದ ಆರಾಧಿಸುವರು. ಅವನು ಸೂರ್ಯ, ಚಂದ್ರ ಮತ್ತು ಅಗ್ನಿ ಇವರ ಜ್ಯೋತಿಗೂ ಅತೀತವಾದ ಮಹಾಜ್ಯೋತಿರ್ಮಯ ಲೋಕದಲ್ಲಿ ವಾಸಿಸುತ್ತಿರುವನು.

ಟೀಕೆ: ಪರಶಂಭುವೇ ಪರಮಶಿವ; ಆಜ್ಞಾಚಕ್ರದ ಆರಾಧನೆಯೂ ಸಿದ್ಧಿಯೂ ಪರಶಿವನ ಸಾನಿಧ್ಯಕ್ಕೆ ಒಯ್ಯುತ್ತವೆ. ಆಜ್ಞಾಕಮಲದಲ್ಲಿ ಪೂಜೆ. ಆದರೆ ದೇವನು ಸಹಸ್ರಾರದಲ್ಲಿ ನೆಲೆಸಿದ್ದಾನೆ. ಆಜ್ಞಾಚಕ್ರದಲ್ಲಿ ಅವನ ಪ್ರತಿಬಿಂಬವು ಮಾತ್ರ ಗೋಚರಿಸುತ್ತದೆ. ಅಗ್ನಿ, ಸೂರ್ಯ ಮತ್ತು ಚಂದ್ರರ ಪ್ರಕಾಶವು ಷಟ್ಚಕ್ರಗಳ ಮೇಲೆ ಮಾತ್ರ ಬೀಳುತ್ತದೆ. ಅದು ಚಿದಾನಂದಸ್ವರೂಪೀ ಭಾಲೋಕವಾದ ಸಹಸ್ರಾರವನ್ನು ಸ್ಪರ್ಶಿಸುವುದಿಲ್ಲ.

ಗೀತೆಯಲ್ಲಿ:

ನ ತತ್ರ ಭಾಸತೇ ಸೂರ್ಯೋ ನ ಶಶಾಂಕೋ ನ ಪಾವಕಃ |
ಯದ್ಗತ್ವಾ ನ ನಿವರ್ತಂತೇ ತದ್ಧಾಮ ಪರಮಂ ಮಮ ||

ಎಂದು ಉಕ್ತವಾಗಿದೆ.

ಇದು ಪ್ರಕಾಶರಹಿತವಾದದ್ದು ಎಂದರೆ ಶುದ್ಧಚಿತ್ತಾದ ಅದು ಸ್ವಯಂ ಪ್ರಕಾಶಯುಕ್ತವಾದದ್ದು. ಅದೇ ಚಿದಾನಂದ. ಅದರ ಧ್ಯಾನದಿಂದ ಜನನ ಮರಣ ವಿಮುಕ್ತವಾದ 'ಬ್ರಹ್ಮಜ್ಞಾನ'ವು ಲಭಿಸುವುದು.

ಈ ಚಕ್ರದ ಕೇಂದ್ರದಲ್ಲಿ ಪರಶಂಭುನಾಥ ಮತ್ತು ಚಿತ್ಪರಾಂಬಾ ದೇವಿಯರು ಪ್ರತಿಷ್ಠಿತರಾಗಿ, ೬೪ ಮಾನಸ ಮಯೂಖಗಳಿಂದ ಪರಿವೃತರಾಗಿರುವಂತೆ ಧ್ಯಾನಿಸಬೇಕು.

ವಿಶುದ್ಧೌ ತೇ ಶುದ್ಧಸ್ಫಟಿಕವಿಶದಂ ವ್ಯೋಮಸದೃಶಂ
ಶಿವಂ ಸೇವೇ ದೇವೀಮಪಿ ಶಿವಸಮಾನವ್ಯಸನನೀಮ್ |
ಯಯೋಃ ಕಾಂತ್ಯಾ ಯಾಂತ್ಯಾ ಶಶಿಕಿರಣಸಾರೂಪ್ಯ ಸರಣೀಂ
ವಿಧೂತಾಂತರ್ಧ್ವಾಂತಾ ವಿಲಸತಿ ಚಕೋರೀವ ಜಗತಿ || ೩೭ ||

ಶುದ್ಧಸ್ಫಟಿಕ ಸಂಕಾಶನೂ, ವ್ಯೋಮಸದೃಶನೂ, ವಿಶುದ್ಧ ಪದ್ಮನಿವಾಸಿಯೂ ಆದ ಶಿವನಿಗೂ, ಅವನ ಸಮಾನ ವ್ಯಸನಿನಿಯಾದ ದೇವಿಗೂ ನಮಿಸುತ್ತೇನೆ. ಅವರ ಕಾಂತಿವಿಶೇಷದಿಂದ ಜಗತ್ತಿನ ಆಂತರ್ಯದ ಅಂಧಕಾರವು ಧ್ವಂಸವಾಗಿ, ಅದು ಚಂದ್ರಿಕೆಯಲ್ಲಿ ಮೋದಗೊಳ್ಳುವ ಚಕೋರದಂತೆ ಆನಂದವನ್ನು ಪಡೆಯುತ್ತದೆ.

ಟೀಕೆ: ಶಿವನೆಂದರೆ ಸದಾಶಿವ. ಚಕೋರವು ಚಂದ್ರಿಕೆಯ ಪಾನದಿಂದ ಕ್ಷುದ್ಬಾಧೆಯನ್ನು ನೀಗುತ್ತದೆ. ಇದೇ ರೀತಿಯಲ್ಲಿ ದೇವದೇವಿಯರನ್ನು ಕುರಿತು ಧ್ಯಾನಿಸುವ ಸಾಧಕನು ಬ್ರಹ್ಮಾನಂದವನ್ನು ಪಡೆಯುವನು. ಇಲ್ಲಿಯ ಶಿವನು ಅರ್ಧನಾರೀಶ್ವರಮೂರ್ತಿ. ಸದಾಶಿವನನ್ನು ಕುರಿತು ಧ್ಯಾನಿಸುವ ಯೋಗಿಯು ತನ್ನ ಅಂಧಕಾರವನ್ನು ನೀಗಿಕೊಂಡು ಜ್ಞಾನಮೂರ್ತಿಯಾಗಿ ಪರಿಣಮಿಸುವನು. ದೇವಿಯು ಶಿವ ಸಮಾನ ವ್ಯಸನಿನಿ. ಇದು ಶಿವಶಕ್ತಿಯರ ಅಭಿನ್ನತೆಯನ್ನು ಸೂಚಿಸುತ್ತದೆ. ಅವರು ಸೃಷ್ಟಿ, ಸ್ಥಿತಿ, ಲಯಕಾರ್ಯಗಳಲ್ಲಿ ಸಾಮರಸ್ಯವನ್ನು ಪಡೆದಿದ್ದಾರೆ. ಆದರೂ ಇದರಾಚೆ ನಿರ್ವಿಕಲ್ಪನಾದ ಪರಶಿವನು ನೆಲಸಿದ್ದಾನೆ.

ಈ ಚಕ್ರದಲ್ಲಿ ವ್ಯೋಮೇಶ್ವರ ವ್ಯೋಮೇಶ್ವರಿಯರು ಪ್ರತಿಷ್ಠಿತರಾಗಿದ್ದಾರೆ. ಅವರು ೭೨ ನಾಭಸ ಮಯೂಖಗಳಿಂದ ಪರಿವೃತರಾಗಿದ್ದಾರೆ.

> ಸಮುನ್ಮೀಲತ್ ಸಂವಿತ್ ಕಮಲಮಕರಂದೈಕ ರಸಿಕಂ
> ಭಜೇ ಹಂಸದ್ವಂದ್ವಂ ಕಿಮಪಿ ಮಹತಾಂ ಮಾನಸಚರಮ್ |
> ಯದಾಲಾಪಾದಷ್ಟಾದಶಗುಣಿತ ವಿದ್ಯಾಪರಿಣತಿಂ
> ಸಮಾಧತ್ತೇ ದೋಷಾದ್ ಗುಣಮಖಿಲಮದ್ಭ್ಯಃ ಪಯ ಇವ || ೩೮ ||

ಮಹಾತ್ಮರ ಮಾನಸದಲ್ಲಿ ಚರಿಸುತ್ತಿರುವ, ವಿಕಸಿಸುತ್ತಿರುವ ಜ್ಞಾನಕಮಲದ ಮಕರಂದ ಪಾನತುಂದಿಲರಾದ, ನಿನ್ನ ಅನಾಹತ ಪದ್ಮದಲ್ಲಿ ನೆಲಸಿರುವ, ವಿಚಿತ್ರರಾದ ಹಂಸದ್ವಂದ್ವರನ್ನು ನಮಿಸುವೆನು. ಇವರನ್ನು ಕುರಿತು ಧ್ಯಾನಿಸುವ ಯೋಗಿಯು ಹದಿನೆಂಟು ಮಹಾವಿದ್ಯೆಗಳಲ್ಲಿ ಪರಿಣತನಾಗಿ, ದೋಷಪೂರ್ಣವಾದುದನ್ನು ತ್ಯಜಿಸಿ, ಗುಣಯುತವಾದುದನ್ನು ಮಾತ್ರ ಪರಿಗ್ರಹಿಸುವನು, ಎಂದರೆ ಹಂಸಕ್ಷೀರ ನ್ಯಾಯವನ್ನು ಅನುಸರಿಸುವನು.

ಟೀಕೆ: 'ಹಂ' ಪುರುಷ ಮತ್ತು ಶಿವ; 'ಸ' ಸ್ತ್ರೀ ಮತ್ತು ಶಕ್ತಿ. ಶಿವಶಕ್ತಿಯರು ಹಂಸ ಸ್ವರೂಪರು. ಅವರು ಮಹಾತ್ಮರ ಮಾನಸದಲ್ಲಿ ಗೋಚರಿಸುವರು. 'ಹಂಸದ್ವಂದ್ವ'—ಪುಂಪ್ರಕೃತ್ಯಾತ್ಮಕೋ ಹಂಸಸ್ತದಾತ್ಮಕಮಿದಂ ಜಗತ್ —ಹಂಸವು ಸ್ತ್ರೀಪುರುಷಾತ್ಮಕವಾದದ್ದು. ಈ ಜಗತ್ತು 'ಹಂಸ'ಮಯವಾಗಿ ತದ್ವ್ಯಾಪಿಯಾಗಿದೆ. ಶಿವನು ಪ್ರಕೃತಿ ಪುರುಷಾತ್ಮಕ. ಅವರು ಆನಂದಿಸುವ ಕಮಲವು ಜ್ಞಾನಕಮಲ ಮತ್ತು ಅದು ಶುದ್ಧ ಚೈತನ್ಯ. ಅದು ಸದಾ ವಿಕಸಿಸುತ್ತಿರುವುದು. ಇದನ್ನೇ ಶೈವರು ಸ್ಫುರತ್ತಾ ಎಂದು ಕರೆಯುವರು. ಹಂಸಕ್ಷೀರನ್ಯಾಯದಂತೆ, ಜ್ಞಾನಿಗಳು ಗುಣದೋಷಗ್ರಾಹಿಗಳು, ಯುಕ್ತಾಯುಕ್ತ ಪರಿಜ್ಞಾನಯುಕ್ತರು, ನಿತ್ಯಾನಿತ್ಯ ಜ್ಞಾನಸಂಪನ್ನರು.

ಅಷ್ಟಾದಶ ವಿದ್ಯೆಗಳು: (೧) ಶಿಕ್ಷಾ, (೨) ಕಲ್ಪ, (೩) ವ್ಯಾಕರಣ, (೪) ನಿರುಕ್ತ, (೫) ಜ್ಯೋತಿಷ, (೬) ಛಂದಸ್ಸು, (೭) ಋಗ್ವೇದ, (೮) ಯಜುರ್ವೇದ, (೯) ಸಾಮ, (೧೦) ಅಥರ್ವ, (೧೧) ನ್ಯಾಯ, (೧೨) ಮೀಮಾಂಸ, (೧೩) ಧರ್ಮ ಶಾಸ್ತ್ರ, (೧೪) ಪುರಾಣ, (೧೫) ಆಯುರ್ವೇದ, (೧೬) ಧನುರ್ವೇದ, (೧೭) ಗಾಂಧರ್ವವೇದ, (೧೮) ಅರ್ಥಶಾಸ್ತ್ರ.

ಈ ಚಕ್ರದ ನಿವಾಸಿಗಳಾದ ಹಂಸೇಶ್ವರ ಮತ್ತು ಹಂಸೇಶ್ವರಿಯರು ೫೪ ವಾಯವ್ಯ ಮಯೂಖಗಳಿಂದ ಪರಿವೃತರಾಗಿದ್ದಾರೆ.

ತವ ಸ್ವಾಧಿಷ್ಠಾನೇ ಹುತವಹಮಧಿಷ್ಠಾಯ ನಿಯತಂ
ತಮೀಡೇ ಸಂವರ್ತಂ ಜನನಿ ಜನನೀಂ ತಾಂ ಚ ಸಮಯಾಮ್ |
ಯದಾಲೋಕೇ ಲೋಕಾನ್ ದಹತಿ ಮಹತಿ ಕ್ರೋಧಕಲಿಲೇ |
ದಯಾದ್ರಾರ್ಭದ್ದೃಗ್ಭಿಃ ಶಿಶಿರಮುಪಚಾರಂ ರಚಯಸಿ || ೩೯ ||

ಎಲೈ ಜನನಿ, ಸ್ವಾಧಿಷ್ಠಾನದಲ್ಲಿ ಸಂವರ್ತಾಗ್ನಿರೂಪದಲ್ಲಿರುವ ರುದ್ರನನ್ನು ನಮಿಸುತ್ತೇನೆ. ನಾನು ಸಮಯಾದೇವೀ (ರುದ್ರಶಕ್ತಿ)ಯನ್ನು ಸ್ತುತಿಸುತ್ತೇನೆ. ರುದ್ರನು ಮಹಾಕ್ರುದ್ಧನಾಗಿ ಪಾಲನೇತ್ರಾಗ್ನಿಯಿಂದ ಜಗತ್ತನ್ನು ದಹಿಸುವಾಗ. ಎಲೈ ಜನನಿ, ನೀನು ಕರುಣಾರ್ದ್ರನಯನೆಯಾಗಿ, ಅವನನ್ನು ಸಾಂತ್ವಗೊಳಿಸುತ್ತೀಯೆ.

ಟೀಕೆ: ಇಲ್ಲಿ ರುದ್ರ ಮತ್ತು ಶಕ್ತಿಯ ಸ್ಥಾನವು ಸ್ವಾಧಿಷ್ಠಾನದಲ್ಲಿ ಹೇಳಲ್ಪಟ್ಟಿದೆ. ಷಟ್ಚಕ್ರನಿರೂಪಣದ ಪ್ರಕಾರ ಈ ಚಕ್ರವು ಅಪ್ಪು ಮತ್ತು ವಿಷ್ಣುಸ್ಥಾನ.

ಈ ಚಕ್ರದಲ್ಲಿ ನೆಲೆಸಿರುವ ಸಂವರ್ತೇಶ್ವರ ಮತ್ತು ಸಮಯಾಂಬಾ ದೇವಿಯರು ೬೨ ತೈಜಸ ಮಯೂಖಗಳಿಂದ ಪರಿವೃತರಾಗಿದ್ದಾರೆ.

ತಟಿತ್ವಂತಂ ಶಕ್ತ್ಯಾ ತಿಮಿರಪರಿಪಂಥಿಸ್ಫುರಣಯಾ
ಸ್ಫುರನ್ನಾನಾರತ್ನಾಭರಣ ಪರಿಣದ್ಧೇಂದ್ರ ಧನುಷಮ್ |
ತಮಃ ಶ್ಯಾಮಃ ಮೇಘಮ್ ಕಮಪಿ ಮಣಿಪೂರೈಕಶರಣಂ
ನಿಷೇವೇ ವರ್ಷಂತಂ ಹರಮಿಹಿರತಪ್ತಂ ತ್ರಿಭುವನಮ್ || ೪೦ ||

ವಾಙ್ಮಯಾತೀತನೂ ನೀಲಮೇಘಶ್ಯಾಮನೂ ಆದ ವಿಷ್ಣುವನ್ನೂ, ತಟಿಲ್ಲೇಖಾ ಸದೃಶ ತನುಕಾಂತಿಯಿಂದ ಅಂಧಕಾರವನ್ನು ಪರಿಹರಿಸುವ ಅವನ ಶಕ್ತಿಯನ್ನು ಆರಾಧಿಸುವೆನು. ಅವನ ನಿವಾಸಸ್ಥಾನ ಮಣಿಪೂರ. ಹರಮಿಹಿರ ತಪ್ತವಾದ ಲೋಕತ್ರಯಗಳನ್ನು ತನ್ನ ದಯಾವರ್ಷದಿಂದ ಶಾಂತಗೊಳಿಸುವನು.

ಟೀಕೆ : ಕೆಲವರು ಹರಮಿಹಿರ ಎಂಬುದಕ್ಕೆ ಸ್ಮರಮಿಹಿರ ಎಂಬ ಪಾಠಾಂತರವುಂಟೆಂದು ಹೇಳುತ್ತಾರೆ. ಇದರ ಪ್ರಕಾರ 'ಸ್ಮರಮಿಹಿರ' ಅಥವಾ ಆಶಾತಪ್ತ ಜಗತ್ತನ್ನು ತನ್ನ ಕೃಪಾವರ್ಷದಿಂದ ಶಾಂತಗೊಳಿಸುವನು. ಆಶಾಗ್ನಿಯಿಂದ ತಪ್ತನಾದವನು ಮಣಿಪೂರದಲ್ಲಿ ನೆಲೆಸಿರುವ ವಿಷ್ಣುರೂಪೀ ಶಿವನನ್ನು ಧ್ಯಾನಿಸಿದರೆ, ಪರಮಶಾಂತಿಯನ್ನು ಪಡೆಯುವನು. ಪ್ರಳಯಕಾಲದಲ್ಲಿ ಪೃಥ್ವಿಯನ್ನು ದ್ವಾದಶಾದಿತ್ಯರು ಕಬಳಿಸುವರು. ಶಕ್ತಿಯು ನಾರಾಯಣೀ.

ಈ ಚಕ್ರದಲ್ಲಿ ಪ್ರತಿಷ್ಠಿತರಾಗಿರುವ ಅಮೃತೇಶ್ವರ (ಮೇಘೇಶ್ವರ) ಮತ್ತು ಅಮೃತೇಶ್ವರಿ (ಸೌದಾಮಿನಿ)ಯರು ೫೨ ಆಪ್ಯ ಮಯೂಖಗಳಿಂದ ಪರಿವೃತರಾಗಿದ್ದಾರೆ.

ತವಾಧಾರೇ ಮೂಲೇ ಸಹ ಸಮಯಯಾ ಲಾಸ್ಯ ಪರಯಾ
ಶಿವಾತ್ಮಾನಂ ವಂದೇ ನವರಸ ಮಹಾತಾಂಡವನಟಮ್ |
ಉಭಾಭ್ಯಾಮೇತಾಭ್ಯಾಮುಭಯವಿಧಿಮುದ್ದಿಶ್ಯ ದಯಯಾ
ಸನಾಥಾಭ್ಯಾಂ ಜಜ್ಞೇ ಜನಕಜನನೀಮಜ್ಜಗದಿದಮ್ || ೪೧ ||

ಸಮಯಾ (ಸಾವಿತ್ರಿ) ಸಮೇತನೂ, ಮೂಲಾಧಾರದಲ್ಲಿ ನವರಸಪರಿಪ್ಲುತವಾದ ಮಹಾತಾಂಡವ ನಾಟ್ಯನಿಪುಣನೂ ಆದ ಶಿವರೂಪಿ ಬ್ರಹ್ಮನಿಗೆ ನಮಿಸುತ್ತೇನೆ. ಅವನ ಪತ್ನಿಯಾದ ಸಮಯಾದೇವಿಯೂ ಲಾಸ್ಯನರ್ತನ ಪ್ರವೀಣೆ. ಈ ಉಭಯರಿಂದ, ಎಲೈ ಜನನೀ, ಸರ್ವವಿಭೂತಿಯುಕ್ತವಾದ ಈ ಜಗತ್ತು, ಅವರ ಉಭಯೋದ್ದೇಶ ಸಾಧನೆಗಾಗಿ, ಅವರ ಕರುಣಾವಿಶೇಷದಿಂದ ಸೃಷ್ಟಿಸಲ್ಪಟ್ಟಿತು.

ಟೀಕೆ : ಕೌಲಮಾರ್ಗದ ಪರಮವಿರೋಧಿಯಾದ ಲಕ್ಷ್ಮೀಧರನು ತನ್ನ ವ್ಯಾಖ್ಯಾನದಲ್ಲಿ, ಈ ಶ್ಲೋಕವು ಕೌಲರ ಮೂಲಾಧಾರಚಕ್ರದ ಆರಾಧನೆಯನ್ನು ಕುರಿತದ್ದೆಂದೂ, ಅಂತಹ ಪೂಜೆಯು ಗರ್ಹಿತವಾದದ್ದೆಂದೂ ಹೇಳಿದ್ದಾನೆ. ಸಮಯಾಚಾರದ ಪ್ರಕಾರ ಮೂಲಾಧಾರ ಮತ್ತು ಸ್ವಾಧಿಷ್ಠಾನ ಚಕ್ರಗಳು ತಮಿಸ್ರಲೋಕಗಳು ; ತತ್ಕಾರಣವಾಗಿ ಆರಾಧನೆಗೆ ಅನರ್ಹವಾದುವು.

ಈ ಚಕ್ರದ ನಿವಾಸಿಗಳಾದ ಆದಿನಟ ಮತ್ತು ಲಾಸ್ಯೇಶ್ವರಿಯರು ೫೬ ಪಾರ್ಥಿವ ಮಯೂಖಗಳಿಂದ ಪರಿವೃತರಾಗಿದ್ದಾರೆ.

ಯಾಚಿನ್ನಾ ಭುವಿಪುತ್ರಪೌತ್ರಭರಣವ್ಯಾಪಾರ ಸಂರಕ್ಷಣೇ |
ಯಾಚಿನ್ನಾ ಧನಧಾನ್ಯ ಭೋಗಯಶಸಾಂಲಾಭೇ ಸದಾ ಜಾಯತೇ ||
ಸಾಚಿನ್ತಾಯದಿ ವೇದಮಾತೃ ಚರಣಾಂಭೋಜೇಕ್ಷಣೇ ಹೈತುಕೀ |
ಕಾಚಿನ್ತಾಯಮರಾಜ ಭೀಮಸದನ ದ್ವಾರ ಪ್ರಯಾಣೇ ನೃಣಾಮ್ ||

ಸಂಪೂರ್ಣಂ

ಸೀ. ಬಿ. ಸೀತಾರಾಂ.

ತುಂಗೆಯ ದಡದಲ್ಲಿ

ಸುತ್ತಲೆತ್ತ ಹಸುರು ಬೆಟ್ಟ
ನಡುವೆ ತುಂಗೆ ಹರಿಯುತಿದೆ!
ಸುತ್ತಲೆತ್ತ ಮೋಡಮಾಲೆ
ನಡುವೆ ಶಾಂತಿ ಹರಿಯುತಿದೆ!
ನದಿಯ ಓಂಕಾರ ಮಂತ್ರ
ಹೃದಯವನ್ನೆ ಮಿಡಿಯುತಿದೆ!
ಎಲ್ಲೆಡೆಯೂ ಹಕ್ಕಿಗಾನ!
ಎಲ್ಲೆಲ್ಲಿಯು ಶಾಂತಿಗಾನ!
ನದಿಯ ನೋಟ ಹಸುರ ನೋಟ
ತೆರೆ ತೆರೆ ತೆರೆ ತೆರೆಯಾಗಿದೆ!

ವೇಣು

ಕನ್ನಡ ಕಾವ್ಯಪ್ರಕಾಶ

ನಾಲ್ಕನೆಯ ಉಲ್ಲಾಸ

(ಮುಂದುವರಿದುದು)

ವ್ಯಭಿಚಾರಿಭಾವಗಳನ್ನೀಗ ಹೇಳುತ್ತಾನೆ--

ನಿರ್ವೇದ ಗ್ಲಾನಿ ಶಂಕಾಖ್ಯಾಃ ತಥಾಸೂಯಾಮದಶ್ರಮಾಃ।
ಆಲಸ್ಯಂ ಚೈವ ದೈನ್ಯಂ ಚ ಚಿಂತಾ ಮೋಹಃ ಸ್ಮೃತಿರ್ಧೃತಿಃ ॥ ೮ ॥

ವ್ರೀಡಾ ಚಪಲತಾ ಹರ್ಷ ಆವೇಗೋ ಜಡತಾ ತಥಾ।
ಗರ್ವೋ ವಿಷಾದ ಔತ್ಸುಕ್ಯಂ ನಿದ್ರಾಪಸ್ಮಾರ ಏವ ಚ ॥ ೯ ॥

ಸ್ವಪ್ನಂ ಪ್ರಬೋಧೋಽಮರ್ಷಶ್ಚಾಪ್ಯವಹಿತ್ಥಮಥೋಗ್ರತಾ।
ಮತಿರ್ವ್ಯಾಧಿಸ್ತಥೋನ್ಮಾದಸ್ತಥಾ ಮರಣಮೇವ ಚ ॥ ೧೦ ॥

ತ್ರಾಸಶ್ಚೈವ ವಿತರ್ಕಶ್ಚ ವಿಜ್ಞೇಯಾ ವ್ಯಭಿಚಾರಿಣಃ।
ತ್ರಯಸ್ತ್ರಿಂಶದಮೀ ಭಾವಾಃ ಸಮಾಖ್ಯಾತಾಸ್ತು ನಾಮತಃ ॥ ೧೧ ॥

(೧) ನಿರ್ವೇದ, (೨) ಗ್ಲಾನಿ, (೩) ಶಂಕೆ, (೪) ಅಸೂಯೆ, (೫) ಮದ, (೬) ಶ್ರಮ, (೭) ಆಲಸ್ಯ, (೮) ದೈನ್ಯ, (೯) ಚಿಂತೆ, (೧೦) ಮೋಹ, (೧೧) ಸ್ಮೃತಿ, (೧೨) ಧೃತಿ, (೧೩) ವ್ರೀಡೆ, (೧೪) ಚಪಲತೆ, (೧೫) ಹರ್ಷ, (೧೬) ಆವೇಗ, (೧೭) ಜಡತೆ, (೧೮) ಗರ್ವ, (೧೯) ವಿಷಾದ, (೨೦) ಔತ್ಸುಕ್ಯ, (೨೧) ನಿದ್ರೆ, (೨೨) ಅಪಸ್ಮಾರ, (೨೩) ಸ್ವಪ್ನ, (೨೪) ಪ್ರಬೋಧ, (೨೫) ಅಮರ್ಷ, (೨೬) ಅವಹಿತ್ಥ, (೨೭) ಉಗ್ರತೆ, (೨೮) ಮತಿ, (೨೯) ವ್ಯಾಧಿ, (೩೦) ಉನ್ಮಾದ, (೩೧) ಮರಣ, (೩೨) ತ್ರಾಸ, (೩೩) ವಿತರ್ಕ—ಈ ಮೂವತ್ತುಮೂರೂ ವ್ಯಭಿಚಾರಿ ಭಾವಗಳ ಹೆಸರುಗಳು.[78]

---

[78] ಇವುಗಳ ಅರ್ಥವಿವರಣೆಗೆ ಓದಿ—(೧) ಕನ್ನಡ ಕೈಪಿಡಿ, ಪು. ೨೨೫-೬; (೨) ಭಾರತೀಯ ಕಾವ್ಯಮೀಮಾಂಸೆ, ಪು. ೩೨೦-೩೨೭.

ಅಮಂಗಲಪ್ರಾಯವಾದ ನಿರ್ವೇದವನ್ನು ಮೊಟ್ಟಮೊದಲು ಹೆಸರಿಸುವುದು ಅನುಚಿತವೆನಿಸಬಹುದಾದರೂ ಅದಕ್ಕೊಂದು ಔಚಿತ್ಯವಿದೆ: ನಿರ್ವೇದವು ವ್ಯಭಿಚಾರಿ ಭಾವವಾದರೂ ಕೆಲವೊಮ್ಮೆ ಸ್ಥಾಯಿಭಾವದ ಮಟ್ಟಕ್ಕೆ ಏರಬಲ್ಲುದೆಂಬುದನ್ನು ಸೂಚಿಸುವುದೇ ಇದರ ಮರ್ಮ.[79] ಆದುದರಿಂದ--

ನಿರ್ವೇದಸ್ಥಾಯಿಭಾವೋಽಸ್ತಿ ಶಾಂತೋಽಪಿ ನವಮೋ ರಸಃ ‖ ೧೨*ab* ‖

ನಿರ್ವೇದವೆಂಬ ಸ್ಥಾಯಿಭಾವವೂ ಒಂದುಂಟು; ಶಾಂತವು ಒಂಭತ್ತನೆಯ ರಸ.[80] ಉದಾಹರಣೆ:—

ಅಹೌ ವಾ ಹಾರೇ ವಾ ಕುಸುಮಶಯನೇ ವಾ ದೃಷದಿ ವಾ
ಮಣೌ ಲೋಷ್ಠೇ ವಾ ಬಲವತಿ ರಿಪೌ ವಾ ಸುಹೃದಿ ವಾ ।
ತೃಣೇ ವಾ ಸ್ತ್ರೈಣೇ ವಾ ಮಮ ಸಮದೃಶೋ ಯಾಂತಿ ದಿವಸಾಃ
ಕ್ವಚಿತ್ಪುಣ್ಯಾರಣ್ಯೇ ಶಿವ ಶಿವ ಶಿವೇತಿ ಪ್ರಲಪತಃ ‖[81]

ಅಹಿಯಾಗಿರ್ಕೆಮ ಹಾರಮಕ್ಕೆ ಸುಮದಾ ಪಾಸಕ್ಕೆ ಕಲ್ಲಕ್ಕೆ ಮೇಣ್
ಮಣಿಯಾಗಿರ್ಕೆಮ ಲೋಷ್ಟಮಕ್ಕೆ ಪಗೆಯುಂ ಮೇಣಕ್ಕೆ ಮಿತ್ರೋತ್ತಮಂ ।
ತೃಣಮೋ ಸ್ತ್ರೈಣಮೊ ಸಾಮ್ಯದೃಷ್ಟಿಯೊಳಗಾಂ ಕಾಲಂಗಳಂ ನೂಂಕುವೆಂ
ಸೊಗದಿಂ ಪುಣ್ಯದರಣ್ಯದೊಳ್ ಶಿವಶಿವಾ ದೇವೇಶಯೆಂದಾವಗಂ ‖

ರತಿರ್ದೇವಾದಿವಿಷಯಾ ವ್ಯಭಿಚಾರೀ ತಥಾಂಜಿತಃ ‖ ೧೨*cd* ‖
ಭಾವಃ ಪ್ರೋಕ್ತಃ—

ದೇವತೆಗಳೇ ಮುಂತಾದವರ ವಿಷಯದಲ್ಲಿ ವ್ಯಕ್ತವಾಗುವ ರತಿಯೇ ವ್ಯಭಿಚಾರಿಭಾವ ವೆನಿಸುತ್ತದೆ.[82]

---

[79] ಈ ವಿಷಯದ ವಿಸ್ತೃತ ವಿವೇಚನೆಗೆ **ಭಾರತೀಯ ಕಾವ್ಯಮೀಮಾಂಸೆ,** ೨೪ ನೆಯ ಅಧ್ಯಾಯವನ್ನೋದಿ. ಮಮ್ಮಟನ ಮನಸ್ಸಿನಲ್ಲಿ ಶಾಂತರಸದ ಸ್ಥಾಯಿಭಾವ ಶಮವೋ ವೈರಾಗ್ಯವೋ, ಮುಂತಾದ ಸಂದೇಹಗಳಿಲ್ಲ. ಅವನು ನಿಸ್ಸಂದಿಗ್ಧವಾಗಿ ನಿರ್ವೇದವೇ ಸ್ಥಾಯಿಭಾವವೆನ್ನುತ್ತಾನೆ.

[80] ಈ ಪ್ರಕ್ರಿಯೆಯನ್ನು ಮಮ್ಮಟನು ಆನಂದವರ್ಧನ, ಅಭಿನವಗುಪ್ತರಿಂದ ಸ್ವೀಕರಿಸಿದ್ದಾನೆ.

[81] ಈ ಪದ್ಯವು ಅಭಿನವಗುಪ್ತನ ಪರಮಗುರುವೂ ಪ್ರತ್ಯಭಿಜ್ಞಾಸೂತ್ರಾದಿ ಗ್ರಂಥಕರ್ತೃವೂ ಆದ ಉತ್ಪಲರಾಜನದೆಂದು ಕ್ಷೇಮೇಂದ್ರನ 'ಔಚಿತ್ಯವಿಚಾರಚರ್ಚೆ'ಯಲ್ಲಿ ಹೇಳಿದೆ. ಭರ್ತೃಹರಿಯ ಪ್ರಚಲಿತ ವೈರಾಗ್ಯಶತಕದಲ್ಲೂ ಇದು ದೊರೆಯುತ್ತದೆ.

[82] ಸಾಂಗೋಪಾಂಗವಾಗಿಯೂ ಕಾಂತಾವಿಷಯಕವಾಗಿಯೂ ಇದ್ದಾಗ ಮಾತ್ರ ರತ್ಯಾದಿಯು (ಶೃಂಗಾರಕ್ಕೆ) ಸ್ಥಾಯಿಭಾವವೆನಿಸುತ್ತದೆ, ಹಾಗಿಲ್ಲದೆ ನ್ಯೂನಾಂಗವೋ, ದೇವಾದಿವಿಷಯಕವೋ,

'ಮುಂತಾದವರ' ಎಂದರೆ ಮುನಿ, ಗುರು, ರಾಜ, ಪುತ್ರ್ರಲ, ಮೊದಲಾದವರ ವಿಷಯದಲ್ಲಿ ಎಂದು ತಾತ್ಪರ್ಯ; ಕಾಂತೆಯ ವಿಷಯದಲ್ಲಿ ವ್ಯಕ್ತವಾಗುವ ರತಿ ಮಾತ್ರ ಶೃಂಗಾರರಸಕ್ಕೆ ಸ್ಥಾಯಿ, ಉದಾಹರಣೆ:—

ಕಂಠಕೋಣವಿನಿವಿಷ್ಟಮೀಶ ತೇ
ಕಾಲಕೂಟಮಪಿ ಮೇ ಮಹಾಮೃತಮ್ ।
ಅಪ್ಯುಪಾತ್ತಮಮೃತಂ ಭವದ್ವಪು-
ರ್ಭೇದವೃತ್ತಿ ಯದಿ ಮೇ ನ ರೋಚತೇ ॥[83]

ಈಶನೆ ನಿನ್ನಯ ಕಂಠದಿ ನೆಲಸಿಹ
ಹಾಲಾಹಲವೂ ಅಮೃತವದು।
ದೊರೆತೊಡಮಮೃತವೆ ನಿನ್ನನ್ನಗಲುತೆ
ಬೇಡವೆ ಬೇಡದು ನನಗೆಂದೂ ॥[84]

ಹರತ್ಯಘಂ ಸಂಪ್ರತಿ ಹೇತುರೇಷ್ಯತಃ
ಶುಭಸ್ಯ ಪೂರ್ವಾಚರಿತೈಃ ಕೃತಂ ಶುಭೈಃ।
ಶರೀರಭಾಜಾಂ ಭವದೀಯದರ್ಶನಂ
ವ್ಯನಕ್ತಿ ಕಾಲತ್ರಿತಯೇಽಪಿ ಯೋಗ್ಯತಾಮ್ ॥[8]

ಇಂದಿನ ಪಾಪವನಟ್ಟುತೆ ಮುಂದಿನ
ಶುಭಗಳ ಪುಟ್ಟಿಸಿ ಮುನ್ಗೈದ।
ಪುಣ್ಯದ ಫಲ ತವ ದರ್ಶನವೊರೆವುದು
ನೋಳ್ಪರ ಪ್ರೈಮೆಯನನುಗಾಲ ॥[86]

ಆದರೆ ಅದು ಸ್ಥಾಯಿಭಾವವೇ ಅಲ್ಲ; ವ್ಯಭಿಚಾರಿಭಾವ. ಇದನ್ನು ಸಮರ್ಥಿಸುವ ಶ್ಲೋಕವೊಂದನ್ನು ಪ್ರದೀಪಕಾರನು ಉದಾಹರಿಸಿದ್ದಾನೆ:—

ರತ್ಯಾದಿಶ್ಚೇನ್ನಿರಂಗಃ ಸ್ಯಾದ್ದೇವಾದಿವಿಷಯೋಽಥ ವಾ।
ಅನ್ಯಾಂಗಭಾವಭಾಗ್ವಾ ಸ್ಯಾನ್ನ ತದಾ ಸ್ಥಾಯಿಶಬ್ದಭಾಕ್॥

83 ಪದ್ಯವು ಪೂರ್ವೋಕ್ತ ಉತ್ಪಲರಾಜನದು.

84 ಇದು ದೇವವಿಷಯಕವಾದ ರತಿಗೆ ಉದಾಹರಣೆ.

85 ಮಾಘನ ಶಿಶುಪಾಲವಧ ಮಹಾಕಾವ್ಯ, ಸರ್ಗ I. ನಾರದನನ್ನು ಕುರಿತು ಕೃಷ್ಣನು ಹೇಳುವ ಮಾತು.

86 ಇದು ಮುನಿವಿಷಯಕವಾದ ರತಿಗೆ ಉದಾಹರಣೆ.

ಹೀಗೆಯೇ ಉಳಿದುವನ್ನು[87] ಉದಾಹರಣೆಗಳಲ್ಲಿ ವಾಚಕರು ಯೋಚಿಸಿಕೊಳ್ಳಬೇಕು ವ್ಯಭಿಚಾರಿಭಾವಕ್ಕೆ ಉದಾಹರಣೆ:—

ಜಾನೇ ಕೋಪಪರಾಙ್ಮುಖೀ ಪ್ರಿಯತಮಾ ಸ್ವಪ್ನೇಽದ್ಯ ದೃಷ್ಟಾ ಮಯಾ
ಮಾ ಮಾಂ ಸಂಸ್ಪೃಶ ಪಾಣಿನೇತಿ ರುದತೀ ಗಂತುಂ ಪ್ರವೃತ್ತಾ ಪುರಃ ।
ನೋ ಯಾವತ್ಪರಿರಭ್ಯ ಚಾಟುಶತಕೈರಾಶ್ವಾಸಯಾಮಿ ಪ್ರಿಯಾಂ
ಭ್ರಾತಸ್ತಾವದಹಂ ಶಠೇನ ವಿಧಿನಾ ನಿದ್ರಾದರಿದ್ರೀಕೃತಃ ॥

ಕನಸಿನೊಳಿಂದು ಕಂಡೆ ಮುನಿಸಿಂ ಮೊಗಮಂ ತಿರುಪಿರ್ದ ಕಾಂತೆಯಂ
ಕರಗಳಿನೆನ್ನ ಸೋಂಕದಿರು ನೀನೆನುತುಂ ಪೊರಮಟ್ಟಿರಲ್ಕಗಳ್ ।
ಸವಿನುಡಿಯಿಂದದೆಂತೊ ಸತಿಯಂ ಬಿಡದಪ್ಪುತುಮೊಪ್ಪಿಸುವನ್ನಮಾ ಖಳಂ
ಬಿದಿ ಕಡೆಗಾಣ್ಬಿದಂ ಸಖನೆ ನಿದ್ರೆಯನೇ ನನಗಂದು ನಿರ್ದಯಂ ॥

ಇಲ್ಲಿ ವಿಧಿಯ ವಿಷಯದಲ್ಲಿ ಅಸೂಯೆಯೆಂಬ ವ್ಯಭಿಚಾರಿಭಾವ ವ್ಯಕ್ತವಾಗಿದೆ.

ತದಾಭಾಸಾಃ ಅನೌಚಿತ್ಯಪ್ರವರ್ತಿತಾಃ ॥ ೧೩ ॥

ಅವುಗಳ ಆಭಾಸಗಳು ಅನೌಚಿತ್ಯದಿಂದ ಉಂಟಾಗುತ್ತವೆ. ಅವುಗಳ ಆಭಾಸಗಳೆಂದರೆ ರಸಾಭಾಸಗಳು ಮತ್ತು ಭಾವಾಭಾಸಗಳು.[88] ರಸಾಭಾಸಕ್ಕೆ ಉದಾಹರಣೆ:—

ಸ್ತುಮಃ ಕಂ ವಾಮಾಕ್ಷಿ, ಕ್ಷಣಮಪಿ ವಿನಾ ಯಾ ನ ರಮಸೇ
ವಿಲೇಭೇ ಕಃ ಪ್ರಾಣಾನ್, ರಣಮಖಮುಖೇ ಯಂ ಮೃಗಯಸೇ

[87] ಗುರು, ನೃಪ, ಪುತ್ರಾದಿ ವಿಷಯಕವಾದ ರತಿಗಳನ್ನೂ ಎಂದು ತಾತ್ಪರ್ಯ.

[88] ರಸವನ್ನು ರಸಾಭಾಸಗೊಳಿಸುವ ಅನೌಚಿತ್ಯಗಳು ಯಾವುವೆಂದರೆ—(೧) ರತಿ ಉಪನಾಯಕನಲ್ಲುಂಟಾಗುವುದು, (೨) ಗುರುಪತ್ನಿಯಲ್ಲುಂಟಾಗುವುದು, (೩) ಅನೇಕ ನಾಯಕರಲ್ಲುಂಟಾಗುವುದು, (೪) ನಾಯಕನಾಯಿಕೆಯರಿಬ್ಬರಲ್ಲೂ ಇಲ್ಲದಿರುವುದು, (೫) ತಿರ್ಯಗ್ಜಂತುಗಳ ವಿಷಯದಲ್ಲಿ ವರ್ಣಿತವಾಗುವುದು ಎಂದು ಉದ್ಯೋತಕಾರನು ಬರೆಯುತ್ತಾನೆ. ಹೋಲಿಸಿ—

'ಉಪನಾಯಕಸಂಸ್ಥಾಯಾಂ ಮುನಿಗುರುಪತ್ನೀಗತಾಯಾಂ ಚ ।
ಬಹುನಾಯಕವಿಷಯಾಯಾಂ ರತೌ ತಥಾನುಭಯನಿಷ್ಠಾಯಾಂ ॥
ಆಭಾಸತ್ವಂ ಕಥಿತಂ ತಥೈವ ತಿರ್ಯಗಾದಿವಿಷಯಾಯಾಮ್' ॥

ಈ ವಿಷಯದಲ್ಲಿರುವ ಮತಭೇದಗಳ ಚರ್ಚೆಗೆ ಭಾರತೀಯ ಕಾವ್ಯಮೀಮಾಂಸೆ, ಪು. ೩೯೬-೪೦೨ ನ್ನು ನೋಡಿ.

ಸುಲಗ್ನೇ ಕೋ ಜಾತಶ್ಶಶಿಮುಖಿ, ಯಮಾಲಿಂಗಸಿ ಬಲಾತ್
ತಪಶ್ಶ್ರೀಃ ಕಸ್ಯೈಷಾ, ಮದನನಗರಿ ಧ್ಯಾಯಸಿ ತು ಯಮ್ ॥

ಸುತಿಗೆಣೆಯಾತ ಜೆಸ್ಸೆ, ಜಣಮೂ ಬಿಡದಾವನ ನೀನೆ ಕಾಮಿಸಯ್
ಹರಣಮನಂಗೆ ಸಾರ್ಥಕಮಲಾ, ರಣರಂಗದೊಳಾರ ಮಾರ್ಗಿಪಯ್ ।
ಶುಭದೊಳೆ ಜಾಸಾತನೆ ಗಡಾ, ಬಿಡದಾವನ ನೀನೆಯಪ್ಪುವಯ್
ವರತಪಗೈದನಾತನೆ ವಲಂ, ತವೆಯಾಪನ ನೀನೆ ಜಾನಿಪಯ್ ॥[89]

ಇಲ್ಲಿ ನಾಯಿಕೆಗೆ ಅನೇಕ ಕಾಮುಕರಲ್ಲಿರುವ ಅನುರಾಗವನ್ನೇ ಹೊಗಳಿರುವುದರಿಂದ ಒಬ್ಬೊಬ್ಬರನ್ನೂ ಕುರಿತು ಅವಳ ಅನುಚಿತ (V.L. ಅನುಗತ) ಆರಂಭಗಳನ್ನು ಎತ್ತಿ ತೋರಿಸಿದಂತಾಗಿದೆ.

ಭಾವಾಭಾಸಕ್ಕೆ ಉದಾಹರಣೆ :—

ರಾಕಾಸುಧಾಕರಮುಖೀ ತರಲಾಯತಾಕ್ಷೀ
ಸಾ ಸ್ಮೇರಯೌವನತರಂಗಿತವಿಭ್ರಮಾಸ್ಯಾ ।
ತತ್ಕಿಂ ಕರೋಮಿ ವಿದಧೇ ಕಥಮತ್ರ ಮೈತ್ರೀಂ
ತತ್ಸ್ವೀಕೃತಿವ್ಯತಿಕರೇ ಕ ಇವಾಭ್ಯುಪಾಯಃ ॥

ರಾಕೇಂದುವಕ್ತ್ರೆ ಚಪಲಾಯತನೇತ್ರೆ ಮತ್ತಂ
ಪ್ರೋದ್ವೇಲ ಯೌವನತರಂಗಿತಗಾತ್ರೆಯಪ್ಪಳ್ ।
ಮತ್ತೇವೆನಾಕೆಯೊಡನಾಟಮದೆಂತುಟಕ್ಕುಂ
ತಾನೆನ್ನ ನೇ ವರಿಪವೋಲಿಹುದೇನುಪಾಯಂ ॥ [90]

ಇಲ್ಲಿ ಚಿಂತೆಗೆ ಕಾರಣ ಅನೌಚಿತ್ಯ.[91] ಹೀಗೆಯೇ ಉಳಿದ ಉದಾಹರಣೆಗಳನ್ನು[92] ಊಹಿಸಿಕೊಳ್ಳಬೇಕು.

ಭಾವಸ್ಯ ಶಾಂತಿರುದಯಃ ಸಂಧಿಶ್ಶಬಲತಾ ತಥಾ ॥ ೧೩*cd* ॥

---

[89] ಪರವನಿತೆಯನ್ನು ಕುರಿತು ಕಾಮುಕನ ಉಕ್ತಿಯೆಂದು ಸಂದರ್ಭವನ್ನು ಕಲ್ಪಿಸಿಕೊಳ್ಳಬಹುದು.

[90] ಸೀತೆಯ ವಿಷಯದಲ್ಲಿ ರಾವಣನಾಡುವ ಮಾತು.

[91] ಪರವನಿತೆಯನ್ನು ಕುರಿತಿರುವುದರಿಂದ.

[92] ಉಳಿದ ರಸಗಳ ಮತ್ತು ಭಾವಗಳ ಆಭಾಸಗಳನ್ನೂ ಎಂದರ್ಥ.

ಮತ್ತು (೧) ಭಾವಶಾಂತಿ,[93] (೨) ಭಾವೋದಯ,[94] (೩) ಭಾವಸಂಧಿ,[95] (೪) ಭಾವಶಬಲತೆ[96]ಗಳು . . . ಇವಕ್ಕೆ ಕ್ರಮವಾಗಿ ಉದಾಹರಣೆಗಳು :—

(೧) ತಸ್ಯಾಸ್ಸಾಂದ್ರವಿಲೇಪನಸ್ತನತಟಪ್ರಶ್ಲೇಷಮುದ್ರಾಂಕಿತಂ
ಕಿಂ ವಕ್ಷಶ್ಚರಣಾನತಿವ್ಯತಿಕರವ್ಯಾಜೇನ ಗೋಪಾಯ್ಯತೇ ।
ಇತ್ಯುಕ್ತೇ ಕ್ವ ತದಿತ್ಯುದೀರ್ಯ ಸಹಸಾ ತತ್ ಸಂಪ್ರಮಾಷ್ಟುಂ ಮಯಾ
ಸಂಶ್ಲಿಷ್ಟಾ ರಭಸೇನ ತತ್ಸುಖವಶಾತ್ ತನ್ವ್ಯಾ ಚ ತದ್ವಿಸ್ಮೃತಮ್ ॥[97]

ಅವಳಾ ಸಾಂದ್ರವಿಲೇಪನಸ್ತನತಟಪ್ರಶ್ಲೇಷಮುದ್ರಾಂಕಮ-
ಪ್ಪೆರ್ದೆಯಂ ಮುಚ್ಚುವೆಯೇಕೆ ಪಾದನಮನಪ್ರಾರಂಭದಾ ವ್ಯಾಜದಿಂ-।
ದೆನಲಾ ಕಾಂತೆಯದೆಲ್ಲಿಯೆನ್ನುತೊಡನಾಂ ಮುಚ್ಚಲ್ಕದಂ ಬೇಗದಿಂ
ದವಳಾಲಿಂಗನಗೈದೆನಾ ನೆನಪವಳ್ಗಿಲ್ಲಾಯ್ತು ತತ್ಸೌಖ್ಯದಿಂ ॥

ಇಲ್ಲಿ ಕೋಪದ ಶಮನವು ಲಕ್ಷ್ಯ.

(೨) ಏಕಸ್ಮಿನ್ ಶಯನೇ ವಿಪಕ್ಷರಮಣೀನಾಮಗ್ರಹೇ ಮುಗ್ಧಯಾ
ಸದ್ಯೋ ಮಾನಪರಾಙ್ಮುಖಗ್ಲಪಿತಯಾ ಚಾಟೂನಿ ಕುರ್ವನ್ನಪಿ ।
ಆವೇಗಾದವಧೀರಿತಃ ಪ್ರಿಯತಮಸ್ತೂಷ್ಣೀಂ ಸ್ಥಿತಸ್ತತ್ಕ್ಷಣಂ
ಮಾ ಭೂತ್ಸುಪ್ತ ಇವೇತ್ಯಮಂದವಲಿತಗ್ರೀವಂ ಪುನರ್ವೀಕ್ಷಿತಃ ॥[98]

ಒಂದೇ ಶಯ್ಯೆಯೊಳೋಪನನ್ಯರಮಣೀನಾಮಂಗೊಳಲ್ ಮುಗ್ಧೆ ತಾ-
ನೆತ್ತಂ ಮಾನಪರಾಙ್ಮುಖಕ್ಷುಭಿತೆಯಾ ಪ್ರಾಣೇಶಚಾಟೂಕ್ತಿಯಂ ।
ರೋಷಾವೇಗದಿನಂದು ನೂಂಕಲೊಡನಾತಂ ಮೌನಮಂ ತಾಳ್ದಿದಂ
ನಿದ್ರಾಮುದ್ರಿತನಕ್ಕುಮೆಂದು ಮಗುಳ್ದಾ ಲೋಲಾಸ್ಯೆ ಮೇಣ್ ನೋಡಿದಳ್ ॥

ಇಲ್ಲಿ ಔತ್ಸುಕ್ಯದ ಉದಯ ಲಕ್ಷ್ಯ.

---

[93] ಶಾಂತಿ ಎಂದರೆ ಪ್ರಶಮ ಅಥವಾ ಶಮನ.

[94] ಉದಯವೆಂದರೆ ಉತ್ಪತ್ತಿ.

[95] ಸಂಧಿಯೆಂದರೆ ಸಮಕಾಲದಲ್ಲಿ ಎರಡು ಕೂಡುವಿಕೆ.

[96] ಶಬಲತೆಯೆಂದರೆ ಹಿಂದಿನದನ್ನು ಕುಗ್ಗಿಸಿ ಮುಂದಿನದು ಹುಟ್ಟುವುದು.

[97] ಅಮರುಶತಕ. ಇದು ಭಾವಶಾಂತಿಗೆ ಉದಾಹರಣೆ.

[98] ಅಮರುಶತಕ. ಇದು ಭಾವೋದಯಕ್ಕೆ ಉದಾಹರಣೆ.

(೩) ಉತ್ಸಿಕ್ತಸ್ಯ ತಪಃಪರಾಕ್ರಮನಿಧೇರಭ್ಯಾಗಮಾದೇಕತಃ
ತತ್ಸಂಗಪ್ರಿಯತಾ ಚ ವೀರರಭಸೋಲ್ಲಾಸಶ್ಚ ಮಾಂ ಕರ್ಷತಃ।
ವೈದೇಹೀಪರಿರಂಭ ಏಷ ಚ ಮುಹುಶ್ಚೈತನ್ಯಮಾಮೀಲಯನ್
ಆನಂದೀ ಹರಿಚಂದನೇಂದುಶಿಶಿರಃ ಸ್ನಿಗ್ಧೋ ರುಣದ್ಧ್ಯನ್ಯತಃ ॥[99]

ಬಂದಂ ಗರ್ವತಪಃ ಪರಾಕ್ರಮಗುಣಾವಾಸಂ ಗಡೆಂಬೊಂದು ಸತ್-
ಸಂಗಪ್ರೇಮಮುಮಂತೆ ವೀರರಭಸೋಲ್ಲಾಸಂ ಕರಂ ಚಿತ್ರಮಂ।
ತುಂಬಲ್ ತಾನಿರದಿತ್ತ ಸೀತೆಯ ಸುಖಾಶ್ಲೇಷಂ ಹೃದಾಪ್ಯಾಯನಂ
ಸಾಂದ್ರಾನಂದಕ ಚಂದನೇಂದು ಶಿಶಿರಂ ಬಾರಿಪ್ಪುದೆನ್ನಂ ದಿಟಂ ॥

ಇಲ್ಲಿ ಆವೇಗ ಮತ್ತು ಹರ್ಷಗಳ ಸಂಧಿ ಲಕ್ಷ್ಯ.

(೪) ಕ್ವಾಕಾರ್ಯಂ ಶಶಲಕ್ಷ್ಮಣಃ ಕ್ವ ಚ ಕುಲಂ ಭೂಯೋಽಪಿ ದೃಶ್ಯೇತ ಸಾ
ದೋಷಾಣಾಂ ಪ್ರಶಮಾಯ ನಶ್ಶ್ರುತಮಹೋ ಕೋಪೇಽಪಿ ಕಾಂತಂ ಮುಖಮ್ ।
ಕಿಂ ವಕ್ಷ್ಯಂತ್ಯಪಕಲ್ಮಷಾಃ ಕೃತಧಿಯಃ ಸ್ವಪ್ನೇಽಪಿ ಸಾ ದುರ್ಲಭಾ
ಚೇತಃ ಸ್ವಾಸ್ಥ್ಯಮುಪೈಹಿ ಕಃ ಖಲು ಯುವಾ ಧನ್ಯೋಽಧರಂ ಪಾಸ್ಯತಿ ॥[100]

ಎಲ್ಲಿಯಕಾರ್ಯಮೆಲ್ಲಿ ಶಶಿಯಾ ಸುಕುಲಂ, ಪ್ರಿಯೆ ಮತ್ತೆ ಕಾಂಬಳೇ
ಪೊಲ್ಲದನಟ್ಟಲಲ್ತೆ ತಿಳಿವೀ ಮೊಗಮೇಂ ಮುನಿದುಂ ಮನೋಹರಂ।
ಬಲ್ಲರಕಲ್ಮಷರ್ ನುಡಿವರೇಂ, ಕನಸಲ್ಲಿಯುಮೀಕೆ ಕಾಣಳಿ-
ನಿಲ್ಲಿ ಸುಧೀರನಾಗು ಮನವೇ, ಮಿಗೆ ಚುಂಬಿಪ ಧನ್ಯನಾವನೋ ॥

ಇಲ್ಲಿ ವಿತರ್ಕ, ಔತ್ಸುಕ್ಯ, ಮತಿ, ಸ್ಮರಣ, ಶಂಕೆ, ದೈನ್ಯ, ಧೃತಿ, ಚಿಂತೆ, ಹೀಗೆ ನಾನಾ ಭಾವಗಳ ಶಬಲತೆಯಿದೆ.

ಭಾವದ ಸ್ಥಿತಿಯನ್ನು ಆಗಲೇ ನಿರೂಪಿಸಿ 'ಜಾನೇ ಕೋಪಪರಾಙ್ಮುಖೀ . . .[101] ಎಂಬ ಲಕ್ಷ್ಯವನ್ನು ಉದಾಹರಿಸಲಾಗಿದೆ.

---

[99] ಮಹಾವೀರಚರಿತನಾಟಕ, ಅಂಕ ii ಪರಶುರಾಮನು ಬಂದಾಗ ಸೀತಾಲಿಂಗನಸುಖದಲ್ಲಿರುವ ರಾಮನ ವಾಕ್ಯ.

[100] ವಿಕ್ರಮೋರ್ವಶೀಯನಾಟಕ, ಅಂಕ iv. ಉರ್ವಶಿಯನ್ನು ಕಂಡ ಪುರೂರವಸ್ಸನ ವಾಕ್ಯ. ಕೆಲವು ಮಾತೃಕೆಗಳಲ್ಲಿ ಶ್ಲೋಕ ಉಪಲಬ್ಧವಿಲ್ಲ. ಆನಂದವರ್ಧನನೂ ಇದನ್ನು ಉದಾಹರಿಸಿದ್ದಾನೆ. ಹೋಲಿಸಿ **ಕನ್ನಡ ಧ್ವನ್ಯಾಲೋಕ**, ಪು. ೧೧೧.

[101] ಮೇಲೆ ವ್ಯಭಿಚಾರಿಭಾವವಾದ ಅಸೂಯೆಯ ಉದಾಹರಣೆಯನ್ನು ನೋಡಿ.

ಮುಖ್ಯೇ ರಸೇಽಪಿ ತೇಽಙ್ಗಿತ್ವಂ ಪ್ರಾಪ್ನುವನ್ತಿ ಕದಾಚನ ॥ ೧೪*ab* ॥

ಯದ್ಯಪಿ ರಸವೇ ಮುಖ್ಯವಾದರೂ, ಒಮ್ಮೊಮ್ಮೆ ಅವುಗಳೂ ಪ್ರಾಧಾನ್ಯವನ್ನು ಪಡೆಯುತ್ತವೆ.

ಅವುಗಳೆಂದರೆ 'ಭಾವಶಾಂತಿ'ಯೇ ಮೊದಲಾದವು. ಮಹಾರಾಜನೇ ಪ್ರೇಕ್ಷಕನಾಗಿ ಉಪಸ್ಥಿತನಿದ್ದರೂ ವಿವಾಹಪ್ರವೃತ್ತನಾದ ರಾಜಸೇವಕನಿಗೆ ಕಾಲೋಚಿತವಾದ ಪ್ರಾಧಾನ್ಯವೊದಗುವಂತೆ ಅವಕ್ಕೂ ಪ್ರಾಧಾನ್ಯವುಂಟು.[102]

ಅನುಸ್ವಾನಾಭಸಂಲಕ್ಷ್ಯಕ್ರಮವ್ಯಂಗ್ಯಸ್ಥಿತಿಸ್ತು ಯಃ ॥ ೧೪*cd* ॥

ಶಬ್ದಾರ್ಥೋಭಯಶಕ್ತ್ಯುತ್ಥಃ ತ್ರಿಧಾ ಸ ಕಥಿತೋ ಧ್ವನಿಃ ॥ ೧೫*ab* ॥

ಅನುರಣನರೂಪವಾಗಿಯೂ ಸಂಲಕ್ಷ್ಯಕ್ರಮವಾಗಿಯೂ ಇರುವ ಧ್ವನಿ ಮೂರು ಬಗೆಯಾಗಿದೆ :—

(೧) ಶಬ್ದಶಕ್ತಿಮೂಲ, (೨) ಅರ್ಥಶಕ್ತಿಮೂಲ, ಮತ್ತು (೩) ಉಭಯಶಕ್ತಿಮೂಲ.

ಎಂದರೆ ಕ್ರಮವಾಗಿ (೧) 'ಶಬ್ದಶಕ್ತಿಮೂಲ-ಅನುರಣನರೂಪ-ವ್ಯಂಗ್ಯ, (೨) ಅರ್ಥಶಕ್ತಿಮೂಲ-ಅನುರಣನರೂಪ-ವ್ಯಂಗ್ಯ ಮತ್ತು (೩) ಉಭಯಶಕ್ತಿಮೂಲ-ಅನುರಣನರೂಪವೆಂಬುವೇ ಮೂರು ಬಗೆಗಳು.[103]

ಅಲಂಕಾರೋಽಥ ವಸ್ತ್ವೇವ ಶಬ್ದಾದ್ಯತ್ರಾವಭಾಸತೇ ॥ ೧೫*cd* ॥

ಪ್ರಧಾನತ್ವೇನ ಸ ಜ್ಞೇಯಃ ಶಬ್ದಶಕ್ತ್ಯುದ್ಭವೋ ದ್ವಿಧಾ ॥ ೧೬*ab* ॥

ಎಲ್ಲಿ ಶಬ್ದದಿಂದ ಪ್ರಧಾನವಾಗಿ (೧) ಅಲಂಕಾರ [104]ಇಲ್ಲವೇ (೨) ವಸ್ತುಮಾತ್ರವು ಧ್ವನಿತವಾಗುತ್ತಿರುವುದೋ ಅದನ್ನು ಶಬ್ದಶಕ್ತಿಮೂಲಧ್ವನಿಯೆಂದು ತಿಳಿಯುವುದು. ಈ ಎರಡೂ ಅದರ ಎರಡು ಪ್ರಕಾರಗಳು.

'ವಸ್ತುಮಾತ್ರ'ವೆನ್ನುವುದಕ್ಕೆ ಅಲಂಕಾರವಿಲ್ಲದ ವಸ್ತುಮಾತ್ರವೆಂದು ತಾತ್ಪರ್ಯ. ಮೊದಲನೆಯದಕ್ಕೆ ಉದಾಹರಣೆ :—

---

[102] ಇಲ್ಲಿಯವರಿಗೆ ಅಸಂಲಕ್ಷ್ಯಕ್ರಮ ಅಥವಾ ರಸಾದಿಧ್ವನಿಯನ್ನು ವಿವರಿಸಲಾಯಿತು. ಇನ್ನು ಮುಂದೆ ಸಂಲಕ್ಷ್ಯಕ್ರಮಧ್ವನಿಯ ವಿಭಾಗಪ್ರದರ್ಶನಕ್ಕೆ ಹೊರಡುತ್ತಾನೆ.

[103] ಇದರ ಮೂಲವನ್ನು **ಕನ್ನಡ ಧ್ವನ್ಯಾಲೋಕ,** ಪು. ೪೯-೬೨ ರಲ್ಲಿ ನೋಡಬಹುದು.

[104] ಅಲಂಕಾರಗಳ ವಿಸ್ತೃತ ನಿರೂಪಣೆ ಮುಂದೆ ಹತ್ತನೆಯ ಉಲ್ಲಾಸದಲ್ಲಿ ಬರುತ್ತದೆ.

(೧) i. ಉಲ್ಲಾಸ್ಯ ಕಾಲಕರವಾಲಮಹಾಂಬುವಾಹಂ
ದೇವೇನ ಯೇನ ಜರಡೋರ್ಜಿತಗರ್ಜಿತೇನ।
ನಿರ್ವಾಪಿತಸ್ಸಕಲ ಏವ ರಣೇ ರಿಪೂಣಾಂ
ಧಾರಾಜಲೈಸ್ತ್ರಿಜಗತಿ ಜ್ವಲಿತಃ ಪ್ರತಾಪಃ ॥

ಬೀಸುತ್ತೆ ಕಾಳಕರವಾಳ ಮಹಾಭ್ರಂ ದಲ್
ತೋರುತ್ತೆ ತೀವ್ರತರಗರ್ಜಿತ ಘೋಷಮಂ ಮೇಣ್!
ಧಾರಾಜಲಂಗಳಿನಿದೋ ತ್ರಿಜಗಂಗಳೊಳ್ ನೀಂ
ಶತ್ರುಪ್ರತಾಪಶಿಖಿಯಂ ಶಮಿಸಿರ್ಪೆಯೆಂಬೆಂ ॥[105]

ಇಲ್ಲಿ ವಾಕ್ಯದ ಅರ್ಥವು ಅಸಂಬದ್ಧವೆನಿಸದಂತಾಗಬೇಕಾದರೆ ಅಪ್ರಸ್ತುತವಾದ ಅರ್ಥಕ್ಕೂ ಪ್ರಸ್ತುತವಾದ ಅರ್ಥಕ್ಕೂ ಉಪಮಾನೋಪಮೇಯಭಾವವನ್ನು ಕಲ್ಪಿಸಿ ಕೊಳ್ಳಬೇಕಾಗುವುದರಿಂದ ಉಪಮಾಲಂಕಾರ ವ್ಯಂಗ್ಯ.

ii. ತಿಗ್ಮರುಚಿರಪ್ರತಾಪೋ ವಿಧುರನಿಶಾಕೃದ್ವಿಭೋ ಮಧುರಲೀಲಃ।
ಮತಿಮಾನತತ್ತ್ವವೃತ್ತಿಃ ಪ್ರತಿಪದಪಕ್ಷಾಗ್ರಣೀರ್ವಿಭಾತಿ ಭವಾನ್ ॥

ಪ್ರಭೋ, ನಿನ್ನ ಪ್ರತಾಪವು ದಾಹಕವಾಗಿರುವಂತೆ ರುಚಿರವೂ ಆಗಿದೆ; ವೈರಿಗಳಿಗೆ ನೀನು ಕತ್ತಲೆಯನ್ನು (=ಮರಣವನ್ನು) ತರುವೆ, ನಿನ್ನ ಲೀಲೆ ಮಧುರ ಮತ್ತು ನಿನ್ನ ವೃತ್ತಿಯು ಸನ್ಮತಿ, ಅಭಿಮಾನ, ತತ್ತ್ವಗಳಲ್ಲೇ ನಿಷ್ಠವಾಗಿದೆ; ಪದವಿಯನ್ನು ಸಾಧಿಸುವ ಪಕ್ಷದ ಮುಂದಾಳೇ ನೀನು.[106]

ಮತ್ತು

ನಿನ್ನ ಇರವೇ ವಿಸ್ಮಯಕರವಾಗಿದೆ: ಸೂರ್ಯನಾದರೂ ಸುಡುವುದಿಲ್ಲ; ಚಂದ್ರನಾದರೂ ರಾತ್ರಿಯನ್ನುಂಟುಮಾಡುವುದಿಲ್ಲ; ವಸಂತನಾದರೂ ವಿಲಾಸವಿಲ್ಲ ; ಮತಿವಂತನಾದರೂ ತತ್ತ್ವದಲ್ಲಿ ನಿಷ್ಠೆಯಿಲ್ಲ; ಪಾಡ್ಯವಾದರೂ ಪಕ್ಷಕ್ಕೆ ಪ್ರಥಮವಲ್ಲ![107]

ಇಲ್ಲಿ ಸಮಾಸವನ್ನಾಶ್ರಯಿಸದಿರುವ ಎರಡನೆಯ ಅರ್ಥವನ್ನು ಸ್ವೀಕರಿಸಿದರೆ ವಿರೋಧಾಭಾಸಾಲಂಕಾರ ವ್ಯಂಗ್ಯ.

---

105 ರಾಜನ ಪ್ರಶಂಸಾಪರವಾದ ಪದ್ಯ.

106 ಮೂಲದ ಪದಗಳನ್ನು ಸಮಾಸಪದಗಳೆಂದು ಭಾವಿಸಿದರೆ ಈ ಅರ್ಥ ಬರುತ್ತದೆ. ಇದೂ ರಾಜಪ್ರಶಂಸೆಯೇ.

107 ಸಮಾಸವನ್ನಾಶ್ರಯಿಸದೆ ಹೋದರೆ ಈ ಅರ್ಥವೂ ಬರುತ್ತದೆ.

iii. ಅಮಿತಸ್ಸಮಿತಃ ಪ್ರಾಪ್ತೈರುತ್ಕರ್ಷೈರ್ಹರ್ಷದಃ ಪ್ರಭೋ ।
ಅಹಿತಸ್ಸಹಿತಃ ಸಾಧುಯಶೋಭಿರಸತಾಮಸಿ ॥

ಹರ್ಷದಾಯಕನಾದ ಪ್ರಭುವೆ! ಯುದ್ಧಗಳಲ್ಲಿ ಜಯಿಸಿ ಪಡೆದ ಉತ್ಕರ್ಷದಿಂದ ನೀನು ಅಮಿತನಾಗಿರುವೆ; ನೀನು ಕುಜನರಿಗೆ ಶತ್ರುವಾಗಿರುವುದಲ್ಲದೆ ಉತ್ತಮ ಯಶಸ್ಸಿಗೆ ಪಾತ್ರನೂ ಆಗಿರುವೆ.

ಮತ್ತು

(ಶಬ್ದಚಮತ್ಕಾರವನ್ನ ಸುಲಕ್ಷಿಸಿದರೆ) ನೀನು ಅಮಿತನಾಗಿರುವಂತೆ ಸಮಿತ (=ಪರಿಮಾಣಸಹಿತ)ನೂ ಆಗಿರುವೆ; ಶತ್ರುಗಳ ಹರ್ಷವನ್ನು ಮುರಿದು ಹರ್ಷದನೆನಿಸುವಂತೆ ಮಿತ್ರರಿಗೆ ಹರ್ಷವಿತ್ತೂ ಹರ್ಷದನೆನಿಸುವೆ; 'ಅಹಿತ'ನೆನಿಸುವಂತೆಯೇ 'ಸಹಿತ'ನೆಂದೂ ಎನಿಸುವೆ.

ಇಲ್ಲಿಯೂ ವಿರೋಧಾಭಾಸಾಲಂಕಾರ ವ್ಯಂಗ್ಯ.[108]

iv. ನಿರುಪಾದಾನಸಂಭಾರಮಭಿತ್ತಾವೇವ ತನ್ವತೇ ।
ಜಗಚ್ಚಿತ್ರಂ ನಮಸ್ತಸ್ಮೈ ಕಲಾಶ್ಲಾಘ್ಯಾಯ ಶೂಲಿನೇ ॥[109]

ಮತ್ತಿನ ಕರಣಗಳಿಲ್ಲದ-
ಭಿತ್ತಿಯೊಳಂ ವಿಶ್ವಚಿತ್ರಮಂ ಬರ್ಚಿಸುವಂ-।
ಗುತ್ತಮಸುಕಲಾಕಾರಿಗೆ
ಚಿತ್ತದೊಳಾಂ ಶೂಲಿಗಿಂದು ನಮಿಸುತ್ತಿರ್ಪೆಂ ॥

ಇಲ್ಲಿ ವ್ಯತಿರೇಕಾಲಂಕಾರ ವ್ಯಂಗ್ಯ. ವಸ್ತುತಃ, ಧ್ವನಿತವಾಗುವ ಅಲಂಕಾರಗಳಿಗೆ ಅಲಂಕಾರತ್ವ ತಪ್ಪಿ ಅಲಂಕಾರ್ಯತ್ವವೊದಗುವುದಾದರೂ, ಬ್ರಾಹ್ಮಣಶ್ರಮಣನ್ಯಾಯದಂತೆ[110] ಅವುಗಳ ಅಲಂಕಾರತ್ವವನ್ನು ಗ್ರಹಿಸಬೇಕು.

108 ಹಿಂದಿನ ಪದ್ಯ 'ಸಭಂಗ' ವಿರೋಧಾಭಾಸಕ್ಕೆ ಉದಾಹರಣೆ; ಇದು 'ಅಭಂಗ' ವಿರೋಧಾಭಾಸಕ್ಕೆ. ಹಿಂದಿನಂತೆ ಇಲ್ಲಿ ಪದಚ್ಛೇದ ಬದಲಾಗುವುದಿಲ್ಲ.

109 ಪದ್ಯವನ್ನು ಅಭಿನವಗುಪ್ತರೂ ಉದಾಹರಿಸಿದ್ದಾರೆ. ಭಟ್ಟನಾಯಕನದಿರಬಹುದು.

110 ಬ್ರಾಹ್ಮಣನು ಸಂನ್ಯಾಸವನ್ನು ಸ್ವೀಕರಿಸಿದ ಮೇಲೆ ಜಾತಿವೈಶಿಷ್ಟ್ಯಗಳು ಹೋಗುವುದಾದರೂ, ಪೂರ್ವಾಶ್ರಮದ ದೃಷ್ಟಿಯಿಂದ ಬ್ರಾಹ್ಮಣಶ್ರಮಣನೆಂದು ವ್ಯವಹರಿಸುವ ರೂಢಿಯುಂಟು. ಹಾಗೆಯೇ ವಸ್ತುತಃ ವಾಚ್ಯಾಲಂಕಾರದ ಸ್ವರೂಪವೂ ವ್ಯಂಗ್ಯಾಲಂಕಾರದ ಸ್ವರೂಪವೂ ಬೇರೆ ಬೇರೆಯಾದರೂ, ಎರಡನ್ನೂ ಅಲಂಕಾರವೆನ್ನುವ ರೂಢಿಯಿದೆ—ಪೂರ್ವಾವಸ್ಥೆಯ ದೃಷ್ಟಿಯಿಂದ.

ವಸ್ತುಮಾತ್ರಕ್ಕೆ ಉದಾಹರಣೆ :—

(೨) i. ಪಂಥಿಅ ಣ ಏತ್ಥ ಸತ್ಥರಮತ್ಥಿ ಮಣಂ ಪತ್ತರತ್ಥಲೇ ಗಾಮೇ !
ಉಣ್ಣಅಪಓಹರಂ ಪೆಕ್ಖಿಊಣ ಜಇ ವಸಸಿ ತಾ ವಸಸು ॥

ಕಲ್ನೆಲಮುಪ್ಪೀ ಪಳ್ಳಿಯೊ-
ಳಿಲ್ಲೆಂತುಂ ಪಾಸಿನಾಸೆ ಪಾಂಥನೆ ಮಲಗಲ್ |
ಉನ್ನತಮಾಯ್ತು ಪಯೋಧರ-[111]
ಮೆನ್ನುತ್ತುಂ ತಂಗಲಿನ್ನು ತಂಗಲ್‌ಬಹುದಯ್ ॥

ಇಲ್ಲಿ 'ನೀನು ಉಪಭೋಗಕ್ಷಮನಾಗಿದ್ದರೆ ತಂಗಬಹುದು' ಎಂಬ ವಸ್ತು ವ್ಯಂಗ್ಯ.

ii. ಶನಿರಶನಿಶ್ಚ ತಮುಚ್ಚೈರ್ನಿಹನ್ತಿ ಕುಪ್ಯಸಿ ನರೇಂದ್ರ ಯಸ್ಮೈ ತ್ವಮ್ ।
ಯತ್ರ ಪ್ರಸೀದಸಿ ಪುನಃ ಸ ಭಾತ್ಯುದಾರೋಽನುದಾರಶ್ಚ ॥

ನರೇಂದ್ರನೆ, ನೀನು ಯಾರ ಮೇಲೆ ಸಿಟ್ಟಾಗುವೆಯೋ ಅವನನ್ನು ಶನಿ (=ಗ್ರಹ) ಮತ್ತು ಅಶನಿ (=ಶನಿಯಲ್ಲದವನು ಮತ್ತು ವಜ್ರಾಯುಧ)ಗಳೆರಡೂ ಮೇಲ್ಬಾಯ್ದು ಮುರಿಯುತ್ತವೆ. ಅದೇ ನೀನು ಯಾರ ವಿಷಯದಲ್ಲಿ ಪ್ರಸನ್ನನಾಗುವೆಯೋ ಅವನು ಏಕಕಾಲದಲ್ಲಿ ಉದಾರ (=ಮಹಾತ್ಮ) ನೂ ಆಗುತ್ತಾನೆ, ಅನುದಾರ (=ಉದಾರ ನಲ್ಲದವನು ಮತ್ತು ಪತ್ನೀಸಖ)ನೂ ಆಗುತ್ತಾನೆ.

ಇಲ್ಲಿ ವಿರುದ್ಧವಾದ ಅಂಶಗಳೂ ಕೂಡ ನಿನ್ನನ್ನು ಅನುಸರಿಸುವುದಕ್ಕಾಗಿ ಒಂದೇ ಕಾರ್ಯವನ್ನು ಮಾಡುತ್ತವೆಯೆಂಬುದು ಧರ್ಮವ್ಯತ್ಯಯ[112]ದಿಂದಲೇ ವ್ಯಂಗ್ಯ.

ಅರ್ಥಶಕ್ತ್ಯುದ್ಭವೋಽಪ್ಯರ್ಥೋ ವ್ಯಂಜಕಸ್ಸಂಭವೀ ಸ್ವತಃ ॥ ೧೬*cd* ॥

ಪ್ರೌಢೋಕ್ತಿಮಾತ್ರಾತ್ ಸಿದ್ಧೋ ವಾ ಕವೇಸ್ತೇನೋಮ್ಭಿತಸ್ಯ ವಾ ।
ವಸ್ತು ವಾಲಂಕೃತಿರ್ವೇತಿ ಷಡ್‌ಭೇದೋಽಸೌ ವ್ಯನಕ್ತಿ ಯತ್ ॥ ೧೭ ॥

ವಸ್ತ್ವಲಂಕಾರಮಥವಾ ತೇನಾಯಾ ದ್ವಾದಶಾತ್ಮಕಃ ॥ ೧೮*ab* ॥

ಅರ್ಥಶಕ್ತಿಮೂಲವಾದ ವ್ಯಂಜಕವು 'ಸ್ವತಃಸಂಭವಿ', 'ಕವಿಪ್ರೌಢೋಕ್ತಿಸಿದ್ಧ' ಮತ್ತು 'ಕವಿನಿಬದ್ಧಪ್ರೌಢೋಕ್ತಿಸಿದ್ಧ'ವೆಂದು ಮೂರು ತೆರ; ಅದು ಒಂದೊಂದೂ

111 ಪಯೋಧರ=ಮೋಡ ಮತ್ತು ಸ್ತನ.

112 ಒಂದೊಂದರ ಸಹಜಗುಣದ ವಿಪರ್ಯಾಸ.

ವಸ್ತುವಾಗಬಹುದು ಇಲ್ಲವೆ ಅಲಂಕಾರವಾಗಬಹುದು ಎಂಬುದರಿಂದ ಆರು ಬಗೆಯಾಯಿತು. ಈ ಆರರ ವ್ಯಂಗ್ಯವು ಮತ್ತೆ ವಸ್ತು ಅಥವಾ ಅಲಂಕಾರವಾಗಬಹುದಾದ್ದರಿಂದ ಅರ್ಥಶಕ್ತಿಮೂಲಧ್ವನಿಯು ಹನ್ನೆರಡು ಪ್ರಕಾರಗಳನ್ನೊಳಗೊಳ್ಳುತ್ತದೆ.

ಅರ್ಥವು ಎರಡು ವಿಧ:—(೧) ಸ್ವತಃ ಸಿದ್ಧವಾಗಿರುವುದು ಮತ್ತು (೨) ಇದೇ ಮೊದಲು ಕಲ್ಪಿತವಾದುದು. ಮೊದಲನೆಯದಾದ ಸ್ವತಃಸಂಭವಿಯು ಕವಿಯ ಭಣಿತಿ ಕೌಶಲದಿಂದ ಮಾತ್ರ ಉತ್ಪನ್ನವಾಗುವಂತಹುದಲ್ಲ; ಅದು ಕಾವ್ಯಪ್ರಪಂಚದ ಹೊರಗೂ ತಾನೇ ತಾನಾಗಿ ವಿದ್ಯಮಾನವಾಗಿರುವುದು ಸಂಭವ. ಆದರೆ ಬಾಹ್ಯ ಪ್ರಪಂಚದಲ್ಲಿ ಇಲ್ಲದೆಯೇ ಇರುವ ವಸ್ತುವನ್ನು ಕವಿಯು ತನ್ನ ಪ್ರತಿಭಾಬಲದಿಂದ ಮೊಟ್ಟಮೊದಲು ಸೃಷ್ಟಿಸುವ ಅಂಶವು ಎರಡನೆಯದು. ಕವಿಯು ತನ್ನ ಮಾತಿನಿಂದಲೇ ಕಲ್ಪಿಸಬಹುದು ಇಲ್ಲವೆ ತಾನು ನಿರ್ಮಿಸಿದ ಪಾತ್ರಗಳ ಮಾತುಗಳ ಮೂಲಕ ಕಲ್ಪಿಸಬಹುದು. ಹೀಗೆ ಎರಡನೆಯ ಬಗೆಯು ಮತ್ತೆ ಎರಡು ವಿಧವಾಗಿರುತ್ತದೆ. ಅಲ್ಲದೆ ಪ್ರತಿಯೊಂದು ಬಗೆಯೂ ವಸ್ತುರೂಪವಾಗಿರಬಹುದು ಇಲ್ಲವೆ ಅಲಂಕಾರರೂಪವಾಗಿರಬಹುದಾದ್ದರಿಂದ ವ್ಯಂಜಕವು ಆರುಬಗೆಯಾಯಿತು. ಅದರ ವ್ಯಂಗ್ಯ ಕೂಡ ವಸ್ತು ಇಲ್ಲವೆ ಅಲಂಕಾರವಾಗಬಹುದಾದ್ದರಿಂದ ಅರ್ಥಶಕ್ತಿಮೂಲಧ್ವನಿಯ ಬಗೆಗಳು ಒಟ್ಟಾರೆ ಹನ್ನೆರಡು. ಕೆಳಗೆ ಕ್ರಮವಾಗಿ ಉದಾಹರಣೆಗಳನ್ನು ಕೊಡಲಾಗಿದೆ:—

೧. ಅಲಸಸಿರೋಮಣೀ ಧುತ್ತಾಣಮಗ್ಗಿಮೋ ಪುತ್ತಿ ಧಣಸಮಿದ್ಧಿಮ ಓ।
ಇಅ ಭಣಿಏಣ ಣಅಂಗೀ ಪಪ್ಫುಲ್ಲವಿಲೋಅಣಾ ಜಾಆ ॥

ಅಲಸಶಿರೋಮಣಿ ಧೂರ್ತರ
ಕುಲಾಗ್ರಣಿಯುಮಂತೆ ಮಗಳೆ ಸುಧನಸಮೃದ್ಧಂ।
ಎಂದೊರೆಯಲೊಡಂ ಸತಿಯಾ
ನಂದಿಸುತುಂ ತಾನೆ ಫುಲ್ಲಲೋಚನೆಯಾದಳ್ ॥

ಇಲ್ಲಿ 'ಆತನು ನನ್ನ ಪ್ರೇಮಪಾಶಕ್ಕೆ ಸಿಕ್ಕಿದವ'ನೆಂಬ ವಸ್ತುವು ವರ್ಣಿತ ವಸ್ತುವಿನಿಂದ ವ್ಯಂಗ್ಯ.

೨. ಧನ್ಯಾಸಿ ಯಾ ಕಥಯಸಿ ಪ್ರಿಯಸಂಗಮೇಽಪಿ
ವಿಶ್ರಬ್ಧಚಾಟುಕಶತಾನಿ ರತಾಂತರೇಷು।
ನೀವೀಂ ಪ್ರತಿ ಪ್ರಣಿಹಿತೇ ತು ಕರೇ ಪ್ರಿಯೇಣ
ಸಖ್ಯಃ ಶಪಾಮಿ ಯದಿ ಕಿಂಚಿದಪಿ ಸ್ಮರಾಮಿ ॥[113]

---

[113] ಇದು ಕವಿಯಿತ್ರಿಯಾದ ವಿಜ್ಜಕೆಯೆಂದು ಶಾರ್ಙ್ಗಧರಪದ್ಧತಿಯಲ್ಲಿ ಹೇಳಿದೆ.

ರತದೊಳ್ ಪ್ರಿಯನೊಡನಾಡಿದ
ಸವಿವಾತಂ ನುಡಿವೆ ಧನ್ಯೆ ನೀನಹೆ ನಿರುತಂ।
ಕೈ ನೀಡಿರೆ ನೀವಿಗವಂ[114]
ನಾನೊಂದಂ ಸಖಿಯರಾಣೆ ನೆನೆಯಲ್ಕಾರೆಂ॥

ಇಲ್ಲಿ 'ನೀನು ಅಧನ್ಯೆ, ನಾನೇ ನಿಜವಾಗಿ ಧನ್ಯೆ'ಯೆಂಬ ವ್ಯತಿರೇಕಾಲಂಕಾರ[115]ವ್ಯಂಗ್ಯ.

೩. ದರ್ಪಾಂಧ ಗಂಧಗಜಕುಂಭಕಪಾಟಕೂಟ-
ಸಂಕ್ರಾಂತನಿಘ್ನಘನಶೋಣಿತ ಶೋಣಶೋಚಿಃ।
ವೀರೈರ್ವ್ಯಲೋಕಿ ಯುಧಿ ಕೂಪಕಷಾಯಕಾಂತಿಃ
ಕಾಳೀಕಟಾಕ್ಷ ಇವ ಯಸ್ಯ ಕರೇ ಕೃಪಾಣಃ॥

ದರ್ಪಾಂಧ-ಗಂಧಗಜ-ಕುಂಭ-ಕಪಾಟ-ಕೂಟ-
ಸಂಕ್ರಾಂತ-ಸಾಂದ್ರ-ಘನಶೋಣಿತ-ಶೋಣವರ್ಣಂ।
ಕೈಯೊಳ್ ಕೃಪಾಣಮಿರೆ ಕಣ್ಗೆ ಸೆದತ್ತು ರಕ್ತಂ
ಕಾಳೀಕಟಾಕ್ಷ ಸದೃಶಂ ರಣದೊಳ್ ಭಟರ್ಗಂ॥

ಇಲ್ಲಿ ಉಪಮಾಲಂಕಾರದಿಂದ 'ಸಕಲ ರಿಪುಬಲವೂ ಕ್ಷಣದಲ್ಲಿ ಧ್ವಂಸವಾಗುತ್ತದೆ' ಯೆಂಬ ವಸ್ತು ವ್ಯಂಗ್ಯ.

೪. ಗಾಢಕಾಂತದಶನಕ್ಷತವ್ಯಥಾ
ಸಂಕಟಾದರಿವಧೂಜನಸ್ಯ ಯಃ।
ಓಷ್ಠವಿದ್ರುಮದಲಾನ್ಯಮೋಚಯತ್
ನಿರ್ದಶನ್ ಯುಧಿ ರುಷಾ ನಿಜಾಧರಮ್॥

ಕರ್ಚುತೆ ತನ್ನಧರಮನೇ
ಬಿರ್ಚುಪವೊಲ್ ಕಾಂತದಂತಪೀಡೆಯಿನೆತ್ತಂ।
ವೈರಿವಧೂಜನದಧರೋ
ತ್ಕರಮಂ ಸಾರ್ಚಿರ್ಪನೀತನೆಂತುಂ ರಣದೊಳ್॥

114 ನೀವಿ = ನೀರೆಯ ಒಳಗಂಟು.

115 ಎರಡನ್ನು ಹೋಲಿಸುವಾಗ ಒಂದಕ್ಕಿಂತ ಇನ್ನೊಂದು ಹೆಚ್ಚೆಂದು ಚಮತ್ಕಾರಕವಾಗಿ ವರ್ಣಿಸುವಲ್ಲಿ 'ವ್ಯತಿರೇಕ' ಹುಟ್ಟುತ್ತದೆ.

ಇಲ್ಲಿರುವ ವಿರೋಧಾಲಂಕಾರದಿಂದ 'ತುಟಿಯನ್ನು ಕಚ್ಚಿದ ಸಮಕಾಲದಲ್ಲಿಯೇ ಶತ್ರುಗಳು ಹತರಾದರು' ಎಂಬ ತುಲ್ಯಯೋಗಿತಾಲಂಕಾರವೂ, 'ನನಗೆ ಗಾಯವಾದರೂ ಪರರ ಗಾಯವನ್ನಳಿಸಬೇಕೆಂಬ ಉದ್ದೇಶ'ವಿತ್ತೆಂಬ ಉತ್ಪ್ರೇಕ್ಷಾಲಂಕಾರವೂ ವ್ಯಂಗ್ಯ. ಈ ಮೇಲಿನ ಉದಾಹರಣೆಗಳಲ್ಲೆಲ್ಲ ವ್ಯಂಜಕವು 'ಸ್ವತಃ ಸಂಭವಿ.'

೫. ಕೈಲಾಸಸ್ಯ ಪ್ರಥಮಶಿಖರೇ ವೇಣುಸಂಮೂರ್ಛನಾಭಿಃ
ಶ್ರುತ್ವಾ ಕೀರ್ತಿಂ ವಿಬುಧರಮಣೀಗೀಯಮಾನಾಂ ಯದೀಯಾಮ್ ।
ಸ್ರಸ್ತಾಪಾಂಗಾಸ್ಸರಸಬಿಸಿನೀಕಾಂಡಸಂಜಾತಶಂಕಾಃ
ದಿಙ್ಮಾತಙ್ಗಾಶ್ಶ್ರವಣಪುಲಿನೇ ಹಸ್ತಮಾವರ್ತಯನ್ತಿ ॥

ಕೈಲಾಸಾದ್ರಿಯ ತುಂಗಶೃಂಗದೊಳಗಂ ವೇಣ್ವಾದಿಗೀತಂಗಳಿಂ
ಕೇಳುತ್ತುಂ ತವ ಕೀರ್ತಿಯಾ ಸುರವಧೂಪ್ರೋದ್ಗೀಯಮಾನಾಂಶಮಂ ।
ಲೋಲಾಪಾಂಗದಿನೆಲ್ಲ ದಿಗ್ಗಜಗಳುಂ ದಲ್ ಪದ್ಮಿನೀಕಾಂಡಮೆಂ-
ದಾಶ್ರೈದೆತ್ತುವುವಂತದಂ ಕರಗಳಿಂ ತಂತಮ್ಮ ಶ್ರೋತ್ರಾಂತದೊಳ್ ॥

ಇಲ್ಲಿ 'ಬುದ್ಧಿಯಿಲ್ಲದ ಮೃಗಗಳಲ್ಲೂ ಕೂಡ ಹೀಗೆ ಬುದ್ಧಿಯನ್ನು ಹುಟ್ಟಿಸುತ್ತಾ ನಿನ್ನ ಕೀರ್ತಿಯು ಚಮತ್ಕಾರವನ್ನುಂಟುಮಾಡುತ್ತದೆ'ಯೆಂಬ ವಸ್ತು ವ್ಯಂಗ್ಯ.

೬. ಕೇಸೇಸು ಬಲಾವೋಡಿಅ ತೇಣ ಸಮರಮ್ಮಿ ಜಅಸಿರೀ ಗಹಿಆ ।
ಜಹ ಕಂದರಾಹಿಂ ವಿಹುರಾ ತಸ್ಸ ದಿಢಂ ಕಂಠಅಮ್ಮಿ ಸಂಠವಿಆ ॥

ಬಲದಿಂ ಕೇಶಂಗೊಳ್ಳುತೆ
ಸೆಳೆದಂ ಜಯಸಿರಿಯನಾತನಂತಿರೆ ರಣದೊಳ್ ।
ಸಲೆ ಗುಹೆಗಳ್ ರಿಪುಕಂಠಂ
ಗಳನೊಡನೆಯೆ ತಬ್ಬಿ ಮುದ್ದಿಪಂತಿರಲಾಗಳ್ ॥

ಇಲ್ಲಿ 'ಕೇಸಗ್ರಹಣದ ದರ್ಶನದಿಂದ ಕಾಮೋದ್ರೇಕಗೊಂಡ ಗುಹೆಗಳು 'ರಿಪುಜನರ ಕಂಠಾಲಿಂಗನ ಮಾಡುವಂತಿವೆ'ಯೆಂಬಲ್ಲಿ ಉತ್ಪ್ರೇಕ್ಷಾಲಂಕಾರವೂ, 'ಸಂಗ್ರಾಮದಲ್ಲಿ ಒಂದು ಕಡೆ ಅವನ ವಿಜಯವನ್ನು ಕಂಡ ರಿಪುಗಳು ಪಲಾಯನ ಮಾಡಿ ಗುಹೆಗಳಲ್ಲಡಗಿರುವರು' ಎಂಬಲ್ಲಿ ಕಾವ್ಯ ಅಂಗಾಲಂಕಾರವೂ, 'ರಿಪುಗಳು ನಿಜವಾಗಿಯೂ ಪಲಾಯನ ಮಾಡಿಲ್ಲ; ಆದರೆ ರಾಜನ ಕೈಯಿಂದ ಸೋಲು ಅವರಿಗೆ ಆಗಬಾರದೆಂದು ಗುಹೆಗಳೇ ಅವರನ್ನು ಹೊರಕ್ಕೆ ಬಿಡುವುದಿಲ್ಲ' ಎಂಬಲ್ಲಿ ಅಪಹ್ನುತಿ ಅಲಂಕಾರವೂ ವ್ಯಂಗ್ಯ.

೭. ಗಾಢಾಲಂಗಣರಹಸುಜ್ಜುಅಮ್ಮಿ ದಇಏ ಲಹು ಸಮೋಸರಇ ।
ಮಾಣಂಸಿಣೀಣಂ ಮಾಣೋ ಪೀಲಣಭೀಅವ್ವ ಹಿಅಆಹಿ ॥

ಇನಿಯಂ ಗಾಢಾಲಿಂಗನ-
ಕನುವಾಗಲ್ ರಭಸದಿಂದೆ[116] ಮಾನಿನಿಯರ್ಗಂ ।
ಮನದಿಂದಂ ಮಾನಂ ಪೀ-
ಡನಭೀತಿಯಿನೆಂಬ ಮಾಳ್ಕೆಯಿಂ ಪೊರಮಡುಗುಂ ॥

ಇಲ್ಲಿರುವ ಉತ್ಪ್ರೇಕ್ಷೆಯಿಂದ 'ರಮಣಿಯರ ಪ್ರತ್ಯಾಲಿಂಗನಾದಿಗಳು ವಿಜೃಂಭಿಸುತ್ತವೆ'ಂಬ ವಸ್ತು ವ್ಯಂಗ್ಯ.

೮. ಜಾ ಠೇರಂ ವ ಹಸನ್ತೀ ಕಇವಅಣಾಂಬುರುಹಬದ್ಧವಿಣಿವೇಸಾ ।
ದಾವೇಇ ಭುಅಣಮಂಡಲಮಣ್ಣಂ ವಿಅ ಜಅಇ ಸಾ ವಾಣೀ ॥[117]

ಸ್ಥವಿರನ ನಗುವಂತಿರೆ ತಾಂ
ಕವಿವದನಾಂಭೋಜಬದ್ಧಸದ್ಮಳ್ ಮುದದಿಂ ।
ಭುವನಮಶೇಷಂ ಬೇರಿಂ-
ಬವೊಲನಿಶಂ ತೋರಲಾರ್ಪ ವಾಣಿಗೆ ವಿಜಯಂ ॥

ಇಲ್ಲಿ ಉತ್ಪ್ರೇಕ್ಷೆಯಿಂದ 'ಚಮತ್ಕಾರೈಕಕಾರಣವೂ ಹೊಸಹೊಸದೂ ಆದ ಜಗತ್ತನ್ನು ಉಪಾದಾನವಿಲ್ಲದೆಯೇ ವಾಣಿ ನಿರ್ಮಿಸುತ್ತಾಳೆ' ಎಂಬ ವ್ಯತಿರೇಕಾಲಂಕಾರ ವ್ಯಂಗ್ಯ. ಮೇಲಿನ ನಾಲ್ಕು ಉದಾಹರಣೆಗಳಲ್ಲೂ ವ್ಯಂಜಕವು ಕವಿಯ ಕಲ್ಪನೆಯಲ್ಲಿ (ಪ್ರೌಢೋಕ್ತಿಯಲ್ಲಿ) ಮಾತ್ರ ಸಿದ್ಧವಾದುದು.

೯. ಜೇ ಲಂಕಾಗಿರಿಮೇಹಲಾಸು ಖಲಿಆ ಸಂಭೋಅಖಿಣ್ಣೋರಈ
ಫಾರುಪ್ಫುಲ್ಲಫಣಾವಲೀಕವಲಣೇ ಪತ್ತಾ ದರಿದ್ರತ್ತಣಮ್ ।
ತೇ ಏಣ್ಹಿಂ ಮಲಆಣಿಲಾ ವಿರಹಿಣೀಣೀಸಾಸಸಂಪಕ್ಕಿಣೋ
ಜಾದಾ ಝತ್ತಿ ಸಿಸುತ್ತಣೇವಿ ಬಹಲಾ ತಾರುಣ್ಣಪುಣ್ಣಾ ವಿಅ ॥[118]

---

116 ರಭಸವೆಂದರೆ ವೇಗ ಮತ್ತು ಹರ್ಷ. 'ರಭಸೋ ವೇಗಹರ್ಷಯೋಃ'—ವಿಶ್ವಕೋಶ.

117 ಈ ಪದ್ಯವು ಭಾಸಮಹಾಕವಿಯದೆಂದು ನಾಯಣಾಚಾರ್ಯರ 'ಅಲಂಕಾರ ಮಹೋದಧಿ'ಯೆಂಬ ಗ್ರಂಥದಲ್ಲಿ ಬರೆದಿದೆ.

118 ರಾಜಶೇಖರಕೃತ ಕರ್ಪೂರಮಂಜರೀಸಟ್ಟಕದ ಪ್ರಥಮಾಂಕದಲ್ಲಿ ಬರುವ ಪದ್ಯ. ನಾಯಿಕೆಯ ಸಖಿ ಮಾಡುವ ವಸಂತವರ್ಣನೆಯಿದು.

ಆ ಅಲಂಕಾಗಿರಿಸಾನುವಲ್ಲೆಡಹುತುಂ ಸಂಭೋಗಖಿನ್ನೋರಗೀ-
ಸ್ಫಾರೋತ್ಫುಲ್ಲಫಣಾವಳೀಕವಳದಿಂ ಪ್ರಾಪ್ತಂ ದರಿದ್ರತ್ವಮಂ।
ಇಂತೀಗಳ್ ಮಳಯಾನಿಳಂ ವಿರಹಿಣೀನಿಶ್ವಾಸ ಸಂಪರ್ಕದಿಂ
ಜಾತಂ ಮತ್ತೆ ಮಹಾಧಿಕಂ ಶಿಶುವೆ ಮೇಣ್ ತಾರುಣ್ಯಪೂರ್ಣೋಪಮಂ ॥

ಇಲ್ಲಿ 'ನಿಶ್ವಾಸಗಳಿಂದ ಮೈದುಂಬಿದ ಮಲಯಾನಿಲವೇನನ್ನು ತಾನೆ ಮಾಡುವುದಿಲ್ಲ'ವೆಂಬ ವಸ್ತು ವರ್ಣಿತವಸ್ತುವಿನಿಂದ ವ್ಯಂಗ್ಯ.

೧೦. ಸಹಿ ವಿರಇಊಣ ಮಾಣಸ್ಸ ಮಜ್ಝ ಧೀರತ್ತಣೇಣ ಆಸಾಸಮ್ ।
ಪಿಅದಂಸಣವಿಹಲಂಖಲಖಣಮ್ಮಿ ಸಹಸತ್ತಿ ತೇಣ ಓಸರಿಅಮ್ ॥

ಕಡುಧೈರ್ಯದಿನಾಂ ಮಾನಂ-
ಬಿಡಿದಿರ್ದೆಂ ಸಖಿಯೆ ದುಷ್ಕರಂ ತಾನೆನೆಯುಂ।
ತಡೆಯದೆ ನೋಡೌ ಪರಿಮದು
ನಡೆ ರಮಣಂ ಕಾಣಲಂದು ತವಕದ ಚಣದೊಳ್ ॥

ಇಲ್ಲಿ ವಸ್ತುವಿನಿಂದ 'ಪ್ರಾರ್ಥನೆಯನ್ನು ಆತ ಮಾಡದಿದ್ದರೂ ಪ್ರಸನ್ನಳಾದೆ' ನೆಂಬ ವಿಭಾವನಾಲಂಕಾರ ಅಥವಾ 'ಪ್ರಿಯದರ್ಶನದ ಸೌಭಾಗ್ಯಬಲವು ಧೈರ್ಯದಿಂದಲೂ ಸಹಿಸಲಶಕ್ಯ'ವೆಂಬ ಉತ್ಪ್ರೇಕ್ಷಾಲಂಕಾರ ವ್ಯಂಗ್ಯ.

೧೧. ಓಲ್ಲೋಲ್ಲಕರಅರಅಣಕ್ಖಏಹಿಂ ತುಹ ಲೋಅಣೇಸು ಮಹ ದಿಣ್ಣಮ್ ।
ರತ್ತಂಸುಅಂ ಪಸಾಓ ಕೋವೇಣ ಪುಣೋ ಇಮೇ ಣ ಅಕ್ಕಮಿಆ ॥

ಕರಜರದನಕ್ಷತಂಗಳ್
ದೊರೆಕೊಂಡಿರೆ ಪಸಿಯುವಾಗಿ ನಿನ್ನಯ ಕಣ್ಣೊಳ್।
ವರರಕ್ತಾಂಶುಕಮೆನ್ನದು
ಕರಮಪ್ಪುದು ಮೆಚ್ಚು ಕುಪಿತಲಕ್ಷ್ಮಿಯುಗಂ ॥

ಇಲ್ಲಿ 'ಕುಪಿತಲೋಚನಗಳನ್ನೇಕೆ ತಳೆದಿರುವೆ' ಎಂಬ ಉತ್ತರಾಲಂಕಾರದಿಂದ 'ಆರ್ದ್ರನಖಕ್ಷತಗಳನ್ನು ಬಚ್ಚಿಡುತ್ತಿರುವುದಷ್ಟೇ ಅಲ್ಲ; ಅವಕ್ಕೆ ನಾನು ಪ್ರಸಾದಪಾತ್ರಳೂ ಆದೆ'ನೆಂಬ ವಸ್ತು ವ್ಯಂಗ್ಯ.

೧೨. ಮಹಿಲಾಸಹಸ್ಸಭರಿಏ ತುಹ ಹಿಅಏ ಸುಹಅ ಸಾ ಅಮಾಅನ್ತೀ ।
ಅನುದಿನಮಣಣ್ಣಕಮ್ಮಾ ಅಂಗಂ ತಣುಅಂ ವಿ ತಣುಏಇ ॥[119]

ವನಿತಾಸಹಸ್ರಮಯಮೆನೆ
ನಿನತೆರ್ದೆಯೊಳ್ ತಾಣಮಿಲ್ಲದಾಗಿರ್ಪುದರಿಂ-।
ದನುದಿನಮವಳುಂ ಸುಭಗನೆ
ತನು ಕೃಶಮೆನೆಯುಂ ಮಗುಳ್ದು ಸವೆಯಿಸುತಿರ್ಪಳ್ ॥

ಇಲ್ಲಿ ಕಾವ್ಯಲಿಂಗಾಲಂಕಾರದಿಂದ 'ಕೃಶಶರೀರವನ್ನು ಎಷ್ಟೆಷ್ಟು ಸವೆಸಿದರೂ ನಿನ್ನ ಹೃದಯದಲ್ಲಿ ಹಿಡಿಸಲಾರದಿದ್ದಾಳೆ' ಎಂಬ ವಿಶೇಷೋಕ್ತಿ ಅಲಂಕಾರ ವ್ಯಂಗ್ಯ. ಈ ಮೇಲಿನ ನಾಲ್ಕು ಉದಾಹರಣೆಗಳಲ್ಲೂ ಕವಿನಿಬದ್ಧ ಪ್ರೌಢೋಕ್ತಿಯಲ್ಲಿ ಮಾತ್ರ ಲಬ್ಧಸ್ವರೂಪವುಳ್ಳುದು ವ್ಯಂಜಕವಾಗಿದೆ. ಹೀಗೆ ಹನ್ನೆರಡು ಪ್ರಕಾರಗಳು.

ಶಬ್ದಾರ್ಥೋಭಯಭೂರೇಕಃ ॥ ೧೮c ॥

ಶಬ್ದಾರ್ಥೋಭಯಶಕ್ತಿಮೂಲವಾದ ಧ್ವನಿಯು ಒಂದೇ ಬಗೆಯಾಗಿರುತ್ತದೆ. ಉದಾಹರಣೆ :—

ಅತಂದ್ರಚಂದ್ರಾಭರಣಾ ಸಮುದ್ದೀಪಿತಮನ್ಮಥಾ ।
ತಾರಕಾತರಲಾ ಶ್ಯಾಮಾ ಸಾನಂದಂ ನ ಕರೋತಿ ಕಮ್ ॥

ಹೊಳೆವ ಚಂದ್ರನಿಂದ ಭೂಷಿತಳೂ, ಕಾಮೋದ್ದೀಪನಕಾರಿಣಿಯೂ, ತರಲ ನಕ್ಷತ್ರಶೋಭಿನಿಯೂ ಆದ ರಜನಿಯು ಯಾರನ್ನು ತಾನೆ ಆನಂದಗೊಳಿಸುವುದಿಲ್ಲ?

ಮತ್ತು

ಉತ್ಸಾಹಶಾಲಿನಿಯೂ, ಚಂದ್ರಾಕೃತಿಯ ತಿಲಕವನ್ನಿಟ್ಟವಳೂ, ತನ್ನ ಹರ್ಷದಿಂದ ಕಾಮವನ್ನು ಕೆರಳಿಸುವವಳೂ, ಚಂಚಲವಾದ ಕಣ್ಣಾಲಿಗಳುಳ್ಳವಳೂ ಆದ ಸುಂದರಿಯು ಯಾರನ್ನು ತಾನೆ ಆನಂದಗೊಳಿಸುವುದಿಲ್ಲ?
ಇಲ್ಲಿ ಉಪಮಾಲಂಕಾರ ವ್ಯಂಗ್ಯ.

ಭೇದಾ ಅಷ್ಟಾದಶಾಸ್ಯ ತತ್ ॥ ೧೮d ॥

ಹೀಗೆ ಇದರ ಭೇದಗಳು ಹದಿನೆಂಟು.

---

119 ಹಾಲ, ಗಾಥಾಸಪ್ತಶತಿ, iv.


ಇದರ ಎಂದರೆ ಧ್ವನಿಯ ಎಂದರ್ಥ.[120]

ರಸಾದೀನಾಮನಂತತ್ವಾತ್ ಭೇದ ಏಕೋ ಹಿ ಗಣ್ಯತೇ ॥ ೧೯*ab* ॥

ರಸಾದಿಗಳು ಅನಂತವಾದುದರಿಂದ ಅವುಗಳನ್ನು ಒಂದೇ ಭೇದವೆಂದು ಪರಿಗಣಿಸಲಾಗುತ್ತದೆ.

ಅನಂತವಾಗುವುದು ಹೇಗೆಂದರೆ—ಮೊದಲು ರಸಗಳು ಒಂಭತ್ತು; ಅವುಗಳಲ್ಲಿ ಶೃಂಗಾರವೊಂದರಲ್ಲೇ ಎರಡು ಭೇದಗಳಿವೆ:–(೧) ಸಂಭೋಗ ಮತ್ತು (೨) ವಿಪ್ರಲಂಭ. 'ಸಂಭೋಗ ಶೃಂಗಾರವೇ ಪರಸ್ಪರ ದರ್ಶನ, ಆಲಿಂಗನ, ಪರಿಚುಂಬನ, ಮುಂತಾದ ಭೇದಗಳನ್ನೂ ಕುಸುಮೋಚ್ಚಯ, ಜಲಕ್ರೀಡೆ, ಸೂರ್ಯಾಸ್ತ, ಚಂದ್ರೋದಯ, ವಸಂತಾದಿ ಷಡೃತುವರ್ಣನ, ಮೊದಲಾದ ಅನೇಕ (ಉದ್ದೀಪಕ) ಭೇದಗಳನ್ನೂ ಒಳಗೊಳ್ಳುತ್ತದೆ. ವಿಪ್ರಲಂಭದಲ್ಲಿಯೂ ಅಭಿಲಾಷೆಯೇ ಮುಂತಾದ ಪ್ರಭೇದಗಳನ್ನು

120 ಹೇಗೆಂದರೆ—



ನಿರೂಪಿಸಲಾಗಿದೆ. ಅಲ್ಲದೆ ಸಂಭೋಗ, ವಿಪ್ರಲಂಭಗಳೆರಡಕ್ಕೂ ಮತ್ತೆ ವಿಭಾವ, ಅನುಭಾವ, ವ್ಯಭಿಚಾರಿಗಳ ಮೂಲಕ ಬಗೆಬಗೆಯ ವೈಚಿತ್ರ್ಯವೊದಗುತ್ತದೆ; ಆ ಒಂದೊಂದು ಬಗೆಯಲ್ಲಿಯೂ ನಾಯಕ, ನಾಯಿಕೆಯರು ಉತ್ತಮ, ಅಧಮ, ಇಲ್ಲವೆ ಮಧ್ಯಮ ಪ್ರಕೃತಿಗಳಾಗಬಹುದು; ಈ ಪ್ರಭೇದಗಳಲ್ಲೂ ಮತ್ತೆ ದೇಶ, ಕಾಲ, ಅವಸ್ಥೆ, ಮೊದಲಾದುವುಗಳಿಂದ ಅವಾಂತರ ಭೇದಗಳುಂಟಾಗುತ್ತವೆ. ಹೀಗೆ ಒಂದೇ ಶೃಂಗಾರರಸದ ಎಲ್ಲ ಭೇದಗಳನ್ನೂ ಲೆಕ್ಕಮಾಡಿ ಮುಗಿಸುವುದು ದುಷ್ಕರವಾಗಿಬಿಡುವಾಗ, ಎಲ್ಲ ರಸಗಳ ಸಂಖ್ಯೆಯನ್ನೂ ಹೇಳುವುದು ಎಂತು? ಆದುದರಿಂದ ಈ ಅನಂತ ರಸಭೇದಗಳಿಗೆಲ್ಲ ಸಮಾನಧರ್ಮವಾದ ಅಸಂಲಕ್ಷ್ಯ ಕ್ರಮತ್ವವನ್ನಾಶ್ರಯಿಸಿ ರಸಾದಿಧ್ವನಿಯು ಒಂದೇ ಬಗೆಯೆಂದು ಪರಿಗಣಿಸಲಾಗಿದೆ.

ವಾಕ್ಯೇ ದ್ವ್ಯುತ್ಥಃ

ಎರಡರಿಂದಲೂ ಹುಟ್ಟುವ ಧ್ವನಿ ವಾಕ್ಯದಲ್ಲಿ ಮಾತ್ರ ಬರುತ್ತದೆ.

'ಎರಡರಿಂದಲೂ ಹುಟ್ಟುವ ಧ್ವನಿ' ಯೆಂದರೆ ಶಬ್ದಾರ್ಥೋಭಯಶಕ್ತಿ ಮೂಲವಾದ ಧ್ವನಿ.

ಪದೇಽಪ್ಯನ್ಯೇ ‖ ೧೯೮ ‖

ಉಳಿದ ಹದಿನೇಳು ಬಗೆಗಳು ಪದದಲ್ಲಿಯೂ ಬರುತ್ತವೆ. 'ಪದದಲ್ಲಿಯೂ' ಎನ್ನುವುದರಿಂದ, ವಾಕ್ಯದಲ್ಲಿಯೂ ಬರುವುವೆಂದಾಯಿತು. ಒಂದೇ ಅವಯುವದಲ್ಲಿರುವ ಆಭರಣದಿಂದಲೂ ಶೋಭಿಸುವ ಕಾಮಿನಿಯಂತೆ ಪದಪ್ರಕಾಶ್ಯವಾದ ವ್ಯಂಗ್ಯದಿಂದಲೂ ವಾಕ್ಯವ್ಯಂಗ್ಯವಾದ ವಾಣಿಯು ಶೋಭಿಸುತ್ತಾಳೆ. ಪದಪ್ರಕಾಶ್ಯವಾದ ವ್ಯಂಗ್ಯಕ್ಕೆ ಕ್ರಮವಾಗಿ ಉದಾಹರಣೆಗಳಿವು[121] :—

೧. ಯಸ್ಯ ಮಿತ್ರಾಣಿ ಮಿತ್ರಾಣಿ ಶತ್ರವಶ್ಶತ್ರವಸ್ತಥಾ।
ಅನುಕಂಪ್ಯೋಽನುಕಂಪ್ಯಶ್ಚ ಸ ಜಾತಃ ಸ ಚ ಜೀವತಿ ‖

ಮಿತ್ರರದಾವನ ಮಿತ್ರರ್
ಶತ್ರುಗಳುಂ ಶತ್ರುಜನರೆ ಮತ್ತಂ ನೋಡಲ್।
ಅನುಕಂಪ್ಯನೆ ಮೇಣನುಕಂ-
ಪ್ಯನವಂ ಗಡ ಜಾತನವನೆ ಜೀವಿಪನೆಂಬೆಂ ‖

---

121 ಇದೇ ಧ್ವನಿಪ್ರಭೇದಗಳಿಗೆ ಈಗಾಗಲೇ ಕೊಟ್ಟಿರುವ ಉದಾಹರಣೆಗಳು ವಾಕ್ಯಪ್ರಕಾಶ್ಯವೆಂದು ತಿಳಿಯಬೇಕು. ಮುಂದೆ ಬರೆಯುವ ಉದಾಹರಣೆಗಳೆಲ್ಲ ಪದಪ್ರಕಾಶ್ಯಗಳು ಮೇಲಿನ ಟಿಪ್ಪಣಿಯಲ್ಲಿ ಕಾಣಿಸಿರುವ ಸಂಖ್ಯಾನುಕ್ರಮದಲ್ಲಿಯೇ ಈ ಉದಾಹರಣೆಗಳನ್ನು ಕೊಡಲಾಗಿದೆ.

ಇಲ್ಲಿ ಎರಡನೆಯ 'ಮಿತ್ರ', 'ಶತ್ರು' 'ಅನುಕಂಪ್ಯ', ಶಬ್ದಗಳು ಕ್ರಮವಾಗಿ ವಿಶ್ವಾಸಪಾತ್ರತ್ವ, ನಿಗ್ರಹಯೋಗ್ಯತ್ವ ಮತ್ತು ಸ್ನೇಹಪಾತ್ರತ್ವ, ಗುಣಗಳುಳ್ಳ ಅರ್ಥಾಂತರಗಳಲ್ಲಿ ಸಂಕ್ರಮಿತವಾಚ್ಯ (=ಪರ್ಯವಸನ್ನಾರ್ಥ) ಗಳಾಗಿವೆ.

೨. ಖಲವ್ಯವಹಾರಾ ದೀಸನ್ತಿ ದಾರುಣಾ ಜಹವಿ ತಹವಿ ಧೀರಾಣಮ್ ।
ಹಿಅಅವಅಸ್ಸಬಹುಮಆ ಣ ಹು ವವಸಾಅ ವಿಮುಜ್ಝನ್ತಿ ॥

ಖಳರಾಚಾರಂ ಕ್ರೂರಂ
ಗಡಮೆಂದೊಡಮುತ್ತಮಾತ್ಮರಪ್ಪರ ಚರಿತಂ ।
ಹೃದಯವಯಸ್ಯಾನುಮತಂ
ಸುದೃಢಂ ಮತಿಗೆಟ್ಟುಪೋಗದೆಂಬುದು ಸಹಜಂ ॥

ಇಲ್ಲಿ 'ಮತಿಗೆಟ್ಟುಪೋಗದು' ಎಂಬುದು.

೩. (*a*) ಲಾವಣ್ಯಂ ತದಸೌ ಕಾಂತಿಸ್ತದ್ರೂಪಂ ಸ ವಚಃಕ್ರಮಃ ।
ತದಾ ಸುಧಾಸ್ಪದಮಭೂದಧುನಾ ತು ಜ್ವರೋಪಮಮ್ ॥

ಆ ಲಾವಣ್ಯಂ ಮೇಣಾ
ಕಾಂತಿಯುಮಾ ವಾಗ್ವಿಲಾಸಮೆಲ್ಲಮುಮಾಗಳ್ ।
ತಾನಮೃತೋಪಮಮಾದುದು
ಜಾನಿಸೆ ಮೇಣೀಗಳೆಲ್ಲಮುಂ ಜ್ವರಸದೃಶಂ ॥

ಇಲ್ಲಿ 'ಆ' ಮೊದಲಾದ ಪದಗಳು ಅನುಭವೈಕವೇದ್ಯವಾದ ಅರ್ಥಗಳನ್ನು ಸೂಚಿಸುತ್ತವೆ. ಅಥವಾ—

೩. (*b*) ಮುಗ್ಧೇ ಮುಗ್ಧತಯೈವ ನೇತುಮಖಿಲಃ ಕಾಲಃ ಕಿಮಾರಭ್ಯತೇ
ಮಾನಂ ಧತ್ಸ್ವ ಧೃತಿಂ ಬಧಾನ ಋಜುತಾಂ ದೂರೇ ಕುರು ಪ್ರೇಯಸಿ ।
ಸಖ್ಯೈವಂ ಪ್ರತಿಬೋಧಿತಾ ಪ್ರತಿವಚಸ್ತಾಮಾಹ ಭೀತಾನನಾ
ನೀಚೈಶ್ಶಂಸ ಹೃದಿ ಸ್ಥಿತೋ ಹಿ ನನು ಮೇ ಪ್ರಾಣೇಶ್ವರಃ ಶ್ರೋಷ್ಯತಿ ॥[122]

[122] ಅಮರುಶತಕ.

ಕೆಳದೀ ನೂಂಕುವೆಯೇನಣಂ ಸಮಯಮಂ ನೀನಿಂತು ಮುಗ್ಧತ್ವದೊಳ್
ತಳೆಯೌ ಮಾಸಮನಪ್ಪುಕಯ್ ಧೃತಿಯುಮಂ ಮುಗ್ಧತ್ವಮಂ ಬಿಟ್ಟಿತಾ|
ಪತಿಯೊಳ್ ಮೇಣೆನೆ ದೂತಿ ಮಾರ್ನುಡಿದಳಾ ಭೀತಾಸ್ಯೆಯಿಂತೀ ತೆರಂ—
'ಸುಡಿ ನೀಂ ಮಲ್ಲನೆಯೆನ್ನ ಹೃದ್ಗತನಿವಂ ಪ್ರಾಣೇಶ್ವರಂ ಕೇಳ್ದಪಂ' ‖

ಇಲ್ಲಿ 'ಭೀತಾಸ್ಯೆ'ಯೆಂಬ ಪದ. ಇದರಿಂದ ಮೆಲ್ಲನೆ ಹೇಳುವುದರ ಯುಕ್ತತೆ ಸೂಚಿತವಾಗುತ್ತದೆ. ಭಾವಾದಿಗಳು ಪದಪ್ರಕಾಶ್ಯವಾದಾಗ ಹೆಚ್ಚಿನ ಸೌಂದರ್ಯ ವಿರದ ಕಾರಣ ಅವನ್ನು ಉದಾಹರಿಸಿಲ್ಲ.

೪. ರುಧಿರವಿಸರಪ್ರಸಾಧಿತಕರವಾಲಕರಾಲರುಚಿರಭುಜಪರಿಘಃ|
ಝಟಿತಿ ಭ್ರುಕುಟಿವಿಟಂಕಿತಲಲಾಟಪಟ್ಟೋ ವಿಭಾಸಿ ನೃಪ ಭೀಮ ‖

ಉರುರುಧಿರವಿಸರಶೋಭಿತ
ಕರಾಲಕರವಾಲರುಚಿರಗುರುಭುಜಪರಿಘಂ|
ಭರದಿಂ ಭ್ರುಕುಟಿವಿಟಂಕಿತ
ವರಭಾಲಂ ನೀನೆ ಭೀಮಸೆಂಬೆಂ ನೃಪನೇ ‖

ಇಲ್ಲಿ ಭೀಷಣನಾದ ಪ್ರಕೃತ ರಾಜನಿಗೆ ಭೀಮಸೇನನು ಉಪಮಾನ.

೫. ಭುಕ್ತಿಮುಕ್ತಿಕೃದೇಕಾಂತಸಮಾದೇಶನತತ್ಪರಃ|
ಕಸ್ಯ ನಾನಂದನಿಸ್ಯನ್ದಂ ವಿದಧಾತಿ ಸದಾಗಮಃ ‖

ಭುಕ್ತಿಯೊಳಂ ಮುಕ್ತಿಯೊಳಂ
ಏಕಾಂತಸಮೋಪದೇಶ ತತ್ಪರಮಪ್ಪಾ|
ಮಹದಾಗಮಮೆಂಬುದು ಮೇಣ್
ಮಹದಾನಂದಾನುಭೂತಿಯಂ ಬಳೆಯಿಸುಗುಂ ‖

ಇಲ್ಲಿ ನಾಯಿಕೆಯೊಬ್ಬಳು ಸಂಕೇತನಿರ್ದೇಶಮಾಡುವ ಉಪಪತಿಗೆ ಹೀಗೆ ಪದಗಳು ನೇರವಾಗಿಯೇ ಅನ್ವಯಿಸುವಂತೆ ಆಡುತ್ತಾಳೆ.

೬. ಸಾಯಂ ಸ್ನಾನಮುಪಾಸಿತಂ ಮಲಯಜೇನಾಂಗಂ ಸಮಾಲೇಪಿತಂ
ಯಾತೋಽಸ್ತಾಚಲಮೌಲಿಮಂಬರಮಣಿರ್ವಿಸ್ರಬ್ಧಮತ್ರಾಗತಿಃ|
ಆಶ್ಚರ್ಯಂ ತವ ಸೌಕುಮಾರ್ಯಮಭಿತಃ ಕ್ಲಾಂತಾಸಿ ಯೇನಾಧುನಾ
ನೇತ್ರದ್ವಂದ್ವನಿಮೀಲನವ್ಯತಿಕರಂ ಶಕ್ನೋತಿ ತೇ ನಾಸಿತುಮ್ ‖

ಸ್ನಾನಂ ಸಂಜೆಯೊಳಂಗರಾಗರಚಿತಂ ಗಾಢಾಂಗಲೇಪಂ ವಲಂ
ತಾನಸನ್ನಾತಜಲಮೈದಿದಂ ದಿನಪನುಂ; ನಿನ್ನಾಗಮಂ ಧೈರ್ಯದಿಂ।
ದಾಶ್ಚರ್ಯಂ ಗಡ ಸೌಕುಮಾರ್ಯಮತುಲಾಯಾಸಂಬಡುತ್ತಿರ್ಪುದೇಂ
ನೇತ್ರದ್ವಂದ್ವಮಿದೀಗ ಮುಚ್ಚದೆ ಸಮಂತೆಂತುಂ ನಿಲಲ್ಕಾರದೌ ॥

ಇಲ್ಲಿ ವರ್ಣಿತವಸ್ತುವಿನಿಂದ 'ಪರಪುರುಷನ ಸಹವಾಸದಲ್ಲಿ ಆಯಾಸಪಟ್ಟಿರುವೆ' ಯೆಂಬ ವಸ್ತುವು 'ಇದೀಗ' ಎಂಬ ಪದದ ಮೂಲಕ ಸೂಚಿತವಾಗಿದೆ.

೭. ತದಪ್ರಾಪ್ತಿಮಹಾದುಃಖವಿಲೀನಾಶೇಷಪಾತಕಾ।
ತಚ್ಚಿಂತಾವಿಪುಲಾಹ್ಲಾದಕ್ಷೀಣಪುಣ್ಯಚಯಾ ತಥಾ ॥
ಚಿಂತಯನ್ತೀ ಜಗತ್ಸೂತಿಂ ಪರಬ್ರಹ್ಮಸ್ವರೂಪಿಣಮ್।
ನಿರುಚ್ಛ್ವಾಸತಯಾ ಮುಕ್ತಿಂ ಗತಾನ್ಯಾ ಗೋಪಕನ್ಯಕಾ ॥[123]

ಆತನ ವಿಯೋಗಮೆಂಬಾ
ಸಂತತಬಹುದುಃಖದಿಂದೆ ಪರಿಯಲಶೇಷಂ।
ಪಾತಕಮಾ ಸುಕೃತಚಯಂ
ಆತನ ಚಿಂತಾಭಿಜಾತಹರ್ಷದಿನಳಿಯಲ್ ॥

ಚಿಂತಿಸುತುಂ ಜಗದೀಶನ
ನಂತಾ ಪರಮಾತ್ಮರೂಪನಂ ಗೋಪಿಕೆಯುಂ।
ಅಂತ್ಯದೊಳುಸಿರಳಿಯಲ್ ತಾಂ
ಸಂತಾಪವಿದೂರಮುಕ್ತಿಯಂ ಮೇಣ್ ಪಡೆದಳ್ ॥

ಇಲ್ಲಿ 'ಜನ್ಮಸಹಸ್ರಗಳಲ್ಲಿ ಅನುಭೋಗಿಸಬೇಕಾದಂತಹ ದುಷ್ಕೃತಸುಕೃತ ಫಲಗಳೆಲ್ಲ ವಿಯೋಗದುಃಖ ಮತ್ತು ಚಿಂತಾಹ್ಲಾದಗಳ ಮೂಲಕ ಅನುಭವಿಸಿ ಮುಗಿದುವು' ಎಂದಿದೆ. ಏವಂಚ, 'ಅಶೇಷ', 'ಚಯ' ಈ ಎರಡು ಪದಗಳ ಮೂಲಕ ಎರಡು ಅತಿಶಯೋಕ್ತಿಗಳು ವ್ಯಂಗ್ಯ.

೮. ಕ್ಷಣದಾಸಾವಕ್ಷಣದಾ ವನಮವನಂ ವ್ಯಸನಮವ್ಯಸನಮ್।
ಬತ ವೀರ ತವ ದ್ವಿಷತಾಂ ಪರಾಙ್ಮುಖೇ ತ್ವಯಿ ಪರಾಙ್ಮುಖಂ ಸರ್ವಮ್ ॥

123 ಈ ಎರಡು ಪದ್ಯಗಳೂ ವಿಷ್ಣುಪುರಾಣದಲ್ಲಿ ಬರುತ್ತವೆ.

ಎಲೈ ವೀರನೇ! ನೀನು ಪ್ರತಿಕೂಲನಾದೊಡನೆ ನಿನ್ನ ಶತ್ರುಗಳಿಗೆ ಸರ್ವವೂ ವಿಪರೀತವೇ ಆಗುತ್ತಿದೆ: ಕ್ಷಣದೆ (=ರಾತ್ರಿ)ಯು ಅಕ್ಷಣದೆ (ರಾತ್ರಿಯಲ್ಲ; ಮತ್ತು ಉತ್ಸವದಾಯಿನಿಯಲ್ಲ); ವನವು (=ಅರಣ್ಯ) ಅವನ (=ಅರಣ್ಯವಲ್ಲದ್ದು ಮತ್ತು ರಕ್ಷಣೆ); ವ್ಯಸನವೇ (=ಮನೋರಂಜಕ ಕಾರ್ಯ) ಅವ್ಯಸನ (ವ್ಯಸನವಲ್ಲದ್ದು ಮತ್ತು ಕುರಿಕಾಯುವುದು).

ಇಲ್ಲಿ ಶಬ್ದ ಶಕ್ತಿಮೂಲವಾದ ವಿರೋಧಾಲಂಕಾರಕ್ಕೆ ಅಂಗವಾಗಿರುವ ಅರ್ಥಾಂತರ ನ್ಯಾಸಾಲಂಕಾರದಿಂದ 'ವಿಧಿಯೂ ನಿನ್ನನ್ನೇ ಅನುಸರಿಸುತ್ತದೆ' ಎಂಬ ವಸ್ತು 'ಸರ್ವ' ಎಂಬ ಪದದ ಮೂಲಕ ವ್ಯಂಗ್ಯ.

೯. ತುಹ ವಲ್ಲಹಸ್ಸ ಗೋಸಮ್ಮಿ ಆಸಿ ಅಹರೋ ಮಿಲಾಣಕಮಲದಲೋ ।
ಇಅ ಣವವಹುಆ ಸೋಊಣ ಕುಣಇ ವಅಣಂ ಮಹೀಸಮುಹಮ್ ॥

ನಿನ್ನಿನಿಯನ ತುಟಿ ಪಗಲೊಳ್
ಕಣ್ಗೆಸೆದುದು ಬಾಡಿಪೋದ ಪದುಮದ ತೆರದಿಂ-।
ದೆನ್ನಲ್ಕಾಲಿಸಿ ನವವಧು
ತನ್ನಾನನಮಂ ಸಮಂತು ಕೆಳಗಾಗಿಸಿದಳ್ ॥

ಇಲ್ಲಿ ರೂಪಕಾಲಂಕಾರದಿಂದ 'ನೀನವನನ್ನು ಮತ್ತೆ ಮತ್ತೆ ಚುಂಬಿಸಿದುದರ ಫಲವಾಗಿಯೇ ಅವನ ತುಟಿ ಬಾಡಿತು' ಎಂಬ ಕಾವ್ಯಲಿಂಗಾಲಂಕಾರವು 'ಬಾಡಿಪೋದ' ಎಂಬ ಪದದ ಮೂಲಕ ಧ್ವನಿತವಾಗಿದೆ. ಈ ಮೇಲಿನ ನಾಲ್ಕು ಉದಾಹರಣೆಗಳಲ್ಲಿಯೂ (೬-೯) ವ್ಯಂಜಕವು 'ಸ್ವತಃ ಸಂಭವಿ'.

೧೦. ರಾಈಸು ಚಂದಧವಲಾಸು ಲಲಿಅಮಪ್ಫಾಲಿಊಣ ಜೋ ಚಾವಮ್ ।
ಏಕಚ್ಛತ್ತಂ ವಿಅ ಕುಣಇ ಭುಅಣರಜ್ಜಂ ವಿಜಂಭಂತೋ ॥

ಶಶಿಧವಳಂಗಳೆನಿಪ್ಪಾ
ನಿಶಿಗಳೊಳಾವಂ ಸುಚಾಪಟಂಕೃತಿಯಿಂದಂ ।
ತ್ರಿಭುವನರಾಜ್ಯಮನೆಲ್ಲಂ
ಬಸಗೈಯುವನೇಕ ಛತ್ರದಡಿಯೊಳ್ ಭೂಪಂ ॥

ಇಲ್ಲಿ ವಸ್ತುವಿನಿಂದ 'ಕಾಮಿಗಳಿಗೆ ರಾಜನೇ ಕಾಮ; ಅವನ ಆಜ್ಞೆಯನ್ನು ಮೀರಲು ಅವರಿಗೆ ಧೈರ್ಯವಿಲ್ಲ; ಆದ್ದರಿಂದಲೇ ಎಚ್ಚರವಾಗಿದ್ದು ಕಾಮಕ್ರೀಡೆ

ಗಳಲ್ಲಿಯೇ ರಾತ್ರಿಯನ್ನೆಲ್ಲ ಕಳೆಯುತ್ತಾರೆ' ಎಂಬ ವಸ್ತು 'ತ್ರಿಭುವನ ರಾಜ್ಯ' ಎಂಬ ಪದದ ಮೂಲಕ ಸೂಚಿತವಾಗಿದೆ.

೧೧. ನಿಶಿತಶರಧಿಯಾಽರ್ಪಯತ್ಯನಂಗೋ
ದೃಶಿ ಸುದೃಶಃ ಸ್ವಬಲಂ ವಯಸ್ಯರಾಲೇ।
ದಿಶಿ ನಿಪತತಿ ಯತ್ರ ಸಾ ಚ ತತ್ರ
ವ್ಯತಿಕರಮೇತ್ಯ ಸಮುನ್ಮಿಷನ್ತ್ಯವಸ್ಥಾಃ ॥

ತನ್ನಯ ಬಲಮಂ ಕಾಮಂ
ಕನ್ನೆಯರಾ ಕಣ್ಣೊಳೀವನಂಬಿದೆಯೆಸುತುಂ।
ಎತ್ತಲ್ ಮೇಣದು ಪರಿವುದೊ
ಅತ್ತಲ್ ಬಳಿಸಾರ್ವುವಲ್ತೆ ಮಿಶ್ರವಿಕಾರಂ ॥

ಇಲ್ಲಿ ವಸ್ತುವಿನಿಂದ 'ಏಕಕಾಲದಲ್ಲಿ ಪರಸ್ಪರ ವಿರುದ್ಧವಾದ ಅವಸ್ಥೆಗಳು ಕೂಡ ಉಂಟಾಗುತ್ತವೆ' ಎಂಬ ವಿರೋಧಾಲಂಕಾರವು ವ್ಯತಿಕರ (= ಮಿಶ್ರ)ವೆಂಬ ಪದದ ಮೂಲಕ ಧ್ವನಿತವಾಗಿದೆ.

೧೨. ವಾರಿಜ್ಜನ್ತೋ ವಿ ಪುಣೋ ಸಂದಾವಕದತ್ಥಿಏಣ ಹಿಅಏಣ।
ಥಣಹರವಅಸ್ಸಏಣ ವಿಸುದ್ಧಜಾಈ ಣ ಚಲಇ ಸೇ ಹಾರೋ ॥

ಭಾರಿಸೆ ಪೀಡಿತಹೃದಯಂ
ಹಾರಮನದು ಶುದ್ಧಜಾತಿಯಪ್ಪುದರಿಂದಾ-।
ಧಾರಮನಲಗದು ಸುಸ್ತನ-
ಭಾರಂ ವರಮಿತ್ರನೆಂದು ಕಾಯುವ ತೆರದಿಂ ॥

ಇಲ್ಲಿ 'ವಿಶುದ್ಧ ಜಾತಿ'ಯುದೆಂಬ ಕಾವ್ಯಲಿಂಗಾಲಂಕಾರದಿಂದ 'ಹಾರವು ಸದಾಕಾಲವೂ ಕಂಪಿಸುತ್ತಲೇ ಇದೆ'ಯೆಂಬ ವಸ್ತು 'ಅಗಲದು' ಎಂಬ ಪದದ ಮೂಲಕ ವ್ಯಂಗ್ಯ.

೧೩. ಸೋ ಮುದ್ಧಸಾಮಲಂಗೋ ಧಮ್ಮಿಲ್ಲೋ ಕಲಿಅಲಲಿಅಣಿಅದೇಹೋ।
ತೀಏ ಖಂಧಾಹಿ ಬಲಂ ಗಹಿಅ ಸರೋ ಸುರಅಸಂಗರೇ ಜಅಇ ॥

ಸುರುಚಿರ ಶಾಮಲವರ್ಣಂ
ಸೋರ್ಮುಡಿಯಿದು ಕಲಿತಲಲಿತಕೋಮಲ ದೇಹಂ।

ಮನ್ಮಥನೆನಲವಳಾ ಸ್ಕಂ-
ಧದೆ ಬಲಮಂ ಕೊಂಡು ಗೆಲ್ವುದಂಗಚರಣದೊಳ್ ||

ಇಲ್ಲಿ (ಸೋರ್ಮುಡಿಯೇ ಮನ್ಮಥನೆಂಬ) ರೂಪಕಾಲಂಕಾರದಿಂದ 'ಮತ್ತೆ ಮತ್ತೆ ಎಳೆದುದರ ಫಲವಾಗಿ ಕೇಶಪಾಶವು ಹೆಗಲಮೇಲೆ ಯಾವ ರೀತಿ ಬಂದಿತೆಂದರೆ, ರತಿಕ್ರೀಡೆಯು ತೀರಿದರೂ ಕಾಮುಕನ ಅಭಿಲಾಷೆ ತೀರಲೇ ಇಲ್ಲ' ಎಂಬ ವಿಭಾವನಾಲಂಕಾರವು 'ಸ್ಕಂಧ'ವೆಂಬ ಪದದ ಮೂಲಕ ವ್ಯಂಗ್ಯ. ಈ ಉದಾಹರಣೆಗಳಲ್ಲಿ (೧೦-೧೩) ವ್ಯಂಜಕ ಸ್ವರೂಪವು ಕವಿಪ್ರೌಢೋಕ್ತಿಯಿಂದ ಮಾತ್ರ ಸಿದ್ಧವಾದುದು.

೧೪. ಣವಪುಣ್ಣಿಮಾಮಿಅಂಕಸ್ಸ ಸುಹಅ ಕೋ ತ್ತಂ ಸಿ ಭಣಸು ಮಹ ಸಚ್ಚಮ್ |
ಕಾ ಸೋಹಗ್ಗಸಮಗ್ಗಾ ಪಓಸರಅಣಿ ವ್ವ ತುಹ ಅಜ್ಜ ||

ನವಪೂರ್ಣಿಮಾಶಶಾಂಕನ
ಸಹಯೋಗಂ ನಿನಗಿದೆಂತು ಪೇಳಯ್ ದಿಟಮಂ |
ಮತ್ತಂ ಪ್ರದೋಷರಾತ್ರಿಯು-
ಮೀಗಳ್ ನಿನಗಾವಳಪ್ಪಳಧಿಕಮನೋಜ್ಞಳ್ ||

ಇಲ್ಲಿ ವಸ್ತುವಿನಿಂದ 'ನನ್ನಲ್ಲಿ ಹೇಗೋ ಹಾಗೆ ಇನ್ನೊಬ್ಬಳಲ್ಲಿಯೂ ಮೊದಲು ನೀನು ಅನುರಕ್ತನಾಗಿದ್ದೆ, ಆದರೆ ಅನಂತರ ಅವಳ ಅನುರಾಗ ತಪ್ಪಿತು' ಎಂಬ ವಸ್ತು ಕ್ರಮವಾಗಿ 'ನವ . . .' ಇತ್ಯಾದಿ ಮತ್ತು 'ಪ್ರದೋಷ . . .' ಇತ್ಯಾದಿ ಪದಗಳ ಮೂಲಕ ವ್ಯಂಗ್ಯ.

೧೫. ಸಹಿ ಣವಣಿಹುವಣಸರಮರಮ್ಮಿ ಅಂಕವಾಲೀಸಹೀಎ ಣಿಬಿಡಾಏ |
ಹಾರೋ ಣಿವಾರಿಓ ವಿಅ ಉಚ್ಛೇರನ್ತೋ ತದೋ ಕಹಂ ರಮಿಅಮ್ ||

ಅಂಗಜರಣದೊಳ್ ನಿಬಿಡಾ
ಲಿಂಗನಸಖಿಯೊಡೆಯೆ ಹಾರಮಂ ಬಾಧಕಮಂ |
ಹಿಂಗದೆ ರತಮಂ ಕೆಳದಿಯೆ
ಸಂಗಡಿಸಲ್ ನೆರೆದೆಯೆಂತೊ ಪೇಳೊಂದಿನಿಸಂ ||

ಇಲ್ಲಿ ವಸ್ತುವಿನಿಂದ 'ಹಾರ ಹರಿದ ಮೇಲೆ ಅವಶ್ಯವಾಗಿಯೂ ಹೊಸಪರಿಯ ರತ ಸಾಗಿಯೇ ಇದ್ದಿರಬೇಕು; ಅದರ ಪರಿಯನ್ನು ವಿವರಿಸು' ಎಂಬ ವ್ಯತಿರೇಕಾಲಂಕಾರವು 'ಎಂತೋ' ಎಂಬ ಪದದ ಮೂಲಕ ಗಮ್ಯ.

೧೬. (*a*) ಪಪಿಸನ್ತೀ ಘರವಾರಂ ವಿವಲಿಅವಲಣಾ ವಿಲೋಇಊಣ ಪಹಮ್ ।
ಖಂಧೇ ಘೇತ್ತೂಣ ಘಡಂ ಹಾಹಾ ಣಟ್ಠೋತ್ತಿ ರುಅಸಿ ಸಹಿ ಕಿಂ ತಿ ॥

ಮನೆಬಾಗಿಲೊಳ್ಳೈತರುತಾ-
ನನಮಂ ತಿರುಪಲ್ಕೆ ಸಖಿಯೆ ಪಾಂಥಂ ಕಾಣಲ್ ।
ಪಿಡಿದಿರ್ದುಂ ಸ್ಕಂಧದೊಳೇ
ಕೊಡನೊಡೆದತ್ತಕಟಯೆಂದು ರೋದಿಪುದೇಕೌ ॥

ಇಲ್ಲಿ ಕಾವ್ಯಲಿಂಗಾಲಂಕಾರದಿಂದ 'ಸಂಕೇತಸ್ಥಾನಕ್ಕೆ ಹೊರಟಿರುವ ನಲ್ಲನನ್ನು ನೋಡಿ ಅಲ್ಲಿಗೆ ನೀನೂ ಹೊರಡಬಯಸುತ್ತಿರುವೆಯಾದರೆ, ಮತ್ತೊಂದು ಕೊಡವನ್ನು ತೆಗೆದುಕೊಂಡು ಹೋಗು' ಎಂಬ ವಸ್ತು 'ಏಕೌ' ಎಂಬ ಪದದ ಮೂಲಕ ವ್ಯಂಗ್ಯ. ಇದಕ್ಕೇ ಮತ್ತೊಂದು ಉದಾಹರಣೆ:—[124]

೧೬. (*b*) ವಿಹಲಂಖಲಂ ತುಮಂ ಸಹಿ ದಿಟ್ಠೂಣ ಕುಡೇಣ ತರಲತರದಿಟ್ಠಿಮ್ ।
ವಾರಪ್ಫಂಸಮಿಸೇಣ ಅಪ್ಪಾ ಗುರುಓತ್ತಿ ಪಾಡಿಅ ವಿಭಿಣ್ಣೋ ॥

ನಿನ್ನಾಯಾಸಮನಂತೆಯೆ
ನಿನ್ನಯ ತರಲೇಕ್ಷಣಂಗಳಂ ನೋಡುತ್ತುಂ ।
ಗುರುವಾದೀ ಕೊಡನೊಡೆದುದು
ಕೆಡೆಯುತ್ತುಂ ತಾನೆ ಬಾಗಿಲೊತ್ತಿದ ನೆವದಿಂ ॥

ಇಲ್ಲಿ 'ನದೀತೀರದ ಲತಾಕುಂಜದಲ್ಲಿ ಕೃತಸಂಕೇತನಾದ ವಿಟನು ಬಾರದೆ, ಕಡೆಗೆ ಮನೆ ಸೇರುವ ಸಮಯದಲ್ಲಿ ಬಂದುದನ್ನು ನೋಡಿದ ನೀನು ಮತ್ತೆ ನದೀ

[124] ಈ ಪದ್ಯದಲ್ಲಿ ಕಾವ್ಯಲಿಂಗವನ್ನು 'ಸ್ವತಃಸಂಭವಿ' ಯೆನ್ನಲೂ ಬರುವುದರಿಂದ ನಿಸ್ಸಂದಿಗ್ಧವಾಗಿ ಕವಿನಿಬದ್ಧಪ್ರೌಢೋಕ್ತಿಯ ಉದಾಹರಣೆಗಾಗಿ ಮತ್ತೊಂದನ್ನು ಬರೆದಿದ್ದಾನೆ.

ಗಮನಕ್ಕೆ ಅನುವಾಗಿ ಬಾಗಿಲು ತಾಗಿದ ನೆವದಿಂದ ಬೇಕೆಂದೇ ವ್ಯಾಕುಲಳಾಗಿ ಕೊಡವನ್ನು ಒಡೆದಿರುವೆಯೆಂಬುದನ್ನು ನಾನು ಬಲ್ಲೆ ; ನೀನೇಕೆ ನಂಬುವುದಿಲ್ಲ? ನಿನ್ನ ಇಷ್ಟಾನುಸಾರ ಹೋಗು ; ನಿನ್ನ ಅತ್ತೆಯೊಡನೆ ನಾನು ಎಲ್ಲವನ್ನೂ ಅನುಕೂಲವಾಗುವಂತೆ ಸಮರ್ಥಿಸಿ ಮಾತನಾಡುತ್ತೇನೆ' ಎಂಬ ವಸ್ತು 'ಬಾಗಿಲೊತ್ತಿದ ನೆವದಿಂ' ಎಂಬ ಅಪಹ್ನುತ್ಯಲಂಕಾರದಿಂದ ಗಮ್ಯ.

೧೭. ಜೋಹ್ನಾ ಇ ಮಹುರಸೇಣ ಅ ವಿಇಣ್ಣ ತಾರುಣ್ಣ ಉತ್ಸುಅಮಣಾ ಸಾ।
ಬುಡ್ಢಾ ವಿ ಣವೋಢವ್ವಿಅ ಪರವಹುಆ ಅಹಹ ಹರಇ ತುಹ
ಹಿಅಅಮ್ ॥

ಮಧುರಸದಿಂ ಚಂದ್ರಿಕೆಯಿಂ-
ದಧಿಗತತಾರುಣ್ಯಳಾಕೆ ಮುದಿಯಾಗಿರೆಯುಂ।
ಅಧಿಕಪ್ರೀತಿಕರಳ್ ಪರ-
ವಧುವೆಂದೇ ನಿನಗಮಿಂತು ನೂತನವಧುವೊಲ್ ॥

ಇಲ್ಲಿ ಕಾವ್ಯಲಿಂಗಾಲಂಕಾರದಿಂದ 'ನನ್ನನ್ನು ಕಡೆಗಣಿಸಿ ನೀನು ಮುದುಕಿಯಾದ ಪರವಧುವನ್ನು ಅಪೇಕ್ಷಿಸುವೆ, ನಿನ್ನ ವರ್ತನೆಯನ್ನು ಹೇಳಲಳವಲ್ಲ'ವೆಂಬ ಆಕ್ಷೇಪಾಲಂಕಾರವು 'ಪರವಧು'ವೆಂಬ ಪದದಿಂದ ವ್ಯಂಗ್ಯ.

ಈ ಮೇಲಿನ ಉದಾಹರಣೆಗಳಲ್ಲಿ (೧೪-೧೭) ವ್ಯಂಜಕವು ಕವಿನಿರ್ಮಿತ ಪಾತ್ರಗಳ ಪ್ರೌಢೋಕ್ತಿಯಲ್ಲಿ ಮಾತ್ರ ಸಿದ್ಧವಾದುದು. ವಾಕ್ಯಗಮ್ಯವಾದ ಧ್ವನಿಯನ್ನಾಗಲೇ ಉದಾಹರಿಸಲಾಗಿದೆ. ಶಬ್ದಾರ್ಥೋಭಯಶಕ್ತಿಮೂಲಧ್ವನಿಯು ಪದಪ್ರಕಾಶ್ಯವಲ್ಲವಾದಕಾರಣ ಒಟ್ಟು ಧ್ವನಿಭೇದಗಳು ಮೂವತ್ತೈದು.[125]

ಪ್ರಬಂಧೇಽಪ್ಯರ್ಥಶಕ್ತಿಭೂಃ ॥ ೧೯*d* ॥

ಅರ್ಥಶಕ್ತಿಮೂಲ ಧ್ವನಿಯು ಸಮಗ್ರಪ್ರಬಂಧದಲ್ಲಿಯೂ ವ್ಯಕ್ತವಾಗುವುದುಂಟು. ಉದಾಹರಣೆಗೆ ಗೃಧ್ರಗೋಮಾಯುಸಂವಾದವನ್ನು[126] ಹೇಳಬಹುದು :—

[125] ವಾಕ್ಯಪ್ರಕಾಶ್ಯವಾದ ಧ್ವನಿಪ್ರಕಾರಗಳು ೧೮ + ಪದಪ್ರಕಾಶ್ಯವಾದ ಪ್ರಕಾರಗಳು ೧೭ = ೩೫. ಅಡಿಟಿಪ್ಪಣಿ ೧೨೦ ರಲ್ಲಿ ತೋರಿಸಿದ ವಿಭಾಗವು ವ್ಯಂಗ್ಯದೃಷ್ಟಿಯಿಂದ; ಇಲ್ಲಿ ಹೇಳುವ ವಿಭಾಗದಲ್ಲಿ ವ್ಯಂಜಕದೃಷ್ಟಿಯೂ ಸೇರಿದೆ.

[126] ಮಹಾಭಾರತ, ಶಾಂತಿಪರ್ವ, ಅಧ್ಯಾಯ ೧೫೩.

ಅಲಂ ಸ್ಥಿತ್ವಾ ಶ್ಮಶಾನೇಽಸ್ಮಿನ್ ಗೃಧ್ರಗೋಮಾಯುಸಂಕುಲೇ ।
ಕಂಕಾಲಬಹಲೇ ಘೋರೇ ಸರ್ವಪ್ರಾಣಿಭಯಂಕರೇ ॥
ನ ಚೇಹ ಜೀವಿತಃ ಕಶ್ಚಿತ್ ಕಾಲಧರ್ಮಮುಪಾಗತಃ ।
ಪ್ರಿಯೋ ವಾ ಯದಿ ವಾ ದ್ವೇಷ್ಯಃ ಪ್ರಾಣಿನಾಂ ಗತಿರೀದೃಶೀ ॥

ಬಿಡಿಬಿಡಿರಿಂ ಸುಡುಗಾಡಂ
ಕಡುಭೀಕರಮಪ್ಪ ಗೃಧ್ರಗೋಮಾಯುಗಳಿಂ- ।
ದಿಡಿಕಿರಿದಿದೆ ಮೂಳೆಗಳಿಂ-
ದೊಡರಿಸುತುಂ ಸಕಲಜೀವಿಗಳ್ಗಂಜಿಕೆಯಂ ॥

ಕಾಲಂ ತೀರಿದ ಬಳಿಯುಂ
ಜೀವಂಬಿಡಿದಿರ್ಪನಿಲ್ಲ ನೋಡಲ್ಕೆಂದುಂ ।
ಪ್ರಿಯನಕ್ಕೆಮ ಪಗೆಯಕ್ಕೆಮ
ಲೋಕಸ್ಥಿತ ಜೀವಿಜಾತಕಿದೆ ಗತಿಯಲ್ತೇ ॥

ಹಗಲು ಸಾಮರ್ಥ್ಯವುಳ್ಳ ಹದ್ದು ಮೃತಪುರುಷನನ್ನು ಬೇಗ ಪರಿತ್ಯಜಿಸಬೇಕೆಂದು ಹೇಳುವ ವಾಕ್ಯವಿದು.

ಆದಿತ್ಯೋಽಯಂ ಸ್ಥಿತೋ ಮೂಢಾಃ ಸ್ನೇಹಂ ಕುರುತ ಸಾಂಪ್ರತಮ್ ।
ಬಹುವಿಘ್ನೋ ಮುಹೂರ್ತೋಽಯಂ ಜೀವೇದಪಿ ಕದಾಚನ ॥
ಅಮುಂ ಕನಕವರ್ಣಾಭಂ ಬಾಲಮಪ್ರಾಪ್ತಯೌವನಮ್ ।
ಗೃಧ್ರವಾಕ್ಯಾತ್ ಕಥಂ ಮೂಢಾಃ ತ್ಯಜಧ್ವಮವಿಶಂಕಿತಾಃ ॥

ರವಿಯಿದೊ ಪೊಳೆವಂ ಗಾಂಪರೆ
ತವೆ ನೇಹಂದೋರಿ ತಡೆವುದೈಸಲೆ ಯೋಗ್ಯಂ ।
ಬಹುವಿಘ್ನಕರಂ ಚಣಮಿದು
ಬದುಕಿದೊಡಂ ಬದುಕಲಕ್ಕುಮೆತ್ತಾನುಂ ತಾಂ ॥

ಇವನಂ ಸುವರ್ಣವರ್ಣನ-
ನಿವನಂ ಗಡ ಯೌವನಕ್ಕೆ ದಾಂಟದ ಮಗುವಂ ।
ಅವಿಶಂಕಿತರೆಂತೀಗಳ್
ತವೆ ತೊರೆವಿರಿ ಗೃಧ್ರದುಕ್ತಿಯಿಂ ಕಡುಮೂಢರ್ ॥

ರಾತ್ರಿ ಸಾಮರ್ಥ್ಯವೇರುವ ಸರಿ ಜನರನ್ನು ಕೂಡಲೇ ಹೋಗದಂತೆ ಆಗ್ರಹ ಮಾಡುವ ವಾಕ್ಯವಿದು. ಹೀಗೆ ಒಟ್ಟು ಪ್ರಬಂಧದಲ್ಲೇ ಧ್ವನಿಯಿದೆ. ಮಿಕ್ಕ ಹನ್ನೊಂದು ಭೇದಗಳನ್ನು ಗ್ರಂಥವಿಸ್ತಾರದ ಭೀತಿಯಿಂದ ಉದಾಹರಿಸಿಲ್ಲ.[127] ಲಕ್ಷಣಕ್ಕನುಗುಣವಾಗಿ ವಾಚಕರೇ ಊಹಿಸಿಕೊಳ್ಳುವುದು. ಕಾರಿಕೆಯಲ್ಲಿ 'ಅಪಿ' ಎಂದಿರುವುದಕ್ಕೆ ಪ್ರಬಂಧದಂತೆ ಪದ, ವಾಕ್ಯಗಳಲ್ಲಿಯೂ ಎಂದು ತಾತ್ಪರ್ಯ.

ಪದೈಕದೇಶರಚನಾವರ್ಣೇಷ್ವಪಿ ರಸಾದಯಃ ‖ ೨೦ab ‖

ಪದಾಂಶ, ರಚನೆ, ಅಕ್ಷರಗಳಲ್ಲಿಯೂ ರಸಾದಿಗಳು ವ್ಯಂಗ್ಯವಾಗುವುವು. ಪ್ರಕೃತಿಯಿಂದ ವ್ಯಂಗ್ಯವಾಗುವುದಕ್ಕೆ ಉದಾಹರಣೆ :—

ರಇಕೇಲಿಹಿಅಣಿಅಸಣಕರಕಿಸಲಅರುದ್ಧಣಅಣಜುಅಲಸ್ಸ ।
ರುದ್ದಸ್ಸ ತಇಅಣಅಣಂ ಪವ್ವಈಪರಿಚುಂಬಿಅಂ ಜಅಇ ‖[128]

ರತಿಕೇಲ್ಯಪಹೃತನಿವಸನ-
ಕರಕಿಸಲಯರುದ್ಧನಯನಯುಗಲನ ಶಿವನಾ |
ಮೂರನೆ ನಯನಂ ಮೆರೆವುದು
ಪಾರ್ವತಿ ಪರಿಚುಂಬಿಸಲ್ಕೆ ಸಂಗಮದೆಡೆಯೊಳ್ ‖

ಇಲ್ಲಿ 'ಮೆರೆವುದು' ಎಂದಿದೆಯೇ ಹೊರತು 'ಶೋಭಿಸುವುದು' ಎಂದಿಲ್ಲ. ಆದ್ದರಿಂದ ಎಲ್ಲ ಕಣ್ಣುಗಳನ್ನು ಮುಚ್ಚುವ ಕೆಲಸವೂ ಒಂದೇ ಆದರೂ, ಈ ಕಣ್ಣನ್ನು ಮುಚ್ಚುವುದು ಮಾತ್ರ ಲೋಕೋತ್ತರವಾದುದೆಂದೂ ಅತ ಏವ ಅದೇ ಉತ್ಕೃಷ್ಟವೆಂದೂ ಭಾಸವಾಗುತ್ತದೆ. ಇನ್ನೊಂದು ಉದಾಹರಣೆ :—

ಪ್ರೇಯಾನ್ ಸೋಽಯಮಪಾಕೃತಃ ಸಶಪಥಂ ಪಾದಾನತಃ ಕಾಂತಯಾ
ದ್ವಿತ್ರಾಣ್ಯೇವ ಪದಾನಿ ವಾಸಭವನಾದ್ಯಾವನ್ನ ಯಾತ್ಯುನ್ಮನಾಃ ।
ತಾವತ್ಪ್ರತ್ಯುತ ಪಾಣಿಸಂಪುಟಗಲನ್ನೀವೀನಿಬಂಧಂ ಧೃತೋ
ಧಾವಿತ್ವೇವ ಕೃತಪ್ರಣಾಮಕಮಹೋ ಪ್ರೇಮ್ಣೋ ವಿಚಿತ್ರಾ ಗತಿಃ ‖

[127] ಟಿಪ್ಪಣಿ ೧೨೦ ರಲ್ಲಿ ತೋರಿಸಿದಂತೆ ಒಟ್ಟು ಅರ್ಥಶಕ್ತಿಮೂಲಧ್ವನಿಯ ಬಗೆಗಳು ೧೨ ಒಂದರ ಪ್ರಬಂಧ ಪ್ರಕಾಶ್ಯತೆಯನ್ನು ಮಾತ್ರ ಇಲ್ಲಿ ತೋರಿಸಿದೆ.

[128] ಗಾಥಾಸಪ್ತಶತಿ, V, ೫೫.

ಪ್ರಿಯನಂ ಪಾದದೆ ಬಿಳ್ದನಂ ಶಪಥದಿಂ ನೂಂಕಿರ್ದಳಾ ಕಾಂತೆ ತಾ-
ನವನುಂ ವಾಸಗೃಹಂಬಿಡಲ್ಕಡಿಯಿಡಲ್ ದ್ವಿತ್ರಂಗಳಂ ಅಂತರೊಳ್ ।
ಭರದಿಂ ಧಾವಿಸಿ ಪಾಣಿಸಂಪುಟಲಸನ್ನೀವೀಭರಳ್ ಬಾರಿಪಳ್
ನಮನಂಗೈಯುತುಮೆನ್ನಲಿನ್ನು ಗತಿಯೇ ಚಿತ್ರಂ ಗಡಾ ಪ್ರೇಮದಾ ॥

ಇಲ್ಲಿ ಎರಡು ಮೂರು ಅಡಿಗಳನ್ನಿಟ್ಟನೆಂದಿದೆಯೇ ಹೊರತು, ಎರಡು ಮೂರು ಬಾಗಿಲುಗಳನ್ನು ದಾಟಿದನೆಂದಿಲ್ಲ.

ಕ್ರಿಯಾಪದ ಮತ್ತು ನಾಮಪದ ಪ್ರತ್ಯಯಗಳ ವ್ಯಂಜಕತ್ವಕ್ಕೆ ಉದಾಹರಣೆ :—

ಪಥಿ ಪಥಿ ಶುಕಚಂಚೂಚಾರುರಾಭಾಂಕುರಾಣಾಂ
ದಿಶಿ ದಿಶಿ ಪವಮಾನೋ ವೀರುಧಾಂ ಲಾಸಕಶ್ಚ ।
ನರಿ ನರಿ ಕಿರತಿ ದ್ರಾಕ್ ಸಾಯಕಾನ್ ಪುಷ್ಪಧನ್ವಾ
ಪುರಿ ಪುರಿ ವಿನಿವೃತ್ತಾ ಮಾನಿನೀಮಾನಚರ್ಚಾ ॥

ದಾರಿದಾರಿಗಳಲ್ಲಿ ಚಿಗುರ ಕಾಂತಿಯು ತಾನು
ಗಿಳಿಗಳಾ ಚಂಚುಗಳ ಬಣ್ಣ ಕೆಣೆಯು ।
ದಿಕ್ಕುದಿಕ್ಕುಗಳಲ್ಲಿ ತೀಡುತಿಹ ತೆಂಬೆಲರು
ಬಳ್ಳಿಗಳನೆಲ್ಲೆಡೆಗೆ ಕುಣಿಸುತಿಹುದು ॥
ಪುರುಷಪುರುಷರ ಮೇಲೆ ತಟ್ಟನೆಯೆ ಸುರಿಸುವನು
ಕಣೆಗಳನು ತಾನೆ ಕುಸುಮಶರನು ।
ಪುರಪುರದೆ ತೊಲಗಿತ್ತು ಮಾನಿನೀ ಜನರೊಳಗೆ
ಮಾನವಾರ್ತೆಯೆ, ನೋಡಿ ಸೋಜಿಗವನು ॥

ಇಲ್ಲಿ 'ಸುರಿಸುವನು' ಎಂಬಲ್ಲಿ ಕ್ರಿಯೆಯು ಇನ್ನೂ ಸಾಗುತ್ತಲೇ ಇದೆಯೆಂಬುದು, 'ತೊಲಗಿತ್ತು' ಎಂಬಲ್ಲಿ ತೊಲಗುವ ಕೆಲಸ ಮುಗಿದಿದೆಯೆಂಬುದೂ 'ಪ್ರತ್ಯಯ ಗಳಿಂದಲೇ ವ್ಯಂಗ್ಯ. ಸಂಸ್ಕೃತಮೂಲದಲ್ಲಿ ವಿನಿವೃತ್ತಾ (=ತೊಲಗಿತ್ತು) ಎಂಬಲ್ಲಿ ರುವ 'ಕ್ತ' ಪ್ರತ್ಯಯವು ಕೆಲಸ ಎಷ್ಟೋ ಹಿಂದೆಯೇ ಮುಗಿದಿದೆಯೆಂಬುದನ್ನೂ ಸೂಚಿಸುತ್ತದೆ.

ಇನ್ನೊಂದು ಉದಾಹರಣೆ :—

ಲಿಖನ್ನಾಸ್ತೇ ಭೂಮಿಂ ಬಹಿರವನತಃ ಪ್ರಾಣದಯಿತಃ
ನಿರಾಹಾರಾಃ ಸಖ್ಯಃ ಸತತರುದಿತೋಚ್ಛೂನನಯನಾಃ ।

ಪರಿತ್ಯಕ್ತಂ ಸರ್ವಂ ಹಸಿತಪಠಿತಂ ಪಂಜರಶುಕೈಃ,
ತವಾವಸ್ಥಾ ಚೇಯಂ, ವಿಸೃಜ ಕಠಿನೇ ಮಾನಮಧುನಾ ‖

ಪ್ರಾಣಕಾಂತನು ಹೊರಗೆ ತಲೆವಾಗಿ ನೆಲವನ್ನು
ಬರೆಯುತಿರುವನು ಕಾಲ ಬೆರಳಿನಿಂದ |
ತೊರೆಯುತಾಹಾರವನು ಸಖಿಯರಿರ್ಪರು ನೋಡು
ಅತ್ತತ್ತು ಊದಿರುವ ಕಣ್ಗಳಿಂದ |
ಹಾಸಪಾಠಾದಿಗಳನೆಲ್ಲ ನಿಲ್ಲಿಸಿ ತಾವು
ಪಂಜರದ ಗಿಳಿಗಳೂ ಸುಮ್ಮನಿಹವು |
ನಿನ್ನವಸ್ಥೆಯು ನೋಡಲಿಂತಾಗೆ ಕರ್ಕಶಳೆ
ಬಿಸುಡೀಗ ಕೋಪವನು ತಡಮಾಡದೆ ‖

ಇಲ್ಲಿ 'ಬರೆಯುತ್ತಾ' ಬಂದಿದೆ, 'ಬರೆವನು' ಎಂದಲ್ಲ; 'ಇರುವನು' ಎಂದಿದೆ, 'ಇದ್ದನು' ಎಂದಲ್ಲ, ಎಂದರೆ ಅವಳು ಪ್ರಸನ್ನಳಾಗುವ ವರೆಗೂ ಇರುವನೆಂದಾಯಿತು; 'ನೆಲವನ್ನು' ಎಂದಿದೆ, 'ನೆಲದಲ್ಲಿ' ಎಂದಲ್ಲ; ಬುದ್ಧಿಪೂರ್ವಕವಾಗಿ ಏನೊಂದನ್ನೂ ಬರೆಯುತ್ತಿಲ್ಲವೆಂದರ್ಥ, ಇದೆಲ್ಲವೂ ಕ್ರಿಯಾಪದ ಮತ್ತು ನಾಮ ಪ್ರತ್ಯಯಗಳಿಂದ ವ್ಯಂಗ್ಯ.

ಸಂಬಂಧದ ವ್ಯಂಜಕತ್ವಕ್ಕೆ ಉದಾಹರಣೆ:—

ಗಾಮಾರುಹಮ್ಮಿ ಗಾಮೇ ವಸಾಮಿ ಣಅರಟ್ಠಿಇಂ ಣ ಜಾಣಾಮಿ |
ಣಅರಿಆಣಂ ಪಇಣೋ ಹರೇಮಿ ಜಾ ಹೋಮಿ ಸಾ ಹೋಮಿ ‖

ಪಳ್ಳಿಯೊಳೇ ಪುಟ್ಟಿದೆನಾಂ
ಪಳ್ಳಿಯೆ ಮನೆಯೆನಗೆ ನಗರನೀತಿಯನರಿಯೆಂ |
ಒಳ್ಳಿಯ ನಗರಸ್ತ್ರೀಯರ
ವಲ್ಲಭರಂ ಸೆಳೆಯುವಾಕೆ ನಾನೇ ನಿರುತಂ ‖

ಇಲ್ಲಿ 'ನಗರಸ್ತ್ರೀಯರ' ಎಂಬ ಷಷ್ಠೀಪ್ರಯೋಗದಲ್ಲಿ ವ್ಯಂಜಕತ್ವವುಂಟು.

ರಮಣೀಯಃ ಕ್ಷತ್ರಿಯಕುಮಾರ ಆಸೀತ್[129]

[129] ಮಹಾವೀರಚರಿತನಾಟಕ II, ಪರಶುರಾಮನ ವಾಕ್ಯ.

'ಕ್ಷತ್ರಿಯ ಕುಮಾರನು ರಮಣೀಯನಾಗಿದ್ದನು (ಹಿಂದೆ)'—ಎಂಬಲ್ಲಿ ಕಾಲದ ವ್ಯಂಜಕತ್ವವನ್ನು ನೋಡಬಹುದು. ವಚನವ್ಯಂಜಕತ್ವಕ್ಕೆ ಉದಾಹರಣೆ:—

ತಾಣಁ ಗುಣಗ್ಗಹಣಾಣಂ ತಾಣುಕ್ಕಁಠಾಣಂ ತಸ್ಸ ಪೇಮ್ಮಸ್ಸ ।
ತಾಣಁ ಭಣಿಆಣಂ ಸುಂದರ ಏರಿಸಿಅಁ ಜಾಅಮುವಸಾಣಮ್ ॥

ಆದೊರೆ ಗುಣಪರತೆಗಳಿಂ
ಗಾದೊರೆಯುತ್ಕಂಠೆಗಳ್ಗೆ ಪ್ರೇಮಕ್ಕ ಮೇಣ್ ।
ಆದೊರೆ ವಚನಂಗಳ್ಗಂ
ಸುಂದರನೇ ಬಂದುದೆಂತು ಕಡೆಯೀ ಪರಿಯೊಳ್ ॥

ಇಲ್ಲಿ ಗುಣಪರತೆ ಮುಂತಾದುವು ಅನೇಕವೆಂಬುದೂ ಪ್ರೇಮವು ಒಂದೇ ಎಂಬುದೂ ವಚನದಿಂದ ವ್ಯಂಗ್ಯ. ಪುರುಷವ್ಯತ್ಯಯಕ್ಕೆ [130] ಉದಾಹರಣೆ:—

ರೇ ರೇ ಚಂಚಲಲೋಚನಾಂಚಿತರುಚೇ ಚೇತಃ ಪ್ರಮುಚ್ಯ ಸ್ಥಿರ-
ಪ್ರೇಮಾಣಂ ಮಹಿಮಾನಮೇಣನಯನಾಮಾಲೋಕ್ಯ ಕಿಂ ನೃತ್ಯಸಿ ।
ಕಿಂ ಮನ್ಯೇ ವಿಹರಿಷ್ಯಸೇ ಬತ ಹತಾಂ ಮುಂಚಾಂತರಾಶಾಮಿಮಾಮ್
ಏಷಾ ಕಂಠತಟೇ ಕೃತಾ ಖಲು ಶಿಲಾ ಸಂಸಾರವಾರಾಂನಿಧೌ ॥

ರೇ ರೇ ಮಾನಸ ಕಾಮಿನೀಪರವಶಾ, ಬೀಳ್ಕೊಟ್ಟು ನೀಂ ಶಾಶ್ವತ-
ಪ್ರೇಮೋಪಾಸನೆಯುಂ ಮೃಗಾಕ್ಷಿಯನಣಂ ನೋಡುತ್ತುಮೇಂ ನರ್ತಿಪಯ್ ।
ಕೂಟಂ ಮೇಣ್ ದೊರೆಕೊಳ್ವುದೆಂದರಿವೆಯೇಂ ಕೀಳಾಸೆಯುಂ ನಿಲ್ಲಿಸಯ್
ಸಂಸಾರಾಂಬುಧಿಯಲ್ಲಿ ಕಲ್ಲಿವಳೆ ಮೇಣ್ ಕಂಠಸ್ಥಮಪ್ಪಳ್ ದಿಟಂ ॥

ಇಲ್ಲಿ ಪ್ರಹಾಸ [131]ವ್ಯಂಗ್ಯ.

ಪೂರ್ವನಿಪಾತದ [132]ಭಾವವ್ಯಂಜಕತೆಗೆ ಉದಾಹರಣೆ:—

---

[130] ಇಲ್ಲಿ ತನ್ನನ್ನೇ ಮಧ್ಯಮಪುರುಷದಿಂದ ಸಂಬೋಧಿಸಿಕೊಳ್ಳಲಾಗಿದೆ.

[131] ತನ್ನ ಸ್ಥಿತಿಗೆ ತಾನೇ ನಗುವುದು.

[132] ಸಂಸ್ಕೃತದಲ್ಲಿ ದ್ವಂದ್ವಸಮಾಸಮಾಡುವಾಗ ಅಲ್ಪಾಕ್ಷರದ ಪದಗಳೇ ಪೂರ್ವಪದಸ್ಥಾನದಲ್ಲಿರಬೇಕೆಂಬುದು ನಿಯಮ. ಆದರೆ ಒಂದು ಪದಕ್ಕೆ ಹೆಚ್ಚಿನ ಪ್ರಾಧಾನ್ಯ ವಿವಕ್ಷಿತವಾದರೆ ಅದು ಬಹ್ವಕ್ಷರವಾದರೂ ಮೊದಲೇ ಬರಬಹುದೆಂದು ಅಪವಾದವಿದೆ.

ಯೇಷಾಂ ದೋರ್ಬಲಮೇವ, ದುರ್ಬಲತಯಾ ತೇ ಸಂಮತಾಃ, ತೈರಪಿ
ಪ್ರಾಯಃ ಕೇವಲನೀತಿರೀತಿಶರಣೈಃ ಕಾರ್ಯಂ ಕಿಮುರ್ವೀಶ್ವರೈಃ ।
ಯೇ ಕ್ಷ್ಮಾಶಕ್ರ ಪುನಃಪರಾಕ್ರಮನಯಸ್ವೀಕಾರಕಾಂತಕ್ರಮಾಃ,
ತೇ ಸ್ಯುರ್ನೈವ ಭವಾದೃಶಾಸ್ತ್ರಿಜಗತಿ ದ್ವಿತ್ರಾಃ ಪವಿತ್ರಾಃ ಪರಮ್ ॥

ಆರೊಳ್ ದೋರ್ಬಲಮೊಂದೆ, ದುರ್ಬಲರವರ್ ಪೃಥ್ವೀಶರಪ್ಪರ್ ಸಮಂ-
ತಾರೊಳ್ ಕೇವಲ ನೀತಿರೀತಿ ಶರಣಂ ಮೇಣಪ್ಪುದೇನನ್ನರಿಂ ।
ಆರ್ ಭೂಪಾಲ, ಮಹಾಪರಾಕ್ರಮನಯಸ್ವೀಕಾರಕಾಂತಕ್ರಮರ್
ಮೂಲೋಕಂಗಳೊಳಿಲ್ಲ ನಿನ್ನ ಸದೃಶರ್ ದ್ವಿತ್ರರ್ ಪವಿತ್ರರ್ ಗಡಾ ॥

ಇಲ್ಲಿ ಪರಾಕ್ರಮದ ಪ್ರಾಧಾನ್ಯವು ಗಮ್ಯ.[133]

ವಿಭಕ್ತಿವಿಶೇಷದ ವ್ಯಂಜಕತ್ವಕ್ಕೆ ಉದಾಹರಣೆ :—

ಪ್ರಧನಾಧ್ವನಿ ಧೀರಧನುರ್ಧ್ವನಿಭೃತಿ ವಿಧುರೈರಯೋಧಿ ತವ ದಿವಸಮ್ ।
ದಿವಸೇನ ತು ನರಪ ಭವಾನಯುದ್ಧ ವಿಧಿಸಿದ್ಧಸಾಧುವಾದಪದಮ್ ॥

ದಿನಮಂ ಯುದ್ಧಂಗೈಯುತೆ
ನಿನತರಿಗಳ್ ಕಳೆದರಂದು ಬಿಲ್ದನಿ ಮೊರೆಯಲ್ ।
ದಿನದಿಂ ಕಾದಿದೆ ನೀನುಂ
ಜನನಾಥನೆ ದೇವಸಿದ್ಧರುಂ ಪೊಗಳ್ವಿನೆಗಂ ॥

ಇಲ್ಲಿ 'ದಿನದಿಂ' ಎಂಬಲ್ಲಿ ಸಿದ್ಧಿಸೂಚಕವಾದ ತೃತೀಯೆಯು ಫಲಪ್ರಾಪ್ತಿಯನ್ನು ಧ್ವನಿಸುತ್ತದೆ.[134]

ಭೂಯೋ ಭೂಯಃ ಸವಿಧನಗರೀರಥ್ಯಯಾ ಪರ್ಯಟನ್ತಂ
ದೃಷ್ಟ್ವಾ ದೃಷ್ಟ್ವಾ ಭವನವಲಭೀತುಂಗವಾತಾಯನಸ್ಥಾ ।

---

133 ಉದಾಹರಣೆಯ 'ಪರಾಕ್ರಮನಯ' . . . ಎಂಬಲ್ಲಿ 'ಪರಾಕ್ರಮ' ಪದವನ್ನು ಪೂರ್ವಪದ ಮಾಡಿರುವುದರಿಂದ ವಿಶಿಷ್ಟ ಪ್ರಾಧಾನ್ಯ ಬಂದಿದೆ. ಇಲ್ಲದಿದ್ದರೆ 'ನಯಪರಾಕ್ರಮ' ವೆಂದೇ ಹೇಳಬೇಕಾಗಿತ್ತು.

134 ಇದು ಸಂಸ್ಕೃತ ವ್ಯಾಕರಣದ ನಿಯಮಾನುಸಾರ. 'ಅಪವರ್ಗೇ ತೃತೀಯಾ'—ಪಾಣಿನಿ II, iii. ೬.

ಸಾಕ್ಷಾತ್ಕಾಮಂ ನವಮಿವ ರತಿರ್ಮಾಲತೀ ಮಾಧವಂ ಯತ್
ಗಾಢೋತ್ಕಂಠಾಲುಲಿತಲುಲಿತೈರಂಗಕೈಸ್ತಾಮ್ಯತೀತಿ ‖[135]

ಮತ್ತಂ ಮತ್ತಂ ಕೆಲದ ನಗರೀಮಾರ್ಗಸಂಚಾರಿಯಂ ತಾಂ
ಕಂಡುಂ ಕಂಡುಂ ಭವನವಲಭೀತುಂಗವಾತಾಯನಸ್ಥಳ್ |
ಸಾಕ್ಷಾತ್ ಕಾಮಂ ನವನೆನೆ ರತಿವೋಲ್ ಕನ್ನೆಯುಂ ಕಾಂತನಂ ಮೇಣ್[136]
ಗಾಢೋತ್ಕಂಠಾವಶದೆ ಧರಿಪಳ್ ಅಂಗಕೋತ್ಪೀಡೆಯಂ ದಲ್ ‖[137]

ಇಲ್ಲಿ ('ಅಂಗಕ'ವೆಂಬ ಪದದಲ್ಲಿ) ಅನುಕಂಪಾರ್ಥದ 'ಕ' ಎಂಬ ತದ್ಧಿತ ಪ್ರತ್ಯಯವು ವ್ಯಂಜಕ.

ಪರಿಚ್ಛೇದಾತೀತಃ ಸಕಲವಚನಾನಾಮವಿಷಯಃ
ಪುನರ್ಜನ್ಮನ್ಯಸ್ಮಿನ್ ಅನುಭವಪಥಂ ಯೋ ನ ಗತವಾನ್ |
ವಿವೇಕಪ್ರಧ್ವಂಸಾದುಪಚಿತಮಹಾಮೋಹಗಹನೋ
ವಿಕಾರಃ ಕೋಽಪ್ಯಂತರ್ಜಡಯತಿ ಚ ತಾಪಂ ಚ ಕುರುತೇ ‖[138]

ಪರಿಚ್ಛೇದಾತೀತಂ ಸಕಲವಚನಂಗಳ್ಗವಿಷಯಂ
ಅದೆಂತುಂ ಮೇಣ್ ಬಾಳೊಳ್ ಅನುಭವಕಣಂ ಬಾರದನಿಶಂ |
ವಿವೇಕಪ್ರಧ್ವಂಸಂ ಜನಿಯಿಪ ಮಹಾಮೋಹಗಹನಂ
ವಿಕಾರಂ ಮೇಣಂತರ್ಜಡಕರಮಣಂ ಪೀಡನಕರಂ ‖[139]

ಇಲ್ಲಿ ('ಪ್ರಧ್ವಂಸ'ವೆಂಬ ಪದದಲ್ಲಿ) 'ಪ್ರ' ಎಂಬ ಉಪಸರ್ಗವು ವ್ಯಂಜಕ.

ಕೃತಂ ಚ ಗರ್ವಾಭಿಮುಖಂ ಮನಸ್ತ್ವಯಾ
ಕಿಮನ್ಯದೇವಂ ನಿಹತಾಶ್ಚ ನೋ ದ್ವಿಷಃ |
ತಮಾಂಸಿ ತಿಷ್ಠನ್ತಿ ಹಿ ತಾವದಂಶುಮಾನ್
ನ ಯಾವದಾಯಾತ್ಯುದಯಾದ್ರಿಮೌಲಿತಾಮ್ ‖

---

[135] ಮಾಲತೀಮಾಧವಪ್ರಕರಣ I, ಕಾಮಂದಕಿಯ ವಾಕ್ಯ.

[136] ಕನ್ನೆ—ಮಾಲತಿ ; ಕಾಂತ—ಮಾಧವ.

[137] ಮಂದಾಕ್ರಾಂತಾ ವೃತ್ತ.

[138] ಮಾಲತೀಮಾಧವಪ್ರಕರಣ I, ಮಕರಂದನನ್ನು ಕುರಿತು ಮಾಧವನ ವಾಕ್ಯ.

[139] ಶಿಖರಿಣೀವೃತ್ತ.

ಮನದೊಳ್ ಮೂಡಿರೆ ಗರ್ವಂ[140]
ನಿನಗಂ ನುಡಿಯಲ್ಕದೇಕೆ ಪಗೆಯುಂ ನಿಹತಂ|
ರವಿಯುದಯಾಚಲಶಿಖರಮ
ನಡರ್ವನ್ನಮೆ ನಿಲ್ವುದಲ್ತೆ ಸಂತಮಸಚಯಂ॥

ಇಲ್ಲಿ ತುಲ್ಯಯೋಗಿತಾಲಂಕಾರವನ್ನು ಧ್ವನಿಸುವ ನಿಪಾತ (ಕನ್ನಡ 'ಪಗೆಯುಂ' ಎಂಬಲ್ಲಿನ 'ಉಂ') ವ್ಯಂಜಕ.

ರಾಮೋಽಸೌ ಭುವನೇಷು ವಿಕ್ರಮಗುಣೈಃ ಪ್ರಾಪ್ತಃ ಪ್ರಸಿದ್ಧಿಂ ಪರಾಂ
ಅಸ್ಮದ್ಭಾಗ್ಯವಿಪರ್ಯಯಾದ್ಯದಿ ಪರಂ ದೇವೋ ನ ಜಾನಾತಿ ತಮ್ ।
ಬಂದೀವೈಷ ಯಶಾಂಸಿ ಗಾಯತಿ ಮರುದ್ಯಸ್ಯೈಕಬಾಣಾಹತಿ-
ಶ್ರೇಣೀಭೂತವಿಶಾಲತಾಲವಿವರೋದ್ಗೀರ್ಣೈಃ ಸ್ವರೈಃ ಸಪ್ತಭಿಃ ॥[141]

ಈ ರಾಮಂ ತ್ರಿಜಗಂಗಳೊಳ್ ಬಲಯುತಂ ತಾನೆಂದು ಕೊಂಡಾಡುವರ್
ದೌರ್ಭಾಗ್ಯಂ ನಮಗಿಂದು ತೀವಿ ತಿಳಿಯಲ್ಕಾರಯ್ ಮಹಾರಾಜನೇ |
ಬಾಣೈಕಾಹತಿಯಿಂದೆ ಬಿಳ್ದ ಮರನೇಳುಂ ಮೇಣ್ ಮಹಾರಂಧ್ರದಿಂ-
ದೇಳುಂ ಸುಸ್ವರದಿಂದೆ ವಾಯುವೊರೆವಂ ತತ್ಕೀರ್ತಿಯಂ ಬಂದಿವೋಲ್ ॥

ಇಲ್ಲಿ 'ಈ' ಎಂಬ ಸರ್ವನಾಮ, 'ತ್ರಿಜಂಗಗಳೊಳ್' ಎಂಬ ಪ್ರಾತಿಪದಿಕ, (ಮೂಲದ) 'ಗುಣೈಃ' ಎಂಬ ಬಹುವಚನ—ಎಲ್ಲವೂ ವ್ಯಂಜಕಗಳು. 'ದೌರ್ಭಾಗ್ಯ'ವು 'ನಿನ್ನದು' ಎಂದಾಗಲಿ 'ನನ್ನದು' ಎಂದಾಗಲಿ ಹೇಳದೆ 'ನಮ್ಮದು' ಎಂದು ಎಲ್ಲರನ್ನೂ ಕೂಡಿಸಿ ಹೇಳುವುದೂ ವ್ಯಂಜಕವಾಗಿದೆ. ಹಾಗೆಯೇ ಭಾಗ್ಯವಿಲ್ಲವೆನ್ನುವ ಬದಲು, ಅದರ ವಿಪರ್ಯಯವಾದ ದೌರ್ಭಾಗ್ಯವೇ ಒಂದಾಗಿದೆ ಯೆನ್ನುವುದಾದರೂ.

ತರುಣಿಮನಿ ಕಲಯತಿ ಕಲಾಮನುಮದನಧನುರ್ಭ್ರುವೋಃ ಪಠತ್ಯಗ್ರೇ ।
ಅಧಿವಸತಿ ಸಕಲಲಲನಾಮೌಲಿಮಿಯಂ ಚಕಿತಹರಿಣಚಲನಯನಾ ॥

ಕಲೆಯಂ ತರುಣಿಮೆಯೊದಗಿಸೆ
ಕಲಿಯಲ್ಕನುಮದನಧನುಷಮಂತೆಯೆ ಪುರ್ವುಂ|

140 ಗರ್ವ = ವಿಜಯಾಸಕ್ತಿ.

141 ರಾಘವಾನಂದನಾಟಕದಲ್ಲಿ ರಾವಣನನ್ನು ಕುರಿತು ವಿಭೀಷಣನ ವಾಕ್ಯವೆಂದು ಟೀಕಾಕಾರರು ಸಂದರ್ಭಸೂಚನೆ ಮಾಡಿದ್ದಾರೆ.

ಲಲನಾಗಣಮೌಲಿಯನೇ
ನೆಲೆಗೊಳ್ವಳ್ ರಮಣಿಯೀಕೆ ಚಂಚಲನಯನಳ್ ॥

ಇಲ್ಲಿ 'ಇಮನಿಚ್' ಪ್ರತ್ಯಯ ('ತರುಣಿಮಾ' ಎಂಬಲ್ಲಿ), ಅವ್ಯಯೀಭಾವ ('ಅನುಮದನ ಧನುಷಂ' ಎಂಬಲ್ಲಿ) ಮತ್ತು ಕರ್ಮಭೂತ ಆಧಾರ[142] ('ಮೌಲಿಯನೇ ನೆಲೆಗೊಳ್ವಳ್' ಎಂಬಲ್ಲಿ)ಗಳ ಪ್ರಯೋಗದಲ್ಲಿ ವ್ಯಂಜಕತ್ವವಿದೆ. ಯದ್ಯಪಿ, 'ತರುಣತ್ವವು,' 'ಧನುಸ್ಸಿನ ಸಮೀಪದಲ್ಲಿ,' 'ಮೌಲಿಯಲ್ಲಿ ನಿಲ್ಲುವಳು' ಎಂಬ ಪ್ರಯೋಗಗಳಿಗೂ ಉಕ್ತಪ್ರಯೋಗಗಳಿಗೂ ವಾಚಕತ್ವದಲ್ಲಿ ಏನೂ ವ್ಯತ್ಯಾಸವಿಲ್ಲವಾದರೂ, ಉಕ್ತಪ್ರಯೋಗ ರೂಪಗಳಲ್ಲಿಯೇ ಅಸ್ವಾದ್ಯಶವಾದ ಒಂದು ಚಮತ್ಕಾರವಿಶೇಷವುಂಟು. ಅದೇ ವ್ಯಂಜಕತ್ವವನ್ನು ತಳೆಯುತ್ತದೆ.

ಹೀಗೆಯೇ ಉಳಿದುವುಗಳ ಮರ್ಮವನ್ನೂ ತಿಳಿಯಬೇಕು.

ಅಕ್ಷರ ಮತ್ತು ರಚನೆಗಳ ವ್ಯಂಜಕತ್ವವನ್ನು ಗುಣನಿರೂಪಣೆಯ ಪ್ರಕರಣದಲ್ಲಿ ಉದಾಹರಿಸಲಾಗುತ್ತದೆ. ಕಾರಿಕೆಯಲ್ಲಿ 'ಅಪಿ' ಎಂದಿರುವುದರಿಂದ ಪ್ರಬಂಧಗಳಲ್ಲಿಯೂ ನಾಟಕಾದಿಗಳಲ್ಲಿಯೂ ವ್ಯಂಜಕತ್ವವುಂಟೆಂದರಿಯುವುದು.

ಹಿಂದೆ ಗಣಿಸಿದ ಭೇದಗಳನ್ನೂ ಕೂಡಿಸಿದರೆ ಒಟ್ಟು ರಸಾದಿಗಳ ಧ್ವನಿಯ ಭೇದಗಳು ಆರಾಗುತ್ತವೆ.[143]

ಭೇದಾಸ್ತದೇಕಪಂಚಾಶತ್ ॥ ೨೦೮ ॥

ಹೀಗೆ ಎಲ್ಲ ಭೇದಗಳ ಒಟ್ಟು ಸಂಖ್ಯೆ ೫೧.[144] ಅವುಗಳ ಸ್ವರೂಪವನ್ನು ಹಿಂದೆಯೇ ವಿವರಿಸಲಾಗಿದೆ.

---

142 ಸಪ್ತಮ್ಯರ್ಥದಲ್ಲಿ ದ್ವಿತೀಯಾ ಪ್ರಯೋಗ.

143 ವ್ಯಂಗ್ಯದೃಷ್ಟಿಯಿಂದ ರಸಾದಿಗಳು ಒಂದೇ ವಿಧವೆಂದು ಹೇಳಿದ್ದರೂ ವ್ಯಂಜಕದೃಷ್ಟಿಯಿಂದ ಆರು ವಿಧವೆಂಬುದನ್ನೀಗ ಮಮ್ಮಟನು ತೋರಿಸುತ್ತಿದ್ದಾನೆ:—

ರಸಾದಿಧ್ವನಿ

೧. ವಾಕ್ಯ ೨. ಪದ ೩. ಪದಾಂಶ ೪. ರಚನೆ ೫. ಅಕ್ಷರ ೬. ಪ್ರಬಂಧ

144 ಈಗ ವ್ಯಂಗ್ಯ-ವ್ಯಂಜಕಗಳೆರಡರ ದೃಷ್ಟಿಯನ್ನೂ ಕೂಡಿಸಿಕೊಂಡು ಧ್ವನಿವಿಭಾಗವನ್ನು ಹೊಸದಾಗಿ ಮಮ್ಮಟನು ಸೂಚಿಸುತ್ತಿದ್ದಾನೆ. ೧೨೦ ನೆ ಅಡಿ ಟಿಪ್ಪಣಿಯ ವಿಭಾಗಕ್ರಮವನ್ನು ಹೀಗೆ ಮುಂದುವರಿಸಬೇಕು.

(೧೮೩ ನೆಯ ಪುಟದ ಅಡಿಟಿಪ್ಪಣಿ ನೋಡಿ)

ತೇಷಾಂ ಚಾನ್ಯೋನ್ಯಯೋಜನೇ ॥ ೨೦*d* ॥

ಸಂಕರೇಣ ತ್ರಿರೂಪೇಣ ಸಂಸೃಷ್ಟ್ಯಾ ಚೈಕರೂಪಯಾ ॥ ೨೧*ab* ॥

ಈ ಮೂಲಭೇದಗಳು ಮೂರೆರನಾದ ಸಂಕರದಿಂದಲೂ ಏಕವಿಧವಾದ ಸಂಸೃಷ್ಟಿಯಿಂದಲೂ ಪರಸ್ಪರ ಸಂಯೋಗಗೊಳ್ಳುವುದನ್ನು ಲೆಕ್ಕಮಾಡುವುದಾದರೆ—


ಶುದ್ಧವಾದ ಭೇದಗಳು ಐವತ್ತೊಂದಾಗುವುದಷ್ಟೇ ಅಲ್ಲ, ಅವುಗಳನ್ನು ಮತ್ತೆ ಅದೇ ಸಂಖ್ಯೆಯಿಂದ ಗುಣಿಸಿ, ಮತ್ತೆ ಅದನ್ನು 'ಸಂಶಯಾಸ್ಪದ', 'ಅನುಗ್ರಾಹ್ಯಾನುಗ್ರಾಹಕ', 'ಏಕ ವ್ಯಂಜಕಾನುಪ್ರವೇಶ'ವೆಂಬ ಮೂರು ಸಂಕರಪ್ರಕಾರಗಳ[145] ಮತ್ತು ಪರಸ್ಪರ ನಿರಪೇಕ್ಷವಾದ ಒಂದು ಸಂಸೃಷ್ಟಿಪ್ರಕಾರದ ಸಂಖ್ಯೆಯಿಂದ ಎಂದರೆ ನಾಲ್ಕರಿಂದ ಗುಣಿಸಿದರೆ—

ವೇದಖಾಬ್ಧಿವಿಯಚ್ಚಂದ್ರಾಃ ॥ ೨೧*c* ॥

ಮಿಶ್ರಧ್ವನಿಭೇದಗಳ ಸಂಖ್ಯೆ—೧೦,೪೦೪ ಆಗುತ್ತದೆ.

ಅದನ್ನು ಶುದ್ಧಭೇದಗಳೊಡನೆ ಕೂಡಿಸಿದರೆ—

(೧೮೨ ನೆಯ ಪುಟದಿಂದ ಮುಂದುವರಿದುದು)



[145] ಇವುಗಳ ವಿವರಣೆಗೆ ಕನ್ನಡ ಧ್ವನ್ಯಾಲೋಕ, ಪು. ೧೬೦-೧೬೫ ನೋಡಿ.

ಶರೇಷುಯುಗಖೇಂದವಃ ॥ ೨೧d ॥

ಒಟ್ಟು ಎಲ್ಲ ಧ್ವನಿಭೇದಗಳ ಸಂಖ್ಯೆ ೧೦,೪೫೫ ಆಗುತ್ತದೆ.[146]
ಕೇವಲ ದಿಕ್ಸೂಚನೆಗಾಗಿ ಒಂದೆರಡನ್ನು ಮಾತ್ರ ಉದಾಹರಿಸಲಾಗುತ್ತದೆ.[147]

ಭಣಪಾಹುಣಿಆ ದೇಅರ ಜಾಆಏ ಸುಹಅ ಕಿಂಪಿ ದೇ ಭಣಿಆ।
ರುಅಇ ಪಡೋಹರವಲಹೀಘರಮ್ಮಿ ಅಣುಣಿಜ್ಜಉ ವರಾಈ ॥

ಉತ್ಸವವನಸರೆಗಳಿಗೆ ನೋಡಲೋಸುಗ ಬಂದ
ಈಕೆಗೇನಸೊ ನಿನ್ನ ಮಡದಿ ಪೇಳೆ।
ಮೈದುನನೆ, ಮಿಡಿಯುವಳು ಕಣ್ಣೀರನೀ ಮುಗುದೆ
ನೀನವಳನನುನಯಿಸು ಶೂನ್ಯಗೃಹದೆ ॥

ಇಲ್ಲಿ 'ಅನುನಯು'ವೆಂಬುದು 'ಉಪಭೋಗ'ವೆಂಬ ಅರ್ಥಾಂತರದಲ್ಲಿ ಸಂಕ್ರಮಿತವಾಗಿದೆಯೋ ಇಲ್ಲವೆ, ಅನುರಣನರೂಪವಾಗಿ ಉಪಭೋಗವೆಂಬ ವ್ಯಂಗ್ಯಾರ್ಥಕ್ಕೆ ವ್ಯಂಜಕವಾಗಿದೆಯೋ ಎಂದು ಸಂದೇಹಬರುತ್ತದೆ.

ಸ್ನಿಗ್ಧಶ್ಯಾಮಲಕಾಂತಿಲಿಪ್ತವಿಯತೋ ವೇಲ್ಲದ್ಬಲಾಕಾ ಘನಾಃ
ವಾತಾಃ ಶೀಕರಿಣಃ, ಪಯೋದಸುಹೃದಾಮಾನಂದಕೇಕಾಃ ಕಲಾಃ।
ಕಾಮಂ ಸಂತು ದೃಢಂ ಕಠೋರಹೃದಯೋ ರಾಮೋಽಸ್ಮಿ ಸರ್ವಂ ಸಹೇ
ವೈದೇಹೀ ತು ಕಥಂ ಭವಿಷ್ಯತಿ, ಹಹಾ ಹಾ ದೇವಿ ಧೀರಾ ಭವ ॥

ದೆಸೆಯಂ ತಮ್ಮೆಣ್ಣೆಗಪ್ಪಿಂ ಬಳಿದು ತವೆ ಬಲಾಕಾಗಣೋದ್ರೇಕಮಂ ಮಾ-
ಡಿಸಿ ನಿಂದಾ ಮೇಘಗಳ್, ಶೀತಲಪವನಚಯಂ ಸಂತಸಂ ಪೆರ್ಚಲಿಂಪಿಂ-।
ದೆಸೆವಾ ಬರ್ಹಿಸ್ವನಂ ತಾಮಿರಲಿರಲೆನಿಸುಂ, ಸರ್ವಮಂ ತಾಳ್ದಪೆಂ ಕ—
ರ್ಕಶಚಿತ್ತಾತ್ಮಂ ಗಡಾ ರಾಮನೆನಲಬಲೆಯಾ ಸೀತೆಯೆಂತಿರ್ಪಳೋ ಮೇಣ್ ॥

---

146 ಮಮ್ಮಟನ ನಿಷ್ಕರ್ಷದೃಷ್ಟಿಯ ಪರಾಕಾಷ್ಠೆಯನ್ನಿಲ್ಲಿ ಕಾಣಬಹುದು. ಅಸಂಖ್ಯವೆಂದು ಆನಂದವರ್ಧನನೇ ಕೈಬಿಟ್ಟಿದ್ದರೂ, ಮಮ್ಮಟನು ಧ್ವನಿಪ್ರಕಾರಗಳ ಸಂಖ್ಯೆಯಿಷ್ಟೇ ಎಂದು ಲೆಕ್ಕ ಮಾಡಿ ನಿರ್ಣಯಿಸುತ್ತಿದ್ದಾನೆ. ಈ ಪ್ರವೃತ್ತಿಯು ಮಧ್ಯಯುಗದ ಸಂಸ್ಕೃತ ಶಾಸ್ತ್ರಕಾರರಲ್ಲೆಲ್ಲ ವ್ಯಕ್ತವಾಗುತ್ತದೆ; ಸಂಸ್ಕೃತ ಶಾಸ್ತ್ರಗಳ ಆರಂಭಯುಗದಲ್ಲಿ ಇದು ಕಾಣಬರುವುದಿಲ್ಲ.

147 ಈ ಉದಾಹರಣೆಗಳು ಧ್ವನ್ಯಾಲೋಕದಲ್ಲೂ ಬಂದಿವೆ. ಹೋಲಿಸಿ—ಕನ್ನಡ **ಧ್ವನ್ಯಾಲೋಕ,** ಪು. ೧೬೧ ಮತ್ತು ೨೬.

ಇಲ್ಲಿ (ಮೂಲದ 'ಲಿಪ್ತ' ಮತ್ತು 'ಪಯೋದಸುಹೃದಾಂ' ಎಂಬೆರಡೂ ಅತ್ಯಂತ ತಿರಸ್ಕೃತ ವಾಚ್ಯಗಳ ಸಂಸೃಷ್ಟಿಯಿದೆ. ಅವುಗಳೊಡನೆ 'ರಾಮೋಽಸ್ಮಿ' ಎಂಬ ಅರ್ಥಾಂತರ ಸಂಕ್ರಮಿತ ವಾಚ್ಯದ ಅನುಗ್ರಾಹ್ಯಾನುಗ್ರಾಹಕಭಾವಸಂಬಂಧದ ಸಂಕರವೂ, 'ರಾಮ' ಶಬ್ದದ ವ್ಯಂಜಕಾನುಪ್ರವೇಶದಿಂದ ಅರ್ಥಾಂತರಸಂಕ್ರಮಿತ ವಾಚ್ಯಧ್ವನಿಯ ಸಂಕರವೂ ಎರಡೂ ಸಮಿಶ್ರವಾಗಿವೆ. ಹೀಗೆ ಉಳಿದ ಉದಾಹರಣೆಗಳನ್ನೂ ಊಹಿಸಿಕೊಳ್ಳುವುದು.

ಇಲ್ಲಿಗೆ ಕಾವ್ಯಪ್ರಕಾಶದಲ್ಲಿ 'ಧ್ವನಿನಿರ್ಣಯ'ವೆಂಬ ನಾಲ್ಕನೆಯ ಉಲ್ಲಾಸ ಮುಗಿದುದು.

ಕವಿತಾತರಂಗರಂಗದೊ-
ಳವಿರತಮೆನೆ ಮುಳುಗಿ ಮೆರೆವ ರಸಿಕಜನರ್ಕಳ್
ನವರಸಭಾವವಿಚಾರಮ-
ನವಧಾರಿಸಿ ಸವಿಗೆ ಮಮ್ಮಟೋಕ್ತ ಕ್ರಮದಿಂ ||

ಡಾ|| ಕೆ. ಕೃಷ್ಣಮೂರ್ತಿ

ಯಾವುದು ಫಲಿಸೀತು

ಸಹಸ್ರ ಚಂದ್ರರು ಬಾನಲಿ ಬರಲಿ
ಕೋಟಿ ಸೂರ್ಯರೇ ಮೂಡಿರಲಿ
ಎಲ್ಲೆಲ್ಲಿಯು ಬೆಳಕೇ ಬೆಳಕಾಗಲಿ
ಕಣ್ ಕೋರೈಸುತಲಿರಲಿ
ಮನೋಮಂದಿರದಿ ಬೆಳಕಿಲ್ಲ
ಅಲ್ಲಿನ ತಮವೇನಳಿದಿಲ್ಲ
ಈ ಕತ್ತಲ ಕರಿಕೋಟೆಯು ನಿಂತಿರೆ
ಯಾವೆತ್ತಣ ಪ್ರಭೆ ಫಲಿಸೀತು
ಬಾಳನು ಬೆಳಗೀತು

ಸಾಸಿರ ದೈತ್ಯರ ಬಲ ತಮಗಿರಲಿ
ಬುವಿಯನು ದಹಿಸುವರಿರಲಿ
ಅಣುಶಕ್ತಿಯೆ ತೃಣವೆಂಬಂತಿರಲಿ
ರುದ್ರರೆ ತಾವೆಂದಿರಲಿ
ಒಳಗಡೆ ಹಕ್ಕಿಗೆ ಕಸುವಿಲ್ಲ
ತತ್ತರಿಸಿದೆ ಅದು ಉಸುರಿಲ್ಲ
ಭೀತಿಯ ವಲ್ಮೀಕವೆ ಒಳಗೆದ್ದಿರೆ
ಯಾವೆತ್ತಣ ಬಲ ಫಲಿಸೀತು
ಮನುಕುಲ ಉಳಿದೀತು

ಎ. ಎಸ್. ರಾಮಕೃಷ್ಣ

ಅರಿಸ್ಟಾಟಲಿನ ಸಾಹಿತ್ಯವಿಮರ್ಶೆ

೭

ಅರಿಸ್ಟಾಟಲಿನ ಕಾವ್ಯಮೀಮಾಂಸೆಯ ಆರನೆಯ ಅಧ್ಯಾಯ ಆ ಗ್ರಂಥದ ಬಹು ಮುಖ್ಯವಾದ ಭಾಗ; ಒಂದೆರಡು ಅಧ್ಯಾಯಗಳನ್ನು ಬಿಟ್ಟರೆ, ಉಳಿದ ಗ್ರಂಥವೆಲ್ಲಾ ಈ ಭಾಗದ ವಿಸ್ತೃತ ವಿವರಣೆ ಮಾತ್ರ. ಅದರಲ್ಲಿ ನಿರೂಪಿತವಾಗಿರುವ ವಿಷಯ ಮತ್ತು ಉಪಯುಕ್ತವಾಗಿರುವ ಪದಗಳಂತೂ ಆಗಾಮಿವ್ಯಾಖ್ಯಾತೃಗಳ ಪಾಂಡಿತ್ಯ ಪ್ರದರ್ಶನ, ತರ್ಕರಸಿಕತೆಗಳಿಗೆ ಸ್ವರ್ಣಭೂಮಿ. ಇಂದಿಗೂ ಜಿಜ್ಞಾಸಾಜಟಿಲವಾದ ರುದ್ರನಾಟಕದ ರೂಪ, ರಚನೆ, ಪ್ರಭಾವಗಳ ಪ್ರಥಮಲಕ್ಷಣವನ್ನು ನಾವು ಕಾಣುವುದು ಇಲ್ಲಿಯೇ. ನಾಟಕದಲ್ಲಿ ವಸ್ತು, ಪಾತ್ರಗಳ ಸ್ಥಾನವನ್ನು ಕುರಿತು ಮುಂದೆ ನಡೆದ ಉಗ್ರಚರ್ಚೆಗೆ ಬೀಜಗಳೂ ಇಲ್ಲೇ ನೆಡಲ್ಪಟ್ಟಿವೆ. ಇಲ್ಲಿ ಬಳಸಿರುವ ಕೆಲವು ಪದಗಳ ಅರ್ಥನಿಷ್ಕರ್ಷೆಗಾಗಿ ನಡೆದಿರುವ ಚರ್ಚೆಯಂತು ಮಾನವ ಬುದ್ಧಿ ಕೌಶಲ್ಯಕ್ಕೇ ಅಪಮಾನಕರವೆಂದು ಮಾರ್ಲೆ ಬರೆದುದು ಸಾಧುವೆಂದೇ ಕೆಲವು ವೇಳೆ ಅನ್ನಿಸುತ್ತದೆ.

ಅರಿಸ್ಟಾಟಲ್ ರುದ್ರನಾಟಕದ ಲಕ್ಷಣವನ್ನು ಈ ರೀತಿ ಕೊಡುತ್ತಾನೆ: "ರುದ್ರನಾಟಕವು ಗಂಭೀರವಾದ, ಪೂರ್ಣವಾದ, ಮತ್ತು ಸೂಕ್ತ ಪ್ರಮಾಣವುಳ್ಳ ಕಾರ್ಯವೊಂದರ ಅನುಕರಣ; ನಾಟಕದ ವಿವಿಧ ಭಾಗಗಳಲ್ಲಿ ವಿವಿಧ ಪ್ರಕಾರಗಳು ಕಾಣುವಂತೆ, ಪ್ರತಿಯೊಂದು ವಿಧವಾದ ಕಾವ್ಯಾಲಂಕಾರಗಳಿಂದಲೂ ಮಂಡಿತವಾದ ಭಾಷೆಯಲ್ಲಿರಬೇಕು; ಅಭಿನಯರೂಪದಲ್ಲಿ, ಕಥನರೂಪದಲ್ಲಲ್ಲ; ಕರುಣೆ ಮತ್ತು ಭಯ ಗಳನ್ನು ಪ್ರಚೋದಿಸಿ, ಅವುಗಳ ಮೂಲಕ ಆ ಭಾವಗಳನ್ನು ಯುಕ್ತರೀತಿಯಲ್ಲಿ ಶಮನ ಮಾಡಬೇಕು." ಈ ಲಕ್ಷಣದ ಮೊದಲನೆಯ ವಾಕ್ಯ ರುದ್ರನಾಟಕವನ್ನು ವೈನೋದಿಕದಿಂದ ಬೇರ್ಪಡಿಸುತ್ತದೆ. ರುದ್ರನಾಟಕದ ವಸ್ತು ಗಂಭೀರವಾದದ್ದು, ಮಹತ್ವವುಳ್ಳದ್ದು; ವೈನೋದಿಕದ ವಸ್ತುವಿನಂತೆ ಕ್ಷುಲ್ಲಕವಲ್ಲ, ಕ್ಷುದ್ರವಲ್ಲ. ಎರಡನೆಯ ವಾಕ್ಯ ಅದನ್ನು ಚಾಟುಪದ್ಯ, ಭಾವಗೀತಗಳಿಂದ ಪ್ರತ್ಯೇಕಿಸುತ್ತದೆ. ಬೇರೆ ಸಾಹಿತ್ಯಪ್ರಕಾರಗಳಲ್ಲಿ, ಗೀತ ಮತ್ತು ಪದ್ಯಭಾಗಗಳು ಹೇಗೆ ಬೇಕಾದರೂ ಮಿಶ್ರಿತ ವಾಗಬಹುದು; ಆದರೆ ರುದ್ರನಾಟಕದಲ್ಲಿ ಅವುಗಳ ಸ್ಥಾನಗಳು ನಿರ್ದಿಷ್ಟವಾಗಿವೆ. ಈ ವಾಕ್ಯವೂ ಮತ್ತು ಮುಂದಿನದು ರುದ್ರನಾಟಕಕ್ಕೂ ಮಹಾಕಾವ್ಯಕ್ಕೂ ಇರುವ ಭೇದವನ್ನು ಸೂಚಿಸುತ್ತದೆ. ಮಹಾಕಾವ್ಯ ಉದ್ದಕ್ಕೂ ಒಂದೇ ವಿಧವಾದ ಛಂದಸ್ಸನ್ನು

ಉಪಯೋಗಿಸುತ್ತದೆ. ಮತ್ತು ಅದರ ರೀತಿ ಕಥನದ್ದು ; ರುದ್ರನಾಟಕವಾದರೋ ವಿವಿಧ ವೃತ್ತಗಳನ್ನು ಬಳಸುತ್ತದೆ ಮತ್ತು ತನ್ನ ವಸ್ತುವನ್ನು ಅಭಿನಯರೂಪದಲ್ಲಿ ಪ್ರದರ್ಶಿಸುತ್ತದೆ. ಕೊನೆಯ ವಾಕ್ಯ ರುದ್ರನಾಟಕ ನಮ್ಮಲ್ಲೆಬ್ಬಿಸುವ ಭಾವಗಳನ್ನುಲ್ಲೇಖಿಸುತ್ತದೆ. ಈ ಲಕ್ಷಣವನ್ನು ಮತ್ತೊಂದು ಕೋಣದಿಂದ ನೋಡಿದಲ್ಲಿ ಅದರ ರಚನೆಯನ್ನು ಇನ್ನೊಂದು ಬಗೆಯಲ್ಲಿ ವಿವರಿಸಬಹುದು. ಲಕ್ಷಣದ ಮೊದಲ ವಾಕ್ಯ ರುದ್ರನಾಟಕದ ವಸ್ತುವನ್ನು ಕುರಿತದ್ದು ; ಎರಡು ಮತ್ತು ಮೂರನೆಯ ವಾಕ್ಯಗಳು ಅದರ ಸಾಧನ ರೀತಿಯನ್ನು ಕುರಿತದ್ದು ; ಕೊನೆಯ ವಾಕ್ಯ ಅದರ ಪ್ರಭಾವವನ್ನು ಕುರಿತದ್ದು.

ಇಲ್ಲಿ ಉಪಯುಕ್ತವಾಗಿರುವ ಕೆಲವು ಪದಗಳ ವಿವರಣೆಯನ್ನು ಅರಿಸ್ಟಾಟಲನೇ ಕೊಟ್ಟಿದ್ದಾನೆ. "ಮಂಡಿತವಾದ ಭಾಷೆ" ಎಂದರೆ ಶ್ರುತಿ, ಲಯ, ರಾಗಗಳಿಂದ ಕೂಡಿದ ಭಾಷೆ. "ವಿವಿಧ ಭಾಗಗಳಲ್ಲಿ ವಿವಿಧ ಪ್ರಕಾರಗಳು" ಎಂದರೆ ನಾಟಕದ ಕೆಲವು ಭಾಗಗಳನ್ನು ಮಾತನಾಡುವ ಪದ್ಯರೂಪದಲ್ಲಿಯೂ, ಕೆಲವನ್ನು ಹಾಡುವ ಗೀತರೂಪದಲ್ಲಿಯೂ ಎಂದು ತನ್ನ ಅರ್ಥ ಎಂದಿರುತ್ತಾನೆ. "ಪೂರ್ಣವಾದ ಕಾರ್ಯ" ಎಂದರೆ ನಿರ್ದಿಷ್ಟವಾದ ಆದಿ, ಮಧ್ಯ, ಅಂತ್ಯಗಳುಳ್ಳದ್ದು. ಸರಿಯಾಗಿ ರಚಿತವಾದ ವಸ್ತು ಹೇಗೆ ಹೇಗೋ ಆರಂಭವಾಗುವುದಾಗಲೀ, ಅಂತ್ಯವಾಗುವುದಾಗಲೀ ಕೂಡದೆಂದೂ, ತನ್ನ ಬೆಳೆವಣಿಗೆಯಲ್ಲಿ ಕಾರ್ಯಕಾರಣಭಾವವನ್ನು ಕೂಡಿರಬೇಕೆಂದೂ ಅಭಿಪ್ರಾಯಪಡುತ್ತಾನೆ. "ಸೂಕ್ತಪ್ರಮಾಣ"ವೆಂದರೆ ಅತಿ ಚಿಕ್ಕದೂ, ಅತಿ ದೊಡ್ಡದೂ ಅಲ್ಲದ್ದೆನ್ನುತ್ತಾನೆ. ಸುಂದರ ವಸ್ತುವೊಂದಕ್ಕೆ, ಜೀವಂತಪ್ರಾಣಿಯಾಗಿರಲಿ ಅಥವಾ ಬೇರೆ ಕೃತಿಯಾಗಿರಲಿ, ಕೇವಲ ಸಕ್ರಮವಾದ ಅಂಗರಚನೆ ಮಾತ್ರ ಸಾಲದು, ಅದಕ್ಕೆ ತಕ್ಕ ಗಾತ್ರವೂ ಇರಬೇಕು ; ಏಕೆಂದರೆ ಸೌಂದರ್ಯ ಕ್ರಮ, ಪರಿಮಾಣ ಎರಡನ್ನೂ ಅವಲಂಬಿಸಿರುತ್ತದೆ. ಅತಿ ಸೂಕ್ಷ್ಮವಾದ ಪ್ರಾಣಿ ಸುಂದರವಾಗಲಾರದು ; ಏಕೆಂದರೆ, ಅದು ಅತ್ಯಲ್ಪಕಾಲದಲ್ಲೇ ಮರೆಯಾಗುವುದರಿಂದ, ಅದರ ದರ್ಶನ ನಮಗೆ ಮಸುಕಿನಿಂದ ಮುಚ್ಚಿರುತ್ತದೆ. ಅತಿ ದೊಡ್ಡ ಪ್ರಮಾಣವುಳ್ಳ ವಸ್ತುಗಳೂ ಸುಂದರವಾಗಿರುವುದಿಲ್ಲ ; ಏಕೆಂದರೆ ಅವುಗಳನ್ನು ಒಂದೇ ಬಾರಿಗೆ ಪೂರ್ಣವಾಗಿ ಗ್ರಹಿಸಲು ಸಾಧ್ಯವಾಗುವುದಿಲ್ಲ. ಒಂದು ಸಾವಿರ ಮೈಲಿ ಉದ್ದವಿರುವ ಪ್ರಾಣಿಯನ್ನು ಇದಕ್ಕೆ ಉದಾಹರಣೆಯನ್ನಾಗಿ ಕೊಡುತ್ತಾನೆ. ಆದ್ದರಿಂದ ಯುಕ್ತ ಪ್ರಮಾಣವೆಂದರೆ ನಮ್ಮ ಸ್ಮೃತಿಯಿಂದ ಸುಲಭವಾಗಿ ಗ್ರಾಹ್ಯವಾಗುವಂತಹದು. ಆದರೆ ನಾಟಕ ಎಷ್ಟು ಅಂಕಗಳನ್ನೊಳಗೊಂಡಿರಬೇಕೆಂದು ನಿರ್ಧರಿಸುವುದು ಕಾವ್ಯಶಾಸ್ತ್ರದ ಕರ್ತವ್ಯವಲ್ಲವೆನ್ನುತ್ತಾನೆ. ಅದು ನಾಟಕದ ವಸ್ತುವಿನಿಂದಲೇ

ನಿರ್ಣಯಿಸಲ್ಪಡುತ್ತದೆ. ಆದರೂ ಸ್ಥೂಲವಾಗಿ ಹೇಳಬೇಕಾದಲ್ಲಿ ಸೂಕ್ತಪ್ರಮಾಣವೆಂದರೆ ನಾಟಕದ ಘಟನೆಗಳಲ್ಲಿ, ಕಾರ್ಯಕಾರಣಯುತವಾಗಿ, ದುಃಸ್ಥಿತಿಯಿಂದ ಒಳ್ಳೆಯ ಸ್ಥಿತಿಗೂ ಅಥವಾ ಒಳ್ಳೆಯ ಸ್ಥಿತಿಯಿಂದ ದುಃಸ್ಥಿತಿಗೂ ಬದಲಾವಣೆಯಾಗಲು ಅವಕಾಶವಿರುವಂತಹದು ಎಂದು ಅರಿಸ್ಟಾಟಲ್ ತೀರ್ಮಾನಕ್ಕೆ ಬರುತ್ತಾನೆ. ಇಲ್ಲಿಯೂ ಕೂಡ ನಾವು ಅವನ ಲೌಕಿಕವಿವೇಕದಿಂದ ಕೂಡಿದ ಮಧ್ಯಮಾರ್ಗವನ್ನು ಕಾಣುತ್ತೇವೆ.

ಅರಿಸ್ಟಾಟಲಿನ ಲಕ್ಷಣರೀತಿ ಅನೇಕ ಕವಿ ಮತ್ತು ವಿಮರ್ಶಕರ ಕಟುಟೀಕೆಗೆ ಗುರಿಯಾಗಿದೆ. ಅವನು ಕೊಟ್ಟಿರುವ ರುದ್ರನಾಟಕದ ಲಕ್ಷಣ ಕೇವಲ ನಿರ್ಜೀವವಾದುದೆಂದು ಅವರ ವಾದ. ಅದರಲ್ಲಿ ನಮಗೆ ಕಾಣುವುದು ರುದ್ರನಾಟಕದ ದೇಹರಚನೆಯೇ ಹೊರತು ಅದರ ಜೀವಕಳೆಯಲ್ಲ. ಸಾಹಿತ್ಯಪ್ರಕಾರಗಳಲ್ಲಿ ಶ್ರೇಷ್ಠವೆನಿಸಿ, ಈಸ್ಕಿಲಸ್, ಸೋಫೋಕ್ಲಿಸ್, ಯೂರಿಪಿಡೀಸ್, ಮುಂತಾದವರಿಂದ ಸಮಾರಾಧಿತವಾದ ರುದ್ರನಾಟಕದಲ್ಲಿ ಕಂಡುಬರುವ ತಾತ್ವಿಕದರ್ಶನ, ಕವಿಪ್ರತಿಭೆ, ಮಾನವಜೀವನದ ರಹಸ್ಯಗಳ ವಿವರಣೆ, ವಿಶ್ವದ ಅಜ್ಞಾತಶಕ್ತಿಗಳ ನಿರೂಪಣೆ—ಇವು ಯಾವುದರ ಸುಳಿವು ಕೂಡ ಅರಿಸ್ಟಾಟಲಿನ ಲಕ್ಷಣದಲ್ಲಿ ಕಂಡುಬರುವುದಿಲ್ಲ. ಅಲ್ಲಿ ಸಿಗುವುದು ರುದ್ರನಾಟಕದ ಅಸ್ಥಿಪಂಜರ ಮಾತ್ರವೆಂದೂ; ಇದಕ್ಕೆ ಕಾರಣ ಅರಿಸ್ಟಾಟಲಿನ ಶುಷ್ಕತಾರ್ಕಿಕ ಪ್ರಕೃತಿಯೆಂದೂ ಇವರ ಆರೋಪ. ಆದರೆ ಇವರು ಅರಿಸ್ಟಾಟಲಿನ ಉದ್ದೇಶ ಮತ್ತು ವಿಮರ್ಶಾರೀತಿಗಳಿಗೆ ಸಾಕಷ್ಟು ಗಮನಕೊಟ್ಟಿಲ್ಲವೆಂದು ಕಾಣುತ್ತದೆ. ಅರಿಸ್ಟಾಟಲಿನ ಸಂಶೋಧನಾ ಮಾರ್ಗ ವಿಜ್ಞಾನಶಾಸ್ತ್ರದ ಮಾರ್ಗ. ಪ್ರತ್ಯೇಕವಸ್ತುಗಳನ್ನು ಕೂಲಂಕಷವಾಗಿ ಪರೀಕ್ಷಿಸಿ, ಸಾದೃಶ್ಯಹೊಂದಿರುವುವುಗಳನ್ನು ಇತರರಿಂದ ಬೇರ್ಪಡಿಸಿ, ಅವುಗಳ ಸಾಮಾನ್ಯ ಗುಣಗಳನ್ನೊಳಗೊಂಡ ಸೂತ್ರಗಳನ್ನು ರಚಿಸುವುದೇ ಈ ಮಾರ್ಗದ ವೈಶಿಷ್ಟ್ಯ. ಅರಿಸ್ಟಾಟಲ್ ರುದ್ರನಾಟಕವನ್ನು ಈ ದೃಷ್ಟಿಯಿಂದಲೇ ಪರೀಕ್ಷಿಸಿರುತ್ತಾನೆ. ರುದ್ರನಾಟಕಗಳನ್ನು ಅಭ್ಯಸಿಸಿದ ಮೇಲೆ, ಅವನಿಗೆ ಕಂಡುಬಂದುದು ಅವುಗಳ ರಚನೆಯ ಸಾದೃಶ್ಯವೇ ಹೊರತು, ಅವುಗಳ ತಾತ್ವಿಕದರ್ಶನದ ಸಾದೃಶ್ಯವಲ್ಲ. ರುದ್ರನಾಟಕಗಳಲ್ಲಿ ಪ್ರತಿಪಾದಿತವಾಗಿರುವ ಕವಿದರ್ಶನ ಒಂದೇ ವಿಧವಾದುದೆಂದು ಹೇಳಲಾಗುವುದಿಲ್ಲ. ಅದು ಕವಿಯಿಂದ ಕವಿಗೆ ಬದಲಾಗುತ್ತಿರುತ್ತದೆ. ಮತ್ತು ಒಬ್ಬನೇ ಕವಿಯಲ್ಲೂ ಒಂದು ಕೃತಿಯಿಂದ ಮತ್ತೊಂದು ಕೃತಿಗೆ ಮಾರ್ಪಾಡಾಗಬಹುದು. ಇದನ್ನು ಷೇಕ್ಸ್‌ಪಿಯರಿನ ನಾಟಕಗಳಲ್ಲಿ ನೋಡಬಹುದು. ಮತ್ತು ಅರಿಸ್ಟಾಟಲ್ ವಸ್ತುಗಳನ್ನು ಪರೀಕ್ಷಿಸುತ್ತಿದ್ದುದು ಜೀವಶಾಸ್ತ್ರದ ಕೋಣದಿಂದ. ಅಲ್ಲಿಯೂ ಕೂಡ ಒಂದೇ ಜಾತಿಗೆ ಸೇರಿದ ಪ್ರಾಣಿಗಳಲ್ಲಿ ಕಂಡುಬರುವ ಸಾಮ್ಯ

ಅವುಗಳ ದೇಹರಚನೆಗೆ ಸಂಬಂಧಿಸಿದುದೇ ಹೊರತು, ಅವುಗಳ ಪ್ರಾಣ, ಬುದ್ಧಿಗಳಿಗೆ ಸಂಬಂಧಿಸಿದುದಲ್ಲ. ಆದ್ದರಿಂದ ಪ್ರಾಣಿಗಳ ವರ್ಗೀಕರಣದಲ್ಲಿ ಅವುಗಳ ಅಂಗವಿನ್ಯಾಸ ಗಣನೆಗೆ ತೆಗೆದುಕೊಳ್ಳಲ್ಪಟ್ಟು, ಅವುಗಳ ಬುದ್ಧಿವೈವಿಧ್ಯತೆ ಲಕ್ಷಿತವಾಗುವುದಿಲ್ಲ. ಹಾಗೆಂದ ಮಾತ್ರಕ್ಕೆ ಅವುಗಳ ಬುದ್ಧಿವೈವಿಧ್ಯತೆಗೆ ಬೆಲೆಯಿಲ್ಲವೆಂದಲ್ಲ; ಜೀವಶಾಸ್ತ್ರದ ಸೂತ್ರರಚನೆಗೆ ಅದು ಅಂಗರಚನೆಯಷ್ಟು ಸಹಕಾರಿಯಲ್ಲವೆಂದು, ಶಾಸ್ತ್ರಸೌಲಭ್ಯದ ದೃಷ್ಟಿಯಿಂದ ಅದಕ್ಕೆ ಪ್ರಾಮುಖ್ಯತೆ ಕೊಟ್ಟಿಲ್ಲ. ಈ ಪಥವನ್ನೇ ಅರಿಸ್ಟಾಟಲ್ ರುದ್ರನಾಟಕದ ಲಕ್ಷಣದಲ್ಲಿ ಅನುಸರಿಸಿದ್ದಾನೆ.

ಅದೂ ಅಲ್ಲದೆ ಕಾವ್ಯಮೀಮಾಂಸೆಯ ಉದ್ದೇಶ ಕೇವಲ ಸಿದ್ಧಕವಿಗಳ ವಿಮರ್ಶೆ ಮಾತ್ರವಲ್ಲ, ಸಾಧ್ಯಕವಿಗಳ ದಿಗ್ದರ್ಶನವೂ ಕೂಡ. ಅರಿಸ್ಟಾಟಲಿನ ಗ್ರಂಥದ ಅವಲೋಕನದಿಂದ ಕವಿಗಳು ಸತ್ಕಾವ್ಯಗಳನ್ನು ಬರೆಯುವ ವಿಧಾನವನ್ನು ತಿಳಿಯಲು ಸಹಾಯವಾಗಬೇಕಾಗಿದ್ದಿತು. ಆದ್ದರಿಂದ ಕವಿಗಳಿಗೆ ಯಾವ ವಿಷಯದಲ್ಲಿ ವಿಮರ್ಶಕನು ಸಲಹೆಯನ್ನು ಕೊಡಬಹುದೋ ಅದನ್ನು ಮಾತ್ರ ಅರಿಸ್ಟಾಟಲ್ ಗಣನೆಗೆ ತೆಗೆದುಕೊಂಡಿದ್ದಾನೆ. ವಿಮರ್ಶಕನು ಕವಿಗೆ ದಾರಿಯನ್ನು ತೋರಿಸಬಹುದೇ ಹೊರತು ಕಣ್ಣನ್ನು ಕೊಡಲಾರ. ಇದನ್ನು ಅರಿಸ್ಟಾಟಲ್ ಚೆನ್ನಾಗಿ ಅರಿತಿದ್ದನು. ಶೈಲಿಯ ವಿಷಯವನ್ನು ಚರ್ಚಿಸುತ್ತಾ, ಕವಿಯ ಅಮೂಲ್ಯವಾದ ಶಕ್ತಿ ಉಪಮೆ; ಅದನ್ನು ಮಾತ್ರ ಇನ್ನೊಬ್ಬರು ಕಲಿಸುವುದಕ್ಕಾಗುವುದಿಲ್ಲ; ಅದು ಪ್ರಕೃತಿದತ್ತವಾಗಿಯೇ ಬರಬೇಕೆಂದು ನಿಷ್ಕೃಷ್ಟವಾಗಿ ನುಡಿದಿದ್ದಾನೆ. ಆದ್ದರಿಂದ ಕವಿಯ ದರ್ಶನ ಬೆಲೆ ಅವನಿಗೆ ಗೊತ್ತಿರಲಿಲ್ಲವೆಂಬುದು ಅಸಂಗತ. ಮತ್ತು ಕವಿಕವಿಗೂ ಭಿನ್ನವಾಗುವ ದರ್ಶನಗಳ, ಆಧಾರದ ಮೇಲೆ ಸಾಮಾನ್ಯಲಕ್ಷಣಗಳುಳ್ಳ ಸಾಹಿತ್ಯಪ್ರಕಾರಗಳನ್ನು ನಿರ್ದೇಶಿಸುವುದಂತೂ ಅಸಾಧ್ಯವೇ. ಆದ್ದರಿಂದಲೇ ಅರಿಸ್ಟಾಟಲ್ ತನ್ನ ಲಕ್ಷಣದಲ್ಲಿ ಕವಿದರ್ಶನವನ್ನು ಉಲ್ಲೇಖಿಸದಿರುವುದು. ಏಕೆಂದರೆ ಅದು ಪ್ರತಿಕವಿಭಿನ್ನ ಮತ್ತು ಅನುಕರಿಸಲು ಅಸಾಧ್ಯ. ಆದರೆ ಲಕ್ಷಣದಲ್ಲಿ ಉಪಯುಕ್ತವಾಗಿರುವ ಒಂದು ಪದ ರುದ್ರಕವಿಯ ದರ್ಶನರೀತಿಯನ್ನು ಸೂಚಿಸುತ್ತದೆ. ಅದು 'ಗಂಭೀರ' ಎಂಬುದು; ಅಂದರೆ ವೈನೋದಿಕದಂತೆ ಅದು ಕೇವಲ ಹಾಸ್ಯಾಸ್ಪದವಾದುದಾಗಲೀ, ಅಥವಾ ನೈತಿಕವಾದ ಬೆಲೆಯಿಲ್ಲದುದಾಗಲೀ ಅಲ್ಲ. ಆದರೆ ಅರಿಸ್ಟಾಟಲ್ ಈ ಪದದ ಅರ್ಥ ವಿವರಣೆಗೆ ಹೊರಡಲಿಲ್ಲ. ಏಕೆಂದರೆ ರುದ್ರದರ್ಶನದ ಸತ್ಯಾಸತ್ಯತೆ ತತ್ವಶಾಸ್ತ್ರ, ನೀತಿಶಾಸ್ತ್ರಕ್ಕೆ ಸಂಬಂಧಿಸಿದುದೇ ಹೊರತು, ಸಾಹಿತ್ಯವಿಮರ್ಶೆಗೆ ಸಂಬಂಧಪಟ್ಟದ್ದಲ್ಲವೆಂದು ಅವನ ಮತ.

೮

ಪ್ರತಿಯೊಂದು ರುದ್ರನಾಟಕದಲ್ಲೂ ಅರಿಸ್ಟಾಟಲ್ ಐದು ಭಾಗಗಳನ್ನು ನಿರ್ದೇಶಿಸುತ್ತಾನೆ. ಅವುಗಳು ದೃಶ್ಯ (Spectacle), ಗೀತ, ಶೈಲಿ, ಭಾವನೆ (Thought), ಪಾತ್ರ ಮತ್ತು ವಸ್ತು (Plot). ಇವುಗಳಲ್ಲಿ ವಸ್ತುವೇ ಅತಿ ಮುಖ್ಯವಾದುದೆನ್ನುತ್ತಾನೆ. ಈ ಅಭಿಪ್ರಾಯದ ವಿಷಯವಾಗಿ ಎದ್ದ ಬಿರುಗಾಳಿಯಂತೂ ಇನ್ನೂ ಶಾಂತವಾಗಿಲ್ಲ.

ರುದ್ರನಾಟಕ ಕಾರ್ಯವೊಂದರ ಅನುಕರಣ. ಕಾರ್ಯವೆಂದುದರಿಂದ ತಮ್ಮದೇ ಆದ ಸ್ವಭಾವ ಮತ್ತು ಭಾವನೆಗಳಿಂದ ಕೂಡಿದ ಕರ್ತೃಗಳನ್ನು ಅದು ಒಳಗೊಂಡಿರುತ್ತದೆ. ಕಾರ್ಯ ಉತ್ಪನ್ನವಾಗುವುದೂ ಪಾತ್ರದ ಸ್ವಭಾವ ಮತ್ತು ಭಾವನೆಗಳಿಂದ ಮತ್ತು ಜಯಾಪಜಯಗಳು ಅವಲಂಬಿಸಿರುವುದು ಕಾರ್ಯವನ್ನು. ಆದ್ದರಿಂದ, ಕಾರ್ಯದ ಅನುಕರಣವಿರುವುದು ವಸ್ತು (Plot) ವಿನಲ್ಲಿ; ವಸ್ತುವೆಂದರೆ ಘಟನೆಗಳ ಸಂವಿಧಾನ ಎನ್ನುತ್ತಾನೆ ಅರಿಸ್ಟಾಟಲ್. ಹಾಗೆಂದಮೇಲೆ ರುದ್ರನಾಟಕದ ಅಂಗಗಳಲ್ಲಿ ಬಹು ಮುಖ್ಯವಾದುದು ವಸ್ತುಸಂವಿಧಾನ. ಏಕೆಂದರೆ ರುದ್ರನಾಟಕವು ಜೀವನದ ಮತ್ತು ಒಂದು ಕಾರ್ಯದ ಅನುಕರಣವೇ ಹೊರತು, ವ್ಯಕ್ತಿಗಳದಲ್ಲ; ಜೀವನ-ಕಾರ್ಯ ವಿಶಿಷ್ಟವಾಗಿರುತ್ತದೆ ಮತ್ತು ಅದರ ಗುರಿ ಒಂದು ವಿಧವಾದ ಕಾರ್ಯಾಚರಣೆ, ಒಂದು ಗುಣವಲ್ಲ. ಪಾತ್ರವೇನೋ ವ್ಯಕ್ತಿಗಳ ಗುಣಗಳನ್ನು ನಿರ್ಧರಿಸುತ್ತದೆ, ಆದರೆ ವ್ಯಕ್ತಿಗಳು ಸುಖಿಗಳೋ ದುಃಖಿಗಳೋ ಆಗುವುದು ಅವರ ಕಾರ್ಯಗಳಿಂದ ಮಾತ್ರ. ನಾಟಕದಲ್ಲಿನ ಕಾರ್ಯದ ಗುರಿ ಪಾತ್ರ ಪ್ರದರ್ಶನವಲ್ಲ; ಕಾರ್ಯಕ್ಕೆ ಗೌಣವಾಗಿ ಪಾತ್ರವಿರುತ್ತದೆ. ಆದ್ದರಿಂದ ರುದ್ರನಾಟಕದ ಗುರಿ ಅದರ ಘಟನೆಗಳು ಮತ್ತು ವಸ್ತು; ಉದ್ದಿಷ್ಟವಿಷಯವೇ ಎಲ್ಲಕ್ಕಿಂತಲೂ ಮುಖ್ಯವಾದುದು. ಮತ್ತು ಕಾರ್ಯವಿಲ್ಲದಿದ್ದರೆ, ರುದ್ರನಾಟಕವೇ ಇರುವುದಿಲ್ಲ; ಪಾತ್ರವಿಲ್ಲದಿದ್ದರೂ ಅದು ಸಾಧ್ಯ. ತತ್ಕಾಲದ ಅನೇಕ ಕವಿಗಳು ಪಾತ್ರರಚನೆಯಲ್ಲಿ ಸಮರ್ಥರಾಗಿರಲಿಲ್ಲವಂತೆ. ಅದೂ ಅಲ್ಲದೆ, ಭಾಷೆ ಭಾವಗಳ ಉತ್ತಮ ಗುಣಗಳಿಂದ ಕೂಡಿದ ಪಾತ್ರವನ್ನು ಪ್ರದರ್ಶಿಸುವ ಭಾಷಣಗಳ ಮಾಲೆಯನ್ನು ಜೋಡಿಸಿದಲ್ಲಿ, ಅದು ರುದ್ರನಾಟಕದ ವಿಶಿಷ್ಟ ರಸವನ್ನುಂಟುಮಾಡಲು, ಇತರ ಭಾಗಗಳಲ್ಲಿ ದೋಷಗಳಿದ್ದರೂ ಸುವ್ಯಸ್ಥಿತವಾದ ವಸ್ತುವನ್ನು ಹೊಂದಿರುವ ನಾಟಕದಷ್ಟು ಯಶಸ್ವಿಯಾಗುವುದಿಲ್ಲವೆನ್ನುತ್ತಾನೆ. ಕವಿಗಳು ಮೊದಲು ಕುಶಲರಾಗುವುದು ಶೈಲಿ ಮತ್ತು ಶೀಲಪ್ರದರ್ಶನದಲ್ಲಿ; ಅನಂತರವೇ ಅವರು ವಸ್ತುಸಂವಿಧಾನಶಕ್ತಿಯನ್ನು ಪಡೆಯುವುದು. ಆದ್ದರಿಂದ ವಸ್ತು ಆದ್ಯಾತತ್ವ, ಮತ್ತು ರುದ್ರನಾಟಕದ ಜೀವದಂತಿದೆ; ಪಾತ್ರದ್ದು ಎರಡನೆಯ ಸ್ಥಾನ.

ಇದೇ ತತ್ವವನ್ನು ಚಿತ್ರಕಲೆಯಲ್ಲಿ ನಾವು ಕಾಣಬಹುದು. ಬಹಳ ಸುಂದರವಾದ ಬಣ್ಣಗಳು, ಅವ್ಯವಸ್ಥಿತವಾಗಿ ಇಡಲ್ಪಟ್ಟಲ್ಲಿ, ಅವು ಸುಣ್ಣದಿಂದ ಬರೆದ ಕೇವಲ ಹೊರ ಆಕೃತಿಯುಳ್ಳ ಚಿತ್ರದಷ್ಟು ಸಂತೋಷವನ್ನು ಕೊಡಲಾರವು. ಆದ್ದರಿಂದ ರುದ್ರ ನಾಟಕವು ಕಾರ್ಯವೊಂದರ ಅನುಕರಣ, ಮತ್ತು ಕಾರ್ಯೋಪಯೋಗಕ್ಕಾಗಿ ಮಾತ್ರ ಪಾತ್ರಗಳನ್ನು ಅನುಕರಿಸುತ್ತದೆ. ಇದು ಅರಿಸ್ಟಾಟಲಿನ ವಾದಸರಣಿ.

ಈ ಅಭಿಪ್ರಾಯಕ್ಕೆ ಪ್ರಬಲವಾದ ವಿರೋಧವಿದೆ, ಮತ್ತು ಅರಿಸ್ಟಾಟಲನು ಏಕೆ ಈ ರೀತಿ ಅಭಿಪ್ರಾಯಪಟ್ಟನೆಂದು ತಿಳಿಸಲು ಅನೇಕ ವಿಧವಾದ ವಿವರಣೆಗಳೂ ಕೊಡಲ್ಪಟ್ಟಿವೆ. ಗ್ರೀಕರ ರುದ್ರನಾಟಕ ಅವರ ಸಾಮೂಹಿಕ ಪೂಜೆಗಳಿಂದ ಜನ್ಯ ವಾದುದು. ಆ ಪೂಜೆಗಳಲ್ಲಿ ಕರ್ಮದ ಆಚರಣೆ, ಕ್ರಮಗಳಿಗೆ ಪ್ರಾಮುಖ್ಯತೆಯೇ ವಿನಾ ಅದನ್ನಾಚರಿಸುವ ವ್ಯಕ್ತಿಗಳಿಗಲ್ಲ. ಅರಿಸ್ಟಾಟಲ್ ಈ ತತ್ವವನ್ನು ನೇರ ವಾಗಿಯೋ ಅಥವಾ ಅನುಮಾನದಿಂದಲೋ ಗ್ರಹಿಸಿದ್ದನು. ಆದ್ದರಿಂದ ಅವನು ವಸ್ತುರಚನೆಗೆ ತನ್ನ ವಿಮರ್ಶೆಯಲ್ಲಿ ಪ್ರಥಮಸ್ಥಾನವನ್ನು ಕೊಟ್ಟಿರುತ್ತಾನೆ. ಮತ್ತು ಅರಿಸ್ಟಾಟಲಿನಿಗಿಂತ ಪೂರ್ವದಲ್ಲಿ ಮತ್ತು ಅವನ ಕಾಲಕ್ಕೆ ಮನಶ್ಶಾಸ್ತ್ರದ ಬೆಳೆವಣಿಗೆ ಸಾಕಷ್ಟು ಮುಂದುವರೆದಿರಲಿಲ್ಲ. ಆದ್ದರಿಂದ ಅವರ ಕವಿಗಳು ವ್ಯಕ್ತಿಚಿತ್ರಣದಲ್ಲಿ ಆಧುನಿಕರಷ್ಟು ಶಕ್ತರಾಗಲು ಸಾಧ್ಯವಾಗಲಿಲ್ಲ. ಅದೂ ಅಲ್ಲದೆ ಗ್ರೀಕರ ನಾಟಕ ಒಂದು ವಿಧವಾದ ಬಯಲಾಟ. ಸಹಸ್ರಾರು ಜನದ ಮುಂದೆ ಪ್ರದರ್ಶಿಸಬೇಕಾಗಿದ್ದಿತು. ಎಲ್ಲರಿಗೂ ನಟರು ಕಾಣಬೇಕಾದಲ್ಲಿ ಅವರು ದೊಡ್ಡದಾದ ಮುಖವಾಡಗಳನ್ನು ಧರಿಸಬೇಕಾಗಿದ್ದಿತು. ಈ ಮುಖವಾಡದ ಮೂಲಕ ಒಂದೇ ಒಂದು ಭಾವವನ್ನು ನಾಟಕದ ಕೊನೆಯವರಿಗೂ ಪ್ರದರ್ಶಿಸಬಹುದಾಗಿದ್ದಿತೇ ಹೊರತು, ಕ್ಷಣಕ್ಷಣಕ್ಕೆ ಬದಲಾಗುವ ಮಾನಸಿಕ ವ್ಯಾಪಾರ, ಭಾವಗಳನ್ನು ತೋರಿಸಲು ಸಾಧ್ಯವಿರಲಿಲ್ಲ. ಆದ್ದರಿಂದ ಕವಿಗಳು ಪಾತ್ರಕೌಶಲಕ್ಕೆ ಪ್ರವರ್ತಿಸುವುದು ಸಾಧ್ಯವಾಗಲಿಲ್ಲ. ಅವರ ಕಲೆ ವಸ್ತುರಚನೆಗೆ ಮೀಸಲಾಗಬೇಕಾಯಿತು. ಕಾಲ, ದೇಶಗಳ ಬಾಹ್ಯ ಅಡಚನೆಗಳಿಂದ ನಾಟಕಗಳಲ್ಲಿ ವಸ್ತುವಿಗೆ ಲಬ್ಧವಾದ ಪ್ರಾಮುಖ್ಯತೆಯನ್ನು ಅರಿಸ್ಟಾಟಲ್ ನಾಟಕ ಸಾಮಾನ್ಯಕ್ಕೇ ಅನ್ವಯಿಸಿದ್ದು ಮಾನವ ಸ್ವಭಾವಜನ್ಯವಾದ ಕ್ಷಮ್ಯದೋಷವೆಂದು ಕೆಲವು ವಿದ್ವಾಂಸರ ಮತ. ಇಷ್ಟಲ್ಲದೆ, ಅರಿಸ್ಟಾಟಲ್ ತನ್ನ ಆದರ್ಶ ನಾಟಕವನ್ನಾಗಿ ಪರಿಗ್ರಹಿಸಿದ್ದು ಸೋಫೋಕ್ಲಿಸನ ಈಡಿಪಸ್ ರೂಪಕವನ್ನು. ಈ ನಾಟಕದಲ್ಲಿ ದ್ಯೋತವಾಗುವುದು ಸಂವಿಧಾನಕೌಶಲವೇ ಹೊರತು ಪಾತ್ರಸೃಷ್ಟಿಯ ಪ್ರಗಲ್ಭತೆ ಯಲ್ಲ. ಇನ್ನು ಕೆಲವು ವಿದ್ವಾಂಸರ ಅಭಿಪ್ರಾಯದಲ್ಲಿ ಅರಿಸ್ಟಾಟಲ್ ಈ ನಾಟಕವನ್ನು ಆರಿಸಿದ್ದು ಅದು ತನ್ನ ಸೂತ್ರಕ್ಕೆ ಅನುಕೂಲವಾದ ನಿದರ್ಶನವಾಗಿದ್ದರಿಂದ ಮಾತ್ರ,

ಅದರ ನಿಜವಾದ ಕಾವ್ಯಗುಣಕ್ಕಲ್ಲ. ಷೇಕ್ಸ್‌ಪಿಯರ್‌ನ ನಾಟಕಗಳನ್ನು ನೋಡಿದ್ದರೆ ತನ್ನ ಈ ಅಭಿಪ್ರಾಯಗಳನ್ನು ಖಂಡಿತವಾಗಿ ಅರಿಸ್ಟಾಟಲ್ ಬದಲಾಯಿಸುತ್ತಿದ್ದ ನೆಂದು ಡ್ರೈಡನ್ ಹೇಳಿದುದನ್ನು ಅನೇಕ ವಿದ್ವಾಂಸರು ಹೃತ್ಪೂರ್ವಕವಾಗಿ ಅನುಮೋದಿಸುತ್ತಾರೆ. ಇನ್ನೂ ಕೆಲವರಂತೂ ರಚನಾಸ್ಖಾಲಿತ್ಯದಿಂದ ಕೂಡಿದ ತಾತ್ವಿಕದರ್ಶನಪ್ರಭಾಪೂರಿತವಾದ ಕೃತಿ ಮತ್ತು ರಚನಾಕೌಶಲದಿಂದ ಕೂಡಿದ ಪತ್ತೇದಾರಿ ಕಾದಂಬರಿಗಳಲ್ಲಿ, ಅರಿಸ್ಟಾಟಲ್ ತನ್ನ ಬಹುಮಾನವನ್ನು ಪತ್ತೇದಾರಿ ಕಾದಂಬರಿಗೇ ಕೊಡುತ್ತಿದ್ದನೆಂದೂ, ಅದು ಅವನ ಶಾಸ್ತ್ರಾಭ್ಯಾಸ ಜಡವಾದ ಮತಿ, ಹೃದಯಗಳ ಶೋಚನೀಯವಾದ ಸ್ಥಿತಿ ಎಂದೂ ಪರಿತಾಪಪಡುತ್ತಾರೆ.

ಈ ಟೀಕೆಗಳಲ್ಲಿ ವಾಸ್ತವಿಕವಾದ ಅಂಶಗಳೆಷ್ಟು, ತಾತ್ವಿಕವಾದವುಗಳೆಷ್ಟೆಂಬು ದನ್ನು ವಿವೇಚಿಸಬೇಕು. ಗ್ರೀಕರ ನಾಟಕಗಳೇನೋ ಸಾಮೂಹಿಕಪೂಜಾಜನ್ಯ, ಆದರೆ ಅರಿಸ್ಟಾಟಲಿನ ವೇಳೆಗೆ, ಪೂಜೆಯ ಆವರಣ ನಾಟಕಕ್ಕೆ ತಪ್ಪಿದ್ದಿತು, ಮತ್ತು ಅರಿಸ್ಟಾಟಲ್ ತನ್ನ ಗ್ರಂಥದಲ್ಲೆಲ್ಲೂ ಅದನ್ನು ಕಾವ್ಯವಿಮರ್ಶೆಗಾಗಿ ಉಪಯೋಗಿಸಿ ಕೊಂಡಿಲ್ಲ. ಎರಡನೆಯದಾಗಿ, ಗ್ರೀಕರ ನಾಟಕದಲ್ಲಿ ವ್ಯಕ್ತಿಚಿತ್ರಣ ಷೇಕ್ಸ್‌ಪಿಯರಿನ ನಾಟಕಗಳಲ್ಲಿನಷ್ಟು ಮುಂದುವರೆಯದಿದ್ದರೂ, ಅದು ಸೂತ್ರದ ಗೊಂಬೆಯಂತೆ ನಿರೂಪಿತವಾಗಿಲ್ಲ. ಈಸ್ಕಿಲಸ್‌ನಲ್ಲೇ ಇದನ್ನು ನಾವು ಕಾಣಬಹುದು. ಕ್ಲೈಟೆಮ್ನೆಸ್ಟ್ರಳ ಪಾತ್ರ ಮರೆಯಲಾಗದಂತಹುದು. ಪ್ರಾಮಿಥ್ಯೂಸ್ ನಾಟಕವಂತೂ ಪಾತ್ರಚಿತ್ರಣಕ್ಕೇ ಮೀಸಲಾಗಿರುವಂತೆ ಕಾಣುತ್ತದೆ. ಅರಿಸ್ಟಾಟಲಿನ ಪ್ರಿಯನಾಟಕ ವಾದ ಈಡಿಪಸ್‌ನಲ್ಲೂ, ನಾಯಕ ನಿರ್ಜೀವವ್ಯಕ್ತಿಯೇನಲ್ಲ. ಮತ್ತು ಯೂರಿಪಿಡೀಸ್‌ ನಂತೂ ತನ್ನ ನಾಟಕಗಳಲ್ಲಿ ವ್ಯಕ್ತಿಚಿತ್ರಣವನ್ನೇ ಉದ್ದೇಶಿಸಿ ಹೊರಟಂತೆ ಕಾಣುತ್ತದೆ. ಅರಿಸ್ಟಾಟಲ್ ಇದನ್ನು ಗಮನಿಸದೇ ಇರಲಿಲ್ಲ. ಅವನು ಈಡಿಪಸ್ ನಾಟಕವನ್ನು ಹೊಗಳಿದುದು ಸ್ವಮತಪುರಸ್ಕಾರಕ್ಕಂತೂ ಅಲ್ಲ. ಯೂರಿಪಿಡೀಸ್‌ನನ್ನು ಶ್ರೇಷ್ಠ ರುದ್ರಕವಿಯೆಂದು ತಾನೇ ಹೇಳಿರುತ್ತಾನೆ. ಆದರೆ ಅವನ ಕೃತಿಗಳಾವುವೂ ಶ್ರೇಷ್ಠಕೃತಿ ಗಳಲ್ಲವೆಂಬುದನ್ನೂ ಅಷ್ಟೇ ಖಚಿತವಾಗಿ ಅನ್ನುತ್ತಾನೆ. ಸೋಫೋಕ್ಲಿಸನೂ ಕೂಡ ಆಧುನಿಕರು ಪರಿಗಣಿಸಿರುವಂತಹ ಎರಡನೆಯ ದರ್ಜೆಯ ಕವಿಯೇನೂ ಅಲ್ಲ. ಅರಿಸ್ಟೋಫನಿಸ್ ಈಸ್ಕಿಲಸ್ ಮತ್ತು ಯೂರಿಪಿಡೀಸ್‌ರನ್ನು ತನ್ನ ನಾಟಕದಲ್ಲಿ ಪ್ರತಿಕಕ್ಷಿಗಳನ್ನಾಗಿ ಮಾಡಿದುದೂ, ಯೂರಿಪಿಡಿಸ್‌ನನ್ನು ತೆಗಳುವುದಕ್ಕಾಗಿಯೇ ಹೊರತು, ಸೋಫೋಕ್ಲಿಸ್ ಆ ಮಟ್ಟದ ಕವಿಯಲ್ಲವೆಂದಲ್ಲ. ಸೋಫೋಕ್ಲಿಸನ ಕವಿತ್ವದ ವಿಷಯವಾಗಿ ಅಂದಿನ ವಿಮರ್ಶಕರಲ್ಲಿ ಭಿನ್ನಾಭಿಪ್ರಾಯವೇ ಇರಲಿಲ್ಲ. ಅವನಿಗೆ ಪ್ರತಿಕಕ್ಷಿಗಳೂ ಇರಲಿಲ್ಲ. ಅರಿಸ್ಟೋಫನಿಸ್ ತನ್ನ ಇನ್ನೊಂದು ನಾಟಕದಲ್ಲಿ

ಅವನನ್ನು "ಮಧುಪ"ನೆನ್ನುತ್ತಾನೆ; ಅವನ ಕಾವ್ಯ "ಮಧುಪಾಕ"ವಂತೆ. ಇಷ್ಟೇ ಅಲ್ಲದೆ ಅರಿಸ್ಟಾಟಲಿನಿಗಿಂತ ಹೆಚ್ಚು ಕವಿಹೃದಯನಾದ ವಿಮರ್ಶಕನೆಂದು ಹೊಗಳಲ್ಪಟ್ಟಿರುವ ಲಾಂಜಿನಸ್ ಕೂಡ ತನ್ನ ಔನ್ನತ್ಯವಿಚಾರ ಚರ್ಚೆಯಲ್ಲಿ, ಔನ್ನತ್ಯಗುಣದ ಶ್ರೇಷ್ಠನಿದರ್ಶನವನ್ನು ಸೋಫೋಕ್ಲಿಸನ ಕಾವ್ಯದಿಂದ ಕೊಡುತ್ತಾನೆ, ಮತ್ತು ಆ ಗುಣವನ್ನು ಹೊಂದಿರುವ ಶ್ರೇಷ್ಠಕೃತಿ ಅರಿಸ್ಟಾಟಲ್ ಉದಾಹರಿಸಿರುವ ಈಡಿಪಸ್ ನಾಟಕವೆಂದೇ ಹೇಳುತ್ತಾನೆ. ಆದ್ದರಿಂದ ಅರಿಸ್ಟಾಟಲ್ ಕೇವಲ ತರ್ಕರಸಿಕ, ಸೂತ್ರಾವಲಂಬಿ ಎನ್ನುವುದನ್ನು ಒಪ್ಪಲಾಗುವುದಿಲ್ಲ.

ಈ ಚರ್ಚೆಯಲ್ಲಿ ಸ್ವಲ್ಪಭಾಗ ಪದಸಂದಿಗ್ಧತೆಯಿಂದ ಉಂಟಾಗಿದೆ. ಅರಿಸ್ಟಾಟಲ್ ಉಪಯೋಗಿಸಿರುವ "ಪಾತ್ರ" ಎಂಬ ಗ್ರೀಕ್ ಪದ ಅನೇಕಾರ್ಥವುಳ್ಳದ್ದು. ಅದಕ್ಕೆ ಶೀಲ, ಸ್ವಭಾವ, ಪ್ರಕೃತಿ ಎಂಬ ಅರ್ಥವೂ ಉಂಟು. ವ್ಯಕ್ತಿಯ "ನೈತಿಕದೃಷ್ಟಿಯನ್ನು ತೋರಿಸುವುದೇ" ಪಾತ್ರ ಎಂದು ಅವನೇ ಹೇಳಿರುತ್ತಾನೆ. ಆದರೆ ಆ ಪದಕ್ಕೆ ನಾವು ಉಪಯೋಗಿಸುವ "ಪಾತ್ರ" ಪದದ ವಿಶಾಲಾರ್ಥವೂ ಇದೆ. ಈ ಭೇದವನ್ನು ಗಮನಿಸದೆ, ಒಂದೇ ಅರ್ಥದಿಂದ ಅರಿಸ್ಟಾಟಲಿನ ಮಾತುಗಳನ್ನು ಅಳೆದರೆ ವಿರೋಧ ತೋರುವುದು ಆಶ್ಚರ್ಯವೇನಲ್ಲ. ಅವನು ಪಾತ್ರ ನಾಟಕದಲ್ಲಿ ಗೌಣ ಎನ್ನುವುದು, ಅವನು ಅದರ ಶೀಲವನ್ನು ಕುರಿತು ಆಡಿರುವುದು, ಮತ್ತು ನಾಟಕದಲ್ಲಿ ಅದರ ಸ್ಥಾನವನ್ನು ಕುರಿತದ್ದು. ನಾಟಕದ ಮುಖ್ಯಲಕ್ಷಣವೇ "ನಾಟ್ಯ", "ಕಾರ್ಯ"; ಅದಿಲ್ಲದಿದ್ದರೇ ನಾಟಕವೇ ಇರುವುದಿಲ್ಲ. ಪಾತ್ರವಿಲ್ಲದೇ ಕಾರ್ಯವಾಗುವುದಿಲ್ಲವೆಂಬುದು ನಿಜ, ಆದರೆ ಪಾತ್ರದಿಂದ ಸದಾ ಕಾರ್ಯವಾಗಲೇಬೇಕೆಂಬ ನಿಯಮವೇನೂ ಇಲ್ಲ. ಇದನ್ನು ನಾವು ಭಾವಗೀತದಲ್ಲಿ ಕಾಣಬಹುದು. ಈ ಅಭಿಪ್ರಾಯದಿಂದಲೇ ಅರಿಸ್ಟಾಟಲನು ಪಾತ್ರವಿಲ್ಲದಿದ್ದರೂ ನಾಟಕ ಸಾಧ್ಯವೆಂದು ಹೇಳಿರುವುದು; ಈ ಮಾತು ಅಕ್ಷರಶಃ ಸತ್ಯವಾಗಿಲ್ಲದಿದ್ದರೂ, ಅದರ ಸ್ಥೂಲವಾದ ಭಾವ ಸರಿಯೆಂದೇ ಹೇಳಬೇಕಾಗುತ್ತದೆ. ಷೇಕ್ಸ್‌ಪಿಯರಿನ ನಾಟಕಗಳನ್ನು ನೋಡಿದ್ದರೆ ಅರಿಸ್ಟಾಟಲ್ ತನ್ನ ಕೆಲವು ಅಭಿಪ್ರಾಯಗಳನ್ನು ಬದಲಾಯಿಸುತ್ತಿದ್ದನೆಂಬುದು ದಿಟ. ಆದರೆ ನಾಟಕದಲ್ಲಿ ವಸ್ತು-ಪಾತ್ರಗಳ ಮುಖ್ಯಾಮುಖ್ಯತೆಯ ವಿಷಯವಾಗಿ ಬದಲಾಯಿಸುತ್ತಿದ್ದನೇ ಎಂಬುದು ಸಂದೇಹ. ಅಂದರೆ ಷೇಕ್ಸ್‌ಪಿಯರ್‌ನನ್ನು ಎಡ್ಗರ್‌ವಾಲೆಸ್‌ಗಿಂತ ಕೀಳೆಂದು ಭಾವಿಸುತ್ತಿದ್ದನೆಂದರೆ ಅದು ತಪ್ಪು. ಸೋಫೋಕ್ಲಿಸನ ಈಡಿಪಸ್ ನಾಟಕವನ್ನು ಆದರ್ಶಕೃತಿಯನ್ನಾಗಿ ಪರಿಗ್ರಹಿಸಿದರೂ, ರುದ್ರಕವಿಗಳಲ್ಲಿ ಶ್ರೇಷ್ಠ ಯೂರಿಪಿಡೀಸ್ ಎನ್ನುತ್ತಾನೆ. ಅದೇ ರೀತಿಯಲ್ಲಿ ಷೇಕ್ಸ್‌ಪಿಯರ್‌ನನ್ನು ಶ್ರೇಷ್ಠ ರುದ್ರಕವಿಯೆಂದು ಅರಿಸ್ಟಾಟಲ್ ಧಾರಾಳವಾಗಿ ಹೊಗಳುತ್ತಿದ್ದನು, ಆದರೆ ಕೌಶಲ, ಕಲೆಯ

ದೃಷ್ಟಿಯಿಂದ ಅವನ ಕೃತಿಗಳು ಪೂರ್ಣವಾದುವುಗಳಲ್ಲವೆಂದು ಅಷ್ಟೇ ಖಚಿತವಾಗಿ ಹೇಳುತ್ತಿದ್ದನು, ಮತ್ತು ಅವುಗಳ ರಚನೆ ಸರಿಯಾಗಿದ್ದಲ್ಲಿ ಅವು ಇನ್ನೂ ಸುಂದರವಾಗುತ್ತಿದ್ದುವೆಂದು ಅಭಿಪ್ರಾಯಪಡುತ್ತಿದ್ದನು. ಈ ಅಭಿಪ್ರಾಯ ಅಸಾಧುವಾದುದೇನೂ ಅಲ್ಲವೆಂದು ೧೯೨೦ ರಿಂದೀಚೆಗೆ ಷೇಕ್ಸ್‌ಪಿಯರ್ ನಾಟಕದ ವಿಷಯವಾಗಿ ಪ್ರಕಟವಾದ ಗ್ರಾನ್‌ವಿಲ್ ಬಾರ್ಕರ್, ಎಲ್. ಸಿ. ನೈಟ್ಸ್, ಇ. ಇ. ಸ್ಟೋಲ್, ಟಿ. ಎಸ್. ಎಲಿಯಟ್, ಎಫ್. ಆರ್. ಲೀವಿಸ್‌ರವರ ವಿಮರ್ಶಾಲೇಖನ, ಗ್ರಂಥಗಳನ್ನು ನೋಡಿದವರಿಗೆ ಸ್ಪಷ್ಟವಾಗುತ್ತದೆ. ಷೇಕ್ಸ್‌ಪಿಯರಿನ ರುದ್ರನಾಟಕಗಳಲ್ಲಿ ವ್ಯಕ್ತಿವೈಭವದ ಪ್ರದರ್ಶಕಗಳು ಮಾತ್ರವಲ್ಲ, ಅವುಗಳ ಹಿಂಬದಿಯಲ್ಲಿರುವ ರಚನೆಯ ರೀತಿ ಅಷ್ಟೇ ಕುಶಲವಾದುದೆಂಬುದನ್ನು ಈ ವಿಮರ್ಶಕರು ಸಾಧಾರಗಳೊಡನೆ ಸ್ಥಾಪಿಸಿರುತ್ತಾರೆ. ವ್ಯಕ್ತಿಚಿತ್ರಣವೇನೋ ಆಕರ್ಷಣೀಯವೇ, ಆದರೆ ನಾಟಕ ಒಂದು ಕಲಾಕೃತಿಯಾಗಲೂ ಆ ವ್ಯಕ್ತಿ ಚಿತ್ರಣಕ್ಕೆ ಆಶ್ರಯಸ್ಥಾನವಾದ ವಸ್ತುವಿದ್ದೇ ಇರಬೇಕು. ರುದ್ರಕವಿಯ ದರ್ಶನವೂ ಕೂಡ ವಸ್ತುಸಂವಿಧಾನದ ಮೂಲಕ ಹೊರಬೀಳುವುದೇ ಹೊರತು, ಪಾತ್ರದ ಒಂದೆರಡು ಮಾತುಗಳಿಂದಲ್ಲ. ಆದ್ದರಿಂದಲೇ ವಸ್ತುಸಂವಿಧಾನವನ್ನು ನಾಟಕದ ಆದ್ಯತತ್ವ, ಜೀವ ಎನ್ನುತ್ತಾನೆ ಅರಿಸ್ಟಾಟಲ್. ಪಾತ್ರ ಅದರ ಮುಖ್ಯವಾದ ಅಂಗ ಮಾತ್ರ.

(ಸಶೇಷ)

ಎನ್. ಬಾಲಸುಬ್ರಹ್ಮಣ್ಯ.

ಕಾವ್ಯಾವಲೋಕನ

ಕಾಲಿದಾಸನ ಕಥಾನಕಗಳು—ಶ್ರೀ ವಿ. ಎಂ. ಇನಾಂದಾರ್ ಅವರು; ಪ್ರಕಾಶಕರು: ಶ್ರೀ ಆರ್. ಜಿ. ಹುಕ್ಕೇರಿ, ಮಾರ್ಕೆಟ್ ರೋಡ್, ಧಾರವಾಡ; ಪುಟ ೧೬೫; ಬೆಲೆ, ರೂ. ೧-೮-೦.

ಬಹಳ ಹಿಂದಿನಿಂದ ಕಾಳಿದಾಸನ ಮಹೋನ್ನತಿ ಒಂದಲ್ಲ ಒಂದು ರೂಪದಲ್ಲಿ ಕನ್ನಡದ ಮೂಲಕ ಕನ್ನಡಿಗರಿಗೆ ಗೋಚರವಾಗುತ್ತಿದೆ. ಪಂಪನ ಕಾಲದಿಂದ ಹಿಡಿದು ಇಂದಿನ ತನಕ ಕಾಳಿದಾಸನ ಕಾವ್ಯನಾಟಕಗಳನ್ನು ಆಂಶಿಕವಾಗಿಯೊ ಪೂರ್ಣವಾಗಿಯೊ ಭಾಷಾಂತರಿಸುವ, ಅನುವಾದಿಸುವ, ಅನುಕರಿಸುವ ಪ್ರಯತ್ನ ಸತತವಾಗಿ ನಡೆಯುತ್ತ ಬಂದಿದೆ. ಜೀವಂತವಾಗಿರುವ ಜನಾಂಗ ತನ್ನ ಮೇಲ್ಮೆಗಾಗಿ, ತನ್ನ ಬದುಕನ್ನು ಹಸನುಗೊಳಿಸುವುದಕ್ಕಾಗಿ, ತನ್ನ ಇರವಿಗಾಗಿ ಇದನ್ನು ಮಾಡಬೇಕಾಗುತ್ತದೆ. ಮಹಾಕವಿ ತನ್ನ ಕಾಲದ ಮತ್ತು ತನ್ನ ದೇಶದ ಜನರಿಗೆ ಮಾತ್ರ ಕಾವ್ಯವನ್ನು ಬರೆಯುವುದಿಲ್ಲ. ಮಹಾಕಾವ್ಯ ಎಲ್ಲ ದೇಶಗಳ, ಎಲ್ಲ ಕಾಲಗಳ ಜನರನ್ನು ಕುರಿತದ್ದು; ಅದು ಎಲ್ಲ ದೇಶಗಳ ಎಲ್ಲ ಪೀಳಿಗೆಯವರ ಸ್ವತ್ತು. ಬೌದ್ಧಿಕವಾಗಿ ಮಾನಸಿಕವಾಗಿ, ಸಾಮಾಜಿಕವಾಗಿ, ವೈಜ್ಞಾನಿಕವಾಗಿ ಊಹಾತೀತವಾದ ಪರಿವರ್ತನೆಗಳಾಗಿದ್ದರೂ ಆ ಕಾವ್ಯ ಹಳಸುವುದಿಲ್ಲ; ವಸಂತೋದಯದ ಕಾನನದಂತೆ ರಮ್ಯವಾಗಿರುತ್ತದೆ. ಪ್ರತಿಯೊಂದು ಯುಗದ ಸಹೃದಯರೂ ಅದರಲ್ಲಿ ಹೊಸತನ್ನು ಕಾಣುತ್ತಾರೆ. ಆಯಾಯ ಕಾಲದ ಅಭಿರುಚಿದೃಷ್ಟಿಗಳಿಗೆ ಅನುಗುಣವಾಗಿ ಅಂಥ ಕಾವ್ಯಗಳನ್ನು ವಿವರಿಸುವುದು, ಅನುವಾದಿಸುವುದು ಅತ್ಯಂತ ಆವಶ್ಯಕ.

ಇತ್ತೀಚೆಗೆ ಪದ್ಯಗದ್ಯ ರೂಪಗಳಲ್ಲಿ ಕಾಳಿದಾಸನ ಕಾವ್ಯನಾಟಕಗಳೆಲ್ಲ ಕನ್ನಡಕ್ಕೆ ಬಂದಿವೆ. ಆದರೂ ತಿಳಿಯಾದ ಭಾಷೆಯಲ್ಲಿ ಸಂಗ್ರಹವಾಗಿ, ಸಾಮಾನ್ಯರಿಗೆ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಒಂದು ಗ್ರಂಥ ಬೇಕಾಗಿತ್ತು. ಕಾದಂಬರಿಯ ಕಲೆಗಾರಿಕೆಯಲ್ಲಿ ಚೆನ್ನಾಗಿ ನುರಿತ ಶ್ರೀ ವಿ. ಎಂ. ಇನಾಂದಾರರ ಕೈಯಿಂದ ಬಂದಿರುವ ಈ ಸಂಗ್ರಹದಲ್ಲಿ ಋತುಸಂಹಾರವೊಂದು ಬಿಟ್ಟರೆ ಉಳಿದೆಲ್ಲ ಕೃತಿಗಳ ಪರಿಚಯ ಸಾಕಷ್ಟು ಒದಗುತ್ತದೆ. ಕಾಳಿದಾಸನ ಕೃತಿಗಳ ಆಳವಾದ ಅಭ್ಯಾಸಕ್ಕೆ ಇದು ಪ್ರಚೋದಕಾರಿಯಾಗುತ್ತದೆಂದು ಭಾವಿಸಬಹುದು. ಕೊನೆಯಲ್ಲಿ ಕೊಟ್ಟಿರುವ ಕವಿಯ ಮತ್ತು ಕಾವ್ಯದ ಸೂಕ್ಷ್ಮಪರಿಚಯ ಓದುಗರಿಗೆ ತುಂಬ ಸಹಕಾರಿಯಾಗುತ್ತದೆ.

ಇಸೋಪನ ನೀತಿಕಥೆಗಳು—ಶ್ರೀ ರಾ. ನ. ಮಳಗಿ; ಪ್ರಕಾಶಕರು : ಸಮಾಜ ಪುಸ್ತಕಾಲಯ, ಧಾರವಾಡ ; ಪುಟಗಳು ೮+೮೮ ; ಬೆಲೆ, ರೂ. ೦-೧೨-೦.

ಭಾರತೀಯರಿಗೆ ಪಂಚತಂತ್ರ ಹಿತೋಪದೇಶ ಹೇಗೊ ಗ್ರೀಕರಿಗೆ ಮತ್ತು ಪಾಶ್ಚಾತ್ಯರಿಗೆ ಇಸೋಪನ ಕಥೆಗಳು ಹಾಗೆ; ಅಷ್ಟೆ ಅಲ್ಲ, ಅವು ಪ್ರಪಂಚದಲ್ಲೆಲ್ಲ ಪ್ರಖ್ಯಾತವಾಗಿವೆ. ವ್ಯವಹಾರ ನೀತಿಧರ್ಮಗಳನ್ನು ಪ್ರಾಣಿಗಳ ಮೂಲಕ ಜನರಿಗೆ ಬೋಧಿಸುವ ರೀತಿ ಅರ್ಥಪೂರ್ಣವಾಗಿದೆ. ಪ್ರಾಣಿಗಳ ಜೀವನದಲ್ಲಿ ಮಾನವನ ಜೀವನವನ್ನು ಪ್ರತಿಬಿಂಬಿಸುವ, ಆ ಮೂಲಕ ಅವನ ಓರೆಕೋರೆಗಳನ್ನು ಎತ್ತಿ ತೋರಿಸುವ ಜಾಣ್ಮೆ ಶ್ಲಾಘನೀಯವಾಗಿದೆ.

ಇಸೋಪನ ಕಥೆಗಳಲ್ಲಿ ಅತ್ಯುತ್ತಮವಾದುವನ್ನು ಆರಿಸಿ ತುಂಬ ಸರಳವೂ ಹಿತವೂ ಆದ ರೀತಿಯಲ್ಲಿ ಬರೆದು ಶ್ರೀ ಮಳಗಿಯವರು ವಾಚಕರ ಮುಂದಿಟ್ಟಿದ್ದಾರೆ. ಒಂದೊಂದು ಕಥೆಗೂ ಆಕರ್ಷಣೀಯವೂ ಅರ್ಥಗರ್ಭಿತವೂ ಸುಂದರವೂ ಸೂಚ್ಯವೂ ಆದ ತಲೆ ಹೆಸರು ಕೊಟ್ಟಿರುವುದೂ, ಕೊನೆಯಲ್ಲಿ ಕಥೆಯ ತತ್ತ್ವದ ವಿವರಣೆಯನ್ನು ಸೇರಿಸಿರುವುದೂ ಜೊತೆಗೆ ಆ ತತ್ತ್ವವನ್ನು ಗರ್ಭೀಕರಿಸಿರುವ ಪ್ರಾಚೀನ ಕನ್ನಡ ಪದ್ಯಮಾಲೆಗಳನ್ನು ಕೂಡಿಸಿರುವುದೂ ಅಲ್ಲಲ್ಲಿ ಕನ್ನಡ ಗಾದೆಗಳನ್ನು ಜೋಡಿಸಿರುವುದೂ ಕೃತಿಯ ಉಪಯುಕ್ತತೆಯನ್ನು ಹೆಚ್ಚಿಸಿವೆ ಮತ್ತು ಅದರ ವೈಶಿಷ್ಟ್ಯವನ್ನು ಅಧಿಕಗೊಳಿಸಿವೆ.

*
* *

ತಾಯಿನಾಡು (ಸಂಕಲನ)—ಪ್ರಕಾಶಕರು : ಜೀವನ ಕಾರ್ಯಾಲಯ, ಬಸವನಗುಡಿ, ಬೆಂಗಳೂರು ; ಪುಟ ೨೩ ; ಬೆಲೆ, ರೂ. ೦-೮-೦.

ತಾನು ಹುಟ್ಟಿದ ಮನೆ, ಊರು, ಪ್ರಾಂತ್ಯ, ನಾಡು ಇವುಗಳ ಬಗ್ಗೆ ಯಾರಿಗಾಗಲಿ ವಿಶೇಷವಾದ ಅಭಿಮಾನ ಹೆಮ್ಮೆ ಆನಂದ ಇದ್ದೇ ಇರುತ್ತವೆ. ತನಗೆ ಜನ್ಮವಿತ್ತ ನೆಲ ಬಂಜರಾಗಿದ್ದರೂ ಅವನ ಪಾಲಿಗೆ ಶಕ್ತಿಯ ವಿದ್ಯುದಾಗರ; ಸೌಂದರ್ಯದ ತವನಿಧಿ. ಇಂಥ ಭಾವನೆಗಳು ಸಾಮಾನ್ಯವಾಗಿ ಪ್ರಪಂಚದ ಎಲ್ಲ ಹಿರಿಯ ಕಿರಿಯ ಕಾವ್ಯಗಳಲ್ಲಿ ಸಾಕಾದಷ್ಟು ಸಿಗುತ್ತವೆ.

ಕನ್ನಡ ಕವಿಗಳ ದೇಶಾಭಿಮಾನ ಮತ್ತು ದೇಶಭಕ್ತಿ ಎಂದೂ ಅರೆಕೊರೆಯಾದುದಲ್ಲ. ತಮ್ಮ ಗ್ರಾಮಗಳ, ತಮ್ಮ ಪ್ರಾಂತಗಳ ಸೌಂದರ್ಯವರ್ಣನೆಯಲ್ಲಿ ತಮ್ಮ ನಾಡಿನ ಸೌಂದರ್ಯವನ್ನೆ ಕಂಡಿದ್ದಾರೆ; ತಮ್ಮ ರಾಜರ ಶೌರ್ಯ ಮಹಿಮೋನ್ನತಿಗಳ ವರ್ಣನೆಯಲ್ಲಿ ನಾಡಿನ ಭಾಗ್ಯದೇವತೆಯ ಮಹಿಮೋನ್ನತಿಯನ್ನು ಕಂಡಿದ್ದಾರೆ; ರಾಜಶಕ್ತಿಯಲ್ಲಿ ಪ್ರಜಾಶಕ್ತಿಯನ್ನು ಕಂಡಿದ್ದಾರೆ. ಸಮಯ ಸಿಕ್ಕಿದರೆ ಸಾಕು

ಔಚಿತ್ಯದ ಎಲ್ಲೆಯನ್ನು ಮೀರಿದ ವರ್ಣನೆಯ ಮೂಲಕ ತಮ್ಮ ಉತ್ಕಟ ದೇಶಾಭಿಮಾನವನ್ನು ಪ್ರದರ್ಶಿಸುವ ಕವಿಗಳಿದ್ದಾರೆ. ಅನೇಕ ಶಾಸನಗಳಲ್ಲಿ ನಾಡುನುಡಿಗಳ ಹಿರಿಮೆಯ ವರ್ಣನೆ ಬರುತ್ತದೆ. ದೇಶಪ್ರೇಮವನ್ನು ಕುರಿತ ಹಲವಾರು ಪದ್ಯಗಳನ್ನು ಶಾಸನಗಳಿಂದ ಪಂಪ ರನ್ನ ಆಂಡಯ್ಯ ಮೊದಲಾದವರ ಕೃತಿಗಳಿಂದ ಉದ್ಧರಿಸಿ ಒಂದೆಡೆ ಕೂಡಿಸಿದೆ. ಕನ್ನಡನಾಡು ಒಂದು, ಕನ್ನಡನುಡಿ ಹಿರಿದು, ಕನ್ನಡ ನೆಲ ಸಮೃದ್ಧವಾದುದು, ಕನ್ನಡಿಗರು ಶೀಲವಂತರು ಎಂಬುದು ಈ ಸಂಕಲನಗ್ರಂಥದಿಂದ ಸ್ಪಷ್ಟವಾಗುತ್ತದೆ.

ದೇ.ಜ.ಗೌ.

*
* *

ಅಂಬುಜಾಕ್ಷಿ (ಸಾಮಾಜಿಕ ಕಾದಂಬರಿ)—ಲೇಖಕರು: ಎಸ್. ವೆಂಕಟರಾಜ; ಪ್ರಕಾಶಕರು: ಶ್ರೀ ಕೃಷ್ಣಪ್ರಕಾಶನ, ಯೋಗೀಂದ್ರಸದನ, ಉಡುಪಿ; ಪುಟಗಳು ೨+೯೮; ಬೆಲೆ, ರೂ. ೦-೧೪-೦.

ವೇಶ್ಯಾವೃತ್ತಿಯನ್ನು ಈಗಾಗಲೇ ಹಲವರು ಹಲವು ವಿಧವಾಗಿ ಚಿತ್ರಿಸಿರುವರು. ಅವರಲ್ಲಿ ಕೆಲವರು ಕಥೆಗಿಂತಲೂ ಹೆಚ್ಚಾಗಿ ಕಾಮದ ಬಣ್ಣನೆಗೆ ಕೈಹಾಕಿದ್ದಾರೆ, ತಮ್ಮ ಕಲ್ಪನೆಯಿಂದ ವೇಶ್ಯೆಯರು ಮಾಡಬಹುದಾದ ವಿವಿಧ ರೀತಿಯ ಕಾಮಕೇಳಿಯನ್ನೇ ಚಿತ್ರಿಸುವುದು ಖಂಡನೀಯ. ಅಶ್ಲೀಲತೆಯನ್ನು ಚಿತ್ರಿಸಿದರೂ ಅದರಿಂದ ಸಹೃದಯರಲ್ಲಿ ಉಂಟಾಗುವ ಭಾವ ಅಶ್ಲೀಲತೆಯುಳ್ಳುದಾಗಿರಬಾರದು; ಜಿಗುಪ್ಸಾಭಾವವನ್ನು ತರುವಂಥದಿರಬೇಕು. ಅದರಿಂದ ಅವನು ಅನೀತಿಯನ್ನು ಸಮಾಜದಿಂದ ಮೂಲೋತ್ಪಾಟನ ಮಾಡುವಂತಾಗಬೇಕು.

ಈ ಕಾದಂಬರಿಯಲ್ಲಿ ಬರುವ ಅಂಬುಜಾಕ್ಷಿಯು ವೇಶ್ಯೆಯ ಮಗಳು. ಆಕೆಯು ತಾಯಿಯ ವೇಶ್ಯಾವೃತ್ತಿಯನ್ನು ಕಂಡು ಹೇಸಿದವಳು. ಅದರಿಂದ ಆದರ್ಶಸತಿಯಾಗಿ ಬಾಳಬೇಕೆಂದು ಮನಸ್ಸಂಕಲ್ಪ ಮಾಡಿದವಳು. ಆಕಸ್ಮಿಕವಾಗಿ ಬಂದ ಶ್ರೀಧರಮೂರ್ತಿಯೆಂಬುವನು ಆಕೆಗೆ ಒಲಿದು, ಮತ್ತೆ ಕಣ್ಮರೆಯಾದ. ಅಂಬುಜಾಕ್ಷಿಗೆ ಒಂದು ಮಗುವೂ ಜನಿಸಿತು. ಅಷ್ಟರಲ್ಲಿಯೇ ಅವಳಿಗೆ ಅನ್ನಹಾಕುತ್ತಿದ್ದ ತಾಯಿ ಸಾಯಲು, ಅನ್ನಸಂಪಾದನೆಗೆ ಬೇರೆ ಮಾರ್ಗವಿಲ್ಲದೆ ತಾಯಿಯ ವೃತ್ತಿಯನ್ನೇ ಅವಲಂಬಿಸಿದಳು. ಇದರಿಂದಲೇ ಲೇಖಕರು ಮುನ್ನುಡಿಯಲ್ಲಿ 'ಅಂಬುಜಾಕ್ಷಿಯು ದೋಷಿಯಾದರೂ ನಿರ್ದೋಷಿ' ಎಂದು ಹೇಳುತ್ತಾರೆ. ಇದರಲ್ಲಿ ದೋಷಿಯೆಂದರೆ, 'ವೇಶ್ಯೆಯ ಮಗಳನ್ನು ಮದುವೆಯಾದರೆ ಸಮಾಜದಲ್ಲಿ ಸ್ಥಾನವಿಲ್ಲ' ಎಂದೋ ಏನೋ ತಪ್ಪಿಸಿಕೊಂಡುಹೋದ ಶ್ರೀಧರಮೂರ್ತಿಯೇ. ಮೊದಲು ಒಲಿದು ಆಮೇಲೆ ಕೈಬಿಟ್ಟದ್ದು

ಮಹಾಪರಾಧ. ಕೊನೆಗೆ ಅಂಬುಜಾಕ್ಷಿಯ ಕೈಗೆ ಆತನು ಸಿಕ್ಕುತ್ತಾನೆ. ಆಕೆಯು ಆತನ ಮೇಲೆ ಸೇಡುತೀರಿಸಿಕೊಳ್ಳಬಹುದಿತ್ತು. ಆದರೆ, ಸಂಸಾರಿಯಾದ ಶ್ರೀಧರ ಮೂರ್ತಿಯು ಸಂಸಾರವನ್ನು ಹಾಳುಮಾಡಲು ಇಷ್ಟವಿಲ್ಲದೆ ತಾನೇ ದೋಷಿಯೆಂದು ಸುಮ್ಮನಾಗುತ್ತಾಳೆ.

ಈ ಕಾದಂಬರಿಯಲ್ಲಿ ಬರುವ ವರ್ಣನೆಯು ಹಿತಮಿತವಾಗಿದೆ. ವೇಶ್ಯಾವೃತ್ತಿಯನ್ನು ಚಿತ್ರಿಸಿದರೂ ಅಶ್ಲೀಲತೆಯ ಸೋಂಕಿಲ್ಲ. ಅಂಬುಜಾಕ್ಷಿಯ ನಿಸ್ಸಹಾಯ ಸ್ಥಿತಿಯನ್ನು ನೋಡಿ ಯಾರಿಗಾದರೂ ಅನುಕಂಪ ಉಂಟಾಗದಿರದು; ಅವಳ ಅಪರಾಧ ಕ್ಷಮ್ಯವೆಂದು ತೋರದಿರದು. ಈ ಕಾದಂಬರಿಯನ್ನು ಓದಿದಾಗ ಸಮಾಜದ ಕುಂದುಕೊರತೆಗಳು ಕಾಣುತ್ತವೆಯೇ ಹೊರತು, ವಾಚಕರ ಮನಸ್ಸು ಉದ್ರೇಕಕ್ಕೆ ಪಕ್ಕಾಗುವುದಿಲ್ಲ.

ಬಿ. ಎಸ್. ಸಣ್ಣಯ್ಯ

*
* *

ಸ್ವಪ್ನನೌಕೆ (ಕವನಸಂಗ್ರಹ)—ಬರೆದವರು: ಕುಸುಮಾಕರ ದೇವರ ಗೆಣ್ಣೂರು; ಪ್ರಕಾಶಕರು: ಪುರೋಹಿತ ಪಬ್ಲಿಷಿಂಗ್ ಹೌಸ್, ಸೊಲ್ಲಾಪುರ; ಪುಟಗಳು ೭೨+೧೦; ಬೆಲೆ, ರೂ. ೦-೧೨-೦.

ಹಿರಿಯರಾದ ಬೇಂದ್ರೆ, ಮುಗಳಿಯವರ ಹರಕೆ, ಆಶೀರ್ವಾದಗಳೊಂದಿಗೆ ಕುಸುಮಾಕರ ದೇವರ ಗೆಣ್ಣೂರು ಅವರು ತಮ್ಮ ಮೊದಲನೆಯ ಕವನಸಂಗ್ರಹವಾದ 'ಸ್ವಪ್ನನೌಕೆ'ಯನ್ನು ತೇಲಿಸಿದ್ದಾರೆ. ಇದೊಂದು ಪ್ರೇಮಗೀತೆಗಳ ಸಂಗ್ರಹ. ಪ್ರಣಯ ಅದರ ಕೆಲವು ಮುಖಗಳು, ಸಂಸಾರ ಅದರ ಕೆಲವು ಮುಖಗಳು ಇಲ್ಲಿನ ಕವಿತೆಗಳ ವಸ್ತುವಾಗಿವೆ. ಶುದ್ಧ ಪ್ರೇಮ, ಪ್ರಣಯ ಬಾಳುವೆಯ ಅಮೂಲ್ಯ ಫಲ. ಹಾಗೆಯೇ ಶುದ್ಧ ಪ್ರೇಮಗೀತೆಗಳೂ ಕಾವ್ಯದ ವಿರಳಫಲ. ಪ್ರೇಮವನ್ನು ವಸ್ತುವಾಗುಳ್ಳ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಪ್ರೇಮವೇ ಕಾಣದೆ ಹೋಗಿರುವುದೂ, ಉದ್ದೇಶ ನಗೆಗೀಡಾಗುವುದೂ ಹೊಸ ವಿಚಾರವಲ್ಲ. ಸರಳತೆಯನ್ನೋ ನವ್ಯತೆಯನ್ನೋ ಅರಸಿಕೊಂಡು ಹೋಗಿ ಹಾದಿ ತಪ್ಪಿರುವುದೂ, ಛಂದಸ್ಸಿನ ಸ್ವಚ್ಛಂದ ಮಾರ್ಗದಲ್ಲಿ ನಡೆದು ಗದ್ಯಪದ್ಯಗಳ ವ್ಯತ್ಯಾಸ ಕಾಣದೆ ಹೋಗಿರುವುದೂ ಇಂದಿನ ಕವಿತೆಯ ಲಕ್ಷಣಗಳಾಗಿವೆ.

ದೇವರ ಗೆಣ್ಣೂರರ ಈ ಸಂಗ್ರಹದಲ್ಲಿ ಕೆಲವು ಪ್ರೇಮಗೀತಗಳು ಸುಂದರವಾಗಿವೆ, ಸರಳವಾಗಿವೆ. ಹಳೆಯ ಚಿತ್ರಮಾತುಗಳನ್ನೇ ಬಳಸಿಕೊಂಡಿದ್ದರೂ ಅಲ್ಲಲ್ಲಿ ಅವರ ಕಲ್ಪನೆ ಅದಕ್ಕೆ ಹೊಸತನವನ್ನು ತಂದುಕೊಟ್ಟಿದೆ. ಇಂದಿನ ತರುಣಕವಿಗಳು ಹೇಗೆ

ಕುವೆಂಪು, ಬೇಂದ್ರೆಯವರ ಪ್ರಭಾವದಿಂದ ತಪ್ಪಿಸಿಕೊಳ್ಳಲು ಸಮರ್ಥರಾಗಿಲ್ಲವೋ ಹಾಗೆ ಪ್ರೇಮಗೀತಗಳನ್ನು ಬರೆಯುವವರೂ 'ಮೈಸೂರ ಮಲ್ಲಿಗೆ'ಯ ಕಂಪಿನಿಂದ ತಪ್ಪಿಸಿಕೊಳ್ಳಲು ಸಮರ್ಥರಾಗಿಲ್ಲ. ಹಾಗೆ ತಪ್ಪಿಸಿಕೊಳ್ಳುವವರು ಮಾತ್ರ ಕಾವ್ಯದಲ್ಲಿ ಹೊಸ ಹಾದಿಯನ್ನು ಸೃಜಿಸಬಲ್ಲವರಾಗುತ್ತಾರೆ. ದೇವರ ಗೆಣ್ಣೂರರ ಕವಿತೆಗಳ ಮೇಲೆ ನರಸಿಂಹಸ್ವಾಮಿಯವರ ಕವಿತೆಗಳ ಪ್ರಭಾವ ಅಪಾರವಾಗಿದೆ. ವಸ್ತುವಿನಲ್ಲಿ, ಭಾವದಲ್ಲಿ, ಛಂದಸ್ಸಿನಲ್ಲಿ, ಶೈಲಿಯಲ್ಲಿ, ಆರಂಭಮುಕ್ತಾಯಗಳಲ್ಲಿ ಇಲ್ಲಿನ ಬಹುಪಾಲು ಕವಿತೆಗಳು ನಮಗೆ ಮೈಸೂರ ಮಲ್ಲಿಗೆ ಕವಿತೆಗಳ ನೆನಪು ಕೊಡುತ್ತವೆ. ಅವುಗಳ ಗಾಢವಾದ ಪ್ರಭಾವವನ್ನು ಎತ್ತಿ ತೋರುತ್ತವೆ. ಹಾಗಾಗಿ ಈ ಕವಿಯ ವಿಶಿಷ್ಟತೆಯನ್ನು ಗುರುತು ಮಾಡಿ ಹೇಳುವುದು ಕಷ್ಟವಾಗುತ್ತದೆ.

'ಏಳಿರಲ ಹೊತ್ತಾಯ್ತು' ಕವಿತೆಯ ವಸ್ತು 'ರಾಯರು ಬಂದರು ಮಾವನ ಮನೆಗೆ' ಎಂಬುದರದು. 'ಹುಟ್ಟುಹಬ್ಬ' ಎಂಬ ಕವಿತೆಯ ಮೊದಲಪದ್ಯ ಓದುತ್ತಲೇ ಅದರ ರೀತಿ ಎರವುತಂದದ್ದೆಂದು ಗೊತ್ತಾಗುತ್ತದೆ. ಹಾಗೆಯೇ, ಪುಣ್ಯವಂತೆ, ಇಂತಹವೆ ನಿಮ್ಮ ಕವನ, ಸಾಕಿನ್ನು ಹುಡುಗಾಟ, ನಲ್ಲ ಬರುವನು ಎಂದು ಮುಂತಾದ ಕವಿತೆಗಳು ಯಾವುದೋ ನೆರಳನ್ನು ಆಶ್ರಯಿಸಿರುವುದು ಮೊದಲ ಓದಿಗೇ ಗೊತ್ತಾಗುತ್ತದೆ. ಅನುಕರಣದಿಂದ ಮುಕ್ತನಾಗಬೇಕೆಂದು ಮುಗಳಿಯವರು ಸೂಚ್ಯವಾಗಿ ಹೇಳಿರುವ ಮಾತನ್ನು ಈ ಕವಿ ಸ್ವೀಕರಿಸಬೇಕು. ಸ್ವಂತ ಹಾದಿಯಲ್ಲಿ ನಡೆಯಬೇಕು.

> "ಏನು ಕಡಿಮೆಯು ನನಗೆ? ಮುತ್ತಿನಂತಹ ಎರಡು
> ಮಕ್ಕಳಿವೆ ಅವೆನನಗೆ ವಜ್ರದೋಲೆ
> ನಿಮ್ಮ ವಿಶ್ವಾಸವನೆ ಉಟ್ಟು ಹೊದೆಯುವೆನಲ್ಲ
> ಬೇತೆ ಜರತಾರಿಗಳು ಏಕೆ ಮೇಲೆ?"

ಎಂಬಲ್ಲಿ, ಹಾಗೂ

> "ಪಾರಿಜಾತಕೆ ಮತ್ತೆ ಬೇರೆ ಬಣ್ಣವು ಬೇಕೆ?
> ಸಂಪಗೆಗೆ ಸೌರಭದ ಸಾಲ ಬೇಕೆ?
> ಒಲವು ಮಲ್ಲಿಗೆ ಮುಡಿದ ಬಾಳಹೆಣ್ಣಿನ ಮುಡಿಗೆ
> ಇನ್ನುಳಿದ ಹೂವುಗಳ ಆಸೆಯೇಕೆ?

ಎಂಬಲ್ಲಿ ದೇವರ ಗೆಣ್ಣೂರರು ಓದುಗರ ಮನ ಸೆಳೆಯುತ್ತಾರೆ. ಹಾಗೆಯೇ

> ಅಡುಗೆ ಮನೆಯಲಿ ಹೊಕ್ಕೆ, ದೇವರೆದುರಲಿ ದೀಪ
> ರಾಮನಾಗಮನವನು ಕಾಯ್ವಹಕ್ಕಿ
> ತೊಳಲುವಂದದಿ ಹೇಗೋ ತೆವಳುತ್ತಲುಳಿದಿತ್ತು
> ಜೀವವನು ಹಿಡಿದಿತ್ತು ನೊಂದು ಬಿಕ್ಕಿ

ಎಂಬೆಡೆಯಲ್ಲಿ, ಮತ್ತು

ಒಲವು ತಾ ಮೈ ತಳೆದು, ಚೆಲುವಿಕೆಗೆ ಕಣ್ಣಾಗಿ
ನಿಂತಿಹುದು ಎದುರಿನಲಿ ಮುದವನುಟ್ಟು
ನನ್ನ ನಿದ್ರೆಯು ಕೆಟ್ಟಿತೆಂಬ ತಳಮಳದಲ್ಲಿ
ಕ್ಷಮೆಯ ಕೇಳುತಲಿತ್ತು ಮೂಗುಬಟ್ಟು

ಇವೇ ಮೊದಲಾದ ಕಡೆಯಲ್ಲಿ ತಮ್ಮ ಕಲ್ಪನೆಯನ್ನು ತೇಲಿಸಿದ್ದಾರೆ. ತನ್ನ ಬಗೆಗೆ ಜನ ಆಸೆಯನ್ನು ಇಟ್ಟುಕೊಳ್ಳುವುದು ತಪ್ಪಾಗಲಾರದೆಂದು ಸೂಚಿಸಿದ್ದಾರೆ. ಗುರುವಿನ ಹಾರೈಕೆಯೊಡನೆ, ದೊಡ್ಡ ಆದರ್ಶಗಳನಿಟ್ಟುಕೊಂಡು ಕಾವ್ಯಕ್ಷೇತ್ರದಲ್ಲಿ ನಡೆಯುತ್ತಿರುವ ದೇವರ ಗೆಣ್ಣೂರರು ಸತತ ಅಭ್ಯಾಸ, ಅನುಭವದ ಪಕ್ವತೆ ಇವುಗಳಿಂದ ನಾಳೆ ದೊಡ್ಡ ಕವಿಯಾಗಿ, ಅವರ ಬಗೆಗೆ ಆಸೆಯನಿಟ್ಟುಕೊಂಡವರಿಗೆ ನಿರಾಸೆಯಾಗದಂತೆ ದೇವರು ನಡೆಸಿಕೊಡಲಿ ಎಂದು ನಮ್ಮ ಪ್ರಾರ್ಥನೆ.

ಹಾ. ಮಾ. ನಾಯಕ.

*
* *

ಭಾವತೀರ್ಥ (ಕವಿತಾಸಂಕಲನ)—ಕವಿ: ಶ್ರೀ ಡಿ. ಎಸ್. ಕರ್ಕಿ; ಪ್ರಕಾಶಕರು: ಉದಯ ಸಾಹಿತ್ಯ ಪ್ರಕಾಶನ, ಬೆಳಗಾವಿ; ಪುಟಗಳು ೬೪+೧೦; ಬೆಲೆ, ರೂ. ೧-೦-೦.

'ನಕ್ಷತ್ರಗಾನ'ವೆಂಬ ತಮ್ಮ ಮೊದಲನೆಯ ಕವನಸಂಕಲನದಿಂದ ಕನ್ನಡ ಜನರಿಗೆ ಪರಿಚಿತರಾದ ಶ್ರೀ ಕರ್ಕಿಯವರ ಈ ಎರಡನೆಯ ಸಂಕಲನಕ್ಕೆ ಒಂದು ವಿಶಿಷ್ಟತೆಯಿದೆ. ಇಲ್ಲಿನ ಇಪ್ಪತ್ತು ಕವನಗಳು ಕನ್ನಡನಾಡಿನ ವಿವಿಧ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿದಾಗ ಕವಿಯ ಹೃದಯದಿಂದ ಹೊಮ್ಮಿ ಬಂದುವಾಗಿವೆ.

'. . . ಮಲೆನಾಡಿನ ಗಿರಿ ನಿರ್ಝರದಂತೆಯೇ ಸ್ವಚ್ಛಂದವಾಗಿ, ಪವಿತ್ರವಾಗಿ, ಪಾವನವಾಗಿ ಅವರ ಕಾವ್ಯದ ಸೆಲೆಯು ಹೊರಹೊಮ್ಮಿದೆ. ಅದರ ಮಂಜುಳಗಾನಕ್ಕೆ ಮೋಹಿಸದವರು ವಿರಳ. ಈ ಹೊನಲಿನಲ್ಲಿ ಮೀಯುವುದು ಆರೋಗ್ಯಕರ, ಆಹ್ಲಾದಕರ . . . ಈ 'ಭಾವತೀರ್ಥ'ದಲ್ಲಿ ಶುದ್ಧ ಹೃದಯಸಂಸ್ಕಾರವಿದೆ. ಪುನೀತಚಿತ್ತದ ಪ್ರಸನ್ನತೆಯಿದೆ . . . ಕ್ಷೇತ್ರಪ್ರವಾಸಿಯಾದ ಕವಿ ಸಾತ್ವಿಕಜೀವನದ ಪ್ರಶಾಂತ ಪ್ರಕಾಶದಲ್ಲಿ ನಾಡ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿ ತನ್ನಲ್ಲುದಿಸಿದ ಬೆಳಕನ್ನು ಉಳಿದವರಿಗೂ ನೀಡಿದ್ದಾನೆ. . . . ಭಾವಿಕರಾದರೂ ಶ್ರೀ ಕರ್ಕಿಯವರು ಸಾಂಪ್ರದಾಯಿಕರಲ್ಲ. ಅವರ ದೃಷ್ಟಿಯಲ್ಲಿ ಆಧುನಿಕತೆಯಿದೆ; ನಾವೀನ್ಯವಿದೆ . . .' ಎಂದು ಮುಂತಾಗಿ ಈ ಕೃತಿಗೆ 'ಕಿರಿನುಡಿ'ಯನ್ನು ಬರೆದ ಪ್ರಿನ್ಸಿಪಲ್ ವಿ. ಕೃ. ಗೋಕಾಕ

ಅವರು ಕವಿಯ ದೃಷ್ಟಿಯನ್ನೂ, ಸೃಷ್ಟಿಯನ್ನೂ ಕುರಿತು ಉದಾರವಾದ ಮಾತು ಗಳನ್ನು ಆಡಿದ್ದಾರೆ.

'ಸುಳಿದು ಬಾ, ಎಲೆ ಜೀವ, ಚೆಲುವಾಡುವೆಡೆಗಳಲಿ'

. . . .

ಏಿಂದೇಳು ನಿನ್ನೊಳಗೆ ತೆರೆಯಾಡುತಿದೆ ತೀರ್ಥ!

ಎಂದು 'ಭಾವತೀರ್ಥ'ದಲ್ಲಿ ಹೇಳುವ ಕವಿ 'ಗೋಕರ್ಣದ ತೀರದಲ್ಲಿ'

ಗುಡಿಯಲ್ಲಿ ಎಲ್ಲವೂ ನಕಾರ
ಹೊರಗುಂಟು ಸತ್ಯ ಸಾಕಾರ

ಎನ್ನುತ್ತಾರೆ. ಇಂಥ ಮಾತುಗಳಲ್ಲಿ 'ಚೆಲುವೇ ದೇವರು, ಒಲವೇ ಪೂಜೆ' ಎಂದು ನಂಬಿದ ಕವಿಯ ಆತ್ಮಗತಿಯನ್ನು ಕಾಣಬಹುದಾಗಿದೆ. ಪುಣ್ಯಕ್ಷೇತ್ರಗಳು, ಅಲ್ಲಿನ ಗುಡಿಗೋಪುರಗಳೂ ಕರ್ಕಿಯವರ ಸಂದರ್ಶನದ ನಿಮಿತ್ತಮಾತ್ರವಾಗಿವೆ. ಗೋಪುರದ ಮೇಲೆ ತೇಲುವ ಮೋಡಗಳನ್ನೂ, ಅವುಗಳ ಮೇಲಿನ ಸುನೀಲ ಆಗಸವನ್ನೂ ಕಾಣಲು ಕರ್ಕಿಯವರು ಸಮರ್ಥರಾಗಿದ್ದಾರೆ. ಗುಡಿಯ ಒಳಗೆ ಸೇರಿರುವ ಮಹಾಬಲೇಶ್ವರನ ನಗೆಯೇ ಹೊರಗಿನ ಲೋಕದಲ್ಲೆಲ್ಲೂ ಚೆಲ್ಲಿರುವುದನ್ನು ಗಮನಿಸಲು ಅವರು ಶಕ್ತರಾಗಿದಾರೆ. ಶಿಲೆಯಲ್ಲಿ ಕಲೆಯಾಗಿ ಅರಳಿರುವ ಕನ್ನಡಿಗರ ಜೀವನ ಮಂದಾರದ ಕಂಪನ್ನು ಅವರು ತಮ್ಮ ನುಡಿಗಳಲ್ಲಿ ಸೆರೆಹಿಡಿಯಲು ಪ್ರಯತ್ನಿಸಿದಾರೆ. ಈ ಪ್ರಯತ್ನದಲ್ಲಿ ಅವರು ಅಲ್ಲಲ್ಲಿ ಯಶಸ್ವಿಯಾಗಿರುವುದು ಕಂಡುಬರುತ್ತದೆ.

'ಹರಿಯುತಿರುವೆನು ಹರಿಯುತಿರುವೆನು ಬಾಳನೆಂತೋ ನೂಕುತ
ಹೋದ ಹಗಲನು ಬಂದ ಇರುಳನು ನೊಂದ ಮನದಲಿ ತೂಗುತ'

ಎಂದು ಆರಂಭವಾಗುವ ಈ ಸಂಕಲನದ ಸುದೀರ್ಘ ಕವನವಾದ 'ತುಂಗಭದ್ರೆಯ ಹಾಡು' ಎಂಬುದು ನೆನ್ನೆಯದನ್ನು ನೆನೆದು, ನಾಳಿನದನ್ನು ಯೋಚಿಸುವ ಇಂದಿನ ಹಾಡಾಗಿದೆ. ತುಂಗಭದ್ರೆಯಂತೆಯೇ ಹರಿಯುವ ಈ ಹಾಡಿನಲ್ಲಿ ಕನ್ನಡಜನದ ಗತವೈಭವ ತಾನೇತಾನಾಗಿ, ಸೂಚ್ಯವಾಗಿ ಚಿತ್ರಿತವಾಗಿದೆ.

ಕೃಷ್ಣದೇವನ ದೃಷ್ಟಿಯರಳಿದ ತೆರದಿ ಅರಳಿತು ಸೌಂದರ
ವಿಜಯನಗರದ ಸರ್ವಸುಂದರ ಮಂದಿರಂಗಳ ಚಂದಿರ

ಆದರೆ ಆ ಸೌಂದರ-ಚಂದಿರಗಳು ಇಂದು ಹಿಂದಿನ ಮಾತುಗಳಾಗಿ ಹೋಗಿವೆ; ಅದರ ಕ್ರಿಯಾಶಕ್ತಿ ಇತಿಹಾಸದ ಮಾತಾಗಿ ಉಳಿದಿದೆ. ನಮ್ಮ ಸಣ್ಣತನದ ಎದುರಿನಲ್ಲಿ ಆ ಹಿರಿತನ ಕನಸಾಗಿ ಹೋಗಿದೆ. ಕಣ್ಣೆದುರು ಇರುವಂಥದನ್ನೇ ಕನಸೆಂದು ಭ್ರಮಿಸುವ ಜನ ನಾವಾಗಿದ್ದೇವೆ. ಒಂದು ಕಾಲದಲ್ಲಿ ಕಲ್ಲು ಜೀವವಾಯಿತು; ಇಂದು ಜೀವಗಳು

ಕಲ್ಲಾಗುತ್ತಲಿವೆ. ವಿಜಯನಗರದ ಕಲಾವೈಭವದ ಅವಶೇಷವನ್ನು ಕಂಡವರಿಗೆ ಯಾರಿಗೆ ತಾನೆ ಹೀಗೆಲ್ಲ ಅನ್ನಿಸದಿರದು ?

ವಿಜಯನಗರದ ಒಂದರ ಕಥೆ ಇದೆ? ತುಂಗಭದ್ರೆಯೊಬ್ಬಳ ಹಾಡೆ ಇದು? ಕಾವೇರಿಯಿಂದ ಗೋದಾವರಿ ವರೆಗಿನ ಎಲ್ಲ ಜಲಕನ್ಯೆಯರ ಹಾಡೂ ಇದೆ. ಎಲ್ಲ ಅವಶೇಷಗಳ ಕಥೆ ಇದೇ. ಕವಿಯಾದ ಸೂಕ್ಷ್ಮಸಂವೇದಿಯಾದ ಕರ್ಕಿಯವರು ಇದನ್ನು ಗಮನಿಸಿದ್ದಾರೆ. ಅಷ್ಟಕ್ಕೇ ನಿಲ್ಲದೆ ಅದರ ಮುಂದಿನದನ್ನೂ ಅವರು ಕಂಡಿದಾರೆ. ಆದ್ದರಿಂದಲೇ ಒಂದೇ ಸಮನೆ ಹರಿಯುವ ತುಂಗಭದ್ರೆಗೂ ಒಂದು ಆಸೆಯಿದೆ; ಹೊಸ ಯುಗವನ್ನು ಕಾಣುವ ಹಂಬಲು ಮರೆಯಾಗಿಲ್ಲ.

ಜೋಗ ಅವರಿಗೆ ಜಲವು ರಚಿಸಿದ ಕಾವ್ಯ; ಅಲ್ಲಿನ ನಾಲ್ಕು ಕವಲುಗಳು ಅವರಿಗೆ ವೀರ, ಕೋಪ, ಶೃಂಗಾರ, ಶಾಂತ, ರಸ ಉಕ್ಕಿ ಹರಿಯುವಂತೆ ತೋರುತ್ತವೆ. ಶಿವಯೋಗದ ಮಂದಿರ ಅವರಿಗೆ ಪ್ರಕೃತಿಯ ಪರಮಾನಂದದ ಸುಧೆ ಸೂಸುವ ಚಂದಿರ. ಪಟ್ಟದ ಕಲ್ಲಿನ ಶ್ರೀ ವಿರೂಪಾಕ್ಷೇಶ ಮತ್ತು ಪಾಪನಾಥೇಶ—ಶಿಲ್ಪನಂದನದಲ್ಲಿ ಅರಳಿದ ಮಂದಾರವೆರಡು. ಶಿಲ್ಪಕವಿ ಉಳಿಯ ಕಂಠವ ಶಿಲಾಪತ್ರದಲ್ಲಿ ನಾಂಟಿಸುತ್ತ ಬರೆದು ನಿಲ್ಲಿಸಿದ ಶಿಲ್ಪದ ಕಾವ್ಯ ಗೊಮ್ಮಟೇಶ್ವರ.

ಕೂಡಲಸಂಗಮ, ಮಾನಸಸರೋವರಗಳನ್ನು ನೋಡುವ ಮನಸ್ಸು, ಐಹೊಳೆ, ಬಾದಾಮಿ ಪಟ್ಟದ ಕಲ್ಲುಗಳನ್ನು ಕಾಣುವ ಮನಸ್ಸು, ಜೋಗ, ಕಾರವಾರ, ಗೋಕರ್ಣಗಳನ್ನು ಈಕ್ಷಿಸುವ ಮನಸ್ಸು ಬೇರೆಬೇರೆಯಾಗಿಲ್ಲ. ಎಲ್ಲೆಲ್ಲಿಯೂ ಚೆಲುವನ್ನು ಕಾಣಲು ಹಾತೊರೆಯುವ ಜೀವ ಅಲ್ಲೆಲ್ಲ ದೇವರನ್ನು ಕಂಡಿದೆ. ಎಲ್ಲ ಕಡೆ ಒಂದೇ ಬಗೆಯಾದ ಮನೋಧರ್ಮ ಹರಡಿರುವುದರಿಂದ ಅನಿವಾರ್ಯವಾಗಿ ಹಲವಾರು ಮಾತುಗಳೂ—ಭಾವಗಳೂ ಅಲ್ಲಲ್ಲಿ ಮರಳಿಬಂದಿವೆ.

ಒಟ್ಟಿನ ಮೇಲೆ ಕರ್ಕಿಯವರ ಪೌರೋಹಿತ್ಯದಲ್ಲಿ ಕನ್ನಡಭಕ್ತರಿಗೆ ಇಲ್ಲಿ ಸೌಂದರ್ಯ ತೀರ್ಥವೂ, ಕಾವ್ಯಪ್ರಸಾದವೂ ಧಾರಾಳವಾಗಿ ದೊರೆಯುತ್ತದೆಂದು ಹೇಳಬೇಕು.

*
* *

ಐದಳ ಮಲ್ಲಿಗೆ (ಕವನ ಸಂಕಲನ)—ಐದು ಬೇರೆ ಬೇರೆ ಕವಿಗಳು; ಪ್ರಕಾಶಕರು: ಸ್ನೇಹ ಪ್ರಕಾಶನ, ಶಮನೇವಾಡಿ (ಜಿ. ಬೆಳಗಾವಿ); ಪುಟಗಳು ೬೪ + ೧೦; ಬೆಲೆ, ರೂ. ೦-೧೫-೯.

ಕಾದಂಬರಿಗಳೇ ಹೆಚ್ಚು ಪ್ರಚಾರದಲ್ಲಿರುವ ಇಂದು, ಉಳಿದ ಸಾಹಿತ್ಯಕೃತಿಗಳ ಪ್ರಕಟಣೆಗಿರುವ ಅಡಚಣೆಗಳು ಅಷ್ಟಿಷ್ಟಲ್ಲ. ಅದರಲ್ಲೂ ಪದ್ಯಗಳ ಬಗೆಗಿರುವ ಅನಾದರ ಮೊದಲಿನಿಂದಲೂ ಒಂದೇ ರೀತಿಯದಾಗಿದೆ. ಈ ಪರಿಸ್ಥಿತಿ ಪ್ರಮುಖ ಕವಿಗಳ

ಪಾಲಿಗೇ ತಪ್ಪದಿರುವಾಗ ಹೊಸಬರ ಪಾಡೇನು—ಎಂಬುದು ಸಾಹಿತ್ಯಪ್ರೇಮಿಗಳ ಎದುರಿಗಿರುವ ಪ್ರಶ್ನೆಯಾಗಿದೆ.

ಇಂಥ ಸಮಯದಲ್ಲಿ ಉತ್ತರ ಕರ್ನಾಟಕದ ಬೆಳಗಾವಿ ಜಿಲ್ಲೆಯ ಶಮನೇವಾಡಿಯ ಐದು ಜನ ಯುವಕ ಕವಿಗಳು ಒಂದು ಹೊಸ ಪ್ರಯತ್ನ ನಡೆಸಿದಾರೆ. ಕನ್ನಡ ಕಾವ್ಯಕ್ಷೇತ್ರದಲ್ಲಿ ಈಗಾಗಲೇ ತಕ್ಕಷ್ಟು ಹೆಸರು ಗಳಿಸಿರುವ ಶ್ರೀಗಳಾದ ಬ. ಗಿ. ಯಲ್ಲಟ್ಟಿ, ಶ್ರೀಕಾಂತ ಶಮನೇವಾಡಿ, ಬಾಳು ಬಿ. ಉಪಾಧ್ಯೆ, ಬಿ.ಎ., ಸನದಿ, ಭುಜೇಂದ್ರ ಮಹಿಷಿವಾಡಿ ಇವರೇ ಆ ಐವರು ಕವಿಗಳು.

ಈ ಐದು ಜನ ಕವಿಗಳು ತಮ್ಮ ಐದೈದು ಕವಿತೆಗಳನ್ನು ಸೇರಿಸಿ, ತಮ್ಮದೇ ಆದ ಸ್ನೇಹಪ್ರಕಾಶನ ಸಮಿತಿಯ ಆಶ್ರಯದಲ್ಲಿ ಪ್ರಕಟಿಸಿ, ಕನ್ನಡ ಕಾವ್ಯಮಾರ್ಗದಲ್ಲಿ ತಮ್ಮ ಹೆಜ್ಜೆಗಳನ್ನು ಉಳಿಸಿಹೋದ ಶ್ರೀ ಮಧುರಚೆನ್ನ, ಪೆಜಾವರ ಸದಾಶಿವ ರಾಯರು, ಶಿವೇಶ್ವರ ದೊಡ್ಡಮನಿ, ಮತ್ತು ಬೆಳಗೆರೆ ಜಾನಕಮ್ಮ ಈ ಐದು ಕವಿಜೀವಗಳಿಗೆ ಅರ್ಪಿಸಿದಾರೆ. ಹೀಗೆ ಈ ಕೃತಿ ಪ್ರಕಟಣೆಯಲ್ಲಿ ಒಂದು ಉತ್ಸಾಹವಿದೆ, ನಾವೀನ್ಯತೆಯಿದೆ, ಚೆಲುವಿದೆ. ಐದೂ ಜನ ಕವಿಗಳ 'ಸಚಿತ್ರ' ಪರಿಚಯವನ್ನುಳ್ಳ ಈ ಐದಳ ಮಲ್ಲಿಗೆಗೆ ರಾಷ್ಟ್ರಕವಿ ಗೋವಿಂದ ಪೈ ಅವರ ಮುನ್ನುಡಿಯ ರಕ್ಷೆಯಿದೆ.

ಪ್ರಕೃತ ವಿಮರ್ಶೆಗಿರುವ ಪುಸ್ತಕದಲ್ಲಿ ಯಲ್ಲಟ್ಟಿಯವರ ಮೊದಲ ಮೂರು ಕವಿತೆಗಳು ಕಣ್ಮರೆಯಾಗಿವೆ. ಕೊನೆಯ ಎರಡರಲ್ಲೂ 'ಒಪ್ಪಿದರೆ ಕೆಲಸ' ಎಂಬುದು ಅಪೂರ್ಣವಾಗಿದೆ. ಕೆಲಸವಿಲ್ಲದೆ ಅಲೆಯುತ್ತಿರುವ ತರುಣನೊಬ್ಬನಿಗೆ ಬಹುಕಾಲದ ನಂತರದಲ್ಲಿ, ತನಗೆ ಬರುವ ಕೆಲವು ತಿಂಗಳ ಸಂಬಳದ ಅರ್ಧವನ್ನು ಸಾಹೇಬರಿಗೆ ಒಪ್ಪಿಸಿದರೆ ಮರುನಿಮಿಷವೇ ಕೆಲಸ ದೊರೆಯುತ್ತದೆಂಬ ವಿಚಾರ ತಿಳಿದು ಬಂದ ಸಂಗತಿ ಈ ಅಪೂರ್ಣ ಪದ್ಯದಲ್ಲಿದೆ. ಕಾಶ್ಮೀರದ ಸಮಸ್ಯೆಯನ್ನು ಕುರಿತ 'ಹಿತವಾದ' ಪದ್ಯ ತೀರ ಸಾಮಾನ್ಯವಾಗಿದೆ.

ನೀ ಸೂತ್ರಧಾರ ನಾ ಪಾತ್ರಧಾರಿ
ಈ ವಿಶ್ವರಂಗದಲ್ಲಿ
ನೀ ಕುಣಿಸಿದಂತೆ ನಾ ಕುಣಿಯುತಿರುವೆ
ಕಾಲ್ಗೆಜ್ಜೆ ಹೆಜ್ಜೆ ಚೆಲ್ಲಿ !

ಎಂಬ ನೀ ಸೂತ್ರಧಾರ ನಾ ಪಾತ್ರಧಾರಿ ಎಂಬ ಪದ್ಯವೂ, "ನಳಿದೋಳಿ ನುಯ್ಯಾಲೆ ನಾವಾಡುವಾ . . . ಚೈತನ್ಯ ಚೈತ್ರದಲ್ಲಿ ಚಿಗುರಾಗುವಾ . . ." ಮುಂತಾದ ಸಾಲುಗಳನ್ನುಳ್ಳ ಚೈತನ್ಯ ಚೈತ್ರ ಎಂಬ ಪದ್ಯವು ಶ್ರೀಕಾಂತರ ಪದ್ಯಗಳಲ್ಲಿ ಉತ್ತಮವಾಗಿವೆ. ಹೋಗಿ ಬಾ ಮಗಳೆ ಎಂಬುದೂ ಮೆಚ್ಚುಗೆಗೆ ಅರ್ಹ

ವಾಗಿದೆ. ಹೊಸತನ ಏನಿರದಿದ್ದರೂ ಅವರ ಸರಳತೆಯಲ್ಲಿಯೇ ಚೆಲುವಿದೆ. 'ಮೌನತೆ' ಮುಂತಾದ ಪದಪ್ರಯೋಗಗಳನ್ನು ಮಾಡುವುದು ಅಷ್ಟು ಸಾಧುವಲ್ಲ.

ಬಿ. ಎ. ಸನದಿಯವರ 'ಶಿವೇಶ್ವರನಿಗೆ' ಕವಿತೆಯನ್ನು ಇಲ್ಲಿ ಹೆಸರಿಸಬೇಕು. 'ನಗೆಯ ಕಾಗದ ಮನದ ಮರುಗಿನ ಕರಿಯ ಮಶಿ-ಕಲೆ ಕಂಡಿದೆ' ಎಂಬ ಮಾತೂ 'ದೀಪವಾರಿದ ಬಳಿಕ ಬೆಳಕಿನ ಕಲ್ಪನೆ ಉಳಿವುದಂತೆಯೆ ನಿನ್ನ ನೆನಹೂ ಮಾಯಲಾರ, ನೋವೆನೆ' ಎಂಬ ಮಾತೂ ಹೃದಯದಾಳದಿಂದ ಬಂದುವೆಂದೂ, ಅದರಲ್ಲಿ ಕವಿಯ ಬಗ್ಗೆ ಕವಿಗಿರುವ ಗೌರವದ, ಸ್ನೇಹದ ಕಲ್ಪನೆ ವ್ಯಕ್ತಗೊಳ್ಳುವುದೆಂದೂ ಅನ್ನಿಸದಿರದು.

ಮತ್ತೊಬ್ಬ ಪ್ರಮುಖ ಯುವಕ ಕವಿಯಾದ ಮಹಿಷವಾಡಿಯವರ ಕವಿತೆಗಳು ಇಲ್ಲಿ ತೀವ್ರ ನಿರಾಶೆಯನ್ನುಂಟುಮಾಡುತ್ತವೆ. ಶ್ರೀಯವರನ್ನು, ಜಾನಕಮ್ಮನವರನ್ನು ಕುರಿತ ಎರಡು ಕವಿತೆಗಳು ನಾಡಿನ ಹಿರಿಮೆಗರಿಮೆಗಳನ್ನು ಕುರಿತ ಎರಡು ಕವಿತೆಗಳು, ಪ್ರಸ್ತುತ ಕೃತಿಯನ್ನು ಕುರಿತ ಒಂದು ಕವಿತೆ—ಈ ಐದೂ ಬಹು ಸಾಮಾನ್ಯವಾಗಿವೆ. ಸಹಜ ಶಕ್ತಿಯನ್ನುಳ್ಳ ಈ ಕವಿಯಿಂದ ಇನ್ನು ಮಿಗಿಲಾದ ಕೃತಿಗಳನ್ನು ನಾವು ನಿರೀಕ್ಷಿಸುತ್ತೇವೆ.

ಸ್ನೇಹಜೀವಿಗಳಾದ ಈ ಐದು ಜನ ಕವಿಗಳು ನಡೆಸಿರುವ ಈ ಪ್ರಯತ್ನವನ್ನು ನಾವು ಮೆಚ್ಚುತ್ತೇವೆ; ಸ್ವಾಗತಿಸುತ್ತೇವೆ. ಕಾವ್ಯ ಉಳಿಯುವುದು, ಬೆಳೆಯುವುದು ಇಂಥ ಪ್ರಯತ್ನಗಳಿಂದಲೇ. ಕವಿ ತನ್ನ ತೃಪ್ತಿಗಾಗಿ ಮಾತ್ರ ಹಾಡಿಕೊಳ್ಳುವುದಾಗಿದ್ದರೆ ಇದೆಲ್ಲ ಬೇಕೇಯಿರಲಿಲ್ಲ. ಆದರೆ ವಾಸ್ತವವಾಗಿ ಕವಿಯ ಎದೆಯಿಂದ ಹೊಮ್ಮಿಬರುವ ನಾದ ಓದುಗನ ಎದೆಯಲ್ಲಿ ಪ್ರತಿಧ್ವನಿಸಬೇಕಾಗುತ್ತದೆ. ಆಗಲೇ ಕಾವ್ಯದ ಗುರಿ ಸಿದ್ಧಿಸುತ್ತದೆ. ಒಳ್ಳೆಯ ಬೀಜ ಒಳ್ಳೆಯ ನೆಲದಲ್ಲಿ ಬೇಗ ಮೊಳೆಯುತ್ತದೆ; ಚಿಗುರುತ್ತದೆ; ಹೂಬಿಡುತ್ತದೆ; ಕಾಯಾಗಿ ಹಣ್ಣಾಗುತ್ತದೆ.

ಹಾ. ಮಾ. ನಾಯಕ.

*
* *

ಸಾವಿನ ಸೆಳವಿನಲ್ಲಿ (ದುರಂತ ಚಿತ್ರಗಳು)—ಲೇಖಕರು: "ಮರುಳುಸಿದ್ಧ"; ಪ್ರಕಾಶಕರು: ಕನ್ನಡ ಕುಲ ಪ್ರಕಾಶನ, ಮೈಸೂರು; ಪುಟಗಳು ೮೬; ಬೆಲೆ, ರೂ. ೦-೧೨-೦.

ಸಾವಿನ ಸೆಳವಿಗೆ ಸಿಕ್ಕದವರಿಲ್ಲ. ವಿಧಿಯ ಏಟಿಗೋ, ತನ್ನ ತಪ್ಪಿಗೋ ಬಲಿಬಿದ್ದು ಸತ್ತ ಜೀವಿಗಳ ನೆನಪು ಮರುಕಳಿಸಿ ಮತ್ತೆ ಬಂದಾಗ ಅಥವಾ ಕೇಳಿದಾಗ ಮನಸ್ಸು ಉದ್ವಿಗ್ನಗೊಳ್ಳುತ್ತದೆ, ಭಾವ ತುಡಿಯುತ್ತದೆ, ಅನುಕಂಪ ಉಕ್ಕಿ ಹರಿಯುತ್ತದೆ. ಆಗ ಅವರ ತಪ್ಪೆಲ್ಲ ಮಾಯವಾಗಿ ಅವರ ಒಳ್ಳೆಯದೇ ನಮ್ಮ ಕಣ್ಣಿಗೆ ಕಾಣಿಸುತ್ತದೆ. 'ಅಯ್ಯೋ, ಎಂತಹ ಸಾವು ಬಂತು ಅವರಿಗೆ' ಎಂಬ ಉದ್ಗಾರ ಹೊರಬರುತ್ತದೆ.

ಮನಸ್ಸು ಶೋಕದಿಂದ ತುಂಬಿ ಈ ಸಾವು-ಜೀವಗಳ ಸಮಸ್ಯೆ ಏನು? ಅದರ ಮೂಲ ಯಾವುದು? ಎಂದು ಹುಡುಕಹೊರಡುತ್ತದೆ. ತನಗೆ ಆಗ ಅನಿಸಿದ ಭಾವಗಳನ್ನು ಬೇರೆಯವರಿಗೆ ಹೇಳಿ ತನ್ನ ಅನುಕಂಪದಲ್ಲಿ, ತನ್ನ ಭಾವನೆಯಲ್ಲಿ ಅವರನ್ನೂ ಪಾಲುಗಾರರನ್ನಾಗಿ ಮಾಡಿಕೊಳ್ಳಬೇಕೆಂಬಾಸೆ ಮೂಡುತ್ತದೆ. ಅದರ ಫಲವೇ ಮರುಳುಸಿದ್ಧರ "ಸಾವಿನ ನೆಳವಿನಲ್ಲಿ" ಎಂಬ ಈ ಪುಸ್ತಕ. ಶ್ರೀ ಹಿರೇಮಲ್ಲೂರ ಈಶ್ವರನ್ ಅವರ "ವಿಷನಿಮಿಷಗಳು" "ಹಾಲಾಹಲ" ಕೃತಿಗಳ ದಾರಿಯಲ್ಲೇ ನಡೆದ ಕೃತಿ.

ಈ ಕೃತಿಯಲ್ಲಿ ತಾವು ಕಂಡ ದುರಂತ ಜೀವಿಗಳ ಕೊನೆಯನ್ನು ಮರುಳುಸಿದ್ಧರು ಚಿತ್ರಿಸಹೊರಟಿದ್ದಾರೆ. ಅದಕ್ಕೆ ತಾವು ಬಹು ಹತ್ತಿರದಿಂದ ಕಂಡ ಸುತ್ತಮುತ್ತಿನ ಜೀವನವನ್ನು ಆರಿಸಿಕೊಂಡಿದ್ದಾರೆ. ಆದರೆ, ಅವರೇ ಹೇಳುವಂತೆ "ಹೈತುಕ ಜೀವಿಯಾದ ಮನುಷ್ಯ ಬಹು ವೇಳೆ ಭಾವಾತಿರೇಕದ ಗಡಿ ಮುಟ್ಟುತ್ತಾನೆ. ತನ್ನ ಆತ್ಮೀಯನಾದೊಬ್ಬನ ಸಾವಿನಿಂದ ಇಡೀ ಜಗತ್ತೇ ನಾಶವಾದಷ್ಟು ಚಿಂತೆ ಮುಸುಗಿ ದುಃಖಿಸುವನು, ಜಗತ್ತು ಇಂಥ ಎಷ್ಟೋ ಸಾವುಗಳನ್ನು ಕಂಡೂ ಬದುಕಿಬಂದಿದೆ ಎಂಬುದನ್ನು ಸ್ವಲ್ಪ ಹೊತ್ತಾದರೂ ಮರೆಯುತ್ತಾನೆ. ಆದರೆ ಅವನ ಆ ಚಣದ ತೀವ್ರವೇದನೆ ಬಹು ಪರಿಣಾಮಕಾರಿಯಾದದ್ದು ಎಂದು ನನ್ನ ಭಾವನೆ"—ಎಂಬ ವಿಚಾರದ ತೀವ್ರತೆಯಲ್ಲೇ ಬರೆಯಹೊರಟಿರುವುದರಿಂದ ಲೇಖಕರ ಮನಸಿನ ತೀವ್ರತೆ, ಉದ್ವೇಗಗಳನ್ನು ಚೆನ್ನಾಗಿ ಕಾಣುತ್ತೇವೆಯೇ ಹೊರತು, ಆ ಭಾವಗಳಿಗೆ ಕಾರಣರಾದ ವ್ಯಕ್ತಿಗಳ ಚಿತ್ರಗಳನ್ನು ಅಷ್ಟು ಸ್ಪಷ್ಟವಾಗಿ ನಾವು ಕಾಣುವುದಿಲ್ಲ. ಹೀಗಾಗಿ, ತಮ್ಮ ಬಾಳಿನ ದುರಂತತೆಯಿಂದ, ತಮ್ಮ ವ್ಯಕ್ತಿತ್ವದಿಂದ ನಮ್ಮನ್ನು ಸೆರೆಹಿಡಿದು ನಮ್ಮವರಾಗಬೇಕಾಗಿದ್ದ ಅವರು ದೂರದೂರದಿಂದಲೇ ಅಸ್ಪಷ್ಟತೆಯ ಮಂಜಿನಲ್ಲಿ ನಿಡುಸುಯ್ಯುತ್ತ ಸಾಗುತ್ತಾರೆ. ವಿಚಾರದ ತೀವ್ರತೆಯನ್ನು ಸಂಯಮದಿಂದ ವ್ಯಕ್ತಿಚಿತ್ರಣದ ಕಲೆಯಲ್ಲಿ ಉಪಯೋಗಿಸಿಕೊಂಡಿದ್ದರೆ ಈ ಕೃತಿ ಇನ್ನೂ ಉತ್ತಮ ಕೃತಿಯಾಗುತಿತ್ತು.

ಆದರೂ, ಕೆಲವೆಡೆಯಲ್ಲಿ ಮನಸ್ಸನ್ನು ಸೆರೆಹಿಡಿಯುವ ಸನ್ನಿವೇಶಗಳು ಬಂದು ಲೇಖಕರ ಪ್ರತಿಭೆಯನ್ನು ಮಿಂಚಿಸುತ್ತವೆ. ನಾಯಿಯಿಂದ ಕಚ್ಚಿಸಿಕೊಂಡು, ಹುಚ್ಚೇರಿ ಸಾಯುವಾಗಲೂ, "ದೂರಾ ಸರೀರಿ, ದೂರಾ ಸರೀರಿ ಕಚ್ಚಿಬಿಡ್ತೀನಿ . . . ನೀವೆಲ್ಲಾ ಸತ್ತೋಗ್ತೀರಿ"—ಎಂಬ ಸಾವಿತ್ರಿಯ ಮಾತು; ಸಾವು-ಜೀವನದಲ್ಲಿ ಉಯ್ಯಾಲೆಯಾಡುತ್ತ, ಅದನ್ನು ತಾನೇ ಸೂಕ್ಷ್ಮಜೀವಿಯಾಗಿ ಅವಲೋಕಿಸುತ್ತನೊಂದ, ಬೆಂದ ರಾಮಚಂದ್ರನ ಚಿತ್ರ ಕರುಳನ್ನು ಕೊರೆಯುತ್ತವೆ. ನಡುನಡುವೆ ಭಾವಗಳಿಗೆ ತಕ್ಕಂತೆ ಭಾವಗೀತೆಗಳನ್ನು, ಬರೆದ ಪತ್ರಗಳನ್ನು ಉಪಯೋಗಿಸಿಕೊಂಡಿರುವ ರೀತಿ ತುಂಬಾ ಚೆನ್ನಾಗಿದೆ.

ಮರುಳುಸಿದ್ಧರು ತಮ್ಮ ಚಿತ್ರಣಕ್ಕೆ [ರಾಮಚಂದ್ರನ ಚಿತ್ರ ಒಂದನ್ನು ಬಿಟ್ಟರೆ] ತಮ್ಮ ಸುತ್ತಮುತ್ತ ಹಳ್ಳಿಯ ಜೀವನವನ್ನು ತೆಗೆದುಕೊಂಡಿದ್ದಾರೆ. ವಿಷಯಗಳ ಬೊಕ್ಕಸ ಅಲ್ಲಿ ಇನ್ನೂ ತುಂಬಿದೆ. ಅತಿ ಭಾವುಕತೆಯನ್ನು ಬಿಟ್ಟು ವಾಸ್ತವಿಕ ದೃಷ್ಟಿಯಿಂದ ಚಿತ್ರಣಮಾಡಿದರೆ ಆಗ ಅವು ಚೊಕ್ಕವಾಗಿ, ಸುಸ್ಪಷ್ಟವಾಗಿ ನೆಲೆ ನಿಲ್ಲುವಂತಹ ಚಿತ್ರಗಳಾಗುತ್ತವೆ, ಮನಸ್ಸನ್ನು ಸೆರೆ ಹಿಡಿಯುತ್ತವೆ. ಆ ಕೆಲಸವನ್ನು ಶ್ರೀ ಮರುಳುಸಿದ್ಧರು ಮಾಡಲಿ ಎಂದು ಹಾರೈಸುತ್ತೇವೆ.

ಪ. ವಿ. ಚಂದ್ರಶೇಖರ

*
* *

ಭಾರತದಲ್ಲಿ ಜಾತಿಪದ್ಧತಿ—ಲೇಖಕರು: ಶ್ರೀ ವಿಕ್ಟರ ಎಸ್. ಡಿಸೋಜಾ, ಎಂ.ಎ., ಪಿಎಚ್.ಡಿ; ಪ್ರಕಾಶಕರು: ಶ್ರೀ ಎಂ. ಎಸ್. ಬಗಲಿ, ಬಿ.ಎ., ಎಲ್‌ಎಲ್ ಬಿ., ರಿಜಿಸ್ಟ್ರಾರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಪುಟ ೫೫; ಬೆಲೆ, ನಾಲ್ಕಾಣೆ.

ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕಮಾಲೆಯ ಮಾದರಿಯನ್ನನುಸರಿಸಿ ಕರ್ನಾಟಕ ವಿಶ್ವವಿದ್ಯಾಲಯದವರು ಉಪನ್ಯಾಸಗ್ರಂಥಮಾಲೆಯೊಂದನ್ನೇರ್ಪಡಿಸಿ ಈಗಾಗಲೇ ಐದು ಉಪನ್ಯಾಸಗಳನ್ನು ಗ್ರಂಥರೂಪದಲ್ಲಿ ಹೊರತಂದಿರುವುದು ಸ್ತುತ್ಯಾರ್ಹವಾಗಿದೆ. ಅವುಗಳಲ್ಲಿ ವಿಕ್ಟರ ಎಸ್. ಡಿಸೋಜಾರವರ "ಭಾರತದಲ್ಲಿ ಜಾತಿಪದ್ಧತಿ" ಎಂಬ ಪುಟ್ಟ ಉಪನ್ಯಾಸಗ್ರಂಥವು ನಮ್ಮ ದೇಶದ ಅತಿ ಮುಖ್ಯ ಸಮಸ್ಯೆಗಳಲ್ಲೊಂದಾದ ಜಾತಿಪದ್ಧತಿಯನ್ನು ಸುಲಭವಾಗಿ ಬಿಡಿಸುವ ಮಾರ್ಗವನ್ನು ತೋರಿಸುವುದಾಗಿದೆ.

ಈಗ ನಮ್ಮ ದೇಶದಲ್ಲಿ ಈ ಜಾತಿಪದ್ಧತಿಯು ಬಿಡಿಸಲಾರದ ಸಮಸ್ಯೆಯಾಗಿದೆ. ಸಮಾಜದಲ್ಲಿ ಶಾಂತಿ, ಸೌಹಾರ್ದ್ರತೆಗಳು ಬೆಳೆಯಬೇಕಾದರೆ ಪ್ರತಿಯೊಬ್ಬ ವ್ಯಕ್ತಿಗೂ ಸ್ಥಾನಮಾನಗಳಿರಬೇಕು. ವ್ಯಕ್ತಿಯು ಸ್ಥಾನಮಾನಗಳ ಮೇಲೆ ಈ ಜಾತಿಪದ್ಧತಿಯು ನಿಂತಿದೆ. ಇದನ್ನು 'ನಿರ್ಬಂಧರಹಿತ ವರ್ಗಪದ್ಧತಿ' (Open Class System) ಮತ್ತು 'ಸಂವೃತ ವರ್ಗಪದ್ಧತಿ' (Closed Class System) ಎಂದು ಎರಡಾಗಿ ವಿಂಗಡಿಸಬಹುದು. ಅಮೆರಿಕದ ಸಂಯುಕ್ತರಾಷ್ಟ್ರಗಳಲ್ಲಿ ಈ ನಿರ್ಬಂಧರಹಿತ ವರ್ಗಪದ್ಧತಿಯನ್ನನುಸರಿಸಿ ಸರ್ವಜನಾಂಗದವರೂ ಒಂದೇ ಸಮಾಜವಾಗಿ ಮಾರ್ಪಟ್ಟಿದ್ದಾರೆ. ಆ ದೇಶದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಏಳಿಗೆಯನ್ನು ಸಾಧಿಸಿಕೊಳ್ಳಲು ಸಾಧ್ಯವಿದೆ. ಮತ್ತು ಒಬ್ಬ ಸಾಧಾರಣವ್ಯಕ್ತಿಯೂ ರಾಷ್ಟ್ರದ ಅಧ್ಯಕ್ಷನಾಗಲು ಅವಕಾಶವಿದೆ. ಆದರೆ ಭಾರತದಲ್ಲಿ ಸಮಾಜವು ಜಾತಿಪದ್ಧತಿಯ ಮೇಲೆ ನಿಂತಿತ್ತು, ವ್ಯಕ್ತಿಯ ಸ್ಥಾನ

ಮಾನವು ಅವನವನ ಜನ್ಮದ ಮೇಲೆ ಅವಲಂಬಿಸಿತ್ತು. ಇದರಿಂದ ವ್ಯಕ್ತಿಯ ಏಳಿಗೆಯು ಸಾಧ್ಯವಿಲ್ಲವಾಗಿತ್ತು.

ಈ ಜಾತಿಪದ್ಧತಿಯ ಜನನ ಯಾವಾಗ ಎಂದು ಕಂಡುಹಿಡಿಯುವುದು ಕಷ್ಟವಾಗಿದೆ. ಪ್ರಥಮದಲ್ಲಿ ಉದ್ಯೋಗದ ಮೇಲೆ ಅವಲಂಬಿಸಿದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ವರ್ಗಗಳು ಕ್ರಮೇಣ ಜನ್ಮದ ಮೇಲೆ ಅವಲಂಬಿಸಿದ ಜಾತಿಗಳಾದುವು. ಜಾತಿಪದ್ಧತಿಯ ಸಮಾಜದಲ್ಲಿ ವ್ಯಕ್ತಿಗೆ ತನ್ನ ಸಾಮರ್ಥ್ಯವನ್ನು ಪ್ರದರ್ಶಿಸಲು ತಕ್ಕ ಅವಕಾಶ ದೊರೆಯುವುದಿಲ್ಲ. ಇದರಿಂದ ಸಮಾಜದ ಬೆಳವಣಿಗೆಯು ಕುಂಠಿತವಾಗುತ್ತದೆ. ವ್ಯಕ್ತಿಯು ಹುಟ್ಟಿನಲ್ಲಿ ಕೀಳುಜಾತಿಯವನಾದರೂ ಗುಣದಿಂದ ಮೇಲುಜಾತಿಯವನಾಗಬಹುದು. ಆದರೆ ಇಂದಿನ ಪರಿಸ್ಥಿತಿಯಲ್ಲಿ ಈ ಜಾತಿಪದ್ಧತಿಯು ವ್ಯಕ್ತಿಯ, ಸಮಾಜದ, ರಾಷ್ಟ್ರದ ಪ್ರಗತಿಗೆ ಅತಿ ದೊಡ್ಡ ತೊಡಕಾಗಿದೆ. ಜನರಲ್ಲಿ ಐಕಮತ್ಯವನ್ನು ಸಾಧಿಸುವುದೇ ಅಸಾಧ್ಯವಾಗಿದೆ. ಈ ಜಾತಿಪದ್ಧತಿಯನ್ನು ಕಿತ್ತೊಗೆಯುವುದರಿಂದ ದೇಶದ ಪ್ರಗತಿ ಸಾಧ್ಯ ಎಂಬುದಕ್ಕೆ ನಿದರ್ಶನಗಳನ್ನೂ ಕೊಟ್ಟಿದ್ದಾರೆ.

ಇಂಗ್ಲೆಂಡ್ ದೇಶದಲ್ಲಿದ್ದ 'ಎಸ್ಟೇಟ್ ಸಿಸ್ಟಮ್' (Estate System) ಎಂಬ ಜಾತಿಪದ್ಧತಿಯು ನಿರ್ಬಂಧರಹಿತ ವರ್ಗಪದ್ಧತಿಯಾಗಿ ಮಾರ್ಪಟ್ಟನಂತರವೇ ಬ್ರಿಟಿಷ್ ಚಕ್ರಾಧಿಪತ್ಯದ ಸ್ವರ್ಣಯುಗವು ತಲೆದೋರಿತು. ಭಾರತೀಯರೂ ಕೂಡ ಈ ಜಾತಿಪದ್ಧತಿಗಳಿಗೆ ಒಳಗಾಗಿ, ಶತಮಾನಗಳ ಕಾಲ ಪರಕೀಯರ ದಾಸರಾಗಿ ಕೊನೆಗೆ ಬುದ್ಧಿಕಲಿತು ಎಲ್ಲರೂ ಒಕ್ಕಟ್ಟಾಗಿ ಸೇರಿದ್ದರಿಂದ ನಮ್ಮ ಸ್ವಾತಂತ್ರ್ಯವನ್ನು ಮತ್ತೆ ಪಡೆದುಕೊಂಡೆವು.

ಭಾರತದ ಚರಿತ್ರೆಯ ಪುಟಗಳನ್ನೂ ಮತ್ತೊಮ್ಮೆ ತಿರುವಿಹಾಕಿ ಈ ಜಾತಿಪದ್ಧತಿಗಳಿಂದ ನಮ್ಮವರು ಪಟ್ಟಿರುವ ಪಾಡನ್ನು ಪರಿಶೀಲಿಸಿ ಇನ್ನು ಮುಂದೆಯಾದರೂ ಈ ಜಾತಿಪದ್ಧತಿಗೆ ಅವಕಾಶಕೊಡದೆ ಗಳಿಸಿಕೊಂಡಿರುವ ಸ್ವಾತಂತ್ರ್ಯವನ್ನು ಭದ್ರಪಡಿಸಿಕೊಳ್ಳಬೇಕಾಗಿದೆ. ಪ್ರಜಾರಾಜ್ಯದ ಗುರಿಗಳನ್ನು ಸಾಧಿಸಬೇಕಾದರೆ ಸಮಾಜದಲ್ಲಿ ಸರ್ವರಿಗೂ ಸರ್ವ (ರಾಜಕೀಯ, ಸಾಮಾಜಿಕ, ಆರ್ಥಿಕ) ಸಮಾನತೆಯಿರಬೇಕು. ಚೈನಾದೇಶದಲ್ಲಿ ನಮ್ಮಲ್ಲಿರುವಂತೆ ನೂರಾರು ಜಾತಿಗಳಿಲ್ಲ. ಅದರಿಂದ ಅವರು ಮುಂದುವರೆಯಲು ಹೆಚ್ಚು ಅವಕಾಶವಿದೆ. ಜನರಿಗೆ ಸುಖ, ಶಾಂತಿಗಳು ಸಿಗಬೇಕಾದರೆ ಈ ಜಾತಿಪದ್ಧತಿಯು ಮಾಯವಾಗಬೇಕು. ಮೇಲು-ಕೀಳೆಂಬ ಭಾವನೆ ತೊಲಗಬೇಕು, ಅಸ್ಪೃಶ್ಯತೆಯು ಸಂಪೂರ್ಣವಾಗಿ ಹೋಗಬೇಕು. ಅಂತರ್ಜಾತೀಯ ವಿವಾಹಗಳು ನಡೆಯಬೇಕು.

"ಜನ್ಮನಾ ಜಾಯತೇ ಶೂದ್ರಃ
ಸಂಸ್ಕಾರಾತ್ ದ್ವಿಜ ಉಚ್ಯತೇ |"

"ಹುಟ್ಟುವಾಗ ಎಲ್ಲರೂ ಶೂದ್ರರಾಗಿಯೇ ಹುಟ್ಟುತ್ತಾರೆ; ನಂತರ ಸಂಸ್ಕಾರ ಹೊಂದಿದವರು ದ್ವಿಜರಾಗುತ್ತಾರೆ" ಆದ್ದರಿಂದ ವ್ಯಕ್ತಿಗೆ ಬೆಲೆ ಜಾತಿಯಿಂದಲ್ಲ; ಗುಣದಿಂದ. ಈ ವಿಶಾಲತತ್ತ್ವವನ್ನು ಮನಗಂಡು ಹಿಂದಿನಿಂದಲೂ ಬಂದ ಅಪ್ರಯೋಜಕವಾದ ಈ ಜಾತಿಪದ್ಧತಿಯನ್ನು ಸಂಪೂರ್ಣವಾಗಿ ನಿರ್ಮೂಲಮಾಡಿ ಸಮಾಜವನ್ನು ಸುಧಾರಿಸಿದಾಗಲೇ ಭಾರತದ ಸರ್ವತೋಮುಖ ಪ್ರಗತಿಯು ಸಾಧ್ಯ.

ಕರ್ನಾಟಕ ವಿಶ್ವವಿದ್ಯಾಲಯದವರು ಇಂತಹ ಕಿರುಹೊತ್ತಗೆಗಳನ್ನು ಪ್ರಕಟಿಸುವ ಕಾರ್ಯವನ್ನು ಕೈಕೊಂಡಿರುವುದು ಪ್ರಶಂಸನೀಯ. ಇಂತಹ ಉಪನ್ಯಾಸ ಗ್ರಂಥಗಳು ಹೆಚ್ಚಿನ ಸಂಖ್ಯೆಯಲ್ಲಿ ಮೈದೋರಿ ಜ್ಞಾನದ ದೀಪಾರಾಧನೆಯಾಗಲಿ!

ಎಸ್. ನಂಜುಂಡಯ್ಯ

* * *

ರಾಗಿಣಿ—ಲೇಖಕರು: ಭಾರತೀಪ್ರಿಯ; ಪ್ರಕಾಶಕರು: ಶಾರದಾ ಪ್ರಕಟನಾಲಯ, ಅರಳೇಪೇಟೆ, ಬೆಂಗಳೂರು; ಪುಟಗಳು ೨೬೯; ಬೆಲೆ, ರೂ. ೧-೮-೦.

ಅನ್ವರ್ಥನಾಮ ಉಳ್ಳ ಈ ಕಾದಂಬರಿಯು ನಿಜವಾಗಿಯೂ ಹೃತ್ತಂತ್ರಿಗಳನ್ನು ಮಿಡಿದು ಉತ್ತಮ ಭಾವನೆಗಳಲ್ಲಿ ರಸಯಾತ್ರಿಕರನ್ನಾಗಿ ಮಾಡುತ್ತದೆ. ಮಧುಸೂದನ ಒಬ್ಬ ನಿಷ್ಠಾವಂತ ದಿವಂಗತ ಬಡ ಉಪಾಧ್ಯಾಯನ ಪುತ್ರ. ಅನನುಕೂಲ ಪರಿಸ್ಥಿತಿಯಲ್ಲೂ ತನ್ನ ನಾದೋಪಾಸನೆಯನ್ನು ಬಿಡದೆ ಸಿದ್ಧಿಯ ತುತ್ತತುದಿಗೇರಿದ ಸಂಗೀತಜ್ಞ. ನರಹರಿದಾಸರು, ಚಿಕ್ಕ ರಾಮರಾಯರು, ನಟರಾಜ ಅಯ್ಯರ್, ಸುಬ್ಬುಕೃಷ್ಣ ಇವರೆಲ್ಲ ಸ್ಫೂರ್ತಿದಾಯಕ ಚೇತನಗಳು. ಅವನ ಪಾಲಿಗೆ ಲಲಿತೆ ಅವನ ಪ್ರೇಮದ ನಲ್ಲೆ. ಅವಳು ತನ್ನ ಜೀವವನ್ನೇ ನಾಟ್ಯಕ್ಕಾಗಿ ಮುಡಿಪಾಗಿಟ್ಟವಳು. ಆದರೆ ಮಧುಸೂದನನನ್ನು ಕಂಡಂದು ಆತ್ಮಸಮರ್ಪಣ ಮಾಡಿಕೊಳ್ಳುತ್ತಾಳೆ. ಇವರಿಬ್ಬರ ಆದರ್ಶಪ್ರೇಮದ ಚಿರನೂತನ ಕಥೆ ಇದು. ಸಮಗ್ರ ದಕ್ಷಿಣ ಭಾರತದಲ್ಲಿ ಖ್ಯಾತ ನಾಮನಾಗಿ, ಅಲ್ಲಿಂದ ಬೊಂಬಾಯಿಗೆ ಹೋಗಿ ದಿಗ್ವಿಜಯ ಗಳಿಸಿದ ಮಧುಸೂದನನ ರೂಪದ ಆಕರ್ಷಣೆ, ಅಲ್ಲಿನ ರೋಷನ್‌ಳನ್ನು ಮುಗ್ಧಳನ್ನಾಗಿ ಮಾಡಿದ್ದೇನೂ ಆಶ್ಚರ್ಯವಲ್ಲ. ಹೆಂಗಸಿನ ಅಂಥದೊಂದು ಸ್ವಭಾವ ಚಾಂಚಲ್ಯದಲ್ಲಿ ನವೀನತೆ ಇಲ್ಲ.

ಕಾದಂಬರಿಯನ್ನು ಓದುತ್ತಾ ಹೋದಂತೆಲ್ಲಾ, ಕಾದಂಬರಿಕಾರರೇ ಹೇಳುವಂತೆ, ರಾಗಭಾವದಲ್ಲಿ ತಲ್ಲೀನರಾಗಿ ಆಲಿಸುತ್ತಿದ್ದ ವಿದ್ವಜ್ಜನರ ಕುತ್ತಿಗೆ ಭಾವದ ಆಘಾತಕ್ಕೆ

ಬಿಗಿದುಬರುತ್ತದೆ. ಉಕ್ತಿಯು ಸಾಹಸವೆನಿಸುತ್ತದೆ. ರಾಗಭಾವದಲ್ಲಿ ತಲ್ಲೀನರಾಗಿ ಓದುವ ಸುಹೃದಯರ ಕುತ್ತಿಗೆ ಭಾವದ ಆಘಾತಕ್ಕೆ ಬಿಗಿದುಬರುತ್ತದೆ. ಅನೇಕ ರಸಘಟ್ಟಗಳಿಂದ ಕೂಡಿದ ಈ ಕಮನೀಯ ಕಾದಂಬರಿಯು ರಸಿಕರಿಗೆ ರಸದೂಟ ವಾಗುವುದರಲ್ಲಿ ಸಂದೇಹವಿಲ್ಲ.

ಒಂದು ಮಾತು. ಉನ್ನತಮಟ್ಟವನ್ನು ಮುಟ್ಟಿದವನು ಯಾರೇ ಆಗಲಿ ಪತನ ವನ್ನು ಹೊಂದುವುದು, ಅನಿವಾರ್ಯವಲ್ಲದಿದ್ದರೂ ಆವಶ್ಯಕವಲ್ಲದಿದ್ದರೂ, ಸಾಮಾನ್ಯ ವಾಗಿ ಕಾದಂಬರಿಗಳಲ್ಲಿ ಕಂಡುಬರುವ ವಿಷಯವಾಗುತ್ತದೆ. ಅದಕ್ಕೆ ತಕ್ಕಂತೆ, ಇಲ್ಲಿ ಸುಳಿದುಹೋಗುವ ಕೆಲ ಪಾತ್ರಗಳು ಮುನ್ಸೂಚನೆಯನ್ನೀಯುವಂತಿವೆ. ಕಥೆಯೂ ಪೂರ್ಣವಾಗಿಲ್ಲ. ಮಧು ಲಲಿತರ ಬಂಧನವನ್ನು ಒಂದು ಘಟ್ಟವಾಗಿಟ್ಟು ಕಥೆಯನ್ನು ನಿಲ್ಲಿಸುವುದರಲ್ಲಿ ಔಚಿತ್ಯವಿದೆ. ಆದ್ದರಿಂದ ಮುಂದಿನ ಭಾಗ, ಇದರ ಪೂರಕ ಪತನ ಹಾಗೂ ಉದ್ಧಾರದ ಚಿತ್ರಗಳನ್ನು ತರುತ್ತದೆಂದು 'ರೂಪಸರ್ಪಿಣಿ' ಎಂಬ ಹೆಸರಿ ನಿಂದಲೇ ಊಹಿಸಬಹುದೆನಿಸುತ್ತದೆ!

ಮಾ. ದೇವೇಗೌಡ.

*
* *

"ಮೂಡು ಕಾವ್ಯಾಲು" (ತೆಲುಗು)—**ಲೇಖಕರು ಮತ್ತು ಪ್ರಕಾಶಕರು: ಶ್ರೀ ಕೆ. ವಿ. ರಾಘವಾಚಾರ್ಯರು, ಆಂಧ್ರ ಅಧ್ಯಾಪಕರು, ತೆನಾಲಿ ಕಾಲೇಜು, ತೆನಾಲಿ (ಗುಂಟೂರು ಜಿಲ್ಲೆ), ಆಂಧ್ರ; ಕ್ರೌನ್ ಅ. ಪು. ೧೪೫; ಬೆಲೆ, ರೂ. ೨-೦-೦.**

ಇದು ರಾಮಾಯಣ, ಭಾರತ, ಭಾಗವತಗಳ ಸಮೀಕ್ಷೆ. ಗ್ರಂಥಕರ್ತನು ಕಾವ್ಯಶಬ್ದವನ್ನು ಗ್ರಂಥದ ಪರ್ಯಾಯಪದವಾಗಿ ಉಪಯೋಗಿಸಿದ್ದಾನೆ. ಭಾರತೀ ಯರಿಗೆ ಅತ್ಯಂತ ಪ್ರೀತಿಪಾತ್ರವಾದ ಗ್ರಂಥಗಳಲ್ಲಿ ರಾಮಾಯಣ, ಭಾರತ, ಭಾಗವತ ಗಳು ಮುಖ್ಯವಾದುವು. ಈ ಗ್ರಂಥಗಳಲ್ಲಿರುವ ಕಥೆಗಳನ್ನು ನಮ್ಮ ಬಾಲಕರಿಗೆ ಚಿಕ್ಕಂದಿನಿಂದಲೂ ಹೇಳಿಕೊಡುತ್ತಿದ್ದೇವೆ. ಅಕ್ಷರಜ್ಞಾನವಿಲ್ಲದವರಿಗೂ ಇವುಗಳ ಲ್ಲಿರುವ ಕಥೆಗಳು ಪರಿಚಿತವಾಗಿವೆ. ಮೂರು ಸಂಧ್ಯಗಳಲ್ಲಿಯೂ ಪಾರಾಯಣ ಮಾಡಬಹುದಾದಂತಹ ಗ್ರಂಥಗಳಿವು. ಕರ್ಮಪ್ರವೃತ್ತಿಯನ್ನೊದಗಿಸುವ ಭಾರತ ರಾಮಾಯಣಗಳನ್ನು ಹಗಲುಹೊತ್ತಿನಲ್ಲಿಯೂ, ಭಕ್ತಿವೈರಾಗ್ಯಗಳನ್ನೊದಗಿಸುವ ಭಾಗವತವನ್ನು ದಿನಾಂತದಲ್ಲಿಯೂ ಪಾರಾಯಣ ಮಾಡಿದರೆ ಉತ್ತಮ ಪ್ರಯೋಜನ ವುಂಟು. ಈ ಮೂರು ಗ್ರಂಥಗಳಲ್ಲಿ ಭಾರತವು ಇತಿಹಾಸದಲ್ಲಿ ಸೇರುತ್ತದೆ. ಭಾಗವತವು ಪುರಾಣಶ್ರೇಣಿಯಲ್ಲಿರುತ್ತದೆ. ರಾಮಾಯಣವು ಕಾವ್ಯಪರಂಪರೆಗೆ

ಸೇರುತ್ತದೆ. ಭಾರತವನ್ನು ಕಾವ್ಯವೆಂದೂ, ರಾಮಾಯಣವನ್ನು ಇತಿಹಾಸವೆಂದೂ ಕರೆಯುವುದುಂಟು. ಭಾಗವತವು ಅಷ್ಟಾದಶ ಪುರಾಣಗಳಲ್ಲೊಂದಾಗಿದೆ. ಕೌರವ ಪಾಂಡವರ ಚರಿತ್ರೆಯಾದ ಭಾರತಕ್ಕಿಂತಲೂ ಶ್ರೀ ಕೃಷ್ಣನ ಕಥೆಯು ಪ್ರಧಾನವಾಗಿರುವ ಭಾಗವತಕ್ಕಿಂತಲೂ ರಾಮಕಥಾಂಶವುಳ್ಳ ರಾಮಾಯಣವೇ ಮೊಟ್ಟ ಮೊದಲನೆಯದು.

ರಾಮಾಯಣ—ರಾಮಾಯಣ ಆದಿಕಾವ್ಯ. ಅದನ್ನು ರಚಿಸಿರುವುದು ತಪಸ್ವಿಯೂ, ಮುನಿಪುಂಗವನೂ ಆದ ವಾಲ್ಮೀಕಿ. ಇದರಲ್ಲಿ ಸಪ್ತ ಕಾಂಡಗಳೂ ಇಪ್ಪತ್ತುನಾಲ್ಕು ಸಾವಿರ ಶ್ಲೋಕಗಳೂ ಇವೆ. ಈ ಸಂಖ್ಯೆಗೆ ಆಧ್ಯಾತ್ಮಿಕಾರ್ಥವಿದೆ. ಆರು ಕಾಂಡಗಳು ಆಧಾರಾದಿ ಷಟ್ಚಕ್ರಗಳನ್ನೂ ಏಳನೆಯದು ಸಹಸ್ರಾರ ಪದ್ಮವನ್ನೂ ಸೂಚಿಸುತ್ತವೆ. ಗಾಯತ್ರೀ ಮಂತ್ರದಲ್ಲಿರುವ ಇಪ್ಪತ್ತುನಾಲ್ಕು ಅಕ್ಷರಗಳಲ್ಲಿ ಕ್ರಮವಾಗಿ ಒಂದೊಂದು ಅಕ್ಷರವನ್ನು ಒಂದೊಂದು ಸಹಸ್ರ ಸಂಖ್ಯೆಯ ಪ್ರಾರಂಭಶ್ಲೋಕದ ಆದ್ಯಕ್ಷರವಾಗಿಟ್ಟು ರಚಿಸಿದ್ದಾನೆ. ಇಂತಹ ಆಧ್ಯಾತ್ಮಿಕ ರಹಸ್ಯಗಳಿರುವುದರಿಂದಲೇ ಆದಿಕಾವ್ಯವಾದ ಈ ರಾಮಾಯಣವು ಅತ್ಯಂತ ಪೂಜನೀಯವಾದ ಗ್ರಂಥವಾಗಿದೆ.

ಶ್ರೀರಾಮನ ಕಥೆಯನ್ನು ಅನೇಕ ಕವಿಗಳು ಅನೇಕ ಭಾಷೆಗಳಲ್ಲಿ ರಚಿಸಿ ಧನ್ಯರಾದರು. ಎಲ್ಲಾ ಭಾಷೆಗಳಿಗೂ ವಾಲ್ಮೀಕಿ ರಾಮಾಯಣವೇ ಮೂಲಗ್ರಂಥ. ಭಾಸ, ಕಾಳಿದಾಸ, ಭವಭೂತಿ, ಮುರಾರಿ ಮುಂತಾದ ಕವಿಗಳು ಶ್ರೀರಾಮನ ಚರಿತ್ರೆಯನ್ನು ಕಾವ್ಯವಾಗಿಯೂ, ನಾಟಕರೂಪದಲ್ಲಿಯೂ ಚಿತ್ರಿಸಿದರು. ಹಿಂದೀ ಭಾಷೆಯಲ್ಲಿ ತುಲಸಿದಾಸ ರಾಮಾಯಣವೂ ತಮಿಳಿನಲ್ಲಿ ಕಂಬರಾಮಾಯಣವೂ ಕನ್ನಡದಲ್ಲಿ ತೊರವೆರಾಮಾಯಣವೂ ಪ್ರಸಿದ್ಧವಾಗಿರುವುವು. ಈಗ "ಕುವೆಂಪು" ಅವರ 'ರಾಮಾಯಣದರ್ಶನಂ'ವು ಪ್ರಖ್ಯಾತಿಯನ್ನು ಹೊಂದಿದೆ. ತೆಲುಗಿನಲ್ಲಿ 'ರಂಗನಾಥರಾಮಾಯಣವು' ಮೊಟ್ಟಮೊದಲನೆಯದು. ಇದು ದ್ವಿಪದಿಯಲ್ಲಿ ರಚಿತವಾಗಿರುವುದರಿಂದ ಜನಪ್ರಿಯತ್ವವನ್ನು ಹೊಂದಿದೆ. ಇತರ ಭಾಷೆಗಳಲ್ಲಿ ರಾಮಾಯಣಕ್ಕೆ ಹೆಚ್ಚಿನ ವ್ಯಾಪ್ತಿಯಿದೆ. ಆದರೆ ತೆಲುಗಿನಲ್ಲಿ ಭಾರತ, ಭಾಗವತಗಳಿಗೆ ಹೆಚ್ಚಿನ ಪ್ರಚಾರವಿದೆ. ಕವಿತ್ವದ ಔನ್ನತ್ಯದಿಂದಲೇ ಇವುಗಳಿಗೆ ಅಧಿಕವ್ಯಾಪ್ತಿ ಆಗಿರುವುದು.

ತೆಲುಗಿನಲ್ಲಿ ಕವಿಗಳ ಹೆಸರಿನಲ್ಲಿಯೇ ರಾಮಾಯಣವು ರಚಿತವಾಗಿದೆ. ಪ್ರಾಚೀನರಲ್ಲಿ ಭಾಸ್ಕರನು "ಭಾಸ್ಕರರಾಮಾಯಣ"ವನ್ನೂ, ಕುಂಬಾರರ ಕುಲಕ್ಕೆ ಸೇರಿದ ಮೊಲ್ಲ ಎಂಬ ಮಹಿಳಾಕವಿ "ಮೊಲ್ಲರಾಮಾಯಣ"ವನ್ನೂ ಗೋಪೀನಾಥನೆಂಬ

ಕವಿ "ಗೋಪೀನಾಥರಾಮಾಯಣ"ವನ್ನೂ ರಚಿಸಿದರು. ಆಧುನಿಕರಲ್ಲಿ ಕೀ ॥ ಶೇ ॥ ವಾವಿಲಕೊಲನು, ಸುಬ್ಬರಾಯರು, ಕೀ ॥ ಶೇ ॥ ಜನಮಂಚಿ ಶೇಷಾದ್ರಿಶರ್ಮರು, ಈಗಿನ ಆಸ್ಥಾನಕವಿಗಳಾದ ಶ್ರೀಪಾದ ಕೃಷ್ಣಮೂರ್ತಿಶಾಸ್ತ್ರಿಗಳು ಮತ್ತು ವಿಶ್ವನಾಥ ಸತ್ಯನಾರಾಯಣರು ವಾಲ್ಮೀಕಿರಾಮಾಯಣವನ್ನು ತೆಲುಗಿಗೆ ಪರಿವರ್ತಿಸಿದರು. ಶ್ರೀ ವೀರರಾಘವಾಚಾರ್ಯರು ಈ ಕವಿಗಳು ರಚಿಸಿರುವ ಕಾವ್ಯಗಳ ಸ್ವರೂಪವನ್ನು ಸೊಗಸಾಗಿ ಈ ಪುಸ್ತಕದಲ್ಲಿ ಸಮೀಕ್ಷಿಸಿದ್ದಾರೆ.

ಭಾರತ—ಭಾರತಕ್ಕೆ ಪಂಚಮವೇದವೆಂಬ ಹೆಸರಿದೆ. ವೇದಮಂತ್ರಗಳ ಅರ್ಥವನ್ನು ತಿಳಿಯುವುದಕ್ಕೆ ಎಲ್ಲರಿಗೂ ಸಾಧ್ಯವಾಗುವುದಿಲ್ಲ. ಆದುದರಿಂದ ವ್ಯಾಸಮಹರ್ಷಿಗಳು ಮಹಾಭಾರತವನ್ನು ಲೌಕಿಕ ಸಂಸ್ಕೃತ ಭಾಷೆಯಲ್ಲಿ ರಚಿಸಿದರಂತೆ. ಕೌರವ ಪಾಂಡವರ ಕಥೆಯನ್ನು ಇತಿವೃತ್ತವಾಗಿಟ್ಟುಕೊಂಡು ಚತುರ್ವೇದಗಳಲ್ಲಿರುವ ಧರ್ಮಗಳನ್ನು ವಿಸ್ತರಿಸಿ ಭಾರತ ರಚನೆಯನ್ನು ಮಾಡಿರುವುದರಿಂದ ಇದಕ್ಕೆ 'ಪಂಚಮವೇದ' ವೆಂಬ ಹೆಸರುಬಂದಿದೆ. ಸಂಸ್ಕೃತ ಭಾರತವು ಅಷ್ಟಾದಶ ಪ್ರಧಾನಪರ್ವಗಳಿಂದ ಕೂಡಿ ಶತಪರ್ವಸಂಶೋಧಿತವಾಗಿ ಶತಸಹಸ್ರಶ್ಲೋಕವುಳ್ಳವಾಗಿ ರಚಿತವಾಗಿದೆ. ಇದನ್ನು ಧರ್ಮತತ್ವಜ್ಞರು ಧರ್ಮಶಾಸ್ತ್ರವೆಂದೂ, ಆಧ್ಯಾತ್ಮಿಗಳು ವೇದಾಂತವೆಂದೂ, ನೀತಿಶಾಸ್ತ್ರಜ್ಞರು ನೀತಿಶಾಸ್ತ್ರವೆಂದೂ, ಕವಿಗಳು ಮಹಾಕಾವ್ಯವೆಂದೂ, ಲಾಕ್ಷಣಿಕರು ಮಹಾಲಕ್ಷಣಸಂಗ್ರಹವೆಂದೂ, ಐತಿಹಾಸಿಕರು ಇತಿಹಾಸವೆಂದೂ, ಪೌರಾಣಿಕರು ಬಹುಪುರಾಣಸಮುಚ್ಚಯವೆಂದೂ ಹೊಗಳುತ್ತಾರೆ.

ಮಹಾಭಾರತವನ್ನು ತೆಲುಗಿನಲ್ಲಿ ಕವಿತ್ರಯರೆಂಬ ಮೂರು ಜನ ಪ್ರಾಚೀನಕವಿಗಳು ಭಾಷಾಂತರಮಾಡಿದರು. ಅವರಲ್ಲಿ ನನ್ನಯಭಟ್ಟು (೧೧ ನೆ ಶತಮಾನ) ತೆಲುಗು ಸಾಹಿತ್ಯದಲ್ಲಿ ಆದಿಕವಿ. ಇವನು ಆದಿಪರ್ವ, ಸಭಾಪರ್ವ, ಅರಣ್ಯಪರ್ವದಲ್ಲಿ ಅರ್ಧಭಾಗವನ್ನು ಅನುವಾದಿಸಿದನು. ತಿಕ್ಕನ ಸೋಮಯಾಜಿ ಎಂಬ ಎರಡನೆಯ ಕವಿ (೧೩ ನೆ ಶತಕ) ವಿರಾಟಪರ್ವದಿಂದ ಹಿಡಿದು ಸ್ವರ್ಗಾರೋಹಣಪರ್ವದ ವರೆಗೂ ಹದಿನೈದು ಪರ್ವಗಳನ್ನನುವಾದಿಸಿದನು; ಅರಣ್ಯಪರ್ವದ ಶೇಷವನ್ನು ೧೪ ನೇ ಶತಮಾನದಲ್ಲಿ ಎಱ್ಱಾಪ್ರೆಗ್ಗಡನೆಂಬ ಕವಿ ಪೂರ್ತಿಮಾಡಿದನು. ಕನ್ನಡಸಾಹಿತ್ಯದಲ್ಲಿ ರತ್ನತ್ರಯರಾದ ಪಂಪ, ಪೊನ್ನ, ರನ್ನರಿಗೆ ಇರುವಷ್ಟು ಪ್ರಖ್ಯಾತಿ ಈ ಕವಿತ್ರಯರಿಗೆ ತೆಲುಗುಸಾಹಿತ್ಯರಂಗದಲ್ಲಿದೆ. ಆಧುನಿಕರಲ್ಲಿ ಕವಿಸಾರ್ವಭೌಮ ಬಿರುದನ್ನು ಪಡೆದ ಶ್ರೀಪಾದ ಕೃಷ್ಣಮೂರ್ತಿಶಾಸ್ತ್ರಿಗಳು ಭಾರತವನ್ನು ಸಂಪೂರ್ಣವಾಗಿ ಭಾಷಾಂತರ ಮಾಡಿದ್ದಾರೆ. ಮೂರು ಶತಾಬ್ದಗಳಲ್ಲಿ ಕವಿತ್ರಯರು ಮಾಡಿರುವ ಕೆಲಸವನ್ನು ಮೂರು ದಶಾಬ್ದಗಳಲ್ಲಿ ಕೃಷ್ಣಮೂರ್ತಿಶಾಸ್ತ್ರಿಗಳು ಮಾಡಿದರು. ಮಹಾಭಾರತವು

ಜೀವನದ ಸಮಸ್ಯೆಗಳನ್ನು ಬಿಡಿಸಿ ಅದರ ಮಾರ್ಗದಲ್ಲಿರುವ ಕತ್ತಲೆಯನ್ನು ಹೊರಡಿಸಿ ಬೆಳಕನ್ನು ಕೊಡುವಂತಹ ಪರಂಜ್ಯೋತಿಯಾಗಿದೆ. ಇದನ್ನು ಇತ್ತೀಚೆಗೆ ರಷ್ಯನ್ ಭಾಷೆಗೂ ಅನುವಾದಿಸಿರುವುದು ಭಾರತೀಯರಿಗೆ ಹೆಮ್ಮೆಯನ್ನುಂಟುಮಾಡಿದೆ. ಕೀ|| ಶೇ|| ಸಿ. ಆರ್. ರೆಡ್ಡಿಯವರು ಆಂಧ್ರಭಾರತದ ಮೇಲೆ ಒಂದು ವಿಮರ್ಶೆಯನ್ನು ಬರೆದು ತೆಲುಗು ಸಾಹಿತ್ಯಕ್ಕೆ ಅಮೂಲ್ಯವಾದ ಸೇವೆಯನ್ನು ಸಲ್ಲಿಸಿದ್ದಾರೆ.

ಭಾಗವತ—ಪುರಾಣಗಳು ಸಾಮಾನ್ಯವಾಗಿ ತ್ರಿಮೂರ್ತಿಗಳ ಮಹಿಮೆಯನ್ನೂ ಅವರ ಅವತಾರವಿಶೇಷಗಳನ್ನೂ ವರ್ಣಿಸಿ ದೇಶಚರಿತ್ರೆಯನ್ನೂ, ಅನೇಕ ರಾಜರ ಇತಿಹಾಸಗಳನ್ನೂ ತಿಳಿಸುತ್ತವೆ. ಇಂತಹ ಹದಿನೆಂಟು ಪುರಾಣಗಳಲ್ಲಿ ಭಾಗವತವು ಪ್ರಸಿದ್ಧವಾಗಿದೆ. ಭಗವಂತನ ಲೀಲೆಗಳನ್ನು ವರ್ಣಿಸುವುದರಿಂದ ಇದಕ್ಕೆ 'ಭಾಗವತ' ವೆಂದು ಹೆಸರುಬಂದಿದೆ. ಭಾಗವತವನ್ನು ಒಂದು ಕಲ್ಪತರು ಸಮಾನವೆಂದು ಹೇಳಿದ್ದಾರೆ. ಭಾಗವತ ಗ್ರಂಥಕರ್ತನಾದ ಕೃಷ್ಣದ್ವೈಪಾಯನನು ಶ್ರೀ ಕೃಷ್ಣನ ಸಮಕಾಲಿಕನೆಂದು ಹೇಳುತ್ತಾರೆ. ಆದುದರಿಂದಲೇ ಆ ಮಹಾತ್ಮನ ಚರಿತ್ರೆಯನ್ನು ಸವಿಸ್ತಾರವಾಗಿ ಸಮಗ್ರವಾಗಿ ವರ್ಣಿಸಿರಬೇಕು. ಶ್ರೀ ಕೃಷ್ಣ ಜನನವು ಅವನ ಬಾಲ್ಯಲೀಲೆಗಳು, ಕಂಸವಧೆ, ರುಕ್ಮಿಣೀಕಲ್ಯಾಣ, ಕುಚೇಲನ ಚರಿತ್ರೆ, ನರಕಾಸುರವಧೆ ಮುಂತಾದ ವಿಷಯುಗಳು ಇದರಲ್ಲಿ ಮನೋಹರವಾಗಿ ವರ್ಣಿತವಾಗಿವೆ.

ಭಾಗವತದಲ್ಲಿ ಶ್ರೀ ಕೃಷ್ಣನ ಚರಿತ್ರೆ ಪ್ರಾಧಾನ್ಯವನ್ನು ಹೊಂದುವುದಕ್ಕೆ ಕೃಷ್ಣ ಪರಮಾತ್ಮನು ಗೀತೋಪದೇಷ್ಟಿಯಾಗಿರುವುದೂ ಒಂದು ಕಾರಣವಿರಬೇಕು. ರಾಮಾಯಣದಲ್ಲಿ ರಾಮನು ಉತ್ತಮ ನಾಯಕನಾಗಿದ್ದರೂ ಅವನಲ್ಲಿ ದಿವ್ಯತ್ವಾ ದಿವ್ಯತ್ವಗಳು, ಜ್ಞಾನಾಜ್ಞಾನಗಳು ಎರಡೂ ಇವೆ. ಅವನು ವಸಿಷ್ಠನಿಂದ ಉಪದೇಶ ವನ್ನು ಹೊಂದಿ ಒಬ್ಬನಿಗೆ ಶಿಷ್ಯನಾಗಿದ್ದನೇ ಹೊರತು ಉಪದೇಶಿಕನ ಅಂತಸ್ತನ್ನು ಹೊಂದಿಲ್ಲ. ಸೀತಾವಿಯೋಗಾದಿ ಘಟ್ಟಗಳಲ್ಲಿ ರಾಮನು ಪ್ರಾಕೃತಜನರ ಹಾಗೆ ವಿಲಾಪಿಸಿ ತನ್ನಲ್ಲಿರುವ ಅಜ್ಞಾನವನ್ನು ಪ್ರಕಟಿಸಿಕೊಂಡಿದ್ದಾನೆ. ಶ್ರೀ ಕೃಷ್ಣನ ಜೀವನದಲ್ಲಿ ಅಂತಹುದು ಯಾವುದೂ ಇಲ್ಲ. ಅವನು ತನ್ನ ಕೆಲಸಗಳಲ್ಲಿ ಸರ್ವಜ್ಞನಾಗಿ ವರ್ತಿಸಿದ್ದಾನೆಂದು ಕಂಡುಬರುತ್ತದೆ. ದ್ವಂದ್ವಾತೀತವಾಗಿ ಸಿದ್ಧಿತಾವಸ್ಥೆಯನ್ನು ಹೊಂದಿರುವ ಯೋಗಿಯ ಹಾಗೆ ಜೀವನರಂಗದಲ್ಲಿ ನಟಿಸಿದ್ದಾನೆ.

ಸಂಸ್ಕೃತ ಭಾಗವತವನ್ನು ೧೫ನೇ ಶತಮಾನದಲ್ಲಿದ್ದ ಪೋತನ ಎಂಬ ಕವಿ ತೆಲುಗಿಗೆ ಅನುವಾದಮಾಡಿದ್ದಾನೆ. ಆಂಧ್ರದಲ್ಲಿ ರಾಮಾಯಣ, ಭಾರತಗಳಿಗಿಂತಲೂ ಭಾಗವತವೇ ಹೆಚ್ಚು ವ್ಯಾಪ್ತಿಯನ್ನು ಹೊಂದಿದೆ. ಕಾರಣವೆಂದರೆ ಇದರಲ್ಲಿರುವ ಮೂರು ಮುಖ್ಯ ಲಕ್ಷಣಗಳು (೧) ಭಕ್ತಿಸಂಪದ, (೨) ವೇದಾಂತವಿವರಣೆ,

(೩) ರಸವತ್‌ಕವಿತೆ. ಈ ಮೂರು ಲಕ್ಷಣಗಳಲ್ಲಿ ಭಕ್ತಿಲಕ್ಷಣವೇ ಪೋತನನ ಕವಿತ್ವಕ್ಕೆ ಜೀವಾಧಾರ. ಭಾಗವತದಲ್ಲಿರುವ ಪ್ರಹ್ಲಾದಚರಿತ್ರೆ, ಗಜೇಂದ್ರಮೋಕ್ಷ, ವಾಮನಚರಿತ್ರೆ ಮುಂತಾದ ಕಥೆಗಳಲ್ಲಿ ಪೋತನನು ಹೆಚ್ಚು ಗಮನ ಕೊಟ್ಟಿದ್ದಾನೆ.

ಪೋತನ ಕವಿಯನ್ನು ಕುರಿತು ಕನ್ನಡಿಗರಿಗೆ ಚಲನಚಿತ್ರದ ಮೂಲಕ ಪರಿಚಯವಾಗಿದೆ. ಇವನು ನಿಯೋಗಿಬ್ರಾಹ್ಮಣ. ಇವನು ಗುರುವಿನಲ್ಲಿ ವ್ಯಾಸಂಗಮಾಡಲಿಲ್ಲ. ಇವನದು ಸಹಜ ಪಾಂಡಿತ್ಯ. ಶ್ರೀರಾಮನಿಂದ ಇವನಿಗೆ ಪ್ರೇರಣೆಯಾಗಿ ಸಂಸ್ಕೃತ ಭಾಗವತವನ್ನು ಅನುವಾದಮಾಡಿದ್ದಾನೆ.

"ಮೂಡು ಕಾವ್ಯಾಲು" ಎಂಬ ಪ್ರಕೃತ ವಿಮರ್ಶನೀಯ ಪುಸ್ತಕದಲ್ಲಿ ಶ್ರೀ ಕೆ. ವಿ. ರಾಘವಾಚಾರ್ಯರು ಒಂದೊಂದು ಕಾವ್ಯದಲ್ಲಿರುವ ಕಥಾವಸ್ತುಗಳನ್ನು ವಿವರಿಸಿ ಅವುಗಳನ್ನು ಈಗಿನ ಯುವಕರಿಗೆ ಅರ್ಥವಾಗುವ ರೀತಿಯಲ್ಲಿ ಸಮೀಕ್ಷಿಸಿದ್ದಾರೆ. ಈ ಪುಸ್ತಕವನ್ನು ಮದ್ರಾಸು, ಆಂಧ್ರ, ಅಣ್ಣಾಮಲೈ ವಿಶ್ವವಿದ್ಯಾನಿಲಯಗಳಲ್ಲಿ ಪಠ್ಯಗ್ರಂಥವಾಗಿಟ್ಟಿದ್ದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕೂಡ ೧೯೫೪ರಲ್ಲಿ ಪಠ್ಯಪುಸ್ತಕವಾಗಿರಲು ನಿರ್ಣಯಮಾಡಿದ್ದಾರೆ. ಕಾವ್ಯಪುರಾಣಾದಿಗಳಿಗೆ ಇಂತಹ ಸಮೀಕ್ಷೆಗಳು ಈಗಿನ ಕಾಲಕ್ಕೆ ಬೇಕಾಗಿವೆ. ವಿದ್ಯಾರ್ಥಿಗಳಿಗೂ, ದೊಡ್ಡವರಿಗೂ ಬೇಕಾದಂತಹ ಪುಸ್ತಕವಿದು.

ವಿದ್ವಾನ್ ಕೆ. ಸುಬ್ಬರಾಮಪ್ಪ

* * *

ನಾಯಿಯ ಕಥೆ—ಲೇಖಕರು : ಪ್ರೇಮಚಂದ್ ; ಅನುವಾದಕರು : ಬಾಳಾಚಾರ್ಯ ಅವಧಾನಿ ; ಪ್ರಕಾಶಕರು : ವಿಂಚಿನಬಳ್ಳಿ, ಧಾರವಾಡ ; ಪುಟಗಳು ೫೪ ; ಬೆಲೆ, ರೂ. ೦-೫-೦.

ಹಿಂದೀ ಸಾಹಿತ್ಯಕ್ಷೇತ್ರದ ಧ್ರುವತಾರೆಯಂತಿರುವ ಪ್ರೇಮಚಂದರು ಉತ್ತಮ ಕಥೆಗಾರರು. ಈ ಕಥೆಯನ್ನು ಮಕ್ಕಳಲ್ಲಿ ಸದ್ಗುಣ ಬೆಳೆಯಲೆಂದು ಬರೆದಿದ್ದಾರೆ. ಬಾಳಾಚಾರ್ಯ ಅವಧಾನಿಯವರು ಅನುವಾದಿಸುವಾಗಲೂ ಮಕ್ಕಳಿಗೆ ಹಿಡಿಸುವಂತಹ ಸರಳಸುಂದರ ಶೈಲಿಯಲ್ಲಿ ಅನುವಾದಿಸಿದ್ದಾರೆ. ಕಥೆಯು ಮಕ್ಕಳ ರಾಜ್ಯದ ಪ್ರಜೆಯಾದ ನಾಯಿಯೊಂದರ ಕಥೆಯಾಗಿದ್ದು, ಸಾಹಸಿಯೋರ್ವನ ಆತ್ಮಕಥೆಯಂತೆ ಮಕ್ಕಳ ಕುತೂಹಲವನ್ನು ಕೆರಳಿಸಿ, ಅವರಲ್ಲಿ ಧೈರ್ಯ, ಸಾಹಸ, ಪರೋಪಕಾರಗಳನ್ನು ತುಂಬುವಂತಿದೆ.

'ಕಲ್ಲೂ' ಕೇವಲ ನಾಯಿ. ಆದರೆ ಎಲ್ಲ ನಾಯಿಗಳಂತೆ ಅಲ್ಲ; ನೀಚವಾದುದೆಂದು ತಿಳಿದಿರುವ ನಾಯಿಯೂ ಸಹ ಮನುಷ್ಯನಿಗೆ ಮಹತ್ಕಾರ್ಯಗಳಲ್ಲಿ ನೆರವಾಗ

ಬಲ್ಲುದೆಂಬುದನ್ನು ಮನಗಾಣಿಸಲು ಹೊರಟ ಕಾರ್ಯಪಟು ಮನುಷ್ಯರಲ್ಲಿರುವಂತೆ ಪ್ರಾಣಿವರ್ಗದ ಅಣ್ಣತಮ್ಮಂದಿರಲ್ಲಿಯೂ ಎಷ್ಟು ಅಂತರ! 'ಜಕಿಯಾ' ಯಾವಾಗಲೂ ತನ್ನ ಬಲವನ್ನು ದುರಪಯೋಗಪಡಿಸುತ್ತಾನೆ; 'ಕಲ್ಲೂ'ನೊಡನೆ ದ್ವೇಷ ಸಾಧಿಸುತ್ತಾನೆ. ಆದರೆ ಅಬಲನಾದ 'ಕಲ್ಲೂ' ಯಾವಾಗಲೂ ಒಳ್ಳೆಯ ಕಾರ್ಯದಲ್ಲಿ ಪ್ರವೃತ್ತನಾಗಿರುತ್ತಾನೆ. ಯಾರೊಡನೆಯೂ ಜಗಳಕಾಯಬೇಕೆಂಬ ದುರ್ಬುದ್ಧಿಯಿಲ್ಲವಾದರೂ ಹೇಡಿಯೆನಿಸಿಕೊಂಡು ಹಿಂತೆಗೆದು ಸುಮ್ಮನಿರಲಾರ. ತನ್ನ ಧನಿಯ ಮಾನರಕ್ಷಣೆಗಾಗಿ ಜೀವವನ್ನೂ ಕೊಡಬಲ್ಲ.

ಒಡೆಯನಿಗಾಗಿ ಮಡಿಯುವ ನಾಯಿಗೆ ಒಂದು ತುತ್ತು ಅನ್ನ ಹಾಕದಿರುವ ಮನುಷ್ಯರನ್ನು ಕಂಡು ಸಣ್ಣವನಿರುವಾಗಲೇ 'ಕಲ್ಲೂ' ಅಸಹ್ಯಪಟ್ಟಿದ್ದ. ಒಂದು ಪ್ರಾಣಿಯ ಸಂಕೇತವನ್ನು ಅರಿಯಲಾರದೆ ಬರಿದೆ 'ನಾವು ತಿಳಿದವರು' ಎನ್ನುವ ಬಡಪಾಯಿಗಳನ್ನು ನೋಡಿ ನಗುತ್ತಾನೆ. ಅಂತಹ ಸಂದರ್ಭಗಳಲ್ಲಿ ತಾನು ಮನುಷ್ಯನಾಗಬೇಕಿತ್ತೆಂದು ಬಯಸುತ್ತಾನೆ. ಪ್ರಾಣಿಯಾದರೇನು ಅದಕ್ಕೆ ಹೃದಯವಿಲ್ಲವೇ? ದಿನದಿನವೂ ಊರ ಪಹರೆ ಮಾಡುತ್ತಿದ್ದ ತನ್ನ ತಾಯಿಗೆ ಅನ್ನವಿಲ್ಲದೆ, ಹಸಿವನ್ನು ತಾಳಲಾರದೆ ಬ್ರಾಹ್ಮಣರ ಪಂಕ್ತಿಯನ್ನು ದಾಟಿ, ಹೊಡೆಯಿಸಿಕೊಂಡು ಹುಚ್ಚಿಯಾದುದನ್ನು ಕಂಡು 'ಕಲ್ಲೂ'ನ ಕರುಳು ಹರಿದಂತಾಗುತ್ತಿತ್ತು. ತಾಯಿ ಮೃತಳಾದಾಗ ಕಣ್ಣೀರಿಡುತ್ತಾನೆ.

ಆತ್ಮಕಥನದಲ್ಲಿಯ ಕೆಲವು ಸಾಹಸಗಳನ್ನು ನೋಡಿದರೆ 'ಕಲ್ಲೂ' ನಿಜವಾಗಿಯೂ ನಾಯಿಯೇ? ಇದೊಂದು ನಾಯಿಯ ಕಥೆಯೇ?—ಎನ್ನುವ ಸಂಶಯ ಬರುವಂತಾಗಿದೆ. ಪಂಡಿತರ ಮಕ್ಕಳು ನೀರಿನಲ್ಲಿ ಮುಳುಗುತ್ತಿರುವಾಗ ಹೊಂಡಕ್ಕೆ ಧುಮುಕಿ ಅವರನ್ನು ಹೊರಕ್ಕೆಳೆಯುತ್ತಾನೆ. ಹಂದಿಯ ಬೇಟೆಗೆಂದು ಸಾಹೇಬರು ಬಂದಾಗ ಅವರ ಜೀವವನ್ನುಳಿಸುತ್ತಾನೆ. ಅದಿಷ್ಟೇ ಏಕೆ? ಸಮುದ್ರದಲ್ಲಿ ಬಿರುಗಾಳಿಗೆ ಸಿಕ್ಕಿ ಹಡಗು ಮುಳುಗಿದಾಗ ಸಾಯುವ ಸ್ಥಿತಿಯಲ್ಲಿಯೇ ಯಜಮಾನರನ್ನು ಸಣ್ಣ ನಾವೆಗಳ ಹತ್ತಿರ ಎಳೆತರುತ್ತಾನೆ. ದ್ವೀಪದಲ್ಲಿ ಸಾಹೇಬರು ಕಪ್ಪು ಜನರ ಕೈದಿಗಳಾಗಿದ್ದಾಗ ಒಬ್ಬ ವೀರನೂ ಮಾಡಲಾರದ ಕೆಲಸವನ್ನು ಕಲ್ಲೂ, ಒಂದು ನಾಯಿ, ಮಾಡಿ ಮುಗಿಸುತ್ತದೆ. ಅಬ್ಬ! ಎಂತಹ ಸಾಹಸ!! ಪ್ರತಿದಿನವೂ ಗುಂಡನ್ನುರುಳಿಸಿ ಸಾಹೇಬರಿಗೆ ಆಹಾರವನ್ನು ಕೊಡುತ್ತಿದ್ದುದಲ್ಲದೆ ಅವರನ್ನು ಸೆರೆಯಿಂದ ಬಿಡಿಸಿ ಕರೆತಂದು, ಸಿಂಹದ ಸಖ್ಯ ಬೆಳಸಿ, ದ್ವೀಪದಿಂದ ಪಾರಾಗುವಂತೆ ಮಾಡುತ್ತಾನೆ. ಎಲ್ಲವೂ ಅಮಾನುಷಕೃತಿಗಳೇ! ಎಂಥವರಿಗೂ ನಾಯಿಯ ಈ ಸಾಹಸಗಳನ್ನು ಕೇಳಿದಾಗ ಉತ್ಸಾಹ ಉಕ್ಕೇರದಿರದು. ಅದರಲ್ಲೂ ಬಾಲಕರಲ್ಲಿ ಕೇಳಬೇಕೆ?

ಸಾಹಸದ ವರ್ಣನೆಯ ಜೊತೆಗೆ ಅಲ್ಲಲ್ಲಿ ಬರುವ ಒಂದೊಂದು ಚಿಕ್ಕ ವಾಕ್ಯಗಳು ಸೂತ್ರಪ್ರಾಯವಾಗಿವೆ. "ಹೊಟ್ಟೆಗಾಗಿ ಜನರು ತನ್ನವರನ್ನೂ ಮರೆತುಬಿಡುತ್ತಾರೆ", "ಎಲ್ಲ ದಿನಗಳೂ ಎಲ್ಲರಿಗೂ ಯಾವಾಗಲೂ ಸಮವಾಗಿರಲಾರವು", "ರಾಜನ ಮುದ್ರೆ ನಾಣ್ಯದ ಮೇಲೆ, ದೇವರ ಮುದ್ರೆ ಕಾಳಿನ ಮೇಲೆ"—ಮುಂತಾದ ಕೆಲವು ವಾಕ್ಯಗಳು ಗಹನವಾದವುಗಳಾಗಿವೆ. ತನ್ನ ಜೀವವು ಸಂಕಟದಲ್ಲಿರುವಾಗ ಕೂಡ ಒಡೆಯರನ್ನು ಬಿಟ್ಟು ಹೇಗೆ ಹೋಗಲಿ ಎನ್ನುವ ಪ್ರಾಣಿಯ ಮನೋಭಾವವನ್ನು ನೋಡಿ ನಾವು ಮೂಕರಾಗುತ್ತೇವೆ. ಕಳ್ಳರನ್ನು ಪತ್ತೇಹಚ್ಚುವುದರಲ್ಲಿ ಅದರ ಪಾತ್ರ; ಸಾಹೇಬರಿಗೆ ಆಹಾರ ಕೊಡುವುದರಲ್ಲಿ ಅದರ ಸಾಹಸ, ಸುಖದಲ್ಲಿದ್ದಾಗ ಪಂಡಿತರು ಬಂದು ಕರೆಯಲು, ತನ್ನನ್ನು ತಾನೇ ಹಳಿದುಕೊಂಡು ಅವರ ಹಿಂದೆ ಓಡಲುದ್ಯುಕ್ತವಾದ ಸನ್ನಿವೇಶ—ಇವುಗಳೆಲ್ಲವನ್ನೂ ನೋಡಿದರೆ ಪ್ರಾಣಿಗಳ ಸೈಜ ಪ್ರೇಮ ಕಾಣುತ್ತದೆ. ನಾವು ಯಾವುದನ್ನು ಅನಿಷ್ಟಕರವಾದದ್ದೆಂದು ದೂಡುತ್ತೇವೆಯೋ ಅದರಿಂದ ಎಂತಹ ಕಾರ್ಯಗಳು ನಡೆಯಬಲ್ಲವು! ಇಂತಹ ನಾಯಿಗೆ ಕೊನೆಗೆ ಸಲ್ಲಿಸಿದ ಪೂಜಾಗೌರವ ಅತ್ಯಂತ ಯುಕ್ತವಾದದ್ದು ಎನಿಸುತ್ತದೆ. ವಿಜಯಶಾಲಿಯಾದ ವೀರಯೋಧನಿಗೆ ದೊರೆಯುವ ಸನ್ಮಾನೋತ್ಸವ; ಪರೋಪಕಾರಕ್ಕಾಗಿ ದೊರೆತ ಸತ್ಫಲ.

ಮಗುವಿನ ಚುರುಕು ಮನಸ್ಸಿನ ಮೇಲೆ ಕಥೆಯು ತನ್ನ ಪೂರ್ಣಪ್ರಭಾವವನ್ನು ಬೀರಬಲ್ಲುದು. ಸತ್ಕಾರ್ಯದಲ್ಲಿ ತೊಡಗಿದರೆ ಎಂತಹ ನಿಶ್ಶಕ್ತನಿಗೂ ಶಕ್ತಿ ಬರುತ್ತದೆ, ಹಿಂದೆಯೇ ದೇವರ ಸಹಾಯವೂ ಸಿಗುತ್ತದೆಂಬುದು ಒಟ್ಟಿನಲ್ಲಿ ತಿಳಿಯಬಹುದಾದ್ದು. ಸಹಜತೆಯು ಕಡಮೆಯೆಂದು ಕಂಡರೂ ನಾಯಿಯ ಸದ್ಗುಣಗಳು ಓದುಗರನ್ನು ಮುಗ್ಧಗೊಳಿಸದಿರಲಾರವು. ಕೆಲವು ಕಡೆ ಕಥೆಯ ಸಂದರ್ಭಗಳು ವಿವರಣೆಯಿಲ್ಲದೆ ಮಕ್ಕಳಿಗೆ ಅರ್ಥಮಾಡಿಕೊಳ್ಳಲು ಕಷ್ಟವಾಗುವಂತಿದೆ. ಆದರೂ ರಸಾಸ್ವಾದನೆಗೆ, ತಿರುಳಿನ ಸವಿಗೆ ಯಾವ ತೊಂದರೆಯೂ ಇಲ್ಲ. ನಾಯಿಯ ಮಾದರಿಯನ್ನು ಅನುಸರಿಸಿ ಮಕ್ಕಳು ಬೆಳೆದರೆ ದೇಶವೆಲ್ಲ ನಂದನವನವಾದೀತು. ಇಂತಹ ಕಥೆಯನ್ನು ಬರೆದು ಪ್ರೇಮಚಂದರು ಮಕ್ಕಳಿಗೆ ಮಿಠಾಯಿಯನ್ನು ಹಂಚಿದ್ದಾರೆ. ಅವಧಾನಿಯವರು ಅದನ್ನು ಕನ್ನಡಮಕ್ಕಳಿಗೆ ದಾನಮಾಡಿ ಕೃತಕೃತ್ಯರಾಗಿದ್ದಾರೆ.

'ಶಿವ'

*
* *

ಕಲಾವಿದ ಕೃಷ್ಣ ಹೆಬ್ಬಾರರು—ಲೇಖಕರು: ಶ್ರೀ ಶಿವರಾಮಕಾರಂತ; ಪ್ರಕಾಶಕರು: ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜು, ಉಡುಪಿ; ಪುಟಗಳು ೩೨; ಬೆಲೆ, ರೂ. ೧-೬-೦.

ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಅವಿಶ್ರಾಂತವಾಗಿ ದುಡಿದು ಪ್ರಸಿದ್ಧ ಸಾಹಿತಿಗಳಾದ ಶ್ರೀ ಶಿವರಾಮಕಾರಂತರು ಈ ಚಿಕ್ಕ ಉಪನ್ಯಾಸಗ್ರಂಥದಲ್ಲಿ ಕಲಾವಿದ ಶ್ರೀ ಕೃಷ್ಣ ಹೆಬ್ಬಾರರ ಪರಿಚಯಮಾಡಿಕೊಟ್ಟಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯವು ಮೊಟ್ಟಮೊದಲು ಪ್ರಚಾರಕ್ಕೆ ತಂದ ಪ್ರಚಾರೋಪನ್ಯಾಸಮಾಲೆ ಇತರ ವಿಶ್ವವಿದ್ಯಾನಿಲಯಗಳಿಗೂ ಸ್ಫೂರ್ತಿಯನ್ನು ನೀಡಿರುವುದು ಸ್ತುತ್ಯಾರ್ಹವಾದ ವಿಷಯ. ಇಂತಹ ಉಪನ್ಯಾಸಗ್ರಂಥಗಳು ಕನ್ನಡದ ಮನೆ ಮನೆಗಳನ್ನು ಬೆಳಗುವ ನಂದಾದೀವಿಗೆಗಳಾಗಲೆಂದು ಹಾರೈಸೋಣ.

ಶ್ರೀ ಕೃಷ್ಣ ಹೆಬ್ಬಾರರು ಉಡುಪಿಗೆ ಸಮೀಪವಾದ ಕಟ್ಟಂಗೇರಿ ಎಂಬ ಹಳ್ಳಿಯಲ್ಲಿ ಹುಟ್ಟಿ, ಬಡತನದ ಕಡುಕಷ್ಟಗಳನ್ನು ಅನುಭವಿಸಿ ಮೈಸೂರು ಮತ್ತು ಬೊಂಬಾಯಿಗಳಲ್ಲಿ ಚಿತ್ರಕಲೆಯ ವ್ಯಾಸಂಗಮಾಡಿ ಯೂರೋಪಿನಲ್ಲಿ ಪ್ರವಾಸಮಾಡಿ ಬಂದಿದ್ದಾರೆ. ಇವರು ರವಿವರ್ಮನ ಚಿತ್ರಕಲೆಯ ಪ್ರತಿಕೃತಿ ವಿಧಾನವನ್ನು ಅನುಕರಿಸದೆ ಪ್ರಾಚ್ಯ ಪಾಶ್ಚಾತ್ಯ ಚಿತ್ರಕಲೆಗಳನ್ನು ಮಿಲನಗೊಳಿಸಿ ಶಕ್ತಿಯುತವೂ ಭಾವಪೂರ್ಣವೂ ಆದ ಹೊಸ ಕಲಾವಿಧಾನವನ್ನು ರೂಪಿಸುತ್ತಿದ್ದಾರೆ. ಜನರ ಮನೋರಂಜನೆಗಾಗಿಯೆ ಚಿತ್ರಗಳನ್ನು ಬರೆದು ಹಣಗಳಿಸುವ ಚಾಪಲ್ಯಕ್ಕೆ ಬಲಿಯಾಗದೆ ಕಲಾರಾಧನೆಯ ಶ್ರೇಷ್ಠ ಸಾಧನೆಗಾಗಿ ಕಲೋಪಾಸಕರಾಗಿದ್ದಾರೆ.

ಶ್ರೀ ಹೆಬ್ಬಾರರ ಕಲೆಯ ಮರ್ಮವನ್ನು ಅರಿತ ಶ್ರೀ ಕಾರಂತರು, ಹಂಚಿನ ಕಾರ್ಖಾನೆಯಲ್ಲಿ, ನಾಗಮಂಡಲದ ನರ್ತಕರು, ಗನಿಯೊಳಗೆ, ಲೇಜಿಮ್ ಎಂಬ ಚಿತ್ರಗಳನ್ನು ತಮ್ಮ ಪುಸ್ತಕದಲ್ಲಿ ಸೇರಿಸಿರುವುದು ಕಲಾವಿದನ ಕಲೆಯ ಮರ್ಮವನ್ನು ತಿಳಿಯಲು ಸಹಾಯಕವಾಗಿದೆ. ಪುಸ್ತಕವನ್ನು ಓದಿ ಮುಗಿಸಿದಾಗ ೩೨ ಪುಟಗಳಲ್ಲಿ ಮುಗಿಯಿತಲ್ಲ ಎಂಬ ಆಶಾಭಂಗವಾದರೂ, ಕಲಾವಿದರನ್ನೂ ಅವರ ಚಿತ್ರಕೃತಿಗಳನ್ನೂ ಅರಿಯಬೇಕೆಂಬ ಆಸಕ್ತಿ ಕೆರಳುತ್ತದೆ. ಶ್ರೀ ಹೆಬ್ಬಾರರ ಹೆಚ್ಚಿನ ಪರಿಚಯ ಮಾಡಿಕೊಡುವ ವಿಸ್ತೃತ ಪುಸ್ತಕವನ್ನು ಶ್ರೀ ಕಾರಂತರು ನಮಗೆ ಬೇಗನೆ ಒದಗಿಸಿಕೊಡುವ ಸುದಿನಗಳು ಬೇಗನೆ ಬರಲಿ!

ವೇಣು.

*
* *

ಸಂಪತ್ತು ಮತ್ತು ಅದರ ಸದುಪಯೋಗ—ಮೂಲ ಕರ್ತೃಗಳು: ಶ್ರೀ ಅರವಿಂದರು; ಪ್ರಕಾಶಕರು: ಶ್ರೀ ಅರವಿಂದ-ಶ್ರೀ ಮಾತಾಕೇಂದ್ರ, ದೇಶಪಾಂಡೆನಗರ, ಹುಬ್ಬಳ್ಳಿ; ಪುಟಗಳು ೨೮; ಬೆಲೆ, ರೂ. ೦-೪-೦.

ಈ ಪುಸ್ತಕ ಶ್ರೀ ಅರವಿಂದಾಶ್ರಮದ ಹಿರಿಯ ಸಾಧಕ ಶ್ರೀ ಋಷಭಚಂದರು ಇಂಗ್ಲಿಷಿನಲ್ಲಿ ಬರೆದ ಲೇಖನದ ಅನುವಾದ. ಶ್ರೀ ಅರವಿಂದರು ಹಾಗೂ ಆಶ್ರಮದ ಮಾತೆಯವರು ಸಂಪತ್ತಿನ ವಿಷಯವಾಗಿ ನಿರೂಪಿಸಿದ ಅಮೂಲ್ಯ ತತ್ತ್ವಗಳ ವಿವರಣೆ ಇದೆ.

ಸಂಪತ್ತು ಅವಿವೇಕಿಗಳ ಕೈಸೇರಿದಾಗ ಜಗತ್ತಿನಲ್ಲಿ ಅಶಾಂತಿ ಹೆಚ್ಚುತ್ತದೆ. ವಿವೇಕಿಗಳು ಸಂಪತ್ತನ್ನು ದೈವೀಕಾರ್ಯಕ್ಕೆ ವಿನಿಯೋಗಿಸುತ್ತಾರೆ. ಸಂಪತ್ತಿನ ದುರುಪಯೋಗದಿಂದ ಆಸುರೀಶಕ್ತಿಯು ಪ್ರಬಲವಾಗುತ್ತಿದೆ. ಆದ್ದರಿಂದ ಸಾತ್ವಿಕರು ಧರ್ಮಮಾರ್ಗದಿಂದ ಹಣವನ್ನು ಆರ್ಜಿಸಿ ಭಗವತ್ಸೇವೆಗಾಗಿ ಉಪಯೋಗಿಸಬೇಕು. ಸಂಪತ್ತು ವಿಶ್ವಶಕ್ತಿಯ ಪ್ರತ್ಯಕ್ಷ ಪ್ರತಿನಿಧಿ. ಆದುದರಿಂದ ಪರಮೇಶ್ವರನದಾದ ಐಶ್ವರ್ಯವನ್ನು ದಿವ್ಯ ಜೀವನಕ್ಕಾಗಿ ವಿನಿಯೋಗಿಸಬೇಕು. ಇದೇ ಸಂಪತ್ತಿನ ಸದ್ವಿನಿಯೋಗ.

ಮೂಲದ ಭಾವಗಳು ಸಹೃದಯ ಗೋಚರವಾಗುವಂತೆ ಭಾಷಾಂತರ ಅರ್ಥ ಗರ್ಭಿತವಾಗಿದೆ. ಇಂತಹ ಕಿರುಹೊತ್ತಗೆಗಳು ಜ್ಞಾನದ ಹಣತೆಗಳಂತೆ ದೇಶದ ಎಲ್ಲೆಡೆಯೂ ಪ್ರಸಾರವಾಗಲೆಂದು ಹಾರೈಸೋಣ.

ವೇಣು.

*
* *

ನಿಶೆಯಿಂದ ಉಷೆಗೆ—ಲೇಖಕರು : ಎ. ಪಿ. ನರಸಪ್ಪ ; ಪ್ರಕಾಶಕರು : ತಾಂಡವಮೂರ್ತಿ ಪ್ರಕಾಶನಾಲಯ, ಮೈಸೂರು ; ಪುಟಗಳು ೨೮೩ ; ಬೆಲೆ, ರೂ. ೧-೮-೦.

"ಅಧರ್ಮದ ಹಾದಿಯಲ್ಲಿ ಧಾವಿಸುತ್ತಿರುವ ಮಾನವ, ಶಾಶ್ವತ ಸುಖವನ್ನೀಯುವ ಧರ್ಮಮಾರ್ಗಕ್ಕೆ ತಿರುಗಬೇಕಾದರೆ, ನಾಸ್ತಿಕತೆ ನಿರ್ಮೂಲವಾಗಬೇಕು. ಹಾಗಾಗಲೆಂದು ಇಂದಿನ ಮನುಷ್ಯ ನಂಬುವ ವಿಜ್ಞಾನದ ಹಾದಿಯಲ್ಲಿಯೇ ದೇವರ ಇರುವಿಕೆಯನ್ನು ಸಾಧಿಸಲು . . ." ಲೇಖಕರು ಈ ಕಿರಿಯ ಹೊತ್ತಗೆಯಲ್ಲಿ ಮುನ್ನುಡಿಯಲ್ಲಿ ಹೇಳಿಕೊಂಡಂತೆ ಪ್ರಯತ್ನಿಸಿದ್ದಾರೆ.

ಚೆಲುವೆ ಚಂದ್ರಳು ಸೋದರಮಾವನ ಮಗಳಾದರೂ, ತಾನು ತಬ್ಬಲಿಯಾದುದರಿಂದ, ಆಕೆ ಕೃಷ್ಣಯ್ಯನ ಕೈಹಿಡಿಯಬೇಕಾಯಿತು. ವಿಧಿಯ ವಂಚನೆಗೆ ತುತ್ತಾದ ಗೋವಿಂದ ಸೇಡನ್ನು ತೀರಿಸಿಕೊಳ್ಳಲು ಪ್ರಯತ್ನಿಸುತ್ತಿರುತ್ತಾನೆ. ವನವಿಹಾರಕ್ಕೆ ಹೋಗಿ ಕಾವೇರಿಯಲ್ಲಿ ಜಾರಿಬಿದ್ದ ಚಂದ್ರಳನ್ನು ರಕ್ಷಿಸಿ ಕೃಷ್ಣಯ್ಯನ ಆತ್ಮೀಯನಾಗುತ್ತಾನೆ. ಕೃಷ್ಣಯ್ಯನನ್ನು ಕ್ರಮಕ್ರಮವಾಗಿ ಅಧಃಪತನದ ಹಾದಿಗೆ ಇಳಿಸು

ತ್ತಾನೆ. ಕೃಷ್ಣಯ್ಯನಿಗೆ ಕುಡಿಯುವುದನ್ನು ಕಲಿಸುತ್ತಾನೆ. ಕೃಷ್ಣಯ್ಯ ಪಾರ್ವತಿಯನ್ನು ಪ್ರೀತಿಸಿದಾಗ ಅದಕ್ಕೆ ತನ್ನ ಒಪ್ಪಿಗೆ ಕೊಡುತ್ತಾನೆ. ಕಡೆಗೆ ಕೃಷ್ಣಯ್ಯ ಚಂದ್ರಳ ಮೇಲೆ ಸಂಶಯ ಬೀರುವಂತೆ ಮಾಡುತ್ತಾನೆ. ಚಂದ್ರಳ ದಾಂಪತ್ಯ ದುಃಖದ ಹಾದಿಯಲ್ಲಿದ್ದಾಗ ತಾನು ಆಕೆಯ ಪ್ರೇಮ ಯಾಚನೆ ಮಾಡುತ್ತಾನೆ. ಆದರೆ ಸಾಧ್ವಿಯ ಮಾತಿನಿಂದ ತನ್ನ ಮೊದಲಿನ ನಾಸ್ತಿಕವಾದದಿಂದ ಆಸ್ತಿಕತ್ವಕ್ಕೆ ಪರಿವರ್ತಿತನಾಗುತ್ತಾನೆ. ಆದರೆ ಅಂತರಂಗದಲ್ಲಿದ್ದ ವಿಷಯವಾಸನೆಯ ಪರಿಣಾಮವಾಗಿ, ಕೃಷ್ಣಯ್ಯನಿಗೆ ಚಾಡಿ ಹೇಳಿ ಚಂದ್ರಳ ಸಾವಿಗೆ ಕಾರಣನಾಗುತ್ತಾನೆ. ಈ ದುರಂತ ನಾಟಕದ ಕೊನೆಯಲ್ಲಿ ತಾನೇ ಈ ದುಃಖಕ್ಕೆಲ್ಲಾ ಮೂಲವೆಂಬ ಅರಿವಾಗಿ ತನ್ನ ತಪ್ಪನ್ನೊಪ್ಪಿಕೊಂಡು ಪ್ರಾಣಬಿಡುತ್ತಾನೆ. ಇದೇ ಈ ಪುಸ್ತಕದ ಸ್ಥೂಲ ಕಥೆ.

ಮೊದಲಿನಿಂದಲೂ ಕಥೆಯಲ್ಲಿ ಪರಿಣಾಮವನ್ನುಂಟುಮಾಡುವ ವ್ಯಕ್ತಿ ಗೋವಿಂದ. ಸಣ್ಣಂದಿನಲ್ಲೇ ತಬ್ಬಲಿಯಾಗಿ ಪರರ ಆಶ್ರಯದಲ್ಲಿ ಬೆಳೆಯುತ್ತಿರುವವನು. ದೈವದ ಕ್ರೂರ ಪೆಟ್ಟಿನಿಂದ ಅಧೈರ್ಯಗೊಳ್ಳದೆ ತನ್ನ ಪುರುಷಯತ್ನದಿಂದಲೇ ಮುಂದೆ ಬರುತ್ತಿರುವವನು. ಈ ಪುರುಷವಾದದ ಫಲವಾಗಿ ದೈವದಲ್ಲಿರುವ ನಂಬಿಕೆಯೆಲ್ಲಾ ಹೋಗಿಬಿಟ್ಟಿರುತ್ತದೆ. ಪೆಟ್ಟಿನ ಮೇಲೆ ಪೆಟ್ಟು ಬಿದ್ದು ಆತನ ನಾಸ್ತಿಕವಾದಕ್ಕೆ ಸರಿಯಾದ ಪುಟ ಕೊಟ್ಟಿರುತ್ತದೆ. ಭಗ್ನಪ್ರಣಯಿಯಾದುದರಿಂದ ಹೇಗಾದರೂ ಚಂದ್ರಳ ಮೇಲೆ ಸೇಡು ತೀರಿಸಿಕೊಳ್ಳಬೇಕೆಂಬ ಛಲವಿದ್ದೇ ಇರುತ್ತದೆ. ತನ್ನ ಕಾರ್ಯಸಾಧನೆಗೆ ಕೃಷ್ಣಯ್ಯನೊಡನೆ ಸ್ನೇಹ ಬೆಳೆಸಿ, ಅದನ್ನು ಆತ್ಮೀಯತೆಗೆ ತಿರುಗಿಸಿ, ಆತನನ್ನು ಅಧಃಪತನದ ದಾರಿ ಹಿಡಿಯುವಂತೆ ಮಾಡುತ್ತಾನೆ. ಚಂದ್ರಳ ಬಾಳನ್ನು ಮುರಿದು ಆಕೆಯ ದಾಂಪತ್ಯ ವಿರಸವಾಗುವಂತೆ ಮಾಡುತ್ತಾನೆ. ಗೋವಿಂದ, ಕೃಷ್ಣಯ್ಯನಲ್ಲಿ ಸಂಶಯದ ಬೀಜವನ್ನು ನೆಟ್ಟು ಅದು ಮರವಾಗಿ ಬೆಳೆಯುವಂತೆ ಮಾಡುತ್ತಾನೆ. ತನ್ನ ಕಾರ್ಯಸಾಧನೆಗಾಗಿ ಏನನ್ನೂ ಮಾಡಲು ಹಿಂಜರಿಯದ ವ್ಯಕ್ತಿ. ದೈವ ತನ್ನ ಮೇಲೆ ತೋರಿಸಿದ ಕ್ರೌರ್ಯವನ್ನು ಹೆಜ್ಜೆಹೆಜ್ಜೆಗೂ ಚಂದ್ರಳ ಮೇಲೆ ಸೇಡು ತೀರಿಸಿಕೊಂಡು ಅವಳ ನಾಶಕ್ಕೆ ಕಾರಣನಾಗುತ್ತಾನೆ. ತನ್ನ ಜೀವನದ ಅಪೂರ್ಣತೆಯನ್ನು ಊರೊಟ್ಟಿನ ಕಾರ್ಯಗಳಲ್ಲಿ ನಿರತನಾಗಿ ಮನಸ್ಸಿಗೆ ಸಮಾಧಾನ ತಂದುಕೊಳ್ಳುತ್ತಾನೆ. ಪಾತ್ರದ ಸೃಷ್ಟಿ ಮತ್ತು ಅದರ ಬೆಳವಣಿಗೆ ಚೆನ್ನಾಗಿದೆ. ಆದರೆ ಚಂದ್ರಳು ಬರೆದಿದ್ದ 'ಭಗವತ್ ತತ್ತ್ವ'ವನ್ನು ಓದಿದೊಡನೆಯೇ ವರ್ಷಾಂತರಗಳಿಂದ ನಂಬಿದ್ದ ನಾಸ್ತಿಕತೆಯನ್ನು ಮರೆತು ಒಮ್ಮೆಗೇ ಆಸ್ತಿಕನಾಗಿ ಪರಿವರ್ತಿತನಾಗುತ್ತಾನೆಯೇ ಎಂಬುದನ್ನು ನಂಬುವುದು ಸ್ವಲ್ಪ ಕಷ್ಟ.

ಚಂದ್ರ ಹಳ್ಳಿಯ ಹೆಣ್ಣಾದರೂ ಓದಿದವಳು. ಓದಿದರೂ ಮತಿಗೆಡದೆ ತನ್ನ ಗಂಡ

ಮತ್ತು ಅತ್ತೆಯೊಡನೆ ಹೊಂದಿಕೊಂಡು ಆದರ್ಶಸತಿಯಾಗಿ ಬಾಳುತ್ತಾಳೆ. ಗೋವಿಂದ ನಲ್ಲಿ ಯಾವ ನಾಸ್ತಿಕತೆಯಿದೆಯೋ ಅದಕ್ಕೆ ವಿರುದ್ಧವಾಗಿ ಇವಳು ಪೂರ್ಣ ಆಸ್ತಿಕಳು. ತನ್ನ ಒಲವಿನ ಗೋವಿಂದ ಹೆಜ್ಜೆಹೆಜ್ಜೆಗೂ, ತನ್ನನ್ನು ಕಷ್ಟಕ್ಕೆ ಗುರಿಮಾಡಿ ತನ್ನ ಗಂಡನ ವಾತ್ಸಲ್ಯವನ್ನು ಪಾರ್ವತಿಯ ಕಡೆಗೆ ತಿರುಗಿಸಿದರೂ ತನ್ನ ದೈವಭಕ್ತಿಯನ್ನು ಬಿಡುವುದಿಲ್ಲ. ಮತಿಗೆಡುವುದಿಲ್ಲ. ಕೊನೆಯಲ್ಲಿ ಗೋವಿಂದ ಪ್ರೇಮ ಯಾಚನೆ ಮಾಡಿ ಅವಳನ್ನು ಕಷ್ಟದಿಂದ ಉದ್ಧಾರಮಾಡುತ್ತೇನೆಂದಾಗಲೂ ಸಂಯಮದಿಂದ ಗೋವಿಂದನಿಗೇ ಬುದ್ಧಿ ಹೇಳಿ ತಾನು ಬರೆದಿದ್ದ 'ಭಗವತ್ ತತ್ತ್ವ'ವನ್ನು ಓದಲಿಕ್ಕೆ ಕೊಟ್ಟು ಅವನನ್ನು ಆಸ್ತಿಕನನ್ನಾಗಿ ಪರಿವರ್ತಿಸುತ್ತಾಳೆ. ಯಾವನನ್ನು ಅಂಧಃಪಥನದ ಹಾದಿಯಿಂದ ಉನ್ನತಿಯ ಹಾದಿಗೆ ತಂದಳೋ ಅವನ ಈರ್ಷೆಯ ನಲುವಾಗಿ ಸಂಶಯಗ್ರಸ್ತನಾದ ಗಂಡನಿಂದ ಏಟುತಿಂದು ಅಸುವನ್ನೀಗಬೇಕಾಯಿತು. ಸಾಯುವ ಮೊದಲು ಪಾರ್ವತಿಯನ್ನು ತನ್ನ ಗಂಡನ ಕೈಯನ್ನು ಸೇರಿಸಿ, ತನ್ನ ಗಂಡನನ್ನು ಬಿಡಬೇಡ ಎಂದು ಹೇಳಿ ತನ್ನ ಔದಾರ್ಯದ ಪರಮಾವಧಿಯನ್ನು ತೋರುತ್ತಾಳೆ. ತನ್ನನ್ನು ಇಷ್ಟು ಕಷ್ಟಕ್ಕೆ ಗುರಿಮಾಡಿದ ಗೋವಿಂದನನ್ನು ಕ್ಷಮಿಸಿ, ತಪ್ಪುಮಾಡ ಬೇಡ, ಸತ್ಸೇವೆಗಾಗಿ ಸಮಸ್ತವನ್ನೂ ಸಮರ್ಪಿಸು, ಭಗವಂತನಿಗೆ ಶರಣುಹೊಗು ಎಂದು ಉಪದೇಶಿಸುತ್ತಾಳೆ. ಆದರೆ ಹಳ್ಳಿಯ ಹೆಣ್ಣು ಇಷ್ಟು ಆದರ್ಶಪ್ರಾಯಳಾದ ವ್ಯಕ್ತಿಯಾಗಬಲ್ಲಳೇ ? ಹೆಣ್ಣಿಗೆ ಸಹಜವಾದ ಸಂಕುಚಿತ ಮನೋಭಾವನೆಯನ್ನೂ ತೊರೆದು ತತ್ತ್ವಹೃದಯಿಯಾಗಬಲ್ಲಳೇ ? ಎಂಬುದೇ ಬಿಡಿಸಲಾರದ ಪ್ರಶ್ನೆಯಾಗು ತ್ತದೆ. ವಿಜ್ಞಾನಿಗಳಿಗೇ ಮತ್ತು ಪ್ರಾಜ್ಞರಿಗೇ ಅರ್ಥವಾಗಲು ಕಷ್ಟವಾದ "ಭಗವತ್ ತತ್ತ್ವ" (Theory of God) ಎಂಬ ಇಂಗ್ಲಿಷ್ ಮಹಾಪ್ರಬಂಧವನ್ನು ಬರೆಯ ಬಲ್ಲಳು ಎಂಬುದು ನಮ್ಮ ಊಹೆಗೆ ಸಿಕ್ಕುವುದೇ ಕಷ್ಟವಾಗುತ್ತದೆ. ಆದರ್ಶವ್ಯಕ್ತಿಯ ಸೃಷ್ಟನೆಯ ಹಾದಿಯಲ್ಲಿ ನಡೆದ ಲೇಖಕರು ಅತಿ ಆದರ್ಶತೆಗೆ ಬಾಗಿ ವಾಸ್ತವಿಕತೆಯಿಂದ ದೂರ ಸರಿದಿದ್ದಾರೆ. ಚಂದ್ರಳಲ್ಲಿ ಯಾವ ಕುಂದೂ ಇಲ್ಲದ ಜ್ಞಾನಿಯಂತೆ ತೋರು ತ್ತಾಳೆ. ಈ ಅತಿ ಆದರ್ಶತೆಯೇ ಚಂದ್ರಳ ಪಾತ್ರವನ್ನು ಸಂಕೋಲೆಯಿಂದ ಕಟ್ಟಿ ದಂತೆ ಮಾಡಿದೆ. ಲೇಖಕರು ತಾವು ಯಾವ ಧ್ಯೇಯಸಾಧನೆಗಾಗಿ—ಭಗವಂತನ ಇರುವಿಕೆಯನ್ನು ಸ್ಥಾಪಿಸಲು—ಚಂದ್ರಳ ಪಾತ್ರವನ್ನು ಸೃಷ್ಟಿಸಿದರೋ ಆ ಕಾರ್ಯ ಚೆನ್ನಾಗಿ ಸಾಧನೆಯಾಗಿಲ್ಲ. ಚಂದ್ರಳನ್ನು ಇನ್ನಷ್ಟು ನೈಜ ಮಾನವವ್ಯಕ್ತಿಯನ್ನಾಗಿ ಮಾಡಿದ್ದರೆ ಚೆನ್ನಾಗಿರುತ್ತಿತ್ತು.

ಕಥೆಯ ಹಾಸುಹೊಕ್ಕಾಗಿ ಕೃಷ್ಣಯ್ಯ, ಪಾರ್ವತಿ, ವೆಂಕಣ್ಣ, ಲಲಿತಮ್ಮ ಮತ್ತು ಶೇಖರ, ಪದ್ಮ, ಇವರ ಪಾತ್ರಗಳು ಬಂದಿವೆ. ಕೃಷ್ಣಯ್ಯನ ವ್ಯಕ್ತಿತ್ವವೇನೂ ಅಂಥ

ಉತ್ತಮವಾದುದ್ದಲ್ಲ. ಪಾರ್ವತಿ ಕಾಲುಜಾರಿದವಳಾದರೂ ಪ್ರಕೃತಿಯ, ದೈವದ ಒಂದು ಚಕ್ರದ ಸೆಳವಿಗೆ ಸಿಕ್ಕಿ ಪತನದ ಹಾದಿ ಹಿಡಿದು ಅದರ ಸಲುವಾಗಿ ಪಶ್ಚಾತ್ತಾಪ ಪಡುತ್ತಿರುವ ವ್ಯಕ್ತಿ. ಅದರಿಂದ ಅನುಕಂಪನೆಗೆ ಪಾತ್ರಳಾಗುತ್ತಾಳೆ. ವೆಂಕಣ್ಣ ಲಲಿತಮ್ಮ ಇವರ ಹೆಸರು ಬಹಳ ಬಂದರೂ ಇವರಿಬ್ಬರ ಪರಸ್ಪರ ಸಂಬಂಧವನ್ನು ಸ್ಪಷ್ಟವಾಗಿ ಹೇಳಿಲ್ಲ. ಶೇಖರ ಪದ್ಮರ ಪ್ರಣಯ ಪ್ರಸಂಗವಂತೂ, ಇರದೇ ಇದ್ದರೆ ಚೆನ್ನಾಗಿರುತ್ತಿತ್ತು ಎನ್ನಿಸುತ್ತದೆ. ಪದ್ಮಳಲ್ಲಿ ನಾಸ್ತಿಕ ಹೆಣ್ಣಿನ ಚಿತ್ರವನ್ನು ಚಿತ್ರಿಸಲು ಹೋಗಿ ಲೇಖಕರು ವಿಫಲರಾಗುತ್ತಾರೆ. ಶೇಖರ ಅರಿತೂ ಅರಿತೂ ಪಾದರಗಿತ್ತಿಯಂತಹ (ಚಿಟ್ಟೆಯಂಥ) ಹೆಣ್ಣಾದ ಪದ್ಮಳಿಗೆ, ಅಷ್ಟು ಪ್ರಾಧಾನ್ಯ ಕೊಡುತ್ತಾನೆಯೇ ಎಂಬುದು ಸ್ವಲ್ಪ ಅಸಮಂಜಸವಾಗಿದೆ.

ಕಥನಕ್ರಮ ಚೆನ್ನಾಗಿದೆ. ಶೈಲಿ ಉತ್ತಮವಾಗಿದೆ. ಕಿರಿಯ ಲೇಖಕರಾದ ಶ್ರೀ ನರಸಪ್ಪನವರು ಇನ್ನಷ್ಟು ಉತ್ತಮ ವಸ್ತುವನ್ನು ಆರಿಸಿಕೊಂಡಿದ್ದರೆ ಚೆನ್ನಾಗಿರುತ್ತಿತ್ತು. ಕೆಲವೆಡೆಗಳಲ್ಲಿ ಕಥೆ ಮುಗ್ಗರಿಸುತ್ತಾ ಸಾಗುತ್ತದೆ. ಭಗವತ್ ತತ್ತ್ವದಷ್ಟು ಕ್ಲಿಷ್ಟ ವಿಷಯವನ್ನು ಕಾದಂಬರಿಯಲ್ಲಿ ತರದೇ ಇದ್ದರೆ ಚೆನ್ನಾಗಿರುತ್ತಿತ್ತು. ಪಾತ್ರರಚನೆಯಲ್ಲಿ ಆದರ್ಶತೆಯ ಕಡೆಗೆ ದೃಷ್ಟಿಯಿದ್ದರೂ ವಾಸ್ತವಿಕತೆ ಮತ್ತು ಸ್ವೈಜತೆಯನ್ನು ಮರೆಯಬಾರದು. ಪಾತ್ರಗಳು ಜನಜೀವನದಿಂದ ದೂರ ಸರಿಯಬಾರದು.

ಮಹದೇವ ಶಂಕರಪ್ಪ, ಸಿ.

ವಸ್ತುಕೋಶ

ರಾಯಚೂರು ಮೂವತ್ತೆಂಟನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಶ್ರೀ ಆದ್ಯರಂಗಾಚಾರ್ಯ (ಶ್ರೀರಂಗ) ಅವರು ಮಾಡಿದ ಅಧ್ಯಕ್ಷಭಾಷಣ

ಸ್ವಾಗತಾಧ್ಯಕ್ಷರೆ ಹಾಗು ಪ್ರತಿನಿಧಿಗಳೆ,

ಈ ದಿನದ ಈ ಸುಯೋಗಕ್ಕಾಗಿ ತಮಗೆ ಋಣಿಯಾಗಿದ್ದೇನೆ ಎಂದು ಮೊದಲು ಹೇಳಲು ಎರಡು ವಿಶೇಷ ಕಾರಣಗಳಿವೆ: ಒಂದು, ಇಂದಿಗೆ ಸರಿಯಾಗಿ ೨೦ ವರುಷಗಳ ಮುಂಚೆ ಇದೇ ರಾಯಚೂರಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನದ ಅಧಿವೇಶನ ಸೇರಿತ್ತು; ನಾನು ಮೊದಲ ಸಲ ಸಮ್ಮೇಳನದ ಅಧಿವೇಶನದಲ್ಲಿ ಹಾಜರಿದ್ದುದು ಆಗ. ಈಗ ಅದೇ ರಾಯಚೂರಿನಲ್ಲಿ ಸಮ್ಮೇಳನದ ಅಧಿವೇಶನದ ಅಧ್ಯಕ್ಷನೆಂದು ನನ್ನನ್ನು ಕೂಡ್ರಿಸಿ ನನ್ನ ಆ ಪ್ರಥಮ ಸಂದರ್ಭದ ದೃಢತೆಯ ಸವಿರುಚಿಯನ್ನೊದಗಿಸಿದ್ದೀರಿ. ಇನ್ನೊಂದು ಕಾರಣವೆಂದರೆ, ೨೦ ವರ್ಷಗಳ ಮುಂಚಿನ ಅಧಿವೇಶನಕ್ಕೆ ಬಂದಾಗ ಪರಿಷತ್ತು ಇಡಿಯ ಕರ್ನಾಟಕಕ್ಕೆ ನಿಕಟವಾಗಿ ಸಂಬಂಧಿಸಿರಬೇಕೆಂಬ ಅಪೇಕ್ಷೆಯಿಂದ ಅದರ ಘಟನೆಯಲ್ಲಿ ಬದಲಾವಣೆಯಾಗಬೇಕೆಂದು ಅಭಿಪ್ರಾಯ ಪಟ್ಟಿದ್ದೆ. ಕರ್ನಾಟಕ ಒಂದಾಗಬೇಕೆಂದು ಮೊದಲಿನಿಂದಲೂ ಬಯಸಿ ಹೆಣಗುತ್ತಲಿದ್ದ ಮತ್ತು ಅದು ಒಂದೇ ಆಗಿದೆ ಎಂದು ಮೊದಲಿನಿಂದಲೂ ತಮ್ಮ ಕೃತಿ ಮತ್ತು ಚಟುವಟಿಕೆಗಳಿಂದ ತೋರಿಸುತ್ತಲಿದ್ದ ಕನ್ನಡ ಸಾಹಿತಿಗಳ ಈ ಸಮ್ಮೇಳನಕ್ಕೆ, ಇಂದು ಏಕೀಕೃತ ಕರ್ನಾಟಕದ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷನಾಗುವ ಮೊದಲ ಭಾಗ್ಯ ಒದಗಿತು, ಅದನ್ನು ಒದಗಿಸಿದ್ದಕ್ಕಾಗಿ ನಾನು ತಮಗೆ ಋಣಿಯಾಗಿದ್ದೇನೆ ಎಂದು ಹೇಳಬಯಸುತ್ತೇನೆ. ಈ ವಿಶೇಷ ಕಾರಣಗಳಿದ್ದಿಲ್ಲವಾದರೆ ಈ ಉಪಚಾರದ ಅಗತ್ಯವೂ ಇದ್ದಿರಲಿಲ್ಲ. ಯಾಕಂದರೆ ಒಂದೆಡೆ, ಸಮ್ಮೇಳನಾಧ್ಯಕ್ಷಪದವಿಯು ಯಾವದೊಂದು ಅಧಿಕಾರದ ಸ್ಥಾನವಲ್ಲ; ಇನ್ನೊಂದೆಡೆ, ತಾವೆಲ್ಲರೂ ಒಂದು ಸ್ನೇಹದಿಂದ ನನ್ನಲ್ಲಿಟ್ಟ ಭರವಸೆಯ ಪರೀಕ್ಷೆ ಇದು. ಪರೀಕ್ಷೆಗಾಗಿ ಯಾವ ವಿದ್ಯಾರ್ಥಿಯೂ ಪರೀಕ್ಷಕರಿಗೆ ಕೃತಜ್ಞನಾಗುವ ಸಂದರ್ಭವಿಲ್ಲ—ಈ ಮರ್ತ್ಯಲೋಕದಲ್ಲಿ.

ಸಮ್ಮೇಳನಾಧ್ಯಕ್ಷ ಪದವಿಯು ಯಾವದೊಂದು ಅಧಿಕಾರದ ಸ್ಥಾನವಲ್ಲ ಎಂದು ಹೇಳಿದೆನಾದರೂ ಆ ಮಾತು ಪೂರ್ತಿಯಾದುದು ಇಲ್ಲವೆ ಸರಿಯಾದುದು ಎಂದು ಹೇಳುವಂತಿಲ್ಲ. ಯಾಕಂದರೆ, ಅಧಿಕಾರ ಎಂಬ ಕಲ್ಪನೆ ಬೇರೆಬೇರೆ ತರದ್ದಾಗಿದೆ.

ಇನ್ನೊಬ್ಬರಿಗಿಂತ ತಾನು ಬೇರೆಯವ, ಮೇಲಿನವ ಎಂಬುದು ಒಂದು ತರದ ಕಲ್ಪನೆ; ತಾನೂ ಮಿಕ್ಕವರಂತೆಯೆ ಅಲ್ಲದೆ ಮಿಕ್ಕವರ ಒಡನೆ ಕೂಡ ಎಂಬುದು ಇನ್ನೊಂದು ಕಲ್ಪನೆ. ಅಧಿಕಾರ ಎಂಬ ಶಬ್ದಕ್ಕೆ ಸಾಮಾನ್ಯ ವ್ಯವಹಾರದಲ್ಲಿ ಮೊದಲ ಕಲ್ಪನೆಯೆ ಹೆಚ್ಚು ರೂಢವಾಗಿದೆ; ಆ ಅರ್ಥದಲ್ಲಿ ಇದು ಅಧಿಕಾರಸ್ಥಾನವಲ್ಲ ಎಂದು ಹೇಳುವುದು ನನ್ನ ಉದ್ದೇಶ. ಆದರೆ ಇನ್ನೊಂದು ಅರ್ಥದಲ್ಲಿ ಇದು ಅಧಿಕಾರಸ್ಥಾನವಾಗಿದೆ. ನಾನು ಮಿಕ್ಕವರಂತೆ, ಮಿಕ್ಕವರೊಡನೆಯೇ ಇದ್ದೇನೆ; ಒಂದು ವೇಳೆ ಕೆಲವರಿಗಿಂತ ವಯಸ್ಸಿನಿಂದ (ಸ್ವಭಾವದಿಂದಲ್ಲ) ಹಿರಿಯನಾಗಿರಬಹುದು. ಆದರೆ ಈ ಸ್ಥಾನವನ್ನು ನಾನು ಆಕ್ರಮಿಸಿರುವುದು ನಿಮ್ಮೆಲ್ಲರ ಸರಿಸಮಾನಸ್ಕಂಧ ಎಂಬ ಅಧಿಕಾರದಿಂದಲೆ. ಈ ಅಧಿಕಾರವು ಸ್ನೇಹ-ಸೌಜನ್ಯಗಳ ತಳಹದಿಯ ಮೇಲೆ ನಿಂತುದುದರಿಂದ ಕಾರ್ಯ ರಂಗದಲ್ಲಿ ಅದು ಹೆಚ್ಚು ಪ್ರಭಾವಶಾಲಿಯಾಗುವುದೆಂಬುದರಲ್ಲಿ ಸಂದೇಹವಿಲ್ಲ.

ಕನ್ನಡ ಪ್ರಾಂತ

ಐವತ್ತು ವರ್ಷಗಳ ಹಿಂದೆ ಬಂಗಾಲ ಪ್ರಾಂತದ ವಿಭಜನೆಯ ವಿರುದ್ಧ ನಡೆದ ಚಳುವಳದ ವಾತಾವರಣದಲ್ಲಿ ರಾಜಕಾರಣದಲ್ಲಿ ಯಾವ ರೀತಿಯಿಂದಲೂ ಸಂಬಂಧ ವಿಲ್ಲದ ಕೆಲವು ಕನ್ನಡ ಸಾಹಿತ್ಯಾಭಿಮಾನಿಗಳು ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಕಾರ್ಯಸಮಿತಿಯಲ್ಲಿ ಒಂದು ಗೊತ್ತುವಳಿಯನ್ನು ಸ್ವೀಕರಿಸಿದ್ದರು. ಆ ಗೊತ್ತುವಳಿ ಎಂದರೆ ಆಡಳಿತ, ಶಿಕ್ಷಣ ಮತ್ತು ಸಂಸ್ಕೃತಿಗಳ ಅನುಕೂಲತೆ ಮತ್ತು ರಕ್ಷಣೆಗಾಗಿ ಮುಂಬಯಿ, ಮದರಾಸು, ಮೈಸೂರು ಮೊದಲಾದ ಭಾಗಗಳ ಎಲ್ಲ ಕನ್ನಡ ಜಿಲ್ಲೆಗಳನ್ನು ಒಂದೇ ಪ್ರಾಂತವನ್ನಾಗಿ ಮಾಡಬೇಕೆಂದು. ತಮ್ಮ ಗೊತ್ತುವಳಿ ತಾತ್ತ್ವಿಕ ದೃಷ್ಟಿಯಿಂದ ಎಷ್ಟು ಆಗತ್ಯ ಮತ್ತು ಮಹತ್ವದ್ದಾಗಿತ್ತೋ ಅಷ್ಟೇ ಕಾರ್ಯರೂಪದಲ್ಲಿ ಬರಲು ದುಸ್ಸಾಧ್ಯವಾಗಿತ್ತೆಂಬುದನ್ನು ಆ ಸಾಧುಹೃದಯದ ಸಾಹಿತಿಗಳು ಅರಿತಿದ್ದರೊ ಇಲ್ಲವೊ! ಆದರೆ ದೇಶವು ಸ್ವತಂತ್ರವಾದೊಡನೆ ತಮ್ಮ ಇಚ್ಛೆ ನೆರವೇರಿತೆಂದು ಇಂದು ಅವರೆಲ್ಲರಿಗೂ—ಅಭಿಮಾನವೆನಿಸಿರಬಹುದಲ್ಲವೆ? ಕರ್ನಾಟಕ ಪ್ರಾಂತನಿರ್ಮಾಣದ ಈ ಅರುಣೋದಯಕಾಲದಲ್ಲಿ ಅದಕ್ಕಾಗಿ ಬಯಸಿದ, ಹೆಣಗಿದ ಎಲ್ಲರನ್ನೂ ನಾವು ಮೊದಲು ಅಭಿಮಾನದಿಂದ, ಆದರದಿಂದ ಕೃತಜ್ಞತಾಪೂರ್ವಕವಾಗಿ ಸ್ಮರಿಸೋಣ. ಅದರಂತೆಯೆ ಇಂದು ಈ ಘಟನೆಯನ್ನು ಅಸ್ತಿತ್ವದಲ್ಲಿ ತಂದುದಕ್ಕಾಗಿ ನಾಡಿನ ನೇತಾರರಿಗೂ ಕೇಂದ್ರ ಮತ್ತು ಸಂಬಂಧಿಸಿದ ರಾಜ್ಯಸರಕಾರಗಳಿಗೂ ಕೃತಜ್ಞತೆ ಯನ್ನು ಸಲ್ಲಿಸೋಣ. ಶಾಂತವಾತಾವರಣದಲ್ಲಿ ಪ್ರಾಂತವೆ ನಿರ್ಮಾಣವಾಗುತ್ತಿರು ವಾಗ ಗಡಿಭಾಗಗಳ ಪ್ರಶ್ನವೂ ಶಾಂತರೀತಿಯಿಂದಲೇ ಸರ್ವಸಮ್ಮತವಾಗಿ ಬಿಡಿಸ ಲ್ಪಡುವುದೆಂದು ಆಶಿಸಬಹುದಲ್ಲವೆ? ಮಹಾಭಾರತ ಕಾಲದಿಂದ ನಡೆದುಬಂದ “ಕರ್ನಾ

ಟಕ" ಎನ್ನಿರಿ, ಇತ್ತೀಚಿನ ಕಾಲದಿಂದ ನಡೆದುಬಂದ "ಮೈಸೂರು" ಎನ್ನಿರಿ; ಹೆಸರು ಯಾವದಾದರೂ ರಾಜ್ಯ ಕನ್ನಡಿಗರದೆ ಅಲ್ಲವೆ? ಗಡಿ ನಿಂತರೂ ದೇಶ ನಮ್ಮದೆ ಅಲ್ಲವೆ?

ಏಕೀಕೃತ ಕರ್ನಾಟಕದ ಸಾಹಿತಿ

ಸಂಸ್ಕೃತಿ, ಸಾಹಿತ್ಯ ಮತ್ತು ಜೀವನದ ದೃಷ್ಟಿಯಿಂದ ಕರ್ನಾಟಕದ ಏಕೀಕರಣವನ್ನು ಬಯಸಿ ಅದಕ್ಕಾಗಿ ದುಡಿಯುತ್ತಿದ್ದ ಕನ್ನಡ ಸಾಹಿತಿಗಳ ಹೊಣೆ ಇನ್ನು ಹೆಚ್ಚಿದೆ ಎನ್ನಬಹುದು. ಇಂದು ಅಲ್ಲಲ್ಲಿ ಸಂಕುಚಿತದೃಷ್ಟಿಯ ವಾತಾವರಣವೆ ಹೆಚ್ಚಾಗಿ ಕಂಡುಬರುತ್ತಲಿದೆ, ಇದಕ್ಕೆ ಅನೇಕ ಕಾರಣಗಳಿವೆ. ಇವೆಲ್ಲ ಕಾರಣಗಳ ಬುನಾದಿಯಾಗಿದ್ದುದು ಮನುಷ್ಯನ ಸ್ವಭಾವ. ಮನುಷ್ಯ ಸ್ವಭಾವವನ್ನು ಚೆನ್ನಾಗಿ ಅರಿಯಬಲ್ಲ ಸಾಹಿತಿ ಈಗ ಸಹಾನುಭೂತಿಯಿಂದ ವರ್ತಿಸಬೇಕಾಗಿದೆ. ತನ್ನ ವಿಶಾಲವಾದ ಮತ್ತು ಸಹಾನುಭೂತಿಯ ದೃಷ್ಟಿಯಿಂದ ಒಂದೆಡೆ ಭಾರತವು ಒಂದು ದೇಶ ಎಂದು, ಇನ್ನೊಂದೆಡೆ ಕನ್ನಡಿಗರೆಲ್ಲರೂ ಒಂದೇ ಕುಲದವರು ಮತ್ತು ಭಾರತೀಯರು ಎಂದು ಮಿಕ್ಕವರಿಗೆ ತಿಳಿಸಿಕೊಡುವುದು ಸಾಹಿತಿಯ ಕರ್ತವ್ಯಗಳಲ್ಲಿ ಒಂದಾಗಿದೆ. ದೇಶ, ದೇಶದ ಸಂಸ್ಕೃತಿ, ದೇಶದ ಜನತೆ ಇವೆಲ್ಲದರ ಬಗ್ಗೆ ಅಭಿಮಾನವಿದ್ದಷ್ಟೆ ಜ್ಞಾನವೂ ಸಾಹಿತಿಗೆ ಅಗತ್ಯವಾಗಿದೆ. ತನ್ನವರ ಸುಖದುಃಖಗಳಲ್ಲಿ ಸಮಭಾಗಿಯಾಗಬಲ್ಲ ಸಾಹಿತಿ ಕ್ರಮೇಣ ತನ್ನವರಲ್ಲ ಎನ್ನಿಸಿಕೊಳ್ಳುವವರ ಸುಖದುಃಖಗಳಲ್ಲಿ ಸಮಭಾಗಿಯಾಗಬಲ್ಲ. ವಿಜ್ಞಾನದ ಪ್ರಗತಿ ಮತ್ತು ಸುಖಜೀವನದ ಅಗತ್ಯ ಇವುಗಳಿಗಾಗಿ ಒಂದಾಗುತ್ತಲಿದ್ದ ಜಗತ್ತಿನಲ್ಲಿ ಸಾಹಿತಿಯ ಹೊಣೆ ದೊಡ್ಡದಿದೆ.

ಸಂಸಾರದಲ್ಲಿ ಸಾಹಿತಿಯ ಸ್ಥಾನವು ಇಷ್ಟು ಮಹತ್ತ್ವದ್ದಾಗಿದೆಯಾದ್ದರಿಂದ ಸಾಹಿತಿಯ ವ್ಯಕ್ತಿತ್ವದ ಆದರ್ಶವು ಉಚ್ಚತರದ್ದಾಗಬೇಕಾಗಿದೆ. ಸಾಮಾನ್ಯವಾಗಿ,

ಎಲ್ಲರೂ ಸಾಹಿತಿಗಳೇ!

ಬರೆದುದನ್ನು ಇಲ್ಲವೆ ಬರೆಯಿಸಿದುದನ್ನು ಅಚ್ಚುಹಾಕಿಸಲು ಧೈರ್ಯ ಇಲ್ಲವೆ ಧನ ಉಳ್ಳವನಿಂದ ತಿನ್ನಲು ತುತ್ತು ಇಲ್ಲದಾಗ್ಯೂ, ಅನಿವಾರ್ಯವೆನಿಸಿ ಬರೆಯುವವನ ವರೆಗೆ ಇಂದು ಸಾವಿರಾರು ಸಾಹಿತಿಗಳು ಅಸ್ತಿತ್ವದಲ್ಲಿದ್ದಾರೆ. ಬರುತ್ತಲಿದ್ದಾರೆ. ಕನ್ನಡದಲ್ಲೂ ಈ ನಿಯಮಕ್ಕೆ ಅಪವಾದವಿಲ್ಲ. ಇದಲ್ಲದೆ ಇಂದಿನ ವ್ಯಕ್ತಿಸ್ವಾತಂತ್ರ್ಯದ ಕಾಲದಲ್ಲಿ ಯಾರನ್ನೂ ತಡೆಯಲು ಶಕ್ಯವಿಲ್ಲ. ಒಂದು ದೃಷ್ಟಿಯಿಂದ ಇದು ಒಳ್ಳೆಯದೆ ಎನ್ನಬಹುದಾಗಿತ್ತು. ಸಾಹಿತಿಯಾಗಲು ಪ್ರಯತ್ನಿಸುವ ಅವಕಾಶ ಪ್ರತಿಯೊಬ್ಬನಿಗೂ ಇದ್ದರೆ ಒಳ್ಳೆಯದೆ ಅಲ್ಲವೆ? ಯಾವ ಕಾಲದಲ್ಲಿ ಯಾವನೆ ಶ್ರೇಷ್ಠ ಸಾಹಿತಿಯಾಗುವ ಯೋಗವಿದ್ದಲ್ಲಿ ಅದು ಸುಲಭಸಾಧ್ಯವಾಗಬಹುದು. ಇದು ನಿಜ. ಆದರೆ ಪ್ರಯತ್ನಿಸುವವರೆಲ್ಲ ತಮ್ಮಲ್ಲಿ ಯೋಗ್ಯತೆ ಇಲ್ಲ ಎಂದು ಕಂಡುಬಂದೊಡನೆ ತಡೆಯುವರೆಂಬ ಭರವಸೆ ಎಲ್ಲಿದೆ? ಇಷ್ಟೇಕೆ? ಯೋಗ್ಯತೆ

ಇಲ್ಲ ಎಂದು ಕಂಡುಬಂದರೆ ಇನ್ನಿಷ್ಟು ಹಟದಿಂದ, ವಕೀಲಿಯ ವಿಮರ್ಶೆಗಳಿಂದ, ಮೋಹಕ ಮುನ್ನುಡಿಗಳಿಂದ, ಇನ್ನೂ ಅನೇಕ ತರದಿಂದ ತಮ್ಮಲ್ಲಿ ಯೋಗ್ಯತೆ ಇದೆ ಎಂದು ಸಾಧಿಸಿಕೊಳ್ಳುವ ಅನೇಕರಿದ್ದಾರೆ. ಇಂದು ಸಾಹಿತ್ಯದ ಮಟ್ಟ ನಿಂತಲ್ಲಿಯೇ ನಿಂತಿದ್ದರೆ, ಒಂದು ವೇಳೆ ಕೆಳಮಟ್ಟಕ್ಕೆ ಇಳಿದಿದ್ದರೆ ಅದಕ್ಕೆ ಇಂತಹ "ಹವ್ಯಾಸ ಸಾಹಿತಿ"ಗಳು ಹೆಚ್ಚಾಗಿ ಕಾರಣರಾಗಿದ್ದಾರೆ. ಕುರುಬನು ಕಾಲಿದಾಸನಾದನೆಂಬ ಸಂಪ್ರದಾಯದ ಅಭಿಮಾನಿಯಾದ ನಾನು ಯೋಗ್ಯತೆ ಇಲ್ಲದವರು ಬರೆಯುವ ಯತ್ನವನ್ನೆ ಮಾಡಬಾರದು ಎಂಬ ಅಭಿಪ್ರಾಯವನ್ನು ಹೇಗೆ ಒಪ್ಪಿಕೊಳ್ಳುವೆ? ಬೇಕಾದವರು ಯತ್ನಿಸಲಿ, ಎಲ್ಲರೂ ಯತ್ನಿಸಲಿ; ಆದರೆ ತಮ್ಮ ಯತ್ನದ ಅನುಭವವನ್ನೂ, ಬುದ್ಧಿಯನ್ನೂ ಕಲಿತುಕೊಳ್ಳುವ ಯೋಗ್ಯತೆ ಮಾತ್ರ ಅವರಲ್ಲಿ ಇರಲಿ: ಇಲ್ಲವಾದರೆ ಅದು ಬುದ್ಧಿವಂತನ ಯತ್ನವೆನಿಸುವುದಿಲ್ಲ.

ಹುಟ್ಟಿನಿಂದಲೆ ನಿಜವಾದ ಸಾಹಿತಿ ಮೂಡಿ ಬರುತ್ತಾನೆ ಎಂದು ಕೆಲವರು ಹೇಳುತ್ತಾರೆ. ಆದರೆ ನಮ್ಮ ಕಾಲದಲ್ಲಿ ಅಂತಹ ಸಾಹಿತಿಯೂ ಹುಟ್ಟಿಲ್ಲವಾದ್ದರಿಂದ ಈ ಮಾತನ್ನು ನಾವು ಈ ಜನ್ಮದಲ್ಲಿ ನಂಬುವುದು ಬೇಡ.

ಹೊಸಪದ್ಧತಿ

ಕೆಲವು ಹುಟ್ಟುಗುಣಗಳನ್ನು ಬೆಳೆಯಿಸಿಕೊಂಡು ಸಾಹಿತಿಯಾಗಬಹುದಾದರೂ, ಹುಟ್ಟಿಗೆ ಸಂಬಂಧವಿಲ್ಲದ, ಪರಿಸ್ಥಿತಿಗೆ ಸಂಬಂಧಿಸಿದ ಕೆಲವು ಗುಣಗಳು ಸಾಹಿತಿಗೆ ಅಗತ್ಯವಾಗಿವೆ ಎಂಬುದಕ್ಕೆ ಒಂದೇ ಒಂದು ದೃಷ್ಟಾಂತ ಸಾಕು. ಭಾಷೆಯ ಮೇಲಿನ ಪ್ರಭುತ್ವ ಹುಟ್ಟಿನಿಂದ ಬರುವುದೆ? ಇಲ್ಲವೆ ರಾತ್ರಿ ನಿದ್ದೆಯನ್ನು ಕೂಡ ತೊರೆದು ಓದಿ ಕಲಿತುಕೊಂಡರೆ ಬರುವುದೆ? ಈ ದೃಷ್ಟಾಂತವನ್ನು ನಾನು ಬುದ್ಧಿಪೂರ್ವಕವಾಗಿ ಕೊಡಲಿದ್ದೇನೆ. ಯಾಕಂದರೆ, ಭಾಷೆ ಸಾಹಿತ್ಯದ ಶರೀರ. ಶರೀರ ದೃಢವಿಲ್ಲದೆ ಜೀವ ಸುರಕ್ಷಿತವಿರಲಾರದು. ಇಂದು ನಮ್ಮ ಸಾಹಿತ್ಯದ ಶರೀರ ಅವಶ್ಯವಿದ್ದಷ್ಟು ಸದೃಢವಾಗಿಲ್ಲ ಎಂದೇ ಹೇಳಬಹುದು. ಬರೆದುದನ್ನೆ ಬರೆಯುವುದು, ಇನ್ನೊಬ್ಬರ ಮಾದರಿಯನ್ನು ನೋಡಿಕೊಂಡರೇನೆ ಬರೆಯಲು ಬರುವುದು, ಇದು ಭಾಷೆಯ ದೌರ್ಬಲ್ಯದ ಲಕ್ಷಣ. ಕವಿತೆ, ಕತೆ, ಕಾದಂಬರಿ, ನಾಟಕ, ಏಕಾಂಕ ಇವೆಲ್ಲವುಗಳ ಮಾದರಿ ಒಂದು ಹಂತಕ್ಕೆ ಬಂದು ನಿಂತಿದೆ. ಹೊಸ ವಿಚಾರ, ಹೊಸ ತಂತ್ರ, ಹೊಸ ಶೈಲಿ ಇವು ಹೆಚ್ಚಾಗಿ ಕಂಡುಬರುವುದಿಲ್ಲ. ದೇಶದ ಪರಿಸ್ಥಿತಿ ಬದಲಾಗಿದೆ, ಜನಜೀವನದ ದೃಷ್ಟಿಧೋರಣೆಗಳೂ, ಸಾಮಾಜಿಕ ಜಾಗೃತಿಯ ಹೊಂಬೆಳಗೂ ಮೂಡುತ್ತಲಿವೆ, ಸಾಕ್ಷರತೆ ಹಬ್ಬುತ್ತಲಿದೆ; ಆದರೂ ನಮ್ಮ ಕತೆ-ಕಾದಂಬರಿಗಳಲ್ಲಿಯ ನಾಯಕ-ನಾಯಕಿಯರು ಕೆಲವು ವರ್ಷಗಳ ಮುಂಚಿನಂತೆಯೇ ಈಗಲೂ ವರ್ತಿಸುತ್ತಲಿದ್ದಾರೆ.

ಇತಿಹಾಸ ರಚನೆಯಾಗುತ್ತಲಿದೆ, ಆದರೆ ಅದನ್ನು ಶಬ್ದಗಳಲ್ಲಿ ತಿಳಿಸಿಕೊಡುವ ಸಾಮರ್ಥ್ಯ ನಮ್ಮಲ್ಲಿಲ್ಲ. ಕೌರವ-ಪಾಂಡವರ ಯುದ್ಧಕ್ಕೆ ಮಹತ್ತ್ವವಿಲ್ಲ; ಅದನ್ನು

ಆತ್ಮವಂಚನೆ ಬೇಡ

ವ್ಯಾಸ-ವೈಶಂಪಾಯನರು ಆ ರೀತಿ ಬರೆದುದಕ್ಕೆ ಕೌರವ-ಪಾಂಡವ ಯುದ್ಧದ ಕಥೆ ಮಹತ್ತ್ವದ್ದಾಯಿತು. ಅದೇ ತೆರನಾಗಿ ಇಂದಿನ ಬದಲಾಗುತ್ತಿರುವ ಜೀವನದ ಕಥೆಯನ್ನು ತಕ್ಕ ಶಬ್ದಗಳಲ್ಲಿ ಚಿತ್ರಿಸುವ ಸಾಹಿತಿಗಳು ನಮಗೆ ಬೇಕಾಗಿದ್ದಾರೆ; ಇಂತಹ ಸಾಹಿತಿಗಳು ಬಂದ ದಿನ ಆಧುನಿಕ ಕನ್ನಡ ಸಾಹಿತ್ಯ ಇನ್ನೂ ಒಂದು ಹೆಜ್ಜೆ ಮುಂದೆ ಇಟ್ಟೀತೆಂದು ಹೇಳಬಹುದು. ಅಂತಹ ಸಾಹಿತಿಗಳ ಉದಯವಾಗುವಂತೆ ಅನುಕೂಲ ವಾತಾವರಣವನ್ನು ನಿರ್ಮಿಸುವ ಬಗ್ಗೆ ವಿಚಾರಮಾಡಲು ಸಾಹಿತ್ಯ ಸಮ್ಮೇಳನವೇ ತಕ್ಕ ಸಭಾಂಗಣವಾಗಿದೆ ಎಂದು ತಿಳಿದು ನಾನು ನನ್ನ ಕೆಲವು ವಿಚಾರಗಳನ್ನು ತಮ್ಮ ಮುಂದೆ ಇಡಬಯಸುತ್ತೇನೆ.

ಇಂದು ನಮ್ಮ ತರುಣ ಸಾಹಿತಿಗಳು ಕನ್ನಡ ಸಾಹಿತ್ಯ ಪ್ರವಾಹವನ್ನು ಹೊಸದಾದ ಮತ್ತು ನಿರರ್ಗಳವಾದ ದಾರಿಗೆ ಹರಿಬಿಡಬೇಕಾದರೆ ಕೆಲವು ಸಂಗತಿಗಳು

ಸಂಸ್ಕೃತ ಅಭ್ಯಾಸದ ಅಗತ್ಯ

ಅಗತ್ಯವಾಗಿವೆ. ಆ ಸಂಗತಿಗಳ ಅಭಾವಕ್ಕಾಗಿ ಇಂದು ಹೊಸಬರಲ್ಲಿ ಬರೆಯುವವರ ಸಂಖ್ಯೆ ಹೆಚ್ಚಾಗುತ್ತಿದ್ದರೂ ಅಷ್ಟಕ್ಕೆ ಓದುಗರ ಸಂಖ್ಯೆ ಕಡಿಮೆಯಾಗಿರಬಹುದಲ್ಲದೆ ಬೇರೆ ಹೇಳುವಂತಹದೇನೂ ಇಲ್ಲ. ಈ ಮಾತಿನಲ್ಲಿ ತರುಣ ಲೇಖಕರಿಗೆ ಅನಾದರವಿಲ್ಲ: ತದ್ವಿರುದ್ಧವಾಗಿ, ಅವರ ಸಾಹಸಕ್ಕಾಗಿ ಮೆಚ್ಚಿಗೆ ಇದೆ, ಅವರ ಹಟಕ್ಕಾಗಿ ಅಭಿನಂದನೆ ಇದೆ, ಸಾಹಿತ್ಯದ ಬಗ್ಗೆ ಅವರಲ್ಲಿದ್ದ ಆಸಕ್ತಿಗಾಗಿ ಸಮಾಧಾನವಿದೆ. ಆದರೆ ಈ ತರುಣರ ಪ್ರಯತ್ನಗಳು—ನಾನು ಈಗ ಹೇಳಲಿರುವ ಸಂಗತಿಗಳಿದ್ದಲ್ಲಿ—ಫಲಕಾರಿಯಾಗುವವಲ್ಲದೆ ಕನ್ನಡ ಸಾಹಿತ್ಯದ ಮಟ್ಟವನ್ನೂ ಉತ್ತಮಗೊಳಿಸುವುವು. ಈ ಸಂಗತಿಗಳಲ್ಲಿ ನನ್ನ ದೃಷ್ಟಿಯಿಂದ ಮೊದಲನೆಯದೆಂದರೆ, ಸಂಸ್ಕೃತ ಭಾಷೆಯ ಮತ್ತು ಸಾಹಿತ್ಯದ ಅಭ್ಯಾಸ ಮತ್ತು ಪರಿಚಯ. ಕನ್ನಡವು ದ್ರಾವಿಡಗುಂಪಿನ ಭಾಷೆ, ಸಂಸ್ಕೃತ ಆರ್ಯಗುಂಪಿನ ಭಾಷೆ, ಎಂಬ ಶಾಸ್ತ್ರ ನನಗೆ ಗೊತ್ತಿದೆ. ಆದರೆ ಭಾಷೆ ಅದನ್ನು ನುಡಿಯುವ ಮನುಷ್ಯನೊಡನೆ ಜೀವಂತವಾಗಿರುವುದಲ್ಲದೆ ಶಾಸ್ತ್ರದ ವ್ರತನಿಯಮಗಳನ್ನು ಆಚರಿಸುವುದಿಲ್ಲ. ಈ ಎರಡು ಭಾಷೆಗಳ ಮೂಲ ಬೇರೆಯಾಗಿದ್ದರೂ ಇವುಗಳನ್ನು ಆಡುವವರ ಜೀವನ ಸಾವಿರಾರು ವರ್ಷಗಳಿಂದ ಒಂದೇ ಪ್ರವಾಹವಾಗಿದೆ. ಇವರಿಬ್ಬರ ಸಂಸ್ಕೃತಿ, ಇತಿಹಾಸ, ದಂತಕಥೆ, ಸಂಪ್ರದಾಯ ಇವು ಒಂದನ್ನೊಂದು ಹೊಂದಿಕೊಂಡು ಬೆಳೆದಿವೆ. ಸಂಸ್ಕೃತವನ್ನು ಅರಿಯದ ಹಳ್ಳಿಗನು ಕೂಡ 'ಹಣ್ಯಾಗ ಏನ್ಬರೆದೇತ್ಯೋ

ಅಳಿಸಾಕ ಬಂದೀತ?" ಎನ್ನುವನು. "ಲಿಖಿತಮಪಿ ಲಲಾಟೇ ಪ್ರೋಜ್ಝಿತುಂ ಕಃ ಸಮರ್ಥಃ?" ಎಂಬ ಸಂಸ್ಕೃತ ಮತ್ತು ಸಂಸ್ಕೃತಿ ಅದು; ಕಷ್ಟದಲ್ಲಿದ್ದಾಗ "ವನವಾಸ ನಡದೇತಿ" ಎನ್ನುವನು. ರಾಮಾಯಣ—ಮಹಾಭಾರತಗಳ ಸಂದರ್ಭವದು. ನಮ್ಮ ಭಾಷೆ, ನಮ್ಮ ವಿಚಾರ, ನಮ್ಮ ರೀತಿನೀತಿಗಳು, ನಮ್ಮ ಗಾದೆಯ ಮಾತುಗಳು, ನಮ್ಮ ಅಜ್ಜಿಯರು ಹೇಳುವ ಕಥೆಗಳು—ಇವೆಲ್ಲವೂ ಆರ್ಯರ ಸಂಸ್ಕೃತಿಯೊಡನೆ ಕಲಬೆರಕೆಯಾಗಿ, ಆರ್ಯದ್ರಾವಿಡವೆಂಬ ಭೇದವೆ ಮಾಯವಾಗಿ ಸಂಸ್ಕೃತ ಸಾಹಿತ್ಯದ ಮಾರ್ಗವಾಗಿ ನಮಗೆ ಜೀವನಶಕ್ತಿಗಳಾಗಿ ದೊರೆತಿವೆ. ಸಂಸ್ಕೃತ ಭಾಷೆಯನ್ನರಿಯದಿದ್ದರೆ ಒಂದೆಡೆ ಬೇಕಾದ ವಿಚಾರಕ್ಕೆ ತಕ್ಕ ಶಬ್ದಸಾಮಗ್ರಿ ಇಲ್ಲದೆ ಹೋದರೆ, ಇನ್ನೊಂದೆಡೆ ನಮ್ಮಲ್ಲಿಯ ಸಾಮಾನ್ಯ ಜನರ ಮಾಧ್ಯಮ ನಮಗೆ ಇಲ್ಲದಂತಾಗುವುದು. ಸಂಸ್ಕೃತದ ಅಗತ್ಯದ ಬಗ್ಗೆ ಕನ್ನಡಿಗರಲ್ಲಿ ಆಂಡಯ್ಯನ ಕಾಲ ದಿಂದಲೂ ಭಿನ್ನಾಭಿಪ್ರಾಯವಿದೆ; ಆದರೆ ಅಭಿಪ್ರಾಯ ಭಿನ್ನವಾದರೆ ಸಂಸಾರವು ಕೂಡಿಯೆ ನಡೆಯುವುದು ಅನಿವಾರ್ಯವೆಂಬ ಸಾಂಪ್ರದಾಯಿಕ ಗಂಡಹೆಂಡತಿಯ ಜೊತೆಯಂತೆ ಸಂಸ್ಕೃತ-ಕನ್ನಡಗಳ ಜೊತೆ ಇದೆ.

ಸಾಹಿತಿಯ ವಿನಯ

ಸಾಹಿತಿಗೆ ಅಗತ್ಯವಾದ ಇನ್ನೂ ಒಂದು ಮಹತ್ವದ ಸಂಗತಿ ಎಂದರೆ ಆತ್ಮ ವಿಶ್ವಾಸ ಮತ್ತು ವಿನಯಶೀಲತೆ. ಇವೆರಡೂ ತೋರಿಕೆಗೆ ಪರಸ್ಪರ ವಿರುದ್ಧವೆನ್ನಿಸ ಬಹುದು. ಆದರೂ 'ಮಂದಃ ಕವಿಯಶಃಪ್ರಾರ್ಥೀ' ಎಂದು ಕಾಳಿದಾಸನು ಕೂಡಲೆ "ತಂ ಸಂತಃ ಶ್ರೋತುಮರ್ಹಂತಿ" ಎಂದಿದ್ದಾನೆಂಬುದನ್ನು ನೋಡಬಹುದು. ತಾನು ಮಂದಮತಿ ಎಂದು ಹೇಳಿಕೊಳ್ಳು ವಾಗಲೂ ತಾನು ಬರೆದ ಕಾವ್ಯವನ್ನು ವಿವೇಕಿಗಳು ಮಾತ್ರ ಓದಲು ಅರ್ಹರು ಎಂದು ಹೇಳುತ್ತಾನೆ ಕಾಳಿದಾಸ. ಮಂದಮತಿ ಎನ್ನುವಲ್ಲಿ ವಿನಯ, ವಿವೇಕಿಗಳೆ ಅರ್ಹರು ಎಂಬಲ್ಲಿ ಆತ್ಮವಿಶ್ವಾಸ, ಬರೆಯುವುದಾದರೆ ಒಳ್ಳೆಯದನ್ನೇ ಬರೆಯುವೆ ಎಂಬುದು ಆತ್ಮವಿಶ್ವಾಸ; ಎಷ್ಟು ಬರೆದರೂ ನಾನು ಹೊಸತನ್ನು ನೋಡಿದಂತೆ ಹೊಸದನ್ನು ಕಲಿಯುವ ಜಿಜ್ಞಾಸು, ವಿದ್ಯಾರ್ಥಿ ಎಂಬುದು ವಿನಯ. ಇಂದು ನಮ್ಮ ಸಾಹಿತಿ ಗಳಲ್ಲಿ ಈ ವಿನಯವಿಲ್ಲದ್ದಕ್ಕೆ ತಾವು ಬರೆದುದು ಒಳ್ಳೆಯದು, ಇನ್ನು ಮುಂದೆ ತಾವು ತಿಳಿಯಬೇಕಾದುದೇನೂ ಇಲ್ಲ ಎಂದೆನ್ನಿಸಿ ಅವರೂ ಅವರ ಕೃತಿಗಳೂ ಹೊಂಡದ ನೀರಾಗಿ ನಿಂತುಬಿಡುವುವು. ಒಮ್ಮೊಮ್ಮೆ ಬರೆಯುವ ಮುಂಚೆ ಇದೇ ಸರಿ ಎಂಬ ಪೂರ್ವಗ್ರಹ ಗಟ್ಟಿಯಾಗಿರುವುದು. ನಿಂತಲ್ಲಿ ನಿಂತ ಮೋಟಾರನ್ನು ಕ್ಯಾಮರಾದ ಕೈಚಳಕದಿಂದ ನಡೆಯುವಂತೆ ತೋರಿಸುವ ಪ್ರಗತಿಯೆ ಇಂತಹರ ಪ್ರಗತಿಯಾಗುವುದು. ನಮ್ಮ ಕಣ್ಮುಂದೆಯೆ ಆಗುತ್ತಲಿದೆ. ಕ್ಷಣಕ್ಷಣಕ್ಕೆ ಬದಲಾಗುತ್ತಿರುವ ಪ್ರಪಂಚದಲ್ಲಿ

ಬದುಕುವ ಸಾಹಿತಿ ಪೂರ್ವಗ್ರಹವನ್ನಿಟ್ಟುಕೊಂಡರೆ ತನಗೆ ತಾನೇ ದ್ರೋಹ ಬಗೆದಂತಾಗುವುದು. ಕ್ಯಾಮರಾದ ಕೈಚಳಕದಲ್ಲಿ ನಿಜವಾಗಿಯೆ ತನ್ನ ಪ್ರಗತಿ ಇದೆ ಎಂದು ತಿಳಿದುಕೊಳ್ಳುವಂತೆ ಇನ್ನೊಂದು ಕಡೆಯ ಚಲನವಲನದಿಂದ ತಾನೆ ಮುಂದುವರಿಯುತ್ತಿದ್ದಾನೆ ಎಂದು ತಿಳಿದುಕೊಳ್ಳುವುದು ವಂಚನೆ.

ಈ ಮಾತುಗಳನ್ನು ನಾನೊಬ್ಬ ಹಿರಿಯ ಇಲ್ಲವೆ ಉತ್ತಮ ತರಗತಿಯ ಸಾಹಿತಿ ಎಂಬ ಅಧಿಕಾರದಿಂದ ಹೇಳುತ್ತಿಲ್ಲ. ಈ ಮಾತುಗಳನ್ನು ಹೇಳಲು ಬೇರೆ ಕಾರಣಗಳಿವೆ.

ಇಂದಿನ ಸಾಹಿತಿ

ಇಂದಿನ ಸಾಹಿತಿ ನಿಜವಾಗಿಯೂ ನನ್ನ ತಲೆಮಾರಿನವರಿಗಿಂತ ಹೆಚ್ಚು ಸುದೈವಿ ಎಂದು ಹೇಳಬಹುದು. ಇಂದು ದೇಶ ಸ್ವತಂತ್ರವಾಗಿದೆ; ವ್ಯಕ್ತಿಸ್ವಾತಂತ್ರ್ಯದ ತತ್ತ್ವ ವ್ಯವಹಾರಕ್ಕಿಳಿದಿದೆ; ದೇಶದ ಪ್ರಗತಿಗೆ ಸಾಹಿತಿಗಳ ಅಗತ್ಯವಿದೆ ಎಂಬ ಮಾತನ್ನು ದೇಶದ ಬೇರೆಬೇರೆ ಸರಕಾರಗಳು ಒಪ್ಪುತ್ತಿವೆ. ಸಾಹಿತ್ಯಕ್ಕೆ ತಕ್ಕ ಉತ್ತೇಜನವನ್ನು ಕೊಡಬೇಕು ಎನ್ನುವುದಲ್ಲದೆ ಸಾಕ್ಷಾತ್ತಾಗಿ ಕೊಡುತ್ತಿರುವ ದೃಷ್ಟಾಂತಗಳು ಕಾಣಿಸಿಕೊಳ್ಳತೊಡಗಿವೆ; ದಿನದಿನಕ್ಕೆ ಓದುಬಲ್ಲವರ ಸಂಖ್ಯೆ ಹೆಚ್ಚುತ್ತಲಿದೆ; ಎಲ್ಲ ಮಟ್ಟಗಳಲ್ಲಿ ಶಿಕ್ಷಣದ ಮಾಧ್ಯಮವು ಪ್ರಾದೇಶಿಕ ಭಾಷೆಯಾಗಿರಬೇಕೆಂಬ ವಿಚಾರಕ್ಕೆ ಪ್ರಾಶಸ್ತ್ಯ ದೊರೆಯುತ್ತಿದೆ; ಅಲ್ಲಲ್ಲಿ ಒಳ್ಳೆಯ ಸಾಹಿತ್ಯಕ್ಕೆ ಪಾರಿತೋಷಕದ ಮನ್ನಣೆ ದೊರೆಯುತ್ತಲಿದೆ. ಇದಲ್ಲದೆ ದಿನದಿನಕ್ಕೆ ಇದಕ್ಕಿಂತ ಹೆಚ್ಚಿನ ಅನುಕೂಲಗಳು ಒದಗಬಹುದಾಗಿವೆ. ಇದು ತರುಣ ಸಾಹಿತಿಗಳ ಸುದೈವ. ಇವೆಲ್ಲ ಅನುಕೂಲಗಳನ್ನು ಒದಗಿಸಬೇಕೆನ್ನುವ ಸಮಾಜಕ್ಕೆ ಪ್ರತಿಯಾಗಿ ಸಾಹಿತಿಯು ಯೋಗ್ಯ ಸಾಹಿತ್ಯವನ್ನು ಒದಗಿಸಬೇಕೆಂಬುದು ಸಮಂಜಸವಾದ ಸಲಹೆಯಲ್ಲವೆ? ಶಿಕ್ಷಣವನ್ನು ಪೂರ್ತಿಯಾಗಿ ಇಂಗ್ಲಿಷದಲ್ಲಿ ಪಡೆದು ಪಟ್ಟಣದಲ್ಲಿ ನೌಕರಿ ಮಾಡಿಕೊಂಡಿರುವ ಸಾಹಿತಿಗಿಂತ ಜನಭಾಷೆಯಲ್ಲಿ ಶಿಕ್ಷಣವನ್ನು ಪಡೆದು, ಸುಧಾರಿಸುತ್ತಿರುವ ಹಳ್ಳಿಯಲ್ಲಿ ಜನಸಾಮಾನ್ಯರೊಡನಿದ್ದ ಸಾಹಿತಿಯ ಸಾಹಿತ್ಯವು ಹೆಚ್ಚು ಸತ್ತ್ವಯುತವಾದುದು, ಸಮಾಜಕ್ಕೆ ಪೋಷಕವಾದುದು ಎಂದು ಹೇಳಬಹುದಲ್ಲವೆ?

ನನ್ನ ಅಲ್ಪಯೋಗ್ಯತೆಗೆ ತಕ್ಕಂತೆ ನಾನೂ ಒಬ್ಬ ಸಾಹಿತಿ. ಆದುದರಿಂದ ಕೇವಲ ಸಾಹಿತಿಗಳಿಗೆಯೆ ಉಪದೇಶ ಮಾಡಿದರೆ ನನಗೆ ಸಮಾಧಾನವಿಲ್ಲ, ನನ್ನ ಕೆಲಸವೂ

ಒಂದು ಸಲಹೆ

ಮುಗಿದಂತಾಗಲಿಲ್ಲ. ಇಂದಿನ ಸಾಹಿತಿ ಸುದೈವಿ ಎಂದೇನೋ ಹೇಳಿದೆನು. ಆದರೆ ಅಷ್ಟಕ್ಕೆ ಅವನು ಸುಖಜೀವಿ ಎಂದು ಹೇಳುವಂತಿಲ್ಲ. ದೇಶವು ಸ್ವತಂತ್ರವಾದಂದಿನಿಂದ ವಾತಾವರಣವು ಅನುಕೂಲವಾಗಿದೆಯೇನೋ ನಿಜ. ಆದರೆ ಹವೆ ಒಳ್ಳೆಯದಿದ್ದರೂ ಎಲ್ಲರಿಗೂ ಅದರ ಲಾಭ ದೊರೆಯುವು

ದಿಲ್ಲ ಎಂಬುದನ್ನು ಅನುಭವದಿಂದ ನೋಡುತ್ತಲಿದ್ದೇವೆ. ಅದಕ್ಕಾಗಿ ಇಂದಿನ ವಾತಾವರಣಕ್ಕಾಗಿ ಸಮಾಧಾನಪಡುವಂತಿಲ್ಲ. ಯಾರು ಹೇಳಬಲ್ಲರು? ದೇಶ ವಿಶಾಲವಿದ್ದಷ್ಟು ನಮ್ಮ ಹೃದಯ ಸಂಕುಚಿತವಾಗುತ್ತಿರುವ ಇಂದಿನ ಕಾಲದಲ್ಲಿ ಹವೆಯು ನಿರರ್ಗಳವಾಗಿ ಬೀಸುವುದು ಎಂದು ಹೇಗೆ ಹೇಳಬಹುದು? ಒಂದೆ ಭಾಷೆಯನ್ನು ಆಡುವವರಲ್ಲಿ ಇಂದು ಮೈಸೂರು ಬೇರೆ, ಮಂಗಳೂರು ಬೇರೆ, ಬೆಳಗಾಂವಿ ಬೇರೆ ಎಂದು ನಾವು ಹೇಳಲು ಹಿಂದುಮುಂದು ನೋಡದಿರುವಾಗ ಹದಿನಾಲ್ಕು ಭಾಷೆಗಳುಳ್ಳ ದೇಶದಲ್ಲಿ ಎಲ್ಲ ಭಾಷೆಗಳಿಗೂ ಸಮವಾದ ಉತ್ತೇಜನ ದೊರೆಯುವುದೆಂದು ಯಾವ ಧೈರ್ಯದಿಂದ ಹೇಳಬಹುದು? ಇದಲ್ಲದೆ ನೈಸರ್ಗಿಕವಾಗಿಯೆ ಭಾಷೆ-ಭಾಷೆಗಳ ಅನುಕೂಲತೆಗಳಲ್ಲಿ ವ್ಯತ್ಯಾಸವಿದೆ. ಹಿಂದೀ ಭಾಷೆಯನ್ನಾಡುವವರ ಸಂಖ್ಯೆ ತೀರ ದೊಡ್ಡದಿದ್ದರೆ ಮಲಯಾಳಿಗರ ಸಂಖ್ಯೆ ಕಡಿಮೆ ಇದೆ. ಹಿಂದೀ ಸಾಹಿತ್ಯಕ್ಕೆ—ಜೊತೆಗೆ ಆಡಳಿತದ ಭಾಷೆ ಎನಿಸುವುದರಿಂದ—ಇನ್ನಿಷ್ಟು ಹೆಚ್ಚು ಓದುಗರು ದೊರೆತರೆ—ಮೈಸೂರು ಧಾರವಾಡ ಎಂಬ ವಾದದಲ್ಲಿ ಕನ್ನಡ ಸಾಹಿತ್ಯಕ್ಕೆ ಇನ್ನಿಷ್ಟು ಕಡಿಮೆ ಓದುಗರು ದೊರೆಯಬಹುದು. ಓದುಗರು ಕಡಿಮೆಯಾದಮಟ್ಟಿಗೆ ಉತ್ತಮ ಸಾಹಿತ್ಯ ನಿರ್ಮಾಣಕ್ಕೆ ಉತ್ತೇಜನವೂ ಕಡಿಮೆಯಾಗಬಹುದು. ಈ ಪರಿಸ್ಥಿತಿಯನ್ನು ಮುಂಚಿತವಾಗಿಯೆ ಅರಿತುಕೊಳ್ಳಬೇಕು. ಇದಕ್ಕೆ ಉಪಾಯವನ್ನು ಯೋಚಿಸುವುದು ಯೋಗ್ಯ ಸಾಹಿತ್ಯವನ್ನು ನಿರ್ಮಿಸಬಲ್ಲ ಸಾಹಿತಿಗಳ ಕೈಯಲ್ಲಿದೆಯಲ್ಲದೆ ಕಾಯಿದೆಗಳನ್ನು ಗೊತ್ತು ಮಾಡುವ ಸರಕಾರಗಳ ಕೆಲಸವಿದಲ್ಲ. ಸಾಹಿತ್ಯ ಪರಿಷತ್ತಿನಂತಹ ಸಂಸ್ಥೆಗಳು ಈ ಪರಿಸ್ಥಿತಿಯನ್ನು ಸುಧಾರಿಸುವಲ್ಲಿ ಹೆಚ್ಚು ಸಹಾಯಕವಾಗಬಲ್ಲವು. ಮೊದಲನೆಯದಾಗಿ, ಆಯಾ ಭಾಷೆಯ ಕೇಂದ್ರ ಸಾಹಿತ್ಯ ಸಂಸ್ಥೆಗಳು ಪ್ರತಿ ವರ್ಷ ದೇಶದ ಬೇರೆ ಬೇರೆ ಸಾಹಿತ್ಯಗಳಿಂದ ಒಂದೊಂದು ಉತ್ತಮ ಕೃತಿಯನ್ನು ತಮ್ಮ ಭಾಷೆಗೆ, ತಮ್ಮ ಕೆಲವು ಉತ್ತಮ ಕೃತಿಗಳನ್ನು ಬೇರೆಬೇರೆ ಭಾಷೆಗಳಿಗೆ ಪರಿವರ್ತಿಸುವಂತೆ ತಜ್ಞರ ಸಮಿತಿಗಳನ್ನು ಏರ್ಪಡಿಸಬೇಕು. ಪ್ರತಿ ವರ್ಷವೂ ಕೇಂದ್ರ ಮತ್ತು ಸಂಬಂಧಿಸಿದ ರಾಜ್ಯಸರಕಾರಗಳು ಮೇಲಿನ ಕೃತಿಗೆ ಕೊಡುವಂತೆ ಉತ್ತಮ ಭಾಷಾಂತರಿತ ಕೃತಿಗಳಿಗೂ ಪಾರಿತೋಷಕಗಳನ್ನು ಕೊಡಬೇಕು. ಹೀಗಾದಲ್ಲಿ ಪ್ರತಿಯೊಂದು ಸಾಹಿತ್ಯವೂ ಪರಸ್ಪರ ಪೋಷಕತೆಯಿಂದ ಬಲಗೊಳ್ಳುವದಲ್ಲದೆ ದೇಶದ ಯಾವದೇ ಭಾಷೆಯ ಉತ್ತಮ ಸಾಹಿತಿಯ ಪರಿಚಯವು ಇಡಿಯ ದೇಶಕ್ಕಾಗುವುದು. ಇದೇ ಸಂದರ್ಭದಲ್ಲಿ ಒಂದು ವಿಷಯದ ಕಡೆ ತಮ್ಮ ಲಕ್ಷ್ಯವನ್ನು ಸೆಳೆಯಬಯಸುತ್ತೇನೆ. ಕಳೆದ ಎರಡು ವರ್ಷಗಳ ಸ್ವಂತದ ಅನುಭವಕ್ಕಾಗಿಯೂ ಇದನ್ನು ತುಸು [illegible]ಟದಿಂದ ಹೇಳಬಯಸುತ್ತೇನೆ. ದೇಶದ ಮಿಕ್ಕ ಸಾಹಿತ್ಯಗಳೊಡನೆ ಸಂಪರ್ಕ ಬೇಕು ಬೇಕೆಂದು

ಹೇಳಿದೆನಲ್ಲವೆ ? ಈಗಾಗಲೆ ಈ ಕೆಲಸ ನಡೆದಿದೆ. ಕಳೆದ ಹತ್ತು-ಹನ್ನೆರಡು ವರ್ಷಗಳಿಂದ ಹೊರನಾಡ ಕನ್ನಡಿಗರ ಸಂಸ್ಥೆ ಎಂಬ ಹೆಸರಿನಿಂದ ನಮ್ಮ ಕನ್ನಡ ಗೆಳೆಯರು ದೇಶದ ಅನೇಕ ಕಡೆಗಳಲ್ಲಿ ಕರ್ನಾಟಕ ಸಂಘಗಳನ್ನು ರಚಿಸಿಕೊಂಡು, ವರ್ಷಕ್ಕೊಮ್ಮೆ ಸಮ್ಮೇಳನವನ್ನು ನಡೆಯಿಸಿ ಕನ್ನಡನಾಡು-ನುಡಿ-ಸಾಹಿತ್ಯ-ಸಂಸ್ಕೃತಿಗಳ ಪರಿಚಯ ವನ್ನು ಹೊರಗಿನವರಿಗೆ ಮಾಡಿಕೊಡುತ್ತಿದ್ದಾರೆ. ಅನಿವಾರ್ಯ ಕಾರಣಗಳಿಗಾಗಿ ಈ ಕಾರ್ಯಕ್ಕೆ ಸಾಕಷ್ಟು ಬಲ ಬಂದಿಲ್ಲ, ನಮ್ಮೆಲ್ಲರ ಪ್ರೋತ್ಸಾಹ-ಆಶ್ರಯಗಳಿಲ್ಲದೆ ಅದು ಬರುವಂತಿಲ್ಲ. ಹೊರನಾಡ ಕನ್ನಡಿಗರ ಚಟುವಟಿಕೆಗಳ ಒಳ್ಳೆಯ ಪರಿಣಾಮ ಗಳನ್ನು ನೋಡಿದರೆ ಈ ಪ್ರೋತ್ಸಾಹ-ಆಶ್ರಯಗಳು ಅಗತ್ಯ, ಅರ್ಹ ಎಂದು ಖಂಡಿತ ವಾಗಿ ಕಂಡುಬರುವುದು. ಕನಿಷ್ಠಪಕ್ಷಕ್ಕೆ ನಾವು—ಪರಿಷತ್ತಿನ ವತಿಯಿಂದ ಕೆಲವು ವಿದ್ವಾಂಸ ಉಪನ್ಯಾಸಕರನ್ನು, ಆಗಾಗ ನಾಟಕ-ನೃತ್ಯ ಕಲೆಗಾರರನ್ನು ಮತ್ತು ಕರ್ನಾಟಕದ ಸಾಹಿತ್ಯ-ಸಂಸ್ಕೃತಿಗಳ ಬಗ್ಗೆ ಅಂಕಿ-ಸಂಖ್ಯೆ-ನಕ್ಷೆ-ಸಮಾಚಾರ ಗಳನ್ನು ಒದಗಿಸುತ್ತ ಹೋದರೂ ಹೊರನಾಡ ಕನ್ನಡ ಕಾರ್ಯಕರ್ತರಿಗೆ ಹೆಚ್ಚಿನ ಉತ್ಸಾಹ ಬರುವುದು. ಅದರಂತೆ ಅಲ್ಲಲ್ಲಿಯ ಬೇರೆ ದೇಶೀಯ ಸಾಹಿತ್ಯಗಳ ಪರಿಚಯ ವನ್ನು ಮಾಡಿಕೊಡಲು ಹೊರನಾಡ ಸಂಘಗಳು ಸಹಾಯಕವು.

ಗೆಳೆಯರೆ, ನಾನು ಇಲ್ಲಿ ಕೇವಲ ನನ್ನ ಸೂಚನೆಗಳನ್ನು ಸಲ್ಲಿಸುತ್ತಿರುವೆನಲ್ಲದೆ ಯಾವೊಂದು ಯೋಜನೆಯನ್ನು ಸಿದ್ಧಪಡಿಸಿ ತಮ್ಮೆದುರು ಇಡುವ ಧಾರ್ಷ್ಟ್ಯವನ್ನು ಮಾಡುವುದಿಲ್ಲ. ನನ್ನ ಯಾವುದೆ ಸೂಚನೆಗೆ ತಮ್ಮ ಒಪ್ಪಿಗೆ ದೊರೆತಲ್ಲಿ ಅದಕ್ಕನುಗುಣವಾದ ಯೋಜನೆಯನ್ನು ಅಧಿಕಾರದ ಸಂಸ್ಥೆಗಳು ತಯಾರಿಸಬಹುದು. ಈ ರೀತಿ—ನನ್ನ ಇನ್ನೊಂದು ಸೂಚನೆ ಪ್ರಕಾಶಕರಿಗೆ ಸಂಬಂಧಿಸಿದೆ. ಕರ್ನಾಟಕದಲ್ಲಿ ಪ್ರಕಾಶನ ಸಂಸ್ಥೆ ಎಂಬ ಗೌರವಕ್ಕೆ ತಕ್ಕ ಸಂಸ್ಥೆಗಳು ಇವೆಯೋ ಇಲ್ಲವೋ ಬಲ್ಲವರು ತಿಳಿಸಿದಲ್ಲಿ ನನಗೆ ಖಂಡಿತ ಸಂತೋಷವಾಗುವುದು. ನನಗೆ ಗೊತ್ತಿದ್ದ ಸಂಸ್ಥೆಗಳೆಂದರೆ ಸಾಹಿತ್ಯ ಪ್ರಕಾಶನದ ಸಂಸ್ಥೆಗಳಲ್ಲ, ನಿಯತಕಾಲಿಕ ಪ್ರಕಾಶನದ ಸಂಸ್ಥೆಗಳು. ತಿಂಗಳಿಗೊ, ಎರಡು ತಿಂಗಳಿಗೊ ಒಂದು ಪ್ರಕಟನೆಯನ್ನು ಹೊರಡಿಸಬೇಕು; ಅದು ಏನೆ ಇರಲಿ, ಎಂತಹದೆ ಇರಲಿ, ಬರೆಯುವವನಿಗೆ ಆದಷ್ಟು ಕಡಿಮೆ ಹಣವನ್ನು ಕೊಡಬೇಕು, ಬೆಲೆ ಶಕ್ಯವಿದ್ದಷ್ಟು ಹೆಚ್ಚಾಗಿರಬೇಕು, ಪ್ರಕಟವಾದ ಕೃತಿಯ ಬಗ್ಗೆ ತಾವೇ ಒಂದು ಜಾಹಿರಾತಿನ ವಿಮರ್ಶೆಯನ್ನು ಬರೆಯತಕ್ಕದ್ದು. ತರುವಾಯ ಮುಂದಿನ ಪ್ರಕಟನೆಯನ್ನು ಕೈಕೊಳ್ಳ ತಕ್ಕದ್ದು. ಹೆಚ್ಚಾಗಿ ಈ ತರದ ಸಂಸ್ಥೆಗಳು. ಇವಾದರೂ ಊರ್ಜಿತಸ್ಥಿತಿಯಲ್ಲಿವೆಯೆ ? ಇಲ್ಲದಿದ್ದರೂ ಇಂತಹ ಸಂಸ್ಥೆಗಳು ಹುಟ್ಟುತ್ತಿರುವುದು ನಮ್ಮ ಸಂಸ್ಕೃತಿಗೇಡಿತನದ

ಪ್ರಕಾಶನದ ಮೇಲೆ ಬೆಳಕು

ಲಕ್ಷಣವಾಗಿದೆ. ಹೀಗಿರುವಾಗ ಈ ಪರಿಸ್ಥಿತಿಯಲ್ಲಿಯೂ ಸದ್ಭಾವನೆಯಿಂದ ಪ್ರೇರಿತವಾಗಿ ದುಡಿಯುತ್ತಿರುವ ಕೆಲವೇ ಕೆಲವು ಬಳ್ಳಿ-ಮಾಲೆಗಳ ಪ್ರಕಾಶಕರಿಗೆ ನನ್ನದೊಂದು ಸೂಚನೆ ಇದೆ. ನೀವೆಲ್ಲರೂ ಒಂದು ಮಾತಿಗಾಗಿ ಒಂದೆಡೆ ಸೇರಿರಿ; ನಿಮ್ಮ ಪತಿಯಿಂದ ಒಬ್ಬೊಬ್ಬ ತಜ್ಞನನ್ನು ನಿಯಮಿಸಿ ಒಂದು "ಭೋಜ ಸಭೆ"ಯನ್ನು (Book Club ದ ಮಾದರಿ) ಗೊತ್ತುಮಾಡಿರಿ; ನಿಮ್ಮಿಂದ ಪ್ರಕಟನೆಗೆ ಸ್ವೀಕರಿಸಲ್ಪಟ್ಟ ಪ್ರತಿಯೊಂದು ಹಸ್ತಪ್ರತಿಯನ್ನೂ ಈ ಸಭೆಯು ಮುಂಚಿತ ಓದಲಿ; ಪ್ರಟಕವಾದ ಮೇಲೆ ಅದು ತನ್ನ ಮೆಚ್ಚಿಗೆಯಾಗಿದೆಯೋ ಇಲ್ಲವೋ ಎಂಬುದನ್ನು ಸಾರಲಿ. ಹೀಗಾದಲ್ಲಿ ನಿಮ್ಮ ಪ್ರಕಾಶನಕ್ಕೆ ಮತ್ತು ಸಾಹಿತಿಗೆ ಏಕಕಾಲಕ್ಕೆ ಪ್ರೋತ್ಸಾಹ ದೊರೆಯುವುದಲ್ಲದೆ ಓದುಗರ ಸಂಖ್ಯೆಯು ಖಂಡಿತವಾಗಿಯೂ ಬೆಳೆಯುವುದು. ಒಳ್ಳೆಯ ವಿಮರ್ಶೆ ನಮ್ಮಲ್ಲಿ ಇನ್ನೂ ಬಂದಿಲ್ಲ; ಒಂದೆಡೆ ಅಂತಹ ವಿಮರ್ಶೆಯನ್ನು ಬರೆಯುವ ಯೋಗ್ಯತೆ ಇದ್ದವರು ವಿರಳ, ಇನ್ನೊಂದೆಡೆ ಅಂತಹ ವಿಮರ್ಶೆಯನ್ನು ಪ್ರಕಟಿಸಲು ಸಿದ್ಧವಿದ್ದ ಪ್ರಾಮಾಣಿಕತೆಯೂ ಕಡಿಮೆ.

ಪ್ರಾಮಾಣಿಕತೆಯ ಪ್ರಶ್ನೆ ಸಾಹಿತ್ಯದಲ್ಲಿ ಅತ್ಯಂತ ಮಹತ್ವದ್ದಾಗಿದೆ. ಅದಕ್ಕಾಗಿಯೆ ಸಾಹಿತಿಯು ಸ್ವತಂತ್ರನಾಗಿರಬೇಕು, ಸಾಹಿತ್ಯ ನಿರ್ಮಾಣದ ಬಗ್ಗೆ ಯಾವ ನಿರ್ಬಂಧಗಳೂ ಇರಕೂಡದು ಎಂದು ಸುಸಂಸ್ಕೃತ ಅಭಿಪ್ರಾಯವಿದೆ. ಇಂದು ಸಾಹಿತಿಯ ಸ್ವಾತಂತ್ರ್ಯಕ್ಕೆ ಒಳಗಿನ ಮತ್ತು ಹೊರಗಿನ ಎರಡು ಶತ್ರುಗಳಿವೆ. ಒಳಗಿನ ಶತ್ರು ಎಂದರೆ ಸಾಹಿತಿ ತನಗೆ ತಾನೇ ಶತ್ರುವಾಗಿರುವುದು. ಯಾವ ಸಾಹಿತಿ ಬುದ್ಧಿಪೂರ್ವಕವಾಗಿ ಸಂಕುಚಿತ ವೃತ್ತಿಯವನಾಗಿರುತ್ತಾನೋ ಅವನು ತನಗೆ ತಾನೇ ಶತ್ರು ಎಂದು ಹೇಳಬಹುದು. ಸಾಹಿತಿಯ ಹೃದಯ ತಳಮಳಿಸುವುದು ಇಡಿಯ ಲೋಕಕ್ಕಾಗಿ, ಕೇವಲ ನೆರೆಮನೆಯ ಬಾಲವಿಧವೆಗಾಗಿ ಅಲ್ಲ; ಸಾಹಿತಿಯ ಸಹೃದಯದಲ್ಲಿ ಸಕಲರೂ ಸರಿಸಮಾನರಾಗಿರುತ್ತಾರೆ, ಕೇವಲ ಒಂದು ವರ್ಗಕ್ಕೆ ವಿಶಿಷ್ಟ ಸ್ಥಾನವಿಲ್ಲ; ಸಾಹಿತಿಯ ಶೋಧ ಪ್ರಾಮಾಣಿಕ ಸತ್ಯಕ್ಕಾಗಿ, ಪೇಟೆಯ ಪ್ರಚಾರಕ್ಕಾಗಿ ಅಲ್ಲ. ಇಂದು ಅಂತಹ ಶೋಧ ಮಾಡುವ ಧೈರ್ಯ ಇಲ್ಲವೆ ಯೋಗ್ಯತೆ ಇಲ್ಲದ್ದಕ್ಕಾಗಿ, ಅಗ್ಗದ ಪ್ರಚಾರ ಜ್ಞಾನದಿಂದ ಸಮಾಜಕ್ಕೂ, ಸಾಹಿತ್ಯಕ್ಕೂ ಧಕ್ಕೆಯನ್ನು ಕೆಲವರು ಕೊಡುತ್ತಿದ್ದಾರೆ. ಎಲ್ಲಿಯ ವರೆಗೆ ನಮ್ಮಲ್ಲಿ ಯೋಗ್ಯವಿಮರ್ಶೆ ಇಲ್ಲವೋ ಅಲ್ಲಿಯ ವರೆಗೆ ಈ ಶೋಷ ಸಾಹಿತ್ಯಕ್ಕೆ ಅನುಕೂಲವಿದೆ. ಆದರೆ ಸಾಕ್ಷರತೆ ಇದೇ ಬೆಳೆಯುತ್ತಿರುವ ಈ ಕಾಲದಲ್ಲಿ ಇಂತಹ ಸಾಹಿತ್ಯ ಅಪಾಯಕಾರಕವಾಗಬಹುದಾಗಿದೆಯಾದ್ದರಿಂದ ಸಾಹಿತ್ಯ ಸಂಘಗಳು ಒಳ್ಳೆಯ ಸಾಹಿತ್ಯಕ್ಕೆ ಮನ್ನಣೆಯನ್ನು ಕೊಡುವ ಅಧಿಕೃತ ಯೋಜನೆಗಳನ್ನು

ಶೋಧ-ಸಾಹಿತ್ಯ, ಶೋಷ-ಸಾಹಿತ್ಯ

ಬೇಗ ಕೈಗೊಳ್ಳಬೇಕು. ಪ್ರಚಾರವು ಅರ್ಧಜ್ಞಾನ ಅಜ್ಞಾನಕ್ಕಿಂತಲೂ ಅಪಾಯ ಕಾರಕ. ಪ್ರಚಾರವು ಪ್ರಾಮಾಣಿಕ ಬುದ್ಧಿಯ ಚಟುವಟಿಕೆಯಾಗಿರುವುದಿಲ್ಲ; ಅದಕ್ಕಾಗಿ ಸಮಾಜದ ಸಂಸ್ಕೃತಿಗೆ ಘಾತಕ. ಯಾವೊಂದು ಗುಂಪನ್ನೂ ಸೇರದೆ ವಿಶ್ವಶಾಂತಿಗಾಗಿ ಹೆಣಗುವ ವಿದೇಶ ನೀತಿಯನ್ನು ಸಾರುವ ಪಂಡಿತ ಜವಾಹರರು ಶ್ರೇಷ್ಠವಾದ ಮತ್ತು ನಿಜವಾದ ಸಾಹಿತಿಯಾಗಿದ್ದಾರೆ ಎಂಬುದು ನಮ್ಮೆಲ್ಲರಿಗೂ ಅಭಿಮಾನದ ಸಂಗತಿಯಾದರೆ ಸದ್ಯದ ನನ್ನ ವಿಚಾರಕ್ಕೆ ಪುಷ್ಟಿಯನ್ನು ಕೊಡುವುದೆಂದು ನನಗೆ ಇನ್ನಿಷ್ಟು ಅಭಿಮಾನದ ಮಾತಾಗಿದೆ.

ಹೊರಗಿನ ಶತ್ರು ಎಂಬ ಮಾತನ್ನು ಹೇಳುವಾಗ ಯಾರೂ ತಪ್ಪು ತಿಳಿಯಬಾರದಾಗಿ ಬೇಡುತ್ತೇನೆ. 'ಶತ್ರು' ಎಂದು ನಾನು ಹೇಳುವುದು ಒಂದು ವ್ಯಕ್ತಿಯ ವಿಷಯವಾಗಿ

ಹೊರಗಿನ ಶತ್ರು

ಅಲ್ಲ, ಅದು ಒಂದು ಸಾಮಾಜಿಕ ಪರಿಸ್ಥಿತಿ. ಇಂದು ಪ್ರಕಾಶಕರೂ ಗ್ರಂಥಕರ್ತರ ಬಗ್ಗೆ ಅನ್ಯಾಯವನ್ನು ಬಗೆಯುತ್ತಿದ್ದಾರೆ ಎಂಬುದನ್ನೆ ಸಾಮಾನ್ಯವಾಗಿ ಪ್ರಕಾಶಕರು ಗ್ರಂಥಕರ್ತನ ಹೊರಗಿನ ಶತ್ರುವಾಗಿದ್ದಾರೆ ಎಂದು ಹೇಳುವುದು. ಪ್ರಕಾಶಕ ಎಂಬುದು ವ್ಯಾಪಕವಾಗಿದೆ. ಒಂದು ಗ್ರಂಥವನ್ನು ಪ್ರಕಟಿಸುವ ಪ್ರಕಾಶಕ ಇಲ್ಲವೆ ಗ್ರಂಥಮಾಲೆಯ ಸಂಚಾಲಕ, ಒಂದು ಲೇಖವನ್ನು ಪ್ರಕಟಿಸುವ ಪತ್ರಿಕಾಕರ್ತ, ಒಂದು ಬರವಣಿಗೆಯನ್ನು ಸ್ತುತಿಸುವ ಮುನ್ನುಡಿಕಾರ—ಇಂತಹರೆಲ್ಲರನ್ನೂ ಈ ಒಂದು ಪದದಲ್ಲಿ ಉದ್ದೇಶಿಸಿದ್ದೇನೆ. ಇವರು ಅನೇಕ ರೀತಿಯಿಂದ ಗ್ರಂಥಕರ್ತನಿಗೆ ಅಪಾಯವನ್ನು ಬಗೆಯಬಹುದು, ಬಗೆಯುತ್ತಲಿದ್ದಾರೆ. ಒಳ್ಳೆಯ ಕೃತಿಗೆ ತಕ್ಕ ಹಣವನ್ನು ಸಲ್ಲಿಸದೆ ತಾನು ಲಾಭವನ್ನು ಪಡೆದುಕೊಳ್ಳುವಷ್ಟೆ ತನ್ನ ಅನುಕೂಲತೆಗಾಗಿ ಕೆಟ್ಟ ಕೃತಿಗೆ ಮನ್ನಣೆಯನ್ನು ಕೊಡುವುದೂ ಗ್ರಂಥಕರ್ತನಿಗೆ ಅಪಾಯ ಬಗೆದಂತಾಗುವುದು. ಸಾಮಾನ್ಯವಾಗಿ ಪ್ರಕಾಶಕರು ಗ್ರಂಥಕರ್ತರೊಡನೆ ಉತ್ಸಾಹದ ಮಾತುಗಳನ್ನೆ ಆಡುವುದಿಲ್ಲ. ಇನ್ನೊಬ್ಬನ ಶೋಷಣೆಯಿಂದ ತಾನು ಪುಷ್ಟನಾಗಬೇಕೆನ್ನುವ ವ್ಯಕ್ತಿ ಸಮಾಜದ ದೃಷ್ಟಿಯಿಂದ, ಸಾಹಿತ್ಯದ ಬೆಳವಣಿಗೆಯ ದೃಷ್ಟಿಯಿಂದ ವಿಘಾತಕನಾಗಿದ್ದಾನೆ. ಸಾಹಿತ್ಯ ಪ್ರಕಾಶನಕ್ಕೆ ಸಾಹಿತ್ಯ ನಿರ್ಮಾಣವು ಅಗತ್ಯ ಎಂಬುದನ್ನರಿತು ಆ ಸಾಹಿತ್ಯ ನಿರ್ಮಾತೃವನ್ನು ಯೋಗ್ಯವಾಗಿ ಪ್ರಕಾಶಕರು ಮನ್ನಿಸಬೇಕು. ಬೇರೆ ಸಾಹಿತ್ಯಗಳ ಪ್ರಕಾಶದ ಅನುಭವದಿಂದ ತಮ್ಮಲ್ಲಿಯ ಪರಿಸ್ಥಿತಿಯ ಇತಿಮಿತಿಗಳಿಗೆ ಹೊಂದಿಕೊಂಡು ಪ್ರಕಾಶಕರು ಗ್ರಂಥಕರ್ತರೊಡನೆ ಕೆಲವು ಕರಾರುಗಳನ್ನು ಬಹಿರಂಗವಾಗಿ ಒಪ್ಪಿಕೊಳ್ಳುವ ಯೋಚನೆಯನ್ನು ಮಾಡಬೇಕು. ಇದಕ್ಕೆ ವಿರುದ್ಧವಾಗಿ ಇನ್ನೊಂದು ತರದ ಅಪಾಯವಿದೆ. ಈ ತಿಂಗಳ ಈ ತಾರೀಕಿಗೆ ಒಂದು ಕಾದಂಬರಿಯನ್ನು ಪ್ರಕಟಿಸಲೇಬೇಕೆಂಬ ಹಟದಿಂದ ಕ್ಷುಲ್ಲಕ ಕೃತಿ

ಯನ್ನು ಪ್ರಕಟಿಸುವವರು ಆ ಕೃತಿಯನ್ನೇ ಬರೆದವನ ಶತ್ರು ಎನ್ನಿಸುತ್ತಾರೆ; ಅದರಂತೆ ಪುಟ ತುಂಬುವುದಕ್ಕೆ ಲೇಖನವನ್ನಾಗಲಿ ಕವಿತೆಯನ್ನಾಗಲಿ ಸ್ವೀಕರಿಸುವ ಪತ್ರಿಕಾ ಕರ್ತನೂ ಸಾಹಿತಿಯ ಶತ್ರು ಆಗುವನು. ಇಂತಹ ಸಂದರ್ಭಗಳಲ್ಲಿ ಕೊಟ್ಟ ಕೃತಿಗಳನ್ನು ಬರೆದವನು ತಾನು ನಿಜವಾಗಿಯೆ ಒಳ್ಳೆಯ ಸಾಹಿತಿ ಎಂದು ತಿಳಿದುಕೊಳ್ಳುತ್ತಾನೆ. ಆಗಾಗ ಸ್ಪರ್ಧೆಗಳನ್ನೇರ್ಪಡಿಸಿ ತಜ್ಞರಿಂದ ಹೊಸಬರ ಲೇಖನಗಳನ್ನು ಪರೀಕ್ಷಿಸಿ ಪಾರಿತೋಷಕವನ್ನೂ, ಸಲಹೆಗಳನ್ನೂ ಕೊಡುವುದರಿಂದ ಇಂತಹ ಪತ್ರಿಕಾಕರ್ತರು ಉತ್ತಮ ಸಾಹಿತ್ಯನಿರ್ಮಾಣಕ್ಕೆ ಉತ್ತೇಜನವನ್ನು ಕೊಡಬಹುದಲ್ಲ?

ರಸಿಕ ಮಹಾನುಭಾವರೆ, ಇಂತಹ ಭಾಷಣದಲ್ಲಿ ಸಾಮಾನ್ಯವಾಗಿ ಅಪೇಕ್ಷಿಸಲಾದ ಕೆಲವು ಸಂದರ್ಭಗಳು ಇಲ್ಲ ಎಂಬುದನ್ನು ನಾನೆ ಚೆನ್ನಾಗಿ ಬಲ್ಲೆ. ಕನ್ನಡ

ಸಾಹಿತ್ಯ ಸಮಾಲೋಚನೆ

ಸಾಹಿತ್ಯದ ಬೆಳವಣಿಗೆಯ ಹಿನ್ನೆಲೆಯಲ್ಲಿ, ಪ್ರಕಟವಾಗುತ್ತಿರುವ ಸಾಹಿತ್ಯ ಕೃತಿಗಳ ಸಮಾಲೋಚನೆ, ಅವುಗಳನ್ನು ಬರೆದವರ ಹೆಸರುಗಳ ಪಟ್ಟಿ, ಔಪಚಾರಿಕವಾದ ವಿಮರ್ಶಾತ್ಮಕ ಮಾತುಗಳು—ಇದೆಲ್ಲ ಇಲ್ಲಿ ಇರಬೇಕೆಂದು ತಾವು ಬಯಸುವುದು ಸಂಪ್ರದಾಯದೃಷ್ಟಿಯಿಂದ ಸಹಜ. ಆದರೆ ನನ್ನ ಅಭಿಪ್ರಾಯ ಬೇರೆಯಾಗಿದೆ. ಸಮ್ಮೇಳನದ ಅಧ್ಯಕ್ಷನಾಗುವವನು ಆಯಾ ವರ್ಷಾವಧಿಯ ಪ್ರತಿಯೊಂದು ಪ್ರಕಟನೆಯನ್ನೂ ಅರಿತುಕೊಂಡು ಅಭ್ಯಸಿಸಿಕೊಂಡು ಸಜ್ಜಾಗಿರಬೇಕೆಂದು ಬಯಸುವುದು ಒಂದು ವ್ಯಕ್ತಿಗೆ ಅನ್ಯಾಯ, ಒಂದು ಮಹತ್ತ್ವದ ಕೆಲಸ ವಿರಸ. ಸಾಹಿತ್ಯದ ಸಮಾಲೋಚನೆಯನ್ನು ನಿಧಾನವಾಗಿ ಮಾಡುವುದು ಉಚಿತ: ಅಲ್ಪಾವಧಿಯಲ್ಲಿ ಅಧ್ಯಕ್ಷ ಭಾಷಣವನ್ನು ಬರೆಯುವಾಗ ಮಾಡಬಾರದಂತಹ ಮಹತ್ವದ ಕೆಲಸವದು. ಇದಲ್ಲದೆ ಸಾಹಿತ್ಯದ ಬೆಳವಣಿಗೆ ಕೃತಿಗಳ ಯೋಗ್ಯತೆಯನ್ನು ಅವಲಂಬಿಸಿರುವುದು, ಅವನ್ನು ಬರೆದವರ ಹೆಸರುಗಳನ್ನಲ್ಲ. ಹೀಗೆ ಹೇಳಿ ಈ ಕೆಲಸ ಅನಾವಶ್ಯಕ ಎಂದು ನಾನು ಹೇಳಬಯಸುವುದಿಲ್ಲ. ವರ್ಷವರ್ಷಕ್ಕೆ ಸಾಹಿತ್ಯ ಸಮಾಲೋಚನೆ ಎಷ್ಟು ಅಗತ್ಯವೊ ಅಷ್ಟೆ ಮಹತ್ವದ್ದೂ ಆಗಿದೆ. ಈ ಬಗ್ಗೆ ನನ್ನದೊಂದು ಸೂಚನೆ ಇದೆ. ಸಾಹಿತ್ಯ ಪರಿಷತ್ತಿನಂತಹ ಸಂಸ್ಥೆಯು ಈ ಕೆಲಸವನ್ನು ಮಾಡುವುದು ಯೋಗ್ಯ. ಪ್ರತಿ ವರ್ಷ ಸಾಹಿತ್ಯ ಸಮ್ಮೇಳನದ ಕಾಲಕ್ಕೆ ಪರಿಷತ್ತು ಆ ವರ್ಷದ ಸಾಹಿತ್ಯ ಸಮಾಲೋಚನೆಯನ್ನು ತನ್ನ ವಾರ್ಷಿಕ ವರದಿಯ ಅಂಗವಾಗಿ ಪ್ರಕಟಿಸಬಹುದಲ್ಲ? ಪರಿಷತ್ತಿನಂತಹ ಸಂಸ್ಥೆ ಒಂದೇ ಒಂದಾಗಿ ಈ ಕಾರ್ಯವನ್ನು ಮಾಡಲು ಶಕ್ಯವಿಲ್ಲ ಎಂಬುದನ್ನು ಬಲ್ಲೆ. ಇದಕ್ಕೆ ಪ್ರಕಾಶಕರು, ಗ್ರಂಥಕರ್ತರು ಪೂರ್ತಿಯಾಗಿ ಸಹಕಾರವನ್ನು ನೀಡಬೇಕು. ಪುಸ್ತಕದ ಪ್ರತಿಯನ್ನು ಕಳಿಸುವುದು ಬೇಡ: ಕನಿಷ್ಠಪಕ್ಷಕ್ಕೆ ಒಂದು ಗ್ರಂಥ ಪ್ರಕಟವಾದೊಡನೆ ಅದರ

ಹೆಸರು, ಗ್ರಂಥಕರ್ತ, ಪ್ರಕಾಶಕ, ಪುಟಸಂಖ್ಯೆ, ಆಕಾರ, ಬೆಲೆ, ಪ್ರಕಟನೆಯ ತಿಂಗಳು ಇಲ್ಲವೆ ತಾರೀಕು—ಇಷ್ಟನ್ನಾದರೂ ಪ್ರಕಾಶಕನಾಗಲಿ ಗ್ರಂಥಕರ್ತನಾಗಲಿ ಪರಿಷತ್ತಿನ ಕಚೇರಿಗೆ ತಿಳಿಸಬಹುದಲ್ಲ? ಅದರಂತೆಯೇ ಶಕ್ಯವಾದರೆ, ಆಯಾ ಸಾಹಿತ್ಯಮಾದರಿಯ ಆ ವರ್ಷದ ವೈಶಿಷ್ಟ್ಯಗಳ, ಸ್ಥೂಲರೂಪದಲ್ಲಿ ಮಾತ್ರವೇ ಆಗಲಿ ವಿಮರ್ಶಿಸುವ ಯೋಜನೆಯನ್ನು ಪರಿಷತ್ತು ಮಾಡಬಹುದು. ಇಂದು ನಾವು ಮುಂದರಿಯುತ್ತಿರುವೆವೆ ಇಲ್ಲವೆ ಎಂಬುದನ್ನು ತಿಳಿದುಕೊಳ್ಳಲು ಈ ತರದ ಆತ್ಮವಿಮರ್ಶೆ ಅಗತ್ಯವಾಗಿದೆ.

ಇಂದಿನ ವರೆಗೆ, ಈ ಪೀಠವನ್ನು ಅಲಂಕರಿಸಿದವರು ನನಗಿಂತ ಹಿರಿಯರು, ವಿದ್ವಾಂಸರು, ಕನ್ನಡ ಸಾಹಿತ್ಯಕ್ಕೆ ಪ್ರತಿಭಾನ್ವಿತ ಕಾಣಿಕೆಗಳನ್ನು ಸಲ್ಲಿಸಿದವರು.

ಸಾಮಾಜಿಕ ಹೊಣೆ

ತಮ್ಮ ಅಧಿಕಾರವಾಣಿಯಿಂದ ಅವರು ಸಾಹಿತ್ಯ ಮತ್ತು ಸಾಹಿತಿಯ ಕುರಿತು ಕೂಲಂಕಷವಾಗಿ ವಿವೇಚನೆಯನ್ನು ಮಾಡಿದ್ದಾರೆ. ಪುನರುಕ್ತಿ ಬೇಡವೆಂದೊ ಇಲ್ಲವೆ ಆ ಯೋಗ್ಯತೆ ಇಲ್ಲವೆಂದೊ ನಾನು ಬೇರೊಂದು ದಾರಿಯನ್ನು ಹಿಡಿದಿದ್ದೇನೆ. ನನ್ನ ಕಿರಿದಾದ ಅನುಭವದಲ್ಲಿ ತೋಚಿದ ನಾಲ್ಕಾರು ಮಾತುಗಳನ್ನು ಹೇಳುತ್ತಲಿದ್ದೇನೆ. ಒಂದು ವೇಳೆ ನಾನು ಪಂಡಿತನೆನ್ನಿಸಲಿಕ್ಕಿಲ್ಲ. ಆದರೆ ಪೂರ್ತಿಯಾದ ಪ್ರಾಮಾಣಿಕತೆಯಿಂದ ಹೇಳುತ್ತಲಿದ್ದೇನೆ, ಎಂಬುದನ್ನು ತಾವು ದಯವಿಟ್ಟು ಮನ್ನಿಸಬೇಕು. ಸಾಹಿತ್ಯವೆ ನನ್ನ ಜೀವನದ ಉಸಿರಾಗಿದೆ; ಉಚ್ಚ ಅಧಿಕಾರಸ್ಥಾನದಲ್ಲಿ ಸುಖದಿಂದ ಇರುವುದಕ್ಕಿಂತ ಉಪವಾಸದಿಂದಿದ್ದರೂ ಸಾಹಿತಿಯಾಗಿರುವುದು ನನಗೆ ಮೆಚ್ಚಿಗೆಯಾಗಿದೆ. ಸಾಹಿತ್ಯದಲ್ಲಿ ದ್ವಂದ್ವಾತೀತ ಸುಖವಿದೆ; ಅದಕ್ಕಾಗಿಯೆ ಸುಖದುಃಖದ ದ್ವಂದ್ವರಾಜಕಾರಣದಲ್ಲಿ ಸಾಹಿತಿ ಸೇರುವುದು ಅಗೌರವ ಎಂದು ನಾನು ತಿಳಿಯುತ್ತೇನೆ. ದೇಶವು ಪರಕೀಯರ ದಾಸ್ಯದಲ್ಲಿದ್ದಾಗ ರಾಜಕೀಯಕ್ಕೆ ಅನಿವಾರ್ಯವಾಗಿ ಪ್ರಾಧಾನ್ಯವಿದ್ದಿತು. ಇಂದು ದೇಶ ಸ್ವತಂತ್ರವಾಗಿದೆ. ದೇಶದ ಸ್ವಾಸ್ಥ್ಯ-ಗೌರವಗಳು ಬೆಳೆಯಬೇಕಾಗಿದೆ. ಇದು ಸಂಸ್ಕೃತಿಯ ಮಾತು, ಎಂದರೆ ಸಾಹಿತ್ಯದ ಮಾತು. ನಮ್ಮ ದೇಶದ ಸಾಹಿತ್ಯವು ಯಾವ ಮಟ್ಟದಲ್ಲಿರುವುದೊ ಆ ಮಟ್ಟಕ್ಕೆ ಅದರ ಸಂಸ್ಕೃತಿ ನಿಲ್ಲುವುದು. ಸಾಹಿತಿಗಳಾದವರು, ಆಗಬಯಸುವವರು, ತಾವು ಸಾಹಿತಿ ಎಂದು ತಿಳಿದುಕೊಂಡವರು, ಎಲ್ಲರೂ ಈ ಮಾತನ್ನು ಲಕ್ಷ್ಯದಲ್ಲಿಡಬೇಕಾಗಿದೆ. ದೇಶ, ಕಾಲ, ಪರಿಸ್ಥಿತಿಗನುಸರಿಸಿ ನಮ್ಮದೂ ಒಂದು ಸಂಸ್ಕೃತಿ ಇದೆ ಎಂಬುದನ್ನು ನೆನಪಿನಲ್ಲಿಡೋಣ. ವೇದ, ಉಪನಿಷತ್ತು, ಬೌದ್ಧಮತ, ಭಗವದ್ಗೀತೆ, ವೇದಾಂತಮಾರ್ಗ, ಭಕ್ತಿಮಾರ್ಗ, ಕರ್ಮಮಾರ್ಗ ಹೀಗೆ ಆಯಾ ಪರಿಸ್ಥಿತಿಗನುಗುಣವಾಗಿ ಹೊಸ ಚೈತನ್ಯವನ್ನು ಹೊಂದಿ ಬದಲಾಗುತ್ತ ಬಂದ ಸಂಸ್ಕೃತಿ ನಮ್ಮದು

ಎಂಬುದನ್ನು ಮರೆಯದಿರೋಣ. ನಮ್ಮ ಸಾಹಿತಿಗಳು ಒಂದೆಡೆ ನಮ್ಮ ಸಂಸ್ಕೃತಿಯ ಪ್ರತೀಕರಾಗಿರಬೇಕು, ಇನ್ನೊಂದೆಡೆ ಸಂಸ್ಕೃತಿಯ ಬದಲಾವಣೆಯ ಜನಕರಾಗಿರಬೇಕು ಎಂದರೇನೆ ಅವರು ನಮ್ಮ ಸಾಹಿತಿಗಳು. ಒಂದು ಕಾಲಕ್ಕೆ ಸಂಸ್ಕೃತದ ಅನುಕರಣ ಮಾಡಿದೆವು, ಮತ್ತೊಮ್ಮೆ ಮರಾಠಿ-ಬಂಗಾಲಿಗಳಿಂದ ವಸ್ತುವನ್ನು ಎತ್ತಿದೆವು ; ಅನೇಕ ವರ್ಷಗಳ ವರೆಗೆ ಇಂಗ್ಲಿಷದಿಂದ ವಿಚಾರಗಳನ್ನು ಆಯ್ದುಕೊಂಡೆವು. ಪರಸ್ಪರ ಸಂಪರ್ಕ ಬೇರೆ, ಕೇವಲ ಅನುಕರಣ ಬೇರೆ. ಪರಸ್ಪರ ಸಂಪರ್ಕ ಸರಿಸಮಾನತೆ ಇದ್ದಲ್ಲಿ ಜರುಗುವುದು. ಅನುಕರಣ ಅಸಾಮರ್ಥ್ಯದ ಲಕ್ಷಣ. ಇಂಗ್ಲಿಷ ಸಾಹಿತ್ಯದಿಂದ ಎತ್ತಿದರೂ ಅಷ್ಟೆ, ಸೊವಿಯೆಟ್ ಸಾಹಿತ್ಯದಿಂದ ಎತ್ತಿದರೂ ಅಷ್ಟೆ ; ಒಂದು ಪಾಪ, ಇನ್ನೊಂದು ಪುಣ್ಯ, ಒಂದು ದುರ್ಗತಿ, ಇನ್ನೊಂದು ಪ್ರಗತಿ ಎನ್ನಲಾಗುವುದು. ಕಳವು ಕಳವೆ, ಚಾರುದತ್ತನ ಮನೆಯಿಂದಿರಲಿ, ಶಕಾರನ ಮನೆಯಿಂದಿರಲಿ, ಮತ್ತು ಕಳುವಿನ ವಸ್ತು ಎಂದೂ ನಮ್ಮದಾಗದು. ದೇಶವು ದಾಸ್ಯದಲ್ಲಿದ್ದಾಗ ಸತ್ತ್ವಯುತವಾಗಿದ್ದ ಸಾಹಿತ್ಯವು ಸ್ವಾತಂತ್ರ್ಯ ದೊರೆತ ಮೇಲೆ ಸಪ್ಪೆಯಾಗಿರುವುದೆಂದರೆ ಆಶ್ಚರ್ಯವಲ್ಲವೆ? ವ್ಯಕ್ತಿಸ್ವಾತಂತ್ರ್ಯ ದೊರೆತ ಕಾಲದಲ್ಲಿ ನಮಗೆ ಸ್ವತಂತ್ರ ವಿಚಾರಗಳಿರಬಾರದೆಂದರೆ? ಆದರೂ ಇಂದಿನ ಸಾಹಿತ್ಯಕೃತಿಗಳನ್ನು ನೋಡಿದರೆ ವಿಚಾರದಾಸ್ಯ, ಅನುಕರಣ ಇನ್ನೂ ಸಾಕಷ್ಟಾಗಿ ಕಂಡುಬರುತ್ತಿದೆ. ಇದಕ್ಕೆ ಅನೇಕ ಕಾರಣಗಳಿವೆ ; ಮುಖ್ಯವಾದ ಎರಡನ್ನು ಇಲ್ಲಿ ಹೇಳುತ್ತೇನೆ. ಒಂದು, ಸ್ವತಂತ್ರ ವಿಚಾರಕ್ಕೆ ಸ್ಫೂರ್ತಿಯನ್ನು ಕೊಡುವಂತಹ ಧ್ಯೇಯ ತರುಣ ಸಾಹಿತಿಗಳ ಎದುರಿಗಿಲ್ಲ. ಸ್ವಾತಂತ್ರ್ಯದ ಮುಂಚೆ, ಸ್ವಾತಂತ್ರ್ಯ ಸಾಧನೆಯು ಉದಾತ್ತ ಧ್ಯೇಯವಿದ್ದಿತು. ಈಗೇನಿದೆ? ಎಷ್ಟು ಕಲಿತರೂ ನೌಕರಿ ಸಿಕ್ಕುವುದಿಲ್ಲ—ಎಂಬ ಕಟು ವಿಚಾರವಿದೆ. ಇದಕ್ಕೆ ಸಂಬಂಧಿಸಿದ ಎರಡನೆಯ ವಿಷಯ ; ಅದೆಂದರೆ, ಸ್ವಾತಂತ್ರ್ಯದ ತರುವಾಯ ಅನಿವಾರ್ಯವಾಗಿ ಕಂಡುಬರುವ ಕೆಲವು ವಿಷಮತೆಗಳು. ಒಂದೆಡೆ ಉಚ್ಚ ಶಿಕ್ಷಣದಲ್ಲಿ ಉತ್ತಮವಾಗಿ ತೇರ್ಗಡೆ ಹೊಂದಿದವನು ಹೊಟ್ಟೆಗಿಲ್ಲದೆ ಬಳಲುವಾಗ, ಇನ್ನೊಂದೆಡೆ ಹೆಬ್ಬೆರಳಿನ ದೊರೆಯೊಬ್ಬ ಘನವಂತನಾಗಿರುವುದು ಯಾಕೆ? ಹೇಗೆ? ಎಂದು ತಲೆ ತುರಿಸುವ ತರುಣನು ಈ ಜಗತ್ತಿನಲ್ಲಿ ಬುದ್ಧಿಗೂ, ಪ್ರಾಮಾಣಿಕತೆಗೂ ಬೆಲೆ ಇಲ್ಲ ಎಂದು ಸಮಾಜ ವಿರೋಧಕನಾಗುವನು. ಈ ವಾತಾವರಣದಲ್ಲಿ ಸಹೃದಯ ಸಾಹಿತ್ಯ ನಿರ್ಮಾಣವಾಗುವುದು ಹೇಗೆ? ಇದು ನಮ್ಮ ಮುಂದಾಳುಗಳು ಬಿಡಿಸಬೇಕಾದ ಪ್ರಶ್ನೆ. ಸಮಾಜದಲ್ಲಿ ವಿಷಮತೆಗಳು ಶಕ್ಯವಾಗದಂತೆ, ಯೋಗ್ಯತೆಗೆ ತಕ್ಕ ಮನ್ನಣೆ ದೊರೆಯುವಂತೆ ಪರಿಸ್ಥಿತಿಯನ್ನು ಸ್ವಂತದ ಉದಾಹರಣದಿಂದ ಮತ್ತು ಪ್ರಯತ್ನಗಳಿಂದ ಸಾಧಿಸಬೇಕಾದುದು ಮುಂದಾಳುಗಳ ಹೊಣೆಗಾರಿಕೆಯಾಗಿದೆ.

ಸಾಹಿತ್ಯಾಭಿಮಾನಿಗಳಾದ ಸಭಿಕಮಹಾಶಯರೆ, ಇನ್ನೂ ಅನೇಕ ಮಾತುಗಳನ್ನು ನಾನು ಹೇಳಬಹುದಾಗಿತ್ತು. ಆದರೆ ವರ್ಷವರ್ಷಕ್ಕೆ ಸೇರುವ ಈ

ಕೊನೆಯದಾಗಿ

ಸಮ್ಮೇಳನದಲ್ಲಿ ಇಡಿಯ ಭವಿಷ್ಯತ್ಕಾಲಕ್ಕಾಗಿ ಮಾತಾಡುವಷ್ಟು ಆಶೆಬುರುಕನಾಗುವುದು ಅಷ್ಟೊಂದು ಯೋಗ್ಯವಾಗಲಿಕ್ಕಿಲ್ಲ. ಈ ಕ್ಷಣ ನಮ್ಮೆದುರಿಗಿದ್ದ ಕೆಲವು ಸಮಸ್ಯೆಗಳು, ಅವುಗಳನ್ನು ಬಿಡಿಸಲು ಒಂದು ವರ್ಷದ ಅವಧಿಯಲ್ಲಿ ಮಾಡಬಹುದಾದ ಉಪಾಯಗಳು, ಇವಕ್ಕೆ ಹಿನ್ನೆಲೆಯಾದ ಪರಿಸ್ಥಿತಿ ಇಷ್ಟನ್ನು ಹೇಳಿದರೆ ನನ್ನ ಕೆಲಸ ಮುಗಿಯಿತು ಎಂದು ನಾನು ತಿಳಿಯುತ್ತೇನೆ. ಸಾಹಿತಿಯ ಸಮಸ್ಯೆ ಬಹುಮುಖವಾದ ಸಮಸ್ಯೆ. ಉಪಜೀವನ ಪ್ರಶ್ನೆ ಅವನ ವೈಯಕ್ತಿಕ ಸಮಸ್ಯೆ ಎನ್ನಿಸಿದರೆ, ಅವನು ಅನ್ಯೋಪಜೀವಿಯಾಗುವುದು ಸಾಮಾಜಿಕ ಸಮಸ್ಯೆ ಎನ್ನಿಸುವುದು. ಅನ್ಯೋಪಜೀವಿಯಾದ ಸಾಹಿತಿ ಸಮಾಜಕ್ಕೆ ಕಂಟಕನಾಗಬಹುದಾಗಿದೆ. ಸಾಹಿತಿಯನ್ನು ಅನ್ಯೋಪಜೀವಿಯನ್ನಾಗಿ ಮಾಡುವ ಅನೇಕ ಶಕ್ತಿಗಳು ನಮ್ಮ ಸಮಾಜರಚನೆಯಲ್ಲಿವೆ. ಧನಿಕ ಒಡೆಯನಿಗಾಗಿ ಅಗ್ರಲೇಖಗಳನ್ನು ಬರೆಯುವ ಸಂಪಾದಕರು, ದೇಶದ ಸರಕಾರಕ್ಕಾಗಿ ಸ್ತುತಿಪಾಠವನ್ನು ಬರೆಯುವ ಸಾಹಿತಿಗಳು, ಪ್ರೊಪ್ರಾಯಿಟರ ಇಲ್ಲನೆ ಅವನ ಸೂಳೆಗಾಗಿ ನಾಟಕಗಳನ್ನು ಬರೆಯುವ ನಾಟಕಕಾರರು, ಬರೆದುದಕ್ಕೆ ಚಿತ್ರನಿರ್ಮಾಪಕನ ಹೆಸರನ್ನು ಕೊಡುವ ಕಥೆಗಾರರು—ಇಂತಹ ವ್ಯಕ್ತಿಗಳು ದೊರಕಿಯೇ ದೊರಕುತ್ತಾರೆ. ಅವರಲ್ಲಿ ಯೋಗ್ಯತೆ ಇದ್ದರೆ ಆ ಮಟ್ಟಿಗೆ ಸಮಾಜಕ್ಕೆ ಹಾನಿ, ಯೋಗ್ಯತೆ ಇಲ್ಲದಿದ್ದರೆ ಆ ಮಟ್ಟಿಗೆ ಸಮಾಜದಲ್ಲಿ ಅನ್ಯಾಯ. ಈ ಪರಿಸ್ಥಿತಿಯನ್ನು ವಿಧಿಸುವುದು ಹೇಗೆ? ಇದು ಆಯಾ ವ್ಯಕ್ತಿಗಳದೆ ತಪ್ಪು ಎಂದು ಒಂದು ಅಭಿಪ್ರಾಯ, ಇದು ಸಮಾಜ ಪರಿಸ್ಥಿತಿಯ ತಪ್ಪು ಎಂಬುದು ಇನ್ನೊಂದು ಅಭಿಪ್ರಾಯ. ತಪ್ಪು ಯಾರದೇ ಇದ್ದರೂ ಸಾಹಿತ್ಯಸೃಷ್ಟಿಯಲ್ಲಿ ಇದೊಂದು ಅನಾಹುತ ಎಂಬುದನ್ನು ಒಪ್ಪಲೇಬೇಕು.

ಇಷ್ಟಾದರೂ ನಾನು ಆಶಾವಾದಿಯಾಗಿದ್ದೇನೆ. ದೋಷಗಳನ್ನು ಹುಡುಕುವದು ನನ್ನ ಸ್ವಭಾವವಾಗಿದ್ದರೂ ಸರಿಪಡಿಸಿಕೊಳ್ಳುವ ಅವಸರ ಅದರಲ್ಲಿದೆ. ಸ್ಫೂರ್ತಿಗೆ ಅನೇಕ ವ್ಯಾಖ್ಯೆಗಳನ್ನು ಕೊಡಬಹುದಾದರೂ ವ್ಯಾವಹಾರಿಕವಾಗಿ ಒಂದು ವ್ಯಾಖ್ಯೆಯನ್ನು ಕೊಡಬಹುದಾಗಿದೆ. ಸ್ಫೂರ್ತಿ ಎಂದರೆ ಅಸಮಾಧಾನ, ಅತೃಪ್ತಿ. ಆ ತರದ ಸ್ಫೂರ್ತಿ ನಮ್ಮ ತರುಣರಿಗೆ ಸಾಕಷ್ಟಿದೆ. ಜೊತೆಗೆ ಹೊರಗಿನ ವಾತಾವರಣವೂ ಅನುಕೂಲವಾಗುತ್ತಲಿದೆ. ಸಾಹಿತ್ಯ, ನಾಟಕ, ಲಲಿತಕಲೆ ಇವುಗಳಿಗೆ ಕೇಂದ್ರ ಮತ್ತು ರಾಜ್ಯ ಸರಕಾರಗಳು ದಿನದಿನಕ್ಕೆ ಉತ್ತೇಜನವನ್ನು ಕೊಡುತ್ತಲಿವೆ. ಅನೇಕ ರಾಜ್ಯಗಳಲ್ಲಿ ಮತ್ತು ಕೇಂದ್ರದಲ್ಲಿ ನಾಟಕ ಮತ್ತು ನೃತ್ಯಕಲೆಗೆ ಮನ್ನಣೆ ಮತ್ತು

ಆಶ್ರಯ ದೊರೆಯುತ್ತಲಿದೆ. ಅಲ್ಲಲ್ಲಿ ಸ್ಪರ್ಧೆಗಳು ನಡೆಯುತ್ತಿವೆ. ಇದಲ್ಲದೆ ಆಗಾಗ ವಿದೇಶೀಯ ಕಲಾಕಾರರು ನಮ್ಮಲ್ಲಿ ಬಂದು ತಮ್ಮ ಕಲೆಯ ಪ್ರದರ್ಶನವನ್ನು ಮಾಡುತ್ತಾರೆ, ನಮ್ಮವರ ಪರಿಚಯವನ್ನು ಮಾಡಿಕೊಳ್ಳುತ್ತಾರೆ. ನಮ್ಮಲ್ಲಿಯ ಕಲಾಕಾರರೂ ಪರದೇಶಗಳ ಸಂಚಾರವನ್ನು ಮಾಡುತ್ತಾರೆ. ಸ್ವಾತಂತ್ರ್ಯ ದೊರೆತ ಸ್ವಲ್ಪಾವಧಿಯಲ್ಲಿಯೆ ಇದೆಲ್ಲ ನಡೆದುದನ್ನು ನೋಡಿದರೆ ಆಶಾವಾದಿಯಾಗುವುದರಲ್ಲಿ ಆಶ್ಚರ್ಯವೇನು? ದೇಶ-ವಿದೇಶಗಳ ಪರಿಚಯದ ಜೊತೆಗೆಯೆ ನಂನಮ್ಮೊಳಗೂ ಪರಿಚಯವಾದರೆ ಭಾರತವು ಒಂದು ರಾಷ್ಟ್ರ, ಭಾರತಕ್ಕೆ ಒಂದು ಸಂಸ್ಕೃತಿ ಇದೆ ಎಂಬುದನ್ನು ನಮ್ಮವರು ಕಣ್ಣಾರೆ ಕಂಡು ಉತ್ತೇಜಿತರಾಗುತ್ತಾರೆ. ಅಂತಹ ಉತ್ಕರ್ಷದ ಕಾಲ ಬೇಗ ಬರಲಿ, ಹಾಗಾಗುವುದರಲ್ಲಿ ಕನ್ನಡಿಗರ ಕೊಡುಗೆ ಶ್ರೇಷ್ಠವಾದುದಾಗಿರಲಿ ಎಂದು ಹಾರಯಿಸಿ, ಇಂದು ಈ ರೀತಿಯಾಗಿ ನನ್ನನ್ನು ಈ ಗೌರವಸ್ಥಾನದಲ್ಲಿ ತಮ್ಮೆಲ್ಲರ ಸೇವೆಗಾಗಿ ಎತ್ತಿ ಕುಳ್ಳಿರಿಸಿದ್ದಕ್ಕೆ ತಮ್ಮನ್ನೆಲ್ಲ ಇನ್ನೊಮ್ಮೆ ಕೃತಜ್ಞತಾಪೂರ್ವಕವಾಗಿ ವಂದಿಸುತ್ತೇನೆ.

ಸಂಪಾದಕೀಯ

ಭಾರತವು ಸ್ವಾತಂತ್ರ್ಯವಾದಂದಿನಿಂದ ದೇಶಭಾಷೆಗಳಿಗೆ ಎಲ್ಲೆಡೆಯೂ ಗೌರವ ಪುರಸ್ಕಾರಗಳು ದೊರಕಿ, ಅವು ತಮ್ಮ ತಮ್ಮ ಸಿಂಹಾಸನಗಳಲ್ಲಿ ಪ್ರತಿಷ್ಠಿತವಾಗುತ್ತಿರುವುದು ದೇಶಪ್ರೇಮಿಗಳಿಗೆ ಸಂತೋಷವನ್ನುಂಟುಮಾಡುತ್ತಿದೆ. ವಿಶ್ವವಿದ್ಯಾನಿಲಯಗಳಲ್ಲಿ ದೇಶಭಾಷೆಗಳ ಮಾಧ್ಯಮದಲ್ಲಿಯೆ ಪಾಠಪ್ರವಚನಗಳು ನಡೆಯಬೇಕೆಂದು ಶಿಕ್ಷಣ ತಜ್ಞರೂ ಶ್ರೇಷ್ಠ ಸಾಹಿತಿಗಳೂ ಹೇಳಿದ ಹಿತವಚನಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕ ವರ್ಗದವರ ಸಭೆ (ಕನ್‌ವೆನ್‌ಷನ್) ಯಲ್ಲಿ ಪುಷ್ಟಿ ದೊರಕಿದುದು ಸಂತೋಷ. ಈ ವರ್ಷ ಮೈಸೂರು ವಿಶ್ವವಿದ್ಯಾನಿಲಯದ ಮೊದಲನೆಯ ತರಗತಿಯಲ್ಲಿ ಕನ್ನಡ ಮಾಧ್ಯಮದಲ್ಲಿಯೆ ಶಿಕ್ಷಣವನ್ನೀಯಬೇಕೆಂದು ನಿರ್ಧರಿಸಿದೆ.

ಮೂವತ್ತೆಂಟನೆಯ ಕನ್ನಡ ಸಾಹಿತ್ಯ ಸಮ್ಮೇಳನ

ಅಖಂಡ ಕರ್ಣಾಟಕವು ಉದಯಿಸುತ್ತಿರುವ ಈ ಶುಭಕಾಲದಲ್ಲಿ ಮೂವತ್ತೆಂಟನೆಯ ಸಾಹಿತ್ಯ ಸಮ್ಮೇಳನವು ರಾಯಚೂರಿನಲ್ಲಿ ವೈಭವಯುತವಾಗಿ ನಡೆಯಿತು. ಪ್ರಸಿದ್ಧ ಸಾಹಿತ್ಯಗಳಾದ ಶ್ರೀ ಆದ್ಯ ರಂಗಾಚಾರ್ಯ (ಶ್ರೀರಂಗ) ಅವರು ಅಧ್ಯಕ್ಷರಾಗಿ ಮಾಡಿದ ಭಾಷಣವನ್ನು ವಸ್ತುಕೋಶದಲ್ಲಿ ಕೊಟ್ಟಿದೆ. ಪ್ರಬುದ್ಧ ಕರ್ಣಾಟಕ ಕಾಲಕ್ಕೆ ಸರಿಯಾಗಿ ಪ್ರಕಟವಾಗಬೇಕಾದುದರಿಂದ ಸಮ್ಮೇಳನದ ವಿವರಗಳನ್ನು ಈ ಸಂಚಿಕೆಯಲ್ಲಿ ಕೊಟ್ಟಿಲ್ಲ. ಸಮ್ಮೇಳನದ ಕಾರ್ಯಕಲಾಪಗಳನ್ನು ಮುಂದಿನ ಸಂಚಿಕೆಯಲ್ಲಿ ಕೊಡಲಾಗುವುದು.

ಸಾಹಿತ್ಯ ಸಮ್ಮೇಳನಗಳು ಕೆಲವರ ದೃಷ್ಟಿಯಲ್ಲಿ 'ನಿರರ್ಥಕ ವಾರ್ಷಿಕ ಸಂತೆಗಳು' ಎಂದೆನಿಸಿದರೂ ಅಖಂಡ ಕರ್ಣಾಟಕದ ಸಾಹಿತಿಗಳು ಒಕ್ಕಡೆ ಸೇರಿ ವಿಚಾರ ವಿನಿಮಯ ಮಾಡಿಕೊಳ್ಳುವ ಹಬ್ಬವೆಂಬುದನ್ನು ಮರೆಯಬಾರದು. ಈಚೆಗೆ ಬೇರೆ ಬೇರೆ ಸಮ್ಮೇಳನಗಳು ಆಗಾಗ ಸೇರಿ ಕಾರ್ಯಪ್ರಪಂಚವನ್ನು ವಿಸ್ತರಿಸುವ ಹಾಗೂ ಸಮರ್ಪಕವಾಗಿ ಕೆಲಸಮಾಡುವ ಉದ್ದೇಶಗಳಿಂದ ಭಾರತದ ಬೇರೆ ಬೇರೆ ಕಡೆಗಳಲ್ಲಿ ಸೇರುತ್ತಿವೆ. ಈ ದೃಷ್ಟಿಯಿಂದ ಸಾಹಿತ್ಯ ಸಮ್ಮೇಳನವು ಕನ್ನಡ ಸಾಹಿತ್ಯದ ಸರ್ವತೋಮುಖವಾದ ಪ್ರಗತಿಯನ್ನು ಯೋಚಿಸಿ ಕಾರ್ಯರೂಪಕ್ಕೆ ತರುವ ಯೋಜನೆಗಳನ್ನು ನಾಡಿನ ಮುಂದಿಟ್ಟು ಕಾರ್ಯರೂಪಕ್ಕೆ ತರುವ ಸಂಸ್ಥೆಯಾಗುವುದೆಂದು ಹಿರಿಯ ಸಾಹಿತಿಗಳು ಹಾರೈಸುತ್ತಿರುವರು. ಇದುವರೆಗೆ ಸಮ್ಮೇಳನದ ಅಧ್ಯಕ್ಷರಾದ ಪ್ರತಿಭಾವಂತ ವ್ಯಕ್ತಿಗಳು ತಮ್ಮ ಅಮೂಲ್ಯವಾದ ಅನುಭವಗಳನ್ನು ಅಧ್ಯಕ್ಷ ಭಾಷಣಗಳಲ್ಲಿ ನೀಡುತ್ತ ಬಂದಿದ್ದಾರೆ. ಆ ಅಮೃತ ಸಂದೇಶಗಳಿಂದ ಪುಷ್ಟಿಗೊಂಡ ಕನ್ನಡ ಸಾಹಿತ್ಯ ಪರಿಷತ್ತು ನಾಡಿಗೆ ಸರ್ವತೋಮುಖವಾಗಿ ಸೇವೆ ಸಲ್ಲಿಸುವ ಪ್ರಚಂಡ ಶಕ್ತಿಕೇಂದ್ರವಾಗಲೆಂದು ಹಾರೈಸೋಣ.

ಸಾದರ ಸ್ವೀಕಾರ

ಅಂಬುಜಾಕ್ಷಿ (ಕಾದಂಬರಿ)—ಲೇಖಕರು : ಶ್ರೀ ಎಸ್. ವೆಂಕಟರಾಜು ; ಪ್ರಕಾಶಕರು : ಶ್ರೀ ಕೃಷ್ಣಪ್ರಕಾಶನ, ಉಡುಪಿ ; ಪುಟಗಳು ೨+೯೮ ; ಬೆಲೆ, ರೂ. ೦-೧೪-೦.

ಸುಧೆ (ಕವನಸಂಕಲನ)—ಕವಿ : ವಾಗೀಶ ; ಪ್ರಕಾಶಕರು : ಸುದರ್ಶನಂ ಅಂಡ್ ಕೋ, ಅವೆನ್ಯೂ ರೋಡ್, ಬೆಂಗಳೂರು ೨ ; ಪುಟಗಳು vii+೭೪ ; ಬೆಲೆ, ರೂ. ೧-೪-೦.

ಕವನಕುಸುಮ (ಕವನಸಂಕಲನ)—ಸಂಪಾದಕರು : ಶ್ರೀ ಎಂ. ಆರ್. ಬುದ್ಧಿವಂತಶೆಟ್ಟಿ ; ಪ್ರಕಾಶಕರು : ಕನ್ನಡ ಸಾಹಿತ್ಯಸಂಘ, ರಂಗಂಪೇಟೆ ; ಪುಟಗಳು ix+೫೧ ; ಬೆಲೆ, ರೂ. ೦-೮-೦.

ಸಾವಿನ ಸೆಳವಿನಲ್ಲಿ—ಲೇಖಕರು : ಶ್ರೀ ಮರುಳಸಿದ್ಧ ; ಪ್ರಕಾಶಕರು : ಕನ್ನಡ ಕುಲ ಪ್ರಕಾಶನ, ಮೈಸೂರು ; ಪುಟಗಳು ೮೫ ; ಬೆಲೆ, ರೂ. ೦-೧೨-೦.

ಕಲಾವಿದ ಕೃಷ್ಣ ಹೆಬ್ಬಾರರು—ಲೇಖಕರು : ಶ್ರೀ ಶಿವರಾಮಕಾರಂತ ; ಪ್ರಕಾಶಕರು : ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜು, ಉಡುಪಿ ; ಪುಟಗಳು ೩೨ ; ಬೆಲೆ, ರೂ. ೦-೬-೦.

ಆಯುವಿವರಣ—ಗ್ರಂಥಕರ್ತರು : ಶ್ರೀ ಎಂ. ಎಸ್. ಕೃಷ್ಣಮೂರ್ತಿ, ಬಿ.ಎಸ್‌ಸಿ. (ಆನರ್ಸ್) ; ಪುಟಗಳು ೩೧ ; ಬೆಲೆ, ರೂ. ೧-೪-೦.

ಉಗಮ (ಕವಿತೆ)—ಕವಿ : ಶ್ರೀ ವಿನಾಯಕ ; ಪ್ರಕಾಶಕರು : ಪ್ರೊ|| ರಂ. ಶ್ರೀ ಮುಗಳಿ, ವಿಲಿಂಗಡನ್ ಕಾಲೇಜ, ಸಾಂಗಲಿ ; ಪುಟಗಳು ೮+೫೨ ; ಬೆಲೆ, ಉತ್ತಮಪ್ರತಿ ರೂ. ೧-೦-೦ ; ಸಾದಾಪ್ರತಿ ರೂ. ೦-೧೨-೦.

ವಿಪರೀತಕ್ಕೆಂತೇ ವಿವಾಹ! (ನಾಟಕ)—ಲೇಖಕರು : ಶ್ರೀ ಎಸ್. ಅನಂತನಾರಾಯಣ, ಎಂ.ಎ. ; ಪ್ರಕಾಶಕರು : ಗೆಳೆಯರ ಬಳಗ ಪ್ರಕಾಶನ, ಮೈಸೂರು ; ಪುಟಗಳು ೬೧ ; ಬೆಲೆ, ರೂ. ೦-೮-೦.

ಜನ್ಮಾಂತರ ವಿಜ್ಞಾನ—ಉಪದೇಶಕರು : ಶ್ರೀ ಡಾ|| ಚಂದ್ರಶೇಖರಸ್ವಾಮಿಗಳು ; ಪ್ರಕಾಶಕರು : ಡಾ|| ಚಂದ್ರಶೇಖರಸ್ವಾಮಿಗಳು, ಇಲಕಲ್ಲ ; ಪುಟಗಳು ೭೭ ; ಬೆಲೆ, ರೂ. ೦-೮-೦.

ಶಾಸ್ತ್ರೀಯ ಬ್ರಹ್ಮಚರ್ಯ—ಲೇಖಕರು : ಶ್ರೀ ಡಾ|| ಚಂದ್ರಶೇಖರಸ್ವಾಮಿಗಳು ; ಪ್ರಕಾಶಕರು : ಡಾ|| ಚಂದ್ರಶೇಖರಸ್ವಾಮಿಗಳು, ಇಲಕಲ್ಲ ; ಪುಟಗಳು ೩೭+೬ ; ಬೆಲೆ, ರೂ. ೦-೪-೦.

ಓಂಕಾರ ಕುಸುಮ—ಲೇಖಕರು : ಶ್ರೀ ಡಾ|| ಚಂದ್ರಶೇಖರಶಾಸ್ತ್ರಿಗಳು ; ಪ್ರಕಾಶಿಸಿದವರು : ಶ್ರೀ ಶಿವ-ಪಾರ್ವತಿ ಮಾಂಗಲ್ಯಮಂದಿರ, ಮಹಾಮಂಡಲ ; ಪುಟಗಳು ೨೨ ; ಬೆಲೆ, ರೂ. ೦-೫-೦.

ಜಾಗೃತ ಹಿಂದೂ ಜೀವನಧರ್ಮ—ಲೇಖಕರು : ಶ್ರೀ ಡಾ|| ಚಂದ್ರಶೇಖರಶಾಸ್ತ್ರಿಗಳು ; ಪ್ರಕಾಶಕರು : ಶ್ರೀ ಮಾಂಗಲ್ಯಮಂದಿರ, ಹೊಳೆ ಆಲೂರ ; ಪುಟಗಳು ೩೮ ; ಬೆಲೆ, ರೂ. ೦-೫-೮.

ಧ್ಯಾನ ಚಿಂತನಾಧಾರೆ (ಅನುವಾದ)—ಮೂಲಲೇಖಕರು : ಶ್ರೀ ಎಫ್. ಜಿ. ಅಲೆಗ್ಸಾಂಡರ್ ; ಪ್ರಕಾಶಕರು : ಶ್ರೀ ರಾಮಕೃಷ್ಣಾಶ್ರಮ, ಮೈಸೂರು ; ಪುಟಗಳು ೧೮೬ ; ಬೆಲೆ, ರೂ. ೧-೦-೮.

ಸೊಹ್ರಾಬ್ ಮತ್ತು ರುಸ್ತುಂ (ಕವಿತೆ)—ಲೇಖಕರು : ಶ್ರೀ ಕ. ನರಸಿಂಹಶಾಸ್ತ್ರಿ ; ಪ್ರಕಾಶಕರು : ಕಾವ್ಯಾಲಯ, ಮೈಸೂರು ; ಪುಟಗಳು ೬೦ ; ಬೆಲೆ, ರೂ. ೦-೧೨-೦.

ಮಲೆದೇಗುಲ (ಕವಿತಾಸಂಕಲನ)—ಲೇಖಕರು : ಶ್ರೀ ಪು. ತಿ. ನರಸಿಂಹಾಚಾರ್ಯರು ; ಪ್ರಕಾಶಕರು : ಕಾವ್ಯಾಲಯ, ಮೈಸೂರು ; ಪುಟಗಳು ೬೦ ; ಬೆಲೆ, ರೂ. ೧-೦-೦.

ನವ್ಯತೆ ಹಾಗೂ ಕಾವ್ಯಜೀವನ—ಲೇಖಕರು : ಶ್ರೀ ವಿ. ಕೃ. ಗೋಕಾಕ ; ಪ್ರಕಾಶಕರು : ಸುರಚಿ ಪ್ರಕಾಶನ, ಮೈಸೂರು ; ಪುಟಗಳು ೧೩೨ ; ಬೆಲೆ, ರೂ. ೨-೦-೦.

Anubhava Mantapa—ಲೇಖಕರು : ಶ್ರೀ ಸಿ. ಡಿ. ಉತ್ತಂಗಿ ; ಪ್ರಕಾಶಕರು : ಕರ್ನಾಟಕ ಸಾಹಿತ್ಯಮಂದಿರ, ಧಾರವಾಡ ; ಪುಟಗಳು ೪೬ ; ಬೆಲೆ, ರೂ. ೦-೬-೮.

ಮಮತೆಯ ಸುಳಿ (ಕಾದಂಬರಿ)—ಲೇಖಕರು : ಶ್ರೀ ಶ್ರೀನಿವಾಸರಾವ್ ಕೊರಟಿ ; ಪ್ರಕಾಶಕರು : ಕಾವ್ಯಾಲಯ, ಮೈಸೂರು ; ಪುಟಗಳು ೨೧೫ ; ಬೆಲೆ, ರೂ. ೧-೪-೦.

ಗೋರಾ (ಅನುವಾದ)—ಅನುವಾದಕರು : ಶ್ರೀಮತಿ ಎಚ್. ವಿ. ಸಾವಿತ್ರಮ್ಮನವರು ; ಪ್ರಕಾಶಕರು : ಕಾವ್ಯಾಲಯ, ಮೈಸೂರು ; ಪುಟಗಳು ೪೧೬ ; ಬೆಲೆ, ರೂ. ೨-೪-೦.

ಪ್ರಬುದ್ಧ ಕರ್ಣಾಟಕಕ್ಕೆ ವಿನಿಮಯವಾಗಿ ಬರುವ ಪತ್ರಿಕೆಗಳು

ಇಂಗ್ಲಿಷ್ ಪತ್ರಿಕೆಗಳು

Annals of the Oriental Research Institute, University, Madras; *Bramhavidya*, Adyar, Madras; *Bulletin of the School of Oriental Studies*, London; *Journal of the Andhra Historical Research Society*, Rajahmundry; *Journal of the Karnataka Historical Research Society*, Dharwar; *Quarterly Journal of the Mythic Society*, Bangalore; *The Indian* P.E.N., Bombay; *Annals of the Venkateswara Oriental Institute*, Tirupati; *The Jaina Siddhanta Bhaskara* and *The Jaina Gazette*, Arrah; *Bulletin of the Deccan College Research Institute*, Poona; *Publication of the Kannada Research Office*, Dharwar; *The Journal of the Literary Committee of the L.E. Association*, Dharwar; *Annals of Bhandarkar Oriental Research Institute*, Poona.

ವಾರಪತ್ರಿಕೆಗಳು

'ಒಕ್ಕಲಿಗರ ಪತ್ರಿಕೆ', ಬೆಂಗಳೂರು; 'ಕಂಠೀರವ', ಮಂಗಳೂರು; 'ಚೇತನಾ', ಬೆಂಗಳೂರು; 'ಕರ್ಣಾಟಕ ವೈಭವ', ಬಿಜಾಪುರ; 'ಪ್ರಭಾತ', ಮಂಗಳೂರು.

ಮಾಸಪತ್ರಿಕೆಗಳು

ಆಂಧ್ರ ಸಾಹಿತ್ಯ ಪರಿಷತ್ಪತ್ರಿಕೆ' (ತೆಲುಗು), ಕಾಕಿನಾಡ; 'ಕತೆಗಾರ', ಬೆಂಗಳೂರು; 'ಕನ್ನಡ ಸಹಕಾರಿ', ಮಂಗಳೂರು; 'ಜಯಕರ್ನಾಟಕ' ಧಾರವಾಡ; 'ಜಯಂತಿ', ಧಾರವಾಡ, 'ಮೈಸೂರು ವ್ಯವಸಾಯ ಶೋಧಕ ಸಂಘದ ಪತ್ರಿಕೆ', ಬೆಂಗಳೂರು; 'ಮಕ್ಕಳ ಪುಸ್ತಕ'; ಬೆಂಗಳೂರು; 'ಮೈಸೂರು ಸಹಕಾರ ಪತ್ರಿಕೆ', ಬೆಂಗಳೂರು; 'ವಿದ್ಯಾದಾಯಿನಿ', ಮೈಸೂರು; 'ವಿವೇಕಾಭ್ಯುದಯ'. ಮೈಸೂರು; 'ಶರಣಸಾಹಿತ್ಯ', ಬೆಂಗಳೂರು; 'ಶಿವಾನುಭವ', ಬಿಜಾಪುರ; 'ಸದ್ಬೋಧಚಂದ್ರಿಕೆ' ಅಗಡಿ; 'ಸರಸ್ವತಿ', ಬೆಂಗಳೂರು; 'ಸುಬೋಧ', ಬೆಂಗಳೂರು; 'ಜೀವನ', ಬೆಂಗಳೂರು: 'ಕಥಾವಳಿ', ಬೆಂಗಳೂರು; 'ಪುಸ್ತಕ ಪ್ರಪಂಚ', ಮೈಸೂರು; 'ಕನ್ನಡ ನುಡಿ', ಬೆಂಗಳೂರು;

ತ್ರೈಮಾಸಿಕಪತ್ರಿಕೆಗಳು

'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ', ಬೆಂಗಳೂರು; 'ಭಾರತ ಇತಿಹಾಸ ಸಂಶೋಧನ ಮಂಡಲದ ಪತ್ರಿಕೆ' (ಮರಾಠಿ), ಪೂನಾ.

ಗ್ರಂಥಮಾಲೆ

'ಮನೋಹರ ಗ್ರಂಥಮಾಲೆ,' ಧಾರವಾಡ; 'ಮಿಂಚಿನಬಳ್ಳಿ', ಧಾರವಾಡ.

ಮೈಸೂರು ಮಹಾರಾಜರವರ ಕಾಲೇಜಿನ
ಕರ್ಣಾಟಕ ಸಂಘದ ಪ್ರಕಟನೆಗಳು

೧. ನಾಗಾನಂದನಾಟಕ—ಶ್ರೀ ಅನಂತನಾರಾಯಣ ಶಾಸ್ತ್ರಿ ; ಬೆಲೆ, ೧ ರೂ.

೨. ಕರ್ಣಾಟಕ ಮೃಚ್ಛಕಟಿಕಪ್ರಕರಣಂ—ಆಸ್ಥಾನ ಕವಿ ನಂಜನಗೂಡು ಸುಬ್ಬಾಶಾಸ್ತ್ರಿಗಳವರಿಂದ ; ರೂ. ೧-೧೨-೦.

ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಪ್ರಕಟಣೆಗಳು

೧. ಶ್ರೀ ಕೈಲಾಸಂ ಅವರ ಸ್ಮರಣೆ—ಶ್ರೀ ಕೆ. ವಿ. ಅಯ್ಯರ್; ರೂ. ೨-೪-೦.

೨. ಕರ್ಣಾಟಕ ಮಾಲವಿಕಾಗ್ನಿಮಿತ್ರ ನಾಟಕಂ—ಶ್ರೀ ಮೋಟಗಾನಹಳ್ಳಿ ಶಂ. ಸುಬ್ರಹ್ಮಣ್ಯಶಾಸ್ತ್ರೀ ; ರೂ. ೧-೧೨-೦.

೩. ಮೊನ್ನ ವನ್ನ (ಮಾರಿಸ್ ಮ್ಯಾಟರ್‌ಲಿಂಕನ ಮೂರಂಕದ ನಾಟಕ)—ಶ್ರೀ ಎಸ್. ಜಿ. ಶಾಸ್ತ್ರಿ ; ರೂ. ೨-೦-೦.

೪. ನಾಗನ ಪದಗಳು—ಶ್ರೀ ಜಿ. ಪಿ. ರಾಜರತ್ನಂ ; ರೂ. ೧-೪-೦.

೫. ಶಕ್ತಿ (ಸಚಿತ್ರ)—ಶ್ರೀ ಆರ್. ಎಲ್. ನರಸಿಂಹಯ್ಯ ; ರೂ. ೩-೦-೦.

೬. ಸುಪ್ರಭಾತಮ್—(ದೈವಭಕ್ತಿಯನ್ನು ಕುರಿತ ಪ್ರಬಂಧಗಳು) ರೂ. ೩-೦-೦.

೭. ಸೋಕ್ರಟೀಸನ ಮರಣ—ಶ್ರೀ ಎಸ್. ಜಿ. ಶಾಸ್ತ್ರಿ ; ರೂ. ೧-೪-೦.

೮. ಬಾಹುಬಲಿ ವಿಜಯಂ—(ಎರಡು ನಾಟಕಗಳು) ; ರೂ. ೧-೮-೦.

೯. ಕಾರ್ಕಳದ ಗೊಮ್ಮಟಸ್ವಾಮಿ—(ಲೇಖನ, ಕವನ) ; ರೂ. ೧-೦-೦.

೧೦. ನಮ್ಮ ನಮ್ಮವರು—(೬೬ ಬೇರೆ ಬೇರೆ ಕೃತಿಗಳು) ; ರೂ. ೨-೮-೦.

೧೧. ಬಾಲಸರಸ್ವತಿ—(೩೬ ಬೇರೆ ಬೇರೆ ಕೃತಿಗಳು) ; ರೂ. ೨-೮-೦.

೧೨. ಚಿನ್ನದ ದೋಸೆ ಮತ್ತು ಇತರ ಕಥೆಗಳು—ರೂ. ೦-೧೨-೦.

೧೩. ಮಕ್ಕಳ ಮಾತು—(ಎಸ್ಸೆಗಳು) ; ರೂ. ೧-೦-೦.

೧೪. ಪಚ್ಚೆಯ ತೆನೆ—(ಎಸ್ಸೆಗಳು) ; ರೂ. ೧-೦-೦.

೧೫. ಗಂಧದ ಹುಡಿ—(ಎಸ್ಸೆಗಳು) ; ರೂ. ೧-೦-೦.

೧೬. ದುರಾಸೆಯ ದಂಡ—(ಐದು ಏಕಾಂಕ ನಾಟಕಗಳು) ; ರೂ. ೧-೪-೦.

೧೭. ಜನಪ್ರಿಯ ವಿಜ್ಞಾನ—(ವಿಜ್ಞಾನ ಪ್ರಬಂಧಗಳು) ; ರೂ. ೧-೦-೦.

Edited by Sri S. V. Parameswara Bhatta, M.A. and Sri U. K. Subbarayachar, M.A.
Published by The University of Mysore, Mysore.
Printed by K. A. Korula at the Wesley Press and Publishing House, Mysore City